ಆಜ್ಞಾನುಸಾರದಿಂದ ಪ್ರಕಟಿತವಾಗಿ

ಟಿ. ಸುಬ್ಬರಾಯಶಾಸ್ತ್ರಿಗಳಿಂದ ಪರಿಷ್ಕರಿಸಲ್ಪಟ್ಟು

ಮತ್ತು

ವೇ॥ ಭಾರತೀ ಸಂಪಂಗಿರಾಮಯ್ಯನವರಿಂದ ಸಹ

ಪರಿಶೋಧಿಸಲ್ಪಟ್ಟು

ಸರ್ವ ಸ್ವಾತಂತ್ರ್ಯವನ್ನು ಪಡೆದಿರುವ

ಬೆಂಗಳೂರು ಸಿಟಿ ಚಿಕ್ಕಪೇಟೆ ಬುಕ್‌ಡಿಪೋ

ಟಿ. ಯಜ್ಞ. ಕೃಷ್ಣಯ್ಯಶೆಟ್ಟಿಯವರ ಸ್ವಕೀಯ

ಶ್ರೀ ವೆಂಕಟೇಶ ಮುದ್ರಾಕ್ಷರಶಾಲೆಯಲ್ಲಿ

ಮುದ್ರಿಸಲ್ಪಟ್ಟಿತು.

ತೀಯ ಮುದ್ರಣ ೨,೦೦೦ ಪ್ರತಿಗಳು.

ಬೆಲೆ 5-8-0

1929

ವಿಷಯಾನುಕ್ರಮಣಿಕೆ.

ವಿಷಯ ಸಂಖ್ಯೆ.	ಸಂಭವಕಾಂಡ.		ಪುಟಸಂಖ್ಯೆ.

ಅಸುರಕಾಂಡ.

ವೀರಮಾಹೇಂದ್ರಕಾಂಡ.

ಯುದ್ಧಕಾಂಡ.

ವಿಷಯ ಸಂಖ್ಯೆ. (೭) ಪುಟಸಂಖ್ಯೆ.

ದೇವಕಾಂಡ.

ದಕ್ಷಕಾಂಡ.

ಉಪದೇಶಕಾಂಡ.

ವಿಷಯಾನುಕ್ರಮಣಿಕೆ ಸಂಪೂರ್ಣಂ.

॥ ಶ್ರೀರಸ್ತು ॥



ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ

ಶಂಕರಸಂಹಿತೆ.

ಶಿವರಹಸ್ಯ ಖಂಡವು.

ಶ್ಲೋ॥ ಶುಕ್ಲಾಂಬರಧರಂವಿಷ್ಣುಂ । ಶಶಿವರ್ಣಂಚತುರ್ಭುಜಂ ॥
ಪ್ರಸನ್ನವದನಂಧ್ಯಾಯೆ । ತ್ಸರ್ವವಿಘ್ನೋಪಶಾಂತಯೆ ॥

ಶ್ಲೋ॥ ಐಶಮಾದ್ಯಂತನಿರ್ಮುಕ್ತಂ । ಮತಿಶೋಭನಮಾದರಾತ್ ॥
ನಮಾಮಿವಿಗ್ರಹಂಸಾಂಬಂ । ಸಂಸಾರಾಮಯಭೇಷಜಂ ॥
ಯೋಗೀಂದ್ರಹೃದಯಾಂಭೋಜ । ನಿಷಣ್ಣಮಪವರ್ಗದಂ ॥
ನಮಾಮಿದಕ್ಷಿಣಾಮೂರ್ತಿಂ । ಪ್ರಣವಾತ್ಮಸ್ವರೂಪಿಣಂ ॥
ಅನಂತಾನಂದಬೋಧಾಂಬು । ನಿಧಿಮುದ್ಭೂತವಿಗ್ರಹಂ ॥
ಅಂಬಿಕಾಪತಿಮೀಶಾನ । ಮನಿಶಂಪ್ರಣಮಾಮ್ಯಹಂ ॥

ಸೂತಮಹಾಮುನಿಯನ್ನು ಶೌನಕಾದಿಮಹರ್ಷಿಗಳು ಶಿವರಹಸ್ಯವನ್ನು ತಿಳಿಸಲು ಪ್ರಾರ್ಥಿಸುವಿಕೆ.

ಪೂರ್ವಕಾಲದೊಳು ಜಗದೀಶ್ವರನಾದ ಪರಮೇಶ್ವರನ ಪರಿಚರ್ಯಾಪರಾಯಣರಾಗಿ, ಶುಭ್ರಭಸ್ಮತ್ರಿಪುಂಡ್ರ ಮಂಡಿತರಾಗಿ ರುದ್ರಾಕ್ಷಾಲಂಕೃತರಾಗಿ ಶೌನಕಾದಿಮಹಾಮುನಿಗಳು, ಸರ್ವಧರ್ಮರಹಸ್ಯಂಗಳನರಿತವನಾಗಿ ಮಹಾ

ಜ್ಞಾನಿಯಾದುದರಿಂ ಪೌರಾಣಿಕೋತ್ತಮನಾದ ಸೂತಮುನಿಯತ್ತಣಿಂ, ಸಕಲ ಪುರುಷಾರ್ಥಪ್ರದಮಾಗಿ ರಹಸ್ಯಂಗಳಾದ ಪರಮಶೈವಧರ್ಮಂಗಳಂ ಪ್ರತಿಪಾದಿಸುತಿಹ, ಶ್ರುತಿಸ್ಮೃತಿ ಪುರಾಣಾದಿಗಳಂ ಮರಳಿ ಮರಳಿ ಕೇಳಿಯಾದೊಡಂ, ತೃಪ್ತಿಯನ್ನೈದದ ಮನವುಳ್ಳವರಾಗಿ, ಲೋಕಶಂಕರನಾದ ಆ ಶಂಕರನ ಚರಿತ್ರೆಯು ರೂಪಮಾಗಿ ಪರಮಪಾವನಮಾದ ಜ್ಞಾನಪ್ರದಮಾಗಿ ಮುಕ್ತಿಪ್ರದಮಾದ ಚರಿತ್ರೆಗಳಂ ಮರಳಿ ನಿರೂಪಿಸೆಂದೆಲ್ಲರು ಬೆಸಗೊಳ್ಳುತ್ತಿರೆ:— ಆಗ ಸೂತನು ಆ ಮುನಿಗಳ ಅಭಿಪ್ರಾಯವನ್ನರಿತು ಅವರಿಗೆ ಕರ್ಣಶ್ರಾವ್ಯಮಪ್ಪಂತೆ ಶಂಕರಸಂಹಿತೆಯಂ ನಿರೂಪಿಸಲುಜ್ಜುಗಿಸಿ ಪ್ರಥಮತಃ ಗಣಪತಿಯಂ ಪ್ರಾರ್ಥಿಸುವನದೆಂತೆನೆ.

ನೈಮಿಶಾರಣ್ಯ ವರ್ಣನೆ.

ಓಂಕಾರ ನಿಲಯನಾಗಿಯೂ ಚತುರ್ಭುಜನಾಗಿಯೂ ಬೃಹತ್ಕುಕ್ಷಿಯಾಗಿಯೂ ಇರುವ ಗಜವಕ್ತ್ರನೆಂಬುವ ದೇವನಂ * ಆಧ್ಯಾತ್ಮಿಕಾದಿ ತಾಪತ್ರಯ ರೂಪಮಾದ ವಿಘ್ನೋಪ ಶಾಂತ್ಯರ್ಥಮಾಗಿ ನಮಸ್ಕರಿಸುವೆನು. ಪೂರ್ವಕಾಲದಲ್ಲಿ ಪರಮೇಶ್ವರನ ಕೃಪೆಯಿಂದ ಸಕಲ ಪ್ರಜೆಗಳನ್ನೂ ಸೃಜಿಸುವೆನೆಂದಪೇಕ್ಷಿಸಿ, ಚತುರ್ಮುಖನು ಕಾಂಚೀಪುರದೊಳು ಪರಮೇಶ್ವರನ ಆರಾಧನಾರೂಪಮಾದ ತಪವನ್ನಾಚರಿಸುತಿರ್ದನು. ಆ ಚತುರಾನನನು ಕಾಂಚೀಪುರದಲ್ಲಿ ಮಹೇಶ ಚರಣ ಪರಿಚರ್ಯಾ ಪರಾಯಣನಾಗಿರುತ್ತಿರಲಾಗಿ, ಕೆಲಬರು ಮುನೀಶ್ವರರು ಗಾರ್ಹಸ್ಥ್ಯಮೆಂದು ಪ್ರಸಿದ್ಧಮಾದ ಉತ್ತಮವಾಗಿರ್ಪ ಪುಣ್ಯಕರಮಾದ ಗ್ರಹಸ್ಥಾಶ್ರಮ ಧರ್ಮದೊಳಿರ್ದು, ಬಳಿಕ ವೈಖಾನಸಾಶ್ರಮದಲ್ಲಿ ನಿಯತಮಾನಸರಾಗಿ ತಪವನಾಚರಿಸುವಣವೆಂದು ಯೋಚಿಸಿ, ಆ ತಪೋನುರೂಪಮಾದ ಸ್ಥಾನಮಂ ಪ್ರಶ್ನೆಗೆಯ್ಯಲೋಸುಗ, ಕಾಂಚೀಪುರಸ್ಥನಾದ ಚತುರ್ಮುಖನ ಸನ್ನಿಧಾನವನ್ನೈದಿ, ಆ ಚತುರಾನನಂಗೆ ಅಭಿನಮಿಸಿ ಬದ್ಧಾಂಜಲಿಗಳಾಗಿ, ಎಲೈ ಪಿತಾಮಹನಾದ ಚತುರ್ಮುಖನೆ! ನಿನಗೆ ನಮಸ್ಕಾರವು, ಎಲೈ — ದೇವನೆ! ವಾನಪ್ರಸ್ಥಾಶ್ರಮ ಪರಾಯಣರಾದ ನಾವು, ಆವ ಸ್ಥಾನಮೊಳಿರ್ದುತಪಮಂ ಮಾಡಬೇಕೆಂಬುದಂ ನೀನು ಪೇಳಬೇಕೆಂದು, ಬೆಸಗೊಂಡ ಮುನೀಶ್ವರರ ವಚ

---

* (ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ) ಎಂಬಿವು (ತಾಪತ್ರಯಂಗಳು) ಆಧ್ಯಾತ್ಮಿಕ = ಪ್ರಿಯರಾದ ಪುತ್ರ ಮಿತ್ರ ಕಳತ್ರಾದಿಗಳ ಅಗಲಿಕೆಯಿಂದುಂಟಾಗುವ ಮನೋರೋಗವು, ಆಧಿಭೌತಿಕ = ಅಜೀರ್ಣಾದಿಗಳಿಂದ ಸಂಭವಿಸುವ ದೇಹ ಜಾಡ್ಯವು, ಆಧಿದೈವಿಕ = ಮಾರ್ಯಾದ್ಯುಪದ್ರವಾದಿಗಳಿಂ ಪುಟ್ಟುವ ಬಾಧೆಗಳು.

ನಮಂ ಕೇಳ್ದು, ಕಮಲಾಸನಂ ಕುಶಕೂರ್ಚಮಂ ಕರದೊಳು ಪರಿಗ್ರಹಿಸಿ, ಮುಹೂರ್ತಮಾತ್ರಂ ಧ್ಯಾನಪರಾಯಣನಾಗಿ, ಮುನಿಗಳ್ಗೆ ಆವಾಸಯೋಗ್ಯ ಮಾದ ಸ್ಥಾನಮಂ ಮನದೋಳ್ಭಾವಿಸಿ, ಮುನಿಗಳಿಗಿಂತೆಂದನದೆಂತೆನೆ:—ಎಲೈ, ಮುನಿಗಳಿರಾ! ಆವ ವಿಜನಮಾದ ವನದಲ್ಲಿ * ನಮ್ಮಿಂದ ಕೊಡಲ್ಪಟ್ಟ ಈ ನೇಮಿಯು ಶೀರ್ಣವಾಗುತ್ತಿರುವುದೊ, ಆ ವನವು ನಿಮಗೆ ತಪನಾಚರಿಪೊಡೆ ಯೋಗ್ಯವೆಂದು ನೈಮಿಶನುಪದೇಶಿಸಿ ಆ ಮುನಿಗಳಂ ಕಳುಹಿ, ಬ್ರಹ್ಮದೇವರು ಪಾರ್ವತೀಪರಮೇಶ್ವರರಂ ಧ್ಯಾನಂಗೈಯುತ್ತಿರೆ. ತದನಂತರದಲ್ಲಿ ಒಂದಾ ನೊಂದು ಮನೋಹರಮಾಗಿ ನುಣ್ಪಾದ ಶಿಲಾತಳದಲ್ಲಿ ಆ ನೇಮಿಯು ಶೀರ್ಣ ವಾಗುತ್ತಿರಲಾಗಿ, ನೇಮಿಶೀರ್ಣವಾದುದರಿಂದಲೇ ಆ ಆಶ್ರಮವು (ನೈಮಿಶ ವೆಂದು) ಸಂಜ್ಞೆಯುಳ್ಳದ್ದಾದುದು. ಆ ನೈಮಿಶಾರಣ್ಯದಲ್ಲಿಗೆ ಚಂದ್ರಮಂಡಲ ನಿಸ್ಸೃತಿಯಾಗಿ ಭಗೀರಥ ಮಾರ್ಗಾನುಸಾರಮಾಗಿ. ಶಂಭು ಜಟಾಜೂಟ ಮಾಲಾ ಸುಗಂಧಿನಿಯಾದ ಭಾಗೀರಥಿಯು, ಹಿಮವತ್ಪರ್ವತದತ್ತಣಿಂದವತರಿಸಿದಳು. ಆ ಭಾಗೀರಥಿಯಿಂದ ಆ ಪುಣ್ಯತಮವಾದ ನೈಮಿಶಾರಣ್ಯವು ಸರ್ವಲೋಕೈಕ ಪಾವನಮಾಗಿ, ನಿರ್ಮಲಮಾದ ತಿಳಿನೀರುಗಳಿಂದ ಅತಿ ರಮಣೀಯಮಾದ ತರು ಪಲಾಶಂಗಳಿಂ ಆ ತಪಸ್ವಿಗಳಿಗೆ ತಪೋಯೋಗ್ಯಮಾದುದು. ಆ ಮುನಿಗಳೆಲ್ಲರು ಪಾರ್ವತೀಪತಿ ಪ್ರೀತಿಗೋಸುಗ, ನೈಮಿಶಾರಣ್ಯದೊಳು ಬಹುಕಾಲಂ ತಪಮ ನಾಚರಿಸಿ, ತದನಂತರದಲ್ಲಿ ಈ ಮುನೀಶ್ವರರಿಂದ ಪರಮೇಶ್ವರನ ಪ್ರೀತಿಯ ನಪೇಕ್ಷಿಸಿ, ಸಹಸ್ರಸಂವತ್ಸರ ಸಂಜ್ಞಮಾದ ಸತ್ರಯಾಗವು ಉಪಕ್ರಾಂತ ಮಾದುದು. ಆ ಮುನೀಶ್ವರರಿಂ ದುಪಕ್ರಾಂತಮಾದ ಸತ್ರಯಾಗಮಂ ಕೇಳ್ದು, ಪೌರಾಣಿಕೋತ್ತಮನಾದ ಪುರಾರಿ ಚರಣಪ್ರಿಯನಾದ ಸತ್ಯವತೀ ಕುಮಾರ ನಾದ ಮತ್ತಾ ವೇದವ್ಯಾಸ ಪ್ರಿಯಶಿಷ್ಯನಾದ ತಪೋನಿಧಿಯಾದ ಸೂತಂ, ಆ ತಪಸ್ವಿಗಳು ಭಾಗ್ಯಗೌರವ ದತ್ತಣಿಂ ಶೀಘ್ರದಿಂ ನೈಮಿಶಾರಣ್ಯಮಂ ನೈದಲಾಗಿ ಕಂಡು ಆ ಮುನಿ ಶ್ರೇಷ್ಠರು ಪ್ರೀತಿಯಿಂದ ರೋಮಾಂಚ ಕಂಚುಕಿತರಾಗಿ, ಅರ್ಘ್ಯಾದ್ಯುಪಚಾರಂಗಳಿಂದುಪಚರಿಸಿದರು. ಆಗ ಸೂತನುಂ ಆ ಮುನಿವರರಿಂ ನಿರ್ದಿಷ್ಟಮಾದ ಆಸನಮಂ ಪರಿಗ್ರಹಿಸಿ, ಮತ್ತಾ ಮುನಿಗಳು ಮಾಡಿದ ಪೂಜೋಪಚಾರಂಗಳಿಂದ ಸಂತೋಷಚಿತ್ತನಾಗಿ, ಶ್ರೀಮಂತನಾಗಿ ಮುಗು ಳ್ನಗೆಯಿಂದೆತ್ತಲ್ಪಟ್ಟ ಮೊಗದಾವರೆಯುಳ್ಳವನಾಗಿರುತಿರ್ದನು. ಆಗಲಾ

* ನೇಮಿ – ಚಕ್ರದ ಕಣ್ಣಿನ ಬಳೆ (ಅಂದರೆ ಚತುರ್ಮುಖನು ಕುಶ ಕೂರ್ಚಮಂ ಪರಿಗ್ರಹಿಸಿ, ಅದನ್ನು ನೇಮಿಯಂಗೈದು ಮುನಿಗಳ್ಗೆ ಕೊಟ್ಟಿದ್ದ ನೆಂದು ಭಾವವು).

ಮುನೀಶ್ವರರು ಅನುಕೂಲಮಾದ ಸ್ತುತಿಪರಮಾದ ವಾಕ್ಯಗಳಿಂದ ವಾಗ್ವಿದಾಂವರನಾದ ಸೂತನಂ ಪ್ರೀತನಂ ಮಾಡಿಕೊಂಡು ಪೌರಾಣಿಕಂಗಳಾಗಿ ಶುಭಂಗಳಾದ ಕಥೆಗಳಂ ಬೆಸಗೊಂಡರದೆಂತೆನೆ:— ಎಲೆ, ಸೂತಪೌರಾಣಿಕನೆ! ನಾವು ಬ್ರಹ್ಮದೇವರ ವಚನದಿಂದ * ನೈಮಿಷಮನೈದಿ ಕೃತಾರ್ಥರಾದೆವು. ಅದು ಕಾರಣ ದತ್ತಣಿಂ ಮಹತ್ತಾದ ಸ್ಕಂದಚರಿತ್ರಮಂ ಕೇಳಬೇಕೆಂದುದ್ಯೋಗಿಸಿದ ನಮ್ಮಿಂದ ಆ ಸ್ಕಂದರೂಪಮಾದ ತೇಜಸ್ಸಿಗೆ ಶಿವಸಂಬಂಧಮಾದ ತೇಜಸ್ಸಿನತ್ತಣಿಂ ಪ್ರಾದುರ್ಭಾವವು ಕೇಳಲ್ಪಟ್ಟಿತು. ಆದರೆ, ಆ ಸ್ಕಂದಂಗೆ ಶರವಣಾಂತರದತ್ತಣಿಂ ಯೆಂತು ಆವಿರ್ಭಾವಮಾದುದು? ಆ ಪಾರ್ವತೀಪುತ್ರನಾದ ಸ್ಕಂದನಿಂ ಸಂಗರದೊಳೆಂತು ಪರಾಕ್ರಮಂಗಳ್ ಪ್ರಕಟಿತಮಾದುದು? ಮತ್ತು ಮಹಾ ಪರಾಕ್ರಮಶಾಲಿಯಾದ ಸ್ಕಂದನಿಂದ ಆವದಾನವರು ಹತರಾದರು? ರಥ ಗಜ ತುರಂಗಗಳನ್ನುಳಿದು ಮಯೂರಮೆಂತಿವನಿಗೆ ವಾಹನಮಾದುದು? ಮತ್ತಿವಂಗೆ ಕುಕ್ಕುಟಧ್ವಜಮೆಂತಾದುದು, ಇದಲ್ಲದೆಯುಂ ವಜ್ರಾದ್ಯಾಯುಧಂಗಳಂ ಪರಿಭವಿಪ ಶಕ್ತಿಯುಳ್ಳ ಶಕ್ತ್ಯಾಯುಧಮೆಂತಿವಂಗೆ ಉಂಟಾದುದು. ಮತ್ತಮಾ ಷಣ್ಮುಖಸ್ವಾಮಿಯ ಪಾರ್ಶ್ವದ್ವಯದಲ್ಲಿರ್ಪ ಶುಭಸ್ವರೂಪಿಯರಾದ ದೇವಿಯರೀರ್ವರರಾರು? ಈ ಸ್ಕಂದನಪರಾಕ್ರಮ ಕಥಾಶ್ರವಣ ದತ್ತಣಿಂ ಭೂಮಿಯೊಳಾವ ಶ್ರೇಯಸ್ಸು ಪ್ರಾಪ್ತವಹುದು? ಎಲೆ ಮಹಾನುಭಾವನಾದ ಸೂತನೆ! ಆತನ ಪರಾಕ್ರಮವಂ ನಮಗೆ ಯಥಾರ್ಥವಾಗಿ ಪೇಳೆಂದು ಮುನಿಗಳ್ ಬಿನ್ನಪಂಗೆಯ್ಯೆ, ಸೂತಪೌರಾಣಿಕನಿಂತಂದನದೆಂತೆನೆ:— ಶಿವವ್ರತಪರರಾಗಿ ಮಹಾನುಭಾವರಾಗಿರ್ಪ, ಎಲೈ ಮುನಿಗಳಿರಾ! ಸಮಸ್ತ ಶ್ರೇಯಸ್ಸುಗಳಿಗೂ ಈ ಕೇಳಲ್ಪಟ್ಟ ವೃತ್ತಾಂತವು ಅತ್ಯುತ್ತಮವಾದ ನಿಧಾನವು. "ಧರ್ಮ, ಅರ್ಥ, ಕಾಮ, ಮೋಕ್ಷಂ" ಗಳೆಂಬ ಪುರುಷಾರ್ಥ ಚತುಷ್ಟಯಕ್ಕಿದೇ ಮುಖ್ಯ ಸಾಧನವು.

ಪುರಾಣಶ್ರವಣಫಲ ನಿರೂಪಣಂ.

ಈ ಮಹದಾಖ್ಯಾನಮಂ ಕೇಳ್ದ ಬಂಜೆಯಾದೊಡಂ ಪುತ್ರನಂ ಪಡೆವಳು. ಕನ್ಯಾರ್ಥಿಯಾದವಂಗೆ ಕನ್ಯಾಲಾಭವಹುದು. ಹಾಗೆಯೇ ಧನಾರ್ಥಿಗೆ ಧನಮುಂ ವಿದ್ಯಾರ್ಥಿಗೆ ವಿದ್ಯಮುಂ ರಾಜ್ಯಾರ್ಥಿಗೆ ರಾಜ್ಯಮುಂ ಲಬ್ಧವಹುದು. ಇದಲ್ಲದೆಯು ಮೀಮಾಖ್ಯಾನಮಂ ದಂಪತಿಗಳು ನಿಯಮದತ್ತಣಿಂ ಅನನ್ಯಮನಸ್ಕರಾಗಿ ಆಲಸ್ಯರಹಿತರೂ ಆಗಿ ಮರಳಿ ಮರಳಿ ಶ್ರವಣಂಗೆಯ್ಯುತ್ತಿರೆ, ಆ ಶ್ರವಣ

* ನೈಮಿಶವೆಂತಲು ನೈಮಿಷವೆಂತಲೂ ಎರಡು ವಿಧವಾಗಿಯೂ ಪ್ರಸಿದ್ಧಿಯುಂಟು.

ಮಾತ್ರದಿಂದಲೇ ಇಷ್ಟಾರ್ಥವೆಲ್ಲಮಂ ಪಡೆಸರೆಂಬ ವಿಷಯದಿ ಎಂದಿಗೂ ಸಂದೇಹಮಿಲ್ಲವು. ಎಲೈ ಮುನಿಗಳಿರಾ! ಮತ್ತಮೀ ವೃತ್ತಮುವಾದ ಪುರಾಣಮಂ ವಿಶ್ವಾಸದಿಂ ಪರಿಪೂಜಿಸಿ ದಂಪತಿಗಳು ಕುಮಾರಗತಮಾನಸರಾಗಿ ಆದ್ಯಂತಮಾಗಿ ಕೇಳ್ದೊಡೆ ಬಹು ಪುತ್ರರಂ ಪಡೆವರು. ಸಂಶಯವಿಲ್ಲ, ಸತ್ಯಮಿದು ಸತ್ಯಮಿದು, ಅದು ಕಾರಣ ದತ್ತಣಿಂ ನೀವೆಲ್ಲರು ಸಾದರಮಪ್ಪಂತೆ ಕೇಳ್ವುದು. ಮತ್ತೆ ಅನೇಕ ಉಪಾಖ್ಯಾನಂಗಳಿಂ ಸಮೇತಮಾಗಿ ಸರ್ವಾಭೀಷ್ಟ ಸಾಧಕಮಾದ ಈ ಆಖ್ಯಾನಮಂ ಆದರದಿಂ ನೀವು ಕೇಳ್ವುದು. ನಾನು ನಿಮಿಗೆ ಪೇಳ್ವೆನೆಂದು ನುಡಿದ ಸೂತಪುರಾಣಿಕರ ವಚನದಿಂ ಶ್ರೋತ್ರಾಮೃತಮಂ ಪಾನಮಾಡಿ ಆ ಮುನಿಗಳೆಲ್ಲರುಂ ವಿಚಿತ್ರಮಾದ ಶಿವಸುತ ಚರಿತ್ರಮಂ ಕೇಳಲಿಚ್ಛೈಸಿ, ಬಹಳ ತರಮಪ್ಪಂತೆ ರಮ್ಯಮಾದುದು ಎಂದು ಮುನಿಗಳೆಲ್ಲರೂ ಶ್ಲಾಘಿಸಿದರು.

ಗದ್ಯ|| ಇಂತು ಕರ್ಣಾಟಕ ಭಾಷಾವಿರಚಿತಮಾದ, ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನಭೂತ, ಶ್ರೀಮನ್ಮಹೀಶೂರ ಮಹಾಸಂಸ್ಥಾನ ಮಧ್ಯ ದೇದೀಪ್ಯಮಾನಾ ವಿಕಲ ಕಲಾನಿಧಿ, ಕುಲಕ್ರಮಾಗತರಾಜಕ್ಷಿತಿಪಾಲ ಪ್ರಮುಖ ನಿಖಿಲ ನಿಜರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ, ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮವೀರ ನರಪತಿ ಬಿರುದೆಂತೆಂಬರ ಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರ ಕಲಾನಿಧಿ, ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ಶ್ರೀಚಾಮರಾಜ ಮಹೀಪಾಲ ಧರ್ಮಪತ್ನಿ ಕೆಂಪನಂಜಮಾಂಬಾಗರ್ಭ ಸುಧಾಂಬುಧಿರಾಕಾ ಸುಧಾಕರಾಯ ಮಾನ ಚಾಮುಂಡಿಕಾಂಬಾವರ ಪ್ರಸಾದೋದ್ಭವರಾದ, ಆತ್ರೇಯಸಗೋತ್ರ ಆಶ್ವಲಾಯನಸೂತ್ರ ಋಕ್ಶಾಖಾನು ವರ್ತಿಗಳಾದ, ಶ್ರೀಮನ್ಮಹೀಶೂರ ಪುರವರಾಧೀಶ ಶ್ರೀಕೃಷ್ಣ ರಾಜ ವೊಡೆಯರವರು ಲೋಕೋಪಕಾರಾರ್ಥವಾಗಿ ರಚಿಸಿದ "ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ" ಸ್ಕಾಂದಪುರಾಣದ ಶಂಕರಸಂಹಿತೆಯಲ್ಲಿ ಶಿವರಹಸ್ಯ ಖಂಡದ ಸಂಭವಕಾಂಡದೋಳ್ ಸೂತಮುನಿ ಶೌನಕಾದಿಗಳ ಸಂವಾದವೆನ್ನುವ ಮೊದಲನೆಯ ಅಧ್ಯಾಯವು ಸಂಪೂರ್ಣಂ.

ಎರಡನೆಯ ಅಧ್ಯಾಯವು.

ಅನಂತರದಲ್ಲಿ ಸೂತಪೌರಾಣಿಕನು ಗೌರೀವಿನಾಯಕ ಸಮೇತನಾದ ಮಹಾದೇವನಂ ಧ್ಯಾನಿಸಿ, ಸತ್ಯವತೀ ಕುಮಾರನಾದ ವ್ಯಾಸನಂ ನೆನಪುಗೊಂಡು ಶುಭಕರವಾದ ವಾಕ್ಯಮಂ ನುಡಿದನದೆಂತೆನೆ,—

ಬ್ರಹ್ಮಾದಿದೇವತೆಗಳು ಪರಮೇಶ್ವರನನ್ನು ಪ್ರಾರ್ಥಿಸುವಿಕೆ.

ಎಲೈ ಶೌನಕಾದಿ ಮುನಿಗಳಿರಾ! ತಪಸ್ಸಿನಿಂದ ಕ್ಷೀಣಮಂ ನೈದಲ್ಪಟ್ಟ ಪಾಪಸಂಘಮುಳ್ಳ ನೀವೆಲ್ಲರು, ಶುಭಮಾದ ಕಥೆಯಂ ಮತ್ತೆ ಸ್ಕಂದನ ಸಂಬಂಧ ಮಾಗಿರ್ಪ ಅಪ್ರತಿಮಮಾಗಿ ಕಲಿಕಲ್ಮಷಹರಮಾದ ಕೀರ್ತಿಯಂ ಕೇಳ್ವುದದೆಂ ತೆಂದೊಡೆ. ಆದಿಕಲ್ಪದೊಳು ಯುಗಾವೃತಿಯಿಂದ ದ್ವಾಪರಯುಗಂ ಬರುತ್ತಿರ ಲಾಗಿ, ಸಕಲ ಪ್ರಜೆಗಳಿಗೂ ಬುದ್ಧಿಮಾಂದ್ಯ ವಶದಿಂದಾಗ ವೇದವೂ ವೇದಾ ರ್ಥವೂ ಸಕಲ ವಿದ್ಯೆಗಳೂ ಬುದ್ಧಿಗೋಚರಂಗಳಾದವು. ಅದುಕಾರಣದಿಂದಾಗ ಕೆಲಬರು ಅಜ್ಞಾನಮೋಹಿತರಾಗಿ ಜಗತ್ತಿಗೆ ಅನ್ನವೇ ಕಾರಣವೆಂದರು, ಮತ್ತೆ ಕೆಲವರು ಪ್ರಾಣವೇ ಕಾರಣವೆಂದರು. ಇನ್ನು ಕೆಲವರು ಆತ್ಮನಿಷ್ಠಂಗಳಾದ ಕರ್ಮಗಳನ್ನೇ ಈ ಜಗಕ್ಕೆ ಹೇತುವೆಂದರು. ಮತ್ತೂ ಕೆಲವರು ಸೂರ್ಯನಂ ಇನ್ನು ಕೆಲವರು ಅಗ್ನಿಯಂ ಮತ್ತು ಕೆಲವರು ವಾಯುವಂ ಮಿಕ್ಕ ಕೆಲವರು ಬ್ರಹ್ಮನ ಮತ್ತೆ ಕೆಲವರು ವಿಷ್ಣುವಂ ಮತ್ತು ಕೆಲವರು ಪ್ರಕೃತಿಪುರುಷರಂ ಮತ್ತು ಕೆಲವರು ಆತ್ಮನಿಷ್ಠಂಗಳಾದ ಕರ್ಮಗಳನ್ನೇ ಜಗತ್ತಿಗೆ ಕಾರಣಮೆಂ ದರು. ಎಲೈ, ಮುನಿಗಳಿರಾ! ಬೌದ್ಧ ಶಾಸ್ತ್ರಾಕುಲಿತರಾಗಿ ಬಹು ಮಾತನಾಡಿ ಪ್ರಯೋಜನವೇನು? ಈಶ್ವರನಿಂದ ಅನ್ಯಮಾದ ವಸ್ತ್ವಂತರಗಳನ್ನೆ ಜಗತ್ಕಾರಣ ವೆಂದರು. ಅದುಕಾರಣದಿಂದ ಕಾಲಗತಿಯಿಂ ಸರ್ವಾಧಿಕಾರವು ಸಂದಿಗ್ಧ ಮಾಗುತ್ತಿರಲಾಗಿ, ಆಗ ವಿಷ್ಣುವು ಮೊದಲಾದ ದೇವತೆಗಳು ಬ್ರಹ್ಮನೊಡನೆ ಕೂಡಿ, ಕಾಲಗತಿಯಿಂದ ಬುದ್ಧಿ ಮೋಹಕರಮಾದ ಕಾಲದ ಕೃತ್ಯಮಂ ಕಂಡು ಅಬಳಿಕ ಕೈಲಾಸವಾಸಿಯಾಗಿ ಸರ್ವಜ್ಞನಾದ, ಸಾಕ್ಷಾತ್ಪರಬ್ರಹ್ಮನಾದುದರಿಂದ ಭವರೋಗವೈದ್ಯನಾಗಿ, ಪಾರ್ವತೀ ದೇವಿಯೊಡಗೂಡಿ ದಿವ್ಯ ಸಿಂಹಾಸನಾರೂಢ ನಾದ, ಮಹಾದೇವನ ಸನ್ನಿಧಾನಮನ್ನೈದಿ ನಮಸ್ಕರಿಸಿ ಬಿನ್ನಪಂಗೈದರದೆಂತೆನೆ,—

ಎಲೈ, ಷಾಡ್ಗುಣ್ಯ ಸಂಪನ್ನನಾದ ಪರಮೇಶ್ವರನೆ! ಬ್ರಾಹ್ಮಣಾದಿ ದ್ವಿಜರು ಗಳುಂ ಸಕಲ ಪ್ರಾಣಿಗಳುಂ ಕಾಲವಶದಿಂದ ಬುದ್ಧಿಮಾಂದ್ಯವನ್ನೈದಿ, ಅನಂತರ ಗಳಪ್ಪುದರಿಂದ ಬುದ್ಧಿಭ್ರಂಶಮನ್ನೈದಿ, ಈಗ ವೇದಾಧ್ಯಯನಮುಂಬಿಟ್ಟು ಮೂರ್ಖರಾಗಿ, ವೇದಾಂತಾದಿ ಶಾಸ್ತ್ರಂಗಳಂ ಪಠಿಸವೇ ವಿಮೋಹಿತರಾಗಿ ನಿಮ್ಮಿಂದ ಅನ್ಯಮಾದ ವಸ್ತ್ವಂತರಮಂ ಜಗತ್ಕಾರಣಮೆಂದು ಪೇಳುವರು.

ಕೆಲವರು ಬ್ರಹ್ಮದೇವರನ್ನೂ ಮತ್ತೆ ಕೆಲವರು ದೇವೇಂದ್ರನಂ ಇನ್ನು ಕೆಲವರು ಸೂರ್ಯನಂ ಮತ್ತು ಕೆಲವರು ವಾಯುವಂ ಜಗತ್ಕಾರಣಮೆಂದು ನುಡಿವುತ್ತಾ, ಪರಬ್ರಹ್ಮವಾದ ನಿಮ್ಮನ್ನು ವಿಮೋಹಿತ ಬುದ್ಧಿಯಿಂದರಿಯದಿರುವರು. ಅದು ಕಾರಣದಿಂ ಸರ್ವಾಧಿಕಾರವು ಸಂದಿಗ್ಧವಾಗುತ್ತಿರಲಾಗಿ ಗುರು ಶಿಷ್ಯಕ್ರಮವು ನಷ್ಟಮಾಗಿ ಲೋಭ ಮೋಹಂಗಳಿಂದ ವ್ಯಾಪ್ತನಾದ ಚರಾಚರಾತ್ಮಕನಾದ ಈ ಜಗತ್ತು ಸ್ವಾಧ್ಯಾಯ ವಷಟ್ಕಾರ ವರ್ಜಿತಮಾಗಲಾಗಿ, ಯಜ್ಞಾಂಶ ಭೋಜಿಗಳಾದ ನಮಗೆ, ನೀನು ಹೊರತಾಗಿ ಗತಿಯಾರೆಂದು, ಈ ಪ್ರಕಾರದಿಂ ವಿಷ್ಣು ಮೊದಲಾದ ದೇವತೆಗಳು ಬಿನ್ನಪಂಗೈದು, ಬಹುಮಾನದಿಂದ ಪರಮೇಶ್ವರನಂ ಲೋಕಹಿತಕಾರ್ಯಮಂ ಬೆಸಗೊಂಡರು. ಆಗ ಜಗತ್ಪ್ರಭುವಾದ ಪರಮೇಶ್ವರಂ ಗಂಭೀರವಾದ ವಾಕ್ಯಗಳಿಂದ ವಿಷ್ಣ್ವಾದಿ ದೇವತೆಗಳಿಗಿಂತೆಂದನು. ಏನೆಂದರೆ,— ಎಲೈ, ವಿಷ್ಣುವೆ, ಬ್ರಹ್ಮನೆ! ನೀವೀರ್ವರುಂ ಭೂಮಿಯಲ್ಲಿ ಪ್ರತಿ ದ್ವಾಪರಯುಗದಲ್ಲಿಯುಂ ಕ್ರಮದಿಂ ವೇದವ್ಯಾಸಮುನಿಗಳಾಗಿ ಅವತರಿಸಿ, ವೇದ ಶಾಸ್ತ್ರಂಗಳೆರಡನ್ನು ಸಂಕ್ಷೇಪಿಸಿ ಸಮ್ಯಕ್ಕಾಗಿ ಮಾಳ್ಪುದು. ಎಂತೆಂದರೆ,— ಅನಂತಂಗಳಾದ ವೇದಶಾಸ್ತ್ರಂಗಳೆರಡು ಬುದ್ಧಿಹೀನರಾದ ಕಲಿಯುಗದ ಜನರಿಗೆ ಅಧಿಕಾರಯೋಗ್ಯಮಪ್ಪಂತೆ "ಕರ್ಮ, ಬ್ರಹ್ಮ" ವಿಧಾಯಕಂಗಳಾದ ಉಭಯ ಶಾಸ್ತ್ರಂಗಳ್ಗೆ, ಪನದಲ್ಲಿರ್ಪ ಋಷಿಗಳೊಡಗೂಡಿ, ಸೂತ್ರ ಮಾರ್ಗದಿಂದ ವಿಳಂಬ ಮಾಡದೇ ಶೀಘ್ರದಲ್ಲಿ ಸಂಗ್ರಹಿಪ್ಪುದು. ಅದಲ್ಲದೆ ಕಲಿಯುಗದಲ್ಲಿ ಪುಟ್ಟಿದ ಜನರ್ಗೆ ಹಿತಾರ್ಥಮಾಗಿ ನನ್ನ ಅನುಗ್ರಹದಿಂದ ದೇವತೆಗಳು ಆ ಬ್ರಹ್ಮದೇವ ರೊಡಗೂಡಿ ಭೂತಳದಲ್ಲಿ ವ್ಯಾಸಾದಿರೂಪದಿಂದವತರಿಸಿ ವೇದಂಗಳಂ ಪುರಾಣಂಗಳಂ ಧರ್ಮಶಾಸ್ತ್ರಂಗಳನೆಲ್ಲಮಂ ಸಂಕ್ಷೇಪದಿಂ ವಿವರಿಸಲಿ. ಎಂದು ಈಶ್ವರಾಜ್ಞೆಯು ಮಹತ್ವವಂಹೊಂದಲಾಗಿ ಈಪೂರ್ವೋಕ್ತಮಾದ ಯುಗಾವೃತ್ತಿಯಲ್ಲಿ ನಾರಾಯಣನು ಸತ್ಯವತೀ ಕುಮಾರನಾದ ವೇದವ್ಯಾಸನಾಗಿ, ನಾಲ್ಕು ವೇದಂಗಳಂ ಸಂಗ್ರಹಿಸಿ, ಬಾದರಾಯಣ ಪೈಲಾದಿ ಶಿಷ್ಯರ್ಗೆ ಅಸಾಂಕರ್ಯಮಪ್ಪಂತೆ, ಪ್ರತ್ಯೇಕ ಪ್ರತ್ಯೇಕಮಾಗಿ ವಿಭಾಗಿಸಿ, ಅಷ್ಟಾದಶಪ್ರಕಾರಮಾದ ಪುರಾಣಂಗಳಂ ನನಗೋಸುಗ, ಕೃಪೆಯಿಂದುಪದೇಶಿಸಿದನು.

ಪುರಾಣ ವಿಮರ್ಶೆಯು.

ಆ ಪುರಾಣಂಗಳು ಆವುವೆಂದೊಡೆ,—ಎಲೈ, ಮುನಿಗಳಿರಾ! ಬ್ರಾಹ್ಮವು, ಪಾದ್ಮವು, ವೈಷ್ಣವವು, ಶೈವವು, ಭಾಗವತವು, ಭವಿಷ್ಯತ್ತು, ನಾರದೀಯವು, ಮಾರ್ಕಂಡೇಯವು, ಆಗ್ನೇಯವು, ಬ್ರಹ್ಮಕೈವರ್ತವು, ಲೈಂಗವು, ವಾರಾಹವು, ಸ್ಕಾಂದವು, ವಾಮನವು, ಮಾತ್ಸ್ಯವು, ಕೌರ್ಮವು, ಗಾರುಡವು,

ಬ್ರಹ್ಮಾಂಡವು ಎಂದು ಈ ಪ್ರಕಾರದಿಂ ಹದಿನೆಂಟು ಪುರಾಣಂಗಳಿಹವು. ಈ ಪುರಾಣಂಗಳೊಳಗೆ "ಶೈವಮುಂ, ಭವಿಷ್ಯತ್ತುಂ, ಮಾರ್ಕಂಡೇಯ ಮುಂ, ಲೈಂಗವುಂ, ವಾರಾಹಮುಂ, ಸ್ಕಾಂದಮುಂ, ಮಾತ್ಸ್ಯಮುಂ, ಕೌರ್ಮವುಂ, ವಾಮನವುಂ, ಬ್ರಹ್ಮಾಂಡಮುಂ, ಈ ಹತ್ತು ಪುರಾಣಂಗಳುಂ ಶೈವಪುರಾಣಂಗಳು ಸಂಖ್ಯೆಯಿಂದ ಮೂರುಲಕ್ಷ ಗ್ರಂಥದಿಂ ಪರಿಮಿತವಾಗಿರ್ಪವು. ಈ ಹತ್ತು ಪುರಾಣಂಗಳಿಂದ ಪರಮೇಶ್ವರನ ಮಹಿಮೆಯು ಪ್ರಕಾಶಿಸಲ್ಪಡುತ್ತಲಿದ್ದೀತು. ಮತ್ತೂ ಈ ದಶ ಪುರಾಣಂಗಳು ಅಸಾಧಾರಣವಾದ ಮೂರ್ತಿಯಿಂದಲೂ, ಅಸಾಧಾರಣವಾದ ಪೆಸರಿಂದಲೂ ಶಿವನನ್ನೇ ಪೇಳುತಲಿರುವುದು. ಆ ಹತ್ತು ಪುರಾಣಂಗಳಲ್ಲಿಯೂ ಶಿವನೇ ಪ್ರಕಾಶಿಸುತ್ತಿರುವನು. ಹಾಗೆಯೇ ವಿಷ್ಣು ಮಾಹಾತ್ಮ್ಯಪ್ರಕಾಶವಾದ "ವಿಷ್ಣು ಪುರಾಣಮುಂ, ಭಾಗವತಮುಂ, ನಾರದೀಯವುಂ, ಗಾರುಡಪುರಾಣಮುಂ" ಈ ನಾಲ್ಕು ವೈಷ್ಣವ ಪುರಾಣಂಗಳು, ಆ ಬಳಿಕ "ಬ್ರಾಹ್ಮವು, ಪಾದ್ಮವು" ಈ ಎರಡು ಬ್ರಹ್ಮ ಪುರಾಣಂಗಳು, ಆಗ್ನೇಯವೊಂದೇ ಅಗ್ನಿ ಪುರಾಣವು, ಬ್ರಹ್ಮ ಕೈವರ್ತವೊಂದೇ ಸೂರ್ಯಪುರಾಣವೆಂದು ಈ ಪ್ರಕಾರದಿಂದ ಅಷ್ಟಾದಶ ಪುರಾಣಂಗಳು ವಿವರಿಸಲ್ಪಟ್ಟವು. ಇದರಲ್ಲಿ ವೈಷ್ಣವಂಗಳಾದ ನಾಲ್ಕು ಪುರಾಣಂಗಳು, ಈಶ್ವರ, ವಿಷ್ಣು ಇವರೀರ್ವರ ಸಾಮ್ಯಪ್ರತಿಪಾದಕಂಗಳಾಗಿ, ಬ್ರಹ್ಮಾದಿ ದೇವತೆಗಳಿಂದ ಅಧಿಕವಾದ ವಿಷ್ಣುವೇ ಜಗತ್ಪತಿಯೆಂದು ಪೇಳ್ವವು. ಬ್ರಹ್ಮ ಪುರಾಣದಲ್ಲಿ "ಬ್ರಹ್ಮ, ವಿಷ್ಣು, ಮಹೇಶ್ವರರಿಗೆ" ಸಮಾನತ್ವಮಂ ಪೇಳಿ, ಮಿಕ್ಕಿನ ದೇವತೆಗಳಿಗೆ ಅಧಿಕನಾಗಿ, ಬ್ರಹ್ಮನೇ ಜಗತ್ಪತಿಯೆಂದು ಪೇಳಲ್ಪಟ್ಟುದು. ಬ್ರಹ್ಮ ಕೈವರ್ತಮೆಂಬ ಸೂರ್ಯ ಪುರಾಣದೋಳ್ ಪ್ರಾತಃಕಾಲ ಮಧ್ಯಾನ್ಹಕಾಲ ಸಾಯಂಕಾಲಮೆಂಬ ಕಾಲತ್ರಯದಲ್ಲಿ ಸೂರ್ಯನು ಕ್ರಮದಿಂ ಬಹ್ಮಾ ವಿಷ್ಣು ಶಿವಾತ್ಮಕನೆಂದು ಪೇಳಲ್ಪಟ್ಟುದು. ಆಗ್ನೇಯದಲ್ಲಿ ವೈಶ್ವಾನರಂಗೆ ತ್ರಿಗುಣಾತ್ಮಕತ್ವವು ನಿರೂಪಿತವಾದುದು. ಆ ಆಗ್ನೇಯ, ಬ್ರಹ್ಮಕೈವರ್ತವೆಂಬ ಪುರಾಣದ್ವಯವು, ಅಗ್ನಿಭಾಸ್ಕರರೀರ್ವರು ಶಿವಾತ್ಮಕರಾಗಿ ಜಗದೀಶ್ವರನ ದೇಹವೆಂದು ಹೇಳುತ್ತಿರುವುದು. ಈ ಹದಿನೆಂಟು ಪುರಾಣಂಗಳಿಗೂ ಗ್ರಂಥಸಂಜ್ಞೆಯು ಪ್ರಮಾಣದಿಂ ನಾಲ್ಕು ಲಕ್ಷವು. ವೇದಂಗಳಲ್ಲಿಯುಂ ಶಾಸ್ತ್ರಂಗಳಲ್ಲಿಯೂ ಉಮಾಪತಿಯು ವಿಶ್ವಾಧಿಕನು, ಸಾಕ್ಷಾತ್ಪಾಪ ವಿಮೋಚಕನಾದ ಅಧಿಪತಿಯು, ಪರಮಾತ್ಮನು, ಪರಂಧಾಮನು, ಪರಂಜ್ಯೋತಿಸ್ವರೂಪನು, ಶುಭಕ್ಕೆ ಶುಭಕರನಾದ ಪಾವನಕ್ಕೆ ಪಾವನನಾದ, ಸರ್ವಮಂಗಳಾ ಸಹಿತನಾಗಿ ಸರ್ವಮಂಗಳ ಸ್ವರೂಪನೆಂದು ನಿತ್ಯನೆಂದು ಅಮೃತನೆಂದು ವೇದಾಂತವಾಕ್ಯಗಳು ಪ್ರತಿ.

ಪಾದಿಸುತ್ತಿರುವವು. ಹಾಗೆ ಪುರಾಣಂಗಳು ತ್ರಿಯಂಬಕನಾದ ಸಾಂಬಶಿವನಂ ಸ್ವತಂತ್ರನೆಂದು ಪಿತನೆಂದು ಅದ್ವೈತನೆಂದು ನಿರಂಕುಶನೆಂದು ಪ್ರತಿಪಾದಿಸುತ್ತಿರುವವು. ಆ ಹದಿನೆಂಟು ಪುರಾಣಂಗಳಲ್ಲಿ ಹದಿಮೂರನೆಯದಾಗಿ ಆರು ಸಂಹಿತೆಗಳಿಂದ ಕೂಡಿ ಲಕ್ಷಗ್ರಂಥದಿಂದ ವಿರಾಜಿತಮಾದ ಸ್ಕಾಂದಪುರಾಣಮಂ ಪೇಳ್ವೆನು, ಅದೆಂತೆನೆ,—

ಶ್ಲೋ|| ತತ್ರಸ್ಕಾಂದಂ ಪ್ರವಕ್ಷ್ಯಾಮಿ ಪುರಾಣೇಷು ತ್ರಯೋದಶಂ | ಸಂಹಿತಾಭಿಸ್ತಥಾಷಡ್ಭಿ ರ್ಲಕ್ಷಗ್ರಂಥೈರ್ವಿರಾಜಿತಂ || ದಶಚೈವ ಪುರಾಣಾನಿ ಸಾತ್ವಿಕಾನಿವಿದುರ್ಬುಧಾಃ || ಶ್ರದ್ಧಯಾನಿದ್ವಿಜವರೈಸ್ತು ಸಾಂಧರ್ಮಸ್ತು ಯತ್ರವೈ || ಸರ್ವಂಶುದ್ಧಂ ಸಮಾವಿಷ್ಟಂ ಸುಖಜ್ಞಾನಾಸ್ಪದಂಹಿಯತ್ || ವಿದ್ಯೋಪದೇಷ್ಟಾಯೋಗಿಭ್ಯ ಶ್ಶುದ್ಧಸ್ಫಟಿಕಸನ್ನಿಭಃ || ಸನಿದಾತಿಶಿವಃಕ್ವಾಪಿ ಬ್ರಾಹ್ಮಣಾಧಿಪತಿಃಪ್ರಭುಃ | ಬೃವಂತ್ಯೇವಂಪುರಾಣಾನಿ ಬ್ರಾಹ್ಮಣಾನಾಂಕಥಾ ಶ್ಶುಭಾಃ | ದಶಶೈವಾನಿಪುಣ್ಯಾನಿ ಹಿಂಸಾದೋಷಪರಾಙ್ಮುಖಾಃ | ವೈಷ್ಣವಾನಿಚ ಚತ್ವಾರಿ ತಾಮಸಾನಿಮುನೀಶ್ವರಾಃ | ಕ್ಷತ್ರಿಯಾಣಾಂಸ್ವಧರ್ಮಾಣಾಂ ತೇಷುತದ್ದೇವತಾಹರಿಃ | ತಮಃಕೃಷ್ಣಮುದಾಸೀನಂ ಕೂಟಕೃತ್ಯವಿಶಾರದಂ | ನಿದ್ರಾಲಸ್ಯಪ್ರಮಾದಾದಿ ವಂಚನಾದ್ಯಾಸ್ತುತಾಮಸಾಃ | ನಿದ್ರಾಲಸ್ಯಪ್ರಮಾದಾದ್ಯಾ ತಾಮಸಾಃಪರಿಕೀರ್ತಿತಾಃ | ಕೃಷ್ಣೋವಿಷ್ಣುಸ್ಸ್ಮೃತ ಶ್ಶೇಷಶಾಯಾಭಕ್ತವಿಮೋಹಕಃ | ತೇಷುಚಕ್ಷತ್ರಿಯಾಣಾಂಚ ಧರ್ಮಾವಿಷ್ಟೈರುದಾಹೃತಾಃ | ಬ್ರಾಹ್ಮೇತು ರಾಜಸೇನ್ಯೈಶ್ಯಸೇವ್ಯೇ ಸರ್ವತ್ರಸಮ್ಮತೇ | ದುಃಖಾಸ್ಪದಂರಕ್ತವರ್ಣಂ ಚಂಚಲಂಚ ರಜೋಮತಂ | ಗುಣತ್ರಯಸಮಾಯುಕ್ತಂ ಆಗ್ನೇಯಂಸೌರಮೇವಚ | ತಸ್ಮಾಚ್ಛೈವಾನಿವಿಪ್ರಾಣಾಂ ಪುರಾಣಾನಿಹಿತಾನಿಹಿ | ತೇಷ್ವಪೀದಂಮುನಿಶ್ರೇಷ್ಠಾಃ ಸ್ಕಾಂದಂಸುಖಮನುತ್ತಮಂ | ಸರ್ವವೇದಾಂತಸಾರತ್ವಂ ಪಂಚಾಶತ್ಖಂಡ ಮಂಡಿತಂ || ಸಂಹಿತಾಭಿಸ್ತಥಾಷಡ್ಭಿರ್ಯುಕ್ತಂ ಪರಮಪಾವನಂ | ಆದ್ಯಾಸನತ್ಕುಮಾರೋಕ್ತಾ ದ್ವಿತೀಯಾ ಸೂತಸಂಹಿತಾ | ತೃತೀಯಾಸಂಹಿತಾಬ್ರಾಹ್ಮೀ ತುರೀಯಾವೈಷ್ಣವೀಮತಾ | ಪಂಚಮೀಶಾಂಕರೀ ಜ್ಞೇಯಾಷಷ್ಠೀಯಾಸೌರ ಸಂಹಿತಾ | ಆದ್ಯಾತುಪಂಚಪಂಚಾ ಶತ್ಸಹಸ್ರೈಶ್ಶ್ಲೋಕಕೈಸ್ತಥಾ | ದ್ವಿತೀಯಾ ಸಂಹಿತಾವಿಪ್ರಾಃ ಷಟ್ಸಹಸ್ರೈರಲಂಕೃತಾ | ತ್ರಿಸಹಸ್ರೈರ್ಯುತಾಬ್ರಾಹ್ಮೀ ಪಂಚಭಿರ್ವೈಷ್ಣವೀಮತಾ | ತ್ರಿಂಶದ್ಭಿಶ್ಶಾಂಕರೀಯುಕ್ತಾ ಖಂಡೈರ್ದ್ವಾದಶ ಭಿರ್ಯುತಾ| ಷಷ್ಠೀತುಸೌರಸಂಯುಕ್ತಾ ಸಹಸ್ರೈಕಕೇನಸಾ| ಲಕ್ಷಗ್ರಂಥೈರ್ಯುತಂ ಸ್ಕಾಂದಂ ಪಂಚಾಶತ್ಖಂಡಮಂಡಿತಂ ||

ಇದರ ತಾತ್ಪರ್ಯವು|| ಈ ಶೈವಂಗಳಾದ ಹತ್ತು ಪುರಾಣಂಗಳು ಸಾತ್ವಿ

ಕಂಗಳೆಂದು ವಿದ್ವಾಂಸರು ಪೇಳುವರು, ಅದು ಕಾರಣದಿಂದ ಬ್ರಾಹ್ಮ ಣೋತ್ತಮರಿಂದ ವಿಶ್ವಾಸದಿಂ ಪರಿಗ್ರಹಿಸತಕ್ಕವು. ಆ ಬ್ರಾಹ್ಮಣ ಸಾತ್ವಿಕ ಧರ್ಮಂಗಳನ್ನೇ ಈ ಪುರಾಣಂಗಳು ಪ್ರತಿಪಾದಿಸುತ್ತಿರುವವು. ಆವುದಾನೊಂದು ಕಾರಣದಿಂದ, ಸುಖಜ್ಞಾನಾಸ್ಪದವಾದ ಸತ್ವವೂ ಶುದ್ಧವೂ ಸತ್ವವೆಂದು ನಿರೂಪಿತವಾದುದು. ಯೋಗಿಗಳ್ಗೆ ದಿವ್ಯೋಪದೇಶಕನಾದ ಶಿವನು, ಶುದ್ಧ ಸ್ಫಟಿಕ ಸಂಕಾಶನಾಗಿ, ಬ್ರಾಹ್ಮಣಾಧಿಪತಿಯಾದುದರಿಂದ ಆವಲ್ಲಿ ಜಿತನಿದ್ರನಾಗಿ ಹನು. ಈ ಸತ್ವಂಗಳಾಗಿ ಶೈವಂಗಳಾದ ಹತ್ತು ಪುರಾಣಂಗಳುಂ ಬ್ರಾಹ್ಮಣರ ಸಾತ್ವಿಕ ಧರ್ಮಗಳನ್ನೇ ಹಿಂಸಾಪರಾಙ್ಮುಖಂಗಳಾಗಿ ನಿರೂಪಿಸುತ್ತಿರುವವು. ವೈಷ್ಣವಂಗಳಾದ ನಾಲ್ಕು ಪುರಾಣಂಗಳು ತಾಮಸಂಗಳೆಂದು ಮುನೀಶ್ವರರಿಂ ಪೇಳಲ್ಪಡುತ್ತವೆ. ಆ ತಾಮಸ ಪುರಾಣಂಗಳೊಳು ತಾಮಸಾಧಿ ದೈವತಮಾದ ಹರಿಯುಂ ಕ್ಷತ್ರಿಯರ್ಗೆ ಶ್ರಾವ್ಯಂಗಳಾದ ಧರ್ಮಂಗಳುಂ ಪೇಳಲ್ಪಡುತ್ತಿರು ವವು. ಆ ತಮಸ್ಸು ಕೃಷ್ಣವರ್ಣವಾಗಿ ಕೂಟಕೃತ್ಯದಲ್ಲಿ ನಿಪುಣವಾಗಿಹುದು. ನಿದ್ರಾಲಸ್ಯ ಪ್ರಮಾದಾದಿಗಳು ಆ ತಮೋಗುಣವೆಂದು ಪೇಳಲ್ಪಟ್ಟುದು. ಬ್ರಹ್ಮ ಸಂಬಂಧಮಾದ ಪುರಾಣದ್ವಯವು ರಾಜಸಗುಣ ಪ್ರತಿಪಾದಕ ಮಪ್ಪುದರಿಂದ ವೈಶ್ಯ ಸೇವ್ಯಂಗಳೆಂದು ಸರ್ವಸಮ್ಮತವು, ರಜೋಗುಣ ದುಃಖಾಸ್ಪದಮಾಗಿ ಚಂಚಲಮೆಂದು ಸಮ್ಮತವು. ಆಗ್ನೇಯ ಸೌರಂಗಳೆಂಬ ಪುರಾಣದ್ವಯವು ಗುಣತ್ರಯ ಸಮೇತವು. ಅದುಕಾರಣದಿಂದ ಶೈವಂಗಳಾದ ಪುರಾಣಂಗಳು ಬ್ರಾಹ್ಮಣರ್ಗೆ ಹಿತಂಗಳಹುದು. ಎಲೈ, ಮುನಿಗಳಿರಾ ! ಆ ಶೈವಪುರಾಣಂಗ ಳೊಳಗೆ ಸ್ಕಾಂದಪುರಾಣವು ಉತ್ತಮಮಾದ ಸುಖಪ್ರದವು. ಈ ಸ್ಕಾಂದಪುರಾ ಣವು ಸರ್ವವೇದಾಂತಮಾಗಿ ಪಂಚಾಶತ್ಖಂಡಮಂಡಿತಮಾಗಿ, ಷಟ್ಸಂಹಿತಾತ್ಮಕ ಮಾಗಿಹುದು. ಅಲ್ಲಿ ಮೊದಲಲ್ಲಿ ಸನತ್ಕುಮಾರ ಸಂಹಿತೆಯು, ಎರಡನೆಯದು ಸೂತಸಂಹಿತೆಯು, ಮೂರನೆಯದು ಬ್ರಹ್ಮಸಂಹಿತೆಯು, ನಾಲ್ಕನೆಯದು ವೈಷ್ಣವಸಂಹಿತೆಯು ಐದನೆಯದು ಶಂಕರಸಂಹಿತೆಯು, ಆರನೆಯದು ಸೌರ ಸಂಹಿತೆಯೆಂದು ಈ ಸಂಹಿತಂಗಳೊಳಗೆ ಮೊದಲು ಸನತ್ಕುಮಾರ ಸಂಹಿತೆಯು ಐವತ್ತೈದು ಸಾವಿರ ಶ್ಲೋಕ ಸಮೇತಮಾಗಿಹುದು. ಎರಡನೆಯ ಸೂತ ಸಂಹಿತೆಯು ಆರು ಸಾವಿರ ಶ್ಲೋಕಂಗಳಿಂದ ಅಲಂಕೃತಮಾಗಿಹುದು. ಮೂರ ನೆಯ ಬ್ರಹ್ಮಸಂಹಿತೆಯು ಮೂರು ಸಾವಿರ ಶ್ಲೋಕಗಳಿಂ ಯುತಮಾಗಿಹುದು. ನಾಲ್ಕನೆಯದಾದ ವೈಷ್ಣವ ಸಂಹಿತೆಯು ಐದು ಸಾವಿರ ಶ್ಲೋಕಗಳಿಂದಿಹುದು. ಐದನೆಯದಾದ ಶಂಕರಸಂಹಿತೆಯು ಮುವ್ವತ್ತು ಸಾವಿರ ಶ್ಲೋಕದಿಂದ ಹನ್ನೆ ರಡು ಖಂಡಂಗಳಿಂದ ವಿರಾಜಿತಮಾಗಿಹುದು. ಆರನೆಯ ಸೌರಸಂಹಿತೆಯು

ಸಾವಿರ ಶ್ಲೋಕದಿಂದಿಹುದು. ಈ ಪೂರ್ವೋಕ್ತಪ್ರಕಾರದಿಂ ಲಕ್ಷ ಗ್ರಂಥಗಳಿಂ ಸಮೇತಮಾದ ಈ ಸ್ಕಾಂದಪುರಾಣವು ಪಂಚಾಶತ್ಖಂಡ ಮಂಡಿತಮಾಗಿಹುದು. ಎಲೈ ಮುನಿಗಳಿರಾ! ಆ ಪ್ರಸಿದ್ಧಮಾದ ಸ್ಕಾಂದಪುರಾಣಮಂ ನಿನಗೆ ಪೇಳುವೆನ ದೆಂತೆನೆ:— ಆ ಸ್ಕಾಂದಪುರಾಣದೊಳು ಮುವ್ವತ್ತು ಸಾವಿರ ಶ್ಲೋಕಂಗಳಿಂದ ವಿಸ್ತರದಿಂ ನಿರೂಪಿತಮಾದ ಆವ ಶಂಕರಸಂಹಿತೆಯು ವೇದಸಮ್ಮತಮಾಗಿ ಪೇಳಲ್ಪಟ್ಟುದೋ, ಈ ಸಂಹಿತೆಯೊಳು ಮೊದಲಲ್ಲಿ ಹದಿಮೂರು ಸಾವಿರ ಶ್ಲೋಕಂಗಳಿಂದ ಸಪ್ತ ಕಾಂಡಂಗಳಿಂದ ಅಲಂಕೃತಮಾದ ಶಿವರಹಸ್ಯಖಂಡ ವನ್ನು, ನಿಮಗೆ ಪೇಳುವೆನು. ಅಲ್ಲಿ ಮೊದಲಲ್ಲಿ ಸಂಭವಕಾಂಡವು. ಎರಡನೆ ಯದು ಆಸುರಕಾಂಡವು. ಮೂರನೆಯದು ಮಾಹೇಂದ್ರಕಾಂಡವು. ನಾಲ್ಕನೆ ಯದು ಯುದ್ಧಕಾಂಡವು. ಐದನೆಯದು ದೇವಕಾಂಡವು. ಆರನೆಯದು ಉಪದೇಶಕಾಂಡವು. ಎಲೈ, ಮುನಿಗಳಿರಾ! ಆ ಕಾಂಡಸಪ್ತಕದಲ್ಲಿಯೂ ಪೂರ್ವದಲ್ಲಿ ವೇದವ್ಯಾಸಮುನಿಯಿಂದ ಕುಮಾರಸ್ವಾಮಿಯ ಪರಾಕ್ರಮವ ಬಣ್ಣಿಸಲ್ಪಟ್ಟುದು. ಈ ಲೋಕದೊಳು ವಿದ್ವಾಂಸರ್ಗೆ ಆತ್ಮಮೋಹನಿವಾರಕ ಮಾಗಿ ಬ್ರಹ್ಮಸ್ವರೂಪ ಪ್ರಕಟಿತಮಾದ ಈ ವೃತ್ತಾಂತಮಂ ಆರು ಪೇಳ್ವರು, ಮತ್ತೆ ಶ್ರವಣಾಮೃತಪ್ರಾಯಮಾದ ಈ ಇತಿ ಹಾಸಮಂ ಆರು ಆದರದಿಂ ಕೇಳುತಿರುವರು, ಅವರೀರ್ವರುಂ ಭೂಮಿಯೊಳು ಸತಿಸುತ ಪಶು ಬಂಧು ಮಿತ್ರ ಕೂಡಗೂಡಿ ರಮಿಸುತ್ತಿಹರೆಂಬಲ್ಲಿಗೆ, ಇಂತು ಕರ್ಣಾಟಕಭಾಷಾ ವಿರಚಿತಮಾದ ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಸ್ಕಾಂದಪುರಾಣದ ಶಂಕರಸಂಹಿತೆಯಲ್ಲಿ, ಶಿವರಹಸ್ಯ ಖಂಡದ ಸಂಭವಕಾಂಡದೊಳು, ಸಾತ್ವಿಕಾದಿ ಗುಣಭೇದಂಗಳಿಂ ಪುರಾಣಂಗಳಂ ದೇವತೆಗಳಂ ವಿಭಾಗಿಸಿ, ಅದರೊಳು ಸಾತ್ವಿಕಗುಣ ಪ್ರಾಧಾನ್ಯ ನಾದ ಶಿವನಂ ಸರ್ವೋತ್ಕೃಷ್ಟನೆಂದು ಪೇಳಿ, ಆ ಶಿವನ ಸಂಬಂಧಮಾದ ಪುರಾ ಣಾತಿಶಯಮುಮಂ ಶೌನಕಾದಿಗಳಿಗೆ ಸೂತಪೌರಾಣಿಕನು ವಿವರಿಸಿದ ಕಥಾ ರೂಪಮಾದ ಎರಡನೆಯ ಅಧ್ಯಾಯವು ಸಂಪೂರ್ಣಂ.

ಮೂರನೆಯ ಅಧ್ಯಾಯವು.

ದಾಕ್ಷಾಯಣಿಯು ಪರಮೇಶ್ವರನನ್ನು ಪ್ರಾರ್ಥಿಸುವಿಕೆ. ಈಶ್ವರ ವರಪ್ರದಾನವು.

(ಸೂತರ ವಚನವು) ಎಲೈ ಮುನಿಗಳಿರಾ, ಪೂರ್ವಕಾಲದಲ್ಲಿ ಕೈಲಾಸ ಶಿಖರದೊಳು ಲೋಕಕ್ಕೆ ಸುಖಕರನಾದ ಶಂಕರಂಗೆ ದಕ್ಷಕನ್ನಿಕೆಯಾದ ಸತೀ

ದೇವಿಯು ಈ ರೀತಿ ಬಿನ್ನೈಸಿದಳು:— ಎಲೈ ಮಹಾದೇವನೆ! ತಮ್ಮ ವಾಕ್ಯವನ್ನುಲ್ಲಂಘಿಸಿ ನಾನು ನನ್ನ ತಂದೆಯ ಮಂದಿರಕ್ಕೆ ಪ್ರವೇಶಿಸುತಲಿರಲಾಗಿ, ನಿಮ್ಮ ವಚನೋಲ್ಲಂಘನದಿಂದ ದುಸ್ಸಹಮಾದ ಅವಮಾನವು ನನ್ನಿಂದ ಅನುಭೂತಮಾದುದು. ಆ ದಕ್ಷಬ್ರಹ್ಮನೆಂಬ ನಮ್ಮ ತಂದೆಯು ಯಾಗ ನಿಮಿತ್ತದಿಂ ವೀರಭದ್ರನಿಂದ ಹತನಾದನು. ಹಾಗಾದೊಡಂ ಜನಸಮೂಹವು ನನ್ನನ್ನು "ದಾಕ್ಷಾಯಣಿ" ಯೆಂದೇ ಪೇಳುತ್ತಿಹರು, ಅಕಟಕಟ! ಎಲೇ ತ್ರಿಭುವನೇಶ್ವರನೆ! ಆ ದಾಕ್ಷಾಯಿಣಿಯೆಂಬ ನಾಮಮಂ ಸೈರಿಸಲಾರೆನು, ಅದುಕಾರಣದಿಂ ದೀಗೆನಗೆ ಬಬ್ಬಾನೊಬ್ಬ ಪುರುಷನಲ್ಲಿ, ಜನಿಸುವಂದದಿ ವರಮಂ ಪಾಲಿಪುದೆಂದು ಸತೀದೇವಿಯು ಪ್ರಾರ್ಥಿಸಲಾಗಿ, ಮಹಾದೇವನು ಮುಗುಳುನಗೆಯಿಂದಿಂತೆಂದು ನುಡಿದನು. ಎಲೌ, ಪೂಜ್ಯಳಾದ ದಾಕ್ಷಾಯಣಿಯೆ! ಈ ಪೂರ್ವೋಕ್ತಮಾದ ಇಚ್ಛೆಯು ನಿನ್ನ ಹೃದಯದಲ್ಲಿ ದೃಢತರಮಾದುದು. ಆದೊಡೆ, ಈಗೆನ್ನ ವಾಕ್ಯದಿಂ ಹಿಮವತ್ಪರ್ವತರಾಜನಂ ತಂದೆಯಾಗಿ ಮಾಳ್ಪುದು. ಆ ಹಿಮವತ್ಪರ್ವತರಾಜನುಂ ನಿನ್ನನ್ನೆ ಪುತ್ರಿಯಾಗಿ ಪಡೆಯಲೋಸುಗ ನಿನ್ನ ಪಾದದ್ವಯಮಂ ಧ್ಯಾನಿಸುತ್ತಾ, ಪಿತೃದೇವತೆಗಳ ಮಾನಸ ಪುತ್ರಿಯಾದ ಮೇನಕಾದೇವೀ ಸಹಿತನಾಗಿ ಅತ್ಯಂತ ತಪಮನಾಚರಿಸುತಲಿರುವನು. ನೀನು ಅವರೀರ್ವರ್ಗೆಯೂ ಪುತ್ರಿಯಾಗೆಂದು ಪರಮೇಶ್ವರಂ ನಿರೂಪಿಸಲಾಗಿ, ಆ ಸತೀದೇವಿಯು ಜನನಾಸಕ್ತಿಯುಳ್ಳವಳಾದಳು.

ಹಿಮವಂತ ಮೇನಕೆಯರ ತಪೋನಿಷ್ಠೆ.

ಇತ್ತಲಾ ಹಿಮಾಚಲವು ತಾಪಸವೇಷಮಂ ಧರಿಸಿ ತೀರದೊಳು ಲತೆಗಳೋಪಾದಿಯಲ್ಲಿ ಜಡೆಗಳಿಂದಾವೃತನಾಗಿ, ಸೂಕ್ಷ್ಮಮೌಂಜೀ ಮೇಖಲೆಯಂ ಧರಿಸುತ ಕೃಷ್ಣಾಜಿನಧಾರಿಯಾಗಿ, ಅಧ್ಯಾತ್ಮರತನಾಗಿ, ಭಸ್ಮ ರುದ್ರಾಕ್ಷ ವಿಲಸಿತ ದೇಹನಾಗಿ, ಶಾಂತನಾಗಿ ದಾಂತನಾಗಿ ಜಿತಕ್ರೋಧನಾಗಿ ಮನಸ್ಸಿನಿಂದ ಅಖಿಲೇಶ್ವರಿಯಾದ ಆ ಸತೀದೇವಿಯನ್ನೇ ಧ್ಯಾನಿಸುತ, ಫಲಪರ್ಣಾಂಬುಪಾನಂಗಳಿಂ ನಿಜವೃತ್ತಿಯಂ ಭಾವಿಸುತ, ಗ್ರೀಷ್ಮಋತುವಿನಲ್ಲಿ ಸೂರ್ಯನಲ್ಲಿರಿಸಲ್ಪಟ್ಟ ದೃಷ್ಟಿಯುಳ್ಳವನಾಗಿ, ಪಂಚಾಗ್ನಿಮಧ್ಯಸ್ಥನಾಗಿ, ಬಳಿಕ ವರ್ಷಾಕಾಲದಲ್ಲಿ ತಾನೋರ್ವನೆ ಬಯಲೊಳು ನಿಂತು, ಮತ್ತಂ ಹೇಮಂತ ಋತುವಿನೊಳು ಹಿಮವ್ಯಾಪ್ತನಾಗಿ, ಅನಂತರ ಪೂರ್ವದ ಹಿಮವಂತನೋಪಾದಿಯಲ್ಲಿರುತ್ತಾ, ಶಿಶಿರ ಋತುವಿನಲ್ಲಿ ಜಲಮಧ್ಯಸ್ಥನಾಗಿ, ವಸಂತ ಋತುವಿನೊಳು ಸೂರ್ಯಾಭಿಮುಖನಾಗಿ ನಿರಂತರದಲ್ಲಿಯೂ ಮಂತ್ರಾಂತರ ಪರಾಙ್ಮುಖನಾಗಿ ದೇವೀಸೂಕ್ತಮನೇ ಪಠಿಸುತ ತೀವ್ರತಪಮನಾಚರಿಸುತ್ತಿರ್ದನು. ಆತನ ಪತ್ನಿ

ಯಾದ ಮತ್ತು ಯೋಗಿನಿಯಾದ ಮೇನಕಾದೇವಿಯು, ಆ ಪರ್ವತರಾಜನ ಶುಶ್ರೂಷಾನಿರತೆಯಾಗಿ, ಸಂತಸದಿಂ ನಿಜಚ್ಛಾಯೆಯೋಪಾದಿಯಲ್ಲಿ ಅನುವರ್ತಿಸುತ್ತಿರ್ದಳು. ಇಂತು ನಿಜಸತಿಸಮೇತನಾಗಿ ತಪೋನಿಷ್ಠನಾಗಿರ್ಪ ಹಿಮವತ್ಪರ್ವತರಾಜಂಗೆ ಬಹುಕಾಲವತಿಕ್ರಮಿಸುತಿರಲಾಗಿ, ಆಗ ಮಹಾದೇವಿಯು ಹಿಮವಂತಂಗೆ ಪ್ರಸನ್ನಳಾದಳದೆಂತೆನೆ.

ಪರ್ವತರಾಯನಿಗೆ ದೇವಿಯ ಪ್ರಸನ್ನತೆ.

ಹಿಮವಂತನು ಮಾನಸಮೆಂಬ ಸರಸ್ಸಿನಲ್ಲಿ ಸ್ನಾನಾರ್ಥವಾಗಿ ವಿಹರಿಸುತ್ತಿರಲಾಗಿ, ದೈವಗತಿಯಿಂದ ಕನ್ಯ್ಯದಿಲೆಯ ಮೇಲಣ ಭಾಗದಲ್ಲಿ ಜಗನ್ಮಾತೆಯು ಕನ್ನಿಕೆಯಂತೆ ಆವಿರ್ಭವಿಸಿದಳು. ಆಗ ಹಿಮವಂತನು ಈಶ್ವರ ವಾಮಾರ್ಧಾಂಗಿಯಾಗಿ ಜಗತ್ಸ್ಥಿತಿಗೆ ಕಾರಣಮಾದ, ಚತುರ್ಭುಜೆಯಾದ ತ್ರಿನೇತ್ರೆಯಾದ ಚಂದ್ರಬಿಂಬ ನಿಭಾನನೆಯಾದ ಮಹಾದೇವಿಯಂ ಕಂಡು, ನಿಧಿಯಂ ಪಡೆದ ನಿರ್ಧನನ ತೆರದಿ ಸಂತುಷ್ಟನಾಗಿ, ದೇವಿಗೆ ವಂದನೆಗೈದು, ಆ ಮಹಾದೇವಿಯಂ ಪರಿಗ್ರಹಿಸಿ, ಸಂತೋಷದಿಂದ ನಿಜಗೃಹಮಂ ಪ್ರವೇಶಿಸುತ್ತಿರಲಾಗಿ, ಅಲ್ಲಿ ತನ್ನ ಪಟ್ಟದರಸಿಯಾದ ಮೇನಕೆಯು, ತಪೋವನದಿಂದ ನಿವೃತ್ತನಾದ ನಿಜಪತಿಯಂ ಶೀಘ್ರದಿಂ ಪಾದಯುಗ್ಮವಂ ಪಿಡಿದು ಸಾದರಮಪ್ಪಂತೆ ಇದಿರ್ಗೊಂಡು ವಂದಿಸಿ, ಆ ಪರ್ವತರಾಜನ ಹಸ್ತದಲ್ಲಿ ತ್ರೈಲೋಕ್ಯಜನನಿಯಾದ ದೇವಿಯಂ ಕಂಡು ಬಳಿಕ ಆ ಬಾಲಿಕೆಯಂ ನಿಜ ಹಸ್ತಂಗಳಿಂದ ಪರಿಗ್ರಹಿಸಿ, ಆಕೆಯಂ ಸಂತಸದಿಂ ತೊಡೆಯೊಳ್ಕುಳ್ಳಿರಿಸಿ, ಆ ಕನ್ನಿಕೆಯಲ್ಲಿ ವಾತ್ಸಲ್ಯಮುಳ್ಳವಳಾಗಿ, ಕ್ಷೀರಪೂರಿತಂಗಳಾದ ಪಯೋಧರಂಗಳಂ ವಹಿಸುತಲಿರಲಾಗಿ, ಆಗ ದೇವಿಯು ಆ ತಾಯಿಯ ಮುಖವ ನೀಕ್ಷಿಸುತ ಸ್ತನ್ಯಪಾನಮಂ ಮಾಡುತ್ತಿರ್ದಳು. ಆ ಸಮಯದಲ್ಲಿ ಸ್ವಕೀಯ ಜನಂಗಳೇ (ಅಂತಃಕರಣಂಗಳು) ಆನಂದಮಂ ಪಡೆದುದು. ಖೇಚರರಾದ ಸಿದ್ಧಚಾರಣರು ಪೂಮಳೆಗರೆದರು. ದೇವದುಂದುಭಿಧ್ವನಿಯು ದಶ ದಿಕ್ಕುಗಳಂ ವ್ಯಾಪಿಸಿತು. ಸಮಸ್ತ ಮುನಿಗಳೂ ತಕ್ಷಣದಲ್ಲಿ ದಂಡಂಗಳಂ ಮೇಲಕ್ಕೆ ನೆಗಹಿ ನರ್ತಿಸಿದರು. ಮತ್ತೆ ಯೋಗೀಶ್ವರರ ಮಾನಸಂಗಳು ಆನಂದದಿಂ ಪರವಶಂಗಳಾದವು. ಬಳಿಕ "ಇಂದ್ರ" ಅಗ್ನಿ, ಯಮ, ನಿಋಋತಿ, ವರುಣ, ವಾಯು, ಕುಬೇರ, ಈಶಾನ್ಯ, ಬ್ರಹ್ಮ, ವಿಷ್ಣು" ಎಂಬ ದಶದಿಕ್ಪಾಲಕರು ತಮ್ಮ ತಮ್ಮ ಪತ್ನಿಯ ಕೂಡಗೂಡಿ, ಗಣಂಗಳ್ವೆರಸಿ ಮಹೋತ್ಸವಮನ್ನಾಚರಿಸಿ, ಮೇನಕೆಯಂ ಹಿಮಾದ್ರಿರಾಜನಂ ಕೃತಾರ್ಥರೆಂದು ತಿಳಿದರು. ಆಗ ಮೇನಕೆಯುಂ ಹಿಮವಂತನುಂ ಕರಂಗಳಂ ಮುಗಿದು, ವಿನಯಪೂರ್ವಕಮಾಗಿ, ಉಮೆಯು ಜನನ ರಹಿತೆಯಾದೊಡಂ ತಮ್ಮಲ್ಲಿ ಜನಿಸಿದ ಕನ್ನಿಕೆಯಂ

ಹೇಗೋ ಹಾಗೆ ಆ ದೇವಿಯಂ ಬಣ್ಣಿಸಿದರು. ಮತ್ತಂ ಜಗಜ್ಜನನಿಯಾದ ಪಾರ್ವತೀದೇವಿಯಂ ಸ್ತುತಿಗೈದರದೆಂತೆನೆ.

ಪರ್ವತರಾಜ ದಂಪತಿಗಳು ದೇವಿಯನ್ನು ಸ್ತುತಿಸುವಿಕೆ.

ಆವಳೋರ್ವಳು ಪ್ರಥಮ ಸೃಷ್ಟಿಯಾಗಿ ಆದಿಯಲ್ಲಿ ಮಹೇಶ್ವರನ ಪ್ರಜ್ಞಾ ರೂಪವಾಗಿ ಪ್ರವೇಶಿಸಿ ಪೋರ್ವಳಾಗಿಯೇ ಸಂಚರಿಸುತ್ತಿದ್ದಳೋ, ಆಕೆ ಗೋಸುಗ ನಮಸ್ಕಾರವು, ಮತ್ತಮಾವಳೋರ್ವಳು ಪರಮೇಶ್ವರನ ಶಕ್ತಿಯಿಂ ಶರೀರಮುಂ ಅಧಿದೈವತಮುಂ ಅಜ್ಞಾನಮುಂ ಇಚ್ಛೆಯುಂ ಕ್ರಿಯೆಯುಂ ಮನಮುಂ ಸಕಲಮುಂ ತಾನಾಗಿರ್ಪಳೋ, ಆ ದೇವಿಗೋಸುಗ ನಮಸ್ಕಾರವು. ಇದಲ್ಲದೆ ಸರ್ವಮಂಗಳೆಯಾದ ಯಾವ ದೇವಿಯಿಂದ ಪರಮೇಶ್ವರನು ಸುಮಂ ಗಳನೋ, ಸರ್ವಮಂಗಳ ಪ್ರದೆಯಾಗಿ ಜನನರಹಿತೆಯಾದ ಆ ದೇವಿಗೆ ನಾವೀ ರ್ವರುಂ ನಮಸ್ಕರಿಸಿದೆವು. ಸ್ವಕೀಯವಾದ ಮಾಯೆಯಂ ಅನುಕರಿಸಿದ ಆ ದೇವಿಯಂ ಅಭಿಜ್ಞರಾದವರು ಶ್ರೀ ಮಹಾಲಕ್ಷ್ಮಿಯೆಂದುಂ ಔಪಲೆಯೆಂದುಂ ಅಂಬಿಕೆಯೆಂದುಂ ವಿಜಯೆಯೆಂದುಂ ಆವನೆ ಯಾಕೆಯಂ ಆರ್ಯೆಯೆಂದುಂ ಪೇಳ್ವರು. ಮತ್ತಮಾದೇವಿಯುಂ ಪ್ರಸನ್ನರಾಗಿ ಶರಣಾಗತರಾದಂಥಾವರು ಈ ಜಗದಲ್ಲಿ ಸರ್ವಸಮ್ಮತರು. ಅವರ್ಗೆ ಧನಂಗಳುಂ ಕೀರ್ತಿಯುಂ ಲಭಿಸುವವು. ಪ್ರಾಣಿಗಳು ಲಲಾಟದಲ್ಲಿ ಬ್ರಹ್ಮದೇವರಿಂದ ಬರೆಯಲ್ಪಟ್ಟ ಅಶುಭಾಕ್ಷರಂಗಳು ಆ ದೇವಿಯ ಅನುಗ್ರಹದಿಂದ ವಿಲಯಂಗಳಾಗುತ್ತಿರುವವು. ಆಹಹ ! ಆವ ಳೋರ್ವಳ ಚರಣಾಂಭೋಜದ್ವಯದಲ್ಲಿರಿಸಲ್ಪಟ್ಟ ಚಿತ್ತವೃತ್ತಿಯುಳ್ಳ, ಜನರು ಗಳು ಪೊಂದಾನೊಂದು ವೇಳೆಯೊಳಾದೊಡಂ ಕ್ಲೇಶಮನೈದರು. ಆ ದೇವಿಯಂ ನಾವೀರ್ವರುಂ ಮರೆಯೊಕ್ಕೆವೆಂದು ಸ್ತುತಿಸುತ್ತಿರಲಾಗಿ, ಅವರೀರ್ವರ್ಗಂ ಜಗ ದಂಬಿಕೆಯಾದ ದೇವಿ ಯಿಂತೆಂದಳು. ಏನಂದರೆ:— ನೀವೀರ್ವರುಂ ನನಗೆ ತಾಯಿ ತಂದೆಗಳಾಗಿಹುದು. ನಾನು ಈಶ್ವರನ ವಾಮಾಂಕಸ್ಥಿತೆಯಾಗಿ ಪುರಾ ತನೆಯಾದ ಈಶನ ಶಕ್ತಿಯು, ಆ ಬ್ರಹ್ಮನಿಂ ಪ್ರಾರ್ಥಿತೆಯಾಗಿ ಈಶ್ವರಾಜ್ಞಾ ವಶವರ್ತಿನಿಯಾಗಿ, ಬೇರೆ ಮತ್ತೋರ್ವಳೆಂಬಂತೆ ದಕ್ಷನ ಪುತ್ರಿಯಾದ ಸತೀದೇವಿ ಯಾಗಿರ್ದೆನು. ಆ ದಕ್ಷನಾಮೊಡೆ ದೈವಹತನಾಗಿ ಶಿವದ್ರೋಹಪರನಾಗುತ್ತಿರ ಲಾಗಿ, ಆತನ ಸಂಬಂಧಮಾದ ತನುವಂ ತ್ಯಜಿಸಿ, ನಿಮ್ಮೀರ್ವರಂ ತಂದೆತಾಯಿ ಗಳನ್ನಾಗಿ ಪರಿಗ್ರಹಿಸಿಪೆನೆಂದು, ನುಡಿದು ಶೀಘ್ರದಿಂ ಅವರೀರ್ವರ್ಗಂ ತನ್ನ ಮಹಿಮಾವಿಷಯವಾದ ಸ್ಮರಣಮಂ ಪರಿಹರಿಸಿದಳು.

ದೇವಿಯು ಅಂತರ್ಧಾನವಾಗಿ ಶೈಶವಾಕೃತಿಯನ್ನು ತಾಳುವಿಕೆ.

ಅನಂತರದಲ್ಲಿ ಆ ದೇವಿಯು ಎರಡು ಭುಜಗಳಿಂ ಮತ್ತೆ ನೀಲೋತ್ಪಲ

ಸದೃಶಮಾದ ನೇತ್ರದ್ವಯದಿಂದುತ್ಪಲವೊಂದೆಯಾಗಿ, ಕನ್ನೈದಿಲೋಪಾದಿಯಲ್ಲಿ ಕಂಗೊಳಿಸುತ್ತಲಿರ್ಪ ತನುಕಾಂತಿಯುಳ್ಳವಳಾಗಿರ್ದಳು. ಬಳಿಕ ಮೇನಕೆಯುಂ ಹಿಮವಂತನುಂ ಇವರೀರ್ವರುಂ ಆ ದೇವಿಯ ಮಾಯೆಯಿಂದ ಪರಿಹರಿಸಲ್ಪಟ್ಟ ಜ್ಞಾನವುಳ್ಳವರಾಗಿ ಆಕೆಯಲ್ಲಿರಿಸಲ್ಪಟ್ಟ ವಾತ್ಸಲ್ಯದಿಂ ತಮ್ಮ ಪುತ್ರಿಯೆಂದೇ ಭಾವಿಸಿದರು. ಆಗ ಹಿಮವಂತನು ಅಮಾತ್ಯರೊಡಗೂಡಿ ಪುರೋಹಿತನಿಂದ ಜಾತಕರ್ಮವನಾಚರಿಸುತ್ತಿರಲಾಗಿ, ಆ ಪಟ್ಟಣದೊಳೆಲ್ಲಾ ಕಡೆಯಲ್ಲಿಯೂ ಎಲ್ಲರಲ್ಲಿಯೂ ಮಹತ್ತಾದುತ್ಸವವು ನೆಗಳ್ದುದು. ಮತ್ತಮಾ ಪುರಜನಂಗಳ್ಗೆ ಮಹತ್ತರಮಾದ ಲವಲವಿಕೆ ಪುಟ್ಟಿದುದು. ಗಿರಿರಾಜನಾದ ಹಿಮವಂತನು ಈ ದೇವಿಗೋಸುಗ ಹನ್ನೆರಡನೆಯ ದಿವಸದಲ್ಲಿ ನಾಮಕರಣಮಂ ಮಾಡಿ ಆರನೆಯ ತಿಂಗಳಲ್ಲಿ ಅನ್ನಪ್ರಾಶನಮುಂ ಸಪ್ತಮ ಮಾಸದೊಳು ನಿಷ್ಕ್ರಮಣಮನಾಚರಿಸುತ್ತಿರಲಾಗಿ, ದೇವಿಯ ಮನೋಹರಮಾದ ದೇಹವು ಸಾಣೆಯಿಡಲ್ಪಟ್ಟ ಮಾಣಿಕ್ಯದೋಪಾದಿಯಲ್ಲಿ ವೊಪ್ಪಿದುದು. ಇದಲ್ಲದೆ ಚಂದ್ರರೇಖೆಯೋಪಾದಿಯಲ್ಲಿ ದಿನದಿನಕ್ಕೆ ವರ್ಧಿಸುತ್ತಿರ್ಪ ತಂದೆಯ ಆನಂದಮೊಡಗೂಡಿ ದೇಹಮಂ ಪೋಷಿಸುತ್ತ ಪರ್ವತರಾಜಪುತ್ರಿಯಾದುದರಿಂದ "ಪಾರ್ವತಿ" ಎಂಬ ನಾಮಮಂ ಧರಿಸಿದಳು. ಆ ದೇವಿಗೆ ಐದನೆಯ ವರುಷವು ಪೂರ್ಣವಾಗುತ್ತಿರಲಾಗಿ ತಪಸ್ಸಿನಲ್ಲಿ ಆಸಕ್ತಿ ಪುಟ್ಟಿದುದು. ಬಳಿಕ ತಂದೆತಾಯಿಗಳಿಗೆ ತನ್ನ ಅಭೀಷ್ಟಮಂ ಪೇಳುತ್ತಿರಲಾಗಿ ತಾಯಿಯಾದ ಮೇನಕೀದೇವಿಯು ಎಲೆ, ಪುತ್ರಿಯೆ! ತಪಸ್ಸು ಬೇಡೆಂದು ನಿಷೇಧಿಸಲಾಗಿ ಬಳಿಕ * ಉಮೆಯೆಂಬ ಪೆಸರಂ ಧರಿಸಿದಳು. ಅನಂತರದಲ್ಲಿ ಹಿಮವಂತನು ಈ ದೇವಿಯ ಅನಿವಾರ್ಯಮಾದ ಸಂಕಲ್ಪವನರಿತು ಸಖಿಯರೊಡಗೂಡಿಸಿ ಸಂತಸದಿಂ ತಪಮನಾಚರಿಸಲೋಸುಗ ಕಳುಹಲಾಗಿ ಬಳಿಕ ಆ ಪಾರ್ವತೀದೇವಿಯು ಆ ಹಿಮವತ್ಪರ್ವತದಲ್ಲಿಯೇ ಗಿರಿಶಿಖರಮನಾಶ್ರಯಿಸಿ, ಕೆಳದಿಯರೊಡಗೂಡಿ, ಅನುಪಮಮಾದ ತಪಮಂ ಮಾಡುತ್ತಿರ್ದಳು. ಇತ್ತಲಾ ಪರಮೇಶ್ವರನು ಕೈಲಾಸದಲ್ಲಿ ಸನಕಾದಿ ಮುನೀಶ್ವರರ್ಗೆ ಚಿದಚಿದೀಶ್ವರ ಭಾಗಾತ್ಮಕಮಾಗಿ ರಹಸ್ಯಮಾದ ವೇದಾಂತಾಖ್ಯಾನಮಾದ ಸಿದ್ಧಾಂತಮಂ ಉಪದೇಶಿಸುತ್ತಿರ್ದನು. ಆಗ ಬ್ರಹ್ಮನ ಮಾನಸಪುತ್ರರಾದ ಸನಕಾದಿ ಯೋಗೀಶ್ವರರು ತಂದೆಯಾದ

* (ಉ = ಈಶ್ವರನು, ಮಾ = ನಿಷೇಧಾರ್ಥವು), ಅಂದರೆ (ಉಕಾರಶಬ್ದವಾಚ್ಯನಾಗಿರ್ಪ) ಪರಮೇಶ್ವರನು ವರಿಸುವದಕ್ಕೋಸುಗ (ಮಾ) ತಪಮನಾಚರಿಸಬೇಡೆಂದು ತನ್ನ ಮಾತೆಯಾದ ಮೇನಕೀದೇವಿಯಿಂದ ನಿಷೇಧಿಸಲ್ಪಟ್ಟಳಾದ ಕಾರಣದಿಂ ಉಮಾ, ಎಂಬ ಪೆಸರು ವಹಿಸಿದಳೆಂದು ಭಾವವು.

ಬ್ರಹ್ಮನಿಂದ ಜಗತ್ಸೃಷ್ಟಿಯಲ್ಲಿ ಪ್ರೇರಿತರಾಗಿ ಇಂತೆಂದರು. ಎಲೈ ಬ್ರಹ್ಮದೇವರೆ! ಈ ನಾವೆಲ್ಲರುಂ ಜಗತ್ಸೃಷ್ಟಿಯಲ್ಲಿ ಅಶುಭಮಾದ ಗತಿಯಂ ಅಂಗೀಕರಿಸುವದಿಲ್ಲವು. ಆವುದಾನೊಂದು ಕಾರಣದಿಂ ಮುಮುಕ್ಷುಗಳ್ಗೆ ಈಶ್ವರೋಪಾಸನೆಯೇ ಸುಖಕರವೆಂದು ನುಡಿದು, ಈ ವೈರಾಗ್ಯಬುದ್ಧಿಯಿಂದ ಎಲ್ಲರು ತಪವಂ ಗೈಯುತ್ತಿರಲಾಗಿ, ಪರಮೇಶ್ವರನಾವಿರ್ಭವಿಸಿ, ವಟವೃಕ್ಷಮೂಲವನಾಶ್ರಯಿಸಿ, ಅವ್ಯಯನಾದ ದಕ್ಷಿಣಾಮೂರ್ತಿಯಾಗಿ, ನಿರ್ಮಲರಾದ ಆ ಸನಕಾದಿಗಳ್ಗೆ ಅಧ್ಯಾಪನಂ ಮಾಡುತ್ತಿರ್ದನು. ಬಳಿಕಾ ಸನಕಾದಿಗಳು ಈಶ್ವರ ಮಾಯೆಯಿಂದ ಸುಸ್ಥಿರಮಾದ ಜ್ಞಾನವಂತರಾದಕಾರಣದಿಂ ಮರಳಿ ಉಮಾಪತಿಯಾದ ಪರಮೇಶ್ವರನಂ ಪ್ರಶ್ನೆಗೆಯ್ಯಲೋಸುಗ ರಜತಮಯಮಾದ ಶಿಲಾತಲಂಗಳುಳ್ಳ ಕೈಲಾಸ ಶಿಖರಮನೈದಿದರು. ಅಲ್ಲಿ ಅಮಿತಾನಂದ ನಿರ್ಭರಮಾದ ಶಂಭುವಿನ ಸ್ಮರಣಮಾತ್ರದಿಂದಲೇ ಮೋಕ್ಷಪ್ರದಮಾಗಿ ದಿವ್ಯಮಾದ ಭೋಗಪ್ರದಮಲ್ಲಿ ಶುಭಕರಮಾದ ದಿವ್ಯಭವನಮಂ ಪ್ರವೇಶಿಸಿ, ನಂದೀಶ್ವರನಮುಖದಿಂ ದೀಶ್ವರನ ಸಾನ್ನಿಧ್ಯಮನೈದಿ, ನಮಸ್ಕಾರವಂಗೈದು, ಈಶ್ವರನನ್ನೀಪರಿ ಪ್ರಾರ್ಥಿಸಿದರು.

ಮಹರ್ಷಿಗಳು ಪರಮೇಶ್ವರನನ್ನು ಪ್ರಾರ್ಥಿಸುವಿಕೆ.

ಎಲೈ ಪರಮೇಶ್ವರನೆ? ನೀನು ಲೀಲೆಯಿಂದ ಜಗವಂ ಸೃಜಿಸಿ ರಕ್ಷಿಸಿ ಅನುಗ್ರಹಿಸುತಿರ್ದೊಡಂ ತಿರೋಹಿತನಾಗುತ್ತಿರ್ದೆ. ಎಲೈ ಸರ್ವೇಶ್ವರನೆ? ಕೃಪಾನಿಧಿಯೆ? ನಿನ್ನ ಮಹಿಮೆಯಂ ತಿಳಿದವರ್ಯಾರು? ಈ ಪ್ರಾಣಿಗಳು ಆವ ಶಿವನೋರ್ವನ ಪಾದರಜಮನೊಂದನ್ನೇ ಆಶ್ರೈಸಿ, ಸಮುದ್ರದಂತೆ ದುಸ್ತರಮಾದ ಸಂಸಾರಮಂ ಮೃತ್ಯುವಂ ಸಹಾ ದಾಂಟುತಲಿರುವರೋ, ಅಂಥಾ ನಿನ್ನನ್ನೇ ಮರೆಹೊಕ್ಕ ದೇವಾದಿಗಳು ನಮಸ್ಕರಿಸುತ್ತಿರುವರು. ಬ್ರಹ್ಮಹತ್ಯಾದಿ ಪಾತಕಂಗಳಾದೊಡಂ ನಿನ್ನನ್ನು ಮುಟ್ಟದು. ಎಲೈ ಉಮಾಕಾಂತನೆ! ಬ್ರಾಹ್ಮಣರಾದ ನಾವೆಲ್ಲರು ಸಂಸಾರಭಯಭೀತರಾಗಿ ಬ್ರಾಹ್ಮಣಾಧಿಪತಿಯಾದ ನಿನಗೆ ಶರಣಾಗತರಾಗಿ, ನಿನ್ನನ್ನೊಬ್ಬನನ್ನೇ ಬಂಧಮೋಕ್ಷಕರನಾದ ಪ್ರಭುವೆಂದು ವಿಚಾರಿಸಿ, ಪಶುಪತಿಯಾದ ಈಶ್ವರನಾದ ಮತ್ತೂ ಪ್ರಭುವಾದ ನಿನಗೆ ನಾವು ಪಶುಗಳೆಂದು, ಸ್ತುತಿಸಿ ಪ್ರಾರ್ಥಿಸಿದರದೆಂತೆನೆ:— ಎಲೈ, ಪರಮೇಶ್ವರನೆ! ನೀನು ಆದಿಯಲ್ಲಿ ವಟವೃಕ್ಷಮನಾಶ್ರಯಿಸಿ, ನಮ್ಮನ್ನೆಲ್ಲರಂ ಕೃಪೋಪಪದ ಭೂಷಿತಂಗಳಾದ ಆಗಮಂಗಳಂ ನಿಖಿಲವೇದಂಗಳಂ ಅಧ್ಯಾಪನಮಂ ಮಾಡಿದಿ. ಆ ಆಗಮಂಗಳಯುಂ ವೇದಂಗಳಯುಂ ಕೃಪಾಬಲದತ್ತಣಿಂ ನಿನ್ನಿಂದ ಆವುದು ಕೆಲವು. ಸ್ವಾನುಭವ ಸಿದ್ಧಂಗಳಾದ ಜ್ಞಾನಂಗಳು

ವೇದಾಂತರೂಪಮಾಗಿ ಉಪದೇಶಮಾಡೊಡಂ ವಿಸ್ತರಮಪ್ಪುದರಿಂ ನಮಗೆ ಮನದಲ್ಲಿ ಸ್ಥಿರತರಮಾದುದಿಲ್ಲ:—ಎಲೈ, ಕೃಪಾನಿಧಿಯೆ! ಈಶ್ವರನೆ! ಕೃಪೆಯಿಂ ನಮಗೋಸುಗ ವಿಶ್ವೇಶ್ವರನಾದ ನೀನು ಮತ್ತೊಮ್ಮೆ ಸಂಗ್ರಹಿಸಿ ನಿರೂಪಿಸಬೇಕೆಂದು ಸನಕಾದಿಗಳಿಂ ಪರಮೇಶ್ವರನು ಪ್ರಾರ್ಥಿಸಲ್ಪಟ್ಟನು. ಬಳಿಕ ಪರಮೇಶ್ವರನು ಕಾರುಣ್ಯದಿಂದೀ ಸನಕಾದಿಗಳ್ಗೆ ಅಧ್ಯಾಪನಂ ಗೈಯಲುಳ್ಳವನಾಗಿ, ಅಖಿಲ ಗುರುಗಳ್ಗೆ ಶ್ರೀಗುರುವಾಗಿ ಕೋಟಿಸೂರ್ಯ ಪ್ರಕಾಶನಾಗಿ ನಂದಿಕೇಶ್ವರನಂ ನೋಡಿ ಬಳಿಕ ಈ ವಚನಮಂ ನಿರೂಪಿಸಿದನೆಂಬಲ್ಲಿಗೆ, ಇಂತು ಕರ್ಣಾಟಕ ಭಾಷಾ ವಿರಚಿತಮಾದ ಶ್ರೀ ಕೃಷ್ಣರಾಜವಾಣೀವಿಲಾಸವೆಂಬ ಸ್ಕಾಂದಪುರಾಣದ ಶಂಕರಸಂಹಿತೆಯಲ್ಲಿ, ಶಿವರಹಸ್ಯಖಂಡದಲ್ಲಿನ ಸಂಭವಕಾಂಡದ ಪಾರ್ವತೀದೇವಿಯ ಜನನಕ್ರಮಮುಂ ದಕ್ಷಿಣಾಮೂರ್ತ್ಯಾವಿರ್ಭಾವ ವಿವರಣಮುಂ ಈ ಕಥಾರೂಪಮಾಗಿಪ್ಪ ಮೂರನೆಯ ಅಧ್ಯಾಯವು ಸಮಾಪ್ತಮಾದುದು.

ನಾಲ್ಕನೆಯ ಅಧ್ಯಾಯವು.

ಸನಕಾದಿಗಳಿಗೆ ದಕ್ಷಿಣಾಮೂರ್ತಿಯು ಜ್ಞಾನಮುದ್ರಾದರ್ಶನ ಮಾಡಿಸುವಿಕೆ.

ಸೂತರ ವಚನವು:— ಎಲೈ, ಮುನಿಗಳಿರಾ ! ಈ ಪ್ರಕಾರಮಾಗಿ ಪರಮೇಶ್ವರನು ನಂದಿಕೇಶ್ವರನ ಮೊಗಮಂ ನೋಡಿ, ನುಡಿಯಲುದ್ಯೋಗಿಸಿದ ತದನಂತರದಲ್ಲಿ, ನಡೆದ ವೃತ್ತಾಂತಮಂ ಪೇಳ್ವೆನು, ಕೇಳುವಿರಾ; ಏನೆಂಬಿರೋ:— ತದನಂತರದಲ್ಲಿ ಭಗನೇತ್ರಹಾರಿಯಾಗಿ ಸರ್ವಕರ್ತನಾಗಿ ಜಗತ್ಪತಿಯಾಗಿ ಷಡ್ಗುಣೈಶ್ವರ್ಯ ಸಂಪನ್ನನಾದ ಪರಮೇಶ್ವರಂ, ಶಿಲಾದ ಪುತ್ರನಾದ ನಂದಿಕೇಶ್ವರನಂ ನೋಡಿ ಈ ರೀತಿಯಲ್ಲಿ ನಿರೂಪಿಸಿದನು:—ಎಲೈ, ನಂದಿಕೇಶ್ವರನೆ! ಎಷ್ಟು ಪರಿಯಂತರಮುಂ ಈ ಮುನಿಗಳಿಗೆ ಸುಖಪ್ರದನಾಗಿ ಉತ್ತಮಮಾದ ಜ್ಞಾನ ರಹಸ್ಯಮಂ ಪೇಳುವೆಂ. ನಾನು ಪೇಳುವ ಪರಿಯಂತರಮುಂ ನನ್ನ ವಾಕ್ಯ ಗೌರವದಿಂ * ಮನ್ಮಥನೋರ್ವನಾದೊಡಂ ಅಂತಃಪುರಕ್ಕೆ ಬರಲಾಗದೆಂದು ನಿರೂಪಿಸಿ, ಅಂತಃಪುರದ ಬಾಗಿಲೊಳು ಆ ನಂದಿಕೇಶ್ವರನ ನಿರಿಸಿ, ಆ ಸನಕಾದಿ ಮಹಾಮುನಿಗಳೊಡಗೂಡಿ ತನ್ನ ಭವನಮಂ ಪೊಕ್ಕು ಶೀಘ್ರದಿಂದುದಾರಾಂತಃ

* ಇಂತು ನಿರೂಪಿಸಿದುದರಿಂದ, ಮಾರನು ಪರಮೇಶ್ವರಂಗೆ ಪರಮ ಪ್ರೀತಿ ಪಾತ್ರನೆಂದು ತೋರುವುದು. ಈ ವಿಷಯವು ಮುಂದು ನಿರೂಪಿಸಲ್ಪಡುತ್ತದೆ.

ಕರಣ ಮುಳ್ಳವನಾಗಿ, ಅಲ್ಲಿ ವೀರಾಸನಮನಲಂಕರಿಸಿ, "ಆಚಾರ, ಕ್ರಿಯಾ, ಯೋಗಂ" ಗಳಲ್ಲಿ ಸುಶಿಕ್ಷಿತರಾದ ಆ ಸನಕಾದಿಗಳ್ಗೆ, ಕೃಪಾನಿಧಿಯಾದ ದಕ್ಷಿಣಾಮೂರ್ತಿ ಸ್ವರೂಪಮನಾಶ್ರೈಸಿ, ಇದೇ ಜ್ಞಾನಮುದ್ರೆಯೆಂದು ನುಡಿಯಲುದ್ಯೋಗಿಸುತ್ತಿರಲಾಗಿ, ಆ ಜ್ಞಾನಮುದ್ರೆಯಿಂದ ಮುನಿಗಳ್ಗೆ ಸಕಲ ಸಂದೇಹಂಗಳು ನಿವೃತ್ತಿಮಾದುದು. ಆ ಚಂದ್ರಶೇಖರನಾದ ಪರಮೇಶ್ವರನಂ ನೋಡಿ ಸರ್ವರೂ ಕೃತಾರ್ಥರಾದರು. ಬಳಿಕ ವ್ಯಾಘ್ರಚರ್ಮದ ಮೇಲೆ ವೀರಾಸನದಿಂ ಕುಳ್ಳಿರ್ದು, ಅಜ್ಞಾನೋಪರಿಭಾಗದಲ್ಲಿಡಲ್ಪಟ್ಟ ದಕ್ಷಿಣಪಾದಾರವಿಂದದ, ಮೇಲ್ಭಾಗದಲ್ಲಿ ಇರಿಸಿಕೊಳ್ಳಲ್ಪಟ್ಟ ವಾಮಪಾದಾರವಿಂದಮುಳ್ಳವನಾಗಿ, ಯೋಗಪಟ್ಟಿಗೆಯಿಂದ ಮನೋಹರಮಾದ "ಬ್ರಹ್ಮ, ಇಂದ್ರ, ವಿಷ್ಣು" ಯೋಗೀಂದ್ರಾದಿಗಳ್ಗಂ ಅಗೋಚರನಾದ ತ್ರಿನೇತ್ರನಾದ ಚಂದ್ರಶೇಖರನಾದ ನಿಜಕಾಂತಿಯಿಂದ ಜಗಮಂ ಬೆಳಗುವಂತೆ ಮಾಡುತಲಿರ್ಪ ಮತ್ತು ಚಂದ್ರ ಸೂರ್ಯಾಗ್ನಿ ಪ್ರಕಾಶಕನಾದ ಶಿವನನ್ನಾ ಸನಕಾದಿಗಳು ಸೇವಿಸುತ್ತಿರ್ದರು. ಆ ಸಮಯದಲ್ಲಿ ಇಂದ್ರಾದಿದೇವತೆಗಳು ಶೂರಪದ್ಮನೆಂಬ ಅಸುರಂಗೆ ಅಂಜಿದವರಾಗಿ ದೀಕ್ಷಾಂಗ ಪುರಸ್ಸರಮಾಗಿ ಕೈಲಾಸಪರ್ವತಮಂ ಪೊರ್ದಿದರು; ಯೇಕೆಂದರೆ:—

ಜ್ಞಾನಮುದ್ರಾಮುದ್ರಿತನಾದ ಪರಶಿವನ ದೆಸೆಯಿಂದುಂಟಾದ ಜಗತ್ತಿನ ದುಸ್ಥಿತಿಯ ವರ್ಣನೆ.

ಆಗ ಶಕ್ತಿಯು ತಪಮನಾಚರಿಸುತ್ತಿರಲಾಗಿ; ಆ ಶಕ್ತಿಗಧಿಪತಿಯಾದ ಶಿವನು ಈ ಪರಿ ಜ್ಞಾನಮುದ್ರೆಯಂ ಧರಿಸಲು, ಸಕಲ ಪ್ರಾಣಿಗಳ ಮನವು ಮನ್ಮಥಂಗೆ ಗುರಿಯಾಗಲಿಲ್ಲವು. ಅದುಕಾರಣದಿಂ ದೇವತೆಗಳು ಬಹು ದುಃಖಿತಮಾದ ಮನಮಂ ಧರಿಸಿದರದೆಂತೆನೆ:— ದೇವೇಂದ್ರನು ಶಚೀದೇವಿಯಲ್ಲಿ ಅಪ್ರೀತಿಯಂತಳೆದನು. ಹಾಗೆಯೇ ಬ್ರಹ್ಮನು ಸರಸ್ವತಿಯಲ್ಲಿಯುಂ ವಿಷ್ಣುವು ಮಹಾ ಲಕ್ಷ್ಮಿಯಲ್ಲಿಯುಂ ಪರಸ್ಪರಮಾಗಿ ಅಪ್ರಿಯಂ ತಳವುತ್ತಿರಲಾಗಿ; ಚೇತನಾ ಚೇತನಾತ್ಮಕಮಾದ ಜಗತ್ತು ವಿರಾಗಮಂ ಧರಿಸಿದುದು. ಅದು ಕಾರಣದಿಂ ಪ್ರಜೆಗಳೆಲ್ಲರುಂ ಅಭಿವೃದ್ಧಿಯನ್ನೈದಲಿಲ್ಲವು. ಮತ್ತು ಅಸುರ ಸಂಬಂಧಮಾದ ಬಾಧೆಯುಂ ಜಗತ್ತಿಗೆ ಅತ್ಯಂತಾಭಿವೃದ್ಧಿಯನ್ನೈದಿತು. ಈ ಉಪದ್ರವಂಗಳ್ಗೆ ಈಶ್ವರಾಜ್ಞೆಯೇ ನಿವಾರಕಮೆಂದು ಲವಲವಿಕೆಯಿಂದಲೇ ಶೂಲಪಾಣಿಯಾದ ಶಿವನ, ಸ್ಥಾನಮಾದ ಕೈಲಾಸಮನ್ನೈದಿದರು. ಆದರೂ ಆ ದೇವತೆಗಳು ಜ್ಞಾನನಿಷ್ಠನಾದ ಶಿವನ ಸಾನ್ನಿಧ್ಯಮಂ ಪಡೆಯಲಿಲ್ಲ. ಅಲ್ಲಿ ದೇವೇಂದ್ರನು ದೇವತೆಗಳೊಡಗೂಡಿ ಅಸುರರಿಂದುಪದ್ರುತಮಾದ ಲೋಕಂಗಳಂ ತಾನೇ ಸಲಹಬೇಕೆಂದು, ಅತ್ಯುಗ್ರಮಾದ ಮಹಾತಪಮನಾಚರಿಸಿದನು. ಮತ್ತು

ಕುಸುಮಾಯುಧನು ನೂರು ಸಂವತ್ಸರ ಪರ್ಯಂತವು ನಿರಾಕುಲನಾಗಿ ತಾಪಸ ವೇಷಮಂ ತಾಳ್ದು ನಿವೃತ್ತಾಧಿಕಾರಮಪ್ಪುದರಿಂ ಶಿವನಲ್ಲಿ ಪ್ರೀತಿಯಂ ಸ್ಥಿರಮಾಗಿ ಮಾಡಿ ರತಿದೇವಿಯಲ್ಲಿ ಪರಾಙ್ಮುಖನಾದನು. ಪ್ರಭುವಾಗಿ ಮಹಾತ್ಮನಪ್ಪುದರಿಂ, ಬ್ರಹ್ಮಮಾನಸಪುತ್ರರಾದ ಸನಕಾದಿಗಳ ಹೃದಯಸ್ಥಮಾದ ಮಹಾಮೋಹಮಂ ಕೃಪೆಯಿಂದ ಪರಿಹರಿಸುತ್ತಿದ್ದನು. ಆಗ ದೇವತೆಗಳು ಮಹತ್ತಾದ ತಪಸ್ಸಿನಿಂದ ವ್ಯರ್ಥಮಾದ ಶ್ರಮವುಳ್ಳವರಾಗಿ, ನಂದಿಕೇಶ್ವರಂಗೆ ನಮಸ್ಕರಿಸಿ ಬಿನ್ನೈಸಲಾಗಿ:—ಆ ನಂದಿಕೇಶ್ವರಂ ಎಲೈ ದೇವತೆಗಳಿರಾ! ಓರ್ವರುಂ ಪೊಳಕ್ಕೆ ಬರಕೂಡದೆಂದೀಶ್ವರಾಜ್ಞೆಯು; ಅದುಕಾರಣದಿಂದೀಗ ನಿಮಗೆ ಸಮಯವಲ್ಲವು; ನೀವಿಲ್ಲಿರಬೇಡಿರಿ; ಎಂದು ನುಡಿದು ನಿವಾರಿಸಿದವನಾಗಲು; ಆ ದೇವತೆಗಳು ಬ್ರಹ್ಮದೇವರಂ ನೋಡಲಿಚ್ಛೈಸಿ, ದೇವತೆಗಳಿಗೆ ಆಲಯಮಾದ ಮಹಾ ಮೇರುವನ್ನೈದಿದರು.

ಅಲ್ಲಿ ಬ್ರಹ್ಮದೇವರಿಗೆ ಮನೋಹರಮಾಗಿ ಅತ್ಯಂತ ಶೋಭನಮಾದ, ವಿಚಿತ್ರೋಪವನ ಯುಕ್ತಮಾದ ಪೊಕ್ಕರಣೆ ಭಾವಿಗಳಿಂದ ಆವೃತಮಾದ ಸರ್ವ ಕುಸುಮಂಗಳಿಂ ರಮ್ಯಂಗಳಾದ ವೃಕ್ಷಂಗಳಿಂದ ಭರಿತಮಾಗಿ, ಅತ್ಯಂತ ಶೋಭನಮಾದ “ಮನೋರಮೆ” ಯೆಂಬ ಪಟ್ಟಣಮುಂಟು. ಆ ಪುರವರವು “ಕಪಿತ್ಥ, ಅಶ್ವತ್ಥ, ಹಿಂತಾಳ, ಕದ್ವಾಳಿನೆಲ್ಲಿ, ಅಸನ, ವಿಭೀತಕ, ಮಾವು, ಇಮ್ಮಾವು, ವಟವೃಕ್ಷ, ಕಗ್ಗಲಿ, ನೇರಿಲು, ಖದಿರ, ಧವ, ಅಂಕೋಲೆ, ಹುಣಸೆ, ನಿಂಬೆ, ಯೆಕ್ಕೆ, ಬೇವು, ಖರ್ಜೂರ, ಯೆಳಚಿ, ವಿಳಿಲೇಬಾಳೆ, ಅಶೋಕ, ಕ್ರಮುಕ, ಸುರಹೊನ್ನೆ, ಬೆಲ್ಲಪತ್ರ, ಶ್ರೀಚಂದನ, ಪಾದರಿ, ಗೇರು, ಅಗಿಲು” ಎಂಬಿವು ಮೊದಲಾದ ವೃಕ್ಷಂಗಳಿಂ ಮತ್ತೆ ಕೆಲವು ವೃಕ್ಷಗಳಿಂದಲೂ ಶೋಭಿತಮಾಗಿಪುದು. ಅಲ್ಲಿ ಅತ್ಯಾಶ್ಚರ್ಯಂಗಳಾಗಿರುವ ನಾನಾಮಣಿ ಮಯೂಖಂಗಳ ಸಮೂಹಂಗಳಿಂದ ಉಜ್ವಲಂಗಳಾಗಿ ಮನೋಹರಂಗಳಾದ ಭವನಂಗಳುಂಟು. ಆವ ಪುರದೊಳು ರಾಗಕ್ಕೂ ಕ್ರೋಧಲೋಭಾದಿಗಳ್ಗೆಯೂ ಸ್ಥಿತಿಯಿಲ್ಲವೋ, ಆ ಪುರವರದಲ್ಲಿ ವೇದವರ್ಣ ಕಲ್ಪ ಮನೋಹರೆಯಾದ “ಭಾರತಿ” ಎಂಬ ಪ್ರಾಣಕಾಂತೆಯೊಡನೆ, ಮರುದ್ಗಣಂಗಳಿಂ ಪರಿಸ್ತೂಯಮಾನನಾಗಿ, ದಿವ್ಯ ಸಿಂಹಾಸನದೊಳು ಭಗವಂತನಾದ ಚತುರ್ಮುಖನಿರುವನು. ಆ ಪಿತಾಮಹನಂ ಕಂಡು ದೇವತೆಗಳೆಲ್ಲರು ಪೊಡಗೂಡಿ ಸಾದರಮಪ್ಪಂತು ಪರಮ ಭಕ್ತಿಯಿಂದ ವಂದನೆಗೈದು, ಕರಗಳಂ ಮುಗಿದು ಕೆಲದೊಳ್ನಿಂತವರಾಗಿ, ಆ ಕಮಲಾಸನನಾದ ಚತುರ್ಮುಖಂಗೆ ಮರಳಿ ವಂದಿಸಿ, ಬೃಹಸ್ಪತಿಯಂ ಮುಂದಿಟ್ಟು, ಸ್ತುತಿಸಿದರದೆಂತೆನೆ;—

ದೇವತೆಗಳು ಚತುರ್ಮುಖನನ್ನು ಸ್ತುತಿಸುವಿಕೆ.

ಎಲೈ ಚತುರ್ಮುಖನೆ! ನಮಗೆ ಮಾತೆಯುಂ ನೀನೆ, ಹಾಗೆ ಪಿತನುಂ ಗುರುವುಂ ಪಿತಾಮಹನುಂ ಭ್ರಾತೃವುಂ ಸ್ನೇಹಿತನುಂ ಸಹಾ ನೀನೆ, ಮತ್ತಂ ನಮಗೆ ಐಶ್ವರ್ಯಮುಂ ಅಧಿದೈವತಮುಂ ನೀನೇ ಹೌದು;—ಎಲೈ ಜೀವಾತ್ಮಕನೆ! ಜೀವಾತ್ಮರ್ಗೆ ಸಮಷ್ಟಿಯುಂ ವ್ಯಷ್ಟಿಯುಂ ನೀನೇ ಸರಿ; ತತ್ವಾತೀತನಾಗಿ ಪರಾತ್ಪರನಾದ ನೀನೇ ತತ್ವವು; ಮತ್ತು ತತ್ವಜ್ಞನುಂ ಆಗುತ್ತಿದ್ದಿ ಇದಲ್ಲದೆ ನೀನು ಸೃಷ್ಟಿಕರ್ತನಾದುದರಿಂ, ದಾರಕನುಂ ಸಂಹಾರಕನುಂ ರಕ್ಷಕನುಂ ಸಹಾ ನೀನೆಂದು ವ್ಯಕ್ತಮಾದುದು. ಅಣ್ಯಾದಿತ್ರಯದಿಂ ದುದೀರಿತವಾದ "ಓಂ" ಕಾರವು ಆವ ನಿನ್ನ ಉಪಕ್ರಮವೋ, ಆ ಓಂಕಾರಮುಂ ಯಜ್ಞಾದಿ ಕರ್ಮಂಗಳಿಗೆ ಫಲರೂಪವಾದ ಸ್ವರ್ಗಮುಂ, ಮುಖ ವಿಶೇಷಂಗಳಿಂ ಜನ್ಯವಾದ ಲೋಕಾಂತರಮುಂ ನೀನೇ ಸರಿ; ಸ್ವರ್ಗಸ್ಥಿತಿ ಸಹ್ಮಾರ ಕಾರಣನಾದುದರಿಂ ತ್ರಿಮೂರ್ತಿಸ್ವರೂಪನಾದ ನಿನಗೋಸುಗ ನಮಸ್ಕಾರವು— ಎಲೈ ಅಧಿಪತಿಯೆ! ನೀನು ಬ್ರಹ್ಮನಾಗಿ ಲೋಕಮುಂ ಸೃಜಿಸುತ್ತಿದ್ದಿ; ಸರ್ವರಕ್ಷಕನಾದ ವಿಷ್ಣುವುಂ ನೀನೆ; ಈ ಚರಾಚರಾತ್ಮಕವಾದ ಪ್ರಪಂಚಮುಂ ನೀನು ಹರಕನಾಗಿ ಶೀಘ್ರದಿಂ ಸಂಹರಿಸುತ್ತಿದ್ದೀ ವಿಶ್ವಾಧಿಪತಿಯಾದ ನಿನಗೆ ನಮಸ್ಕಾರವು. ಈ ಭೂಮಿಯೊಡಗೂಡಿದ ಪ್ರಪಂಚವೆಲ್ಲವೂ ಆದ ನಿನ್ನನ್ನು ಅಭ್ಯಂತರದಲ್ಲಿ ಧರಿಸಿರುವೆಯಾದುದರಿಂದ ನಿನ್ನ ಅಭ್ಯಂತರದಲ್ಲಿರುತಿರ್ಪುದು. ಆವನಿಗೆ ಸಮಸ್ತ ಭೂತಂಗಳೂ ವಶವರ್ತಿಗಳಾಗಿರುವವೋ, ಆ ನಿನಗೋಸುಗ ನಿರಂತರವೂ ಈ ನಮಸ್ಕಾರವಾಗಲೆಂದು ನಿಜಾಶ್ರಿತರಾದ ದೇವಶ್ರೇಣಿಯಿಂ ಸ್ತೂಯಮಾನನಾಗಿ ಬ್ರಹ್ಮದೇವನು ಅನುಗ್ರಹಾಭಿಮುಖನಾದುದರಿಂದ ದಯಾನಿಧಿಯಾಗಿ ಈ ಪರಿ ನಿರೂಪಿಸಲುದ್ಯುಕ್ತನಾದನು. ಎಂದು ಸೂತಪುರಾಣಿಕನು ಶೌನಕಾದಿಮುನಿಗಳ್ಗೆ ಪೇಳಿವನೆಂಬಿಲ್ಲಿಗೆ,

ಶ್ರೀಕೃಷ್ಣರಾಜ ವಾಣೀವಿಲಾಸನೆಂಬ ಸ್ಕಾಂದಪುರಾಣದ ಶಂಕರಸಂಹಿತೆಯೋಳ್ ಶಿವರಹಸ್ಯ ಖಂಡದೊಳು ಸಂಭವಕಾಂಡದ, ಪರಮೇಶ್ವರಂ ಜ್ಞಾನಮುದ್ರೆಯಂ ಧರಿಸಿರ್ಪವಸರದೋಳ್ ಸಮಸ್ತ ದೇವತೆಗಳುಂ ಶೂರಪದ್ಮಾದಿ ಭಯದಿಂ ಕೈಲಾಸಮಂ ಪೊರ್ದಿ, ನಂದಿಕೇಶ್ವರನಿಂ ನಿವಾರಿತರಾಗಿ ಬಳಿಕ ಸತ್ಯಲೋಕಮನೈದಿ ಬ್ರಹ್ಮನಂ ಸ್ತುತಿಸಿದರೆಂಬ ಕಥಾರೂಪವಾಗಿರ್ಪ ನಾಲ್ಕನೆಯ ಅಧ್ಯಾಯವು ಮುಗಿದುದು.

ಐದನೆಯ ಅಧ್ಯಾಯವು.

ದುರ್ದೆಸೆಯಲ್ಲಿರುವ ದೇವತೆಗಳಿಗೆ ಬ್ರಹ್ಮದೇವನ ವರಪ್ರದಾನವು.

ಸೂತರ ವಚನವು:—ಎಲೈ ಮುನಿಗಳಿರಾ! ಸಾವಧಾನಮನದಿಂ ಕೇಳುವ
ರಾಗಿ; ಅನಂತರದಲ್ಲಿ ಚತುರಾನನನು ದೇವತೆಗಳಂ ಕುರಿತು, ಎಲೈ ಮಕ್ಕಳಿರಾ!
ನೀವು ಸಾವರಮಪ್ಪಂತು ಕೂಡಿ ವಿವರ್ಣಮಾದ ಮುಖವುಳ್ಳವರಾಗಿ, ನನ್ನ
ನ್ನೇನು ಕಾರಣದಿಂ ಮರೆಹೊಕ್ಕಿರಿ! ಪೇಳ್ವುದು. ನೀವು ವಿವರ್ಣವದನರಾದುದ
ರಿಂದತ್ಯಂತ ವ್ಯಾಕುಲಿತರೆಂಬಂತೆ ತೋರುತ್ತಿದ್ದೀರಿ. ಎಂದು ನುಡಿಯಲಾಗಿ
ಅಲ್ಲಿ ಪ್ರಥಮತಃ ಶಿಥಿಲಮಾದ ವಜ್ರಮುಂ ಧರಿಸುತ್ತಿಹ ದೇವೇಂದ್ರನು, ಭಂಗ
ಶೃಂಗಮಾದ ವೃಷಭನಂತೆ ದೈನ್ಯದಿಂ ನಡೆದನು. ಹಾಗೆ ಅಗ್ನಿಯುಂ ನಿರಂತರ
ದಲ್ಲಿಯೂ ಧೂಮದಿಂ ಧೂಮ್ರವರ್ಣನಾಗಿ ಅತಿಖಿನ್ನ ಮಾನಸನಾದನು. ಭಿಕ್ಷಾ
ಟನಮಂ ಮಾಡುತ್ತಿರ್ಪ ರಾಕ್ಷಸಾಧಿಪತಿಯಾದ ಖಡ್ಗಹಸ್ತನಾದೊಡಂ ನಿಋ
ಋತಿಯು ನಿಸ್ತೇಜಸ್ಕನಾಗಿ, ಭಗ್ನವಾದ ಕೋರೆದಾಡೆಗಳುಳ್ಳ ಸರ್ಪನ ದುರವಸ್ಥೆ
ಯನ್ನೈದಿದನು. ಈ ಪಾಶಪಾಣಿಯಾದ ವರುಣನೀಗ ಆ ವೇಳೆಯಲ್ಲಿಯುಂ
ತಡೆಯಿಲ್ಲದ ಪಾಶಮುಂ ಉಭಯ ಭುಜಂಗಳಿಂ ಧರಿಸುತಿರ್ದೊಡಂ, ಅತ್ಯಂತ
ದುರ್ಮನಸ್ಕನಾಗಿ ಪಶುವಿನ ದೈನ್ಯಮನ್ನೈದಿದನು. ವಾಯುವಾದೊಡೆ ಧ್ವಜ
ಪಟ ಸಹಿತಮಾದ ಧ್ವಜಮುಂ ಧರಿಸುತ್ತ, ಭಿಕ್ಷಾಟನಂ ಮಾಡುತಿರ್ಪ ದರಿದ್ರನ
ದೈನ್ಯಮನ್ನಾಶ್ರೈಸಿದನು. ಕುಬೇರನು ಶಂಖ ಪದ್ಮ ಮೊದಲಾದ ನವನಿಧಿಗಳಂ
ತ್ಯಜಿಸಿ ಪ್ರಾಣತ್ರಾಣ ಪರಾಯಣನಾಗಿಲ್ಲಿಗೆ ಬಂದಂತೆ ತೋರುತ್ತಿದ್ದನು.
ಈಶಾನನುಂ ಮಂದಮಾದ ಮೊನೆಯನ್ನುಳ್ಳ, ತ್ರಿಶೂಲಮಂ ಕೈಯಲ್ಲಿ ಪಿಡಿದು,
ವಿಷವೈದ್ಯನ ಕೈಯ್ಯಿಲ್ಲಿಂದ ಮರ್ದಿಸಲ್ಪಟ್ಟ ವಿಷದಂತವುಳ್ಳ ಸರ್ಪರಾಜನ
ತೆರದಿ ನಿಸ್ತೇಜಸ್ಕನಾದನು. ಸಪ್ತಮರುದ್ದೇವತೆಗಳುಂ ಒಬ್ಬರೊಬ್ಬರು ಕಂಪಿ
ಸುವಂತೆ ಮಹಾ ಶೈಲದಿಂ ತಡೆಯಲ್ಪಟ್ಟ ಪ್ರವಾಹವುಳ್ಳ ನದೀಧರ್ಮವನ್ನೇ
ಆಶ್ರಯಿಸಿದರು. ಈ ಅಷ್ಟವಸುಗಳು ನಿಸ್ತೇಜಸ್ಕರಾಗಿ ಭಯಾಕುಲರಾದ್ದರಿಂದ
ಕುಪಿತನಾದ ಗರುಡನ ಭಯದಿಂದಂಜಿದ ಕೃಷ್ಣಸರ್ಪನಂ ಪೋಲ್ದರು. ಏಕಾ
ದಶ ರುದ್ರರ ಹೃದಯಂಗಳುಂ ಮುಖಕಾಂತಿಗಳುಂ ನಿವೃತ್ತಾ ಹಂಕಾರಿಗಳಾಗಿ
ಮರಳಿ ಮರಳಿ ಅತ್ಯಂತಮಾಗಿ ದುರವಸ್ಥೆಯುಂ ಸೂಚಿಸುತ್ತಿದ್ದುವು. ದ್ವಾದಶಾದಿ
ತ್ಯರು ಅತ್ಯಂತಬಾಧೆಯಿಂದ ನಿಸ್ತೇಜಸ್ಕರಾಗಿ ದಿವಾಕರರಹಿತ ಲವದೀಪದೈನ್ಯಮಂ
ಪೊರ್ದಿದರು. ಆಗ ಚತುರಾನನಂ ಎಲೈ ದೇವತೆಗಳಿರಾ! ನೀವು ಸ್ಥಾನಭ್ರಷ್ಟ
ರಾದಂತೆ ಯಿರುತಿದ್ದೀರಿ; ಇದನ್ನೆಲ್ಲಮಂ ಪೇಳುವುದು. ವಿಚಾರಿಸಿದ ಬಳಿಕ
ನಿಮ್ಮ ಈ ದೈನ್ಯಕ್ಕೆ ಪ್ರತೀಕಾರಮಂ ಮಾಳ್ಪೆನೆಂದು ನುಡಿದ ಬ್ರಹ್ಮದೇವನ

ವಾಕ್ಯಮಂ ಕೇಳ್ದು; ದೇವತೆಗಳೆಲ್ಲರೂ ಪಲವು ತೆರದಿಂ ಕೂಗುತ್ತಿರೆ ಅವರೆಲ್ಲ ರನ್ನೂ ನಿವಾರಿಸಿ ದೇವೇಂದ್ರನು ಬೃಹಸ್ಪತಿಯೊಡನಿಂತೆಂದನು. ಎಲೈ ಬೃಹ ಸ್ಪತಿಯೆ! ಸಕಲ ಪ್ರಾಣಿಗಳುಂ ದೇವತೆಗಳಾದ ನಮಗುಂ ಮಹರ್ಷಿಗಳ್ಗೆಯುಂ ಈಗ ಬಂದಿರ್ಪ ಅಸುರ ಸಂಬಂಧವಾದ ಭಯಮಂ ನೀನು ವಿಸ್ತರದಿಂ ಬಿನ್ನೈ ಸೆಂದು ನುಡಿದನು.

ಅನಂತರದಲ್ಲಿ ಬೃಹಸ್ಪತಿಯು ಬ್ರಹ್ಮದೇವರ ಸನ್ನಿಧಿಯಲ್ಲಿದ್ದುನಿಂತು ಕೈಗಳಂ ಮುಗಿದು ನಮಸ್ಕರಿಸಿ, ಬ್ರಹ್ಮದೇವರಿಗೋಸುಗ ಈ ವಾಕ್ಯಮಂ ಬಿನ್ನೈ ಸಿದನು. ಎಲೈ ಭಗವಂತನಾದ ಬ್ರಹ್ಮದೇವನೆ! ನೀನು ನಿರೂಪಿಸಿದ ವಾಕ್ಯವು ಸತ್ಯವೇ ಸರಿ, ಅದೆಂತೆಂದೊಡೆ,—

ದೇವತೆಗಳು ಶೂರ ಪದ್ಮಾಸುರ, ಸಿಹ್ಮವಕ್ತ್ರ, ತಾರಕಾಸುರರ ಹಿಂಸೆಯನ್ನು ಬಿನ್ನೈಸುವಿಕೆ.

ಎಲೈ ಚತುರ್ಮುಖನೆ! ಅಸುರನಾಗಿ ಅತಿ ಪರಾಕ್ರಮಿಯಾದ ಶೂರಪದ್ಮ ನಿಂದಲುಂ, ಸಿಹ್ಮವಕ್ತ್ರನಿಂದಲುಂ ತಾರಕಾಸುರನಿಂದಲುಂ ದೇವತೆಗಳತ್ಯಂತ ನಿರಾಕೃತರಾದರು. ಶೂರಪದ್ಮ ಮೊದಲಾದ ದಾನವರಿಂದ ಜೀವಾತ್ಮರಿಗೆ ಧೂಮಕೇತುವು ಪುಟ್ಟಿದಂತಾದುದು,— ಎಲೈ ಚತುರ್ಮುಖನೇ! ನೀನೆಲ್ಲಾ ಜೀವಾತ್ಮರ್ಗೆಯುಂ ಅಂತರಾತ್ಮನಾಗಿಯುಂ ಈ ಕಾರ್ಯಮನೆಂತು ತಿಳಿಯದಿದ್ದಿ? ಆ ಶೂರಪದ್ಮನೆಂಬಸುರನು ಈಶ್ವರನ ವರದಿಂದ ಮಹಾ ಮಾಯಾವಿಯಾಗಿಹನು. ಆವನಿಂದ ಯುದ್ಧದಲ್ಲಿ ಇಂದ್ರ ಮೊದಲಾದ ದೇವತೆಗಳು ಜಯಿಸಲ್ಪಟ್ಟವರಾಗಿ ಅನಾಥರಾಗಿ ಬಹು ಪ್ರಕಾರದಿಂ ಆ ಅಸುರನಂ ಉಪಾಸನೆಗೈಯ್ಯುತಿದ್ದಾರೆ. ಅದೆಂತೆಂದೊಡೆ,— ಈ ದೇವೇಂದ್ರನು ಪ್ರತಿದಿವಸದಲ್ಲಿಯುಂ ಆ ಶೂರಪದ್ಮನ ಮಂದಿರ ಮಧ್ಯದಲ್ಲಿರ್ಪ ಸಭಾಸ್ಥಾನಮಂ ಮೇಘಂಗಳಿಂದ ಕರೆಯಲ್ಪಟ್ಟ ಉದ ಕಂಗಳಿಂ ಸಾರಣೆಗೈಯ್ಯುತ್ತಿರುವನು. ಹಾಗೆ ಅಗ್ನಿಯು ಸಂತುಷ್ಟಚಿತ್ತನಾಗಿ ಪ್ರತಿದಿನದಲ್ಲಿಯುಂ ದೀಪಮಂ ಪಿಡಿದು, ನಾಲ್ವತ್ತೊಂಭತ್ತು ಮರುದ್ದೇವತೆ ಗಳೊಡಗೂಡಿ, ಆ ಅಸುರನ ಪಾರ್ಶ್ವಮನ್ನೆಡಬಿಡದಿರುವನು. ಯಮನು ಮುದ ದಿಂದ ಸ್ವಕೀಯಮಾದ ರಾಜಯಕ್ಷ್ಮಾದಿರೋಗಂಗಳೊಡಗೂಡಿ, ವೈದ್ಯರೂಪ ಮಂ ತಳೆದು ಅಶ್ವಿನೀದೇವತೆಗಳ್ಕರೆಸಿ ಚಿಕಿತ್ಸೆಯಂ ಮಾಡುತ್ತಿದಾನೆ. ಈ ನಿಋ ಋತಿಯು ಪ್ರತಿದಿವಸದಲ್ಲಿಯೂ ಅರಿಗೆ ಕತ್ತಿಯಂ ಪಿಡಿದು ಏಕವೀರತ್ವಮನಾ ಶ್ರಯಿಸಿ ತನ್ನನ್ನು ಕೃತಾರ್ಥರ ಮಧ್ಯದಲ್ಲಿ ಶ್ರೇಷ್ಠನೆಂದು ಭಾವಿಸುತ್ತಿರುವನು. ಇದಲ್ಲದೆ ಈ ವರುಣನು ಆ ಶೂರಪದ್ಮಂಗೆ ಪ್ರಿಯಮಂ ನುಡಿವಲ್ಲಿ ಸುಮನಸ್ಕ ನಾಗಿ, ದೈತ್ಯರಿಂ ನಿಬಿಡಿತಮಾದ ಆ ಅಸುರನ ಅಂಗಳಮಂ ಆದರದಿಂದಾಶ್ರಯಿ

ಸುತಿರ್ಧಾನೆ. ಈ ವಾಯುವಾದೊಡೆ ದೈತ್ಯ ಸಂಬಂಧವಾದ ಸಮ್ಮಾರ್ಜನಾದಿ
ಕರ್ಮಗಳಲ್ಲಿ ನಿರೂಪಿತನಾಗಿ ಗಂಧವಹನಾದನು. ಕುಬೇರನಾದರೋ ಕುತ್ಸಿತ
ಶರೀರ ವುಪ್ಪುದರಿಂದ ಅಸುರನ ಗೃಹಕ್ಕೆ ಅಧಿಕಾರಿಯಾಗಿ ಈ ರಾಕ್ಷಸಸ್ತ್ರೀಯರ್ಗೆ
ಕೋಲುಗಾರನಾಗಿ ಈತನ ಪಾರ್ಶ್ವಮನೊಂದುವೇಳೆಯಾದೊಡಂ ಬಿಡದಿದಾನೆ.
ಇವಲ್ಲದೆ ಈಶಾನನು ಅಪ್ರಾರ್ಥಿತನಾಗಿ ಆ ಅಸುರಂಗೆ ನಾನಾ ಭೋಗ ಸುಖಪ್ರದ
ನಾಗಿ ಪ್ರತಿದಿನದಲ್ಲಿಯುಂ ದ್ವಾರಸ್ಥನಾದ ಗಣಾಧಿಪತಿಯೊಡಗೂಡಿ ಯೆಲ್ಲಾ
ಕಡೆಯಲ್ಲಿಯೂ ಅನುಸರಿಸುತ್ತಿದ್ದಾನೆ. ಮತ್ತು ಈ ಸೂರ್ಯನಾದರೆ ಪದ್ಮಹಸ್ತ
ನಾಗಿ; ದ್ವೇಷಿಯಾದ ಆ ಶೂರಪದ್ಮನ ಭೋಗಾರ್ಥವಾದ ಕಮಲಂಗಳನ್ನು,
ಯಥೋಚಿತವಾದ ಬಿಸಿಲಿನಿಂದ ನಿರಂತರದಲ್ಲಿಯೂ ವಿಕಾಸವಂ ಮಾಡುತ್ತಿ
ದ್ದಾನೆ. ಇದೂ ಅಲ್ಲದೆ ಚಂದಿರನು ನಿರಂತರವು ಪೂರ್ಣನಾಗಿ, ಶರತ್ಕಾಲ ಸಂ
ಬಂಧವಾದ ತನ್ನ ಬೆಳಕಿನ ಕಾಂತಿಯುಂ ಧರಿಸುತ್ತ, ಸ್ತ್ರೀಯರುಗಳಂ ರಂಜನೆ
ಯುಂ ಗೆಯ್ಯುತ್ತ, ಕಾಮತಂತ್ರಕ್ಕೆ ಸಹಾಯಭೂತನಾಗಿರುವನು. ಹಾಗೆ ಅಷ್ಟ
ವಸುಗಳು ಮಹಾ ಶ್ರದ್ಧಾಭಕ್ತಿ ಭಾವಂಗಳುಳ್ಳವರಾಗಿ ಬಹು ಧನ ಭರಿತವಾದ
ಈತನ ಭಂಡಾರಮಂ ಪರಿಪಾಲಿಸುತ್ತಿದ್ದಾರೆ. ಅದೇ ರೀತಿಯಲ್ಲಿ ಏಕಾದಶ
ರುದ್ರರು ಆ ರಕ್ಕಸನ ಪ್ರಾಣರಕ್ಷಕರಾಗಿ, ಆತನ ಮಂದಿರದಲ್ಲಿ ತ್ರಿಕಾಲದಲ್ಲಿಯೂ
ಘಂಟೆಯುಂ ಹಿಡಿದು ತಿರುಗುತ್ತಿದಾರೆ. ಇದಲ್ಲದೆ ದ್ವಾದಶಾದಿತ್ಯರು ಈ ಅಸುರನ
ಗೃಹಾಭ್ಯಂತರದಲ್ಲಿ ಅಲ್ಲಲ್ಲಿಗೆ ಅಂಧಕಾರವುಂ ನಿವಾರಿಸುತ್ತ ಪ್ರತಿದಿನದಲ್ಲಿಯೂ
ದೀಪಮಾಲೆಯುಂ ಕಲ್ಪಿಸುತ್ತಿರುವರು. ಮಿಕ್ಕ ದೇವತೆಗಳಾದೊಡೆ ಕ್ರೂರ
ನಾದ ಈ ದೈತ್ಯನ ತತ್ತತ್ಕಾರ್ಯಂಗಳಂ ಸಾಧಿಸುತ್ತಿರುತ್ತಾರೆ. ಮತ್ತೆ ಕೆಲಬರು
ಆ ಅಸುರನ ಗೋರಕ್ಷಣದಲ್ಲಿ ಉದ್ಯುಕ್ತರಾದುದರಿಂದ, ಗೋಗ್ರಾಸಂಗಳಂ
ತರುವುದರಲ್ಲಿ ಆಸಕ್ತ ಚಿತ್ತರಾಗಿಧಾರೆ. ಇನ್ನು ಕೆಲವರು ಆ ಅಸುರಂಗೆ ಮಾಂಸ
ಮುಂ ಸಂಪಾದಿಸುವುದರಲ್ಲಿ ನಿಯಮಿತ ರಪ್ಪುದರಿಂದ, ಮಾಂಸ ಸಮೂಹಾಸಕ್ತ
ರಾಗಿ, ಸಕಲ ಸಮುದ್ರಂಗಳಲ್ಲಿಯೂ ಮತ್ಸ್ಯಂಗಳಂ ಸಂಗ್ರಹಿಸುವುದರಲ್ಲಿ
ಉದ್ಯುಕ್ತರಾಗಿದಾರೆ. ಈ ಪೂರ್ವೋಕ್ತಮಾಗಿ ದೇವತೆಗಳಿಂದಲೇ ಕೃತ್ಯಂಗಳಂ
ಸಾಧಿಸಿಕೊಳ್ಳುತ್ತಾ ಸುರವಿರೋಧಿಯಾಗಿ ಶೂರಪದ್ಮಾಸುರನು, ವರಲಾಭದ
ಬಲದಿಂದ ಅತಿ ಪ್ರಬಲನಾಗಿ, ಜಗಕ್ಕೆ ಅಪಕಾರವುಂ ಮಾಡುತಲಿಧಾನೆ ಹಾಗಾ
ದರೂ ಆ ದುರ್ಜನನು ಅಪಕಾರ ಶತಂಗಳಿಂದ ವಶವರ್ತಿಯಾಗುವಂತೆ ಉಪಕಾರ
ಶತಂಗಳಿಂದ ವಶವರ್ತಿಯಾಗನು ಇದಲ್ಲದೆ ಆ ಮಾಯಾವಿಯಾದ ಅಸುರನಿಂದ
ಸೆರೆಮನೆಯಲ್ಲಿಡಲ್ಪಟ್ಟ ದೇವತಾಸ್ತ್ರೀಯರು ಆ ಸೆರೆಮನೆಗಳ ಅಂಗಳದಲ್ಲಿ ನಿಟ್ಟು
ಸಿರುಗಳಂ ಬಿಡುತಲಿದಾರೆ ಎಲೈ ಪಿತಾಮಹನೆ! ಗಂಧರ್ವರು, ಉರಗರು,

ಯಕ್ಷರು, ರಾಕ್ಷಸರು, ಪಿಶಾಚರು ಎಂಬಿವರು ಮೊದಲಾದ ಸರ್ವರುಂ ಆತನ ಭೃತ್ಯರ ಬಾಗಿಲುಗಳಲ್ಲಿ ನಿರಂತರಂ ವಾಸಂಗೈಯುತಲಿದಾರೆ. ಮತ್ತಂ "ಅನಂತ, ವಾಸುಕಿ, ತಕ್ಷಕ, ಕರ್ಕೋಟಕ, ಕಂಬಳಾಶ್ವತರರು, ಧೃತರಾಷ್ಟ್ರನು ಶಂಖನು, ಗುಳಿಕನು" ಎಂಬ ಮಹೋರಗಂಗಳು ತಮ್ಮ ತಮ್ಮ ಮಣಿಮೌಳಿಗಳಿಂ ಆ ಅಸುರನ ಸಿಹ್ಮಾಸನಮಂ ಪೊತ್ತಿರ್ಪರು. ಆ ದುರುಳನಾದ ಅಸುರಾಧಿಪನು ಉಪರಿ ಸತ್ಯಲೋಕದ ಪರಿಯಂತವೂ ಕೆಳಗೆ ಪಾತಾಳದವರಿವಿಗೂ ಅಷ್ಟೋತ್ತರ ಸಹಸ್ರ ಅಂಡಂಗಳಂ ಬಾಧಿಸುತಲಿಧಾನೆ. ಎಲೈ ಬ್ರಹ್ಮನೆ! ಅನೇಕ ಯುಗ ಪರ್ಯಂತವು, ಇಂತು ಶೂರನಾಗಿ ನಾನಾವಿಧ ಕ್ರೂರಕರ್ಮಂಗಳುಳ್ಳ ಆ ಶೂರಪದ್ಮನೆಂಬ ರಾಕ್ಷಸಂಗೆ ನೀವು ಸಹ್ಮಾರಮಂ ಚಿಂತಿಸದಿರ್ದೊಡೆ ಮುಂದೇನು ಗತಿಯೆಂದು ನುಡಿದನು.

ಈ ಪರಿ ಪೇಳ್ದ ಬೃಹಸ್ಪತಿಯ ವಾಕ್ಯಮಂ ದೇವಪ್ರಿಯನಾದ ಬ್ರಹ್ಮದೇವರು ಕಿವಿಯಲ್ಲಿ ಕೇಳುತ್ತಿರಲಾಗಿ, ಆಗ ದೇವೇಂದ್ರನು ಕಮಲಾಸನನ ಸನ್ನಿಧಾನದಲ್ಲಿ ತಾನು ನುಡಿಯಲುದ್ಯುಕ್ತನಾದನದೆಂತೆನೆ,—

ಎಲೈ, ಪ್ರಭುವೆ! ಬೃಹಸ್ಪತಿಯಿಂದ ತಾರಕಾಸುರಂಗೆ ಪಿರಿಯನಾದ ಶೂರಪದ್ಮನ ವಿಷಯವಾಗಿ ಆ ವೃತ್ತಾಂತವು ಬಿನ್ನೈಸಲ್ಪಟ್ಟುದು. ಅದು ಜಗತ್ಪೀಡಾ ಸಹಸ್ರದಲ್ಲಿ ಸಹಸ್ರಾಂಶವು; ಆ ಅಸುರಂ ಮಾಡುವ ಬಾಧೆಯು ಇಷ್ಟೆಂದು ಪರಿಚ್ಛೇದಮಂ ಮಾಡುವದಕ್ಕೆ ಶಕ್ಯವಲ್ಲವು. ನಿಮ್ಮಿಂದ ಈ ಅಸುರನ ವಿಲಾಸಾರ್ಥಮಾಗಿ ಕಲ್ಪಿತಂಗಳಾದ ಉಪಾಯಂಗಳು, ಸನ್ನಿಪಾತ ವಿಕಾರಂಗಳಲ್ಲಿ ಔಷಧಂಗಳ ಹಾಗೆ ನಿವೃತ್ತಂಗಳಾದವು. ಆ ಶೂರಪದ್ಮನೆಂಬ ಅಸುರನು "ಸಿಂಹವಕ್ತ್ರ, ತಾರಕ" ರೆಂಬ ತನ್ನ ತಮ್ಮಂದರೀರ್ವರ್ಗೆಯುಂ ಪ್ರತ್ಯೇಕವಾಗಿ, (೨೦೦) ಇನ್ನೂರಿನ್ನೂರು ಅಂಡಂಗಳನ್ನು ವಿಭಾಗಿಸಿಕೊಟ್ಟು, ತಾನು ಆರುನೂರೆಂಟು ಅಂಡಂಗಳಂ ಪಾಲಿಸುತ್ತಿಧಾನೆ. ಆದುವರಿಂದ ಅವನ ತಮ್ಮನಾದ ಸಿಂಹವಕ್ತ್ರನೆಂಬುವನು ಇನ್ನೂರು ಅಂಡಂಗಳಿಗೆ ಶಿಕ್ಷಕನಾದನು. ಹಾಗೆ ತಾರಕನೆಂಬ ಮತ್ತೊಬ್ಬ ತಮ್ಮನು ಇನ್ನೂರು ಅಂಡಂಗಳಿಗೆ ಅಧಿಪತಿಯಾದನು:— ಎಲೈ, ಪಿತಾಮಹನೆ! ದೇವತೆಗಳಿಂದಲೂ ಮನುಷ್ಯರಿಂದಲೂ ವ್ಯಾಪ್ತಮಾದ ಈ ಜಗತ್ತು, ದಿವಾರಾತ್ರಿಯಲ್ಲಿಯೂ ನಿರಂತರವಾಗಿ ಆತನ ಭೃತ್ಯರಿಂದಲೇ ಈಗಲೂ ಬಾಧಿಸಲ್ಪಡುತ್ತಿದ್ದೀತು:— ಅಕಟಕಟ! ಅದು ಕಾರಣದಿಂದ ಆ "ಶೂರಪದ್ಮ, ಸಿಂಹವಕ್ತ್ರ, ತಾರಕ" ರೆಂಬ ಮೂವ್ವರಂ ಮತ್ತೊರ್ವನಾರಾದೊಡಂ ಆಕ್ರಮಿಸಲಾರನು. ಅವನ ಬಾಧೆಯುಂ ಸಹಿಸುತಿರ್ಪ ದಿಕ್ಪಾಲಕರೊಡಗೂಡಿದ ನನ್ನಿಂದ ಪ್ರಾರಂಭಿತವಾದ ಪಲವು ಬಗೆಯಾದ

ಯುದ್ಧಂಗಳು ಯೆಂಟು ವೇಳೆಗಳಲ್ಲಿ ನಿರರ್ಥಕವಾದುದು. ಅದೆಂತೆಂದೊಡೆ:— ಅಷ್ಟದಿಕ್ಪಾಲಕರು ಭಯದಿಂದೋಡುತ್ತಿರಲಾಗಿ, ಈ ಅಸುರನ ಮೇಲೆ ನನ್ನಿಂದ ಪ್ರಯೋಗಿಸಲ್ಪಟ್ಟ ವಜ್ರಾಯುಧವು ಮೊನೆ ಮುರಿದು ರಕ್ತಮಂ ಕಾರುತ್ತ ಅಡ್ಡಲಾಗಿ ಬಿದ್ದುದು. ಹಾಗೆ ಅಗ್ನಿಯ ಶಕ್ತಿಯುಂ ದಂಡಧರನ ದಂಡಮುಂ ನಿಋುತಿಯ ಖಡ್ಗಮುಂ ವರುಣನ ಪಾಶಮುಂ, ನಿಜವಜ್ರದ ತೆರದಿ ಭಂಗಂ ಬಡೆದುದು; ಆ ಯುದ್ಧದಲ್ಲಿ ವಾಯುವಿನ ಧ್ವಜವು ದಂಡಮಾತ್ರದಿಂ ನಿಂದುದು. ಕುಬೇರನ ಗದೆಯುಂ ಆತನ ಬೆನ್ನೆಲುವಿನೋಪಾದಿಯಲ್ಲಿ ಛಿನ್ನವಾದುದು. ಶೂಲಪಾಣಿಯ ಶೂಲವು ಈ ಅಸುರನ ಯೆದೆಯಂ ಯೆಳಸಿತ್ತಾದೊಡಂ ನಡೆವುದಕ್ಕೆ ಅಸಮರ್ಥವಾಮುದು. ಮತ್ತು ಚಕ್ರಪಾಣಿಯ ಚಕ್ರವು ಆ ಅಸುರನ ಕಂಠದಲ್ಲಿ ಕಂಠಾಭರಣದಂತಾದುದು. ಅದುಕಾರಣದಿಂದ ತಾರಕನಿಂ ಪುಟ್ಟಿದ ಭೀತಿಯು ನಮ್ಮ ಮನಸ್ಸಿನೊಳು ಪೊಕ್ಕುದು:— ಎಲೈ, ಚತುರ್ಮುಖನೆ! ನಾವೀಗ ನಾನಾವಿಧಂಗಳಾದ ಕಾಣಿಕೆಗಳಂ ಕೈಯೋಳ್ಪಿಡಿದು, ನಿನ್ನಂ ಸ್ತುತಿಸುತ್ತಿದ್ದೇವೆ. ಇನ್ನು ಮೇಲೆ ಆತನ ಬಳಿಗೆ ಪೋಗಲಾರೆವು; ಅದುಕಾರಣದಿಂದ ನಮಗೆ ಅಭಯ ಪ್ರದವಾದ ಬುದ್ಧಿಯಂ ನಿರೂಪಿವುದೆಂದು, ಈ ಪ್ರಕಾರದಿಂದ ದೇವೇಂದ್ರನು ಬಿನ್ನೈಸಿ ಸುಮ್ಮನಿರ್ದವನಾಗಲಾಗಿ; ಆ ಬ್ರಹ್ಮಸಭೆಯಲ್ಲಿ ಸುಮೇರುವೆಂಬ ಗಿರಿರಾಜನು ಬಹಳವಾಗಿ ನಿಟ್ಟುಸಿರಂ ಬಿಡುತ್ತ, ಮುಂಗಳಿ ಮರಳಿ ದೇವೇಂದ್ರನ ವಾಕ್ಯದ ಪ್ರತಿಧ್ವನಿಯಿಂದ ಸಭೆಯಂ ದ್ವಿಗುಣವಾಗಿ ಪ್ರತಿಧ್ವನಿಯುತಮಂ ಮಾಡುತಿರ್ದನು. ಎಂದು ಸೂತಪುರಾಣಿಕನು ಶೌನಕಾದಿ ಮುನಿಗಳ್ಗೆ ನಿರೂಪಿಸಿದನೆಂಬಲ್ಲಿಗೆ, ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಸ್ಕಾಂದ ಪುರಾಣದ ಶಂಕರಸಂಹಿತೆಯೋಳ್ ಶಿವರಹಸ್ಯಖಂಡದೊಳು ಸಂಭವಕಾಂಡದ ಸುರರುಗಳು, ಶೂರಪದ್ಮನಿಂ ಸಂಭವಿಸಿದ ಅನೇಕ ಪರಿಭವಂಗಳಂ ಪದ್ಮಸಂಭವಂಗೆ ಬಿತ್ತರವಾಗಿ ಬಿನ್ನೈಸಿದ ಕಥಾರೂಪವಾಗಿರ್ಪ ಐದನೆಯ ಅಧ್ಯಾಯವು ಸಂಪೂರ್ಣಂ.

ಆರನೆಯ ಅಧ್ಯಾಯವು.

ಬ್ರಹ್ಮಾದಿದೇವತೆಗಳು ಮಹಾವಿಷ್ಣುವಂ ಪ್ರಾರ್ಥಿಸುವಿಕೆ.

ಎಲೈ, ಮುನಿಗಳಿರಾ! ಸಾವಧಾನಮನದಿಂ ಕೇಳುವರಾಗಿ; ಅನಂತರದಲ್ಲಿ ಬ್ರಹ್ಮನು ನಿಟ್ಟುಸಿರುಗಳಂ ಬಿಟ್ಟು, ಮನದೋಳ್ ಪಲವುತೆರದಿಂದ ವಿಚಾರಿಸಿ, ದೇವತೆಗಳ್ಗೆ ಐವಲೂ ಯೋಗ್ಯವಾದ, ಮಾಧವಂಗೆ ನಿಲಯವಾದ ವೈಕುಂಠಮನ್ನೈದಿದನು. ಅಲ್ಲಿ ವಿಷ್ಣುವಿನ ದಿವ್ಯಾಲಯವು ನಾನಾ ಮಣಿಗಣ

ವಿರಾಜಿತವಾಗಿ, ಸಾವಿರ ನೆಲೆಗಳಿಂ ನಿರ್ಮಿತವಾದ ಉಪ್ಪರಿಗೆಗಳಿಂ ಗೋಪುರಂಗಳಿಂ, ಆ ಗೋಪುರಂಗಳ ಅಂಗಳಂಗಳಿಂದಲುಂ, ಅಲಂಕೃತವಾಗಿ, ಸುವರ್ಣಮಯವಾದ ಮಹಾದ್ವಾರ ಕವಾಟಂಗಳಿಂದ ಅತಿ ಮನೋಹರವಾಗಿ ವೈಷ್ಣವಂಗಳಾದ ಚಕ್ರಚಿಹ್ನಂಗಳಿಂದುಪಲಕ್ಷಿತರಾದ ವೈಷ್ಣವ ಗಣಾಧಿಪರಿಂ ವ್ಯಾಪ್ತವಾಗಿ, ನವರತ್ನ ವೈಚಿತ್ರ್ಯದಿಂದೆಸೆದಿರ್ಪ ರಾಜವೀಥಿಗಳಿಂ ವಿರಾಜತವಾಗಿ, ನಾನಾ ಮಣಿಗಣ ಪ್ರಭಾಜಾಲದಿಂ ವಿಚಿತ್ರವಾದ ದಿಗಂತರಾಳವುಳ್ಳದ್ದಾಗಿ, ಗೃಹದ್ವಾರಂಗಳ ಯಿಕ್ಕೆಲಂಗಳಲ್ಲಿರ್ಪ ವರಗುಗಳಿಂದಲಂಕೃತವಾದ, ಪವಳದ ತೋರಣಂಗಳಿಂ ನಿರಂತರದಲ್ಲಿಯುಂ ದರುಶನ ಯೋಗ್ಯವಾಗಿ, ಕಣ್ಗಳ್ ನೋಟವಂ ಸೆರೆಗೆಯ್ವುತ್ತಿರ್ಪುದು. ಆವುದಾನೊಂದು ಸ್ಥಾನಮಂ ಶಾಂತರಾಗಿ ತದ್ಗತಮಾನಸರಾದ ವಾಸುದೇವನ ಭಕ್ತರು ಐದಿ ತಿರಗದಿರುವರೋ, ದಿವ್ಯಪ್ರಾಕಾರ ಪರಿವೇಷ್ಟಿತವಾದ ಆ ವಿಷ್ಣುವಿನ ಆಲಯವಂ, ದೇವತೆಗಳು ಬ್ರಹ್ಮದೇವನೊಡಗೂಡಿ ಶೀಘ್ರದಿಂ ಪ್ರವೇಶಿಸಿದರು. ಅಲ್ಲಿ ದಿವ್ಯವಾದ ರಕ್ಷಕರಿಂದ ರಕ್ಷಿತನಾಗಿ, ಮಹಾಶೇಷನ ದಿವ್ಯವಾದ ದೇಹದ ಮೇಲೆ ಶಯನಮಂ ಮಾಡುತ್ತಾ ಮನೋಹರನಾದ, ದೇವತಾ ಶ್ರೇಷ್ಠನಾಗಿ ನೀಲಮೇಘಶ್ಯಾಮನಾಗಿ ಪದ್ಮಾಂಘ್ರಿಯಾದ, ಪದ್ಮಾಸ್ಯನಾಗಿ ಪದ್ಮಕೋಮಳನಾದ ಮತ್ತು ಮಹಾಲಕ್ಷ್ಮಿಯ ಮೃದುಕರಾಂಭೋಜ ಸ್ಪರ್ಶದಿಂದ ಆ ರಕ್ತವಾದ ಕರಕಮಲವುಳ್ಳ, ಇದಲ್ಲದೆ ಭೂಮಿಯಲ್ಲಿ ವಾತ್ಸಲ್ಯವುಳ್ಳವನಾಗಿ, ಆತ್ಮೇಶ್ವರನಾದ ಪರಮೇಶ್ವರಂಗೆ ಅತಿ ಪ್ರಿಯನಾದ, ನಿರಂತರದಲ್ಲಿಯು ಯೋಗ, ನಿದ್ರಾ, ಸಮಾಧಿಗಳಿಂದ ಸದಾಶಿವನಂ ಭಾವಿಸುತ್ತಿಹ, ಸ್ತೋತ್ರಾರ್ಹನಾದ ಅಜನಾಗಿ ಅವ್ಯಕ್ತನಾದುದರಿಂದ ಕಮಲಾಸನಂಗೆ ಕಾರಣೀಭೂತನಾದ ವಿಷ್ಣುವಿಂಗೆ ಅಡಿಗಡಿಗೆ ಬೀಳುತ್ತಾ ಬ್ರಹ್ಮಾದಿ ದೇವತೆಗಳಿಂತು ಸ್ತುತಿಸಿದರು. ಎಲೈ, ಪದ್ಮನಾಭನೆ! ಲಕ್ಷ್ಮೀಪತಿಯೆ! ಚಂದ್ರ ಸೂರ್ಯಾಗ್ನಿನೇತ್ರನಾಗಿ ಪರಮಾತ್ಮನಾದ ನಿನಗೆ ನಮಸ್ಕಾರವು:— ಪದ್ಮಾಕರನಾಗಿ ಭಕ್ತಚಿತ್ತನಿವಾಸಿಯಾದ, ವೇದಾಂತವೇದಿಯಾಗಿ ಅಧಿಪತಿಯಾದ ನಾರಾಯಣನೆ! ನಿನಗೋಸುಗ ನಮಸ್ಕಾರ:— ಯೋಗೀಶ್ವರರಿಗೆ ಯೋಗವಂ ಕೊಟ್ಟು ಧ್ಯಾನದಿಂ ಗಮ್ಯವಾದ ಸ್ವರೂಪವುಳ್ಳ ಮತ್ತು ಭೋಗಿಗಳ್ಗೆ ಭೋಗಪ್ರದನಾಗಿ ಭೋಗಿರಾಜಶಾಯಿಯಾದ ಪರಮ ಕಲ್ಯಾಣಗುಣರತ್ನಾಕರನಾದ, ನಿನಗೋಸುಗ ವಂದಿಸುವೆವು:— ವಾಸುದೇವನಾಗಿ ಶಾಂತನಾದ ಮಹಾತ್ಮನಾದ ವಿಷ್ಣು! ನಿನಗೆ ನಮಸ್ಕಾರವು:— ಎಲೈ, ಸರ್ವೇಶ್ವರನೆ! ಆವಾವ ಸಮಯದಲ್ಲಿಯೂ ಸಕಲಜಗಮುಂ ದೈತ್ಯರಿಂದ ಬಾಧಿತವಾಗುವುದೋ; ಆಯಾ ಸಮಯಂಗಳಲ್ಲಿ ನೀನವತಾರಮಂಗೈದು ಅಧರ್ಮವಂ ನಿವಾರಿಸು

ತ್ರಿದ್ಧಿ. ಅದು ಕಾರಣದಿಂದ ಅಸುರರಿಂ ಮರ್ದಿಸಲ್ಪಟ್ಟ ನಮ್ಮನ್ನು ರಕ್ಷಿಸು ರಕ್ಷಿಸೆಂದು, ಆ ಮುರಹರನಂ ಬ್ರಹ್ಮಾದಿಗಳು ಸ್ತುತಿಸಿದ ಬಳಿಕ; ಈ ಸ್ತೋತ್ರಂಗಳಿಂ ಸುಪ್ರೀತನಾದ ಶ್ರೀ ಮಹಾವಿಷ್ಣುವು ಮುಗುಳ್ನಗೆವೆರಸಿ ಆ ಬ್ರಹ್ಮಾದಿ ದೇವತೆಗಳಿಗೆ ಈ ವಾಕ್ಯಮಂ ನಿರೂಪಿಸಿದನು:— ಎಲೈ, ಚತುರ್ಮುಖನೆ! ದೇವೇಂದ್ರನೆ! ನೀವೆಲ್ಲರೂ ಈ ದೇವತೆಗಳೊಡಗೂಡಿ ನನ್ನ ಬಳಿಗೇನು ಕಾರಣ ಬಂದಿರಿ? ಈಗ ನಾನು ನಿಮ್ಮನ್ನು ರಕ್ಷಿಸಲಾರೆನು. ಅದೇನುಕಾರಣವೆಂದರೆ:— ನಾನು ದಿವಾಭೀತನಂತೆ ಅತ್ಯಂತವಾಗಿ ಭಯಪಡುತ್ತ, ಈ ಮಹಾ ಮೇರುವಿನ ಗುಹೆಯಂ ಸಾರ್ದು ನಿರ್ಭಯನಾಗಿ ನಿದ್ರೆಗೆಯ್ಯುತ್ತಿರ್ದೊಡಂ, ಆ ನಿದ್ರೆಯೊಳುಂ ಆ ಶೂರಪದ್ಮನ ಭಯದಿಂದ ಸ್ವಪ್ನದೊಳುಂ ಸಕಲ ಲೋಕಂಗಳಂ ಸಂಚರಿಸಿ, ಬಳಿಕ ಯೆಚ್ಚೆತ್ತು ನಿರ್ಭಯನಾಗುತ್ತಿದ್ದೇನೆ. "ಶೂರ" ಎಂಬ ಶಬ್ದಶ್ರವಣ ಮಾತ್ರದಿಂದಲೆ ಮನವು ನಡುಗುತ್ತಿರುವುದು. ಈಶ್ವರನಿಂದೀ ಮಹಾ ಮೇರುವು ನಮ್ಮನ್ನು ರಕ್ಷಿಸಲೋಸುಗ ಕಲ್ಪಿತವಾದುದು. ಎಂದು ವಿಷ್ಣುವು ದೇವತೆಗಳ್ಗೆ ನಿರೂಪಿಸಿದನೆಂಬದಾಗಿ ಸೂತಪೌರಾಣಿಕನು ನುಡಿಯೆ; ಶೌನಕಾದಿಗಳು, ಎಲೈ, ಮಹಾ ಬುದ್ಧಿಶಾಲಿಯಾದ ಸೂತನೆ! ದೇವತೆಗಳಿಗೆ ಆವಾಸಸ್ಥಾನವಾದ ಈ ಮೇರುವು ಅಸುರರಿಂದ ಅಗಮ್ಯವಾಗಿ ಯೆಂದು ಈಶ್ವರನಿಂ ಕಲ್ಪಿತವಾದುದು? ಎಂದು ಪೃಚ್ಛಿಸಲಾಗಿ ಸೂತನಿಂತೆಂದನು;—

ಮೇರುವರ್ಣನೆ.

ಎಲೈ, ಮುನಿಗಳಿರಾ! ಪೂರ್ವದಲ್ಲಿ ಒಂದಾನೊಂದು ಬ್ರಹ್ಮಕಲ್ಪದಲ್ಲಿ ಒಂದಾನೊಂದು ವೇಳೆ, ಕಾಲಗತಿಯಿಂದ ದೇವಾಸುರರ್ಗೆ ಭಯಂಕರವಾದ ಯುದ್ಧವಾದುದು. ಆಗ ಅಸುರ ಬಲಂಗಳಿಂ ಭೀತರಾದ ದೇವತೆಗಳು ಭಯದಿಂದೋಡಿ, ಮೇರುವಿನಲ್ಲಿ ಮೇಲಣಭಾಗದೊಳು ಶಂಕರನಂ ಮರೆಹೊಕ್ಕರು. ಹಾಗಾದೊಡಂ ಅಲ್ಲಿ ಬಲೋನ್ಮತ್ತರಾದ ಅಸುರರು ದೇವತೆಗಳಂ ಬಾಧಿಸುವುದಕ್ಕೆ ಉದ್ಯುಕ್ತರಾಗಲು, ಪ್ರಭುವಾದ ಈಶ್ವರನು ಆ ದೈತ್ಯರಂ ಕಂಡು ಕುಪಿತನಾಗಿ ಶಪಿಸಿದನದೆಂತೆನೆ.

ಎಲೈ ದುರಾತ್ಮರಾದ ದೈತ್ಯರಿರಾ! ಆವುದಾನೊಂದು ಕಾರಣದಿಂ ನಮ್ಮವರಾಗಿ ಶರಣಾಗತರಾದವರಂ ಬಾಧಿಸಲೋಸುಗ ಯತ್ನಮಂ ಮಾಡಿದಿರಿ; ಅದು ಕಾರಣದಿಂ ನೀವು ಹತರಾಗಿ ಪರಾಭವಮಂ ಪಡೆಯಿರಿ; ಸ್ವಭಾವದಿಂದುಗ್ರವಾದ ಕರ್ಮವುಳ್ಳ ನಿಮಗೆ ಯಜ್ಞಭಾಗವು ಬೇಡ; ಮತ್ತಂ ಸ್ವಭಾವದಿಂದಲೇ ಮಹಾತ್ಮರಾದ ಬ್ರಾಹ್ಮಣರಿಂದ ನಿಂದಿತರಾಗಿ, ಈ ಮಹಾ ಮೇರುವಿನ ಮೇಲಣ ಭಾಗವು ನಿಮಗೆ ಗೋಚರವಾಗಬೇಡ; ಗೋಚರವಾದೊಡಂ ನಿಮಗೆ ಈ

ಮೇರುಪರ್ವತಮನ್ನೈದುವಲ್ಲಿ ಅನಾದರಣೆಯುಂಟಾಗಲಿ; ಇದು ಮೊದಲ್ಗೊಂಡೀ ಮೇರುಗಿರಿಯ ಊರ್ಧ್ವಭಾಗವು ದೈತ್ಯದಾನವ ರಾಕ್ಷಸರ್ಗೆ ಅಗಮ್ಯಮಾಗಿರಲಿ; ಇದಲ್ಲದೆ ಆ ದೇವತೆಗಳೇ ಲೋಕಗಳ್ಗೆ ಪ್ರಧಾನರಾಗಿ, ಯಜ್ಞಭಾಗಂಗಳಂ ಭುಜಿಸುತ್ತ ನಿರಂತರದಲ್ಲಿಯೂ ವಿಷ್ಣು ಮೊದಲಾದ ಪ್ರಧಾನ ದೇವತೆಗಳೊಡ ಗೂಡಿ, ಹವನಮಂ ಮಾಡುತಲಿರಲಿ. ಭೂಮಿಯಲ್ಲಿಯೂ ಆ ದೇವತೆಗಳೇ ಪರಾಕ್ರಮಿಗಳಾಗಲಿ; ಗಾಯತ್ರಿಯೆಂಬ ಛಂದಸ್ಸಿನಿಂದಲೇ ಗಗನಚಾರಿಗ ಳಾಗಲಿ; ತ್ರಿಷ್ಟುಪ್ ಎಂಬ ಛಂದಸ್ಸಿನಿಂದ ನಿಂದಿತರಂ ಜಯಿಸಿ ಸ್ವರ್ಗ ಸಂಚಾರಿಗಳಾಗಲಿ; ಮತ್ತು ಜಗತೀ ಛಂದಸ್ಸಿನಿಂದ ವೃತ್ರಜಯಮಂ ಮಾಡಿ ಯೆಲ್ಲಾದಿಕ್ಕೆನಲ್ಲಿಯೂ ಪರಾಕ್ರಮಿಗಳಾಗಿ ಶತ್ರುಗಳಂ ಜಯಿಸಲೆಂದು ನನ್ನ ಆಜ್ಞೆಯು. ಇದಲ್ಲದೆ ಅಸುರರ ಮಧ್ಯದಲ್ಲಿ ಆವನೋರ್ವನಾದೊಡಂ ಭಕ್ತಿಭಾವ ದಿಂದ ನಮ್ಮನ್ನಾರಾಧಿಸಿದನಾದೊಡೆ ಅವನೂ ಜಯಶಾಲಿಯಾಗಿರಲಿ, ಮತ್ತು ನನ್ನನ್ನು ಆರಾಧಿಸದಿರ್ದೊಡೆ ಪರಾಜಿತನಾಗಲೆಂದು ಪರಮೇಶ್ವರಂ ನುಡಿದ ನದುಕಾರಣದಿಂ ಆ ದೇವತೆಗಳು ಅಸುರರ ಭಯದಿಂದ ಮಹಾ ಮೇರುವನ್ನೇ ಆಶ್ರಯಿಸಿದರೆಂದು, ಸೂತಮುನಿಯ ವಾಕ್ಯಮಂ ಕೇಳ್ದು, ನೈಮಿಶಾರಣ್ಯವಾಸಿಗ ಳಾದ ಶೌನಕಾದಿ ಮಹಾ ಮುನಿಗಳು ಆ ಸೂತನಂ ವಾಕ್ಯಗಳಿಂ ಮನಂಗಳಿಂ ವಿನಯದಿಂ ಸಹಾ ಸ್ತುತಿಸುತಿರ್ದರೆಂಬಲ್ಲಿಗೆ, ಶ್ರೀ ಕೃಷ್ಣರಾಜ ವಾಣೀವಿಲಾಸ ವೆಂಬ ಸ್ಕಾಂದಪುರಾಣದ ಶಂಕರ ಸಂಹಿತೆಯೋಳ್ ಶಿವರಹಸ್ಯಖಂಡದ ಸಂಭವ ಕಾಂಡದ ಶೂರಪದ್ಮಾಸುರನ ಬಾಧೆಯಿಂದ ಬ್ರಹ್ಮೇಂದ್ರಾದಿ ದೇವತೆಗಳು ವಿಷ್ಣು ಲೋಕಮಂ ಸಾರ್ದು ಅಚ್ಯುತಂಗೆ ಬಿನ್ನೈಸಿದರು. ಮತ್ತೆ ಮಹಾಮೇರುವಂ ಪರಮೇಶ್ವರಂ ನಿರ್ಭಯಮಾಗಿ ಮಾಡಿದನು ಎಂಬ ಕಥಾರೂಪವಾದ ಆರನೆಯ ಅಧ್ಯಾಯವು ಸಂಪೂರ್ಣಂ.

ಏಳನೆಯ ಅಧ್ಯಾಯವು.

ಶ್ರೀ ಮಹಾವಿಷ್ಣುವು ಬ್ರಹ್ಮಾದಿದೇವತೆಗಳಿಗಿತ್ತ ಪ್ರತ್ಯುತ್ತರವು.

ಎಲೈ ಶೌನಕಾದಿಗಳಿರಾ! ತದನಂತರದಲ್ಲಿ ನಾರಾಯಣನು ದೇತೆಗಳ ನೆಲ್ಲರಂ ನೋಡಿ, ಬ್ರಹ್ಮದೇವನೊಡನಿಂತೆಂದನು ಏನಂದರೆ:— ಎಲೈ ಬ್ರಹ್ಮನೆ! ಈಗ ನಾನು ನನ್ನಿಂದಲೇ ದೇವತೆಗಳ ಆಗಮನಮಂ ತಿಳಿದು ಗುಹೆಯಂ ಬಿಟ್ಟು ವೇಗದಿಂದ ವೈಕುಂಠಮನ್ನೈದಿದೆನು. ಆವಾವ ಸಮಯದಲ್ಲಿ ಉಮಾಪತಿಯ ವರಲಾಭದಿಂದ ಅಸುರರ ಉದ್ರೇಕವು ಪುಟ್ಟುವುದೋ, ಆಯಾ ಸಮಯದಲ್ಲಿ ನಿರಂತರದಲ್ಲಿಯೂ ದೇವತೆಗಳಾದ ನಮ್ಮಂದ ಮೇರುವೇ ಆ ವಾಸಸ್ಥಾನಮಾಗಿ

ಮಾಡಿರಲ್ಪಟ್ಟಿದು. ಅದುಕಾರಣದಿಂ ದೇವತೆಗಳಾದ ನಮ್ಮಿಂದ ಆ ಅಸುರರಂ ಜಯಿಸಲಶಕ್ಯವು. ಆ ಲೋಕಶಂಕರನಾದ ಶಂಕರನೇ ಈ ಮುಖ್ಯರಾದ ಅಸುರರಂ, ಪೂರ್ವದಲ್ಲಿ ತ್ರಿಪುರರಂ ಸಂಹರಿಸಿದಂತೆ ಸಂಹರಿಸಲು ಶಕ್ತನು. ಪೂರ್ವದಲ್ಲಿ ಈಶ್ವರನು ನಗುತ ನಮ್ಮ ಮೇಲಣ ದಯದಿಂದ ಹಾಲಾಹಲ ವಿಷಮಂ ಪಾನಮಂಮಾಡಲಿಲ್ಲವೆ? ಈಗಲು ಆ ಪರಮೇಶ್ವರನ ಹೊರತಾಗಿ ಆ ದುರುಳರಾದ ಶೂರಪದ್ಮಂಗೆಯೂ ಸಿಂಹವಕ್ತ್ರಂಗೆಯೂ ತಾರಕಾಸುರಂಗೆಯೂ ಜಗತ್ರಯದಲ್ಲಿ ಸಂಹಾರಕನು ಮತ್ತೋರ್ವನಾವನು? ಎಲೈ ದೇವತೆಗಳಿರಾ! ಅದುಕಾರಣದಿಂ ಸರ್ವಪ್ರಾಣಿಗಳ್ಗೆಯುಂ ಶಾಸಕನಾದ ಆ ಈಶ್ವರನಂ ಸಾದರಮಪ್ಪಂತೆ ತೀವ್ರಮಾಗಿಹ ತಪದಿಂದ ಆಶ್ರೈಸುವ; ಯೆಂದು ನಾರಾಯಣನು ನಿರೂಪಿಸಿ ಸಮಸ್ತ ದೇವತೆಗಳೊಡಗೂಡಿ ಪಿನಾಕಪಾಣಿಯಾದ ಶಿವನಂ ಮಹತ್ತಾದ ನಿಯಮದಿಂದಲೂ ಜಪಾದಿಗಳಿಂದಲೂ ಆರಾಧಿಸುತ್ತಿರ್ದನದೆಂತೆನೆ:—ಕೃಷ್ಣಾಜಿನಮನೇ ಉತ್ತರೀಯಮಾಗಿ ಧರಿಸಿ ಮೌಂಜಿಯೆಂಬ ಕಾಂಚೀದಾಮದಿಂದಲಂಕೃತನಾಗಿ, ರುದ್ರಾಕ್ಷಮಾಲೆಯಂ ಧರಿಸಿ ನಿರ್ಮಲಾಕಾರನಾಗಿ ವಿಭೂತಿಯುಂದ ಜಲದಿಂ ತ್ರಿಯಂಬಕ ಮಂತ್ರಮಂ ಭಾವಿಸಿ ತ್ರಿಯಾಯುಷಮೆಂಬ ಮಂತ್ರದಿಂದಲುಂ ಪಂಚಾಕ್ಷರೀ ಸಮೇತಮಾದ ಓಂಕಾರದಿಂದಲುಂ ತ್ರಿಪುಂಡ್ರಗಳಿಂದಲೂ ದೀಪ್ತನಾಗಿ ಶತರುದ್ರೀಯ ತತ್ಪರನಾಗಿ ಸರ್ವಜಗತ್ಪತಿ ಶಿವನಂ ಏಕಮನನಾಗಿ ಧ್ಯಾನಿಸುತ್ತ ಜಪಾಸಕ್ತನಾದನು. ಹಾಗೆಯೆ ಬ್ರಹ್ಮನೂ ಅಗ್ನಿಯೂ ಮಹರ್ಷಿಗಳೂ ಸಹಾ ದಿಕ್ಪಾಲಕರೊಡಗೂಡಿ ಅವ್ಯಯನಾದ ಶಿವನಂ ಧ್ಯಾನಿಸುತ್ತ ತಪಮನಾಚರಿಸಿದರು. ಇಂತು ಧ್ಯಾನಮಂ ಮಾಡುತ್ತಿರ್ಪ ದೇವತೆಗಳ್ಗೆ ಬಹು ಕಾಲವು ಅತಿಕ್ರಮಿಸುತ್ತಿರಲಾಗಿ ಬಳಿಕ ಶಿವನು ಮುಗುಳ್ನಗೆ ವೆರೆಸಿ ಗಜಚರ್ಮಾಂಬರಧಾರಿಯಾಗಿ ಪ್ರಸನ್ನನಾಗುತ್ತಿರೆ, ವಿಷ್ಣು ಮೊದಲಾದ ದೇವತೆಗಳು ಪಶುಪತಿಯಾದ ಶಿವನಂ ಕಂಡು ಸಂತೋಷಚಿತ್ತರಾಗಿ ಸಕಲಾವಯವಂಗಳಲ್ಲಿಯುಂ ಪುಳಕಾಂಕಿತರಾಗಿ ಸ್ತುತಿಸಿದರದೆಂತೆನೆ.

ಪ್ರಸನ್ನನಾದ ಪರಶಿವನನ್ನು ಮಹಾವಿಷ್ಣು ಚತುರ್ಮುಖ ಮುಂತಾದ ದೇವತೆಗಳು ಸ್ತುತಿಸುವಿಕೆ.

ಎಲೈ, ಪರಶಿವನೆ! ನಿನಗೆ ನಮಸ್ಕಾರವು; ಶೂಲಿಯಾಗಿ ಮಾಲಿಯಾದ, ನಿರಂತರದಲ್ಲಿಯು ಹಾರಕಿರೀಟ ಧಾರಿಯಾದ, ಕಾಲನಾಗಿ ಕಾಲಕಾಲನಾದ, ದುರ್ಜನರಿಗೆ ಕಾಲಾಗ್ನಿರೂಪನಾದ, ಸಜ್ಜನಾವನ ಶೀಲನಾಗಿ ಸದಸದ್ರೂಪನಾದ ಪರಾಪರನಾದ ಭಕ್ತಿಗಮ್ಯನಾದ ನಿನಗೆ ನಮಸ್ಕಾರಗಳು, ಪರಾತ್ಪರನಾಗಿ ದೇವ

ನಾದ ಮತ್ತು ದೇವತೆಗಳಾದ ನಮಗೆ ರಕ್ಷಕನಾದ ಜಗದ್ರೋಹಿಗಳಾದ ದೈತ್ಯರ್ಗೆ ಸಂಹಾರಕನಾದ, ಅಖಿಲಾಂಡಂಗಳ್ಗೆಯುಂ ಪಿತನಾಗಿ ಅಧಿಪತಿಯಾದ ನಿನಗೆ ನಮಸ್ಕಾರಗಳು,— ಎಲೈ, ಸ್ವಾಮಿಯೆ! ಸುರರ್ಗೆ ಪ್ರಭುವಾಗಿ ತ್ರಿಯಂಬಕ ನಾಗಿ ತ್ರಿಪುರಾಂತಕನಾಗಿ ಮಹೇಶ್ವರನಾಗಿ, ಸಮಸ್ತ ದೇಹಧಾರಿಗಳ್ಗೆಯುಂ ಹಿತಪ್ರದನಾದ ನಿನಗೆ ಮರಳಿ ಮರಳಿ ನಮಸ್ಕಾರಗಳು ಎಂದಿಂತು ಹರಿ ಬ್ರಹ್ಮ ಮೊದಲಾದ ದೇವತೆಗಳು ಸ್ತುತಿಸಿದವರಾಗಲೂ; ಹರನು ಮುಗುಳ್ನಗೆಯೆಂಬ ಬೆಳ್ದಿಂಗಳಿಂದ ನಿವಾರಿತಮಾದ ದಿಕ್ಕುಗಳಲ್ಲಿರ್ಪ ಗಾಢಾಂಧಕಾರ ಪಂಕವುಳ್ಳವ ನಾಗಿ ಈ ವಾಕ್ಯಮಂ ನಿರೂಪಿಸಿದನು:— ಎಲೈ ಹರಿಯೆ! ಚತುರ್ಮುಖನೇ ಈ ಸುರಶ್ರೇಷ್ಠರ್ಗೆ ನನ್ನಿಂದ ಮಾಡಲ್ಪಡತಕ್ಕ ಕೃತ್ಯಮಾವುದು? ಬಹುಕಾಲವು ದೇವತೆಗಳಿಂದಾಚರಿತಂಗಳಾದ ತಪಂಗಳು ಅದ್ಭುತಂಗಳಾದುವು. ಸಕಲ ಜಗತ್ತಿ ನಲ್ಲಿಯುಂ ಸಜ್ಜನರ್ಗೆ ನನ್ನ ದರುಶನವು ಅಪೂರ್ವವಹುದೋ? ಎಂದಿಂತು ಪರಮೇಶ್ವರಂ ನುಡಿವುತ್ತಿರಲಾಗಿ, ದೇವತೆಗಳು ಮಹಾ ಹರ್ಷದಿಂದ, ಎಲೈ ಈಶಾನನೆ! ಸರ್ವೇಶ್ವರನೆ! ಹರನೆ! ಜಯಜಯ ಯೆಂದು ನುಡಿಯುತ್ತಿದ್ದರು. ಬಳಿಕ ವಿಷ್ಣುವು ಆ ದೇವತೆಗಳನೆಲ್ಲರುಂ ನಿವಾರಿಸಿ, ವಿಶ್ವಾಧಿಕನಾದ ಪರಮೇಶ್ವ ರಂಗೆ ಯಿಂತು ಬಿನ್ನೈಸಿದನು. ಏನೆಂದರೆ, ಎಲೈ ದೇವನೆ! ನಿನ್ನಿಂದ ಲಬ್ಧವರ ರಾಗಿ ಉಲ್ಬಣರಾದ ಶೂರಪದ್ಮ ಮೊದಲಾದ ದೈತ್ಯರಿಂದ, ನಾವು ನಿರಂತರ ಮಪ್ಪಂತು ಅತ್ಯಂತ ಬಾಧಿತರಾದೆವು. ಅದುಕಾರಣದಿಂ ನಮ್ಮನೆಲ್ಲರನ್ನೂ ಜಯಿಸಿ ನಮ್ಮ ಯೆಲ್ಲರ ಜೀವಂಗಳನ್ನೂ ಅಪಹರಿಸಿದರು. ಆ ಅಸುರರ ಭೀತಿ ಯಿಂದ ಶರಣಾಗತರಾದ ನಮ್ಮನ್ನು ಕರುಣಾಬಲದಿಂ ಪರಿಪಾಲಿಸು. ಎಲೈ ಶಿವನೆ! ಈ ದೇವತೆಗಳ ಮಧ್ಯದಲ್ಲಿ ನೀನೊಬ್ಬ ಹೊರತಾಗಿ, ಆ ಶೂರಪದ್ಮಾದಿ ದೈತ್ಯರಂ ಜಯಿಸುವ ಸಮರ್ಥನಂ ಕಾಣೆನು, ಎಂದು ಈ ಪ್ರಕಾರವಾಗಿ ದೇವತೆ ಗಳ್ಗೆ ಪ್ರಿಯವಾಗಿ ವಿಷ್ಣುವು ನಿರೂಪಿಸಲಾಗಿ, ಚಂದ್ರಶೇಖರನಾ ವಚನಮಂ ಕೇಳ್ದು ತನ್ನ ಶಿರದಲ್ಲಿರ್ಪ ಚಂದಿರನ ಕಾಂತಿಯನ್ನು ದಂತಕಾಂತಿಯಿಂದ ಅಭಿ ವೃದ್ಧಿಯಂ ಮಾಡುತ್ತ ಈ ವಾಕ್ಯಮಂ ನಿರೂಪಿಸಿದನು.— ಎಲೈ ಹರಿಯೆ! ಕಮಲಾಸನನೆ! ಎಲ್ಲಾ ದೇವತೆಗಳುಂ ಕೇಳ್ವುದು. ಈಗ ನಾನು ಅಜೇಯ ನಾದ ಷಣ್ಮುಖನಂ ಸೃಜಿಸಿ ಆ ಶೂರಪದ್ಮಾದಿ ರಾಕ್ಷಸರನೆಲ್ಲರಂ ಶೀಘ್ರದಿಂದಲೇ ಸಂಹರಿಸುವೆನು, ಯೆಂದು ನುಡಿದು ಶಿವನು ಅಂತರ್ಧಾನಮ ನೈದುತ್ತಿರಲಾಗಿ, ಬಳಿಕ ಬ್ರಹ್ಮವಿಷ್ಣು ಮೊದಲಾದ ದೇವತೆಗಳು ಮಹೇಶ್ವರಂಗೆ ನಮಿಸಿ, ಕ್ಷಣಮಾತ್ರದಲ್ಲಿ ಆ ಶೂರಪದ್ಮಾದಿಗಳ ಭಯದಿಂದ ಮಹಾ ಮೇರುವನ್ನೇ ಆಶ್ರೈಸಿದರು.

ಬಳಿಕ ಆ ಮೇರು ಪರ್ವತದಲ್ಲಿ ಬ್ರಹ್ಮಾದಿ ದೇವತೆಗಳು ನಾರಾಯಣನಂ ಕುರಿತು, ಎಲೈ, ಪ್ರಭುವಾದ ನಾರಾಯಣನೆ! ನಮಗೆ ಶಿವನು ಪ್ರಸನ್ನನಾದೊಡಂ ನಮ್ಮ ಭಾಗ್ಯವು ಯೇನು ಕಾರಣದಿಂದೀ ಪ್ರಕಾರವಾದುದು? ಆ ಶೂರಪದ್ಮ ಮೊದಲಾದ ಅಸುರರೇ ಅತ್ಯಂತ ಕೃತಾರ್ಥರು; ಹಾಹಾ!! ಆ ಅಸುರರ ಅದೃಷ್ಟ ಪರಿಪಾಕವು ಹೇಗಿದ್ದೀತು? ಇತಃಪರದಲ್ಲಿ ಯಾವ ಉಪಾಯವು ಸಿದ್ಧಿಸಲ್ಪಡತಕ್ಕದ್ದಾಗಿದೆ? ಯಾವ ಉಪಾಯದಿಂ ಹರನಿಂದ ಕುಮಾರನು ಉತ್ಪನ್ನನಾಗಿ ದೈತ್ಯರಂ ಸಂಹರಿಸುವನು? ಎಂದು ದೇವತೆಗಳು ನುಡಿದವರಾಗಲು; ಮಧುಸೂದನನಾ ವಚನಮಂ ಕೇಳ್ದು, ತನ್ನ ಮನದೊಳ್ವಿಚಾರಿಸಿ, ಬ್ರಹ್ಮದೇವನೊಡಗೂಡಿ ಆಲೋಚನೆಯಂ ಗೈದು, ದೇವಸಭೆಯಲ್ಲಿ ಈ ವಾಕ್ಯಮಂ ನಿರೂಪಿಸಿದನು. ಎಲೈ ದೇವತೆಗಳಿರಾ! ಯೆಂದಿನಾರಭ್ಯವಾಗಿ ಶರ್ವಾಣಿಯು ದಾಕ್ಷಾಯಿಣೀ ದೇಹಮಂ ತ್ಯಜಿಸಿ ಹಿಮವತ್ಪರ್ವತ ರಾಜನಂ ಜನನಕ್ಕೋಸುಗ ಐದಿದಳೊ, ಅಂದಿನಾರಭ್ಯವಾಗಿ ಸರ್ವಜ್ಞನಾದ ಜಗತ್ಪತಿಯಾದ ಶಿವನು ಮನೋನೇತ್ರಾದಿ ಕರಣಂಗಳಂ ನಿಗ್ರಹಿಸಿ, ಸನಕಾದಿ ಯೋಗಿಗಳ್ಗೆ ಅತ್ಯಂತ ದುರ್ಗ್ರಹವಾದ ಸ್ವಸ್ವರೂಪಮಂ ಉಪದೇಶಿಸಲು ಮನಗೊಂಡು ಕೈಲಾಸದಲ್ಲಿ ವಟವೃಕ್ಷದ ಮೂಲಮನಾಶ್ರಯಿಸಿ, ದಕ್ಷಿಣಾಮೂರ್ತಿಯಾಗಿ ಸರ್ವಜ್ಞನಾದುದರಿಂದ ಜೀವಾತ್ಮರ್ಗೆ ಗುರುವಾಗಿ ಜ್ಞಾನಮುದ್ರೆಯಂ ಧರಿಸುತ್ತ, ಆ ಸನಕಾದಿಗಳ ಸಕಲ ಸಂದೇಹಂಗಳಂ ಛೇದಿಸುತ್ತ ಇರುತ್ತಿರುವನು. ಈ ಚರಾಚರಾತ್ಮಕವಾದ ಪ್ರಪಂಚವು ಶಿವಮಯವಪ್ಪುದರಿಂದ, ಸಕಲ ಪ್ರಾಣಿಗಳ್ಗೆಯುಂ ಸರ್ವ ಭೋಗದಲ್ಲಿಯೂ ವಿರಕ್ತಿ ಪುಟ್ಟಿದುದು. ಅದುಕಾರಣದಿಂ ಸ್ರಕ್ಚಂದನಾದಿ ವಿಷಯಂಗಳು ವಿಷಸಮಾನಂಗಳಾದವು ಆಯ ಲೋಕಂಗಳಲ್ಲಿ ಆವಾವ ಆತ್ಮರು ಯಿರುತ್ತಿರುವರೊ; ಈ ಚರಾಚರ ಪ್ರಪಂಚದಲ್ಲಿ ಸಕಲವು ತನ್ಮಯವಪ್ಪುದರಿಂದ ಸ್ತ್ರೀ ಪುರುಷ ಭಾವಂಗಳಿಲ್ಲವೆಂದು ದೇವತೆಗಳ್ಗೆ ನಾರಾಯಣಂ ಪೇಳ್ದನೆಂದು ಸೂತಪೌರಾಣಿಕರು ಶೌನಕಾದಿ ಮುನಿಗಳಿಗೆ ನಿರೂಪಿಸಿದರೆಂಬಲ್ಲಿಗೆ, ಶ್ರೀ ಕೃಷ್ಣರಾಜ ವಾಣೀವಿಲಾಸಮೆಂಬ ಸ್ಕಾಂದಪುರಾಣದ ಶಂಕರಸಂಹಿತೆಯೊಳ್ ಶಿವರಹಸ್ಯಖಂಡದೊಳ್ ಸಂಭವಕಾಂಡದಲ್ಲಿ, ಪುರಂದರಾದಿಗಳ್ಬೆರಸಿ, ಅಚ್ಯುತಂ ತಪಮಿಸಿದುರ್ ಶೂರಪದ್ಮಾದಿಗಳಂ ಜಯಿಸುವ ಅಭಯವಾಕ್ಯಮಂ ಪರಮೇಶ್ವರನಿಂ ಪಡೆದು ಮೇರುಗಿರಿಯೊಳಾಲೋಚಿಸಿದನೆಂಬ ಕಥಾರೂಪವಾದ,

ಏಳನೆಯ ಅಧ್ಯಾಯವು ಸಂಪೂರ್ಣವು.

ಎಂಟನೆಯ ಅಧ್ಯಾಯವು.

ಪರಶಿವನ ಸನ್ನಿಧಿಗೆ ಮನ್ಮಥನನ್ನು ಕಳುಹಲು ಪ್ರಯತ್ನಿಸುವಿಕೆ.

ಎಲೈ, ಮುನಿಗಳಿರಾ! ಕೇಳಿರಿ; ಅನಂತರದಲ್ಲಿ ನಾರಾಯಣನು ಆ ದೇವತೆಗಳಂ ಕುರಿತು, ಎಲೈ ದೇವತೆಗಳಿರಾ! ನೀವು ದಿಕ್ಪಾಲಕರಾದೊಡಂ ನಿಜಸ್ತ್ರೀಯರಲ್ಲಿ ಆಶಾರಹಿತರಾದುದರಿಂದ, ಈಗ ನಿಮ್ಮ ಮನಂಗಳು ನಿರ್ವಿಕಾರಂಗಳಾದವು. ಹೇಗೆಂದರೆ, ವೃತ್ರಾರಿಯಾದ ಇಂದ್ರನ ಮನಸ್ಸು ಶಚಿಯಲ್ಲಿ ಅರತಿಯಂ ಪೊಂದಿದರ್ದುದು. ಈ ಪಿತಾಮಹನುಂ ಸರಸ್ವತಿಯಲ್ಲಿ ವಿರಕ್ತನಾಗಿ ನಿಸ್ಪೃಹನಾಗಿರುವುದರಿಂದ ದಿವಾರಾತ್ರಿಯಲ್ಲಿಯೂ ಸೃಷ್ಟಿಯು ಹೇಗೆ ಆದೀತು? ನನ್ನಿಂದಲು ಜಗದ್ರಕ್ಷಕತ್ವವು ಯೆಂತಾದೀತು? ವಿರಕ್ತರಾದ ಈ ದಿಕ್ಪಾಲಕರುಗಳ್ಗೆಯುಂ ಆವ ಅಧಿಕಾರವು ನಡೆದೀತು? ಪುತ್ರೋತ್ಪತ್ತಿ ಯಾಗುತ್ತಿರಲಾಗಿ; ಯಾಜ್ಞಿಕರಿಂದ ಆವುದಾನೊಂದು ವೈಶ್ವಾನರೇಷ್ಟಿಯು ಮಾಡಲ್ಪಕ್ಕುದು. ಈ ಜಗತ್ತೆಲ್ಲವು ಹೀಗೆ ಹೀನವಾಗುತ್ತಿರೆ ಆ ಯಾಗಾದಿಗಳ ಹೊರತು ದೇವತೆಗಳಿಗೆ ತೃಪ್ತಿಯೆಂತಹುದು? ಪ್ರಾಣಿಗಳಿಗೆ ಪರಾಕ್ರಮವಾವುದು? ಅನ್ನಾದಿಜನ್ಯವಾದ ಇಂದ್ರಿಯ ಪಟುತ್ವವಾವುದು? ಆದುಕಾರಣದಿಂದ ಸಕಲ ಜಗತ್ತಿನ ಸೃಷ್ಟಿಯು ಸ್ತ್ರೀ ಪುರುಷರ ಭಾವದಿಂದಲ್ಲದೆ ಆಗದೆಂಬುದರಿಂದ ಇಲ್ಲಿ ನಾವೆಲ್ಲರುಂ ಕೂಡಿ ಮನ್ಮಥನಂ ಕರೆದು, ಉಚಿತವಾದ ವಿವಿಧೋಪಾಯಂಗಳಿಂ ಅತ್ಯಂತ ಸಂತುಷ್ಟನಂ ಮಾಡಲೋಸುಗವೂ ಪಾರ್ವತೀ ಪರಮೇಶ್ವರರ್ಗೆ ಐಕ್ಯಮಂ ಸಂಪಾದಿಸಲೋಸುಗವೂ ಮಹತ್ತಾದ ಯತ್ನವು ಮಾಡಲ್ಪಕ್ಕುದೆಂದು ನಿಶ್ಚೈಸಿ, ಆ ಬ್ರಹ್ಮಾದಿ ದೇವತೆಗಳೊಡಗೂಡಿ ಮನ್ಮಥನಂ ಸ್ಮರಿಸುತ್ತಿರಲಾಗಿ, ಬಳಿಕ ಕಾಮನು ದನುಜ ದ್ವೇಷಿಗಳ ಮುಂದೆ ರತೀದೇವಿಯೊಡಗೂಡಿ, ವಸಂತನಂ ಬೆರೆಸಿ, ಧನುರ್ಬಾಣಂಗಳಂ ಧರಿಸುತ್ತ, ಪ್ರಸನ್ನನಾಗಿ ಆ ದೇವತೆಗಳಿಗೆ ನಮಿಸಿ, ನುಡಿದನದೆಂತೆನೆ:—

ಎಲೈ ಪೂಜ್ಯರಾದ ದೇವತೆಗಳಿರಾ! ಜಗದೀಶ್ವರರಾದ ನೀವುಗಳು ನನ್ನನ್ನೇನು ಕಾರಣದಿಂದ ಸ್ಮರಿಸಿದಿರಿ? ಎಲೈ ಹರಿಯೆ! ಬ್ರಹ್ಮನೆ! ದೇವೇಂದ್ರನೆ! ನೀವೆಲ್ಲರುಂ ಶಂಕೆಯಿಲ್ಲದಂತೆ ನಿರೂಪಿಸುವುದು. ಈ ಜಗತ್ರಯದಲ್ಲಿ ನಿಮಗೆ ಆವಕಾರ್ಯವವಶ್ಯವು? ಆ ಕಾರ್ಯಮನೆಲ್ಲಂ ನಿಮ್ಮ ಕಿಂಕರನಾದ ನಾನು ಸಾಧಿಸುವೆನು. ಎಂದು ನುಡಿದ ಕಾಮನಂ ಕುರಿತು ವಿಷ್ಣುವಿಂತೆಂದನು. ಎಲೈ, ಬುದ್ಧಿಶಾಲಿಯಾದ ಕಾಮನೆ! ಭೂತ ಭವಿಷ್ಯತ್ಕಾರ್ಯಂಗಳಿಗೆ ನೀನೊರ್ವನೆ ಮಂಡಲಾಧಿಪತಿಯಾದುದರಿಂದ ಈಗ ದೇವತೆಗಳ ಕಾರ್ಯಮಂ ಸಾಧಿಸಲೋಸುಗ ಈ ಜಗತ್ತನ್ನೆಲ್ಲಮಂ ಸ್ತ್ರೀ ಪುರುಷರ ಭಾವದಿಂದೊಡಗೂಡಿಸು. ಯೆಷ್ಟು ಪರ್ಯಂತವು

ಉಮಾಪತಿಯು ಯೆಡಬಲದ ಭಾಗಂಗಳಾದ ಸ್ತ್ರೀಪುರುಷದ್ವಯವು ಆಗಲಿರು ವುದೋ, ಅಷ್ಟು ಪರಿಯಂತವು ಈ ಚರಾಚರಾತ್ಮಕಮಾದ ಜಗತ್ತು ಕೂಡಿಸಲು ಶಕ್ಯಮಲ್ಲ. ಯೇಕೆಂದರೆ, ಈ ಪೂರ್ವೋಕ್ತಮಾದ ಸ್ತ್ರೀಪುರುಷದ್ವಯವು ಲೋಕಂಗಳಿಗೆ ಮಾತಾಪಿತೃ ರೂಪಮಾಗಿಹುದು. ಆ ಸ್ತ್ರೀ ಪುರುಷರ ಉಭಯ ದಲ್ಲಿ ಮಾತೃರೂಪವಾದ ವೊಂದು ವಸ್ತುವು ಗಿರಿರಾಜಂಗೆ ಪುತ್ರಿಯಾಗಿ, ಆ ಗಿರಿ ರಾಜನಲ್ಲಿಯೆ ಈಶ್ವರನ ಪ್ರೀತಿಗೋಸುಗ ತಪಮನಾಚರಿಸುತ್ತಿರುವುದು. ಮತ್ತೊಂದು ವಸ್ತುವಾದೊಡೆ, ಕೈಲಾಸಗಿರಿಯಲ್ಲಿಯೇ ವಟವೃಕ್ಷ ಛಾಯೆ ಯನ್ನಾಶ್ರೈಸಿ, ಯೋಗಿ ಶ್ರೇಷ್ಠರಿಗೋಸುಗ ಜ್ಞಾನೋಪದೇಶಮಂ ಮಾಡುತ್ತ ಸುಖದಲ್ಲಿಯಿತ್ತಿದೆ. ಆ ಉಮಾ ಮಹೇಶ್ವರ ರೂಪಮಾದ ವಸ್ತುದ್ವಯಕ್ಕೆ ಐಕ್ಯಮುಂಟಾದೊಡೆ ಜಗತ್ರಯಮುಂ ಸ್ವಸ್ಥಮಹುದು. ನಿನ್ನ ಪರಾಕ್ರಮ ಮಾದೊಡೆ ಜಗತ್ತಂ ಅತಿಕ್ರಮಿಸಿ ಅತ್ಯಂತ ಮಹತ್ತಾಗಿರುವುದು. ಅದುಕಾರಣ ದಿಂದ ನೀನು ಬಹು ಶ್ಲಾಘ್ಯನಾಗಿರುತಿದ್ದಿ. ಅವುದಾನೊಂದು ಕಾರಣದಿಂ ನಿನಗೆ ಕುಸುಮಂಗಳು ಬಾಣಂಗಳು; ಆ ಬಾಣಂಗಳಿಂದಲೇ ಈಶ್ವರಾರ್ಚನೆಯು; ಅದುಕಾರಣದಿಂದೀಗ ಈಶ್ವರ ಪ್ರೀತಿಗೋಸುಗ ಸಮಸ್ತ ಲೋಕಂಗಳಲ್ಲಿಯೂ ನೀನು ಕುಶಲನಲ್ಲವೇ ಯೆಂದು ಮಾಧವನು ನುಡಿದನು.

ಅನಂತರದೊಳು ಮನ್ಮಥನು ಈ ವಾಕ್ಯಮುಂ ಕೇಳಿ, ಆ ಬ್ರಹ್ಮಾದಿಗಳಂ ಕುರಿತು, ಎಲೈ ವಿಷ್ಣುವೆ! ಬ್ರಹ್ಮನೇ! ನಿಮ್ಮ ವಾಕ್ಯವು ಕೇಳ್ವುದು. ತಮ್ಮ ಗಳ ಸನ್ನಿಧಾನದಲ್ಲಿ ನಾನು ಯಾವ ಈಶ್ವರನ ಕೃಪೆಯಿಂದ ಯೆಲ್ಲಾ ಕಡೆಯಲ್ಲಿಯು ಜಯಶಾಲಿಯಾದೆನೋ ಅಂಥಾ ಈ ಈಶ್ವರನಂ ಜಯಿಸುವಲ್ಲಿ ಯತ್ನಮುಂ ಮಾಡಿ ದೊಡೆ ನಿಸ್ಸಂದೇಹಮಾಗಿ ಸ್ವಾಮಿ ದ್ರೋಹಿಯಾಗುವೆನಲ್ಲವೆ? ಸ್ವಾಮಿದ್ರೋಹಿ ಗಳಾದ ಪುರುಷರ್ಗೆ ಸ್ವರ್ಗವಿಲ್ಲ; ನರಕಮುಂಟಾಗುವದು. ಮತ್ತೆ ಪರಲೋಕ ವೆಲ್ಲಿಯದು? ಅದಂತಿರಲಿ, ಈಗ ಚಂದ್ರಶೇಖರನು ಭಕ್ತಿವರ್ಜಿತಮಾದ ಅತಿ ಪ್ರಿಯಕರಮಾದ ಕುಸುಮಮನಾದೊಡಂ ಅಂಗೀಕರಿಸನು. ಭಾವಶುದ್ಧಿಯಾದವ ನಿಂದ ಕೊಡಲ್ಪಟ್ಟ ತೃಣಗುಲ್ಮ ಶಿಲಾದಿಕಮನಾದೊಡಂ ಸರ್ವೇಶ್ವರನಾದ ಧೂರ್ಜಟಿಯು ಅಂಗೀಕರಿಸುವನು. ಈ ವಿಷಯದಿ ದೃಷ್ಟಾಂತಮೇನೆಂದರೊ, ಪೂರ್ವದಲ್ಲಿ ಭಾವವರ್ಜನೆಯಿಂದ ಕಾಮಧೇನುಗಳಿಂ ಕರೆಯಲ್ಪಟ್ಟ ಕ್ಷೀರವು ಆ ಕ್ಷಣದಲ್ಲಿಯೇ ಆ ಧೇನುಗಳ್ಗೆ ಸಂತಾಪಕ್ಕೆ ಕಾರಣಮಾಗಿ ಅಪ್ರಿಯ ಮಾದುದೆಂದು ಮನ್ಮಥನು ನುಡಿದವನಾಗಲು, ಆವಾಕ್ಯಮುಂ ಕೇಳ್ದು, ಎಲೈ ಕಾಮನೆ! ಈಕ್ಷೀರಮುಂ ಈಶ್ವರಂ ಪರಿಗ್ರಹಿಸದೇ ಪೋದ ಕಾರಣಮೇನೆಂದು ಬೆಸಗೊಂಡರು.

ಕಾಮಧೇನು ಕಥಾ ನಿರೂಪಣಂ.

ತದನಂತರದಲ್ಲಿ ಮನ್ಮಥನು ಎಲೈ, ಬ್ರಹ್ಮಾದಿಗಳಿರಾ ! ಪೂರ್ವದಲ್ಲಿ ಮಂದರ ಪರ್ವತದಲ್ಲಿ ಜಗತ್ಪತಿಯಾದ ಚಂದ್ರಮೌಳಿಯಾದ ಪರಮೇಶ್ವರನು ಮರುದ್ಗಣಂಗಳಿಂ ಸೇವ್ಯಮಾನನಾಗಿ, ನಂದಿ ಭೃಂಗಿ ಸ್ಕಂದ ವಿಘ್ನೇಶ್ವರರಿಂ ಪರಿವೃತನಾಗಿ, ನರ್ತನೋಪಚಾರ ನಿಪುಣೆಯರಾದ ರುದ್ರಕನ್ನಿಕೆಯರಿಂದಲುಂ ಅಪ್ಸರ ಸ್ತ್ರೀಯರಿಂದಲುಂ ಸೇವಿತನಾಗಿ, ಮಧುಮಾಧವರಿಂ ಸಂಪಾದಿತಂಗಳಾದ ಕುಸುಮಂಗಳಿಂದ ನಿಬಿಡ ಮಾದುದರಿಂ ಚಿತ್ರವರ್ಣವುಳ್ಳವನಾಗಿ, ಜಗಂಗಳ್ಗೆ ಮಾತೆಯಾಗಿ ತನಗೆ ಪ್ರಾಣಕಾಂತೆಯಾದ ದಾಕ್ಷಾಯಣಿಯಂ ಅಲಂಕಾರಂಗೈದು, ಅತ್ಯಂತ ಸಂತುಷ್ಟನಾಗಿ, ಸಿಂಹಾಸನದೋಳ್ ಯಿರುತಿರ್ದನು. ಆ ಸಮಯದಲ್ಲಿ ಬ್ರಹ್ಮಪುತ್ರನಾದ ಕಶ್ಯಪ ಬ್ರಹ್ಮನು ದಿತಿ ಅದಿತಿಯರೆಂಬ ಪತ್ನಿಯರೀರ್ವರಿಂ ತಮಗೆ ಸ್ವಾದುವಾದ ಸಾಕ್ಷಾದ್ಗೋಕ್ಷೀರಮಾಗ ಬೇಕೆಂದು ಮರಳಿ ಮರಳಿ ಪ್ರಾರ್ಥಿತನಾಗಿ, ವರುಣನ ಬಳಿಗೆ ಹೋಗಿ, ಕ್ಷೀರಪೂರಿತಂಗಳಾದ ದಶಧೇನುಗಳಂ ಕೊಡ ಹೇಳಿ ಪ್ರಾರ್ಥಿಸಿದವನಾಗಲು, ಆ ವರುಣನು ಬಹಳವಾದ ಕ್ಷೀರಯುಕ್ತಮಾದ ಧೇನುಗಳಂ ಕೊಟ್ಟನು. ಆ ಬಳಿಕ ಕಶ್ಯಪ ಬ್ರಹ್ಮನು ತನ್ನ ಸ್ತ್ರೀಯರೀರ್ವರಿಗೋಸ್ಕರ, ಆ ಧೇನುಗಳಂ ದಂಡಮಂ ಪಿಡಿದು ನಡೆಸುತ್ತ, ಸಂತುಷ್ಟಮಾದ ಅಂತಃಕರಣದಿಂದ ಜನಲೋಕಕ್ಕಾಗಿ ತೆರಳುತ್ತಿರೆ. ಆ ಕಶ್ಯಪ ಬ್ರಹ್ಮನ ವಶವರ್ತಿಯಾದ ಧೇನುಗಳು ಆಕಾಶಮಾರ್ಗದಲ್ಲಿ ಸ್ವೇಚ್ಛೆಯಿಂದ ಪೋಗುತ್ತಿರಲಾಗಿ, ಅಕಾಮಧೇನುಗಳು ಅವ ಪ್ರದೇಶದಲ್ಲಿ ಯೈದುತಿದ್ದವೋ, ಆ ಪ್ರದೇಶದಲ್ಲಿ ಭೂಮಿಯ ಉಪರಿಭಾಗದಲ್ಲಿ ನದಿಗಳುಂ ನವಂಗಳುಂ ಆ ಕಾಮಧೇನುಗಳ ಕ್ಷೀರದಿಂದ ಪರಿಪೂರ್ಣಂಗಳಾದವು. ಕ್ರಮದಿಂದ ಆ ಕಾಮಧೇನುಗಳು ಯೆಲ್ಲಾ ಕಡೆಯಲ್ಲಿಯುಂ ಸಂಚರಿಸುತ ಯೈದಿದವು. ಆಗ ಕಶ್ಯಪ ಬ್ರಹನು ಶೀಘ್ರದಿಂದಂಡಮಂ ಪಿಡಿದು ನಿಜಪತ್ನಿಯರ್ಗೆರೆಸಿ, ಪರವಶನಾಗಿ ಅತಿ ಖೇದದಿಂ ಬಹುತರಮಾದ ನಿಟ್ಟುಸಿರಂ ಬಿಡುತ, ವೊಣಗಿದ ತುಟಗಳಿಂದುಪಲಕ್ಷಿತನಾಗಿ, ಆ ಧೇನುಗಳನ್ನು ತಡೆಯಲಶಕ್ತನಾದನೆಂಬಲ್ಲಿಗೆ, ಕರ್ನಾಟಕ ಭಾಷಾ ವಿರಚಿತಮಾದ, ಸ್ಕಾಂದ ಪುರಾಣದ ಶಂಕರ ಸಂಹಿತೆಯೋಳ್ ಶಿವರಹಸ್ಯಖಂಡದೊಳು ಸಂಭವಕಾಂಡದ, ಪಶುಪತಿಯಂ ಕುಸುಮಾಸ್ತ್ರದಿಂದರ್ಚನೆಗೆಯ್ವುದೆಂದು ಸುರನಿಕರಂ ಮನ್ಮಥನಂ ಚೋಧಿಸಲಾಗಿ ಕಾಮಧೇನುವಿನ ಕಥೆಯಂ ಆ ದಿವಿಜರ್ಗೆ ಕಾಮಂ ವಿವರಿಸು ತ್ತಿದ್ದನೆಂಬ ಕಥಾರೂಪಮಾದ ಯೆಂಟ ನೆಯ ಅಧ್ಯಾಯವು ಸಂಪೂರ್ಣಂ.

ಒಂಬತ್ತನೆಯ ಅಧ್ಯಾಯವು.

ಪರಶಿವನ ದೃಷ್ಟಿಕ್ಷೇಪದಿಂದ ಕಾಮಧೇನುಗಳು ಭಸ್ಮವಾಗುವಿಕೆ.

ಎಲೈ, ಮುನಿಗಳಿರಾ! ತದನಂತರದಲ್ಲಿ ಆ ಮನ್ಮಥನು ಮರಳಿ ವಿಷ್ಣು ಮೊದಲಾದ ದೇವತೆಗಳ್ಗೆ ಇಂತೆಂದಂ:— ಎಲೈ, ವಿಷ್ಣ್ವಾದಿ ದೇವತೆಗಳಿರಾ! ಆ ಕಾಮಧೇನುಗಳು ಕ್ಷಣಮಾತ್ರದಿಂದ ಕ್ಷೀರವರ್ಷಮಂ ವರ್ಷಿಸುತ್ತ, ಮಂದರ ಪರ್ವತದ ಮೇಲಣ ಭಾಗಮನೈದುತ್ತಿರಲಾಗಿ, ಆ ಕಾಮಧೇನುವಿನ ಕ್ಷೀರ ವರ್ಷಗಳು ಆ ಮಂದರೋಪರಿಭಾಗಸ್ಥನಾದ ಶಿವನ ಶಿರಸ್ಸಿನಲ್ಲಿ ಪ್ರವಹಿಸುತ್ತಿರಲು, ಈ ಪರಮೇಶ್ವರನು ಅವಮಾನದಿಂದ ಆಕಾಶಮಂ ನೋಡುತ್ತಿರೆ, ಆ ಕಾಮಧೇನುಗಳು ತತ್ಕ್ಷಣದಲ್ಲಿಯೇ ಭಸ್ಮೀಭೂತಂಗಳಾದವು. ಅಕಟಕಟ!! ಈಶ್ವರಂಗೆ ಕ್ಷೀರಧಾರಾಭಿಷೇಕವು ಪ್ರಿಯವೆಂದು ಮುನೀಶ್ವರರು ಪೇಳ್ವರಲ್ಲವೆ? ಆ ಕ್ಷೀರಧಾರೆಯು ಅತ್ಯಂತ ಸ್ವಲ್ಪಮಾದೊಡಂ, ಧೇನು ಸಂಬಂಧಮಾಗಿ ಮಹಾ ಪರಿಶುದ್ಧಮಾದ ಪಂಚಗವ್ಯವಾದೊಡಂ ಪ್ರಿಯಕರ ಮಾದೊಡಂ ಮತ್ತೆ ಈತಂ ಪಶುಪತಿಯಾಗಿ ಅನ್ಯಾಯನಾದೊಡಂ ಕಾಮಧೇನುಗಳಂ ಯೆಂತು ದಹಿಸಿದ ನೆಂದಲ್ಲಿ, ಭಾವಹೀನಂಗಳಾದ ಧೇನುಗಳಿಂದ ವರ್ಷಿಸಲ್ಪಟ್ಟ ಕ್ಷೀರಮಾದ ಕಾರಣದಿಂ, ಶಿವಂಗೆ ಭಾವಶುದ್ಧಿಯಿಲ್ಲದ ಆ ಕ್ಷೀರವು ಅಪ್ರಿಯ ಮಾದುದು. ಭಾವ ಶುದ್ಧಿಯಾದ ಮನದಿಂದಲಾದೊಡೆ ಕೋದಂಡದಂಡತಾಡನಮಾದೊಡಂ ದೇವತಾರ್ಚನೆಯೇ ಅಹುದೆಂಬದು ನಿಶ್ಚಯವು.

ದೇವತೆಗಳ ಬಳಿ ಕಾಮದೇವನ ಆತ್ಮಸ್ತುತಿಯ ಬಿನ್ನಹವು.

ಎಲೈ, ದೇವತೆಗಳಿರಾ! ಭಾವಶುದ್ಧಿಯಿಲ್ಲದುದರಿಂದ ಈ ಪರಮೇಶ್ವರನಿಂದ ನಾನು ಅಂಜುತಲಿದ್ದೇನೆ. ಐದಾದ ನನ್ನ ಕುಸುಮ ಬಾಣಂಗಳ್ಗೆ ಆ ಪರಮೇಶ್ವರನನೆಂತು ಲಕ್ಷ್ಯಂಮಾಳ್ಪೆನು? ಬಾಣಬುದ್ಧಿಯಿಂದ ಈ ಜಗತ್ಪತಿಯಾದ ಈಶ್ವರಂಗೆ ಕುಸುಮ ಬಾಣಂಗಳಂ ಪ್ರಯೋಗಿಸಿದೆನಾದೊಡೆ, ನಾನು ಪಾಪಿಗಳ ಮಧ್ಯದಲ್ಲಿ ಮಹಾ ಪಾಪಿಯಹೆ ನೆಂಬಲ್ಲಿ ಸಂದೇಹಮಿಲ್ಲ. ಆದು ಕಾರಣದಿಂದ, ಎಲೈ, ವಿಷ್ಣುವೆ! ನಿನ್ನ ವಾಕ್ಯಮಂ ನಾನು ಅಂಗೀಕರಿಸುವದಿಲ್ಲವೆಂದು ನುಡಿದ ಮನ್ಮಥನ ವಾಕ್ಯಮಂ ಕೇಳಿ, ಮರಳಿ ಬ್ರಹ್ಮದೇವನು ನುಡಿಯಲುದ್ಯೋಗಿಸಿ, ಮದನನಂ ಸಮೀಪಕ್ಕೆ ಕರೆದು ಸಂತವಿಡುತ್ತ, ಯಿಂತೆಂದನು. ಎಲೈ, ಮನ್ಮಥನೆ ನಿನಗೆ ದೇವತೆಗಳು ಯಾಚಕರಾಗುತ್ತಿರಲಾಗಿ, ಈ ಕಾರ್ಯವು ಜಗತ್ತ್ರಯಕ್ಕೆ ಹಿತಕರವು, ಈಶ್ವರಾಜ್ಞೆಯು ನಿನಗೆ ಜಗತ್ತಿನ ಸೃಷ್ಟಿಯ

ಅಭಿವೃದ್ಧಿಗೋಸುಗವಹುದಲ್ಲವೆ? ಅದು ಕಾರಣದಿಂ ನಿನಗೋಸುಗ ಸರ್ವೇಶ್ವರನಾದ ಪರಮೇಶ್ವರನು ಕೋಪವಂ ಮಾಡನು, ಅಕಟಕಟ !! ಮನಸ್ಸಿನ ಕಾಠಿಣ್ಯವು ಪರಿಹರಿಸಲ್ಪಡಲಿಲ್ಲವು; ಆವುದಾನೊಂದು ಕಾರಣದತ್ತಣಿಂ ವಿಷ್ಣು ಮೊದಲಾದ ದೇವತೆಗಳ ಮುಖದಿಂ ನುಡಿಯಲ್ಪಟ್ಟ ದೇಹೀಯೆಂಬ ಯಾಚನೆಯಂ ಕೇಳುತಿರ್ದೊಡಂ, ಚಿತ್ತಜನ ಚಿತ್ತವು ಮೃದುವಾಗಲಿಲ್ಲವೆಂದು ನುಡಿದ ಈ ಪ್ರಕಾರವಾದ ಬ್ರಹ್ಮದೇವರ ವಾಕ್ಯಕ್ಕೆ ಮನ್ಮಥನಿಂತೆಂದನು, ಯೇನೆಂದರೆ:— ಎಲೈ, ವಿಶ್ವಸೃಷ್ಟಿಕರ್ತನಾದ ಚತುರ್ಮುಖನೆ! ನೀನಾವವಾಕ್ಯಮಂ ನುಡಿದಿರುವೆಯೋ ಅದೆಲ್ಲಮುಂ ಯಥಾರ್ಥವೇ ಸರಿ. ಈ ಅರ್ಥದಲ್ಲಿ ಸಂದೇಹವಿಲ್ಲ. ನನ್ನ ಪ್ರವೃತ್ತಿಯು ಯೆಲ್ಲಾ ಕಡೆಯಲ್ಲಿಯೂ ಈಶ್ವರಾಜ್ಞೆಯಿಂದಲೇ ಹೊರತು ಬೇರೆ ಇನ್ನೊಂದು ವಿಧದಿಂದಲ್ಲ, ನನಗೆ ಜಯಶಾಲಿಯೆಂಬ ನಾಮಧೇಯಮಂ ಜಗತ್ತ್ರಯದ ಜಯದಿಂದಾದುದು. * ಅಂಡಜ, ಸ್ವೇದಜ, ಜರಾಯುಜ, ಉದ್ಭಿಜ್ಜ, ವೆಂಬ ನಾಲ್ಕು ವಿಧವಾದ ಸುರಾಸುರಾತ್ಮಕವಾದ ಬ್ರಹ್ಮಾಂಡ ಜಾತದಲ್ಲಿ ನನ್ನ ಬಾಣಂಗಳು ಸಿದ್ಧಾರ್ಥಂಗಳಾಗಿ, ಹಿಂದಿರುಗದೆ ಯಿರುವವು. ಇದೆಲ್ಲವು ಹಾಗಿರಲಿ, ಎಲೈ ಬ್ರಹ್ಮನೆ, ಪೂರ್ವದಲ್ಲಿ ನಾನು ನಿನ್ನನ್ನು ನಿಜಕುಮಾರಿಯಾದ ಸರಸ್ವತಿಯಲ್ಲಿ ಬದ್ಧಾನುರಾಗನಂ ಮಾಡಲಿಲ್ಲವೋ ಯೇನು? ಎಲೈ, ಪ್ರಭುವೆ! ಅದೆಲ್ಲಮಂ ಮರೆತೆಯೋ ಏನು? ಮಾಯೆಯಿಂದ ಸ್ತ್ರೀವೇಷಮಂ ಧರಿಸಿದ ಮಾಧವನು ವೃಕ್ಷಂಗಳಿಂ ಗಹನವಾದ ಆಶ್ರಮದಲ್ಲಿರ್ಪ ಋಷಿಗಳನಾದೊಡಂ ಮೋಹಿತರಂ ಮಾಡಿ ಪರಾಕ್ರಾಂತರಂ ಮಾಡಲಿಲ್ಲವೋ ಏನು? ಆ ವಿಷ್ಣುವು ಸೆರೆಮನೆಯಲ್ಲಿರುತಿರ್ದೊಡಂ ಜಲಂಧರ ಪತ್ನಿಯಾದ "ಬೃಂದೆ" ಯೆಂಬಾಕೆಯಲ್ಲಿ ನನ್ನ ಬಾಣಂಗಳಿಂದ ಪೀಡಿತನಾಗಿ ಅಪೇಕ್ಷೆಯಂ ಮಾಡಲಿಲ್ಲವೇನು? ಮತ್ತು ಅಂಬರೀಷನ ಮಗಳಾದ ವಿದ್ಯುನ್ಮತಿ ಯೆಂಬಾಕೆಯಂ ನಾರದ ಪರ್ವತರೆಂಬವರಂ ವಂಚಿಸಿ ಹರಿಯು ಅಪಹರಿಸಲಿಲ್ಲವೋ ಏನು? ಆ ಹರಿಯೇ ವಸುದೇವಸುತನಾದೊಡಂ ನಂದಗೋಪನ ಮನೆಯೊಳಿರ್ದು ನನ್ನ ಪಂಚ ಬಾಣಂಗಳಿಂ ಪರಿಪೀಡಿತನಾಗಿ, ಗೋಪಸ್ತ್ರೀಯರಂ ರಮಿಸಲಿಲ್ಲವೋ ಏನು? ಇದಲ್ಲದೆ ದೇವೇಂದ್ರನು ಬಾಣಂಗಳಿಂ ಪೀಡಿತನಾಗಿ, ಗೌತಮಪತ್ನಿಯಂ ಬಯಸಿದನು. ಆ ಚಂದಿರನ ಮನಸ್ಸು ನನ್ನಿಂದ ಗುರುಪತ್ನಿಯ ವಶವರ್ತಿಯಾದುದು.

* ಅಂಡಜ = ಮೊಟ್ಟೆಯಿಂದ ಹುಟ್ಟುವ ಹಕ್ಕಿ ಮೊದಲಾದವು. ಸ್ವೇದಜ= ಬೆವರಿನಿಂದ ಜನ್ಯವಾದ ತಗಣೆ ಮುಂತಾದವುಗಳು. ಜರಾಯುಜ = ಬಸುರಿನಿಂದುತ್ಪನ್ನವಾಗುವ ಮೃಗಮನುಷ್ಯಾದಿಗಳು. ಉದ್ಭಿಜ್ಜ = ಭೇದಿಸಿಕೊಂಡು ಬರುವ ವೃಕ್ಷಾದಿಗಳು.

ಆ ಸೂರ್ಯನು ಛಾಯಾದೇವಿಯಂ ಸಂಜ್ಞಾದೇವಿಯುಂ ಬುದ್ಧಿಪೂರ್ವಕವಾಗಿ ನೂರು ಸಂವತ್ಸರ ಪರ್ಯಂತವು ರಮಿಸಿದನು. ಆ ಅಗ್ನಿಯು ತನ್ನಿಂದ ವರುಣನ ಉದಕರೂಪಂಗಳಾದ ಸತಿಯರಂ ಬಯಸಿದನು. ನಾರದನು ಪೀಡಿತನಾಗಿ ಪರಿಣಯಲ್ಲಿ ರತಿಗೈದನು. ಪರಾಶರನು ಅಂಬಿಗನ ಮಗಳಾದ ಸತ್ಯವತಿಯಲ್ಲಿ ರಮಿಸಿದನು. ವಿಶ್ವಾಮಿತ್ರನ ತಪಸ್ಸಿಗೆ ಮೇನಕೆಯೆಂಬ ಅಪ್ಸರ ಸ್ತ್ರೀಯು ವಿಘ್ನವನ್ನಾಚರಿಸಿದಳು. ಮಿಕ್ಕ ಮಾತೇನು? ದೇವಾಸುರ ಮನುಷ್ಯರಲ್ಲಿ ನನ್ನ ಬಾಣಂಗಳಿಗೆ ವಶವರ್ತಿಗಳಾಗಿ ಯೆಷ್ಟು ಮಂದಿ ಲೋಕದಲ್ಲಿ ಮೋಹಿತರಾಗದಿರುವರು! ಕೃಶಾನು ರೇತಸ್ಕನಾಗಿ ಕೃತ್ತಿವಾಸನಾದ ಈಶ್ವರನ ನೋರ್ವನ ನುಳಿದು ಮಿಕ್ಕ ಜೀವಾತ್ಮರಂ ಕುಸುಮಾಯುಧಂಗಳಿಂ ಪ್ರಹರಿಸುತ್ತಿದ್ದೇನೆ. ಆ ಪರಮೇಶ್ವರನಾದೊಡೆ ಹಣೆಗಣ್ಣಿಂದ ಜಗಮನೆಲ್ಲಮಂ ದಹಿಸುತ್ತಿರುವನು. ಆತನೇ ಜಗಂಗಳ್ಗೆ ಕರ್ತನು, ಧಾರಕನು, ನಿಯಾಮಕನು. ಅಜನಾಗಿ ಶಾಶ್ವತನಾದ ಪರಮ ಪ್ರಭುವಾದ ಆ ಪರಮೇಶ್ವರಂಗೆ, ಈ ಲೋಕದಲ್ಲಿ ಬುದ್ಧಿಶಾಲಿಯಾದ ಆವಾತನು ನಿರ್ಭಯನಾಗಿ ಪ್ರತಿಕೂಲಮನ್ನಾಚರಿಸುವನು? ನಾನಾದೊಡೆ ಯೆಲ್ಲರಲ್ಲಿಯೂ ಅಂಜದಿದ್ದೇನೆ. ಆದರು ಈ ಮಹೇಶ್ವರಂಗೆ ಮಾತ್ರ ಅಂಜುವೆನು. ಅದುಕಾರಣದಿಂದ ನೀವು ನನ್ನನ್ನು ಈ ಪರಮೇಶ್ವರನ ವಿಷಯದಲ್ಲಿ ನಿಯೋಗಿಸಬೇಡಿರಿ, ಈತನು ನಮ್ಮ ವಚನಮಂ ಕೇಳದಿರುವನೆಂದು ವ್ಯಥೆಯಂ ಧರಿಸಬೇಡಿರಿ:— ಎಲೈ ಬ್ರಹ್ಮನೆ! ಕ್ಷಮಿಸು ಕ್ಷಮಿಸೆಂದು ನುಡಿದನು.

ಕಾಮದೇವನಿಗೆ ಬ್ರಹ್ಮದೇವನ ಸಮಾಧಾನೋಕ್ತಿ.

ಬಳಿಕ ಬ್ರಹ್ಮದೇವನು ಮಹಾ ಕುಪಿತನಾಗಿ ಆ ಮನ್ಮಥನಂ ಕುರಿತು, ಎಲೈ, ಮದನನೆ! ನೀನು ನಿಂದ್ಯನು, ಲೋಕದಲ್ಲಿ ಮೋಹಿತರಾದ ಜನಂಗಳು ಹಿತಮಂ ಕೇಳರು. ಅಹಿತ ವಾಕ್ಯಮಂ ಕೇಳಿದವರ್ಗೆ ಹೃದಯದಲ್ಲಿ ಲಜ್ಜೆಯಿಲ್ಲವೆಂಬ ಲೌಕಿಕದ ಗಾದೆಯು ಸತ್ಯವೇಸರಿ:— ಈ ವಿಷಯದಲ್ಲಿ ನಿನಗೆ ಪೇಳ್ವುದೇನು! ನೀನು ಪುರುಷರ್ಗೆ ಪ್ರಥಮ ಶತ್ರುವಾಗುತಲಿದ್ದಿ. ಲೋಕದಲ್ಲಿ ಉಪಕಾರ ಪರರಾದ ಪೂರ್ವಿಕರು ಕೀರ್ತಿಯೆಂಬ ದೇಹದಿಂ ವಿರಾಜಿತರಾಗಿ ಪ್ರಳಯಕಾಲದವರಿವಿಗೂ ಇದ್ದರು ಹೇಗೆಂದರೆ:— ಪೂರ್ವಕಾಲದಲ್ಲಿ ದೇವತೆಗಳಿಂ ಪ್ರಾರ್ಥಿತನಾದ ಚ್ಯವನನ ಕುಮಾರನಾದ ದಧೀಚಿಮುನಿಯು, ತನ್ನ ಶರೀರದ ಅಸ್ಥಿಗಳನ್ನೇ ವಜ್ರಾಯುಧವಾಗಿ ಕೊಟ್ಟನು. ಶಿಬಿಚಕ್ರವರ್ತಿಯು ಕಪೋತವೆಂಬ ಪಕ್ಷಿಗೋಸುಗ ದಯಾರ್ದ್ರಹೃದಯನಾಗಿ, ತನ್ನ ಶರೀರದ ಅಸ್ಥಿಮಾಂಸಂಗಳಂ ಕೊಯ್ದು ಕೊಯ್ದು ನಿರಾಕುಲನಾಗಿ ಕೊಟ್ಟನು. ಇದಲ್ಲದೆ ಕನ್ಯಾಪುತ್ರನಾಗಿ ಸೂರ್ಯಪುತ್ರನಾದ ಕರ್ಣನು ಸಹಜ ವಾದ ತನ್ನ ಕವಚವಂ

ಸಂತೋಷದಿಂದ ಯಾಚಕನಾದ ದೇವೇಂದ್ರಂಗೆ ಕೊಟ್ಟು, ಆತನಿಂದ ಶಕ್ತಿಯಂ ತೆಗೆದುಕೊಂಡನು. ಅದು ಕಾರಣದಿಂ ನಿನ್ನಂಥ ಕ್ಷುದ್ರನು ಲೋಕದಲ್ಲಿ ಕಾಲ ತ್ರಯದಲ್ಲಿಯೂ ಇಲ್ಲವು. ಅಹಹಹ!! ಎಲೈ, ದೇವತೆಗಳಿರಾ; ಈತನ ಮೂರ್ಖ ತನಮಂ ನೋಡಿದಿರಾ? ಯೆಂದು ನುಡಿಯುತ್ತ ಶಿರಃಕಂಪನಂಮಾಡಿ, ಹಸ್ತ ದಿಂದ ಹಸ್ತಮಂ ಪೊಯ್ದು ಕಮಲಾಸನಂ ನಗುತಿರ್ದನು. ಆಗ ದೇವ ತೆಗಳೆಲ್ಲರೂ ಮರಳಿ ಮರಳಿ ಆ ಮದನನಂ ಪ್ರಾರ್ಥಿಸಿದರು. ಆ ಸಮಯ ದಲ್ಲಿ ನಾರಾಯಣನು ಮನ್ಮಥನಂ ಕುರಿತು, ಎಲೈ ಮನ್ಮಥನೆ! ನಿನಗಿದು ಸರಿಯೋ? ನೀನು ಸಜ್ಜನರ್ಗೆಲ್ಲರಿಗೂ ಬಂಧುವು, ದುರ್ಜನರ್ಗೆ ದ್ವೇಷಿಯು ಯೆಂದು ಯೆಲ್ಲಾ ಕಡೆಯಲ್ಲಿಯುಂ ಪ್ರಸಿದ್ಧನಾಗಿರುವೆ. ಅದುಕಾರಣದಿಂ ಮಹೇ ಶ್ವರನಂ ಉಮೆ ಯೊಡಗೂಡಿಸಿ ಕೃತಾರ್ಥನಾಗು, ಆ ಪಾರ್ವತೀ ಪರಮೇಶ್ವ ರರಂ ನಿನಗತ್ಯಂತಮಾದ ಇಷ್ಟಾರ್ಥಮಂ ಪಾಲಿಸಲೆಂದು ನುಡಿದವನಾಗಲು, ಕಾಮನು ಆ ವಚನಮಂ ಕೇಳ್ದು, ಎಲೈ ದೇವತೆಗಳಿರಾ! ನಾನು ಸರ್ವಾತ್ಮಕ ನಾದ ಶಿವನ ಸನ್ನಿಧಾನಮಂ ಸರ್ವಾತ್ಮನಾಪೊರ್ದಲಾರೆನು. ಆದರೆ ಪಾರ್ವತೀ ಪರಮೇಶ್ವರರ ಸಂಯೋಜನ ವ್ಯತಿರಿಕ್ತಮಾದ ಕಾರ್ಯಮಂ ನಿರೂಪಿಸಿದರೆ, ಆ ಕೃತ್ಯಮಂ ಕ್ಷಣಮಾತ್ರದಲ್ಲಿ ಮಾಡುವೆನು. ಇದಕ್ಕನ್ಯಮಾದ ಕಾರ್ಯವಾವು ದೆಂದೊಡೆ? ಆವನೋರ್ವ ಶೂರಪದ್ಮನೆಂಬ ದಾನವನು ನಿಮ್ಮನ್ನಾವಾಗಲುಂ ಬಾಧಿಸುತ್ತಿರುವನೋ, ಆ ಭ್ರಾತೃಸಮೇತನಾದ ಅಸುರನಂ ನನ್ನ ಬಾಣಂಗ ಳಿಗೆ ಗುರಿಯಾಗಿ ಮಾಡುತ್ತಿರೆ, ಆ ದಾನವನು ಬಹು ಕಾಲ ಪರ್ಯಂತವು ನಿರಂತರ ಮುಪ್ಪಂತು ಸ್ತ್ರೀಯರ ವಶವರ್ತಿಯಾಗುವನು. ಆದರೆ ಸರ್ವಗುರುವಾಗಿ ಭುವನಾ ಧೀಶ್ವರನಾದ, ಸರ್ವಜ್ಞನಾಗಿ ಸರ್ವಕರ್ತನಾದ ಪರಮೇಶ್ವರನಂ ಬಾಣಂಗಳ್ಗೆ ಗುರಿಯಾಗಿ ಮಾಡಲಾರೆನೆಂದು ನುಡಿದನು.

ಮನ್ಮಥನನ್ನು ಕುರಿತ ಬ್ರಹ್ಮದೇವನ ಸಿಟ್ಟು - ರತಿ ದೇವಿಯ ಹಿತೋಕ್ತಿ.

ಬಳಿಕ ಬ್ರಹ್ಮದೇವನು ಕಾಮನಂ ಕುರಿತು ಕೋಪಸ್ಫುರಿತಾಧರನಾಗೆದ್ದು ಕರ್ಣಕಠೋರಮಾಗಿ ಅಚ್ಯುತಂಗಿಂತೆಂದನು. ಎಲೈ, ಚ್ಯುತಿರಹಿತನೆ! ಅಸು ರನಂ ತನ್ನ ವಶಮನ್ನೈದಿಸಿ ಪರದಾರಾಪಹಾರಮಂ ಮಾಡಿಸಲುದ್ಯೋಗಿಸಿಮುದ ರಿಂದ ಅಸುರ ಸಂಬಂಧಿಯೇ ಆದ ಕಾಮನನ್ನೇನುಕಾರಣ ಅನುಸರಿಸುತ್ತಿದ್ದಿ? ಈ ಕಾಮನು ನಾವು ಪೇಳ್ದಂತೆ ಕೇಳದೆಯೆ ಹೋದನಾದೊಡೆ ದೇವಕಾರ್ಯ ವಿರೋಧಿಯಾದಿವನಂ ಕ್ಷಣಮಾತ್ರದಲ್ಲಿ ಶಪಿಸುವೆನು. ಲೋಕದೊಳು ದುರ್ಜನನು ದಂಡಸಾಧ್ಯನೇ ಹೊರತು ಸಾಧುಸಾಧ್ಯನಲ್ಲೆಂದು ಕಮಲಾಸನಂ ನುಡಿಯು

ತ್ತಿರೆ:— ಕಿವಿಗಳಂ ಕಿವುಡುಮಾಡುತ್ತ ಜಯಿಸಲ್ಪಟ್ಟ ಸಾಗರಗಳುಂ ಮೇಘಂಗಳುಂ ಉಳ್ಳ ದೇವತೆಗಳಿಂದ ಪ್ರವರ್ತಿತಮಾದ ಕೋಲಾಹಲಧ್ವನಿಯು ದಿಕ್ಕು ದಿಕ್ಕುಗಳಲ್ಲಿಯುಂ ಅಭಿವೃದ್ಧಮಾದುದು. ಆಗ ಕಾಮನು ಬ್ರಹ್ಮಶಾಪ ಭಯಾಕ್ರಾಂತನಾಗಿ ನಿಜಕಾಂತೆಯಾದ ರತಿಯೊಡಗೂಡಿ ಇನ್ನೆಂತು ಮಾಳ್ಪೆನೆಂದು ಬಹು ಪ್ರಕಾರಮಾಗಿ ಚಿಂತೆಯನ್ನೈಯ್ದುವನು. ಆಗ ರತಿದೇವಿಯು ಕಾಮನಂ ನೋಡಿ, ಎಲೈ ಕಾಮನೆ! ನೀನು ಈಶ್ವರಾಲಯಮನೈದಬೇಡ? ಈ ಬ್ರಹ್ಮಶಾಪವು ನಿನ್ನನ್ನೇನೂ ಮಾಡಲಾರದು! ಶಾಪಕ್ಕಾದೊಡೆ ಕಡೆಯುಂಟು, ಶಿವದ್ರೋಹಕ್ಕೆಲ್ಲಿಯುಂ ಕಡೆಯಿಲ್ಲವು. ಆ ಪರಮೇಶ್ವರನು ಶೀಘ್ರದಿಂ ಸ್ಮಿತಲೇಶದಿಂದಲೇ ಜಗತ್ರಯಮಂ ದಹಿಸುವನು. ನಿನ್ನಂಥವನಲ್ಲಿ ವನಿತೋಕ್ತಿಯು ತಿರಸ್ಕಾರದಂತೆ ತೋರುವುದು. ಈ ಯಿಶ್ವರಾವಮಾನ ವಿಷಯಮಾದ ವಚನವು ಹಿತಕರವಲ್ಲವು. ಆದ್ದರಿಂದ ಈಶ್ವರನಂ ಬಾಣಕ್ಕೆ ಗುರಿಯಾಗಿ ಮಾಡಬೇಡ. ಯೇಕೆಂದರೆ, ಲೋಕದೊಳು ಈಶ್ವರಾವಮಾನಮಂ ಮಾಡಿದವರು ಪಾಪದಿಂ ಶೀಘ್ರಮಾಗಿ ನಾಶಮನೈದುವರೆಂದು ರತಿಯು ನುಡಿಯಲಾಗಿ ಎಲೌ ರತಿಯೆ! ನೀನು ನುಡಿದದ್ದು ಯಥಾರ್ಥವೇ ಸರಿ, ಸಂಶಯಮಿಲ್ಲ. ಆದರೆ ಅಲ್ಪಾಯುವಾದೊಡಂ ಅಂತಕಾಂತಕನಾದ ಉಮಾಕಾಂತನತ್ತಣಿಂ ಮರಣಮನೈದುವುದು ಲೇಸು. ಅಂತು ಮಲ್ಲದೆಯುಂ ಜಗತ್ಪತಿಗಳಾದ ಬ್ರಹ್ಮಾದಿ ದೇವತೆಗಳು ನನ್ನಂ ಪ್ರಾರ್ಥಿಸುತ್ತಿರೆ ನಾನು ಪ್ರತಿ ವಚನಮಂ ನುಡಿದವನಾದೊಡೆ ಶಾಪಂ ಸಂಭವಿಸುವದೆಂದು ರತಿದೇವಿಯಂ ಸಂತವಿಟ್ಟು, ಕೈಗಳಂ ಮುಗಿದೆದ್ದು ಯಥಾಕ್ರಮದಿಂ ವಿಷ್ಣು ಮೊದಲಾದ ದೇವತೆಗಳ್ಗೆ ನಮಸ್ಕರಿಸಿ ಈ ಪರಿ ನುಡಿಯಲುದ್ಯೋಗಿಸಿದನೆಂದು ಸೂತನು ಶೌನಕಾದಿಮುನಿಗಳ್ಗೆ ನಿರೂಪಿಸಿದನೆಂಬಲ್ಲಿಗೆ, ಕರ್ಣಾಟಕ ಭಾಷಾ ವಿರಚಿತಮಾದ ಶ್ರೀ ಕೃಷ್ಣರಾಜ ವಾಣೀವಿಲಾಸಮೆಂಬ ಸ್ಕಾಂದಪುರಾಣದ ಶಂಕರಸಂಹಿತೆಯೊಳ್ ಶಿವರಹಸ್ಯ ಖಂಡದೊಳು ಸಂಭವಕಾಂಡದ ಕುಸುಮಾಸ್ತ್ರದಿಂ ಹರನಂ ಗೆಲ್ವುದೆಂದು ಮನ್ಮಥನ ನೊಡಂಬಡಿಸಿದ ಕಥಾ ರೂಪಮಾದ ಒಂಬತ್ತನೆಯ ಅಧ್ಯಾಯವು ಸಂಪೂರ್ಣಂ.

ಹತ್ತನೆಯ ಅಧ್ಯಾಯವು.

ಮನ್ಮಥನ ವಿಜಯ ಯಾತ್ರೆಯು.

ಸೂತರ ವಚನವು:—ಎಲೈ ಮುನಿಗಳಿರಾ! ಅನಂತರದಲ್ಲಿ ಮನ್ಮಥನು ೧ ವಿಷ್ಣ್ವಾದಿ ದೇವತೆಗಳಂ ಕುರಿತು, ಎಲೈ ಅಧಿಪತಿಗಳಾದ ದೇವತೆಗಳಿರಾ! ಈಗ ಕಾಮನಾದ ನಾನು ತ್ರಿಪುರಾರಿಯೊಡನೆ ಯುದ್ಧಮಂ ಮಾಡಲೋಸುಗಯ್ದಿ, ೨ ಶಿವನಂ ತ್ರಿಜಗನ್ಮಾತೆಯಾದ ಪಾರ್ವತೀದೇವಿಯೊಡನೆ ಕೂಡಿಸುವೆನು; ನಿಮ್ಮ

ಆಶೀರ್ವಾದದಿಂದ ನನಗೆ ಶೀಘ್ರದಲ್ಲಿ ವಿಜಯವಾಗಲಿ; ಆಶೀರ್ವಾದಪರರಾದ ನೀವೀಗ ನನಗೋಸುಗ ಉತ್ತಮವಾದ ವೇಳೆಯುಮಂ ಪಾಲಿಪುದು. ನಿಮ್ಮ ಕಾರ್ಯದೊಳು ಯಥಾಶಕ್ತಿ ಯತ್ನಮಂ ಮಾಡುವೆನೆಂದು ನುಡಿಯೆ.— ಬಳಿಕ ಆ ವಾಕ್ಯಮಂ ಕೇಳ್ದು ಸಂತುಷ್ಟಚಿತ್ತನಾದ ಚತುರ್ಮುಖನು, ತನ್ನ ಶರೀರದಲ್ಲಿ ಧರಿಸಿರ್ದ ಪುಷ್ಪಮಾಲಿಕೆಯನ್ನಿತ್ತು ಕೊಂಡಾಡಿದನು. ಹರಿಯುಂ ನವರತ್ನ ವಿರಾಜಿತವಾದ ಬಹುಬೆಲೆಯುಳ್ಳ ಕಂಠಾಭರಣವನ್ನಿತ್ತನು. ದೇವೇಂದ್ರನು ಪಾರಿಜಾತವೆಂಬ ಕಲ್ಪವೃಕ್ಷದಿಂ ಲಭ್ಯವಾದ ಅಲಂಕಾರಂಗಳನ್ನಿತ್ತನು. ದಿಕ್ಪಾಲಕರು ಅದ್ಭುತವಾದ ನಾನಾವಿಧವಾದ ಕಾಣಿಕೆಗಳನ್ನಿತ್ತರು. ಮತ್ತೆ ಮುನಿಗಳುಂ ಯೋಗೀಶ್ವರರುಂ ಆಶೀರ್ವಾದಗಳಿಂದಭಿವೃದ್ಧನಂ ಮಾಡುತ್ತಿರಲಾಗಿ, ಮನ್ಮಥನು ಆ ದೇವತೆಗಳ ಸಂಭ್ರಮವಂ ನೋಡಿ ಸಂತೋಷ ಚಿತ್ತನಾದನು. ಆಗ ರತೀದೇವಿಯಾದೊಡೆ ದುರ್ಮನಸ್ಕೆಯಾಗಿ ಅಲ್ಲಿ ನಡುಗುತ್ತಿರ್ದಳು. ಬ್ರಹ್ಮವಿಷ್ಣುಗಳೀರ್ವರುಂ ಆ ಕಾಮನು ಸಂತಸದಿಂ ಕಳುಪುತ್ತಿರಲಾಗಿ, ಆವನೀರ್ವರ್ಗಳುಂ ರತಿದೇವಿಯೊಡಗೂಡಿ ನಮಿಸಿ, ದೇವತೆಗಳ್ಗೆ ಪ್ರದಕ್ಷಿಣಮಂ ಮಾಡಿ ಜಯ ಶಬ್ದಾದಿ ಮಂಗಳಂಗಳಿಂ ತತ್‌ಕ್ಷಣದೊಳ್ ಪೊರಮಟ್ಟನು. ಎಂತೆಂದರೆ,

ಆಗ ಮಲಯಮಾರುತ ರೂಪವಾದ ರಥವು ಬಂದುದು. ಆ ರಥಕ್ಕೆ ಅಶ್ವಂಗಳಾದ ಗಿಣಿಗಳ ಸಮೂಹದಿಂ ದಿಕ್ಕುದಿಕ್ಕುಗಳು ಹಸುರು ಬಣ್ಣವಾದುವು. ಪರಿಮಳದಿಂ ಮನೋಹರಂಗಳಾದ ಐದು ಪುಷ್ಪಂಗಳು ಬಾಣಂಗಳಾದವು. ಈ ಕಾಮನ ಸಂಬಂಧವಾದ “ರಸದಾಳಿಯ ಕಬ್ಬೆಂಬ” ಬಿಲ್ಲಿನಲ್ಲಿ ದುಂಬಿಗಳೆಂಬ ಜವಡೆಯ ಧ್ವನಿಯು ಅಭಿವೃದ್ಧವಾದುದು. ಚಂದ್ರಗಾವಿಯ ಪಟ್ಟೆಯನ್ನುಟ್ಟು ಕಟ್ಟಲ್ಪಟ್ಟ ಶಿಖೆಯಲ್ಲಿ ಪರಿಮಳಭರಿತ ಕುಸುಮಂಗಳಿಂ ದಲಂಕೃತನಾಗಿ ಬಳಿಕ ಚಂದ್ರಗಾವಿಯ ವಸ್ತ್ರದಿಂ ಶಿರೋವೇಷ್ಟನಮಂ ಧರಿಸಿ ಕುಂಡಲ ಕವಚ ದಿವ್ಯ ಭೂಷಣಂಗಳಿಂ ಭೂಷಿತನಾಗಿ, ಮಂದಾರಪುಷ್ಪಮಾಲಿಕೆಯಂ ಧರಿಸಿಕೊಂಡು, ಶ್ರೀಗಂಧಮಂ ಅನುಲೇಪನಂಗೈದು, ಕಲ್ಪವೃಕ್ಷದೊಳ್ಪುಟ್ಟಿದ ಇತರ ದಿವ್ಯ ಭೂಷಣಂಗಳಿಂ ಭೂಷಿತನಾಗಿ ತೆರಳುತ್ತಿರೆ, ಆಗ ಲಾವಣ್ಯವಾರಿಧಿಯಾದ ಮದನನಂ ನೋಡಿ, ಯೆಲ್ಲರ ಮನಸ್ಸುಂ ಆ ಕಾಮನ ಅಂಗಮಂ ತಕ್ಕೈಸುವ ಅಭಿಲಾಷೆಯುಂ, ರತಿಯ ಸಾಪತ್ನಿಯಮನ್ನೈದಿದವು. ಈ ರೀತಿ ಮದನನು ಆ ಪ್ರಕಾರ ಮಾದ ರಥವನ್ನೇರಿ ಬಿಲ್ಲಂ ಪಿಡಿದು, ಮಹೇಶ್ವರನಂ ಜಯಿಸಲಿಚ್ಛೆಯಿಂದ ಪೊರಮಟ್ಟನು.

ಆಗ ಭೇರೀ ಭಾವಮನ್ನೈದಿದ ಸಪ್ತ ಸಮುದ್ರಂಗಳ ನಿನಾದಂಗಳೊಡಗೂಡಿ “ಕಿಲಾಲಪ” ವೆಂಬ ಕಾಹಳ ಧ್ವನಿಯು ಅಭಿವೃದ್ಧವಾದುದು. ಪಾದ

ರಿಯು ಕುಸುಮಂಗಳೆಂಬ ನಾಗಸರದ ಪಂಕ್ತಿಗಳ ಧ್ವನಿಯಿಂದ ಅನುಗತಮಾಗಿ ಭ್ರಮರಂಗಳಿಂ ಪರಿವೃತಮಾದಲ್ಲಿ ಘೇ ಯೆಂಬ ಧ್ವನಿಯು ಪೆರ್ಚಿದುದು. ಕ್ಷಣ ಮಾತ್ರದಿಂದಲೆ ಗಿಳಿ ವಿಂಡುಗಳು ತಂಗಾಳಿಯೆಂಬಿತ್ತರಂ ಕೈಲಾಸಮನ್ನೈದಿಸಿತು. ಧ್ವಜಂಗಳಾದ ವಿಮಾನ್ಗಳ ಮುಖಂಗಳಿಂ ಗ್ರಸ್ತಮಾದ ಮೇಘದ ಉದಕಂಗಳಿಂ ಪ್ರಕಾಶಮಾನಮಾದ ರಜತಾಚಲೇಂದ್ರಮಂ ಕಂಡು, ಬಳಿಕ ರಥದಿಂದಿಳಿದು ರತಿ ಸಮೇತನಾಗಿ ಕಾಮಿತಾರ್ಥಪ್ರದಮಾದ ಕೈಲಾಸಕ್ಕೆ ನಮಿಸಿ, ಸಿದ್ಧ ಚಾರಣ ಗಂಧರ್ವ ಯಕ್ಷ ಕಿನ್ನರರಿಂ ಪರಿಸೇವಿತಮಾದ ಆ ಗಿರಿಯಂ ಪ್ರದಕ್ಷಿಣಂ ಗೈದು, ಕಾಲ್ನಡೆಯಿಂದಲೇ ವಿನಯ ಸಂಪನ್ನನಾಗಿ, ಆ ಪ್ರಕಾರದಿಂ ರತಿದೇವಿಯೊಡಗೂಡಿ, ಆ ಕೈಲಾಸಮನ್ನೈದಿದನು. ಚಾಂಚಲ್ಯದಿಂ ಕೌತುಕದಿಂದ ಬಿಲ್ಲಿನಲ್ಲಿ ಶರಸಂಧಾನಮಂ ಮಾಡಿ, ವೃಕ್ಷಸಮೂಹಂಗಳಲ್ಲಿಯುಂ ನಾನಾ ಮೃಗಗಣಂಗಳಲ್ಲಿಯುಂ ಪ್ರಯೋಗಿಸಿದನು. ಭಾವಶುದ್ಧಿಯಿಲ್ಲದ ಮೃಗಂಗಳು ಪೂರತಾಗಿ ಮಿಕ್ಕಿನ ಪ್ರಾಣಿಗಳು ಮೋಹಿತಂಗಳಾಗುತ್ತಿರಲಾಗಿ, ನಂದೀಶ್ವರಾಜ್ಞಾವಶದಿಂದ ಆ ಮದನಾಸ್ತ್ರವು ಸುಮ್ಮನೆ ಆ ಕಾಮನನ್ನೇ ಹೊಂದುತಿರ್ದುದು. ಆಗ ವೃಕ್ಷಂಗಳು ಚಲಿಸಲಿಲ್ಲ, ತುಂಬಿಗಳು ಝುಂಕಾರಮಂ ಮಾಡಲಿಲ್ಲ. ಪಕ್ಷಿಗಳು ಚಿತ್ರದದಲ್ಲಿ ಬರೆಯಲ್ಪಟ್ಟಂತೆ ಧ್ವನಿಗೈಯಲಿಲ್ಲ. ನಂದೀಶ್ವರಾಜ್ಞೆಯಿಂದ ಆ ಕೈಲಾಸದಲ್ಲಿ ಸಕಲ ಪ್ರಾಣಿಗಳೂ ನಿಯಮವುಳ್ಳವಾಗಿರ್ದವು. ಆಗ ಕಾಮನು ತನ್ನ ಅಮೋಘಮಾದ ಅತ್ಯದ್ಭುತಮಾದ ಅಸ್ತ್ರವು ವ್ಯರ್ಥಮಾಗುತ್ತಿರಲಾಗಿ, ಆತನ ಪ್ರಭಾವಮಂ ನೋಡಿ ನಗುತ, ಗಮನ ಮುಖದಿಂ ಶೀಘ್ರದಿಂ ಆ ನಂದಿಕೇಶ್ವರನ ಸನ್ನಿಧಾನಮನ್ನೈದಿ, ನಮಸ್ಕರಿಸಿ ಯಿಂತೆಂದು ಬಿನ್ನೈಸಿದನು ಹೇಗೆಂದಡೆ,–

ಮನ್ಮಥನು ನಂದಿಕೇಶ್ವರನನ್ನು ಪ್ರಾರ್ಥಿಸುವಿಕೆ.

ಎಲೈ ಪೂಜ್ಯನಾದ ನಂದಿಕೇಶ್ವರನೆ! ವಿಷ್ಣು ಮೊದಲಾದ ದೇವತೆಗಳು ಶೂರಪದ್ಮನ ಭಯದಿಂ ಭೀತರಾಗಿ, ವಿಶ್ವಾಧಿಕನಾದ ಈಶ್ವರನಂ ಆಶ್ರಯಿಸುತ್ತಿರಲಾಗಿ, ಆ ಸ್ವಾಮಿಯು ಅವರ ವಿಜ್ಞಾಪನೆಯಂ ಕೇಳ್ದು, ಆರ್ತಿಘ್ನನಾದೊಡಂ ಆ ದೇವತೆಗಳ್ಗಿಂತೆಂದನು,— ಎಲೈ ದೇವತೆಗಳಿರಾ! ನಿಮ್ಮ ವಾಕ್ಯವನೆಲ್ಲಮಂ ಕೇಳ್ದುದು. ಆ ಶೂರಪದ್ಮನೆಂಬ ಅಸುರೋತ್ತಮನು ಬಹುಕಾಲ ಪರ್ಯಂತವು ಅನನ್ಯಮನಸ್ಕನಾಗಿ, ಭಾವದಿಂದ ನನ್ನನ್ನು ಪೂಜಿಸಿದನು. ಆತಂಗೆ ನಾನು ಪ್ರಸನ್ನನಾಗಿ ಅತ್ಯುತ್ತಮಮಾದ ವರಮಂ ಕೊಟ್ಟೆನು, ಅದೆಂತೆಂದೊಡೆ, ಎಲೈ ಶೂರಪದ್ಮನೆ! ಅಸುರರೊಳಗೆ ನೀನು ಪೂಜ್ಯನಾಗು ; ಇದಲ್ಲದೆ ನೀನು ನನ್ನಾಜ್ಞೆಯಿಂದ ಸಾವಿರದೆಂಟು ಅಂಡಂಗಳಂ ಶತ್ರುಗಳ ಭಯಮಿಲ್ಲದೆ ಪಾಲಿಸು. ಮತ್ತು ಅಮರರಾದ ತಮ್ಮಂದಿರೊಡಗೂಡಿ, ಬೇರೊಂದು ವರಮಂ ಬೇಡುವುದು

ನಿನಗೆ ಆವಾವುದು ಅತಿ ಪ್ರೀತಿಯಾಗಿರ್ಪುದೋ ಅದನ್ನೆಲ್ಲನುಂ ಕೊಡುವೆನೆಂದು ನುಡಿವುತ್ತಿರಲಾಗಿ; ಮರಳಿ ಆ ದಾನವಂ ಪ್ರಣಾಮುಂಗೈದು, ಭಾವಯುಕ್ತ ಮಾದ ಮನದಿಂದ ಬೇರೊಂದು ವರವುಂ ಬೆಸಗೊಂಡನು.

ಎಲೈ ದೇವದೇವನಾದ ಮಹಾದೇವನೆ! ಕರುಣಾಕರನಾದ ಶಂಕರನೆ! ದಯಾನಿಧಿಯಾದ ನೀನು ವರಪ್ರದಾನದಲ್ಲಿ ಅತ್ಯಂತದಾನಶೂರನು. ಈ ದೇವಾ ಸುರ ಸಮೇತವಾದ ಲೋಕದಲ್ಲಿ, ಆವುದಾನೊಂದು ಆಧಿಪತ್ಯವು ಪ್ರಶಸ್ತವೋ, ಆ ತ್ರೈಲೋಕ್ಯಾಧಿಪತ್ಯವು ನಿನ್ನ ಕೃಪಾಲೇಶದ ಲಾಭದಿಂದಲೇ ಲಬ್ಧವಾದುದು. ನಮಸ್ಕರಿಸಿ ಭಜಿಸುವವರಿಗೆ ಪ್ರಾರ್ಥಿತವಾದ ಅರ್ಥಕ್ಕಿಂತಲೂ ಅಧಿಕವಾದ ಅರ್ಥವುಂ ಕೊಡುತ್ತಿದ್ದಿ ಎಲೈ ಪ್ರಭುವೆ! ಮತ್ತೊಂದು ವಿಶೇಷವುಂಟು; ಭೂತ ಭವಿಷ್ಯದ್ವರ್ತಮಾನರಾದ ದೇವತೆಗಳಲ್ಲಿ ನಿನ್ನ ಅಂಗೋದ್ಭವನಾದ ಕುಮಾರನೋರ್ವನುಳಿದು, ನನಗೆ ಮತ್ತೊಬ್ಬನಿಂದ ಮರಣವಿಲ್ಲದಂತೆ ಮಾಳ್ಪುದು. ನಾನು ಆ ನಿನ್ನ ಕುಮಾರಂಗೆ ಸಕಲ ಕಾರ್ಯ ನಿರ್ವಾಹಕನಹೆನು ಆತನು ನನ್ನಾಜ್ಞೆಯಂ ನಿರ್ವಹಿಸಲೆಂದು, ಈ ಪ್ರಕಾರವಾದ ವರಂಗಳಂ ಸಂಭಾಷಣಾಪೂರ್ವಕವಾಗಿ ದೈತ್ಯಂಗೆ ಕೊಟ್ಟನು. ಅದು ಕಾರಣದಿಂದ ಎಲೈ ದೇವತೆಗಳಿರಾ! ನಿಮಗೆ ಸ್ವಾಮಿಯಾಗಿ ಜಗದ್ಗುರುವಾದ, ಕುಮಾರಭಾವನಾದ ಕುಮಾರನಂ ಸೃಜಿಸಿ ಆ ದೈತ್ಯಾಧಮನಂ ಕೊಲ್ಲಿಸುವೆನೆಂದಿಂತು ನುಡಿದು, ಪರಮೇಶ್ವರಂ ಅಂತರ್ಧಾನಮನ್ನೈದುತ್ತಿರಲಾಗಿ, ಮಹಾ ಮೇರುವಿನಲ್ಲಿ ದೇವೋತ್ತಮರೆಲ್ಲರುಂ ಕೂಡಿ ನನ್ನಂ ಕರೆದು, ಇಂತೆಂದು ಪ್ರಾರ್ಥಿಸಿದರು, ಏನೆಂದರೆ, ಎಲೈ ಮನ್ಮಥನೆ! ಜಗತ್ತಿನ ಅಭಿವೃದ್ಧಿಗೋಸುಗ ಈಶ್ವರನಂ ಪಾರ್ವತಿಯೊಡಗೂಡಿಸು ಆ ಪಾರ್ವತೀದೇವಿಯು ಹಿಮಗಿರಿಯಲ್ಲಿ ಈಶ್ವರನ ಅಂಗ ಲಾಭೇಚ್ಛೆಯಿಂದ ತಪವನ್ನಾಚರಿಸುತಿರುವಳು. ಶಿವನುಂ ಶೈಲದೊಳು ದಕ್ಷಿಣಾಮೂರ್ತಿ ರೂಪಮುಂ ಧರಿಸಿ, ಮುನೀಂದ್ರವರ್ಗಕ್ಕೆ ವೇದಾಂತಗತವಾದ ಸ್ವಕೀಯವಾಗಿರ್ಪ ಜ್ಞಾನಮುಂ ವಿವರಿಸುತ್ತಿರುವನು. ಅವರೀರ್ವರ್ಗೆಯುಂ ನಮ್ಮ ರಕ್ಷಣೆಗಾಗಿ ಐಕ್ಯವು ಮಾಡಲ್ಪಡತಕ್ಕದ್ದೆಂದು; ದೇವತೆಗಳಿಂದ ಆಜ್ಞಾಪಿಸಲ್ಪಟ್ಟು, ಈ ರತಿಯೊಡಗೂಡಿ ಇಲ್ಲಿಗೆ ಬಂದೆನು. ಎಲೈ ನಂದೀಶ್ವರನೆ ನನಗೆ ನೀನೇ ಕರ್ತನು, ಪಿತನುಂ ಪಿತಾಮಹನುಂ ಗುರುವುಂ ಸಹಾ ನೀನೆ ಸರಿ, ಅದುವರಿಂದ ಈಗ ನನಗೆ ಬುದ್ಧಿಯಂ ಪೇಳ್ವುದು. ಯೆಂದಿಂತು ಸುಕುಮಾರ ಶರೀರನಾದ ಮಾರನು ನಿರೂಪಿಸಿದನು.

ಮನ್ಮಥನಿಗೆ ನಂದಿಕೇಶ್ವರನ ಪ್ರತಿ ವಚನವು.

ಎಲೈ ಮುನಿಗಳಿರಾ! ಈ ರೀತಿ ನಿರೂಪಿಸಲ್ಪಟ್ಟ ಮನ್ಮಥನ ವಚನಮುಂ

ಕೇಳ್ದು ಆ ನಂದೀಶ್ವರನು ಪರಮೇಶ್ವರನ ಆಜ್ಞೆಯಂ ನೆನೆದು ಮರಳಿ ರತಿಸಮೇತ ನಾದ ಆ ಕಾಮನೊಡನೆ ಆದರದಿಂದಿಂತೆಂದಂ. ಅದೆಂತೆಂದೊಡೆ, ಎಲೈ ಮಹಾನು ಭಾವನಾದ ಮನ್ಮಥನೆ! ನನಗಿಂತಲೂ ನೀನು ಈಶ್ವರಂಗೆ ಪರಮಾಪ್ತನಾದುದ ರಿಂ ನೀನೇ ಪೊಳಕ್ಕೆ ಶೀಘ್ರದಿಂ ಗಮಿಸಿ ದೇವತೆಗಳ ಕಾರ್ಯಮಂ ಸಾಧಿಸು. ಅದರೆ, ನಿನಗೆ ಹಿತಮಂ ಪೇಳ್ವೆನು. ಸಾವಧಾನದಿಂ ಕೇಳುವನಾಗು, ಏನೆಂದರೆ, ನೀನು ಪಶ್ಚಿಮ ದ್ವಾರಮಾರ್ಗಮಂ ಪ್ರವೇಶಿಸಿ, ಈಶ್ವರನ ಸನ್ನಿಧಿಯಲ್ಲಿ ಯಥೇಷ್ಟ ಮಪ್ಪಂತು, ದೇವತಾಕಾರ್ಯಮಂ ಸಾಧಿಸಿ ಸ್ವಸ್ಥನಾಗೆಂದು ಈ ಪ್ರಕಾರದಲ್ಲಿ ನಂದೀ ಶ್ವರಂ ನಿರೂಪಿಸುತ್ತಿರಲಾಗಿ, ಕಾಮನು ರತಿದೇವಿಯೊಡಗೂಡಿ ಮಹಾಧೈರ್ಯ ಚಿತ್ತನಾಗಿ ದಕ್ಷಿಣ ದ್ವಾರಮಂ ದಾಂಟಿ ಪಶ್ಚಿಮ ದ್ವಾರಮನಾಶ್ರಯಿಸಿದನು. ಆತನ ಹಿಂದಣ ಭಾಗವನಾಶ್ರಯಿಸಿ ದೇವತೆಗಳು ಆಕಾಶಮಾರ್ಗದಲ್ಲಿದ್ದರು. ಆಗ ಮನ್ಮಥನು ನಿಜಕಾಂತೆಯಾದ ರತಿದೇವಿಯೊಡಗೂಡಿ ಶಿವಾಲಯಮಂ ಪೊಕ್ಕು, ದಿವ್ಯಮಾದ ವೀರಾಸನದಲ್ಲಿ ಸುಖದಿಂದ ಸಮಾಸೀನನಾಗಿ, ಯೋಗೀಂ ದ್ರರಿಂ ಸೇವ್ಯಮಾನನಾಗಿ, ಯೋಗಿಗಳ ಯೋಗದಿಂ ವಂದಿತನಾಗಿ ಶುದ್ಧಸ್ಫಟಿಕ ಸಂಕಾಶನಾದ, ದಿವ್ಯಭೂಷಣಂಗಳಿಂ ಭೂಷಿತನಾಗಿ, ಸಿಹ್ಮದ ಚರ್ಮವನ್ನೇ ಉತ್ತರೀಯ್ಯಮನ್ನಾಗಿಮಾಡಿ, ವ್ಯಾಘ್ರಚರ್ಮಾಂಬರವನ್ನುಟ್ಟು, ಲೋಚನ ತ್ರಯಂಗಳೇ ಗುರಿಯಾಗಿ ಮಾಡಲ್ಪಟ್ಟ, ಉನ್ನತಮಾದ ನಾಸಾಗ್ರವುಳ್ಳ, ಮತ್ತು ಯೋಗಪಟ್ಟಿಗೆಯಿಂದ ಮನೋಹರವಾಗಿ ವೇದವಾಕ್ಕುಗಳ್ಗೆ ಅಗೋಚರನಾದ, ನಿಸ್ತರಂಗ ಸಮುದ್ರ ಸದೃಶನಾಗಿ ನೀಲಕಂಠನಾದ, ಜಗತ್ಪ್ರಭುವಾಗಿ ನಿತ್ಯರ್ಗೆ ನಿತ್ಯನಾದ. ಚೇತನರ್ಗೆ ಚೇತನನಾದ. ನಿಜಕಾಂತಿಯಿಂ ಚಂದ್ರ ಸೂರ್ಯಾಗ್ನಿಗಳಂ ಪದಿ ಪ್ರಕಾಶಿಸುತ್ತಿಹ, ಸರ್ವಜ್ಞನಾಗಿ ಸರ್ವ ಕರ್ತನಾದ, ಸ್ವತಂತ್ರನಾಗಿ ಅಪ ರಾಜಿತನಾದ, ಮಹತ್ತಿಗುಂ ಮಹತ್ತಾದ, ಅಣುವಿಗುಂ ಅಣುವಾದ, ಸರ್ವಸಾಕ್ಷಿ ಯಾದ ಮಹಾದೇವನಂ ಕಂಡನು. ಎಲೈ ಮುನಿಗಳಿರಾ! ಅಜ್ಞಾನಕ್ಕೆ ಪರ ನಾಗಿರ್ದು ಸರ್ವೈಶ್ವರ್ಯ ಸಂಪನ್ನನಾದ ಶಂಭುವಾಗಿ ಆದ್ಯನಾಗಿ ಸನಾಥನಾದ, ತ್ರಿನೇತ್ರನಾದುದರಿಂ ಮನಂಗಳ್ಗಂ ಅಸಾಧ್ಯನಾದ ಆ ಪರಮೇಶ್ವರನಂ ಕಂಡು ಮನ್ಮಥನು ಸಮೀಪಸ್ಥಮಾದ ದೇಹಪತನ ಮುಳ್ಳವನಾಗಿ, ಭಯದಿಂ ಕಂಪಿತ ಭುಜನಾಗಿ, ನಿಜ ಹಸ್ತಂಗಳಿಂ ಜಗುಳ್ವ ಧನುರ್ಬಾಣಂಗಳಂ ಕಾಣದಿರ್ದನು. ಪರಮೇಶ್ವರನ ಮಹಿಮೆಯು ಈ ಪ್ರಕಾರಮಾಗಿಹುದು. ಆವ ಮಹಿಮೆಯಿಂ ಪ್ರಾಣಿಗಳು ಅಭಿವೃದ್ಧರಹರೋ, ಆ ಈಶ್ವರನಂ ನೋಡಿ ನೋಡಿ ರತಿದೇವಿಯೂ ಮೊಡೊ ಅತ್ಯಂತ ಚಿಂತಾಕ್ರಾಂತಕಾದಳೆಂದು ಸೂತನು ನಿರೂಪಿಸಿದ ನೆಂಬಲ್ಲಿಗೆ, ಕರ್ಣಾಟ ಭಾಷಾವಿರಚಿತಮಾದ, ಸ್ಕಾಂದಪುರಾಣದ ಶಂಕರಸಂಹಿತೆಯೋಳ್

ಶಿವರಹಸ್ಯಖಂಡದೊಳು ಸಂಭವಕಾಂಡದ, ಹರನಂ ಕುಸುಮಶರದಿಂದೆಸೆಯು ವೋಸುಗ ಮನ್ಮಥಂ ಕೈಲಾಸಂ ಸಾರ್ದು, ಅಂತಃಪುರದೊಳಿರ್ದ ಪರಮೇಶ್ವರನಂ ಭಯದಿಂ ನಿರೀಕ್ಷಿಸುತ್ತಿರ್ದನೆಂಬ ಕಥಾರೂಪವಾದ
ಹತ್ತನೆಯ ಅಧ್ಯಾಯವು ಸಂಪೂರ್ಣಂ.

ಹನ್ನೊಂದನೆಯ ಅಧ್ಯಾಯವು.

ಮನ್ಮಥನ ಶರಸಂಧಾನ-ಫಾಲನೇತ್ರದಿಂದ ದಹನ-ರತಿದೇವಿಯ ಪರಿತಾಪ.

ಎಲೈ ಮುನಿಗಳಿರಾ! ಅನಂತರದಲ್ಲಿ ರತಿದೇವಿಯು ತನ್ನ ಮನದಲ್ಲಿ, ಈ ಪರಿ ಯೋಚಿಸಿದಳು ಎಂತೆಂದರೆ, ಹಾಹಾ!! ಇಂತಹ ಕಾರ್ಯದಲ್ಲಿ ಉದ್ಯುಕ್ತನಾದ ಆರ್ಯಪುತ್ರನಾದ ಮಾರನು, ಮಹೇಶ್ವರನತ್ತಣಿಂ ಎಂತು ಕ್ಷೇಮವನ್ನೈದುವನು? ಏನುಕಾರಣದಿಂದ ಮೂರ್ಖತನದಿಂದೆನ್ನ ವಚನಮಂ ಮೀರಿ ಇಲ್ಲಿಗೆ ಬಂದನೋ ಬಹು ಮಾತುಗಳಿಂದೇನು ಪ್ರಯೋಜನವು! ಈ ಮನ್ಮಥನು ಕ್ಷೇಮದಿಂ ಹಿಂತಿರುಗಿದವನಾದೊಡೆ ಪುನಃ ತಾಯಿಯ ಉದರದಲ್ಲಿ ಜನಿಸಿದಂತಾಗುವದು; ಯಮನು ಮೊದಲಾದ ದೇವತೆಗಳ್ಗೆ ದೇವನಾದ ಪರಮೇಶ್ವರನ ಸಮೀಪಮಂ ಕಿಂಕರನಾಗಿ ಯ್ಯೆದಲಿಚ್ಛಿಸಿ ಮರಳಿ ಮರಳಿ ತಿರುಗುತ್ತಿರುವನು. ಮಿಕ್ಕವರನಾದರೆ ಪೇಳ್ವುವೇನು? ಈ ಪ್ರಕಾರವಾಗಿ ರತಿಯು ತನ್ನ ಮನದೊಳ್ಚಿಂತಿಸುತ್ತಿರಲಾಗಿ ಬಳಿಕ ಕ್ಷಣಮಾತ್ರದಲ್ಲಿ ಪಂಚಶರನು ಮೂರ್ಛೆಯಂ ತಿಳಿವುತ್ತಿರಲಾಗಿ ಮರಳಿ ಶರಸಮೇತವಾದ ಶರಾಸನಮಂ ಪಿಡಿದು, ಸಮೀಪದಲ್ಲಿರ್ಪ ಸುರಹೊನ್ನೆಯ ಮರಗಳ ಸಮೂಹದಲ್ಲಿ ಮೆಲ್ಲಮೆಲ್ಲನೆ ಮರೆಯಾಗಿ, ಭಯಸಂಭ್ರಮಸಮೇತ ನಪ್ಪಂತು ಬಿಲ್ಲನೇರಿಸಿ ಸಮ್ಮೋಹನಾಸ್ತ್ರಮಂ ಮಾಡಿ ಯೋಗೀಶ್ವರಗ್ರಗಣ್ಯನಾದ ಆ ಶಿವನಂ ಗುರಿಯಂ ಮಾಡಿ ಇರುತಿರ್ದೊಡಂ, ಮನದೊಳಿಂತು ಚಿಂತಿಸಿದನು. ದೇವತೆಗಳು ತನ್ನನ್ನೇನುಕಾರಣದಿಂ ಪಿನಾಕಪಾಣಿಯ ವಿಷಯದಲ್ಲಿ ಈ ಪ್ರಕಾರವಾದ ಕರ್ಮಮಂ ಮಾಡಲೋಸುಗ ಕಳುಹಿದರೋ ಏನೋ, ನನ್ನ ಎಡಗಣ್ಣು ಭಯಮಂ ಸೂಚಿಸುತ್ತ ಬಹಳವಾಗಿ ಚಲಿಸುತ್ತಿರುವುದು. ಅಕಟಕಟ!! ತ್ರಿಪುರಾರಿಯ ಯುದ್ಧದಲ್ಲಿ ಕ್ಷೇಮವೆಂತಹುದು! ಅದೆಲ್ಲವು ಹಾಗಿರಲಿ; ಯುದ್ಧದಲ್ಲಿ ಜೀವಿಸುವೆನೋ ಇಲ್ಲವೋ, ಈಗ ನೇತ್ರಾನಂದಕರನಾದ ದೇವನಂ ನೇತ್ರಂಗಳಿಂದ ನೋಡಿದೆನೆಂಬ ಕಾರಣದಿಂ, ಭಾಗ್ಯವಂತರ ಮಧ್ಯದಲ್ಲಿ ನಾನೇ ಭಾಗ್ಯವಂತನಲ್ಲವೆ! ಎಂದು ಆಲೋಚಿಸಿ ಸಮ್ಮೋಹನಾಸ್ತ್ರಮಂತ್ರಮಂ ಜಪಿಸುತ್ತಿರಲು; ಆಗ ವಿಷ್ಣ್ವಾದಿ ದೇವತೆಗಳೆಲ್ಲರುಂ ಕೈಗಳಂ ಮುಗಿದು, ಸಸ್ತ್ರೀಕ

ನಾದ ಆ ಕಾಮಂಗೆ ಕ್ಷೇಮವಾಗಲೆಂದು ಮನದೋಳ್ಜಪಿಸುತ್ತಿದ್ದರು. ಬಳಿಕ ಸರ್ವಜ್ಞನಾಗಿ ಸರ್ವೇಶ್ವರನಾದ ದಯಾನಿಧಿಯಾದ ಶಿವನ ಹಣೆಗಣ್ಣಿನ ಕೊನೆಯತ್ತಣಿಂ, ಪೊಂದಾನೊಂದು ಅಣುಮಾತ್ರವಾದ ಅಗ್ನಿಜ್ವಾಲೆಯು ಪೊರಮಟ್ಟು, ಮಂಡಲೀಕೃತ ಕೋದಂಡನಾಗಿ ಸುರಹೊನ್ನೆಯ ಮರಗಳ ಮಧ್ಯದಲ್ಲಿಹ ಕಾಮನಂ ಶೀಘ್ರದಿಂದ ಮಹಿಷಾಕ್ಷ ಧೂಪದ ಲೇಶಮಂ ಹೇಗೆಯೊ ಹಾಗೆ ಭಸ್ಮೀಕರಿಸಿದುದು.

ಆಗ ರತಿದೇವಿಯು ಮೂರ್ಛೆಯಿಂದ ಪತಿಯ ಮರಣಮಂ ತಿಳಿಯದೇ ಇರುತ್ತಿರಲಾಗಿ, ಬಳಿಕ ಕಪೋತಂಗಳ ಗಳಂಗಳ ಹಾಗೆ ಕಬ್ಬುರಮಾದ ಧೂಮವು ಪೊರಮಟ್ಟು, ದುರ್ಗಂಧದಿಂ ದುಸ್ಸಹಮಾಗಿ ದೇವತೆಗಳ ಸಮೂಹಂಗಳಿಂದ ಗಗನದಲ್ಲಿ ಕಾಣಲ್ಪಡುತ್ತಿರೆ, ಆಗಲೇ ಸಕಲ ದೇವತೆಗಳ ಉದರದಲ್ಲಿ ಶೋಕಾಗ್ನಿಯು ಉಜ್ವಲಿಸಿದುದು. ಆದುಕಾರಣದಿಂದ ಆಕಾಶದಲ್ಲಿರ್ದ ದೇವತೆಗಳು ಪರಮೇಶ್ವರನಂ ಕುರಿತು ವಾಕ್ಕಿನಿಂದ ಜಯ ಜಯ!! ಯೆಂದು ನುಡಿದರು. ಈ ವೃತ್ತಾಂತಗಳನ್ನೆಲ್ಲಮಂ ತಿಳಿಯದೇ ಇದ್ದವನೋಪಾದಿಯಲ್ಲಿ ಶಿವನು, ವ್ಯಾಖ್ಯಾನ ಮುದ್ರಾಲಸದ್ಭುಜನಾಗಿ, ಮುನೀಶ್ವರರೊಡನೆ ಯೆಂದಿನಂತೆ ತೂಷ್ಣೀಂಭೂತನಾಗಿದ್ದನು. ಬಳಿಕ ಇಂದ್ರ, ವಿಷ್ಣು ಮೊದಲಾದ ದೇವತಾಶ್ರೇಷ್ಠರು ಕೈಲಾಸದ ಶಿಖರದಿಂದಿಳಿದು ಸರ್ವಕರ್ತನಾಗಿ ಸರ್ವಜ್ಞನಾದ, ಕಾಮಾರಿಯಾದೊಡಂ ಕಾಮಿತಾರ್ಥ ಪ್ರದನಾದ, ಸರ್ವಕಾರಣನಾದ ಶಿವಂಗೆ ಶಿರದೋಳಂಜಲಿ ಬಂಧಮಂ ಮಾಡಿ ನಮಸ್ಕರಿಸಿದರು ಯೆಂತೆಂದರೆ,—

ದೇವತೆಗಳು ಪರಮೇಶ್ವರನನ್ನು ಸ್ತುತಿಸುವಿಕೆ.

ಸುರ, ನರ, ತಿರ್ಯಕ್ ಸ್ಥಾವರ ರೂಪಂಗಳಾದ ಚತುರ್ವಿಧ ಪ್ರಾಣಿಗಳೂ ಆವನೋರ್ವನಿಂ ಪುಟ್ಟಿ, ಆವನೋರ್ವನಂ ಜಪಿಸುತ್ತ ಆವನೋರ್ವನೋಳು ಲಯಮನ್ನೈದುತ್ತಿರುವವೋ, ಮತ್ತೆ ಆವನೋರ್ವಂ ಪುನಹ ಸೃಷ್ಟಿಯನ್ನಾರಂಭಿಸಿ ಆ ಚತುರ್ವಿಧ ಪ್ರಾಣಿಗಳನ್ನು ಅನುಗ್ರಹಿಸುತ್ತಿರುವನೋ, ಅಂಥಾ ನಿನಗೀ ನಮಸ್ಕಾರವು, ಎಲೈ ಪರಮೇಶ್ವರನೆ! ಆವನೋರ್ವನು ಅವುದಾನೊಂದು ಕಾರಣದಿಂ ಆನಂದ ಪ್ರಚುರವಪ್ಪುದರಿಂದ ಅಭ್ಯಾಸದತ್ತಣಿಂದ ಆನಂದಮಯನೋ, ಮತ್ತೆ ಆನಂದಿಗಳ ಆನಂದಮಂ ತಿಳಿವುತಿರ್ದೊಡಂ, ಆವನೋರ್ವಂ ಅಂಜದೆ ಬರುತ್ತಿರುವನೋ, ಆ ರೀತಿಯಾದ ನಿನಗೆ ನಮಸ್ಕಾರಂ ವೇದತ್ರಯ ಮೂಲನಾಗಿ ವೇದತ್ರಯ ಕರ್ತನಾದ ಮತ್ತೆ ವೇದತ್ರಯ ಮಂಡಲ ಮಧ್ಯಗತನಾಗಿ ವೇದತ್ರಯ ಸಾರನಾದ ನಿನಗೆ ನಮಸ್ಕಾರವು, ಎಲೈ ನೀಲಗ್ರೀವನೇ! ಆವನೋರ್ವನಿಂದ ಈ ಪ್ರಪಂಚದ ಜನನವೊ, ಆವನೋರ್ವನಲ್ಲಿಯೇ ಇದ

ಲಯವೂ ಉಂಟಾದುದಲ್ಲದೆ ಆವನೋರ್ವನಿಂದೀ ಜಗತ್ರಯವು ಆನಂದ ಸಮೇತಮಾದದೋ ಅದುಕಾರಣದಿಂ ಸಕಲಮುಂ ಶರ್ವನೆಂಬುದರಿಂದ ಆ ರುದ್ರನಾದ ನಿನಗೆ ನಮಸ್ಕಾರವು. ಎಲೈ ಪರಮೇಶ್ವರನೆ! ಸೃಷ್ಟ್ಯಾದಿಯಲ್ಲಿ ಸನ್ಮಾತ್ರವಾದ ಪರಬ್ರಹ್ಮವೇ ಇರ್ದುದೆಂಬ ಶ್ರುತಿವಾಕ್ಯವೇ. ಆವಬ್ರಹ್ಮಂಗೆ ಲಕ್ಷ್ಯವಾಗಿರುವುದೋ, ಆವುದಾನೊಂದು ಬ್ರಹ್ಮವು "ಅಹಮೇವ" ಎಂಬುದರಿಂದ, ಆ ಬ್ರಹ್ಮವು ಪುರುಷರೂಪವಾಗಿಯುಂ ಸದ್ರೂಪವಾಗಿಯುಂ ತೇಜೋರೂಪವಾಗಿಯುಂ ಯಿಹುದು. ಯಿದಲ್ಲದೆ ಸತ್ಯಜ್ಞಾನ ಮನಂತಂ. ಯೆಂಬುದೆ ಮೊದಲಾದ ಶ್ರುತಿಯು ತಾನೆ ಆವನೋರ್ವನಂ ತಮಗೆ ಸತ್ಯನೆಂದೇ ಪ್ರತಿಪಾದಿಸುತ್ತಿರುವುದೋ, ಚಿದಚಿದಾತ್ಮಕಮಾದ ಈ ಜಗತ್ತು, ಆವನೋರ್ವನ ಶರೀರವೋ ಆವನೋರ್ವನು ಆ ಚಿದಚಿದಾತ್ಮಕವಾದ ಜಗತ್ತಿನಲ್ಲಿ ಅಂತರ್ಯಾಮಿಯಾಗಿರುವನೋ, ಅಂಥಾ ವಿಶ್ವಾಧಿಕನಾಗಿ ಜಗತ್ಪತಿಯಾದ ಪ್ರಭುವೇ! ಕಲ್ಯಾಣ ನಿಧಿಯಾಗಿ ಪರಮಾತ್ಮನಾದ ನಿನಗೆ ನಮುಸ್ಕಾರ, ಸಕಲ ಪ್ರಾಣಿಗಳ ಹೃದಯಸ್ಥನಾಗಿ ಮಹಾಮಹಿಮನಾದ, ಎಲೈ ಮಹಾದೇವನೆ! ನೀನೆಂಬ ಸಮುದ್ರದಲ್ಲಿ ಸುರಾಸುರರೆಂಬ ನಾವು ತುಂತುರುವನಿಗಳಾಗಿ ಇರುತಿದ್ದೇವಾದಕಾರಣ ನಮ್ಮನ್ನು ರಕ್ಷಿಸು ರಕ್ಷಿಸು, ನಿರಂತರದಲ್ಲಿಯೂ ಪ್ರಸನ್ನನಾಗೆಂದು ಈ ಪ್ರಕಾರದಿಂ ದೇವತೆಗಳು ಸ್ತುತಿಸುತ್ತಿರಲಾಗಿ, ಅಂತಃ ಪುರಸ್ಥನಾದ ಪರಮೇಶ್ವರನು ತನ್ನ ಸಮೀಪಕ್ಕೆ ಬಂದ ನಂದೀಶ್ವರನಂ ನೋಡಿ ಇಂತೆಂದನು.

ನಂದಿಗೆ ಪರಶಿವನ ಅನುಜ್ಞೆಯು.

ಎಲೈ, ನಂದೀಶ್ವರನೆ! ಈ ಕೋಲಾಹಲವೇನು? ಯಾರಿಂದ ಪ್ರವರ್ತಿಸಲ್ಪಟ್ಟುದು? ಇದೇನು ನಿಮಿತ್ತದಿಂ ಬಂದುದು? ಯೆಂದು ನುಡಿಯಲು, ನಂದಿಕೇಶ್ವರನು ಕೈಮುಗಿದು ಬಿನ್ನೈಸಿದನದೆಂತೆನೆ:— ಎಲೈ, ಭಗವಂತನಾದ ಶಿವನೆ! ಇಂದ್ರ ಸಮೇತರಾದ ದೇವತೆಗಳುಂ ಬ್ರಹ್ಮನೊಡಗೂಡಿದ ಮಧುಸೂದನನುಂ, ಶೂರಪದ್ಮ ಮೊದಲಾದ ಅಸುರರಿಂ ಪರಿಪೀಡಿತರಾಗಿ, ಪ್ರಭುವಾದ ನಿನ್ನಂ ಮರೆಹೊಗಲೋಸುಗ, ನಿನ್ನ ದರ್ಶನಮುನಪೇಕ್ಷಿಸುತ್ತಿರುವರೆಂದು ನುಡಿಯೆ, ಆ ವಚನಮುಂ ಕೇಳ್ದು ಪರಮೇಶ್ವರನು ಎಲೈ, ನಂದಿಕೇಶ್ವರನೆ! ಆ ದೇವತೆಗಳೆಲ್ಲರುಂ ಸಮೀಪಕ್ಕೆ ಬರಲೆಂದೀಶ್ವರಂ ನುಡಿವುತ್ತಿರೆ, ಆ ವಾಕ್ಯಮುಂ ಕೇಳ್ದು, ಶಿಲಾದನೆಂಬ ಮಹಾಮುನಿಯ ಕುಮಾರನಾದ ನಂದಿಕೇಶ್ವರನು, ಶೀಘ್ರದಿಂ ಪೊರಮಟ್ಟು ದೇವತೆಗಳಂ ಕರೆದು ಅವರೊಡಗೂಡಿ ಅಂತಃಪುರಮಂ ಪ್ರವೇಶಿಸುತ್ತಿರಲಾಗಿ, ಆ ದೇವತೆಗಳೆಲ್ಲರುಂ ಭಕ್ತಿ ಭಾವಿತರಾಗಿ ಶಿವಂಗೆ ನಮಿಸುತ್ತಿರೆ, ಮಹಾದೇವನು ಆ ದೇವತೆಗಳಂ ನೋಡಿ ಯಿಂತೆಂದನು. ಎಲೈ, ಬ್ರಹ್ಮಾದಿಗಳಿರಾ!

ನಿಮ್ಮಿಂದ ಆವುದಾನೊಂದು ಸ್ತುತಿಯು ಮಾಡಲ್ಪಟ್ಟುದು. ಈ ಸ್ತೋತ್ರವೆನಗೆ ಅತ್ಯಂತ ಹೃದ್ಯಮಾದುದರಿಂದ ಸುಪ್ರೀತನಾದೆನು. ಅದುಕಾರಣದಿಂ ಮನದೊಳ್ಬಯಸಿದ ವರಮಂ ಬೇಡುವುದು, ಅಂತುಮಲ್ಲದೆಯುಂ ನೀವು ಮಾಡಿದ ಸ್ತುತಿಯುಂ ಪೊಂದು ಬಾರಿಯಾದೊಡಂ, ಆರು ಕೆಲಬರು ಪಠಿಸುವರೋ, ಅವರು ನಿಷ್ಪತ್ತ ಕಲ್ಮಷರಾಗಿ ದುರ್ಲಭಂಗಳಾದ ಪುರುಷಾರ್ಥಗಳನ್ನೆಲ್ಲಮಂ ಪಡೆಯಲಿ, ಯೆಂತೆಂದರೆ. ಪುತ್ರಾರ್ಥಿಯು ಪುತ್ರರಂ, ಕನ್ಯಾರ್ಥಿಯು ಶುಭಳಾದ ಕನ್ನಿಕೆಯಂ, ಪಶುಕಾಮನು ಪಶುಗಳಂ ವಿದ್ಯಾಕಾಮನು ವಿದ್ಯೆಯಂ ಮತ್ತೆ ಸ್ವರ್ಗಕಾಮನು ಸ್ವರ್ಗಮಂ ಮೋಕ್ಷಾರ್ಥಿಯು ಮೋಕ್ಷಮಂ ಪಡೆಯಲಿ. ಬಹುವಾಗಿ ಮಾತನಾಡಿ ಪ್ರಯೋಜನವೇನು? ಈ ಸ್ತೋತ್ರವಂ ಪಠಿಸಿದವರೇ ನನಗೆ ಪ್ರಿಯರು. ಅವರು ಬಹು ಪಾತಕ ಯುಕ್ತರಾದೊಡಂ ಈ ಸ್ತುತಿಪಾಠದಿಂ ಶುದ್ಧಾತ್ಮರಾಗುವರು, ಈ ಅರ್ಥದಲ್ಲಿ ಸಂಶಯಮಿಲ್ಲೆಂದು ಪರಮೇಶ್ವರಂ ದೇವತೆಗಳ್ಗೆ ನಿರೂಪಿಸಿದವನಾಗಲು, ಆ ವಿಷ್ಣು ಮೊದಲಾದ ದೇವತೆಗಳು ಕರ್ಣಪ್ರಾಪ್ಯಮಾದ ಆ ಶಿವವಚನಮೆಂಬ ಅಮೃತಮಂ ಪಾನಮಾಡಿ ಹೃಷ್ಟಾಂತಃಕರಣಮುಳ್ಳವರಾಗಿ, ವಿಕಸಿತಮಾದ ಮುಖಾರವಿಂದಂಗಳಿಂ ದುಪಲಕ್ಷಿತರೂ ಆಗಿ, ವಿಶ್ವೇಶ್ವರನಾದ ಆ ಶಿವನಂ ಮರಳಿ ಮರಳಿ ನಮಸ್ಕರಿಸುತ್ತಿದ್ದರೆಂಬದಾಗಿ, ಸೂತಂ ಶೌನಗಾದಿಗಳ್ಗೆ ಪೇಳಿದನೆಂಬಲ್ಲಿಗೆ, ಕರ್ಣಾಟಕ ಭಾಷಾ ವಿರಚಿತಮಾದ, ಶ್ರೀ ಕೃಷ್ಣರಾಜ ವಾಣೀವಿಲಾಸಮೆಂಬ, ಶಂಕರಸಂಹಿತೆಯ ಶಿವರಹಸ್ಯಖಂಡದೊಳ್ ಸಂಭವಕಾಂಡದ ಕುಸುಮಾಸ್ತ್ರದಿಂದೆಸೆಯಲ್ಪಟ್ಟಸುಮಶರನಂ, ಅಸಮಾಂಬಕದಿಂದೀಶ್ವರ ಸುಡುಹಿದನಂತರದೊಳ್, ಪಶುಪತಿಯಂ ಸರಸಿಜ

ಭವಾದಿಗಳ್ ಶ್ರುತ್ಯುಕ್ತಮಾದ ಸ್ತುತಿಗಳಿಂ ಸ್ತುತಿಸಿದ ಕಥಾರೂಪಮಾದ
ಹನ್ನೊಂದನೆಯ ಅಧ್ಯಾಯವು ಸಂಪೂರ್ಣಂ.

ಹನ್ನೆರಡನೆಯ ಅಧ್ಯಾಯವು.

ದೇವತೆಗಳಿಗೆ ಪರಶಿವನ ವರಪ್ರಸಾದನು.

ಎಲೈ, ಮುನಿಗಳಿರಾ! ತದನಂತರದಲ್ಲಿ ಆ ದೇವತೆಗಳೆಲ್ಲರುಂ ಕೂಡಿ, ಪೂರ್ವದಲ್ಲಿ ನುಡಿಯಲ್ಪಟ್ಟಂತೆ, ಭೀತಿನಿವಾರಕಮಾದ ಕುಮಾರಜನನಮಂ, ಭವಭಯಾಪಹಾರಿಯಾದ ಭವಂಗೆ ನಮಿಸಿ ಪ್ರಾರ್ಥಿಸುತ್ತಿರಲಾಗಿ, ಆ ಪರಮೇಶ್ವರನು ಮುಗುಳ್ನಗೆ ನೇಸಿ ಬಹುಮಾನದಿಂದಿಂತೆಂದನು. ಎಲೈ, ದೇವತೆಗಳಿರಾ! ನಿಮಗೆ ಹಿತಾರ್ಥಮಾಗಿ ಕುಮಾರಂಜನಿಸುವನು, ಸ್ವಲ್ಪ ಕಾಲಮಾತ್ರ ಈ

ಕಾಮನಂ ನೋಡಿಕೊಂಡಿರ್ಪುದೆಂದು ನುಡಿದು, ಆ ದೇವತೆಗಳನ್ನು ಕಳುಹಿಸಿದನು. ಈ ಮಧ್ಯಕಾಲದಲ್ಲಿ ಕಾಮನ ಪತ್ನಿಯಾದ ರತಿಯು ಮೂರ್ಛೆಯನ್ನೈದಿ ಕ್ಷಣಮಾತ್ರ ಬಿದ್ದಿದ್ದಳಾದಕಾರಣ ಹರನ ಲಲಾಟನೇತ್ರಾಗ್ನಿಯ ಅಧೀನನಾದ ನಿಜಪತಿಯಂ ತಿಳಿಯದಿದ್ದು, ಪ್ರಜ್ಞೆಯನ್ನೈದಿದ ಬಳಿಕ, ಎಲೈ ಪ್ರಾಣಕಾಂತನೆ! ನೀನು ಜೀವಿಸುತಿದ್ದೀಯೋ ಏನೋ ಯೆಂದಿಂತು ನುಡಿವುತ್ತಿದ್ದು ನಿಂತವಳಾಗಿ, ಗಗನಮಾರ್ಗದಲ್ಲಿ ಲೇಶಲೇಶವಾಗಿ ಪೋಗುತ್ತಿರುವ ಭಸ್ಮಮುಂ ಕಂಡಳು.

ಭಸ್ಮವಾದ ಮನ್ಮಥನನ್ನು ಕುರಿತು ರತಿದೇವಿಯ ಪ್ರಲಾಪವು.

ಬಳಿಕ ಆಕೆಯು ಶೋಕಾಕ್ರಾಂತಳಾಗಿ ಭೂತಳದಲ್ಲಿ ಹೊರಳುತ್ತ, ವ್ಯಾಕುಲಿತವಾದ ಚಕ್ಷುರಾದೀಂದ್ರಿಯಂಗಳುಳ್ಳವಳಾಗಿ, ಕೆದರಲ್ಪಟ್ಟ ಮುಂಗುರುಳುಗಳಿಂದುಪಲಕ್ಷಿತೆಯಾಗಿ ಈ ಪರಿ ಪ್ರಲಾಪಂಗೈದಳು.

ಎಲೈ, ವಿಶಾಲಾಕ್ಷನಾದ ಪ್ರಾಣಕಾಂತನೇ! ನಿನ್ನ ಅಂಗವು ಅತ್ಯಂತ ಶೋಭನಮಪ್ಪುದರಿಂ ಜಗತ್ತುಗಳಲ್ಲಿ, ಮೃದುವಾದ ವಸ್ತುಗಳ್ಗೆ ಯೆಲ್ಲಿ ಸಾದೃಶ್ಯಮನ್ನೈದಿದುದು. ಎಲೈ, ವಿಧಿಯೆ! ನಾನು ನಿಃಪರಾಧಿನಿಯಾಗಿ ಅನಾಥೆಯಾಗಿ ನನ್ನಂ ನಾನು ತಿಳಿಯದಿದ್ದೆನು. ಏನು ಕಾರಣದಿಂ ಕಾಮನಂ ವಿಧಿಸಿದೆ, ಅಕಟಕಟ!! ನನಗೆ ಮಾತೆಯುಂ ಪಿತನುಂ ವೊಡಹುಟ್ಟಿದವರುಂ ಹಿತರುಂ ಯಾರೂ ಇಲ್ಲ; ನನಿಗಾವುದು ಗತಿಯು; ಎಲೈ, ಕಾಮನೇ! ನೀನೇ ಕುಟುಂಬ ಪೋಷಕನಲ್ಲವೆ? ನಿನ್ನಧೀನವಾದ ಜೀವನವುಳ್ಳ ನನ್ನ ಸ್ನೇಹವಂ ಬಿಟ್ಟು ತ್ಯಜಿಸಿದೆ, ಇದು ಯುಕ್ತವೊ, ಯೆಂದು ನುಡಿಯುತ್ತಲೂ ನಡುಗುತ್ತಲೂ ಲೋಚನದಿಂ ಕಣ್ಣೀರಂ ಸುರಿಸುತ್ತಲೂ ದೈನ್ಯಮನ್ನೈದಿದ ಮುಖವುಳ್ಳವಳಾಗಿ, ಮಸುಳಿಸಲ್ಪಟ್ಟ ಅಂಗದಿಂದ ಅಡಿಗಡಿಗೂ ಯೆಡಹುತ್ತಿಹ ಆ ಪ್ರಕಾರವಾದ ರತಿದೇವಿಯಂ ನೋಡಿ ಪ್ರಭುವಾದ ಶಿವನು ಕೃಪೆವೆರಸಿ ಸನಕಾದಿಗಳ ಸಮಕ್ಷಮದಲ್ಲಿ ಮುಗುಳ್ನಗೆ ಗೂಡಿ ಯಿಂತೆಂದು ನುಡಿದನು.

ಎಲೌ ಮಗಳೆ! ನೀನು ಶೋಕಮನೈದಬೇಡ, ಯೆಂತಾದೊಡಂ ನಿನ್ನ ಪತಿಯು ನನಗೆ ದ್ರೋಹಮಂ ಮಾಡಿದೊಡಂ ಪಾತಿವ್ರತ್ಯದಿಂ ಸುವ್ರತೆಯಾದ ನಿನಗೆ ಸಂತೋಷ ಮಪ್ಪಂತು ನಿನ್ನ ಪತಿಯಂ ಬದುಕಿಸುವೆನು. ಕೆಲವುಕಾಲ ತಡೆ ಎಂದಿಂತು ಆ ರತೀದೇವಿಯಂ ಸಂತವಿಟ್ಟು, ಮರಳಿ ಆ ಸನಕಾದಿ ಮುನೀಶ್ವರರಂ ಕುರಿತು ಎಲೈ, ಮುನಿಗಳಿರಾ! ನೀವೀ ಪ್ರಕಾರದಲ್ಲಿಯೇ ನಿರಂತರದಲ್ಲಿಯುಂ ನನ್ನನ್ನು ಭಾವಿಸುತ್ತಿರಿ, ನಾನೀಗ ದೇವತೆಗಳ ಕಾರ್ಯಾರ್ಥವಾಗಿ ತೆರಳುವೆನೆಂದು ನಿರೂಪಿಸಿ ಶಿವನಂತರ್ಧಾನಮನ್ನೈದಿದನು.

ತಪೋನಿಷ್ಠೆಯಾದ ಪಾರ್ವತೀದೇವಿಯು ಸನ್ನಿಧಿಗೆ ಪರಶಿವನ ವೇಷಾಂತರ ಪ್ರಯಾಣ.

ಇತ್ತ ಕಡೆಯಲ್ಲಿ ಜಗನ್ಮಾತೆಯಾದ ಪಾರ್ವತೀದೇವಿಯು ಉಗ್ರವಾದ ತಪಮನಾಚರಿಸಿ ಶಿವಧ್ಯಾನಮಂ ಮಾಡುತಿರೆ, ಆಕೆಯ ತಪದಿಂದ ಪ್ರಸನ್ನನಾದ ಶಿವನು, ಆಕೆಯ ಭಕ್ತಿಯಂ ರಕ್ಷಿಸಲೋಸುಗ, ಆ ಪಾರ್ವತೀದೇವಿಯ ಆಶ್ರಮಮಂ ಕ್ರಮರಹಿತನಾಗೈದಿದನದೆಂತೆನೆ. ಆ ಜಗದೀಶ್ವರನಾದ ಪರಮೇಶ್ವರನು ಜೀರ್ಣವಾದ ಪರಿತಾಪದಿಂ, ಘನವಾದ ಜರೆಯಿಂದಲುಂ ಜೀರ್ಣವಾದ ನಿಜಾಂಘ್ರಿದ್ವಯ ಮಪ್ಪುದರಿಂದ ಯೆಡಹುತ್ತಿಹ ಹೆಜ್ಜೆಗಳುಳ್ಳದ್ದಾಗಿ, ಅತ್ಯನ್ತವಾ ಶೋಭನವಾದ ಕೆಚ್ಚೆವುಳ್ಳ ತೊಡೆಗಳುಳ್ಳದ್ದಾಗಿ, ಜಗಳಿದ ವಸ್ತ್ರವುಳ್ಳ ಮಧ್ಯಪ್ರದೇಶವುಳ್ಳದ್ದಾಗಿ, ಗಂಭೀರವಾದ ನಾಭಿಯಿಂದೊಪ್ಪುತ್ತಾ ಬೃಹತ್ಕುಕ್ಷಿಯಾಗಿ ವಳಿತ್ರಯದಿಂದಲಂಕೃತವಾಗಿ, ಉನ್ನತವಾದ ಉರಸ್ಥಲದಲ್ಲಿ ಚಂಚಲವಾಗಿ ಕಂಪಿಸುತ್ತಿಹ ಸ್ತನವುಳ್ಳದ್ದಾಗಿ, ಬಳ್ಳಿಗಳ್ವೆರೆಸಿದ ಪರ್ವತದಂತೆ ಯಜ್ಞೋಪವೀತಂಗಳ ತಂಡಂಗಳಿಂ ವ್ಯಾಪ್ತವಾಗಿ, ಧವಳವಾದ ಗಡ್ಡಮೀಸೆಯುಳ್ಳ ಬಿಳ್ಪಾದ ಯುವೆಗಳುಂಟಹ, ಶರತ್ಕಾಲದ ಮೇಘಂಗಳಿಂ ಪರಿವೃತವಾದ ಚಂದ್ರಮಂಡಲಕ್ಕೆ ಸದೃಶವಾಗಿ, ಶೋಭನವಾದ ನಾಸಿಕೆಯಿಂದಲೂ ಆ ಪ್ರಕಾರವಾದ ಕರ್ಣಗಳಿಂದಲೂ ದಂತರಹಿತವಾದ ಬಾಯಿಂದಲೂ ಚಲಿಸುತ್ತಿಹ ತುಟಿಯಿಂದಲೂ ಉಪಲಕ್ಷಿತವಾದ ವದನಮಂ ಧರಿಸುತ್ತಾ, ಅತಿ ಸ್ವಲ್ಪವಾದ ಶಿಖೆಯುಳ್ಳ ಮನೋಹರಮಪ್ಪಂತು ನೆರೆಯಿಂದ ಬಿಳ್ಪಾದ ಕೇಶಪಾಶಂಗಳಂ ಧರಿಸುತಿಹ, ಈ ಪ್ರಕಾರವಾದ ಬ್ರಾಹ್ಮಣ ದೇಹಮಂ ಧರಿಸಿದನು. ಮತ್ತಮಾ ಪರಮೇಶ್ವರಂ ಭಸ್ಮಾನುಲೇಪನದಿಂ ಶುಭ್ರವಾದ ಶರೀರವುಳ್ಳವನಾಗಿ, ತ್ರಿಪುಂಡ್ರಾವಳಿಯಿಂ ದೀಪ್ತನಾಗಿ, ರುದ್ರಾಕ್ಷಮಾಲೆಗಳಿಂದಲಂಕೃತನಾಗಿ, ದೃಢವಾದ ವೇಣುದಂಡಮಂ ಪಿಡಿದು ನಿರ್ಮಲಾಂತಃಕರಣನಾಗಿ, ನಿರಂತರದಲ್ಲಿಯು ವೇದಾಧ್ಯಯನಮಂ ಮಾಡುತ್ತಾ ಅತ್ಯನ್ನತ ಶರೀರನಾಗಿ, ವಯೋತಿಕ್ರಮದಿಂದ ವಾತದೋಷದಿಂ ಪೀಡಿತವಾದ "ಕಟಿ, ಬಾಹು" ತೊಡೆಗಳ ಸಂದುಗಳುಳ್ಳವನಾಗಿ, ವೃದ್ಧಬ್ರಾಹ್ಮಣ ವೇಷಮಂ ಧರಿಸಿ, ಅತ್ಯಂತ ಮಂದಗಮನದಿಂದಾಪಾರ್ವತೀದೇವಿಯ ಆಶ್ರಮಮಂ ಪೊಕ್ಕು, ಆ ಪ್ರಕಾರವಾಗಿ ತಪಮನಾಚರಿಸುತ್ತಿಹ ಆ ಪಾರ್ವತೀದೇವಿಯಂ ನಗುತ ನೋಡಿ ಮುನಿಗಳುಂ ಯೋಗಿಗಳುಂ ಆ ದೇವಿಗೆ ನಮಸ್ಕರಿಸಿದ ಬಳಿಕ, ಸಂತುಷ್ಟನಾಗಿ ಮೆಲ್ಲಮೆಲ್ಲನೆ ಪೋರಮಡುತ್ತಿದ್ದನು. ಮತ್ತು ಆ ಪರಮೇಶ್ವರನು ಸಮಸ್ತ ತೀರ್ಥಂಗಳಲ್ಲಿಯುಂ ತಾನು ಸ್ನಾನಮಂಮಾಡಿ ವೈವೃದ್ಧತ್ವಮಂ ಪ್ರತಿಪಾದಿಸುತ್ತಿಹ

ವೇದಂಗಳ ಅರ್ಥವನ್ನೇ ವೇದಾರ್ಥವಂ ಮಾಡುತ್ತಾ ವೃದ್ಧನಾಗಿ, ಮೆಲ್ಲ ಮೆಲ್ಲನೆ ಪಾರ್ವತಿದೇವಿಯಂ ನೋಡಲಿಚ್ಛೈಸಿದವನತೆರದಿ, ಅಪರ್ಣೆಯಾದ ಉಮಾದೇವಿಯ ಅಪರ್ಣಶಾಲೆಯಂ ಪ್ರವೇಶಿಸುತ್ತಿರೆ, ಆ ಪಾರ್ವತೀದೇವಿಯ ಸಖೀಜನವು ಆ ಆಶ್ರಮದಲ್ಲಿ, ವೃದ್ಧನಾದುದರಿಂ ತಂದೆಯೋಪಾದಿಯಲ್ಲಿಹ ಮುನಿಪುಂಗವಂ ನೋಡುತಲೆ, ಆ ಪಾರ್ವತೀದೇವಿಯ ಸಂಬಂಧಮಾಗಿರ್ಪ ಪರ್ಣಂಗಳಿಂ ನಿರ್ಮಿತವಾದ ಆ ಪರ್ಣಶಾಲೆಯನ್ನೈದಿತು.

ಆಗ ಪಾರ್ವತೀದೇವಿಯು ಆ ವೃದ್ಧಬ್ರಾಹ್ಮಣನಂ ಅರ್ಘ್ಯಪಾದ್ಯಾದಿಗಳ್ನೆರೆಸಿ ಯಿದಿರ್ಗೊಂಡು, ಭಕ್ತಿಯಿಂದಾಸನಮನಿತ್ತು ಉಪಚಾರಂಗಳಿಂದುಪಚರಿಸಿದಳು, ಯೆಂತೆಂದರೆ:— ಎಲೈ, ಶೌನಕಾದಿ ಮುನಿಗಳಿರಾ! ಆ ಪಾರ್ವತೀದೇವಿಯು ಬೀಸಣಿಗೆಯಂ ಬೀಸಿ, ಆ ವೃದ್ಧನ ಬಳಲಿಕೆಯಿಂದಾದ ಜೆಮಬಿಂದುಗಳಂ ಪರಿಹರಿಸಿದಳು. ಆಗ ವೃದ್ಧಬ್ರಾಹ್ಮಣನು ಆ ದೇವಿಯ ಉಪಚಾರಂಗಳಿಂದ ಕ್ಷಣಮಾತ್ರದಿಂ ಮಾರ್ಗಶ್ರಮವಂ ಪರಿಹರಿಸಿಕೊಂಡು ಆ ಪಾರ್ವತೀದೇವಿಯಂ ನೋಡಿ ಈ ಪರಿ ನುಡಿದನು:— ಎಲೌ ಪೂಜ್ಯಳಾದ ಕನ್ನಿಕೆಯೆ! ಶೋಭನವಾದ ವದನಂಗಳುಳ್ಳ ಸ್ತ್ರೀಯರ ಮಧ್ಯದಲ್ಲಿ, ನೀನೋರ್ವಳೆ ಶ್ರೇಷ್ಠಮಾದ ವರ್ಣವುಳ್ಳವಳಾಗಿ ಕಾಣಲ್ಪಡುತಿದ್ದಿ. ಶೋಭಾಯಮಾನವಾದ ಸರ್ವಾವಯವಂಗಳುಳ್ಳವಳಾದುದರಿಂ ಮಂಗಳಾತ್ಮಿಕೆಯಾದ ಕನ್ನಿಕೆಯೆ! ಸುಮುಖಿಯೇ! ನೀನು ಗಿರಿರಾಜನ ತಪಸ್ಸಿನ ಫಲವು. ನಿನಗೆ ಕ್ಷೇಮವೇನಸು? ನಿನ್ನ ತಪಸ್ಸಿಗೆ ಕ್ಷೇಮವೋ? ನಿನ್ನ ಶಕ್ತ್ಯಗನುಕೂಲವಾಗಿ ತಪಮನಾಚರಿಸುವೆಯೋ? ಎಲೌ, ಕಲ್ಯಾಣಿಯೆ! ಧರ್ಮಂಗಳಿಗೆ ಮುಖ್ಯ ಸಾಧಕಮಾದ ನಿಜದೇಹಮಂ ಸಲಹು. ಲೋಕದಲ್ಲಿ ದೇಹಮುಳಿದು ಸುಖಕರಮಾದುದು ಬೇರೆ ಯಿನ್ನೊಂದಿಲ್ಲವು. ಈ ಉದಕಂಗಳು ನಿನ್ನ ಸ್ನಾನಾದಿಗಳಿಗೆ ಅನುಕೂಲಂಗಳಾಗಿಹವೊ ಆಹಾಹಾ!! ಏನಾಶ್ಚರ್ಯವು!! ಆವುದಾನೊಂದು ಈ ದೇಹವು ಅನಿತ್ಯಮಾದೊಡಂ ದುರ್ಲಭಮಾದ ಈ ದೇಹಮಂ ಪಡೆದು ಲೋಕದಲ್ಲಿಹ ಜನವು ಶ್ರೇಯಸ್ಕರಮಾದ ಕಾರ್ಯಮಂ ಮಾಡಲಿಲ್ಲ. ಎಲೌ. ಬಾಲಕಿಯೆ! ನೀನಾದರೆ ಗಿರಿರಾಜಪುತ್ರಿಯು, ಸೌಮ್ಯಾಂಗಿಯಾಗಿ ಶೋಭನಮಾದ ಯೌವನವುಳ್ಳವಳಾದೊಡಂ ತಪೋವೃದ್ಧಳಾಗುತ್ತಿರುವೆ. ಎಲೌ, ಗಿರಿಜೆಯೆ! ಜಗಜ್ಜನನಿಯಾದ ನೀನು ಧರ್ಮವೃದ್ಧಿಯು ಮಾಡುದರಿಂದ, ಯೋಗೀಶ್ವರರಾದ ಋಷಿಗಳುಂ ಪೂಜ್ಯಳಾದ ನಿನಗೆ ನಮಿಸುವರು. ಮತ್ತೇನೆಂದರೆ:— ನೀನು ಭಾವಿತಾಂತಃಕರಣಮಾದ ತಪದಿಂ ಏಬ್ಬಾನೊಬ್ಬ ಪುರುಷನಂ ಧ್ಯಾನಿಸುವಂತೆ ನನಗೆ ತೋರುವುದು. ಎಲೌ, ಮಹಾಸುಭಾವೆಯಾದ ಪಾರ್ವತಿಯೆ!

ಸತ್ಯಮಂನುಡಿ. ಸಜ್ಜನರ್ಗೆ ಸತ್ಯಮೇ ಸಾಧುಪುದಲ್ಲವೆ! ಈ ಗಿಲ್ಲಿಗೆ ನೋಡಬೇಕೆಂದು ಬಂದವನು ಬೇರೊಬ್ಬನೆಂದು ತಿಳಿಯಬೇಡ. ಅದುಕಾರಣದಿಂ ಲಜ್ಜೆಯಂ ತ್ಯಜಿಸಿ ಸಮಸ್ತವನ್ನು ಯಥಾರ್ಥಮಾಗಿ ಪೇಳು. ಜರೆಯೆಂಬ ಅತಿ ಭಾರದಿಂ ಪ್ರಬ್ಬಿದ ನೆರೆಯಿಂದ ಉಪಲಕ್ಷಿತನಾದ ನನ್ನಿಂದೀಗ, ಅವುದಾನೊಂದು ಬೆಸಗೊಳ್ಳಲ್ಪಟ್ಟುದು. ಆ ವೃತ್ತಾಂತವು ರಹಸ್ಯಮಲ್ಲದೊಡೆ, ನಿನಗೆ ಪೇಳುವ ಪಕ್ಕೆ ಸಾಮರ್ಥ್ಯಮುಂಟಾದೊಡೆ, ಯಥಾರ್ಥಮಾಗಿ ಪೇಳ್ವುದೆಂದು, ಈ ಪ್ರಕಾರದಿಂ ಜಗತ್ಪತಿಯಾದ ವೃದ್ಧಭೂಸುರ ವೇಷಮಂಧರಿಸಿದ ಈಶ್ವರನು ನಿರೂಪಿಸಿದವನಾಗಲು, ಪಾರ್ವತೀದೇವಿಯು ಆ ವಚನಮಂ ಕೇಳ್ದು ನಿಶ್ಚೈಸಿ, ಆತನಂ ನೋಡಿ ತಲೆವಾಗಿ, ಆತನ ತೇಜಸ್ಸಿನಿಂದ ನಡುಗುತ್ತಿಹ ಹೃದಯಮುಳ್ಳವಳಾಗಿ, ಆಗ ತನ್ನ ಮುಂದಿಹ ಬ್ರಾಹ್ಮಣವೇಷದ ಶಿವನಂ ತನ್ನನುಂ ಅರಿಯದಂತಿರುತಿದ್ದಳೆಂದು, ಸೂತಪೌರಾಣೀಕನು ಶೌನಕಾದಿ ಮುನಿಗಳಿಗೆ ಪೇಳಿದ

ಸಂಬಿಲ್ಲಿಗೆ ಹನ್ನೆರಡನೆಯ ಅಧ್ಯಾಯವು ಸಂಪೂರ್ಣಂ.

ಹದಿಮೂರನೆಯ ಅಧ್ಯಾಯವು.

ವೇಷಾಂತರದಿಂದಿರುವ ಪರಶಿವನು ಪಾರ್ವತಿಯೊಂದಿಗೆ ಮಾತಾಡುವಿಕೆ.

ಸೂತರ ವಚನವು:— ಎಲೈ, ಮುನಿಗಳಿರಾ! ಕೇಳಿರಿ, ಮತ್ತಮಾ ವೃದ್ಧರೂಪಮಂ ತಳೆದ ಪರಮೇಶ್ವರನಾಪಾರ್ವತೀದೇವಿಯಂ ಕುರಿತು, ಎಲೌ, ಗಿರಿರಾಜನಂದಿನಿಯೆ! ಲೋಕದಲ್ಲಿ ವಿವಾಹಕಾಲದೊಳು ವಧೂವರರೀರ್ವರುಂ ಮತ್ತ ಗಜವನ್ನೇರಿ, "ಮೆರೆವಣಿಗೆ" ಯೆಂಬ ಮಹೋತ್ಸವಮಂ ಮಾಡಿಕೊಂಡು ತೆರಳುವಾಗ ಬ್ರಾಹ್ಮಣರು ಸ್ವಸ್ತಿವಾಚನ ಸೂಕ್ತಂಗಳಂ ಜಪಿಸುತ್ತಿರಲಾಗಿ, ಆ ದಂಪತಿಗಳ ನೀರ್ವರಂ ಮಂಗಳ ಪಾಠಕರು ಸ್ತುತಿಸುವರಲ್ಲವೆ? ಮುದಿಯೆತ್ತನ್ನೇರಿ ಭೂತ ಭೇತಾಳ ಸೇವಿತರಾದ ನಿಮ್ಮನ್ನೀರ್ವರಂ ನೋಡಿ, ಜನ ಸಮೂಹವು ನೋಡಿದ ಮಾತ್ರದಿಂದಲೇ ನಸುನಗೆಯಂ ನಗುವುದು. ಎಲೌ, ಮನೋಹರಾಂಗಿಯೆ! ಮತ್ತೊಂದು ರಹಸ್ಯವೂ ಉಂಟು, ಏನೆನ್ನುವೆಯೋ? ನಿನ್ನ ಸಂಬಂಧಿಯಾದ ವರನು ನಿರ್ಗುಣನು ಲೌಕಿಕದ ಮಾತನ್ನರಿಯದೆ ದಿಗಂಬರನಾಗಿ ವಿಕಾರ ಲಕ್ಷಣದಿಂದ ಆವಾಗಲೂ ಸ್ಮಶಾನನಿಲಯನಾಗಿ, ಚರ್ಮಾಸ್ಥಿ ಉರಗಭೂಷಣನಾಗಿರುವನು. ಲೋಕದೊಳಾದೊಡೆ ರೋಗವರ್ಜಿತನಾದ ಪೂರ್ವೋಕ್ತ ಸಲ್ಲಕ್ಷಣ ಲಕ್ಷಿತನಾದವಂ ಯೋಗ್ಯನು. ಎಲೌ, ಪಾರ್ವತಿಯೇ! ಈ ತ್ರಿನೇತ್ರನಲ್ಲಿ ಪೂರ್ವೋಕ್ತವಾದ ಒಂದು ಲಕ್ಷಣವಾದರೂ ಇಲ್ಲವಲ್ಲ. ನೀನೇ

ವಿಚಾರಿಸಿ ನೋಡು ಛೀ ಛೀ !! ಈಗ ನಾನು ನಿನ್ನ ನೋಡಲು ಯೋಗ್ಯವಲ್ಲ, ಆಹಾಹಾ !! ಯಾವ ನಿನ್ನ ಮಾತಾಪಿತೃಗಳೆಂಬವರು ಇಂತು ಅಮಾರ್ಗಗತೆಯಾಗಿ ಬಾಲೆಯಾದ ಈ ಪ್ರಕಾರಮಾದ ನಿನ್ನನ್ನೇತಕ್ಕೆ ತಡೆಯಲರಿಯರೋ, ಅಂಥಾ ತಂದೆ ತಾಯಿಗಳೇ ನಿಂದ್ಯರು.

ಆಕಟಕಟ ! ಆ ರುದ್ರನು ಈ ಪೂರ್ವೋಕ್ತ ಪ್ರಕಾರಮಾಗಿರ್ದೊಡಂ, ಸಕಲಕಲಾ ಭಿಜ್ಞನೆಂದು ಮುನಿಗಳೆಲ್ಲರು ಜ್ಞಾನಾರ್ಥಮಾಗಿ ಈತನ ಉಪಾಸನಮಂ ಗೈಯುತಿರುವರು. ನೀನೂ ಸಹಾ ಅವರಂತಯೆ, ಮರುಳಾಗಿ ಆ ಮಾಯಾವಿನೋದಿಯಾದ ಶಿವನ ಕೈಯಲ್ಲಿ ಶಿಲುಕಿದೆ. ಎಲೌ, ಜಯೆವಿಜಯೆಯರೆಂಬ ಸಖಿಯರಿರಾ ! ನೀವಾದೊಡಂ ಈಕೆಗೆ ಬುದ್ಧಿಯಂ ಪೇಳಬೇಡವೆ? ಆದರೆ. ನಿನಗೊಂದು ಹಿತಮಂ ಪೇಳುವೆನು, ಅದನ್ನಾದರು ಕೇಳಿ ಸುಖದಿಂದಿರು ಏನೆಂದರೆ.

ಎಲೌ, ಪಾರ್ವತಿಯೆ ! ನಾನು ರುದ್ರನಿಗಿಂತಲು ಕಡೆಯಾದವನೋ ನೋಡು ? ವೃದ್ಧನಾದೊಡಂ ಗುಣವಂತನಾಗಿ ಶೀಲವಂತನು, ಸದಾಚಾರವುಳ್ಳವರಿಗೆ ಸಮ್ಮತನು, ಸಕಲ ವಿದ್ಯೆಗಳಲ್ಲಿಯುಂ ಈ ಲೋಕದಲ್ಲಿ ನನ್ನಂಥ ನಿಪುಣನಿಲ್ಲ. ನನಿಗಿಂತ ಮತ್ತೊಬ್ಬನು ಅಷ್ಟೈಶ್ವರ್ಯ ಸಂಪನ್ನನೂ ಇಲ್ಲ. ನನ್ನಂ ನೋಡುವಳಾಗು, ಆ ನಿರ್ಗುಣನಾದ ಶಿವನಂ ನೀನು ಭ್ರಮೆಯಿಂದ ಯಾಕೆ ಬಯಸುತಿರ್ದೆ ? ಎಲೌ, ಸುಂದರಾಂಗಿಯೆ ! ನಿನ್ನನ್ನು ಪ್ರಾರ್ಥಿಸುತ್ತೇನೆ. ಆ ತ್ರಿಯಂಬಕನು ಕುಬೇರಂಗೆ ಧನಿಕನೆಂದು ವೃಥಾ ಸ್ನೇಹಿತನಾದನು. ನಾನಾದರೋ ನನ್ನನ್ನಾಶ್ರೈಸಿದ ಜನರ್ಗೆಲ್ಲರ್ಗೆಯುಂ ಸ್ನೇಹಿತನು, ಧನಿಕರ್ಗೆಯುಂ ಧನಿಕನಾದ ನಾನು ನಿರಂತರದಲ್ಲಿಯು ಬಯಸಿದ ಇಷ್ಟಾರ್ಥಮಂ ಕೊಡುವೆನು. ಇದಲ್ಲದೆನ್ನ ಭಕ್ತರ ಮಂದಿರದಲ್ಲಿ ಕಾಮಧೇನುಗಳುಂ ಕಲ್ಪವೃಕ್ಷಂಗಳುಂ ನಿರಂತರದಲ್ಲಿಯುಂ ಇಹುದು. ಅದು ಕಾರಣದಿಂದಿಲ್ಲಿ ನೀನು ಸಮಸ್ತಮಂ ವಿಚಾರಿಸಿ ನನ್ನನ್ನು ವರಿಸು ತಪಸ್ಸಿನಿಂದ ನಿತ್ಯನಾದುದರಿಂ, ವೃದ್ಧನಾದೊಡಂ ಯೌವನಸ್ಥನೇ ಸರಿ. ಎಲೌ, ಪುಣ್ಯಶೀಲೆಯಾದ ಕನ್ನಿಕೆಯೆ ! ನನಗನ್ಯನಾದ ರುದ್ರನು ನಿರ್ಗುಣನಾದ ಕಾರಣದಿಂ, ವಾಕ್ಯದಿಂದಾದೊಡಂ ಆತನಂ ಬಹುಮಾನಮಂ ಮಾಡಬೇಡೆಂದೀಪ್ರಕಾರದಿಂ ನುಡಿವುತ್ತ ಮಂದಹಾಸಾಲಂಕೃತನಾಗಿ ವೃದ್ಧವಿಪ್ರವೇಷನಾದ ಈಶ್ವರನು, ಪಾರ್ವತೀದೇವಿಯ ಮುಖಮಂ ನೋಡಿ ನೋಡಿ ನಗುತಿದ್ದನು.

ಈ ಪೂರ್ವೋಕ್ತ ಪ್ರಕಾರಮಾದ ವೃದ್ಧವೇಷನ ವಾಕ್ಯಮಂ ಕಿವಿಯಲ್ಲಿ ಕೇಳ್ದು, ಪಾರ್ವತೀದೇವಿಯು ಕುಪಿತೆಯಾಗಿ ಶೀಘ್ರದಿಂ ಕಿವಿಗಳಂ ಮುಚ್ಚಿ,

ಕಾತನಂ ಹಿಂದಿಟ್ಟು ಸಖಿಯರಂ ಕುರಿತು, ಎಲೌ, ಸಖಿಯರಿರಾ! ನಮ್ಮ ತಪೋವನಕ್ಕೆ ಒಬ್ಬಾನೊಬ್ಬ ಅಸುರನು ವೃದ್ಧಬ್ರಾಹ್ಮಣ ವೇಷವಂ ತಳೆದು ಬಂದವನಾಗಿರಬಹುದು. ಹಾಗಲ್ಲದಿದ್ದೊಡೆ, ನಾನು ಪೂರ್ವದಲ್ಲಿ ಯಾವ ದುಷ್ಕರ್ಮವಂ ಮಾಡಿದೆನೊ ಆ ದುಷ್ಕಾರ್ಯವೇ ಮೂರ್ತಿಮತ್ತಾಗಿ ಈ ವಿಪ್ರರೂಪವಾಗಿ ವಿಘ್ನವು ಆರಿಂದ ನಿರ್ಮಿತವಾದುದೋ, ಎಲೌ, ಸಖಿಯೆ! ಮರಳಿ ನುಡಿಯಲಿಚ್ಛೈಸುತ್ತಿಹ ಈ ವಿಪ್ರನಂ ನಿವಾರಿಸಿ ಕಳೆ. ಆದರೆ, ಬುದ್ಧಿಹೀನನಾದಿವನು ಪರಮೇಶ್ವರನು ನಿರ್ಗುಣನೆಂದು ಇದೊಂದು ಮಾತ್ರವನ್ನೇ ಸರಿಯಾಗಿ ನುಡಿದಿರುವನು, ಯೇನೆಂದರೆ.

ಪರಶಿವನಿಗೆ ಪಾರ್ವತಿದೇವಿಯ ತಪೋನಿಷ್ಠೆಯನ್ನು ಸಖೀ ಗಣವು ತಿಳುಹುವಿಕೆ.

ಎಲೈ, ಮುನಿಗಳಿರಾ! ಅನಂತರದಲ್ಲಿ ಪಾರ್ವತಿಯು ಆ ವಿಪ್ರನಲ್ಲಿ, ಪ್ರೇಮದಿಂದ, ಕಾತರವಾದ ಚಿತ್ತಮಂ ಸಮಾಧಾನಂಗೈದು, ಜಯೆವಿಜಯೆಯರೆಂಬ ಸಖಿಯರೀರ್ವರಂ ಕುರಿತು ಸಂತಸದಿಂದ ಎಲೈ, ಸಖಿಯರಿರಾ! ನೀವೀರ್ವರು ನನ್ನ ತಪಸ್ಸಿನ ಕಾರಣವಂ ಪೇಳ್ವುದು. ಈ ವಿಪ್ರವರನು ತೇಜಸ್ವಿಯಾಗಿ ಅನೇಕ ಕಳೆಗಳೊಡಗೂಡಿದಾತನು, ಈ ವಿಪ್ರಂಗೆ ತನ್ನ ತಪೋವೃತ್ತಾಂತವನೆಲ್ಲಮಂ ಪೇಳ್ವುದೆಂದು ದೃಷ್ಟಿಸಂಜ್ಞೆಯಿಂದ ಸೂಚಿಸಿದವಳಾಗಲು ಆ ಸಖಿಯರೀರ್ವರುಂ ಆದಿಯಲ್ಲಿ ಪಾರ್ವತಿಗೆ ಶುಶ್ರೂಷೆಯಂ ಮಾಡುತ್ತ ಸ್ಥಿರವಾಗಿ ತಿಳಿದವರಾದ್ದರಿಂದ ತಮ್ಮ ಮುಖವನ್ನು ಆ ಪರಮೇಶ್ವರಂಗೆ ಅಭಿಮುಖಮಂ ಮಾಡಿ ಆ ದೇವಿಯ ವೃತ್ತಾಂತಮಂ ನುಡಿಯಲುದ್ಯೋಗಿಸಿದರದೆಂತೆನೆ:— ಎಲೈ, ತಂದೆಯಾದ ದ್ವಿಜಶ್ರೇಷ್ಠನೆ ನಿನ್ನೊಡನೆ ಈ ಬಾಲಕಿಯು ನುಡಿಯಲಾರದವಳಾದುದರಿಂ ನಾವೀರ್ವರು ನುಡಿಯಲು ಯೋಗ್ಯರಾಗುತ್ತೇವೆ. ನಮ್ಮಲ್ಲಿ ಕೃಪೆಗೈದು ನಮ್ಮ ವಾಕ್ಯಮಂ ಕೇಳ್ವುದು. ಅಪ್ರದಾನೊಂದು ಕಾರಣದಿಂದೀ ಪಾರ್ವತಿಯು ಶೋಭನವಾದ ತನ್ನ ದೇಹಮಂ ಕೃಶವಾಗಿ ಮಾಡಿದಳು. ನಿನ್ನಿಂದ ಬೆಸಗೊಳಲ್ಪಟ್ಟ ಈಕೆಯು ಹಿಮವಂತನ ಪುತ್ರಿಯು ರೂಪಲಾವಣ್ಯ ಸಂಪನ್ನೆಯಾಗಿ ಶೀಲಾಚಾರ ಗುಣಂಗಳ್ವೆರಸಿ ಸುಗಂಧಿಯಾದ ನಮ್ಮ ಸಖಿಯಾದ ಪಾರ್ವತೀದೇವಿಯು ಪುಷ್ಟಿವರ್ಧನನಾದ ಮೃತ್ಯುಂಜಯನಾದ ಅನಾದ್ಯಂತನಾದ ಸುಮಂಗಳನಾಗಿ ಅಜನಾಗಿ ಶಿವನಾದ ಯೌವನಸ್ಥನಾಗಿ ಸುಶ್ರೇಷ್ಠನಾದ. ಜಗದ್ವಂದ್ಯನಾಗಿ ಸರ್ವಮಂಗಳ ದಾಯಕನಾದ ತ್ರಿಯಂಬಕನಂ ನಿಗ ತಾನು ಸರ್ವಮಂಗಳೆಯಾಗಲೋಸುಗ ಜಗತ್ಪತಿಯೇ ನನಗೆ ಪತಿಯಾಗಬೇಕೆಂದಿಚ್ಛೈಸಿ, ತಂದೆಯ ಮನೆಯಲ್ಲಿ ನಿಮ್ಮಂಥ ದೊಡ್ಡವರ ಮುಖದಿಂದ ಪ್ರತ್ಯ

ಗನು ಪುರಾಣಂಗಳಂ ತಿಳಿದು, ಈಶ್ವರನ ಪಾದಪದ್ಮಮಂ ಧ್ಯಾನಿಸುತ, ಸಜ್ಜನರು ಯಾವ ಸುಖಮಂ ಪಡೆವರೋ ಆ ಸುಖಮಂ ಪಡೆಯದೆ, ಧ್ಯಾನದೃಷ್ಟಿಯಿಂದಾತನನಾಮ ಜಪದಲ್ಲಿ ಆಸಕ್ತೆಯಾಗಿ, ಆತನ ಕಥಾಶ್ರವಣದಲ್ಲಿ ಅಭಿಮುಖ್ಯಮನೈದಿ, ಜಗವೆಲ್ಲಮಂ ತನ್ಮಯಮಾಗಿ ನೋಡುತ್ತಾ, ಪರಮೇಶ್ವರನಲ್ಲಿ ಉತ್ತರೋತ್ತರಮಾದ ಬಹಳ ಲವಲವಿಕೆಯನ್ನೈದಿದಳು.

ಎಲೈ, ಬ್ರಾಹ್ಮಣೋತ್ತಮನೆ! ಈಕೆಯು ದಿವದಲ್ಲಿ ಸಂತಾಪದಿಂದ ತಣ್ಪಾದ ಜಲಸೂತ್ರ ಗೃಹದಲ್ಲಿರುವಳು. ರಾತ್ರಿಯಲ್ಲಿ ತಳಿರ ಹಾಸಿಗೆಯಲ್ಲಿ ಕುಳ್ಳಿರ್ದು ಯೆಚ್ಚರದೊಳಿರ್ದೊಡಂ, ಅಪರ ರಾತ್ರಿಯಲ್ಲಿ ಕ್ಷಣಮಾತ್ರವು ನಿದ್ರೆಯಂ ಪಡೆದು, ಸ್ವಪ್ನದಲ್ಲಿ ಪತಿಯಾದ ಶಿವನಂ ಮರಳಿ ಮರಳಿ ಕಂಡು ಎಚ್ಚತ್ತು ಇಂತು ಕಳವಳಿಸುತ್ತಿರುವಳು. ಎಲೈ, ಪ್ರಾಣಕಾಂತನೆ! ಯೆಲ್ಲಿಗೆ ಪೋಗುತ್ತಿದ್ದಿ, ಯೆಂದು ನುಡಿವುತ್ತ ಆತನ ಕೈಗಳಂ ಪಿಡಿದು, ಎಲೈ, ಶಿವನೆ! ಭೂಮ್ಯಾಕಾಶಂಗಳಂ ವ್ಯಾಪಿಸಿಹ ನಿನ್ನನ್ನು, ಸಕಲ ವೇದಾಂತಗಳುಂ ವಿಷ್ಣು ಮೊದಲಾದವರುಂ ಪರಿಪೂರ್ಣನೆಂದು ಪೇಳುತ್ತಿರುವರಲ್ಲವೆ, ಹೀಗಿರುವಲ್ಲಿ ಯೆಲ್ಲಿ ಹೋಗುವೆ? ಬೇಡಬೇಡ, ನಿಲ್ಲು ನಿಲ್ಲು. ಎಲೈ, ಶಿವನೇ! ನೀನು ಭಕ್ತಿ ಭಾವಮಂ ವೆರಸಿರ್ಪ ಜನಮಂ ಎಂತು ತಿಳಿಯದಿದ್ದೀ, ಹಾಹಾ!! ಏನಾಶ್ಚರ್ಯವು, ಶಿವಶಿವ!! ಅವುದಾನೊಂದು ಕಾರಣದಿಂದ ಈ ಜನವುಂ, ಜಗಂಗಳಿಗೆ ಅನುಗ್ರಹ ಕರನಾದ ಈಶ್ವರನೆಂತು ಅನುಗ್ರಹಿಸದಿರುವನು, ಯೆಂದು ಗಿರಿರಾಜ ಪುತ್ರಿಯು ಶಿವನ ಸಮಾಗಮಮಂ ಬಯಸುತ್ತ, ತಾನು ಬಯಸಿದ ಸಮಾಗಮವುಂ ಪಡೆಯದೆ ಇರ್ಪುದರಿಂದ, ಈ ತಂಪೆತಾಯಿಗಳೀರ್ವರ್ಗೆಯುಂ ಈ ವೃತ್ತಾಂತಮಂ ನುಡಿದು, ಸಖಿಯರಾದ ನಮ್ಮೊಡವೆರಸಿ ತಪವಂ ಮಾಡಲೋಸುಗ ಈ ತಪೋವನಮಂ ಪೊಕ್ಕು ತಪಮನಾಚರಿಸುತ್ತ ಈ ಬಿತ್ತಿ ಬೆಳೆಸಿದ ವೃಕ್ಷಂಗಳ ಸೊಸಿಗಳೆಲ್ಲವು ಕ್ರಮಕ್ರಮವಾಗಿ ದೊಡ್ಡ ದೊಡ್ಡ ಮರಗೆಳಾಗಿ ನಿರಂತರದಲ್ಲಿಯೂ ಪುಷ್ಪ ಫಲಾಢ್ಯಂಗಳಾಗಿರುವವು, ಇವುಗಳಂ ನೋಡುವನಾಗು.

ಎಲೈ, ತಂದೆಯೆ! ಈ ಉಮೆಯು ಸಾಕಿದ ಯೆರಳೆಗಳು ಪುತ್ರ ಪೌತ್ರಾದಿಗಳ್ವೆರಸಿ ಬಹು ಸಮೂಹಾನ್ವಿತಂಗಳಾದವು. ಹಾಗಾದೊಡಂ ಸರ್ವ ಪ್ರಭುವಾಗಿ, ಮಹಾ ಸರ್ಪಭೂಷಣನಾದ ಶಂಭುವಾದ ಪರಿಪೂರ್ಣನಾದ ಸದಾಶಿವನು ಈಕೆಗೆ ಪ್ರಸನ್ನ ನಾಗಲಿಲ್ಲವು. ಈಗಲೂ ಆ ಶಿವನು ಪ್ರಸನ್ನನಾಗದೆ ಅತ್ಯದ್ಭುತಮಂ ಮಾಡುತ್ತಿರುವ ಸದುಕಾರಣದಿಂ ನೀನು ಸಹಸ್ರ ಚಂದ್ರದರ್ಶಿಯಪ್ಪುದರಿಂದೀಪಾರ್ವತಿಗೆ ಶೀಘ್ರದಲ್ಲಿ ಶಿವನು ಪ್ರಸನ್ನನಪ್ಪಂತೆ ಅನುಗ್ರಹಿಪು

ದೆಂದು, ಆ ಪಾರ್ವತೀದೇವಿಗೆ ಪ್ರಿಯಸಖಿಯರಾದ ಜಯೆವಿಜಯೆಯರೀರ್ವರುಂ ನುಡಿದು ತೂಷ್ಣೀಂಭೂತರಾದರು.

ಬಳಿಕ ಭಗವಂತನಾದ ಆ ವೃದ್ಧವಿಪ್ರನು ಕೈಗಳಂ ಪೊಯ್ದು ನಗುತ ಪಾರ್ವತಿಯ ಮುಖಮಂ ನೋಡಿ ಯಿಂತೆಂದನು, ಎಲೌ ಗಿರಿರಾಜಪುತ್ರಿಯೆ! ನಿನ್ನ ಸಖಿಯರೀರ್ವರುಂ ಪೇಳ್ದುದು ಯಥಾರ್ಥವೊ? ಎಂದು ನಿರೂಪಿಸಲು, ಆ ವಾಕ್ಯಮಂ ಕೇಳ್ದು, ಜಗನ್ಮಾತೆಯಾದ ಗಿರಿರಾಜ ಪುತ್ರಿಯು, ಎಲೈ ಸರ್ವಜ್ಞನಾಗಿ ಮಹಾಮತಿಯಾದ ತಂದೆಯಾದ ವೃದ್ಧ ವಿಪ್ರನೆ! ದೇವತೆಗಳಿಂದಲೂ ಅಸಾಧ್ಯಮಾದ ಆ ಪರಶಿವನ ಸಾನ್ನಿಧ್ಯಮನ್ನೇ ಪ್ರಾರ್ಥಿಸುತಿದ್ದೇನೆ. ಈ ತಪಸ್ಸು ಶಿವಸಾನ್ನಿಧ್ಯಪ್ರಾಪ್ತಿ ಸಾಧನವಲ್ಲವೊ; ಇದೇ ಎನ್ನ ಮನೋರಥವು, ಆಹಾಹಾ!! ಈ ಮನೋರಥದ ಗತಿಯು ಎಂದಿಗೂ ಶಾಂತವಾಗಲಿಲ್ಲ, ಶಿವಶಿವ!! ಮೂರ್ಖೆಯಾದ ಬಾಲಕಿಯಾದ ನಾನೆತ್ತ? ವಾಙ್ಮನಗೋಚರನಾದ ಶಿವನೆಲ್ಲಿ! ಹಾಗಾದೊಡಂ ಈಶ್ವರನು ಭಕ್ತವತ್ಸಲನೆಂದು ವಿದ್ವಾಂಸರು ನುಡಿವರು, ಅದು ಕಾರಣದಿಂದ ನಾನು ಉಪಾಸಿಸುತ್ತಲಿದ್ದೇನೆ. ಎಲೈ ವಿಪ್ರನೆ! ನನಗೆ ಪರಮೇಶ್ವರನು ಪ್ರಸನ್ನನಪ್ಪಂತೆ ನೀನಾದರೂ ಅನುಗ್ರಹಿಪುದೆಂದು ನುಡಿದ ಪಾರ್ವತೀದೇವಿಯ ವಾಕ್ಯಮಂ ಕೇಳ್ದು, ಅಡಿಗಡಿಗೆ ತಲೆದೂಗುತ್ತಾ! ಆಹಾಹಾ!! ಕಷ್ಟ ಕಷ್ಟವು!!! ಎಲೌ ಗಿರಿರಾಜಪುತ್ರಿಯೆ! ಅದೃಶ್ಯನಾಗಿ ಅನಿರ್ದೇಶ್ಯನಾದ ಲೋಕವಂದಿತನಾದ ದೇವನಂ ಬಯಸುತ್ತಿರುವೆ, ಹರಹರ!! ಆವಾತನಿಂದ ಪ್ರೇರಿತಮಾಗಿ ಈ ಪ್ರಕಾರಮಾದ ಬುದ್ಧಿಯು ನಿನಗೆ ಪುಟ್ಟಿತೊ? ನಾನೀ ವೃತ್ತಾಂತಮಂ ಮನದಿಂದಲಾದೊಡಂ ಒಪ್ಪುವುದಿಲ್ಲವು. ಏಕೆಂದರೆ, ಸರ್ವಮಂಗಳೆಯಾಗಿ ಸರ್ವಾನವದ್ಯೆಯಾದ ನಿನ್ನನ್ನೂ, ಸ್ಮಶಾನ ನಿಲಯನಾಗಿ ಸರ್ಪಭೂಷಣನಾದ, ಜಟಾಧಾರಿಯಾಗಿ ಚರ್ಮಾಸ್ಥಿ ಭೂಷಣನಾದ, ನಿರಂತರದಲ್ಲಿಯುಂ ಭಯಂಕರನಾದ ಭೂತಪ್ರೇತ ಪಿಶಾಚಾದಿಗಳಿಂ ಪರಿವೃತನಾದ ರುದ್ರನನ್ನೂ, ಸೂಕ್ಷ್ಮಬುದ್ಧಿಯಿಂದ ವಿಚಾರಿಸಿ, ನನ್ನ ಮನವು ಬಹು ಖೇದವನ್ನೈದುವದು, ಎಲೌ ಕೃಶಾಂಗಿಯೆ! ಕೇಳು; ಲೋಕದೊಳು ಮೊದಲ್ಗೊಂಡು ದಂಪತಿಗಳೀರ್ವರುಂ ಕೋಮಲಾಕೃತಿಗಳಾಗಿರಬೇಕು, ಭದ್ರಾಸನಾರ್ಹೆಯಾದ ನೀನು ಆ ಅಪಸ್ಮಾರಿಯಾಗಿರ್ಪ ಹರನಂ ವೆರಸಿ ಹಸೆಯ ಮಣೆಯಲ್ಲಿ ಕುಳ್ಳಿರ್ಪುದೆಂತು? ಎಲೌ ಶೋಭನಾಂಗಿಯೆ! ಪಟ್ಟೆಯ ಸೂತ್ರದ ಕಂಕಣ ಬಂಧನಾರ್ಹೆಯಾದ ನೀನು ಫೂತ್ಕಾರಸಹಿತಮಾದ ಸರ್ಪನ ಶೀತಳ ಶರೀರ ಬಂಧನಮನೆಂತು ಸೈರಿಸುವೆ? ಅಕಟಕಟ!! ಲೋಕದಲ್ಲಿ ಸಮಸ್ತ ಸ್ತ್ರೀಯರಿಗು ಸುವರ್ಣಮಯಮಾದ ಮಾಂಗಲ್ಯ ತಂತುವಿನಿಂದ ನಿರ್ಮಿತಮಾದ ಮಂಗಳ ಸೂತ್ರವು ಪ್ರಸಿದ್ಧವಾಗಿರುವ

ದಲ್ಲವೆ; ಹೀಗಿರುವಲ್ಲಿ ಈ ಶೂಲಪಾಣಿಯು ನಿನ್ನ ಕಂಠದಲ್ಲಿ ಮಂಡಲಾಕಾರ ಮಾಗಿರ್ಪ ಕೃಷ್ಣಸರ್ಪವಂ ಕಟ್ಟುವನೆ, ಅದನ್ನೆಂತು ಧರಿಸುವೆ? ಎಲೌ ಶೋಭನಾಂಗಿಯೆ! ಲೋಕದೊಳು ವಿವಾಹಕ್ಕೆ ಯೋಗ್ಯಳಾದ ವಧುವು ವರನಿಂದ ಕೊಡಲ್ಪಟ್ಟ ಪಟ್ಟೆಯ ಶೀರೆ ಮೊದಲಾದ ದುಕೂಲ ವಸ್ತ್ರವನ್ನುಡುವಳು, ನೀನು ಸ್ಮರಿಸುತಿರ್ಪ ಸ್ಮರಹರನಾದೊಡೆ ನಿನಗೀಯುವ ದುರುಳ ಸಿಹ್ಮ ಚರ್ಮವನ್ನಾದೊಡಂ ವ್ಯಾಘ್ರಚರ್ಮವನಾದೊಡಂ ಉಡಬೇಕು. ಕಡು ಕಠಿಣವಾದ ಆ ಚರ್ಮಗಳನೆಂತುಡುವೆ? ಎಲೌ ಬಾಲೆಯೆ! ಲೋಕದಲ್ಲಿಯೆಲ್ಲಾ ಕಡೆಯಲ್ಲಿಯುಂ ದಂಪತಿಗಳು ಯಜ್ಞೇಶ್ವರನಲ್ಲಿ ಲಾಜಾಹೋಮವಂ ಮಾಡಿ ಅಗ್ನಿ ಪ್ರದಕ್ಷಿಣವಂ ಮಾಡುವರಲ್ಲವೆ. ನೀನಾದೊಡೆ ಆ ಶೂಲಿಯೊಡಗೂಡಿ ಶ್ಮಶಾನಾಗ್ನಿಯಂ ಪ್ರದಕ್ಷಿಣವಂ ಮಾಡಬೇಕು, ಇಂತಿರುವಲ್ಲಿ ಆ ಪುರಹರನಂ ವರಿಸಿ ನೀನೆಂತು ಸುಖಮನ್ನೈದುವಿಯೋ, ನಾನು ಪೇಳಲಾರೆನು, ಇದಕ್ಕೆ ನಿನ್ನ ಜನನೀಜನಕರೆಂತು ವೊಡಂಬಟ್ಟರು? ಆಹಾಹಾ!! ಹರನೆ ಅರಿವನು, ಯೆಂದು ವೃದ್ಧವಿಪ್ರಂ ಪಾರ್ವತೀದೇವಿಯಂ ಗಡಗಡನೆ ನಡುಗಿಸುವಂದದಿ ನುಡಿಯುತ್ತಿರ್ದನೆಂದು, ಸೂತಂ ಶೌನಕಾದಿಗಳ್ಗೆ ನಿರೂಪಿಸಿದ ನೆಂಬಲ್ಲಿಗೆ ಕರ್ಣಾಟಭಾಷಾ ವಿರಚಿತಮಾದ, ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಶಿವರಹಸ್ಯ ಖಂಡದೊಳು ಸಂಭವಕಾಂಡದೋಳ್ ಹದಿಮೂರನೆಯ ಅಧ್ಯಾಯವು ಸಂಪೂರ್ಣಂ.

ಹದಿನಾಲ್ಕನೆಯ ಅಧ್ಯಾಯವು.

ವೇಷಾಂತರದ ವೃದ್ಧಬ್ರಾಹ್ಮಣನು ಪರಶಿವೆಯ ಗೆಳತಿಯರೊಂದಿಗೆ ಪರಶಿವನನ್ನು ತೆಗಳುವಿಕೆ.

ಸೂತರ ವಚನವು:— ಎಲೈ ಮುನಿಗಳಿರಾ! ಕೇಳಿರಿ; ಮತ್ತಮಾ ವೃದ್ಧರೂಪವಂ ತಳೆದ ಪರಮೇಶ್ವರನಾ ಪಾರ್ವತೀದೇವಿಯಂ ಕುರಿತು, ಎಲೌ ಗಿರಿರಾಜನಂದಿನಿಯೆ! ಲೋಕದಲ್ಲಿ ವಿವಾಹ ಕಾಲದೊಳು ವಧೂವರರೀರ್ವರುಂ "ಮತ್ತಗಜವನೇರಿ, ಮೆರವಣಿಗೆ" ಯೆಂಬ ಮಹೋತ್ಸವವಂ ಮಾಡಿಕೊಂಡು ತೆರಳುವಾಗ ಬ್ರಾಹ್ಮಣರು ಸ್ವಸ್ತಿವಾಚನ ಸೂಕ್ತಂಗಳಂ ಜಪಿಸುತ್ತಿರಲಾಗಿ, ಆ ದಂಪತಿಗಳನೀರ್ವರಂ ಮಂಗಳಪಾಠಕರು ಸ್ತುತಿಸುವರಲ್ಲವೆ? ಮುದಿಯೆತ್ತನೇರಿ ಭೂತಭೇತಾಳ ಸೇವಿತರಾದ ನಿಮ್ಮ ನೀರ್ವರಂ ನೋಡಿ, ಜನಸಮೂಹವು ನೋಡಿದ ಮಾತ್ರದಿಂದಲೇ ನಸುನಗೆಯಂ ನಗುವುದು. ಎಲೌ ಮನೋಹರಾಂಗಿಯೆ! ಮತ್ತೊಂದು ರಹಸ್ಯವೂ ಉಂಟು, ಏನೆನ್ನುವೆಯೊ? ನಿನ್ನ ಸಂಬಂಧಿಯಾದ ವರನು ನಿರ್ಗುಣನು, ಲೌಕಿಕಮಾತ್ರನ್ನರಿಯದೆ ದಿಗಂಬರನಾಗಿ ವಿಕಾರ

ಲಕ್ಷಣದಿಂದ ಆವಾಗಲೂ ಸ್ಮಶಾನ ನಿಲಯನಾಗಿ, ಚರ್ಮಾಸ್ಥಿ ಉರಗಭೂಷಣನಾಗಿರುವನು. ಲೋಕದೊಳಾದೊಡೆ ರೋಗವರ್ಜಿತನಾದ ಪೂರ್ವೋಕ್ತಲಕ್ಷಣಲಕ್ಷಿತನಾದವಂ ಯೋಗ್ಯನು. ಎಲೌ ಪಾರ್ವತಿಯೆ! ಈ ತ್ರಿನೇತ್ರನಲ್ಲಿ ಪೂರ್ವೋಕ್ತವಾದ ವೊಂದು ಲಕ್ಷಣವಾದರೂ ಇಲ್ಲವಲ್ಲ, ನೀನೇ ವಿಚಾರಿಸಿ ನೋಡು, ಛೀ ಛೀ!! ಈಗ ನಾನು ನಿನ್ನನ್ನು ನೋಡಲು ಯೋಗ್ಯವಲ್ಲ; ಆಹಾಹಾ!! ಯಾವ ನಿನ್ನ ಮಾತಾಪಿತೃಗಳೀರ್ವರುಂ ಇಂತು ಅಮಾರ್ಗಗತೆಯಾಗಿ ಬಾಲೆಯಾದ ಈ ಪ್ರಕಾರವಾದ ನಿನ್ನನ್ನು ತಡೆಯಲರಿಯರೊ; ಅಂಥಾ ತಂದೆ ತಾಯಿಗಳೇ ನಿಂದ್ಯರು. ಅಕಟಕಟ ಆ ರುದ್ರನು ಈ ಪೂರ್ವೋಕ್ತಪ್ರಕಾರನಾಗಿರ್ದೊಡಂ ಸಕಲ ಕಲಾಭಿಜ್ಞನೆಂದು ಮುನಿಗಳೆಲ್ಲರು ಜ್ಞಾನಾರ್ಥವಾಗಿ ಈತನ ಉಪಾಸನಂಗೈಯುತ್ತಿರುವರು. ನೀನೂ ಸಹ ಅವರಂತೆಯೆ ಮರುಳಾಗಿ ಆ ಮಾಯಾವಿನೋದಿಯಾದ ಶಿವನ ಕೈಯಲ್ಲಿ ಶಿಲುಕಿದೆ ಎಲೌ ಜಯ ವಿಜಯೆಯರೆಂಬ ಸಖಿಯರಿರಾ! ನೀವಾದೊಡಂ ಈಕೆಗೆ ಬುದ್ಧಿಯಂ ಪೇಳಬೇಡವೆ? ಆದರೆ, ನಿನಗೊಂದು ಹಿತವಂ ಪೇಳುವೆನು ಅದನ್ನಾದರು ಕೇಳಿ ಸುಖದಿಂದಿರು, ಏನೆಂದರೆ, ಪಾರ್ವತಿಯೆ! ನಾನು ರುದ್ರನಿಗಿಂತಲು ಕಡಮೆಯಾದವನೋ ನೋಡು, ನಾನು ವೃದ್ಧನಾದೊಡಂ ಗುಣವನ್ನಾಗಿ ಶೀಲವಂತನು ಸದಾಚಾರವುಳ್ಳವರಿಗೆ ಸಮ್ಮತನು, ಸಕಲ ವಿದ್ಯೆಗಳಲ್ಲಿಯುಂ ಈ ಲೋಕದಲ್ಲಿ ನನ್ನಂಥ ನಿಪುಣನಿಲ್ಲ. ನನಗಿಂತ ಮತ್ತೊರ್ವನು ಅಷ್ಟೈಶ್ವರ್ಯ ಸಂಪನ್ನನೂ ಇಲ್ಲ, ನನ್ನಂ ನೋಡುವಳಾಗು, ಆ ನಿರ್ಗುಣನಾದ ಶಿವನಂ ನೀನು ಭ್ರಮೆಯಿಂದ ಏಕೆ ಬಯಸುತಿರುವೆ?

ಎಲೌ ಸುಂದರಾಂಗಿಯೆ! ನಿನ್ನನ್ನು ಪ್ರಾರ್ಥಿಸುತ್ತೇನೆ, ಆ ತ್ರಿಯಂಬಕನು ಕುಬೇರಂಗೆ ಧನಿಕನೆಂದು ವೃಥಾ ಸ್ನೇಹಿತನಾದನು. ನಾನಾದರೋ ನನ್ನನಾಶ್ರೈಸಿದ ಜನರ್ಗೆಲ್ಲರ್ಗೆಯುಂ ಸ್ನೇಹಿತನು, ಧನಿಕರ್ಗೆಯುಂ ಧನಿಕನಾದ ನಾನು ನಿರಂತರದಲ್ಲಿಯು ಬಯಸಿದ ಇಷ್ಟಾರ್ಥವುಂ ಕೊಡುವೆನು. ಇದಲ್ಲದೆನ್ನ ಭಕ್ತರ ಮಂದಿರದಲ್ಲಿ ಕಾಮಧೇನುಗಳುಂ ಕಲ್ಪವೃಕ್ಷಂಗಳುಂ ನಿರಂತರದಲ್ಲಿಯುಂ ಇಹುದು. ಅದುಕಾರಣದಿಂದಿಲ್ಲಿ ನೀನು ಸಮಸ್ತವುಂ ವಿಚಾರಿಸಿ ನನ್ನನ್ನು ವರಿಸು. ನಾನು ತಪಸ್ಸಿನಿಂದ ನಿತ್ಯನಾದುದರಿಂ, ವೃದ್ಧನಾದೊಡಂ ಯೌವನಸ್ಥನೇಸರಿ, ಎಲೌ ಪುಣ್ಯಶೀಲೆಯಾದ ಕನ್ನಿಕೆಯೆ! ನನಗೆ ಅನ್ಯನಾದ ರುದ್ರನು ನಿರ್ಗುಣನಾದ ಕಾರಣದಿಂ, ವಾಕ್ಯದಿಂದಾದೊಡಂ ಆತನಂ ಬಹುಮಾನವುಂ ಮಾಡಬೇಡೆಂದೀ ಪ್ರಕಾರದಿಂ ನುಡಿವುತ್ತ ಮಂದಹಾಸಾಲಂಕೃತನಾಗಿ ವೃದ್ಧವಿಪ್ರವೇಷನಾದ ಈಶ್ವರನು, ಪಾರ್ವತೀದೇವಿಯ ಮುಖವುಂ ನೋಡಿನೋಡಿ ನಗುತಿದ್ದನು.

ಈ ಪೂರ್ವೋಕ್ತಪ್ರಕಾರವಾದ ವೃದ್ಧವೇಷನ ವಾಕ್ಯಮಂ ಕಿವಿಯಲ್ಲಿ ಕೇಳ್ದು, ಪಾರ್ವತೀದೇವಿಯು ಕುಪಿತೆಯಾಗಿ ಶೀಘ್ರದಿಂ ಕಿವಿಗಳಂ ಮುಚ್ಚಿ, ಈತನಂ ಹಿಂದಿಟ್ಟು ಸಖಿಯರಂ ಕುರಿತು, ಎಲೌ ಸಖಿಯರಿರಾ! ನಮ್ಮ ತಪೋವನಕ್ಕೆ ಒಬ್ಬಾನೊಬ್ಬ ಅಸುರನು ವೃದ್ಧ ಬ್ರಾಹ್ಮಣ ವೇಷಮಂ ತಳೆದು ಬಂದವನಾಗಿರಬಹುದು. ಹಾಗಲ್ಲದಿದ್ದೊಡೆ, ನಾನು ಪೂರ್ವದಲ್ಲಿ ಯಾವ ದುಷ್ಕರ್ಮವಂ ಮಾಡಿದೆನೊ? ಆ ದುಷ್ಕಾರ್ಯವೇ ಮೂರ್ತಿಮತ್ತಾಗಿ ಈ ವಿಪ್ರರೂಪವಾಗಿ ವಿಘ್ನವು ಆರಿಂದ ನಿರ್ಮಿತವಾದುದೊ? ಎಲೌ ಸಖಿಯೆ! ಮರಳಿ ನುಡಿಯಲಿಚ್ಛೈಸುತ್ತಿಹ ಈ ವಿಪ್ರನಂ ನಿವಾರಿಸಿ ಕಳೆ, ಆದರೆ ಈ ಬುದ್ಧಿಹೀನನಾದವನು ಪರಮೇಶ್ವರನು ನಿರ್ಗುಣನೆಂದಿದೊಂದುಮಾತ್ರ ಸರಿಯಾಗಿ ನುಡಿದನು ಏನೆಂದರೆ, ಗುಣತ್ರಯಮಾರ್ಗವನ್ನತಿಕ್ರಮಿಸಿ, ತಪಸ್ಸಿನಕಡೆಯಲ್ಲಿ ಪ್ರತಿಷ್ಠಿತನಾಗಿ, ಆದಿತ್ಯವರ್ಣನಾಗಿ ಭಗವಂತನಾದ ಶಿವನು ನಿರ್ಗುಣನೆಂಬುದು ಯಥಾರ್ಥವೆಸರಿ ಎಂದು ನುಡಿದು ಆ ವಿಪ್ರನಂ ಕುರಿತು, ಎಲೈ ವೃದ್ಧನೆ! ವೈತ್ಯದಿಂದಾಕ್ರಾಂತವಾದುದರಿಂ ಬುದ್ಧಿಹೀನನಾದುದರಿಂದಲುಂ ನೀನು ಪೇಳಿದುದೆಲ್ಲವುಂ ಅಂತಿರಲಿ; ಆವ ಪರಮೇಶ್ವರನ ಆದ್ಯಂತಂಗಳನ್ನು ಕ್ರಮದಿಂ ಬ್ರಹ್ಮನೂ ವಿಷ್ಣುವೂ ಕಾಣದೇ ಹೋದರೊ, ಅಂಥಾ ಈ ಶಿವನ ಮಹಿಮಾಲೇಶಮಂ ಬಲ್ಲವನಾರು? ನೀನು ವೃದ್ಧನಾದುದರಿಂದಲೇ ಆ ಜಗದೀಶ್ವರನ್ನೆಂತು ತಿಳಿಯುವೆ? ಎಂದು ನುಡಿದು ಎಲೌ ಸಖಿಯೆ! ನೆರೆತ ಕೂದಲಿಂದ ವೃದ್ಧನಾದೀತನು ಮರಳಿಯುಂ ಏನೋ ನುಡಿಯಲಿಚ್ಛೈಸಿ ಬರುತಿರುವನು. ಚಲಿಸುತ್ತಿಹ ತುಟಿಗಳುಳ್ಳವನಪ್ಪುದರಿಂ ಈತನಂ ನಿವಾರಿಸಿ ಕಳುಹಿಸು. ಅವಿವೇಕಿಯಾದ ವೃದ್ಧನೆಲ್ಲಿ? ಸರ್ವಜ್ಞನಾದ ಶಿವನೆತ್ತ? ಈ ವಿಪ್ರನು ವೃದ್ಧನಾದೊಡಂ ಆತ್ಮ ವಿವೇಕ ಶೂನ್ಯನಾದುದರಿಂ ಪೋಗಿಯು, ಈತನು ಸಾಹಸಿಯಪ್ಪುದರಿಂ ಪೋಗದಿರುವನು. ಬಲವಂತವಲ್ಲಿಯಾವರೂ ಈತನಂ ನೂಕಿದವಾದೊಡೆ ಮರಣವನ್ನೈದುವನು. ನಾನಾದೊಡೆ ಈತನ ಮುಂದುಗಡೆಯಲ್ಲಿರಲಾರೆನು. ಅದುಕಾರಣದಿಂದೀ ಸ್ಥಲಮಂ ಬಿಟ್ಟು ಪೋಪೆನೆಂದು ನುಡಿದು, ಕುಪಿತೆಯಾಗಿ ಪಾರ್ವತೀದೇವಿಯು ಪರಾಙ್ಮುಖಿಯಾಗಿ ಪೋಗಲುದ್ಯೋಗಿಸುತ್ತಿರೆ,

ಪ್ರಚ್ಛನ್ನವೇಷದ ಪರಶಿವನು ಪರಶಿವಗೆ ಸ್ವಸ್ವರೂಪ ದೋರುವಿಕೆ.

ಶಿವನು ಪ್ರಸನ್ನನಾಗಿ ಮುಗುಳ್ನಗೆ ವೆರಸಿದ ಮುಖಾರವಿಂದದಿಂ ನೀಲಕಂಠನಾಗಿ ವಿರೂಪಾಕ್ಷನಾದ, ನಿತ್ಯ ಮನೋಹರನಾಗಿ, ನಿತ್ಯವಾದ ದೇವತೆಗಳ ಕರಂಗಳಿಂ ಕರೆಯಲ್ಪಟ್ಟ ಪುಷ್ಪವೃಷ್ಟಿಯಿಂದ ಮನೋಹರವಾದ ಸ್ವಸ್ವರೂಪಮನ್ನಾಶ್ರೈಸಿ, ಆ ಪಾರ್ವತೀದೇವಿಯ ಮುಂದುಗಡೆಯಲ್ಲಿ ಪ್ರತ್ಯಕ್ಷನಾಗಿ,

ಎಲೌ, ಪಾರ್ವತಿಯೆ! ನಿನ್ನ ತಪಸ್ಸಿನಿಂದೀಗ ನಿನ್ನವನಾದ ಹರನು ಬಂದಿರುವೆನು. ಉತ್ತಮವಾದ ಆವ ವರವನ್ನೀಯಲಿ? ಪೇಳೆಂದು ನುಡಿಯುತ್ತಿರಲಾಗಿ, ಆ ಪಾರ್ವತೀದೇವಿಯು ತಕ್ಷಣದಲ್ಲಿಯೇ, ತಪೋನಿಯಮದಿಂದುಂಟಾದ ಕ್ಲೇಶಮಂ ತ್ಯಜಿಸಿ "ಕಂಪನಭಯ, ರೋಮಾಂಚ" ಮಪ್ಪಂತು ಹರುಷದಿಂ ಗದ್ಗದಮಾದ ವಾಕ್ಕಿನಿಂದ, ಕೈಗಳಂ ಮುಗಿದುಕೊಂಡು ಸ್ತುತಿಗೈಯಲುದ್ಯೋಗಿಸಿದಳದೆಂತೆನೆ:— ಶಿವಶಿವ!! ಆವನೋರ್ವನಂ ವೇದಾಂತ ವಿಚಕ್ಷಣರು ಪುರುಷನೆಂದು ಪೇಳುವರೋ, ಮತ್ತೆ ಆವನೋರ್ವನು ಭೂಮ್ಯಾಕಾಶ ರಂಧ್ರಂಗಳಂ ವ್ಯಾಪಿಸಿರುವನೋ, ಆ ಹರನಾದ ನಿನಗೆ ನಮಸ್ಕಾರವು, ಹರಹರ! ಆವನೋರ್ವನ ಪಾದಕಮಲಧ್ಯಾನದಿಂ ನಿವೃತ್ತ ಕಲ್ಮಷರಾದ ಪುರುಷರು ನಿರ್ಭಯರಾಗಿ ಮುಕ್ತಿಯನ್ನೈದುವರೋ, ಮತ್ತು ಆವನೋರ್ವನ ಕೃಪಾದೃಷ್ಟಿಯಿಂದ ನೋಡಲ್ಪಟ್ಟವರ್ಗೆ, ಮೋಹಮುಂ ದುಷ್ಕೃತಿಯುಂ ಇಲ್ಲದೆ ಅವರೇ ಜಗದ್ವಂದ್ಯರಾಗುವರೋ, ಆ ಪ್ರಕಾರಮಾದೀಶ್ವರನೆ! ನಿನ್ನನ್ನಾಶ್ರೈಸಿದೆನು. ಆವನೋರ್ವನಂ, ಜಿತನಿದ್ರರಾಗಿ ಜಿತಶ್ವಾಸರಾದ ಶಾಂತರಾದ ಭಕ್ತರು ಜ್ಯೋತಿರ್ಮಯನೆಂದು ತಿಳಿಯುವರೋ, ಆ ರೂಪನಾದ ಈಶ್ವರನೆ! ನಿನ್ನನ್ನಾಶ್ರೈಸಿದೆನು. ನನ್ನನ್ನಂಗೀಕರಿಸಿ ಅನುಗ್ರಹಿಸು, ಎಲೈ ಮಹಾದೇವನೆ! ನೀನು ಜಗತ್ರಯದಲ್ಲಿಯುಂ ಭಕ್ತರ ಭಯಮಂ ಪರಿಹರಿಸುತ್ತಿದ್ದೀಯೆಂದು ಪ್ರಸಿದ್ಧನಾದುದರಿಂ ನಾನು ಭಕ್ತೆಯಾದೆನು. ನನ್ನನ್ನು ಅಂಗೀಕರಿಸಿ ಅನುಗ್ರಹಿಸುವನಾಗೆಂದು, ಈ ಪ್ರಕಾರಮಾಗಿ ಸ್ತುತಿಸಿದ ಪಾರ್ವತೀದೇವಿಯ ಸ್ತೋತ್ರದಿಂದ ಪರಮೇಶ್ವರನು ಸಂತುಷ್ಟನಾಗಿ ಯಿಂತೆಂದು ನಿರೂಪಿಸಿದನು.

ಎಲೌ, ಗಿರಿರಾಜಪುತ್ರಿಯೆ! ನಾಳೆ ಪ್ರಾತಃಕಾಲದಲ್ಲಿ ಬಂದು ನಿನ್ನ ತಂದೆತಾಯಿಗಳ ಅನುಜ್ಞೆವಿಡಿದು, ಸುರಸಿದ್ಧ ಸೇವಿತನಾಗಿ ಮಹೋತ್ಸವದಲ್ಲಿ ನಿನ್ನನ್ನು ಪಾಣಿಗ್ರಹಣಮಂ ಮಾಡುವೆನೆಂದು ನುಡಿದು, ವರಮನಿತ್ತು ಕೈಲಾಸಮನ್ನೈದಿದನು. ಅಲ್ಲಿ ಸ್ಮರಶಾಸಕನಾದ ಯೀಶ್ವರನು, ಮನದಿಂ ತನ್ನನ್ನೇ ಧ್ಯಾನಿಸುತ್ತಿಹ ಮುನಿಶ್ರೇಷ್ಠರಾದ ಸಪ್ತರ್ಷಿಗಳಂ ಸ್ಮರಿಸಿದವನಾಗುತ್ತಿರೆ, ಆ ಸ್ಮರಣಮಾತ್ರದಿಂದ ಸಪ್ತರ್ಷಿಗಳು, ಶೀಘ್ರದಿಂದಾ ಈಶ್ವರನ ಸನ್ನಿಧಾನಮನ್ನೈದಲು ಬರುವಾಗ ದೂರದಿಂದ ಆ ಚಂದ್ರಶೇಖರನಂ ಕಂಡು, ಸಂತೋಷಾತಿಶಯದಿಂದ ಕೃತ್ಯಾಕೃತ್ಯಂಗಳನ್ನರಿಯದೆ ಪರವಶಮಾದ ಅಂತಃಕರಣಮುಳ್ಳವರಾಗಿ, ಸಾಂಗಾಧ್ಯಾಯಿಗಳಾದ ಕಾರಣದಿಂ ಶಾಶ್ವತಮಾದ ವೇದವಾಕ್ಯಂಗಳಂ ಪಠಿಸುತ್ತ ಪರೋಕ್ಷದಲ್ಲಿಯೇ ಈ ಪರಿ ನುಡಿಯುತ್ತಿದ್ದರು ಏನಂದರೆ:— ಆಹಾಹಾ! ಪರಮೇಶ್ವರನೆ!! ಆವ ಸ್ವರೂಪದಿಂದೀಪ್ರಪಂಚಮಂ

ಸೃಜಿಸುತ್ತಲುಂ ರಕ್ಷಿಸುತ್ತಲುಂ ಸಹ್ಮರಿಸುತಲುಂ ಅನುಗ್ರಹಿಸುತಲುಂ ಇರು ವೆಯೋ, ಆ ನಿನ್ನ ಸ್ವರೂಪವು ತಿಳಿಯದಿರುವದು. ಅದುಕಾರಣದಿಂದದಂ ನಿರೂಪಿಸುವನಾಗು, ಯೇಕೆಂದರೆ:— ನೀನು ಕ್ರಿಯಾವಂತನಾದೊಡಂ ಅಕ್ರಿಯ ನಾಗಿ ಕಳಾವಂತನಾದೊಡಂ ನಿಷ್ಕಲನಾದುದರಿಂ ದೋಷರಹಿತನಾಗಿರುವೆ ಯಲ್ಲವೆ. ರೂಪರಹಿತನಾದೊಡಂ ಸ್ವರೂಪದಿಂ ನೀಲಕಂಠನಾಗಿರುವೆ. ಎಲೈ, ನಿರಂಜನನೆ! ನೀನು ನಿತ್ಯನಪ್ಪುದರಿಂದ ಸದಾಶಿವನು, ನಿರ್ಮಲ ನಪ್ಪುದರಿಂದ ಪ್ರಖ್ಯಾತನು, "ನೇಹನಾನಾಸ್ತಿ ಕಿಂಚನ" ಯೆಂಬ ಶ್ರುತಿವಾಕ್ಯದಿಂದ ನೀನೋ ರ್ವನೇ ಪರಬ್ರಹ್ಮವು, ರುದ್ರನು, ಬ್ರಹ್ಮನು, ನೀನೇ ವಿಷ್ಣುವು. ಪ್ರಜಾಪಾಲ ಕನು, ಮತ್ತೆ ಸ್ವಾಹಾಕಾರಮುಂ ವಷಟ್ಕಾರಮುಂ ಯಜ್ಞಮುಂ, ಆ ಯಜ್ಞಾಧಿ ಕರಣವಾದ ಯಜ್ಞೇಶ್ವರನುಂ ಸಹಾ ನೀನೇ ಸರಿ. ಎಲೈ, ಪ್ರಭುವೇ! ನೀನು ಕಾಲತ್ರಯದಲ್ಲಿಯುಂ ಜನ್ಯನಲ್ಲದುದರಿಂದ ನಿನ್ನನ್ನು ನಾವು ತಿಳಿಯಲರಿಯೆವು ಊಹಿಸಲೂ ಶಕ್ಯವಲ್ಲದ ಐಶ್ವರ್ಯವೈಭವಂಗಳುಳ್ಳ ಭವನಾದ ನಿನ್ನಲ್ಲಿ, ಪ್ರಪಂ ಚವು ಅನೇಕ ವಿಧವಾಗಿರ್ಪುದೆಂಬುದರಿಂದ, ಭೂಮಿಯಲ್ಲಿ ಮಹಾತ್ಮರಿಂದ ವಿಶ್ವಾಧಿಕನೆಂದು ತಿಳಿಯಲ್ಪಡುತಿರುವೆ. ಎಲೈ, ಶಿವನೆ! ನಿನ್ನಲ್ಲಿ ಭಕ್ತಿಯು ವೃಧಿಸುವಂತು ನಮ್ಮನ್ನು ಅನುಗ್ರಹಿಸು. ನಿರಂತರದಲ್ಲಿಯುಂ ನಾವು ಮಾಡಿದ ವೇದಾಧ್ಯಯನಕ್ಕೂ, ಆ ವೇದೋಕ್ತಮಾದ ಕರ್ಮಾನುಷ್ಠಾನಕ್ಕೂ ತಪಸ್ಸಿಗೂ ಸಹ, ನಿನ್ನ ಸ್ಮರಣೆಗೆ ಪಾತ್ರರಾದೆವೆಂಬದೇ ಮಹಾ ಫಲವು. ಯೆಂದಿಂತು ಈ ಸಪ್ತರ್ಷಿಗಳು ನುಡಿಯುತ್ತಾ, ಕ್ಷಣಮಾತ್ರದಲ್ಲಿಯೇ ಕೈಲಾಸಪರ್ವತ ದಲ್ಲಿರ್ಪ, ನಿರಂತರದಲ್ಲಿಯುಂ ರೋಗಮಂ ನಿವಾರಿಪ್ಪುದರಿಂದ ರುದ್ರನಾದ ಭಕ್ತಾನುಗ್ರಹತತ್ಪರನಾದ ಈಶ್ವರನ, ಗೃಹಮಂ ನೈದಿ ಸಂತುಷ್ಟಚಿತ್ತರಾಗಿ ಆ ಶಿವಾಲಯದ ಉನ್ನತವಾದ ಗೋಪುರದ ಅಂಗಳದಲ್ಲಿಹ ನಂದಿಕೇಶ್ವರಂಗೆ ನಮಸ್ಕರಿಸಿದರು.

ಎಲೈ, ಶೌನಕಾದಿ ಮುನಿಗಳಿರಾ! ಮುನಿಶ್ರೇಷ್ಠರಾದ ಆ ಸಪ್ತರ್ಷಿಗ ಳಿಂದ ಬಿನ್ನೈಸಲ್ಪಟ್ಟ ಈ ಸ್ತೋತ್ರಮಂ ಪಠಿಸುತ್ತಾ, ಶಿವನ ಪ್ರಾಣಕಾಂತೆ ಯಾದ ಪಾರ್ವತೀದೇವಿಯ ಸ್ತುತಿಯಂ ಆರು ಕಿವಿಯಿಂದ ಕೇಳುತಿರುವರೋ ಅವರುಗಳು ಭೂಮಿಯಲ್ಲಿ ಸ್ತ್ರೀಪುತ್ರ ಪಶುಗಳನ್ನೆಲ್ಲಮಂ ಸುಖಸಮೇತಮಪ್ಪಂತು ಪಡೆವ ಮುಕ್ತಿಯಂಪಡೆವ ವಿಷಯದಲ್ಲಿ ಸಂದೇಹವಿಲ್ಲೆಂದು ಸೂತಂ ನಿರೂ ಪಿಸಿದ ನೆಂಬಲ್ಲಿಗೆ ಹದಿನಾಲ್ಕನೆಯ ಅಧ್ಯಾಯವು

ಸಂಪೂರ್ಣಂ.

ಹದಿನೈದನೆಯ ಅಧ್ಯಾಯವು.

ಸಪ್ತರ್ಷಿಗಳ ಆಗಮನ.

ಎಲೈ, ಮುನಿಗಳಿರಾ! ಆ ಸಪ್ತರ್ಷಿಗಳು ನಂದಿಕೇಶ್ವರನಂ ಕಂಡ ಬಳಿಕ, ಆತನಂ ಕುರಿತು—ಎಲೈ ಶಿಲಾದ ಪುತ್ರನಾದ ನಂದಿಕೇಶ್ವರನೆ! ಈಶ್ವರನ ದರುಶನಕ್ಕೆ ಸಮಯವಾವುದು? ಯೆಂದು ಪ್ರಾರ್ಥಿಸುತ್ತಿರೆ, ಆ ನಂದಿಕೇಶ್ವರನು ಶಿವಾಲಯಮಂ ಪೊಕ್ಕು, ಶಿವನ ಅನುಜ್ಞೆಯಂ ಪಡೆದು, ಈ ಸಪ್ತರ್ಷಿಗಳಂ ಧೂರ್ಜಟಿಯ ಗೃಹಮಂ ಪೊಗಿಸುತಿರಲಾಗಿ! ಅವರುಗಳು ಸ್ವಲ್ಪ ಸಮೀಪದಲ್ಲಿ ಪ್ರಕಾಶಿಸುತ್ತಿರುವ, ಯೌವನಸ್ಥನಾಗಿ ಅತಿ ಕೋಮಲನಾದ ಶಿವನಂ ಕಂಡು ನಮಸ್ಕರಿಸಿದರು. ದಿವ್ಯಭೂಷಣಗಳಿಂದ ಅಲಂಕೃತನಾಗಿ ವಿಚಿತ್ರ ಕುಸುಮಂಗಳಿಂದುಜ್ವಲನಾದ ಆ ಶಿವನಂ ಕಂಡು ಸಂತೋಷದಿಂದ ಪರವಶರಾಗಿ, ಹರ್ಷಾತಿಶಯದಿಂ ವ್ಯಾಕುಲಿತಮಾದ ನೋಟಂಗಳುಳ್ಳವರಾಗಲು, ಶಿಲಾದ ಪುತ್ರನಾದ ನಂದೀಶ್ವರನು ಅವರನ್ನು ಈಶ್ವರ ಸಮೀಪವನ್ನೈದಿಸುತ್ತಿರೆ, ಆ ಮುನಿಗಳು ಅತ್ಯಂತ ಸಮೀಪಸ್ಥನಾದ ಶಿವನಂ ನೋಡಿ ತಮ್ಮ ಮನದೊಳಿಂತು ಆಲೋಚಿಸಿದರು.

ಆಹಾಹಾ !! ಈ ಪರಮೇಶ್ವರನಂ ನೋಡಿ ಮಾರನು ಲಜ್ಜೆಯಿಂದಲೀ ಅನಂಗನಾದನೇ ಹೊರತು ಹಣೆಗಣ್ಣಿನ ಜ್ವಾಲೆಯಿಂದಾಗಲಿಲ್ಲವು. ಪುಂಡರೀಕಾಕ್ಷನಾದ ವಿಷ್ಣುವು ಈ ಶಿವನಂ ನೋಡಿ ನಾರೀಭಾವವನ್ನೈದಿದನು. ದೇವರ್ಷಿಪತ್ನಿಗಳು ಅದ್ಭುತಮಪ್ಪಂತು ಈತನಂ ಕಂಡು ಮೋಹಿತರಾದರು. ಹೀಗಿರುವಲ್ಲಿ ಮಿಕ್ಕವರ ಮಾತೇನು? ಪುರುಷರ ಮನಂಗಳೇ ಈ ರೀತಿ ಮೋಹಿತಂಗಳಾದ ಬಳಿಕ ಸ್ತ್ರೀಯರು ಕಂಡು ಈತನಲ್ಲಿ ಮೋಹಿದರೆಂಬುದಂ ಪೇಳುವುದೇನು? ಯೆಂದು ಈ ಪ್ರಕಾರವಾಗಿ ಪೇಳುತ್ತಾ ಆ ಸಪ್ತರ್ಷಿಗಳು, ಮರಳಿ ಮರಳಿ ನಯನದ್ವಯಂಗಳಿಂದ, ಭವಭಯಹರನಾದ ಭವನಂ ನೋಡಿ ನೋಡಿ ಭಾವಿತಾಂತಃಕರಣರಾಗಿ ನಮಸ್ಕರಿಸುತ್ತಿರೆ, ಆ ಮಹಾ ದೇವನು ಮಧುರವಾದ ವಾಕ್ಯಗಳಿಂದ ಆ ಮುನಿಗಳಂ ಕುರಿತು, ಎಲೈ, ಮುನಿಗಳಿರಾ! ನೀವೆನಗೆ ಪರಮಭಕ್ತರಾದ ಕಾರಣದಿಂ ಅಸದೃಶರಾಗಿ ನನ್ನ ಮನಸ್ಸಿಗೆ ಸರಿಬಂದವರು, ಆಸನಂಗಳಲ್ಲಿ ಕುಳಿತುಕೊಳ್ಳಿರೆಂದು ನಿರೂಪಿಸಲಾಗಿ, ಅವರೆಲ್ಲರುಂ ಕೈಗಳಂ ಮುಗಿದು ಸ್ವಸ್ಥಾನುಕ್ರಮದಿಂದ ಆಸನಂಗಳಲ್ಲಿ ಕುಳಿತುಕೊಂಡರು.

ಆಗ ಸಪ್ತರ್ಷಿಗಳಲ್ಲಿ ಸುದಿ ಜ್ಯೇಷ್ಠ್ಯಮುಳ್ಳ ವಸಿಷ್ಠಮುನಿಯು, ಯೆದ್ದು ನಿಂತು ಕೈಗಳಂ ಮುಗಿದು ನಮಸ್ಕರಿಸಿ, ಎಲೈ, ಪರಮೇಶ್ವರನೆ! ಆವಾತನ ಮನಸ್ಸು ನಿನ್ನನೇ ನೆನೆವುತ್ತಿರುವುದೋ, ಆತನೇ ಧನ್ಯರೊಳಗೆ ಶ್ರೇಷ್ಠನು.

ದೇವರವರು ಆರಂ ಮನದೊಳು ನೆನೆಯುತ್ತಿರುವಿರೋ! ಅವರ ಭಾಗ್ಯಾತಿಶಯವ ನೇನೆನ್ನ ಬಹುದು? ಎಲೈ, ಶಂಕರನೇ! ನಾವು ನಿನ್ನ ಕಿಂಕರರು ನಮ್ಮನ್ನು ಮನಬಂದಂತೆ ಶಿಕ್ಷಿಪುದು. ಹಾಗಲ್ಲದಿದ್ದೊಡೆ, ಮತ್ತೊಬ್ಬ ನನ್ನಾಶ್ರೈಸದಿಹ ನಮ್ಮನ್ನು ಈ ಸಂಸಾರಸಾಗರಮಂ ದಾಂಟಿಸಿ, ರಕ್ಷಿಸು ರಕ್ಷಿಸೆಂದು ಬಿನ್ನೈಸಿದನು.

ಅನಂತರದಲ್ಲಿ ಪರಮೇಶ್ವರನು, ಆ ಸಪ್ತರ್ಷಿಗಳಂ ಕುರಿತು, ಎಲೈ ಮುನಿಗಳಿರಾ! ನಿಮ್ಮನ್ನೇನು ಕಾರಣದಿಂದ ನಾನು ನೆನೆಸಿದೆನೋ, ಆ ವೃತ್ತಾಂತಮಂ ಪೇಳುವೆನು. ಏನೆಂದರೆ, ನಾನು ಅಷ್ಟಮೂರ್ತಿಗಳಿಂದ ಯೆಲ್ಲಾ ಕಡೆಯಲ್ಲಿಯುಂ ಅನುಗ್ರಹಂ ಮಾಡುತ್ತಿರಲಾಗಿ; ವಿಷ್ಣು ಮೊದಲಾದ ದೇವತೆಗಳು ಶತ್ರುಗಳಿಂದ ಪರಿಪೀಡಿತರಾಗಿ, ಆ ಶತ್ರುಗಳ ಶಾಂತಿಗೋಸುಗ ನನ್ನ ತನೂಭವನಾದ ಸೇನಾಪತಿಯಂ, ನನ್ನನ್ನು ಪ್ರಾರ್ಥಿಸಿದರು. ಎಲೈ ಮುನಿಗಳಿರಾ! ಅದುಕಾರಣದಿಂದ ಸುರವಿರೋಧಿಗಳ ಶಾಂತಿಗೋಸುಗ ಹಾಗೆಯೆ ಆಗಲೆಂದು ನನ್ನಿಂದ ಪ್ರತಿಜ್ಞೆಯು ಮಾಡಲ್ಪಟ್ಟುದು. ಈಗಲೂ ಆ ಮೂರುಸಂದಿ ಅಸುರರಿಂದ ಸುರಶ್ರೇಷ್ಠರು ಪರಿಪೀಡಿತರಾಗಿಧಾರೆ; ನಾನು ದೇವಸೇನಾ ನಾಯಕನಂ ಸೃಜಿಸಿ ಜಯಿಸಲು ಶಕ್ಯನಲ್ಲದ ಶೂರಪದ್ಮನೆಂಬಸುರನಂ ವೊಡಹುಟ್ಟಿದವರೊಡನೆ ಪೂರ್ವದಲ್ಲಿ ತ್ರಿಪುರಂಗಳಂ ಸಂಹರಿಸಿದ ತೆರದಿ, ಆ ಕುಮಾರನಿಂದಲೇ ಕೊಲ್ಲಿಸುವೆನೆಂದು, ಅಭಯಪ್ರದಾನಮಂ ಮಾಡಿ, ಆ ವಿಷ್ಣು ಮೊದಲಾದ ದೇವತೆಗಳಂ ಕಳುಹಿದೆನು. ಅದುಕಾರಣದಿಂದ ಆ ಕುಮಾರನ ಜನನಾರ್ಥಮಾಗಿ ಗಿರಿರಾಜಕುಮಾರಿಯನ್ನು ಪರಿಗ್ರಹಿಸಲಿಚ್ಛೈಸುತ್ತೇನೆ. ಆದರೆ ಆ ಗಿರಿರಾಜಪುತ್ರಿಯು ಸ್ವಕೀಯಮಾಗಿಹ ಜ್ಞಾನಕ್ರಿಯಾತ್ಮಕಮಾದ ಶಕ್ತಿಯೇ ಆಗಿ ಭಿನ್ನಮಿಲ್ಲದಿರ್ದೊಡಂ, ಸೂರ್ಯನ ಪ್ರಭೆಯಂತೆ ಭಿನ್ನಮಾಗಿ ತೋರುವುದು. ಹಾಗಾದೊಡಂ ಆ ಪರ್ವತರಾಜನಂದಿನಿಯು ನನ್ನನ್ನು ಕುರಿತು ಉಗ್ರತಪವನ್ನಾಚರಿಸಿದಳು. ಅದು ಕಾರಣದಿಂದ ನಾನು ಆ ಗಿರಿರಾಜಪುತ್ರಿಯ ಪಾಣಿಗ್ರಹಣಮಂ ಬಯಸುತ್ತಿದ್ದೇನೆ ಎಲೈ ಮಹಾನುಭಾವರಾದ ಮುನಿಗಳಿರಾ! ಪತ್ನೀ ಸಮೇತರಾಗಿ ಗ್ರಹಸ್ಥರಾದ ನೀವು ಸಂತೋಷದಿಂದ ಆ ಗಿರಿರಾಜನ ಬಳಿಗೈದಿ ಕನ್ಯಾರ್ಥಮಾಗಿ ಆತಂಗೆ ಬೆಸಗೊಂಬುದು. ಇಂದಾರಭ್ಯಮಾಗಿ ಲೋಕದಲ್ಲಿ ಬ್ರಾಹ್ಮಣರ್ಗೆ ಈ ಕನ್ಯಾವರಣಮೆಂಬ ಧರ್ಮವು ನಿತ್ಯವಾಗಿರುವದು. ಆ ಕನ್ಯಾವರಣದಲ್ಲಿ ಕಲ್ಯಾಣಿಯಾದ ಅರುಂಧತಿಯು, ಗಿರಿರಾಜನ ಸತಿಯಾದ ಮೇನಕಿಯು ಸಮ್ಮತಿಸುವಂತೆ ಪ್ರೌಢೆಯಾಗಲಿ ಈ ಪ್ರಕಾರಮಾದ ಕಾರ್ಯಂಗಳಲ್ಲಿ ಕುಲಸ್ತ್ರೀಯರ್ಗೆ ಪ್ರೌಢೆಯಾವವಳು ಅರುಂಧತಿಯೇ ಸರಿ, ಅದುದರಿಂದ ಈ ಅರುಂಧತಿಯಿಂದ ನಾನಾ ವಿಧಂಗಳಾದ

ಉಪಾಯಂಗಳಿಂದಲೂ ಆ ಗಿರಿರಾಜ ಪತ್ನಿಯು ಮನದೋಳ್ ಸಮ್ಮತಿಸುವಂತೆ ನಾನಾ ಪ್ರಯತ್ನವು ಮಾಡಲ್ಪಡತಕ್ಕದ್ದು ಎಂದಿಂತು ವೇದಾಂತ ವಿಜ್ಞಾನದಿಂ ನಿಶ್ಚಯಿಸಲ್ಪಟ್ಟ ಯತೀಶ್ವರನಾದ ಪರಮೇಶ್ವರನು ಪರಿಗ್ರಹೋನ್ಮುಖನಾಗಿ ನಿರೂಪಿಸುತ್ತಿರೆ,—

ಸಪ್ತರ್ಷಿಗಳು ಹಿಮವಂತನ ಬಳಿಗೆ ಕನ್ಯಾರ್ಥಿಗಳಾಗಿ ಬರುವಿಕೆ.

ಆ ಸಪ್ತರ್ಷಿಗಳು ಲಜ್ಜೆಯಂ ಬಿಟ್ಟು, ಜಗತ್ಪತಿಯಾದ ಶಿವಂಗೆ ಅಭಿನಮಿಸಿ ಪ್ರದಕ್ಷಿಣಮಂ ಮಾಡಿ ಪೊರಮಟ್ಟು, ಆಕಾಶಮಾರ್ಗಮನತಿಕ್ರಮಿಸಿ ಶೀಘ್ರದಿಂ ಹಿಮವತ್ಪರ್ವತವನ್ನೇರಿದರು. ಆ ಹಿಮವತ್ಪರ್ವತದಲ್ಲಿ, ಲೋಕತ್ರಯದಲ್ಲಿಯುಂ "ಓಷಧಿಪ್ರಸ್ಥ" ಮೆಂಬ ಪೆಸರಿಸಿಂದ ಪ್ರಸಿದ್ಧಮಾದ ಗಿರಿರಾಜನ ಪಟ್ಟಣವು, ಆ ಸಪ್ತರ್ಷಿಗಳ್ಗೆ ಗೋಚರಮಾದುದು. ಆವ ಓಷಧಿಪ್ರಸ್ಥಮೆಂಬ ಪಟ್ಟಣದಲ್ಲಿ "ಯುಗಾವೃತ್ತಿಯುಂ ಜರೆಯುಂ ಅಂಧಕಮುಂ ಶೋಕಮುಂ ಮದಮುಂ" ಮತ್ತೆ ಯೌವನಕ್ಕಿಂತಲೂ ಅನ್ಯಮಾದ ವಯಸ್ಸೂ ಇವೆಲ್ಲವೂ ಇಲ್ಲವೋ, ಅಂಥಾ ಮಹಿಮೆಯುಳ್ಳ ಆ ಪಟ್ಟಣಮುಂ ಪೊಕ್ಕರು.

ಅಲ್ಲಿ ಗಿರಿರಾಜನು ಕ್ರಮದಿಂದ ಪುರಾಭ್ಯಂತರದಲ್ಲಿ, ಜಗಮಂ ಬೆಳಗುತ್ತಿಹ ಆದಿತ್ಯರಂತೆ ದೇದೀಪ್ಯಮಾನರಾದ ಈ ಸಪ್ತರ್ಷಿಗಳಂ ಕಂಡು ಇದಿರ್ಗೊಂಡು, ಕ್ರಮದಿಂದಿವರು ರಾಜಗೃಹಾಭ್ಯಂತರವನ್ನೈದುವಷ್ಟರೊಳಗೆ, ತಾನು ಪತ್ನೀಸಮೇತನಾಗಿ ಅರ್ಘ್ಯಪಾದ್ಯಮುಂ ಪಿಡಿದು, ಆ ಸಪತ್ನೀಕರಾದ ಸಪ್ತರ್ಷಿಗಳನ್ನು ಆಸನಂಗಳಲ್ಲಿ ಕುಳ್ಳಿರಿಸಿ, ಅರ್ಘ್ಯಪಾದ್ಯಾದಿಗಳಿಂದುಪಚರಿಸಿ, ಆಗ ಅತ್ಯಂತ ಸಂತೋಷದಿಂದ ಕೃತ್ಯಾಕೃತ್ಯ ವಿವೇಕ ಜ್ಞಾನಮುಳ್ಳವನಾಗಿ, ಪರಮ ಭಕ್ತಿಯಿಂದ ಸ್ತುತಿಸಿದ ಬಳಿಕ ಆ ಸಪ್ತರ್ಷಿಗಳು ಗಿರಿರಾಜನ ಯೋಗಕ್ಷೇಮವನ್ನು ವಿಚಾರಿಸುವರೆಂತೆನೆ, ಎಲೈ ಗಿರಿರಾಯನೆ! ಕ್ಷೇಮದಲ್ಲಿರುವೆಯೊ? ಪ್ರಜೆಗಳೆಲ್ಲರುಂ ಕ್ಷೇಮವಾಗಿರುವರೋ ಏನು? ನಿನ್ನ ಪರ್ವತರಾಜತ್ವವು ಯೆಲ್ಲಿಯುಂ ತಡೆಯಿಲ್ಲದಿರುವುದೊ? ಅಮಾತ್ಯ ಬಂಧು ಮಿತ್ರರ ಅನುರಾಗವು ನಿನ್ನಲ್ಲಿ ದೃಢವಾಗಿಹವೋ ಏನು? ನೀನು ಲೋಕದಲ್ಲಿ ಮಹಾತಪಸ್ವಿ ಯಾದುದರಿಂದ ಅತ್ಯಂತ ಧನ್ಯನುಂ, ಪೂಜ್ಯನುಂ ವಂದ್ಯನುಂ ಆಗುತ್ತಿದ್ದೀಯೆ, ತಪಸ್ವಿಗಳಾದ ನಮಿಗೂ ನೀನು ಪೂಜ್ಯನಾದ ಪರ್ವತರಾಜನು, ಕುಳಿತುಕೊಯೆಂದು ನಿರೂಪಿಸಿದರು.

ಬಳಿಕ ಆ ಗಿರಿರಾಜನು ವಿನಯಸಮೇತಮಪ್ಪಂತು ಕೈಗಳಂ ಮುಗಿದು, ಎಲೈ ಮುನಿಗಳಿರಾ! ಭಾರ್ಯಾಸಮೇತರಾಗಿರ್ಪ ಮಹಾನುಭಾವರಾದ ತಮ್ಮ ದರ್ಶನದಿಂದೆಲ್ಲರು ಕ್ಷೇಮವು; ನನ್ನ ಜನ್ಮ ಸಾಫಲ್ಯವಾದುದು. ನಾನೇ ಧನ್ಯನು ಕೃತಾರ್ಥನು ಪುಣ್ಯವಂತನು. ಅಹಹ!! ಬಹು ಸಂತಸಮಾದುದು, ಕಿಂಕರ

ನಾದ ಇವನಿಂದೇನು ಮಾಡಲ್ತಕ್ಕದಿರುವುದೊ, ಆ ಜ್ಞಾಪನಂಗೆಯ್ದು ಕೃತಾರ್ಥನಂ ಮಾಡಿರೆಂದು ನುಡಿಯೆ, ತಪೋಧನರಾದ ಆ ಮಹಾ ಮುನಿಗಳು ವಿನಯಾನ್ವಿತಮಾದ ಆ ವಚನಮಂ ಕೇಳ್ದು ನುಡಿಜಾಣ್ಮನಾದ ಅಂಗೀರಸಮುನಿಯುಂ ಪ್ರೋತ್ಸಾಹಗೊಳಿಸಲಾಗಿ, ಆ ಮಹರ್ಷಿಯು ಎಲೈ ಗಿರಿರಾಜನೆ! ಕಲ್ಯಾಣಗುಣ ಸಂಪನ್ನೆಯಾಗಿ ನಿನ್ನ ಕುಮಾರ್ತಿಯಾದ ಪಾರ್ವತೀದೇವಿಗೆ ಕಲ್ಯಾಣ ಮಹೋತ್ಸವಮಂ ಬೆಳೆಯಿಸಲ್ಬಯಸಿ ನಾವು ಬಂದಿರುವುದರಿಂದ, ನೀನು ಸಾವಧಾನ ಮನಸ್ಕನಾಗಿ, ಪುತ್ರ ಮಿತ್ರ ಕಳತ್ರಾದಿಗಳ್ವೆರಸಿ, ಸರ್ವಾಭರಣಂಗಳಿಂ ಭೂಷಿತಳಾದ ಪಾರ್ವತೀದೇವಿಯಂ ಕರೆಯಿಸೆಂದು ನಿರೂಪಿಸಿದನು. ತದನಂತರದಲ್ಲಿ ಗಿರಿರಾಜನು ವಿನಯಾನ್ವಿತನಾಗಿ ಆ ಸಪ್ತಋಷಿಗಳ ಆಜ್ಞಾಪರಿಪಾಲನೆಯಲ್ಲಿ ಕಾತರನಾಗಿ ಪ್ರತಿವಾಕ್ಯವಂ ನುಡಿಯದೆ ಆ ಪ್ರಕಾರದಿಂದಲೇ ಆಜ್ಞಾಪಿಸಿದವನಾಗಲು, ಆತನ ಮಡದಿಯರಾದ ಮೇನಕಾದಿಗಳು ತಕ್ಷಣದಲ್ಲಿಯೇ ಆ ಪಾರ್ವತೀದೇವಿಯಂ ದಿವ್ಯತಮವಾದ ಭೂಷಣಂಗಳಿಂದ ಪರಿಭೂಷಿಸಿ ಕರೆತರುವ ಸಮಯದೊಳು ಆ ದೇವಿಯು ಶರತ್ಕಾಲದೊಳು ಚಂದಿರನು ಬೆಳಗುವಂದದಿ ವಿಚಿತ್ರಮಾಗಿ ಬೆಳಗುತ್ತ ತಂದೆಯ ಸಮೀಪಮನ್ನೈದಿದಳೆಂದು ಸೂತಂ ಶೌನಕಾದಿ ಮುನಿಗಳ್ಗೆ

ನಿರೂಪಿಸಿದನೆಂಬಲ್ಲಿಗೆ ಶ್ರೀಕೃಷ್ಣರಾಜ ವಾಣೀವಿಲಾಸಮೆಂಬ ಶಂಕರಸಂ
ಹಿತೆಯ ಶಿವರಹಸ್ಯ ಖಂಡದೊಳು ಸಂಭವಕಾಂಡದ
ಹದಿನೈದನೆಯ ಅಧ್ಯಾಯವು ಸಂಪೂರ್ಣಂ.

ಹದಿನಾರನೆಯ ಅಧ್ಯಾಯವು.

ಸಪ್ತರ್ಷಿಗಳು ಹಿಮವಂತರಾಯನ ಬಳಿ ಪರಶಿವನ ಗುಣ ಕಥನ ಮಾಡುವಿಕೆ.

ಸೂತರ ವಚನವು:— ಎಲೈ ಮುನಿಗಳಿರಾ! ಈ ಪ್ರಕಾರಮಾಗಿ ಜಗನ್ಮಾತೆಯಾಗಿರ್ಪ ಆ ಪಾರ್ವತೀದೇವಿಯು ತನ್ನ ಜನಕನಾದ ಗಿರಿರಾಜನ ಸಮೀಪವನ್ನೈದಿದವಳಾಗಲು, ಆ ಸಪ್ತಋಷಿಗಳೂ ಅರುಂಧತಿಯೂ ಸಹಾ ಆ ದೇವಿಯಂ ಕಂಡು ಮರಳಿ ಮರಳಿ ತಮ್ಮ ತಮ್ಮ ಮನಸ್ಸುಗಳಲ್ಲಿಯೆ ನಮಸ್ಕರಿಸುತಿರಲಾಗಿ, ಆ ಗಿರಿರಾಜನು ಸಭೆಯಲ್ಲಿ ಲಜ್ಜೆಯಿಂದ ಬೆಳಗುತಲಿರುವ ಮೊಗವುಳ್ಳ ಸರ್ವಾಭರಣ ಭೂಷಿತೆಯಾದ ಆ ಪಾರ್ವತೀದೇವಿಯನ್ನು, ಅತ್ಯಂತ ವಾತ್ಸಲ್ಯದಿಂದ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಮಂದಸ್ಮಿತಯುಕ್ತಮಾದ ಮುಖವುಳ್ಳವನಾಗಿ ಆಹಾಹಾ!! ಬ್ರಹ್ಮಜ್ಞಾನಿಗಳಾದ ಸಪ್ತಋಷಿಗಳು ನನ್ನ ಕುಮಾರಿಯನ್ನು ಶಿವಂಗೆ ಕೊಟ್ಟು ಪಾಣಿಗ್ರಹಣಮಂ

ಮಾಡಿಸಬೇಕೆಂದು ನುಡಿದರು. ಈ ಮಗಳು ಕಣ್ಣಿಗೆ ಕನೀನಿಕೆಯು ಹೇಗೋ ಹಾಗೆ ನನಗೆ ಕುಲಭೂಷಣೆಯು. ಸರ್ವಸ್ವವು ಈಕೆಯೇ ಸರಿಯೆಂದು ನುಡಿದನು. ಅನಂತರದಲ್ಲಿ ಆಂಗೀರಸ ಮುನಿಯು, ಎಲೈ, ಪರ್ವತರಾಜನೆ! ಪೂಜ್ಯವಾದ ಆಕಾರಮುಳ್ಳ ಈಕೆಯು ಲೋಕಮಾತೆಯಾದುದರಿಂದ ಸರ್ವಲೋಕಂಗಳ್ಗೆಯುಂ ಆವನೋರ್ವನು ಧಾತನೊ, ಬ್ರಹ್ಮಾದಿ ಸೃಷ್ಟಿಕರ್ತರಿಗೂ ವಿಧಾತನೋ, ಕಾರಣಂಗಳ್ಗೆ ಕಾರಣನೋ, ವಿಧಿಗೆ ನಿಯಾಮಕನೋ, ಸೃಷ್ಟಿಮಾಡತಕ್ಕವರಿಗೂ ಸ್ರಷ್ಟನೋ, ರಕ್ಷಕರ್ಗೆ ರಕ್ಷಕನೋ, ಸಂಹರಿಸುವವರಿಗೆ ಸಂಹಾರಕನೋ, ಮಹಾಗ್ರಾಸವುಳ್ಳವನಾಗಿ ಮಹೀಧರನೋ, ಮತ್ತಂ "ಪರಮಾತ್ಮನುಂ ಪರಂಜ್ಯೋತಿಯುಂ ಪರಬ್ರಹ್ಮನುಂ ಪರಾತ್ಪರನುಂ" ಪರಿಶುದ್ಧರೆಲ್ಲರ್ಗೆಯುಂ ಪರಿಶುದ್ಧನುಂ, ಮಂಗಳಂಗಳ್ಗೆ ಮಂಗಳನುಂ ಆಗಿರುವನೋ, ಇದಲ್ಲದೆ ಆವನೋರ್ವನ ಹೊರತು ಬೇರೊಂದು ಪದಾರ್ಥವು ಸ್ವಲ್ಪವಾಗಲಿ ಮಹತ್ತಾಗಲಿ ಇಲ್ಲವೊ, ಆವನಿಂದ ಪ್ರಪಂಚವು ಸೃಷ್ಟಿಮಾಡಲ್ಪಡುತಲುಂ ಪಾಲಿಸಲ್ಪಡುತಲುಂ ಬಾಧಿಸಲ್ಪಡುತಲುಂ ಇರುವುದೋ, ಇವನಲ್ಲಿ ಈ ಈಶ್ವರನೆಂಬ ಶಬ್ದವು ಉಪಚಾರಾರ್ಥ ಮಲ್ಲದೆ ಯಥಾರ್ಥವಾಗಿಯೇ ಇರುವುದೋ, ಈ ಅನ್ಯಗಾಮಿಯೆಂಬ ಶಬ್ದವು ಆವನಲ್ಲಿ ಅಣಿಮಾದಿಗಳಿಂದಿಲ್ಲವೋ, ಮತ್ತೆ ಆವನೋರ್ವನು ನಿತ್ಯರ್ಗೆ ನಿತ್ಯನುಂ ಚೇತನಂಗಳ್ಗೆ ಚೇತನಮುಂ ಮಾಡಲ್ತಕ್ಕವರ್ಗೆ ಕಾಲನುಂ ಕಾಲಕಾಲನುಂ ಕಲಾಧರನುಂ ಜಗತ್ಪಿತನುಂ ಆಗಿರುವನೋ, ಆತಂಗೆ ಪತ್ನಿಯಾಗೀಗ ಕೊಡತಕ್ಕವಳು. ಪೂರ್ವದೊಳು ಪಾದಂಗಳಂ ಹುಡುಕಲಿಚ್ಛೈಸಿ ವರಾಹರೂಪಮಂ ತಳೆದ ವಿಷ್ಣುವಿನಿಂದ ಆವಾತನ ಪಾದಂಗಳುಂ ಹಂಸರೂಪಿಯಾದ ಪಿತಾಮಹನಿಂದ ಶಿರಸ್ಸೂ ಸಹಾ ನೋಡಲ್ಪಡಲಿಲ್ಲವೊ, ಅಂಥಾ ಜಗದೀಶ್ವರನಾದ ಶಿವಂಗೆ ನಿನ್ನ ಮಗಳಾದ ಪಾರ್ವತೀದೇವಿಯು ಪತ್ನಿಯಾಗಿ ನಿನ್ನಿಂದ ಕೊಡಲ್ಪಡಬೇಕು. ಎಲೈ, ಗಿರಿರಾಜನೆ! ಆವಾತನ ವೀಕ್ಷಣಮಾತ್ರದಿಂದಲೇ ವೃತ್ರಾರಿಯಾದ ಇಂದ್ರನು ತ್ಯಕ್ತವಾದ ವಜ್ರವುಳ್ಳವನಾಗಿ ಜಡಂಮಾಡಲ್ಪಟ್ಟನೋ, ಮತ್ತೆ ಒಂದು ತೃಣಮಾತ್ರದಿಂದ ವಿಷ್ಣ್ವಾದಿ ದೇವತೆಗಳು ಜಯಿಸಲಶಕ್ಯರೋ, ಅಂಥ ಪರಮೇಶ್ವರಂಗೆ ಕಲ್ಯಾಣಿಯಾದ ಈ ಪಾರ್ವತೀದೇವಿಯಂ ಸಮರ್ಪಿಸುವನಾಗು.

ಎಲೈ, ಮಹಾರಾಯನೆ! ಆವಾತನ ಕಣ್ಣು ಸಂಜ್ಞೆಯಿಂದ ಲಕ್ಷ್ಮೀದೇವಿಯು ಪ್ರೇರಿತಳಾಗಿ, "ಸುರ, ಅಸುರ, ನರ" ರೂಪವರ್ಗರೆಸಿಯೆಡೆ ಬಿಡದಿರುವಳೋ, ಅಂಥ ಶಿವಂಗೆ, ಭಾರ್ಯಾಸಹಿತನಾಗಿ ಲೋಕಹಿತಮಂ ಬಯಸುವ ಲಿಹ ನಿನ್ನಿಂದ ಕುಮಾರತಿಯು ಪತ್ನಿಯಾಗಿ ಕೊಡಲ್ಪಡಬೇಕು. ಯೇಕೆಂದರೆ:—

ದುರ್ಬುದ್ಧಿಯುಳ್ಳ ಶೂರಪದ್ಮಾದಿಗಳ್ಗೆ ಸಂಹಾರಕನಾದ ಸುಕುಮಾರ ಶರೀರನಾಗಿ ಮಹಾಭುಜ ಪರಾಕ್ರಮಿಯಾದ ಈಶ್ವರ ಕುಮಾರನು ಈಕೆಯಲ್ಲಿ ಪುಟ್ಟುವನು. ಎಲೈ, ಗಿರಿರಾಜನೆ! ಜಗದ್ಗುರುವಾದ ಪರಮೇಶ್ವರನು ಆವ ನಿನಗೆ ಜಾಮಾತನಾಗುವನೋ ಅಂಥಹ ನೀನೇ ಲೋಕದೊಳು ಧನ್ಯನು, ಕೃತಾರ್ಥನು, ಕುಲ ಶ್ರೇಷ್ಠರೊಳಗೆ ಉತ್ತಮನು ಯೆಂದು ಈ ಪ್ರಕಾರವಾಗಿ ಅಂಗೀರಸ ಮುನಿಯು ನಿರೂಪಿಸಿ ತೂಷ್ಣೀಂಭೂತನಾಗುತ್ತಿರೆ, ಹೃಷ್ಟಾಂತಃಕರಣರಾಗಿ ಆ ಸಪ್ತಋಷಿಗಳು ಆ ಗಿರಿರಾಜನಂ ಹೇಗೆ ಶ್ಲಾಘಿಸಿದರು. ಅದೇ ಪ್ರಕಾರದಲ್ಲಿಯೇ ಮುನಿಪತ್ನಿಯರಾದ ಅರುಂಧತಿ ಮೊದಲಾದ ಸ್ತ್ರೀಯರು ಮುದಿತಂಗಳಾದ ಮುಖಂಗಳುಳ್ಳವರಾಗಿ ರೋಮಹರ್ಷಣವಾದ ಹರ್ಷದಿಂದ, ಸಂಜಾತ ರೋಮಾಂಚವುಳ್ಳ ಸರ್ವಾವಯುವಂಗಳುಳ್ಳವರಾಗಿ ಗಿರಿರಾಜನ ಪಟ್ಟದರಸಿಯಾಗಿ ಪರಮ ಪೂಜ್ಯೆಯಾದ ಆ ಮೇನಕೀ ದೇವಿಯನ್ನು ಅತ್ಯಂತ ಶ್ಲಾಘಿಸುತ್ತಿದ್ದರು.

ಆಗ ಗಿರಿರಾಜನಾದ ಹಿಮವಂತನು ಜಂಗಮಭಾವಕ್ಕೆ ಉಚಿತವಾದ ರೋಮಾಂಚದಿಂ, ಸರ್ವತ್ರ ಕಂಟಕಂಗಳಿಂವೇಶಿ ಆ ಕಂಟಕಿತಂಗಳಾದ ಅವಯವಂಗಳು ಪರಿಮಳ ಯುಕ್ತಂಗಳಾಗಿರೆ, ಆನಂದಾಶ್ರು ಪರಿಪೂರ್ಣಂಗಳಾದ ನಯನಂಗಳುಳ್ಳವನಾಗಿ ಗದ್ಗದ ಸ್ವರನಾಗಿ ವಾತ್ಸಲ್ಯದಿಂದ ತನ್ನ ಕುಮಾರತಿಯಾದ ಪಾರ್ವತೀದೇವಿಯನ್ನಾಲಿಂಗಿಸಿಕೊಂಡು ಈ ಸಪ್ತಋಷಿಗಳಂ ಕುರಿತು ಯಿಂತೆಂದನು. ಕಮಲೇಕ್ಷಣೆಯಾಗಿ ಜಗನ್ಮಾತೆಯಾದ ಈಕೆಯು ನನ್ನ ಕುಮಾರಿಯಾದುದರಿಂದ, ನಾನೀಗ ತಮ್ಮಿಂದ ಕೃತಾರ್ಥನಾದೆನು? ಎಲೈ, ಬ್ರಾಹ್ಮಣರೆ! ಲೋಕದಲ್ಲಿ "ಶುಭಸ್ಯಶೀಘ್ರಂ" ಯೆಂಬದಾಗಿ ಸರ್ವತ್ರ ಕೇಳ್ಬರುತಲಿರುವುದರಿಂದ ತಾವು, ದೇವದೇವನಾದ ಪರಮೇಶ್ವರಂಗೆ ವಿಜ್ಞಾಪನಂಗೈದು ಮನೋರಥ ಪರಿಪೂರ್ತಿಯಂಮಾಡಿ, ದಯೆಯಿಂದೆನ್ನನ್ನು ರಕ್ಷಿಸಿರೆಂದು ನುಡಿಯುತ್ತಾ, ಎದ್ದೆದ್ದು ಮರಳಿ ಮರಳಿ ನಮಸ್ಕರಿಸುತ್ತಿರೆ, ಆ ಮುನೀಶ್ವರರೆಲ್ಲರುಂ ಸಾಧುಸಾಧುವೆಂದು ಪ್ರಶಂಶಿಸಿದರು.

ಸಪ್ತರ್ಷಿಗಳೊಂದಿಗೆ ಸಂಶಯದಿಂದ ಮೇನಕಾ ದೇವಿಯು ಪರಶಿವನ ಗುಣಗಳನ್ನು ಬಣ್ಣಿಸುವಿಕೆ.

ಅನಂತರದಲ್ಲಿ ಅಂಗೀರಸ ಮುನಿಯು ಮರಳಿ ಗಿರಿರಾಜನಂ ಕುರಿತು, ಎಲೈ, ಗಿರಿರಾಜನೆ! ಲೋಕದಲ್ಲಿ ಮಾತೃಸಮ್ಮತಿಯಿಂದಲೇ ಕುಟುಂಬಿಗಳಿಂದ ಕನ್ಯಾದಾನ ವಹುದಾದಕಾರಣದಿಂ ನಿಮ್ಮ ಪತ್ನಿಗಳಾದ ಮಹಿಷಿಯರೆಲ್ಲರು ಅನುಮೋದಿಸಲೆಂದು ನುಡಿಯೆ, ಆ ಅರಸಿಯರೆಲ್ಲರು ಸಮ್ಮತಿಸಲಾಗಿ ಪಟ್ಟದರಸಿ

ಯಾದ ಮೇನಕಾದೇವಿಯು ಮಾತ್ರ ಈ ಪರಿ ಸ್ವಲ್ಪ ಉಸುರಿದಳು. ಎಲೈ, ಭೂಸುರರೆ! ನಾವಾದೊಡೆ ಸ್ಥಾವರರು ಅಚೇತನರೆಂದು ಜನರಿಂದ ವಿದಿತರಾಗಿ ರ್ಥೇವೆ. ಲೋಕತ್ರಯದಲ್ಲಿಯು ವಿವೇಕವುಳ್ಳವರ್ಗೆ ವಿಶೇಷವಾಗಿ ರಾಗ ದ್ವೇಷಾದಿ ದೋಷಂಗಳುಂ "ದೇವ, ತಿರ್ಯಕ್, ಮನುಷ್ಯ, ಸರ್ಪ" ಎಂಬಿವುಗ ಳಲ್ಲಿ ಸರ್ವಪ್ರಾಣಿಗಳ್ಗೆಯುಂ ವಾಕ್ಕುಗಳ ವ್ಯತ್ಯಾಸಮುಂ ಇರಲೇ ಇರುವುದು. ಬಹು ತರವಾಗಿ ಸಂಬಂಧವೆಲ್ಲಿರ್ಪುದೋ ಅಲ್ಲಿಯೆ ಸಂಬಂಧಿಗಳ್ಗೆಯೇ ಅಹ ರ್ನಿಶವು ವಿಶೇಷವಾಗಿ ವಿವಾಹಂಗಳು ನಡೆವವು. ಮತ್ತೆ ವಾಗ್ವ್ಯತ್ಯಾಸ ವಿರುವ ಸ್ಥಳದಲ್ಲಿ ನಡೆವ ವಿವಾಹವು ನಿವಾರಿಸಲ್ಪಡಬೇಕು. ಆದುಕಾರಣದಿಂದ "ವಿವಾದಶ್ಚ ವಿವಾಹಶ್ಚ ಸಮಯೊರೇವ ಶೋಭತೆ" ಯೆಂಬದಾಗಿರುವಂತೆ ಸಮಾನರಾದವರಿಗೆ ವಿವಾಹ ಮುಂಟಾದೊಡೆ ಸುಖಕರವಾಗಿಯುಂ ಶೋಭಾಯ ಮಾನವಾಗಿಯುಂ ಯಿರುವುದು. ಗಜಾರೂಢನು ಗಜಾರೂಢಂಗೆಯೇ ಚೂರ್ಣವ ನೀಯುವ ನೆಂಬುದು ಸರ್ವರಿಗಂ ತಿಳದೇ ಯಿರುವದು. ದೇವನಾಗಿ ಜಗದ್ಧಾತ ನಾಗಿ ಮಹಾದೇವನಾಗಿ ಮಹೇಶ್ವರನಾದ, ಮಹಾಗ್ರಾಸನಾಗಿ ಜಗನ್ಮೃತ್ಯು ವಾದ, ಮೃತ್ಯುಂಜಯನಾಗಿ ಹರನಾದವನು ಈ ಭವನಾದುದರಿಂದ ದುರ್ವಿ ಭಾವ್ಯಮಾದ ಈತನ ಚರಿತ್ರವನ್ನು ಬ್ರಹ್ಮಾದಿಗಳೇ ತಿಳಿಯರು. ಸುರಾಸುರರು ದಂಡಿಸಲ್ಪಟ್ಟರು. ವಿಲಾಸಮಾತ್ರದಿಂ ನಖದಿಂದ ಚತುರ್ಮುಖ ಬ್ರಹ್ಮನ ಶಿರಸ್ಸು ಭಿನ್ನಮಾದುದು. ವೈಷ್ಣವಂಗಳಾದ ನೃಸಿಂಹಾದ್ಯವತಾರಂಗಳುಂ ಶಾಸಿಸಲ್ಪಟ್ಟವು. ಪ್ರಭುಗಳ ವ್ಯಾಪಾರಂಗಳು ಹಾಗಿರುವವು. ಹೀಗಿರುವಲ್ಲಿ ನಮ್ಮ ನಮ್ಮ ಕರ್ಮಗಳನ್ನು ವಿಚಾರಿಸುವವೇನು? ದ್ವಿಜಶ್ರೇಷ್ಠನಾಗಿ ಈತಂಗೆ ಶ್ವಶುರನಾದ ಯಜಮಾನಗಿನಾಗಿರ್ಪ ದಕ್ಷಬ್ರಹ್ಮನು, ವಾಗ್ವ್ಯತ್ಯಾಸಭಯ ದಿಂದಲೇ ಭಿನ್ನಮಾದ ಶಿರಸ್ಸುಳ್ಳವನಾದ ನಲ್ಲದೆ, ಆ ದಕ್ಷಬ್ರಹ್ಮನ ಋತ್ವಿಕ್ಕುಗ ಳಾದ ಮುನಿಗಳುಂ ಸಭ್ಯರಾದ ಋಷಿಗಳುಂ ದೇವತೆಗಳುಂ ಯಜ್ಞಮುಂ ಯಜ್ಞಾಧಿಪತಿಯುಂ ಯಜ್ವನುಂ ಭಕ್ತವತ್ಸಲನಾದ ಮಾಧವನುಂ ಮೃಗ ರೂಪದಿಂ ವೀರಭದ್ರನಿಂದ ದಂಡಿಸಲ್ಪಟ್ಟರು.

ಬಾಲೆಯಾದ ಈ ನಮ್ಮ ಮಗಳಾದೊಡೆ ನಮ್ಮನ್ನುದ್ದೇಶಿಸಿ ಯೆಂತು ಶೋಕಿಸದಿರುವಳೋ ಆ ರೀತಿಯಲ್ಲಿ ತಾವು ಚನ್ನಾಗಿ ಯೋಚಿಸಿ ಮಾಡುವರಾಗಿ, ಬಾಲಕಿಯಾದವಳ್ಗೆ ಶೋಕಮುಂಟಾದೊಡೆ ನಮಗೆಂದಿಗೂ ಸುಖವಿಲ್ಲವು. ದೇವದೇವನಾದ ಈತಂಗೆ ಮಾತೆಯುಂ ಪಿತನುಂ ಭ್ರಾತನುಂ ಸ್ನೇಹಿತರುಂ ಬಂಧುಗಳುಂ ಕುಲವೂ ಯಾವದೊಂದೂ ಇಲ್ಲವು. "ಏಕವಿವರುದ್ರೋನದ್ವಿ ತೀಯತಸ್ಥೆ" ಎಂಬದಾಗಿ ಶ್ರುತಿಯಿರುವಂದದಿ, ಈ ರುದ್ರನು ತಾನೋರ್ವನೆ

ಇರುವನೆಂದು ನಾನು, ವಿಭುವಾದಾತನ ಮಹಿಮೆಯನ್ನು ಮರಳಿ ಮರಳಿ ನೆನಪು ಗೊಳ್ಳುತ್ತಿರುವುದರಿಂದೆನ್ನ ಮನವು ಪ್ರೀತವಾಗಿಯುಂ ಭೀತವಾಗಿಯುಂ ಈ ಪ್ರಕಾರದಿಂ ದ್ವೈಧಾಕಾತರವಾಗಿದೆ. ಯೆಂಬದಾಗಿ ಗಿರಿರಾಜನ ಮಡದಿಯಾದ ಮೇನಕಾದೇವಿಯು ನುಡಿದು ತೂಷ್ಣೀಂಭೂತಳಾಗುತ್ತಿರೆ, ವಸಿಷ್ಠಮುನಿಯ ಪತ್ನಿಯಾದ ಅರುಂಧತೀದೇವಿಯು, ಗಿರಿರಾಜನ ಸತಿಯಾದ ವುತ್ತೆ ಮೈನಾಕನ ತಾಯಿಯಾದ ಆ ಮೇನಕಾದೇವಿಯಂ ಸಂತವಿಡುತ್ತ ಮಧುರವಾಕ್ಯದಿಂದೀ ಪರಿ ನಿರೂಪಿಸಿದಳೆಂಬದಾಗಿ ಸೂತಂ ಶೌನಕಾದಿ ಮಹರ್ಷಿಗಳ್ಗೆ ಪೇಳಿದನೆಂಬಿ ಲ್ಲಿಗೆ, ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಶಂಕರಸಂಹಿತೆಯ ಶಿವರಹಸ್ಯ ಖಂಡದೊಳು ಸಂಭವಕಾಂಡದ ಹದಿನಾರನೆಯ ಅಧ್ಯಾ ಯವು ಸಂಪೂರ್ಣಂ.

ಹದಿನೇಳನೆಯ ಅಧ್ಯಾಯವು.

ಅರುಂಧತೀದೇವಿಯು ಮೇನಕೆಯ ಸಂಶಯ ನಿವಾರಣ ಮಾಡುವಿಕೆ.

ಎಲೈ, ಮುನಿಗಳಿರಾ! ಅನಂತರದಲ್ಲಿ ಅರುಂಧತೀದೇವಿಯು ಆ ಮೇನಕಾ ದೇವಿಯಂ ಕುರಿತು, ಎಲೈ, ಮೇನಕೆಯೆ! ಈ ಪರಮೇಶ್ವರಂಗೆ ಮಾತಾಪಿತ್ರಾ ದಿಗಳ್ಯಾರೂ ಇಲ್ಲವೆಂದು ನೀನು ನಿರೂಪಿಸಿದ ವಾಕ್ಯವು ಯಥಾರ್ಥವೇ ಸರಿ! ಈತನೇ ಜಗತ್ಪಿತನು ಸರ್ವರಿಗು ರಾಜಾಧಿರಾಜನು. ರಾಜರಾಜನಾದ ಕುಬೇ ರಂಗೆ ಸ್ನೇಹಿತನು. ಸರ್ವೈಶ್ವರ್ಯ ಸಂಪನ್ನನಾದುದರಿಂದ ಸರ್ವೇಶ್ವರೇಶ್ವರನು, ಸರ್ವಲೋಕಂಗಳ್ಗೆಯುಂ ಶಿಕ್ಷಾವಿಧಾಯಕನು, ಆತನ ಅಧೀನದಲ್ಲಿಯೆ, ಈ ಜಗವಿರುವುದು. ಲೋಕವಲ್ಲಿ ಸರ್ವಸಮವಾಗಿ ಮಧ್ಯಸ್ಥನಾದ ಅರಸಿನಿಂದ ದಂಡಾರ್ಹರು ದಂಡಿಸಲ್ಪಡುವರಲ್ಲವೆ? ದಂಡಿಸದಿರ್ದೊಡೆ ಪುಂಡುಗಾರರ ಆಟೋಪವೆಂತು ಅಡಗುವುದು. ಆದುದರಿಂದ ಆರು ಕೆಲಬರು ಮತ್ಸ್ಯಂಗಳೋ ಪಾದಿಯಲ್ಲಿ ಅಬಲರಂ ಬಾಧಿಸುತ್ತ ರಾಜದ್ರೋಹಮಂ ಮಾಡುತಿರುವರೋ, ಆ ದುರ್ಜನರು ಪುತ್ರಮಿತ್ರ ಪಶುಬಾಂಧವ ಸಹಿತರಾಗಿ ಭೂಪಾಲಕರಿಂದ ಶಿಕ್ಷಿಸಲ್ಪಡಲೇಬೇಕು.

ಎಲೌ ಮೇನಕೆಯೆ! ಈ ಈಶ್ವರಂಗೆ ಮಾವನಾದ ದಕ್ಷಬ್ರಹ್ಮನು, ತನ್ನ ಮಗಳಾದ ಸತೀದೇವಿಯಂ ಕಂಡರೂ ಮೂಢಾತ್ಮನಾದುದರಿಂದ ಆಕೆಯ ಮುಂ ಗಡೆಯಲ್ಲಿಯೇ ಆಕಸ್ಮಿಕವಾಗಿ, ಸಕಲ ದೋಷರಹಿತನಾದ ದೇವೇಶ್ವರನಾದ ಶಿವನಂ ಬಹುವಾಗಿ ನಿಂದಿಸಿದನು. ಈ ಶಿವನಿಂದೆ ಯಿಂದಾದ ಬಹುವಿಧವಾದ

ಪಾಪದಿಂದಲೆ, ಶಿವನು ಆ ದಕ್ಷಬ್ರಹ್ಮನನ್ನು ಆತನ ಋತ್ವಿಕ್ಕುಗಳ್ವೆರಸಿ ಶಿಕ್ಷಿಸಿದನು
ಆಗ ಬ್ರಹ್ಮಾದಿ ದೇವತೆಗಳೂ ಸಹಾ ಅವರವರ ದೋಷಾನುಗುಣವಾಗಿ ಆ ಶಿವ
ನಿಂದಲೇ ದಂಡಿಸಲ್ಪಟ್ಟರು. ಎಲೌ ಶೋಭನಾಂಗಿಯೆ! ಅದುಕಾರಣದಿಂ
ಮಹೇಶ್ವರನ ವಿಷಯದಲ್ಲಿ ಯಥಾರ್ಥವಾಗಿ ದುರ್ಬುದ್ಧಿಯಂ ಮಾಡಬೇಡ, ನನ್ನ
ವಚನದಲ್ಲಿ ನಿಸ್ಸಂದೇಹವಾಗಿರು. ಸದಾಶಿವನಾಗಿ ಶಂಕರನಾಗಿ ಮಹಾದೇವ
ನಾಗಿ ಚಂದ್ರಶೇಖರನಾಗಿ, ಮೃಡನಾದ ಸುಮಂಗಳನಾದ ಶಂಭುವಿನ ವಿಷಯ
ದಲ್ಲಿ, ಸಂಶಯ ಮಾಡಬೇಡ. ನಿನ್ನನ್ನು ನಾನು ಯೋಗಿನಿಯರೊಳಗೆ ಶ್ರೇಷ್ಠ
ಳೆಂದು ತಿಳಿದುಕೊಂಡಿದ್ದೇನೆ. ಆದಕಾರಣದಿಂ ನೀನು ರುದ್ರದೇವರಿಗೋಸುಗ
ಕನ್ಯಾದಾನವುಂ ಮಾಡಿದೆಯಾದೊಡೆ, ಧನ್ಯೆಯಾಗಿ ಕೃತಕೃತ್ಯೆಯಾಗುತ್ತಿದ್ದಿ;
ಈಗ ಬಂದಿರ್ಪ ಮುನಿಗಳಾದೊಡೆ ಪ್ರಖ್ಯಾತರಾಗಿ ಬ್ರಹ್ಮವಾದಿಗಳಾದ ಸಪ್ತ
ಋಷಿಗಳು ಇವರು ಆ ಶಿವನ ಭಕ್ತಿಯಿಂದಲೇ ಭಾವಿತಚಿತ್ತರಾಗಿ ಆತನನ್ನೆ ಮರೆ
ಹೊಕ್ಕಿರುವರು; ಅಂತಹ ಈ ಸಪ್ತ ಋಷಿಗಳಿಗೆ ನಮಸ್ಕಾರವುಂ ಮಾಡಿ, ದಯಾ
ಪರರಾದ ಇವರಂ ಪ್ರಾರ್ಥಿಸು. ಎಲೌ ಮೇನಕೆಯೆ! ನೀನು ನಿಸ್ಸಂದೇಹ
ವಾಗಿ ಸಂತೋಷದಿಂದ ಈ ಕುಮಾರತಿಯನ್ನು ತ್ರಿನಾಟಾ ಕೊಡುವೆನೆಂದು
ಹೇಳು ಯೆಂಬದಾಗಿ ಅರುಂಧತಿಯು ನುಡಿದಳು.

ಅನಂತರದಲ್ಲಿ ಮೇನಕೆಯು ಅರುಂಧತಿಯ ವಾಕ್ಯದಿಂದ, ಶಿವನನ್ನು
ದೇವವಂದಿತನೆಂದು ತಿಳಿದು ಸಂದೇಹವುಂ ಬಿಟ್ಟು, ಆಗ ಅತ್ರಿ ಮೊದಲಾದ
ಸಪ್ತ ಋಷಿಗಳನ್ನು ಕುರಿತು ನಮಸ್ಕರಿಸಿ ಯಿಂತು ಪ್ರಾರ್ಥಿಸಿದಳು.

ಸಪ್ತರ್ಷಿಗಳಲ್ಲಿ ಮೇನಕಾದೇವಿಯ ಪ್ರಾರ್ಥನೆ, ಹರ ಪಾರ್ವತಿ ಯರ ವಿವಾಹ ನಿಶ್ಚಯ.

ಎಲೌ ಸಪ್ತ ಋಷಿಗಳಿರಾ! ನಾನು ನಿಮಗೆಲ್ಲರ್ಗೆಯುಂ ತಂಗಿಯಾದುದ
ರಿಂದ ಸಲಿಗೆಯಲ್ಲಿ ಅರಿಯದೆ ನಾನಾಡಿದ ನಿಂದಿತೋಕ್ತಿಗಳನ್ನು ಕ್ಷಮಿಸಬೇಕು.
ನನ್ನ ಮಗಳಾದ ಪಾರ್ವತಿಯುಂ ಆ ಮಹೇಶ್ವರಂ ವಿವಾಹವನೆಂತು ಯೆಸಗು
ವನೋ. ಅಂತು ಚೆನ್ನಾಗಿ ಉಪಾಯವುಂ ನೀವೆಲ್ಲರುಂ ಮಾಡಿರೆಂದು ಪ್ರಾರ್ಥಿಸಿ
ನಮಸ್ಕರಿಸಿದಳು. ಆಗ ಅವರುಗಳು ಆ ಅದ್ರಿರಾಜ ಪತ್ನಿಯಾದ ಮೇನಕೆಯುಂ
ಕೊಂಡಾಡುತ್ತ, ಮೃದುಭಾಷಿಗಳಾಗಿ ಅದ್ರಿರಾಜನಂ ಕುರಿತು, ಎಲೈ ಪರ್ವತ
ರಾಜನೆ! ಈ ಪಾರ್ವತೀದೇವಿಯು ಕೈಯಲ್ಲಿ ಫಲವುಂ ಪಿಡಿಯಲಿ; ಈಕೆಯನ್ನು
ತೊಡೆಯ ಮೇಲೆ ಕುಳ್ಳಿರಿಸಿಕೋ ಎಂದು ನುಡಿದ ಬಳಿಕ, ಹಾಗೆಯೇ ಅರುಂ
ಧತಿಯೂ ಮಿಕ್ಕಿನ ಮುನಿಪತ್ನಿಯರುಂ ನುಡಿವುತ್ತಿರಲಾಗಿ, ಅದ್ರಿರಾಜನು
ಕಲ್ಯಾಣಿಯಾದ ಪಾರ್ವತೀದೇವಿಯುಂ ತೊಡೆಯಮೇಲೆ ಕುಳ್ಳಿರಿಸಿಕೊಂಡಿರುತಿರೆ

ಆಗ ಅರುಂಧತೀದೇವಿಯು ಮಿಕ್ಕ ಮುನಿಪತ್ನಿಯರ್ವೆರೆಸಿ ಫಲಂಗಳಂ ಪಾಣಿದ್ವಯದಿಂದ ಪಾರ್ವತಿಯ ಹಸ್ತದ್ವಯದಲ್ಲಿ ಸಮರ್ಪಿಸಿ, ಆ ದೇವಿಯ ಪಾದ ಪಂಕಜಕ್ಕೆ ನಮಿಸಿ, ಜಗನ್ಮಾತೆಯಾಗಿ ಶರ್ವಾಣಿಯಾದ ಈ ಸರ್ವ ಮಂಗಳೆಯು ಅನ್ಯರ್ಗೆ ಸುಲಭವಲ್ಲ, ಶಿವನ ತೊಡೆಯನ್ನೇರಲಿ, ಈಕೆಯಿಂದ ಭಗವಂತನಾದ ಈಶ್ವರನು ಗ್ರುಹಸ್ಥನಾಗಲಿ, ಆ ಶಿವಂಗೆ ಈಕೆಯು ಪತ್ನಿಯಾಗಲಿ, ವಿಚಿತ್ರಕೃತ್ಯವುಳ್ಳ ಇವರೀರ್ವರಿಂದಲುಂ ಜಗತ್ತು ಸೃಷ್ಟಿಸಲ್ಪಟ್ಟದು, ಮತ್ತೆ ರಕ್ಷಿಸಲ್ಪಟ್ಟುದೆಂದು ಸಪ್ತ ಋಷಿ ಪತ್ನಿಯರ್ ನುಡಿದ ಬಳಿಕ, ಪರ್ವತರಾಜನು ಮುನಿಗಳೆಲ್ಲರ್ಗೆಯುಂ ನಮಿಸಿ, ಕೈಗಳಂ ಮುಗಿದು ಎಲೈ ಸಪ್ತ ಋಷಿಗಳಿರಾ! ಆವ ಮುಹೂರ್ತವು ಶುಭಕರವಾಗಿಹುದು? ಚಂದ್ರತಾರಾ ಬಲಾನ್ವಿತವಾದ ಕಾಲವಾವುದು? ಆ ಶಿವನಿಗುಂ ಈ ಪಾರ್ವತೀದೇವಿಗುಂ ರಾಶಿನಕ್ಷತ್ರಾದಿಗಳ ಅನುಕೂಲವನ್ನು ಚನ್ನಾಗಿ ವಿಚಾರಿಸಿ ನಮಗೆ ನೀವು ಪೇಳ್ವುದೆಂದು ನುಡಿದನು. ಬಳಿಕ ಮುನಿಶ್ರೇಷ್ಠರು ಆ ವಚನಮುಂ ಕೇಳ್ದು ಹರ್ಷಗೊಂಡು ಗಿರಿರಾಜನಂ ಕುರಿತು, ಎಲೈ ಪರ್ವತರಾಜನೆ! ನಾಳೆ ಉತ್ತರ ಫಲ್ಗುನೀ ನಕ್ಷತ್ರದಲ್ಲಿ ಶುಭ ಮುಹೂರ್ತವಿರುವುದು. ರಾತ್ರೆಯಲ್ಲಿ ನವಮ ಪಂಚಮ ಶುದ್ಧಿಯಲ್ಲಿ ಈ ಪಾರ್ವತಿಯು ಈ ಶಿವನಿಗೋಸುಗ ಕೊಡಲ್ಪಡಬಹುದು. ಸಕಲ ಬಂಧುವಾದ ಮಹೇಶ್ವರಂಗೆ ಸರ್ವಾನುಕೂಲ್ಯವು ಉಂಟು, ಎಲೈ ಗಿರಿರಾಜನೆ! ಈ ವಿವಾಹ ಮಹೋತ್ಸವಮುಂ ನೋಡಲ್ಬಯಸಿ ಬಂದ ಸಕಲ ಜನರ್ಗೆಯುಂ ಅತ್ಯಂತ ಸತ್ಕಾರಯೋಗ್ಯಮಪ್ಪಂತು, ಸಕಲ ಸಂಭಾರಂಗಳು ಸಂಗ್ರಹಿಸಲ್ಪಡಬೇಕು. ನಾಳೆ ಪ್ರಾತಃಕಾಲದಲ್ಲಿ ಮಹೇಶ್ವರಂಗೆ ಕಲ್ಯಾಣ ಮಹೋತ್ಸವವು. ನಿನಗೆ ಕ್ಷೇಮವಾಗಲಿ, ನಾವು ತೆರಳುವೆವೆಂದು ನುಡಿದು ದೇವದೇವನಾದ ಶಿವನ ಸನ್ನಿಧಾನಮನ್ನೈದಿದರು.

ಬಳಿಕ ಹಿಮವತ್ಪರ್ವತರಾಜನು "ಬಂಧು, ಸ್ತ್ರೀ, ಸುತರ್" ವೆರೆಸಿ ಈ ಪರಮೇಶ್ವರನ ಕೃಪೆಯಿಂದಲೇ ಚರಾಚರಾತ್ಮಕಮಾದ ಪ್ರಪಂಚವು, ಅತ್ಯಂತ ಇಷ್ಟಾರ್ಥಮುಂ ಪಡೆದು ಸುಖಿಯಾಗಿ ನಿರ್ಭಯಮಾಗಿದ್ದೀತೆಂಬುದನ್ನರಿಯದೆ, ಈ ವಿವಾಹ ಮಹೋತ್ಸವಮುಂ ನೋಡಲ್ಬಯಸಿದ ಜನರ್ಗೆ ಅವಕಾಶವೆಂತಹುದು? ಅನಿಂದ್ಯನಾದ ಶಿವನು ಯೆಂತು ಬರುತಿರುವನು? ಆ ಮಹೇಶ್ವರಂಗೆ ವಿವಾಹ ಮಹೋತ್ಸವ ಮೆಂತಪ್ಪುದು? ಎಂದು ತನ್ನ ಪತ್ನಿಯಾದ ಮೇನಕೆಯೊಡನೆ ಅತ್ಯಂತ ಚಿಂತಾಕ್ರಾಂತನಾಗಿ ಯೋಚಿಸುತ್ತಿರಲು ಈ ಗಿರಿರಾಜನ ಪುತ್ರನಾದ ಮೈನಾಕನೆಂಬಾತನು ಆ ಪರ್ವತರಾಜನಂ ಕುರಿತು, ಎಲೈ, ಪಿತನೆ! ಶೀಘ್ರದಲ್ಲಿ ವಿಶ್ವಕರ್ಮನಂ ಕರೆಯಿಸಿ, ಇಲ್ಲಿ ಸರ್ವೇಶ್ವರಂಗೆ ಯೋಗ್ಯಮಾದ ಮಹತ್ತಾದ ವಿವಾಹ ಮಂಟಪವು, ಆತನ ಮುಖದಿಂದಲೆ ನಿರ್ಮಿಸಲ್ಪಡಬೇಕು,

ಇತರರಿಂದಾಗತಕ್ಕದ್ದಲ್ಲವು. ಈ ವಿಷಯದಿ ವಿಳಂಬಮಂ ಮಾಡಬೇಡೆಂದು ನುಡಿದನು.

ಅನಂತರದಲ್ಲಿ ಪರ್ವತರಾಜನು ಸಂತೋಷದಿಂದ ತತ್ಕ್ಷಣದಲ್ಲಿಯೇ ದೇವ ಶಿಲ್ಪಿಗಳಲ್ಲಿ ಶ್ರೇಷ್ಠನಾದ ವಿಶ್ವಕರ್ಮನಂ ಕರೆಯಿಸುತ್ತಿರೆ; ಶೀಘ್ರದಲ್ಲಿ ಆ ವಿಶ್ವಕರ್ಮನು ಬಂದು ಆ ಗಿರಿರಾಜನ ಮುಂದುಗಡೆಯಲ್ಲಿ ಕೈಗಳಂ ಮುಗಿದು ಆವಿರ್ಭವಿಸುತ್ತಿರಲಾಗಿ; ಪರ್ವತರಾಜನು ಆತನನ್ನು ಸ್ವಾಗತೋಕ್ತಿ ಆಸನ ಅರ್ಘ್ಯಾದಿಗಳಿಂದುಪಚರಿಸಿ, ಬಳಿಕ ಆದರದಿಂ ಆತನಂ ಕುರಿತಿಂತೆಂದನು. ಎಲೈ ವಿಶ್ವಕರ್ಮನೆ! ನೀನು ಶಿಲ್ಪಿಗಳಿಗೆಲ್ಲರಿಗುಂ ಒಡೆಯನು. ನಾನು ನಾಳೆ ಪ್ರಾತಃಕಾಲದಲ್ಲಿ ಶಿವಪ್ರದನಾಗಿ ಜಗನ್ನಾಯಕನಾದ ಪರಮೇಶ್ವರಂಗೆ ಈ ಪಾರ್ವತಿಯೆಂಬ ಕನ್ನಿಕೆಯನ್ನು ಕೊಟ್ಟು ಪಾಣಿಗ್ರಹಣಮಂ ಮಾಡಿಸುವೆನು. ಆದುಕಾರಣದಿಂದ ನೀನು ಅತ್ಯದ್ಭುತವಾಗಿ ಅತಿ ವಿಶಾಲಮಾದ, ವಿಚಿತ್ರಾಢ್ಯ ಮಾಗಿ ಬಹಳ ಶಾಲೆಗಳುಳ್ಳ ಚಿತ್ರದೊಡಗೂಡಿ, ಮತ್ತೆಲ್ಲಿಯುಂ ಈ ಪ್ರಕಾರ ವಿಲ್ಲವೆಂಬಂತೆ; ಪ್ರಯತ್ನದಿಂ ಕಲ್ಯಾಣಮಂಟಪಮಂ ಶೀಘ್ರದಿಂ ನಿರ್ಮಿಪು ದೆಂದು ನುಡಿದು ಆ ವಿಶ್ವಕರ್ಮನನ್ನು ವಸ್ತ್ರಮಾಲ್ಯಾನು ಲೇಪನಂಗಳಿಂ ದುಪ ಚರಿಸಿದನು. ಬಳಿಕ ಸಂತುಷ್ಟಚಿತ್ತನಾದ ಆ ವಿಶ್ವಕರ್ಮನೆಂಬ ಶಿಲ್ಪಿಯು; ಅತಿ ಸಂಭ್ರಮದಿಂದ ಶೀಘ್ರದಲ್ಲಿ ಮಾಣಿಕ್ಯಂಗಳಿಂ ಮನೋಹರಮಾದ ಮಂಟಪ ವನ್ನು ಮನದಿಂದಲೇ ನಿರ್ಮಿಸಿದನು ಅದೆಂತೆನೆ,

ವಿವಾಹಮಂಟಪ ವರ್ಣನೆಯು.

ಅಗಲ ನೀಳಂಗಳಿಂದ ದೇದೀಪ್ಯಮಾನಮಾದ, ವಿಶಾಲಂಗಳಾದ ಅನೇಕ ಶಾಲೆಗಳಿಂದ ವಿರಾಜಿತಮಾಗಿ, ಲಕ್ಷಯೋಜನ ವಿಸ್ತೀರ್ಣಮಾದ ಸಾವಿರ ನೆಲೆಯು ಉಪ್ಪರಿಗೆಗಳಿಂದ ಆಕಾಶವಂ ಸೋಂಕುವಂತಿರ್ಪ; ಮತ್ತೆ ಕೆಲವು ಪ್ರದೇಶಂಗ ಳಲ್ಲಿ ಜಲಸಿಭಂಗಳಾದ ರತ್ನಂಗಳಿಂದ, ನಿರ್ಮಾಣ ಕುಶಲತೆಯಿಂದಲೇ ತೆರೆಗಳ ಪರಂಪರೆಗಳಿಂದ ನಿಬಿಡಮಾದ ಸಮುದ್ರರಾಜನಂತಿಹ ಇನ್ನು ಕೆಲತಾವುಗಳಲ್ಲಿ ಪರ್ವತಸಮಾನಾಕಾರಮಾದ ಜಲಾಶಯಂಗಳಿಂ ಪರಿವೃತ್ತಮಾಗಿ, ಮತ್ತೆ ಕೆಲ ವೆಡೆಯಲ್ಲಿ ಮಡುಗಳಿಂದಾದ ಭ್ರಮೆಯಂ ಮಾಡುತಿರ್ಪ ಕೃತ್ಯ ಮಧ್ಯಂಗಳಿಂ ಮನೋಹರಮಾಗಿ, ಮತ್ತೆ ಕೆಲವೆಡೆಯಲ್ಲಿ ಕುಡ್ಯಪ್ರದೇಶ ನಿಭಂಗಳಾದ ದ್ವಾರ ಪಂಜ್ತಗಳಿಂದ ಅದ್ಭುತಮಾಗಿ, ಇನ್ನು ಕೆಲವೆಡೆಯಲ್ಲಿ ಆಕಾಶ ಸಮಾನಮಾದ ಭಿತ್ತಿಯುಳ್ಳದ್ದಾಗಿ, ಹಾಗೆ ಭಿತ್ತಿಗೆ ಸಮಾನವಾದ ಆಕಾಶವುಳ್ಳದ್ದಾಗಿ, ಮತ್ತೆ ಕೆಲಸ್ಥಳಗಳಲ್ಲಿ ಸ್ತಂಭಸಮಾನವಾದ ಆಕಾರವುಳ್ಳ ಆಕಾಶಪಂಜ್ತಯಿಂದುಜ್ವಲ ಮಾಗಿ, ಮತ್ತೆ ಕೆಲವೆಡೆಯಲ್ಲಿ ಆಕಾಶದಂತಿರ್ಪ ಕಂಭಗಳಿಂದೆಲ್ಲಾ ಕಡೆಯಲ್ಲಿ

ಯುಂ ಅಲಂಕೃತಮಾಗಿ, ಅನೇಕ ರತ್ನಸ್ತಂಭಗಳ್ವೆರಸಿದ ಮಂಟಪ ವಿಶೇಷಂಗಳಿಂ ಶೋಭಿತಮಾಗಿ ಮೌಕ್ತಿಕಮಣಿ ಗವಾಕ್ಷಿಗಳಿಂ ದೊಡಗೂಡಿ, ಪವಳದ ಬಾಗಿಲ್ಗಳುಂ ಬಹಿರ್ದ್ವಾರಂಗಳುಂ ಉಳ್ಳದ್ದಾಗಿ, ವಜ್ರಂಗಳಿಂ ನೀಲಂಗಳಿಂ ನಿರ್ಮಿತಮಾದ ಸೋಪಾನಂಗಳಿಂ, ಸ್ವಚ್ಛವಾದ ಸ್ಫಟಿಕಂಗಳಿಂ ನಿರ್ಮಿತಮಾದ ಜಗಲಿಗಳಿಂದುಪಲಕ್ಷಿತಮಾಗಿ, ಅತ್ಯುನ್ನತಮಾದ ಧ್ವಜಾಗ್ರಗಳಿಂ ತಡೆಯಲ್ಪಟ್ಟ ಸೂರ್ಯನೂ ಮೇಘವೂ ಉಳ್ಳದ್ದಾಗಿ, ಮಹಾವೃಷಭಂಗಳಿಂ ನಿಬಿಡಿತಮಾಗಿ, ಪ್ರಾಕಾರಾಗ್ರಗಳಿಂ ಮನೋಹರಮಾಗಿ, ಈ ಪ್ರಕಾರದಿಂ ವಿಚಿತ್ರವರ್ಣಮಾದ ಮಣಿಮಂಟಪಮಂ ಸಂತೋಷದಿಂದ ಮನದಿಂದಲೇ ನಿರ್ಮಿಸಿ, ಆದರಣೆಯೊಡಗೂಡಿ ಗಿರಿರಾಜಂಗೆ ತೋರಿಸುತ್ತಿರ್ದನೆಂಬಲ್ಲಿಗೆ, ಇಂತು ಕರ್ಣಾಟಭಾಷಾ ವಿರಚಿತಮಾದ, ಶ್ರೀಕೃಷ್ಣರಾಜವಾಣೀವಿಲಾಸವೆಂಬ ಶಂಕರಸಂಹಿತೆಯೊಳು ಶಿವರಹಸ್ಯಖಂಡದೋಳ್ ಸಂಭವಕಾಂಡದ ಹದಿನೇಳನೆಯ ಅಧ್ಯಾಯವು ಸಂಪೂರ್ಣಂ.

ಹದಿನೆಂಟನೆಯ ಅಧ್ಯಾಯವು.

ಮದವಣಿಗಿತಿಯಾದ ಪಾರ್ವತಿದೇವಿಯ ಶೃಂಗಾರವರ್ಣನೆ.

ಸೂತರವಚನವು :— ಎಲೈ ಮುನಿಗಳಿರಾ ! ಅನಂತರದಲ್ಲಿ ಗಿರಿರಾಜನು ಕುಮಾರತಿಯ ಕಲ್ಯಾಣಮಂಟಪಮಂ ನೋಡಿ, ಆಗ ವಿಶ್ವಕರ್ಮನಂ ಅದ್ಭುತಂಗಳಾದ ದಿವ್ಯ ಭೋಗಂಗಳಿಂದುಪಚರಿಸಿ, ಸಂತೋಷದಿಂದ ನಾಳೆ ಪ್ರಾತಃಕಾಲದಲ್ಲಿ ವಿವಾಹ ಮಹೋತ್ಸವಾರ್ಥವಾಗಿ ನೀನು ಬರುವುದೆಂದು ಹೇಳಿ, ಆ ವಿಶ್ವಕರ್ಮನಂ ಕಳುಪಿ, ಶೀಘ್ರದಿಂದ ಪಾರ್ವತೀದೇವಿಯನ್ನು ದಿವ್ಯಮಾಲ್ಯಾನುಲೇಪನಂಗಳಿಂದ ಕಮಲಾಕ್ಷಿಯರಾದ ಮುತ್ತೈದೆಯರು ಅಲಂಕಾರಮಂ ಮಾಳ್ಪುದೆಂದು ಆಜ್ಞಾಪಿಸುತ್ತಿರಲಾಗಿ, ಅಲಂಕಾರ ನಿಪುಣೆಯರಾದ ಮುತ್ತೈದೆಯರು ಆ ಪಾರ್ವತೀದೇವಿಯಂ ಅಲಂಕರಿಸಿದರದೆಂತೆನೆ,

ಆ ಕಾಲದಲ್ಲಿ ಕಮಲದಂತೆ ಕಂಗೊಳಿಪ ವಿಸ್ತಾರಮಾದ ಕಣ್ಗಳುಳ್ಳ ಅಲಂಕಾರ ಚತುರೆಯರಾದ ಅನೇಕ ಸ್ತ್ರೀಯರು ಸುಮಂಗಳೆಯಾದ ಆ ದೇವಿಯನ್ನು ಮಂಗಳಕರಂಗಳಾದ ಆಭರಣಂಗಳಿಂದಲಂಕರಿಸಿ, ನವರತ್ನ ಖಚಿತಮಾದ ದಿವ್ಯ ಪೀಠದಮೇಲೆ ಪೂರ್ವಾಭಿಮುಖಮಾಗಿ ಕುಳ್ಳಿರಿಸಿ, ಮಂಗಳಾರ್ಥಮಾಗಿ ಸುಸ್ವರದಿಂ ಹಾಡುಗಳಂ ಹಾಡುತ್ತ "ಶಂಖ, ದುಂದುಭಿ, ಮೃದಂಗ, ಶೃಂಗ" ಎಂಬಿವೇ ಮೊದಲಾದ ಮಂಗಳವಾದ್ಯಗಳ್ವೆರಸಿ ಪರಿಮಳಯುಕ್ತಮಾದ ತೈಲದಿಂ ಸರ್ವಾಂಗಗಳನ್ನು ಅಭ್ಯಂಗನಂಗೈದು ; ಸುಖಮಪ್ಪಂತು ಪ್ರಥಮತಃ

ಉಷ್ಣೋದಕದಿಂ ಅಭಿಷೇಕಮನ್ನೆಸಗಿ! ಶುಭಕರಂಗಳಾದ ಸುವಾಸನೆಯಾಗಿರ್ಪ * ಶಾಲಿಚೂರ್ಣ, ಮುದ್ಗಪಿಷ್ಟಾದಿಗಳಿಂ ಬೆರೆದರಸಂಗಳಿಂದ ಉಪಮಾರ್ಜನೆಯಂ ಮಾಡಿ, ಮರಳಿ ಪರಿಮಳಯುಕ್ತಂಗಳಾಗಿಯುಂ ಶೀತಳಂಗಳಾಗಿಯೂ ನಿರ್ಮಲ ಮಾಗಿಯುಂ ಶುಭಕರಂಗಳಾಗಿಯೂ ಇರುವ "ಗಂಗಾ, ತುಂಗಾ, ಯಮುನಾ" ಎಂಬಿವು ಮೊದಲಾದ ಸರ್ವತೀರ್ಥೋದಕಂಗಳಿಂದ ಮಂಗಳಸ್ನಾನಮಂ ಮಾಡಿಸಿದರು. ಆಗ ಜ್ಞಾನದಲ್ಲಿಯುಂ ವಯಸ್ಸಿನಲ್ಲಿಯುಂ ವೃದ್ಧರಾದ ಬ್ರಾಹ್ಮ ಣೋತ್ತಮರು ದೇವೀಸೂಕ್ತಂಗಳಂ ಪಠಿಸುತ್ತಿರಲು ನೋಡುವರೆಲ್ಲರ್ಗೆಯುಂ ನೇತ್ರದ್ವಯದಿಂ ಆನಂದಾಶ್ರುಗಳು ಸುರಿದವು ಈ ಪ್ರಕಾರದಿಂದ ಸಮಸ್ತರಾದ ಮುನಿಪತ್ನಿಗಳುಂ ದೇವತಾಸ್ತ್ರೀಯರುಂ ಮತ್ತೆ "ಅದಿತಿ, ದಿತಿ, ಸುಪರ್ಣಿ, ಸುರಸೆ, ಸ್ವಾಹಾಸ್ವಧಾ, ಗಾರ್ಗಿ, ಅರುಂಧತಿ" ಇವರೆಲ್ಲರುಂ ಜಗಜ್ಜನನಿಯಾದ ಆ ದೇವಿಗೆ ಸುವರ್ಣ ಕಲಶಂಗಳಿಂದ ಮೆಲ್ಲಮೆಲ್ಲನೆ ಅಭ್ಯಂಗಸ್ನಾನಮನೆಸಗಿ, ಕನಕ ಕಮಲಂಗಳಿಂ ಕೋಮಲಂಗಳಾದ ಸರ್ವಾಂಗಗಳನ್ನೊರೆಸಿ, ಶುಭ್ರಮಾದ ವಸ್ತ್ರದಿಂದ ಅನ್ವರ್ತನಂಗೈದು, ಬಹು ಬೆಲೆಯುಳ್ಳ ದುಕೂಲವನ್ನುಡಿಸಿ, ಪಾದಾದಿ ಕೇಶ ಪರ್‍ಯಂತವುಂ ಭೂಷಣಂಗಳಿಂದ ಅಲಂಕರಿಸಿದರು. ಆಗ ಅಲಂಕಾರ ಚತುರೆಯರಾದ ಕೆಲಜಾಣ್ಮೆಯರು ಆ ಪಾರ್ವತೀದೇವಿಯ ಕಮಲ ಕೋಮಲಂಗ ಳಾದ ಪಾದಂಗಳನ್ನು ನೂತನಮಾದ † ಅಲತಿಗೆಯ ರಸದಿಂದ ಮಂಗಳಾರ್ಥ ಮಾಗಿ ರಂಜನೆಗೆಯ್ದು ಇಂತೆಂದರು, ಎಲೌ ಪೂಜ್ಯಳಾದ ಗಿರಿಜೆಯೆ! ಕನ್ನಲ ಕೋಮಲಂಗಳಾದ ನಿನ್ನ ಪಾದಂಗಳನ್ನು ಜಗತ್ಪತಿಯಾದ ಶಿವನ ಮಕುಟದಲ್ಲಿ ಚಂದ್ರಕಲೆಯೊಡಗೂಡಿರಿಸೆಂದು ನುಡಿಯುತ್ತಿರೆ, ಗಿರಿಜೆಯವರನ್ನು ಮುಗುಳ್ನಗೆ ವೆರಸಿ ನೋಡುತ್ತಾ ತನ್ನ ಕೈಯೊಳ್ಪಿನೋದದಿಂ ಪಿಡಿದಿರ್ದ ತಾವರೆಯಿಂದ ಪ್ರಹರಿಸಿದಳು. ಬಳಿಕ ಅರುಂಧತಿ ಮೊದಲಾದ ಸ್ತ್ರೀಯರು ಆಕೆಯ ಪಾದಾರ ವಿಂದಗಳ್ಗೆ ರತ್ನಖಚಿತಂಗಳಾದ ಕಾಲ ಕಡಗಗಳನ್ನೂ ಶುಭಕರಂಗಳಾದ ಕಾಲುಂ ಡಿಗೆಗಳನ್ನೂ ತೊಡಿಸಿದರು. ಆಗ ಶೋಭನಾಂಗಿಯಾದ ಪಾರ್ವತಿಯ ಮಧ್ಯ ಪ್ರದೇಶವು ಕಾಂಚೀಸೂತ್ರದಿಂದ ಪರಿವೇಷ್ಟಿತಮಾಗಿ, ಈಶ್ವರನ ಕಣ್ಗಳೆಂಬ ಖಂಜರೀಟ ಪಕ್ಷಿಗಳ ನಪಹರಿಸಲಿಚ್ಛೆಯಿಂದ ಕಾಲ್ಬಳೆಯಂ ಧರಿಸಿದಂತಿರ್ದುದು. ಮತ್ತೆ ವಿಶಾಲಾಕ್ಷಿಯಾದ ಗಿರಿಜೆಯ ಭುಜದ್ವಯವು ನಾನಾವಿಧಾಭರಣಂಗಳಿಂ ಮೊಡಗೂಡಿ; ಮಕರಧ್ವಜನಿಂದ ಮಹೇಶ್ವರಂಗೆ ಕಂಠಬಂಧನ ರಜ್ಜುಗಳಾಗಿ ಮಾಡಲ್ಪಟ್ಟವು. ಕೃಶಾಂಗಿಯಾದ ಆಕೆಯ ಉಜ್ವಲಮಾದ ದೇಹವು ನಾನಾ ವಿಧಾಭರಣಂಗಳಿಂದ; ಇಂದ್ರಕೋದಂಡ ಖಂಡ ಮಂಡಲ ಮಂಡಿತಮಾದ

* ಶಾಲಿ=ಭತ್ತ. ಮುದ್ಗಪಿಷ್ಟ=ಹೆಸರನಪುಡಿ. † ಅಲತಿಗೆ=ಬಣ್ಣದರಗು.

ಆಕಾಶದಂತೆಸೆದುದು. ಮತ್ತೆ ಮುಕ್ತಾಹಾರಂಗಳ್ವೆರೆಸಿ ತಾವರೆಯ ಮೊಗ್ಗೆಗಳಂತಿರ್ಪ ಸ್ತನಂಗಳೆರಡುಂ ಆಕೆಯ ಕಾಂಚೀದಾಮದಲ್ಲಿರ್ಪ ನೀಲಮಣಿ ಕಾಂತಿಯಿಂದ ನೀಲಮೇಘಂಗಳಂತೆಸೆದವು. ಇದಲ್ಲದೆ ಅನೇಕಾಭರಣಂಗಳಿಂ ಡಾಚ್ಛಾದಿತಮಾದ ವಕ್ಷಸ್ಥಲವು ವರ್ಷಾಕಾಲದಲ್ಲಿ ಇಂದ್ರಚಾಪಂಗಳ ಸಮೂಹ ದಿಂದಲಂಕೃತಮಾದ ಗಗನದಂತಿರ್ದುದು. ಮತ್ತೂ ಅತ್ಯಂತ ಪಕ್ವಮಾದ ತೊಂಡೆವಣ್ಣಿನಂತೆ ತಾಮ್ರವರ್ಣಮಾದ ದೇವಿಯ ಚೆಂದುಟಿಯು ಸಂಧ್ಯಾ ಮೇಘಂಗಳ ಲೇಶಂಗಳಿಂದೊಡಗೂಡಿದ ಚಂದ್ರಮಂಡಲದಂತೆ ಬೆಳಗುತಿತ್ತು. ಮತ್ತಮಾದೇವಿಯ ನಾಸಾಗ್ರವು ಶೋಭನಮಾದ ಮೌಕ್ತಿಕದಿಂ ಯುಕ್ತಮಾಗಿ ಸುವರ್ಣಮಯವಾದ ಸರಳಿನಿಂದ ಅತಿ ಮನೋಹರಮಾಗಿರ್ದುದು. ಇದಲ್ಲದೆ ಆಕೆಯ ಕರ್ಣಂಗಳೆರಡುಂ ರತ್ನಮಯಂಗಳಾದ ಹರಳೋಲೆಗಳ ಕಾಂತಿಯಿಂದ ಆ ಪಾರ್ವತಿಯ ಮುಖಾರವಿಂದಕ್ಕೆ ಅತುಲಮಾದ ಅತ್ಯಂತಕಾಂತಿಯಂ ಅಭಿವೃದ್ಧಮಂ ಮಾಡಿದವು. ಮತ್ತೂ ಶುಭಕರಮಾದ ಆ ಪಾರ್ವತೀದೇವಿಯ ಪುಷ್ಪಮಾಲಿಕೆಯಿಂದಲಂಕೃತಮಾದ ತುರುಬು ಬಹು ಮನೋಹರಮಾಗಿರ್ದುದು ಕುರುಳ್ಮುದಲುಗಳಿಂದ ವಿರಾಜಿತವಾದ ಆ ದೇವಿಯ ಲಲಾಟವು ಮುತ್ತಿನಬಟ್ಟಿನಿಂದ ಅಲಂಕೃತಮಾದುದು. ಆ ದೇವಿಯ ಅಂಜನಯುಕ್ತಂಗಳಾದ ನೇತ್ರಂಗಳುಂ ಮಹಾಮನೋಹರಂಗಳಾದ ಪುರ್ಬುಗಳೆರಡುಂ ಬಾಣಸಮೇತಮಾಗಿ ಮನೋಹರಮಾದ ಕಾಮನ ಧನುರ್ದ್ವಯದಂತಿರ್ದವು; ಎಲೈ ಮುನಿಗಳಿರಾ! ಸಹಸ್ರಮುಖನಾದ ಶೇಷನಿಂದಲೂ ಬಣ್ಣಿಸಲಸಾಧ್ಯಮಾದ ಆ ದೇವಿಯ ಸೌಂದರ್ಯಾತಿಶಯಮಂ ನಾನೆಂತು ಬಣ್ಣಿಸಿ ಪೇಳಲಿ? ಕೇಶಪಾಶಮಾದಿಯಾಗಿ ಪಾದ ನಖಾಗ್ರ ಪರ್ಯಂತವು ಮಣಿಭೂಷಣಂಗಳಿಂ ಭೂಷಿತಮಾದ ಆ ಪಾರ್ವತೀ ದೇವಿಯ ದೇಹವು ಭೂಷಣಂಗಳ್ಗೆಯುಂ ಭೂಷಣಮಾದುದೇ ಹೊರತು, ಭೂಷಣಂಗಳಿಂದ ಆಕೆಯ ದೇಹಕ್ಕೆ ಯೆಷ್ಟುಮಾತ್ರವು ಭೂಷಣವಾದುದಿಲ್ಲ. ಆಗ ಸ್ತ್ರೀಯರೆಲ್ಲರುಂ ಸರ್ವಾವಯವ ಮನೋಹರೆಯಾದ ಪಾರ್ವತೀದೇವಿಯಂ ನೋಡಿ ಈ ಪಾರ್ವತೀದೇವಿಯಿಂದ ಈಶ್ವರನು ಗೃಹಸ್ಥನಾಗುತಿರುವನು, ಈಶ್ವರಂಗೆ ಈ ಪಾರ್ವತೀದೇವಿಯು ಪತ್ನಿಯಾಗುವಳು, ಅದುಕಾರಣದಿಂದ ಇವರೀರ್ವರ್ಗೆಯುಂ ಇವರೀರ್ವರೇ ಸಮಾನಮಾದ ದಂಪತಿಗಳೇ ಹೊರತು ಮತ್ತಾರು ಇಲ್ಲವೆಂದು ತಿಳಿದರು.

ತದನಂತರದಲ್ಲಿ ಆ ಅರುಂಧತಿ ಮೊದಲಾದ ಮುತ್ತೈದೆಯರು ಗಿರಿರಾಜಂಗೆ ಪಾರ್ವತಿಯು ಅಲಂಕೃತೆಯಾದಳೆಂದು ಪೇಳುತ್ತಿರೆ, ಬಳಿಕ ಆ ಗಿರಿರಾಜನು ಪರಮೇಶ್ವರನ ಸಮೀಪವನ್ನೈದ ಲೋಸುಗ ಬುದ್ಧಿಯಂ ತಾಳ್ದು

ವರನಂ ಕರೆದು ಕನ್ನಿಕೆಯನ್ನೀಯುವುದು, ಬ್ರಾಹ್ಮ್ಯವೆಂಬ ವಿವಾಹವು. ಅದು ಸೂರ್ಯನು ಉತ್ತರಾಯಣ ಮಾರ್ಗಸ್ಥನಾಗುತ್ತಿರಲಾಗಿ ಮಾಡಲ್ಪಡತಕ್ಕದ್ದು. ಆದರಿಂದ ನಾನು ಶೀಘ್ರಮಪ್ಪಂತು ನೀಲಕಂಠನಾದ ಶಿವನಿಗೆ ಪ್ರಿಯಮಾದ ಕೈಲಾಸ ಪರ್ವತಮಂ ಸಾರ್ದು, ಆ ಪರಮೇಶ್ವರನಂ ಕರೆತರಬೇಕೆಂದು ಮನದೊಳಾಲೋಚಿಸಿ ಆ ಕೈಲಾಸ ಪರ್ವತದೊಳಿಹ ರತ್ನಮಯಂಗಳಾದ ಪ್ರಾಕಾರಂಗಳಿಂದಲಂಕೃತಮಾದ ಸಾವಿರ ನೆಲೆಯ ಉಪ್ಪರಿಗೆಗಳಿಂ ಮಂಟಪಂಗಳಿಂದಲೂ ಶೋಭಿತಮಾಗಿ, ಯೆಲ್ಲರ್ಗೆಯುಂ ರಾಜಾಧಿರಾಜನಾದ ಶಂಕರಂಗೆ ಸ್ಥಾನವಾದ, ಆ ಭೋಗಪುರದ ಮೊದಲಭ್ಯಂತರಮಂ ಪ್ರೊಕ್ಕು, ಪ್ರಮಥಾಧಿಪತಿಯಾಗಿ ಸಾಲಂಕಾಯನ ಯೋಗೀಶ್ವರನ ಮುಮ್ಮಗನಾದ ಪ್ರಭುವಾದ ನಂದೀಶ್ವರಂಗೆ ನಮಿಸಿ, ಸನ್ನಿಧಿಯಲ್ಲಿ ಈ ವಾಕ್ಯಮಂ ಬಿನ್ನೈಸಿದನದೆಂತೆನೆ.

ಹಿಮವಂತನು ಪರಶಿವನನ್ನು ಪ್ರಾರ್ಥಿಸುವಿಕೆ.

ಎಲೈ, ಭಗವಂತನಾದ ನಂದಿಕೇಶ್ವರನೆ! ನನ್ನ ಬಿನ್ನಹಮಂ ನೀನು ಕೇಳ್ವುದು. ಈಗ ಬ್ರಾಹ್ಮಣ ಪ್ರಭುವಾದ ಶಿವಂಗೆ ಬ್ರಾಹ್ಮ್ಯಮೆಂಬ ವಿವಾಹದಿಂದಲೆ ನನ್ನ ಕುಮಾರಿಯಾದ ಪಾರ್ವತೀದೇವಿಯಂ ಕೊಡುವೆನು. ಯಜ್ಞಾದಿ ಕಾಲಗಳಲ್ಲಿ ಬಹು ಪ್ರಕಾರದಿಂ ಕರೆಯಲ್ಪಡುವ ಸುಖಕರನಾದ ಪ್ರಭುವಾದ ಶಿವನ ದರ್ಶನಮಂ ಬಯಸಿ ನಿನ್ನನ್ನು ಮರೆಹೊಕ್ಕೆನೆಂದು ಗಿರಿರಾಜನು ಬಿನ್ನೈಸುತ್ತಿರಲಾಗಿ, ಬಳಿಕ ಆ ಭಗವಂತನಾದ ನಂದೀಶ್ವರನು ಮಹೇಶ್ವರನ ಆನುಜ್ಞೆ ಪಡೆದು ಈ ಪರ್ವತರಾಜನಂ ಜಗದೀಶ್ವರನ ಸನ್ನಿಧಾನಮಂ ಕ್ಷಣಮಾತ್ರದಿಂದ ಯೈದಿಸಿದನು. ಅಲ್ಲಿ ಗಿರಿರಾಜನು ಸಿಹ್ಮಾಸನದೊಳಿರುತಿಹ ಜಗತ್ರಯದ ಕ್ಷಣದಲ್ಲಿ ಯೆಚ್ಚರವುಳ್ಳವನಾಗಿ ತ್ರಿಯಂಬಕನಾದ, ಸನಕಾದಿ ಮಹಾ ಯೋಗೀಶ್ವರರಿಂದ ಪರಿವೃತಮಾದ ಸಮೀಪ ಪ್ರದೇಶವುಳ್ಳ ಮತ್ತಾ ಮಹಾ ಮೇರುವನ್ನೆ ಬಿಲ್ಲಂಮಾಡಿದ ಪ್ರಭುವಾದ ಸ್ತುತ್ಯನಾದ ಶಿವಂಗೆ ಪರಮ ಭಕ್ತಿಯಿಂ ಪ್ರಣಾಮಂ ಗೈದು ಸ್ತುತಿಸಿದನು.

ಎಲೈ, ಪರಮಾನಂದಮಯನಾಗಿ ಭುವನಂಗಳ್ಗೆ ಅಧೀಶ್ವರನಾದ ದೇವನೆ! ಸರ್ವೋತ್ಕೃಷ್ಟನಾಗಿ ವರ್ತಿಸು. ಸುರಾಸುರೇಂದ್ರರಿಂ ಪೂಜಿಸಲ್ಪಟ್ಟ ಪಾದಪದ್ಮಂಗಳುಳ್ಳ ಪರಾತ್ಪರನೆ! ಆಪ್ತತೆಯನ್ನೈದಿದ ಭಕ್ತರ ಮನಃಪೀಡೆಯೆಂಬ ಸಂತಾಪಕ್ಕೆ ಮುಖ್ಯಮಾದ ವರ್ಷಾಕಾಲರೂಪನಾದ ಧೂರ್ಜಟಿಯೆ! ಈ ಲೋಕದಲ್ಲಿ ಸುರಾಸುರರು ನಿನ್ನನ್ನು ಪ್ರಸನ್ನನಂ ಮಾಡಿ ಆಶ್ಚರ್ಯಮಂ ಪಡೆದರು. ಇನ್ನು ಆರು ಕೆಲಬರು ನಿನ್ನ ಪಾದಾರವಿಂದಂಗಳನ್ನು ಅರ್ಚಿಸದಿರುವರೋ ಅವರು ದುರ್ಗತಿಯಂ ಪಡೆದು ಸುಮಂಗಳ ಪರಾಙ್ಮುಖರಾಗಿ ಅಮಂಗಳ

ರಾಗಿರುವರು. ಗಿರಿರಾಜನಾದ ನಾನಾದೊಡೆ ಅಖಿಲೇಶ್ವರನಾದ ಶಿವನಂ ಮರೆಹೊಕ್ಕೆನು. ಮತ್ತಂ ಸಕಲ ಲೋಕಂಗಳ್ಗೆಯುಂ ನಿರಂತರದಲ್ಲಿಯುಂ ದಾತನಾದ ಮಹಾತ್ಮನಾಗಿ ಅವ್ಯಯನಾದ ಶಿವನಂ ಯಾಚಕನಾಗೀಗ ಮರೆಹೊಕ್ಕೆನು. ಎಲೈ, ಪರಮೇಶ್ವರನೆ! ಬೇಡಿದರ್ಥಕ್ಕಿಂತಲುಂ ಅಧಿಕ ಫಲವಂ ಕೊಡುವ ನೀನು ನನ್ನ ಪ್ರಾರ್ಥನೆಯಂ ಶೀಘ್ರದಲ್ಲಿ ಪೂರ್ಣಮಂ ಮಾಡೆಂದು ನುಡಿಯುತ್ತ ಮರಳಿ ಮರಳಿ ನಮಸ್ಕರಿಸುತ್ತಿರೆ, ಶತ್ರುಸಂಹಾರಕನಾದ ಆ ಗಿರಿರಾಜಂಗೆ ಪರಮೇಶ್ವರನು ಪ್ರಭುಲಕ್ಷಣಯುತಮಾದ ಗಂಭೀರಮಾದ ವಾಕ್ಕಿನಿಂದ ಈ ವಾಕ್ಯಮಂ ನಿರೂಪಿಸಿದನು.

ಎಲೈ, ಗಿರಿರಾಜನೇ! ನಿನಗೆ ಮಂಗಳವಾಗಲಿ, ಏಳೇಳು ವರವಂ ಕೊಡುವೆನು ಬೇಡುವನಾಗು. ಆವುದು ನಿನಗೀಗ ಬಯಕೆ? ಆ ಬಯಕೆಯನ್ನು ನಿನಗೆ ಕೊಡುವೆನು. ಶೀಘ್ರದಿಂದ ಪೇಳೆಂದು ಗಿರಿರಾಜಂಗೆ ಪರಮೇಶ್ವರನು ನಿರೂಪಿಸುತ್ತಿರ್ದನೆಂಬದಾಗಿ ಸೂತಂ ಶೌನಕಾದಿಗಳ್ಗೆ ಪೇಳಿದನೆಂಬಲ್ಲಿಗೆ ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಶಂಕರಸಂಹಿತೆಯ ಶಿವರಹಸ್ಯ ಖಂಡದೊಳು ಸಂಭವಕಾಂಡದ ಹದಿನೆಂಟನೆಯ ಅಧ್ಯಾಯವು ಸಂಪೂರ್ಣಂ.

ಹತ್ತೊಂಬತ್ತನೆಯ ಅಧ್ಯಾಯವು.

ಪರಶಿವನನ್ನು ಪಾರ್ವತಿಯ ಪಾಣಿಗ್ರಹಣ ಮಾಡೆಂದು ಪ್ರಾರ್ಥಿಸುವಿಕೆ.

ಎಲೈ, ಮುನಿಗಳಿರಾ! ಈ ಪ್ರಕಾರವಾಗಿ ಪರಮೇಶ್ವರನು ವರಪ್ರದಾನಾಭಿಮುಖನಾಗುತ್ತಿರೆ. ಹಿಮವತ್ಪರ್ವತರಾಜನು ಇಂತು ಬಿನ್ನೈಸಿದನು. ಎಲೈ, ಪರಮೇಶ್ವರನೆ! ನನ್ನ ಕುಮಾರಿತಿಯನ್ನು ಕೊಡಲೋಸುಗ ಬಯಸುತ್ತಿರ್ದ್ದೇನೆ. ಆದಕಾರಣ ನೀನು ನಾಳೆ ಪ್ರಾತಃಕಾಲದಲ್ಲಿ ದೇವತೆಗಳ ಸಮೂಹದಿಂದಲೂ ವಿಷ್ಣು ಬ್ರಹ್ಮರಿಂದಲೂ ಸಮಸ್ತರಾದ ಮುನೀಶ್ವರರಿಂದಲು ವೊಡಗೂಡಿ, ನನ್ನ ಓಷಧಿಪ್ರಸ್ಥವೆಂಬ ಪುರದಲ್ಲಿ ನನ್ನ ಗೃಹಕ್ಕೆ ಬಂದು ನನ್ನ ಕುಮಾರಿಯಾದ ಪಾರ್ವತೀದೇವಿಯಂ ಪರಿಗ್ರಹಿಸೆಂದು ಪ್ರಾರ್ಥಿಸಿದನು. ಬಳಿಕ ಪರಮೇಶ್ವರಂ ಹಾಗೆಯೇ ಆಗಲೆಂದು ನುಡಿದು ಪ್ರಸನ್ನಮಾದ ಮನದಿಂದ ಆ ಗಿರಿರಾಜನಂ ಕಳುಹುತ್ತಿರೆ, ಆ ಗಿರಿರಾಜನು ತನ್ನ ಓಷಧಿಪ್ರಸ್ಥಪುರಿಗೆ ತೆರಳಿದನು.

ಬಳಿಕ ಶಿವನು ತನ್ನ ಮುಂದುಗಡೆಯಲ್ಲಿಹ ನಂದೀಶ್ವರನಂ ಕುರಿತು, ಎಲೈ, ಗಣಾಧಿಪತಿಯಾದ ನಂದೀಶ್ವರನೆ! ಅಂಡಂಗಳಲ್ಲಿರ್ಪ ಅಪರಿಮಿತಮಾದ

ತೇಜಸ್ವಿಗಳಂ ಅಸಂಖ್ಯಾಕರಾದ ನನ್ನ ರುದ್ರಗಣಂಗಳಂ ಮತ್ತೂ ಸಾಧ್ಯದೇವತೆಗಳನ್ನೂ ವಿಶ್ವೆದೇವತೆಗಳನ್ನೂ ಸಕಲ ಮುನೀಶ್ವರರನ್ನೂ ಸಹಾ, ಶೀಘ್ರದಲ್ಲಿ ನನ್ನ ಆಜ್ಞೆಯಿಂದ ಈ ಕ್ಷಣದಲ್ಲಿಯೇ ಕರೆಯಿಸೆಂದಾಜ್ಞಾಪಿಸಿದ ಬಳಿಕ, ಶಂಕರಪ್ರಿಯನಾದ ನಂದೀಶ್ವರನು ಶಿರಸಾವಹಿಸಿ ಸಾವಧಾನಮನಸ್ಕನಾಗಿ ಮುಹೂರ್ತಮಾತ್ರ ಮನದೊಳ್ ಆ ಗಣಾಧಿಪತಿಗಳಂ ಸ್ಮರಿಸಿದನದೆಂತೆನೆ.

ಪರಶಿವನು ಪ್ರಮಥಗಣಯುತನಾಗಿ ಓಷಧಿಪ್ರಸ್ಥಪುರ ಪ್ರಯಾಣ ಮಾಡುವಿಕೆ.

ಇಂದ್ರ ಸಹಿತರಾದ ದೇವತೆಗಳನ್ನೂ ವರುಣಾದಿ ದಿಕ್ಪಾಲಕ ಸಮೇತರಾದ ನವಬ್ರಹ್ಮರನ್ನೂ, ಏಕಾದಶ ರುದ್ರರನ್ನೂ ದ್ವಾದಶಾದಿತ್ಯರನ್ನೂ ತ್ರಯೋದಶ ವಿಶ್ವೇದೇವರನ್ನೂ ಹಾಗೆಯೇ ಸಾಧ್ಯದೇವತೆಗಳನ್ನೂ ಪಿತೃದೇವತೆಗಳನ್ನೂ ಸರ್ವಲೋಕಂಗಳ್ಗೆಯುಂ ಆದಿಯಾದ ನಾರಾಯಣನನ್ನೂ, ಆತನ ಅವತಾರಂಗಳನ್ನೂ, ಸಾಕ್ಷಾಚ್ಚತುರ್ಮುಖನಾಗಿ ಪರಮೇಷ್ಠಿಯಾದ ಬ್ರಹ್ಮನನ್ನೂ, ಪಾತಾಳವಾಸಿಗಳಾದ ಸಕಲ ದಾನವರನ್ನೂ, ಕದ್ರುವಿನ ಕುಮಾರರಾದ ಬಹು ಬಲವಂತರಾದ, ಅನಂತ, ವಾಸುಕಿ ಕರ್ಕೋಟಕ ತಕ್ಷಕ, ಕಂಬಳ, ಅಶ್ವತರ, ಶಂಖಪಾಲಕ, ಮಹಾಪದ್ಮ, ಮೊದಲಾದ ಸರ್ಪಶ್ರೇಷ್ಠರನ್ನೂ ಇವರನ್ನೆಲ್ಲರಂ, ಗಣಾಧಿಪತಿಯಾದ ನಂದಿಕೇಶ್ವರಂ ಮನದೊಳ್ ಸ್ಮರಿಸಿದನು. ಮತ್ತೆ ವಿರೋಚನನನ್ನೂ ಬಲಿಯನ್ನೂ ನಮುಚಿಯನ್ನೂ ಬಲಾಸುರನನ್ನೂ ಮಹಾಜಂಭನನ್ನೂ ಹಯಗ್ರೀವನೆಂಬ ದಾನವನನ್ನೂ ಇನ್ನೂ ದೈತ್ಯದಾನವರನ್ನೂ, ಮತ್ತೂ ಪಾತಾಳವಾಸಿಗಳಾದ ಹಾಟಕೇಶ್ವರ ಸಮ್ಮತರಾದ ಮಿಕ್ಕ ಗಣಾಧೀಶ್ವರರನ್ನೂ, ಕೂಶ್ಮಾಂಡ ಮುಖ್ಯರನ್ನೂ, ಮಹಾ ಬಲವಂತನಾದ ಭಾನುಕಂಪನನ್ನೂ, ಜಗದ್ಭದ್ರನಾಗಿ ಭದ್ರಕಾಳೀ ಮನೋಹರನಾದ ವೀರಭದ್ರನನ್ನೂ, ಭೂತೇಶ ಪ್ರಮಥೇಶರೆಂಬ ಸಕಲ ಗಣಾಧೀಶ್ವರರನ್ನೂ, ಹಾಗೆ ಮಹಾ ಬಲನನ್ನೂ ಮಹಾಬಾಹುವನ್ನೂ ಮಧುಪಿಂಗಳನನ್ನೂ ಚತುರ್ವಕ್ತ್ರನನ್ನೂ, ಕೋಟಿಸಂಖ್ಯಾತರಾದ ಭೂತೇಶರನ್ನೂ ಪ್ರಮಥೇಶರನ್ನೂ, ಕಾರಣನನ್ನೂ ಬಾಹುಕನನ್ನೂ ಪಂಚಾಕ್ಷನನ್ನೂ * ಶತಭಾಮುಕನನ್ನೂ ಸುಕೇಶನನ್ನೂ ಕಾಷ್ಠಕೂಟನನ್ನೂ ವೃಷಮೇಷನನ್ನೂ * ಮೇಘರುತನನ್ನೂ ವಿಶ್ವರೂಪ ವಿರೂಪಾಕ್ಷರನ್ನೂ ಕಾಲಕ್ಷೇತ್ರ ಶತಾನನರನ್ನೂ ಮಿಕ್ಕ ಅಸಂಖ್ಯಾತ ಗಣಂಗಳನ್ನೂ ಸಹಾ ಮನದೊಳ್ ಸ್ಮರಿಸಿದ್ದಲ್ಲದೆ “ಕಲಾ, ಕಾಷ್ಠಾ, ಮುಹೂರ್ತ, ಕ್ಷಣ, ಅಹೋರಾತ್ರ, ಪಕ್ಷ,

* ಶತಮನ್ಯುವನ್ನು. * ಮೇಘಭೃತ್ತಿನನ್ನು.

ಮಾಸ, ಋತು, ಅಯನ, ವತ್ಸರಂಗಳೆಂಬದಾಗಿ" ಕೋಟಿಪ್ರಕಾರಮಾದ ಕಾಲ ಭೇದಂಗಳನ್ನೂ, ಗಂಗಾದಿ ಸಕಲ ನದಿಗಳನ್ನೂ, ಸಮುದ್ರಂಗಳಂ ಕೊಳಂಗಳಂ ಮತ್ತೂ, ಈ ಜಗತ್ತಿನಲ್ಲಿ ಆವುದೊಂದು ದೃಷ್ಟಮಾಗಿಯುಂ ಅನುಮಿತಮಾಗಿಯುಂ ಶೃತಮಾಗಿಯುಂ ಇಹವೋ, ಅದೆಲ್ಲಮುಂ ದೇವದೇವನ ಕಲ್ಯಾಣಾರ್ಥಮಾಗಿ ಆ ಕ್ಷಣದಲ್ಲಿಯೇ ಮನದೊಳ್ ನೆನೆಯುತ್ತಿರಲಾಗಿ, ಆ ಪ್ರಸ್ತಾವದಮಧ್ಯದಲ್ಲಿ ಶಿವನ ಕಲ್ಯಾಣಸಮಯವನ್ನು ದೇವತೆಗಳಿಗೆ ಸೂಚಿಸುವುದೋ ಯೇನೋ ಎಂಬಂತೆ ವಾದ್ಯಧ್ವನಿಯು ಅಭಿವೃದ್ಧಮಾದುದು.

ತದನಂತರದಲ್ಲಿ ವಿಷ್ಣು ಮೊದಲಾದ ದೇವತೆಗಳು ಆಗ ಆ ವಾದ್ಯಧ್ವನಿಯಂ ಕೇಳ್ದು ಅತ್ಯಂತ ಹರುಷದಿಂದ ವಿವಾಹಮಹೋತ್ಸವಮಂ ನೋಡಲಿಚ್ಛೈಸಿಬಂದರದೆಂತನೆ:— ಸಾಕ್ಷಾಚ್ಛಂದೋಮಯನಾಗಿ ಮಹಾ ಭುಜನಾದ ಗರುಡನನ್ನೂ ಮಹಾ ಲಕ್ಷ್ಮಿಯಂ ವೆರಸಿಯೇ, ಶ್ರೀವೈಷ್ಣವಗಣಂಗಳೊಡಗೂಡಿ ವಿಷ್ಣುವು ಆದ್ಯರಾದ ದಂಪತಿಗಳಂ ನೋಡಲಿಚ್ಛೈಸಿಬಂದನು. ಜಗನ್ಮಯನಾದ ಚತುರ್ಮುಖನು ಏಣೀನೇತ್ರಂಗಳ್ಗೆ ಸದೃಶಮಾಗಿ ಬಗಸೆ ಗಣ್ಣುಗಳುಳ್ಳ ಸರಸ್ವತಿವೆರೆಸಿ ಹಂಸಶ್ರೇಷ್ಠಮನ್ನೇರಿ, ವಿಶ್ವಸೃಷ್ಟಿಕರ್ತರಾದುದರಿಂದ ಆದ್ಯರಾದ ಮಹಾತ್ಮರಾದ ನವಬ್ರಹ್ಮರೊಡಗೂಡಿ, ಮೂರ್ತಿಮತ್ತಾದ ವೇದಾಗಮಂಗಳ್ವೆರೆಸಿ ಮಿಕ್ಕ ವಿದ್ಯೆಗಳೊಡನೆಯುಂ ಬ್ರಹ್ಮಗಣಂಗಳೊಡನೆಯುಂ ಪಾರ್ವತೀಪರಮೇಶ್ವರರ್ಗೆ ವಿವಾಹಾರ್ಥಮಾಗಿ ಶೂಲಪಾಣಿಯಾದ ಶಿವನ ಸನ್ನಿಧಾನಮನ್ನೈದಿದನು. ದೇವೇಂದ್ರನು ಶಚೀದೇವಿ ವೆರೆಸಿ ಅತ್ಯಂತ ಶುಭಮಾಗಿ ಶುಭಕರಮಾದ ಐರಾವತಮನೇರಿ, ಸಮಾನವಯಸ್ಕರಿಂದಲಂಕೃತನಾಗಿ ವಿವಾಹ ಮಹೋತ್ಸವಕ್ಕೆ ಬಂದನು. ಮತ್ತಮಾ ದೇವೇಂದ್ರನೇ ದ್ವಾದಶಾದಿತ್ಯರಿಂದಲೂ ಅಶ್ವಿನೀ ದೇವತೆಗಳಿಂದಲೂ ಸರ್ವಜ್ಞರಾದ ಏಕಾದಶರುದ್ರರಿಂದಲೂ ಮತ್ತೆ "ವಿಶ್ವೇದೇವರ್ಕಗಳು, ಸಾಧ್ಯದೇವತೆಗಳು, ಬ್ರಹ್ಮವಾದಿಗಳಾದ ಮುನೀಶ್ವರರು" ಇವರ್ವೆರೆಸಿ ಈಶ್ವರ ಸಂಬಂಧಮಾದ ದಾಂಪತ್ಯಮಂ ನೋಡಲೋಸುಗ ಬಂದನು. ಈ ಪ್ರಕಾರದಿಂದಲೇ "ಅಗ್ನಿ, ಯಮ, ನಿಋುತಿ, ವರುಣ, ವಾಯು, ಕುಬೇರ, ಈಶಾನ" ರೆಂಬ ದಿಕ್ಪಾಲಕರೆಲ್ಲರು ಶಿವನ ಸಾನ್ನಿಧ್ಯಮನ್ನೈದುತ್ತಿರ್ದರೆಂಬಲ್ಲಿಗೆ ಹತ್ತೊಂಬತ್ತನೆಯ ಅಧ್ಯಾಯವು ಸಂಪೂರ್ಣಂ.

ಇಪ್ಪತ್ತನೆಯ ಅಧ್ಯಾಯವು.

ಪರಶಿವನ ವಿವಾಹ ಸಮಾರಂಭದಲ್ಲಿ ದೇವತೆಗಳ ಆಗಮನ ವೃತ್ತಾಂತವು.

ಅನಂತರದಲ್ಲಿ ಸ್ಥಾವರ ಜಂಗಮಾತ್ಮಕಮಾದ ಪ್ರಾಣಿಗಳಾತ್ಮರೆಲ್ಲರುಂ ಅಂತರಾತ್ಮರುಂ ಪರಮಾತ್ಮರುಂ ಪರಾಕ್ರಮಶಾಲಿಗಳಾದ ನೂರು ಅರವತ್ತಾರು ಕೋಟಿ ಅಸುರರುಂ, ಪಾತಾಳ ತಳಂಗಳಲ್ಲಿರ್ಪ ನಾಗರಾಜರುಂ ಬಂದ ಬಳಿಕ, ಸರ್ವಾಧಾರನಾಗಿ ಅಪರಿಮಿತ ತೇಜಸ್ವಿಯಾಗಿ ಭಗವಂತನಾದ ಕಾಲಾಗ್ನಿರುದ್ರನುಂ ತನಗೆ ಸಮಾನರಾಗಿ ಬಹು ಬಲಶಾಲಿಗಳಾದ ಅನಂತಕೋಟಿ ಗಣಾಧಿಪತಿಗಳ್ವೆರಸಿ ರುದ್ರಾಣಿಯೊಡನೆ ದೇವದೇವನ ಸನ್ನಿಧಾನಮನ್ನೈದಿದನು. ಮತ್ತೆ ಮಹಾ ಭುಜಬಲಶಾಲಿಯಾದ ಹಾಟಕೇಶ್ವರನುಂ ತನ್ನ ಸಮಾನವಾದ ಅಲಂಕಾರವುಳ್ಳ ಅರ್ಬುದಾಯುತಕೋಟಿ ಗಣಾಧಿಪರ್ವೆರಸಿ ಐದಿದನು. ಶ್ರೀಮಂತರಾದ ಗಣಾಧಿಪತಿಗಳುಂ ಕೋಟಿ ಕೋಟಿಗಣಂಗಳ್ವೆರಸಿ ಆ ವಿವಾಹ ಮಹೋತ್ಸವಮಂ ನೋಡಲೋಸುಗ ಶಿವನ ಸನ್ನಿಧಾನವನ್ನೈದಿದರು. ರಕ್ತವರ್ಣನೆಂಬಾತನು ಕೋಟ್ಯರ್ಬುದಂಗಳೊಡನೆಯುಂ ಕೃಶರಾಕ್ಷನೆಂಬಾತನುಂ ಹತ್ತು ನಿರ್ಬುದ ಕೋಟಿ ಗಣಂಗಳೊಡನೆಯುಂ ವೈದ್ಯುತನೆಂಬಾತನು ನಿರ್ಮಲರಾದ ಯೆಂಟು ಸಮುದ್ರಕೋಟಿ ಸಂಖ್ಯಾತರಾದ ಮುಕ್ತಾತ್ಮರಾದ ಗಣಾಧಿಪತಿಗಳೊಡನೆಯೂ ವಿಶಾಖನು ಮೇರೆಯಿಲ್ಲದ ಅಸ್ತ್ರಂಗಳಂ ಧರಿಸಿದ ಕೋಟಿ ಕೋಟಿ ಮಹಾಪದ್ಮ ಸಂಖ್ಯಾತಗಣಂಗಳೊಡನೆಯೂ ಭಗವಂತನಾದ ಪಾರಿಯಾತ್ರನು ಶತನ್ಯರ್ಬುದ ಪ್ರಮಥಗಣಂಗಳೊಡನೆಯೂ ಸರ್ವಜ್ಞನಾಗಿ ಸರ್ವಭಾವಿತನಾದ ಸರ್ವಾನನನೆಂಬಾತನು ಸಮುದ್ರ ಶತಕೋಟಿ ಕೋಟಿ ಗಣಾಧಿಪರೊಡನೆಯು, ವಿಕೃತಾಸ್ಯನೆಂಬಾತನು ರಾಗಮತ್ಸರರಹಿತರಾದ ಅನೇಕಕೋಟಿ ನಾನಾವಿಧ ಗಣಂಗಳೊಡನೆಯೂ, ಮಹಾ ಭುಜಂಗನಾಗಿ ಲೋಕಾಲೋಕ ಪರ್ವತದಲ್ಲಿರ್ಪ ಜ್ವಾಲಾಕೇಶನೆಂಬಾತನು, ಶೂಲಂಗಳಿಂ ಲಾಲಭುಜಂಗಳುಳ್ಳ ದೇವತೆಗಳೊಡನೆಯೂ ಮಹಾನುಭಾವನಾದ ಸಮದನೆಂಬಾತನು ಮದಯುಕ್ತರಾದ ತನ್ನ ಪರಿವಾರಂಗಳೊಡನೆಯೂ, ದುಂದುಭಿಯೆಂಬಾತನು ಜಿತಸಾಗರಂಗಳಾದ ದುಂದುಭಿಶ್ರೇಣಿಧ್ವನಿಗಳುಳ್ಳ ಅಸಂಖ್ಯಾತರಾದ ತನ್ನ ಸೈನಿಕರೊಡನೆಯೂ, ಮಹಾನುಭಾವನಾದ ಕಪಾಲೀಶನು, ಕಪಾಲಮಾಲಿಕಾಲಂಕೃತನಾಗಿ ಪರಾರ್ಧಗಣ ಸಂವೃತನಾಗಿಯೂ, ಸಂಹ್ಲಾದನೆಂಬಾತನು ಮುಕ್ತಕಿಲ್ಬಿಷಂಗಳಾದ ಶತಕೋಟಿಹಾರ್ದಗಣಾಧಿಪತಿಗಳೊಡನೆಯೂ, ರುದ್ರಸನ್ನಿಭನಾದ ಅಂಡಕನೆಂಬಾತನು ಕೋಟಿ ಪದ್ಮ ಸಂಖ್ಯಾತರಾದ ರುದ್ರರೊಡನೆಯೂ ಕುಂಭಕನೆಂಬಾತನು ಜಂಭಾರಿಯಿಂದ

ಸನ್ನುತರಾದ ಕೋಟಿಕೋಟಿ ಗಣಾಧಿಪರೊಡನೆಯುಂ ಸಾಧಕನೆಂಬ ಮಹಾನುಭಾವನಾಗಿ ವಿಭುವಾದ ಪ್ರಮಥಾಧಿಪತಿಯು ಶತಕೋಟಿ ಗಣಾವೃತನಾಗಿಯೂ ಸನ್ಮಾದನೆಂಬ ಗಣಾಧಿಪತಿಯು ಗಣಕೋಟಿ ಪರಾರ್ಧಂಗಳೊಡನೆಯುಂ ಭಗವಂತನಾದ ಆವೇಗಿಯೆಂಬಾತನು ಸಾದರಮಪ್ಪಂತು ಅಯುತಾಯುತ ಕೋಟಿ ಗಣಂಗಳೊಡನೆಯೂ ಆಪರ್ವತ ಮಹಾಕೇಶ ವೀರಪರ್ವತಕರೆಂಬ ಮೂವರುಂ ಸಹಸ್ರ ಕೋಟಿ ಗಣಾಧಿಪತಿಗಳೊಡನೆಯೂ ಪಿಪ್ಪಲನುಂ ಕಾಕಪಾದನುಂ ಸಂತಾನಕಗಣಾಗ್ರಣಿಯುಂ ಇವರ್ಸ್ಮಾವ್ವರುಂ ಅಸಂಖ್ಯಾತ ಗಣಾಧಿಪರೊಡನೆಯುಂ; ಪೂರ್ಣ ಭದ್ರನುಂ ಚತುರ್ವಕ್ತ್ರನುಂ ಯವನಾಧೀಶ್ವರರೀರ್ವರುಂ ಈ ಸರ್ವರುಂ ಗೌರೀ ಕಲ್ಯಾಣ ಸೇವಾತಿಥಿ ಗಳಾಗಿ ಪರಮೇಶ್ವರನ ಸನ್ನಿಧಾನಮ ನೈದಿದರು.

ಈ ಪೂರ್ವೋಕ್ತರಾದ ಭೂತಗಣಂಗಳುಂ, ಮಹಾತ್ಮರಾದ ಪ್ರಮಥರುಂ ಸ್ವಕೀಯಂಗಳಾದ ಬಹು ಸೈನ್ಯಂಗಳೊಡನೆ, ಪುರುಷಾರ್ಥಪ್ರದನಾದ ಪುರಾರಿಯನ್ನನುಸರಿಸಿ ಬಂದಬಳಿಕ ಪ್ರಮಥಾಧೀಶ್ವರನಾದ ಕರುಣನು ಅನೇಕ ಸೇನಾಧಿಪತಿಗಳ್ವೆರೆಸಿ, ಕರುಣಾಸಮುದ್ರನಾದ ಪರಮೇಶ್ವರನಂ ಮರೆಹೊಕ್ಕನು. ಬಳಿಕ ಮಹಾನುಭಾವನಾದ ಬಾಹುಕನು ಪ್ರಮಥಸೇನೆ ಯೊಡಗೂಡಿ ಅಂಗಜ ವೈರಿಯಾಗಿ ಆದಿದೇವನಾದ ಶಿವನ ಪಾರ್ಶ್ವವನ್ನೈದಿದನು. ಪಂಚಾಕ್ಷನುಂ ಐವತ್ತೈದು ನಿರ್ಬುದ ಪ್ರಮಥರ್ವೆರಸಿಯೂ, ಮತ್ತೆ ನಿರಂತರ ಕುಪಿತನಾದುದರಿಂದ ದೇವೇಂದ್ರನಿಂ ಪೂಜಿತನಾದ ಶತಮನ್ಯುವೆಂಬಾತನು, ಶತಕೋಟಿ ಗಣಂಗಳ್ವೆರಸಿಯುಂ ಹಾಗೆ ಮೇಘಭೃತ್ತುಂ ಕಾಷ್ಠಕೂಟನುಂ ಸುಕೇಶನುಂ ವೃಷಭನುಂ ಬಲಿಯುಂ ಜೇರಿ ಜೇರಿ ಕೋಟಿ ಕೋಟಿ ಪ್ರಮಥರೊಡನೆಯೂ ವೇಗದಿಂಬಂದು ಈಶ್ವರನನ್ನಾಶ್ರಯಿಸಿದರು. ಇದಲ್ಲದೆ ಶತಾನನನುಂ ವಿಶ್ವರೂಪನುಂ ಸಾಲಕೇತುವುಂ ಸುಚಿತ್ರನುಂ ಲೋಕಾಂತಕನುಂ ಚೈತ್ರನುಂ ದೀಪ್ತನುಂ ಅಕಳೇಶ್ವರನುಂ ಇವರೆಲ್ಲರುಂ ಅಸಂಖ್ಯಾತಮಾದ ಪ್ರಮಥರೊಡಗೂಡಿ ಶಿವಸನ್ನಿಧಾನಮನ್ನೈದಿದರು. ದೈತ್ಯಾಂತಕನುಂ ಮೃತ್ಯುಜಿತ್ತುಂ ನಿಷಾದನುಂ ಕಲಿಜಿತ್ತುಂ, ಮತ್ತೆ ಅತ್ಯಂತ ಶ್ರೇಷ್ಠನಾಗಿ ಶ್ರೀಮಂತನಾದ ಭೃಂಗಿರಿಟಿಯುಂ, ಸೂರ್ಯವಾಸಿಯುಂ, ಅಶನಿಷ್ಠನುಂ ಲೋಕಪಾಲಕರಾದ ಪ್ರಮಥರೆಲ್ಲರುಂ, ಸಾವಿರ ಪರಾರ್ಧ ಸಂಖ್ಯಾತರಾದ ಪ್ರಮಥರ್ವೆರಸಿ ಪಾರ್ವತೀ ಪರಮೇಶ್ವರರ ಕಲ್ಯಾಣ ಮಹೋತ್ಸವ ದರ್ಶನಾರ್ಥಮಾಗಿ ಬಂದರೆಂಬಲ್ಲಿಗೆ,

ಇಪ್ಪತ್ತನೆಯ ಅಧ್ಯಾಯವು ಸಂಪೂರ್ಣಂ.

ಇಪ್ಪತ್ತೊಂದನೆಯ ಅಧ್ಯಾಯವು.

ಪರಶಿವನ ವಿವಾಹ ಸಮಾರಂಭಕ್ಕೆ ಬಂದ ದೇವತೆಗಳ ವರ್ಣನೆ.

ಈ ಪ್ರಕಾರವಾಗಿ ಸೂತಪೌರಾಣಿಕನು ಆ ಶೌನಕಾದಿ ಮುನಿಗಳ್ಗೆ ಪರಮೇಶ್ವರನ ವಿವಾಹಾರ್ಥವಾಗಿ ಬಂದ ದೇವಗಣಂಗಳಂ ನಿರೂಪಿಸಿ ಮತ್ತಿಂತೆಂದನು, ಎಲೈ ಮುನಿಗಳಿರಾ! ಸಕಲ ಭೂವಲಯದ ವೃತ್ತಾಂತಮಂ ತಿಳಿದುದರಿಂದಲೇ ಬಿಲ್ಗಳಂ ಧರಿಸಿ ಸಹಸ್ರ ಯೋಜನ ದೂರದಲ್ಲಿಹ ಗುರಿಯ ನೆಸೆವಲ್ಲಿ ಸಮರ್ಥರಾದ ಸಹಸ್ರ ಸಂಖ್ಯಾತರಾದ ದೇವತಾಶ್ರೇಷ್ಠರಾದ ರುದ್ರರೂ ಮತ್ತೆ ಈ ಮಹತ್ತಾದ ಸಮುದ್ರದಲ್ಲಿಯೂ ಅಂತರಿಕ್ಷದಲ್ಲಿಯುಂ ಇಹ ನೀಲಕಂಠರಾಗಿ ತ್ರಿನೇತ್ರರಾದ ಅಸಂಖ್ಯಾತರಾದ ರುದ್ರರುಂ ಇದಲ್ಲದೆ; ಭೂಮಿಯ ಕೆಳಭಾಗದಲ್ಲಿ ಯಾರು ಕೆಲವರು ನೀಲಕಂಠರಾಗಿ ತ್ರಿನೇತ್ರರಾಗಿರುವರೋ, ಆರು ಕೆಲಬರು ವೃಕ್ಷಂಗಳಲ್ಲಿ ಪೊಂಬಣ್ಣದಿಂದ ನೀಲಕಂಠರಾಗಿರುವರೋ, ಮತ್ತಂ ರಕ್ತವರ್ಣರಾಗಿ ಭೂತಾಧಿಪತಿಗಳಾಗಿ ಕೆಲವರುಂ ಕೇಶವರ್ಜಿತರಾಗಿ ಕೆಲವರುಂ, ಜಟಾಧಾರಿಗಳಾಗಿಯೂ ಆಯುಧಪಾಣಿಗಳಾಗಿಯುಂ ಅಸಂಖ್ಯಾತ ಸಹಸ್ರ ಸಂಖ್ಯಾತರಾಗಿರುವರೋ, ಮತ್ತೆ ಆರು ಕೆಲಬರು ಪಾತ್ರಭೋಜನಂ ಮಾಳ್ಪರಂ ಬಾಧಿಸುತ್ತಿರುವರೋ, ಅರು ಕೆಲಬರ್ ಮಾರ್ಗಂಗಳಲ್ಲಿ ಪಥಿಕರ್ಗಳಂ ರಕ್ಷಿಸುವರೋ, ಇದಲ್ಲದೆ ಯಾರು ಕೆಲವರು ಪುಣ್ಯತೀರ್ಥಂಗಳಲ್ಲಿಯುಂ ದಶದಿಕ್ಕುಗಳಲ್ಲಿಯುಂ ನಾನಾರೀತಿಯಾಗಿ ನಿರಂತರದಲ್ಲಿಯೂ ಸಂಚರಿಸುತ್ತಿಹರೋ, ಆ ರುದ್ರದೇವರುಗಳೆಲ್ಲರುಂ ಗೌರೀಕಲ್ಯಾಣ ಸೇವಾರ್ಥವಾಗಿ ಈಶ್ವರನ ಸನ್ನಿಧಿಯಂ ಸಾರ್ದರು.

ಬಳಿಕ "ಅದಿತಿ, ದಿತ್ಯೆ, ಕದ್ರು, ಕಾಳಿಕೆ, ಪುಲೋಮೆ, ಸರಮೆ, ಸಿಂಹಿಕೆ, ವಿನತೆ, ಸಿದ್ಧಿ, ಮಾಯೆ, ಕ್ರಿಯೆ, ದುರ್ಗೆ, ಸ್ವಾಹಾ, ಸ್ವಧಾ, ವೇದಮಾತೆಯಾದ ಸಾವಿತ್ರಿಯುಂ, ರಜನಿ, ದಕ್ಷಿಣೆ, ದ್ಯುತಿ, ರತಿ, ಬುದ್ಧಿ, ಮತಿ, ಮೇಧೆ, ಪುಷ್ಟಿ, ತುಷ್ಟಿ, ಸರಸ್ವತಿ, ರಾಕೆ, ಕುಹೂ, ಸಿನೀವಾಲಿ, ಸಾನುಮತಿ, ಭರಣಿ, ಕಲಿ" ಮತ್ತು ಬಾಲಕೆಯಾದ ನಾರಾಯಣಿಯುಂ, ದೇವತೆಗಳ ಮಾತೆಯರಾಗಿರ್ಪವರುಂ, ಪತ್ನಿಯರಾಗಿರ್ಪವರುಂ ಮತ್ತೆ ಕೆಲವು ದೇವತಾಸ್ತ್ರೀಯರುಂ ಇವರೆಲ್ಲರುಂ ಶಂಕರಂಗೆ ವಿವಾಹಮೆಂದು ಸಂತೋಷಾನ್ವಿತೆಯರಾಗಿ ಬಂದರು. ಇದಲ್ಲದೆ ಸಮುದ್ರಗಾಮಿನಿಗಳಾಗಿ ಬ್ರಹ್ಮಾಂಡೋದರ ಮಧ್ಯವರ್ತಿಗಳಾದ ನದಿಗಳೆಲ್ಲವು ಸ್ತ್ರೀವೇಷಮಂ ಧರಿಸಿ, ಮಾಣಿಕ್ಯ ಭೂಷಣ ವಿರಾಜಿತೆಯರಾಗಿ, ಕಮಲದಂತೆಸೆದಿರ್ಪ ನಿಜಹಸ್ತಂಗಳಲ್ಲಿ ಚಾಮರಂಗಳಂ ಪಿಡಿದಿರ್ಪುದರಿಂದ ತಾವರೆಯಂ ಹಂಸೆ

ಯಂ ಧರಿಸಿರ್ಪ ಕೊಳಂಗಳಂತೆ ಕಣ್ಗೊಳಿಪವರೆಲ್ಲರುಂ ಶಿವನ ಸನ್ನಿಧಿಯಂ ಪೊರ್ದಿದರು. ಮತ್ತು ಉರಗ, ಗರುಡ, ಯಕ್ಷ, ಗಂಧರ್ವ ಕಿನ್ನರರುಂ, ಸಾಗರ ಗಿರಿ ಮೇಘಂಗಳಂ, ಮಾಸಂಗಳುಂ ಅಯನಂಗಳುಂ ಸಂವತ್ಸರಂಗಳುಂ ಕಲೆಗಳುಂ ವೇದಂಗಳುಂ ಮಂತ್ರಂಗಳುಂ ಸ್ತೋತ್ರಂಗಳುಂ ಧರ್ಮಂಗಳುಂ ಸ್ವಾಮ್ಯಂಗಳುಂ ಹುಂಕಾರಂಗಳುಂ ಪ್ರಣವಂಗಳುಂ ವಷಟ್ಕಾರಂಗಳುಂ ಹಿಂಕೃತಂಗಳುಂ, ಹಾಗೆಯೇ ಕೋಟಿ ಸಂಖ್ಯಾತರಾದ ದಿವ್ಯಾಪ್ಸರಸ್ತ್ರೀಯರುಂ ಇವರೆಲ್ಲರುಂ, ಸುಮಂಗಳರಾದ ಪಾರ್ವತೀಪರಮೇಶ್ವರರ ವಿವಾಹ ಮಹೋತ್ಸವಮಂ ಕೇಳ್ದು, ಆ ಕ್ಷಣದಲ್ಲಿಯೇ ಬಂದು, ಶಿವನ ಅಂತಃಪುರಾಧೀಶನಾದ ಶಿಲಾದ ಕುಲನಂದನನಾದ ನಂದಿಕೇಶ್ವರಂಗೆ ಬಿನ್ನೈಸಿ, ಭಗವಂತನಾಗಿ ಸ್ವಾಮಿಯಾದ ಜ್ಞಾನದಯಾನಿಧಿಯಾಗಿ ಗುರುವಾದ, ಎಲೈ, ನಂದಿಕೇಶ್ವರನೆ! ಆಜ್ಞಾಬದ್ಧರಾಗಿ ನಾವೆಲ್ಲರುಂ ಪರಮೇಶ್ವರನ ಸೇವಾರ್ಥಮಾಗಿ ಬಂದೆವು. ಸರ್ವೇಶ್ವರನಾದ ಶಿವಂಗೆ ಬಿನ್ನೈಸಿ ನಮ್ಮನ್ನೆಲ್ಲರಂ ತೋರಿಸೆಂದು ಎಲ್ಲರೂ ನುಡಿಯುತ್ತಿರೆ, ದೇವವಂದಿತನಾದ ಆ ನಂದೀಶ್ವರನು ಆ ವಾಕ್ಯಮಂ ಕೇಳ್ದು, ಚಂದ್ರಶೇಖರನ ಸನ್ನಿಧಾನಮನ್ನೈದಿ ನಮಸ್ಕರಿಸಿ, ಎಲೈ ಪರಮೇಶ್ವರನೆ! ಈ ದೇವತೆಗಳೆಲ್ಲರುಂ ನನ್ನ ಸ್ಮರಣಮಾತ್ರದಿಂದಲೇ ಬಂದಿಹರೆಂದು ಬಿನ್ನೈಸಿದ ಬಳಿಕ, ಪರಮೇಶ್ವರನ ಅಜ್ಞೆಯಿಂದ ಆ ನಂದಿಕೇಶ್ವರನು, ಒಂದೆರಡು ಮೂರು ಮುಖಂಗಳ್ಳ ಕೆಲಬರನ್ನೂ ಮುಕ್ತರಾದ ಗಣಾಧೀಶ್ವರರನ್ನೂ, ಅಧಿಕಾರಿಗಳಾದ ಗಣಾಧೀಶ್ವರರನ್ನೂ, ಅಪರಿಮಿತ ತೇಜಸ್ವಿಗಳಾದ ವಿಘ್ನೇಶ್ವರರನ್ನೂ, ವಿವಾಹಾರ್ಥಮಾಗಿ ಬಂದಿರ್ಪ ಈ ದೇವತೆಗಳನೆಲ್ಲರಂ ಪೊಬ್ಬರೊಬ್ಬರನ್ನಾಗಿ ತ್ರಿಪುರಾರಿಯ ಅಂಗಳವನ್ನೈದಿಸಿದನು.

ಅನಂತರದಲ್ಲಿ ಕರುಣಾರಸ ವಾರಿಧಿಯಾಗಿ ಸರ್ವೇಶ್ವರನಾದ, ಸಿಂಹಾಸನಾರೂಢನಾಗಿ ಜಗದೀಶ್ವರೇಶ್ವರನಾದ ಶಿವನು ತನ್ನ ವಿವಾಹ ಮಹೋತ್ಸವಕ್ಕೆ ಬಂದಿರ್ಪ ಅವರನ್ನೆಲ್ಲರಂ ಅನುಗ್ರಹಿಸಿದನು. ಬಳಿಕ ಆ ದೇವತೆಗಳನ್ನೆಲ್ಲರನ್ನು. ಗಣಾಧಿಪತಿಯಾದ ನಂದಿಕೇಶ್ವರನು ಕಡೆಗಣ್ಣಿನ ನೋಟದಿಂದಲು ಬೇರೆ ಬೇರೆ ಪ್ರಯತ್ನದಿಂದಲು ಅಂಗಳದ ಏಕದೇಶದಲ್ಲಿ ಭಿನ್ನ ಭಿನ್ನಮಾಗಿ ನಿಲ್ಲಿಸಿ, ಈ ಸಮೂಹದಲ್ಲಿ ನಾನು ಆವನೊರ್ವನ ಕರೆಯುವೆನೊ, ಆತನಲ್ಲದೆ ಮತ್ತೊಬ್ಬನು ಬರಲಾಗದು, ಮಿಕ್ಕವರೆಲ್ಲರು ಮಾತನಾಡದೆ ಸುಮ್ಮನೆ ಇರ್ಪುದೆಂದು ಅವರ್ಗೆಲ್ಲರ್ಗೆಯುಂ ನಿರೂಪಿಸಿ ಸನ್ನಿಧಾನಮನ್ನೈದಿ, ಆ ಪ್ರಭುವಾದ ಶಿವಂಗೆ ಪ್ರತ್ಯೇಕಮಾಗಿ ತೋರಿಸುತ್ತಿರ್ದನದೆಂತೆನೆ.

ವಿವಾಹ ಸಮಾರಂಭದಲ್ಲಿ ಬಂದ ಅತಿಥಿಗಳನ್ನು ನಂದಿಕೇಶ್ವರನು ಪರಶಿವನ ಸನ್ನಿಧಿ ಗೊಯ್ಯುವಿಕೆ.

ಮೊದಲ್ಮೊದಲು ಆ ನಂದಿಕೇಶ್ವರನು ಹಿಡಿದ ಬೆತ್ತದ ಕೊನೆಯ ಸಂಕೇತದಿಂದೆದ್ದು ನಿಂತಿರ್ಪ, ಲೋಕಪಾಲಕನಾದ ಭಗವಂತನಾದ ಕಾಲಾಗ್ನಿರುದ್ರನು, ದೇವದೇವಂಗೆ ತನ್ನಿಂದ ತಾನೆ ನಮಿಸಿ, ಕೈಮುಗಿದು ದೂರದೊಳ್ ನಿಂತಿದ್ದವನಾಗಲು, ಆ ಕಾಲಾಗ್ನಿರುದ್ರನಂ, ಮರಳಿ ಭಗವಂತನಾದ ನಂದಿಕೇಶ್ವರನು ಬೆತ್ತಮಂ ಹಿಡಿದ ನಿಜಹಸ್ತದಿಂದ ಶಿವಂಗೆ ತೋರಿಸುತ್ತ, ಎಲೈ, ದೇವದೇವನೆ! ಈತನು ಕಾಲಾಗ್ನಿರುದ್ರನು, ಪ್ರಳಯಕಾಲಂಗಳಲ್ಲಿ ಜಗಂಗಳ್ಗೆ ಸಂಹಾರಕನಾಗಿ ಸರ್ವಘಾತಕನಾದ ದೇವಶ್ರೇಷ್ಠನು. ಈತನಂ ನೋಡುವನಾಗು, ಈತನೀಗ ನಿನ್ನಾಜ್ಞೆಯಿಂದ ತನಗೆ ಸಮಾನರಾದ ನಿಜಗಣಾಧಿಪರ್ವೆರಸಿ ಬಂದಿಹನು. ಈ ಕಾಲಾಗ್ನಿರುದ್ರನಂ ಶಾಂತಮಾದ ದೃಷ್ಟಿಯಿಂದ ಬಹುಮಾನಮಂಮಾಡಿ ಅನುಗ್ರಹಿಸೆಂದು ನುಡಿದ ಆ ನಂದಿಕೇಶ್ವರನ ವಚನಮಂ ಕೇಳ್ದಬಳಿಕ, ಚಂದ್ರಶೇಖರನಾದ ಶಿವನು ಪ್ರಸನ್ನವಾದ ದೃಷ್ಟಿಯಿಂದ ಆ ಕಾಲಾಗ್ನಿರುದ್ರನನ್ನು ಅನುಗ್ರಹಿಸಿ ಕೃತಾರ್ಥನೆಂದು ತಿಳಿದನು. ಬಳಿಕ ಸರ್ವಮಹೇಶ್ವರನಾದ ಆ ಕಾಲಾಗ್ನಿರುದ್ರನು ಶಿವನ ಪ್ರಸನ್ನ ದೃಷ್ಟಿಯಿಂದ ತಾನು ಕೃತಾರ್ಥನಾದೆನೆಂದು ತಿಳಿದುಕೊಂಡನು. ಬಳಿಕ ಗಣಶ್ರೇಷ್ಠನಾದ ನಂದೀಶ್ವರನು ಕೂಶ್ಮಾಂಡನಂ ವೀರೇಶ್ವರನಂ, ಹಾಟಕೇಶ್ವರನಂ ಮತ್ತೆ ಕೆಲ ಗಣಾಧೀಶ್ವರರನ್ನೂ ತೋರಿಸಿದ ಬಳಿಕ, ಆ ನಂದೀಶ್ವರನ ಆಜ್ಞೆಯಿಂದಲೇ ನಿಜಪರಿವಾರ ಸಮೇತನಾಗಿ ತನ್ನ ಅವತಾರಂಗಳ್ವೆರಸಿ ಮೂರ್ತಿ ಚತುಷ್ಟಯಂಗಳೊಡಗೂಡಿ ನಾರಾಯಣಂ ಎದ್ದು ನಿಂತಿರಲಾಗಿ, ಆಗ ನಂದಿಕೇಶ್ವರನು ಆ ನಾರಾಯಣನ ಚರಿತ್ರಮಂ ಬಿನ್ನೈಸುತ್ತಾ ಆತನಂ ತೋರಿಸುವನದೆಂತೆನೆ,-ಎಲೈ, ಪರಮೇಶ್ವರನೆ! ಈ ಮುಂದಿರ್ಪಾತನು ನಿನ್ನ ವಾಮಾಂಗದಲ್ಲಿ ಪುಟ್ಟಿದುದರಿಂದ ಜಗದ್ರಕ್ಷಣದಲ್ಲಿ ನಿನ್ನಿಂದ ನಿಯಮಿಸಲ್ಪಟ್ಟ ವಿಷ್ಣುವು ಅವ್ರದಾನೊಂದು ಕಾರಣದಿಂದ ಈ ನಾರಾಯಣನಿಂ ಮನೋಹರನಾಗಿ ವಿಚಿತ್ರವಾದ, ಮುಕ್ತಿಪ್ರದವಾಗಿ ಇಂದ್ರನೀಲಮಯಮಾದ ಅಯತ್ನಲಭ್ಯಮಾದ ಲಿಂಗವು ಪೂಜಿಸಲ್ಪಟ್ಟಿದು. ಈ ಪ್ರಕಾರಮಾದೀತನು ನಿನ್ನ ಕಲ್ಯಾಣಾಮೃತ ರಸಾಸ್ವಾದನದಿಂದ ಕಣ್ಗಳ್ಗೆ ಸಾಫಲ್ಯಮಂ ಪಡೆಯಲಿ ಈತನಂ ಕಡೆಗಣ್ಣನೋಟದಿಂ ಸತ್ಕರಿಸೆಂದು ನಂದೀಶ್ವರಂ ಬಿನ್ನೈಸೆ, ಪ್ರಭುವಾದ ಶಂಕರನು ಆ ನಾರಾಯಣನಂ ಕಡೆಗಣ್ಣ ನೋಟದಿಂದ ಕೃತಾರ್ಥನಂ ಮಾಡಿದನು. ಅನಂತರದಲ್ಲಿ ನಂದೀಶ್ವರನ ಕೈಯೊಳಗಿರ್ಪ ಬೆತ್ತದ ಸಂಜ್ಞೆಯಿಂದ ನವಬ್ರಹ್ಮರೊಡಗೂಡೆದ್ದು ನಿಂತಿರ್ದ ಬ್ರಹ್ಮದೇವರು, ಶಿವನಂ ಕಂಡು ಕೈಮುಗಿದು ದೂರ

ದೋಳ್ ನಮಸ್ಕರಿಸಿ ವಿನಯದಿಂದಿರ್ದನು. ಬಳಿಕ ನಂದೀಶ್ವರನು ಆತನಂ ವೇತ್ರಾಗ್ರದಿಂ ಶಿವಂಗೆ ತೋರಿಸಿ, ಎಲೈ ಭಗವಂತನಾಗಿ ಸರ್ವೇಶ್ವರನಾದ ಶಿವನೆ! ಈ ಮುಂದಿರ್ಪಾತನು ನಿನ್ನ ದಕ್ಷಿಣಾಂಗದಲ್ಲಿ ಪುಟ್ಟಿದುದರಿಂದ ಜಗತ್ತ್ರಯಸೃಷ್ಟಿಯಲ್ಲಿ ನಿನ್ನಿಂದ ನಿಯುಕ್ತನಾದ ಚತುರ್ಮುಖ ಬ್ರಹ್ಮನು ನಿನ್ನಾಜ್ಞೆಯಿಂದಲೇ ಶೈಲರೂಪವಾದ ಲಿಂಗಮಂ ಭಕ್ತಿಯಿಂದರ್ಚಿಸಿ ಈ ಮಹಾ ಪದವಿಯಂ ಪಡೆದನು. ಈತನು ನಿನ್ನ ಪದ ಪಂಕಜದ ಮಕರಂದಕ್ಕೆ ಮಧುಕರನಾಗಿರ್ಪುದರಿಂದ, ನಿನ್ನ ಕೃಪಾದೃಷ್ಟಿ ವಿಲೋಕನಂಗಳಿಂದ ಈತನಂ ಅನುಗ್ರಹಿಪುದೆಂದು ಬಿನ್ನೈಸೆ ಆ ಪರಮೇಶ್ವರನು ಬ್ರಹ್ಮದೇವನಂ ಕಟಾಕ್ಷ ವೀಕ್ಷಣದಿಂದ ಬಹುಮಾನಮಂ ಮಾಡಿ ಈ ಪ್ರಕಾರದಿಂ ಅನುಗ್ರಹಿಸುತ್ತಿರಲಾಗಿ, ಆ ಪ್ರಮಥಾಧಿಪತಿಯಾದ ನಂದೀಶ್ವರನು ಮಿಕ್ಕ ದೇವತೆಗಳನೆಲ್ಲರಂ ಯಥಾಕ್ರಮದಿಂ ಶಿವಂಗೆ ತೋರಿಸುತ್ತಿದ್ದನೆಂದು, ಸೂತಪೌರಾಣಿಕನು ಶೌನಕಾದಿ ಮುನಿಗಳ್ಗೆ ನಿರೂಪಿಸಿದನೆಂಬಲ್ಲಿಗೆ,

ಶ್ರೀ ಕೃಷ್ಣರಾಜವಾಣೀವಿಲಾಸವೆಂಬ ಶಂಕರಸಂಹಿತೆಯ ಶಿವರಹಸ್ಯ
ಖಂಡದೊಳು, ಸಂಭವಕಾಂಡದ ಇಪ್ಪತ್ತೊಂದನೆಯ
ಅಧ್ಯಾಯವು ಸಂಪೂರ್ಣಂ.

ಇಪ್ಪತ್ತೆರಡನೆಯ ಅಧ್ಯಾಯವು.

ಪರಶಿವನು ಕೈಲಾಸದಿಂದ ಸರ್ವಾಲಂಕಾರದಿಂದ ಹಿಮವಂತ ನರಮನೆಗೆ ಬಿಜ ಮಾಡುವಿಕೆ.

ಸೂತರ ವಚನವು:— ಎಲೈ, ಮುನಿಗಳಿರಾ! ಬಳಿಕ ನಂದಿಕೇಶ್ವರನು, ಇಂದ್ರ ಮೊದಲಾದ ಅಪರಿಮಿತ ತೇಜಸ್ವಿಗಳಾದ ದಿಕ್ಪಾಲಕರಂ ದೇವಾಸುರ ಮುನಿಗಳಂ ಗಂಧರ್ವೋರಗ ರಾಕ್ಷಸರಂ, ಅಶ್ವಿನೀದೇವತೆಗಳ ನೀರ್ವರಂ ಮರುದ್ದೇವತೆಗಳಂ ಅಷ್ಟವಸುಗಳಂ ಏಕಾದಶರುದ್ರರಂ ದ್ವಾದಶಾದಿತ್ಯರಂ, ಪಿತೃದೇವತೆಗಳಂ ಸರ್ಪರಾಜರಂ ಪಕ್ಷಿಶ್ರೇಷ್ಠರಂ ಪಿಶಾಚರಂ ಗುಹ್ಯಕರಂ, ನದೀನದ ಸಮುದ್ರಂಗಳಂ ಪರ್ವತಂಗಳಂ ವನಂಗಳಂ, ಕಳಾಕಾಷ್ಠಾ ಮುಹೂರ್ತಂಗಳಂ, ಮಾಸ ಋತು ಅಯನ ವತ್ಸರಂಗಳಂ, ಕ್ರಮದಿಂ ಶಿವಂಗೆ ತೋರಿಸುತ್ತಿರಲಾಗಿ, ಆ ಶಿವನು ನೆರೆದು ಬಂದಿರ್ಪ ಆ ದೇವತೆಗಳನ್ನೆಲ್ಲರಂ ಕ್ರಮದಿಂದ ಯಥಾಯೋಗ್ಯನುಪ್ಪಂತು, ಮಂದಹಾಸಾಲಂಕೃತ ಮುಖಾರವಿಂದನಾಗಿ, ಆನುಪೂರ್ವ್ಯದಿಂದ ನೋಟಂಗಳಿಂ ಬಹುಮಾನಮಂ ಮಾಡುತ್ತಿರೆ, ಆ ಆ ದೇವತೆಗಳು ತಮ್ಮ ತಮ್ಮ ಸಂಬಂಧಮಾದ ಕಾಣಿಕೆಗಳಂ ಪರಮೇಶ್ವರಂಗೆ ಅರ್ಪಿಸಿ ಬಿನ್ನೈಸಿದರು.

ಬಳಿಕ ಚತುರ್ಮುಖನು ವಿನಯಾನ್ವಿತನಾಗಿ ಸುವರ್ಣ ಪಾತ್ರಂಗಳಲ್ಲಿ ಮಿಗಿಲಾಗಿ ಬಹು ಬೆಲೆಯುಳ್ಳ ಆಭರಣಂಗಳಂ ಶಿವನ ಮುಂದುಗಡೆಯಲ್ಲಿ ಸಮರ್ಪಿಸಿ, ವಂದನೆಯಂಗೈದು, ಭಗವಂತನಾದ ಪರಮೇಶ್ವರನಂ ಪ್ರಾರ್ಥಿಸಿದನು. ಎಂತೆಂದರೆ. ಎಲೈ, ರೂಪವಂತರ್ಗೆ ಶ್ರೇಷ್ಠನಾದ ಪರಮೇಶ್ವರನೆ! ನಿನ್ನ ಸ್ವರೂಪ ಪತ್ಯದ್ಭುತವು. ಭೂಷಣಂಗಳ್ಗೆ ಭೂಷಣವಾಗಿ ದೇಹಧಾರಿಗಳ್ಗೆ ಉಪಮಾನ ಭೂತಮಾಗಿ, ಅಲಂಕಾರವಿಧಿಗುಂ ಅಲಂಕಾರ ರೂಪಮಾಗಿರ್ದೊಡಂ, ಈ ಆಭರಣಂಗಳಿಂ ನಿಜದೇಹಮನಲಂಕರಿಸಲ್ಪರಿಗ್ರಹಿಸೆಂದು ಬಿನ್ನೈಸಿದ ಚತುರ್ಮುಖನ ಪ್ರಾರ್ಥನೆಯಿಂದ, ಮುಗುಳ್ನಗೆವೆರೆಸಿದ ಮುಖಾರವಿಂದವುಳ್ಳವನಾಗಿ ಶಿವನು ಹಸ್ತಾಗ್ರದಿಂದ ಆ ಆಭರಣಂಗಳಂ ಸ್ಪರ್ಶಿಸಿ, ಅತ್ಯದ್ಭುತಮಾದ ಸ್ವರೂಪಮಂ ಧರಿಸಿದನದೆಂತೆನೆ.

ಕೋಟಿ ಕಂದರ್ಪ ಸದೃಶನಾಗಿ, ಪೂರ್ಣಚಂದ್ರ ನಿಭಾನನಮಾದ, ಅಲರ್ದ ತಾವರೆಯೋಪಾದಿಯಲ್ಲಿ ಕಣ್ಗಳುಳ್ಳವನಾಗಿ, ಬಿಂಬಾಧರದಿಂದ ಮನೋಹರಮಾದ, ಶಂಖದಂತೆಸೆವ ಕಂಠದಲ್ಲಿ ಪೊಪ್ಪುತಿರ್ಪ ನೀಲವರ್ಣವುಳ್ಳ, ಅತಿ ಕೋಮಲಮಾಗಿ ಅತ್ಯಂತ ಮನೋಹರಮಾದ ವಿಶಾಲಮಾದ ಉದರದಲ್ಲಿ ಕಂಗೊಳಿಪ, ರಮಣೀಯಮಾದ ಹಾರಂಗಳುಳ್ಳ ಚತುರ್ಭುಜನಾಗಿ ಸರ್ವಾವಯವಂಗಳಲ್ಲಿಯುಂ ದೇದೀಪ್ಯಮಾನವಾದ ಸರ್ವಾಭರಣ ಭೂಷಿತಮಾದ, ಕೇಶಪಾಶಮಾದಿಯಾಗಿ ಪದನಖಾಗ್ರಪರ್ಯಂತವು, ಆ ಅಲಂಕಾರಂಗಳಿಂದಲಂಕೃತಮಾಗಿ ಲೋಕಸಮ್ಮೋಹಕರಮಾದ ರೂಪಮಂ ಧರಿಸಿದ ದಯಾನಿಧಿಯಾದ ಶಿವನು, ತನ್ನ ಮುಂದುಗಡೆಯಲ್ಲಿ ವಂದಿಸಿ ಕೈಮುಗಿದು ನಿಂತಿರ್ಪ ಬ್ರಹ್ಮದೇವನಂ ಕುರಿತು ಯಿಂತೆಂದನು.

ಎಲೈ, ಬ್ರಹ್ಮನೆ! ಈ ಭೂಷಣಂಗಳ ಸಮೂಹಂಗಳಿಂದ, ನನ್ನಾಜ್ಞೆಯಿಂದಿಲ್ಲಿಗೆ ಬಂದಿರ್ಪ ದೇವತೆಗಳೆಲ್ಲರುಂ ಅಲಂಕರಿಪುದೆಂದು ಶಿವಂ ನಿರೂಪಿಸಲಾಗಿ, ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಬ್ರಹ್ಮನು ಆ ಶಿವನ ಆಜ್ಞೆಯಿಂದಾ ತೊಡವೆಗಳಂ ವಿಭಾಗಿಸಿಕೊಡುತ್ತಿರೆ, ಬಳಿಕ ದೇವತಾ ಶ್ರೇಷ್ಠರು ಆ ಭೂಷಣಂಗಳಿಂ ಭೂಷಿತರಾದರು. ಆಗ ಶಂಖಂಗಳುಂ ಮರ್ದಳೆಗಳುಂ ಡಿಂಡಿಮಂಗಳುಂ ಮೊದಲಾದ ಸಮಸ್ತ ವಾದ್ಯಂಗಳುಂ, ಸಮುದ್ರಘೋಷವನತಿಕ್ರಮಿಸಿ ಧ್ವನಿಗೈಯುತಿರಲಾಗಿ, ಹಾಗೆ ಮಧುರ ವಾದ್ಯಂಗಳಾದ ವೀಣೆಗಳುಂ ಕೊಳಲ್ಗಳುಂ ನಾಗಸರಂಗಳುಂ, ಮತ್ತೆ ಮಿಕ್ಕ ನಾನಾವಿಧ ಚಿನ್ಹಂಗಳುಳ್ಳ ವಾದ್ಯಂಗಳುಂ, ಮುಖಮಾರುತಂಗಳಿಂದ ಪೂರ್ಣಂಗಳಾದ ವಾದ್ಯವಿಶೇಷಂಗಳುಂ ಧ್ವನಿಗೆಯ್ವುವು. ಮತ್ತು ಕೈಲಾಸಪರ್ವತ ವಾರಭ್ಯಮಾಗಿ ಹಿಮಾಚಲದ

ಪರ್ಯಂತವು, ನಿರಂತರಮಪ್ಪಂತು ನಾಟ್ಯಂಗೆಯ್ಯುತಲಿರ್ದ ಅಪ್ಸರ ಸ್ತ್ರೀಯರ, ಧ್ವನಿಗೈಯುತ್ತಿರ್ಪ ಕಂಕಣ ಧ್ವನಿಗಳಿಂದ ಯಿಕ್ಕೆಲದೋಳ್ಚಾಮರಂಗಳಂ ಸೂಚಿಸುತ್ತಿರಲಾಗಿ ಯೆಲ್ಲಾ ಕಡೆಯಲ್ಲಿಯುಂ ಬೀಸಣಿಗೆಗಳ್ ವಿರಾಜಿಸುತ್ತಿರೆ, ಶೋಭನಗಂಧಂಗಳುಳ್ಳ ಹಿಮೋದಕಂಗಳಿಂ ಚಳೆಯಂಗೆಯ್ದು, ಕಸ್ತೂರಿ ಪಂಕಂಗಳಿಂ ದನುಲೇಪನಮಂ ಮಾಡಿ, ಕರ್ಪೂರಂಗಳೇ ಮಳಲ್ಗಳಾಗುತ್ತಿದ್ದವು. ಮತ್ತಮಾ ಸಮಯದೋಳ್ ಮಾರ್ಗಂಗಳು ಪತ್ತಿಗೆಗಳಿಂದಾವೃತಂಗಳಾದುದ ರಿಂದ, ನೊರೆಯೇರಿಸಿದ ಸಮುದ್ರಂಗಳಂತೆ ಮಹತ್ತಾದ ಧ್ವಜಂಗಳಿಂದಲುಂ, ಕ್ಷುದ್ರಧ್ವಪಙ್ಕ್ತಿಗಳಿಂದಲುಂ, ಪರಿವೃತಂಗಳಾಗಿ, ಯೆಲ್ಲಾ ಕಡೆಯಲ್ಲಿಯುಂ ಅಗರು ಧೂಪಂಗಳಿಂದ ಪರಿಮಳಿಸುತ್ತಿದ್ದವು. ಆಗ ಮುನೀಂದ್ರರಾದ ಬ್ರಾಹ್ಮ ಣರು ವೇದಂಗಳಂ ಪಠಿಸುತ್ತಿದ್ದರು. ಮುತ್ತೈದೆಯರಾದ ಸ್ತ್ರೀಯರು ಶೋಭ ನಂಗಳಾದ ನಿಡುಸ್ವರಂಗಳಿಂದ ಗಾನಂಗೆಯ್ಯುತ್ತಿದ್ದರು. ಸೂತಮಾಗಧ ವಂದಿ ಗಳು ಜಯಶಬ್ದರವಂಗಳಿಂ ಜಯಧ್ವನಿಯಂ ಮಾಡಿದರು. ಆಗ ಬೆತ್ತಂಗಳಂ ಪಿಡಿದಿರ್ಪ ಪ್ರಮಥರುದ್ರ ಕಂಚುಕರು. ಯೆಡಬಲಗಳಲ್ಲಿರ್ಪ ಜನಂಗಳಂ ನಿವಾರಿಸುತಿರ್ದರು. ಬಳಿಕ ರುದ್ರಕನ್ಯಾ ಸಹಸ್ರಂಗಳು ರಥಂಗಳಿಂದಿಳಿದು ನಡೆವುತ್ತಿರಲಾಗಿ, ಬದ್ಧಾಂಜಲಿಗಳಾದ ಯೋಗೀಶ್ವರರೆಲ್ಲರು ಅತ್ಯಂತಮಾಗಿ ನರ್ತಿಸುತಿರೆ, ಚಂದ್ರಶೇಖರನು ನಂದೀಶ್ವರನ ಕೈಲಾಗಿನಿಂದ ಸರ್ವರತ್ನೋಪ ಶೋಭಿತಂಗಳಾದ ಪಾದುಕಂಗಳಂ ಮೆಟ್ಟಿ, ಮೆಲ್ಲನೆಮೆಲ್ಲನೆ ಸಿಂಹಾಸನದಿಂದಿಳಿದು, ಕ್ರಮದಿಂ ಏಳು ಸುತ್ತಿನ ಅರಮನೆಯ ಅಭ್ಯಂತರಂಗಳಲ್ಲಿ ಅಲ್ಲಲ್ಲಿಗೆ ಪ್ರಮಥರಂ ಕಾವಲಿರಿಸಿ, ಬಳಿಕ ದ್ವಾರದೇಶದಲ್ಲಿ ಬಿಳ್ಪಾದುದರಿಂದಲೇ ಕೈಲಾಸಗಿರಿ ಸದೃಶ ಮಾದ ಧ್ವನಿಗೈಯುವ ಕಿರುಘಂಟೆಗಳ ಧ್ವನಿಗಳಿಂದ ಧ್ವನಿಗೈಯಲ್ಪಟ್ಟ ದಿಬ್ಬ ಖಂಗಳುಳ್ಳವನಾಗಿ, ಉಭಯ ಪಾರ್ಶ್ವಂಗಳಲ್ಲಿಯುಂ ಬಿಗಿದ ಚಾಮರಂಗಳಿಂ ದೇದೀಪ್ಯಮಾನನಾಗಿ, ಮಣಿಮಯಮಾದ ಹಲ್ಲದಿಂದ ಪೂಜ್ಯಮಾಗಿ, ಹಿಳಿಕಿನಿಂದ ಲಂಕೃತಮಾಗಿ, ಸ್ಥೂಲಮಾದ ಹೆಗಲಿನಿಂದುಪಲಕ್ಷಿತಮಾಗಿ, ನಿಡಿದಾದ ಕಣ್ಗ ಳುಳ್ಳ ವೃಷಭೇಶ್ವರನ ನೇರುವಲ್ಲಿ, ಒಂದು ಪಾದಮಂ ಕುಂಭೋದರನೆಂಬ ಗಣಾಧೀಶ್ವರನ ಬೆನ್ನಮೇಲಿಟ್ಟು, ಸಜ್ಜನರ್ಗೆ ರಕ್ಷಕನಾದ ಶಿವನು ಸರ್ವತೋ ಪಮನಾದ ವೃಷಭೇಶ್ವರನನ್ನೇರಿದನು.

ಆಗ ಯೋಗಿಗಳುಂ ಸಿದ್ಧರುಂ ತಾಪಸರುಂ ದೇವಶ್ರೇಷ್ಠರುಂ ಜಯ ಶಬ್ದಾದಿ ಮಂಗಳಂಗಳಿಂದ ಯುಕ್ತಮಾದ ವೈದಿಕಂಗಳಾಗಿರ್ಪ ಸೂಕ್ತಂಗಳಂ ಪಠಿಸುತಿರ್ದರ್ "ಅದಿತಿಯುಂ, ದನುವುಂ, ಕದ್ರುವುಂ, ಅರುಂಧತಿಯುಂ, ತುಷ್ಟಿಯುಂ, ಪುಷ್ಟಿಯುಂ, ಕೀರ್ತಿಯುಂ, ಸ್ವಧಾ, ಸ್ವಾಹಾ, ಮತಿಗಳುಂ,

ಸರಸ್ವತೀ, ಮಹಾಲಕ್ಷ್ಮಿಯರೆಂಬ" ಲೋಕಮಾತೆಯರಾದ ಇವರೆಲ್ಲರುಂ, ದೇವಪತ್ನಿಯರುಂ, ಮುನಿಪತ್ನಿಯರುಂ ಸಹಾ ಸುಸ್ವರಮಪ್ಪಂತು ಶಿವನ ಸಚ್ಚರಿತ್ರಂಗಳಂ ಮೇಲ್ಕಡೆಯಲ್ಲಿಯುಂ ಗಾನಮಂ ಮಾಡುತ್ತಿದ್ದರು. ಗಂಧರ್ವರುಂ, ಕಿನ್ನರರುಂ, ಸಿದ್ಧವಿದ್ಯಾಧರರುಂ, ಮಹೋರಗರುಂ, ಪೂಜ್ಯರಾದ ಹಾಹಾ ಹೂಹೂ ತುಂಬುರ ನಾರದರುಂ, ಹಾಗೆ ಅವರೆಲ್ಲರುಂ ವೀಣೆಗಳಿಂದ ಚರಿತ್ರಂಗಳಂ ನುಡಿಸುತ್ತಿರ್ದರು. ಆಗ ಗಣಾಧಿಪತಿಯಾದ ಕುಂಭೋದರನು ಶಿವನ ಸಮೀಪವನ್ನಾಶ್ರೈಸಿ, ಶತಶಲಾಕಾಢ್ಯವಾಗಿ, ಚಂದ್ರಮಂಡಲಕ್ಕೆ ಸಮಾನವಾದ ಅತಿ ಮಹತ್ತಾದ ಛತ್ರಮಂ ಪ್ರೇಮದಿಂದ ಮನೋಹರವಾದ ಹೃದಯನಾಗಿ ಧರಿಸಿದನು. ಆ ಛತ್ರದ ಕೆಳಗಡೆಯಲ್ಲಿ ಜೋಲ್ಬಿಸಿದ ಮುತ್ತಿನ ಸರಂಗಳಿಂದ, ಸರ್ವೇಶ್ವರೇಶ್ವರನು, ಶಿರಸ್ಸಿನಲ್ಲಿ ಪೂರ್ಣೇಂದು ಮಂಡಲದತ್ತಣಿಂ ಬೀಳುತ್ತಿರ್ಪ ಗಂಗಾಪ್ರವಾಹ ಉಳ್ಳಂತೆಸೆದನು.

ಇಂತು ವಿಲಾಸದಿಂಪೈಡುತಿರ್ಪ ಶಿವನಂ ಗಗನಮಾರ್ಗದಲ್ಲಿ ವೃಷಭೇಶ್ವರಂ ವಹಿಸುತಿರ್ದನು. ಆ ವೃಷಭೇಶ್ವರನು ಅಡಿಗಡಿಗೆ ಚಾಮರಂಗಳಂ ಧರಿಸಿರ್ಪ ಘನಂಗಳಾದ ಕೊಂಬುಗಳ ನೆಡ ನೊಲಿದಾಡಿಸುತ್ತ, ಕ್ಷಣಮಾತ್ರದಿಂದಲೆ ಕೈಲಾಸಪರ್ವತ ದತ್ತಣಿಂದ ಹಿಮವತ್ಪರ್ವತವನ್ನೆಯ್ದಿದನು. ಆಗ ಗಿರಿರಾಜನು ಶೈಲಸಂಬಂಧಂಗಳಾದ ಪುತ್ರಪೌತ್ರ ಸಮೇತರಾದ ಬಂಧುಗಳ್ವೆರಸಿ, ಮೇಲು ಕಟ್ಟುಗಳಿಂದಲುಂ ಚಿಕ್ಕೆಗಳಿಂದಲುಂ ಅಲಂಕೃತವಾದ ಓಷಧಿಪ್ರಸ್ಥನಗರದತ್ತಣಿಂ ಪೊರಮಟ್ಟು ಇದಿರ್ಗೊಂಡನು. ಆ ಕ್ಷಣದಲ್ಲಿ ದೇವಾದಿದೇವನಾದ ಶಿವನು ಪರ್ವತರಾಜನ ಇವರೀರ್ವರ ಸೇನೆಗಳುಂ, ಸಮುದ್ರ ಪ್ರವಾಹದಂತೆ ಪೊಂದ ಕೊಂಡು ಸೇರಿ ಕೂಡುತಿರ್ದವು. ಹಿಮಗಿರಿರಾಜನು, ಮೈನಾಕಕ್ರೌಂಚರೆಂಬ ಕುವರರ್ ಪುತ್ರರ್ವೆರಸಿ, ದೇವದೇವಂಗೆ ಪ್ರಣಾಮಂಗೈದು, ಉನ್ನತಂಗಳಾದ ಗೋಪುರ ಪ್ರಾಕಾರಂಗಳಿಂದ ಪೂಜಿತವಾಗಿ, ರಥಗಜತುರಂಗ ಪದಾತಿಗಳೆಂಬ ಚತುರಂಗಬಲದಿಂ ನಿಬಿಡವಾದ ಓಷಧಿಪ್ರಸ್ಥಪುರವನ್ನು ಶಿವನಂ ಹೊಗಿಸುತ್ತಿರಲಾಗಿ, ಆ ಶಿವನನ್ನೀಕ್ಷಿಸುವ ಇಚ್ಛೆಯಿಂದಾಗ ಪೊಬ್ಬ ಸ್ತ್ರೀಯು, ಅಂಜನ ಶಲಾಕೆಯಿಂದ ಪೊಂದೇ ನಯನಕ್ಕೆ ಕಾಡಿಗೆಯುಂ ಧರಿಸಿ, ಮತ್ತೊಂದು ನಯನಮಂ ಮರೆತು ಪೊರಮಟ್ಟು ಗವಾಕ್ಷಮಂ ಸಾರ್ದಳು. ಮತ್ತೋರ್ವಳು ಜಗುಳ್ದ ಮುಡಿಕಟ್ಟುಗಳುಂ ವಸ್ತ್ರಭೂಷಣಂಗಳುಂ ಸಹಾ ಉಳ್ಳವಳಾಗಿ, ಸಂತೋಷದಿಂದ ಗವಾಕ್ಷರಂಧ್ರಮಾರ್ಗದಿಂದ ರಾಜವೀಧಿಯಲ್ಲಿ, ಪುಷ್ಪಂಗಳಂ ಚಲ್ಲುತ್ತಿರ್ದಳು. ಮತ್ತೋರ್ವಳು ಪೊಂದೇ ಪಾದವನ್ನು ಅಲತಿಗೆಯಿಂದಲಂಕರಿಸಿ, ಅಷ್ಟು ಮಾತ್ರದಿಂದಲೇ ಪೊರಮಟ್ಟು ತಾನು ಅಡಿಯಿಟ್ಟು ನಡೆವ

ಮಾರ್ಗಮಂ ಆ ಅಲತಿಗೆಯಿಂದಲಂಕರಿಸಿದಳು. ಆ ಪುರದಲ್ಲಿ ಕಮಲಾಕ್ಷಿಯ ರಾದ ಕುಲಸ್ತ್ರೀಯರು ಉಪ್ಪರಿಗೆಗಳ ಸಮೂಹಂಗಳನ್ನು, ತಮ್ಮ ಮೊಸೆದಾವರೆಗಳಿಂದ ಕಮಲಗಳಿಂದಲಂಕೃತಮಾದಂತೆ ಮಾಡುತ್ತಾ ಸೇವಿಸುತಿರ್ದರು.

ಆಗ ಜಗದೀಶ್ವರನಾದ ಶಿವನು ಗಣಾಧೀಶ್ವರರ್ವೆರೆಸಿ, ರಾಜಮಾರ್ಗಮಂ ಪ್ರವೇಶಿಸುತ್ತಿರಲಾಗಿ, ಆ ಪುರಸ್ತ್ರೀಯರು ಪುಷ್ಪಂಗಳನ್ನೂ ರಮ್ಯಂಗಳಾದ ಲಾಜಾಕ್ಷತೆಗಳನ್ನೂ ಚಲ್ಲುತ್ತಿರ್ದರು. ದೇವದೇವೇಶನಾದ ಶಿವನಂ ನೋಡುತಿರ್ಪ ಆ ಪೌರಾಂಗನೆಯರ ಕಣ್ಗಳುಂ, ಬಾಹ್ಯಾಭ್ಯಂತರಾಂತಃಕರಣ ಪುರಸ್ಸರಮಪ್ಪಂತು, ಸರ್ವಪ್ರಕಾರದಿಂದ ಅತ್ಯಂತಮಾಗಿ ಶಿವನ ಹಿಂಬಳಿ ವಿಡಿದು ಯ್ದೆದಿದವು. ಆಗ ಯೆಲ್ಲ ಪುರಸ್ತ್ರೀಯರುಂ ತಮ್ಮೊಳ್ತಾವೆ ನುಡಿವುತ್ತಿರ್ದರದೆಂತೆನೆ. ಚರಾಚರಾತ್ಮಕಮಾದ ಈ ಜಗತ್ತು, ಆವಾತನ ಸಂಕಲ್ಪಮಾತ್ರದಿಂದಲೇ ನಿರ್ಮಿತಮಾದುದೆಂದು, ಮುನಿಗಳುಂ ಯೋಗಿಗಳುಂ ಪೇಳುವುದೋ, ಈ ಪರಮೇಶ್ವರನ ಅನುಗ್ರಹದಿಂದಲೇ ಪ್ರಾಣಿಗಳು ಮುಕ್ತಿಯಂ ಪಡೆಯುತ್ತಿರುವರೀ ಹೊರತು ಬೇರೊಂದಲ್ಲ. ಆ ಬಾಲಕಿಯಾದ ಗೌರಿದೇವಿಯು, ಚಂದ್ರಶೇಖರನಾದ ದೇವದೇವೇಶನಂ ಪಾಣಿಗ್ರಹಣಮಂ ಮಾಡಲೋಸುಗ, ಅತಿ ಮಹತ್ತಾಗಿ ಆಚರಿಸಲೂ ಶಕ್ಯಮಲ್ಲದ ತಪಮಂ ಬಹು ಕಾಲ ಪರ್ಯಂತವೂ, ಈತನ ಮಹಿಮೆಯಂ ತಿಳಿದೇ ಆಚರಿಸಿದಳು. ಈಗ ನಾವುಂ ಮಹತ್ತಿಗೆ ಮಹತ್ತರನಾಗಿ ಕಾರಣಂಗಳ್ಗಂ ಕಾರಣನಾಗಿ, ದೇವದೇವತೆಗಳ್ಗಂ ದೈವತಮಾಗಿ, ಯೋಗಿಧ್ಯೇಯನಾಗಿ ನಿತ್ಯನಾದ ಶಿವನಂ ಕಣ್ಣಳಿಂನೋಡಿ, ಅದುಕಾರಣದಿಂ ಕೃತಾರ್ಥರಾದೆವೆಂದು ನುಡಿದರು. ಈ ಪ್ರಕಾರದಿಂ ಕಿವಿಗಳ್ಗೆ ಇಂಪಾದ ವಾಕ್ಯಮಂ ಕೇಳುತ್ತ, ಆ ಶಿವನು ಮೆಲ್ಲಮೆಲ್ಲನೆ ಮಹತ್ತಾಗಿ ಉನ್ನತಮಾದ ಗಿರಿರಾಜನ ಭವನಮುನ್ನೈದಿದನು.

ಆಗ ಜಗದೀಶ್ವರನು ಶೀಘ್ರದಿಂದ ವೃಷಭೇಶ್ವರನಿಂದಿಳಿದು, ರತ್ನನಿರ್ಮಿತಂಗಳಾದ ಹರಿಯಿಂದಿರಿಸಲ್ಪಟ್ಟ ಪಾದುಕೆಗಳಂ ಮೆಟ್ಟಿ ಹರಿಬ್ರಹ್ಮರ ಕೈಲಾಗಿ ನಿಂದ ದ್ವಾರದೇಶದಲ್ಲಿ ಯೆಲ್ಲಾ ಕುಲಸ್ತ್ರೀಯರ ಕಣ್ಣಳ ದೃಷ್ಟಿಗಳ್ವೆರೆಸಿ, ಹಿಮುವದ್ಗಿರಿರಾಜನ ಅರಮನೆಯ ಮೊದಲಭ್ಯಂತರಮಂ ಪ್ರವೇಶಿಸಿದನು. ಆ ಅಭ್ಯಂತರದಲ್ಲಿ ಚಿತ್ತಮಂ ಕೈಯೊಳ್ಪಿಡಿದಿರ್ಪ ನಂದೀಶ್ವರನು, ಎಲೈ ಅಧೀಶ್ವರನೆ ಜಯ ಜಯ !! ಎಲೈ ಆರ್ತಿಘ್ನನಾದ ಶಿವನೆ! ನಿಮ್ನೋನ್ನತ ಪ್ರದೇಶದಲ್ಲಿ ಯೆಚ್ಚರಿಕೆ. ಪರಾಕು ಯೆಂದು ನುಡಿಯುತ್ತ ಆದರಣೆಯಿಂದ, ಶಿವನ ಮುಂದುಗಡೆಯಲ್ಲಿ ನಡೆಯುತ್ತಿರ್ದನು. ಆಗ ಗಿರಿರಾಜನ ಪತ್ನಿಯಾದ ಮೇನಕೆಯು, ಕೃಪಾನಿಧಿಯಾದ ಪರಮೇಶ್ವರನ ಪಾದಂಗಳನ್ನು ಗೋಕ್ಷೀರದಿಂದ ಪ್ರಕ್ಷಾಳನಂ

ಗೈದು, ವಿಶ್ವಕರ್ಮನಿರ್ಮಿತಮಾದ ಅಷ್ಟಮಂಗಳ ಸಮೇತಮಾದ, ಗೃಹಾಭ್ಯಂತರ ಗತಮಾಗಿ ವಿಚಿತ್ರಂಗಳಾದ ನಾನಾ ಮಣಿಗಳಿಂದ ಅಗಲನೀಳಂಗಳಿಂ ಚಿತ್ತ್ರಮಾಗಿ, ಅನೇಕ ರತ್ನಸ್ತಂಭಂಗಳಿಂದಲಂಕೃತಮಾಗಿ ಯಿಕ್ಕೆಲದೊಳಂಗಳದೊಳಿರ್ಪ ವರಗುಗಳಿಂದ ಮನೋಹರಮಾದ ಕಲ್ಯಾಣಮಂಟಪಕ್ಕೆ ಶಿವನನ್ನೈದಿಸಿದಳು. ಆ ಕಲ್ಯಾಣಮಂಟಪ ಮಧ್ಯದಲ್ಲಿ ಇಂದ್ರನೀಲ ಮಾಣಿಕ್ಯಂಗಳ ಸಮೂಹಂಗಳಿಂದ ನಿರ್ಮಿತಮಾಗಿ ಉನ್ನತಮಾದ, ನಾಲ್ಕು ಸ್ತಂಬಗಳಿಂದಲಂಕೃತಮಾಗಿ ಅನೇಕಾದಿತ್ಯ ಸನ್ನಿಭಮಾದ, ಪ್ರಕಾಶದಿಂದಲೇ ಕಣ್ಗಳಂ ಕೋರೈಯಿಸುತಿರ್ಪ ದಿವ್ಯಸಿಂಹಾಸನವನ್ನು, ಭಗನೇತ್ರಘ್ನನಾಗಿ ಭಗವಂತನಾದ ಶಿವನು ಏರಿ ವಿರಾಜಿಸಿದನು. ಆಗ ರುದ್ರಸಮೂಹದೊಡಗೂಡಿದ ಕಾಲಾಗ್ನಿರುದ್ರನುಂ ಗಣಂಗಳ್ವೆರಸಿದ ಹಾಟಕೇಶ್ವರನುಂ, ಪ್ರಮಥರುಂ ಭೂತಸಮೂಹಾಧಿಪತಿಗಳುಂ ಇವರೆಲ್ಲರುಂ ಪರಮೇಶ್ವರನ ಸುತ್ತಲುಂ ಸೇವಿಸುತಿರ್ದರೆಂದು,

ಸೂತಂ ಶೌನಕಾದಿಗಳ್ಗೆ ನಿರೂಪಿಸಿದ ನೆಂಬಿಲ್ಲಿಗೆ ಇಪ್ಪತ್ತೆರಡನೆಯ
ಅಧ್ಯಾಯವು ಸಂಪೂರ್ಣಂ.

ಇಪ್ಪತ್ತ ಮೂರನೆಯ ಅಧ್ಯಾಯವು.

ಪರಶಿವೆ ಪರಶಿವರ ಕಲ್ಯಾಣೋತ್ಸವ ವರ್ಣನೆಯು.

ಅನಂತರದಲ್ಲಿ ಸೂತಪೌರಾಣಿಕಂ ಶೌನಕಾದಿ ಮುನಿಗಳ್ಗೆ, ಕಲ್ಯಾಣಮಹೋತ್ಸವದ ವೃತ್ತಾಂತಮನೇ ನಿರೂಪಿಸುವನದೆಂತೆನೆ,-ಎಲೈ ಮುನಿಗಳಿರಾ ! ಬಳಿಕ ದೇವೇಶ್ವರನ ಅನುಜ್ಞೆಯಿಂದ ದೇವತೆಗಳು ಚಂದ್ರಶೇಖರನಾದ ಶಂಕರನ ಸುತ್ತಲುಂ ವಿಚಿತ್ರಂಗಳಾದ ಪೀಠಂಗಳಲ್ಲಿ ಕುಳ್ಳಿರ್ದರು. ಅವರಾರೆಂದರೆ:— ಭಗವಂತನಾದ ವಿಷ್ಣುವುಂ ಬ್ರಹ್ಮನುಂ ಇಂದ್ರನುಂ ಭಾಸ್ಕರನುಂ ಅಷ್ಟವಸುಗಳುಂ ಏಕಾದಶ ರುದ್ರರುಂ ದ್ವಾದಶಾದಿತ್ಯರುಂ ಅಶ್ವಿನೀ ದೇವತೆಗಳೀರ್ವರುಂ ವಸಿಷ್ಠಾದಿ ಬ್ರಹ್ಮರ್ಷಿಗಳುಂ ನಾರದಾದಿ ದೇವರ್ಷಿಗಳುಂ ಸನಕಾದಿ ಯೋಗೀಶ್ವರರುಂ, ವೇದವೇದಾಂಗಾದಿ ವಿದ್ಯೆಗಳುಂ, ವಿದ್ಯಾಧರೋರಗರುಂ, ಸಪ್ತಮಾತೃಕೆಯರುಂ ದೇವಪತ್ನಿಯರುಂ, ನಿರ್ಮಲರಾದ ಮುನಿಪತ್ನಿಯರುಂ ಹಾಗೆಯೆ ಎಲ್ಲ ಅಪ್ಸರಸ್ತ್ರೀಯರುಂ, ಅದಿತಿ ದಿತಿ ಮೊದಲಾದ ದಕ್ಷಕನ್ನಿಕೆಯರುಂ ಈ ಪೂರ್ವೋಕ್ತರಾದ ದೇವತೆಗಳೆಲ್ಲರುಂ ಸಿಂಹಾಸನದಲ್ಲಿ ಕುಳ್ಳಿರ್ದರು. ಆಗ ಗಿರಿರಾಜನು ಜಗನ್ಮಾತೆಯಾದ ಸುಮಂಗಳೆಯಾದ ಪಾರ್ವತೀದೇವಿಯನ್ನು, ನಿಜಪತ್ನಿಯಾದ ಮೇನಕೆಯಿಂದಲುಂ ಆ ಪಟ್ಟಣದಲ್ಲಿರ್ಪ ಕುಲಸ್ತ್ರೀಯರಿಂದಲುಂ ಅಲಂಕಾರಂ ಗೈಸಿದ ಬಳಿಕ, ಅಂಗನೆಯರು ಕೈಯೊಳ್ ಕಮಲಮಂ ಪಿಡಿದಿರ್ಪ

ಮಹಾದೇವಿಯಂ ಪೂರ್ವಾಭಿಮುಖಮಾಗಿ ಭದ್ರಪೀಠದೋಳ್ಕುಳ್ಳಿರಿಸಿ, "ಗೌರಿಯ ಕಲ್ಯಾಣವೈಭವನಮಂ" ಗಾನಮಂ ಮಾಡುತ್ತಾ, ಅತ್ಯಂತ ಹರುಷಾನ್ವಿತೆಯರಾಗಿ ಸುಗಂಧ ತೈಲದಿಂದ ಆ ಪಾರ್ವತೀದೇವಿಗೆ ಮಂಗಳಸ್ನಾನವಂ ಮಾಡಿ ಶಂಖ ಕಾಹಳೆ ಭೇರೀ ಮುರವ ಡಿಂಡಿಮಗಳ್ ವೆರಸಿ, ಧನಿಗೈಯ್ಯುತ್ತಿರೆ ಸಮ್ಮಾನಿತಂಗಳಾದ ಮಹಾಪುಣ್ಯ ತೀರ್ಥಂಗಳಿಂದ ಅಭಿಷೇಕಮಂ ಮಾಡಿ ಆಬಳಿಕ ಪಾರ್ವತಿದೇವಿಯನ್ನಲಂಕರಿಸಿ ಪರಮೇಶ್ವರನ ಸನ್ನಿಧಾನಮನ್ನೈದಿಸಿದರು. ಆಗ ದಿವ್ಯ ಸಿಂಹಾಸನಮನೇರಿದ ಆ ಪಾರ್ವತೀ ದೇವಿಯಿಂದ ಪರಮೇಶ್ವರನು, ಮೇರುಶಿಖರವನ್ನೇರಿರ್ಪ ಚಂದ್ರನು, ರೋಹಿಣೀದೇವಿಯಿಂದೊಪ್ಪುವನೋ ಆ ಪ್ರಕಾರದಿಂ ಪೆಸೆದಿರ್ದನು.

ಆ ಸಮಯದಲ್ಲಿ ಪರ್ವತರಾಜನು ಪುತ್ರ ಬಾಂಧವ ಗಣ ಸಮೇತನಾಗಿ ವಿಧಿವತ್ತಾಗಿ ಪ್ರಭುವಾದ ಶಿವಂಗೆ ಪಾದಪ್ರಕ್ಷಾಳನವಮ್ಮಾಡಿ, ವಿಶ್ವಾಸದಿಂ ನಿಜಪತ್ನಿಯರ್ವೆರಸಿ, ಆ ಪಾದಪ್ರಕ್ಷಾಳನೋದಕಮಂ ಶಿರದೊಳಾಂತು ತನ್ನ ಬಂಧುಗಳ ಶಿರಸ್ಸಿನಲ್ಲಿಯುಂ ಪ್ರೋಕ್ಷಿಸಿ, ಆ ಮಹೇಶ್ವರಂಗೆ ಭಕ್ತಿಯಿಂದ ಯಥಾಕ್ರಮದಿಂ ಮಧುಪರ್ಕಮಂಮಾಡಿ, ಬಳಿಕಾ ದೈವಸಭೆಯಲ್ಲಿ ಸುವರ್ಣಮಯಮಾದ ಗಿಂಡಿಯೊಳಿರ್ಪ ಉದಕವಂ ಕೈಯೋಳ್ಧರಿಸಿ, ವಸ್ತ್ರಾಭರಣಂಗಳು ಮೊದಲಾದ ಸತ್ಕಾರಂಗಳಿಂ ಸತ್ಕರಿಸಿ, ಆ ದೇವೇಶ್ವರನಾದ ಶಿವಂಗೆ ವಿಧಿವತ್ತಾದ ವೇದಮಂತ್ರಗಳ್ವೆರೆಸಿ, ಧಾರಾಪೂರ್ವಕಮಾಗಿ ಪಾರ್ವತೀದೇವಿಯಂ ಪಾಣಿಗ್ರಹಣಮಂ ಮಾಡಿಸಿದನು.

ಆಗ ಜಯಶಬ್ದಾದಿ ಮಂಗಳಗಳಿಂದ ಮಹತ್ತಾದ ಮಹೋತ್ಸವಮಾದುದು. ಮಹೇಶ್ವರನು ಅತ್ಯಂತ ಸಂತೋಷದಿಂದ ಗೌರಿದೇವಿಯ ಪಾಣಿಗ್ರಹಣಮಂ ಮಾಡಿದನು. ಸ್ಥಾವರ ಜಂಗಮಾತ್ಮಕಮಾದ ಜಗತ್ತೆಲ್ಲವು ಸಂತುಷ್ಟಮಾದುದು. ದೇವತೆಗಳೆಲ್ಲರುಂ ಭಕ್ತಿಯಿಂದ ಪಾರ್ವತೀಪರಮೇಶ್ವರರ್ಗೆ ನಮಸ್ಕರಿಸಿದರು. ಹಾಗೆಯೇ ಗಣಾಧೀಶ್ವರರುಂ ಮುನಿಗಳುಂ ಯೋಗಿಗಳುಂ ಸಕಲ ಜೀವಾತ್ಮರುಂ ನಮಸ್ಕರಿಸುತಿರಲಾಗಿ, ಭೂಮಿಯು ಮಹಾಭಾರದಿಂ ತಗ್ಗಿ ದಕ್ಷಿಣ ದಿಕ್ಕಿನಲ್ಲಿ ಉನ್ನತಮಾಗಿ ಉತ್ತರದಿಕ್ಕಿನಲ್ಲಿ ಬಹಳಮಾಗಿ ಕುಸಿದುದು. ಅದು ಕಾರಣದಿಂದ ಜನರೆಲ್ಲರುಂ ಹೃದಯದಲ್ಲಿ ಅಧಃಪತನ ಶಂಕೆಯಿಂದ ಬಹಳಮಾಗಿ ಭೀತರಾಗಿ ಶೂಲಪಾಣಿಯಾದ ಶಿವಂಗೆ ನಮಿಸಿ, ಈ ವೃತ್ತಾಂತಮಂ ಆಡಿಗಡಿಗೂ ಬಿನ್ನೈಸುತ್ತಿರಲಾಗಿ, ತಪೋಧನರಾದ ಮುನೀಶ್ವರರು. ಎಲೈ ದಯಾ ಸಮುದ್ರನಾದ ಪರಮೇಶ್ವರನೆ! ಸರ್ವೋತ್ಕೃಷ್ಟನಾಗಿ ವರ್ತಿಸು. ಈ ಭೂಮಿಯು ಕೀಳುಮೇಲಾಗುತಲಿರುವುದು. ಈ ಜನ

ರೆಲ್ಲರುಂ ಯೆಂತು ಕೆಳಕ್ಕೆ ಬೀಳದಿರ್ಪುದೋ, ಅಂತು ಭೂಮಿಯುಂ ಸಮಮಾಡಿ, ಜನರನ್ನೆಲ್ಲರಂ ರಕ್ಷಿಪುದೆಂದು ಪ್ರಾರ್ಥಿಸಿದರು.

ಅಗಸ್ತ್ಯಮಹರ್ಷಿಯು ಮಲಯಪರ್ವತ ಪ್ರಯಾಣದಿಂದ ಭೂದೇವಿಯು ಸಮನಾಗಿ ನಿಲ್ಲುವಿಕೆ.

ಅನಂತರದಲ್ಲಿ ಶಿವನು ಮುಗುಳ್ನಗೆ ವೆರಸಿ ತನಗೆ ಸಮಾನನಾದ ಅಗಸ್ತ್ಯ ಮುನೀಶ್ವರನಂ ಕರದು, ಆತನನ್ನು ಆ ದಕ್ಷಿಣದಿಕ್ಕಿಗೆ ಅಧಿಪತಿಯಂ ಮಾಡಿ, ಅಲ್ಲಿಗೆ ಆ ಮುನಿಶ್ರೇಷ್ಠಂಗೆ ಕಲ್ಯಾಣ ವೇಷಮಂ ತೋರಿಸಿದನು. ಆದರೂ ಆ ಅಗಸ್ತ್ಯಮುನೀಶ್ವರನು ಈ ಶಿವನಾಜ್ಞೆಯಿಂದ ಕ್ಲೇಶದಿಂ ಪತ್ನೀಸಮೇತನಾಗಿ ಆಕಾಶ ಮಾರ್ಗದಿಂದಲೇ ಮಲಯಪರ್ವತದ ಪ್ರಾಂತ್ಯಮನ್ನೈದಿದನು. ಶಿವನ ಭಾವನೆಯಿಂದ ಶಿವಂಗೆ ಸಮಾನನಾದ ಆ ಅಗಸ್ತ್ಯಮುನಿಯು ಮಲಯಾಚಲಮನ್ನೈದಿದ ಬಳಿಕ, ವಿಷಮವಾದ ಭೂಮಿಯು ಸಮಮಾದುದು.

ಪರಶಿವನು ಸಮಂತ್ರಕವಾದ ಅಗ್ನಿಯಲ್ಲಿ ಹವಿರ್ದಾನ ಮಾಡುವಿಕೆ.

ತದನಂತರದಲ್ಲಿ ಚತುರ್ಮುಖನು ಕೈಗಳಂ ಮುಗಿದು ಎಲೈ ಪ್ರಭುವಾದ ಪರಮೇಶ್ವರನೆ! ವಿವಾಹಸಂಬಂಧವಾದ ಕ್ರಿಯೆಯು ಯಜ್ಞೇಶ್ವರನಲ್ಲಿ ಮಾಡಲ್ಪಡತಕ್ಕದ್ದು, ಲೋಕಶ್ರೇಷ್ಠರು ಆದರಣೆಯಿಂದ ಆವ ಕರ್ಮವಂ ಮಾಡುತ್ತಿರುವರೋ, ಆ ಕರ್ಮವನ್ನೇ ಲೋಕವೆಲ್ಲವು ಅನುಸರಿಸುವುದು. ಅದುಕಾರಣದಿಂದ ನೀನು ಲೋಕಶ್ರೇಷ್ಠನಾದುದರಿಂ ವಿವಾಹ ಹೋಮಕ್ಕೆ ಅನುಜ್ಞೆಯ ನೀಡೆಂದು ಬಿನ್ನೈಸುತ್ತಿರಲಾಗಿ, ಶಿವನು ಆ ಚತುರ್ಮುಖನ ವಾಕ್ಯಮಂ ಕೇಳ್ದು ಮುಗುಳ್ನಗೆವೆರಸಿದ ಮುಖಾರವಿಂದವುಳ್ಳವನಾಗಿ ಅದರಂತೆ ಆಜ್ಞಾಪಿಸಿದನು. ಆಗ ವಿಧಿಪೂರ್ವಕನಾಗಿ ಆ ಬ್ರಹ್ಮದೇವರು ವಿವಾಹ ಹೋಮವಂ ಮಾಡುತ್ತಿರಲಾಗಿ, ಸಾಕ್ಷಾದ್ಯಜ್ಞೇಶ್ವರನು ಮೂರ್ತಿಮಂತನಾಗಿ ಕಲ್ಯಾಣಾಧ್ವರಿ ಮಂಟಪದಲ್ಲಿ ಪಾರ್ವತೀ ಪರಮೇಶ್ವರರ್ಗೆ ನಮಸ್ಕರಿಸಿ ಪ್ರತ್ಯಕ್ಷವಾಗಿ ಜ್ವಲಿಸುತ್ತಿರೆ, ಚತುರ್ಮುಖನು ದರ್ಭೆಗಳಿಂ ಪರಿಸ್ತರಣಮಂ ವಿಸ್ತರಿಸಿ, ಪರಿಧಿಗಳನ್ನು ಯಥಾವಿಧಿ ಸ್ಥಾಪಿಸಿ, ವಿಧಿವತ್ತಾಗಿ ಆಜ್ಯಸ್ಥಾಲಿಯೊಳು ಆಜ್ಯಮಂ ಪೊಯ್ದು, ಆ ಆಜ್ಯಮು ನಂಗಾರಂಗಳಲ್ಲಿ ಪ್ರತಿಷ್ಠಾಪನಂಗೈಯ್ದು, ಆಜ್ಯೋಪರಿಭಾಗದಲ್ಲಿ ದರ್ಭಾಗ್ರದ್ವಯಮನಿರಿಸಿ, ಹೋಮಗುಂಡದ ಉಪರಿಭಾಗದ ಉತ್ತರ ಪ್ರದೇಶದಲ್ಲಿ ದರ್ಭೆಗಳಮೇಲೆ ಆ ಆಜ್ಯಸ್ಥಾಲಿಯನಿಟ್ಟು ಜ್ವಲಿಸುವ ದರ್ಭೆಗಳಿಂದ ಪರ್ಯಗ್ನಿಕರಣಮಂ ಮಾಡಿ, ಉತ್ತರಭಾಗದಲ್ಲಿಯೇ ಆಜ್ಯಸ್ಥಾಲಿಯಂ ಉದ್ವಾಸನಂಗೈದು,

ಆ ಸ್ಥಾಲಿಯ ಉತ್ತರ ಭಾಗಮಾದ ಅಂಗಾರಮಂ ಹೋಮಾಗ್ನಿಯಲ್ಲಿಯೇ ಕೂಡಿಸಿ, ದರ್ವಿಯಿಂದ ಯಜ್ಞೇಶ್ವರನಲ್ಲಿ ಸಮಿದಾಜ್ಯ ಚರುಲಾಜಗಳಂ ದಂಪತಿಗಳ ಪ್ರೀತಿವೃದ್ಧಿಗೋಸುಗ ಹವನಮಂ ಮಾಡಿದನು.

ಬಳಿಕ ಶಿವನು ಪಾರ್ವತೀದೇವಿಯ ಪಾದವನ್ನು ಮೆಲ್ಲಮೆಲ್ಲನೆ ಮುಗುಳ್ನಗೆ ವೆರಸಿ, ಸಪ್ತಪದೀ ಭಾವಸಾನಂತರದಲ್ಲಿ ಅಸಿಕಲ್ಲಿನ ಅಗ್ರಭಾಗದಲ್ಲಿರಿಸಿದನು. ಬಳಿಕ ದಂಪತಿಗಳಾದ ಪಾರ್ವತೀಪರಮೇಶ್ವರರೀರ್ವರುಂ ಸಂತೋಷಾನ್ವಿತರಾಗಿ, ಆ ವಿವಾಹಾಗ್ನಿಯಂ ಪ್ರದಕ್ಷಿಣಮಂಮಾಡಿ, ಅವರೀರ್ವರುಂ ವೊಂದೇ ಸಿಂಹಾಸನದಲ್ಲಿ ಕುಳ್ಳಿರ್ದರು, ಆಗ ಪರಮೇಶ್ವರನು ಪ್ರಥಮದಲ್ಲಿ ಪ್ರಮಥೇಂದ್ರರ್ಗೆ ದರ್ಶನಮನಿತ್ತು, ಬಳಿಕ ಕಾಲಾಗ್ನಿರುದ್ರಂಗೆ ತದನಂತರದಲ್ಲಿ ಹಾಟಕೇಶ್ವರಂಗೆ ಈ ರೀತಿ ಕ್ರಮದಲ್ಲಿ ಹರಿಬ್ರಹ್ಮಮಹೇಂದ್ರಾಗ್ನಿ ಮೊದಲಾದ ದೇವತೆಗಳ್ಗೆಯುಂ ಯೋಗೀಶ್ವರರ್ಗೆಯುಂ ಮುನೀಂದ್ರ ಉರಗ ಸಿದ್ಧರ್ಗೆಯುಂ ದರುಶನಮನಿತ್ತು, ಬಳಿಕ ಆ ಕಾಲಗ್ನಿರುದ್ರನಂ ಹಾಟಕೇಶ್ವರನಂ ಸಂಭಾಷಣೆಯಿಂ ಬಹುಮಾನಮಂಮಾಡಿ, ಚತುರ್ಮುಖನಂ ನೋಟದಿಂದಲುಂ ಸಮಸ್ತ ದೇವತೆಗಳಂ ಅರೆನೋಟದಿಂದಲುಂ ತಪಸ್ವಿಗಳಂ ಶಿರಃಕಂಪನದಿಂದಲುಂ ಬಹುಮಾನಮಂಮಾಡುತ್ತಿರೆ, ಆ ಪ್ರಸ್ತಾವದಲ್ಲಿ ಕಾಮಪತ್ನಿಯಾದ ರತಿದೇವಿಯು ಇಂದ್ರಾದಿದೇವತೆಗಳ್ವೆರಸಿ, ಅಡಿಗಡಿಗೆ ತನ್ನ ಪತಿಯಾದ ಕಾಮನಂ ತನಗೀಯಲ್ವೇಳೆಂದು ಪರಮೇಶ್ವರಿಯಂ ಪ್ರಾರ್ಥಿಸಿದಳು.

ರತಿದೇವಿಗೆ ಪರಶಿವನ ವರಪ್ರದಾನವು.

ಆಗ ಪಾರ್ವತೀದೇವಿಯು ಪರಮೇಶ್ವರನಂ ವಕ್ರದೃಷ್ಟಿಯಿಂ ನೋಡುತ್ತಿರಲಾಗಿ, ಚಕ್ರಪಾಣಿಯಾದ ವಿಷ್ಣುವುಂ ಚತುರ್ಮುಖನುಂ ತಮ್ಮ ತಮ್ಮ ಪತ್ನಿಯರಲ್ಲಿ ಭೋಗಮನಪೇಕ್ಷಿಸುತಿರೆ, ಅಲ್ಲಿ ಕರ್ತನಾದ ಶಿವನು ಆ ವೃತ್ತಾಂತಮನೆಲ್ಲಮಂ ನೋಡಿ ಸಂತುಷ್ಟಚಿತ್ತನಾಗಿ, ತಾನೆ ರತೀದೇವಿಯಂ ನೋಡಿ ಈ ವಾಕ್ಯಮಂ ನಿರೂಪಿಸಿದನು. ಏನಂದರೆ, ಎಲೌ, ಮಗಳೆ! ನಿನ್ನ ಪತಿಯು ನಿನಗೋರ್ವಳ್ಗೆ ಅಂಗಮೊಡಗೂಡಿರಲಿ, ಮಿಕ್ಕ ಜೀವಾತ್ಮರೆಲ್ಲರ್ಗೆಯುಂ ಅನಂಗನಾಗಿರಲಿ, ಯಿಂದಿನಾರಭ್ಯಮಾಗಿ ಈ ಜಗತ್ರಯದಲ್ಲಿಯುಂ ನಾನು ಕಾಮಾರಿಯೆಂದು ಪ್ರಖ್ಯಾತಿಯಂ ಪಡೆಯಲೋಸುಗ, ಆ ಕಾಮನಂ ಅನಂಗನಂಮಾಡಿ ನಿನಗೆಮಾತ್ರ ಸಾಂಗನಾಗಿ ಮಾಡಿದೆನೆಂದು ನುಡಿದು, ಬಳಿಕ ಪ್ರಯಾಣೋನ್ಮುಖನಾಗುತ್ತಿರಲಾಗಿ, ಹಿಮವತ್ಪರ್ವತರಾಜನು ಮೈನಾಕ ಕ್ರೌಂಚರೆಂಬ ಈರ್ವರ್ ಪುತ್ರರ್ವೆರಸಿ, ಪರಮೇಶ್ವರನ ಸನ್ನಿಧಿಯಲ್ಲಿ ನಮಸ್ಕರಿಸಿ, ಮಧುಪರ್ಕಶೇಷವಿನಿಯೋಗಮಂ ಬಿನ್ನೈಸುತ್ತಿರೆ, ಆ ಮಧುಪರ್ಕಶೇಷಮಂಬಯಸುತ್ತಿಹ ಹರಿ

ಬ್ರಹ್ಮಾದಿದೇವತೆಗಳು, ಶಿರಸ್ಸಿನಲ್ಲಿ ಅಂಜಲಿಬಂಧನುಂಮಾಡಿ ಅದರಲ್ಲಿ ಮನ ವಿಟ್ಟು ಪರಮೇಶ್ವರನ ಮುಖಮಂ ನೋಡಿದರು. ಆಗ ಪರಮೇಶ್ವರನು ಅವರ ತಾತ್ಪರ್ಯಮನೆಲ್ಲಮಂ ತಿಳಿದು, ಹರಿಬ್ರಹ್ಮಾದಿಗಳ್ಗೆ ವಿಭಾಗಿಸಿ ಯಾವುದೆಂದು ಹಿಮವತ್ಪರ್ವತರಾಜಂಗೆ ನಿರೂಪಿಸಿದ ಬಳಿಕ ಆ ದೇವತೆಗಳೆಲ್ಲರುಂ ನಾನುಂಚು ತಾನುಂಚೆಂದು ನಿರ್ಮಲಾಕಾರಮಾದ ಮಧುಪರ್ಕನಿರ್ಮಾಲ್ಯಶೇಷಮಂ ಆತ್ಮ ಶುದ್ಧ್ಯರ್ಥವಾಗಿ ಸ್ವೀಕರಿಸಿ ಅತ್ಯಂತ ನಿರ್ಮಲರಾದರು.

ಬಳಿಕ ಮಹಾಮೇರುವಂ ಬಿಲ್ಲಂಮಾಡಿ ಧರಿಸಿದ ಪರಮೇಶ್ವರನು, ಗಿರಿ ರಾಜನಂ ಪರಿಗ್ರಹಿಸಿ ಪಾರ್ವತೀಸಮೇತನಾಗಿ, ವೃಷಭರಾಜನ ಮೇಲೆ ಗಣಾಧಿಪ ಸ್ಥಿರಸಿ, ದೇವತೆಗಳೊಡನೆಯುಂ ಮುನೀಶ್ವರೊಡನೆಯುಂ ತೆರಳಿ, ಕ್ಷಣಾರ್ಧ ದಲ್ಲಿಯೆ ಕೈಲಾಸಮಂ ಪ್ರವೇಶಿಸಿ, ಆ ಕೈಲಾಸಗಿರಿಯೊಳಿರ್ಪ ಶುಭಕರಮಾದ ಭೋಗಪುರದಲ್ಲಿ, ತನ್ನ ಅರಮನೆಯ ದ್ವಾರದೇಶದಲ್ಲಿ ವೃಷಭನಮೇಲಿರ್ದು, ಕಾಲಾಗ್ನಿರುದ್ರ ಮೊದಲಾದ ಸಕಲ ದೇವತೆಗಳಂ ತಮ್ಮ ತಮ್ಮ ಸ್ಥಾನಂಗಳಿಗೆ ಕಳುಹಿ, ವಸಿಷ್ಠಾದಿ ಋಷಿಗಳನ್ನೂ ಚರಾಚರಾತ್ಮಕರಾದ ಸಕಲ ಜೀವಾತ್ಮರನ್ನೂ ಭ್ರೂಸಂಜ್ಞೆಯಿಂದಲೇ ಕಳುಹಿ, ತಕ್ಷಣದಿಂ ವೃಷಭನಿಂದಿಳಿದು, ನಂದೀಶ್ವರನ ಕೈಲಾಗಿನಿಂದ ಪಾರ್ವತೀದೇವಿಸಹಿತ ವೆರಸಿ, ಅಂತರಂಗಭಕ್ತರಾದ ಗಣಾಧಿಪ ರೊಡನೆ ತನ್ನ ಅರಮನೆಯಂ ಪೊಕ್ಕನು.

ಗಿರಿಜಾಕಲ್ಯಾಣಾಧ್ಯಾಯ ಪಠನ ಶ್ರವಣ ಫಲಸ್ತುತಿಯು.

ಸೂತರ ವಚನವು:—ಎಲೈ ಮುನಿಗಳಿರಾ! ಈ ಪ್ರಕಾರಮಾದ ಪಾರ್ವತೀ ಪರಮೇಶ್ವರರ ಕಲ್ಯಾಣಸರ್ಗಮಂ ಪ್ರತಿ ದಿನದಲ್ಲಿಯುಂ, ಆವಾತಂ ಭಕ್ತಿಯಿಂದ ಪಠಿಸುತ್ತಿರುವನೋ, ಮತ್ತೆ ಅವನೋರ್ವಂ ಸಾವಧಾನನಾಗಿ ಕೇಳುವನೋ ಇವಲ್ಲದೆ ಸ್ತ್ರೀಯಾದೊಡಂ ಪುರುಷನಾದೊಡಂ, ಆಗಾದೊಡಂ ಈ ಕಲ್ಯಾಣಾ ಧ್ಯಾಯಮಂ ಪಠಿಸುವ ವಿದ್ವಾಂಸಂಗೆ, ಚನ್ನಾಗಿ ಅರ್ಚನೆಯಂಮಾಡಿ ಆದರದೆ ಯಿಂದ ಕೇಳುತಿರುವುದೋ, ಅವಗೆ ಫಲಮಂ ನಿರೂಪಿಸುವೆನು. ಏನಂದರೆ, ಕನ್ಯಾರ್ಥಿಯಾದವನು ಕನ್ನಿಕೆಯುಂ, ಪತಿಯುಂ ಬಯಸುವ ಕನ್ನಿಕೆಯು ಶೋಭನ ನಾದ ಪತಿಯನ್ನು ಈ ಪ್ರಕಾರಮಾದ ದಂಪತಿಗಳೀರ್ವರುಂ ತಮ್ಮ ತಮ್ಮ ಇಷ್ಟಾರ್ಥಮಂ ಪಡೆವರಲ್ಲದೆ, ವಿದ್ಯಾರ್ಥಿಯು ವಿದ್ಯೆಯಂ ಜಯಕಾಮನು ಜಯಮುಂ ಪುತ್ರಾರ್ಥಿಯು ಪುತ್ರರಂ ಆಯುಷ್ಕಾಮನು ಅಧಿಕವಯಸ್ಸಂ ಪಡೆವರು. ಎಲೈ ಮುನಿಗಳಿರಾ! ಈ ಗೌರೀಕಲ್ಯಾಣಾಧ್ಯಾಯಮಂ ಮುರಾರಿಯಾದ ವಿಷ್ಣುವು ವಿಶ್ವಾಸಪುರಸ್ಸರಮುಪ್ಪಂತು ಕೇಳ್ದು ಅಮೃತಮಥನದಲ್ಲಿ ಉತ್ಪನ್ನೆಯಾದ ಸಾಕ್ಷಾತ್ ಮಹಾಲಕ್ಷ್ಮಿಗೆ ಪತಿಯಾದನು. ಹಾಗೆ ಸರಸ್ವತೀದೇವಿಯು ಈ

ಅಧ್ಯಾಯಮಂ ಕೇಳ್ದು ಜಗನ್ನಿರ್ಮಾಣಚತುರನಾದ ಚತುರಾನನಂಗೆ ಸತಿಯಾದಳು. ಮಹಾತ್ಮನಾದ ದೇವೇಂದ್ರನು ಈ ಕಥಾಶ್ರವಣದಿಂದಲೇ ದೇವವೈಭವದೊಡನೆ, ಶಚೀದೇವಿಯ ಪಾಣಿಗ್ರಹಣಮಂ ಪಡೆದನು. ಗೌತಮ ಮುನೀಶ್ವರನು ಈ ಅಧ್ಯಾಯ ಪಠನದಿಂದಲೇ ಅಹಲ್ಯಾದೇವಿಗೆ ಪತಿಯಾದನು. ಮತ್ತಂ ನಿರ್ಮಲರಾದ ಮುನೀಶ್ವರರೆಲ್ಲರುಂ ಈ ಕಲ್ಯಾಣಾಧ್ಯಾಯದ ಪಠನದಿಂದಲೇ ತಮ್ಮ ತಮ್ಮ ಇಷ್ಟಾರ್ಥಂಗಳಂ ಪಡೆದರು. ಅದು ಕಾರಣದಿಂ ಸಕಲ ಪ್ರಯತ್ನದಿಂದಲೂ ಉತ್ತಮವಾದ ಈ ಕಲ್ಯಾಣಾಧ್ಯಾಯಮಂ ಪಠಿಸಿದವರುಂ ಕೇಳಿದವರುಂ ಇವರೆಲ್ಲರುಂ ತಮ್ಮ ತಮ್ಮ ಬಯಕೆಗಳಂ ಪಡೆವರೆಂಬ ವಿಷಯದಲ್ಲಿ ಸಂದೇಹವಿಲ್ಲವು. ಯೆಂದು ನುಡಿದನೆಂಬಲ್ಲಿಗೆ ಸ್ಕಾಂದಪುರಾಣದ ಶಂಕರ ಸಂಹಿತೆ ಯೋಳ್ ಶಿವರಹಸ್ಯ ಖಂಡದೊಳು ಸಂಭವಕಾಂಡದ ಇಪ್ಪತ್ತ ಮೂರನೆಯ ಅಧ್ಯಾಯವು ಸಂಪೂರ್ಣಂ.

ಇಪ್ಪತ್ತ ನಾಲ್ಕನೆಯ ಅಧ್ಯಾಯವು.

ಬ್ರಹ್ಮಾದಿಗಳು ಯೋಚಿಸಿ ಪರಶಿವನ ಅಂತಃಪುರಕ್ಕೆ ವಾಯು ದೇವನನ್ನು ಕಳುಹುವಿಕೆ.

ಎಲೈ, ಮುನಿಗಳಿರಾ! ಪರಮೇಶ್ವರನು ಅರಮನೆಯಂ ಪ್ರವೇಶಿಸಿದ ಬಳಿಕ, ನೂತನವಾಗಿ ವಿವಾಹವಾದ ಹಿಮವತ್ಪರ್ವತರಾಜನ ಕುಮಾರಿತಿಯಾದ ಆ ಪಾರ್ವತೀದೇವಿಯೊಡನೆ, ನವರತ್ನಂಗಳಿಂ ನಿರ್ಮಿತವಾಗಿ ಸುವರ್ಣಮಯವಾದ ಸಿಂಹಾಸನದ ಮೇಲೆ ಕುಳಿತುಕೊಂಡಿದ್ದನು. ಆ ಸಮಯದಲ್ಲಿ ಪಾರ್ವತೀದೇವಿಯು ಪರಮೇಶ್ವರನೊಡನೆ ಭೇದವಿಲ್ಲದಾಕೆಯಾದೊಡಂ, ಕುಲಸ್ತ್ರೀಯರ ಮತವನ್ನಾಶ್ರೈಸಿ, ಅತ್ಯಂತ ಲಜ್ಜೆಯಿಂದ ಬಗ್ಗಿದ ಮುಖವುಳ್ಳವಳಾಗಿ, ಸಪ್ತಮಾತೃಕೆಯರಿಂದ ಆದೃತೆಯಾಗಿ ನಾನಾ ಮುಖಂಗಳುಳ್ಳ ಗಣಾಧೀಶ್ವರರಿಂದ ನಿರ್ಮಿತವಾದ, ತಾನು ಬಯಸಿದ ಇಷ್ಟಾರ್ಥಮಂ ನೋಡಿದಾಕೆಯಾಗಿ ಸಂತುಷ್ಟೆಯಾದಳು. ಮತ್ತೆ ನೂತನವಾಗಿ ವಿವಾಹವಾದ ಆ ದೇವಿಯು ಕೆಲವು ಕಾಲಾಂತರದ ಮೇಲೆ ಮೆಲ್ಲ ಮೆಲ್ಲನೆ ಆ ಲಜ್ಜೆಯಂ ತ್ಯಜಿಸಿದಳು. ಈ ಪ್ರಕಾರದಿಂ ಬಹು ಕಾಲವು ಪ್ರವರ್ತಿಸುತ್ತಿರೆ, ಶೂಲಪಾಣಿಯಾದ ಪರಮೇಶ್ವರನು ವಿಚಿತ್ರವಾದ ಉದ್ಯಾನವನಂಗಳಲ್ಲಿಯುಂ ಆ ರಮ್ಯಂಗಳಾದ ಸ್ಥಳಂಗಳಲ್ಲಿಯುಂ, ಆ ಪಾರ್ವತೀದೇವಿಯೊಡನೆ ಕ್ರೀಡಿಸುತ್ತಿರಲಾಗಿ, ಎಲ್ಲಾ ಜಗಂಗಳಲ್ಲಿಯುಂ ಸ್ತ್ರೀಪುರುಷ ಭಾವವು ಮೆಲ್ಲಮೆಲ್ಲನೆ ಅಭಿವೃದ್ಧಮಾದುದು.

ಆಗ ಕಾಮನುಂ ಸಕಾಮನಾಗಿ ನಿಜಪತ್ನಿಯಾದ ರತಿದೇವಿ ವೆರಸಿ, ಜಗತ್ರಯವನ್ನು ಪ್ರಯತ್ನವ ನುಳಿದು ವನದಲ್ಲಿ ಪುಟ್ಟಿದ ಪುಷ್ಪಬಾಣಂಗಳ್ಗೆ ವಶವರ್ತಿಯಂ ಮಾಡಿದನು. ತದನಂತರದಲ್ಲಿ ಹರಿಯೇ ಮೊದಲಾದ ದೇವತೆಗಳುಂ ತಪೋಧನರಾದ ಋಷಿಗಳುಂ ಈ ಮೊದಲಾದವರೆಲ್ಲರುಂ ಈ ಪ್ರಕಾರದಿಂ ಕಲ್ಯಾಣೋತ್ಸವಾನಂತರದಲ್ಲಿ ಶೂಲಪಾಣಿಯಾದ ಶಿವನಿಂ ಕಳುಹಲ್ಪಟ್ಟವರಾಗಿ ತಮ್ಮ ತಮ್ಮ ಲೋಕಂಗಳನ್ನೈದಿದರು. ಆಗ ಶೂರಪದ್ಮಾಸುರನ ಭಯದಿಂದ ದೇವತೆಗಳೆಲ್ಲರುಂ ವೊಂದೇ ಕಡೆಯಲ್ಲಿ ಕೂಡಿ, ಮಹಾಮೇರುಪರ್ವತದ ಗುಹೆಯಂ ಪೊಕ್ಕು ಶೀಘ್ರದಿಂದ ಮಂತ್ರಾಲೋಚನೆಯಂ ಮಾಡಿದರು. ಆ ವೇಳೆಯಲ್ಲಿ ದೇವೇಂದ್ರನು ನೆರೆದ ದೇವಸಭಾ ಮಧ್ಯದಲ್ಲಿ ಸರಸ್ವತೀಪತಿಯಾದ ಚತುರ್ಮುಖಂಗೆಯುಂ, ಲಕ್ಷ್ಮೀಪತಿಯಾದ ನಾರಾಯಣಂಗೆಯುಂ ಕೈಮುಗಿದು, ಎಲೈ, ಭಗವಂತನಾದ, ಚತುರ್ಮುಖನೆ! ವಿಷ್ಣುವೆ! ಈ ಜಗತ್ತೆಲ್ಲವು ಬಹು ಕಾಲದಿಂದ ಶೂರಪದ್ಮಾಸುರನಿಂ ಹತಮಾಗುತ್ತಿರೆ, ಪರಮೇಶ್ವರನು ಸುಬ್ರಹ್ಮಣ್ಯನೆಂಬ ನಿಜಕುಮಾರನಂ ಸೃಜಿಸಿ, ಈ ಜಗಮಂ ರಕ್ಷಿಸುವೆನೆಂದು ಪ್ರತಿಜ್ಞೆಯಂ ಮಾಡಿದನು. ಆ ಪರಮೇಶ್ವರನ ಸತ್ಯವಾಕ್ಯ ಪ್ರತಿಜ್ಞೆಯು ಯೇಕೆ ವಿಳಂಬವಾಗುತ್ತಿರುವುದೋ ಏನೋ? ಆದರೆ, ನಮ್ಮ ವಿಷಯದಲ್ಲಿ ಈಶ್ವರನೇನುಮಾಡುವನು? ನಮ್ಮ ಸಂಬಂಧವಾದ ದುರದೃಷ್ಟಂಗಳ ಮಹಿಮೆಯಿಂದಲೇ ಈ ಕಷ್ಟವು ವೊದಗಿದೆಯೇ ಹೊರತು ಬೇರೊಂದರಿಂದಿಲ್ಲವು, ಆಕಟಕಟ!! ಅಸುರರೇ ಭಾಗ್ಯವಂತರು, ಆ ಶಿವಶರಣರಾಗಿ ಶಿವನನ್ನೇ ಮರೆಹೊಕ್ಕರು, ಎಂದೀಪ್ರಕಾರವಾಗಿ ದೇವೇಂದ್ರನುಂ ದಿಕ್ಪಾಲಕರುಂ ಮುನಿಗಳುಂ ಅತ್ಯಂತ ದುಃಖಿತರಾಗಿರಲು, ಆಗ ಬ್ರಹ್ಮದೇವನು ದೇವತೆಗಳಂ ನೋಡಿ, ಎಲೈ ದೇವತೆಗಳಿರಾ! ನಾವು ದಯಾಸಿಧುವಾದ ಶಿವನಂ ಮರಳಿ ಉಪಾಸಿಸುವುದೇ ಉತ್ತಮಕಾರ್ಯವು. ವಿಚಾರಿಸಿ ನೋಡುವಲ್ಲಿ ಜಗನ್ಮಯನಾದ ಶಿವಂಗೆ, ಅಸುರರುಂ ಮಿಕ್ಕ ಸ್ಥಾವರಜಂಗಮಾತ್ಮಕವಾದ ಜಗತ್ತೆಲ್ಲವುಂ ಸಮಾನವಾಗಿಯೇಯಿಹುದು. ಹಾಗಿಲ್ಲದಿರ್ದೊಡೆ ಈ ಜಗದೀಶ್ವರನೀಗ ಅಂತಃಪುರದಲ್ಲಿ ಪಾರ್ವತೀಸಮೇತನಾಗಿ ಆವ ಕಾರ್ಯವನ್ನೆಸಗುತ್ತಿರ್ಪನೆಂಬುದಂ ವಿಚಾರಿಸಲೋಸುಗ, ಆ ತ್ರಿಪುರಾರಿಯಾದ ಶಿವನ ಸನ್ನಿಧಾನಕ್ಕೆ ಆವಾತನನ್ನಾದರುಂ ಕಳುಹಿ, ಆ ಪುರುಷನ ಮುಖಾಂತರದಿಂದ ವಿಶದವಾಗಿ ವೃತ್ತಾಂತಮಂ ವಿಚಾರಿಸಿ ದನಂತರದಲ್ಲಿ, ಪ್ರಯತ್ನದಿಂದ ನಾವು ಮಾಡಲ್ತಕ್ಕ ಕಾರ್ಯವನ್ನು ಶಕ್ಯವಾದೊಡೆ ಮಾಡುವುದು, ಎಂದು ನುಡಿದ ಬ್ರಹ್ಮದೇವನ ವಚನಮಂ ನಾರಾಯಣನುಂ ದೇವೇಂದ್ರನುಂ ಮಿಕ್ಕ ದಿಕ್ಪಾಲಕರುಂ ಯಿವರೆಲ್ಲರುಂ ಸಾದರವುಪ್ಪಂತು ಬಹುಮಾನಮಂ

ಮಾಡಿದರು. ಆಗ ಪರಮೇಷ್ಠಿಯು, ನಾರಾಯಣನ ಮತ್ತೆ ಇಂದ್ರಾದಿ ದೇವತೆಗಳ ಅನುಮತಿಯಿಂದ ಗಗನೋದ್ಭವನಾದ ವಾಯುವಂ ಕರೆದು, ಬಹು ಪ್ರಕಾರವಾಗಿ ಪ್ರಿಯೋಕ್ತಿಗಳಿಂದ ಬಹುಮಾನವುಂಮಾಡಿ, ಆ ದೇವತೆಗಳ ಸಮಕ್ಷಮದಲ್ಲಿಯೇ ಯಿಂತೆಂದನು.

ಎಲೈ ವಾಯುವೆ! ನಾವೆಲ್ಲರುಂ ಬಹುಕಾಲದಿಂದ ಶೂರಪದ್ಮಾಸುರನಿಂದ ಅಪಹರಿಸಲ್ಪಟ ನಿಜಲೋಕಂಗಳುಂ ಧನಂಗಳುಂ ಉಳ್ಳವರಾಗಿ, ದೇಹಮಾತ್ರದಿಂದ ಉಳಿದಂಥವರಾದೆವು. ಆ ಅಸುರರ್ಗೆ ಸ್ಕಂದನನುಳಿದು ಶಿಕ್ಷಕನಂ ಕಾಣೆವು. ಆ ಸ್ಕಂದನಾದೊಡೆ ಊರ್ಧ್ವರೇತಸ್ಕನಾಗಿ ಪ್ರಪಂಚಕ್ಕೆ ಯೆಲ್ಲಾ ಕಡೆಯುಲ್ಲಿಯುಂ ಪಂಚಕೃತ್ಯಪರನಾದ ಶಿವನಿಂದಲೇ ಪಾರ್ವತೀದೇವಿಯಲ್ಲಿ ಉತ್ಪನ್ನನಾಗಬೇಕು. ಎಲೈ ಸದಾಗತಿಯಾದ ವಾಯುವೆ! ಬಹು ಕಾಲದಿಂದ ದಿವ್ಯಾಂತಃಪುರವಾಸಿಯಾದ ಪರಮೇಶ್ವರನಿಂದ ಪಾರ್ವತೀದೇವಿ ವೆರೆಸಿ ಆವ ಕಾರ್ಯವು ಪ್ರವರ್ತಿಸಲ್ಪಡುತ್ತಿರುವುದೋ, ನೀನು ಶಿವನ ಅಂತಃಪುರವಂ ಪೊಕ್ಕು ಆ ಅಂತಃಪುರದ ವೃತ್ತಾಂತಮನೆಲ್ಲಮಂ ತಿಳಿವುದು, ನೀನಾದೊಡೆ ಲೋಕದಲ್ಲಿ ಸರ್ವಪ್ರಾಣಿಗಳ್ಗೆಯುಂ ಪ್ರಾಣರೂಪನಾಗಿರುವನಲ್ಲದೆ ಆ ಶಿವಂಗೂ ಮಹತ್ತಾದ ಮೂರ್ತಿಯು,. ಇದಲ್ಲದೆ ನಿತ್ಯಂಗಳಾದ ವೇದಂಗಳ್ಗೆಯುಂ ವೇದಾಗ್ರೇಸರನೆಂದು ಪ್ರಸಿದ್ಧನಾದುದರಿಂದ, ನೀನೇ ಶಿವನ ಅಂತಃಪುರಮಂ ಪೊಕ್ಕು ದೇವತೆಗಳ್ಗೆಯುಂ, ಈ ಮೂರು ಲೋಕಂಗಳ್ಗೆಯುಂ ಪ್ರೀತಿಯಂ ಮಾಡೆಂದು ನುಡಿದ ಚತುರ್ಮುಖನ ವಚನಮಂ ಕೇಳ್ದು, ಪವಮಾನನಿಂತೆಂದನು. ಎಲೈ ಚತುರ್ಮುಖನೆ! ನಾನು ಶಿವಾಂತಃಪುರದಲ್ಲಿ ಪ್ರವೇಶಿಸುವದಕ್ಕೆ ಸಮರ್ಥನಲ್ಲ. ಮಿಕ್ಕವರಾದೊಡಂ ಶಕ್ತರಲ್ಲ. ಪೂರ್ವದಲ್ಲಿ ಕಾಮನು ದೇವತೆಗಳ ವಾಕ್ಯಮಂ ಕೇಳ್ದು, ರತಿದೇವಿಯೊಡನೆ ಶಿವಾಂತಃಪುರಮಂ ಪೊಕ್ಕು ಭಸ್ಮವಾದುದನ್ನು ನೀವೆಲ್ಲರುಂ ಬಲ್ಲಿರಲ್ಲಿವೆ! ಯೆಂದು ನುಡಿದನು.

ಅನಂತರದಲ್ಲಿ ಚತುರ್ಮುಖನು ಈ ವಾಕ್ಯಮಂ ಕೇಳ್ದು ಮರಳಿ ಆ ವಾಯುವಂ ಕುರಿತು, ಎಲೈ ವಾಯುವೆ! ಆ ಕಾಮನು ವಟಮೂಲ ನಿವಾಸಿಯಾಗಿ ಉಪದೇಶಪರನಾದ ಶಿವಂಗೆ, ರತಿದೇವಿ ವೆರೆಸಿ ಅಪಕಾರಮಂ ಮಾಡುತ್ತಿರಲಾಗಿ ಆ ಅಪಚಾರವೇ ಕಾಮನಂ ವಿನಾಶಮನ್ನೆಯ್ದಿಸಿತು. ನೀನಾದೊಡೆ ಅಷ್ಟಮೂರ್ತಿಯಾದ ಶಿವನ ಸಾಕ್ಷಾನ್ಮೂರ್ತಿಯು, ಈ ಮಹತ್ತಾದ ದೇವತೆಗಳ ಕಾರ್ಯದ ವಿಷಯದಲ್ಲಿ ಇಷ್ಟಾನಿಷ್ಟ ಸುಚಿತ್ತನಾದ ನಿನ್ನನ್ನೇ ನಾವಾಶ್ರಯಿಸಿಧೇವೆ, ಎಲೈ ಪವಮಾನನೆ! ತಿರಸ್ಕಾರಮಂ ಮಾಡದೆ ಹಾಗೆಯೆ ವಿಳಂಬಮಂ ಮಾಡದೆ ನೀನು ತೆರಳಿ ಪೋಪುದು. ನಿನಗೆ ಪೂರ್ವದಲ್ಲಿ ಶುಭಂಗಳಾಗಲಿ, ಯೆಂದೀಪ್ರಕಾರದಿಂದಲೇ

ದೇವತೆಗಳೆಲ್ಲರುಂ ನಿರ್ಮಲರಾದ ಬ್ರಹ್ಮರ್ಷಿಗಳೆಲ್ಲರುಂ ಪ್ರಾರ್ಥಿಸುತಿರಲಾಗಿ, ಆಗಲತ್ಯಂತ ಪ್ರಯಾಸದಿಂ ಗಮನೇಚ್ಛೆಯುಂ ಧರಿಸಿ ತೆರಳಿದನದೆಂತೆನೆ.

ಎಲೈ ಮುನಿಗಳಿರಾ! ಕ್ಷಣಮಾತ್ರದಲ್ಲಿ ಉತ್ತರದಿಕ್ಕಿನಲ್ಲಿಯುಂ ಪೂರ್ವ ದಿಕ್ಕಿನಲ್ಲಿಯು ಯಿಹ ಆ ಮಾರುತನು ದಕ್ಷಿಣನಾಗಿ ಮಂದಮಾರುತನಾಗಿ ತೆರಳಿ, ಪರಮೇಶ್ವರನ ಪುರಮನಾಶ್ರಯಿಸಲೋಸುಗ ಪುರದ್ವಾರದಿಂದ ಪುರಮಂ ಪೊಕ್ಕು ಬಳಿಕ ಪರಮೇಶ್ವರನ ದಿವ್ಯ ಮಾಣಿಕ್ಯ ಖಚಿತವಾದ ದೃಷ್ಟಿಗಳ ಸಮೂಹಂ ಗಳ್ಗೆ ಅಪಹಾರಕಮಾಗಿ, ಅನೇಕಾದಿತ್ಯ ಸಂಕಾಶಮಾದ ಆಕಾಶಮಂ ಮುಟ್ಟು ತಿಹ ಮಹಾ ಗೃಹಂಗಳುಳ್ಳ ಸ್ವಾಮಿಯಾದ ಶಿವನ ಅರಮನೆಯಂ ಪ್ರವೇಶಿಸಿ, ಅಭ್ಯಂತರಂ ದಾಂಟಿ ಅಲ್ಲಿ ಭಯಂಕರರಾಗಿ ದ್ವಾರಸ್ಥರಾದ ಗಣಾಧಿಪತಿಗಳಿಂ ದಲಂಕೃತಮಾದ ಅಂತಃಪುರಾಧಿಪತಿಯಾದ ನಂದಿಕೇಶ್ವರನ ನಿಲಯಮಂ ಪೊಕ್ಕನು. ಅಲ್ಲಿ ಆ ವಾಯುವು ಸ್ವರೂಪವಂತನಾದ ಮಂದಮಾರುತನಾದ ಕಾರಣದಿಂ ನಂದಿಕೇಶ್ವರನಿಂದ ತಿಳಿಯಲ್ಪಟ್ಟು ಕೋಪದಿಂದೀಪ್ರಕಾರದಿಂದ ನುಡಿಯಲ್ಪಟ್ಟನು. ಎಲೈ ಸಾಹಸಿಯಾದ ಪ್ರಭಂಜನನೆ! ನಡೆನಡೆ, ನೀನು ಪ್ರಭುವಾದ ಶಿವನ ಅರಮನೆಯನೇನುಕಾರಣದಿಂ ಪ್ರವೇಶಿಸುತ್ತಿದ್ದಿ? ಹೇಳು. ನನಗೆ ತಿಳುಪದೆ ಚಂದ್ರಶೇಖರನ ಗೃಹಾಂತರವನ್ನು ಚೋರನ ತೆರದಿ ಪ್ರವೇ ಶಿಸುವದು ನಿನಗುಚಿತವೊ? ಯೆಂದು ನುಡಿವ ನಂದಿಕೇಶ್ವರನ ವಾಕ್ಯಮಂ ಕೇಳ್ದು ಆತನ ಮುಂದುಗಡೆಯಲ್ಲಿ ನಿಂತಿಹ ಸದಾಗತಿಯಾದ ಪವನನು, ಆ ನಂದೀಶ್ವರಂಗೆ ನಮಸ್ಕರಿಸಿ, ಕೈಮುಗಿದು ಅಭಿಮುಖವಾಗಿ ನಿಂತು ಈ ವಾಕ್ಯ ಮಂ ಬಿನ್ನೈಸಿದನು, ಎಲೈ ನಂದೀಶ್ವರನೆ! ನಾನು ಭಿಕ್ಷುನು; ದೇವತೆಗಳ ಕಾರ್ಯಾ ರ್ಥಮಾಗಿ ಅವರಿಂದಲೆ ಅಡಿಗಡಿಗಾಜ್ಞಾಪಿಸಲ್ಪಟ್ಟವನಾಗಿಲ್ಲಿಗೆ ಬಂದೆನು. ಈ ಮಹತ್ತಾದ ಅಪರಾಧಮಂ ಕ್ಷಮಿಸಿ, ಪ್ರಭುವಾದ ಶಿವಂಗೆ ನೀನೆ ಬಿನ್ನಪಂ ಗೆಯ್ದು, ನನಗೆ ಅಂತಃಪುರ ಪ್ರವೇಶಮಂ ಮಾಡಿಪುದೆಂದು ನುಡಿಯಲಾಗಿ ನಂದೀ ಶ್ವರನು ಮರಳಿ ಕುಪಿತನಾಗಿ ಛಿಛಿ !! ಹಿಂತಿರಿಗಿ ಪೋಗು, ಈಗ ಪರಮೇಶ್ವರಂಗೆ ಸಮಯವೇ ಇಲ್ಲ, ಮದನನ ಹಾಗೆ ವಿನಾಶಮನ್ನೈದಬೇಡೆಂದು ನುಡಿದನು.

ತದನಂತರದಲ್ಲಿ ವಾಯುವು ಈ ನಂದೀಶ್ವರನ ವಚನದಿಂದ ಖಿನ್ನನಾಗಿ, ನಾನೆಂತು ಮಾಳ್ಪೆನೆಂದು ಚಿಂತಿಸುತ್ತ, ಆ ಹಾಹಾ !! ಈ ವೃತ್ತಾಂತವನ್ನು ದೇವಶ್ರೇಷ್ಠರಾದ ಬ್ರಹ್ಮಾದಿಗಳ್ಗೆ ಅತ್ಯಂತ ಪ್ರಯಾಸದಿಂ ತಿಳುಪಿ ಆ ದೇವತೆ ಗಳ್ವೆರಸಿ ಉಚಿತಮಾದ ಕಾರ್ಯಮಂ ಪ್ರವರ್ತಿಪೆನೆಂದು ತನ್ನ ಮನದೊಳ್ನಿಶ್ಚ ಯಿಸಿ, ಮನೋವೇಗಮನಾಶ್ರಯಿಸಿ, ಶೀಘ್ರದಿಂ ಮಂತ್ರಾಲೋಚನೆಯಂ ಮಾಡುತಿರ್ದ ಆ ಬ್ರಹ್ಮಾದಿದೇವತೆಗಳಿಂದ ಆಶ್ರಿತಮಾದ ಮಹಾಮೇರುವಿನ

ಗುಹೆಯಂ ಪೊಕ್ಕನೆಂದು, ಸೂತಪೌರಾಣಿಕಂ ಶೌನಕಾದಿ ಮಹರ್ಷಿಗಳ್ಗೆ ನಿರೂಪಿಸಿದ ನೆಂಬಿಲ್ಲಿಗೆ, ಶ್ರೀಕೃಷ್ಣರಾಜ ವಾಣೀವಿಲಾಸಮೆಂಬ ಕರ್ಣಾಟಕ ಭಾಷಾತ್ಮಕಮಾದ, ಶಿವರಹಸ್ಯಖಂಡದೊಳು ಸಂಭವಕಾಂಡದ ಇಪ್ಪತ್ತ ನಾಲ್ಕನೆಯ ಅಧ್ಯಾಯವು ಸಂಪೂರ್ಣಂ.

ಇಪ್ಪತ್ತೈದನೆಯ ಅಧ್ಯಾಯವು.

ಬ್ರಹ್ಮಾದಿಗಳು ನಂದೀಶ್ವರನಂ ಪ್ರಾರ್ಥಿಸುವಿಕೆ.

ಸೂತರ ವಚನವು:—ಎಲೈ, ಮುನಿಗಳಿರಾ! ಅನಂತರದಲ್ಲಿ ಆ ಬ್ರಹ್ಮಾದಿ ದೇವತೆಗಳು ಆ ಪವನನಂ ಕಂಡು ಅತ್ಯಂತ ಸಂತುಷ್ಟರಾಗಿ, ನಮಸ್ಕರಿಸಿ, ತಮ್ಮ ಪಾರ್ಶ್ವದೊಳಿರ್ಪಂತಿಪ ನಮ್ರಮುಖನಾದ ಪವನನಂ ಕುರಿತು, ಎಲೈ, ಮಹಾನುಭಾವನಾದ ಪವನನೆ! ಇತ್ತಬಾ, ಸಜ್ಜನರ್ಗೆ ಗತಿಯಾದ ಮಹಾದೇವನೀಗ ಪಾರ್ವತೀ ಸಮೇತನಾಗಿ ಆವಕಾರ್ಯಮಂ ಮಾಡುತಲಿರ್ಧಾನೆ? ಪೇಳೆಂದು ನುಡಿದರು. ಬಳಿಕ ವಾಯುವು ಪ್ರಸನ್ನವದನನಾದ ಆ ಬ್ರಹ್ಮಾದಿಗಳ ವಾಕ್ಯಮಂ ಕೇಳ್ದು, ಎಲೈ ಬ್ರಹ್ಮಾದಿ ದೇವತೆಗಳಿರಾ! ಆ ಅಂತಃಪುರದಲ್ಲಿ ಪಾರ್ವತೀಪರಮೇಶ್ವರರ ವೃತ್ತಾಂತಮಂ ನಾನರಿಯೆನು, ಕುಪಿತನಾದ ನಂದೀಶ್ವರಂ ನನ್ನಂ ಕಂಡು, ದೇವತೆಗಳಿಗಿದು ಸಮಯವಲ್ಲೆಂದು ನುಡಿಯಲಾಗಿ ಆ ವಚನಮಂ ಕೇಳ್ದು, ಹಿಂತಿರುಗಿ ಬಂದೆನು. ಪ್ರಭುಗಳ ಸ್ವರೂಪವೀಪ್ರಕಾರವಲ್ಲವೆ? ಇದರ ಮೇಲೆ ನೀವೆಲ್ಲರುಂ ನಿಮಗೆ ಹಿತಮಾದ ಕಾರ್ಯಮನೆಸಗುವುದೆಂದು ನುಡಿದನು.

ಬಳಿಕ ಬ್ರಹ್ಮಾದಿಗಳ್ವೆರಸಿದ ಆ ದೇವತೆಗಳೆಲ್ಲರುಂ ನಾರಾಯಣಂ ವೆರಸಿ, ಮಂತ್ರಾಲೋಚನೆಯಂ ಮಾಡಿ, ಆ ಗುಹೆಯಿಂ ಪೊರಮಟ್ಟು, ಮಹಾಮೇರು ಪರ್ವತದತ್ತಣಿಂ ಕೈಲಾಸಪರ್ವತಮನೈದಿ, ಅಲ್ಲಿಹ ಪುಣ್ಯಕರಮಾದ ಮಹತ್ತಾದ ಶಿವನ ಆಲಯ ಪ್ರಾಂತ್ಯಮಂಪೊಂದಿ, ದೇವಾದಿದೇವನ ದ್ವಾರಪ್ರದೇಶಮನಾಶ್ರಯಿಸಿ, ಬಹುಕಾಲ ಪರ್ಯಂತರವು ಆಲಸ್ಯಮಂ ಬಟ್ಟಿರ್ದರು. ಆ ಸಮಯದಲ್ಲಿ ಆ ದೇವಾಧೀಶ್ವರರೆಲ್ಲರುಂ, ಯೆಲ್ಲಾ ಗಣಾಧಿಪತಿಗಳಿಂ ಸೇವಿತನಾಗಿ ಸಿದ್ಧ ಗಂಧರ್ವ ಕಿನ್ನರರಿಂ ಪರಿಪೂಜಿತನಾದ, ಯಥೇಚ್ಛೆಯಿಂದ ಆ ಅರಮನೆಯ ಬಹಿರ್ದ್ವಾರಮನಾಶ್ರಯಿಸಿದ ಗಣಾಧಿಪತಿಯಾದ ನಂದಿಕೇಶ್ವರನಂ ಕಂಡು, ಗಣಾಧಿಪತಿಯಾದ ನಂದಿಕೇಶ್ವರನಂ ಕಂಡು, ಧನಮಂ ಪಡದ ನಿರ್ಧನನಂತೆ ಸಂತುಷ್ಟರಾಗಿ, ಕಲ್ಪವೃಕ್ಷ ಕುಸುಮಗಳಿಂದಾತನಂ ಚನ್ನಾಗಿ ಅರ್ಚಿಸಿ, ನಾನಾವಿಧ ಸ್ತೋತ್ರಂಗಳಿಂ ಸಂತುಷ್ಟನಂಮಾಡಿ, ಮುಂದುಗಡೆಯಲ್ಲಿ ಕೈಗಳಂ ಮುಗಿ

ದಿಂತು ಬಿನ್ನೈಸಿದರು. ಎಲೈ, ನಂದೀಶ್ವರನೆ! ಸಾಲಂಕಾಯನ ಪುತ್ರನಾದ ಸಾಕ್ಷಾಚ್ಛಿಲಾದ ಭಗವಂತನು ಧನ್ಯನಾಗಿ, ನಿನ್ನಿಂದ ತ್ರೈಲೋಕ್ಯ ಗುರುವೆಂದೆಲ್ಲರಿಂದಲುಂ ನಿರೂಪಿಸಲ್ಪಟ್ಟನು. ದೇವತೆಗಳ್ಗೆ ನೀನೇ ಉತ್ತಮ ಸಹಾಯಕನು, ಅದುಕಾರಣದಿಂ ಅತ್ಯಂತ ದುಃಖಿತರಾಗಿ ಬಂದಿಹ ನಮ್ಮೆಲ್ಲರ ವೃತ್ತಾಂತಮಂ, ದೇವದೇವನಾದ ಪರಮೇಶ್ವರಂಗ ಬಿನ್ನೈಸಿ, ಶೋಕಾರ್ಣವದೊಳು ಮುಣಗಿರ್ಪ ಜಗವನುದ್ಧರಿಸೆಂದು ನುಡಿದರು. ಬಳಿಕ ಆ ಶಿವ ಪ್ರಿಯನಾಗಿ ಶ್ರೀಮಂತನಾದ ನಂದೀಶ್ವರನು ಆ ದೇವತೆಗಳ ವಾಕ್ಯಮುಂ ಕೇಳ್ದು ಸಂತೋಷದಿಂದ, ತೇಜಃಪುಂಜರಂಜಿತಮಾದ ಶಿವನ ಸನ್ನಿಧಾನಮುಂ ಪೊಕ್ಕು, ಸಕಲ ಜಗಂಗಳ್ಗೆ ಮಾತಾಪಿತೃಗಳಾಗಿ ಕೃತಾರ್ಥರಾದ ಪಾರ್ವತೀಪರಮೇಶ್ವರರಂ ನೋಡಿ, ಇಂಗಿತದಿಂದ ಕಾಮರಿಪುವಾದ ಶಿವನ ಚಿತ್ತಮಂ ತಿಳಿದು, ವಿನಯಾನ್ವಿತರಾಗಿ ದೇವತೆಗಳು ಸೇವಾರ್ಥಮಾಗಿ ಬಂದಿರುತ್ತಾರೆಂದು ಬಿನ್ನೈಸಿ, ಆ ದೇವದೇವನ ಅನುಜ್ಞೆಯುಂ ಪಡೆದ ಬಳಿಕ, ಆ ದೇವತೆಗಳನೆಲ್ಲರಂ ಶಿವನ ಸನ್ನಿಧಾನಮನ್ನೈದಿಸಿದನು.

ಎಲೈ, ಮುನಿಗಳಿರಾ! ಜಗದೀಶ್ವರನಾದ ಶಿವನು ಪಾರ್ವತೀದೇವಿ ವೆರಸಿ, ದಿವ್ಯ ಸಿಂಹಾಸನಸ್ಥನಾಗಿ, ಮುಗುಳ್ನಗೆ ವೆರಸಿ ದೇವತೆಗಳ್ಗೆ ದರ್ಶನಮನಿತ್ತ ಬಳಿಕ, ಬ್ರಹ್ಮಾದಿ ದೇವತೆಗಳು ಆ ಶಿವನಂ ಕಂಡು, ಪ್ರೀತಿಯಿಂದ ರೋಮಾಂಚಿತರಾಗಿ ಪರವಶಮಾದ ಅಂತಃಕರಣದಿಂದ, ಸ್ತೋತ್ರಾರ್ಹನಾದ ಶಿವನಂ ಸ್ತುತಿಗಳಿಂದ ಸ್ತುತಿಸಿದರು. ಯೆಂತೆಂದರೆ, ಅಶುಭಮೋಚಕನಾದುದರಿಂದಲೆ ಪ್ರಣತಾರ್ತಿಘ್ನನಾದ ಮತ್ತೆ ಕಲ್ಯಾಣಪ್ರದನಾಗಿ ಇಷ್ಟಾರ್ಥಪ್ರದನಾದ ಸತ್ವರೂಪನಾದ ನಿನಗೆ ನಮಸ್ಕಾರ. ಕಾಮಘ್ನನಾಗಿ ಪುರಘ್ನನಾದ ಕಲಿಪ್ರಮಥನಾದ, ಮತ್ತೆ ಸೋಮಸೂರ್ಯಾಗ್ನಿ ನೇತ್ರನಾಗಿ ಪಾರ್ವತೀದೇವಿಯೊಡಗೂಡಿದ ಅರ್ಧನಾರೀಭಾವಮುಂ ಧರಿಸಿದ ನಿನಗೆ ನಮಸ್ಕಾರವು. ಪಾಪಘ್ನನಾಗಿ ಯಮಘ್ನನಾದ, ಸುಖಪ್ರಾಪ್ತಿಗೆ ಮುಖ್ಯಕಾರಣಮಾದುದರಿಂದಲೇ ಶಂಭುವಾದ, ಲೋಕಶಂಕರನಾದೊಡಂ ದುರುಳರಂ ಭಂಜಿಸುವುದಕ್ಕೋಸುಗ ತ್ರಿಶೂಲಪಾಣಿಯಾದ ಮತ್ತೆ ಯಮಘ್ನನಾದುದರಿಂದಲೇ ವಿಷಘ್ನನಾದ, ಸಜ್ಜನರ್ಗೆ ನಿರಂತರದಲ್ಲಿಯುಂ ಶತ್ರುಘ್ನನಾದ, ಲೋಕಂಗಳಿಗೆ ಪ್ರಭುವಾಗಿ ನಮ್ಮೆಲ್ಲರ್ಗೆಯುಂ ಪ್ರಭುವಾದ ನಿನಗೆ ನಮಸ್ಕಾರವು. ಆದ್ಯರಾದವರಿಗೆಲ್ಲರ್ಗೆಯುಂ ಅಂತಃಕರಣಜ್ಞನಾದ ಶಿವನೆ! ಈಗ ನೀನು ಸೇನಾಧಿಪತಿಯುಂ ಸೃಜಿಸಿ, ದಯೆಯಿಂದ ಶೀಘ್ರದಲ್ಲಿ ತಾರಪದ್ಮ ಮೊದಲಾದ ಅಸುರರ ಬಾಧೆಯು ನಮಗಿಲ್ಲದಂತೆ ನಮ್ಮನ್ನು ಪಾಲಿಸು ಪಾಲಿಸೆಂದು ಬ್ರಹ್ಮಾದಿ ದೇವತೆಗಳು ಅಡಿಗಡಿಗು ಪರಮೇಶನಂ ಸ್ತುತಿಸಿದರು.

ಪರಶಿವನಿಂದ ಹೊರಬಿದ್ದ ಆರು ತೇಜಸ್ಸಿಗಂಜಿದ ದೇವತೆಗಳ ಪ್ರಾರ್ಥನೆಯು.

ಆನಂತರದಲ್ಲಿ ಈ ಪೂರ್ವೋಕ್ತಪ್ರಕಾರದಿಂದ ದೇವತೆಗಳಿಂ ಸ್ತುತಿಸಲ್ಪಡುತಲಿರುವ ಅತ್ಯಂತ ದಯಾನಿಧಿಯಾದ ಪರಮೇಶ್ವರನು, ಆರು ಮುಖಂಗಳಿಂದ ಅಲಂಕೃತಮಾದ ದಿವ್ಯದೇಹದಿಂದ ಸಿಂಹಾಸನದಲ್ಲಿ ತನ್ನ ಪಾರ್ಶ್ವದಲ್ಲಿಯೇ ಇಹ ಪಾರ್ವತಿಯಂ, ಅಪರಿಚ್ಛೇದ್ಯ ಮಹಾಮಹಿಮನಾಗಿ, ಆರು ಮುಖಂಗಳಿಂದಲೂ ಆಕಾಂಕ್ಷೆಯೊಡಗೂಡಿ ನೋಡುತ್ತಿರಲಾಗಿ, ಆ ಊರ್ಧ್ವರೇತಸ್ಕನಾದ ಪರಮೇಶ್ವರನ ಆರು ಹಣೆಗಣ್ಣುಗಳಿಂದಲುಂ ಕೋಟಿಸೂರ್ಯ ಪ್ರಕಾಶಮಾನಮಾಗಿ ಕೋಟಿಕಾಲಾಗ್ನಿ ಸನ್ನಿಭಮಾದ ಆರು ಪ್ರಕಾರಮಾದ ತೇಜಸ್ಸು ಉತ್ಪನ್ನಮಾಗಿ, ತತ್ ಕ್ಷಣದಲ್ಲಿಯೇ ಚರಾಚರಾತ್ಮಕಮಾದ ಪ್ರಪಂಚಮನೆಲ್ಲಮಂ ವ್ಯಾಪಿಸಿತು.

ಆಗ ದೇವತೆಗಳೆಲ್ಲರುಂ ಆ ತೇಜಸ್ಸಿನಿಂದಂಜಿ ದಿಕ್ಕು ದಿಕ್ಕಿಗೆ ಪೋಡಿದರು. ಆದರೂ ಅಲ್ಲಿಗಲ್ಲಿಗೆ ಓಡುವ ಸಮಯದಲ್ಲಿಯುಂ ಆ ದೇವತೆಗಳೆಲ್ಲರುಂ ಆ ಶಿವನ ಸಂಬಂಧಮಾದ ತೇಜಸ್ಸನ್ನೇ ನೋಡಿ ನೋಡಿ ಯೆಂದಿಗೂ ಭಯಮನೇ ಅರಿಯದಿರ್ದವರಾದೊಡಂ, ಅತ್ಯಂತ ಭೀತರಾಗಿ, ಆ ಆ ಸ್ಥಳಂಗಳಲ್ಲಿಯೇ ಮರೆಸಿಕ್ಕೊಂಡು, ದಿಕ್ಕು ದಿಕ್ಕುಗಳಲ್ಲಿಯೂ ಓಡಿಸಿದೊಡಂ ಬೇರೆ ಮತ್ತೊಬ್ಬ ರಕ್ಷಕನಂ ಕಾಣದೇ ಇರ್ಪುದರಿಂದಲೇ ಅನನ್ಯ ಶರಣರಾಗಿ, ತ್ವರಿತದಿಂದ ಅಡಿಗಡಿಗೆ ಪರಮೇಶ್ವರನನ್ನೇ ಮರೆಯೊಕ್ಕರು ಯೆಂತೆಂದರೆ, ಆ ದೇವತೆಗಳೆಲ್ಲರುಂ ಭೀತಿಯಿಂದ ನಡುಗುತ್ತಿಹ ಸರ್ವಾಂಗಂಗಳಿಂದಲುಂ, ಮರಳಿ ಮರಳಿ ನಿಟ್ಟುಸಿರುಗಳಂ ಬಿಡುತ್ತ, ಶಿವ ಶಿವ!! ರಕ್ಷಿಸು ರಕ್ಷಿಸು, ಸರ್ವಜ್ಞನಾಗಿ ಸರ್ವೇಶ್ವರನಾದ ಸರ್ವಶಕ್ತಿ ಸಮೇತನಾಗಿ ಸರ್ವಾರ್ಥ ಸಾಧನೋಪಾಯ ಭೂತನಾದ ಸರ್ವಜೀವ ದಯಾಪರನಾದ ಶಿವನೆ! ನಮಗೆ ರಕ್ಷಕನಾಗು, ರಕ್ಷಕನಾಗು, ಈ ನಿನ್ನ ತೇಜಸ್ಸಿನಿಂದ ತಡೆಯಲ್ಪಟ್ಟ ದೃಷ್ಟಿವ್ಯಾಪಾರಮುಳ್ಳ ನಮ್ಮನ್ನು ಈಗಲೇ ಪರಿಪಾಲಿಸೆಂದು ಪರಿಪರಿ ಬೇಡುತ್ತಿದ್ದರು.

ಎಲೈ ಮುನಿಗಳಿರಾ! ಈ ಪ್ರಕಾರಮಾದ ದೇವತೆಗಳ ಪ್ರಾರ್ಥನೆಯಿಂದ ಸರ್ವೇಶ್ವರನಾದ ಸಾಂಬಶಿವನು ದಯಾನಿಧಿಯಾದುದರಿಂದ ಪ್ರಸನ್ನನಾಗಿ ಆ ಸ್ವಕೀಯಮಾದ ತೇಜಸ್ಸನ್ನು ಮನದೊಳ್ನೆನೆಯುತ್ತಿರಲಾಗಿ, ಆ ತೇಜಸ್ಸು ಶಿವನು ನೆನೆದ ಮಾತ್ರದಿಂದಲೇ ಆ ಕ್ಷಣದಲ್ಲಿಯೆ ಮಾತಾಪಿತೃಗಳಾದ ಪಾರ್ವತೀ ಪರಮೇಶ್ವರರ ಸನ್ನಿಧಾನಮನ್ನೈದಿತು. ಆ ಆರು ಪ್ರಕಾರಮಾದ ತೇಜಸ್ಸುಂ ಅತ್ಯಂತ ಸೂಕ್ಷ್ಮಮಾಗಿ ತತ್ಕ್ಷಣದಲ್ಲಿಯೇ ಶಾಂತಮಾದುದು. ತದನಂತರದಲ್ಲಿ

ಕೃಪಾಮೂರ್ತಿಯಾದ ಪರಮೇಶ್ವರನು, ಆ ದೇವತೆಗಳನೆಲ್ಲರಂ ನೋಡಿ ಯಜ್ಞೇಶ್ವರ ವಾಯುಗಳೀರ್ವರಂ ಕರೆದು ಎಲೆ, ಅಗ್ನಿಯೆ! ವಾಯುವೆ! ಈ ಆರು ಪ್ರಕಾರ ಮಾದ ತೇಜಸ್ಸನ್ನು ನೀವೀರ್ವರೂಂ ಶೀಘ್ರದಲ್ಲಿ ದೇವಗಂಗೆಯನ್ನೈದಿಸಿ, ನನ್ನಾಜ್ಞೆಯಿಂದ ದೇವತೆಗಳ್ಪೆರಸಿ ಶರವಣವೆಂಬ ವನಮಧ್ಯದಲ್ಲಿ ಸ್ಥಾಪಿಪುದೆಂದು ನಿರೂಪಿಸಿದನೆಂದು, ಸೂತಂ ಶೌನಕಾದಿಗಳ್ಗೆ ಉಸುರಿದನೆಂಬಲ್ಲಿಗೆ, ಶ್ರೀ ಕೃಷ್ಣ ರಾಜ ವಾಣೀವಿಲಾಸವೆಂಬ ಶಿವರಹಸ್ಯಖಂಡದ ಸಂಭವಕಾಂಡದ ಇಪ್ಪತ್ತೈದನೆಯ ಅಧ್ಯಾಯವು ಸಂಪೂರ್ಣಂ.

ಇಪ್ಪತ್ತಾರನೆಯ ಅಧ್ಯಾಯವು.

ಅನಂತರದಲ್ಲಿ ಶೌನಕಾದಿಮುನಿಗಳು ಸೂತಪೌರಾಣಿಕನಂ ಕುರಿತು, ಎಲೈ ಪೌರಾಣಿಕೋತ್ತಮನಾದ ಸೂತಮುನಿಯೆ! ಈ ಪೂರ್ವೋಕ್ತ ಪ್ರಕಾರದಿಂ ದೇವತೆಗಳು ಪರಮೇಶ್ವರನ ಸನ್ನಿಧಾನದಲ್ಲಿ ಸ್ತುತಿಸಿ ಪ್ರಾರ್ಥಿಸಿದ ಬಳಿಕ, ಆ ಪರಮೇಶ್ವರಂ ಆರು ಮುಖಂಗಳಿಂದಲಂಕೃತನಾಗಿರ್ಪ ಸಮಯದಲ್ಲಿ, ಆ ಪರಮೇಶ್ವರನ ಆರು ಹಣೆಗಣ್ಣುಗಳಿಂದ ಕೋಟಿಸೂರ್ಯಪ್ರಕಾಶಮಾನಮಾದ ಆರು ವಿಧಮಾದ ತೇಜಸ್ಸು ಪೊರಮಟ್ಟು ಪ್ರಪಂಚಮನೆಲ್ಲಮಂ ವ್ಯಾಪಿಸುತ್ತಿರಲಾಗಿ, ದೇವತೆಗಳೆಲ್ಲರುಂ ದಿಕ್ಕುದಿಕ್ಕುಗಳಿಗೆ ಪಲಾಯನಮನ್ನೈದಿ, ಬೇರೊಬ್ಬ ರಕ್ಷಕನಂ ಕಾಣದೇ ಶಿವನನ್ನೇ ಮರೆಯೊಕ್ಕತಿರೆ, ಆ ಶಿವನದಂ ನೆನೆದಮಾತ್ರದಲ್ಲಿ ಆ ದಿವ್ಯ ತೇಜಸ್ಸು ಸೂಕ್ಷ್ಮಮಾಗಿ ಆರುಪ್ರಕಾರಮಾಗಿಯುಂ ಇರುತಿರ್ದುದೆಂದು ನಿರೂಪಿತಮಾದುದು ಸರಿಯಷ್ಟೆ, ಅಪರಿಮಿತ ತೇಜಸ್ವಿಯಾದ ಪರಮೇಶ್ವರನ ಊರ್ಧ್ವರೇತಸ್ಸು ಲೋಕದಲ್ಲಿ ಅತ್ಯದ್ಭುತವೇ ಸರಿ, ಆದರೂ ಈ ಪರಮೇಶ್ವರನ ಆರು ಹಣೆಗಣ್ಣುಗಳಲ್ಲಿ ಉತ್ಪನ್ನಮಾದ ಆರು ವಿಧಮಾದ ತೇಜಸ್ಸು ಸ್ಕಂದನೆಂತಾದುದು? ಈ ಆಶ್ಚರ್ಯಕರಮಾದ ಕಥೆಯಂ ನಮಗೆ ನಿರೂಪಿಸು, ಏಕೆಂದರೆ, ಈ ಚರಾಚರಾತ್ಮಕಮಾದ ಜಗತ್ತಿನಲ್ಲಿ ನೀನೊರ್ವನೆ ಸರ್ವಜ್ಞನು? ನೀನರಿಯದಿರ್ಪುದೊಂದೂಯಿಲ್ಲ, ಅದುಕಾರಣದಿಂದ ಈ ಸುಬ್ರಹ್ಮಣ್ಯನ ಉತ್ಪತ್ತಿಯನ್ನೆಲ್ಲಮಂ ನಿರೂಪಿಸೆಂದಿಂತು ಶೌನಕಾದಿಗಳು ಪ್ರಾರ್ಥಿಸುತ್ತಿರಲಾಗಿ, ಮಹಾತ್ಮನಾಗಿ ವ್ಯಾಸಶಿಷ್ಯನಾದ ಸೂತಪೌರಾಣಿಕನು ಆ ಕಥಾವೃತ್ತಾಂತಮನೆಲ್ಲಮಂ ಮನದೋಳ್ನಿಶ್ಚಯಿಸಿ ಅದನೆಲ್ಲಮಂ ನಿರೂಪಿಸಲುದ್ಯೋಗಿಸಿ ಆ ಶೌನಕಾದಿ ಮುನಿಗಳಂ ಕುರಿತು ಎಲೈ ಮುನಿಗಳಿರಾ! ಪೂರ್ವದಲ್ಲಿ ವ್ಯಾಸಮುನಿಯಿಂದ ಕರುಣಾಬಲದಿಂ ನಿರೂಪಿತಮಾದ ಶ್ರೇಯಸ್ಸುಗಳಿಗೆ ಮುಖ್ಯಸಾಧಕಮಾದ ಶ್ರೀ ಸುಬ್ರಹ್ಮಣ್ಯೋತ್ಪತ್ತಿ ಕಥೆಯಂ ಪೇಳ್ವೆನು ಕೇಳುವರಾಗಿ ಏನೆಂದರೆ,

ಸುಬ್ರಹ್ಮಣ್ಯೋತ್ಪತ್ತಿ ಕಥಾ ಸಂದರ್ಭವು.

ಪಾರ್ವತೀಪತಿಯಾದ ಪರಮೇಶ್ವರನು, ಮಹಾಬಲರಾದ ವಹ್ನಿ ವಾಯುಗಳೀರ್ವರುಂ ಈ ತೇಜಸ್ಸನ್ನು ಶೀಘ್ರದಿಂದ ಶರವಣ ಮಧ್ಯವನೈದಿಸುವಂತೆ ನಿರೂಪಿಸುತ್ತಿರೆ ಆ ಅಗ್ನಿ ವಾಯುಗಳೀರ್ವರುಂ ಭಕ್ತಿಯಿಂದ ಪರಮೇಶ್ವರಂಗೆ ವಂದಿಸಿ ಭೀತರಾಗಿ ಕೈಮುಗಿದಿಂತೆಂದು ಬಿನ್ನೈಸಿದರು, ಎಲೈ ಅಂಬಿಕಾಪತಿಯಾಗಿ ಪ್ರಭುವಾದ ಪರಮೇಶ್ವರನೆ! ನಿನ್ನ ಸಂಬಂಧವಾದ ಎಲ್ಲಾ ಲೋಕಂಗಳಂ ತಿರಸ್ಕರಿಸುವ ತೇಜಸ್ಸೆತ್ತ? ನಾವೆತ್ತ? ಆ ತೇಜಸ್ಸಂ ವಹಿಸಲು ನಮಗೀರ್ವರ್ಗೆಯುಂ ಶಕ್ತಿಯೆತ್ತಣದು? ಎಂದು ಬಿನ್ನೈಸಲಾಗಿ, ಶೂಲಪಾಣಿಯಾದ ಪರಮೇಶ್ವರನು ಆ ವಾಕ್ಯಮಂ ಕೇಳ್ದು ಮುಗುಳ್ನಗೆವೆರಸಿದ ಮುಖಾರವಿಂದಮುಳ್ಳವನಾಗಿ ಎಲೈ ವಾಯುವೆ! ವಹ್ನಿಯೆ! ನನ್ನ ಆಜ್ಞೆಯಿಂದೀ ತೇಜಸ್ಸನ್ನು ವಹಿಸುವಲ್ಲಿ ನಿಮಗೀರ್ವರ್ಗೆಯುಂ ಬಲವುಂಟಾಗಲಿ ಈ ತೇಜಸ್ಸು ನಿಮಗೀರ್ವರ್ಗೆಯುಂ ಭಾರವಿಲ್ಲದಿರಲಿ? ದೇವತೆಗಳೆಲ್ಲರು ಬ್ರಹ್ಮದೇವರ್ವೆರೆಸಿ ಮುರಾರಿಯಾದ ವಿಷ್ಣುವಿನೊಡನೆ ನಿಮ್ಮನೀರ್ವರನ್ನನುಸರಿಸಿ ಬರಲಿ, ಎಂದಿಂತು ಪ್ರಸನ್ನನಾಗಿ ನಿರೂಪಿಸಿದನು.

ತದನಂತರದಲ್ಲಿ ಅಗ್ನಿಯು ಆ ಪರಮೇಶ್ವರನ ಸಂಬಂಧನಾಗಿ ಆರುವಿಧವಾಗಿ ಜ್ವಲಿಸುತ್ತಿರ್ದೊಡಂ, ಆ ಪರಮೇಶ್ವರನ ಮಹಿಮೆಯಿಂದಲೇ ಶೀತಳವಾದ ಆ ತೇಜಸ್ಸನ್ನು ಶಿರದೊಳು ಕೆಲವು ಪ್ರದೇಶ ಪರ್ಯಂತವೂ ಪೊತ್ತು ಬಳಲಿದನು. ಆಗ ವಾಯು ವಹ್ನಿ ಈರ್ವರುಂ ವೊಬ್ಬರೊಬ್ಬರಿಗೆ ಸಹಾಯನಾಗಿ ಆ ತೇಜಸ್ಸನ್ನು ಪೊತ್ತು ನಡೆವುತ್ತಿರ್ದೊಡಂ ಈರ್ವರು ಅಡಿಗಡಿಗೆ ಬಳಲುತ್ತ ಅತ್ಯಂತ ಪ್ರಯತ್ನದಿಂದ ದೇವ ಗಂಗೆಯಲ್ಲಿಹ "ಶರವಣ" ವೆಂಬ ಪ್ರದೇಶದ ಅಭ್ಯಂತರದಲ್ಲಿ ಆ ಶೋಭನವಾದ ತೇಜಸ್ಸು, ಮಹತ್ತಾದ ಪ್ರಯತ್ನದಿಂದ ಆ ವಹ್ನಿ ವಾಯುಗಳೀರ್ವರಿಂದಲೂ ಸ್ಥಾಪಿಸಲ್ಪಟ್ಟುದು. ಆ ತೇಜಸ್ಸು ಕಮಲಂಗಳ ಮಧ್ಯದಲ್ಲಿ ಕಮಲಸದೃಶವಾಗಿ ಕಮಲ ವನದಂತೆ ಪರಿಮಳವುಳ್ಳದ್ದಾಗಿರುತ್ತಿರಲಾಗಿ, ಆ ತೇಜಸ್ಸಿನಿಂದ ಪಾನಮಂ ಮಾಡಲ್ಪಟ್ಟ ಜಲವುಳ್ಳ ದೇವಗಂಗೆಯು ಕೃಶತ್ವಮನ್ನೈದಿ, ಶರತ್ತಟಾಕ ಮಧ್ಯದಲ್ಲಿರ್ಪ ಕಮಲ ಮಧ್ಯಮನ್ನೈದಿಸುತ್ತಿರೆ ಸಹಸ್ರ ಸೂರ್ಯಸಮಾನವಾದ ಆ ಶಿವನ ತೇಜಸ್ಸು ಆ ಕಮಲಮಧ್ಯದಲ್ಲಿ ಆರು ಮುಖಂಗಳಿಂದಲುಂ ಹನ್ನೆರಡು ಭುಜಂಗಳಿಂದಲುಂ ಪಾದದ್ವಯದಿಂದಲೂ ಮನೋಹರವಾಗಿ ಮಂಗಳಾಯುಷ್ಯಂಗಳಂ ಜಗಂಗಳ್ಗೆ ಪೇರ್ಚಿಸುತ್ತಿರ್ಪ ದಿವ್ಯದೇಹಮಂ ಧರಿಸಿ, ಮೃದುವಾದ ವಸ್ತುಗಳ್ಗೀ ಉಪಮಾನವಾದ ಕುಮಾರ ಸ್ವರೂಪವನ್ನು ಆ ಕ್ಷಣದಲ್ಲಿ ಧರಿಸಿದನು. ಆಗ ದುಂದುಭಿಧ್ವನಿಗಳ್ವೆರೆಸಿದ ಪುಷ್ಪ

ವೃಷ್ಟಿಯುಂಟಾದುದು. ನರ್ತನದ ಕಲೆಯಲ್ಲಿ ಕುಶಲರಾದ ಅಪ್ಸರಸ್ತ್ರೀಯರು ನರ್ತಿಸುತ್ತಿದ್ದರು, ದಿಕ್ಕುಗಳು ಪ್ರಸನ್ನವಾದವು, ಜೀವಾತ್ಮರ್ಗೆ ಸುಖಕರಂಗಳಾದ ತಂಗಾಳಿಗಳ್ತೀವಿದವು, ಇಂದ್ರಾದಿ ದೇವತೆಗಳ ಲೋಕಂಗಳಲ್ಲಿ ಅತ್ಯಂತ ಶೋಭನವಾದುದು, ಈಶ್ವರನ ತೇಜಸ್ಸು ಮೊದಲ್ಗೊದಲು ಮನೋಹರವಾಗಿ ಕುಮಾರರೂಪಮಂ ಧರಿಸುತ್ತಿರಲಾಗಿ, ಇಂದ್ರಾದಿದೇವತೆಗಳೆಲ್ಲರುಂ ಆ ಕುಮಾರನಂ ನೋಡಿ ನೋಡಿ ಕೃತಕೃತ್ಯರಾಗಿ ವಂದಿಸಿ, ತಮ್ಮ ತಮ್ಮ ಐಶ್ವರ್ಯವನ್ನು ಪೂರ್ವದೋಪಾದಿಯಲ್ಲಿಯೇ ನಿಷ್ಕಂಟಕವಾಗಿ ನಾವೆಲ್ಲರು ಮಹಾವೈಭವಂಗಳ್ವೆರಸಿ ಈ ಕುಮಾರನ ಸೇವೆಯಿಂದಲೆ ಅನುಭವಿಸುವೆವೆಂದು ಶೀಘ್ರದಿಂದಾ ಕುಮಾರನಂ ಸೇವಿಸುತ್ತ, ಇದ್ದ ದಿಕ್ಕುಗಳನ್ನು ರಕ್ಷಿಸುತ್ತಿದ್ದರು. ಈ ಪ್ರಕಾರದಿಂದೀ ದೇವತೆಗಳು ಕುಮಾರ ದೇವತೆಗಳ ಸೇವೆಯಂ ಮಾಡುತ್ತಿರಲಾಗಿ ಆಗ ದೈತ್ಯಾಂತಕನಾದ ವಿಷ್ಣುವು ಕೃತ್ತಿಕೆಯರೆಂಬ ಆರು ನಕ್ಷತ್ರ ಸ್ತ್ರೀಯರಂ ಕರೆದು ಅವರ ಮುಖಾಂತರದಿಂದ ಆ ಕುಮಾರಂಗೆ ಸ್ತನ್ಯವನೆಸಗಿಸಲೋಸುಗ ಎಲೈ ಕೃತ್ತಿಕೆಯರಿರಾ! ಪ್ರತಿದಿನದಲ್ಲಿಯುಂ ನೀವು ಅಗ್ನಿಕುಮಾರನಾದ ಸ್ಕಂದಂಗೆ ತಾಯಿಗಳಾಗಿಹುದೆಂದು ನುಡಿದನು. ಆ ವಾಕ್ಯಮಂ ಕೇಳ್ದು ನಕ್ಷತ್ರರೂಪಿಯರಾದ ಆ ಆರುಮಂದಿಯುಂ ಮುಖಾದ್ಯವಯವಂಗಳಂ ಧರಿಸಿ ಸ್ತನಗಳಂ ಪಯಸ್ಸುಗಳಂ ಸ್ರವಿಸುತ್ತ ಪ್ರೀತಿಯೊಡಗೂಡಿ ಬಂದು ಈ ಕುಮಾರಂಗೆ ಈರೀತಿ ಸ್ತನ್ಯಪಾನಮಂ ಮಾಡಿಸಿದರು.

ಆ ಪರಮೇಶ್ವರನ ಆಜ್ಞೆಯಿಂದ ಆ ಅರುಮಂದಿ ಸ್ತ್ರೀಯರುಂ ಸಮೀಪಕ್ಕೆ ಬರುತ್ತಿರಲಾಗಿ, ಆ ಶಿವನ ಕುಮಾರನಾದ ಸ್ಕಂದನು ಆ ಆರುಮಂದಿ ಸ್ತ್ರೀಯರ ಅನುಗ್ರಹಾರ್ಥವಾಗಿ ಆ ಕ್ಷಣದಲ್ಲಿಯೇ ಆರು ರೂಪಂಗಳಂ ಧರಿಸಿದನು. ಆಗ ಆ ಸ್ತ್ರೀಯರು ಆರುಮಂದಿಯುಂ ಕಮಲದ ಉಪರಿಭಾಗದಲ್ಲಿ ಸುಕುಮಾರನಂ ಕಂಡು ಸಂತುಷ್ಟವಾದ ಅಂತಃಕರಣದಿಂದ ಪ್ರತ್ಯೇಕವಾಗಿ ಒಬ್ಬರೊಬ್ಬರು, ಷಿರ್ವರೋರ್ವರಾದ ಕುಮಾರರಂ ಪರಿಗ್ರಹಿಸಿದ ಬಳಿಕ, ಸ್ತನಂಗಳಲ್ಲಿ ಕ್ಷೀರವು ಸ್ರವಿಸುತ್ತಿರಲಾಗಿ, ಆ ಕುಮಾರರ ಮುಖಗಳನ್ನು ತಮ್ಮ ಮುಖಂಗಳಿಂದ ಆಘ್ರಾಣಮಂ ಮಾಡುತ್ತ ಕ್ಷೀರಮಂ ಕೊಡುತಲಿರಲು, ಆ ಬಾಕರಾದ ಆರುಮಂದಿ ಕುಮಾರರು ಆ ಸ್ತ್ರೀಯರ ಮುಖಂಗಳನ್ನೇ ನೋಡುತ್ತ ಸ್ತನ್ಯಪಾನಮಂ ಮಾಡುತ್ತಿರ್ದರು.

ಷಣ್ಮುಖನ ಬಾಲಲೀಲೆ.

ಈ ಪ್ರಕಾರವಾಗಿ ಅವರಾರುಮಂದಿ ಸ್ತ್ರೀಯರುಂ ತಮ್ಮ ಸ್ತನ್ಯಮಂ ಆ

ಕುಮಾರರ್ಗೆ ಕ್ರಮದಿಂದ ಪಾನಮಂ ಮಾಡಿಸಿ, ಪದ್ಮಂಗಳೋಳ್ಮಲಗಿಸಿ, ಲಾಲಿಸುತ್ತ ಸಂತೋಷಿಸುತ್ತಿದ್ದರು. ಆ ಆರು ಕುಮಾರರ ಮಧ್ಯದಲ್ಲಿ ಓರ್ವಕುಮಾರನು ನಿದ್ರೆಗೆಯ್ಯುತ್ತಿದ್ದನು. ಮತ್ತೋರ್ವ ಕುಮಾರನು ಅಡಿಗಡಿಗೆ ನಗುತ್ತಿರ್ದನು. ಇನ್ನೊಬ್ಬ ಬಾಲಕನು ಬಹಳವಾಗಿ ರೋದಿಸುತಿರ್ದನು. ಇನ್ನೋರ್ವನು ಮೊರೆಯಿಡುತ್ತ ಮಾತೃವಿನಿಂದ ಅಂಜಿಸಲ್ಪಡುತಿರ್ದನು. ಮತ್ತೊಬ್ಬ ಬಾಲಕನು ನಿದ್ರಾಪರವಶನಾಗಿ ಅಡಿಗಡಿಗೆ ತಾಯಸಮೀಪದಲ್ಲಿ ರೋದನಮಂ ಮಾಡುತ್ತ ಹಾಸ್ಯಮಂ ಮಾಡುತ್ತಿರ್ದನು. ಮತ್ತೋರ್ವನು ರೋದನಮಂ ಮಾಡುತ್ತಾ ತನ್ನಂಗುಷ್ಠವನ್ನು ತನ್ನ ಬಾಯೊಳಿಡುತ್ತಿದ್ದನು. ಮತ್ತೊಬ್ಬನು ತನ್ನ ಪಣೆಯಲ್ಲಿ ಕೈಗಳಂ ಮುಗಿವುತ್ತಿರ್ದನು. ಮತ್ತೋರ್ವನು ಆ ಕ್ಷಣದಲ್ಲಿಯೇ ತನ್ನ ಉದರದಿಂದಲೇ ತಾಯ ಮುಂಗಡೆಯಲ್ಲಿ ಚಲಿಸುತ್ತಿರ್ದನು. ಇನ್ನೊಬ್ಬನು ತನ್ನ ಮೊಳಕಾಲ್ಗಳಿಂದಲುಂ ಹಸ್ತಂಗಳಿಂದಲುಂ ಮೆಲ್ಲಮೆಲ್ಲನೆ ಚಲಿಸುತಿರ್ದನು. ಮತ್ತೋರ್ವನಾದೊಡೆ ನಾಲ್ಗಡೆಯಿಂದಲೇ ಮೂರುನಾಲು ಅಡಿಗಳ ನಿಡುತ್ತಂ ನೆಡೆವುತ್ತಂ ಬೀಳುತ್ತಂ ಇದ್ದನು. ಇನ್ನೊಬ್ಬನು ಕೆಲವು ದೂರಪರ್ಯಂತವು ಕಾಲ್ನಡೆಯಿಂದಲೆ ಭೂಮಿಯಲ್ಲಿ ನಡೆವುತ್ತಿರ್ದನು. ಮತ್ತೋರ್ವನು ತನ್ನ ತಾಯ ಕೈಯ್ಯಂ ಪಿಡಿದು ನೆಲದಲ್ಲಿ ನಡೆಯುತ್ತಿದ್ದನು. ಮತ್ತೋರ್ವ ಶಿವಕುಮಾರನಾದೊಡೆ ನಡೆವುತ್ತಂ ಬೀಳುತ್ತಂ ತಿರುಗುತ್ತಿರ್ದನು. ಇನ್ನೊಬ್ಬ ಬಾಲಕನು ಕ್ಷಣದಲ್ಲಿಯೆ ಅಡಿಗಡಿಗೆ ನಡೆಯುತ್ತಿರ್ದನು. ಮತ್ತಾ ಕೆಲವರು ಅತ್ಯಂತಮಾಗಿ ಕಾಲ್ನಡೆಯಂ ಕಲಿವುತ್ತ ಒಂದುಕಾಲಿನಿಂದ ನಡೆವುತ್ತಿರ್ದರು. ಮತ್ತೋರ್ವಕುಮಾರನು ಜಟ್ಟಿಯಂತೆಯುಂ ತಗರಂತೆಯುಂ ತನ್ನ ಶರೀರದಿಂದಲೇ ಮತ್ತೋರ್ವ ಕುಮಾರನ ಶಿರಮಂ ಪಾಯುತಿರ್ದನು. ಮತ್ತೀರ್ವರ್ ಕುಮಾರರು ಬಹು ಯುದ್ಧಮಂ ಮಾಡುತ್ತಿದ್ದರು.

ಈ ಪ್ರಕಾರದಿಂದ ಆ ಪರಬ್ರಹ್ಮನೇ ಬಾಲಭಾವವನ್ನಾಶ್ರೈಸಿ ಆರು ಪ್ರಕಾರಮಾಗಿ ಏರ್ಪಟ್ಟು, ಬಾಲಕ್ರೀಡಾರಸಮಂ ಅನುಭವಿಸುತಿರ್ದುದು. ಆಗ ಕೃತ್ತಿಕಾರೂಪಿಣಿಯರಾದ ಆರುಮಂದಿ ಸ್ತ್ರೀಯರುಂ ಆ ಆರುಮಂದಿ ಕುಮಾರರ ವಿಚಿತ್ರಂಗಳಾದ ಬಾಲಲೀಲೆಗಳಂ ನೋಡುತ್ತ, ಆ ಕುಮಾರರೆಲ್ಲರಲ್ಲಿಯುಂ ಅತ್ಯಂತ ಪ್ರೀತಿಯಂ ವಿಸ್ಮಯಂ ಸಹಾ ಮಾಡುತಿರ್ದರು. ವಿಷ್ಣು ಮೊದಲಾದ ದೇವತೆಗಳು ಆ ಕುಮಾರರಂ ನೋಡಿ, ಆ ಬಾಲಕರ ವಿಚಿತ್ರಂಗಳಾದ ಚರಿತ್ರಂಗಳಿಂದ ರೋಮಾಂಚ ಭರಿತರಾಗಿ, ಕೃತಕೃತ್ಯರುಂ ಆಗಿ ನಾವು ಈಶ್ವರಂ ಒಬ್ಬ ಕುಮಾರನಂ ಬೇಡಲಾಗಿ ಅಹಹ! ಐದುಮಂದಿ ಕುಮಾರರು ಮತ್ತಂ ಮಿಗಿಲಾಗಿ ಪುಟ್ಟಿದರು. ಈ ಆರುಮಂದಿ ಕುಮಾರರಿಂದಲುಂ ಲೋಕೈಕ ಕಂಟಕರಾದ

ಶೂರಪದ್ಮ ಮೊದಲಾದ ಅಸುರರಂ ಕೊಲ್ಲಿಸಿ, ನಾವು ಕೃತಾರ್ಥರಪ್ಪೆವೆಂದು ತಮ್ಮ ತಮ್ಮ ಮನಂಗಳೊಳು ತಾವೇ ಚಿಂತಿಸುತ್ತಂ, ಮನೋಹರ ಮುಖಂಗಳುಳ್ಳ ಆ ಆರುಮಂದಿ ಕುಮಾರರಂ ಮರಳಿ ಮರಳಿ ನೋಡುತ್ತಂ ನಾನಾಭೀಷ್ಟಂಗಳಂ ಬಯಸುತ್ತಾ, ಮೋಕ್ಷಸಾಮ್ರಾಜ್ಯ ಲಕ್ಷ್ಮಿಗಿಂತ ಅಧಿಕಮಾದ ಸುಖಮಂ ಪಡೆಯುತ್ತಮಿರ್ದರು. ಎಲೈ ಮುನಿಗಳಿರಾ! ಹಾಗೆ ಸರಿಯಲ್ಲವೆ? ಪರಮೇಶ್ವರನು ಪ್ರಸನ್ನನಾಗುತ್ತಿರಲಾಗಿ ಆವ ಸೌಖ್ಯವು ತಾನೆ ಉಂಟಾಗದು? ಯೆಂದಿಂತು ಸೂತಂ ಶೌನಕಾದಿಗಳ್ಗೆ ಉಸುರಿದನೆಂಬಲ್ಲಿಗೆ ಶ್ರೀ ಕೃಷ್ಣರಾಜವಾಣೀವಿಲಾಸಮೆಂಬ ಶಂಕರಸಂಹಿತೆಯ ಶಿವರಹಸ್ಯಖಂಡದೋಳ್ ಸಂಭವಕಾಂಡದ ಶ್ರೀ ಸುಬ್ರಹ್ಮಣ್ಯೋತ್ಪತ್ತಿ ಕಥಾರೂಪಮಾದ ಇಪ್ಪತ್ತಾರನೆಯ ಅಧ್ಯಾಯವು ಸಂಪೂರ್ಣಂ.

ಇಪ್ಪತ್ತೇಳನೆಯ ಅಧ್ಯಾಯವು.

ಪರಮೇಶ್ವರನು ನವಕನ್ನೆಯರನ್ನು ಅನುಗ್ರಹಿಸಿ ವೊಂಬತ್ತುಮಂದಿ ವೀರಮಾಹೇಶ್ವರರು ಗಣಾಧೀಶರು ಜನಿಸುವಿಕೆ.

ಎಲೈ ಮುನಿಗಳಿರಾ! ಈ ಪ್ರಕಾರದಿಂ ಆರು ಲಲಾಟನೇತ್ರಂಗಳಿಂದಲುಂ ಉತ್ಪನ್ನವಾದ ತೇಜಸ್ಸುಗಳು, ಆರು ಕುಮಾರರ ವೇಷಮಂ ಧರಿಸಿ ಬಾಲಕ್ರೀಡಾರಸಮಂ ತೋರಿಸುತಲಿಪ್ಪದ್ದು ಸರಿಯಷ್ಟೆ. ದೇವತೆಗಳೆಲ್ಲರುಂ ಆ ಕುಮಾರರೂಪವಾದ ತೇಜಸ್ಸುಗಳಂ ಕಂಡು ಅಂಜಿದವರಾಗಿ, ಯಾವ ಸಮಯದಲ್ಲಿ ಪಲಾಯನವ ನೈದಿದರೊ, ಆಗಲೇ ಪಾರ್ವತೀದೇವಿಯು ಈ ಪರಮೇಶ್ವರನ ತೊಡೆಯಂ ತ್ಯಜಿಸಿ ಸಂಭ್ರಾಂತ ಚಿತ್ತೆಯಾಗಿ ಪಲಾಯನಮನ್ನಾಶ್ರೈಸಿದಳು. ಆಗ ಯೆಡವುತ್ತಿಹ ಪಾದಾರವಿಂದಂಗಳಿಂದ ಸ್ವಲ್ಪಮಾತ್ರ ಪಲಾಯನಮನ್ನೈದಿ, ಆಗಲೇ ಪರಮೇಶ್ವರಂಗಭಿಮುಖಮಾಗಿ ಮರಳಿ ಉಪಶಾಂತೆಯಾದಳದೆಂತೆನೆ. ಯೆಡವುತ್ತಿಹ ಪಾದಂಗಳಲ್ಲಿ ಗಮನವೇಗದಿಂದ ಕಾಲಂದಿಗೆಗಳಲ್ಲಿ ಕೆತ್ತಿಸಲ್ಪಟ್ಟ ನವರತ್ನಗಳು ಆ ಕ್ಷಣದಲ್ಲಿಯೆ ಜಗುಳುತಿರ್ದವು. ತದನಂತರದಲ್ಲಿ ಆ ಕುಮಾರರೂಪಂಗಳಾದ ತೇಜಸ್ಸುಗಳು ಸೂಕ್ಷ್ಮಶರೀರ ರೂಪಮಂ ಧರಿಸಿರ್ಪುದಂ, ದೇವತೆಗಳು ನಿರ್ಭಯರಾಗಿರ್ಪುದಂ ಸಹಾ ಕಂಡು ಪಾರ್ವತೀದೇವಿಯು ಆ ವೃತ್ತಾಂತಮನೆಲ್ಲಮಂ ತಿಳಿದು ಕೋಪದಿಂದ ಆ ದೇವತೆಗಳಂ ಈ ಪ್ರಕಾರಮಾಗಿ ಶಪಿಸಿದಳು. ಎಲೈ ದೇವತೆಗಳಿರಾ! ನೀವು ಆವುದಾನೊಂದು ಕಾರಣದಿಂದ ನನ್ನ ಅಂಗೋದ್ಭವನಾದ ಕುಮಾರನಂ ಸ್ವೈರಿಸದಿರ್ಪುದರಿಂದ, ನೀವು

ಪುತ್ರವಂತರಾಗಬೇಡ, ಯೆಂದಿಂತು ಶಪಿಸುತ್ತ ಮುಗುಳ್ನಗೆ ವೆರಸಿ, ತನ್ನ ಪತಿಯಾದ ಪರಮೇಶ್ವರನ ತೊಡೆಯಂ ಮರಳಿ ಪರುವದಕ್ಕೆ ಬರುವುದರೊಳಗಾಗಿಯೇ, ಆ ದೇವಿಯು ಅಂಜಿ ಓಡುವಾಗ, ಮಾರ್ಗದ ಇತ್ತೆರಗಳಲ್ಲಿಯೂ ಚೆಲ್ಲಿದ ನವರತ್ನಂಗಳಲ್ಲಿ ಪ್ರತಿಫಲಿಸಿದ ಗೌರಿದೇವಿಯು, ಆ ನವರತ್ನಂಗಳಲ್ಲಿಯುಂ ವೊಂಬತ್ತು ಪ್ರಕಾರವಾಗಿ ವಿರಾಜಿಸುತಿರ್ದಳು. ಆ ರತ್ನಂಗಳಲ್ಲಿ ಪ್ರತಿಫಲಿಸಿದ ಗೌರೀಪ್ರತಿಚ್ಛಾಯೆಗಳನ್ನು ನೋಡಿ, ಪರಮೇಶ್ವರನು ನವರತ್ನಂಗಳತ್ತಣಿಂ ಕರೆವುತ್ತಿರೆ, ಆ ರತ್ನಪ್ರತಿಚ್ಛಾಯೆಗಳೆಲ್ಲಮಂ ಆ ಆ ರತ್ನಂಗಳ ಕಾಂತಿಗಳಿಂದ ದೇದೀಪ್ಯಮಾನಂಗಳಾದ ಶರೀರಂಗಳಿಂದ ಆ ರತ್ನಂಗಳ ಪೆಸರ್ಗಳಿಂದ ಸ್ತ್ರೀರೂಪಂಗಳಂ ಧರಿಸಿ, ಆ ಮಹಾದೇವನನ್ನು ಮತ್ತೆ ಗಿರಿರಾಜ ಪುತ್ರಿಯಾದ ಪಾರ್ವತೀದೇವಿಯನ್ನೂ ಇದಿರ್ಗೊಂಡವು. ಇದಲ್ಲದೇ ಆ ನವರತ್ನಂಗಳ ಪೆಸರಿನ ವೊಂಬತ್ತು ಮಂದಿ ಕನ್ನಿಕೆಯರ ಪ್ರೀತಿಯಿಂದ ಪರಿಪೂರ್ಣಮಾನಸೆಯರಾಗಿ, ತಾವರೆಯೆಸಳ್ಗಳಂತಿಹ ಕಣ್ಗಳಿಂದಲುಂ ಶೋಭನಮಾದ ನಾಸಿಕೆಯಿಂದಲುಂ, ಮನೋಹರಮಾದ ಕುಂಡಲದ್ವಯದಿಂದಲುಂ ಉಪಲಕ್ಷಿತಮಾಗಿ ಶರತ್ಕಾಲದ ಚಂದ್ರನಂತೆ ಮನೋಹರಮಾದ, ಮುಗುಳ್ನಗೆಯಿಂ ದುಜ್ವಲಮಾದ ಪರಮೇಶ್ವರನ ಮುಖಾರವಿಂದಮಂ ನೋಡುತ್ತಿರುವಾಗಲೆ, ಆ ವೊಂಬತ್ತು ಮಂದಿ ನವರತ್ನಂಗಳ ಪೆಸರಿನ ಕನ್ನಿಕೆಯರ ಉದರಂಗಳಲ್ಲಿ ಗರ್ಭಂಗಳಾವಿರ್ಭವಿಸಿದವು. ಆ ಗರ್ಭಂಗಳಂ ಧರಿಸಿದ ವೊಂಬತ್ತು ಮಂದಿ ಕನ್ನಿಕೆಯರುಂ ಆ ಗರ್ಭಕಾಲದಲ್ಲಿ ಬಯಕೆಯಂ ಧರಿಸುತ್ತಿರ್ಪುದರಿಂದ, ಅವರುಗಳು ಸೂರ್ಯಕಿರಣಂಗಳಿಂದ ಆ ಕ್ಷಣದಲ್ಲಿಯೇ ಕಪ್ಪಾದ ವರ್ಣಮಂ ಧರಿಸುತ್ತಿರಲಾಗಿ, ಆಗ ಪಾರ್ವತೀದೇವಿಯು ಆ ವೊಂಬತ್ತು ಮಂದಿ ಕನ್ಯೆಯರ ತಾತ್ಪರ್ಯಮಂ ತಿಳಿದು, ಮೊದಲು ಕೋಪದಿಂದ ಕಣ್ಗಳಂ ಕೆಂಪಾಗಿ ಮಾಡಿ, ಅವರ ಉದರಂಗಳಲ್ಲಿಹ ಗರ್ಭಂಗಳನ್ನೂ ಕಂಡು ಅತ್ಯಂತ ಕೋಪದಿಂದ ಕಂಪಿಸುತ್ತಿಹ ಅಧರೋಷ್ಠವುಳ್ಳವಳಾಗಿ, ಆ ಕನ್ಯೆಯರಂ ಕುರಿತು ಎಲೌ ಕನ್ನಿಕೆಯರಿರಾ ! ನೀವು ಗರ್ಭಿಣಿಯರಾಗಿರ್ದೊಡಂ ಪುತ್ರರಂ ಪಡೆಯಬೇಡಿ. ಈ ಗರ್ಭಸಮೇತಮಾಗಿ ಕನ್ಯೆಯರಾಗಿಯೇ ಬಹುಕಾಲ ಮಿರ್ಪುದೆಂದು ಈ ಪ್ರಕಾರದಿಂದ ಆ ವೊಂಬತ್ತುಮಂದಿ ಕನ್ಯೆಯರ್ಗುಂ ಶಾಪವನೀಯುತ್ತಿರಲಾಗಿ, ಆ ಕನ್ಯೆಯರ್ಗೆ ಪಾರ್ವತೀದೇವಿಯ ಶಾಪ ಭೀತಿಯಿಂದ ಅವರ ಶರೀರಂಗಳಲ್ಲಿ ಪುಟ್ಟಿದ ಬೆಮರ್ಬಿಂದುಗಳು ಮುತ್ತಿನ ಮಣಿಗಳಂತೆಸೆಯುತ್ತಿರ್ದವು. ಆ ಬೆಮರ್ಬಿಂದುಗಳತ್ತಣಿಂ ನಿರಂತರದಲ್ಲಿಯುಂ ಶೂರರಾಗಿ ಕತ್ತಿಗಳಂ ಪಿಡಿದ ನಿಯುತ ಸಂಖ್ಯಾತರಾದ ಗಣಾಧಿಪತಿಗಳು, ಮಹಾ ಪರಾಕ್ರಮಶಾಲಿಗಳಾಗಿ ಉತ್ಪನ್ನರಾದರು.

ಆಗ ಭಗವಂತನಾಗಿ ಭಗನೇತ್ರಹಾರಿಯಾದ ಪರಮೇಶ್ವರನು, ಆ ರತ್ನ ಕನ್ನಿಕೆಯರ ಬೆಮರ್ಬಿಂದುಗಳಿಂ ದುತ್ಪನ್ನರಾದ ಗಣಾಧೀಶ್ವರನ್ನೆಲ್ಲರಂ ತನ್ನ ಕುಮಾರಂಗೆ ಪರಿವಾರರನ್ನಾಗಿ ಕಲ್ಪಿಸಿದನು. ಆಗ ಗೌರಿದೇವಿಯು ಶಾಪ ದಿಂದ ಆರುಕೆಲಬರು ಆ ನವರತ್ನಕನ್ನಿಕೆಯರ ಗರ್ಭಂಗಳಲ್ಲಿಯೇ ಇಹಪರಾ ಕ್ರಮಶಾಲಿಗಳಾದ ಪುರುಷರು ಜಗದೀಶ್ವರನಾದ ಪರಮೇಶ್ವರನನ್ನು ಚಿತ್ತ ದೋಳ್ ಧ್ಯಾನಿಸುತ್ತಿರ್ದರು. ಮತ್ತೆ ಆ ಕನ್ನಿಕೆಯರು ಪರಮೇಶ್ವರನ ಆಜ್ಞೆ ಯಿಂದ ಪಾರ್ವತೀದೇವಿಗೆ ಊಳಿಗಮಂ ಮಾಡುತ್ತ ನಿರಂತರದಲ್ಲಿಯುಂ ಮಹ ತ್ತಾದ ಗರ್ಭಭಾರದಿಂದ ದುಃಖಿತೆಯರಾಗಿದ್ದರು. ತದನಂತರದಲ್ಲಿ ಬಹುಕಾಲ ಅತಿಕ್ರಮಿಸುತಿರ್ದೊಡಂ ಆ ಪೊಂಬತ್ತುಮಂದಿ ಕನ್ನಿಕೆಯರುಂ ಪ್ರಯತ್ನ ದಿಂದ ಪಾರ್ವತೀದೇಯ ಊಳಿಗದಲ್ಲಿಯೇ ಆಸಕ್ತರಾಗಿರುತ್ತಿರಲಾಗಿ, ಪರಮೇ ಶ್ವರನು ಆ ನವರತ್ನಕನ್ಯೆಯರಲ್ಲಿ ಪ್ರಸನ್ನನಾದ ಬಳಿಕ, ಆ ಪಾರ್ವತೀದೇವಿಯುಂ ಅವರ ಊಳಿಗದಿಂದಲೇ ಪ್ರಸನ್ನೆಯಾದಳು. ಹೇಗೆಂದರೆ, ಪರಮೇಶ್ವರನು ಆ ಕನ್ಯೆಯರನ್ನನುಗ್ರಹಿಸಲೋಸುಗ ಪಾರ್ವತೀದೇವಿಯಂ ಪ್ರಾರ್ಥಿಸುತಿರೆ, ಪಾರ್ವತೀದೇವಿಯು ತಾನೇ ಆ ಕನ್ಯೆಯರಲ್ಲಿ ಪ್ರಸನ್ನೆಯಾರುತಿರ್ದೊಡಂ, ಪರ ಮೇಶ್ವರನ ಅನುಜ್ಞೆಯಂ ಪಡೆದ ಬಳಿಕ, ಆ ಪೊಂಭತ್ತುಮಂದಿ ಕನ್ಯೆಯರಾದ ಸಖಿಯರನ್ನು ಅನುಗ್ರಹಿಸಿ ಯಿಂತೆಂದಳು. ಲೋಕಂಗಳ ಅನುಗ್ರಹಾರ್ಥ ನಾಗಿ ಬಹುಕಾಲದಿಂ ಗರ್ಭಮಂ ಧರಿಸಿದ ನವರತ್ನ ಕನ್ನಿಕೆಯರು ಕುಮಾರರಂ ಪಡೆಯಲೆಂದು ಅನುಗ್ರಹಿಸುತ್ತಿರಲಾಗಿ, ಆ ಪೊಂಬತ್ತು ಕನ್ಯೆಯರಲ್ಲಿಯೂ ಪೊಂಬತ್ತುಮಂದಿ ಪರಾಕ್ರಮಶಾಲಿಗಳಾದ ವೀರಶ್ರೇಷ್ಠರಾದ ಶೂರರು, ಆ ತಾಯಿಗಳ ವರ್ಣಂಗಳನ್ನೆ ಧರಿಸುತ್ತ ಮನೋಹರರಾಗಿ ಉತ್ಪನ್ನರಾದರು. ಎಲೈ ಮುನಿಗಳಿರಾ! ಪದ್ಮರಾಗರತ್ನದಲ್ಲಿ ಉತ್ಪನ್ನೆಯಾದ "ರತ್ನವಲ್ಲಿ" ಯೆಂಬ ಕನ್ನಿಕೆಯಲ್ಲಿ ಪ್ರತಾಪಶಾಲಿಯಾಗಿ ವೀರನಾದ "ವೀರಬಾಹು" ಯೆಂಬಾತನು ಉತ್ಪನ್ನನಾದನು. ಮುತ್ತಿನ ಮಣಿಯಲ್ಲಿ ಪುಟ್ಟಿದ "ತರಳವಲ್ಲಿ" ಯೆಂಬ ಮುತ್ತೊರ್ವಳಲ್ಲಿ ಸರ್ವವೀರಶ್ರೇಷ್ಠನಾಗಿ ಶ್ರೀಮಂತನಾದ "ವೀರಕೇಸರಿ" ಯೆಂಬ ಪುತ್ರನು ಸಂಜನಿಸಿದನು. ಪುಷ್ಯರಾಗವೆಂಬ ಮಾಣಿಕ್ಯದಲ್ಲಿ ಉತ್ಪ ನ್ನೆಯಾದ "ಪೌಷವಲ್ಲಿ" ಯೆಂಬ ಕನ್ನಿಕೆಯಲ್ಲಿ ಸರ್ವವೀರರ್ಗೆ ಅಗ್ರಗಣ್ಯನಾದ "ವೀರಮಹೇಂದ್ರ" ನೆಂಬ ಕುಮಾರನು ಪುಟ್ಟಿದನು. ಗೋಮೇಧಿಕವೆಂಬ ಮಾಣಿಕ್ಯದಲ್ಲಿ "ಗೋಮೇಧಿಕ ಲತಿಕೆ" ಯೆಂಬ ಕನ್ನಿಕೆಯಲ್ಲಿ, ಜಗದ್ವಿಖ್ಯಾತ ನಾದ ಸಾಕ್ಷಾ "ದ್ವೀರಪರಮೇಶ್ವರ" ನೆಂಬ ಪುತ್ರನು ಜನಿಸಿದನು. ವೈಡೂರ್ಯ ಮಾಣಿಕ್ಯದಲ್ಲಿ ಸಂಜನಿಸಿದ ವೈಡೂರ್ಯ ಸಂಭವೆಯೆಂಬ ಕನ್ನಿಕೆಯು "ವೀರಪುರಂ

ದರ" ನೆಂಬ ಪುತ್ರನಂ ಹಡೆದಳು. ವಜ್ರಮಣಿಯಲ್ಲಿ ಪುಟ್ಟಿದ "ವಜ್ರವಲ್ಲಿ" ಯೆಂಬಾಕೆಗೆ "ವೀರರಾಕ್ಷಸ" ನೆಂಬ ಕುಮಾರನುಂಟಾದನು, ಮರಕತಮಣಿಯಲ್ಲಿ ಪುಟ್ಟಿದ ವಿದ್ವಾಂಸರಲ್ಲಿ ಪ್ರಸಿದ್ಧೆಯಾದ "ಮರಕತವಲ್ಲಿ" ಯೆಂಬ ಕನ್ಯೆಯಲ್ಲಿ, ಶತ್ರುಗಳೆಂಬ ಕೆಸರ್ಗೆ ಶೋಕದಾಯಕನಾದ "ವೀರಮಾರ್ತಾಂಡ" ನೆಂಬ ಸುತನವತರಿಸಿದನು. ಪವಳದೊಳ್ಪುಟ್ಟಿದ "ಪ್ರವಾಳವಲ್ಲಿ" ಯೆಂಬ ಕನ್ನಿಕೆಯಲ್ಲಿ "ವೀರಾಂತಕ" ನೆಂಬ ಸುತನು ಉದ್ಭವಿಸಿದನು. ಇಂದ್ರನೀಲಮಣಿಯೊಳ್ಪುಟ್ಟಿದ "ನೀಲವಲ್ಲಿ" ಯೆಂಬಾಕೆಯಲ್ಲಿ "ವೀರವೀರ" ನೆಂಬ ಸುತನು ಹುಟ್ಟಿದನು.

ಈ ನವರತ್ನಂಗಳ ಪೆಸರಿನ ಕನ್ಯೆಯರಲ್ಲಿ ಉತ್ಪನ್ನರಾದ ಪುತ್ರರು ಪೊಂಬತ್ತು ಮಂದಿಯು ಮೆಲ್ಲಮೆಲ್ಲನೆ, ಆ ನವರತ್ನಕನ್ಯೆಯರ ನಾಭಿಮಾರ್ಗದಿಂದ ಪೊರಮಟ್ಟು, ಭಕ್ತರೆಡರಂ ಪರಿಹರಿಪ ಪಾರ್ವತೀಸಮೇತನಾದ ಪರಮೇಶ್ವರಂಗೆ ನಮಸ್ಕರಿಸಿ, ಅವರೆಲ್ಲರು ಮಾತಾಪಿತೃಗಳಾದ ಆ ಪಾರ್ವತೀಪರಮೇಶ್ವರರ ಯಿಕ್ಕೆಲದಲ್ಲಿ ನಿಂತು, ವಿನಯದಿಂದಿರುತಿರ್ದರೆಂದು ಸೂತಂ ಶೌನಕಾದಿಗಳ್ಗೆ ಉಸುರಿದನೆಂಬಲ್ಲಿಗೆ ಇಪ್ಪತ್ತೇಳನೆಯ ಅಧ್ಯಾಯವು ಸಂಪೂರ್ಣಂ.

ಇಪ್ಪತ್ತೆಂಟನೆಯ ಅಧ್ಯಾಯವು.

ಪರಮೇಶ್ವರ ದಂಪತಿಗಳ ಶರವಣಪ್ರಯಾಣ ವೃತ್ತಾಂತ.

ಸೂತರ ವಚನವು:— ಎಲೈ ಋಷಿಗಳಿರಾ! ಆನಂತರದಲ್ಲಿ ಪರಮೇಶ್ವರನು ಸರ್ವಜ್ಞನಾಗಿ ಜಗತ್ಪತಿಯಾದುದರಿಂದ ತನ್ನ ಸಮೀಪಮಂ ಸಾರ್ದ, ಪೊಂಬತ್ತುಮಂದಿ ನವರತ್ನ ಕುಮಾರರಂ ನೋಡಿ, ಎಲೈ ಮಕ್ಕಳಿರಾ! ನಿಮಗೆಲ್ಲರ್ಗಂಯುಂ ಪ್ರಭುವಾಗಿ ಅವ್ಯಯನಾದ ಮಹಾಭುಜನಾಗಿ ಅಮರಾರಿಗಳ್ಗೆ ಸಂಹಾರಕನಾದ ಪಾರ್ವತೀಕುಮಾರನು ಉತ್ಪನ್ನನಾಗುತ್ತಿರುವನೆಂದು, ಈ ಪ್ರಕಾರದಲ್ಲಿ ಆ ನವರತ್ನ ಕನ್ಯಾಕುಮಾರರ್ಗೆ ಆಜ್ಞಾಪಿಸಿ, ಅವರ್ಗೆಲ್ಲರ್ಗೆಯುಂ ನಾಮಕರಣಮುಂ ಮಾಡಿ, ಪಾರ್ವತೀದೇವಿಯ ಪುತ್ರನ ಮುಖಮಂ ನೋಡುವಲ್ಲಿ ಲವಲವಿಕೆಯುಂ ಧರಿಸಿ, ಆ ಪರ್ವತರಾಜ ಪುತ್ರಿಯಾದ ಪಾರ್ವತೀದೇವಿಯೊಡನೆ ಸಂಭಾಷಣಮುಂ ಮಾಡಿ, ಆಕೆಯೊಡನೆ ಭಕ್ತರ ಯೆಡರಂ ಪರಿಹರಿಸಲೋಸುಗ, ನಿಜಪುತ್ರಾವಲೋಕನದಿಂದುಂಟಾದ ಲವಲವಿಕೆಯಿಂದ ಆದರಣೆಯುಂ ಧರಿಸಿ ವೃಷಭೇಶ್ವರನನ್ನೇರಿದನು. ಆಗ ಪಯಣನಿಮಿತ್ತಮಾದ ಭೇರಿ ಮೊದಲಾದ ಮಹಾ ವಾದ್ಯಧ್ವನಿಯು ಪ್ರಮಥರಿಂದ ಪ್ರವರ್ತಿಸಲ್ಪಟ್ಟುದು. ಅದೆಂತೆನೆ, ಪಟಹಂಗಳುಂ ಭೇರಿಗಳುಂ ಶಂಖಂಗಳುಂ ಕಹಳೆಗಳುಂ ಮನೋಹರಂಗಳಾದ

ಧ್ವನಿಗಳಂ ಗೆಯ್ಯುತ್ತಿರ್ದವು. ಗಣಾಧೀಶ್ವರರಲ್ಲಿ ಶ್ರೇಷ್ಠರಾದವರು ನಾನಾ ಶಸ್ತ್ರಂಗಳಂ ಪಿಡಿದು, ರಥಗಜಾಶ್ವಂಗಳನ್ನೇರಿಯೂ ಮಹಾ ಬಲಶಾಲಿಗಳಾದ ಕಾಲಾಳ್ಗಳುಂ ಕಾಲ್ನಡೆಯಿಂದಲುಂ ಪ್ರೇರಮುಡುವಾಗ, ಮನೋಹರಾಂಗಿಯರಾದ ಸಹಸ್ರ ಸಂಖ್ಯಾತೆಯರಾದ ಋದ್ರಕನ್ನಿಕೆಯರುಂ, ಆ ಪ್ರಕಾರವಾದ ಅಪ್ಸರ ಸ್ತ್ರೀಯರ ಸಮೂಹಂಗಳುಂ, ಆ ಪರಮೇಶ್ವರನ ಮುಂದುಗಡೆಯಲ್ಲಿ ನಡೆಯುತ್ತಿರೆ, ಚಂದ್ರಸೂರ್ಯರೀರ್ವರುಂ ಪರಮೇಶ್ವರಂಗೆಯುಂ ಪಾರ್ವತೀ ದೇವಿಯರ್ಗೆಯುಂ ಯಿಕ್ಕೆಲಂಗಳಲ್ಲಿ ಭಕ್ತಿಭಾವಿತರಾಗಿ, ಪ್ರತ್ಯೇಕ ಪ್ರತ್ಯೇಕವಾಗಿ ಬೆಳ್ಗೊಡೆಗಳಂ ಪಿಡಿವುತ್ತಿರ್ದರು. ಮತ್ತೆ ಸೌಂದರ್ಯಶಾಲಿಯಾದ ಪರಮೇಶ್ವರಂಗೆ ಅತ್ಯಂತ ಅಂತರಂಗನಾದ ಹಾಲಾಸ್ಯಸಂಜಾತನು ಆ ಪರಮೇಶ್ವರನ ಸಮೀಪದಲ್ಲಿಯೇ ನಡೆಯುತ್ತಿರ್ದನು. ಆಗ ಕುಮಾರ ಸನ್ನಿಧಾನದಲ್ಲಿ ಶರವಣದಲ್ಲಿರ್ಪ ಮುರಾರಿ ಮೊದಲಾದ ದೇವತೆಗಳು ಆ ಪ್ರಯಾಣ ಭೇರೀಧ್ವನಿಯಿಂದ ಸಂತುಷ್ಟರಾಗಿ, ಭಕ್ತಿಯಿಂದ ಆ ಪರಮೇಶ್ವರನ ಸಿದಿಗೊಂಡರು.

ಆಗ ಪರಮೈಶ್ವರ್ಯ ಸಂಪನ್ನನಾದ ಪರಮೇಶ್ವರನು ಸಂತೋಷದಿಂದ ಆ ದೇವತೆಗಳ್ವೆರಸಿ ಕ್ಷಣಮಾತ್ರದಿಂದ ಆ ಶರವಣವಂ ಪೊಗುತ್ತಿರಲಾಗಿ, ಆ ವೇಳೆಯಲ್ಲಿ ಈ ಪರಮೇಶ್ವರ ಕುಮಾರನು ಪದ್ಮಾಭ್ಯಂತರಂಗಳಲ್ಲಿ ಪಿತೃಗಳಾದ ಪಾರ್ವತೀ ಪರಮೇಶ್ವರರಂ ನೋಡಲ್ಬಯಸಿ ಆರುಪ್ರಕಾರವಾಗಿರುತಿರ್ದನು. ಆ ಆರುಪ್ರಕಾರವಾದ ಕುಮಾರರ ಸನ್ನಿಧಿಯಲ್ಲಿ ಕೃತ್ತಿಕಾನಕ್ಷತ್ರ ರೂಪಿಯರಾದ ಆ ಆರುಮಂದಿ ಸ್ತ್ರೀಯರು ಆ ಕುಮಾರರನೆಲ್ಲರನ್ನು ಬೇರೆಬೇರೆ ಪೋಷಿಸುತ್ತಿರಲಾಗಿ, ಪಾರ್ವತೀ ಸಮೇತನಾದ ಪರಮೇಶ್ವರನು ಆಕಾಶ ಮಾರ್ಗದಲ್ಲಿ ಮರುದ್ಗಣಂಗಳೊಡನೆಯುಂ ಗಣಾಧೀಶ್ವರರೊಡನೆಯುಂ ಸಪ್ತಮಾತೃಕೆಯರೊಡನೆಯುಂ ಸಾವಧಾನನಾಗಿರುತ್ತ ಈ ಕುಮಾರರ ಮುಖಮಂ ನೋಡಿ ನೋಡಿ ತನ್ನ ಲೋಚನತ್ರಯವನ್ನು ಸಫಲವಾಗಿ ಭಾವಿಸುತ್ತ, ಆ ಪಾರ್ವತೀದೇವಿಗೆ ಈ ವಾಕ್ಯಮಂ ನಿರೂಪಿಸಿದನು.

ಷಣ್ಮುಖದ್ವಿಬಾಹು-ದ್ವಾದಶನೇತ್ರ-ಅಷ್ಟಾದಶ ಬಾಹುಗಳುಳ್ಳ ಕುಮಾರನ ಆವಿರ್ಭಾವ ಘಟ್ಟವು.

ಎಲೌ ಪ್ರಿಯಳಾದ ಪಾರ್ವತೀದೇವಿಯೆ! ಮನೋಹರವಾಗಿ ಬಹುಪ್ರಕಾರದಿಂ ಕಮಲಂಗಳೆಂಬ ಸಿಂಹಾಸನಂಗಳೊಳ್ಸಮಾಸೀನನಾದ ನಿನ್ನ ಕುಮಾರನಂ ನೋಡು, ನೀನು ಈ ಕುಮಾರನಿಂದಲೆ ವೀರ ಮಾತೆಯಾಗಿ ಜಗಂಗಳ ಯೆಡರ್ಗಳಂ ಪರಿಹರಿಸುತಿದ್ದೀ ಎಂದಿಂತು ಪರಮೇಶ್ವರಂ ನಿರೂಪಿಸುತ್ತಿರಲಾಗಿ, ಗೌರಿದೇವಿಯು ವೃಷಭೇಶ್ವರನಿಂದಿಳಿದು ಈ ಆರುಮಂದಿ ಕುಮಾರರಂ

ಏಕಮಾಗಿ ಕೂಡಿಸಿ ತಕ್ಕೈಸಿ ದೃಢಮಾಗಿ ಸ್ತನಾಭ್ಯಂತರದೊಳಿಟ್ಟು, ಶಿರಸ್ಸಿನಲ್ಲಿ ಆಘ್ರಾಣಮಂ ಮಾಡಿ, ಈ ಆರುಮಂದಿ ಕುಮಾರರನ್ನು ಪಾದದ್ವಯದಿಂದಲುಂ, ಪನ್ನೆರಡು ಭುಜಂಗಳಿಂದಲುಂ ಆರು ಮುಖಂಗಳಿಂದಲುಂ ಹದಿನೆಂಟು ಕಣ್ಗಳಿಂದಲುಂ ಉಪಲಕ್ಷಿತನಾಗಿ ಓರ್ವನೇ ಆದ ಕುಮಾರನಂ ಮಾಡಿ, ಸ್ತನಂಗಳಿಂ ಸ್ರವಿಸಿದ ಶೋಭನಮಾದ ಪಾಲ್ಗಳನ್ನು ಆ ಕುಮಾರಂಗೆ ಪಾನಮಂ ಮಾಡಿಸಿದಳು. ಆಗ ಆ ಬಾಲಕನಾದ ಕುಮಾರನಾದರೆ, ಲೀಲೆಯಿಂದ ಪಾರ್ವತೀದೇವಿಯ ತೊಡೆಯಮೇಲಿರುತ್ತ, ಆರುಮುಖಂಗಳಿಂದಲುಂ ಸ್ತನ್ಯಪಾನಮಂ ಮಾಡುತಿದ್ದನು. ವಿದ್ಯಾಮಯನಾಗಿ ಜ್ಞಾನಮಯನಾದ ತನಗೆ ತಾಯಾದ ಪಾರ್ವತೀದೇವಿಯ ಪಾವನತರಮಾದ ಮುಖವನ್ನು ತಾವರೆಯಂತೆಸೆವುತ್ತಿಹ ಕಡೆಗಣ್ಗಳ ನೋಟಂಗಳಿಂದ ನೋಡುತ್ತಲು ಸ್ತನ್ಯಪಾನಮಂ ಮಾಡುತ್ತಲು ಇರುವಾಗ, ಆ ತಾಯಿಯಾದ ಪಾರ್ವತೀದೇವಿಯ ಸ್ರವಿಸುತ್ತಿರ್ಪ ಸ್ತನಂಗಳಿಂ ಸಿಡಿದುಬಿರ್ದ ಕ್ಷೀರ ಬಿಂದುಗಳು ಪ್ರವಾಹರೂಪಂಗಳಾಗಿ ಉದಕಂಗಳಲ್ಲಿ ಬೀಳುತ್ತಿದ್ದವು.

ಎಲೈ ಮುನಿಗಳಿರಾ! ಪೂರ್ವಕಾಲದೊಳು ಮುನಿಕುಮಾರರು ಪರಾಶರ ಮುನಿಯ ಶಾಪದಿಂದ ಮತ್ಸ್ಯರೂಪಮನೈದಿಪೊಡಂ, ಆ ಮತ್ಸ್ಯರೂಪದಿಂದಲೆ ಆ ಉದಕದೋಳ್ಚರಿಸಿರ್ಪ ಪಾರ್ವತೀದೇವಿಯ ಮೊಲೆ ಪಾಲ್ಗಳ ತುಂತುರ್ವನಿಗಳಂ ಪಾನಮಂ ಮಾಡಿದ ಮಾತ್ರದಿಂದಲೆ, ಆ ಕುಮಾರರಿಗೆ ಪೂರ್ವದ ಮುನಿರೂಪವೇ ಬಂದುದು. ಬಳಿಕ ಆ ಪಾರ್ವತೀದೇವಿಯು ತನ್ನ ಸ್ತನ್ಯಪಾನಮಂ ಮಾಡಿ ಪುತ್ರನಾದ ಕುಮಾರನೊಡನೆ ಭೇರಿ ಧ್ವನಿಗಳ್ಬೆರಸಿ ಜಯ ಶಬ್ದಾದಿ ಮಂಗಳಂಗಳೊಡನೆ ವೃಷಭೇಶ್ವರನ ಮೇಲಿರ್ಪ ಪರಮೇಶ್ವರನ ತೊಡೆಯನ್ನೈದುತ್ತಿರಲಾಗಿ, ಆಗ ಆ ಕುಮಾರಂಗೆ ಮಾತಾಪಿತೃಗಳಾದ ಪಾರ್ವತೀ ಪರಮೇಶ್ವರರ ಶಿರದಲ್ಲಿ ದೇವತೆಗಳು ಪೂಮಳೆ ಗರೆಯುತ್ತಿದ್ದರು. ದಂಡಹಸ್ತರಾಗಿ ಜಟಾಧರರಾದ ಮುನಿಗಳುಂ ಸಿದ್ಧರುಂ ನರ್ತಿಸುತ್ತಿರಲಾಗಿ, ಉಮಾಪತಿಯಾದ ಪರಮೇಶ್ವರನು ಕುಮಾರಂ ವೆರೆಸಿರ್ಪ ಗಿರಿರಾಜ ಪುತ್ರಿಯನ್ನು ವೃಷಭೇಶ್ವರನಮೇಲೆ ಏರಿಸಿಕೊಂಡು ಆರುಮಂದಿ ಕೃತ್ತಿಕೆಯರೆಂಬ ನಕ್ಷತ್ರ ಸ್ತ್ರೀಯರಂ ನೋಡಿ ಸಂತುಷ್ಟನಾಗಿ, ಅವರ್ಗೆ ವರಮನಿತ್ತನದೆಂತೆನೆ,

ಕೃತ್ತಿಕಾಸ್ತ್ರೀಷಟ್ಕಕ್ಕೆ ಪರಮೇಶ್ವರನ ವರಪ್ರದಾನ.

ಎಲೆ ಕೃತ್ತಿಕೆಯರೆಂಬ ಸ್ತ್ರೀಯರಿರಾ! ಬಹುಕಾಲ ಪರ್ಯಂತವು ನೀವು ಆವುದಾನೊಂದು ಕಾರಣದಿಂದ ಈ ಕುಮಾರಂಗೆ ಮೊಲೆವಾಲನಿತ್ತು ಸಾಕಿದಿರಿ, ಅದುಕಾರಣದಿಂದ ಈ ಕುಮಾರನು ಲೋಕದಲ್ಲಿ ನಿಮ್ಮ ಪೆಸರಿನಿಂದಲೆ ಕಾರ್ತಿ

ಕೇಯನೆಂಬ ಪೆಸರಂ ಪಡೆಯಲಿ, ಇಂದಾರಭ್ಯವಾಗಿ, ನಿಮ್ಮ ದಿನಂಗಳಲ್ಲಿ ಅತ್ಯಂತ ಆದರಣೆಯಿಂ ಮಾಡಿ ಆರು ಕೆಲಬರು ಈ ಕುಮಾರನ ಪ್ರೀತಿಗೋಸುಗ ವ್ರತಮನ್ನಾಚರಿಸುವರೋ, ಅವರ್ಗೆ ಈ ಕುಮಾರನಾದ ಪುತ್ರನು ಆ ಕ್ಷಣದಲ್ಲಿಯೆ ಇಷ್ಟಾರ್ಥಂಗಳನ್ನು ಕೊಡುವನೆಂಬಲ್ಲಿ ಸಂದೇಹವಿಲ್ಲ, ಈ ಕುಮಾರನ ಸಂಭವಾಧ್ಯಾಯವನ್ನು ಅತ್ಯಂತ ಆದರಣೆಯಿಂದ ಆರು ಕೆಲಬರು ಕೇಳುವರೋ, ಆ ಕೇಳ್ವರ ಮಧ್ಯದಲ್ಲಿ ಪುತ್ರರಂ ಬಯಸಿದವರು ಪುತ್ರರನ್ನೂ, ಸ್ತ್ರೀಕಾಮನು ಸ್ತ್ರೀಯರಂ, ಧನಮಂ ಬಯಸಿದಾತನು ಧನಮಂ, ಪಶುಕಾಮರು ಬಹು ಪಶುಗಳಂ, ವಿದ್ಯಾರ್ಥಿಯು ವಿದ್ಯೆಯುಂ ಈ ರೀತಿ ಅವರವರು ತಮ್ಮತಮ್ಮ ಇಷ್ಟಾರ್ಥಮುಂ ಪಡೆವರು. ಈ ಕುಮಾರ ಸಂಭವಾಧ್ಯಾಯಮಂ ಕೇಳ್ದ ಬಂಜೆಯಾದೊಡಂ ಕುಮಾರಂಗೆ ಸರಿಯಾದ ಪುತ್ರರಂ ಪಡೆವಳು. ಎಂದೀಪ್ರಕಾರವಾಗಿ ದಯಾಸಮುದ್ರನಾದ ಶಿವನು ವರವಂ ಕೊಟ್ಟು ಪಾರ್ವತೀದೇವಿಯರ್ವೆರಸಿ, ಆ ಕುಮಾರನಂ ಭುಜಂಗಳಿಂ ತಕ್ಕೈಸಿ, ಹರಿಬ್ರಹ್ಮದೇವ ಯೋಗಿಗಳ ಧ್ಯಾನದಿಂದ ಪೂಜಿತಮಾದ ಪಾದಾರವಿಂದವುಳ್ಳವನಾಗಿ, ಭೂತಾಧೀಶ್ವರರ ಸಮೂಹಂಗಳ್ವೆರಸಿ, ಮರಳಿ ನಿಜ ಆವಾಸಮಂ ಪೊಕ್ಕನೆಂದು ಈ ಕಥಾವೃತ್ತಾಂತಮಂ

ಸೂತಪೌರಾಣಿಕಂ ಶೌನಕಾದಿ ಮುನಿಗಳ್ಗೆ ನಿರೂಪಿಸಿದ ನೆಂಬಲ್ಲಿಗೆ
ಇಪ್ಪತ್ತೆಂಟನೆಯ ಅಧ್ಯಾಯವು ಸಂಪೂರ್ಣವು.

ಇಪ್ಪತ್ತೊಂಬತ್ತನೆಯ ಅಧ್ಯಾಯವು.
ಷಣ್ಮುಖಸ್ವಾಮಿಯ ಬಾಲಲೀಲೆ.

ಎಲೈ ಮುನಿಗಳಿರಾ! ಅನಂತರದಲ್ಲಿ ಉಪಲಾಲನಂ ಗೆಯ್ಯುತ್ತಿರ್ಪ ಪಾರ್ವತೀ ಪರಮೇಶ್ವರರ ಸನ್ನಿಧಾನದಲ್ಲಿ ಕೆಲವುಕಾಲ ವಾಸಮಂ ಮಾಡುತ್ತಿರ್ಪ ಆ ಶಿಶುವಾದ ಶಿವ ಕುಮಾರನು ಬಾಲಕ್ರೀಡಾಪರಿಶೀಲನದಲ್ಲಿ ಮನವಿಟ್ಟು ಶಿವಭವನದ ಅಂಗಳಮನ್ನಲಂಕರಿಸುತ್ತಿರ್ದನು.

ಎಂತೆಂದರೆ:— ಶಿವಪುತ್ರನಾದ ಆ ಕುಮಾರನು ತನ್ನ ಪಾದಂಗಳಲ್ಲಿರ್ಪ ಕಾಲ್ಕಡಗಂಗಳೊಡಗೂಡಿದ ಮಣಿಮಯವಾದ ಕಾಲಂದಿಗೆಗಳನೆರಡಂ ಘಳಿರ್ಘಳಿರೆಂಬ ಧ್ವನಿಗಳಿಂದಲೂ ಕಟಿಸೂತ್ರದಲ್ಲಿರ್ಪ ಕಿರುಗಂಟೆಗಳ ಮಾಣಿಕ್ಯಂಗಳ ಧ್ವನಿಗಳಿಂದಲೂ ಅಂಗಳಮನಲಂಕರಿಸುತ್ತ ಉದರದಲ್ಲಿ ಮುತ್ತಿನ ಹಾರಮಂ ಧರಿಸುತ್ತಿರೆ, ಈ ಕುಮಾರನ ಭುಜಾಭ್ಯಂತರವು ಬಹಳವಾದ ಮಣಿಕಾಂಚನಮಯಂಗಳಾದ ನಡುನಡುವೆ ಸುವರ್ಣಮಯವಾದ ಮೊಳಗಳಿಂದದ್ಭುತವಾದ ವಿಭೂಷಣಂಗಳಿಂದ ಸಂಜೆಗೆಂಪಿನಿಂ ಕೆಂಪಾಗಿ ಹುಟ್ಟಲ್ಪಟ್ಟ ನಕ್ಷತ್ರಂಗಳುಳ್ಳ

ಆಕಾಶದಂತಿರ್ದುದು. ಆ ಕುಮಾರನ ಮುಖಪಙ್ತಿಗಳು ಕಿವಿಗಳ್ಗಲಂಕಾರಮಂ ಮಾಡುತಿರ್ಪ ಮಣಿಕುಂಡಲಂಗಳ ಕಾಂತಿಗಳಿಂದ ವಿಕಾಸಮನ್ನೈದಿ, ಪಟ್ಟೆಯ ಸೂತ್ರಗಳಿಂದ ಪೋಣಿಸಲ್ಪಟ್ಟ ಜೋಲುತಿರ್ಪ ಮಣಿಮಾಲಿಕೆಯಿಂದೊಪ್ಪುವ ನಿಜ ಲಲಾಟಂಗಳ್ಗೆ ಸಮಾನಮಾದ ಚಂದ್ರಮಂಡಲಂಗಳುಳ್ಳವುಗಳಾಗಿರ್ದವು. ಮತ್ತೆ ಶೋಭನಂಗಳಾದ ಕಿರೀಟಂಗಳಾರರಲ್ಲಿಯೂ ಕೆತ್ತಿಸಿರ್ಪ ಮಾಣಿಕ್ಯಂಗಳ ಕಿರಣಂಗಳಿಂದ ದಿಕ್ಕುಗಳಂ ಬೆಳಗುತ್ತಿರ್ಪ ಈ ಕುಮಾರನ ವಿಸ್ತೀರ್ಣಂಗಳಾದ ಶಿರಸ್ಸುಗಳ ಪಙ್ತಿಗಳು ದೇವತೆಗಳ್ಗೆ ಆವಾಸಮಾದ ಮೇರು ಪರ್ವತದ ಮಾಣಿಕ್ಯಮಯಂಗಳಾದ ತೊಪ್ಪಲುಗಳ ಸಮೂಹಂಗಳ್ಗೆ ಸಮಾನಮಾದ ಕಾಂತಿಯುಳ್ಳವಾಗಿ ಪೊಪ್ಪುತ್ತಿರ್ದವು. ಈ ಪೂರ್ವೋಕ್ತಪ್ರಕಾರಮಾದ ಮನೋವಾಕ್ಕುಗಳಿಗೆ ಅಗೋಚರಮಾಗಿ ಅನಂತ ಸುಖಕರಮಾದ ಪರಮೇಶ್ವರನ ಸಂಬಂಧಮಾಗಿ ಅಪರಿಮಿತ ಜ್ಞಾನಾನಂದ ಸ್ವರೂಪವು ಅಲಂಕಾರಂಗಳೊಡಗೂಡಿದ ಬಾಲಭಾವಮನ್ನೈದಿ, ಪಾರ್ವತೀ ಪರಮೇಶ್ವರರ ಸನ್ನಿಧಾನಮನಲಂಕರಿಸುತಿರ್ದುದು. ಬಳಿಕ ಆ ಶಿಶುವಾದ ಕುಮಾರನು ಭೃತ್ಯರೊಡಗೂಡಿ ಜಗತ್ತಿನಲ್ಲಿ ಕ್ರೀಡಿಸುವ ಬುದ್ಧಿಯಿಂದ ಮಾತಾಪಿತೃಗಳಾದ ಪಾರ್ವತೀ ಪರಮೇಶ್ವರರ್ಗೆ ನಮಿಸಿ, ಅಡಿಗಡಿಗೆ ಪ್ರದಕ್ಷಿಣಮಂ ಮಾಡಿ, ತದನಂತರದಲ್ಲಿ ಜನಗಳ ಮನಂಗಳನ್ನು ಬಹುಕಾಲ ಪರಿಯಂತರ ಕೌತುಕ ಸಮೇತಂಗಳಂ ಚೆನ್ನಾಗಿ ಮಾಡುತ್ತಾ ಪೊರಮಟ್ಟು, ಪ್ರಥಮದಲ್ಲಿ ಪಶುಪತಿಯಾದ ಶಿವನ ಮುಂಗಡೆಯಲ್ಲಿಹ ವೃಷಭೇಶ್ವರನ ಮೇಲೇರಿ ಆತನ ಹಿಳುಕನ್ನು ಉಗುರ್ಗಳಿಂದ ತುರಿಸಿ, ಆಗ ತೀಟೆಯು ಶಾಂತಮಾದುದೋ ಏನೆಂದು ಆ ವೃಷಭೇಶ್ವರನಂ ಬೆಸಗೊಂಡ ಬಳಿಕ, ಆ ಕ್ಷಣದಲ್ಲಿಯೇ ಆ ವೃಷಭೇಶ್ವರನಿಂದಿಳಿದು ನಡೆವುತ್ತ, ವಿಕಾರಮಾದ ಆಕಾರಂಗಳಂ ಧರಿಸಿರ್ಪ ಗಣಾಧಿಪತಿಗಳಂ ನೋಡಿ, ಕೆಲಬರು ಶ್ರೀ ಗಣಾಧಿಪತಿಗಳ ಸಮೀಪವನ್ನೈದಿ ಬೆರಳಿಂದ ಆದಿ ಕ್ರಮಮಪ್ಪಂತು ತನ್ನ ಮುಖವನ್ನು ಅರಸುತ್ತಿರ್ದನು. ತದನಂತರದಲ್ಲಿ ಶೀಘ್ರದಿಂ ಬಂದಾನೊಂದು ಗೃಹಮಂ ಪೊಕ್ಕು ಆ ಗೃಹದತ್ತಣಿಂ ಆ ಗೃಹೋದ್ಯಾನಮಾರ್ಗದಿಂ ಪೊರಮಟ್ಟು ಗಣಾಧಿಪತಿಗಳಿಂದ ಕಾಣಲ್ಪಡದ ಗತಿವುಳ್ಳವನಾಗಿ, ಮತ್ತೊಂದು ಗೃಹಮಂ ಪ್ರವೇಶಿಸಿ ಗೃಹವತ್ತಣಿಂ ಆ ಮಾರ್ಗದಿಂದಲೆ ಬಹಿರ್ಭಾಗಮನ್ನೈದುತ್ತಿರ್ದನು. ಬಳಿಕ ಆಕಾಶಮಾರ್ಗದಿಂದ ದೇವತೆಗಳ್ಗೆ ಪೂಜ್ಯಮಾದ ನಂದನವನವನ್ನು ಶೀಘ್ರದಿಂ ಪ್ರವೇಶಿಸಿ ಮರಂಗಳ ಸಮೂಹಂಗಳಿಂದೊಡಗೂಡಿದ ಬಂದಾನೊಂದು ಮರವನ್ನೇರಿ, ಅಡಿಗಡಿಗೆ ಆ ಮರದ ಫಲಂಗಳನೆಲ್ಲಮಂ ಉದುರಿಸಿ, ಮತ್ತೊಂದು ವೃಕ್ಷವನೇರಿ ಆ ವೃಕ್ಷದ ಪೂವುಗಳಂ ಕೊಯ್ದು, ಬಳಿಕ ಮತ್ತೊಂದು ವೃಕ್ಷವನೇರಿ, ಕೊಡಹಲ್ಪಟ್ಟ

ತಳಿರ್ಗಳಲ್ಲಿಯುಂ ಪೂಗಳಲ್ಲಿಯುಂ ಪ್ರೀತಿಯಂ ವಹಿಸುತ್ತಂ ಫಲಂಗಳಂ ಭಕ್ಷಿಸುತ್ತಂ ಇಹ ಸುಖಂಗಳ ತಂಡವುಳ್ಳವನಾಗಿ, ಬಳಿಕ ಆ ದೇವತೆಗಳ ವನದತ್ತಣಿಂ ಭೂಲೋಕಮನೈದಿ ನದಿಗಳಂ ನೋಡಿ, ಕಮಲಂಗಳ ವಿಷಯವಾದ ಪ್ರೀತಿಯಿಂದ ನದಿಗಳಂ ಕಲಕಿ ತದನಂತರದಲ್ಲಿ ಏಳು ಸಮುದ್ರಂಗಳ ತಳಗಳನ್ನು ಪಾದಾಂಗವಿಂದದಿಂ ಭೇದಿಸಿ, ಶೀಘ್ರದಿಂದ ಆ ಸಪ್ತ ಸಮುದ್ರಂಗಳನ್ನು ಒಂದಾಗಿ ಕೂಡಿಸಿ, ಸಂತೋಷದಿಂದ ಮಕರಂಗಳನ್ನು ತಿಮಿ ತಿಮಿಂಗಿಲಾದಿ ಮೀನುಗಳನ್ನು ಅತ್ಯಂತವಾಗಿ ಮರ್ದಿಸುತ್ತಿರ್ದನು. ಬಳಿಕ ಈಡಿಗಟ್ಟಿಗೆಯೆಂಬ ಆಯುಧಮಂ ಪಿಡಿದು, ಕುಲಪರ್ವತಂಗಳನ್ನು ಸಿಂಹಂಗಳ್ವೆರಸಿ ಆ ಈಡಿಗಟ್ಟಿಗೆಯಿಂ ನೂರಾರು ಪ್ರಕಾರದಿಂದಿರಿದು, ಪಾದದ್ವಯದಿಂ ಒಂದು ಕುಲಪರ್ವತದಿಂ ಮತ್ತೊಂದು ಕುಲಪರ್ವತಕ್ಕೆ ನೆಗೆವುತ್ತಿರ್ದನು. ಮತ್ತೆ ಅಪರಿಮಿತ ಗುಣಶಾಲಿಯಾಗಿ ಜಗದ್ಗುರುವಾದ ಆ ಕುಮಾರನು ಗಣಂಗಳ್ವೆರಸಿ ಕ್ರಮದಿಂದ ಅತಲ ಮೊದಲಾದ ಸರ್ಪಾಲಯಂಗಳಲ್ಲಿರ್ಪ ಮಣಿಭೂಮಿಗಳಲ್ಲಿ ಕ್ರೀಡಿಸುತ್ತ ಮೇಘಂಗಳೆಂಬ ಆನೆಗಳಿಂ ನಿಬಿಡಮಾದ ಆಕಾಶಕ್ಕೆ ನೆಗೆದು, ಅತ್ಯಂತ ತೃಪ್ತಿಯಿಂದ ಆಕಾಶಮಾರ್ಗದಲ್ಲಿ ಮೇಘದತ್ತಣಿಂ ಭುಜದ್ವಯದಿಂದ ಇಂದ್ರಚಾಪಮಂ ಪರಿಗ್ರಹಿಸಿ, ನಕ್ಷತ್ರಸಮೂಹಂಗಳೆಂಬ ಶತಕೋಟಿ ರತ್ನಂಗಳಾದ ಮಿಂಚುಗೆಗಳಿಂದ, ದೇವಕೋಟಿಗಳ ಕಿರೀಟಾಗ್ರದಲ್ಲಿರ್ಪ ಮಾಣಿಕ್ಯಂಗಳನ್ನು ಯೆಬ್ಬು ಕೆಡವುತ್ತಿದ್ದನು. ಬಳಿಕ ಆ ಮೇಘಮಾರ್ಗದತ್ತಣಿಂ ಉಪರಿಭಾಗದಲ್ಲಿರ್ಪ ಆಕಾಶಮನೈದಿ, ಸೂರ್ಯಸಂಬಂಧಮಾದ ಪಚ್ಚೆಯ ವರ್ಣಂಗಳಾದ, ಕುದುರೆಗಳ ಕೊರಳ ಹಗ್ಗಂಗಳಂ ಬಿಚ್ಚಿ, ಆ ಸೂರ್ಯನ ಕುದುರೆಗಳನ್ನೇರಿ ತ್ವರೆಯಿಂದ ಆ ಅಶ್ವಂಗಳನ್ನು ನಾನಾ ವಿಧಂಗಳಾದ ಗತಿವಿಶೇಷಂಗಳಿಂದ ನಡೆಸುತ್ತಿರ್ದನು. ತದನಂತರದಲ್ಲಿ ಆ ಕಾರ್ತಿಕೇಯನಾದ ಕುಮಾರನು ಅಡಿಗಡಿಗೆ ಚಂದ್ರನ ರಥಮನೈದಿ ಆತನ ರಥಾಶ್ವಂಗಳ ಹಗ್ಗಗಳಂ ಬಿಚ್ಚಿ, ಸರಸ್ಸುಗಳಲ್ಲಿ ನೊರೆಗಳನ್ನು ಹೇಗೊ ಹಾಗೆ, ಆ ಚಂದ್ರ ರಥಾಶ್ವಂಗಳನ್ನು ದಶದಿಕ್ಕುಗಳಲ್ಲಿಯುಂ ತಡೆಯಿಲ್ಲದಂತೆ ನಡೆಸುತ್ತಿರ್ದನು. ಮತ್ತೆ ದೇವಲೋಕಂಗಳಲ್ಲಿ ಬಹು ರೂಪಮಾಗಿ ಸ್ತುತಿಸಲ್ಪಟ್ಟ ಆ ಶಿವಕುಮಾರನು ಚಂದ್ರಮಂಡಲದ ಸನ್ನಿಧಿಯಿಂ ಬಿಟ್ಟು ಬಳಿಕ ಇಂದ್ರನ ಐರಾವತಮನ್ನೇರಿ ಹಾಗೆಯೇ "ಯಜ್ಞೇಶ್ವರನ, ಯಮನ, ನಿಋುತಿಯ ವರುಣನ ವಾಯುವಿನ, ಕುಬೇರನ" ಸಂಬಂಧಂಗಳಾದ ವಾಹನಂಗಳನ್ನೆಲ್ಲವನ್ನು ಕ್ರಮದಿಂದೇರಿ, ನಾನಾ ವಿಧಗತಿಗಳಿಂ ನಡೆಸುತ್ತಿರ್ದನು. ಬಳಿಕ ಪ್ರಸಿದ್ಧಮಾದ ಮಹಿಮೆಯುಳ್ಳ ಆ ಕುಮಾರನು ವಾಯುಪಾಶಂಗಳಿಂ ಕಟ್ಟಲ್ಪಟ್ಟ ಧ್ರುವನಪತಮಾದ ಜ್ಯೋತಿಶ್ಚಕ್ರವನ್ನು ತನ್ನ

ಊಳಿಗದವರ ಹಸ್ತಾಗ್ರಂಗಳಿಂದ ಭೇದಿಸಿ ಆ ಜ್ಯೋತಿಶ್ಚಕ್ರವನ್ನು ತಾನು ಕೈಯೊಳ್ಪಿಡಿದು, ಎಂಟು ದಿಕ್ಕುಗಳಯೂ ಬ್ರಹ್ಮಲೋಕದವರಿವಿಗುಂ ಸಂತೋಷದಿಂದ ಆ ಆ ಸ್ಥಾನಂಗಳಂ ಪ್ರವೇಶಿಸುತ್ತ ಕ್ರೀಡಿಸುತ್ತಿರ್ದನು. ಹಾಗೆ ಸತ್ಯಲೋಕದಲ್ಲಿ ಸಾಕ್ಷಾದ್ಬ್ರಹ್ಮದೇವನ ಸನ್ನಿಧಿಯನ್ನೈದಿ, ಆ ಬ್ರಹ್ಮ ದೇವನ ಮುಖಪಂಗ್ತಿಯನ್ನು ಹಸ್ತಾಗ್ರಂಗಳಿಂ ಮುಟ್ಟಿ ಮುಟ್ಟಿ ನೋಡುತ್ತ, ಆ ಬ್ರಹ್ಮದೇವನ ಉರದೊಳಿರ್ಪ ಶುಭ್ರವರ್ಣಮಾದ ಕೆದರಿರ್ಪ ಯಜ್ಞೋಪ ವೀತವನ್ನು ಅಪಹರಿಸ ಲಿಚ್ಛೈಸಿ, ತನ್ನ ಶಿರಂಗಳಿಂ ಪೊಯ್ವುತ್ತ, ಸರ್ವೇಶ್ವರ ನಾದ ಕಾರಣದಿಂದ ಮತ್ತೊಂದು ದಿವ್ಯ ತೇಜಸ್ಸನ್ನಾಶ್ರೈಸಿ, ವೈಕುಂಠವೆಂಬ ಹೆಸರಿನ ಮುರಾರಿಯ ಸ್ಥಾನಮನೈದಿ ಆ ವೈಕುಂಠದೊಳು ನಾರಾಯಣನ ಸನ್ನಿ ಧಾನದಲ್ಲಿರ್ಪ ಅದ್ಭುತಮಾಗಿ ಶೋಭನಮಾದ ಶಿರಮಂಧರಿಸಿರ್ಪ ಗರುತ್ಮಂತನಂ ಮತ್ತೆ ಆ ಮುರಾರಿಯಾದ ವಿಷ್ಣುವಿನ ಶಯನಮಾದ ಸರ್ಪರಾಜನಂ, ಇವರ ನೀರ್ವರಂ ಕಂಡು ಆಗ ಗರುತ್ಮಂತನಿಗುಂ ಶೇಷನಿಗುಂ ಕದನಂ ಗೈಸುವಾಗ, ಆ ಗರುತ್ಮಂತಶೇಷರೀರ್ವರುಂ ಪರಸ್ಪರಮಾಗಿ ಗರಿಗಳಿಂದಲುಂ ಪೆಡೆಗಳಿಂದಲೂ ಪ್ರಹರಿಸುತ್ತಿರಲಾಗಿ ಸಂತೋಷಿಸುತ್ತಿರ್ದನು. ಆ ಕುಮಾರನು ವಕ್ರಮಾದ ಆಚಾರನುಂ ಧರಿಸಿ ವಟುವಾದುದರಿಂದ ಅತ್ಯಂತ ವಕ್ರಮಾದ ಲೀಲಾವಿನೋ ದಮನಾಶ್ರಯಿಸಿ, ಕೆಲವೆಡೆಯೊಳೋರ್ವನೆ ಸಂಚರಿಸುತ್ತ ಯೌವನವಂ ತಳೆದು, ಸ್ತ್ರೀಯರಂ ಮೋಹಿಸುತಿರ್ದನು. ದೇವಾದಿಗಳ ಭವನಂಗಳನ್ನಾಶ್ರಯಿಸುತ್ತ ಆ ದೇವಾದಿ ಲೋಕಂಗಳಲ್ಲಿ ವಿದ್ವಾಂಸರಿಂ ಪರಿಪೂಜ್ಯಮಾದ ಪಾದಾರವಿಂದ ವುಳ್ಳವನಾಗಿ ನಾನಾ ವಿಧಮಾದ ಕ್ರೀಡೆಯಿಂದ ಆಶ್ಚರ್ಯಕರನಾಗಿಯೂ ಇರು ತ್ತಿರ್ದನು. ಈ ಕುಮಾರನು ಮಹತ್ತಾದ ಅಡವಿಯ ಮಧ್ಯಮನ್ನೈದಿ ಯೆರಡು ಕೈಗಳಿಂ ತಗರ್ಗಳ ಕಂಠದೆಡೆಗಳಲ್ಲಿ ಪಿಡಿದು ಸನ್ನೆಯಿಂದ, ಆ ತಗರ್ಗಳ ಯುದ್ಧಮುಂ ನೋಡುತ್ತಾ, ಮಹಿಷಾಶ್ವಂಗಳ ನೆರಡಂ ಯುದ್ಧಮುಂ ಮಾಡಿಸು ತಿರ್ದನು. ಮತ್ತೆ ದೇವೇಂದ್ರವಂದ್ಯನಾದ ಈ ಕುಮಾರನು ಮರಳಿ ಬಾಲಕ ನಾಗಿ, ತಾಯಿಂದ ಹೇಗೆಯೋ ಹಾಗೆ ಲೋಕದಲ್ಲಿರ್ಪ ಸ್ತ್ರೀಯರ ಸಮೂಹ ದಿಂದ ಪಿಡಿಯಲ್ಪಟ್ಟು, ಆ ಸ್ತ್ರೀಯರಲ್ಲಿ ಪ್ರೀತಿಯುಳ್ಳವನಂತೆ ಆ ಸ್ತ್ರೀಯರ ತೊಡೆಯನ್ನೇರಿ ಅಲಂಕರಿಸುತ್ತಿರಲಾಗಿ, ಈ ಕುಮಾರನಂ ಪ್ರತಿಪಾದಿಸುವ ವೇದಾಂತಗಳಿಂದ ಈ ಕುಮಾರನಂ ತೊಡೆಯವೇಲಿಟ್ಟಿರ್ಪ ಸ್ತ್ರೀಯ್ಯರ ತೊಡೆ ಗಳೇ ಉತ್ಕೃಷ್ಟಂಗಳಾದವು. ಮತ್ತೆ ಕೆಲವೆಡೆಯಲ್ಲಿ ವೃದ್ಧನಾಗಿ ನರೆಮಂಡೆ ಯಿಂದ ಅತ್ಯಂತಮಾದ ಕಿವಿಗಳುಂ ದೃಷ್ಟಿಗಳುಂ ಉಳ್ಳವನಾಗಿ ಕೈಯಲ್ಲಿ ಕೋಲಂ ಪಿಡಿದು, ಜಗಜ್ಜನನಿಯಾದ ಪಾರ್ವತೀಕುಮಾರನಾದುದರಿಂದ ಸಜ್ಜ

ಸರ್ಗೆ ಅತ್ಯಂತ ಬಂಧುವಾಗಿ, ಲೋಕಾನುಗ್ರಹಪರನಾಗಿ ದೇವಲೋಕಂಗಳಲ್ಲಿ ಸಂಚರಿಸುತ್ತಿರ್ದನು. ಮತ್ತೆ ಕೆಲವೆಡೆಯಲ್ಲಿ ರಾಜಕುಮಾರನಂತೆ ಅಶ್ವವನ್ನೇರಿ, ವಿಚಿತ್ರವಾದ ಕಿರುಘಂಟೆಗಳ ಧ್ವನಿಯಿಂದ ಮನೋಹರ ಮಪ್ಪಂತು ಬಹು ವಿಧ ಮಾಗಿ, ಏಕ ಪ್ರಕಾರಮಾದ ಗಮನವುಳ್ಳವನಾಗಿ, ಸಕಲ ದೇವಚೂಡಾಮಣಿ ಯಾಗಿ ಉತ್ತಮಾಶ್ವ ಮಹಿಮೆಗಿಂತ ಅಧಿಕ ಮಪ್ಪಂತು ಯಳಗನ್ನೇರಿ ನಡೆಸುತ್ತ ಕ್ರೀಡಿಸುತ್ತಿರ್ದನು. ಇನ್ನು ಕೆಲವೆಡೆಯಲ್ಲಿ, ಘನಮಾದ ನಖಾಗ್ರಂಗಳುಂ ದಂತಪಂಗ್ತಿಗಳುಂ ಉಳ್ಳ ಶುಭ್ರಮಾದ ಕೊನೆಗಳುಳ್ಳ, ಹೆಗ್ಗತ್ತಿನಲ್ಲಿರ್ಪ ಕೂದಲುಗಳುಳ್ಳ, ಪೂಜ್ಯಮಾದ ಬಾಲದಿಂ ಮನೋಹರಮಾದ ಉನ್ನತಮಾದ ಸಿಂಹಮನ್ನೇರಿ ಗಮನಾಗಮನಂಗಳಿಂದ ಆ ಸಿಂಹಮುಂ ನಡೆಸುತ್ತಿರ್ದನು. ಎಲೈ ಮುನಿಗಳಿರಾ ! ಈ ಪ್ರಕಾರಮಾದ ಪಾರ್ವತೀದೇವಿಯ ಕುಮಾರನಾದ ಕುಮಾರನು ಆಕಾಶದಲ್ಲಿಯುಂ ಭೂಮಿಯಲ್ಲಿಯುಂ ಕ್ರೀಡಿಸುತ್ತ ಕೆಲವೆಡೆಯಲ್ಲಿ ಪಕ್ಷಿರಾಜನಾದ ಗರುತ್ಮಂತನನ್ನೇರಿಯುಂ ಮತ್ತೆ ಕೆಲವೆಡೆಯಲ್ಲಿ ಹಂಸೆಯನ್ನೇರಿಯುಂ ಇನ್ನು ಕೆಲವೆಡೆಯಲ್ಲಿ ಶರಭ ಶಾರ್ದೂಲಂಗಳನ್ನೇರಿಯುಂ ಮತ್ತೆ ಕೆಲ ಪ್ರದೇಶದಲ್ಲಿ ನಾನಾ ವಿಧಂಗಳಾದ ಪಕ್ಷಿಗಳನ್ನೇರಿಯೂ ಮಾರ್ಗಂಗಳ್ಲಿ ಸಂಚರಿಸುತ್ತ, ನಾನಾ ವಿಧ ವಿಲಾಸಂಗಳನ್ನೈದುತ್ತ, ಶಿವನೆಂಬ ಅಮೃತ ಸಮುದ್ರಕ್ಕೆ ಚಂದ್ರಪ್ರಾಯನಾಗೊಪ್ಪುತ್ತ ಬಹಳವಾದ ಸರಸ್ಸುಗಳಲ್ಲಿಯೂ, ತಟಾಕಕೋಟಿಗಳಲ್ಲಿಯುಂ ಪೋರ್ವನೇ ಸಂಚರಿಸುತ್ತಿರ್ದನು. ಎಲ್ಲಾ ನದಿಗಳಲ್ಲಿಯುಂ ವಿಹಾರಮಂ ಬಯಸಿ ತನ್ನ ಪ್ರಮಥಾದಿ ಗಣಂಗಳ್ಗೆ ಮನದೊಳನೇಕ ಸಂತೋಷವನ್ನುಂಟುಮಾಡುತ್ತ, ಕೆಲವೆಡೆಯಲ್ಲಿ ವೀಣೆಯುಂ ಕೈಯೋಳ್ ಪಿಡಿದು ಬಹಳ ಹೊತ್ತು ಪರಿಯಂತರವು ಸುಸ್ವರಮಪ್ಪಂತು ಗಾನಂ ಗೈಯ್ಯುತಲುಂ ಉದ್ಯಾನವನ ಮಧ್ಯಂಗಳಲ್ಲಿ ತಳಿರ್ಗಳಿಂ ಪೊತ್ತಿರ್ಪ ವೃಕ್ಷಂಗಳಂ ನೋಡುತ್ತಲುಂ ಮತ್ತೆ ಕೆಲವೆಡೆಯಲ್ಲಿ ಕೈಯೋಳ್ ಕೊಳಲಂ ಪಿಡಿದು ಆ ಕೊಳಲಿನ ರಂಧ್ರಂಗಳನ್ನು ಬೆರಳ್ಗಳ ಕೊನೆಗಳಿಂ ಮುಚ್ಚುತ್ತಲುಂ ಮೃಗಂಗಳನ್ನೆಲ್ಲವನ್ನೂ ಮುಚ್ಚುತ್ತಿರ್ಪ ನಯನಂಗಳುಳ್ಳವನಾಗಿ ತೃಣಾಪೇಕ್ಷೆಯುಂ ಬಿಡಿಸುತ್ತ, ಲೋಕದೊಳಿರ್ಪ ವನಿತಾಜನಮನ್ನೆಲ್ಲಮಂ ಮನ್ಮಥವಶವರ್ತಿಯುಂ ಮಾಡುತ್ತಲುಂ ಎಲ್ಲಾ ಜನಂಗಳ ಮನಸ್ಸುಗಳಂ ಪರವಶಮುಂ ಗೈಯುತ್ತಲೂ, ಈ ಪ್ರಕಾರದಿಂದ ವೀಣಾವೇಣು ಮೊದಲಾದ ವಾದ್ಯಂಗಳಿಂ ಕ್ರೀಡಿಸುತ್ತ, ಪರಬ್ರಹ್ಮಮುಂ ಪ್ರಕಾಶಮುಂ ಗೈವುತ್ತಿರ್ದನು. ಆ ವೆಡೆಯಲ್ಲಿ ಬ್ರಾಹ್ಮಣ ಕುಮಾರರು ಅಕ್ಷರಾಭ್ಯಾಸಂಗಳಂ ಮಾಡುತ್ತಿರೆ, ಅಲ್ಲಿ ತಾನುಂ ಬಾಲಕ ವೇಷಮುಂ ಧರಿಸಿ ಆ ಬ್ರಾಹ್ಮಣ ಪುತ್ರರ್ವೆರಸಿ, ದ್ರಾವಿಡ, ಆಂಧ್ರ, ಕರ್ನಾಟಕಾದಿ ಭಾಷೆಗಳಂ

ಪಠಿಸುತ್ತ, ಶಿವನ ಅಂಗೋದ್ಭವನಾಗಿ ಅಚ್ಯುತನಿಂದ ಕೊಂಡಾಡಲ್ಪಟ್ಟ ಕೀರ್ತಿಯುಳ್ಳವನಾಗಿ, ಅಧ್ಯಯನಂ ಗೈಯುವ ಬ್ರಾಹ್ಮಣ ಕುಮಾರರ ಮಧ್ಯಂಗಳಲ್ಲಿ ವೇದಂಗಳಂ ಪಠಿಸುತ್ತ ಸರ್ವೋತ್ಕೃಷ್ಟನಾಗಿ ಯಿರುತಿರ್ದನು. ಈ ಪ್ರಕಾರದಿಂದ ಶಿವನ ಪಣೆಗಣ್ಣಿನ ತೇಜಸ್ಸಿನಿಂದ ಉದ್ಭವಿಸಿದ ಮೂರ್ತಿಯು ಬ್ರಹ್ಮಾಂಡಗಳ ಬಹಿರ್ಭಾಗಂಗಳಲ್ಲಿಯುಂ ಬ್ರಹ್ಮಾಂಡಕೋಟಿಗಳ ಅಭ್ಯಂತರಂಗಳಲ್ಲಿಯುಂ ಆ ಕುಮಾರನು ತನ್ನ ಭೃತ್ಯವರ್ಗಂಗಳ್ವೆರಸಿ, ಬಹುಕಾಲ ಪರಿಯಂತರವೂ ಕ್ರೀಡಿಸುತ್ತ ಮಹಾಮೇರುಪರ್ವತಮನಾಶ್ರಯಿಸಿ ಆ ಮೇರುಪರ್ವತದೊಳಿರುತ್ತ ಆ ಮೇರು ಶಿಖರಂಗಳನೇಱುತಿರ್ದನೆಂಬಲ್ಲಿಗೆ, ಇಪ್ಪತ್ತೊಂಬತ್ತನೆಯ ಅಧ್ಯಾಯವು ಸಂಪೂರ್ಣಂ.

ಮುವ್ವತ್ತನೆಯ ಅಧ್ಯಾಯವು.

ದೇವತೆಗಳ ದಿಗ್ಭ್ರಮೆ.

ಎಲೈ ಮುನಿಗಳಿರಾ ! ಈ ಪ್ರಕಾರದಿಂ ಶಿವಕುಮಾರನಾಗಿ ಜಗತ್ಪತಿಯಾದ ಆ ಕುಮಾರನು ಮಹಾಮೇರುವಲ್ಲಿ ಕ್ರೀಡಿಸುತ್ತಿರಲಾಗಿ, ಸಪ್ತಕುಲಪರ್ವತಂಗಳಂ ಭೇದಿಸುತ್ತಿರ್ಪ ಅಪರಿಮಿತ ಪರಾಕ್ರಮಶಾಲಿಯಾದ ಕುಮಾರನಂ ಕಂಡು ಆಶ್ಚರಿಯಪಟ್ಟು ಪರಮ ಭೀತರಾಗಿ, ಭೂತಳದಲ್ಲಿ ಯೆಂತಹುದೋಯೆಂದು ಬಹಳವಾಗಿ ಚಿಂತಿಸುತ್ತ, ಏಕಾದಶರುದ್ರರುಂ, ದ್ವಾದಶಾದಿತ್ಯರುಂ, ಅಷ್ಟವಸುಗಳಂ, ಸಪ್ತಮರುದ್ದೇವತೆಗಳೂ, ಅಶ್ವಿನೀದೇವತೆಗಳೀರ್ವರುಂ ಯೆಲ್ಲಾ ದಿಕ್ಪತಿಗಳ್ವೆರೆಸಿ ಮುವ್ವತ್ತುಮೂರುಕೋಟಿ ದೇವತೆಗಳು ದೇವೇಂದ್ರನ ಸನ್ನಿಧಾನಮನ್ನೈದಿ, ಆ ದೇವೇಂದ್ರಂಗೆ ಶಿವಕುಮಾರನಾದ ಬಾಲಕನ ಕ್ರೀಡೆಯನ್ನು ಬಿನ್ನಹಂಮಾಡಲುಜ್ಜುಗಿಸಿ, ಆ ಸುಬ್ರಹ್ಮಣ್ಯನ ಮಾಯೆಯಿಂದ ಅಪಹರಿಸಲ್ಪಟ್ಟ ಜ್ಞಾನವುಳ್ಳವರಾಗಿ, ಬಿನ್ನೈಸಿದರೆಂತೆನೆ, ಎಲೈ ದೇವೇಂದ್ರನೆ ! ಬಾಲಕನಾದ ಕುಮಾರನು ಜಗತ್ರಯವನ್ನು ಬಹು ಕಾಲದಿಂದ ಮರಿಯಾನೆಯು ಕೊಳನಂ ಕದಡುವಂತೆ ಕದಡುತ್ತಿರುವನು. ಎಂತೆಂದರೆ, ಈ ಕುಮಾರನಿಂದೆಂದಿಗುಂ ಭೇದಿಸಲ್ಪಡದಿಹ ಕುಲಪರ್ವತಂಗಳು ಭೇದಿಸಲ್ಪಟ್ಟವು. ಸಪ್ತಸಮುದ್ರಂಗಳು ವೊಂದಾಗಿ ಕೂಡಿದವು. ಸಪ್ತದ್ವೀಪಂಗಳು ಮರ್ದಿಸಲ್ಪಟ್ಟವು. ದಿಗ್ಗಜಂಗಳೆಲ್ಲವು ಕೈಯೊಳಿರಿಸಲ್ಪಟ್ಟು ಬಹು ದೂರದಲ್ಲಿ ಯಿಡಲ್ಪಟ್ಟವು. ಈ ಪ್ರಕಾರದಿಂದ ಆ ಬಾಲಕನಿಂ ಲೋಕಂಗಳು ತಿರಸ್ಕೃತಂಗಳಾಗುತ್ತಿರಲಾಗಿ ನಮಗೇನುಗತಿ ? ಎಂದೀಪ್ರಕಾರದಿಂದ ನುಡಿದ ದೇವತೆಗಳ ವಾಕ್ಯಮಂ ಕೇಳ್ದು ದೇವೇಂದ್ರನು ಆ ಶಿವಕುಮಾರನ ಉತ್ತಮವಾದ ಪರಾ

ಕ್ರಮಮಂ ನೋಡಿ ಆ ಕುಮಾರನ ಮಾಯೆಯಿಂದ ಆತನ ಸ್ವರೂಪಮಂ ತಿಳಿಯಲಾರದೆ, ಮನದೊಳಿಂತು ಚಿಂತಿಸಿದನದೆಂತೆನೆ. ಈ ಬಾಲಕನು ಅತ್ಯದ್ಭುತ ಪರಾಕ್ರಮಿಯು. ಈತ ನಾರೆಂಬುದನ್ನು ನಾವರಿಯೆವು. ಈ ಕುಮಾರನಿಂದ ಲೀಲಾಮಾತ್ರದಿಂದಲೆ ಜಗತ್ತೆಲ್ಲವುಂ ಭಸ್ಮೀಭೂತವಾಗುತ್ತಿದ್ದೀತು. ಈ ವೃತ್ತಾಂತಮನೆಲ್ಲಮಂ ಬ್ರಹ್ಮದೇವಂಗೆ ಬಿನ್ನೈಸಿ ಈತಂಗೆ ಪ್ರತೀಕಾರಮಂ ಮಾಡುವೆನೆಂದು ಆಲೋಚಿಸಿ ಐರಾವತವನ್ನೇರಿ, ದಿಕ್ಪಾಲಕರ್ವೆರಸಿ, ದೇವತೆಗಳೊಡನೆ ನಡೆವುತ್ತ, ಮಾರ್ಗಮಧ್ಯದಲ್ಲಿ ಮಹಾಮೇರು ಪರ್ವತ ಶಿಖರಂಗಳನ್ನು ವಿಲಾಸದಿಂದ ಒಂದೊಂದನ್ನು ಹಸ್ತಂಗಳಿಂ ಕಿತ್ತು ಕಿತ್ತು ದಿಕ್ಕು ದಿಕ್ಕಿಗೀಡಾಡುತ್ತಿಹ ಆ ಶಿವಕುಮಾರನನ್ನು ಕಂಡು ಕುಪಿತನಾಗಿ, ದೇವತೆಗಳ್ವೆರಸಿ ಆ ಕುಮಾರನನ್ನು ಪ್ರಹರಿಸಲುದ್ಯೋಗಿಸಲಾಗಿ ಆ ಕುಮಾರನು ವಿಲಾಸಪರನಾದೊಡಂ ದೇವತೆಗಳ್ವೆರಸಿ ತನ್ನ ಮೇಲೆ ಕೋಪಿಸುತ್ತಿಹ ದೇವೇಂದ್ರನನ್ನು ವೀಕ್ಷಿಸಿ, ಪ್ರಹರಿಸಲುದ್ಯೋಗಿಸಿದನು. ಆಗ ಇಂದ್ರ ಮೊದಲಾದ ದೇವತೆಗಳಿಂದ ಬಿಲ್ಲಿನಲ್ಲಿ ಸಂಧಾನಮುಂ ಮಾಡಿ, ಅಡಿಗಡಿಗೆ ಪ್ರಯೋಗಿಸಲ್ಪಟ್ಟ ಶರಂಗಳು, ಪುಷ್ಪವೃಷ್ಟಿಯಾಗಿ ಆ ಕುಮಾರನ ಮೇಲಣ ಭಾಗದಲ್ಲಿಯುಂ ಪಾದಂಗಳಲ್ಲಿಯುಂ ಈ ರೀತಿ ಆತನ ಮೇಲೆ ಬೀಳುತಿರ್ದುವು.

ದಿಗ್ಭ್ರಾಂತರಾದ ದೇವತೆಗಳೊಂದಿಗೆ ಕುಮಾರನ ಯುದ್ಧಲೀಲೆ.

ಆದರೆ ಆ ಕುಮಾರನು ಮುಗುಳ್ನಗೆವೆರಸಿದ ಮುಖಾರವಿಂದದಿಂದ ಸುಮ್ಮನೆ ಇರುತಿರಲಾಗಿ, ಮರಳಿಯುಂ ವೃತ್ರಾರಿಯಾದ ದೇವೇಂದ್ರನು ಕುಪಿತನಾಗಿ ಐರಾವತದ ಶಿರದಮೇಲಿರುತ್ತ ಪರಬ್ರಹ್ಮಮಾದ ಕುಮಾರನಮೇಲೆ ದೇದೀಪ್ಯಮಾನಮಾದ ವಜ್ರಾಯುಧಮುಂ ಪ್ರಯೋಗಿಸುತ್ತಾನೆ, ಆ ವಜ್ರಾಯುಧವು ಪ್ರತಿವಜ್ರದಿಂದ ಪ್ರಹರಿಸಲ್ಪಟ್ಟಂತೆ ಆ ಕ್ಷಣದಲ್ಲಿ ಶಿಡಿವುತ್ತಿಹ ಯಜ್ಞೇಶ್ವರನ ಕಿಡಿಗಳುಳ್ಳದ್ದಾಗಿ, ಶೀರ್ಣ ಧೂಳ್ಗಳ ಸಮೂಹದಂತಿರುತಿರ್ದುದು. ತದನಂತರದಲ್ಲಿ ಆ ಕುಮಾರನು ವಜ್ರಪ್ರಹಾರದಿಂದ ವಜ್ರಪಾಣಿಯಾದ ಆ ದೇವೇಂದ್ರನ ಮೇಲೆ ಕೋಪವುಳ್ಳವನಾಗಿ, ಬಿಲ್ಲಿನಲ್ಲಿ ಬಾಣಮುಂ ಸಂಧಾನಂಗೈದು ಐರಾವತೋಪರಿಭಾಗದಲ್ಲಿ ಪ್ರಯೋಗಿಸಿದವನಾಗಲು, ಆ ಬಾಣದಿಂದ ಶಿರದಲ್ಲಿ ಅಪಹರಿಸಲ್ಪಟ್ಟ ಐರಾವತವು ವಜ್ರದಿಂ ಪೊಡೆಯಲ್ಪಟ್ಟ ಪರ್ವತದಂತೆ ಅತ್ಯಂತ ಮೂರ್ಛಿತನಾಗಿ ಬೀಳ್ದುದು. ಆಗ ದೇವೇಂದ್ರನು ಮರಳಿಯುಂ ನೆನೆದು ಬಿಲ್ಲಂ ಕೈಯೊಳ್ ಪಿಡಿದು, ಶರಂಗಳಂ ಸಂಧಾನಮುಂ ಮಾಡಿ, ಮೇಘವು ವರ್ಷಂಗಳಂ ವರ್ಷಿಸುವಂತೆ ಅಂಬುಗಳಂ ಮಳೆಗರೆವುತಿರ್ದನು. ಆಗ ಮಹಾಭುಜನಾದ ಕುಮಾರನು ಬಿಲ್ಲಿನಲ್ಲಿ ಒಂದು ಬಾಣಮುಂ ಸಂಧಾನಮುಂ ಮಾಡಿ, ಆ

ದೇವೇಂದ್ರನ ಬಾಣವರ್ಷಮಂ ಮಳೆಯಿಂ ಕ್ಷಾಮಮಂ ಪರಿಹರಿಸುವಂತೆ ಪರಿಹರಿಸಿ ಆ ದೇವೇಂದ್ರನ ಬಿಲ್ಲಂ ಯರಡಾಗಿ ಖಂಡಿಸಿ ಧ್ವಜವನ್ನು ಒಂದು ಬಾಣದಿಂದ ಕೆಡವಿದನಲ್ಲದೆ ನಿಜಶರೀರಂಗಳಿಂದ ಶೀಘ್ರವಾಗಿ ಆ ದೇವತೆಗಳ ನೆಲ್ಲರಂ ಒಬ್ಬ ರೊಬ್ಬರನ್ನಾಗಿ ಪ್ರಹರಿಸಿದನದೆಂತೆನೆ, ಯಮನಮೇಲೆ ಐದು ಬಾಣಂಗಳನ್ನು ಸೂರ್ಯನಮೇಲೆ ಮೂರು ಬಾಣಂಗಳನ್ನು ಚಂದ್ರನಮೇಲೆ ಒಂದು ಬಾಣವನ್ನು ಈ ಪ್ರಕಾರದಿಂದ ಪ್ರತ್ಯೇಕವಾಗಿ ಬಾಣ ಸಮೂಹಮಂ ಪ್ರಯೋಗಿಸಿ ವಿಲಾಸ ದಿಂದ ಆ ದೇವತೆಗಳನೆಲ್ಲರುಂ ಕೆಡಹುತಿರ್ದನು. ಈ ಪ್ರಕಾರದಿಂದ ದಿಕ್ಪಾಲಕ ರೆಲ್ಲರನ್ನು, ಶರವಣದಲ್ಲಿ ಪುಟ್ಟಿದ ಆ ಕುಮಾರನು ತನ್ನ ಬಾಣದಿಂದ ಕ್ಷಣಮಾತ್ರ ದಿಂದಲೆ ಹೊಡೆದು ಕೆಡಹುತಿರಲಾಗಿ ಹತಶೇಷವಾದ ದೇವ ಸಮೂಹವು ದಿಕ್ಕು ದಿಕ್ಕಿನಲ್ಲಿ ಪಲಾಯನಮನ್ನೈದಿದುದು. ಆಗ ದೇವರ್ಷಿಯಾದ ನಾರದನು ವೀರ ನಾದ ಕುಮಾರನ ಪರಾಕ್ರಮವಂ ನೋಡಿ ಈ ವೃತ್ತಾಂತಮನೆಲ್ಲಮಂ ಅಡಿಗಡಿಗೆ ರೋಮಾಂಚ ಭರಿತನಾಗಿ ಬೃಹಸ್ಪತಿಯ ಬಳಿಗೆ ವೇಗದಿಂದೈದಿ ಎಲೈ ಬೃಹ ಸ್ಪತಿಯೆ! ನೀನು ದೇವತೆಗಳ್ಗೆ ಪ್ರಾಣಸಮಾನನಾದ ಪುರೋಹಿತನು, ಆ ದೇವತೆ ಗಳೆಲ್ಲರುಂ ಓರ್ವ ಬಾಲಕನಿಂದ ಯುದ್ಧದಲ್ಲಿ ಪ್ರಹರಿಸಲ್ಪಟ್ಟರು, ಈಗ ಆವುದು ದೇವತೆಗಳಿಗೆ ಹಿತವಾದ ಕಾರ್ಯವೋ ಅದನ್ನು ನೀನು ಶೀಘ್ರದಿಂದಾಚರಿಪುದೆಂದು ನುಡಿದನು.

ಕುಮಾರದೇವನನ್ನು ದೇವಗುರು ಸ್ತುತಿಸುವಿಕೆ.

ಈ ಪ್ರಕಾರವಾದ ನಾರದವಾಕ್ಯಮಂ ಕೇಳ್ದು, ಬೃಹಸ್ಪತಿಯು ಆಗ ಜ್ಞಾನ ದೃಷ್ಟಿಯಿಂದ ದೇವತೆಗಳ ಸಮೂಹದಿಂದ ಜಗನ್ನಾಯಕನಾದ ಶಿಶುವಾದ ಸ್ಕಂ ದನಿಗೋಸುಗ ಮಾಡಲ್ಪಟ್ಟ ಅಪಚಾರಮಂ ತಿಳಿದು, ಗುಹಾಭ್ಯಂತರದಿಂ ಪೊರ ಮಟ್ಟು ಗುಹನಂ ಮರೆಯೊಕ್ಕನದೆಂತೆನೆ, ಜಗತ್ಪ್ರಭುವಾದ ಆ ಕುಮಾರನು, ರಮ್ಯವಾದ ಮಹಾ ಮೇರು ಶಿಖರದಲ್ಲಿ ಕುಳ್ಳಿರ್ದು, ಅಸ್ವಾಧೀನನಾಗಿ ಯಿರು ತ್ತಿರಲಾಗಿ, ಸರ್ವೇಶ್ವರನಾದ ಆ ಷಣ್ಮುಖನ ಸಮೀಪವನ್ನೈದಿ, ಅಡಿಗಡಿಗೆ ಶಿರಸ್ಸಿ ನಿಂ ನಮಸ್ಕರಿಸಿ, ಆ ಕುಮಾರನಂ ಕುರಿತು ಬೃಹಸ್ಪತಿಯು, ಎಲೈ ಜಗದ್ರಕ್ಷಕನೆ! ಅನಂತಮಹಿಮೆಗಳ್ಗೆ ಅಪಾರ ಸಾಗರನಾಗಿ ವಿಘ್ನೇಶ್ವರನ ಸಹೋದರನಾದ ನಿರ್ಭ ಯನಾದ ಸ್ಕಂದಂಗೋಸ್ಕರ ನಮಸ್ಕಾರ, ಏಕವಕ್ತ್ರನಾದ ಸಾಕ್ಷಾತ್ಪರಮೇಶ್ವರನೆ! ಷಡ್ವಕ್ತ್ರನಾಗಿ ದ್ವಾದಶ ಭುಜನಾಗಿ ಸೌಮ್ಯನಾಗಿ ತನ್ನನ್ನು ಅರ್ಚಿಸುವರ್ಗೆ ಇಷ್ಟಾರ್ಥಪ್ರದನಾದ ಪಾರ್ವತೀ ಪರಮೇಶ್ವರರ್ಗೆ ಈರ್ವರ್ಗೆಯುಂ ಏಕವಿಧ ವಾದ ಪ್ರೀತಿಗೆ ಆಶ್ರಯಭೂತವಾದ ಮೂರ್ತಿಯಂ ಧರಿಸಿ ಅನಂತಮೂರ್ತಿ ಯಾದ ಅನಂತಾದ್ಭುತಂಗಳಿಗೆ ಕಾರಣವಾದ ಅನಂತಜ್ಯೋತಿಯಾಗಿ ಅನಂತ

ನಾದ ನಿನಗೋಸುಗ ನಮುಸ್ಕಾರ ನಮುಸ್ಕಾರ, ಆವನೋರ್ವನ ಬಲವನ್ನು ಆವ ನೋರ್ವನ ಮಾಯೆಯಿಂದ ದೇವತೆಗಳು ತಿಳಿಯದಿರುವರೋ, ಆವನೋರ್ವನು ಎಲ್ಲಾ ಕಡೆಂಬಲ್ಲಿಯೂ ವ್ಯಾಪಿಸುತ್ತಿದ್ಧಾದೋ, ಅಂಥ ಗುಹನಾಗಿ ಈಶ್ವರನಾದ ಪ್ರಭುವೆ! ನಾನು ನಿನಗೆ ನಮುಸ್ಕಾರಮಂ ಮಾಡುತ್ತೇನೆ, ಜಗತ್ಪಾಲನಮಂ ಕುರಿತು ವಿವಿಧಮಾಗಿಹ ಈಶ್ವರನಂ ಆಶ್ರಯಿಸುವೆನು. ಆವನೋರ್ವನ ಮಾಯೆ ಯಿಂದ ಅಪಹೃತಮಾದ ಜ್ಞಾನವುಳ್ಳವರಾಗಿ ವಿಬುಧರು ಆದ್ಯನಾದ ಆವನೋ ರ್ವನನ್ನೈದಿ, ವೈರಬುದ್ಧಿಯಿಂದ ಅಬುಧರಾಗಿ ಶಿಕ್ಷಿಸಲ್ಪಟ್ಟರೋ ಆ ದೇವಶಿಕ್ಷಕ ನಾದ ಸ್ಕಂದನೆ! ನಿಮಗೆ ನಮುಸ್ಕಾರವು, ಎಂದಿಂತು ಬೃಹಸ್ಪತಿಯು ಸ್ತುತಿಸುತ್ತ ಈ ಕುಮಾರನಂ ನೋಡಿ ನೋಡಿ ಅಡಿಗಡಿಗೆ ಪ್ರಣಾಮಮಂ ಮಾಡುತ್ತಿರೆ, ಆ ಬೃಹಸ್ಪತಿಯನ್ನು ಅಂಬಿಕಾ ಕುಮಾರನಾದ ಸುಬ್ರಹ್ಮಣ್ಯನು ಅನುಗ್ರಹಿಸಿ, ಈ ವಾಕ್ಯಮಂ ನಿರೂಪಿಸಿದನು. ಎಲೈ ಬೃಹಸ್ಪತಿಯೆ! ನೀನು ಮನದೋಳ್ ಬಯ ಸಿದ ಅಭೀಷ್ಟವನ್ನು ಅದರಿಂದ ಸನ್ನಿಧಾನದಲ್ಲಿ ವಿವರಿಸೆಂದು ನಿರೂಪಿಸಲಾಗಿ, ಆ ವಚನಮಂ ಕೇಳ್ದು ಆಂಗೀರಸ ಕುಮಾರನಾದ ಬೃಹಸ್ಪತಿಯು ಮುಗುಳ್ನಗೆ ವೆರೆಸಿದ ಮುಖಾರವಿಂದದಿಂದ ಆ ಕುಮಾರಂಗೆ ನಮಿಸಿ, ಕೈಗಳಂ ಮುಗಿದು ಅತ್ಯುತ್ತಮಮಾದ ವರಮಂ ಬೇಡಿದನದೆಂತೆನೆ, ಷಡ್ಗುಣೈಶ್ವರ್ಯ ಸಂಪನ್ನನಾಗಿ ಸರ್ವಜ್ಞನಾದ ದಯಾನಿಧಿಯಾದ ಸುಬ್ರಹ್ಮಣ್ಯನೆ! ನಿನ್ನ ಮಾಯೆಯಿಂದ ಮೋ ಹಿತರಾದ ದೇವತೆಗಳು ನಿನ್ನ ಕೂಡೆ ಯುದ್ಧಮಂ ಮಾಡಿದ್ದರಿಂದ ಅವರುಗಳ ದೋಷಾನುಗುಣಮಾಗಿ ನಿನ್ನಿಂದ ಶಿಕ್ಷಿಸಲ್ಪಟ್ಟರು. ಅಂತು ಮಲ್ಲದೆಯುಂ ಛಿನ್ನಭಿನ್ನರಾಗಿ ಪರಿಹರಿಸಲ್ಪಟ್ಟು ಹತಶೇಷರಾದ ದೇವತೆಗಳು ದಿಕ್ಕುದಿಕ್ಕಿನಲ್ಲಿ ಪಲಾಯನಮನ್ನೈದಿದರು. ಎಲೈ ವಿಭುವಾದ ಷಣ್ಮುಖನೆ! ಅಜ್ಞಾನದಿಂದ ಆಚರಿಸಿದ ದೇವತೆಗಳ ಅಪಚಾರಮಂ ಸಹಿಸಿ, ಮೊದಲಿದ್ದಂತೆ ದೇವತೆಗಳಮೇಲೆ ಕೃಪೆಯಂ ಧರಿಸು, ದೇವತೆಗಳೆಲ್ಲರುಂ ಪ್ರಾಣಮಂ ಧರಿಸಲಿ, ಅವರವರ ಕರ ಚರಣಾದ್ಯವಯವಂಗಳೆಲ್ಲವುಂ ಎಂದಿನಂತೆ ಧೃಡಮಪ್ಪಂತು ಅನುಗ್ರಹ ದೃಷ್ಟಿ ಯಿಂದ ನಮ್ಮನೆಲ್ಲರನ್ನು ರಕ್ಷಿಸುವಲ್ಲಿ ಮತಿಯಂ ಧರಿಸು. ಎಲೈ ಈಶ್ವರನಾದ ಕುಮಾರನೆ; ಸರ್ವೇಶ್ವರನಾದ ಕಾರಣದಿಂದಲೆ ಆವಾಗಲುಂ ನಮ್ಮನ್ನುರಕ್ಷಿಸು, ನಿರಂತರದಲ್ಲಿಯೂ ಪ್ರಸನ್ನನಾಗೆಂದು ಈ ಪ್ರಕಾರದಿಂ ಬೃಹಸ್ಪತಿಯು ಕುಮಾರ ನಂ ಸ್ತುತಿಸಿ ಪ್ರಾರ್ಥಿಸುತಿರ್ದನೆಂಬಲ್ಲಿಗೆ, ಶ್ರೀಕೃಷ್ಣರಾಜವಾಣೀವಿಲಾಸ ವೆಂಬ ಶಂಕರಸಂಹಿತೆಯಲ್ಲಿ ಸಂಭವಕಾಂಡದ ಮುವ್ವತ್ತನೆಯ ಅಧ್ಯಾಯವು ಸಂಪೂರ್ಣಂ.

ಮುವ್ವತ್ತೊಂದನೆಯ ಅಧ್ಯಾಯವು.

ದೇವತೆಗಳಿಗೆ ಕುಮಾರದೇವನು ಪ್ರಸನ್ನನಾಗುವಿಕೆ.

ಕಂದ|| ಅವಿರಳವಿಶ್ವಾಕೃತಿಯಂ |
ವಿವಿಧಾಮರಸಂಚಯಕ್ಕೆ ತೋರಿಶಿವಾಸಂ ||
ಭವನೊಲ್ದಭಯಮನಿತ್ತು |
ತ್ಸವದಿಂ ರಜತಾದ್ರಿಗೈದಿಹರನಂಕಂಡಂ ||

ಎಲೈ ಶೌನಕಾದಿಮುನಿಗಳಿರಾ! ಈ ಪೂರ್ವೋಕ್ತಪ್ರಕಾರದಿಂದ ದೇವಲೋಕ ಪುರೋಹಿತನಾದ ಬೃಹಸ್ಪತಿಯಿಂದ ಪ್ರಾರ್ಥಿತನಾಗಿ ಆ ಕುಮಾರನು ಪ್ರಸನ್ನನಾಗಿ ಸಂತೋಷದಿಂದ ಈ ಬೃಹಸ್ಪತಿಯ ಪ್ರಾರ್ಥನೆಯಂತೆ ಹಾಗೆಯೇ ಆಗಲೆಂದು ಅನುಗ್ರಹಿಸುತ್ತಿರಲಾಗಿ, ಹರಿ ಮೊದಲಾದ ಆ ದೇವತೆಗಳೆಲ್ಲರುಂ ಮಲಗಿದ್ದವರಂತೆದ್ದು, ಆ ಕುಮಾರಂಗೆ ನಮಸ್ಕರಿಸಿದ ಬಳಿಕ, ಆ ಕುಮಾರನು ಆಜ್ಞಾರೂಪಮಾದ ಮಾಯೆಯಂ ಪರಿಹರಿಸಿ ಕರುಣಾಮೂರ್ತಿಯಾದ ಕಾರಣದಿಂದ ತನ್ನ ಪಾದಂಗಳಲ್ಲಿ ಆ ದೇವತೆಗಳಿಗೆ ದೃಢಭಕ್ತಿಯನ್ನಿತ್ತು ಇಂತೆಂದನು.

ಎಲೈ ದೇವತೆಗಳಿರಾ! ನೀವು ಅಗ್ನಿಗಳೋಪಾದಿಯಲ್ಲಿ ತನ್ನನ್ನು ಶಿಶುವೆಂದು ತಿಳಿದಿರಿ, ಅತ್ಯುತ್ತಮವಾಗಿ ಪರಮೇಶ್ವರನ ಸಂಬಂಧವಾದ ನನ್ನ ಸ್ವರೂಪವನೀಗ ಶೀಘ್ರದಿಂದೆಲ್ಲರುಂ ನೋಡುವರಾಗಿ, ನಿಮಗೆ ಆ ಸ್ವರೂಪಮಂ ನೋಡಲು ದಿವ್ಯದೃಷ್ಟಿಯಂ ಕೊಡುವೆನೆಂದೀ ಪ್ರಕಾರದಿಂದ ನಿರೂಪಿಸಿ, ಆ ದೇವತೆಗಳೆಲ್ಲರ್ಗೆಯುಂ ಜಗದ್ಗುರುವಾದ ಕುಮಾರನು ತನ್ನ ವಿಶ್ವರೂಪಮಂ ತೋರಿಸಿದನದೆಂತೆನೆ, ಸಪ್ತಪಾತಾಳಂಗಳೇ ಪಾದಮಾಗಿಯುಂ ಸಪ್ತದ್ವೀಪಂಗಳೇ ಕಣಕಾಲಾಗಿಯುಂ, ಸಪ್ತಸಮುದ್ರಂಗಳೆ ಅಧೋವಸ್ತ್ರಮಾಗಿಯುಂ, ದಿಕ್ಕುಗಳೇ ಬಾಹುಗಳಾಗಿಯುಂ, ಆಕಾಶಮೇ ನಾಭಿಯಾಗಿಯುಂ ಅಂತರಿಕ್ಷಮೇ ಶಿರಸ್ಸಾಗಿಯುಂ ಚಂದ್ರ ಸೂರ್ಯಾಗ್ನಿಗಳೆಂಬ ನಯನತ್ರಯದಿಂದ ಪರಿಶೋಭಿತಮಾಗಿಯುಂ ಮೇಘಂಗಳೆ ಕೇಶಪಾಶಂಗಳಾಗಿಯುಂ ನಕ್ಷತ್ರಗಳೆಂಬ ಪುಷ್ಪಮಾಲಿಕೆಯಿಂ ರಂಜಿತಮಾಗಿಯೂ ಶಿವನೇ ಆತ್ಮನಾಗಿಯುಂ ಗೌರಿದೇವಿಯೇ ಮತಿಯಾಗಿಯುಂ ಎಡದ ಪಾರ್ಶ್ವವು ಜನಾರ್ದನನಾಗಿಯುಂ, ಬಲದ ಭಾಗವು ಬ್ರಹ್ಮದೇವನಾಗಿಯುಂ, ವೈದಿಕಮಾರ್ಗವು ಸರಸ್ವತಿಯಾಗಿಯುಂ, ಲಕ್ಷ್ಮಿದೇವಿಯೇ ವಾಕ್ಕಾಗಿಯುಂ ಪ್ರಾಣಾದಿ ದಶಭೇದಮಾದ ಪವನನೇ ಪ್ರಾಣಮಾದ ವಾಯುವಾಗಿಯುಂ ಸಮುದ್ರಂಗಳೇ ರೋಮಂಗಳಾಗಿಯುಂ, ಅಂಡ ಕೋಟಿಗಳೇ ಬಹಳಮಾದ ಪೇನುಗಳಾಗಿಯುಂ, ಶಿರುಗಳಾಗಿಯುಂ "ಆ ಕುಮಾರನ ವಿಶ್ವರೂಪವು" ಕೋಟಿಸೂರ್ಯ ಸಂಕಾಶಮಾಗಿ ಕೋಟಿಚಂದ್ರ ಶೀತಳಮಾಗಿ,

ಕೋಟಿ ಕಾಲಾಗ್ನಿ ತೇಜಸ್ಕಮಾಗಿರುತ್ತಿರಲು, ಅತ್ಯುತ್ತಮಮಾಗಿ ಅದ್ಭುತಮಾದ ಆ ವಿಶ್ವರೂಪವನ್ನು ಅಪರಿಚ್ಛೇದ್ಯ ಮಹಿಮನಾಗಿ ಬ್ರಹ್ಮಣ್ಯನಾದ ಹರನ ಕುಮಾರನು ದೇವತೆಗಳಿಗೆ ತೋರುತ್ತಿರಲಾಗಿ, ಆ ವಿಶ್ವರೂಪದ ತೇಜಸ್ಸಿನಿಂದ ದೇವತೆಗಳ ಕಣ್ಗಳೆಲ್ಲವುಂ ಅಂಧರ ದೃಷ್ಟಿಯೋಪಾದಿಯಲ್ಲಿ ಆದವು. ಅಹಹಹ!! ಆ ದೇವತೆಗಳ ದೃಷ್ಟಿಗಳು ನಿದ್ರಾರಹಿತಂಗಳಾಗಿರ್ದೊಡಂ ಏನೂ ಹೊಳಚದೇ ಘಟಾದಿ ವಿಷಯಂಗಳನ್ನೈದಲಾರದಿರ್ದವು. ಮಹತ್ತಿಗುಂ ಮಹತ್ತರಮಾದ ಆ ವಿಶ್ವರೂಪದ ಪ್ರಕಾಶದೊಳು ಅಸಮರ್ಥಂಗಳಾಗಿರ್ದ ವೆಂಬುದಂ ಪೇಳ್ವುದೇನು? ಆ ದೇವ ಸಮೂಹಂಗಳ ಮನಂಗಳು ಪಂಚೇಂದ್ರಿಯಂಗಳ್ವೆರಸಿ ಪರಮೇಶ್ವರನ ಸಂಬಂಧಮಾದ ಅತ್ಯುತ್ತಮವಾದ ವಿಶ್ವರೂಪದ ತೇಜಸ್ಸಿನಲ್ಲಿ ಆ ಕ್ಷಣದಲ್ಲಿಯೇ ಅಂತರ್ಧಾನಮನ್ನೈದಿದವು. ಆ ಕ್ಷಣದಲ್ಲಿಯೇ ಮರಳಿಯೂ ವಿಷ್ಣು ಮೊದಲಾದ ದೇವತೆಗಳು ತಿಳುವಳಿಕೆಯಂ ಪಡೆದು ಆ ಕುಮಾರಂಗೆ ಪ್ರಣಾಮಂಗೈದು, ಕೈಮುಗಿದು ಆ ಸುಬ್ರಹ್ಮಣ್ಯನ ಸಂಬಂಧಮಾದ ಶತ್ರುಸಂಹಾರಕಮಾದ ವಿಶ್ವರೂಪಮಂ, ಬಾಹ್ಯಮಾದ ತಮ್ಮ ಚಕ್ಷುಸ್ಸುಗಳಿಂದಲೆ ನೋಡಲಸಮರ್ಥರಾಗಿ ಪ್ರಾರ್ಥಿಸುತಿರ್ದರದೆಂತೆನೆ.

ಕುಮಾರದೇವನು ವಿಶ್ವರೂಪಸಂದರ್ಶನವನ್ನು ಕುರಿತು ದೇವತೆಗಳಿಗೆ ದಿವ್ಯದೃಷ್ಟಿಯನ್ನನುಗ್ರಹಿಸುವಿಕೆ.

ಜಗನ್ನಾಯಕನಾಗಿ ಶಂಕರನ ಕುಮಾರನಾದ ದೇವದೇವನಾದ ಕುಮಾರನೇ! ನೀನು ಸರ್ವೇಶ್ವರನಾದುದರಿಂದ ನಿನ್ನ ಅತ್ಯದ್ಭುತಮಾದ ರೂಪಮಂ ನೋಡಲು, ಅತ್ಯಂತ ಅಶಕ್ತರಾಗಿದೇವೆ. ಎಲೈ ದಯಾನಿಧಿಯಾಗಿ ಬ್ರಹ್ಮಸ್ವರೂಪನಾದ ಕುಮಾರನೇ! ದಯೆಯಿಂದ ನಮಗೆ ದಿವ್ಯದೃಷ್ಟಿಯಂ ಕೊಡುವುದೆಂದು, ಈ ಪ್ರಕಾರದಿಂ ಪ್ರಾರ್ಥಿಸಿದ ದೇವತೆಗಳ ಪ್ರಾರ್ಥನೆಯಿಂ ಸಂತುಷ್ಟನಾಗಿ ಶತೃಸಂಹಾರಕನಾದ ಶಿವನ ಕುಮಾರನು ಮುಗುಳ್ನಗೆಯಿಂ ನಕ್ಕು ಆ ದೇವತೆಗಳ್ಗೆ ಆ ವಿಶ್ವರೂಪ ದರ್ಶನದಲ್ಲಿ ಸಮರ್ಥಮಾದ ಸ್ವರೂಪಾವಲೋಕನದಲ್ಲಿ ನಿಪುಣಮಾದ ದಿವ್ಯದೃಷ್ಟಿಯಂ ಕೊಟ್ಟನು. ಆ ಕುಮಾರನು ತನ್ನ ವಿಶ್ವರೂಪವು ಮಾಂಸದೃಷ್ಟಿಯಿಂದ ನೋಡಲು ಶಕ್ಯವಲ್ಲೆಂದು ನುಡಿಯುತ್ತ ದಿವ್ಯದೃಷ್ಟಿಯನ್ನು ಕೊಡುತ್ತಿರಲಾಗಿ, ಇಂದ್ರ, ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳೆಲ್ಲರುಂ ಆ ವಿಶ್ವರೂಪದ ತೇಜೋಮಂಡಲದ ಸಹಸ್ರಾಂಶದೊಳೊಂದಂಶಮಂ ನೋಡುತಿದ್ದರು. ಸಕಲ ಲೋಕಂಗಳಂ ವ್ಯಾಪಿಸಿದ ಆ ಕುಮಾರನ ಜಾನುಪ್ರದೇಶದಲ್ಲಿಯೇ ಸಕಲ ಪದಾರ್ಥಗಳುಂ ಯಿರುತ್ತಿರಲಾಗಿ ಆ ದೇವತೆಗಳೆಲ್ಲರುಂ ಆ ವಿಶ್ವರೂಪದರ್ಶನದಿಂದ ಅಡಿಗಡಿಗೆ ಮನದೊಳಂಜುತ, ಆ ವಿಶ್ವ

ರೂಪದ ತೇಜಸ್ಸಿನೊಳು ಜಗತ್ರಯಮಂ ಕಾಣುತಿರ್ದರು. ಮತ್ತೆ ಆ ಮಹತ್ತಾದ ವಿಶ್ವರೂಪದೇಹದಲ್ಲಿರ್ಪ ರೋಮಕೂಪಂಗಳಲ್ಲಿ ಕೋಟಿ ಬ್ರಹ್ಮಾಂಡ ಕೋಟಿಗಳುಪಿರುಗಳ ಕೋಟಿಗಳಂತಿರುತ್ತಿರಲಾಗಿ, ಒಂದೊಂದು ಬ್ರಹ್ಮಾಂಡದಲ್ಲಿ ತತ್ತದಾವರಣಂಗಳೊಡಗೂಡಿ, ಆ ಆ ಬ್ರಹ್ಮಾಂಡಂಗಳೊಳಿರ್ಪ ಭುವನಂಗಳಿಂದಲೂ, ಜನರಿಂದಲೂ, ಭೂತಭವಿಷ್ಯದ್ರೂಪಂಗಳಂ ಧರಿಸಿರ್ಪ ಆ ಬ್ರಹ್ಮ, ವಿಷ್ಣು, ಮೊದಲಾದ ದೇವತೆಗಳಿಂದ ಅನೇಕ ಸಹಸ್ರ ಪ್ರಕಾರವಾಗಿ ಜಾನುಪ್ರದೇಶ ಮಾತ್ರದಲ್ಲಿಯೇ ಇರುತ್ತಿರಲಾಗಿ, ಆ ದೇವತೆಗಳೆಲ್ಲರುಂ ಕಂಡು ವಿಸ್ಮಯಮನೈದಿ, ಅತ್ಯಂತ ಸಂತೋಷದಿಂದ ವೇದವೇದಾಂತಂಗಳಲ್ಲಿ ಉತ್ಪನ್ನಂಗಳಾದ ವಾಕ್ಯಗಳಿಂದ, ವಾಕ್ಯಗಳಿಗಧೀಶ್ವರನಾದ ಆ ಆನಂದಘನನಾಗಿ ಅದ್ಭುತನಾದುದರಿಂದ ಶಿವಂಗೆ ಅತ್ಯಂತ ಪ್ರಿಯಕರನಾದ ಕುಮಾರನಂ ಸ್ತುತಿಗೈದರದೆಂತೆನೆ.

ವಿಶ್ವರೂಪಧಾರಿಯಾದ ಕುಮಾರದೇವನನ್ನು ದೇವತೆಗಳು ಸ್ತುತಿಸುವಿಕೆ.

ಈ ಜಗಂಗಳು ಆರೊಬ್ಬ ನತ್ತಣಿಂ ಪುಟ್ಟಿದುವೋ? ಭುವನಂಗಳು ಆರೊಬ್ಬನ ಅಭ್ಯಂತರದೊಳಿರುವುವೋ? ಆರೊಬ್ಬನಿಂ ಪುಟ್ಟಿ ಜೀವಿಸುವವೋ? ಆರೊಬ್ಬನನ್ನೈದಿ ಜೀವಿಸುವವೊ? ಆ ಸಾಕ್ಷಾತ್ಪರಬ್ರಹ್ಮವಾದ ಆ ಸುಬ್ರಹ್ಮಣ್ಯನಂ ನಾವು ಉಪಾಸನಂಗೈಯುತ್ತೇವೆ. ಆರೊಬ್ಬನ ಮಾಯೆಯಿಂದ ಮೋಹಿತ ಚಿತ್ತರಾದವರು ಜ್ಞಾನಾನಂದಾತ್ಮಕವಾಗಿ ಪರಾತ್ಪರವಾದ ಬ್ರಹ್ಮವನರಿಯದಿದ್ದ ಜನರು ಅಜ್ಞಾನರೂಪವಾಗಿ ಜಡವಾದ ಪ್ರಕೃತಿಯನ್ನೇ ಜಗತ್ಕಾರಣವೆಂದು ಪೇಳ್ವರೋ, ಆವನೋರ್ವನು ವೇದತ್ರಯ ರೂಪನಾದ, ಸೂರ್ಯನ ಮಂಡಲದಲ್ಲಿ ವರಿಸಲು ಯೋಗ್ಯನಾಗಿ ಸುವರ್ಣಮಯವಾದ ಗಡ್ಡ ಮೀಸೆಗಳುಳ್ಳವನಾಗಿ, ಕೇಶಾದಿನಖಾಗ್ರಪರ್ಯಂತವು ಹಿರಣ್ಮಯನಾಗಿ ವಿಕಸಿತವಾದ ಬೆಳ್ದಾವರೆಯಂತಿಹ ನಯನದ್ವಯವುಳ್ಳವನಾಗಿ, ಜಗತ್ಪತಿಯಾಗಿಹನೋ, ಆ ಸೂರ್ಯಮಂಡಲ ಮಧ್ಯವರ್ತಿಯಾಗಿ ಗುಹನೆಂದು ಪ್ರಸಿದ್ಧನಾದ ನಿನ್ನನ್ನು ಅನಿತ್ಯಶರಣರಾಗಿ, ಮರೆಯೊಕ್ಕೆವು. ಮತ್ತೆ ಬ್ರಹ್ಮಾದಿದೇವತೆಗಳಾನಂದಂಗಳು ಆವನೋರ್ವನ, ಆನಂದಲೇಶಂಗಳೆಂದು ಪೇಳಲ್ಪಟ್ಟವೋ, ಅತುಳವಾಗಿ ಪೂರ್ಣಾನಂದಾಬ್ಧಿಯಾದ ಪಾರ್ವತೀಕುಮಾರನಾದ ಆ ನಿನ್ನನ್ನು ಭಜಿಸುತ್ತೇವೆ. ಎಲೈ ಭಗವಂತನೆ! ಆವನೋರ್ವನ ಮಾಯೆಯಿಂದ ಮೂಢರಾದವರು ನಿನಗೆ ಅನ್ಯನಾದ ಇಂದ್ರನನ್ನು ಹರನನ್ನು ವಿಷ್ಣುವನ್ನು ಬ್ರಹ್ಮನನ್ನು ಅಸುರಾಂತಕನೆಂದು ಪೇಳ್ವರೋ, ಪರಮೇಶ್ವರನ ಕುಮಾರನಾದ ಆ ನಿನಗೆ ನಮಿಸುತ್ತೇವೆ.

ಚಿದಚಿತ್ತೆಂಬ ಈ ಯೆರಡಾಗಿ ತೋರ್ಪ ಸಮಸ್ತವು ಆವನೋರ್ವನ ಶರೀರವೋ, ಈ ಸಮಸ್ತ ಪ್ರಪಂಚಕ್ಕೆ ನಿಯಾಮಕನಾದ ಆ ನಿನ್ನನ್ನು ನಾವೆಲ್ಲರುಂ ಉಪಾಸನಂ ಗೈಯುತಿದ್ದೇವೆ. ಅವಸ್ಥಾತ್ರಯ ನಿರ್ಮುಕ್ತನಾಗಿ ಅವಸ್ಥಾತ್ರಯ ಸಾಕ್ಷಿಯಾದ ಸಮಸ್ತ ಜೀವಸಮೂಹಕ್ಕೆ ಪ್ರೇರಕನಾಗಿ ಮೋಕ್ಷಪ್ರದನಾದ ಆ ನಿನ್ನನ್ನು ನಾವು ಉಪಾಸನಂ ಗೆಯ್ಯುತ್ತೇವೆ. ಈ ಪೂರ್ವೋಕ್ತಪ್ರಕಾರದಿಂದ ಆವನೋರ್ವನನ್ನರಿತು ಜನವು ಶಾಂತಿಯಂನೈದುತಿದ್ದೀತೋ, ಐಶ್ವರ್ಯಪ್ರದನಾಗಿ ಶಕ್ತಿಯೆಂಬ ಆಯುಧಮಂ ಧರಿಸಿ ಸರ್ವಶಕ್ತಿ ಸಮೃದ್ಧನಾದ ಆ ನಿನ್ನನ್ನು ಮರೆ ಯೊಗುತ್ತಿದ್ದೇವೆ. ಮಂಗಳಪ್ರದನಾಗಿ ಮಂಗಳಾತ್ಮಕನಾದ ನಿನ್ನತ್ತಣಿಂ ಅನ್ಯರಾದ ಮಿಕ್ಕವರನ್ನೆಲ್ಲರಂ ಪರಿತ್ಯಜಿಸಿ, ಆವನೋರ್ವವನು ನಿನ್ನಂ ಧ್ಯಾನಂಗೆಯ್ಯುತಿರುವನೊ ಆ ವಿಪ್ರನು ಮೋಕ್ಷಮನ್ನೈದುವನು. ಪರಬ್ರಹ್ಮಮಾದ ಆ ನಿನ್ನ ಉಪಾಸನಂ ಗೈಯುತಿರ್ಥೇವೆ. ಮತ್ತೆ ಮಂಗಳಪ್ರದನಾದ ಆವನೋರ್ವನ ನಾಮದ ಮಹಿಮೆಯಂ ತಿಳಿದ ಮನುಷ್ಯನು, ಭುಜದಿಂದ ಆಕಾಶಮಂ ಚರ್ಮದಂತೆ ಸುತ್ತುವದೆಂದು ಅಸಾಧ್ಯವೋ, ಆ ಪ್ರಕಾರಮಾಗಿ ಅಸಾಧ್ಯಮಾದ ಮೋಕ್ಷಮಂ ಪಡೆವನು. ಅಂಥ ಮೋಕ್ಷಪ್ರದನಾದ ನಿನಗೆ ನಮಿಸುತ್ತಿದ್ದೇವೆ. ಎಲೈ ಜಗನ್ನಾಥನೆ! ಪರಾತ್ಪರನಾಗಿ ಸುಬ್ರಹ್ಮಣ್ಯನಾದ, ನಿನ್ನಂ ಕಂಡ ಮಾತ್ರದಲ್ಲಿಯೆ ಹೃದಯಗ್ರಂಥಿಯು ಭಿನ್ನವಹುದು. ಯೆಲ್ಲ ಸಂಶಯಂಗಳು ನಿವೃತ್ತವಹುವು. ಈ ಪಾಂಚಭೌತಿಕ ದೇಹದತ್ತಣಿಂ ಪೊರಮಟ್ಟು ಪರಂಜ್ಯೋತಿ ಸ್ವರೂಪನಾದ ನಿನ್ನನ್ನೈದಿ ಈ ಜೀವಾತ್ಮನು ಸ್ವಸ್ವರೂಪವನ್ನೈದುವನು. ಆ ಪ್ರಕಾರನಾದ ನಿನಗೆ ನಾವು ನಮಿಸುತ್ತೇವೆ. ನಿನ್ನ ಉಪಾಸನಂಗೆಯ್ವರು ನಿನ್ನ ಅನುಗ್ರಹದೃಷ್ಟಿಯಿಂದ ಕ್ರಮದಿಂ ಶತಾಧಿಕಮಾದ ದೇವಾನಂದಮಂ ಪಡೆದು ವೈದ್ಯುತಮೆಂಬ ಮಾರ್ಗದಿಂ ಮೋಕ್ಷಮಂ ಪಡೆವರು. ಎಲೈ ದೇವೇಶ್ವರನೆ! ನಿನ್ನ ಭಕ್ತರ್ಗೆ ಸಂಸಾರದಲ್ಲಿ ಪುನರಾವೃತ್ತಿಯಿಲ್ಲ. ಅದು ಕಾರಣದಿಂದಲೆ ನೀನೆಲ್ಲರ್ಗೆಯುಂ ಸಂಸಾರ ಸಮುದ್ರಮಂ ದಾಟಿಸುವಾತನು, ನಿನ್ನನ್ನುಳಿದು ಬೇರೊಬ್ಬನು ಪರಬ್ರಹ್ಮವೆಂದು ತಿಳಿವುದೇನು? ಪರಬ್ರಹ್ಮವಾದ ಪರಂಧಾಮನಾದ ಪರಂಜ್ಯೋತಿಸ್ವರೂಪನಾದ ಆ ಈಶ್ವರನೇ ನೀನು. ಉತ್ಕೃಷ್ಟಸ್ವರೂಪನಾಗಿ ಅತ್ಯಂತ ಶಾಂತಾಕಾರನಾದ ಪರಾತ್ಪರನಾದ ನಿನ್ನಂ ಉಪಾಸನಂ ಗೈಯುತಿರ್ಥೇವೆಂದೀಪ್ರಕಾರದಿಂದ, ವಿಶ್ವರೂಪಾನ್ವಿತನಾದ ಪ್ರಭುವಾದ ಕುಮಾರನನ್ನು ಸ್ತುತಿಸಿ, ಪ್ರಾರ್ಥನೆಗೈವರದೆಂತೆನೆ.

"ಎಲೈ ಕುಮಾರನೇ! ನಿನ್ನ ಅತ್ಯುಗ್ರಮಾದ ರೂಪವನ್ನು ನೋಡಲು ಅಸಮರ್ಥರಾಗಿ ಸೂರ್ಯನ ತೇಜಸ್ಸು ಕಂಡ ದಿವಸದಲ್ಲಿ ಕಣ್ಕಾಣದ ಪಕ್ಷಿವಿಶೇಷ

ಚಿತವಾದ ಸಿಂಹಾಸನದಲ್ಲಿ, ತ್ರಿಪುರಾರಿಯಾದ ದೇವನಾದ ಪರಮೇಶ್ವರನ ಕುಮಾರನಾದ ಷಣ್ಮುಖಸ್ವಾಮಿಯನ್ನು ಮುಹೂರ್ತಮಾಡಿಸಿ, ಜಗದ್ಗುರುವಾದ ಆ ಸ್ವಾಮಿಯನ್ನು ಬ್ರಹ್ಮ ವಿಷ್ಣು ಮೊದಲಾದ ದೇವತೆಗಳ್ಗೆ ಸೇನಾಪತಿಯ ಸ್ಥಾನದಲ್ಲಿ ವೈದಿಕಂಗಳಾದ ನಾನಾ ಪ್ರಕಾರಂಗಳಾದ ಮಂತ್ರಂಗಳಿಂದ ಪವಿತ್ರ ಮಾದ ಬ್ರಹ್ಮಾಂಡ ಮಧ್ಯವರ್ತಿಗಳಾದ ಗಂಗಾದಿ ಸಮಸ್ತ ತೀರ್ಥಂಗಳಿಂದಭಿ ಷೇಕಮಂ ಮಾಡಿದರು.

ಆ ಸಮಯದಲ್ಲಿ ದೇವ ದುಂದುಭಿಗಳು ಮೊಳಗುತಿರ್ದವು ಪುಷ್ಪವೃಷ್ಟಿ ಗಳು ಕರೆದವು. ಮತ್ತೆ ವಾದ್ಯವಿಶೇಷವಾದ "ನಿಸ್ಸಾಣ, ತಿಮಿಲ, ಢಕ್ಕ, ವಿರಣ, ಡಿಂಡಿಮ, ಶಂಖ, ಮೃದಂಗ" ಎಂಬಿವು ಮೊದಲಾದ ವಾದ್ಯವಿಶೇಷಂಗಳ್ ಕರ್ಣ ಶ್ರಾವ್ಯಮಾಗಿಯುಂ, ಸಮುದ್ರಘೋಷೆಗೆ ಸಮಾನಮಾಗಿಯುಂ ಮೊಳಗಿದವು. ಆಗ ಮತ್ತಂ ಮಧುರವಾದ್ಯಂಗಳಾದ ವೀಣಾವೇಣು ಸ್ವನಗಳಿಂದ ಯುಕ್ತರಾಗಿ, ಕಿನ್ನರ, ಗರುಡ, ಸಿದ್ಧ, ವಿದ್ಯಾಧರರುಂ ಮತ್ತೆ ಅಂಗನಾ ಸಹಿತರಾದ ಕಿಂಪುರು ಷರುಂ ಚಿತ್ರಸೇನ ಪ್ರಮುಖರಾದ "ಹಾಹಾ ಹೂಹೂ" ಎಂಬ ಗಂಧರ್ವರುಂ ಗಾನವಂ ಮಾಡುತ್ತಿರೆ, ಸೇನಾಧಿಪತ್ಯದಲ್ಲಿ ಅಭಿಷಿಕ್ತನಾದ ಜಗದ್ಬಂಧುವಾದ ಹರ ಕುಮಾರನಾದ ಷಣ್ಮುಖಂಗೆ, ವಸ್ತ್ರ, ಆಚಮನ, ಗಂಧ, ಯಜ್ಞೋಪವೀತ, ಧೂಪ, ದೀಪ, ನೈವೇದ್ಯ ಎಂಬಿವುಗಳು ಮೊದಲಾದ ಸರ್ವೋಪಚಾರಂಗಳಿಂ ದುಪಚರಿಸಿ ವಿಷ್ಣು ಮೊದಲಾದ ಸೇನೆಗಳು ನಾನಾ ವಿಧಂಗಳಾದ ಕಪ್ಪ ಕಾಣಿಕೆ ಗಳಂ ಕೈಗಳಿಂ ಹಿಡಿದುಕೊಂಡು, ಜಗತ್ಪತಿಯಾದ ಮಹಾಸೇನನಾದ ಜಗದ್ಗುರು ವಾದ ಷಣ್ಮುಖಸ್ವಾಮಿಯು, ನಮಗೆ ಸೇನಾಪತಿಯೆಂದು ನಮಸ್ಕಾರಮಂಮಾಡಿ ಆ ಕಾಣಿಕೆಗಳಂ ಸಮರ್ಪಿಸಿ ನಿಂತಿದ್ದರು.

ನಾರದ ಯಾಗದಲ್ಲಿ ಅಜೋತ್ಪತ್ತಿ ಕಥನಂ.

ಆಗ ಹರಸಂಭವನಾದ ಕುಮಾರಸ್ವಾಮಿಯು ಆ ದೇವತೆಗಳ್ಗೆ ಪ್ರಸಾದ ವನ್ನು ಕೊಟ್ಟು, ಶೀಘ್ರದಿಂದ ಸಮಸ್ತ ದೇವತೆಗಳನ್ನು ಕಳುಹಿಸಿ, ಸಮಾನ ಮಿಲ್ಲದ ಕಾಂತಿಯುಳ್ಳವನಾಗಿ ವಿಹರಿಸುತ್ತಿರೆ, ಆ ಸಮಯದಲ್ಲಿ ಮಹಾತ್ಮರಾದ ಋಷಿಗಳ್ಗೆ ಮುಖ್ಯನಾದ ಆ ಸ್ವಾಮಿಯ ದರ್ಶನವನ್ನು ಇಚ್ಛೈಸುತ್ತಂ ಇದ್ದ ನಾರದನೆಂಬ ದ್ವಿಜೋತ್ತಮನು ವಿಧಿಯಿಂದ ಯಾಗಮಂ ಮಾಡುತ್ತಿರಲಾಗಿ, ಆತನ ಸಾಂಗದಕ್ಷಿಣೆಯುಳ್ಳ ಯಾಗದಲ್ಲಿ ಸಮಸ್ತ ಋತ್ವಿಕ್ಕುಗಳು ಪಶು ಬಂಧ ಮಂ ಮಾಡುತ್ತಿರಲು, ಆಸಮಯದಲ್ಲಿ ಸರ್ವಾಂಗ ಮನೋಹರವಾದ ಅತ್ಯು ನ್ನತ ಶೃಂಗಮುಳ್ಳದ್ದಾದ, ವರ್ತುಲಾಕಾರ ರಕ್ತಲೋಚನವಾದ, ದೀರ್ಘಮಾದ ರೋಮಗಳುಳ್ಳದ್ದಾಗಿ ಪ್ರಕಾಶಮಾನಮಾದ ಆಶ್ರಮವನುಳ್ಳದ್ದಾಗಿ ವಿರಾಜ

ಮಾನವಾದ ಪೂರ್ವಕಾಯವನುಳ್ಳದ್ದಾದ, ಕಂಠಸ್ಥನಯುಗಭ್ರಾಂತಿ ನಿಸ್ಸಾರಿತ ಘನಾವಳಿಯಾಗಿ ದೀರ್ಘಜಂಘವಾದ ನಾಲ್ಕು ಪಾದಂಗಳುಳ್ಳದ್ದಾದ, ಖುರಾಗ್ರದಿಂದ ಬಡಿಯಲ್ಪಟ್ಟ ಭೂಮಿಯುಳ್ಳದ್ದಾಗಿ ಹೃಷ್ಟಪುಷ್ಟ ತನುವುಳ್ಳದ್ದಾದ, ಪುಚ್ಛದಿಂ ಮುಚ್ಚಲ್ಪಟ್ಟ ನಕ್ಷತ್ರಗಳುಳ್ಳದ್ದಾಗಿ ಲಂಬಿತ ಸ್ಥೂಲವೃಷಣವಾದ, ಮದಗಂಧದಿಂ ಕ್ರೂರವಾಗಿ ಪಟುವಾಗಿ ಪೊಪ್ಪುತಿರ್ದ ಮಣಿಗಣಂಗಳ ನೂಪುರ ಧ್ವನಿಯುಳ್ಳದ್ದಾಗಿ ಕ್ಷುದ್ರಘಂಟಾ ಲಸತ್ಕಂಠವಾದ ಮನೋಹರವಾದ ಮತ್ತೆ ಶೌರ್ಯದಲ್ಲಿಯುಂ ಜವದಲ್ಲಿಯುಂ ಗರುಡಾನಿಲ ವಿಕ್ರಮಾತೀತವಾದ, ಅತ್ಯಂತ ಗರ್ವಿಷ್ಠವಾದ ಆಜವು ಪುಟ್ಟಿ ಜಗತ್ತಿನಲ್ಲಿ ಸಂಚರಿಸುತಿತ್ತು.

ಆ ಅಜಮಂ ಕಂಡು ಸಮಸ್ತವಾದ ದಿಗ್ಗಜಂಗಳುಂ ಆ ಅಜಮದ ಗಂಧಾಸಿಲಾಹತವಾಗಿ ಓಡಿದವದೆಂತೆನೆ, ಆ ಸಮಯದಲ್ಲಿ ಮನೋಜವವಾದ ಈ ಅಜವು ಐರಾವತಮಂ ಕಂಡು, ಅಶಲವೇಗ ಸಮಾನವಾದ ಶಿರಸ್ಸಿನಿಂದ ಐರಾವತದ ಶಿರಸ್ಸನ್ನು ಹಾಯಲಾಗಿ, ಆ ಘಾಯದಿಂದ ಐರಾವತವು ಭ್ರಾಂತಲೋಚನವಾಗಿ, ಭ್ರಾಂತಮನಸ್ಸುಳ್ಳದ್ದಾಗಿ ಪಲಾಯನಮನೈದಿತು. ಆ ಮೇಲೆ ಪುಂಡರೀಕವೆಂಬ ದಿಗ್ಗಜವು ವನಮನೈದಿ ಭಯಾಕುಲವಾಗಿರುತಿರೆ, ವಾಮನವೆಂಬ ದಿಗ್ಗಜವು ಭಯದಿಂ ಗಡಗಡನೆ ನಡುಗಿ ದ್ವೀಪಾಂತರಮಂ ಪೊಕ್ಕು ಸಂಚರಿಸುತ್ತಿತ್ತು. ಮತ್ತೆ ಕುಮುದವೆಂಬ ದಿಗ್ಗಜವು ಕುತ್ಸಿತವಾದ ಸಂತೋಷ ವುಳ್ಳದ್ದಾಗಿ ಪೋಗುತ್ತಿರೆ, ಅಂಜನವೆಂಬ ದಿಗ್ಗಜವು ನೇತ್ರಮಾರ್ಗಮಂ ಪೊಕ್ಕು ಪೋಗುತ್ತಿರಲು, ಪುಷ್ಪದಂತ ವೆಂಬ ದಿಗ್ಗಜವು ತನ್ನ ದಂತವನು ಪುಷ್ಪವಾಗಿ ಯೆಣಿಸಿ ಭಯವ್ಯಾಕುಲ ವಾಗಿರುತಿರಲಾಗಿ, ಸಾರ್ವಭೌಮವೆಂಬ ದಿಗ್ಗಜವು ಅಂದುಮೊದಲಾಗಿ ಸಮಸ್ತ ಭೂಮಿಯನ್ನು ಸಂಚರಿಸುತ್ತಿರೆ, ಸುಪ್ರತೀಕವೆಂಬ ದಿಗ್ದಂತಿಯು ಈಗತನಗೆ ಮೃತ್ಯುಬಂದನಲಾ! ಎಂದು ವಿಲಾಪವನೈದಿತು. ಈಪ್ರಕಾರದಲ್ಲಿ ಬಂದು ಅಜದಿಂದ ಸಮಸ್ತವಾದ ದಿಗ್ಗಜಂಗಳಿಗುಂ ಶೋಕಮುಂಟಾದುದು.

ಆಮೇಲೆ ಈ ಅಜವು ರಸಾತಳವನ್ನೈದಿ ಬಲಿಚಕ್ರೇಶ್ವರನ ಗೃಹದಲ್ಲಿ ವಿಷಕಾಯಂಗಳಾದ ಸರ್ಪಂಗಳ ಬಲವನ್ನು ಲಯವನ್ನೈದಿಸಿ, ಅತಿ ವೇಗವುಳ್ಳದ್ದಾಗಿ ಇತರ ಭೋಗಿಲೋಕಂಗಳಂ ಜಯಿಸಿ, ಆ ಲೋಕಾ ಲೋಕಾ ಪರ್ವತವಾದಿಯಾದ ಅವನಿಯುಂ ಮನುಷ್ಯ ಮೃಗ ಪಕ್ಷಿಗಳನ್ನೂ ಮಹಾ ಪರಾಕ್ರಮದಿಂದ ತನ್ನ ವಶಮಂ ಮಾಡಿಕೊಂಡು, ಸಾಗರ ಮಧ್ಯವರ್ತಿಯಾದ ಜಲಚರಂಗಳೊಡನೆ ಯುದ್ಧಮಂ ಮಾಡಿ, ಆಕಾಶದಲ್ಲಿ ವಾಯುಪೋಪಾದಿಯಲ್ಲಿ ವೇಗದಿಂದ ಕ್ಷಣಾರ್ಧದಲ್ಲಿ ಮೇಘಪಙ್ಕ್ತಿಯನ್ನು ಕೆದರಿಸಿ ಅತಿಗರ್ವಿತವಾಗಿ, ಸೂರ್ಯನ ಕಾಂತಿಗಳನ್ನು ಚಂದ್ರನ ರಥಗಳನ್ನೂ ಓಡಿಸಿ, ಮಹಾಬಲವಾಗಿ ಸ್ವರ್ಗವಾಸಿಗಳಂ

ಬಾಧಿಸಿ, ಜನೋ ಲೋಕದಲ್ಲಿ ವಿಶ್ವೆದೇವತೆಗಳನ್ನೂ ತಪಸ್ವಿಗಳಾದ ಸಾಧ್ಯರನ್ನೂ ಬಾಧಿಸಿ, ಆ ಸತ್ಯಲೋಕದಲ್ಲಿ ಸನಕ ಪ್ರಮುಖರಾದ ಯೋಗಿಗಳನ್ನೂ ಬಾಧಿಸಿ, ಸರ್ವಕರ್ತನಾದ ಗಣಸಹಿತನಾದ ಸಾಕ್ಷಾಚ್ಚತುರ್ಮುಖನನ್ನೂ ದೈನ್ಯಮನೈದಿಸಿ, ಅತ್ಯಂತ ಬಲವುಳ್ಳದ್ದಾಗಿ ವೈಕುಂಠ ಲೋಕಮನ್ನೈದಿ, ವಿರಜಾನದಿಯಂದಾಂಟಿ ಅಲ್ಲಿಹ ವೈಷ್ಣವಗಣಂಗಳಂ ಬಾಧಿಸುತಿರ್ದುದು.

ಆಮೇಲೆ ಇಂದ್ರಸಹಿತರಾದ ದೇವತೆಗಳೆಲ್ಲರುಂ ಋತ್ವಿಕ್ಕು ಸಹಿತನಾದ ಯಜಮಾನನಾದ ನಾರದ ರೊಡನೆಸೇರಿ, ವಿಪರೀತ ಫಲಮಂ ಕಂಡು ಯಜ್ಞವಾಟಮಂ ಬಿಟ್ಟು, ಕಾಲಕೂಟ ವಿಷವ ಕಂಡವರೋ ಪಾದಿಯಲ್ಲಿ ಭೀತರಾಗಿ, ನೀಲಕಂಠನಾದ ಸದಾಶಿವನನ್ನು ಕಾಣಬೇಕೆಂ ಬಿಚ್ಛೆಯುಳ್ಳವರಾಗಿ, ಶಿವಪ್ರಿಯನಾದ ಶೈಲರಾಜನಾದ ಕೈಲಾಸ ಗಿರಿಯಂ ಹತ್ತಿ, ಅಲ್ಲಿ ದೇವಗೃಹ ದ್ವಾರದಲ್ಲಿ ವೀರಬಾಹು ಮೊದಲಾದ ಪ್ರಮುಖರೊಡನೆ ಕ್ರೀಡಾಪರವಶನಾದ ಅಗ್ನಿಜನ್ಯನಾದ ಗುಹಸ್ವಾಮಿಯಂ ಕಂಡು, ಸಮೀಪಕ್ಕೆ ಬಂದು ನಮಿಸಿ ಅವ್ಯಯನಾಗಿ ಸರ್ವಾರ್ತಿಹರನಾದ ಜಗನ್ನಾಥನಾದ ಅಖಿಲೇಶ್ವರನಾದ ಹರಕುಮಾರನಾದ ಆ ಸೇನಾನಿಗೆ ನಮಸ್ಕರಿಸಿ ಇಂತೆಂದು ಬಿನ್ನೈಸಿದರು.

ಅಜ ಪರಾಭವನಿಮಿತ್ತ ದೇವತೆಗಳು ಗುಹನನ್ನು ಪ್ರಾರ್ಥಿಸುವಿಕೆ.

ಎಲೈ ಮಹಾಸೇನನೆ! ಮಹಾದೇವ ರಾಗ ಸಂಭವನೆ ಅಸ್ಮತ್ಪ್ರಭುವೆ! ಈಗ ಪ್ರಸನ್ನನಾಗು, ನಮ್ಮ ವಿಜ್ಞಾಪನೆಯಂ ಕೇಳು ಏನೆಂದರೆ, ಪರಮೇಶ್ವರ ಪಾದ ಪೂಜಕನಾದ ಈ ನಾರದನೆಂಬ ಮುನಿಯು ಚಂದ್ರಾರ್ಧಭೂಷಣನಾದ ಉಮಾ ಸಮೇತನಾದ ಯಜ್ಞೇಶ್ವರನಾದ ಪರಮೇಶ್ವರನನ್ನು ಯಜ್ಞದಿಂ ಯಜಿಸುತ್ತಿರಲು, ಸರ್ವಕಾಲಜ್ಞಾನವ ನರಿವ ಮಹಾತ್ಮನಾದ ಈ ಮುನಿಯು ಯಜ್ಞದಲ್ಲಿ ಪಶುಬಂಧವ ಮಾಡುತ್ತಿರಲಾಗಿ, ಮಹಾತ್ಮನಾದ ವೊಂದು ಅಜವು ದೈವಯೋಗದಿಂದ ಪುಟ್ಟಿ, ಜಗತ್ತ್ರಯವನ್ನು ವ್ಯಾಕುಲವಾಗಿ ಮಾಡುತಿರುವುದು. ಕಾಲಕೂಟಕ್ಕಿಂತಲು ಅತಿ ಕ್ರೂರವಾದ ಈ ಛಾಗವನ್ನು ನಿಗ್ರಹಿಸಿ ರಕ್ಷಿಸದೆ ಹೋದೆಯಾದರೆ, ಸರ್ವಜಗತ್ತು ಭಗ್ನವಾಗುವದು. ನೀನು ವ್ಯತಿರಿಕ್ತವಾಗಿ ದೇವಾಸುರರೊಬ್ಬರು ಆ ಅಜವನ್ನು ಶೀಕ್ಷಿಸಲಾರರು ಹೀಗೆಂದು ನುಡಿಯುತ್ತ ದೇವತೆಗಳು ಶರಣವನ್ನೈದಿದರು.

ಈ ಪ್ರಕಾರದಿಂದ ಆ ಛಾಗವಧೆಯ ನಿಮಿತ್ತವಾಗಿ ಸಕಲ ದೇವತೆಗಳಿಂದಲು ಪ್ರಾರ್ಥಿತನಾದ ದೇವಪಾಲಕನಾದ ಈ ಗುಹಸ್ವಾಮಿಯು ಕರದಿಂದ ಕರವ ಹೊಯ್ದು, ವೀರಬಾಹುವಂ ನೋಡಿ, ಪುಸಿ ನಗೆಯಂ ನಕ್ಕು ಷಡ್ಗುಣೈಶ್ವರ್ಯ

ಸಂಪನ್ನವಾದ ಆ ಅಜಮಂ ಹಿಡಿದು ತರುವಲ್ಲಿ ತ್ವರಿತಮುಳ್ಳವನಾಗಿ, ಆ ವೀರಬಾಹುವಿಗೆ ಆಜ್ಞಾಪಿಸಿದನು. ಅನಂತರದಲ್ಲಿ ಶತ್ರುಸಂಹಾರಿಯಾದ ವೀರಬಾಹುವು ಕುಮಾರಸ್ವಾಮಿಯ ಆಜ್ಞೆಯಿಂದ ಶೀಘ್ರದಲ್ಲಿ ಆ ಮೇಷವನ್ನು ತರಬೇಕೆಂಬಿಚ್ಛೆಯುಳ್ಳವನಾಗಿ, ಭುವನತ್ರಯಮಂ ಚಿಂತಿಸಿ ಪಾತಾಳಾರಭ್ಯ ಬ್ರಹ್ಮಾಂಡಾವಧಿಯಾಗಿ ತ್ವರಿತದಿಂ ಸುತ್ತಿ ವಿಷ್ಣುಲೋಕಮಂ ಪ್ರೊಕ್ಕು, ವೈಕುಂಠದಲ್ಲಿ ಮಹತ್ತಾದ ಕೋಲಾಹಲದಿಂದ ಭಯವನ್ನೈದಿಸುತಿರುವ ಆ ಮೇಷಮಂ ಕಂಡು ಮಹಾಮಹಿಮೆಯುಳ್ಳವನಾಗಿ ಆ ಅಜದ ಕೊಂಬುಗಳಂ ಪಿಡಿದು, ತ್ವರಿತದಿಂದ ಪ್ರಸಿದ್ಧಮಾದ ಸಹಸ್ರಾರ್ಕ ಪ್ರಭೆಯುಳ್ಳದ್ದಾದ, ಮನೋವಾಯುವನ್ನು ಜಯಿಸಿದ ಮಹಾ ಪರಾಕ್ರಮಿಯಾದ ಈ ಮೇಷವನ್ನು ಸ್ವಾಮಿಯ ಸಮಿಾಪವನ್ನೈದಿಸಿದನು.

ಆ ಬಳಿಕ ಸಂತುಷ್ಟಮಾದ ಮನಸ್ಸುಳ್ಳವನಾಗಿ ಆ ಕುಮಾರಸ್ವಾಮಿಯು ಆ ಮೇಷಮಂ ನೋಡಿ, ಅತಿ ಬಲಶಾಲಿಯಾದ ಆ ಮೇಷಮನ್ನೇರಿ, ಪಾರ್ಷ್ಣಿಘಾತ ಕಶಾಪಾತಂಗಳಿಂದ ಆ ಅಜದ ಗರ್ವಮಂ ಪೋಗೊಳಿಸಿ ಅರಿಮರ್ದಕನಾಗಿ, ಅಶ್ವದೋಪಾದಿಯಲ್ಲಿ ತನ್ನ ವಶವರ್ತಿಯಂ ಮಾಡಿಕೊಂಡು, ಅತ್ಯಂತ ಪರಾಕ್ರಮವುಳ್ಳವನಾಗಿ ಜಗತ್ಸ್ವಾಮಿಯಾಗಿ, ಪಂಚಧಾರೆ ಗತಿಗಳಿಂದ ಈ ಮೇಷವಂ ಕುಣಿಯಿಸಿ, ಶೀಘ್ರದಿಂದ ವಾಯು ಮನೋಜವವುಳ್ಳ ಈ ಮೇಷವನ್ನು ಸುಳಿಗಾಳಿಯೋಪಾದಿಯಲ್ಲಿ ಸಮಸ್ತವಾದ ಭುವನಂಗಳನ್ನು ಸುತ್ತಿಸಿದನು.

ಅನಂತರದಲ್ಲಿ ಅಧಿಕ ಸಂಭ್ರಮಿಯಾದ ಶ್ರಾಂತವಾಗಿ, ಬೆಮರು ಜಲಂಗಳಿಂದ ಆವೃತವಾಗಿ ಛಿನ್ನಮುಖಮಾದ ನೊರೆಯುಳ್ಳದ್ದಾಗಿ ಹೀನಸ್ವರಮಾದ ನಡುಗಲು ಪಟ್ಟ ದೇಹವುಳ್ಳದ್ದಾದ, ಕಶಾಘಾತಂಗಳಿಂದ ಅತಿ ಭೀತವಾದ, ಲೋಕಂಗಳಿಗೆ ಅತಿಭಯಂಕರವಾದ ಈ ಮೇಷವು, ದಯಾವಂತನಾದ ಪ್ರಭುವಾದ ಕುಮಾರಸ್ವಾಮಿಯಿಂದ ರಕ್ಷಿಸಲ್ಪಟ್ಟು ತತ್ವಜ್ಞಾನವುಳ್ಳದಾಗಿ, ಉಮಾಸುತನಾದ ಆ ಕುಮಾರಸ್ವಾಮಿಯಂ ಸ್ತುತಿಸಿ, ಪ್ರಸನ್ನವಾದ ಮನಸ್ಸಿನಿಂದ ದೇವನಿಗೋಸುಗ ನಮಸ್ಕಾರಮಂ ಮಾಡಿ, ಆ ಸ್ವಾಮಿಗೆ ಅತ್ಯಂತ ಪ್ರೀತನಾದುದರಿಂದ ಆತಂಗೆ ವಾಹನಮಾಗಿರ್ದುದು. ಆಗ ಜಗತ್ಕರ್ತೃವಾದ ಕುಮಾರಸ್ವಾಮಿಯು ಆ ಛಾಗಕ್ಕೆ ಅನುಗ್ರಹಮಂ ಮಾಡಿ, ಅಂದು ಮೊದಲಾಗಿ ಅಗ್ನಿಯೋಪಾದಿಯಲ್ಲಿ ಮೇಷವಾಹನನಾಗಿ ಸಂಚರಿಸುತ್ತಿರ್ದನು. ಆ ನಾರದನೆಂಬ ಮುನಿಯಾದರೆ ನ್ಯೂನಮಾದ ಯಜ್ಞಮುಳ್ಳವನಾಗಿ ದೇವತೆಗಳೊಡನೆಯುಂ ಋಷಿಗಳೊಡನೆಯುಂ ದೇವಸೇನಾಪತಿಯಂ ಶಿರಸ್ಸಿನಿಂದ ನಮಸ್ಕರಿಸಿ, ವಿನಯವಂತ

ನಾಗಿ ಆ ಸ್ವಾಮಿಯ ಸಮೀಪದಲ್ಲಿ ನಿಂತಿರಲಾಗಿ, ಆ ಭಾಗವಾಹನನಾದ ಸ್ವಾಮಿಯು ದೇವಮುನಿ ಸಮೇತನಾದ ಮುನೀಶ್ವರನಾದ ದುಃಖಾರ್ತನಾದ ಆ ನಾರದನನ್ನು ನೋಡಿ ಪ್ರತಿಜ್ಞೆ ಮಾಡಲೋಸುಗ ಈ ವಾಕ್ಯಮಂ ನುಡಿದ ನೆಂದು ಸೂತಂ ಶೌನಕಾದಿಗಳ್ಗೆ ಪೇಳಿದನೆಂಬಲ್ಲಿಗೆ, ಶಂಕರಸಂಹಿತೆಯ ಶಿವ ರಹಸ್ಯ ಖಂಡದೊಳು ಸಂಭವಕಾಂಡದೋಳ್ ಮುವ್ವತ್ತೆರಡನೆಯ ಅಧ್ಯಾಯವು ಸಂಪೂರ್ಣಂ.

ಮುವ್ವತ್ತಮೂರನೆಯ ಅಧ್ಯಾಯವು.

ನಾರದನಿಗೆ ಕುಮಾರಸ್ವಾಮಿಯ ವರಪ್ರದಾನವು.

ಸೂತರ ವಚನವು:— ಎಲೈ ಮುನಿಗಳಿರಾ! ಸಾವಧಾನಮನದಿಂ ಕೇಳುವ ರಾಗಿ. ಅನಂತರದಲ್ಲಿ ದೇವೇಶಾಂಗ ಸಂಭವನಾದ ಸೇನಾಪತಿಯಾದ ಕುಮಾರ ಸ್ವಾಮಿಯು, ತನ್ನ ಪಾರ್ಶ್ವದಲ್ಲಿ ಪ್ರಣತನಾಗಿ ಅಂಜಲಿ ಹಸ್ತನಾದ ನಾರದ ಮುನಿಯಂ ಕುರಿತು, ಎಲೈ ಮಹರ್ಷಿಯೆ! ನಿನ್ನ ಯಜ್ಞದಿಂದ ನಮಗೆ ಮಹ ತ್ತಾದ ವಾಹನಮುಂಟಾಯಿತು. ಅದುಕಾರಣದಿಂದ ಮರಳಿ ಮಾಡುವ ಯಜ್ಞವು ವಿಘ್ನರಹಿತಮಾದದ್ದಾಗಿ, ಸಂಪೂರ್ಣವನ್ನೈದಲಿ. ನೀನು ದೇವತೆ ಗಳ ಸಹಿತನಾಗಿ ಯಾಗಶಾಲೆಯನ್ನೈದಿ, ಋತ್ವಿಜರೊಡನೆ ಶೀಘ್ರದಲ್ಲಿ ಆ ಯಾಗ ವನ್ನು ಸಾಂಗದಕ್ಷಿಣೆಗಳಿಂದ ಸಮಾಪ್ತಿಯನ್ನೈದಿಸಿ, ಅವಭೃಥಸ್ನಾನವಂಮಾಡಿ, ನನಗೆ ವಾಹನ ದಾನವಮಾಡಿದ್ದರಿಂದ ನಿನಗೆ ಶತಯಜ್ಞ ಫಲವುಂಟಾಗಲಿ. ಲೋಕದಲ್ಲಿ ಯಾವ ಮನುಜರು ನಮಗೋಸುಗ ಭಕ್ತಿಯಿಂದ ಯಾವುದನ್ನಾಗಲಿ ಸಮರ್ಪಿಸುವರೋ, ಆ ಮನುಷ್ಯರುಗಳಿಗೆ ಸರ್ವಯಜ್ಞ ತಪೋಧಿಕವಾದ ಫಲ ವುಂಟಾಗಲಿ. ಯೆಂದು ಈ ಪ್ರಕಾರದಿಂ ಕುಮಾರಸ್ವಾಮಿಯು ಆಜ್ಞಾಪಿಸಿ, ನಾರದಾದಿ ಸುರರ್ಷಿಗಳನ್ನು ಕಳುಹಿಸಿದನು.

ಚತುರ್ಮುಖನ ದರ್ಪದಳನವು.

ಆ ಮುನಿಗಳು ಯಥೋಕ್ತಪ್ರಕಾರದಿಂದ ಪ್ರಭುವಿನಿಂದ ಆಜ್ಞಪ್ತರಾಗಿ, ಆಗ ಯಾಗಮಂಟಪಮಂ ಮಾಡಿದರು. ಆ ನಾರದ ಮುನಿಯು ಸುಖಮನ್ನೈದಿ ಕೈಲಾಸಪರ್ವತದಲ್ಲಿಯೇ, ತನ್ನ ಪ್ರೀತಿಗನುಗುಣವಾಗಿ ವಿಹರಿಸಿಕೊಂಡಿರ್ದನು. ಆ ಸಮಯದಲ್ಲಿ ಬ್ರಹ್ಮದೇವರು, ಸಾಧ್ಯರು. ಮರುದ್ಗಣಂಗಳು ಇವರೊಡ ಗೂಡಿ ಸತ್ಯಲೋಕದ ದೆಸೆಯಿಂದ ಪಾರ್ವತೀವಲ್ಲಭನಂ ಆರಾಧಿಸಲ್ಬಂದವನಾಗಿ, ರಮ್ಯವಾದ ಶಂಕರನಿಗೆ ಪ್ರಿಯವಾದ ಮುಕ್ತಿಯನ್ನೈದಿದ್ದಲ್ಲದೆ ಪರಮಾನಂದ ಮುಕ್ತದೇವತೆಗಳಿಂ ಆಶ್ರಿತಮಾದ ಕೈಲಾಸ ಶಿಖರದಲ್ಲಿ ದೇವತೆಗಳೊಡನೆ ಸೇರಿ

ವಿನಯದಿಂ ಪ್ರವೇಶಿಸಿ, ನಾನಾ ವಿಧಂಗಳಾದ ಅತ್ಯುನ್ನತ ಪತಾಕಂಗಳುಳ್ಳ ವೀಧಿಗಳಂ ದಾಂಟಿ, ಮಹತ್ತಾದ ವಿಚಿತ್ರಮಾದ ಪರಮೇಶ್ವರನ ಆಲಯವನ್ನೈದಿ, ಆ ದ್ವಾರದಲ್ಲಿ ಜಗದ್ಗುರುವಾದ ಅಮೇಯನಾದ ಜರಾರಹಿತನಾದ ಶಿಶುವಾದ, ಸಖರುಗಳೊಡನೆ ವಿಹರಿಸುತ್ತಿರುವ ಕುಮಾರಸ್ವಾಮಿಯಂ ಕಂಡನು. ಆಗ ಕುಮಾರಸ್ವಾಮಿಯು ಆ ಬ್ರಹ್ಮನ ಮತಿಯನ್ನು ವಿನೋದಕ್ಕೋಸ್ಕರ ಅಪಹರಿಸಿದನು. ಅದುಃಕಾರಣದಿಂದ ಆ ಬ್ರಹ್ಮದೇವನು ಆ ಕುಮಾರಸ್ವಾಮಿಯನ್ನು ಸರ್ವಾತ್ಮಕನೆಂದು, ತನಗೆ ಪ್ರಭುವೆಂದು ತಿಳಿಯದೆ ಈತನನ್ನು ಶಿಶುಮಾತ್ರನೆಂದರಿತು, ಈತನಲ್ಲಿ ವಿನಯಾದಿಗಳನ್ನು ತೋರಿಸದೆ, ಅದ್ಭುತಮಾದ ಶಿವಾಲಯಮುಂ ಪ್ರವೇಶಿಸಿ ಆ ಶಿವಾಲಯದಲ್ಲಿ ಮಹಾದೇವನಂ, ಸಾಧ್ಯರ್ವೆರಸಿ ಚಿರಕಾಲಮಂ ಪೂಜಿಸಿ ಆ ಮಹಾದೇವನಿಂದಾಜ್ಞಾಪಿಸಲ್ಪಟ್ಟವನಾಗಿ, ಅಸಾಧ್ಯರುಗಳೊಡನೆ ಸೇರಿ ಸತ್ಯಲೋಕಕ್ಕೆ ಹೋಗುವ ವೇಳೆಯಲ್ಲಿಯುಂ, ಮನ್ಮಥನೋಪಾದಿಯಲ್ಲಿ ಚಂದವುಳ್ಳ ಆ ಪರಮೇಶ್ವರನ ಕುಮಾರನಾದ ಕುಮಾರಸ್ವಾಮಿಯು ಆ ಬಾಗಿಲಲ್ಲಿಯೇ ಸ್ನೇಹಿತರ್ವೆರಸಿ ಆಡುತ್ತಿರ್ದನು. ಆ ವೇಳೆಯಲ್ಲಿ ಅಬ್ಜಸಂಭವನಾದ ಬ್ರಹ್ಮನು ಈ ಕುಮಾರಸ್ವಾಮಿಗೆ ನಮಸ್ಕಾರಾದಿಗಳಂ ಮಾಡದೆ ಪೋಗುತ್ತಿರಲಾಗಿ, ಆಗ ಕುಮಾರಸ್ವಾಮಿಯು ಈ ಬ್ರಹ್ಮದೇವನಂ ಕರೆದು, ನೀನಾರು? ಕೋಪದಿಂದ ಕೇಳುತ್ತಿರೆ, ಬ್ರಹ್ಮದೇವನು ನಮಸ್ಕಾರವನ್ಮಾಡಿ ಅಂಜಲಿ ಹಸ್ತವನುಳ್ಳವನಾಗಿ, ವಿನಯದಿಂದ ಪೋಗುವ ವೇಳೆಯಲ್ಲಿ ಸ್ವೇಚ್ಛೆಯಿಂದ ನಿನ್ನ ಕೃಪೆಗೆ ಪಾತ್ರನಾಗಿ, ನಿಮ್ಮಂ ಕೂಡಿದವನಾಗಿ, ನಿಂತೆಂದನು. ಎಲೈ ದಯಾನಿಧಿಯೆ! ಸುಬ್ರಹ್ಮಣ್ಯನೆ! ಜಗದ್ಗುರುವೆ! ನಾನು ಬ್ರಹ್ಮನು. ಪಾರ್ವತೀಪರಮೇಶ್ವರರಂ ಪರಿಪೂಜಿಸುವ ನಿಮಿತ್ತವಾಗಿ, ಸಕಲ ದೇವತೆಗಳೊಡನೆ ಬಂದು ಸ್ವಾಮಿಯ ದರ್ಶನವನ್ಮಾಡಿ ಪೋಗುವ ವೇಳೆಯಲ್ಲಿ ಸ್ವೇಚ್ಛೆಯಿಂದ, ನಿಮ್ಮ ಕೃಪೆಗೆ ಪಾತ್ರನಾಗಿ, ನಿಮ್ಮಿಂದಲೆ ಕರೆಯಲ್ಪಟ್ಟು ಕೃತಾರ್ಥನಾದೆನು. ಸ್ವರ್ಗಗಮನವನ್ಮಾಡಲು ಅಪ್ಪಣೆಯಂ ಪಾಲಿಸಬೇಕೆಂದು ಬೇಡಿದನು. ಅನಂತರದಲ್ಲಿ ಕುಮಾರಸ್ವಾಮಿಯು ಪ್ರಸಾದೋನ್ಮುಖನಾದ ಆ ಚತುರ್ಮುಖನಂ ನೋಡಿ, ಸ್ನೇಹಿತರೊಡನೆ ಸೇರಿ ನಕ್ಕು ವಿನೋದಕ್ಕೋಸ್ಕರ ಒಂದು ವಾಕ್ಯವಂ ನುಡಿದನು. ಏನೆಂದರೆ, ಎಲೈ ಬ್ರಹ್ಮದೇವನೆ! ನಿನ್ನ ಆಕೃತಿಯೆಂಥಾದ್ದು? ನಿನಗೆ ಅವಿದ್ಯೆಗಳಲ್ಲಿ ಪಟುತ್ವವುಂಟೊ? ಈ ಬಗೆಯನ್ನು ನಾನು ಕೇಳಲಿಚ್ಛೈಸಿದವನಾಗಿ, ನಿನ್ನನ್ನು ಕೇಳಿದೆನು, ಎಲೈ ಬ್ರಹ್ಮನೆ! ನೀನೀಗ ಕೋಪವಂ ಮಾಡದೆ ನಾನು ಕೇಳಿದುದನ್ನು ಚನ್ನಾಗಿ ಹೇಳು. ಈ ಪ್ರಕಾರವಾದ ಮೇಘಗಂಭೀರವಾಗಿ ಅತಿ ಮನೋಹರವಾದ ಕುಮಾರಸ್ವಾಮಿಯ

ವಾಕ್ಯವಂ ಕೇಳಿ, ಆ ಚತುರಾನನನು ಭೀತನಾಗಿ, ಸಂತುಷ್ಟಮನಸ್ಸುಳ್ಳವನಾಗಿ ಇಂತೆಂದನು. ಎಲೈ ಪ್ರಭುವೆ! ದೇವಾಸುರ ಮನುಷ್ಯರುಗಳಾದ ಜಗತ್ತುಗಳನ್ನು ಸೃಷ್ಟಿಸುವನು ನಾನೆ ಸರಿ. ಈ ಲೋಕದಲ್ಲಿ ಚರಾಚರ ಕೃತಿಗೆ ನಾನೆ ಸಮರ್ಥನು. ನನಗೆ ಸಮಾನನಾದವನಾರೂ ಇಲ್ಲ. ಈ ದಿಗಂತದ ಕೃತಿಯು, ಎಲೈ ಪ್ರಭುವೆ! ಅಷ್ಟಾದಶ ವಿದ್ಯೆಗಳಲ್ಲಿಯುಂ ನಾನೆ ಸಮರ್ಥನು. ಸಕಲವಾದ ಧಾತ್ವರ್ಥಂಗಳನ್ನು ಅದರ ಸ್ವರೂಪವನ್ನೂ ನಾನೆ ಬಲ್ಲೆನು. ಸಕಲ ವಿದ್ಯೆಗಳಿಗುಂ ನಾನೆ ಆಶ್ರಯನು. ಹೀಗೆಂದು ಬ್ರಹ್ಮದೇವನು ನುಡಿಯುತ್ತಿರಲಾಗಿ, ಮರಳಿಯುಂ ಕುಮಾರಸ್ವಾಮಿಯು ಆ ಬ್ರಹ್ಮನ ವಚನವನ್ನು ಆದರದಿಂದುಪಲಾಲಿಸಿ, ಎಲೈ ಬ್ರಹ್ಮನೆ! ನೀನೆ ಸಮರ್ಥನು, ನೀನೆ ಕುಶಲವಂತನು, ಮಹಾತ್ಮರೊಳಗೆ ದೊಡ್ಡವನು, ಅದ್ದರಿಂದ ಈಗ ನೀನು ಆ ವಿದ್ಯೆಗಳಲ್ಲಿ ಆದಿವಿದ್ಯೆಗಳು ಯೆಷ್ಟು ವಿಧವು? ಅದನ್ನು ಪೇಳು, ಶಿಶುಗಳಿಗೆ ವೃದ್ಧರನ್ನು ಮಾತಾಡಿಸುವುದಲ್ಲಿ ಬಹು ಸಂತೋಷವಹುದು. ಅದರಿಂ ಶೀಘ್ರದಲ್ಲಿ ಹೇಳು, ಎಲೈ ವಿಧಿಯೆ! ನಾನು ಸಕಲವನ್ನು ಹೇಳಿಹೆನು. ಆದರೂ ಸಖರುಗಳೊಡನೆ ಸೇರಿದ ನನ್ನ ವಾಕ್ಯವಂ ಕೇಳು ನಿನ್ನ ಆಕಾರವೆ ಸರ್ವರಿಗು ಮಹಿಮೆಯನ್ನು ಪೇಳುತ್ತಿರುವದು. ಹೀಗೆಂದು ನುಡಿದ ಬಳಿಕ ಆ ಬ್ರಹ್ಮದೇವನು ಈ ವಾಕ್ಯಮಂ ಕೇಳ್ದು ಋಕ್ಸ್ವರೂಪವಾದ ಆದಿಯಾದ ಶ್ರುತಿಯನ್ನು ಪಠಿಸುತ್ತ, ಆ ಶ್ರುತಿಯ ಆದಿಯಲ್ಲಿ ಸ್ವರವಂ ಬಿಂದುನಾದಂಗಳಿಂ ತ್ರಯೋದಶಾತ್ಮಕವಾಗಿ ಉಚ್ಚರಿಸುತಿರೆ, ಕುಮಾರಸ್ವಾಮಿಯು ಅಷ್ಟು ಮಾತ್ರದಿಂದಲೆ ಶಿರಃಕಂಪನವಮಾಡಿ, ಹಸ್ತದಿಂದ ಮರಳಿಯೂ ನಿಲ್ಲು ನಿಲ್ಲೆಂದು ಸಂಜ್ಞೆಯಂಗೈದು, ಎಲೈ ಬ್ರಹ್ಮನೆ! ಈ ಆದಿವಿದ್ಯೆಯ ಅರ್ಥವು ನಮ್ಮ ಮನಸ್ಸಿಗೆ ಹೇಗೆ ಸರಿಬರುವುದೊ, ಆ ಪ್ರಕಾರಕ್ಕೆ ನಿನ್ನಿಂದ ಪ್ರಣವಾರ್ಥವು ನಿರ್ಣಯಿಸಲ್ಪಡಲೆಂದು ನುಡಿದನು.

ಅನಂತರದಲ್ಲಿ ಬ್ರಹ್ಮನು ಆ ಆದಿವಿದ್ಯೆಗೆ ತಾನೋರ್ವನೆ ಅರ್ಥವೆಂದು ಪೇಳಲು, ಕುಮಾರಸ್ವಾಮಿಯು ವೀರಬಾಹುವಿನಿಂದ ದಶದಿಕ್ಕುಗಳು ಕೇಳುವ ಮರ್ಯಾದೆಯಲ್ಲಿ ಚೋದನವಂ ಮಾಡುತ್ತ, ಆ ಬ್ರಹ್ಮದೇವನನ್ನು ಮುಷ್ಟಿಘಾತಂಗಳಿಂದ ತಾಡನವಮ್ಮಾಡಿಸಿ, ಕಾರಾಗೃಹವನ್ನೈದಿಸಿ, ತಾನೇ ಚರಾಚರಾತ್ಮಕವಾದ ಪ್ರಪಂಚವನ್ನು ಸೃಷ್ಟಿಸುತಿರ್ದನು. ಆ ಮೇಲೆ ಸಾಧ್ಯರುಂ ಮುನಿಗಳುಂ ಯೋಗಿಗಳುಂ, ಚಂದ್ರಶೇಖರನಾದ ಶಂಕರನಾದ ದೇವೇಶನಾದ ಮಹಾದೇವನಂ ಕುರಿತು ಬಹು ಕಾಲ ತಪಸ್ಸು ಮಾಡಿ, ಆ ಸ್ವಾಮಿಯಾದ ಪರಮೇಶ್ವರನಂ ಪ್ರಸನ್ನನಮ್ಮಾಡಿಕೊಂಡು, ಎಲೈ ಸ್ವಾಮಿಯೆ! ಸರ್ವಾರ್ತಿಹರನೆ! ಭಕ್ತಪ್ರಿಯನೆ! ಸರ್ವಲೋಕ ಶರಣ್ಯನೆ! ನಮ್ಮಂ ರಕ್ಷಿಸೆಂದು ಈ ಪ್ರಕಾರ

ನಾಗಿ ಬಹು ಪ್ರಾರ್ಥನೆಯನ್ನಾಡಿ ಆ ಬ್ರಹ್ಮನ ಸೆರೆಯಂ ಬಿಡಿಸಬೇಕೆಂದು ಬಿನ್ನಹವನ್ನಾಡಲಾಗಿ, ಆ ದೇವದೇವನಾದ ಪರಮೇಶ್ವರನು ತನ್ನ ಮನಸ್ಸಿನಿಂದ ಆ ಸಕಲ ವೃತ್ತಾಂತಮಂ ತಿಳಿದು, ಆ ಸುಬ್ರಹ್ಮಣ್ಯನ ಸಮೀಪಕ್ಕೆ ನಂದೀಶ್ವರನಂ ಕಳುಹಿಸಬೇಕೆಂದು ಯೋಚಿಸಿ, ಎಲೈ ನಂದೀಶ್ವರನೆ! ನೀನೀಗ ನಮ್ಮ ಪುತ್ರನ ಸಮೀಪಕ್ಕೆ ಸಾರಿ ಆ ಕುಮಾರನಂ ಸಂತೋಷಗೊಳಿಸಿ, ನನ್ನಾಜ್ಞೆಯಿಂದ ಸೃಷ್ಟಿವಿಘ್ನೋಪ ಶಾಂತಿಗೋಸ್ಕರ ಬ್ರಹ್ಮದೇವನ ಸೆರೆಯಂ ವಿಮೋಚನವನ್ನಾಡಿಸೆಂದು ನಿರೂಪಿಸಿದನು.

ನಂದೀಶ್ವರ ಕುಮಾರ ಸಮಾಗಮ.

ಆಮೇಲೆ ಶಿಲಾದ ಕುಮಾರನಾದ ನಂದೀಶ್ವರನು ಈ ಪ್ರಕಾರದಿಂ ಆ ಸ್ವಾಮಿಯಿಂದ ಆಜ್ಞಾಪಿಸಲ್ಪಟ್ಟವನಾಗಿ, ಆ ಮೇರಿಗೆ ತ್ವರಿತದಿಂದ ಸ್ಕಂದಗಿರಿಯನೈದಿ, ಆ ಪರ್ವತದಲ್ಲಿ ಕುಮಾರಸ್ವಾಮಿಯಂ ಚನ್ನಾಗಿ ಆರಾಧಿಸಿ, ನಾನಾವಿಧ ಸ್ತೋತ್ರಂಗಳಿಂದ ಸಂತೋಷವನ್ನೈದಿಸಿ, ನಮಸ್ಕಾರವಂಮಾಡಿ, ಅಗ್ರದಲ್ಲಿ ಅಂಜಲಿ ಬಂಧವುಂಗೈದು, ಎಲೈ ಸ್ವಾಮಿಯೆ, ನಿನಗೆ ತಂದೆಯಾದ ಪರಮೇಶ್ವರನ ವಾಕ್ಯದಿಂದ ಬ್ರಹ್ಮನು ಕಾರಾಗೃಹದಿಂದ ಮುಕ್ತನಾಗಿ ಸೃಷ್ಟಿಯಂ ಮಾಡುತಲಿರಲೆಂದು ಬಿನ್ನಹಮಂ ಮಾಡಿ ವಿನಯದಿಂದಿರುತ್ತಿರೆ ಆಗ ಕುಮಾರ ಸ್ವಾಮಿಯು ಬಹು ಕೋಪವುಳ್ಳವನಾಗಿ ಆ ನಂದಿಕೇಶ್ವರನ ಕೂಡೆ, ಬಹಳವಾದ ಕಠಿಣೋಕ್ತಿಗಳನ್ನಾಡಿ, ಎಲೆ! ಎಲೆ! ನೀನು ಆವ ಮಾರ್ಗದಿಂ ಬಂದೆಯೋ ಅದೇ ಮಾರ್ಗವಿಡಿದು ಪೋಗು, ಹಾಗಲ್ಲದಿರ್ದೊಡೆ ನೀನು ಆ ಬ್ರಹ್ಮನಸೇರಿ ಕಾರಾಗೃಹದಲ್ಲಿರೆಂದು ಪೇಳಲಾಗಿ, ಆ ನಂದೀಶ್ವರನು ಅತ್ಯುಗ್ರವಾದ ಈ ವಾಕ್ಯಮಂ ಕೇಳಿ, ಬಹು ಕಂಪನವುಳ್ಳವನಾಗಿ, ಪುರಾರಿಯ ಸಮೀಪವನ್ನೈದಿ ಈ ವೃತ್ತಾಂತಮಂ ಪೇಳುತಿರೆ, ಆ ಪರಮೇಶ್ವರನು ವಿಸ್ಮಯಮಂ ಪಟ್ಟು ಶಿರಮಂ ತೂಗಿಸುತ್ತ ಮುಗುಳುನಗೆಯಿಂದಿದ್ದನೆಂದು ಸೂತಂ ಶೌನಕಾದಿಗಳ್ಗೆ ನಿರೂಪಿಸಿದ ನೆಂಬಲ್ಲಿಗೆ, ಕರ್ಣಾಟಕ ಭಾಷಾತ್ಮಕವಾದ ಶಂಕರಸಂಹಿತೆಯ ಶಿವರಹಸ್ಯಖಂಡದೊಳು ಸಂಭವಕಾಂಡದಲ್ಲಿ ಮುವ್ವತ್ಮೂರನೆಯ ಅಧ್ಯಾಯವು ಸಂಪೂರ್ಣಂ.

ಮುವ್ವತ್ತನಾಲ್ಕನೆಯ ಅಧ್ಯಾಯವು.

ಪರಶಿವನು ಕುಮಾರನನ್ನು ಸಮಾಧಾನಪಡಿಸುವಿಕೆ.

ಅನಂತರದಲ್ಲಿ ಸೂತಪೌರಾಣಿಕನುಂ ಶೌನಕಾದಿ ಋಷಿಗಳಂ ಕುರಿತು, ಎಲೈ ಮುನಿಗಳಿರಾ! ಜಗದೀಶ್ವರನಾದ ಆ ಪರಮೇಶ್ವರನು ಕುಮಾರಸ್ವಾಮಿಯುಂ ನೋಡಲಿಚ್ಛೆಯುಳ್ಳವನಾಗಿ, ಅಂತಃಪುರದಲ್ಲಿ ಪಾರ್ವತೀದೇವಿಗೂ ಹೇಳದೆ

ತಾನೆ ಸ್ಕಂದಗಿರಿಗೆ ಬಂದು; ಆಸ್ಕಂದಪರ್ವತದಲ್ಲಿ ಸ್ನೇಹಿತ ಸಮೂಹ ಮಧ್ಯ ಗತನಾಗಿ ಕ್ರೀಡಾಪರವಶನಾದ ಕುಮಾರಸ್ವಾಮಿಯಂ ಮೂರು ಕಣ್ಣುಗಳಿಂದ ಲುಂ ವೀಕ್ಷಿಸಿ, ತೃಪ್ತಿಯನ್ನೈದದೆ ತ್ವರಿತದಿಂದ ಸಮೀಪಕ್ಕೆ ಬಂದು, ಭುಜಂಗ ಳಿಂದ ಆ ಕುಮಾರನಂ ಆ ಲಿಂಗನಮಂ ಮಾಡಿಕೊಂಡು; ಅನ್ಯದಲ್ಲಿ ಮನಸ್ಸ ನಿಡದೆ, ಸಂತೋಷ ಯುಕ್ತನಾದ ವಿನಯ ಶೀಲವುಳ್ಳ ಭಕ್ತಿಯುಕ್ತನಾದ ಆ ಕುಮಾರನನ್ನು ಕರಗಳಿಂದೆತ್ತಿ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅಪರಿ ಮಿತಾನಂದಯುಕ್ತನಾಗಿ, ಆ ಕುಮಾರನ ಅಂಗಸ್ಪರ್ಶದಿಂದ ಆನಂದ ಸಮುದ್ರ ದಲ್ಲಿ ಮುಳುಗಿ, ಅತಿ ಮನೋಹರವಾದ ಆ ಕುಮಾರಸ್ವಾಮಿಯ ದೇಹಮನ್ನು ಪದ್ಮ ಕೋಮಳ ಪಾಣಿಯಿಂದ ಅಡಿಗಡಿಗೆ ಸವರಿ, ಆ ಶಿಶುವಿನ ಮುಖಮನ್ನು ಮರಳಿಯು ಆಘ್ರಾಣವಂ ಮಾಡಿ, ಮಂದಸ್ಮಿತ ಯುಕ್ತವಾದ ಆ ಬಾಲಕನ ಮುಖವಂ ನೋಡುತ್ತ ಸಾಂತ್ವ ಪೂರ್ವಕಮಾದ ಈ ವಾಕ್ಯವಂ ಪೇಳ್ದನು.

ಎಲೈ ಕುಮಾರನೆ! ನನ್ನಾಜ್ಞೆಯಿಂದ ಈ ಬ್ರಹ್ಮನ ಸೆರೆಯನ್ನು ಬಿಡಿಸು, ಈ ಬ್ರಹ್ಮನು ನಿರ್ವಿಘ್ನಮಾಗಿ ಸೃಷ್ಟಿಯಂ ಮಾಡಲಿ; ಎಂದು ಪೇಳಲಾಗಿ ಆಗ ಕುಮಾರನು ಶಂಭು ಮುಖೋದ್ಗತಮಾದ ವಾಕ್ಯಮಂ ಕೇಳ್ದು ಆದರಣೆಯಂ ಮಾಡದೆ, ಈ ಬ್ರಹ್ಮದೇವರ ಸೆರೆಯಂ ಬಿಡದೆ ವಾತ್ಸಲ್ಯ ಕೋಪಗಳ ಮಧ್ಯದಲ್ಲಿ ನಿಂತು, ಆ ವಾತ್ಸಲ್ಯಕ್ಕಿಂತಲುಂ ಕೋಪ ಹೆಚ್ಚಿ ಆ ಕೋಪದಿಂದ ಆ ಪರಮೇಶ್ವರ ನನ್ನು ಧಿಕ್ಕರಿಸಿ ಸ್ವವಶಮಂ ಮಾಡಿ ಕೊಂಡಿರಲಾಗಿ, ಆಗ ಪರಮೇಶ್ವರನು ಆ ಪುತ್ರನಂ ನಿರೀಕ್ಷಿಸಿ ಹುಸಿನಗೆಯುಕ್ತನಾಗಿ, ಎಲೈ ಕುಮಾರನೆ! ನೀನೇನನ್ನೂ ಅರಿಯೆಯಾ? ಮೊದಲು ಬ್ರಹ್ಮದೇವನ ಸೆರೆಯ ಬಿಡಿಸೆಂದು ನನ್ನಾಜ್ಞಾ ಪರಿ ಪಾಲಕನಾದ ನಂದೀಶ್ವರನನ್ನು ತಿರಸ್ಕರಿಸ ಬಾರದು, ಈಗಲಾದರೂ ಜಗತ್ಸೃಷ್ಟಿ ಯಂ ಮಾಡುವ ಚತುರ್ಮುಖನನ್ನು ಬಿಟ್ಟು ಪಾಲಿಸಿಗೊಂಡು ಬಾ, ಎಂದಾಜ್ಞಾ ಪಿಸಲಾಗಿ, ಆಗ ಕುಮಾರಸ್ವಾಮಿಯು ಮುಖಮಂ ನಿರೀಕ್ಷಿಸಿ ವಿನಯಮುಳ್ಳವ ನಾಗಿ ಶ್ರೇಷ್ಠಗಳಾದ ಗಣಾಧ್ಯಕ್ಷರುಗಳಿಂದ ಚತುರ್ಮುಖನಂ ಕರೆಯಿಸಿ ಸತ್ಯ ಲೋಕಕ್ಕೆ ಕಳುಹಿಸಿದನು.

ಕುಮಾರ ಪರಶಿವರ ಸಲ್ಲಾಪವು.

ಅನಂತರದಲ್ಲಿ ಪ್ರೀತನಾಗಿ ವಾತ್ಸಲ್ಯವುಳ್ಳ ಆ ಪರಮೇಶ್ವರನು, ತೊಡೆಯ ಮೇಲೆ ಕುಳಿತಿರುವ ಕುಮಾರನ ಮುಖಮಂ ನೋಡುತ್ತ, ಎಲೈ ಕುಮಾರನೆ! ವಿಧಿಯಲ್ಲಿ ಕೋಪಿಸುವುದಕ್ಕೆ ಕಾರಣವೇನು? ಎಂದು ನಿರೂಪಿಸಲಾಗಿ ಆ ಕುಮಾರ ಸ್ವಾಮಿಯು ಪ್ರೀತಿಗೂಡಿದ ಮನಸ್ಸಿನಿಂದ ವಿನಯಾನ್ವಿತನಾಗಿ ತಮ್ಮ ಪಿತಂಗೆ ನಮಸ್ಕಾರಮಂ ಮಾಡಿ, ಅಂಜಲಿ ಹಸ್ತನಾಗಿ ಸುಭವಾದ ವಾಕ್ಯಮಂ ನುಡಿವ

ನದೆಂತೆನೆ, ಎಲೈ ತಂದೆಯೆ! ನಾನು ಸ್ನೇಹಿತರೊಡನೆ ಪ್ರೀತಿಗನುಗುಣವಾಗಿ ಇಲ್ಲಿ ವಿಹರಿಸುತ್ತಿರೆ, ಆ ಬ್ರಹ್ಮನೆನಗೆ ನಮಸ್ಕಾರಂಗಳಂ ಮಾಡದೆ, ಸಂಚರಿಸುತಿರ ಲಾಗಿ, ನಾನು ಆತನಂ ಕರೆದು, ಎಲೈ ಪುರುಷನೆ! ನೀನಾರು? ನಿನ್ನ ಕೃತ್ಯ ವಾವುದು? ನೀನಿರುವ ಸ್ಥಾನವಾವುದು? ನಿನಗೆ ಆವ ವಿದ್ಯೆಯು ಬರುವುದು? ಇವೆಲ್ಲವನ್ನು ಹೇಳಬೇಕೆಂದಾಕ್ಷೇಪಮಂ ಮಾಡಲು, ಆ ಚತುರ್ಮುಖನು ತನ್ನ ನಾಮವನ್ನೂ ಕುಶಲವಾಗಿ ತಾನು ಮಾಡುವ ಕೃತ್ಯವನ್ನೂ ತನಗೆ ಅಷ್ಟಾದಶ ವಿದ್ಯೆಗಳಲ್ಲಿ ತಿಳುವಳಿಕೆಯನ್ನೂ ಹೇಳಲಾಗಿ, ನಾನು ಎಲೈ ಬ್ರಹ್ಮನೆ! ವೇದ ಗಳಿಗೆ ಆದಿಯಾದ ಸ್ವರವಾವುದು? ಆ ಸ್ವರಕ್ಕೆ ಅರ್ಥವೇನು? ಎಂದು ಮರಳಿ ಕೇಳಿದೆನು. ಆಗ ವಿಧಿಯು ಯತ್ಕಿಂಚಿದನ್ವಾರ್ಥವನ್ನು ಪೇಳಲಾಗಿ, ಮಹಾತ್ಮ್ಯ ವುಳ್ಳ ಪ್ರಣವಕ್ಕೆ ಅನ್ವಾರ್ಥಮಂ ಪೇಳಿದುದರಿಂದ ನಾನು ಆ ಬ್ರಹ್ಮನನ್ನ ಕಾರಾ ಗೃಹಮನ್ನೈದಿಸಿದೆನೆಂದು ನುಡಿದನು.

ಪರಶಿವನು ಕುಮಾರನ ಪಾಂಡಿತ್ಯವನ್ನು ಪರಿಕಿಸುವಿಕೆ.

ಆ ಮೇಲೆ ಪರಮೇಶ್ವರನು ಪ್ರೀತಿಮನಸ್ಕನಾಗಿ ಗಲ್ಲಂ ಪಿಡಿದು ಆ ಕುಮಾ ರನನ್ನು ಅಘ್ರಾಣಮಂ ಮಾಡಿ, ದೇವತೆಗಳ ಮುಂದೆ ಆತ್ಮ ಸಂಭವನಾದ ಆ ಕುಮಾರಸ್ವಾಮಿಯನ್ನು ಮಂತ್ರಾರ್ಥವ ಕೇಳಲಾಗಿ, ಆ ಕುಮಾರಸ್ವಾಮಿಯು ಜಗದ್ಗುರುವಾದ ಸ್ವಾಮಿಗೆ ಮರಳಿ ನಮಸ್ಕಾರಮಂ ಮಾಡಿ ಒಂದು ವಾಕ್ಯಮಂ ನುಡಿದನು. ಏನೆಂದಡೆ, ಎಲೈ ಜಗದ್ಗುರುವೆ! ಈಶ್ವರನೆ! ಬುದ್ಧಿಮಂತನಾದ ಪುರುಷನು ಗುರುವನ್ನು ಪ್ರಕಟವಮಾಡಬೇಕು, ಮಂತ್ರವನ್ನು ಯತ್ನದಿಂದ ಗೋಪ್ಯವ ಮಾಡಬೇಕು, ಆವ ಪುರುಷನು ಪ್ರಕಾಶಮಾಡುವದನ್ನು ಗೋಪ್ಯವ ಮಾಡುವನೋ ಮತ್ತೆ ಆವ ಪುರುಷನು ಗೋಪ್ಯವನ್ನು ಪ್ರಕಾಶವಂ ಮಾಡುತ್ತಿರು ವನೋ, ಅವರಿಗೆ ರೌರವನರಕವುಂಟೆಂದು ಲೋಕದಲ್ಲಿ ಸುರಾಸುರರುಗಳಿಂದ ಅಲಂಘ್ಯವಾದ ನಿಮ್ಮ ಆಜ್ಞೆಯುಂಟಾದ ಕಾರಣದಿಂದ ಎಲೆ ತಂದೆಯೇ ದೇವತೆಗಳ ಮುಂದೆ ಪ್ರಣವದ ರಹಸ್ಯಾರ್ಥವನೆಂತು ಪೇಳಲಿ ಹೀಗೆಂದು ನುಡಿ ದನು. ಅನಂತರದಲ್ಲಿ ಪರಮೇಶ್ವರನು, ಆ ಕುಮಾರನಂ ಅಡಿಗಡಿಗೆ ಮೂರ್ಧ್ನಿ ಅಘ್ರಾಣಮಂ ಮಾಡಿ, ತೊಡೆಯಮೇಲಿರಿಸಿಕೊಂಡು ಆಲಿಂಗನವಂ ಮಾಡಿ ಎಲೈ ಪುತ್ರನೇ, ನಮ್ಮ ಕರ್ಣದಲ್ಲಿ ಮಂತ್ರಾರ್ಥಮಂ ಹೇಳೆಂದು ಪರಮೇಶ್ವರಂ ನಿರೂಪಿಸಲಾಗಿ, ಆಮೇಲೆ ಕುಮಾರಸ್ವಾಮಿಯು ಮನಸ್ಸಿನಿಂದ ತಂದೆಯಾದ ಸ್ವಾಮಿಗೆ ನಮಸ್ಕಾರಮಂ ಮಾಡಿ ಅತ್ಯಂತ ಸಂತೋಷದಿಂದ ರಹಸ್ಯದಲ್ಲಿ ಆ ಪ್ರಣವಾರ್ಥವನ್ನು ಪಿತೃವಾದ ಪರಮೇಶ್ವರನಿಂದ ತಾನು ಹೇಗೆ ಅನುಗ್ರಹಿಸಲ್ಪ ಟ್ಟನೋ ಆ ಮೇರಿಗೆ ನುಡಿದನು. ಆ ಪರಮೇಶ್ವರನು ಪ್ರಣವಾರ್ಥಮಂ ಕೇಳಿ

ಅದೇ ಅರ್ಥವು ಸರಿ ಈ ಅರ್ಥಕ್ಕೆ ಸಂಶಯವಿಲ್ಲ, ಆ ಪ್ರಣವಾರ್ಥವ ನೀವು ನೀವು "ಸುಬ್ರಹ್ಮಣ್ಯೋಂ, ಸದಾಶಿವೋಂ" ಇಂತೆಂದು ಲೋಕದಲ್ಲಿ ಆರು ತಿಳಿಯುತಲಿರುವರೊ, ಅವರು ನಮ್ಮ ಸಾಯುಜ್ಯವನೈದುವರು. ಸರ್ವ ವೇದಾಂತಜ್ಞಾನದಿಂ ನಿಶ್ಚಿತಬುದ್ಧಿಯುಳ್ಳ ಸತ್ಪುರುಷರಾದ ಶುದ್ಧ ತತ್ವರಾದ ಯತಿಗಳಿಗೆ ಬ್ರಹ್ಮಪ್ರಾಪ್ತಿಗೋಸುಗ ಸಾಧನಮಂ ಪೇಳ್ವೆನೆಂದು, ಪ್ರೀತಿಯಿಂದ ಅತ್ಯಂತ ಪ್ರಸನ್ನಹೃದಯನಾಗಿ, ಎಲೈ ಪುತ್ರನೆ! ನಿನ್ನಿಂದ ಈ ಮಹತ್ತಾದ ಮಂತ್ರವು ಪೇಳಲ್ಪಟ್ಟುದು, ಅತಿಕಾಯ ಮಲಗ್ರಂಥಸ್ಥನಾದ ಚತುರ್ಮುಖನು ಈ ಅರ್ಥವನ್ನು ಹೇಗೆ ತಿಳಿದಾನು, ಧ್ಯಾನದಿಂದ ಹೋಗಲ್ಪಟ್ಟ ಪಾಪವುಳ್ಳ ಯೋಗಿಗಳುಂ ತಿಳಿಯಲಾರರು, ನಮ್ಮ ಭಕ್ತರೆ ನಮ್ಮ ಅನುಗ್ರಹದಿಂ ತಿಳಿವರು. ಎಲೈ ಮಗನೆ! ನೀನು ಆವುದಾನೊಂದು ಕಾರಣದಿಂ ನಮ್ಮನ್ನನುಸರಿಸುತಲಿದ್ದೆ ಆದರದಿಂದ ಅದ್ಭುತಮಾಗಿ ಹೇಳಿದ ಅರ್ಥಮಂ ನಿಶ್ಚಯಮಾಗಿ ತಿಳಿಯುತಲಿದ್ದೆ, ಯೋಗಿಗಳಲ್ಲಿ ಅಗಸ್ತ್ಯ ಹೊರತಾಗಿ ಈ ಮಂತ್ರಾರ್ಥಕ್ಕೆ ಅಧಿಕಾರಿಯಿಲ್ಲ, ನಮ್ಮಾಜ್ಞೆಯಿಂದ ನೀನು ಈ ಅರ್ಥಮಂ ಆ ಅಗಸ್ತ್ಯನಿಗೋಸುಗ ಸಮ್ಯಕ್ಕಾಗಿ ಉಪದೇಶಮಂ ಮಾಡಿದೊಡೆ ಪರಂಪರಾ ಪ್ರಾಪ್ತಮಾದ ವಿದ್ಯೆಯು ವಿಚ್ಛಿನ್ನಮಾಗದಿರುವದು. ಆ ಅಗಸ್ತ್ಯನು ನಿನಗೆ ಅತ್ಯಂತ ಶಿಷ್ಯನು ಎಲೈ ಪುತ್ರನೆ! ಆ ಅಗಸ್ತ್ಯನಂ ಪುತ್ರನಂತೆ ವಿಶೇಷಮಾಗಿ ಶಿಕ್ಷಿಸು ಎಂದು ಆ ದೇವನಾದ ಶಿವನು ಈ ಪ್ರಕಾರದಿಂ ಆತ್ಮಜಂಗೆ ನಿರೂಪಿಸಿ ಮರಳಿ ತಮ್ಮ ಅರಮನೆಯನ್ನೈದಿದನು. ಅಲ್ಲಿ ಜಗತ್ಪತಿಯು ರಾತ್ರಿಯ ಆತ್ಯಂತದಲ್ಲಿ ಉಪಚಾರಮಂ ಮಾಡುವ ದೇವಿಯರಂ ಕರದು ಆಲಿಂಗಿಸಿ, ಆ ಗಿರಿರಾಜ ಪುತ್ರಿಯುಂ ತೊಡೆಯಮೇಲೆ ಇರಿಸಿಕೊಂಡು ಬ್ರಹ್ಮಸ್ವಾಮಿಯ ವೃತ್ತಾಂತಮಂ ಪೇಳುವೆನೆಂದು ನುಡಿದನೆಂಬದಾಗಿ ಸೂತಪೌರಾಣಿಕನು ಶೌನಕಾದಿ ಮುನಿಗಳ್ಗೆ ಪೇಳಿದನೆಂಬಲ್ಲಿಗೆ, ಕರ್ಣಾಟಭಾಷಾ ವಿರಚಿತಮಾದ ಶಂಕರಸಂಹಿತೆಯ ಶಿವರಹಸ್ಯ ಖಂಡದಲ್ಲಿ ಸಂಭವಕಾಂಡದೋಳ್ ಮುವ್ವತ್ನಾಲ್ಕನೆಯ ಅಧ್ಯಾಯವು ಸಂಪೂರ್ಣಂ.

ಮುವ್ವತ್ತೈದನೆಯ ಅಧ್ಯಾಯವು.

ಪರಶಿವೆಯು ಪರಶಿವನನ್ನು ಕುಮಾರಸ್ವಾಮಿಯ ಮಹಿಮೆಯನ್ನು ತಿಳಿಸಲಿಚ್ಛಿಸುವಿಕೆ.

ಅನಂತರ ಸೂತಪೌರಾಣಿಕರು ಶೌನಕಾದಿ ಋಷಿಗಳಂ ಕುರಿತು, ಎಲೈ ಮುನಿಗಳಿರಾ! ಜಗದೀಶ್ವರನಾದ ಪರಮೇಶ್ವರನಮುಖದಿಂ ಕುಮಾರನವೈಭವವಂ ಕೇಳಿ, ಪಾರ್ವತೀದೇವಿಯು ಕದಂಬ ಕುಸುಮಕ್ಕೆ ಸಮಾನಮಾದ ಸ್ವಕೀಯ

ಮಾದ ಅವಯವಂಗಳೊಡವೆರೆಸಿ, ಪ್ರಾಣನಾಥನಂ ನಿರೀಕ್ಷಿಸಿ ಇಂತೆಂದಳು, ಎಲೈ ಪ್ರಭುವೆ! ನಿಮ್ಮ ಕುಮಾರನ ಚರಿತ್ರವು ಲೋಕಾತೀತಮಾಗಿಯುಂ ಆಶ್ಚರ್ಯಮಾಗಿಯುಂ ಇರುವ ರೂಪವೆಂಥಾದ್ದು? ವೀರ್ಯವೆಂಥಾದ್ದು? ಈತನಾರು? ಇವನ ವಿಭೂತಿಯಾವುದು? ಎಂದು ಬಿನ್ನೈಸಿದ ಬಳಿಕ, ಮದನ ಯಮಗರ್ವ ಮರ್ದನನಾದ ದೇವಶ್ರೇಷ್ಠನಾದ ಶಂಭುವು, ತಮ್ಮ ದೇವಿಯರಾದ ಆ ಪಾರ್ವತಿ ಯನ್ನು ಕುರಿತು, ಎಲೌ ದೇವಿಯೆ! ನಿನಗೆ ಆ ರಹಸ್ಯಮಂ ಪೇಳ್ವೆನು ಕೇಳುವ ಳಾಗು, ಏನೆಂದರೆ ನಾನು ನಿಷ್ಕಳಂಕನಾದ ಪೂರ್ಣನಾದ ಶಿವನು, ನೀನು ಅಗ ಲಿರ್ದಶಕ್ತಿಯು ಪ್ರಕೃತಿಪ್ರತ್ಯಯಾಕಾರವಾದ ಪರಶಬ್ದಾತ್ಮರು ನಾವು ನೀನು ತ್ವಂ ಶಬ್ದಾರ್ಥಗಳು. ಜಗತ್ತು ತಾವು ಪತಿಯಾಗುತಿದ್ದೆವು. ತಾವು ಪಂಚಕೃತ್ಯಪರ ನಾದ ಪಂಚವಕ್ತ್ರನಾದ ಸದಾಶಿವನು. ಎಲೌ ಪರಮೇಶ್ವರಿಯೆ! ನೀನು ಬಹು ಪ್ರಕಾರವಾದ ರೂಪವಾಗಿದ್ದರೂ ಏಕವಕ್ತ್ರವುಳ್ಳವಳಾಗುತಿದ್ದಿ, ಈ ಕುಮಾ ರನು ಆವ ಕಾರಣದಿಂದ ತನ್ಮಯನೋ ಅದುಕಾರಣದಿಂದ ಷಡ್ವಕ್ತ್ರನಾಗಿ ಪೇಳ ಲ್ಪಟ್ಟನು. ಈ ಕುಮಾರನು ಲೀಲೆಯಿಂದ ಈ ಜಗತ್ತಿನ ಪಂಚಕೃತ್ಯದಲ್ಲಿ ತತ್ಪ ರನು, ಆವಕಾರಣದಿಂದ ಮುಖ್ಯರೂಪಾದ ಷಟ್ಕೃತ್ತಿಕೆಯರು ಈತಂಗೆ ಸ್ತನ್ಯ ವನ್ನಿತ್ತರೋ, ಅದುಕಾರಣದಿಂದ ನಿನ್ನ ಕುಮಾರನಾದ ಈ ಬಾಲಕನು ಅವರ ಸ್ತನ್ಯಮಂ ಪಾನವಂ ಮಾಡಿದನು. ಅದರಿಂದ "ಕಾರ್ತಿಕೇಯನೆಂದು" ಪೇಳಲ್ಪ ಟ್ಟನು. ಇವಲ್ಲದೆ ನಿನ್ನ ಪುತ್ರನಾದಿವನು ನಿನ್ನ ನಾಮದಿಂ ಲೋಕದಲ್ಲಿ ಪಾರ್ವತೀ ನಂದನನಾಗಿ ದೇವಾದಿಗಳಿಂ ಪೇಳಲ್ಪಡುತಲಿರುವನು. ಆವುದಾನೊಂದು ಕಾರಣ ದಿಂದ ಲೋಕತ್ರಯವನ್ನು ವಿಕ್ರಮದಿಂ ಆಕ್ರಮಿಸುವನೋ ಅದುಕಾರಣದಿಂ "ಸ್ಕಂದನೆಂದು" ಹೇಳಲ್ಪಡುತಿರುವನು. ಎಲೌ ಗಿರಿಜೆಯೆ! ಆವಕಾರಣದಿಂ ನಾನು ಭಕ್ತರನ್ನು ಅಂಗವನ್ನೈದಿಸುತಿರುವೆನೋ ಅದರಿಂ ಅಗ್ನಿಯೆಂದು ಹೇಳ ಲ್ಪಟ್ಟು, ಅಗ್ನಿಯದೆಸೆಯಿಂದ ಆವಿರ್ಭವಮುಂಟಾದುದು. ಅದರಿಂದ ಅಗ್ನಿಭೂ ಯೆಂದು ಹೇಳಲ್ಪಟ್ಟನು. ಮತ್ತೆ ಆವಕಾರಣದಿಂ ಊರ್ಧ್ವರೇತಸ್ಸಾದ ಲಲಾಟ ದಲ್ಲಿರ್ಪ ವಹ್ನಿನೇತ್ರದ ದೆಸೆಯಿಂದ ಉಂಟಾದನೋ ಅದರಿಂದ ಅಗ್ನಿಭೂ ಯೆಂದು ಹೇಳಲ್ಪಟ್ಟನು. ಎಲೌ ಸುಭ್ರು! ಹಾಗಲ್ಲದಿರ್ದೊಡಂ ಆವಕಾರಣದಿಂ ನಿನ್ನ ಕುಮಾರನು ಅಗ್ನಿಯು ನನ್ನ ನಿಯೋಗದ ದೆಸೆಯಿಂದ ವಾಯುವಿನಿಂ ವಹಿಸಲ್ಪಟ್ಟನೋ ಅದು ಕಾರಣದಿಂದಲುಂ ನಿನ್ನ ಪುತ್ರನು "ಅಗ್ನಿಭು" ಎಂದು ಸೂರಿಗಳಿಂ ನಿರೂಪಿಸಲ್ಪಟ್ಟರುತ್ತಾ. ಇವಲ್ಲದೆ ದಹರಾಕಾಶವು "ಗುಂ" ಎಂದು ಹೇಳಲ್ಪಟ್ಟಿರುವುದರಿಂದ ತನ್ನಿಷ್ಟನಾಗಿ ಸರ್ವ ಹೃತ್ಕಮಲಾಸನನಾದ ಈ ಬಾಲನು "ಗುಹ" ನೆಂದು ಹೇಳಲ್ಪಟ್ಟನು. ಎಲೌ ಮಹೇಶ್ವರಿಯೆ! ಇವನು ಆಪಹತ

ಪಾಪ್ಮನು, ವಿರಜನು, ಮೃತ್ಯುವರ್ಜಿತನು, ವಿಶೋಕನು, ವಿಪಿಪಾಸನು, ಸತ್ಯ ಕಾಮನು, ಸತ್ಯಸಂಕಲ್ಪನು, ಹಾಗೆ ಸತ್ಯನು, ಪುರುಷನು, ವಿಶ್ವನು ಯೆಂದು ಪೇಳಲ್ಪಟ್ಟನು. ಮತ್ತೆ ಆವುದಾನೊಂದು ಕಾರಣದಿಂದ ಶರಂಗಳ ವನದಲ್ಲಿ ಜನಿಸಿದನೋ ಅದುಕಾರಣದಿಂ "ಶರವಣೋಧ್ಭವನೆಂದು" ನುಡಿಯಲ್ಪಟ್ಟನು. ವನವೆಂದು ಜಲವು ಶರಮಧ್ಯಸ್ಥ ತಟಾಕವರ್ತಿಯಾದ ಪದ್ಮದಲ್ಲಿ ನಿಜೇಚ್ಛೆ ಯಿಂದ ರಕ್ಷಣನಿಮಿತ್ತವಾಗಿ ಸಂಭವಿಸಿದ ಕಾರಣದಿಂ ಪದ್ಮಾಭ ವದನನಾದ ಜಗನ್ನಾಥನಾದ ಈ ಕುಮಾರನು " ಶರವಣೋದ್ಭವ" ನೆಂದು ಪೇಳಲ್ಪಟ್ಟನು. ನಾನು ಬ್ರಾಹ್ಮಣನು ಗೊವನು, ಮತ್ಸುತನು ವಿಶೇಷವಾಗಿ ಅವರ್ಗೆ ದೇವನು. ಎಲೀ ಪ್ರಿಯೆ ! ಸುರಾಸುರ ನಮಸ್ಕೃತನಾದ ನಿನ್ನ ಕುಮಾನು " ಬ್ರಹ್ಮಣ್ಯ" ನೆಂದು ಹೇಳಲ್ಪಟ್ಟನು, ಮತ್ತೂ ನಿನ್ನ ಸುತನು ಆತ್ಮ ಸಮೂಹವೆಂಬ ಮಹಾ ಸೇನೆಗೆ ಅಧಿಪತಿಯಾದ ಕಾರಣದಿಂ " ಮಹಾಸೇನ" ನೆಂದು ಹೇಳಲ್ಪಟ್ಟನು. ಇದಲ್ಲದೆ ಈ ಬಾಲಕನು ಗಂಗೆಯಲ್ಲಿ ಉದಯಿಸಿದ ಕಾರಣದಿಂ " ಗಾಂಗೇಯ" ನೆಂದು ಪೇಳಲ್ಪಟ್ಟನು. ವಿಷ್ಣು ಮೊದಲಾದ ದೇವತೆಗಳ ಆವ ಕುಮಾರಸ್ವಾ ಮಿಗೆ ಸೇನೆಗಳಾಗಿ ಪೇಳ್ವರೋ ಅವರ ದುಃಖ ಶಮನನಾದಿವನು ಅವರ್ಗೆ "ಸೇನಾನಿ" ಎಂದು ಪೇಳಲ್ಪಟ್ಟನು.

ಎಲೌ ಅನಘೆ! ನಿನ್ನ ಪುತ್ರನಿಗೆ ಅನಂತ ನಾಮಂಗಳುಂಟು. ಅಖಿಲಾತ್ಮ ರಿಗೆ ಮುಕ್ತಿಪ್ರದಂಗಳಾದ ಕೆಲವು ನಾಮಂಗಳು ನಮ್ಮಿಂದ ಪೇಳಲ್ಪಟ್ಟವು. ಈ ಕುಮಾರನ ಒಂದು ನಾಮವಾದರು ಆವನಿಂದಾಗಲಿ ಪೇಳಲ್ಪಡುವುದೋ, ಆತಂಗೆ ಈ ಲೋಕದಲ್ಲಿ ಪುರುಷಾರ್ಥ ಚತುಷ್ಟಯ ಮುಂಟಾಗುವುದು. ಬ್ರಹ್ಮ ಹತ್ಯಾದಿ ಪಾತಕಂಗಳು ಅವನಂ ಪೊಂದವು. ಮತ್ತೆ ಸಚ್ಚಿದಾನಂದ ಸ್ವರೂಪ ವುಳ್ಳ ನಿಷ್ಕಳಂಕನಾದ ಈ ನಿನ್ನ ಕುಮಾರನ ರೂಪವನ್ನೂ ಪೇಳುವೆನು ಕೇಳು, ಈ ಗುಹನು ಕಾಂತಿಗಳ್ಗೆ ಒಡೆಯನು, ಅನುಪಮಮಾದ ಪರಂಜ್ಯೋತಿಯು ಕಾಂತಿ ಯಲಿ ಹಾಗೆ ಪ್ರಕಾಶಿಸುವನು, ಆತನ ಪ್ರಕಾಶದಿಂದ ಸರ್ವಮುಂ ಪ್ರಕಾಶಿಸುತ್ತ ಲಿರುವುದು, ಅನ್ಯನ ದೆಸೆಯಿಂ ಮುಕ್ತಿಯುಮಿಲ್ಲ ಇವನಿಂದಲೆ ಉಂಟಾಗುವದು, ಎಲೌ ಪೂರ್ಣಚಂದ್ರ ನಿಭಾನನೆಯೆ! ಪುರಾಣನಾದ ಈ ನಿನ್ನ ಕುಮಾರನ ರೂಪ ವನ್ನು ಪೇಳುವೆನು ಕೇಳು, ಈ ಗುಹನು ಕಾಂತಿಗಳ್ಗೆ ಒಡೆಯನು, ಅನುಪಮ ಮಾದ ಪರಂಜ್ಯೋತಿಯು, ಕಾಂತಿಯಲ್ಲಿ ಅಗ್ನಿಯಹಾಗೆ ಪ್ರಕಾಶಿಸುವವನು ಆತನ ಪ್ರಕಾಶದಿಂದ ಸರ್ವಮುಂ ಪ್ರಕಾಶಿಸುತಲಿರುವುದು, ಅನ್ಯನ ದೆಸೆಯಿಂ ಮುಕ್ತಿಯುಮಿಲ್ಲ ಇವನಿಂದಲೇ ಉಂಟಾಗುವದು, ಎಲೌ ಪೂರ್ಣಚಂದ್ರನಿಭಾ ನನೆಯೆ! ಪುರಾಣನಾದ ಈ ನಿನ್ನ ಕುಮಾರನಿಂದ ನಿಖಿಲಮುಂ ಸೂತ್ರದಲ್ಲಿ ಮಣಿ

ಗಣಂಗಳಂತೆ ಪ್ರೀತಮಾಗಿ ಮಾಡಲ್ಪಟ್ಟುದು. ಈ ರೂಪವು ನಿನ್ನ ಕುಮಾರಂಗೆ ಸ್ವಾಭಾವಿಕವು, ಚರಾಚರಮಾದ ಅನ್ಯರೂಪಮಂ ಪೇಳ್ವೆನು ಕೇಳು, ಎಲೌ ಶುಭಕರಳೆ! ಈತನ ಅನ್ಯರೂಪವು ಭವನಾಕಾರವೇಸರಿ, ಅದೆಂತೆನೆ, ಈತನ ಶಿರಸ್ಸು ಸ್ವರ್ಗವು, ನಾಭಿಯು ಆಕಾಶವು, ಪಾದಂಗಳು ಸಪ್ತಪಾತಾಳಂಗಳು, ನಯನಂಗಳು ಚಂದ್ರ ಸೂರ್‍ಯಾಗ್ನಿಗಳು, ಈತನ ಬಾಹುಗಳು ದಿಕ್ಕುಗಳು, ರೋಮಂಗಳು ಓಷಧಿಗಳು, ಇಂದ್ರಿಯಂಗಳು ಭೂತಂಗಳು, ವಿಷಯಂಗಳು ಶಬ್ದಾದಿಗಳು ಮತ್ತೆ ಈ ಸ್ವಾಮಿಯಿಂದೀಗ ಲೋಕಾನುಗ್ರಹಕ್ಕೋಸುಗ ಷಡ್ವಕ್ತ್ರಮಾದ ದ್ವಾದಶ ಭುಜಂಗಳುಳ್ಳ ಅಷ್ಟಾದಶ ಲೋಚನಂಗಳುಳ್ಳ ಉತ್ಪತ್ತಿ ರಹಿತಮಾದ ಈ ಒಂದು ರೂಪವು ಅಂಗೀಕರಿಸಲ್ಪಟ್ಟುದು, ಎಲೌ ವರಾನನೆಯೆ! ಆರು ಈ ರೂಪವನ್ನು ಧ್ಯಾನಮಂ ಮಾಡುತಿರುವರೋ ಅವರು ಜಗದ್ವಂದ್ಯರು, ಅವರುಗಳಿಂದ ಭೂಮಿಯು ಅತ್ಯಂತ ಶ್ರೇಷ್ಠವಹುದು. ಆತನ ಅಂಘ್ರಿದ್ವಯಂಗಳಲ್ಲಿ ಯಾವ ಮನುಷ್ಯರು ಭೂತಳದಲ್ಲಿ ಭಕ್ತರೋ, ಆ ಮನುಷ್ಯರು ದೇವತೆಗಳಿಂದಲೂ ವಂದ್ಯರಾಗಿರುವರು, ಇದಲ್ಲದೆ ಅವರುಗಳು ಸರ್ವರಿಗೂ ಪ್ರಿಯರು. ಓ ಪಾರ್ವತಿಯೆ! ಮಹಾತ್ಮನಾದ ಈ ಕುಮಾರನ ಮಹಿಮೆಯನ್ನೂ ಪೇಳ್ವೆನು ಕೇಳು; ಆತನ ಆಜ್ಞೆಯಿಂದ ವಾಯುವು ಚಲಿಸುವನು, ಭುವನಗಳನ್ನು ಸಚರಾಚರಂಗಳಿಂ ಜ್ಯೋತಿಶ್ಚಕ್ರಾದಿಕಂಗಳಂ ಪಿಡಿದು ಧರಿಸುತ್ತಂ ಈತನ ಆಜ್ಞೆಯಿಂದ ಪ್ರಾಣಿಗಳು ಪ್ರಾಣಾದಿ ಭೇದಂಗಳಿಂ ಚಲಿಸುತ್ತಲೂ ಇರುವರು. ಇದಲ್ಲದೆ ಈತನ ಆಜ್ಞೆಯಿಂದಲೇ ಸೂರ್ಯನು ಭೀತನಾಗಿ ಪ್ರಕಾಶಿಸುತಲಿರುವನು. ಸರ್ವ ಲೋಕಂಗಳಿಂದಲುಂ ದೇವತೆಗಳಿಂದಲುಂ ಅಲಂಘ್ಯಮಾದ ಈ ನಿನ್ನ ಕುಮಾರನ ಆಜ್ಞೆಯಿಂದ ಅಗ್ನಿಯು ಈ ಲೋಕವನ್ನೂ ದೇವತೆಗಳ್ಗೆ ಹವ್ಯವನ್ನೂ ಪಿತೃಗಳಿಗೆ ಕವ್ಯವನ್ನೂ ವಹಿಸುತ್ತಲುಂ ಮತ್ತೆ ಪಾಕಮಂ ಮಾಡುತ್ತಲೂ ಇರ್ಧಾನೆ. ಇದಲ್ಲದೆ ಭೂತಗಳ ಜಠರಮನ್ನಾಶ್ರೈಸಿ ಪ್ರಾಣಾಪಾನ ಯುಕ್ತನಾಗಿ ಚತುರ್ವಿಧಮಾದ ಅನ್ನಮಂ ಪಚನಂ ಮಾಡುತಲಿರುವನು. ಈತನ ಆಜ್ಞೆಯಿಂದ ಯಮನು ಪಾಪಿಗಳನ್ನು ವ್ಯಾಧಿಗಳಿಂದಲುಂ ಚೇತನರನ್ನು ಯಾತನೆಗಳಿಂದಲುಂ ಮೃತರಾದವರ್ಗೆ ರೌರವಾದಿ ನರಕಂಗಳಿಂದಲುಂ ಬಾಧಿಸುತಲಿರುವನು. ಇದೂ ಅಲ್ಲದೆ ಈತನ ಶಾಸನದಿಂ ಚತುರ್ಮುಖನು ಭೂತಾದಿಗಳಂ ಸೃಷ್ಟಿಸುತ್ತಲು, ನಾರಾಯಣನು ಮಹಾ ಯೋಗಿಯಾಗಿ ನರಭೂತನಾಗಿ ಜಲಾಶಯನಾಗಿ ಜಗದ್ರಕ್ಷಣವಂ ಮಾಡುತಲೂ, ಭೃಗುಶಾಪದಿಂ ಕಟ್ಟಲ್ಪಟ್ಟವನಾಗಿ ಮತ್ಸ್ಯ ಕೂರ್ಮ ವರಾಹಾದಿ ಅವತಾರಮನ್ನೈದಿ, ಧರ್ಮಸಂಸ್ಥಾಪನನಾಗಿ ಲೋಕರಕ್ಷಣೆಯಂ ಮಾಡುತ್ತಲೂ ಅಸತ್ತುಗಳಾದ ದಾನವರಂ ಸಂಹರಿಸುತ್ತಲು ಇರುವನು. ಮತ್ತು

ಈತನ ಶಾಸನದಿಂದ ಭಗವಂತನಾದ ಕಾಲಾಗ್ನಿ ರುದ್ರನು ಈ ಸಮಸ್ತ ಜಗತ್ತುಗಳನ್ನು ಸಂಹರಿಸುತಲಿಧಾನೆ, ಈ ಸುಬ್ರಹ್ಮಣ್ಯನ ಕಾಲವು ಭೂತಂಗಳಂ ಸೃಜಿಸುತಲೂ ಪ್ರಜೆಗಳಂ ಸಂಹರಿಸುತಲೂ ಇರುವುದರಿಂದ ಸರ್ವರೂ ಆ ಕಾಲಕ್ಕೆ ವಶವರ್ತಿಗಳು. ಆ ಕಾಲವು ಈತನ ವಶದಲ್ಲಿಯೇ ಇಧೆ. ಮತ್ತೆ ಆಕಾಲವು ಭೂತಂಗಳಿಗೆ ಅವಕಾಶಂಗಳಂ ನಿಜಪುತ್ರನ ಆಜ್ಞೆಯಿಂದ ಕೊಡುತಂ ಇರುವುದು ಎಲೌ ಭಾಮಿನಿಯೆ! ನಿನ್ನ ಪುತ್ರನ ಮಹತ್ತಾದ ಆಜ್ಞೆಯಿಂದ ಆಕಾಶವು ಸಮಸ್ತವಾದ ಭೂತಗಳನ್ನೈದಿ ರಕ್ಷಿಸುತಲಿದ್ಧೀತು. ಆತನ ಮಹತ್ತಾದ ಆಜ್ಞೆಯು ಸರ್ವರಿಗೂ ಅಲಂಘ್ಯವು ಮತ್ತೆ ಈ ಭೂಮಿಯು ಧರಾಧರಂಗಳುಂ ಸಪ್ತ ಸಮುದ್ರಂಗಳು ಜ್ಯೋತಿರ್ಗಣಂಗಳು ವಿಷ್ಣು ಪ್ರಮುಖರಾದ ದೇವತೆಗಳುಂ ಈ ಚರಾಚರಾತ್ಮಕವಾದ ಜಗತ್ತು ಈ ಸಮಸ್ತವು ಆತನ ಆಜ್ಞೆಯಿಂ ಸ್ಥಿರವಾಗಿ ಧರಿಸುತ್ತಲೂ ಇರುವುದೆಂದು ಪರಮೇಶ್ವರನು ಪಾರ್ವತೀದೇವಿಗೆ ನಿರೂಪಿಸಿದನೆಂಬದಾಗಿ

ಸೂತಂ ಶೌನಕಾದಿಗಳ್ಗೆ ಪೇಳಿದನೆಂಬಲ್ಲಿಗೆ ಮುಪ್ಪತ್ತೈದನೆಯ ಅಧ್ಯಾಯವು ಸಂಪೂರ್ಣಂ.

ಮುಪ್ಪತ್ತಾರನೆಯ ಅಧ್ಯಾಯವು.

ಪರಶಿವನು ಪರಶಿವೆಗೆ ಕುಮಾರಸ್ವಾಮಿಯ ವಿಭೂತಿಯಂ ವಿವರಿಸುವಿಕೆ.

ಅನಂತರದಲ್ಲಿ ಪಾರ್ವತೀದೇವಿಯು ಎಲೈ, ಸ್ವಾಮಿಯೇ! ವಿಭುವಾದ ನಿಮ್ಮ ಕುಮಾರನಾದ ಸ್ಕಂದನು ಸರ್ವದೇವಾತ್ಮಕನುಂ ಸರ್ವಲೋಕಾತ್ಮಕನುಂ ಸರ್ವಭೂತಾತ್ಮಕನುಂ ಸಾಕ್ಷಾತ್ಸನಾತನನುಂ ಆದಪರಬ್ರಹ್ಮವೋ; ಈಲೋಕದಲ್ಲಿಆವುದಾನೊಂದು ವಸ್ತುವು ವಿಭೂತಿ ವುಳ್ಳದ್ದಾಗಿಯುಂ ಪೂಜಿತಮಾಗಿಯುಂ ಇರುವುದೋ ಆ ವಸ್ತುವೇ ಸರಿಯೆಂದು ನುಡಿಯಲು, ಪರಮೇಶ್ವರನು ಈತನ ವಿಭೂತಿ ಲೇಶದಿಂದ ವೃದ್ಧಿಯ ನ್ನೈದಲ್ಪಟ್ಟು ದೆಂದು ತಿಳಿದುಕೊ, ದೀಪದಿಂ ದೀಪಾಂತರದಂತೆ ಆತ್ಮನು ಪುತ್ರತ್ವ ಮನ್ನೈದು ತಿದ್ಧಾನೆ, ದೀಪಾಂತರದ ಮಾಹಾತ್ಮ್ಯದ ವಶೆಯಿಂದ ದೀಪವು ಮಹತ್ತಾಗುತ್ತಿದ್ದೀತಲ್ಲವೆ? ಈಪ್ರಕಾರದಿಂದ ಮಹಾತ್ಮ ಸಾದೀತನು ತನ್ನದೆಸೆಯಿಂ ಪುತ್ರನಾಗಿಧಾನೆ, ಆತನ ವಿಭೂತಿ ವಿಶೇಷವು ಅಲ್ಲಿ ಅಲ್ಲಿ ವೃದ್ಧಿಯನ್ನೈದು ತಂಯಿದ್ದೀತು, ಅನಂತರಾದ ರುದ್ರರ್ಗೆ ಈತನು ಕಾಲಾಗ್ನಿರುದ್ರನು, ಶಂಖ ಚಕ್ರಾ ಸಿಧಾರಿಗಳಾದ ವಿಷ್ಣುಗಳಿಗೆ ಈತನು ಸಾರ್ವಕಾಲವು ವಿಷ್ಣುವು, ಎಲೆ ಶಿವೆಯೆ! ನಾಲ್ಕು ಮೂರ್ತಿಗಳೊಳಗೆ ಪರವಾಸುದೇವನು; ಮತ್ತೆ ಆ ವಿಷ್ಣುವಿನ ಅವತಾರಂಗಳಲ್ಲಿ ರಾಮನು, ಶಸ್ತ್ರ ಭೃತರಾದ

ವೃಷ್ಣಿಗಳಿಗೆ ವಾಸುದೇವನು, ಪಾಂಡವರ್ಗೆ ಧನಂಜಯನು, ಬ್ರಾಹ್ಮಣರಿಗೆ ಚತುರ್ಮುಖನು, ಸಮಸ್ತ ಮನುಗಳ ಮಧ್ಯದಲ್ಲಿ ಸ್ವಾಯಂಭುವ ಮನು, ಪಿತೃಗಳಿಗೆ ಯಮನು, ಈತನು ರಕ್ಷಸ್ಸುಗಳಿಗೆ ನಿರುತಿಯು, ಉದಕಂಗಳಿಗೆ ವರುಣನು ಬಲವುಳ್ಳವರ್ಗೆ ವಾಯುವು, ಗಂಧರ್ವರ್ಗೆ ಚಿತ್ರರಥನು, ನಿಧಿಗಳುಳ್ಳವರ್ಗೆ ನವನಿಧಿಗಳುಳ್ಳ ಕುಬೇರನು, ಗಿರೀಶರೊಳಗೆ ಈಶಾನನು, ಭೋಗವಂ ಕೊಡುವಂಥಾವನನಾಗಿ ಪೇಳಲ್ಪಟ್ಟ ಈತನು ಗಜೇಂದ್ರಗೆ ಐರಾವತನು ನದಿಗಳ್ಗೆ ಜಾಹ್ನವಿಯು, ಏಕಾದಶರುದ್ರರ್ಗೆ ಶುಕರನು, ವಸುಗಳಿಗೆ ಪಾವಕನು, ಆದಿತ್ಯರ್ಗೆ ವಿಷ್ಣುವು, ವೈದ್ಯರ್ಗೆ ಅಶ್ವಿನಿಗಳು, ದೈತ್ಯರ್ಗೆ ಪ್ರಹ್ಲಾದನು, ಸರ್ಪಗಳಿಗೆ ವಾಸುಕಿಯು, ಮೃಗಗಳಿಗೆ ಮೃಗೇಂದ್ರನು, ಪಕ್ಷಿಗಳಿಗೆ ಗರುಡನು ಬ್ರಹ್ಮಋಷಿಗಳ್ಗೆ ವಸಿಷ್ಠನು, ದೇವಋಷಿಗಳ್ಗೆ ನಾರದನು, ವೃಕ್ಷಗಳಿಗೆ ಅಶ್ವತ್ಥವು ಮನುಷ್ಯರಿಗೆ ದ್ವಿಜನು, ಯಾವಯಾವ ಲೋಕದಲ್ಲಿ ದೇವತಿರ್ಯಙ್ಮನುಷ್ಯರುಗಳಲ್ಲಿ ಅಧಿಕವಾದ ವೀರ್ಯವು, ಸಂಪತ್ತು ಕಾಂತಿಯು ವಿದ್ಯೆಯು ಮತ್ತಂ ಜ್ಞಾನಾದಿಗಳು ಇರುವವೋ, ಆ ಸರ್ವವು ಈತನ ವಿಭೂತಿಯೆಂದು ತಿಳಿಯಲ್ಪಟ್ಟುವು. ಎಲೌ, ಶುಭಳೆ, ಹೇಭುವನೇಶ್ವರಿ! ನಿನ್ನ ಕುಮಾರನ ವಿಭೂತಿಯು ಸಂಕ್ಷೇಪದಿಂದ ಪೇಳಲ್ಪಟ್ಟುದು, ವಿಸ್ತಾರದಿಂ ಪೇಳಲು ಶತಕೋಟಿ ಸಂವತ್ಸರಂಗಳಿಂದಲು ಶಕ್ಯವಲ್ಲ, ಆರ್ಯೆ ಪೂರ್ವದಲ್ಲಿ ಪ್ರಸಂಗದಿಂ ನಿನ್ನ ಕುಮಾರನ ವಿಭೂತಿಯು ಪೇಳಲ್ಪಟ್ಟುದು, ನಿನ್ನಿಂದ ಆ ವೃತಾಂತಂ ವಿಸ್ಮೃತಮಾದುದೋ; ಅಲ್ಲದಿರ್ದೊಡೆ ಲೋಕಕೃತ್ಯದಿಂ ಮರಳಿ ಪ್ರಶ್ನೆಯಂ ಮಾಡಿದೆಯೋ? ಎಂದು ದೇವನಾದ ಮಹೇಶ್ವರಂ ಪ್ರಸನ್ನಾತ್ಮನಾಗಿ ಲೋಕಾನುಗ್ರಹೇಚ್ಛೆಯಿಂ ಈ ಕುಮಾರಸ್ವಾಮಿಯ ವೈಭವಮಂ ಪಾರ್ವತಿಗೊಸುಗ ಪೇಳಿ ಮರಳಿ ಆದೇವಿಯಂ ಆಲಿಂಗಿಸಿ, ಅಂತಃಪುರಮಂ ಪ್ರವೇಶಿಸಿದನು.

ಅಮೃತವಲ್ಲಿ ಸೌಂದರ್ಯವಲ್ಲಿಯರ ತಪೋನಿಷ್ಠೆ. ಅವರಿಗೆ ಕುಮಾರಸ್ವಾಮಿಯ ಪ್ರಸನ್ನತೆ.

ಎಲೈ, ಮುನಿಗಳಿರಾ! ಈರೀತಿಯಿಂ ಈಶ್ವರನಿಂದ ಪೇಳಲ್ಪಟ್ಟ ಈ ವೃತ್ತಾಂತಮಂ ಲೋಕದಲ್ಲಿ ಪ್ರಸಿದ್ಧಿಯನೈದಿತು, ಸುರೇಂದ್ರರುಗಳ ಪ್ರಸಿದ್ಧಮಾದ ಭುವನಂಗಳಲ್ಲಿಯೂ ವಿಷ್ಣು ಭುವನದಲ್ಲಿಹ ವೈಷ್ಣವರುಗಳಿಂ ವೈಕುಂಠದಲ್ಲಿಯೂ ಮತ್ತೆ ಕಾಮಿನಿಯರುಗಳಿಂ ಸಾರ್ವ ಕಾಲವುಂ ವಿಪಂಚಿಗಳಿಂ ಪರಿಸ್ಪಡುತಲೂ ಇತ್ತು ಎಲೈ ಮುನಿಗಳಿರಾ! ಆಸಮಯದಲ್ಲಿ ಅಮೃತವಲ್ಲಿಯೆಂದು ಸೌಂದರ್ಯವಲ್ಲಿಯೆಂದುಂ ಉಪೇಂದ್ರನ ನಯನೋದ್ಭವೆಯರಾದ ಸುಲೋಚನೆಯರಾದ ಕನ್ನಿಕೆಯರು, ಜನರು ವರ್ಣಿಸುತ್ತಿರ್ಪ ಈ ಕುಮಾರನ

ವೈಭವವಂ ಈತನ ಸೌಕುಮಾರ್ಯವನ್ನೂ ನಿತ್ಯದಲ್ಲಿಯೂ ಅಲ್ಲಿ ಅಲ್ಲಿ ಕೇಳಿ, ಅವ ರೀರ್ವರು ಆ ಕುಮಾರಸ್ವಾಮಿಗೆ ಅತಿ ದುರ್ಲಭ ಮಾದ ಪತ್ನೀಭಾವವ ನಪೇಕ್ಷಿಸಿ, ಆಕುಮಾರಸ್ವಾಮಿಯ ಪ್ರೀತಿಗೋಸುಗ, ಶ್ರದ್ಧೆಯೊಡಗೂಡಿ ತಪಸಾಚರಿಸಲಿಚ್ಛೈಸಿ, ಭೂಮಿಯಲ್ಲಿ ರೂಪದಿಂ ಅಪ್ರತಿಮರಾದ ಸುಕುಮಾರಾಂಗಿಗಳಾಗಿ ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಆತನು ತಮಗೆ ವರಿಸಲು ಯೋಗ್ಯನೆಂಡು ತಿಳಿದು, ಆ ಕುಮಾರಸ್ವಾಮಿಯ ಚರಿತ್ರೆಯಂ ಕೇಳಿ, ಕೇಳಿ ಸ್ಮರನಿಂದ ಆರ್ತೆಯರಾಗಿ ಪ್ರವಾಳಶಯನದಲ್ಲಿಯೂ ಸುಖಮನ್ನೈದದೆ ಆತನ ಚರಿತ್ರಮಂ ಕೇಳುವಲ್ಲಿ ಕೌತುಕದಿಂ ಆಕ್ರಮಿಸಲ್ಪಟ್ಟ ಮನಸ್ಸುಳ್ಳವರಾಗಿ, ಅತಿದೀರ್ಘವಾದ ರಾತ್ರಿಗಳಲ್ಲಿ ನಿತ್ಯಂ ವಿನಿದ್ರನಯನೆಯರಾಗಿ, ಅಸುಕುಮಾರನಿರುವ ಶರವಣಮನ್ನೈದಿ, ನಿಯತಾ ಹಾರ ನಿಯತರಾಗಿ ಮುನಿಗಳ ವ್ರತಮಂ ಕೈವಿಡಿದು, ರತ್ನಕಾಂಚಿಯಂ ಬಿಟ್ಟು ಮೌಂಜಿಯಂಧರಿಸಿ ಮೇಖಲೆಯಿಂ ಬದ್ಧರಾಗಿ ನೀಲಕೋಮಲವಾದ ಪವಿತ್ರವಾದ ಕೃಷ್ಣಾಜಿನಮಂ ಧರಿಸಿ, ರಮ್ಯಮಾದ ವಲ್ಕಲಂಗಳ ನುಟ್ಟು, ದುಕೂಲವಸ್ತ್ರಮಂ ಪರಿಹರಿಸಿ ಭೂತಿ ಭೂಷಿತ ಸರ್ವಾಂಗಿಯರಾಗಿ ರುದ್ರಾಕ್ಷಾಭರಣಂಗಳಿಂದಲಂಕೃತೆಯರಾಗಿ, ಷಡಕ್ಷರ ಮಹಾಜಪ ಪರಾಯಣೆಯರಾಗಿ, ಆ ಕುಮಾರಸ್ವಾಮಿಯ ಧ್ಯಾನವುಳ್ಳವರಾಗಿ ಬಹುಕಾಲಂ ತಪವನಾಚರಿಸಿದರು. ಆ ಸಮಯದಲ್ಲಿ ಇವರುಗಳ ಮುಂದೆ ಮನೋಹರಮಾದ ನಗೆಯುಳ್ಳ ಮುಖ ಕಮಲವುಳ್ಳ ಸನಾತನನಾದ ಆಕುಮಾರಸ್ವಾಮಿಯು ಪ್ರಸನ್ನ ನಾದನು

ಆನಂತರದಲ್ಲಿ ಅಮೃತವಲ್ಲಿಯು ಸೌಂದರ್ಯವಲ್ಲಿಯು ಎಂಬಿವರುಗಳಾ ಕುಮಾರಸ್ವಾಮಿಯಂ ಕಂಡು ರೋಮಾಂಚ ಕಂಚುಕಿತ ದೇಹಿಯರಾಗಿ ಪ್ರಿಯದಿಂ ವಿಶಾಲನಯನೆಯರಾಗಿ, ಆ ಸ್ವಾಮಿಗೆ ಅಭಿನಮಿನಿ ಅಂಜಲಿಹಸ್ತಂಗಳುಳ್ಳವರಾಗಿ ಆ ಸ್ವಾಮಿಯ ಉಭಯ ಪಾರ್ಶ್ವಗಳಲ್ಲಿಯುಂ ನಿಂತು ಈ ಪುತ್ರನಂ ಸ್ವಪ್ನದಲ್ಲಿಯುಂ ಅದೃಷ್ಟರೂಪನನ್ನಾಗಿ ಭಾವಿಸಿ, ಸರ್ವೋತ್ಕೃಷ್ಟನಾದ ಮಹಾಸೇನನಿಂ ನೋಡಲ್ಪಟ್ಟವರಾಗಿ ಲಜ್ಜಾನ್ವಿತೆಯ ರಾಗಿರುವಾಗ, ಆ ಜಗತ್ಸ್ವಾಮಿಯು ಅವರುಗಳಂ ನೋಡಿ, ಎಲೆ, ಭದ್ರೆಯರಿರಾ! ನೀವು ನಿಮ್ಮ ಮನೋಭೀಷ್ಟವಂ ಪೇಳಿರಿ, ನಿಮ್ಮ ವಾಕ್ಯವಂ ಸಲ್ಲಿಸುವೆನೆಂದು ಈ ರೀತಿಯಿಂ ಪೇಳುತ್ತಿರಲಾಗಿ; ಆ ಕನ್ನಿಕೆಯರು ಆ ಸ್ವಾಮಿಯ ವಾಕ್ಯಮಂ ಕೇಳಿ, ಪ್ರೀತಿ ಹೃದಯೆಯರಾಗಿ, ಎಲೈ, ಜಗದ್ವಂದ್ಯನೆ! ಜಗನ್ನಾಥನೆ; ಪಾರ್ವತೀ ಪರಮೇಶ್ವರರಿಗೆ ಹೃದಯಂಗಮನಾದ ಕುಮಾರಸ್ವಾಮಿಯೇ! ನಾವು ನಿಮಿಗೆ ಪತ್ನಿಯರಾಗಿಯಿರುವಭಾವಮಂ ಅಪೇಕ್ಷಿಸಿ, ಚಿರಕಾಲಂ ತಪಸ್ಸು ಮಾಡಿದ ಕಾರಣದಿಂ

ಪ್ರಸನ್ನನಾಗಿ ನಮ್ಮ ಪಾಣಿಗ್ರಹಣಮಂ ಮಾಡೆಂದು ನುಡಿದರು. ಎಲೈ, ಮುನಿಗಳಿರಾ! ಈರೀತಿಯಾಗಿ ಇವರಿಂ ಪ್ರಾರ್ಥಿತನಾದ ಆ ಕುಮಾರಸ್ವಾಮಿಯು ಮರಳಿ ಇವರುಗಳಿಗೆ ಪೇಳುವನದೆಂತೆನೆ:—ಎಲೌ, ಕನ್ನಿಕೆಯರಿರಾ! ನಿಮ್ಮ ಕಾಂಕ್ಷೆಯನ್ನು ಪೂರ್ಣವಂ ಮಾಡೇವು, ಎಲೆ, ಅಮೃತವಲ್ಲಿಯೆ! ನೀನು ನಮ್ಮ ಆಜ್ಞೆಯಿಂ ಸ್ವರ್ಗಲೋಕಮನೈದಿ, ದೇವೇಂದ್ರನ ಸಮೀಪಸ್ಥೆಯಾಗಿಯಿರುವ ಸಮಯ ಬಂದಲ್ಲಿ ಪಾಣಿಗ್ರಹಣಮಂ ಮಾಡುತ್ತಿರ್ಧೇನೆ. ಸೌಂದರ್ಯವಲ್ಲಿಯೆ, ನೀನು ಭೂಲೋಕಮನೈದಿ ಶಿವಮುನಿ ಸಮೀಪಸ್ಥೆಯಾಗಿ ಇರುವ ಕಾಲವೊದಗಿದಲ್ಲಿ ಪಾಣಿಗ್ರಹಣಮಂ ಮಾಡುವೆನೆಂದು ಈ ಪ್ರಕಾರಮಾಗಿ ವಿಶಾಲಾಕ್ಷಿಗಳ್ಗೆ ಪೇಳ್ದು, ಮಾತಾಪಿತೃಗಳಪಾದಮಂ ಧ್ಯಾನಿಸಿ, ಕೈಲಾಸ ವಾಸಿಗಳಾದ ಪಾರ್ವತೀ ಪರಮೇಶ್ವರರುಗಳ ಸಮೀಪಮನೈದಿ, ಅವರ ಪಾದಂಗಳ್ಗೆ ನಮಸ್ಕಾರಂಗಳಂ ಮಾಡಿ, ಬದ್ಧಾಂಜಲಿ ಪುಟರಾಗಿ ಆ ಸ್ವಾಮಿಗಳ ಮುಖಮಂ ನಿರೀಕ್ಷಿಸಿಕೊಂಡಿರುತ್ತಿರಲಾಗಿ, ಆದಂಪತಿಗಳು ಆ ಸ್ವಾಮಿಯಂ ಆಲಿಂಗಿಸಿ ಆತನಮುಖ ಪಂಕಜಮಂ ಆಘ್ರಾಣಿಸಿ ತೃಪ್ತಿಯನ್ನೈದದೆ ತಮ್ಮ ತೊಡೆಗಳ ಮೇಲೇರಿಸಿಕೊಂಡು ಲಾಲಿಸುತ್ತ, ತಮ್ಮಿರ್ವರ ಮಧ್ಯದಲ್ಲಿರಿಸಿಕೊಂಡು ಸಂತೋಷದಿಂ ದಿದ್ದರು. ಆಸಮಯದಲ್ಲಿ ಗಣಾಧೀಶ್ವರರುಗಳು ಪಾರ್ವತೀ ಪರಮೇಶ್ವರರುಗಳ ಮಧ್ಯದಲ್ಲಿರುವ ಕುಮಾರನಂ ಕಂಡು ಮೋಕ್ಷಸಾಂಬ್ರಾಜ್ಯಾಧಿ ಪತಿಯೆಂದು ತಿಳಿದರು. ಎಲೈ, ಮುನಿಗಳಿರಾ! ಈಗಲುಂ ಯಾವಮನುಷ್ಯರು ಸಾಂಬನಾಗಿ ಸುಕುಮಾರನಾಗಿಹ ಆಜಗದೀಶ್ವರನಂ ಧ್ಯಾನಮಂಮಾಡುತ್ತಿದ್ದಾರೊ ಅವರುಗಳು ಧನ್ಯರು. ಧರಣಿಯಲ್ಲಿ ಅವರುಗಳು ದೇವತೆಗಳಿಂದ ವಂದ್ಯರು.

ಶಿವ ಶಿವೆಯರು ಪುತ್ರಲಾಲನಾಪರರಾಗಿರುವಾಗ ನಾರಾಯಣಾದಿಗಳು ಸಂದರ್ಶನವನ್ನು ಕುರಿತು ನಂದೀಶ್ವರನಂ ಪ್ರಾರ್ಥಿಸುವಿಕೆ.

ಆಮೇಲೆ ಸಾಂಬನಾದ ಶಿವನು ಸ್ಮಿತವದನದಿಂದಿರಲಾಗಿ ಆ ಸಮಯದಲ್ಲಿ ವಿಷ್ಣು ಮೊದಲಾದ ಸಮಸ್ತ ದೇವತೆಗಳು ತಮ್ಮ ಸ್ಥಿತಿ ಹೀನರಾಗಿ ಕೈಲಾಸ ಪರ್ವತವನ್ನೈದಿ, ಸಮಯಮಂ ತಿಳಿದು ತ್ವರಿತದಿಂ ಆ ಗಿರಿಯನ್ನೇರಿ, ರಾಜಗೃಹದ್ವಾರಮಂ ಕಂಡು ನಾರಾಯಣೇಂದ್ರ ಪ್ರಜಾಪತಿ ಮೊದಲಾದ ಸಮಸ್ತ ದೇವತೆಗಳುಂ ಆ ದ್ವಾರದಲ್ಲಿ ಗಣಾಧಿಪತಿಯಾದ ನಂದಿಕೇಶ್ವರನಂ ಕಂಡು ಅವರ ಪಾದಗಳ ಅರ್ಚನೆಯಂ ಮಾಡಿ ಮುಕುಳಿತಹಸ್ತಾಬ್ಜಂಗಳುಳ್ಳವರಾಗಿ ವ್ಯಕ್ತವಾದ ಸ್ತೋತ್ರಮಂ ಮಾಡಿ, ವಿನಯವಂತರಾಗಿ ಬಿನ್ನವಿಸಿದರದೆಂತೆನೆ, ಎಲೈ ನಂದಿಕೇಶ್ವರನೆ! ಜಗತ್ಸ್ವಾಮಿಯೆ! ಸರ್ವೇಶ್ವರನಿಗೋಸ್ಕರ ನಮ್ಮ ಆಗಮನವಂ ಪೇಳಿ ನಮ್ಮ ಆರ್ತಿಯಂ ಪೋಗಲಾಡಿಸಿ ನಮಗೆ ಸೌಖ್ಯಮನುಂಟುಮಾ

ಡೆಂದು ಪೇಳಿಕೊಂಡ ಆ ದೇವತೆಗಳ ವಾಕ್ಯಮಂ ಕೇಳಿ ಶಿಲಾದಮುನಿಯ ಕುಮಾರನಾದ ನಂದಿಕೇಶ್ವರನು, ವಿಚಿತ್ರಕೃತ್ಯಂಗಳುಳ್ಳ ಆ ಪಾರ್ವತೀ ಪರಮೇಶ್ವರರ ಸಮಯಮಂ ತಿಳಿದು ಹಿಂತಿರುಗಿ ಬಂದವನಾಗಿ, ಎಲೈ ದೇವತೆಗಳಿರಾ! ನಿಮಗೀಗ ಈಶ್ವರನ ಸೇವಾಸಮಯವಾಗದು; ಸಮಯಬಂದಲ್ಲಿ ಸ್ವಾಮಿಯ ದರ್ಶನವುಂಟಾದೀತು ಇಲ್ಲಿಯೇ ಇರಿರೆಂದು ಪೇಳಿದನು. ಬಳಿಕ ಆ-ವಾಕ್ಯಮಂ ಕೇಳಿ ಸಮಸ್ತವಾದ ದೇವತೆಗಳು ಶಿಲಾದಮುನಿಯ ಶಿಖರದಲ್ಲಿ ಬಹುಕಾಲವಿದ್ದು ಬಳಿಕ ಉಮಾಪತಿಯಾದ ದಯಾಸಿಂಧುವಾದ ಆ ಮಹೇಶ್ವರನ ದರ್ಶನಮಂ ಬಯಸಿ ಮರಳಿ ನಂದಿಕೇಶ್ವರನಂ ಪ್ರಾರ್ಥಿಸಿ ಆ ಮೇಲೆ ಆ ನಂದಿಕೇಶ್ವರನು ಅಂತಃಪುರಮಂ ಪ್ರವೇಶಿಸಿ ದೇವನಾದ ಉಮಾಪತಿಯ ಪಾದಂಗಳ್ಗೆ ನಮಿಸಿ, ವಿಷ್ಣು ಮೊದಲಾದ ದೇವತೆಗಳ ಆಗಮನಮಂ ಬಿನ್ನೈಸಿದನು, ಎಂತೆಂದರೆ, ಎಲೈ ಸರ್ವೇಶ್ವರನಾದ ದೇವನೆ! ಶೂರಪದ್ಮನಿಂ ಹತಪರಾಕ್ರಮಿಗಳಾದ ವಿಷ್ಣು ಮೊದಲಾದ ಸಕಲ ದೇವತೆಗಳುಂ ಬಂದು, ದೇವನಾದ ನಿಮ್ಮ ದರ್ಶನಮನಪೇಕ್ಷಿಸಿ ಅನನ್ಯ ಶರಣರಾಗಿ ಬಹುಕಾಲಂ ದ್ವಾರದಲ್ಲಿ ನಿಂತಿಥಾರೆ. ನಿಮ್ಮ ಕುಮಾರನು ಚರಾಚರಗಳಾದ ಅವರುಗಳಲ್ಲಿ ಅನುಗ್ರಹಮಂ ಮಾಡಲಿ ಎಂದನು ವಿಜ್ಞಾಪಿಸಿದನು ಬಳಿಕ ಸಕಲ ಜಗತ್ಪ್ರಾಣಿಗಳಿಗೂ ಸ್ವಾಮಿಯಾದ ಕುಮಾರ ಸಹಿತನಾದ ಷಡ್ಗುಣಸಂಪತ್ತುಳ್ಳ ಪರಮೇಶ್ವರನು ಆ ಸುರೇಂದ್ರರುಗಳ ಮುನೀಂದ್ರರುಗಳ ಮತ್ತೆ ಯೋಗಿಗಳ ಪ್ರದೇಶದಲ್ಲಿ ದೃಷ್ಟಿಯಿಂದ ಅನುಗ್ರಹಮಂ ಪಾಲಿಸಿದನು. ಆ ಮೇಲೆ ನಂದಿಕೇಶ್ವರನು ಸರ್ವ ಸುರೋತ್ತಮರುಗಳಂ ದೇವದೇವನ ಸಮೀಪವನ್ನೈದಿಸಿದನು.

ಆಗ ಈ ದೇವತೆಗಳು ಮಹತ್ತಾದ ಯತ್ನದಿಂ ಸ್ವಾಮಿಯ ಸನ್ನಿಧಿಯನ್ನೈದಿ ಸಾಂಬನಾದ ಕುಮಾರ ಸಹಿತನಾದ ಅವ್ಯಯನಾದ ಸರ್ವಜ್ಞನಾದ ಸರ್ವಕರ್ತೃವಾದ ಸರ್ವಲೋಕ ಮಹೇಶ್ವರನಾದ ಮಹಾದೇವಂಗೆ ನಮಸ್ಕರಿಸಿ ಉತ್ತಮಂಗಳಾದ ಅರ್ಥಂಗಳುಳ್ಳ ವಾಕ್ಯಗಳಿಂ ಸಮುಖನಾದ ಆ ಪರಮೇಶ್ವರನಂ ಶರವಣವನ್ನೈದಿದರು. ಆ ಮೇಲೆ ನಂದಿಕೇಶ್ವರನು ಗಜಚರ್ಮಾಂಬರನಾದ ಆ ಸ್ವಾಮಿಯ ಸಮೀಪಮಂ ಮುಂದಗೈದಿ, ಆ ಪರಮೇಶ್ವರನಂ ಕುರಿತು ಸರ್ವಜ್ಞನಾದ ಶಂಭುವಾದ ತ್ರಿಪುರಹರನಾದ ವಿಭುವಾದ ದೇವದೇವನಾದ ತ್ರಿಶೂಲಿಯಾದ ಎಲೈ ಸ್ವಾಮಿಯೆ! ನಿಮ್ಮ ಪಾದಾಂಭೋಜಯುಗ್ಮದಲ್ಲಿ ಪ್ರಣತರಾದ ಸಕಲ ಮುನಿಗಣ ಯುಕ್ತರಾದ ಇಂದ್ರನೊಡಗೂಡಿ ಸಾಧ್ಯರಿಂವೆರಸಿದ ಮತ್ತೆ ವಿಷ್ಣುಪದ್ಮಾಸನ ಮೊದಲಾದ ದೇವತೆಗಳು ನಿಮ್ಮ ಪಾದಾರವಿಂದ ದರ್ಶನದಿಂದ

ನರಾಧಮರ ತೆರದಿ ಕೃತಾರ್ಥರಾದರೆಂದು ಪರಮೇಶ್ವರಂಗೆ ಪೇಳಿದನೆಂದು ಶೌನಕಾದಿ ಮುನಿಗಳಿಗೆ ಸೂತಂ ಪೇಳ್ದನೆಂಬಲ್ಲಿಗೆ ಮುವ್ವತ್ತಾರನೆಯ ಅಧ್ಯಾಯವು ಸಂಪೂರ್ಣಂ.

ಮುವ್ವತ್ತ್ರೇಳನೆಯ ಅಧ್ಯಾಯವು.

ನಾರಾಯಣಾದಿಗಳ ಪ್ರಾರ್ಥನೆ, ಕುಮಾರಸ್ವಾಮಿಗೆ ಪರಶಿವನ ಅನುಜ್ಞೆ, ವರಪ್ರದಾನ.

ಎಲೈ ಮುನಿಗಳಿರಾ! ಅನಂತರದಲ್ಲಿ ದೇವತೆಗಳು ಸಮಸ್ತ ಮುನಿಗಳು ಕೃತಾಂಜಲಿ ಹಸ್ತರಾಗಿ ಅವ್ಯಯನಾದ ಅಂಬಿಕಾಪತಿಯಾದ ಮಹಾದೇವಂಗೆ ಬಿನ್ನಪಂ ಗೈದಿರದೆಂತೆನೆ, ಸರ್ವೇಶ್ವರನಾದ ಭಗನೇತ್ರಹಾರಿಯಾದ ಅಸುರ ಮರ್ದನನಾದ ಷಡ್ಗುಣೈಶ್ವರ್ಯ ಸಂಪನ್ನನಾದ ಎಲೈ ಮಹಾದೇವನೆ! ಶೂರಪದ್ಮ ಮೊದಲಾದ ಅಸುರರಿಂ ಚಿರಕಾಲದಿಂ ಬಾಧಿತರಾದ ನಮ್ಮಂ ಕೃಪಾಬಲದಿಂದ ರಕ್ಷಿಸು ರಕ್ಷಿಸು; ನಿಮ್ಮ ಕುಮಾರನಿಂ ಸುರದ್ವೇಷಿಗಳಾದ ಆ ದೈತ್ಯರಂ ಸಂಹಾರಮಂ ಮಾಡಿಸು, ಹೀಗೆಂದು ದೇವತೆಗಳು ಬಿನ್ನಹಂ ಮಾಡಿ ಮುದದಿಂ ಸನ್ನಿಧಿಯಲ್ಲಿ ನಿಂತಿರ್ದರು. ಅನಂತರದಲ್ಲಿ ಪ್ರಸನ್ನ ಹೃದಯನಾದ ಆ ಮಹಾದೇವನು ಸಮಸ್ತರಾದ ಆ ದೇವತೆಗಳಂ ಸಮಸ್ತವಾದ ಜಗತ್ತುಗಳಂ ರಕ್ಷಿಸಲೋಸುಗ ಪಾರ್ವತೀದೇವಿಯೊಡನೆ ಬಹು ಪ್ರಕಾರವಾಗಿ ಯೋಚಿಸಿ ಕುಮಾರಸ್ವಾಮಿಯಂ ಆಲಿಂಗಿಸಿ ಮೂರ್ಧ್ನಿಯಲ್ಲಿ ಆಘ್ರಾಣಮಂ ಮಾಡಿ ಒಂದು ವಾಕ್ಯಮಂ ನಿರೂಪಿಸಿದನು.

ಎಲೈ ಕುಮಾರನೆ! ನಮ್ಮ ಆಜ್ಞೆಯಿಂದ ಈಗ ದೇವ ಶತೃಗಳಾದ ಅಸುರರಂ ಪರಿಹರಿಸು, ದುರಾತ್ಮರಾದ ಶೂರಪದ್ಮ ಸಿಂಹವಕ್ತ್ರ ತಾರಕರಂ ಪುತ್ರಮಿತ್ರ ಸಂಬಂಧಿ ಜ್ಞಾತಿಗಳ್ವೆರಸಿದ ಸರ್ವದಾನವರಂ ಸಂಹರಿಸು, ನಿನಗೆ ಎಲ್ಲಾ ಕಡೆಯಲ್ಲಿ ಜಯವುಂಟಾಗಲಿ, ಒಂದು ಕಡೆಯಲ್ಲಿಯೂ ಅಪಜಯವಾಗಬೇಡ, ಹೀಗೆಂದು ಆ ಮಹಾದೇವಂ ತನ್ನ ಕುಮಾರನಿಗಾಜ್ಞಾಪಿಸಿ, ತನ್ನ ಸಂಬಂಧವಾದ ಏಕಾದಶ ರುದ್ರರುಗಳಂ ಅಸ್ತ್ರಂಗಳಂ ಮಾಡಿ, ಸರ್ವ ಶತೃಸಂಹಾರಿಯಾದ ಒಂದು ಶಕ್ತಿಯಂ ಮನಸ್ಸಿನಿಂ ನಿರ್ಮಾಣಮಂ ಮಾಡಿದನಲ್ಲದೆ ತೋಮರ, ಧ್ವಜ, ಖಡ್ಗ, ಕುಂತ, ಕುಲಿಶ, ಪಾಶ, ಘಂಟಾ, ಕಮಲ, ಕೋದಂಡ, ಚಾಪ, ಪರಶು, ತ್ರಿಶೂಲವೆಂಬ ಏಕಾದಶ ರೌದ್ರಾಸ್ತ್ರಂಗಳಂ ಶಕ್ತಿಯೆಂಬ ಆಯುಧ ಮೊಂದಂ ಇಂತೀ ದ್ವಾದಶಾಯುಧಂಗಳಂ ದ್ವಾದಶಾದಿತ್ಯರ ಕಾಂತಿಯುಳ್ಳ ಕುಮಾರಸ್ವಾಮಿಗೆ ಕೊಟ್ಟನು. ಮತ್ತೆ ಸಹಸ್ರಾದಿತ್ಯರಿಗೆ ಸಮಾನಮಾದ ಸರ್ವ ಶಸ್ತ್ರಂ

ಗಳ್ಗೆ ಶ್ರೇಷ್ಠಮಾದ, ಸಹಸ್ರ ಧಾರೆಗಳೊಡನೆ ಯುಕ್ತಮಾದ ಚಕ್ರವನ್ನೂ, ನಾನಾರತ್ನಯುಕ್ತಮಾದ ಸರ್ವಾಯುಧಂಗಳಿಂದ ಭೇದ್ಯವಾದ ಸ್ವರ್ಣಕವಚಮುಂ ಅಕ್ಷಯ ಸಾಯಕಗಳಿಂದ ಪೂರ್ಣಮಾದ ಬತ್ತಳಿಕೆಗಳನ್ನೂ ಸರ್ವಶತ್ರುವಿನಾಶಕರವಾದ ಶಿವಮಹಾಮಂತ್ರವನ್ನೂ ಸಹಾ ಕೊಟ್ಟನು.

ಎಲೈ ಮುನಿಗಳಿರಾ ! ಅನಂಗ ವೈರಿಯಾದ ಅಮರಾಗ್ರಣಿಯಾದ ವಿಶ್ವಾಧೀಶನಾದ ಜಗದೀಶ್ವರಂ ಹೀಗೆ ಅಸ್ತ್ರಸಂಪನ್ನನಾದ ತಮ್ಮ ಕುಮಾರನಂ ಆಲಿಂಗಿಸಿ ಆತನ ಮುಖಕಮಲಮಂ ಆಘ್ರಾಣಿಸಿ, ಈತನಂ ಕಳುಹಿದನು. ಆ ಮೇಲೆ ಸಾಕ್ಷಾತ್ತಾಗಿ ಜಗನ್ಮಾತೃವಾದ ಸರ್ವಲೋಕ ಮಹೇಶ್ವರಿಯಾದ ಆ ಪಾರ್ವತೀ ದೇವಿಯು ಸರ್ವಾಸ್ತ್ರಗಳಿಂ ಪರಿವೃತನಾದ ತಮ್ಮ ಕುಮಾರನಂ ಆಲಿಂಗಿಸಿ, ಮೂರ್ಧ್ನಿಯಲ್ಲಿ ಆಘ್ರಾಣಮಮ್ಮಾಡಿ ಸಂತೋಷಯುಕ್ತೆಯಾಗಿ ಎಲೈ ಪುತ್ರನೇ! ದೇವಶತ್ರುಗಳಾದ ದೈತ್ಯರಂ ಸಂಹರಿಸೆಂದು ಆಶೀರ್ವಾದಂಗಳಂ ಕೊಟ್ಟು ಕಳುಹಿದಳು. ಆ ಬಳಿಕ ಜಗತ್ಪತಿಯಾದ ದೇವಕಾರ್ಯದಲ್ಲಿ ಉದ್ಯುಕ್ತನಾದ ಸೇನಾಪತಿಯಾದ ಆ ಕುಮಾರಸ್ವಾಮಿಯು, ಮಾತಾಪಿತೃಗಳಿಗೆ ಪ್ರದಕ್ಷಣವಂಮಾಡಿ, ಅವರ ಪಾದವಂದನೆಯಂಗೆಯ್ದು ನಿಂತಿರಲಾಗಿ, ಆ ಕುಮಾರಸ್ವಾಮಿಯಲ್ಲಿ ಬಹು ಪ್ರೀತಿಯುಕ್ತನಾದ ವಿಭುವಾದ ಆ ಪರಮೇಶ್ವರನು ಕುಮಾರಸ್ವಾಮಿಗೆ ವೀರಬಾಹು ಮೊದಲಾದ ಗಣಾಧೀಶ್ವರರುಗಳ ನಿಯುತಮಂ ಮತ್ತೆ ಧರಿಸಲ್ಪಟ್ಟ ಶಸ್ತ್ರಾಸ್ತ್ರ ಸಂಪತ್ತುಗಳ ದ್ವಿಸಹಸ್ರವಾಹಿನಿಗಳಂ ಧೀರರಾದ ಸೇನಾಧಿಪತಿಗಳ ಅಷ್ಟೋತ್ತರ ಶತಮಂ ಸಹಾಯಾರ್ಥಮಾಗಿ ಕೂಡಿಸಿ ವಿಷ್ಣು ಬ್ರಹ್ಮ ಮೊದಲಾದ ದೇವತೆಗಳಿಗೆ ಪೇಳ್ವನದೆಂತೆನೆ. ಎಲೈ ಸುರರುಗಳಿರಾ ! ಕುಮಾರಸ್ವಾಮಿಯು ಅರ್ಧಾರ್ಧ ಕ್ಷಣಮಾತ್ರದಲ್ಲಿ ನಿಮ್ಮ ಶತ್ರುಗಳಂ ಜಯಿಸುವನು. ನೀವು ಈತನ ಪರಾಕ್ರಮಮಂ ನೋಡಿರಿ. ಬ್ರಹ್ಮಾದಿಗಳಾದ ಮುನಿಗಳೊಡನೆಯುಂ ಸಿದ್ಧರುಗಳೊಡನೆಯುಂ ಸಹ ನಿರ್ಭಯರಾಗಿ ಪೋಗಿರೆಂದು ಆಜ್ಞಾಪಿಸಿ ತಾನು ಪಾರ್ವತೀದೇವಿಯೊಡನೆ ಅಂತಃಪುರವನ್ನೈದಿದನು.

ಕುಮಾರಸ್ವಾಮಿಗೆ ನಾರಾಯಣಾದಿಗಳು ರಾಕ್ಷಸ ಸಂಹಾರದಲ್ಲಿ ಸಂತಸಗೊಂಡು ಸಹಾಯಕರಾಗುವಿಕೆ.

ಆ ಮೇಲೆ ವಿಷ್ಣು ಮೊದಲಾದ ದೇವತೆಗಳು ಕುಮಾರಸ್ವಾಮಿಗೆ ನಮಸ್ಕರಿಸಿ ಅನೇಕ ಸ್ತೋತ್ರಂಗಳಿಂ ಸ್ತುತಿಸಿ, ಆ ಸ್ವಾಮಿಯ ಬಳಿವಿಡಿಗೈದರದೆಂತೆನೆ. ಬಳಿಕ ಮಾಧವನಾದ ಅಸುರಾರಿಯಾದ ವಿಷ್ಣುವು ವಾಯುವಂ ಮನೋವೇಗವುಳ್ಳ ಕುಮಾರಸ್ವಾಮಿಯ ಮಹಾ ರಥವಂ ವಹಿಸುವ ನಿಯುತ ತುರಂಗಂಗಳಿಗೆ ಸಾರಥಿಯಾಗಿ ಮಾಡಿದನು. ಆಕಾಶದಲ್ಲಿ ನಾನಾಧ್ವನಿಯುಳ್ಳ

ದೇವದುಂದುಭಿಗಳ್ ಮೊಳಗಿದವು. ದೇವತೆಗಳು ಪುಷ್ಪವರುಷಂಗಳಂ ವರ್ಷಿಸಿದರು. ಲಾಜಂಗಳಂ ಚಲ್ಲಿದರು ಜಟಾಧಾರಿಗಳಾದ ಸರ್ವಮುನಿಗಳು ದೃಢಹಸ್ತರಾಗಿ ನರ್ತನವನ್ಮಾಡಿದರು. ಕಿನ್ನರ ಗಂಧರ್ವ ಕಿಂಪುರುಷಾಂಗನೆಯರು ಗಾನವನ್ಮಾಡಿದರು. ವಸಿಷ್ಠ ಮೊದಲಾದ ಬ್ರಹ್ಮರ್ಷಿಗಳು ನಾರದರು ಮೊದಲಾದ ದೇವರ್ಷಿಗಳು ಕುಮಾರಸ್ವಾಮಿಗೆ ವಿಜಯಪ್ರದಂಗಳಾದ ಶುಭಮಂತ್ರಗಳಂ ಪಠಿಸಿದರು. ಸಮಸ್ತ ಲೋಕಂಗಳಿಗೆ ಮಾತೃಗಳಾದ ಮುನಿಪತ್ನಿಗಳುಂ ಕಲ್ಯಾಣಮನಸ್ಸುಳ್ಳ ಸುಮುಖರಾದ ನಾಗಕನ್ನಿಕೆಯರುಂ ಗಾನವಮಾಡಿದರು. ಬ್ರಹ್ಮನು ಭಗವಂತನಾದ ವಿಷ್ಣುವು, ದೇವಶಿಲ್ಪಿಯಾದ ತ್ವಷ್ಟುವು, ವೀರಸೈನ್ಯಗಳುಳ್ಳ ವೀರಬಾಹು ಪ್ರಮುಖರಾದ ವೀರರುಗಳಿಗೆ ನಾನಾ ವಿಕಾರಂಗಳುಳ್ಳ ನಾನಾ ವಾಹನಂಗಳುಳ್ಳ ಅನೇಕ ರಥಂಗಳುಳ್ಳ ದಿವ್ಯಾಯುಧಗಳನ್ನು ದಿವ್ಯ ಕವಚಂಗಳನ್ನು ಮಾಡಿಕೊಟ್ಟರು. ಆಗ ಕೆಲವರು ಸಿಂಹವಾಹಕ ರಥಂಗಳುಳ್ಳವರಾಗಿಯೂ ಮತ್ತೆ ಕೆಲವರು ಗಜವಾಹಕ ರಥಂಗಳುಳ್ಳವರಾಗಿಯೂ ಇನ್ನು ಕೆಲವರು ವ್ಯಾಘ್ರವಾಹಕರಥಂಗಳುಳ್ಳವರಾಗಿಯೂ, ಕೆಲವರು ಭೂತವಾಹಕರಥಂಗಳುಳ್ಳವರಾಗಿಯೂ ಇನ್ನು ಕೆಲವರು ಭೇತಾಳವಾಹಕರಥಗಳುಳ್ಳವರಾಗಿಯೂ, ಕೆಲವರು ಸರ್ಪವಾಹಕ ರಥಂಗಳುಳ್ಳವರಾಗಿಯೂ ಮತ್ತೆ ಕೆಲವರು ಅಶ್ವವಾಹಕರಥಂಗಳುಳ್ಳವರಾಗಿಯೂ ಈ ಪ್ರಕಾರಮಾದ ಕಟ್ಟಲ್ಪಟ್ಟ ದಟ್ಟಗಳುಳ್ಳ ಆಯುಧಗಳಂ ಧರಿಸಿ, ಸನ್ನದ್ಧರಾಗಿ ದಶದಿಕ್ಕುಗಳಂ ಧ್ವನಿಮಾಡುತಿರ್ಪ ಸಮಸ್ತ ರಥಿಕರು ಪೂರ್ವಾಭಿಮುಖವಾಗೈದುತ್ತಾ ದಕ್ಷಿಣಾಭಿಮುಖವನ್ನೈದಿದರು. ಭೂತಗಣಂಗಳು ರಥಗಳಿಂದಲುಂ ಗಜ ತುರಗ ಪದಾತಿಗಳಿಂದಲುಂ ಸೈನ್ಯಂಗಳಿಂದಲುಂ ಏಳಲ್ಪಟ್ಟ ಧೂಳಿಗಳಿಂದ ದಶದಿಕ್ಕುಗಳನ್ನಾಚ್ಛಾದನವಂ ಮಾಡುವರಾಗಿ. ಮಹತ್ತಾದ ಸೈನ್ಯಘೋಷದಿಂ ಸಮುದ್ರಧ್ವನಿಯಂ ಜಯಿಸಿ, ಕುಲಾಚಲಮಾದ ಗಂಧಮಾದನ ಪರ್ವತಮನ್ನೈದಿದರು. ಪ್ರಥಮದ ಕುಮಾರಸ್ವಾಮಿಯ ಪರಾಕ್ರಮವೈದಿತು. ಅನಂತರದಲ್ಲಿ ಸೈನ್ಯದಲ್ಲಿರುವ "ದುಂದುಭಿ ನಿಸ್ಸಾಳ, ಆನಕ, ಕಹಳೆ, ಶಂಖ, ಕೊಂಬು" ಎಂಬಿವು ಮೊದಲಾದ ವಾದ್ಯ ಧ್ವನಿಗಳೈದಿದವು. ಅನಂತರದಲ್ಲಿ "ರಥ ಗಜ ಅಶ್ವ ಪದಾತಿ ಚಕ್ರಪಾದ ಕೊಳಗರ್ಳ" ಚರಣಗಳಿಂದೇಳಲ್ಪಟ್ಟ ರಜಸ್ಸಮೂಹಂ ಸೂರ್ಯಮಂಡಲಮಂ ಮುಚ್ಚಿತು. ಕೂಡಲಿ ಪದಾತಿಗಳ್ ಅತಿ ವೇಗವುಳ್ಳ ತುರಂಗಗಳುಂ ಅತಿ ಮದವುಳ್ಳ ಗಜಂಗಳುಂ ಮಹತ್ತಾದ ರಥಂಗಳುಂ ಯೈದಿದ ಬಳಿಕ, ಉಗ್ರಪರಾಕ್ರಮಿಗಳಾದ ಅಷ್ಟೋತ್ತರ ಶತಸೇನಾಪತಿಗಳೈದಿದರು. ಆ ಮೇಲೆ ಶೂರರಾದ ಮಹಾ ಬಲಶಾಲಿಗಳಾದ ವಿಂಶತಿ ಸಹಸ್ರ ಗಣಾಧ್ಯಕ್ಷರುಗಳುಂ, ಅನಂತರದಲ್ಲಿ

ಮಹಾ ರಥಿಕರಾದ ವೀರಬಾಹು ಪ್ರಮುಖರಾದ ವೀರರುಂ, ಜಗತ್ಪತಿಯಾದ ದೇವಸೇನಾಪತಿಯಾದ ಕುಮಾರಸ್ವಾಮಿಯುಂ ಪರಿವೇಷ್ಟಿಸಿಕೊಂಡ್ಬೈದಿದರು. ಆ ಮೇಲೆ ವಸಿಷ್ಠರು ಮೊದಲಾದ ರುಷಿಗಳುಂ ತದನಂತರದಲ್ಲಿ ದೇವತೆಗಳುಂ ಇವರುಗಳ ಪತ್ನಿಗಳುಂ ಈ ಪ್ರಕಾರವಾಗಿ ಸಮಸ್ತರುಂ ಹೇಮಕೂಟಾದ್ರಿಯು ನ್ನೈದಿದರು. ಆ ಹೇಮಕೂಟಾದ್ರಿಯಲ್ಲಿ ಚತುರ್ಮುಖ ದೇವಸಮೇತರಾದ ಮಾಧವ ಇಂದ್ರ ದಿಕ್ಪಾಲಕರು ಮೊದಲಾದ ದೇವತೆಗಳು ಕ್ರೌಂಚಾದ್ರಿಯಂ ಕಂಡು ಭಯಕಂಪಿತ ಮನಸ್ಸುಳ್ಳವರಾಗಿ, ಆ ತಾರಕಾಸುರನಿಂ ಪ್ರಾಗ್ಯಾ ್ರವಿತ ವಾದ ಆ ಮಾಯಾಪುರಮಂ ನಿರೀಕ್ಷಿಸಿ, ಭಯದಿಂ ಚೆದರಿ, ಜಗತ್ಪತಿಯಾದ ಕುಮಾರಸ್ವಾಮಿಯ ಮರೆಯಂ ಪೊಕ್ಕರು. ಅನಂತರದಲ್ಲಿ ಮುನಿವರನಾದ ಶ್ರೀಮಂತನಾದ ಸ್ವಾಮಿಗೆ ಅತಿ ಪ್ರಿಯನಾದ ವೀಣಾವಾದ್ಯ ವಿಶಾರದನಾದ ಮುನಿಯು ಆ ಸ್ವಾಮಿಗೆ ನಮಸ್ಕಾರವಮ್ಮಾಡಿ, ಬದ್ಧಾಂಜಲಿಪುಟನಾಗಿ ಬಿನ್ನಹಂ ಮಾಡಿದನೆಂಬಲ್ಲಿಗೆ ಮುವ್ವತ್ತೇಳನೆಯ ಅಧ್ಯಾಯವು ಸಂಪೂರ್ಣಂ.

ಮುವ್ವತ್ತೆಂಟನೆಯ ಅಧ್ಯಾಯವು.

ನಾರದರು ಕುಮಾರಸ್ವಾಮಿಗೆ ತಾರಕಾಸುರನ ನೆಲೆಯಂ ತಿಳುಹುವಿಕೆ.

ಎಲೈ ಮುನಿಗಳಿರಾ ! ಅನಂತರದಲ್ಲಿ ನಾರದಮುನಿಯು ಪಾರ್ವತೀನಂದನ ನಾದ ಸ್ವಾಮಿಯಾದ ಭಕ್ತಸಂರಕ್ಷಕನಾದ ಸೇನಾಪತಿಯಾದ, ದೇವತೆಗಳ್ಗೆ ಪ್ರೀತಿವರ್ಧಕನಾದ ಆ ಕುಮಾರನಂ ಕುರಿತು, ಎಲೈ ಕುಮಾರಸ್ವಾಮಿಯೆ ! ಕ್ರೌಂಚನು ಪೂರ್ವದಲ್ಲಿ ಅತಿ ರೌದ್ರನಾದ ಮಹಾ ಸುರನಾಗಿ ಅಗಸ್ತ್ಯಮುನಿಯ ಶಾಪದಿಂದ ಪರ್ವತ ಭಾವವನ್ನೈದಿದನು. ಮಹಾ ಕಾಯನಾದ ಸರ್ವಲೋಕ ಭಯಂಕರನಾದ ಮಹಾತ್ಮನಾದ ದೇವತಾದ್ವೇಷಿಯಾದ ಈ ಕ್ರೌಂಚನಂ ಸಂಹ ರಿಸು. ಆ ಕ್ರೌಂಚಗಿರಿಯ ಸಮೀಪದಲ್ಲಿ ಆವುದಾನೊಂದು ಪಟ್ಟಣವು ಅತಿ ಭಯಂಕರವಾಗಿ ಕಾಣಲ್ಪಡುತಿರ್ದ್ದೀತು. ಆ ಪುರಿಯಲ್ಲಿ ದುರ್ಮತಿಯಾದ ಶೂರ ಪದ್ಮನಿಗೆ ಅನುಜನಾದ ಮಹಾರೌದ್ರನಾದ ಗಜವಕ್ತ್ರನಾದ ಮಹಾ ಸುರನಾದ ತಾರಕನು, ಅನೇಕ ರಥ ಗಜ ತುರಗ ಪದಾತಿಗಳೆಂಬ ಚತುರಂಗಬಲಕ್ಕೆ ಅಧಿಪತಿ ಯಾಗಿ ಲೋಕಕಂಟಕನಾಗಿ ಮಹಾ ಧೀರನಾಗಿ ಕರುಣಾಲೇಶವರ್ಜಿತನಾಗಿ, ದಿವಾರಾತ್ರಿಯಲ್ಲಿಯೂ ಸುರರಿಗೂ ಭೂಸುರರಿಗುಂ ದ್ರೋಹಶೀಲನಾಗಿ ನಾಸವಮ್ಮಾಡುತ್ತಿದ್ದಾನೆ. ಎಲೈ ಕುಮಾರಸ್ವಾಮಿಯೆ ! ಮಹಾಸೇನೆಯಿಂದ

ಇಷ್ಟಾಪೂರ್ತಾಪಹಾರಿಯಾದ ದುಷ್ಟನಾದ, ದುರಾತ್ಮರುಗಳಿಂ ಯುಕ್ತನಾದ, ಅಸಾಧ್ಯನಾದ ಈತನಂ ಈಗಲೆ ಸಂಹರಿಸು.

ವೀರಬಾಹು ಸೇನಾನಿಗೆ ಕುಮಾರದೇವನ ಯುದ್ಧಾನುಜ್ಞೆ.

ಈ ಪ್ರಕಾರಮಾಗಿ ಆ ದೇವತೆಗಳಿಂ ನಾರದನಿಂ ಪ್ರಾರ್ಥಿಸಲ್ಪಟ್ಟ ದಯಾನಿಧಿಯಾದ ಆ ಕುಮಾರಸ್ವಾಮಿಯು ತಾರಕಾಸುರನ ವಧೆಯಲ್ಲಿ ಮತಿಯನ್ಮಾಡಿ ಅರಿಮರ್ದಕನಾದ ಮಹಾ ವೀರನಾದ ವೀರಬಾಹುವಿಗೆ ಸಹಾಯಮಾಗಿ ಬಲಮಂ ಯೆರಡಾಗಿಭಾಗಿಸಿ ಆ ಬಲಾರ್ಧಮಂ ಐವತ್ತುನಾಲ್ಕು ಸೇನಾಪತಿಗಳ ಮಹಾಗಜಂಗಳುಳ್ಳ ಇಪ್ಪತೆಂಟುಸಾವಿರ ಗಣಾಧಿಪತಿಗಳನ್ನು ಕೊಟ್ಟು, ಮಹಾಬಾಹುವಾದ ವೀರಬಾಹುವಂ ನೋಡಿ ಎಲೈ, ಮಹಾವೀರನಾದ ವೀರಬಾಹುವೆ! ಮಹತ್ತಾದ ಬಲಗಳಿಂದ ಮಾಯಾಪುರಿಯಂಮುತ್ತಿ ದುಷ್ಟನಾದ ಕ್ರೌಂಚಗಿರಿಯಲ್ಲಿಹ ದುರಾತ್ಮನಾದ ಶೂರಪದ್ಮ ನನುಜನಾದ ಸಸೈನ್ಯನಾದ, ಮಂತ್ರಿಸಹಿತನಾದ ಶತ್ರುಗಳಿ ಗಶಕ್ಯನಾದ ದೇವಾರಿಯಾದ ಈ ತಾರಕನಂ ಯುದ್ಧದಲ್ಲಿ ನಿಗ್ರಹಿಸಿ ತ್ವರಿತದಿಂ ಸಂಹಾರವಂಮಾಡು. ಆವುದಾನೊಂದು ಕಾರಣದಿಂ ವಿಷ್ಣು ಮೊದಲಾದ ದೇವತೆಗಳು ನಮಗೆ ಸೇನೆಗಳಾದರೋ ಅದು ಕಾರಣದಿಂದ ನಮ್ಮನ್ನು ಸೇರಿರುವಂಥಾವರ್ಗೆ ಭೀತಿಯೆತ್ತಣದು? ಆವನೋರ್ವನಿಂ ನಮಗೋಸುಗ ಮಾಡಿದಪರಾಧಮಂ ಸಹಿಸೆನು? ನಮಗೆ ಮಾಡಿದ ಅಪರಾಧ ವಿಷಯದಲ್ಲಿ ಆಗ್ರಹವಿಲ್ಲ, ಪರಪುರಂಜಯನಾದ ತಾರಕನು ನಮ್ಮ ಪಾದಕಮಲ ದ್ವಯದಲ್ಲಿ ಭಕ್ತಿಯುಳ್ಳವರ್ಗೆ ಅಪರಾಧಮಂ ಮಾಡುತ್ತಿದ್ದಾನೊ, ಅವರುಗಳಂ ಸಹಿಸಲಾಕೆನು? ಅವರು ದೇವತೆಗಳಲ್ಲಿ ಸರ್ವಕಾಲವು ನಮ್ಮಿಂ ಶಿಕ್ಷಿಸಲು ಯೋಗ್ಯರು, ಕೇಳೆಲೈ ಮಹಾಬಾಹುವಾದ ವೀರಬಾಹುವೆ! ನೀನು ನಮ್ಮಾಜ್ಞೆಯಿಂ ಮುಂದೆ ಶೀಘ್ರದಲ್ಲಿ ಸೇನಾಯುಕ್ತನಾಗಿ ಗಿರಿಯುಪಟ್ಟಣಮಂ ಮುತ್ತಿ, ವಿಚಾರವನ್ಮಾಡದೆ ದೈತ್ಯರೊಡನೆ ಯುದ್ಧವಮಾಡು. ನಾವು ಸೇನಾಯುಕ್ತರಾಗಿ ತ್ವರಿತದಿಂ ಬರುತಿರ್ಥೇವೆ, ನೀಪೋಗೆಂದಾಜ್ಞಾಪಿಸಿ ಮಹಾಬಾಹುವಾದ ಆ ವೀರಬಾಹುವಂ ಕಳುಹಿದನು. ಅನಂತರದಲ್ಲಿ ದೇವನಾಯಕನಾದ ವೀರಬಾಹುವು ಮುಂದೆ ತೆರಳಲಾಗಿ, ದೇವತೆಗಳದಂ ಕಂಡು ಮಹಾ ಸಂತೋಷ ಯುಕ್ತರಾದರು. ಆಸಮಯದಲ್ಲಿ ರಾಕ್ಷಸಪುರದಲ್ಲಿ ಮರಣಸೂಚಕಮಾದ ಬಹು ಭಯಂಕರಮಾದ ಉತ್ಪಾತಂಗಳುಂಟಾದವೆಂತೆನೆ.

ತಾರಕ ರಕ್ಕಸನಿಗುಂಟಾದ ಅಪಶಕುನಗಳು.

ಕಲಭಂಗೆಸಮಾನವಾದ ಮಹಾಮೇಘಂಗಳು ರುಧಿರಗಳಂ ವರ್ಷಿಸಿದವು, ಮತ್ತಮಾ ದಾನವೇಂದ್ರನ ಪ್ರಾಸಾದಗಳಿಂ ಶಿಖರಂಗಳ್ಬಿದ್ದವು. ಆ ಭೂಮಿ

ಯನಂತನ ಪಡೆಯೆಂಬ ರಂಗಸ್ಥಳದಲ್ಲಿ ಹರ್ಷದಿಂ ನರ್ತನವಂ ಮಾಡಿತು. ಮತ್ತ ಮಾಕಸ್ಮಿಕ ಮಾದಗ್ನಿಯು ಜಂಝೂಮಾರುತ ಸಮೇತಮಾಗಿ ಗ್ರಾಮ ಪಳ್ಳಿ ಪುರಂಗಳಂ ದಹಿಸಿತು. ಸಮಸ್ತ ದಿಕ್ಕುಗಳು ದಾವಾಗ್ನಿಯಿಂ ನಾಶ ವನ್ನೈದಿದವು. ಆಗ ಮೇಘವು ವಾಯುವಿನಿಂ ಪ್ರೇರಿತಮಾಗಿ ಧೂಳುಗಳಂ ಕರೆದುದು. ಮಹಾಭಯಮಂ ಕಾಣಿಸುತಿರ್ಪ ಜೆಂಕಿಯುಳ್ಳ ಉರಿಗೊಳ್ಳಿ ಗಳ್ಬಿದ್ದವು. ಮತ್ತಮತಿ ಭಯಂಕರಮಾದ ಮೇಘನಿಃಹಿತಮಾದ ಶಿಡಿಲು ಪುರ ಪ್ರಾಸಾದ ಶಿಖರಂಗಳಂ ಪೊಯಿದುದು. ನಕ್ಷತ್ರರೂಪುಗಳಾದ ತಾರಕಂಗಳು ನಭೋಮಾರ್ಗದಿಂ ದುದುರಿದವು. ಸಪ್ತ ಸಮುದ್ರಗಳ್ ಬಹುನೊರೆ ಪೆರೆಸಿ ದವು. ನದಿಗಳು ಶುಭಧ್ವನಿಗಳಿಂ ರೌದ್ರಮಾಗಿ ಕೂಗಿದವು, ದೈತ್ಯ ಮಸ್ತಕ ಗಳಲ್ಲಿ ಹಾವರಾಣಿಗಳ್ಬಿದ್ದವು, ಅಸುರರ ಗೃಹಂಗಳಲ್ಲಿ ಕೂರ್ಮಗಳ್ಪೊಕ್ಕವು. ಮತ್ತಮಸುರರು ದರ್ಪಣದಲ್ಲಿ ಮಸ್ತಕಹೀನಮಾದ ಪ್ರತಿಬಿಂಬಮಂ ಕಂಡರು. ಅಸುರರ ರಥಿಕರು ಕಾರಣಮಿಲ್ಲದೆ ರಥದಿಂ ದಧೋಮುಖಮಾಗಿ ಬಿದ್ದರು. ಅವರ ಕುದುರೆಗಳು ಕಂಬನಿಗಳಂ ಬಿಟ್ಟವು. ದೈತ್ಯರ ರಥ ಶಿಃಗಳಲ್ಲಿ ಗೃಧ್ರ, ಕಂಕಗಳ್ಕುಳಿತವು. ಅವರ ಗಜಗಳು ಕಾರಣಮಿಲ್ಲವೆ ಶೀಘ್ರದಿಂದಧೋಮುಖ ಮಾಗಿ ಬಿದ್ದವು. ಮತ್ತಮಸುರರು ಸಮಸ್ತ ವೃಕ್ಷಗಳಂ ಸ್ವರ್ಣಮಯಂಗ ಳಾಗಿ ಕಂಡರು. ಮತ್ತವರು ಜಲದಲ್ಲಿಇಂದ್ರ ಚಾಪವಂ ಕಂಡರು.

ಮಾಯಾಪುರದ ಮುತ್ತಿಗೆಯು.

ಬಳಿಕ ಕುಮಾರಸ್ವಾಮಿಯ ಸೇನೆಗಳು ಮಹತ್ತಾದ ಕೋಟಿ ಕೊತ್ತಳ ಗಳುಳ್ಳುದ್ದಾದ ಮಹಾ ಸಿಂಹನಾದದಿಂ ದಿಕ್ಕುಗಳಲ್ಲಿ ಪ್ರತಿಧ್ವನಿಯಂ ಮಾಡು ತಿರ್ಪ ಭಟರಿಂ ರಕ್ಷಿತಮಾದ, ಶೂರನ ಮಾತೃನಾಮಾಂಕಿತ ನಾದತಾರಕನಿಂ ಮಾತೃವರಕ್ಷಿಸುವಂತೆ ಪಾಲಿತಮಾದ ಮಾಯಾಪುರಮಂ ಮುತ್ತಿದರು. ಬಳಿಕ ಶೂರಪದ್ಮಾನುಜನಾದ ತಾರಕನು ಬಹು ಉತ್ಪಾತಂಗಳಂ ನೋಡಿ ವಿಚಾರಿಸುವ ಸಮಯದಲ್ಲಿ, ಚಾರರಿಂ ಶತ್ರುಗಳ ವೃತ್ತಾಂತಮಂ ಕೇಳಿ; ಯಮನಿಂ ಪ್ರೇರಿತ ನಾಗಿ ಯುದ್ಧಮಂ ಮಾಡಲಿಚ್ಛೈಸಿ ಮಹತ್ತಾದಶ್ವಂಗಳುಳ್ಳ ಸರ್ವಾಸ್ತ್ರಗಳಿಂ ಪೂರ್ಣಮಾದ ಮಹಾರಥಮನ್ನೇರಿ, ಸಂನದ್ಧರಾದ ಬಹು ರಥಗಜ ವಾಜಿಪ ದಾತಿಗಳ್ವೆರೆಸಿ, ಯುದ್ಧಕೆ ತೆರಳಿದನು. ಬಳಿಕ ಆ ಪುರದಲ್ಲಿ ಸನ್ನಾಹಬೋಧ ಕಂಗಳಾದ ಭೇರಿಗಳ್ಮೊಳಗಿದವು. ಮತ್ತಮಾ ತಾರಕನು ಅವರೊಡನೆ ಯುದ್ಧಕ್ಕೆ ಪೋದನೆಂಬ ವಾರ್ತೆಯಂ ಮಸುರರು ಕೇಳಿ, ಸಕಲ ಸೇನಾಯುಕ್ತರಾಗಿ ಪುರ ದ್ವಾರಗಳಿಂ ಪೊರಮಟ್ಟರು. ಅನಂತರದಲ್ಲಿ ರಾಕ್ಷಸಸೇನೆಯು ಪಾವಕನಂ ಪತಂಗಂ ಗಳೈದುವಂತೆಯು ಸಮುದ್ರವ ನ್ನೈದುವ ನದಿಗಳ ತೆರದಿ ವೀರಬಾಹು

ವಿನ ಸೇನಾ ಸಮೀಪವನೈದಿತು. ಬಳಿಕ ಉಭಯ ಬಲಗಳು, ಯುಗಾಂತದಲ್ಲಿ ತಟರಹಿತವಾದ ಪೂರ್ವಾಪರ ಸಮುದ್ರಂಗಳಂತೆ ನಿಂತಿರಲಾಗಿ, ದೇವರಕ್ಷಕನಾದ ಹರಕುಮಾರನಾದ ಕುಮಾರಸ್ವಾಮಿಯ ಪ್ರಬಲವಾದ ಸೇನೆಗಳು, ಲೋಕರಕ್ಷಣಕ್ಕೋಸ್ಕರ ವೀರಬಾಹುವಿನಿಂ ಪ್ರೇರಿತಂಗಳಾಗಿ, ಗರ್ವಿಸಿದ ಶತ್ರುಗಳಾದ ದೈತ್ಯರೊಡನೆ ಯುದ್ಧಮಂ ಮಾಡಿದರೆಂದು, ಶೌನಕಾದಿ ಮುನಿಗಳಿಗೆ ಸೂತಪುರಾಣಿಕನು ಪೇಳಿದನೆಂಬಲ್ಲಿಗೆ, ಮುವತ್ತೆಂಟನೆಯ ಅಧ್ಯಾಯವು ಸಂಪೂರ್ಣವು.

ಮುವ್ವತ್ತೊಂಬತ್ತನೆಯ ಅಧ್ಯಾಯವು.

ವೀರಬಾಹು ತಾರಕಸೇನೆಯ ಯುದ್ಧಾರಂಭವು.

ಎಲೈ ಮುನಿಗಳಿರಾ! ಆನಂತರದಲ್ಲಿ ಉಭಯ ಬಲಂಗಳಿಗೂ ಮಹತ್ತಾದ ಯುದ್ಧಮುಂಟಾದುದು ಅದೆಂತೆನೆ, ಪದಾತಿಯು ಪಾದಾತಿಯಂ, ಅಶ್ವಸಾದಿಯು ಅಶ್ವಸಾದಿಯಂ, ಗಜಾರೂಢನು ಗಜಾರೂಢನಂ, ರಥಿಕನು ರಥಿಕನಂ ಈ ಪ್ರಕಾರದಿಂ ಶಸ್ತ್ರಗಳಿಂ ಅಸ್ತ್ರಗಳಿಂ ಅನೇಕವಾದ ಪ್ರಾಸಂಗಳಿಂ ಅನ್ಯೋನ್ಯ ಯುದ್ಧಮುಂಟಾಗುತ್ತಿರೆ, ಕ್ರುದ್ಧರಾದ ವೀರರಿಂ ರಾಕ್ಷಸರುಹತರಾದರು, ಅದೇಪ್ರಕಾರದಲ್ಲಿ ರಾಕ್ಷಸರ ವೀರರು ಹತರಾದರು. ಈ ಪ್ರಕಾರವಾಗಿ ಅನ್ಯೋನ್ಯ ಯುದ್ಧಮುಂಟಾಗುತ್ತಿರಲಾಗಿ, ಅರಿಗುಂ ಜಯಾ ಅಪಜಯಂಗಳು ಕಾಣ್ಬರಲಿಲ್ಲವು. ಆಗ ರಥಚಕ್ರಗಳಿಂದೇಳಲ್ಪಟ್ಟ ಅಶ್ವಗಳ ಖುರಗಳಿಂ ಪರಿಯಲ್ಪಟ್ಟ ಗಜಕರ್ಣಗಳಿಂಚಲಿಸಿದ ಧೂಳೀಣುಗಳು, ದಶದಿಕ್ಕುಗಳಂ ವ್ಯಾಪಿಸಿ ಸೂರ್ಯನಂ ಆವರಿಸಿದವು. ಬಳಿಕ ಅಂಧಕಾರಾವೃತವಾಗಿ ಮಹಾಭಯಂಕರಮಾಗಿರ್ದೊಡಂ, ಸುಭಟರಿಗೆ ಮಹೋತ್ಸವ ಪ್ರಾಯವಾದ ಆ ಯುದ್ಧಭೂಮಿಯಲ್ಲಿರುವ, ಉಭಯ ಸೇನೆಗಳು ಕಾರ್ಮುಕದ ನಾರಿಯ ಧ್ವನಿಯಿಂದ ಸ್ವಪಕ್ಷಪರಪಕ್ಷಗಳಂ ತಿಳಿದು, ಪಿಪಾಶ, ಭಲ್ಲೆಯ, ಕುಂತ, ಖಡ್ಗ ಮೊದಲಾದ ಆಯುಧಂಗಳಿಂ ಕತ್ತರಿಸಲ್ಪಟ್ಟ ಬಲಶಾಲಿಗಳಾದ ಶೂರರ ಶಿರಸ್ಸುಗಳಿಂ ಪೊರಮಟ್ಟ ರಕ್ತಧಾರೆಗಳಿಂ ಧೂಳಿಯು ಶಮಿತವಾಗುತ್ತಿರಲಾಗಿ, ಬಲಶಾಲಿಗಳಾದ ಸೇನಾಭೂತಗಳಾಗ ಕಂಡು ಯುದ್ಧಮಂ ಮಾಡಿದರು. ಮತ್ತಂ ಸಂಗ್ರಾಮದಲ್ಲಿ ತಿರುಗಣೆಯ ಯುದ್ಧ ಮಾಡುವ ಅಧಿಪತಿಗಳು ಮಹಾ ಘೋರಂಗಳಾದ ಪ್ರಳಯಕಾಲ ವಾಯುವಿಗೆ ಸಮಾನವಾದ ಶಸ್ತ್ರಾಸ್ತ್ರಂಗಳಿಂದಸುರರಂ ಕೊಂದರು.

ತಾರಕಾಸುರನು ಕುಪಿತನಾಗಿ ನುಗ್ಗುವಿಕೆ-ಯುದ್ಧವರ್ಣನೆ.

ಬಳಿಕ ತಾರಕನು ಮಹಾ ಭೂತಂಗಳಿಂ ಮರ್ದಿಸಲ್ಪಟ್ಟು, ಸಮಸ್ತ ದಿಕ್ಕುಗಳಲ್ಲಿ ಚೆದರಿ, ಪುರಕ್ಕಭಿಮುಖವಾಗಿ ಪಲಾಯನಮಂ ಮಾಡುತಿರ್ಪ ತನ್ನ ಬಲಮಂ ಕಂಡು ಕೋಪದಿಂದ ಪರಬಲವನು ನಿರೀಕ್ಷಿಸಿ, ಭಯಂಕರನಾಗಿ ಕಬ್ಬಿಣದಿಂ ಮಾಡಲ್ಪಟ್ಟ ಅನೇಕ ಭಾರಮುಳ್ಳವಾದ, ಮಹ ದಪ್ಪ ಸ್ವರ್ನಕಟ್ಟುಗಳಿಂ ಶ್ರೇಷ್ಠವಾದ, ಪುಷ್ಪಸಮೂಹದಿಂದರ್ಚಿತವಾದ ಗದೆಯಂ ತೆಗದು ಅಡಿಗಡಿಗೆ ಅಂಗುಲಿಗಳಿಂ ತಿರುಹುತ್ತ ಕಟಕಟ!! ಎಂದು ದಂತಂಗಳಂ ಕಡಿದು, ಪ್ರಳಯಕಾಲದ ಮೇಘಕ್ಕೆ ಸಮಾನ ಶಬ್ದವುಳ್ಳವನಾಗಿ, ದಂಷ್ಟ್ರಾಧರೋಷ್ಠನಾಗಿ, ನೋಡಲಶಕ್ಯನಾಗಿ, ಭ್ರೂಭಂಗದಿಂ ವಿಕೃತನಾಗಿ, ಮತ್ತವಾರಣಂಗೆ ಸಮಾನನಾಗಿ ಪಾದಂಗಳಿಂ ಭೂತಸೇನೆಗಳ ಸಹಸ್ರಂಗಳಂ ಅವರ ಸೇನಾಪತಿಗಳಿಂ ಮತ್ತವಾರಣ ವಿಕ್ರಮದಿಂದಾ ಗದೆಯಿಂ ಮರ್ದಿಸಿದನು. ಬಳಿಕ ಗಣಂಗಳೀತನಿಂ ಮರ್ದಿಸಲ್ಪಟ್ಟ ಭೂತಂಗಳ ನಿಯುತ ಬಲಮಂ ಕಂಡು ಕಾಲಭವ ಮೇಘಂಗಳಂತೆ ಶ್ರೀಘ್ರದಿಂ ಬಂದು, ವಿಷಧರಂಗಳಿಗೆ ಸಮಾನವಾದ ಅಸಂಖ್ಯಂಗಳಾದ ಶರಂಗಳಂ ತಾರಕನ ಮೇಲೆ ವರ್ಷಿಸಿದರು. ಆ ಮೇಲೆ ಗಜಮುಖನಾದ ಆ ತಾರಕಾಸುರನು ಗದೆಯಿಂದ ಬಾಣಗಳಂ ಮುರಿದು ಕೋಪದಿಂದ ಮಹತ್ತಾದ ಆ ಗದೆಯಿಂದ ಭೂಮಿಯಂ ಬಡಿದನು. ಆ ಬಳಿಕ ಭೂಮಿಯು ಗದಾಘಾತದಿಂ ದೊಡೆದು ಎರಡು ಭಾಗವಾದುದು. ಮತ್ತಮಾ ತಾರಕನ ಸಿಂಹನಾದದಲ್ಲಿ ಜಗತ್ತು ಬಧಿರವಾದುದು. ಮರಳಿ ಆ ಸಮಸ್ತ ಗಣಂಗಳು ಕ್ರುದ್ಧರಾಗಿ ದಿವ್ಯಾಸ್ತ್ರಗಳಂಮಾಡಿ ಮಹಾಗಿರಿಯಂ ಕಿತ್ತು, ಆತನಂ ಬಳಸಿಕೊಂಡು ಸಂಹಾರಕಾಲದ ಮೇಘಂಗಳಂತೆ ಶರವರ್ಷಂಗಳಂ ಕರೆದರು. ಆಗ ಭೀಮ ವಿಕ್ರಮನಾದ ಮಹಾ ಭುಜನಾದ ತಾರಕಾಸುರನು ಅವರು ಬಿಟ್ಟ ಶರಾದಿಗಳಂ ಗದೆಯಿಂದಲೇ ವ್ಯರ್ಥಗಳಂ ಮಾಡಿ ಅಬಲಂಗಳಂಗೈದು, ಆ ಬಲಂಗಳಂ ಮಥಿಸಿ ಕೋಪದಿಂ ಶುಂಡಾದಂಡಂಗಳಿಂ ಕೆಲಬರಂ ಸಮುದ್ರಮನ್ಯೈದಿಸಿದನು. ಬಳಿಕ ಸಮುದ್ರಗತರಾದ ಭೂತಂಗಳರ್ಣವದಿಂದೆದ್ದು, ಅಲ್ಲಲ್ಲಿ ಲೀನವಾದರು. ಆ ಸಮಯದಲ್ಲಿ ಸಾಕ್ಷಾತ್ಕೇಸರಿಯಂತೆ ಅತಿ ಪರಾಕ್ರಮಿಯಾದ ವೀರಕೇಸರಿಯು ಗಜಾಸ್ಯನಾದ ತಾರಕನಂ ಅಸಂಖ್ಯಾತಂಗಳಾದ ಶರವರ್ಷಂಗಳಿಂದ, ಜಲಮಂ ವರ್ಷಾಕಾಲದ ಮೇಘದಂತೆ ಸುರಿಸುತ್ತ ಬರುತ್ತಿರಲಾಗಿ, ಆಗ ತಾರಕ ವೀರಕೇಸರಿಗಳೀರ್ವರ್ಗೆ ವೃತ್ರಾಸುರ ದೇವೇಂದ್ರರಂತೆ ಮಹಾಭಯಂಕರವಾದ ಯುದ್ಧಮುಂಟಾದುದು. ಆ ವೇಳೆಯಲ್ಲಿ ಧೂಳಿಯಿಂದಂಧಕಾರದೊಳು ಭಟರುಗಳಿಗೆ ಯುದ್ಧಮುಂಟಾಗುತಿರಲಾಗಿ, ಅವರುಗಳಿಗೆ ಮನ್ಮಥ ಶಂಬರಾಸುರರಂತೆ

ಯುದ್ಧಮಾಡುದು. ಆಸಮಯದಲ್ಲಿ ಎಲೈ ಶೂರನೆ ನಿಲ್ಲು! ನಿಲ್ಲೆಂದು ಧಿಕ್ಕರಿಸಿ, ಅಡಿಗಡಿಗೆ ಧನುವಂ ಕೊಡಹುತಿರ್ಪ ವೀರ ಕೇಸರಿಯು, ಕುಪಿತನಾಗಿ ಮಹತ್ತಾದ ಮೌರ್ವೀನಾದದಿಂ ದಿಕ್ಕುಗಳನೆಲ್ಲವಂ ಬಧಿರತೆಯನ್ನುಮಾಡುತ, ಆ ತಾರಕನಂ ಶರಂಗಳಿಂದಾಚ್ಛಾದನವಂ ಮಾಡಿದನು. ಅನಂತರದಲ್ಲಿ ಮಹಾಧೀರನಾದ ಲಘುಹಸ್ತನಾದ ಪ್ರತಾಪಮುಳ್ಳ ತಾರಕಾಸುರನು ವೀರಕೇಸರಿಯೆಂಬ ಮೇಘದಿಂ ಪುಟ್ಟಿದ ಶರವೃಷ್ಟಿಗಳಂ ತೊಲಗಿಸಿ, ಅತಿ ನಿಶಿತಂಗಳಾದ ಸ್ವನಾಮ ಚಿಹ್ನಿತಂಗಳಾದ, ಗರ್ವಿಗಳಾದ ವಿಷಧರಂಗಳಿಗೆ ಸಮಾನವಾದ ಸ್ವರ್ಣಪುಂಖಗಳುಳ್ಳ ಬಾಣಂಗಳಂ, ವೈರಿಗಳಿಗಭಿಮುಖವಾಗಿ ಪ್ರಯೋಗಿಸಿ ಶೀಘ್ರದಿಂದಡಿಗಡಿಗೆ ಅನೇಕವಿಧಮಾಗಿ ಸಿಂಹನಾದವ ಮಾಡಿದನು. ಅನಂತರದಲ್ಲಿ ಮಹಾಧೀರನಾದ ನಿರ್ಭಯನಾದ ಕೇಸರಿಯು, ಆ ಸಮಸ್ತ ಬಾಣಂಗಳಂ ಕ್ಷಣದಿಂ ಅರ್ಧಮಾರ್ಗದಲ್ಲಿಯೇ ಛೇದಿಸಿ ತುಮುರುಗಳಂಮಾಡಿ, ಭೂತಳಕೆ ಕೆಡಹಿ ಮರಳಿ ಮಹಾಕೋಪದಿಂ ನಕ್ಕು, ಅತ್ಯಂತರಕ್ತಲೋಚನನಾಗಿ, ಹತ್ತು ಬಾಣಂಗಳಿಂ ತಾರಕನ ಕಿರೀಟಮಂ ಕೆಡಹಿ ಸಿಂಹನಾದದಿಂ ದಶದಿಕ್ಕುಗಳಂ ಪ್ರತಿಧ್ವನಿಯಂ ಮಾಡಿಸಿ, ಕರದಿಂ ಕರಮಂ ಪಿಡಿದು, ಅಡಿಗಡಿಗೆ ಹಾಸ್ಯವಮಾಡಿದನು. ಆಗ ದೇವತೆಗಳು ಪುಷ್ಪವೃಷ್ಟಿಯಂ ವೀರಕೇಸರಿಯ ಮಸ್ತಕದ ಮೇಲೆ ಕರೆದರು. ಆ ಮೇಲೆ ಕ್ರೋಧದಿಂ ರಕ್ತಲೋಚನನಾದ ಮಹಾಬಲವುಳ್ಳ ತಾರಕಾಸುರನು ಗದೆಯಿಂ ವೀರಕೇಸರಿಯ ಉರಮಂ ಕೋಪದಿಂ ಹೊಯ್ದು, ಅನಂತರದಲ್ಲಿ ಅಡಿಗಡಿಗೆ ಕಿಲಕಿಲಾ ಶಬ್ದವಂ ಮಾಡಿದನು. ಆಗ ವೀರಕೇಸರಿಯು ಗದಾಪ್ರಹಾರದಿಂ ತಾಡಿತನಾಗಿ ಮೂರ್ಛೆಯನ್ನೈದಿದನು. ಅನಂತರದಲ್ಲಿ ಮಹಾಮಹಿಮನಾದ, ವೀರಸಮೂಹದಿಂ ಆವೃತನಾದ ಸರ್ವಾಸುರ ವಿಮರ್ದನನಾದ ವೀರಬಾಹುವು ದುರಾತ್ಮನಾದ ಆ ತಾರಕನ ಪರಾಕ್ರಮವಂ ಕಂಡು, ರಣಭೂಮಿಯಲ್ಲಿ ದಾನವರುಗಳಂ ವಾಕ್ಯದಿಂ ಬಹುವಾಗಿ ಧಿಕ್ಕರಿಸಿ, ಎಲೈ ದುರಾತ್ಮನೆ! ದುಷ್ಟನೆ! ಹೋಗದಿರು ಹೋಗದಿರು!! ನಿಲ್ಲುನಿಲ್ಲು!! ಎಲೈ ಮೂರ್ಖನೆ! ಯೆನ್ನ ದೃಷ್ಟಿಪಥವನೈದಿ ಬಹುಕಾಲ ಜೀವಿಸುವಿಯೊ? ಎಲೆ ನಿರ್ಲಜ್ಜನೆ! ಈಗ ಯುದ್ಧದಲ್ಲಿ ತನ್ನನೈದಿ ಪ್ರಾಣವಂತನಾಗಿ ಆರಬಳಿಗೆ ಹೋಗುವೆ? ಹೀಗೆಂದು ನುಡಿದು, ಹಿಂಹ್ಯಾಳಿಸಿ ಆ ತಾರಕನಂ ನಿಗ್ರಹಿಸಿದನು. ಆದರೂ ಭೂಮಿಯಲ್ಲಿ ಧೀರನಾದ ಮಹಾ ಶೂರನಾದ ಆ ತಾರಕನು ಯುದ್ಧದಲ್ಲಿ ಈತನು ನುಡಿಯುತಿರ್ಪ ವಾಕ್ಯವಂ ಕೇಳಿ ಮಹೇಂದ್ರನುಂ ಪರ್ವತದಂತೆ ಶೀಘ್ರಗತಿಯಿಂ ಬಂದನು. ಅನಂತರದಲ್ಲಿ ಆ ತಾರಕವೀರಬಾಹುಗಳಿಗೆ ಮಧುಮಾಧವರಂತೆ ಯುದ್ಧಮಾಡುದು. ಆಗ ಆ ಯುದ್ಧವಂ ನೋಡಲಿಚ್ಛೈಸಿದವರಾಗಿ ಬಂದಯಕ್ಷ ಗಂಧರ್ವ

ಸಿದ್ಧರುಗಳಿಂ ಅಪ್ಸರಗಣಂಗಳಿಂ ಸಮಸ್ತ ದಿಕ್ಕುಗಳು ಆವೃತಮಾದವು. ಬಳಿಕ ತಾರಕನು ರಥಾರೂಢನಾಗಿ ಧನುವಂ ಹಸ್ತದಿಂ ಪಿಡಿದು, ಆಧನುವಿನ ಕೊಪ್ಪಿನಲ್ಲಿ ನಾರಿಯನ್ನೇರಿಸಿ, ಧ್ವನಿಯಿಂದ ದಶದಿಕ್ಕುಗಳಂ ತುಂಬಿಸಿ, ಶರವರ್ಷಮಂ ಕರೆದು, ಬುಧಶುಕ್ರಸಮೀಪಸ್ಥವಾದ ವರ್ಷಾಕಾಲದಲ್ಲಿ ಮೇಘವು ಮಹಾಗಿರಿಯುಂ ಕುರಿತು ವರ್ಷಿಸುವಂತೆ, ವೀರಬಾಹುವಂ ಶರಗಳಿಂ ಮುಚ್ಚಿದನು. ಅನಂತರದಲ್ಲಿ ಲೋಕವು ಶರಗಳಿಂ ಅಂಧಕಾರಾ ವೃತಮಾಗಿರಲು, ಮಹಾಮಹಿಮನಾದ ವೀರಬಾಹುವು ಫಕ್ಕನೆನಕ್ಕು, ಪರಮೇಶ್ವರನು ಮಹಾಮೇರುವೆಂಬ ಧನುವಂ ಹೇಗೆತ್ತುವನೊ, ಹಾಗೆ ಮಹತ್ತಾದ ಧನುವನೆತ್ತಿ, ನಖದಿಂ ನಾರಿಯ ಮೀಂಟಿ, ಹಸ್ತದಿಂ ನೀವಿ, ಮಹಾಮನಸ್ಸುಳ್ಳವನಾಗಿ ಚತುರ್ದಶ ಬಾಣಂಗಳಿಂ ಸಮಸ್ತ ಅಸುರರಂ ಛೇದಿಸಿದನು. ಆಗ ಮಹತ್ತಾದಾ ಲಾಘವದಿಂದ ಯುದ್ಧವು ಅದ್ಭುತದಂತೆ ಪ್ರಕಾಶಿಸಿತು ಮತ್ತಂ ದುರ್ದಿನವು ಉಂಟಾಗುತ್ತಿರಲಾಗಿ ಶರವೃಷ್ಟಿಯಿಂದ ನಿರಸ್ತಮಾಯಿತು. ಆಗ ಸಮಸ್ತಮುಂ ಪ್ರಸನ್ನಮಾಯಿತು, ದೇವತೆಗಳಿಗೆ ಸಂತೋಷಮಾದುದು, ಅನಂತರದಲ್ಲಿ ಮಹಾಸತ್ವನಾದ ತಾರಕನು ವೀರಬಾಹುವಿನ ಅದ್ಭುತಮಾದ ಕರ್ಮಮಂ ಕಂಡು ಮಹತ್ತಾದ ಕೋಪದಿಂ ಆವರಿಸಲ್ಪಟ್ಟು, ಅತಿಭಯಂಕರಮಾದ ಕುಸುಮಂಗಳಿಂ ನಿತ್ಯಮರ್ಚಿತಮಾದ ಘಂಟಾ ಚಾಮರಗಳಿಂದಲಂಕೃತಮಾದ ತ್ರಿಶೂಲಮಂ ತೆಗೆದುಕೊಂಡು, ಲೀಲೆಯಿಂದ ಏಕಹಸ್ತದಿಂ ತಿರುಹಿದನು. ಆಗ ಆದಾನವಾಧಿಪನು ಖಸ್ಥಮಾಗಿ ಜ್ವಲಿಸುತಿರ್ಪ ತ್ರಿಶೂಲದಿಂ ಜ್ವಾಲಾ ಮಾಲಾಕುಲನಾದ ಕಾಲಾಗ್ನಿರುದ್ರನೋಪಾದಿಯಲ್ಲಿ ಶೋಭಿಸುತ್ತ, ವೀರಬಾಹುವಿಗೋಸ್ಕರ ಆ ತ್ರಿಶೂಲಮಂ ಬಿಟ್ಟನು. ತಡೆಯಲಶಕ್ಯಮಾದ ರೌದ್ರಮಾದ, ತೀಕ್ಷ್ಣಧಾರೆಗಳುಳ್ಳ ಆ ಶೂಲವು ವೀರಬಾಹುವಿನ ವಕ್ಷಸ್ಸಿನಲ್ಲಿ ಬಿದ್ದುದು. ಆಗ ವೀರಬಾಹುವು ತ್ರಿಶೂಲಪತನದಿಂ ಮೂರ್ಛಿತನಾಗಿರಲು, ಸಪ್ತವೀರರುಂ ಈತನ ಮೂರ್ಛೆಯಂ ಕಂಡು, ಮಹಾಸುರನಾದ ಧೀರನಾದ ಅತ್ಯುಗ್ರನಾದ ತಾರಕನಂ ಬಹು ವಿಧ ರಥಗಳಿಂದ ಆವರಿಸಿದರು. ಅನಂತರದಲ್ಲಿ ವೀರನಾದ ಗಜಪರಾಕ್ರಮಿಯಾದ ತಾರಕನು, ಸಪ್ತವೀರರ ಆಯುಧವರ್ಷಂಗಳಂ ಶುಂಡಿಲೀಂಧ್ರಕದಂಡದಿಂ ನಿವಾರಿಸಿ, ಮರಳಿ ಅಯೊವಿಕಾರಮಾದ ಗದೆಯಿಂ ರಣಭೂಮಿಯಲ್ಲಿ ಆಸಪ್ತವೀರರಂ ಕೆಡಹಿದನು. ಎಲೈ ಮುನಿಗಳಿರಾ! ಭೀಕರರಾದ ಆ ಸಪ್ತವೀರರುಂ ಪಲಾಯನ ಪರರಾಗುತ್ತಿರಲಾಗಿ, ಅರಿಮರ್ದಕನಾದ ವೀರಬಾಹುವು ಆ ಮೂರ್ಛೆಯಂ ಕೊಡಹಿ ಕೋಪಾರೂಢನಾಗಿ, ಆತಾರಕನಮೇಲೆ ಮರಳಿ ಶರವರ್ಷಮಂ ಕರೆದನು. ಆ ತಾರಕನು ತನ್ನಧನುವಂ ತೆಗದು ನಾರಿಯಂ

ಹೂಡಿ, ನಖದಿಂ ಮೀಟಿ ಶರಸಂಧಾನವಮಾಡಿ, ತನ್ನ ಹಸ್ತವೇಗವಮಂ ತೋಱುವ
ನಾಗಿ ಅರ್ಧಮಾರ್ಗದಲ್ಲಿ ಸಮಸ್ತ ಬಾಣಂಗಳಂ ಛೇದಿಸಿ, ರಣಾಂಗಣದಲ್ಲಿ ಶರ
ಗಳಿಂ ವೀರಬಾಹುವಂ ಕನಲಿಸಿದನು. ಅತಿ ವಿಕ್ರಮನಾದ ವೀರಬಾಹುವು ಆ
ಬಾಣಗಳಂ ಅರ್ಧಮಾರ್ಗದಲ್ಲಿಯೇ ಖಂಡಿಸಿ, ಎಲೈ ಗಜಾಸುರನೆ! ನೀನು
ನಮ್ಮ ಮುಂದೆ ಜೀವಿಸಿ ಹೋಗುವೆಯಾ? ನಿಲ್ಲು ನಿಲ್ಲು ಎಂದು ಉಗ್ರವಾಕ್ಯಂ
ಗಳಂ ನುಡಿದನು. ಬಳಿಕ ಆ ತಾರಕನ ಕರ್ಣಕಠೋರವಾದ ಆ ವಾಕ್ಯಮಂ
ಕೇಳಿ, ಎಲೈ ವೀರಬಾಹುವೆ! ನಮ್ಮ ಸತ್ವಮಂ ತಿಳಿಯದೆ ನುಡಿವುತಿರ್ದಿ,
ಪೂರ್ವದಲ್ಲಿ ಯುದ್ಧದಲ್ಲಿ ಅನೇಕಾದಿತ್ಯ ಪ್ರಕಾಶಮುಳ್ಳ ಅರಿಮರ್ದಕವಾದ
ವಿಷ್ಣುಚಕ್ರವು ನನಗೆ ಅಭಿಮುಖವಾಗಿ ಬರುತ್ತಿರಲಾಗಿ, ಆ ಚಕ್ರವು ನನ್ನಿಂದ
ಹಿಡಿಯಲ್ಪಟ್ಟುದು. ಮತ್ತಂ ವೃತ್ರಾರಿಯ ಕುಲಿಶವು, ಅಗ್ನಿಯ ಶಕ್ತಿಯು,
ಯಮನದಂಡವು, ನಿಋಋತಿಯ ಖಡ್ಗವು, ವರುಣನಪಾಶವು, ವಾಯುವಿನ
ಧ್ವಜವು ಕುಬೇರನ ಗದೆಯು, ಈಶಾನನ ತ್ರಿಶೂಲವು ಸಹ ಗ್ರಹಿಸಲ್ಪಟ್ಟವು.
ಇದಲ್ಲದೆ ಬ್ರಹ್ಮಾಸ್ತ್ರವು ಬಾಹುಪರಾಕ್ರಮದಿಂ ತಿರಸ್ಕರಿಸಲ್ಪಟ್ಟಿತು. ನನ್ನಿಂ
ಜಯಿಸಲ್ಪಟ್ಟ ವಿಷ್ಣು ಮೊದಲಾದ ದೇವತೆಗಳು ಪಲಾಯಿತರಾದರು. ಈಗಲೂ
ನಿನ್ನ ಅಷ್ಟಸಹೋದರರು ರಣಾಗ್ರದಲ್ಲಿ ಭೂತಸೇನೆಯೊಡನೆ ಬಿದ್ದಿರುವರು.
ಅವರಂ ಕಣ್ಗಳಿಂ ನೋಡು, ನಿನ್ನನ್ನು ಈಕ್ಷಣದಲ್ಲಿಯೇ ಜಯಿಸಿ ಅನಂತರದಲ್ಲಿ
ನಿನ್ನ ಸ್ವಾಮಿಯುಂ ಸೇನೆಯುಂ ಜಯಿಸುವೆನು ನೋಡು, ಹೀಗೆಂದು ನುಡಿದ
ನೆಂಬಿಲ್ಲಿಗೆ, ಮುವ್ವತ್ತೊಂಬತ್ತನೆಯ ಅಧ್ಯಾಯವು ಸಂಪೂರ್ಣಂ.

ನಲವತ್ತನೆಯ ಅಧ್ಯಾಯವು.

ವೀರಬಾಹು ತಾರಕಾಸುರರ ಯುದ್ಧವರ್ಣನೆ ತಾರಕಾ ಸುರನ ಪಲಾಯನವು.

ಎಲೈ ಮುನಿಗಳಿರಾ! ಈ ಪ್ರಕಾರದಲ್ಲಿ ಗರ್ಜಿಸುತಿರ್ಪ ಮದಾಕುಲನಾದ
ಶುಂಡಾಗ್ರದಿಂ ಹಿಡಿಯಲ್ಪಟ್ಟ ದಿಕ್ಚಕ್ರ ಕಾಲಚಕ್ರಂಗಳುಳ್ಳವನಾದ, ದುರಾಸದ
ನಾದ ಆ ತಾರಕನಂ, ಮಹಾಮಹಿಮನಾದ ವೀರಬಾಹುವು, ಕೋಪದಿಂ
ಸುವರ್ಣಪುಂಖಂಗಳಿಂ ದಾರ್ಢ್ಯವಾದ ಜ್ವಲಿಸುತಿರ್ಪ ಪಾವಕಂಗೆ ಸಮಾನವಾದ,
ಈ ಜಗತ್ತಿನಲ್ಲಿ ಅವ್ಯಾಹತವಾದ, ನಾರಾಚಗಳಿಂ ಹೂಳಿದನು. ರಣದಲ್ಲಿ ಶ್ಲಾಘ್ಯ
ನಾದ ತಾರಕನು ಯುದ್ಧದಲ್ಲಿ ಸ್ವನಾಮ ಚಿಹ್ನಿತಂಗಳಾದ ತೀಕ್ಷ್ಣಂಗಳಾದ
ಸಹಸ್ರ ಬಾಣಂಗಳಿಂ, ಮಾರ್ಗದಲ್ಲಿ ಆ ಪ್ರಾಪ್ತಂಗಳಾದ ನಾರಾಚಂಗಳಂ
ಛೇದಿಸಿದನು. ಮರಳಿ ಲಘುಹಸ್ತನಾದ ವೀರಬಾಹುವು ಲೀಲೆಗಳಿಂ ತೀಕ್ಷ್ಣ

ಮಾದ ಬಾಣಂಗಳಂ ಪ್ರೇರಿಸುತ್ತಿರೆ, ತಾರಕಂ ಶತಬಾಣದಿಂ ಆ ಬಾಣಂಗಳಂ ಛೇದಿಸಿ, ಮಹತ್ತಾದ ಧನುವಂ ಪಿಡಿದು ರಣದಲ್ಲಿ ಕ್ರೂರವಾದ ಶರಗಳಿಂ ಅದ್ಭುತ ಕೃತ್ಯವಮ್ಮಾಡಿ, ಮರಳಿ ಹರ ಸಹಸ್ರ ಬಾಣಂಗಳಿಂ ಆತನ ಸಮಸ್ತ ಬಾಣಂಗಳಂ ಖಂಡಿಸಿದನು. ಅನಂತರದಲ್ಲಿ ತಾರಕಾಸುರನು ವೀರಬಾಹುವಿನ ಅಸ್ತ್ರಚಾತುರ್ಯವಂ ಕಂಡು ಮರಳಿ ಪ್ರಳಯಕಾಲಾಗ್ನಿಯೋಪಾದಿಯಲ್ಲಿ ಜ್ವಲಿಸಿ ಮಹಾಬಲವಂತನಾಗಿ ಆಗ್ನೇಯಾಸ್ತ್ರಮಂ ಧನುಸ್ಸಿನಲ್ಲಿ ಸಂಧಾನಮಮ್ಮಾಡಿ, ಅತಿ ರೌದ್ರನಾಗುತ್ತಿರಲಾಗಿ, ಅದ್ಭುತವಾದ ಆ ಆಗ್ನೇಯಾಸ್ತ್ರದ ಅಗ್ನಿಯುಂ ಜ್ವಾಲಾಮಾಲಾ ಸಹಸ್ರದಿಂ ಲೋಕವನ್ನಾವರಿಸಿ, ಬ್ರಹ್ಮಾಂಡಕಟಾಹಾಂತರವಂ ಚಟಚಟಾ ಧ್ವನಿಯಾಗಿ ಮಾಡುತ್ತ ಪ್ರಕಾಶಿಸಿತು. ಆಗ ಸಮಸ್ತ ದೇವತೆಗಳು ಈ ಜಗದ್ವ್ಯಾಪ್ತವಾದ ಆಗ್ನೇಯಾಸ್ತ್ರಮಂ ಕಂಡು ಕಂಪಿತರಾದರು. ವೀರ ಬಾಹುವು ಆ ತಾರಕನಿಂ ಪ್ರೇರಿತವಾದ ಆಗ್ನೇಯಾಸ್ತ್ರವಂ ಕಂಡು, ಶೀಘ್ರದಿಂ ಮಹತ್ತಾದ ಆ ಆಗ್ನೇಯವಮಂ ಪ್ರತ್ಯಸ್ತ್ರದಿಂದಲೆ ನಿವಾರಿಸಿದನು. ಲೋಕ ದಲ್ಲಿ ಉಷ್ಣವು ಉಷ್ಣದಿಂದಲೆ ಶಾಂತಿಯಾಗುವುದೆ ಮಹಾಶ್ಚರ್ಯವಲ್ಲವೇ? ಅವುದೊ ರೀತಿಯಲ್ಲಿ ಶಾಂತವಾದುದು. ಮರಳಿ ಆ ಗಜಮುಖನಾದ ತಾರ ಕನು ವಾರಣಾಸ್ತ್ರದಿಂದೆಚ್ಚನು; ಅಗ ಸಮಸ್ತವಾದ ಜಗತ್ತು ವರ್ಷಾಕಾಲ ದಂತೆ ಮೇಘ ಸಮೂಹಗಳಿಂ ದಾವೃತವಾದದು. ಆ ಅಸ್ತ್ರದ ಮಿಂಚುಗಳು ಮೇಘಗರ್ಜನೆಗಳಿಂ ಸಂತುಷ್ಟ ಮಾಗಿ ಸಂಚರಿಸಿದವು. ಪುರದಲ್ಲಿ ಬೀಸುವ ವಾಯುವಿನಿಂದ ಪ್ರೇರಿತವಾದ ಅಭ್ರಂಗಳಿಗೆ ಸಂಭ್ರಮ ಮಾದುದು. ಮರಳಿ ಆ ವೀರಬಾಹುವು ವಾರುಣಾಸ್ತ್ರಮಂ ನೋಡಿ ಕೋಪವಂತನಾಗಿ ಕೋಪದಿಂ ಆವರಿಸಲ್ಪಟ್ಟ ಅವಯವಂಗಳುಳ್ಳವನಾಗಿ, ವಾಯುವ್ಯಾಸ್ತ್ರದಿಂದ ನಿವಾರಿಸು ತ್ತಿದ್ದನು. ಅಗ ಸಮಸ್ತ ಮೇಘಂಗಳುಂ ಬೀರಿದವು. ಸಮಸ್ತದಿಕ್ಕು ಗಳುಂ ಪ್ರಸನ್ನವಾದವು. ಸಿದ್ಧಗಂಧರ್ವಯಕ್ಷಕರುಂ ವೀರಬಾಹುವಿನ ಮೇಲೆ ಪೂಮಳೆಗಳಂ ಕರೆದರು. ಮರಳಿ ಆ ತಾರಕನು ಶೀಘ್ರದಿಂ ಸೌರಾಸ್ತ್ರಮಂ ಕೊಟ್ಟನು. ಆ ಅಸ್ತ್ರದಲ್ಲಿ ಸೂರ್ಯ ಸಹಸ್ರಂಗಳು ಯುಗಾಂತದಲ್ಲಿ ಯಾವ ಪ್ರಕಾರವಾಗಿ ಸಮಸ್ತಲೋಕಮಂ ದಹನಮಂ ಮಾಡಲು ಉದ ಯಿಸುವವೊ! ಆ ಬಗೆಯಾಗಿ ಉದಯಿಸಿದವು. ಬಳಿಕ ವೀರಬಾಹುವು ಸೌರಾಸ್ತ್ರಮಂ ಕಂಡು ವಾರುಣಾಸ್ತ್ರಮಂ ಕಳುಹಿಸಿದನು. ಆ ಮೇಘಂಗಳು ಈ ಸಹಸ್ರಕಿರಣರಂ ಆಚ್ಛಾದಿಸಿ, ಜಗನುನಾವರಿಸಿಕೊಂಡವು. ಮರಳಿ ತಾರ ಕನು ಸೋಮಾಸ್ತ್ರದಿಂದದನ್ನು ಶಾಂತವಮಾಡಿ ವ್ಯರ್ಥಮನ್ನೈದಿಸಿದನು. ಈ ಪ್ರಕಾರನಾಗಿ ವೀರಬಾಹುವು ಐಂದ್ರಾಸ್ತ್ರಮಂ ಐಂದ್ರಾಸ್ತ್ರದಿಂ, ವಾಯು

ವ್ಯಾಸ್ತ್ರಮಂ ವಾಯುವ್ಯಾಸ್ತ್ರದಿಂ ಯಾಮ್ಯಾಸ್ತ್ರಮಂ ಯಾಮ್ಯಾಸ್ತ್ರದಿಂ, ನೈರುತ್ಯಾಸ್ತ್ರಮಂ ನೈರುತ್ಯಾಸ್ತ್ರದಿಂ, ಮರಳಿಸಿದನು. ಮತ್ತಂ ತಾರಕನು ಯೆಲ್ಲಾ ಕಡೆಯಲ್ಲಿಯುಂ ಅನಿವಾರಿತವಾದ ಬ್ರಹ್ಮಾಸ್ತ್ರವಂ ಪ್ರೇರಿಸಿದವನಾಗಲಾಗಿ, ಆ ಅಸ್ತ್ರವು ಜಗತ್ತಂ ನಿಶ್ಶೇಷವಂ ಮಾಡುವಂತೆ ಆಕಾಶದಲ್ಲಿ ಜಾಜ್ವಲ್ಯಮಾನಮಾಗಿತ್ತು. ಆಗ ವೀರಬಾಹುವು ಕಡುಭಯಂಕರಮಾದ ಆ ಬ್ರಹ್ಮಾಸ್ತ್ರವಂ ಕಂಡು ಶೀಘ್ರದಿಂ ಅದರಿಂದಲೆ ನಿವಾರಿಸಿದನು. ಮರಳಿ ಆ ತಾರಕನೆಂಬ ದೈತ್ಯನು ಕ್ರುದ್ಧನಾಗಿ ವೀರಬಾಹುವಿಗೋಸುಗ ಸರ್ವಶತ್ರು ಸಂಹಾರಕಮಾದ ನಾರಾಯಣಾಸ್ತ್ರಮಂ ಕಳುಹಿದನು. ಬಳಿಕ ವೀರಬಾಹುವುಂ ಪ್ರಯಾಸವಿಲ್ಲದೆ ಆ ನಾರಾಯಣಾಸ್ತ್ರದಿಂದಲೆ ಅದನ್ನು ತಡೆದನು. ಅನಂತರದಲ್ಲಿ ಮಾಯೆಯುಳ್ಳ ಸುರಶತ್ರುವಾದ ತಾರಕನ ಮಾಯಾಬಲದಿಂದಲೆ ಅತಿ ಕೋಪದಿಂ ಮಹತ್ತಾದ ರಜೋಂಧಕಾರವು ದೃಷ್ಟಿಮಾರ್ಗವನ್ನಾವರಿಸುತ್ತಿರಲಾಗಿ ಅರಣ್ಯಮಧ್ಯದಲ್ಲಿ ಬಹು ರೂಪಂ ತೆಗೆದುಕೊಂಡು ಯುದ್ಧವನ್ಮಾಡುತ್ತ, ಪ್ರತ್ಯೇಕ ಪ್ರತ್ಯೇಕಮಾಗಿ ದಿವ್ಯಂಗಳಾದ ಬಹು ಅಸ್ತ್ರಂಗಳಂ ಪ್ರಯೋಗಿಸಿದನು. ಆಗ ವೀರಬಾಹುವು ಯುದ್ಧಭೂಮಿಯಲ್ಲಿ ಆ ಅಸ್ತ್ರಂಗಳಿಂ ಆವೃತನಾಗಿ ಸರ್ವಶತ್ರುವಿನಾಶಕವಾದ ವೀರಭದ್ರಾಸ್ತ್ರಮಂ ಕೊಟ್ಟನು. ಆ ವೀರಭದ್ರಾಸ್ತ್ರದ ರಭಸಮಂ ನೋಡಿ ಮಾಯಾಮಯಂಗಳಾದ ಸರ್ವರೂಪಂಗಳು ನಾಶಮನ್ನೈದಿದವು. ಮರಳಿ ಮಾಯಿಯಾದ ತಾರಕನು ಬಹು ಅಸ್ತ್ರಂಗಳಂ ಪ್ರಯೋಗಿಸಿ ಯುದ್ಧವಂ ಮಾಡುವನಂತೆ ಶಕ್ತಿಯಂ ತೋರಿಸುತಲೆ ರಣದ ದೆಸೆಯಿಂ ಶೀಘ್ರಮಾಗಿ ಮಾಯೆಯಿಂ ವೀರಬಾಹುವಂ ವಂಚಿಸಿ, ಯಿಲಿಯುವೋಲು ಗಿರಿಬಿಲಮಂ ಪ್ರವೇಶಿಸಿದನು. ಆ ಮೇಲೆ ವೀರಬಾಹುವು ಪಲಾಯನಪರನಂ ಕೊಲ್ಲುವದು ಅಯುಕ್ತವೆಂದು ತಿಳಿದು, ಪ್ರಯುಕ್ತಮಾದ ಆ ವೀರಭದ್ರಾಸ್ತ್ರಮಂ ಮರಳಿ ಉಪಸಂಹಾರಮನ್ಮಾಡಿ, ಆ ತಾರಕಾಸುರನ ಮಾಯಾಪಥವನನುಸರಿಸಿ ಘೋರಮಾದ ನೋಡಲಶಕ್ಯಮಾದ ಮಹಾ ರೌರವಕ್ಕೆ ಸಮಾನವಾದ ಕ್ರೌಂಚಗಿರಿಯ ಬಿಲಮಂ ಪ್ರವೇಶಿಸಿದನು. ಮಾಯಾವಿಯಾದ ದಾನವಾಧಮನಾದ ಆ ಕ್ರೌಂಚಗಿರಿಯು, ಅಸುರೇಶನಾದ ತಾರಕನ ವಾಕ್ಯದಿಂ ಬಹು ಮಾಯೆಗಳಿಂ ವೀರಬಾಹುವಂ ಭ್ರಾಂತಿಯನ್ನೈದಿಸಿದನದೆಂತೆನೆ.

ಕ್ರೌಂಚಗಿರಿಯು ಮಾಯಾಜಾಲದಿಂದ ವೀರಬಾಹುವನ್ನು ವಂಚಿಸುವಿಕೆ.

ಪ್ರಥಮದಲ್ಲಿ ಅಂಧತಮಸ್ಸಿನಂತೆ ಅಜ್ಞಾನಕರಮಾದ ಮಹಾಂಧಕಾರ ಉಂಟಾದುದು. ಮರಳಿ ಗಿರಿಯ ಗುಹೆಯಲ್ಲಿ ಬಹು ಮಾರ್ಗಗಳ್ ಪ್ರಕಾಶಿಸಿ

ದವು. ಮತ್ತಂ ಆ ಮಾರ್ಗಂಗಳು ಬಹು ರೂಪಗಳಾಗಿ ಅತಿ ಭಯಂಕರಗಳಾಗಿಯುಂ, ಅಲ್ಲಲ್ಲಿ ತಡದವಾಗಿಯುಂ ಕಾಣಿಸಿದವು. ಎಲೈ, ದ್ವಿಜರುಗಳಿರಾ! ಆ ವೀರಬಾಹುವು ಸಮಸ್ತಂಗಳಾದ ಆ ಆ ಮಾರ್ಗಂಗಳಲ್ಲಿ ಹೋಗಿ ಮಾರ್ಗಮಂ ಕಾಣದೆ ಆ ಕ್ರೌಂಚ ಮಾಯೆಯಿಂ ದೈನ್ಯನಾಗಿ, ತಾರಕನಂ ಕಾಣದೆ ತಿರಿಗಿ, ಮನಸ್ಸಿನಿಂ ಮಹತ್ತಾದ ಚಿಂತೆಯಂ ಬಹಳ ಕಾಲ ಯೈದಿದನು. ಆವುದಾನೊಂದು ಕಾರಣದಿಂ ರೌದ್ರುವಶನಾದ ವೀರಬಾಹುವಿಗುಂ ಮನದಲ್ಲಿ ಬಹು ವ್ಯಥೆಯುಂಟಾದುದು. ಲೋಕದಲ್ಲಿ ಇತರರು ಕ್ಷಣಮಾತ್ರದಲ್ಲಿ ನಿಶ್ಚಯಮಾಗಿ ಮೃತಿಯನ್ನೈದುವರು. ಬಹು ಧೀರನಾದುದರಿಂದ ಆ ವೀರಬಾಹುವು ಧೈರ್ಯಗೆಟ್ಟು ಭ್ರಮಿಸಿ, ತಾನು ಅನ್ಯನಾದೆನೋ, ಹಾಗಲ್ಲದಿರ್ದೊಡೆ ಮೋಹದಿಂ ಈ ಪ್ರಕಾರಮಾದುದೋ, ಅಲ್ಲದಿರ್ದೊಡೆ ಸ್ವಪ್ನಮೊ ಅದೂ ಅಲ್ಲದಿರ್ದೊಡೆ ಭ್ರಮೆಯೋ, ಇವು ನಮ್ಮ ಬಾಹುಗಳಲ್ಲವು. ಇವು ನಮ್ಮ ಪಾದಂಗಳಲ್ಲ. ಇದು ನಮ್ಮ ಧನುಸ್ಸಲ್ಲ, ಇದು ನಮ್ಮ ಶರೀರವಲ್ಲ, ಸಮಸ್ತ ದಿಕ್ಕುಗಳಲ್ಲಿಯೂ ಸರ್ವ ಮಾರ್ಗಂಗಳೂ ರುದ್ಧಂಗಳಾದವು. ಈಗ ನಾವು ಆವ ಮಾರ್ಗದಲ್ಲಿ ಪೋಗಲು ಶಕ್ಯಮೆಂದು ಚಿಂತಿಸಿದಷ್ಟು ಆತನ ಮನವು ಅತ್ಯಂತ ಮೋಹಮನ್ನೈದಿತು. ಅನಂತರದಲ್ಲಿ ಬಲಗರ್ವಿತರಾದ ವೀರಕಂಠೀರವ ಮೊದಲಾದವರು, ನಿಯುತ ಭೂತಂಗಳುಂ ಆ ವೀರಬಾಹುವಿನ ಪದಮಂ ಆರಿಸಲೈದಿದರು ಚತುಃಪಂಚಾಶತ್ಸೇನಾಧಿಪತಿಗಳುಂ ವೀರಬಾಹುವಿನ ವಿಳಂಬನುಂ ನೋಡಿ ನಿತ್ಯಕೃಪಾಣರಾಗಿ ಸುಖದಿಂದಿರುವುಣ, ಎಂದು ವಿಚಾರಿಸಿ ಆತನ ಪದಮಂ ನೋಡಲೈದಿದರು ಯೆಂತೆಂದರೆ. ವೀರಕಂಠೀರವ ಮೊದಲಾದ ಸಮಸ್ತ ಭೂತಂಗಳು ಗಿರಿಯ ಬಿಲಮಂ ಪ್ರವೇಶಿಸಿ, ಅರಿಮರ್ದಕರಾದ ಆ ಸರ್ವರುಂ ಪ್ರವಿಷ್ಟಮಾತ್ರದಲ್ಲಿ ಮೋಹಮನ್ನೈದಿರು. ಮರಳಿ ಕ್ರೌಂಚನೆಂಬ ದಾನವಾಧಮನು ಇವರುಗಳು ಮರಳಿ ಬರುವ ಮಾರ್ಗಮಂ ಮುಚ್ಚಿದನು. ಮತ್ತಂ ಆ ತಾರಕನು ಕ್ರೌಂಚ ಬಿಲದಲ್ಲಿ ಸಮಸ್ತ ವೀರರು ಮೋಹಮನ್ನೈದುತಿರಲಾಗಿ, ನಮಗೆ ವಿಜಯ ಉಂಟಾಗುವದೆಂದರಿತು ಮೋಹಿತರಾದ ಇವರುಗಳಂ ನೋಡಿ ಮಹತ್ತಾದ ರಥವನೇರಿ ಹೊರಟು ಗಣಸಮೂಹಮಂ ಅತಿ ಘೋರಮಾಗಿ ಈ ರೀತಿ ಸಂಹರಿಸಿದನು. ದನುಜಾಧಮನು ಯಿವರಂ ಸಂಹರಿಸಬೇಕೆಂದಿಚ್ಛೈಸಿ ಸನ್ನದ್ಧನಾಗಿ ಸಜ್ಜಮಾದ ಧನುವಂ ತೆಗೆದುಕೊಂಡು, ಅಕ್ಷಯ ಸಾಯಕಗಳುಳ್ಳ ಅಂಬಿನ ಬತ್ತಳಿಕೆಗಳಂ ಸ್ವೀಕರಿಸಿ, ರಥಮನೇರಿ, ಗಣ ಸೇನೆಗಳಂ ಮರ್ದಿಸುವವನಾಗಿ, ಅವರ ಸಮೀಪವನ್ನೈದಿ, ವೀರಬಾಹು ಪದಾನುಗಾಮಿಗಳಾದ ಗಣ ಸೇನೆಗಳಂ ಮರ್ದಿಸಿದನು. ನಾನಾ ವಿಧವಾದ ಆಯುಧಂಗಳುಳ್ಳ ಸೇನೆಗಳು, ಆ ತಾರಕ

ನೊಡನೆ ಅತ್ಯಂತ ಯುದ್ಧವನ್ಮಾಡಿದರು. ಆಗ ಆ ನಾಯಕರಾದವರು ಅತ್ಯದ್ಭುತವಾದ ಯುದ್ಧಮಂಮಾಡಬೇಕೆಂದು ಧೈರ್ಯಯುಕ್ತರಾಗಿ ಶತ ಸಹಸ್ರಮುಖದಲ್ಲಿ ಶಿಲೆಗಳಂ ಮಹತ್ತಾದ ಪರ್ವತಂಗಳಂ ಆ ತಾರಕನ ಮೇಲೆ ಕವಿಚಿದರು. ರಣಕೋವಿದನಾದ ತಾರಕನು ಮಹಾ ಕೋಪಯುಕ್ತನಾಗಿ ಏಕ ವೀರನಾದರೂ, ಬಹುವಾದ ಸೇನೆಗಳಿಂ ಪ್ರೇರಿತವಾದ ಶರ ಪಾಷಾಣ ಪರ್ವತಾದಿಗಳಂ ರಣಾಂಗಣದಲ್ಲಿ ಕಣಗಳಾಗಿ ಛೇದಿಸಿದನು. ಸಕಲ ದಾನವಾಧಿಪತಿಯಾದಂಥ ಮಹಾ ಮನಸ್ಸು ಉಳ್ಳ ತಾರಕನು ಸುರಸೇನಾಪತಿಗಳ ವಾಹಿನಿಯಂ, ಗಜಶ್ರೇಷ್ಠವು ಮದಕಲುಷಿತವಾಗಿ ಕೋಪದಿಂದ ಸರಸಿಜ ಸಮೂಹಮಂಡಿತವಾದ ಸರೋವರಮಂ ಕದಡುವಂತೆ ಕದಡಿದನೆಂದು ಶೌನಕಾದಿ ಋಷಿಜನಕ್ಕೆ ಸೂತಂ ಪೇಳ್ದನೆಂಬಲ್ಲಿಗೆ ನಲವತ್ತನೆಯ ಅಧ್ಯಾಯವು ಸಂಪೂರ್ಣಂ.

ನಲವತ್ತೊಂದನೆಯ ಅಧ್ಯಾಯವು.

ಸುಬ್ರಹ್ಮಣ್ಯದೇವನನ್ನು ನಾರದಮಹರ್ಷಿಯು ಸ್ತುತಿಸುವಿಕೆ.

ಆನಂತರದಲ್ಲಿ ಆನಾಯಕನಾದ ವೀರಬಾಹುವಿನ ಸೈನಿಕರು ಈ ತಾರಕನಿಂ ಭಗ್ನರಾಗಿ ರಕ್ಷಕರಹಿತರೂ ಆಗಿ ಅತ್ಯಂತಾತುರರಾಗಿ, ವೊಬ್ಬನ ಪದಮಂ ಒಬ್ಬನೈದದೆ ಹಾಹಾ !! ವೆಂದು ಕೂಗುತ್ತಲೇ ಕದನವ ಮಾಡುತ್ತ ಅತ್ಯಂತ ಪೀಡಿತರಾಗಿ, ಪ್ರತ್ಯೇಕವಾಗಿ ಘರ್ಜಿಸುತಿರ್ಪ ಆ ತಾರಕನ ನಿಶಿತಂಗಳಾದ ಬಾಣಜಾಲಂಗಳಿಂ ಮರ್ದಿತರಾಗಿ, ಪ್ರಾಣರಕ್ಷಣಪರರಾಗಿ ದಿಕ್ಕುಗಳಂ ವಿದಿಕ್ಕುಗಳಂ ನೈದ್ದಿದರು. ಎಲೈ ಮುನಿಗಳಿರಾ ! ಈ ಪ್ರಕಾರದಿಂ ವಿಷ್ಣು ಮೊದಲಾದ ದೇವತೆಗಳು ಅತ್ಯಂತ ಭೀತರಾಗಿ ಕಂಪಿಸುತ್ತಿರಲು, ಆಗ ನಾರದ ಮುನಿಯು ಆ ಸೇನೆಗಳ ರೋದನಮಂ ದೇವತೆಗಳ ಭಯಮಂ ಸಹಾ ವೀಕ್ಷಿಸಿ, ಶೀಘ್ರದಿಂ ದೇವಸೇನಾಪತಿಯಾದ ಸೂರಿಯಾದ ಸುಬ್ರಹ್ಮಣ್ಯನ ಸಮೀಪವನೈದಿ, ಆ ಕುಮಾರಸ್ವಾಮಿಗೆ ನಮಸ್ಕಾರಮನ್ಮಾಡಿ ಪರಮಭಕ್ತಿಯಿಂದ ಕೃತಾಂಜಲಿ ಹಸ್ತನಾಗಿ ಭೀತಮನಸ್ಸುಳ್ಳವನಾಗಿ, ಭೋಭಗರ್ವ ! ಈಗ ವೀರಬಾಹು ಪ್ರಮುಖರಾದ ನಮ್ಮ ಸಮಸ್ತ ಗಣಂಗಳು ಕ್ರೌಂಚ ಬಿಲವನ್ನು ಪ್ರವೇಶಿಸಿದವರು, ಮರಳಿ ಬರಲಿಲ್ಲ. ಆ ಅಸುರನ ಮಾಯೆಯಿಂ ಜೀವಿಸಿರುವರೋ ಇಲ್ಲವೋ ತಿಳಿಯಲಿಲ್ಲವು. ನಮ್ಮ ಸೇನೆಗಳೆಲ್ಲವು ದಿಕ್ಕುದಿಕ್ಕುಗಳಲ್ಲಿಯುಂ ಪಲಾಯನಮನ್ನೈದಿದವು. ಅದರಿಂದ ಭೂದೇವ ದೇವತೆಗಳ ಮನಸ್ಸಿನಲ್ಲಿ

ಭೀತಿಯು ದ್ವಿಗುಣಮಾದುದು. ಈ ಮಹತ್ತಾದ ಭೀತಿಯು ದೆಸೆಯಿಂದ ಸರ್ವ ಪ್ರಕಾರದಿಂದ ನಮ್ಮನ್ನು ರಕ್ಷಿಸೆಂದು ಬಿನ್ನೈಸಿದನು.

ನಾರದಮಹರ್ಷಿಗೆ ಕುಮಾರಸ್ವಾಮಿಯು ವಾಗ್ದಾನವು.

ಅನಂತರದಲ್ಲಿ ದೇವದೇವಾಂಗ ಸಂಭವನಾದ ಕುಮಾರಸ್ವಾಮಿಯು ಈ ನಾರದೋಕ್ತಮಾದ ವಾಕ್ಯಮಂ ಕೇಳಿ, ಲೋಕತ್ರಯಮಂ ದಹಿಸುವನೋ ಎಂಬಂತೆ ಕ್ರೋಧ ತಾಮ್ರಾಕ್ಷನಾಗಿಂತೆಂದನು. ಎಲೈ ನಾರದಮುನಿಯೆ ! ಈ ಅಸುರರುಗಳ ಸಮಸ್ತಮಾದ ಕುಲವಂ ಕ್ಷಣಮಾತ್ರದಲ್ಲಿ ನಾಶವನ್ನೈದಿಸುವೆನು. ವಿಬುಧರು ಆ ಅಸುರರಿಂ ಪುಟ್ಟಿದ ಖತಿಯಂಬಿಡಲಿ. ಈ ಲೋಕದೊಳು ನಮ್ಮ ನ್ನಾಶ್ರಯಿಸಿದವರಿಗೆ ಭಯವೆತ್ತಣದು ? ಕೇಡೆಂಬದು ಹೇಗೆ ಬರುವದು ? ಈ ಜಗದಲ್ಲಿ ನಮ್ಮ ಭಕ್ತರಿಗೆ ಶತ್ರುವೆಂಬ ವ್ಯಾಧಿಯೆಲ್ಲಿಯದು? ಯಾವನೋ ಒಬ್ಬ ನರಾಧಮನು ಮೋಹದಿಂ ನಮ್ಮ ಭಕ್ತರಲ್ಲಿ ದ್ವೇಷಮಂ ಗೈಯುವನೋ, ಅವನು ನಮಗೇನೆ ದ್ವೇಷಿಯಾಗುವನು ಈ ವಿಷಯದಿ ಸಂಶಯಮಿಲ್ಲವು. ನಮ್ಮ ವಿಷಯದಲ್ಲಿ ಅಪರಾಧಮಂ ಮಾಡಿದವನನ್ನು ಸಹಿಸೆನು. ಅದುಕಾರಣದಿಂದ ಆ ದುರಾತ್ಮನಂ ಸೈರಿಸಲಾರೆನು. ಈ ಲೋಕದಲ್ಲಿ ಆ ದುರುಳನು ಶಕ್ರನಿಂ ರಕ್ಷಿತನಾದೊಡಂ ನಮಗೆ ವಧ್ಯನೇ ಸರಿ. ಭೂತಳದಲ್ಲಿ ನಮ್ಮ ಭಕ್ತರಂ ಪೋಷಿಸುವವರನ್ನೇ ರಕ್ಷಿಸುತಿಪ್ಪೆನೆ. ಎಲೈ ಮುನಿಯೆ ! ದಾನವಾಧಮನಾದ ಕ್ರೌಂಚಗಿರಿಯ ನೊಡೆದು ಶೀಘ್ರದಿಂದ ಆ ಕ್ರೌಂಚ ಮಾಯೆಯಿಂ ಮೋಹಿತ ರಾದ ವೀರಬಾಹು ಮೊದಲಾದವರಂ ಉದ್ಧರಿಸುವೆನು. ಪ್ರಥಮದಲ್ಲಿ ದಾನವಾ ಧಮನಾದ ತಾರಕನಂ ಪರಾಕ್ರಮದಿಂ ಸಂಹರಿಸುವೆನು. ಮತ್ತೆ ಆ ಅಸುರನ ಸಂಬಂಧಿಯರಾಗಿ ದುರಾತ್ಮರಾದ ಯುದ್ಧಗಾಮಿಗಳಾದ ಸೇನೆಗಳ್ಗಿಯುಂ, ಭ್ರಾತೃಗಳಾದ "ಸಿಂಹಮುಖ, ಶೂರಪದ್ಮ" ರಿಗೂ ಅಶೇಷರಾದ ಅಸುರರಿಗೂ ಅವಕಾಶಮ ನೀಡದೇ ಶೀಘ್ರದಿಂ ಸಂಹರಿಸುವೆನೆಂದು ನುಡಿದು, ವಾಯುವಂ ಕುರಿತು, ಎಲೈ ಸಮೀರಣನೆ! ರಣರಂಗದಲ್ಲಿ ನೀನು ಅಶ್ವಂಗಳನ್ನು ಶೀಘ್ರಮಾಗಿ ನಡೆಯಿಸಿ, ನಿನ್ನ ಸಾರಥ್ಯದ ಸಾಮರ್ಥ್ಯಮಂ ತೋರಿಸೆಂದು ನಿರೂಪಿಸಿದನು.

ಕುಮಾರದೇವನ ವಿಜಯ ಯಾತ್ರಾವರ್ಣನೆ.

ಅನಂತರದಲ್ಲಿ ವಾಯುವು ಈ ರೀತಿಯಿಂದ ಸುಬ್ರಹ್ಮಣ್ಯನಿಂ ಪ್ರೇರಿತ ನಾಗಿ, ಆ ಸ್ವಾಮಿಯ ರಥಮಂ ವಹಿಸುವ ಅಶ್ವಂಗಳ ನಿಯುತಮಂ ಶೀಘ್ರದಿಂ ಪ್ರೇರಿಸಿದವನಾಗಲು, ದಿವ್ಯಂಗಳಾದ ದೇವದುಂದುಭಿಗಳು ಮತ್ತೆ ಸಮಸ್ತ ವಾದ "ಶೃಂಗ ನಿಸ್ಸಾಣ ಮುರಜ ಡಿಂಡಿಮ" ಮೊದಲಾದ ವಾದ್ಯಂಗಳು ಮೊಳಗಿದವು. ದೇವತೆಗಳುಂ ಋಷಿಗಳುಂ ಜಯಶಬ್ದಾದಿ ಮಂಗಳಂಗಳಂ

ಕೊಟ್ಟರು. ಗುಣಪಾತಕರೆಲ್ಲರು ಸ್ವಾಮಿಯ ಚರಿತ್ರಮಂ ಕೊಂಡಾಡಿದರು. ವೈತಾಳಿಕ ಗಣಂಗಳ ಅಪರಿಮಿತ ಪರಾಕ್ರಮವುಳ್ಳ ಷಣ್ಮುಖದೇವನ ಆಜ್ಞೆಗಳಂ ಪೇಳಿದರು. ಆಲುತಿರ್ಪ ಗರ್ಜಿಸುತಿರ್ಪ ಬಳಿಮಿಡಿದು ಓಡುತಿರ್ಪ ಪದಾತಿಗಳ ಧ್ವನಿಗಳುಂ ಅಶ್ವಂಗಳ ಹೇಷಾರವಂಗಳುಂ ಗಜಂಗಳ ಬೃಂಹಿತ ಶಬ್ದಂಗಳುಂ ರಥಚಕ್ರಂಗಳ ಕೂಜಿತಂಗಳುಂ ಸಾಗರ ಘೋಷೆಯಂ ಜಯಿಸಿ ದಶದಿಕ್ಕುಗಳ್ಲಿಯುಂ ಪ್ರತಿಯಿಲ್ಲದೆ ಬಹುಪ್ರಕಾರವಾಗಿ ಮೊರೆಯುತಿರ್ದವು. ಆಗ ಕುಮಾರಸ್ವಾಮಿಯ ಸೇನೆಗಳು ದೈತ್ಯರ ಸೇನೆಯನ್ನಾವರಿಸಿದವು. ಆ ದೈತ್ಯರ ಸೈನ್ಯವು ಸಾಗರಮಂ ಸಾಗರದಂತೆ ಆ ದೇವಸೇನಾಪತಿಯ ಸೇನೆಯನ್ನಾವರಿಸಿತು. ಅನಂತರದಲ್ಲಿ ರಣರಂಗದಲ್ಲಿ ರೋಮಹರ್ಷಣವಾದ ಯುದ್ಧವು ಸಂಕುಲ ಮಾದುದು. ಆಗ ಧೂಳಿನಲ್ಲಿ ಪ್ರತಿವೀರರಲ್ಲಿಯುಂ ವೀರವಾದಂಗಳು ಪುಟ್ಟಿದವು. ಆ ಸಮಯದಲ್ಲಿ ಈ ತಾರಕನು ಪೋರ್ಪಪುರುಷನಂ ಕಂಡು, ಹಿಡಿಹಿಡಿ, ಹುಯಿಹುಯ್ಯಿ, ಹೋಗದಿರು ಪೋಗದಿರು, ನಿಲ್ಲುನಿಲ್ಲು. ಹೀಗೆಂಬ ವಾಕ್ಯದಿಂ ಧಿಕ್ಕರಿಸಿ, ಆತನ ಕೈಯಂ ಪಿಡಿದು, ಎಲೈ ನೀನು ಆರ ದೂತನು? ಸೇನಾಸಮುದ್ರ ಮಧ್ಯದಲ್ಲಿ ಹಡಗಿನಂತೆ ಪೊಪ್ಪುತಿರ್ಪ ಮತ್ತಂ ಅಪರ ಕಾಂಚನಾದ್ರಿಯಂತೆ ಕಾಣಿಸುತಿರ್ಪ, ನಾನಾಮಣಿ ಖಚಿತ ವಿಚಿತ್ರಧ್ವಜದಿಂ ಮಂಡಿತವಾದ ರಥದಲ್ಲಿ ಕೋಟಿಸೂರ್ಯರಿಗೆ ಸಮಾನವಾದ ಕಾಂತಿಯಂ ಪ್ರಕಾಶಿಸುತಿರ್ಪ ದಿಗಂತರವುಳ್ಳವನಾದ, ಸಮರದಲ್ಲಿ ನೋಡಲಶಕ್ಯನಾದ ಸಾಕ್ಷಾತ್ಕಾಲಾಗ್ನಿ ರುದ್ರನಂತೆ ಸರ್ವಮಂ ದಹಿಸುತಿರ್ಪ, ದೇವತೆಗಳ್ಗೆ ಅತ್ಯಂತ ವಂದ್ಯಮಾನನಾದ ಬಹು ಪರಾಕ್ರಮಿಯಾದ ಈತ ನ್ಯಾರೆಂದು ಚಿಂತಿಸುತ ತನ್ನ ಗೂಢಚಾರಿಯಂ ಕೇಳಿದನು.

ತಾರಕಾಸುರನಿಗೆ ಚಾರನು ಕುಮಾರದೇವನನ್ನು ತಿಳುಹುವಿಕೆ.

ಬಳಿಕ ಆ ಗೂಢಚಾರಿಯು ದಾನವರಿಗೆ ಪ್ರಭುವಾದ ತಾರಕನಂ ನಮಿಸಿ, ಕೃತಾಂಜಲಿಪುಟನಾಗಿ, ಆತನ ಸಮೀಪದಲ್ಲಿ ನಿಯಮವಾಕ್ಕುಳ್ಳವನಾಗಿಂತೆಂದು ಬಿನ್ನೈಸಿದನು, ಎಲೈ ವಿಪ್ರ,, ಅಪ್ರಮತ್ತನಾಗಿ ನನ್ನ ವಿಜ್ಞಾಪನೆಯಂ ಲಾಲಿಸು, ನಿನ್ನಿಂದ ನಿರೂಪಿತನಾದವನು ಯಾವನೋ; ಈ ಸ್ಕಂದನು ಸರ್ವಲೋಕರಕ್ಷಕನು! ಮಹಾಮಹಿಮನು; ಶಿವನ ಕುಮಾರನು ; ಸರ್ವದೇವತೆಗಳಿಗುಂ ರಕ್ಷಾಪರನಾದ ಪ್ರಭುವು ; ಈತನು ಸಮಗ್ರಬಲವೀರ್ಯನು; ಶರಣಾಗತರ್ಗೆ ರಕ್ಷಕನು: ಜಗತ್ಕರ್ತನಾದ ಸಮಗ್ರಬಲನಾಗಿ ಸರ್ವಜ್ಞನಾದ ಸಾಕ್ಷಾಚ್ಛಂಭುಗಿಂತಲುಂ ಬಲದಲ್ಲಿಯುಂ ಸತ್ವದಲ್ಲಿಯುಂ ಧೈರ್ಯದಲ್ಲಿಯುಂ ಸಾಮರ್ಥ್ಯದಲ್ಲಿಯುಂ ಚಾಪಾಕರ್ಷಣದಲ್ಲಿಯುಂ ಅಧಿಕನು. ಈತನ ಸೌಭಾಗ್ಯವು ಕಂದರ್ಪನ

ಗರ್ವವನ್ನು ಪಲಾಯನನುಂ ಮಾಡುತಿರುವುದು. ಸಂಜೀವನೌಷಧಕಾಮಾಂತಕ ಪುರಕ್ಷ್ವೈಳ ದಕ್ಷಾಧ್ವರಂಗಳಂ ಸಂಹರಿಸಿದನನಾದ ಸೋಮಾವತಂಸನಾದ ಆ ಹರನಾದರುಂ ಈತನ ಸಂಗರದಲ್ಲಿ ಪ್ರತಿಭಟಿಸಿ ನಿಲ್ಲಲು ಸಮರ್ಥನಲ್ಲದಿರುವಲ್ಲಿ ಲೋಕದಲ್ಲಿ ಅನ್ಯಧನುರ್ಧಾರರು ಯೆತ್ತಣವರು? ಆವ ಶಿವನು ಲೋಕದಲ್ಲಿ ಈ ಪ್ರಕಾರವಾದ ದೇವರಕ್ಷಕನಾದ ಪುತ್ರನಂ ಪಡೆದನೊ, ಆ ಶಿವನೇ ಪರಮ ಧನ್ಯನು. ಈ ದೇಶಿಕನು ಶಿವನೆಂಬ ದೀಪದ ದೆಸೆಯಿಂ ದೀಪದಂತೆ ಆವಿರ್ಭವಿಸಿದನೆಂದು ನುಡಿದನು.

ಕುಮಾರ ತಾರಕರ ವಾದ ಪ್ರತಿವಾದವು.

ಆನಂತರದಲ್ಲಿ ತಾರಕನು ಈ ಪ್ರಕಾರವಾಗಿ ದೂತನಿಂ ಪ್ರೋಕ್ತವಾದ ವಾಕ್ಯಮಂ ಕೇಳಿ, ಸಾರಥಿಯಂ ವೀಕ್ಷಿಸಿ, ಎಲೈ ಸಾರಥಿಯೆ! ಲೋಕನಾಥನಾದ ಶೂಲಿಯಾದ ಈಶ್ವರನ ಕುಮಾರನು ರಥದಲ್ಲಿ ಕೋಟಿಸೂರ್ಯ ಪ್ರಕಾಶನಾಗಿರುವನು. ಆತನೊಡನೆ ನನಗೆ ಮಾತನಾಡುವ ಕಾರ್ಯಮುಂಟು, ಆಮಕಾರಣದಿಂ ಪೆನ್ನ ಆಜ್ಞೆಯ ದೆಸೆಯಿಂದ ವೇಗದಿಂ, ಅಪ್ರತಿರಥನಾದ ಈ ಕುಮಾರಸ್ವಾಮಿಯ ರಥಮಂ ಕುರಿತು ನನ್ನ ರಥಮಂ ತರುವವನಾಗೆಂದನು. ಸುಕೃತಿಯಾದ ಆತನ ಸಾರಥಿಯು ಈ ಪ್ರಕಾರವಾಗಿ ಪ್ರೇರಿಸಲ್ಪಟ್ಟು ವಿನಯಾನ್ವಿತನಾಗಿ, ಮನೋಮಾರುತವೇಗವುಳ್ಳ ಅಶ್ವಂಗಳಂ ಪ್ರೇರಿಸಿ, ಆ ತಾರಕನ ರಥಮಂ ಶೀಘ್ರವಾಗಿ ಸುಬ್ರಹ್ಮಣ್ಯನ ಸಮೀಪವನ್ನೈದಿಸಿದವನಾಗಲಾಗಿ, ಆಗ ತಾರಕನು ಸೂರ್ಯಪ್ರತೀಕಾಶನಾದ ಕೋಟಿ ಶೀತಾಂಶು ಶೀತಳನಾದ, ಪ್ರಸನ್ನ ಷಣ್ಮುಖಾಂಭೋಜನಾದ ಆ ಕುಮಾರಸ್ವಾಮಿಯಂ ರಥದಲ್ಲಿ ಕಂಡು, ಹಾಹಾ! ಲೋಕನಾಯಕನಾದ ಜಗತ್ಪತಿಯಾದ ನೀನು ಯಾವನೋ ಒಬ್ಬ ಶಂಭುವಿಗೆ ಪುತ್ರನು. ಬುಧನಾಯಕನಾದ ಆ ಶಂಭುವು ನಿನ್ನಿಂದ ಪುತ್ರವಂತನು, ಆ ಪ್ರಸಂಗವಂತಿರಲಿ ಎಲೈ ಸ್ವಾಮಿಯೆ! ನೀನು ನನ್ನ ವಾಕ್ಯಮಂ ಆದರದಿಂ ಕ್ಷಣಮಾತ್ರ ಕೇಳಿ ಬಳಿಕ ನಿನ್ನ ಮತಿಗನುಗುಣವಾಗಿ ಮಾಡು, ಏನಂದರೆ, ಸುರಾಸುರರ್ಗೆ ಜನ್ಮಾರಭ್ಯದಿಂ ಬಂದ ಪರಸ್ಪರ ವೈರಮಂ ಬಿಡಿಸಲು ಯಾರಿಂದಲೂ ಅಶಕ್ಯವು, ನಾವು ದ್ವೇಷಿಗಳಾದ ದೇವತೆಗಳಂ ಸಂಹರಿಸುತಲಿದ್ದೇವೆ, ಹಾಗೆ ಬಲಶಾಲಿಗಳಾದ ಆ ದೇವತೆಗಳು ನಮ್ಮನ್ನು ಸಂಹಾರಮಂ ಮಾಡುತಲಿದ್ದಾರೆ. ಇದೆಲ್ಲವು ಚಂದ್ರಶೇಖರನ ಪ್ರಸಾದದಿಂದಲೆ ಉಂಟಾಯಿತೆ ಹೊರತು ಇತರ ಬಗೆಯಿಂದುಂಟಾಗಲಿಲ್ಲವು. ಆವುದಾನೊಂದು ಕಾರಣದಿಂದ ಶಿವನಿಗೆ ನೀನು ಪುತ್ರನೋ, ಆ ಹೇತುವಿನಿಂದ ನಮಗೆ ಹೇಗೆ ಶಿವನೋ ಹಾಗೆ ನೀನು ಪೂಜ್ಯನಾಗುತಿದ್ದೀ ನೀನು ನಮ್ಮೊಡನೆ ಏನುಕಾರಣದಿಂ ಯುದ್ಧಮಂ ಮಾಡಲು ಬಂದಿರುವೆ? ಹೇಳು, ವಿಷ್ಣು ವೊದ

ಲಾದ ದೇವತೆಗಳು ನಮ್ಮಗಳ ಸಂಹಾರಮಂ ಮಾಡುತಲಿರುವರು. ನಾವು ಅವರಂ ಸಂಹರಿಸುತೇವೆ, ಎಲೈ ದೇವನೆ ! ನಮಗೆ ನೀನೆ ಸಾಕ್ಷಾತ್ಪರಬ್ರಹ್ಮ ; ಶಿವನು ಸಹಾ ನೀನೆ ಸರಿ ಎಂದು ನುಡಿದನು.

ಅನಂತರವಲ್ಲಿ ಆ ದೇವಸೇನಾನಿಯು ಆ ದಾನವನ ಮಾತುಗಳಂ ಕೇಳಿ, ಅವನಂ ಕುರಿತು ಕುಪಿತನಾಗಿ ನಗುತ, ಎಲೈ ಅಸುರನೆ! ದಾನವರಲ್ಲಿ ರಥಾರೂಢನಾದ ನೀನೀಗ ನಮಗೆ ಕೋಪಪ್ರದನು. ನಮ್ಮ ಬಳಿಗೆ ಬಂದು ಏನುಕಾರಣ ಭಯಪಡುತ್ತಿದ್ದಿ? ನಿನ್ನ ನಾಮವಾವುದು? ಇಲ್ಲಿಗೆ ಬಂದ ಕಾರಣವೇನು? ಎಂದು ಕೇಳಲಾಗಿ ಆ ತಾರಕನು, ಎಲೈ ಶಿವಕುಮಾರನೆ! ಲೋಕದಲ್ಲಿ ನಾನು ಶೂರಪದ್ಮಾಸುರನ ಅನುಜನಾಗಿ ತಾರಕನೆಂದು ಲೋಕಪ್ರಸಿದ್ಧನಾಗಿಧೇನೆ. ನಿಮ್ಮೊಡನೆ ನಮಗೆ ಯೆಂದಿಗೂ ಕಲಹಮಿಲ್ಲವೆಂದು ನುಡಿದನು ಬಳಿಕ ಕುಮಾರಸ್ವಾಮಿಯು ಎಲೈ ತಾರಕನೆ, ಸುರಾಸುರರ್ಗೆ ಗುರುವಾದ ಶಿವನು ಈ ಜಗತ್ತಿಗೆ ಕರ್ತನೆಂದು ಪೇಳಲ್ಪಟ್ಟನು. ಅಷ್ಟಶಕ್ತಿಗಳಿಂದೀ ಜಗತ್ತು ಬಹುವಾಗಿ ಆಶ್ಚರ್ಯಕರಮಾಗಿಧೆ. ಈಶ್ವರನು ಆ ಜಗಳವ ಮಾಡಿಸದಿದ್ದರೆ ಜಗತ್ತಿಗೆ ಈ ಶಿತ್ವವೆತ್ತಣದು? ಶಂಕರನು ಈ ಲೋಕಂಗಳನು ಭೇದವಿಲ್ಲದೆ ಮಾಡುವದಕ್ಕೋಸ್ಕರವೆ ಶಂಕರನೆಂದು ಹೇಳಲ್ಪಟ್ಟನು. ಆದುಕಾರಣದಿಂ ವಿಶ್ವಮೂರ್ತಿಯಾದ ಆ ಪರಮೇಶ್ವರನಿಂದ ಆ ಸೇತು ಮರ್‍ಯ್ಯಾದೆಯಂ ನಡೆಸುವಂಥ ವೇದದಿಂದ ಆದಿಯಲ್ಲಿ ಕರ್ಮವು ವಿದ್ಯಾತ್ಮಕದಿಂ ಕರ್ತವ್ಯವೆಂಬದಾಗಿಯುಂ, ನಿಷೇಧದಿಂದ ಕರ್ತವ್ಯಮೆಂಬದಾಗಿಯೂ, ಯೆರಡಾಗಿ ವಿಭಾಗಮಂ ಮಾಡಲ್ಪಟ್ಟಿತು. ಈ ಪ್ರಕಾರವಾದ ಈಶಾಜ್ಞೆಯು ಸುರಾಸುರರುಗಳಿಂ ಅಲಂಘ್ಯವಾಗಿರುವುದಲ್ಲದೆ ನಿಷೇಧದಲ್ಲಿ ನಡೆದವನು ದುಷ್ಟನೆಂದುಂ ವಿಧಿಯಲ್ಲಿ ನಡೆದವಂ ಶಿಷ್ಟನೆಂದುಂ ಪೇಳಲ್ಪಟ್ಟರು. ಪರಮೇಶ್ವರನ ಆಜ್ಞೋಲ್ಲಂಘನಮಾಡುವ ದುಷ್ಟನು ನಿಗ್ರಹಕ್ಕೆ ಆಸ್ಪದನು; ಆಜ್ಞಾಪರಿಪಾಲಕನಾದ ಶಿಷ್ಟನು ಅನುಗ್ರಹಕ್ಕೆ ಯೋಗ್ಯನು. ಆವುದಾನೊಂದು ಕಾರಣದಿಂದ ಅವರುಗಳು ಶಿಷ್ಟದುಷ್ಟರೆಂದು ಪೇಳಲ್ಪಟ್ಟರು, ಲೋಕದಲ್ಲಿ ನೀವು ಬಹುಪ್ರಕಾರವಾಗಿ ಯಾವಾಗಲುಂ ದುಷ್ಕೃತ್ಯನಿರತರು; ನಿತ್ಯವು ಪ್ರಾಣಪೀಡಪರರು; ಸರ್ವಕಾಲವು ಇಷ್ಟಾಪೂರ್ತನಿಂದಕರು; ವಿಶ್ವವು ಬಹುಪ್ರಕಾರವಾಗಿ ಪುಟ್ಟಿತು, ಮುಂದು ಬಹುವಿಧವಾಗಿ ಪುಟ್ಟುತಿರುವುದು ಸದ್ಯೋಜಾತ ರುದ್ರನುಂ ಜಗತ್ಕರ್ತನೆಂದುಂ ವಿಶ್ವಾಧಿಕನೆಂದು ಶ್ರುತಿಯಿಂದ ಪೇಳಲ್ಪಡುತ್ತಲಿಧಾನೆ. ಈ ಜಗತ್ತು ಆತಂಗೆ ಶರೀರವು ; ಆ ಜಗತ್ತಿನಿಂದ ಶಂಕರನು ಶರೀರಿಯು. ಆದುಕಾರಣದಿಂ ಈ ಜಗತ್ತಿನಲ್ಲಿ ಯಾವನೋ ಒಬ್ಬ ದೇಹಿಗೆ ಯಾವನು ಅನಿಷ್ಟಮಂ ಮಾಡುತಲಿಧಾನೊ, ಅವನು ಲೋಕದಲ್ಲಿ

ಶಿವಂಗೆ ಅನಿಷ್ಟಕರನೆಂದು ನಿಶ್ಚಿತವು. ವಿಷ್ಣುಪ್ರಮುಖರಾದ ದೇವತೆಗಳು ಆ ಶಿವನ ಆಜ್ಞಾಭಾವವರ್ತಿಗಳು; ಜಗತ್ಪತಿಯಾದವರಿಗೆ ಜನಕನಾದ ಶಿವನನ್ನು ಆ ವಿಷ್ಣ್ವಾದಿ ದೇವತೆಗಳು, ಪೂಜಿಸಿ ಜಗತ್ತಿನ ರಕ್ಷಣನಿಮಿತ್ತವಾಗಿ ಈ ನಿಮ್ಮ ನಿಗ್ರಹಾರ್ಥವಾಗಿಯುಂ ನನ್ನನ್ನು ವಿಜ್ಞಾಪಿಸಿದರು. ಅದುಕಾರಣದಿಂದ ನಾನು ಮಹತ್ತಾದ ಸೇನೆಯೊಡನೆ ನಿಮ್ಮಗಳ ಸಂಗಡ ಯುದ್ಧಮಂ ಮಾಡಲು ಬಂದೆನು. ನೀನು ಶಿವ ನಮ್ಮವನೆಂದು ಯೋಚಿಸಬೇಡ, ಸನ್ನದ್ಧನಾಗಿ ಯುದ್ಧವ ಮಾಡು ಈ ವೃತ್ತಾಂತಮಂ ನಿನಗೆ ವೊಡಹುಟ್ಟಿದವರಾದ “ಶೂರಪದ್ಮ, ಸಿಹ್ಮ ವಕ್ತ್ರ” ಎಂಬವರಿಗೆ ತಿಳುಹಿಸು. ಈಗ ಜಡನಾಗಬೇಡ, ಮರಳಿ ಪ್ರಾಕಾರ ದುರ್ಗಗಳಂ ಸ್ವಬಲದಿಂ ರಕ್ಷಿಸಿಕೊ, ಮದ್ದೃಷ್ಟಿಪಥವನ್ನೈದಿ! ಪುನಃ ಜೀವಂತ ನಾಗಿ ಹೊರಡಲಾರೆ, ನಿಮ್ಮಿಂದ ಪೀಡಿತರಾದ ಆ ವಿಷ್ಣು ಬ್ರಹ್ಮೇಂದ್ರಾದಿ ದೇವತೆಗಳು ನಿಮ್ಮ ಭಯದಿಂದ ದೇವದೇವನ ಸನ್ನಿಧಿಯಲ್ಲಿ ಬಹು ಪ್ರಕಾರದಿಂ ಮರೆಯಿಟ್ಟರು. ಅದುಕಾರಣದಿಂದ ಕ್ಷಣಮಾತ್ರದಲ್ಲಿ ನಿಮ್ಮ ಕುಲಮಂ ಸಂಹಾರ ಮಂ ಮಾಡುತಲಿರ್ಧೇನೆಂದು ಕುಮಾರಸ್ವಾಮಿಯು ತಾರಕಂಗೆ ಪೇಳಿವನೆಂಬದಾಗಿ ಸೂತಪೌರಾಣಿಕನು ಶೌನಕಾದಿಗಳ್ಗೆ ನಿರೂಪಿಸಿದನೆಂಬಲ್ಲಿಗೆ, ಶ್ರೀಕೃಷ್ಣರಾಜ ವಾಣೀವಿಲಾಸನೆಂಬ ಶಂಕರಸಂಹಿತೆಯ ಶಿವರಹಸ್ಯಖಂಡದೊಳು ಸಂಭವ ಕಾಂಡದಲ್ಲಿ ನಲವತ್ತೊಂದನೆಯ ಅಧ್ಯಾಯವು ಸಂಪೂರ್ಣವು.

ನಲವತ್ತೆರಡನೆಯ ಅಧ್ಯಾಯವು.

ತಾರಕನು ಕುಮಾರದೇವನಿಗೆ ಹೇಳುವ ಹಿತೋಕ್ತಿ.

ಎಲೈ ಮುನಿಗಳಿರಾ! ಅನಂತರದಲ್ಲಿ ತಾರಕನು ಆ ಸುಬ್ರಹ್ಮಣ್ಯನ ಮಾತಂ ಕೇಳಿ, ಕೋಪದಿಂ ಪ್ರಕಾಶಿಸುತಿರ್ಪ ದಂತಂಗಳಿಂ ಕಡಿಯಲ್ಪಟ್ಟ ಅಧರೋಷ್ಠದ ಕಾಂತಿಯುಳ್ಳವನಾಗಿ, ಗಂಟಿಕ್ಕಿದ ಹುಬ್ಬುಗಳಿಂ ಕುಟಿಲದೃಷ್ಟಿಯುಳ್ಳವನಾಗಿ, ಅಡಿಗಡಿಗೆ ನಿಟ್ಟುಸಿರಂ ಬಿಟ್ಟು ಮಹತ್ತಾದ ಒಂದು ವಾಕ್ಯಮಂ ನುಡಿದನದೆಂ ತೆನೆ, ಎಲೈ ಕುಮಾರನೆ! ನೀನು ಶಿಶುವು, ಏನನ್ನೂ ಅರಿತವನಲ್ಲ, ಹೇಗೆ ಯುದ್ಧ ಮಂ ಮಾಡಲು ಬಂದೆ? ನಾವು ಬಲವಂತರಾದ ಅಸುರರು, ಸಂಗ್ರಾಮಗಳಲ್ಲಿ ಹಿಂದಿರುಗುವವರಲ್ಲ, ಸಮಸ್ತ ಅಸುರರುಂ ಸ್ವಭಾವದಿಂ ಕ್ರೂರಮನಸ್ಸುಳ್ಳವರು. ಈಶನಾಜ್ಞೆಯಿಂದ ನಮಗೆ ನಿಷೇಧವೇ ಉತ್ತಮವು, ಸುರರು ವಿಧಿಯಿಂ ನಡೆ ವರು, ಪರಧರ್ಮಾನುಷ್ಠಾನಕ್ಕಿಂತಲೂ ಸ್ವಧರ್ಮವು ವಿಗುಣವಾದರುಂ ಶ್ರೇಯ ಸ್ಕರವಾದದ್ದು, ಅದುಕಾರಣದಿಂ ನಮ್ಮ ಅಸುರರು ಸಮಸ್ತ ದೇವತೆಗಳ ಉತ್ತಮವಾದ ಬಲಮಂ ನಿಗ್ರಹಿಸಿ, ಅವರಂ ಬಾಧಿಸುತಿಹಾರೆ. ನನ್ನಿಂದಿಂ

ದ್ರನು ಯುದ್ಧದಲ್ಲಿ ಸಾಯಕಂಗಳಿಂ ವಜ್ರವಂ ಕೊಡಹಿ ಜಯಿಸಲ್ಪಟ್ಟನು, ಸಮಸ್ತ ದಿಕ್ಪಾಲಕರು ನಿರಾಶರಾಗಿ ಮಾಡಲ್ಪಟ್ಟರು, ಬ್ರಹ್ಮನು ಶೀಘ್ರದಿಂ ನಿರ್ಜಿತನಾದನು, ಬ್ರಹ್ಮಾಸ್ತ್ರಮುಂ ಭಂಜಿತಮಾದುದು. ಇದಲ್ಲದೆ, ನಯಿನಾರ್ಜನೆಯಿಂದ ಮಿತ್ರನಾದ ಹರನ ಪ್ರೀತಿಯ ದೆಸೆಯಿಂದ ತನಗೆ ಸಹಸ್ರ ಸೂರ್ಯರ್ಗೆ ಸಮಾನವಾದ, ಶತ್ರುವೆಂಬ ತಿಮಿರಕ್ಕೆ ಸೂರ್ಯನಾದ, ಅತಿಪ್ರಕಟ ಪರಾಕ್ರಮವುಳ್ಳಂಥಾ, ಆವುದಾನೊಂದು ಸುದರ್ಶನವು ವಿಷ್ಣುವಿನಿಂದ ಪಡೆಯಲ್ಪಟ್ಟಿತೋ ಅಂಥಾ ಸುದರ್ಶನವು ಭಯದಿಂ ಶೀಘ್ರಮಾಗಿ ಓಡುತಿರ್ಪ ವಿಷ್ಣುವಿನಿಂದ ಸಂಗ್ರಾಮ ಭೂಮಿಯಲ್ಲಿ ನನ್ನನ್ನು ಕುರಿತು ಬಿಡಲ್ಪಟ್ಟಿದ್ದಾಗಲು, ಆ ಚಕ್ರವು ವಕ್ಷೋಘಾತದಿಂದ ಕುಂಠಿತ ಧಾರೆಗಳುಳ್ಳದ್ದಾಗಿ ಪತಿತವಾದುದು. ಮತ್ತಂ ಕಮಲಾಪತಿ ರಕ್ಷಣಮಾದ ಆ ಚಕ್ರವು ಶೀಘ್ರಮಾಗಿ ಬಲದಿಂ ಕಂಠದಲ್ಲಿ ಬಳೆಯೋಪಾದಿಯಲ್ಲಿ ಧರಿಸಲ್ಪಟ್ಟಿತು. ಮತ್ತೆ ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ, ಸುಪ್ರತೀಕಗಳೆಂಬ ದಿಗ್ಗಜಗಳು ಎನ್ನ ಸೊಂಡಿಲದ ಘಾತದಿಂ ಛಿನ್ನಮಸ್ತಕಂಗಳಾಗಿ ದಿಕ್ಕುಗಳಲ್ಲಿ ಓಡಿದವು. ಈಗ ನಿನ್ನ ವೀರಬಾಹುವೆಲ್ಲಿ? ನಿನಗೆ ಅಸ್ತ್ರರಾಗಿದ್ದ ಅನುಜರೆಲ್ಲಿ? ನಿನ್ನವರಾದ ನಿಯುತಗಣಂಗಳು ಕ್ರೌಂಚ ಬಿಲದಲ್ಲಿ ನಿಗ್ರಹಿಸಲ್ಪಟ್ಟರು. ಸಹಸ್ರ ವಾಹಿನಿಗಳು ಸಮರದೊಳು ಶರಂಗಳಿಂ ಹತರಾಗಿ ವಿಮುಕ್ತಕೇಶರಾಗಿ ಬಹು ಮಾರ್ಗವಿಡಿದು, ನಾನಾದಿಕ್ಕುಗಳಲ್ಲಿ ಪುನರಾವೃತ್ತಿ ದುರ್ಲಭರಾಗಿ ಪಲಾಯಿತರಾದರು. ಎಲೈ ಕುಮಾರನೆ! ನೀನು ಸಮಸ್ತಮುಂ ಮನಸ್ಸಿನಲ್ಲಿ ತಿಳಿದು ನೋಡು, ನಮಗೆ ಸಂಗ್ರಾಮ ವ್ಯಾಪಾರದಲ್ಲಿ ಸರ್ವರು ಷೋಡಶವರ್ಷ ಪರ್ಯಂತರವೇ ಯೋಗ್ಯರು ನಿನಗೆ ನಮ್ಮೊಡನೆ ವೈರವಿಲ್ಲವು; ನೀನು ಚಿಕ್ಕವನಾದ ಕಾರಣದಿಂ ಏನನ್ನೂ ಅರಿತವನಲ್ಲ, ಈ ಪ್ರಕಾರವಾಗಿ ಲೋಕದಲ್ಲಿ ಮಹತ್ತಾದ ವೃತ್ತಾಂತವು ಜನರಿಂ ಪೇಳಲ್ಪಡುತ್ತಿದೆ. ಅದುಕಾರಣದಿಂ ಮಾತಾಪಿತೃ ಸಮೀಪವನ್ನೈದುವನಾದೊಡೆ ಮಹತ್ಸುಖ ಮುಂಟಾಗುವದೆಂದು ನುಡಿದನು. ಅನಂತರದಲ್ಲಿ ಹರಾತ್ಮಜನು ಈ ಪ್ರಕಾರಮಾದ ತಾರಕನ ವಾಕ್ಯಮುಂ ಕೇಳಿ, ಕೋಪದಿಂ ಸ್ಫುರಿತಾಧರನಾಗಿ ಆ ತಾರಕನಂ ಕುರಿತು ನಸುನಗೆಯುಳ್ಳವನಾಗಿಂತೆಂದನು.

ತಾರಕನಿಗೆ ಕುಮಾರದೇವನ ಪ್ರತ್ಯುತ್ತರವು.

ಎಲಾ, ಎಲೋ ತಾರಕ ದುಷ್ಟಾತ್ಮನೆ! ಕ್ರೂರನೆ! ಅನರ್ಥವತ್ತಾದ ಸಮಸ್ತ ಶೌರ್ಯಮುಂ ಹೇಳುವದಂತಿರಲಿ, ವಿಷ್ಣುಚಕ್ರವು ನನ್ನ ಕಂಠದಲ್ಲಿ ಬಳೆಯೋಪಾದಿಯಲ್ಲಿ ಇರುತಿದ್ದೀತೆಂಬ ನಿನ್ನ ವಾಕ್ಯಮುಂ ಕೇಳಿ ನನಗೆ ಬಹು ನಗು

ಬರುವದು, ನಾನು ನನ್ನ ಪ್ರೀತಿಗನುಗುಣವಾಗಿರುವೆನು ಇಲ್ಲದಿರ್ದೊಡೆ ಪೋಗುವೆನು. ಅಥವಾ ಯುದ್ಧಮಂ ಮಾಡುತ್ತೇನೆ, ಆದರೆ ಆ ಕಾರ್ಯವಂತಿರಲಿ, ನಿನ್ನ ವೀರಭಾಷಿತಂಗಳಂ ನೆನದು ನೆನದು ನನಗೆ ತುಚ್ಛವಾಗಿ ಕಾಣುತಲಿದ್ದೀ, ಎಲೋ ದುರುಳನೆ! ಒಂದು ಭೂತಾರ್ಥಮಂ ಪೇಳ್ವೆನು ಕೇಳು, ಏನಂದರೆ, "ವಿಷ್ಣು ಚಕ್ರಮಪಿ" ಎಂದು ಬಹುಮಾನ ಪುರಸ್ಸರಮಾಗಿ "ಅಪಿ" ಶಬ್ಧವು ಕವಿತ್ವದಿಂದ ಹೇಳಲ್ಪಟ್ಟದ್ದೇ ಹೊರತು ಬೇರೆಯಲ್ಲವು. ಏಕೆಂದರೆ, ಪೂರ್ವದಲ್ಲಿ ದಕ್ಷಾಧ್ವರ ರಣಾಂಗಣದಲ್ಲಿ ಜಿಷ್ಣುವಾದ ವಿಷ್ಣುವಿನಿಂ ಒಂದು ಕಡೆಯಲ್ಲಿ ಅವ್ಯಾಹತವಾದ ಚಕ್ರವು ವೀರಭದ್ರನಲ್ಲಿ ಬಿಡಲ್ಪಟ್ಟದ್ದಾಗಲು, ಆ ಚಕ್ರವು ಆತನ ಶಿರೋರುಂಡ ಮಾಲೆಯಲ್ಲಿರುವ ಒಂದು ಶಿರಸ್ಸಿನಿಂದಲೆ ಭಕ್ಷಿಸಲ್ಪಟ್ಟಿತು. ಇದಲ್ಲದೆ ಪೂರ್ವದಲ್ಲಿ ಗಣಮುಖ್ಯಮಾದ ಒಂದು ಭೂತದಿಂದ ಆ ಚಕ್ರವು ಬಾಧಿತವಾದುದು ಮತ್ತು ದೇವಸಭಾಮಧ್ಯದಲ್ಲಿ ತ್ರಿಣವನಂ ಕುರಿತು ಮುರಾರಿಯಿಂ ಬಿಡಲ್ಪಟ್ಟು ಬಬ್ಬ ಯಕ್ಷನ ನಿರೀಕ್ಷಣದಿಂದ ಅದೃಶ್ಯಮುಖವಾದುದು. ಮತ್ತೆ ದಧೀಚಿಯಂ ಕುರಿತು ಬಿಡಲ್ಪಟ್ಟದ್ದಾಗಿ ಆ ಮುನಿಯ ಅಂಗಾಸ್ಥಿ ಪರಿಘಟ್ಟಿತಮಾಗಿ ಭಗ್ನಾಸ್ಯ ಮಾದುದು. ಈ ಪ್ರಕಾರಮಾದ ಚಕ್ರದಿಂ ನಿನ್ನಂ ಬಹುಮಾನಮಂ ಮಾಡುವದು ನಮ್ಮ ಮುಂದೆ ಆವುದಾನೊಂದು ಪರಾಕ್ರಮವೆಂದು ಪೇಳಲ್ಪಟ್ಟಿತು. ನಿನ್ನ ಶೌರ್ಯವು ಇಷ್ಟೇಸರಿ, ನಮ್ಮ ಪಾದದಾಣೆ ಹೀಗೆ ಕೊಬ್ಬಿ ನುಡಿಯುತಲಿರುವ ನಿನ್ನ ಶಕ್ತಿಯಂ ಕಣಕಣವಾಗಿ ಕಾಳಗದಲ್ಲಿ ಛೇದಿಸುವೆನೆಂದು, ಕುಮಾರಸ್ವಾಮಿಯು ತಾರಕಂಗೆ ಪೇಳಿದನೆಂಬದಾಗಿ, ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಮುನಿಗಳಿಗೆ ನಿರೂಪಿಸಿದನೆಂಬಿಲ್ಲಿಗೆ,

ನಲವತ್ತೆರಡನೆಯ ಅಧ್ಯಾಯವು ಸಂಪೂರ್ಣವು.

ನಲವತ್ಮೂರನೆಯ ಅಧ್ಯಾಯವು.

ಕುಮಾರತಾರಕ ಯುದ್ಧವರ್ಣನೆ.

ಅನಂತರದಲ್ಲಿ ತಾರಕನು ಕುಮಾರಸ್ವಾಮಿಯಿಂ ಪೂರ್ವೋಕ್ತಪ್ರಕಾರದಿಂ ನುಡಿಯಲ್ಪಟ್ಟ ವಾಕ್ಯಮಂ ಕೇಳಿ ಕ್ರೋಧದಿಂ ಮೂರ್ಛಿತನಾಗಿ ನಿಷ್ಠೂರಮಾದ ಮಹದ್ಧನುವಂ ತೆಗೆದು ಸನ್ನದ್ಧಂಗೈದು, ಮಹತ್ತಾದ ನಾರಿಯ ಶಬ್ದದಿಂದ ದಿಕ್ಕುಗಳಂ ತುಂಬಿಸುವನಾಗಿ, ಸ್ವಾತೀಶುಕ್ರರಲ್ಲಿ ಮೇಘವು ವರ್ಷಿಸುವಂತೆ ಬಹು ಬಾಣಂಗಳಂ ಸುರಿಸಿದನು. ಆ ಬಾಣವರ್ಷದಿಂದ ಸಮಸ್ತ ದಿಕ್ಕುಗಳಾಚ್ಛಾದಿತಂಗಳಾಗಿ ಸವಿತ್ರನ ಮಂಡಲವು ಮುಚ್ಚಲ್ಪಟ್ಟಿತು. ಸರ್ವಕಡೆಯಲ್ಲಿಯುಂ ಉರಿಗೊಳ್ಳಿಗಳ್ ಬಿದ್ದವು. ನಭಸ್ಥಳದಿಂ ಜ್ಯೋತಿಸ್ಸುಗಳು

ಬಿದ್ದವು. ಸಮುಸ್ತ ಸಾಗರಂಗಳು ಶೋಷಿಸಿದವು. ವಸುಂಧರೆಯು ಕಂಪಿ ಸಿತು. ಆಗ ಕುಮಾರಸ್ವಾಮಿಯು ನಾರಿಯ ಶಬ್ದದಿಂ ಮುಖರಿಸುತ್ತಿರ್ಪ ಮಹಧ್ಧನುವಂ ತೆಗೆದು ಸಾಯಕಂಗಳಿಂ ಘೋರಮಾದ ಆ ಬಾಣವರ್ಷಮಂ ನಿವಾರಿಸಿ, ಆಶೀವಿಷಂಗಳಿಗೆ ಸಮಾನಮಾದ ಸಹಸ್ರ ಸಹಸ್ರಂಗಳಾದ ಶರಂ ಗಳಂ ಬಿಟ್ಟವನಾಗಲು, ತಾರಕನು ಪರಾತ್ಮಜನಲ್ಲಿ ಕ್ರುದ್ಧನಾಗಿ ಶತಪರ್ವಂಗಳುಳ್ಳ ಸಹಸ್ರ ಸಹಸ್ರಂಗಳಾದ ತನ್ನ ಸಾಯಕಂಗಳಿಂದ ಆ ಶರಳುಗಳಂ ಶೀಘ್ರದಿಂ ನಿವಾರಿಸಿ. ಮರಳಿ ಕ್ಷಿಪ್ರಹಸ್ತನಾಗಿ ಸ್ವನಾಮ ಚಿನ್ಹಿತಂಗಳಾದ ದಶಬಾಣಂಗಳಿಂ ಆ ಸ್ಯಂದನಂ ಪ್ರಹರಿಸುತ್ತಿರೆ, ಆಗ ಕುಮಾರಸ್ವಾಮಿಯು ರಣಾಂಗಣದಲ್ಲಿ ನಸು ನಗೆಯುಂ ನಕ್ಕು ಕ್ರೀಡಿಸುವಂದದಿ ಆ ನಿಡುಸರಳ್ಗಳಂ ತಡೆದನು. ಆ ಮೇಲೆ ವೀರ್ಯವಂತನಾದ ತಾರಕನು ಮಹಾ ರೋಷವುಳ್ಳವನಾಗಿ ಸಾರಥಿಯಂ ಕುರಿತು, ಎಲೈ ಸಾರಥಿಯೆ ! ಈ ಸಂಗರದಲ್ಲಿ ಯುದ್ಧಮಮ್ಮಾಡಲು ಇಚ್ಛೈಸುತಿರ್ಪ ಹರ ಕುಮಾರನೊಡನೆ, ಸಮರಕ್ರೀಡೆಯನ್ಮಾಡುವೆ ನಡುಕಾರಣದಿಂ ನಮ್ಮ ಅಶ್ವಂ ಗಳಂ ಶೀಘ್ರದಿಂ ಸವ್ಯಾಪಸವ್ಯಮಾರ್ಗದಿಂ ಪ್ರೇರಿಸುತ್ತ ನಿನ್ನ ಸಾಮರ್ಥ್ಯವಂ ತೋರಿಸೆಂದು ನಿರೂಪಿಸಲಾಗಿ, ಆ ವಾಕ್ಯಮಂ ಕೇಳಿ ಸಾರಥಿಯು ಆ ರೀತಿ ಯಲ್ಲಿಯೆ ಉತ್ತಮಂಗಳಾದ ಸೈಂಧವಂಗಳಂ ಪ್ರೇರಿಸಿ ಸವ್ಯಾಪಸವ್ಯನಾಗಿ ವೇಗದಿಂ ತಿರಿಗಿಸುತಿರೆ, ಸಮಿತಿಂಜಯನಾದ ಸ್ಕಂದನು ತನ್ನ ಸಾರಥಿಯಾದ ವಾಯುವಂ ಉದ್ದೇಶಿಸಿ, ಎಲೈ ಜಗತ್ಪ್ರಾಣನೆ! ನೀನು ನಮ್ಮ ರಥಮಂ ಕ್ಷಣಮಾತ್ರದೋಳ್ ಮಂಡಲಾಕಾರಮಾಗಿ ತಿರಿಗಿಸೆನಲು, ಮತಿವಂತನಾದ ಆ ವಾಯುವು ಆ ವಚನಮಂ ಕೇಳ್ದು, ಮನೋಜವಂಗಳಾದ ಅಶ್ವಂಗಳಂ ಪ್ರೇರಿಸಿ ದನು. ಆಗ ತಾರಕಾಸುರನ ರಥವು ಅಪಸವ್ಯಮಾಗಿಯುಂ ಕುಮಾರಸ್ವಾಮಿಯ ರಥವು ಸವ್ಯಮಾಗಿಯುಂ ನಡೆಯುತ್ತಿದ್ದವು. ಈ ಪ್ರಕಾರದಿಂ “ಸ್ವಾಮಿ, ದೈತ್ಯ” ರಥಂಗಳು ಅನ್ಯೋನ್ಯಭ್ರಮಣಮಂ ಮಾಡುತಿರಲಾಗಿ, ಸಂಗರಮಂ ವೀಕ್ಷಿಸಲಿಚ್ಛೈಸಿ ಬಂದಿರ್ಪ, ಪುಷ್ಪಸಂಯುಕ್ತ ಹಸ್ತರಾದ ಅನೇಕ ಸಿದ್ಧ ಚಾರಣ ಗಂಧರ್ವ ಯಕ್ಷರುಗಳು, ಶೀಘ್ರಮಾಗಿ ಅಂತರಿಕ್ಷಮಾರ್ಗದೊಳು ಆವರಿಸಿದರು.

ಎಲೈ ಮುನಿಗಳಿರಾ ! ಜಯಾರ್ಥಿಗಳಾದ ವೇಗಹಸ್ತರಾದ ದೇವರಾಕ್ಷಸ ಸ್ವಾಮಿಗಳೀರ್ವರುಂ, ಶೀಘ್ರದಿಂ ಮೌರ್ವೀನಾದದಿಂ ಮೇಘಂಗಳಂತೆ ಘರ್ಜಿಸು ತಿರ್ಪ ಕೋದಂಡಂಗಳಂ ತೆಗದು, ಆತನು ಈತನಂ ಈತನು ಆತನಂ ಈ ಪ್ರಕಾರದಿಂ ಅನ್ಯೋನ್ಯಮಾಗಿ ಬಾಣಂಗಳಂ ಸುರಿಸಿದರು. ಆ ಸಮಯದಲ್ಲಿ ತಾರಕನು ಕ್ರೋಧತಾಮ್ರನಯನನಾಗಿ ಕ್ಷಿಪ್ರಗಾಮಿಗಳಾದ ಶರಂಗಳಂ ದೇವತೆ

ಗಳ್ಗೆ ಅಭಯಪ್ರದನಾದ ಕುಮಾರಸ್ವಾಮಿಯನ್ನೂ ಆಕಾಶವನ್ನೂ ಸಮಸ್ತಮಾದ ಭೂಮಿಯನ್ನೂ ಸಹಾ ಆಚ್ಛಾಧಿಸಿದನು. ಬಳಿಕ ಕುಶಾಗ್ರಬುದ್ಧಿಯಾದ ಮಹಾ ಪ್ರತಾಪವಂತನಾದ, ದೇವದೇವನ ಕುಮಾರನಾದ ಷಣ್ಮುಖಸ್ವಾಮಿಯು ರೋಷದಿಂ ಕೆಂಗಣ್ಣುಗಳುಳ್ಳವನಾಗಿ, ಅತಿ ವೇಗದಿಂದ್ಯೆದುತಿರುವ ಬಹು ಸಾಯ ಕಂಗಳಂ ವೈರಿಗಭಿಮುಖಂಗಳಂಗೈದು, ಮರಳಿ ಶರಣಾರ್ಥಿಗಳಿಗೆ ಧರ್ಮಾರ್ಥ ಕಾಮಮೋಕ್ಷಂಗಳಂ ಮತ್ತೆ ವೈರಿಗಳ್ಗೆ ನಿಧನಮಂ ಕೊಡುತಿರ್ಪ ಹಸ್ತಂಗ ಳುಳ್ಳವನಾಗಿ ವೊಂದು ಶರದಿಂ ತಾರಕಾಸುರನ ಚಾಪಮಂ ಖಂಡಿಸಿದನು. ಮರಳಿ ಆ ತಾರಕನು ಭಗ್ನಚಾಪಮಂ ಬಿಟ್ಟು ಮತ್ತೊಂದಾದ ದೃಢಧನುವಂ ತೆಗೆದು ತ್ವರಿತಮಾಗಿ ಬಹು ಸಹಸ್ರ ಬಾಣಂಗಳಂ ನಾನಾ ಮುಖದಲ್ಲಿ ಸ್ವಾಮಿಯಂ ಕುರಿತು ಪ್ರೇರಿಸಿದವನಾಗಲಾಗಿ, ಆ ಶರವಣೋದ್ಭವನಾದ ಕುಮಾರಸ್ವಾಮಿಯು ಬಾಣಂಗಳಿಂ ಆತನ ಬಾಣಂಗಳಂ ಛೇದಿಸಿ, ಮರಳಿ ಶತ ಸಹಸ್ರ ಬಾಣಂಗಳಿಂ ಆತನ ಆದ್ಭುತಮಾದ ಧನುವಂ ಛಿನ್ನಂಗೈದನು. ಬಳಿಕ ಆ ತಾರಕಾಸುರನು ಮತ್ತೊಂದು ಸ್ವರ್ಣಕಟ್ಟುಗಳಿಂದಲಂಕೃತಮಾದ ಮಹಾ ಚಾಪಮಂ ಕೈಕೊಂಡು ಬಾಣಸಹಸ್ರದಿಂ ಷಣ್ಮುಖಸ್ವಾಮಿಯ ಸಾರಥಿಯಾದ ವಾಯುವಿನಂ ನೊಯ್ಯಿಸಿದನು. ಆವೊಡಂ ಕೃತಾರ್ಥನಾದ ಹರಾತ್ಮಜನು ಕ್ಷಿಪ್ರಹಸ್ತನಾಗಿ ಶತಬಾಣಂಗಳಿಂ ತಾರಕನಂ ಕುರಿತು ಪ್ರೇರಿಸಿ, ಮರಳಿ ನಾರಾಚ ಸಹಸ್ರದಿಂ ಆತನ ಲಲಾಟಮಂ ಪೊಡೆದವನಾಗಲಾಗಿ, ಆ ತಾರಕನು ಆ ನಾರಾಚ ಸಹಸ್ರದಿಂ ಅತ್ಯಂತ ಛಿನ್ನ ಲಲಾಟನಾಗಿ, ಮೂರ್ಛಿತನಾದನು. ಆಗ ಸಾರಥಿಯು ಆತನಂ ಕಂಡು ಯುದ್ಧರಂಗದಿಂ ರಥಮಂ ಹಿಂತಿರಿಗಿಸಿದವ ನಾಗಲಾಗಿ, ಆತನ ಮಹಾರಥಿಕರಾದ ವೀರರೆಲ್ಲರುಂ ಅನ್ಯಬಲಂಗಳಿಂ ಗಜಂಗಳಿಂ ಅಶ್ವಂಗಳಿಂ ಅನೇಕರಥಂಗಳಿಂ ಕುಮಾರಸ್ವಾಮಿಯನ್ನಾವರಿಸಿ " ಶರ, ಭಲ್ಲಿಯ, ಶಲ್ಲಿಹ, ವಿಪಾಠ, ಕ್ಷುರ, ನಾನಾಶಸ್ತ್ರ, ವೃಕ್ಷ, ಮಹಾಶೈಲ" ಎಂಬಿವುಗಳಂ ವರ್ಷಿಸಿದರು. ಆವೊಡಂ ದೇವದೇವನಾದ ಕುಮಾರಸ್ವಾಮಿಯು ಸುಕುಮಾರ ಶರೀರನಾದರು ದಾನವಾಂಭೋಧಿ ಜನ್ಯಮಾದ ಶರವರ್ಷಂಗಳಂ ನಿವಾರಿಸಿ, ಸಮಸ್ತರಾದ ದಾನವರಂ ಯಮನೆಂಬ ಗೃಹಸ್ಥಂಗೆ ಅತಿಥಿಗಳನ್ನಾಗಿ ಮಾಡಿ ದನು. ಅನಂತರದಲ್ಲಿ ಮಹಾ ದುಷ್ಟನಾದ ತಾರಕನು, ಮೂರ್ಛೆಯಂ ಬಿಟ್ಟು ಜಾಗ್ರತೆವಂತನಾಗಿ, ಅತಿ ಕೋಪದಿಂ ಆತ್ಮಸಾರಥಿಯಂ ಧಿಕ್ಕರಿಸಿ ಮಿತಸೈನ್ಯ ನಾದರು ಅತಿ ಬಲಯುತನಾದ ಕಾರಣದಿಂ ಆ ಸೇನಾನಿಯಂ ಬಹು ಪ್ರಕಾರ ಮಾಗಿ ಬೋಧಿಸಿ, ಸೇನಾವಿನಾಶದಾಕ್ರೋಶದಿಂ ಕೆಂಪಾದ ನಯನವುಳ್ಳವನಾಗಿ, ಸಂಗರದಲ್ಲಿ ಹರಪುತ್ರಂಗೋಸುಗ ವೊಂದು ಕಡೆಯಲ್ಲಿಯು ಅಪಜಯವಿಲ್ಲದೆ

ಪ್ರಳಯ ಕಾಲಾಗ್ನಿಗೆ ಸಮಾನಮಾದ ಬ್ರಹ್ಮಾಸ್ತ್ರಮಂ ಬಿಟ್ಟನು. ಆ ಬ್ರಹ್ಮಾಸ್ತ್ರವು ಆತನ ಶರಾಸನದಿಂ ಪೊರಮಟ್ಟು ದೇವದೇವನಾದ ಕುಮಾರಸ್ವಾಮಿಯಂ ಕಂಡು ಆ ಜಗದ್ಗುರುವಂ ಸ್ತೋತ್ರವಮ್ಮಾಡಿತು. "ಆಗ್ನೇಯ, ಯಾಮ್ಯ, ಐಂದ್ರ, ವರುಣ, ಸೌರ, ಆಸುರ, ಗಾಂಧರ್ವ, ಅತ್ಯುಗ್ರವಾದ ಸಮ್ಮೋಹನ, ಸಾರ್ಪ, ಚಾಂದ್ರ, ಗಾರುಡ, ಮಾರುತ, ಎಂಬ ಅಸ್ತ್ರಂಗಳಂ ಬಿಟ್ಟನು. ಆ ಸರ್ವವೂ ಯುದ್ಧದಲ್ಲಿ ಆ ದೇವನ ಸಮೀಪಮನೈದಿ, ಕೃತಾಂಜಲಿ ಪುಟಂಗಳಾಗಿ, ವಿಪ್ರಪೂಜಿತನಾದ ಈತನಂ ಸ್ತೋತ್ರವಮ್ಮಾಡುತಿರಲು, ಮರಳಿ ಆ ತಾರಕನು ಕಡುಕೋಪದಿಂ ಆ ಅಸ್ತ್ರಂಗಳಂ ಸುಡಲಿ ಸುಡಲಿ ಎಂದು ನುಡಿದು, ಕಾಳಗದಲ್ಲಿ ದಿವ್ಯವಾದ ಸರ್ವಸಂಹಾರಕಮಾದ ಪಾಶುಪತಾಸ್ತ್ರಮಂ ಮನಸ್ಸಿನಲ್ಲಿ ಪೂಜಿಸಿ, ಕೋದಂಡದಲ್ಲಿ ಸಂಧಾನಮಮ್ಮಾಡಿ, ಕುಮಾರಸ್ವಾಮಿಗಭಿಮುಖಮಾಗಿ ಬಿಟ್ಟನು. ಆಗ ಭುವನೇಶ್ವರನಾದ ಕುಮಾರಸ್ವಾಮಿಯು ಜ್ವಾಲಾಮಾಲೆಗಳಿಂ ಆವೃತಾಂತರಮಾದ, ಒಂದು ಕಡೆಯಲ್ಲಿಯುಂ ಅಪಜಯಮಿಲ್ಲದ ರೌದ್ರಮಾದ ಪಾಶುಪತಾಸ್ತ್ರಮಂ ಕಂಡು ಆಗ ಸನ್ನದ್ಧನಾಗಿ, ರಣಾಂಕಣದಲ್ಲಿ ಲೀಲೆಯಿಂದಲಿ ಏಕಹಸ್ತದಿಂದದಂ ಧರಿಸಿದನು. ಆ ದಾನವನು ಅಪಜಯ ಮುಖ್ಯಂಗಳಾದ ಅಸ್ತ್ರಂಗಳು ವ್ಯರ್ಥಮಾಗಿ ಪೋದಕಾರಣ ಮಹಾ ಕ್ರೋಧದಿಂ ದಾಟಿಷ್ಟನಾಗಿ ಸಾರಥಿಯಂ ಕುರಿತಿಂತೆಂದನು.

ಎಲೈ ಸಾರಥಿಯೆ! ಈ ಸೇನಾನಿಯು ನಮಗೆ ಶತ್ರುವು. ರಣದಲ್ಲಿ ದುರ್ಜಯನಾದ ಈತನಂ ಪರಾಭವಮಮ್ಮಾಡಲೋಸುಗ ಶೀಘ್ರದಲ್ಲಿ ಎನ್ನ ರಥಮಂ ಅಡಿಗಡಿಗೆ ಸವ್ಯಾಪಸವ್ಯಮಾಗಿ, ಮರಳಿ ಪುರುಹೂತಗರ್ವಶಾಂತಿಗೋಸುಗ ತಿರುಗಿಸೆಂದು ನುಡಿದನು. ಆ ಮೇಲೆ ಸಾರಥ್ಯ ಧರ್ಮಾಭಿಜ್ಞನಾದ ಸಾರಥಿಯು ಮಾಯಾ ಕುಮಾರನಾದ ಆ ದೈತ್ಯನ ಆಜ್ಞೆಯಿಂ ರಥಾಶ್ವಂಗಳಂ ಪ್ರೇರಿಸಿ, ಕ್ಷಣಾರ್ಧದಿಂ ಭ್ರಮಣದಿಂ ಮನೋಹರಮಾಗಿ ರಥಮಂ ತಿರುಗಿಸಿದನು. ಆ ಸಮಯದಲ್ಲಿ ಈತನು ಅಂಬಿನ ಬತ್ತಳಿಕೆಯಿಂ ಶರಂಗಳಂ ಚಾಪದಲ್ಲಿ ಸಂಧಾನಂಗೈವನೋ, ಇಲ್ಲದಿರ್ದೊಡಂ ಶೀಘ್ರಮಾಗಿ ಸರಳುಗಳಂ ಬಿಡುತಲಿದ್ದನೋ, ಆರಿಂದಲುಂ ನೋಡಲ್ಪಡದವನಾಗಿ ತಾರಕಂ ಚಾಪಹಸ್ತನಾಗಿ ಪ್ರಳಯಕಾಲದ ಕಾಲಮೇಘದಂತೆ, ಸುವರ್ಣಪುಂಖ ಮನೋಹರಂಗಳಾದ ಗರಿಗಳುಳ್ಳ ಮಹಾ ತೀಕ್ಷ್ಣಂಗಳಾದ ಶತಪರ್ವಂಗಳಾದ ಮನೋಜವಂಗಳುಳ್ಳ ವಿಷಧಾರಾ ಸಮಾನಂಗಳಾದ, ಶನರೂಪಂಗಳಾದ ಶರಂಗಳಂ ವರ್ಷಿಸಿದನು. ಆ ಶರವರ್ಷದಿಂ ಅಷ್ಟದಿಕ್ಕುಗಳುಂ ಮೇಘಮಂಡಲ ಸುಮಾಚ್ಛಾದಿತಮಾದವು. ಪವನನು ಅಗ್ನಿಯಿಂ ಪ್ರೇರಿತಮಾಗದಿದ್ದರು ತತ್ಪೂರ್ವದಲ್ಲಿಯೆ ಗೃಹಮಂ ದಹಿ

ಸುಪವನಂತೆ ಕುಮಾರಸ್ವಾಮಿಯಿಂದ ಪ್ರೇರಿತನಲ್ಲದಿರ್ದೊಡಂ, ಆ ಕುಮಾರ ಸ್ವಾಮಿಯ ರಥಸ್ಥಂಗಳಾದ ಮನೋಜವಂಗಳಾಗಿರ್ಪ, ಶತಸಹಸ್ರ ಅಶ್ವಂಗಳಂ ಪ್ರೇರಿಸಿದನೆಂದು, ಸೂತಪೌರಾಣಿಕಂ ಶೌನಕಾದಿ ಮುನಿಗಳ್ಗೆ ನಿರೂಪಿಸಿದ ನೆಂಬಲ್ಲಿಗೆ ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಶಂಕರ ಸಂಹಿತೆಯ ಶಿವ ರಹಸ್ಯ ಖಂಡದೊಳು ಸಂಭವಕಾಂಡದಲ್ಲಿ ನಲವತ್ಮೂರನೆಯ ಅಧ್ಯಾ ಯವು ಸಂಪೂರ್ಣಂ.

ನಲವತ್ನಾಲ್ಕನೆಯ ಅಧ್ಯಾಯವು.

ಕುಮಾರದೇವನು ಕ್ರೌಂಚತಾರಕರನ್ನು ಸಂಹರಿಸುವಿಕೆ.

ಎಲೈ ಮುನಿಗಳಿರಾ! ಅನಂತರದಲ್ಲಿ ಆ ರೀತಿಯಿಂ ತಿರುಗುತ್ತಿರ್ಪ ರಥ ದಲ್ಲಿ ಕುಳಿತಿರುವ ಸರ್ವೋತ್ತಮನಾದ ಕುಮಾರಸ್ವಾಮಿಯು, ಮಹಾಮೇರುವಿಗೆ ಸಮಾನಮಾದ ಕೋದಂಡಮಂ ತೆಗೆದು ಮೌರ್ವಿಯಂ ಹೂಡಿದನು. ಆ ನಾರೀ ಶಬ್ದದಿಂ ಅಷ್ಟದಿಕ್ಕುಗಳಂ ತುಂಬಿಸಿ, ಮತ್ತಮಾಧ್ವನಿಯಿಂದಲೇ ಸತ್ಯಲೋ ಕಾದಿ ಪಾತಾಳಾಂತಮಾಗಿ ಬಧಿರತ್ವಮುಂಟಾಗುವಂದದಿ, ತಾರಾಂಬುದ ಸಂಭವ ಮಾದ ಶರವೃಷ್ಟಿಗಳನ್ನು ನಿವಾರಿಸಿದನು ಆಗ ಕಾಳಗಮಂ ನೋಡಲ್ಬಯಸಿ ಬಂದ ಯಕ್ಷ, ಚಾರಣ, ಗಂಧರ್ವ, ಸಿದ್ಧರುಗಳಿಂ ಆಕಾಶವು ನಿರಾವಕಾಶ ಮಾದುದು. ಅನಂತರದಲ್ಲಿ ರೋಮಹರ್ಷಣಮಾದ ಅನುಪಮಮಾದ, ಅನಿರ್ದೇಶ್ಯ ವಾದ ಘೋರಮಾದ ಆ ಸ್ಕಂದತಾರಕರುಗಳ ಯುದ್ಧವು ಅವರೀರ್ವರ್ಗೆಯೇ ಸದೃಶಮಾಗಿರುವುದೇ ಹೊರತು ಇತರರಿಗಿಲ್ಲವೆಂದು ಯೆಲ್ಲರಿಂದಲು ನಿರೂಪಿತ ಮಾಗಿ ವಿಚಿತ್ರಮಾಗಿತ್ತು. ಅವರೀರ್ವರೊಳಗೆ ಓರ್ವನಿಗುಂ ಜಯಾಪಜಯಂ ಗಳು ಕಂಡುಬರಲಿಲ್ಲವು. ಆಗ ಸಿದ್ಧ, ಚಾರಣ, ಗಂಧರ್ವ ಕಿನ್ನರರು ಮೊದಲಾ ದೇವತೆಗಳು ನಮ್ಮ ಕುಮಾರಸ್ವಾಮಿಯು ಆವಾಗ ಜಯಿಸುವನೋ ಆ ವೇಳೆ ಯಲ್ಲಿ ಪುಷ್ಪವೃಷ್ಟಿಯಂ ವರ್ಷಿಸುವುಣವೆಂತಲು, ದಾನವರು ತಮ್ಮ ಒಡೆಯ ನಾದ ತಾರಕಂ ಆವಾಗ ಜಯುವನ್ನೈದುವನೋ, ಆಗ ಪೂಮಳೆಯಂ ಕರೆಯುವುಣ ವೆಂತಲು ಯೋಚಿಸುತ್ತಿದ್ದರು. ಈ ಮಧ್ಯಕಾಲದಲ್ಲಿ ಬಾಲಕನಾದ ಹರಾತ್ಮಜ ನಾದ ಷಣ್ಮುಖಂ, ಶೀಘ್ರದಿಂ ಸರ್ವಸಂಹಾರಮೊಳು ಶಕ್ತನಾದೊಡಂ, ಲೋಕ ದಲ್ಲಿ ಶಿಶುಗಳು ಅಸದೃಶರೊಡನೆ ಆಡುವಂತೆ ಲೀಲಾವಿನೋದಕ್ಕೋಸುಗ ಆ ದಾನವನಂ ಇದಿರುಮಾಡಿಕೊಂಡು ಯುದ್ಧವನ್ಮಾಡುತ್ತ, ಮೊದಲು ಈ ದಾನ ವನ ಶುಂಡಾವಿಷಾಣಂಗಳಂ ಭೇದಿಸಿದವನಾಗಲು, ಆ ಶುಂಡಾದಂತಂಗಳು ವರ ಬಲದಿಂ ಮರಳಿ ಪುಟ್ಟಿದವು. ಅನಂತರದಲ್ಲಿ ಕುಮಾರಸ್ವಾಮಿಯು ಅತಿ

ಕೋಪದಿಂ ಮರಳಿ ಶುಂಡಾದಂತಂಗಳಂ ಕತ್ತರಿಸಿದನು. ಆದರೂ ಅವುಗಳು ಮರಳಿ ಉತ್ಪನ್ನಂಗಳಾದವು. ಆ ಮೇಲೆ ಮಾಯಾವಿಯಾದ ತಾರಕನೆಂಬ ಮಹಾಸುರನು ಯುದ್ಧದಲ್ಲಿ ಬಹು ವಿಧದಿಂ ಛೇದಿಸಲ್ಪಟ್ಟ ಆ ಶುಂಡಾದಂತಂಗಳುಳ್ಳವನಾಗಿ, ಈತನಂ ಮಾಯೆಯಿಂದಲೇ ಜಯಿಸಬೇಕೆಂದು ಯೋಚಿಸಿ, ಆ ಕುಮಾರಸ್ವಾಮಿಯು ನೋಡುತಿರುವಾಗ ರಥದೊಡನೆ ಅಂತರ್ಧಾನನಾಗಿ ಕ್ರೌಂಚಗಿರಿಯ ಬಿಲಮಂ ಪೊಕ್ಕನು. ಅನಂತರದಲ್ಲಿ ದುರಾತ್ಮನಾದ ಲೋಕಕಂಟಕನಾದ ಮಾಯೆಯೋಳ್ ಅತಿ ಸಮರ್ಥನಾದ ಆ ತಾರಕನು ಕ್ರೌಂಚ ಗಿರಿಯನೆ ಮಾಯೆಯನ್ಮಾಡಿದನು. ಆ ಕ್ರೌಂಚಗಿರಿಯು ಕೃಷ್ಣಾಯಸ ರಾಜಿತ ಹೈರಣ್ಯಮಾದ ತ್ರಿಪುರಸ್ವರ್ಶಮಾದುದು. ಆ ತಾರಕನುಂ ವಿದ್ಯುನ್ಮಾಲಿ, ತಾರಕಾಕ್ಷ, ಕಮಲಾಕ್ಷನೆಂಬ ರೂಪನುನ್ನೈದಿದನು. ಆ ಪರಮೇಶ್ವರ ಕುಮಾರಕನು ತ್ರಿಪುರಾಂತಕನಾಗಿ, ಆ ಪರ್ವತವನ್ನೈದಿ, ಅದ್ಭುತಮಾದ ನಗೆಯಿಂದ ಅಗ್ನಿಯಂತೆ ದೇವತೆಗಳಂ ಪ್ರಕಾಶಿಸುವಂತೆ ಮಾಡಿದನು. ಮತ್ತೆ ಈಶನಾದ ಕುಮಾರಸ್ವಾಮಿಯು ಆ ಸಮುದ್ರಮಂ ಚುಳುಕೋದಕಲೀಲೆಯಿಂ ಆಚಮನಮನ್ಮಾಡಿದನು. ಆ ಕ್ರೌಂಚನೆಂಬ ಮಹಾಗಿರಿಯುಂ ಚಕ್ರವಾಳ ಗಿರಿಯಾಗಿ ಪುಟ್ಟಿದನು. ತಾರಕನು ಆ ಲೋಕರಹಿತ ಮಾದ ಅಂಧಕಾರದಂತೆ ಕಾಣಲ್ಪಟ್ಟನು. ಮರಳಿ ಉಮಾಸುತನು ಕೋಟಿಸೂರ್ಯಪ್ರಕಾಶನಾಗಿ, ಸ್ವಲೀಲೆಯಿಂ ಆ ಚಕ್ರವಾಳ ತಪೋಲೋಕಂಗಳಂ ನಾಶಮನ್ಮಾಡಿ ಪ್ರಕಾಶಿಸಿದನು. ದಾನವಾಧಮನಾದ ಕ್ರೌಂಚಗಿರಿಯು ತನ್ನ ಮಾಯೆಯಿಂ "ಹಿಮವಂತ, ನಿಷಧ, ವಿಂಧ್ಯ, ಮಾಲ್ಯವಂತ, ಪಾರಿಯಾತ್ರ, ಗಂಧಮಾದನ" ಹೇಮಕೂಟಗಳೆಂಬ ಸಪ್ತ ಪರ್ವತಂಗಳಾದನು. ಆ ತಾರಕನು "ಐರಾವತ, ಪುಂಡರೀಕ, ವಾಮನ, ಅಂಜನ, ಪುಷ್ಪದಂತ, ಸಾರ್ವಭೌಮ, ಸುಪ್ರತೀಕಗಳೆಂಬ ಅಷ್ಟದಿಗ್ಗಜಂಗಳಾಗಿ, ಸ್ಕಂದನಂ ಮೋಹಗೊಳಿಸುತ ಮಹತ್ಕದನಮನ್ಮಾಡಿದನು. ಆಗ ವೀರ್ಯವಂತನಾದ ರುದ್ರಕುಮಾರನುಂ ಶೀಘ್ರಮಾಗಿ ವಜ್ರಾಯುಧಮಂ ತೆಗೆದು ಕಾಳಗದಲ್ಲಿ ಸಪ್ತಪರ್ವತಂಗಳಂ ಅಷ್ಟದಿಗ್ಗಜಂಗಳಂ ಛೇದಿಸಿ, ಕ್ರೌಂಚ ತಾರಕರುಗಳಂ ವೇಗದಿಂ ಅದ್ಭುತದಂತೆ ಜಡಿಸಿದನು. ಮರಳಿ ಆ ಕ್ರೌಂಚ ತಾರಕರು ಅಗ್ನಿಮಾರುತ ರೂಪಂಗಳನ್ನಂಗೀಕರಿಸಲಾಗಿ, ಸ್ಕಂದನು ಕೋಪಮಂಕೈಕೊಂಡು ಅರ್ಧಾರ್ಧಕ್ಷಣದಿಂ ಆ ಅಗ್ನಿಮಾರುತ ರೂಪಂಗಳಂ ನಾಶಂಮಾಡಿದನು. ಆಗೆ ಕ್ರೌಂಚನು ಕಾಲಾಗ್ನಿ ರುದ್ರಕೋಟಿಗೆ ಸದೃಶಮಾದ ಈಶ್ವರನ ಸಂಬಂಧಮಾದ ರೂಪಮಂ ಕೈಕೊಂಡನು. ತಾರಕನು ರಣಾಂಕಣದಲ್ಲಿ ಪ್ರಳಯಕಾಲ ಸಹಸ್ರ ಸೂರ್ಯರಕಾಂತಿಗಳಂ ವಹಿಸಿದನು. ಈ ಕೋಟಿಕಾಲಾಗ್ನಿ ಪ್ರಳಯಕಾಲ ಸಮ

ಸ್ರಾರ್ಕರುಗಳ ತೇಜಸ್ಸುಗಳಿಂದ ದಶದಿಕ್ಕುಗಳು ವ್ಯಾಪ್ತಂಗಳಾದವು. ಜಗತ್ರಯಮುಂ ಜ್ವಲಿಸಿತು. ವಸುಂಧರೆಯು ಕಂಪಾಯಮಾನಮಾದುದು. ಸಾಗರಂಗಳು ಕಳವಳಿಸಿದವು. ದೇವತೆಗಳು ಭೀತಿಯನ್ನೈದಿ ಮುನಿಗಳೊಡಗೂಡಿದರು. ಸಿದ್ಧಚಾರಣರು ಬೆದರಿದರು. ಭೂತಾಧಿಪತಿಗಳು ಕಾಂತಿಹೀನರಾಗಿ ಓಡಿದರು. ಅದುಕಾರಣದಿಂ ಶರವಣೋದ್ಭವನಾದ ಸುರಾರಿ ಸಂಹಾರಕನಾದ ಈ ಕುಮಾರನಾದ ಕಾರ್ತಿಕೇಯನು ರಣರಂಗದಲ್ಲಿ ಶತ್ರುಸಂಹಾರಕನಾದ ಸರ್ವಪ್ರಾಣಿ ಸಮೇತಮಾದ ತನ್ನ ಮೂರ್ತಿಯಂತಿರುತಿರ್ಪ ಶಕ್ತಿಯಂ ಮಾಯಿಗಳಾಗಿರ್ಪ ಕ್ರೌಂಚತಾರಕರ ವಿನಾಶಗೋಸುಗ ಬಿಟ್ಟನು. ಅನಂತರದಲ್ಲಿ ಆ ಶಕ್ತಿಯು ಪ್ರಭೆಯಿಂ ಜಾಜ್ವಲ್ಯಮಾನಮಾದ ಜಗತ್ರಯಮಂ ಆಸ್ವಾದನೆಯಮ್ಮಾಡುತಿರ್ಪ ಯುಗಾಂತಾಗ್ನಿಯರ ಸೇನೆಯಂತೆ, ಸ್ಫುರಿಸುತಿರ್ದ ಕಾಂತಿಯುಳ್ಳದ್ದಾಗಿ ಅಗ್ನಿ ಕಿಡಿಗಳಂ ಸೂಸುತಿರುವ, ಘಂಟಾಚಾಮರಂಗಳಿಂದಲಂಕೃತಮಾಗಿ, ಪ್ರಳಯಕಾಲ ಮೇಘಂಗಳ ಶತಕೋಟಿ ಘರ್ಜನೆಗೆ ಸಮಾನಧ್ವನಿಯುಳ್ಳದ್ದಾಗಿ, ಗಗನಮುಂ ವ್ಯಾಪಿಸಿ ಕ್ಷಣದಿಂ ದಶದಿಕ್ಕುಗಳನ್ನಾವರಿಸಿ, ನೋಡುತಿರ್ಪ ದೇವತೆಗಳ ಭಯಮಂ ಬಿಡಿಸಿ, ನಿಮಿಷಾರ್ಧದಿಂ ಶಿಲಾಭಾರಮಾದ ಆಕ್ರೌಂಚಗಿರಿಯಂ ಭೇದಿಸಿ, ಆ ಕಶ್ಮಲನಾದ ತಾರಕನಂ ವಸುಧೆಯೊಳ್ಕೆಡವಿ, ವಿಶ್ವಮೋಹಿನಿಯಾದ ಆ ಮಾಯೆಯಂ ಹೋಗೊಳಿಸಿ, ಹತಶೇಷವಾದ ಆ ಸೇನೆಯಂ ಏಕಕಾಲದಲ್ಲಿ ಯಮಪುರವನ್ನೈದಿಸಿ, ಕ್ರೌಂಚಮಾಯಾ ಮೋಹಿತರಾದ ವೀರಬಾಹು ಪ್ರಮುಖರಂ ಬಾಹ್ಯಮನ್ನೈದಿಸಿ ಪ್ರಕಾಶಿಸಿತು. ಆಗ ವೀರಬಾಹು ಪ್ರಮುಖರು ನಿದ್ರೆಯಮ್ಮಾಡಿದವರಂತೆ ಪ್ರಕೃತಿಯನ್ನೈದಿ, ಮರಳಿ ಸಂಬಂಧಿಸಿದ ಅಂಗಸಂಧಿಗಳುಳ್ಳವರಾಗಿ, ಕ್ಷಣದಿಂದೆದ್ದವರಾದರು.

ಎಲೈ ಮುನಿಗಳಿರಾ! ಆವ ನರೋತ್ತಮನು, ಈ ಶೋಭನಮಾದ ತಾರಕ ಕ್ರೌಂಚ ಸಂಹಾರರೂಪಮಾದ ಕಥಾಧ್ಯಾಯಂ ಪಠಿಸುವನೊ, ಆವಾತನು ಭಕ್ತಿಯಿಂ ಕೇಳುವನೋ, ಅವರೀರ್ವರಂ ಕಂಡು ಶತ್ರುಗಳು ಭಯದಿಂ ಪಲಾಯನವ ನೈದುವರು. ಪೂರ್ವದಲ್ಲಿ ಮಾಧವನು ಈ ತಾರಕನ ವಧಾವೃತ್ತಾಂತಮಂ ಕೇಳಿದ್ದರಿಂದ ಹಿರಣ್ಯಾಕ್ಷ ಹಿರಣ್ಯಕಶಿಪು, ಸೋಮಕಾಸುರರೆಂಬ ಮಹಾ ರಾಕ್ಷಸರಂ ಸಂಹರಿಸಿದನು. ಸೀರಪಾಣಿಯಾದ ಬಲರಾಮನು ಈ ಚರಿತ್ರಮಂ ಕೇಳಿ ರಣರಂಗದಲ್ಲಿ ವೈರಿಗಳಾದ ಗೊಲ್ಲರಂ ಕೊಂದನು. ಮತ್ತೆ ಇಂದ್ರನು ರಣಮಧ್ಯದಲ್ಲಿ ಪರಮ ಪಾಪಿಗಳಾದ ಬಹು ದೈತ್ಯರಂ ಸಂಹರಿಸಿ ಜಯಶಾಲಿಯಾದನು. ಅದುಕಾರಣದಿಂದೆಲ್ಲರುಂ ಮುಖ್ಯವಾಗಿ ಈ ಕಥೆಯಂ ಪಠಿಸುತಲುಂ ಕೇಳುತಲುಂ ಇರಬೇಕು. ಈ ಪ್ರಕಾರದಲ್ಲಿ ಅಂಬಿಕಾ ಕುಮಾರನಾದ

ಕುಮಾರಸ್ವಾಮಿಯು, ನೋಡುತಿರ್ಪ ಆ ದೇವತೆಗಳು ಋಷಿಗಳು ಮನುಷ್ಯರು ಇವರುಗಳ ಅತಿಶಯಕ್ಕೋಸುಗ ದೃಷ್ಟಿಗೋಚರನಾಗಿ ಬಹು ಲೀಲೆಗಳುಳ್ಳವನಾಗಿ ಉಗ್ರನಾದ ತಾರಕನೆಂಬ ದೈತ್ಯನಂ ಮಹಾಮಾಯೆಯುಳ್ಳ ಕ್ರೌಂಚನೆಂಬ ಗಿರಿಯುಂ ಉಳಿದ ದೈತ್ಯರುಗಳಂ ಸಹ ಸಂಹರಿಸಿದನೆಂದು, ಸೂತಂ ಶೌನಕಾದಿ ಮುನಿಗಳ್ಗೆ ನಿರೂಪಿಸಿದನೆಂಬಲ್ಲಿಗೆ, ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಶಂಕರಸಂಹಿತೆಯ ಶಿವರಹಸ್ಯಖಂಡದ ಸಂಭವಕಾಂಡದೊಳು ನಲವತ್ನಾಲ್ಕನೆಯ ಅಧ್ಯಾಯವು ಸಂಪೂರ್ಣವು.

ನಲವತ್ತೈದನೆಯ ಅಧ್ಯಾಯವು.

ದೇವತೆಗಳು ತಾರಕಹಾರಿಯನ್ನು ಸ್ತುತಿಸುವಿಕೆ, ದೇವಗಿರಿ ಪ್ರಸನ್ನನಾಗುವಿಕೆ.

ಸೂತರ ವಚನವು,-- ಎಲೈ ಮುನಿಗಳಿರಾ! ಅನಂತರದಲ್ಲಿ ಆ ಶಕ್ತಿಯು ತಾರಕನ ಹೃದಯಮಂ ಪ್ರವೇಶಿಸಿ, ರಕ್ತಮಂ ಮುಟ್ಟದೆ ಆವಾಗ ಪೊರಮಟ್ಟುದೋ, ಆಗ ಸಮುದ್ರ ಘೋಷಮಂ ಜಯಿಸಿದಂಥ ಧ್ವನಿಯು ಪುಟ್ಟಿತು. ಈ ಶಕ್ತಿಯು ತಾರಕಾಂತರ್ಗತವಾದುದೋ ಇಲ್ಲವೋ ಎಂದು ಎಲ್ಲರಿಂದಲುಂ ತಿಳಿಯಲ್ಪಡುವುದರೊಳಗಾಗಿ, ದಾನವಾಧಮನಾದ ಆ ತಾರಕನು ಆಕಾಶಕ್ಕೆ ನೆಗದು ಭೂಮಿಯಲ್ಲಿ ಬಿದ್ದು ಪ್ರಾಣಂಗಳಂ ಬಿಟ್ಟನು. ಅದು ಅದ್ಭುತದಂತಾದುದು. ಅನಂತರದಲ್ಲಿ ದೇವತೆಗಳುಂ ಋಷಿಗಳುಂ ಮುನಿಗಳುಂ ಕಿನ್ನರರುಂ ಕಿಂಪುರುಷರುಂ, ವೀರಬಾಹು ಪ್ರಮುಖರಾದ ಐವತ್ನಾಲ್ಕು ಸಂಖ್ಯಾತರಾದ ಸೇನಾನಾಯಕರುಂ ಇವರೆಲ್ಲರುಂ ಶಕ್ತಿಯಿಂ ಮೃತನಾದ ಆ ತಾರಕನಂ ಕಂಡು ಪ್ರಸನ್ನವಾದ ಇಂದ್ರಿಯಂಗಳುಳ್ಳವರಾಗಿ, ಸ್ವಾಮಿಯಂ ಬಹುಮಾನಮಂ ಮಾಡಿದರು. ದೇವತೆಗಳು ಅಧಿಕ ಮುದದಿಂ ದೇವಸೇನಾ ನಾಯಕಂಗೆ ಕುಸುಮಂಗಳಂ ಮಳೆಗರೆದರು. ಸಮಸ್ತ ಮುನಿಗಳು ನರ್ತನಮಂ ಮಾಡಿದರು. ಕಿನ್ನರರು ಗಾನಮಂಗೈದರು. ವೀರಬಾಹು ಮೊದಲಾದ ವೀರರುಂ ನಿಯುತ ಗಣಾಧಿಪತಿಗಳುಂ ಐವತ್ನಾಲ್ಕು ಸೇನಾಪತಿಗಳುಂ ಜಯಘೋಷಮಂ ಗೈಯುತ್ತ ಕೃತಾಂಜಲಿಪುಟರಾಗಿ ಸರ್ವಕರ್ತನಾದ ಕುಮಾರಸ್ವಾಮಿಯ ಸಾನ್ನಿಧ್ಯಮನೈದಿ, ಪ್ರಸನ್ನೇಂದ್ರಿಯಮಾನಸರಾಗಿ, ಮುಂಗಡೆಯಲ್ಲಿ ಕೆಲಬರುಂ ಪಾರ್ಶ್ವದಲ್ಲಿ ಕೆಲವರಂ ಹಿಂಭಾಗದಲ್ಲಿ ಕೆಲವರುಂ ಈ ರೀತಿಯಲ್ಲಿ ನಿಂತಿರ್ದರು. ಆಗ ಶಾಂತನಾದ ಕುಮಾರಸ್ವಾಮಿಯು ಸಮಸ್ತ ದೇವತೆಗಳಂ ನಿರೀಕ್ಷಿಸಿ, ಎಲೈ ದೇವತೆಗಳಿರಾ! ಮಹಾ ವೀರರಿರಾ! ದನುಜಾದಿಗಳಿಂ ದೈವಗತಿಯಿಂದ ಎನ್ನ ಕೃಪೆಯಿಂದ

ವಿಮುಕ್ತರಾಗಿ ಸ್ವಸ್ಥರಾದಿರಿ; ಎಂದು ನಿರೂಪಿಸಲಾಗಿ, ಆ ವಚನವಂ ಕೇಳ್ದು ಅವರುಗಳಿಂತೆಂದು ಬಿನ್ನೈಸಿದರು, ಎಲೈ ಸ್ವಾಮಿಯೆ, ಸಾಕ್ಷಾಜ್ಜಗತ್ಪತಿಯಾದ ನೀನಿರಲಾಗಿ, ನಮಗೆ ನೊವ್ವೆತ್ತಣದು ? ದಯಾನಿಧಿಯಾದ ಸ್ವಾಮಿಭಕ್ತರಿಗೆ ವ್ಯಥೆಯುಲ್ಲಿಯದು? ನಿನ್ನ ಪಾದಾರವಿಂದದಲ್ಲಿ ನಿಷ್ಠೆಯುಳ್ಳವರಿಗೆ ಏನು ದುಸ್ತರವೊ? ಎಂದಿಂತು ಬಿನ್ನಪಂಗೆಯ್ಯುತಿರ್ದ ಅವರ ವಾಕ್ಯಮಂ ಕೇಳಿ ಕುಮಾರ ಸ್ವಾಮಿಯು ಅದು ಯುಕ್ತವೇಸರಿಯೆಂದು ಪೇಳುತ್ತ ಸಂತೋಷಚಿತ್ತನಾಗಿ, ವೀರಬಾಹುವಂ ಕರೆದು, ಎಲೈ ವೀರಬಾಹುವೆ! ದುರಾತ್ಮಕನಾದ ತಾರಕನಿಂ ರಣಾಂಕಣದಲ್ಲಿ ಬಿಡಲ್ಪಟ್ಟ ಪಾಶುಪತಾಸ್ತ್ರವು ನಮ್ಮ ಹಸ್ತದಿಂದ ಧರಿಸಲ್ಪಟ್ಟಿತು. ನೋಡುವನಾಗೆಂದು ಪೇಳಿ, ಲೋಕದಲ್ಲಿ ಅವ್ಯಾಹತಮಾದ ಆ ಅಸ್ತ್ರಮಂ ತೋರಿಸಿ ಪಾಲಿಸಿದನು. ಆ ಸಮಯದಲ್ಲಿ ಕಲ್ಪವೃಕ್ಷದಿಂ ಪುಟ್ಟಿದ ಪುಷ್ಪವೃಷ್ಟಿಯುಂಟಾದುದು. ಮತ್ತೆ ಆಕಾಶದಲ್ಲಿ ಸಂಕುಳಧ್ವನಿಗಳಾದ ದೇವ ದುಂದುಭಿಗಳು ಮೊಳಗಿದವು. ಮುನಿಗಳು ಸಿದ್ಧರು ನರ್ತನಂಗೈದರು. ಕಿನ್ನರ ಸ್ತ್ರೀಯರು ಗಾನವಂ ಮಾಡಿದರು. ಇಂದ್ರಸಹಿತರಾದ ದೇವತೆಗು ಶೂರಪದ್ಮನು ಶೀಘ್ರದಲ್ಲಿ ಆ ಸಿಂಹವಕ್ತ್ರನೊಡನೆ ಯುದ್ಧದೊಳು ಕುಮಾರಸ್ವಾಮಿಯಿಂ ಲೀಲೆಯಿಂದಲೇ ಹತರಾಗುವರೆಂದು ತಿಳಿದರು. ಮತ್ತಂ ಅರಿಮರ್ದಕನಾದ ಜಗತ್ಪತಿಯಾದ ದೇವಸೇನಾನಿಯಾದ ಕುಮಾರಸ್ವಾಮಿಯು ಅವರ ಸಂತಾಪಮಂ ನೋಡಿ ದೇವತೆಗಳಿಂದಲು ಸರ್ವಗಣಾಧ್ಯಕ್ಷರಿಂದಲು ಒಡಗೂಡಿ ರಣರಂಗವಂ ಬಿಟ್ಟು, ಹಿಮವತ್ಪರ್ವತವನ್ನೈದಿ, ಅಲ್ಲಿ ಓಷಧಿಪ್ರಸ್ಥಮೆಂಬ ನಗರದಲ್ಲಿ ನೆಲೆಗೊಂಡು, ತನ್ನ ಮಾತಾಮಹನಾದ ಗಿರಿರಾಜನಂ ಸಂಭಾವಿಸಿ, ಆತನಂ ಮಾತನಾಡಿಸಿ ದೇವಗಿರಿಯನ್ನೈದಿದನು. ಆ ಸಮಯದಲ್ಲಿ ಭಾನುವು ಅನುಗ್ರಹವನಿಚ್ಛೈಸಿದವನಂತೆ ತಾನು ದೇವಗಿರಿಯ ನ್ಯೆದುವವನಾಗಿ ಸ್ವಾಮಿಯಾಜ್ಞೆಯಿಂದ ಈ ಪಶ್ಚಿಮ ದಿಕ್ಕಿನಲ್ಲಿ ಮರೆಯಾದನು. ಆಗ ಮಹಾರಥಿಕನಾದ ಹರಕುಮಾರನು ಚತುರಂಗದಿಂ ನಿಬಿಡಮಾದ ಆ ಸೇನೆಯಂ ನಿರೀಕ್ಷಿಸಿ ರಥದಿಂದಿಳಿದು ಸಾಯಂಸಂಧ್ಯಾ ಕೃತ್ಯಮಂ ಮಾಡಿ, ಆ ದೇವಗಿರಿಯಿಂದ ಆಚರಿಸಲ್ಪಟ್ಟ ಪೂಜೆಯಂ ಕೈಕೊಂಡು ಮಹಾ ಸಂತೋಷಯುಕ್ತನಾಗಿ, ಆ ರಾತ್ರಿ ಅದೇ ಪರ್ವತದೊಳು ವಾಸಂಗೈದನು. ಆಗ ಪರ್ವತದಲ್ಲಿ ದೇವತೆಗಳು ದೇವ ಋಷೀಶನಾದ ಸರ್ವಸಿದ್ಧಿಪ್ರದನಾದ ಪ್ರಭುವಾದ ಶಂಕರನ ಕುಮಾರನಾದ ಕುಮಾರಸ್ವಾಮಿಯುನ್ನೈದಿ, ನಮಸ್ಕಾರವಂ ಮಾಡಿ ಇಂತು ಬಿನ್ನೈಸಿದರು.

ಎಲೈ ಭಗವಂತನೆ! ದೇವೇಶನೆ! ಸ್ಕಂದನೆ! ಸೇನಾಪತಿಯೆ! ಪ್ರಭುವೆ! ರಾತ್ರಿಕಾಲವೊದಗಿರುವುದರಿಂದ ಈ ಪರ್ವತದಲ್ಲಿ ನಿಮ್ಮಿಂದ ವಾಸವು ಮಾಡ

ಲ್ಪಡಲು ಯೋಗ್ಯವು; ನಾವು ನಿಮ್ಮ ಪೂಜಾವಿಧಿಜನ್ಯಮಾದ ಫಲವನಿಚ್ಛೈಸು ತ್ತೇವೆ, ನಮಗೆ ಅನುಗ್ರಹವಂ ಮಾಡುವನಾಗೆಂದು ನುಡಿದ ಬಳಿಕ, ಭಕ್ತ ವತ್ಸಲನಾದ ಹರಾತ್ಮಜನು ತನ್ನಂ ಪೂಜಿಸಲನುಗ್ರಹಮುಂ ಕೊಟ್ಟನು. ಅನಂ ತರದಲ್ಲಿ ವಿಷ್ಣು ಮೊದಲಾದ ಆ ಸರ್ವ ದೇವತೆಗಳು ವಿಶ್ವಕರ್ಮನಂ ಕರೆದು, ಎಲೈ ವಿಶ್ವಕರ್ಮನೆ! ನೀನು ವಿಚಿತ್ರಮಾದ ಮನೋಹರಮಾದ, ಅತಿ ಸೌಂದರ್ಯ ದಿಂ ಶ್ರೇಷ್ಠಮಾದ ಪುರಮುಂ ರಚಿಸೆಂದು ನುಡಿಯಲು ಆ ವಾಕ್ಯಮುಂ ಕೇಳಿ ವಿಶ್ವಕರ್ಮನು ಆಗ ವಿಚಿತ್ರ ಚಿತ್ರಂಗಳಿಂದ ಜಾಜ್ವಲ್ಯಮಾನಮಾದ, ನಾನಾವಿಧ ಮಾದ ಗೃಹಂಗಳಿಂ ಯುಕ್ತಮಾದ ಶತಸಹಸ್ರವಿಧಗಳಿಂ ಶೋಭಿತಮಾದ ವಿಮಾನ ಕುಶಲಗಳಿಂದುಜ್ವಲಮಾದ ಪುರುಹೂತ ಧ್ವಜಗಳಿಂ ನಿಬಿಡಮಾದ, ಮಣಿ ಸೋಪಾನಗಳಿಂದಲಂಕೃತಮಪ್ಪ, ಕೂಪತಟಾಕಗಳಿಂ ಮನೋಹರಮಾದ, ಪುಂಡ ರೀಕದಂತೊಪ್ಪುತ್ತಿರ್ಪ ಕಾಂತಿಯಿಂ ಶೋಭಿತಮಾದ ಸಹಸ್ರಸೂರ್ಯ ಕಾಂತಿ ಯುಳ್ಳ ಪುರಮುಂ ರಚಿಸಿ, ಅಲ್ಲಿ ಗಣಂಗಳಿಗೂ ಗಣ ಮುಖ್ಯರಿಗೂ ಸಹ ವಾಸ ಕ್ಷಮಮಪ್ಪ, ಅದ್ಭುತಮಾದ ಗೃಹಂಗಳಂ ನಿರ್ಮಿಸಿ, ಆ ಪುರಮಧ್ಯದೋಳ್ ರಾಜಾಧಿರಾಜಸೂನುವಿಗೆ ಮಹೋನ್ನತಮಾದ ರಾಜಗೃಹಮಂ ಮಾಡಿದನು. ಅನಂತರದಲ್ಲಿ ದೇವತೆಗಳ ದೇವೇಶನಿಂ ಪುಟ್ಟಿದ ಮಹಾಸೇನನಾದ ಕುಮಾರ ಸ್ವಾಮಿಯು, ವೀರಬಾಹುವು ಮುಖ್ಯಸರ್ವ ವೀರರೊಡನೆ, ಶಂಖ ಶಿಂಗಧ್ವನಿಗಳಿಂ ಕೂಡಿದ ದೇವದುಂದುಭಿ ಧ್ವನಿಗಳಿಂ ನಗರಪ್ರವೇಶಮಂ ಮಾಡಿಸಲಾಗಿ, ಗಣ ಶ್ರೇಷ್ಠರು ತಮಗೆ ಯೋಗ್ಯಮಾದ ಗೃಹಮುಂ ಪ್ರವೇಶಿಸಿದರು. ಮತ್ತಂ ವಾಗ್ಮಿಗಳಲ್ಲಿ ಶ್ರೇಷ್ಠರಾದ ಮರೀಚಿ, ಕಶ್ಯಪ, ಅತ್ರಿ, ವಸಿಷ್ಠರುಂ, ವೇದಾಗ ಮಾರ್ಥಂಗಳಂ ತಿಳಿದಿರ್ಪ ಪೂರ್ಣಕುಂಭ ಹಸ್ತರಾದ ಉತ್ತಮ ವಿಪ್ರರು ಸಹ ಸ್ವಸ್ತ್ಯಯನಂ ಮಾಡುತ್ತಿರಲಾಗಿ, ವಿಷ್ಣು ಮೊದಲಾದ ದೇವೋತ್ತಮರುಗಳಿಂ ನೆರೆಸಿದ ಬ್ರಹ್ಮನು, ಹರಾತ್ಮಜನಾದ ಅರಿಮರ್ದನನಾದ ಕುಮಾರಸ್ವಾಮಿಗೆ ನಮಸ್ಕಾರಮುಂ ಮಾಡಿ ಎಲೈ ದೇವನೆ! ನಿಮಗೆ ಯೋಗ್ಯಮಾದ ರತ್ನಭವನಮಂ ಪ್ರವೇಶಿಸಬೇಕೆಂದು ಬಿನ್ನಪಂ ಗೈಯ್ಯಲಾಗಿ, ಕುಮಾರಸ್ವಾಮಿಯು ಪ್ರಸನ್ನ ಮನಸ್ಸಿನಿಂ ವೀರಬಾಹುವಿನಿಂದಿಡಲ್ಪಟ್ಟ ಪಾದುಕೆಗಳಂ ಮೆಟ್ಟಿ, ಗೃಹಮುಂ ಪ್ರವೇಶಿಸಿದನು. ಆಗ ವಿಷ್ಣು ಮೊದಲಾದ ದೇವತೆಗಳು ಯೋಗ್ಯಮಾದ ಸಿಂಹಾಸನಮಂ ಅಲಂಕರಿಸಲಾಗಿ, ಜಗತ್ಪತಿಯಾದ ದೇವಾದಿದೇವಕುಮಾರನು ಆ ಸಿಂಹಾಸನಮಂ ನಿರೀಕ್ಷಿಸಿ ಸರ್ವಜ್ಞತನಯನಾದ, ಜಗದ್ವಂದ್ಯನಾದ, ಜಗತ್ತಿ ಗೊಡೆಯನಾದ, ಸರ್ವಜ್ಞನಾದ, ವಿಶ್ವರಕ್ಷಕನಾದ ಆ ಕುಮಾರಸ್ವಾಮಿಯು ಸಿಂಹಾಸನಾರೂಢನಾಗಲು, ನಾನಾವಿಧ ಸ್ತೋತ್ರಂಗಳಿಂ ಸ್ತುತಿಸಿ ಈಶ ಕುಮಾರ

ನಂಘ್ರಿಯಂ ಅರ್ಘ್ಯಾದ್ಯುಪಚಾರಗಳಿಂ ಪೂಜಿಸಿ, ವೀರಬಾಹು ಪ್ರಮುಖ ವೀರರಂ ಆ ಸ್ವಾಮಿಗೆ ಆವರಣದೇವತೆಗಳನ್ನಾಗಿ ಆವಾಹನೆಗಳಂಮಾಡಿ ಶಾಸ್ತ್ರೋಕ್ತ ವಿಧಿಯಿಂ ನ್ಯಾಯವಾಗಿ ಅರ್ಚಿಸಿ, ತಾವು ಕೃತಾರ್ಥರಾದೆವೆಂದೆಣಿಸಿ ಆ ವಿಭುವಿನ ಸಮೀಪವನ್ನೈದಿ, ಅತ್ಯಂತ ಸಂತೋಷವಂ ವಹಿಸಿದರು. ಜಗದ್ವಂದ್ಯನಾದ ವಿಚಿತ್ರ ಕೃತ್ಯವುಳ್ಳ ಪಾರ್ವತೀ ಪರಮೇಶ್ವರರ ಕುಮಾರನು ಮಹಾ ಘನವಾದ ಆ ದೇವಗಿರಿಯಿಂ, ಜಗತ್ತುಗಳಿಗೆ ಆದಿಯಾದ ಶಂಕರನು ಕೈಲಾಸದಂತೆ ಈ ಪರ್ವತಮಂ ತನಗೆ ಆವಾಸವಂ ಮಾಡಿಕೊಂಡನು. ಶ್ಲೋ॥ ಶಿವಯೋರತಿ ವಿಚಿತ್ರಕೃತ್ಯಯೊಸ್ತನು ಭೂರಾರ್ತಿ ನಿವಾರಕ, ಸ್ಸತಾಂ । ಗಿರಿಮಾವಸಥಂಚ ಕಾರತಂಗಣಪೈರ್ದೇವಗಣೈಶ್ಚ ಸಾದರಂ ॥ತಾ॥ ಸತ್ಪುರುಷರಿಗೆ ಆರ್ತಿ ನಿವಾರಕನಾದ, ವಿಚಿತ್ರಕೃತ್ಯವುಳ್ಳ, ಪಾರ್ವತೀ ಪರಮೇಶ್ವರರ ತನುವಿನಲ್ಲಿ ಜನಿಸಿದ ಆ ಕುಮಾರಸ್ವಾಮಿಯು, ಆದರಣೆಯಿಂದೊಡಗೂಡಿ ಗಣಾಧ್ಯಕ್ಷರಿಂ ದೇವಗಣಂಗಳಿಂ ನೆರೆಸಿ ಆ ದೇವಗಿರಿಯಂ ತನಗೆ ಗೃಹವಾಗಿ ಮಾಡಿಕೊಂಡಿದ್ದನೆಂದು, ಶೌನಕಾದಿ ಋಷಿಗಳಿಗೆ ಸೂತಪೌರಾಣಿಕನು ಪೇಳ್ದನೆಂಬಲ್ಲಿಗೆ, ಶ್ರೀ ಕೃಷ್ಣರಾಜ ವಾಣೀ

ವಿಲಾಸವೆಂಬ ಸ್ಕಾಂದಪುರಾಣದ ಶಂಕರಸಂಹಿತೆಯಲ್ಲಿ ಶಿವರಹಸ್ಯಖಂಡದ
ಸಂಭವಕಾಂಡದೊಳ್ ನಲವತ್ತೈದನೆಯ ಅಧ್ಯಾಯವು ಸಂಪೂರ್ಣವು.

ನಲವತ್ತಾರನೆಯ ಅಧ್ಯಾಯವು.

ತಾರಕ ಪತ್ನಿಯರ ಪತಿ ಶೋಕ.

ಎಲೈ ಮುನಿಗಳಿರಾ! ಮಹಾ ಕ್ರೂರನಾಗಿ ಬಲಯುತನಾದ ತಾರಕನು, ಅಮರರಿಂ ಸ್ತುತಿಸಲು ಯೋಗ್ಯನಾದ, ವಜ್ರಾಯುಧದಂತೆ ಪ್ರೊಪ್ಪುತ್ತಿರ್ಪ ಬಲವುಳ್ಳ ಕುಮಾರಸ್ವಾಮಿಯಿಂದೀಪರಿ ಯುದ್ಧದಲ್ಲಿ ಹತನಾಗುತ್ತಿರಲಾಗಿ, ಸಾಕ್ಷಾದ್ರತೀದೇವಿಯಂತೊಪ್ಪುತ್ತಿರ್ಪ “ಗೌರಿ” ಯೆಂಬ ಆತನ ಸ್ತ್ರೀಯು, ಅನ್ಯರಾದ ಮಹಿಷಿಗಳು ಸಹ ದುಃಖದಿಂದಾರ್ತರಾಗಿ, ಕುರರಿಯೆಂಬ ಪಕ್ಷಿವಿಶೇಷದಂತೆ ಬಹಳವಾಗಿ ಹಂಬಲಿಸುತ್ತ ಅಶ್ರುಜಲಂಗಳಂ ಬಿಡುತಲು ಹಾಹಾ! ದೈತ್ಯೇಂದ್ರನೆ! ಹಾ! ನಾಥ ನಾಥ! ತ್ರೈಲೋಕ್ಯಾಮಿತವಿಕ್ರಮ! ಸಮಸ್ತರಾದ ನಮ್ಮನ್ನು ಬಿಟ್ಟು ಈಗೇನುಕಾರಣ ಈ ರೀತಿಯಾದೆ; ಹಾ! ಹಾ! ಅರಿಮರ್ದಕನೇ! ಈಗ ನಾವು ಅತಿವೇಗದಿಂದ ವಹ್ನಿಮಾರ್ಗವನ್ನೈದಿ ಪರಿಚಾರಿಕೆಯರಾಗಿ ನಿನ್ನ ಸಮೀಪವನ್ನೈದಿದೆವು. ಹಾಹಾ! ಈಗ ದೇವತೆಗಳು ನಿರ್ಭಯರಾದರು, ಈಗಲೇ ಸೂರಪದ್ಮನು ಮರಣವನ್ನೈದಿದನೆ; ಈಗ ಪ್ರೀತಿಯುಕ್ತನಾದ ಸಿಂಹಮುಖನು ಪತನಾದನೆ; ಇಲ್ಲದಿರ್ದೊಡಂ ಇದು ನಿಶ್ಚಯವೆಂದೇತಿಳಿ. ಹರಿಯ ಚಕ್ರವು

ಕಠಿಣವಾದ ಯಾವನ ವಕ್ಷದಲ್ಲಿ ಪ್ರತಿಹತವಾದುದೋ! ಆ ನಿನ್ನನ್ನು ಭೇದಿಸಿ ಬಾಲಕನ ಶಕ್ತಿಯು ಪ್ರಾಣಂಗಳಂ ಹ್ಯಾಗೆ ಭಕ್ಷಿಸಿತು, ಬ್ರಹ್ಮ ಶಿರಸ್ಸೆಂಬ ಅಸ್ತ್ರವು ಆವನೋರ್ವನಿಂದ ಕುಂಠಿತವಾದುದೊ, ಆ ಅತಿದೃಢವಾದ ವಕ್ಷಸ್ಸು ಈ ಶಿಶುವಿನಿಂ ಹೇಗೆ ಭಗ್ನವಾದುದು? ಎಂದು ಈ ಪ್ರಕಾರವಾಗಿ ಬಹುವಿಧದಿಂ ದೀನಸ್ವರವಾಗಿ ಪ್ರಳಾಪವುಂ ಮಾಡುತ್ತ ಯುದ್ಧಭೂಮಿಗೆ ಬಂದು ಆತನ ತನುವಂ ತೆಗೆದು ತಮ್ಮ ತೊಡೆಯಮೇಲೆ ಇರಿಸಿಕೊಂಡು, ಶೋಕಾಗ್ನಿಯಿಂ ಸಂತಪ್ತವಾದ ಹೃದಯವುಂ ಅಶ್ರುವರ್ಷಂಗಳಿಂ ನೆನೆಸಿ ಅಸುರ ಪುರದಿಂ ಪೊರ ಮಟ್ಟು ರೋದನವಂ ಮಾಡುತ್ತಿರಲಾಗಿ, ಆತನ ಕುಮಾರನಾದ ಅಸುರೇಂದ್ರ ನೆಂಬ ದೈತ್ಯಶ್ರೇಷ್ಠನು ಗಜವಾಜಿ ರಥಗಳಿಂ ಯುಕ್ತವಾದ ಮಹಾಸೇನೆ ಯೊಡನೆ ಸಿಂಹವಕ್ತ್ರನಗರದಿಂ ಪೊರಮಟ್ಟು, ಸಿಂಹಪರಾಕ್ರಮಿಯಾದ ಈತನು ರಥಾರೂಢನಾಗಿ, ಸ್ವೇಚ್ಛೆಯಿಂದ ತಂದೆಯಂ ನೋಡಲಿಚ್ಛೈಸಿ, ಶೀಘ್ರಗತಿಯಿಂ ಬರುವ ಮಾರ್ಗದಲ್ಲಿ ಪಿತೃವಿನ ವೃತ್ತಾಂತವುಂ ಕೇಳಿ, ಹತಮನಸ್ಸುಳ್ಳವನಾಗಿ, ತ್ವರಿತದಿಂ ಮಾಯಾಪುರಕ್ಕೆ ಗಮಿಸಿ, ಆ ಪುರದ್ವಾರದಲ್ಲಿ ಛೇದಿಸಲ್ಪಟ್ಟ ವೃಕ್ಷ ದಂತೆ ಬಿದ್ದು, ಆತನ ಗುಣಾತಿಶಯಂಗಳಂ ನುತಿಸಿ, ಬಹುಪ್ರಕಾರದಲ್ಲಿ ಪ್ರಳಾ ಪಿಸಿ, ಏಕವಸ್ತ್ರಧಾರಿಯಾಗಿ, ದುಃಖಾನ್ವಿತನಾಗಿ, ಮುಕ್ತಕೇಶನಾಗಿ ಭೂಮಿಯಲ್ಲಿ ಬಿಡಹುತ್ತಾ ಹಾ! ತಾರಕ! ಹಾ! ಅಸುರಾಧೀಶ! ಹಾ! ಲೋಕತಾಪಕ! ಯೆತ್ತಹೋದೆ? ಕಟಕಟ! ಆಶ್ಚರ್ಯ! ಲೋಕದಲ್ಲಿ ಇಂಥಾ ಆಶ್ಚರ್ಯವಿಲ್ಲ. ಆವನಾ ದೋರ್ವನ ವಕ್ಷಸ್ಸು ವಿಷ್ಣುಚಕ್ರದಿಂದಲೂ, ಇಂದ್ರನ ವಜ್ರಾಯುಧದಿಂದಲೂ ಅಲಂಕೃತವಾದುದೋ ಆ ಉರಸ್ಸು ಸ್ತನ್ಯಪಾನವಂ ಮಾಡುವ ಶಿಶುವಿನ ಶಕ್ತಿಯಿಂ ಈ ಪ್ರಕಾರ ಭಗ್ನವಾಗುವದುಂಟೇ? ಎಂದು ನುಡಿದು, ಸ್ತ್ರೀ ಸಮೂಹದಿಂ ನಿಬಿಡವಾದ ಯುದ್ಧಭೂಮಿಯನ್ನೈದಿ ಮೃತನಾದ ಆ ತಾರ ಕನಂ ಕಂಡು ಆ ಮಾತೃಗಳಿಗೆ ವಿಶೇಷ ಮರುಕ ಹುಟ್ಟುವಂತೆ ಪ್ರಳಾಪಿ ಸಿದ ನದೆಂತೆನೆ, ಈಗ ಸಮಸ್ತವಾದ ದೇವತೆಗಳ ಕೋಪವು ಶಾಂತಿಯ ನ್ನೈದಿತು. ಇಂದ್ರನ ಹೆಂಡತಿಯಾದ ಶಚೀದೇವಿಯು,ಸ್ವರ್ಗವಾಸಿಗಳಾದ ಅಪ್ಸರೋಗಣಂಗಳು ಇಂದ್ರಪೆರೆಸಿದ ದೇವತೆಗಳು ಸಹ ಸುಖವುಳ್ಳವರಾದರು. ಹಾಹಾ!! ಸ್ವರ್ಗವು ಅವರಿಗೆ ಪಟ್ಟಣವಾದೀತು, ಈಗ ಸಿಂಹಮುಖನು ಶೂರ ಪದ್ಮನು ನಿರಾಶರಾಗಿ ಪತರಾದರೇ? ಅಕಟಕಟಾ! ದಕ್ಷಿಣ ಬಾಹು ಭಗ್ನ ವಾಯಿತಲ್ಲಾ! ಎಂದು ಬಹು ವಿಧವಾಗಿ ಪ್ರಳಾಪವುಮ್ಮಾಡಿ, ದೀನನಾಗಿ ದಶ ದಿಕ್ಕುಗಳಂ ನೋಡಿ ಹಸ್ತದಿಂ ಹಸ್ತವಂ ಮುರಿದು ದಂತದಿಂ ಓಷ್ಠಂಗಳಂ ಕಡಿದು ಅತಿ ಭಯಂಕರನಾಗಿ, ಕ್ರೋಧದಿಂ ರಕ್ತನಯನನಾಗಿ ಬಹೊಹೆಹೆ !!

ಎಂದು ವಿಶೇಷವಾಗಿ ನಕ್ಕು ಅಗಲಿ ಆಗಲಿ!! ಎಂದು ಮರಳಿ ಉರವಂ ಕೈಯಿಂದ ಹೊಡೆದು ಗಂಧಚಂದನದಿಂ ಚಿತಿಯಂಮಾಡಿ ಅದರ ಮಧ್ಯದಲ್ಲಿ ಪಿತೃವನ್ನಿರಿಸಿ. ಅಗ್ನಿಯಂ ಜ್ವಲಿಸುವಂತೆ ಮಾಡಿ ಪತಿಯೇ ದೈವವೆಂದಿರುತಿರ್ಪ ಗೌರಿ ಮೊದಲಾದ ಮಾತೃಗಳಂ ಆ ಅಗ್ನಿಯೊಳು ದಹಿಸಿ ಆ ಮಾತೃಗಳಿಗೆ ವಿಧಿ ಪೂರ್ವಕಮಾಗಿ ಔರ್ಧ್ವದೈಹಿಕಮಂ ಸಮಾಪನೆಯಂಮಾಡಿ, ಖಿನ್ನನಾಗಿ ಚತುರಂಗ ಸೇನೆಯಿಂ ಮರಳಿ ವೀರಮಹೇಂದ್ರಪುರಕ್ಕೆ ಗಮಿಸಿ, ಆ ಪುರದೋಳ್ ತನ್ನ ತಂದೆಗೆ ಜ್ಯೇಷ್ಠನಾದ, ಶೂರಪದ್ಮನ ಪಾದಗಳಲ್ಲಿ ಬಿದ್ದು ಅತಿ ದುಃಖಾರ್ತನಾಗಿ ಪ್ರಳಾಪಿಸಿ ರೋದಸಿದನು. ಆಗ ಸುರರಿಗೆ ಖಿನ್ನನಪ್ಪ ಶೂರಪದ್ಮನು ದೀನವದನನಾಗಿ, ಅಶ್ರುಜಲವಂ ಬಿಡುತ ಅವನೀತಲದಲ್ಲಿ ಪೊರಳುತಿರ್ಪ ತಾರಕನ ಕುಮಾರನಾದ ಅಸುರೇಂದ್ರನಂ ಕಂಡು, ಬಾಹುಗಳಿಂದೆತ್ತಿ ಉರದಿಂದಾಲಿಂಗನೆಯಂಮಾಡಿ, ಎಲೈ ಪುತ್ರನೆ! ಅಂಜಬೇಡವೆಂದು ಹೇಳಿ, ಇದೇನು? ಕಾರಣವು? ಎಂದಡಿಗಡಿಗೆ ಪರಾಮರ್ಶಿಸಿ ಕಂಬನಿಗಳಂ ತೊಡೆದು, ಶೋಕ ಕಾರಣವಂ ಕೇಳಿದನು. ಆಗ ತಾರಕನ ಸುತನು ಕಂಬನಿಗಳಂ ಸುರಿಸುತ್ತ ಸಮಸ್ತ ವೃತ್ತಾಂತಮಂ ಪೇಳಲಾಗಿ, ಆ ಶೂರಪದ್ಮನೆಂಬ ದಾನವನು ಆ ಅಸುರೇಂದ್ರನ ವಾಕ್ಯಮಂ ಕೇಳಿ ವ್ಯಾಕುಲನಾಗಿ ಆತನಿಗೆ ಸಮಾನನಾದ ಭ್ರಾತೃವಿನ ವಧೆಯನ್ನಾದರಿಸದೆ, ತಾರಕನ ಪರಾಕ್ರಮವಂ ಸ್ಮರಿಸಿ, ಎಲೈ ಬಾಲಕನೆ! ನಮಗೆ ದರ್ಶಮಪ್ಪ ಅಂಡಂಗಳಿಗೆ ಆ ದೇವತೆಗಳು ಅಧಿಪರು ಆ ದೇವತೆಗಳಾದರೂ ಭೂಮಿಯಲ್ಲಿ ನನ್ನ ತಮ್ಮನ ಮುಂದೆ ನಿಲಲು ಸಮರ್ಥರೇ ಅಲ್ಲ. ಈ ಹರನ ಕುಮಾರನಿಂ ಯುದ್ಧದಲ್ಲಿ ತನ್ನ ಭ್ರಾತೃವು ಹೀಗೆ ಹತನಾದನು. ಎಲೈ ಪುತ್ರನೇ! ಇನ್ನು ವಿಚಾರಿಸಲು ಯೋಗ್ಯಮುಂಟು. ನೀನು ಭ್ರಾಂತನಾದೆಯೋ ಏನು? ಅಲ್ಲದೆ ಸ್ವಪ್ನದಲ್ಲಿ ಕಂಡೆಯೋ ಏನು? ಎಲೈ ಕುಮಾರನೆ! ಈಗ ನೀನು ಅಂಜದಿರೆಂದು ಅಸುರೇಂದ್ರನಂ ತಕ್ಕೈಸಿದನು. ಆ ಅಸುರೇಂದ್ರನು ಶೂರಪದ್ಮನ ವಾಕ್ಯಮಂ ಕೇಳಿ ಎಲೈ ತಂದೆಯೇ! ನನಗೆ ಭ್ರಾಂತಿಯು ಮಿಲ್ಲ, ಸ್ವಪ್ನಾನುಭೂತಿಯು ಮಿಲ್ಲ, ಅನ್ಯರಿಂ ಕೇಳಿದ್ದೂ ಅಲ್ಲ. ನಾನೆ ಯುದ್ಧದಲ್ಲಿ ಹತನಾದ ಪಿತೃವಂ ಮಾತೃಗಳೊಡನೆ ಸಂಸ್ಕಾರವಂಮಾಡಿ, ನಿನ್ನ ಭ್ರಾತೃವಿನ ಔರ್ಧ್ವದೇಹಿಕ ಕರ್ಮವಂ ಸಮಾಪನೆಯಂಮಾಡಿ ನಿನ್ನ ಸಮೀಪವನ್ನೈಯ್ದಿದೆನು. ಹರಸೂನುವಿನ ಭಯದಿಂದ ಅಲ್ಲಿ ಕ್ಷಣಾರ್ಧವಾದರೂ ಇರಕೂಡದು. ಎಲೈ ಪ್ರಭುವೇ! ಈ ವಿಷಯದಲ್ಲಿ ಸಂದೇಹವಂಮಾಡಬೇಡ. ನಿನ್ನ ಪಾದಗಳ ಮೇಲೆ ಆಣೆಯನ್ನಿಡುತ್ತಿದೇನೆ. ಎಲೈ ಶತೃಸಂಹಾರಕನೇ! ಇದು ನಮ್ಮ ತಾತಮಾತ್ರದಲ್ಲಿಯೆ ಹೋದುದಲ್ಲ. ಮಹಾ ಪರಾಕ್ರಮಶಾಲಿಯಾದ ಆ

ಕುಮಾರನಿಂ ನಮಗೂ ಭಯ ಉಂಟೆಂದು ತಿಳಿ. ಎಂದು ಪೇಳಿ ಕಂಬನಿಗಳಂ ಬಿಡುತ್ತಿದ್ದನು.

ಶ್ಲೋ|| ವಚನಮಿದಮುಷ್ಯಶ್ರೋತ್ರಶಂಕುಂ |
ಸ್ವಸೂನೋರಸುರಪತಿರವೇತ್ಯಸ್ವಾಂತರೆಶೂರಪದ್ಮ ||
ಭಯಕೃತಪ್ರವೇಪಃಸ್ವಾಸನಾತ್ಸಿಂಹಪಾದಾ |
ಜ್ಝಡಿತತಿಭಃಪತಿತ್ವಾಹಾರುರೋವೇತಿಹೇತಿ ||

ತಾ|| ಅಸುರಪತಿಯಾದ ಶೂರಪದ್ಮನು ಶ್ರೋತ್ರಂಗಳಿಗೆ ಶೂಲಮಾದ ಈ ತನ್ನ ಕುಮಾರನ ವಾಕ್ಯಮಂ ಕೇಳಿ ಮನದೊಳ್ತಿಳಿದು ಭಯದಿಂ ಮಾಡಲ್ಪಟ್ಟ ಕಂಪಮುಳ್ಳವನಾಗಿ, ಸಿಂಹಪಾದವುಳ್ಳ ಆತನ ದೆಸೆಯಿಂದ ಶೀಘ್ರವಾಗಿ ಭೂಮಿಯಲ್ಲಿ ಬಿದ್ದು ಹಾ! ಹಾ!! ಎಂದು ರೋದನವಂಮಾಡಿದನೆಂದು ಸೂತಂ ಶೌನಕಾದಿಗಳ್ಗೆ ಪೇಳಿದನು ಎಂಬಲ್ಲಿಗೆ ನಲವತ್ತಾರನೆಯ ಅಧ್ಯಾಯವು ಸಂಪೂರ್ಣಂ.

ನಲವತ್ತೇಳನೆಯ ಅಧ್ಯಾಯವು.

ಸಿಂಹವಕ್ತ್ರನ ಶೋಕ, ಶೂರಪದ್ಮನ ಭೀಕರ ಪ್ರತಿಜ್ಞೆ.

ಅನಂತರದಲ್ಲಿ ಶೂರಪದ್ಮಾನುಜನಾದ ಸಿಂಹವಕ್ತ್ರನು ಈ ವಾರ್ತೆಯಂ ಕೇಳಿ ಛೇದಿಸಿದ ವೃಕ್ಷದಂತೆ ಭೂಮಿಯಲ್ಲಿ ಬಿದ್ದು ಮುಕ್ತಕೇಶನಾಗಿ ಧೂಳಿಯಿಂ ಲೇಪಿತಮಾದ ಶರೀರಮುಳ್ಳವನಾಗಿ ಶೋಕಿಸುವದಂ ಕಂಡು, ಶೂರಪದ್ಮನು ಆ ಸಿಂಹವಕ್ತ್ರನಂ ಕರೆದೆತ್ತಿ ಆಲಿಂಗನವಂಮಾಡಿ, ದೀನನಾಗಿ ಪ್ರಳಾಪಿಸಿ, ಎಲೆ ಹತವಿಧಿಯೆ! ನಿನ್ನಿಂದ ನಾವು ಹತರಾದೆವಲ್ಲ? ಕಟಕಟ! ಎಂದು ಬಹು ದೈನ್ಯದೊಡನೆ ಅಡಿಗಡಿಗೆ ಹಾ! ಹಾ! ಎಂದು ರೋದಿಸಿದನು. ಆಗ ಸಮಸ್ತರಾದ ಮಂತ್ರಿ ಪುರೋಹಿತ ವಿದ್ವಾಂಸರೆ ಮೊದಲಾದವರು ಬಹಳವಾಗಿ ದುಃಖಿಸುತ್ತಿರಲು, ಶೂರಪದ್ಮನು ತನ್ನ ತಲೆಯನ್ನು ಭೂಮಿಯಲ್ಲಿ ಬಡಿದು ಮೂರ್ಛಿತನಾಗಿ ಮರಳಿ ಚಿರಕಾಲ ಪ್ರಳಾಪಿಸುತ್ತಿರಲು, ಸಮಸ್ತ ಮಂತ್ರಿಗಳು ಆತನಂ ಪಿಡಿದೆತ್ತಿ ಬಹು ಪ್ರಕಾರ ವಾಕ್ಯಗಳಿಂದಲುಂ ಉಪಚಾರಗಳಿಂದಲೂ ಸಂತೈಸಿ ಜೀವಿಸುವಂತೆ ಮಾಡಿದರು. ಮತ್ತು ಮಹಾಶೂರನಾದ ಶೂರಪದ್ಮನು ಮೂರ್ಛೆಯಂ ತಿಳಿದು ಕೋಪಗೊಂಡು, ಔಷ್ಠಂಗಳಂ ಕಚ್ಚುತ್ತಾ ಸಮಸ್ತ ದಿಕ್ಕುಗಳಂ ನೋಡಿ ಹಲ್ಲುಗಳು ಕಡಿಯುತ್ತಾ, ಕರದಿಂದ ಕರಮಂ ಪಿಡಿಯುತ್ತಾ, ನೇತ್ರದಿಂದ ಚರಾಚರಮಂ ದಹಿಸುವನಂತೆ ನಕ್ಕು ಮರಳಿ

ದಂತಂಗಳಿಂದ ಅಧರಮಂ ಕಡಿದು, ಮಹತ್ತಾದ ಸಿಡಿಲಂತೆ ಧ್ವನಿಯಂ ಮಾಡಿ ಮೇದಿನಿಯು ಕಂಪಿಸುವಂತೆ ಹುಂಕಾರಮಂ ಗೈದು ಶೀಘ್ರವಾಗಿ ಯುದ್ಧದೊಳು ತನ್ನ ಅಸುವಂ ಬಿಡುವನು. ಆದಕಾರಣ ಯುದ್ಧದಲ್ಲಿ ಸನ್ನದ್ಧರಾದ ಚತುರಂಗ ಸೇನಾಯುಕ್ತರಪ್ಪ ಧನುರ್ಧರರಾದ ನಾಯಕರು ಈಗಲೆ ಪುರದಿಂದ ಪೊರಮಡಲಿ! ಮತ್ತಂ "ಭೇರಿ, ಪಟಹ, ಡಿಂಡಿಮ, ಕಹಳೆ, ಝರ್ಝರ, ನಿಸ್ಸಾಳ, ಎಂಬಿವು" ಮೊದಲಾದ ವಾದ್ಯಂಗಳು ಘೋಷಿಸಲಿ ಎಂದು ಕೂಗುತ್ತ ಮಂತ್ರಿಗಳಂ ಕರೆದು ರೋಷದಿಂ ಭಯಂಕರನಾಗಿ, ಪೇಳ್ವನದೆಂತೆನೆ. ತ್ರಿಪುರಾರಿಯ ತನಯನಂ ಯುದ್ಧಕ್ಕೋಸ್ಕರ ತನ್ನಾಜ್ಞೆಯಿಂದ ನಿರ್ಭಯರಾಗಿ ಈಗಲೇ ಹೋಗಿ ಕರೆಸಲಿ. ಬಾಲಕನು ಮತ್ತೂ ಮುಗ್ಧನಾದ ಅನುಜನಂ ರಣದಲ್ಲಿ ವಂಚಿಸಿ ದೇವತೆಗಳೊಡನೆ ಸೇರಿ ಕೊಂದನು. ಈಗ ಅಂಬಿಕಾಸುತನಾದ ಕುಮಾರಸ್ವಾಮಿಯು ತನಗೆ ಶತೃವಾದನು. ನಾನು ಅನುಜನೊಡನೆ ಜೀವಿಸಿರಲಾಗಿ ಎಲೆ ಕುಮಾರನೆ ! ಹೇಗೆ ನಿದ್ರೆಯಂ ಗೈಯುತ್ತಿದ್ದೀ? ಭೋಜನವಮ್ಮಾಡುತ್ತಿದ್ಧೀಯೋ ಏನು ? ಎಂದು ನುಡಿದು ದೇವತೆಗಳಂ ಕರೆದು ಎಲೈ ದೇವತೆಗಳಿರಾ ! ನೀವು ವ್ಯತಿರಿಕ್ತವಾಗಿ ಮತ್ತಾರ್ಯರು ಈ ಕಾರ್ಯವಂ ನಡಿಸಿದವರಲ್ಲ. ಆದ್ದರಿಂದ ಇಂದು ಮೊದಲಾಗಿ ನಾನು ನಿಮ್ಮ ಉದರದಲ್ಲಿ ತಾಪಮಂ ಹೆಚ್ಚಿಸುತ್ತಿರ್ಧೇನೆಂದು ಪೇಳಿ, ತನ್ನ ಸಮೀಪವನ್ನೈದುವದೆಂದು ದೂತರಿಗೆ ಆಜ್ಞಾಪಿಸಿ, ಅತಿ ಕೋಪಮುಳ್ಳ ಮತ್ತು ಅಶ್ವಲಕ್ಷಣಮಂ ತಿಳಿದ ಸಾರಥಿಯಂ ನೋಡಿ ಎಲೈ ಸಾರಥಿಯೇ! ಸಹಸ್ರ ಶರ ಯುಕ್ತಮಾದ, ಸರ್ವರತ್ನಾಢ್ಯಮಾದ, ಸರ್ವಾಯುಧ ಸಮನ್ವಿತಮಾದ ರಥಮಂ ತರಿಸೆಂದು ಅಜ್ಞಾಪಿಸಿ, ಅಧಿಕಾರಿಗಳಂ ಕರೆದು ಸ್ವರ್ನಮಯಮಾದ ಅಭೇದ್ಯಮಾದ ಕವಚಮಂ ಚಾಪಂಗಳಂ ಮಹತ್ತಾದ ಇತರ ಆಯುಧಗಳನ್ನು, ಅಕ್ಷಯಂಗಳಾದ ಮತ್ತು ಶರಪೂರ್ಣಂಗಳಾದ ಬತ್ತಳಿಕೆಗಳನ್ನು ತರುವಂತೆ ಆಜ್ಞೆಯಮ್ಮಾಡಿ ಯುದ್ಧಕ್ಕೆ ಸನ್ನದ್ಧನಾಗುತ್ತಿರಲಾಗಿ, ನೀತಿಶಾಸ್ತ್ರ ವಿಶಾರದನಾದ ಮತಿಮಂತನಾದ ಇಂದ್ರಿಯ ನಿಗ್ರಹಮುಳ್ಳವನಾದ ಆ ಮೇಘನೆಂಬ ಮಂತ್ರಿಯು ಭಯವಂ ಬಿಟ್ಟು ಪೊಳ್ವನದೆಂತೆನೆ. ಎಲೈ ದೇವನೆ! ರಾಜನೀತಿ ಯೆಂಬುವದು ಮಹತ್ತಾದುದು. ಈ ರಾಜನೀತಿಯು ಪಾಮರರಾದ ದೇವತೆಗಳಿಂದಲೂ, ಇತರ ಜನಗಳಿಂದಲೂ ತಿಳಿಯಲಸಾಧ್ಯವು. ಸರ್ವಸುಖಪ್ರದಮಾದ ಈ ನೀತಿಯು ಶಕ್ತಿತ್ರಯಾನ್ವಿತನಾದ ನೃಪನಿಂ ಧರಿಸಲು ಯೋಗ್ಯವು. ಆದರೆ, ಉತ್ಸಾಹವೆಂಬ ಶಕ್ತಿಯು, ಮಹತ್ತಾದ ಮಂತ್ರವೆಂಬ ಶಕ್ತಿಯು, ಅನಂತಮಾದ ಪ್ರಭುಶಕ್ತಿಯು ಎಂಬೀ ಶಕ್ತಿತ್ರಯವು ನಿಮ್ಮಲ್ಲಿ ಉಂಟಾಗಿಯೇ ಇಧೆ. ಮತ್ತೆ ಸಂಧಿವಿಗ್ರಹ ಯಾನ

ಆಸನ ದ್ವೈಧೀಭಾವ ಸಮಾಶ್ರಯಗಳೆಂಬ ಷಡ್ಗುಣಂಗಳನ್ನೂ "ಸ್ವಾಮಿ, ಅಮಾತ್ಯ, ಸುಹೃತ್, ಕೋಶ, ರಾಷ್ಟ್ರ, ದುರ್ಗ, ಬಲಗಳೆಂಬ ಸಪ್ತಾಂಗಗಳನ್ನೂ" ಸಹಾ ಅರಿತವನೆ ಸರಿ. ನೀನರಿಯದ ಮತ್ತೊಂದು ವಿಷಯವನ್ನು ನಾನು ಪೇಳಲಿಲ್ಲ. ಆದ್ದರಿಂದ ರುದ್ರಾಂಗ ಸಂಭವನಾದ ಕುಮಾರನೊಡನೆ ಈಗ ಯಾನ ಯೋಗ್ಯವಲ್ಲ ಆತನು ಬಾಲಕನಲ್ಲ ಅನಭಿಜ್ಞನುಮಲ್ಲ ಮತ್ತು ಆತನು ಬಲವಂತನು ಶಕ್ತಿಪಾಣಿಯು ಅರಿಮರ್ದಕನು ಯೆಂದು ತಿಳಿ. ಲೋಕ ಶಂಕರನಾದ ಶಂಕರನಲ್ಲಿ ನಮಿಗೆ ವೈರವಿಲ್ಲ ಯಾವದೋ ಒಂದು ಕಾರಣದಿಂದ ಸ್ಕಂದನು ಕುಮಾರಸ್ವಾಮಿಯಾಗಿ ಜನಿಸಿದನು. ಆದ್ದರಿಂದ ಈತನು ಸಾಕ್ಷಾತ್ ಶಂಕರನೇ ಸರಿ. ಅನಭಿಜ್ಞನಾಗಿ ನಿನ್ನ ಅನುಜನು ಸ್ವೇಚ್ಛೆಯಿಂದ ಬಂದ ಕುಮಾರನೊಡನೆ ಯುದ್ಧವಮ್ಮಾಡಿ ಮೃತನಾದನು. ಅಥವಾ ವೊಂದು ವೇಳೆ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟವನಾಗಿ ಶಂಭುವು ನಮ್ಮಗಳ ವಧೆಗೋಸುಗ ತನ್ನ ಕುಮಾರನನ್ನು ಕಳುಹಿಸಿದ್ದರೂ ಆತನು ನಮ್ಮಿಂದ ಪೂಜನೀಯನೇ ಸರಿ. ಇನ್ನು ಮೇಲೆ ಆತನೊಡನೆ ವೈರವಮ್ಮಾಡಲಾಗದೆಂದು ಪೇಳಿದ ಸಚಿವೋತ್ತಮನ ವಾಕ್ಯಮುಂ ಕೇಳಿ, ಶೂರಪದ್ಮನು ಮನದಲ್ಲಿ ಯೋಚಿಸಿ, ಶಾಂತಮುಂ ತಾಳಿ, ತೂಷ್ಣೀಂಭಾವದಿಂ ಮರಳಿ ರಮ್ಯೋತ್ತುಂಗಮಾದ ಸಿಂಹಾಸನಾ ರೂಢನಾದನು. ಆ ಸಮಯದಲ್ಲಿ ಶೂರಪದ್ಮನೆಂಬ ಅರಸು "ಬಕ, ಮಯೂರ, ಶ್ಯೇನ, ಚಕ್ರವಾಕ, ಶುಕ" ಮೊದಲಾದ ಗೂಢಚಾರಿಗಳಂ ನೋಡಿ, ವಸ್ತ್ರಾಭರಣ ಭೋಜನಂಗಳಿಂದುಪಚರಿಸಿ, ಅವರ ಕರ್ಣದೊಳು ಪೇಳಿದನದೆಂತೆನೆ. ಎಲೈ ಮಹಾತ್ಮರಿರಾ! ನೀವು ಶೀಘ್ರವಾಗಿ ಸುಬ್ರಹ್ಮಣ್ಯನ ಸಮೀಪವನ್ನೈದಿ, ಸರ್ವರೂ, ನಿಮ್ಮ ನಾಮಗಳಿಗೆ ಸದೃಶಮಾದ ರೂಪುಗಳಂ ಕೈಕೊಂಡು ಸೇನಾ ಸಾಗರಮುಂ ಪೊಕ್ಕು, ಹರಾತ್ಮಜನ ರೂಪವೆಂತಿಹುದು? ಆತನ ವಯಸ್ಸು ಯೆಷ್ಟು? ಆತನ ಮತಿಯು ಹ್ಯಾಗೆ? ಆತನಿಗೆ ಮರಳಿ ಉದ್ಯೋಗವು ಯಾವ ಕಡೆಯಲ್ಲಿ? ಆತಂಗೆ ಪಯಣವೆಲ್ಲಿ? ಆತನ ಸೇನೆ ಯೆಂತಿಹುದು? ಆತನ ಬಲದೋಳ್ ವೀರರಾರು? ಆ ವೀರರುಗಳಿಗೆ ರೂಪಮೆಂತಿಹುದು? ಆತನ ಬಲದೋಳ್ ಮಹಾರಥರಾರು? ದಿವ್ಯಾಸ್ತ್ರಂಗಳಿಂ ಯುಕ್ತರಾರು? ಈ ಮೊದಲಾದ ಅತಿಶಯಂಗಳ ನರಿತು ಮರಳಿ ನನ್ನ ಬಳಿಯು ನೈದುವದೆಂದು ಚಾರರಿಗೆ ಪೇಳ್ದನೆಂದು, ಶೌನಕಾದಿಗಳಿಗೆ ಸೂತನು ಪೇಳ್ದನೆಂಬಲ್ಲಿಗೆ ನಲವತ್ತೇಳನೆಯ ಅಧ್ಯಾಯವು ಸಂಪೂರ್ಣಂ.

ನಲವತ್ತೆಂಟನೆಯ ಅಧ್ಯಾಯವು.

ಕುಮಾರದೇವನ ಕೇದಾರಪರ್ವತಗಮನ-ಶಿವಶಿವೆಯರ ದರ್ಶನಾದಿ ವೃತ್ತಾಂತವು.

ಕೇಳಿರೈ, ಮುನಿಗಳಿರಾ! ಅನಂತರದಲ್ಲಿ ಇಂದ್ರಾರಿಯಾದ ಶೂರಪದ್ಮನು ಯತ್ನದಿಂ ಚಾರರಂ ಕಳುಹಿ, ಸರ್ವಮಂತ್ರಿ ಸಮೇತನಾಗಿ, ಹತನಾದ ಅನುಜನನ್ನೇ ಚಿಂತಿಸುತಿದ್ದನು. ಇತ್ತ ಕಡೆಯಲ್ಲಿ ಶೋಭನ ಬುದ್ಧಿಯುಳ್ಳ ಕುಮಾರಸ್ವಾಮಿಯು ರಾತ್ರಿ ಕಳೆದು ಸೂರ್ಯೋದಯವಾದ ಬಳಿಕ ಹರಿ ಬ್ರಹ್ಮ ಪ್ರಮುಖರಾದ ದೇವತೆಗಳಿಂದಲುಂ ಮುನಿಗಳಿಂದಲುಂ ಮಹತ್ತಾದ ಸೇನೆಯಿಂದಲುಂ ಒಡಗೂಡಿ, ತನಗೆ ಪ್ರಿಯಮಾದ ದೇವಗಿರಿಯಂ ಬಿಟ್ಟು, ವಾಯುಮನಸ್ಸುಗಳ ವೇಗಮುಳ್ಳವನಾಗಿ ಆಕಾಶಪಥವನ್ನೈದಿ, ದಿಕ್ಪಾಲಕರಾದ ಇಂದ್ರಾದಿಗಳೊಡನೆ, ಅಗಸ್ತ್ಯಮುನಿಯು ಚಲಿಸುತಲಿರುವ ದಕ್ಷಿಣದಿಕ್ಕಿಗೈದಿ, ಆ ಮಾರ್ಗದೊಳು ಪಾರ್ವತೀ ಪರಮೇಶ್ವರರ್ಗೆ ಶುಭಕರಮಾದ ಸ್ಥಾನಮಾಗಿರುವ ಕೇತಾರಮಂ ಭಾವಪೂರ್ಣಮನಸ್ಸಿನಿಂದೈದಿದನು. ಆ ಕೇತಾರಕ್ಷೇತ್ರದಲ್ಲಿ ಆವುದಾನೊಂದು ಜಂತುವು ಅನಾದರಣೆಯಿಂದಲಾದರುಂ ಉದ್ದಿನಕಾಳು ಮುಳುಗುವಷ್ಟು ತೀರ್ಥಮಂ ಪಾನಮಮ್ಮಾಡುತಿರುವುದೋ, ಆ ಪ್ರಾಣಿಯು ಮರಳಿ ಜನ್ಮವನೆತ್ತಿ ಸ್ತನ್ಯಪಾನಮಮ್ಮಾಡನು. ಅಲ್ಲಿ ಜಗತ್ಪಿತೃವಾದ ಮತ್ತೆ ತನಗೆ ಜನಕನಾದ ಜಗದ್ಗುರುವಾದ ಸದಾವಿಶ್ವನಾಥನೆಂಬ ನಾಮವುಳ್ಳ ಲಿಂಗಮೂರ್ತಿಯಂ ಜಗನ್ಮಾತೃವಾದ ಮತ್ತೆ ತಾಯಾದ ಪಾರ್ವತೀದೇವಿಯೊಡನೆ ಸಹ ಮಾನಸಪೂಜೆಯಮ್ಮಾಡಿ, ಈಶನಾದ ಆ ವಿಶ್ವನಾಥಸ್ವಾಮಿಯ ಪ್ರಕಾಶದಿಂ ಬೆಳಗುತಲಿರ್ಪ ಕಾಶೀಕ್ಷೇತ್ರವನ್ನೂ, ಸರ್ವೋತ್ತಮನಾದ ವಿರೂಪಾಕ್ಷನನ್ನೂ ಸುವರ್ಣಮುಖಿಯೆಂಬ ನದೀತೀರದಲ್ಲಿ ವೊಪ್ಪುತಿರ್ಪ ದಕ್ಷಣ ಕೈಲಾಸವನ್ನೂ, ಪ್ರತಿದಿನವು ತಮಗೆ ಆವಾಸಮಾದ ಅದ್ಭುತಮಾದ ಕಂಗೊಳಿಪ ವೆಂಕಟಾಚಲವನ್ನೂ, ಸ್ವಾಮಿ ಪುಷ್ಕರಣೀತೀರದೊಳು ವಿಷ್ಣು ಮೊದಲಾದ ದೇವತೆಗಳಿಂ ಪೂಜಿತನಾದ, ಊರ್ಧ್ವತಾಂಡವ ಮಂಡಿತನಪ್ಪ ಶ್ರೀಮದ್ವಟಾಟವಿ ದೇವನನ್ನೈದಿ, ಮಾನಸ ಪೂಜೆಯನ್ನೆಸಗಿ, ಕ್ರಮದಿಂ ಕಾಂಚೀಪುರವನ್ನೈದಿದನು. ಆವ ಕಾಂಚೀಪುರದಲ್ಲಿ ಸ್ವಯಂಭುವಾದ ದೇವನು ಶತ್ರುಸಂಹಾರದಿಂ ಮನೋಹರನಾಗಿ ಸಕಲ ಜೀವರನ್ನು ರಕ್ಷಿಸುವವನಾಗಿ ವಿಷ್ಣುವಮ್ಮಾಡುತ್ತಿರುವುನೋ, ಆ ಕಾಂಚೀಪುರದೊಳು, ಪರಾಶರ ಬಿಲಾತ್ಮಿಕೆಯಾದ ದೇವಿಯಂ ಆರಾಧಿಸಿ, ಅಲ್ಲಿ ವೇದವೆಂಬ ಏಕಾಮ್ರತರುವಿನ ಮೂಲದೊಳು ವಿಶ್ವಾಧೀಶನಾದ ಧ್ರುವನಾದ ಸರ್ವಲೋಕೇಶ್ವರನಾದ ಸಾಕ್ಷಾತ್ಸ್ವಯಂಭುವಾದ ದೇವನಂ ಸಮಾರಾಧಿಸಿ,

ಬಳಿಕ ವೃದ್ಧಾಚಲಕ್ಕೆ ಗಮಿಸಿ, ಅಲ್ಲಿ ವೃದ್ಧಾಚಲೇಶ್ವರನಂ ಪರಿ ಪೂಜಿಸಿ, ಚಿದಂಬರಮಂ ನೋಡಿ, ನಭಸ್ಥಿತನಾಗಿಯೇ ಅನ್ಯಂಗಳಾದ ಶಿವ ಸ್ಥಾನಂಗಳಂ ವೀಕ್ಷಿಸಿ, ಕಾವೇರಿಗೆ ಉತ್ತರದಿಕ್ಕಿನಲ್ಲಿರುವ ಮಣಿನದಿಯ ನೈೖದಿದನು. ಆ ನದೀತೀರದಲ್ಲಿ ಸೂರ್ಯನು ಪಶ್ಚಿಮಾದ್ರಿಯನ್ನೈದಲಾಗಿ ದಿಕ್ಕುಗಳು ತಿಮಿರಾವೃತಂಗಳಾದವು, ನಭದೊಳು ತಾರೆಗಳು ಬೆಳಗಿದವು, ಕುಮುದಪ್ರಿಯನಪ್ಪ ಚಂದಿರನು ತನ್ನ ಕರಂಗಳಿಂ ಅಂಧಕಾರಮಂ ತೊಲಗಿಸಿ ಇಂದ್ರದಿಕ್ಕಂ ಅಲಂಕರಿಸುತ್ತಿದ್ದನು. ಆಗ ಸೂರ್ಯ್ಯಾಸ್ತಮಯಾನಂತರದಲ್ಲಿ ಮಯೂರಧ್ವಜನಾದ ನಿಶಾಚರ ವಿನಾಶಕರನಾದ ಕುಮಾರಸ್ವಾಮಿಯು ಆ ಮಣಿ ನದೀತೀರದಲ್ಲಿ ರಾತ್ರಿಯಂ ಕಳೆಯಲು ದೇವತೆಗಳು ವಾಸಕ್ಕೋಸುಗ ಇಚ್ಛೈಸಿ ದರು. ಮತ್ತು ವಿಶ್ವಕರ್ಮನು ಆ ಸ್ವಾಮಿಯನಾಮದಿಂ ಶುಭಮಾದ, ಭುವನ ತ್ರಯದೋಳ್ ಕುಮಾರಪುರವೆಂದು ಪ್ರಸಿದ್ಧಮಪ್ಪಂತೆ ಮನೋಹರಮಾದ ಪುರ ಮಂ ರಚಿಸಿ, ಆ ಪಟ್ಟಣ ಮಧ್ಯದಲ್ಲಿ ನವರತ್ನ ವಿಚಿತ್ರಮಾದ ರಾಜಭವನಮಂ ರಚಿಸಿದನು, ಅನಂತರದಲ್ಲಿ ಭವನಂದನನು ರಾತ್ರಿಯೊಳು ಆ ಅರಮನೆಯಂ ಪೊಕ್ಕು, ಸಮಸ್ತ ದೇವತೆಗಳನ್ನು ತಮ್ಮ ತಮ್ಮ ಗೃಹಂಗಳಿಗೆ ತೆರಳಲಾಜ್ಞಾಪಿಸಿ ದವನಾಗಲು, ಆ ದೇವತೆಗಳು ಆ ಸ್ವಾಮಿಯ ಅಪ್ಪಣೆಯಂತೆ ತಮ್ಮ ತಮ್ಮ ಮಂದಿರಂಗಳಂ ಪೊಕ್ಕರು. ಆಗ ದೇವೇಂದ್ರನು ತನ್ನ ಆವಾಸಸ್ಥಾನವನ್ನೈದಿ ಶಯನಮಂ ಮಾಡುತಿರಲಾಗಿ, ರಜನೀಮುಖದೊಳು ಪುರೋದ್ಯಾನದೇವತೆಯು ಪೂರ್ವದಲ್ಲಿ ಇಂದ್ರನಿಂದ ತನ್ನ ಉದ್ಯಾನವನದೊಳು ನಿಕ್ಷಿಪ್ತಮಾದ ಭೂಷಣ ಭಾಂಡಮಂ ತೆಗೆದುಕೊಂಡು, ಮೆಲ್ಲಮೆಲ್ಲನೆ ಆತನ ಸಮೀಪವನ್ನೈದಿ ಹರ್ಷದಿಂ ಸಮರ್ಪಿಸಿದಳು. ಆಗ ದೇವೇಂದ್ರನು ಆ ದೇವತೆಯಿಂ ದತ್ತಮಾದ ಭಾಂಡ ಮಂ ಪರಿಗ್ರಹಿಸಿ, ಆ ಭಾಂಡದ ಮುದ್ರೆಗಳನ್ನೊಡೆದು, ಅದರೊಳು ಪ್ರಥಮತಃ ಶಚೀದೇವಿಯ ಭೂಷಣಂಗಳಂ ವೀಕ್ಷಿಸಿ, ವಿರಹದಿಂ ವ್ಯಾಕುಲೇಂದ್ರಿಯನಾಗಿ ಆಕೆಯಂ ನೆನೆದನು. ಹಾಹಾ!! ಹಾಗೇ ಸರಿಯಲ್ಲವೆ? ಲೋಕದಲ್ಲಿ ಸರ್ವರುಂ ಸಹಕಾರಿಯ ದರ್ಶನದಿಂದ ತಮ್ಮ ಮನೋರಥಮಾದ ವಸ್ತುವಂ ನೆನವುತ್ತಿರು ವರು. ಮತ್ತಂ ಕಾಮನು ತನ್ನ ಬಾಣಕ್ಕಿದೆ ಸಮಯವೆಂದು ತಿಳಿದು ನಿಶಿತ ಮಾದ ಕುಸುಮಾಸ್ತ್ರದಿಂದೆಚ್ಚು, ಆ ಇಂದ್ರನ ಗರ್ವವಂ ಮುರಿದನು. ಶ್ಲೋ॥ ಸುರಪತಿ ರತಿಖಿನ್ನೋ ಭೂಷಣಾಸೀಹಕಾಮೀ ಪರಿಜನವನಿತಾನಾಂ ಹಸ್ತಮಾ ದಾಯ ಭೂಯಃ । ನಿಜಜನ ಪರಿವಾರಾ ಸೀತಪುಷ್ಪಾಭಿತಲ್ಪೋ ಕ್ಷಣಮಪಿ ನಿಶಿ ಕಲ್ಪಂ ತದ್ವಿಯೋಗಾನ್ನಿನಾಯ ॥ತಾ॥ ಕಾಮಿಯಾದ ದೇವೇಂದ್ರನು ಆ ಶಚೀ ದೇವಿಯ ವಿರಹದಿಂದತಿಖಿನ್ನನಾಗಿ, ಈ ಗೃಹದಲ್ಲಿರುವ ಪರಿಜನ ಸ್ತ್ರೀಯರುಗಳ

ಹಸ್ತದೊಳು ಮರಳಿ ಆ ಭೂಷಣಂಗಳಂ ಕೊಟ್ಟು, ತನ್ನ ಪರಿವಾರ ಜನರಿಂದಾ ನೀತಮಾದ ಪುಷ್ಪಂಗಳಿಂದ ಮಾಡಲ್ಪಟ್ಟ ಶಯನಮುಳ್ಳವನಾಗಿ, ರಾತ್ರಿಯೊ ಳೊಂದು ಕ್ಷಣವನ್ನು ಒಂದು ಬ್ರಹ್ಮಕಲ್ಪವನ್ನಾಗಿ ಕಳೆದನೆಂದು ಸೂತಂ ಶೌನಕಾದಿಗಳ್ಗೆ ನಿರೂಪಿಸಿದನೆಂಬಿಲ್ಲಿಗೆ ನಲತ್ತೆಂಟನೆಯ ಅಧ್ಯಾಯವು ಸಂಪೂರ್ಣವು.

ನಲವತ್ತೊಂಬತ್ತನೆಯ ಅಧ್ಯಾಯವು.

ದೇವೇಂದ್ರನ ವಿರಹತಾಪ ವರ್ಣನೆ-ಕುಮಾರಸ್ವಾಮಿ ಯನ್ನು ಸೇವಿಸುವಿಕೆ.

ಕೇಳಿರೈ ಮುನಿಗಳಿರಾ! ದೇವೇಂದ್ರನು ಆ ಇಂದ್ರಾಣಿಯ ವಿರಹದಿಂದ ಈ ಪ್ರಕಾರದಲ್ಲಿ ಆ ರಾತ್ರಿಯೊಳು ನಿದ್ದೆಯಂ ಬಿಟ್ಟು, ಉದ್ಯಾನವನಂಗಳಲ್ಲಿಯುಂ ತಟಾಕಂಗಳಲ್ಲಿಯುಂ ಚಿರಕಾಲವು ಸುಖಮನೈದದೆ, ತಳಿರುಗಳೆಂಬ ಹಾಸಿಗೆ ಯೊಳು ಕುಳ್ಳಿರ್ದು, ಅಲ್ಪಮಾದ ಆ ರಾತ್ರಿಯಂ ಅನೇಕ ಬ್ರಹ್ಮಕಲ್ಪವಾಗಿ ತೋರಿ, ಅತಿ ಪ್ರಯಾಸದಿಂದುದಯಮಾದ ಬಳಿಕ ತನ್ನ ಮನದಿಂದಲೆ ತನ್ನ ಆತ್ಮನಂ ಧೈರ್ಯಮನೈದಿಸಿ ಮಹಾಮನಸ್ಸುಳ್ಳವನಾಗಿ, ತನ್ನ ಅವಯವಂಗಳಲ್ಲಿ ತೋರುತಿರ್ಪ ಕಂದರ್ಪಾಕಾರ ವಿಕಾರವಂ, ಚಂದನಂಗಳಿಂ ಕರ್ಪೂರವೆರೆಸಿದ ಕುಂಕುಮಂಗಳಿಂ ಮರಸಿ, ಸರ್ವ ದೇವತೆಗಳೊಡಗೂಡಿ, ಮರಳಿ ಮಹಾಸೇನನ ಅಂಘ್ರಿಸರೋಜಮಂ ದರ್ಶನವಂ ಮಾಡಲಿಚ್ಛೈಸಿ, ಆ ಸ್ವಾಮಿಯ ಸಮಿಾಪವ ನೈದಿ, ಆತನ ಪಾದಪದ್ಮಂಗಳಿಗೆರಗಿ, ಸೇವಾರಸಭರಿತನಾಗಿ ಅತ್ಯಂತ ಸಂತೋ ಷವನೈದಿದನು.

ಅನಂತರದಲ್ಲಿ ಕುಮಾರಸ್ವಾಮಿಯು ಪ್ರಾತಃಕಾಲದೊಳು ಪೂರ್ವಾಹ್ನಿಕ ಕ್ರಿಯೆಯಂ ಮಾಡಿ, ಮಾತಾಪಿತೃಗಳ ಪಾದದ್ವಯ ಸೇವೆಯಲ್ಲಿ ಆಸಕ್ತನಾಗಿ, ಪರಮ ಭಕ್ತಿಯುಕ್ತಮಾದ ಶ್ರದ್ಧೆಯಿಂದ ವಿಧಿಪೂರ್ವಕಮಾಗಿ ಮಹಾವಿಭವ ವಿಸ್ತಾರಂಗಳಿಂ ಪಾಶುಪತವ್ರತಮಂ ಕೈಕೊಂಡು, ಆ ಪಾರ್ವತೀಪರಮೇಶ್ವರ ರನ್ನು ಅರ್ಚಿಸುತಲಿರಲಾಗಿ, ಆ ಶಂಕರನು ಮಹಾವೃಷಭವನೇರಿ ಸ್ವಕೀಯರಾದ ಗಣನಾಯಕರೊಡನೆ ಪ್ರಸನ್ನನಾಗಿ, ಆ ಸೇನಾನಿಯಂ ಸ್ವಕೀಯಮಾದ ಆಸ್ಯ ದಿಂದಲುಂ, ಅನುಪಮ ರೌದ್ರಪಾಶುಪತಂಗಳೆಂಬ ಮಹಾಸ್ತ್ರಂಗಳಿಂದಲುಂ ಅನುಗ್ರಹಿಸಿ, ಪತ್ನಿಯಾದ ಪಾರ್ವತಿಯೊಡನೆ ಅಂತರ್ಧಾನವನ್ನೈದಿದನು. ಅನಂ ತರದಲ್ಲಿ ಜಗತ್ಪತಿಯಾದ ದೇವಸೇನಾಪಾಲಕನಾದ ಕುಮಾರಸ್ವಾಮಿಯು, ದೇವದೇವನಾದ ಪರಮೇಶ್ವರಂಗೋಸುಗ ನಮಸ್ಕಾರಮನಾಚರಿಸಿ ಪ್ರಾರ್ಥಿಸಿ

ಶೀಘ್ರದಿಂ ರಥಾರೂಢನಾಗಿ, ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳೊಡನೆ, ಆ ಕುಮಾರಪುರದಿಂ ಪೊರಮಟ್ಟು ಪಯಣದಲ್ಲಿ ಭೂಮಿಯಲ್ಲಿರುತಿರ್ಪ ಪಿತೃವಾದ ಪರಮೇಶ್ವರನ ಮನೋಹರಮಾದ ಸ್ಥಾನಂಗಳನ್ನು ನಯನದಿಂ ನಿರೀಕ್ಷಿಸುತ ಪೋಗುವಾಗ ಒಂದಾನೊಂದು ಕಡೆಯಲ್ಲಿ ಮರುಭೂಮಿಯನ್ನೈದಿದನು. ಆ ಮರುಭೂಮಿಯು ಕಾಡುಗಿಚ್ಚಿಗೆ ಸಮಾನಮಾಗಿ ಆರಿಂದಲು ಯ್ದೈದಲಶಕ್ಯಮಾಗಿ ಅತಿ ಕ್ರೂರಮಾಗಿತ್ತು. ಅದರೊಳು ಸೂರ್ಯಕಿರಣಂಗಳುಂ ಸೂರ್ಯಕಾಂತಿ ಶಿಲೆಗಳುಂ ಅದಕ್ಕಿಂತಲು ಅಧಿಕಮಾಗಿ ಜ್ವಾಲಾಸಮೂಹಂಗಳಂ ಕರೆವುತಲಿದ್ದವು. ಮತ್ತೆ ರಾತ್ರಿಯ ತುದಿಯಲ್ಲಿ ಹೇಮಂತಕಾಲದ ಚಂದ್ರಕಿರಣಂಗಳು ಆ ಮರುಭೂಮಿಯಂ ಶೀತಳಮಾಗಿ ಮಾಡಲು ಸಮರ್ಥಂಗಳಾಗಲಿಲ್ಲವು. ಮರಳಿ ಏನು ಹೇಳಬೇಕಾಗಿರುವುದು? ಅಲ್ಲಿ ಆವ ವೃಕ್ಷಂಗಳುಂ ಪಾಷಾಣ ಸಮೂಹಂಗಳು ಇರಿಸಲ್ಪಟ್ಟಿರುವವೋ, ಅವುಗಳು ವರ್ಷಾಕಾಲದಲ್ಲಿಯುಂ ಉಷ್ಣಾಧಿಕಮಂ ಧರಿಸುತಲಿದ್ದವು ಕಟಕಟ!! ಮರಳಿ ಪೇಳುವದೇನು? ಅತಳವೆಂಬ ಲೋಕದಲ್ಲಿ ವಾಸವಂ ಮಾಡುತಿರ್ಪ ಫಣಿಫಣಾ ಮಣಿಗಳ ಕಾಂತಿಗಳು ಆ ಮರುಭೂಮಿಯಲ್ಲಿ ಸರ್ವಕಾಲವು ಕಾಣಲ್ಪಡುತಲಿವೆ. ಅಲ್ಲಿ ಆವ ಪಶುಗಳುಂ ಆವ ಪಕ್ಷಿಗಳುಂ ಸ್ವೇಚ್ಛೆಯಿಂ ಸಂಚರಿಸುತಲಿರುವವೋ, ಆ ಸಮಸ್ತವು ದಹಿಸಲ್ಪಟ್ಟ ಅಂಗ ಸಂಧಿಗಳುಳ್ಳವುಗಳಾಗಿ ಮತ್ತೊಂದು ಕಡೆಗೈದಿದವು ಹೀಗಿರ್ದೊಡಂ ಆ ಭೂಮಿಯು ಕುಮಾರಸ್ವಾಮಿಯ ಅನುಗ್ರಹದಿಂದ ಜಾಂಗಲದೇಶದಂತೆ ಸರ್ವಪ್ರಾಣಿಗಳಿಗು ಸುಖಕರಮಾಗಿರುವದು.

ವ್ಯಾಸಾಗ್ರಜರಾದ ಆರುಮಂದಿ ಮಹರ್ಷಿಗಳ ಶಾಪ ವೃತ್ತಾಂತವು.

ಅನಂತರದಲ್ಲಿ ಮಹಾದೇವಾಂಗ ಸಂಭವನಾದ ಕುಮಾರಸ್ವಾಮಿಯು ಆ ಮರುಭೂಮಿಯಂ ದಾಂಟಿ, ಅದ್ರಿಶ್ರೇಷ್ಠಮಾದ ಪರಪರ್ವತಮಂ ಶೀಘ್ರದಿಂ ದೈದಿದನು. ಆ ಅಮ್ರುಪರ್ವತದೊಳು ತಪ್ತ, ಅನಂತ, ನಂದಿ, ಚತುರ್ಮುಖ, ಚಕ್ರಪಾಣಿ, ಮಾಲಿ ಎಂಬ ನಾಮಂಗಳಂಗಳುಳ್ಳ ತಪಸ್ವಿಗಳ್ಗೆ ಶ್ರೇಷ್ಠರಾದ ಮಹಾ ತೇಜೋವಂತರಾದ ಸನ್ಮುನಿಗಳು ಜಗದುಪದ್ರವನಾಶದಲ್ಲಿ ಉದ್ಯುಕ್ತನಾದ ಸಾಕ್ಷಾದ್ರುದ್ರಾಂಗ ಸಂಭವನಾದ ಕುಮಾರಸ್ವಾಮಿಯಂ ದೂರದಲ್ಲಿ ಬಹು ಮಾನದಿಂದ ಆದರವೆರೆಸಿ ನಮಿಸಿದರು. ಆ ಸಮಯದೊಳು ಅಮರಾಧಿಪನಾದ ಇಂದ್ರನು ಕುಮಾರಸ್ವಾಮಿಯ ಸಮೀಪವನ್ನೈದಿ, ನಮಸ್ಕಾರಮಂ ಮಾಡಿ ಅಂಜಲಿಬದ್ಧನಾಗಿ ಈಶನಾದ ಕುಮಾರಸ್ವಾಮಿಗೆ, ಆ ಸರ್ವಮುನಿಗಳ ಸಮಸ್ತವಾದ ವೃತ್ತಾಂತಮಂ ಪೇಳ್ವನದೆಂತೆನೆ, ಎಲೈ ಸ್ವಾಮಿಯೆ! ಪೂರ್ವದಲ್ಲಿ ಪರಾಶರ

ಕುಮಾರನಾದ ವ್ಯಾಸಂಗೆ ಅಗ್ರಜರಾದ ಬಾಲಕರಾದವರು ಬುದ್ಧಿನಾಶದ ದೆಸೆಯಿಂದ ಶರವಣವೆಂಬ ಸರಸ್ಸಿನ ತೀರದೊಳು ರಜ್ಜುಪ್ರೋತಮಾದ ಮತ್ಸ್ಯಂಗಳಂ ಪಿಡಿದು ಶೀಘ್ರದಿಂ ಸಂಹರಿಸಿದರು. ಆ ಸಮಯದಲ್ಲಿ ಇವರ ತಂದೆಯು ಈ ಪ್ರಕಾರವಾಗಿ ಕ್ರೀಡಿಸುತಿರ್ಪ ಪುತ್ರರಂ ಕಂಡು ರೋಷಯುಕ್ತನಾಗಿ ಕಟಕಟ !! ಎಲೈ ಮಕ್ಕಳಿರಾ ! ಆವ ಕಾರಣದಿಂ ಈ ಸರೋವರದ ಮತ್ಸ್ಯಂಗಳ್ಗೆ ಹಿಂಸಕರಾಗಿ ಕ್ರೀಡಿಸುತ್ತಿರುವಿರೋ, ಅದುಕಾರಣದಿಂ ನೀವು ತಪವಂ ಬಿಟ್ಟು ಮತ್ಸ್ಯರೂಪಂಗಳಂ ಧರಿಸಿರೆಂದು ಶಪಿಸಿದನು. ಎಲೈ, ಮುನಿಗಳಿರಾ! ತಪಸ್ವಿಗಳಾದ ಮುನಿಗಳು ಪಿತೃವಿನಿಂದ ಪ್ರತ್ಯಕ್ಷವಾಗಿ ಈ ರೀತಿಯಿಂ ಶಪಿಸಲ್ಪಟ್ಟವರಾಗಿ ಭೀತಿಗೊಂಡು ಮುನಿಶ್ರೇಷ್ಠನಾದ ಆ ಪಿತಂಗೆ ನಮಸ್ಕಾರವನೆಸಗಿ ಶಿರಸ್ಸುಗಳಲ್ಲಿ ಅಂಜಲಿಬಂಧಂಗಳಂಗೈದು ಶಾಪವಿಮೋಚನವನ್ನು ಪ್ರಾರ್ಥಿಸಿದರು. ಬಳಿಕ ಮಹಾಮತಿವಂತನಾದ ಪರಾಶರಮುನಿಯು ಶಾಪಭೀತರಾದ ಆ ಕುಮಾರರಂ ನೋಡಿ ಎಲೈ ಕುಮಾರರೆ, ಆವಾಗ ಪರ್ವತರಾಜಪುತ್ರಿಯ ಸ್ತನ್ಯವು ನಿಮ್ಮಿಂದ ಪಾನಮಾಡಲ್ಪಡುವದೋ ಆಗ ತತ್‌ಕ್ಷಣವೇ ಶಾಪವಿಮೋಚನ ಉಂಟಾಗುವುದೆಂದು ನುಡಿದನು.

ಶ್ಲೋ॥ ಇತಿ ಮುನಿಪ್ರವರೇತ್ರ ಪರಾಶರೆ ಸಮನುಗೃಹ್ಯಗತೆ ಮುನಿಪುತ್ರಕಾಃ । ಸಪದಿವಿಪ್ರತನುಂ ಸಹತ್ಯತೇ ನಿವಿಷದೃಷ್ಟಿವಪುಶ್ಮತಥಾಭಜ೯ ॥

ತಾ॥ ಈ ಪ್ರಕಾರವಾಗಿ ಮುನಿಶ್ರೇಷ್ಠನಾದಪರಾಶರಮುನಿಯು ತನ್ನ ಪುತ್ರರಿಗೆ ಶಾಪವಂ ಕೊಟ್ಟು ಈ ಶರವಣವೆಂಬ ಸರೋವರದ ತೀರದಲ್ಲಿ ಅನುಗ್ರಹಿಸಿಯೈದಿದ ಬಳಿಕ ಅವರುಗಳು ಆ ಕ್ಷಣವಲ್ಲಿಯೆ ವಿಪ್ರಶರೀರವಂ ಬಿಟ್ಟು ಅನಿಮಿಷದೃಷ್ಟಿಯುಳ್ಳ ಮತ್ಸ್ಯರೂಪಂಗಳಂ ತಾಳ್ದರೆಂದು, ಸೂತಪೌರಾಣಿಕನು ಶೌನಕಾದಿ ಮುನಿಗಳಿಗೆ ಪೇಳ್ದನೆಂಬಲ್ಲಿಗೆ, ನಲವತ್ತೊಂಬತ್ತನೆಯ ಅಧ್ಯಾಯವು ಸಂಪೂರ್ಣವು.

ಐವತ್ತನೆಯ ಅಧ್ಯಾಯವು.

ವ್ಯಾಸಾಗ್ರಜರಾದ ಮಹರ್ಷಿಗಳ ಶಾಪವಿಮೋಚನೆಯು.

ಅನಂತರದಲ್ಲಿ ಮತ್ಸ್ಯರೂಪರಾದ ಆ ಸಮಸ್ತ ಮುನಿಕುಮಾರರು, ಆ ಶರವಣ ಮಧ್ಯದಲ್ಲಿ ಲೀಲೆಯಿಂ ಸಂಚಾರವಂ ಮಾಡುತಿರಲು, ಬಹು ಕಾಲ ಕಳೆದ ಬಳಿಕ ಜಗದ್ಗುರುವಾದ ನೀನು, ದಯಾನಿಧಿಗಳಾದ ಪಾರ್ವತೀಪರಮೇಶ್ವರರ್ಗೆ ಕುಮಾರತ್ವಮನೈದಿ, ಜಗನ್ಮಾತೆಯಾದ ಪಾರ್ವತೀದೇವಿಯು ಸಂಬಂಧ

ಮಾಗಿರ್ಪ ಅಮೃತತುಲ್ಯಮಾದ ಸ್ತನ್ಯವನ್ನು ಪಾನಮಂ ಮಾಡುತಿರಲಾಗಿ, ಆ ಸಮಯದೊಳು ಆ ಮಡುವಿನ ಮಧ್ಯದಲ್ಲಿ ಲೇಶಮಾತ್ರ ಸ್ತನ್ಯಬಿಂದುವು ಜಾರಿಬೀಳಲು, ಅದನ್ನು ಮತ್ಸ್ಯರೂಪರಾದ ಮುನಿಕುಮಾರರು ಪಾನಮಂ ಮಾಡಿದ್ದರಿಂದ ಮರಳಿ ಶೀಘ್ರದಿಂ ತಮ್ಮ ಸ್ವರೂಪವನ್ನೈದಿ ಅಂಬಾಸಮೇತ ನಾಗಿ ನಿನ್ನನ್ನು ತೊಡೆಯಮೇಲೆ ಧರಿಸಿಕೊಂಡಿದ್ದ ಪರಮೇಶ್ವರನಂ ಕಂಡು, ಆ ಶಿವಂಗೆ ನಮಸ್ಕರಿಸಿದ ಬಳಿಕ, ಮುಕ್ತಮಾದ ಆತ್ಮಸ್ಥಾನವುಳ್ಳ ಸರ್ವ ಜನನಿ ಯಾದ ಉಮಾದೇವಿಗೂ ನಮಸ್ಕಾರವನಾಚರಿಸಿ, ಸ್ತೋತ್ರಂಗಳಿಂದ ಆ ಪಾರ್ವತೀ ಪರಮೇಶ್ವರರಂ ಪ್ರೀತರಂ ಮಾಡಿಕೊಂಡರು. ಬಳಿಕ ಶತಕೋಟಿ ಸೂರ್ಯರಿಗೆ ಸಮಾನಮಾದ ಕಾಂತಿಯುಳ್ಳ ಸರ್ವನಿಯಾಮಕನಾದ, ಆರಿಂದಲು ದಾಂಟಲಶಕ್ಯಮಪ್ಪ ಆಜ್ಞೆಯುಳ್ಳ ಶಿವನು, ಆ ಮುನಿಕುಮಾರರಂ ನಿರೀಕ್ಷಿಸಿ, ಎಲೈ ಪರಾಶರ ಕುಮಾರರಿರಾ! ನೀವು ನಮ್ಮ ಆಜ್ಞೆಯಿಂದ ಶಾಪವಿಮೋಚಿತ ರಾಗಿ, ಉತ್ತಮವಾದ ಅಪರ ಪರ್ವತವನ್ನೈದಿ, ಆ ಪರ್ವತಕ್ಕೆ ಕುಮಾರಸ್ವಾಮಿಯು ಸಮಸ್ತ ದೇವತೆಗಳೊಡನೆ ಯಾವಾಗ ಬಂದು ನಿಮಗೆ ಪಾದಾರವಿಂದದರ್ಶನ ಮಂ ಕೊಡುವನೋ; ಆ ಪರ್ಯಂತವು ತಪಸ್ಸುಗಳನ್ನು ಆಚರಿಸುತಿದ್ದು ಆತನಂ ಶರಣುಹೊಕ್ಕ ಬಳಿಕ ಶ್ರೇಷ್ಠಗಳಾದ ಶ್ರೇಯಸ್ಸುಗಳಂ ಪಡೆಯುವಿರೆಂದು ನಿರೂಪಿಸಿದನು.

ಕುಮಾರಸ್ವಾಮಿಯ ಓಲಗ ವರ್ಣನೆ.

ಎಲೈ ದೇವೇಶನೆ! ಈಪ್ರಕಾರಮಾಗಿ ಈಶನಿಂ ಆಜ್ಞಪ್ತರಾದ ಸಂಶಿತವ್ರತ ಧಾರಿಗಳಾದ ಮುನಿಗಳೀಗ ನಿನ್ನನ್ನೈದಿ ಕೃತಾರ್ಥರಾದರು. ಈ ಅರ್ಥಕ್ಕೆ ಸಂಶಯ ವಿಲ್ಲೆಂದು ಇಂದ್ರನು ನುಡಿಯಲಾಗಿ, ರುದ್ರಕುಮಾರನಾದ ಕುಮಾರಸ್ವಾಮಿಯು ಆ ವಾಕ್ಯಮಂ ಕೇಳಿ ಆ ತಪಸ್ವಿ ಗಳನ್ನು ಅನುಗ್ರಹಿಸಿ, ಸರ್ವ ಮುನೀಶ್ವರರಂ ನೋಡಿ ಸಾಧುಸಾಧೆಂದು ನುಡಿದು ಪ್ರತಾಪದಿಂ ತಿರಸ್ಕರಿಸಲ್ಪಟ್ಟ ಅಸುರರುಳ್ಳವ ನಾಗಿ, ಆ ಮುನಿಗಳನ್ನು ಒಡನೆ ಬರಹೇಳಿ ಅನುಗ್ರಹಿಸಿ, ಸರ್ವದೇವತೆಗಳೊಡನೆ ಆ ಅಮೃತಕೂಟದಿಂ ಪೊರಮಟ್ಟು, ಶ್ರೀಮತ್ತಾದಶಂತೀಪುರವನ್ನೈದಿ, ಆ ಪಟ್ಟಣ ದಲ್ಲಿ ವಿಚಿತ್ರಮಾದ ಮಹಾ ಉನ್ನತಮಾದ ರತ್ನಗೋಪುರದಿಂದಲಂಕೃತಮಾದ ಮತ್ತೆ ತನಗೆ ವಿಶ್ವಕರ್ಮನಿಂ ಸಮರ್ಪಿತಮಪ್ಪ ರಾಜಗೃಹಮಂ ಪ್ರವೇಶಿಸಿ, ಆ ಅರಮನೆಯಲ್ಲಿ ಮಧ್ಯವರ್ತಿಯಾದ ಮಹತ್ತಾದ ರತ್ನಸಿಂಹಾಸನಮನ್ನೈದಿ, ಮಹಾ ಸಿಂಹಾಸನಾರೂಢನಾದ ಪರಮೇಶ್ವರನಂತೆ ಪ್ರಕಾಶಿಸಿದನು. ಆಗ ಹಾಹಾ ಹೂಹೂ ತುಂಬುರು ವಿಶ್ವಾವಸು ಮೊದಲಾದ ಗಂಧರ್ವರುಂ ಕಿನ್ನರರುಂ ವೀಣಾ ವಂತರಾಗಿ, ಆದರದಿಂ ದೇವಮಾನುಷರಂ ಮೀರಿದ ಕುಮಾರಸ್ವಾಮಿಯ ಜನನಾ

ರಭ್ಯವಾಗಿ ಸಂಭವಿಸಿದ ವೃತ್ತಾಂತವಂ ಗಾನವ ಮಾಡಿದರು. ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಪೂಮಳೆ ಗರೆದರು. ಸಪ್ತ ಮರುತ್ತುಗಳು ಅನುರ ರೊಡನೆ ಶಂಕರ ಕುಮಾರನಂ ಸೇವಿಸಿದರು. ಅಗ್ನಿ ವರುಣರೀರ್ವರುಂ ಅದ್ಭುತ ವಾದ ಛತ್ರವಂ ಧರಿಸಿದರು. ಆ ಸಮಯದಲ್ಲಿ ಕೆಲವರಾದ ದಿಕ್ಪಾಲಕರು ಸಮಸ್ತವಾದ ಲೋಕಂಗಳಲ್ಲಿ ದ್ವಿತೀಯ ಸೂರ್ಯನಂತೆ ಕಂಗೊಳಿಪ ವಿಚಿತ್ರಂಗ ಳಾದ ವ್ಯಜನಗಳಿಂ ಯಥೋಚಿತವಾಗಿ ಸೇವಿಸಿದರು. ಮಹಾಬಾಹುವಾದ ಅತ್ಯಂತ ಭಕ್ತನಾದ ವೀರಬಾಹುವು ಕನಕ ರತ್ನಾಢ್ಯವಾದ ನವರತ್ನ ಖಚಿತ ವುಪ್ಪ ಪಿಡಿಯುಳ್ಳ, ಪಟ್ಟಕೋಶವುಳ್ಳ ಖಡ್ಗಮಂ ಬಾಹುಗಳಿಂದಾಲಿಂಗಿಸಿದವ ನಾಗಿ ಸ್ವಾಮಿಯಂ ಸೇವಿಸಿದನು. ಇದಲ್ಲದೆ ಇತರರಾದ ಅಷ್ಟವೀರರುಂ ನಿಯುತಗಣಾಧ್ಯಕ್ಷರುಂ ಅಷ್ಟೋತ್ತರ ಸೇನಾನಾಯಕರುಂ ತಮತಮಗೆ ಯೋಗ್ಯ ವುಪ್ಪಂತು ಸ್ವಾಮಿಯಂ ಸೇವಿಸಿದರು. ಆಗ ಮುನಿಗಳು, ಷಡ್ವಕ್ತ್ರದ್ವಾದಶ ಭುಜ ಅಷ್ಟಾದಶನಯನ ಪಂಕಜಸ್ಮೇರ ಉದಾರಾಂಗ ವಿಚಿತ್ರ ಮಕುಟೋಜ್ವಲ ನಾದ ರತ್ನಾಢ್ಯಮಪ್ಪ, ಉತ್ತಮವಾದ ದಿವ್ಯ ಸಿಂಹಾಸನದಲ್ಲಿ ವಿರಾಜಮಾನ ನಾದ ಕುಮಾರಸ್ವಾಮಿಯಂ ವೀಕ್ಷಿಸಿ ನಯನ ಸಾಫಲ್ಯವನ್ನೈದಿದರು. ಬಳಿಕ ದೇವೇಶ್ವರನಾದ ಶರವಣೋದ್ಭವನು ಪ್ರಸನ್ನನಾಗಿ ಹರಿಬ್ರಹ್ಮ ಮೊದಲಾದವರಂ ವಿಬುಧರನ್ನೂ ನೋಡಿ ಮುಗುಳುನಗೆ ಯುಳ್ಳವನಾಗಿಂತೆಂದನು.

ಎಲೈ ದೇವತೆಗಳಿರಾ! ಅಸುರರಾರು? ಅವರೆಷ್ಟುಮಂದಿ? ಅವರ ರೂಪಂಗಳೆಂತಿಹುವು? ಆರ ಕುಮಾರರು? ಅವರಿಗೆಲ್ಲರ್ಗೆಯುಂ ಪ್ರಮುಖ ನಾರು? ಇವುಗಳೆಲ್ಲಮಂ ಸವಿಸ್ತಾರಮಾಗಿ ಪೇಳಿರೆಂದು ನಿರೂಪಿಸಲಾಗಿ, ದೇವೋತ್ತಮರು ಆ ಕುಮಾರಸ್ವಾಮಿಯ ವಚನಮಂ ಕೇಳ್ದರು. ಆಗ ಹರಿ ಬ್ರಹ್ಮರು ಪರಸ್ಪರಮಾಗಿ ಮುಖಮಂ ವೀಕ್ಷಿಸಿ, ಸಭೆಯಲ್ಲಿ ವಾಕ್ಕುಗಳಿಗೆ ಪತಿ ಯಾದ ಬೃಹಸ್ಪತಿಯಂ ನೋಡಿ, ಎಲೆ ಬೃಹಸ್ಪತಿಯೆ! ನಮಗೆ ಒಡೆಯನಾದ ಹರಕುಮಾರನು ಕೇಳುತಿರ್ಪ ವಿಷಯವನ್ನು ಬಿನ್ನಪಂಗೆಯ್ಯೆಂದು ಪೇಳುತಿರೆ, ಆ ಬೃಹಸ್ಪತಿಯು ಸ್ವಾಮಿಗೆ ನಮಸ್ಕರಮಮ್ಮಾಡಿ ಕೃತಾಂಜಲಿ ಯುಳ್ಳವನಾಗಿ ಆ ಸುರೇಂದ್ರಾರ್ತಿಹರನಾದ ಗುಹನಿಗೆ ನಮಸ್ಕಾರಮಮ್ಮಾಡಿ, ಯೋಗಿಗಳ ಹೃದಯ ಗುಹೆಯಲ್ಲಿ ವಾಸವಾಗಿರ್ಪ ಆ ಗುಹಸ್ವಾಮಿಗೋಸುಗ ಅಸುರರ ಸರ್ವ ವೃತ್ತಾಂತಮಂ ಪೇಳ್ದನು. ವೇದಾರ್ಥ ಸಮ್ಮತವಾದ, ಸತ್ಪುರುಷರಾದ ವಿದ್ವಾಂಸರ ಶ್ರೇಯಸ್ಸುಗಳ್ಗೆ ಆದಿಕಾರಣವಾದ ಈ ಸಂಭವಕಾಂಡವು ಶೌನ ಕಾದಿ ಮುನಿಗಳಿಗೆ ಸೂತನಿಂ ಪೇಳಲ್ಪಟ್ಟುದೆಂಬಲ್ಲಿಗೆ ಇಂತು ಕರ್ಣಾ ಟಕ ಭಾಷಾವಿರಚಿತಮಾದ ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ

ಮಾನ ನಿಖಿಲ ದೇಶಾವತಂಸ ಕರ್ಣಾಟಕ ಜನಪದ ಸಂಪದ ಧಿಷ್ಠಾನಭೂತ ಶ್ರೀಮನ್ಮಹೀಶೂರ ಮಹಾ ಸಂಸ್ಥಾನಮಧ್ಯ ದೇದೀಪ್ಯಮಾನಾವಿಕಲಕಲಾನಿಧಿ ಕುಲಕ್ರಮಾಗತರಾಜಕ್ಷಿತಿಪಾಲ ಪ್ರಮುಖ ನಿಖಿಲ ನಿಜ ರಾಜಾಧಿರಾಜ ಮಹಾ ರಾಜ ಚಕ್ರವರ್ತಿಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ ಶ್ರೀಮ ದ್ರಾಜಾಧಿರಾಜ ಪರಮೇಶ್ವರ ಪ್ರೌಢಪ್ರತಾಪಾ ಪ್ರತಿಮ ನರಪತಿ ಬಿರುದೆಂತೆಂ ಬರ ಗಂಡ, ಲೋಕೈಕವೀರ ಯದುಕುಲ ಪಯಃಪಾರಾವಾರ ಕಲಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀ ವರಾಹ ಹನುಮದ್ಗರುಡ ಕಂಠೀರ ವಾದ್ಯನೇಕ ಬಿರುದಾಂಕಿತ ಶ್ರೀ ಚಾಮ ರಾಜ ಮಹೀಪಾಲ ಧರ್ಮಪತ್ನಿ ಕೆಂಪನಂಜಮಾಂಬಾ ಗರ್ಭಸುಧಾಂಬುಧಿ ರಾಕಾ ಸುಧಾಕರಾಯಮಾನ ಶ್ರೀ ಚಾಮುಂಡಿಕಾಂಬಾ ವರಪ್ರಸಾದೋದ್ಭವರಾದ ಆತ್ರೇಯಸಗೋತ್ರ ಆಶ್ವಲಾಯನಸೂತ್ರ ಋಕ್ಶಾಖಾನುವರ್ತಿಗಳಾದ ಶ್ರೀಮ ನ್ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪ ಕಾರಾರ್ಥವಾಗಿ, ರಚಿಸಿದ ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಸ್ಕಾಂದ ಪುರಾಣದ ಶಂಕರಸಂಹಿತೆಯಲ್ಲಿ ಶಿವರಹಸ್ಯ ಖಂಡದ ಸಂಭವಕಾಂಡ ದೋಳ್ ಐವತ್ತನೆಯ ಅಧ್ಯಾಯವು ಸಂಪೂರ್ಣಂ.

ಸಂಭವಕಾಂಡವು ಸಮಾಪ್ತಂ.

ಆಸುರಕಾಂಡ ಪ್ರಾರಂಭವು.

ಮೊದಲನೆಯ ಅಧ್ಯಾಯವು.

ಶ್ಲೋ॥ ಶಿವಂ ಶಿವಪ್ರಿಯಂದೇವಂ ದೇವಾನಾಮಧಿದೈವತಂ ।
ಭಜೇಹಂ ವಿಘ್ನರಾಜಂತಂ ವಿಘ್ನಹಂತಾರಮವ್ಯಯಂ ॥
ಕಪಿಂಕಪೀನಾಮೀಶಾನಂ ಗಣಾನಾಂ ಗಣನಾಯಕಂ ।
ವಕ್ರತುಂಡಂಮಹಾಕಾಯಂ ವಿಘ್ನೇಶಂತಂನಮಾಮ್ಯಹಂ ॥
ಕಾರ್ತಿಕೇಯಂ ಮಹಾಸೇನಂ ಕುಮಾರಂ ಪುಷ್ಕರಸ್ರಜಂ ।
ನಮಾಮಿ ಕೇಕಿ ಕಂಠಸ್ಥಂ ಕಿಂಕಿಣೀನಾದಮೇದುರಂ ॥

ತಾ॥ ಶಿವನಾಗಿ ಶಿವಪ್ರಿಯನಾದ ದೇವನಾಗಿ ದೇವತೆಗಳಿಗೆ ಒಡೆಯನಾದ ವಿಘ್ನಧ್ವಂಸಕನಾದ ಆ ವಿಘ್ನೇಶ್ವರನನ್ನು ನಾನು ಭಜಿಸುವೆನು. ಮತ್ತೆ ಕಪಿ ಯಾದ ಕಪಿಗಳಿಗೊಡೆಯನಾದ ಗಣಂಗಳ್ಗೆ ಗಣನಾಯಕನಾದ ವಕ್ರತುಂಡನಾದ ಮಹಾಕಾಯನಾದ ವಿಘ್ನರಾಜನನ್ನು ಕುರಿತು ನಮಸ್ಕಾರವಮ್ಮಾಡುತ್ತೇನೆ.

ನವಿಲಿನ ಕೊರಳಲ್ಲಿರುವ ಕಿರು ಘಂಟೆಗಳ ಘೋಷೆಯಿಂ ವ್ಯಾಪ್ತನಾಗಿ ಕಾರ್ತಿಕೇಯನಾದ ಮಹಾ ಸೇನನಾದ ಮತ್ತೆ ಆನೆಯ ಸೊಂಡಿಲದೋಪಾದಿಯಲ್ಲಿ ಬೃಹತ್ತಾಗಿಯುಂ ಸುವಾಸನೆಯಾಗಿಯುಂ ಇರುವ ಪೂದಂಡೆಗಳುಳ್ಳ ಕುಮಾರಸ್ವಾಮಿಗೆ ನಮಸ್ಕರಿಸುತ್ತೇನೆಂದು ಪ್ರಾರ್ಥನೆಯು.

ದೈತ್ಯೋತ್ಪತ್ತಿ ವಿವರಣ.

ಮುನಿಗಳ ವಚನವು:— ಸರ್ವಜ್ಞನಾದ ಪುರಾಣಾರ್ಥಂಗಳಂ ಬಲ್ಲವನಾದ ಭಗವಂತನಪ್ಪ ಎಲೈ ಸೂತನೆ! ಮಹಾಪರಾಕ್ರಮಿಗಳಾದ ಶೂರಪದ್ಮ ಸಿಂಹವಕ್ತ್ರ ತಾರಕರೆಂಬ ಅಸುರರ ಮತ್ತೆ ಅನ್ಯರಾದ ದೈತ್ಯರುಗಳ ಉತ್ಪತ್ತಿಯನ್ನೂ ಅವರ ಕ್ರಿಯೆಗಳನ್ನೂ ನಾವು ಕೇಳಲಿಚ್ಛೈಸುತಿರ್ಥೇವೆ. ವಿಸ್ತಾರದಿಂ ಪೇಳುವನಾಗೆಂದು ಶೌನಕಾದಿ ಮುನಿಗಳು ಪೇಳ್ದವರಾಗಲು, ಆ ವಚನಮಂ ಕೇಳಿ ಸೂತಪೌರಾಣಿಕನಿಂತೆಂದಂ. ಎಲೈ ಸಮಸ್ತ ಋಷಿಗಳಿರಾ! ಮಹಾ ತೇಜೋವಂತನಾದ ಕುಮಾರಸ್ವಾಮಿ ಗೋಸುಗೆ ಬೃಹಸ್ಪತಿಯಿಂ ಪೂರ್ವದಲ್ಲಿ ಆವ ವಚನವು ಹೇಳಲ್ಪಟ್ಟದೋ ಆ ವೃತ್ತಾಂತಮಂ ಕ್ರಮದಿಂ ಪೇಳ್ವೆನು ಕೇಳುವರಾಗಿ ಏನಂದರೆ. ತಪೋಧನನಾದ ಬ್ರಹ್ಮಕುಮಾರನಾದ ಜಿತಕ್ರೋಧನಾದ ಸತ್ಯವಾಕ್ಯನಾದ ಧರ್ಮತತ್ಪರನಾದ ಕಾಶ್ಯಪನೆಂಬ, ಅರವತ್ತು ದೈತ್ಯರಿಗೆ ಪಿತನಾದವನಿಧಾನೆ. ಆ ಕಾಶ್ಯಪನು ಅರವತ್ತು ಕೋಟಿ ಸಂಖ್ಯೆಯಿಂ ಮಿತರಾದ ಮಹಾ ವೀರ್ಯ ಪರಾಕ್ರಮವುಳ್ಳ ಬಹು ದೈತ್ಯರಂ ದಿತಿಯೆಂಬ ತನ್ನ ಧರ್ಮಪತ್ನಿಯಲ್ಲಿ ಪುಟ್ಟಿಸಿದನು. ಆ ಅಸುರರುಗಳಿಗಧಿಪತಿಯಾಗಿ ಶ್ರೀಮಂತನಾದ ಅಸುರೇಂದ್ರನೆಂಬ ಮಹಾ ದನುಜನಿರ್ದನು.

ಆ ಅಸುರೇಂದ್ರನು ಮಂಗಕೇಶಿನಿಯೆಂಬ, ಸ್ತ್ರೀಯು ವೊಡನೆ ಯುಕ್ತನಾಗಿ ಲೋಕದಲ್ಲಿ ಹೋಲಿಕೆಯಿಲ್ಲದವಳಾದ ಸರ್ವಾವಯವ ಸೌಂದರ್ಯಮಪ್ಪ ಸುರಸೆಯೆಂದು ಪೆಸರುಳ್ಳ ಪುತ್ರಿಯಂ ಪಡೆದನು. ಅನಂತರದಲ್ಲಿ ಆ ದೈತ್ಯೇಂದ್ರನ ಪುತ್ರಿಯು ದೈತ್ಯಗುರುವಿನ ಸಮೀಪಕ್ಕೆ ಗಮಿಸಿ, ಆ ಗುರುವಾದ ಶುಕ್ರನಂ ಉಪಾಸಿಸಿದವರಾಗಲು, ಶುಕ್ರನು ಆ ಪುತ್ರಿಗೆ ನಾನಾವಿಧ ವಿದ್ಯೆಗಳಂ ಉಪದೇಶಿಸಿ, ಮಾಯೆಯೆಂದು ಪೆಸರನ್ನಿಟ್ಟು, ಆಗ ದೇವತೆಗಳ ಸಮೃದ್ಧಿಯಂ ದೈತ್ಯರ ಕ್ಷಯಮಂ ಮನಸ್ಸಿನಿಂದಾಲೋಚಿಸಿ, ದಕ್ಷಾಧ್ವರದಲ್ಲಿ ಆ ದೇವತೆಗಳ ಸಂಪತ್ತಿಗೆ ನಾಶಮುಂ ದೈತ್ಯರುಗಳಿಗೆ ವಿಜಯಮುಂ ಉಂಟಾಗಲೆಂಬ ನಂದಿಕೇಶ್ವರನ ಶಾಪಮಂ ಸ್ಮರಿಸಿ, ಆ ಮಾಯಾದೇವಿಯಂ ಕುರಿತು, ಎಲೌ ಮಾಯಾದೇವಿಯೆ! ದೇವತೆಗಳಿಂ ಋಷಿಗಳಂ ಮಹತ್ತಾದ ಅಸುರರು ನಾಶಮನ್ನೈದಿದರು. ಅದುಕಾರಣದಿಂ ನೀನು ಕಾಶ್ಯಪನಿಂ ಪುತ್ರರಂ ಪಡೆದು ಆ ಸುರರ

ಸಂಹಾರವನ್ಮಾಡೆಂದು ನಿರೂಪಿಸಲಾಗಿ, ಆ ಮಾಯಾದೇವಿಯುಂ ಹಾಗೆಯೇ ಆಗಲೆಂದು ಗುರುವಿಗೆ ಪೇಳಿ, ಮರಳಿ ಪಿತೃವಿನ ಬಳಿಗೆ ಬಂದು ಈ ವೃತ್ತಾಂತಮಂ ಪೇಳ್ವ, ಆತನಿಂ ಅನುಜ್ಞಾತೆಯಾಗಿ ಧೈರ್ಯದಿಂ ಸಾಕ್ಷಾನ್ಮಾಯೆಯಂತೆ ಪೊರಮಟ್ಟು ಮಾರ್ಗದಲ್ಲಿ ಕಂಡಕಂಡವರಂ ಮೋಹಾಸಕ್ತರನ್ಮಾಡಿ, ಆವ ಸ್ಥಳದಲ್ಲಿ ಕಾಶ್ಯಪನಿರುವನೋ, ಅಲ್ಲಿಗೆ ಪೋಗಿ, ಚಿತ್ರದಿಂದಲಂಕೃತಮಾದ ಮಹೋನ್ನತ ಮಂಟಪಂಗಳಂ, ನಡೆಭಾವಿಗಳಂ ಕೂಪಂಗಳಂ ಅತ್ಯುನ್ನತಂಗಳಾದ ವೃಕ್ಷಂಗಳಂ ಸಂಜಾತಪುಷ್ಪಂಗಳುಳ್ಳ ಉದ್ಯಾನವನಂಗಳಂ ಕ್ಷಣದಿಂ ತನ್ನ ಮಾಯೆಯಿಂ ನಿರ್ಮಿಸಿದಳು. ಅನಂತರದಲ್ಲಿ ಕಾಶ್ಯಪಮುನಿಯು ಈ ಪ್ರಕಾರಮಾದ ಸರ್ವಮಂ ನೋಡಿ, ಆಗ ಇದೇನು ವಿಚಿತ್ರವು? ಮಂಟಪ ಮೊದಲಾದವು ಬ್ರಹ್ಮನಿಂ ವಿಷ್ಣುವಿನಿಂ ಇವರ್ಗನ್ಯಮಾದ ದೇವತೆಯಿಂ ನಿರ್ಮಿಸಲ್ಪಟ್ಟುದು, ಎಂದು ಚಿಂತಿಸಿ ಸಮಸ್ತ ಕಡೆಯಲ್ಲಿಯುಂ ನೋಡುತಿರಲಾಗಿ, ಪರ್ವತಾಗ್ರದಲ್ಲಿ ರಮಣೀಯಮಾದ ಶರೀರಮುಳ್ಳ ಆಕೆಯಂ ನೋಡಿ ಮನ್ಮಥನ ನಿಧಿಯಂತಿರುತಿರ್ಪ ಆ ಮಾಯೆಯ ಸಮೀಪವನ್ನೈದಿ ಮನೋಹರಮಾದ ಸ್ವರವುಳ್ಳ ಪ್ರೀತಿಯುಕ್ತಮಾದ ಈ ವಚನಮಂ ಪೇಳ್ದನು. ಎಲೆ ಸರ್ವಾಂಗಸುಂದರಿಯೆ? ನೀನಾರು? ಏಕಾಂಗಿಯಾಗಿರುತಿದ್ದೀಯೇ? ನಿನ್ನ ಪೆಸರಾವುದು? ನೀನಾರ ಮಗಳು? ನಿನ್ನ ದೇಶವಾವುದು? ಈಗ ಆವ ದಿಕ್ಕಿನಿಂ ಬಂದಿ? ಪೇಳೆಂದು ನುಡಿದ ವಾಕ್ಯಮಂ ಆ ಮಾಯಾದೇವಿಯು ಕೇಳ್ದು, ಎಲೈ ಋಷಿಯೆ! ನಾನು ಓರ್ವ ಸ್ತ್ರೀಯು, ಏಕಾಕಿಯಾಗಿ ಈ ಪರ್ವತದಲ್ಲಿ ಘೇನೆ, ತಪಸ್ವಿಗಳ್ಗೆ ಹೀಗಿರುವುದೇ ಯೋಗ್ಯವು, ನಿನ್ನೊಡನೆ ನಮಗೇನು ಮಾತಿರುವುದು. ಮೇರು ಸಮೀಪಮಂ ಬಿಟ್ಟು ಇಲ್ಲಿಗೆ ಗಂಗಾಸ್ನಾನಾರ್ಥಮಾಗಿ ಬಂದೆನು. ನನ್ನ ಮನದೊಳಿರುವುದಕ್ಕೋಸ್ಕರವೇ ನಾನು ಪೋಗುತ್ತಿದ್ದೇನೆ, ನೀನಿಲ್ಲಿರೆಂದು ನುಡಿದಳು.

ಬಳಿಕ ಕಾಶ್ಯಪಮುನಿಯು, ಎಲೌ ವರಾಂಗಿಯೆ! ಇಲ್ಲಿಗೆ ಗಂಗೆಯುಂ ಮಹತ್ತರವಾದ ಮಹಾದೇವನ ಸ್ಥಾನಂಗಳುಂ ಮಹಾ ತೀರ್ಥಂಗಳುಂ ಅಮರತ್ವವನ್ನೀಯುವ ಅದ್ಭುತಮಾದ ಅಮೃತಮುಂ ನನ್ನಿಂದೈದಿಸಲ್ಪಡುವವು ನಿನಗೆ ಪುತ್ರರಂ ದಿವ್ಯಸ್ತ್ರೀ ಪರಿಚಾರಕರಂ ಕೊಡುವೆನು. ಮನೋಹರವಾದ ರಹಸ್ಯಸ್ಥಾನದಲ್ಲಿ ನನ್ನನ್ನಂಗೀಕರಿಸು. ಎಂದು ನುಡಿಯಲಾಗಿ, ವಿಚಿತ್ರಾಂಗಿಯಾದ ಮಾಯಾದೇವಿಯು ಪುಸಿನಗೆ ಯುಕ್ತಮಾದ ಮುಖಾಂಬುಜ ಉಳ್ಳವಳಾಗಿ ಆಗ ಶೀಘ್ರದಿಂ ಮಿಂಚಿನಂತೆ ಅಂತರ್ಧಾನಳಾದಳು. ಆ ಸಮಯದೊಳು ತಪಸ್ವಿಶ್ರೇಷ್ಠನಾದ ಕಾಶ್ಯಪನು ಆಕೆ ಯಂತರ್ಧಾನಳಾದ ಬಳಿಕ ಅತ್ಯಂತ ಮೋಹಾ

ಸಕ್ತನಾದ ಮನಸ್ಸುಳ್ಳವನಾಗಿ ಚಿರಕಾಲವು ನೆಲದಲ್ಲಿ ಬಿದ್ದು ಕಾಮದಿಂ ಹತನಾದ ಜನವು ಆವ ಪ್ರಕಾರದಲ್ಲಿ ದುಃಖಿಸುವುದೋ ಆ ಪ್ರಕಾರದಲ್ಲಿ ಮಹಾ ದುಃಖಾರ್ತನಾಗಿ ಪ್ರಲಾಪಿಸಿದನು. ಆಗ ಮಾಯಾದೇವಿಯು ಆ ರೀತಿಯಾದ ಆ ಋಷಿಯಂ ಕಂಡು, ಮರಳಿ ಕ್ಷಣಮಾತ್ರದಲ್ಲಿ ಪ್ರಭೆಯಿಂದಾವಿರ್ಭವಿಸಲಾಗಿ ಮತ್ತಂ ಮೋಹಯುಕ್ತನಾದ ಋಷಿಯು ಆಕೆಯಂ ಕಂಡು ದರಿದ್ರನು ದ್ರವ್ಯಮಂ ಪಡೆದು ಸಂತೋಷಿಸುವಂತೆ ಸಂತೋಷಿಸಿ ಪುಳಿನಗೆಯುಳ್ಳವನಾಗಿ ಆ ಸಂತೋಷಾತಿಶಯದಿಂದ ವಿಧವಿಧವಾಗಿ ನರ್ತನಮಂ ಮಾಡಿ ಆ ದೇವಿಯ ಪಾದಂಗಳ್ಗೆ ನಮಿಸಿದವನಾಗಲು, ಆ ಮಾಯಾದೇವಿಯು ಕಾಮಾತುರನಾದ ಆ ಕಶ್ಯಪಋಷಿಯಂ ನೋಡಿಯಿಂತೆಂದಳು. ಎಲೈ ಕಾಶ್ಯಪನೆ! ಈಗ ನನ್ನಿಂ ಅದ್ಭುತ ಮಾಗಿ ಆವಾವ ರೂಪ ವೆತ್ತಲ್ಪಡುತ್ತಿರುವುದೋ ಆಯಾ ರೂಪವಂ ಧರಿಸಲು ಸಮರ್ಥನಾದೊಡೆನ್ನನು ರಮಿಸೆಂದು ಪೇಳ್ದಳು. ಬಳಿಕ ಯೋಗಿಶ್ರೇಷ್ಠನಾದ ಕಾಶ್ಯಪನು ಕಾಮರೂಪವಂ ಧರಿಸಿ ಅಡಿಗಡಿಗೆ ಸ್ಮರನಿಂ ನೊಂದವನಾಗಿ ರಮ್ಯ ಮಾದ ವಿಜನಮಪ್ಪ ಒಂದಾನೊಂದು ಮಂಟಪದಲ್ಲಿ ಈ ಪ್ರಕಾರವಾಗಿ ನುಡಿದ ಮನೋಹರೆಯಾಗಿರುವ ಆಕೆಯಂ ರಮಿಸಿದನು. ಆಗ ರಾತ್ರಿಯ ಪ್ರಥಮ ಯಾಮದಲ್ಲಿ ದುರ್ಹತನಾದ ದೈತ್ಯಶ್ರೇಷ್ಠನಾದ ಶೂರನೆಂಬ ಪೆಸರುಳ್ಳ ದೈತ್ಯನು ಪುಟ್ಟಿದನು. ಮತ್ತಮವರುಗಳ ಸ್ವೇದಾಂಬುಗಳಿಂ ಮೂವತ್ತು ಸಾವಿರ ವಾಹಿನಿಗಳು ಪುಟ್ಟಿದವು ಮರಳಿ ಅವರೀರ್ವರು ಸಿಂಹರೂಪಮಂಧರಿಸಿ ಒಂದಾನೊಂದು ಮಂಟಪದಲ್ಲಿ ಕ್ರೀಡಿಸುತಿರಲು, ಆಗ ರಜನಿಯ ದ್ವಿತೀಯ ಯಾಮದಲ್ಲಿ ಅರಿಘಾತಮಾದ ನಾಲ್ವತ್ತು ಸಾವಿರ ಸಂಖ್ಯೆಯುಳ್ಳ ವಾಹಿನಿಯುದ್ಭವಿಸಿತು. ಬಳಿಕ ಅವರೀರ್ವರು ಗಜರೂಪದಿಂ ಮರಳಿ ಕ್ರೀಡಿಸುತ್ತಿರಲಾಗಿ, ಆಗ ನಿಶಿಯ ತೃತೀಯ ಯಾಮದೊಳು ಮನೋಹರನಾದ ತಾರಕನೆಂಬ ದೈತ್ಯೇಂದ್ರನು ಗಜಮುಖನಾಗಿ ಜನಿಸಿದನು. ಮತ್ತಮವರೀರ್ವರ ಬೆವರ್ವನಿಗಳಿಂ ಗಜರೂಪ ಮಾದ ನಾಲ್ವತ್ತು ಸಾಹಸ್ರ ವಾಹಿನಿ ಯುದ್ಭವಿಸಿತು. ಬಳಿಕ ಆ ರಾತ್ರಿಯ ನಾಲ್ಕನೆ ಯಾಮದಲ್ಲಿ ಮರಳಿ ಅವರೀರ್ವರು ಅಜರೂಪಮಂ ಧರಿಸಿ, ವಿಚಿತ್ರ ಮಾದ ಮಂಟಪದಲ್ಲಿ ಕ್ರೀಡಿಸುತ್ತಿರುವಾಗ, ಅಜಮುಖಿಯೆಂಬ ದೈತ್ಯಕನ್ಯೆಯು ಪುಟ್ಟಿದಳು. ಮತ್ತು ಅವರ ಸ್ವೇದಬಿಂದು ಜನ್ಯಮಾದ ಅಜರೂಪಮಾದ ನಾಲ್ವತ್ತು ಸಾವಿರ ವಾಹಿನಿಯು ಜನಿಸಿತು. ಇದಲ್ಲದೆ ಮಂಟಪ ಮಂಟಪದಲ್ಲಿ ಅಡಿಗಡಿಗೆ ಅವರೀರ್ವರುಂ "ತರಕ್ಷು, ವ್ಯಾಘ್ರ, ಮೃಗ, ಗೋ, ಭಲ್ಲೂಕ, ಗೋಮಾಯು" ಎಂಬಿವು ಮೊದಲಾದ ಮೃಗರೂಪಂಗಳಂ ಧರಿಸಿ ಕ್ರೀಡಿಸುತ್ತಿರಲಾಗಿ ಅರವತ್ತು ಸಾವಿರ ವಾಹಿಗನಿಗಳು ಜನಿಸಿದವು. ಆಗ ಆಯಾ

ರೂಪದಿಂ ದೆರಡು ಲಕ್ಷ ಗಣಿತವಾದ ಅಸುರರಂ ಮತ್ತೆ ಶೂರಪದ್ಮ, ಸಿಂಹ ವಕ್ತ್ರ, ತಾರಕರಂ, ಅಜಮುಖಿಯಂ ಸಹ ನಿರೀಕ್ಷಿಸಿ ವಿಸ್ಮಯದಿಂ ವಿಕಸಿತ ಹೃದಯವುಳ್ಳವರಾಗಿ ಕ್ಷಣದಿಂ ಸ್ವಕೀಯವಾದ ರೂಪಮಂ ಧರಿಸಿದರು. ಆಗ ಮಹಾ ಅಸುರನಾದ ಶೂರಪದ್ಮನು ಮಾತಾಪಿತೃಗಳಿಗೆ ನಮಸ್ಕಾರಮಂಮಾಡಿ ಎಲೈ ತಾಯಿ ತಂದೆಗಳಿರಾ! ನಮಗೇನುಕಾರ್ಯವು ? ಸರ್ವಮಂ ಯಥಾಪ್ರಕಾರ ಮಾಗಿ ಪೇಳಿ, ಮಾತೃವಿಗೆ ಏನು ಸಮ್ಮತವೋ ಎಂದು ನುಡಿಯುತ್ತ ಅಲ್ಲಿ ನಿಂದಿರ್ದನು. ಬಳಿಕ ಕಾಶ್ಯಪನು ಅವನಂ ನೋಡಿ, ಎಲೈ ಮಕ್ಕಳಿರಾ! ನನ್ನ ಮನದಲ್ಲಿರುವಂಥಾದ್ದನ್ನು ಪೇಳ್ವೆನು ಕೇಳು, ಸಾರ್ವಕಾಲವು ಜಿತೇಂದ್ರಿಯ ರಾದ ನಿಮ್ಮಿಂದ ತಪವು ಮಾಡಲು ಯೋಗ್ಯವು, ಪೂರ್ವದಲ್ಲಿ ದೇವತೆಗಳು ತಪಸ್ಸಿನಿಂದ ದೇವತ್ವಮಂ ಪಡೆದರು. ಹಾಗೆಯೆ ಕೆಲ ಋಷಿಗಳುಂ ಜೀವ ನ್ಮುಕ್ತಿಯನ್ನೈದಿದರಲ್ಲವೆ? ತ್ರಿಪದಾರ್ಥದ ಜ್ಞಾನವಂ ಮುಖ್ಯವಾಗಿ ಸಂಪಾ ದಿಸಬೇಕು. ಆ ಜ್ಞಾನದಿಂ ಶಿವಸ್ವರೂಪವಾದ ಶಿವಪ್ರಾಪ್ತಿ ಯುಂಟಾದೀತು. ಸರ್ವಪ್ರಕಾರದಿಂ ಪಾಪನಾಶಕ್ಕೋಸುಗ ಧರ್ಮವಮಾಡಲು ಯೋಗ್ಯವೆಂದು ಈ ಪ್ರಕಾರವಾಗಿ ನಿಮ್ಮಿಂದ ಪೇಳಲ್ಪಟ್ಟ ಗುಣಯುಕ್ತರಾದ ನಿಮ್ಮಿಂ ಶಂಭು ವಿನ ಈ ಅನುಗ್ರಹವು ನಿಮ್ಮಿಂ ಹೊದ್ದಲ್ಪಟ್ಟಿತು. ಈ ಅರ್ಥದಲ್ಲಿ ಸಂಶಯ ಮಿಲ್ಲವು, ಶಂಭುವಿನ ಅನುಗ್ರಹದಲ್ಲಿ ಇಹಪರದೊಳು ಸಿದ್ಧಿಯುಂಟಾದೀತೆಂದು ನಿರೂಪಿಸಿದ ನೆಂಬದಾಗಿ ಸೂತಂ ಶೌನಕಾದಿ ಮುನಿಗಳ್ಗೆ ಪೇಳಿದನೆಂಬಲ್ಲಿಗೆ

ಶ್ರೀ ಕೃಷ್ಣರಾಜ ವಾಣೀವಿಲಾಸಮೆಂಬ ಶಂಕರಸಂಹಿತೆಯ ಶಿವರಹಸ್ಯಖಂಡ
ದೊಳು ಆಸುರಕಾಂಡದೋಳ್ ಮೊದಲನೆಯ ಅಧ್ಯಾಯವು
ಸಂಪೂರ್ಣಂ.

ಎರಡನೆಯ ಅಧ್ಯಾಯವು.

ಕಶ್ಯಪನ ತಪಸ್ಸು, ಮಾಯಾದೇವಿಯ ಅಂತರ್ಧಾನ, ಶೂರಪದ್ಮನ ಯಾಗ ಸಮಾರಂಭ.

ಎಲೈ ಪುತ್ರರಿರಾ! ಹರಿಬ್ರಹ್ಮೇಂದ್ರ ಪ್ರಮುಖರಾದ ಸುರೋತ್ತಮರು ತಪದಿಂ ಶಿವಾನುಗ್ರಹಮಂ ಪಡೆದು ತಮ್ಮತಮ್ಮ ಸ್ಥಾನಂಗಳನ್ನೈದಿದರು. ಪೂರ್ವ ದಲ್ಲಿ ಕೆಲಬರಾದ ಋಷಿಗಳು ಅತಿ ಕಠಿಣವಾದ ತಪಮನಾಚರಿಸಿ, ಶಂಭುವಿನ ಅನುಗ್ರಹಮಂ ಪಡೆದು ಧೃವಮಪ್ಪ ಅಭೀಷ್ಟಮನ್ನೈದಿದರು. ಅದುಕಾರಣ ದೆಸೆಯಿಂದ ಸರ್ವಪ್ರಯತ್ನದಿಂ ನೀವು ಶಿವಂಗೆ ಸಂತೋಷವಂ ಮಾಡಿ, ಇಹ ಪರದಲ್ಲಿ ಭುಕ್ತಿಮುಕ್ತಿಗಳಂ ಸಂಪಾದಿಸಿರಿ, ಈ ವಿಷಯದಲ್ಲಿ ಪುಣ್ಯವಾದ

ಕಥೆಯಂ ಪೇಳ್ವೆನು ಕೇಳುವರಾಗಿ? ಏನೆಂದರೆ, ಪೂರ್ವಕಾಲದಲ್ಲಿ ಕುತ್ಸನೆಂಬ ಋಷಿಯು ಮೃತೆಯಾದ ಕನ್ನಿಕೆಯಂ ತಪೋಮಹಿಮೆಯಿಂ ಕ್ಷಣದಿಂ ನಿದ್ರೆತಿಳಿದೆದ್ದವರಂತೆ ಮರಳಿ ಜೀವಿಸುವಂತೆಮಾಡಿದನು, ಹಾಗೆ ಮತ್ತೊಂದು ಕಥೆಯಲ್ಲಿ ಗಜಕ್ಕೆ ದೇವತ್ವಮಂ ಕೊಟ್ಟನು; ಹೀಗೆ ತಪೋಮಹಿಮೆಯಿಂ ಮೃಕಂಡುವಂ ಪೆತ್ತನು. ಹಾಗೆ ಮೃಕಂಡು ಋಷಿಯು ಶ್ರೇಷ್ಠಮಾದ ತಪಸ್ಸಿನಿಂ ಹರಿಬ್ರಹ್ಮೇಂದ್ರ ಪೂಜಿತನಾದ ಮಾರ್ಕಂಡೇಯನೆಂಬ ಪುತ್ರನಂ ಮುದದಿಂ ಪಡೆದನು. ಆ ಮಾರ್ಕಂಡೇಯನು ಪರಮೇಶ್ವರನ ಪ್ರಸನ್ನತೆಯಂ ಪಡೆದು ಮೃತ್ಯುವಂ ಜಯಿಸಿ ಸ್ವಾಮಿಯ ನಿತ್ಯಪದವನ್ನೈದಿದನಲ್ಲವೆ, ಎಂದು ಮುನಿಶ್ರೇಷ್ಠನಾದ ಕಾಶ್ಯಪಮುನಿಯು ಪುತ್ರರಿಗೆ ಪೇಳ್ದು ತೂಷ್ಣೀಂಭಾವವನ್ನೈದಿದನು. ಅನಂತರದಲ್ಲಿ ಮಾಯಾದೇವಿಯು ಪುತ್ರರಂ ನೋಡಿ, ಎಲೈ ಕುಮಾರರಿರಾ! ತಪಸ್ವಿಗಳ್ಗೆ ಶ್ರೇಷ್ಠನಾದ ನಿಮ್ಮ ತಂದೆಯು ಪೇಳ್ದ ವಾಕ್ಯವು ಮಹಾ ಯೋಗಿಗಳ್ಗೆ ಯುಕ್ತವೇಸರಿ, ಆದರೆ ಐಶ್ವರ್ಯ, ಶೌರ್ಯ, ಆಯುಸ್ಸು, ಯಶಸ್ಸು, ಪ್ರಭುತ್ವವು, ಪೌರುಷವು ಎಂಬಿವುಗಳ್ಗೆ ಆಶ್ರಯರಾದ ನಿಮ್ಮಿಂದ ಆರ್ಜಿಸಲು ಯೋಗ್ಯವು. ಅದುಕಾರಣದಿಂ ಭೂಮಿಯ ಉತ್ತರಭಾಗದೊಳು ವಟದ್ವೀಪವೆಂದು ಖ್ಯಾತವಪ್ಪ ಮಹಾಕ್ಷೇತ್ರವಿರುವದು, ನೀವಲ್ಲಿಗೆಪೋಗಿ ಈಶ್ವರಪ್ರೀತಿಗೋಸುಗ ವೀರಯಾಗಮಂ ಮಾಡಿ ಆ ಯಾಗಕ್ಕೆ ಯಜಮಾನ ದ್ರವ್ಯಂಗಳ ಅಪೇಕ್ಷೆಯಂಮಾಡು ಅವುಗಳಂ ನಾನು ಕೊಡುತ್ತೇನೆ. ಆ ಯಜ್ಞದಲ್ಲಿ ಗೌರೀಶನು ಪ್ರಸನ್ನನಾದೊಡೆ ನನ್ನಿಂ ಪೇಳಲ್ಪಟ್ಟ ಸಮಸ್ತಮಂ ಪಡೆಯಿರೆಂದು ಪೇಳ್ದು, ತಂತ್ರಭೇದಂಗಳಂ ಮಂತ್ರಂಗಳಂ ಸಹ ಉಪದೇಶಿಸಿ, ಅವರಂ ಕಳುಹಿ ಮರಳಿ ಋಷಿಯಂನೋಡಿ, ಎಲೈ ಋಷಿಯೆ! ಮಾಯೆಯೆಂದು ಪೆಸರು ಪುತ್ರಕಾಂಕ್ಷೆಯಿಂ ನಿನ್ನನ್ನೈದಿದೆನು, ನಿನ್ನಿಂದೆನ್ನಲ್ಲಿ ಮಹಾ ಪರಾಕ್ರಮಶಾಲಿಗಳಾದ ಈ ಕುಮಾರರಾವಿರ್ಭವಿಸಿದರು. ನಾನು ಮರಳಿ ತಪವನಾಚರಿಸಲು ತೆರಳುವೆನೆಂದು ನುಡಿದು ಕ್ಷಣದಿಂ ಯ್ಯೆದಿದಳು. ಅನಂತರವಲ್ಲಿ ಕಾಶ್ಯಪನೆಂಬ ಋಷಿಯು ಆಕೆಯು ತೆರಳಿದ ಬಳಿಕ ಆಕೆಯಂ ಕಾಣದೆ, ಮೂಢಜನದಂತೆ ಅತ್ಯಂತ ದುಃಖಾರ್ತನಾಗಿ ಪ್ರಲಾಪಿಸಿದನು. ಆಗ ಬ್ರಹ್ಮನು ಈತನಿರುವ ಸ್ಥಳಕ್ಕೆ ತಾನೇ ಬಂದು, ಆರೀತಿಯಾಗಿರುವ ಆತನಂ ನೋಡಿ, ಎಲೈ ಕಾಶ್ಯಪನೆ! ಇಲ್ಲಿ ನೀನೀಗ ಮಹಾಮೂಢನಂತೆ ವ್ಯರ್ಥವಾಗಿ ರೋದನಮಂ ಮಾಡುತಿದ್ದಿ, ಈ ರೋದನಮಂ ಬಿಟ್ಟು ನನ್ನಾಜ್ಞೆಯಿಂ ಸುಖಿಯಾಗಿರು. ಆ ದೋಷಶಾಂತಿಗೋಸುಗ ಮಹೇಶ್ವರನಂ ಕುರಿತು ಪಾಪಸಮೂಹನಾಶಕಮಾದ ತೀವ್ರಮಾದ ತಪಮನಾಚರಿಸೆಂದು ಪೇಳ್ದು ಅಂತರ್ಧಾನಮನ್ನೈದಿದನು.

ಅನಂತರದಲ್ಲಿ ಕಾಶ್ಯಪನು ತಪಮನಾಚರಿಸಲು ತನ್ನ ಆಶ್ರಮಕ್ಕೆ ಪೋದನು ಆಗ ಅಲ್ಲಿ ಮಾಯೆಯಿಂ ಮಾಡಿದ ಮಂಟಪಗಳು ತತ್‌ಕ್ಷಣದಲ್ಲಿಯೇ ಅದೃಶ್ಯಮನೈದಿತು. ಈತನು ಪೂರ್ವದಲ್ಲಿದ್ದಂತೆ ಗೋಡೆಗಳನ್ನೇ ಕಂಡನು. ಎಲೈ ಮಹಾಸೇನನೆ! ತದನಂತರದಲ್ಲಿ ಶೂರಪದ್ಮನು ಪರಮೇಶ್ವರನ ಪ್ರೀತಿಗೋಸುಗ ತನ್ನ ಒಡಹುಟ್ಟಿದವರೊಡನೆ ಯಾಗಮಂ ಮಾಡಲು ಪೊರಮಟ್ಟು, ಮಾರ್ಗಮಧ್ಯದಲ್ಲಿ ದೈವವಶದಿಂ ದೈತ್ಯಗುರು ಬಂದನು. ಆ ಶುಕ್ರನು ಅತ್ಯಂತ ಭಯಂಕರರಾದ ಆ ದೈತ್ಯರಂ ಕಂಡು ಭೀತಿಪಟ್ಟು, ಅವರಂ ವಶೀಕೃತರಂ ಮಾಡಿಕೊಳ್ಳಲು ವಶ್ಯಮಂತ್ರಮಂ ಜಪಿಸಿ, ಶೂರಪದ್ಮನ ಸಮಿಪಕ್ಕೆ ಪೋಗಿ ತಾನು ಗುರುವೆಂದು ಪೇಳ್ದನು. ಬಳಿಕ ಅಸುರಶ್ರೇಷ್ಠನಾದ ಆ ಶೂರಪದ್ಮನು ಆ ಗುರುವಿನ ಪಾದಂಗಳ್ಗೆ ನಮಿಸಿ ವಿನಯದಿಂ ನಿಂದಿರಲಾಗಿ, ಶುಕ್ರನು ದೈತ್ಯಶ್ರೇಷ್ಠನಿಗೋಸುಗ ಯಾಗ ವಿಘ್ನ ನಾಶಾರ್ಥಮಾಗಿ ಶಿವಮಂತ್ರಮಂ ಉಪದೇಶಿಸಿ ಕ್ಷಣದಿಂ ಪೋದನು. ಸೇನಾಯುಕ್ತನಾದ ಶೂರಪದ್ಮನು ತನ್ನ ಅನುಜನು ಸಹ ವಟದ್ವೀಪಕ್ಕೆ ಶೀಘ್ರದಿಂ ಪೋಗಿ, ಅಲ್ಲಿ ಶತ ಸಹಸ್ರಯೋಜನಮಾದ ಪರ್ವತಗಳನ್ನೆ ಪ್ರಾಕಾರಮಾಗಿ ಉಳ್ಳದ್ದಾಗಿ ಯಾಗಶಾಲೆಯಂ ನಿರ್ಮಿಸಿ, ಸರ್ವಾಯುಧದಿಂ ಭಯಂಕರಮಾದ ಸೇನೆಯಂ ಆ ಯಜ್ಞಶಾಲೆಯ ಸುತ್ತಲು ಕಾವಲಾಗಿರಿಸಿ, ಅದರ ಮಧ್ಯದಲ್ಲಿ ಸಾವಿರ ಯೋಜನದಗಲಮಾದ ಆಳವುಳ್ಳದ್ದಾಗಿ ಅಗ್ನಿಕುಂಡಮಂ ರಚಿಸಿ, ಆ ಕುಂಡದ ಸುತ್ತಲುಂ ನೂರೆಂಟು ಕುಂಡಂಗಳಂ ಹಾಗೆಯೆ ಮಾಡಿ, ಅವುಗಳಂ ಬಳಸಿ ಸಾವಿರದೆಂಟು ಕುಂಡಂಗಳಂ ಹಾಗೆ ನಿರ್ಮಾಣಮಂ ಮಾಡಿ, ಪ್ರಧಾನ ಕುಂಡದಲ್ಲಿ ತಾನೆ ಹೋಮಮಂ ಮಾಡಲು ಸಮಿಪಕ್ಕೆ ಪೋಗಿ, ಅದರಲ್ಲಿ ಭೂಮಿಯಂ ಪ್ರೋಕ್ಷಣಂಗೈದು, ಘೋರಮಾದ ಪಾತಾಳ ಭೂತಂಗಳಂ ಉಚ್ಚಾಟನೆಯಂ ಮಾಡಿದನು. ಆಮೇಲೆ ಮಾಯಾದೇವಿಯು ಅಂಡಮಧ್ಯದಲ್ಲಿಪ “ ಅರ್ಕ, ಅಳರ್ಕ, ಅಪಾಮಾರ್ಗ, ಪಲಾಶ, ನಿಂಬ, ಪ್ಲಕ್ಷ, ತಿಂತ್ರಿಣಿ, ಭೂವಪಾನ, ವಿಷವೃಕ್ಷ” ಎಂಬಿವುಗಳು ಮೊದಲಾದವುಗಳ ಸಮಿತ್ತುಗಳಂ ಬಹುವಾದ ಕ್ಷೀರ, ಆಜ್ಯ, ದಧಿತೈಲ, ಮಧುಗಳಂ ಆಢಕ ಮುದ್ಗ ಮಾಷ ತಿಲಕುಳುತ್ಥ ಸರ್ಷಪ ತಂಡುಲ ವ್ರೀಹಿಗಳಂ, ಗೋಧಾಗಮಹಿಷ ಪ್ರಮುಖಂಗಳಾದ ಶತಸಹಸ್ರಮಂ ಅನೇಕ ರುಧಿರಮಾಂಸಂಗಳಂ ಕಸ್ತೂರಿವೆರಸಿದ ಕರ್ಪೂರಚಂದನಮಂ, ವಿಚಿತ್ರಮಾದ ಸುಗಂಧಮುಳ್ಳ ಅನೇಕ ಪುಷ್ಪಂಗಳಂ ದರ್ಭೆಗಳಂ ಖುಹೂಯೆಂಬ ಪಾತ್ರೆಗಳಂ ಪರಿಸ್ತರಣಮಂ ಅರಣಿಯುಂ ಈ ಸಮಸ್ತಮಾದ ಯಾಗೋಪಕರಣಂಗಳಂ, ಮೂರು ಸಹಸ್ರಯೋಜನ ಉನ್ನತಮಾಗಿ ತಂದಿರಿಸಿದಳು. ಆ ಮೇಲೆ ಈ ಶೂರಪದ್ಮನು ದುರ್ಗಾದೇವಿ ಭೈರವ ಭದ್ರಕಾಳಿ, ಭೂತಪ್ರೇತ

ಪಿಶಾಚ ಡಾಕಿನೀ ಸಮೂಹ ಚಾಮುಂಡಿ ಎಂಬೀ ದೇವತೆಗಳಂ ದಿಕ್ಕುಗಳಂ ಪೂಜಿಸಿ, ಅರಣಿಯಂ ಮಥಿಸಿ ಅದರಿಂದುತ್ಪನ್ನವಾದ ಅಗ್ನಿಯಂ ಕುಂಡದಲ್ಲಿರಿಸಿ, ಘೃತಂಗಳಿಂ ಜ್ವಾಲೆಯಂ ಮಾಡಿ, ಕುಂಡಮಧ್ಯದಲ್ಲಿ ವಜ್ರಸ್ತಂಭವನ್ನಿಟ್ಟು ಶಿವ ಪ್ರೀತಿಗೋಸುಗ ದಶಸಹಸ್ರ ವರ್ಷಂಗಳು, ಅಧಿಕ ತಿಲಮಾಂಸ ಆಜ್ಯಂಗಳ ಹೋಮವಂ ಮಾಡಿದನು. ಮತ್ತಂ ಸಿಂಹಮುಖನು ಪ್ರಧಾನಕುಂಡಮಂ ಬಳಸಿರುತಿರ್ಪ ಅಷ್ಟೋತ್ತರ ಶತಕುಂಡಂಗಳಲ್ಲಿ ಹೋಮವಂ ಮಾಡಿದನು. ಬಳಿಕ ಮಹಾ ವೀರ್ಯ ಪರಾಕ್ರಮುಂಗಳುಳ್ಳ ತಾರಕನು ಆ ಅಷ್ಟೋತ್ತರ ಶತಕುಂಡಂಗಳಂ ಬಳಸಿರುತಿರ್ಪ ಅಷ್ಟೋತ್ತರ ಸಹಸ್ರ ಕುಂಡಂಗಳಲ್ಲಿ ಹೋಮಮಂ ಮಾಡಿದನು. ಈ ಪ್ರಕಾರವಾಗಿ ಯಾಗವಂ ಮಾಡಿದೊಡಂ ಮಹಾದೇವನು ಪ್ರಸನ್ನನಾಗಲಿಲ್ಲ. ಆಮೇಲೆ ಶೂರಪದ್ಮನು ಕೃದ್ಧನಾಗಿ ಮೇಲಕ್ಕೆ ನೆಗೆದು ಗಗನದಲ್ಲಿ ಸಹಸ್ರವರ್ಷವಿದ್ದು, ತನ್ನ ಶರೀರಮಂ ಖಂಡಖಂಡವಾಗಿ ಛೇದಿಸಿ ಮನದಿಂ ಸದಾಶಿವನಂ ಸ್ಮರಿಸುತ್ತ ರಕ್ತಮಾಂಸಂಗಳಿಂ ಹೋಮವಂ ಮಾಡಿದನು. ಈರೀತಿ ಮಾಡಿದರು ಭಗವಂತನಾದ ಪರಮೇಶ್ವರನು ಪ್ರಸನ್ನನಾಗದಿರಲಾಗಿ, ಮರಳಿ ಶೂರಪದ್ಮನು ಶೀಘ್ರದಿಂದೂರ್ಧ್ವವಾಗಿ ನೆಗೆದು ವಜ್ರಸ್ತಂಭದಮೇಲೆ ಬಿದ್ದು, ಆ ವಜ್ರಸ್ತಂಭಮೂಲಪರ್ಯಂತರವೈದಿ ಮಧ್ಯದಲ್ಲಿ ಪ್ರಾಣಂಗಳಂ ಬಿಟ್ಟನು. ಆಬಳಿಕ ದೈತ್ಯರ ಸಂಬಂಧವಾದ ಹಾಹಾ! ಎಂಬ ಮಹತ್ತಾದ ಶೋಕಧ್ವನಿಯು ಪುಟ್ಟಿತು. ಆಗ ದೇವತೆಗಳಿಗೆ ಮಹಾ ಹರುಷಮುಂಟಾದುದು. ಅನಂತರದಲ್ಲಿ ಸಿಂಹಮುಖನು ತನ್ನ ಶಿರಸ್ಸುಗಳಂ ಛೇದಿಸಿ ಹೋಮವಂ ಮಾಡಿದನು. ಆದರೂ ಮರಳಿ ಮರಳಿ ಉತ್ಪನ್ನವಾದ ಶಿರಸ್ಸುಗಳಂ ಛೇದಿಸಿ ಛೇದಿಸಿ ಕುಂಡಮಧ್ಯದಲ್ಲಿ ಹಾಕಿದನು. ಮತ್ತಂ ತಾರಕನು ಮಹಾ ಬಲಶಾಲಿಗಳಾದ ಅನ್ಯರಾದ ದೈತ್ಯರುಗಳೊಡನೆ ಅಗ್ನಿಯಲ್ಲಿ ಬಿದ್ದನು. ಹಾಗಾದರುಂ ಸ್ವಾಮಿಯು ಪ್ರಸನ್ನನಾಗದಿರಲು, ಸಿಂಹವಕ್ತ್ರನು ಅಲ್ಲಿಯೇ ಪ್ರಾಣಂಗಳಂ ಬಿಡಲಿಚ್ಛೈಸಿ, ಬ್ರಹ್ಮಾಂಡಾದಿ ಭಿತ್ತಿಪರ್ಯಂತ ಊರ್ಧ್ವವಾಗಿ ಅಗ್ನಿಜ್ವಾಲೆಯಂ ಪೆರ್ಚಿಸಿ, ಹಾಗೆ ಪೃಥ್ವಿಯ ಅಧೋಭಾಗದಲ್ಲಿರುವ ನಾಗಲೋಕ ಜ್ವಾಲೆಯಿಂ ಬೆಂದುದು. ಆಗ ಈಶ್ವರನು ವೃದ್ಧತ್ವಮಂ ಕೈಕೊಂಡು ವಿಷ್ಣುವಿನ ಬೆನ್ನ ನಿಟ್ಟೆಲುಪೆಂಬ ದಂಡಮಂ ಪಿಡಿದು ವೇದಮಂ ಉಚ್ಚರಿಸುತ್ತ ಯೆಡಬಲಕ್ಕೆ ಯೆಡಹುತ ಯಾಗಶಾಲೆಗೆ ಬಂದು, ಸಿಂಹಮುಖನ ಸಮೀಪವನ್ನೈದಿ ಎಲೈ ದೈತ್ಯನೆ! ನೀವಾರ ಕುಮಾರರು? ನೀವು ಏನುಕಾರ್ಯವಂ ಮಾಡುತಿದ್ದೀರಿ? ಯಥಾರ್ಥವಾಗಿ ಪೇಳಿವರೆಂದು ನುಡಿದನು.

ಅನಂತರದಲ್ಲಿ ಸಿಂಹವಕ್ತ್ರನು ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಆ ವಿಪ್ರ

ವರನಂ ಕುರಿತು, ಎಲೈ ವೃದ್ಧಬ್ರಾಹ್ಮಣನೆ! ಪರಮೇಶ್ವರನ ದರ್ಶನದಿಂ ನಮ ಗೆಂತು ಸಂತೋಷವಹುದೋ, ಅಂತು ತಮ್ಮ ದರ್ಶನದಿಂ ಆನಂದ ಮುಂಟಾ ದುದು. ನಾವು ದೈತ್ಯರು, ಕಾಶ್ಯಪನ ಪುತ್ರರು, ರಾಜ್ಯಪ್ರಾಪ್ತಿಗೋಸುಗ ವೀರ ಯಾಗದಿಂ ಈಶ್ವರನಂ ಪ್ರಸನ್ನನಂ ಮಾಡಿಕೊಳ್ಳಲು ಬಂದೆವು. ಮಹಾವೀರ ನಾದೆನ್ನ ಭ್ರಾತೃವು ಮಹೇಶ್ವರನ ಪ್ರಸಾದವಿಲ್ಲದೆ ಕುಂಡಮಧ್ಯದಲ್ಲಿಹ ವಜ್ರ ಸ್ತಂಭದಲ್ಲಿ ಬಿದ್ದು ಪ್ರಾಣಂಗಳಂ ತೊರೆಕೊಂಡನು. ಅದುಕಾರಣದಿಂದೀಗ ನಾನು ದೇಹಮಂ ಬಿಡಲಿಚ್ಛೈಸಿಧೇನೆಂದು ನುಡಿಯಲಾಗಿ, ವೃದ್ಧನು ಆತನಂ ನೋಡಿ, ಎಲೆ ವೀರನೆ! ನೀನು ಮರಣವಾಗದಿರು, ನಿನ್ನ ಅಭೀಷ್ಟಮುಂಟಾದೀ ತೆಂದು ಪೇಳ್ದು, ಆಕಾಶ ಗಂಗೆಯಂ ತರಿಸಿದನು. ಆಗ ಆಕಾಶಗಂಗೆಯು ಮಹ ತ್ತಾದ ಅಪರಿಮಿತವಾದ ತೆರೆಗಳಿಂ ಪರ್ವತಂಗಳಂ, ಚನ್ನಾಗಿ ತಾಡಿಸಲ್ಪಟ್ಟ ಕಂತು ಕ್ರಿಯೆಯಂ ಮಾಡುವಂದದಿ, ಆ ಯಾಗಶಾಲೆಗೈದದ್ವಾಗಲಾಗಿ, ಆ ಗಂಗೋದಕದಿಂದ ಸಮಸ್ತವಾದ ಕುಂಡಂಗಳಲ್ಲಿರುವ ಮತ್ತೆ ಸಮಿತ್ತುಗಳಿಂ ವೃದ್ಧಿಯನ್ನೈದಿದ ಅಗ್ನಿಯು ನೆನೆಯಿತು. ಆಗ ಶೂರಪದ್ಮ ಮೊದಲಾದ ದೈತ್ಯರು ಪೂರ್ವದಂತೆ ಪ್ರಜ್ಞೆಯನ್ನೈದಿದರೆಂದು ಸೂತಂ ಶೌನಕಾದಿ ಮುನಿಗಳ್ಗೆ ಪೇಳ್ದ ನೆಂಬಲ್ಲಿಗೆ, ಆಸುರಕಾಂಡದೊಳು ಎರಡನೆಯ ಅಧ್ಯಾಯವು ಸಂಪೂರ್ಣವು.

ಮೂರನೆಯ ಅಧ್ಯಾಯವು.

ಶೂರಪದ್ಮಾದಿ ರಕ್ಕಸರಿಗೆ ಪರಶಿವನು ಪ್ರಸನ್ನನಾಗುವಿಕೆ, ವರಪ್ರದಾನ.

ಎಲೈ, ಮುನಿಗಳಿರಾ! ಅನಂತರದಲ್ಲಿ ಭಗವಂತನಾದ ಪ್ರಭುವಾದ ಕಂಕಣ ಕೇಯೂರ ಮುತ್ತಿನಸರಗಳಿಂದೊಪ್ಪುತಿರ್ಪ, ಕಪರ್ದಬದ್ಧ ಚಂದ್ರಾರ್ಧ ಸಮಾಲಂಕೃತ ಮಸ್ತಕನಾದ, ಪ್ರಕಾಶಿಸುವ ಜಡೆಗಳಲ್ಲಿರ್ಪ ಗಂಗೆಯಿಂ ದಲಂಕೃತನಾದ, ಮಂದಹಾಸದಿಂ ಪ್ರಕಾಶಿಸುವ ದಂತ ಪಂಕ್ತಿಯಿಂ ವಿರಾಜಿತನಾದ, ತ್ರಿಪುಂಡ್ರರೇಖೆಗಳಿಂ ದೇದೀಪ್ಯಮಾನನಾದ ಲಲಾಟದಿ ಸ್ಥಳಗಳಿಂ ದುಜ್ವಲನಾದ, ವಿಭೂತಿ ಭೂಷಿತ ಸರ್ವಾಂಗನಾದ, ರುದ್ರಾಕ್ಷಮಾಲೆಗಳಿಂದ ಆವೃತನಾದ, ಸಾಂಬನಾದ ಪರಮೇಶ್ವರನು, ನಾನಾವಿಧಾಲಂಕಾರಂಗಳಿಂ ಭೂಷಿತ ನಾದ ಕಿಂಕಿಣಿಯೆಂಬ ಕಿರುಘಂಟೆಗಳ ನಾದದಿಂ ಪ್ರತಿಧ್ವನಿಯಂ ಮಾಡುತಿರ್ಪ ದಿಜ್ಮುಖವುಳ್ಳದ್ದಾದ ಸರ್ವಶರೀರಕ್ಕೆ ಸಮಾನಮಪ್ಪ ಚಾರುವಾಲದಿಂ ವಿರಾಜಿತ ವಾದ ಕಂಠದಲ್ಲಿ ಜೋಲುತ ಪೊಪ್ಪುತಿರ್ಪ ಘಂಟಾನಾದದಿಂ ಪ್ರತಿಧ್ವನಿಯಂ

ಗೈಯುವ ದಿಙ್ಮುಖವುಳ್ಳದ್ದಾದ ಮಹತ್ತಾದ ಹಿಳುಲಿನಿಂ ಯುಕ್ತಮಾದ, ಬೃಹತ್ಕಂಠದಿಂ ಮನೋಹರಮಾಗಿ ದಿವ್ಯಮಾದ ವೃಷಭೇಶ್ವರನನೇರಿ; ಮಂಗಳವಾದ್ಯಗಳ್ವೆರಸಿ, ನಾನಾವಿಧ ಗಣಂಗಳಿಂದಲುಂ ಇತರಲಾದ ಹರಿಬ್ರಹ್ಮೇಂದ್ರಾದಿ ಸುರರಿಂದಲು ಆವೃತನಾಗಿ, ಅನೇಕ ದಿವ್ಯಸ್ತ್ರೀಯರಿಂ ಸೇವಿತನಾಗಿ ಪ್ರಸನ್ನನಾದನು.

ಆಗ ಶೂರಪದ್ಮನು ಮಹಾದೇವನಂ ನಿರೀಕ್ಷಿಸಿ ವಿಕಸಿತ ಲೋಚನನಾಗಿ ಭ್ರಾತೃ ಸೇನೆಗಳಿಂವೆರಸಿ, ಆ ಸ್ವಾಮಿಗೆ ನಮಸ್ಕಾರಮಂ ಮಾಡಿ ವೇದಾಂತ ವಾಕ್ಯಂಗಳಿಂ ಸ್ತುತಿಸಿದನು. ಅನಂತರದಲ್ಲಿ ಪರಮೇಶ್ವರನು ಮುಗುಳುನಗೆ ಯುಕ್ತಮಾದ ಮುಖಕಮಲವುಳ್ಳವನಾಗಿ, ಎಲೈ ಅಸುರೇಶ್ವರರುಗಳಿರಾ! ನಿಮ್ಮ ತಪಸ್ಸಿನಿಂ ಅತ್ಯಂತ ಪ್ರೀತನಾದೆನು; ಆದುದರಿಂದ ನಿಮ್ಮ ಅಭೀಷ್ಟಮಂ ಪೇಳಿದರೆ ಕೊಡುವೆನೆಂದು ನಿರೂಪಿಸಲಾಗಿ, ಶೂರಪದ್ಮನಾ ಸ್ವಾಮಿಯಂ ನೋಡಿ, ಎಲೈ ಭಗವಂತನೆ! ನಮ್ಮಿಂದ ನೀನು ಭಕ್ತಿಯಿಂ ಪೂಜಿತನಾಗಿ ಪ್ರಸನ್ನನಾದೊಡೆ; ನಮಗೆ ಅಷ್ಟೋತ್ತರ ಸಹಸ್ರಾಂಡಗಳ ಸಾರ್ವಭೌಮತ್ವಮುಂಟಾಗಲಿ; ನಾನಾರತ್ನದಿಂ ಶೋಭಿತನಾದ ಇಂದ್ರವಿಮಾನವು ಇತರಮಾದ ಸಿಹ್ಮಾಸನವೂ ನಮಗೆ ಲಭಿಸಲಿ; ಪಾಶುಪತ ಮೊದಲಾದ ದಿವ್ಯಾಸ್ತ್ರಂಗಳು ನಮಗೆ ದೊರಿಯಲಿ ಕುಂಡದಲ್ಲಿ ಬಿದ್ದು ದಹನಮಾದ ಅನೇಕ ಅಸುರರ್ಗೆ ವಜ್ರದೇಹಮುಂಟಾಗಲಿ, ಶತಕೋಟಿ ಸಹಸ್ರ ಚತುರಂಗ ಬಲವುಂಟಾಗಲಿ ಎಂದು ಬೇಡಲಾಗಿ, ಸಾಂಬ ಸದಾಶಿವನು, ಎಲೈ ಶೂರಪದ್ಮನೆ! ನಿನ್ನ ಅನುಜರ್ಗೆ ಬಹು ಆಯುಧಂಗಳುಂ ನೂರೆಂಟುಯುಗ ಪ್ರಭುತ್ವಮುಂ ಉಂಟಾಗಲಿ, ಸಮರದೊಳು ನಮ್ಮ ಶಕ್ತಿ ಪೊರತಾಗಿ ಅನ್ಯರಾದ ಸುರನರನಾಗಂಗಳಿಂ ಮರಣ ರಹಿತರಾಗಿರೆಂದು ವರಮಂ ಕೊಟ್ಟು ಅಂತರ್ಧಾನವನ್ನೈದಿದನು.

ಅನಂತರದಲ್ಲಿ ಶೂರಪದ್ಮ ಮೊದಲಾದ ದೈತ್ಯರುಗಳು ಸಂತೋಷವನೈದಿದರು. ಮತ್ತಂ ಕೆಲಬರು ದೈತ್ಯರಂ ಖಡ್ಗಪಾಣಿಗಳಾಗಿ ಅಟ್ಟಹಾಸವಂಗೈದು ನರ್ತನಮಂ ಮಾಡಿದರು. ಹಾಗೆ ಇನ್ನು ಕೆಲದೈತ್ಯರು ಸಂತಸದಿಂ ಶ್ರೀಘ್ರಮಾದ ಗತಿಯಿಂ ಸಂಚರಿಸಿದನು. ಆ ಬಳಿಕ ಶೂರಪದ್ಮನು ದೈತ್ಯರಂ ನೋಡಿ, ಎಲೈ ದೈತ್ಯರುಗಳಿರಾ! ಇದುವರಿವಿಗು ನೀವು ಬಹು ಕಷ್ಟಪಟ್ಟಿರೆಂದು ಉಪಚಾರೋಕ್ತಿಯಿಂ ಪೇಳಲಾಗಿ, ಅವರುಗಳು ವಿನಯಾನ್ವಿತರಾಗಿ ಪರಿಪರಿ ಬಿನ್ನಪಂಗೈದರು. ಅನಂತರದಲ್ಲಿ ಶೂರಪದ್ಮನು ಶಂಭುವಿನಿಂ ಕೊಡಲ್ಪಟ್ಟ ಚತುರಂಗ ಬಲಂಗಳಿಗೆ ಪ್ರತ್ಯೇಕ ಪ್ರತ್ಯೇಕಮಾಗಿ ಬಹು ಸೇನಾಪತಿಗಳಂಮಾಡಿ, ಭ್ರಾತೃಗಳೊಡನೆ ವಟದ್ವೀಪವಂ ಬಿಟ್ಟು, ತನ್ನ ತಂದೆಯಾದ ಕಾಶ್ಯಪನ ಸಮಿಾಪಕ್ಕೆ ಬಂದು, ಆತಂಗೆ ನಮಸ್ಕರಿಸಿ ವಿನಯಾನ್ವಿತನಾಗಿ, ಎಲೈ ತಂದೆಯೆ!

ನಾನು ಮಾಡಿದ ಯಾಗದಿಂ ಪರಮೇಶ್ವರನು ಪ್ರೀತನಾಗಿ ದಯೆಮಾಡಿ ನನಗೆ ಅಂಡಂಗಳ್ಗೆ ಅಧಿಪತ್ಯವನಿತ್ತನು, ನನಗೆ ಯೇನು ಬುದ್ಧಿವಾದವಂ ಪೇಳಬೇಕೋ ನಿರೂಪಿಸೆಂದು ಕೇಳಲಾಗಿ; ಆ ಕಶ್ಯಪನು ದೇವತೆಗಳ್ಗೆ ವಿಪತ್ತು ಬಂತೆಂದು ಚಿಂತಿಸಿ, ಎಲೈ ಕುಮಾರರಿರಾ! ನಿಮ್ಮ ಗುರುವಿನ ಸಮೀಪಕ್ಕೆ ಪೋಗಿ ಬುದ್ಧಿಯಂ ಕೇಳಿ ನಮ್ಮ ತಪಸ್ಸುಗಳಿಗೆ ವಿಘ್ನವಮಾಡದಿರಿ, ಶೀಘ್ರದಿಂ ಪೋಗಿರೆಂದು ಪೇಳಿದನು. ಅನಂತರದಲ್ಲಿ ಸಮಸ್ತ ದೈತ್ಯೇಂದ್ರರು ಸೇರಿ ಶೀಘ್ರದಿಂ ಪೊರಮಟ್ಟು ತಮಗೆ ಹಿತವನಾಚರಿಸುತಿರ್ಪ ಸರ್ವ ಶಾಸ್ತ್ರದೊಳು ಸಮರ್ಥನಾದ ಭಾರ್ಗವನ ಸಮೀಪಕ್ಕೆ ಬಂದು ಆತಂಗೆ ನಮಸ್ಕಾರವಂ ಮಾಡಿ ಅಂಜಲಿಬದ್ಧನಾಗಿ ಆ ಗುರುವಿಗೆ ಸರ್ವ ವೃತ್ತಾಂತವಮಂ ಬಿನ್ನವಿಸಿ, ಎಲೈ ಗುರುವೆ! ನಮಗೆ ಹಿತಾಹಿತಮಾದ ಕಾರ್ಯವಂ ಚಿಂತಿಸಿ, ನಾವು ವೃದ್ಧಿಯನೆಯ್ದುವ ಪ್ರಕಾರವಂ ಪೇಳೆಂದು ವಿನಯದಿಂ ನಮ್ರರಾಗಿ ಆತನ ಬಳಸಿ ನಿಂತಿರ್ದರು.

ಶೂರಪದ್ಮನಿಗೆ ದೈತ್ಯಗುರುವಿನ ಉಪದೇಶವು.

ಅನಂತರದಲ್ಲಿ ಶುಕ್ರಾಚಾರ್ಯನು ಶೂರಪದ್ಮ ನೊಬ್ಬನಂ ಏಕಾಂತಕ್ಕೆ ಕರೆದುಕೊಂಡು ಪೋಗಿ ಇವರಿಗೆ ಯೋಗ್ಯಮಾದ ಬಹು ವಚನವಂ ಪೇಳ್ದನದೆಂತೆನೆ. ಎಲೈ ಶೂರಪದ್ಮನೆ! ಶಿವನು ಮಾಯೆಯಂ ಆಶ್ರಯಿಸಿ ಆಕಾಶ ಮೊದಲಾದ ಪಂಚಭೂತಂಗಳಂ ಸೃಜಿಸಿ, ತನ್ನ ಅಂಶಂಗಳಂ ಎರಡು ಭಾಗಗಳಂ ಮಾಡಿ, ಶರೀರೇಂದ್ರಿಯಗಳನ್ನಾಶ್ರಯಿಸಿ, ಲೀಲಾವಿನೋದನಾಗಿ ಜೀವಭಾವದಿಂದಿರುವನು. ಘಟವು ಭಗ್ನಮಾದೊಡೆ ಘಟಾಕಾಶವು ಮಹದಾಕಾಶದಲ್ಲಿ ಎಂತು ಲೀನಮಾಗುವುದೋ, ಅಂತು ದೇಹನಾಶದಿಂ ಶಿವನು ಶಿವನಾಗುತಿರುವನು. ಅದು ಕಾರಣದಿಂ ಯಥಾರ್ಥದಿಂ ಪುಣ್ಯಪಾಪಂಗಳು ಮಿಥ್ಯಾರೂಪಂಗಳು, ಹಾಗೆಯೇ ಮೋಕ್ಷವು ಮಿಥ್ಯಾರೂಪವು. ಅದುಕಾರಣದಿಂ ನೀನು ಸತ್ವಭಾವಮುಂ ಬ್ರಹ್ಮಸ್ವರೂಪಮಾಗೆಣಿಸಿ, ಶೋಕವಮಂ ಬಿಟ್ಟು, ಹರಿಬ್ರಹ್ಮಾದಿ ದೇವತೆಗಳಂ ಪರಿತ್ಯಜಿಸಿ, ಹೃದಯಾಕಾಶ ಮಧ್ಯದಲ್ಲಿರ್ಪ ಶಿವನಂ ಧ್ಯಾನಿಸಿ ಇಂದ್ರಾದಿ ದೇವತೆಗಳ್ಗೆ ಮಹತ್ತಾದ ಭಯವುಂಟಾಗುವಂತೆ ಮಾಡಿ, ಅಮರ ಸ್ಥಾನಂಗಳಂ ಮಹಾಪರಾಕ್ರಮಿಗಳಾದ ಅಸುರರ್ಗಿತ್ತು, ಶತ್ರುಗಳ್ಗೆ ಮಾರಣ, ಅತ್ಯಂತ ವಂಚನೆ, ಚೌರ್ಯ, ಪ್ರದ್ವೇಷಣಂಗಳನ್ಮಾಡು. ಹಾಗಿಲ್ಲದಿರ್ದೊಡೆ ಆವ ಮನುಷ್ಯರು ಆವ ದೇವತೆಗಳುಂ ನಿನ್ನನ್ನು ಯೋಚಿಸರು. ಸ್ವಕೀಯಮಾದ ಸರ್ವಾಂಡಂಗಳಲ್ಲಿ ಪ್ರವೇಶಿಸಿ ಅಲ್ಲಲ್ಲಿ ನಡೆದ ವೃತ್ತಾಂತವಂ ಸಾವಧಾನಮಾಗಿ ವಿಚಾರಿಸಿ, ಆಯಾ ಅಂಡದ ಆಯಾಮು ವಿಸ್ತಾರಮುಂ ಮಹೀಧರಂಗಳಂ ನಾನಾ ವಿಧ ಲೋಕಂಗಳಂ ತಿಳಿದು, ದೇವತೆಗಳಂ ಲೋಕಪಾಲಕರಂ ದಿಗ್ಗಜಂಗಳಂ ಮನುಜರು

ಗಳಂ, ಪ್ರಾಣಿ ಮೊದಲಾದವಂ ಕಾಡುಕಿಚ್ಚಿನಂತೆ ಬಾಧಿಸು. ಮತ್ತೆ ನಿನಗೆ ಸಹಾಯಕರಾಗಿ ನಿನ್ನೊಡನೆ ಅಂಡಂಗಳಲ್ಲಿ ಯಾರು ವಾಸವನ್ಮಾಡುತಿರುವರೋ ಅವರನ್ನೆಲ್ಲರಂ ಕೈಕೆಳಗಿಟ್ಟುಕೊಂಡು ತಿರುಗುತಲಿರೆಂದು ಅವರಿಗೆ ಹೇಳತಕ್ಕದ್ದನ್ನು ಹೇಳಿಕಳುಹಿಸಿಕೊಟ್ಟನು. ಅನಂತರದಲ್ಲಿ ಈ ಶೂರಪದ್ಮನು ಆತಂಗೆ ನಮುಸ್ಕಾರವನ್ಮಾಡಿ ಕೋಟಿಸೂರ್ಯ ಪ್ರಕಾಶಮಾನವಾದ ಕೋಟಿ ತುರಂಗಂಗಳಿಂ ಸನ್ನದ್ಧವಾದ, ನಾಶರಹಿತವಾದ ಮನೋಹರಮಪ್ಪ, ಛತ್ರಧ್ವಜಂಗಳಿಂದಲಂಕೃತವಾದ ಇಂದ್ರ ವಿಮಾನವನ್ನೇರಿ ಪೊರಮಟ್ಟನು. ಮತ್ತಂ ಹಾಗೆ ಸಿಂಹಮುಖನುಂ ದೈತ್ಯಾಳಿಗಳುಂ ದಶಸಹಸ್ರದಿಂ ತುರಗಗಳ ದಶಸಹಸ್ರದಿಂ ಹಾಗೆಯೇ ಭೂತಂಗಳ ದಶಸಹಸ್ರದಿಂ ಯುಕ್ತಮಪ್ಪ ರಥಮನ್ನೇರಿ ಪೊರಟನೆಂದು ಸೂತಂ ಶೌನಕಾದಿ ಮುನಿಗಳ್ಗೆ ಪೇಳ್ದನೆಂಬಲ್ಲಿಗೆ, ಸ್ಕಾಂದ ಪುರಾಣದ ಶಂಕರಸಂಹಿತೆಯ ಶಿವರಹಸ್ಯಖಂಡದ ಆಸುರಕಾಂಡದೊಳು ಮೂರನೆಯ ಅಧ್ಯಾಯವು ಸಂಪೂರ್ಣಂ.

ನಾಲ್ಕನೆಯ ಅಧ್ಯಾಯವು.

ಶೂರಪದ್ಮಾಸುರನ ವಿಜಯಯಾತ್ರಾ ವರ್ಣನಂ.

ಕೇಳಿರೈ ಮುನಿಗಳಿರಾ! ಅನಂತರದಲ್ಲಿ ತಾರಕಾಸುರನು ದಶಸಹಸ್ರ ತುರಗಯುಕ್ತಮಾದ ಮನೋಹರಮಪ್ಪ ರಥಮನ್ನೇರಿ ತೆರಳಿದವನಾಗಲು, ಅನ್ಯರಾದ ರಥಿಕರು ನಾನಾಯುಧಂಗಳಿಂದಲಂಕೃತರಾಗಿ ಪೊರಮಟ್ಟರು. ಹಾಗೆ ಇನ್ನು ಕೆಲವರುಂ ಕುಮಾರರಾದ ಗಜಾರೂಢರುಂ ಮಹಾ ಸೇನೆಯುಂ ಖರೋಷ್ಟ್ರಂಗಳುಂ ಪೊರಮಟ್ಟವು. ಆ ಸಮಯದೊಳು ಕಹಳ ಭೇರಿ ಪಟಹಂಗಳು ಅತ್ಯಂತ ನಾದಂಗಳುಳ್ಳವುಗಳಾದವು. ಮತ್ತೆ ವಾದ್ಯಭೇದಂಗಳಾದ ಡಿಂಡಿಮ ಜರ್ಝರಂಗಳು ತಾಡಿತಂಗಳಾಗಿ ಅಂಬುಧಿಧ್ವನಿಯಂ ಜಯಿಸುವಂತೆ ಘೋಷಿಸಿದವು. ಕೆಲವರು ಖಡ್ಗಪಾಣಿಗಳಾಗಿಯುಂ ಮತ್ತೆ ಕೆಲವರು ದಂಡಪಾಣಿಗಳಾಗಿಯುಂ ಇನ್ನು ಕೆಲವರು ಖಟ್ವಾಂಗಪಾಣಿಗಳಾಗಿಯುಂ ಮತ್ತೆ ಕುಂತಹಸ್ತರಾಗಿ ಕೆಲವರುಂ ಛತ್ರಿಗಳಾಗಿ ಕೆಲವರುಂ ಧ್ವಜವುಳ್ಳವರಾಗಿ ಕೆಲಂಬರುಂ ಪ್ರಾಸಂಗಳಂ ಪಿಡಿದವರಾಗಿ ಕೆಲಂಬರುಂ ಈ ರೀತಿ ಶೀಘ್ರದಿಂ ಸಂಚರಿಸಿದರು. ಮತ್ತೆ ಕೆಲವರು ಅಟ್ಟಹಾಸಮನ್ಮಾಡಿ ಅನ್ಯೋನ್ಯಕರಮಂ ಪೊಯ್ದರು. ಆಗ ಪಾಂಸುಗಳು ಸೂರ್ಯಮಂಡಲಮಂ ವ್ಯಾಪಿಸಿದವು. ಭೂಮಿಯು ಮೂರು ಕೋಟಿ ಯೋಜನ ನಿಬಿಡಿತಮಾದುದು. ಈ ಪ್ರಕಾರಮಾಗಿ ಮಹಾ ಶೂರನಾದ ಶೂರಪದ್ಮನು ಭ್ರಾತೃಸಹಿತನಾಗಿ ಸೇನೆಯೊಡನೆ ಕುಬೇರನ ದಿಕ್ಕಿಗೆ ಪೋಗಿ,

ಅತ್ಯುನ್ನತಮಪ್ಪ ಕೋಟೆಯಿಂದಾವೃತವಾದ ಅಳಕಾಪುರಿಯಂ ಮುತ್ತಿದವನಾಗಿ, ಆ ಕುಬೇರನು ದೂತಮುಖದಿಂದೀವೃತ್ತಾಂತಮಂ ಕೇಳಿ, ಅತಿ ಭೀತಿಗೊಂಡು ಆ ದೈತ್ಯನ ಸಮೀಪಕ್ಕೆ ಪೋಗಿ, ಆಶೀರ್ವದಮನೆಸಗಿ ವಿನಯಾನ್ವಿತನಾಗಿ ಅಂಜಲಿ ಬಂಧಮಮ್ಮಾಡಿ, ಧನ್ಯಂಗಳಪ್ಪ ದಿವ್ಯ ವಸ್ತ್ರಭೂಷಣಂಗಳಂ ಕೊಟ್ಟು ಆತನಂ ನೋಡಿ, ನಾನು ನಿನಗೆ ಯೆರಡನೆಯವನಾಗಿಲ್ಲ ದಾಸಮುಮ್ಮಾಡುತಿರ್ಪೆನೆ. ದಯೆಯಿಂ ರಕ್ಷಿಸೆಂದು ನುಡಿದು ತನ್ನ ಪುರಿಯೊಳಕ್ಕೆ ಆ ಶೂರಪದ್ಮನಂ ಕರೆಯಿಸಿಕೊಂಡು ಸಮಾಧಾನಮಮ್ಮಾಡಿ ಕಳುಹಿಸಿ ತನ್ನ ಪಟ್ಟಣಮಂ ಪೊಕ್ಕು ಬಹು ದುಃಖವನ್ನೈದಿದನು. ಅನಂತರದಲ್ಲಿ ಅಸುರನಾಯಕನಾದ ಶೂರಪದ್ಮನು ಈಶಾನನಂ ಜಯಿಸಲಿಚ್ಛೈಸಿ ಪೊರಮಟ್ಟು ಮಾರ್ಗಮಧ್ಯದಲ್ಲಿ ಆ ಈಶಾನನ ಸಂಬಂಧಮಪ್ಪ ತ್ರಿನೇತ್ರ ಮೊದಲಾದ ಚಿಹ್ನಮಂ ಕೇಳಿ ಇಂದ್ರನಂ ಜಯಿಸಲು ಪೂರ್ವದಿಕ್ಕನ್ನೈದಿ ಅಮರನಾಯಕನಾದ ಇಂದ್ರನ ಅದ್ಭುತಮಪ್ಪ ಪುರಮಂ ಮುತ್ತಿ, ನಾನಾ ದಿಕ್ಕುಗಳಲ್ಲಿರುವ ಬಹು ವೃಕ್ಷಗಳಂ ಛೇದಿಸಿದನು. ಆ ಸಮಯದಲ್ಲಿ ಇಂದ್ರನು ಶೀಘ್ರಮಾಗಿ ಆಕಾಶಮಾರ್ಗದೊಳು ಪಲಾಯಮನ್ನೈದಿದನು. ಆಗ ಆತನ ಪುರದ ಕೋಟೆಗಳಂ ಸೇನೆಗಳಂ ಕೆಡಹಿಸಿದನು. ಎಲೈ ದ್ವಿಜರುಗಳಿರಾ! ಅನೇಕ ಸ್ತ್ರೀಯರಂ ದೇವಸ್ತ್ರೀಯರ ಸೆರೆಯಂ ಪಿಡಿದು ಆ ಇಂದ್ರನ ಅರಮನೆಯಂ ಶೀಘ್ರದಿಂದಾವರಿಸಿ ಅಂತಃಪುರಮಂ ಪೊಕ್ಕು, ವಿಶಾಲ ಭೂಮಿಯನ್ನಗೆದು ಬಹು ಧನಮಂ ತೆಗೆದು, ಪ್ರತಿ ಗೃಹಮಂ ಪೊಕ್ಕು, ಆ ಪಟ್ಟಣಮಂ ದಹಿಸಿದನು. ಆ ಸಮಯದೊಳು ಅನೇಕ ದೇವತೆಗಳು ದುರ್ಬಲರಾಗಿ ಆತನ ಹಸ್ತಗತರಾದರು. ಮತ್ತೆ ಕೆಲಂಬರು ದೇವತೆಗಳು ಆತನ ಧಾವನೆಯಲ್ಲಿ ಪೋಗಲಾರದೆ ವಶರಾದರು. ಆಗ ದನುಜಾಧಿಪನು ಆ ದೇವತೆಗಳ ಮೇಲೆ ಹಂಜೆಗಳಸ್ನಿರಿಸಿ ಅಗ್ನಿಪುರಕ್ಕೆ ಶೀಘ್ರಮಾಗಿ ಪೋದನು.

ಅಲ್ಲಿ ಅನೇಕವಾದ ಅಗ್ನಿಸೇನೆಯು ಅತಿ ವೇಗಮುಳ್ಳ ದೈತ್ಯಬಲದೊಡನೆ ಯುದ್ಧಮಂ ಮಾಡಲ್ಪೊರಮಟ್ಟುದು. ಆ ಸಮಯದಲ್ಲಿ ಉಭಯರಿಗುಂ ಕಾಳಗ ಮುಂಟಾಗುತಿರಲಾಗಿ, ತಾರಕನ ಬಲದ ಮುಂದೆ ಅಗ್ನಿಯ ಸೈನ್ಯವು ನಿಲ್ಲಲಾರದೆ ಪರಾಭವನ್ನೈದಿ ಆ ಅಗ್ನಿಯ ಸಮೀಪವನ್ನೈದಿತು. ಆಗ ಅಗ್ನಿಯು ಕ್ರೋಧಮೂರ್ಛಿತನಾಗಿ ಕಾಲಾಗ್ನಿಯಂತೆ ಜ್ವಾಲಾಸಮೂಹದಿಂ ಜಗತ್ತಂ ಆವರಿಸಿಕೊಂಡು, ಸರ್ವರಂ ಸಂಹರಿಸಲು ಶೀಘ್ರಮಾಗಿ ಬಂದು, ಅಸುರರ ಬಲದಲ್ಲಿ ಅಸ್ತ್ರಸಮೂಹಮಂ ಬಿಟ್ಟನು. ಬಳಿಕ ತಾರಕನು ನಾನಾವಿಧಾಸ್ತ್ರ ಸಮೂಹಯುಕ್ತನಾಗಿ ಬಹು ಮಾಯೆಯಂ ಕೈಕೊಂಡು, ಮಹತ್ತಾದ

ಧನುವಂ ತೆಗೆದು ಪ್ರಳಯಕಾಲ ಮೇಘದ ಧ್ವನಿಯುಳ್ಳ ನಾರಿಯಂ ಪಿಡಿದು, ಧನುಶ್ಶಾಸ್ತ್ರಕ್ರಮದಿಂದ ಆಲೀಢವೆಂಬ ಧನುರಾಕರ್ಷಣ ಸ್ಥಾನ ಕದಲನಿಂತು, ಬಹುವಾದ ಅಸ್ತ್ರಜಾಲಂಗಳಂ ಬಿಟ್ಟನು. ಆ ಮೇಲೆ ಹೃದಯಕಮಲದೊಳು ಪಶುಪತಿಯಂ ಧ್ಯಾನಿಸಿ, ಸಾಕ್ಷಾದ್ರುದ್ರನಂತೆ ಪಾಶುಪತಾಸ್ತ್ರ ಸಂಧಾನವಂ ಮಾಡಿದವನಾಗಲಾಗಿ, ಕೃಶಾನುಭಯವನ್ನೈದಿ ಚಂಚಲಮನಸ್ಸುಳ್ಳವನಾಗಿ, ಈ ಪಶುಪತಿಯ ಅಸ್ತ್ರವು ಕ್ಷಣದಿಂ ಸರ್ವಲೋಕವಂ ದಹಿಸೀತು? ಇದಕ್ಕೆ ಲಕ್ಷ್ಯ ವಾವುದು? ಕಾಲಾಗ್ನಿಯಲ್ಲಿ ಮಶಕಗಳಂತೆ ನಾವೆತ್ತ? ಹರಾಸ್ತ್ರವೆತ್ತ? ಹಾಹಾ!! ಹತನಾಗಿ ಪೋದೆನೆ; ಏನುಮಾಡುವುಣ; ಎಂದು ಚಿಂತಿಸಿ, ಈಗ ಪ್ರಾಣ ದಾಯಕನಾದ ತಾರಕನನ್ನೇ ಶರಣವನ್ನೈದಬೇಕೆಂದು ನಿಶ್ಚೈಸಿ, ಶೀಘ್ರದಿಂ ಆಯುಧ ಸಮೂಹಮಂ ತ್ಯಜಿಸಿ, ಎಲೈ, ನನ್ನಂ ರಕ್ಷಿಸೆಂದು ನುಡಿಯುತ್ತ, ಆ ತಾರಕನ ಸಮೀಪವನ್ನೈದಿ, ಬದ್ಧಾಂಜಲಿ ಪುಟನಾಗಿ ನಾನು ನಿನ್ನವನು, ನನ್ನಂ ಬಿಟ್ಟು ಪಾಲಿಸಿಕೋ ಎಂದು ಮರಳಿ ಪೇಳ್ದು, ಭಯಕಂಪಿತನಾಗಿ ಆ ರಣ ರಂಗದಲ್ಲಿ ನಿಂತಿರ್ದನು. ಅಸುರಪಾಲಕನಾದ ತಾರಕನಾದೊಡೆ ಆ ಅಗ್ನಿಯು ತೂಷ್ಣೀಂಭೂತನಾಗಿ ನಿಂತಿಹಾನೆಂದು ಪ್ರೀತಿಯಮ್ಮಾಡಿ, ಶೀತಳವಾಕ್ಯದಿಂ ದಾತನಂ ಸಂತೋಷವನ್ನೈದಿಸಿ, ಪೂರ್ವದಂತೆ ಪುರವನ್ನೈದಿ, ಪ್ರಜೆಗಳಂ ಚನ್ನಾಗಿ ಪಾಲಿಸಿಕೊಂಡು ನಮ್ಮಾಜ್ಞೆಯಿಂ ನಮ್ಮವನಾಗಿರೆಂದು ಆಜ್ಞಾಪಿಸಿ ದನು. ಆಗ ಅಗ್ನಿಯು ಆ ವಾಕ್ಯವಂ ಕೇಳಿ ಅಜ್ಞಾನದಿಮ್ಮಾಡಿದ ಕೃತ್ಯಮಂ ಕ್ಷಮಿಸೆಂದು ಆತಂಗೆ ಪೇಳ್ದು, ಅಸುರರಿಂ ಅಶ್ವವಾಹಕರಿಂ ಪೂರ್ವದಲ್ಲಿ ಕೆಡಹ ಲ್ಪಟ್ಟ ವೈಶ್ವಾನರಪುರಮಂ ಪೊಕ್ಕನು. ಶೂರರಿಗೆ ಅತಿ ಶೂರನಾದ ಶೂರ ಪದ್ಮನು ಘಣಂಗನೆಂಬ ಸಾರಥಿಯಂ ಕರೆದು, ಸಂಯಮಿನೀಪುರಕ್ಕೆ ರಥವನ್ನೈದಿ ಸೆಂದಾಜ್ಞಾಪಿಸಲಾಗಿ, ಆ ಸಾರಥಿಯು ರಥಮಂ ತ್ವರಿತಗತಿಯಮ್ಮಾಡಿ ಧರ್ಮ ರಾಜನ ಪುರದ ಸಮೀಪದಲ್ಲಿ ನಿಲ್ಲಿಸಿದನು. ಮತ್ತಂ ಚತುರಂಗಬಲವು ಸಮುದ್ರ ದಂತೆ ಚಲಿಸಿ ಶೀಘ್ರದಿಂ ಪೋಗಿ ಯಮಪುರಮಂ ಮುತ್ತಿತು. ಆಗ ಯಮನು ತನ್ನ ಪುರವು ದನುಜರಿಂದ ಆಕ್ರಮಿಸಲ್ಪಟ್ಟಿತೆಂದು ದೂತಮುಖದಿಂ ಕೇಳಿ, ಹಾಹಾ!! ಕುಬೇರನ ಪುರವು ಈತನಿಂದ ಕೈವಶಮಾಡಲ್ಪಟ್ಟಿತು. ಇಂದ್ರನ ಪಟ್ಟಣವು ದಗ್ಧಮಾದುದು. ಅಗ್ನಿಯ ಪುರವು ಕೆಡಹಲ್ಪಟ್ಟಿತು. ಎಂದು ಈ ಪ್ರಕಾರಮಾಗಿ ಯೋಚಿಸಿ ಚಿಂತಾಪರವಶನಾಗಿ ಜವದಿಂ ಆತನ ಸಮೀಪವ ನ್ನೈದಿ, ಆತಂಗೆ ದಿವ್ಯವಾದ ವಸ್ತ್ರಂಗಳಂ ವಿಚಿತ್ರಂಗಳಾದ ಹಾರಂಗಳಂ ಶ್ವೇತ ಸೂಕ್ಷ್ಮವಾದ ಪರ್ವತೋಪಮಾನಮಾದ, ತಂಡುಲ ರಾಶಿಗಳಂ ಮುದ್ಗ ಕುಳುತ್ಥ ತುವರೀ ಮಾಷಾದಿಗಳಂ ಕೊಟ್ಟ ಬಳಿಕ, ಎಲೈ ಶೂರಪದ್ಮನೆ! ನಾನು ನಿನ್ನವನು,

ನಿನ್ನಾಜ್ಞೆಯಿಂ ಇಲ್ಲಿ ವಾಸವನ್ಮಾಡುತಲಿಧೇನೆ. ಮಹಾ ಶೂರರಾದ ದೈತ್ಯರು ನಗರಮುಂ ನಾಶವನ್ಮಾಡುತಿಧಾರೆ. ಅವರಂ ಶೀಘ್ರದಿಂ ಕರೆಯಿಸಿ ತನ್ನ ಪಾಲಿಸಿಕೋ ಯೆನಲಾಗಿ, ತಾರಕನು ಪುರಮಂ ಕೆಡಹುತಿರ್ಪ ದಾನವರಂ ಕರೆಸಿ, ಆ ಯಮುಂಗೆ ಬಹುಮಾನಮನ್ಮಾಡಿ ವೈವಸ್ವತಪುರಿಗೆ ಕಳುಹಿಸಿದನೆಂದು ಸೂತ ಪೌರಾಣಿಕಂ ಶೌನಕಾದಿ ಮುನಿಗಳ್ಗೆ ಪೇಳಿದನೆಂಬಿಲ್ಲಿಗೆ ಆಸುರ ಕಾಂಡದಲ್ಲಿ ನಾಲ್ಕನೆಯ ಅಧ್ಯಾಯವು ಸಂಪೂರ್ಣಂ.

ಐದನೆಯ ಅಧ್ಯಾಯವು.

ಶೂರಪದ್ಮಾಸುರನ ದಿಗ್ವಿಜಯವು.

ಎಲೈ ಮುನಿಗಳಿರಾ! ಅನಂತರದಲ್ಲಿ ಅಸುರನಾಯಕನಾದ ಆ ಶೂರ ಪದ್ಮನು ನೈಋತ್ಯದಿಕ್ಕಿಗೆ ಪೋಗಿ, ಆತನ ಪುರಮುಂ ಬಲದಿಂ ಮುತ್ತಿದನು. ಆಗ ನಿಋುತಿಯು ಶೀಘ್ರವಾಗಿ ಪುರದಿಂ ಪೊರಮಟ್ಟು ಶತ್ರುಸಂಹಾರಕನಾದ ತಾರಕನ ಸಮೀಪಕ್ಕೆ ಬಂದು, ಅಂಜಲಿಬಂಧವನ್ಮಾಡಿ, ಎಲೈ, ತಾರಕನೆ! ನಾನು ನಿನ್ನ ಬಂಧುವು. ನಿನ್ನ ಆಜ್ಞೆಯಿಂದಿಲ್ಲಿ ವಾಸವನ್ಮಾಡುತಲಿಧೇನೆ. ಐಶ್ವರ್ಯ ಬಂದು ಪುಟ್ಟಿದಕ್ಕೋಸುಗ ನನ್ನನ್ನು ಪಾಲಿಸೆಂದು ಪೇಳಲಾಗಿ, ತಾರಕನು ಆತಂಗೆ ಬಹುಮಾನಮನ್ಮಾಡಿ, ಆತನಂ ಪುರಕ್ಕೆ ಕಳುಹಿ ವರುಣ ದಿಕ್ಕಿಗೈದಿದನು. ಅನಂತರದಲ್ಲಿ ವರುಣನು ಈತನ ಪಯಣಮಂ ಕೇಳಿ ಸಮುದ್ರವಂ ತೆರೆಯಿಂ ಪೋಗಲಾಗಿ, ದೈತ್ಯಸೇನೆಯು ಮಹತ್ತಾದ ಪುರವನ್ನಾವರಿಸಿ, ಆ ಪುರದೊಳು ಓಡುತಿರ್ಪ ಜನರ ವಸ್ತ್ರಾಭರಣಂಗಳಂ ಅಪಹರಿಸಿ, ನಾನಾ ರತ್ನದಿಂ ಶೋಭಿತವಾದ ಆತನ ಪಟ್ಟಣಮಂ ಕೆಡಹಿದನು. ಅನಂತರದಲ್ಲಿ ಶೂರಪದ್ಮನು ಬಲಗಳಿಂ ವಾಯುಪುರಮಂ ಮುತ್ತಲಾಗಿ, ಎಲೈ ದ್ವಿಜರುಗಳಿರಾ! ಆ ವಾಯುವು ತ್ವರಿತದಿಂ ಅಂಧಕಾರಲೋಕಮುಂ ಪೊಕ್ಕನು. ಆಗ ತಾರಕನು ಅತ್ಯಂತ ಉಜ್ವಲವಾದ ವಾಯುಪುರಮುಂ ಕೆಡಹಿದನು. ಅನಂತರದಲ್ಲಿ ಶೂರಪದ್ಮನು ಈ ಪ್ರಕಾರವಾಗಿ ಅಷ್ಟದಿಕ್ಕುಗಳಂ ಜಯಿಸಿ, ನಾಗಂಗಳಂ ಜಯಿಸಲುದ್ದೇಶಿಸಿ ಪಾತಾಳಮುಂ ಪೊಕ್ಕನಾಗಲು, ಅಲ್ಲಿ ಸರ್ಪಾಧಿಪತಿಯು ಯುದ್ಧದಲ್ಲಿ ಪರಾಭವವನ್ನೈದಿ, ಆ ಶೂರಪದ್ಮಂಗೆ ಅನೇಕ ವಿಚಿತ್ರರತ್ನಂಗಳಂ ಕೊಟ್ಟ ಬಳಿಕ, ಆತನು ಆ ನಾಗಂಗಳ್ಗೆ ಪ್ರಿಯವಚನಮುಂ ಪೇಳ್ದು, ಅಲ್ಲಿಹ ಅಮೃತಮುಂ ಅಸುರರೊಡನೆ ಪಾನವನ್ಮಾಡಿ, ಪಾತಾಳ ಸಂಭವರಿಂ ಪೂಜಿತನಾಗಿ, ಅತಿ ಪ್ರೀತಿಯಿಂದ ಅಲ್ಲಿನ ಅದ್ಭುತಂಗಳಂ ನೋಡಿ, ಮಹಾರಮ್ಯವಾಗಿರುವ ಬಿಲದ್ವಾರಂಗಳಂ ನಿರೀಕ್ಷಿಸಿ, ಅಲ್ಲಿ ಪೊಂದು ದಿವಸವಿರ್ದು ಮರಳಿ ಶೀಘ್ರವಾಗಿ ಬಲ

ಗರ್ವಿತರಾದ ಅನುಜರೊಡನೆ ಸೇನಾಸಮೇತನಾಗಿ ಅಲ್ಲಿಂದ ಭೂತಳಕ್ಕೆ ಬಂದನು.

ಆ ಭೂಲೋಕದಲ್ಲಿ ರಮ್ಯಂಗಳಾದ ದ್ವೀಪಾಂತರಂಗಳ್ಗೆ ಪೋಗಲಾಗಿ, ವಿಷ್ಣು ಪತ್ನಿಗಳಾದ ಭೂಮಿದೇವಿಗಳು ಈ ಧ್ವನಿಯಂ ಕೇಳಿ ಭಯಪಟ್ಟು, ಹರಿಯ ಸಮೀಪವನ್ನೈದಿ ಆತನ ನಿದ್ರೆಯಂ ತಿಳಿಯಪೇಳಿ, ಎಲೈ ವಿಭುವೆ! ಸ್ವಾಮಿಯೆ! ನೀನು ಶೇಷನಲ್ಲಿ ಏಕಶಯನಮಮ್ಮಾಡುತಲಿರುವುದರಿಂದ ಭಯ ಮುಂಟಾಗಿ ಈ ನಿದ್ರೆಯಂ ಬಿಟ್ಟು ಭೀತರಾದ ನಮ್ಮನ್ನು ರಕ್ಷಿಸೆಂದು ಪೇಳಿ ದರು. ಆ ಹರಿಯು ನಿದ್ದೆಯಂ ಬಿಟ್ಟು ಏಳುವಾಗ ತನ್ನ ಸಮೀಪಕ್ಕೆ ಬಂದ ಅಸುರರಂ ಕಂಡು, ದಟ್ಟಿಯಂ ಕಟ್ಟಿ ಜೋಡಂತೊಟ್ಟು ಹಿಂಭಾಗದಲ್ಲಿ ಬತ್ತಳ ಕೆಯಂ ಬಿಗಿದು ಕೌಮೋದಕಿಯೆಂಬ ಗದೆಯಂ ನಂದಕವೆಂಬ ಖಡ್ಗಮಂ ಪಾಂಚಜನ್ಯವೆಂಬ ಶಂಖಮುಂ ಸುದರ್ಶನವೆಂಬ ಚಕ್ರಮಂ ಶಾರ್ಙ್ಗವೆಂಬ ಧನುವಂ ಧರಿಸಿ, ಗರುಡಾರೂಢನಾಗಿ ಶೂರಪದ್ಮನ ಸಮೀಪವನ್ನೈದಿ, ಸವ್ಯ ಪಾಣಿಯಿಂ ಚಾಪಮಂ ಪಿಡಿದು, ದಕ್ಷಿಣ ಪಾಣಿಯಿಂ ನಾರಿಯಂ ಹೂಡಿ, ತಾರ ಕನ ಸೇನೆಯೊಳು ಅನೇಕಾಸ್ತ್ರಂಗಳಂ ಕರೆದನು. ಆಗ ಅಸ್ತ್ರಘಾತದಿಂ ಆ ಸೇನೆಯು ಬಹಳವಾಗಿ ಹತಮಾದುದು. ಅಲ್ಲಿ ಕೆಲಬರು ದೈತ್ಯರು ವಿಷ್ಣುಶರದಿಂ ಖಂಡಿಸಲ್ಪಟ್ಟ ದೇಹವುಳ್ಳವರಾಗಿ ಪಲಾಯನವನ್ನೈದಿದರು. ಇನ್ನು ಕೆಲವರು ತಾರಕನಂ ಶರಣು ಹೊಕ್ಕರು. ಆಗ ತಾರಕನು ಶೀಘ್ರಮಾಗಿ ಮಹತ್ತರವಾದ ಅನೇಕಾಸ್ತ್ರಂಗಳಂ ತೆಗದು ಹರಿಯೊಡನೆ ಯುದ್ಧವಮ್ಮಾಡಲು ಪೊರಮಟ್ಟು ಚಾಪದಲ್ಲಿ ನಾರಿಯಂ ಪೂಡಿ, ಗುಣದಿಂ ಟಂಕಾರವಮ್ಮಾಡಿ ವಿಷ್ಣುವಿನ ಮೇಲೆ ಬಹು ಬಾಣಂಗಳಂ ವರ್ಷಿಸಿ, ಗರುಡನ ದೇಹವಲ್ಲಿ ರಕ್ತಪ್ರವಾಹವಮ್ಮಾಡಿ ದನು. ಬಳಿಕ ಅಸುರಾರಿಯಾದ ಹರಿಯು ಮಹಾ ಕುಪಿತನಾಗಿ, ನಿಶಿತವಾದ ಶರಗಳಿಂ ಆತನ ಶರೀರವನೆಚ್ಚು ಮರಳಿ ಕೆಲಶರಂಗಳಿಂ ಆತನ ರಥವಂ ಛೇದಿಸಿ ಇನ್ನು ಕೆಲವು ಸರಳುಗಳಿಂ ಆತನ ಸಾರಥಿಯಂ ಖಂಡಿಸಿ ನೆಲದಲ್ಲಿ ಕೆಡಹಿ, ಮತ್ತು ಆತನ ಮೇಲೆ ಪಂಚಶತ ಬಾಣಗಳಂ ಯೆಚ್ಚನು. ಆಗ ತಾರಕನು ಉಜ್ವಲಮಪ್ಪ ಅನ್ಯರಥವನ್ನೇರಿ ಮರಳಿ ಮಹತ್ತಾದ ಚಾಪಮಂ ಪಿಡಿದು, ಆತನ ಮುಂದೆ ಅಟ್ಟಹಾಸಮಮ್ಮಾಡಿ, ಘರ್ಮಕಾಲ ಮೇಘದಂತೆ ನಿಶಿತಂಗಳಾದ ಅಸ್ತ್ರಂಗಳಂ ವರ್ಷಿಸಿದನು. ಆ ಸಮಯದಲ್ಲಿ ವಿಷ್ಣುವಿನ ಶರೀರಮುಂ ರಕ್ತ ಸಮೂಹದಿಂ ವ್ಯಾಪ್ತಮಾದುದು. ಆತನ ಜೋಡು ಅಸ್ತ್ರಘಾತದಿಂ ಮುಕ್ತ ಮಾದುದು. ಅನಂತರದಲ್ಲಿ ಹರಿಯು ಮಹಾ ರೋಷದಿಂ ಅಗ್ನಿಯಂಜ್ವಲಿಸಿ, ಮರ್ಮಭೇದಗಳಪ್ಪ ನಾರಾಚಂಗಳಿಂ ಆತನ ಶರೀರದೊಳು ವರ್ಷಿಸಿ, ಶೂಲಂ

ಗಳಿಂ ನಾನಾವಿಧಾಸ್ತ್ರಂಗಳಿಂ ರಥಮಂ ಕೆಡಹಿ, ಮತ್ತೆ ಕೆಲ ಬಾಣಂಗಳಿಂ ಆತನ ಚಾಪಮಂ ಸಹಸ್ರವಿಧವಾಗಿ ಖಂಡಿಸಿದವನಾಗಲು, ಆಗ ತಾರಕನು ಉಜ್ವಲಮಾಗಿ ಅದ್ಭುತಮಾದ ಮತ್ತೊಂದು ರಥವನ್ನೇರಿ, ದೃಢಮಾದ ಅನ್ಯ ಧನುವಂ ಧರಿಸಿ ಆ ಹರಿಯ ಶರೀರದಲ್ಲಿ ಅಸ್ತ್ರಸಮೂಹವಂ ಕೋಪದಿಂ ಬಿಟ್ಟನು. ಅದುಕಾರಣದಿಂ ವಿಷ್ಣುವು ಸಂಭ್ರಮಯುಕ್ತಮಾಗಿ ಮಾಯೆಯಿಂ ಬಹು ರೂಪಂಕೈಕೊಂಡು, ಅಸ್ತ್ರಪ್ರಯೋಗಮಂ ತಿಳಿದು ಶತಕೋಟಿ ಸಹಸ್ರಾಸ್ತ್ರಂಗಳಂ ಬಹು ಮುಖದಲ್ಲಿ, ಆ ತಾರಕನ ಮೇಲೆ ಸುರಿಸಿದನು. ಆಗ ತಾರಕನು ಶೀಘ್ರದಿಂ ಮಾತೃವಾದ ಮಾಯಾದೇವಿಯು ತನಗೆ ಉಪದೇಶಿಸಿದ ಮಂತ್ರಮಂ ಉಚ್ಚರಿಸಿ, ಬಹು ರೂಪಂಗಳಂ ಧರಿಸಿ ಅಸಂಖ್ಯಾತಂಗಳಾದ ಅಸ್ತ್ರಂಗಳಿಂ ವಿಷ್ಣುವಂ ಮರ್ದಿಸಿದನು. ಎಲೈ ಮುನಿಗಳಿರಾ! ಯುದ್ಧಮಲ್ಲರಾದ ಹರಿ ತಾರಕರೀರ್ವರು ಈ ಪ್ರಕಾರಮಾಗಿ ದ್ವಾದಶವರ್ಷಪರ್ಯಂತವು ಅನ್ಯೋನ್ಯವಾಗಿ ಯುದ್ಧವಮ್ಮಾಡಿದರು. ಆಗ ಕೈಟಭಾರಿಯಾದ ಹರಿಯು ಅತಿ ಭಯಂಕರವಾದ ಕೌಮೋದಕಿಯೆಂಬ ಗದೆಯಂ ಕರದಿಂ ತಿರುಹಿ ತಾರಕನ ಮೇಲೆ ಹೊಡೆದವನಾಗಲು, ಆ ಗದೆಯು ಈತನ ಗದೆಯಿಂ ಹೊಡೆಯಲ್ಪಟ್ಟು ಭೂಮಿಗೆ ಬಿದ್ದುದು. ಅದೇರೀತಿಯಲ್ಲಿ ನಂದಕವೆಂಬ ಖಡ್ಗವು ನೆಲದಲ್ಲಿ ಬಿದ್ದು ವ್ಯರ್ಥವನ್ನೈದಿತು. ಬಳಿಕ ತಾರಕನು ವಧೋದ್ಯುಕ್ತನಾಗಿ ಕೋಪದಿಂ ಶೂಲಮಂ ಗದೆಯಂ ತಿರುಹುತ್ತ ಶೀಘ್ರದಿಂ ವಿಷ್ಣುವಿನ ಸಮೀಪವನ್ನೈದಲಾಗಿ, ಆಗ ಮಾಧವನು ತನ್ನ ಸಮೀಪಕ್ಕೆ ಬಂದ ಆ ಮಹಾವೀರನಂ ಕಂಡು, ಪ್ರಳಯ ಕಾಲದ ಮೇಘದಂತೆ ಶಂಖನಾದಮಮ್ಮಾಡಿ, ಸರ್ವಶತ್ರು ಸಂಹಾರಕಮಾದ ಬಹು ಭಯಂಕರಮಾದ ಸುದರ್ಶನವೆಂಬ ಚಕ್ರಮಂ ವಜ್ರದಂತೆ ನಿಷ್ಠುರಮಪ್ಪ ಆತನ ಉದರಲ್ಲಿಡುತಿರೆ, ಆ ಚಕ್ರವು ಆತನ ಕಂಠದಲ್ಲಿ ವಿಚಿತ್ರಮಾಗಿ ನಿಷ್ಕತ್ವಮನ್ನೈದಿತೆಂದು ಶೌನಕಾದಿಗಳ್ಗೆ ಸೂತಂ ಪೇಳ್ದನೆಂಬಲ್ಲಿಗೆ, ಆಸುರ ಕಾಂಡದಲ್ಲಿ ಐದನೆಯ ಅಧ್ಯಾಯವು ಸಂಪೂರ್ಣಂ.

ಆರನೆಯ ಅಧ್ಯಾಯವು.

ಶ್ರೀ ಮಹಾವಿಷ್ಣು ಪರಾಜಯವು—ಸ್ವರ್ಗಲೋಕದ ಸೂರೆ ಲೋಕಾಲೋಕ ವಿಜಯ.

ಎಲೈ ಮುನಿಗಳಿರಾ! ಅನಂತರದಲ್ಲಿ ಶತ್ರು ಸಂಹಾರಕನಾದ ವಿಷ್ಣುವು, ಪಂಚಾಯುಧಗಳಂ ಬಿಟ್ಟು, ತಾನೆ ಆ ತಾರಕನ ಸಮೀಪಕ್ಕೆ ಬಂದು, ಎಲೈ

ಅಸುರಶ್ರೇಷ್ಠನೆ! ನಿನ್ನ ಬಲವು ಶೌರ್ಯವು ಬಹಳ ಆಶ್ಚರ್ಯಕರವಾದದ್ದು, ಶಸ್ತ್ರಾಭ್ಯಾಸವು ಅಕಿಂಚಿನ್ಮಾತ್ರವು; ತ್ರಿಯಂಬಕನಾದ ರುದ್ರನಂ ಬಿಟ್ಟು ಮತ್ತೋರ್ವರಲ್ಲಿ ಇಂತೀ ಆಶ್ಚರ್ಯಮಾದ ಬಲವಿಲ್ಲವು, ನಿನ್ನ ತಾಯಿಯು ನಿನ್ನಿಂ ಸತ್ಯವಾಗಿ ಪುತ್ರವಂತೆಯಾದಳು. ಈಗ ಬಹು ಮಾತಿನಿಂದೇನು ಪ್ರಯೋಜನವು? ನಾನು ಮಾಡಿದ ಅಪರಾಧಮಂ ನೀನು ಸಂತಸದಿಂ ಕ್ಷಮಿಸೆಂದು ಪೇಳುತ್ತಿರಲಾಗಿ, ದೈತ್ಯಗೊಡೆಯನಾದ ತಾರಕನು ಅತಿ ಪ್ರೀತಮಾದಮನದಿಂ ಈ ಪರಿಗೆ ಪರಿಪರಿ ಬಹುಮಾನಮಂ ಮಾಡಿ, ಆತನಂ ಕಳುಹಿಸಿ ವಿನಯದಿಂ ಅಂಜಲಿಬಂಧಮಂ ಮಾಡಿ ಶೂರಪದ್ಮನ ಸಮೀಪಕ್ಕೆ ಬಂದನು. ಆಗ ಶೂರಪದ್ಮನು ಪ್ರೇಮದಿಂ ಆತನ ಸಮಸ್ತತನುವನಾಘ್ರಾಣಿಸಿ ಅಪ್ಪಿಕೊಂಡನು. ಅನಂತರದಲ್ಲಿ ಆ ಸಮಸ್ತರಾದ ದೈತ್ಯರು ಚಕ್ರವಾಳಗಿರಿಗೆ ಪೋಗಿ ಅಲ್ಲಿರುವ ಆಶ್ಚರ್ಯಂಗಳಂ ನೋಡಿ ಸ್ವರ್ಗಕ್ಕೆ ಪೊರಮಟ್ಟರು. ಆಗ ದೇವೇಂದ್ರನದಂ ಕೇಳಿ ಪರಮ ಭೀತನಾಗಿ, ಶಚಿಯೊಡನೆ ಏಕರೂಪದಿಂ ವ್ಯೋಮದೊಳು ಶೀಘ್ರದಿಂ ಪೋದನು. ದೈತ್ಯರು ಆಕಾಶಮಾರ್ಗದಿಂ ಸ್ವರ್ಗವನ್ನೈದಿ ಆ ಪುರವಂ ಸುತ್ತಿಕೊಂಡು ಪೋಗುತಿರುವ ದೇವತೆಗಳಂ ಬಂಧಿಸಿ ಆ ಪಟ್ಟಣವನ್ನಿಳಿದು ಮಹಲೋಕವನ್ನೈದಿದರು. ಆಗ ಶೂರಪದ್ಮನಂ ಅಲ್ಲಿರುವ ಋಷಿಗಳಿಂ ಪೂಜಿತನಾಗಿ ಆಲೋಕದಿಂ ಪೊರಮಟ್ಟು ಜನೋಲೋಕ, ತಪೋಲೋಕಂಗಳಂ ನೋಡಿ, ಸೇನೆಯೊಡನೆ ಶೀಘ್ರನಾಗಿ ಚತುರ್ಮುಖನಿಂದಲಂಕೃತಮಾದ ಸತ್ಯಲೋಕವನ್ನೈದಿದನು.

ಸತ್ಯಲೋಕ-ವೈಕುಂಠ-ಕೈಲಾಸಗಳ ವಿಜಯ.

ಅನಂತರದಲ್ಲಿ ವಿಧಿಯು ದಶಬ್ರಹ್ಮರೊಡನೆ ಕ್ಷಣದಿಂ ಶೂರಪದ್ಮನ ಸಮೀಪಕ್ಕೆ ಬಂದು ಶೀತಳಮಾದ ಈ ವಾಕ್ಯಮಂ ಪೇಳ್ದನು. ಎಲೈ ಅಸುರನಾಯಕನೆ! ನಿನಗೆ ಪಿತಾಮಹನಾದ ನಾನು ಇಲ್ಲಿ ಸರ್ವಕಾಲವು ವಾಸಿಸುತ್ತಿರ್ಧೇನೆ. ನನ್ನ ಈ ಸರ್ವಸ್ವವು ನಿನ್ನದೇಸರಿ; ನಿನ್ನ ಆಗಮನವು ನನಗೆ ಮಹಾ ಸಂತೋಷಕರಮಾಗಿರ್ಧೆ, ಆದುದರಿಂದೀಗ ನಾನು ನಿನಗುಚಿತಂಗಳಾದ ಬಹು ಆಯುಧಂಗಳಂ ಬ್ರಹ್ಮಾಸ್ತ್ರಮಂ ರಮ್ಯಮಪ್ಪ ರಥಮಂ ಸಹ ಕೊಡುತಿರ್ಧೇನೆಂದು ಪೇಳ್ದು, ಅವುಗಳಂ ಕೊಟ್ಟನು. ಆ ಮೇಲೆ ಶೂರನು ಅತ್ಯಂತ ಬಹುಮಾನಮಂ ಮಾಡಿ, ಅನೇಕ ಸೇನಾಯುಕ್ತನಾಗಿ ವಿಷ್ಣುಲೋಕಕ್ಕೆ ಪೋದನು. ಆಗ ವ್ಯಾಪಕನಾದ ವಿಷ್ಣುವು ಆತನ ಆಗಮನವಂ ಕೇಳ್ದು ಶೀಘ್ರದಿಂ ಆತಂಗೆ ಇದಿರಾಗಿ ಬಂದು, ಎಲೈ ದೈತ್ಯೇಂದ್ರನೆ! ನಿನ್ನ ಕೃಪೆಯಿಂದೀಲೋಕದೊಳು ವಾಸವಂ ಮಾಡುತಲಿರ್ಧೇವೆ, ಸೈನಿಕರಿಂ ಯುಕ್ತನಾದ ನಿನ್ನಿಂದೆನ್ನಲೋಕ ಪುಂಟುಮಾಡಲ್ಪಡಲೆಂದು ಪೇಳಿ, ಆ ದೈತ್ಯರೊಡನೆ ತನ್ನ ಪಟ್ಟಣಮಂ ಪೊಕ್ಕು, ಅಲ್ಲಿಹ ವಿಚಿತ್ರಂಗಳಂ

ಅವರ್ಗೆ ತೋರಿಸಿ ಮರಳಿ ಆ ಅಸುರಶ್ರೇಷ್ಠನಿಗೋಸುಗ ಬಹು ದ್ರವ್ಯಂಗಳಂ ಕೊಟ್ಟು ಅನೇಕೋಪಚಾರಂಗಳಂ ಮಾಡಿದನು. ಆಗ ಶೂರಪದ್ಮನು ಮಹಾ ರಮಣೀಯಮಾದ ವಾಕ್ಯದಿಂ ಆ ಹರಿಗೆ ಸಂತೋಷಮಂ ಮಾಡಿ, ಆ ಲೋಕದಿಂ ಪೊರಮಟ್ಟು, ಮನೋಹರವಾದ ಕೋಪಯುಕ್ತನಪ್ಪ ಗಣಾಧಿಪತಿಗಳಿಂ ದೇವತೆಗಳಿಂ ಮಹಾ ಮುನಿಗಳಿಂ ಯುಕ್ತಮಾದ, ಪ್ರಾಕಾರ ಗೋಪುರ ಅಟ್ಟಾಳ ವಳಭಿ ಸಹಸ್ರ ಸ್ತಂಭಯುಕ್ತಮಾದ, ಮಂಟಪಗಳಿಂದೆಲ್ಲಕಡೆಯಲ್ಲಿಯುಂ ಅಲಂಕೃತಮಾದ, ನಾನಾರತ್ನ ವಿಭೂಷಣರಪ್ಪ ರುದ್ರಕನ್ಯಾಸಹಸ್ರಗಳಿಂ ವೀಣಾವೇಣು ಮೃದಂಗಪ್ರಮುಖ ಭೇರಿ ಕಹಳ ಡಿಂಡಿಮಗಳಿಂ ನಾಟ್ಯವಾದ್ಯ ಕುಶಲರುಗಳಿಂ ಗಾಯಕರುಗಳಿಂ ಕಿನ್ನರರಿಂ ಕರ್ಣಶ್ರಾವ್ಯಂಗಳಾದ ವೇದಘೋಷೆಗಳಿಂ ಸರ್ವಕಾಲದಲ್ಲಿಯು ಶೋಭಿತವಾದ ಶಿವ ಲೋಕಮಂ ಕಂಡು, ವೇಗದಿಂ ದೂರದೊಳಂಜಲಿ ಬಂಧವುಳ್ಳವನಾಗಿ ಸೇನೆಯಂ ಹಿಂದಕ್ಕೆ ಕಳುಹಿ, ಭಯಾನ್ವಿತನಾಗಿ ಸಿಂಹಮುಖ ತಾರಕರೊಡನೆ ಶಿವನಂ ಸ್ಮರಿಸುತ, ಮೆಲ್ಲಮೆಲ್ಲನೆ ಸಮೀಪಕ್ಕೆ ಪೋಗಿ ಆ ಶಿವ ಲೋಕದೊಳು, ಮಹಾ ವಿಭವ ವಿಸ್ತಾರಮಾದ ವಿಚಿತ್ರಮಪ್ಪ ನಾನಾ ರತ್ನಗಳಿಂ ಚಿತ್ರಮಾದ ಅತಿ ಮನೋಹರಮಾದ, ರಮ್ಯಂಗಳಪ್ಪ ಕಾಂಚನ ಪ್ರಾಕಾರಂಗಳಿಂ ಪರಿವೃತಮಾಗಿ ಮನೋಹಾರಿಯಾದ, ಸ್ವರ್ಣ ತೋರಣ ನಿರ್ಮಿತಾಶ್ವತ್ಥ ಪತ್ರಗಳಿಂದಲುಂ ಮತ್ತೆ ನಾನಾ ದಿಕ್ಕುಗಳಲ್ಲಿರುವ ರಮಣೀಯವಾದ ವೃಕ್ಷ ವಿಶೇಷಗಳಿಂದಲುಂ ಸರ್ವತ್ರ ಅನೇಕ ಮಂಟಪಂಗಳಿಂದಲುಂ, ಪ್ರವಾಳಗಳಿಂದಲೂ ಇಂದ್ರನೀಲ ಮಣಿಗಳಿಂದಲೂ ನಿರ್ಮಿತಂಗಳಾದ ಸೋಪಾನಂಗಳಿಂದಲುಂ ರಮ್ಯಮಾದ ದೇವಾಲಯಮಂ ಕ್ರಮದಿಂ ಕಂಡು, ಆ ಅಸುರನು ನಯನ ಸಾಫಲ್ಯಮನೈದಿ, ಕರ್ಣಕುಂಡಲಗಳಿಂ ಶೋಭಿತ ಮುಖಕಮಲರಾದ ತಿರುಹುತಲಿರುವ ನೇತ್ರವುಳ್ಳ ಮಹಾ ಭೀಮರಾದ ಬಹು ಕ್ರೂರರಾದ ಸರ್ವ ಸಂಹಾರಿಗಳಾದ ಮತ್ತರಾದ ಉನ್ಮತ್ತರಾದ ಮಹಾಧೀರರಾದ ಮಹಾಬಲ ಪರಾಕ್ರಮಿಗಳಾದ, ಬ್ರಹ್ಮಾಂಡ ಸಮೂಹವಂ ಸಂಹರಿಸಲು ಧರಿಸಲು ಉಪಪಟ್ಟ ವೇಷವುಳ್ಳವರಂತಿರುತಿರ್ಪ ಸಮುದ್ರದ ಚುಳುಕೋದಕದಿಂ ಪಾನಮಂ ಮಾಡುವರಂತೆ ಹೂಂಕಾರಯುಕ್ತರಾದ ಮತ್ತೆ ಸುರೂಪರಾಗಿಯುಂ ಅರೂಪರಾಗಿಯುಂ ದ್ವಿಪಾದ ತ್ರಿಪಾದ ಚತುಷ್ಪಾದ ಅಪಾದ ಏಕಪಾದರಾಗಿಯುಂ ಏಕಹಸ್ತ ದ್ವಿಹಸ್ತ ತ್ರಿಹಸ್ತ ಚತುರ್ಹಸ್ತರಾಗಿಯುಂ, ಸಿಂಹವಕ್ತ್ರ ಗಜಮುಖ ವ್ಯಾಘ್ರಮುಖ ಭೀಷಣಮಪ್ಪ ತರಕ್ಷುಮುಖ ಮೃಗಮುಖರಪ್ಪ, ಖರ ಮಹಿಷ ಗೋಮಾಯು ಭಲ್ಲೂಕ ಶಶಮುಖರಾದ ಮತ್ತೆ ಏಕ ದ್ವಿತ್ರಿ ಮುಖರಾದ ಅನೇಕಕೋಟಿ ಗಣಾಧೀಶ್ವರರುಗಳಿಂ ಪರಿವೃತನಾದ ದ್ವಾರಪಾಲಧುರಂ

ಧರನಾದ ದೇವನಾದ ನಂದಿಕೇಶ್ವರನಂ ಕಂಡು, ಸಂತುಷ್ಟನಾದ ಮನದಿಂ ಆತಂಗೆ ಅನೇಕ ನಮಸ್ಕಾರಗಳಂ ಮಾಡಿದನು. ಬಳಿಕ ನಂದಿಕೇಶ್ವರನು ಶೂರ ಪದ್ಮನಂ ನೋಡಿ, ಎಲೈ ದೈತ್ಯನೆ! ಪೂರ್ವದಲ್ಲಿ ಮಹತ್ತಾದ ಯಾಗದಿಂ ಶಂಭು ವಿಗೆ ಪೂಜೆಯಂ ಮಾಡಿ ಸರ್ವಾಭೀಷ್ಟಮಂ ಪಡೆದು ಈಗ ಬಂದಕಾರಣವೇ ನೆಂದು ನಿರೂಪಿಸಿದವನಾಗಲು, ಶೂರಪದ್ಮನು ಆ ವಾಕ್ಯವಂ ಕೇಳಿ, ಎಲೈ ದೇವನೆ! ನಾನು ದೇವದೇವನಾದ ಮತ್ತೆ ನನಗೆ ವಿಶೇಷವಾಗಿ ಒಡೆಯನಾದ ಮಹಾದೇವಂಗೆ ನಮಸ್ಕಾರಮಂ ಮಾಡಲು ಬಂದೆನು. ನನಗೆ ಇದಕ್ಕಿಂತಲು ವಿಶೇಷವಾದ ಕಾರ್ಯವೇನಿದ್ದೀತು? ನೀವು ಹೇಳಿ; ಅದುಕಾರಣದಿಂ ಸಮಯ ಮಂ ನೋಡಿ ಶುಭಾರ್ಥವಾಗಿ ಸ್ವಾಮಿಯ ಸಮೀಪವಂ ನನ್ನನೈದಿಸೆಂದು ಪೇಳು ತ್ತಿರೆ, ನಂದಿಕೇಶ್ವರನು ಅಂತಃಪುರಕ್ಕೆ ಹೋಗಿ ಸ್ವಾಮಿಗೆ ಬಿನ್ನಪಂಗೈದು, ಆ ಸ್ವಾಮಿಯಿಂದಾಜ್ಞಪ್ತನಾಗಿ ಮರಳಿ ಬಂದು ಶೂರಪದ್ಮನೊಡನೆ ಅಂಃಪುರವಂ ಪೊಕ್ಕನು. ಆಗ ಶೂರಪದ್ಮನು ಆಯಾದ್ವಾರದಲ್ಲಿರುತಿರ್ಪ ಗಣಾಧೀಶ್ವರರ್ಗೆ ನಮಸ್ಕಾರಂಗಳಂ ಮಾಡಿ, ಕೃತಾಂಜಲಿಪುಟನಾಗಿ ಅಂತಃಪುರವಂ ವೊಳಹೊಕ್ಕು ಅಲ್ಲಿ ದೇವದೇವನಾಗಿ ಈಶಾನನಾದ ತ್ರಿಯಂಬಕನಾದ ಸತ್ಯಜ್ಞಾನಾನಂದಮಯ ನಾದ ಸಾಕ್ಷಾತ್ಕೈವಲ್ಯಪ್ರದನಾದ ಋತನಾದ ಸತ್ಯನಾದ ಪರನಾದ ಬ್ರಹ್ಮನಾದ ಪುರುಷನಾದ ನೀಲಲೋಹಿತನಾದ, ಊರ್ಧ್ವರೇತಸ್ಕನಾದ ಅಪ್ರಮೇಯನಾದ ಪರಾತ್ಪರನಾದ, ಕಾಮಿಕಾದ್ಯಷ್ಟಾವಿಂಶತಿ ತಂತ್ರಂಗಳಿಂ ಸ್ತುತನಾದ ಚತುರ್ವೇ ದಂಗಳಿಂ ಸ್ತೂಯಮಾನ ಪಾದಾಂಬುಜನಾದ; ಸೌಂದರ್ಯರಪ್ಪ ನಾಟ್ಯವಿದ್ಯಾ ಕುಶಲರಪ್ಪ ಮೃಣಾಳ ಸೂತ್ರಂಗಳಂದದಿ ಶೋಭಿಸುತಿರ್ಪ ಚಾಮರಪಾಣಿಗಳಾದ ಮತ್ತೆ ಪಾದಕಡಗ ಧ್ವನಿಗಳಿಂ ನೃತ್ಯವ ನಾಡುತ್ತಿರುವ ರುದ್ರಕನ್ಯಾ ಸಹಸ್ರ ಗಳಿಂದಲುಂ ಮತ್ತರಾದ ತ್ರಿನೇತ್ರರಾದ ನೀಲಕಂಠರಾದ ಕುಂಭನಿಕುಂಭ ಪ್ರಮುಖ ಗಣಾಧೀಶ್ವರರುಗಳಿಂದಲುಂ, ಮಹಾತ್ಮರಾದ ಕಿಂಚಿನ್ಮುಕ್ತರಾದ ಮುನಿಗಳಿಂದಲುಂ ಸೇವಿತನಾದ ಪರಮೇಶ್ವರಂಗೆ ಭಕ್ತಿಯಿಂ ಅನುಜರೊಡನೆ ನಮಸ್ಕರಿಸಿ ಇಂತೆಂದನು.

ಶೂರಪದ್ಮಾಸುರನು ಮಹಾದೇವನನ್ನು ಸ್ತುತಿಸುವಿಕೆ.

ಮಹಾದೇವನಾದ ಸೃಷ್ಟಿಸ್ಥಿತ್ಯಂತ ಕಾರಣನಾದ ಭಕ್ತವತ್ಸಲನಾದ ಎಲೈ ವಿಶ್ವೇಶ್ವರನೆ! ನಿನಗೋಸುಗ ನಮಸ್ಕಾರವು, ವಿಶ್ವರೂಪನಾದ ಸಾಂಬನಾದ ಸಸೋಮನಾಗಿ ಸಪುತ್ರನಾದ ಶಂಭುವಾದ ಗಂಗಾಧರನಾದ ಭರ್ಗನಾದ ಸಾಕ್ಷಾ ತ್ಕೈವಲ್ಯರೂಪನಾದ, ಶುದ್ಧಸ್ಫಟಿಕ ಸಂಕಾಶರೂಪ ಮೂರ್ತಿಯಾದ ಬ್ರಹ್ಮ ಗೋಸುಗ ನಮಸ್ಕಾರವೆಂದು ಸ್ತುತಿಸಿದನು. ಆಗ ಇತರರಾದ ಅಸುರರು

ಆದೇರೀತಿಗೈದು ವಿನಯಸಮೇತರಾಗಿ ನಿಂತಿದ್ದರು. ಅನಂತರದಲ್ಲಿ ದೇವದೇವೇಶನಾದ ಶಂಕರನು ನಂದಿಕೇಶ್ವರನಂ ವೀಕ್ಷಿಸಿ, ಎಲೈ ನಂದಿಕೇಶ್ವರನೆ! ನಮ್ಮ ಭಕ್ತನಾದ ಶೂರಪದ್ಮನು ತನ್ನ ವಂಶದಲ್ಲಿರ್ಪ ಅಂಡಂಗಳಂ ಕುರಿತು ನಮ್ಮಾಜ್ಞೆಯಿಂ ತೆರಳಿ, ಅಲ್ಲಲ್ಲಿ ಅಂಡಪಾಲಕರಂ ಕಲ್ಪಿಸಿ ಮರಳಿ ಬಂದು ಅನುಜರೊಡನೆ, ಈ ಅಂಡಮಧ್ಯದಲ್ಲಿ ವಾಸವಾಗಿರಲೆಂದು ಈ ಪ್ರಕಾರವಾಗಿ ನಿರೂಪಿಸಿದವನಾಗಲು, ನಂದಿಕೇಶ್ವರನು ಆ ವಾಕ್ಯವಂ ಕೇಳ್ದು ಆ ಅಸುರನಂ ಕುರಿತು, ಎಲೈ ಶೂರಪದ್ಮನೆ! ನೀನು ಹೋಗಿ ಸ್ವಕೀಯವಾದ ಅಂಡಂಗಳಂ ನೋಡಿ ಅಂಡರಕ್ಷಕರನ್ನಿರಿಸಿ ಅಂಡಮಧ್ಯದಲ್ಲಿ ವಾಸವುಮ್ಮಾಡಬೇಕೆಂದು ಶಾಂಭವಾಜ್ಞೆಯಂ ಪೇಳುತ್ತಿರಲಾಗಿ, ಶೂರನು ವೇಗದಿಂ ದೇವನಾದ ಲೋಕ ಶಂಕರನಾದ ಶಂಕರಂಗೆ ನಮಸ್ಕಾರವಮ್ಮಾಡಿ ಮರಳಿ ಅನುಜರೊಡನೆ ಪೊರಮಟ್ಟು ಪ್ರಥಮದ್ವಾರಮನ್ನೈದಿ, ಅಲ್ಲಿ ನಂದಿಕೇಶ್ವರಂಗೆ ಮರಳಿ ನಮಸ್ಕಾರಮಮ್ಮಾಡಿ ಆತನಿಂದ ಅನುಜ್ಞಾತನಾಗಿ ತನ್ನ ಸೇನೆಯಂ ಸೇರಿದನೆಂದು ಸೂತಂ ಶೌನಕಾದಿಗಳ್ಗೆ ಪೇಳಿದನೆಂಬಲ್ಲಿಗೆ, ಅಸುರಕಾಂಡದ ಆರನೆಯ ಅಧ್ಯಾಯವು ಸಂಪೂರ್ಣಂ.

ಏಳನೆಯ ಅಧ್ಯಾಯವು.

ಶೂರಪದ್ಮ ಶುಕ್ರಾಚಾರ್ಯ ಸಮಾಗಮವು.
ವಿಷ್ಣು ಶೂರಪದ್ಮ ಸಂವಾದ ರುದ್ರಸೃಷ್ಟಿ.

ಎಲೈ ಮುನಿಗಳಿರಾ! ಅನಂತರದಲ್ಲಿ ಶೂರನು ಸೇನೆಯೊಡನೆ ಅಂಡಂಗಳಂ ನೋಡಲು ಪೊರಮಟ್ಟು ರುದ್ರಪಾಲಿತವಾದ ಬ್ರಹ್ಮಾಂಡದ ಭಿತ್ತಿಯಂ ತ್ವರಿತದಿಂದೈದಿದನು. ಆಗ ರುದ್ರರು ಸೇನಾಸಮೇತನಾಗಿ ಬಂದಿರ್ಪ ಆ ಶೂರನಂ ಕಂಡು ಶಿವಾಜ್ಞೆಯಿಂದಾತಂಗೆ ಶೀಘ್ರದಿಂ ನಿಜಮಾರ್ಗವಂ ಕೊಟ್ಟವರಾಗಲು, ಅವರು ಮುದದಿಂ ಅಂಡದ ಪೂರ್ವದ್ವಾರವನ್ನೈದಿ, ತ್ವರಿತದಿಂ ಆ ಅಂಡಂಗಳಂ ಪ್ರವೇಶಿಸಿ ಶತ್ರುಗಳಂ ಜಯಿಸಿ, ಮಹಾ ಪರಾಕ್ರಮಿಗಳಾದ ಅಂಡಪಾಲಕರಂ ಸ್ಥಾಪಿಸಿ, ಅವರೊಳು ನಾನಾ ಭೋಗಂಗಳಂ ಭುಂಜಿಸಿ, ಶೀಘ್ರದಿಂ ಪೊರಮಟ್ಟು ಈ ಅಂಡಾಧಿಪರಾದ ರುದ್ರರು ಅವರ ಆಗಮನವಂ ಕೇಳಿ ಬ್ರಹ್ಮಾಂಡದ ಭಿತ್ತಿಯಂ ಭೇದಿಸಿ ಮಾರ್ಗವಂ ಕೊಟ್ಟವರಾಗಲು, ಶೂರಪದ್ಮನು ನಾನಾ ವಿಧ ಬಲದೊಡನೆ ಸ್ವರ್ಗವನ್ನೈದಿದನು. ಬಳಿಕ ಪೂರ್ವದಲ್ಲಿ ದೇವತೆಗಳಿಂ ರಣಾಂಗಣದೊಳು ಕ್ಷೀಣಬಲನಾದ ಪಂಡಿತನಾದ ಮತ್ತು ಈತಂಗೆ

ಪಿತಾಮಹನಾದ ಅಸುರೇಂದ್ರನು ಶುಕ್ರಾಚಾರ್ಯನೊಡನೆ ಆತನ ಸಮೀಪವನ್ನೈದಿ, ಕುಶಲಪ್ರಶ್ನೆ ಪೂರ್ವಕವಾಗಿ ಬಂಧುತ್ವಮಂ ಪೇಳಿದವನಾಗಲು, ಆಗ ಶೂರಪದ್ಮನು ದೈತ್ಯಗುರುವಿಂಗೆಯುಂ ಅಸುರೇಂದ್ರಂಗೆಯುಂ ನಮಸ್ಕಾರವಂ ಮಾಡಿ, ಪರಮ ಹರುಷದಿಂದವರಂ ಪರಿಪರಿ ಪೂಜಿಸಿ ಅವರ್ಗೆ ದಿಗ್ವಿಜಯವನುಂ ಅಂಡಂಗಳ್ಗೆ ತನ್ನ ಗಮನವನುಂ ಪೇಳ್ದು, ಅವರಿಂದಲುಂ ಯುಕ್ತನಾಗಿ ಅನುಜರೊಡನೆ ಸೇನಾಸಮೇತನಾಗಿ ಭೂತಳವನ್ನೈದಿದನು.

ಆಗ ದೇವತೆಗಳು ಖಿನ್ನರಾಗಿ ಈತನ ಭಯದೊಡನೆ ಯುಕ್ತರಾಗಿ ಈತಂ ಭೂತಳಕ್ಕೆ ಪೋದನೆಂಬುವಂ ಕೇಳಿ ವಿಷ್ಣುಲೋಕಮನ್ನೈದಿ, ಅರಿಮರ್ದಕನಾದ ಜನಾರ್ದನನಾದ ಆ ವಿಷ್ಣುವಂ ಕಂಡು, ಎಲೈ ದೇವದೇವನೆ! ದೈತ್ಯರಿಂ ಪೀಡಿತರಾದ ನಮ್ಮಗಳನ್ನು ರಕ್ಷಿಸೆಂದು ಪೇಳಲಾಗಿ, ಮಾಧವನು ಆ ವಚನಮಂ ಕೇಳಿ ಎಲೈ ಮೂಢಬುದ್ಧಿಯುಳ್ಳವರಾದ ದೇವತೆಗಳಿರಾ! ವ್ಯರ್ಥಮಾದ ಯತ್ನವಂ ಏನು ಕಾರಣದಿಂ ಮಾಡುತಲಿದ್ದೀರಿ? ಹಾಹಾ ಆಶ್ಚರ್ಯವು. ನೀವು ದಕ್ಷಾಧ್ವರದೊಳು ಯಾಗಕ್ಕೆ ರಾಜನಾದ ಮಹಾದೇವನಂ ಬಿಟ್ಟು ನನ್ನೊಡನೆ ಹವಿರ್ಭಾಗಮಂ ಕೈಕೊಂಡಿದ್ದದ್ದರಿಂದ ಈ ರೀತಿ ಯುಂಟಾದುದು. ಅದುಕಾರಣದಿಂ ನಮ್ಮಿಂದ ಈ ಶೂರಪದ್ಮನು ಸೇವಿಸಲು ಯೋಗ್ಯನೆಂದು ಮಹತ್ತಾದ ಶಿವನಾಜ್ಞೆಯಿರುವದೆಂಬದಾಗಿ ದೇವತೆಗಳ್ಗೆ ಪೇಳ್ದು, ಕೋಟಿ ದೇವತೆಗಳೊಡನೆ ತಾನೆ ಶೂರಪದ್ಮನ ಬಳಿಗೈದಿ, ಎಲೈ ಅನಘನಾದ ಅಸುರಶ್ರೇಷ್ಠನೆ! ಆಶ್ರಿತ ಸಂರಕ್ಷಕನಾದ ಶತ್ರುಭಯಂಕರನಾದ ನಿನಗೆ ಕುಶಲವೇ? ನಾನು ನಿನ್ನ ದಯದಿಂದ ಇಷ್ಟುಕಾಲ ಪರ್ಯಂತರ ಇದ್ದೆನೆಂದು ಪೇಳಿದನು.

ಅನಂತರದಲ್ಲಿ ಶೂರಪದ್ಮನು ಆ ಹರಿಗೆ ಬಹು ಸಂತೋಷಮನ್ಮಾಡಿ, ದೇವತೆಗಳ ಮಧ್ಯದಲ್ಲಿ ಬಹು ಪರಾಕ್ರಮಿಗಳಾದ ಅನೇಕ ರುದ್ರರಂ ಕಂಡು ಎಲೈ ಮಾಧವನೆ! ತ್ರಿಣೇತ್ರರಾದ ನೀಲಕಂಠನಾದ ರುದ್ರರೂಪರಾದ ಇವರಾರು? ನೀನು ಪೇಳೆಂದು ಕೇಳಲಾಗಿ, ವಿಷ್ಣುವು, ಎಲೈ ದೈತ್ಯನೆ! ಪೂರ್ವದಲ್ಲಿ ಬ್ರಹ್ಮನು ರಜೋಗುಣಯುತನಾಗಿ ವ್ಯರ್ಥಮಾದ ಅಹಂಕಾರದಿಂ ಗರ್ವಿತನಾಗಿ ಮಹಾಮಾಯಾ ವಿಮೋಹಿತನಾಗಿ, ಶಿವಲೀಲೆಯಂ ಮರೆತು ತಾನೆ ಜಗತ್ಕರ್ತನು ಜಗತ್ಸಂಹಾರಕನು ಜಗತ್ಪಾಲಕನೆಂದಿದ್ದನು. ಅದುಕಾರಣದಿಂ ಶಿವಾಜ್ಞೆಯಿಂದಾತನ ಸೃಷ್ಟಿಸಾಮರ್ಥ್ಯವು ಪೋದುದು. ಮರಳಿ ಆ ಬ್ರಹ್ಮನು ತನ್ನಿಂ ಮೂಢಮನದಿಂ ಏನು ಚೇಷ್ಟಿತಮಾದುದು? ಸರ್ವಸಮ್ಮೋಹನಕಾರಿಣಿಯಾದ ಶಿವನ ಮಾಯೆ ಯಾರಿಂದಲು ದಾಂಟಲಶಕ್ಯವು. ಆವುದಾನೊಂದು ಕಾರಣದಿಂ ಮಹಾ ದೇವನಾದ ಮತ್ತೂ ನನಗೆ ಕರ್ತನಾದ ಅವ್ಯಯನಾದ

ಅಖಿಲಾಂಡಂಗಳ ಸೃಷ್ಟ್ಯಾದಿಗಳನ್ನು ಮಾಡುವಲ್ಲಿ ಉದ್ಯುಕ್ತನಾದ, ಆ ಶಿವನಂ ತಿಳಿಯದೆ ಅತ್ಯಂತ ಅಹಂಕಾರಿಯಾದನು. ಅದರಿಂ ಈ ಫಲವುಂಟಾದುದು. ಇದು ನಿಶ್ಚಯವೇ ಸರಿಯೆಂದು ಚಿಂತಾಪರವಶನಾಗಿ ಭ್ರೂಮಧ್ಯದೊಳು ನೀಲಕಂಠನಾದ ತ್ರಿಣೇತ್ರನಾದ ವಿಕಸಿತ ಮುಖಕಮಲನಾದ ಮುಗುಳುನಗೆ ಯುಕ್ತಮಪ್ಪ ಮುಖಮುಳ್ಳವನಾದ ಮೌಕ್ತಿಕಮಾಲಾ ವಿರಾಜಿತನಾದ ಕೋಟಿಸೂರ್ಯರ್ಗೆ ಸದೃಶನಾದ ಸ್ಫಟಿಕ ಪೀಠದ ಮೇಲೆ ಕುಳಿತಿರುವ ಸಾಂಬನಾದ ಶಿವನಾದ ಸತ್ವರೂಪನಾದ ಶಂಭುವಂ ಧ್ಯಾನಿಸುತ್ತಿರ್ದನು. ಅನಂತರದಲ್ಲಿ ಈಶ್ವರನು ಅತ್ಯಂತ ಪ್ರೀತನಾದ ಮನದಲ್ಲಿ ಏಕಾದಶ ರುದ್ರರಂ ಬ್ರಹ್ಮನ ಸಮೀಪಕ್ಕೆ ಪೋಗೆಂದು ಪ್ರೇರಿಸಿದನು. ಆಗ ಬ್ರಹ್ಮನು ಅವರಂ ಕಂಡು ಭಕ್ತಿಯಿಂ ನಮಿಸಿ, ಎಲೈ ಸ್ವಾಮಿಗಳಿರಾ! ನೀವಾರು? ಈಗ ನೀವು ಯಾತಕ್ಕಾಗಿ ಬಂದಿರೆಂದು ಪ್ರಶ್ನೆಯಂ ಮಾಡುತ್ತಿರೆ, ಏಕಾದಶರುದ್ರರು ಆ ವಾಕ್ಯಮಂ ಕೇಳಿ ಎಲೈ ಸೃಷ್ಟಿಕರ್ತನೆ! ನಾವು ರುದ್ರರು ದೇವದೇವನಾದ ಶಂಭುವಿನಿಂ ನಿನ್ನ ಸೃಷ್ಟ್ಯರ್ಥಮಾಗಿ ಪ್ರೇರಿಸಲ್ಪಟ್ಟು ನಿನ್ನ ಸಮೀಪವನ್ನೈದಿದೆವೆಂದು ಪೇಳಿದರು. ಬಳಿಕ ಬ್ರಹ್ಮನು ರುದ್ರರಲ್ಲಿ ಆಸಕ್ತನಾಗಿ ಸರ್ವೇಶ್ವರನಾಜ್ಞೆಯಿಂ ನೀವೇ ಸೃಷ್ಟಿಕಾರ್ಯವನ್ಮಾಡಿರೆಂದು ಪೇಳಲಾಗಿ, ಆ ಮಾತಂ ಕೇಳಿ ರುದ್ರರು ಪ್ರತ್ಯೇಕಮಾಗಿ ಕೋಟಿ ಸಂಖ್ಯೆಯಿಂ ರುದ್ರಸೃಷ್ಟಿಯನ್ಮಾಡಿದರು. ಆಗ ಬ್ರಹ್ಮನು ಮಹಾತ್ಮರಾದ ರುದ್ರರಿಂ ಸೃಜಿಸಲ್ಪಟ್ಟ ಬಹು ರುದ್ರರಂ ಕಂಡು, ಜಗಜ್ಜಾಲವು ರುದ್ರರಿಂದಾವೃತಮಾಗಿ ಪೋಗಿ, ನಂದಿಕೇಶ್ವರನಿಂ ಮಹಾದೇವಂಗೆ ಬಿನ್ನಪಂಗೈಯಿಸಿ, ಆತನಿಂ ಕರೆಯಲ್ಪಟ್ಟವನಾಗಿ ಅಂತಃಪುರವನ್ನೈದಿ, ಅಲ್ಲಿ ಲೋಕಾನುಗ್ರಹ ಕಾರಣನಾದ ಮಹಾದೇವನಂ ಕಂಡು ಭೂಮಿಯಲ್ಲಿ ದಂಡದೋಪಾದಿಯಲ್ಲಿ ನಮಸ್ಕಾರವನ್ಮಾಡಿ ಬಹು ವಿಧ ಸ್ತೋತ್ರದಿಂ ಸ್ತುತಿಸಿ ನಿಂತಿರುವ ಸಮಯದಲ್ಲಿ ಎಲೈ ಬ್ರಹ್ಮನೆ! ಏನುಕಾರಣ ಬಂದೆ? ಎಂದು ದೇವದೇವನಾದ ಶಿವನಿಂ ನಿರೂಪಿಸಲ್ಪಟ್ಟು ಭಯಾನ್ವಿತನಾಗಿ ತನ್ನ ಅಜ್ಞಾನದೋಷಮಂ ಶಿವಾಜ್ಞೆಯಿಂ ರುದ್ರರ ಆಗಮನಮಂ ರುದ್ರಸೃಷ್ಟಿ ಮೊದಲಾದ ಬಹುವಾದ ವೃತ್ತಾಂತವಂ ಪೇಳ್ದನು. ಬಳಿಕ ಮಹಾದೇವನು ವಿಕಸಿತ ಕಮಲಲೋಚನದಿಂ ಆ ಚತುರಾನನಂ ವೀಕ್ಷಿಸಿ, ಎಲೈ ಬ್ರಹ್ಮನೆ! ನೀನು ಗರ್ವವಂ ಬಿಟ್ಟು ನಮ್ಮ ಆಜ್ಞೆಯಿಂ ಇಂದು ಮೊದಲಾಗಿ ಪೂರ್ವದೋಪಾದಿಯಲ್ಲಿ ಸೃಜಿಸೆಂದು ಅಪ್ಪಣೆಯಂ ಕೊಟ್ಟು ಏಕಾದಶ ರುದ್ರರಂ ತಮ್ಮ ಭಾವವನ್ನೈದಿಸಿ, ದೇವತೆಗಳಂ ಏಕಾದಶಕೋಟಿ ರುದ್ರರಂ ಸ್ಥಾಪಿಸಿದನು. ಆಗ ದೇವತೆಗಳು ಇವರೂ ಸಹ ಮುವ್ವತ್ತು ಮೂರು ಕೋಟಿ ಸಂಖ್ಯಾಪರಿಮಿತರಾದರು. ಆ ಮೇಲೆ ಬ್ರಹ್ಮದೇವನಾದ ಈಶಾನಂಗೆ

ನಮುಸ್ಕಾರಮುಮ್ಮಾಡಿ ಸ್ಥಿತಿಯನ್ನೈದಿದನು. ಎಲೈ ಶೂರನೆ! ಈ ಪ್ರಕಾರ ವಾಗಿ ರುದ್ರಸೃಷ್ಟಿಯು ಪೇಳಲ್ಪಟ್ಟಿತೆಂದು ವಿಷ್ಣುವು ನುಡಿಯಲಾಗಿ, ಶೂರ ಪದ್ಮನು ಅದ್ಭುತವಾದ ಆ ರುದ್ರಸೃಷ್ಟಿಯಂ ಕೇಳ್ದು ಪರಮ ಪ್ರೀತಿಯನ್ನೈದಿ ಅನುಜರೊಡನೆ ಸೇನಾಸಮೇತನಾಗಿ ಮಾಧವನೊಡನೆ ಶುಕ್ರನಿಂ ಪ್ರೇರಿತನಾಗಿ ದಕ್ಷಿಣದಿಕ್ಕಿನಲ್ಲಿ ಲವಣಾಬ್ಧಿಮಧ್ಯದೊಳು ಯೆಂಭತ್ತುಸಾವಿರ ಯೋಜನ ವಿಸ್ತಾರ ವಾದ ಶತಯೋಜನ ಅಗಲವುಳ್ಳ ಅನೇಕ ವಿಧಗಳಿಂ ಯುಕ್ತವಾದ, ಕಾಂಚೀ ದಾಮದಂತೊಪ್ಪುವ ಅಗಳು ಆಳ್ವೇರಿ ಕೋಟೆಗಳಿಂದಾವೃತವಾದ ಬ್ರಹ್ಮಾಂ ಡಕ್ಕೆ ಆಧಾರವಾದ, ಕುಂಭಗಳೋ ಏನೋ ಎಂಬಂತಿರುವ ಚತುರ್ದ್ವಾರ ಗೋಪುರಗಳಿಂ, ವಾಪೀಕೂಪ ತಟಾಕ ಕಾಸಾರಗಳಿಂದಾವೃತವಾದ ನಾಲ್ಕು ದಿಕ್ಕುಗಳಲ್ಲಿರುತಿರ್ಪ ಉದ್ಯಾನ ಸಮೂಹಗಳಿಂದಲಂಕೃತವಾದ ಮತ್ತೆ ನಾಳಿ ಕೇರ, ಆಮ್ರ, ಪನಸ, ಪಾಟಲಿ, ಮಧೂಕ, ಪಾರಿಜಾತ, ಕುದ್ದಾಲ, ವಟ ಮಂದಾಲ, ಅಶೋಕ, ಪೂಗ, ಪುನ್ನಾಗ, ಹಿಂತಾಳ, ತಾಳ, ನಾರಂಗ, ಮಾತು ಳಂಗ, ಜಂಬು, ಪ್ಲಕ್ಷ, ಸುಮೇರು, ಅಗ್ನಿಶಾಲ್ಮಲಿ, ವಕುಳ, ಅಶ್ವತ್ಥ, ನಿಂಬ, ಜಂಬೀರ, ದಾಳಿಂಬ, ಅಕ್ಷಲೋಧ್ರ, ಶಿರೀಷ, ಶ್ರೀಫಲ, ಕೋಲ, ಕುಲಕ, ಅಗರು, ಚಂದನ, ತಿಂತ್ರಿಣೀ, ವರುಣ, ದ್ರಾಕ್ಷಿ, ಕಕುಭ, ಆಯುಗ್ಮಪತ್ರ, ತಮಾಲ ತಿಲಕ ಎಂಬಿವು ಮೊದಲಾದ ಬಹು ವೃಕ್ಷಗಳಿಂದಾವೃತವಾದ, ಸೋಪಾನ ಪಂಗ್ತಿಗಳಿಂ ವಿರಾಜಿತವುಳ್ಳ, ವಲಭಿಗಳಿಂ ಅಟ್ಟಾಲಗಳಿಂ ಹರ್ಮ್ಯ ಗಳಿಂ ಯುಕ್ತವಾದ ಅಳಿಂದ ದೇಹಳಿ ನೀವ್ರಜಾಲಂಗಳಿಂ ಮನೋಹರವುಳ್ಳ ಮಾಣಿಕ್ಯಗಳಿಂ ಕೆತ್ತಿಸಲ್ಪಟ್ಟ, ಶತಸಹಸ್ರಗ್ರುಹಗಳಿಂ ದದ್ಭುತವಾದ ರಮ್ಯ ವಾದ ಪುರವಂ ವಿಶ್ವಕರ್ಮನಿಂ ನಿರ್ಮಾಣಮುಮ್ಮಾಡಿಸಿದನೆಂದು ಶೌನಕಾದಿ ಮುನಿಗಳ್ಗೆ ಸೂತಂ ಪೇಳಿದ ನೆಂಬಿಲ್ಲಿಗೆ ಆಸುರಕಾಂಡದಲ್ಲಿ ಏಳನೆಯ ಅಧ್ಯಾಯವು ಸಂಪೂರ್ಣಂ.

ಎಂಟನೆಯ ಅಧ್ಯಾಯವು.

ವಿಶ್ವಕರ್ಮ ನಿರ್ಮಿತ ಪಟ್ಟಣಾಭಿವರ್ಣನೆ.

ಎಲೈ ಮುನಿಗಳಿರಾ! ಅನಂತರದಲ್ಲಿ ದನುಜಾಧಿಪನಾದ ಶೂರಪದ್ಮನು ಆ ಪುರವರದಲ್ಲಿ ಸಹಸ್ರ ಪ್ರಾಕಾರಗಳಿಂ ರಮ್ಯವಾಗಿ ಅಗಳುಗಳಿಂದಾವೃತವಾದ ಚತುರ್ದ್ವಾರಂಗಳಿಂದಿರುತಿರ್ಪ ಮಹಾಗೋಪುರಗಳಿಂ ಭೂಷಿತವಾದ ಅನೇಕ ಅಂಗಣಗಳಿಂ ಯುಕ್ತವುಳ್ಳ ಪ್ರಾಸಾದಗಳಿಂದತಿಮನೋಹರವಾದ ಸ್ಫಟಿಕ್ಕ ಗಳಿಂ ನಿರ್ಮಿತವುಳ್ಳ ನಿಚ್ಚಣಿಗೆಗಳಿಂ ಶತ ಸಹಸ್ರವೇದಿಕೆಗಳಿಂದಲುಂ ನಾನಾದಿಕು

ಗಳಲ್ಲಿ ಬಿತ್ತರಗಳಿಂದಲುಂ ವಿಚಿತ್ರಮಾದ, ಕ್ರೀಡಾಪರ್ವತ ಸಮೂಹಂಗಳಿಂ ಎಲ್ಲಾ ಕಡೆಯಲ್ಲಿಯುಂ ವಾಪೀ ಸಮೂಹಗಳಿಂದಲು ವಾರಿಪೂರಿತಂಗಳಾದ ಅನೇಕ ಕೂಪಗಳಿಂದಲು ಆವೃತಮಾದ ಪರ್ವತರ್ಗಳ ಕುಸುಮಂಗಳಿಂದುಜ್ವಲ ಮಪ್ಪ, ಉಪವನಸಮೂಹಂಗಳಿಂ ಅನೇಕ ಶೃಂಗಾರವನಂಗಳಿಂದಲುಂ ಅಲಂಕೃತಮಾದ, ಸಮಸ್ತ ದಿಕ್ಕುಗಳಲ್ಲಿ ಸಹಸ್ರ ಯಾಗಶಾಲೆಗಳಿಂ ವಿರಾಜಿತಮಾದ, ಉಭಯಪಾರ್ಶ್ವದಲ್ಲಿರುವ ಯೋಗಶಾಲೆಗಳಿಂದಲುಂ ಗಾನಶಾಲೆಗಳಿಂ ವಿಶಾಲ ಮಪ್ಪ ಶತಪಾಕಶಾಲೆಗಳಿಂದಲುಂ ಭೂಷಣಶಾಲೆಗಳಿಂದಲುಂ ಶಸ್ತ್ರಯುದ್ಧಶಾಲೆ ಗಳಿಂದಲುಂ ಅಸ್ತ್ರಶಾಲೆಗಳಿಂದಲುಂ ಕಥಾಶಾಲೆಗಳಿಂದಲುಂ ವಿದ್ಯಾಶಾಲೆಗಳಿಂದ ಲುಂ ಭೋಜನಶಾಲೆಗಳಿಂದಲುಂ ಗಜಶಾಲೆಗಳಿಂದಲುಂ ಅಶ್ವಶಾಲೆಗಳಿಂದಲುಂ ಆವೃತಮಾದ ಆಸ್ಥಾನ ಮಂಟಪಗಳಿಂದಲು ದೇವಾಸುರ ಮಂಟಪಗಳಿಂದಲುಂ ನಾನಾರತ್ನ ವಿಚಿತ್ರಮಾದ ಏಕಾಂತ ಮಂಟಪಗಳಿಂದಲು ಬಹು ಮನೋಹರ ಮಾದ ಮುಕ್ತಾಮಣಿ ಮಂಟಪಗಳಿಂ ಶೋಭಿಸುವ ರಾಜಗೃಹಗಳಿಂ ಪ್ರವಾಳಂ ಗಳಿಂ ಕಾಂತಿಯಿಂ ರಮ್ಯಮಾದ ವೈಡೂರ್ಯ ರತ್ನಗಳಿಂ ಕೆತ್ತಿಸಲ್ಪಟ್ಟ ಬಹು ಮಂಟಪಗಳಿಂದಲುಂ ಪುಷ್ಯರಾಗಗಳಿಂ ರಚಿತವಾದ ಉಜ್ವಲಮಂಟಪಗಳಿಂದಲು ಅನೇಕ ಪದ್ಮರಾಗ ನಿರ್ಮಿತಂಗಳಾಗಿ ತೇಜೋರಾಶಿಗಳಿಂ ಪ್ರಕಾಶಿಸುತಿರ್ಪ ಮಂಟಪಗಳಿಂದಲು ಪೊಪ್ಪುವ, ಮರಕತ ಖಚಿತವಾದ ಕಾಂತಿಸಮೂಹದಿಂದಾ ವೃತಮಾದ ಮಂಟಪಗಳಿಂದಲುಂ ಇಂದ್ರನೀಲರತ್ನಂಗಳಿಂ ರಚಿತಮಾದ ಮಂಟಪಗಳಿಂದಲುಂ, ವಜ್ರಮಣಿ ವಿನಿರ್ಮಿತವಾದ ಮನೋಹರಮಂಟಪಗಳಿಂ ದಲು, ಶುದ್ಧಸ್ಫಟಿಕ ಮಣಿಮಯ ಮಂಟಪಗಳಿಂದಲುಂ ಗೋಮೇಧಿಕ ಮಣಿ ಗಳಿಂ ಕೆತ್ತಿಸಲ್ಪಟ್ಟ ಭಿತ್ತಿಗಳುಳ್ಳ ಮಂಟಪಗಳಿಂದಲುಂ ಸುಗಂಧದಿಂ ವಿಚಿತ್ರ ವಾದ ಹರಿಚಂದನ ವೃಕ್ಷ ಸಮೂಹಗಳಿಂ ರಮ್ಯವಾದ ಮಂಟಪಗಳಿಂದಲುಂ, ಸಮಸ್ತ ದಿಕ್ಕುಗಳಲ್ಲಿಯುಂ ಅತಿ ಮನೋಹರಮಾಗಿ ಅಲಂಕರಿಸಲ್ಪಟ್ಟ ಇತರ ಮಂಟಪಗಳಿಲೂ ಶೋಭಿಸುವ ಮತ್ತೆ ಮಾಣಿಕ್ಯಗಳಿಂ ಖಚಿತಮಾದ ಅಲ್ಲಲ್ಲಿರುವ ಗಗನಮಂ ಸೋಂಕುವ ಪತಾಕೆಗಳಿಂದಲು ಮೌಕ್ತಿಕ ಮಾಣಿಕ್ಯಗಳಿಂ ಖಚಿತವಾದ ಕನಾಟ ಸಹಸ್ರಗಳಿಂದಲು ನಾನಾದಾರು ಶಿಲಾಮಯವಾದ ಕಾರಾಗೃಹಗಳಿಂ ದಲುಂ ರಮ್ಯವಾದ ರಾಜಭವನಮಂ ನಿರ್ಮಿಸಿ, ಆ ಪುರಕ್ಕೆ ವೀರಮಾಹೇಂದ್ರ ವೆಂಬ ಪೆಸರನಿಟ್ಟನು.

ಶೂರಪದ್ಮಾಸುರನ ವೊಡ್ಡೋಲಗ ವರ್ಣನೆ.

ಬಳಿಕ ಆ ವೀರಮಾಹೇಂದ್ರಪುರ ಬಳಸಿ ಮಂಟಪಂಗಳಂ ನಿರ್ಮಿಸಿದ ನದೆಂತೆನೆ, ಅಸುರನಾಯಕನಾದ ಶೂರಪದ್ಮನಿಂದ ಆ ಪುರಿಗೆ ಪೂರ್ವದಿಕ್ಕಿನೊಳು

ಹೇಮಪುರಿಯೆಂಬದು ಆ ಪಟ್ಟಣದಂತೆ ಶೋಭಿಸುವದು. ಮತ್ತಂ ಆಗ್ನೇಯ ಭಾಗದಲ್ಲಿ ದೇವಪುರಿಯುಂ, ಯಾಮ್ಯದಿಗ್ಭಾಗದಲ್ಲಿ ಲಂಕಾಪುರಿಯುಂ, ನೈಋ ಋತ್ಯಭಾಗದಲ್ಲಿ ನೀಲಪುರಿಯುಂ, ವರುಣದಿಗ್ಭಾಗದೊಳು ಶ್ವೇತಪುರಿಯೆಂಬುದಂ ವಾಯವ್ಯದಿಕ್ಕಿನೊಳು ಅಸುರರ್ಗೆ ಮನೋಹರಮಾದ ಅಸುರಪುರಿಯೆಂಬುದಂ, ಕುಬೇರದಿಕ್ಕಿನೊಳು ವಾಮವೆಂಬ ಪುರಿಯುಂ ಈಶಾನ್ಯಭಾಗದೊಳು ಪದ್ಮಪುರಿ ಯುಂ ನಿರ್ಮಿಸಲ್ಪಟ್ಟು ಯೆಸೆಯುತ್ತಿದ್ದವು. ಅನಂತರದಲ್ಲಿ ಸಮುದ್ರದ ಉತ್ತರ ದಿಕ್ಕಿನೊಳು ಈತನಿಂ ನಿರ್ಮಿತಮಾದ ನವರತ್ನಖಚಿತಮಾದ ಅಸುರಪುರಿಯು ವಿಚಿತ್ರಮಾಗಿರ್ಕುಂ. ಬಳಿಕ ಮೇರುವಿಗೆ ದಕ್ಷಿಣ ಜಂಬೂ ದ್ವೀಪದೊಳು ಈತನ ಬಲದಿಂ ಹೇಮಕೂಟಗಿರಿಯ ಸಮೀಪದಲ್ಲಿ ಮಾಯಾಪುರಿಯು ನಾನಾ ವಿಧ ರತ್ನ ಭಿತ್ತಿಯುಳ್ಳದ್ದಾಗಿವಿರಚಿತ ಮಾಗಿರ್ಕುಂ ಆಸಮಯದಲ್ಲಿ ಈತಂಗೆ ಅಬ್ಧಿಗಳಲ್ಲಿಯುಂ ನಿರ್ಮಿತ ರತ್ನಪುರಿಗಳೊಪ್ಪುತಿರ್ದವು. ಅನಂತರದಲ್ಲಿ ಶೂರ ಪದ್ಮನು ವೀರಮಾಹೇಂದ್ರಪುರದ ಆಶ್ಚರ್ಯಮಂ ನೀರೀಕ್ಷಿಸಿ, ದನುಜರೊಡನೆ ಸೇರಿ ರಾಜಗೃಹಮಧ್ಯದಲ್ಲಿ ಸಿಂಹಾಸನವ ನೇರಿದವನಾಗಲು, ಆಗ ಬ್ರಹ್ಮನು ಮಕುಟವನಿತ್ತು ವಿಷ್ಣು ಮೊದಲಾದ ದೇವತೆಗಳಿಂ ಯುಕ್ತನಾಗಿ ಪಟ್ಟಾಭಿಷೇಕ ವಂ ಮಾಡಿದನು. ಬಳಿಕ ಅಸುರರು ಅತಿಹರ್ಷವುಳ್ಳವರಾಗಿರ್ದರು. ಆಗ ಶೂರಪದ್ಮನು ವಿಷ್ಣುವನ್ನು ನೋಡಿ, ಎಲೈ, ವಿಷ್ಣುವೆ! ನನ್ನಿಂದಾವಾಗ ಕರೆ ಯಲ್ಪಡುವೆಯೋ ಆಗ ನೀನುಬರುವನಾಗು; ಈಗ ಹೋಗೆಂದು ನಿರೂಪಿಸಿ ಕಳುಹಿ ಸಂತಸದಿಂ ದಿರುತಿರ್ದನು. ಮತ್ತ ಮೀತನು ಈಶಾನನಂ ಏಕಾದಶ ಕೋಟಿರುದ್ರರಂ ಕಳುಹಿಸಿ, ಸಿಂಹಮುಖ ತಾರಕರಂ ಪೀಠದೋಳ್ ಕುಳ್ಳಿರಿಸಿ ದೇವತೆಗಳ್ಗೆ ಪ್ರತ್ಯೇಕಮಾಗಿರ್ದ ಕಾರ್ಯಂಗಳಂ ಪೇಳಿದನು. ಎಂತೆಂದರೆ, ಇಂದ್ರಂಗೆ ಪಡಿಗ, ಅಗ್ನಿಯಮರಿಗೆ ಕುಡಿನೀರಚೆಂಬು, ನಿಋಋತಿಗೆ ವೀಳ್ಯದ ಸ್ವರ್ಣಪಾತ್ರೆ, ವರುಣಂಗೆ ವ್ಯಜನ, ವಾಯುವಿಗೆ ಚಾಮರ, ಕುಬೇರಂಗೆ ಹಡಪ, ಚಂದ್ರಸೂರ್ಯರ್ಗೆ ಛತ್ರ, ಅಸುರೇಂದ್ರರ್ಗೆ ಮನೋಹರಂಗಳಾದ ಖಡ್ಗಂಗಳು ಇವುಗಳಂ ಕೊಟ್ಟು, ಸಿದ್ಧ ವಿದ್ಯಾಧರ ಗಣ ಕಿನ್ನರ ಗಾರುಡ ಮೊದಲಾದ ನಾನಾ ವಿಧ ಗಾಯಕುಂ ದಾವೃತನಾಗಿ, ರಂಭೆ ಊರ್ವಶಿ ಮೇನಕೆಯರೆಂಬ ದೇವತಾ ಸ್ತ್ರೀಯರು ನರ್ತನವಂ ಮಾಡುತಿರಲಾಗಿ, ಸಿಂಹಾಸನಾ ರೂಢನಾದ ಶೂರ ಪದ್ಮನು ಬಳಸಿರುತಿರ್ಪ ದೇವತೆಗಳಂ ನೋಡಿ, ಇಂದ್ರನಂಕರೆದು, ಎಲೈ, ಇಂದ್ರನೆ! ನೀನು ದೇವತೆಗಳೊಡನೆ ನಮ್ಮ ಮನುಷ್ಯರು ನಿರೂಪಿಸಿದ ಕೃಷಿಯ ಗೈವುತ್ತ ವ್ಯರ್ಥಮಾದ ಅಹಂಕಾರಮಂ ಬಿಟ್ಟು ಭಯದಿಂ ಸೇವಿಸುತ್ತಿರೆಂದು ನೇಮಿಸಿ, ಬಳಿಕ ಅಗ್ನಿಯಂನೋಡಿ ಎಲೊ, ಪಾವಕನೆ! ಈ ಪುರದಲ್ಲಿ ವಾಸ

ವಾಗಿರ್ದ ದೈತ್ಯರ್ಗೆ ಪಾಚಕನಾಗಿ ಮುಟ್ಟದರೆ ನುಡದಿರೆಂದಾಜ್ಞಾಪಿಸಿ, ಯಮನನ್ನು ಕರೆದು ಎಲೊ, ನೀನು ಶಾಂತನಾಗಿ ದೈತ್ಯರು ಹೇಳಿದಂತೆ ಸೇವೆಯಂ ಮಾಡಿ ಕೊಂಡಿರೆಂದು ನುಡಿದು, ಎಲೈ, ವರುಣನೆ! ನೀನು ಈ ಪಟ್ಟಣದಲ್ಲಿ ಸಾವಧಾನದಿಂ ಶೀತಳವಾದ ಗಂಧೋದಕದಿಂ ಚಳೆಯಂ ಮಾಡುತಿರೆಂದು ಪೇಳ್ದು, ಬಳಿಕವಾಯುವಂ ಕೂಗಿ, ಎಲೆ, ಸಮೀರನೆ! ನೀನು ಶೀತಳವಾದ ಪರಿಮಳಯುಕ್ತವಾದ ಹಿಮಾಂಬು ಬಿಂದುಗಳಿಂ ಮುಗ್ಧಾಂಗನಾ ಕುಚತಟ ದೊಳು ಚಲ್ಲುತ ಮೆಲ್ಲಮೆಲ್ಲನೆ ಚಲಿಸುತ ಈ ಪುರದೊಳು ಸಂಮಾರ್ಜನವಂ ಮಾಡುತಿರೆಂದು ನಿರೂಪಿಸಿ, ಕುಬೇರನಂ ನೋಡಿ, ಎಲೈ ಧನದನೆ! ಶೀಘ್ರ ದಿಂ ಶಂಖಪದ್ಮ ನಿಧಿಗಳೊಡೆದು ಸಾವಧಾನದಿಂ ಭಟರುಗಳಿಗೆ ದ್ರವ್ಯವಂ ಕೊಡುತಿರೆಂದು ಆಜ್ಞಾಪಿಸಿ, ಸೂರ್ಯನಂ ವೀಕ್ಷಿಸಿ ಎಲೈ ನೀನು ಗೋಪುರದ್ವಾರ ದೇಶದೊಳಿರ್ದು ಆ ತಪವಂ ಮಾಡುತ ನನ್ನ ಸ್ತ್ರೀಯರ್ಗೆ ಉಷ್ಣವಿಲ್ಲದ ಬೆಮ ರ್ಬಿಂದುಗಳಿಂದಲಂಕರಿಸೆಂದು ನಿಯಮಿಸಿ, ಚಂದ್ರನಂ ಕರೆದು, ಪೂರ್ಣಕಳಾ ಯುಕ್ತನಾಗಿ ಮಾನವತಿಗಳ ಮನೋರಂಜನೆಯಂ ಮಾಡುತ್ತ ತನಗೆ ಕ್ರೀಡಾ ದ್ಯೂತವಂ ವಹಿಸೆಂದು ನಿರೂಪಿಸಿ ಬಳಿಕ ವಿಧಿಗೆ ದಕ್ಷಬ್ರಹ್ಮರೊಡನೆ ಪಂಚಾಂ ಗವಂ ಪೇಳುವ ಕಾರ್ಯವಂ ಆಜ್ಞಾಪಿಸಿ, ಇತರ ದೇವತೆಗಳ್ಗೆ ನಾನಾವಿಧ ಸೇವೆ ಗಳಂ ಮಾಡುವಂತೆ ಪೇಳಿ, ಗುರುವಾದ ಶುಕ್ರನಿಂ ಕುಶೋದಕಗಳಿಂದ ಪ್ರೋಕ್ಷಿತ ನಾಗಿ ಸಿಂಹಾಸನದೊಳು ಇರುತಿರ್ದನು. ಶ್ಲೋ॥ "ಪ್ರತಿದಿನಮಿತಿದೈರ್ವೈರಿಂದ್ರ ಪೂರ್ವೈರ್ವಿರೋಧಂ ದಿತಿತನುಜ ಸಮೂಹೈಶ್ಶೂರಪದ್ಮೋಸಪತ್ನಃ। ಕೃತನಿಜಕೃಷಿ ಸಂಘಾತ್ಸಂತತಂ ಸಾರ್ವಭೌಮಸ್ಸಮಧಿಗತ ಬಹುಶ್ರೀರ್ಭ್ರಾತೃಭಿರ್ಭೂತ ಸುರೇಂ ದ್ರಾಃ" ತಾ॥ ಎಲೈ ಮುನಿಗಳಿರಾ! ಈ ಪ್ರಕಾರವಾಗಿ ಸಾರ್ವಭೌಮನಾದ ದೇವವೈರಿಯಾದ ಮಹದೈಶ್ವರ್ಯಸಂಪನ್ನನಾದ ಶೂರಪದ್ಮನು, ದಿತಿ ಕುಮಾರರ ಸಮೂಹಗಳಿಂ ದೇವತೆಗಳ್ಗೆ ವಿರೋಧವಂ ಮಾಡುತ, ಆ ಇಂದ್ರ ಪ್ರಮುಖ ದೇವತೆಗಳಿಂ ಮಾಡಲ್ಪಟ್ಟ ನಿಜಕೃಷಿ ಸಮೂಹವುಳ್ಳವನಾಗಿ ಭ್ರಾತೃಗಳೊಡನೆ ಸುಖವಾಗಿರ್ದನೆಂದು ಸೂತಪೌರಾಣಿಕನು ಪೇಳ್ದನೆಂಬಲ್ಲಿಗೆ

ಎಂಟನೆಯ ಅಧ್ಯಾಯವು ಸಂಪೂರ್ಣಂ.

ಒಂಬತ್ತನೆಯ ಅಧ್ಯಾಯವು.

ಶೂರಪದ್ಮಾಸುರ ವಿವಾಹಾದಿ ವರ್ಣನಂ.

ಎಲೈ ಮುನಿಗಳಿರಾ! ಅನಂತರದಲ್ಲಿ ಶೂರಪದ್ಮನು ಮನೋಹರೆಯಾದ ಪದ್ಮಕೋಮಲೆಯೆಂಬ ಪೆಸರುಳ್ಳ, ವಿಶ್ವಕರ್ಮನ ಕನ್ನಿಕೆಯನ್ನು ವಿವಾಹವಂ

ಮಾಡಿಕೊಂಡನು. ಬಳಿಕ ಆಕೆಯಲ್ಲಿ "ಭಾನುಕೋಪ ಅಗ್ನಿಮುಖ ಹಿರಣ್ಯ ವಜ್ರಬಾಹು" ನಾಲ್ವರು ಕುಮಾರರು ಪುಟ್ಟಿ, ಬಲಶಾಲಿಗಳಾಗಿರುತಿರ್ದರು. ಆಬಳಿಕ ಶೂರಪದ್ಮನು ದೇವಾಸುರ ಗಂಧರ್ವ ಸಿದ್ಧ ವಿದ್ಯಾಧರ ನಾಗ ಎಂಬಿವರುಗಳ ಬಹು ಕನ್ನಿಕೆಯರಂ ಮದುವೆಮಾಡಿಕೊಂಡನು. ಅವರಲ್ಲಿ ಪುಟ್ಟಿದ ತ್ರಿಸಹಸ್ರ ಪುತ್ರರು ವೀರ್ಯ ಪರಾಕ್ರಮಿಗಳಾಗಿದ್ದರು. ಅನಂತರದಲ್ಲಿ ಶೂರಪದ್ಮನು ಅನುಜನಾದ ಸಿಂಹಮುಖನಿಗೆ ಸಹಾಯವಾಗಿ ದ್ವಿಕೋಟಿ ಬಲಮಂ ಕೊಟ್ಟು, ಆತನಂ ಅಸುರಪುರಿಗೆ ಕಳುಹಿಸಲಾಗಿ, ಆ ಸಿಂಹಮುಖನು ಯಮನ ಕನ್ನಿಕೆಯಾದ "ವಿಭೀತಕೆ" ಎಂಬ ಸ್ತ್ರೀಯನ್ನು ವಿವಾಹಮಾಡಿಕೊಂಡು ಆಕೆಯಲ್ಲಿ ಮಹಾಶೂರನೆಂಬ ಪುತ್ರನಂ ಪಡೆದನು. ಬಳಿಕ ದೇವಾದಿ ಕನ್ನಿಕೆಯರಂ ವಿವಾಹಮನೆಸಗಿ ಅವರೊಳು ಶತಪುತ್ರರನ್ನೈದಿಸಿದನು. ಅನಂತರದಲ್ಲಿ ಶೂರಪದ್ಮನು ತನ್ನ ಅನುಜನಾದ ತಾರಕಂಗೆ ದ್ವಿಕೋಟಿಬಲವಂ ಕೂಡಿಸಿ, ಆತನಂ ಮಾಯಾಪುರಿಗೆ ಕಳುಹಿಸಿದನು. ಬಳಿಕ ಆ ತಾರಕನು ಸೂರ್ಯಕನ್ನಿಕೆಯನ್ನು ವಿವಾಹಮಾಡಿಕೊಂಡು, ಆಕೆಯಲ್ಲಿ ಧರ್ಮಾತ್ಮನಾದ ಅಸುರೇಂದ್ರನೆಂಬ ಪುತ್ರನಂ ಪುಟ್ಟಿಸಿ, ರಮ್ಯವಾದ ಆ ಪಟ್ಟಣದಲ್ಲಿ ಕ್ರೀಡಿಸುತಿರ್ದನು. ಅನಂತರದಲ್ಲಿ ಶೂರಪದ್ಮನು ದ್ವಿಕೋಟಿವಾಹಿನಿಯುತರಾದ ಅಸುರರಂ ಕಳುಹಿ, ದ್ವೀಪದ್ವೀಪಗಳಂ ಬಲಿದು, ಪಾತಾಳ ಸ್ವರ್ಗಗಳ್ಗೆ ಆರುಕೋಟಿ ವಾಹಿನಿಗಳಿಂದ ಯುಕ್ತರಾದ ದೈತ್ಯರಂ ಕಳುಹಿ, ಲೋಕಗಳಂ ಬಲಿದು, ಬಳಿಕ ವೀರಮಾಹೇಂದ್ರಪುರದ ಬಳಸಿರುವ ಅಷ್ಟಪುರಿಗಳ್ಗೆ ಪ್ರತ್ಯೇಕ ಪ್ರತ್ಯೇಕವಾಗಿ ಯೆಂಭತ್ತೆಂಟು ಸಾವಿರ ವಾಹಿನಿಯುತರಾದ ವೀರರಾದ ಅತಿ ಪರಾಕ್ರಮಿಗಳಾದ ಗಜಾನನ, ತುರಗಾಸ್ಯ, ವ್ಯಾಳಿ, ವಕ್ತ್ರ, ಭಲ್ಲೂಕವಕ್ತ್ರ, ವ್ಯಾಘ್ರವಕ್ತ್ರ, ವರಾಹಮುಖ, ಸಿಂಹವಕ್ತ್ರ, ಗವಯಾಸ್ಯರೆಂಬ ಅಷ್ಟದೈತ್ಯರಂ ಕಳುಹಿ, ತಾನಿರುವ ವೀರಮಾಹೇಂದ್ರಪುರದ ಗೋಪುರಪ್ರಾಕಾರ ಮೊದಲಾದ ಪ್ರದೇಶಂಗಳಲ್ಲಿ ಮಹಾಪರಾಕ್ರಮವುಳ್ಳ ಲಕ್ಷವಾಹಿನಿಗಳನಿರಿಸಿ ದುರ್ಗುಣ, ದರ್ಮುಕೋಪ, ದುರ್ಮುಖ ಶಂಖಪಾಲ, ಮರ್ಮಜ್ಞನಾದ ವಕ್ರಪಾಲ, ಮಹಿಷರೆಂಬ ಆರುವಂದಿ ಮಂತ್ರಿಗಳೊಡನೆ ರಾಜ್ಯಭಾರವಂ ಮಾಡುತಿರ್ದನು. ಬಳಿಕ ಇಂದ್ರ ಮೊದಲಾದ ದೇವತೆಗಳುಂ ತಪೋಧನರಾದ ಋಷಿಗಳುಂ ಶೂರಪದ್ಮ ಸಿಂಹವಕ್ತ್ರ ತಾರಕರಂ ಅವರ ಪುತ್ರರಂ ಮಂತ್ರಿಗಳಂ ದಿನದಿನದಲ್ಲಿ ಕಂಡು, ಅವರು ಪೇಳಿದ ಕಾರ್ಯಂಗಳಂ ಮಾಡುತ, ಗರುಡನಂ ಕಂಡ ಸರ್ಪಗಳಂತೆ ಇರುತಿರ್ದರು. ಆಗ ಶೂರನು ಒಂದಾನೊಂದು ಸಮಯದಲ್ಲಿ ನೋಡಿ ಎಲೈ ದೇವತೆಗಳಿರಾ! ನಿಮ್ಮಿಂದ ಬಹು ಮತ್ಸ್ಯಗಳು ತರಲ್ಪಡಲೆಂದು ಪೇಳಲು, ಅವರದಂ ಕೇಳಿ ದಕ್ಷಾಧ್ವರದಲ್ಲಿ

ಮಾಡಿದ ದೋಷವ ನೆನೆದು ಭಯಾನ್ವಿತರಾಗಿ, ಸಮುದ್ರಕ್ಕೆ ಪೋದರು. ಆಗ ದೇವೇಂದ್ರನು ವರುಣನಂ ಕರೆದು, ಎಲೈ ವರುಣನೆ! ನಿನ್ನಿಂದ ಬಹು ಮತ್ಸ್ಯಂಗಳು ಬರಲೆಂದು ನುಡಿಯಲಾಗಿ, ಆ ವರುಣನು ಭಯಾನ್ವಿತನಾಗಿ ಶೀಘ್ರದಿಂ ತಿಮಿತಿಮಿಂಗಿಲ ಮೊದಲಾದ ಮತ್ಸ್ಯಂಗಳಂ ಸಮುದ್ರದಕಡೆಯನ್ನೈದಿಸಿದವನಾಗಲು, ಸೂರ್ಯನು ತನ್ನ ಕಿರಣಗಳಿಂದಾ ಮತ್ಸ್ಯಂಗಳಂ ಶೋಷಿಸಿದನು. ಯಮನು ಅವುಗಳ ಪ್ರಾಣಂಗಳನ್ನಪಹರಿಸಿದನು. ಬಳಿಕ ಸಮಸ್ತರೂ ನಾಗಪಾಶದಿಂ ಅವುಗಳನ್ನು ಬಿಗಿದು ಶೂರನ ಪಾಕಶಾಲೆಯನ್ನೈದಿಸಿದರು. ಅನಂತರದಲ್ಲಿ ಶೂರಪದ್ಮನು ಆ ಮತ್ಸ್ಯಂಗಳಂ ಕಂಡು ಹಾಸ್ಯವಮಾಡಿ ನಕ್ಕು, ಎಲೈ ದೇವತೆಗಳಿರಾ ! ನಿಮ್ಮಿಂದ ಇದೇ ರೀತಿಯಲ್ಲಿ ದಿನದಿನದಲ್ಲಿಯು ಮತ್ಸ್ಯಂಗಳು ತರಲ್ಪಡುತಲಿರಲೆಂದು ಪೇಳಿದ ನಿಮಿತ್ತಕಾರಣದಿಂ, ದೇವತೆಗಳು ಭಯಾನ್ವಿತರಾಗಿಪ್ರತ್ಯಹವು ಮತ್ಸ್ಯಂಗಳಂ ಕೊಂಡೊಯ್ದು, ಆತಂಗೆ ಸೇವೆಯಂ ಮಾಡುತಿರ್ದರು.

ಅಜಮುಖಿಯ ವೃತ್ತಾಂತವು-ಇಲ್ವಲ ವಾತಾಪಿಗಳ ಜನನವು.

ಈ ವೃತ್ತಾಂತಮಂ ಕೇಳಿ, ಆಗ ಶೌನಕಾದಿಗಳು ಪರಮಾನಂದ ಭರಿತರಾಗಿ, ಎಲೈ ಮಹಾಮತಿವಂತನೆ! ಪೂರ್ವದಲ್ಲಿ ಅಜಮುಖಿಯೆಂಬಾಕೆಯು ಪುಟ್ಟಿದಳೆಂದು ನಿನ್ನಿಂದ ನಿರೂಪಿಸಲ್ಪಟ್ಟಿದ್ದು ಸರಿಯಷ್ಟೆ. ಆಕೆಯ ಚರಿತ್ರೆಯು ಹೇಗೆ? ಎಂದು ಕೇಳಲಾಗಿ, ಆ ವಾಕ್ಯಮಂ ಕೇಳ್ದು ಇಂತೆಂದನು. ಎಲೈ ಮುನಿಗಳಿರಾ ! ಆ ಅಜಮುಖಿಯೆಂಬವಳು ಮಹಾ ಕ್ರೂರಳು, ಬಹು ಪಾಪಿನಿಯು, ಕಾಮುಕಿಯು, ಅತಿ ವಂಚಕಳು. ಆಕೆಯು ಸರ್ವಕಾಲದಲ್ಲಿಯುಂ ಯೆಲ್ಲ ಕಡೆಯಲ್ಲಿ ಸಂಚರಿಸುತ್ತ, ಅಲ್ಲಲ್ಲಿರುವ ವಿಪ್ರರಂ ಋಷಿಗಳಂ ಅನ್ಯರಾದ ದೇವತೆಗಳಂ ಅಸುರರಂ ರಾಕ್ಷಸರಂ ಸೌಂದರ್ಯವಂತರಂ ವಿಕಾರರಾದ ಪುರುಷರಂ ಯೌವನಸ್ಥರಂ ವರ್ಷಾರ್ಭಕರಂ ಮಾರ್ಗದೊಳು ಯಾರು ಕಂಡರು ಪಿಡಿದು ಇಂತು ಏಕದಿನಸದಲ್ಲಿ ಸಹಸ್ರ ಪುರುಷರಂ ಕ್ರೀಡಿಸುವಳು. ಈ ಪ್ರಕಾರದಿಂ ಮಾರ್ಗದಲ್ಲಿರುವ ರಮ್ಯರಾದ ಬಾಲಕಿಯರಂ ಪ್ರೌಢೆಯರಂ ಕನ್ನಿಕೆಯರಂ ಬಲಾತ್ಕಾರದಿಂ ಪಿಡಿದು ತನಗೆ ಜ್ಯೇಷ್ಠರಾದ ಶೂರಪದ್ಮ ಸಿಂಹವಕ್ತ್ರ ತಾರಕರ್ಗೆ ಕೊಡುತಿರುವಳು. ಇವಲ್ಲದೆ ಯೋಗಿಗಳಿಗೆ ತಪಸ್ವಿಗಳಿಗೆ ವಿಘ್ನಮಾಡುವಳು. ಈ ಪ್ರಕಾರವಾಗಿ ಮಹಾ ಘೋರಕರ್ಮಮಂ ಮಾಡುತಿರಲಾಗಿ, ಪೊಂದಾನೊಂದು ವೇಳೆಯಲ್ಲಿ ದೂರ್ವಾಸಮುನಿಯ ಸಮೀಪಕ್ಕೆ ಪೋಗಿ, ತಪಸ್ವಿಗಳಿಗೆ ಉತ್ತಮನಾದ ಎಲೈ ದೂರ್ವಾಸನೆ! ಪುತ್ರಾರ್ಥಿಯಾಗಿ ಬಂದ ನನ್ನಂ ಪರಿಗ್ರಹಿಸು. ನೀಂ ನನ್ನೊಡನೆ ಸಂಭೋಗಿಸಲು ಯೋಗ್ಯನೆಂದು ಪೇಳಲು,

ಆ ವಚನಮಂ ಕೇಳ್ದು ಭಯಪಟ್ಟವನಾಗಿ, ಎಲೌ ಬಾಲಕಿಯೆ! ನಾನು ಅಶಕ್ತನು. ನೀಪ್ರೋಗೆಂದು ಪೇಳುತಿರೆ ಈ ವಾಕ್ಯಮಂ ಕೇಳಿ, ಆತನ ಅಧರಮಂ ಪಿಡಿದು ಚುಂಬಿಸಿ, ಆತನಂ ಕೆಡಹಿ ಬಲಾತ್ಕಾರದಿಂದ ಆತನೊಡನೆ ರಮಿಸಿದಳು. ಆಗ ಅವರೀರ್ವರ ಸುರತವೇಗದಿಂ ಪುಟ್ಟದ ಪಿತೃಮಾತೃಸ್ವರೂಪಿಗಳಾದ ಅರಿಮರ್ದಕರಾದ ಇಲ್ವಲ ವಾತಾಪಿಗಳೆಂಬೀರ್ವರು ಪುತ್ರರು ಜನಿಸಿದರು. ದುರುಳರಾದ ಅವರಿಬ್ಬರು ಒಂದಾನೊಂದು ವೇಳೆಯಲ್ಲಿ ಪಿತೃವಾದ ದೂರ್ವಾಸರ ಬಳಿಗೈದಿ, ಎಲೈ ತಂದೆಯೆ! ನಿನ್ನ ತಪೋಬಲಮಂ ನಮಗೆ ಕೊಡಬೇಕೆಂದು ಕೇಳಲಾಗಿ, ಬಳಿಕ ದೂರ್ವಾಸನು ಕುಪಿತನಾಗಿ ಅವರನ್ನೋಡಿ, ದುರಾತ್ಮರಾದ ಭ್ರಾಂತರಿರಾ! ನಿಮಗೆ ತಪೋಬಲವಂ ಕೊಡುವದು ಹೇಗೆಂದು ಪೇಳಿ, ತಾನು ತಪವನ್ನಾಚರಿಸುತ್ತಿರಲು, ಮಹಾ ಪಾಪಿಗಳಾದ ಅವರೀರ್ವರು ಆ ತಂದೆಯಾದ ದೂರ್ವಾಸನಂ ಕೊಲ್ಲಲುದ್ಯೋಗಿಸಿದರು. ಆಗ ದೂರ್ವಾಸಮುನಿಯು ಮಹಾ ಕುಪಿತನಾಗಿ, ಎಲೆಲಾ ದುರುಳರಿರಾ! ನೀವು ದುರಾತ್ಮರು, ಋಷಿಗಳಿಗೆ ಈ ಪ್ರಕಾರವಾಗಿ ದುಷ್ಕ್ರಿಯೆಗಳಂ ಮಾಡಿ ಮರಣವನ್ನೈದಿರೆಂದು ಶಾಪವಂ ಕೊಟ್ಟನು. ಅನಂತರದಲ್ಲಿ ಆ ಇಲ್ವಲನೆಂಬ ದೈತ್ಯನು ಕೆಲವು ಕಾಲವು ನಿಯಮಯುಕ್ತನಾಗಿ, ಬ್ರಹ್ಮನಂ ಕುರಿತು ತಾನು ಮಾಡುವ ಯಾಗದೊಳು ವಾತಾಪಿಯಂ ಖಂಡಖಂಡವಾಗಿ ಛೇದಿಸಿ ಅಗ್ನಿಯಲ್ಲಿ ಹೋಮವನ್ಮಾಡಿದನು. ಬಳಿಕ ಬ್ರಹ್ಮನು ಆತಂಗೆ ಪ್ರಸನ್ನನಾಗಿ, ಎಲೈದೈತ್ಯನೆ! ನಿನ್ನ ಮನಸ್ಸಿನಲ್ಲಿ ಏನು ಅಪೇಕ್ಷಿತವಾಗಿರುವುದೋ ಅದಂ ಪೇಳೆನಲು ಇಲ್ವಲನು ಎಲೈ ಬ್ರಹ್ಮನೆ! ಅಜರೂಪಿಯಾದ ವಾತಾಪಿಯಂ ಸಂಹರಿಸಿ ಮರಳಿ ತಾನು, ಆತನಂ ಕರೆದರೆ ಯೆಂದಿನಂತೆ ಬರಬೇಕೆಂದು ಕೇಳಿದನು. ಅದರಂತೆಯೆ ಬ್ರಹ್ಮನು ವರವನ್ನಿತ್ತು ತನ್ನ ಸ್ಥಾನಕ್ಕೆ ಪೋದನು. ಬಳಿಕ ಮಹಾವೀರರಾದ ಅವರೀರ್ವರು ಶೂರಪದ್ಮನ ಬಳಿಗೈದಿ ಆತಂಗೆ ನಮಸ್ಕರಿಸಿ ಮುದದಿಂ ತಮ್ಮ ವೃತ್ತಾಂತಮಂ ಪೇಳ್ದು, ಅಲ್ಲಿ ಕೆಲವು ಕಾಲವಿದ್ದು, ಬಳಿಕ ಕುಟಕವೆಂಬ ಪ್ರದೇಶಕ್ಕೆ ಸಾರಿ ರಮ್ಯಮಾದ ವನದೊಳು ಮನೋಹರಮಾದ ಪರ್ಣಶಾಲೆಯನ್ಮಾಡಿಕೊಂಡು, ಅಲ್ಲಿ ವಿಶೇಷಮಾದ ಭೋಗಂಗಳಂ ಭುಜಿಸುತ್ತಿದ್ದರು. ಅನಂತರದಲ್ಲಿ ಇಲ್ವಲನೆಂಬಾತನು ಋಷಿರೂಪದಿಂ ತಾನು ಮಾರ್ಗದಲ್ಲಿ ಕಾದುಕೊಂಡಿದ್ದು, ಆ ದಾರಿಯಲ್ಲಿ ಬರುವ ಬ್ರಾಹ್ಮಣರಂ ಋಷಿಗಳಂ ಕಂಡು, ಅವರ ಸಮೀಪಕ್ಕೆ ಹೋಗಿ ನಮಸ್ಕರಿಸಿ, ತನ್ನಾಶ್ರಮಕ್ಕೆ ಕರೆದು ತಂದು, ಅರ್ಘ್ಯಪಾದ್ಯಾಚಮನಂಗಳನಿತ್ತು, ಅವರ ಅನುಜ್ಞೆಯಿಂ ನೆಲದಲ್ಲಿ ಕುಳಿತು, ಹಾಹಾ! ನನ್ನ ಭಾಗ್ಯವಶದಿಂ ನೀವು ಬಂದಿರಿ. ಈ ದಿವಸದಲ್ಲಿ ಪಿತೃಪೂಜೆಯು, ಯೆಲ್ಲಿ ಮಾಡಲೆಂದು ಚಿಂತಾಪರವಶನಾಗಿಧೇನೆಂಬದಾಗಿ ನುಡಿದನೆಂದು

ಸೂತಂ ಪೇಳ್ದನೆಂಬಲ್ಲಿಗೆ, ಆಸುರಕಾಂಡದಲ್ಲಿ ಒಂಬತ್ತನೆಯ ಅಧ್ಯಾಯವು ಸಮಾಪ್ತಮಾದುದು.

ಹತ್ತನೆಯ ಅಧ್ಯಾಯವು.

ಇಲ್ವಲ ವಾತಾಪಿಗಳ ದುರುಳು ತನವು.

ಎಲೈ ಮುನಿಗಳಿರಾ! ಅನಂತರದಲ್ಲಿ ಇಲ್ವಲನು ಬ್ರಾಹ್ಮಣರಂ ನೋಡಿ, ಎಲೈ ಸ್ವಾಮಿಗಳಿರಾ! ಈಗ ಭೂಮಿಯು ನಿಮ್ಮಿಂದಲಂಕೃತಮಾದುದು. ನನ್ನ ಪುಣ್ಯ ಪ್ರಭಾವದಿಂ ತಮ್ಮದರ್ಶನಮಾದುದು ಎಂದು ಸ್ತುತಿಸಿ ಲೋಕದಲ್ಲಿ ಅಜರೂಪದಿಂ ತೃಣವಂ ಭಕ್ಷಿಸಿ ಚರಿಸುತಿರ್ಪ ವಾತಾಪಿಯೆಂಬಾತನಂ ಕೊಂದು ಪಾಕಮಾಡಿ ದ್ವಿಜರಿಗೆ ಆಕಂಠಪರ್‍ಯಂತ ಭೋಜನಮಮ್ಮಾಡಿಸಿ, ಪರ್ಣಶಾಲೆಯಂ ಬಿಟ್ಟು ಹೊರ ಗಡೆಗೆ ಪೋಗಿ, ಎಲೈ ವಾತಾಪಿಯೆ! ನೀನು ಬಾರೆಂದು ದೀರ್ಘಮಾಗಿ ಕರೆಯೆ, ಆ ವಾತಾಪಿಯು ಆ ಧ್ವನಿಯಂ ಕೇಳಿ ಸಂಭ್ರಮದಿಂ ಆ ಬ್ರಾಹ್ಮಣರ ಉದ ರವಂ ಶೀಳಿ ಪೂರ್ವದೇಹಮುಂ ಧರಿಸಿ ಆತನ ಬಳಿಗೆ ಬಂದನು. ಬಳಿಕ ದುರಾ ತ್ಮಕನಾಗಿ ಬ್ರಹ್ಮಘಾತಕನಾದ ಇಲ್ವಲನು ಈ ಪ್ರಕಾರಮಾಗಿ ದಿನದಿನದಲ್ಲಿ ಸ್ವೇಚ್ಛೆಯಿಂದ ದುಷ್ಕರ್ಮಮಮ್ಮಾಡುತ್ತಿರ್ದನು. ಎಲೈ ಮುನಿಗಳಿರಾ! ಈ ರೀತಿಯಾಗಿ ಅಜಮುಖಿಯ ಚರಿತ್ರೆಯು ಪೇಳಲ್ಪಟ್ಟಿತು. ಮರಳಿ ಶೂರಪದ್ಮನ ಚರಿತ್ರವಂ ಕೇಳುವರಾಗಿ.

ಶೂರಪದ್ಮಾಸುರನ ಲೋಕಯಾತ್ರಾವರ್ಣನಂ.

ಏನಂದಡೆ, ಅಸುರನಾಯಕನಾದ ಶೂರಪದ್ಮನು ಇಂದ್ರವಿಮಾನಮನ್ನೇರಿ ದಿನದಿನದಲ್ಲಿಯುಂ ಅಂಡಂಗಳಿಗೆ ಪೋಗುತ್ತಿದ್ದನು. ಬಳಿಕ ಒಂದಾನೊಂದು ದಿನದಲ್ಲಿ ಆತನು ಮಧ್ಯಾಹ್ನದೊಳಗೆ, ಪಾತಾಳಲೋಕವನ್ನೈದಿ, ಮರಳಿ ಸಾಯಂಕಾಲಕ್ಕೆ ವೀರಮಾಹೇಂದ್ರ ಪುರಿಗೆ ಬಂದನು. ಮತ್ತಂ ಪೊಂದು ದಿನದಲ್ಲಿ ಭೂಲೋಕವೆಲ್ಲಮಂ ಸಂಚಾರಮಾಡಿ, ಮರಳಿ ಪುರಕ್ಕೆ ಬಂದು, ಮತ್ತೊಂದು ದಿನದಲ್ಲಿ ಭುವರ್ಲೋಕಕ್ಕೆ ಗಮಿಸಿ, ಅಲ್ಲಿಂದ ಇಂದು ಮಂಡ ಲಕ್ಕೆ ಪೋಗಿ, ಅಲ್ಲಿಂದ ಸೌಮ್ಯಮಂಡಲಕ್ಕೆ ಸಾರಿ, ಆ ಪ್ರದೇಶದಿಂದ ಶುಕ್ರಮಂ ಡಲಕ್ಕೆ ತೆರಳಿ ಮತ್ತಂ ಸೂರ್ಯಮಂಡಲಕ್ಕೆ ಗಮಿಸಿ, ಬಳಿಕ ಗುರುಮಂಡಲಮಂ ಪೊಕ್ಕು ಶನಿಮಂಡಲವಡೆದು, ಬ್ರಹ್ಮಲೋಕವನೈದಿ, ಅದರಿಂ ವಿಷ್ಣುಲೋಕಕ್ಕೆ ಪೋಗಿ, ಅಲ್ಲಿರುವ ಆಶ್ಚರ್ಯಂಗಳಂ ವೀಕ್ಷಿಸುತ ಈ ಪ್ರಕಾರಮಾಗಿ ದಿನದಿನದಲ್ಲಿ ಯುಂ ಆಯಾಲೋಕಕ್ಕೆ ಪೋಗಿ ರಾತ್ರಿಕಾಲಕ್ಕೆ ಸರಿಯಾಗಿ ತನ್ನಪುರಿಗೆ ಬರು

ತಿರ್ದನು. ಅನಂತರ ಒಂದಾನೊಂದು ಸಮಯದಲ್ಲಿ ಆ ಶೂರಪದ್ಮನು ಶಚೀದೇವಿಯ ನಿಚ್ಛೈಸಿ ಕಾಮಬಾಣದಿಂ ನೊಂದವನಾಗಿ ಸೇನಾಪತಿಯಂ ನೋಡಿ, ಎಲೈ, ಸೈನ್ಯಾಧಿಪತಿಯೆ! ನೀನು ಇಂದ್ರನಂ ಬಂಧಿಸಿ ಇಂದ್ರಾಣಿಯಂ ನಮ್ಮ ಪುರವನೈದಿಸೆಂದು ಪೇಳಿ ಆತನಂ ಕಳುಹಲಾಗಿ, ಆ ಸಮಯದಲ್ಲಿ ಶಚೀದೇವಿಯಂ ತರಲೋಸುಗ ನವಕೋಟಿದೈತ್ಯಸ್ತ್ರೀಯರು ಪೊರಮಡಲು; ದೇವೇಂದ್ರನು ಈ ವಾರ್ತೆಯಂ ಕೇಳಿ ಪರಮ ಭೀತನಾಗಿ ಶಚೀದೇವಿಯೊಡನೆ ಪುರದಿಂ ಪೊರಮಟ್ಟು ಪಲಾಯನವನ್ನೈದಿದನು. ಬಳಿಕ ಆತನ ಸಾರಥಿಯು ನವಕೋಟಿ ದೈತ್ಯಸ್ತ್ರೀಯರು ಸಹಾ ದೇವಲೋಕಮಂ ಸಾರ್ದು, ಅಲ್ಲಿದ್ದ ದೇವತೆಗಳಂ ಕೊಂದು ಅವರಿಂ ದೇವೇಂದ್ರನು ಪಲಾಯಿತನಾದನೆಂಬುದಂ ಕೇಳ್ದು, ಮರಳಿ ಶೂರಪದ್ಮನ ಬಳಿಗೆ ಬಂದು ಈ ವೃತ್ತಾಂತವಂ ಪೇಳಿದವನಾಗಲು, ಮಹಾ ಬಲವಂತನಾದ ಶೂರಪದ್ಮನು ಆ ವಾಕ್ಯವಂ ಕೇಳಿ, ಸರ್ವಲೋಕಂಗಳಲ್ಲಿಯುಂ ಆ ದೇವೇಂದ್ರನಂ ಅರಸಲೋಸುಗ ಗೂಢಚಾರಿಗಳಂ ಕಳುಹಿಸಿದನು.

ಶಚೀಪುರಂದರರ ಅವಸ್ಥಾಂತರ ಕಥನಂ.

ಎಲೈ ದ್ವಿಜರುಗಳಿರಾ! ಆಗ ದೇವತೆಗಳು ಅತ್ಯಂತ ದುಃಖಿತರಾಗಿ ಇಂದ್ರನಗಲಿದ ಕಾರಣದಿಂ ಪೋಗಲ್ಪಟ್ಟ ಐಶ್ವರ್ಯವುಳ್ಳವರಾಗಿ, ವಿಷ್ಣುಲೋಕಕ್ಕೆ ಸಾರಿ ಆತನ ಪುತ್ರನಾದ ಜಯಂತಂಗೆ ಶ್ರುತಗೊಳಿಸಿದರೆಂದು ಸೂತಂ ಪೇಳಲಾಗಿ, ಆ ಶೌನಕಾದಿಗಳು ಈ ವಾರ್ತೆಯಂ ಕೇಳ್ದು, ಎಲೈ ಸೂತನೆ! ಜಯಂತನು ಸ್ವರ್ಗವಂ ಬಿಟ್ಟು ವಿಷ್ಣುಲೋಕದಲ್ಲಿ ಏನು ಕಾರಣದಿಂದಿದ್ದನೆಂದು ಪೃಚ್ಛಿಸಿದರು. ಬಳಿಕ ಸೂತನು ಎಲೈ ಮುನಿಗಳಿರಾ! ಸಾವಧಾನಮನದಿಂ ಕೇಳುವರಾಗಿ. ಪೂರ್ವದಲ್ಲಿ ಶೂರಪದ್ಮನ ಭಯದಿಂ ಉಪೇಂದ್ರನು ಜಯಂತನು ಸಹ ವಿಷ್ಣುಲೋಕವನ್ನೈದಿದರು. ಅದುಕಾರಣದಿಂ ಜಯಂತನು ಭೀತಿಯಿಂ ವಿಷ್ಣುಲೋಕದಲ್ಲಿಯೇ ಇರುತಿರ್ದನು. ಈಗ ಆ ದೇವತೆಗಳು ಆ ಜಯಂತನೊಡನೆ ದೇವಲೋಕಕ್ಕೆ ಬಂದರು. ಬಳಿಕ ಜಯಂತನು ತನ್ನ ತಂದೆಯಂ ನೆನೆದು ಕೃಶಾಂಗನಾಗಿ ದೇವಲೋಕದಲ್ಲಿ ಅಸುರರ್ಗೆ ಕೃಷಿಗಳನ್ಮಾಡುತ್ತಿರಲಾಗಿ, ಬಳಿಕ ಕಾಲವಶದಿಂ ನಾರದನು ಅಲ್ಲಿಗೆ ಬಂದನು. ಆಗ ಜಯಂತನು ಋಷಿಶ್ರೇಷ್ಠನಾದ ನಾರದನಂ ಕಂಡು ಆತಂಗೆ ನಮಸ್ಕಾರವನ್ಮಾಡಿ, ಭಕ್ತಿಯುಕ್ತನಾಗಿ, ಎಲೈ ಋಷಿಯೆ! ತಮ್ಮ ಸೇವಾವಶದಿಂ ನಾನು ಪರಮ ಧನ್ಯನಾದೆನು? ಮತ್ತಂ ಪಿತೃಮಾತೃಗಳ ನಗಲಿ ಕ್ರೂರವಾದ ಶೋಕವಂ ವಹಿಸುತ್ತಿದ್ದೇನೆಂದು ಪೇಳೆ, ನಾರದನದಂ ಕೇಳಿ ಎಲೈ, ಜಯಂತನೆ! ಈಗ ಶೋಕವಂ ಬಿಡು, ನಿನ್ನ ಅಭೀಷ್ಟಮುಂಟಾಗುವದು. ಕೆಲವು ಕಾಲದಲ್ಲಿಯೆ ಮಾತಾಪಿತೃಗಳ ದರ್ಶನ

ದುಂಟಾದೀತು? ಯಾರಿಂದಿಲ್ಲಿ ಕರ್ಮವು ಮಾಡಲ್ಪಡುವುದೋ ಅವರಿಂದಲ್ಲಿ ಆ ಕರ್ಮವು ಅನುಭವಿಸಲು ಯೋಗ್ಯವು. ಇದು ನಿಶ್ಚಯವೆಂದು ತಿಳಿ. ನಿನಗೆ ಪಿತೃವಾದ ದೇವೇಂದ್ರನು ಶಚೀದೇವಿಯೊಡನೆ ಭೂಮಿಯನ್ನೈದಿ, ಅಸುರರ ನಾಶಕ್ಕೋಸುಗ ಆ ಪರಮೇಶ್ವರನಂ ಕುರಿತು ತಪವನ್ಮಾಡುತ್ತಿಥಾನೆ. ಅದು ಕಾರಣದಿಂ ನೀನಿಂದ್ರು ಶತ್ರುಗಳಾದ ದೈತ್ಯರ್ಗೆ ಸಮಸ್ತ ಸುರರು ಸಹ ಸಾರ್ವ ಕಾಲವು ಕೃಷಿಯನ್ಮಾಡುತ ಅಪ್ರಮತ್ತನಾಗಿರೆಂದು ಪೇಳ್ದು, ಶೀಘ್ರನಾಗಿ ಗಗನದಲ್ಲಿ ತೆರಳಿದನು. ಅನಂತರದಲ್ಲಿ ದೇವೇಂದ್ರನು ಸಮೀಪಸ್ಥವಾದ ರಮ್ಯ ಪುಷ್ಪ ಶ್ರೀ ಕಾಶೀ ಎಂಬ ಪುರದಲ್ಲಿ ಮಹಾದೇವನಂ ಅತ್ಯಂತವಾಗಿ ಪೂಜಿಸು ತ್ತಿರುವಾಗ, ಆತನು ಶೂರನ ಗೂಢಚಾರಿಗಳು ಬಂದ ವರ್ತಮಾನವಂ ಕೇಳಿ ಶಚೀದೇವಿಯೊಡನೆ ಆರಾಮುವನ್ನೈದಿ, ಅದರ ಮಧ್ಯಪ್ರದೇಶದಲ್ಲಿ ವೇಣುರೂಪವ ಧರಿಸಿ, ಪ್ರಚ್ಛನ್ನವೇಷದಿಂದಿರುತಿದ್ದನು. ಬಳಿಕ ಕ್ಷಾಮುವಶದಿಂದಲ್ಲಿ ವೃಷ್ಟಿ ಯಾಗದೆ ಪೋದುದರಿಂ ಸಮಸ್ತ ವೃಕ್ಷಂಗಳು ಶುಷ್ಕಂಗಳಾಗಲು, ದೇವೇಂದ್ರ ನದಂ ಕಂಡು, ಹಾಹಾ!! ಬ್ರಹ್ಮನಿಂದಲುಂ ದುಷ್ಕರ್ಮಮಹಿಮೆಯು ದಾಂಟ ಲಶಕ್ಯವು ಓಹೋ! ಆಶ್ಚರ್ಯವು!! ನನ್ನಾಗಮನದಿಂ ವೃಕ್ಷಂಗಳು ಶುಷ್ಕಂಗ ಳಾದವೆಂದು ಬಹು ಚಿಂತಾಪರವಶನಾಗಿರುತಿರೆ, ಆ ಸಮಯದಲ್ಲಿ ಎಲೈ ದೇವೇಂ ದ್ರನೆ! ಶೋಕಮಂ ಬಿಡು. ಸ್ವಲ್ಪಕಾಲದಲ್ಲಿಯೇ ಇಲ್ಲಿಗೆ ಶ್ರೇಷ್ಠವಾದ ನದಿಯು ಬಂದೀತು. ಮುಕ್ತಪರ್ಣಂಗಳುಳ್ಳ ಸರ್ವ ವೃಕ್ಷಂಗಳು ಸಮ್ಯಕ್ಕಾಗಿ ಪೂರ್ವ ದಂತೆ ಪುಟ್ಟುವವೆಂದು ಗಗನವಾಣಿಯು ನುಡಿಯಲಾಗಿ, ಅದಂ ಕೇಳ್ದು ಶೋಕಮಂ ಬಿಟ್ಟು ಪರಮ ಸಂತೋಷದಲ್ಲಿದ್ದನು. ಆ ಸಮಯದಲ್ಲಿ ಶೀಘ್ರದಿಂ ನಾರದಮುನಿಯು ವಿಂಧ್ಯಾದ್ರಿಯನ್ನೈದಲಾಗಿ, ಆ ವಿಂಧ್ಯನು ಬಂದು ನಾರದಂಗೆ ನಮಸ್ಕಾರವನ್ಮಾಡಿ ಅರ್ಘ್ಯ ಮೊದಲಾದವಂ ಕೊಟ್ಟು ಆಸನವನ್ನಿತ್ತು, ಎಲೈ ಮುನಿಶ್ರೇಷ್ಠನೆ, ನಿಮ್ಮ ದರ್ಶನದಿಂದತ್ಯಂತ ಹರ್ಷಿತನಾಗಿ ಧನ್ಯನಾದೆನೆಂದು ಪೇಳುತ್ತಿರೆ, ನಾರದನದಂ ಕೇಳಿ, ಎಲೈ ವಿಂಧ್ಯನೆ! ಮಹಾತ್ಮರಿಂ ನುತನಾದ ನಿನಗೆ ಕುಶಲವೆ? ಈಗ ನಾನು ಮೇರುಪ್ರದೇಶದಿಂ ಬಂದೆನು. ಆ ಮೇರು ವಿನಿಂ ನಿರೂಪಿತವಾದ ವಾಕ್ಯವಂ ಕೇಳಿ ಆಶ್ಚರ್ಯಮುಂಟಾದುದು? ಅದನ್ನು ಹೇಗೆ ಹೇಳಲಿ? ಆದರೂ ನನ್ನಲ್ಲಿ ನಿನಗೆ ಗುರುವಿಶ್ವಾಸವಿರುವುದರಿಂ ಹೇಳ ಬೇಕಾಗಿರುವದು ಏನಂದರೆ.

ವಿಂಧ್ಯನಗರ್ವ ಪ್ರಕಾರವು.

ಆ ಮೇರುಪರ್ವತವು ದಿನದಿನದಲ್ಲಿಯುಂ ಚಂದ್ರಸೂರ್ಯರು ನಕ್ಷತ್ರರಾಶಿ ಗಳು ಸಹಾ ಭಯಾನ್ವಿತರಾಗಿ, ತನಗೆ ಪ್ರದಕ್ಷಿಣವನ್ಮಾಡುತಿಥಾರೆ. ತಾನು

ತ್ರಿಪುರ ಮರ್ದನನಾದ ಶಂಭುವಿಗೆ ಧನುರ್ಭಾವವನ್ನೈದೆದನು. ಮತ್ತಂ ತನ್ನೊಳು ಸಮಸ್ತರಾದ ದೇವತೆಗಳು ವಾಸವನ್ಮಾಡುತಿರ್ಪಾರೆ. ಅದುಕಾರಣದಿಂ ಲೋಕದೊಳು ತನಗೆ ಸಮಾನವಾದ ಪರ್ವತಮಿಲ್ಲೆಂದು ನುಡಿದನೆಂದು ಪೇಳಲಾಗಿ, ಆ ವಾಕ್ಯವಂಕೇಳಿ ವಿಂಧ್ಯನು, ಎಲೈ ನಾರದನೆ! ಪೂರ್ವದಲ್ಲಿ ಆ ಮೇರುವು ಶಿವನಿಂ ಚಾಪಭಾವಂ ಧರಿಸಿದ್ದುದರಿಂದ ಬಾಗಲ್ಪಟ್ಟನು. ಪರಮ ಗರ್ವಿತನಾಗಿ ಮೂಢನಾದ ಆ ಮೇರುವು ಅಹಂಕಾರದಿಂ ಆತ್ಮಸ್ತುತಿಯ ನ್ಮಾಡುತ, ಸಮಸ್ತ ದೇವತೆಗಳು ತನ್ನ ಮೇಲೆ ಪ್ರತಿದಿನವು ತನ್ನ ಸೇರಿರುವದ ನರಿಯದೆ ಮದಾಭಿಮಾನದಿಂದಿರುತಿರ್ಪಾನೆ. ಆತನು ನಾರಸಿಂಹನಂ ಹರಿಸುವ ಶರಭನ ಕೆಳಗಿನೊಳಗೆ ಉದ್ದಿನ ಕಾಳಿನೋಪಾದಿಯಲ್ಲಿ ಅಡಗಿದ್ದುದನ್ನರಿಯದೆ ನುಡಿವನು. ಮತ್ತಂ ಮಂದಬುದ್ಧಿಯಾದ ಆತನು ಶರಭನ ಪಕ್ಷಘಾತದಿಂದ ತ್ಯಂತಮಾಗಿ ಬಡಿಯಲ್ಪಟ್ಟವನಾಗಿ ಬಿಣ್ಣು ಹುಳುವಿನಂತೆ ತಿರುಗಲಿಲ್ಲವೆ? ಎಂದು ನುಡಿಯಲಾಗಿ, ಆ ವಾಕ್ಯವಂ ಕೇಳಿ ನಾರದನು ಆತಂಗೆ ಆಶೀರ್ವಾದವನ್ನಿತ್ತು ಶೀಘ್ರಮಾಗಿ, ಆಕಾಶಮಾರ್ಗವನ್ನೈದಿದನು.

ಎಲೈ ದ್ವಿಜರುಗಳಿರಾ! ಬಳಿಕ ಆ ವಿಂಧ್ಯನು ಮಹಾಕೋಪವುಳ್ಳವನಾಗಿ ವೇಗದಿಂ ಬ್ರಹ್ಮಾಂಡದವರಿಗು ಬೆಳೆದನು. ಆ ಸಮಯದಲ್ಲಿ ಚಂದ್ರಸೂರ್ಯರ್ಗೆ ಆಕಾಶಮಾರ್ಗವು ತಡೆಯಾದುದು. ಅವರಿಂದ ಸಮಸ್ತವಾದ ಜಗತ್ತೊಂದು ಕಡೆಯಲ್ಲಿ ತಿಮಿರದಿಂದಾಕ್ರಮಿಸಲ್ಪಟ್ಟಿತು. ಮತ್ತೊಂದು ಕಡೆಯಲ್ಲಿ ಸೂರ್ಯನ ಕಿರಣಗಳಿಂದಾವೃತಮಾದುದು. ಮತ್ತು ಆ ಜಗತ್ತೊ ಕಾಲ ಪರಿಮಾಣವಿಲ್ಲದೆ ನಾಶರಹಿತಮಾಗಿ ಕ್ರಿಯಾರಹಿತಮಾಗಿರ್ಕುಂ, ಬಳಿಕ ದೇವತೆಗಳು ಆಲೋಚಿಸಿ ವಿಂಧ್ಯನಿಂದೀಬಗೆಯಾದುದೆಂದು ತಿಳಿದು, ಮೇರುಗುಹಾ ಮಧ್ಯದೊಳಿರುತಿರ್ಪ ಋಷಿಶ್ರೇಷ್ಠನಾದ ಅಗಸ್ತ್ಯಮುನಿಯ ಸಮೀಪಕ್ಕೆ ಪೋಗಿ, ಆತನಂ ಕಂಡು ತಪವನ್ನಾಚರಿಸುವವರಿಗು ನಿರೀಕ್ಷಿಸಿ, ಶ್ರೇಷ್ಠನಾದ ಸಮುದ್ರೋದಕಮಂ ಚುಳುಕದಿಂ ಪಾನಮನ್ಮಾಡಿದ, ಎಲೈ ಅಗಸ್ತ್ಯಮುನಿಯೆ! ಪೂರ್ವದಲ್ಲಿ ಸಮಸ್ತ ಜಗತ್ತು ನಿಮ್ಮಿಂದನೇಕ ವೇಳೆ ರಕ್ಷಿತಮಾದುದು. ಮತ್ತಮಿಾಗ ವಿಂಧ್ಯಾದ್ರಿಯ ಗರ್ವದಿಂ ಕೆಲವು ಕೆಲವು ಪ್ರದೇಶದಲ್ಲಿ ಸೂರ್ಯಕಿರಣದಿಂ ವ್ಯಾಪ್ತಮಿಲ್ಲದೆ ತಿಮಿರ ಯುಕ್ತಮಾಗಿ ಜಗವಿರುವದು. ಮತ್ತೆ ಕೆಲಂಬ ಕೆಲಂಬ ಪ್ರದೇಶಂಗಳಲ್ಲಿ ಸೂರ್ಯಕಿರಣಂಗಳಿಂ ಪ್ರಕಾಶಮಾಗಿರುತಿರುವದು. ಅದು ಕಾರಣದಿಂ ಕ್ರಿಯಗಳನ್ನಾಚರಿಸದೆಯು ನಾಶಮಿಲ್ಲದೆಯು ಯಾಗಾದಿ ಕ್ರಿಯೆಗಳಂ ಮಾಡದೆಯೂ ಇರುವದರಿಂದ ನಮಗೆ ಕ್ಷುಧೆಯು ವಿಶೇಷಮಾದುದು. ಅದರಿಂ ನೀನು ವಿಂಧ್ಯನ ಗರ್ವವಂ ಮುರಿದು ಈ ಜಗವನ್ನೂ ನಮ್ಮನ್ನೂ ರಕ್ಷಿಸೆಂದು

ಅಗಸ್ತ್ಯಂಗೆ ಪೇಳ್ದರೆಂದು ಸೂತಂ ಶೌನಕಾದಿ ಮುನಿಗಳ್ಗೆ ನಿರೂಪಿದನೆಂಬಿಲ್ಲಿಗೆ, ಆಸುರಕಾಂಡದಲ್ಲಿ ಹತ್ತನೆಯ ಅಧ್ಯಾಯವು ಸಮಾಪ್ತಂ.

ಹನ್ನೊಂದನೆಯ ಅಧ್ಯಾಯವು.

ಅಗಸ್ತ್ಯಮಹರ್ಷಿಯು ಮಹಾದೇವನನ್ನು ಸ್ತುತಿಸುವಿಕೆ.

ಎಲೈ ಮುನಿಗಳಿರಾ ! ಅನಂತರದಲ್ಲಿ ಅಗಸ್ತ್ಯಮಹಾಮುನಿಯು ಹಾಗೇ ಆಗಲೆಂದು ಪೇಳಿ ಆ ದೇವತೆಗಳಂ ಕಳುಹಿಸಿ, ತನ್ನ ಹೃದಯಕಮಲದಲ್ಲಿ ಮಹಾದೇವನಂ ಚಿಂತಿಸಿದವನಾಗಲು, ಪರಮೇಶ್ವರನು ಪ್ರಸನ್ನನಾದನು. ಆಗ ಆ ಋಷಿಯು ಸ್ವಾಮಿಯಂ ಕಂಡು, ಎಲೈ ಭಗವಂತನಾದ ಮಹಾದೇವನೆ! ಭಕ್ತವತ್ಸಲನಾದ ಶಂಕರನೆ! ನಿನ್ನ ಕೃಪಾಬಲದಿಂ ಲೋಕರಕ್ಷಣೆಗೋಸುಗ ವಿಂಧ್ಯಾದ್ರಿ ಗರ್ವಾಪಹಾರವನ್ನುಮಾಡುವ ಶಕ್ತಿಯಂ ಮತ್ತೆ ದಕ್ಷಿಣದಿಕ್ಕಿಗೈದುವ ತನಗೆ ಸಮಸ್ತರಿಂದ ಪೂಜಿಸಲು ಯೋಗ್ಯವಾದ ತೀರ್ಥಮಂ ಸಹಾ ಪಾಲಿಸಬೇಕೆಂದು ಭಕ್ತಿಯಿಂದ ನಮಸ್ಕಾರವನ್ನುಮಾಡಿದನು.

ಅನಂತರದಲ್ಲಿ ಪರಮೇಶ್ವರನು ಆತನಂ ನೋಡಿ, ಕೇಳೈ ಅಗಸ್ತ್ಯನೆ ! ನಿನಗೆ ಅತ್ಯಂತ ಶಕ್ತಿಯುಂಟಾಗಲಿ. ನೀನೆ ನದಿಗಳಲ್ಲಿ ಉತ್ತಮವಾದ ಕಾವೇರಿಯಂ ಕಮಂಡಲದಲ್ಲಿರಿಸಿಕೊಂಡು ಪೋಗೆಂದು ನಿರೂಪಿಸಲಾಗಿ, ಆಗ ಕಾವೇರಿಯು ಸ್ವಾಮಿಯ ವಾಕ್ಯವಂ ಕೇಳಿ, ಎಲೈ ಸ್ವಾಮಿಯೆ ! ಆ ಪುರುಷನೊಡನೆ ನಾನು ಹೇಗೆ ಪೋಗಲಿ? ಎಂದು ಬಿನ್ನೈಸಿದಳು. ಆ ಮೇಲೆ ಪರಮೇಶ್ವರನು, ಎಲೌ ಕಾವೇರಿಯೆ! ಈ ಋಷಿಯು ತಾನೆ ಕಳುಹಿಸುವನು ಎಂದಾಕೆಗೆ ನಿರೂಪಿಸಿ ತಾನಂತರ್ಹಿತನಾದನು. ಬಳಿಕ ತಪಸ್ವಿಗಳೊಳಗೆ ಶ್ರೇಷ್ಠನಾದ ಅಗಸ್ತ್ಯಮುನಿಯು ವಿಂಧ್ಯಾಚಲಕ್ಕೆ ಪೋಗುವ ಮಾರ್ಗದಲ್ಲಿ ಮಾಯಾಪುರದ ಸಮೀಪದೊಳು, ಕ್ರೂರನಾದ ಮಹಾ ಮಾಯಾವಿಯಾದ, ಭೂಪಾತಾಳಸ್ವರ್ಗಂಗಳಂ ವ್ಯತ್ಯಸ್ತಂ ಗೆಯ್ಯಲು ಸಮರ್ಥನಾದ, ಮತ್ತೆ ಜಲದಿಂಪರ್ವತವಾಗಿಯುಂ ಪರ್ವತದಿಂ ಜಲವಾಗಿಯುಂ ಜಲದಿಂ ಭೂಮಿಯಾಗಿಯುಂ ಭೂಮಿಯಿಂ ಜಲವಾಗಿಯುಂ ತೋರುತ್ತ, ನಾನಾ ರೂಪವಂ ಧರಿಸಿದ ಮಹಾ ಪಾಪಿಯಾದ, ಕಪಟದಿಂದ ಅತೀಂದ್ರಿಯನಾದ ಕ್ರೌಂಚನಂ ಕಂಡು, ಆತನ ಮೇಲೆ ಪೋಗುವ ಸಮಯದಲ್ಲಿ ಮಾರ್ಗವಕಾಣದೆ ತಿರುಗಿದನದೆಂತೆನೆ.

ವಿಂಧ್ಯಕ್ರೌಂಚರ ಗರ್ವಭಂಗವು.

ಎಲೈ ಮುನಿಗಳಿರಾ! ಆ ಅಗಸ್ತ್ಯಮಹಾಮುನಿಯು ದೀರ್ಘವಾದ ಮಾರ್ಗದ ಭ್ರಮೆಯಿಂದಲ್ಲಿಗೆ ಪೋಗಿ ಮಾರ್ಗವಂ ಕಾಣದೆ ಕ್ಷಣ ಮೋಹಿತನಾಗಿ

ಮರಳಿ ಸೂಕ್ಷ್ಮರೂಪದಿಂದೊಂದು ಮಾರ್ಗವಂ ಕಂಡಲ್ಲಿಗೆ ಪೋಗಿ, ಮರಳಿ ಮೋಹಿಸಲ್ಪಟವನಾಗಿ ದಾರಿಯನ್ನು ಕಾಣದೆ ಸುತ್ತು ಮುತ್ತಲು ನೋಡುತ್ತಲು ಯೆಡಹುತ್ತಲು ಶ್ರೀಘ್ರದಿಂ ಪೋಗಿ, ಮತ್ತೊಂದು ಮಾರ್ಗವಂ ಕಂಡಲ್ಲಿಗೆ ತೆರಳಿ, ಮರಳಿ ಮೋಹಿತನಾಗಿ ಅಲ್ಲಿ ನಿಂತು, ವಿಚಾರವಂ ಮಾಡಿ ಮತ್ತೊಂದು ಮಾರ್ಗಕ್ಕೆ ಹೋಗಿ ಅಲ್ಲಿ ತಿರುಗಿ ಬಹು ಮಾರ್ಗಂಗಳಂ ಸಂಚರಿಸಿ, ಇನ್ನೊಂದು ಮಾರ್ಗದಿಂ ವನಕ್ಕೆ ಪೋದನು. ಬಳಿಕ ಅಲ್ಲಿ ಕಂಭದೋಪಾದಿಯಲ್ಲಿ ವೃಷ್ಟಿ ಧಾರೆಯುಂಟಾದುದು, ಮತ್ತಂ ಮೇಘಂಗಳ ಧ್ವನಿಯು ಕಲ್ಪಾಂತದೋಪಾದಿ ಯಲ್ಲಿ ಭಯಂಕರಮಾಗಲು, ಮೋಹಕ್ಕೆ ಮೋಹಮಾಗಿ ಮೃತ್ಯುವಿಗೆ ಮೃತ್ಯು ಪ್ರದಮಾಗಿ ಸರ್ವರಿಗುಂ ಮೋಹಮಾದುದು. ಅನಂತರದಲ್ಲಿ ಅಗಸ್ತ್ಯಮುನಿಯು ಆ ವನವಂ ಕಂಡು ಹಾಹಾ!! ಇನ್ನೇನೀಬಹುದೆಂದು ಚಿಂತಿಸಿ, ಜ್ಞಾನದೃಷ್ಟಿ ಯಿಂದ ಕ್ರೌಂಚನ ಮಾಯೆ ಯೆಂಬುದಂ ತಿಳಿದು ನಿರ್ಭಯನಾಗಿ, ಹಸ್ತದಲ್ಲಿರು ತಿರ್ಪ ದಂಡದಿಂದಾತನಂ ಪೊಯ್ದು, ಎಲೆಲೊ ದುರಾತ್ಮನೆ! ಆವುದಾನೊಂದು ಕಾರಣದಿಂ ಕಪಟವಾದ ಪರ್ವತ ರೂಪದಿಂ ನನಗೆ ಮಾಯೆಯಂ ಮಾಡಿ ತಿರು ಗಿಸಿದೆ ಅದುಕಾರಣದಿಂ ನಿನಗೆ ಪರ್ವತರೂಪ ಮುಂಟಾಗಲಿ, ಮತ್ತಂ ನಿನ್ನ ಶರೀರವಂ ಕುಮಾರಸ್ವಾಮಿಯಿಂ, ಶಕ್ತಿಯಿಂ ಭೇದಿಸಲಿ, ಎಂದು ಹಸ್ತದಿಂ ದುದಕಮಂ ತೆಗೆದಾತಂಗೆ ಶಾಪವನಿತ್ತು, ಮರಳಿ ಪೂರ್ವ ಮಾರ್ಗವಿಡಿದು ಕಾಶಿಗೆ ಪೋದನು. ಆ ಬಳಿಕ ಆ ಕಾಶೀಕ್ಷೇತ್ರದಲ್ಲಿ ಮಹಾದೇವನಾದ ಜಗದ್ಗುರು ವಾದ, ಪ್ರಾಣಿಗಳ್ಗೆ ಮರಣಕಾಲದಲ್ಲಿ ತಾರಕಬ್ರಹ್ಮ ಮಂತ್ರೋಪದೇಶವಂ ಮಾಡುವ ವಿಶ್ವನಾಥನಂ ಪೂಜಿಸಿ, ಅಲ್ಲಿಂದ ಪೊರಮಟ್ಟು ವಿಂಧ್ಯನ ಸಮಿಾಪಕ್ಕೆ ಪೋಗಿ, ಕೇಳೈ ಪರ್ವತರಾಜನಾದ ಋಷಿಗಳಲ್ಲಿ ಪ್ರೀತಿಯುಳ್ಳ ವಿಂಧ್ಯನೆ! ಸರ್ವ ಭೂತಂಗಳಿಗೆ ದಯೆಯಿಂ ಪ್ರವರ್ತಕನಾದ ನಿನಗೋಸುಗ ಪೇಳುವೆನು, ನನಗೆ ದಕ್ಷಿಣದಿಕ್ಕಿಗೆ ಪೋಗುವದೊಂದು ಕಾರ್ಯಮುಂಟು, ಮಾರ್ಗವನೀಡೆಂದು ಶಾಂತ ವಚನದಿಂ ತ್ರಿರಾವರ್ತಿ ಕೇಳಲು, ಆ ವಿಂಧ್ಯನು ಋಷಿಶ್ರೇಷ್ಠನಾದ ಆತನಂ ಕಂಡು, ಎಲೈ ಋಷಿಯೆ! ನೀನೇನು ಅರಿಯೆಯ? ಮಾರ್ಗವೆಲ್ಲಿ? ಆವುದು ನೀನು ಬಂದಮಾರ್ಗವು? ಆ ಮಾರ್ಗವಿಡಿದು ಪೋಗೆಂದು ಗಂಭೀರವಾಕ್ಯದಿಂ ಪೇಳಲಾಗಿ ಆಗ ಆತನು ಶೀಘ್ರಮಾಗಿ ಕರವನೆತ್ತಿ ವಿಂಧ್ಯನಮೇಲಿರಿಸಿ ಆತನಂ ಮರ್ದಿಸಿದನು.

ಇಲ್ವಲ ವಾತಾಪಿಗಳ ವೃತ್ತಾಂತವು.

ಬಳಿಕ ಗಿರಿರಾಜನಾದ ವಿಂಧ್ಯನು ಆತನ ಹಸ್ತಘಾತದಿಂ ಭೂಮಿಯಲ್ಲಿ ಭಯಾನ್ವಿತನಾಗಿ, ಆ ಋಷಿಯಂ ನೋಡಿ, ಶಿವಂಗೆ ಪ್ರಿಯನಾದ ತಪಸ್ವಿಗಳಿಗೆ ಶ್ರೇಷ್ಠನಾದ ಅಗಸ್ತ್ಯ! ಕೇಳೈ, ನನ್ನನ್ನು ರಕ್ಷಿಸು ರಕ್ಷಿಸು, ಅಜ್ಞಾನದಿಂ

ಮಾಡಿದ ಅಪರಾಧಮಂ ಕ್ಷಮಿಸಿ, ನನಗೆ ಆವಾಗ ಪೂರ್ವದಂತೆ ಉನ್ನತ ಮುಂಟಾದೀತೆಂದು ಕೇಳಲಾಗಿ, ಆ ಋಷಿಯು ವಿನಯಾನ್ವಿತನಾದ ಆ ವಿಂಧ್ಯನಂ ನೋಡಿ ಎಲೈ ವಿಂಧ್ಯನೆ! ಮರಳಿ ಈ ಮಾರ್ಗವಿಡಿದು ನಾನು ಬಂದಾಗ ನಿನಗೆ ಉನ್ನತವುಂಟಾದೀತೆಂದು ಪೇಳ್ದು, ಆವ ಬಳಿಯಲ್ಲಿ ಪಾಪಕರ್ಮಿಗಳಾದ ಇಲ್ವಲ ವಾತಾಪಿಗಳಿರುವರೋ ಅಲ್ಲಿಗೆ ಪೋದನು. ಬಳಿಕ ಇಲ್ವಲನು ಋಷಿಶ್ರೇಷ್ಠ ನಾದ ಆತನಂ ಕಂಡು ಪೂರ್ವದಂತೆ ಆ ಋಷಿಯಂ ಭೋಜನಕ್ಕೆ ಹೇಳಿ ಮೊದಲಿ ನಂತೆ ವಾತಾಪಿಯಂ ಛೇದಿಸಿ, ಆತಂಗೆ ಆಜ್ಯಕ್ಷೀರ ಫಲ ಅಪೂಪದಧಿ ಪಲಲ ಶುದ್ಧಾನ್ನಪಾಯಸ ಮೊದಲಾದ ಭೋಜನವನಿತ್ತು, ಗೃಹದಿಂ ಪೊರಮಟ್ಟು ವಾತಾಪಿಯೆ! ಎಂದು ಕರೆಯುವುದರೊಳಗೆ ಅಗಸ್ತ್ಯನ ಕುಕ್ಷಿಗತವಾದ ಸಮ ಸ್ತವು ಜೀರ್ಣವಾದುದು. ಬಳಿಕ ವಾತಾಪಿಯು ಕುಕ್ಷಿಯೊಳು ತಿರುಗಲಾಗಿ ಅಗ ಸ್ತ್ಯನು ಆ ದೈತ್ಯನ ವಂಚನೆಯಂ ತಿಳಿದು ಕರದಿಂ ಕುಕ್ಷಿಯಂ ಸ್ಪರ್ಶಿಸಿ, ಉತ್ತ ಮವಾದ ಮಂತ್ರಮಂ ಜಪಿಸಲಾಗಿ, ಆ ಮಂತ್ರ ಪ್ರಭಾವದಿಂದ ಅವನು ಜೀರ್ಣ ವಾಗಿ ಹೋದನು. ಕೇಳಿರೈ ಋಷಿಗಳಿರಾ! ಬಳಿಕ ಇಲ್ವಲನು ವಾತಾಪಿಯೆಂದು ಕರೆದು ಆತ ಬಾರದ ಕಾರಣದಿಂ, ಉದರ ಬಾಧಕನಾದ ವಾತಾಪಿಯು ಭಸ್ಮನಾದ ನೆಂದರಿತು ಆಗ ಅಗಸ್ತ್ಯನ ಸಂಹಾರಮಂ ಮಾಡಲು ಶೀಘ್ರದಿಂ ಬರಲಾಗಿ; ಅಗಸ್ತ್ಯನು ಆತನಂ ಕಂಡು ಕುಶದರ್ಭೆಯಿಂದಾತನಂ ಕೊಂದು, ಕುಟಕವೆಂಬ ದೇಶಮಂ ಬಿಟ್ಟು ಕೊಂಕಣವೆಂಬ ದೇಶವನೈದಿ, ಆ ಬ್ರಹ್ಮಹತ್ಯದಿಂದ ಅತ್ಯಂತ ಬಾಧಿತನಾಗಿ, ಅಲ್ಲಿ ಲಿಂಗರೂಪನಾದ ಸದಾಶಿವನಂ ಪೂಜಿಸುತಿದ್ದನು. ಎಲೈ ಮುನಿಗಳಿರಾ! ಅದೇ ಸಮಯದಲ್ಲಿ ನಾರದನು ಇಂದ್ರನ ಬಳಿಗೆ ಪೋಗಲಾಗಿ, ಆ ಇಂದ್ರನು ಆತಂಗೆ ಅರ್ಘ್ಯಾದಿಗಳಂ ಕೊಟ್ಟು ದೀನನಾಗಿ ದೈನ್ಯವಾದ ವಾಕ್ಯವಂ ಪೇಳ್ದನದೆಂತೆನೆ, ಕೇಳೈ ಬ್ರಹ್ಮರ್ಷಿಯಾದ ನಾರದನೆ! ನನಗೆ ಶೂರಪದ್ಮನ ಭಯವಾವಾಗ ವಿಮೋಚನವಾದೀತು? ದೇವತೆಗಳುಂ ನಾನುಸಹ ಸ್ವಸ್ಥಾನವನೈದಿ ಯಾವಾಗಿದ್ದೇವು? ಮತ್ತಂ ನಾನು ಶೂರಪದ್ಮನ ಭಯದಿಂದಲು ಆತನ ಗೂಢ ಚಾರಿಗಳ ಭೀತಿಯಿಂದಲು ಯಾವಾಗ ವೇಣುರೂಪಮಂ ಧರಿಸಿದೆನೋ, ಆಗ ವರ್ಷಕಾಲವು ಹೋದುದರಿಂದ ಸರ್ವವೃಕ್ಷಂಗಳು ಶುಷ್ಕಂಗಳಾದವು; ಅದರಿಂದ ಆ ಮರಗಳ ಹಾನಿಯು ನನ್ನ ಬಾಧಿಸುವದು ; ಅದುಕಾರಣದಿಂ ವೃಕ್ಷಂಗಳ ಪ್ರೋಷಣೆಗೋಸುಗ ಆವಾಗ ವೃಷ್ಟಿಯುಂಟಾದೀತು? ಎಂದು ನಾರದನಂ ಕೇಳ ಲಾಗಿ, ಬಳಿಕ ನಾರದನದಂ ಕೇಳಿ, ಎಲೈ ಇಂದ್ರನೆ! ದುಃಖಿಸಬೇಡ; ಅಲ್ಪಕಾಲ ದಲ್ಲಿಯೆ ನಿನಗೆ ಸ್ವರ್ಗಪ್ರಾಪ್ತಿಯುಂಟಾದೀತು; ಈಗ ಅಗಸ್ತ್ಯನು ಕೈಲಾಸವಾಸಿ ಯಾದ ಸಪ್ತತೀರ್ಥದ ಮಧ್ಯದಲ್ಲಿರುವ ಕಾವೇರಿಯಂ ಕುಂಭದಲ್ಲಿರಿಸಿಕೊಂಡು,

ಸಮೀಪವಾದ ಕೊಂಕಣದೇಶಕ್ಕೆ ಬಂದಿಧಾನೆ. ಅದುಕಾರಣದಿಂ ವೃಕ್ಷಂಗಳ ಪುಷ್ಪಾಭಿವೃದ್ಧಿಗೋಸುಗ ಗಣಪತಿಯಂ ಪೂಜಿಸು, ನಾನು ಪ್ರಸನ್ನನಾಗಿ ಕಾವೇರಿಯಂ ಸುರಿಸುವೆನೆಂದು ಪೇಳ್ದು ಆಕಾಶಮಾರ್ಗಕ್ಕೆ ಪೋದನು.

ಅನಂತರದಲ್ಲಿ ಅಮರೇಶ್ವರನಾದ ಇಂದ್ರನು ಅಮೃತಸಮೂಹ ಸ್ರಾವಿಯಾದ ಸರ್ವದುಃಖಪರಿಹಾರಕಮಾದ, ನಾರದಮುನಿಯ ವಾಕ್ಯಮಂ ಕೇಳಿ, ಶೀಘ್ರದಿಂದಾಗ ಗಜಮುಖನ ಪೂಜೆಯಂ ಮಾಡುವುದರಲ್ಲಿ ಮತಿಯಂಗೈದು, ಕುಮಾರಸ್ವಾಮಿಗೆ ಜ್ಯೇಷ್ಠನಾದ ಆ ವಿನಾಯಕಂಗೆ ಅಗಮುರಿಕಡುಬು ಸಮೇತವಾದ ಯೆರೆಯಪ್ಪ ಕ್ಷೀರ ಘೃತಾನ್ನಗಳಿಂದ, ಅತ್ಯಂತವಾಗಿ ಪೋಗೆಲ್ಪಟ್ಟ ಪಾಪಗಳ ಸಾಲುಳ್ಳ ಪರಿಶುದ್ಧವಾದ ಪೂಜೆಯಂ ಮಾಡಿದವನಾಗಲಾಗಿ, ಭಕ್ತಜನಾರ್ತಿಹರನಾದ ಹೋಗೊಳಿಸಲ್ಪಟ್ಟ ಭಕ್ತರ ಪಾಪ ಸಮೂಹವುಳ್ಳವನಾಗಿ, ನಿರ್ಮಲಪ್ರಕಾಶಮುಖ ವಿಘ್ನೇಶ್ವರನು ದೇವೇಂದ್ರನ ನಯನಂಗಳ್ಗೆ ಗೋಚರತ್ವಮನೈದಿದನೆಂದು ಸೂತಂ ಶೌನಕಾದಿಗಳ್ಗೆ ಪೇಳಿದನೆಂಬಲ್ಲಿಗೆ, ಅಸುರಕಾಂಡದಲ್ಲಿ ಹನ್ನೊಂದನೆಯ ಅಧ್ಯಾಯವು ಸಂಪೂರ್ಣಂ.

ಹನ್ನೆರಡನೆಯ ಅಧ್ಯಾಯವು.

ಕಾವೇರಿಯ ಉತ್ಪತ್ತಿಯು.

ಅನಂತರದಲ್ಲಿ ಭಗವಂತನಾದ ವಿಘ್ನೇಶ್ವರನಾತಂಗೆ ಪ್ರಸನ್ನನಾಗಿ ಆತನಂ ನೋಡಿ, ಎಲೈ ಇಂದ್ರನೆ! ಸುಪ್ರೀತನಾದೆನು, ನಿನಗೆ ಬೇಕಾದ ವರವಂ ಕೇಳೆಂದು ಪೇಳಲಾಗಿ, ಇಂದ್ರನು ಎಲೈ ವಿನಾಯಕನೆ! ನಿನ್ನ ಪ್ರಸಾದದಿಂ ವೃಕ್ಷಂಗಳ ಪೋಷಣೆಗೋಸುಗ ಬಹು ಉದಕಮುಂಟಾಗಬೇಕೆಂದು ನುಡಿದನು. ಬಳಿಕ ವಿನಾಯಕನು ಎಲೈ ಇಂದ್ರನೆ! ಬ್ರಹ್ಮಾಂಡದಲ್ಲಿರ್ದ ಉದಕಂಗಳೋ ಅಂಡದ ಪೊರವಳೆಯದೊಳಿರುತಿರ್ಪ ಉದಕಂಗಳೋ ಆಕಾಶಗಂಗೆಯೋ ಅಲ್ಲದಿರ್ದೊಡೆ ಪಾತಾಳಗಂಗೆಯೋ, ಆಯಾ ಲೋಕಂಗಳಲ್ಲಿರುತಿರುವ ಇವು ಮೊದಲಾದ ಉದಕಂಗಳೊಳಗೆ ಯಾವ ಉದಕವು ಬರಬೇಕು? ಎನಲಾಗಿ ಬಳಿಕ ಇಂದ್ರನು ಆತನ ಗಂಭೀರವಾದ ವಾಕ್ಯಮಂ ಕೇಳಿ, ಎಲೈ ವಿಘ್ನೇಶ್ವರನೆ! ತಪೋವಂತರೊಳಗೆ ಶ್ರೇಷ್ಠನಾದ ಕಲಶೋದ್ಭವನಾದ ಅಗಸ್ತ್ಯನು ನದಿಗಳೊಳಗೆ ಉತ್ತಮವಾದ ಕಾವೇರಿಯಂ ಶಿವನಿಂ ತೆಗೆದುಕ್ಕೊಂಡು ಬಂದು ಸಮೀಪದಲ್ಲಿಧಾನೆ. ನಿನ್ನಿಂದೀಗ ಆ ಕಾವೇರಿಯು ತರಲ್ಪಡಬೇಕೆಂದು ಪೇಳಿ ಭಕ್ತಿಯಿಂ ನಿಂತಿರೆ, ಹಾಗೆ ಆಗಲೆಂದು ನಿರೂಪಿಸಿ ವಿಘ್ನೇಶ್ವರನು ಕಾಕರೂಪವಂ ಕೈಕೊಂಡು, ಅಗಸ್ತ್ಯನ ಸಮೀಪಕ್ಕೆ ಪೋಗಿ ಅದ್ಭುತಮಪ್ಪ ಕಮಂಡಲದ ಮೇಲೆ ಕುಳಿತಿರಲಾಗಿ, ಆ

ಮಹಾಮುನಿಯು ಆ ಕಾಗೆಯುಂ ಕಂಡು ತ್ವರಿತದಿಂ ಬಂದು ಕರದಿಂದುಚ್ಚಾಟನೆಯಂ ಮಾಡಲಾಗಿ, ಆ ಕಾಗೆಯು ಪಾದದಿಂ ಕಮಂಡಲವಂ ಕೆಡಹಿ ಶೀಘ್ರದಿಂ ಭಯಪಡುವಂತೆ ಸ್ವಲ್ಪದೂರ ಓಡಿ ಪೋಗಲು, ಋಷಿಯು ಬಿದ್ದಿರ್ಪ ಆ ಕಮಂಡಲವಂ ಕಂಡು, ಹಾಹಾ !! ಶಿವಶಿವ !! ಎಂದು ಕೂಗುತ್ತ ಆ ಕಮಂಡಲದ ಬಳಿಗೈದಿ, ಈ ಕಾಗೆಯು ಏನುಕಾರಣವು ಬಂದಿತೆಂದು ಚಿಂತಿಸಿ, ಯೆಡಬಲದೊಳಿರುತಿರ್ಪ ಆ ಕಾಗೆಯುಂ ವೀಕ್ಷಿಸಿ, ಆವ ಬಗೆಯಿಂದಲಾದರುಂ ಈ ಕಾಗೆಯುಂ ಕೊಲ್ಲಬೇಕೆಂದು ನಿಶ್ಚಯಿಸಿ, ಕೋಪದಿಂದಾಕಾಗೆಯ ಬಳಿಗೆ ಪೋಗಿ, ಅಲ್ಲಿ ಅದಂ ಕಾಣದೆ ಇದೇನಾಯಿತೆಂದು ಆಶ್ಚರ್ಯಪಟ್ಟು ಮುಖಮುಂ ಮೇಲಕ್ಕೆತ್ತಿ ಇತ್ತಲತ್ತ ನೋಡುತಿರೆ, ಯಜ್ಞೋಪವೀತವಂ ಧರಿಸಿದ ಒಬ್ಬ ಬ್ರಹ್ಮಚಾರಿಯುಂ ಕಂಡು, ಈತನೆ ಸರಿ ಕಾಗೆಯೆಂಬುದು ಭ್ರಮೆಯೆಂದು ನಿಶ್ಚೈಸಿ, ಈತನಂ ಮುಷ್ಟಿಯಿಂ ಮರ್ದಿಸಬೇಕೆಂದು ಪೋಗಲು, ಬಳಿಕ ಆ ಬ್ರಹ್ಮಚಾರಿಯು ಭಯಪಟ್ಟವನಂತೆ ಸ್ವಲ್ಪದೂರ ಪೋಗಲಾಗಿ, ಆ ಅಗಸ್ತ್ಯನು ಅಲ್ಲಿಗೆ ಸಾರಿ ಬ್ರಹ್ಮಚಾರಿಯುಂ ಸೋಣೆಯಬೇಕೆಂದು ಕೋಪದಿಂ ಕರವಂ ಮೇಲಕ್ಕೆತ್ತಿದನು.

ಅಗಸ್ತ್ಯಮಹಾಮುನಿಗೆ ಗಣೇಶನು ಪ್ರಸನ್ನನಾಗುವಿಕೆ.

ಆಗ ಬ್ರಹ್ಮಚಾರಿಯು ಆತನಿಗೆ ಕೈವಶವಾಗುವಂತೆ ಮೆಲ್ಲಮೆಲ್ಲನೆ ಚಲಿಸುತ, ಋಷಿಶ್ರೇಷ್ಠರೊಳಗೆ ಉತ್ತಮನಾದ ಅಗಸ್ತ್ಯನಂ ಪರಿಪರಿ ವಂಚಿಸಿ, ಆತನ ಮುಂದುಗಡೆಗೈದಿ ತನ್ನ ನಿಜಸ್ವರೂಪವಂ ತೋರಿಸಲಾಗಿ, ಆ ಅಗಸ್ತ್ಯನು ನಾನಾ ವಿಧವಾದ ಗಣಾಧೀಶ್ವರರಿಂದ ಆವೃತನಾಗಿ ಗಜಮುಖನಾಗಿ ಮಹೋದರನಾದ ಶೂರ್ಪಕರ್ಣನಾಗಿ ಜೋಲುತಿರ್ಪ ಅಧರವುಳ್ಳವನಾಗಿ ಕಾಮರೂಪಿಯಾದ, ಸಾಕಾರನಾಗಿ ಗಣಂಗಳ್ಗೆ ಗಣಪತಿಯಾಗಿ ಕವಿಗಳ್ಗೆ ಕವಿಯಾಗಿ ಬ್ರಹ್ಮಸ್ವರೂಪನಾದ, ಶ್ರೇಷ್ಠರಾಜನಾಗಿ ಶಿವನಾಗಿರ್ದ ಆ ವಿನಾಯಕನಂ ಕಂಡು, ಆತಂಗೆ ಅನೇಕ ನಮಸ್ಕಾರಂಗಳಂ ಮಾಡಿ, ಸರ್ವ ವಿಘ್ನಂಗಳಂ ಪರಿಹರಿಸುವ ವಿನಾಯಕನೆ! ನಮಸ್ಕಾರವು, ಸಮಸ್ತ ಪಾಪಂಗಳನ್ನು ಹೋಗಲಾಡಿಸುವ ವಿನಾಯಕನೆ! ನಿನಗೆ ನಮಸ್ಕಾರ, ಕುಮಾರಸ್ವಾಮಿಗೆ ಜ್ಯೇಷ್ಠನಾದ ವಿಘ್ನೇಶ್ವರನೆ ನಮಸ್ಕರಿಸುತ್ತೇನೆ, ಎಂದು ಈ ಪ್ರಕಾರದಿಂ ಸ್ತುತಿಸಿ, ಅಡಿಗಡಿಗೆ ನಮಸ್ಕಾರಂಗಳಂ ಮಾಡಿದವನಾಗಲು, ಆ ವಿನಾಯಕನು ವಿಂಧ್ಯಗರ್ವ ಪರಿಹಾರಕನಾದ ಅಗಸ್ತ್ಯನೆ! ವಿನಾಯಕನು ನಿನಗೆ ಪ್ರಸನ್ನನಾದನು, ನಿನ್ನ ಅಭೀಷ್ಟವಂ ಪೇಳೆನಲಾಗಿ, ಅಗಸ್ತ್ಯನು ಆ ವಾಕ್ಯವಂ ಕೇಳಿ, ಎಲೈ ದಯಾನಿಧಿಯೆ! ನನ್ನ ಅಪರಾಧವಂ ಮನ್ನಿಸಿ, ನಿನ್ನ ಪಾದಾಂಬುಜದಲ್ಲಿ ಮತ್ತೋರ್ವರಂ ಭಜಿಸದ ಭಕ್ತಿಯುಂಟಾಗಲಿ, ಮತ್ತಂ ಪರಮೇಶ್ವರನ ಪೂಜೆಗೋಸುಗ ಕಾವೇರಿಯುಂ ತಂದೆನು

ಕಮಂಡಲವು ಬಿದ್ದಮಾತ್ರದಿಂದ ನದಿಯು ಪೋದುದು; ಅದರಿಂ ಪರಮೇಶ್ವರನ ಪೂಜೆಗೋಸುಗ ತೀರ್ಥವಂ ಪಾಲಿಸಬೇಕು. ಆವುದಾನೊಂದು ಕಾರಣದಿಂ ನಿನ್ನನ್ನು ನಾನು ಹಸ್ತದಿಂ ನೂಕೆಯಲ್ಬಂದೆನೋ, ಅದುಕಾರಣದಿಂದಾ ಕುಟ್ಟಣವು ನನಗಾಗಲೆಂದು ಮುಷ್ಟಿಯಿಂ ತನ್ನ ಮಸ್ತಕವಂ ತಾಡನವಂಮಾಡಿ ಕೊಂಡು ವಿನಯದಿಂ ನಿಂತಿರಲಾಗಿ, ಬಳಿಕ ವಿನಾಯಕನು ತನ್ನ ಭಕ್ತನಾದ ಕೃತ್ಯಕೃತ್ಯವ ಬಲ್ಲಂಥ ಅಗಸ್ತ್ಯನಂ ಗಂಭೀರವಾಕ್ಯದಿಂ ಮನ್ನಿಸಿ, ಮುಗುಳು ನಗೆಯಿಂದಿಂತೆಂದನು. ಎಲೈ ಮುನಿಯೆ! ವೃಕ್ಷಂಗಳು ಒಣಗಿ ಪೋದುದರಿಂದ ಇಂದ್ರನಿಂ ಪ್ರಾರ್ಥಿಸಲ್ಪಟ್ಟು, ಜಲಾರ್ಥವಾಗಿ ಬಂದು ಕಾಕರೂಪದಿಂ ಕಮಂಡಲವಂ ಕೆಡಹಿದೆನು. ನಿನ್ನಿಂದ ಮಾಡಲ್ಪಟ್ಟ ಉಪಚಾರವು ನನಗತ್ಯಂತ ಪ್ರಿಯವು, ಪುರಾರಿಯಾದ ಪರಮೇಶ್ವರನ ಪೂಜೆಗೋಸುಗ ಉದಕವಾಗಲೆಂದು ಪೇಳಿ, ಕಮಂಡಲದಿಂದ ಕಾವೇರೀ ಉದಕಮಂ ಕಮಂಡಲದಲ್ಲಿ ತುಂಬಲಾಗಿ, ಆ ಕಮಂಡಲವು ಪೂರ್ಣವಾಗಿ ಕಡೆಗೋಡಿ ಪರಿದುದು. ಈ ಪ್ರಕಾರವಾಗಿ ವಿನಾಯಕನು ಆತಂಗೆ ಬಹು ವರಗಳಂ ಕೊಟ್ಟು ಅಂತರ್ಧಾನವಾಗಲು, ಅಗಸ್ತ್ಯನು ಶೀಘ್ರದಿಂ ಕುದ್ರಾಲವೆಂಬ ಪುರಕ್ಕೆ ಪೋದನು. ಅಲ್ಲಿರುವ ಸಮಸ್ತರಾದ ವೈಷ್ಣವರು ವಿಭೂತಿಯಿಂ ಸರ್ವಾಂಗ ಭೂಷಿತನಾದ ರುದ್ರಾಕ್ಷಿ ಯಿಂದಲಂಕೃತನಾದ, ಋಷಿಶ್ರೇಷ್ಠನಾದ ಆ ಅಗಸ್ತ್ಯನಂ ಕಂಡು, ಎಲೈ ವಿಪ್ರನೆ! ನೀನು ಶೈವನು; ಅದರಿಂ ನಮ್ಮ ಪುರಕ್ಕೆ ಬರಲಾಗದೆಂದು ಪೇಳಲಾಗಿ, ಆತನು ಹಾಗೆ ಆಗಲೆಂದು ಪೇಳಿ ಪುರದ ಪೊರವಳಯಕ್ಕೆ ಬಂದು, ಶೀಘ್ರದಿಂ ಭಾಗವತರೂಪವಂ ಕೈಕೊಂಡು ಮಾಯೆಯಿಂದಾಪುರಕ್ಕೆ ಮರಳಿ ಪೋಗುತ್ತಿರೆ, ಆ ಬೀದಿಯಲ್ಲಿರುವ ಸಮಸ್ತರಾದ ವೈಷ್ಣವರು ಆತನಂ ಕಂಡು ನಮಸ್ಕಾರವಂ ಮಾಡಿ, ಬಹುಮಾನದಿಂದಾತನಂ ದೇವಾಲಯಕ್ಕೆ ಕರೆದುಕೊಂಡು ಪೋದರು.

ವಿಷ್ಣುವು ಲಿಂಗವಾಗುವಿಕೆ.

ಅನಂತರದಲ್ಲಿ ಆತನು ವೈಷ್ಣವರು ಸಹ ಅಲ್ಲಿರುವ ವಿಷ್ಣುವಂ ಮಾತ ನಾಡಿಸಿ, ವೈಷ್ಣವರಂ ನೋಡಿ ಎಲೈ ವೈಷ್ಣವರುಗಳಿರಾ! ನಾನು ವಿಷ್ಣುಪೂಜೆ ಯಂ ಮಾಡಬೇಕು, ನೀವು ಪೊರವಳಯಕ್ಕೆ ಪೋಗಿರೆಂದವರಂ ಕಳುಹಿ, ಶಿವ ಭಾವದಿಂದ ವಿಷ್ಣುವಂ ಕರದಿಂ ಮರ್ದಿಸಲಾಗಿ, ಆ ವಿಷ್ಣುವು ಶೀಘ್ರದಿಂ ಲಿಂಗರೂಪನಾದನು. ಬಳಿಕ ಅಗಸ್ತ್ಯನು ಭಕ್ತಿಯಿಂ ಲಿಂಗಾಕಾರವಾದ ಶಂಭು ವಂ ವಿಧಿಯಿಂ ಪೂಜಿಸಿ, ಆ ವೈಷ್ಣವರ್ಗೆ ಆ ಲಿಂಗವಂ ತೋರಿಸಲಾಗಿ, ಸಮಸ್ತ ವೈಷ್ಣವರು ಸೇರಿ ಆತನಂ ಸಂಹರಿಸಲೋಸುಗ ವೇಗದಿಂ ಬರುತಿರೆ, ಆತನು ಕೋಪಯುಕ್ತನಾಗಿ ಆ ವೈಷ್ಣವರಂ ನೋಡಲು ಅವರೆಲ್ಲರು ಕೋಪಾಗ್ನಿ

ಸಂತಪ್ತರಾಗಿ ದಿಕ್ಕುದಿಕ್ಕಿಗೆ ಓಡಿಹೋದರು. ಬಳಿಕ ಅಗಸ್ತ್ಯನು ದಧೀಚಿ ಕಣ್ವ ನಂದೀಶ್ವರ ಭೃಗು ಗೌತಮ ಬೃಹಸ್ಪತಿ ದೂರ್ವಾಸರೆಂಬ ಮಹಾ ಮುನಿಗಳ ಶಾಪವಂ ನೆನೆದು, ಆ ಪುರದಲ್ಲಿ ಶೈವರಂ ನಿಲ್ಲಿಸಿ ಸಹ್ಯಪುರಕ್ಕೆ ಬಂದನು.

ಕೇಳಿರೈ ದ್ವಿಜರುಗಳಿರಾ! ಕಮಂಡಲದಿಂ ಪೊರಮಟ್ಟ, ಆ ಕಾವೇರಿಯು ಶ್ರೀಕಾಶವೆಂಬ ಪುರದ ಶೃಂಗಾರವನದಲ್ಲಿರುತಿರ್ಪ ವೃಕ್ಷಪಂಗ್ತಿಗಳ ಮಧ್ಯದಲ್ಲಿ ಪ್ರವಹಿಸಲಾಗಿ, ಜೀರ್ಣಪರ್ಣಗಳಾಗಿರ್ದ ಆ ವೃಕ್ಷಗಳು ತತ್ಕ್ಷಣದಲ್ಲಿ ಪ್ರಾದುರ್ಭವಿಸಿದ ಅಂಕುರಂಗಳುಳ್ಳವುಗಳಾಗಿ ನಾನಾ ವಿಧ ಪುಷ್ಪಫಲಂಗಳಿಂ ಶೋಭಿತವಾದವು. ಬಳಿಕ ಇಂದ್ರನು ಅವುಗಳಂ ಕಂಡು ವ್ಯಾಕುಲವಾದ ಮನಸ್ಸಂ ಬಿಟ್ಟು ಹರುಷಗೊಂಡು ತನ್ನ ನಿಜರೂಪವಂ ಧರಿಸಿ, ಶಚೀದೇವಿಯೊಡನೆ ವಿಚಿತ್ರ ಪುಷ್ಪ ಪತ್ರಂಗಳಂ ಪರಿಮಳವಾದ ಕುಸುಮಂಗಳಂ ಬಹಳವಾಗೆತ್ತಿ, ವಿಶ್ವೇಶನಾದ ಶಿವನಂ ಪೂಜಿಸಿ ನಿಯಮವಂತನಾಗಿರುವಾಗ, ಸಮಸ್ತರಾದ ದೇವತೆಗಳು ಆ ಇಂದ್ರನಂ ಕಾಣಲಿಚ್ಛೈಸಿ, ಅಲ್ಲಿಗೆ ಬಂದು ಆತಂಗೆ ನಮಸ್ಕರಿಸಿ, ಎಲೈ ಇಂದ್ರನೆ! ಏಕಾಕಿಯಾಗಿ ಶಚೀದೇವಿ ವೆರಸಿ ನಮ್ಮನ್ನು ಬಿಟ್ಟು ಮುನಿಗಳ ಆವಾಸದೊಳು ಕಪಟರೂಪದಿಂ ಹೇಗೆ ಇರುತಿದ್ದಿ? ಪೂರ್ವದಂತೆ ದಯದಿಂ ದೇವತೆಗಳಾದ ನಮ್ಮಗಳನ್ನು ಪಾಲಿಸುತ್ತ ಸಮಸ್ತರಾದ ಅಸುರರಂ ಸಂಹರಿಸೆಂದು ಪೇಳಲಾಗಿ, ಇಂದ್ರನು ಆ ವಾಕ್ಯವಂ ಕೇಳಿ, ಎಲೈ ದೇವತೆಗಳಿರಾ! ನನ್ನಿಂದೀಗ ಮಾಡತಕ್ಕದ್ದೇನು! ಶೂರಪದ್ಮನ ವಚನದಿಂ ನಾನು ಮಹತ್ತಾದ ಮತ್ಸ್ಯಂಗಳಂ ಅತ್ಯಂತ ನಿಂದಿತವಾದ ಮಧುಮಾಂಸಂಗಳಂ ತಂದು ಆತಂಗಿತ್ತೆನು. ಮರಳಿ ಆತನು ಈ ಪ್ರಕಾರವಾಗಿ ಸೇವೆಯಮ್ಮಾಡುತಿರ್ಪ ನನ್ನನ್ನು ಕಾರಾಗೃಹವನ್ನೈದಿಸಬೇಕೆಂದುಂ ಇಂದ್ರಾಣಿಯಂ ಬಲಾತ್ಕಾರದಿಂ ಕೆಡಿಸಬೇಕೆಂಬುದಾಗಿಯುಂ ಯೋಚಿಸಿ, ಗೂಢಚಾರಿಗಳಂ ಕಳುಹಿಸಲಾಗಿ, ನಾನು ಮಾನಭಂಗ ಭಯದಿಂದಿಲ್ಲಿರುತಲಿರ್ದೇನೆ. ಮತ್ತಂ ಅಸುರರ ನಾಶಕ್ಕೋಸುಗ ಮಹಾದೇವನಂ ಪೂಜಿಸುತಲಿರುವೆನು. ನೀವು ಯಾವ ಕಾರ್ಯದಿಂದಿಲ್ಲಿಗೆ ಬಂದಿರೊ? ಅದರಿಂದ ನಾವೆಲ್ಲರು ಕೈಲಾಸಪುರಕ್ಕೆ ಪೋಗಿ ಮಹಾದೇವಂಗೆ ಬಿನ್ನಪಂಗೈದರೆ, ದೇವದೇವನಾದ ಪರಮೇಶ್ವರನಿಂದ ಆವ ಕಾರ್ಯವು ನಿರೂಪಿಸಲ್ಪಡುವದೋ ಅಂತು ಮಾಡುವನೆಂದು ಪೇಳಿ ಪೋಗಲಿಚ್ಛೈಸಿ ಶಚೀದೇವಿಯುಂ ಆ ಸ್ಥಳದಲ್ಲಿರಿಸಿ, ಆಕೆಗೆ ಈ ವೃತ್ತಾಂತವಂ ಪೇಳಲಾಗಿ, ಆ ಶಚೀದೇವಿಯು ಇಂಗಿತದಿಂ ತಿಳಿದು ಖಿನ್ನೆಯಾಗಿ ಸೂಚಿಸುತಿರೆ, ಎಲೈ ಇಂದ್ರಾಣಿಯೆ! ಈ ಶೋಕವಂ ಬಿಡು ಬಿಡು. ಇಲ್ಲಿಗೆ ಸಮಸ್ತರಾದ ದೇವತೆಗಳು ಬಂದಿರುವುದರಿಂದ, ನಾನು ಕೈಲಾಸವಾಸಿಯಾದ ಪರಮೇಶ್ವರನ ಬಳಿಗೆ ಪೋಗಿ ದೇವತೆಗಳ ಆಗಮನವಂ ಬಿನ್ನಪಂ

ಗೈದು, ಮರಳಿ ನಿನ್ನ ಬಳಿಗೆ ಶೀಘ್ರದಿಂ ಬರುತಿದೇನೆ. ನಿನ್ನನ್ನು ಈಶಾಸ್ತ್ರನೆಂಬೀತನು ರಕ್ಷಿಸಿಕೊಂಡು ಬರಲೆಂದು ಪೇಳಲು, ಶಚೀದೇವಿಯು ನನ್ನಂ ಪಾಲಿಸುವ ಈಶಾಸ್ತ್ರನೆಂಬವನಾರು? ಸಮಸ್ತರಂ ಪಾಲಿಸುವ ನೀನಿರಲಾಗಿ ಈತಂಗೆ ಪಾಲಕತ್ವವು ಹೇಗೆ ಬಂತು? ಎನಲಾಗಿಂತೆಂದನು.

ಶಚೀಪುರಂದರರ ಸಂವಾದವು.

ಪೂರ್ವದಲ್ಲಿ ಸಮಸ್ತ ದೇವತೆಗಳು ಕ್ಷೀರಸಮುದ್ರವಂ ಮಥಿಸಲಾಗಿ ಅಮೃತವು ಪುಟ್ಟಿತು. ಆ ಸಮಯದಲ್ಲಿ ವಿಷ್ಣುವು ದೇವಾಸುರರ್ಗೆ ಅಮೃತವಂ ಕೊಡಲು ಮೋಹಿನೀರೂಪವಂತಾಳಿ, ಆ ಅಮೃತವಂ ಯೆರಡು ಭಾಗವಮ್ಮಾಡುವಂತೆ ದೈತ್ಯರಿಗೆ ಮೋಹಕವಮ್ಮಾಡಿ ದೇವತೆಗಳಿಗಮೃತವನೆರೆದನೆಂದು ಪೇಳ್ದನೆಂಬದಾಗಿ ಶೌನಕಾದಿ ಋಷಿಗಳಿಗೆ ಸೂತಪೌರಾಣಿಕನು ನಿರೂಪಿಸಿದ ನೆಂಬಿಲ್ಲಿಗೆ,

ಆಸುರಕಾಂಡದೊಳು ಹನ್ನೆರಡನೆಯ ಅಧ್ಯಾಯವು ಸಂಪೂರ್ಣಂ.

ಹದಿಮೂರನೆಯ ಅಧ್ಯಾಯವು.

ಶಾಸ್ತ್ರಾಕುವರ-ಮೋಹಿನಿಯರ ವೃತ್ತಾಂತವು.

ಎಲೈ ಮುನಿಗಳಿರಾ! ಆವೇಸಮಯದಲ್ಲಿ ಭಗವಂತನಾದ ಪರಮೇಶ್ವರನು ಪ್ರಾದುರ್ಭವಿಸಿದವನಾಗಿ, ಚಂಚಲವಾದ ಕಡೆಗಣ್ಣ ನೋಟವುಳ್ಳ, ಪೊಳೆವುತಿರ್ಪ ಮಿಂಚಿನೋಪಾದಿಯಲ್ಲಿ ರಮ್ಯವಾಗಿ ಪ್ರಕಾಶಿಸುವ ಶರೀರಾವಯವಗಳುಳ್ಳ, ಮನೋಹರವಾದ ಕಂಠಮಾಲಿಕೆಗಳುಳ್ಳ, ಮನವನ್ನು ಅಪಹರಿಸುತಲಿರುವ ಕುಚಂಗಳಿಂ ಸೋಲುಮಾಡಲ್ಪಟ್ಟ ನಡುವುಳ್ಳ ಮನೋಹರಮಾದ ಅಮೋಘಮಾದ ಆ ಮೋಹಿನಿಯಂ ಕಂಡು, ಆಕೆಯೊಡನೆ ಸರಸವಾಡಲಿಚ್ಛೈಸಿ, ಎಲೆ ವರಾನನೆಯೆ! ಇಲ್ಲಿಬಾ, ನಿನ್ನೊಡನೆ ಸಂಭೋಗವನೆಸಗಬೇಕೆಂದೆನಗೆ ಅಭಿಲಾಷೆಯುಂಟಾಗಿಧೆ ಯೆಂದು ನಿರೂಪಿಸಲಾಗಿ, ಆ ದೇವಿಯು ಕಾಮಾತುರನಾದ ಆ ಪರಮೇಶ್ವರನಂ ವೀಕ್ಷಿಸಿ, ಎಲೈ ಈಶ್ವರನೆ! ನನ್ನೊಡನೆ ನಿನಗೆ ಸಂಭೋಗವು ಹೇಗುಂಟಾದೀತು? ನಾನು ನಾರಾಯಣನು, ಈಗ ಮೋಹಿನೀರೂಪವಂ ಧರಿಸಿಥೇನೆ, ಎಂದು ಪೇಳ್ದು ಲಜ್ಜೆಯಿಂ ತಲೆವಾಗಿ ನಿಂತಿರಲು, ಆತನು ಎಲಾ, ಮೋಹಿನಿಯೆ! ನೀನು ನಾಲ್ಕು ಶಕ್ತಿಗಳ ಮಧ್ಯದಲ್ಲಿ ಪುರುಷನೆಂಬ ಶಕ್ತಿಯು, ಪೂರ್ವದಲ್ಲಿ ನಿನ್ನೊಡನೆ ರಮಿಸಿ ಚತುರ್ಮುಖನೆಂಬ ಪುತ್ರನಂ ಪಡೆದೆನು. ಹಾಗೆ ದಾರುಕಾವನದಲ್ಲಿ ಮೋಹಿನೀರೂಪವಂಧರಿಸಿದ ನೀನು ನನ್ನೊಡನೆ ರಮಿಸಲಿಚ್ಛೈಸಲಾಗಿ, ಆಗ ನಾನು ಸಮಯದಲ್ಲಿ ಮುಂದೆ ಮೋಹಿನೀರೂಪವಂ

ಧರಿಸುತಿದ್ದಿ, ಆ ಸಮಯದಲ್ಲಿ ನಿನ್ನೊಡನೆ ರಮಿಸುವೆನೆಂದು ಪೇಳಿದೆನು. ಅದು ಕಾರಣದಿಂ ದೀಗ ನನ್ನೊಡನೆ ನೀನು ರಮಿಸೆಂದು ಅಡಿಗಡಿಗೆ ನುಡಿದು, ಪರಾಙ್ಮುಖಿಯಾಗಿದ್ದಾಕೆಯಂ ಪಿಡಿದು, ಜಂಬೂದ್ವೀಪದಲ್ಲಿರುವ ಸಾಲವೃಕ್ಷದ ಸಮೀಪದಲ್ಲಿ ಆಕೆಯೊಡನೆ ಕ್ರೀಡಿಸಿದನು. ಬಳಿಕ ಮೋಹಿನಿಯು ಅತ್ಯಂತ ವ್ಯಗ್ರಳಾದ ಸುರತವಂ ಸಹಿಸಲಾರದೆ ಬಹು ಬೆವರ್ಬಿಂದುಗಳಿಂದಾವೃತವಾದ ಶರೀರವುಳ್ಳವಳಾಗಿ, ಉದಾರನಮ್ಮಾಡಿದಳು. ಆಕೆಯು ವಮನವಮಾಡಿದ ಜಲವು ಗಂಡಕಿಯೆಂಬ ಹೆಸರುಳ್ಳ ನದಿಯಾದುದು. ಆ ನದಿಯೊಳು ವಜ್ರದಂತಂಗಳೆಂದು ಪೆಸರುಳ್ಳ ಕ್ರಿಮಿಗಳು ಪುಟ್ಟುವವು. ಆ ಸಮಸ್ತ ಪುಳುಗಳು ಅಲ್ಲಿ ಪುಟ್ಟಿದ ಸೂಕ್ಷ್ಮಮೃತ್ತಿಕೆಯಿಂ ಮುಖೋದಕವೆರಸಿ ಗೂಡುಗಳಮ್ಮಾಡಿ ಅದರೊಳು ವಾಸವಮ್ಮಾಡುತಲಿವೆ. ಎಲೈ ಇಂದ್ರಾಣಿಯೆ! ಆವಾಗ ಗಂಡಕೀ ನದಿಯು ಪೂರ್ಣವಾಗಿ ಪ್ರವಹಿಸುವುದೋ, ಆಗ ಆ ಪುಳುಗಳು ಮರಣವನ್ನೈದುವವು. ಆ ಗೂಡುಗಳು ನದಿಯೊಳು ಪ್ರವಾಹದೊಡನೆ ಅನೇಕ ಬರುವವು. ಅಲ್ಲಿರುವ ಜನಗಳೊಳಗೆ ಕೆಲವರು ಬಲೆಗಳಿಂದಾ ಗೂಡುಗಳಂ ಪಿಡಿದು ಅದರೊಳು ಇರುತಿರುವ ಸುವರ್ಣಂಗಳಂ ತೆಗದು ವಿಕ್ರಯವಮ್ಮಾಡುತಿಹಾರೆ. ಆ ಗೂಡುಗಳೀಗ ಸಾಲಗ್ರಾಮಗಳು, ವಿಷ್ಣುವಿನ ಉದರದಿಂ ಪುಟ್ಟಿದ ಕಾರಣದಿಂ ವಿಷ್ಣುಮಂಥ ಸಿಲೆಯೆಂದು ಪ್ರಸಿದ್ಧಮಾದವು. ಈ ಪ್ರಕಾರವಾಗಿ ಅವರಿಗೆ ಪುಟ್ಟಿದ ಶಾಸ್ತಾಕುಮಾರನು ಹರಿಗೆ ಪುತ್ರನಾಗಿ, ಆ ಹರನ ಸಮೀಪಕ್ಕೆ ಬಂದು, ಎಲೈ ಪಿತನೆ! ನಾನು ಮಾಡತಕ್ಕ ಕಾರ್ಯವೇನೆಂದು ಬಿನ್ನಪಂಗೆಯ್ಯಲಾಗಿ, ಪರಮೇಶ್ವರನು ತಲೆವಾಗಿ ಆ ನಿಂತಿರ್ದ ಕುಮಾರಂಗೆ ಜಗದೀಶ್ವರತ್ವವಂ ಕೊಟ್ಟನು.

ಎಲೌ ಶಚೀದೇವಿಯೆ! ಶಿವಪುತ್ರನಾದ ಆ ಶಾಸ್ತಾಕುಮಾರನು ನಿನ್ನಂ ರಕ್ಷಿಸಲೆಂದು ಪೇಳ್ದು, ಅನಂತರದಲ್ಲಿ ದೇವೇಂದ್ರನು ಆ ಶಚೀದೇವಿಯ ಮುಂದೆ ಏಕಚಿತ್ತದಿಂ ಆ ಶಾಸ್ತಾಕುಮಾರನಂ ಧ್ಯಾನಿಸಲಾಗಿ, ಆತನು ಪ್ರಸನ್ನನಾಗಿ ಎಲೈ ಇಂದ್ರನೆ! ನಾನು ನಿನಗೆ ಕೊಡತಕ್ಕ ವರವೇನೆಂದು ಕೇಳಿದನು. ಬಳಿಕ ಇಂದ್ರನು ಕ್ರೂರರಾದ ಗಣಂಗಳ ಸಮೂಹದಿಂದಾವೃತನಾದ ಆ ಶಾಸ್ತಾಕುಮಾರನಂ ನೋಡಿ, ಎಲೈ ಶಾಸ್ತಾಕುಮಾರನೆ! ಪರಮೇಶ್ವರನ ದರ್ಶನಾರ್ಥವಾಗಿ ಕೈಲಾಸಕ್ಕೆ ಪೋಗುವೆನು. ನನ್ನ ಸ್ತ್ರೀಯಾದ ಶಚೀದೇವಿಯಂ ನಾನು ಬರುವ ಪರ್ಯಂತವು ಪಾಲಿಸಿಕೊಂಡಿರಬೇಕೆಂದು ಬಿನ್ನಪಂಗೈದು, ಆಕೆಯಂ ಆ ಕುಮಾರನ ಬಳಿಯಲ್ಲಿರಿಸಿ, ಅವರೀರ್ವರಿಂ ದನುಮತನಾಗಿ ಸಮಸ್ತ ದೇವತೆಗಳ್ವೆರಸಿ ಶೀಘ್ರದಿಂ ಕೈಲಾಸಪರ್ವತಕ್ಕೆ ಪೋರಮಟ್ಟನು. ಬಳಿಕ ಆ ಶಾಸ್ತಾಕುಮಾರನು

ಮಹಾಕಾಶನೆಂಬ ಗಣಾಧೀಶ್ವರನಂ ಕರೆದು ಇಂದ್ರಾಣಿಯಂ ರಕ್ಷಿಸಲೋಸುಗ ಆಕೆಯನ್ನು ಆತನ ವಶವಮ್ಮಾಡಿ ತಾನು ತನ್ನ ಆ ವಾಸಸ್ಥಾನಕ್ಕೆ ಪೋದನು.

ಇತ್ತ ಕಡೆಯಲ್ಲಿ ದೇವೇಂದ್ರನು ಸಮಸ್ತ ಪಾಪಂಗಳೆಂಬ ಅಂಧಕಾರಕ್ಕೆ ಸೂರ್ಯನ ತೇಜಜ್ಜನೋಪಾದಿಯಲ್ಲಿ ಪ್ರಕಾಶಿಸುತಲಿರುವ ಕೈಲಾಸಪರ್ವತಮನ್ನೈದಿ, ಅಲ್ಲಿ ನಂದಿಕೇಶ್ವರನಂ ಕಂಡು ಸರ್ವದೇವತೆಗಳೊಡನೆ ಆತಂಗೆ ನಮಸ್ಕಾರವನ್ನೆಸಗಿ ದೂರದಲ್ಲಿ ನಿಂತು ಆತನಿಂ ಕರೆಯಲ್ಪಟ್ಟವನಾಗಿ ಬಳಿಗೆ ಪೋದವನಾಗಲು, ಎಲೈ ಇಂದ್ರನೆ ! ನೀನೇನುಕಾರಣದಿಂ ಬಂದಿ? ಎಂದು ಕೇಳಲಾಗಿ, ದೇವೇಂದ್ರನು ಭಯಕಂಪಿತನಾಗಿ ಪರಮೇಶ್ವರನ ಸೇವಾರ್ಥವಾಗಿ ದೇವತೆಗಳ್ವೆರಸಿ ಬಂದಿಧೇನೆ. ನನ್ನಲ್ಲಿ ಕರುಣಿಸಬೇಕೆಂದು ವಿನಯದಿಂ ತಲೆವಾಗಿ ಪೇಳಿದನು. ಬಳಿಕ ಗಣಾಧಿಪತಿಯಾದ ನಂದಿಕೇಶ್ವರನು, ಕೇಳೈ ಪುರಂದರನೆ ! ಪರಮೇಶ್ವರನ ಸಮಯವೀಗ ನಿನಗೆ ದೊರೆಯಲಾರದು. ಯಾಕಂದರೆ, ಈಗ ಭಗವಂತನಾದ ಪರಮೇಶ್ವರನು ಸನಕಾದಿಮುನಿಗಳಿಗೆ ಜ್ಞಾನೋಪದೇಶವಮ್ಮಾಡುತಲಿಧಾನೆ. ಅದುಕಾರಣದಿಂದೀಗೆ ಸಮಯವಲ್ಲವೆಂದು ನಿರೂಪಿಸಲಾಗಿ, ಆ ವಾಕ್ಯವಂ ಕೇಳ್ದು ದೇವತೆಗಳುಂ ಇಂದ್ರನುಂ ಸಹಾ ಆ ನಂದಿಕೇಶ್ವರಂಗೆ ಮರಳಿ ನಮಸ್ಕಾರವಮ್ಮಾಡಿ, ಮತ್ತೊಂದು ಶಿಖರಕ್ಕೆ ಸಾರಿ ಅಲ್ಲಿ ವಾಸಿಸುತಿದ್ದರು.

ಅಜಮುಖಿಯು ಶಚೀದೇವಿಯುನ್ನೆಳೆಯುವಿಕೆ.

ಎಲೈ ಮುನಿಗಳಿರಾ ! ಆ ಸಮಯದಲ್ಲಿ ಕ್ರೂರರಾಗಿ ಮಹಾ ಪಾಪಕರ್ಮಗಳುಳ್ಳವರಾದ ರಾಕ್ಷಸರಾದ ಆ ಶೂರಪದ್ಮನ ಗೂಢಚಾರಿಗಳು ಬ್ರಹ್ಮಾಂಡದ್ವಾರದ ಸಮೀಪದಲ್ಲಿ ಸಂಚರಿಸುತಿದ್ದರು. ಆಗ ದುರ್ಮುಖಿಯೆಂಬ ಸಖಿವೆರಸಿ ವ್ಯಭಿಚಾರಿಯಾದ ಅಜಮುಖಿಯು ಮಾರ್ಗಸ್ಥರಾದ ಪುರುಷರಂ ಬಲಾತ್ಕಾರದಿಂ ರಮಿಸಿ, ಶೂರಪದ್ಮಂಗೆ ಪ್ರತಿದಿನದಲ್ಲಿಯು ಸ್ವಭಾವ ಸೌಂದರ್ಯವತಿಗಳಾದ ಯೆರಡು ಸಾವಿರ ಸ್ತ್ರೀಯರುಗಳಂ ಬಲಾತ್ಕಾರದಿಂ ಪಿಡಿದುಕೊಡುತ್ತ, ವೊಂದು ದಿವಸದಲ್ಲಿ ವೃಕ್ಷಗಳ ಸಾಲುಗಳಿಂ ಭೂಷಿತಮಾದ ಶ್ರೀಕಾಶಪುರದ ಉದ್ಯಾನವನ್ನೈದಿ, ಅಲ್ಲಿರುತಿರ್ಪ ಇಂದ್ರನ ಪ್ರಾಣಕಾಂತೆಯಾದ ಇಂದ್ರಾಣಿಯಂ ಕಂಡು ಸಂತೋಷಚಿತ್ತವುಳ್ಳವಳಾಗಿ, ಎಲೌ ಶಚೀದೇವಿಯೆ ! ನೀನು ಏನು ಕಾರಣ ಇಲ್ಲಿರುತ್ತಿ ? ನಿನ್ನ ನಿಮಿತ್ತವಾಗಿ ನಾನಿಲ್ಲಿಗೆ ಬಂದೆನು. ನನ್ನ ಭ್ರಾತನಾದ ಶೂರಪದ್ಮನು ಸಾರ್ವಭೌಮನು, ಜಗತ್ತನ್ನೆಲ್ಲವಂ ಆಳುತಲಿಧಾನೆ. ಆತಂಗೆ ನಿನ್ನಲ್ಲಿ ಬಹು ಪ್ರೀತಿಯಿರುವದು. ಆದುದರಿಂದ ಆತನ ಅಂತಃಪುರಕ್ಕೆ ಶೀಘ್ರದಿಂ ಬಂದೆಯಾದೊಡೆ ನಿನ್ನನ್ನೇ ಪಟ್ಟದರಾಣಿಯಾಗಿ ಮಾಡಿ ನಿನ್ನೊಡನೆ ರಮಿಸುವನು. ಇಂದ್ರಾದಿ ಸಮಸ್ತ ದೇವತೆಗಳು ದುರ್ಬಲರಾಗಿ ಅವರ್ಗೆ

ಭೃತ್ಯರಾಗಿಹಾರೆ, ನೀನೀಸ್ಥಳವಂ ಬಿಟ್ಟು ಶೀಘ್ರದಿಂ ಬರುವಳಾಗು, ಅಲ್ಲದಿದ್ದೊಡೆ ಬಲಾತ್ಕಾರದಿಂ ನಿನ್ನನ್ನು ಹಿಡಿದುಕೊಂಡು ಹೋಗುವೆನೆಂದು ಹೇಳ್ದು ಆಕೆಯ ಸಮೀಪಕ್ಕೆ ಬರಲಾಗಿ, ಆ ಶಚೀದೇವಿಯು ಅಜಮುಖಿಯ ವಾಕ್ಯವಂ ಕೇಳಿ ಎಲೈ ದೈತ್ಯಸ್ತ್ರೀಯೆ! ಪೂರ್ವದಲ್ಲಿ ದೇವತೆಗಳತ್ಯಂತಮಾದ ಐಶ್ವರ್ಯದಿಂದಿರೆ ಬಲಯುತರಾಗಿದ್ದರು. ಕರ್ಮಾನುಸಾರದಿಂದ ಸುರರು ದುರ್ಬಲರಾಗಿ ಪುಟ್ಟಿದರು. ಎಲೈ ದುರುಳಳೆ! ಆವ ಸ್ತ್ರೀಗೆ ಆವ ಪುರುಷನು ಪತಿಯಾಗಿ ಲೋಕದೊಳು ಮಾಡಲ್ಪಟ್ಟವನೋ ಆ ಪುರುಷನು ದರಿದ್ರನಾದೊಡಂ ಸಂಪನ್ನನಾದರುಂ ಆಕೆಗೆ ಪತಿಯಪ್ಪನೆಂದು ದಾಂಟಲಶಕ್ಯಮಾದ ಮತ್ತೆ ನಾನಾ ಮಾರ್ಗ ಹಿಡಿಯದ ನೀತಿಯುಪ್ಪುದು. ಹೇ ಮೂರ್ಖೆ! ಗಣಂಗಳಿಗಧಿಕನಾದ ಈಶ್ವರನಾದ ಮತ್ತೆ ನನ್ನ ಪಾಲಿಸುವ ಶಾಸ್ತಾಕುಮಾರನ ಅನುಚರನಾದ ಮಹಾಕಾಳನ ಬಲವನರಿಯದೆ, ಬಲಾತ್ಕಾರದಿಂ ನನ್ನನ್ನು ಹಿಡಿದುಕೊಂಡು ಹೋಗಬೇಕೆಂದು ಹೇಳುತ್ತಿಯಲ್ಲವೆ? ಹೋಗುಹೋಗು, ನೀನೇನರಿಯೆಯ? ಎಂದು ಧಿಕ್ಕರಿಸಲಾಗಿ, ಆ ಅಜಮುಖಿಯು, ಎಲೆ ಶಚಿಯೆ! ನಿನ್ನನು ಬಿಡಿಸಿಕೊಂಬಾತನಂ ನೋಡುವೆನೆಂದು ಹೇಳಿ, ಶೀಘ್ರದಿಂದಾಕೆಯನ್ನೆಳೆದಳು.

ಅನಂತರದಲ್ಲಿ ಶಚಿಯು ಭಯಾನ್ವಿತೆಯಾಗಿ ಗಡಗಡನೆ ನಡುಗಿ ಮೊರೆಯಿಡಲಾಗಿ, ಮಹಾಕಾಳನು ಆ ಧ್ವನಿಯಂ ಕೇಳಿ ಇದೇನೆಂದು ಆಶ್ಚರ್ಯಪಟ್ಟು, ವೃಕ್ಷ ಮೂಲದಲ್ಲಿರ್ಪ ಶಚಿದೇವಿಯಂ ಸೆಳೆಯುತಿರುವ ಆ ಅಸುರ ಸ್ತ್ರೀಯಂ ಕಂಡು, ವೇಗದಿಂದೆದ್ದು ಆಕೆಯ ಬಳಿಗೈದಿ, ಎಲೆ ಮೂಢೆ! ಇಂದ್ರಾಣಿಯಂ ಬಿಡುಬಿಡು, ಇಲ್ಲದಿದ್ದೊಡೆ ನಿನ್ನ ಹಸ್ತವಂ ಖಡ್ಗದಿಂ ಛೇದಿಸಿ ಭೂತಳದಲ್ಲಿ ಕೆಡಹುವೆನೆಂದು ಪೇಳ್ದನು. ಬಳಿಕ ಆ ಅಜಮುಖಿಯು ಕೋಪದಿಂ ನೀನಾರೆಂದು ಕೇಳಲಾಗಿ, ಆವನು ಈ ಲೋಕವನ್ನಾಳುವನೋ, ಆವಾತಂಗೆ ಉತ್ತಮವಾದ ಶ್ವೇತಗಜವುಂಟಾಗಿದ್ದೀತೋ, ಅಂಥಾ ಶಾಸ್ತಂಗೆ ನಾನು ಭೃತ್ಯನು! ಶಚಿಯಂ ಬಿಡೆಂದು ಪೇಳುತಿರೆ, ಅಜಮುಖಿಯು ಶೂಲವಂ ತೆಗದು ಆತನಂ ತಿವಿಯಲುದ್ಯುಕ್ತಳಾಗಲು, ಆತಂ ಆ ಶೂಲವನ್ನು ನೂರು ತುಂಡುಗಳಾಗಿ ಖಂಡಿಸಿದನು. ಬಳಿಕಾಕೆಯು ದುರ್ಮುಖಿಯು ಹಸ್ತದಲ್ಲಿರುವ ಪ್ರತಿ ಶೂಲವಂ ತೆಗದು ಆ ಇಂದ್ರಾಣಿಯಂ ದುರ್ಮುಖಿಯು ಕೈಯಲ್ಲಿ ಕೊಟ್ಟು ತನ್ನ ಸರ್ವ ಶಕ್ತಿಯಿಂ ಅತಿ ಕ್ರೂರನಾದ ಈ ಶೂಲವಂ ಇಡಲಾಗಿ, ಖಡ್ಗದಿಂದಾ ಶೂಲಮಂ ಪೂರ್ವದಂತೆ ಛೇದಿಸಿದನು. ಅನಂತರದಲ್ಲಿ ಆಕೆಯು ಪರ್ವತಮಂ ಕಿತ್ತೊಯ್ದಿಡಲಾಗಿ ಮರಳಿ ಮಹಾಕಾಳನದಂ ಖಡ್ಗದಿಂ ಛೇದಿಸಲಾಗಿ ಆ ಖಡ್ಗವು ಭಗ್ನಮಾದುದು. ಆಗ ಅಜಮುಖಿಯು, ಎಲೆ, ನಿರಾಯುಧನೆ! ನಿನ್ನೊಡನೆ ನನ

ಗೇನೆಂದು ನಿರ್ಲಕ್ಷ್ಯದಿಂ ನುಡಿದು, ಮರಳಿ ಆ ಶಚಿಯಂ ಸೆಳೆದಳು. ಎಲೈ ಋಷಿಗಳಿರಾ! ಅನಂತರದಲ್ಲಿ ಮಹಾಕಾಯನಾದ ವೀರನಾದ ಮಹಾಕಾಳನು ಆ ಅಸುರಸ್ತ್ರೀಯ ಬಳಿಗೈದಿ ಮಹಾ ಭಯಂಕರನಾಗಿ ಆಕೆಯ ಕರಮಂ ಪಿಡಿದು ತನ್ನ ಕಟಿಯಲ್ಲಿ ಅತಿ ಸೂಕ್ಷ್ಮವಾಗಿರ್ಪ ತೀಕ್ಷ್ಣಧಾರೆಯುಳ್ಳ ಕರವಾಲವಂ ತೆಗೆದು, ಆದರಿಂದಾಕೆಯ ಕಠಿಣಮಾದ ಕರವಂ ಛೇದಿಸಿ, ದುರ್ಮುಖಿಯೆಂಬ ದೈತ್ಯಸ್ತ್ರೀಯ ಹಸ್ತಮಂ ಕೊಯ್ದು ಭೂಮಿಯಲ್ಲಿ ಕೆಡಹಿ ಇಂದ್ರಾಣಿಯಂ ಬಿಡಿಸಿ, ವೃಕ್ಷವಾಟಿಯೊಳಿರುತಿರ್ದನು. ಎಲೈ ದ್ವಿಜರುಗಳಿರಾ! ಅನಂತರದಲ್ಲಿ ಆ ಅಜಮುಖಿಯು ಯೆರಡು ಭಾಗವಾಗಿ ಮಾಡಲ್ಪಟ್ಟ ತನ್ನ ಹಸ್ತವಂ ವೀಕ್ಷಿಸಿ, ಅತ್ಯಂತಮಾಗಿ ಖಿನ್ನವಾದ ಮನಸ್ಸುಳ್ಳವಳಾಗಿ ಚೆದರಿದ ಕೇಶಪಾಶವುಳ್ಳವಳಾಗಿ ಭೂಮಿಯಲ್ಲಿ ಹೊರಳಾಡುವುದರಿಂದ ಮಲಿನವಾದ ಶರೀರವುಳ್ಳವಳಾಗಿ ಈ ಪರಿ ಪ್ರಲಾಪಿಸಿದಳು. ಹಾಹಾ!! ನಾನು ಆಶ್ರಯಿಸಲ್ಪಟ್ಟ ಭೂಮಿಯುಳ್ಳವಳಾಗಿ ಪೋಡಂ ಆಕಾಶದಲ್ಲಿ ನಿಂತು ಸಮುದ್ರಮಂ ಚುಳುಕಂಗೈಯುವೆನು. ಮತ್ತೆ ಹಗಲು ರಾತ್ರಿಗಳಂ ಪ್ರಕಾಶಿಸುವಂತೆ ಮಾಡುವ ಸೂರ್ಯಚಂದ್ರರಂ ಭಕ್ಷಿಸುತ್ತೇನೆ. ನಿಶ್ಚಯವಾಗಿ ಭೂಮಿಯನ್ನೆ ಮರ್ದಿಸುತ್ತೇನೆ, ಜಲಮುಂತಾದವನ್ನು ಶೋಷಣೆಯನ್ನೈದಿಸುವೆನೆಂದು ಹೇಳಿ, ಅಡಿಗಡಿಗೆ ಛೇದಿಸಲ್ಪಟ್ಟ ಕರವಂ ನೋಡಿನೋಡೀ, ಕರದಿಂದ ನೆಲವನ್ನು ಬಡಿಯುತ್ತ ಅಳುವುತಿರುವ ಆ ಅಜ

ಮುಖಿಯಂ ಕುರಿತು ದುರ್ಮುಖಿಯಿಂತೆಂದಳೆಂದು ಸೂತಂ ಶೌನಕಾದಿ ಮುನಿಗಳ್ಗೆ ಪೇಳಿದನೆಂಬಲ್ಲಿಗೆ ಆಸುರಕಾಂಡದಲ್ಲಿ ಹದಿಮೂರನೆಯ ಅಧ್ಯಾಯವು ಸಮಾಪ್ತಮಾದುದು.

ಹದಿನಾಲ್ಕನೆಯ ಅಧ್ಯಾಯವು.

ಅಜಮುಖಿ ದುರ್ಮುಖಿಯರ ಸಂಭಾಷಣೆ.

ಎಲೈ ಮುನಿಗಳಿರಾ! ಅನಂತರದಲ್ಲಿ ದುರ್ಮುಖಿಯೆಂಬ ಅಸುರ ಸ್ತ್ರೀಯು ಅಜಮುಖಿಯ ಶೋಕವಂ ನೋಡಿ, ಎಲೆ ಸಖಿಯೆ! ಯಾತಕ್ಕೋಸ್ಕರ ರೋದಿಸುತ್ತಿದ್ದಿ? ಈ ದುಃಖವಂ ಬಿಡು ಬಿಡು, ಪೂರ್ವದಲ್ಲಿ ದಕ್ಷಬ್ರಹ್ಮನ ಯಾಗಕಾಲದಲ್ಲಿ ವೀರಭದ್ರನಿಂ ದೇವತಾಸ್ತ್ರೀಯರಲ್ಲಿ ಕೆಲಬರು ನಾಸಿಕಾರಹಿತರಾಗಿಯುಂ ಕೆಲಬರು ಅಧರ ಹೀನರಾಗಿಯುಂ ಮತ್ತೆ ಕೆಲಬರು ಕೊಯ್ಯಲ್ಪಟ್ಟ ಪಯೋಧರಂಗಳುಳ್ಳವರಾಗಿಯುಂ ಇನ್ನು ಕೆಲಬರು ಹೀನಹಸ್ತರಾಗಿಯುಂ ಮಾಡಲ್ಪಟ್ಟರು, ನನಗೂ ಈಗ ಈ ಪ್ರಕಾರವಾದುದು. ಆದುದರಿಂದೀಗ ದುಃಖಿಸಬೇಡ, ಸಮು

ದ್ರನಂ ಚುಳುಕೋದಕವಂ ಮಾಡುವಂಥ ಸಾಮರ್ಥ್ಯವುಳ್ಳವನಾದ ಜಗತ್ಪಾಲಕನಾದ ಶೂರಪದ್ಮಂಗೆ ಹಾನಿಯಿಲ್ಲದಿರುವಲ್ಲಿ ಶೋಕಕ್ಕೆ ಕಾರಣವೇನೆಂದು ಸಂತೈಸಿದಳು. ಬಳಿಕ ಆ ಅಜಮುಖಿಯು ತತ್ಕ್ಷಣದಲ್ಲಿಯೆ ಶೋಕವಂ ಬಿಟ್ಟು, ಮಹಾ ಕಾಳನಂ ನೋಡಿ, ಎಲೊ ನಿನಗೆ ಪ್ರಭುವಾದ ಇಂದ್ರನಂ ನಿನ್ನನ್ನೂ ಸಹವಿಗಳ ಬಂಧನವಮ್ಮಾಡಿಸುತ್ತೇನೆ, ಹಾಗೆ ಮಾಡದಿರ್ದೊಡೆ ಎನ್ನ ಪಯೋಧರಂಗಳು ಸ್ತನಂಗಳಲ್ಲವು, ಎಂದು ಈ ಪ್ರಕಾರದಿಂ ಪ್ರತಿಜ್ಞೆಯಂ ಮಾಡಿದುರ್ಮುಖಿಯೊಡನೆ ಶೀಘ್ರದಿಂ ವೀರಮಾಹೇಂದ್ರಪುರಿಗೆ ಪೊರಮಟ್ಟಳು,

ಆಗ ನಾರದನು ಈ ಸಮಸ್ತ ವೃತ್ತಾಂತವನ್ನು ಕೈಲಾಸದಲ್ಲಿರ್ದ ಇಂದ್ರಂಗೆ ಪೇಳಲಾಗಿ, ಆತನು ಮಹಾ ದುಃಖವನ್ನೈದಿ, ನಂದಿಕೇಶ್ವರಂಗೆ ಬಿನ್ನೈಸಿ ಶಚಿಯ ಸಮೀಪಕ್ಕೆ ಬಂದು, ಆಕೆಯಿಂ ಸಕಲ ವೃತ್ತಾಂತವಂ ಕೇಳಿ, ಪೂರ್ವದಲ್ಲಿ ಮಾಡಿದ ಕರ್ಮ ಫಲವೆಂದು ತಿಳಿದು, ಮಹಾ ಕಾಳಂಗೆ ನಮಸ್ಕಾರವಂ ಮಾಡಿ ಸ್ತೋತ್ರಗಳಿಂ ಸ್ತುತಿಸಿ, ಆತನಂ ಕಳುಹಿ, ಶಚೀದೇವಿಯೊಡನೆ ಶೀಘ್ರದಿಂ ಮೇರುಪರ್ವತಕ್ಕೆ ಪೊರಮಟ್ಟು ಆ ಮೇರುಪರ್ವತದ ಗುಹಾಂತರವನೈದಿ ಮಹಾ ತಪವಂ ಮಾಡುತಿರ್ದನು. ಇಲ್ಲಿ ಅಜಮುಖಿಯು ಅಡಿಗಡಿಗೆ ಪ್ರಲಾಪಿಸುತ್ತ, ಶೂರನಿರ್ದ ವೀರಮಾಹೇಂದ್ರಪುರಿಗೆ ಬಂದು, ಆ ಪಟ್ಟಣದ ವೀಧಿಯೊಳಿರುವ ಅಸುರ ಸ್ತ್ರೀಯರಿಂ ನೋಡಲ್ಪಡುತ್ತ, ಅವರಿಂದಲು ಬಾಲಕರಿಂದಲು ಆವರಿಸಲ್ಪಟ್ಟ ಉಭಯ ಪಾರ್ಶ್ವಗಳುಳ್ಳವಳಾಗಿ ಮಹಾ ಶೋಕವನ್ನೈದಿ ಪೋಗುತ್ತಿರೆ, ಆಗ ಅನೇಕರಾದ ಅಸುರರು ಮೇಷಕುಕ್ಕುಟಮಲ್ಲ ಗಜ ವಾಜಿಗಳ ಯುದ್ಧವಂ ನಿವಾರಿಸಿ, ತಾವು ಮಾಡುವ ಶಿಕ್ಷೆಗಳಂ ಬಿಟ್ಟು, ಈಕೆಯ ಕರವಂ ಛೇದಿಸಿದವನ್ಯಾರೆಂದು ಆಶ್ಚರ್ಯಪಟ್ಟು ಅಶ್ವಾರೂಢರಾಗಿ ನಿಂತರು. ಮತ್ತೆ ಕೆಲವರು ಗಜಾರೂಢರಾಗಿ ನಿಂತರು. ಈ ಪ್ರಕಾರದಿಂ ಸ್ವಸ್ವಕರ್ಮಗಳಂ ತೊರೆದು, ಛೇದಿಸಲ್ಪಟ್ಟ ಆಕೆಯಂ ಕಂಡು, ಕಟಕಟ!! ಯಾರಾದರು ಇದನ್ನು ತಿಳಿದವರುಂಟೆ? ಇದು ರುದ್ರನಿಂ ಮಾಡಲ್ಪಟ್ಟದ್ದೋ ಅಥವಾ ಭೈರವನಿಂ ಮಾಡಲ್ಪಟ್ಟದ್ದೊ, ವೀರಭದ್ರನಿಂ ಮಾಡಲ್ಪಟ್ಟದ್ದೋ, ಆತನಲ್ಲದಿರ್ದೊಡೆ ಶಾಸ್ತಾ ಕುಮಾರನಿಂ ಮಾಡಲ್ಪಟ್ಟದ್ದೋ, ಇಲ್ಲದಿರ್ದೊಡೆ ದುರ್ಗೆಯಿಂ ಮಾಡಲ್ಪಟ್ಟದೋ ಅಥವ ಇವರೀರ್ವರು ಅನ್ಯೋನ್ಯವಾಗಿ ಕರವಂ ಛೇಧಿಸಿಕೊಂಡರೋ, ಎಂದು ಈ ಪ್ರಕಾರದಿಂ ವಿಧವಿಧವಾಗಿ ಬಹು ಚಿಂತೆಗಳಮ್ಮಾಡುತಿರೆ, ಅಜಮುಖಿಯು ಪಿತೃ ಮಾತೃ ಪುತ್ರ ಜಾಮಾತೃ ಜ್ಯೇಷ್ಠರಂ ನೆನದು ವೇಗದಿಂ ಶೂರಪದ್ಮನ ಆಸ್ಥಾನಮಂಟಪವನ್ನೈದಿದಳು.

ಅಜಮುಖಿಯು ಶೂರಪದ್ಮನ ಅಸ್ಥಾನವನ್ನು ಹೊಗುವಿಕೆ.

ಆ ಆಸ್ಥಾನಮಂಟಪವು ಸಹಸ್ರ ಯೋಜನದಗಲದ ನೀಳಮುಳ್ಳದ್ದಾಗಿ ಸಹಸ್ರ ಕೋಟಿ ಸ್ತಂಭಂಗಳುಳ್ಳದ್ದಾಗಿ, ಬ್ರಹ್ಮಾಂಡಂಗಳಲ್ಲಿರ್ಪ ವಿಚಿತ್ರ ರತ್ನಂಗಳಿಂ ಕೆತ್ತಿಸಲ್ಪಟ್ಟ ಊರ್ಧ್ವಾಧೋಭಾಗಂಗಳುಳ್ಳದ್ದಾಗಿ, ಮತ್ತೆ ಚಿತ್ತಾರಗಳಿಂ ದರ್ಪಣಂಗಳಿಂ ವಿಚಿತ್ರವಸ್ತ್ರಂಗಳಿಂದನೇಕ ಚಾಮರಂಗಳಿಂದಲಂಕರಿಸಲ್ಪಟ್ಟದ್ದಾಗಿ ವಿರಾಜಿಸುತಿತ್ತು. ಆ ಮಂಟಪದಲ್ಲಿ ನಾನಾವಿಧ ವಿಕಾರಂಗಳುಳ್ಳ ಮಂತ್ರಿಗಳಿಂದಲೂ ಭಯಂಕರರಾದ ಭ್ರಾತೃಗಳಿಂದಲೂ ಮಹಾ ವೀರರಾದ ಪುತ್ರಪೌತ್ರರಿಂ ಬಹು ಶೌರ್ಯಂಗಳುಳ್ಳ ಸೇನಾನಾಯಕರಿಂ ಅನೇಕರಾದ ಸಾಮಂತ ಮಂಡಲೇಶ್ವರರಿಂ ದೂತರ ಸಮೂಹದಿಂ ಚಾಮರ ಪಾಣಿಗಳಿಂ, ವಿಚಿತ್ರಂಗಳಾದ ಛತ್ರಂಗಳಿಂ ತಾಳ ವೃಂತಂಗಳಿಂ ಕಾಳಾಂಜನವಂ ಪಿಡಿದ ಹಸ್ತಂಗಳುಳ್ಳವರುಗಳಿಂ, ತಾಂಬೂಲಯುಕ್ತಮಪ್ಪ ಹಡಪಗಳುಳ್ಳವರುಗಳಿಂ, ಧ್ವಜಂಗಳಂ ಪಿಡಿದ ಪರಿಚಾರಕರಿಂ ನೃತ್ಯವಮ್ಮಾಡುತಿರ್ಪ ಊರ್ವಶಿ ರಂಭೆ ಮೊದಲಾದ ದೇವವೇಶ್ಯೆಯರಿಂ ಸೇವಿಸಲ್ಪಟ್ಟ ಭಯಂಕರಮಪ್ಪ ರೂಪವುಳ್ಳ, ಮತ್ತೆ ನೀರಾಜನಗಳಂ ಕರದೊಳು ಪಿಡಿದಿರ್ಪ ದಿವ್ಯ ಸ್ತ್ರೀಯರಿಂ ಸೇವಿತನಾದ ಬ್ರಹ್ಮನಿಂ, ಆತನ ಪುತ್ರರಿಂದಲೂ ಪೇಳಲ್ಪಟ್ಟ ದಿನಶುದ್ಧಿಗಳಂ ಕೇಳುವ, ಇದಲ್ಲದೆ ಮಾಂತ್ರಿಕರಿಂ ದೈವಜ್ಞರಿಂ ಸಾಮುದ್ರಿಕವ ತಿಳಿದವರಿಂ ವೈದ್ಯರಿಂ ಶಾಸ್ತ್ರಜ್ಞರಿಂ ಪರಿವೃತನಾಗಿ ನಾನಾವಿಧಮಾದ ರತ್ನಂಗಳಿಂ ವಿಚಿತ್ರವಾದ ಹಾರ ಕೇಯೂರ ಕಿರೀಟ ಕಂಕಣ ಅಂಗುಳೀಯಕಾದಿವಿಭೂಷಣಂಗಳಿಂದಲಂಕೃತನಾದ, ತಪ್ತಕಾಂಚನದಿಂ ವಿಚಿತ್ರಮಾದ ಕಟಿಸೂತ್ರದಿಂ ಶೋಭಿತನಾದ ದಿವ್ಯ ವಸ್ತ್ರಂಗಳಂ ಧರಿಸಿದಂಥ, ಗಾನಂಗೈಯುತ್ತಿರ್ಪ ಕಿನ್ನರ ಸಿದ್ಧವಿದ್ಯಾಧರರಿಂ ಸೇವಿತನಾದ, ನಾನಾ ವಿಧ ಶೌರ್ಯಾದಿಗುಣಂಗಳಂ ಪೇಳುತಿರುವ ವಂದಿಗಳಿಂ ಸ್ತುತಿಸಲ್ಪಡುತಲಿರುವ ಶೂರಪದ್ಮನು ಸಾಕ್ಷಾತ್ತಾದ ರುದ್ರನೋಪಾದಿಯಲ್ಲಿ ಸಿಂಹಾಸನಾರೂಢನಾಗಿ ಇರುತಿರ್ಪನು. ಆಗ ಅಜಮುಖಿಯು ಪುರುಷ ಶ್ರೇಷ್ಠನಾದ ಶೂರಪದ್ಮನಂ ಕಂಡು ವೇಗದಿಂ ಭೂಮಿಯಲ್ಲಿ ಬಿದ್ದು ಈ ಪರಿ ಪ್ರಲಾಪಿಸಿದಳು. ಎಲೈ ಶೂರಪದ್ಮನೆ! ಪೂರ್ವದಲ್ಲಿ ದೇವೇಂದ್ರನು ಸೂರ್ಯಕಿರಣಗಳಂ ನೋಡಲಾರದೆ ಗೂಬೆಯಂತೆ ಯುದ್ಧದಲ್ಲಿ ನಿನ್ನಿಂ ಪರಾಜಿತನಾಗಿ ಸೇನಾಪರಾಕ್ರಮವಂ ಸಹಿಸಲಾರದೆ ಗುಹೆಯಂ ಪೊಕ್ಕನು. ಈಗ ಆತನ ಸಂಬಂಧಿಯಾದ ಕ್ರೂರಕರ್ಮನಾದ ಭೃತ್ಯನು ನನ್ನ ಕರವಂ ಛೇದಿಸಿದನು. ಹಾಹಾ!! ನಿನ್ನ ಶಕ್ತಿಯು ಯಲ್ಲಿಗೆ ಪೋದುದು? ಎಲೋ ಎಲೋ ಸಿಂಹಮುಖನೆ! ನೀನು ದ್ವಿಸಹಸ್ರದಿಂದೊಪ್ಪುವ ಭುಜಗಳಿಂ ಸಹಸ್ರ ಕಂಠಗಳಿಂ ಯುಕ್ತನಾದವನು.

ಅಂಥಾ ನಿನಗೀಗ ಶಕ್ತಿಯು ಯೆಲ್ಲಿಗೆ ಪೋದುದು? ಇಂದ್ರನ ಐರಾವತವಂ ಪಿಡಿದು ಆಕಾಶಕ್ಕೆ ಒಯ್ದವನಾದೆಯಲ್ಲವೆ? ಆ ಬಲವೆಲ್ಲಿ ಪೋದುದು? ಎಲೆ ತಾರಕನೆ! ಯುದ್ಧದೊಳು ವಿಷ್ಣುವಿನಿಂ ಬಿಡಲ್ಪಟ್ಟ ಚಕ್ರವನ್ನು ಬಳೆಯೋಪಾದಿಯಲ್ಲಿ ಕಂಠದಲ್ಲಿ ನೀನು ಧರಿಸಲಿಲ್ಲವೆ? ಆ ಪರಾಕ್ರಮವೆತ್ತ ಪೋದುದು? ಭಾನುಕೋಪ ಅಗ್ನಿಮುಖ ಹಿರಣ್ಯಬಾಹು ವಜ್ರಬಾಹುಗಳು ಲೀಲೆಯಿಂ ಸೂರ್ಯನಂ ಪಿಡಿದು ತಮ್ಮ ಮಂಚದಲ್ಲಿ ಕಟ್ಟಲಿಲ್ಲವೆ? ಮತ್ತಂ ಗರ್ವಿತರಾದ ದ್ವಿಶಿರಸ್ಸು ತ್ರಿಶಿರಸ್ಸು ಚತುಃಪಂಚಷಟ್ ಸಪ್ತ ಅಷ್ಟನವದಶ ಮುಂತಾದ ಶತಸಹಸ್ರ ಶಿರಸ್ಸುಗಳುಳ್ಳವರು ನೀವೆಲ್ಲರೂ ಈ ಪ್ರಕಾರವಾದ ನನ್ನ ಅವಸ್ಥೆಯಂ ನೋಡುತಿದ್ದೀರಿ, ಪೂರ್ವದಲ್ಲಿ ನನ್ನ ಪುತ್ರರನ್ನು ದೇವೇಂದ್ರನು ಕೊಂದನು. ಅದನ್ನು ತಿಳಿದವರಂತೆ ಎಲ್ಲರು ತೂಷ್ಣೀಂಭೂತರಾಗಿ ಇದ್ದೀರಿ, ಹಾ! ತಾತ ನೀನೆತ್ತ ಪೋದೆ? ಹಾಹಾ!! ಅತಿಬಲರಾದ ಪುತ್ರರಿರಾ! ನೀವೆತ್ತ ಪೋದಿರಿ? ಎಂದು ಈ ಪ್ರಕಾರವಾಗಿ ಬಹು ವಿಧದಿಂ ಶೋಕಿಸುತ್ತ ಭೂಮಿಯಲ್ಲಿ ಬಿದ್ದು ಪೊರಳುತ್ತಿದ್ದಳು.

ಆಗ ಶೂರರೊಳಗೆ ಅತಿ ಶೂರನಾದ ಶೂರಪದ್ಮನು ಅಧರೋಷ್ಠವಂ ಕಡಿದು, ಕೋಪಾಗ್ನಿಯಂ ಉಗುಳುತ್ತ, ಎಲೆ ವತ್ಸೆ! ರೋದನವಂ ಬಿಡು ಬಿಡು. ಆವನಿಂದ ಈ ಕೃತ್ಯವು ಮಾಡಲ್ಪಟ್ಟುದೋ ಆತನಂ ಪುತ್ರ ಪೌತ್ರ ಬಾಂಧವರ್ಸಹಿತ ಸಂಹರಿಸುವೆನು. ಏಳೇಳು ಶೀಘ್ರದಿಂ ಪೇಳೆಂದು ನುಡಿಯಲಾಗಿ, ಆ ಅಜಮುಖಿಯು ಎಲೈ, ಶೂರ ಕೇಳು, ಶ್ವೇತಕಾಶವೆಂಬ ನಗರದ ಉದ್ಯಾನವನದಲ್ಲಿ ಶಚೀದೇವಿಯಂ ಕಂಡು ಶೂರನ ಬಳಿಗೆ ಬಾರೆಂದು ಕರೆಯಲಾಗಿ, ಆಕೆಯ ಬಳಿಯಲ್ಲಿರ್ದ ಪೂರ್ವ ಪುರುಷನು ಶೀಘ್ರದಿಂ ಬಂದು ಖಡ್ಗದಿಂ ಕರವಂ ಛೇದಿಸಿದನೆಂದು ಪೇಳುತಿರೆ, ಶೂರಪದ್ಮನು ರೋದನಯುಕ್ತವಾದ ಆ ವಾಕ್ಯವಂ ಕೇಳಿ ಮಹಾ ಕೋಪಾನ್ವಿತನಾಗಿ ಅರ್ಕಾದಿ ಸರ್ವ ಗ್ರಹಂಗಳಂ ಷಡೃತುಗಳಂ ಅಲ್ಲಿರುವ ದೇವತೆಗಳಂ ಕರೆಯಿಸಿ ನಿಗಳ ಬಂಧನವಮ್ಮಾಡಿಸಿ, ನಿಷ್ಠುರ ವಾಕ್ಯಂಗಳಂ ಪೇಳಿ, ಈ ರೀತಿಯಾಗಿ ಸಮಸ್ತ ದೇವತೆಗಳಂ ಕಾರಾಗೃಹದಲ್ಲಿ ಕೆಡಹಿ, ಭೂಭಕ್ಷಕರಾದ ಕೆಲಬರಿಂ ದೇವತೆಗಳ ಶಿರಚ್ಛೇದಂಗಳಮ್ಮಾಡಿಸಿದನು. ಬಳಿಕ ಬ್ರಹ್ಮನು ಶೂರಪದ್ಮನ ಕೈಯ್ಯಂ ಪಿಡಿದು ಲೋಕಪಾಲಕರಾದ ಸೂರ್ಯಾದಿ ನವಗ್ರಹಂಗಳಂ ಬಿಡಬೇಕೆಂದು ಬಹು ಪ್ರಿಯೋಕ್ತಿಗಳಿಂದ ಹೇಳಿ ಅವರಂ ಬಿಡಿಸಿದನು. ಅನಂತರದಲ್ಲಿ ಭಾನು ಕೋಪನು ಇಂದ್ರನಂ ಕುರಿತು, ಬಹು ಕೋಪವಮ್ಮಾಡಿ ಶೂರಪದ್ಮನಿಗಿಂತೆಂದನೆಂಬದಾಗಿ ಸೂತಂ ಶೌನಕಾದಿ ಮುನಿಗಳ್ಗೆ ನಿರೂಪಿಸಿದನೆಂಬಲ್ಲಿಗೆ ಅಸುರಕಾಂಡದಲ್ಲಿ ಹದಿನಾಲ್ಕನೆಯ ಅಧ್ಯಾಯವು ಸಂಪೂರ್ಣಂ.

ಹದಿನೈದನೆಯ ಅಧ್ಯಾಯವು.

ಭಾನುಕೋಪನ ವಿಜಯಯಾತ್ರಾ ವರ್ಣನಂ.

ಎಲೈ, ಮುನಿಗಳಿರಾ! ಅನಂತರದಲ್ಲಿ ಭಾನುಕೋಪನು ಶೂರಪದ್ಮನಂ ಕುರಿತು, ಎಲೈ ಪಿತೃವೆ? ಭಗವಂತನಾದ ನಿನ್ನಿಂದತ್ತಣಿದಂ ಕುರಿತು ಚಿಂತಿಸಲ್ಪಡುವದೇಕೆ? ಆವಕಡೆಯಲ್ಲಿದ್ದರುಂ ನಾನೇಪೋಗಿ ಇಂದ್ರನೆಂಬ ಶತ್ರುವಂ ಪಿಡಿದು ನಿಗಳಬಂಧನವ ಮಾಡಿ, ಚಂದ್ರವದನೆಯಾದ ಶಚೀದೇವಿಯೊಡನೆ ನಿನ್ನ ಸಮೀಪಕ್ಕೆ ಕರೆತರುವೆನು; ಆ ಇಂದ್ರನಂ ಕಾಣದಿದ್ದರೆ ಆತನಪುರವೆಂಬ ಅಮರಾವತಿಯಂ ದಹಿಸಿ ದೇವತೆಗಳಂ ಬಂಧಿಸಿ ನಿಮ್ಮ ಸಮೀಪಕ್ಕೆ ಬರುವೆನು; ಎಂದು ಈ ಪ್ರಕಾರದಿಂ ಪೇಳ್ದು ಆತನಂ ದನುಜ್ಞಾತನಾಗಿ ತನ್ನ ಅರಮನೆಗೆ ಪೋದನು. ಅನಂತರದಲ್ಲಿ, ಶೂರನು ಬ್ರಹ್ಮಾದಿಗಳಂ ಕಳುಹಿ ತನ್ನ ಅಂತಃಪುರವನ್ನೈದಿದನು. ಬಳಿಕ ರಥಪರಂಪರೆಗಳುಳ್ಳ ಸಹಸ್ರವಾಹಿನಿಗಳು ಪೊರಮಟ್ಟವು; ಮತ್ತಂ ಮಹಾಪರಾಕ್ರಮವುಳ್ಳ ಅಶ್ವಂಗಳುಂ ಗಜಂಗಳುಂ ಪೊರಮಟ್ಟವು. ಆಬಳಿಕ ಭಾನು ಕೋಪನು ವಿಂಶತಿ ಸಹಸ್ರ ಅಶ್ವಂಗಳಿಂ ಯುಕ್ತಮಾದ ರಥವನ್ನೇರಿ, ದುರ್ಮುಖಿಯಿಂ ಅಸುರಸ್ತ್ರೀಯರ್ ಸಹ ಶ್ರೀಕಾಶಪುರದ ಉದ್ಯಾನವನಕ್ಕೆ ಪೋಗಿ ಆ ವನದೊಳು ದೇವೇಂದ್ರನಂ ಕಾಣವೆ ಉದ್ಯಾನವನದ ಸಮಸ್ತ ವೃಕ್ಷಂಗಳಂ ಛೇದಿಸಿ, ಬಹು ಉಪದ್ರವಂಗಳಂ ಮಾಡಲಾಗಿ, ಜಯಂತನದಂ ಕೇಳಿ, ಪರಿಪರಿ ಚಿಂತಿಸಿ ಯುದ್ಧವಂ ಮಾಡುವದೇ ಸರಿಯೆಂದು ನಿಶ್ಚಯಿಸಿ ಶೀಘ್ರದಿಂ ಪುರದಿಂ ಪೊರಮಟ್ಟು, ಐರಾವತವೆಂಬ ಗಜವನ್ನೇರಿ, ನಾನಾ ಆಯುಧಂಗಳಂ ಧರಿಸಿ ದೇವತೆಗಳ್ವೆರೆಸಿ ಕಾಳಗಕ್ಕೆ ಬಂದನು. ಆಗ ಬಲಗರ್ವಿತನಾದ ಭಾನುಕೋಪನ ಸೇನೆಯು ಯುದ್ಧವಂ ಮಾಡಲಿಚ್ಛೈಸಿ ಅಭಿಮುಖಮಾಗಿ ಬರುತಲಿರುವ ದೇವತೆಗಳ ಸೈನ್ಯವಂ ಕಂಡು ಶೀಘ್ರದಿಂ ಬರಲಾಗಿ, ಉಭಯ ಬಲಗಳಿಗು ಮಹತ್ತಾದ ಯುದ್ಧಮುಂಟಾದುದು. ಆ ಸಮಯದಲ್ಲಿ ದೇವಸೇನೆಯು ಭಗ್ನವನ್ನೈದಿ ಪಲಾಯನ ವಾಗುತ್ತಿರೆ, ಅಸುರರು ಅವರಂ ಪಿಡಿದು ಭಾನುಕೋಪನ ಸಮೀಪವನ್ನೈದಿಸಿ, ಆತನ ಆಜ್ಞಾಪ್ರಕಾರದಿಂ ಶಿಲುಕಿದ ದೇವತೆಗಳಂ ಪಾಶಂಗಳಿಂ ದೃಢವಾಗಿ ಕಟ್ಟಿದರು. ಬಳಿಕ ಜಯಂತನದಂ ಕಂಡು ಬಹುವಾಗಿ ಚಿಂತಿಸಿ ಶರವರ್ಷಂಗಳಂ ಕರೆದು, ದೈತ್ಯಸೇನೆಯಂ ಶತವಾಹಿನಿಯುಂ ಸಂಹರಿಸಿದನು. ಆಗ ಐರಾವತವು ತನ್ನ ಪಾದಂಗಳಿಂ ದಂತಂಗಳಿಂ ಸೊಂಡಿಲುಗಳಿಂ ಅನೇಕ ದೈತ್ಯರಂ ಮರ್ದಿಸಲಾಗಿ, ನೀಲಕೇಶನೆಂಬ ದೈತ್ಯನು ಜಯಂತನಮೇಲೆ ಅನೇಕ ಶರವರ್ಷಂಗಳಂ ಬಿಡುತ್ತಿದ್ದನು.

ಭಾನುಕೋಪ ಜಯಂತರ ಯುದ್ಧವರ್ಣನೆ.

ಬಳಿಕ ಜಯಂತನು ಆತನಮೇಲು ಅನೇಕ ಬಾಣವರ್ಷಂಗಳ ಬಿಟ್ಟು ಅನೇಕ ಶಸ್ತ್ರಂಗಳಂ ಯೆಚ್ಚು ಆತನ ದೃಢಮಾದ ಕವಚವಂ ಖಂಡಿಸಲಾಗಿ, ಆ ನೀಲಕೇಶನು ಮಹಾಕೋಪಾ ಟೋಪಮುಳ್ಳವನಾಗಿ ಬಹು ಅಸ್ತ್ರಗಳನೆಚ್ಚಿ ಆ ಜಯಂತನ ಧನುವಂ ಅದರನಾರಿಯಂ ಕತ್ತರಿಸಲು, ಆ ಜಯಂತನು ಮಾಯಾ ಮಂತ್ರದಿಂ ನಾನಾರೂಪಮಂಧರಿಸಿ ಆ ಅಸುರನಮೇಲೆ ಅನೇಕ ಬಾಣಗಳಂ ವರ್ಷಿಸಿದನು. ಅನಂತರದಲ್ಲಿ ನೀಲಕೇಶನು ಕಿಂಚಿತ್ ಕ್ಷೀಣಬಲನಾದನು. ಆಗ ಸೋಮಾಸುರ ವರುಣಾಸುರ ಪದ್ಮಾಸುರ ಮಾಯಾವಳಿ ಬಲವಂತನಾದ ವಾಮಭಾಗ ದಂಡಕಮಾರುತ ಬಲಿ ಸುರಕೇಶಿಗಳೆಂಬ ಮಹಾರಂಗಕ್ಕೆ ದೈತ್ಯರು ಆ ನೀಲಕೇಶನ ಬಲಹೀನತೆಯಂ ಕಂಡು ಶೀಘ್ರದಿಂ ಯುದ್ಧಕ್ಕೆಬಂದು, ಆತನ ಮಾಯೆಯಂ ವೀಕ್ಷಿಸಿ ಮೋಹಿತರಾಗಿ, ತಮ್ಮ ಬಲಗಳಂ ತಿಳಿಯದೆ ಎಲ್ಲರು ನಿಂತಿರಲಾಗಿ, ಅತಿಬಲನಾದ ಭಾನುಕೋಪನು ಅವರಂ ಕಂಡು ತನ್ನ ಪರಾಕ್ರಮ ವಂ ಹೇಳಿಕೊಳ್ಳುತ, ಆ ಜಯಂತನ ಸಮೀಪಕ್ಕೆಬಂದು ಶರಗಳಿಂ ದೆಚ್ಚುತಿರೆ, ಜಯಂತನು ತನ್ನ ನಾಮಚಿನ್ಹೆಗಳುಳ್ಳ ಅಸ್ತ್ರಗಳಂ ಬಿಟ್ಟನು. ಬಳಿಕ ಅಸುರನು ಕೋಪಾನ್ವಿತನಾಗಿ ಸಹಸ್ರ ಬಾಣಂಗಳಂ ಬಿಡಲಾಗಿ, ಆ ಜಯಂತನು ಕೋಪ ದಿಂ ಜ್ವಲಮಾದ ಬಾಣವಂ ತೆಗೆದು ಆತನ ಧನುವಂ ಛೇದಿಸುತ್ತಿರೆ, ಆಭಾನು ಕೋಪನು ದೃಢತರವಾದ ಧನುವಂ ತೆಗದುಕೊಂಡು ತನಗಭಿಮುಖಮಾಗಿ ಬರು ತಿರ್ಪ ಸರಳುಗಳಂ ಛೇದಿಸಿ, ಆ ಜಯಂತನಮೇಲೆ ಬಹುಶರ ವರ್ಷಂಗಳಂ ಮಾಡಿಸಿದನು. ಮರಳಿ ಜಯಂತನು ರಥಸಾರಥಿ ತುರಂಗಂಗಳಂ ಸಹಸ್ರ ಬಾಣಂಗಳಂ ಬಿಡಲಾಗಿ, ಆ ಜಯಂತನು ಕೋಪದಿಂ ದುಜ್ವಲಮಾದ ಬಾಣವಂ ತೆಗದು ಆತನ ಧನುವಂ ಛೇದಿಸುತ್ತಿರೆ, ಆಭಾನುಕೋಪನು ದೃಢತರವಾದ ಧನುವಂ ತೆಗದುಕೊಂಡು ತನಗಭಿಮುಖಮಾಗಿ ಬರುತಿರ್ಪ ಸರಳುಗಳಂ ಛೇದಿಸಿ, ಆ ಜಯಂತನಮೇಲೆ ಬಹುಶರ ವರ್ಷಂಗಳಂ ಮಾಡಿಸಿದನು. ಮರಳಿ ಜಯಂ ತನು ರಥಸಾರಥಿ ತುರಂಗಂಗಳಂ ಸಹಸ್ರ ಬಾಣಂಗಳಿಂ ಸಂಹರಿಸುತ್ತಿರೆ ಭಾನು ಕೋಪನು ಮಹಾರಥವನೇರಿ ಚಾಪಪಾಣಿಯಾಗಿ ಆ ಜಯಂತನ ಪರಿಸರದಲ್ಲಿ ಅಸ್ತ್ರಂಗಳಿಂದೆಚ್ಚು, ಆತನ ಬತ್ತಳಿಕೆಯಂ ಕತ್ತರಿಸಿ, ನಿಶಿತವಾದ ಅಸ್ತ್ರಜಾಲಗಳಿಂ ಐರಾವತವು ರಕ್ತಧಾರೆಗಳಿಂದಾವೃತಮಾಗುವಂತೆ ಯೆಚ್ಚಲಾಗಿ ಜಯಂತನು ಮೂರ್ಛೆಯನೈದಿದವನಾಗಲು; ಐರಾವತವು ಶೀಘ್ರದಿಂ ಭಾನುಕೋಪನ ರಥವಂ ತಿರ್ಯಗ್ದಂತ ಪ್ರಹಾರದಿಂ ತಾಡಿಸಿ, ವೇಗದಿಂದ ಆತನ ಸಾರಥಿಯಂ ಸಂಹರಿಸಿ, ಗಂಡಶೈಲದಂತೆ ಕಠಿಣಮಪ್ಪ ಭಾನುಕೋಪನ ಭುಜಮಧ್ಯಮಂ ದಂತಂಗಳಿಂ

ತಿವಿದು, ಆತನ ವಕ್ಷಸ್ಥಳದ ಘಾತದಿಂ ಭಗ್ನದಂತವಾಗಿ ಆತನಿಂ ಕಪೋಲದೊಳು ತಾಡಿತವಾಗಿ ಮೂರ್ಛೆಯನ್ನೈದಿತು. ಬಳಿಕ ಅಸುರರು ಅತ್ಯಂತ ಕೋಲಾಹಲವಂ ಮಾಡುತ ಆಪುರವಂ ಪೊಕ್ಕು, ಉಳಿದ ದೇವತೆಗಳಂ ದೇವಾಂಗನೆಯರಂ ಮೋಹಿತನಾದ ಜಯಂತನಂ ಆತನ ಅಶ್ವಮುಂ ಸಹ ಹಿಡಿದು ಬಂಧಿಸಿ ಭಾನುಕೋಪನಸವಿಾಪವನ್ನೈದಿಸಿದರು. ಇಂತು ಭಾನುಕೋಪನು ಸಮಸ್ತ ಬಲದೊಡನೆ ಆಪುರದಲ್ಲಿರ್ಪ ಸರ್ವರಂ ಗ್ರಹಿಸಿಕೊಂಡು ಶೂರಪದ್ಮನ ಸವಿಾಪಕ್ಕೆ ಬಂದು, ನಿಖಿಲ ವೃತ್ತಾಂತಮುಂ ಪೇಳಲಾಗಿ, ಆಶೂರಪದ್ಮನು ದೇವತೆಗಳಂ ಕೋಪದಿಂ ನೋಡಿ ಅಜಮುಖಿಯಮುಂದೆ ಅವರಂತಾಡಿಸಿ ಅವರ ಕರಪಾದಂಗಳಂ ಛೇದಿಸೆ ಮರಳಿ ಪುಟ್ಟಲಾಗಿ, ಇದೇನೆಂದು ವಿಚಾರಿಸಿ, ಬಳಿಕ ಅಮೃತಪಾನವಂ ಮಾಡಿದವರೆಂದು ಕೇಳಿ, ಶೀಘ್ರದಿಂ ಜಯಂತ ಮುಂತಾದ ದೇವತೆಗಳನೆಲ್ಲರಂ ನಿಗಳಬಂಧನ ಕಾರಾಗೃಹ ಪ್ರವೇಶವಂ ಮಾಡಿಸಿ ದೇವಾಂಗನೆಯರಂ ದಿತಿಕುಮಾರರಾದ ಅಸುರರ್ಗೆ ಪರಿಚಾರಕಿಯರಂ ಮಾಡಿಸಿ, ಪುತ್ರನಾದ ಆ ಭಾನುಕೋಪನಂ ನೋಡಿ ಇಂತೆಂದನು, ಎಲೈ ಭಾನುಕೋಪನೆ! ಜಯಂತ ಮೊದಲಾದ ದೇವತೆಗಳಂ ಬಂಧಿಸಿ ತಂದದು ನಿನಗೊಂದು ಅತಿಶಯವೆ? ಪೂರ್ವದಲ್ಲಿ ನೀನು ಸೂಕ್ಷ್ಮವಾದ ಮಂಚದೊಳು ಬಾಲನಾಗಿ ಶಯನವಂ ಮಾಡಿರುವಾಗ, ಗವಾಕ್ಷರಂಧ್ರದಿಂ ದಾಗತಮಾದ ಕಿರಣಗಳಿಂ ಮುಟ್ಟುತಿರುವ ಸೂರ್ಯನಂ ಕಂಡು ಮಂಚದ ಪಾದದೊಳು ಕಟ್ಟಲಾಗಿ, ಬ್ರಹ್ಮದೇವನು ಸೂರ್ಯನಂ ಬಿಟ್ಟು ರಕ್ಷಿಸಬೇಕೆಂದು ಕೇಳಿಕೊಂಡವನಾಗಲು, ನಾನು ಭಾನುಕೋಪನ ಬಳಿಗೆ ಪೋಗೆಂದು ಕಳುಪಲಾಗಿ, ಅಗ ನಿನ್ನ ಬಳಿಗೆ ಬಂದು ಬಗೆಬಗೆಯಾಗಿ ಪ್ರಾರ್ಥಿಸಿ, ನಿನಗೆ ಬ್ರಹ್ಮಾಸ್ತ್ರವೊಂದವಂ ಕೊಟ್ಟು ಸೂರ್ಯನಂ ಬಿಡಿಸಿದನು. ಎಲೆ, ಪುತ್ರನೆ! ನಿನ್ನ ಬಲವೆತ್ತ? ಶೌರ್ಯವೆತ್ತ? ಜಯಂತನೆಲ್ಲಿ? ಎಂದು ಬಹುವಾಕ್ಯಗಳಿಂ ಪುತ್ರನಂ ಕೊಂಡಾಡಿ ಆತನಂ ಗೃಹಕ್ಕೆ ಕಳುಹಿಸಿ ತಾನು ಅಂತಃಪುರವನ್ನೈದಿದನು.

ಬಳಿಕ ಐರಾವತವು ಪ್ರಜ್ಞೆಯನ್ನೈದಿ, ಶ್ವೇತವನವೆಂಬ ಪುಣ್ಯಕ್ಷೇತ್ರಕ್ಕೆ ಪೋಗಿ ಮಹಾದೇವನಂ ಪೂಜಿಸಿ, ಮನೋಹರವಾದ ದಂತಂಗಳಂ ಪಡೆದು, ಮೇರುಪರ್ವತಕ್ಕೆ ಸಾರಿ, ಅಲ್ಲಿ ದೇವೇಂದ್ರನಂ ಕಂಡು, ಎಲೈ, ದೇವೇಂದ್ರನೆ! ಜಯಂತಪ್ರಮುಖರಾದ ದೇವತೆಗಳಂ ಹರಿಬ್ರಹ್ಮಾದಿಗಳಂ ಮಹಾ ತಪಸ್ವಿಗಳಾದ ಋಷಿಗಳಂ ಮನನಶೀಲರಂ ಸಹ, ಪಾಪಿಗಳಾದ ಶೂರಪದ್ಮ ಸಿಹ್ಮವಕ್ತ್ರ ತಾರಕರು ಅವರ ಪುತ್ರರು ದಿವಾ ರಾತ್ರಿಯಲ್ಲಿಯುಂ ಬಾಧಿಸುತಿಧಾರೆಂದುಪೇಳಿ, ತೂಷ್ಣೀಂ ಭೂತಮಾದುದು. ಎಲೈ ಬ್ರಾಹ್ಮಣೋತ್ತಮರಾದ ಶೌನಕಾದಿ ಮುನಿಗಳಿರಾ! ದೇವತೆಗಳಿಗೆ ಗುರುವಾದ ಬೃಹಸ್ಪತಿಯಿಂದ ಪಾಪಪರಿಹಾರಕವಾದ

ಹರ ಕುಮಾರನಾದ ಕುಮಾರಸ್ವಾಮಿಗೆ ಆಪ ಅಸುರರ ಚರಿತ್ರವು ನಿರೂಪಿಸಲ್ಪಟ್ಟಿತೋ, ಅಂಥ ಅತ್ಯದ್ಭುತವಾದ ಈ ವೃತ್ತಾಂತವನ್ನು ಪಾಪರಹಿತರಾದ ನಿಮಗೆ ಕ್ರಮವಾಗಿ ಪೇಳಿವೆನೆಂದು ಸೂತಂ ನುಡಿದನೆಂಬಲ್ಲಿಗೆ ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ, ನಿಖಿಲ ದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನಭೂತ ಶ್ರೀಮನ್ಮಹೀಶೂರ ಮಹಾ ಸಂಸ್ಥಾನ ಮಧ್ಯದೇದೀಪ್ಯಮಾನ ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ಕರ್ಣಾಟಕಭಾಷೆಯಲ್ಲಿ ವಿರಚಿಸಿದ ಶ್ರೀ ಕೃಷ್ಣರಾಜ ವಾಣೀ
ವಿಲಾಸವೆಂಬ ಸ್ಕಾಂದ ಮಹಾಪುರಾಣದ ಶಂಕರಸಂಹಿತೆಯಲ್ಲಿ ಶಿವರಹಸ್ಯ
ಖಂಡದ ಅಸುರಕಾಂಡದೊಳು ಹದಿನೈದನೆಯ ಅಧ್ಯಾಯವು
ಸಂಪೂರ್ಣವಾದುದು.

ವೀರಮಾಹೇಂದ್ರ ಕಾಂಡ.

ಮೊದಲನೆಯ ಅಧ್ಯಾಯವು.

ವೀರಬಾಹು ಶೂರಪದ್ಮಾಸುರನ ಬಳಿಗೆ ತೆರಳುವಿಕೆ.

ಎಲೈ ಮುನಿಗಳಿರಾ! ಸಾವಧಾನಮನದಿಂ ಕೇಳುವರಾಗಿ, ಅನಂತರದಲ್ಲಿ ಕುಮಾರಸ್ವಾಮಿಯು ಬೃಹಸ್ಪತಿಯಿಂ ಕೇಳಲ್ಪಟ್ಟ ವಾಕ್ಯವಂ ಕೇಳಿ, ಕರುಣಾಕಟಾಕ್ಷದಿಂ ಆತನಂ ವೀಕ್ಷಿಸಿ ನಿಲ್ಲೆಂದು ನಿರೂಪಿಸಿ, ಬಳಿಕ ಬ್ರಹ್ಮ ವಿಷ್ಣು ಮೊದಲಾದ ದೇವತೆಗಳಂ ಕುರಿತು ಅವರಿಗೆ ಹಿತಕರವಾದ ಶ್ರೋತ್ರಾನಂದ ಕರವಾಗಿರ್ಪ ಈ ವಾಕ್ಯವಂ ನಿರೂಪಿಸಿದನು. ಎಲೈ, ದೇವತೆಗಳಿರಾ! ಬಂಧುವರ್ಗಸಮೇತನಾತ ಶೂರನಂ ಸಂಹರಿಸಿ ನಿಶ್ಚಯವಾಗಿ ನಿಮ್ಮನೆಲ್ಲರಂ ಸ್ಥಾಪಿಸುವೆ, ಅದುಕಾರಣದಿಂದಾತನ ಬಲಾಬಲಂಗಳಂ ಔನ್ನತ್ಯವಂ ಹೀನತೆಯಂ ತಿಳಿಯಲು ಮರ್ಮಜ್ಞನಾದ ವಿಚಕ್ಷಣನಾದಂಥ ದೂತನಾರಿರುವನೆಂದಾಜ್ಞಾಪಿಸಲಾಗಿ, ದೇವತೆಗಳದಂ ಕೇಳಿ, ಆ ಕುಮಾರಸ್ವಾಮಿಯನುಮತದಿಂ ಬಲಾಧಿಕನಾದ ವೀರಬಾಹುವಿನಂ ಕಳುಹಬೇಕೆಂದು ನಿಶ್ಚಯಿಸಿ, ಮಹಾ ಬಲವಂತನಾದ ವೀರಬಾಹುವಿನಂ ಕುರಿತು, ಎಲೈ ಮಹಾ ಬಲವಂತನೆ! ದೇವತೆಗಳ ಹಿತಕ್ಕೋಸುಗ ನೀನೀಗ ಶೂರನ ಸಮೀಪಕ್ಕೆ ಪೋಗಿ, ಜಯಂತ ಮೊದಲಾದ ದೇವತೆಗಳಂ ಬಿಟ್ಟು ಅಹಂಕಾರ ರಹಿತನಾಗಿ, ಸರ್ವದೇವತೆಗಳಂ ಬಹುಮಾನದಿಂ ಪಾಲಿಸುತ ನಿನ್ನ ಪುರದೊಳು ವಾಸವಮ್ಮಾಡುತಿರು. ಇಲ್ಲದಿರ್ದೊಡೆ ಕುಮಾರಸ್ವಾಮಿಯು ಬಂದು ನಿನ್ನ ಅನುಜರಂ ಪುತ್ರರಂ ಬಂಧು

ವರ್ಗ ಸಮೇತನಾದ ನಿನ್ನಂ ಸಂಹರಿಸುವನೆಂದು ಆತಂಗೆ ಪೇಳ್ದು, ಆತನ ಬುದ್ಧಿಯುಂ ತಿಳಿದು ಶೀಘ್ರದಿಂ ಬರುವನಾಗೆಂದು ನಿರೂಪಿಸಲಾಗಿ, ಆ ವೀರ ಬಾಹುವು ಕುಮಾರಸ್ವಾಮಿಯ ವಚನಮಂ ಕೇಳ್ದು, ವಿನಯದಿಂದಾತಂಗೆ ನಮ ಸ್ಕಾರವನ್ಮಾಡಿ, ದೇವತೆಗಳ ವಚನಮಂ ಮನದಲ್ಲಿರಿಸಿ, ಶೂರನಿಂ ಪಾಲಿತಮಾದ ವೀರಮಾಹೇಂದ್ರ ಪುರಿಗೆ ಪೋಗುವಂತೆ ಸ್ವಾಮಿಯಿಂದಪ್ಪಣೆಯಂ ತೆಗೆದು ಕೊಂಡು, ಶೀಘ್ರದಿಂ ಪೊರಮಟ್ಟು, ಪರ್ವತೇಶ್ವರನಾದ ಗಂಧಮಾದನ ಪರ್ವ ತವನ್ನೇರಿದನು. ಮತ್ತಮಾ ವೀರಬಾಹುವು ಬ್ರಹ್ಮಾಂಡದ ಭಿತ್ತಿಪರ್ಯಂತವು ವರ್ಧಿಸಿ ಘೋರರೂಪಮಂ ಧರಿಸಿ ಮಹಾ ಭಯಂಕರನಾಗಿ, ನಾನಾ ವಿಧ ಗೋಪುರಂಗಳಿಂ ಶೋಭಿತಮಾದ ಅಲ್ಲಲ್ಲಿ ಅನೇಕ ಮಂಟಪಗಳಿಂ ಮಂಡಿತ ಮಾದ, ಅಷ್ಟಪುರಿಗಳಿಂದಾವೃತಮಾದ, ನಾನಾವಿಧವಾಗಿರ್ಪ ಅಸುರರಿಂ ನಿಬಿಡ ಮಾಗಿ ಅತಿ ಮನೋಹರಮಾದ, ಆ ವೀರಮಾಹೇಂದ್ರ ಪುರಮಂ ಕಂಡು, ಬಳಿಕ ಸಮುದ್ರಂಗಳಂ ಪರ್ವತಂಗಳಂ ರಮ್ಯಂಗಳಾಗಿರ್ಪ ನಾನಾ ವಿಧ ದೇಶಂಗಳಂ ವೀಕ್ಷಿಸಿ, ತಿಲಯಂತ್ರದಲ್ಲಿ ತಿಲಂಗಳಂ ಮರ್ದಿಸುವಂತೆ ಆ ಪುರವಂ ಮರ್ದಿಸು ವೆನು. ಆದರೆ ಅಲ್ಲಿರುವ ದೇವತೆಗಳೆಲ್ಲರು ಮೃತಿಯನ್ನೈದುವರು, ಎಂದು ಚಿಂತಿಸಿ ಕ್ಷಣಮಾತ್ರ ನಿಂತು ಅಟ್ಟಹಾಸಮನ್ಮಾಡುತಿರೆ, ಆ ಪರ್ವತವು ಅಧೋ ಭಾಗಕ್ಕೆ ಬೀಳಲಾಗಿ, ಆದರ ಗುಹೆಗಳಲ್ಲಿರುತಿರುವ ಕೆಲಬರಾದ ತಾರಕನ ಭಟರು ಮೃತಿಯನ್ನೈದಿದರು.

ಬಳಿಕ ವೀರಬಾಹುವು ಸಾಗರವಂ ದಾಂಟಲು ಪೂರ್ವರೂಪಮಂ ಧರಿಸಿ, ದೇವಸೇನಾಪತಿಯಾದ ಕುಮಾರಸ್ವಾಮಿಯುಂ ಮನದೊಳು ಸ್ಮರಿಸಿ, ಆ ಪರ್ವ ತವು ಪೂರ್ವದಂತೆ ಉನ್ನತವನ್ನೈದಿತು. ಎಲೈ, ಮುನಿಗಳಿರಾ! ಯಾವಾಗ ಈತನು ಅಟ್ಟಹಾಸವನ್ಮಾಡುತ ಆಕಾಶಮಾರ್ಗವನ್ನೈದಿದನೋ ಆಗ ಆತನ ವೇಗದಿಂ ವಾಯುವು ಪುಟ್ಟಿ ಅದರಿಂದ ಪರ್ವತಂಗಳು ತೂಲಂಗಳ ಸಮೂ ಹದೋಪಾದಿಯಲ್ಲಿ ಮಾರ್ಗವಿಡಿದು, ಬಳಿವಿಡಿದೈದಿದವು. ಸಮುದ್ರವು ತೆರೆ ಗಳಿಂದಲಂಕೃತಮಾಗಿ ಕಂಪಾಯಮಾನವನ್ನೈದಿತು. ಆಗ ಬಡಬಾಗ್ನಿಯುವನಿಂ ಬಡಿಯಲ್ಪಟ್ಟು ಶಾಂತಮಾದುದು. ಅರ್ಕ ಮೊದಲಾದ ಆವಾವ ಮೇಘಂಗಳು ಆತನ ಮಾರ್ಗವನ್ನೈದಿದವು. ಮತ್ತಂ ಆ ಸಮುದ್ರವು ವೀರಬಾಹುವಿನ ವೇಗದಿಂ ಚಕ್ರಾಕೃತಿಯಲ್ಲಿ ತಿರುಗುತಿರ್ದವು. ಬಳಿಕ ವೀರಬಾಹುವು ವ್ಯಾಳಿ ವಕ್ತ್ರದಿಂ ಪಾಲಿತಮಾದ ಲಂಕಾಪುರಿಗೆ ಪೋಗಲಾಗಿ, ಆತಂಗೆ ಸೇನಾಪತಿಯಾದ ವೀರಸಿಂಹನು ಆಕಾಶಮಾರ್ಗದಲ್ಲಿ ಆ ವೀರಬಾಹುವಂ ಕಂಡು, ಶೀಘ್ರದಿಂ ಪೆಲ್ಲಿಗೆ ಪೋಗುತಿದ್ದಾನೆಂದು ಚಿಂತಿಸಿ, ಅತ್ಯಂತ ಜ್ವಾಲೆಯುಳ್ಳವನಾಗಿ ಪಂಚ

ಶತ ವಾಹಿನೀಯುಕ್ತನಾಗಿ, ಪುರದಿಂ ಪೊರಮಟ್ಟು, ನೀನಾರು? ಯೆಲ್ಲಿಗೆ ಪಯಣವು? ಎಂದು ಕೇಳಿದನು.

ವೀರಬಾಹು ವೀರಸಿಂಹರ ಯುದ್ಧ.

ಬಳಿಕ ವೀರಬಾಹುವು ಆ ವಾಕ್ಯವಂ ಕೇಳಿ, ಎಲೈ ಅಸುರನೆ! ನಾನು ವೀರಬಾಹುವೆಂದು ಪ್ರಸಿದ್ಧನಾಗಿದೇನೆ. ವೀರಮಹೇಂದ್ರಪುರದಲ್ಲಿರುವ ಶೂರಪದ್ಮನ ಬಳಿಗೆ ಪೋಗುತಿವೇನೆ. ನೀನು ಮಾಡಲ್ಕಕ್ಕದ್ದೇನೆಂದು ಕೇಳ್ದು ವೇಗದಿಂ ಪೋಗುತಿರಲಾಗಿ, ಆ ವೀರಸಿಂಹನು ಅತಿ ಕೋಪದಿಂದಾತನ ಮೇಲೆ ಶರವೃಷ್ಟಿಯಂ ಕರೆದನು. ಆತನ ಭೃತ್ಯರಾದ ಅಸುರರು ಬಹು ಅಟ್ಟಹಾಸವ ಮ್ಮಾಡುತಿರೆ ಆ ವೀರಬಾಹುವು ಅತಿ ಕೋಪದಿಂ ಅರುಣಾಕ್ಷನಾಗಿ ಖಡ್ಗಮಂ ತೆಗದು, ಶತವಾಹಿನಿಯಂ ಭೇದಿಸಲಾಗಿ, ಇತರರಾದ ದೈತ್ಯರೆಲ್ಲರು ಪಲಾಯನವನ್ನೈದಿದರು. ಬಳಿಕ ಆ ವೀರಸಿಂಹನು ಶೂಲವಂ ವಜ್ರವಂತೆಗದು ವೀರಬಾಹುವಿನ ಶರೀರದ ಮೇಲೆ ಬಿಡಲಾಗಿ, ಆ ವೀರಬಾಹುವು ಖಡ್ಗದಿಂದವುಗಳನ್ನು ಕ್ರಮದಿಂ ಭೇದಿಸಿ, ಆತನಂ ಸಂಹರಿಸಿ, ಗಗನಮಾರ್ಗದಲ್ಲಿ ನಿಂತು ಮರಳಿ ಬಹು ದೈತ್ಯರಂ ಕೊಂದು ವೇಗದಿಂ ಲಂಕಾಪುರಿಯ ಮೇಲೆ ಬೀಳಲಾಗಿ, ಆತನ ಪತನದಿಂದ ಆ ಪಟ್ಟಣವು ಅಧೋಭಾಗಕ್ಕೆ ಬಿದ್ದುದು.

ವೀರಬಾಹು ಅತಿವೀರರ ಯುದ್ಧ.

ಆಗ ಕೆಲಬರು ದೈತ್ಯರು ಮುರಿಯಲ್ಪಟ್ಟ ಹಸ್ತಪಾದಂಗಳುಳ್ಳವರಾಗಿ ಮರಣವನ್ನೈದಿದರು. ತಿಮಿಂಗಿಲ ಮೊದಲಾದ ಮೀನುಗಳು ಅವರುಗಳಂ ಕೊಂಡುಪೋದವು. ಬಳಿಕ ವ್ಯಾಳಿವಕ್ತ್ರನ ಕುಮಾರನಾದ ಅತಿ ವೀರನೆಂಬಾತನು ಇದೇನಿರಬಹುದು? ಎಂದು ಕೋಪದಿಂ ಯುದ್ಧವಮ್ಮಾಡಲುದ್ಯುಕ್ತನಾಗಿ ಪೊರಮಟ್ಟು, ಆ ವೀರಬಾಹುವಂ ಕಂಡನು. ಮತ್ತಂ ಆತನ ಭಟರು ಕೋಪದಿಂ ಮೈಮರೆದು ಘರ್ಮಕಾಲದೊಳು ಮೇಘಂಗಳು ವರ್ಷಿಸುವಂತೆ ಶರವರ್ಷಂಗಳಂ ಸುರಿಸಿದರು. ಬಳಿಕ ವೀರಬಾಹುವು ಆ ಬಾಣಂಗಳಂ ಭೇದಿಸಿ, ಆತನ ಭಟರಂ ಸಂಹರಿಸಿದವನಾಗಲು, ಆ ಅತಿವೀರನೆಂಬುವನು ಬಹು ವೇಗದಿಂ ಸನ್ನದ್ಧನಾಗಿ ಶಕ್ತಿಯೆಂಬ ಆಯುಧವಂ ಬಿಡುತಿರೆ, ಅದನ್ನು ವೀರಬಾಹುವು ಘಕ್ಕನೆ ಖಡ್ಗದಿಂ ಭೇದಿಸಿದನು. ಅನಂತರದಲ್ಲಿ ಆತನು ದೃಢವಾದ ಗದೆಯಂ ತೆಗೆದು ವೀರಬಾಹುವಿನ ಮೇಲೆ ಬಿಡಲಾಗಿ, ಆ ಗದೆಯು ಆತನ ಉರಸ್ಥಲದಲ್ಲಿ ಬಿದ್ದು ಭಗ್ನವಾಗಲು, ಮರಳಿ ಶೂಲದಿಂದಾತನಂ ಇರಿಯಲಾಗಿ, ಶೀಘ್ರದಿಂದಾತನ ಕರದಿಂದ ಚೂರ್ಣವಾಗೆ, ಆಗ ಬ್ರಹ್ಮನಿಂ ದತ್ತವಾದ ಉಜ್ವಲವಾದ ಕರವಾಳವಂ ಪಿಡಿದು ಆ ಖಡ್ಗದ ಮಹಿಮೆಯಂ ಪೇಳ್ದು, ವೇಗದಿಂದಾತನ ಸಮೀಪಕ್ಕೆ ಬಂದು ಘರ್ರನೆ ಸುತ್ತುಮುತ್ತಲುಂ ಮಂಡಲಾಕಾರವಾಗಿ ತಿರು

ಗುತ್ತ ಆತನಂ ತ್ವರೆಮಾಡಿಸಲಾಗಿ, ಆ ವೀರಬಾಹುವು ಅತಿ ವೇಗದಿಂದಾತಂಗೆ ಸ್ವಶಿಕ್ಷೆಯಂ ತೋರಿಸುತಿರಲು ಅವರೀರ್ವರು ಯುದ್ಧದೊಳ್ ಮಲ್ಲರಂತೆ ಅನ್ಯೋನ್ಯ ಸಂಕುಲಮಾದ ಯುದ್ಧಮನ್ಮಾಡೆ, ವೀರಬಾಹುವು ಅತಿ ಕೋಪ ಯುಕ್ತನಾಗಿ ಕರವಾಳದಿಂದಾತನ ಕರಗಳಂ ಛೇದಿಸಿ, ಆತನ ಶಿರಮಂ ಖಂಡಿಸಿ ಮರಳಿ ಕರವಾಳದಿಂ ಶೀಘ್ರಮಾಗಿ, ಲಂಕಾಪುರದೊಳಿರ್ಪ ಬಹು ದೈತ್ಯರಂ ವಧಿಸಿ, ಅಟ್ಟಹಾಸವನ್ನೆಸಗಿ, ವೇಗದಿಂ ವೀರಮಾಹೇಂದ್ರಕ್ಕೆ ಪೊರಮಟ್ಟನೆಂದು

ಶೌನಕಾದಿಗಳ್ಗೆ ಸೂತಂ ಪೇಳ್ದನೆಂಬಲ್ಲಿಗೆ, ವೀರಮಾಹೇಂದ್ರಕಾಂಡ
ದೊಳು ಮೊದಲನೆಯ ಅಧ್ಯಾಯವು ಸಂಪೂರ್ಣಂ.

ಎರಡನೆಯ ಅಧ್ಯಾಯವು.

ವೀರಬಾಹು ಗಜಮುಖ ಯುದ್ಧವು-ದೇವತೆಗಳು ಪರಮೇಶ್ವರನನ್ನು ಹೊಗಳುವಿಕೆ.

ಕೇಳಿರೈ ಋಷಿಗಳಿರಾ! ಅನಂತರದಲ್ಲಿ ವೀರಬಾಹುವು ವೇಗದಿಂ ವೀರ ಮಾಹೇಂದ್ರ ಪುರಿಗೈದಿ, ಆ ಪುರದ ಸಹಸ್ರಯೋಜನ ದಗಲಮುಳ್ಳ ಅಗಳಂ ದಾಂಟಿ, ಆ ಪಟ್ಟಣದ ಉತ್ತರ ಪ್ರಾಕಾರದ್ವಾರವನ್ನೈದಿ, ಅಲ್ಲಿ ಭಯಂಕರರಾದ ಘೋರಾತಿಘೋರರೆಂಬ ಈಶ್ವರ ಸುರರಂ ಸಹಸ್ರ ವಾಹಿನೀಗಣಿತಮಪ್ಪ, ಗಜಂ ಗಳಂ, ಸಹಸ್ರವಾಹಿನೀ ರಥಂಗಳಂ, ದ್ವಿಸಹಸ್ರ ವಾಹಿನಿತುರಂಗಂಗಳಂ ತಥಾ ವಿಧಮಾದ ಪದದಾತಿಗಳಂ ನಿರೀಕ್ಷಿಸಿ, ಬಳಿಕ ನಾನೀಮಾರ್ಗದೊಳು ಪೋದೆನಾ ದೊಡೆ ಅಸುರರಿಂ ತನ್ನ ಕಾರ್ಯಕ್ಕೆ ಹಾನಿಯುಂಟಾಗುವದೆಂದು ಯೋಚಿಸಿ, ಆ ಮಾರ್ಗಮಂ ಬಿಟ್ಟು ಪೂರ್ವದ್ವಾರಕ್ಕೆ ಪೋಗೆ, ಅಲ್ಲಿಯುಂ ಉತ್ತರ ಬಲದಂತೆ ಗಜರಥ ತುರಗ ಪದಾತಿಗಳಂ ಮಹಾ ಬಲವಂತರಾದ ಮಹಿಷ ವೀರಭಾನು ಗಳೆಂಬೀರ್ವರಸುರಂ, ದಕ್ಷಿಣದ್ವಾರಕ್ಕೆ ಪೋಗಿ ಅತಿ ಭಯಂಕರನಾದ ಸಹಸ್ರವ ದನಂಗಳಿಂ ದ್ವಿಸಹಸ್ರ ಕರಗಳಿಂ ಸಹಸ್ರ ಶುಂಡಿಲಗಳಿಂ ಯುಕ್ತನಾದ ಮಹಾ ಶರೀರಿಯಾಗಿರ್ಪ ಅನೇಕ ಸೇನಾ ಸಮೂಹನಾದಂಥ ಗಜಮುಖನೆಂಬ ಅಸುರನಂ ಕಂಡನು.

ಅನಂತರದಲ್ಲಿ ಆ ಗಜಮುಖನು ವೀರಬಾಹುವಿನಂ ನೋಡಿ, ಎಲೋ ನೀನ್ಯಾರು? ಏನು ಕಾರಣದಿಂ ಬಂದಿ? ನಿನ್ನನ್ನು ಆವ ದೇವತೆ ಕಳುಹಿಸಿದಳು? ಎಂದು ಪೇಳ್ದು ಮಹಾಕೋಪದಿಂದತ್ಯುನ್ನತಮಪ್ಪ ಅದ್ರಿಯಂ ಕಿತ್ತು, ಮಹಾ ವೇಗದಿಂದಾತನ ಭುಜದಲ್ಲಿಡೆ, ಆ ವೀರಬಾಹುವವಂ ಭುಜದಲ್ಲಿ ಗ್ರಹಿಸಿ, ಆ ಪರ್ವತದಲ್ಲಿ ಬಿದ್ದುದರಿಂ ಚೂರ್ಣತ್ವವನ್ನೈದಿತು. ಆಗ ಮರಳಿ ಗಜಮುಖನು

ಕೋಪದಿಂ ಶೀಘ್ರನಾಗಿ ಶುಂಡಾಜಾಲದಿಂ ಸಹಸ್ರ ಗಿರಿಗಳಂ ಕಿತ್ತು ವೇಗದಿಂ ದಾತನಮೇಲಿಡೆ, ಆ ಪರ್ವತಂಗಳು ಆತನ ಶರೀರದಲ್ಲಿ ಬಿದ್ದಮಾತ್ರದಿಂದಲೆ ಚೂರ್ಣಂಗಳಾಗಲು, ಅವುಗಳಂ ವೀಕ್ಷಿಸಿ ಪುನಃ ಹಸ್ತದಿಂ ಗದೆಯುಂ ತಿರುಹಿ ವೇಗದಿಂದಾತನ ಶರೀರದಮೇಲೆ ಪ್ರಹರಿಸೆ, ಅದಂ ವೀರಬಾಹುವು ಖಡ್ಗದಿಂ ಛೇದಿಸಿದನು. ಬಳಿಕ ಗಜಾಸುರನು ಮರಳಿ ಶುಂಡಾ ಸಹಸ್ರದಿಂ ಸಹಸ್ರ ವಟ ವೃಕ್ಷಂಗಳಂ ಕಿತ್ತು ವೇಗದಿಂ ತಿರುಹಿ ಆತನಂ ಕುರಿತು ಅವುಗಳಂ ಪ್ರಹರಿಸಿದವನಾಗಲು, ಆ ವೀರಬಾಹುವು ಅವುಗಳಂ ಕರವಾಲದಿಂ ಖಂಡಿಸಿ ನೆಲದಲ್ಲಿ ಕೆಡಹಿದನು. ಅನಂತರದಲ್ಲಿ ಗಜಮುಖನು ಮುಷ್ಟಿಯುದ್ಧವಂ ಮಾಡಲು ಕರಂಗಳನೆತ್ತಿ ವೇಗದಿಂದಾತನ ಸಮೀಪಕ್ಕೆ ಬರಲಾಗಿ, ಆ ವೀರಬಾಹುವು ಅತಿ ಶೀಘ್ರದಿಂ ಆ ಸಹಸ್ರ ಕರಂಗಳಂ ಮೂಲಾರಭ್ಯವಾಗಿ, ಛೇದಿಸಿ ತುಂಡು ತುಂಡುಗಳಾಗಿ ಮಾಡಿದವನಾಗಲು, ಮರಳಿ ಆ ಅಸುರನು ಖಡ್ಗದಿಂದಾತನಂ ಕಡಿಯಲು ಅತಿ ಶೀಘ್ರದಿಂ ಬರೆ, ಆ ವೀರಬಾಹುವು ಆ ಗಜಾಸುರನಂ ಪಾದದಿಂ ತಾಡಿಸಲಾಗಿ, ಆ ಅಸುರನು ಅದರಿಂದ ನೊಂದು ನೆಲದಲ್ಲಿ ಬಿದ್ದು ಪ್ರಾಣಂಗಳಂ ಬಿಟ್ಟನು.

ಎಲೈ ಮುನಿಗಳಿರಾ! ಈ ಪ್ರಕಾರದಿಂ ವೀರಬಾಹುವು ಆ ಗಜಾಸುರನಂ ಸಂಹರಿಸಿ, ಮರಳಿ ಕಾರ್ಯವಿಳಂಬ ಮಾಡೆನೆಂದು ಮನದೊಳು ಆಲೋಚನೆಯಂ ಗೈದು ಮಹಾ ವೇಗವನ್ನೈದಿ ಪಶ್ಚಿಮದ್ವಾರದ ಅತ್ಯಂತ ಉನ್ನತವಾದ ಗೋಪುರವನೇರಿ, ಅಲ್ಲಿ ನಿಂತು ಅನೇಕ ವೀಥಿಗಳಿಂದಮರಾವತಿಯ ಜಯಿಸಿದ ಬ್ರಹ್ಮಾಂಡ ಭಿತ್ತಿಯಂ ಭೇದಿಸಿ ಬಾಹ್ಯಾಕಾಶವನ್ನೈದುತಿರ್ಪ ಮಂಟಪಂಗಳ ಸಾಲುಗಳಿಂದ ಯುಕ್ತವಾಗಿ ಅತಿ ಚಿತ್ರವಾದ, ಗೋಪುರಂಗಳಿಂ ಶೋಭಿತವಾಗಿ ವಾಪೀಕೂಪ ತಟಾಕ ಪುಷ್ಪವಾಟಿಕೆಗಳಿಂ ಮನೋಹರವಾದ, ನಾನಾ ವೃಕ್ಷ ಸಮೂಹಗಳಿಂದೊಪ್ಪುವುದಾಗಿ ಸುಕುಮಾರರಾದ ಅಸುರರಿಂದಾವೃತವಾದ ವೇಶ್ಯಾಗೃಹಂಗಳುಳ್ಳ, ಸೆರೆಯ ಹಾಕಲ್ಪಟ್ಟ ಅಮರನಾರಿಯರಿಂದಿರಿಸಲ್ಪಟ್ಟ ಮನೆ ಮನೆಯಲ್ಲಿರುವ ಕಲ್ಪವೃಕ್ಷವಾಟಿಕೆಗಳಿಂದೆಸೆವ, ವಾಂಛಿತಾರ್ಥವನೀಯುವ ಕಾಮಧೇನುಗಳಿಂ ಪ್ರಕಾಶಮಾನವಾಗಿ ನವರತ್ನಗಳಿಂ ಕೆತ್ತಿಸಲ್ಪಟ್ಟ ವಿಧವಿಧ ಮಂದಿರಂಗಳಿಂ ರಮ್ಯವಾದ ಮತ್ತೆ ಮನೆಮನೆಯ ಬಾಗಿಲುಗಳಲ್ಲಿರ್ಪ ರಂಭಾಸ್ತಂಭಗಳಿಂ ಸುಮಂಗಳವಾದ, ರಥಾಶ್ವಗಜ ಸೇನೆಗಳಿಂ ದಿತ್ತರದಲ್ಲಿ ಶೋಭಿತವಾದ ಪ್ರಾಸಾದ ಭವನಗಳನೇರಿ ಸಂಚರಿಸುತಲಿರುವ ದೈತ್ಯಾಂಗನೆಯರಿಂ ನಿಬಿಡಿತವಾದ, ವಾಯುವಿನಿಂದಡಿಗಡಿಗೆ ಸಂಮಾರ್ಜನೆಯಂ ಮಾಡಲ್ಪಟ್ಟ ರೇಣು ಸಮೂಹಗಳುಳ್ಳ ಕೃಷಿಗಳಲ್ಲಿ ನಿರತರಾದ ಸೋಮಸೂರ್ಯಾಗ್ನಿಗಳಂ

ದಾವೃತಮಾಗಿ, ಸೂರ್ಯ ಸಂಬಂಧಮಾದ ರಥಮಂ ಹಿಡಿದಾಡಿಸುವ ಬಾಲಕರಿಗೋಸುಗ ಕೊಡುತ್ತಲಿರುವ ಶ್ರೇಷ್ಠರಾದ ದೈತ್ಯ ಸ್ತ್ರೀಯರಿಂದಾವೃತಮಾದ, ಬಲಾತ್ಕಾರದಿಂ ಋಷಿಗಳೊಡನೆ ರಮಿಸುತಲಿರುವ ಜಾರ ಸ್ತ್ರೀಯರಿಂ ಯುಕ್ತಮಾದ ಅಧೋಭಾಗದೊಳು ಸಂಚರಿಸುತ್ತಲಿರುವ ಕೆಲ ದೇವತಾಸ್ತ್ರೀಯರುಳ್ಳ ಅತ್ಯುತ್ತಮವಾದ ಹರ್ಮ್ಯಗಳ ಸಾಲುಗಳಿಂದಾವೃತಮಾದ ರಾಜಗೃಹದೊಳು ಸುರತಶ್ರಮದ ಶಾಂತಿಯಂ ಮಾಡುತ್ತಲಿರುವ ಚಂದ್ರನಂ ಪಿಡಿದು, ಬಳಲಿದ ಜನವು ನಾಳಿಕೇರಾಮೃತವಂ ಪಾನಮಾಡುವಂದದಿ ಆ ಚಂದ್ರಮಂಡಲದಲ್ಲಿರುತಿರ್ಪ ಅಮೃತವಂ ಪಾನವಂ ಮಾಡಿ ಮರಳಿ ಮರಳಿ ಚಂದ್ರನಂ ಬಿಡುತಿರುವ ದೈತ್ಯಾಂಗನೆಯರಿಂದ ಆವೃತಮಾಗಿ ನಾನಾವಿಧರಾದ ಅಸುರರಿಂ ನಿಬಿಡಿತಮಾದ ಅನೇಕ ಶಯ್ಯೆಗಳಿಂ ಯುಕ್ತಮಾಗಿ ಮನೋಹರಮಾದ ಆ ವೀರಮಾಹೇಂದ್ರಪುರಮಂ ಕಂಡು, ಹಾಹಾ! ಈಭಾಗ್ಯವಾಶ್ಚರ್ಯವಾಶ್ಚರ್ಯವು!! ಸರ್ವಲೋಕಂಗಳೊಳಗೆ ಯೆಲ್ಲಿಯು ಲಭಿಸಲಾರದು; ಈ ಪುರದ ಐಶ್ವರ್ಯವಂ ನೋಡಲು ಸಹಸ್ರನಯನಂಗಳಾದರು ಸಾಲವು; ಬ್ರಹ್ಮವಿಷ್ಣು ಲೋಕಂಗಳು ಇದಕ್ಕೆ ಸರಿಯಾದವಲ್ಲವು, ಎಂದು ಈ ಪ್ರಕಾರಮಾಗಿ ತನ್ನ ಮನದೊಳು ಯೋಚಿಸಿ, ಶೀಘ್ರದಿಂ ಗೋಪುರದಿಂ ದಿಳಿದು ಪುರವಂ ವೊಳಹೊಕ್ಕು, ಬೀದಿಯಲ್ಲಿರುತಿರ್ಪ ಆಶ್ಚರ್ಯಗಳಂ ನೋಡಿ ನೋಡಿ ಬೆರಗಾಗಿ ವಿಚಿತ್ರಮಾದ ಮತ್ತೊಂದು ಬೀದಿಗೆ ಸಾರಿ ಮರಳಿ ಅಲ್ಲಿರುವ ಬಹು ವಿಚಿತ್ರಂನೋಡಿ ಮತ್ತೆ ಕೆಲ ಬೀದಿಗಳಿಗೈದಿ ಅಲ್ಲಿರ್ಪ ಅದ್ಭುತಂಗಳಂ ವೀಕ್ಷಿಸಿ, ಕ್ರಮದಿಂ ದೈತ್ಯರಿಂದ ಬಾಧಿಸಲ್ಪಡುತಲಿರುವ ದೇವತೆಗಳಿರುವ ಸೆರೆಮನೆಯಂ ಹೊಕ್ಕನು. ಅಲ್ಲಿ ಎಲೈ ಜಯಂತನೆ! ನಿನ್ನ ತಂದೆಯಾದ ಇಂದ್ರನು ಇಂದ್ರಾಣಿಯು ಯೆಲ್ಲಿಗೆ ಪೋದರು? ಶೀಘ್ರದಿಂ ಪೇಳು. ಇಲ್ಲದಿರ್ದೊಡೆ ನಿಮ್ಮಂ ಸಂಹರಿಸುತ್ತೇನೆಂದು ಈ ಪ್ರಕಾರವಾಗಿ ಕ್ರೂರವಾಕ್ಯಂಗಳುಳ್ಳ ಮಹಾ ಬಲ ಪರಾಕ್ರಮಿಗಳಾದ "ಮಹೋಗ್ರ ಕರಾಳ, ಶಂಕುನಿಶ್ಶಂಕ ಕಂಟಕ ಮಹಾವಕ್ತ್ರ" ಎಂಬಿವರು ಮೊದಲಾದ ದೈತ್ಯರಿಂ ಪೀಡಿತರಾದ ಜಯಂತಾದಿ ದೇವತೆಗಳು ಪರಿಪರಿ ದುಃಖಿಸುತ್ತಾ ಸ್ವಾಮಿಯಂ ಮನದೊಳು ಚಿಂತಿಸಿ, ಎಲೈ ಮಹಾದೇವನೆ! ಈಗ ನೀನು ಏನು ಕಾರಣದಿಂ ಉಪೇಕ್ಷಿಸುತಿದ್ದಿ? ಪೂರ್ವದಲ್ಲಿ ನಮಗೋಸುಗ ತ್ರಿಪುರ ಸಂಹಾರವನ್ಮಾಡಿ ಆ ಭೀತಿಯಂ ಪರಿಹರಿಸಿ ನಮ್ಮನೆಲ್ಲರಂ ಪರಿಪಾಲಿಸಿದಿ, ಎಲೈ ಕಾಲಕಂಠನೆ! ಕಾಲಕೂಟಾನಲದಿಂದಾವೃತರಾದ ದೇವತೆಗಳಾಗಿರ್ಪ ನಮ್ಮನ್ನು ನೋಡಿ ಅದಂ ಪಾನವನ್ಮಾಡಿ ರಕ್ಷಿಸಿದವನಾದಿ. ಹಾಗಿರ್ದೊಡಂ ಈಗ ಯೆಲ್ಲಿಗೆ ಪೋದೆ? ಶಿವಶಿವ! ಗಜಾಸುರ ಅಂಧಕಾಸುರರೆಂಬೀರ್ವರಂ ಸಂಹರಿಸಿ ಸುರರಂ ಪಾಲಿಸಿದೆ. ಎಲೈ ಪರಮೇ

ಶ್ವರನೆ! ಮತ್ಸ್ಯಕೂರ್ಮ ವರಾಹ ನಾರಸಿಂಹ ತ್ರಿವಿಕ್ರಮರಂ ಸಂಹರಿಸಿ ಮೀನ ನೇತ್ರಂಗಳಂ ಕಮಠದ ಕರ್ಕಶಮಪ್ಪ ವರಾಹದ ದಂಷ್ಟ್ರಮಂ ನೃಸಿಂಹನ ಚರ್ಮಮಂ ತ್ರಿವಿಕ್ರಮನ ಬೆನ್ನೆಲುವಿನಂ ಪಿಡಿದು ನಿನ್ನಿಂದ ಪೂರ್ವದಲ್ಲಿ ದೇವತೆಗಳು ರಕ್ಷಿಸಲ್ಪಟ್ಟರು. ಇದಲ್ಲದೆ ಮಹಾಸುರರಾದ ಭಂಡಾಸುರ ಜಲಂಧರ ಪಂಚಮೇಢ್ರರೆಂಬಸುರರಂ ಕೊಂದು ದೇವತೆಗಳಂ ಪಾಲಿಸಿದೆ. ಎಲೈ ಸ್ವಾಮಿಯೆ! ಈ ಪ್ರಕಾರವಾಗಿ ಬಹುವಿಧದಿಂ ಪೂರ್ವದಲ್ಲಿ ದೇವತೆಗಳನ್ನು ರಕ್ಷಿಸಿದವನಾದ್ದರಿಂದ ಈಗಲು ದೈತ್ಯರಿಂ ದುದ್ಭವಮಾದ ಐರಾವತ ವೆತ್ತ ಪೋದುದು? ವಸಂತಾದಿ ಷಡೃತುಗಳಿಂ ಸಕಲ ಕುಸುಮಂಗಳುಳ್ಳ ಅಮರಾವತಿಯೆಲ್ಲಿ ಪೋದುದು? ನಂದನವೆಂಬ ಉದ್ಯಾನವು ವೈಜಯಂತಿಯೆಂಬ ಪತಾಕೆಯುಂ ಮಾತಲಿಯೆಂಬ ಸಾರಥಿಯುಂ ಸತ್ಪುರುಷರಿಂ ಧರಿಸಲ್ಪಟ್ಟ ಸುಧರ್ಮೆಯೆಂಬ ದೇವಸಭೆಯುಂ ಯೆತ್ತ ಪೋದವು? ಹಾಹಾ!! ದೇವೇಂದ್ರನು ಈ ಪ್ರಕಾರಮಾದ ತಮ್ಮ ಅವಸ್ಥೆಯುಂ ತಿಳಿದನೋ ಇಲ್ಲವೋ, ಮತ್ತಂ ಆತನು ಬ್ರಹ್ಮಾದಿಗಳ್ವೆರಸಿ, ಈ ವೃತ್ತಾಂತವನ್ನು ಸರ್ವಪಾಪ ಪರಿಹಾರಕಮಾದ ಶಿವಲೋಕಮನೈದಿ ಗಣಾಧಿಪರೊಳಗೆ ಉತ್ತಮನಾದ ನಂದಿಕೇಶ್ವರನಂ ಕಂಡು ಆತನ ಮುಖದಿಂದ ಸಮಯಮಂ ತಿಳಿದು ಉಮಾಪತಿಯಾದ ನೀಲಕಂಠನಾದ ಪರಮೇಶ್ವರಂಗೆ ಬಿನ್ನಹಮಮ್ಮಾಡಿದನೋ, ಅಥವಾ ಆ ನಂದಿಕೇಶ್ವರನು ಸಮಯವಿಲ್ಲವೆಂದು ಮಾನಭಂಗಮಂ ಗೈದನೋ ಏನೋ, ಎಲೈ ಶಂಭುವಾದ ಮಹೇಶ್ವರನೆ! ದೇವತೆಗಳಿಂದಾವ ಪಾಪವು ಮಾಡಲ್ಪಟ್ಟಿತು? ಪಿಪೀಲಿಕಾದಿ ಜಂತುಗಳನ್ನು ನೀನು ಪಾಲಿಸುವದಿಲ್ಲವೇ? ಎಂದು ಈ ಪ್ರಕಾರಮಾಗಿ ಆ ದೇವತೆಗಳು ಪರಿ ಪರಿ ಪ್ರಲಾಪಿಸುತ್ತಾ ಶೋಕಾಕ್ರಾಂತರಾಗಿ ಚಿರಕಾಲ ವೆಚ್ಚರಗೊಂಡಿದ್ದರು. ಸಿದ್ಧಿಯನೈದಿದರೆಂದು ಸೂತಂ ಶೌನಕಾದಿ ಮುನಿಗಳ್ಗೆ ನಿರೂಪಿಸಿದ ನೆಂಬಲ್ಲಿಗೆ,

ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಶಂಕರಸಂಹಿತೆಯ ಶಿವರಹಸ್ಯ ಖಂಡದೊಳು ವೀರಮಾಹೇಂದ್ರ ಕಾಂಡದಲ್ಲಿ ಎರಡನೆಯ ಅಧ್ಯಾಯ ಸಮಾಪ್ತಮಾದುದು.

ಮೂರನೆಯ ಅಧ್ಯಾಯವು.

ಜಯಂತಾದಿಗಳಿಗೆ ಆದ ಸ್ವಪ್ನವು-ವೀರಬಾಹು ಧೈರ್ಯವನ್ನು ಹೇಳುವಿಕೆ.

ಎಲೈ, ಮುನಿಗಳಿರಾ! ಈಪ್ರಕಾರವಾಗಿ ಸರ್ವದೇವತೆಗಳು ನಿದ್ರೆಯಂ ಗೈಯುತ್ತಿರಲಾಗಿ, ಅನೇಕ ರತ್ನಗಳಿಂ ಕೆತ್ತಿಸಲ್ಪಟ್ಟ ಸ್ವರ್ಣಕಿರೀಟವಂ ಧರಿ

ಸುವ, ಕಮಲಂಗಳಂ ತಿರಸ್ಕಾರವಮಂ ಗೈಯ್ವ ಆರು ಮುಖಂಗಳುಳ್ಳ ಶುಂಡಾ ದಂಡದಂತೆ ವಿರಾಜಿಪ ದ್ವಾದಶ ಭುಜಂಗಳಿಂ ಯುಕ್ತನಾದ ಕವಾಟದಂತೆ ಅಗಲಮಾಗಿಯೂ ನಿಡುಪಾಗಿಯು ಇರುವ ವಕ್ಷಸ್ಥಳಮುಳ್ಳ ಸುವರ್ಣ ಸೂತ್ರ ದಿಂದೊಪ್ಪುವ ಕಟಿಪ್ರದೇಶವುಳ್ಳ ವಿಚಿತ್ರವಾದ ಮುತ್ತಿನ ಸರಗಳಿಂ ದೊಪ್ಪುತ ಲಿರುವ ಮಹಾಮಯೂರ ವಾಹನನಾದ ಮತ್ತೆ ಹರಕುಮಾರನಾದ ಕುಮಾರ ಸ್ವಾಮಿಯು, ಆ ದೇವರ್ಕಳ ಸ್ವಪ್ನದೊಳು ಪ್ರಾದುರ್ಭವಿಸಿ ಅಸುರರಿಂ ಪೀಡಿತ ರಾಗಿ ಕಥಂಚನ ನಿದ್ರಾವಶರಾದ ಆ ಜಯಂತ ಮೊದಲಾದವರಂ ನೋಡಿ, ಎಲೈ ಜಯಂತನೆ! ನಿನಗೆ ಕ್ಷೇಮಉುಂಟಾಗುವದು, ಈ ದುಃಖವಂ ಬಿಡು ಬಿಡು; ಇಂದ್ರನು ಇಂದ್ರಾಣಿಯು ಸಹಾ ಸುಖದಿಂದಿಧಾರೆ, ಮಹಾಬಲವಂತನಾದ ಯೆನ್ನದೂತನೀಗಲೆ ಬರುವನು; ದುರುಳನಾದ ಶೂರಪದ್ಮನಂ ಬಂಧುಮಿತ್ರ ಪುತ್ರರ್ವೆರಸಿ ರಣರಂಗದಲ್ಲಿ ಸಂಹರಿಸಿ, ನಿಮ್ಮನೆಲ್ಲರಂ ಸ್ವಕೀಯ ಸ್ವಕೀಯಂಗ ಳಾದ ಲೋಕಂಗಳಲ್ಲಿ ಸ್ಥಾಪಿಸುತ್ತೇನೆ, ಎಂದು ಈಪ್ರಕಾರಮಾಗಿ ಪ್ರತಿದೇವತೆ ಗಳಿಗೂ ಪ್ರಸನ್ನನಾಗಿ ನಿರೂಪಿಸಿ ಅಂತರ್ಧಾನನಾದನು. ಅನಂತರದಲ್ಲಿ ಸಮಸ್ತ ದೇವತೆಗಳು ನಿದ್ರೆಯಂಬಿಟ್ಟು ಪರಸ್ಪರಮಾಗಿ ತಮ್ಮ ತಮ್ಮ ಸ್ವಪ್ನಂಗಳಲ್ಲಿ ಕಂಡ ಆಶ್ಚರ್ಯಂಗಳಂ ಪೇಳುತ್ತಿರೆ, ವೀರಬಾಹುವವರ ಸಮಿಾಪಕ್ಕೆ ಬಂದನು. ಬಳಿಕ ದೇವತೆಗಳು ಆತನಂಕಂಡು ತಮ್ಮನ್ನು ಬಾಧಿಸುತಲಿರುವ ದೈತ್ಯರ್ಗೆ ಮರೆಮಾಡಿ ಆತಂಗೆ ನಮಸ್ಕಾರವನೆಸಗೆ, ಎಲೈ ಜಯಂತನೆ! ನಿನಗೆ ಜಯಉುಂಟಾಗೆಲಿ, ನಿನ್ನ ತಂದೆಯಾದ ಇಂದ್ರನು ಬ್ರಹ್ಮಾವಿಷ್ಣು ಮೊದಲಾದ ದೇವತೆಗಳು ಸಹಾ ಕೈಲಾಸ ಪರ್ವತಕ್ಕೆ ಪೋಗಿ ಆ ಮಹೇಶ್ವರಂಗೆ ನಮಸ್ಕಾರವಂ ಮಾಡಿ, ಪಾಪಿ ಯಾದ ಶೂರಪದ್ಮನ ವೃತ್ತಾಂತವಂ ಪೇಳ್ದು, ಆ ಸ್ವಾಮಿಯ ಅನುಜ್ಞೆಯಿಂ ಕುಮಾರಸ್ವಾಮಿಯಂ ಕರೆದುಕ್ಕೊಂಡು ಸರ್ವದೇವತೆಗಳೊಡನೆ ಶ್ರೀಸಂಧಿಯೆಂಬ ನಗರದೊಳಿರುತಿಧಾರೆ. ನಾನು ಶೂರಪದ್ಮನ ವೃತ್ತಾಂತವಂ ತಿಳಿಯಲು ಬಂದೆನು. ನಿನ್ನ ಪಿತೃವಾದ ಇಂದ್ರನು ಒಂದು ವಾಕ್ಯವಂ ಪೇಳಿರುವನು, ಏನಂದರೆ, ನಿನಗೆ ಮಾತೃವಾದ ಶಚೀದೇವಿಯು ಮೇರುಪರ್ವತದಲ್ಲಿ ಸುಖದಿಂ ದಿರುವಳು, ನನಗೆ ಒಡೆಯನಾದ ಕುಮಾರಸ್ವಾಮಿಯು ಕ್ರೌಂಚತಾರಕ ರೆಂಬು ವರಂ ಸಂಹರಿಸಿದನು, ಈಗ ಶೂರಪದ್ಮ ಮೊದಲಾದ ಅಸುರರಂ ಸಂಹರಿಸಲು ದ್ಯುಕ್ತನಾಗಿಧಾನೆ, ನಮ್ಮವರಾದ ಸರ್ವದೇವತೆಗಳಂ ಪಾಲಿಸುವನು, ಎಂದು ಈ ಪ್ರಕಾರಮಾಗಿ ಪೇಳ್ದು ನನ್ನನ್ನು ಕಳುಹಿಸಿದನು. ಎಲೈ ಜಯಂತನೆ! ನಾನು ಶೂರಪದ್ಮನೊಡನೆ ಪ್ರಸಂಗವಮ್ಮಾಡಿ ಪೋಗುತ್ತಿಧೇನೆಂದು ಪೇಳ್ದು, ಆ ವೀರಬಾಹುವು ಮರಳಿ ಪುರದ ಆಶ್ಚರ್ಯಂಗಳಂ ನೋಡಲು ಪೊರಮಟ್ಟನು.

ಆಮೇಲೆ ಅಸುರರು ಮೂರ್ಛೆಯುಂತಳೆದು ಅತಿರಭಸ ಯುಕ್ತರಾಗಿದ್ದರು. ಮರಳಿ ವೀರಬಾಹು ಪತಿಮನೋಹರವಾದ ಆಯಾವೀಥಿಗಳಂ ನೋಡಿ, ಅತಿ ಸೂಕ್ಷ್ಮರೂಪದಿಂ ಗೋಪುರ ದ್ವಾರದಲ್ಲಿರುತಿರ್ಪ ಉಗ್ರ ಮಯೂರಾಸುರ ಮೊದಲಾದ ಬಹುದೈತ್ಯರುಗಳ ದೃಷ್ಟಿಗಳಿಗೆ ಗೋಚರವಾದ ಶೂರಪದ್ಮನ ಅತಿ ಸೌಂದರ್ಯವುಳ್ಳ ರಾಜಗೃಹವನ್ನೈದಿ, ಅಸುರರಿಂ ಸೇವಿತನಾಗಿ ದಿವ್ಯ ಸಿಂಹಾಸನಾಸೀನನಾದ, ದಿವ್ಯಾಂಬರ ಧಾರಿಯಾಗಿ ನಾನಾವಿಧ ರತ್ನಗಳಿಂ ಖಚಿತವಪ್ಪ ಬಾಹು ಪುರಿಗಳುಳ್ಳ, ಕರ್ಣಕುಂಡಲಗಳಿಂ ದಲಂಕೃತವಾದ ಮುಖಮಂಡಲವುಳ್ಳವನಾಗಿ ಮಂದಹಾಸದಿಂ ದೊಪ್ಪುವ ದಂತಪಂಗ್ತಿಗಳಲಲಾಟ ಫಲಕದಲ್ಲಿ ಪ್ರಕಾಶಿಸುತಿರ್ಪ ತ್ರಿಪುಂಡ್ರದಿಂ ಭೂಷಿತನಾಗಿ ಬಹುವಾಗಿ ಅಲಂಕರಿಸಲ್ಪಟ್ಟ, ಸಹಸ್ರ ಯೋಜನವಗಲ ಮಂಟಪದಲ್ಲಿ ಚತುರ್ವಿಧ ವಾದ್ಯಂಗಳೊಡನೆ ನರ್ತನವಂ ಮಾಡುತಲಿರುವ ಅಪ್ಸರಸ್ತ್ರೀಯರು ಗಳಿಂದಲುಂ ನೀರಾಜನವ ನೆತ್ತುವ ದಿವ್ಯನಾರಿಯರಿಂದಲುಂ ಆವೃತನಾದ ನಾನಾಲಂಕಾರ ಯುಕ್ತನಾಗಿ ನಾನಾ ಭಾಷೆಗಳಲ್ಲಿ ವಿಚಕ್ಷಣನಾದ ಶೂರಪದ್ಮನಂ ಕಂಡು, ಹಾಹಾ !! ನನಗೆ ಸಿಂಹಾಸನ ವಿಲ್ಲದಿರ್ದೊಡೆ ತನ್ನ ನ್ಯಾತನು ಯೆಣಿಸನೆಂದಾಲೋಚಿಸಿ ಹೃದಯದೊಳು ಕುಮಾರಸ್ವಾಮಿಯಂ ಚಿಂತಿಸಿ, ಆ ಸ್ಕಂದನ ಪ್ರಸಾದದಿಂದತ್ಯಂತ ಮುನ್ನತಮಾದ ನವರತ್ನಂಗಳಿಂ ವಿಚಿತ್ರವಾದ, ಅನೇಕಾರ್ಕರಿಗೆ ಸಮಾನವಾದ ಹೋಲಿಕೆಯಿಲ್ಲದ ಸಕಾಂತಿಯ ಸಮೂಹದಿಂ ಶೂರನ ಸಿಂಹಾಸನವಂ ತಿರಸ್ಕಾರಂ ಗೆಯ್ಯುವ ಸಿಂಹಾಸನಮಂ ಪಡೆದು, ತನ್ನ ರೂಪಮಂ ಧರಿಸಿ ಮಹಾಪ್ರತಾಪದಿಂ ಜ್ವಲಿಸುತ್ತಾ ಆ ಶೂರನ ಮುಂದೆ ತಾನು ಸಿಂಹಾಸನದ ಮೇಲೆ ಕುಳಿತುಕೊಂಡನು. ಬಳಿಕ ಸಮಸ್ತ ದೈತ್ಯರು ಅತ್ಯಂತ ಜ್ವಲಿಸುತಲಿರುವ ಆತನಂ ಕಂಡು. ಆಹಾ !! ಈತನು ಬ್ರಹ್ಮನೋ ವಿಷ್ಣುವೋ ಶಂಕರನೋ ಯಾವನೋ ಪ್ರಬ್ಬನು ನಗರಪಾಲಕರಂ ವಂಚಿಸಿ, ಹೀಗೆ ಬಂದಿರಬಹುದೆಂದು· ಈ ಪ್ರಕಾರವಾಗಿ ಚಿಂತಿಸುತಿರೆ, ಶೂರಪದ್ಮನು ತನಗಿಂತಲು ಅಧಿಕನಾಗಿ ಕಾಣ್ಬರುತಲಿರುವ ಆ ವೀರಬಾಹುವಂ ವೀಕ್ಷಿಸಿ, ಎಲೈ ನೀನಾರು ? ಯೆಲ್ಲಿರುವಿ? ನೀನಾರವರಿಂ ಇಂದ್ರಜಾಲ ವಿದ್ಯೆಯಲ್ಲಿ ಅಭ್ಯಾಸಮಾಡಲ್ಪಟ್ಟವನಾಗಿ ಬ್ರಹ್ಮಾದಿ ದೇವತೆಗಳು ನನ್ನ ಮುಂದೆ ಕಂಪಿಸುತಲಿರ್ಧಾರೆ. ನೀನಾದೊಡೆ ಅತಿ ಸಾಹಸಿಯಾಗಿ ಸರ್ವಾಲಂಕಾರಯುತನಾಗಿ ಮಹತ್ತಾದ ಸಿಂಹಾಸನವನೇರಿ ನನ್ನ ಮುಂದೆ ಇರುತ್ತಿದ್ದಿ. ಆವುದಾನೊಂದು ಕಾರಣದಿಂದೀವಿದ್ಯೆಯು ನಿನ್ನಿಂದ ತೋರಿಸಲ್ಪಟ್ಟಿತೋ ಅದುಕಾರಣದಿಂ ನಿನಗೋಸುಗ ನಿನ್ನ ಪ್ರಾಣವನ್ನೇ ತ್ಯಾಗವಾಗಿ ಕೊಡುತ್ತಿರ್ದೇನೆ. ಇಲ್ಲಿಗೆ ಏನು ಕಾರಣ ಬಂದೆ? ಯಥಾಕ್ರಮದಿಂ

ಪೇಳೆಂದು ಕೇಳಲಾಗಿ, ವೀರಬಾಹುವು ಆ ವಾಕ್ಯವಂ ಕೇಳಿ, ಕೇಳೈ ಶೂರ ಪದ್ಮನೆ! ಬ್ರಹ್ಮ ವಿಷ್ಣು ಮೊದಲಾದ ದೇವತೆಗಳು ನಿನ್ನಿಂದ ಪೀಡಿತರಾಗಿ ಕೈಲಾಸವಾಸಿಯಾದ ದೇವನಾದಂಥ ಸರ್ವರಿಗು ಅಭಯವನ್ನೀಯುವ ಸರ್ವ ರೋಗ ಹರನಾದ, ಶಾಂತನಾಗಿ ಸಾಕ್ಷಾತ್ಕೈವಲ್ಯಪ್ರದನಾದಂಥ ಮಹಾದೇವನ ಸಮೀಪಕ್ಕೆ ಪೋಗಿ ನಮಸ್ಕಾರವಮ್ಮಾಡಿ ಅನೇಕ ಸ್ತೋತ್ರಂಗಳಿಂ ಸ್ತುತಿಸಿ, ನಿನ್ನಿಂದ ಮಾಡಲ್ಪಟ್ಟ ಬಾಧೆಯನ್ನು ಈಪರಿ ಬಿನ್ನಪಂ ಗೈದರು. ಎಲೈ ದೇವ ದೇವನಾದ ಮಹಾದೇವನೆ! ಶೂರಪದ್ಮನು ದೇವತೆಗಳಂ ಬಾಧಿಸುತಲಿದಾನಾದ ಕಾರಣ ಆತನ ನಾಶಕ್ಕೋಸುಗ ನಿನ್ನ ಪ್ರಾಣವನ್ನೇ ಪಾರ್ವತೀದೇವಿಯಲ್ಲಿ ಸುಕು ಮಾರನಾದ ಕುಮಾರನನ್ನಾಗಿ ಮಾಡಬೇಕೆಂದು ಪ್ರಾರ್ಥಿಸಲಾಗಿ, ಬಳಿಕ ಮಹೇ ಶ್ವರನು ಆ ವಾಕ್ಯವಂ ಅಂಗೀಕರಿಸಿ ಶೀಘ್ರದಿಂದಸುರ ಸಂಹಾರಿಯಾದ ಕುಮಾರ ಸ್ವಾಮಿಯಂ ಪೆತ್ತು ಆತನಂ ನೋಡಿ, ಎಲೈ ಮಗನೆ! ನನ್ನಾಜ್ಞೆಯಿಂ ಶೂರ ಪದ್ಮ ಮೊದಲಾದ ಅಸುರರಂ ಸಂಹರಿಸಿ ಭೀತರಾಗಿ ಪಲಾಯನಮಮ್ಮಾಡುತ ಲಿರುವ ದೇವತೆಗಳಂ ರಕ್ಷಿಸೆಂದು ಆತಂಗೆ ಪೇಳಲಾಗಿ, ಆ ಕುಮಾರಸ್ವಾಮಿಯು ಶೀಘ್ರದಿಂ ಪೊರಮಟ್ಟು ಬರುವ ಸಮಯದೊಳು ಪಾಪಿಗಳಾದ ಕ್ರೌಂಚತಾರ ಕರಂ ಸಂಹರಿಸಿ, ಶ್ರೀಸಂಧಿಯೆಂಬ ನಗರದೊಳು ನಿಂತು ನಿನ್ನಲ್ಲಿ ದಯೆಯಂ ಮಾಡಿ ಈ ರೀತಿ ಬಂದು ವಾಕ್ಯವಂ ಹೇಳಿ ನಿನ್ನ ಸಮೀಪಕ್ಕೆ ನನ್ನನ್ನು ಕಳುಹಿಸಿ ದನು. ಏನೆಂದರೆ, ಜಯಂತ ಮೊದಲಾದ ದೇವತೆಗಳಂ ಬಿಟ್ಟು ನೀನು ನಿನ್ನ ಪುರದಲ್ಲಿ ವಾಸವಮ್ಮಾಡುತಲಿರು. ಇಲ್ಲದಿದ್ದೊಡೆ ನಾನು ಸಂಹರಿಸುತ್ತೇನೆ. ಈ ವಿಷಯದಲ್ಲಿ ಸಂಶಯವಿಲ್ಲವು. ಎಂದು ವೀರಬಾಹುವು ಶೂರಂಗೆ ಪೇಳ್ದ ನೆಂದು ಸೂತಂ ಶೌನಕಾದಿ ಋಷಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ವೀರ ಮಾಹೇಂದ್ರಕಾಂಡದಲ್ಲಿ ಮೂರನೆಯ ಅಧ್ಯಾಯವು ಸಮಾಪ್ತಮಾದುದು.

ನಾಲ್ಕನೆಯ ಅಧ್ಯಾಯವು.

ಶೂರಪದ್ಮ ವೀರಬಾಹುಗಳ ಸಮಾಗಮ ಮತ್ತು ಯುದ್ಧ.

ಎಲೈ ಮುನಿಗಳಿರಾ! ಈ ಪ್ರಕಾರವಾಗಿ ನಿಗರ್ವಿಯಾಗಿದ್ದ ದೇವತೆಗ ಳನ್ನು ಬಿಟ್ಟು ಪ್ರಸಾದವಿಲ್ಲದಿರೆಂದು ವ್ಯಕ್ತವಾದ ಅಕ್ಷರಂಗಳುಳ್ಳಂತೆ ವೀರ ಬಾಹುವು ಶೂರಪದ್ಮಂಗೆ ನಿರೂಪಿಸಿ ತೂಷ್ಣೀಂಭೂತನಾಗಲು, ಆ ಶೂರ ಪದ್ಮನು ವೀರಬಾಹುವಂನೋಡಿ ಕೋಪಸ್ಫುರಿತಾಧರನಾಗಿ, ಎಲೈ ನನ್ನ

ಶೌರ್ಯವನರಿಯದೆ ಶಿಶುವಿನ ಚೇಷ್ಟೆಯು ಪೇಳಲ್ಪಟ್ಟಿತು. ಆದರೆ ತಾರಕನ ವಧೆಯುಂ ಕೇಳುತಲೇ ಬಾಲಕನ ವಧೆಗೋಸುಗ ಲಜ್ಜೆಯುಂ ತ್ಯಜಿಸಿ ಹೇಗೆ ಪೋಗಲೆಂದು ಚಿಂತಿಸಿ ಪೋರಾಡದೆ ಉಪೇಕ್ಷೆಯನ್ಮಾಡಿದೆನು. ಆದೊಡಂ ನಾಳೆಗರ್ವಿತರಾದ ಮಹಾ ಶೂರರಂ ಕಳುಹಿಸಿ ಆತನಂ ಜಯಿಸುವೆನು. ಜಯಂತ ಪ್ರಮುಖರಾದ ದೇವತೆಗಳಂ ಬಿಡೆನು. ಆ ಶಿಶುವಂ ಬಂಧಿಸಿ ಶೀಘ್ರದಿಂದಿಲ್ಲಿಗೆ ತರಲು ಯತ್ನಿಸುತ್ತೇನೆಂದು ನುಡಿದನು. ಅನಂತರದಲ್ಲಿ ವೀರಬಾಹುವು ಗರ್ವಯುಕ್ತಮಾದ ಆ ಶೂರನ ವಾಕ್ಯವಂ ಕೇಳಿ ಕೋಪದಿಂ ಜ್ವಲಿಸುವನೋ ಏನೋ ಎಂಬಂತಿರುವನಾಗಿ, ಎಲೈ ದುರ್ಮತಿಯಾದ ಶೂರನೆ ! ಆ ಕುಮಾರಸ್ವಾಮಿಯ ವೃತ್ತಾಂತವಂ ತಿಳಿಯದೆ ನುಡಿಯುವಿಯೋ? ಆತನು ದೇವಾದಿದೇವನಾದ ಶಿವನ ಸ್ಕಂದನೆಂಬ ಅವ್ಯಯವಾದ ಮೂರ್ತಿಯು. ಈ ಜಗತ್ತು ಆತನ ದೇಹದಲ್ಲಿ ಉತ್ಪತ್ತಿಯಾಯಿತು. ಆತನ ಶರೀರದಲ್ಲಿಯೆ ಲಯವನ್ನೈದುವದು, ಅವನಾನೊಂದು ಕಾರಣದಿಂ ನಾನು ಆತನ ದೂತನಾಗಿಲ್ಲಿಗೆ ಬಂದೆನು. ದುರುಳನಾದ ನಿನ್ನಿಂದ ಅವಮಾನಮಾಡಲ್ಪಟ್ಟೆನು. ಎಂದು ಆತನಂ ಧಿಕ್ಕರಿಸಿ ನುಡಿಯುತ್ತಿರೆ, ಶೂರನಿಂ ಪ್ರೇರಿತರಾದ ಸಹಸ್ರ ಕರಗಳುಳ್ಳ ಸಾವಿರಮಂದಿ ಅಸುರರು ಸನ್ನದ್ಧರಾಗಿ ಯುದ್ಧಕ್ಕೋಸುಗ ಆತನಂ ಬಳಸಿಕೊಳ್ಳಲಾಗಿ, ವೀರಬಾಹು ಅವರಂ ಕೈಯಿಂದ ಪಿಡಿದು ನೆಲಕ್ಕೆ ಬಡಿದು ಸಂಹರಿಸಿ ಕ್ಷಣದಿಂ ಪೊರಮಟ್ಟನು. ಬಳಿಕ ವೀರಬಾಹುವಿನ ಸಿಂಹಾಸನವು ಅಂತರ್ಧಾನವನ್ನೈದಿತು. ಮರಳಿ ಶತಮುಖನು ಶೂರಪ್ರೇರಿತನಾದ ಸೇನೆಯೊಡನೆ ಯುದ್ಧವನ್ಮಾಡಲು ಬರಲಾಗಿ, ವೀರಬಾಹುವು ಸಾರವತ್ತಾದ ವಿಂಶತಿ ಸಹಸ್ರ ಕಲಶಗಳಿಂದಲಂಕೃತಮಾದ ಗೋಪುರವಂ ಕಿತ್ತು ಮಹಾ ವೇಗದಿಂ ಸೇನೆಯೊಳಿಟ್ಟನು. ಆಗ ಶತಮುಖನು ತೋಮರ ಪ್ರಾಸಶಕ್ತಿಗಳಂ ಅನೇಕ ಬಾಣಗಳಂ ಕೋಪದಿಂ ಬಿಡಲಾಗಿ ವೀರಬಾಹುವು ಆ ಬಾಣಾದಿಗಳಂ ಖಂಡಿಸಿ ಆತನ ಧನುವಂ ಮುರಿಯುತಿರೆ, ಆ ಅಸುರನು ದ್ವಿಶತಬಾಹುಗಳಿಂ ಬಂಧಿಸಲ್ಬಂದನು. ಆ ಸಮಯದಲ್ಲಿ ವೀರಬಾಹುವು ಆ ರಕ್ಕಸನಂ ಉರದೊಳು ತಿವಿದು ಭೂತಳಕ್ಕೆ ಕೆಡಹಿ, ಒಂದು ಪಾದದಿಂದವನ ಉರವಂ ಮೆಟ್ಟಿ ಮತ್ತೊಂದು ಪಾದದಿಂ ಗಜವು ನಾಳಿಕೇರಮಂ ತುಳಿಯುವಂದದಿ ಆತನ ಶಿರವಂ ತುಳಿದು ಸಂಹಾರವನ್ಮಾಡಿ, ಮರಳಿ ಅತ್ಯುನ್ನತವಾದ ಅದ್ಭುತರೂಪವಂ ಧರಿಸಿ, ವೇಗದಿಂ ಭೂಮಿಯಂ ಪಾದದಿಂ ದೊಡೆಯಲಾಗಿ ಸರ್ವರು ಜಲದಲ್ಲಿ ತೇಲಿದರು. ಬಳಿಕ ಐವತ್ತು ವಾಹಿನಿಗಳು ಪೊರಮಡುತ್ತಿರ, ಆ ಭೂಮಿಯು ಬಾಗಿದ್ದಾದುದು. ಆಗ ಜಲಪ್ರವಾಹವು ಭೂಮಿಯಿಂದುದ್ಭವವಾಗಿ ಅಲ್ಲಿರುವ ಅಸುರರಂ ಅಸ್ತ್ರಂಗಳಂ ತೆಗದುಕೊಂಡು

ಪ್ರವಾಹರೂಪವಾಗಿ ಪೋದುದು. ಎಲ್ಲರು ಜಲದಲ್ಲಿ ತೇಲಿದರು. ಮತ್ತೆ ವೀರಬಾಹುವಿನ ಮೇಲೆ ಶರವರ್ಷಂಗಳಂ ಕರೆಯಲಾಗಿ, ಆತನ ಶರೀರದಲ್ಲಿ ಅನೇಕವಾಗಿ ರುಧಿರಂಗಳುಂಟಾದವು. ಅನಂತರದಲ್ಲಿ ವೀರಬಾಹುವು ಮಹಾ ಕೋಪವುಳ್ಳವನಾಗಿ ಅಸ್ತ್ರಪಾದಗಳಿಂ ಅಸುರರಂ ಮರ್ದಿಸಿ ಸಂಹಾರಮಂಗೈದು, ಮರಳಿ ಇದೇ ಪ್ರಕಾರದಲ್ಲಿ ಪುರಪಾಲಕರಂ ವಧಿಸಿ, ನಿಯುತ ಸುವರ್ಣಕಲಶಂಗಳಿಂ ಭಾಸುರಮಾದ ಅತ್ಯಂತ ಮನೋಹರನಾದ ಸಾವಿರದೈನೂರು ಯೋಜನದಗಲದುನ್ನತಿಗಳುಳ್ಳಂಥ ಗೋಪುರವಂ ಕಿತ್ತು ಶೂರಪದ್ಮನ ಆಸ್ಥಾನಮಂಟಪದ ಮೇಲೆ ಬೀಳಿಸಲಾಗಿ, ಅದರ ಪತನದಿಂ ಆ ಆಸ್ಥಾನಮಂಟಪವು ಮುರಿದು ಬಿದ್ದಿತು. ಬಳಿಕ ವೀರಬಾಹುವು ವೃಕ್ಷಂಗಳಂ ಕಿತ್ತು ಅನ್ಯಂಗಳಾದ ಮಂಟಪಂಗಳಂ ಪ್ರಾಕಾರದ ಸಂಬಂಧವಾದ ಅಖಿಲ ಗೋಪುರ ಅಟ್ಟಾಲಕ ಪ್ರಾಸಾದಂಗಳಂ ಪೊಡೆದು ಅಟ್ಟಹಾಸವಮ್ಮಾಡುತ ಕರವಂ ಮೇಲಕ್ಕೆತ್ತಿ ನರ್ತನವಮ್ಮಾಡಲಾಗಿ, ಕೆಲಂಬರು ದೈತ್ಯರು ಅಧಃಪತನದಿಂ ಮೃತಿಯನ್ನೈದಿದರು. ಮತ್ತೆ ಕೆಲಬರು ಅಂಬರಂಗಳಂ ಬಿಟ್ಟು ಕೇಶಗಳಂ ಕೆದರಿಕೊಂಡು ಪಲಾಯನವನ್ನೈದಿದರು. ಬಳಿಕ ಶೂರನು ತನ್ನ ಆಸ್ಥಾನಮಂಟಪವೈದಿದ ಸ್ವರೂಪಮಂ ನೋಡಿ, ಬಹು ಕೋಪದಿಂ ಸಹಸ್ರ ಭುಜಂಗಳುಳ್ಳ ಪಂಚಶತ ಕಾನನಂಗಳುಳ್ಳ ದಿತಿಕುಮಾರರಂ ಕರೆದು, ಎಲೈ ಭಟರುಗಳಿರಾ ! ನೀವು ಈತನಂ ಬಂಧಿಸಿ ನನ್ನ ಸಮೀಪಕ್ಕೆ ಪಿಡಿದುಕೊಂಡು ಬನ್ನಿರೆಂದು ಅವರಂ ಕಳುಪಲಾಗಿ, ಬಳಿಕ ಸಹಸ್ರ ಸಂಖ್ಯೆಯುಳ್ಳ ಅವರುಗಳು ಆತನಿಂದ ನೇಮಿಸಲ್ಪಟ್ಟವರಾಗಿ ಅತಿ ಪರಾಕ್ರಮವುಳ್ಳವರಾಗಿ ಎಲೈ, ಪ್ರಭುವೆ ! ನಾವು ಪೂರ್ವದಲ್ಲಿ ಈತನಂ ಬಂಧಿಸಲುದ್ಯೋಗಿಸಿ ನಿನ್ನ ಆಜ್ಞೆಯನ್ನು ನಿರೀಕ್ಷಿಸುತ್ತಿದ್ದೆವು. ಈಗ ನಮ್ಮ ಪರಾಕ್ರಮವಂ ವೀಕ್ಷಿಸೆಂದು ನುಡಿದು ಆತನಿಂದಲು ಅನುಜ್ಞಾತರಾಗಿ ಆ ವೀರಬಾಹುವನ್ನು ಆವರಿಸಿಕೊಂಡು, ನಿಶಿತಂಗಳಾದ ನಾನಾ ಶಸ್ತ್ರಂಗಳಂ ಬಿಟ್ಟರು.

ಬಳಿಕ ವೀರಬಾಹುವು ಮಹಾ ಕೋಪದಿಂ ಉನ್ನತವಾದ ತಾಳವೃಕ್ಷಂಗಳಂ ಕಿತ್ತು ಕಿತ್ತು ಯೆಸೆಯುತ್ತಾ ಆ ಅಸ್ತ್ರಂಗಳಂ ಚೂರ್ಣವಮ್ಮಾಡಿ, ಕ್ರೂರರಾದ ಆ ಅಸುರರಂ ಆ ವೃಕ್ಷಂಗಳಿಂದಲಿ ಸಂಹರಿಸಿದ ಬಳಿಕ, ಶೂರನದಂ ಕೇಳಿ ಬಹು ಬಲವಂತನಾದ ವೀರಬಾಹುವಿನ ಮೇಲೆ ಅತ್ಯಂತ ಕೋಪವಮ್ಮಾಡಿದನು. ಎಲೈ ಋಷಿಗಳಿರಾ ! ಬಳಿಕ ವಿಧವಿಧವಾದ ಅಲಂಕಾರಗಳಿಂದ ಅಲಂಕರಿಸಲ್ಪಟ್ಟ ಮನೋಹರಮಾದ ಶರೀರಮುಳ್ಳ ಶೂರಪದ್ಮನ ಮಗನಾದ ವಜ್ರಬಾಹುವೆಂಬ ಸುರನು ತನ್ನ ತಂದೆಯ ಆಜ್ಞೆಯಿಂದ ಶೀಘ್ರಮಾಗಿ ನೂರುಸಾವಿರ ಸಂಖ್ಯೆಯಾದ ತುರಂಗಂಗಳಿಂದ ಕಟ್ಟಲ್ಪಟ್ಟ ರಥವನ್ನೇರಿ, ವಿಜಯಪ್ರಯಾಣವಮ್ಮಾಡಿದ

ನೆಂದು ಸೂತಂ ಪೇಳ್ದನೆಂಬಲ್ಲಿಗೆ ವೀರಮಾಹೇಂದ್ರಕಾಂಡದಲ್ಲಿ ನಾಲ್ಕನೆಯ ಅಧ್ಯಾಯವು ಸಮಾಪ್ತಮಾದುದು.

ಐದನೆಯ ಅಧ್ಯಾಯವು.

ವೀರಬಾಹು ವಜ್ರಬಾಹುಗಳ ಯುದ್ಧ.

ಎಲೈ ಮುನಿಗಳಿರಾ! ಅನಂತರದಲ್ಲಿ ಬಲವಂತನಾದ ಶೂರನ ಕುಮಾರನಾದ ವಜ್ರಬಾಹುವೆಂಬ ಮಹಾಸುರನು ಮಂತ್ರಿಪುತ್ರರಿಂದಲೂ ಸೇನಾನಾಯಕಕುಮಾರರಿಂದಲು ಒಡಗೂಡಿ ಐನೂರು ರಥಂಗಳಿಂದಲುಂ ಗಜಂಗಳಿಂದಲುಂ ಮಾರುತನಂತೆ ವೇಗವತ್ತಾದ ಸಹಸ್ರ ವಾಹಿನೀ ಅಶ್ವಂಗಳಿಂದಲುಂ ದ್ವಿಸಹಸ್ರವಾಹಿನಿಗಳ ಬಲಂಗಳುಳ್ಳ ಪದಾತಿಗಳಿಂದಲುಂ ಯುಕ್ತನಾಗಿ, ಸಮುದ್ರಮಂ ತಿರಸ್ಕರಿಸುವಂತೆ ಅಟ್ಟಹಾಸ ಧ್ವನಿಗಳಮ್ಮಾಡುತ, ಛತ್ರಚಾಮರಧಾರಿಗಳಂ ಧ್ವಜಂಗಳಂ ಮೆರಸಿ ವೀರಬಾಹುವನ್ನು ಕುರಿತು ಯಾವಾಗ ಪೊರಮಟ್ಟನೋ, ಆಗ ಆಕಸ್ಮಿಕಮಾಗಿ ಆ ವಜ್ರಬಾಹುವಿನ ಮುಂದೆ ಭಯಂಕರಮಾಗಿ ಉರಿಗೊಳ್ಳಿಗಳ್ ಬಿದ್ದವು. ಶುಷ್ಕವೃಕ್ಷದ ಕೊನೆಯಲ್ಲಿದ್ದು ಕಾಗೆಯು ಧ್ವನಿಮಾಡಿತು. ಸರ್ವಕಡೆಯಲ್ಲಿಯು ನರಿಗಳ ಧ್ವನಿಯು ಕೇಳಲ್ಪಟ್ಟಿತು. ರಕ್ತಮಾಲ್ಯಾಂಬರಂಗಳಿಂದ ಆವೃತಮಾದ ಮಾಲಿನ್ಯವಾದ ರಜಸ್ವಲೆಯಂ ಕಂಡನು. ಛಿನ್ನಬಾಹುವು ನಾಸಿಕೆ ಮೊದಲಾದ ತನಗೆ ಆಪದಮಂ ತೋರಿಸುವ ದುಶ್ಶಕುನಂಗಳಂ ಕಂಡರೂ, ಅವುಗಳಂ ಗಣನೆಯಮ್ಮಾಡದೆ ವೇಗದಿಂ ವೀರಬಾಹುವಿನ ಸಮೀಪವನ್ನೈದಿದನು.

ಅನಂತರದಲ್ಲಿ ವೀರಬಾಹುವು ಧ್ವನಿಮೆರಸಿ ಬರುತಿರ್ಪ ಸೇನೆಯಂ ನೋಡಿ, ಕ್ಷಿಪ್ರದಿಂದೀತನಂ ಸಂಹರಿಸಿ ಷಣ್ಮುಖಸ್ವಾಮಿಯ ಸಮೀಪಕ್ಕೆ ಪೋಗದಿರ್ದೊಡೆ ನಾನು ಆ ಕುಮಾರಸ್ವಾಮಿಯ ದೂತನಲ್ಲೆಂದು ಪ್ರತಿಜ್ಞೆಯಂ ಮಾಡಿ, ಬಲವಾಗಿ ಅಟ್ಟಹಾಸಮಂ ಗೈದವನಾಗಲು, ವಜ್ರಬಾಹುವದಂ ಕೇಳಿ ಇದೇನೆಂದು ವಿಜಯನೆಂಬ ಸಾರಥಿಯಂ ಕೇಳಲಾಗಿ, ಆ ಸಾರಥಿಯು, ಎಲೈ ವಜ್ರಬಾಹುವೆ! ಈ ವೀರಬಾಹುವಿನ ಅಟ್ಟಹಾಸವೆಂದು ಪೇಳುತಿರೆ, ಆ ವಜ್ರಬಾಹುವು ಬಳಿಕ ರಣಕ್ಕೋಸುಗ ಸನ್ನದ್ಧನಾಗಿ ಶರವೃಷ್ಟಿಯಂ ಕರೆದು ಆ ವೀರಬಾಹುವಿನ ಶರೀರವನ್ನು ರಕ್ತಧಾರೆಗಳಿಂವ ಆವೃತಮಾಗುವಂತೆ ಮಾಡಿದನು. ಅನಂತರದಲ್ಲಿ ವೀರಬಾಹುವು ಅತಿ ಕೋಪದಿಂ ಹಸ್ತದಿಂದ ಅಸುರರ ಕಪೋಲದಲ್ಲಿ ಹೊಡೆದು ಅನೇಕ ಅಸುರರಂ ಸಂಹರಿಸಿ ಕೆಲಬರ ಪಾದಗಳಂ ತಿರುಹಿ ಸಮುದ್ರೋದಕಂಗಳಲ್ಲಿಯುಂ ಲೋಕಾಲೋಕ ಪರ್ವತಂಗಳಲ್ಲಿಯುಂ ದ್ವೀಪಂಗಳಲ್ಲಿಯುಂ ಆ ಅಸುರರ

ನೊಯ್ದು, ಪಾದಾಹತದಿಂ ಕೆಲಬರಂ ಮುಷ್ಟಿಗಳ ಹೊಡೆತಗಳಿಂ ಕೆಲವರನ್ನೂ ಹೊಡೆದು ಕರಗಳಿಂ ಕೆಲವರ ಪಾದಂಗಳಂ ಪಿಡಿದು ಲೀಲೆಯಿಂದ ಆಕಾಶ ಮಾರ್ಗವನ್ನೈದಿಸಿ ಮತ್ತೆ ಕೆಲಬರ ಶಿರಸ್ಸುಗಳಂ ಮುಷ್ಟಿಘಾತಂಗಳಿಂ ಉದರವ ನೈದಿಸಿ, ಇನ್ನು ಕೆಲಬರ ಉದರಂಗಳಲ್ಲಿ ತನ್ನ ಒಂದು ಪಾದವನಿರಿಸಿ ಹಸ್ತದಿಂ ದವರ ಶಿರಸ್ಸುಗಳಂ ಪೀಡಿಸಿ, ಮತ್ತೆ ಕೆಲಬರಸುರರಂ ಬಾಧಿಸಿ ಪಿಂಡೀಕರಣವಂ ಮಾಡಿ ಕೆಲಬರಂ ಆಕಾಶಮಾರ್ಗಕ್ಕೆ ಪೋಗುವಂತೆ ಮಾಡಿ, ಈ ಪ್ರಕಾರದಿಂ ಬಹು ಅಸುರರಂ ಕೊಂದು ಬಳಿಕ ಒಂದಾನೊಂದು ವಟವೃಕ್ಷವಂ ಕಿತ್ತು ಸೇನಾ ಪತಿ ಕುಮಾರರಂ ತಾಡಿಸಿ ವಿಗತಪ್ರಾಣಂಗಳುಳ್ಳವರನ್ನಾಗಿ ಮಾಡಿದನು.

ಅನಂತರದಲ್ಲಿ ವಜ್ರಬಾಹುವು ಶೀಘ್ರದಿಂ ಸಂಭ್ರಮವೆರಸಿ, ಸವ್ಯ ಪಾಣಿಯಿಂ ಚಾಪಮಂ ಪಿಡಿದು ಇತರ ಭುಜದಿಂ ಮಾರ್ಗಣಂಗಳಂ ತೆಗೆದು ನಾರಿಯಂ ಹೂಡಿ ಸಾವಿರ ಸರಳುಗಳಂ ಕರೆದನು. ಬಳಿಕ ವೀರಬಾಹುವು ಆ ಬಾಣಂಗಳಂ ಚೂರ್ಣಂಗಳಂ ಮಾಡಿದವನಾಗಲು ಆತನು ಮರಳಿ ತೀಕ್ಷ್ಣಂ ಗಳಾದ ನಿಯುತ ಬಾಣಂಗಳಂ ಬಿಡಲಾಗಿ ವೀರಬಾಹುವು ಅವುಗಳನ್ನೂ ಮುಸಲ ದಿಂ ರೇಣುಗಳಂ ಮಾಡಿದನು. ಮರಳಿ ವಜ್ರಬಾಹುವು ಸಹಸ್ರ ಬಾಣಂಗಳ ವೃಷ್ಟಿಯಂ ಕರೆಯಲು ವೀರಬಾಹುವು ಅವುಗಳಂ ಕರದಿಂದಲೆ ಪೊಯ್ದು ವ್ಯರ್ಥಂಗಳಂ ಮಾಡಲಾಗಿ, ಪುನಃ ಆತನು ಕೋಪದಿಂ ಶಿರಸ್ಸು ವಕ್ಷಸ್ಥಲ ಪಾಣಿ ಪಾದ ಲಲಾಟ ಕಂಠ ಮೊದಲಾದ ಮರ್ಮಸ್ಥಾನಂಗಳಲ್ಲಿ ನಿಶಿತಂಗಳಾದ ಸಹಸ್ರ ಸಹಸ್ರ ಶರಂಗಳಂ ಬಿಟ್ಟು, ಮತ್ತಮಾತನ ಕರ್ಕಶವಹ ಮುಸಲಮಂ ಛೇದಿಸಿ ಆತನ ಶರೀರಮಂ ಶರಜಾಲದಿಂ ನಿಬಿಡಮಾಗಿ ಮಾಡಿ ಮೂರ್ಛೆಯನ್ನೈದಿಸಿದನು. ಬಳಿಕ ವೀರಬಾಹುವು ತಕ್ಷಣದಲ್ಲಿಯೆ ಎದ್ದು ಆತನ ಅತಿ ಸೌಂದರ್ಯಮಾದ ರಥ ಮಂ ಪಾದದಿಂದೊದೆಯೆ ಅದು ಬಿದ್ದು ಪುಡಿಯಾಗಲು, ಬಳಿಕ ವಜ್ರಬಾಹುವು ಮತ್ತೊಂದು ರಥವನೇರಿ ಆತನ ನಿಟಿಲದಲ್ಲಿ ಸಾವಿರ ಬಾಣಗಳಂ ಬಿಡೆ, ಆ ವೀರ ಬಾಹುವು ಅವುಗಳಂ ಕರದಿ ವ್ಯರ್ಥವನ್ನೈದಿಸಿ, ವೇಗದಿಂ ವಜ್ರಬಾಹು ಸಹಿತ ಮಾಗಿ ರಥವನೆತ್ತಿ ಲಕ್ಷಯೋಜನದುನ್ನತಕ್ಕೆ ಬಿಡಲಾಗಿ ಅದು ಭೂಮಿಯಲ್ಲಿ ಬಿದ್ದು ಚೂರ್ಣಮಾಯತು. ಅನಂತರದಲ್ಲಿ ವಜ್ರಬಾಹುವು ಅತ್ಯಂತ ದೃಢವಾದ ಧನುವಂ ತೆಗದು ಯಾವಾಗ ತೆರಳಿದನೋ, ಆಗ ವೀರಬಾಹುವು ಆ ಧನುವಂ ಎರಡಾಗಿ ಖಂಡಿಸಿದನು.

ವ್ಯಾಳಿವಕ್ತ್ರ ವೀರಬಾಹುಗಳ ಯುದ್ಧ.

ಮರಳಿ ವಜ್ರಬಾಹುವು ಖಡ್ಗವಂ ಪಿಡಿದು ಅತಿ ವೇಗದಿಂದಾತನಮೇಲೆ ಬರಲಾಗಿ, ಆತನು ಖಡ್ಗದ ಪಿಡಿ ಸಹ ಆತನ ಕರವಂ ಖಂಡಿಸೆ, ಮರಳಿ ವಜ್ರ

ಬಾಹುವು ಕೋಪದಿಂ ಗದೆಯಂ ತಿರುಹಿ ಆತನಂ ಬಡಿಯೆ ವೀರಬಾಹುವು ಕರ ವಾಳದಿಂದ ಆ ಗದೆಯಂ ಛೇದಿಸಿ, ಆತನ ಕರವಂ ಕಡಿದು, ಈ ಪ್ರಕಾರವಾಗಿ ಬಹು ಅಸುರರಂ ಕೊಂದು ಆವಾಗ ಕುಮಾರಸ್ವಾಮಿಯ ಬಳಿಗೆ ಪೋಗಬೇಕೆಂ ದಿಚ್ಛೈಸಿದನೋ ಆಗ ಸೂರ್ಯಾಸ್ತಮಾನವಾಯಿತು. ಬಳಿಕ ವೀರಬಾಹುವು ಶೂರಪದ್ಮನು ಶಿವನಿಂದೆಯಂ ಮಾಡಿದುದರಿಂದ ಈ ಪ್ರಕಾರವಾಗಿ ಆತಂಗೆ ಅಪಜಯಮುಂಟಾದುದೆಂದು ನಿಶ್ಚಯಿಸಿ, ಅಲ್ಲಿಂದ ಪೊರಮಟ್ಟು, ಬೀದಿಗಳಲ್ಲಿ ರುವ ಆಶ್ಚರ್ಯಂಗಳಂ ನೋಡುತ ಪ್ರಾಕಾರವಂ ದಾಂಟಿ, ಅಗಳ್ತೆಯುಂ ಲಂಘಿಸಿ ವೇಗದಿಂ ಲಂಕಾಪುರಕ್ಕೆ ಬರಲಾಗಿ, ಆಗ ವ್ಯಾಳಿವಕ್ತ್ರನು ದೂತಮುಖದಿಂದ ಆತನ ಬರವಂ ಕೇಳಿ, ಸಹಸ್ರ ಮುಖದಿಂದ ಆರ್ಭಟಿಸಿ, ದ್ವಿ ಸಹಸ್ರ ಕರಗಳಿಂದ ಆಯುಧಂಗಳಂ ಧರಿಸಿ ವೀರಬಾಹುವಿನಿಂದ ಮರಣವಾದ ಪುತ್ರನಂ ನೆನೆದು, ಅತಿ ಕೋಪದಿಂ ಸೇನಾಯುಕ್ತನಾಗಿ ಮಾರ್ಗವಂ ತಡದು, ಆತನಂ ನೋಡಿ ಎಲೈ ನೀನು ನನ್ನ ಪುತ್ರನಂ ಸಂಹರಿಸಿದಿ; ಅದುಕಾರಣದಿಂ ನಾನು ನಿನ್ನನು ಸಂಹರಿಸುವೆನು ನನ್ನ ಪರಾಕ್ರಮವಂ ನೋಡೆಂದು ಪೇಳಲಾಗಿ, ವೀರಬಾಹುವು ಆತನ ಕ್ರೂರವಾಕ್ಯವಂ ಕೇಳಿ, ವಿಸ್ಮಿತಮುಖನಾಗಿ ಆತನಂ ನೋಡಿ ಸಾವಿರ ಮುಖಂಗಳಿಂ ದ್ವಿ ಸಹಸ್ರ ಕರಗಳಿಂ ಭುಜಂಗಳಿಂ ನೀನು ಅತಿ ಭಯಂಕರ ನಾಗಿದ್ದೀ, ನಾನು ಏಕ ಶಿರದಿಂದಲಂಕೃತನಾಗಿದೇನೆ. ವೀರ್ಯವಂತನಾದ ನೀನು ಏನುಮಾಡಬೇಕಾದೊಡಂ ರಣರಂಗದಲ್ಲಿ ತಿಳಿದು ತೋರಿಸೆಂದು ಪೇಳಲಾಗಿ ವ್ಯಾಳಿವಕ್ತ್ರನು ನಿಸ್ಸಂಗಂಗಳಾದ ಸೇನೆಗಳು ನಿಶಿತಾಸ್ತ್ರಂಗಳಿಂದಾತನಂ ಗುರಿ ಮಾಡೆಚ್ಚೆ; ವೀರಬಾಹುವು ಅವುಗಳಂ ಛೇದಿಸಿದನು. ಬಳಿಕ ವ್ಯಾಳಿವಕ್ತ್ರನು ಸಹಸ್ರ ಭುಜಗಳಿಂದ ಆತನ ಉರವಂ ಬಡಿಯೆ, ವೀರಬಾಹುವು ತತ್‌ಕ್ಷಣದಲ್ಲಿ ಖಡ್ಗದಿಂದಾತನ ಕರಂಗಳಂ ಛೇದಿಸಲಾಗಿ, ಮರಳಿ ಆ ವ್ಯಾಳಿವಕ್ತ್ರನು ಸಹಸ್ರ ಕರಗಳಂ ಪರ್ವತಂಗಳಂ ಕಿತ್ತು ವೀರಬಾಹುವಿನಮೇಲಿಡೆ, ಅವುಗಳು ಆತನ ಮೇಲೆ ಬಿದ್ದ ಮಾತ್ರದಿಂದಲೆ ಚೂರ್ಣಂಗಳಾದವು ಮರಳಿ ವೀರಬಾಹುವು ಅತಿ ಕೋಪಯುಕ್ತನಾಗಿ ಖಡ್ಗದಿಂ ದಾತನ ಸಹಸ್ರ ಕರಂಗಳಂ ಛೇದಿಸಲಾಗಿ, ಆತನು ಸಹಸ್ರ ಸುಂಡಿಲಗಳಿಂ ದೀತನಂ ಖಂಡಿಸಲು ಬರೆ ಶೀಘ್ರದಿಂ ದವು ಗಳಂ ನೆಲದಲ್ಲಿ ಬೀಳಿಸಿ ಆತನಂ ಬಿಟ್ಟು ಸಮುದ್ರವಂ ದಾಂಟಿ, ಗಂಧಮಾದನ ಪರ್ವತಕ್ಕೆ ಬಂದು ಅಲ್ಲಿಂದ ಕುಮಾರಸ್ವಾಮಿಗೆ ಆ ವಾಸಸ್ಥಾನವಾದ ತ್ರಿಸಂಧಿ ಯೆಂಬ ನಗರಕ್ಕೆ ಬಂದು ನಟಿಸಂತೆ ಪೂರ್ವರೂಪ ಮಂಧರಿಸಿ ಪುರಪ್ರವೇಶಮಂ ಮಾಡಿದನು. ಅಲ್ಲಿ ಪರಾಕ್ರಮಿಗಳಾದ ನಾಲ್ಕುಲಕ್ಷ ಮತ್ತೆ ಯೆಂಟು ಲಕ್ಷಂಗ ಳುಳ್ಳ ಬ್ರಹ್ಮೇಂದ್ರ ವಿಷ್ಣು ಮೊದಲಾದ ದೇವತೆಗಳು ಆ ವೀರಬಾಹುವಿಗೆ

ನಮಸ್ಕಾರವನೆಸಗಿ, ಕೃತಾಂಜಲಿಪುಟರಾಗಿ ಸ್ತೋತ್ರಂಗಳಂ ಮಾಡಲು ವೀರ ಬಾಹುವು ಅವರನೆಲ್ಲರಂ ಅಪ್ಪಿಕೊಂಡು, ಅವರೊಡನೆ ಸರ್ವ ಸಂಭಾಷಣೆಯಂ ಮಾಡಿ, ಸರ್ವರಿಗು ತನ್ನ ವೃತ್ತಾಂತವಂ ಪೇಳ್ದು, ವಿಶೇಷವಾಗಿ ಇಂದ್ರಂಗೆ ನಿರೂಪಿಸಿ, ಅವರೊಡನೆ ಕುಮಾರಸ್ವಾಮಿಯ ಮಂದಿರಕ್ಕೆ ಪೋಗಿ ಅಲ್ಲಿ ದೇವ ಸೇನಾರಕ್ಷಕನಾದ ಉತ್ತಮನಾದ ಗುಹನಂ ಕಂಡು ಪರಮಭಕ್ತಿಯಿಂದ ನಮ ಸ್ಕಾರವಂ ಮಾಡಿ, ಶತಸ್ತೋತ್ರ ಗ್ರಂಥದಿಂ ಸ್ತುತಿಸಿ ಕೈಮುಗಿದು ವಿನಯಾನ್ವಿತ ನಾಗಿ, ಆತನಿಂ ದನುನುತಿಯಂ ಪಡೆದು ಈ ವೃತ್ತಾಂತವನೆ ಪೇಳುವನದೆಂತೆನೆ.

ಶ್ರೀಕುಮಾರ ಸನ್ನಿಧಿಯಲ್ಲಿ ವೀರಬಾಹು ವಿಜಯಮಂ ಬಿನ್ನೈಸುವಿಕೆ.

ಎಲೈ ಸ್ವಾಮಿಯೆ! ನಿನ್ನಿಂದ ಹೇಗೆ ನಿರೂಪಿಸಲ್ಪಟ್ಟಿತೋ ಹಾಗೆ ನನ್ನಿಂದ ಹೇಳಲ್ಪಟ್ಟಿತು. ಆತನು ಆ ವಾಕ್ಯವಂ ಕೇಳದೆ ಆಜ್ಞೋಲ್ಲಂಘನೆಯಂ ಮಾಡಿ ನನ್ನನ್ನು ಸಂಹರಿಸಲು ಕೆಲಬರಾದ ಅಸುರರಂ ಕಳುಹಲಾಗಿ, ನಿನ್ನ ಕೃಪೆಯಿಂ ದವರನೆಲ್ಲರಂ ಸಂಹರಿಸಿ ನಿನ್ನ ಸನ್ನಿಧಾನಕ್ಕೆ ಬಂದೆನೆಂದು ಬಿನ್ನಪಂಗೆಯ್ಯೆ, ಕುಮಾರಸ್ವಾಮಿಯು ವಿನಯಾನ್ವಿತನಾದ ಆ ವೀರಬಾಹುವಂ ವೀಕ್ಷಿಸಿ ಎಲೆ ಭಕ್ತನೆ! ಬಹುಬಳಲಿದವನಾಗಿದ್ದಿ, ಮಹಾ ಪ್ರಯಾಸವಂ ನನ್ನ ನಿಮಿತ್ತದಿಂದನು ಭವಿಸಿದೆಯೆಂದು ಉಪಚರಿಸಿ ಬಳಿಕ ಬ್ರಹ್ಮ ವಿಷ್ಣು ಮೊದಲಾದ ದೇವತೆಗಳಂ ನೋಡಿ, ಎಲೈ ದೇವತೆಗಳಿರಾ! ಆವುದಾನೊಂದು ಕಾರಣದಿಂದೆನ್ನ ವಾಕ್ಯವು ಆ ಅಸುರನಿಂದುಲ್ಲಂಘಿತವಾದುದೊ ಅದುಕಾರಣದಿಂ ನೀವು ನಾಳೆ ನೋಡುತ್ತಿರು ವಾಗಲೆ ಬಾಂಧವರೊಡನೆ ಆ ಶೂರನಂ ಸಂಹರಿಸುವೆನೆಂದು ಪೇಳಲಾಗಿ ದೇವತೆ ಗಳು ಆ ವಾಕ್ಯವಂ ಕೇಳಿ ಕುಮಾರಸ್ವಾಮಿಯಿಂದ ಪುಷ್ಟಿಯನೈದಿದರು. ಎಲೈ, ಶೌನಕಾದಿ ಮುನಿಗಳಿರಾ! ಈ ಪ್ರಕಾರಮಾಗಿ ಸರ್ವರಾಕ್ಷಸ ಸಂಹಾರಕನಾದ ವೀರಬಾಹುವಿನ ಸಂಬಂಧಮಾದ ಸಮಸ್ತ ಚರಿತ್ರವು ಹೇಳಲ್ಪಟ್ಟಿತು. ಮರಳಿಯು ಕಥೆಯಂ ಪೇಳ್ವೆನು ಪೂರ್ವಪುಣ್ಯಾತಿಶಯದಿಂದ ನೀವುಗಳೆಲ್ಲರು ಸಾವಧಾನ ಸ್ಕರಾಗಿ ಕೇಳಿರೆಂದು ಸೂತಂ ಪೇಳಿದನೆಂಬಲ್ಲಿಗೆ ವೀರಮಾಹೇಂದ್ರಕಾಂಡ ದಲ್ಲಿ ಐದನೆಯ ಅಧ್ಯಾಯವು ಸಂಪೂರ್ಣಂ.

ಆರನೆಯ ಅಧ್ಯಾಯವು.

ಶೂರಪದ್ಮಾಸುರನ ಪುತ್ರಶೋಕ.

ಕೇಳಿರೈ ಋಷಿಗಳಿರಾ! ಇತ್ತಕಡೆಯಲ್ಲಿ ಸಮರ ನಿರ್ಭಯನಾದ ಪುತ್ರ ಸ್ನೇಹದಿಂ ಸಮಾಕುಲನಾದ ಶೂರಪದ್ಮನು ತನ್ನ ಮಗನ ಆ ವಿಪತ್ತನ್ನು ಕೇಳಿ

ಅಸುರರೊಡನೆಯು ಪದ್ಮಕೋಮಲೆಯರಾದ ನಾರಿಯರೊಡನೆಯು ಅತ್ಯಂತ ದುಃಖವನ್ನೈದಿದನು. ಆಗ ಮಹಾಮತಿವಂತನಾದ ಮಂತ್ರಿವರ್ಯನಾಗಿರ್ಪ ಧರ್ಮಕೋಪನೆಂಬುವನು ಮಹಾ ದುಃಖಿತನಾದ ಶೂರನ ಬಳಿಗೈದಿ, ಸಾಂತ್ವ ವಚನಂಗಳಂ ಪೇಳ್ವ ನದೆಂತೆನೆ, ಎಲೈ ಪರಾಕ್ರಮಿಯಾದ ಶೂರನೆ! ನೀನು ಐಶ್ವರ್ಯ ಕೀರ್ತಿ ಬುದ್ಧಿ ಶೌರ್ಯಂಗಳ್ಗೆ ಸ್ಥಾನನು, ಮತ್ತೆ ಸರ್ವಕಾಲದಲ್ಲಿಯು ಸಮಸ್ತ ಮಂತ್ರಾಲೋಚನೆಯುಂ ಬಲ್ಲವನು ಮೂಢನೋಪಾದಿಯಲ್ಲಿ ಯಾತಕ್ಕೆ ದುಃಖಿಸುವಿ? ಬ್ರಹ್ಮಾದಿ ಸಮಸ್ತ ದೇವತೆಗಳು ನಿನ್ನನ್ನು ನೋಡಿ ಹೀಗೆ ಹಾಸ್ಯವಂ ಮಾಡುವರಾದ ಕಾರಣ ಈ ಶೋಕಮಂ ಬಿಡುಬಿಡು, ಒಬ್ಬನಾದ ದೂತನಿಂದ ಹೀಗೆ ಮಾಡಲ್ಪಟ್ಟಿತೆಂದೆಣಿಸಿ ಯಾಕೆ ದುಃಖಿಸುತ್ತಿ? ನಿನ್ನ ಪುತ್ರಂಗೆ ಆಯುಸ್ಸು ಇಷ್ಟೆ ಮಾಡಲ್ಪಟ್ಟಿತು, ಹಾಗಲ್ಲದಿರ್ದೊಡೆ ಸರ್ವ ಘಾತಕನಾದ ನಿನ್ನ ಕುಮಾರನು ಆತನಿಂದ ಹೀಗೆ ಮೃತನಾದನೆಂದು ಪೇಳಲಾಗಿ ಶೂರನು ಈ ಪ್ರಕಾರಮಾಗಿ ಆತನಿಂದ ನಿರೂಪಿಸಲ್ಪಟ್ಟ ವಾಕ್ಯಮಂ ಕೇಳಿ, ತನ್ನ ಪಾರ್ಶ್ವದಲ್ಲಿರುವ ಪುರುಷರಂ ನೋಡಿ, ಆ ದೂತನು ಪೋದನೋ ಇಲ್ಲವೋ ಎಂದು ಕೇಳಿ, ಪೋದನೆಂದು ಹೇಳಲಾಗಿ ಬ್ರಹ್ಮನಂ ಕರೆದುಕೊಂಡು ಬನ್ನಿರೆಂದು ಆಜ್ಞಾಪಿಸಿದನು.

ಶೂರಪದ್ಮಾಸುರನ ಮಂತ್ರಾಲೋಚನೆ.

ಅನಂತರದಲ್ಲಿ ಆ ದೂತನು ಸಮಸ್ತ ದಿಕ್ಕಿನಲ್ಲಿಯೂ ನೋಡಿ ದೇವತೆಗಳೊಡನೆ ಕುಮಾರಸ್ವಾಮಿಯ ಸಮೀಪದಲ್ಲಿರುವ ಬ್ರಹ್ಮನಂ ಕಂಡು, ಶೀಘ್ರದಿಂ ಬಂದು ಯಥಾಕ್ರಮದಿಂ ಶೂರಂಗೆ ಪೇಳಲಾಗಿ, ಆಗ ಶೂರಪದ್ಮನು ಆ ವಾಕ್ಯಮಂ ಕೇಳಿ, ಆ ಬ್ರಹ್ಮಾದಿ ದೇವತೆಗಳ ಮೇಲೆ ಮನದಲ್ಲಿ ಕೋಪವನ್ನೈಸಗಿ, ತನ್ನ ಮುಖದಿಂದ ಮತ್ತೊಂದು ಬ್ರಹ್ಮಾಂಡದಲ್ಲಿರುವ ಬ್ರಹ್ಮನಂ ಕರೆಯಿಸಿ ಆತನಂ ನೋಡಿ, ಎಲೈ ಬ್ರಹ್ಮನೆ! ಪೂರ್ವದಂತೆ ಈ ಪುರಮಂ ನಿರ್ಮಿಸೆಂದು ಪೇಳೆ, ಆತನು ಪೂರ್ವದಂತೆ ಅದನ್ನು ನಿರ್ಮಿಸಿ ಶೂರನ ಸಮೀಪಕ್ಕೆ ಬರಲಾಗಿ, ಶೂರನು ಆ ಬ್ರಹ್ಮನಂ ದೂತರೊಡನೆ ಬಹುಮಾನದಿಂ ಬ್ರಹ್ಮಾಂಡದ ಪೊರವಳಯಕ್ಕೆ ಕಳುಹಿಸಿದನು. ಬಳಿಕ ಮೊದಲು ಕಳುಹಿಸಿದ ದೂತರುಗಳು ಬಂದು ವಿನಯಾನ್ವಿತರಾಗಿ, ಸಿಂಹಾಸನಾರೂಢನಾದ ಶೂರನ ಬಳಿಗೈದಿ, ಎಲೈ ಶೂರನೆ! ನಾವು ನಿನ್ನಾಜ್ಞೆಯಿಂದ ಸರ್ವಮಂ ತಿಳಿದು ಬಂದೆವು. ಈಗ ಕುಮಾರಸ್ವಾಮಿಯು ಸಂಬಂಧವಾದ ಶ್ರೀಸಂಧಿಯೆಂಬ ನಗರದಲ್ಲಿ ಬಲವಂತರಾದ ದ್ವಿಸಹಸ್ರವಾಹಿನಿಗಳಿಂ ಗಣಿತರಾದ ಭೂತಗಣಂಗಳಿಂದಲುಂ ಉಜ್ವಲರಾದ ಅಷ್ಟೋತ್ತರ ಶತಸೇನಾಪತಿಗಳಿಂದಲುಂ, ಅಪರಿಮಿತ ಶಕ್ತಿಯುಳ್ಳ ನವ ಶಂಖವಮೀರಿದ ಲಕ್ಷವೀರರಿಂದಲುಂ ಒಡಗೂಡಿ, ಪರಮೇಶ್ವರಾಂಗ ಸಂಭವ

ನಾದ ಕುಮಾರಸ್ವಾಮಿಯು ತಾರಕನಂ ಸಂಹರಿಸಿ, ತನ್ನ ಶುಶ್ರೂಷಾ ಪರರಾದ ಬ್ರಹ್ಮ, ವಿಷ್ಣು, ಇಂದ್ರ ಮೊದಲಾದ ದೇವತೆಗಳ್ವೆರಸಿ, ಬಹು ಬಲವಂತನಾದ ವೀರಬಾಹುವಿನಂ ನಿನ್ನ ಬಳಿಗೆ ಕಳುಹಿಸೆ, ಆತನು ನಿನ್ನ ಬಲವಂ ತಿಳಿದು ಮರಳಿ ಪೋಗುವಾಗ ಲಂಕಾಧಿಪತಿಯಾದ ವ್ಯಾಳಿವಕ್ತ್ರನಂ ಸಂಹರಿಸಿ ಅತಿ ಸೌಂದರ್ಯ ವಾದ ಆ ಪುರವಂ ದಹಿಸಿದ ಬಳಿಕ ಕುಮಾರಸ್ವಾಮಿಯ ಸನ್ನಿಧಾನಕ್ಕೆ ತೆರಳಿ, ನಿನ್ನ ವೃತ್ತಾಂತವನ್ನು ಪೇಳಿದನು. ಬಳಿಕ ಆ ಕುಮಾರಸ್ವಾಮಿಯು ಬಹು ಕೋಪಯುಕ್ತನಾಗಿ ಕಾಳಗದಲ್ಲಿ ಉದ್ಯುಕ್ತನಾಗಿ ಬ್ರಹ್ಮಾದಿಗಳನ್ನು ನಾಳೆಯ ದಿವಸ ಅಸುರನ ಸಂಗಡ ಯುದ್ಧವಮ್ಮಾಡುವದಕ್ಕೆ ಹೊರಡುವನೆಂದು ನಿರೂ ಪಿಸಿ ಅವರೊಡನೆ ಸಂತುಷ್ಟನಾಗಿ ಇರುತಿದಾನೆಂದು ಪೇಳಿದನು. ಅನಂತರ ವಲ್ಲಿ ಶೂರಪದ್ಮನು ಆ ವಾಕ್ಯವಂಕೇಳಿ ಸಿಂಹಮುಖನಂ ತನ್ನ ಪುತ್ರರಂ ಸೇನಾ ಪತಿಗಳಂ ಮರ್ಮಜ್ಞರಾದ ಮಂತ್ರಿಗಳಂ ಶೀಘ್ರದಿಂ ಕರೆಯಿಸಿ, ಬಂದಂಥವರಂ ನೋಡಿ ವಿಚಾರಿಸಿ, ಎಲೈ ಅನುಜರಿರಾ ! ಪುತ್ರರಿರಾ ! ಎಲ್ಲರು ಸಾವಧಾನ ಯುಕ್ತರಾಗಿ ನನ್ನ ವಾಕ್ಯವಂ ಕೇಳುವರಾಗಿ, ಏನಂದರೆ, ಬ್ರಹ್ಮ ವಿಷ್ಣು ಮೊದ ಲಾದ ದೇವತೆಗಳು ಪರಮೇಶ್ವರನ ಸಮೀಪಕ್ಕೆ ಪೋಗಿ ಶೂರಪದ್ಮನು ಸಮಸ್ತ ದೇವತೆಗಳಂ ಬಾಧಿಸುತ್ತಿದಾನೆ. ಆ ಬಾಧೆಯಂ ಬಿಡಿಸಿ ನಮ್ಮನ್ನು ಪಾಲಿಸಬೇ ಕೆಂದು ಬಿನ್ನಪಂ ಗೈಯೆ ಪರಮೇಶ್ವರನು ಆ ವಾಕ್ಯವಂ ಕೇಳಿ ಅವರಿಗೋಸುಗ ಕುಮಾರನಂ ಪೆತ್ತು, ಆ ಬಾಲಕನೊಡನೆ ಅನೇಕ ಸೇನೆಗಳಂ ಕೂಡಿಸಿ ನಮ್ಮೊ ಡನೆ ಯುದ್ಧಕ್ಕೆ ಪೋಗುವಂತೆ ಆಜ್ಞಾಪಿಸಿದನವರಿಂದ ಆ ಕುಮಾರನು ಪೊರ ಮಟ್ಟು ಬ್ರಹ್ಮ ವಿಷ್ಣು ಇಂದ್ರಾದಿಗಳೊಡನೆ ನಾಳೆ ದಿವಸ ನಮ್ಮೊಡನೆ ಯುದ್ಧ ವಮ್ಮಾಡುವಂತೆ ನಿಶ್ಚಯಿಸಿ, ಶ್ರೀಸಂಧಿ ನಗರದೊಳು ಇರುತಿಧಾನೆ. ಯಾವಾಗ ಆ ಬಾಲಕನು ತಾರಕನಂ ಸಂಹರಿಸಿದನೋ ಆಗಲೆ ನಾನು ಆತನಂ ಹಿಡಿತರಲು ಬಲದೊಡನೆ ಪೊರಮಡಬೇಕಾಗಿತ್ತು. ಆದರೆ ಬಾಲಕನೊಡನೆ ಯುದ್ಧವಮ್ಮಾ ಡಿದನೆಂದು ಅಪಕೀರ್ತಿಯುಂಟಾಗುವದೆಂದು ಚಿಂತಿಸಿ ಇಂತೆಂದನು. ಎಲೆ ಅನುಜರಿರಾ ! ಮುಂದು ಮಾಪತಕ್ಕ ಕಾರ್ಯವೇನು ? ಎಂದು ಪೇಳಿ ಮೌನ ವಾಗಿದ್ದನು.

ಅನಂತರದಲ್ಲಿ ಮಯೂರಸೆಂಜವನು, ಎಲೈ ಸ್ವಾಮಿಯೆ ! ಮಹಾ ಪರಾ ಕ್ರಮಿಯಾದ ತಾರಕನಂ ವಧಿಸಿದವನು ಎಂತು ಬಾಲಕನಾಗುವನು ? ಸರ್ವಜ್ಞ ನಾದ ನೀನು ಬಾಲನೆಂದು ಹೇಗೆ ಪೇಳುತ್ತಿ ? ಸಮಸ್ತ ಬಲಂಗಳಂ ಕೊಂದು ವಜ್ರಬಾಹುವಿಗೆ ಅಂತಕನಾದ ಪುರುಷನಲ್ಲಿ ದೂತಬುದ್ಧಿಯಮ್ಮಾಡಬೇಡ. ಬಹು ಮಾತುಗಳಿಂದೇನುಪ್ರಯೋಜನವು? ಈಗ ಯುದ್ಧವಮ್ಮಾಡಬೇಕೆಂದು

ನನ್ನ ಮತಿಯು ಪೇಳುತಿದ್ದೀತು. ಎಂದು ನುಡಿದು ವಿಚಾರವಂತನಾಗಿರೆ, ದುರ್ಗುಣನೆಂಬವನು ಎಲೈ ಪ್ರಭುವೆ! ಆ ಬಾಲಕನು ಆ ಭೂತಸೇನೆಯು ನಿನ್ನಿಂದ ಪರಾಭವಮ್ಮಾಡಬಾರದು. ಸೇನಾಪತಿಗಳಂ ಕಳುಹಿ ಆತನನ್ನು ಬಲದೊಡನೆ ಇಲ್ಲಿಗೆ ಕರತರಿಸಬೇಕೆಂದು ಪೇಳಲಾಗಿ, ಧರ್ಮಕೋಪನೆಂಬುವನು ದುರ್ಗುಣನ ವಾಕ್ಯವಂ ಕೇಳಿ, ಎಲೈ ಸ್ವಾಮಿಯೆ! ಹಿರಣ್ಯ ಅಗ್ನಿಮುಖರೆಂಬ ಈರ್ವರು ಕುಮಾರರಿದ್ದಾರೆ. ಅವರ ಮಧ್ಯದಲ್ಲಿ ಈ ಬಾಲಕನು ಶೌರ್ಯಪರಾಕ್ರಮಗಳಲ್ಲಿ ಒಬ್ಬನಿಗೂ ಸಮಾನನಲ್ಲ. ಈತಂಗೆ ತಾರಕನು ಬಾಲಬುದ್ಧಿಯಮ್ಮಾಡಿ ಪ್ರತ್ಯಸ್ತ್ರಂಗಳಂ ಬಿಡದೆ ಮೃತಿಯನ್ನೈದಿದನು. ಕ್ರೌಂಚನು ಆಗಸ್ತ್ಯರ ಶಾಪದಿಂ ಶಕ್ತಿಯಿಂ ಮೃತನಾದನು. ವಜ್ರಬಾಹುವು ರಥಾಯುಧಂಗಳಿಲ್ಲದೆ ದೂತನಿಂ ಪತನಾದನು. ಅದುಕಾರಣದಿಂ ಸೇನಾಪತಿಯಂ ಕಳುಹಿ, ವಿಷ್ಣು ಮೊದಲಾದ ದೇವತೆಗಳ್ವೆರಸಿ ಆ ಬಾಲಕನಂ ಜಯಿಸಬೇಕೆಂದು ಪೇಳ್ದು ಮೌನವಾಗಿದ್ದನು. ಬಳಿಕ ಕಾಲಚಿತ್ರೆಂಬ ಅಸುರನು ಆ ಶೂರನಂ ನೋಡಿ, ಎಲೈ ಅಸುರಪತಿಯೆ! ಬ್ರಹ್ಮ ವಿಷ್ಣು ಮೊದಲಾದ ದೇವತೆಗಳಂ ಪೂರ್ವದಲ್ಲಿ ನೀನು ಜಯಿಸಿದೆ, ಆಗ ನೀನು ಈ ಪ್ರಕಾರವಾಗಿ ವಿಚಾರಿಸಲಿಲ್ಲ. ಈಗಲು ಸೇನೆಯಂ ಕಳುಹಿಸಿ ಆತನಂ ಜಯಿಸು. ಅದಲ್ಲದಿರ್ದೊಡೆ ನನಗೆ ಅಪ್ಪಣೆಯಂ ಪಾಲಿಸೆಂದು ಬಿನ್ನವಿಸಲಾಗಿ, ಚಂಡನೆಂಬ ದೈತ್ಯನು ಆ ವಾಕ್ಯವಂ ಕೇಳಿ, ಎಲೈ ಅಸುರ ಶ್ರೇಷ್ಠನೆ! ನಿನ್ನಂಥವನು ಭೂತಸೇನೆಯಂ ಜಯಿಸಲು ಭಯಪಟ್ಟು ವಿಚಾರಮ್ಮಾಡಬಹುದೆ? ಈಗ ನಾನು ಪೋಗಿ ಆ ಶಿಶುವಿಗೆ ಸಹಾಯಮಾಗಿ ಬಂದವರಂ ಜಯಿಸಿ ಬಾಲಕನಂ ನಿನ್ನ ಬಳಿಗೆ ಹಿಡಿದು ತರುವೆನೆಂದು ಪೇಳೆ, ಅನಲನೆಂಬ ದೈತ್ಯನು ಅಮಿತ ಪರಾಕ್ರಮಿಯಾದ ಆತಂಗೆ ಪೂರ್ವೋಕ್ತರೀತಿಯಿಂದ ಪೇಳಿದನು. ಅನಂತರದಲ್ಲಿ ಸಿಂಹಮುಖನು ರಾಜಾದಿ ಸಪ್ತಾಂಗಗಳಂ ತಿಳಿದು ಬಹು ಗರ್ವಿತನಾಗಿ, ಎಲೈ ಅಸುರೇಶ್ವರನೆ! ದೇವೇಂದ್ರಂಗೆ ಸಹಾಯಭೂತನಾಗಿ ಬಂದ ಶಿಶುವಂ ಜಯಿಸಲು ಇಷ್ಟು ವಿಚಾರವೇತಕೆ? ಅಂಡದಲ್ಲಿರುವ ಸರ್ವರು ಸಹಾಯಮಾಗಿ ಬಂದರೂ ಅವರನ್ನೂ ಆ ಶಿಶುವಿನನ್ನೂ ಸಹಾ ಜಯಿಸಿ ನಿನ್ನ ಸಮೀಪಕ್ಕೆ ಬರುವೆನು. ಆಜ್ಞೆಯಂ ಪಾಲಿಸೆಂದು ಬಿನ್ನವಿಸಿದನು. ಅನಂತರದಲ್ಲಿ ವಿಚಕ್ಷಣನಾಗಿ ಭಾನುಕೋಪನು ಸೇನಾಪತಿಗಳು ಸಹಾ ಮಂತ್ರಿಗಳಿಂ ನಿರೂಪಿತವಾದ ವಾಕ್ಯವಂ ಕೇಳಿ, ತನಗೆ ತಂದೆಯಾದ ಶೂರಪದ್ಮನಂ ಕುರಿತು ಎಲೈ ಪಿತೃವೆ! ಯಾವಾಗ ಉತ್ತಮರಾದ ತಾರಕ ಕ್ರೌಂಚರೆಂಬ ಅಸುರರು ಹತರಾದರೋ, ಆಗಲೆ ನನ್ನನ್ನು ಯುದ್ಧಕ್ಕೆ ಕಳುಹಲಿಲ್ಲವು. ಆ ಶಿಶುವಿನ ದೂತನು ಬಂದ ಸಮಯದಲ್ಲಿ ಬಾಲಕನಾದ ವಜ್ರಬಾಹುವಂ ಕಳುಹಿ ಕೊಲ್ಲಿಸಿ

ದವನಾದೆ, ನಿನಿಗೆ ಶೌರ‍್ಯವು ಬಲಂಗಳು ಯಥಾರ್ಥವಾಗಿ ತಿಳಿಯಲಿಲ್ಲ. ಬಹು ವಾಕ್ಯದಿಂದೇನು? ನನ್ನನ್ನು ಶೀಘ್ರದಿಂ ಕಳುಹಿಸೆಂದು ಪೇಳುತಿರೆ, ಹಿರಣ್ಯ ನೆಂಬವನು, ಎಲೈ ಸ್ವಾಮಿಯೆ! ಅಸುರನಾಯಕನಾದ ಶೂರಪದ್ಮನು ಶಿಶುವನ್ನು ಕುರಿತು ವಿಚಾರವನ್ಮಾಡುತಿದಾನೆಂದು ಸಮಸ್ತರು ನಿನ್ನನ್ನು ಹಾಸ್ಯವನ್ಮಾಡು ವರು, ಭಾನುಕೋಪನು ಯುದ್ಧಕ್ಕೆ ಪೋದರೆ ಸರ್ವರು ಆತನ ಹಸ್ತಗತರಾಗು ವರು, ಇದು ನಿಶ್ಚಯವು. ಹಾಗಾದೊಡಂ ನಾನು ಶೀಘ್ರದಿಂ ಪೋಗಿ ಸೇನಾ ಸಮೇತನಾದ ಕುಮಾರನಂ ಜಯಿಸಿ ನಿನ್ನ ಆಜ್ಞೆಯಿಂ ಶೀಘ್ರವಾಗಿ ಬರು ತಿರ್ಥೇನೆಂದು ಪೇಳೆ, ಅಗ್ನಿಮುಖನು ಈ ಮಾತಂ ಕೇಳಿ, ಎಲೈ ತಂದೆಯೆ! ಬಾಲದೂತರಿಂ ಹತರಾದರು. ಸೇನೆ ಸಹಿತವಾಗಿ ಆತನಂ ನಾನು ಸಂಹರಿಸು ತ್ತೇನೆ. ಹಾಗಲ್ಲದಿರ್ದೊಡೆ ಮರಳಿ ನಿನ್ನ ಸಮೀಪಕ್ಕೆ ಬರೆನು, ಬಲಿಚಕ್ರ ವರ್ತಿಯ ಮನೆಯಲ್ಲಿರುವ ರಾಕ್ಷಸರನೆಲ್ಲರಂ ನಾನು ಪೂರ್ವದಲ್ಲಿ ಜಯಿಸಲಿಲ್ಲವೆ? ನೀನಾದರುಂ ನನ್ನ ಶಕ್ತಿಯನ್ನು ಅರಿಯಬೇಡವೆ? ಹಾಹಾ! ಏನಾಶ್ಚರ‍್ಯ? ಬ್ರಹ್ಮನಿಂ ಕೊಡಲ್ಪಟ್ಟ ಮಹತ್ತಾದ ಘೋರಂಗಳಾದ ಕವಚ ಕಾರ್ಮುಕ ಮೊದಲಾದ ಆಯುಧಂಗಳು ಇರುತ್ತಿರುವವು. ರಣಾಂಗಣಕ್ಕೆ ನನ್ನನ್ನು ಕಳುಹಿ ಸೆಂದು ಪೇಳಿದನು.

ಅನಂತರದಲ್ಲಿ ಸರ್ವಾರ್ಥಕೋವಿದನಾದ ಸಿಂಹಮುಖನು ಅವರಂ ನಿಗ್ರ ಹಿಸಿ, ಶೂರನಂ ನೋಡಿ, ಎಲೈ ಅಸುರಾಧಿಪನೆ! ಸುಬ್ರಹ್ಮಣ್ಯನಲ್ಲಿ ಹೀಗೆ ಶಿಶು ಬುದ್ಧಿಯಂ ಮಾಡುತಿದ್ದಿ, ನೀನು ಯಾವನಿಂದ ವರವಂ ಪಡದಿಯೋ ಆ ಮಹೇ ಶ್ವರನೆ ಈತನು, ಆತನ ಆಜ್ಞೆಯಿಂದ ಅಂಡಂಗಳು ಉತ್ಪತ್ತಿ ಲಯಂಗಳನೈದು ವವು, ಆತನಿಂದ ಕೊಡಲ್ಪಟ್ಟ ಐಶ್ವರ‍್ಯಂಗಳನ್ನನುಭವಿಸಿ ಅತ್ಯಂತ ಗರ್ವಿತನಾಗಿ ಹಾಗಾದೊಡಂ ಸುಮ್ಮನಿರದೆ ಬ್ರಹ್ಮ ವಿಷ್ಣು ಮೊದಲಾದ ದೇವತೆಗಳಂ ಬಾಧಿಸಿ ಇಂದ್ರನ ಕುಮಾರನಂ ಕಾರಾಗೃಹದಲ್ಲಿರಿಸಿವೆ, ಅದುಕಾರಣದಿಂ ಕುಮಾರ ಸ್ವಾಮಿಯು ಅವರಲ್ಲಿ ದಯೆಯಂ ಮಾಡಿ ಶ್ರೀಸಂಧಿಯೆಂಬ ನಗರಕ್ಕೆ ಬಂದಿ ದಾನೆ, ಎಲೈ ಅಸುರಾಧಿಪನೆ! ದೂತನಲ್ಲಿ ದೂತಬುದ್ಧಿಯಂ ಮಾಡಬೇಡ, ಮಹಾ ಬಲನಾದ ಈತನು ನಂದಿಕೇಶ್ವರನ ಬಲಂಗಳೊಳಗೆ ಪ್ರಮಥ ಗಣಂಗಳಲ್ಲಿ ಮಹಾ ಶ್ರೇಷ್ಠನು, ಈತನ ಬಲಪರಾಕ್ರಮಂಗಳಂ ಕಂಡು ತಿಳಿಯದೇ ಹೋದೆ, ಪರ ಮೇಶ್ವರನಿಂದ ಅಷ್ಟೋತ್ತರ ಶತಯುಗಂಗಳ ಆಯುಸ್ಸು ನಿನಗೆ ಕೊಡಲ್ಪಟ್ಟಿತು ಆ ಪರಮೇಶ್ವರನು ಶಕ್ತಿಯೆಂಬಾಯುಧದಿಂ ನಿನಗೆ ಮರಣವೆಂದು ಪೇಳಿದ ನಲ್ಲವೆ? ಈಗಲು ಕುಮಾರನಾದ ಕುಮಾರಸ್ವಾಮಿಯು ಶಕ್ತಿಯೆಂಬಾಯುಧವಂ ಪಿಡಿದು ಬಂದಿದಾನೆ. ಮಹಾ ದೇವನ ಮಾಯೆಯು ದುರ್ಘಟಕಾರಿಣಿಯೆಂ

ಬುದಂ ತಿಳಿಯದೆ ನಿನಗೆ ಯಾತಕ್ಕೆ ಇಂಥ ಬುದ್ಧಿಯುಂಟಾದುದು? ಎಲೈ ಭ್ರಾತೃವೆ! ಇತಃಪರದಲ್ಲಾದರು ಸೆರೆಯಲ್ಲಿರುವ ದೇವತೆಗಳಂ ಬಿಟ್ಟು ಷಣ್ಮುಖಂಗೆ ನಮಸ್ಕಾರವಂ ಮಾಡಿ ಆತನ ವಾಕ್ಯದಂತೆ ವೊಪ್ಪಿಕೊಂಡು ನಿರ್ಭಯನಾಗಿ ಯಥೇಚ್ಛೆಯಿಂ ಭೋಗಂಗಳನ್ನನುಭವಿಸುತ್ತ ರಮ್ಯವಾದ ಈ ಪುರದಲ್ಲಿ ವಾಸವಂ ಮಾಡುತ್ತಿರೆಂದು ಪೇಳಲಾಗಿ, ಅಸುರನಾಯಕನಾದ ಶೂರಪದ್ಮನೀ ವಾಕ್ಯಮಂ ಕೇಳಿ, ಮಹಾ ಕೋಪವುಳ್ಳವನಾಗಿ ದಂತಂಗಳಂ ಕಡಿದು ಚಂಚಲವಾದ ಅಧರೋಷ್ಠವುಳ್ಳವನಾಗಿ ರಕ್ತಲೋಚನಂಗಳಂ ತಿರುಹುತ, ಬೆವರ್ವನಿಗಳಿಂದಾವೃತವಾದ ಸರ್ವಾಂಗವುಳ್ಳವನಾಗಿ, ಎಲೈ ಭ್ರಾತೃವೆ! ನನ್ನ ಸಮೀಪದಲ್ಲಿ ಲಜ್ಜೆಯಂ ಬಿಟ್ಟು ನೀನು ಹೇಳಿದೆ? ಭೂತಂಗಳಂ ಬಾಲಕನಂ ಸಹಾ ನೀನು ಶ್ಲಾಘಿಸುತ್ತಿ? ದುರುಳನೆ! ಜಯಂತ ಮೊದಲಾದ ದೇವತೆಗಳಂ ಬಿಟ್ಟು ಆತಂಗೆ ನಮಸ್ಕಾರವಂ ಮಾಡಿ ಆತನ ವಾಕ್ಯವಂ ಕೇಳುತ ನಿರ್ಭಯವಾಗಿ ಪುರದಲ್ಲಿ ವಾಸಮಾಡಬೇಕೆಂದು ಪೇಳಿದ್ದು ಮಹಾ ಆಶ್ಚರ್ಯವು! ಅಷ್ಟೋತ್ತರ ಶತ ಯುಗಾವೃತ್ತಿಗಳಲ್ಲಿ ಮರಣವೆಂದು ವುಸಿಯನ್ನೇ ಪೇಳುತ್ತಿ, ಕಟಕಟ!! ನೀನೇ ಮಾಯೆಯೋ? ನಿನ್ನ ಮತಿಗೆ ಭ್ರಮೆಯುಂಟಾದುದೋ? ನಿನ್ನ ಬಲಪರಾಕ್ರಮವು ನಷ್ಟವಾಗಿ ಪೋದುದೋ? ಪರಮೇಶ್ವರನಿಂದ ಕೊಡಲ್ಪಟ್ಟವರನ್ನು ನೀನರಿಯೆಯೋ, ಛೀಛೀ! ಈಗ ನೀನು ನನ್ನ ಸಮೀಪವಂ ಬಿಟ್ಟು ಯಾವ ಬಳಿಗಾದೊಡಂ ಪೋಗೆಂದು ನಿಷ್ಠುರವಾಕ್ಯವಂ ಪೇಳೆ, ಸಿಂಹಮುಖನು ಕೋಪಯುಕ್ತನಾದ ಈ ವಾಕ್ಯವಂ ಕೇಳಿ, ಹಾಹಾ!! ನನ್ನಿಂದ ಹಿತವು ಪೇಳಲ್ಪಟ್ಟಿತು, ಮೂಢ ಬುದ್ಧಿಯುಳ್ಳವನಾದೀತನಿದಂ ಕೇಳದೆ ವಿಪರೀತವಂ ಮಾಡುತ್ತಿಥಾನೆಂದು ಮನದಿಂ ನಿಶ್ಚಯಿಸಿ ಇಂತೆಂದನು. ಎಲೈ ಅಸುರೇಶ್ವರನೆ! ನನಗೆ ಅನೇಕ ವಿಧವಾದ ಆಯುಧಂಗಳಿರಲೇ ಇವೆ; ಮತ್ತೆ ನಾನು ನಿನ್ನಾಜ್ಞೆಯಿಂದ ಭೂತಂಗಳಂ ಬಾಲಕನಂ ಕುರಿತು ಪೋಗಿ ಜಯಿಸಿ, ಮರಳಿ ಬರುತ್ತಿದ್ದೇನೆ, ಇದು ನಿಶ್ಚಯವೆಂದು ನುಡಿದನು, ಎಲೈ ಮುನಿಗಳಿರಾ! ಅತ್ಯಂತ ಭಯಂಕರನಾದ ದೇವಸಮೂಹವಂಚಕನೆಗೆ ಸಿಂಹಮುಖನು ಆತನ ಸಮೀಪದಲ್ಲಿ ಮರಣವನ್ನೈದಲೆಂದು ಶೌನಕಾದಿಮುನಿಗಳಿಗೆ ಸೂತಂ ಪೇಳ್ದನೆಂಬಲ್ಲಿಗೆ, ವೀರಮಾಹೇಂದ್ರಕಾಂಡದಲ್ಲಿ ಆರನೆಯ ಅಧ್ಯಾಯವು ಸಮಾಪ್ತವಾದುದು.

ಏಳನೆಯ ಅಧ್ಯಾಯವು.

ಷಣ್ಮುಖಸ್ವಾಮಿಯ ಯುದ್ಧೋದ್ಯೋಗ.

ಎಲೈ ಮುನಿಗಳಿರಾ! ಅನಂತರದಲ್ಲಿ ಶೂರಪದ್ಮನು ಸಿಂಹಮುಖನ ವಾಕ್ಯವಂ ಕೇಳಿ ಅತ್ಯಂತ ಸಂತುಷ್ಟಚಿತ್ತನಾಗಿ ಸಿಂಹಮುಖನಿಗೆ ಪ್ರಸನ್ನ ವಚನವಂ

ಪೇಳ್ವನದೆಂತೆನೆ, ಎಲೈ ಸಿಂಹಮುಖನೆ! ಸತ್ಯವಾಗಿ ನನ್ನ ಮನಸ್ಸನ್ನು ಶೋಧಿಸುವ ನಿಮಿತ್ಯವಾಗಿ ನೀನು ಪೇಳಿದೆ, ಬಾಲಕನೊಡನೆ ಯುದ್ಧಮಂ ಮಾಡಲು ನಿನಗೆ ಯೋಗ್ಯವಲ್ಲ, ಇಲ್ಲಿ ಬಂದಪಸಾದೊಡೆ ನಿನ್ನನ್ನು ಕಳುಹಿಸುತ್ತೇನೆ, ಈಗ ನೀನು ಗೃಹಕ್ಕೆ ಪೋಗೆಂದು ಪೇಳಿ ಆತನೊಡನೆ ಸರ್ವರಂ ಕಳುಹಿಸಿ ತಾನು ಅಂತಃಪುರವನ್ನೈದಿದನು. ಇತ್ತಕಡೆಯಲ್ಲಿ ಕುಮಾರಸ್ವಾಮಿಯು ಮಾರನೆಯ ದಿವಸ ಪ್ರಾತಃಕಾಲದಲ್ಲಿದ್ದು, ನಾನಾರತ್ನಂಗಳಿಂದಲಂಕೃತನಾಗಿ, ದಿವ್ಯ ಸಿಂಹಾಸನವನೇರಿ, ಆಗ ಬ್ರಹ್ಮ ವಿಷ್ಣು ಇಂದ್ರಾದಿಗಳಿಂದಲುಂ ಅಷ್ಟೋತ್ತರ ಶತ ಸೇನಾನಾಯಕರಿಂದಲುಂ ಅನೇಕ ಭೂತಗಣಂಗಳಿಂದಲುಂ ಆವೃತನಾಗಿ ವೀರಬಾಹುವಂ ನೋಡಿ, ಎಲೈ ವೀರಬಾಹುವೆ! ಯುದ್ಧಸನ್ನದ್ಧವಾದ ರಥಮಂ ತರಿಸೆಂದು ನೇಮಿಸೆ, ವೀರಬಾಹುವದಂ ಕೇಳಿ ವಾಯುವಿಗೆ ಪೇಳೆ, ವಾಯುವು ರಮ್ಯಮಾದ ರಥಮಂ ತಂದಿರಿಸಲಾಗಿ, ಕುಮಾರಸ್ವಾಮಿಯು ಆ ರಥಾಗಮನಮಂ ಕೇಳಿ, ಸಿಂಹಾಸನದಿಂದಿಳಿದು ರಥಾರೂಢನಾಗಿ ಬ್ರಹ್ಮ ವಿಷ್ಣು ಮೊದಲಾದ ದೇವತೆಗಳ್ಗೆ ತಮ್ಮತಮ್ಮ ವಾಹನಂಗಳನೇರಲಾಜ್ಞಾಪಿಸೆ, ಬ್ರಹ್ಮನು ಹಂಸೆಯಂ ಹರಿಯು ಗರುಡನಂ, ದೇವೇಂದ್ರನು ವಿಮಾನವಂ, ಸಮಸ್ತ ಸೇನಾಪತಿಗಳು ರಮ್ಯಂಗಳಾದ ರಥಂಗಳ ನೇರುತಿರೆ, ಎರಡುಸಾವಿರ ಭೂತವಾಹಿನಿಗಳು ಪೊರಮಟ್ಟವು, ದೇವದುಂದುಭಿಗಳ್ ಮೊಳಗಿದವು, ಝಲ್ಲರಿ, ಮಡ್ಡು, ಡಿಂಡಿಮ, ಪಟಹ ಮೊದಲಾದ ವಾದ್ಯಂಗಳು ಪ್ರಳಯಕಾಲಾಗ್ನಿ ಯಂಬುಧಿ ತರಂಗ ಘರ್ಜನೆಯಂ ತಿರಸ್ಕರಿಸುವಂದದಿ ಘೋಷಿಸಿದವು, ಕಲ್ಪವೃಕ್ಷದಿಂ ಕಟ್ಟೆ ವೃಕ್ಷಂಗಳು ಪೂ ಮಳೆಯಂಗರೆದು, ಸಮಸ್ತ ದೇವತೆಗಳು ಅಟ್ಟಹಾಸವಂ ಮಾಡುತ್ತ ತೆರಳಿದಾಗ, ಸಮುದ್ರದ ಕಡೆಗೆ ಪೋಗಿ ರಥಗಜ ಪದಾತಿಗಳಿಂದೇಳಲ್ಪಟ್ಟ ಧೂಳಿಗಳು ಸಮಸ್ತ ದಿಕ್ಕುಗಳನಾವರಿಸಿ ಕಡಲಿನಲ್ಲಿ ಬೀಳೆ, ಅದು ಕೆಸರಾಗಿ ಸೇನಾಗಮನಕ್ಕೆ ಯೋಗ್ಯಮಾದುದು.

ಬಳಿಕ ಕುಮಾರಸ್ವಾಮಿಯು ಸಮಸ್ತ ಸೇನೆಗಳೊಡನೆ ಸುಖಮಾಗಿ ಸಮುದ್ರವಂ ದಾಂಟಿ ವೀರಮಾಹೇಂದ್ರಪುರದ ಉತ್ತರದ್ವಾರದ ಸಮೀಪಕ್ಕೆ ಪೋಗೆ, ಆಗ ಬ್ರಹ್ಮ ವಿಷ್ಣುಗಳೀರ್ವರು ಕುಮಾರಸ್ವಾಮಿಗೆ ನಮಸ್ಕಾರವಂ ಮಾಡಿ, ಎಲೈ ದೇವೇಶನೆ! ಭಕ್ತರಿಗೆ ಅಭಯಪ್ರದನೆ! ಜಯಜಯ ! ಪಾಪಿಯ ಪುರಕ್ಕೆ ನೀನು ಹೋಗಬಾರದು, ಇಲ್ಲಿಯೇ ನಿಂತು ಆತನಂ ಸಂಹರಿಸೆಂದು ಪ್ರಾರ್ಥಿಸಲಾಗಿ ಕುಮಾರಸ್ವಾಮಿಯು ವಿಶ್ವಕರ್ಮನಂ ನೋಡಿ ನಮಗೆ ಪುರವಂ ರಚಿಸೆಂದು ಪೇಳೆ, ಆತನು ನಾನಾ ಮಂಟಪಯುಕ್ತವಾದ ಗೋಪುರಯುಕ್ತಮಾಗಿ ಆತ್ಯಾಶ್ಚರ್ಯಯುಕ್ತಮಾದ ರಾಜಗೃಹದಿಂದಲಂಕೃತಮಾದ ನಾನಾ ವೀಧಿ

ಗಳಲ್ಲಿರುವ ಗೃಹಪರಂಪರೆಯಿಂದ ಯುಕ್ತಮಾದ ಮಹಾ ಕೋಟೆವೆಂದು ಪೆಸರ್ಗೊಂಡ ಪುರಮಂ ರಚಿಸಿ, ಬಿನ್ನಪಮುಂ ಮಾಡಿದನು.

ಅನಂತರದಲ್ಲಿ ಕುಮಾರಸ್ವಾಮಿಯು ಆ ಪುರಮಂ ನೋಡಿ ಆತಂಗೆ ಬಹುಮಾನಮಾಡಿ, ರಾಜಗೃಹದ್ವಾರದ ಮುಂದೆ ರಥಮಿಳಿದು ಶುಭ್ರ ಮೇಘಮಾಲೆ " ಕ್ಷೇತ್ರಶೀರ್ಷ, ಕರಿಕಪಾಲಿ, ಅಪ್ರಸಿದ್ಧಾಭಿಧ, ಚಿತ್ರಾಂಗ, ವಜ್ರಭೀಮ, ಉಗ್ರ, ಅತ್ಯುಗ್ರ, ಪಿಪ್ಪಲ, ನಂದಿಸೇನ, ಬ್ರಹ್ಮಸೇನ, ಕರಾಳ, ದಂಡ, ಪತ್ರಕ, ಪರಿಘನೇಮಿ, ಹುತವಹ, ಪುಷ್ಪದಂತ, ರುದ್ರ, ಹಾರಕ, ಮತಿಜ, ಕೇತುಮಾಲಿ, ವಕ್ರ, ಬ್ರಹ್ಮಕೇಶ, ನದೀಪತಿ, ಕಳಿಂಗ, ಘೋರಕಾಂತ, ಚಿತ್ರಸೇನ, ಭೂರಿಸಾಮ, ಕ್ರತುಶೀಲಕ, ಮಹಾಜಯ, ಮಾನವಂತ, ಸಿಂಹ, ಉತ್ತರಸಿಂಹ, ಉಪದಿಷ್ಟಜಯೇಶ, ವರ್ತಕ, ಮಾತಂಗಕ, ಚಂಡಿ, ಮಹಾಬಲ, ಶ್ವೇತ, ನೀಲಪತ್ರ, ಸುಬಾಹುಕ, ಅಂಡಾಭರಣ, ಸಂಘಕ, ಕಾಕಪಾದ, ವಿಗಲ, ಸಮಾನ, ಮಾಯಾಘ್ನ ನಿಕುಂಭ, ಕುಂಭ, ಶಂಖಪಾಲಕ, ವಿಶಿಖ, ಶತ್ರುತಾಪ, ಹಯಗ್ರೀವ, ಅದ್ರುತಾಕ್ಷ, ಸಹಸ್ರಬಾಹು, ಅನಂತ, ವಾಮನ, ಮಂಗಳಕೇಶ, ಸೋಮ, ವಜ್ರಮಾಲಿ, ಚಂಡ, ಪರಿತಅಕ್ಷಕರಿ, ಶರಭ, ನಂದ, ಅಂಧಕ, ಕಬಂಧ, ವಿಜಯ, ವಿದ್ರುಮ, ಕಾಲಿಕ, ಧೂಮ್ರ, ದಂಡ, ವ್ಯಗ್ರ, ಕಾಲಪಾಶ, ನಿಷ್ಠುರ, ಶತಮುಖಾಕ್ಷ, ಕುಮುದಭಾನು, ಧನಂಜಯ, ವೃಷಭರೂಪ, ಶುಚಿಮುಖ, ಅನಲಕೇಶ, ಸುವಕ್ತ್ರ, ಮತ್ತ, ಉನ್ಮತ್ತ, ನಂದಿ, ಮನೋಭವ, ವಾಯುವೇಗ, ಸಹಸ್ರಭಾಕ್, ಭಾನುಕೋಪ, ಪತಂಗ, ಶಿತ, ಸುನಾದ, ಸುಮಾಲಿ, ಮಾಲಿ, ಅತ್ರಿ, ಅಸುರಕಾಲ, ಹರಿಕೇಶ, ಜ್ವಾಲಾಕೇಶ " ಎಂಬ ಸೇನಾಪತಿಗಳಿಗೆ ಸ್ಥಾನಂಗಳಂ ಪರಿಕಲ್ಪಿಸಿ, ಬ್ರಹ್ಮ ವಿಷ್ಣು ಮೊದಲಾದ ಇಂದ್ರಾದಿ ದೇವತೆಗಳಿಂದಲುಂ ಲಕ್ಷ ವೀರರಿಂದಲುಂ ಸ್ತುತಿಸಲ್ಪಡುತ್ತ, ಷಣ್ಮುಖಂಗಳೊಡನೆ ರಾಜಗೃಹಮಂ ಪ್ರವೇಶಿಸಿ, ಸಿಂಹಾಸನವನ್ನೇರಿ ಇರುತಿರ್ದನು.

ಅನಂತರದಲ್ಲಿ ನಾರದನು ಶೂರಪದ್ಮಾಸುರನ ಸಮೀಪಕ್ಕೆ ಪೋಗಿ, ಎಲೈ ಶೂರನೆ! ನಿಮ್ಮ ಗುರುವು ನನಗೆ ಪ್ರಾಣಸಖನು, ಕುಮಾರಸ್ವಾಮಿಯು ಯುದ್ಧಕ್ಕೋಸುಗ ಪುರದ್ವಾರದಲ್ಲಿರುವನು, ನಿರ್ಭಯದಿಂದ ಯುದ್ಧಮಂ ಮಾಡು ನಿನಗೆ ವಿಜಯವುಂಟಾಗಲೆಂದು ಪೇಳಿ ತೆರಳೆ, ಶೂರಪದ್ಮನೀವಾಕ್ಯವಂ ಕೇಳಿ, ಕ್ರೋಧಾಕುಲನಾಗಿ ಇದೇನತಿಶಯವೆಂದು ಪೇಳ್ದು, ಘೋರಾತಿ ಘೋರರೆಂಬ ಕಿಂಕರರಂ ಕರೆದು ಅವರ ಮುಖದಿಂ ಸಮುದ್ರನಂ ಕರೆಯಿಸಿ, ಎಲೈ ಸಮುದ್ರನೆ! ಈ ಬಾಲಕನ ಭೂತಸೇನೆಗೆ ಮಾರ್ಗಮಂ ಕೊಡದ ಕಾರಣವೇನೆಂದು ನಿಷ್ಠೂರವಾಕ್ಯಮಂ ನುಡಿಯಲಾಗಿ, ಸಮುದ್ರನತಿಭೀತನಾಗಿ ಎಲೈ ಅಸುರೇಶ್ವರನೆ! ಅಸುರೇಶ್ವರ

ನಾವಾಬಾಲಕನು ನನ್ನಿಂದ ನಿಗ್ರಹಿಸಲು ಶಕ್ಯನೆ? ಆತನ ರಥ ಗಜ ತುರಗ ಪದಾತಿಗಳ ಪದಹತಿಗಳಿಂದೇಳಲ್ಪಟ್ಟ ಧೂಳಿಗಳಿಂ ನಾನು ಶೋಷಿತನಾದೆನೆಂದು ಪೇಳಿದನು. ಈ ಮಾತಂ ಕೇಳುತಲೆ ಶೂರಪದ್ಮನು ಕುಮಾರಸ್ವಾಮಿಯಮೇಲೆ ಅತಿ ಕೋಪವಂ ಮಾಡುತಿರೆ, ಆಗ ಗೂಢಚಾರಿಗಳು ಸಮಸ್ತ ವೃತ್ತಾಂತವಂ ತಿಳಿದು ಸಿಂಹಾಸನಾರೂಢನಾದ ಆ ಶೂರಪದ್ಮನ ಬಳಗೆ ಬಂದು ಇಂತೆಂದರು.

ಕೇಳೆಲೈ ಶೂರನೆ! ಆತನ ಸಮೀಪದಲ್ಲಿ ಯಾವ ಪ್ರಕಾರದಿಂ ನಾವು ಕಂಡೆವೋ ಹಾಗೆ ಪೇಳ್ವೆವು, ಕೇಳುವನಾಗು, ಕುಮಾರಸ್ವಾಮಿಯು ಭೂತ ಸೇನೆಗಳೊಡನೆ ಸಮುದ್ರವಂ ದಾಂಟಿ ವೀರಬಾಹುವಿನಿಂದ ಮರ್ದಿಸಲ್ಪಟ್ಟ ಲಂಕಾಪುರವಂ ನೋಡಿ, ನಿನ್ನ ಪಟ್ಟಣದ ಉತ್ತರದ್ವಾರದ ಸಮೀಪದಲ್ಲಿ ನಾನಾ ಆಶ್ಚರ್ಯಯುಕ್ತವಾದ ಪುರವಂ ವಿಶ್ವಕರ್ಮನಿಂ ನಿರ್ಮ್ಮಾಣವಮ್ಮಾಡಿಸಿ, ಆ ಪುರದೊಳು ಬ್ರಹ್ಮ ವಿಷ್ಣು ಇಂದ್ರ ಮೊದಲಾದ ದೇವತೆಗಳ್ವೆರೆಸಿ ರುದ್ರಗಣಂಗಳಿಂದ ಯುಕ್ತನಾಗಿ, ನಿನ್ನ ಸಂಗಡ ಯುದ್ಧವಮ್ಮಾಡಲು ಸನ್ನದ್ಧನಾಗಿದಾನೆಂದು ಪೇಳಲಾಗಿ, ಶೂರಪದ್ಮನದಂ ಕೇಳಿ, ಕ್ರೋಧಾಗ್ನಿಯಿಂ ದುಜ್ವಲಿಸಿ ನಯನಗಳಿಂ ದಿಕ್ಕುಗಳಂ ನೋಡಿ, ದೂತರಿಂ ತನ್ನ ಕುಮಾರನಾದ ಭಾನುಕೋಪನಂ ಕರೆಯಿಸೆ, ಆತನು ಅನೇಕ ಸೇನೆಗಳಿಂದಾವೃತನಾಗಿ ರಥವನ್ನೇರಿ ಶೂರನ ಅರಮನೆಯ ಬಾಗಿಲಿಗೆ ಬಂದು ರಥದಿಂ ದಿಳಿದು ಶೀಘ್ರದಿಂ ಆ ಶೂರಪದ್ಮನ ಬಳಿಗೈದಿ, ಅಸುರೇಶನಾದ ತನ್ನ ತಂದೆಗೆ ನಮಸ್ಕಾರವನ್ನೆಸಗಿ, ಆತನಿಂ ಪೇಳಲ್ಪಟ್ಟ ವೃತ್ತಾಂತವಂ ಕೇಳಿ, ಎಲೈ ಪಿತೃವೆ! ನಾನು ಶೀಘ್ರದಿಂ ಪೋಗಿ ಸರ್ವರಂ ಜಯಿಸಿ ಸಮಸ್ತ ಸೇನೆಯೊಡನೆ ಆತನಂ ಬಂಧಿಸಿ ನಿನ್ನ ಸಮೀಪಕ್ಕೆ ಕರತರುವೆನೆಂದು ಪೇಳಲಾಗಿ, ಅಸುರೇಶನಾದ ಶೂರಪದ್ಮನು ಆ ವಚನಂ ಕೇಳುತಲೇ ಪರಮಾನಂದ ಭರಿತನಾಗಿ ಆತನಂ ರಣಾಂಗಣಕ್ಕೆ ಕಳುಹಿದನೆಂದು ಸೂತಂ ಶೌನಕಾದಿಗಳ್ಗೆ ಪೇಳ್ದನೆಂಬಲ್ಲಿಗೆ, ವೀರಮಾಹೇಂದ್ರಕಾಂಡದಲ್ಲಿ ಏಳನೆಯ ಅಧ್ಯಾಯವು ಸಮಾಪ್ತಮಾದುದು.

ವೀರಮಾಹೇಂದ್ರಕಾಂಡಂ ಸಂಪೂರ್ಣಂ.

ಯುದ್ಧಕಾಂಡಪ್ರಾರಂಭವು.

ಮೊದಲನೆಯ ಅಧ್ಯಾಯವು.

ಭಾನುಕೋಪನ ಯುದ್ಧೋದ್ಯೋಗ.

ಎಲೈ ಋಷಿಗಳಿರಾ! ಅನಂತರದಲ್ಲಿ ಭಾನುಕೋಪನು ತನ್ನ ಮಂದಿರವನ್ನೈದಿ ಕವಚ ಕುಂಡಲಗಳನ್ನಿಟ್ಟು, ಸರಳು ಬತ್ತಳಿಕೆಗಳು ಮೊದಲಾದ ಆಯುಧಗಳಂ ಧರಿಸಿ, ಖಡ್ಗವಂ ಪಿಡಿದು ಪೀತಾಂಬರಧಾರಿಯಾಗಿ, ವೀರಪಟ್ಟದಿಂ ದೊಪ್ಪುವನಾಗಿ ನಾನಾ ಆಭರಣಂಗಳಿಂ ಭೂಷಿತನಾಗಿ ಸಂಮೋಹನಾಸ್ತ್ರಮಂ ಧರಿಸಿ, ಛತ್ರ ಚಾಮರ ಮುರವು ಮೊದಲಾದವಂ ಪಿಡಿದಿರ್ಪ ಪುರಜನರಿಂದಾವೃತನಾಗಿ, ಅನೇಕ ವೀರರೊಡನೆ ಪೊರಮಟ್ಟು ಮುವ್ವತ್ತು ಸಾವಿರ ತುರಗಗಳಿಂ ಕಟ್ಟಲ್ಪಟ್ಟ ರಥವನ್ನೇರಿ, ಕೋಟಿ ರಥಂಗಳಿಂ ಯುಕ್ತವಾದ ಸೇನೆಯಿಂದ ಕೂಡಿದವನಾಗಿ ಪೊರಮಟ್ಟನು. ಆ ಸಮಯದಲ್ಲಿ ಚಂಡವಿಕ್ರಮರಾದ ವಿಜಯ ಜಯಕಂಟಕ ಕರಂಜಮುಖ, ಸೋಮಮುಖರುಂ, ಆ ಅಸುರಸೇನೆಯುಂ, ನಿಯುತವಾಹನಗಳಿಂ ಭಿನ್ನ ಭಿನ್ನವಾಗಿ ಗೂಢವಾದ ದೈತ್ಯರು, ರಥ ಅಶ್ವ ಗಜ ಪದಾತಿಗಳುಂ ವೇಗದಿಂ ಪೊರಮಟ್ಟವು. ಆಗ ದುಂದುಭಿ ಮೊದಲಾದ ವಾದ್ಯಧ್ವನಿಗಳು, ಅಶ್ವಂಗಳ ಘೋಷಿಯು ಗಜಂಗಳ ಬೃಂಹಿತಂಗಳುಂ ರಥಂಗಳ ಗಾಲಿಗಳ ಝೇಂಕಾರಂಗಳುಂ, ಸೇನೆಗಳ ಕಿಲಕಿಲ ರಭಸಗಳುಂ ಪ್ರಳಯಕಾಲದ ಮೇಘಧ್ವನಿಯುಂ ತಿರಸ್ಕರಿಸುತಿತ್ತು. ಆ ವೇಳೆಯಲ್ಲಿ ಧೂಳಿಗಳು ದಶದಿಕ್ಕುಗಳನ್ನು ಆವರಿಸಿ ಸೂರ್ಯಮಂಡಲಮಂ ಮುಸುಕಿದವು. ಸಮಸ್ತರಾದ ಮಾಗಧರು ಆತನ ಗುಣಾದಿಗಳಂ ಪೊಗಳೆ ಸರ್ವಸೇನೆಗಳು ಪ್ರಳಯಕಾಲದ ಸಮುದ್ರದಂತೆ ಘೋರವಾಗಿ ಚಲಿಸಿದವು. ಎಲೈ ಮುನಿಶ್ರೇಷ್ಠರುಗಳಿರಾ! ಬ್ರಹ್ಮಪುತ್ರನಾದ ದೇವರ್ಷಿಯಾದ ನಾರದಮುನಿಯು ಜಯಿಸಲ್ಪಟ್ಟ ಸೂರ್ಯ ಪರಾಕ್ರಮವುಳ್ಳ ದೈತ್ಯನಾದ ಈ ಭಾನುಕೋಪನ ಸಂಬಂಧವಾಗಿರ್ಪ ಸಮಸ್ತವಾದ ವಾರ್ತೆಯನ್ನು ಪೇಳುವದಕ್ಕೋಸುಗ, ದೇವಸೇನೆಗಳಿಂ ಪರಿವೃತನಾದ ಅಂಬಿಕಾಪುತ್ರನಾದ ಕುಮಾರಸ್ವಾಮಿಯ ಬಳಿಯನ್ನೈದಿದನೆಂದು

ಸೂತಂ ಶೌನಕಾದಿಮುನಿಗಳ್ಗೆ ಪೇಳಿದ ಸಂಬಲ್ಲಿಗೆ,

ಯುದ್ಧಕಾಂಡದ ಮೊದಲನೆಯ ಅಧ್ಯಾಯವು

ಸಮಾಪ್ತಮಾದುದು.

ಎರಡನೆಯ ಅಧ್ಯಾಯವು.

ಭಾನುಕೋಪ ವೀರಬಾಹುಗಳ ಯುದ್ಧವು.

ಎಲೈ ಮುನಿಗಳಿರಾ! ಅನಂತರದಲ್ಲಿ ನಾರದನು ಅಂಬಿಕಾಪುತ್ರನಾದ ಕುಮಾರಸ್ವಾಮಿಯ ಸಮೀಪಕ್ಕೆ ಬಂದು, ಭಕ್ತಿಯಿಂದಾತಂಗೆ ನಮಸ್ಕಾರವ ನೆಸಗಿ, ಸ್ತೋತ್ರಂಗಳಿಂ ಸ್ತುತಿಸಿ, ಎಲೈ ಸ್ವಾಮಿಯೆ! ನೀನು ಸರ್ವಜ್ಞನಾ ದೊಡಂ ನನ್ನ ಮೇಲಣ ದಯೆಯಿಂದೆನ್ನ ವಾಕ್ಯವಂ ಲಾಲಿಸಬೇಕು; ಏನೆಂದರೆ, ಶೂರಪದ್ಮನು ನಿನ್ನ ಆಗಮನವಂ ಕೇಳಿ, ಸೂರ್ಯನಂ ಜಯಿಸಿದ ತನ್ನ ಕುಮಾರ ನಾದ ಭಾನುಕೋಪನಂ ನಿನ್ನ ಸಂಗಡ ಯುದ್ಧಮಂ ಮಾಡುವದಕ್ಕೆ ಕಳುಹಿಸಿರು ವನು. ಮಹಾ ಕೋಪವುಳ್ಳ ಆತನು ಪೂರ್ವದಲ್ಲಿ ರಣದೊಳು ಬ್ರಹ್ಮಾಸ್ತ್ರಮಂ ವಿಷ್ಣುಚಕ್ರಮಂ ವರುಣಪಾಶವಂ ಕಾಲದಂಡಮಂ ಪಿಡಿದು, ಆ ಬ್ರಹ್ಮಾದಿಗಳಂ ಜಯಿಸಿದನು. ಅಂಥವನಂ ಜಯಿಸಲು ಪರಮೇಶ್ವರನಾಜ್ಞೆಯಿಂದ ನೀನು ಸಮರ್ಥನೆಂದು ಪೇಳಲಾಗಿ, ಆ ವಾಕ್ಯವಂ ಕೇಳುತಲೆ ಕುಮಾರಸ್ವಾಮಿಯು ವಿಸ್ಮಿತನಾಗಿ, ಕೇಸರಿಯು ಶರಭನನ್ನೈದುವಂತೆಯು, ಗಜವು ಸಿಂಹದ ಸಮೀಪಕ್ಕೆ ಪೋಗುವಂತೆಯು ಈತನು ನನ್ನ ಸಮೀಪಕ್ಕೆ ಬರುವನೆಂದು ಪೇಳ್ದು, ಮಹಾಬಲ ವಂತನಾದ ವೀರಬಾಹುವಂ ವೀಕ್ಷಿಸಿ, ಎಲೈ ವೀರಬಾಹುವೆ! ನೀನು ಮಹಾ ವೀರರೊಡನೆ ಸಹಸ್ರವಾಹಿನಿ ಬಲಗಳಿಂ ದಾವೃತನಾಗಿ ಆತನ ಪುರವಂ ಮುತ್ತಿ ಕೋಲುಗಳಂ ಕೆಡಹಿ ಮಹತ್ತಾದ ಯುದ್ಧವಂ ಕೊಟ್ಟು ಅಸುರಾಧಿಪರಂ ಜಯಿಸಿ ಮರಳಿ ನನ್ನ ಸಮೀಪಕ್ಕೆ ಬಾಯೆಂದು ಆಜ್ಞಾಪಿಸಿದನು.

ಬಳಿಕ ವೀರಬಾಹುವು ವೀರಪಟ್ಟವಂ ಧರಿಸಿ ಕರ್ಣಕುಂಡಲದ ಸ್ವರ್ಣ ಸೂತ್ರ ರತ್ನಾಂಗುಳೀಯಕ ಹಾರ ಕೇಯೂರ ಕಿರೀಟಮುಂತಾದ ಆಭರಣಗಳಂ ಧರಿಸಿ ದಂಡಪಾಣಿಯಂತೆ ಮಹತ್ತಾದ ಧನುವಂ ಪಿಡಿದು, ಶರಗಳಿಂ ಪೂರ್ಣ ಮಾದ ಬತ್ತಳಿಕೆಯಿಂ ಹಿಂಭಾಗದಲ್ಲಿ ಧರಿಸಿ, ಪಿನಾಕಧಾರಿಯಾದ ಶಂಕರನಂತೆ ಮಹತ್ತಾದ ಚಾಪಮಂಧರಿಸಿ, ಖಡ್ಗ ಕುಂತಅಸಿ ತೋಮರ ಮೊದಲಾದ ಆಯು ಧಂಗಳಿಂ ದುಜ್ವಲನಾಗಿ, ಪೂರ್ಣಚಂದ್ರನಂತೆ ಮನೋಹರಮಾದ ಮುತ್ತಿನ ಸತ್ತಿಗೆಯುಳ್ಳವನಾಗಿ, ವೇಣು ವೀಣಾದಿ ವಾದ್ಯಧಾರಿಗಳಿಂದಾವೃತನಾಗಿ, ರಮ್ಯ ಮಾದ ಸ್ವಗುಣಂಗಳಂ ವರ್ಣಿಸುತಿರುವ ಸ್ತುತಿಪಾಠಕರಿಂ ಯುಕ್ತನಾಗಿ ಪೊರ ಮಡಲು, ಸಹಸ್ರ ವಾಹಿನೀಭೂತಗಣಂಗಳು ಪ್ರಳಯಕಾಲ ಸಮುದ್ರದಂತೆ ಪೊರಮಟ್ಟರು. ಆಗ ಸೇನೆಯು ರಥ ಗಜ ತುರಗಗಳನ್ನೇರಿ ಭೇರಿ ಮೊದಲಾದ ವಾದ್ಯಗಳ್ಮೊರಸಿ ತೆರಳುತ್ತಿರೆ, ಈತನ ಪಯಣವಂ ಪೇಳಲು ಆ ಪುರಕ್ಕೆ ಮೊದಲೆ ಪೋದವು (ಅಂದರೆ ಈತನ ಆಗಮನವಂ ಪೇಳುವಂದದಿ ವಾದ್ಯಂಗಳು ನೊಳ

ಗಿದವೆಂದು ಭಾವವು.) ಆ ಸಮಯದಲ್ಲಿ ಕೆಲಬರು ಭೂತಗಣಂಗಳು, ಅಟ್ಟಹಾಸ ಗಣಂಗಳು, ಕೆಲವರು ಶೀಘ್ರಗಾಮಿಗಳು, ಕೆಲವರು ಮಂಡಲಾಕಾರಮಾಗಿ ಕೆಲವರು ಈ ಪ್ರಕಾರಮಾಗಿ ಸೇನೆಗಳು ಆ ಗೋಪುರದ್ವಾರಕ್ಕೆ ಪೋಗೆ, ಭಾನುಕೋಪನದಂ ಕೇಳಿ ಆ ಶಿಶುನಂ ಬಂಧಿಸಿ ಶೂರಪದ್ಮನ ಬಳಿಗೆ ಪಿಡಿದು ತರುವೆನೆಂದು ಪ್ರತಿಜ್ಞೆಯಮ್ಮಾಡಿ, ಮಹಾ ಆಸುರರೊಡನೆ ಪುರದಿಂ ಪೊರಮಡಲಾಗಿ, ಆಗ ದುರುಳರಾದ ದೈತ್ಯರು ಭೂತಸೇನೆಯಂ ಕಂಡು, ಇದೇನು ಭಾರವೆಂದು ಮಹತ್ತಾದ ಅಟ್ಟಹಾಸಮಮ್ಮಾಡೆ, ಭೂತಸೇನೆಗಳದಂ ಕೇಳಿ ಮಹಾ ಭಯಂಕರಮಾದ ಧ್ವನಿಯಮ್ಮಾಡಿ ಪಾಪಿಗಳಾದ ದೈತ್ಯರ ಸಮೀಪಕ್ಕೆ ಪೋಗಲು, ಆ ದೈತ್ಯರು ಭೂತಸೇನೆಯೊಳು ಅನೇಕ ಆಯುಧಂಗಳಂ ಶರವ್ರಾತಮಂ ಸಹ ವರ್ಷಿಸಲಾಗಿ, ಕೆಲ ಭೂತಗಣಂಗಳು ಛೇದಿಸಲ್ಪಟ್ಟ ಪಾವುಗೆ ಪಾದಶರೀರಂಗಳುಳ್ಳವರಾಗಿ ಮೂರ್ಛೆಯನ್ನೈದಿದರು. ಮತ್ತು ಕೆಲ ಭೂತಸೇನೆಯು ಕೋಪದಿಂ ನಾಗಂಗಳಿಂ ನಾಗಂಗಳಂ ತುರಗಂಗಳಿಂ ತುರಗಗಳಂ ರಥಗಳಿಂ ರಥಂಗಳಂ ಪದಾತಿಗಳಿಂ ಪದಾತಿಗಳಂ ಈ ಪ್ರಕಾರಮಾಗಿ ಅಸುರರಿಂ ಆಸುರರಂ ಸಂಹರಿಸಿ ಬಹು ಬಲವನ್ನು ಹತವನ್ಮಾಡಿದರು. ಈ ರೀತಿಯಾಗಿ ರಾಕ್ಷಸ ಬಲವು ಗಣಂಗಳಿಂದ ಹತಮಾಗಲು ಬಳಿಕ ಭಾನುಕೋಪನ ಸೇನಾಪತಿಯಾದ ಅನಲನೆಂಬುವನು ಇದಂ ಕಂಡು ವೇಗದಿಂ ಬಂದು ಭೂತಸೇನೆಯೆಂಬ ಅಡವಿಯೊಳು ಧನುವಂ ಬಗ್ಗಿಸಿ ನಾರಿಯಂ ಹೂಡಿ ಶರಗಳಂ ಕರೆದನೆಂದು ಶೌನಕಾದಿ ಮುನಿಗಳಿಗೆ ಸೂತಂ ಪೇಳಿದನೆಂಬಿಲ್ಲಿಗೆ, ಯುದ್ಧಕಾಂಡದಲ್ಲಿ ಎರಡನೆಯ ಅಧ್ಯಾಯವು ಸಮಾಪ್ತಮಾದುದು.

ಮೂರನೆಯ ಅಧ್ಯಾಯವು.

ಅನಲ ವಧೆ-ಭಾನುಕೋಪ ವೀರಬಾಹು ಯುದ್ಧವು.

ಎಲೈ ಮುನಿಗಳಿರಾ! ಅನಂತರದಲ್ಲಿ ಭೂತಸೇನೆಗಳು ಭಯಪಟ್ಟು ದಿಕ್ಕುದಿಕ್ಕುಗಳಲ್ಲಿಯುಂ ಓಡಿದರು. ಆಗ ಕೆಲಭೂತಂಗಳು ಆತನ ಬಾಣಗಳಂ ನೊಂದವರಾಗಿ ಮೂರ್ಛೆಯನ್ನೈದಿದರು. ಬಳಿಕ ಭೂತಸೇನಾಧಿಪತಿಯಾದ ಸಿಂಹನೆಂಬ ಗಣಾಧೀಶ್ವರನು ಇದಂ ಕಂಡು, ಅಂತಕನಂತೆ ದಂಡಮಂ ಪಿಡಿದು ಆ ದಂಡದಿಂದ ರಥದಲ್ಲಿ ಕಟ್ಟಲ್ಪಟ್ಟ ಅಶ್ವಂಗಳಂ ಕುಟ್ಟಿ ಕೆಡಹಲಾಗಿ, ಆತನ ಮೇಲೆ ಶರಗಳಂ ವರ್ಷಿಸಿದನು. ಮರಳಿ ಸಿಂಹನು ಶರಪ್ರವಾಹ ಮಧ್ಯದಲ್ಲಿ ಅಭಿಮುಖನಾಗಿ ಪೋಗಿ ಆತನ ರಥವನ್ನೇರಿ ಹಸ್ತದಲ್ಲಿರ್ಪ ಚಾಪಮಂ ಸೆಳೆದು

ಕಡೆಗಿಡಲಾಗಿ, ಆ ಅನಲನು ಗದೆಯಂ ಪಿಡಿದು ಸಿಂಹನ ಸಂಬಂಧವಾದ ವಜ್ರದಂತೆ ಕಠಿಣವಾದ ಶರೀರಮಂ ಬಡಿಯೆ, ಮರಳಿ ಸಿಂಹನು ಕೋಪದಿಂ ಮುಷ್ಟಿಯಿಂದಾತನಂ ತಿವಿದು, ಹಸ್ತದಿಂದಾತನ ಪಾದಮಂ ಪಿಡಿದು ವೇಗದಿಂ ತಿರುಹಿ ಭೂಮಿಗೆ ಬಡಿಯಲಾಗಿ, ಆ ಅನಲನು ನೂರು ಶೀಳಾಗಿ ಮೃತನಾದನು.

ಚಂಡರಕ್ಕಸನ ಸಂಹಾರ.

ಬಳಿಕ ಚಂಡನೆಂಬ ದೈತ್ಯನು ಶೀಘ್ರದಿಂ ಬಂದು ಮೇಘವು ವರ್ಷಿಸುವಂತೆ ಆತನ ಮೇಲೆ ಸಾವಿರ ಸರಳ್ಗಳಂ ಪ್ರಯೋಗಿಸಲಾಗಿ, ಸಿಂಹನೆಂಬ ಗಣಾಧೀಶ್ವರನಾಮೃತಿಯನ್ನೈದಿದ ಅನಲನ ಗದೆಯಂ ತೆಗದುಕೊಂಡು ಆತನಂ ಬಡಿಯೆ, ಆ ಚಂಡನು ದಂಡದಿಂದಾತನಂತಾಡಿಸಿದನು. ಈ ಪ್ರಕಾರವಾಗಿ ಅವರೀರ್ವರುಂ ಅನ್ಯೋನ್ಯವಾಗಿ ಗದೆ ದಂಡಂಗಳಿಂ ಹೊಡೆಯಲ್ಪಟ್ಟು ಭೂಮಿಯಲ್ಲಿ ಬಿದ್ದು ಮೂರ್ಛೆಯನ್ನೈದಿದವರಾಗಲು, ಮಾಯನೆಂಬ ದೈತ್ಯಾಧಿಪನು ನೀಲನೆಂಬ ಭೂತ ಗಣಾಧೀಶ್ವರನು ಯುದ್ಧಕ್ಕೆ ಸೇರಿದಾಗ, ನೀಲನು ದಂಡದಿಂದಾತನಂತಾಡಿಸಲು ಮಾಯನು ಮೂರ್ಛೆಯನ್ನೈದಿ ಆ ಮೇಲೆ ಮೂರ್ಛೆಯಂ ತಿಳಿದು ಶೂಲದಿಂ ನೀಲನಂ ತಿವಿದನು. ಮರಳಿ ನೀಲನೆಂಬ ಭೂತಸೇನಾನಾಯಕನು ಮೂರ್ಛೆಯನ್ನೈದಿ ತತ್ಕ್ಷಣವೆ ಪ್ರಜ್ಞೆಯಂ ಪೊಂದೆದ್ದು ಕೋಪದಿಂದಾತನಂ ಕರವಂ ಪಿಡಿದು ಬಡಿದಪ್ಪಿ ರಕ್ತಪಾನವಮ್ಮಾಡಿ ಆತನಂ ಸಂಹರಿಸಿದನು.

ಪೂರ್ವದಲ್ಲಿ ಮೂರ್ಛಿತರಾದ ಚಂಡಸಿಂಹ ರೀರ್ವರು ಮರಳಿ ದಂಡಗಳಂ ಪಿಡಿದು ಪರಸ್ಪರವಾಗಿ ಯುದ್ಧವಮ್ಮಾಡಿ, ಓರ್ವನು ದಂಡದಿಂ ಬಡಿಯೆ ಮತ್ತೋರ್ವನು ಪಾದದಿಂ ಮಸ್ತಕವನ್ನೊದೆಯೆ, ಇನ್ನೊಬ್ಬನು ದಂಡದಿಂ ತಪ್ಪಿಸೆ, ಈ ಪ್ರಕಾರವಾಗಿ ಅನ್ಯೋನ್ಯದಿಂ ಯುದ್ಧವಮ್ಮಾಡುವ ಸಮಯದಲ್ಲಿ ಸಿಂಹನೆಂಬ ಗಣಾಧೀಶ್ವರನು ಗದೆಯಿಂದಾತನ ಗದೆಯಂ ಚೂರ್ಣವಮ್ಮಾಡಿದನು. ಮರಳಿ ಚಂಡನು ದಂಡಪಾಣಿಯಾದ ಸಿಂಹನೊಡನೆ ಯುದ್ಧವಮ್ಮಾಡಿ ಕರದಿಂದಾತನಂ ಮರಳಿ ಮರಳಿ ಬಡಿಯುತ್ತಿರೆ, ಸಿಂಹನು ಕೋಪದಿಂ ದಂಡದಿಂದ ಆತನ ಕರಮಂ ಬಡಿದವನಾಗಲು ಅದು ಛೇದಿಸಲ್ಪಟ್ಟ ವೃಕ್ಷದ ಶಾಖೆಯಂತೆ ನೆಲದಲ್ಲಿ ಬಿತ್ತು. ಬಳಿಕ ಚಂಡನು ದಂಡದ ಹೊಡೆತದಿಂ ಮುರಿದ ತನ್ನ ಕರವಂ ತೆಗದು ಅಟ್ಟಹಾಸವಮ್ಮಾಡಿ ಆತನ ಮೇಲೆ ಬಿಡೆ, ಸಿಂಹನದಂ ಪಾದದಿಂದೊದ್ದು ಕೆಡಹಿದನು. ಆ ಸಮಯದಲ್ಲಿ ಭೀಚರರಾದ ದೇವತೆಗಳು, ಎಲೈ ಸಿಂಹನೆ! ಈ ಚಂಡನು ಯಮನಂ ಜಯಿಸಿದವನು. ಇವನಂ ಬೇಗ ಸಂಹರಿಸೆಂದು ನುಡಿಯೆ, ಭೂತನಾಯಕನಾದ ಸಿಂಹನದಂ ಕೇಳಿ ಗಜವಂ

ಪೊಯ್ದು ಸಿಂಹನಂತೆ ಆತನ ಕಪೋಲವಂ ಕರದಿಂ ಹೊಡೆದು ಕೆಡಹಿದವನಾಗಲು, ಅವನು ನೆಲದಲ್ಲಿ ಬಿದ್ದು ಪ್ರಾಣವಂ ಬಿಟ್ಟನು.

ಅಜಮುಖನ ಸಂಹಾರ.

ಆಗ ಯಮದೂತರು ಆತನ ಪ್ರಾಣವಂ ಹಿಡಿಯಲು ಭೀತಿಗೊಂಡು, ಸಿಂಹನೆಂಬ ಗಣಾಧೀಶ್ವರನಿಂದನು ಜ್ಞಾತರಾಗಿ ಅವನ ಪ್ರಾಣಂಗಳಂ ಕೊಂಡು ಪೋದರು. ಬಳಿಕ ಅಜಮುಖನೆಂಬ ದೈತ್ಯನು ಸಿಂಹನ ಮೇಲ್ವಾಯ್ದು ಬರಲುಜ್ಜುಗಿಸಲು, ಮಹಾಬಲವಂತನಾದ ಮಥನೆಂಬ ಗಣಾಧೀಶ್ವರನು ಆತಂಗಿದಿರಾಗಿ ಪೋಗೆ, ಆ ದೈತ್ಯನು ಆತನ ಮೇಲೆ ಶರ ಸಮೂಹಂಗಳಂ ಬಿಟ್ಟನು. ಅನಂತರದಲ್ಲಿ ಗಣಾಧೀಶ್ವರನು ವಟವೃಕ್ಷವಂ ಕಿತ್ತು ಅಡಿಗಡಿಗೆ ಲಂಘಿಸಿ ಸಿಂಹನಾದವಂ ಮಾಡುತ್ತ ರಥಕ್ಕೆ ಮೇಲ್ವಾಯ್ದು ಬರುತಿರೆ, ಮಹತ್ತರವಾದ ಅಟ್ಟಹಾಸದಿಂದ ಭೂಮಿಯು ಕಂಪಿಸಿತು. ದೈತ್ಯನದಂ ಕೇಳಿ ಭೀತನಾಗಿ ಚಾಪಮಂ ಬಿಟ್ಟು ಕಂಪಿತನಾಗಲು, ಗಣಾಧೀಶ್ವರನು ಆತನಂ ಕಂಡು, ಎಲೈ ಛೀಛೀ!! ನೀನು ಶೂರನಲ್ಲವೆ? ತಿರಿಗಿ ಪೋಗಲು ಭೀತನಾದೆಯೊ? ಪೋಗುಪೋಗು, ಎಂದು ಪೇಳುತಿರ್ದೊಡಂ ಅದನ್ನು ಕೇಳದವನಂತೆ ರಥದಿಂದಿಳಿದು ಪುರಕ್ಕೆ ತೆರಳಿದನು. ಆ ದೈತ್ಯನು ಛೀಛೀ!! ನನ್ನ ಜೀವನವನ್ನು ಸುಡು, ಜೀವಿಸುವುದಕ್ಕಿಂತಲು ಮರಣವೇ ಲೇಸೆಂದು ಚಿಂತಿಸಿ ಮರಳಿ ರಥದಲ್ಲಿ ಕುಳಿತು, ಅಟ್ಟಹಾಸವಂ ಮಾಡುತ್ತ ಧನುವಂ ಧರಿಸಿ ಬಾಣಂಗಳನ್ನು ಸುರಿಸುತ್ತ ಆತನಂ ಕಾಳಗಕ್ಕೆ ಕರೆದನು. ಬಳಿಕ ಗಣಾಧೀಶ್ವರನು ಕರಗಳಿಂದಲೆ ಆಶರವಂ ತೊಲಗಿಸಿ, ಕೋಪದಿಂದಾತನ ರಥವಂ ತಿರುಹಿಸ ಮುದ್ರಿಕ್ಕಿಡೆ, ಆಗ ದೈತ್ಯನು ಭೂತಳಕ್ಕೆ ಲಂಘಿಸಿ ಮುಷ್ಟಿಯಿಂದಾತನ ವಕ್ಷಸ್ಥಲದಲ್ಲಿ ಹೊಡೆಯಲಾಗಿ, ಗಣಾಧೀಶ್ವರನುಂ ಆತನ ಕರವಂ ಪಿಡಿದು ಪರಿಘಶೋಭಿಯಾದ ಭುಜದಿಂದ ಇಂದ್ರನು ವಜ್ರಾಯುಧದಿಂ ಪರ್ವತವಂ ಕುಟ್ಟುವಂದದಿ ಮರ್ದಿಸಿದನು. ಆಗ ಅವರೀರ್ವರು ಮಲ್ಲಮಾರ್ಗದಿಂ ಕೇಶಾಕೇಶಿ ಬಾಹಾಬಾಹು ಮುಷ್ಟಾಮುಷ್ಟಿ ಎಂಬ ರೀತಿಯಿಂದ ಯುದ್ಧವಂ ಮಾಡಿ ಭೂತಳದಲ್ಲಿ ಬಿದ್ದು ಮರಳೆದ್ದು ಯುದ್ಧವಂ ಮಾಡುತಿರೆ, ಆಸಮಯದಲ್ಲಿ ಗಣಾಧೀಶ್ವರನು ಆದೈತ್ಯನ ಪಾದವಂ ಪಿಡಿದು ಆಕಾಶಕ್ಕೆ ಬೀಸಿಡೆ, ಅವನು ನೆಲದಲ್ಲಿ ಬಿದ್ದು ಕಂತುಕನಂತಾಗಿ ವೇಗದಿಂದೆದ್ದು ಮುಷ್ಟಿಯಿಂದಾತನಂ ಬಡಿದು ಮಾಯೆಯಿಂದ ಅದೃಶ್ಯನಾಗಿ ವಿಷ್ಣುಚಕ್ರವಂ ಬಿಡಲಾಗಿ, ಆಚಕ್ರವು ನಿರಾಯುಧನಾದೊಡಂ ಮಹಾ ಭಯಂಕರನಾದ ಆಗಣಾಧೀಶ್ವರನಂ ನೋಡಿ, ಶೀಘ್ರದಿಂ ಹಿಂತಿರುಗಿ ತನ್ನನ್ನು ಪ್ರಯೋಗಿಸಿದ ದೈತ್ಯನ ಕಂಠವಂ ಛೇದಿಸಿತು. ಎಲೈ ಮುನಿಗಳಿರಾ! ಈಪ್ರಕಾರವಾಗಿ ಆದೈತ್ಯನು ತನ್ನ ಆಯುಧದಿಂದಲೆ ಪ್ರಾಣವಂ

ಬಿಟ್ಟನು. ಬಳಿಕ ಸಮಸ್ತರಾದ ದೈತ್ಯ ಸೇನಾ ನಾಯಕರು ಮಹಾಕೋಪ ಮುಳ್ಳವರಾಗಿ ವೇಗದಿಂ ರಣರಂಗಕ್ಕೆ ಬಂದು, ಭೂತ ಸಮೂಹದಲ್ಲಿ ಮೇಘಂಗ ಳಂತೆ ಬಾಣವರ್ಷವಂ ಸುರಿಸುತ್ತಿರೆ, ಅಬಾಣಘಾತದಿಂ ನೊಂದು ಭೂತಗಣಂ ಗಳು ಸುತ್ತುಮುತ್ತಲು ಓಡಿಪೋದವು. ಆಗ ಶತ್ರುದಂಡಕನಾದ ದಂಡಕ ನೆಂಬ ಗಣಾಧೀಶ್ವರನು ಮಹಾ ಆಯುಧಮುಳ್ಳವನಾಗಿ, ಆಸಮಸ್ತರಾದ ರಾಕ್ಷಸ ರನ್ನು ಬಡಿದು ಬಡಿದು ಓಡಿಸುತ್ತಿರಲಾಗಿ, ಬಹುಮಂದಿ ಮರಣವನ್ನೈದಿದರು. ಮತ್ತೆ ಕೆಲ ದೈತ್ಯರು ಪಾದಪಾಣಿ ಕವಚ ಮಣಿಬಂಧ ವಿಹೀನರಾಗಿ ಮೃತ ರಾದವರಂತೆ ಕಣ್ಗಳಂ ಮುಚ್ಚಿ ಮಲಗಿದರು. ಇನ್ನು ಕೆಲವರು ವಿಗತರಾದ ಕರ್ಣನಾಸಿಕೆಗಳುಳ್ಳವರಾದರು. ಈ ಪ್ರಕಾರವಾಗಿ ಮಹತ್ತರವಾದ ಹಾಹಾ ಕಾರವು ಪುಟ್ಟಿದ ಬಳಿಕ ಭಾನುಕೋಪನದಂ ಕಂಡು ಅಧರೋಷ್ಠವಂ ಕಡಿದು, ಕಟಕಟ!! ನಾನಿವರಂ ಸಂಹರಿಸದಿರ್ದೊಡೆ ಶೂರನಮಗನಲ್ಲೆಂದು ಸಾರಥಿಗೆ ಪೇಳಿ, ಧನುಷ್ಟಂಕಾರವಂ ಗೈದು, ಸ್ವಬಲ ಪರಬಲಂಗಳಂ ವೀಕ್ಷಿಸಿ ಸಾರಥಿ ಯಿಂದ ರಥಕ್ಕೆ ತೀವ್ರಗತಿ ಯುಂಟಾಗುವಂತೆ ಮಾಡಿಸಿ, ಆ ಭೂತಸೇನೆಯ ಮೇಲೆ ಶರಗಳನ್ನು ವರ್ಷಿಸೆ, ಆ ಭೂತಸೇನೆಗಳು "ವೃಕ್ಷ ಪರ್ವತ ಪಾಷಾಣ ಆಯುಧಂಗಳನ್ನು ಭಾನುಕೋಪನ ಮೇಲಿಡೆ, ಆದೈತ್ಯನು ಕೋದಂಡವನ್ನು ಚಕ್ರಾಕೃತಿಯಂ ಮಾಡಿ, ಕೋಟಿ ಬಾಣಂಗಳಿಂದ ಆ ವೃಕ್ಷ ಮುಂತಾದವುಗಳಂ ಛೇದಿಸಿ ಅವರನ್ನು ಛಿನ್ನ ಭಿನ್ನಾಂಗರನ್ನಾಗಿ ಮಾಡಿ, ರಕ್ತ ಪ್ರವಾಹವನ್ನುಂಟು ಮಾಡಿದನು. ಇಷ್ಟರಲ್ಲಿ ಉಗ್ರನೆಂಬ ಗಣಾಧೀಶ್ವರನು ಭೂತಗಳ ಪರಾಭವವಂ ನೋಡಿ, ಆ ಭಾನುಕೋಪನಿ ಗಿದಿರಾಗಿ ದಂಡವಂ ಪಿಡಿದು ಅಟ್ಟಹಾಸವಂ ಮಾಡೆ, ಆದೈತ್ಯನು ಆತನ ಮರ್ಮ ಸ್ಥಾನದಲ್ಲಿ ಕೋಟಿ ಬಾಣಂಗಳಿಂದೆಚ್ಚನು. ಆಗ ಗಣಾಧೀಶ್ವರನು ದಂಡದಿಂದವುಗಳಂ ನಿಷ್ಫಲವಂ ಮಾಡೆ, ದೈತ್ಯನದಂ ಕಂಡು ಗದೆಯಿಂದ ಹೊಡೆಯಲಾಗಿ, ಮರಳಿ ಗಣಾಧೀಶ್ವರನು ದಂಡದಿಂದ ಆಗದೆಯಂ ಹೊಯ್ದು, ಭಾನುಕೋಪನ ರಥಮಂ ಮುರಿದು ತುರಗಂಗಳಂ ಸಂಹ ರಿಸಿದನು. ಎಲೈ, ಮುನಿಗಳಿರಾ! ಮಹಾಬಲಶಾಲಿಯಾದ ಮತ್ತೆ ರಾಕ್ಷಸರೆಂಬ ಅಂಧಕಾರಕ್ಕೆ ಸೂರ್ಯಪ್ರಾಯನಾದ ಉಗ್ರನೆಂಬ ಗಣಾಧೀಶ್ವರನಿಂದ ರಥವು ಭಗ್ನ ವಾಗಲಾಗಿ, ದೈತ್ಯರುಗಳೊಳಗೆ ಉತ್ತಮನಾದ ಭಾನುಕೋಪನು ಮಹಾ ಪ್ರಕಾಶ ಮಾನವಾದ ಮತ್ತೊಂದು ರಥವನ್ನೇರಿ ವೇಗದಿಂ ಬಂದನೆಂದು ಸೂತಂ ನುಡಿದ ನೆಂಬಲ್ಲಿಗೆ, ಯುದ್ಧ ಕಾಂಡದಲ್ಲಿ ಮೂರನೆಯ ಅಧ್ಯಾಯವು ಸಂಪೂರ್ಣಂ.

ನಾಲ್ಕನೆಯ ಅಧ್ಯಾಯವು.

ಭಾನುಕೋಪ ಉಗ್ರ ಮುಂತಾದ ಗಣಾಧೀಶರ ಯುದ್ಧ.

ಅನಂತರದಲ್ಲಿ ಭಾನುಕೋಪನು ಮಹಾ ಕೋಪದಿಂದ ಬಹು ಬಾಣಂಗಳಂ ಬಿಟ್ಟು ಆತನ ದಂಡವಂ ಚೂರ್ಣಂಗೆಯ್ದು, ಮರಳಿ ಆತನ ಶರೀರದಲ್ಲಿ ಶರವರ್ಷಗಳಂ ಸುರಿಸೆ, ಆ ಉಗ್ರನೆಂಬ ಗಣಾಧೀಶ್ವರನು ಕರದಿಂದಾ ಬಾಣಂಗಳಂ ಬಡಿದು ಬಡಿದು ವ್ಯರ್ಥವಂ ಮಾಡಿ, ಮೀನುಗಳು ನದಿಗಭಿಮುಖವಾಗಿ ಪೋಗುವಂತೆ ಆ ಬಾಣಂಗಳಿಗೆ ಯೆದುರಾಗಿ ನಡೆದು, ಆತನಂ ವೆರಸಿದ ರಥವನೆತ್ತಿ ಸೂರ್ಯಮಂಡಲಕ್ಕೆ ಬೀಸಿಡಲಾಗಿ, ಆಗ ಸೂರ್ಯನು ರಥದೊಡನೆ ಬರುತಿರ್ಪ ಆತನಂ ಕಂಡು ಅತ್ಯಂತ ಭೀತನಾಗಿ, ಕಟಕಟ!! ಭಾನುಕೋಪನಿಗೆ ನಾನೇನಪರಾಧವಂ ಮಾಡಿದೆನೆಂದು ಚಿಂತಿಸಿದನು. ತತ್ಕ್ಷಣದಲ್ಲಿಯೆ ಆ ದೈತ್ಯನು ಭಗ್ನರಥನಾಗಿ ಭೂಮಿಯಲ್ಲಿ ಬಿದ್ದು ಶೀಘ್ರದಿಂದೆದ್ದು, ಆ ಗಣಾಧೀಶ್ವರನ ವಕ್ಷಸ್ಥಲದಲ್ಲಿ ತಾಡಿಸಿ ಆತನ ಪಾದಂಗಳಂ ಪಿಡಿದು ಸತ್ಯಲೋಕದ ಪರ್ಯಂತವು ಬೀಸಿಡಲಾಗಿ, ಆ ಗಣಾಧೀಶ್ವರನು (ಪುಣ್ಯಕ್ಷಯದಿಂದ ಸ್ವರ್ಗದಿಂ ಭೂಮಿಗೆ ಬೀಳುವಂತೆ) ಬಿದ್ದು ಮೂರ್ಛಿತನಾದನು. ಬಳಿಕ ದಂಡಿಯೆಂಬ ಗಣಾಧೀಶ್ವರನು ಮಹಾ ಗಿರಿಯಂ ಕಿತ್ತು ಆತನನ್ನು ಪ್ರಹರಿಸಿದವನಾಗಲು, ಆ ದೈತ್ಯನದಂ ಛೇದಿಸೆ, ಮರಳಿ ಗಣಾಧೀಶ್ವರನು ಚೂತವೃಕ್ಷವಂ ಕಿತ್ತು ಆತನ ಸಾರಥಿಯಂ ಬಡಿದು ಸಂಹರಿಸಲಾಗಿ, ಭಾನುಕೋಪನು ಹತ್ತು ಸಾವಿರ ಬಾಣಗಳಿಂದ ಆತನ ಪೆಡತಲೆಯು ಲೆಚ್ಚೆ, ಆ ದಂಡಿಯು ಭೂತಲದಲ್ಲಿ ಬಿದ್ದನು. ಬಳಿಕ ಪಿನಾಕಿಯೆಂಬ ಗಣಾಧೀಶ್ವರನು ಶೀಘ್ರದಿಂ ಬಂದು ತೊಡೆಯಂ ತಟ್ಟಿ ಅಟ್ಟಹಾಸಮಂ ಮಾಡಿ ಭಾನುಕೋಪನಂ ಪಿಡಿಯಲು ಬರೆ, ಅಷ್ಟರಲ್ಲಿಯೆ ಆ ಭಾನುಕೋಪನು ಸಹಸ್ರ ಶರಗಳಂ ಬಿಟ್ಟು ಆತನ ಉದರಮಂ ಭೇದಿಸಿ ಭೂಮಿಯಲ್ಲಿ ಕೆಡಹಿದನು.

ಬಳಿಕ ಸಮಸ್ತ ಭೂತಂಗಳುಂ ಸೇನಾಪತಿಗಳುಂ ಬಂದು ಗರ್ಜನೆಯಂ ಮಾಡುತ್ತ "ಪರ್ವತ, ವೃಕ್ಷ, ಗಂಡಶಿಲೆ, ಗದೆ" ಗಳಿಂದ ಆತನನ್ನು ಹೊಡೆಯೆ ಆ ಭಾನುಕೋಪನು ಅನೇಕ ಶರಗಳಿಂದ ಅವುಗಳಂ ಛೇದಿಸಿ, ಮರಳಿ ಬಹು ಬಾಣಂಗಳಿಂ ಪ್ರಹರಿಸಿ ಅವರನೆಲ್ಲರಂ ಪಲಾಯನಮನೈದಿಸಿದನು. ಅನಂತರದಲ್ಲಿ ಅಖಂಡ ರುದ್ರ ದಂಡಕ ನಿರಂಜನ ಕಪಾಲ ದಂಡಲೋಚನರು ಮೊದಲಾದ ಲಕ್ಷ ವೀರರು ಸುಕುಮಾರ ಶರೀರರಾಗಿ, ಸರ್ವಾಭರಣ ಭೂಷಿತರಾಗಿ ಸಮಸ್ತವಾದ ಆಯುಧಂಗಳಂ ಧರಿಸಿ ಧನುಷ್ಟಂಕಾರವಂ ಮಾಡಿ, ಧನುಶ್ಶಾಸ್ತ್ರೋಕ್ತ ಮಾರ್ಗದಲ್ಲಿ ಶರಸಂಧಾನಂಗಳಂ ಮಾಡಿ ಬಿಡುತ್ತ ಯುದ್ಧವಂ ಮಾಡೆ, ಭಾನು

ಕೋಪನು ಕೋಪದಿಂ ಕೋಟಿ ಸಹಸ್ರ ಬಾಣಂಗಳಂ ಬಿಡಲಾಗಿ, ಆ ವೀರರು ಪ್ರತ್ಯಸ್ತ್ರದಿಂದ ಆತನ ಶರಂಗಳಂ ಭೇದಿಸಿದರು. ಅನಂತರದಲ್ಲಿ ಭಾನುಕೋಪನು ಮಯನಿರ್ಮಿತಂಗಳಾದ ಅನೇಕಕೋಟಿ ಬಾಣಂಗಳಂ ಬಿಡಲಾಗಿ, ಆ ವೀರರು ಅವುಗಳಂ ಛಿನ್ನಾ ಛಿನ್ನಂಗಳಂಮಾಡಿ ಮರಳಿ ಅನೇಕ ಸರಳುಗಳಿಂದ ಪ್ರಹರಿಸಿ ಆತನ ರಥವಂ ಮುರಿದು, ಮತ್ತೆ ಕೆಲ ಬಾಣಂಗಳಿಂದ ಆತನ ಚತುರಂಗ ಬಲ ವನ್ನು ಪಲಾಯನವಂ ಮಾಡಿಸಿ ಸಾವಿರ ಬಾಣಗಳಿಂದ ಸಾರಥಿಯುಂ ಭೂಮಿ ಯಲ್ಲಿ ಕೆಡಹಿದರು. ಆಗ ಭಾನುಕೋಪನು ಮಹಾ ಕೋಪವುಳ್ಳವನಾಗಿ ಮತ್ತೊಂದು ರಥವನೇರಿ ಶತಸಹಸ್ರ ಶರಗಳಿಂದ ಅವರ ಸರ್ವಾಂಗಂಗಳಂ ಖಂಡಿಸಿ ರಣೋತ್ಸಾಹವಂ ಪೋಗಲಾಡಿಸೆ, ಬಳಿಕ ವೀರಸಿಂಹನು ಕೋಲಾಹಳ ವಂ ಮಾಡುತ ಬಂದು ಆತನಮೇಲೆ ಶರವರ್ಷವಂ ಕರೆದನು. ಅನಂತರದಲ್ಲಿ ಭಾನುಕೋಪನು ಸಹಸ್ರಕೋಟಿ ಬಾಣಂಗಳಿಂದಾತನ ಬಾಣಂಗಳಂ ಖಂಡಿಸಿ, ಮರಳಿ ಸಹಸ್ರ ವಜ್ರಗಳಂ ಬಿಡೆ, ಆ ವೀರಸಿಂಹನು ಸಹಸ್ರ ಅಸ್ತ್ರಗಳಿಂದ ಅವು ಗಳಂ ಭೇದಿಸಿ ಆತನ ವಕ್ಷಸ್ಥಲವನ್ನು ಶರಪಂಜರದಿಂದ ಪೂರಿಸಿದನು.

ಎಲೈ ಮುನಿಗಳಿರಾ! ಈ ಪ್ರಕಾರವಾಗಿ ಭಾನುಕೋಪನು ಆತನ ಬಾಣಗ ಳಿಂದ ತಾಡಿತನಾಗಿ ಬಹುವಾಗಿ ನೊಂದು ಕ್ರುದ್ಧನಾಗಿ, ಸರ್ವಶತ್ರು ಸಂಹಾರಕ ವಾದ ನಾರಾಯಣಾಸ್ತ್ರವಂ ಪ್ರಯೋಗಿಸಿ ಆತನಂ ಭೂಮಿಯಲ್ಲಿ ಕೆಡಹಿದನು. ಬಳಿಕ ವೀರಮಾರ್ತಾಂಡನು ಧನುಷ್ಟಂಕಾರವನ್ಮಾಡಿ ಶೀಘ್ರದಿಂಬರೆ, ಭಾನು ಕೋಪನಾತನಂ ಕಂಡು ಬಾಣಂಗಳಂ ಬಿಟ್ಟು ಆತನ ಧನುವನ್ನು ನಾರಿಯನ್ನು ಕತ್ತರಿಸಿ, ಕೆಲವು ಬಾಣಗಳಿಂದ ಲಲಾಟದಲ್ಲಿ ಹೊಡೆದು, ಮರಳಿ ಹಿಡಿದ ಧನುವಂಭೇದಿಸಿ, ಆ ವೀರಮಾರ್ತಾಂಡನ ರಥಾಶ್ವಂಗಳಂತಾಡಿಸಿ ಭೂಮಿಯಲ್ಲಿ ಕೆಡಹಿ ಶತಸಹಸ್ರ ಬಾಣಂಗಳಿಂದಾತನಂ ನೊಯ್ಯಿಸೆ, ಆತನು ಅಟ್ಟಹಾಸವ ನ್ಮಾಡುತ್ತ ರಥದಿಂ ಲಂಘಿಸಿ ಆತನ ಉರದಲ್ಲಿ ಬಿಟ್ಟು ಚಾಪವುಂ ಮುರಿಯ ಲಾಗಿ, ಆ ಭಾನುಕೋಪನು ಖಡ್ಗಮಂ ಹಿಡಿದು ಆತನ ಕಪೋಲವುಂ ತಿವಿಯೆ, ಆತನು ಖಡ್ಗದಿಂದ ಆ ದೈತ್ಯನ ವಕ್ಷಸ್ಥಲವಂ ಕಡೆದು ಆತನ ಕವಚವುಂ ಕತ್ತರಿಸಲಾಗಿ, ಮರಳಿ ಭಾನುಕೋಪನು ಖಡ್ಗದಿಂದ ವಕ್ಷಸ್ಥಲವಂ ಹಣೆಯುಂ ಹೊಯ್ದು, ಆ ವೀರಮಾರ್ತಾಂಡನಂ ಭೂಮಿಯಲ್ಲಿ ಕೆಡಹಿದನು. ಬಳಿಕ ವೀರ ರಾಕ್ಷಸನೆಂಬ ಗಣಾಧೀಶ್ವರನು ವೇಗದಿಂ ಬಂದು ಸಹಸ್ರಾಸ್ತ್ರಂಗಳಂ ಬಿಡೆ, ಭಾನುಕೋಪನು ಅಟ್ಟಹಾಸಮನ್ಮಾಡಿ ತನಗೆ ಅಭಿಮುಖವಾಗಿ ಬರುವ ಬಾಣಂ ಗಳಂ ಭೇದಿಸಿ, ಕೆಲಂಬ ಶರಂಗಳಿಂದ ಆತನ ಸಾರಥಿಯಂ ಕೊಲ್ಲಲಾಗಿ, ಆ ವೀರರಾಕ್ಷಸನು ಮತ್ತೋರ್ವ ಸಾರಥಿಯುಂ ಕರೆಯಿಸಿ, ವೇಗದಿಂನಿಶಿತಂಗಳಾದ

ಸಹಸ್ರ ಬಾಣಂಗಳಿಂದ ಭಾನುಕೋಪನ ಕಿರೀಟಮಂ ಕೆಡಹೆ, ಆ ದೈತ್ಯನು ಲಜ್ಜಾಯುತನಾಗಿ ಮತ್ತೊಂದು ಕಿರೀಟಮಂ ಧರಿಸಿ, ಶರದಿಂದಾತನ ಧನುವಂ ಕತ್ತರಿಸಿ ಪ್ರತಿ ಧನುವಂ ಪಿಡಿಯಲೀಸದೆ ಆತನ ರಥವಂ ಖಂಡಿಸಿದನು. ಬಳಿಕ ವೀರರಾಕ್ಷಸನು ಮತ್ತೊಂದು ರಥವನ್ನೇರಿ ಧನುವಂ ಸಂಧಾನಮಾಡೆ, ಭಾನುಕೋಪನು ಶರಗಳಿಂದಾತನ ಶಕ್ತಿಯುಂ ಖಂಡಿಸಲಾಗಿ, ಆ ವೀರರಾಕ್ಷಸನು ದೈತ್ಯಸಹಿತಮಾದ ರಥಕ್ಕೆ ಆಕಾಶವನ್ನೈದಿಸೆ, ಆ ದೈತ್ಯನು ಅಲ್ಲಿಯೆ ನಿಂತು ಅಟ್ಟಹಾಸವಮ್ಮಾಡಿ, ಆತನ ವಕ್ಷಸ್ಥಲದಲ್ಲಿ ಶಕ್ತಿಯುಂ ಬಿಟ್ಟು ಆತನಂ ಭೂಮಿಯಲ್ಲಿ ಮಲಗಿಸಿದನು. ಅನಂತರದಲ್ಲಿ ವೀರಾಂತಕನು ವೀರಮಹೇಶ್ವರನು ವೀರ ಮಾಹೇಂದ್ರ ವೀರರು ಆ ಕೃತ್ಯಮಂನೋಡಿ ವೀರಪುರಂದರನೊಡನೆ ರಣಾಂ ಗಣಕ್ಕೆ ಬಂದರೆಂದು ಸೂತಂ ಶೌನಕಾದಿಮುನಿಗಳಿಗೆ ಪೇಳಿದನೆಂಬಲ್ಲಿಗೆ,

ಯುದ್ಧಕಾಂಡದಲ್ಲಿ ನಾಲ್ಕನೆಯ ಅಧ್ಯಾಯ ಸಂಪೂರ್ಣಂ.

ಐದನೆಯ ಅಧ್ಯಾಯವು.

ಭಾನುಕೋಪನ ವೀರಾಂತಕ ವೀರಪುರಂದರಾದಿ ಗಣಾಧಿಪರ ಯುದ್ಧವು.

ಎಲೈ ಋಷಿಗಳಿರಾ! ಅನಂತರದಲ್ಲಿ ಕಾರ್ಮುಕಪಾಣಿಯಾದ ವೀರಾಂತಕ ನೊದಲಾದ ಐದುಮಂದಿ ವೀರರು ಪೊರಮಟ್ಟು, ಮೇಘದಂತೆ ಘರ್ಜಿಸಿ, ಶರ ಜಾಲಂಗಳಂ ವರ್ಷಿಸಲಾಗಿ, ಭಾನುಕೋಪನು ನಾನಾಲಂಕಾರಮಾದ ರಥವ ನ್ನೇರಿ ಬಹು ಶರವರ್ಷಗಳಂ ಕರೆದನು. ಹೀಗೆ ಆ ಪಂಚವೀರರು ಆತನೊಡನೆ ಯುದ್ಧವಮ್ಮಾಡಿ, ಶರಗಳಿಂನೊಂದು ಅವರೊಳಗಿರ್ವರು ಭಗ್ನರಥರಾದರು. ಮತ್ತೀರ್ವರು ಭಯಪಟ್ಟರು. ಓರ್ವನು ಮೂರ್ಛಿತನಾದನು. ಆ ಸಮಯದಲ್ಲಿ ಅಸುರ ಸೇನೆಯು ಮೂರ್ಛಿತರಾದವರಂ ಕಂಡು, ಅತಿ ವೇಗದಿಂ ಬಂದು ಅಟ್ಟ ಹಾಸವಮ್ಮಾಡಲಾಗಿ, ಮಹಾ ಬಲನಾದ ವೀರಬಾಹುವು ಹೃದಯವೆಂಬ ಸರೋಜ ದಲ್ಲಿ ಕುಮಾರನಂ ಧ್ಯಾನವಮ್ಮಾಡಿ, ವೇದಾಂತ ವಾಕ್ಯಗಳಿಂ ಗುಹನಂ ಸ್ತೋತ್ರವಮ್ಮಾಡುತ, ಶೀಘ್ರದಿಂಬಂದು ಪಿನಾಕಪಾಣಿಯಾದಂಥಾ ಪರಮೇ ಶ್ವರನಂತೆ ಧನುರ್ಬಾಣಗಳಂ ಧರಿಸಿ, ನಾರಿಯುಂ ಮಿಡಿದು ಅಟ್ಟಹಾಸವಮ್ಮಾಡಿ ದಾಗ ಸಮಸ್ತ ಜನರು ಆಶ್ಚರ್ಯವನ್ನೈದಿ, ಆ ಕಾಲದಲ್ಲಿ ಬ್ರಹ್ಮಾಂಡ ವೊಡೆ ಯಿತೋ ಪ್ರಳಯಕಾಲ ಸಮುದ್ರಧ್ವನಿಯೋ ಎಂಬದಾಗಿ, ಮತ್ತೆ ಮೃಗಗಳು ವ್ಯಾಘ್ರವೆಂಬದಾಗಿಯೂ, ವ್ಯಾಘ್ರವು ಗಜಗಳೆಂಬದಾಗಿಯೂ, ಗಜಗಳು ಸಿಂಹ

ವೆಂಬದಾಗಿಯೂ, ಸಿಂಹಗಳು ಶರಭಧ್ವನಿಗಳೆಂಬದಾಗಿಯು ಈ ಪ್ರಕಾರದಿಂ ಸಮಸ್ತರು ಭಯಪಟ್ಟು ಹೋಡಿದರು, ಮೃಗಜಾತಿಗಳು ಸಹಾ ತಮ್ಮ ತಮ್ಮ ಸ್ಥಾನಂಗಳಂ ಬಿಟ್ಟು ಓಡಿ ಪೋದವು.

ಬಳಿಕ, ಭಾನುಕೋಪನು ನಾರಿಯಂ ಮೀಟಿದರೆ ಪೂರ್ವದೋಪಾದಿಯಲ್ಲಿ ಸಮಸ್ತರಿಗೂ ಆಶ್ಚರ್ಯಕರವಾದ ಶಬ್ದವು ಪುಟ್ಟಿದುದು. ಮತ್ತಂ ಭಾನುಕೋಪನು ಮಹಾ ಬಲನಾದ ವೀರಬಾಹುವನ್ನೋಡಿ, ಎಲೈ ನೀನು ಬ್ರಹ್ಮನಲ್ಲ, ವಿಷ್ಣುವಲ್ಲ, ಗುಹನಲ್ಲ, ಇಂದ್ರನಲ್ಲ, ನೀನೊಬ್ಬನ ದೂತನು, ನಿನಗೇತಕಿಷ್ಟು ಗರ್ವವು, ಪೂರ್ವದಲ್ಲಿ ನೀನು ಮಾಯಾಬಲದಿಂ ಸಮಸ್ತರಂ ಮರವೆಯಮ್ಮಾಡಿ ಓಡಿಪೋದೆಯಲ್ಲಾ? ಆಗ ನಾನು ದೂತನೆಂದು ನಿನ್ನ ಪರಿಹರಿಸಿದೆನು. ಈಗ ನನ್ನ ಬಲವನ್ನೋಡು, ಪಲಾಯನನಾದವರಂ ಮೃತರಾದ ಕೆಲವರನ್ನೋಡು, ಈಗಲೆ ನಾನು ನಿನ್ನಂ ಜಯಿಸಿ, ನಿನ್ನವರಾದ ಸಮಸ್ತ ದೇವತೆಗಳಂ ನಿಗಳ ಬಂಧನವಮ್ಮಾಡಿಸುವದಕ್ಕೆ ಸಂದೇಹವಿಲ್ಲಾ, ಎಂದು ಪೇಳುತಿರ್ಪ ವಚನವಂ ಕೇಳಿ, ವೀರಬಾಹುವು ಎಲೆ ಎಲೆ ದೈತ್ಯನೆ! ನೀನು ಯೇನನ್ನು ಪೇಳುತಲಿರ್ದಿ? ಯುದ್ಧಕ್ಕೆ ಬಂದ ಸಮಯದಲ್ಲಿ ನನ್ನನ್ನು ದೂತನೆಂದು ಪೇಳುವುದು ನಿನಗೆ ಯೋಗ್ಯವಲ್ಲಾ, ದೂತನಲ್ಲಿ ಬಲ ಶೌರ್ಯಗಳಿಲ್ಲವೆಂದು ಆರು ಕಂಡರು? ಇಂಥಾ ಅಹಂಕಾರವಂ ಬಿಟ್ಟು ನನ್ನೊಡನೆ ಯುದ್ಧವಮ್ಮಾಡು, ಎಂದು ಪೇಳಿದನು. ಬಳಿಕ ಭಾನುಕೋಪನು ಕೋಪದಿಂದ ದಶಬಾಣಂಗಳಂ ಬಿಡೆ, ವೀರಬಾಹುವು ಆ ರೀತಿಯಲ್ಲಿಯೆ ದಶಬಾಣಂಗಳಂ ಬಿಟ್ಟು ಅವಂ ಛೇದಿಸಿದನು. ಮರಳಿ ಭಾನುಕೋಪನು ಶತಶರಂಗಳಿಂದೆಚ್ಚೆ ಶತಬಾಣಂಗಳಿಂದವುಗಳಂ ಛೇದಿಸಿದನು. ಮರಳಿ ಭಾನುಕೋಪನು ಸಹಸ್ರ ಬಾಣಗಳಂ ಪ್ರಯೋಗಿಸೆ, ವೀರಬಾಹುವದಂ ಖಂಡಿಸಿದನು. ಮರಳಿ ಭಾನುಕೋಪನು ದಶಸಹಸ್ರ ಬಾಣಂಗಳಂ ಕರೆಯೆ, ವೀರಬಾಹುವು ದಶಸಹಸ್ರ ಬಾಣಂಗಳಿಂ ಕತ್ತರಿಸಿದನು. ಭಾನುಕೋಪನು ಲಕ್ಷ ಬಾಣಗಳಂ ಬಿಡೆ, ವೀರಬಾಹುವು ಲಕ್ಷ ಬಾಣಂಗಳಿಂದವಂ ಖಂಡಿಸಿದನು. ಮರಳಿ ಭಾನುಕೋಪನು ದಶಲಕ್ಷ ಶತಲಕ್ಷ ಸಹಸ್ರಲಕ್ಷ ಅಸಂಖ್ಯಾತ ಬಾಣಂಗಳಂ ವರ್ಷಿಸೆ, ಕ್ರಮದಿಂ ವೀರಬಾಹುವು ಆ ಬಾಣಂಗಳನ್ನೆಲ್ಲವಂ ಛೇದಿಸಿದನು. ಈ ಪ್ರಕಾರದಿಂ ಅನ್ಯೋನ್ಯ ಯುದ್ಧವುಂಟಾಗುತ್ತಿರಲು, ಧನುವಿನ ನಾರಿಯ ಧ್ವನಿಯೆಂಬ ಘರ್ಜನೆಯಿಂ ಪತಿಭಯಂಕರವಾಗಿ, ಶರಸಹಸ್ರ ಸಮೂಹ ಪ್ರಭೆಯೆಂಬ ಮಿಂಚುಗಳಿಂದಾವೃತಮಾದ ಬಾಣಸಮೂಹವೆಂಬ ವೃಷ್ಟಿಗಳಿಂ ದಿಕ್ಕುಗಳಂ, ಸೂರ್ಯಮಂಡಲಗಳಂ ಮರೆಸಿದಂಥಾ, ಶರಗಳೆಂಬ ನದಿಗಳ ಮಧ್ಯದಲ್ಲಿ ತಿರುಗುತಿರ್ಪ ರಥಗಳೆಂಬ ಪರ್ವತಗಳುಳ್ಳಂಥಾ, ಬಾಣಗಳ

ಪ್ರಭಾಸಮೂಹದಿಂದನ್ಯೋನ್ಯ ಗುರುತುಗಳಿಲ್ಲದಂಥಾ, ಕಾಪಿಲ್ಲದ ಸತ್ರಿಗೆಯೇ ನೊರೆಯಾದಂಥಾ, ಅನಿಮಿಷರಾದ ದೇವತೆಗಳಿಂದ ಕಾಣಲಶಕ್ಯವಾದಂಥಾ ದುರ್ದಿನವು ಪೋಗಲಾಗಿ, ಭಾನುಕೋಪನು ವೀರಬಾಹುವಿನಿಂದ ಬಿಡಲ್ಪಟ್ಟ ಬಾಣಗಳಂ ಕಡಿದು, ದಶಬಾಣಗಳಿಂದಾತನ ಶರಾಸನವಂ ಛೇದಿಸಿ, ಅಟ್ಟಹಾಸವ ಮ್ಮಾಡೆ, ವೀರಬಾಹುವಿನ ಧನುವಂ ಪಿಡಿದು, ಆತನ ಧನುವಂ ಛೇದಿಸೆ, ಭಾನುಕೋಪನು ಅನ್ಯ ಧನುವಂ ಧರಿಸಿ, ಮಹತ್ತಾದ ಧ್ವನಿಯನ್ಮಾಡಿ ಆತನ ಉರಮಂ ಸಹಸ್ರ ಬಾಣಂಗಳಿಂದೆಚ್ಚೆ, ವೀರಬಾಹುವು ಸಪ್ತ ಬಾಣಂಗಳಿಂದಾತನ ಮುಕುಟವಂ ಖಂಡಿಸಿ ಕೆಡಹೆ, ಸೂರ್ಯನು ಆತನಂ ಕಂಡು ಹಾಸ್ಯವ ಮ್ಮಾಡಿದನು. ಬಳಿಕ ಭಾನುಕೋಪನು ಅತ್ಯಂತ ಕೋಪದಿಂ ಆತನ ಹಣೆಯಲ್ಲಿ ಸಹಸ್ರ ನಾರಾಚಂಗಳಂ ಕರೆಯೆ, ವೀರಬಾಹುವು ಹಣೆಯಲ್ಲಿಟ್ಟ ಬಾಣಂಗಳಂ ತೆಗದಿಟ್ಟು ಮರಳಿ ನಾರಿಯಂ ಪಿಡಿದು ಅಟ್ಟಹಾಸನಮ್ಮಾಡಿ, ಆತನ ಉರಸ್ಸು ಮುಖ ಬಾಹುಸಂಧಿ ಹಸ್ತಯುಗಳಗಳಲ್ಲಿ ಪ್ರತ್ಯೇಕ ಪ್ರತ್ಯೇಕಮಾಗಿ ಬಾಣ ಸಹಸ್ರಂಗಳಂ ಪರ್ಚಿಸೆ, ಭಾನುಕೋಪನು ಆ ಶರಂಗಳನ್ನೊಂದು, ಧನುವಿನ ಕೊಪ್ಪಿನಲ್ಲಿ ತೋಳಂ ಯಿರಿಸಿ, ಮೂರ್ಛಿತನಾದನು. ಆಗ ಆತನ ಶರೀರದಲ್ಲಿ ಬಾಣಗಳು ಮುತ್ತುಗದ ಮರವು ಹೂವಾದಂತೆ ಪ್ರಕಾಶಿಸಿದವು. ಬಳಿಕ ಸಮಸ್ತ ದೈತ್ಯರು ವೊಂದೇ ಸಮಯದಲ್ಲಿ ಶರಜಾಲಂಗಳಂ ಕರೆಯೆ, ವೀರಬಾಹುವು ಹೃದಯದಲ್ಲಿ ಗುಹನಂ ಧ್ಯಾನಿಸಿ, ಸಹಸ್ರ ಬಾಣಂಗಳಂ ಬಿಟ್ಟು, ಆ ಶರಂಗಳಂ ಖಂಡಿಸಿ, ತ್ರಿಪುರಮರ್ದನನಂತೆ ಅನೇಕ ಕೋಟಿ ಬಾಣಂಗಳಿಂ ದೈತ್ಯರಂ ಸಂಹರಿಸಲಾಗಿ, ಕೆಲದೈತ್ಯರ ಶಿರಸ್ಸುಗಳು ಬಾಣಗಳಿಂ ಕತ್ತರಿಸಲ್ಪಟ್ಟು ಸಮುದ್ರದಲ್ಲಿ ಬಿದ್ದವು. ಕೆಲಬರ ಶಿರಗಳು ನದಿಗಳೋಳ್ ಬಿದ್ದವು, ಮತ್ತೆ ಕೆಲಬರ ಶಿರಗಳು ದ್ವೀಪದ್ವೀಪಗಳಲ್ಲಿ ಬಿದ್ದವು. ಕೆಲಬರ ಶಿರಗಳು ಅಂಡಕಟಾಹಕ್ಕೆ ಪೋದವು, ಮತ್ತೆ ಕೆಲಬರ ಶಿರಂಗಳು ತಮ್ಮ ಸ್ತ್ರೀಪುತ್ರಾದಿಗಳ ಮುಂದೆ ಬಿದ್ದವು. ಎಂದು ಶೌನಕಾದಿಗಳ್ಗೆ ಸೂತಂ ಪೇಳ್ದನೆಂಬಲ್ಲಿಗೆ, ಯುದ್ಧಕಾಂಡದೋಳ್ ಐದನೆಯ ಅಧ್ಯಾಯವು ಸಮಾಪ್ತಮಾದುದು.

ಆರನೆಯ ಅಧ್ಯಾಯವು.

ರಣರಂಗದ ವರ್ಣನೆ ಮತ್ತು ಭಾನುಕೋಪನ ಪ್ರತಾಪ.

ಎಲೈ ಋಷಿಗಳಿರಾ! ಆ ಸಮಯದಲ್ಲಿ ಅನೇಕ ಕಬಂಧಗಳೆದ್ದು ನರ್ತನವನ್ಮಾಡಿದವು. ಆ ರಣಾಗ್ರದಲ್ಲಿ ಮಾಂಸಗಳೇ ಕೆಸರಾಗಿಯೂ ಕೇಶವೇ

ಪಾಶವಾಗಿಯೂ, ಸತ್ತಿಗೆಯೇ ನೊರೆಯಾಗಿಯು ಶಿರಗಳೇ ಪಾಷಾಣ ಪಂಗ್ತಿ ಯಾಗಿಯುಂ, ರಕ್ತವೇ ನದಿಯಾಗಿಯು ಹರಿವುತ್ತಿರೆ, ಶ್ಯೇನ, ಕಾಕ, ಕಂಕ, ಶ್ವಾನ, ನರಿ ಮೊದಲಾದ ಪಕ್ಷಿಮೃಗಂಗಳಿಂ ಪ್ರೇತಂಗಳಿಂ ಪಿಶಾಚಂಗಳಿಂ ಮಾಂಸಾ ಕಾಂಕ್ಷೆಯಿಂದ ಆ ರಣಭೂಮಿಯು ನಿಬಿಡಿತವಾಗೆ, ವೀರಬಾಹುವಿನ ಕೋಪಾಗ್ನಿಯಿಂದ ಸುರಸೇನೆಯು ಮೃತವಾದುದು. ಆ ಸಮಯದಲ್ಲಿ ಭೂತ ಸೇನೆಯು ಪೂರ್ವದಲ್ಲಿ ರಣಮೊೞ್ ಬಿದ್ದಿರ್ಪ ವೀರರ ಮೂರ್ಛೆಯಂ ತಿಳಿಹಿ, ಸಮಸ್ತರೂ ಏಕವಾಗಿ ಕೂಡಿ ನೃತ್ಯಗಾನಗಳಲ್ಲಿ ತತ್ಪರರಾಗಿ, ಅನ್ಯೋನ್ಯ ಪರಿ ಹಾಸಕವಮ್ಮಾಡುತ್ತಿರೆ, ಭಾನುಕೋಪನು ಕೋಪವಂ ಬಿಟ್ಟು ಮೃತರಾದ ತನ್ನ ಸೇನೆಯಂ ಜಯಮುಖರಾದ ಭೂತಸೇನೆಯಂ ನೋಡಿ, ಮನದಲ್ಲಿ ಚಿಂತಿಸಿ ಸಮಸ್ತರು ತನ್ನಿಂದ ಪಲಾಯಿತರಾದೊಡಂ ಈತನೋರ್ವನೆ ಮಹಾವೀರನು. ಈತಂಗೆ ಸಮಾನರಾರು ಇಲ್ಲ. ವೊಂದು ಘಳಿಗೆಯಲ್ಲಿ ಈತನಂ ಸಂಹರಿಸುತಿರ್ಪೆ ನೆಂದು ಪ್ರತಿಜ್ಞೆಯಮ್ಮಾಡಿ, ಸಿಂಹದಂತೆ ಘರ್ಜಿಸಿ ಮೂರು ಕವಲಾದ ಸಹಸ್ರ ಬಾಣಗಳಂ ಬಿಡೆ, ವೀರಬಾಹುವು ಪ್ರತ್ಯಸ್ತ್ರದಿಂದವುಗಳಂ ಛೇದಿಸಿ, ಮರಳಿ ಸಹಸ್ರ ಶರಗಳಂ ದೈತ್ಯರ ಮೇಲೆ ಬಿಟ್ಟನು. ಬಳಿಕ ಭಾನುಕೋಪನು ಅವಂ ಕಳಿದು ನಿಶಿತವಾದ ಸಹಸ್ರ ಶರಂಗಳಂ ಬಿಟ್ಟು ರಥಾಶ್ವಗಳಂ ಸಾರಥಿಯಂ ಸಂಹರಿಸೆ, ವೀರಬಾಹುವು ಅನ್ಯರಥವನ್ನೇರಿ ಕೋಪದಿಂ ಶರದ್ವಯವಂ ಬಿಟ್ಟು, ಆತನ ರಥಾಶ್ವ ಸಾರಥಿ ಧನುವಂ ಖಂಡಿಸಿದನು. ಮರಳಿ ಭಾನುಕೋಪನು ಇತರವಾದ ರಥವನ್ನೇರಿ ಮಹತ್ತಾದ ಕೋದಂಡವಂ ಪಿಡಿದು, ಸಪ್ತಶತ ಸಂಖ್ಯೆ ಯಾದ ವಜ್ರಸಮಾನವಾದ ಅಸ್ತ್ರಗಳಂ ಬಿಡೆ, ವೀರಬಾಹುವು ಕಿಂಚಿತ್ ಖಿನ್ನ ನಾಗಿ ಹದಿನಾಲ್ಕು ಬಾಣಂಗಳಿಂದ ಆತನ ಧನುವ ಛೇದಿಸಿ, ದೈತ್ಯಕುಂಜರನು ಕಂಪಿಸುವಂತೆ ಸಿಂಹನಾದವಮ್ಮಾಡಿ, ಮರಳಿ ಸಹಸ್ರ ಬಾಣಗಳಂ ಬಿಟ್ಟು ಆತನ ರಥತುರಗಗಳಂ ಕೊಂದು, ಪುನಃ ಸಹಸ್ರ ಶರಗಳಿಂದಾತನ ಉರವಂ ಛೇದಿಸಿ, ಮತ್ತು ಸಾವಿರ ಬಾಣಗಳಿಂದ ಆತನ ಬತ್ತಳಿಕೆಯಂ ಛೇದಿಸಿದನು. ಬಳಿಕ ಭಾನುಕೋಪನು ಮಹತ್ತಾದ ಮತ್ತೊಂದು ರಥವನ್ನೇರಿ ಧನು ರ್ವಿದ್ಯೆಯಿಂದೀತನಂ ಜಯಿಸಕೂಡದೆಂದು ನಿಶ್ಚಯಿಸಿ, ಭಯಂಕರವಾದ ಅಂಧ ಕಾರಮಯಮಾದ, ದಶದಿಕ್ಕುಗಳನ್ನಾವರಿಸಿದಂಥ ಮಹಾ ಮಾಯೆಯನ್ನು ಮಾಡುವ, ಮೋಹಕ್ಕೆ ಮೋಹಕರಮಾದ ಭಯಕ್ಕೆ ಭಯವಾದಂಥ, ಸರ್ವರಿಗು ವ್ಯಾಮೋಹವಮ್ಮಾಡುವ ಸಂಮೋಹನಾಸ್ತ್ರವಂ ತೆಗೆದು ಮನದಿಂದ ಮಂತ್ರಿಸಿ, ವೀರಬಾಹುವಿನ ಮೇಲೆ ಬಿಡಲಾಗಿ, ಸರ್ವಭೂತಂಗಳು ಗಣಂಗಳು ಘೋರ ಮಾದ ಯುದ್ಧಗಳಂ ಬಿಟ್ಟು, ಅದಂ ಛೇದಿಸಿ, ಇದೇನೆಂದು ಚಿಂತಿಸುತ್ತಾ,

ಮರಳಿ ತೀಕ್ಷ್ಣಂಗಳಾದ ಅಸ್ತ್ರಂಗಳಂ ಬಿಟ್ಟು ಅದಂನೋಡೆ, ಸ್ತಂಭಗಳಂತೆ ಮೈಮರೆದು ರಥಿಕರು ರಥಂಗಳ ಮೇಲು ಅಶ್ವಸಾರಥಿಗಳು ಕುದುರೆಗಳ ಮೇಲು ಗಜಾರೂಢರು ಗಜಗಳ ಮೇಲೂ, ಹೀಗೆ ಅಲ್ಲಲ್ಲಿ ಬಲದೊಡನೆ ಸ್ವಲ್ಪ ಹೊತ್ತಿನ ಮೇಲೆ ಜಯಿಸಲು ಯೋಗ್ಯ ರಂತೆ ನಿದ್ರಿತರಾದರು. ಮರಳಿ ಭಾನು ಕೋಪನು ಆ ಅಸ್ತ್ರದಿಂದವರೊಳು ಬಹು ಬಾಣಂಗಳಂ ಬಿಟ್ಟು, ಅವರ ಶರೀರಂಗಳಂ ರಕ್ತಮಯಮಮ್ಮಾಡೆ, ಸಮಸ್ತ ಭೂತಗಣ ವಾಸಿಯಾದ ದಯಾನಿಧಿಯಾದಂಥ ಸುಕುಮಾರಶರೀರಿಯಾದ ಸಚ್ಚಿದಾನಂದ ವಿಗ್ರಹ ನಾದ, ಹೇಮಕೂಟ ಪುರದೊಳು ದಿವ್ಯಸಿಂಹಾಸನಾಸೀನನಾಗಿ ದೇವ ಗಣ ಸೇವಿತನಾದ ಕುಮಾರಸ್ವಾಮಿಯು, ಈ ಪ್ರಕಾರಮಾದುದಂ ತಿಳಿದು ಮಹಾ ಘೋರಮಾದ ಅಮೋಘಾಸ್ತ್ರಮಂ ಬಿಡೆ, ಆ ಅಸ್ತ್ರವು ಪ್ರಭಾ ಸಮೂಹದಿಂದದಂ ತಿರಸ್ಕರಿಸಿತು. ಅನಂತರದಲ್ಲಿ ವೀರಬಾಹು ಮೊದಲಾದ ಸಮಸ್ತ ವೀರರು ಸಮಸ್ತ ಭೂತಸೇನಾಪತಿಗಳು ನಿದ್ರೆಯಿಂ ತಿಳಿದೆದ್ದವರಂತೆ ಮೋಹದಿಂ ಬಿಡಲ್ಪಟ್ಟರು. ಎಲೈ ಮುನಿಗಳಿರಾ! ಈ ಪ್ರಕಾರಮಾಗಿ ಅಮೋ ಘಾಸ್ತ್ರವು ಇವರನ್ನೆಲ್ಲರನ್ನೆಬ್ಬಿಸಿ ಸ್ವಾಮಿಯ ಸಮೀಪವನ್ನೈದಿತು.

ಅಮೋಘಾಸ್ತ್ರದಿಂದ ಭಾನುಕೋಪನ ಸೋಲು.

ಬಳಿಕ ಸಮಸ್ತ ವೀರರು ಎದ್ದು ಲಜ್ಜೆಯಂತರಾಗಿ ತಮಗೆ ಪರಾಕ್ರಮ ವೇನಿರುವದು? ಷಣ್ಮುಖಸ್ವಾಮಿಯ ಕೃಪೆಯಿಂದ ನಾವೆಲ್ಲರು ರಕ್ಷಿಸಲ್ಪಟ್ಟೆವೆಂದು ಆ ಸ್ವಾಮಿಯಂ ಸ್ತುತಿಸಿ ಎಲ್ಲರು ಯುದ್ಧಕ್ಕೆ ಸನ್ನದ್ಧರಾಗೆ, ವೀರಬಾಹುವು ಆ ದೈತ್ಯನಂ ಸಂಹರಿಸಲು ಪಾಶುಪತಾಸ್ತ್ರಮಂ ಬಿಡೆ, ಭಾನುಕೋಪನದಂ ಕಂಡು ಇದಕ್ಕೆ ಪ್ರತ್ಯಸ್ತ್ರಮಂ ತರಲಿಲ್ಲವು, ಶೀಘ್ರದಿಂ ಗೃಹಕ್ಕೆ ಪೋಗಿ ಪಾಶುಪತಾಸ್ತ್ರಮಂ ತರಬೇಕೆಂದು ಚಿಂತಿಸಿ, ಸೂಕ್ಷ್ಮರೂಪಮಂ ಧರಿಸಿ, ರಥಮಂ ಬಿಟ್ಟು ದೈತ್ಯರಿಂ ನಿಬಿಡಮಾದ ಪುರಮಂ ಪ್ರವೇಶಿಸಿ, ಚಾವಡಿಗಳಲ್ಲಿ ಗಾನಮಂ ಮಾಡುವವರಂ ಪಗಡೆಯಾಡುವವರಂ ನೋಡುತ ನಾನಾರತ್ನಗಳಿಂದ ವಿಚಿತ್ರರಾಗಿ ಮನೋಹರ ಕಾಯರಾದಂಥ ಸ್ತ್ರೀಯರಿಂದಾವೃತಮಾದ ತನ್ನ ಅಂತಃಪುರಮಂ ಪೊಕ್ಕಲು ಅವರು ನಾನಾ ಉಪಚಾರಂಗಳಂ ಮಾಡಿದೊಡಂ ಖಿನ್ನನಾಗಿಯೆ ಚಿಂತಿಸು ತಿರ್ದನು. ಇಲ್ಲಿ ಭೂತಸೇನಾಪತಿಗಳು ಅಟ್ಟಹಾಸಮಂ ಮಾಡಿದರು. ದೇವತೆ ಗಳು ಪೂಮಳೆಯಂ ಗರೆದರು. ದೇವದುಂದುಭಿಗಳು ಮೊಳಗಿದವು. ಆಗ ಭೂತಗಣಂಗಳು ದೈತ್ಯನಂ ಹಿಡಿದು ಸೇನಾಮಧ್ಯಕ್ಕೆ ತರಬೇಕೆಂದು ವೀರಬಾಹು ವಿಗೆ ಪೇಳೆ ವೀರಬಾಹುವದಂ ಕೇಳಿ, ಎಲೈ ಭೂತಗಣಂಗಳಿರಾ! ನೀವು ಯುದ್ಧ ಸನ್ನದ್ಧರು, ರಣದಲ್ಲಿ ಪಲಾಯನನನ್ನೈದಿದವರಂ ಅವಮಾನವಂ ಮಾಡಬಾರ

ದೆಂದು ಬಲ್ಲವರು ನುಡಿವರು. ಅದುಕಾರಣದಿಂ ಮರಳಿ ಬಂದವನಾದೊಡೆ, ಸಂಹಾರವಂ ಮಾಡುವೆನೆಂದು ಪೇಳಿದನು. ಅದಂ ಕೇಳಿ ಭೂತಸೇನೆಗಳು ಸಂತೋಷಚಿತ್ತರಾಗಿ ತಮ್ಮ ಪುರಕ್ಕೆ ಪೊರಟುಬಿಟ್ಟರು. ಎಲೈ ಮುನಿಗಳಿರಾ! ಜಗತ್ಪ್ರಕಾಶಮಾನನಾದ ಸೂರ್ಯನು ಭಾನುಕೋಪನಿಗೆ ಸಂಭವಿಸಿದ ಈ ಪ್ರಕಾರ ಮಾದ ಅಪಜಯವನ್ನು ನೋಡಿ, ಭೀತಿಯೆಂಬ ಕರಿದಿಂದ ಲೇಪನಮಾಡಲ್ಪಟ್ಟ ಕಿರಣಂಗಳುಳ್ಳವನಾಗಿ ಮಹತ್ತರವಾದ ಪಶ್ಚಿಮ ಸಮುದ್ರವನ್ನೈದಿದವನಾಗಲು, ಆಗ ಮರಳಿಯು ಸಮಸ್ತರಾದ ಆ ವೀರರು ಸಮಸ್ತರಾದ ದೈತ್ಯರನ್ನು ಸಂಹರಿಸಿ ವೇಗದಿಂ ಕುಮಾರಸ್ವಾಮಿಗೆ ಆವಾಸಸ್ಥಾನವಾದ ಪ್ರದೇಶವನ್ನೈದಿದರೆಂದು ಶೌನಕಾದಿಮುನಿಗಳಿಗೆ ಸೂತಂ ಪೇಳ್ದನೆಂಬಲ್ಲಿಗೆ ಯುದ್ಧಕಾಂಡದಲ್ಲಿ ಆರನೆಯಅಧ್ಯಾಯವು ಸಮಾಪ್ತಮಾದುದು.

ಏಳನೆಯ ಅಧ್ಯಾಯವು.

ಶೂರಪದ್ಮಾಸುರನ ಮಂತ್ರಾಲೋಚನೆ ಯುದ್ಧ ಸನ್ನಾಹ.

ಎಲೈ ಋಷಿಗಳಿರಾ! ಅನಂತರದಲ್ಲಿ ವೀರಬಾಹುವು ಮೊದಲಾದ ಭೂತ ಸೇನಾಧಿಪತಿಗಳು ಆ ಕುಮಾರಸ್ವಾಮಿಯ ಬಳಿಗೈದಿ, ಸಮೀಪದಲ್ಲಿ ನಮಸ್ಕಾರವ ನೆಸಗಿ, ಸ್ತೋತ್ರಂಗಳಿಂ ಸ್ತುತಿಸಿ ಯುದ್ಧವೃತ್ತಾಂತವಂ ಬಿನ್ನಪಂಗೈದು, ಆತ ನಿಂದ ಬಹುಮಾನಿತರಾಗಿ ಮರಳಿ ನಮಸ್ಕಾರಂಗಳಂ ಮಾಡಿ ತಮ್ಮತಮ್ಮ ಮಂದಿ ರಂಗಳಿಗೆ ಸಾರಿದರು. ಬಳಿಕ ಶೂರಪದ್ಮನು ಪುತ್ರನ ಪರಾಭವನಂ ಕೇಳಿ, ನಾಳೆಯ ದಿವಸದಲ್ಲಿ ತಾನು ಪೋಗಿ, ಬಾಲಕನೊಡನೆ ಆ ಭೂತಸೇನೆಯಂ ಜಯಿಸುವೆನೆಂದು ಪೇಳಿ, ದೂತರಂ ಕಳುಹಿಸಿ, ರಾತ್ರಿಯಲ್ಲಿ ಚಿಂತೆಯಿಂ ಪರವಶ ನಾಗಿರ್ದು ಪ್ರಾತಃಕಾಲದಲ್ಲೆದ್ದು ನಿತ್ಯಕರ್ಮವಂ ಮಾಡಿ, ಸಿಂಹಾಸನದಲ್ಲಿ ಕುಳಿತು, ಸಹಸ್ರಕೋಟಿ ದೂತರುಗಳಿಂ ದ್ವೀಪಂಗಳಲ್ಲಿಯುಂ ಸಮುದ್ರಂಗ ಳಲ್ಲಿಯುಂ ಅಲ್ಲಲ್ಲಿ ಲೋಕಾಂತರಗಳಲ್ಲಿರುವ ಶತಸಹಸ್ರ ವಾಹಿನಿಗಳಿಂದ ಗಣಿತ ವಾದ ಅಸುರಸೇನೆಯಂ ಕರೆಯಿಸಿ, ತಾನು ಗೋಪುರವನೇರಿ ಈ ಸೇನೆಯಂ ನೋಡಿ ಮಹಾ ಸಂತಸದಿಂದಿಳಿದು, ನಾನಾರತ್ನಮಯವಾದ ಧನುವಂ ಧರಿಸಿ, ಇಂದ್ರಚಾಪದಿಂದೊಪ್ಪುವ ಮೇಘದಂತೆ ಬೆಳಗುವನಾಗಿ, ಶರಪೂರ್ಣಂಗಳಾದ ಸ್ವರ್ಣ ಬತ್ತಳಿಕೆಗಳಂ ಧರಿಸಿ, ಸ್ಥಿರವಾದ ಮಿಂಚಿನ ಕಾಂತಿಯುಳ್ಳ ಮೇಘದಂತೆ ಉಜ್ವಲನಾಗಿ ದಂಡ ಪ್ರಾಸ ಅಸಿ ನಿಸ್ತ್ರಿಂಶ ಕುಠಾರ ಮುಂತಾದ ಆಯುಧಂ ಗಳಂ ಧರಿಸಿ, ಮಂದರ ಕೈಲಾಸ ಮಹಾಮೇರುಗಳಂ ಜಯಿಸಿದ ನಾನಾ ರತ್ನಂ

ಗಳಿಂ ಶೋಭಿತವಾದ, ಆಕಾಶಗಂಗೆಯುಂ ಮುಟ್ಟುತಿರುವ ಛತ್ರ ಚಾಮರಗಳಿಂ ದಲಂಕೃತವಾದ ಇಂದ್ರ ರಥವಲ್ಲಿ ಕುಳಿತು, ಶ್ರೇಷ್ಠರಾದ ಮಂತ್ರಿಗಳಿಂ ಮಹಾ ವೀರರಾದ ಸೇನಾಪತಿಗಳಿಂದಲುಂ, ಸರ್ವಾಯುಧ ಸಂಪೂರ್ಣವಾದ ರಥಂಗ ಳಿಂದಲುಂ ಒಡಗೂಡಿ ಪೊರಮಟ್ಟವನಾಗಿ, ರಾಜಬೀದಿಯುಂ ದಾಂಟಿ ಗೋಪುರ ದ್ವಾರಕ್ಕೆ ಬಂದು, ಅಸುರೇಶ, ಅತಿಶೂರರೆಂಬ ಸಿಂಹತಾರಕರ ಪುತ್ರರಂ ಕರೆಯಿಸಿ ಸೇನಾಧಿಪತ್ಯವಂ ಕೊಟ್ಟು ಅವರುಗಳಂ ಮುಂದೆ ಕಳುಹಿ, ಕಹಳೆ ಭೇರಿ ಪಟಹ ಡಿಂಡಿಮ ಜರ್ಝರ ಶಂಖ ವೇಣು ವೀಣೆ ಮೊದಲಾದ ವಾದ್ಯಧ್ವನಿಗಳಿಂದಲುಂ ತುರಂಗಂಗಳ ಹೇಷಾರವಂಗಳಿಂದಲುಂ ಗಜಂಗಳ ಬೃಂಹಣ ಧ್ವನಿಗಳಿಂದಲುಂ, ರಥಂಗಳ ಗಾಲಿಗಳ ಝೇಂಕಾರಂಗಳಿಂದಲುಂ ಪ್ರಳಯಕಾಲದ ಸಮುದ್ರಧ್ವನಿ ಯುಂ ಜಯಿಸಿದವನಾಗಿ ನಾನಾರತ್ನ ಖಚಿತವಾದ ಛತ್ರದಿಂ ವಿರಾಜಿತನಾಗಿ, ಸೇನಾಸಮೂಹದಿಂ ದೇಳಲ್ಪಟ್ಟ ಧೂಳುಗಳಿಂ ದಶದಿಕ್ಕುಗಳಂ ಮರಸಿ, ಸೂರ್ಯ ಮಂಡಲವಂ ಮುಚ್ಚಿ ಮಹತ್ತಾದ ಯುದ್ಧರಂಗಕ್ಕೆ ಬಂದನು.

ಷಣ್ಮುಖದೇವನು ಯುದ್ಧೋದ್ಯೋಗಿಯಾಗುವಿಕೆ.

ಆಗ ದೇವೇಂದ್ರನು ಅತನ ಆಗಮನವಂ ಕೇಳಿ ಕುಮಾರಸ್ವಾಮಿಯ ಬಳಿಗೈದಿ, ನಮಸ್ಕಾರವಂ ಮಾಡಿ ಎಲೈ ಭಕ್ತಪಾಲನೆ! ಯುದ್ಧಕ್ಕೆ ಬಂದ ದುರಾ ತ್ಮನಾದ ಶೂರಪದ್ಮನಂ ಜಯಿಸೆಂದು ಪ್ರಾರ್ಥಿಸೆ, ಕುಮಾರಸ್ವಾಮಿಯು ಅದಂ ಕೇಳಿ ಹಾಗೆಯೇ ಆಗಲೆಂದು ಪೇಳಿ, ವಾಯುವಂ ಕಳುಹಿ ರಥವಂ ತರಿಯಿಸಿ ಗೊಂಡು ಅದನ್ನೇರಿ, ಬ್ರಹ್ಮ ವಿಷ್ಣುಗಳಿಂದ ಸ್ತುತಿಸಲ್ಪಟ್ಟು, ಗಾನವಂ ಮಾಡುತ ಲಿರುವ ನಾರದಾದಿಗಳಿಂ ಸೇವಿತನಾಗಿ ದಂಡ ಧಾರಿಗಳಾಗಿ ನರ್ತನವಂ ಮಾಡುತ ಲಿರುವ ಷಡ್ಋಷಿಗಳಿಂದಾವೃತನಾಗಿ ಭೇರಿ, ಕಹಳೆ, ನಿಸ್ಸಾಳೆ, ಜರ್ಝರ, ಮಡ್ಡು, ಡಿಂಡಿಮ, ಶಂಖ, ವೇಣು, ವೀಣೆಗಳ ಧ್ವನಿಗಳಿಂ ಯುತನಾಗಿ, ಗುಣಪಾಠಕರಿಂ ದಾವೃತನಾಗಿ ಛತ್ರ ಚಾಮರ ಧಾರಿಗಳಿಂ ಸೇವಿತನಾಗಿ, ನಾನಾವಿಧವಾದ ಉಪ ಚಾರಂಗಳಿಂ ಯುಕ್ತನಾಗಿ ಯುದ್ಧಭೂಮಿಗೆ ಪೊರಮಟ್ಟನು. ಆ ಸಮಯದಲ್ಲಿ ಸಮಸ್ತರಾದ ಸೇನಾಪತಿಗಳುಂ ವೀರಬಾಹು ಮೊದಲಾದ ವೀರರುಂ ಸರ್ವಾ ಭರಣ ಭೂಷಿತರಾಗಿ ರಥಗಳನೇರಿ ಪೊರಮಟ್ಟರು. ಸಮಸ್ತ ಭೂತಂಗಳು ಸಿಂಹನಾದಂಗಳಂ ಮಾಡುತ ಹೊರಟರು. ಆವೇಳೆಯಲ್ಲಿ ಧೂಳುಗಳು ಸಮಸ್ತ ದಿಕ್ಕುಗಳನಾವರಿಸಿ ಸೂರ್ಯಮಂಡಲವಂ ಮುಚ್ಚಿತು. ಈಪ್ರಕಾರವಾಗಿ ಸಮ ಸ್ತರು ಯುದ್ಧರಂಗಕ್ಕೆ ಪೋಗೆ, ಭೂತಂಗಳು ಬಡಬಾಗ್ನಿಯುಂ ಸಮುದ್ರ ವಾವರಿಸುವಂತೆ ದೈತ್ಯರಿಂದಾವರಿಸಲ್ಪಟ್ಟು ವೃಕ್ಷಂಗಳಂ ಪರ್ವತಂಗಳಂ ಮಹಾ ಶಿಲೆಗಳಂ ಧರಿಸಿ, ಆ ದೈತ್ಯರಮೇಲಿಡೆ, ಆ ದೈತ್ಯರು ಕೋಪದಿಂ ಘೋರವಾದ

ಆಯುಧಗಳಂ ಬಿಟ್ಟರು. ಮರಳಿ ಭೂತಗಳು ಕೋಪದಿಂದಸುರರಿಂ ದಸುರರಂ ಗಜಗಳಿಂ ಗಜಂಗಳಂ ಅಶ್ವಂಗಳಿಂದಶ್ವಂಗಳಂ ರಥಂಗಳಿಂ ರಥಂಗಳಂ ಹೊಡೆದು ಗಜ ತುರಗ ರಥಂಗಳಂ ಪಿಡಿದು ಗರ್ರನೆ ತಿರುಹಿ, ಭೂತಳಕ್ಕೆ ಬಡಿದು ಬಹು ದೈತ್ಯರಂ ಸಂಹರಿಸಲಾಗಿ, ದೈತ್ಯರು ಶೀಘ್ರದಿಂ ಭೂತಂಗಳಿಂ ಬಿಡಲ್ಪಟ್ಟ ಪರ್ವತಾದಿಗಳಂ ನಾನಾಯುಧಂಗಳಿಂ ಖಂಡಿಸಿ, ಅನೇಕಾಯುಧಂಗಳಂ ಬಿಟ್ಟು ಆ ಭೂತಂಗಳ ಪಾಣಿ ಪಾದಂಗಳಂ ಛೇದಿಸಿ, ಪಲಾಯನವನ್ನೈದಿಸಿದರು. ಬಳಿಕ ಭೂತಸೇನಾಪತಿಗಳು ಅತಿ ಕೋಪದಿಂದ ಖಡ್ಗ ಶರ ಮೊದಲಾದ ಬಹು ಆಯುಧಂಗಳಿಂದಸುರರಂ ಖಂಡಿಸೆ, ಆಗ ಅನೇಕ ಕಬಂಧಗಳು ಕುಣಿದಾಡಿದವು. ರಕ್ತಪ್ರವಾಹಂಗಳು ಹರಿದವು. ಬಳಿಕ ಆ ಶೂರನು ಇದಂ ಕಂಡು ರಥ ಸಹಸ್ರಯುಕ್ತನಾಗಿ ಶತಸಹಸ್ರ ಅಶ್ವಂಗಳಿಂ ಯುಕ್ತವಾದ ರಥದಲ್ಲಿ ಕುಳಿತು, ಶರವೃಷ್ಟಿಯಂ ಕರೆಯೆ, ಉಗ್ರನೆಂಬ ಗಣಾಧೀಶ್ವರ್ವನು ಆತನಂ ಕಂಡು ದಂಡದಿಂದಾತನ ಉರವಂ ಬಡಿದು ಕವಚವಂ ಮುರಿಯೆ, ಮರಳಿ ಅತಿ ಶೂರನು ಶತಸಹಸ್ರ ಬಾಣಂಗಳಂ ಬಿಟ್ಟು ಆತನ ಶರೀರವಂ ರಕ್ತಮಯವಂ ಮಾಡಿದನು. ಬಳಿಕ ಆ ಉಗ್ರನೆಂಬ ಗಣಾಧೀಶ್ವರನು ಮಹಾ ಪರ್ವತವಂ ಕಿತ್ತು ಅದರಿಂದ ಆತನ ರಥವಂ ಮುರಿಯೆ, ದೈತ್ಯನು ಪ್ರತಿರಥವನೇರಿದನೆಂದು ಶೌನಕಾದಿ ಮುನಿಗಳಿಗೆ ಸೂತಂ ಪೇಳನೆಂಬಿಲ್ಲಿಗೆ, ಯುದ್ಧಕಾಂಡದಲ್ಲಿ ಏಳನೆಯ ಅಧ್ಯಾಯವು ಸಂಪೂರ್ಣಂ.

ಎಂಟನೆಯ ಅಧ್ಯಾಯವು.

ಅತಿಶೂರ ಶೂರಪದ್ಮಾಸುರ ಉಗ್ರ ಗಣಾಧೀಶರ ಯುದ್ಧವು.

ಎಲೈ ಮುನಿಗಳಿರಾ! ಅನಂತರದಲ್ಲಿ ಅತಿ ಶೂರನು ಅನ್ಯರಥವನೇರಿದವನಾಗಲು, ಉಗ್ರಗಣಾಧೀಶ್ವರನು ಪಾದಂಗಳಿಂದಶ್ವಂಗಳಂ ತಾಡಿಸೆ, ಅದು ಸಹಾ ಭಗ್ನಮಾದುದು ಬಳಿಕ ಅತಿಶೂರನು ಉನ್ನತವಾದ ಮತ್ತೊಂದು ರಥವನೇರಿ ಮೇಘದಂತೆ ಅಟ್ಟಹಾಸವಂ ಮಾಡಿ, ಅತಿ ಭಯಂಕರಮಾಗಿ ಪ್ರಳಯಾಗ್ನಿಗೆ ಸಮಾನವಾದ ಆಗ್ನೇಯಾಸ್ತ್ರವಂ ಬಿಡೆ, ಭೂತ ಸೇನಾಧಿಪತಿಯಾದ ಉಗ್ರನು ಅದಂ ಪಿಡಿದು ಭಕ್ಷಿಸಿದನು. ಮರಳಿ ಅತಿ ಶೂರನು ಭಯಂಕರಮಾದ ಜಲಮಯವಾದ ವಾರುಣಾಸ್ತ್ರವಂಬಿಡೆ, ದೇವೇಶನಾದ ಉಗ್ರನು ಪೂರ್ವದಂತೆ ಅದನ್ನೂ ಭಕ್ಷಿಸೆ, ಮರಳಿ ಬ್ರಹ್ಮಾಸ್ತ್ರವಂ ಬಿಟ್ಟನು. ಅದಂ ಕಂಡು ಮನದಿಂ ಕುಮಾರನಂ ಧ್ಯಾನಿಸಿ, ಮೊದಲಿನಂತೆ ನುಂಗಿದನು. ಬಳಿಕ ಅತಿ ಶೂರನು

ಸಮಸ್ತಾಸ್ತ್ರಂಗಳಂ ಭಕ್ಷಿತಂಗಳನ್ನಾಗಿ ಕಂಡು, ಯೆಲ್ಲಿಯು ಅಪಜಯಮಿಲ್ಲದ ಸರ್ವಸಂಹಾರಕಮಾದ ನಾರಾಯಣಾಸ್ತ್ರಮಂ ಬಿಡೆ, ಉಗ್ರನದಂ ನೋಡಿ ಸಿಂಹ ದಂತೆ ಗರ್ಜಿಸುತ್ತಾ ಹೃದಯಕಮಲದಲ್ಲಿ ಗುಹನಂ ಧ್ಯಾನಿಸಿ, ಆ ಅಸ್ತ್ರಮಂ ಆಸ್ವಾದನೆಯಮ್ಮಾಡಿದನು.

ಬಳಿಕ ಮಹಾ ಧೈರ್ಯಶಾಲಿಯಾದ ಆತಿ ಶೂರನದಂ ಕಂಡು, ಈತನು ವಿಧಿಯೋ? ಹರಿಯೋ? ಅಲ್ಲದಿರ್ದೊಡೆ ಹರನೋ? ಆರೂ ಈ ಅಸ್ತ್ರದ ಮುಂದೆ ನಿಲ್ಲಲು ಸಮರ್ಥರಲ್ಲದೆ ಈತನಾದೊಡೆ ಸರ್ವವಂ ಭಕ್ಷಿಸಿದನು. ಈತನ ಪರಾ ಕ್ರಮವೆಂತಿರುವದೋ ಏನೋ ಎಂದು ಚಿಂತಿಸುತ್ತಾ ಭಯಕಂಪಿತನಾಗಿ ಆಶ್ಚರ್ಯ ಯುಕ್ತನಾಗಿರುವಾಗ ಸಮಸ್ತರಾದ ದೈತ್ಯರು ಭೀತರಾದರು. ಬಳಿಕ ಆಕಾಶಮಾರ್ಗದಲ್ಲಿ ದೇವತೆಗಳು ಈತನ ಬಲವಂ ಕಂಡು ಆಶ್ಚರ್ಯಯುಕ್ತರಾಗಿ, ಆತನ ಬಲಪರಾಕ್ರಮಂಗಳಂ ಶ್ಲಾಘಿಸುತ್ತ ಬ್ರಹ್ಮದೇವರಂ ಕೇಳೆ, ಆ ಬ್ರಹ್ಮನು, ಎಲೈ ದೇವತೆಗಳಿರಾ! ಶಿವಭಕ್ತರೊಳು ಈತನೇ ಪ್ರಥಮನು. ಈತನು ಶಿವಂಗೆ ಪ್ರೀತಿಪಾತ್ರನು. ಸಮಸ್ತನಾದ ಬ್ರಹ್ಮದಂಡಗಳಂ ನಿವಾರಿ ಸಲು ಸಮರ್ಥನು. ಪೂರ್ವದಲ್ಲಿ ಆತನು ವಿಷ್ಣುಚಕ್ರವಂ ಭಕ್ಷಿಸಿದನು. ಸಮಸ್ತ ಗಣಂಗಳಿಗೂ ಶ್ರೇಷ್ಠನು. ಲೋಕವಂ ಪವಿತ್ರಮಾಡುವ ಸುರಾಸುರಾರ್ಚಿತ ನಾದ ಕುಮಾರಸ್ವಾಮಿಯಲ್ಲಿ ಆಸಕ್ತಮಾದ ಚಿತ್ತವುಳ್ಳವರ್ಗೆ ಏನುತಾನೆ ಅಶ ಕ್ಯವು? ಎಂದು ಹೇಳಿದನು.

ಅದಂ ಕೇಳಿ ದೇವತೆಗಳು ಹೃದಯಕಮಲದಲ್ಲಿ ಪುಷ್ಕರಸ್ರುಜನಾದ ಕುಮಾ ರನಂ ಧ್ಯಾನಿಸಿ ಆನಂದಾಶ್ರುಗಳಿಂ ನನೆದವರಾಗಿ, ರೋಮಾಂಚ ಕಂಚುಕಿತ ಸರ್ವಾಂಗಂಗಳುಳ್ಳವರಾಗಿ, ಈತಂಗೆ ಇದಕ್ಕಿಂತಲೂ ಅತಿಶಯಮಾಗಿ ಬಲ ವುಂಟಾಗಲೆಂದು ಆಶೀರ್ವಾದವಂ ಕೊಟ್ಟು ಗಗನಮಾರ್ಗದಲ್ಲಿ ನೋಡುತಿದ್ದರು. ಬಳಿಕ ಶೂರನು ಈತನನ್ನೇನುಪಾಯದಿಂ ಜಯಿಸಬೇಕೆಂದು ಚಿಂತಿಸಿ, ಪಾಶು ಪತಾಸ್ತ್ರಮಂ ಮನದಿಂ ಪೂಜಿಸಿ, ಸರ್ವಸಂಹಾರ ಕಾರಿಯಾದ ಅತಿ ಘೋರಮಾದ ಆ ಅಸ್ತ್ರವಂ ಬಿಡೆ, ಅದು ಸರ್ವರಂ ಸಂಹರಿಸುವ ರುದ್ರನ ಅಟ್ಟಹಾಸದಂತೆ ಬ್ರಹ್ಮಾಂಡಗಳಂ ತುಂಬಿಸುತ, ನಾನಾ ವಿಧಂಗಳಾದ ಸರ್ಪವಿಷಂಗಳಂ, ಯಮ ದೂತ ಸಮೂಹಂಗಳಂ, ಘೋರಂಗಳಾದ ಆಯುಧಂಗಳಂ ಉಗುಳುತ್ತಾ, ಆತನ ಸಮೀಪಕ್ಕೆ ಬಂದುದು. ಆಗ ಉಗ್ರನದಂ ಕಂಡು ಅತಿ ಭೀತನಾಗಿ ಮೂರ್ಛೆಯಲ್ಲಿ ಅಂಜಲಿ ಬಂಧನಮಂಗೈದು ದಂಡವಂ ಬಿಟ್ಟು, ಹೃದಯಕಮಲ ದಲ್ಲಿ ಶಿವನಂ ಧ್ಯಾನಿಸಿ, ಮನದಿಂ ಪಂಚಾಕ್ಷರೀಮಂತ್ರವನ್ನುಚ್ಚರಿಸಿ, ಅರ! ಭವ! ಶಂಭೋ! ಮಹಾದೇವ! ಶಿವ! ಶಂಕರ! ಶಂಕರ! ನನ್ನನ್ನು ರಕ್ಷಿ

ಸೆಂದು ಪರಿಪರಿ ತಪಿಸಿ, ಗಡಗಡನೆ ನಡುಗುತಿರುವ ಸರ್ವಾವಯವಂಗಳುಳ್ಳವನಾಗಿ ನಿಂತಿರೆ, ಆ ಅಸ್ತ್ರವು ಆತನಂ ಮುಟ್ಟದೆ ಶಂಭುವಿನ ಸಮೀಪಕ್ಕೆ ಪೋದುದೆಂದು ಸೂತಂ ಪೇಳಿದವನಾಗಲು, ಎಲೈ ಸೂತನೆ! ಇದೇನಾಶ್ಚರ್ಯವು? ನಮಗೆ ಪೇಳಬೇಕೆಂದು ಮರಳಿ ಕೇಳಲಾಗಿ, ಆ ವಾಕ್ಯವಂ ಕೇಳಿ, ಎಲೈ ಋಷಿಗಳಿರಾ! ಪೂರ್ವದಲ್ಲಿ ಶಂಭುವು ನಿರಾಯುಧನ ಮೇಲೆ ಈ ಅಸ್ತ್ರವಂ ಬಿಟ್ಟರೆ, ಆತನಂ ಮುಟ್ಟದೆ ನಮ್ಮ ಬಳಿಗೆ ಬರಲೆಂದು ಪೇಳಿ, ಅಸುರರಿಗೆ ಅಸ್ತ್ರವಂ ಕೊಟ್ಟನು. ಆದುಕಾರಣದಿಂದೀಗ ಆ ಅಸ್ತ್ರವು ಶಂಭುವಿನ ಬಳಿಗೆ ಪೋದುದು. ಎಲೈ ಮುನಿಗಳಿರಾ! ಅತಿ ಶೂರನಾದ ಶೂರಪದ್ಮನು ಮೊದಲಾದ ಸಮಸ್ತವಾದ ಅಸುರರು ವ್ಯರ್ಥವಾಗಿ ಮಾಡಲ್ಪಟ್ಟ ಪಾಶುಪತಾಸ್ತ್ರವಂ ಕಂಡು, ಭಯಕಂಪಿತವಾದ ಶರೀರವುಳ್ಳವರಾಗಿ ಭಗ್ನವಾದ ಮನೋರಥವೂ ಉಳ್ಳವರಾಗಿ, ಹಾಹಾ!! ಎಂದು ಬಹಳವಾಗಿ ಕೂಗುತ್ತ ಅಂಜಿದವರಾದರು. ಭೂತಂಗಳಾದರೋ ತತ್‌ಕ್ಷಣದಲ್ಲಿಯೇ ಕಳಕಳ ಧ್ವನಿಯಮ್ಮಾಡುತ್ತಲೂ, ದೇವತೆಗಳು ಪೂಮಳೆಯಂ ಗರೆಯುತ್ತ ಇದ್ದರು. ಆಗ ಶೂರನು ದಂಡಧಾರಿಯಾಗಿ ರಥವನ್ನು ಬಿಟ್ಟು ಭೂಮಿಯನ್ನೈದಿ ತೆರಳಿದನೆಂದು ಸೂತಂ ಪೇಳ್ದನೆಂಬಲ್ಲಿಗೆ,

ಯುದ್ಧಕಾಂಡದಲ್ಲಿ ಎಂಟನೆಯ ಅಧ್ಯಾಯವು
ಸಮಾಪ್ತಮಾದುದು.

ಒಂಬತ್ತನೆಯ ಅಧ್ಯಾಯವು.

ಅತಿಶೂರನ ವಧೆ-ಗಣಾಧೀಶ್ವರರ ಯುದ್ಧವರ್ಣನೆ.

ಕೇಳಿರೈ ಋಷಿಗಳಿರಾ! ಅನಂತರದಲ್ಲಿ ಅತಿ ಶೂರನು ಕೋಪದಿಂ ಜ್ವಲಿಸಿ ಪಾಣಿಯಿಂ ದಂಡಮಂ ತಿರುಹಿ, ವೇಗದಿಂ ನೆಗೆದು ಇತ್ತಲತ್ತಲು ಓಡುತ ವ್ಯರ್ಥವಾಗಿ ಪೋದ ಆಯುಧಂಗಳಿಂ ಜ್ವಲಿಸುತ, ಆಯುಧ ಗರ್ಜನೆಗಳಿಂ ಭೂತಗಳಂ ಬೆದರಿಸುತ್ತ, ಸಮೀಪಕ್ಕೆ ಬಂದು, ದಂಡದಿಂದಾತನ ಉರವಂತಾಡಿಸೆ, ಉಗ್ರಗಣಾಧೀಶ್ವರನು ಆತನ ದಂಡಮಂ ಬಲಾತ್ಕಾರದಿಂ ತೆಗೆದುಕೊಂಡು ವೇಗದಿಂ ಬಲಿದು ಆತನಂ ಸಂಹರಿಸಿದವನಾಗಲು, ಭೂತಸೇನೆಯು ಇದಂ ಕಂಡು ಅಟ್ಟಹಾಸಮಮ್ಮಾಡಿತು. ಅನಂತರದಲ್ಲಿ ಅಸುರೇಂದ್ರನು ಮೇಘದಂತೆ ಘರ್ಜಿಸುತ, ಶರಗಳಂ ವರ್ಷಿಸುತಬರೆ, ಭೂತಗಣಂಗಳಾತನಂ ಕಂಡು ಪಲಾಯನವನ್ನೈದಿದರು. ಆಗ ಕನಕನೆಂಬ ಗಣಾಧೀಶ್ವರನು ಗರ್ಜಿಸುತ ಆತಂಗಭಿಮುಖವಾಗಿ ಬರೆ, ಅಸುರೇಂದ್ರನಾತನ ಬಲವಂ ತಿಳಿಯದೆ ಏಕಬಾಣವಂ ಪ್ರಯೋ

ಗಿಸಲಾಗಿ, ಕನಕನದಂ ಕರದಿಂ ಪಿಡಿದು ಆತನ ರಥಕ್ಕೆ ಕುಳಿಸಿ ಸೂತನಂ ಬಡಿದು ಸಂಹರಿಸಿ, ಆತನ ಧನುವಿನ ನಾರಿಯುಂ ದಂತಗಳಿಂ ಕಳದು ಧನುವಂ ಮುರಿದು ಅಲ್ಲಿಂದ ಕೆಳಕ್ಕೆ ಲಂಘಿಸಿ, ಮಹಾಗಿರಿಯಂ ಕಿತ್ತು ಗರ್ಜನೆ ತಿರುಗಿಸಿ ವೇಗದಿಂದಾತನ ಮೇಲೆ ಬಿಡೆ, ಅಸುರೇಂದ್ರನು ಅನ್ಯಧನುವಂ ತೆಗದು ಅಷ್ಟಬಾಣಗಳಿಂದಾ ಪರ್ವತವಂ ಛೇದಿಸಿ, ಮರಳಿ, ಸಹಸ್ರ ಬಾಣಂಗಳಂ ಬಿಟ್ಟು, ಆ ಕನಕನಂ ಭೂಮಿಯಲ್ಲಿ ಕೆಡಹಿ, ಮತ್ತೋರ್ವ ಸಾರಥಿಯಂ ಕರೆಯಿಸಿ, ಆ ಭೂತಸೇನೆಯ ನ್ನೋಡಿಸಿದನು. ಬಳಿಕ ಉನ್ಮತ್ತನೆಂಬ ಗಣಾಧೀಶ್ವರನು ಮಹತ್ತಾದ ಗಿರಿಯಂ ಕಿತ್ತು ಅದರಿಂ ಪ್ರಹರಿಸಿ ರಥಾಶ್ವಂಗಳಂ ಸಂಹರಿಸೆ, ಅತಿ ಶೂರನು ಅತ್ಯಂತ ಕೋಪದಿಂದಾತನ ಮೇಲೆ ಬಹು ಬಾಣಂಗಳಂ ಸುರಿಸಿ, ರಕ್ತದಿಂದಾವೃತವಾದ ಶರೀರದಿಂ ಮೂರ್ಛೆಯನ್ನೈದಿಸೆ, ಮತ್ತನೆಂಬ ಗಣಾಧೀಶ್ವರನು ಕಿಡಿ ಹಾರುತಿರುವ ನಯನದಿಂದಾತನಂ ವೀಕ್ಷಿಸಿ ಮಹತ್ತಾದ ಪರ್ವತವಂ ಕಿತ್ತಾತಂಗೆ ಇದಿರಾಗಿ ಬರೆ, ಅಸುರೇಂದ್ರನಾತನಂ ಕಂಡು ದಶಬಾಣಂಗಳಂ ಬಿಟ್ಟನು. ಆಗ ಮತ್ತನು ಆ ಶರಗಳಿಂ ಬಹುವಾಗಿ ನೊಂದು ಮಹಾ ಕುಪಿತನಾಗಿ, ಆ ಪರ್ವತ ವನ್ನು ಆತನ ಮೇಲಿಡಲಾಗಿ, ಅಸುರೇಂದ್ರನು ಅದಕ್ಕೆ ಇದಿರಾಗಿ ತನ್ನ ಯೆದೆಯ ನ್ನೊಡ್ಡೆ, ಅದು ಕಠಿಣವಾದ ಆ ವಕ್ಷಸ್ಥಿಸಲ್ಲಿ ಬಿದ್ದು ಶತಪ್ರಕಾರಮಾಗಿ ವೊಡೆದು ಭೂಮಿಯಲ್ಲಿ ಬಿದ್ದುದು. ಅನಂತರದಲ್ಲಿ ಅಸುರೇಂದ್ರನು ಕೋಪಾಗ್ನಿಯಿಂ ತಪ್ತನಾಗಿ ಸಹಸ್ರ ಬಾಣಗಳಂ ಬಿಟ್ಟು, ಆತನ ಶರೀರಮಂ ಕತ್ತರಿಸಿ ಭೂಮಿ ಯಲ್ಲಿ ಕೆಡಹೆ, ಸಿಂಹನೆಂಬ ಗಣಾಧೀಶ್ವರನು ಸಿಂಹನಾದವನ್ಮಾಡಿ, ಮಹತ್ತಾದ ಗಿರಿಯಂ ಆ ದೈತ್ಯನ ಮೇಲೆ ಯಿಡೆ, ಅದಂ ಶರದಿಂ ಛೇದಿಸಿದನು. ಮರಳಿ ದಂಡದಿಂದಿಡೆ, ಅದಂ ಶರಗಳಿಂ ಛೇದಿಸಿ ಆತನಂ ಮೂರ್ಛೆಯನ್ನೈದಿಸಿ, ಸಮಸ್ತ ಭೂತಗಣಂಗಳಂ ಓಡಿಸಿದನು. ಬಳಿಕ ಸ್ವೇದೋದ್ಭವರಾದ ನಿಯುತ ಗಣಾಧೀಶ್ವರರೊಳಗೆ ದಂಡಕನೆಂಬ ಒಬ್ಬ ಗಣಾಧೀಶ್ವರನು ಶೀಘ್ರದಿಂ ಬಂದು, ಆ ದೈತ್ಯನ ಮೇಲೆ ಸಹಸ್ರ ಬಾಣಗಳಂ ಬಿಡೆ, ಅಸುರೇಂದ್ರನಾತನ ಮಸ್ತಕ ದಲ್ಲಿ ಬಹು ಶರಗಳಂ ಯೆಚ್ಚಿ, ಆತನಂ ಮೂರ್ಛೆಯನ್ಮಾಡೆ, ಸೋಮಕನೆಂಬ ಗಣಾಧೀಶ್ವರನು ಶೀಘ್ರಮಾಗಿ ಬರೆ, ಅಸುರೇಂದ್ರನಾತನ ಮೇಲೆ ಬಹು ಬಾಣ ಗಳಂ ಬಿಡೆ, ಸೋಮಕನು ಧ್ವನಿಯಿಂದ ದಶದಿಕ್ಕುಗಳಂ ತುಂಬಿಸಿ, ಸಹಸ್ರ ನಿಶಿತಾಸ್ತ್ರಗಳಂ ಬಿಟ್ಟು ಆತನ ಸಾರಥಿಯಂ ಕೊಂದು ರಥವಂ ಕೆಡಹಲಾಗಿ, ಆ ಅಸುರೇಂದ್ರನು ಅನ್ಯ ರಥವನ್ನೇರಿ ಶಕ್ತಿಯಂ ಬಿಟ್ಟು ಆತನಂ ಕೆಡಹಿದನು. ಬಳಿಕ ವಿಜಯನೆಂಬ ಗಣಾಧೀಶ್ವರನು ಮಹಾ ವೀರನಾದ ಆತನಂ ಜಯಿಸಲು, ಶೀಘ್ರದಿಂ ಬಂದು ಸಹಸ್ರ ಬಾಣಗಳಿಂದಾತನ ಸಾರಥಿಯಂ ಕೊಂದು, ದೃಢ

ನಾದ ಧನುವಂ ಖಂಡಿಸಿ ಭೂಮಿಯಲ್ಲಿ ಕೆಡಹಿದನು. ಅನಂತರದಲ್ಲಿ ಅಸುರೇಂದ್ರನು ಮಹಾ ಕೋಪದಿಂ ದಂಡವಂ ತಿರುಹಿ ಆತನ ಮೇಲೆ ಬಿಡೆ, ವಿಜಯನು ಅನೇಕ ಬಾಣಗಳಿಂದ ಆತನ ದಂಡವಂ ಛೇದಿಸಲಾರದೆ, ಅದರಿಂತಾಡಿತನಾಗಿ ಭೂಮಿಯಲ್ಲಿ ಬಿದ್ದನು. ಬಳಿಕ ಸಮಸ್ತ ವೀರರು ಮಹತ್ತಾದ ಕಳಕಳ ಧ್ವನಿಯಿಂದ ದಶದಿಕ್ಕುಗಳಂ ತುಂಬಿಸಿ, ಶೀಘ್ರದಿಂ ಬಂದು ನಾನಾ ವಿಧವಾದ ಶಸ್ತ್ರಂಗಳ ಕರೆಯೆ, ಅಸುರೇಂದ್ರನು ಶರಗಳಿಂದ ಅವರಂ ಪಲಾಯನವನ್ಮಾಡಿಸೆ, ಮಹಾ ಬಲನಾದ ವೀರಬಾಹುವು ಅಮಿತ ಪರಾಕ್ರಮಿಯಾದ ಈ ಅಸುರೇಂದ್ರನಂ ಕಂಡು ಶರಸಂಧಾನವನ್ಮಾಡಿ, ಬಾಣಗಳಿಂದಾತನ ಶರೀರವಂ ತುಬಿಸೆ, ಆ ಅಸುರೇಂದ್ರನು ಮಹಾ ಕೋಪದಿಂ ಸಹಸ್ರ ಬಾಣಗಳಿಂದಾತನ ಶರೀರವಂ ಸುರಿಯುತಿರುವ ರಕ್ತದಿಂದಲಂಕೃತಮನ್ಮಾಡಿ ಈತನ ಧನುವಂ ಸಪ್ತಶರಗಳಿಂ ಛೇದಿಸಿ, ವೀರಬಾಹುವು ಪ್ರತಿ ಧನುವಂ ಧರಿಸಿ ಕೋಪದಿಂ ಕಲ್ಪಾಂತ ಮೇಘದಂತೆ ಗರ್ಜಿಸಿ ಸಹಸ್ರ ಶರಂಗಳಿಂದಾತನ ಚಾಪತುರಗಗಳಂ ಛೇದಿಸಿದನು. ಬಳಿಕ ಅಸುರೇಂದ್ರನು ಅನ್ಯರಥವನ್ನೇರಿ ಧನುವಂ ಧರಿಸಿ, ಶತ ಬಾಣಗಳಿಂ ಶತ್ರುಗಳ ರಥಂಗಳಂ ಖಂಡಿಸಲಾಗಿ, ವೀರಬಾಹುವು ಆಕಾಶ ಮಾರ್ಗಕ್ಕೆ ಲಂಘಿಸಿ, ಹೃದಯದಲ್ಲಿ ಗುಹನಂ ಧ್ಯಾನಿಸಿ, ಅಟ್ಟಹಾಸದಿಂದ ಸುರ ಸೇನೆಯಂ ಪೀಡಿಸಿ ಖಡ್ಗವಂ ತೆಗದು ಆತನ ರಥದ ಮೇಲೆ ಲಂಘಿಸಿ ಆತನ ಕರವಂ ಛೇದಿಸೆ, ಅಸುರೇಂದ್ರನು ಅನ್ಯರಥದಿಂ ದಂಡಮಂ ತೆಗದು, ಆದರಿಂ ತಾಡಿಸಲಾಗಿ, ವೀರಬಾಹುವು ಪಾದದಿಂದೊದ್ದು ಖಡ್ಗದಿಂ ತಿವಿಯೆ, ಆ ಅಸುರೇಂದ್ರನು ಪ್ರತಿ ಖಡ್ಗವಂ ಧರಿಸಿ ಇದಿರಾಗಿ ಬರೆ, ವೀರಬಾಹುವು ಆತನ ಶರೀರವಂ ಛೇದಿಸಿ ಯಮಪುರಕ್ಕೆ ಕಳುಹಿಸಿದನೆಂದು ಸೂತಂ ಶೌನಕಾದಿಗಳ್ಗೆ ಪೇಳ್ದನೆಂಬಲ್ಲಿಗೆ, ಯುದ್ಧಕಾಂಡದಲ್ಲಿ ಒಂಬತ್ತನೆಯ ಅಧ್ಯಾಯವು ಸಮಾಪ್ತಮಾದುದು.

ಹತ್ತನೆಯ ಅಧ್ಯಾಯವು.

ಶೂರಪದ್ಮಾಸುರ ಗಣಾಧೀಶ್ವರ ಪ್ರಮುಖರ ಯುದ್ಧ.

ಎಲೈ, ಋಷಿಗಳಿರಾ! ಅನಂತರದಲ್ಲಿ ದೇವತೆಗಳು ಮೃತನಾದ ಅಸುರೇಂದ್ರನಂಕಂಡು ಕೋಲಾಹಲ ಧ್ವನಿಯಂ ಗೈದರು, ದೈತ್ಯರು, ಪರಾಜಿತರಾಗಿ ಪಲಾಯನವಂ ಮಾಡಿದರು. ಅನಂತರದಲ್ಲಿ ಶೂರರೊಳಗೆ ಮಹಾಶೂರನಾದ ಶೂರಪದ್ಮನು ಮೃತರಾದ ಶೂರ ಅಸುರೇಂದ್ರರೆಂಬ ತನ್ನ ಅನುಜರ ಪುತ್ರರಂ

ದಶದಿಕ್ಕುಗಳಲ್ಲಿ ಓಡುತಿರುವ ದೈತ್ಯಸೇನೆಯನ್ನೂ ನೋಡಿ, ಶೀಘ್ರದಿಂ ರಥವನ್ನು ಮುಂದಕ್ಕೆ ನಡೆಯಿಸಿ, ಕೊದಂಡವಂ ಪಿಡಿದು ನಾರಿಯಂ ಹೂಡಿ, ಶರದಿಂ ನಾರಿಯಂ ಬಡಿಯೆ, ಆ ನಾರಿಯು ಎಲೈ, ಅಸುರಾಧಿಪನೆ! ಏನು ಕಾರಣದಿಂ ತಾಡಿಸಿದೆ? ನನ್ನ ಸತಿಯು ನಿನ್ನ ಆಜ್ಞೆಯಂ ದಾಂಟದಿರಲೆಂದು ಧನುಸ್ಸು ಪೇಳುತಲಿರುವುದೋ ಏನೋ, ಎಂಬಂತೆ ಧನುವು ಧ್ವನಿಯಂ ಮಾಡುತಿತ್ತು; ಆಗ ಸಮಸ್ತ ಲೋಕಂಗಳು ಗಡಗಡನೆ ನಡುಗಿತು ಮತ್ತೆ ಬ್ರಹ್ಮ ವಿಷ್ಣು ಇಂದ್ರ ಮೊದಲಾದ ದೇವತೆಗಳು ಆ ಧ್ವನಿಯಂ ಕೇಳಿ ಭೀತರಾದರು.

ಬಳಿಕ ಸಮಸ್ತ ಭೂತಗಣಂಗಳು ಈ ಧ್ವನಿಯಂ ಕೇಳಿ, ತಮ್ಮ ರಕ್ಷಕನ ಮರೆಯೊಕ್ಕು ಬಿನ್ನೈಸಲಾಗಿ, ದ್ವಾದಶಯೋಜನದಲ್ಲಿರುವ ಜನರುಗಳ್ಗೆ ಪೇಳುತಿರೆ, ಮಹಾಪರಾಕ್ರಮವಂತರಾದ ಸಮಸ್ತ ಜನರುಗಳಂ ಸರ್ವಸೇನಾಪತಿಗಳು ಸಹ ನಿಂತು, ವೃಕ್ಷಂಗಳಿಂ ಪರ್ವತಂಗಳಿಂ ಶಸ್ತ್ರಂಗಳಿಂ ನಾನಾವಿಧಂಗಳಾದ ಆಯುಧಂಗಳಿಂ ಶೂರನೊಡನೆ ಯುದ್ಧವಂ ಮಾಡಿದರು. ಆಗ ಅಸುರನಾಯಕನು ಅವರಿಂ ಬಿಡಲ್ಪಟ್ಟ ಮಸ್ತವಂ ನಿಶಿತಂಗಳಾದ ಶರಂಗಳಿಂ ಚೂರ್ಣಂಗಳನೆಸಗಿ, ಮರಳಿ ಶತಸಹಸ್ರಕೋಟಿ ಬಾಣಂಗಳಂ ತೊಡಗಿ, ಕಠಿಣಂಗಳಾದ ಅವರ ಶರೀರಂಗಳಂ ಭೇದಿಸಿದನು. ಆ ಸಮಯದಲ್ಲಿ ಕೆಲಂಬರು ಸೇನಾಪತಿಗಳು ಆತನ ಶರಗಳಿಂ ಖಂಡಿತರಾದರು, ಮತ್ತೆ ಕೆಲವರು ಅತ್ಯಂತ ಖಿನ್ನರಾದರು, ಇನ್ನು ಕೆಲವರು ನೊಂದ ಮನಸ್ಸುಳ್ಳವರಾಗಿ ಭೂಮಿಯಲ್ಲಿ ಬಿದ್ದು ಹೊರಳಾಡಿದರು, ಇನ್ನೂ ಕೆಲವರು ಮಹತ್ತಾದ ನಿಟ್ಟುಸುರುಗಳಂ ಬಿಡುತ್ತ ಪಲಾಯನವನ್ನೈದಿದರು. ಈ ಪ್ರಕಾರದಿಂ ಸಮಸ್ತರು ನಾನಾ ರೂಪದಿಂ ಪಲಾಯಿತರಾಗೆ, ಸ್ವೇದೋದ್ಭವರಾದ ಗಣಾಧೀಶ್ವರರು ರಣಭೂಮಿಗೆ ಬಂದು ನಿಶಿತಾಸ್ತ್ರಂಗಳಿಂ ದನುಜರನಂ ಪ್ರಹರಿಸೆ, ಶೂರಪದ್ಮನು ಪ್ರತ್ಯಸ್ತ್ರಂಗಳಂ ಬಿಟ್ಟು ಅವುಗಳಂ ಭೇದಿಸಿ ಮರಳಿ ಕೋಟಿ ಬಾಣಂಗಳಂ ಬಿಟ್ಟು ಅವರ ಚಾಪ ಶರಂಗಳಂ ಚೂರ್ಣವನೆಸಗಿ, ಅವರ ಉರಗಳಂ ಗುರಿಮಾಡಿ ಸಹಸ್ರ ಸರಳುಗಳಂ ಬಿಟ್ಟನು. ಆಗ ಅವರೆಲ್ಲರು ಭೇದಿಸಲ್ಪಟ್ಟ ವಕ್ಷಸ್ಥಲಗಳುಳ್ಳವರಾಗಿ ಮೂರ್ಛೆಯನ್ನೈದಿದರು. ಬಳಿಕ ನವವೀರರೊಳು ಶ್ರೀಮಂತನಾದ ವೀರಮಾರ್ತಾಂಡನೆಂಬವನು ಮುಂದಕ್ಕೆ ಪೊರಮಟ್ಟು ಅನೇಕ ಬಾಣಂಗಳಂ ಬಿಡಲಾಗಿ, ಶೂರ ನವುಗಳಂ ಛೇದಿಸಿ, ಮರಳಿ ಸಹಸ್ರ ಸರಳುಗಳಿಂದಾತನ ಪಣೆಯಲ್ಲಿಚ್ಚೈ, ಆ ವೀರಮಾರ್ತಾಂಡನವಂ ಭೇದಿಸಿದನು. ಬಳಿಕ ಶೂರನು ಸಹಸ್ರ ಬಾಣಗಳಿಂದ ಆತನ ಧನುವಂ ಬತ್ತಳಿಕೆಯಂ ಛೇದಿಸಿ, ಮರಳಿ ಸಾವಿರ ಸಿಡುಸರಳುಗಳಿಂದಾತನಂ ನೆಲದಲ್ಲಿ ಕೆಡಹೆ, ಮಹಾವೀರನಾದ ವೀರರಾಕ್ಷಸನೆಂಬ ಗಣಾಧೀಶ್ವರನು ಬಂದು, ಆ ಮಹಾ ಅಸುರನಲ್ಲಿ

ಸಾವಿರ ಶಸ್ತ್ರಂಗಳಂ ಬಿಡಲಾಗಿ, ಶೂರನು ಸಹಸ್ರ ಬಾಣಂಗಳಿಂದವಂ ಛೇದಿಸಿ, ಮರಳಿ ಶತ ಸಹಸ್ರ ಬಾಣಗಳಿಂದಾತನ ಕಾರ್ಮುಕವಂ ಖಂಡಿಸಿ, ಕೋಪದಿಂದಾತನ ರಥದಮೇಲೆ ಧುಮುಕಿ ಖಡ್ಗದಿಂದಾತನ ಕೋದಂಡವಂ ಕಡಿಯೆ, ವೀರ ರಾಕ್ಷಸನು ಭಗ್ನಚಾಪನಾಗಿ ಮುಷ್ಟಿಯಿಂದ ಶೂರನೊಡನೆ ಯುದ್ಧಕ್ಕೆ ಬಂದನು. ಆಗ ಶೂರನು ನಿರಾಯುಧನಾದ ಆತನ ಪಾದವಂ ಪಿಡಿದು ಬ್ರಹ್ಮಾಂಡ ಭಿತ್ತಿಯ ಪರ್ಯಂತರವು ಬಿಡೆ, ಆ ವೀರರಾಕ್ಷಸನು ಅಂಡದ ಭಿತ್ತಿ ತಾಕಿ ವೊಡೆದು ಪೋದ ಶರೀರವುಳ್ಳವನಾಗಿ ನೆಲದಲ್ಲಿ ಬಿದ್ದು ಮೂರ್ಛಿತನಾದನು. ಬಳಿಕ ವೀರಮಾಹೇಂದ್ರನು ಪೊರಮಟ್ಟು ಕೋಲಾಹಲ ಧ್ವನಿಯಂ ಮಾಡಿ, ದೈತ್ಯನ ಮೇಲೆ ಅನೇಕ ಸರಳುಗಳಂ ಬಿಡಲಾಗಿ, ಶೂರನವುಗಳಂ ಛೇದಿಸಿದನು. ಹೀಗೆ ಅವರೀರ್ವರು ಅನ್ಯೋನ್ಯವಾಗಿ ಸವ್ಯಾಪಸವ್ಯದಿಂ ರಥಗಳಂ ತಿರಿಗಿಸುತ್ತ ಯುದ್ಧವಂ ಮಾಡಿದರು. ಅನಂತರದಲ್ಲಿ ಶೂರನು ಕೋಪದಿಂ ಪಾದಂಗಳಲ್ಲಿ ಮುವ್ವತ್ತು ಮುವ್ವತ್ತು ಉರದಲ್ಲಿ ನಾಲ್ವತ್ತು ಬಾಹುಯುಗ್ಮದಲ್ಲಿ ಮುವ್ವತ್ತು ಈ ಪ್ರಕಾರದಿಂ ಶರಗಳಂ ಬಿಡೆ, ಆ ವೀರಮಾಹೇಂದ್ರನು ನೆಲದಲ್ಲಿ ಬಿದ್ದು ಮೂರ್ಛಿತನಾದನು. ಬಳಿಕ ವೀರ ವೀರನು ಪೊರಮಟ್ಟು ಬಾಣಂಗಳಂ ವರ್ಷಿಸಲಾಗಿ ಶೂರನು ಆತನ ಧನುವಂ ಶರಂಗಳಿಂ ಖಂಡಿಸಿ, ಶತ ಸಹಸ್ರ ಬಾಣಗಳಿಂ ರಥವಂ ಕೆಡಹೆ, ಆಗ ವೀರವೀರನು ದಂಡವಂ ಪಿಡಿದುಕೊಂಡು ಬರೆ, ನಾಲ್ಕು ಬಾಣಂಗಳಿಂದಾ ದಂಡವಂ ಛೇದಿಸಿ ಹೊಡೆಯಲು, ಇಂದ್ರನಿಂದ ಗಿರಿಯಂತೆ, ಆ ವೀರವೀರನು ಭೂಮಿಯಲ್ಲಿ ಬಿದ್ದನು. ಅನಂತರದಲ್ಲಿ ವೀರಮಾಹೇಶ್ವರನು ಧನುವಿನಿಂದೀತನಂ ಜಯಿಸಲಾಗದೆಂದು ಚಿಂತಿಸಿ ಶಕ್ತಿಯಂ ಬಿಡಲಾಗಿ ಆ ಶಕ್ತಿಯು ಶೂರನ ಸಮಸ್ತವಾದ ಶಸ್ತ್ರಾಸ್ತ್ರಂಗಳಂ ಛೇದಿಸಿ, ಆತನ ವಕ್ಷೋಮಧ್ಯದಲ್ಲಿ ಬಿದ್ದು, ಹೆಂಟೆಯು ಪಾಷಾಣವಂ ಸೋಂಕಿದಂತೆ ಭಗ್ನವಾಗಿ ಪುಡಿಪುಡಿಯಾದುದು. ಮರಳಿ ಶೂರನು ಸಪ್ತಶರಂಗಳಿಂದಾತನಂ ಖಂಡಿಸೆ, ವೀರಕೇಸರಿಯೆಂಬ ಗಣಾಧೀಶ್ವರನು ಬಂದು ಬಹು ಬಾಣವರ್ಷವಂ ಕರೆಯಲಾಗಿ, ಶೂರನು ಸಮಸ್ತ ಶರಂಗಳಿಂದವಂ ಖಂಡಿಸಿ, ಆತನ ನಿಟಿಲದಲ್ಲಿ ಸಹಸ್ರ ಬಾಣಂಗಳಂ ಬಿಡೆ, ವೀರಕೇಸರಿಯು ಮರಳಿ ಪರ್ವತವಂ ಕಿತ್ತಿಟ್ಟನು.

ಬಳಿಕ ಶೂರನು ಏಕಬಾಣದಿಂದದಂ ಖಂಡಿಸೆ, ಮರಳಿ ಕೋಪದಿಂದಾತನ ರಥಕ್ಕೆ ಲಂಘಿಸಿ ಕರದಿಂದಾತನ ಉರವಂ ಹೊಡೆಯಲಾಗಿ, ಆ ಕರವು ಮುರಿದು ಆತನ ಮುಂದೆಯೆ ಬಿದ್ದುದು. ಆಗ ಶೂರನು ಆತನಂ ಪಿಡಿದು ಕ್ಷೀರಾಬ್ಧಿಗಿಡಲಾಗಿ ಅಲ್ಲಿ ಬಿದ್ದು ಮೂರ್ಛಿತನಾಗಿ ಪ್ರಜ್ಞೆಯನೈದಿದ ಬಳಿಕ ತನ್ನ ಸೇನೆಗೆ ಮರಳಿ ಬಂದನು. ಇಷ್ಟರಲ್ಲಿ ವೀರ ಪುರುಹೂತನೆಂಬವನು ಕಾಲಾಸ್ತ್ರವಂ ಬಿಡೆ,

ಆ ಅಸ್ತ್ರವು ಶೂರನ ಉರೋಮಧ್ಯದಲ್ಲಿ ಬಿದ್ದು ರೇಣುವಂತೆಮಾದುದು. ಮರಳಿ ಆತನು ಬ್ರಹ್ಮಾಸ್ತ್ರವನ್ನು ಹೂಡೆ ಅದಂ ಕಂಡು ಶೂರನು ಸಹಸ್ರ ಬಾಣಗಳಂ ಬಿಟ್ಟು ಭೂಮಿಯಲ್ಲಿ ಕೆಡಹಿದನು. ಬಳಿಕ ವೀರಬಾಹು ಬಂದವನಾಗಲು ಶೂರನಾತನಂ ಕಂಡು, ಎಲೆ ನೀನು ಪೂರ್ವದಲ್ಲಿ ದೂತರೂಪದಿಂ ಬಂದು ರಣದಲ್ಲಿ ಅನೇಕರಾದ ಅನುಚರರಂ ನನ್ನ ಪುತ್ರನಂ ಸಹ ಕೊಂಡು ಮಾಯಾರೂಪದಿಂ ಪೋದವನಾದೆ ಈಗಲು ಧನುವಂ ತೊರೆದು ನನ್ನಾಜ್ಞೆಯಿಂ ದೂತನಾಗು, ಇಲ್ಲದಿರ್ದೊಡೆ ಈ ಕ್ಷಣದಲ್ಲಿಯೆ ನಿನ್ನಂ ಸಂಹರಿಸುವೆನೆಂದು ಪೇಳಲಾಗಿ, ವೀರಬಾಹು ವಿದಂ ಕೇಳಿ, ಎಲೈ, ಶೂರನೆ! ಕುಮಾರನಾಜ್ಞೆಯಿಂ ನಾನು ದೂತನಾದೆನು, ಈಗ ಭಟನಾಗಿರ್ದೇನೆ, ಈ ವಿಷಯದಿಂ ನಿನಗೇನುಂಟು? ಪ್ರಲಾಪವಂ ಬಿಟ್ಟು ಯುದ್ಧವಂ ಮಾಡೆಂದು ಪೇಳಲಾಗಿ, ಶೂರನು ಕೋಪದಿಂ ಸಹಸ್ರಕೋಟಿ ಬಾಣಂಗಳಂ ಬಿಡೆ, ವೀರಬಾಹುವು ಆ ಸರಳುಗಳಂ ಖಂಡಿಸಲಾಗಿ, ಮರಳಿ ಲಕ್ಷಕೋಟಿ ಬಾಣಂಗಳಂ ಬಿಟ್ಟವನಾಗಲು; ಪೂರ್ವದಂತೆ ಅವುಗಳಂ ಖಂಡಿಸಿ, ಕುಮಾರಸ್ವಾಮಿಯ ಶಕ್ತಿಯಿಂದಲ್ಲದೆ ಮರಣವಿಲ್ಲವೆಂಬುದಂ ತಿಳಿದು ಬಾಣಂಗಳಿಂ ದೀತನಂ ನೋಯ್ಯಿಸಬೇಕೆಂದು ನಿಶ್ಚಯಿಸಿ ಬಹುಬಾಣ ವರ್ಷಂಗಳಂ ಕರೆಯಲಾಗಿ, ದೈತ್ಯನವಂ ಛೇದಿಸಿ ಉರದಲ್ಲಿಯುಂ ಭುಜದಲ್ಲಿಯು ಯೆಂಟೆಂಟು ಶರಂಗಳಂ ಬಿಟ್ಟು ಮರಳಿ ಕೋಟಿ ಶರಗಳಿಂ ದಾತನ ಸಾರಥಿಯುಂ ಸಂಹರಿಸಿ, ಪಂಚಾಽದ್ಬಾಣಗಳಿಂ ದಾತನ ರಥವಂ ಮುರಿದನೆಂದು ಸೂತಂ ಶೌನಕಾದಿ ಮುನಿಗಳಿಗೆ ಪೇಳಿದನೆಂಬಲ್ಲಿಗೆ ಯುದ್ಧಕಾಂಡದಲ್ಲಿ ಹತ್ತನೆಯ ಅಧ್ಯಾಯವು ಸಮಾಪ್ತದುದು.

ಹನ್ನೊಂದನೆಯ ಅಧ್ಯಾಯವು.

ಶೂರಪದ್ಮಾಸುರ ವೀರಬಾಹು ಗಣಾಧೀಶರಯುದ್ಧವು.

ಎಲೈ, ಋಷಿಗಳಿರಾ! ಅನಂತರದಲ್ಲಿ ವೀರಬಾಹುವು ಸಂತೋಷ ಯುಕ್ತನಾಗಿ ಪ್ರತಿರಥವನ್ನೇರಿ ವಾಯವ್ಯಾಗ್ನೇಯಾಸ್ತ್ರಗಳಂ ಬಂದಾಗಿ ಜೋಡಿಸಿ ಪ್ರಯೋಗಿಸೆ, ಶೂರನದಂ ಕಂಡು ಉರದಿಂ ದೊಡೆಯೆ, ಆ ಅಸ್ತ್ರಂಗಳು ಆತನ ಉರದಲ್ಲಿಬಿದ್ದು ಚೂರ್ಣವಾದವು. ಮರಳಿ ಕಾಲಸೂರ್ಯಾಸ್ತ್ರಗಳನ್ನು ಬಿಡಲಾಗಿ ಅವುಗಳು ಆತನ ಉರೋಘಾತದಿಂದ ಕುಂಠಿತವಾದವು. ಪುನಃ ವಾರುಣ ಐಂದ್ರಾಸ್ತ್ರಗಳಂಬಿಡೆ ಅವು ಪೂರ್ವದಂತೆ ವ್ಯರ್ಥವಾದವು. ಮರಳಿ ಮಾಯಾಸುರಾಸ್ತ್ರಗಳಂ ಬಿಡಲಾಗಿ, ಅವುಗಳು ಆತನ ಸಮೀಪಕ್ಕೆಪೋಗಿ ಲಜ್ಜೆಯಿಂದ

ಭೂಮಿಯಲ್ಲಿ ಬಿದ್ದವು. ಮರಳಿ ನಾರಾಯಣಾಸ್ತ್ರವಂ ತೊಡೆಯಲಾಗಿ, ಅದು ಆತನ ಉರವಂತಾಕಿ ಶಿಡಿದು ಕೆಳಕ್ಕೆ ಬಿದ್ದುದು. ಆಗ ಸರ್ವರು ಆತನ ಬಲವಂ ಕಂಡು ಆಶ್ಚರ್ಯಪಟ್ಟರು. ಬಳಿಕ ಶೂರಪದ್ಮನು ವೀರಬಾಹುವಂ ನೋಡಿ, ಎಲೆ, ವೀರನೆ! ನೀನು ಬಿಟ್ಟ ದಿವ್ಯಾಸ್ತ್ರಂಗಳು ಮೂಷಕಾದಿಗಳು ಬಡಬಾಗ್ನಿಯಲ್ಲಿ ಬೀಳುವಂತೆ ನನ್ನಲ್ಲಿಬಿದ್ದು ವ್ಯರ್ಥವಾದವಲ್ಲವೆ? ಪೂರ್ವದಲ್ಲಿಯೆ ನಾನು ನಿನ್ನನ್ನು ಸಂಹರಿಸುತಿದ್ದೆನು, ಆದರೆ, ನಿನ್ನ ಪರಾಕ್ರಮ ಬಲಅಸ್ತ್ರ ಚಾತುರ್ಯವಂ ನೋಡ ಬೇಕೆಂದು ನಿಂತೆನು.

ಈಗ ಕ್ಷಣಮಾತ್ರದಲ್ಲಿ ಸಂಹರಿಸುವೆನೆಂದು ಗಂಭೀರವಾಗಿ ನುಡಿಯೆ, ವೀರಬಾಹುವು ಅವಾಕ್ಯವಂ ಕೇಳಿ ಕೋಪದಿಂ ಜ್ವಲಿಸಿ, ಘೋರವಾದ ಪಾಶು ಪತಾಸ್ತ್ರವಂ ಬಿಡೆ, ಶೂರನದಂ ಕಂಡು ಆ ಅಸ್ತ್ರವನ್ನೇ ಪ್ರಯೋಗಿಸಲಾಗಿ! ಆ ಯೆರಡು ಅಸ್ತ್ರಗಳು ಅತ್ಯಂತಯುದ್ಧವಂ ಮಾಡಿ ಮರಳಿ ಪ್ರಯೋಗಿಸಿದವರ ಸಮೀಪಕ್ಕೆ ಪೋದವು.

ದೇವದೇವನಾದ ಕುಮಾರ ಶೂರಪದ್ಮ ರಕ್ಕಸರ ಸಮಾಗಮ, ಸಂಭಾಷಣೆ, ಯುದ್ಧ.

ಬಳಿಕ ಶೂರಪದ್ಮನು, ಎಲೈ ದೂತನೆ! ನಿನ್ನ ಬಲವಿಷ್ಟೇಸರಿಯೊ? ನನ್ನ ಪರಾಕ್ರಮವಂ ನೋಡೆಂದು ನುಡಿದು ಬಹುವಾಗಿ ಶರವೃಷ್ಟಿಯಂ ಕರೆಯಲಾಗಿ, ವೀರಬಾಹು ಅವುಗಳಿಗೆ ಅಭಿಮುಖನಾಗಿ ಅನೇಕ ಬಾಣವರ್ಷವಂ ಸುರಿದನು. ಬಳಿಕ ಶೂರನು ಐವತ್ತು ಬಾಣಗಳಿಂ ದಾತನರಥವಂ ಭೇದಿಸಿ, ಮರಳಿ ಶಕ್ತಿ ಯಂ ಬಿಡಲಾಗಿ ಅದುವೀರನ ಉರದಲ್ಲಿಬಿದ್ದು ಪುಡಿಯಾಗೆ, ಮರಳಿ ಶೂರನು ದಂಡವಂ ಬಿಟ್ಟವನಾಗಲು ಅದಕ್ಕಭಿಮುಖವಾಗಿ ವೀರಬಾಹುವುತನ್ನ ದಂಡವಂ ಬಿಡೆ ದೈತ್ಯನ ದಂಡವು ಅದಂಮುರಿದು ಆ ವೀರಬಾಹುವಿನ ಉರದಲ್ಲಿ ಬಿದ್ದು ಆತನಂ ಕೊಲ್ಲಿತು. ಆಗ ಸಾರಥಿಯು ಮೂರ್ಛಿತನಾದ ವೀರಬಾಹುವಂ ಕಂಡು ಆತನ ಮರವೆಯಂ ತಿಳಿಯಿಸಲು ಕೆಳಕ್ಕೆ ರಥವಂ ತೆಗಿಯಲಾಗಿ ಶೂರನು ಭೂತಸೇನೆಗಳಲ್ಲಿ ಬಹುಶರ ವರ್ಷಗಳಂ ಕರೆಯಿಸಿ, ಪಲಾಯನವನ್ನೈದಿಸಿದನು. ಅನಂತರದಲ್ಲಿ ಅಮಿತಪರಾಕ್ರಮಿಯಾದ ಅನೇಕಕೋಟಿ ಸೂರ್ಯಪ್ರಕಾಶನಾದ ಕುಮಾರಸ್ವಾಮಿಯು ಪಲಾಯಿತರಾದ ಭೂತಗಣಂಗಳಂ ಮೂರ್ಛಿತರಾದ ಸೇನಾ ಪತಿಗಳಂ ತಿಳಿದು, ಶೀಘ್ರಮಾಗಿ ರಥಮಂ ತರುಬಿ ಬಂದವನಾಗಲು ಶೂರನು ಸರ್ವೇಶ್ವರನಾದ ಆ ಕುಮಾರಸ್ವಾಮಿಯಂ ನೋಡಿ, ಹಾಹಾ! ಈ ಕುಮಾರನು ಸರ್ವ ದೈತ್ಯಸಂಹಾರಕನೇ ಸರಿ? ಎಂದು ತಿಳಿದು ಎಲೈ ಬಾಲಕನೆ! ನಿನ್ನ ಸಂಬಂಧಿಗಳಾದ ಮಹಾ ಪರಾಕ್ರಮಿಗಳಾದ ಸೇನಾಪತಿಗಳು ಸಮಸ್ತರೂ

ಮೃತರಾದರು. ಆದುಕಾರಣದಿಂದೀಗ ಬಾಲ್ಯಚೇಷ್ಟಾನ್ವಿತನಾದ ನೀನು ಯುದ್ಧದಿಂ ಹಿಂದಿರುಗು. ದುರ್ಬಲರಾದ ಕ್ರೌಂಚತಾರಕರಂತೆ ನನ್ನ ಬಲವಂ ತಿಳಿದು ಬಂದವನಾದಿ. ಬಾಲಕತ್ವದಿಂದೆನ್ನ ಬಲವಂ ನೀನರಿಯೆ ? ವಿಷ್ಣು ಮುಂತಾದ ದೇವತೆಗಳಿಗೆ ಹೇಗೆ ಭೀತಿಯುಪ್ಪುದೋ ಹಾಗೆ ರಣಮಧ್ಯಗತನಾದ ನಿನ್ನನ್ನು ಜಯಿಸುವೆನೆಂದು ಪೇಳಲಾಗಿ, ಕುಮಾರಸ್ವಾಮಿಯು ಮುಗುಳುನಗೆಯುಳ್ಳ ಮುಖಾರವಿಂದವುಳ್ಳವನಾಗಿ, ದುರಾತ್ಮನಾದ ಎಲೈ ಅಸುರಾಧಿಪನೆ ! ನಿನ್ನ ಬಲವನ್ನೀಗಲೆ ತೆಗೆದುಕೊಳ್ಳುತ್ತೇನೆ. ಮದಾಂಧನಾದ ನೀನು ಬಾಲನೆಂದು ನನಿಗೆ ಪೇಳಿದಿಯಲ್ಲವೆ? ಪರಮೇಶ್ವರನ ಲಲಾಟಾಗ್ನಿ ಕಣವು ಬ್ರಹ್ಮಾಂಡಂಗಳನ್ನೇ ದಹಿಸಲು ಸಮರ್ಥವಲ್ಲವೆ? ಎಂದು ನುಡಿದನು. ಅನಂತರದಲ್ಲಿ ಶೂರನು ಆ ವಾಕ್ಯವಂ ಕೇಳಿ ಉನ್ನತವಾದ ಧನುವಂ ಕರದಿಂದೆತ್ತಿದವನಾಗಲು, ಆ ಸಮಯದಲ್ಲಿ ಆತನು ಮಧುವೈರಿಯ ಸಂಬಂಧವಾದ ತ್ರಿವಿಕ್ರಮನ ಶರೀರದಂತೆ ಶೋಭಿಸಿದನು. ಬಳಿಕ ಶೂರನು ಧನುಸ್ಸಂಧಾನವಮ್ಮಾಡಿ ನಾರಿಯುಂ ಮೀಂಟಿ, ಆಗ ಸಮಸ್ತ ಸಾಗರಂಗಳು ಪೊಡದಂತೆ ಧ್ವನಿಯಾದುದು.

ಆ ಬಳಿಕ ಕುಮಾರಸ್ವಾಮಿಯು ಅತ್ಯಂತ ಉನ್ನತವಾದ ಊರ್ಧ್ವತಾಂಡವ ಸಂಹಾರಕನಾದ ಹರನ ಪಾದದಂತೆ ಉಜ್ವಲವಾದ ಕಾರ್ಮುಕವಂ ತೆಗೆದು ಬ್ರಹ್ಮಾಂಡವು ಪೊಡೆದು ಹೋಗುವಂತೆ ನಾರಿಯುಂ ಮೀಂಟಿದವನಾಗಲು, ಶೂರಪದ್ಮನು ಶರಗಳಿಂದಾತನ ರಥವಂ ಮಹತ್ತಾದ ದೇಹವಂ ಸಮಸ್ತ ಲೋಕಂಗಳಂ ಮುಚ್ಚಿದನು. ಆಗ ಕುಮಾರಸ್ವಾಮಿಯು ಆತನ ಶರೀರಂಗಳಂ ಛೇದಿಸಿ, ಆತನ ಮೇಲೆ ಘರ್ಮಕಾಲದಲ್ಲಿ ತತ್ಕಾಲಮೇಘದಂತೆ ಶರಗಳಂ ಕರೆಯೆ ಮರಳಿ ದಶ ಸಹಸ್ರ ಬಾಣಗಳಂ ಬಿಟ್ಟು ಅವುಗಳಂ ಛೇದಿಸಿ, ಆ ಗುಹನಲ್ಲಿ ಅನೇಕ ಬಾಣಂಗಳಂ ಬಿಟ್ಟವನಾಗಲು, ಕುಮಾರನು ಅವುಗಳಂ ಚೂರ್ಣವನ್ನೆಸಗಿ ಚತುರ್ದಶ ಬಾಣಂಗಳಿಂದಾತನ ಭುಜಂಗಳ ಮೇಲೆ ಬಿಡಲಾಗಿ ಅವುಗಳು ಅಲ್ಲಿ ಬಿದ್ದು ಕುಂಠಿತಂಗಳಾದವು. ಬಳಿಕ ಪಾರ್ವತೀಪುತ್ರನಾದ ಕುಮಾರಸ್ವಾಮಿಯು ಅದಂ ಕಂಡು ಸಾವಿರ ಬಾಣಂಗಳಿಂ ಇಂದ್ರನು ಗಿರಿಯಂ ಧ್ವಂಸಿಸುವಂತೆ ಆತನ ರಥವಂ ಛೇದಿಸೆ, ಶೂರನು ಬ್ರಹ್ಮ ವಿಷ್ಣುಗಳಿಗೆ ಭಯಂಕರವಾದ ಶಕ್ತಿಯಂ ಬಿಟ್ಟವನಾಗಲು, ಗುಹನು ಚತುರ್ದಶ ಬಾಣಗಳಿಂದಾತನ ರಥವಂ ಛೇದಿಸಿದನು. ಬಳಿಕ ಶೂರನು ಅನ್ಯ ರಥವನ್ನೇರಿ ಧನುವಂ ಧರಿಸಿ ಬಹು ಬಾಣಗಳಂ ಬಿಟ್ಟು, ಕುಮಾರಸ್ವಾಮಿಯ ಧನುವಂ ಛೇದಿಸೆ, ಕುಮಾರನು ಅನ್ಯ ಧನುವಂ ತೆಗೆದುಕೊಂಡು ಗುಪ್ತರಥಂಗಳಂ ಚೂರ್ಣವಮ್ಮಾಡಿದವನಾಗಲು, ಶೂರನು ಶೂಲವಂ ಬಿಟ್ಟನು. ಆಗ ಕುಮಾರನದಂ ಕಂಡು ಛೇದಿಸಿ, ಆತನ

ಛತ್ರುವಂ ಮುಕುಟವಂ ಮತ್ತೆ ಸಮಸ್ತವಾದ ಭೂಷಣಂಗಳಂ ಶರಗಳಿಂ ಖಂಡಿಸಿ ಭೂಮಿಯಲ್ಲಿ ಕೆಡಹಲಾಗಿ, ಆ ಶೂರನು ಲಜ್ಜೆಯಿಂ ತಲೆದೂಗಿ ದರಿದ್ರನಂತೆ ನಿಂತಿದ್ದನು. ಎಲೈ ಋಷಿಗಳಿರಾ! ಮಹಾ ಚಪಲರಾದ ಮತ್ತೆ ಸಿಂಹನಾದಂಗಳಿಂ ತುಂಬಲ್ಪಟ್ಟ ಬ್ರಹ್ಮಾಂಡ ವಳಯವುಳ್ಳ ಸಮಸ್ತರಾದ ಆ ದೈತ್ಯರುಗಳು ಇಂಥಾ ಅವಸ್ಥೆಯನ್ನೈದಿದ ತಮ್ಮೊಡೆಯನಾದ ಶೂರಪದ್ಮನಂ ಕಂಡು ವಿಧವಿಧವಾದ ಆಯುಧಂಗಳಂ ತೀಕ್ಷ್ಣವಾದ ಬಾಣಂಗಳಂ ಸಹಾ ತೆಗೆದುಕ್ಕೊಂಡು ವೇಗದಿಂದ ಭೂಮಿಗೆ ಬಂದು ಅಗ್ನಿಜನ್ಯನಾದ ಕುಮಾರಸ್ವಾಮಿಯೊಡನೆ ಯುದ್ಧವಮ್ಮಾಡಿದರೆಂದು ಸೂತಂ ಪೇಳಿದನೆಂಬಿಲ್ಲಿಗೆ, ಯುದ್ಧ ಕಾಂಡದಲ್ಲಿ ಹನ್ನೊಂದನೆಯ ಅಧ್ಯಾಯವು ಸಮಾಪ್ತಮಾದುದು.

ಹನ್ನೆರಡನೆಯ ಅಧ್ಯಾಯವು.

ಕುಮಾರದೇವ ಶೂರಪದ್ಮಾಸುರ ಯುದ್ಧ.

ಎಲೈ ಮುನಿಗಳಿರಾ! ಅನಂತರದಲ್ಲಿ ಕುಮಾರಸ್ವಾಮಿಯು ಸರ್ವಸಂಹಾರಕಮಾದ ಚಕ್ರಮಂ ಚನ್ನಾಗಿ ತಿರುಹಿಸಿ ದೈತ್ಯಸೇನೆಯಲ್ಲಿ ಪ್ರಯೋಗಿಸಲಾಗಿ, ಆ ಚಕ್ರವು ಕೋಟಿಸೂರ್ಯಪ್ರಕಾಶಮಾನವಾಗಿ ಬಹು ಪ್ರಕಾರದಿಂ ದೈತ್ಯಸೇನೆಯಂ ಸಂಹರಿಸಿತು. ಆ ಸಮಯದಲ್ಲಿ ಕೆಲಂಬರು ಕಂಠವಿಹೀನರಾಗಿಯುಂ ಪಾದಕಂಠರಹಿತರಾಗಿಯುಂ ಮತ್ತೆ ಕೆಲವರು ನಾಸಿಕಾ ಅಕ್ಷಿ ಚರಣಹೀನರಾಗಿಯುಂ ಇನ್ನು ಕೆಲವರು ಕೇಶವಸ್ತ್ರ ವಿರತರಾಗಿಯುಂ ಮೃತರಾದರು. ಆ ರಥಂಗಳು ಚೂರ್ಣಂಗಳಾದವು, ಗಜಾಶ್ವಂಗಳು ಮೃತವಾದವು, ಶತ್ರುಗಳೆಲ್ಲರು ಛೇದಿಸಲ್ಪಟ್ಟರು. ಮತ್ತೆ ಶ್ವೇತಛತ್ರಂಗಳು ಛೇದಿಸಲ್ಪಟ್ಟು ರಜತ ಪಾತ್ರೆಗಳಂತೆ ನೆಲದಲ್ಲಿ ಬಿದ್ದವು. ಆ ರಣರಂಗದಲ್ಲಿ ದೈತ್ಯರ ಶರಂಗಳು ಯೆಲ್ಲೆಲ್ಲಿಯು ನಿಬಿಡಮಾಗಿದ್ದವು. ಚಾಮರ ಧ್ವಜ ಶಸ್ತ್ರಂಗಳು ಸುತ್ತುಮುತ್ತಲು ಚಲಿಸುತ್ತಿದ್ದವು. ಮತ್ತೆ ನರ್ತನವಮ್ಮಾಡುತಲಿರುವ ಕಬಂಧಂಗಳಿಂದ ನಿಬಿಡಿತಮಾಗಿ ಪಿಶಾಚ ಸಮೂಹದಿಂ ಯುಕ್ತಮಾದ ಆ ಯುದ್ಧಭೂಮಿಯು, ಸರ್ವತ್ರ ತಿರಗಾಡುತಲಿರುವ ಕಂಕ ಕಾಕ ಶ್ಯೇನ ಸಮೂಹದಿಂದ ವ್ಯಾಪ್ತಮಾದುದು. ಆಗ ವಿಷ್ಣುಚಕ್ರವು ಈ ಮಹಾ ಚಕ್ರವಂ ಕಂಡು ಗಡಗಡನೆ ನಡುಗುತ್ತಾ ಸ್ತೋತ್ರವಮ್ಮಾಡಿತು. ಈ ಪ್ರಕಾರದಿಂದ ಈ ಚಕ್ರವು ಬಹು ದೈತ್ಯರಂ ಸಂಹರಿಸಿ ಮರಳಿ ಕುಮಾರಸ್ವಾಮಿಯ ಕರವನ್ನೇ ಸೇರಿತು.

ಬಳಿಕ ಶೂರಪದ್ಮನು ಸಮಸ್ತರನ್ನೋಡಿ, ಹಾಹಾ!! ಇದು ಪಾಶುಪತಾಸ್ತ್ರವೋ ಈತನ ಶಕ್ತಿಯೋ ಏನೋ? ಮಹಾ ಪರಾಕ್ರಮಶಾಲಿಗಳಾದ ಅಸುರರೆಲ್ಲರು ಹತರಾದರಲ್ಲವೆ? ಎಂದು ಆಶ್ಚರ್ಯಪಟ್ಟು ಸ್ತಂಭವಾಗಿ ನಿಂತು ಬಳಿಕ ಬ್ರಹ್ಮಾಸ್ತ್ರವಂ ಬಿಡೆ, ಆ ಆಸ್ತ್ರವು ಅತಿ ಭಯಂಕರವಾಗಿ ಗುಹನ ಸಮೀಪಕೆ ಬಂದದ್ದಾಗಲು, ಆತನ ಕರದಲ್ಲಿರ್ಪ ಶಕ್ತಿಯು ಅದನ್ನು ಭಕ್ಷಿಸಿತು. ಬಳಿಕ ಶೂರಪದ್ಮನು ವೈಷ್ಣವಾಸ್ತ್ರವನ್ನು ಬಿಡಲಾಗಿ ಆ ಅಸ್ತ್ರವು ನಾನಾ ರೂಪದಿಂದ ದಶದಿಕ್ಕುಗಳಂ ಪ್ರಕಾಶಗೊಳಿಸುತ್ತ ವಿಧವಿಧವಾದ ವಿಷ್ಣುರೂಪದಿಂದ ಕುಮಾರಸ್ವಾಮಿಯ ಸಮೀಪಕ್ಕೆ ಬರೆ, ಅದನ್ನೂ ಶಕ್ತಿಯು ಭಕ್ಷಿಸಿತು. ಆಗ ಶೂರನು ಮೇಘದಂತೆ ಘರ್ಜಿಸಿ ಪಾಶುಪತಾಸ್ತ್ರವಂ ಬಿಡೆ, ಆ ಅಸ್ತ್ರವು ನಾನಾ ರೂಪದಿಂದ ದಶದಿಕ್ಕುಗಳಂ ಬೆಳಗುವಂತೆ ಮಾಡುತ ಅನೇಕ ಸರ್ಪಂಗಳಂ ಪಿಶಾಚಂಗಳಂ ಭೂತಂಗಳಂ ರಾಕ್ಷಸರಂ ಸಹಾ ಉಗುಳುತ ಭಯಂಕರವಾಗಿ ಕುಮಾರಸ್ವಾಮಿಯ ಸಮೀಪಕ್ಕೆ ಬರಲಾಗಿ, ಆ ಕುಮಾರನು ಕರವನ್ನೀಡಿ ಆ ಅಸ್ತ್ರವನ್ನು ಕೈಯ್ಯಿಂದಲೆ ಪಿಡಿದನು. ಅನಂತರದಲ್ಲಿ ಶೂರಪದ್ಮನು ಸಮಸ್ತ ಅಸ್ತ್ರಂಗಳಂ ವ್ಯರ್ಥಗಳನ್ನಾಗಿ ಕಂಡು ಮನಸಾ ಆಲೋಚಿಸಿ, ನನ್ನೊಡನೆ ಈತನು ಯುದ್ಧವಮ್ಮಾಡಲು ಸಮರ್ಥನೆಂದು ನಿಶ್ಚಯಿಸಿ, ಆ ಕುಮಾರಸ್ವಾಮಿಯ ಅದ್ಭುತಮಾದ ಶೌರ್ಯವಂ ಪರಿಪರಿ ನಿರೀಕ್ಷಿಸುತ್ತ ನಿರ್ವಿಣ್ಣನಾಗಿ ನಿಂತಿದ್ದನು. ಬಳಿಕ ಕುಮಾರಸ್ವಾಮಿಯು ಆತನನ್ನೋಡಿ, ಎಲೈ ದೈತ್ಯನೆ! ಪೂರ್ವದಲ್ಲಿ ದೇವತೆಗಳಂ ಬಿಟ್ಟು ಸುಖವಾಗಿರೆಂದು ನಾನು ನಿರೂಪಿಸಿದ ವಚನವಂ ನೀನು ಕೇಳಲಿಲ್ಲ. ಆದುದರಿಂ ದೈತ್ಯರ ಸಂಬಂಧವಾದ ಲಕ್ಷ ವಾಹಿನಿಗಳು ಮೃತಂಗಳಾದವು. ಇದಲ್ಲದೆ ನಿನ್ನ ಮಕುಟ ಮುಂತಾದವು ಪೋದವು ಇತಃಪರದಲ್ಲಾದರು ಈ ದೇವತೆಗಳಂ ಬಿಡು. ನಮ್ಮ ಇಷ್ಟಾನುಸಾರದಿಂ ನೀನು ನಡೆಯತಕ್ಕವನೋ ಇಲ್ಲವೋ ಬೇಗ ಪೇಳು. ಇಲ್ಲದಿರ್ದೊಡೆ ನಿನ್ನ ಅನುಜನಾದ ತಾರಕನನ್ನು ನಾನು ಹ್ಯಾಗೆ ಸಂಹರಿಸಿದೆನೋ ಹಾಗೆಯೇ ನಿನ್ನನ್ನು ಸಂಹರಿಸುವೆನೆಂದು ನಿರೂಪಿಸಿದನು.

ಶೂರಪದ್ಮಾಸುರನು ಮಾಯಾಬಲದಿಂದ ಮರೆಯಾಗುವಿಕೆ.

ಬಳಿಕ ಶೂರಪದ್ಮನು ಈ ವಾಕ್ಯವಂ ಕೇಳಿ ಹಾಹಾ! ಈತನು ಬಾಲಕನು, ಆ ಬಾಲಚೇಷ್ಟೆಗೆ ತಕ್ಕಂತೆ ಈಗ ಪೇಳಿದನು. ನನ್ನ ಬಲವನ್ನು ಈತಬಲ್ಲನೆ? ನಾನು ಶೀಘ್ರದಿಂ ಪುರಕ್ಕೆ ಸಾರಿ ಸರ್ವಬಲ ಸಮೇತನಾಗಿ ಬಂದು ಈತನಂ ಜಯಿಸಬೇಕೆಂದು ಚಿಂತಿಸಿ, ಮಾಯೆಯಿಂ ಪುರವಂ ಪೊಕ್ಕವನಾಗಲು, ಕುಮಾರಸ್ವಾಮಿಯು ಶಕ್ತಿಯಿಂ ಸಂಹರಿಸಲು ಸಮರ್ಥನಾದೊಡಂ ಆತನ ಮತಿಯಂ

ಪರೀಕ್ಷಿಸಲೋಸುಗ ಸುಮ್ಮನಿರ್ದನು. ಬಳಿಕ ವಿಷ್ಣು ಮುಂತಾದ ಸಮಸ್ತ ದೇವತೆಗಳು ಆ ಕುಮಾರಸ್ವಾಮಿಯ ಸಮೀಪಕ್ಕೆ ಬಂದು ನಮಸ್ಕಾರವಮ್ಮಾಡಿ ಮಸ್ತಕಂಗಳಲ್ಲಿ ಅಂಜಲಿ ಬಂಧಂಗಳನೆಸಗಿ ಸ್ತುತಿಸಿ, ಎಲೈ ಸ್ವಾಮಿಯೆ! ನಿಮ್ಮ ಮುಂದೆ ನಿಲ್ಲಲು ಈತನು ಸಮರ್ಥನೆ? ಈತನಂ ಸಂಹರಿಸುವದು ನಿನಗೇ ನಶಕ್ಯವು? ವಿಲಾಸಮಾತ್ರದಿಂ ಕಾಲಹರಣೆಯಮ್ಮಾಡುತ ಸಂಹರಿಸದಿದ್ದೀರೆಂದು ನುಡಿಯೆ, ಆ ಕುಮಾರಸ್ವಾಮಿಯು ಈ ವಾಕ್ಯವಂಕೇಳಿ,

ದೇವತೆಗಳಿಗೆ ಕುಮಾರಸ್ವಾಮಿಯ ವಾಗ್ದಾನ.

ಎಲೈ ದೇವತೆಗಳಿರಾ! ದುರುಳನಾದ ಆ ಶೂರಪದ್ಮನು ಮರಳಿ ಆವಾಗ ಬರುವನೋ ಆಗ ಸಂಹರಿಸುವೆನೆಂದು ನಿರೂಪಿಸೆ, ಸಮಸ್ತರಾದ ವೀರರಿಂದಲು ಭೂತಗಣಂಗಳಿಂದಲು ಒಡಗೂಡಿ ದೇವತೆಗಳೆಲ್ಲರು ಕೋಲಾಹಲ ಧ್ವನಿಯ ಮ್ಮಾಡಿದರು. ಅನಂತರದಲ್ಲಿ ಸೇನಾಪತಿಗಳು ಕುಮಾರಸ್ವಾಮಿಯ ಆಜ್ಞೆಯಿಂ ಪುರವಂ ಕೆಡಹಲು ಭೂತಗಣಂಗಳೊಡನೆ ಪೊರಮಟ್ಟು ಅಟ್ಟಹಾಸಂಗಳಮ್ಮಾ ಡುತ ಆದರಿಂದ ದಶದಿಕ್ಕುಗಳಂ ತುಂಬಿಸುತ ಪ್ರಾಕಾರದ್ವಾರದ ಸಮೀಪಕ್ಕೆ ಪೋಗಿ ಕೋಟೆಗಳಂ ಕೆಡಹೆ, ದ್ವಾರದಲ್ಲಿರುವ ಅತಿ ಶೂರನೆಂಬ ದೈತ್ಯನು ಶತ್ರು ಸೇನೆಯ ಸಿಂಹನಾದವಂ ಕೇಳಿ, ಶೀಘ್ರದಿಂ ಚತುರಂಗ ಬಲದೊಡನೆ ಪೊರ ಮಟ್ಟನು. ಆಗ ಭೂತಂಗಳಿಗೂ ಅಸುರರಿಗೂ ಅನ್ಯೋನ್ಯಮಾಗಿ ಯುದ್ಧಮಾಗೆ, ಆ ಸಮಯದಲ್ಲಿ ದೈತ್ಯಸೇನೆಯು ಪರಾಜಿತಮಾಗಲಾಗಿ, ಅತಿ ಶೂರನು ಘೋರ ಮಾದ ಅಯೋವಿಕಾರಮಾಗಿರ್ಪ ದುಡುವಾದ ಮುಸಲವಂ ತಿರುಹಿಸಿ ಭೂತ ಗಣಂಗಳಂ ಬಡಿದು ಓಡಿಸಿದನು.

ವೀರರಕ್ಕಸರ ಮತ್ತು ಭೂತಗಳ ಯುದ್ಧ.

ಅನಂತರದಲ್ಲಿ ಮಹಾ ಬಲವಂತನಾದ ಮೇಘನೆಂಬ ಗಣಾಧೀಶ್ವರನದಂ ಕೇಳಿ ಶೀಘ್ರದಿಂ ಪೊರಮಟ್ಟು, ಮಹಾ ಪರ್ವತವಂ ತೆಗೆದು ಆತನಂ ಪ್ರಹರಿಸ ಲಾಗಿ, ಆ ದೈತ್ಯನದಂ ಚೂರ್ಣವಮ್ಮಾಡಿದನು. ಮರಳಿ ಮೇಘನು ಕರದಿಂದಾ ತನ ಕರವಂ ಪಿಡಿದು ಉರವಂತಾಡಿಸೆ, ಆ ಅಸುರನು ಕೋಪದಿಂ ತನ್ನ ಅಧ ರವಂ ಕಡಿದು ಮುಸಲದಿಂದಾತನ ಉದರದಲ್ಲಿ ಬಡಿಯೆ, ಆ ಮೇಘನು ಕಣ್ಣಿ ನಲ್ಲಿ ಕಿಡಿಗಳನ್ನುದುರಿಸುತ ವೇಗದಿಂ ನೆಗದು ಕರದಿಂದಲೆ ಆತನ ಕಪೋಲವಂ ತಾಡಿಸಿದನು. ಆಗ ಸಮಸ್ತ ಭೂತಂಗಳು ಸಹಸ್ರ ಯೋಜನೋನ್ನತಮಾದ, ಪುರಕ್ಕೆ ಭೂಷಣಮಾದ ಗೋಪುರವಂ ಕಿತ್ತು ಸಮುದ್ರ ಮಧ್ಯದಲ್ಲಿ ಪೂರ್ವದಲ್ಲಿ ದೇವತೆಗಳು ಮಂದರ ಪರ್ವತವನ್ನಿಟ್ಟಂತೆ ಇಟ್ಟರು. ಅಲ್ಲಿರುವ ಅನೇಕ ದೈತ್ಯರುಗಳು ಆಗ ಸಮುದ್ರದಲ್ಲಿ ಬಿದ್ದರು. ಸಮುದ್ರವು ಆ ಪುರವಂ ಆವರಿ

ಸಿತು. ಬಳಿಕ ಆ ಪುರಕ್ಕೆ ಕಾಂಚೀದಾಮದಂತೆ ಶೋಭಿಸುತಿರ್ಪ ಉತ್ತರ ದಿಗ್ಭಾಗದ ಕೋಟೆಯಂ ಕೆಡಹಿ ತಡೆಯಿಲ್ಲದೆ ಪುರವಂ ಪ್ರವೇಶಿಸಿ, ಬಹು ದೈತ್ಯರಂ ಕೊಂದು ಅನೇಕ ಗೃಹಂಗಳಂ ಪಿಡಿದು ಮರಳಿ ಕುಮಾರಸ್ವಾಮಿಯ ಸಮೀಪಕ್ಕೆ ಬಂದರು. ಆಗ ಕುಮಾರಸ್ವಾಮಿಯು ಹೇಮಕೂಟ ಪುರಕ್ಕೆ ಮಹಾ ಕೋಲಾಹಲ ಧ್ವನಿಗಳಂ ಗೆಯ್ದು ತಮ್ಮ ಸೇನೆಗಳೊಡನೆ ಪೊರಮಡೆ, ದೇವತೆ ಗಳು ಪೂಮಳೆ ಗರೆದರು. ದೇವದುಂದುಭಿಗಳು ಮೊಳಗಿದವು. ಸಮಸ್ತವಾದ ವಾದ್ಯಂಗಳು ಘೋಷಿಸಿದವು. ಸ್ತುತಿಪಾಠಕರು ಸ್ಫುಟವಾಕ್ಯಂಗಳಿಂದ ಕುಮಾರಸ್ವಾಮಿಯ ಗುಣಂಗಳಂ ಹೊಗಳಿದರು. ಈ ಪ್ರಕಾರದಿಂ ಕುಮಾರ ಸ್ವಾಮಿಯು ಭಕ್ತರೊಡನೆ ಹೇಮಕೂಟ ಮಧ್ಯದಲ್ಲಿರುವ ರಾಜಗೃಹಕ್ಕೆ ಪೋಗಿ ಸಿಂಹಾಸನವನ್ನೇರಿ, ಸಮಸ್ತವಾದ ಸೇನೆಗಳನ್ನು ತಮ್ಮ ತಮ್ಮ ಗೃಹಂಗಳಿಗೆ ಕಳುಹಿ, ಬ್ರಹ್ಮ ವಿಷ್ಣು ಮೊದಲಾದ ದೇವತೆಗಳಿಂದ ಸ್ತುತಿಸಲ್ಪಟ್ಟ ಪಾದ ಸರೋಜವುಳ್ಳವನಾಗಿ, ರಮ್ಯವಾದ ಸಿಂಹಾಸನದಲ್ಲಿರ್ದನು. ಆಗ ಸೂರ್ಯನು ಕುಮಾರಸ್ವಾಮಿಯ ಜಯವನ್ನೋಡಿ ಭಯವಂ ಬಿಟ್ಟು ಪಶ್ಚಿಮಾಂಬುಧಿಯಲ್ಲಿ ಮುಳುಗಿದನು. ಬಳಿಕ ಶೂರನು ಪದ್ಮಕೋಮಲಿಯೆಂಬ ಸ್ತ್ರೀಯೊಡನೆ ನಿದ್ರೆಯಂ ಬಿಟ್ಟು ರಣಾರ್ಥವಾಗಿ ಚಿಂತಿಸುತಿರಲಾಗಿ, ಭಾನುಕೋಪನು ಪಿತೃ ವಿನ ಆಗಮನವಂ ಕೇಳಿ ಜಯಕ್ಕೋಸ್ಕರವಾಗಿ ಮಂತ್ರ ಪುನಶ್ಚರಣೆಯಮ್ಮಾ ಡುತ್ತ, ಯುದ್ಧಶಿಕ್ಷೆಯನ್ಮಾಯೆಯಿಂ ಬಿಡಲು ರಾತ್ರಿಯಲ್ಲಿ ಖಿನ್ನನಾದ ಶೂರ ಪದ್ಮನ ಬಳಿಗೆ ಬಂದು, ಪೂರ್ವದಿನದಲ್ಲಿ ಉಂಟಾದ ವೃತ್ತಾಂತವಂ ಬಿನ್ನಪಂ ಗೆಯ್ದನೆಂದು ಸೂತಪೌರಾಣಿಕನು ಶೌನಕಾದಿ ಮುನಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ಯುದ್ಧಕಾಂಡದಲ್ಲಿ ಹನ್ನೆರಡನೆಯ ಅಧ್ಯಾಯವು ಸಮಾಪ್ತಮಾದುದು.

ಹದಿಮೂರನೆಯ ಅಧ್ಯಾಯವು.

ಭಾನುಕೋಪರಕ್ಕಸ ಷಣ್ಮುಖದೇವರ ಯುದ್ಧ.

ಎಲೈ ಋಷಿಗಳಿರಾ! ಅನಂತರದಲ್ಲಿ ಭಾನುಕೋಪನು ತಮ್ಮ ತಂದೆಯಾದ ಶೂರಪದ್ಮನಂ ನೋಡಿ, ಎಲೈ ಪಿತನೆ! ನಾನು ಸಮಸ್ತವಾದ ಸೇನೆಗಳೊಡನೆ ಸರ್ವಾಯುಧ ಸಮೇತನಾಗಿ ಯುದ್ಧಯಾತ್ರೆಯಂ ಕುರಿತು ತೆರಳಲು ಸಿದ್ಧವಾಗಿ ದ್ದೆನು. ನೀನು ನನಗೆ ತಿಳುಹಿಸದೆ ಪೋದವನಾದಿ, ಬಾಲಕನೊಡನೆ ಯುದ್ಧವಂ ಮಾಡಿ ಜಯಫಲವಂ ಹ್ಯಾಗೆ ಪಡದಿ? ನಿನಗೆ ಕೀರ್ತಿಯೆಲ್ಲಿಯದು? ಅಪಕೀರ್ತಿ

ಯುಂಟಾಗುವದು ನಿಶ್ಚಯವು, ನಾನು ಉದಯಕಾಲದಲ್ಲಿ ನಿನ್ನ ಆಜ್ಞೆಯಿಂದ ಆತನಂ ಸಂಹರಿಸುವೆನು, ದೂತಮುಖದಿಂದೀವಾರ್ತೆಯಂ ಕೇಳಿ ಸಂತುಷ್ಟನಾದೆನು, ರಣದಲ್ಲಿ ಶತ್ರುಗಳಂ ಜಯಿಸಲಾರದೆ ನನಗೆ ಮರಳಿ ನಿನ್ನೊಡನೆ ಸಂಗವೇ ಬೇಡ, ನಿನ್ನ ರಾಜ್ಯವನ್ನು ಇದೇ ನೋಡು ಬಿಟ್ಟೆನು, ಎಂದು ಈ ಪ್ರಕಾರವಾಗಿ ನುಡಿಯಲಾಗಿ, ಶೂರನು ಆ ವಾಕ್ಯವಂ ಕೇಳಿ ಆ ಬಾಲಕನು ನನ್ನಿಂದಲ್ಲದೆ ಇತರರಿಂ ಜಯಿಸಲು ಶಕ್ಯನಲ್ಲ. ಎಲೆ ಮಗನೆ! ನೀನು ನನ್ನಾಜ್ಞೆಯಿಂದ ಬಂದ ದೂತರಂ ಆತನ ಸೇನೆಗಳಂ ಜಯಿಸಿ ಶೀಘ್ರವಾಗಿ ಬಾರೆಂದು ಆ ಮಗನಂ ಕಳುಹಿ ಸಂತೋಷವನ್ನೈದಿ ನಿಜಗೃಹದಲ್ಲಿರ್ದನು. ಅನಂತರದಲ್ಲಿ ದೂತರು ಪುರವಂ ಕೆಡಹಿದುದಂ ಗೋಪುರವಂ ಅಬ್ಧಿಯೊಳು ಬಿಸುಟದುದು ಗೃಹಂಗಳಂ ಮುರಿದುದಂ ಪ್ರಾಕಾರ ಪತನವಂ ಅತಿಘೋರನ ಮರಣವಂ ರಾಜಗೃಹದಿಂ ಪೊರಮಟ್ಟ ಭಾನುಕೋಪಂಗೆ ಪೇಳಲಾಗಿ, ಆತನು ಚಾರಮುಖದಿಂ ಶೂರನ ಅಪಜಯದಿಂದೀಬಗೆಯಾದುದೆಂದು ಕೇಳಿ, ಕೋಪದಿಂ ಜ್ವಲಿಸಿ ಪುರವನ್ನು ಪೂರ್ವದಂತೆ ರಚಿಸೆಂದು ಮಯಂಗೆ ಪೇಳಿ, ಮಹಾಕಾಯನೆಂಬ ದೈತ್ಯನಂ ಪುರದ ಕಾವಲಿಗೆ ಕಳುಹಿ, ದಶಸಹಸ್ರ ವಾಹಿನೀ ಸೇನೆಗಳೊಡನೆ ನಾನಾ ರತ್ನ ಭೂಷಿತಮಾದ ತನ್ನ ಗೃಹಮಂ ಪ್ರವೇಶಿಸಿದನು.

ಬಳಿಕ ದೈತ್ಯಶಿಲ್ಪಿಯಾದ ಮಯನು ರಾತ್ರಿಯಲ್ಲಿ ಕ್ಷಣದಿಂ ಪೂರ್ವದಂತೆ ಪುರವಂ ನಿರ್ಮಿಸಿ ತನ್ನ ಮಂದಿರಕ್ಕೆ ಪೋಗೆ, ಮಹಾಕಾಯನು ಸೇನೆಯೊಡನೆ ಅಳ್ವೇರಿಯ ಸಮಿಾಪಕ್ಕೆ ಗಮಿಸಿ ಮಹಾ ದೀಪಪ್ರಭೆಯಿಂ ಅಂಧಕಾರವಂ ಕೆಡಿಸಿ ಅಲ್ಲಿಯೆ ತಿರುಗುತಿರ್ದನು. ಬಳಿಕ ಭಾನುಕೋಪನು ಉದಯಕಾಲದಲ್ಲೆದ್ದು ದಿನಕರ್ಮವಂ ಮಾಡಿ, ತನ್ನ ಪಿತೃಮಾತೆಯಾದ ಮತ್ತೆ ತಪವಂ ಮಾಡುತಲಿರುವ ಮಾಯಾದೇವಿಯಂ ನೆನೆಯೆ, ಆಕೆಯು ಬಂದಳು. ಆಗ ಆಕೆಯಂ ಕಂಡು ನಮಸ್ಕಾರವಂ ಮಾಡಿ ಸ್ತುತಿಸಿ, ವೀರಬಾಹುವಿನಿಂ ಮಾಡಲ್ಪಟ್ಟ ಭಂಗವಂ ಪೇಳಲಾಗಿ ಆ ಮಾಯಾದೇವಿಯು ಆತನಂ ನೋಡಿ, ಎಲೈ ಪೌತ್ರನೆ! ಬ್ರಹ್ಮವಿಷ್ಣು ಮೊದಲಾದ ದೇವತೆಗಳು ನಿಮ್ಮಿಂದ ಅತ್ಯಂತ ಬಾಧಿತರಾದರು. ಅದು ಕಾರಣದಿಂದೀಗ ಮಗನಿಗೆ ಹೇಗೆ ಜಯವುಂಟಾಗುವದು? ಅಡಿಗಡಿಗೆ ಆತಂಗೆ ಪೇಳೆ, ಭಾನುಕೋಪನು ಆ ವಾಕ್ಯವಂ ಕೇಳಿ ಪೌತ್ರನ ಸುಖದಲ್ಲಿ ಉದ್ಯುಕ್ತೆಯಾದವೇಲೆ ಮುಂದೆ ಬರುವ ಕಾರ್ಯವು ಹೇಗಾದೊಡಂ ಆಗಲಿ, ವೀರಬಾಹುವಿನ ಜಯಕ್ಕೋಸ್ಕರ ನನಗೊಂದಸ್ತ್ರವಂ ಕೊಡೆಂದು ಕೇಳಿ ಪ್ರಾರ್ಥಿಸಿದವನಾಗಲು, ಆ ಮಾಯಾದೇವಿಯು ಎಲೈ ದೈತ್ಯಶ್ರೇಷ್ಠನೆ! ರಣವಲ್ಲಿ ಶತ್ರುಗಳಿಗೆ ಮಹಾ ಮೂರ್ಛೆಯಂ ಮಾಡುವ ಅಸ್ತ್ರವಂ ಕೊಡುವೆನು. ಈ ದಿನದಲ್ಲಿ ನಿನಗೆ

ಜಯವುಂಟಾದೀತೆಂದು ಪೇಳಿ ತೆರಳಿದಳು. ಅನಂತರದಲ್ಲಿ ಭಾನುಕೋಪನು ಮಾಯಾದೇವಿಯಿಂದ ಕೊಡಲ್ಪಟ್ಟ ಅಸ್ತ್ರವಂ ಪಡದು ಅತಿ ಸಂತೋಷದಿಂ ಧನುಸ್ಶರಗಳಿಂ ಪೂರ್ಣಮಾದ ಬತ್ತಳಿಕೆಗಳಂ ವಜ್ರ ಕವಚಮುಂ ಧರಿಸಿ, ಶ್ರೇಷ್ಠಂಗಳಾದ ವಾಯು ಅಗ್ನಿ ಯಮ ಚಂದ್ರ ಅರ್ಕ ಬ್ರಹ್ಮ ವಿಷ್ಣುಗಳ ಅಸ್ತ್ರಂಗಳಂ ಉತ್ತಮವಾದ ಪಾಶುಪತಾಸ್ತ್ರಮಂ ಸಹ ತೆಗೆದುಕೊಂಡು ಪ್ರತ್ಯೇಕ ದಶಸಹಸ್ರ ವಾಹಿನಿಗಳಾದ ಬಲಂಗಳೊಡನೆ, ಪೊರಮಟ್ಟನು. ಆಗ ಭೇರಿ ಮೊದಲಾದ ವಾದ್ಯಧ್ವನಿಗಳಿಂ ರೇಣುಗಳಿಂದಲುಂ ಸಮಸ್ತ ದಿಕ್ಕುಗಳು ಆವೃತಂಗಳಾದವು. ಗಜಂಗಳು ಮೇಘಜಲವಂ ಸುಂಡಿಲಗಳಿಂ ವರ್ಷಿಸಿದವು; ತುರಗಂಗಳು ಸೂರ್ಯ ಮಾರ್ಗದಲ್ಲಿಯುಂ ಮೇಘಮಾರ್ಗದಲ್ಲಿಯುಂ ಪಾದಂಗಳಂ ನಿಲ್ಲಿಸಿ ನಡೆದವು. ರಥಂಗಳ ಚಕ್ರಧ್ವನಿಯು ಮೇಘದಂತೆ ಮೊಳಗಿತು. ಮತ್ತೆ ಕೃಷ್ಣಾಂಗರಾದ ವಿಚಿತ್ರಕೇಶರಾದ ದೈತ್ಯರುಗಳು ಮಹಾ ಕೋಲಾಹಳಧ್ವನಿಯಿಂ ಪೊರಮಟ್ಟರು. ಅತಿ ನಿಬಿಡಮಾದ ರಥ ಗಜಾದಿಗಳಿಂದಂಧಕಾರ ಮುಂಟಾದೊಡಂ, ಭೂಷಣಾದಿಗಳ ಕಾಂತಿಯಿಂ ಬೆಳಕುಂಟಾದುದು. ಆಗ ಭಾನುಕೋಪನು ಪುರದ್ವಾರಕ್ಕೆ ಪೋಗಿ, ಅಶ್ವಮುಖನೆಂಬ ದೂತನಂ ನೋಡಿ, ಎಲೈ ದೂತನೆ! ವೀರಬಾಹುವಿನ ಸಮೀಪಕ್ಕೆ ಪೋಗಿ, ಭಾನುಕೋಪನು ನಿನ್ನಂ ರಣದಲ್ಲಿ ಜಯಿಸುವದಕ್ಕೋಸುಗ ಬರುತಿದಾನೆಂದು ಪೇಳಿ ಶೀಘ್ರನಾಗಿ ಬರುವನಾಗೆಂದು ಪೇಳಿ ಕಳುಹಿಸಿದನು. ಆ ಬಳಿಕ ದೂತನು ಅದರಂತೆ ವೀರಬಾಹುವಿನ ಸಮೀಪಕ್ಕೆ ಪೋಗಿ ಹೀಗೆಂದು ಪೇಳಲಾಗಿ ವೀರಬಾಹುವು ಆ ವಾಕ್ಯವಂ ಕೇಳಿ, ಹಾಗೆಯೇ ಆಗಲೆಂದು ನುಡಿದು ಆತನಂ ಕಳುಹಿಸಿ, ತನ್ನ ಅನುಜರೊಡನೆ ಕುಮಾರಸ್ವಾಮಿಯ ಸಮೀಪಕ್ಕೆ ಪೋಗಿ ಪರಮ ಭಕ್ತಿಯಿಂ ನಮಸ್ಕಾರವಂ ಮಾಡಿ, ಬದ್ಧಾಂಜಲಿಪುಟನಾಗಿ ನಿಂತಿರೆ, ಸರ್ವ ಭೂತಾಂತರಾತ್ಮನಾದ ಕುಮಾರಸ್ವಾಮಿಯು ಆತನಂ ನೋಡಿ, ಎಲೈ ವೀರಬಾಹುವೆ! ಈ ದುರಾತ್ಮನಾದ ಭಾನುಕೋಪನು ಕೋಪದಿಂ ನಿನ್ನೊಡನೆ ಯುದ್ಧಕ್ಕೆ ಬರುತಿಧಾನೆ. ಸಹಸ್ರವಾಹಿನೀ ಭೂತಸೇನೆಗಳೊಡನೆ ಸೇನಾಪತಿಗಳಿಂದ ಯುಕ್ತನಾಗಿ, ಅಷ್ಟಾದಶ ಲಕ್ಷ ವೀರರಿಂದ ಸಹಿತನಾಗಿ ಪೊರಮಟ್ಟು ನನ್ನಾಜ್ಞೆಯಿಂದ ಯುದ್ಧವಂ ಮಾಡುವನಾಗು. ಭಾನುಕೋಪನು ಮಹಾಸ್ತ್ರವಂ ಬಿಟ್ಟು ನಿನಗೆ ಮೂರ್ಛೆಯುಂಟಾಗುವಂತೆ ಮಾಡುತ್ತಾನೆ, ಆ ಸಮಯದಲ್ಲಿ ನಿನ್ನ ಶಕ್ತಿಗೆ ಅನುಸಾರವಾಗಿ ನಮ್ಮ ಶಕ್ತಿಯು ಮೋಹಾಸ್ತ್ರವಂ ತೊಲಗಿಸುವದು ಎಂದು ಈ ಪ್ರಕಾರವಾಗಿ ಪೇಳಿ ಆತನಂ ಯುದ್ಧಕ್ಕೆ ಕಳುಹಿಸಿದನು. ಆಗ ವೀರಬಾಹುವು ಕುಮಾರಂಗೆ ನಮಸ್ಕಾರವಂ ಮಾಡಿ ರಥವನೇರಿ, ಭೂತಸೇನೆಯ ಧ್ವನಿಗಳಿಂ ವಾದ್ಯಘೋಷಗಳಿಂ ಯುಕ್ತನಾಗಿ ಯುದ್ಧಭೂಮಿಗೆ ಬರಲಾಗಿ, ದೈತ್ಯ

ಸೇನೆಯು ಭೂತಸೇನೆಯೊಳಗೆ ಬಹು ಬಾಣಂಗಳಂ ಸುರಿಸಿತು. ಮತ್ತು ಭೂತ ಸೇನೆಯು ಹಾಗೆ ಅನೇಕ ಶರಂಗಳಂ ಪ್ರಯೋಗಿಸಿತು. ಈ ಪ್ರಕಾರವಾಗಿ ಯುದ್ಧವಾಗುತ್ತಿರಲಾಗಿ ಅನೇಕ ಭೂತಂಗಳು ಯುದ್ಧವಂ ಮಾಡಿ ಭೂಮಿಯಲ್ಲಿ ಬಿದ್ದರು. ಆದರು ಎಲ್ಲ ಭೂತಂಗಳು ಒಂದಾಗಿ ಕೂಡಿ ದೈತ್ಯರ ಶಿರಗಳಲ್ಲಿ ತಾಡಿಸಿ ಕೆಲಂಬರಂ ಪಾದಂಗಳಲ್ಲಿ ಹಿಡಿದು ತಿರುಹಿ ಭೂಮಿಗೆ ಬಡಿದರು. ಕೆಲವರಂ ಸಮುದ್ರದಲ್ಲೊಯ್ದರು. ನಾರಾಯಣನಂತೆ ಸರ್ವಾರಿ ಮರ್ದಕರಾಗಿ ಗಜ ಸಮೂಹವಂ ತಿರುಹಿ ಅವುಗಳ ದಂತಂಗಳಂ ಕಿತ್ತು ಅನೇಕ ದೈತ್ಯರಂ ಸಂಹರಿಸಿದರು. ದೈತ್ಯರಾದರೆ ಜಲಂಧರನಂತೆ ತ್ರಿಶೂಲದಲ್ಲಿ ತಿವಿದು ಯುದ್ಧವಂ ಮಾಡಲಾಗಿ, ವೀರರು ಅನೇಕ ಶರವರ್ಷಂಗಳಂ ಕರೆದರು.

ಆಗ ಭಾನುಕೋಪನು ಇದಂ ಕಂಡು ತ್ವರಿತದಿಂ ರಥವಂ ತರುಬಿ ಶರ ಸಂಧಾನವಂ ಮಾಡಲಾಗಿ, ರಣಕೋವಿದನಾದ ವೀರಬಾಹುವು ಶೀಘ್ರದಿಂ ಪೊರಮಟ್ಟನು. ಅನಂತರದಲ್ಲಿ ರಣಶಾರ್ದೂಲರಾದ ಅವರೀರ್ವರು ಪರಸ್ಪರವಾಗಿ ಜಯೇಚ್ಛೆಯಿಂ ಬಹು ಕುಪಿತರಾಗಿ ನಿಶಿತಂಗಳಾದ ಅನೇಕ ಶರಗಳಂ ವರ್ಷಿಸಲಾಗಿ, ಆ ಬಾಣಂಗಳು ಅನ್ಯೋನ್ಯ ಯುದ್ಧವಂ ಮಾಡಿ ಪೊಂದಕ್ಕೊಂದು ಅಭಿಘಾತದಿಂ ಭಂಗವಾಗುತಿರೆ, ಅವರೀರ್ವರು ಶೀಘ್ರದಿಂ ಕ್ಷಣದಿಂ ಬ್ರಹ್ಮಲೋಕವನ್ನು ವಿಷ್ಣುಲೋಕವನ್ನು ಪೊಂದಿ ಅಲ್ಲಲ್ಲಿಯು ಯುದ್ಧವಂ ಮಾಡುತ್ತ ಅತ್ತಣಿಂ ಸಪ್ತಸಮುದ್ರಪರ್ಯಂತವು ಚಕ್ರಾಕಾರವಾಗಿ ತಿರಿಗಿ, ರಥಂಗಳಲ್ಲಿಯೆ ನಿಂತು ಮಹಾ ಕೋಲಾಹಲ ಧ್ವನಿಗಳಂ ಮಾಡುತ ಯುದ್ಧವಂ ಮಾಡಿದರೆಂದು ಸೂತ ಪೌರಾಣಿಕನು ಶೌನಕಾದಿ ಮುನಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ಯುದ್ಧ ಕಾಂಡದಲ್ಲಿ ಹದಿಮೂರನೆಯ ಅಧ್ಯಾಯವು ಸಮಾಪ್ತವಾದುದು.

ಹದಿನಾಲ್ಕನೆಯ ಅಧ್ಯಾಯವು.

ಭಾನುಕೋಪ ವೀರಬಾಹುಗಳ ಯುದ್ಧ.

ಎಲೈ ಋಷಿಗಳಿರಾ! ಅನಂತರದಲ್ಲಿ ಭಾನುಕೋಪನು ಕೋಪದಿಂ ವೀರನ ಉದರದಲ್ಲಿ ಸಹಸ್ರ ಶರಗಳಂ ಪ್ರಯೋಗಿಸಲಾಗಿ, ವೀರಬಾಹುವು ಕೋಪಾಗ್ನಿ ಜ್ವಾಲೆಯಿಂದತಿ ಭಯಂಕರನಾಗಿ ನಿಶಿತಂಗಳಾದ ಸರಳುಗಳಿಂದಾತನ ಸಾರಥಿಯುಂ ತುರಗಗಳಂ ಸಂಹರಿಸಿ ರಥವಂ ಮುರಿದನು. ಆಗ ಆತನು ಮತ್ತೊಂದು ರಥವನ್ನೇರಿ ಶರಸಂಧಾನವಂ ಮಾಡುವದರೊಳಗೆ ಸಹಸ್ರ ಬಾಣಂಗಳಿಂದಾತನ ಉರವಂ ಛೇದಿಸಲಾಗಿ, ಭೂತಂಗಳಿದಂ ಕಂಡು ಕೋಲಾಹಲಧ್ವನಿಯಂ ಮಾಡಿದರು. ಅನಂತರದಲ್ಲಿ ಭಾನುಕೋಪನಿಂದ ವಾರುಣಾಸ್ತ್ರವು ಬಿಡಲ್ಪಡಲಾಗಿ ಅದು

ಸಮಸ್ತ ದಿಕ್ಕುಗಳನ್ನು ಸರ್ವ ಲೋಕಂಗಳನ್ನು ವ್ಯಾಪಿಸಿಕೊಂಡು ಸಪ್ತಸಾಗರಂಗಳಂ ಅತಿ ಭಯಂಕರವಾಗಿ ಮಹತ್ತಾದ ಧ್ವನಿಯಿಂ ಭೂತಗಣಂಗಳನ್ನೋಡಿಸುತ್ತ, ಭೂತಸೇನಾಧಿಪತಿಗಳನ್ನು ಭಯಪಡಿಸುತ್ತ ಬಂದುದು. ಆ ಸಮಯದಲ್ಲಿ ವೀರಬಾಹುವದಂ ಕಂಡು ಆಗ್ನೇಯಾಸ್ತ್ರವಂ ಬಿಡೆ, ಆ ಅಸ್ತ್ರವು ಒಂದು ಕಡೆಯಲ್ಲಿ ಕಿಡಿಗಳ ಸಮೂಹದಿಂದಾವೃತವಾಗಿ ಮತ್ತೊಂದು ಪ್ರದೇಶದಲ್ಲಿ ಜ್ವಾಲಾಮಾಲಿಗಳಿಂ ಇನ್ನೊಂದು ದಿಕ್ಕಿನಲ್ಲಿ ಧೂಮದಿಂ ಬೇರೊಂದು ಕಡೆಯಲ್ಲಿ ಧ್ವನಿಯಿಂ ವ್ಯಾಪ್ತಮಾಗಿ ಬ್ರಹ್ಮಾಂಡ ಪೊಡೆಯುವಂದದಿ ಜ್ವಲಿಸುತ, ತಾರಾಮಂಡಲಂಗಳಂ ಚಲನೆಯಂ ಮಾಡಿಸುತ್ತಲು ಗಂಗಾದಿ ಸರ್ವ ನದಿಗಳಂ ಸಮುದ್ರಂಗಳಂ ಶೋಷಿಸುತ್ತಲುಂ ಸರ್ವ ಪರ್ವತಂಗಳಂ ಧೂಳೀಪಟಲಂಗೈಯುತಲುಂ, ಭೂಮಂಡಲವನ್ನು ಗಡಗಡನೆ ನಡುಗಿಸುತ್ತಲು ಬಂದು ಆ ವಾರುಣಾಸ್ತ್ರವನ್ನು ಆ ಸ್ವಾದನೆಯನ್ಮಾಡಿ ತನ್ನ ಸಮೀಪಕ್ಕೆ ಬರಲಾಗಿ, ಭಾನುಕೋಪನದಂಕಂಡು ವಾಯುವ್ಯಾಸ್ತ್ರವಂ ಪ್ರಯೋಗಿಸಿದನು. ಆ ಅಸ್ತ್ರವು ಸಮುದ್ರವಂ ಕಂಪಾಯಮಾನಂ ಗೆಯ್ಯುತಲು ಪರ್ವತಂಗಳಂ ತೊಲಗಿಸುತ್ತಲು ಕಲ್ಪಾಂತವಾಯುವಿನಂತೆ ನೋಡಲಶಕ್ಯಮಾಗಿ ಆ ಆಗ್ನೇಯಾಸ್ತ್ರಮಂ ಕೆಡಿಸಿ, ವೀರಬಾಹುವಿನ ಸಮೀಪಕ್ಕೆ ಬರಲಾಗಿ, ವೀರಬಾಹುವದಂ ಕಂಡು ಮಹಾ ಕೋಪದಿಂದ ಸರ್ಪಾಸ್ತ್ರವಂ ಬಿಟ್ಟನು. ಅದು ಅನೇಕ ಸರ್ಪ ಸಮೂಹದಿಂದಲುಂ ಮಹತ್ತಾದ ನಿಟ್ಟುಸುರಿನಿಂದಲುಂ ವಿಷಗಳಿಂದಲುಂ ಅಗ್ನಿ ಕಣಂಗಳಿಂದಲುಂ ಆವೃತಮಾಗಿ, ಬಹಳವಾದ ಹೆಡೆಗಳಿಂದಲಂಕೃತಮಾಗಿ ಜಗದ್ವ್ಯಾಪಿಯಾಗಿ ಸೂರ್ಯನಂ ತಿರಸ್ಕರಿಸಿ, ಆಕಾಶವನ್ನಾವರಿಸುತ್ತ ಶೀಘ್ರದಿಂ ಬಂದು ಆ ವಾಯುವ್ಯಾಸ್ತ್ರವಂ ಭಕ್ಷಿಸಿ ಸರ್ವಲೋಕ ಭಯಂಕರಮಾಗಿ ಅಸುರನ ಸಮೀಪಕ್ಕೆ ಪೋಗಲು, ಭಾನುಕೋಪನದಂ ಕಂಡು ಗಾರುಡಾಸ್ತ್ರವಂ ಪ್ರಯೋಗಿಸಿದನು. ಅದು ಅನೇಕ ರೂಪದಿಂ ಪೊರಮಟ್ಟು ಮಾರುತನಿಂ ತೂಲದಂತೆ ಪಕ್ಷಪಾತದಿಂ ಪರ್ವತಗಳನ್ನೆತ್ತಿ ಆಕಾಶದಲ್ಲಿ ಪೊಯ್ಯುತಲು, ಸಪ್ತಸಮುದ್ರಂಗಳನ್ನು ಏಕವಾಗಿ ಮಾಡುತಲು ಕೊಕ್ಕಿಯಿಂದ ಭೂಮಿಯನ್ನು ಶೀಳುತಲು, ತನ್ನ ದರ್ಶನ ಮಾತ್ರದಿಂದಲೇ ಸರ್ಪಾಸ್ತ್ರವು ಪೋಡಿಹೋಗುವಂತೆ ಮಾಡುತ್ತಲು ಅತಿ ಭಯಂಕರಮಾಗಿ ಭೂತನಾಯಕನಾದ ವೀರಬಾಹುವಿನ ಬಳಿಗೆ ಬರಲಾಗಿ, ಆತನದಂ ಕಂಡು ಮಹಾ ಬಲ ಪರಾಕ್ರಮವುಳ್ಳ ವೃಷಭಾಸ್ತ್ರವನ್ನು ಬಿಟ್ಟನು. ಅದು ಅತಿ ಕೋಪದಿಂ ಭಯಂಕರವಾಗಿ ಸರ್ವರನ್ನು ಬೆದರಿಸುತ ಘರ್ಘರಧ್ವನಿಯುಳ್ಳದ್ದಾಗಿ ಮಧ್ಯದಲ್ಲಿ ಘಂಟೆಗಳಿಂ ವಿರಾಜಿತವಾಗಿ, ಉನ್ನತವಾದ ಗಿರಿಗಳಂ ಕೊಂಬಿನಿಂದೆತ್ತಿ ಅವುಗಳ ಸಾಲುಗಳಿಂ ವಿರಾಜಿತಮಾಗಿ, ತನ್ನ ಪಾದದ

ಗೊರಸುಗಳಿಂ ಭೂಮಿಯಂ ಬಡಿಯುತ್ತ ಸರ್ವಸಾಗರಂಗಳಂ ಏಕವಾಗಿ ಮಾಡುವಂತೆ ಬಾಲವಂ ಬೀಸುತ, ಗಂಭೀರವಾದ ಧ್ವನಿಯಿಂ ಬ್ರಹ್ಮಾಂಡವಂ ಪೂರಿಸುತಲುಂ ಬಂದು ಆ ಗಾರುಡಾಸ್ತ್ರವಂ ಶ್ವಾಸದಿಂ ಗ್ರಹಿಸಿ ಸಮಸ್ತ ದೈತ್ಯರಂ ಭಯಪಡಿಸುತ್ತ, ಸಕಲ ಜಗತ್ತನ್ನು ಕಂಪಿಸುವಂತೆ ಮಾಡುತ ಆ ದೈತ್ಯನ ಬಳಿಗೆ ಬಂದು ಧಿಕ್ಕರಿಸಿತು.

ಬಳಿಕ ಭಾನುಕೋಪನದಂ ಕಂಡು ಯಮಾಸ್ತ್ರವಂ ಬ್ರಹ್ಮಾಂಡಾಸ್ತ್ರವಂ ಕೂಡಿಸಿ ಬಿಡಲಾಗಿ, ಆ ಅಸ್ತ್ರವಂ ಯೆಲ್ಲ ಅಸ್ತ್ರಗಳು ಧ್ವನಿಗಳಿಂ ಬಂದು, ಆ ವೃಷಭಾಸ್ತ್ರವಂ ಕಂಡು ನಮಸ್ಕರಿಸಿ ಪೋದವು. ಬಳಿಕ ನಾರಾಯಣಾಸ್ತ್ರವಂ ಬಿಡೆ, ಅದು ಬಹುವಾಗಿ ನಾರಾಯಣಾಕೃತಿಯಾಗಿ ಪಂಚಾಯುಧಂಗಳಂ ಧರಿಸಿ ವೇಗದಿಂ ಬಂದು ವೃಷಭಾಸ್ತ್ರದೊಡನೆ ಯುದ್ಧವಮ್ಮಾಡಲಾಗಿ, ವೀರಬಾಹುವಪಂ ಕಂಡು ವೀರಭದ್ರಾಸ್ತ್ರಮಂ ಬಿಟ್ಟನು. ಅದು ಮಹಾ ಭಯಂಕರಮಾಗಿ ಅನಂತಕೋಟಿವೀರರಿಂ ವೀರಭದ್ರರಿಂದಾವೃತಮಾಗಿ ಶೀಘ್ರದಿಂ ಬಂದು ಆ ನಾರಾಯಣಾಸ್ತ್ರವಂ ಭೇದಿಸೆ, ದೈತ್ಯನು ಅಸ್ತ್ರವಂ ಭೇದಿಸೆ, ದೈತ್ಯನು ಅಸ್ತ್ರರಾಜನಾದ ಸರ್ವಶಕ್ತಿನಿವಾರಕಮಾದ ಪಾಶುಪತಾಸ್ತ್ರವಂ ವಿಧಿಯಿಂ ಬಿಡಲಾಗಿ, ವೀರಬಾಹುವು ಪಾಶುಪತಾಸ್ತ್ರವನ್ನೇ ಬಿಟ್ಟನು. ಅದು ಕಲ್ಪಾಂತದಿಂದತಿವೇಗದಿಂ ಮಹಾ ಭಯಂಕರಮಾದ ವಾಯುವುಳ್ಳದ್ದಾಗಿ ಸಮಸ್ತ ದಿಕ್ಕುಗಳನ್ನಾವರಿಸಿಕೊಂಡು, ವಿಶೇಷಧೂಮದಿಂ ವ್ಯಾಪ್ತಮಾಗಿ ಒಂದು ಕಡೆಯಲ್ಲಿ ಪ್ರಳಯಕಾಲದ ಧ್ವನಿಯಂತೆ ಧ್ವನಿಯುಳ್ಳದ್ದಾಗಿ ಜ್ವಲಿಸುತ, ಹಾಲಹಲ ಮೊದಲಾದ ವಿಷಗಳ ಕೋಲಾಹಳ ಧ್ವನಿಗಳಿಂ ಭೀಷಣಮಾಗಿ, ಮತ್ತೊಂದು ಕಡೆಯಲ್ಲಿ ಮಹಾ ಕಲ್ಪದಲ್ಲಿ ಉಂಟಾದ ಸಪ್ತಸಾಗರಂಗಳಂ ಉಗುಳುತ್ತ ಹಾಗೆ ಪ್ರಳಯಕಾಲದಲ್ಲಿ ಪ್ರಾದುರ್ಭವಿಸಿದ ಪುಷ್ಕಳಾವರ್ತಕಗಳೆಂಬ ಮೇಘಗಳುಳ್ಳದ್ದಾಗಿ, ಅನಂತ ಮುಂತಾದ ಅಷ್ಟಫಣೀಂದ್ರರಿಗೆ, ಭಯಂಕರಮಾಗಿ, ಒಂದು ಕಡೆಯಲ್ಲಿ ಭೂತ ಪ್ರೇತ ಪಿಶಾಚಗಳನ್ನು ಉಗುಳುತ್ತ, ಮತ್ತೊಂದು ಕಡೆಯಲ್ಲಿ ವಿಶ್ವವನ್ನಾವರಿಸುತ್ತ ಅಂಧತಮಸ್ಸುಳ್ಳದ್ದಾಗಿ, ಅತಿ ಭಯಂಕರಮಾಗಿ ಮಹಾ ಸಮ್ಮೋಹಕರಮಾಗಿ ಮಹಾ ಮಾಯೆಗಳಿಂದ ಯುಕ್ತವಾಗಿ, ಓಷ್ಠದಂಷ್ಟ್ರಗಳಿಂ ಕರಾಳವಾದ ಮಹಾ ಮೃತ್ಯುಗಳಿಂದಾವೃತಮಾಗಿರ್ದ ಪಾರ್ಶ್ವವುಳ್ಳದ್ದಾಗಿ, ಅತಿಭಯಂಕರಮಾಗಿ ಶಾಸ್ತಾಕುಮಾರನಿಂ ನಿಡಿದಾದ ಮಹಾ ಪರ್ವತಗಳಿಗೆ ಸಮಾನರಾದ ನಾರಸ್ಯಂಹ್ಮ್ಯಗಣಂಗಳಿಂದಲುಂ ಬಹು ಘೋರರಾದ ಸರಭಸಮುಳ್ಳ ಶರಭ ಸಮೂಹಗಳಿಂದಲೂ ಶ್ವಸಾಯಸಾರೂಪರಾದ ಬಹು ಭಯಂಕರರಾಗಿ ಮಹಾ ಬಲವಂತರಾದ ಮತ್ತೆ ಅಂಜನಾದ್ರಿಗೆ ಸಮಾನರಾದಂಥ

ಪಿಶಾಚಗಣಗಳಿಂದ ಆವೃತವಾದ, ಜಗಜ್ಜ್ವಾಲವಂ ಧಿಕ್ಕರಿಸುತಿರುವ ಮಹಾ ಭೂತ ಶತಗಳಿಂದಲು ವ್ಯಾಳಿವಾಹಕರಿಂದಲು ವೃಷಭತುರಗ ಶಾರ್ದೂಲ ಸಮೂಹ ವಾಹನರಿಂದಲುಂ ಗಜಾರೂಢರಿಂದಲು ವ್ಯೋಮವಾಹಕರಿಂದಲು ರುದ್ರಗಣಂಗಳಿಂದಲು ಅವರ ಅಸ್ತ್ರಗಳಿಂದಲು ಬ್ರಹ್ಮ ವಿಷ್ಣು ವಾಯು ಇಂದ್ರ ವರುಣ ಮುಂತಾದವರ ಅಸ್ತ್ರಂಗಳಿಂದಲು, ಮತ್ತೆ ಘಂಟಾ ಖಡ್ಗ ಖಟ್ವಾಂಗ ಮುಸಲ ಮುದ್ಗರ ಭಿಂಡಿವಾಳ ಮುಸುಂಡಿ ಪರಿಘ ತೋಮರ ಚಕ್ರ ಶತಘ್ನಿ ಕುಂತ ಶರ ಟಂಕ ಅಂಕುಶ ಶಕ್ತಿ ಚಾಪ ಗದಾಪ್ರಾಸ ಕುಠಾರ ತ್ರಿಶಿಖ ಅಸಿ ಕರವಾಳ ಮುಂತಾದ ಆಯುಧಂಗಳಿಂದಲು ಆವೃತವಾಗಿ ಪೊರಮಟ್ಟುದು. ಆ ಸಮಯದಲ್ಲಿ ಆ ಯೆರಡು ಪಾಶುಪತಾಸ್ತ್ರಂಗಳಿಗು ಯುದ್ಧಮುಂಟಾಗಿ, ಅವುಗಳ ರಭಸದಿಂ ಸಪ್ತ ಸಮುದ್ರಂಗಳು ಕ್ಷೋಭಿಸಿದವು. ಯಮುನಾ ಭಾಗೀರಥಿಗಳು ಪೊಣಗಿ ಬಿರಿದವು. ಮೇರುಗಿರಿಯ ಶಿಖರಂಗಳು ಶಿಡಿದು ಬಿದ್ದವು. ನವಗ್ರಹಗಳಿಗು ಕ್ಷೋಭೆಯುಂಟಾದುದು. ಬ್ರಹ್ಮಾಂಡ ಭಿತ್ತಿಯು ಪೊಡೆದು ಪೋದುದು. ಸೂರ್ಯನ ರಥವು ಪುಡಿಯಾದುದು. ಅಷ್ಟದಿಗ್ಗಜಂಗಳು ಮೂರ್ಛೆಯನ್ನೈದಿದವು. ಪವನ ವೈಶ್ವಾನರ ಮಹಾ ಜಲಂಗಳು ನಷ್ಟಂಗಳಾದವು. ಪಾತಾಳವು ಕಂಪಿಸಿತು. ಆದಿಕೂರ್ಮವು ನಡುಗಿತು. ಜಗತ್ತಿನಲ್ಲಿ ಹಾಹಾಕಾರವುಂಟಾದುದು. ಲಕ್ಷ್ಮೀದೇವಿಯು ವಿಷ್ಣುವಂ ಅಪ್ಪಿಕೊಂಡಳು, ರತಿದೇವಿಯು ಮನ್ಮಥನಂ ಆಲಿಂಗಿಸಿ ರೋದನವನ್ಮಾಡಿದಳು. ಋಷಿಪತ್ನಿಗಳು ತಮ್ಮ ತಮ್ಮ ಪತಿಗಳಂ ತಕ್ಕೈಸಿದರು. ಈ ಪ್ರಕಾರವಾಗಿ ಯುದ್ಧವಾಗಲು ಸೇನೆಯು ಕಲ್ಪಾಂತ ಕಾಲದಂತೆ ಮರಣವನ್ನೈದಿತು. ಆಗ ಶೂರನ ಪುರದಲ್ಲಿರುವ ವಾಸಿಗಳಾದ ಸಮಸ್ತ ದೈತ್ಯರು ಈ ಅಸ್ತ್ರಗಳ ಧ್ವನಿಗಳಂ ಕೇಳಿ ಅಂಜಿದರು. ಶೂರಪದ್ಮನು ಇದೇನೆಂದು ದೂತರಂ ಕಳುಹಿ ಅವರ ಮುಖದಿಂದೀ ವೃತ್ತಾಂತವಂ ಕೇಳಿ, ಕಟಕಟ!! ಈತನಂ ದೂತನೆಂದು ತಿಳಿದೆನಲ್ಲವೆ? ಈತನೆ ವೀರಾಧಿವೀರನೆಂದು ಪೇಳಿದನು.

ಎಲೈ ಮುನಿಗಳಿರಾ! ಈ ಪ್ರಕಾರವಾಗಿ ಈ ಅಸ್ತ್ರಂಗಳೆರಡು ಯುದ್ಧವನ್ಮಾಡಿ ತಮ್ಮ ರಭಸವಿಂದುಂಟಾದ್ದೆಂದು ತಿಳಿದು ಮರಳಿ ಪ್ರಯೋಗಿಸಿದವರ ಹಸ್ತಂಗಳಲ್ಲಿ ಅಡಗಿದವು. ದೇವತೆಗಳಿದಂ ಕಂಡು ಸಂತುಷ್ಟರಾದರು. ಭಾನುಕೋಪನು ಮೃತವಾದ ಸೇನೆಯುಳ್ಳವನಾಗಿ ಕಪಟ ವೇಷವಂ ಧರಿಸಿ ಆಕಾಶದಲ್ಲಿ ನಿಂತನು. ಭೂತಗಣಗಳು ಸೇನಾಪತಿಗಳು ಸಹ ಈತನು ಪೋದನೆಂದು ನಿಶ್ಚಯಿಸಿ ಕೋಲಾಹಲ ಧ್ವನಿಯನ್ಮಾಡಿದರು. ಆಗ ಸೂರ್ಯನು ಈ ದೈತ್ಯನಾದ ಭಾನುಕೋಪನು ಆಕಾಶದಲ್ಲಿರುವುದಂ ತಿಳಿದು ಭೀತಿಯಿಂದಲಿ

(ಯೆಂಬ ಹಾಗೆ) ಮೆಲ್ಲನೆ ಬಿಡಲ್ಪಟ್ಟ ಕಿರಣಗಳುಳ್ಳವನಾಗಿ ಶೀಘ್ರದಿಂ ಗಗನವಂ ಬಿಟ್ಟು, ಪಶ್ಚಿಮ ಪರ್ವತ ಶಿಖರದಲ್ಲಿರ್ಪ ಶರೀರವುಳ್ಳವನಾಗಿ ಸಮುದ್ರವನ್ನೈದಿದ ನೆಂಬದಾಗಿ ಸೂತಪೌರಾಣಿಕನು ಶೌನಕಾದಿ ಮುನಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ಯುದ್ಧಕಾಂಡದಲ್ಲಿ ಹದಿನಾಲ್ಕನೆಯ ಅಧ್ಯಾಯವು ಸಮಾಪ್ತಮಾದುದು.

ಹದಿನೈದನೆಯ ಅಧ್ಯಾಯವು.

ಭಾನುಕೋಪನ ಮಾಯಾ ಯುದ್ಧವು-ಕುಮಾರಶಕ್ತಿ ಪ್ರಯೋಗ.

ಎಲೈ ಋಷಿಗಳಿರಾ! ಅನಂತರದಲ್ಲಿ ಸಮಸ್ತರಾದ ವೀರರು ಭೂತಗಣಗಳಿಂದಲು, ಸೇನಾಪತಿಗಳಿಂದಲೂ ಒಡಗೂಡಿ ನಾಳೆಯ ದಿವಸ ಕುಮಾರಸ್ವಾಮಿಗೆ ನಮಸ್ಕಾರವನ್ಮಾಡಿ ಯುದ್ಧಕ್ಕೆ ಬರುವಣೆಂದು ಯೋಚಿಸಿ ಆಗ ಪೊರಮಟ್ಟರು. ಆ ಸಮಯದಲ್ಲಿ ಭಾನುಕೋಪನು ತಾನು ಪೋದೆನಾದೊಡೆ ಅಪಕೀರ್ತಿಯುಂಟಾಗುವದೆಂದು ವಿಚಾರಿಸಿ ಸರ್ವರಿಗು ಮೂರ್ಛೆಯನ್ನೈದಿಸುವಂಥ ಮಾಯಾಸ್ತ್ರವಂ ಬಿಡಲಾಗಿ, ಆ ಅಸ್ತ್ರವು ಕಲ್ಪಾಂತಮೇಘದ ವಾಯುವಿನ ಧ್ವನಿಯುಂಟಾದದ್ದಾಗಿ ಬಂದು ಅವರನ್ನಾವರಿಸಿ ಸರ್ವರಂ ಮೂರ್ಛಿತರನ್ನಾಗಿಮಾಡಿ, ಸಮಸ್ತ ವೀರರೊಡನೆ ಭೂತಗಳಂ ಸ್ವಾದೂದಕ ಸಮುದ್ರಮಧ್ಯವನ್ನೈದಿಸಿತು. ಬಳಿಕ ಭಾನುಕೋಪನು ಪಿತೃವಿನ ಸಮೀಪಕ್ಕೆ ಪೋಗಿ, ಎಲೈ ತಂದೆಯೆ! ನಾನು ಶತ್ರುಗಳಂ ಸಂಹರಿಸಿ ಸಮುದ್ರಮಧ್ಯವನ್ನೈದಿಸಿದೆನು. ನಾಳೆಯ ದಿವಸ ಆ ಬಾಲಕನಂ ಬ್ರಹ್ಮಾದಿಗಳಂ ಜಯಿಸಿ ಕಾರಾಗೃಹವನ್ನೈದಿಸುವೆನೆಂದು ಪೇಳಲಾಗಿ, ಶೂರಪದ್ಮನಿದಂ ಕೇಳಿ ಪ್ರೀತಿಯಿಂ ಆತನ ಶಿರವನ್ನು ಆಘ್ರಾಣಂಗೈದು, ಆತನನ್ನಪ್ಪಿಕೊಂಡು ಸಮೀಪದಲ್ಲಿ ಕುಳ್ಳಿರಿಸಿಕೊಂಡು ಮಕುಟಾದಿ ಭೂಷಣಂಗಳಂ ಕೊಟ್ಟು, ಪ್ರಿಯವಚನವಂ ಪೇಳಿ ನಾಳೆ ದಿವಸ ಸಮಸ್ತ ದೇವತೆಗಳಂ ಜಯಿಸುವಿಯೊ? ಎಂದು ಪೇಳಿದನು. ಬಳಿಕ ಭಾನುಕೋಪನು ಆತನಿಂದಪ್ಪಣೆಯಂ ತೆಗದುಕ್ಕೊಂಡು ತನ್ನ ಮಂದಿರಕ್ಕೆ ಸಾರಿದನು. ಅನಂತರದಲ್ಲಿ ದೇವತೆಗಳು ವೀರರ ವಿಪತ್ತನ್ನು ನೋಡಿ ಖಿನ್ನರಾಗಿ ಕುಮಾರಸ್ವಾಮಿಯ ಬಳಿಗೆ ಪೋದರು. ಇದರೊಳಗಾಗಿ ನಾರದನು ಈ ವೃತ್ತಾಂತವಂ ಸ್ವಾಮಿಗೆ ಪೇಳಲಾಗಿ, ಕುಮಾರಸ್ವಾಮಿಯು ಶಕ್ತಿಯಂ ಪಿಡಿದು ಆ ಅಸ್ತ್ರದಿಂ ಸಮಸ್ತರಂ ಬಿಡಿಸಿ, ಇಲ್ಲಿಗೆ ಅವರಂ ಕೊಂಡೊಯ್ಯುವಂತೆ ನಿರೂಪಿಸಿ ಶಕ್ತಿಯಂ ಪ್ರಯೋಗಿಸೆ, ಆ ಶಕ್ತಿಯು ಸಹಸ್ರ ಕೋಟಿ ಸೂರ್ಯರ ತೇಜಸ್ಸುಗಳಂ ತಿರಸ್ಕರಿಸುವದಾಗಿ ಗಾಢಾಂಧಕಾರ ರಾತ್ರಿಯಲ್ಲಿ ಸಿಂಹನಾದವಂತೆ ಧ್ವನಿಮಾಡುತಿರುವ ಅಗ್ನಿ

ಕಣಗಳಿಂ ಭಯಂಕರಮಾಗಿ, ಮಹಾ ಜಲೇಂದ್ರ ಸಮೂಹಗಳಿಂ ಸುಳಿಘಾಳಿಯ ಭಯಮಂ ಪುಟ್ಟಿಸುತ್ತ ಗಂಟಿಕ್ಕಿದ ಪುರ್ಬುಗಳಿಂ ಕುಟಿಲರಾದ ಯಮಸಮೂಹದಿಂ ನಿಡಿದಾಗಿ ನಿಬಿಡಮಾಗಿ ಪ್ರಳಯಕಾಲದ ಮೇಘದ ಕಾಂತಿಗೆ ಸಮಾನ ಪಾಪ ಜ್ವಾಲಾಮಾಲಾಗ್ನಿ ಕಣಗಳಿಂ ವ್ಯಾಪ್ತಮಾಗಿ, ವಜ್ರಾಯುಧದಂತೆ ಧ್ವನಿಯನ್ಮಾಡುತ ಮಹಾ ಮೇಘಗಳಿಂದಾವೃತಮಾಗಿ, ಅಗ್ನಿ, ಸೂರ್ಯ, ಯಮ ವಾಯು ಸಪ್ತಮರುತ್ ದೇವತೆಗಳಿಂದಲು ಇಂದ್ರ, ವರುಣ, ಬ್ರಹ್ಮ, ವಿಷ್ಣು ಮುಂತಾದವರ ಅಸ್ತ್ರಗಳಿಂ ಸ್ತೋತ್ರಮನ್ಮಾಡಲ್ಪಟ್ಟದ್ದಾಗಿ ಪೋರಮಟ್ಟು ಅಲ್ಲಿಗೆ ಪೋಗಲಾಗಿ, ಆ ಸಮುದ್ರನು ಅಮಿತ ತೇಜಸುಳ್ಳ ಕುಮಾರಸ್ವಾಮಿಯ ಸಂಬಂಧಮಾದ ತನಗೆ ಸಮಾನಮಾದ ವಸ್ತ್ವಂತರವಿಲ್ಲದ ಆ ಶಕ್ತಿಯಂ ಕಂಡು, ಭಯದಿಂ ಕಂಪಿಸಿ ವಿನಯದಿಂ ಸಮೀಪಕ್ಕೆ ಬಂದು, ಎಲೈ ಶಕ್ತಿಯೆ! ನಿನ್ನಿಂದೀಕಾರ್ಯವು ಮಾಡಲ್ಪಡಲಿಲ್ಲ. ನನ್ನನ್ನು ರಕ್ಷಿಸೆಂದು ಶರಣು ಪೊಕ್ಕು ಸ್ತೋತ್ರಂಗಳಿಂ ಸ್ತುತಿಸಿ ಅಡಿಗಡಿಗೆ ನಮಸ್ಕರಿಸಿದನು.

ಬಳಿಕ ಆ ಶಕ್ತಿಯು ಆತಂಗೆ ಮನ್ನಣೆಯಂ ಮಾಡಿ ಆ ಸಮುದ್ರ ಮಧ್ಯಕ್ಕೆ ಪೋಗುತ್ತಿರೆ, ಅದರ ದರ್ಶನಮಾತ್ರದಿಂದ ಸಮಸ್ತರಾದ ಭೂತಂಗಳು ಭೂತ ಸೇನಾಪತಿಗಳು ಮೂರ್ಛೆಯಂ ತಿಳಿದೆದ್ದು, ಆ ಶಕ್ತಿಯಂ ಕಂಡು ಈರೀತಿ ಸ್ತುತಿಸಿದರು, ಎಲೈ ಸರ್ವಲೋಕಪಾವನಮಾದ ಶಕ್ತಿಯೆ! ಪೂರ್ವದಲ್ಲಿ ನೀನು ತಾರಕನ ಮಾಯೆಯಂ ಬಿಡಿಸಿ ರಕ್ಷಿಸಿದಿ, ಈಗಲು ಹಾಗೆ ರಕ್ಷಿಸಿದೆ, ಅದು ಕಾರಣದಿಂದೀಗ ಮಾಡತಕ್ಕ ಉಪಕಾರವೇನಿರುವದು? ಎಂದು ನುಡಿಯಲಾಗಿ, ಆ ಶಕ್ತಿಯು ಈ ವಾಕ್ಯಮಂ ಕೇಳಿ, ಎಲೈ ಭೂತಸೇನಾಧಿಪತಿಗಳಿರಾ! ಕುಮಾರ ಸ್ವಾಮಿಯು ದಯೆಯಿಂದ ನಿಮ್ಮನ್ನು ಮೋಹಾಸ್ತ್ರದಿಂ ಬಿಡಿಸಿ ಎಲ್ಲರನ್ನು ತನ್ನ ಸಮೀಪಕ್ಕೆ ಕರತರಬೇಕೆಂದು ನಿರೂಪಿಸಿ ನನ್ನಂ ಕಳುಹಿಸಿದನು. ಅದು ಕಾರಣದಿಂ ನೀವೆಲ್ಲರು ಸ್ವಾಮಿಯ ಸಮೀಪಕ್ಕೆ ಶೀಘ್ರದಿಂ ಬನ್ನಿರಿ; ನಾನು ಪೋಗುವೆನೆಂದು ಪೇಳಿ ಮರಳಿ ಆ ಕುಮಾರಸ್ವಾಮಿಯ ಸನ್ನಿಧಾನಮಂ ಸೇರಿತು. ಬಳಿಕ ವೀರಬಾಹುವು ವೀರರಂ ಸೇನಾಪತಿಗಳಂ ನೋಡಿ ಎಲೈ, ವೀರರುಗಳಿರಾ! ಕ್ರೋಶಮಾತ್ರದಲ್ಲಿ ಮುಂದೆ ದೈತ್ಯನನಗರವು ಕಾಣಲ್ಪಡುತಲಿಧೆ. ಅದರೊಳು ನನಗೆ ಮೂರ್ಛೆಯನ್ನುಂಟುಮಾಡಿದ ದೈತ್ಯನಿರುವನು. ಆತನಂ ಸಂಹರಿಸಲು ಆತನ ಪಟ್ಟಣಮಂ ಶೀಘ್ರದಿಂ ಕೆಡಹಿದಡಿಸಲಾಗಿ, ಆತನು ವೇಗದಿಂ ಬರುವನು. ಆಗ ಆತನಂ ಜಯಿಸುವೆನು ಇಲ್ಲದಿರ್ದೊಡೆ ನಾನು ಚಾಪಹಸ್ತನಾಗಿ ಅಗ್ನಿ, ಪ್ರವೇಶಮಂ ಮಾಡುವ ದೇಸರಿಯೆಂದು ಶಪಥಪೂರ್ವಕಮಾಗಿ ಅವರಿಗೆ ಪೇಳಿದನು. ಅನಂತರದಲ್ಲಿ ವೀರರದಂ ಕೇಳಿ ಕೋಲಾಹಲಧ್ವನಿಯಂ ಮಾಡುತ್ತ

ಪುರದ ಪಶ್ಚಿಮದಿಕ್ಕಿಗೆ ಪೋದರು. ಇತ್ತಕಡೆಯಲ್ಲಿ ಮಹಾ ದೀಪರಾಜಿಗಳಿಂ ವಿರಾಜಿಸುತಿರ್ಪ ಸಮೀಪವುಳ್ಳಸನಾದ ಮಾಯಾಪುತ್ರನು ಪ್ರಾಕಾರಾಧಿಪನಾಗಿ ಅಲ್ಲಿ ಸಿಂಹಾಸನಾಸೀನನಾಗಿರ್ದನು. ಆತನ ಸಮೀಪದಲ್ಲಿ ವ್ಯಾಘ್ರಮುಖನೆಂಬ ಮತ್ತೊರ್ವ ದೈತ್ಯನು ಚತುರಂಗಬಲದೊಡನೆ ಸುತ್ತುಮುತ್ತಲು ತಿರುಗುತ್ತ ಅಲ್ಲಿರ್ದನು. ಆತನು ಅವರಧ್ವನಿಯಂ ಕೇಳಿ ಸರ್ವದೈತ್ಯರುಗಳೊಡನೆ ಪೊರ ಮಡಲಾಗಿ, ಭೂತಂಗಳಿಗು ರಾಕ್ಷಸರಿಗು ಮಹಾಭಯಂಕರ ಮಾದ ಯುದ್ಧ ಮುಂಟಾದುದು. ಆಗ ಭೂತಂಗಳು ಪರ್ವತ ವೃಕ್ಷ ಪಾಷಾಣಗಳಿಂ ಅಸ್ತ್ರಂಗ ಳಿಂ ದೈತ್ಯರಂ ಸಂಹರಿಸೆ, ವ್ಯಾಘ್ರವಕ್ತ್ರನು ಕೋಪದಿಂ ಶೂಲವಂತಿರುವುತ್ತ ವೇಗದಿಂ ಬಂದು ಪರ್ವತಾದಿಗಳಂ ಛೇದಿಸಿ ಅಟ್ಟಹಾಸವಂ ಮಾಡಲಾಗಿ, ಭೂತ ಸೇನಾಧಿಪತಿಯಾದ ಪ್ರಳಯಕಾಲದ ಮೇಘಧ್ವನಿಯಂತೆ ಭಯಂಕರಮಾದ ಅಟ್ಟ ಹಾಸವುಳ್ಳ ಸಿಂಹನೆಂಬ ಗಣಾಧೀಶ್ವರನು ಪೊರಮಡೆ; ದೈತ್ಯನಾತನು ಶೂಲದಿಂ ತಿವಿದನು. ಮತ್ತು ಸಿಂಹನು ಆತನನ್ನು ಸಹ ಶೂಲದಿಂ ತಿವಿಯಲ್ಬರಲಾಗಿ, ಆ ಯೆರಡು ಶೂಲಗಳು ಅನ್ಯೋನ್ಯಘಾತದಿಂ ಮುರಿದುಬಿದ್ದವು. ಆಗ ಸಿಂಹನು ಮಲ್ಲಯುದ್ಧದಿಂ ದಾತನಂ ಸಂಹರಿಸಲಾಗಿ ದೇವತೆಗಳು ಪೂಮಳೆಯಂಗರೆದರು. ವೀರಬಾಹುವು ಅತಿಸಂತೋಷಯುಕ್ತನಾದನು. ಮತ್ತಂ ಸಮಸ್ತ ಭೂತಂ ಗಳು ಪ್ರಾಕಾರವಂ ಕೆಡಹಿ ಗೋಪುರವಂ ಕಿತ್ತು ಅದಂ ಪುರದಮೇಲಿಟ್ಟು ಅನೇಕ ದೈತ್ಯರಂ ಸಂಹರಿಸಿ ಪುರಮಂ ಪ್ರವೇಶಿಸಿ ಬೀದಿಗಳಲ್ಲಿ ಬಹುದೈತ್ಯರಂ ಕೊಂದು ಗೋಪುರಂಗಳಂ ವಿಮಾನಂಗಳಂ ಗೃಹಂಗಳಂ ಕೆಡಹಿ, ಅಸ್ತ್ರಂಗಳಿಂ ಚತುರಂಗ ಬಲಂಗಳಂ ಸಂಹರಿಸಿ ಮಹಾಧ್ವನಿಗಳಂ ಮಾಡುತ್ತ ಬರುವಾಗ, ವೀರಬಾಹುವು ಆ ಪುರವಂ ದಹಿಸಲೋಸುಗ ಆಗ್ನೇಯಾಸ್ತ್ರವನ್ನು ವಾಯವ್ಯಾಸ್ತ್ರವನ್ನು ಸಹ ಬಿಟ್ಟವನಾಗಲು, ಆ ಅಗ್ನಿಯು ಆ ಪುರವಂದಹಿಸ ಲಂಜಿಮೊಡಂ ವೀರಬಾಹು ವಿನ ಆಜ್ಞೆಯಿಂದ ಜ್ವಾಲಾ ಮಾಲಾವೃತನಾಗಿ ಆ ಪಟ್ಟಣವಂ ದಹಿಸಿದನು. ಮತ್ತಂ ದೂತರಿದಂ ಕಂಡು ಶೂರಪದ್ಮನ ಬಳಿಗೆ ಪೋಗಿ, ಎಲೈ ಸ್ವಾಮಿಯೆ! ಭಾನುಕೋಪನು ಮಾಡಿದ್ದರಿಂದ ಮೋಹಿತನಾಗಿ ಸಮುದ್ರ ಮಧ್ಯವನ್ನೈದಿದ ಭೂತಗಣವು ಕುಮಾರಸ್ವಾಮಿಯ ಶಕ್ತಿಯಿಂ ಮೂರ್ಛೆಯಂ ತಿಳಿದು ನಿಮ್ಮ ಪುರಕ್ಕೆ ಬಂದು, ವ್ಯಾಘ್ರಮುಖ ಮೊದಲಾದ ದೈತ್ಯರಂ ಕೊಂದು ಸಹಸ್ರಯೋಜ ನದ ಗಲಮಾದ ಪಟ್ಟಣವಂ ಸುಟ್ಟರು. ಆ ಅಗ್ನಿಯು ಶಾಂತಿಯನ್ನೈದಲಿ ಲ್ಲೆಂದು ಪೇಳಲಾಗಿ ಶೂರಪದ್ಮನಾ ವಚನವಂ ಕೇಳಿ ಅತ್ಯಂತ ಕೋಪವಂ ಮಾಡಿದನೆಂದು ಸೂತನು ಶೌನಕಾದಿ ಮುನಿಗಳಿಗೆ ಪೇಳಿದನೆಂಬಲ್ಲಿಗೆ ಯುದ್ಧ

ಕಾಂಡದಲ್ಲಿ ಹದಿನೈದನೆಯ ಅಧ್ಯಾಯವು ಮುಗಿದುದು.

ಹದಿನಾರನೆಯ ಅಧ್ಯಾಯವು.

ವೀರಬಾಹುವಿನ ಪ್ರತಾಪ ವರ್ಣನೆ.

ಎಲೈ, ಋುಷಿಗಳಿರಾ! ಅನಂತರದಲ್ಲಿ ಶೂರಪದ್ಮನು ಮಹಾಕೋಪದಿಂ ಮೇಘಂಗಳಂ ಕರೆಯಿಸಿ ಅಗ್ನಿ ಶಾಂತಿಗೋಸುಗ ಅವಂ ಕಳುಹಲಾಗಿ, ಆ ಮೇಘಂಗಳು ಮಹಾ ಪ್ರಳಯಕಾಲದ ಮೇಘರೂಪಂಗಳಾಗಿ ಬಂದು, ಹಾಹಾ! ನಾವು ಆ ಅಗ್ನಿಯನ್ನು ಶಾಂತಿಮಾಡುವದಕ್ಕೆ ತೆರಳಿದರೆ ಅಗ್ನಿಗೋಸುಗ ವೀರಬಾಹುವು ನಮ್ಮಗಳನ್ನು ಸಂಹರಿಸುವನು; ಹಾಗಲ್ಲದಿರ್ದೊಡೆ ಶೂರನು ಕಾರಾಗೃಹದಲ್ಲಿ ಕೆಡಹಿ ಚನ್ನಾಗಿ ಕುಟ್ಟಿಸಿ ಸಂಹಾರವಂ ಮಾಡುವನು, ಶಿವಶಿವ!! ಎಂತಿದ್ದರೂ ನಮಗೆ ದುಃಖವು ತಪ್ಪಿದ್ದಲ್ಲವು, ಏನುಮಾಡುವಹೆಂದು ಚಿಂತಿಸಿ, ಈ ಶೂರನಕೈಯಲ್ಲಿ ಶಿಲುಕುವದಕ್ಕಿಂತಲು ವೀರಬಾಹುವಿನ ಕೈಯಿಂದಲೆ ಮೃತವಾಗುವದು ಲೇಸೆಂದು ನಿಶ್ಚಯಿಸಿ, ಬಳಿಕ ಘರ್ಜಿಸಿ ಉದಕ ಬಿಂದುಗಳಿಂದ ಅಗ್ನಿಯನ್ನು ಶಾಂತಿಮಾಡುತಲಿರಲು, ವೀರಬಾಹುವು ಆ ಮೇಘಂಗಳಂ ವೀಕ್ಷಿಸಿ ಇವು ಪ್ರಳಯಕಾಲದ ಮೇಘಂಗಳೋ ಏನೋ ಎಂದು ತಿಳಿದನು. ಅಷ್ಟರಲ್ಲಿ ನಾರದನು ಬಂದು ಎಲೈ, ವೀರಬಾಹುವೆ! ಶೂರನಿಂ ಕರೆಯಿಸಲ್ಪಟ್ಟ ಮೇಘಂಗಳಿವು, ಇದಕ್ಕೆ ಬಡಬಾಗ್ನಿಯೆಂಬ ಪ್ರತ್ಯಸ್ತ್ರವುಂಟು; ಅದನ್ನು ಬಿಡೆಂದು ನುಡಿದು ತೆರಳುತಿರೆ, ವೀರಬಾಹುವು ಆ ಬಡಬಾನಲಾಸ್ತ್ರವಂ ಬಿಡಲಾಗಿ, ಆ ಅಸ್ತ್ರಗಳು ಜ್ವಾಲಾ ಮಾಲೆಗಳಿಂ ಮೇಘೋದಕವಂ ಪಾನವಂ ಮಾಡಿತು. ಆಗ ಆ ಮೇಘಂಗಳು ನಿಸ್ಸಾರಂಗಳಾಗಿ ಭೂಮಿಯಲ್ಲಿಬಿದ್ದು ಗುಹನಾಮಕೀರ್ತನೆಯಂ ಮಾಡಿ, ಮರಳಿ ಬಲವಂ ಪಡೆದು ಸಮುದ್ರವನ್ನೈದಿದವು, ದೇವಗತೆಗಳು ಪುಷ್ಪಂಗಳಂ ಚಲ್ಲಿ ನರ್ತನವಂ ಮಾಡಿದರು ಶೂರನು ದೂತನ ಮುಖದಿಂ ವಿದಂ ಕೇಳಿ ಅತಿ ಕೋಪದಿಂ ಯುದ್ಧಕ್ಕೆ ಪೊರಮಟ್ಟು ರಥ ಸನ್ನಾಹವಂ ಮಾಡಲಾಗಿ

ಶೂರಪದ್ಮಾಸುರನಿಗೆ ಮಗ ಹಿರಣ್ಯಕನು ನೀತಿಪೇಳುವಿಕೆ.

ಪಾತಾಳ ರಕ್ಷಕನಾದ ಮೂರು ಶಿರಸ್ಸುಗಳುಳ್ಳ ಪಟುಬುದ್ಧಿಯುಳ್ಳ ಮಹಾಬಲವಾದ ಮಹಾ ಮಾಯಿಯಾದ ಹಿರಣ್ಯನೆಂಬ ಶೂರನ ಮಗನು ಶೀಘ್ರದಿಂ ಎದ್ದು, ಪಿತೃವಿಗೆ ನಮಸ್ಕಾರವಂ ಮಾಡಿ, ವಿನಯಾನ್ವಿತನಾಗಿ ಹಿತವಚನವಂ ಪೇಳಿದನದೆಂತೆನೆ, ಎಲೆ ದೈತ್ಯನೆ! ದೇವತೆಗಳಂ ಬಾಧಿಸುವುದರಿಂದ ಸಂಪತ್ತು ಆಯುಸ್ಸು ನಷ್ಟವಾಗುವದು, ಈಗ ದೇವತೆಗಳಲ್ಲಿ ದಯೆಯಂ ಮಾಡಿ ಕುಮಾರಸ್ವಾಮಿಯು ಬಂದಿರುವನು, ನೀನು ಆತನ ವರದಿಂ ಬ್ರಹ್ಮ ವಿಷ್ಣು ಮೊದಲಾದವರಂ ಜಯಿಸಿದವನಾದಿ, ಅಂಥ ಬಲವನ್ನೀಯುವ ಸ್ವಾಮಿಗೆ ನಿನ್ನ ಬಲವನ್ನು ತೆಗೆದುಕೊಳ್ಳುವದೇನು ಕಷ್ಟವು? ನನಗೆ ಹಿತವನ್ನು ಅಪೇಕ್ಷಿಸುವವರು ಶಿವಾ

ಜ್ಞೆಯಂ ದಾಂಟರು. ಆರು ಶಿವಾಜ್ಞೆಯಂ ದಾಂಟುವರೊ ಅವರು ದುರ್ಗತಿಯ ನ್ನೈದುವರು. ನೀನರಿಯೆಯಾ? ಮಹಾಪರಾಧಿಗಳಾದ ತ್ರಿಪುರಾಸುರರಿಗುಂ ಜಲಂಧರ ಭಗ ಷಂಡಾಸುರ ವ್ಯಾಘ್ರಾಸುರ ಮೊದಲಾದ ಅಸುರ ಕಾಮ ಅಂತಕ ರಿಗು ಮತ್ಸ್ಯ ಕೂರ್ಮ ವರಾಹ ನಾರಸಿಂಹ ಹರಿಗಳಿಗು ದಕ್ಷಂಗುಂ ಪಂಚರಾವಣ ಮುಂತಾದವರಿಗು ಸಹ ಶಿವಾಜ್ಞಾಭಂಗದಿಂ ಮರಣಮುಂಟಾದುದು. ಗಂಗಾ ಗರ್ವಾಪಹಾರ ಕಾಲಕೂಟ ಭಕ್ಷಣ ಇಂದ್ರನ ಭಂಗವಿಧಿಯ ಶಿರೋಕ್ರಂದನ ಹರಿಯ ರಕ್ತಪಾನ ಕರೋಟಿಯು ರುಧಿರಪಾನ ಅಜೀರ್ಣರೂಪವಾದ ಅಪಸ್ಮಾರ ನಂ ಪಾದದಿಂ ತುಳಿದುದು ಮೊದಲಾದ ಲೀಲೆಗಳು ಮಹಾ ದೇವನಿಂ ಮಾಡ ಲ್ಪಟ್ಟವು. ಅದುಕಾರಣದಿಂ ಕುಮಾರನೊಡನೆ ಯುದ್ಧವಂ ಮಾಡುವುದು ಯೋಗ್ಯವಲ್ಲವು. ಈ ಶಿಶುವಂ ಮಹಾದೇವನ ಸ್ವರೂಪವನ್ನಾಗಿ ತಿಳಿದುಕೋ, ಈತನ ವಿಶ್ವರೂಪವಂ ಬ್ರಹ್ಮನ ಕಾರಾಗೃಹ ಪ್ರವೇಶವಂ ಲೀಲೆಯಂ ಬ್ರಹ್ಮ ಸೃಷ್ಟಿಯಂ ಮಾಡಿದುದಂ ಅರಿಯೆಯೊ? ಆದಿ ವರಾಹನ ಕೊಂಬುಗಳಂ ಕಿತ್ತು ಹರಂಗೆ ಕೊಟ್ಟನು. ಕ್ರೌಂಚತಾರಕರಂ ಸಂಹರಿಸಿದನು. ಅದುಕಾರಣದಿಂ ಈತನಲ್ಲಿ ಬಾಲಬುದ್ಧಿಯಂ ಮಾಡಬೇಡ; ಈತನ ಮುಗುಳ್ನಗೆಯು ಜಗತ್ತಂ ಸೃಜಿಸುವದಕ್ಕೆ ಸಮರ್ಥವು. ಗಾಂಗೇಯ ಕಾಳಿಕೇಯ ಮೊದಲಾದ ನಾಮ ಗಳಿಂ ಪರಮೇಶ್ವರನು ಪೇಳಲ್ಪಡುತಿರ್ಪನೆಂದು ಋಷಿಗಳು ಪೇಳುವರು. ಮೂಢರು ಭಿನ್ನವಾಗಿ ನುಡಿವರು. ಏಳನೆಯ ಸಮುದ್ರದಲ್ಲಿರುವವರನ್ನು ಶಕ್ತಿ ಯಿಂ ಕರೆಯಿಸಿದನು. ಮತ್ತಂ ವೀರಬಾಹುವಿನಲ್ಲಿ ದೂತಬುದ್ಧಿಯಂ ಮಾಡ ಬೇಡ; ಅವಂಗೆ ಮೃತ್ಯು ಭಯವಿಲ್ಲವು, ಅವಂಗೆ ದೇವತೆಗಳು ಭಯಪಡುವರು. ಆತನು ಭಾನುಕೋಪನಿಂ ಅಪಜಯಮುಂಟಾದವನಾಗಿ ಪುರವಂ ದಹಿಸುತ್ತಿದ್ದಾನೆ ಆತನೊಡನೆ ಯುದ್ಧವಂ ಮಾಡಲು ಸಮರ್ಥರಾರು? ಸಂಹರಿಸಲು ಇಚ್ಛೈಸಿದ ಕುಮಾರಸ್ವಾಮಿಯಮುಂದೆ ನಿಲ್ಲಲು ಆರು ಸಮರ್ಥರು? ಅದುಕಾರಣದಿಂ ನೀನು ದೇವತೆಗಳಂ ಬಿಟ್ಟು ದೂತನ ಮುಖದಿಂ ಅರಿಕೆಯಂ ಮಾಡಿ ಕುಮಾರಸ್ವಾಮಿಯ ಸಮೀಪಕ್ಕೆ ಪೋಗಿ ನಮಸ್ಕಾರವಂ ಮಾಡು. ಹಾಗಾದೊಡೆ ಸ್ವಾಮಿಯು ಪ್ರಸನ್ನನಾಗಿ ನೀನು ಕೇಳಿದವರಂ ಕೊಟ್ಟು ಸೇನೆಯೊಡನೆ ಮರಳಿ ಪೋಗುವ ನೆಂದು ಪೇಳಿದನು.

ಬಳಿಕ ಶೂರಪದ್ಮನು ಈ ವಾಕ್ಯವಂ ಕೇಳಿ, ದಂತೋಷ್ಠಗಳಂ ಕಡಿದು, ಎಲೊ ಭ್ರಾಂತ! ಏನು ಪೇಳುತಿದ್ದಿ? ನಮಗೆ ಶತ್ರುವಾದ ಬಾಲಕನಂ ಅಧಿಕ ವಾಗಿ ಪೇಳೆಂದು ಬೋಧಿಸಿದವನಾರು? ಆತನಂ ಪೇಳು ಸಂಹರಿಸುವೆನು, ನನ್ನ ಐಶ್ವರ್ಯ ಬಲಶೌರ್ಯ ಕಾರ್ಯನಿರ್ವಹತ್ವಗಳನ್ನರಿಯೆಯೊ? ಎನ್ನನುಜಂಗೆ ಅಂಜಿ

ಹರಿಯು ರಣದಲ್ಲಿ ಚಕ್ರವಂ ಬಿಟ್ಟು ಓಡಿಹೋದನು, ಬ್ರಹ್ಮನು ನನ್ನ ಪುತ್ರರಿಗೆ ದಿನಶುದ್ಧಿಯಂ ಪೇಳುತಿರ್ಪಾನೆ. ಇಂದ್ರಾದಿ ದೇವತೆಗಳು ಮತ್ಸ್ಯಂಗಳಂ ತರುತಿರುವರು. ದೈತ್ಯರ ಕುಲನೀತಿಗಳನ್ನರಿಯದೆ ಪೇಳಿದೆಯೊ, ಮರಳಿ ಹೀಗೆ ಪೇಳಿದರೆ ಸಂಹರಿಸುವೆನೆಂದು ಪೇಳಲಾಗಿ, ಹಿರಣ್ಯನದಂ ಕೇಳಿ "ವಿನಾಶಕಾಲೇ ವಿಪರೀತಬುದ್ಧಿಃ" ಎಂಬಂತೆ ಈತಂಗೆ ವಿನಾಶಕಾಲ ಪ್ರಾಪ್ತವಾಗಿರುವುದರಿಂದ ಈತನ ಮತಿಯು ಕೆಟ್ಟಿರುವದು, ನನ್ನ ವಚನವು ಪಥ್ಯವಾಗಿರದು, ಇನ್ನು ವಿಶೇಷವಾಗಿ ಪೇಳಿದ್ದರಿಂದ ಪ್ರಯೋಜನವೇನು? ಎಂದು ಮನದಲ್ಲಿ ತಿಳಿದು, ಎಲೈ ಸ್ವಾಮಿಯೆ! ನಿನ್ನನ್ನು ಶೋಧಿಸಲೋಸುಗ ಹೀಗೆ ಪೇಳಿದೆನು. ಇದನ್ನು ಕ್ಷಮಿಸು ಕ್ಷಮಿಸು. ನಾನು ಶೀಘ್ರದಿಂ ಪೋಗಿ ಬಾಲಕನಂ ಜಯಿಸಿ ನಿನ್ನ ಸಮೀಪಕ್ಕೆ ಬರುತಿರ್ಪೆನೆ. ನನ್ನನ್ನು ರಣಕ್ಕೆ ಕಳುಹಿಸಬೇಕೆಂದು ಹೇಳಲಾಗಿ, ಶೂರಪದ್ಮ ನಿದಂ ಕೇಳಿ ಪ್ರೀತಿಯಿಂದಾತನನ್ನು ರಣಕ್ಕೆ ಕಳುಹಿದನು. ಅನಂತರದಲ್ಲಿ ಮಹಾ ಪ್ರಕಾಶಮಾನವಾದ ಕಾಂತಿಯುಳ್ಳ ಮತ್ತೆ ದೈತ್ಯರೊಳಗೆ ಉತ್ತಮನಾದ ಹಿರಣ್ಯನೆಂದು ಪೆಸರುಳ್ಳ ದೈತ್ಯನು, ತನ್ನ ಮನೆಯನ್ನೈದಿ ಯುದ್ಧವನ್ಮಾಡುವದರಲ್ಲಿ ಬುದ್ಧಿಯುಳ್ಳವನಾಗಿ, ಸಾವಿರ ಸಂಖ್ಯಾತರಾದ ತನ್ನ ಅನುಜರೊಡನೆ ವೇಗದಿಂದೈದಿದನೆಂದು ಸೂತಮುನಿಯು ಪೇಳಿದನೆಂಬಲ್ಲಿಗೆ,

ಯುದ್ಧಕಾಂಡದಲ್ಲಿ ಹದಿನಾರನೆಯ ಅಧ್ಯಾಯವು
ಸಮಾಪ್ತಮಾದುದು.

ಹದಿನೇಳನೆಯ ಅಧ್ಯಾಯವು.

ವೀರಬಾಹು ಹಿರಣ್ಯರ ಯುದ್ಧ.

ಎಲೈ ಮುನಿಗಳಿರಾ! ಅನಂತರದಲ್ಲಿ ಹಿರಣ್ಯನೆಂಬ ಮಹಾ ಅಸುರನು ಪುಷ್ಪಮಾಲಿಕೆಗಳಿಂದಲಂಕೃತನಾಗಿ, ಸಹಸ್ರ ಸಿಂಹಗಳಿಂದ ವಹಿಸಲ್ಪಟ್ಟ ರಥದಲ್ಲಿ ಕುಳಿತು ಚತುರಂಗಬಲ ಸಮೇತರಾದ ಸಹಸ್ರ ಸೇನಾಪತಿಗಳೊಡನೆ ಪೊರಮಟ್ಟು, ಪುರಸ್ತ್ರೀಯರಿಂ ಕಾಂಕ್ಷೆಯಿಂ ನೋಡಲ್ಪಟ್ಟನು. ಆಗ ನೂರೆಂಟು ವಾಹಿನಿ ರಥಂಗಳು ಮಹಾ ಪರ್ವತಕ್ಕೆ ಸಮಾನವಾದ ನೂರೆಂಟು ವಾಹಿನಿ ಗಜಗಳು, ನೂರೆಂಟು ಸಹಸ್ರ ವಾಹಿನಿ ತುರಗಗಳು ಇನ್ನೂರು ಸಹಸ್ರ ವಾಹಿನೀ ಶೂರರು ಸಹಾ ಯುದ್ಧಕ್ಕೆ ನಡೆದರು. ಆ ವೇಳೆಯಲ್ಲಿ ಭೇರ್ಯಾದಿ ವಾದ್ಯಂಗಳು ಮೊಳಗಿದವು. ಶೀಘ್ರದಿಂ ವೀರನ ಸಮೀಪಕ್ಕೆ ಪೋಗಿ ಪುರಮಧ್ಯಕ್ಕೆ ಬಂದು ಕೋಪದಿಂ ಪುರಮಂ ನಿರೀಕ್ಷಿಸಿ, ಬಲವನ್ನು ನಾಲ್ಕು ಭಾಗವಾಗಿ ಮಾಡಿ ನಾಲ್ಕು ದಿಕ್ಕುಗಳಲ್ಲಿ ಸಹಸ್ರ ವಾಹಿಗಳಂ ಕಳುಹಿ ಹಿರಣ್ಯನು ತನ್ನ ಬಲಮೊಡನೆ ವೀರ

ಬಾಹುವಿನ ಸಮೀಪಕ್ಕೆ ಶೀಘ್ರದಿಂ ಬರೆ, ವೀರಬಾಹುವು ಆತನಂ ನೋಡಿ ಈತನಾರೆಂದು ವಿಚಾರಿಸಿ, ಮಹಾತ್ಮನಾದ ಬ್ರಹ್ಮಪುತ್ರನಾದ ನಾರದನಿಂದಾತನ ವೃತ್ತಾಂತವಂ ತಿಳಿದು, ತನ್ನ ಬಲವನ್ನು ನಾಲ್ಕು ದಿಕ್ಕುಗಳಿಗೆ ಮುಂದಾಗಿ ಕಳುಹಿಸಿ ತಾನು ಬಂದವನಾಗಲು, ಹಿರಣ್ಯನು ಭಯವಾಗುವಂತೆ ಸಿಂಹನಾದವನ್ನು ಮಾಡಿ ವೀರನ ಸಂಗಡ ಯುದ್ಧಕ್ಕೆ ನಿಂತನು. ಆಗ ಭೂತಗಳಿಗೆ ಅಸುರರೊಡನೆ ಮಹಾ ಯುದ್ಧಮಾದುದು. ದೈತ್ಯಸೇನಾಪತಿಗಳಿಗೆ ಭೂತಸೇನಾಪತಿಗಳೊಡನೆ ವೀರಾನುಜರಿಗೆ ಆತನ ಸಹಸ್ರಾನುಜರೊಡನೆ ಕಾಳಗವಾದುದು. ಆಗ ಮುಸಲ ಮುದ್ಗರ ಚಕ್ರ ಭಿಂಡಿವಾಲ ತೋಮರ ಅಸಿ ಶರ ಶಕ್ತಿ ಶೂಲ ವಜ್ರ ಕುಠಾರ ವೃಕ್ಷ ಪಾಷಾಣ ಗಿರಿ ಗದೆ ಲೋಷ್ಟಗಳಿಂ ಕೆಲಂಬರು ಪಾಣಿಪಾದ ಅಂಗುಳಿ ನಾಸಿಕ ಮಣಿಬಂಧ ಹಸ್ತಂಗಳಿಂ ವಿಹೀನರಾದರು. ಮತ್ತೆ ಕೆಲಂಬರು ತೊಡೆ ಮಣಿಬಂಧ ದಂತ ಅಂಡ ಮೊಣಕಾಲು ರಹಿತರಾದರು. ಇನ್ನು ಕೆಲವರು ಲೋಚನ ಕರ್ಣ ಮುಂತಾದ ಅವಯವಗಳಿಂ ರಕ್ತಂಗಳಂ ಸುರಿಸುತ್ತ ಅತಿ ಭಯಂಕರರಾಗಿದ್ದರು. ಮತ್ತೆ ಕೆಲ ಭಟರು ಮೂರ್ಛಿತರಾದರು. ಕೆಲವರು ಮೃತರಾದರು.

ನೀಲಭೂತೇಶನ ಯುದ್ಧ.

ಬಳಿಕ ವೀರಬಾಹುವು ಶೀಘ್ರದಿಂ ಬಂದು ನಾರಿಯಂ ಧ್ವನಿಮಾಡಿ ಅತಿ ಭಯಂಕರನಾಗಿ, ದೈತ್ಯನಿಂದ ಬಿಡಲ್ಪಟ್ಟ ಶರಗಳಂ ಛೇದಿಸಿ ಅನೇಕ ದೈತ್ಯರಂ ಸಂಹರಿಸಲಾಗಿ, ಆಗ ರಕ್ತಗಳಿಂದತಿವೇಗವಾದ ನದಿಯುಂಟಾದುದು. ನರ್ತನವಮ್ಮಾಡುವ ಕಬಂಧಗಳಿಂ ರಣಾಗ್ರವು ಅತಿ ಭಯಂಕರಮಾದುದು. ಆಗ ಹಿರಣ್ಯನು ಅತಿ ಕೋಪದಿಂ ಸಹಸ್ರ ಅಯುತನಿಯುತ ಕೋಟಿ ಬಾಣಂಗಳಿಂ ಭೂತಸೇನೆಯಂ ಛೇದಿಸಿ, ಮತ್ತು ಕೆಲಬರಂ ಮೂರ್ಛೆಯನ್ನೈದಿಸಿ ಕೆಲಂಬರನ್ನು ಓಡಿಸಿದನು. ಅನಂತರದಲ್ಲಿ ನೀಲನೆಂಬ ಗಣಾಧೀಶ್ವರನು ಮಹಾ ಕೋಲಾಹಲ ಧ್ವನಿಯಿಂ ದಶದಿಕ್ಕುಗಳಂ ತುಂಬಿಸುತ್ತ ಯುದ್ಧಕ್ಕೆ ಬಂದವನಾಗಲು, ಆ ದೈತ್ಯನು ಆತನಲ್ಲಿ ಶಕ್ತಿಯಂ ಬಿಡಲಾಗಿ, ಆ ನೀಲನು ಶಕ್ತಿಯ ಪಾತದಿಂ ಕ್ಷಣಮಾತ್ರ ಮೂರ್ಛೆಯನ್ನೈದಿ ಬಳಿಕೆದ್ದು ಸಾಲವೃಕ್ಷವಂ ಕಿತ್ತು ಆತನ ರಥವಂ ಮುರಿದನು. ಆಗ ಹಿರಣ್ಯನು ಪ್ರತಿರಥವನ್ನೇರಿ ಆತನ ಉರದಲ್ಲಿ ನಿಶಿತಂಗಳಾದ ಬಾಣಂಗಳಂ ಕರೆಯೆ. ಭೂತೇಶನಾದ ನೀಲನು ಮಹಾ ಪರ್ವತವಂ ಕಿತ್ತು ಮಹಾ ಧ್ವನಿಯಿಂ ಭಯಂಕರನಾಗಿ ಆತನ ಮೇಲೆ ಪ್ರಯೋಗಿಸಲಾಗಿ, ದೈತ್ಯನು ಅದಂ ನೂರು ಬಾಣಗಳಿಂದ ಛೇದಿಸಿದನು. ಮರಳಿ ನೀಲನು ಶೀಘ್ರದಿಂ ಬಂದು ರಥವನ್ನೆತ್ತಿ ಆತನೊಡನೆ ವೇಗದಿಂ ಆಕಾಶಮಾರ್ಗಕ್ಕೊಯ್ಯಲಾಗಿ, ಆ ಹಿರ

ಣ್ಯನು ರಥದೊಡನೆ ಆಕಾಶಕ್ಕೆ ಪೋಗಿ ಮರಳಿ ಭೂಮಿಯಲ್ಲಿ ಬಿದ್ದು ಪುನಃ ರಥವನ್ನೇರಬೇಕೆಂದು ಆವಾಗ ನಿಶ್ಚೈಸಿ ಬಂದನೋ ಆ ಸಮಯದಲ್ಲಿ ನೀಲನು ಪಾದದಿಂದುರಮಂ ತಾಡಿಸೆ, ದೈತ್ಯನು ಆಕಾಶಕ್ಕೆ ಬೀಸಿ ಬಿಸುಟನು. ನೀಲನು ಸಂಭ್ರಮದಿಂ ದವೇಮಾರ್ಗದಲ್ಲಿ ಬಂದು ಮರಳಿ ಪಾದದಿಂ ತಾಡಿಸಿ ಕೋಲಾಹಲ ಧ್ವನಿಯನ್ಮಾಡಿ ಭೂಮಿಯಲ್ಲಿ ಬಿದ್ದ ಅಸುರನ ಮೇಲಿಳಿದು ಮೆತ್ತೆ, ಆಗ ಹಿರಣ್ಯನು ರಕ್ತವನ್ನು ಉಗುಳುತ ಮೂರ್ಛೆಯನ್ನೈದಿ ಮರಳಿ ಮಾಯೆಯಂ ಪೊಂದಿ ನೆನೆದು, ಆ ಸ್ವರೂಪಮಂ ಆತನ ಮುಂದೆ ನಿಲ್ಲಿಸಿ ತಾನು ಸಾರಿದನು. ಬಳಿಕ ಆ ಮಾಯಾದೈತ್ಯನು ಅತಿ ಭಯಂಕರನಾಗಿ ಆತನೊಡನೆ ಯುದ್ಧವನ್ಮಾಡಲಾಗಿ, ನೀಲನಾತನಂ ದಂಡದಿಂ ಬಡಿಯೆ, ಆ ಮಾಯಾದೈತ್ಯನು ಮೂರ್ಛೆಯಾದವನಂತೆ ಭೂಮಿಯಲ್ಲಿ ಬಿದ್ದು ಮರಳಿ ಆಕಾಶಮಾರ್ಗವನ್ನೈದಿ, ಸಿಂಹನಾದವನ್ಮಾಡಿ, ಗಗನದಲ್ಲಿಯೇ ನೀಲನೊಡನೆ ಯುದ್ಧವನ್ನೆಸಗಿ, ಮರಳಿ ಭೂಮಿಗೆ ಬಂದು ಕೋಲಾಹಲ ಧ್ವನಿಯಂಗೈದು ಭೂಮಿಗೆ ಬಂದ ನೀಲನೊಡನೆ ಮರಳಿ ಕಾಳಗವನ್ಮಾಡುತಲಿರೆ, ಆಗ ಶೂರನ ಕುಮಾರನಾದ ಹಿರಣ್ಯನೆಂಬ ದೈತ್ಯನು ಚೇತನಗೂಡಿ ಆ ಮಾಯಾದೈತ್ಯನೊಡನೆ ಸೇರಿ ಯುದ್ಧಕ್ಕೆ ಬಂದು ರಥಾರೂಢನಾಗಿ ಆಗ್ನೇಯಾಸ್ತ್ರಮಂ ತೆಗದು ಪ್ರಯೋಗಿಸೆ, ನೀಲನು ರಕ್ತದಿಂದಾವೃತನಾಗಿ ಮೂರ್ಛೆಯನ್ನೈದಿದನು. ಬಳಿಕ ವೀರಬಾಹುವದಂ ತಿಳಿದು ಮಾಯಾದೈತ್ಯನ ಮೇಲೆ ವಿಜ್ಞಾನಾಸ್ತ್ರಮಂ ಬಿಡಲಾಗಿ, ಹಿರಣ್ಯನು ಮಾಯಾರಹಿತನಾಗಿ ಏಕರೂಪದಿಂ ನಿಂತು ಸಹಸ್ರ ಬಾಣಂಗಳಂ ಬಿಡೆ, ಆ ಬಾಣಗಳು ವೀರಬಾಹುವಿನ ಉರಮಂ ಸೋಂಕಿ ಮೊನೆ ಮುರಿದು ಬಿದ್ದವು. ನೂರು ಬಾಣಗಳಿಂದ ಆತನ ಧ್ವಜ ಚಾಪಗಳಂ ಛೇದಿಸಿ, ಮರಳಿ ಧನುವಂ ತೆಗದು ಸಹಸ್ರ ಶರಗಳಿಂದಾತನ ಧನುವಂ ಬತ್ತಳಿಕೆಗಳಂ ರಥಮಂ ಸಾರಥಿಯಂ ಖಂಡಿಸಿ, ಪುನಹ ಅಲ್ಲಿರುವ ರಥಂಗಳಂ ಛೇದಿಸಲಾಗಿ, ಆ ಹಿರಣ್ಯನು ಏಕನಾಗಿ ಚಿಂತಿಸಿ ಹಾಹಾ !! ನನ್ನ ಸಮಸ್ತವಾದ ಆಯುಧಂಗಳುಂ ಪೋದವು. ಈ ಕುಮಾರಸ್ವಾಮಿಯು ಶೂರಪದ್ಮ ಮೊದಲಾದ ದೈತ್ಯರಂ ಸಂಹರಿಸುವನು. ನನ್ನ ಜನಕನಾದ ಶೂರಪದ್ಮನು ಬಹು ಪುತ್ರರಂ ಪೆತ್ತನು. ಅವರೊಳಗೆ ಓರ್ವನಾದೊಡಂ ಪಿಂಡಪ್ರದಾನಕ್ಕೋಸುಗ ಇರಲೇಬೇಕೆಂದು ನಿಶ್ಚೈಸಿ ಮಾಯಾರೂಪಮಂ ಧರಿಸಿ ಸಮುದ್ರವನ್ನೈದಿ ಮತ್ಸ್ಯರೂಪಮಂ ಧರಿಸಿದನು.

ಅಗ್ನಿಮುಖ ರಕ್ಕಸನು ವೀರಬಾಹುವು ಯುದ್ಧಮಾಡುವಿಕೆ.

ಬಳಿಕ ದೈತ್ಯಸೇನೆಯು ಅಸ್ತ್ರಗಳಿನ್ನೊಂದು ಪಲಾಯನವನ್ನೈದಲಾಗಿ, ಭೂತಗಣಾಧೀಶ್ವರರು ಸಿಂಹನಾದವನ್ಮಾಡಿದರು. ವೀರಬಾಹುವು ಶಂಖ

ಧ್ವನಿಯಂಗೈದನು. ದೇವತೆಗಳು ಕುಸುಮವೃಷ್ಟಿಯಂ ಕರೆದರು. ಶೂರಪದ್ಮನು ದೂತಮುಖದಿಂದೀವೃತ್ತಾಂತವಂ ತಿಳಿದು ಕೋಪದಿಂ ಜ್ವಲಿಸಿ ಅಧೋಮುಖನಾಗಿರಲಾಗಿ, ಆವನಾನೊಬ್ಬನು ದಿಗ್ಗಜಗಳನ್ನೂ ಸೂರ್ಯ ರಥವನ್ನೂ ಆತನ ಕುದುರೆಗಳನ್ನೂ ಹಿಡಿದು ಚದುರಂಗವನ್ನಾಡಿದನೋ, ಗರ್ಭದಲ್ಲಿರುವಾಗಲೆ ಮಾತೃವಿಗೆ ಸಂತಾಪವನ್ನುಂಟುಮಾಡಿದನೋ ಪಿತೃಮಾತೆಯಾದ ಮಾಯೆಯಿಂ ಅಗ್ನಿಮುಖನೆಂಬ ಪೆಸರಿನಿಂ ಕರೆಯಲ್ಪಟ್ಟನೋ, ವಿಷ್ಣುವಿನ ಗರುಡನಂ ಬ್ರಹ್ಮನ ಹಸ್ತವಂ ಪಿಡಿದು ಲೀಲೆಯಿಂದಾಡಿದನೋ, ಜ್ಯೇಷ್ಠನಿಂ ಸೂರ್ಯನು ಬಾಧಿಸಲ್ಪಟ್ಟನೆಂದು ತಿಳಿದು ನಿಶಾಕರನಂ ಪಿಡಿದು, ತಾನು ಬಾಧಿಸಿದನೋ ಮತ್ತೆ ಯಾವನೊಬ್ಬನು ಸರ್ವದೇವಾಸ್ತ್ರಸಂಪನ್ನನೋ ಅಂಥ ಅಗ್ನಿಮುಖನೆಂಬ ದೈತ್ಯನು ಪಿತೃವಿನ ಸಮೀಪಕೆ ಬಂದು ನಮಸ್ಕಾರವಮ್ಮಾಡಿ, ಎಲೈ ಪಿತೃವೆ! ಏನು ನಿಮಿತ್ತದಿಂ ಚಿಂತಿಸುತಿದ್ದಿ? ಬ್ರಹ್ಮ ವಿಷ್ಣು ಮೊದಲಾದವರು ನಿನ್ನಿಂದ ತಲೆವಾಗಿ ಚಿಂತಿಸುತಿಧಾರೆ. ಎಂದು ನುಡಿಯಲಾಗಿ, ಶೂರಪದ್ಮನು ಆ ಪುತ್ರನ ವಾಕ್ಯವಂ ಕೇಳಿ, ಎಲೆ ಮಗನೆ! ದೇವಸೇನಾಪತಿಯ ದೂತನು ಪಟ್ಟಣವಂ ದಹಿಸಿ ತನ್ನನುಜರೊಡನೆ ಗರ್ಜಿಸುತ್ತಿದಾನೆ. ಅಗ್ನಿಯ ಶಾಂತಿಗೋಸುಗ ಕಳುಹಿಸಿದ ಮೇಘಂಗಳು ಆತನಿಂ ಪರಾಭವವಾದವು. ಹಿರಣ್ಯನು ಆತನೊಡನೆ ಯುದ್ಧವಮ್ಮಾಡಿ ಪರಾಜಿತನಾಗಿ ರೂಪಭೇದದಿಂ ಸಮುದ್ರವಂ ಪೊಕ್ಕನು. ಈ ದೂತನಿಂದ ಅನೇಕ ದೈತ್ಯರು ಮಡಿದರೆಂದು ಪೇಳಲಾಗಿ, ಆ ಅಗ್ನಿಮುಖನು ತಂದೆಯ ಮಾತಂ ಕೇಳಿ, ಎಲೆ ತಂದೆಯೆ! ನೀನು ದೂತನಂ ಜಯಿಸುವದಕ್ಕೆ ಏನು ವಿಚಾರಿಸುತ್ತಿ? ನಾನು ನಿನ್ನಾಜ್ಞೆಯಿಂ ಶಿರಸಾವಹಿಸಿ ಹೋಗಿ ಆತನಂ ಜಯಿಸಿ ಶೀಘ್ರದಿಂ ನಿನ್ನ ಸಮೀಪಕ್ಕೆ ಬರುವೆನೆಂದು ಪೇಳಿ, ಆತನಿಂದ ಅಪ್ಪಣೆಯಂ ಪಡೆದು ತನ್ನ ಗೃಹಕ್ಕೆ ಪೋದನು.

ಬಳಿಕ ಆ ಅಗ್ನಿಮುಖನು ಆ ತತ್ ಕ್ಷಣದಲ್ಲಿಯೆ ಮಾಯಾದೇವಿಯಿಂದ ಕೊಡಲ್ಪಟ್ಟ ಕೋದಂಡವನ್ನು ಸಮಸ್ತವಾದ ಶಸ್ತ್ರಾಸ್ತ್ರಗಳನ್ನು ಧರಿಸಿ, ಸಹಸ್ರವಾಹಿನಿಗಳಾದ ರಥಗಜಗಳಿಂದಲು ಸಹಸ್ರ ವಾಹಿನೀ ತುರಗಗಳಿಂದಲು ಅನೇಕ ವಾಹಿನೀದೈತ್ಯ ಬಲಗಳಿಂದಲು ಆವೃತನಾಗಿ, ಸೋಮುಕ ಕಟುಕ ಸೂರ್ಯಸಿಕ್ ಮೇಘಪಿಂಗಳರೆಂಬ ಸೇನಾಪತಿಗಳೊಡನೆ ಕಲಭಧ್ವಜಗಳೊಡನೆ ಮಹಾ ವಾದ್ಯಗಳನ್ನು ಘೋಷಿಸುತ್ತ ಪೊರಮಡಲಾಗಿ, ಸೂರ್ಯೋದಯಮಾದುದೆಂದು ಸೂತಂ ಶೌನಕಾದಿ ಮುನಿಗಳಿಗೆ ಪೇಳಿವನೆಂಬಲ್ಲಿಗೆ, ಯುದ್ಧ ಕಾಂಡದಲ್ಲಿ ಪದಿನೇಳನೆಯ ಅಧ್ಯಾಯವು ಸಂಪೂರ್ಣಂ.

ಹದಿನೆಂಟನೆಯ ಅಧ್ಯಾಯವು.

ಅಗ್ನಿಮುಖ ವೀರಬಾಹು ಗಣಾಧೀಶರ ಯುದ್ಧ.

ಎಲೈ ಋಷಿಗಳಿರಾ! ಅನಂತರದಲ್ಲಿ ಉಭಯ ಬಲಗಳು ವೃಕ್ಷ ಪಾಷಾಣ ಮೊದಲಾದ ಆಯುಧಗಳಿಂ ಯುದ್ಧವಂ ಮಾಡುತಿರೆ, ಲಕ್ಷವೀರರು ಕೋಪದಿಂ ಬಂದು ಬಾಣಗಳಿಂದಾ ದೈತ್ಯರನ್ನು ಓಡಿಸಲಾಗಿ, ಸೋಮಕ ಮುಂತಾದ ಸೇನಾ ಪತಿಗಳು ಭೂತಗಣ ಸೇನಾನಾಯಕರೊಡನೆ ಯುದ್ಧವಂ ಮಾಡಿದರು. ಆಗ ಅಗ್ನಿಮುಖನು ಅನೇಕ ಶರಗಳಂ ಬಿಟ್ಟು ಭೂತಂಗಳನ್ನು ಪಲಾಯಿತರಂ ಮಾಡ ಲಾಗಿ, ವೀರಪುರಂದರನೆಂಬುವನು ಶೀಘ್ರದಿಂ ಬಂದು ಆ ದೈತ್ಯನಲ್ಲಿ ಬಾಣ ಗಳನ್ನು ಪ್ರಯೋಗಿಸೆ, ಅಗ್ನಿಮುಖನು ಆತನ ರಥಮುಂತಾದವಂ ಛೇದಿಸಿ ಅನೇಕ ಶರಗಳಂ ಬಿಟ್ಟು ಕ್ಷಣದಿಂದಾತನಂ ಮೂರ್ಛೆಯನ್ನೈದಿಸಿದನು. ಬಳಿಕ ಸಮಸ್ತ ವೀರರು ಶೀಘ್ರದಿಂ ಬಂದು ಆತನ ಮುಖ ಬಾಹು ಯುಗ್ಮಗಳಲ್ಲಿ ಸಹಸ್ರ ಸಹಸ್ರ ಬಾಣಂಗಳಂ ತೊಡಗಿಸಿ ಮರಳಿ ಕೆಲವು ಬಾಣಗಳಿಂದಾತನ ರಥವಂ ಛೇದಿಸಲಾಗಿ, ಆ ದಾನವನು ಮತ್ತೊಂದು ರಥವನೇರಿ ಅವರಂ ನೋಡಿ ಎಲೈ ವೀರರುಗಳಿರಾ! ನಿಮ್ಮನ್ನು ವೀರಬಾಹುವನ್ನೂ ರಣದಿಂ ಜಯಿಸುವೆ ನೆಂದು ಪೇಳೆ, ವೀರರು ಆ ವಚನವಂ ಕೇಳಿ ಕಾಲಾಗ್ನಿಯಂತೆ ಜ್ವಲಿಸಿ ಶರಗಳಿಂ ದಾತನ ರಥ ತುರಗ ಸಾರಥಿಗಳಂ ಖಂಡಿಸಿ, ಪ್ರತ್ಯೇಕ ಸಹಸ್ರ ಬಾಣಗಳಿಂ ದಾತನ ಉರವಂ ಪ್ರಹರಿಸಿದರು.

ಭದ್ರಕಾಳಿಯ ಅಪಜಯ-ಅಗ್ನಿಮುಖ ಸಂಹಾರ.

ಆಗ ಅಗ್ನಿಮುಖನು ಅಗ್ನಿಯಂತೆ ತಾಮ್ರನಯನನಾಗಿ ಅನ್ಯರಥವನ್ನೇರಿ ಪಾಶುಪತಾಸ್ತ್ರವಂ ಬಿಡಲಾಗಿ, ವೀರರು ಅದರಮೇಲೆ ವಾರುಣಾಸ್ತ್ರವಂ ಬಿಟ್ಟರು ಅದು ಇವರುಗಳನ್ನು ಲಕ್ಷ್ಯಂಗೆಯ್ಯದೆ ಕಬಳೀಕರಿಸಿತಲ್ಲದೆ ತತ್ಕ್ಷಣದಲ್ಲಿ ಆ ವೀರ ರನ್ನು ಸಂಹಾರವಂ ಮಾಡೆ ಅಗ್ನಿಮುಖನು ಅವರಂ ಕಂಡು ಅಟ್ಟಹಾಸವಂ ಮಾಡಿದನು. ಭೂತಗಳು ಪಲಾಯಿತರಾದರು. ಆ ಸಮಯದಲ್ಲಿ ವೀರಬಾಹುವು ಕೇಸರಿಯಂತೆ ಘರ್ಜಿಸಿ ಶೀಘ್ರದಿಂ ಬರಲಾಗಿ, ಅಗ್ನಿಮುಖನು ಆತನಂ ಕಂಡು, ಎಲೆ ನೀನು ಪೂರ್ವದಲ್ಲಿ ಅನೇಕ ದೈತ್ಯರಂ ರಣದಲ್ಲಿ ಸಂಹರಿಸಿದಿ, ಈಗ ನಿನ್ನನ್ನು ಕ್ಷಣಮಾತ್ರದಲ್ಲಿ ಜಯಿಸುತಿಹೇನೆ. ನಿನ್ನನ್ನೇ ಜಯಿಸಲಾರದವನು ಸ್ತ್ರೀ ಸಂ ಭೋಗವಂ ಮಾಡಬಲ್ಲನೆ? ಎಂದು ಪೇಳಲಾಗಿ, ವೀರಬಾಹು ಆ ವಚನವಂ ಕೇಳಿ, ಎಲೈ ದೈತ್ಯನೆ! ಗಂಡು ಗೂಬೆಯಂತೆ ಹಿರಣ್ಯನೆಂಬ ದೈತ್ಯನು ಓಡಿದನು, ಭಾನು ಕೋಪನು ಮಾಯೆಯಿಂ ಮಾಡಿ ಪೊರಮಟ್ಟನು, ಆತನು ಬಂದರೆ ತತ್ಕ್ಷಣ ದಲ್ಲಿಯೆ ಸಂಹರಿಸುತ್ತೇನೆ, ನೀನು ಯುದ್ಧವಂ ಮಾಡುವಾಗಲೆ ಪಲಾಯನವ

ನೈದಿದಿ, ಇದಿಗೋ ಪಲಾಯನವಾದಿ ಎಂದು ಪೇಳಿ ಕೋಪದಿಂ ಗರ್ಜಿಸೆ, ಆ ಅಗ್ನಿಮುಖನು ಸಮಸ್ತರು ಹೆದರುವಂತೆ ಕೋದಂಡದ ನಾರಿಯಂ ಧ್ವನಿಸಿ ಚತುರ್ದಶ ನಿಡುಸರಳುಗಳಂ ವೀರಬಾಹುವಿನಮೇಲೆ ಬಿಡಲಾಗಿ, ವೀರನು ಅದಂ ಏಕಬಾಣದಿಂದ ಛೇದಿಸಿದನು. ದೈತ್ಯನು ಮರಳಿ ವಾಯು ಸೂರ್ಯ ಯಮಾಸ್ತ್ರ ಗಳನ್ನು ಬಿಡಲಾಗಿ, ವೀರನು ಅದೇ ಅಸ್ತ್ರಗಳಿಂದವಂ ಛೇದಿಸಿ ಮರಳಿ ಕೆಲವು ಬಾಣಗಳಿಂದ ಆ ದೈತ್ಯನಂ ಮೂರ್ಛೆಯನ್ನೈದಿಸೆ, ಆತನು ಶೀಘ್ರದಿಂದೆದ್ದು ತಾನು ಪೂಜಿಸಿದ ಕಾಳಿಯಂ ಸ್ಮರಿಸಿದನು. ಆಗ ಕಾಳಿಯು ಸಿಂಹವಾಹನವ ನೇರಿ ಶೂಲ ಮೊದಲಾದ ಆಯುಧಗಳಂ ಧರಿಸಿ ಅನೇಕ ಕೋಟಿ ಕಾಳಿಗಳಿಂ ದಾವೃತೆಯಾಗಿ ಸಮಸ್ತ ವಾದ್ಯ ಘೋಷಗಳಿಂದ ಯುಕ್ತಳಾಗಿ ಆತಂಗೆ ಪ್ರಸನ್ನಳಾಗೆ, ಆತನು ಆಕೆಯಂ ಕಂಡು ಆಶ್ರಿತರಿಗೆ ಭದ್ರವಂ ಕೊಡುವ ಭದ್ರ ಕಾಳಿಯೆ! ಶತ್ರುವಾದ ವೀರಬಾಹುವಂ ಜಯಿಸೆಂದು ಪೇಳಲಾಗಿ, ಆ ವಾಕ್ಯವಂ ಕೇಳಿ ಅತಿ ಘೋರರೂಪವಂ ಧರಿಸಿ ಮಹಾ ಧ್ವನಿಯಿಂ ಸಮಸ್ತರಾದ ವೀರರಂ ಬೆದರಿಸುತ್ತ ಯುದ್ಧಭೂಮಿಗೆ ಬಂದು ಶೂಲದಿಂದಾತನನ್ನು ತಿವಿಯೆ, ವೀರ ಬಾಹು ಚತುರ್ದಶ ಬಾಣಗಳಿಂದವಂ ಛೇದಿಸಲಾಗಿ ಮರಳಿ ಶೂಲವಂ ಬಿಟ್ಟಳು. ಅದನ್ನು ವೀರನು ಛೇದಿಸೆ, ಬಳಿಕ ಕಾಳಿಯು ಕೋಪದಿಂ ವಾಹನವನಿಳಿದು ಖಡ್ಗದಿಂದಾತನಂ ಸಂಹರಿಸಲ್ಬರಲಾಗಿ, ವೀರನಾಕೆಯಂ ಕಂಡು ಸ್ತ್ರೀವಧೆಯಂ ಮಾಡಬಾರದೆಂದು ತಿಳಿದು ತನ್ನ ಭುಜಗಳಿಂದಾಕೆಯ ಎಂಟು ಭುಜಗಳಂ ಬಿಗಿ ದಪ್ಪಿ ಇತರ ಕರದಿಂದಾಕೆಯ ಉರವಂ ಹೊಡೆಯಲಾಗಿ, ಆ ಕಾಳಿಯು ರಕ್ತವಂ ಸ್ರವಿಸುತ್ತ ಹೀನಸ್ವರದಿಂದ ರೋದನವಂ ಗೈಯುತ, ಬಲಹೀನೆಯಾಗಿ ಕುಮಾರ ಸ್ವಾಮಿಯ ಸಹೋದರರೊಡನೆ ಯುದ್ಧವಂ ಮಾಡಿ ಜಯಿಸಲಾಗದೆಂದು ತಿಳಿದು ವೀರಬಾಹುವಂ ನೋಡಿ, ಎಲೈ ವೀರನೆ! ನಿನ್ನ ಬಲವನರಿಯದೆ ಆತನ ಭಕ್ತಿಯಿಂ ಬಂದೆನು. ನೀನು ಕುಮಾರಸ್ವಾಮಿಯ ಪ್ರಸಾದದಿಂದ ಅಗ್ನಿಮುಖ ಭಾನು ಕೋಪ ಮುಂತಾದವರಂ ಸಂಹರಿಸೆಂದು ಪೇಳಿ, ಆತನನುಜ್ಞೆಯಿಂ ಸಿಂಹವ ನೇರಿ ತನ್ನ ಸ್ಥಾನಕ್ಕೆ ಪೋದಳು. ಬಳಿಕ ದೈತ್ಯನು ಆಕೆಯ ನಿರ್ಗಮನವಂ ಕಂಡು ಶತ್ರು ಸಂಹಾರದೊಳು ಈಕೆಗೆ ಬಲವೆಂತಿರುವುದೆಂದು ಆಕೆಯಂ ನೆನೆದನು. ನನಗೆ ಯುದ್ಧದಲ್ಲಿ ಪರಾಪೇಕ್ಷೆಯೆ ಇಲ್ಲ. ಮೂರು ಲೋಕಗಳಲ್ಲಿ ನಾನೇ ವೀರನು, ನಾನೇ ಶತ್ರುವಂ ಸಂಹರಿಸುತ್ತಿಹೇನೆಂದು ಪ್ರತಿಜ್ಞೆಯಂ ಮಾಡಿಕೊಂಡು ಸಿಂಹನಾದವಂ ಮಾಡಿ ವೀರಬಾಹುವಿನಮೇಲೆ ಶತ ಬಾಣಗಳಂ ಬಿಡಲಾಗಿ, ವೀರನವಂ ಛೇದಿಸಿ ಮರಳಿ ದೈತ್ಯನಮೇಲೆ ಅನೇಕ ಬಾಣಂಗಳಂ ಸುರಿಸಿದನು. ಆಗ ದೈತ್ಯನು ಅವುಗಳಂ ಖಂಡಿಸಿ ಶಂಖಧ್ವನಿಯಂ ಮಾಡೆ,

ವೀರಬಾಹುವು ಚತುರ್ದಶ ಬಾಣಗಳಿಂದಾತನ ರಥವಂ ಛೇದಿಸಿ ಕೋಲಾಹಳ ಧ್ವನಿಯಂ ಮಾಡಿದನು. ಬಳಿಕ ದೈತ್ಯನು ಅದಂ ಕೇಳಿ ಬ್ರಹ್ಮಾಸ್ತ್ರವನ್ನು ಬಿಡಲಾಗಿ, ವೀರಬಾಹುವು ವೀರಭದ್ರಾಸ್ತ್ರವಂ ಪ್ರಯೋಗಿಸೆ, ಅದು ವೇಗದಿಂ ಬಂದು ಆ ಬ್ರಹ್ಮಾಸ್ತ್ರವಂ ಭಕ್ಷಿಸಿ ದೈತ್ಯನ ಮಹಾ ಶಿರವಂ ಛೇದಿಸಿ ಭೂಮಿ ಯಲ್ಲಿ ಕೆಡಹಿತೆಂದು ಶೌನಕಾದಿಗಳಿಗೆ ಸೂತಂ ಪೇಳ್ದನೆಂಬಲ್ಲಿಗೆ,

ಯುದ್ಧಕಾಂಡದಲ್ಲಿ ಹದಿನೆಂಟನೆಯ ಅಧ್ಯಾಯವು ಸಮಾಪ್ತಮಾದುದು.

ಹತ್ತೊಂಬತ್ತನೆಯ ಅಧ್ಯಾಯವು.

ಯುದ್ಧರಂಗ ವರ್ಣನೆಯು ಗಣಾಧೀಶ್ವರರಲ್ಲಿ ಯಮನ ಸೋಲು.

ಎಲೈ ಋಷಿಗಳಿರಾ! ಅನಂತರದಲ್ಲಿ ನಾಲ್ವತ್ತು ನಾಲ್ಕುಮಂದಿಯಾದ ಸೇನಾ ಪತಿಗಳು, ಅಗ್ನಿಮುಖನು ಮೃತನಾದನೆಂದು ತಿಳಿದು ತಮ್ಮ ಸೇನೆಗಳನೆಲ್ಲಮಂ ಏಕವಾಗಿ ಕೂಡಿಸಿ ಗರ್ವಿತರಾಗಿ, ಘರ್ಮಕಾಲದ ಮೇಘಂಗಳಂತೆ ಶಿತವಾದ ಶರಗಳಂ ವರ್ಷಿಸಲಾಗಿ, ವೀರಬಾಹುವು ಆ ದೈತ್ಯರಲ್ಲಿ ಕೋಟಿ ಬಾಣಗಳನ್ನು ಪ್ರಯೋಗಿಸೆ, ಕೆಲವರು ಓಡಿದರು, ಮತ್ತೆ ಕೆಲವರು ಆಯುಧಂಗಳಂ ಕೆಳಗಿರಿಸಿ ನಮಸ್ಕಾರಂಗಳಂ ಮಾಡಿದರು, ಇನ್ನು ಕೆಲವರು ಮರಣವನ್ನೈದಿದರು, ಮತ್ತು ಕೆಲಂಬರು ಮೃತರಾದವರಂ ತಮ್ಮ ಮೇಲಿರಿಸಿಕೊಂಡು ಭಾರದಿಂ ಮೃತಿಯಂ ಪಡದರು, ಕೆಲವರು ಭ್ರಮೆಯಿಂ ಕಂಡ ವಸ್ತುವನ್ನೂ ವೀರಬಾಹುವೆಂದು ತಿಳಿದು ಭೀತಿಪಟ್ಟು ಮೂರ್ಛಿತರಾದರು, ಕೆಲಂಬರು ರಕ್ತನದಿಯಲ್ಲಿ ಬಿದ್ದು ಹತರಾದರು, ಕೆಲವರು ಸಮುದ್ರದಲ್ಲಿ ಬಿದ್ದರು, ಇನ್ನು ಕೆಲವರು ಶಿರೋರಹಿತ ರಾದರು, ಆ ಸಮಯದಲ್ಲಿ ರಣಹದ್ದು ಕಾಗೆ ಮುಂತಾದ ಪಕ್ಷಿಗಳು ಮಾಂಸಂಗಳಂ ತಿನ್ನಲಿಚ್ಛೈಸಿ ಬಂದೆರಗಿದವು. ಆ ಪುರದಲ್ಲಿ ಅಲ್ಲಲ್ಲಿ ಕಿಲಕಿಲಧ್ವನಿಯು ಸುತ್ತು ಮುತ್ತಲು ವ್ಯಾಪಿಸಿ ಜನಗಳಿಗೆ ರೋದನಮುಂಟಾದುದು, ದೇವತೆಗಳು ಪುಷ್ಪ ವೃಷ್ಟಿಯಂ ಕರದರು, ಋಷಿಗಳು ಸಂತೋಷಾತಿ ಶಯದಿಂದ ತಮ್ಮ ತಮ್ಮ ವಸ್ತ್ರಗಳ ಮೇಲೆ ಕೈಯ್ಯಿಗಳನ್ನಿಟ್ಟು ನರ್ತನವಂ ಮಾಡಿದರು, ಭೂತಸೇನಾಪತಿ ಗಳು ಭೂತಗಳು ಸಹ ಮಹಾತಾಂಡವವಂ ನಟಿಸಿದರು. ಬಳಿಕ ಉಗ್ರಗಣಾ ಧೀಶ್ವರನು ಮೂರ್ಛೆಯಿಂ ಬಿಟ್ಟು ವೀರಬಾಹುವಂ ನೋಡಿ, ಎಲೈ, ವೀರ ಬಾಹುವೆ! ಶತಯೋಜನದಲ್ಲಿ ಮಹತ್ತಾದ ವಟವೃಕ್ಷವಿದ್ದೀತು. ಅಲ್ಲಿ ಸಿನ್ನನು ಜರ ಪ್ರಾಣಗಳನ್ನು ಯಮನು ತನ್ನ ಪಟ್ಟಣಕ್ಕೆ ಕೊಂಡುಪೋದನು ; ಎಂದು ಪೇಳಲಾಗಿ, ವೀರಬಾಹುವದಂ ಕೇಳಿ ದುಃಖಿತನಾಗಿ ಯೆಡಹುತ ಅಲ್ಲಿಗೆಪೋಗಿ

ಅವರಂಕಂಡು ಮೂರ್ಛಿತನಾಗಿ ಬಳಿಕ ಪ್ರಜ್ಞೆಯನ್ನೈದಿ, ಬಹು ಪ್ರಲಾಪವಂ ಮಾಡಿ ಶಿವಾಸ್ತ್ರದಿಂ ಮೃತರಾದವರನ್ನು ಯಮನುಹೇಗೆ ಕೊಂಡುಪೋದನು? ಮೂರ್ಖನಾದ ಆತನು ಕುಮಾರಸ್ವಾಮಿಯ ಅನುಜರೆಂಬುವದನ್ನು ಹೇಗೆ ತಿಳಿಯದಿದ್ದನು? ಶಿವಶಿವ!! ಮೃಕಂಡು ಸುತನಂ ಕುರಿತು ಪರಮೇಶ್ವರನಿಂದ ಮಾಡಲ್ಪಟ್ಟ ಪಾದತಾಡನವನ್ನು ಮರೆತನೋ ಏನೊ? ಛೀಛೀ ವಿಭೂತಿ ರುದ್ರಾಕ್ಷಿ ಮಾರ್ಗವನ್ನೈದದ ನಿನಗೆ ಮದವೇತಕೆ? ಎಂದು ಬಾಣದಲ್ಲಿ ಬರೆದು ಆ ಯಮಲೋಕಕ್ಕೆ ಬಾಣವನ್ನು ಬಿಟ್ಟವನಾಗಲು, ಅದು ಯಮನ ಮುಂದೆ ಬೀಳಲಾಗಿ, ಆ ಯಮನು ಇದೇನೆಂದು ವಿಸ್ಮಿತನಾಗಿ ಆದನ್ನು ಓದಿ ನೋಡಿಕೊಂಡು ಭಯಪಟ್ಟು, ಜ್ಞಾನದೃಷ್ಟಿಯಿಂ ಕೈಲಾಸ ಪರ್ವತದಲ್ಲಿರುವ ವರವನ್ನಾಗಿ ತಿಳಿದು ಮಹಿಷವನ್ನೇರಿ ತನ್ನ ಬಲದೊಡನೆ ಅಲ್ಲಿಗೆಪೋಗಿ; ಉದ್ಯಾನವನ ವಾಸಿಗಳಾದ ರಾಕ್ಷಸರಿಂ ಮರಣವನ್ನೈದಿ ಭೂತಗಣಗಳಿಂ ದಾವೃತರಾದ ಅಶರೀರಿಗಳಾದ ಆ ಮಹಾವೀರರಂ ಕಂಡು ನಮಸ್ಕಾರವಂ ಮಾಡಿ, ಅಲ್ಲಿಂದ ವೀರಬಾಹುವಿನ ಸಮೀಪಕ್ಕೆಬಂದು, ಎಲೈ, ವೀರಬಾಹುವೆ! ಭಸ್ಮ ರುದ್ರಾಕ್ಷಿಗಳಂ ಧಾರಣೆಯಂ ಮಾಡಿದವರ ಮಾರ್ಗದಿಂ ನಾನು ಪೋಗಲಿಲ್ಲವು; ಬೇರೆ ಮಾರ್ಗದಲ್ಲಿ ಪೋಗಿದ್ದೆನು, ನಿನ್ನ ಅನುಜರಾದ ವೀರರು ಕೈಲಾಸಪರ್ವತದಲ್ಲಿಧಾರೆ, ಅವರಂ ಕಂಡು ಇಲ್ಲಿಗೆ ಬಂದೆನು. ಕೋಪವಂ ಬಿಟ್ಟು ನನ್ನನ್ನು ದಯಪಾಲಿಸೆಂದು ಪೇಳಿದನು. ಬಳಿಗ ವೀರಬಾಹುವು ಆ ವಾಕ್ಯವಂ ಕೇಳಿ, ಎಲೆ, ಮಗನೆ! ನೀನು ಶಿವಪ್ರಿಯನಾದುದರಿಂದ ಶಿವಭಕ್ತರಲ್ಲಿಯುಂ ವಿಶ್ವಾಸವುಳ್ಳವನು. ನಿನ್ನಿಂದಿವರು ಈರೀತಿ ಮಾಡಲ್ಪಡಲಿಲ್ಲ ಭಯವಂ ಬಿಡುಬಿಡು; ಅವರ ಮರಣವಂ ಕಂಡು ನಾನು ದುಃಖಿತನಾಗಿ ಭ್ರಾಂತಿಯಿಂದ ನಿನ್ನಿಂದ ಮಾಡಲ್ಪಟ್ಟದ್ದೆಂದು ಪೀಡಿಸಿದೆನು. ನೀನು ಶಿವಾಜ್ಞೆಯಿಂ ನಿನ್ನ ಪುರಕ್ಕೆ ತೆರಳುವನಾಗೆಂದು ಪೇಳಲಾಗಿ, ಆ ಯಮನು ಆತಂಗೆ ನಮಸ್ಕಾರವಂಮಾಡಿ ತನ್ನಪುರಕ್ಕೆ ಪೋದನು. ಆಗ ದೇವತೆಗಳು ಪುಷ್ಪಂಗಳಂ ಕರದರು. ಭೂತಗಳು ಕೋಲಾಹಲ ಧ್ವನಿಯಂ ಮಾಡಿದರು. ವೀರಬಾಹುವು ವೀರರಿಂದಾವೃತನಾಗಿ ನಿಂತಿರ್ದನು.

ಶೂರಪದ್ಮನ ಪುತ್ರಶೋಕ ಮತ್ತು ಪುತ್ರರು ಯುದ್ಧಮಾಡುವಿಕೆ.

ಬಳಿಕ ಶೂರಪದ್ಮನು ದೂತಮುಖದಿಂ ಸಮಸ್ತ ವೃತ್ತಾಂತಮಂ ಕೇಳಿ ಅಗ್ನಿಮುಖನೆಂಬ ತನ್ನ ಮಗನನ್ನು ನೆನದು ರೋದನವಂ ಮಾಡಲಾಗಿ, ಅದಂ ಕೇಳಿ ಅಂತಃ ಪುರಸ್ತ್ರೀಯರು ಹಾಹಾ!! ಎಂದು ಹಲುಬಿದರು. ಆ ಪುರದಲ್ಲಿರುವ ಸರ್ವರು ದುಃಖಿತರಾದರು ಆ ವೇಳೆಯಲ್ಲಿ ಶೂರಪದ್ಮನ ಕುಮಾರನಾದ ಅಗ್ನಿಮುಖನು ಬಂದು ತಂದೆಯಂ ನೋಡಿ ದುಃಖಿತನಾಗಿ, ಎಲೈ, ತಂದೆಯೇ?

ನಾವು ಅಧಿಕ ಲಕ್ಷ ವೀರರಿರುವಲ್ಲಿ, ಅನೇಕ ಭೂತಗಳೊಡನೆ ಯುದ್ಧಕ್ಕೋಸುಗ ಆತನೋರ್ವನಂ ಹೇಗೆ ಕಳುಹಿದಿ? ಈಗ ಮೃತನಾದರೆ ಇದಕ್ಕೋಸುಗ ಯಾಕೆ ದುಃಖಿಸುತ್ತಿ. ಬಲವಂತರಾದ ನಾವು ಜೀವಂತರಾಗಿದೇವೆ. ಹಿರಣ್ಯ ಭಾನು ಕೋಪರೀರ್ವರಿರುವರು. ಸೇನೆಯು ಮೃತವಾದುದೆಂದು ದುಃಖಿಸಬೇಡ. ಸಮುದ್ರವು ಶೋಷಣೆಯನ್ನೈದಿದರು ನಿನ್ನ ಬಲಕ್ಕೆ ಕೊರತೆಯಿಲ್ಲ. ನಾವು ಮೇರು ಪರ್ವತವನ್ನು ವ್ಯತ್ಯಾಸವನ್ಮಾಡುವೆವು. ಬಡಬಾಗ್ನಿಯನ್ನು ಶಾಂತಂಗೈಯುವೆವು. ಭೂತಂಗಳಂ ವೀರರಂ ಮೃತ್ಯುವಂ ಸಂಹರಿಸಿ ಶೀಘ್ರದಿಂಬಂದೇವು. ನಮ್ಮನ್ನು ಕಳುಹೆಂದು ಪೇಳಲಾಗಿ, ಶೂರಪದ್ಮನಿದಂ ಕೇಳಿ ಅವರಂ ಕಳುಹಿಸಿದನು. ಅನಂತರದಲ್ಲಿ ಆ ಪುತ್ರರು ಅನೇಕ ಭೂಷಣಗಳಂ ತೊಟ್ಟು ಸರ್ವಾಯುಧ ಸನ್ನದ್ಧರಾಗಿ ಚತುರಂಗ ಬಲಸಹಿತ ಸಮಸ್ತವಾದ್ಯ ಘೋಷಗಳಿಂದ ಯುಕ್ತರಾಗಿ ಯುದ್ಧಕ್ಕೆ ಪೊರಮಟ್ಟರು. ಆ ಸಮಯದಲ್ಲಿ ಭೂಮಿಯು ನರ್ತನವನ್ಮಾಡಿತು. ಬ್ರಾಹ್ಮಣರು ಪೋಗಲಾಗದೆಂದು ನುಡಿದರು. ರಣಪದ್ದುಗಳು ಕಾಗೆಗಳು ಅವರ ಮೇಲೆ ಚಕ್ರಾಕೃತಿಯಿಂ ತಿರುಗಿದವು. ಮತ್ತೆ ಅವರ ಮುಂಗಡೆಯಲ್ಲಿ ಉರಿಗೊಳ್ಳಿಗಳು ಬಿದ್ದವು. ಛತ್ರಂಗಳ ಮೇಲೆ ರಣಹದ್ದುಗಳು ಕುಳಿತವು. ಆ ದೈತ್ಯಕುಮಾರರು ತಮಗೆ ಮರಣಸೂಚಕಂಗಳಾದ ದುಶ್ಶಕುನಂಗಳಂ ಕಂಡರೂ ಅವುಗಳನ್ನು ಲಕ್ಷ್ಯಂಗೈಯದೆ ಯುದ್ಧಕ್ಕೆ ಪೋಗಲಾಗಿ ಆಗ ಉಭಯಬಲಗಳು ಮಹತ್ತಾದ ಯುದ್ಧವನ್ಮಾಡಿದರು. ಆ ಸಮಯದಲ್ಲಿ ಭೂತಸೇನೆಗಳಿಂ ವೀರರಿಂ ವೃಕ್ಷಗಳಿಂ ಬಡಿಯಲ್ಪಟ್ಟು ಅನೇಕ ದಾನವರು ದಶದಿಕ್ಕುಗಳಿಗು ಓಡಿದರು. ದೈತ್ಯಕುಮಾರರು ಅವರಂ ಕಂಡು ಧನುಸ್ಸುಗಳಂ ಬಗ್ಗಿಸಿ ನಾರಿಯಂ ಹೂಡಿ ಬಹು ಬಾಣಗಳಂ ಬಿಟ್ಟು ಆ ಭೂತಗಳನ್ನು ಓಡಿಸಲಾಗಿ, ಭೂತಸೇನಾಪತಿಗಳು ವೃಕ್ಷಾದಿಗಳಿಂದವರ ರಥ ಮುಂತಾದವುಗಳಂ ಛೇದಿಸಿದರು. ಬಳಿಕ ಶೂರಪುತ್ರನು ಆಗ್ನೇಯಾಸ್ತ್ರವನ್ನು ಬಿಡಲಾಗಿ ಅದರಿನೊಂದು ದುಃಖಿತರಾಗಿ ವಿಜಯ ಜಯ ವೀರ ಅನಂತ ಅಕಳಂಕ ಶತಬಲಿ ಮುಂತಾದ ಸಹಸ್ರ ವೀರರು ವೀರಬಾಹುವಿನಿಂದ ಕಳುಹಿಸಲ್ಪಟ್ಟು ಆ ದೈತ್ಯಕುಮಾರನ ಬಳಿಗೆ ಬಂದು ಶರಗಳಂ ವರ್ಷಿಸೆ ಆಗ ಅನ್ಯೋನ್ಯಯುದ್ಧ ಮುಂಟಾದುದು. ಆ ಸಮಯದಲ್ಲಿ ದೈತ್ಯರು ವೀರಗಣಗಳ ಸಮಸ್ತವಾದ ರಥಗಳನ್ನು ಶರಗಳಿಂ ಛೇಧಿಸಲಾಗಿ, ಬಳಿಕ ವೀರ ಸಹಸ್ರರು ಅನೇಕ ಸಹಸ್ರ ಬಾಣಗಳಂ ಪ್ರಯೋಗಿಸಿ ಅವುಗಳಿಂದ ರಥ ಕಾರ್ಮುಕಾದಿಗಳಂ ಛೇದಿಸಿ ಅವರಿಗೆ ಸಹಾಯಮಾಗಿ ಬಂದ ರಥಗಳನ್ನು ಧ್ವಂಸಿಸಿ, ರಾಕ್ಷಸರು ಭೂಮಿಯಲ್ಲಿ ನಿಂತು ವೃಕ್ಷ ಪರ್ವತಗಳಂ ಕಿತ್ತು ತಮ್ಮ ಮೇಲೆ ಪ್ರಯೋಗಿಸುವಂತೆ ಮಾಡಿ, ಅವುಗಳನ್ನು ಛೇದಿಸಿ

ದರು. ಬಳಿಕ ದೈತ್ಯರು ಆಗ್ನೇಯಾಸ್ತ್ರವನ್ನು ಬಿಡೆ, ಗಣಾಧೀಶ್ವರರು ಅದೇ ಆಗ್ನೇಯಾಸ್ತ್ರವನ್ನೆ ಬಿಟ್ಟು ಆ ದೈತ್ಯರನ್ನು ಮೂರ್ಛೆಯನ್ನೈದಿಸಿದರು. ಆಗ ಕೆಲವರಾದ ದೈತ್ಯರು ಯುದ್ಧವನ್ಮಾಡುತ್ತ ವೀರರಥಂಗಳನ್ನು ಆಕಾಶಕ್ಕೆ ಹಾರಿಸಲಾಗಿ ಆ ವೀರರು ಭೂಮಿಯಲ್ಲಿ ಬಿದ್ದು ಥಟ್ಟನೆದ್ದು ಪ್ರತಿ ರಥಗಳನ್ನೇರಿ ಬಾಣಗಳಂ ಪ್ರಯೋಗಿಸಿ ರಾಕ್ಷಸರು ನೊಯ್ಯುವಂತೆ ಮಾಡಿದರು. ಬಳಿಕ ಆ ದಾನವರು ಶೀಘ್ರದಿಂದೆದ್ದು ಆ ವೀರರ ಬಾಣಗಳಂ ಛೇದಿಸಿದರು ಎಂದು ಶೌನಕಾದಿ ಮುನಿಗಳಿಗೆ ಸೂತಂ ಪೇಳಿದನೆಂಬಲ್ಲಿಗೆ, ಯುದ್ಧಕಾಂಡ ದಲ್ಲಿ ಹತ್ತೊಂಭತ್ತನೆಯ ಅಧ್ಯಾಯವು ಸಂಪೂರ್ಣಂ.

ಇಪ್ಪತ್ತನೆಯ ಅಧ್ಯಾಯವು.

ದೈತ್ಯವೀರರ ಭೂತಗಣಗಳ ಯುದ್ಧವು.

ಎಲೈ ಋಷಿಗಳಿರಾ! ಅನಂತರದಲ್ಲಿ ದೈತ್ಯರಿಗು ವೀರರಿಗು ಮರಳಿ ಮಲ್ಲ ಯುದ್ಧಮುಂಟಾಗೆ, ದೈತ್ಯರಿಂ ವೀರರು ತಾಡಿತರಾಗಿ ಖೇದವನ್ನೈದಿದರು. ಬಳಿಕ ಬಲರೊಳು ಮಹಾ ಬಲವಂತನಾದ ಭೂತಗಣಪತಿಯಾದ ಶ್ರೀಮಂತ ನಾದ ವಿಜಯನೆಂಬ ವೀರನು ಮಹಾದೇವನ ದೆಶೆಯಿಂದ ಚಾಪವಂ ಶರಪೂರ್ಣ ಬತ್ತಳಿಕೆಯಂ ಪಡೆದು ಮಹಾ ಕೋಪದಿಂದ ಆ ದೈತ್ಯರೊಳು ಬಾಣಗಳಂ ವರ್ಷಿಸಲಾಗಿ, ಆತನಿಂ ಬಿಡಲ್ಪಟ್ಟ ಬಾಣಗಳು ಶೀಘ್ರದಿಂ ದೈತ್ಯರ ಶಿರಸ್ಸು ಗಳು ರಣಾಗ್ರದಲ್ಲಿಯು ಸಮುದ್ರದಲ್ಲಿಯು ಬಿದ್ದವು. ದೈತ್ಯರು ಮರಳಿ ಪುಟ್ಟಿದ ಶಿರಸ್ಸುಳ್ಳವರಾಗಿ ಬಾಣಗಳಂ ವರ್ಷಿಸುತ್ತ ಯುದ್ಧವನ್ಮಾಡುತಿರೆ, ವಿಜಯನು ಬಾಣಗಳಿಂ ಅವರ ಪಾಣಿಪಾದಗಳಂ ಛೇದಿಸಲಾಗಿ, ದೈತ್ಯರು ಮರಳಿ ಪುಟ್ಟಿದ ಆಯಾ ಅವಯವಂಗಳುಳ್ಳವರಾಗಿ ಆ ವಿಜಯನ ಮೇಲೆ ಬಾಣಗಳಂ ಪ್ರಯೋ ಗಿಸಿದರು. ಬಳಿಕ ವಿಜಯನು ದೈತ್ಯರಂ ಜಯಿಸಲಾಗದೆಂದು ವಿಚಾರವಂತನಾಗಿ ಮಹಾ ಬಾಹುವಾದ ಸರ್ವಶತ್ರು ನಿವಾರಣನಾದ, ನನಗೆ ಸ್ವಾಮಿಯಾದ, ಕುಮಾರಸ್ವಾಮಿಯೆ! ನನ್ನಿಂದ ಮಾಡಲ್ಪಡತಕ್ಕದೇನು? ಪಾಪಿಗಳಾದ ಅಸು ರರು ಅನೇಕ ವೇಳೆ ಪಾಣಿಪಾದ ಶಿರಗಳಿಂದ ಭೇದಿಸಲ್ಪಟ್ಟರೂ ಮರಳಿ ಪುಟ್ಟಿದ ಸರ್ವಾಂಗಗಳುಳ್ಳವರಾಗಿ ನನ್ನೊಡನೆ ಯುದ್ಧವನ್ಮಾಡುತಿಹಾರೆ. ಏನು ಮಾಡಲಿ? ಎಂದು ಈ ಪ್ರಕಾರದಿಂ ದುಃಖಿಸಿ ಹೃದಯದಲ್ಲಿ ಗುಹನಂ ಧ್ಯಾನಿಸ ಲಾಗಿ, ಆ ಕುಮಾರಸ್ವಾಮಿಯು ಆತಂಗೆ ಪ್ರಸನ್ನನಾಗಿ, ಎಲೈ ವಿಜಯನೆ! ನನ್ನಾಜ್ಞೆಯಿಂದ ನಿನಗೆ ಜಯವುಂಟಾಗಲಿ, ಹೃದಯದಲ್ಲಿ ಪಾಪಿಗಳಾದ ಅಸು

ರರು ಬ್ರಹ್ಮನಿಂದ ವರವಂ ಪಡೆದರಾದಕಾರಣ ಇವರನ್ನು ಒಂದು ಬಾಣದಿಂದಲೆ ಪೋರ್ವನು ಉಳಿಯದ ಹಾಗೆ ಸಂಹರಿಸಬೇಕೆಂದು ನಿರೂಪಿಸಿ, ಭೈರವಾಸ್ತ್ರವಂ ಕೊಟ್ಟು ಇದರಿಂದ ಸರ್ವರಂ ಸಂಹರಿಸೆಂದಾಜ್ಞಾಪಿಸಿ ಅಂತರ್ಧಾನನಾದನು.

ಬಳಿಕ ವಿಜಯನು ಕುಮಾರಸ್ವಾಮಿಯಿಂದ ಅಸ್ತ್ರವಂ ಪಡೆದು ಸಿಂಹನಾದವ್ಮಾಡಿ ಆ ಅಸ್ತ್ರವಂ ಬಿಟ್ಟು ಮಾಯಾಸ್ತ್ರವಂ ಶಿಕ್ಷಿಸಿ ತ್ರಿಸಹಸ್ರ ಅಸುರರಂ ಸಂಹರಿಸಿ ಸಂತುಷ್ಟನಾಗಿ ಕುಮಾರಸ್ವಾಮಿಯಂ ಸ್ತುತಿಸಿದನು. ಭೂತಗಣಗಳು ಸಿಂಹನಾದವ್ಮಾಡಿದರು. ದೇವತೆಗಳು ಕುಸುಮವೃಷ್ಟಿಯಂ ಕರೆದರು. ಚಾರರಿದಂ ಕಂಡು ಶೂರಪದ್ಮಂಗೆ ಪೇಳಲಾಗಿ, ಶೂರನಿದಂ ಕೇಳಿ ದುಃಖಸಮುದ್ರದಲ್ಲಿ ಮುಳುಗಿದನು. ಅನಂತರದಲ್ಲಿ ರಾಜನೀತಿಯಂ ಬಲ್ಲಂಥ ಧರ್ಮಕೋಪನೆಂಬ ಮಂತ್ರಿಯು ಆ ಶೂರಪದ್ಮನೆ! ಮಹಾ ಪರಾಕ್ರಮವನ್ನು ತಿಳಿದವರಿಗೆ ರಣರಂಗದಲ್ಲಿ ಪುತ್ರ ಮಿತ್ರ ಪಿತೃ ಭ್ರಾತೃ ಬಂಧುಗಳ ಮರಣದ ವಿಷಯದಲ್ಲಿ ಶೋಕವಿಲ್ಲವು. ದೈತ್ಯರಿಗೆ ಶ್ರೇಷ್ಠನಾದ ಧೀಮಂತನಾದ ಸರ್ವರಿಗು ಒಡೆಯನಾದ ನೀನು ದುಃಖವಮ್ಮಾಡಬಾರದು. ಸಮಸ್ತ ಪ್ರಾಣಗಳನ್ನು ಅಪಹರಿಸುವ ಕಾಲನು ಪ್ರಾಣಗಳನ್ನು ಸೃಜಿಸುವ ಬ್ರಹ್ಮನು ಸಹ ನಮ್ಮ ವಶದಲ್ಲಿದಾರೆ. ಮತ್ತೆ ಐಶ್ವರ್ಯವು ಇಂದ್ರಲೋಕವು ದೇವರಥವು ಸೇನೆಗಳು ಮಂತ್ರಿಗಳು ವೀರರು ಇರುತಿಥಾರೆ. ನಿನಗೇನು ಕಡಮೆಯಾಗಿಥೆ? ಯಾತಕ್ಕೆ ಚಿಂತಿಸುತ್ತಿದ್ದಿ? ಈ ದುಃಖವನ್ನು ಬಿಡುವನಾಗೆಂದು ಪೇಳಲಾಗಿ, ಶೂರನಿದಂ ಕೇಳಿ ತಾನು ದುಃಖವನ್ನು ಬಿಟ್ಟು ಜಯಿಸುವೆನೆಂದು ಪೇಳಿ ಪೊರಮಟ್ಟನು. ಆಗ ಧರ್ಮಕೋಪನು, ಎಲೈ ದಾನವೇಶ್ವರನೆ! ಸರ್ವರು ಇರುವಲ್ಲಿ ಅಲ್ಪನ ಮೇಲೆ ನೀನು ಪೋಗುವದು ಕಾರ್ಯವಲ್ಲವು. ನಾನು ತೆರಳಿ ಸಮಸ್ತರನ್ನು ಸಂಹರಿಸಿ ನಿನ್ನ ಬಳಿಗೆ ಬರುವೆನೆಂದು ಪೇಳಲಾಗಿ, ಶೂರನು ಹಾಗೆ ಆಗಲೆಂದು ಒಪ್ಪಿಕೊಂಡು ಆತನಂ ಕಳುಹಿ ಮರಳಿ ಸಿಂಹಾಸನಾರೂಢನಾಗಿರ್ದನು. ಅನಂತರದಲ್ಲಿ ಧರ್ಮಕೋಪನು ನಾನಾಸ್ತ್ರಂಗಳಂ ಧರಿಸಿ ಪುಂಡರೀಕವೆಂಬ ದಿಗ್ಗಜವನ್ನೇರಿ ಅನೇಕ ಮಂತ್ರಿಗಳೊಡನೆ ಚತುರಂಗಬಲ ಸಮೇತನಾಗಿ ಛತ್ರಾದಿಗಳಂ ಸ್ವೀಕರಿಸಿ ವಾದ್ಯಂಗಳ ಘೋಷಗಳಿಂದ ಯುಕ್ತನಾಗಿ ಪೊರಮಟ್ಟು ಯುದ್ಧರಂಗವನ್ನೈದಿದನು.

ಧರ್ಮಕೋಪನ ವಧೆ-ಭೂತಗಣಗಳ ಯುದ್ಧ.

ಬಳಿಕ ಭೂತಂಗಳು ಭೂತಗಣಾಧಿಪತಿಗಳು ಆತನಂ ಕಂಡು ಘರ್ಜಿಸಲಾಗಿ, ಧರ್ಮಕೋಪನದಂ ಕೇಳಿ ಅನೇಕ ಬಾಣಗಳನ್ನು ವರ್ಷಿಸಿದನು. ಆಗ ಉಭಯ ಬಲಗಳಿಗು ಬಹು ಯುದ್ಧವಾದುದು. ಆ ಯುದ್ಧರಂಗದಲ್ಲಿ ಲಕ್ಷ

ವೀರರಿಗು ದೈತ್ಯಮಂತ್ರಿಗಳಿಗು ಪರಸ್ಪರವಾಗಿ ಯುದ್ಧವಾಗುತ್ತಿರಲಾಗಿ, ವೀರರು ಯಮದೂತರಂತೆ ಬಹು ಬಾಣಗಳಂ ಬಿಟ್ಟು ದೈತ್ಯರ ಪ್ರಾಣಂಗಳನ್ನು ಅಪಹರಿಸುತ್ತಿರಲು ಕೆಲಬರು ದೈತ್ಯರು ಪ್ರಾಣಂಗಳಂ ಬಿಟ್ಟರು. ಕೆಲವರು ಓಡಿದರು. ಬಳಿಕ ಧರ್ಮಕೋಪನು ಆ ಸೇನೆಗಳಲ್ಲಿ ಅನೇಕ ಬಾಣಂಗಳಂ ವರ್ಷಿಸಿದನು. ಪುಂಡರೀಕವೆಂಬ ದಿಗ್ಗಜವು ಅನೇಕರಂ ಸಂಹರಿಸಿತು. ಅನಂತರದಲ್ಲಿ ಗಣಾಧೀಶ್ವರರು ಆ ಗಜದ ಮೇಲೆ ಬಹು ಬಾಣಗಳಂ ಬಿಡಲಾಗಿ, ಅದು ಸರ್ವಾಂಗದಲ್ಲಿಯು ರಕ್ತಧಾರೆಗಳುಳ್ಳದ್ದಾಗಿ ಕಬ್ಬುನದ ಮುಸಲವಂ ಪಿಡಿದು ಅವರಂ ಬಡಿಯೆ, ಆ ಘಾತದಿಂದ ಕೆಲವರು ಗಣಾಧೀಶ್ವರರು ಮೃತರಾದರು. ಮತ್ತೆ ಕೆಲಂಬರೋಡಿದರು. ಬಳಿಕ ವೀರಬಾಹುವು ಆ ಗಜವಂ ಕಂಡು ಬಹು ಬಾಣಂಗಳಂ ಬಿಡೆ ಆ ಗಜವು ಹೀನಬಲವಾದುದು. ಆಗ ಧರ್ಮಕೋಪನದಂ ಕಂಡು ಅದಕ್ಕೆ ಶಾಂತಿಯಮ್ಮಾಡಿ ಆತನ ಮೇಲೆ ಅನೇಕ ಶರಗಳನ್ನು ಸುರಿಸಲಾಗಿ, ವೀರಬಾಹುವು ರಕ್ತದಿಂ ಸರ್ವಾಂಗವ್ಯಾಪ್ತನಾಗಿ ರಥದಲ್ಲಿ ನಿಂತನು. ಮರಳಿ ಧರ್ಮಕೋಪನು ಮಹಾ ಕೋಪದಿಂದ ಶಕ್ತಿಯಂ ಬಿಡಲಾಗಿ ಅದಂ ಬಾಣಗಳಿಂ ಖಂಡಿಸಿ ಮರಳಿ ಆತನ ಕವಚಮಂ ಭೇದಿಸಿದನು. ಬಳಿಕ ದೈತ್ಯನು ದಂಡದಿಂ ಹೊಡೆಯಲಾಗಿ ಅದನ್ನು ಸಪ್ತ ಬಾಣಗಳಿಂ ಛೇದಿಸೆ, ಆಗ ದೈತ್ಯನು ಚಿಂತಿಸಿ ವೀರವಾದಂಗಳನ್ನು ನುಡಿದು ಅನೇಕ ಬಾಣಗಳನ್ನು ಬಿಡುತಿರೆ, ವೀರನು ಶಕ್ತಿಯಂ ಬಿಟ್ಟನು. ಅನಂತರದಲ್ಲಿ ಧರ್ಮಕೋಪನು ಅದಂ ಛೇದಿಸಲಾಗಿ ವೀರಬಾಹುವು ದೈತ್ಯನ ಉರವನ್ನು ಬಾಣದಿಂಭೇದಿಸೆ, ಆ ಅಸುರನು ಕ್ಷಣಮಾತ್ರ ಮೂರ್ಛಿತನಾಗಿ ಶೀಘ್ರದಿಂದೆದ್ದು ದಂಡದಿಂದಾತನ ಸಾರಥಿಯಂ ಸಂಹರಿಸಲಾಗಿ, ವೀರಬಾಹುವು ಶೀಘ್ರದಿಂದ ರಥದಿಂದಿಳಿದು ಆತನ ಕಪೋಲದಲ್ಲಿ ತಾಡಿಸಿ ಗಜದೊಡನೆ ಆತನನ್ನು ಆಕಾಶಕ್ಕೆ ಯೆತ್ತಿ ಬೀಸಿ ಬಿಸುಟನು. ಆಗ ಆ ಗಜವು ಭೂಮಿಯಲ್ಲಿ ಬಿದ್ದು ಮೂರ್ಛೆಯನ್ನೈದಿತು. ಮರಳಿ ದಾನವನೆದ್ದು ದಂಡದಿಂದಾತನ ಉದರವಂ ಬಡಿಯೆ ವೀರಬಾಹುವದಂ ಕರದಿಂ ಮುರಿದನು. ಬಳಿಕ ದೈತ್ಯನು ವಜ್ರಾಯುಧದಿಂದ ಹೊಡೆಯಲಾಗಿ ವೀರನದಕ್ಕೆ ಇದಿರಾಗಿ ನಡೆದು ಅದಂ ಕರದಿಂ ಪಿಡಿದು ಆತನಂ ಕಡಿಯೆ ದೈತ್ಯನು ಭೂಮಿಯಲ್ಲಿ ಬಿದ್ದು ರಕ್ತವಂ ಕಾರುತ ಪ್ರಾಣವಂ ಬಿಟ್ಟನು. ಅನಂತರದಲ್ಲಿ ದೈತ್ಯರುಗಳು ಮರಣವನ್ನೈದಿದ ಆ ದನುಜಮಂತ್ರಿಯಾದ ಧರ್ಮಕೋಪನಂ ಕಂಡು, ಆ ವೀರಬಾಹುವಿನ ಮುಂದುಗಡೆಯಲ್ಲಿ ನಿಲ್ಲಲು, ವ್ಯಗ್ರವಾಗಿ ಶಕ್ತಿಯಿಲ್ಲದವರಾಗಿ, ಖೇದವನ್ನೈದಿದ ಮನಸ್ಸುಳ್ಳವರಾಗಿ ಕೆದರಿದ ಕೇಶಭಾರಂಗಳುಳ್ಳವರಾಗಿ ಸುತ್ತುಮುತ್ತಲು ತಮ್ಮ ತಮ್ಮ ಆಯುಧಗಳನ್ನು ಕೆಡವಿಕೊಂಡು ವೇಗದಿಂ

ಓಡಿಹೋದವರೆಂದು ಸೂತಪೌರಾಣಿಕನು ಶೌನಕಾದಿ ಮುನಿಗಳಿಗೆ ಪೇಳಿದ ನೆಂಬಿಲ್ಲಿಗೆ, ಯುದ್ಧಕಾಂಡದಲ್ಲಿ ಇಪ್ಪತ್ತನೆಯ ಅಧ್ಯಾಯವು ಸಮಾಪ್ತಮಾದುದು.

ಇಪ್ಪತ್ತೊಂದನೆಯ ಅಧ್ಯಾಯವು.

ಪುಂಡರೀಕವು ವೀರಬಾಹುವಿನ ಅನುಜ್ಞೆಯಂತೆ ಸ್ವಸ್ಥಾನ ಸೇರುವಿಕೆ.

ಎಲೈ ಮುನಿಗಳಿರಾ! ಬಳಿಕ ಪುಂಡರೀಕವೆಂಬ ದಿಗ್ಗಜವು ಮೂರ್ಛೆಯಂ ಬಿಟ್ಟು, ವೀರಬಾಹುವಿನ ಸಮೀಪಕ್ಕೆ ಬಂದು, ಆತಂಗೆ ನಮಸ್ಕಾರವಂ ಮಾಡಿ, ಎಲೈ ವೀರಬಾಹುವೆ! ಧರ್ಮಕೋಪನೆಂಬ ಅಸುರನು ದಿಗ್ಗಜಗಳಿಗೆ ಶ್ರೇಷ್ಠನಾದ ನನ್ನನ್ನು ಪಿಡಿದು ಸ್ವೇಚ್ಛೆಯಿಂದ ನನ್ನ ಮೇಲೆ ಕುಳಿತು ಸಂಚರಿಸುತ್ತಿದ್ದನು. ಪೇಳದೆ ಕೇಳದೆ ಪೋದೆನಾದೊಡೆ ಆ ಅಸುರನು ನನ್ನನ್ನು ಛೇದಿಸುವನೆಂದು ಅಧೀನವಲ್ಲಿದ್ದೆನು. ಆ ಅಸುರನಂ ಸಂಹರಿಸಿ ನನ್ನನ್ನು ಪರಿಪಾಲಿಸಿದಿ, ನಾನು ಮಾಡಿದ ಅಪರಾಧನಂ ಕ್ಷಮಿಸು, ನಿನ್ನ ಮಹಿಮೆಯಂ ತಿಳಿಯದೆ ಪೋದೆನು. ನಿನ್ನಾಜ್ಞೆಯಿಂದ ಪೂರ್ವಸ್ಥಾನಕ್ಕೆ ಪೋಗುವೆನೆಂದು ಪೇಳಲಾಗಿ, ವೀರಬಾಹುವು ಹಾಗೆ ಆಗಲೆಂದು ಅಪ್ಪಣೆಯಂ ಪಾಲಿಸೆ, ದಿಗ್ಗಜವು ತನ್ನ ಸ್ಥಾನವನ್ನೈದಿತು. ದೇವತೆಗಳು ಪುಷ್ಪವೃಷ್ಟಿಯಂ ಕರೆದರು. ಭೂತಗಳು ಅಟ್ಟಹಾಸವಂ ಮಾಡಿದರು. ಬಳಿಕ ಶೂರಪದ್ಮನು ಚಾರರಿಂದ ಈ ವೃತ್ತಾಂತವಂ ಕೇಳಿ ಪಿತಾರವಂತನಾಗಿ ದುಃಖವನ್ನೈದಿದನು. ಆ ಸಮಯದಲ್ಲಿ ರಾತ್ರಿಯು ಅನೇಕ ದೈತ್ಯರನ್ನು ಯಮಪುರವಂ ಸೇರಿಸಿ ತಾನು ಲಯವಾದುದು. ಭಾನುಕೋಪನು ಆ ದಿನದಲ್ಲಿ ಪೋಗಿ ಮಾಯೆಯಿಂ ಬಿಡಲ್ಪಟ್ಟವನಾಗಿ ತನ್ನ ಗೃಹಕ್ಕೆ ಬಂದ ದೂತನಿಂದ ಧರ್ಮಕೋಪನ ಮರಣವಂ ಪುರವನ್ನಿಡಿವದಂ ಕೇಳಿ ತನ್ನ ಗ್ರಾಮದಿಂ ಪೊರಟು ಶೂರನ ಸಮೀಪವನ್ನೈದಿ, ಆತಂಗೆ ನಮಸ್ಕಾರವಂ ಮಾಡಿ, ಎಲೈ ತಂದೆಯೆ! ರಣದಲ್ಲಿ ಕುಮಾರಸ್ವಾಮಿಯು ಜಯಿಸಲಶಕ್ಯವು, ಸುರರನ್ನು ಪೀಡಿಸಿದುದರಿಂದ ನಮ್ಮ ಬಲದಲ್ಲಿ ಅನೇಕ ದೈತ್ಯರು ಮೃತರಾದರು, ಈಗಲಾದರು ದೇವತೆಗಳಂ ಬಿಟ್ಟು ಗುಹಂಗೆ ನಮಸ್ಕಾರವಂ ಮಾಡಿ ಆತನ ಅನುಗ್ರಹವಂ ಪಡೆದು ಪುರದಲ್ಲಿ ಸುಖವಾಗಿರೆಂದು ಪೇಳಿದನು.

ಭಾನುಕೋಪ ವೀರಬಾಹುಗಳ ಯುದ್ಧ.

ಬಳಿಕ ಶೂರನು ಆ ವಾಕ್ಯವಂ ಕೇಳಿ, ಎಲೈ ಮಗನೆ! ಬ್ರಹ್ಮ ವಿಷ್ಣು ಮೊದಲಾದವರಿಂದ ಸ್ತುತಿಮಾಡಿಸಿಕೊಂಬಾತನಾದ ನಾನು ಆರಂಭಿಸಿದ ಕಾರ್ಯ

ವನ್ನು ಪ್ರಾಣವಿರುವವರಿಗು ಬಿಡೆನು. ಬಿಟ್ಟೆನಾದೊಡೆ ಅಪಕೀರ್ತಿಯುಂಟಾಗು ವದು. ಎಲೆ ಭ್ರಾಂತನೆ! ನೀನು ಅತ್ಯಂತ ಭೀತನಾದಿ? ಮನೆಗೆ ಪೋಗಿ ನಿದ್ರಿಸು ತ್ತಿರು, ಆ ಶತ್ರುಗಳಂ ನಾನೇ ಜಯಿಸುವೆನೆಂದು ಪೇಳಲಾಗಿ, ಭಾನು ಕೋಪನು ಇದಂ ಕೇಳಿ, ಎಲೈ ತಂದೆಯೆ! ನಾನು ಅಜ್ಞಾನದಿಂದೀವಾಕ್ಯವಂ ಪೇಳಿದೆನೆಂದು ಬಿನ್ನಪಂಗೆಯ್ದು ಆ ತಂದೆಯುಂ ಸಂತೋಷಗೊಳಿಸಿ, ಆತನ ಅಪ್ಪಣೆಯಿಂದ ಗೃಹಕ್ಕೆ ಬಂದು, ಅನೇಕ ದಿವ್ಯವಸ್ತ್ರಗಳಂ ಧರಿಸಿ ನಾನಾವಿಧವಾದ ಗುಪ್ತ ರಥ ಗಳಂ ಸಂಪಾದಿಸಿ, ತಾನೊಂದು ರಥವನೇರಿ ಚತುರಂಗಬಲ ಸಹಿತನಾಗಿ ಛತ್ರಾದಿ ಗಳಂ ಧರಿಸಿ, ವಾದ್ಯಗಳೊಡನೆ ಅನೇಕ ಅಸುರರಿಂದಾವೃತನಾಗಿ ತನ್ನ ಮರಣವಂ ತಿಳಿದು ಕುಮಾರನಂ ನೋಡಿ ದುಃಖಿತನಾಗಿ, ಗೃಹದಿಂ ಪೊರಮಟ್ಟು ರಣ ಭೂಮಿಯನ್ನೈದಿ ಅಲ್ಲಿ ಮೃತರಾದ ತ್ರಿಸಹಸ್ರ ಅನುಜರಿಂದೊಡಗೂಡಿ ಬಿದ್ದಿರ್ಪ ಮಹಾ ಅಸುರರಂ ಕಂಡು, ದುಃಖಿಸಿ ಮಹಾ ಕೋಪವಂ ಮಾಡಿ, ಹಾಹಾ!! ಈಗ ನಾನು ರಣಾಂಗಣದಲ್ಲಿ ಸರ್ವ ಶತ್ರುಗಳಂ ಸಂಹರಿಸುತಿರ್ಥೇನೆ, ಅಲ್ಲದಿರ್ದೊಡೆ ಕಾಮಪೀಡಿತನಾಗಿ ದರಿದ್ರನಾದ ವೇಶ್ಯಾಸಕ್ತನಂ ಜನರು ಹೇಗೆ ದೂಷಿಸುವರೋ ಹಾಗೆ ನನಗೆ ಅಪಕೀರ್ತಿಯುಂಟಾಗುವದೆಂದು ತಿಳಿದು ಭೂತಸೇನೆಯು ಬೆದರು ವಂತೆ ಯುದ್ಧರಂಗವನ್ನು ಪ್ರವೇಶಿಸೆ, ಆಗ ಉಭಯ ಸೇನೆಗಳಿಗು ಮೊದಲು ಪರ್ವತ ವೃಕ್ಷ ಖಡ್ಗ ಮುಂತಾದ ಆಯುಧಗಳಿಂದ ಅತ್ಯಂತ ಯುದ್ಧಮುಂಟಾ ಯಿತು. ಆ ಸಮಯದಲ್ಲಿ ಅನೇಕ ಶೂರರು ಮೃತರಾದರು. ಬಳಿಕ ಕಬಂಧಗಳು ನರ್ತನವಂ ಮಾಡಿದವು. ರಣಹದ್ದು ಕಾಗೆ ನರಿ ಮೊದಲಾದವು ಮಾಂಸವಂ ತಿನ್ನಲೆರಗಿದವು. ಬಳಿಕ ಭೂತಸೇನೆಯು ಪಲಾಯನವಾಗಲಾಗಿ ಸೇನಾಪತಿಗಳು ಬಂದು ದೈತ್ಯರಂ ಸಂಹರಿಸೆ, ಭಾನುಕೋಪನಿದಂ ಕಂಡು ರಥವಂ ಮುಂದು ನಡೆಯಿಸಿ, ಆ ವೈರಿಗಳಿಂದ ಬಿಡಲ್ಪಟ್ಟ ಶಸ್ತ್ರ ಪರ್ವತಾದಿಗಳಂ ಛೇದಿಸಿ, ಅವರಲ್ಲಿ ಆಗ್ನೇಯಾಸ್ತ್ರವಂ ಬಿಟ್ಟವನಾಗಲು, ಭೂತ ಸೇನಾಧಿಪತಿಗಳು ಯುದ್ಧದಲ್ಲಿ ಪಲಾಯನವಾದರು.

ಬಳಿಕ ವೀರಬಾಹುವದಂ ಕಂಡು ರಥವಂ ಮುಂದಕ್ಕೆ ನಡೆಯಿಸಿ, ದೈತ್ಯರು ಬಿಟ್ಟ ಅಸ್ತ್ರವಂ ಛೇದಿಸಿ ಬಹು ದೈತ್ಯರಂ ಸಂಹರಿಸಲಾಗಿ, ಭಾನುಕೋಪನು ಆತನಂ ನೋಡಿ, ಎಲೈ ದೂತನೆ! ಪೂರ್ವದಲ್ಲಿ ಅನೇಕ ದೈತ್ಯರಂ ಸಂಹರಿಸಿ ಪೋದೆ, ಈಗಿಲ್ಲಿಗೆ ಬಂದು ಎಲ್ಲಿಗೆ ಪೋಗುವಿ? ಎಲ್ಲಿ ಪೋದರು ನಿನ್ನನ್ನು ಸಂಹರಿಸುತಿರ್ಥೇನೆಂದು ಪೇಳಲಾಗಿ, ವೀರಬಾಹುವು ಈ ವಾಕ್ಯವಂ ಕೇಳಿ, ಎಲೈ ದೈತ್ಯನೆ! ನಾವೀರ್ವರು ಯುದ್ಧವಂ ಮಾಡುವುದರಲ್ಲಿ ಜಯಾಪಜಯಂಗಳನ್ನು ದೇವತೆಗಳು ತಿಳಿವರು; ವ್ಯರ್ಥ ವಾಕ್ಯಗಳಿಂದೇನು ಪ್ರಯೋಜನವು? ಯುದ್ಧವಂ

ನೋಡೆಂದು ನುಡಿಯೆ, ಭಾನುಕೋಪನಿದಂ ಕೇಳಿ ಬಹು ಕೋಪವುಳ್ಳವನಾಗಿ ಆತನ ಉರದಲ್ಲಿ ಸಹಸ್ರ ಬಾಣಗಳನ್ನು ಪ್ರಯೋಗಿಸಲಾಗಿ, ವೀರಬಾಹುವು ಅವುಗಳನ್ನು ಛೇದಿಸಿ ಮರಳಿ ಆತನಮೇಲೆ ಸಾವಿರ ಬಾಣಗಳನ್ನು ಬಿಟ್ಟು ಸೌರ ಮುಂತಾದ ಅಸ್ತ್ರಗಳಂ ಪ್ರಯೋಗಿಸಿದನು. ಅನಂತರದಲ್ಲಿ ದೈತ್ಯನು ಬತ್ತಳಿಕೆಯಂ ಖಂಡಿಸಲಾಗಿ ವೀರನು ಆತನಮೇಲೆ ಶಕ್ತಿಯಂಬಿಡೆ, ಆ ದೈತ್ಯನು ಕ್ಷಣ ಮಾತ್ರ ಮೂರ್ಛಿತನಾಗಿ ಬಿದ್ದು ಶೀಘ್ರದಿಂದೆದ್ದು ಆತನಮೇಲೆ ಸೌರ ಬ್ರಹ್ಮಾಸ್ತ್ರ ನಾರಾಯಣಾಸ್ತ್ರಗಳಂ ಬಿಡಲಾಗಿ, ವೀರನು ಅವೇ ಅಸ್ತ್ರಗಳಂ ಬಿಟ್ಟು ಖಂಡಿಸಿ ವ್ಯರ್ಥವಂ ಮಾಡಿದನು. ಅನಂತರದಲ್ಲಿ ಭಾನುಕೋಪನು ನಿರರ್ಥಕವಾದ ತನ್ನ ಅಸ್ತ್ರಗಳಂ ನೋಡಿ, ಪಾಶುಪತಾಸ್ತ್ರವಂ ಬಿಟ್ಟು ಅದನ್ನು ಹೀಗೆಯೆ ಆಗುವದೋ ಏನೋ ಎಂದು ಚಿಂತಿಸುತ್ತಿದ್ದನೆಂದು ಸೂತಮುನಿಯು ಶೌನಕಾದಿ ಋಷಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ಯುದ್ಧಕಾಂಡದಲ್ಲಿ ಇಪ್ಪತ್ತೊಂದನೆಯ ಅಧ್ಯಾಯವು ಸಮಾಪ್ತವಾದುದು.

ಇಪ್ಪತ್ತೆರಡನೆಯ ಅಧ್ಯಾಯವು.

ವೀರಬಾಹು ಭಾನುಕೋಪರ ಯುದ್ಧ.

ಎಲೈ, ಋಷಿಗಳಿರಾ! ಅನಂತರದಲ್ಲಿ ಭಾನುಕೋಪನು ಮಾಯೆಯಿಂದಾವೃತನಾಗಿ ನಾನಾದಿಕ್ಕುಗಳಲ್ಲಿ ನಿಂತು, ವೀರಬಾಹುವಿನಮೇಲೆ ಅನೇಕಾಸ್ತ್ರಗಳಂ ಸುರಿಸಲಾಗಿ, ವೀರಬಾಹುವು ಆ ಅಸ್ತ್ರಂಗಳಿಂ ನೊಂದು, ರಕ್ತದಲ್ಲಿ ಮುಳುಗಿದವನಂತೆ ನಿಂತು, ಹಾಹಾ!! ದುರಾತ್ಮನಾದ ಭಾನುಕೋಪನು ಯಾವ ಬಳಿಯಲ್ಲಿನಿಂತು ಶರಗಳನ್ನು ಪ್ರಯೋಗಿಸುವನೋ ಅದಂ ಕಾಣಲಿಲ್ಲವಲ್ಲ; ಶರಗಳೋ ಬಂದು ಶರೀರದಮೇಲೆ ಬೀಳುತಿವೆ, ಎಂದು ಚಿಂತಿಸಿ. ದಶದಿಕ್ಕುಗಳನ್ನು ನೋಡುತ್ತಿದ್ದನು. ಆಗ ಸಮಸ್ತ ದೇವತೆಗಳು ಭೂತಗಣಗಳು ಭಯಪಟ್ಟರು. ಬಳಿಕ ವೀರಬಾಹುವು ಕ್ಷಣಮಾತ್ರದಿಂ ದಾತನ ಮಾಯೆಯಂ ತಿಳಿದು ವಿಜ್ಞಾನಾಸ್ತ್ರವಂ ಬಿಟ್ಟು ಆ ಅಸ್ತ್ರಪ್ರಭಾವದಿಂದ ಆಕಾಶ ಪ್ರದೇಶದಲ್ಲಿ ರಥಾರೂಢನಾಗಿರುವ ದೈತ್ಯನಂ ಕಂಡು ತಾನು ರಥವೊಡನೆ ಅಲ್ಲಿಗೆ ಪೋಗಲು, ಅವರೀರ್ವರಿಗು ಮಹತ್ತಾದ ಯುದ್ಧಮುಂಟಾದುದು. ಆಗ ಅವರೀರ್ವರು ಬಹುಬಾಣವರ್ಷಂಗಳಂ ಸುರಿಸುತ್ತ ದಿಕ್ಕು ದಿಕ್ಕುಗಳಲ್ಲಿಯು ರಥಗಳನ್ನು ತಿರಿಗಿಸುತ್ತ, ಎಲೊ ಎಲೊ! ನನ್ನ ಮುಂದೆ ನೀನೆಲ್ಲಿ? ಬಾಣಗಳನ್ನು ಬಿಡು, ನಿನ್ನನ್ನು ಸಂಹರಿಸುತಿರ್ಪೆನೆಂದು ಪರಸ್ಪರವಾಗಿ ನಿರೂಪಿಸುತ್ತಲು; ಕೋಪಾತಿಶಯದಿಂದ ಪ್ರತಿಜ್ಞೆಯಂ ಮಾಡಿ ಅನ್ಯೋನ್ಯ ನಾಮಗಳನ್ನು ಉಚ್ಚರಿಸಿ ವೀರವಾದಂಗಳಂ

ನುಡಿಯುತ್ತಲು ಒಬ್ಬನನ್ನೊಬ್ಬನು ಧಿಕ್ಕರಿಸುತಲು ಉಭಯರ ಅಸ್ತ್ರಗಳನ್ನು ವ್ಯರ್ಥಗಳನ್ನಾಗಿ ಕಂಡು ಈರ್ವರು ನಗುತಲು ಸಂತೋಷದಿಂ ದೊಬ್ಬರನ್ನೊಬ್ಬರು ಕೊಂಡಾಡುತಲು, ಶಂಖಧ್ವನಿಗಳ ನ್ನೀರ್ವರು ಮಾಡುತಲು ಕಠಿಣವಾಕ್ಯಗಳಂ ಪೇಳುತಲು ಮಹಾ ಭಯಂಕರಮಾದ ಯುದ್ಧವಂ ಮಾಡಿದರು. ಆಗ ಅವರೀರ್ವರ ಬಾಣಗಳಿಂದ ಅನೇಕ ಭೂತಗಣಗಳು ಅಸುರರು ಸಹ ಮೃತರಾದರು. ಸೂರ್ಯನು ಮೊದಲಾದ ನವಗ್ರಹಗಳು ಆ ಯುದ್ಧವಂ ಕಂಡು ಭಯಪಟ್ಟರು.

ಮರಳಿ ಅವರೀರ್ವರು ವಾಯುವಿಗೆ ಸಮಾನವಾದ, ವೇಗವುಳ್ಳ ಯಮನಂತೆ ಸಂಹಾರಕವಾದ, ಪ್ರಳಯಾಗ್ನಿಯಂತೆ ದಾಹಕವಾದ, ಸೂರ್ಯ ಸದೃಶ ಕಾಂತಿಯುಳ್ಳ ಸಿಡಿಲಿನಂತೆ ಭಯಂಕರವಾದ, ತ್ರಿಪುರಾರಿಯ ಶರದಂತೆ ಭೀತಿಯಂ ಮಾಡುತಲಿರುವ ನಾನಾವಿಧವಾದ ಅಸ್ತ್ರಗಳನ್ನು ಪ್ರಯೋಗಿಸಲಾಗಿ, ಗಿರಿಗಳು ಆ ಶರಗಳಿಂದ ಚೂರ್ಣವಾದವು, ಮೇಘಂಗಳು ಖಂಡಿಸಲ್ಪಟ್ಟವು, ಚಂದ್ರಸೂರ್ಯರು ನಯನಗೋಚರ ವಿಲ್ಲದೆ ಪೋದರು, ಬ್ರಹ್ಮಾಂಡ ಆಕಾಶ ಪಾತಾಳ ಸಮುದ್ರಗಳು ತುಂಬಲ್ಪಟ್ಟವು. ದಿಗ್ಗಜಂಗಳು ಮೇಘಂಗಳು ಭೂತಂಗಳು ಆ ಬಾಣಾಗ್ನಿಯಿಂದ ಅಲ್ಲಲ್ಲಿಯೆ ದಹಿಸಲ್ಪಟ್ಟು ಬೆಂದು ಸಿಡಿದವು, ಸಾಗರಂಗಳು ಬತ್ತಿದವು ತಾರಕೆಗಳು ದಗ್ಧವಾದವು, ಧೂಮಸಮೂಹದಿಂ ಬ್ರಹ್ಮಾಂಡವು ಪೂರಿತಮಾದುದು. ಆಗ ದೇವತೆಗಳು ಮುನಿಗಳು ಈ ಯುದ್ಧವಂ ಕಂಡು, ಹಾಹಾ!! ಇವರೀರ್ವರ ಪರಾಕ್ರಮವು ಶೌರ್ಯವು ಗಾಂಭೀರ್ಯವು ಎಂತಿರುವವೋ ಎಂದು ಆಶ್ಚರ್ಯವಂತರಾದರು.

ಭಾನುಕೋಪನ ವಧೆ.

ಬಳಿಕ ಬಾನುಕೋಪನು ಶತಸಹಸ್ರ ಶರಗಳಿಂದ ವೀರಬಾಹುವಿನ ರಥವಂ ಛೇದಿಸಿ ಅಟ್ಟಹಾಸವಂ ಮಾಡಲಾಗಿ, ವೀರಬಾಹುವು ಆತನ ರಥವಂ ಖಂಡಿಸಿ ಭೂತಳದಲ್ಲಿ ಕೆಡಹೆ, ಭಾನುಕೋಪನು ವಿಂಶತಿ ಬಾಣಗಳಂ ಬಿಟ್ಟನು. ವೀರಬಾಹುವು ಚತುರ್ದಶ ಬಾಣಗಳಿಂದ ಅತನ ಮಕುಟವಂ ಕೆಡಹಲಾಗಿ, ದೈತ್ಯನು ಚತುರ್ದಶ ಶರಗಳಿಂದ ಈತನ ಕವಚಮಂ ಖಂಡಿಸಿದನು. ಬಳಿಕ ವೀರನು ಸಪ್ತಬಾಣಗಳಿಂ ದಾತನ ಧನುವಂ ಛೇದಿಸೆ, ದೈತ್ಯನು ಬ್ರಾಹ್ಮೀಯೆಂಬ ಶಕ್ತಿಯಂ ಬಿಡಲಾಗಿ, ಅದು ವೀರಬಾಹುವಿನಿಂದ ಬಿಡಲ್ಪಟ್ಟ ಕೋಟಿ ಶರಗಳಂ ಭಕ್ಷಿಸಿ ಸಮೀಪಕ್ಕೆ ಬರುತಿರಲು, ವೀರಬಾಹು ವದಂ ಕಂಡು ಹೃದಯದಲ್ಲಿ ಗುಹನಂ ಧ್ಯಾನಿಸಿ, ವರೆಯಲ್ಲಿರ್ದ ಕತ್ತಿಯಂ ತೆಗೆದು ಅದಂ ಖಂಡಿಸಿ ಮರಳಿ ಆ ಖಡ್ಗವನ್ನು ವರೆಯಲ್ಲಿರಿಸಿದನು.

ಅನಂತರದಲ್ಲಿ ಭಾನುಕೋಪನು ಖಡ್ಗವಂ ಪಿಡಿದು ಯುದ್ಧವಂ ಮಾಡುತ ಭುಜವಂ ಕಡಿಯೆ, ವೀರನವಂ ಖಡ್ಗದಿಂತಱಿದು ಆತನ ದಕ್ಷಿಣ ಹಸ್ತವನ್ನು ಛೇದಿಸಿದನು. ದೈತ್ಯನು ವಾಮಹಸ್ತದಿಂ ಖಡ್ಗವಂಧರಿಸಿ ಆತನಂ ಛೇದಿಸಲು ಬರಲಾಗಿ, ವೀರಬಾಹುವು ಆತನ ವಾಮಹಸ್ತವನ್ನು ಛೇದಿಸಿದನು. ಮರಳಿ ದೈತ್ಯನು ಮಾಯಾಸ್ತ್ರವನ್ನು ಬಿಡಲು ಚಿಂತಿಸಲಾಗಿ, ವೀರಬಾಹುವು ತತ್ಕ್ಷಣ ದಲ್ಲಿಯೆ ಖಡ್ಗದಿಂ ದಾತನ ಶಿರವಂಖಂಡಿಸಿ ಕೆಳಕ್ಕೆ ಕೆಡಹಿದನು, ಆಗ ದೇವತೆ ಗಳು ಕಾಲವಶವನ್ನೈದಿದ ಆ ದೈತ್ಯನಂ ಕಂಡು ಪುಷ್ಪವೃಷ್ಟಿಯಂ ಕರೆದರು. ಭೂತಗಣಗಳು ಘರ್ಜಿಸಿದವು. ಸೂರ್ಯನು ಸಂತೋಷವನ್ನೈದಿದನು.

ಅನಂತರದಲ್ಲಿ ವೀರಬಾಹುವು ಆಕಾಶವಂ ಬಿಟ್ಟು ಭೂತಳಕ್ಕೆ ಬಂದು ತನ್ನ ವೀರರಿಂದಲು ಭೂತಗಣಗಳಿಂದಲು ಆವೃತನಾಗಿ, ಹಾ! ಹಾ! ನಮ್ಮ ಪ್ರತಿಜ್ಞೆಯು ಈಡೇರಿತು. ಪೂರ್ವದಿವಸದಿಂದಿಲ್ಲಿಯು ಕುಮಾರಸ್ವಾಮಿಗೆ ನಮಸ್ಕಾರವಮ್ಮಾಡಲಿಲ್ಲವಲ್ಲ ಎಂದು ಸರ್ವರಂ ನೋಡಿ ನಿರೂಪಿಸಿ, ಮಹತ್ತಾದ ವಾದ್ಯಂಗಳಂ ಘೋಷಿಸುತ್ತ ಹೇಮಕೂಟಕ್ಕೆ ಬಂದು, ರಾಜಗೃಹದ್ವಾರದ ಮುಂದೆ ರಥದಿಂದಿಳಿದು ಅಂತಃಪುರಕ್ಕೆ ಪೋಗಿ, ಮಂಗಳ ವಿಗ್ರಹನಾದ ಕುಮಾರ ಸ್ವಾಮಿಯಂ ಕಂಡು ವಿನಯದಿಂ ನಮಸ್ಕಾರವಮ್ಮಾಡಿದನು. ಬಳಿಕ ಪರಮೇ ಶ್ವರನಾದ ಆ ಕುಮಾರಸ್ವಾಮಿಯು ಆತನನ್ನು ತಾನು ಹಸ್ತಗಳಿಂದೆತ್ತಿ, ಎಲೆ ಮಹಾ ಬಲನಾದ ವೀರಬಾಹುವೆ! ಅತಿ ಪ್ರಯಾಸದಿಂದಾಪಾಪಿಯಂ ಸಂಹ ರಿಸಿ ಅತ್ಯಂತ ಬಳಲಿದಿ, ನನಗೆ ಮಹಾ ಸಂತೋಷಮುಂಟಾದುದು. ನಿನಗೇನು ಬೇಕಾಗಿರುವದೋ ಅದಂ ಕೇಳಿಕೋ ಎಂದು ನಿರೂಪಿಸಲಾಗಿ, ವೀರಬಾಹು ಆ ವಾಕ್ಯವಂ ಕೇಳಿ, ಅಂಜಲಿಬಂಧವಮ್ಮಾಡಿ, ಎಲೈ ಸ್ವಾಮಿಯೆ! ನಿಮ್ಮಾಜ್ಞೆ ಯಿಂದಾತನಂ ಸಂಹರಿಸಿದೆನು. ನೀನು ಪ್ರಸನ್ನನಾದವನಾದೊಡೆ ನನಗೆ ನಿಮ್ಮಲ್ಲಿ ಭಕ್ತಿಯುಂಟಾಗಲಿ. ಬ್ರಹ್ಮ ವಿಷ್ಣು ಮೊದಲಾದ ದೇವತೆಗಳ ಪದವು ನನಗೆ ಬೇಡ. ನಿಮ್ಮ ಪಾದಾರವಿಂದದಲ್ಲಿಯೇ ಭಕ್ತಿಯುಂಟಾಗಲೆಂದು ಕೇಳಿಕೊಂಡೆನು.

ವೀರಬಾಹುವಿಗೆ ಕುಮಾರಸ್ವಾಮಿಯು ವರಪ್ರದಾನ-ಫಲಸ್ತುತಿ.

ಈ ಪ್ರಕಾರವಾಗಿ ಕುಮಾರಸ್ವಾಮಿಯು ವೀರಬಾಹುವಿನಿಂದ ಪ್ರಾರ್ಥಿಸ ಲ್ಪಟ್ಟವನಾಗಿ ಆತನಂ ಕುರಿತು, ಎಲೆ ವೀರಬಾಹುವೆ! ನಮ್ಮ ಭಕ್ತಿಯು ಪುಣ್ಯಾ ನಂತರಿಗೇನೆ ಉಂಟಾಗುವದು. ನನ್ನ ಕೃಪಾವಶದಿಂ ನಿನಗುಂಟಾಗಲೆಂದು ಪೇಳಿ ಸಂತೋಷಗೊಳಿಸಿ, ಸಮಸ್ತರನ್ನು ಅವರವರ ಮಂದಿರಂಗಳಿಗೆ ಕಳುಹ ಲಾಗಿ, ಸಮಸ್ತರಾದ ಗಣಾಧೀಶ್ವರರು ತಮ್ಮ ತಮ್ಮ ಸ್ಥಾನವನ್ನೈದಿದರು, ಎಲೈ

ಮುನಿಗಳಿರಾ! ಆವನಾಸೊಬ್ಬ ವೀರಬಾಹುವಿನಿಂದ ಮಾಡಲ್ಪಟ್ಟ ಭಾನು ಕೋಪನ ವಧೆಯನ್ನು ಭಕ್ತಿವಿಶ್ವಾಸಯುಕ್ತನಾಗಿ ನಿತ್ಯವು ಪಠಿಸುವನೋ ಮತ್ತೆ ಆವ ಸಚ್ಛ್ರೇಷ್ಠರು ಕೇಳುತ್ತಲಿರುವರೋ, ಅವರಿಗೆ ಶತ್ರುಜಯವು ಸರ್ವಾ ಭೀಷ್ಟವು ಸಹ ಉಂಟಾಗ್ಸವವು. ಪೂರ್ವದಲ್ಲಿ ಪಾಂಡವರು ಈ ಕಥೆಯಂ ಕೇಳಿ, ದುರ್ಯೋಧನ ಮೊದಲಾದ ಶತ್ರುಗಳಂ ಜಯಿಸಿದರು. ಹಾಗೆಯೆ ಪರಶು ರಾಮನು ಕಾರ್ತವೀರ್ಯಾರ್ಜುನನು ಮೊದಲಾದ ಕ್ಷತ್ರಿಯರನ್ನು ಕೊಡಲಿಯಿಂದ ಜಯಿಸಿದನು. ಹನುಮಂತನು ಋಷಿಗಳಿಂದೀಕಥೆಯಂ ಕೇಳಿ ಆರಿಂದಲು ಜಯಿಸಲಸಾಧ್ಯರಾದ ಶತ್ರುಗಳನ್ನು ಜಯಿಸಿದನೆಂದು ಸೂತಂ ಶೌನಕಾದಿ ಗಳಿಗೆ ಪೇಳಿದನೆಂಬಲ್ಲಿಗೆ, ಯುದ್ಧಕಾಂಡದಲ್ಲಿ ಇಪ್ಪತ್ತೆರಡನೆಯ ಅಧ್ಯಾಯವು ಸಮಾಪ್ತಮಾದುದು.

ಇಪ್ಪತ್ಮೂರನೆಯ ಅಧ್ಯಾಯವು.

ಶೂರಪದ್ಮಾಸುರನ ಪುತ್ರಶೋಕ.

ಕೇಳಿರೈ ಋಷಿಗಳಿರಾ! ಅನಂತರದಲ್ಲಿ ಶೂರಪದ್ಮನು ದೂತಮುಖದಿಂದ ಭಾನುಕೋಪನ ಮರಣವಂ ಕೇಳಿ, ಅತ್ಯಂತ ದುಃಖಿತನಾಗಿ ಭೂಮಿಯಲ್ಲಿ ಬಿದ್ದು ಮೂರ್ಛೆಯನ್ನೈದಿ, ಆ ಮೂರ್ಛೆಯಂ ತಿಳಿದ ಬಳಿಕ, ಹಾಪುತ್ರ! ಎಂದು ಕೂಗುತ್ತ ಬಹು ಶೋಕವನ್ಮಾಡುತ ಈ ಪರಿ ಪ್ರಲಾಪಿಸಿದನು. ಹಾಹಾ!! ಮಹಾ ಬಲವಂತನಾದ ಭಾನುವನ್ನು ಜಯಿಸಿದಂಥ ಎಲೆ ಭಾನುಕೋಪನೆ! ನೀನು ಮೃತನಾದ ಬಳಿಕ ದೇವತೆಗಳಿಗೆ ಸುಖಮುಂಟಾಗದಿದು? ಹರಿಯು ಕ್ಷೀರಸಮುದ್ರದಲ್ಲಿ ಮಹಾ ಲಕ್ಷ್ಮಿಯಿಂದಲು ಭೂದೇವಿಯಿಂದಲು ಯುಕ್ತ ನಾಗಿ ಸುಖಶಯನವನ್ಮಾಡುವನು. ಇಂದ್ರನು ಶಚೀದೇವಿಯೊಡನೆ ಸ್ವರ್ಗ ವನ್ನೈದುವನು. ದೇವತೆಗಳು ತಮ್ಮ ತಮ್ಮ ಸ್ಥಾನಂಗಳಲ್ಲಿ ಸುಖದಿಂದಿರು ವರು. ಎಂದು ಈ ಪ್ರಕಾರವಾಗಿ ಹಲುಬುತ್ತಿರಲಾಗಿ, ಕೆಲಂಬರು ಅಸುರರು ಭಾನುಕೋಪನ ಶಿರಸ್ಸು ಮೊದಲಾದ ಅವಯವಗಳಂ ತಂದು ಪದ್ಮನ ಮುಂದಿರಿಸಿದರು.

ಆಗ ಶೂರನದಂ ಕಂಡು ಬಹು ಶೋಕವನ್ಮಾಡುತಿರಲಾಗಿ, ಆ ಸಮಯ ದಲ್ಲಿ ಪದ್ಮಕೋಮಲೆ ಮೊದಲಾದ ಅನೇಕ ಸ್ತ್ರೀಯರು ಬಂದು ಆ ಪುತ್ರನ ಅವ ಯವಗಳಂ ನೋಡಿ ಮುಕ್ತಕೇಶಿನಿಯರಾಗಿ ಭೂಮಿಯಲ್ಲಿ ಬಿದ್ದಿರೆ, ಬಹು ಪ್ರಕಾರದಲ್ಲಿ ಹಲುಬಿ, ಆ ಮಗನ ಹಸ್ತವಂ ಕಣ್ಣುಗಳಲ್ಲಿ ವೊತ್ತಿಕೊಂಡು,

ಎಲೆ ಪುತ್ರನೆ! ಲಕ್ಷ್ಮೀದೇವಿಯ ಕರದಲ್ಲಿರ್ದ ಅಮೃತ ಕಲಶವನ್ನು ನನಗೆ ತಂದಿತ್ತೆಯಲ್ಲವೆ? ಆವುದಾನೊಂದು ಕಾರಣದಿಂದ ದೇವತೆಗಳು ನನಗೆ ದುಃಖವನ್ನುಂಟುಮಾಡಿದರೋ, ಅದುಕಾರಣದಿಂದವರ ಸ್ತ್ರೀಯರುಗಳಿಗೆ ದುಃಖ ಉಂಟಾಗಲೆಂದು ಹಲುಬುತ್ತಿರೆ ಸಮಸ್ತರು ರೋದನವಮ್ಮಾಡಿದರು.

ಬಳಿಕ ಶೂರನೇಳ್ದು ಕೋಪದಿಂ ಜ್ವಲಿಸಿ ವೈರಿಗಳಂ ಸಂಹರಿಸಿ ಅವರ ರಕ್ತದಿಂದ ವೀರಯಾಗವಮ್ಮಾಡಿ, ಮೃತನಾದ ಪುತ್ರನಂ ಜೀವಂತನಂ ಮಾಡುವೆನೆಂದು ಪೇಳಿ, ಕೆಲಂಬರಸುರರಂ ವಶದಲ್ಲಿ ಅಂಗರಕ್ಷೆಗಿರಿಸಿಕೊಂಡು, ಪದ್ಮಕೋಮಲೆ ಮೊದಲಾದ ಸ್ತ್ರೀಯರಂ ಅಂತಃಪುರಕ್ಕೆ ಕಳುಹಿಸಿ, ಕೆಲವರಾದ ದೂತರಂ ಸಿಂಹಮುಖನ ಸಮೀಪಕ್ಕೆ ಕಳುಹಲಾಗಿ, ಅವರುಗಳು ಶೀಘ್ರದಿಂ ಪೋಗಿ ಆ ಸಿಂಹಮುಖಂಗೆ ಭಾನುಕೋಪನ ಮರಣವಾರ್ತೆಯಂ ಪೇಳಿದರು. ಆಗ ಆ ದೈತ್ಯನದಂ ಕೇಳಿ, ಬಹು ದುಃಖಿಸಿ ಕೋಪದಿಂ ಜ್ವಲಿಸಿ ದುಃಖದಿಂ ತಲೆವಾಗಿ ಶೀಘ್ರದಿಂದೆದ್ದು ರಥವನ್ನೇರಿ ಚತುರಂಗಬಲದೊಡನೆ ಗಗನ ಮಾರ್ಗದಿಂ ವೀರಮಾಹೇಂದ್ರ ಪುರಿಗೆ ಬಂದು ರಥದಿಂ ದಿಳಿದು ಜ್ಯೇಷ್ಠನ ಮಂದಿರವನ್ನು ಪ್ರವೇಶಿಸಿ, ಅಲ್ಲಿ ತನ್ನ ಅಗ್ರಜನಂ ಕಂಡು ನಮಸ್ಕಾರವಮ್ಮಾಡಲಾಗಿ, ಶೂರನು ಆ ಅನುಜನಂ ಬಾಹುಗಳಿಂದಪ್ಪಿ, ಎಲೈ ತಮ್ಮನೆ! ದುಃಖವಂ ಮಾಡುವವನಂತಿದ್ದಿ, ದುಃಖಿಸಬೇಡ, ಭಾನುಕೋಪನೇ ಮುಂತಾದವರ ವೃತ್ತಾಂತವನ್ನು ಕೇಳಿದೆಯ? ಅದುಕಾರಣದಿಂ ನೀನು ರಣರಂಗಕ್ಕೆ ಪೋಗಿ ಶತ್ರುಗಳಂ ಸಂಹರಿಸಿ ಮರಳಿ ನನ್ನ ಸಮೀಪಕ್ಕೆ ಬರುವನಾಗೆಂದು ನಿರೂಪಿಸಿದನು.

ಸಿಂವಕ್ತ್ರ ಯುದ್ಧಪ್ರಯಾಣ.

ಆ ಬಳಿಕ ಸಿಂಹವಕ್ತ್ರನು ಆ ವಾಕ್ಯವಂ ಕೇಳಿ, ಎಲೈ ಅಸುರನಾಯಕನೆ! ನನ್ನ ವಾಕ್ಯವನ್ನು ಅನಾದರಣೆಯಮ್ಮಾಡಿ ಸರ್ವರಂ ಸಂಹರಿಸಿ ದುಃಖವನ್ನನುಭವಿಸಿದೆ. ಆರಿಂದಲುಂ ವಿಧಿಯಂ ತಿರಸ್ಕರಿಸಲಸಾಧ್ಯವು. ನನ್ನ ವಾಕ್ಯವೋ ಅತ್ಯಂತವಾಗಿ ದಹಿಸುವ ವಿಷವಾದುದು. ಈಗ ಪೇಳುವದರಿಂದೇನು? ನಾನು ಸಮಸ್ತ ಶತ್ರುಗಳಂ ಸಂಹರಿಸಿ ಬಂದರೆ ನಿನ್ನ ಮುಖವನ್ನೋಡುವೆನು, ಎಂದು ನುಡಿಯಲಾಗಿ, ಶೂರನಾ ವಚನಮಂ ಕೇಳಿ ಹಾಗೆಯೇ ಆಗಲೆಂದು ಅನುಜನಂ ಯುದ್ಧಕ್ಕೆ ಕಳುಹಿಸಿದನು. ಅನಂತರದಲ್ಲಿ ಸಿಂಹಮುಖನು ತನ್ನ ಮಂದಿರಕ್ಕೆ ಪೋಗಿ ಸಪ್ತಸಾಗರ ಪರಿಪೂರ್ಣವಾಗುವಷ್ಟು ಮಾಂಸ ರಕ್ತ ಮಧು ಕ್ಷೀರ ದಧಿ ಸುರೆಯಂ ಪಾನವಮ್ಮಾಡಿ, ಭಕ್ಷ್ಯ ಮುಂತಾದವಂ ಭಕ್ಷಿಸಿ ಪರಿಮಳ ದ್ರವ್ಯವಂ ಶರೀರದಲ್ಲಿ ಲೇಪಿಸಿ, ನೂತನವಾದ ವಸ್ತ್ರಂಗಳನ್ನು ಭೂಷಣಂಗಳನ್ನು ಧರಿಸಿ

ಕೊಂಡು, ಶಿವನಿಂದ ಕೊಡಲ್ಪಟ್ಟ ದಂಡ ಚಕ್ರ ಕುಲಿಶ ಶೂಲಗಳನ್ನು ಸಮಸ್ತ ದೇವತೆಗಳ ಅಸ್ತ್ರಗಳನ್ನು ಮಾಯಾಪಾಶ ಮುಂತಾದ ಆಯುಧಗಳನ್ನು ತೆಗದು ಕೊಂಡು, ದಶಲಕ್ಷ ಕುದುರೆಗಳಿಂದ ಕಟ್ಟಲ್ಪಟ್ಟ ರಥವನ್ನೇರಿ, ಲಕ್ಷವಾಹಿನಿ ಚತುರಂಗ ಬಲಸಹಿತ ವಾದ್ಯಂಗಳೊಡನೆ ಛತ್ರಾದಿಗಳಂ ಪಿಡಿದು ಸಮಸ್ತ ದೈತ್ಯಸೇನೆಗಳಿಂದಾವೃತನಾಗಿ ಪೊರಮಡೆ, ಅನೇಕ ದುರ್ನಿಮಿತ್ತಂಗಳಾದವು. ಆಗ ಬ್ರಹ್ಮ ವಿಷ್ಣು ಮುಂತಾದ ದೇವತೆಗಳ್ಬೆದರಿ ಕುಮಾರಸ್ವಾಮಿಯ ಬಳಿಗೆ ಪೋಗಿ ನಮಸ್ಕಾರವಮ್ಮಾಡಿಂತೆಂದರು.

ಸಿಂಹವಕ್ತ್ರನ ಬಲನಿರೂಪಣೆ.

ದಯಾಸಿಂಧುವಾದ ಎಲೈ ದೇವದೇವನೆ! ಶೂರಂಗೆ ಅನುಜನಾದ ಸಿಂಹ ಮುಖನೆಂಬ ದೈತ್ಯನಿರುವನು, ಆ ಅಸುರನು ಸಹಸ್ರ ಶಿರಸ್ಸುಗಳಿಂದ ದ್ವಿಸಹಸ್ರ ಕರಗಳಿಂದಲು ಸಹಸ್ರಯೋಜನ ದಗಲವುಳ್ಳ ಉರಸ್ಸಿನಿಂದಲು ಅತಿ ಭಯಂಕರ ನಾಗಿದಾನೆ. ಸಹಸ್ರ ಯಮರನ್ನು ಶಿಕ್ಷಿಸುವಂಥಾವನು. ಈತನು ಒಂದಾ ನೊಂದು ಸಮಯದಲ್ಲಿ ಸಪ್ತಕುಲ ಪರ್ವತಂಗಳಿಂ ಅಷ್ಟದಿಗ್ಗಜಂಗಳಿಂದಲುಂ ಅನಂತಾದ್ಯಷ್ಟನಾಗಂಗಳಿಂದಲುಂ ಕೂರ್ಮನಿಂದಲುಂ ಧರಿಸಲ್ಪಟ್ಟ ಭೂಮಿ ಯನ್ನು ತಾನೋರ್ವನೇ ಪೊತ್ತನು. ಮತ್ತೊಂದು ಕಾಲದಲ್ಲಿ ಗದೆಯಾಗ ಬೇಕೆಂದಿಚ್ಛೈಸಿ, ಮೇರುಗಿರಿಯಂ ಕಿತ್ತು ಬ್ರಹ್ಮಾಂಡದಲ್ಲಿ ತಿರುಹಿನೋಡಿ ಭಾರವಿಲ್ಲವೆಂದು ಪೂರ್ವಸ್ಥಾನದಲ್ಲಿಯೆ ಇರಿಸಿದನು. ಮತ್ತೆ ಮಾಯಾರೂಪ ವಾದ ಪಾರ್ಶ್ವದ್ವಯವುಳ್ಳ ಶಂಭುವಿನಿಂದ ಕೊಡಲ್ಪಟ್ಟ, ತ್ರಿಶೂಲವಂ ಧರಿಸಿ ಪಾನೆ. ಈತನಗ್ರಜನು ವಿಷ್ಣುವನ್ನು ಏಕಾದಶ ರುದ್ರರನ್ನು ಈಶಾನನನ್ನು ಬಾಧಿಸದೆ ಮಾಯಾದೇವಿಯಲ್ಲಿ ನಡಿಸಿಕೊಂಡು ಬರುತಿದಾನೆ. ಈ ಮಹಾ ಪಾಪಿಯು ನಮ್ಮಗಳನ್ನು ಬಾಧಿಸುತಲಿದಾನೆ ಆದ್ದರಿಂದ ಮಹಾ ಘೋರನಾದಿ ವನಂ ಸಂಹರಿಸಿ ರಕ್ಷಿಸಬೇಕೆಂದು ಬಿನ್ನೈಸಿದರು.

ರಕ್ಕಸರಿಗೂ ಭೂತಗಣಗಳಿಗೂ ಯುದ್ಧ.

ಈಪ್ರಕಾರವಾಗಿ ಪ್ರಾರ್ಥಿಸಿದ ಆ ದೇವತೆಗಳ ವಾಕ್ಯವಂ ಕೇಳಿ, ಕುಮಾರ ಸ್ವಾಮಿಯು ಹಾಗೇ ಆಗಲೆಂದು ನುಡಿದು, ತನ್ನ ಪಾರ್ಶ್ವದಲ್ಲಿರುವ ವಾಯುವಿ ನಂ ಕರೆದು ಶೀಘ್ರದಿಂ ರಥವಂಕೊಂಡುಬಾರೆಂದು ಪೇಳಲಾಗಿ ವೀರಬಾಹುವು ಕುಮಾರಸ್ವಾಮಿಯ ವಚನಮಂ ಕೇಳಿ, ಸಚ್ಚಿದಾನಂದ ಸ್ವರೂಪನಾದ ಆ ಸ್ವಾಮಿಗೆ ನಮಸ್ಕಾರವನ್ನೆಸಗಿ, ಎಲೈ ಪ್ರಭುವೆ! ರಣಕ್ಕೆ ಬಂದ ಅಸುರನಂ ನಾನು ಸಂಹರಿಸುತ್ತೇನೆ. ನಿನಗನುಜನಾದೆನಗೆ ಅಪ್ಪಣೆಯಂ ಪಾಲಿಸೆಂದು ಬಿನ್ನಪಂ ಗೆಯ್ಯೆ, ಕುಮಾರಸ್ವಾಮಿಯು ಸ್ಮಿತವದನನಾಗಿ ಆತನ ಕರ್ಣದಲ್ಲಿ ಒಂದು

ವಾಕ್ಯವಂ ನಿರೂಪಿಸಿ ಆತನಂ ಕಳುಹಿಸಿದನು. ಬಳಿಕ ವೀರಬಾಹುವು ಎಂಟು ಲಕ್ಷ ವೀರರಿಂದಲುಂ ಸೇನಾಧಿಪತಿಗಳಿಂದಲುಂ ಚತುರಂಗ ಬಲಗಳಿಂದಲು ಒಡಗೂಡಿ ತನ್ನ ಗೃಹಕ್ಕೆ ಪೋಗಿ, ದಿವ್ಯಾಂಬರಗಳನ್ನುಟ್ಟು ಪುಷ್ಪಗಳಿಂದಲಂಕೃತನಾಗಿ, ನಾನಾವಿಧವಾದ ಅಸ್ತ್ರಗಳಂ ಧರಿಸಿ, ರಥವನೇರಿ ರಥಾರೂಢರಾದ ವೀರರೊಡನೆ ಸಹಸ್ರವಾಹಿನಿಭೂತಗಣಗಳ್ವೆರಸಿ ಯುದ್ಧಕ್ಕೆ ಪೊರಮಡೆ, ಧೂಳು ಸೂರ್ಯಮಂಡಲವನ್ನಾವರಿಸಿತು, ಸಮಸ್ತ ವಾದ್ಯಂಗಳು ಮೊಳಗಿದವು. ಮೇಘಮಂಡಲಕ್ಕೆ ತಾಕಲ್ಪಡುವ ಪತಾಕಧ್ವಜಗಳಂ ಪಿಡಿಸಿಕೊಂಡು ಯುದ್ಧಮಂಡಲಕ್ಕೆ ಪೋದನು. ಆ ಸಮಯದಲ್ಲಿ ರಥ ಗಜ ತುರಗ ಪದಾತಿಗಳ ಕೋಲಾಹಲಧ್ವನಿಗಳುಳ್ಳ ಪರ್ವತ ವೃಕ್ಷ ಪಾಷಾಣ ತ್ರಿಶೂಲಾಸ್ತ್ರಂಗಳಂ ಧರಿಸಿದ ಉಭಯ ಸೇನೆಗಳಿಗು ಮಹಾ ಯುದ್ಧ ಮುಂಟಾದುದು. ಆಗ ದೈತ್ಯರೆಲ್ಲರು ಕೂಡಿ ಬಾಣ ತೋಮರ ತ್ರಿಶೂಲ ಮುಂತಾದ ಆಯುಧಗಳಿಂ ಭೂತಗಣಂಗಳ ವೃಕ್ಷಾದಿಗಳಂ ಛೇದಿಸಿ ಅವರನ್ನು ಓಡಿಸಲಾಗಿ, ಸಿಂಹನೆಂಬ ಗಣಾಧೀಶ್ವರನು ಶೀಘ್ರದಿಂ ಬಂದು ದಂಡದಿಂದಸುರರಂ ಬಡಿದು ಮೃಗಾಧಿಪನು ಗಜಗಳಂ ಸಂಹರಿಸುವಂತೆ ಅನೇಕ ಅಸುರರಂ ಕೊಂದನು. ಬಳಿಕ ದಶಮುಖನು ಅನೇಕ ಬಾಣಗಳಂ ವರ್ಷಿಸಲಾಗಿ, ಸಿಂಹನದಂ ದಂಡದಿಂ ಮುರಿದು ಲಂಘಿಸಿ, ಆತನ ಉರವಂ ತಾಡಿಸೆ, ಆತನ ಕವಚವು ಛಿನ್ನವಾಗಿ ಒಡೆದುದು. ಬಳಿಕ ದಾನವನು ಕೋಪದಿಂದಾತನಮೇಲೆ ದಂಡದಿಂದಿಡೆ ಆತನಾದಂಡವಂ ದಂಡದಿಂ ಮುರಿದನು. ಆಗ ದೈತ್ಯನು ಶಕ್ತಿಯುಂ ಬಿಡಲಾಗಿ ಸಿಂಹನೆಂಬ ಗಣಾಧೀಶ್ವರನು ಕೋಪಿಸಿಕೊಂಡು ಚಕ್ರದಿಂದತಿವೇಗದಿಂ ಬರುತಿರುವ ಆ ಶಕ್ತಿಯಂ ಛೇದಿಸಿದನೆಂದು

ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ ಯುದ್ಧಕಾಂಡದಲ್ಲಿ ಇಪ್ಪತ್ಮೂರನೆಯ ಅಧ್ಯಾಯವು ಸಮಾಪ್ತವಾದುದು.

ಇಪ್ಪತ್ನಾಲ್ಕನೆಯ ಅಧ್ಯಾಯವು.

ದಶಮುಖ ವಧೆ.

ಎಲೈ ಋಷಿಗಳಿರಾ! ಅನಂತರದಲ್ಲಿ ಪರಮ ಪಾಪಿಯಾದ ದಶಮುಖನೆಂಬ ದೈತ್ಯನು ಛೇದಿಸಲ್ಪಟ್ಟ ತನ್ನ ಶಕ್ತಿಯಂ ನೋಡಿ, ಅತಿ ಕೋಪದಿಂ ಜ್ವಲಿಸಿ ಭಯಂಕರವಾದ ದಂಡವಂ ತೆಗದು ಯಮನೋಪಾದಿಯಲ್ಲಿ ವೀರ ಶ್ರೇಷ್ಠನಾದ ಸಿಂಹನಮೇಲೆ ಗದೆಯುಂ ಪ್ರಯೋಗಿಸಲಾಗಿ, ಆತನು ಗದೆಯ ಘಾತದಿಂ ನೊಂದು ರಕ್ತದಿಂದಾವೃತನಾಗಿ ಕ್ಷಣಮಾತ್ರ ನಿಂತು, ವೇಗದಿಂ ಬಂದು ಆ

ದೈತ್ಯನಂ ಮುಷ್ಟಿಯಿಂ ದುರವಂ ಬಡಿಯೆ, ಆ ದಶಮುಖನು ತನ್ನ ಮುಖಂಗಳಿಂದ ರಕ್ತವಂ ಕಾರಿ ಪರ್ವತದಂತೆ ಭೂಮಿಯಲ್ಲಿ ಬಿದ್ದು ಪ್ರಾಣವಂ ಬಿಟ್ಟನು.

ದುರ್ಮುಖದೈತ್ಯನ ಅಪಜಯು.

ಬಳಿಕ ಸಮಸ್ತ ದೈತ್ಯರು ಏಕವಾಗಿ ಸೇರಿ ಯುದ್ಧವಂ ಮಾಡಲಾಗಿ, ಲಕ್ಷ ವೀರರಲ್ಲಿ ಮಹಾ ಬಲವಂತನಾದ ಕನಕ ಕಾಂತಿಯುಳ್ಳ ಕನಕನೆಂಬ ಗಣಾಧೀಶ್ವರನು ಶೀಘ್ರದಿಂ ಬಂದು ಬಹು ಬಾಣಗಳಂ ಬಿಟ್ಟು ಸರ್ವ ದೈತ್ಯರನ್ನು ಪಲಾಯನವನ್ನೈದಿಸೆ, ದುರ್ಮುಖನೆಂಬ ದೈತ್ಯನು ಸಮಸ್ತರಾದ ಅಸುರರಂ ಚಾರರಿಂ ಕರೆಯಿಸಿ ವೇಗದಿಂ ಬಂದು ಭಯಂಕರವಾದ ಬಾಣಗಳಂ ಬಿಟ್ಟನು. ಆಗ ಭೂತಗಣಂಗಳೊಂದಾಗಿ ಕೂಡಿ ಪರ್ವತಾದಿಗಳಿಂ ತಾಡಿಸೆ, ದುರ್ಮುಖನು ಮಹಾಕೋಪವನ್ನೈದಿ ರಣದಲ್ಲಿ ವಂಚಿಸಿ ಮಾಯೆಯಿಂದನೇಕ ರೂಪವಂ ಧರಿಸಿ, ಭೂತಗಣಳೊಡನೆ ಯುದ್ಧವಂ ಮಾಡುತ್ತಿದ್ದನು. ಆ ಸಮಯದಲ್ಲಿ ವೀರಮಾರ್ತಾಂಡನು ಆತನ ಮಾಯೆಯಂ ತಿಳಿದು ಪೊರಮಟ್ಟು ಜ್ಞಾನಾಸ್ತ್ರವಂ ಪ್ರಯೋಗಿಸಲಾಗಿ, ದೈತ್ಯನು ಮಾಯಾರಹಿತನಾಗಿ ನಿಂತು ಅನೇಕ ಶರಗಳಂ ವರ್ಷಿಸಿದನು. ಬಳಿಕ ಆ ವೀರಮಾರ್ತಾಂಡನು ಸಹಸ್ರ ಶರಗಳಿಂದಸುರರಂ ಸಂಹರಿಸಿ ಸಪ್ತ ಬಾಣಗಳಿಂದಾತನ ಕವಚವಂ ಕತ್ತರಿಸಿ, ಸರ್ವಾವಯವಗಳಲ್ಲಿಯುಂ ಶರಗಳನ್ನು ತುಂಬೆ, ಆ ದುರ್ಮುಖನು ಕ್ಷಣಮಾತ್ರ ಮೂರ್ಛಿತನಾಗಿದ್ದು ಮಾಯೆಯಿಂದ ಅಂತರ್ಧಾನನಾಗಲಾಗಿ, ಭೂತಂಗಳು ಆತನ ಪಲಾಯನವಂ ಕಂಡು, ಬಳಿವಿಡಿದು ಒಂದಾಗಿ ಪೋಗುವುದು ಯೋಗ್ಯವಲ್ಲೆಂದು ವಿಚಾರಿಸಿ ಮಹಾಧ್ವನಿಗಳಂ ಮಾಡಲಾಗಿ ಆ ದೈತ್ಯರೆಲ್ಲರು ಪಲಾಯನವನ್ನೈದಿದರು.

ಸಿಂಹಮುಖನ ಯುದ್ಧ.

ಅನಂತರದಲ್ಲಿ ಸಿಂಹಮುಖನದಂ ಕಂಡು ಓಡಿಬಂದವನಾಗಲು, ಭೂತಗಳು ಪರ್ವತಾಕಾರವಾದ ಆತನಂ ಕಂಡು ಪರ್ವತಾದಿಗಳಿಂದ ಪ್ರಹರಿಸಲಾಗಿ, ಅವುಗಳೆಲ್ಲವು ಆತನ ಮೇಲೆ ಬಿದ್ದು ಚೂರ್ಣವಾದವು. ಆಗ ದೈತ್ಯನು ಮಹಾಕೋಪವುಳ್ಳವನಾಗಿ ರಥದಿಂದಿಳಿದು ಆ ವೃಕ್ಷಂಗಳಿಂ ಪರ್ವತಂಗಳಿಂ ಅನೇಕ ಭೂತಗಣಂಗಳಂ ಸಂಹರಿಸಿ, ಕೆಲಂಬರನ್ನು ಪಾದಂಗಳಂ ಪಿಡಿದು ಭೂಮಿಯಲ್ಲಿಯು ಮತ್ತೆ ಕೆಲಬರಂ ಪರ್ವತದಲ್ಲಿಯು ಬಡಿದು, ಕೆಲ ಭೂತಗಳನ್ನು ಸೂರ್ಯರಥದಲ್ಲಿಯು ಕೆಲವರನ್ನು ಬಡಬಾಗ್ನಿಯಲ್ಲಿಯುಂ ಇನ್ನು ಕೆಲಬರನ್ನು ಸಮುದ್ರಂಗಳಲ್ಲಿಯುಂ ದ್ವೀಪಂಗಳಲ್ಲಿಯುಂ ಮತ್ತೆ ಕೆಲಂಬರನ್ನು ಬ್ರಹ್ಮಾಂಡ ಭಿತ್ತಿಗಳಲ್ಲಿಯು ಇನ್ನು ಕೆಲವರನ್ನು ಅಷ್ಟದಿಕ್ಕುಗಳಲ್ಲಿಯು ಒಸ್ಸಿದನು. ಮತ್ತು ಕುಪಿತನಾಗಿ ಕೆಲವರನ್ನು ಪಾದದಿಂದುಜ್ಜಿದನು. ಮತ್ತೆ ಕೆಲಂಬರಂ ಹಸ್ತದಿಂ

ಹಿಡಿದು ಭಕ್ಷಿಸಿದನು. ಇನ್ನು ಕೆಲವರನ್ನು ಶೂಲ ಗದಾ ಶರಗಳಿಂ ಗಿರಿತರುಗಳಂ ಹಿಡಿದು ಸಂಹಾರವಂ ಮಾಡಿದನು. ಹೀಗೆ ಅನೇಕ ಭೂತಗಣಂಗಳು ಮೃತವಾಗಲಾಗಿ, ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಭಯಪಟ್ಟು ಪಲಾಯನವನೈದಿದರು. ಪಾಪಿಯಾದ ಆ ದೈತ್ಯನು ಮತ್ತೊಂದು ರಥವನೇರಿ ಬರುತಿರೆ, ಅಗ್ನಿಕೋಪನೆಂಬ ಗಣಾಧೀಶ್ವರನು ಬಹು ಕುಪಿತನಾಗಿ ಕ್ಷಣದಿಂ ಪೊರಮಟ್ಟು, ಆ ಸಿಂಹಮುಖನಿಗೆ ತನ್ನ ಪರಾಕ್ರಮವಂ ಪೇಳುತ್ತ ಮಹತ್ತಾದ ಶೂಲದಿಂ ತಿವಿಯಲಾಗಿ, ಆ ಶೂಲವು ಕಠಿಣವಾದ ಆತನ ಉರದಲ್ಲಿ ಬಿದ್ದು ಮುರಿದು ಪೋಯದು. ಆ ರಭಸದಲ್ಲಿ ಸಾರಥಿಯು ಮೃತನಾದನು. ಮರಳಿ ಸಿಂಹಮುಖನು ದಂಡವಂ ತಿರುಹಿ ಆತನಂ ಕೆಡಹಿ ಮತ್ತೊರ್ವ ಸಾರಥಿಯಂ ಸಂಪಾದಿಸಿಕೊಂಡು ಸುಮಾಲಿಯೆಂಬ ಗಣಾಧೀಶ್ವರನಂ ಕುರಿತು ಕೋಪದಿಂ ನಡೆಯೆ, ಆತನು ಮಹಾ ಪರ್ವತವಂ ಕಿತ್ತು ಆತನ ಮೇಲಿಟ್ಟನು. ಆಗ ಸಿಂಹಮುಖನು ಲೀಲೆಯಿಂ ಬಾಲಕರು ಚಂಡನಾಡುವಂತೆ ಆ ಮಹಾ ಗಿರಿಯಂ ಕರದಿಂ ಬಡಿದು ಆತನ ಮೇಲೆ ಹಾರಿಸಿದವನಾಗಲು, ಆ ಸುಮಾಲಿಯು ಅದರ ಪತನದಿಂದ ಮೂರ್ಛಿತನಾದನು.

ಸುಮಾಲಿ ಗಣಾಧಿಪನ ಮೂರ್ಛೆ.

ಬಳಿಕ ದಂಡಿಯೆಂಬ ಗಣಾಧೀಶ್ವರನು ಮೂರ್ಛಿತನಾಗಿ ಬಿದ್ದಿರುವ ಆ ಸುಮಾಲಿಯಂ ಕಂಡು, ದಂಡದಿಂದಾತನ ಉರವಂ ಬಡಿಯೆ ಆ ದಂಡವು ಆತನ ಉರೋಘಾತದಿಂ ಚೂರ್ಣವಾದುದು. ಮರಳಿ ದಂಡಿಯು ಕೋಪದಿಂದಾತನನ್ನು ಮುಷ್ಟಿಯಿಂ ಪ್ರಹರಿಸಲಾಗಿ ಸಿಂಹನು ಪಾದದಿಂದೊದ್ದು ಆತನಂ ಭೂಮಿಯಲ್ಲಿ ಕೆಡಹಿ ಫಕ್ಕನೆ ಗಗನಕ್ಕೆಪೆ, ಆ ದಂಡಿಯು ವೇಗದಿಂದಾತನಮೇಲೆ ಧುಮುಕಿ, ವೃಕ್ಷಂಗಳ ಕೊಂಬೆನಲ್ಲಿ ಮರ್ಕಟದಂತೆ ಲಂಘಿಸುತಲು, ಕುಸುಮಂಗಳೊಳು ಭೃಂಗವು ಚರಿಸುವಂತೆ ಲಘುವಿನಿಂ ಸಂಚರಿಸುತ್ತಲು ಇರೆ, ಸಿಂಹಮುಖನು ಕೋಪದಿಂದಾತನಂ ಬಡಿದು ಮನುಜರು ಮಕ್ಷಿಕವನ್ನು ಮರ್ದಿಸುವಂತೆ ಮರ್ದಿಸಿದಲಾಗಿ, ಆ ದಂಡಿಯು ದೂರದಲ್ಲಿ ಬಿದ್ದು ಮೂರ್ಛೆಯನೈದಿದನು.

ಈ ಪ್ರಕಾರವಾಗಿ ಸಮಸ್ತ ಸೇನಾಪತಿಗಳು ಮೂರ್ಛಿತರಾಗೆ, ವೀರರು ಶೀಘ್ರದಿಂ ಬಂದು ಬಾಣವೃಷ್ಟಿಯಂ ಕರೆಯಲಾಗಿ, ಆ ಶರಂಗಳು ಪುಷ್ಪವೃಷ್ಟಿಯಂತೆ ಆತನಮೇಲೆ ಬೀಳುತ್ತಿದ್ದುವು. ಬಳಿಕ ದೈತ್ಯನು ರಥದಿಂ ದಿಳಿದು ಕೋಲಾಹಲ ಧ್ವನಿಯನೆಸಗಿ ಗಜಗಳಂ ಸಿಂಹವು ಹಿಡಿಯುವಂತೆ ಅವರ ಹಸ್ತಗಳಂ ಹಿಡಿದು ಅನ್ಯೋನ್ಯದಿಂ ತಾಡಿಸಿ ಕೆಡಹಿದನು. ಪಾದದಿಂ ಕೆಲಬರನೊದ್ದನು.

ರಥದೊಡನೆ ಕೆಲಬರನ್ನು ಗಗನಕ್ಕಿಟ್ಟನು. ಹೀಗೆ ಬಹುಪ್ರಕಾರದಿಂ ವೀರರಂ ಜಯಿಸುತಲಿರಲು, ಭೂತಗಣಂಗಳಿದಂ ಕಂಡು ಉಗ್ರನಿಂ ಭಯಪಟ್ಟು ಮೃಗಂಗಳಂತೆ ಓಡಿದರು.

ವೀರಬಾಹು ಸಿಂಹಮುಖರ ಯುದ್ಧ ಅವನ ಕುಮಾರರ ವಧೆ.

ಅನಂತರದಲ್ಲಿ ವೀರಶ್ರೇಷ್ಠನಾದ ವೀರಬಾಹುವವರಂ ನೋಡಿ ದೃಢವಾದ ಕೋದಂಡವಂ ಪಿಡಿದು ಘರ್ಮಕಾಲದ ಮೇಘದಂತೆ ಆ ದೈತ್ಯರಮೇಲೆ ಬಾಣಗಳಂ ವರ್ಷಿಸಲಾಗಿ, ಅನೇಕ ದೈತ್ಯರು ಮೃತರಾದರು. ಚತುರಂಗ ಬಲವು ನಾಶವನ್ನೈದಿತು. ರಕ್ತಪ್ರವಾಹದಲ್ಲಿ ಕಬಂಧಗಳು ನರ್ತಿಸಿದವು. ರಣಹದ್ದು ಮೊದಲಾದ ಮಾಂಸಾಶಿಗಳು ಆ ಪ್ರದೇಶದಲ್ಲಿ ಸಂಚರಿಸಿದವು. ಬಳಿಕ ಸಿಂಹಮುಖನ ಕುಮಾರರಾದ ಅತಿ ಸೌಂದರ್ಯವಂತರಾದ ನೂರೊಂದುಸುಂದಿ ದೈತ್ಯರುಗಳು ಆ ಯುದ್ಧವಂ ಕಂಡು ವೀರಬಾಹುವಿನಮೇಲೆ ಶರವರ್ಷವಂ ಕರೆಯೆ; ಆ ವೀರಬಾಹುವು ಕೋಪದಿಂ ಜ್ವಲಿಸಿ, ಅನೇಕ ಬಾಣಗಳಂ ಸುರಿಸಿದನು. ಆಗ ಆ ದೈತ್ಯಕುಮಾರರು ಅನೇಕ ಕೋಟಿ ಬಾಣಂಗಳಂ ವರ್ಷಿಸಲಾಗಿ, ವೀರಬಾಹುವು ಕೋಟಿ ಬಾಣಗಳಂ ಬಿಟ್ಟು ಅವರ ಶರಗಳನ್ನು ಚಾಪಂಗಳನ್ನು ಖಂಡಿಸೆ, ಅವರೆಲ್ಲ ಸೇರಿ ಧನುವಿನಿಂದೀತನೊಡನೆ ಯುದ್ಧವಮ್ಮಾಡಲು, ಯಾರೂ ಸಮರ್ಥರಲ್ಲವೆಂದು ನಿಶ್ಚೈಸಿ, ಖಡ್ಗಗಳಂ ಧರಿಸಿದವರಾಗಲು, ವೀರಬಾಹುವದಂ ಕಂಡು ಖಡ್ಗವಂ ಪಿಡಿದು ಬಡಿದಾಡುತಿರೆ, ಆ ದೈತ್ಯಕುಮಾರರು ಆತನೊಡನೆ ನಾನಾವಿಧ ಕ್ರಿಯಾದಿಗಳಿಂ ಯುದ್ಧವಮ್ಮಾಡಿ, ಖಡ್ಗದಿಂದಲು ಈತನಂ ಜಯಿಸಲಾಗದೆಂದು ನಿಶ್ಚೈಸಿ, ಈತನಂ ಸಂಹರಿಸಲು ಸುತ್ತಿ ಬಳಸಿಬರಲಾಗಿ, ವೀರಬಾಹು ದೈತ್ಯರ ಶಿರಂಗಳನ್ನೆಲ್ಲವಂ ಏಕ ಶಿರದಂತೆ ಖಡ್ಗದಿಂ ಛೇದಿಸಿ ಸಂಹಾರವಮ್ಮಾಡಿ ಮರಳಿ ಶೀಘ್ರದಿಂ ರಥಾರೂಢನಾದನು.

ಆಗ ದೇವತೆಗಳು ಸಂತೋಷದಿಂ ಪುಷ್ಪವೃಷ್ಟಿಯಂ ಸುರಿಸಿದರು. ಸಿಂಹಮುಖ ನಿದಂ ಕಂಡು, ಹಾಹಾ ! ಓರ್ವನೆ ಸರ್ವರಂ ಸಂಹರಿಸಿದನಲ್ಲವೆ? ಏನಾಶ್ಚರ್ಯವು? ಎಂದು ಮನದಲ್ಲಿ ಚಿಂತಿಸಿ ಲಜ್ಜೆಯಿಂ ಖಿನ್ನನಾಗಿ ಕೋಪದಿಂದು ಜ್ವಲಿಸಿ, ಈ ವೀರಬಾಹುವೆರಸಿ ಸರ್ವರಂ ಭಕ್ಷಿಸಿ ಬಳಿಕ ಕೋಪಶಾಂತಿಗೋಸುಗ ಸಕಲ ಲೋಕಂಗಳಂ ಸಂಹರಿಸುವೆನೆಂದು ನಿಶ್ಚೈಸಿ, ಆ ವೀರಬಾಹುವಿನ ಸಮೀಪಕ್ಕೆ ಪೋಗಿ, ಇದಿರಾಗಿ ಬರುತಲಿರುವ ಆತನಂ ಕಂಡು, ಎಲೆ ! ನೀನು ಗುಹನಲ್ಲ. ಲಕ್ಷ ವೀರರೊಳೋರ್ವನೋ, ನವಕುಮಾರರೊಳು ದೂತನೋ ಸತ್ಯವಾಗಿ ಪೇಳೆಂದು ನುಡಿಯಲಾಗಿ, ಧರ್ಮಾತ್ಮನಾದ ವೀರಬಾಹುವು ಆ ವಾಕ್ಯವಂ ಕೇಳಿ ಇಂತೆಂದನು. ಎಲೆ ದೈತ್ಯನೆ! ನಾನು ಅಮಿತಪರಾಕ್ರಮಿಯಾದ

ದೇವದೇವನಾದ ಕುಮಾರಸ್ವಾಮಿಯ ದಾಸನು. ಪೂರ್ವದಲ್ಲಿ ದೂತಭಾವದಿಂ ದನೇಕ ಅಸುರರಂ ಕೊಂದವನೆಂದು ತಿಳಿ. ದೇವಶ್ರೇಷ್ಠರು ವೀರಬಾಹು ವೆಂದೆನ್ನಂ ಕರೆವರು. ಆದಾದಡೇನೀಗ? ಅವರಿಂದೇನು? ಹೇಳೆಂದು ಗಂಭೀರ ವಾಗಿ ನುಡಿಯೆ, ಸಿಂಹನಿದಂ ಕೇಳಿ, ಎಲೆ ದೂತನೆ! ದುರ್ಬಲರಾದ ಅಸು ರರಂ ಕೊಂದುದರಿಂದೇನು ಫಲವು? ಈಗ ನನ್ನ ಪುತ್ರರಂ ಸಂಹರಿಸಿದಿ, ಅದ ರಿಂದ ಬಲವಂತನಾಗಿದ್ದಿ. ಈಗ ನಿನ್ನನ್ನು ಕ್ಷಣದಿಂ ಸಂಹರಿಸಿ ರಣಹದ್ದು ಮುಂತಾದವುಗಳಿಗೆ ತೃಪ್ತಿಯುಮ್ಮಾಡಿ, ವೇಗದಿಂ ಕುಮಾರಸ್ವಾಮಿಯ ಬಲವ ನ್ನಪಹರಿಸುವೆನು. ಮತ್ತು ಭೂತಂಗಳು ದೇವತೆಗಳು ವೀರರು ಬಲವಂತರು ಇವರೆಲ್ಲರು ನೋಡುತಲಿರುವಾಗಲೆ ತೆಗದುಕ್ಕೊಳ್ಳುವೆನು ನೋಡೆಂದು ನುಡಿ ದನು. ಎಲೈ ಋಷಿಶ್ರೇಷ್ಠರುಗಳಿರಾ! ಈ ಪ್ರಕಾರವಾಗಿ ಸಿಂಹಮುಖನಿಂದ ನಿರೂಪಿಸಲ್ಪಟ್ಟ ಅತಿ ಕಟುವಾದುದರಿಂದ ಸೈರಿಸಲಸಾಧ್ಯವಾದ ಆ ವಚನವಂ ಕೇಳಿ, ವೀರಬಾಹುವು ತನ್ನ ಲೋಚನ ಪ್ರದೇಶಗಳಿಂದ ಕೋಪೋದ್ರೇಕವನ್ನು ಉಗುಳುತ್ತಿರುವನಾಗಿ ನಿಂತಿರ್ದನೆಂದು ಸೂತಂ ಪೇಳಿದನೆಂಬಲ್ಲಿಗೆ,

ಯುದ್ಧಕಾಂಡದಲ್ಲಿ ಇಪ್ಪತ್ನಾಲ್ಕನೆಯ ಅಧ್ಯಾಯವು
ಸಮಾಪ್ತವಾದುದು.

ಇಪ್ಪತ್ತೈದನೆಯ ಅಧ್ಯಾಯವು.

ಸಿಂಹಮುಖ ವೀರಬಾಹುಗಳ ಯುದ್ಧ.

ಎಲೈ ಮುನಿಗಳಿರಾ! ಅನಂತರದಲ್ಲಿ ವೀರಬಾಹುವು ಅಸುರೇಶ್ವರನ ಸಂಬಂಧವಾದ ಬಹು ದುಷ್ಟವಾದ ದೃಢವಾದ ವಕ್ಷಸ್ಸಿನಲ್ಲಿ ಚತುರ್ದಶಾಸ್ತ್ರಗ ಳನ್ನು ಪ್ರಯೋಗಿಸಲಾಗಿ, ಅವುಗಳು ಆತನ ಉರದಲ್ಲಿ ಬಿದ್ದು ಮೊನೆ ಮುರಿದು ಭೂತಳದಲ್ಲಿ ಬಿದ್ದವು. ಬಳಿಕ ದೈತ್ಯರು ವೀರಬಾಹುವಿನ ಮೇಲೆ ಭಯಂಕರ ವಾದ ದಂಡವಂ ಬಿಡೆ, ವೀರನು ಚತುರ್ದಶ ಬಾಣಗಳಿಂದದಂ ಖಂಡಿಸಿ, ಆತನ ಶಿರಸ್ಸಿನ ಮೇಲೆ ಸಹಸ್ರ ಬಾಣಗಳಂ ಸುರಿಸಲಾಗಿ, ಅವುಗಳು ಬಿದ್ದಮಾತ್ರ ದಿಂದಲೆ ಚೂರ್ಣಂಗಳಾದವು. ಆಗ ಸಿಂಹಮುಖನು ಕೋಪದಿಂ ತ್ರಿಶೂಲವಂ ಬಿಡಲಾಗಿ ವೀರಬಾಹುವದಂ ಛೇದಿಸಲೋಸುಗ ಸಹಸ್ರ ಬಾಣಂಗಳಂ ಬಿಟ್ಟು ಅದಂ ಕಡಿಯಲಶಕ್ಯವಾಗಲು ಮರಳಿ ಸಹಸ್ರ ಶರಗಳಂ ಬಿಟ್ಟು ನೋಡಲಾಗಿ, ಆ ಶೂಲವು ಅವುಗಳಂ ತಿರಸ್ಕರಿಸಿ ತನ್ನ ಸಮೀಪಕ್ಕೆ ಬರೆ, ವೀರಬಾಹುವದಂ ಕಂಡು ಖಡ್ಗದಿಂ ಖಂಡಿಸಿದನು. ಆಗ ದೇವತೆಗಳು ವೀರಬಾಹುವಿನ ಬಲವಂ ಕಂಡು ಸ್ತುತಿಸಿದರು. ಮರಳಿ ವೀರಬಾಹುವು ಪಾಶುಪತಾಸ್ತ್ರವಂ ಬಿಡಲಾಗಿ

ದೈತ್ಯನು ಅದರ ಮೇಲೆ ಪಾಶುಪತಾಸ್ತ್ರವನ್ನೆ ಪ್ರಯೋಗಿಸಿದನು. ಆ ಉಭಯಾಸ್ತ್ರಗಳಿಗು ಬಹು ಯುದ್ಧಮುಂಟಾಗಿ ಮರಳಿ ಪ್ರಯೋಗಿಸಿದವರ ಹಸ್ತಗಳನ್ನೆ ಸೇರಿದವು.

ಆಗ ವೀರಬಾಹುವು ದೈತ್ಯನಂ ನೋಡಿ ಮನದಲ್ಲಿ ಆಶ್ಚರ್ಯಪಟ್ಟು ರಣದಲ್ಲೀತನಂ ಕೊಲ್ಲುವದಕ್ಕೆ ಕುಮಾರಸ್ವಾಮಿಯಿಂದಲ್ಲದೆ ನನ್ನಿಂದಾಗದು ನಾನು ಕೆಲಸರಾದ ಅಸುರರಂ ಸಂಹರಿಸುವೆನೆಂದು ಯೋಚಿಸಿ, ಚತುರ್ದಶ ಬಾಣಗಳಿಂದಾತನ ಸಾರಥಿಯಂ ಸಂಹರಿಸಲಾಗಿ, ಅಸುರನು ಕೋಪದಿಂ ಗದೆಯನ್ನು ಆತನ ಮೇಲೆ ಬಿಡೆ ಅದು ಆತನ ಮೇಲೆ ಬಿದ್ದು ನೂರು ತುಂಡಾದುದು. ಮರಳಿ ವೀರಬಾಹುವು ಸಹಸ್ರ ಬಾಣಗಳಿಂದಾತನ ರಥವಂ ಖಂಡಿಸಿದನು. ಬಳಿಕ ಭೂತಗಣಗಳು ಆತನಂ ಬಳಸಿಕೊಂಡು ಮಹಾ ಪರ್ವತಂಗಳಂ ತರುಗಳಂ ಹೆಂಟಿಗಳಂ ಪಾಷಾಣಗಳಂ ವರ್ಷಿಸಲಾಗಿ, ಸಿಂಹಮುಖನು ಮತ್ತೊಂದು ರಥವನ್ನೇರಿ ಸಹಸ್ರ ಧನುಸ್ಸುಗಳಂ ತೆಗದು ಸಂಧಾನವಮ್ಮಾಡಿ ಏಕಕೋಟಿ ಶರಗಳನ್ನು ಭೂತಗಣಗಳ ಮೇಲೆ ಬಿಡೆ, ಆಗ ಬಹು ಭೂತಗಳು ಮೃತವಾದವು. ಮತ್ತಮಾ ಶರಗಳು ಪರ್ವತ ಸಮುದ್ರ ನದಿ ಕಾನನ ದ್ವೀಪ ದಿಕ್ಕು ಆಕಾಶ ಜ್ಯೋತಿಶ್ಚಕ್ರ ಸೂರ್ಯರಥ ಬ್ರಹ್ಮಾಂಡ ಪಾತಾಳಲೋಕ ಲೋಕಾಲೋಕಪರ್ವತ ಮುಂತಾದ ಸಮಸ್ತ ಪ್ರದೇಶದಲ್ಲಿಯು ನಿಬಿಡಮಾಗಿ ಬಿದ್ದವು. ಮೂರು ಲೋಕಗಳಲ್ಲಿಯು ಆತನ ಬಾಣಗಳು ತಾಗಿ ಘಾಯವಿಲ್ಲದಿರ್ದವರಿಲ್ಲವು. ಆಗ ವೀರಬಾಹುವು ಅನೇಕ ಶರಗಳಂ ಬಿಟ್ಟು ಆತನ ಸೇನೆಯಲ್ಲಿರುವ ಅನೇಕ ಅಸುರರಂ ಸಂಹರಿಸಿ, ಮರಳಿ ದೈತ್ಯನ ಬಾಣಗಳು ಯೆಲ್ಲೆಲ್ಲಿ ಪೋದವೋ ಅಲ್ಲಲ್ಲಿಗೆ ಬಾಣಗಳಂ ಪ್ರಯೋಗಿಸಿ ಆಯಾ ಬಾಣಗಳನ್ನು ಛೇದಿಸಿದನು. ಬಳಿಕ ಸಿಂಹಮುಖನು ವೀರವಾದಗಳನ್ನು ನುಡಿಯೆ ವೀರನು ಕಠಿಣವಾಕ್ಯವನ್ನುಡಿದನು. ಅನಂತರದಲ್ಲಿ ದೈತ್ಯನು ಕೋಲಾಹಲ ಧ್ವನಿಯಮ್ಮಾಡೆ, ಆತನ ಮೇಲೆ ದಶ ಸಹಸ್ರ ಬಾಣಗಳನ್ನು ಪ್ರಯೋಗಿಸಿದನು. ಮರಳಿ ದೈತ್ಯನು ದಶ ಲಕ್ಷ ಬಾಣಗಳಿಂದವಂ ಛೇದಿಸಿ ವೀರಬಾಹುವಿನ ಮೇಲೆ ಅನೇಕ ಕೋಟಿ ಬಾಣಗಳಂ ಬಿಡೆ ವೀರನವಂ ಖಂಡಿಸಿದನು. ಬಳಿಕ ಅಸುರನು ದ್ವಿಸಹಸ್ರ ಕೋಟಿ ಬಾಣಗಳಿಂದಾತನ ಚಾಪಮಂ ಖಂಡಿಸಲಾಗಿ ವೀರನು ಪ್ರತಿ ಚಾಪಮಂ ಪಿಡಿದನು. ಅದರೊಳಗೆ ಅನೇಕ ಕೋಟಿ ಬಾಣಗಳಿಂದಾತನ ಶರೀರವಂ ರಕ್ತಸಿಕ್ತಮಾಗುವಂತೆ ಮಾಡಿದನು. ಹಾಗಾದೊಡಂ ವೀರನು ಮತ್ತೊಂದು ಧನುವಂ ತೆಗದು ದೈತ್ಯನ ಮೇಲೆ ಸಹಸ್ರ ಬಾಣಗಳನ್ನು ಬಿಡಲಾಗಿ, ಅಸುರನು ಲಕ್ಷ ಬಾಣಗಳಿಂದಾತನ ಶರಗಳಂ ಛೇದಿಸಿ ಮರಳಿ ಆತನ ಮೇಲೆ ಬಹು ಬಾಣಗಳನ್ನು ಸುರಿಸಿದನು. ಆಗ ವೀರನು

ಲಕ್ಷ ಬಾಣಗಳಿಂದವುಗಳಂ ಖಂಡಿಸಿ ಮರಳಿ ಸಹಸ್ರ ಬಾಣಗಳಿಂದತ್ಯಂತ ಉನ್ನತವಾದ ರಥಮಂ ಖಂಡಿಸೆ, ದೈತ್ಯನು ಭೂಮಿಯು ಕಂಪಿಸುವಂತೆ ಯಾವಾಗ ಪ್ರತಿರಥವನ್ನೇರಿದನೋ ಆಗ ವೀರನು ಅನೇಕ ಬಾಣಗಳಿಂ ಘೋರಂಗಳಾದ ಆತನ ಕೈಯಲ್ಲಿರುವ ಸಹಸ್ರ ಕೋದಂಡಂಗಳನ್ನು ಛೇದಿಸಲಾಗಿ, ಭೂತಗಣಗಳು ಕೋಲಾಹಲ ಧ್ವನಿಯನ್ನಾಡಿದರು. ಆ ಸಮಯದಲ್ಲಿ ಮಹಾ ಪಾಪಿಯಾದ ದೈತ್ಯನು ಕೋಪಾಗ್ನಿಯಿಂ ಜ್ವಲಿಸಿ ಅತಿ ಘೋರವಾದ ಮಾಯಾಪಾಶವಂ ಚಿಂತಿಸಿ, ಸಮಸ್ತ ಶತ್ರುಗಳಂ ಬಂಧಿಸಿಕೊಂಡು ಉದಯಪರ್ವತದಲ್ಲಿರಿಸೆಂದು ಅಭಿಮಂತ್ರಿಸಿ ಪ್ರಯೋಗಿಸಿದನು. ಅತಿ ಘೋರವಾಗಿ ಗಾಢಾಂಧಕಾರದಿಂದಾವೃತವಾದ ಮಹಾ ವೇಗವತ್ತಾಗಿ ಬಹು ಧ್ವನಿಯುಳ್ಳ ಆ ಅಸ್ತ್ರವಂ ಸರ್ವರು ನೋಡಿ ಮಾಯೆಯೆಂದು ತಿಳಿವುದರೊಳಗೆ ಆ ಪಾಶವು ಭೂತಗಣಸಹಿತವಾಗಿ ವೀರಬಾಹು ಮೊದಲಾದ ಸೇನಾಪತಿಗಳಂ ಬಂಧಿಸಿ ಪರ್ವತದಲ್ಲಿ ಕೆಡಹಿತು. ಬಳಿಕ ಮಹಾ ಪಾಪಿಯಾದ ಸಿಂಹಮುಖನು ಕೋಲಾಹಲ ಧ್ವನಿಯನ್ನಾಡಿ, ಗುಹನೆಂಬ ಬಾಲಕನೆಲ್ಲಿರುತಿರ್ಪಾನೆ? ಇಲ್ಲದಿರ್ದೊಡೆ ಭೀತಿಗೊಂಡು ಓಡಿಪೋದನೋ? ಎಂದು ತನ್ನ ಚಾರರಂ ಕೇಳಿ, ರಮ್ಯವಾದ ಹೇಮಕೂಟದಲ್ಲಿ ಷಣ್ಮುಖನು ಸಹಸ್ರ ವಾಹಿನೀಭೂತಗಳಿಂ ಸೇವಿಸಲ್ಪಟ್ಟು ಪಾದಕಮಲಉಳ್ಳವನಾಗಿ ವಾಸಿಸುತಿರ್ಪಾನೆಂಬ ವೃತ್ತಾಂತವನ್ನರಿತು, ತಾನಲ್ಲಿಗೆ ಪೋಗಿ ಆತನಂ ಜಯಿಸುವೆನೆಂದು ಪೇಳಿ ಸಮಸ್ತರಾದ ದೈತ್ಯರೊಡನೆ ಪೊರಮಟ್ಟನು. ಆ ಸಮಯದಲ್ಲಿ ವಾಯುವಿದನ್ನೆಲ್ಲವಂ ಕಂಡು ಕುಮಾರಸ್ವಾಮಿಯ ಬಳಿಗೆ ಪೋಗಿ, ಎಲೈ ಸ್ವಾಮಿಯೆ! ವೀರಬಾಹು ಮೊದಲಾದ ಸಮಸ್ತರು ಮಾಯಾಪಾಶದಿಂ ಬದ್ಧರಾಗಿ ಉದಯಗಿರಿಯಲ್ಲಿರ್ಪಾರೆಂದು ಪೇಳಿ, ದೇವಸೇನಾಪತಿಯಾದ ಕುಮಾರಸ್ವಾಮಿಯು ಆ ವೃತ್ತಾಂತವಂ ಕೇಳಿ, ಆ ದೈತ್ಯನೆಲ್ಲಿದಾನೆಂದು ಕೇಳುತ ಸಿಂಹಾಸನದಿಂದಿಳಿದು ವಾಯು ಸಹ ಪೊರಮಟ್ಟನು.

ಕುಮಾರಸ್ವಾಮಿಯು ರಣರಂಗಕ್ಕೆ ಬರುವಿಕೆ.

ಆಗ ಬ್ರಹ್ಮನು ರಮ್ಯವಾದ ಮಣಿಗಳಿಂ ವಿಚಿತ್ರವಾದ ಪಾದುಕೆಗಳಂ ತಂದಿರಿಸೆ, ಅವುಗಳಂ ಮೆಟ್ಟಿ ರಾಜಗೃಹ ದ್ವಾರಕ್ಕೆ ಬಂದು, ವಾಯುವಿನಿಂದ ತರಲ್ಪಟ್ಟ ಉಜ್ವಲವಾದ ರಥವನ್ನೇರಿ ಬರುವಾಗ ಬ್ರಹ್ಮ ವಿಷ್ಣ್ವಾದಿಗಳು ಪುಷ್ಪವೃಷ್ಟಿಯಂ ಕರೆದರು. ಇಂದ್ರನು ಚಾಮರಗಳನ್ನು ಹಿಡಿದನು. ಸುರರು ವಿಚಿತ್ರವಾದ ತಾಳವೃಂತಗಳನ್ನು ಧರಿಸಿದರು. ಚಂದ್ರ ಸೂರ್ಯರು ಪಾರ್ಶ್ವದ್ವಯದಲ್ಲಿ ಮೌಕ್ತಿಕ ಚತ್ರಗಳಂ ವಹಿಸಿದರು. ಯಮನು ಖಡ್ಗವಂ ಹಿಡಿದು ಬಳಿವಿಡಿದು ಬಂದನು. ಕೆಲಂಬ ದೇವತೆಗಳು ಉಪಚಾರಗಳನ್ನಾಡುತ್ತಿದ್ದರು.

ಆ ಸಮಯದಲ್ಲಿ ದೇವವಾದ್ಯಂಗಳು ಮೊಳಗಿದವು. ಅನೇಕ ಶ್ವೇತಚ್ಛತ್ರಗಳು ಧ್ವಜಗಳು ಮುಂದೆ ನಡೆದವು. ಕೆಲವು ವೃಷಧ್ವಜಂಗಳತ್ಯಂತವಾಗಿ ಶೋಭಿಸಿದವು. ವಸಿಷ್ಠಾದಿ ಋಷಿಗಳು ನರ್ತನವಮ್ಮಾಡುತ್ತ ಸ್ತುತಿಸಿದರು. ಮಧುರ ವಾಕ್ಯಗಳುಳ್ಳ ಪಾಠಕರು ಪೂರ್ವವಾಕ್ಯಂಗಳಿಂ ಕೊಂಡಾಡಿದರು. ಅನೇಕ ಭೂತಂಗಳು ಘೋರಂಗಳಾದ ಆಯುಧಂಗಳಂ ಕರಾಗ್ರಂಗಳಿಂ ತಿರುಹುತ ಸಂಚರಿಸಿದರು. ಆಗ ಮನೋಹರವಾದ ಕಾಹಳೆ ಧ್ವನಿಗಳಿಂದ ಅಹಹ!! ದೇವ ನಾಯಕನಾಗಿ ಭಕ್ತವತ್ಸಲನಾದ ವಿಶ್ವಪಾಲಕನಾದ ಕುಮಾರಸ್ವಾಮಿಯೆ! ನಿಮ್ಮ ಭಕ್ತಿಪರಾಯಣರಾದ ದೇವತೆಗಳನ್ನು ರಕ್ಷಿಸು, ಸರ್ವೋತ್ಕರ್ಷನಾಗಿ ವರ್ಧಿಸು, ದೈತ್ಯರ ಕುಲಸಂಹಾರಕನು ಬಂದನು ಬಂದನು. ದೇವಸೇನಾಧಿಪತಿಯು ಬಂದನೆಂಬದಾಗಿಯು ಅಖಿಲೇಶ್ವರನಾದ ಪಾರ್ವತೀಕುಮಾರನಾದ, ಅಸುರಾಂತಕನಾದ ಶಕ್ತಿಯಿಂದೊಪ್ಪುವ ಕರಕಮಲವುಳ್ಳ ಸ್ಕಂದನು ಬಂದನೆಂಬದಾಗಿಯು ಭಕ್ತರಕ್ಷಕನಾಗಿ ಗುಹಾಶಯನಾದ ಪರಮ ಕಲ್ಯಾಣಗುಣನಾದ ಅಮಿತ ಪರಾಕ್ರಮನಾದ ಲೋಕವಂದ್ಯನಾದ ಗುಹಸ್ವಾಮಿಯು ಲೀಲೆಯಿಂ ಲೋಕವಂ ಸೃಷ್ಟಿಸಿ ವಿನೋದವನ್ನೋಡುತ್ತ ದೇವಶತ್ರುಗಳಂ ಸಂಹರಿಸಲು ಬಂದನೆಂಬದಾಗಿಯು, ಸರ್ವೇಶ್ವರನಾದ ಸಮಸ್ತವನ್ನು ತಿಳಿದವನಾದ ಶಂಭುವಿನ ಪ್ರೇಮಾಸ್ಪದನು ಬಂದನೆಂಬದಾಗಿಯು ಸರ್ವದೇವ ವಂದ್ಯನಾದ ಸರ್ವಾಧಾರಕನು ಬಂದನೆಂಬದಾಗಿಯು, ಜಗತ್ಸೃಷ್ಟಿ ಸಂಹಾರಕನು ಬಂದನೆಂದುನ್ನೂ ಸರ್ವೇಶ್ವರಂಗೆ ಸಮಾನನು ಬಂದನೆಂಬದಾಗಿಯು, ಇದಲ್ಲದೆ ಅಣಿಮಾದಿ ಗುಣಯುತನಾದ ಸರ್ವತಂತ್ರ ಸ್ವತಂತ್ರನು ಬಂದನೆಂಬದಾಗಿಯು ಕಹಳೆ ಕಾರರು ಸ್ವಾಮಿಯ ಬರುವಂ ಸೂಚಿಸಿದರು. ಬಳಿಕ ಕುಮಾರ ಸ್ವಾಮಿಯು ಸರ್ವ ಪ್ರಾಣಿಗಳ ಶ್ರೋತ್ರಂಗಳಿಗೆ ಶ್ರಾವ್ಯಮಾದ ಲೋಕತ್ರಯವನ್ನು ವ್ಯಾಪಿಸಿದ ಭೇರ್ಯಾದಿ ವಾದ್ಯಂಗಳಂ ಕೇಳುತ ಮಹಾ ಬಲರಾದ ವೀರ

ರೊಡನೆ ಯುದ್ಧಭೂಮಿಯನ್ನೈದಿದನೆಂದು ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ, ಯುದ್ಧಕಾಂಡದಲ್ಲಿ ಇಪ್ಪತ್ತೈದನೆಯ ಅಧ್ಯಾಯವು ಸಮಾಪ್ತಮಾದುದು.

ಇಪ್ಪತ್ತಾರನೆಯ ಅಧ್ಯಾಯವು.

ಸಿಂಹವಕ್ತ್ರ ರಕ್ಕಸನ ಯುದ್ಧಾಡಂಬರ.

ಎಲೈ ಋಷಿಗಳಿರಾ! ಆ ಸಮಯದಲ್ಲಿ ಕುಮಾರಸ್ವಾಮಿಯು ಮುಂದೆ ಪೋಗುತಲಿರುವ ಬ್ರಹ್ಮ ವಿಷ್ಣು ಮುಂತಾದ ಸಕಲ ದೇವತೆಗಳಂ ಹಿಂದಕ್ಕೆ ಬರ

ಹೇಳಿ, ತಾನು ವೀರರೊಡನೆ ಒಂದು ಕಡೆಯಲ್ಲಿ ನಿಂತಿರ್ದನು. ಬಳಿಕ ವೃಕ್ಷ ಪರ್ವತ ಪಾಷಾಣಗಳಂ ಪಿಡಿದಿರ್ಪ ಭೂತಗಳಿಗೆ ದುರಾತ್ಮರಾದ ದೈತ್ಯರೊಡನೆ ಯುದ್ಧಮುಂಟಾಗಿ ದೈತ್ಯರು ಪರಾಜಿತರಾದರು. ಅನಂತರದಲ್ಲಿ ಘೋರಕಾಯ ನಾದ ಸಿಂಹಮುಖನಿದಂ ಕಂಡು ಯುದ್ಧಕ್ಕೆ ಬರಲಾಗಿ, ಭೂತಗಣಗಳು ತರು ಗಿರಿ ಶಿಲೆಗಳಂ ಪ್ರಹರಿಸಲ್ಪರೆ, ಮಹಾಕಾಯನಾದ ಆ ಸಿಂಹವಕ್ತ್ರನವರಂ ದ್ವಿ ಸಹಸ್ರ ಕರಗಳಿಂ ಬಾಯಿಂ ಬಿಟ್ಟು ಉದರಕ್ಕೆ ಹಾಕಿದನು. ಆ ಸಮಯದಲ್ಲಿ ಕೆಲಂಬ ಭೂತಂಗಳು ನಾಸಾದ್ವಾರಗಳಿಂ ಶ್ರೋತ್ರದ್ವಾರಗಳಿಂ ಪೊರಮಟ್ಟು ಓಡಿದವು. ಮತ್ತೆ ಕೆಲವು ಭೂತಂಗಳು ಆ ತಮ್ಮ ಆಯುಧಗಳಿಂದ ಆತನ ಉದರವಂ ತೀಳಿಕೊಂಡು ಹೊರಗೆ ಬಂದವು. ಈ ಪ್ರಕಾರವಾಗಿ ದಾನವನು ಸಹಸ್ರವಾಹಿನೀ ಭೂತಗಳಂ ಭಕ್ಷಿಸಿ ಮರಳಿ ವೀರರಂ ಸೇನಾಪತಿಗಳಂ ಕರದಿಂ ಮರ್ದಿಸಿ ನುಂಗಿದನು. ಆಗ ಕುಮಾರಸ್ವಾಮಿಯು ಏಕನಾಗಿ ಸರ್ವವನ್ನು ನೋಡುತ ನಿಂತಿರಲಾಗಿ, ಕೆಲಂಬ ಚಾರರು ಸಮಸ್ತವಂ ಕಂಡು ಶೂರಪದ್ಮನ ಸಮೀಪಕ್ಕೆ ಪೋಗಿ, ಎಲೈ ಶೂರನೆ! ವೀರಬಾಹು ಮೊದಲಾದವರು ಮಾಯಾ ಪಾಶದಿಂದ ಬದ್ಧರಾಗಿ ಉದಯ ಪರ್ವತದಲ್ಲಿ ಬಿದ್ದಿರುವರು. ನಿನ್ನನುಜನು ಕೆಲಂಬರಂ ಭಕ್ಷಿಸಿದನು. ಕುಮಾರಸ್ವಾಮಿಯು ಓರ್ವನೆ ಇದ್ದಾನೆಂದು ಆತಂಗೆ ಪೇಳಲಾಗಿ, ಶೂರಪದ್ಮನಿದಂ ಕೇಳಿ ಆ ದೂತರಿಗೆ ಅನೇಕ ವಸ್ತ್ರ ಭೂಷಣಗಳಂ ಕೊಟ್ಟು ಅನುಜಂಗೆ ಸಹಾಯವಾಗಿ ಬಹು ದೈತ್ಯರಂ ಕಳುಹಿಸಿ, ಸರ್ವ ಶತ್ರುಭಕ್ಷಕನಾದ ನನ್ನನುಜನಂ ನೋಡುವೆನೆಂದು ಸಿಂಹಾಸನದಿಂದಿಳಿದು ಗೋಪುರವನೇರಿ ಮಹಾ ಸಿಂಹಾಸನದಲ್ಲಿ ಕುಳಿತು, ರಣದಲ್ಲಿ ಏಕನಾಗಿರುವ ಕುಮಾರಸ್ವಾಮಿಯಂ ಭಯಂಕರನಾಗಿ ಮಹಾಕಾಯನಾದ ಸಿಂಹಮುಖನಂ ನೋಡಿ ಪರಮ ಸಂತೋಷವನ್ನೈದಿ ಗೋಪುರದಮೇಲೆ ಇರುತಿರ್ದನು. ಇಲ್ಲಿ ಕುಮಾರಸ್ವಾಮಿಯು ಸಿಂಹಮುಖನ ಮೇಲೆ ಯುದ್ಧವಂ ಮಾಡಲು ಪೊರಮಡೆ, ಆಗ ಅನೇಕ ದೈತ್ಯರು ಕೋಲಾಹಲಧ್ವನಿಯಂ ಮಾಡುತ್ತ ಆತನಂ ಬಳಸಿ ಕೊಂಡರು. ಆ ಸಮಯದಲ್ಲಿ ದೇವನಾಯಕನಾದ ಗುಹಸ್ವಾಮಿಯು ಮಶಕ ಪ್ರಾಯರಾದ ದನುಜರಂ ನೋಡಿ, ಲೀಲೆಯಿಂ ಧನುವಂ ಬೊಗ್ಗಿಸಿ ನಾರಿಯಂ ಹೂಡಿ ಸರ್ಪಗಳಂತೆ ಭಯಂಕರವಾದ ಆ ನಾರಿಯಂ ಧ್ವನಿಮಾಡೆ, ಆ ಧ್ವನಿಯು ಬ್ರಹ್ಮಾಂಡವಡದಂತೆ ಘೋಷವಂ ಮಾಡಲು ದೈತ್ಯೇಂದ್ರನ ತುರಗಂಗಳು ಆ ಧ್ವನಿಯಂ ಕೇಳಿ ಭಯಪಟ್ಟು ಭೂಮಿಯಮೇಲೆ ಅಧೋಮುಖವಾಗಿ ಬಿದ್ದವು. ಬಳಿಕ ಸಿಂಹಮುಖನು ಈತನೇ ತಾರಕಮಾರಕನೆಂದು ನಿಶ್ಚಯಿಸಿ ಶೀಘ್ರದಿಂ ಪೊರಮಟ್ಟು ಗುಹನ ಸಮೀಪಕ್ಕೆ ಬಂದು ಆತನಂ ನೋಡಿ, ಎಲೆ ಬಾಲಕನೆ!

ನೀನೇನು ಕಾರ್ಯವಂ ಕುರಿತು ಬಂದೆ? ನಾವು ಶತ್ರುಗಳನ್ನು ಸಂಹರಿಸುತ್ತೇವೆ. ಅದರಿಂ ನಿನಗೇನು? ಬಂದಮಾರ್ಗವಿಡಿದು ಮರಳಿ ಪೋಗೆಂದು ಪೇಳಲಾಗಿ, ದೇವಸೇನಾಪತಿಯಾದ ಕುಮಾರಸ್ವಾಮಿಯು ಆ ವಾಕ್ಯವಂ ಕೇಳಿ ಮುಗುಳು ನಗೆ ಯುಕ್ತನಾಗಿ, ಎಲೈ, ಅಸುರನೆ! ದುಷ್ಟರಿಂ ಪೀಡಿತರಾದ ಸಾಧುಗ್ರಹಣವು ನಮಗೆ ಗುಣವು, ಅದುಕಾರಣದಿಂದೀಗ ಬಂದೆನು, ಪಾಪಕಾರಿಗಳಾದ ನಿಮ್ಮಿಂದ ಸಮಸ್ತ ದೇವತೆಗಳು ಪೀಡಿಸಲ್ಪಟ್ಟರು. ಬಹು ಮಾತಿನಿಂದೇನು? ಸಂಹರಿಸಲು ಬಂದೆನು ಎಂದು ಪೇಳೆ, ಸಿಂಹಮುಖ ನೀವಾಕ್ಯಮಂ ಕೇಳಿ ಎಲೆಬಾಲಕನೆ ನೀನು ದೇವತೆಗಳಂ ಬಿಡಿಸಲ್ಬಂದು ಸರ್ವರಂ ಸಂಹರಿಸಿವೆ, ಬಾಲಕನಾದ ತಾರಕನಂತೆ ನನ್ನನ್ನು ಯೆಣಿಸಬೇಡ, ಕೆಲಂಬ ಶತ್ರುಗಳು ಸಂಹೃತರಾದರು. ನನ್ನಿಂದ ಅಸಂಖ್ಯಾತರಾದ ವೈರಿಗಳು ಪಲಾಯನವನ್ನೈದಿದರು. ರಣಮಧ್ಯದಲ್ಲಿರುವ ನೀನು ನನ್ನ ಶಕ್ತಿಯ ನರಿಯಯೋ, ಏನೋ, ಸ್ವಪ್ನದಲ್ಲಿಯಾದರು ಕಾರಾಗೃಹದಲ್ಲಿರುವ ಸುರರಂ ಯುದ್ಧಕ್ಕೆ ಬಂದ ನಿನ್ನನ್ನು ಬಿಡೆನೆಂದು ಪೇಳಿದನು. ಬಳಿಕ ಭಗವಂತನಾದ ಕುಮಾರಸ್ವಾಮಿಯು ಪಾಪಿಯಾದ ಆ ದೈತ್ಯನ ವಾಕ್ಯವಂ ಕೇಳಿ ಪ್ರಕಾಶಿಸುವ ದಂತ ಕಾಂತಿಯುಳ್ಳ ಮಂದಸ್ಮಿತ ವದನನಾಗಿ, ಏಕಾಸ್ತ್ರದಿಂ ದಾತನ ಕಠಿಣವಾದ ಉರವಂ ಭೇದಿಸಿದನು. ಆ ಸಮಯದಲ್ಲಿ ಕೆಲಂಬ ಭೂತಗಳು ಸುರಿವುತಿರ್ಪ ರಕ್ತದ್ವಾರದಿಂ ಪೊರಮಟ್ಟು ವೇಗದಿಂ ಪಲಾಯನವನ್ನೈದಿದರು ಆಗ ಮಹಾಪಾಪಿಯಾದ ದೈತ್ಯನು ಕರದಿಂ ದಾವುದರಲ್ಲಿನ ಘಾಯರಂಧ್ರದಂ ಮುಚ್ಚಿ ಕೆಲಂಬ ಭೂತಗಳಂ ಅದೊಡ್ಡ ಉದರದಲ್ಲಿನ ಘಾಯ ರಂಧ್ರವಂ ಮುಚ್ಚಿ ಕೆಲಂಬ ಭೂತಗಳಂ ಆ ದೊಡ್ಡ ಉದರದಲ್ಲಿಯೆ ನಿಲ್ಲಿಸಿ, ಮಹಾ ಕೋಪದಿಂ ಜ್ವಲಿಸಿ ಬಹು ಭಯಂಕರವಾದ ದಂಡವಂ ತಿರುಹಿ ಪಾರ್ವತೀ ಪುತ್ರನಾದ ಕುಮಾರಸ್ವಾಮಿಯ ಮೇಲಿಡೆ, ಸುರನಾಯಕನಾದ ಆ ಕುಮಾರ ಸ್ವಾಮಿಯು ಚತುರ್ಬಾಣಗಳಂ ಬಿಟ್ಟು ಆದಂಡವಂ ಭೇದಿಸಿ ನಿಟಲವಂ ಭೇದಿಸಿದನು. ಆಗ ದೈತ್ಯನು ಕಿಂಚಿತ್ಕ್ಷೀಣ ಬಲನಾಗಿ ಉದರಬಿಲವಂ ಮುಚ್ಚಿದ ಕರವಂ ತೆಗೆದು ಚಿಂತಿಸುತಿರಲಾಗಿ, ಆ ವೇಳೆಯಲ್ಲಿ ಸಮಸ್ತ ಭೂತಗಳು ಆ ದ್ವಾರದಿಂ ಪೊರಮಟ್ಟು ಓಡಿದರು. ಪೂರ್ವದಲ್ಲಿ ಯಾವಭೂತಗಳು ಅಸುರರಿಂ ಮೃತರಾದರೋ ಆ ಸಮಸ್ತರು ಕುಮಾರಸ್ವಾಮಿಯ ಕಾರುಣ್ಯದಿಂದೆದ್ದು ಆತಂಗೆ ಬಳಸಿ ನಿಂತರು. ಬಳಿಕ ಕುಮಾರಸ್ವಾಮಿಯು ದಯೆಯಿಂದ ವೀರಬಾಹು ಮೊದಲಾದ ಅನುಜರಂ ತನ್ನ ಸಮಿಪಕ್ಕೆ ಕರೆಸಿಕ್ಕೊಳ್ಳಲು ಪಾಶ ವಿಮೋಚಕ ಶರವಂ ಪ್ರಯೋಗಿಸೆ, ಆ ಶರವು ಕ್ಷಣದಿಂದಲ್ಲಿಗೆ ಪೋಗಿ ಹಿತರಾದ ಆ ವೀರರನೆಬ್ಬಿಸಿ ಮಾಯಾಪಾಶದಿಂಪರಿದು ಉದಯಗಿರಿಯಿಂ ಪೊರಮಟ್ಟು

ಪುಷ್ಪದಂತವಂ ಧರಿಸಿಕೊಂಡು ಸ್ವಾಮಿಯ ಸಮೀಪವನ್ನೈದಿಸಿ, ಆ ಸ್ವಾಮಿಯ ಆಜ್ಞೆಯಿಂ ಮರಳಿ ಬತ್ತಳಿಕೆಯಂ ಪೊಕ್ಕುದು.

ಷಣ್ಮುಖಸ್ವಾಮಿಯ ಯುದ್ಧ ವರ್ಣನೆ.

ಬಳಿಕ ವೀರಬಾಹು ಮುಂತಾದ ವೀರರು ಸ್ವಾಮಿಗೆ ಪರಮ ಭಕ್ತಿಯಿಂ ನಮಸ್ಕಾರವಂ ಮಾಡಿ ಆಪತ್ಪರಿಹಾರಕನಾದ ಆ ಸ್ವಾಮಿಯಂ ಸ್ತೋತ್ರಂಗಳಿಂ ಸ್ತುತಿಸಲಾಗಿ ಆ ಪಾರ್ವತೀ ಪುತ್ರನು ಅವರಂ ನೋಡಿ, ಎಲೈ ವೀರರಿರಾ! ಪಾಪಿಯಿಂದ ಪಾಶದಲ್ಲಿ ಬಿದ್ದು ಬಳಲಿದಿರಿ ಎಂದು ಅವರಿಗೆ ಪ್ರಿಯವಚನವಂ ಪೇಳೆ, ಎಲೈ ಸ್ವಾಮಿಯೆ! ನಿಮ್ಮ ದಯೆಯಿಂದ ನಮಗೆ ಬಳಲಿಕೆ ಇಲ್ಲವೆಂದು ನುಡಿದ ಬಳಿಕ ದೇವೇಶನಾಗಿ, ಸರ್ವದೈತ್ಯ ವಿನಾಶಕನಾದ ಈಶ್ವರನಾದ ಕುಮಾರಸ್ವಾಮಿಯು ಸರ್ವರಂ ನಿರೀಕ್ಷಿಸಿದನು. ಎಲೈ ಋಷಿಗಳಿರಾ! ಪೂರ್ವದಲ್ಲಿ ಗುಹನ ಮೌರ್ವಿಯ ಧ್ವನಿಯಂ ಕೇಳಿ ಮೂರ್ಛಿತರಾದ ದಾನವರು ಪ್ರಜ್ಞೆಯನ್ನೈದಿ ಸುರೇಶ್ವರನಾದ ಸ್ವಾಮಿಯಮೇಲೆ ಉಗ್ರಂಗಳಾದ ಶರಗಳಂ ವರ್ಷಿಸುತಲು ಅಟ್ಟಹಾಸವಂ ಮಾಡುತಲು ಬಂದು ಆ ಸ್ವಾಮಿಯಂ ಬಳಸಿಕೊಳ್ಳಲಾಗಿ, ಆಗ ಕುಮಾರಸ್ವಾಮಿಯು ಆ ದೈತ್ಯರ ಮೇಲೆ ಬಹು ಶರಗಳಂ ವರ್ಷಿಸೆ ಅವುಗಳು ದಂಡ ಖಡ್ಗ ಶಕ್ತಿ ಮುಂತಾದ ಆಯುಧಗಳಂ ಸೃಜಿಸುತಲು ವೇದೋಕ್ತ ಧರ್ಮಗಳಂ ಸ್ಥಾಪಿಸುತ್ತಲು ದೇವತೆಗಳಂ ರಕ್ಷಿಸುತ್ತಲು ಪಾಪಿಗಳಾದ ಅಸುರರಂ ಬ್ರಹ್ಮ ವಿಷ್ಣು ಹರರಂತೆ ಸಂಹರಿಸುತಲು, ಮನೋವೇಗ ವಾಯು ವೇಗವುಳ್ಳವುಗಳಾಗಿ ಸಮುದ್ರಗಳಂ ಶೋಷಿಸುತಲು ಬಡಬಾಗ್ನಿಯಂ ತಿರಸ್ಕರಿಸುತಲುಂ ಸೂರ್ಯರಥ ಮೊದಲಾದನಂ ಬ್ರಹ್ಮಾಂಡವಂ ಮೇರುಗಿರಿಯಂ ಭೂಮಿಯಂ ಜೊಡೆವುತಲು ಮಹಾಧ್ವನಿಯುಳ್ಳವುಗಳಾಗಿ ಅನೇಕ ದಾನವರ ಶಿರಸ್ಸು ಬಾಹುಗಳಂ ಛೇದಿಸಿ ಚತುರಂಗ ಬಲವಂ ಖಂಡಿಸಿ, ಅಂಡಮಧ್ಯದಲ್ಲಿ ಹರಹುತ ಪಾರ್ಥಿವಾಂಡವಂ ಭೇದಿಸಿ ಉದಕಗಳಲ್ಲಿ ಪ್ರವೇಶಿಸಿ ಆ ವರುಣೋದಕಗಳಂ ಕದಡಿ ಅನ್ಯಾಂಡಂಗಳಂ ಪ್ರವೇಶಿಸಿ ಸುರರಂ ಋಷಿಗಳಂ ಬಿಟ್ಟು ಅನೇಕ ದೈತ್ಯರಂ ಸಂಹರಿಸಿದವು.

ಈ ಪ್ರಕಾರವಾಗಿ ಅತ್ಯದ್ಭುತವಾದ ಗುಹನ ಮಹಾತ್ಮ್ಯವು ಆರಿಂದಲು ಪೇಳಲಶಕ್ಯವು. ಆತನು ಒಂದು ಬಾಣವನ್ನು ಪ್ರಯೋಗಿಸಿದರೆ, ಅದು ಕೋಟಿ ಶತಕೋಟಿ ಲಕ್ಷಕೋಟಿ ಅಸಂಖ್ಯಾತ ಬಾಣಗಳಾಗಿ ಸಮಸ್ತಾಂಡಗಳಂ ವ್ಯಾಪಿಸಿ ಅನೇಕ ಅಸುರರಂ ಸಂಹರಿಸಿತು. ಆಗ ಬ್ರಹ್ಮ ವಿಷ್ಣು ಮುಂತಾದ ಸಕಲ ದೇವತೆಗಳು ಭಯ ಕಂಪಿತ ವಿಗ್ರಹರಾಗಿ ಭೀತಿಯಿಂ ನಯನಗಳಂ ಮುಚ್ಚಿ, ಶಿರದಲ್ಲಿ ಅಂಜಲಿ ಬಂಧವನೆಸಗಿ, ಭಗವಂತನಾದ ಸ್ವಾಮಿಯಾಗಿ ದೇವದೇವನಾದ

ಕೃಪಾಪರನಾದ ಭಕ್ತವತ್ಸಲನಾದ ಸುರಶ್ರೇಷ್ಠನಾದ ಎಲೈ ಸುಬ್ರಹ್ಮಣ್ಯನೆ! ಪಾಪಿಗಳಂ ಸಂಹರಿಸಿ ಸುರರಂ ಪಾಲಿಸು, ಎಂದು ಪರಮ ಮಂಗಳನಾದ ಅಚಿಂತ್ಯ ಮಹಿಮೆಯುಳ್ಳ ಚಲಿಸದಿರುವ ವೈಭವವುಳ್ಳ ಗುಹನಂ ಸ್ತುತಿಸಿದರು. ಆಗ ಅನೇಕ ದೈತ್ಯರು ಹತರಾಗಿ ಬಹು ಕಬಂಧಂಗಳು ಕುಣಿದಾಡಿದವು, ಕಾಗೆ ನರಿ ತೋಳ ಮುಂತಾದ ಮಾಂಸಾಶನಿಗಳು ಬಂದೆರಗಿದವು. ಸಿಂಹಮುಖನು ಮೂರ್ಛೆಯಂ ತಿಳಿದು ಮಾಯೆಯಂ ಬಿಟ್ಟು ಪೂರ್ವ ರೂಪವಂ ಧರಿಸಿ ಮೃತರಾದ ದೈತ್ಯರಂ ಒಂದಾಗಿ ಸೇರಿರುವ ಭೂತಗಣವಂ ವೀರಬಾಹು ಮುಂತಾದ ವೀರರಂ ಸಹ ನೋಡಿ ಕೋಪದಿಂ ಜ್ವಲಿಸಿದನೆಂದು ಸೂತಂ ಶೌನಕಾದಿಗಳಿಗೆ ಪೇಳಿದ

ನೆಂಬಲ್ಲಿಗೆ, ಯುದ್ಧಕಾಂಡದಲ್ಲಿ ಇಪ್ಪತ್ತಾರನೆಯ ಅಧ್ಯಾಯವು ಸಮಾಪ್ತಮಾದುದು.

ಇಪ್ಪತ್ತೇಳನೆಯ ಅಧ್ಯಾಯವು.

ಸಿಂಹಮುಖ ಷಣ್ಮುಖದೇವರ ಯುದ್ಧವು.

ಎಲೈ ಋಷಿಗಳಿರಾ! ಅನಂತರದಲ್ಲಿ ಸಿಂಹಮುಖನು ಸಹಸ್ರ ಧನುಗಳಂ ಧರಿಸಿ, ಸ್ವಾಮಿಯ ಮೇಲೆ ದಶಲಕ್ಷವಾದ ಶರಗಳಂ ಪ್ರಯೋಗಿಸಲಾಗಿ, ಸ್ವಾಮಿಯು ಸಹಸ್ರ ಬಾಣಗಳಿಂದವಂ ಖಂಡಿಸಿ ಆತನ ಮೇಲೆ ಸಹಸ್ರ ಬಾಣ ಗಳಂ ಬಿಡೆ, ಅಸುರನು ಕುಪಿತನಾಗಿ ಮರಳಿ ದಶಲಕ್ಷ ಬಾಣಗಳಂ ಬಿಡಲಾಗಿ ಪುನಃ ಗುಹಸ್ವಾಮಿಯು ಅವಂ ಛೇದಿಸಿದನು. ಬಳಿಕ ಸಿಂಹಮುಖನು ಸಹಸ್ರ ಶರಗಳಿಂದಾತನ ಸಾರಥಿಯಂ ಪ್ರಹರಿಸಿ ನೊಯ್ಯಿಸೆ ಸಾರಥಿಯ ದೇಹದಲ್ಲಿ ರಕ್ತ ಪ್ರವಾಹ ವುಂಟಾಯಿತು. ಸ್ವಾಮಿಯು ಇದಂ ಕಂಡು ಕೋಪಿಸಿ ಏಕಾದಶ ಶರಗಳಂ ಪ್ರಯೋಗಿಸಿ, ಆತನ ರಥವಂ ಛೇದಿಸಲಾಗಿ ದೈತ್ಯನು ಬಹುಬಾಣ ಗಳನ್ನು ಪ್ರಯೋಗಿಸಿದನು. ಆಗ ಕುಮಾರಸ್ವಾಮಿಯು ಬಾಣಗಳಿಂದವಂ ಛೇದಿಸಿ, ಮರಳಿ ಸಹಸ್ರ ಬಾಣಗಳಿಂದಾತನ ಚಾಪವಂ ಕತ್ತರಿಸಲಾಗಿ, ದೈತ್ಯನು ಶೂಲವಂ ಬಿಟ್ಟನು. ಸ್ವಾಮಿಯು ಅದಂ ಛೇದಿಸಿ ಮರಳಿ ಸಹಸ್ರ ಬಾಣಗಳಂ ವರ್ಷಿಸಲಾಗಿ ದೈತ್ಯನು ದಂಡದಿಂದವಂ ಬಡಿದು ಕೆಡಹಿ ಕೋಲಾಹಲ ಧ್ವನಿ ಯಂ ಮಾಡಿ ಮೇಲ್ವಾಯ್ದು ಬರೆ, ಕುಮಾರನಾತನಂ ಕಂಡು ಸಪ್ತ ಶರಗಳಿಂ ದಾತನ ಕರಗಳಂ ಛೇದಿಸಲಾಗಿ ಮರಳಿ ಪುಟ್ಟಿದವು. ಆ ಸಮಯದಲ್ಲಿ ಕುಮಾರ ಸ್ವಾಮಿಯಮೇಲೆ ದಂಡವಂ ತಿರುಹಿಡೆ, ಸಹಸ್ರ ಬಾಣಗಳಂ ಬಿಟ್ಟದಂ ಖಂಡಿಸಿ ಮರಳಿ ದ್ವಿ ಸಹಸ್ರ ಬಾಣಗಳಿಂದ ಆತನ ದ್ವಿ ಸಹಸ್ರ ಕರಗಳಂ ಛೇದಿಸಲಾಗಿ,

ಅವುಗಳು ಮಹತ್ತರವಾದ ವೃಕ್ಷಂಗಳಂತೆ ಭೂಮಿಯಲ್ಲಿ ಬಿದ್ದವು. ಮರಳಿ ಆತಂಗೆ ಕರಗಳು ಪುಟ್ಟಿದ ಬಳಿಕ ಆ ದಾನವನು ಅಟ್ಟಹಾಸವನ್ಮಾಡಿ ತುಂಡು ಹಸ್ತಗಳಿಂದ ಪ್ರಹರಿಸೆ, ಆ ಗುಹನು ಆತನನ್ನೋಡಿ ತ್ರಿಸಹಸ್ರ ಬಾಣಗಳಿಂ ಬಾತನ ಸಹಸ್ರ ಶಿರಸ್ಸುಗಳನ್ನು ದ್ವಿಸಹಸ್ರ ಕರಗಳನ್ನು ಖಂಡಿಸಲಾಗಿ, ಅವುಗಳು ಮರಳಿ ಜನಿಸಿದವು ಅದರಿಂದ ದೇವತೆಗಳು ಆಶ್ಚರ್ಯಪಟ್ಟು ವ್ಯಾಕುಲಚಿತ್ತರಾಗಿರಲಾಗ, ಷಣ್ಮುಖಸ್ವಾಮಿಯು ವಟದ್ವೀಪದಲ್ಲಿ ಅಸುರರಿಂ ಮಾಡಲ್ಪಟ್ಟ ವೀರಯಾಗವನ್ನೆನೆದು ಹಾಹಾ!! ಅದುಕಾರಣದಿಂದೀತನ ಕರಗಳು ಶಿರಗಳು ಮರಳಿ ಪುಟ್ಟುವವೆಂದು ಧ್ಯಾನಿಸಲಾಗಿ, ಎಲೈ ಬಾಲಕನೆ! ನನ್ನ ಬಲಪರಾಕ್ರಮುಗಳನ್ನು ನೀನರಿಯದವನು. ನನ್ನ ಶಿರಸ್ಸುಗಳು ಕರಗಳು ಪುಟ್ಟುವ ಮಹಿಮೆಯನ್ನು ನೀನು ತಿಳಿದವನಲ್ಲ. ಸುರರಂ ಕಾರಾಗೃಹದಿಂ ಬಿಡೆನು. ನೀನು ಯೆತ್ತಲಾದೊಡಂ ಶೀಘ್ರಮಾಗಿ ಪೋಗೆಂದು ಪೇಳೆ, ಕುಮಾರಸ್ವಾಮಿಯು ಎಲೆ ದೈತ್ಯನೆ! ವ್ಯರ್ಥವಾಕ್ಯಗಳಿಂದೇನು? ನಿನ್ನನ್ನು ಸಂಹರಿಸಲೇ ಸಂಹರಿಸುವೆನೆಂದು ಪೇಳಲಾಗಿ, ಸಿಂಹನಿದಂ ಕೇಳಿ ಕುಪಿತನಾಗಿ ಸಹಸ್ರ ಪರ್ವತಗಳಿಂ ಪ್ರಹರಿಸೆ, ಗುಹನನಂ ಶತ ಬಾಣಂಗಳಿಂ ಖಂಡಿಸಿ, ಸಹಸ್ರ ಬಾಣಗಳಿಂದಾತನ ಉರವಂ ಭೇದಿಸಿ ಶರೀರಮಂ ರಕ್ತಮಯವನ್ಮಾಡಿ, ಆ ದೈತ್ಯನು ಪರ್ವತಗಳನ್ನು ಕೀಳುವುದರೊಳಗಾಗಿ ತ್ರಿಸಹಸ್ರ ಬಾಣಗಳಂ ಬಿಟ್ಟು ಆತನ ಶಿರಂಗಳಂ ಕರಗಳಂ ಭೇದಿಸಿದನು. ಈ ಪ್ರಕಾರಮಾಗಿ ಮರಳಿ ಮರಳಿ ಜನಿಸೆ, ಅವುಗಳನ್ನೆಲ್ಲಮಂ ಬಾರಿಬಾರಿಗು ಛೇದಿಸಿದನು. ಆ ಸಮಯದಲ್ಲಿ ಸುರರು ಬೆದರಿದರು. ಸಮಸ್ತರು ವ್ಯಾಕುಲರಾದರು. ಬಳಿಕ ಗುಹನು ದೈತ್ಯನ ಒಂದು ಶಿರವಂ ಯೆರಡು ಬಾಹುಗಳಂ ನಿಲ್ಲಿಸಿ ಉಳಿದವಂ ಛೇದಿಸಲಾಗಿ, ಮರಳಿ ಪುಟ್ಟದೆ ಪೋದವು. ಬಳಿಕ ಏಕಶಿರನಾದ ದೈತ್ಯನನ್ನೋಡಿ, ಎಲೆ ದೈತ್ಯನೆ! ಶಿರಗಳು ಮರಳಿ ಮರಳಿ ಪುಟ್ಟುವವೆಂದು ಪೇಳಿದೆಯಲ್ಲವೆ? ಈಗ ನನ್ನಾಜ್ಞೆಯಂ ನೋಡೆಂದು ನುಡಿಯೆ, ದೈತ್ಯನಿದಂ ಕೇಳಿ ಏಕಶಿರನಾದೊಡಂ ಯೆನ್ನ ಪರಾಕ್ರಮವನ್ನೋಡೆಂದು ಪರ್ವತದಿಂ ಪ್ರಹರಿಸೆ, ಸ್ವಾಮಿಯದಂ ಶರದಿಂ ಖಂಡಿಸಿದನು. ದೈತ್ಯನು ದಂಡವಂ ಪಿಡಿದು, ಎಲೈ ಬಾಲಕನೆ! ಈ ದಂಡವಂ ಬಿಡುವೆನು ಇದು ನಿನ್ನ ಶಕ್ತಿ ಮೊದಲಾದ ಆಯುಧಂಗಳಿಂದ ತಡೆದೆಯಾದೊಡೆ ನೀನು ಸಮರ್ಥನೇ ಸರಿ ಎಂದು ನುಡಿದು ದಂಡವಂ ತಿರುಹಿ ಬಿಟ್ಟನು.

ಸಿಂಹವಕ್ತ್ರನ ಸಂಹಾರ.

ಆಗ ಗುಹನದಂ ನೋಡಿ ಅನೇಕ ಕೋಟಿ ಸೂರ್ಯಪ್ರಕಾಶಮಾನವಾದ ಕುಲಿಶವಂ ಬಿಡಲಾಗಿ, ಅದು ಪೋರಮಟ್ಟು ತನಗಿದಿರಾಗಿ ಬರುವ ದಂಡವಂ

ಭೇದಿಸಿ, ಆತನ ಉರೋಮಧ್ಯದಲ್ಲಿ ಬಿದ್ದು ಪ್ರಾಣವಂ ತೆಗೆದುಕೊಂಡು ಪೊರಮಟ್ಟು ಗಂಗಾಸ್ನಾನವಮ್ಮಾಡಿ ಮಳಿರ ಕುಮಾರಸ್ವಾಮಿಯ ಹಸ್ತವನ್ನೈದಿತು. ಆ ಸಮಯದಲ್ಲಿ ಸಿಂಹಮುಖನು ಭೂತಳದಲ್ಲಿ ಬಿದ್ದು ಮುಖದಿಂ ರಕ್ತವಂ ಕಾರಿಸುತ್ತಲು ಪೊರಳಿ ಪೊರಳಿ ಶೀಘ್ರದಿಂ ಪ್ರಾಣವಂ ಬಿಟ್ಟನು. ಬಳಿಕ ದೇವತೆಗಳು ಮೃತನಾದ ದೈತ್ಯನಂ ಕಂಡು ಸಂತುಷ್ಟರಾಗಿ ಸುಗಂಧಗಳಾದ ಕುಸುಮವರ್ಷವಂ ಕರೆದರು. ಆ ಮೇಲೆ ಕುಮಾರಸ್ವಾಮಿಯು ಸಪ್ತ ಭೂತಗಣ ಸೇನಾಪತಿಗಳು ಸಹ ಮಹತ್ತರವಾದ ವಾದ್ಯಗಳನ್ನು ಘೋಷಿಸಲಾಗಿ, ಭೂತಗಣಗಳು ಕೋಲಾಹಳ ಧ್ವನಿಗಳಮ್ಮಾಡುತ್ತ ಹೇಮಕೂಟ ಪುರಕ್ಕೆ ಪೋಗಿ ದ್ವಾರದ ಸಮೀಪದಲ್ಲಿ ರಥದಿಂದಿಳಿದು ಸರ್ವರಂ ತಮ್ಮ ತಮ್ಮ ಗೃಹಗಳಿಗೆ ಕಳುಹಿಸಿ ಸುರರೊಡನೆ ಅಂತಃಪುರಕ್ಕೆ ಪ್ರವೇಶಿಸಿ, ಸಿಂಹಾಸನದ ಮೇಲೆ ಕುಳಿತನು. ಎಲೈ ಮುನಿಗಳಿರಾ! ಈ ಉಪಾಖ್ಯಾನವನ್ನು ಆರು ಪೇಳುವರೋ ಆರು ಪಠಿಸುವರೋ ಅವರು ಈ ಲೋಕದಲ್ಲಿ ಸರ್ವಾಭೀಷ್ಟಗಳಂ ಪಡೆವರು. ಮತ್ತಮವರಿಗೆ ಶತ್ರುಜಯವುಂಟಾಗುವದು. ಪೂರ್ವದಲ್ಲಿ ದಶರಥನ ಕುಮಾರನಾದ ರಾಮಚಂದ್ರನು ಅಗಸ್ತ್ಯರಿಂದಿದಂ ಕೇಳಿ ಪಾಪಿಗಳಾದ ರಾವಣ ಮುಂತಾದ ರಾಕ್ಷಸರಂ ಜಯಿಸಿದನೆಂದು ಪೇಳ್ದ ಸೂತಂ ಶೌನಕಾದಿಗಳಿಗೆ ಪೇಳಿದ ನೆಂಬಲ್ಲಿಗೆ,

ಯುದ್ಧಕಾಂಡದಲ್ಲಿ ಇಪ್ಪತ್ತೇಳನೆಯ ಅಧ್ಯಾಯವು ಸಮಾಪ್ತಮಾದುದು.

ಇಪ್ಪತ್ತೆಂಟನೆಯ ಅಧ್ಯಾಯವು.

ಶೂರಪದ್ಮಾಸುರನ ಯುದ್ಧೋದ್ಯೋಗ.

ಎಲೈ ಮುನಿಗಳಿರಾ! ಅನಂತರದಲ್ಲಿ ಶೂರಪದ್ಮನು ದೂತರ ಮುಖದಿಂದೀವೃತ್ತಾಂತಮಂ ಕೇಳಿ ಗೋಪುರಾಗ್ರದಿಂ ಭೂತಳಕ್ಕೆ ಬಿದ್ದು ಅತ್ಯಂತ ದುಃಖದಿಂ ಇತ್ತಲತ್ತ ಪೊರಳಿ, ಬ್ರಹ್ಮಾದಿ ದೇವತೆಗಳು ನನಗೆ ಕೃಷಿಗಳನು ಮಾಡುವದಂ ಬಿಟ್ಟು ಪೂರ್ವದಂತೆ ತಮ್ಮ ತಮ್ಮ ಪುರಕ್ಕೆ ಪೋಗಿ ಸುಖದಲ್ಲಿರುವಂತಾದುದೆ? ಹಾಹಾ!! ಸರ್ವಘಾತಕನಾದ ಅನುಜನೆ! ನಿನಗೀಮರಣವು ಹೇಗೆ ಬಂದುದು? ಎಂದು ಬಹು ಬಗೆಯಿಂದ ಪ್ರಲಾಪಿಸಿ ಶೀಘ್ರದಿಂ ಸಿಂಹಾಸನದಿಂದಿಳಿದು ಮಹಾ ರೋಷಾನ್ವಿತನಾಗಿ, ನನ್ನಾಳ್ವಿಕೆಯ ಬ್ರಹ್ಮಾಂಡಗಳೊಳಗೆ ಸಿಂಹಮುಖನಿಗಿಂತಲು ಬಲಪರಾಕ್ರಮಿಗಳಾದ ಅಸುರರಿರುವರು. ಆವರಂ ಕರೆದುಕೊಂಡು ಯುದ್ಧಕ್ಕೆ ಪೋಗಿ ಬಾಲಕನಂ ಜಯಿಸಿ ಮರಳಿ ನನ್ನ ಪುರಕ್ಕೆ ಬರುವೆನೆಂದು ಪೇಳಿ, ಸಹಸ್ರ ಕೋಟಿ ದೂತರಂ ಕಳುಹಲಾಗಿ, ಅವರು ಸಮಸ್ತ

ವಾದ ಅಂಡಂಗಳಲ್ಲಿಯು ಪ್ರವೇಶಿಸಿ ಅಲ್ಲಿರ್ಪ ದೈತ್ಯರುಗಳಿಗೆ ಶೂರನಾಜ್ಞೆಯಂ ಪೇಳಿ, ಅವರೊಡನೆ ಈ ಅಂಡವಂ ಪ್ರವೇಶಿಸಿದರು.

ಪೂರ್ವದಲ್ಲಿ ಜಗತ್ಸೃಷ್ಟಿಯಮ್ಮಾಡುವ ಶಂಭುವಿನ ಪಾದದಿಂ ಸುರಾಸುರ ಮನುಷ್ಯರ್ವೆರಸಿ ವಿಶ್ವವು ಪೊರಮಡುವಂತೆಯು, ಶಂಭುವಿನ ಜಟಾಜೂಟದಿಂ ಗಂಗೆಯು ಪೊರಮಡುವಂತೆಯು ಮಹಾ ಘೋರವಾದ ಸೂರ್‍ಯನ ಕಾಂತಿಯಂ ತಿರಸ್ಕರಿಸುವಂಥ ತಮ್ಮ ಶರೀರಾಂಧಕಾರದಿಂ ವ್ಯಾಪ್ತಮಾದ ಜಗತ್ರಯವುಳ್ಳ ಬಲಶಾಲಿಗಳಾದ ದೈತ್ಯರು ಬ್ರಹ್ಮಾಂಡ ಬಿಲದ್ವಾರದಿಂ ಪೊರಮಟ್ಟರು. ಆಗ ದೈತ್ಯರ ವೇಗದಿಂ ಪುಟ್ಟಿದ ವಾಯುವು ಅಗ್ನಿಯಂ ಪೆರ್ಚಿಸಿತು. ಅವರ ಧ್ವನಿಯಿಂ ಸಮಸ್ತ ಲೋಕಂಗಳಿಗೆ ಭಯಮುಂಟಾದುದು. ಅವರ ಪಾದಘಾತದಿಂದೇಳಲ್ಪಟ್ಟ ಧೂಳುಗಳಿಂ ಸಪ್ತ ಸಾಗರಂಗಳು ಶೋಷಿಸಿದವು. ಅವರು ವೇಗದಿಂ ದಡಿಯಿಟ್ಟು ನಡೆಯೆ ಅದರಿಂ ಬ್ರಹ್ಮಾಂಡ ವೊಡೆದುದು. ಭೂಮಿಯು ಪಾತಾಳವು ಅಂತರಿಕ್ಷವು ಅಸುರರಿಂ ನಿಬಿಡಮಾದವು. ಆಗ ಬ್ರಹ್ಮಮುಂತಾದ ದೇವತೆಗಳು ನಿಲ್ಲುವದಕ್ಕೆ ಅವಕಾಶವಿಲ್ಲದೆ ಆಕಾಶವನ್ನೈದಿದರು. ಸಮಸ್ತ ಪರ್ವತಗಳು ಪಾತಾಳಾಂತರಿಕ್ಷಗಳು ಭೂ ಸಮನಾದವು.

ಈ ಪ್ರಕಾರದಿಂ ದೈತ್ಯಸೇನೆಯಿಂ ಬ್ರಹ್ಮಾಂಡವು ತುಂಬಿದುದರಿಂದ ಹಿಂದೆ ಬರುವ ದೈತ್ಯರು ಬರುವದಕ್ಕೆ ತೆರಪಿಲ್ಲದೆ ಅಂಡದ ಪೊರವಳಯದಲ್ಲಿರ್ದರು. ಬಳಿಕ ಶೂರಪದ್ಮನು ಆ ದೈತ್ಯರ ಬಲರವಗಳಂ ಕೇಳಿ ಸಂತೋಷದಿಂದೆದ್ದು ಸ್ನಾನವನ್ಮಾಡಿ ಯಥೇಚ್ಛೆಯಿಂ ಭೋಜನವಮ್ಮಾಡಿ ತ್ರಿಪುಂಡ್ರ ರುದ್ರಾಕ್ಷಾಲಂಕೃತನಾಗಿ, ಸುಗಂಧ ಚಂದನವಂ ದೇಹಕ್ಕೆ ಲೇಪಿಸಿ ನಿರ್ಮಲವಾದ ಪುಷ್ಪಮಾಲಿಕೆಗಳಂ ಶಿರದೊಳು ಧರಿಸಿ, ವಿಚಿತ್ರದ ನೂತನ ವಸ್ತ್ರಭೂಷಣಗಳಂ ತೊಟ್ಟು, ಅಸ್ತ್ರರಾಜೇಶ್ವರನಾದ ಪಾಶುಪತಾಸ್ತ್ರವನ್ನು ಬ್ರಹ್ಮಾಸ್ತ್ರ ದೇವತಾಸ್ತ್ರಗಳಂ ತೆಗದುಕೊಂಡು, ಸಹಸ್ರ ಕೋಟಿ ಗುಪ್ತರಥಗಳಮ್ಮಾಡಿಕೊಂಡು ಶೀಘ್ರಮಾಗಿ ಪೊರಮಡೆ, ಆಗ ದೈತ್ಯರು ಅದ್ಭುತವಾದ ಸಿಂಹವಾಹನವಂ ಸಪ್ತ ಸಹಸ್ರ ತುರಗ ಸಿಂಹ ಭೂತಗಳಿಂದ ಆವೃತವಾದ ಸಿಂಹಧ್ವಜದಿಂದಂಕಿತವಾದ ಮನೋಮಾರುತ ವೇಗವುಳ್ಳ ರಮ್ಯವಾದ ರಥವಂ ತಂದಿರಿಸಲಾಗಿ, ಗಿರಿಗಳು ರಥವೇಗದಿಂದತ್ಯಂತ ತಿರಿಗಿದವು. ಸೂರ್‍ಯನು ಶೀತಳನಾದನು, ಬಡಬಾಗ್ನಿಯು ಶಾಂತಮಾದುದು. ಆ ಸಮಯದಲ್ಲಿ ದೈತ್ಯರಾಜನಾದ ಶೂರಪದ್ಮನು ನಾನಾ ಆಯುಧಂಗಳಂ ಧರಿಸಿ ಅಷ್ಟಕುಲ ಪರ್ವತಂಗಳಂ ಧಿಕ್ಕರಿಸುವ, ಗಾಲಿಗಳಿಂ ರಮ್ಯವಾದ ವೀರ್‍ಯಪ್ರಭಾವದಿಂ ಪುಟ್ಟಿದ, ಮತ್ತೆ ಬ್ರಹ್ಮನಾಶವಾದೊಡಂ ನಾಶವಿಲ್ಲದ ಆ ರಥದ ಮೇಲೆ, ನೀಲಗಿರಿಯೆಂಬ ಪರ್ವತದಂತೆ ಕುಳಿತು, ದೈತ್ಯರು

ಮಾಡುವ ಅಟ್ಟಹಾಸಗಳಿಂ ಅವರ ಆಶೀರ್ವಾದಗಳಿಂ ಚಲ್ಲುತಲಿರುವ ಕುಸುಮ ಸಮೂಹಗಳಿಂ ಸಂತುಷ್ಟಮಾನಸನಾಗಿ ಅನೇಕ ಸಾರಥಿಗಳಂ ಕರೆದು ಅಲ್ಲಲ್ಲಿ ನಿಲ್ಲಿಸಿ ಶೀಘ್ರದಿಂ ಪೊರಮಟ್ಟನು.

ಆ ಸಮಯದಲ್ಲಿ ಕೆಲಂಬರು ಕಾಳಾಂಜಿಯನ್ನು ಕೆಲಬರು ಅಡಪಗಳನ್ನು ಕೆಲಬರು ನರಗಿಂಡಿಗಳನ್ನು ಇನ್ನು ಕೆಲವರು ಕೈಯ್ಯಾಲವಟ್ಟಿಗೆ ಚಾಮರಗಳಂ ಬೀಸುತ, ಕೆಲಂಬರು ಧ್ವಜಗಳಂ ಪಿಡಿದು ಸಂಭ್ರಮದಿಂದ ಹೊರಟರು. ಆಗ ಕೆಲಬರಾದ ದೈತ್ಯರು ಕೋಲಾಹಳ ಧ್ವನಿಯಮ್ಮಾಡಿದರು. ಬಳಿಕ ಶೂರ ಪದ್ಮನು ಆನೇಕ ಬೀದಿಗಳಂ ಬಹು ಗೋಪುರಗಳಂದಾಂಟಿ ಪ್ರಧಾನಗೋಪುರ ದ್ವಾರಕ್ಕೆ ಪೋಗೆ, ಅಲ್ಲಿರುತಿರ್ಪ ಸರ್ವ ದೈತ್ಯರು ಆ ದೈತ್ಯನಂ ಕಂಡು ಶೀಘ್ರದಿಂ ದೆದ್ದು ನಮಸ್ಕಾರಮಮ್ಮಾಡಿ, ತಮ್ಮ ಆಯುಧಗಳಂ ಕೊಡಹಿ ಕೋಕಿಲ ಧ್ವನಿ ಗಳಮ್ಮಾಡಲಾಗಿ, ಶೂರನು ಸಮಸ್ತ ದೈತ್ಯರು ಸಹ ಮದ್ದಾನೆಗಳ ಮದಧಾರೆ ಗಳಿಂ ಪೂರಿತವಾದ ಹುಲಿಮುಖದ ಮಾರ್ಗಮಂದಾಂಟಿದರು, ಆ ವೇಳೆಯಲ್ಲಿ ಮಹಾ ಪಾಪಿಗಳಾದ ಬಹು ಬಲರಾದ ಕೆಲಬರು ದೈತ್ಯರು ಸಿಂಹನಾದವಮ್ಮಾ ಡುತ ಹೇಮಕೂಟ ಪುರವಂ ಮುತ್ತಿಕೊಳ್ಳಲಾಗಿ, ಬ್ರಹ್ಮ ವಿಷ್ಣು ಮುಂತಾದ ಸಕಲ ದೇವತೆಗಳು ಮೂರ್ಛಿತರಾದರು. ಭೂತಗಳು ವೀರರು ಅಂಜಿದರು. ಬಳಿಕ ಬ್ರಹ್ಮಾದಿಗಳು ಶೀಘ್ರದಿಂ ಬಂದು ಗುಹಂಗೆ ನಮಸ್ಕಾರವಮ್ಮಾಡಿ ಎಲೆ ಅಮರೇಶ್ವರನೆ! ಶೂರಪದ್ಮನು ಸಮಸ್ತಾಂಡಗಳಲ್ಲಿರುವ ಅಸುರರಂ ಸೇರಿಸಿ ಕೊಂಡು ಯುದ್ಧಕ್ಕೆ ತಾನೇ ಬಂದಿಹನು. ಆತನ ಸೇನಾಪ್ರಮುಖರು ನಿಮ್ಮ ಪಟ್ಟಣವಂ ಮುತ್ತಿಕೊಂಡಿದಾರೆ. ಆ ಪಾಪಿಯಾದ ಅಸುರನಂ ಸಂಹರಿಸೆಂದು ಬಿನ್ನಪಂಗೆಯ್ಯೆ, ಪರಮ ಕಾರುಣಿಕನಾದ ಗುಹಸ್ವಾಮಿಯು ಆ ವಾಕ್ಯವಂ ಕೇಳಿ ಶೀಘ್ರದಿಂ ಮನೋವೇಗವಾದ ರಥವಂ ಕೊಂಡೊಯ್ಯುವಂತೆ ವಾಯುವಿಗೆ ನಿರೂಪಿಸಿ ತ್ವರಿತದಿಂ ಸಿಹ್ಮಾಸನವ ನಿಳಿದನೆಂದು ಸೂತಂ ಶೌನಕಾದಿಗಳಿಗೆ ಪೇಳಿದ ನೆಂಬಲ್ಲಿಗೆ, ಯುದ್ಧಕಾಂಡವಲ್ಲಿ ಇಪ್ಪತ್ತೆಂಟನೆಯ ಅಧ್ಯಾಯವು ಸಮಾಪ್ತಮಾದುದು.

ಇಪ್ಪತ್ತೊಂಬತ್ತನೆಯ ಅಧ್ಯಾಯವು.

ಷಣ್ಮುಖಸ್ವಾಮಿಯ ವಿಜಯಯಾತ್ರೆಯನ್ನು ಕುರಿತು ದೇವತೆಗಳು ಪ್ರಾರ್ಥಿಸುವಿಕೆ.

ಎಲೈ ಋಷಿಗಳಿರಾ! ಅನಂತರದಲ್ಲಿ ಕುಮಾರಸ್ವಾಮಿಯು ಪರಶು ವಜ್ರ ಶೂಲ ಶಕ್ತಿ ಖಡ್ಗ ಖೇಟ ಚಕ್ರ ದಂಡ ಮುಸಲ ತೋಮರ ಮೊದಲಾದ ಅನೇಕ

ಆಯುಧಂಗಳಂ ಘೋರಂಗಳಾದ ಅಸ್ತ್ರಂಗಳಂ ಧರಿಸಿ, ದೇವತೆಗಳಿಂದ ವರ್ಷಿಸಲ್ಪಟ್ಟ ಪುಷ್ಪವೃಷ್ಟಿಯಿಂ ಪೂಜಿತನಾಗಿ, ಬಹು ದೃಢವಾದ ಉನ್ನತ ರಥಗಳನ್ನೇರಿದ ಕೀರ್ತಿವಂತರಾದ ಸ್ತೋತ್ರಗಳಂ ಮಾಡುತಲಿರುವ ಲಕ್ಷ ನವವೀರರೊಡನೆ ಬಹು ಬಲವಾದ ಆಯುಧಂಗಳುಳ್ಳ ದ್ವಿಸಹಸ್ರ ವಾಹಿನೀ ಭೂತಗಳ್ವೆರಸಿ ಪೊರಮಡೆ, ಬ್ರಹ್ಮಾದಿ ದೇವತೆಗಳು ಆ ಗುಹಸ್ವಾಮಿಯಮೇಲೆ ಕುಸುಮ ವೃಷ್ಟಿಯಂ ವರ್ಷಿಸಿದರು, ವಾದ್ಯಂಗಳು ಪ್ರಳಯಕಾಲದ ಮೇಘದಂತೆ ಧ್ವನಿಯಂ ಮಾಡಿದವು, ಸೂರ್ಯಕಿರಣಗಳಂ ತಿರಸ್ಕರಿಸುವ ಛತ್ರ ಚಾಮರಗಳಂ ಪಿಡಿದರು. ಬಳಿಕ ಸಮಸ್ತ ಭೂತಂಗಳು ಕ್ರೂರಕರ್ಮಗಳುಳ್ಳ ದಾನವರಂ ಕಂಡು ಅಷ್ಟೋತ್ತರ ಸಹಸ್ರಾಂಡಂಗಳಲ್ಲಿರ್ಪ ಮಹಾ ದುಷ್ಟರಾದ ಅನೇಕ ಶಿರಸ್ಸುಗಳುಳ್ಳ ಬಹು ಸಹಸ್ರ ಸಂಖ್ಯಾತರಾದ ಮಾಯಿಗಳಾದ ಸಮಸ್ತ ಲೋಕಗಳಂ ಭಕ್ಷಿಸಲು ಸಮರ್ಥರಾದ ಬ್ರಹ್ಮಾಂಡಂಗಳಂ ಕಂಪಿಸುವಂತೆ ಮಾಡುವದಕ್ಕೆ ಸಮರ್ಥರಾದ ಅಗ್ನಿಯಂತೆ ಜ್ವಲಿಸುತ್ತಿರುವ ದೊಡ್ಡದೊಡ್ಡ ಕಣ್ಣುಗಳುಳ್ಳ ಸಮುದ್ರದಂತೆ ವಿಸ್ತಾರವಾದ ಮುಖಂಗಳುಳ್ಳ ಚಂದ್ರ ಸೂರ್ಯ ನಕ್ಷತ್ರಗಳಂ ಮುಟ್ಟುತಿರುವ ಸಿಂಹಮುಖ ಭಾನುಕೋಪ ತಾರಕ ಅಗ್ನಿಮುಖ ವ್ಯಾಳಿವಕ್ತ್ರ ಸುಂದೋಪಸುಂದ ಮಧುಕೈಟಭ ಜಲಂಧರ ಮಹಿಷಾಸುರರಂತೆ ಕ್ರೂರರಾದ, ಬಹುಬಲ ಪರಾಕ್ರಮವಂತರಾದ ಬ್ರಹ್ಮ ವಿಷ್ಣು ಇಂದ್ರಾದಿಗಳ ಆಯುಧಂಗಳಂ ಧರಿಸಿದ ಅನಂತ ಕೋಟಿ ದಾನವರು ಬಳಸಿಕೊಂಡರು. ಆಗ ಭೂತಂಗಳು ಹಾಹಾ!! ಪೂರ್ವದಲ್ಲಿ ಏಕಾಂಡಸ್ಥಿತರಾದ ಅಸುರರಿಂ ಸಮಸ್ತವು ಪರಾಭವವನ್ನೈದಿತು. ಮತ್ತೆ ಸಮಸ್ತ ಬ್ರಹ್ಮಾಂಡಗಳಿಗೆ ಅಧಿಪನಾದ ಓರ್ವನು ಬ್ರಹ್ಮ ವಿಷ್ಣು ಮುಂತಾದ ದೇವತೆಗಳಂ ಜಯಿಸಿದನು. ಹೀಗಿರುವಲ್ಲಿ ಅವನೊಡನೆ ಮತ್ತೊರ್ವನು ಸೇರಿದನಾದೊಡವರಮುಂದೆ ನಿಲ್ಲುವುದಕ್ಕೆ ಸಮರ್ಥರಾರು? ವೀರನು ಸೇನಾಧಿಪನು ಜಯಿಸಲು ಸಮರ್ಥನಲ್ಲ; ವೃಕ್ಷ ಪಾಷಾಣಗಳಿಂ ಯುದ್ಧವಂ ಮಾಡಲು ನಮಗೇನು ಶಕ್ತಿಯಿದ್ದೀತು? ಚತುರಂಗ ಬಲದೊಡನೆಯಾದರೆ ಯುದ್ಧವಂ ಮಾಡಬಹುದು; ವೀರರು ಸೇನಾಧಿಪತಿಗಳು ತೃಣಂಗಳು ಹೇಗೆ ಬಿರುಗಾಳಿಯಿಂದ ಕೊಂಡು ಹೋಗಲ್ಪಡುವವೋ ಹಾಗೆ ಪೋಗುವರು. ಆಗ ವೀರಬಾಹುವು ಓರ್ವನು ನಿಂತರೂ ಆತನು ಪರಾಭವವಾಗುವನು. ಸರ್ವ ದಾನವ ಸಂಹಾರಕನಾದ ಗುಹಸ್ವಾಮಿಯು ನಿಲ್ಲಲು ಸಮರ್ಥನು, ಶಿವಶಿವ! ನಮಗೆ ಪಲಾಯನಕ್ಕಾದೊಡಂ ಅವಕಾಶಮಿಲ್ಲವು, ಆದುದರಿಂದ ನಮ್ಮಿಂದ ಆಗುವಷ್ಟು ಯುದ್ಧವಂ ಮಾಡಿ ಪ್ರಾಣಗಳಂ ಬಿಡುವೆವೆಂದು ನಿಶ್ಚಯಿಸಿ ಅನ್ಯೋನ್ಯ ಮಾತುಗಳನಾಡುತ ಯುದ್ಧಕ್ಕೆ ಪ್ರಾರಂಭಿಸಿದರು. ಆಗ ಇಂದ್ರಾದಿ ದೇವತೆಗಳು ವಿಷ್ಣುವಂ

ನೋಡಿ, ಎಲೈ ಕೇಶವನೆ! ಏಕನಾದ ಗುಹನಿಂ ಈ ಪಾಪಿಗಳಾದ ಅಸುರರಂ ಸಂಹರಿಸಲು ಅನೇಕ ದಿವಸಂಗಳಾಗುವವು. ಆವಾಗ ಶೂರನವಧೆ ಯುಂಟಾದೀತೋ? ದೇವತೆಗಳ ಬಂಧನವಾವಾಗ ತೀರುವುದೋ? ನಮ್ಮ ದುಃಖವೆಂದಿಗೆ ನಾಶವಾಗುವದೋ, ಮತ್ತೆ ನಮ್ಮ ಸ್ಥಾನವು ಯಾವಾಗ ದೊರಿಯುವದೋ? ನಾವು ಜೀವಂತರಾಗಿರುವಲ್ಲಿ ಪಡದು ಬರಲಿಲ್ಲವೋ ಏನೋ? ಎಂದು ಪೇಳಲಾಗಿ, ವಿಷ್ಣುವು ಈ ವಾಕ್ಯವಂ ಕೇಳಿ, ಎಲೈ ದೇವತೆಗಳಿರಾ! ಸಾಕ್ಷಾತ್ಪರಶಿವನಾದ ಮತ್ತೆ ನಮಗೆ ಕರ್ತನಾದ ನಾಯಕನಾದ ಶಂಕರನು ಕುಮಾರಸ್ವಾಮಿಯೆಂಬ ನಾಮವಂ ಧರಿಸಿಕೊಂಡು ಬಂದನು. ಆವನೊಬ್ಬ ಷಣ್ಮುಖನು ಅಂಡಂಗಳಂ ಶರೀರಗಳು ಸಹ ಸಮಸ್ತ ಲೋಕಗಳಂ ಲೀಲೆಯಿಂದ ತನ್ನ ಶರೀರದಲ್ಲಿ ತೋರಿಸಿದನೋ, ಪಂಚಕೃತ್ಯಪರನಾದ ಸಕಲ ಶತ್ರು ಸಂಹಾರಕನಾದ ಆತಂಗೆ ಅಸುರಸಂಹಾರಮಂ ಮಾಡುವದೇನಶಕ್ಯವು? ಕ್ಷಣದಿಂ ಸರ್ವರಂ ಸಂಹರಿಸುವನು, ನೀವು ಈತನ ಮಹಿಮೆಯಂ ತಿಳಿದವರಲ್ಲ; ನಿಮ್ಮ ಬುದ್ಧಿಯು ವಿಸ್ಮೃತಮಾದುದೋ ಏನೋ, ಎಲೈ ದೇವೇಂದ್ರನೆ! ಸಮಸ್ತ ಬ್ರಾಹ್ಮಣರಿಗು ಅಧಿಪತಿಯಾದ ಪರಮ ಪಾವನನಾದ ಗುಹನಲ್ಲಿ ನೀನು ವಿಶೇಷವಾಗಿ ಶಿಶು ಬುದ್ಧಿಯಂ ಮಾಡುತಲಿದ್ದಿ; ದೇವನಾಯಕನಾದ ಕುಮಾರಸ್ವಾಮಿಯು ಈ ಪ್ರಕಾರವಾದ ಮಂಗಳಾಕಾರವಂ ತೆಗೆದುಕ್ಕೊಂಡು ಪೂರ್ವದಲ್ಲಿ ನಾವು ಮಾಡಿದ ತಪಃ ಫಲದಿಂದ ಬಂದಿಥಾನೆ, ಆತನು ಮಂದಸ್ಮಿತದಿಂ ಕೋಪದಿಂ ಯುದ್ಧದಿಂ ಶೂರ ಮುಂತಾದ ಅಸುರರಂ ಸಂಹರಿಸಲು ಸಮರ್ಥನು. ಆ ದೇವನ ಅದ್ಭುತವಾದ ಬಲವನ್ನು ಯಾರು ತಿಳಿವರು? ಸರ್ವಾಯುಧ ಸಮೇತರಾಗಿ ಭೂತಗಳು ವೀರರುಗಳೊಡನೆ ಯುದ್ಧಕ್ಕೆ ಬಂದು ಸಮಸ್ತರಾದ ಅಸುರರಂ ಕೊಂದು ಅಸುರಾಧಿಪನಾದ ಶೂರಪದ್ಮನಂ ಸಂಹರಿಸುವನು. ಎಲೈ ಅಮರರುಗಳಿರಾ! ನೀವೆಲ್ಲರು ನನ್ನ ವಚನಮಂ ಸತ್ಯವಾಗಿ ಕೇಳಿ, ಶಂಕಿಸದೆ ಹೃದಯದಲ್ಲಿ ದೇವನಾಯಕನಂ ಧ್ಯಾನಿಸಿ, ಸತ್ಯಜ್ಞಾನಾನಂದಮಯನಾದ ಸರ್ವ ಶತ್ರುಸಂಹಾರಕನಾದ ಕುಮಾರಸ್ವಾಮಿಯಂ ಶರಣವನ್ನೈದಿರೆಂದು ಪೇಳಿದನು.

ಬಳಿಕ ದೇವತೆಗಳು ವಿಷ್ಣುವಿನ ವಾಕ್ಯವಂ ಕೇಳಿ ಆ ವಿಷ್ಣು ಬ್ರಹ್ಮಾದಿಗಳ್ವೆರಸಿ ಸ್ವಾಮಿಯ ಸಮೀಪಕ್ಕೆ ಬಂದು ಆ ಗುಹನಂ ಅನುಸರಿಸಿ ಆಕಾಶಕ್ಕೆ ಪೋದರು. ಆಗ ಗುಹನಿದಂ ಕಂಡು ವೀರಬಾಹು ಮುಂತಾದ ವೀರರೊಡನೆ ಪ್ರಸಿನಗೆಯುಕ್ತನಾಗಿ ರಣ ಮಂಡಲವನ್ನೈದಿದನು. ಆ ಸಮಯದಲ್ಲಿ ಭೂತಗಳಿಗು ಅಸುರರಿಗು ವೃಕ್ಷಪರ್ವತ ಪಾಷಾಣ ಮುಂತಾದವುಗಳಿಂ ಯುದ್ಧಮುಂಟಾದುದು. ಆಗ ಕೆಲವು ಕಡೆಯಲ್ಲಿ ಭೂತಗಳು ಪಲಾಯನವನ್ನೈದಿದರು. ಮತ್ತೆ

ಕೆಲವೆಡೆಯಲ್ಲಿ ವೀರರುಗಳು ಪರಾಭವವಂ ಪಡೆದರು. ಬಳಿಕ ವೀರಬಾಹುವು ಶೀಘ್ರದಿಂ ಬಂದು ಅಸುರರಮೇಲೆ ಅನೇಕ ಬಾಣಗಳಂ ವರ್ಷಿಸಿ ಅವರಂ ಸಂಹರಿಸಿ ಪರಾಭವವನ್ನೈದಿಸಿ ಸ್ವಾಮಿಯ ಸಮೀಪಕ್ಕೆ ಬಂದನು. ಆ ಸಮಯದಲ್ಲಿ ದೈತ್ಯರು ಗುಹನಂ ಬೀಳ್ಕೊಂಡು ಈತನತ್ಯಂತ ಬಾಲನು ಯುದ್ಧದಲ್ಲಿ ಏನುಶಕ್ತಿ ಇದ್ದೀತು? ಹೀಗೆಂದು ಪೇಳಿ ದಂಡ ಚಕ್ರ ಕುಲಿಶ ಶೂಲ ಶಕ್ತಿ ಮುಂತಾದವಂ ವರ್ಷಿಸಲಾಗಿ, ಕುಮಾರಸ್ವಾಮಿ ಇದಂ ಕಂಡು ಧನುಷ್ಟಂಕಾರವಂ ಮಾಡೆ, ಮಹಾಧ್ವನಿಯುಂಟಾದುದು.

ಆ ಧ್ವನಿಯಿಂದ ಅಸುರರ ಚತುರಂಗ ಬಲವು ಮೂರ್ಛೆಯನ್ನೈದಿ ಭೂಮಿಯಲ್ಲಿ ಬಿದ್ದುದು. ಆಗ ಕುಮಾರಸ್ವಾಮಿಯು ಅನೇಕ ಬಾಣಗಳಂ ಬಿಟ್ಟು ಅವರ ಪಾದ ಪಾಣಿ ವಕ್ಷಸ್ಸು ಮೊದಲಾದವಂ ಛೇದಿಸಿ ಛೇದಿಸಿ ಮಹೀತಳದಲ್ಲಿ ಕೆಡಹಿ, ಅಶ್ವಂಗಳ ಪಾದ ಬಾಲ ಕೊರಳುಗಳಂ ಕತ್ತರಿಸಿ ಕತ್ತರಿಸಿ, ಮಹಾ ರಥಂಗಳಂ ಚಕ್ರ ಧ್ವಜ ಸ್ತಂಭಂಗಳಂ ಖಂಡಿಸಿ, ಆನೆಗಳ ದಂತಗಳನ್ನು ಸುಂಡಿಲಗಳನ್ನು ಪಾದ ಮಸ್ತಕಾದಿಗಳಂ ಭಂಜಿಸಿ, ಮತ್ತಂ ದೈತ್ಯರ ಛತ್ರ ಚಾಮರ ಆಯುಧ ಭೂಷಣ ಕಿರೀಟಗಳಂ ಛೇದಿಸಿ ಭೂತಳದಲ್ಲಿ ಹರಹಿದನು. ಇದಲ್ಲದೆ ಅಮಿತ ಪರಾಕ್ರಮಿಯಾದ ಕುಮಾರಸ್ವಾಮಿಯು ಬಿಟ್ಟ ಬಾಣಗಳು ಸ್ವರ್ಗ ಮರ್ತ್ಯ ಪಾತಾಳ ಬ್ರಹ್ಮಲೋಕ ವಿಷ್ಣುಲೋಕ ಆಕಾಶ ದಿಗ್ವಾಯುಗಳಂ ವ್ಯಾಪಿಸಿ ಅನೇಕ ದೈತ್ಯರಂ ಸಂಹರಿಸಿದನೆಂದು ಸೂತಂ ಶೌನಕಾದಿಗಳಿಗೆ ಪೇಳಿದ

ನೆಂಬಲ್ಲಿಗೆ. ಶ್ರೀ ಕೃಷ್ಣರಾಜ ವಾಣೀವಿಲಾಸಮೆಂಬ ಸ್ಕಾಂದಪುರಾಣದ
ಶಿವರಹಸ್ಯಖಂಡದಲ್ಲಿ ಯುದ್ಧಕಾಂಡದೊಳು ಇಪ್ಪತ್ತೊಂಬತ್ತನೆಯ
ಅಧ್ಯಾಯವು ಸಮಾಪ್ತಮಾದುದು.

ಮುವ್ವತ್ತನೆಯ ಅಧ್ಯಾಯವು.

ಷಣ್ಮುಖದೇವನ ಯುದ್ಧ ವರ್ಣನೆ.

ಎಲೈ, ಮುನಿಗಳಿರಾ! ಆ ಕುಮಾರಸ್ವಾಮಿಯ ಬಾಣಗಳು ದೇವಬ್ರಾಹ್ಮಣರಂ ಬಿಟ್ಟು ರಾಹುವಿನ ಶಿರವಂ ಕತ್ತರಿಸುವಂತೆ ಸಕಲ ಅಸುರರ ಶಿರಗಳಂ ಛೇದಿಸಿದವು. ಚರಾಚರವಾದ ಈ ಜಗತ್ತು ಅಸುರಶಿರಗಳಿಂ ಪೂರ್ಣವಾದವು. ಛೇದಿಸಿದ ದೈತ್ಯರ ಆಯುಧಂಗಳು ಒಬ್ಬರೊಬ್ಬರಮೇಲೆ ಬೀಳೆ ಅನೇಕ ಅಸುರರು ಹತರಾದರು. ಹೀಗೆ ಅನೇಕ ದೈತ್ಯರು ಮೃತರಾಗಲು ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಭೂತಗಳು ಸೇನಾಧಿಪತಿಗಳು ವೀರರು ಸಹ ಇದಂ ಕಂಡು ಸಂತೋಷವನ್ನೈದಿ, ಪ್ರಥಮದಲ್ಲಿ ಮಾಡಲ್ಪಟ್ಟ ಸಂಹಾರವಂ ಕಾಣದೆ

ಸಮಸ್ತ ಕಡೆಯಲ್ಲಿಯು ಮೃತರಾದವರನ್ನೇ ಕಂಡರು. ಬಳಿಕ ದೇವತೆಗಳು ಮಹಾ ಸಂತೋಷವನ್ನೈದಿದರು. ಪೊರವಳಯದಲ್ಲಿರ್ದ ಅಸುರರು ತಮಗೆ ಅವ ಕಾಶಮಂ ಕಂಡು ಅಂಡಮಂ ಪ್ರವೇಶಿಸಿ ಅಸುರನಂ ಕಂಡು ಅಟ್ಟಹಾಸಮಂ ಮಾಡಿ, ಅನೇಕ ಕಬಂಧಗಳು ನರ್ತನವಂ ಮಾಡುತ್ತಿರೆ ರಕ್ತನದಿಗಳಂ ದಾಂಟಿ ಶೂರಂಗೆ ಶತ್ರುವಾದ ಕುಮಾರಸ್ವಾಮಿಯಂ ಜಯಿಸುವೆ ವೆಂದು ಪ್ರತಿಜ್ಞೆ ಯಂ ಮಾಡಿದರು.

ಬಳಿಕ ಈ ಬಾಲಕನು ದೈತ್ಯರ ಸೇನೆಯಂ ಸಂಹರಿಸಿ ಅಂಡಾಂತರದಲ್ಲಿರುವ ದೈತ್ಯರುಗಳ ಸೇನೆಯಂ ಸಂಹರಿಸಲೋಸುಗ ಬಾಣಪ್ರಯೋಗವಂ ಮಾಡೆ, ಶೂರಂಗೆ ಸಹಾಯವಾಗಿ ಬಂದುದಕ್ಕೆ ಬಹುದೈತ್ಯರು ಮೃತರಾದರು. ಆಗ ಅನೇಕ ದೈತ್ಯರು ಶೂರಪದ್ಮನ; ಬರುವದಕ್ಕೆ ಮುಂಚಿತವಾಗಿಯೆ ಬಾಲಕನಂ ಸಂಹರಿಸುವೆವೆಂದು ಪೇಳುತ ಮೇಲ್ವಾಯ್ದುಬರಲಾಗಿ, ವೀರರು ಭೂತಸೇನಾ ಪತಿಗಳು ವಿಚಾರವನ್ನೈದಿದರು. ಆ ಸಮಯದಲ್ಲಿ ವಾಯುವು ಮೆಲ್ಲನೆ ಯುದ್ಧ ಮಂಡಲಕ್ಕೆ ರಥವನ್ನು ನಡೆಯಿಸುತಿರೆ, ಕುಮಾರಸ್ವಾಮಿಯು ಮುಸಿನಗೆಯುಕ್ತ ನಾಗಿ, ಎಲೈ ವಾಯುವೆ! ಉಭಯ ಪಾರ್ಶ್ವದಲ್ಲಿಯು ಪೂರ್ವಭಾಗದಲ್ಲಿಯು ಪಶ್ಚಾದ್ಭಾಗದಲ್ಲಿಯು ರಥವಂ ನಡಿಸೆಂದು ನಿರೂಪಿಸಲಾಗಿ, ಆ ವಚನವಂ ಕೇಳಿ "ಭೂತಳ ಆಕಾಶ ಸಮುದ್ರ ಲೋಕಾಲೋಕ ಗಿರಿ" ಮುಂತಾದ ಸಮಸ್ತ ಕಡೆ ಯಲ್ಲಿಯು ರಥವಂತಿರುಗಿಸೆ, ಕುಮಾರಸ್ವಾಮಿಯು ಅಲ್ಲಲ್ಲಿರುವ ಮಹಾಘೋರ ರಾದ ಅಸುರರಂ ಸಂಹರಿಸಿದನು. ಆಗ ಭೂಮಿಯು ಶವಗಳಿಂದ ನಿಬಿಡ ವಾದುದು. ಆದಿಶೇಷನು ನಡುಗಿದನು. ದೈತ್ಯರು ಗಗನಕ್ಕೆ ಗಮಿಸಿದರು. ಅವರಲ್ಲಿ ಅತ್ಯಂತ ರೌದ್ರರಾದವರು ಆನೇಕ ಭಕ್ಷಣಗಳಂ ಭಕ್ಷಿಸಿದರು. ಆಗ ಕುಮಾರಸ್ವಾಮಿಯ ರಥವೇಗವಂ ಕಂಡು ಹಾಹಾ!! ಈ ರಥವೇಗವು ಬಾಣಗಳ ತ್ವರಿತಾಗಮನವು, ಗುಹನ ಮಹಿಮೆಯೇ ಸರಿಯೆಂದು ತಿಳಿದು ದೇವತೆಗಳು ಸ್ತುತಿಸುತಿರ್ದರು. ಈ ಪ್ರಕಾರವಾಗಿ ಕುಮಾರಸ್ವಾಮಿಯು ಸಮಸ್ತ ದೈತ್ಯ ರಂ ಸಂಹರಿಸೆ, ಸರ್ವತ್ರ ಶವಗಳು ಬಿದ್ದು ಭೂಪಾತಾಳಗಳು ರಕ್ತದಿಂದ ತುಂಬಲ್ಪಟ್ಟವು.

ಬಳಿಕ ಹೊರಬ್ರಹ್ಮಾಂಡದಿಂ ಬಂದದೈತ್ಯರು ಈ ಬ್ರಂಹ್ಮಾಡವಂ ತುಂಬಿ ಮರಳಿ ಕುಮಾರಸ್ವಾಮಿಯು ಆ ದೈತ್ಯರಂ ಸಂಹರಿಸಿ ಬ್ರಹ್ಮಾಂಡದ್ವಾರಕ್ಕೆ ಅನೇಕ ಶರಗಳನ್ನು ಪ್ರಯೋಗಿಸಲಾಗಿ, ಆಗ ಮಾರ್ಗವಿಲ್ಲದೆ ಇರುವುದರಿಂದ ಬಹಿರಾವರಣದಲ್ಲಿಯೆ ಕೆಲಂಬರು ದೈತ್ಯರು ನಿಂತರು. ಆಸಮಯದಲ್ಲಿ ಪ್ರಾಣಂ ಗಳಂ ಬಿಟ್ಟ ಅಸುರರಿಂ ಬ್ರಹ್ಮಾಂಡ ಭಿತ್ತಿಯ ಪರ್ಯಂತರವು ಶವಮಯಮಾದ

ಮಹತ್ತಾದ ಗಿರಿಯುಂಟಾಯಿತು. ಮತ್ತೆ ಸಮುದ್ರವು ರಕ್ತದಿಂ ಪೂರ್ಣವಾದುದು. ಆಗ ಕುಮಾರಸ್ವಾಮಿಯು ಆ ಶವಪರ್ವತಮಂ ಕಂಡು ಮುಗುಳುನಗೆ ಯುಕ್ತನಾಗಿ ಕಿಡಿಗಳು ಹಾರುತಲಿರುವ ಫಾಲಲೋಚನಗಳಿಂದ ಆ ಶವಪರ್ವತಮಂ ಕ್ಷಣದಿಂ ಭಸ್ಮವನ್ಮಾಡೆ, ಆ ಭಸ್ಮವು ಅಲ್ಲಲ್ಲಿ ವಾಯುವಿನಿಂದ ಕೆದರಿ ವಿರಳವಾಗಿ ಪೂರ್ವದಂತೆ ಅವಕಾಶಮುಂಟಾದುದು. ಆ ಸಮಯದಲ್ಲಿ ವಿಷ್ಣು ಮುಂತಾದ ದೇವತೆಗಳು ಆ ಸುಬ್ರಹ್ಮಣ್ಯಸ್ವಾಮಿಯ ಮಹಿಮೆಯನ್ನೋಡಿ ಸಂತುಷ್ಟರಾಗಿ ಈ ರೀತಿಯಿಂದ ಸ್ತೋತ್ರವನ್ಮಾಡಿದರು. ಅಹಹಾ! ಕುಮಾರಸ್ವಾಮಿಯು ಪಾಪಿಗಳಾದ ಅಸುರರಂ ಸಂಹರಿಸಿ ಸಮುದ್ರದಲ್ಲಿ ತೇಲುತಿರುವ ಬ್ರಹ್ಮಾಂಡವನ್ನೋಡಿ, ನೋಟಮಾತ್ರದಿಂದಲೆ ಭಸ್ಮವನ್ಮಾಡಿದನು. ಮಹೇಶ್ವರನಾದ ಕುಮಾರಸ್ವಾಮಿಗೆ ಶೂರಪದ್ಮನಂ ವಧಿಸುವದೆಷ್ಟುಮಾತ್ರವು? ಹೀಗೆ ಅನ್ಯೋನ್ಯವಾಗಿ ಮಾತಾಡುತ್ತ ಆ ಸ್ವಾಮಿಗೆ ನಮಸ್ಕಾರವನ್ಮಾಡಿ ಪರಮ ಭಕ್ತಿವಶರಾಗಿ ಧೈರ್ಯದಿಂದಿದ್ದರು.

ಬಳಿಕ ಶೂರಪದ್ಮನು ಆ ಕುಮಾರಸ್ವಾಮಿಯಂ ಕಂಡು ಜ್ವಲಿಸಿ ವಾಕ್ಯದಿಂ ಜರೆವುತ ಯುದ್ಧಕ್ಕೆ ನಡೆದುಬರೆ, ಅಮರೇಶ್ವರನಾದ ಸುಬ್ರಹ್ಮಣ್ಯನು ಪಾಪಿಯಾದ ಶೂರಂಗೆ ಇದಿರಾಗೆ, ಶೂರನಾಗುಹನನ್ನೋಡಿ, ಎಲೈ ಬಾಲಕನೆ! ಪರಮೇಶ್ವರನ ವರದಿಂದ ನನಗೆ ಮರಣವಿಲ್ಲ. ನನ್ನೊಡನೆ ಯುದ್ಧವನ್ಮಾಡಿ ಸಮಸ್ತರು ಪರಾಭವವನ್ನೈದಿದರು. ನನಗೆ ಕೃಷಿಗಳನ್ನು ಮಾಡುತಲಿರುವ ದೇವತೆಗಳ ವಾಕ್ಯವಂ ಕೇಳಿ ವಿಚಾರವನ್ಮಾಡದೆ ಅವರಿಗೆ ಸಹಾಯಕನಾಗಿ ಬಂದು ನನ್ನ ಸೈನ್ಯವನ್ನು ಸಂಹರಿಸಿದೆ. ಎಂದು ನುಡಿಯಲಾಗಿ, ಕುಮಾರಸ್ವಾಮಿಯು ಆ ವಾಕ್ಯವಂ ಕೇಳಿ, ಎಲೈ ಶೂರನೆ! ಪಾಪಿಯಾದ ನಿನ್ನೊಡನೆ ಮಾತನಾಡೆವು. ನಮ್ಮ ಹಸ್ತದಲ್ಲಿರುವ ಅಸ್ತ್ರಗಳಂ ಖಂಡಿಸಿ ನಿನ್ನಸ್ತ್ರಗಳಂ ಪೇಳಬೇಕು. ಪರಾಕ್ರಮವನ್ನು ಹೇಳಿಕೊಳ್ಳಬೇಕು. ಮುಂದೆ ನಡಿಸುವ ಯುದ್ಧದಿಂದ ನಮ್ಮ ಪರಾಕ್ರಮವನ್ನು ನೀನೆ ತಿಳಿದುಕೊಳ್ಳುವಿ ಎಂದು ಪೇಳೆ, ಶೂರನಿದಂ ಕೇಳಿ ಅತಿ ಕೋಪದಿಂ ಶರಸಂಧಾನವನ್ಮಾಡಿ ಬಾಣಗಳಂ ವರ್ಷಿಸಲಾಗಿ, ಆ ಬಾಣಗಳು ಭೂತಗಣಗಳಿಂದಲು ವೀರರಿಂದಲು ಬಿಡಲ್ಪಟ್ಟ ತರುಗಿರಿ ಮುಂತಾದವುಗಳಂ ಭೇದಿಸಿ, ಮಹತ್ತರವಾದ ಜಲದಲ್ಲಿ ಬಿದ್ದವೆಂದು ಸೂತಂ ಶೌನಕಾದಿ ಮುನಿಗಳಿಗೆ ಪೇಳಿದ ಸಂಬಿಲ್ಲಿಗೆ, ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಶಂಕರ

ಸಂಹಿತೆಯ ಶಿವರಹಸ್ಯ ಖಂಡದೊಳು ಯುದ್ಧಕಾಂಡದಲ್ಲಿ ಮುವ್ವತ್ತನೆಯ
ಅಧ್ಯಾಯವು ಸಮಾಪ್ತವಾದುದು.

ಮುವ್ವತ್ತೊಂದನೆಯ ಅಧ್ಯಾಯವು.

ಶೂರಪದ್ಮಾಸುರನ ಯುದ್ಧಾರಂಭವು.

ಎಲೈ ಋಷಿಗಳಿರಾ! ಅನಂತರದಲ್ಲಿ ಶೂರಪದ್ಮನ ಶರಘಾತದಿಂ ಕೆಲಂಬರು ಶಿರೋರಹಿತರಾಗಿಯು ಕೆಲವರು ಉರೋವಿಹೀನರಾಗಿಯು ಮೃತರಾದರು. ಕೆಲಂಬರು ಮೂರ್ಛೆಯನ್ನೈದಿದರು. ಆಗ ವೀರಬಾಹು ಮೊದಲಾದ ಕೆಲಂಬರು ವೀರರು ಗುಂಪಾಗಿ ಸೇರಿ ಅಸ್ತ್ರಗಳಂ ವರ್ಷಿಸಲಾಗಿ, ಅವುಗಳು ಆತನ ಉರದಲ್ಲಿ ಬಿದ್ದು ಕುಂಠಿತವಾದವು. ಬಳಿಕ ಶೂರನು ಅನೇಕಾಸ್ತ್ರಗಳಂ ಬಿಟ್ಟು ಅವರ ಶರಗಳಂ ಛೇದಿಸಿ ಮರಳಿ ಬಿಡೆ, ಮರಳಿ ಛೇದಿಸೆ ವೀರರ ಶರಂಗಳಂ ಛೇದಿಸಿ ಅವರ ಧನುಸ್ಸುಗಳಂ ಶಿರಸ್ಸುಗಳಂ ಉರಸ್ಸುಗಳಂ ಶರಂಗಳಿಂದೆಚ್ಚು ಮರಳಿ ಕೋಲಾಹಲ ಧ್ವನಿಯಮ್ಮಾಡಿ, ಚಕ್ರಾಕೃತಿಯಾಗಿ ರಥವಂ ತಿರಿಗಿಸುತ್ತ ಅವರನ್ನು ಹೀಯಾಳಿಸಿದನು. ಆ ಸಮಯದಲ್ಲಿ ವೀರರು ಶೂರನ ಶರಧಾರೆಗಳಿಂ ನೆನೆಯಲ್ಪಟ್ಟ ದೇಹಗಳುಳ್ಳವರಾಗಿ, ಅತ್ಯಂತ ಭಯಪಟ್ಟು ಪಲಾಯನವನ್ನೈದಿದರು. ಆಗ ವೀರಬಾಹುವು ಕೋಪದಿಂ ಬಂದು ಆತನ ರಥವಂಮುರಿದು ಕರವಾಳದಿಂದಾತನ ಧನುವಂ ಛೇದಿಸಲಾಗಿ, ದೈತ್ಯನು ತನ್ನ ಸಮೀಪಕ್ಕೆ ಬಂದ ಆ ವೀರಬಾಹುವಂ ಕರದಿಂತಾಡಿಸೆ ಆತನು ಆ ಕರಘಾತದಿಂದ ಮೂರ್ಛೆಯನ್ನೈದಿದನು. ಆ ಸಮಯದಲ್ಲಿ ಶೂರಪದ್ಮನು ಶೂರನ ವಧೆಯಮ್ಮಾಡಬಾರದೆಂದು ಯೋಚಿಸಿ ಆತನ ಪಾದವಂ ಪಿಡಿದು ಆಕಾಶಕ್ಕಿಡೆ, ಆ ವೀರಬಾಹುವು ಆ ಘಾತದಿಂ ಪೋಗಿ ಮೂರ್ಛೆಯಂ ತಿಳಿದು ಕ್ಷಣದಿಂ ಕುಮಾರಸ್ವಾಮಿಯ ಬಳಿಗೆ ಬಂದನು. ಬಳಿಕ ದಾನವನು ಕೋಪದಿಂ ಕ್ರೌಂಚ ಪರ್ವತಕ್ಕೆ ಸಮಾನವಾದ ಶತ್ರು ಭಂಗಕರವಾದ ನಾರಿಯಂ ಹೂಡಿ ಕರದಿಂ ಬಡಿಯೆ, ಆಗ ಅತ್ಯಂತ ಭಯಂಕರವಾದ ಧ್ವನಿಯು ಪುಟ್ಟಿ ಅದರಿಂದ ಜಗತ್ತೆಲ್ಲವು ಭಯಾಕ್ರಾಂತವಾದುದು. ಬಳಿಕ ಶೂರಾಧಿಪನಾದ ವಿಷ್ಣು ಬ್ರಹ್ಮ ಮುಂತಾದವರ ಸಂಹಾರ ಕಾಲದಲ್ಲಿ ಕೈಲಾಸಗಿರಿಯಾದ, ಬ್ರಹ್ಮಾಂಡದ ಭಿತ್ತಿ ಪರ್ಯಂತವು ಬೆಳೆವ ಸುಬ್ರಹ್ಮಣ್ಯನು, ಅತ್ಯಂತ ಉನ್ನತವಾದ ಧನುಶ್ರೇಷ್ಠವಾದ ಕೋದಂಡವಂ ತೆಗೆದು ಕ್ರೋಂಪು ನಾರಿಯಂ ಹೂಡೆ, ಮೇರು ಬೀಳುವಂತೆಯು ಭೂಮಿಯು ಆಕಾಶವು ಏಕವಾದಂತೆಯು ಧ್ವನಿಯುಂಟಾದುದು.

ಬಳಿಕ ಶೂರಪದ್ಮನು ಕೋಪದಿಂ ಕೋಟಿ ಸಹಸ್ರ ಕೋಟಿ ದಶ ಸಹಸ್ರ ಕೋಟಿ ಸಂಖ್ಯಾತವಾದ ಜಗತ್ತಿಗೆ ವೇದನೆಯುಮ್ಮಾಡುವ ದಾವಾಗ್ನಿ ಸದೃಶವಾದ ಯಮನಂತೆ ಭಯಂಕರವಾದ, ಅಂಡವನ್ನೊಡೆಯಲು ಸಮರ್ಥವಾದ ಪ್ರಭೆಯುಳ್ಳ ಕೃಷ್ಣಲೋಹಿತಂಗಳಾದ ಶರಗಳಂ ವರ್ಷಿಸಲಾಗಿ, ದೇವತೆಗಳು

ಅತ್ಯಂತ ಭೀತರಾಗಿ ಖಿನ್ನತೆಯನ್ನೈದಿ, ಎಲೆ ಸಾಧವನೆ! ಈ ನಮಗೆ ಶರ ಘಾತ ವಿರಹಿತವಾದ ಸ್ಥಾನವಾವುದು? ಎಂದು ಕೇಳೆ, ಆ ದೇವತೆಗಳಿಗೆ ಉತ್ತರ ವನ್ನು ಕೊಡುವಷ್ಟರೊಳಗೆ ಅಗ್ನಿ ಜನ್ಯನಾದ ಕುಮಾರಸ್ವಾಮಿಯು ಬಾಣ ಗಳಂ ಬಿಟ್ಟು, ಆ ದೈತ್ಯನಿಂದ ಬಿಡಲ್ಪಟ್ಟ ಶರಗಳಂ ಖಂಡಿಸಲಾಗಿ, ದೇವತೆಗ ಳದಂ ಕಂಡು ಸಂತೋಷವನ್ನೈದಿದರು. ಮರಳಿ ಶೂರನು ಗುಹನ ಮೇಲೆ ಅಸ್ತ್ರಗಳಂ ವರ್ಷಿಸೆ, ಧರ್ಮಾತ್ಮನಾದ ಆ ಕುಮಾರಸ್ವಾಮಿಯು ಆ ಧನುವಂ ಛೇದಿಸಿ ಮರಳಿ ಬಿತೆ ಅವಂ ಚೂರ್ಣವನ್ಮಾಡಿ ಆ ದೈತ್ಯನ ಮೇಲೆ ಶತ ಬಾಣಂ ಗಳಂ ಬಿಡಲಾಗಿ, ಶೂರನು ಆ ಶರಗಳಂ ಖಂಡಿಸಿ ದ್ವಿಸಹಸ್ರ ಬಾಣಗಳಂ ಬಿಟ್ಟನು. ಬಳಿಕ ಗುಹನು ಅವಂ ಛೇದಿಸಿ ಆತನ ಮೇಲೆ ದ್ವಿಸಹಸ್ರ ಬಾಣ ಗಳಂ ಪ್ರಯೋಗಿಸಲಾಗಿ, ಶೂರನವಂ ಛೇದಿಸಿ ಪಾತಾಳವು ಭೂಮಿಯು ಕಂಪಿಸುವಂತೆ ಘರ್ಜಿಸಿ ಕೋಟಿ ಬಾಣಂಗಳಂ ವರ್ಷಿಸೆ, ಗುಹನು ಒಂದು ನೂರು ಶರಘಾತದಿಂ ಹಾಗೆ ಮಾಡಿದನು. ಹೀಗೆ ಅನ್ಯೋನ್ಯಾಸ್ತ್ರ ಯುದ್ಧಮುಂಟಾಗೆ, ಆಗ ಒಬ್ಬರೊಬ್ಬರ ಶರಗಳ ಸಂಘಟನೆಯಿಂ ಅಗ್ನಿ ಪುಟ್ಟಿದುದು. ಆಕಾಶವು ಗಂಗೆಯು ಸಮುದ್ರವು ಶೋಷಿಸಿದವು. ವೀರಲಕ್ಷ್ಮಿಯು ಸಮೀಪದಲ್ಲಿ ಇವರ ಪರಾಕ್ರಮವನ್ನು ನೋಡುತ್ತ ತಾನು ವರಿಸಲು ಜಯಶಾಲಿಯಾರೆಂದು ಇವ ರೀರ್ವರ ಮಧ್ಯದಲ್ಲಿ ನಿಂತಿರ್ದಳು. ಆಗ ಅವರ ಶರೀರಗಳು ಶರಗಳಿಂದಾಚ್ಛಾ ದಿಸಲ್ಪಟ್ಟುವು.

ಶೂರಪದ್ಮ ಕುಮಾರದೇವನ ಯುದ್ಧ ವರ್ಣನೆ.

ಅನಂತರದಲ್ಲಿ ಶೂರನು ಆತನ ರಥದ ಮೇಲಿರುವ ದೊಡ್ಡದಾದ ಧ್ವಜವಂ ಬಾಣಗಳಿಂ ಛೇದಿಸಿ ಕೋಲಾಹಲ ಧ್ವನಿಯನ್ಮಾಡಿ ಅನೇಕಾಸ್ತ್ರಗಳಂ ಬಿಡ ಲಾಗಿ, ದೇವೇಶನಾದ ಸ್ವಾಮಿಯು ಶರಗಳಿಂದ ಆ ಅಸ್ತ್ರಜಾಲಗಳಂ ಛೇದಿಸಿ ಸಮುದ್ರದಲ್ಲಿ ಕೆಡಹಿ ಆತನ ರಥಧ್ವಜಗಳಂ ಸಪ್ತಶರಗಳಿಂ ಛೇದಿಸಿದನು. ಆ ಬಳಿಕ ಭಾಸುಕಂಪನೆಂಬ ಗಣಾಧೀಶ್ವರನು ಸಹಸ್ರ ಮುಖವಾದ ಶಂಖವಂ ತೆಗೆದು ಸಮಸ್ತ ಶಬ್ದಗಳಂ ಮರೆಸುವಂತೆ ಅತ್ಯಂತ ಶಂಖಧ್ವನಿಯನ್ಮಾಡ ಲಾಗಿ, ಅದು ಅನೇಕ ಯೋಜನ ಪರ್ಯಂತ ವ್ಯಾಪಿಸಿ ಅಂಡದ ಭಿತ್ತಿಯಂ ಮುಟ್ಟಿ ಮರಳಿ ಬಂದುದು. ಹರಿಯು ಪಾಂಚಜನ್ಯವೆಂಬ ಶಂಖಧ್ವನಿಯನ್ಮಾಡಿದನು. ಅಗ್ನಿಯು ದೇವತೆಗಳಿಂ ಕಳುಹಲ್ಪಟ್ಟು ಕುಕ್ಕುಟ ಧ್ವಜರೂಪದಿಂ ಗುಹನ ರಥ ದಲ್ಲಿ ಕುಳಿತು ಮಹಾ ಪ್ರಳಯಕಾಲದ ಮೇಘದಂತೆ ಧ್ವನಿಯನ್ಮಾಡಲಾಗಿ, ಅದನ್ನು ನೋಡಿ ಯೆಲ್ಲರು ಸಂತುಷ್ಟರಾಗಿ ಕೋಲಾಹಲ ಧ್ವನಿಯನ್ಮಾಡಿದರು. ಬಳಿಕ ಶೂರನಿದಂ ಕೇಳಿ ನನಗೆ ಕೃಪೆಯನ್ನು ಮಾಡುತಲಿರುವ ಮಾಧವನು

ಮುಂತಾದ ದೇವತೆಗಳು ಪಲಾಯನವಾದೊಡಂ ಈ ಬಾಲಕನು ನನ್ನ ಮುಂದೆಯೆ ಇರುತಿಧಾನೆ. ನಭಸ್ಥಳದಲ್ಲಿ ನನ್ನ ಬಲಕ್ಕೆ ಶಕ್ಯವಾರಿಗೂ ಆಗ ದೆಂದು ಚಿಂತಿಸಿ ಅನೇಕ ಶರಗಳಂ ಕರೆಯೆ, ಅಮರೇಶ್ವರನಾದ ಗುಹನು ಪ್ರತ್ಯಸ್ತ್ರ ಗಳಿಂದವಂ ಛೇದಿಸಿದನು. ಆ ಸಮಯದಲ್ಲಿ ಯುದ್ಧವನ್ಮಾಡುತಲಿರುವ ಅವ ರೀರ್ವರ ರಥಂಗಳು ವಾಯುಭ್ರಮಣವೋ ಇವರೀರ್ವರ ಚಕ್ರಗಳೋ ರಾಶಿ ಚಕ್ರವೋ ಕುಲಾಲನ ಚಕ್ರವೋ ಎಂಬಂತೆ ತಿರುಗಿದವು. ಮತ್ತೆ ಪ್ರಕಾಶಮಾನ ರಾದ ಅವರೀರ್ವರು ಭೂಪಾತಾಳ ದಿಕ್ಕು ಸಮುದ್ರ ಪರ್ವತ ಇಂದ್ರಲೋಕ ಬ್ರಹ್ಮಲೋಕ ವಿಷ್ಣುಲೋಕ ಚಕ್ರವಾಳ ಗಿರಿ ಮುಂತಾದ ತಲೋಲೊಕ ಅಂಡ ಭಿತ್ತಿ ಬ್ರಂಹ್ಮಾಂಡ ಮೂಲಗಳಂ ಪ್ರವೇಶಿಸಿ ಯುದ್ಧವನ್ಮಾಡಿದರು. ಈ ಪ್ರಕಾರದಿಂ ಸುತ್ತುತಲಿರುವ ಅವರೀರ್ವರ ರಥರಭಸದಿಂದ ಸರ್ವರು ಅಂಜಿದರು. ಭೂಮಿಯು ಕಂಪಿಸಿತು. ಸಪ್ತಸಮುದ್ರಂಗಳು ನಡುಗಿದವು. ಪರ್ವತಂಗಳು ನಡುಗಿದವು. ಪರ್ವತಂಗಳು ಪುಡಿಪುಡಿಯಾದವು. ಬ್ರಹ್ಮಾಂಡವು ಚಲಿಸಿತು. ತಾರೆಗಳು ಮೇಘಂಗಳು ಸರ್ವತ್ರ ಬಿದ್ದವು. ಆಗ ಶೂರನು ಅಗ್ನಿಬಾಣಗಳಂ ವರ್ಷಿಸುತ್ತ ಮಧ್ಯೆ ಮಧ್ಯೆ ಪರಶು ಕುಲಿಶ ವಜ್ರ ಶೂಲ ಮುಸಲ ಶಕ್ತಿ ಭಿಂಡಿ ವಾಳ ತೋಮರ ಹಲಾಯುಧಂಗಳಂ ವರ್ಷಿಸಿದನು. ಆಗ ಗುಹಸ್ವಾಮಿಯು ದೇವತಾ ಸಂಬಂಧವಾದ ಅಸ್ತ್ರಗಳಿಂ ಅವುಗಳಂ ಛೇದಿಸಿದನೆಂದು ಸೂತಂ ಪೇಳಿದ ನೆಂಬಲ್ಲಿಗೆ, ಯುದ್ಧಕಾಂಡದಲ್ಲಿ ಮುವ್ವತ್ತೊಂದನೆಯ ಅಧ್ಯಾಯವು ಸಮಾಪ್ತಮಾದುದು.

ಮುಪ್ಪತ್ತೆರಡನೆಯ ಅಧ್ಯಾಯವು.

ದೇವದೇವಕುಮಾರ ಶೂರಪದ್ಮರ ಯುದ್ಧವು.

ಕೇಳಿರೈ ಋಷಿಗಳಿರಾ! ಬಳಿಕ ಗುಹನು ಚತುರ್ದಶಾಸ್ತ್ರಗಳಂ ಬಿಟ್ಟು ಆತನ ರಥತುರಗಗಳಂ ಸಂಹರಿಸಲಾಗಿ, ಶೂರನು ಆ ರಥದಿಂದಿಳಿದು ಭೂಮಿ ಯಲ್ಲಿ ನಿಂತು ಧನುರ್ಧರನಾಗಿ ಸುಬ್ರಹ್ಮಣ್ಯನಮೇಲೆ ಕೋಪದಿಂ ಅನಂತಬಾಣ ಗಳಂ ಬಿಡೆ, ದೇವನಾಯಕನಾದ ಆ ಕುಮಾರಸ್ವಾಮಿಯು ಅಭಿಮುಖವಾಗಿ ಆ ಶರಗಳಂ ಬಾಣಗಳಿಂ ಖಂಡಿಸಿ ಕೋಲಾಹಲ ಧ್ವನಿಯಂ ಮಾಡಿದನು. ಆಗ ಆ ಶರಗಳು ಆತನಮೇಲೆ ಬಿದ್ದು ಭಸ್ಮವಾದವು. ಆ ಸಮಯದಲ್ಲಿ ಶೂರನದಂ ಕಂಡು ಮಹಾ ಕೋಪದಿಂ ಜ್ವಲಿಸಿ ಭೂತಸೈನ್ಯಗಳಲ್ಲಿಯುಂ ವೀರಮುಗಳಲ್ಲಿಯುಂ ಅನಂತ ಶರಗಳಂ ಬಿಡೆ, ಗುಹನು ಸಹಸ್ರಬಾಣಗಳಂ ಬಿಟ್ಟು ಆತನ ಧನು

ವನ್ನು ಖಂಡಿಸಿದನು. ಆಗ ಶೂರನು ಪ್ರತಿಧನುವಂ ಧರಿಸಿ ಆಕಾಶದಲ್ಲಿ ನಿಂತು ಶರಗಳಂ ವರ್ಷಿಸಲಾಗಿ, ಗುಹನಾಕಾಶಕ್ಕೆ ಪೋಗಿ ಯುದ್ಧಮಂ ಮಾಡಿದನು. ಮರಳಿ ಆ ಅಸುರನು ಯುದ್ಧವಂ ಮಾಡುವನೋಪಾದಿಯಲ್ಲಿ ಭೂಮಿಗೆ ಬರೆ; ಸ್ವಾಮಿಯು ಅಲ್ಲಿಗೆ ಬಂದು ಯುದ್ಧಮಂ ಮಾಡಿದನು. ಬಳಿಕ ಶೂರಪದ್ಮನು ಪಾತಾಳ ಸಮುದ್ರ ಚಕ್ರವಾಳ ಗಿರಿ ಮೇರು ಮುಂತಾದ ಸ್ಥಾನಗಳಿಗೆ ಪೋಗಿ ಬಾಣಗಳಂ ವರ್ಷಿಸಲಾಗಿ, ಗುಹನು ಕ್ಷಣದಿಂ ದಲ್ಲಿಗೆ ಪೋಗಿ ಆತನ ರಥಮಂ ಖಂಡಿಸಿದನು. ಆಗ ಶೂರನು ಇಂದ್ರಲೋಕ ರಥವನ್ನು ಸ್ಮರಿಸಲಾಗಿ ಅತಿವೇಗ ದಿಂ ಬಂದುದು. ಅನಂತರದಲ್ಲಿ ಅದರ ಮೇಲೆ ಕುಳಿತು ಶರಗಳಂ ವರ್ಷಿಸಿ ಆ ಶರಗಳಿಂದ ಪೂರ್ವದಲ್ಲಿ ಗುಹನ ಬಾಣಗಳಿಂದ ಮುಚ್ಚಲ್ಪಟ್ಟ ಬ್ರಂಹ್ಮಾಂಡ ದ್ವಾರಗಳಂ ಒಡದು ಪೂರ್ವದಂತೆ ದ್ವಾರಮಾದುದು. ಆ ಸಮಯದಲ್ಲಿ ಅನೇಕ ದೈತ್ಯರು ಅಂಡಾಂತರದಿಂ ಅಂಡಮಧ್ಯಕ್ಕೆ ಬರಲಾಗಿ, ವಿಷ್ಣು ಮುಂತಾದ ದೇವತೆ ಗಳು ಆ ಚತುರಂಗ ಬಲಮಂ ಕಂಡು, ಘೋರಂಗಳಾದ ಹಾಲಾಹಲಂಗಳೋ ಅನೇಕ ವಜ್ರಾಯುಧಂಗಳೋ ಕಾಲಾಗ್ನಿ ರುದ್ರನ ಧೂಮಸಮೂಹವೋ, ಅಂಡದ ಪೊರವಳಯದಲ್ಲಿನ ಉದಕರಾಶಿಗಳು ಬಂದವೋ ಏನೋ, ಎಂದು ಆಲೋಚಿಸಿ ಭಯಯುಕ್ತರಾಗಿ ಆ ಕುಮಾರಸ್ವಾಮಿಯ ಸಮೀಪಕ್ಕೆ ಬಂದರು.

ಆ ಸಮಯದಲ್ಲಿ ದೈತ್ಯರು ಗುಹನನ್ನಾವರಿಸಿಕೊಂಡು ಬಾಣಗಳಂ ವರ್ಷಿಸ ಲಾಗಿ, ಗುಹನು ಮಂದಹಾಸವಂ ಗೈದು ಅವರಂ ನೋಡಿ ಹೂಂ ಕಾರನಂಮಾಡಿ ಭಸ್ಮೀಕರಿಸಿ, ಮರಳಿ ಮರಳಿಬರೆ ಮರಳಿ ಭಸ್ಮೀಕರಿಸಿ, ಚಕ್ರ ಪರಶುದಂಡ ಮುದ್ಗರ ಮುಸಲ ಖಡ್ಗಗಳಂ ಬಿಟ್ಟು ಆ ಅಂಡದಲ್ಲಿರುವ ಅಸುರರಂ ಸಂಹರಿ ಸಲು ಪಂಚಾಯುಧಂಗಳಿಗೆ ಆಜ್ಞಾಪಿಸೆ, ಅವುಗಳು ಶೀಘ್ರದಿಂ ಪೊರಮಟ್ಟು ಆಗುಹನ ಸಮೀಪದಲ್ಲಿರುವ ದೈತ್ಯರಂ ಸಂಹರಿಸಿ, ಅನೇಕವಿಧವಾಗಿ ಬ್ರಹ್ಮಾಂ ಡಂಗಳಂ ಪ್ರವೇಶಿಸಿ, ಅಲ್ಲಲ್ಲಿರುವ ಅಸುರರಂ ಸಂಹರಿಸಿದವು. ಬಳಿಕ ಶೂರನು ಸರ್ವಸಂಹಾರಕವಾದ ಪಾಶುಪತಾಸ್ತ್ರಮಂ ಬಿಡೆ, ಸ್ವಾಮಿಯು ಕರವನ್ನೀಡಿ ಆ ಅಸ್ತ್ರಮಂ ಹಿಡಿಯಲಾಗಿ, ಶೂರನದಂ ಕಂಡು ತನ್ನಹೃದಯದಲ್ಲಿ ಶೋಕವಂ ಮಾಡಿ ಬಹು ರೂಪಮಂಧರಿಸಿ ಯುದ್ಧಮಂ ಮಾಡಿದನು. ಆಗ ಗುಹನು, ಆತನ ಆಕಾರವಂ ನೋಡಿ, ವಿಧವಿಧವಾದ ಅಸ್ತ್ರಗಳಂ ಪ್ರಯೋಗಿಸಲಾಗಿ, ಶೂರನು ಮಾಯಾರಹಿತನಾಗಿ ನಿಂತನು. ಬಳಿಕ ಬ್ರಹ್ಮಾದಿಗಳದಂ ಕಂಡು ಕುಸುಮ ಗಳಂ ಚಲ್ಲುತ ಕೋಲಾಹಲ ಧ್ವನಿಯಂ ಮಾಡಿದರು. ಶೂರನು ಬ್ರಹ್ಮಾಂಡ ಮಂ ದಾಟಿದವನಾಗಲು ಕುಮಾರಸ್ವಾಮಿಯು ಅಲ್ಲಿಗೆ ಪೋದನು. ಈ ಪ್ರಕಾರ ವಾಗಿ ಅವರೀರ್ವರು ಅಂಡಾಂತರಕ್ಕೆ ಪೋಗಿಯು ಯುದ್ಧಮಂ ಮಾಡಿ, ಮರಳಿ

ಮತ್ತೊಂದು ಅಂಡಕ್ಕೆ ಸಾರಿ ಅಲ್ಲಿಯು ಘೋರವಾದ ಯುದ್ಧವಂ ಮಾಡುತ್ತಿರೆ, ಶೂರನು ತನ್ನ ಆಳ್ವಿಕೆಯ ಸಾವಿರದೆಂಟು ಅಂಡಗಳಿಗೆ ಪೋಗಿ ಅಲ್ಲಲ್ಲಿ ಅಸುರರಂ ಕೂಡಿಸಿ ಕೊಂಡು ಯುದ್ಧವಂ ಮಾಡಲಾಗಿ ಕುಮಾರನು ಅಲ್ಲಲ್ಲಿಗೆ ಗಮಿಸಿ ಯುದ್ಧವನೆಸಗಿದನು. ಆಗ ಬ್ರಹ್ಮಾದಿ ದೇವತೆಗಳು ವಿಷ್ಣುವಂ ನೋಡಿ, ಎಲೈ ವಿಷ್ಣುವೆ! ಪರಮವಂಚಕನಾಗಿ ದುರ್ಜನನಾದ ಶೂರನು ಅಂಡಂಗಳಂ ಪ್ರವೇಶಿಸಿ ನಮಗೀಶ್ವರನಾದ ಕುಮಾರನಂ ಯುದ್ಧಕ್ಕೆ ಕರೆದು ಕೊಂಡು ಪೋದನು. ಆ ವಂಚಕನ ವಾಕ್ಯದಿಂ ಅಂಡಾಂತರವನ್ನು ಪ್ರವೇಶಿಸಿದನು. ದೇವನು ಆ ವಂಚಕನಂ ಕಂಡನೋ ಇಲ್ಲವೋ, ಯುದ್ಧ ಮುಂಟಾದುದೋ ಇಲ್ಲವೋ ನಮಗೆ ಬಹುಭೀತಿ ಯುಂಟಾಗುತಲಿರ್ಧೆಯೆಂದು ನುಡಿಯಲಾಗಿ ವಿಷ್ಣುವು ಎಲೈ ದೇವತೆಗಳಿರಾ! ನಿಮಗೇನು ಭಯವು? ಷಣ್ಮುಖನು ಸಾಕ್ಷಾತ್ಪರಶಿವನು, ಧನುರ್ವಿದ್ಯೆಯಲ್ಲಿ ಮಹಾ ಸಮರ್ಥನು. ಆತನ ಬಲವೇ ಅಧಿಕವಾದದ್ದು, ಸಮಸ್ತವನ್ನೂ ನೀವೇ ಬಲ್ಲಿರಿ, ಸಂಶಯ ಪಡಬೇಡಿರಿ, ಬೇಗಬರುವನೆಂದು ಪೇಳೆ ಸಂತೋಷ ವನ್ನೈದಿದರು. ಆ ಸಮಯದಲ್ಲಿ ಶೂರನು ಸಮಸ್ತಾಂಡಂ ಗಳಲ್ಲಿಯು ಯುದ್ಧವಂ ಮಾಡಿ ಈ ಅಂಡವಂ ಪ್ರವೇಶಿಸಲಾಗಿ, ಕುಮಾರ ಸ್ವಾಮಿಯು ಇಲ್ಲಿಯು ಆತನ ಮುಂದೆ ನಿಂತು ಯುದ್ಧವಂ ಮಾಡುತಿರೆ, ಆಗ ಮಹೇಂದ್ರ ಪರ್ವತಾಕಾರರಾದ ಕೆಲಂಬ ದೈತ್ಯರು ಕುಮಾರನ ಮೇಲೆ ಬಾಣ ಗಳನ್ನು ಪ್ರಯೋಗಿಸಲಾಗಿ. ಆತನು ಮಂದಸ್ಮಿತದಿಂ ನೋಡಿ ಅವರಂ ಸಂಹ ರಿಸಿದನು. ದೇವತೆಗಳು ಕುಸುಮವೃಷ್ಟಿಯಂ ಕರೆಯುತ್ತ ಸುಬ್ರಹ್ಮಣ್ಯನಂ ಸ್ತುತಿಸಿದರು. ಯುದ್ಧಕಾಂಡದಲ್ಲಿ ಮುವ್ವತ್ತೆರಡನೆಯ ಅಧ್ಯಾ ಯವು ಸಂಪೂರ್ಣಮಾದುದು.

ಮುವ್ವತ್ಮೂರನೆಯ ಅಧ್ಯಾಯವು.

ಶೂರಪದ್ಮಾಸುರನು ಮಾಯಾದೇವಿಯ ಪ್ರಸನ್ನತೆಯಿಂದ ಸತ್ತ ದೈತ್ಯರೆಲ್ಲರನ್ನೂ ಬದುಕಿಸುವಿಕೆ.

ಎಲೈ ಋಷಿಗಳಿರಾ! ಈ ಪ್ರಕಾರದಿಂ ಸರ್ವ ದೈತ್ಯರು ಭಸ್ಮವಾಗಿ ಪೋದ ಬಳಿಕ ಸಮೀಪದಲ್ಲಿ ಸೇನೆಯಿಂದೊಡಗೂಡಿರುವ ಆ ಗುಹನಂ ನೋಡಿ ದುಃಖ ದಿಂ ಪೀಡಿತನಾಗಿ, ಮುಂದೇನು ಮಾಡಬೇಕೆಂದು ವಿಚಾರಿಸಿ ಅಸುರ ರೂಪಿಯಾದ ತನಗೆ ಮಾತೃವಾದ ತಪಸ್ಸುಮಾಡುವ ಮಾಯಾದೇವಿಯಂ ಸ್ಮರಿಸಲಾಗಿ ಆಕೆಯು ಮಹಾವೇಗದಿಂದ ದೈತ್ಯನ ಸಮೀಪಕ್ಕೆ ಬಂದಳು. ಆಗ ದೈತ್ಯನಾಕೆಯಂ

ಕಂಡು, ಎಲೈ ಮಾತೃವೆ! ಮೃತರಾದ ಸಮಸ್ತ ದೈತ್ಯರಂ ಮರಳಿ ಜೀವಂತರಂ ಮಾಡೆಂದು ನುಡಿಯಲಾಗಿ ಆ ದೇವಿಯು ಈ ವಚನವಂ ಕೇಳ್ದು ಆತನಂ ನೋಡಿ ಎಲೆ, ಮಹಾದೇವ ಸ್ವರೂಪನಾದ ಗುಹನಂ ನೀನು ನಿಂದಿಸಿದಿ; ಆಗ ನಾನು ಕೇಳಲ್ಪಡಲಿಲ್ಲವು, ಮೋಹಿತನಾದ ನೀನು ದುರ್ಜಯನಾದ ಆತನೊಡನೆ ಯುದ್ಧ ವಂ ಮಾಡಿದೆ, ಆಮಕಾರಣದಿಂದ ನಿನಗಾತನ ಶಕ್ತಿಯಿಂದ ಮರಣ ಉಂಟಾಗು ವದು, ಇದಕ್ಕೆ ಸಂಶಯುವಿಲ್ಲ, ಹಾಗಾದೊಡಂ ಮೃತರಾದ ದೈತ್ಯರು ಜೀವಿಸು ವಂತೆ ಮಾಡಿದೆನಾದರೆ ಎಂದಿನಂತೆ ಸಮರ್ಥರಾಗುವರು. ಮಹತ್ತರವಾದ ಸಮುದ್ರದ ತಳದಲ್ಲಿ ಮಂದರ ಪರ್ವತವಿರುವದು. ಅದು ಮೃತರಾದವರನ್ನು ಮರಳಿ ಜೀವಿಸುವಂತೆ ಮಾಡುವದಕ್ಕೆ ಶಕ್ತಿಯುಳ್ಳದ್ದು. ಅದನ್ನು ಶೀಘ್ರದಿಂ ತೆಗೆದುಕೊಂಡು ಬರುವನಾಗೆಂದು ಪೇಳಿ ಆಕೆಯು ಬಂದ ಮಾರ್ಗವಿಡಿದು ಪೋದಳು. ಬಳಿಕ ಅಸುರನು ಆ ವಾಕ್ಯವಂ ಕೇಳಿ ಸಂತೋಷಯುಕ್ತನಾಗಿ ಸಿಂಹವಾಹನನನೇರಿ ಮಂದರ ಪರ್ವತವಂ ತರಲು ಇಂದ್ರ ರಥವಂ ಕಳುಹಲಾಗಿ ಆ ರಥವಲ್ಲಿಗೆ ಪೋಗಿ ಆ ಗಿರಿಯಂ ತರೆ, ಆ ಮಂದರ ಪರ್ವತದ ವಾಯುವಿನಿಂದ ಶೂರಪುತ್ರರಾದ ಭಾನುಕೋಪ ಮುಂತಾದವರು ಈತಂಗೆ ಅನುಜರಾದ ಸಿಂಹ ಮುಖ ಮೊದಲಾದವರು ಮತ್ತೆ ಹತರಾದ ಸಮಸ್ತರು, ನಿದ್ರೆ ತಿಳಿದೆದ್ದವರಂ ತೆದ್ದು ಈ ಭೂಮಿಯು ಯುದ್ಧಸ್ಥಳದಂತಿದ್ದಿತೆಂದು ನೋಡಿ ಕೋಲಾಹಲ ಧ್ವನಿಯಂ ಮಾಡಿ ಅಲ್ಲಿ ಬಿದ್ದಿರುವ ಆಯುಧಂಗಳಂ ತೆಗದುಕೊಂಡು ಯುದ್ಧವಂ ಮಾಡಲು ಸನ್ನದ್ಧರಾಗಿ ನಿಂತರು.

ಕುಮಾರಾಸ್ತ್ರ ಪ್ರಭಾವದಿಂದ ಜೀವಿತರಾದ ದೈತ್ಯರುಗಳ ವಧೆ.

ಬಳಿಕ ಶೂರಪದ್ಮನು ಜೀವಂತರಾದ ಪುತ್ರ ಭ್ರಾತೃ ಮುಂತಾದ ಅಸುರರಂ ಕಂಡು ಸಂತೋಷಚಿತ್ತನಾಗಿ, ಇಂದ್ರಲೋಕ ರಥವಂ ಕೊಂಡಾಡಿ ದೇವತೆಗಳಂ ಜರೆದನು. ಆಗ ದೇವತೆಗಳು ದೂರದಲ್ಲಿಯೆ ಇವರಂ ಕಂಡು ತಮಗೆ ಅಸುರರಿಂ ವಧೆಯುಂಟೆಂದು ನಿಶ್ಚೈಸಿ ಓಡಿಪೋದೆ ಜಯವಿಲ್ಲೆಂದು ಯೋಚಿಸಿ ಚಕ್ರವಾಕ ನವಿಲು ಹಂಸ ಪಾರಿವಾಳ ಪಿಕ ಗೂಗೆ ದುಂಬಿ ಬಕಪಕ್ಷಿ ಮುಂತಾದ ರೂಪಂ ಗಳಂ ಧರಿಸಿ ತಮ್ಮತಮ್ಮ ಆಯುಧಂಗಳಂ ಬಿಟ್ಟು ಪಲಾಯನವನ್ನೈದಿದರು. ವೀರರು ಭೂತಗಣಗಳು ಸೇನಾಪತಿಗಳು ದುಃಖವನ್ನೈದಿದರು, ಸಚ್ಚಿದಾನಂದ ವಿಗ್ರಹನಾದ ಗುಹನು ಅವರಂ ನೋಡಿ ಮುಗುಳುನಗೆಯಿಂದ ಯುಕ್ತನಾಗಿ ಅಲ್ಲಿ ನಿಂತಿರ್ದನು. ಬಳಿಕ ಸಿಂಹಮುಖ ಮುಂತಾದ ಸಕಲ ದೈತ್ಯರುಂ ಶೂರನಿಂ ಯುದ್ಧಕ್ಕೆ ಅಪ್ಪಣೆಯಂ ಪಡೆದು, ಪತಂಗದ ಪುಳುಗಳು ದೀಪವಂ ಕೆಡಿಸಲು ಬಂದಂತೆ ಕುಮಾರಸ್ವಾಮಿಯಂ ಜಯಿಸಲಿಚ್ಛೈಸಿ ಆತನ ಮೇಲೆ

ಬಾಣಂಗಳಂ ಕರೆದರು. ಆಗ ವೀರರವರಾಟೋಪಮಂ ನೋಡಿ ಭಯಪಟ್ಟರು. ಬಳಿಕ ಧರ್ಮಾತ್ಮನಾದ ಷಣ್ಮುಖನು ಪರಮ ಪಾಪಿಗಳಾದ ಅಸುರರಮೇಲೆ ಸರ್ವಶತ್ರು ಸಂಹಾರಕಮಾದ ಪಾಶುಪತಾಸ್ತ್ರವಂ ಪ್ರಯೋಗಿಸಲಾಗಿ, ಆ ಅಸ್ತ್ರವು ಮಹಾ ಸರ್ಪ ಕುಲಿಶ ವಿಷ ಅನಂತ ರುದ್ರ ವಾಯು ಇತರ ಮಹಾ ಅಸ್ತ್ರಗಳ ಧಾರೆಗಳಂ ಮತ್ತೆ ಸಮುದ್ರ ಪರ್ವತ ಅಗ್ನಿಗಳಂತೆ ಘೋರಂಗಳಾದ ಶಸ್ತ್ರಂಗಳಂ ಉಗುಳುತ ಪೊರಮಟ್ಟು, ಆ ದೈತ್ಯರಿಂದ ಬಿಡಲ್ಪಟ್ಟ ಸಮಸ್ತ ಅಸ್ತ್ರಂಗಳಂ ಛೇದಿಸಿ, ಪಾಪಿಗಳಾದ ಆ ಅಸುರರಂ ಯಲ್ಲರನ್ನೂ ಒಂದೇಸಲ ಕೊಂದು ಆ ಮಂದರ ಪರ್ವತವಂ ಧೂಳಿಮಾಡಿ ಮರಳಿ ಶೀಘ್ರದಿಂದ ಆ ಸುಬ್ರಹ್ಮಣ್ಯ ಸ್ವಾಮಿಯ ಹಸ್ತವನ್ನೈದಿತು. ಶೂರನು ರಣಸ್ಥಳದಲ್ಲಿ ಓರ್ವನಾಗಿ ನಿಂತನು. ಆಗ ದೇವತೆಗಳು ಸಂತೋಷವನ್ನೈದಿದರು.

ಅನಂತರದಲ್ಲಿ ಶೂರನು ಅತ್ಯಂತವ್ಯಾಕುಲನಾಗಿ ವೀರರಂ ಭೂತಂಗಳಂ ಮಿಕ್ಕಾದ ಸೇನಾಪತಿಗಳಂ ಅಂಡದ ಪೊರವಳಯಕ್ಕೆ ಕೊಂಡು ಪೋಗೆಂದು ಇಂದ್ರಲೋಕ ರಥಕ್ಕೆ ಪೇಳಲಾಗಿ, ಆಗ ರಥವು ಪೊರಮಟ್ಟು ಆ ವೀರಾದಿಗಳಿಗೆ ಮೂರ್ಛೆಯಂ ಪುಟ್ಟಿಸಿ ಅವರಂ ಧರಿಸಿಕೊಂಡು ಬಹಿರಾವರಣಕ್ಕೆ ಪೋಗೆ, ಶೂರ ನದಂ ಕಂಡು ಸಂತೋಷವನ್ನೈದಿದನು. ದೇವತೆಗಳು ಭಯಪಟ್ಟು ಹಾಹಾ ಕಾರವಂ ಮಾಡಿ ದುಃಖಿಸಿದರು. ಬಳಿಕ ಕುಮಾರಸ್ವಾಮಿಯದಂ ತಿಳಿದು ಅನೇಕಾಸ್ತ್ರಂಗಳನ್ನು ಪ್ರಯೋಗಿಸಲಾಗಿ, ಆ ಅಸ್ತ್ರಂಗಳಲ್ಲಿಗೆ ಪೋಗಿ ಆ ವೀರರ ನ್ನೆಬ್ಬಿಸಿ ಆ ರಥದೊಡನೆ ಕುಮಾರಸ್ವಾಮಿಯ ಬಳಿಗೆ ಬಂದುವು. ಆಗ ವೀರರು ಮುಂತಾದ ಸಮಸ್ತ ಭೂತಂಗಳು ಆ ರಥದಿಂದಿಳಿದು ಕುಮಾರಸ್ವಾಮಿಗೆ ನಮ ಸ್ಕಾರವಂ ಮಾಡಿ ಸ್ತುತಿಸಿದರು. ಆ ವೇಳೆಯಲ್ಲಿ ಕುಮಾರಸ್ವಾಮಿಯು ಆ ಇಂದ್ರರಥವಂ ಕರೆದು ದೈತ್ಯನ ಸಮೀಪಕ್ಕೆ ಮರಳಿ ಪೋಗಬೇಕೆಂದಾಜ್ಞಾಪಿಸಿ ತಮ್ಮ ಸಮೀಪದಲ್ಲಿ ನಿಲ್ಲಿಸಿಕೊಂಡು, ಆ ಶೂರನಂ ನೋಡುತ ನಿಂತಿರ್ದನು. ಶೂರನಿದಂ ಕಂಡು ಕೋಪಿಸಿ ಘರ್ಮಕಾಲದ ಮೇಘದಂತೆ ಆ ಸ್ವಾಮಿಯ ಮೇಲೆ ಬಾಣಗಳನ್ನು ವರ್ಷಿಸಲಾಗಿ, ಆತನು ಬಾಣಗಳಿಂದಾ ಶರಂಗಳಂ ಖಂಡಿಸಿ ಮರಳಿ ಆ ದೈತ್ಯನ ಮೇಲೆ ಬಹು ಬಾಣಗಳಂ ಪ್ರಯೋಗಿಸಿದನು. ಬಳಿಕ ದೈತ್ಯನು ತನಗಭಿಮುಖನಾಗಿ ಬರುತಲಿರುವ ಶರಂಗಳಂ ಛೇದಿಸಿ ಸಾರಥಿಯಾದ ವಾಯುವಿನ ಮೇಲೆ ಬಹು ಬಾಣಂಗಳಂ ಬಿಟ್ಟು ಆತನ ಶರೀರವಂ ರಕ್ತಮಯ ಮಮ್ಮಾಡಿ ರಥವನ್ನು ನಡಸುವದಕ್ಕೆ ಅಶಕ್ತನಮ್ಮಾಡಲಾಗಿ, ಕುಮಾರಸ್ವಾಮಿ ಯದಂ ಕಂಡು ಬಾಣಗಳಂ ಬಿಟ್ಟು ಅವನ ಧನುವಂ ಖಂಡಿಸಿದನು. ಬಳಿಕ ಶೂರನು ಕುಪಿತನಾಗಿ ಸಿಂಹಾಸನವಂ ಬಿಟ್ಟು ಶೂಲವಂ ತೆಗೆದುಕೊಂಡು

ಸ್ವಾಮಿಯ ಸಮೀಪಕ್ಕೆ ಬರೆ, ಸಿಂಹವು ಶೀಘ್ರದಿಂ ಲಂಘಿಸಿ ಆ ಕುಮಾರ ಸ್ವಾಮಿಯ ರಥಾಶ್ವಂಗಳಂ ಹಸ್ತಪಾದಂಗಳಂ ಪಿಡಿದು ಘೋರವಾದ ಧ್ವನಿಯನ್ನಾಮಾಡಿತು. ಶೂರನು ಶೂಲವಂ ಸ್ವಾಮಿಯ ಮೇಲೆ ಬಿಡಲಾಗಿ ಅದು ಅಗ್ನಿ ವಿಷಕುಲಿಶ ಭೂತಾದಿಗಳನ್ನು ಉಗುಳುತ್ತ ಸ್ವಾಮಿಯ ಸಮೀಪಕ್ಕೆ ಬರಲಾಗಿ, ಗುಹನು ಕೋಟಿ ಶರಗಳನ್ನು ಪ್ರಯೋಗಿಸಿದರೂ ಅವುಗಳಂ ಛೇದಿಸಿ ಬರುತಿರಲು, ಮರಳಿ ಕುಲಿಶವಂ ಬಿಟ್ಟು ಅದರಿಂದಾ ಶೂಲವನ್ನು ವಶಮಾಡಿಕೊಂಡನು. ಆಗ ದೇವತೆಗಳು ಸ್ತುತಿಸಲಾಗಿ, ಕುಮಾರಸ್ವಾಮಿಯು ದ್ವಿಸಹಸ್ರ ಬಾಣಗಳಿಂದ ಆತನ ಸಿಂಹವಂ ನೊಯ್ಯಿಸಿ ಸಂಹಾರವಂ ಮಾಡಿದನು. ಬಳಿಕ

ಶೂರನು ಚಕ್ರವಾಕ ಪಕ್ಷಿಯ ರೂಪವಂ ಧರಿಸಿ ಆಕಾಶಕ್ಕೆ ಪೋದನೆಂದು
ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ, ಯುದ್ಧಕಾಂಡದಲ್ಲಿ
ಮುವ್ವತ್ಮೂರನೆಯ ಅಧ್ಯಾಯವು ಸಂಪೂರ್ಣಂ.

ಮುವ್ವತ್ನಾಲ್ಕನೆಯ ಅಧ್ಯಾಯವು.

ಶೂರಪದ್ಮರಕ್ಕಸನ ಮಾಯಾ ಯುದ್ಧ.

ಅನಂತರದಲ್ಲಿ ಚಕ್ರವಾಳಪಕ್ಷಿಯ ರೂಪವಂ ಧರಿಸಿದ ಶೂರಪದ್ಮನು ಆಕಾಶದಲ್ಲಿ ನಿಂತು ಪಕ್ಷಘಾತದಿಂ ಬಲಾಧಿಕರಾದ ಭೂತಂಗಳಂ ವೀರರಂ ಮೂರ್ಛೆಯನ್ನೈದಿಸಿ, ಕೊಕ್ಕಿನಿಂ ಕೆಲಂಬರಂ ಕೆಡಹಿ ಕಡಿದು ಮತ್ತೆ ಕೆಲಂಬರಂ ಆಕಾಶಕ್ಕೆ ಕಡಿದು ಬಿಟ್ಟು ಪಾದಂಗಳಿಂ ಕೆಲಂಬರಂ ಶೀಳಿ ರಥದ ಮೇಲೆ ವೇಗದಿಂ ತಿರುಗುತ್ತ, ಅಗ್ನಿಸಾರಥಿಯಾದ ವಾಯುವಂ ಆತನ ರಥವಂ ಪಾದದಿಂದಾಕಾಶಕ್ಕಿಟ್ಟು, ಗಗನಕ್ಕೆ ಪೋಗಿ ಮರಳಿ ಬಂದು ಸ್ವಾಮಿಯ ರಥಾಶ್ವಂಗಳಂ ನೊಯ್ಯಿಸಿ, ಘೋರಂಗಳಾದ ಅಸ್ತ್ರಂಗಳಂ ಮುರಿಯುತ್ತಿರ್ದನು. ಆಗ ಕುಮಾರಸ್ವಾಮಿಯು ಹಂಸರೂಪನಾದ ಶೂರನ ಯುದ್ಧವಂ ಕಂಡು ಅನೇಕಂಗಳಾದ ಅಸ್ತ್ರಂಗಳಂ ವರ್ಷಿಸಲಾಗಿ, ಶೂರನು ಆ ಸಮಸ್ತ ಬಾಣಂಗಳಂ ಪಕ್ಷಂಗಳಿಂ ಬಡಿದು ಬಡಿದು ಕೊಕ್ಕಿನಿಂ ಖಂಡಿಸಿ ಪಾದಂಗಳಿಂ ಶೀಳಿ ವೇಗದಿಂ ಚಕ್ರಾಕಾರವಾಗಿ ತಿರುಗಿ ಪಾತಾಳಕ್ಕೆ ಪೋಗಿ ಶೀಘ್ರದಿಂ ಬಂದು ಕೆಲಂಬರಾದ ವೀರರಂ ಭಕ್ಷಿಸಿ, ಮರಳಿ ಸಮುದ್ರವಂ ಪೊಕ್ಕು ವೇಗದಿಂ ಬಂದು ಕೆಲವು ಭೂತಂಗಳಂ ಕೊಂದು ಮರಳಿ ಮರಳಿ ಚಕ್ರವಾಗಿ ಗಿರಿ ನದಿಗಳಂ ಪೊಕ್ಕು ವೇಗದಿಂ ಬಂದು ಕೊಕ್ಕಿನಿಂ ಕೆಲಂಬ ಭೂತಂಗಳಂ ಆಕಾಶಕ್ಕೊಯ್ದು, ಮಹಾಧ್ವನಿಯನ್ನಾಮಾಡುತ್ತ ಆ ಸ್ವಾಮಿಯ ರಥದ ಮೇಲೆ ಮರಳಿ ಚಕ್ರಾಕಾರವಾಗಿ

ತಿರುಗುತ್ತಿರೆ, ಸ್ವಾಮಿಯು ಘೋರವಾದ ಆ ಪಕ್ಷಿಯನ್ನೋಡಿ ಕ್ಷಣಮಾತ್ರ ಧ್ಯಾನಿಸಿ, ನನಗೀ ಪಕ್ಷಿಯೊಡನೆ ಯುದ್ಧವಮ್ಮಾಡುವದುಚಿತವಲ್ಲೆಂದು ತಿಳಿದು ಸಮೀಪದಲ್ಲಿರ್ದ ಇಂದ್ರನಂ ನೋಡಿದನು.

ಆ ಸಮಯದಲ್ಲಿ ಇಂದ್ರನು ಮಯೂರ ರೂಪವಂ ಧರಿಸಿ ಶೀಘ್ರದಿಂ ಬಂದು ಆ ಗುಹಂಗೆ ನಮಸ್ಕಾರವಮ್ಮಾಡಿ, ಎಲೈ ಸ್ವಾಮಿಯೆ! ದೇವತೆಗಳಿಗೊಡೆಯನೆ! ನನ್ನ ಮೇಲೆ ಕುಳಿತು ದೈತ್ಯನೊಡನೆ ಯುದ್ಧವಮ್ಮಾಡೆಂದು ನುಡಿಯಲಾಗಿ, ಕುಮಾರಸ್ವಾಮಿಯು ಆ ವಾಕ್ಯವಂ ಕೇಳಿ ಆ ಮಯೂರದ ಮೇಲೆ ಕುಳಿತು, ಆ ನವಿಲನ್ನು ಚಕ್ರವಾಕದ ಮೇಲೆ ಪ್ರೇರಿಸೆ ಅದನ್ನು ಪಾದದಿಂದೊದ್ದು ಕೊಕ್ಕಿನಿಂ ಕುಕ್ಕಿದನು. ಆಗ ಮಯೂರನು ಭಯಾನ್ವಿತನಾಗಿ ಅತ್ಯಂತ ಶ್ರಮವನ್ನೈದಲಾಗಿ, ಪಾರ್ವತೀಪುತ್ರನಾದ ಕುಮಾರಸ್ವಾಮಿಯದಂ ಕಂಡು, ಆ ಪಕ್ಷಿರೂಪವಾದ ದೈತ್ಯನ ಮುಖ ಶಿರ ಉರೋಪಾದಂಗಳಲ್ಲಿ ಅಸ್ತ್ರಂಗಳಂ ಬಿಟ್ಟು ರಕ್ತಧಾರೆಗಳಿಂದಾವೃತವನ್ನಾಗಿ ಮಾಡಿ ನೊಯ್ಯಿಸಿದನು. ಆಗ ಪಕ್ಷಿಯು ನಭೋಮಾರ್ಗದಲ್ಲಿ ತನ್ನ ಪಕ್ಷಂಗಳಂ ಕೊಡಹುತ್ತ ಕ್ಷಣಮಾತ್ರದಿಂ ಸಕಲ ಲೋಕಂಗಳಂ ಕಂಪಿಸುವಂತೆ ಮಾಡುತ್ತ ತಿರುಗೆ, ದೇವನಾಯಕನಾದ ಕುಮಾರ ಸ್ವಾಮಿಯು ಆತ ನೆಲ್ಲಿಪೋದನೋ ಅಲ್ಲಿಗೆ ಪೋಗಿ ಕಲ್ಪಾಂತ ಮೇಘದಂತೆ ಬಾಣಂಗಳಂ ವರ್ಷಿಸಲಾಗಿ, ಅದು ಧನುವಂ ಮುರಿದು ಸಮೀಪಕ್ಕೆ ಬರೆ ಸ್ವಾಮಿಯು ಖಡ್ಗದಿಂದದಂ ಯೆರಡು ತುಂಡಾಗಿ ಖಂಡಿಸಿ ಭೂಮಿಯಲ್ಲಿ ಕೆಡಹಿದನು.

ದುರಾತ್ಮನಾದ ಶೂರನು ಪಕ್ಷಿರೂಪದಿಂ ಭೂಮಿಯಲ್ಲಿ ಬಿದ್ದರೂ, ಮಹಾ ಭೂತ ರೂಪದಿಂದೆದ್ದು ಗುಹಸ್ವಾಮಿಯನ್ನಂಜಿಸುತ ಶೀಘ್ರದಿಂ ಬ್ರಹ್ಮಾಂಡ ಭಿತ್ತಿಯ ಪರ್ಯಂತವು ಬೆಳೆಯೆ, ಆಗ ಸೂರ್ಯಚಂದ್ರ ವಾಯುಗಳ ಮಾರ್ಗವು ನಿಂತು ಪೋದುದು. ಆಗ ಸುಬ್ರಹ್ಮಣ್ಯನು ಭಯಂಕರನಾದ ಆತನಂ ನೋಡಿ, ಛೀಛೀ! ದುರಾತ್ಮನೆ! ಎಂದು ನುಡಿದು ಪಾಪಿಷ್ಠನಾದ ಆತನ ಮೇಲೆ ಗುರಿಯಿಟ್ಟು, ಸಪ್ತ ಶರಂಗಳಂ ಬಿಡೆ, ಅವುಗಳು ಮಹಾ ಸಮುದ್ರಗಳ ರೂಪಂಗಳಿಂ ಭೂಮಿಯಂ ಪ್ರವೇಶಿಸಿ, ಖಿನ್ನ ರೂಪನಾದ ಅಸುರನಂ ವಿನಾಶವನ್ನೈದಿಸಿದವು. ಮರಳಿ ದೈತ್ಯನು ಕೋಪದಿಂ ಮಹಾ ಸಮುದ್ರ ರೂಪಮಂ ಧರಿಸಿ ದೊಡ್ಡ ದೊಡ್ಡ ತೆರೆಗಳ್ವೆರಸಿ ಆ ಗುಹಸ್ವಾಮಿಯ ಮೇಲೆ ಬರಲಾಗಿ, ಸುರೇಶ್ವರನಾದ ಆ ಕುಮಾರಸ್ವಾಮಿಯು ಅಗ್ನಿರೂಪವಾದ ಶತ ಬಾಣಗಳಂ ಪ್ರಯೋಗಿಸಿ ಸಮುದ್ರ ರೂಪವಾದ ಆ ಅಸುರನಂ ದಹಿಸಿದನು. ಆಗ ಪಾಪಿಷ್ಟನಾದ ದಾನವನು ಆ ಸಮುದ್ರರೂಪವಂ ಬಿಟ್ಟು ಅಗ್ನಿಯು ಆಕಾಶವಂ ತಾಳ್ದು ಕಿಡಿಗಳಿಂದಾ

ವೃತನಾಗಿ, ಸ್ವಾಮಿಯ ಮೇಲೆ ಬರೆ, ದೇವನು ಮುಗುಳುನಗೆ ಯುಕ್ತನಾಗಿ ಸಹಸ್ರ ಬಾಣಂಗಳಂ ಬಿಡಲಾಗಿ, ಅವುಗಳು ಚಂಡಮಾರುತ ರೂಪದಿಂ ಸಾರಿ ಆ ಅಗ್ನಿಯಂ ಶಾಂತವನ್ಮಾಡಿದವು. ಬಳಿಕ ಪಾಪಾತ್ಮನಾದ ಘೋರನಾದ ವಂಚಕನಾದ ದಾನವನು ಆ ರೂಪವಂ ಬಿಟ್ಟು ಭಯಂಕರವಾದ ವಾಯು ರೂಪವಂ ಧರಿಸೆ, ದೇವನಾಯಕನಾದ ಕುಮಾರಸ್ವಾಮಿಯು ಆತನ ಮೇಲೆ ಭಯಂಕರವಾದ ಲಕ್ಷ ಬಾಣಗಳಂ ಬಿಟ್ಟು ಮಹಾ ಸರ್ಪ ರೂಪಂಗಳಾದವುಗಳಿಂದ ಆ ವಾಯುವನ್ನು ಕಬಳೀಕರಿಸುವಂತೆ ಮಾಡಿದನು. ಮರಳಿ ದೈತ್ಯನು ಸರ್ಪರೂಪದಿಂ ಸ್ವಾಮಿಯ ಸಮೀಪಕ್ಕೆ ಬರೆ, ಆಯಾ ಅಸ್ತ್ರಂಗಳು ಆಯಾ ರೂಪಂಗಳಂ ಧರಿಸಿ ದಾನವನಂ ನೋಯಿಸೆ, ಮರಳಿ ಸರ್ವೇಶ್ವರನಾದ ಸ್ವಾಮಿಯು ತನ್ನ ಸಮೀಪಕ್ಕೆ ಬರುವಂತೆ ಮಾಡುತ್ತಿರ್ದನು. ಈ ಪ್ರಕಾರ ಮಾಗಿ ನಾನಾ ಯುದ್ಧಮಲ್ಲರಾದ ಸುರಾಸುರರಿ ಗೋಪಯರಾದ ಅವರೀರ್ವರಿಗೆ ಘೋರಮಾದ ಯುದ್ಧದಿಂದ ನಾಲ್ಕು ದಿವಸಗಳು ಕಳೆದವು. ಮರಳಿ ವಂಚಕನಾದ ದೈತ್ಯನು ಒಂದು ಕಡೆಯಲ್ಲಿ ತ್ರಿಮೂರ್ತಿಗಳ ರೂಪಗಳಿಂದಲು ಮತ್ತೊಂದು ಕಡೆಯಲ್ಲಿ ದಾನವ ರೂಪದಿಂದಲು ಇನ್ನೊಂದು ಪ್ರದೇಶದಲ್ಲಿ ಇಂದ್ರಾದಿ ದೇವತೆಗಳ ರೂಪಂಗಳಿಂದಲು, ಒಂದು ಕಡೆಯಲ್ಲಿ ಪಿಶಾಚ ರೂಪದಿಂದಲು ಸುತ್ತುಮುತ್ತಲು ಅಗ್ನಿರೂಪದಿಂದಲು ಸುಳಿಗಾಳಿಯ ರೂಪದಿಂದಲು, ಒಂದು ಕಡೆಯಲ್ಲಿ ಸಮುದ್ರ ರೂಪದಿಂದಲು ಬೇರೊಂದು ಕಡೆಯಲ್ಲಿ ಮೇಘಾಶ್ವ ರೂಪಂಗಳಿಂದಲು, ಒಂದೆಡೆಯಲ್ಲಿ ಸೂರ್ಯ ಸಮೂಹಾಕಾರದಿಂದಲು ಮತ್ತೊಂದು ಕಡೆಯಲ್ಲಿ ದಿಗ್ಗಜ ಪಕ್ಷಿ ಸಿಂಹ ಮೃಗ ಸಮೂಹಂಗಳ ಆಕಾರಂಗಳಿಂದಲು, ಬೇರೊಂದು ಕಡೆಯಲ್ಲಿ ತನ್ನ ರೂಪದಿಂದಲು ಇನ್ನೊಂದು ಕಡೆಯಲ್ಲಿ ಮಹಾ ಭಯಂಕರರಾದ ತಾರಕ ಸಿಂಹಮುಖ ಭಾನುಕೋಪ ಮುಂತಾದವರ ಮತ್ತೆ ಅಲ್ಲಲ್ಲಿ ಮಂತ್ರಿ ಸೇನಾಪತಿಗಳ ರೂಪಂಗಳಿಂದಲು, ಕೆಲವೆಡೆಯಲ್ಲಿ ಭಯಂಕರವಾದ ತನ್ನ ರೂಪದಿಂದಲು ಬರುತ್ತಿರೆ, ದೇವತೆಗಳು ಆಯಾ ರೂಪಂಗಳಂ ಕಂಡು ಪಲಾಯನವನ್ನೈದಿದರು. ಕುಮಾರಸ್ವಾಮಿಯು ಮುಗುಳುನಗೆಯಿಂದ ಯುಕ್ತನಾಗಿ ಸಹಸ್ರ ಕೋಟಿ ಬಾಣಂಗಳಂ ಪ್ರಯೋಗಿಸಿದನೆಂದು ಸೂತಂ ಪೇಳಿದ ನೆಂಬಲ್ಲಿಗೆ, ಯುದ್ಧಕಾಂಡದಲ್ಲಿ ಮುವ್ವತ್ನಾಲ್ಕನೆಯ ಅಧ್ಯಾಯವು ಸಮಾಪ್ತಮಾದುದು.

ಮುಪ್ಪತ್ತೈದನೆಯ ಅಧ್ಯಾಯವು.

ಶೂರಪದ್ಮಾಸುರನಿಗೆ ಕುಮಾರದೇವನು ವಿಶ್ವರೂಪವಂ ತೋರುವಿಕೆ.

ಎಲೈ ಋಷಿಗಳಿರಾ! ಅನಂತರದಲ್ಲಿ ಆ ಆ ಬಾಣಂಗಳು ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದಕ್ಕೆ ಸಪ್ತ ಸಹಸ್ರಾಧಿಕವಾಗಿ ಆ ಸ್ವರೂಪಗಳಂ ಸಂಹರಿಸಿ ಆತನೊಬ್ಬನನ್ನೇ ಸ್ವಾಮಿಯ ಸಮೀಪದಲ್ಲಿ ನಿಲ್ಲಿಸಿ ತಾವು ಸ್ವಾಮಿಯ ಸಮೀಪವನ್ನೈದಿದವು. ಬಳಿಕ ಪರಮ ವೈಭವನಾದ ದೇವನು ಆ ಶೂರನಂ ನೋಡಿ, ಎಲೆ ದಾನವನೆ! ಈ ನಿನ್ನ ರೂಪಗಳಂ ನೋಡಿದೆನು. ನನ್ನ ರೂಪವಂ ನೋಡೆಂದು ಪೇಳಿ, ಅವಾಙ್ಮಾನಸ ಗೋಚರವಾದ ವಿಶ್ವರೂಪವನ್ನು ಶೂರಂಗೆ ತೋರಿಸಿದನದೆಂತೆನೆ. ಮಹಾ ಪರ್ವತಂಗಳು ಸ್ವಾಮಿಯ ಪಾದತಳದಲ್ಲಿದ್ದವು. ಸಮುದ್ರಗಳು ಆತನ ಮೊಳಕಾಲಿನಲ್ಲಿಯು, ನಕ್ಷತ್ರಂಗಳು ನವಗ್ರಹಂಗಳು ಪಾದಾಂಗುಳಿಗಳಲ್ಲಿಯು ಚಂದ್ರಸೂರ್ಯರು ನಿಋಋತಿಯು ವರುಣ ವಾಯುಗಳೀರ್ವರು ಹರಡುಗಳಲ್ಲಿಯು ಋಷಿಗಳು ಕಣುಕಾಲುಗಳಲ್ಲಿಯು ಚಿಂತಾಮಣಿ ಮುಂತಾದ ರತ್ನಗಳು ಮಣಕಾಲುಗಳಲ್ಲಿಯು ಇಂದ್ರ ಜಯಂತರು ಊರುಗಳಲ್ಲಿಯು ಕಾಲಯಮರು ಕಟಿ ಸಂಧಿಗಳಲ್ಲಿಯು ಅಷ್ಟವಸುಗಳು ಕಟಿ ಪ್ರದೇಶದಲ್ಲಿಯು ದೇವತೆಗಳು ಉಭಯಪಾರ್ಶ್ವಗಳಲ್ಲಿಯು ನಾಗಂಗಳು ಗುಹ್ಯ ಮುಂತಾದ ಪ್ರದೇಶದಲ್ಲಿಯು ಅಮೃತವು ಮೇಢ್ರಸ್ಥಾನದಲ್ಲಿಯು ಜಗತ್ತುಗಳ ಉತ್ಪತ್ತಿಯು ನಾಭಿಯಲ್ಲಿಯು ಶಾಸ್ತ್ರಗಳು ಜ್ಞಾನವು ಯಜ್ಞೋಪವೀತಂಗಳು ದಿವ್ಯವಾದ ವಕ್ಷಸ್ಥಲದಲ್ಲಿಯು ಬ್ರಹ್ಮಾದಿಗಳು ರೋಮಕೂಪಂಗಳಲ್ಲಿಯು ಭೋಗವು ಪಾಣಿಯಲ್ಲಿಯು ಬ್ರಹ್ಮ ವಿಷ್ಣುಗಳೀರ್ವರು ಭುಜಗಳಲ್ಲಿಯು ದೇವತಾ ಸ್ತ್ರೀಯರು ಅಂಗಾಲುಗಳಲ್ಲಿಯು ಶಬ್ದ ಸಮೂಹವು ಕಂಠ ಪ್ರದೇಶದಲ್ಲಿಯು ವೇದಂಗಳು ಮುಖಮಧ್ಯದಲ್ಲಿಯು ಸಪ್ತ ಕೋಟಿ ಮಹಾ ಮಂತ್ರಂಗಳು ಓಷ್ಠ ಪ್ರದೇಶದಲ್ಲಿಯು ಶಿವಾಗಮಂಗಳು ಜಿಹ್ವೆಯಲ್ಲಿಯು ಅಕ್ಷರಂಗಳು ದಂತಂಗಳಲ್ಲಿಯು ವಾಯುವು ನಾಸಿಕೆಯಲ್ಲಿಯು ಚಂದ್ರಸೂರ್ಯರು ನಯನಂಗಳಲ್ಲಿಯು ದಿಕ್ಕುಗಳು ಶ್ರೋತ್ರಂಗಳಲ್ಲಿಯು ಪ್ರಣವವು ಊಟದಲ್ಲಿಯು ಈ ಪ್ರಕಾರದಿಂ ಪರಮಾತ್ಮನಾದ ಶಿವನು ತಾನೆ ಶಿರೋಮಧ್ಯದಲ್ಲಿ ವಿರಾಜಿಸುತಿರ್ದನು. ಹೀಗೆ ಷಣ್ಮುಖನು ಅತ್ಯದ್ಭುತವಾದ ವಿಶ್ವರೂಪವನ್ನು ಶೂರಪದ್ಮಂಗೆ ತೋರಿಸಿದನು.

ಶೂರಪದ್ಮನಿಗೆ ಜ್ಞಾನೋದಯವಾಗುವಿಕೆ.

ಬಳಿಕ ಸಮಸ್ತ ದೇವತೆಗಳು ಆ ಕುಮಾರಸ್ವಾಮಿಯ ವಿಶ್ವರೂಪವಂ ನೋಡಿ ಭಯಕಂಪಿತ ವಿಗ್ರಹರಾಗಿ, ಮಸ್ತಕದಲ್ಲಿ ಅಂಜಲಿಬಂಧವಂ ಮಾಡಿ

ಸ್ವಾಮಿಯಂ ಸ್ತುತಿಸಲಾಗಿ, ಆ ಸ್ವಾಮಿಯು ಅಮರರಂ ನೋಡಿ, ಎಲೈ ದೇವತೆಗಳಿರಾ! ನಿಮಗೆ ಭೀತಿ ಬೇಡೆಂದು ನಿರೂಪಿಸೆ, ದೇವತೆಗಳು ಸಂತುಷ್ಟರಾಗಿ ಮರಳಿ ಸುಬ್ರಹ್ಮಣ್ಯಂಗೆ ನಮಸ್ಕಾರವಂ ಮಾಡಿ ಸ್ತುತಿಸಿದರು. ಆಗ ಶೂರನು ದೈವವಶದಿಂದ ಪ್ರಾಕೃತವಾದ ರೂಪವಂ ಕಂಡು ಸ್ವಾಮಿಯಿಂದ ಜ್ಞಾನವನ್ನೈದಿ ಈರೀತಿ ಚಿಂತಿಸಿದನು. ಈ ಕುಮಾರನು ಅಸುರಸೇನೆಯಂ ಸಂಹರಿಸಿ ಇತರರಾದ ದೈತ್ಯರೊಡನೆಯು ನನ್ನ ಸಂಗಡಲು ಮಹಾ ಭಯಂಕರವಾದ ಯುದ್ಧವಂ ಮಾಡಿ ಮರಳಿ ಇಂದ್ರಲೋಕ ರಥವನ್ನು ತನ್ನ ವಶವಂ ಮಾಡಿಕೊಂಡು ನನ್ನಿಂದ ಮಾಡಲ್ಪಟ್ಟ ಮಾಯೆಯನ್ನು ನಾಶಂಗೈದು, ಸುರಾಸುರ ಮನುಷ್ಯ ಸಹಿತವಾದ ಇತರ ಸಾದೃಶ್ಯವಿಲ್ಲದ ಅನೇಕ ಕೋಟಿ ಬ್ರಹ್ಮಾಂಡಗಳಿಗೆ ಆವಾಸವಾದ ರೂಪವಂ ತೋರಿಸಿದನು. ನಾನು ಮೂಢಬುದ್ಧಿಯಿಂದೀತನಂ ಬಾಲಕನೆಂದು ತಿಳಿದೆನು. ಈತನು ಆ ಮಹಾದೇವನಾಗಿ ಪರಮಾತ್ಮನಾದ ಸ್ವಯಂ ಶಿವನು. ಪೂರ್ವದಲ್ಲಿ ನನ್ನ ಪುತ್ರನಾದ ಹಿರಣ್ಯನು ಅನುಜನಾದ ಸಿಂಹಮುಖನು ಹೀಗೆ ಪರಶಿವನೆಂದು ತಿಳಿದು ನನಗೂ ಪೇಳಿದರು, ಆಮೊಡಂ ಮತ್ತರಾಗಿ ಐಶ್ವರ್ಯ ಗರ್ವಿತರಾದ ನಮ್ಮಿಂದ ಆ ವಚನವು ನಿರಾಕರಿಸಲ್ಪಟ್ಟುದು. ಆತನ ಪಾದರೋಮಂಗಳಲ್ಲಿ ನನ್ನಧೀನವಾದ ಸಮಸ್ತಾಂಡಂಗಳು ಕಾಣಲ್ಪಟ್ಟವು. ಈತನ ರೂಪವು ನೇತ್ರಗಳಿಂದೆನ್ನಿಂದ ಪಾದಾರಭ್ಯ ಮಸ್ತಕ ಪರ್ಯಂತವು ನೋಡಲ್ಪಟ್ಟಿತು. ಎಷ್ಟು ನೋಡಿದರು ನೂತನವಾದ ಸೌಂದರ್ಯವು ಮನಸ್ಸಿಗೆ ತೃಪ್ತಿಯನ್ನೈದಿಸದೆ, ಮರಳಿ ಮರಳಿ ಪ್ರೀತಿಯನ್ನೇ ಪುಟ್ಟಿಸುತಲಿದೆ. ತಪೋ ಮಹಿಮೆಯಿಂದಾತನ ಮಹಾತ್ಮ್ಯವಂ ಕಂಡೆನು. ದೇವನು ನನ್ನ ಮೇಲಣ ದಯೆಯಿಂದೆನ್ನೊಡನೆ ಯುದ್ಧವಂ ಮಾಡಲು ಬಂದನು. ಈತನಲ್ಲಿ ನನಗೆ ಭಕ್ತಿಯುಂಟಾಗುತಲಿದೆ. ಪ್ರದಕ್ಷಿಣ ನಮಸ್ಕಾರ ಸ್ತೋತ್ರಂಗಳಂ ಮಾಡಬೇಕೆಂದು ಅಭೀಷ್ಟವಿರುವದು. ನನ್ನ ದಕ್ಷಿಣ ಬಾಹುಗಳೆರಡು ಶುಭ ಸೂಚಕಂಗಳಾಗಿ ಹಾರುತಲಿವೆ. ಸ್ವಾಮಿಯೊಡನೆ ನನಗೆ ಯುದ್ಧವಂ ಮಾಡುವದು ಯೋಗ್ಯವಲ್ಲೆಂದು ಕೆಲಂಬರು ಅಜ್ಞಾನಿಗಳು ಪೇಳಿದರು. ಆವುದಾನೊಂದು ಕಾರಣದಿಂ ಈತನೊಡನೆ ಯುದ್ಧವಂ ಮಾಡಿದೆನೊ, ಅದುಕಾರಣದಿಂದೆನಗೆ ಅತ್ಯಂತ ಪರಾಕ್ರಮವು ಕೀರ್ತಿಯು ಉಂಟಾದವು. ದೇವತೆಗಳನ್ನು ಬಿಟ್ಟು ಈತಂಗೆ ನಮಸ್ಕಾರವಂ ಮಾಡಿದರೆ, ಕೀರ್ತಿ ಪರಾಕ್ರಮಂಗಳು ಎಂತುಂಟಾಗವು? ಎಂದು ಈ ಪ್ರಕಾರದಿಂ ಬಹುವಾಗಿ ವಿಚಾರಿಸಿ ಸ್ವಾಮಿಯಂ ಧ್ಯಾನಿಸುತ ಸಿಂತಿರ್ದನು.

ಶೂರಪದ್ಮನು ಮರಳಿ ಮೋಹಿತನಾಗುವಿಕೆ.

ಬಳಿಕ ಕುಮಾರಸ್ವಾಮಿಯು ತನ್ನ ವಿಶ್ವರೂಪವಂ ಆತನಿಗೆ ತೋರಿ

ಜ್ಞಾನವನ್ನು ಉಪಸಂಹರಿಸಲಾಗಿ, ದೈತ್ಯನು ಮರಳಿ ಕೋಪಯುಕ್ತನಾಗಿ ಕರಗಳಂ ಬಡಿದು ಅಟ್ಟಹಾಸವಂ ಮಾಡಿ ಯುದ್ಧವಂ ಮಾಡಲು ತನಗೆ ಆರು ಇದಿರಲ್ಲೆಂದು ನುಡಿದು ಮತ್ತನಾಗಿ, ಪ್ರಥಮದಲ್ಲಿ ಸಮಸ್ತ ದೇವತೆಗಳಂ ಭಕ್ಷಿಸಿ ಬಳಿಕ ಈ ಶಿಶುವಂ ಜಯಿಸುವೆನೆಂದು ಮಾಯೆಯಿಂ ಮಹಾಂಧಕಾರಕ್ಕೆ ಪೊಳಪಟ್ಟು ಅನೇಕ ಪಾಣಿಪಾದ ಶಿರಂಗಳುಳ್ಳವನಾಗಿ ಆಕಾಶಕ್ಕೆ ಲಂಘಿಸಿ ದೇವತೆಗಳಂ ಭಕ್ಷಿಸಲು ಕರವನ್ನೀಡೆ, ದೇವತೆಗಳು ಕುಮಾರಸ್ವಾಮಿಯನ್ನು ಮೊರೆಯಿಟ್ಟರು. ಬಳಿಕ ಮಯೂರನಾಗಿ ದೇವೇಂದ್ರನು ಅಸುರ ಸಂಹಾರವಂ ಮಾಡಬೇಕೆಂದು ಕುಮಾರಸ್ವಾಮಿಯಂ ಬಹುವಾಗಿ ಸ್ತುತಿಸಲಾಗಿ, ಆ ಕುಮಾರಸ್ವಾಮಿಯು ಸರ್ವಶತ್ರು ಸಂಹಾರಕಮಾದ ಶಕ್ತಿಯಂ ಬಿಟ್ಟನು. ಆಗ ಶಕ್ತಿಯು ಅನೇಕ ಕೋಟಿ ಸೂರ್ಯಪ್ರಕಾಶವಾಗಿ ಆ ಅಂಧಕಾರವಂ ಕಬಳೀಕರಿಸಿ ಮೆಲ್ಲಮೆಲ್ಲನೆ ಶೂರನ ಸಮೀಪಕ್ಕೆ ಪೋಗೆ, ದೈತ್ಯನದಂ ಕಂಡು ನಾಶರಹಿತನಾದ ನನ್ನನ್ನು ಈ ಶಕ್ತಿಯು ಏನು ಮಾಡಬಲ್ಲದೆಂದು ನಗೆಯಿಂದ ಯುಕ್ತನಾಗಿ, ಪ್ರಥಮದಲ್ಲಿ ದೇವತೆಗಳಂ ಸಂಹರಿಸಿ ಬಳಿಕ ಈ ಶಿಶುವಂ ಜಯಿಸುವೆನೆಂದು ವೇಗದಿಂ ಸಮುದ್ರ ಮಧ್ಯಕ್ಕೆ ಪೋಗಿ, ಅಲ್ಲಿ ಚೂತ ವೃಕ್ಷಾಕಾರವಂ ಧರಿಸಿದನದೆಂತೆನೆ, ಅಗ್ನಿ ಪ್ರಭೆಯಂತೆ ತಳಿರುಗಳು ಧೂಮಪಂಗ್ತಿಯಂತೆ ಪರ್ಣಗಳು ಕಾಂಚನದಂತೆ ಪುಷ್ಪಗಳು ರಕ್ತೋತ್ಪಲ ವರ್ಣದಂತೆ ಫಲಂಗಳು ಮೇಘದಂತೆ ಶಾಖೆಗಳು ಬ್ರಹ್ಮಾಂಡದ ಅಧೋಭಿತ್ತಿ ಪರ್ಯಂತವು ಬಳಸಿರುವ ಲಕ್ಷಯೋಜನ ಪರ್ಯಂತ ವ್ಯಾಪಿಸಿದ ಈ ಪ್ರಕಾರಮಾದ ವೃಕ್ಷಾಕಾರದಿಂ ಹರಿ ಬ್ರಹ್ಮ ದಿಕ್ಪಾಲಕ ಸೂರ್ಯ ಚಂದ್ರ ವಾಯು ಕನ್ನಿಕೆಗಳಿಗು ಭಯವಂ ಪುಟ್ಟಿಸುತಲು ಕೊಂಬೆಗಳಿಂ ಬ್ರಹ್ಮಾಂಡಭಿತ್ತಿಯನ್ನು ಒಡೆಯುತ್ತ ರೆಂಬೆಗಳಿಂ ಬಡಿದು ಬಡಿದು ಸಮಸ್ತ ಜಗವಂ ಪೀಡಿಸುತಲು ಇರ್ದನು.

ಶೂರಪದ್ಮಾಸುರ ವಧೆ.

ಆ ಸಮಯದಲ್ಲಿ ಭೂಮಿಯು ಒಡೆದುದು. ಅಧೋಭುವನಂಗಳು ಸಿಡಿದು ಬಿದ್ದವು ಆದಿಕೂರ್ಮ ಅಷ್ಟದಿಗ್ಗಜಂಗಳು ಅನಂತಾದಿ ಸರ್ಪಗಳು ಕಂಪಿಸಿದವು ಗಿರಿಗಳ್ಸಿಡಿದು ಬಿದ್ದವು ತಾರಕಂಗಳು ಉದುರಿದವು. ಚಂದ್ರ ಸೂರ್ಯ ಮುಂತಾದ ನವಗ್ರಹಂಗಳು ತಮ್ಮ ತಮ್ಮ ರಥಂಗಳಂ ಬಿಟ್ಟು ಓಡಿದರು. ಅವರಲ್ಲಿ ಕೆಲಂಬರು ಕೈಲಾಸಗಿರಿಯ ನೈದಿದರು. ಬ್ರಹ್ಮಾಂಡ ವೊಡೆದು ಬಿದ್ದುದು. ಬಳಿಕ ಶಕ್ತಿಯು ದೈತ್ಯನ ಮಾಯಾರೂಪವಂ ಕಂಡು ಕೋಪದಿಂದತ್ಯಂತ ಭಯಂಕರವಾಗಿ ಮಹಾ ಸಂಹಾರ ರುದ್ರಸ್ವರೂಪವಾಗಿ ಸಮುದ್ರಗಳಂ ಶೋಷಿಸುತ ಬಂದು ಆ ಚೂತ ವೃಕ್ಷವಂ ಎರಡು ಹೋಳು ಮಾಡಲಾಗಿ, ದೈತ್ಯನು ಶೀಘ್ರದಿಂ

ತನ್ನ ರೂಪವಂ ಧರಿಸೆ, ಶಕ್ತಿಯು ಖಡ್ಗ ಚರ್ಮಗಳಂ ಧರಿಸಿ, ಶೀಘ್ರದಿಂ ಬಂದು ಆತನ ಉರವಂ ಛೇದಿಸಿ ಪೊರಮಟ್ಟು ದೇವತೆಗಳಿಂದ ಸ್ತುತಿಸಲ್ಪಡುತ್ತ ಆಕಾಶ ಗಂಗೆಯಲ್ಲಿ ಸ್ನಾನವಂ ಮಾಡಿ ಸ್ವಾಮಿಯ ಹಸ್ತವನ್ನೈದಿತು.

ದೈತ್ಯನ ಮಯೂರ ಕುಕ್ಕುಟಗಳ ಸ್ವರೂಪಧಾರಣೆ.

ಬಳಿಕ ದೈತ್ಯನು ಒಂದು ಭಾಗದಿಂ ಮಯೂರನಾಗಿ ಬೇರೊಂದು ಭಾಗದಿಂ ಕುಕ್ಕುಟನಾಗಿ ಪೊರಮಟ್ಟನು. ಆ ಮಯೂರ ಕುಕ್ಕಟಗಳು ಸ್ವಾಮಿಯಂ ನೋಡಿ ತಲೆವಾಗಿ ನಿಲ್ಲೆ, ಕುಮಾರಸ್ವಾಮಿಯು ಅಹಂಕಾರ ರಹಿತರಾದ ಅವರ ಜ್ಞಾನವಂ ನೋಡಲಾಗಿ, ಆಮಯೂರ ಕುಕ್ಕುಟಂಗಳು ಆ ಸ್ವಾಮಿಗೆ ನಮಸ್ಕಾರವಂಮಾಡಿ ಸ್ತುತಿಸಿದವು. ಆಗ ಸುಬ್ರಹ್ಮಣ್ಯನು ಆ ಕುಕ್ಕುಟವಂ ನೋಡಿ ಧ್ವಜ ರೂಪದಿಂ ತಮ್ಮ ರಥದ ಮೇಲಿರೆಂದಾಜ್ಞಾಪಿಸಲಾಗಿ, ಅದು ಆ ಆಜ್ಞೆಯಂ ಶಿರಸಾವಹಿಸಿ ರಥವನ್ನೇರಿ ಅಲ್ಲಿ ನಿಂತು, ಪ್ರಳಯಕಾಲದ ಮೇಘದಂತೆ ಘರ್ಜಿಸಿತು. ಬಳಿಕ ಸ್ವಾಮಿಯು ಇಂದ್ರರೂಪವಾದ ಮಯೂರದಿಂದಿಳಿದು ಈ ಮಯೂರದ ಮೇಲೇರಿ, ಸರ್ವಲೋಕಮಂ ಸಂಚರಿಸಿ ಅನೇಕ ಕೋಟಿ ಸೂರ್ಯಪ್ರಕಾಶನಾಗಿ ಯುದ್ಧಮಂಡಲಕ್ಕೆ ಬಂದನು. ಆ ಸಮಯದಲ್ಲಿ ಅಗ್ನಿಯು ಇಂದ್ರನು ಗುಹನ ಆಜ್ಞೆಯಿಂ ಕುಕ್ಕುಟ ಮಯೂರ ರೂಪಂಗಳಂ ಬಿಟ್ಟು ನಿಜರೂಪಗಳಂ ಧರಿಸಿ ಸ್ವಾಮಿಗೆ ನಮಸ್ಕಾರವಂ ಮಾಡಿ ಸ್ತುತಿಸಲಾಗಿ, ಭೂತಂಗಳು ವೀರರು ಸೇನಾಪತಿಗಳು ಆ ಸ್ವಾಮಿಗೆ ಬಳಸಿನಿಂತು ಕೋಳಾಹಳ ಧ್ವನಿಯಂ ಮಾಡಿದರು. ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಆ ಗುಹಸ್ವಾಮಿಗೆ ನಮಸ್ಕಾರಂಗಳಂ ಮಾಡಿ ಸ್ತೋತ್ರಂಗಳಂ ಮಾಡಿದರು, ಬಳಿಕ ಕುಮಾರಸ್ವಾಮಿಯು ಕೃಪಾದೃಷ್ಟಿಯಿಂದವರಂ ರಕ್ಷಿಸಿದನು.

ಶೂರಪದ್ಮಾಸುರನ ಪತ್ನಿಯರ ಶೋಕ ಮತ್ತು ಫಲಸ್ತುತಿ.

ಅನಂತರದಲ್ಲಿ ಶೂರಪದ್ಮನ ಪತ್ನಿಯಾದ ಪದ್ಮಕೋಮಲೆಯು ಶೂರಪದ್ಮನ ಮರಣವಂ ಕೇಳಿ, ತತ್‌ಕ್ಷಣದಲ್ಲಿಯೆ ಪ್ರಾಣವಂ ಬಿಟ್ಟಳು. ಉಳಿದ ಸ್ತ್ರೀಯರು ಅಗ್ನಿಪ್ರವೇಶವಂ ಮಾಡಿದರು. ಶೂರಪುತ್ರನಾದ ಹಿರಣ್ಯನು ಆ ಶೂರಪದ್ಮನು ಮುಂತಾದ ದೈತ್ಯರ ವಧೆಯಂ ಕೇಳಿ, ಅಕಟಕಟ! ಎಲೈ ಪಿತೃವೆ! ನನ್ನಿಂದ ಹೇಳಲ್ಪಟ್ಟ ವಾಕ್ಯವನ್ನು ಕೇಳದೆ ಮೃತನಾದೊಡಂ ವೈರಿಯು ಧ್ವಜದ ಮೇಲೆ ನಿಂತೆ. ಮತ್ತು ಮಯೂರ ರೂಪವಂ ಧರಿಸಿ ಸ್ವಾಮಿಯಂ ವಹಿಸುತ್ತಿದ್ದಿ ನಾನು ಪೇಳಿದ ಸಮಯದಲ್ಲಿ ನಿನಗೆ ನನ್ನ ವಾಕ್ಯವು ಅತಿ ಕ್ರೂರವಾಗಿದ್ದುದು. ಎಂದು ವಿಧವಿಧವಾಗಿ ಹಲುಬಿ, ಸೈನಿಕರು ಬಾಧಿಸುವರೋ ಏನೋ ಎಂದು ಉಪಾಯದಲ್ಲಿ ಶುಕ್ರನ ಸಮೀಪಕ್ಕೆ ಪೋಗಿ ಪಿತೃಕರ್ಮವಂ ಮಾಡಿ, ಕ್ಷಣ

ಭಂಗುರವಾದ ಐಶ್ವರ್ಯವಂ ನಿಂದಿಸಿ ಮೋಕ್ಷಾರ್ಥಿಯಾಗಿ ಶಿವನಂ ಕುರಿತು ತಪವನ್ನಾಚರಿಸಿದನು. ಎಲೈ ಋಷಿಗಳಿರಾ! ಲೋಕದಲ್ಲಿ ಯಾವನರನಿದಂ ಕೇಳು ವನೋ ಆ ವಾತನು ಪಠಿಸುತಲಿರುವನೋ, ಆತಂಗೆ ಸುಬ್ರಹ್ಮಣ್ಯನ ಕೃಪಾಬಲದ ದೆಶೆಯಿಂದ ಶತ್ರುಭಯವಿಲ್ಲವು. ವಿಷ್ಣುವು ಋಷಿಗಳ ಮುಖದಿಂದೀ ಉಪಾ ಖ್ಯಾನವಂ ಕೇಳಿ ಮುರಾಸುರ ಕಾಲನೇಮಿ ಮುಂತಾದವರಂ ಜಯಿಸಿದನು. ಕೃಷ್ಣನು ಉಪಮನ್ಯು ಋಷಿಯಿಂದಿದಂ ಕೇಳಿ ನರಕಾಸುರನು ಮೊದಲಾದ ಅಸುರರಂ ಗೆದ್ದನು. ದಧೀಚಿಯೆಂಬ ಋಷಿಯು ಪಿತಾಮಹನಾದ ಶುಕ್ರನಿಂದ ಈ ಉಪಾಖ್ಯಾನವಂ ಕೇಳಿ ಅಚ್ಯುತನಾದ ಹರಿಯಂ ಜಯಿಸಿದನು, ಎಂಬದಾಗಿ ಸೂತಪೌರಾಣಿಕಂ ಶೌನಕಾದಿ ಮಹಾಮುನಿಗಳಿಗೆ ಪೇಳಿದನೆಂಬಿಲ್ಲಿಗೆ,

ಗದ್ಯ|| ಇಂತು ಕರ್ಣಾಟಕಭಾಷಾ ವಿರಚಿತಮಾದ, ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನ ಭೂತ ಶ್ರೀಮನ್ಮಹೀಶೂರ ಮಹಾಸಂಸ್ಥಾನ ಮಧ್ಯದೇದೀಪ್ಯ ಮಾನಾ ವಿಕಲ ಕಲಾನಿಧಿ ಕುಲಕ್ರಮಾಗತ ರಾಜ ಕ್ಷಿತಿಪಾಲ ಪ್ರಮುಖ ನಿಖಿಲ ನಿಜರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ, ಶ್ರೀಮದ್ರಾಜಾಧಿರಾಜ ರಾಜ ಪರಮೇಶ್ವರ ಪ್ರೌಢ ಪ್ರತಾಪಾ ಪ್ರತಿಮವೀರ ನರಪತಿ ಬಿರುದೆಂತೆಂಬರ ಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರ ಕಲಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾ ದ್ಯನೇಕ ಬಿರುದಾಂಕಿತ ಶ್ರೀ ಚಾಮರಾಜ ಮಹೀಪಾಲ ಧರ್ಮಪತ್ನಿ ಕೆಂಪನಂಜ ಮಾಂಬಾಗರ್ಭ ಸುಧಾಂಬುಧಿ ರಾಕಾಸುಧಾಕರಾಯಮಾನ ಶ್ರೀಚಾಮುಂಡಿ ಕಾಂಬಾ ವರಪ್ರಸಾದೋದ್ಭವರಾದ ಆತ್ರೇಯಸಗೋತ್ರ ಅಶ್ವಲಾಯನಸೂತ್ರ ಋಕ್ಶಾಖಾನುವರ್ತಿಗಳಾದ ಶ್ರೀಮತ್ ಮಹೀಶೂರ ಪುರವರಾಧೀಶ ಶ್ರೀಕೃಷ್ಣ ರಾಜ ಒಡೆಯರವರು ಲೋಕೋಪಕಾರಾರ್ಥಮಾಗಿ ರಚಿಸಿದ "ಶ್ರೀಕೃಷ್ಣರಾಜ ವಾಣೀವಿಲಾಸಮೆಂಬ" ಸ್ಕಾಂದ ಪುರಾಣದ ಶಂಕರಸಂಹಿತೆಯಲ್ಲಿ ಶಿವರಹಸ್ಯ ಖಂಡದ ಯುದ್ಧಕಾಂಡದೊಳು ಮುವ್ವತ್ತೈದನೆಯ ಅಧ್ಯಾಯವು ಸಮಾಪ್ತಮಾದುದು.

ದೇವಕಾಂಡ ಪ್ರಾರಂಭ.

ಮೊದಲನೆಯ ಅಧ್ಯಾಯವು.

ದೇವತೆಗಳಿಗೆ ಪೂರ್ವವಿಭವಪ್ರಾಪ್ತಿ.

ಎಲೈ ಋಷಿಗಳಿರಾ! ಅನಂತರದಲ್ಲಿ ಕುಮಾರಸ್ವಾಮಿಯು ದೇವತೆಗಳಂ ನಿರೀಕ್ಷಿಸಿ ವೀರಬಾಹುವಂ ಕರೆದು, ಎಲೈ ವೀರನೆ! ಕಾರಾಗೃಹದಲ್ಲಿರುವ ಜಯಂತ ಮುಂತಾದ ದೇವತೆಗಳಂ ನಮ್ಮ ಸಮೀಪಕ್ಕೆ ಕರೆದುಕೊಂಡು ಬರುವದೆಂದು ನಿರೂಪಿಸಲಾಗಿ, ಆತನ ಆಜ್ಞೆಯಂ ಶಿರಸಾವಹಿಸಿ, ಆ ಕ್ಷಣದಲ್ಲಿ ಅಸುರನ ಪುರಮಂ ಪ್ರವೇಶಿಸಿ, ಅಲ್ಲಿರ್ದ ದೇವತೆಗಳಂ ಕರೆದುಕೊಂಡುಬಂದರು. ಆಗ ಜಯಂತಾದಿ ದೇವತೆಗಳು ಆ ಸ್ವಾಮಿಯಂ ಕಂಡು ಸ್ತುತಿಸುತ ನಮಸ್ಕಾರವಮ್ಮಾಡೆ, ಎಲೈ ದೇವತೆಗಳಿರಾ! ಈಗ ನೀವು ಸುಖವುಳ್ಳವರಾಗಿ ಪೂರ್ವದಂತೆ ಸ್ವರ್ಗಕ್ಕೆ ಪೋಗಿ ಭೋಗಗಳನ್ನನುಭವಿಸಿಕೊಳಿರೆಂದು ನಿರೂಪಿಸಲಾಗಿ, ಆ ದೇವತೆಗಳು ಸ್ವಾಮಿಯಿಂದನುಜ್ಞಾತರಾಗಿ ಸಮೀಪದಲ್ಲಿರ್ದ ದೇವೇಂದ್ರಂಗೆ ನಮಸ್ಕಾರವಮ್ಮಾಡೆ, ಆತನು ಸಂತುಷ್ಟನಾಗಿ ತಕ್ಕೈಸಿ ಪ್ರಿಯವಚನವಂ ಪೇಳಿದನು. ಬಳಿಕ ಕುಮಾರಸ್ವಾಮಿಯು ಮೃತರಾದ ಭೂತಸೇನೆಗಳಿಗು ವೀರರಿಗು ಪ್ರಾಣಂಗಳಂ ಕೊಟ್ಟೆಬ್ಬಿಸಿ, ವರುಣನಂ ಕರೆದು ದೈತ್ಯರಿಗೆ ಆ ವಾಸವಾದ ವೀರಮಾಹೇಂದ್ರ ಪುರಮಂ ಕಬಳೀಕರಿಸೆಂದು ಪೇಳಲಾಗಿ, ಅತನು ಹಾಗೆಯೆ ಸಮುದ್ರೋದಕದಿಂದಾವರಿಸಿದನು. ಆ ಬಳಿಕ ಷಣ್ಮುಖಸ್ವಾಮಿಯು ಸಮಸ್ತ ವೀರರು ಸಹ ದೇವತೆಗಳೊಡನೆ ವಾದ್ಯಘೋಷಗಳ್ವೆರಸಿ ಶ್ರೀಸನ್ನಿಧಿ ನಗರಕ್ಕೆ ಬಂದು ಮಯೂರದಿಂದಿಳಿದು ಸಿಂಹಾಸನಾರೂಢನಾದನು. ಸೂರ್ಯನು ಪಶ್ಚಿಮಾದ್ರಿಯನ್ನೈದಿದನು. ಆಗ ದೇವತೆಗಳು ವಿಧಿಯಿಂದ ಪೂಜಿಸಿ ಆ ಸ್ವಾಮಿಯ ಕೃಪೆಗೆ ಪಾತ್ರರಾದರು. ಮರಳಿ ಸೂರ್ಯನುದಯಿಸಲಾಗಿ, ಆ ಕುಮಾರಸ್ವಾಮಿಯು ಮಹಾದೇವನಂ ಪೂಜಿಸಿ ಮಯೂರಾರೂಢನಾಗಿ ವರಪರ್ವತಕ್ಕೆ ಪೊರಮಟ್ಟನು. ಆಗ ವಿಷ್ಣು ಮುಂತಾದ ದೇವತೆಗಳು ಸ್ವಾಮಿಯ ಆಜ್ಞೆಯಿಂ ತಮ್ಮ ತಮ್ಮ ವಾಹನಗಳನ್ನೇರಿ ಪೊರಮಡೆ, ಚಾಮರ ಧ್ವಜ ಮುಂತಾದವಂ ಪಿಡಿದರು. ಮಯೂರವು ಕೊಕ್ಕಿನಿಂ ಭೂಮಿಯು ಬರೆದು ಮಹಾ ಧ್ವನಿಯಮ್ಮಾಡಲಾಗಿ, ಅದರಿಂದ ಭೂಮಿಗೆ ಕಂಪನವುಂಟಾದುದು. ಮೃಗಂಗಳು ಸಿಂಹಮುಖವಾದ ಭೂತಂಗಳ ಧ್ವನಿಗಳಂ ಕೇಳಿ ಪರ್ವತ ಗುಹೆಯಂ ಪೊಕ್ಕವು. ಮತ್ತೆ ಮಹಾ ಉರಗಂಗಳು ದೊಡ್ಡ ದೊಡ್ಡ ಬಿಲಗಳನ್ನೈದಿದವು. ದೇವತೆಗಳು ಸಿಂಹನಾದವಮ್ಮಾಡಿದರು. ಋಷಿಗಳು ಸ್ವಾಮಿಯಂ ಸ್ತುತಿಸುತ್ತ ಸಮೀಪದಲ್ಲಿ

ರ್ದರು. ಈ ಪ್ರಕಾರದಿಂ ಸ್ವಾಮಿಯು ಪರಪರ್ವತಕ್ಕೆ ಪೋಗೆ, ಅತ್ರಿ ಮುಂತಾದ ಷಡೃಷಿಗಳು ಇಲ್ಲಿರಬೇಕೆಂದು ಪ್ರಾರ್ಥಿಸಲಾಗಿ ಗುಹಸ್ವಾಮಿಯು ಅವರ ವಾಕ್ಯವಂ ಕೇಳಿ, ಎಲೈ ಋಷಿಗಳಿರಾ! ನೀವು ಜ್ಞಾಪಕವನ್ಮಾಡಿದ್ದು ಚಂದಾಯಿತೆಂದು ನಿರೂಪಿಸಿ, ಆ ಗಿರಿಯನ್ನೇರಿ ಅಲ್ಲಿ ನಿಂತು ವಿಶ್ವಕರ್ಮನಂ ನೋಡಿ, ಈ ಪರ್ವತೋಪರಿ ಭಾಗದಲ್ಲಿ ಪುರವಂ ರಚಿಸೆಂದು ನಿರೂಪಿಸೆ, ಆತನು ಅದೇರೀತಿಯಿಂದ ಶಿರಸಾವಹಿಸಿ ರಮ್ಯವಾದ, ನಾನಾ ವೃಕ್ಷಗಳಿಂ ಶೋಭಿತವಾದ ಗೋಪುರಾಟ್ಟಾಲಕ ಯುಕ್ತವಾದ ಪ್ರಾಕಾರದಿಂದಲು ಲೋವೆಗಳಿಂದಲು ಆವೃತವಾದ ನಾನಾಶ್ಚರ್ಯ ಯುಕ್ತವಾಗಿ ನಾನಾ ವಿಚಿತ್ರಗಳಿಂದಲಂಕೃತವಾದ ಪುರವಂ ರಚಿಸಿದನು.

ಬಳಿಕ ಕುಮಾರಸ್ವಾಮಿಯು ಆ ಪಟ್ಟಣವಂ ನೋಡಿ ಸಂತುಷ್ಟಮಾನಸನಾಗಿ ವೀಧಿಗಳಿಗೆ ವೀರರಂ ಭೂತಗಳಂ ಕಳುಹಿ, ಬಲಾಧಿಕರಿಂದಾವೃತನಾಗಿ ಆ ಪುರವಂ ಪ್ರವೇಶಿಸಿ ರಾಜಮಂದಿರವಂ ಪೊಕ್ಕು ಮಯೂರದಿಂದಿಳಿದು ಸಿಂಹಾಸನವನ್ನೇರಿ ಬ್ರಹ್ಮಾದಿ ದೇವತೆಗಳಂ ಪಾರ್ಶ್ವದಲ್ಲಿ ಕುಳ್ಳಿರಿಸಿ ವೀರರಿಂ ಮಾಡಲ್ಪಟ್ಟ ನಾನಾ ವಿಧವಾದ ಉಪಚಾರಂಗಳುಳ್ಳವನಾಗಿ ಷಡೃಷಿಗಳಿಂ ಪೂಜಿತನಾಗಿ, ಅವರಿಗೆ ಜ್ಞಾನೋಪದೇಶವನ್ಮಾಡಲೋಸುಗ ಬ್ರಹ್ಮಾದಿ ದೇವತೆಗಳಂ ತಮ್ಮ ತಮ್ಮ ಗೃಹಕ್ಕೆ ಕಳುಹಿ ಅವರಿಗೆ ಜ್ಞಾನೋಪದೇಶವನ್ಮಾಡುತಿರ್ದನು. ಆ ಸಮಯದಲ್ಲಿ ಇಂದ್ರನು ಬ್ರಹ್ಮ ವಿಷ್ಣು ಮುಂತಾದ ದೇವತೆಗಳಂ ಕರೆದು ವಿವಾಹೋಕ್ತ ವಿಧಾನದಿಂ ತನ್ನ ಕುಮಾರತಿಯಂ ಕುಮಾರಸ್ವಾಮಿಗೆ ಕೊಡುವೆನೆಂದು ಪೇಳಲಾಗಿ, ಆ ದೇವತೆಗಳು ಈ ವಾಕ್ಯವಂ ಕೇಳಿ ಸಂತಸದಿಂದಾಗಬಹುದೆಂದುತ್ತರವಂ ಕೊಟ್ಟು ಕೃತಕೃತ್ಯರಾಗಿ ತಮ್ಮ ತಮ್ಮ ಸ್ಥಾನಕ್ಕೆ ಪೋದರು. ಆಗ ದೇವೇಂದ್ರನು ತನ್ನ ಮಂದಿರಕ್ಕೆ ಸಾರಿ ಇಂದ್ರಾಣಿಯಂ ತನ್ನ ಕುಮಾರತಿಯಂ ಸಹ ಕರೆಯಿಸಲು ಭಟರಂ ಕಳುಹಲಾಗಿ ಅವರು ಮೇರುಗಿರಿಯಲ್ಲಿರ್ಪ ಆಕೆಯ ಸಮೀಪಕ್ಕೆ ಪೋಗಿ ನಮಸ್ಕಾರವನ್ಮಾಡಿ, ಆ ಶೂರ ಮೊದಲಾದ ಅಸುರರಂ ಸಂಹರಿಸಿ ಜಯಂತ ಮುಂತಾದ ದೇವತೆಗಳ ಸೆರೆಯಂ ಬಿಡಿಸಿ ಪರಪರ್ವತದಲ್ಲಿ ಕುಮಾರಸ್ವಾಮಿಯು ವಾಸವಾಗಿಧಾನೆ. ನಿಮ್ಮ ಕುಮಾರತಿಯಂ ಆ ಸ್ವಾಮಿಗೆ ಕಲ್ಯಾಣಮಹೋತ್ಸವವನ್ಮಾಡಿಸಬೇಕಾದುದರಿಂದ ನಿಮ್ಮನ್ನು ಕುಮಾರತಿಯೊಡನೆ ಕರೆದುಕೊಂಡು ಬರಹೇಳಿ ನಮ್ಮನ್ನು ಕಳುಸಿದನೆಂದು ಪೇಳ್ದು, ಸುತೆಯೊಡನೆ ಗಜಾರೂಢೆಯಾದ ಆ ದೇವಿಯಂ ಕರೆದುಕೊಂಡು ಬಂದರು.

ಬಳಿಕ ನಾನಾಲಂಕಾರಗಳಿಂ ಭೂಷಿತವಾದ ಇಂದ್ರಗೃಹವಂ ಪ್ರವೇಶಿಸಿ

ದರು. ಆ ಸಮಯದಲ್ಲಿ ಬಂಧನದಲ್ಲಿರ್ದ ದೇವಕನ್ನಿಕೆಯರು ಶೀಘ್ರದಿಂ ಬಂದು ಆ ಶಚೀದೇವಿಯಂ ಕಂಡು ಆಕೆಗೆ ನಮಸ್ಕಾರಮಂ ಮಾಡಿದರು. ಜಯಂತನು ತನ್ನ ತಾಯಿಯ ಸಮೀಪಕ್ಕೆ ಬಂದು ನಮಸ್ಕರಿಸಿದನು. ಆಗ ಶೋಭನವಾದ ದಂತಂಗಳುಳ್ಳ ಆ ದೇವಿಯು ಸಂಭ್ರಮದಿಂ ದೇವತಾಸ್ತ್ರೀಯರುಗಳಿಗೆ ಶುಭ ವಚನವಂ ಪೇಳ್ದಳು. ಸರ್ವರು ಸಹ ಶರಜನ್ಮನ ಕಲ್ಯಾಣಮಹೋತ್ಸವಂ ಕೇಳಿ ಪ್ರಸನ್ನಚಿತ್ತರಾಗಿ ಅತ್ಯಂತ ಪ್ರೀತಿಯನ್ನೈದಿದರು. ಸುರರಿಗೊಡೆಯನಾದ ದೇವೇಂದ್ರನು ದೇವತೆಗಳ್ವೆರಸಿ ತನ್ನ ಗೃಹದಿಂ ಪೊರಮಟ್ಟು ಸ್ವಾಮಿಯ ಸಮೀಪಕ್ಕೆ ಬಂದು ನಮಸ್ಕಾರಮಂ ಮಾಡಿ, ವಿನಯದಿಂ ತಲೆವಾಗಿ ಮೃದುವಚನವಂ ಪೇಳ್ದನದೆಂತೆನೆ.

ಷಣ್ಮುಖ ದೇವಸೇನಾವಿವಾಹ ವಿಭವ.

ಎಲೈ ಕೃಪಾಸಿಂಧುವೆ! ಶೂರಪದ್ಮನು ಮೊದಲಾದ ಅಸುರರಂ ಸಂಹರಿಸಿ ದೇವತೆಗಳಾದ ನಮಗೆ ಸ್ವಸ್ಥಾನಗಳನ್ನಿತ್ತು ರಕ್ಷಿಸಿದಿ, ಅದು ಕಾರಣದಿಂ ನಿನಗೆ ನಾವು ಕೊಡಬೇಕಾದ ವಸ್ತುವೇನಿರುವದು? ಭಕ್ತರ ಇಷ್ಟಾರ್ಥವನ್ನೀಡೇರಿಸುವ ಸಮಸ್ತ ದೇವತೆಗಳಿಗೆ ಒಡೆಯನಾದ ದಯಾನಿಧಿಯಾದ ಕುಮಾರ ಸ್ವಾಮಿಯೆ! ದೇವತೆಗಳ ರಕ್ಷಣೆಗೋಸುಗ ತನ್ನ ಪುತ್ರಿಯ ಪಾಣಿಗ್ರಹಣವ ಮಾಡುವನಾಗೆಂದು ಪೇಳಲಾಗಿ, ಆ ಸ್ವಾಮಿಯು ಎಲೈ ಇಂದ್ರನೆ! ಹಾಗೆ ಆಗಲಿ ಕಲ್ಯಾಣಸಾಮಗ್ರಿಗಳಂ ಸಂಪಾದಿಸೆಂದು ಪೇಳಿ ಸಂತೋಷಗೊಳಿಸಿದ ಬಳಿಕ, ಅಮರೇಶ್ವರನಾದ ದೇವೇಂದ್ರನು ಶೀಘ್ರದಿಂ ಪೊರಮಟ್ಟು ತನ್ನ ಗೃಹಕ್ಕೆ ಪೋಗಿ ಅತ್ಯಂತ ಸಂತೋಷವನ್ನೈದಿದವನಾಗಿ, ಗುಹಸ್ವಾಮಿಗೆ ನಾಳೆಯ ದಿವಸ ಕಲ್ಯಾಣಾರ್ಥಮಾಗಿ, ಮುಚುಕುಂದಾದಿ ರಾಜರ್ಷಿಗಳಂ ಅಮರರಂ ಕರೆಯಲೋಸುಗ ಚಾರರಂ ಕಳುಹಲಾಗಿ, ಅವರುಗಳು ವೇಗದಿಂ ಪೋಗಿ ಯೆಲ್ಲರಂ ಕರೆದರು. ಆಗ ಮುಚುಕುಂದನು ಷಣ್ಮುಖನ ಕಲ್ಯಾಣವಂ ಕೇಳಿ ಆಚಾರರಂ ಸಂತೋಷದಿಂ ಪೂಜಿಸಿ ಉಪಚಾರಂಗಳಮಾಡಿ ತನ್ನ ಬಂಧುಗಳ್ವೆರಸಿ ಪಟ್ಟಣದಲ್ಲಿಯು ದೇಶದಲ್ಲಿಯು ಇರುವ ಜನಗಳೊಡನೆ, ವಿಲಾಸಿನಿಗಳಿಂ ಯುಕ್ತನಾಗಿ ಪೊರಮಟ್ಟು, ದೇದೀಪ್ಯಮಾನವಾದ ಆ ದೇವಸೇನಾನಾಯಕನ ಪಟ್ಟಣಕ್ಕೆ ಬಂದನು. ಮತ್ತೆ ಇತರರಾದ ಭೂಪಾಲಕರು ಚಂದ್ರಸೂರ್ಯಾದಿ ಗ್ರಹಗಳು ದೇವತೆಗಳು ಋಷಿಗಳು ದೂತಮುಖದಿಂ ಕುಮಾರಸ್ವಾಮಿಯ ಕಲ್ಯಾಣಮಂ ಕೇಳಿ ಉತ್ತಮಾಂಗನೆಯರಿಂದ ಯುಕ್ತರಾಗಿ ಪೊರಮಟ್ಟು ಪರ ಪರ್ವತದ ಪುರವಳಯದ ಭೂಮಿಯಲ್ಲಿಯು ವೃಕ್ಷಾರಾಮಂಗಳಲ್ಲಿಯು ಸರಿತ್ತುಗಳಲ್ಲಿಯು ಪಾನಶಾಲೆಗಳಲ್ಲಿಯು ಮಂಟಪಂಗಳಲ್ಲಿಯು ನಿಬಿಡವಾಗಿ ಮುದದಿಂ

ವಾಸಮಮ್ಮಾಡಿದರು. ಅನಂತರದಲ್ಲಿ ಆ ಮುಚುಕುಂದ ಮುಂತಾದ ಭೂಪಾಲಕರು ದೇವತೆಗಳು ಋಷಿಗಳು ದೇವೇಂದ್ರನ ಗೃಹಕ್ಕೆ ಪೋಗಿ ಆತನಂ ಕಂಡು ಪರಸ್ಪರೋಪಚಾರಂಗಳಂ ಪಡೆದರು. ಆಗ ದೇವತೆಗಳು ಬಂದಂಥ ಭೂಪಾಲಸ್ತ್ರೀಯರುಗಳು ಸಹಾ ಇಂದ್ರಾಣಿಯ ಸಮೀಪಕ್ಕೆ ಪೋಗಿ ಆಕೆಗೆ ನಮಸ್ಕಾರವಮಾಡಿ ಕಲ್ಯಾಣಕರವಾದ * ಗಜೆಯೆಂಬ ಪೆಸರುಳ್ಳ ಶಚೀದೇವಿಯ ಕುಮಾರತಿಯಂ ದಿವ್ಯಾಂಬರ ಭೂಷಣಂಗಳಿಂದಲಂಕರಿಸಿದರು. ಬಳಿಕ ಬ್ರಹ್ಮದೇವನಿಂ ಕಲ್ಯಾಣಕ್ಕೋಸುಗ ಲಗ್ನವು ನಿಶ್ಚಯಿಸಲ್ಪಟ್ಟಿತು. ಇಂದ್ರನದಂ ಕೇಳಿ ವಿಷ್ಣು ಮುಂತಾದ ದೇವತೆಗಳೊಡನೆ ಸುಬ್ರಹ್ಮಣ್ಯನ ಮಂದಿರಕ್ಕೆ ಪೋಗಿ ಸ್ವಾಮಿಗೆ ನಮಸ್ಕಾರವಮ್ಮಾಡಿ, ದೇವನಾದ ಎಲೈ ಕೃಪಾನಿಧಿಯೆ! ಈಗ ಸಮಯವು ಚನ್ನಾಗಿದ್ದೀತು. ವಿವಾಹಕ್ಕೋಸುಗ ನನ್ನ ಗೃಹಕ್ಕೆ ಬರಬೇಕೆಂದು ಬಿನ್ನಪಂಗೈಯ್ಯಲಾಗಿ, ಆಗ ಪರಮಾತ್ಮನಾದ ಗುಹಸ್ವಾಮಿಯು ಆ ವಾಕ್ಯವಂ ಕೇಳಿ ಸಂತೋಷಚಿತ್ತನಾಗಿ ಮುಗುಳುನಗೆಯಿಂದೊಡಗೂಡಿ ನಾನಾ ರತ್ನಗಳಿಂದಲಂಕೃತಮಾದ ಮಯೂರವನ್ನೇರಿ, ನವವೀರರಾದ ಸಮೀಪದಲ್ಲಿ ಸಂಚರಿಸುವ ಲಕ್ಷ ವೀರರೊಡನೆ ಆತ್ಮಪಾವನಂಗಳಾದ ಸ್ತೋತ್ರಂಗಳಮ್ಮಾಡುತ್ತಾ ಅಂಜಲಿಬಂಧಂಗಳಮ್ಮಾಡುತಲಿರುವ ದೇವತೆಗಳಿಂದಲು, ಅತ್ಯಂತ ಸಂತೋಷದಿಂ ಪುಷ್ಪಾಂಜಲಿಗಳಮ್ಮಾಡುತ್ತಲಿರುವ ಬ್ರಹ್ಮ ವಿಷ್ಣುಗಳಿಂದಾವೃತನಾಗಿ ಶೀಘ್ರದಿಂ ಪೊರಮಡೆ, ಆ ಸಮಯದಲ್ಲಿ ಚಂದ್ರಸೂರ್ಯರು ಪ್ರಕಾಶಿಸುತಿರುವ ಛತ್ರಗಳಂ ಪಿಡಿದರು. ವಾಯು ವರುಣಕೀರ್ವರು ಚಾಮರ ವ್ಯಜನಗಳಂ ಧರಿಸಿದರು. ಕಾಲನು ಭಯಂಕರವಾದ ದಂಡವಂ ಪಿಡಿದು ಪೊರಮಟ್ಟನು. ಆಗ ಕರ್ಣಶ್ರಾವ್ಯಮಾದ ವೇದಘೋಷ ಮುಂಟಾದುದು. ವಾದ್ಯಂಗಳ ಧ್ವನಿಯು ಪುಟ್ಟಿದುದು. ಋಷಿಗಳು ಅವ್ಯಯನಾದ ಸ್ತುತಿಸಲು ಯೋಗ್ಯನಾದ ಆ ಕುಮಾರಸ್ವಾಮಿಯಂ ಸ್ತೋತ್ರಂಗಳಿಂ ಸ್ತುತಿಸಿದರು. ಆ ಕುಕ್ಕುಟವು ಅತ್ಯಂತ ಭಯಂಕರವಾದ ಧ್ವನಿಯಮ್ಮಾಡಿತು. ಅವ್ಯಕ್ತಮಧುರವಾದ ವಾಕ್ಯಂಗಳುಳ್ಳ ಕಿನ್ನರರು ರಮ್ಯವಾದ ಗಾನವಮ್ಮಾಡಿದರು. ಊರ್ವಶಿ ರಂಭೆ ಮೇನಕಿಯರು ಗಾನದಲ್ಲಿ ತತ್ಪರರಾಗಿ ನರ್ತನವಮ್ಮಾಡಿದರು. ಋಷಿಗಳು ಪೂರ್ಣ ಕುಂಭಗಳಂ ಹಸ್ತದಲ್ಲಿ ಪಿಡಿದುಕ್ಕೊಂಡು ಮುಂದುಗಡೆಯಲ್ಲಿ ಬಂದರು.

ಷಣ್ಮುಖನು ಈ ಪ್ರಕಾರವಾದ ನಾನಾವಿಧೋಪಚಾರಗಳಿಂ ಅಮರಪ್ಪೇರಿಸಿ ವೀಧಿಯಂ ದಾಂಟಿ, ಹಿಂದಿನ ಗೃಹದ್ವಾರದ ಬೀದಿಗೆ ಪೋಗೆ, ಆ ಸಮಯದಲ್ಲಿ

* ಈಗ ಕಲ್ಯಾಣವಾಗುವ ಇಂದ್ರನ ಪುತ್ರಿಗೆ ಗಜೆ ಯೆಂಬದಾಗಿಯು ದೇವಸೇನೆ ಯೆಂಬದಾಗಿಯು ಜಗನ್ನಾಯಕಿ ಯೆಂಬದಾಗಿಯು ಪೆಸರುಂಟು.

ಲಕ್ಷ್ಮೀ ಮುಂತಾದ ದೇವಶ್ರೇಷ್ಠರ ಸ್ತ್ರೀಯರುಗಳು ಸ್ವಾಮಿಗೆ ನೀರಾಜನ ಕ್ರಿಯೆಯಂ ಪ್ರದಕ್ಷಿಣತ್ರಯವಂ ಮಾಡಿ ಭವನಾಂತರಕ್ಕೆ ಪ್ರವೇಶಿಸಲಾಗಿ, ಭಗವಂತನು ಕುಮಾರಸ್ವಾಮಿಯು ಮಯೂರದಿಂದಿಳಿದು ಮಂಗಳ ಧ್ವನಿಗಳಿಂ ಕಲ್ಯಾಣ ಮಂಟಪ ಸಮೀಪಕ್ಕೆ ಪೋಗೆ, ಆ ಸಮಯದಲ್ಲಿ ಇಂದ್ರನ ಮಡದಿಯಾದ ಶಚೀದೇವಿಯು ಅಪ್ಸರ ಸ್ತ್ರೀಯರೊಡನೆ ಬಂದು ಆತ್ಯಂತ ಸಂತೋಷದಿಂದ ಗುಹಸ್ವಾಮಿಗೆ ನಮಸ್ಕಾರವಂ ಮಾಡಿ, ಕ್ಷೀರಂಗಳಿಂ ಸ್ವಾಮಿಯ ಪಾದಂಗಳಂ ತೊಳೆದು, ಪುಷ್ಪಂಗಳಿಂ ಪೂಜಿಸಿ ದೀಪಾವಳಿಯಂ ಮಾಡಿ ಪ್ರದಕ್ಷಿಣ ನಮಸ್ಕಾರವನೆಸಗಿ, ತನ್ನ ಗೃಹಕ್ಕೆ ಪ್ರವೇಶಿಸಿದಳು.

ಬಳಿಕ ಕುಮಾರಸ್ವಾಮಿಯು ನಾನಾರತ್ನ ವಿಚಿತ್ರವಾದ ರಮ್ಯವಾದ ಸುವರ್ಣ ಪಾದುಕೆಗಳಂ ಪಾದದಿಂ ಮೆಟ್ಟಿ ಮೆಲ್ಲಮೆಲ್ಲನೆ ಕಲ್ಯಾಣ ಮಂಟಪವ ನೈದಿ, ಅಲ್ಲಿರುತಿರ್ಪ ಸಿಂಹಾಸನವನೇರಿದನು. ಆಗ ದೇವತೆಗಳು ಪ್ರದಕ್ಷಿಣ ನಮಸ್ಕಾರವನೆಸಗಿ ಪೂಜಿಸಿದರು. ವಿಷ್ಣ್ವಾದಿ ದೇವತೆಗಳು ಸ್ವಾಮಿಯ ಆಜ್ಞೆಯಿಂ ಸಮೀಪಕ್ಕೆ ಪೋಗಿ ತಮ್ಮ ತಮ್ಮ ಯೋಗ್ಯಾನುಸಾರವಾಗಿ ಆಸನಂಗಳಲ್ಲಿ ಕುಳಿತರು. ಮುಚುಕುಂದ ಮುಂತಾದ ಭೂಪಾಲಕರು ಆ ಸ್ವಾಮಿಗೆ ನಮಸ್ಕಾರವಂ ಮಾಡಿ ಅಂಜಲಿಹಸ್ತರಾಗಿ ನಿಂತಿರ್ದರು. ವೀರಬಾಹು ಮುಂತಾದ ವೀರರು ಹಾಗೆ ನಮಸ್ಕಾರವಂ ಮಾಡಿದರು. ಆಗ ಸುರೇಶ್ವರನಾದ ಕುಮಾರಸ್ವಾಮಿಯು ಈ ಪ್ರಕಾರಮಾದ ನಾನಾವಿಧೋಪಚಾರಗಳಿಂ ಪೂಜಿಸಲ್ಪಟ್ಟವನಾಗಿರುತಿರ್ದನು. ಅನಂತರದಲ್ಲಿ ಪರಮೇಶ್ವರನು ಆಕಾಶದಲ್ಲಿ ಪೋಗುತಲಿರುವ ಸುವರ್ಣದಿಂದಲು ರತ್ನಗಳಿಂದಲು ಆಶ್ಚರ್ಯಕರವಾದ ರಥವನ್ನೇರಿ ಪಾರ್ವತೀದೇವಿಯೊಡನೆ ಈ ಕಲ್ಯಾಣವನ್ನು ನೋಡಲು ಆಕಾಶಮಾರ್ಗದಲ್ಲಿ ಪರಿಶುದ್ಧಂಗಳಾದ ಬಹಳವಾದ ಮೇಘಘೋಷಣೆಗಳಂ ಜಯಿಸಿದ ಶಬ್ದಗಳುಳ್ಳ ವಾದ್ಯಂಗಳ್ವೆರಸಿ ಪೊರಮಟ್ಟನೆಂದು ಸೂತಪೌರಾಣಿಕಂ ಶೌನಕಾದಿ ಮುನಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ಶಿವರಹಸ್ಯಖಂಡದೊಳು ದೇವಕಾಂಡದಲ್ಲಿ ಮೊದಲನೆಯ ಅಧ್ಯಾಯವು ಸಮಾಪ್ತಮಾದುದು.

ಎರಡನೆಯ ಅಧ್ಯಾಯವು.

ವರಶಿವಾ ಶಿವರುಗಳು ವಿವಾಹಮಂಟಪಕ್ಕೆ ಬರುವಿಕೆ.

ಎಲೈ ಋಷಿಗಳಿರಾ! ಅನಂತರದಲ್ಲಿ ಆ ಕಲ್ಯಾಣಮಂಟಪದಲ್ಲಿ ಗುಹಸ್ವಾಮಿ ಮುಂತಾದವರು ಮಹಾದೇವನಂ ಕಂಡು ನಮಸ್ಕಾರವಂ ಮಾಡಿ ಪರಮಭಕ್ತಿ

ಯಿಂ ಅಂಜಲಿ ಬಂಧವಂ ಮಾಡಿ ಆತನಂ ಸ್ತುತಿಸಿದರು. ಆಗ ಶಿವನು ಪಾರ್ವತೀ ದೇವಿಯೊಡನೆ ವಿಮಾನದಿಂದಿಳಿದು ಪೊರಮಡೆ, ಗುಹನು ಮುಂದೆ ಪೋಗಿ ಆ ಪಾರ್ವತೀ ಪರಮೇಶ್ವರರ ಪಾದಂಗಳಿಗೆ ಸಂಭ್ರಮದಿಂ ನಮಸ್ಕಾರವಂ ಮಾಡಿ ವಿನಯದಿಂ ಸ್ತೋತ್ರಂಗಳಂ ಮಾಡಿದನು. ಆ ಸಮಯದಲ್ಲಿ ಶಂಭುವು ಆ ಕುಮಾರನಂ ಶೀಘ್ರದಿಂದಾತನ ಮಸ್ತಕವಂ ಅಡಿಗಡಿಗೆ ಆಘ್ರಾಣಿಸಿ ತೃಪ್ತಿಯ ನೈದಲಿಲ್ಲವು. ಆಗ ವಿಷ್ಣು ಮುಂತಾದ ದೇವತೆಗಳು ತ್ರಿಯಂಬಕನಾದ ದೇವಂಗೆ ನಮಸ್ಕಾರವಂ ಮಾಡಿ ನಾನಾಪ್ರಕಾರವಾದ ಸ್ತೋತ್ರಂಗಳಿಂ ಸ್ತುತಿಸಿದರು. ಆವೇಳೆಯಲ್ಲಿ ಈಶ್ವರ ನವರವರಂ ನೋಡಿ, ಕಲ್ಯಾಣಮಂಟಪವನೈದಿದನು. ಸಮಸ್ತ ದೇವತೆಗಳು ಪರಮೇಶ್ವರನ ಬಳಿವಿಡಿದೈದಿದರು. ಆ ಸಮಯದಲ್ಲಿ ಅಲ್ಲಲ್ಲಿಗೆ ಸ್ವಾಮಿಯಾಜ್ಞೆಯಿಂ ದಿವ್ಯ ಸಿಂಹಾಸನವು ಬಂದುದು. ಪರಮಾನಂದ ವಿಗ್ರಹ ನಾದ ದೇವನು ಸಿಂಹಾಸನದೊಳು ಪದ್ಮಾಸನಸ್ಥಿತನಾಗಿ, ಸುಬ್ರಹ್ಮಣ್ಯನಂ ತನ್ನ ಊರು ಪ್ರದೇಶದಲ್ಲಿ ಕುಳ್ಳಿರಿಸಿಕೊಂಡಿದ್ದನು. ಆಗ ಸಮಸ್ತ ದೇವತೆ ಗಳು ಕುಮಾರ ಸಹಿತನಾದ ಅಂಬಿಕಾನಾಥಂಗೆ ನಮಸ್ಕಾರವಂ ಮಾಡಿದರು. ಆ ವೇಳೆಯಲ್ಲಿ ಬ್ರಹ್ಮದೇವರು, ಎಲೈ ಸ್ವಾಮಿಯೆ! ಗುಹನು ನಿಮ್ಮ ಆಜ್ಞೆಯಿಂ ದೇವದ್ರೋಹಿಗಳಾದ ದೈತ್ಯರಂ ಸಂಹರಿಸಿ, ಬಂಧನದಲ್ಲಿರ್ದ ದೇವತೆಗಳಂ ಬಿಡಿಸಿ ಪರ ಪರ್ವತಕ್ಕೆ ಬಂದನು. ಆಗ ಈ ದೇವೇಂದ್ರನು ತನ್ನ ಕುಲದ ಅತಿಶಯಕ್ಕೋಸುಗ ಷಣ್ಮುಖನ ಪ್ರೀತಿಗಾಗಿ ತನ್ನ ಕುಮಾರ್ತಿಯಂ ಕುಮಾರ ಸ್ವಾಮಿಗೆ ಕೊಟ್ಟು ಕಲ್ಯಾಣವಂ ಮಾಡುವೆನೆಂದು ಪೇಳಿ, ದೇವೇಶಂಗೆ ನಮ ಸ್ಕಾರವಂ ಮಾಡಿದನೆಂದು ನುಡಿದರು. ಈ ವಾಕ್ಯವಂ ಕೇಳಿ ಪರಮೇಶ್ವರನು ಎಲೈ ಋಷಿಗಳಿರಾ! ನಾವು ಈ ಕಲ್ಯಾಣವನ್ನು ನೋಡಲಿಲ್ಲಿಗೆ ಬಂದೆನೆಂದನು. ಆಗ ವಿಷ್ಣುವು ಶ್ರೇಷ್ಠೆಯಾದ ಕಲ್ಯಾಣಾಕಾರವಾದ ನಿನ್ನ ಕುಮಾರ್ತಿಯನ್ನಿಲ್ಲಿಗೆ ಕರೆತಾರೆಂದು ದೇವೇಂದ್ರಂಗೆ ಪೇಳಲಾಗಿ ಆ ದೇವೇಂದ್ರನು ಶೀಘ್ರದಿಂ ಪೋಗಿ ತನ್ನ ಕುಮಾರ್ತಿಯಂ ಕರೆತರಲಾಗಿ ಲಕ್ಷ್ಮೀದೇವಿಯು ಸರಸ್ವತಿಯು ಆ ಕಲ್ಯಾಣ ಮಂಟಪವನೈದಿಸಿದರು.

ಕುಮಾರಸ್ವಾಮಿಯ ವಿವಾಹ ಘಟ್ಟವು.

ಬಳಿಕ ದೇವತೆಗಳೆದ್ದು ಆಕೆಗೆ ನಮಸ್ಕಾರವಂ ಮಾಡಲಾಗಿ, ಆಕೆಯು ತನಗೆ ಅತ್ತೆ ಮಾವಂದರಾದ ಪಾರ್ವತೀ ಪರಮೇಶ್ವರರ್ಗೆ ನಮಸ್ಕರಿಸಿ, ಮುಂದು ಗಡೆಯುಲ್ಲಿರ್ದ ಷಣ್ಮುಖನಂ ಕಂಡೆದ್ದು ಲಜ್ಜೆಯನ್ನೈದಿದಳು. ಆಗ ಜಗನ್ಮಾತೆ ಯಾದ ಪಾರ್ವತೀದೇವಿಯು ಆಕೆಯಂ ನೋಡಿ ಕೃಪೆಯಿಂದ ಹಸ್ತವಂ ಪಿಡಿದು ಗಂಡಸ್ಥಲದಲ್ಲಿ ಆಘ್ರಾಣವಂ ಮಾಡಿ ತನ್ನ ಕುಮಾರನನ್ನು ಆ ಸೊಸೆಯನ್ನು

ತಾನೆ ಸಿಂಹಾಸನದಲ್ಲಿ ಕುಳ್ಳಿರಿಸಲಾಗಿ, ಸಮಸ್ತ ದೇವತೆಗಳು ಏಕಾಸನದಲ್ಲಿರ್ಪ ದೇವಸೇನೆಯುಂ ಕುಮಾರಸ್ವಾಮಿಯುಂ ನೋಡಿ ಸಂತೋಷವನ್ನೈದಿದರು. ಅನಂತರದಲ್ಲಿ ದೇವೇಂದ್ರನು ಶಚೀದೇವಿಯ ಕೈಯ್ಯಲ್ಲಿರುವ ಸುವರ್ಣಗಿಂಡಿಯ ತೀರ್ಥದಿಂದ ಷಣ್ಮುಖಂಗೆ ಪಾದಪ್ರಕ್ಷಾಳನವಂ ಮಾಡಿ ಗಂಧ ಪುಷ್ಪ ಧೂಪ ದೀಪಾದಿಗಳಿಂದರ್ಚಿಸಿ, ನಾನಾವಿಧವಾದ ಉಪಚಾರಂಗಳಂ ಮಾಡಿ, ತಾನು ಸ್ವೀಕರಿಸಲೋಸುಗ ಪವಿತ್ರತರಮಾದ ಆ ಪಾದೋದಕವನೊಂದು ಕಪೆಯಲ್ಲಿರಿಸಿ ಹಸ್ತದಿಂದುದಕವಂ ತೆಗದು ಈಕೆಯು ಗುಹನಿಗೆ ಕುಟುಂಬಿನಿಯೆಂದು ಪೇಳಿ ಮಂಗಳ ಸೂತ್ರವನ್ನು ಕುಮಾರಸ್ವಾಮಿಯ ಹಸ್ತದಲ್ಲಿ ಕೊಟ್ಟನು.

ಆಗ ದೇವನಾಯಕನಾದ ಕುಮಾರಸ್ವಾಮಿಯು ದೇವಸೇನೆಯ ಕಂಠದಲ್ಲಿ ಮಂಗಳಸೂತ್ರವಂ ಧರಿಸಿ ಆಕೆಯ ಕಂಠಮಂ ಸುಗಂಧ ಕುಸುಮ ಮಾಲಿಕೆಗಳಿಂದಲಂಕರಿಸಿದನು. ಬಳಿಕ ಮಹಾಮತಿಮಂತನಾದ ದೇವೇಂದ್ರನು ತನ್ನ ಪುತ್ರಿಯಾದ ದೇವಸೇನೆಯೆಂಬ ಕನ್ನಿಕೆಗು ಅಳಿಯನಾದ ಕುಮಾರಸ್ವಾಮಿಗು ರಸಾಯನವನ್ನು ಫಲಂಗಳನ್ನು ಸೀರೇ ದನವಂ ಮಾಡಿದನು. ಆಗ ಮೇಘಘೋಷದಂತೆ ಗಂಭೀರವಾದ ವಾದ್ಯಧ್ವನಿಗಳು ಮೊಳಗಿದವು. ದೇವತೆಗಳು ಆಶೀರ್ವಾದಂಗಳಂ ಮಾಡಿದರು. ಬ್ರಹ್ಮನು ಪ್ರದಕ್ಷಿಣಾಕಾರಮಾದ ಜ್ವಾಲೆಗಳುಳ್ಳ ಅಗ್ನಿಯಲ್ಲಿ ಸಮಿತ್ತುಗಳಿಂ ಆಜ್ಯಾಹುತಿಗಳಿಂದಲು ಹೋಮಮಂ ಮಾಡಿದನು.

ಶ್ಲೋ॥ ತತಃಪ್ರದಕ್ಷಿಣೀ ಕೃತ್ಯವಹ್ನಿಂಸ್ಕಂದಃ ಸ್ವಯಂಪ್ರಭುಃ ।
ಪಾಣಿನಾರೋಪಯಾಮಾಸ ಪತ್ನ್ಯಾಃ ಪಾದಂತದಾಶ್ಮನಿ ॥

ತಾ॥ ಬಳಿಕ ಅಘಟ ಸಘಟನಾ ಸಮರ್ಥನಾದ ಕುಮಾರಸ್ವಾಮಿಯು ತಾನೆ ಅಗ್ನಿಗೆ ಪ್ರದಕ್ಷಿಣವಂ ಮಾಡಿ ಆ ಸಮಯದಲ್ಲಿ ಪತ್ನಿಯಾದ ದೇವಸೇನೆಯ ಪಾದವನ್ನು ಹಸೀಕಲ್ಲಿನಮೇಲೆ ಹಸ್ತದಿಂದಿರಿಸಿದನು.

ಆಗ ಸತಿಪತಿಗಳೀರ್ವರು ಅರುಂಧತಿಯಂ ನೋಡಿ ಮಾತಾಪಿತೃಗಳಾದ ಪಾರ್ವತೀಪರಮೇಶ್ವರರಿಗೆ ಮೂರು ಪ್ರದಕ್ಷಿಣಗಳಂ ಮಾಡಿ ನಮಸ್ಕರಿಸಲಾಗಿ, ಆ ಜನನೀ ಜನಕರಾದ ಪಾರ್ವತೀಪರಮೇಶ್ವರರು ಆಮುದಮಾಣಿಗರಂ ತಮ್ಮ ಸಿಂಹಾಸನದಲ್ಲಿ ಕುಳ್ಳಿರಿಸಿ ಆ ಸೊಸೆಯನ್ನು ಮಗನನ್ನು ಸಹ ಆಲಿಂಗಿಸಿ ದಯಾದೃಷ್ಟಿಯಿಂ ನೋಡಿದರು. ಬಳಿಕ ವಿಷ್ಣು ಮುಂತಾದ ದೇವತೆಗಳು ಸಿಂಹಾಸನಸ್ಥರಾಗಿ ನೇತ್ರಾನಂದಕರರಾದ ಆ ಪಾರ್ವತೀಪರಮೇಶ್ವರರನ್ನು ದೇವಸೇನಾಸಹಿತನಾದ ಕುಮಾರಸ್ವಾಮಿಯನ್ನೂ ನೋಡಿ ಪರಮ ಭಕ್ತಿಯಿಂದ ನಮಸ್ಕಾರವಂ ಮಾಡಿ ಸ್ತುತಿಸಿದರು. ಈ ಪ್ರಕಾರದಿಂ ಪಾರ್ವತೀ ಪರಮೇಶ್ವರರು ತಮ್ಮ ಕುಮಾರನ ಕಲ್ಯಾಣ ಮಹೋತ್ಸವವಂ ವೀಕ್ಷಿಸಿ ಅಂತರ್ಧಾನವನ್ನೈದಲಾಗಿ,

ದೇವತೆಗಳೆಲ್ಲರು ಆ ಸಾಂಬಸದಾಶಿವನನ್ನು ಸ್ತೋತ್ರಂಗಳಿಂ ಸ್ತುತಿಸಿದರು. ಬಳಿಕ ಷಣ್ಮುಖನು ತನಗೆ ಸತಿಯಾದ ದೇವಸೇನೆಯೊಡನೆ ತನ್ನ ಮಂದಿರಕ್ಕೆ ಪೊರಮಟ್ಟು ದ್ವಾರದಲ್ಲಿರುವ ಸಮಸ್ತ ದೇವತೆಗಳಂ ತಮ್ಮ ತಮ್ಮ ಮಂದಿರಕ್ಕೆ ಕಳುಹಿ ದ್ವಾರಪಾಲಕರಂ ಕಲ್ಪಿಸಿ ತನ್ನ ಸ್ತ್ರೀಯ ಹಸ್ತನಂ ಪಿಡಿದು ಅಂತಃಪುರವನ್ನು ಪ್ರವೇಶಿಸಿ ಮುದದಿಂದಿದ್ದನು. ಅನಂತರದಲ್ಲಿ ದೇವೇಂದ್ರನು ಪೂಜ್ಯರಾದ ಮುಚುಕುಂದಾದಿ ಭೂಪಾಲಕರಂ ದೇವತೆಗಳಂ ಅವರವರ ತಾರತಮ್ಯವಾಗಿ ದಿವ್ಯಂಗಳಾದ ಕಲ್ಪವೃಕ್ಷಂಗಳಿಂ ಪುಟ್ಟಿದ ವಸ್ತ್ರಭೂಷಣಂಗಳಿಂದಲು, ತ್ರಾಸವೆಂಬ ದೋಷದಿಂ ರಹಿತವಾದ ಮಾಣಿಕ್ಯಂಗಳಿಂದಲು ಹಾರ ಕಂಕಣಗಳಿಂದಲು ಪೂಜಿಸಿ, ಸಂತೋಷವನುಂಟುಮಾಡಿ ಯೆಲ್ಲರಂ ಕಳುಹಿಸಿ, ಶಚೀದೇವಿಯೊಡನೆ ಅಲ್ಲಿ ಮುದದಿಂದಿರ್ದನು.

ಬಳಿಕ ಸುಬ್ರಹ್ಮಣ್ಯನು ತನ್ನ ಸತಿಯಂ ಪೆರಸಿ ಅಲ್ಲಿ ಕೆಲವು ಕಾಲವಿದ್ದು ಇಂದ್ರಂಗೆ ಪಟ್ಟಾಭಿಷೇಕವಂ ಮಾಡಲೋಸುಗ ಶೀಘ್ರದಿಂ ಸ್ವರ್ಗಲೋಕಕ್ಕೆ ಪೋಗಲು ದ್ವಾರಪ್ರದೇಶಕ್ಕೆ ಬರಲಾಗಿ ಆ ಭೂತಂಗಳು ವೀರಬಾಹು ಮೊದಲಾದ ಸೇನಾಪತಿಗಳು ಸಹ ಪೊರಮಟ್ಟು, ಪಟಹಧ್ವನಿಗಳ್ಗೈದಿಸಿ ಕೋಲಾಹಲಂಗಳಂ ಮಾಡಿದರು. ಆಗ ಇಂದ್ರನು ಹರಿಯು ಉಳಿದ ದೇವತೆಗಳು ಗುಹಸ್ವಾಮಿಯೊಡನೆ ಸೇರಿದರು. ಬಳಿಕ ಷಣ್ಮುಖನು ಮನೋವೇಗವಾದ ರಮ್ಯರಥವನೇರಿ ದೇವಿಯೊಡನೆ ಪೊರಮಟ್ಟು, ಸ್ತೋತ್ರಂಗಳಿಂ ಸ್ತುತಿಸುತ್ತ ನಮಸ್ಕಾರಂಗಳಂ ಮಾಡುತಲಿರುವ ದೇವತೆಗಳನ್ನು ಅವರವರ ಸ್ಥಾನಂಗಳ ನೈದಿಸಲು ಅವರನ್ನು ವಾಹನಂಗಳನ್ನೇರಿರೆಂದು ನಿರೂಪಿಸಲಾಗಿ, ದೇವತೆಗಳು ಆ ಗುಹಸ್ವಾಮಿಯ ಆಜ್ಞೆಯಿಂದ ವಾಹನಂಗಳ ಮೇಲೆ ಕುಳಿತು ದೇವದೇವನ ಸಮೀಪಕ್ಕೆ ಬಂದು ಮುಂದುಗಡೆಯಲ್ಲಿ ಪರಮ ಭಕ್ತಿಯಿಂದ ನಿಂತಿರ್ದರು. ಆಗ ವಾದ್ಯಧ್ವನಿಗಳು ಪ್ರಳಯಕಾಲದ ಮೇಘದಂತೆ ಮೊಳಗಿದವು. ಅಲ್ಲಿ ಕೆಲಬರು ರಥಿಕರಾಗಿಯು ಕೆಲಂಬರು ರಥ ಧ್ವಜಪತಾಕಿಗಳಾಗಿಯು ಈ ಪ್ರಕಾರವಾಗಿದ್ದರು.

ದೇವತೆಗಳಿಗೆ ವಿಭವಪ್ರದಾನ.

ಬಳಿಕ ಕುಮಾರಸ್ವಾಮಿಯು ಅಪ್ಪಣೆಯಿಂ ಇಂದ್ರನು ಅಮರಾವತಿಯನ್ನೈದಿದನು. ಪಾಪಕಾರಿಗಳಾದ ಅಸುರರಿಂ ಅಗ್ನಿಯಿಂದ ನಿರ್ಮಾನುಷ್ಯವಾಗಿ ಮಾಡಲ್ಪಟ್ಟ ಸ್ವರ್ಗಲೋಕವಂ ನೋಡಿ ದೇವ ಶಿಲ್ಪಿಯಂ ಕರೆದು ಈ ಪುರಮಂ ಪೂರ್ವದಂತೆ ರಚಿಸೆಂದು ನಿರೂಪಿಸಲಾಗಿ, ಸ್ವಾಮಿಯ ವಾಕ್ಯದಿಂದ ಆತನು ಪೂರ್ವದಂತೆ ರಚಿಸಿದನು. ಆಗ ಮಹಾಮಹಿಮೆಯುಳ್ಳವರಾದ ದೇವತೆಗಳು ಆ ಶಿಲ್ಪಿಗೆ ಸಂತೋಷವನ್ನುಂಟುಮಾಡಿ ಆ ಗುಹಸ್ವಾಮಿಯ ಸಮೀಪಕ್ಕೆ ಮರಳಿ

ಬಂದು ಯಥಾಪೂರ್ವಮಾದುದೆಂದು ಬಿನ್ನಪಂಗೆಯ್ಯೆ, ಸುಬ್ರಹ್ಮಣ್ಯನು ಆ ವಾಕ್ಯವಂ ಕೇಳಿ ವಾಹನದಿಂದಿಳಿದು ಚಿತ್ರಂಗಳಿಂ ಶೋಭಿತಮಾಗಿ ರಮ್ಯಮಾದ ತನ್ನ ಭವನಕ್ಕೆ ಪೋಗಿ ಭದ್ರಾಸನದಲ್ಲಿ ಕುಳಿತವನಾಗಲು, ಇಂದ್ರಾದಿ ದೇವತೆಗಳು ತಮ್ಮ ತಮ್ಮ ದೇವತೆಗಳೊಡನೆ ಪೀಠಂಗಳಲ್ಲಿ ಕುಳಿತರು. ಆಗ ಶಚೀದೇವಿಯು ದೇವತಾಸ್ತ್ರೀಯರೊಡನೆ ಸರ್ವ ರತ್ನಗಳಿಂದಾಶ್ಚರ್ಯಯುಕ್ತಮಾದ ತನ್ನ ಗೃಹವನ್ನು ಪ್ರವೇಶಿಸಿದಳು.

ಇಂದ್ರನ ಪಟ್ಟಾಭಿಷೇಕ.

ಆ ಸಮಯದಲ್ಲಿ ಕುಮಾರಸ್ವಾಮಿಯು ಪಾರ್ಶ್ವದಲ್ಲಿರ್ದ ಬ್ರಹ್ಮನಂ ಕರೆದು, ಎಲೈ ಬ್ರಹ್ಮನೆ! ನೀನು ಪಟ್ಟಾಭಿಷೇಕಮಮ್ಮಾಡಿಕೊಂಡು ನಮ್ಮ ಬಳಿಗೆ ಬಾರೆಂದು ಪೇಳಲಾಗಿ, ಬ್ರಹ್ಮನು ಆ ಆಜ್ಞೆಯಂ ಶಿರಸಾವಹಿಸಿ ಅಪೇಕ್ಷಿತಂಗಳಾದ ದ್ರವ್ಯಂಗಳಂ ಸಂಪಾದಿಸಿ ಗೃಹಕ್ಕೆ ಬಂದು ಶುದ್ಧೋದಕ ಗಂಧೋದಕಂಗಳಿಂ ಸ್ನಾನಮಮ್ಮಾಡಿ ಪಟ್ಟಬಂಧನಮಮ್ಮಾಡಿಕೊಂಡು ಆ ಕುಮಾರಸ್ವಾಮಿಯ ಸಮೀಪಕ್ಕೆ ಬಂದನು. ಬಳಿಕ ದೇವೇಂದ್ರನು ಋಷಿಗಳಿಮ್ಮಾಡಲ್ಪಟ್ಟ ಆಶೀರ್ವಾದಂಗಳಂ ಕೈಕೊಂಡು ಸಕಲ ದೇವತೆಗಳಿಂ ಪರಿವೃತನಾಗಿ, ನರ್ತನಮಮ್ಮಾಡುತಲಿರುವ ಅಪ್ಸರೋಗಣಗಳಿಂದಲು ಗಾನವನ್ನೆಸಗುತಲಿರ್ಪ ಕಿನ್ನರ ಸ್ತ್ರೀಯರಿಂದಲು ಮಾಡಲ್ಪಟ್ಟ ವಿವಿಧೋಪಚಾರಂಗಳುಳ್ಳವನಾಗಿ, ಅಲ್ಪಕಾಲವು ಸಿಂಹಾಸನದಲ್ಲಿ ಕುಳಿತಿರ್ದು ಅತ್ಯಂತ ಸಂತಸಯುಕ್ತನಾಗಿ ಮರಳಿ ಸ್ವಾಮಿಯ ಸಮೀಪಕ್ಕೆ ಬಂದವನಾಗಲು, ಷಣ್ಮುಖನು ಆ ಇಂದ್ರನಂ ನೋಡಿ, ಎಲೈ ದೇವೇಂದ್ರನೆ! ಪೂರ್ವದಂತೆ ಸ್ವರ್ಗವಂ ಪಾಲಿಸುತ್ತ ಸುಖದಿಂ ಸ್ವರ್ಗದಲ್ಲಿರೆಂದು ಪೇಳಿ ಆತನಂ ಕಳುಹಿ, ಬಳಿಕ ವಿಷ್ಣು ಮುಂತಾದ ದೇವತೆಗಳಂ ತಮ್ಮ ತಮ್ಮ ಸ್ಥಾನಂಗಳಿಗೆ ಕಳುಹಿಸಿ, ವೀರರಂ ಗೃಹದ್ವಾರದಲ್ಲಿ ನಿಲ್ಲಿಸಿ, ದೇವಿಯೊಡನೆ ಅಂತಃಪುರವಂ ಪೊಕ್ಕು ಅತ್ಯಂತ ಪ್ರೀತಿಯುಕ್ತನಾಗಿ ಕೆಲವು ಕಾಲ ಸ್ವರ್ಗಲೋಕದಲ್ಲಿರ್ದು, ಮರಳಿ ಮುದದಿಂ ದೇವೀಸಹಿತನಾಗಿ ತನ್ನ ನಗರಿಗೆ ಪೋಗಲಿಚ್ಛೈಸಿ ಪೊರಮಟ್ಟನು. ಆಗ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಅಂಜಲಿಹಸ್ತರಾಗಿ ಮುಂಗಡೆಯಲ್ಲಿ ನಿಂತಿರಲಾಗಿ, ಅವರಂ ಕಂಡು ತಮ್ಮ ತಮ್ಮ ಲೋಕಂಗಳಿಗೆ ಕಳುಹಿ ದೇವಿ ಸಹ ರಥದಲ್ಲಿ ಕುಳಿತು ವೀರಬಾಹುವು ಮುಂತಾದ ವೀರರೊಡನೆ ಸೇನಾಪತಿಗಳ್ವೆರಸಿ ಭೂತಂಗಳ ಸಹಿತ ಕೈಲಾಸಗಿರಿಯನ್ನೈದಿ, ರಥದಿಂದಿಳಿದು ಪಾರ್ವತೀಪರಮೇಶ್ವರರಿಂಗೆ ನಮಸ್ಕಾರಮಮ್ಮಾಡಿ, ಅವರಿಂದ ಅಪ್ಪಣೆಯಂ ಪಡೆದು ಸ್ವಕೀಯರಾದ ಭೂತಗಣಗಳಿಂದಾವೃತನಾಗಿ ಸತಿಯೊಡನೆ ಸ್ಕಂದಗಿರಿಗೆ ಬಂದು ಸಿಂಹಾಸನಾರೂಢನಾಗಿರ್ದನು. ಎಲೈ ಬ್ರಾಹ್ಮಣರುಗ

ರಿರಾ! ಆವನಾನೊಬ್ಬ ನರನು ಉತ್ತಮವಾದ ಮತ್ತೆ ಕೇಳಲು ಯೋಗ್ಯವಾದ ಪುಣ್ಯಕರಮಾದ, ಈ ಗೌರೀಪುತ್ರನಾದ ಕುಮಾರಸ್ವಾಮಿಯ ಕಲ್ಯಾಣ ಕಥೆಯ ಸಾರವನ್ನು ಪಠಿಸುವನೋ, ಮತ್ತೆ ಯಾವಾತನು ಮಹಾ ಭಕ್ತಿಯಿಂದ ಕೇಳುವನೋ ಅವರೀರ್ವರು ದೀರ್ಘಾಯುಷ್ಮಂತರಾಗಿ ಸರ್ವಕಾಲದಲ್ಲಿಯು ದಾರಾಪುತ್ರಾದಿಗಳ್ವೆರಸಿ ಇಹಲೋಕದಲ್ಲಿ ಸರ್ವಸುಖಗಳನ್ನನುಭವಿಸುತಿದ್ದು ಸಾಕ್ಷಾತ್ ಸ್ಕಂದಸಾಯುಜ್ಯವನ್ನೈದುವರೆನದು ಸೂತಂ ಪೇಳಿದ ನೆಂಬಲ್ಲಿಗೆ, ದೇವಕಾಂಡದಲ್ಲಿ ಎರಡನೆಯ ಅಧ್ಯಾಯವು ಸಮಾಪ್ತವಾದುದು.

ಮೂರನೆಯ ಅಧ್ಯಾಯವು.

ಜಯಂತನಿಗೆ ದೇವಗುರುವಿನ ಮಹೋಪದೇಶ.

ಕೇಳಿರೈ ಋಷಿಗಳಿರಾ! ಅನಂತರದಲ್ಲಿ ಗುಹಸ್ವಾಮಿಯಿಂದ ಕಳುಹಿಸಲ್ಪಟ್ಟ ಬ್ರಹ್ಮಾದಿ ದೇವತೆಗಳು ತಮ್ಮ ತಮ್ಮ ಗೃಹಂಗಳಲ್ಲಿ ನಿಂತು ಹೃದಯಕಮಲಂಗಳಲ್ಲಿ ಆ ಗುಹಸ್ವಾಮಿಯನ್ನೇ ಧ್ಯಾನಿಸುತ ಸುಖವಾಗಿರ್ದರು. ಆಗ ಇಂದ್ರನು ಕ್ಷಣಕ್ಷಣದಲ್ಲಿಯು ಶೂರನಿಮ್ಮಾಡಲ್ಪಟ್ಟ ಬಾಧೆಯಂ ನೆನೆದು ವೈರಾಗ್ಯದಿಂ ಸಮಸ್ತವಂ ಬಿಟ್ಟು ತಾನೆ ಸಂಸಾರವಂ ನಿಂದಿಸುತ ಯೋಗಿಯಾಗಿ ತಲೆವಾಗಿ ಷಣ್ಮುಖನಂ ಧ್ಯಾನಿಸುತಿರ್ದನು. ಬಳಿಕ ಬೃಹಸ್ಪತಿಯು ಇಂದ್ರನ ಹೃದಯವಂ ತಿಳಿದು ಶೀಘ್ರದಿಂದಾತನ ಸಮೀಪಕ್ಕೆ ಬಂದು ಏಕಾಂತದಲ್ಲಿ ಮದನಶಾಸ್ತ್ರವನ್ನುಪದೇಶಿಸಿದವನಾಗಲು, ಇಂದ್ರನು ಹಾಗೆ ಯಾಗಲೆಂದು ನಿಶ್ಚಯಿಸಿ ಮದನನಿಂ ಮೋಹಿತನಾಗಿ, ಸ್ತ್ರೀಸಂಭೋಗದಲ್ಲಿ ಕುತೂಹಲ ಉಳ್ಳವನಾಗಿ, ಹಾಹಾ! ಸ್ತ್ರೀಸಂಭೋಗದಲ್ಲಿ ಯಾವ ಸುಖ ಉಂಟಾಗುವದೋ ಅದೇ ಜನ್ಮಕ್ಕೆ ಸಾಫಲ್ಯವನ್ನೀಯುವದು. ಐಶ್ವರ್ಯ ಬಲವಿಜ್ಞಾನ ಭೋಗಂಗಳಲ್ಲಿ ಅದು ಶ್ರೇಷ್ಠವಾದದ್ದು. ಸುಖಂಗಳಲ್ಲಿ ಅದೇ ಅತಿಶಯವಾದ ಸುಖವು. ವ್ಯರ್ಥವಾಗಿ ಜನರು ದ್ರವ್ಯಲಾಭದಿಂದಿದಂ ನಿಂದಿಸುವರೆಂದು ಮನದಿ ಚಿಂತಿಸಿ ತನ್ನ ಗುರುವನ್ನು ಕಳುಹಿ, ಪುತ್ರನಾದ ಜಯಂತನಂ ರಾಜ್ಯವಂ ರಕ್ಷಿಸಲೋಸುಗ ನಿಯಮಿಸಿ, ದಿವಾರಾತ್ರಿಯು ವಿಲಾಸದಿಂ ಶಚೀದೇವಿಯೊಡನೆ ಮನೆಯಲ್ಲಿಯು ಉದ್ಯಾನದಲ್ಲಿಯು ರಮಿಸುತಿರ್ದನು.

ಆ ಸಮಯದಲ್ಲಿ ಜಯಂತನು ನೀತಿಮಾರ್ಗದಿಂ ಸ್ವರ್ಗಲೋಕವಂ ಪಾಲಿಸುತ ಒಂದಾನೊಂದು ವೇಳೆಯಲ್ಲಿ ಸರ್ವಶಾಸ್ತ್ರಾರ್ಥಕೋವಿದನಾದ ತನ್ನ

ಗುರುವನ್ನು ನೋಡಿ, ಎಲೈ ಗುರುವೆ! ಮಹಾ ಶೂರನಾದ ಶೂರಪದ್ಮನು ಬ್ರಹ್ಮ ವಿಷ್ಣು ಮುಂತಾದವರನ್ನು ತನ್ನ ಕೃಷಿಗೆಳಲ್ಲಿ ಪ್ರೇರಿಸಿ ಬಾಧಿಸಿದನು. ಇದು ಆವ ಕರ್ಮಫಲವೆಂಬುದಂ ನೀನು ಪೇಳು. ಪ್ರಾಣಿಗಳಿಂ ಕರ್ಮವಿಲ್ಲದೆ ಒಂದು ಫಲವು ಅನುಭವಿಸಕೂಡದು. ಎಂದು ಪೇಳುತ್ತ ನಮಸ್ಕಾರವನ್ಮಾಡಲಾಗಿ, ಆ ಗುರುವು ಈ ವಚನವಂ ಕೇಳಿ, ಎಲೈ ಜಯಂತನೆ! ಪೂರ್ವದಲ್ಲಿ ನಾರಾಯಣ ಮುಂತಾದ ನಾವುಗಳು ದಕ್ಷಾಧ್ವರಕಾಲದಲ್ಲಿ ಅಧ್ವರೇಶ್ವರನಾದ ತ್ರಿಯಂಬಕನಂ ಬಿಟ್ಟು ಹವಿಸ್ಸುಗಳಂ ಭುಂಜಿಸುತಿರ್ದೆವು. ಆಗ ವೀರಭದ್ರನಿಂದ ಆ ಫಲವನ್ನು ಅನುಭವಿಸಿದೆವು. ಕರ್ಮಶೇಷವಶದಿಂ ಶೂರಪದ್ಮನೆಂಬ ವ್ಯಾಜದಿಂ ಆರಿಂದಲು ದಾಂಟಲಶಕ್ಯವಾದ ಈ ಬಾಧೆಯುಂಟಾದುದು. ಕರ್ಮಗತಿಯು ಕುಟಿಲವಾದ್ದರಿಂದ ಈ ರೀತಿಯಾದುದೆಂದು ನುಡಿಯೆ, ಜಯಂತನದಂ ಕೇಳಿ ಎಲೈ ಗುರುವೆ! ವಿಧಿಯ ಪುತ್ರರೊಳಗೆ ಪ್ರಥಮನಾದ ದಕ್ಷನು ಅಧ್ವರೇಶ್ವರನಾದ ಮಹಾ ದೇವನಂ ಬಿಟ್ಟು ದೇವತೆಗಳೊಡನೆ ಆವಾಗ ಇರುತಿರ್ದನು. ಆವಾಗ ದೇವತೆಗಳು ಫಲವನ್ನು ವೀರಭದ್ರನಿಂದ ಅನುಭವಿಸಿದರು. ಈ ಸಂಶಯವಂ ಪರಿಹರಿಸೆಂದು ಆತನು ಕೇಳಲಾಗಿ, ಗುರುವಿನ ವದನಪಂಕಜದಿಂ ಕ್ರಮದಿಂದ ಈ ವೃತ್ತಾಂತವಂ ತಿಳಿದು ಸಂತುಷ್ಟನಾಗಿ ಹೃದಯಾಂಬುಜದಲ್ಲಿ ಮಹಾದೇವನಂ ಧ್ಯಾನಿಸಿ, ಆತನಂ ನಿಂದಿಸುವ ಪಾಪಿಗಳಂ ಸ್ಮರಿಸದೆ ಸುಖದಿಂ ರಾಜ್ಯಪರಿಪಾಲನೆಯನ್ಮಾಡುತಿರ್ದನು. ಬಳಿಕ ಋಷಿಗಳು ಸ್ಕಂದಗಿರಿಯಲ್ಲಿ ವಾಸವನ್ಮಾಡುತಲಿರ್ದ ಕುಮಾರಸ್ವಾಮಿಯು ಏನು ಮಾಡಿದನೋ ನಿರೂಪಿಸಬೇಕೆಂದು ಸೂತನಂ ಪೃಚ್ಛಿಸಲಾಗಿ, ಅತನು ಎಲೈ ಋಷಿಗಳಿರಾ! ಶ್ರದ್ಧೆಯಿಂದೊಡಗೂಡಿ ಕೇಳುವಿರಾ, ಏನೆಂದರೆ. ಬಳಿಕ ಷಣ್ಮುಖನು ಲೀಲೆಯಿಂ ಸೌಂದರ್ಯವತಿಯೆಂಬ ನಾಯಿಕೆಯಂ ಪಾಣಿಗ್ರಹಣವಂ ಮಾಡಿದನೆನಲು, ಅವರು ಆ ವಾಕ್ಯವಂ ಕೇಳಿ, ಎಲೈ ತಪಶ್ಶ್ರೇಷ್ಠನಾದ ಸೂತನೆ! ಆ ಸ್ವಾಮಿಯು ಯಾವ ಬಳಿಯಲ್ಲಿ ಆಕೆಯ ಪಾಣಿಗ್ರಹಣವನ್ಮಾಡಿದನು? ಯಾರ ಕುಮಾರತಿಯು? ಸೌಂದರ್ಯವತಿಯೆಂಬ ಪೆಸರು ಏನುಕಾರಣದಿಂ ಬಂದುದು? ಈ ವೃತ್ತಾಂತವಂ ವಿಸ್ತಾರದಿಂ ಪೇಳೆನಲು ಸೂತನಿಂತೆಂದನು.

ಕುಮಾರದೇವ ಲವಲೀಕುವರಿಯ ಸಂವಾದ.

ಎಲೈ ಋಷಿಗಳಿರಾ! ಮಹಾಸ್ಥಳವಾದ ಜಗತ್ತಿನಲ್ಲಿ ಉತ್ತಮವಾದ ಆವುದಾನೊಂದು ಕಾಂಚೀಪುರವೆಂದು ಪ್ರಸಿದ್ಧವಾದ ಪುರವರವಿರುವದೋ ಅದರ ಸಮೀಪದಲ್ಲಿ ರಮ್ಯವಾದ ಊರ್ಧ್ವಸ್ಫಾಟಿಕೆಯೆಂದು ಪ್ರಖ್ಯಾತವಾದ ಪುರವುಂಟು. ಅಲ್ಲಿ ಲವಲೀನಿಲಯವೆಂಬ ಪರ್ವತವು ವಿರಾಜಿಸುತಡಿದೆ. ಆ

ಪ್ರದೇಶದಲ್ಲಿ ವ್ಯಾಧರಿಗೆ ಅಧಿಪತಿಯಾದ ಮಹಾ ಧನಿಕನಾದ ಪುತ್ರರಹಿತನಾದ ಒಬ್ಬಾನೊಬ್ಬ ವ್ಯಾಧನು ಪ್ರತಿ ದಿನದಲ್ಲಿಯು ತನಗೆ ಪುತ್ರನಾಗಬೇಕೆಂದು ಚಿಂತಿಸುತಿದ್ದನು. ಮತ್ತು ಆ ಗಿರಿಯ ಕಾನನದಲ್ಲಿ ಸತ್ಯಸಂಧನಾದ ತಪೋವಂತನಾದ ಶಿವಯೋಗಿಯೆಂಬ ಪೆಸರುಳ್ಳ ಋಷಿಶ್ರೇಷ್ಠನು ತಪಸ್ಸನ್ನು ಆಚರಿಸುತಿರ್ದನು. ಆ ಋಷಿಯು ಒಂದಾನೊಂದು ವೇಳೆಯಲ್ಲಿ ತನ್ನ ಸಮೀಪದಲ್ಲಿರುವ ಮನೋಹರವಾದ ಜಿಗರಿಯನ್ನೋಡಿ ಅತ್ಯಂತ ಕಾಮಾತುರನಾಗಿ ಮೋಹಿಸೆ, ಆಗ ಹರಿಣಿಯು ನೋಟಮಾತ್ರದಿಂದಲೆ ಗರ್ಭವಂಧರಿಸಿ ಲವಲೀಕುಲಮಧ್ಯದಲ್ಲಿ ಉತ್ತಮವಾದ ಶಿಶುವಂ ಪೆತ್ತು ವಿಜಾತೀಯವಾದ ಆ ಶಿಶುವಂ ನೋಡಿ ಭಯದಿಂ ವ್ಯಾಕುಲಮಾಗಿ ಪಲಾಯನವನ್ನೈದಿತು.

ಅಲ್ಲಿ ಆ ಶಿಶುವು ಶೋಭನವಾದ ಧ್ವನಿಯಿಂ ರೋದನವಮ್ಮಾಡುತ್ತಿತ್ತು. ಆ ಸಮಯದಲ್ಲಿ ಆ ವ್ಯಾಧನು ನವಣೆ ನೆಲ್ಲು ಮುಂತಾದ ಪೈರುಗಳಂ ನೋಡಲೋಸುಗ ಬಂದು ಅಳುತಲಿರುವ ಶಿಶುವಂ ಕಂಡು ಅತ್ಯಂತ ಪ್ರೀತಿಯಿಂ ಮನೋಹರೆಯಾದ ಆ ಕೂಸನ್ನು ತೆಗದುಕೊಂಡು ಪೋಗಿ ತನ್ನ ಸ್ತ್ರೀಯ ಹಸ್ತದಲ್ಲಿ ಕೊಟ್ಟು ವಿಧಿಯಿಂ ಜಾತಕರ್ಮವಮ್ಮಾಡಿಸಿ, ದಿನದಿನದಲ್ಲಿಯು ತನ್ನ ಸ್ತ್ರೀಮುಖಾಂತರದಿಂದಲೆ ಆ ಕನ್ನಿಕೆಯಂ ಪೋಷಿಸುತಿರ್ದನು. ಆ ಬಾಲಕಿಯು ಕ್ರಮದಿಂ ದಶವರ್ಷ ಪರ್ಯಂತರವು ರೇಣುಕ್ರೀಡಾ ವಿಲಾಸದಿಂದಲು ಬಾಲಲೀಲಾ ವಿನೋದದಿಂದಲು ವೃದ್ಧಿಯನ್ನೈದಿದಳು. ಬಳಿಕ ವ್ಯಾಧರಾಜನು ಸಂಪನ್ನ ಯೌವನವುಳ್ಳ ಆಕೆಯಂ ನೋಡಿ, ರಮ್ಯವಾದ ಒಂದಾನೊಂದು ಕ್ಷೇತ್ರದಲ್ಲಿ ಪಕ್ಷಿಗಳು ತಿನ್ನಲೀಸದ ಹಾಗೆ ನವಣೆ ನೆಲ್ಲು ಮುಂತಾದ ಪೈರುಗಳಂ ರಕ್ಷಿಸಲಿರಿಸಿದನು. ಆಕೆಯು ಒಂದು ನೆಳಲನ್ನುಂಟುಮಾಡಿಕ್ಕೊಂಡು ಮನೋವಿನೋದದಿಂ ಊರ್ಧ್ವಸ್ವರಂಗಳಾದ ಶಬ್ದಭೇದಂಗಳಿಂ ಪಕ್ಷಿಗಳಂ ಬೆದರಿಸುತ್ತ ವಾಸವಮ್ಮಾಡುತ್ತಿದ್ದಳು. ಲವಲಿಯ ಮಧ್ಯದಲ್ಲಿ ಪುಟ್ಟಿದ ಕಾರಣದಿಂ "ಲವಲೀ" ಎಂಬ ಪೆಸರಾಕೆಗೆ ಬಂದುದು.

ಆಗ ಸ್ಕಂದನು ಆಕೆಯಂ ರಕ್ಷಿಸಲೋಸುಗ ಸ್ಕಂದಗಿರಿಯಂ ಬಿಟ್ಟು ಐಶ್ವರ್ಯದಿಂ ಪರಿಪೂರ್ಣವಾದ ಮಹಾ ಶೋಭಾಯಮಾನವಾದ ಊರ್ಧ್ವಸ್ಫಟಿಕವೆಂಬ ಪುರಕ್ಕೆ ಬಂದನು. ಆಗ ನಾರದನು ಸಮಸ್ತ ಕಡೆಯಲ್ಲಿಯು ಸಂಚರಿಸಿ ಅಲ್ಲಿಗೆ ಬಂದು ಲವಲಿಯೆಂಬ ನಾಯಕಿಯಂ ಕಂಡು ಸ್ಕಂದಪತ್ನಿಯೆಂದು ತಿಳಿದು ನಮಸ್ಕಾರವಂ ಮಾಡಿ, ಆ ಗಿರಿಪುರಕ್ಕೆ ಬಂದು ಅಲ್ಲಿ ದೇವದೇವನಾದ ಗುಹನಂ ಕಂಡು ನಮಸ್ಕಾರವಂ ಮಾಡಿ ಲವಲಿಯೆಂಬ ನಾಯಕಿಯಂ ಕಂಡು ಬಂದೆನೆಂದು ದೇವನಾಯಕಂಗೆ ಪೇಳ್ದು ಮರಳಿ ನಮಸ್ಕರಿಸಿ ಸ್ವೇಚ್ಛೆಯಿಂ ಪೋದನು.

ಬಳಿಕ ಷಣ್ಮುಖನು ವ್ಯಾಧರೂಪವಂ ಧರಿಸಿ ಲವಲೀನಾಯಕಿಯ ಸಮೀಪಕ್ಕೆ ತೀವ್ರಗತಿಯಿಂ ಪೋಗಿ, ಎಲೆ ಬಾಲಕಿಯೆ! ನೀನಾರು? ಯಾರ ಮಗಳು? ನಿನ್ನ ಪೆಸರೇನು? ನೀನು ಎಲ್ಲಿ ಪುಟ್ಟಿದೆ? ವ್ಯಾಧ ಪುತ್ರಿಗೆ ಇಂಥ ಸೌಂದರ್ಯವೆಂತು ಬಂದುದು? ನಿನ್ನನ್ನು ಪೈರುಗಳನ್ನು ರಕ್ಷಿಸಲೋಸುಗ ಇಲ್ಲಿರಿಸಿದವನಾರು? ಲಜ್ಜೆಯಂ ಬಿಟ್ಟು ನನ್ನಂ ನೋಡಿ ಇಷ್ಟಪಟ್ಟು ಹಾಸ್ಯವಂ ಮಾಡದೆ ಜನ್ಮ ಭೂಮಿಯಂ ಪೇಳು, ಎಲೆ ಶೋಭನಾಂಗಿಯೆ! ವನಗಳಲ್ಲಿ ಅತ್ಯಂತ ಭ್ರಮೆಯಿಂ ಕಿರಾತಕನಾದ ನನಗೆ ಸಮಾಧಾನವಾದ ನಿನ್ನಧರದಲ್ಲಿ ಅಮೃತಪಾನವಂ ಮಾಡಬೇಕೆಂದು ಅತ್ಯಂತ ಪ್ರೀತಿಯುಂಟಾಗಿಹೆಯೆಂದು ಪೇಳಿದನು.

ಆ ಸಮಯದಲ್ಲಿ ಆಕೆಯ ತಂದೆಯಾದ ವ್ಯಾಧನಾಯಕನು ಧನುರ್ಧರರಾದ ಕ್ರೂರರೂಪಿಗಳಾದ ಅನೇಕ ವ್ಯಾಧರಿಂದಾವೃತನಾಗಿ ಭಯಂಕರವಾದ ಧ್ವನಿಗಳಂ ಮಾಡುತ್ತ ಮುಂದುಬರಲಾಗಿ, ದೇವನು ಅನಂತ ವೇದಶಾಖೆಗಳೆಂಬ ಶಾಖೆಗಳುಳ್ಳ ಅನಂತರೂಪವಂ ಧರಿಸಿ, ಆ ವೃಕ್ಷದ ಸಮೀಪದಲ್ಲಿ ಶೀತಳವಾದ ಛಾಯೆಯಂ ಮಾಡುತ ಇರುತಿರ್ದನು. ಬಳಿಕ ವ್ಯಾಧನಾಯಕನು ಸ್ತ್ರೀಸಮೇತನಾಗಿ ಬಂದು ನಾನಾವಿಧವಾದ ಪರಮಾನ್ನಂಗಳಂ ಮಧುಯುಕ್ತವಾದ ಪಿಷ್ಟವಂ ವಾತ್ಸಲ್ಯವಾದ ತನ್ನ ಕುಮಾರ್ತಿಗಿತ್ತನು. ಆಗ ಆತನ ಸೇವಕರಾದ ವ್ಯಾಧರು ಆ ವೃಕ್ಷವಂ ಕಂಡು ಇದು ಪೂರ್ವದಲ್ಲಿ ಕಂಡದ್ದಲ್ಲವೆಂದು ಅದಂ ಛೇದಿಸಲ್ಬರೆ, ವ್ಯಾಧನಾಯಕನು ಛೇದಿಸಬೇಡಿರೆಂದು ನಿರೂಪಿಸಿ ಆ ಉದ್ಯೋಗವಂ ನಿಲ್ಲಿಸಿ, ಪುತ್ರಿಯಂ ನೋಡಿ, ಎಲೆ ಮಗಳೆ! ಶೋಭನವಾದ ಶಾಖೆಗಳುಳ್ಳ ಈ ವೃಕ್ಷವೆಲ್ಲಿಯದು? ಎಂದು ಕೇಳೆ, ವರಾನನೆಯಾದ ಈ ಕನ್ನಿಕೆಯು ಆ ತಂದೆಯಂ ನೋಡಿ ಈ ವೃಕ್ಷವಂ ನಾನು ಕಾಣೆನು. ಅತ್ಯಂತ ಮಾಯೆಯೋಪಾದಿಯಲ್ಲಿ ತೋರುವದೆಂದು ಪೇಳಿದಳು.

ಬಳಿಕ ವ್ಯಾಧನದಂ ಕೇಳಿ, ಎಲೆ ಕುಮಾರ್ತಿಯೆ! ಶೀತಳವಾದ ನೆಳಲುಳ್ಳ ಈ ವೃಕ್ಷದಿಂ ನಿನಗೆ ಭಯವು ಬೇಡವು. ಇದು ಕಾನನದಲ್ಲಿ ನಿನಗೆ ಸಹಾಯವಾಗಿ ಸುಖವಂ ಕೊಡುವದಾಗಲೆಂದು ಪೇಳ್ದು, ನಾನಾ ವಿಧವಾದ ವನಗಳಿಗೆ ಪೋದನು. ಅನಂತರದಲ್ಲಿ ಪರಿವಾರ ಸಹಾ ವ್ಯಾಧನು ಪೋದ ಬಳಿಕ ಗುಹನು ಪೂರ್ವ ರೂಪವಂ ಧರಿಸಿದ ಧನುಷ್ಪಾಣಿಯಾಗಿ ಮಹಾ ರೂಪನಾಗಿ ಯೌವನವಂತನಾಗಿ ಮಹಾ ಪ್ರಿಯನಾಗಿ ಆಕೆಯ ಮುಂದೆ ಬಂದು ನಿಂತು ಆಲಿಂಗನವಂ ಮಾಡಲಿಚ್ಛೈಸಿ ಅನೇಕ ಚಾತುರ್ಯವಾಕ್ಯಗಳಂ ನುಡಿದು ಆಲಿಂಗಿಸೆಂದು ಪೇಳಲಾಗಿ ಆ ಕನ್ನಿಕೆಯು ಭಯಪಟ್ಟು ಚಾಗಲ್ಪಟ್ಟ ಮುಖವುಳ್ಳವಳಾಗಿ ಆತನಂ ಕುರಿತಿಂತೆಂದಳು.

ಎಲೈ ಮಹಾಪುರುಷನೆ! ನಾನು ಹೀನಜಾತಿಯಲ್ಲಿ ಪುಟ್ಟಿದವಳು, ನೀನು ರಾಜಕುಲೋತ್ಪನ್ನನು. ನಾನು ಪೈರುಗಳನ್ನು ರಕ್ಷಿಸುತ್ತಿರುವಳು, ನೀನು ಮಹಾರಾಜನು, ನಮಗೀರ್ವರ್ಗೆಯು ಅತ್ಯಂತ ತಾರತಮ್ಯವುಂಟು. ಇಲ್ಲಿ ನಿನಗಿದು ಯೋಗ್ಯವಲ್ಲವು, ಬಂದ ಮಾರ್ಗವಿಡಿದು ಶೀಘ್ರದಿಂ ಪೋಗು, ನಮ್ಮವರು ನಿನ್ನಂ ಕಂಡರೆ ವಿಶೇಷವಾಗಿ ಬಾಧಿಸುವರು. ಇದು ನಿಶ್ಚಯವೆಂದು ಪೇಳುತಿರ ಲಾಗಿ, ವ್ಯಾಧನಾಯಕನು ಮಹಾ ಧ್ವನಿಗಳುಳ್ಳ ಬಹುವ್ಯಾಧರೊಡನೆ ಮರಳಿ ಬಂದನು. ಆಗ ಗುಹನು ಅದ್ಭುತವಾದ ನರೆಜರೆಗಳುಳ್ಳ ವೃದ್ಧರೂಪವಂ ಧರಿಸಿ ಪಾಣಿಯಿಂ ದಂಡವಂ ಪಿಡಿದು ಆ ವ್ಯಾಧಂಗೆ ಆಶೀರ್ವಾದವಂ ಮಾಡಿ ಭಸ್ಮವ ನೀಯಲು, ಆತನು ಈತನಂ ಕುರಿತು ಎಲ್ಲಿಗೆ ಪೋಗುವಿ? ನಿನಗಪೇಕ್ಷಿತವೇನೆಂದು ಪೇಳಲಾಗಿ ಇಂತೆಂದನು.

ಎಲೈ ವ್ಯಾಧನಾಯಕನೆ! ನನಗೆ ಆವ ವಸ್ತುಗಳಲ್ಲಿಯು ಅಪೇಕ್ಷೆಯಿಲ್ಲವು. ನಿನ್ನ ಪರ್ವತದ ಮೇಲಿರುವ ಕುಮಾರ ತೀರ್ಥದಲ್ಲಿ ಸ್ನಾನವಂ ಮಾಡಲೋಸುಗ ಬಂದೆನು ಎಂದು ಪೇಳೆ, ವ್ಯಾಧನಾಯಕನು ಆ ವಾಕ್ಯವಂ ಕೇಳಿ, ಹಾಗೇ ಆಗಲಿ ನೀನು ಇಲ್ಲಿ ಸ್ನಾನವಂಮಾಡಿ ನನ್ನ ಪುತ್ರಿಗೆ ಸಹಾಯಕನಾಗಿರೆಂದು ಪೇಳ್ವು, ಆಕೆಗೆ ಪೂರ್ವದಂತೆ ಫಲಾದಿಗಳಂ ಕೊಟ್ಟು ತನ್ನ ಜನರೊಡನೆ ಬೇರೊಂದು ವನಕ್ಕೆ ಪೋದನು. ಬಳಿಕ ವೃದ್ಧನು ಆ ಕನ್ನಿಕೆಯಂ ನೋಡಿ, ಎಲೆ ಶೋಭನಾಂ ಗಿಯೆ! ನನಗೆ ಕ್ಷುಧೆಯಾಗಿದೆಯೆಂದು ಪೇಳಿ ಆಕೆಯ ಹಸ್ತದಲ್ಲಿರುವ ಫಲ ಪಿಷ್ಟ ಮಧುಗಳಂ ತೆಗೆದುಕ್ಕೊಂಡು ಭಕ್ಷಿಸಿ, ನನಗತ್ಯಂತ ತೃಪ್ತಿಯಾದುದೆಂದು ಪೇಳ ಲಾಗಿ, ಆಕೆಯು ಎಲೈ ವೃದ್ಧನೆ! ಇಲ್ಲಿ ಮಹತ್ತರವಾದ ತಟಾಕವಿರುವದು. ಸಪ್ತಗಿರಿಗಳಂ ದಾಂಟ ಪೋಗಿ ಸ್ವಾದುವಾದ ಉದಕವಂ ಪಾನವಂಮಾಡಿ ಮರಳಿ ಕ್ಷಣದಿಂ ಬಾರೆಂದು ಪೇಳಿದಳು. ಅನಂತರದಲ್ಲಿ ವೃದ್ಧನು ಆಕೆಯ ವಾಕ್ಯವಂ ಕೇಳಿ, ಎಲೆ ಕನ್ನಿಕೆಯೆ! ನಾನು ಆ ತಟಾಕವನರಿಯೆನು, ನೀನು ಸಹಾಯವಾಗಿ ಬಂದು ಮಾರ್ಗವಂ ತೋರಿಸೆಂದು ಪೇಳಲಾಗಿ, ಆಕೆಯು ಹಾಗೇ ಆಗಲೆಂದು ಪೇಳಿ ಪೊರಮಟ್ಟು ಆತನಂ ತಟಾಕದ ಸಮೀಪಕ್ಕೆ ಕರೆದುಕೊಂಡು ಪೋದಳು. ಆಗ ವೃದ್ಧನು ಸರೋವರಕ್ಕೆ ಪೋಗಿ ಕಂಠ ಪರ್‍ಯಂತವು ಉದಕಪಾನವಂ ಮಾಡಿ ಮರಳಿ ಬಂದು ಬಾಲಕಿಯಂ ನೋಡಿ, ಸರ್ವಾಂಗ ಸುಂದರಿಯೆ! ನನಗೆ ಜಲ ಕಾಂಕ್ಷೆಯಾದ ತೃಷೆ ಪೋದುದು. ಆದೊಡೆ ನಿನ್ನನ್ನಿಲ್ಲಿ ಸಂಭೋಗಿಸಬೇಕೆಂಬ ತೃಷೆಯಿದ್ದೀತು ಆ ತೃಷೆಯಂ ಪೋಗಲಾಡಿಸು, ನಿನಗೆ ನಮಸ್ಕರಿಸುತ್ತೇನೆ. ಜನರಹಿತವಾದ ಈ ಪ್ರದೇಶದಲ್ಲಿ ರತಿಯು ಸ್ಮರನನ್ನಂಗೀಕರಿಸುವಂದದಿ ನನ್ನ ನ್ನಂಗೀಕರಿಸೆಂದು ಪೇಳಿದನು.

ಅನಂತರದಲ್ಲಿ ಲವಲಿಯು ಆತನ ವಾಕ್ಯವಂ ಕೇಳಿ, ಎಲೈ ವೃದ್ಧನೆ! ನೀನು ತಪಸ್ವಿಯು ನನ್ನೊಡನೆ ಏನೆಂದು ಪೇಳಿದೆ? ವೃದ್ಧನಾಗಿ ನಿನಗೆ ನಮಸ್ಕಾರವಂ ಮಾಡುತ್ತಿರ್ಫೆನೆಂದು ಪೇಳುವದು ಯುಕ್ತವೋ, ನಮ್ಮವರಿಂಥಾವನಂ ಕಂಡರೆ ವಿಶೇಷವಾಗಿ ಬಾಧಿಸುವರು. ನೀನು ಹಿಂದೆಬಾ; ನಾನು ಮುಂದೆ ಪೋಗುವೆನೆಂದು ಪೇಳಿ ವೇಗದಿಂ ಪೊರಮಡೆ, ಆಗ ಷಣ್ಮುಖನು ಜ್ಯೇಷ್ಠನಾದ ಗಜಮುಖನಂ ನೆನೆಯೆ; ಆತನು ಮದಗಜನಾಗಿ ಮಹಾವೇಗದಿಂ ಬಂದನು. ಆ ವೇಳೆಯಲ್ಲಿ ಆಕೆಯು ಆ ಗಜಶ್ರೇಷ್ಠನಂ ಕಂಡು ಅತ್ಯಂತ ಭಯಪಟ್ಟು ವೇಗದಿಂ ಬಂದು ವೃದ್ಧನನ್ನಾಲಿಂಗಿಸಿ, ನೀನು ನಿರೂಪಿಸಿದಂತೆ ಕೇಳುವೆನು. ಈ ಗಜದ ದೆಶೆಯಿಂದೆನನ್ನನ್ನು ರಕ್ಷಿಸು ರಕ್ಷಿಸೆಂದು ಪೇಳಲಾಗಿ, ವೃದ್ಧ ವೇಷಧಾರಿಯಾದ ಷಣ್ಮುಖನು ಆಕೆಯ ವಾಕ್ಯವಂ ಕೇಳಿ ಗಣನಾಯಕಂಗೆ ನಮಸ್ಕಾರವನೆಸಗಿ, ಪರಮ ಭಕ್ತಿಯಿಂ ಸ್ತುತಿಸಿದನು. ಆಗ ವಿಘ್ನೇಶ್ವರನು ಆಗ ಜರೂಪವಂ ಉಪಸಂಹರಿಸಿ ಅಂತರ್ಧಾನವನೈದಲಾಗಿ, ಗುಹಸ್ವಾಮಿಯು ಮಹತ್ತರವಾದ ಆ ಅರಾಮದಲ್ಲಿ ಕೇಶಂಗಳಂ ಪಿಡಿದು ದಂತಕ್ಷತಂಗಳಿಂದ ಧರವಂ ಚುಂಬಿಸಿ ಆಕೆಯಂ ರಮಿಸಿ, ಸಂಭೋಗಾನಂತರದಲ್ಲಿ ನಿಜರೂಪಮಂ ತೋರಿಸಿದನು.

ಆಗ ಆಕೆಯು ಆಕುಮಾರಸ್ವಾಮಿಯಂ ಕಂಡು ಭೀತೆಯಾಗಿ ಪರಮಭಕ್ತಿಯಿಂದ ನಮಸ್ಕರಿಸಿ ಅಂಜಲಿ ಬಂಧನವಂ ಮಾಡಿ, ಎಲೈ ದೇವನೆ! ಪೂರ್ವದಲ್ಲಿ ಅತಿಸೌಂದರ್ಯವಾದ ನಿನ್ನ ರೂಪವನ್ನು ಪ್ರಕಾಶವ ಮಾಡದೆ ವಂಚನೆಯಂ ಮಾಡಿದೆ, ಅಚ್ಚರಿಯ ಮಚ್ಚರಿಯಂ!! ನಿನ್ನ ರೂಪವೆಂಥಾದ್ದು, ಎಂದು ಪೇಳ್ದು ಆ ಗುಹನಂ ಸ್ತುತಿಸಲಾಗಿ, ದೇವೇಶನು ಮಂದಸ್ಮಿತ ಮುಖಾರವಿಂದ ಮುಳ್ಳವನಾಗಿಂತೆಂದನು, ಎಲೈ ಶುಭಕರಳೆ ನೀನು ವಿಷ್ಣುವಿನ ಕುಮಾರತಿಯು, ಪೂರ್ವದಲ್ಲಿ ಮಹತ್ತಾದ ತಪನನ್ನಾಚರಿಸಿದೆ, ಆದರಿಂದ ಅತ್ಯಂತ ಸಂತುಷ್ಟನಾಗಿ ಪರಮ ಪ್ರೀತಿಯಂ ಮಾಡಿದೆನು. ಅದು ಕಾರಣದಿಂ ನೀನು ಆ ಪೈರುಗಳಿರುವ ಕ್ಷೇತ್ರಕ್ಕೆ ಮುಂದೆ ಪೋಗು ನಾನು ಮಹಾ ವೇಗದಿಂದಲ್ಲಿಗೆ ಬರುತಲಿರ್ಫೆನೆಂದು ಪೇಳಿದನು.

ಎಲೈ, ಋಷಿಗಳಿರಾ! ಆ ಲವಲಿ ಯೆಂಬ ನಾಯಕಿಯು ಈ ಪ್ರಕಾರವಾದ ಗುಹನವಚನಮಂ ಕೇಳಿ, ಆತನಲ್ಲಿಯೆ ಇರಿಸಲ್ಪಟ್ಟ ಮನಸ್ಸುಳ್ಳವಳಾಗಿ ಆತಂಗೆ ನಮಸ್ಕಾರವನ್ಮಾಡಿ ವೇಗದಿಂ ಆ ಪೂರ್ವಸ್ಥಳವನೈದಿದಳೆಂದು ಸೂತಂ ಶೌನಕಾದಿ ಮುನಿಗಳಿಗೆ ಪೇಳಿದ ನೆಂಬಲ್ಲಿಗೆ, ದೇವಕಾಂಡದಲ್ಲಿ ಮೂರನೆಯ ಅಧ್ಯಾಯವು ಸಂಪೂರ್ಣಮಾದುದು.

ನಾಲ್ಕನೆಯ ಅಧ್ಯಾಯವು.

ಲವಲೀಕುವರಿ ಸಖಿಯರ ಸಂವಾದವು.

ಎಲೈ, ಮುನಿಗಳಿರಾ! ಅನಂತರದಲ್ಲಿ ಪೈರುಗಳಂ ರಕ್ಷಿಸುತಲಿರುವ ಆಕೆಯ ಓರ್ವಳಾದ ಸಖಿಯು, ಆಕೆಯಂ ಕಂಡು, ಎಲೆ ಸಖಿಯೇ! ಇದುವರಿವಿಗೆಲ್ಲಿಗೆ ಪೋಗಿದ್ದೆ! ಎಂದು ನುಡಿಯಲಾಗಿ, ಆಕೆಯು ಮಹಾತಟಾಕದಲ್ಲಿ ಸ್ನಾನವಂ ಮಾಡಲು ಪೋದೆನೆಂದು ಪೇಳಿದಳು. ಸಖಿಯು ಆ ವಾಕ್ಯವಂ ಕೇಳಿ ಅಧರದ ರಾಗವಂ ಪೋಗಿಸುವ ಆತಟಾಕವೆಲ್ಲಿರುವದು? ರಮ್ಯಂಗಳಾದ ಲೋಚನಂಗಳು ಅತ್ಯಂತ ಕೆಂಪಾದವು. ನಿನ್ನ ಕೇಶಂಗಳೆಲ್ಲವು ಚದುರಿರುವವು. ಮುಖದೊಳು ಮನೋಹರವಾದ ಸ್ವೇದ ಬಿಂದುಗಳಿರುವವೆಂದು ಪೇಳೆ ಲವಲಿಯು ಆಕೆಯ ವಾಕ್ಯವಂ ಕೇಳಿ ತನ್ನ ಕ್ರಿಯೆಯಂ ಶಂಕಿಸುತಿಥಾಳೆಂದು ತಿಳಿದು, ಎಲೌ, ಸಖಿಯೆ! ಈಗ ನೀನು ನನ್ನಲ್ಲಿ ನಿಂದೆಯನಾರೋಪಿಸುತ್ತಿದ್ಧೀ ಎಂದು ಪೇಳುತ್ತಿರಲು; ಆ ಈಶ್ವರನಾದ ಗುಹನು ಅವರೀರ್ವರು ಅನ್ಯೋನ್ಯದಿಂ ಮಾತಾಡುವ ಸಮಯದಲ್ಲಿ ಧನುರ್ಬಾಣಂಗಳಂ ಧರಿಸಿ ಅವರ ಸಮೀಪಕ್ಕೆ ಬಂದು ಬೇಟೆಯನಾಡಿಅತ್ಯಂತ ಬಳಲಿಥೇನೆಂದು ಪೇಳಲಾಗಿ ಇಂತೆಂದನು.

ಎಲೆ ಬಾಲಕಿಯರಿ! ನೀವು ಉನ್ನತವಾದ ತನ್ನ ಶರಗಳಿಂ ಖಂಡಿಸಲ್ಪಟ್ಟ ಸರ್ವಾಂಗವುಳ್ಳ ಪಲಾಯನವಾಗಿ ಇತ್ತ ಬಂದ ಗಜಶ್ರೇಷ್ಠವಂ ಕಂಡಿರೆ? ಎಂದು ಅವರಂ ಕೇಳಲಾಗಿ, ಆ ಸಖಿಯು ಆತನ ವಾಕ್ಯವಂ ಕೇಳಿ, ಎಲೈ ನಿನಗೆ ಸಂಬಂಧವಾದದಂ ನಿನಗೆ ಸಮಾನರಾದ ಭಟರಿಗೆ ಪೇಳು; ನಮ್ಮೊಡನೆ ಮಾತಾಡಬೇಡೆಂದು ಪೇಳಿ, ಮನದಲ್ಲಿ ಇವರೀರ್ವರಂ ನೋಡಿ ಈಕೆಯು ತಟಾಕಸ್ನಾನಕ್ಕೆ ಪೋದವಳಲ್ಲ; ಈತನು ನೆಲ್ಲು ಪೈರು ಮುಂತಾದವಂ ಭಕ್ಷಿಸಲ್ಬಂದ ಗಜಾದಿಗಳ ನರಸಲು ಬಂದವನಲ್ಲ, ಹೇಗೆ ಆಕೆಯು ಈತನಂ ನೊಡುತ್ತಿರುವಳೋ ಹಾಗೆ ಈತನು ಆಕೆಯಂ ವಿಶೇಷವಾಗಿ ನೋಡುತಲಿಥಾನೆಂದು ಚಿಂತಿಸಿದಳು. ಆಗೆ, ಲವಲಿಯು ಷಣ್ಮುಖನೊಳು ಸಂದೇಹವಂ ಮಾಡಿ ಕೋಪಯುತೆಯಾಗಿ, ವೇಗದಿಂ ತನ್ನ ಕ್ಷೇತ್ರಕ್ಕೆ ಪೋದಳು. ಆ ಸಮಯದಲ್ಲಿ ದೇವನು ಆಕೆಯ ಬಳಿ ವಿಡಿದು ಪೋಗಿ, ಎಲೆ ವರಾಂಗಿಯೆ! ನನ್ನಲ್ಲಿ ಶೀಘ್ರದಿಂ ದಯೆಯಂ ಮಾಡೆಂದು ಪೇಳಲಾಗಿ, ಆಸಖಿಯು ಆ ವಾಕ್ಯವಂ ಕೇಳಿ, ಅರಸುಗಳು ವ್ಯಾಧಕನ್ನಿಕೆಯ ನಿಚ್ಛಿಸರು. ಈ ಬಾಲಕಿಯಂ ನೀನು ಹೇಗೆ ಇಚ್ಛೈಸುತ್ತಿ ಎಂದು ಪೇಳೆ, ಸ್ಕಂದನದಂ ಕೇಳಿ, ಈಕೆಯು ಸ್ತ್ರೀಯರಲ್ಲಿ ಉತ್ತಮಳಾದ ವಿಷ್ಣುವಿನ ವರಲಬ್ಧಳಾದ ಅಮೃತೆಯು ವ್ಯಾಧನ ತಪೋಮಹಿಮೆಯಿಂದ ಕುಮಾರತಿಯಾದಳು. ನಾಳೆ ಆಕೆಯಂ ನನ್ನೊಡನೆ ಕೂಡಿಸದೆ ಪೋದೆಯಾದೊಡೆ, ಪಟದಲ್ಲಿ ಆ ಬಾಲಕಿಯಂ

ಬರೆದು ನೋಡುವೆನು. ಸಂಶಯಿಸಬೇಡೆಂದು ನುಡಿದನು. ಬಳಿಕ ಸಖಿಯು ಆತನ ವಾಕ್ಯವಂ ಕೇಳಿ, ಮಾನವಂತರೊಳಗೆ ಉತ್ತಮನೆ! ನಿನಗೀಗ ಇಂಥಾ ವಚನವು ಯುಕ್ತವಲ್ಲ. ನಾನು ಆಕೆಯನ್ನು ಮನೋಹರವಾದ ವೃಕ್ಷಾರಾಮದಲ್ಲಿ ಶೀಘ್ರದಿಂ ಕರೆತರುತಿದ್ದೇನೆ. ಅಲ್ಲಿ ನೀನಿರು, ವ್ಯಾಧನಿಂ ಕಾಣ್ಬಟ್ಟೆಯಾದೊಡೆ ನಿನಗೆ ಭಯವುಂಟಾಗುವದರಿಂ ನೀನು ಸಾವಧಾನದಿಂದಿರೆಂದು ಪೇಳ್ದು ಲವಲಿಯ ಸಮಿಪಕ್ಕೆ ಬಂದು ನಮಸ್ಕಾರವಮ್ಮಾಡಿ ಆತನ ವಾಂಛೆಯಂ ಆಕೆಗೆ ವಿಶೇಷವಾಗಿ ಪೇಳಿ, ಆಕೆಯಂ ಕರೆದುಕೊಂಡು ಬಂದು ವೃಕ್ಷಾರಾಮದಲ್ಲಿ ಒಂದು ಕಡೆಯಲ್ಲಿ ನಿಲ್ಲಿಸಿ, ತಾನು ಪುಷ್ಪವಂ ಬಿಡಿಸುವ ವ್ಯಾಜದಿಂ ಬೇರೊಂದು ಕಡೆಗೈದಿದಳು.

ಲವಲೀ ಕುಮಾರದೇವ ಸಂಯೋಗ.

ಅನಂತರದಲ್ಲಿ ಗುಹಸ್ವಾಮಿಯು ಬಂದು ಆಕೆಯಂ ನೋಡಲಾಗಿ, ಆಕೆಯು ದೂರದಲ್ಲಿಯೆ ಇದ್ದು ಸ್ಮರನಿಂದ ನೊಂದವಳಾಗಿ ಆತಂಗೆ ನಮಸ್ಕಾರವಮ್ಮಾಡಿದಳು. ಆಗ ದೇವೇಶನು ಆಕೆಯನ್ನಾಲಿಂಗಿಸಿ ಸ್ತನಕುಟ್ಮಲಗಳಂ ಸಂಮರ್ದಿಸಿ ಅಧರವಂ ದಂತಂಗಳಿಂ ದೊತ್ತಿ ನಖಕ್ಷತವಮ್ಮಾಡಿ ಆಕೆಯಂ ರಮಿಸಿದನು. ಬಳಿಕ ಆಕೆಯು ಪುಷ್ಪಂಗಳನ್ನೆತ್ತಿ ಶೀಘ್ರದಿಂ ಬಂದು ಆಕೆಯ ಕೇಶಮುಡಿಗಳಲ್ಲಿ ಬಹು ಪುಷ್ಪಗಳಂ ಮುಡಿಸಿ, ಮರಳಿ ಆಕೆಯಂ ಕರೆದುಕೊಂಡು ನೆಲ್ಲು ಮುಂತಾದ ತೆನೆಗಳಂ ರಕ್ಷಿಸಲು ತಾನಿರುವ ಕ್ಷೇತ್ರಕ್ಕೆ ಪೋಗೆ, ಲವಲಿಯು ಅಲ್ಲಿಗೆ ಪೋಗಿ ತನಗೆ ಷಣ್ಮುಖನ ಸಂಭೋಗವು ಆವಾಗ ಮರಳಿ ಯುಂಟಾಗುವದೆಂದು ವಿರಹದಿಂದಿರುತಿರ್ದಳು.

ಬಳಿಕ ವ್ಯಾಧರಲ್ಲಿಗೆ ಬಂದು ಪಕ್ವವಾದ ನೆಲ್ಲು ಮುಂತಾದ ತೆನೆಗಳಂ ನೋಡಿ, ಅತ್ಯಂತ ಶೋಭನಾಂಗಿಯಾದ ಲವಲಿಯೆಂಬ ಬಾಲಕಿಯಂ ತಮ್ಮ ಗೃಹಕ್ಕೆ ಕರೆದುಕೊಂಡು ಪೋಗಲಾಗಿ, ಆಕೆಯ ಸಖಿಯು ತನ್ನ ಮಂದಿರಕ್ಕೆ ಸಾರಿದಳು. ಆ ಪೋಗುವ ಸಮಯದಲ್ಲಿ ಲವಲಿಯು ಅಲ್ಲಿರುತಿರುವ ಪಕ್ಷಿಗಳಿಗು ಇತರವಾದ ಮೃಗಂಗಳಿಗು ತನ್ನ ಗಮನವಂ ಪೇಳುತ್ತ ಗೃಹಕ್ಕೆ ಪೋಗಿ, ದೇವನಂ ಸ್ಮರಿಸಿ ಮದನನಿಂ ಪರಿಪೀಡಿತೆಯಾಗಿ, ಕಂತುಕ ವಿಹಾರಮಂ ಅನ್ಯವಾದ ಶುಭಕ್ರಿಯೆಯಂ ಬಿಟ್ಟು ಕಾಮಂಗೆ ವಶವರ್ತಿನಿಯಾಗಿ, ಅತ್ಯಂತ ಖಿನ್ನಮಾನಸೆಯಾಗಿ ಮೂರ್ಛಿತಳಾದಳು.

ಲವಲೀ ಕುಮಾರದೇವನ ಅಗಲಿಕೆಯು-ಪುನಸ್ಸಂಯೋಗ.

ಬಳಿಕ ಆಕೆಯ ತಾಯಿಯು ಮುಂತಾದವರು ಆ ಲವಲಿಯಂ ಪರಿವೇಷ್ಟಿಸಿಕೊಂಡು, ಆ ಮೂರ್ಛೆಯ ನಿವೃತ್ತಿಗೋಸುಗ ಆ ವ್ಯಾಧನ ಆಗಮನವಾದ

ತರುವಾಯ ಯೋಚಿಸಿ ಕುಲದೇವತೆಯಾದ ಗುಹಂಗೆ ನೈವೇದ್ಯ ಮೊದಲಾದ ಉಪಚಾರಂಗಳಿಂ ಸಂತೋಷಪನ್ನೈದಿಸಿದರು. ಅನಂತರದಲ್ಲಿ ಅಮಿತ ತೇಜೋವಂತನಾದ ಕುಮಾರಸ್ವಾಮಿಯು ಆ ವೇಶವು ಲವಲಿಯಂ ಸಾಕಿದ ತಾಯನ್ನಾವರಿಸಿ, ಈಕೆಗೆ ಗುಹನೊಡನೆ ಸಂಭೋಗವಾದುದೆಂದು ಪೇಳಲಾಗಿ, ಲವಲಿಯು ಗುಹನೆಂಬ ಪತಿಯ ನಾಮವಂ ಕೇಳುತಲೆ ಶೀಘ್ರದಿಂದೆದ್ದು ಬಹು ಪ್ರಕಾರವಾಗಿ ವಿರಹವ್ಯಾಕುಲೆಯಾಗಿರುತಿರ್ದಳು. ಬಳಿಕ ವ್ಯಾಧನಾಯಕನು ಪಾಕವಾದ ನೆಲ್ಲು ಮುಂತಾದವಂ ಕೊಯ್ದನು. ಆಗ ಷಣ್ಮುಖನು ತನ್ನ ಪ್ರಿಯೆಯಂ ಕಾಣದೆ ಇತ್ತತ್ತ ನೋಡಿ ವಿರಹಯುಕ್ತನಾಗಿ ತನ್ನ ಪ್ರಾಣನಾಯಕಿಯು ಎತ್ತ ಪೋದಳೋ ಏನೋ ಎಂದು ಸ್ನೇಹದಿಂ ಪರ್ವತಗಳಂ ಕಾನನಂಗಳಂ ಮೃಗಂಗಳಂ ತಟಾಕಂಗಳಂ ನದಿ ಮುಂತಾದವಂ ಕೇಳಿ ಅಸ್ತಮಾನವಾದ ಬಳಿಕ ರಾತ್ರಿಯಲ್ಲಿ ಆಕೆಯ ಮನೆಯ ಹಿಂಭಾಗಕ್ಕೆ ಪೋಗಿ ಆಕೆಯು ಯಾವಾಗ ಬಂದಾಳೆಂದು ನಿಂತಿರಲಾಗಿ, ಆ ಸಮಯದಲ್ಲಿ ಆಕೆಯ ಸಖಿಯು ಅಲ್ಲಿಗೆ ಬಂದು ಷಣ್ಮುಖನಂ ಕಂಡು, ಇಲ್ಲಿ ನಿನಗೆ ಭೋಗಕ್ಕವಕಾಶವಿಲ್ಲವೆಂದು ಪೇಳೆ, ಆತನು ಗೃಹದ ಬಾಲಕಿಯಂ ಕೂಡುವದುಚಿತವಲ್ಲವು. ಅದುಕಾರಣದಿಂದಾಕೆಯನ್ನು ಬೇರೊಂದೆಡಕ್ಕೆ ಕರತರುವಂತೆ ಪೇಳಿ, ಆ ಸಖಿಯನ್ನು ಸಮ್ಮತಿಗೊಳಿಸಿ, ಆಕೆಯ ಸಮೀಪಕ್ಕೆ ಕಳುಹಿ ನಿದ್ರೆ ಪೋಗುತಿರ್ಪ ಮಾತಾಪಿತ್ರಾದಿಗಳಂ ವಂಚಿಸಿ ಕವಾಟದ ಲಾಳಮುಂಡಿಗೆಯಂ ತೆಗದು ಕ್ಷಣದಿಂದಾಕೆಯನ್ನು ಗುಹನ ಸಮೀಪವನ್ನೈದಿಸಿ ಇಂತೆಂದಳು.

ಕ್ರೂರರಾದ ವ್ಯಾಧರಿಂ ನೀನು ಕಾಣಲ್ಪಟ್ಟೆಯಾದರೆ ಬಹು ಬಾಧೆಯುಂಟಾಗುವದದುಕಾರಣದಿಂ, ನೀನೊಂದು ಕಡೆಗೆ ಪೋಗಿ ಈಕೆಯಂ ಸಂರಕ್ಷಿಸೆಂದು ಲವಲಿಯ ಕರಂಗಳಂ ಪರಾತ್ಪರನಾದ ಗುಹನ ಕರಂಗಳರಿಲ್ಲಿಸಿ, ಗುಹನಿಂದತ್ಯಂತ ಸಂತುಷ್ಟೆಯಾಗಿ, ನಾನಾ ವಿಧೋಪಚಾರಂಗಳನ್ಮಾಡಿ, ಆತಂಗೆ ನಮಸ್ಕರಿಸಿ ಆ ಲವಲಿಯಂ ಆಲಿಂಗಿಸಿ, ಅವರಿಂದನುಮತಿಯಂ ಪಡೆದು ಓರ್ವಳೆ ಗೃಹಕ್ಕೆ ತೆರಳದಳು. ಬಳಿಕ ಲವಲಿಯು ಗುಹಂಗೆ ನಮಸ್ಕಾರವನ್ಮಾಡಿ ಕೃಪಾವಶದಿಂ ನನ್ನನ್ನು ರಕ್ಷಿಸಲ್ಬಂದೆ. ಮಹಾಂಧಕಾರವಾದ ಈ ಆರಣ್ಯದಲ್ಲಿ ಬರಲಾರಿಗೆ ಶಕ್ಯವು? ಆನೇಕ ಸಹಾಯವುಳ್ಳವನೆಂದು ಮನೋಹರವಾದ ಚಾಟುವಾಕ್ಯಂಗಳಂ ಪೇಳಲಾಗಿ, ಗುಹನು ಮಂದಸ್ಮಿತ ಯುಕ್ತೆಯಾದ ಆಕೆಯಂ ಹಿಂಭಾಗದಲ್ಲಿರಿಸಿಕೊಂಡು ಗ್ರಾಮಪಾಲಕರಿಂ ಕಾಣಲ್ಪಡದೆ ಆಕೆಯೊಡನೆ ದೂರವಾದ ರುದ್ರಾಕ್ಷಾರಾಮಕ್ಕೆ ಪೋಗಿ ರಮಿಸಿದನು.

ಲವಲಿಯ ಜನನೀಜನಕರ ಪರಿತಾಪ.

ಬಳಿಕ ರಾತ್ರಿಯು ಕಳಿಯಲಾಗಿ, ಲವಲಿಯ ಜನನಿ ಯೆದ್ದು ಪಾರ್ಶ್ವದಲ್ಲಿ ಮಲಗಿರ್ದ ಸುತೆಯಂ ಕಾಣದೆ ವ್ಯಾಕುಲೆಯಾಗಿ, ಆಕೆಯ ಸಖಿಯ ಸಮೀಪಕ್ಕೆ ಪೋಗಿ ಲವಲಿಯು ಯೆಲ್ಲಿಗೆ ಪೋದಳು? ಎಂದು ಕೇಳೆ, ಆಕೆಯು ಪ್ರಾತಃ ಕಾಲದಲ್ಲಿದ್ದು ಯೆಲ್ಲಿಗೆ ಪೋದಳೋ ನಾನರಿಯೆನೆಂದು ಪೇಳಿದಳು. ಅದಂ ಕೇಳಿ ಆಕೆಯು ದುಃಖಿಸುತ ತನ್ನ ಗೃಹಕ್ಕೆ ಬರೆ, ಆ ಸಮಯದಲ್ಲಿ ಆ ಪುರದೊಳು ಯೆಲ್ಲ ಕಡೆಯಲ್ಲಿಯು ಹಾಹಾಕಾರಧ್ವನಿ ಪುಟ್ಟಿದುದು. ಬಳಿಕ ವ್ಯಾಧ ನಾಯಕನು ಆಕೆಯಂ ಹುಡುಕಲು ವ್ಯಾಧರೊಡನೆ ಕೋಪದಿಂ ಪೊರಮಟ್ಟು ಬಾಲಕಿಯಾದ ತನ್ನ ಕುವರಿಯಂ ಕರೆದುಕೊಂಡು ಪೋಗಿ ಪ್ರಾಣವಂ ಧರಿಸಿ ಕೊಂಡಾವಜನ ವಿದ್ದೀತೆಂದು ಪೇಳ್ವ ಕ್ರೂರರಾದ ಅನೇಕ ವ್ಯಾಧರಂ ಮಾರ್ಗಗ ಳಲ್ಲಿ ಕಳುಹಿ ತಾನೆ ರಮ್ಯಂಗಳಾದ ಪರ್ವತಂಗಳಂ ತಿರಿಗಿ ಕ್ರಮದಿಂದ ರುದ್ರಾ ಕ್ಷಾರಾಮಕ್ಕೆ ಬಂದನು.

ಲವಲೀಜನಕ-ವ್ಯಾಧಯುದ್ಧ ಕುಕ್ಕುಟಾಗಮನದಿಂದ ವ್ಯಾಧರ ಹತ.

ಆಗ ಲವಲಿಯೆಂಬ ನಾಯಕಿಯು ಆ ವ್ಯಾಧರಂ ಕಂಡು ಭಯಕಂಪಿತೆ ಯಾಗಿ, ಎಲೈ ದೇವನೆ! ಇಲ್ಲಿ ಶಸ್ತ್ರಪಾಣಿಗಳು ಬಂದರು ನನ್ನಂ ರಕ್ಷಿಸೆಂದು ಪೇಳಿ ನಮಸ್ಕಾರವಮ್ಮಾಡಲಾಗಿ, ಗುಹನು ಆಕೆಯನ್ನೋಡಿ ಮುಗುಳುನಗೆ ವೆರಸಿ, ಎಲೈ ಪ್ರಾಣಕಾಂತೆಯೆ! ನಾನಿರುವಲ್ಲಿ ನಿನಗೆ ಭಯವೇತಕೆ? ನನ್ನ ಹಿಂಭಾಗದಲ್ಲಿ ನಿಂತಿರು. ಯುದ್ಧವಮ್ಮಾಡಲು ನನಗೆ ಶಕ್ತಿಯುಂಟೆಂದು ಪೇಳೆ, ಲವಲಿಯು ಆ ವಾಕ್ಯವಂ ಕೇಳಿ ಹಿಂಭಾಗದಲ್ಲಿ ನಿಲ್ಲುವ ಸಮಯದಲ್ಲಿಯೆ, ಆ ವ್ಯಾಧರು ಬಂದು ಇವರೀರ್ವರಂ ಕಂಡು ಪುತ್ರಿಯ ಚೋರನಂ ಕಂಡೆವೆಂದು ಕೋಲಾಹಲ ಧ್ವನಿಯಮ್ಮಾಡಿ ಜ್ವಲಿಸುತ ಕಟುವಚನಂಗಳಂ ನುಡಿದು, ಆತನ ಮೇಲೆ ಅನೇಕ ಬಾಣಗಳನ್ನೆಸೆಯಲು, ಆಗ ಭಯದಿಂ ಖಿನ್ನಮಾನಸೆಯಾಗಿ ಸ್ವಾಮಿಯನ್ನೋಡಿ, ಪಾಪಿಗಳಾದ ದುರ್ಜನರಾದ ಇವರಂ ಶೀಘ್ರದಿಂ ಸಂಹ ರಿಸು, ನಾನು ಸ್ತ್ರೀಯು ನನ್ನಂ ರಕ್ಷಿಸಬೇಕು. ಅಲ್ಲದಿರ್ದೊಡೆ ಪ್ರಾಣಹಾನಿ ಯುಂಟಾಗುವದು. ಎಲೈ ಪ್ರಾಣನಾಯಕನೆ! ನನ್ನ ಹಿಂಭಾಗದಲ್ಲಿ ನೀನಿರು. ಯುದ್ಧವಮ್ಮಾಡಲು ಶಕ್ತಿಯುಂಟೆಂದು ನೀನು ಪೂರ್ವದಲ್ಲಿ ಹೇಳಿದೆಯಲ್ಲವೆ? ಆ ಮಾತನ್ನು ಸತ್ಯವಮ್ಮಾಡಿ ನನ್ನ ಭಯಮಂ ಪರಿಹರಿಸಿ ರಕ್ಷಿಸೆಂದು, ಸರ್ವಾತ್ಮ ರಿಗು ಹಿತವನ್ನಾಚರಿಸುವ ಭಗವಂತನಾದ ಷಣ್ಮುಖನಂ ಕುರಿತು ನುಡಿಯೆ, ಕುಮಾರಸ್ವಾಮಿಯು ಆ ಪ್ರಾಣನಾಯಕಿಯ ವಾಕ್ಯವಂ ಕೇಳಿ ಕುಕ್ಕುಟವಂ

ಸ್ಮರಿಸಿದನು. ಬಳಿಕ ಆ ಕುಕ್ಕುಟವು ಸ್ಮರಣಮಾತ್ರದಿಂದಲೆ ಅತಿವೇಗದಿಂ ಬಂದು ಮಹಾ ಧ್ವನಿಯನ್ಮಾಡಲಾಗಿ, ಸಮಸ್ತ ವ್ಯಾಧರು ಪ್ರಳಯಕಾಲ, ಮೇಘಧ್ವನಿಗೆ ಸಮಾನವಾದ ಕುಕ್ಕುಟದ ಮಹಾ ಘೋಷಮಂ ಕೇಳಿ ಭಟರು ಭಯಾತುರರಾಗಿ ಭೂಮಿಯಲ್ಲಿ ಬಿದ್ದು ಪ್ರಾಣಂಗಳಂ ಬಿಟ್ಟರೆಂದು ಸೂತಂ ಶೌನಕಾದಿ ಮುನಿ ಗಳಿಗೆ ಪೇಳಿದ ನೆಂಬಲ್ಲಿಗೆ, ದೇವಕಾಂಡದಲ್ಲಿ ನಾಲ್ಕನೆಯ ಅಧ್ಯಾಯವು ಸಮಾಪ್ತವಾದುದು.

ಐದನೆಯ ಅಧ್ಯಾಯವು.

ಕುಮಾರದೇವ ಸನ್ನಿಧಿಯನ್ನು ಕುರಿತು ನಾರದಾಗಮನ.

ಎಲೈ ಋಷಿಗಳಿರಾ! ಈ ಪ್ರಕಾರದಲ್ಲಿ ದೇವನಾಯಕನಾದ ಗುಹ ಸ್ವಾಮಿಯು ಸಮಸ್ತ ವ್ಯಾಧರಂ ಸಂಹರಿಸಿ ಪೊರಮಡೆ, ಆಗ ಲವಲಿಯು ಪಿತೃ ವಿನ ಮರಣವಂ ಕಂಡು ದುಃಖವನ್ಮಾಡಿ ವಸ್ತ್ರದಿಂ ಸರ್ವಾವಯವಂಗಳಂ ಮುಚ್ಚಿಕೊಂಡು ಸ್ವಾಮಿಯ ಬಳಿವಿಡಿದು ಪೋಗಲಾಗಿ, ಆ ಸಮಯದಲ್ಲಿ ಬ್ರಹ್ಮನ ಆತ್ಮದಿಂ ಪುಟ್ಟಿದವನಾದ ಯೋಗಿಶ್ರೇಷ್ಠನಾದ ನಾರದನು ಮಧ್ಯ ಮಾರ್ಗಕ್ಕೆ ಬಂದು, ಲೀಲಾಮಾನುಷ ವಿಗ್ರಹನಾದ ಕುಮಾರಂಗೆ ನಮಸ್ಕಾರವ ನ್ನೆಸಗಿ, ಕ್ರಮದಿಂದಾಸ್ವಾಮಿಯಿಂದ ವೃತ್ತಾಂತವಂ ಕೇಳಿ, ಎಲೈ ಸ್ವಾಮಿಯೆ! ಮೃತರಾದ ಈಕೆಯ ಪಿತೃ ಮುಂತಾದ ಶಬರರಂ ಜೀವಂತರನ್ಮಾಡಿ, ಸರ್ವ ಮಂಗಳಗಳಿಂದ ಯುಕ್ತನಾಗಿ ಈ ಲವಲಿದೇವಿಯಂ ಪಾಣಿಗ್ರಹಣಮಂ ಯಥಾ ವಿಧಿಯಾಗಿ ಮಾಡೆಂದು ಪ್ರಾರ್ಥನಾ ಪೂರ್ವಕದಿಂ ಪೇಳಿದನು. ಬಳಿಕ ಕುಮಾರ ಸ್ವಾಮಿಯು ಆ ವಾಕ್ಯವಂ ಕೇಳಿ ಸಂತುಷ್ಟನಾಗಲು ಮುನಿಯು ಲೋಕ ಯಾತ್ರೆಯನ್ಮಾಡಲು ಸ್ವಾಮಿಯಿಂ ದನುಜ್ಞಾತನಾಗಿ ತೆರಳಿದನು.

ವ್ಯಾಧರಿಗೆ ಪ್ರಾಣದಾನ.

ಅನಂತರದಲ್ಲಿ ದೇವೇಶನಾದ ಸುಬ್ರಹ್ಮಣ್ಯನು ಅತಿ ಸೌಂದರ್ಯವತಿಯಾದ ಲವಲಿಯಂ ನೋಡಿ, ಎಲೆ ಪ್ರಾಣನಾಯಕಿಯೆ! ನನ್ನಾಜ್ಞೆಯಿಂ ನೀನೀಗ ಮೃತ ನಾದ ನಿನ್ನ ಪಿತೃ ಮುಂತಾದವರಂ ದಯೆಯಿಂದೊಡಗೂಡಿದ ದೃಷ್ಟಿಯಿಂ ನೋಡಿ ಜೀವಂತರಂ ಮಾಡೆಂದು ನಿರೂಪಿಸಲಾಗಿ, ಪ್ರಾಣಕಾಂತೆಯಾದ ಆ ಲವಲಿಯು ಹಾಗೆ ಆಗಲೆಂದು ಸರ್ವವ್ಯಾಧರಂ ಬದುಕಿಸೆ ಆ ವ್ಯಾಧರು ನಿದ್ರೆ ತಿಳಿದೇಳುವಂತೆ ಏಳಲು, ಆ ಸಮಯದಲ್ಲಿ ಲೀಲಾಮಾನುಷ ವಿಗ್ರಹನಾದ ಕುಮಾರಸ್ವಾಮಿಯು ಅವರಿಗೆ ತನ್ನ ನಿಜರೂಪವಂ ತೋರಿಸಿದನು. ಬಳಿಕ

ಆ ವ್ಯಾಧರು ದ್ವಾದಶ ನಯನನಾಗಿ ಸಿತಿದಾದ ದ್ವಾದಶ ಭುಜಂಗಳುಳ್ಳ, ಮಂದಾರಮಾಲೆಯಿಂದಲಂಕೃತನಾದ ಮಹತ್ತಾದ ಉರವುಳ್ಳ ಅಪ್ರಾಕೃತ ಶರೀರವುಳ್ಳಂಥ ದೇವಸೇನಾಧಿಪತಿಯಾದ ಷಣ್ಮುಖಸ್ವಾಮಿಯಂ ಕಂಡು ಭಯ ಕಂಪಿತರಾಗಿ ಅಂಜಲಿಬಂಧವಮ್ಮಾಡಿ ಭಕ್ತಿಯಿಂದಾತನಂ ಪರಿವೇಷ್ಟಿಸಿಕೊಂಡು ಸ್ತುತಿಸಿ ಇಂತೆಂದರು.

* ಲವಲೀಪರಿಣಯಘಟ್ಟವು.

ಎಲೆ ದೇವನೆ! ನೀನೀಪ್ರಕಾರವಾಗಿ ಮಾಡಿದರೆ ಶಿವನಾಜ್ಞೆಯಂ ದಾಂಟಿದೆ ಯಾದರೆ, ನಮ್ಮ ಕುಲಕ್ಕೆ ಅತ್ಯಂತ ನಿಂದಿತಮಾದ ಅಪಕೀರ್ತಿಯುಂಟಾ ಗುವದಾದ್ದರಿಂದನೀ ನೀಕೆಯಂ ವಿವಾಹವಂ ಮಾಡಿಕೋ, ಎಂದು ಪೇಳ್ದು ಆ ಕುಮಾರಸ್ವಾಮಿಗೆ ನಮಸ್ಕಾರವಂ ಮಾಡಿದರು.. ಬಳಿಕ ದೇವನಾಯಕನಾದ ಕುಮಾರಸ್ವಾಮಿಯು ದಯೆಯಿಂದವರವಾಕ್ಯವನ್ನಂಗೀಕರಿಸಿ ನಾರದನೊಡನೆ ವ್ಯಾಧರಿಂ ಸೇವಿತನಾದ ಸ್ಥಾನಕ್ಕೆ ಪೋಗಿ, ಅವರಿಂದ ಕೊಡಲ್ಪಟ್ಟ ವ್ಯಾಘ್ರಾ ಜಿನಗಳಲ್ಲಿ ಪದ್ಮಾಸನ ಸ್ಥಿತನಾದನು. ಆ ಸಮಯದಲ್ಲಿ ವ್ಯಾಧರು ಶ್ರೇಷ್ಠವಾದ ಆಸನದಲ್ಲಿ ಕುಳಿತಿರುವ ಆ ಬಾಲಕಿಯಂ ಮಹಾಸರ್ಪವು ಪೊರೆಯಂ ಬಿಡುವಂತೆ ಮಾನುಷರೂಪವಂ ಬಿಟ್ಟು ದಿವ್ಯಾಕಾರವುಳ್ಳ ಸ್ವಾಮಿಯಂ ಸಹಾ ನೋಡಿದರು. ಬಳಿಕ ವ್ಯಾಧನಾಯಕನು ಹಸ್ತದಿಂ ಜಲವಂ ತೆಗೆದು ಯಥಾವಿಧಿಯಾಗಿ ಕುಮಾರಸ್ವಾಮಿಗೋಸುಗ ಆಕೆಯನ್ನು ಧಾರೆಯೆರೆದನು. ಆಗ ದ್ವಿಜೋತ್ತಮ ನಾದ ನಾರದನು ಔಪಾಸನ ಮುಂತಾದವಂ ಮಾಡಿಸಿದನು. ಬಳಿಕ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಸ್ತುತ್ಯನಾದ ಪಾರ್ವತೀ ಸಮೇತನಾದ ಪರಮೇಶ್ವರನು ಆಕಾಶದಲ್ಲಿ ಪ್ರಾದುರ್ಭವಿಸಿ ಅಲ್ಲಿಯೆ ನಿಂತು ಕಲ್ಯಾಣಾಕಾರ ನಾದ ಗುಹನಂ ಬಾಲಕಿಯಾದ ಲವಲಿಯಂ ಸಹಾ ನೋಡಿಕೊಂಡಾಡಿದರು. ಆ ಸಮಯದಲ್ಲಿ ಗುಹನು ಪತ್ನೀ ಸಮೇತನಾಗಿ ಪರಮೇಶ್ವರಂಗೆ ನಮಸ್ಕಾರವಂ ಮಾಡಲಾಗಿ ವಿಷ್ಣು ಮುಂತಾದ ದೇವತೆಗಳು ಸ್ತುತಿಸಿದರು. ಬಳಿಕ ಮಹಾ ದೇವನು ಇತರ ದೇವತೆಗಳು ಸಹ ಅಂತರ್ಧಾನ ವಾಗಲಾಗಿ ವ್ಯಾಧನಾಯಕನು ವ್ಯಾಧರಿಂದಲು ತಮ್ಮವರಾದ ಸ್ತ್ರೀಯರಿಂದಲು ಯುಕ್ತನಾಗಿ ಆ ಸುಬ್ರಹ್ಮ ಣ್ಯೇಶ್ವರಂಗೆ ಪ್ರಣಾಮವನಾಚರಿಸಿ ಪರಮ ಹರುಷವನ್ನೈದಿದವನಾಗಿ ಪರಿಮಳ ಯುಕ್ತಂಗಳಾದ ಪುಷ್ಪಂಗಳಿಂದಲ್ಲಿ ಪೂಜಿಸಿದರು. ಈ ಪ್ರಕಾರವಾಗಿ ದೇವ ನಾಯಕನು ನಾನಾವಿಧವಾದ ಉಪಚಾರಗಳಿಂದ ಪೂಜಿತನಾಗಿ ಅತ್ಯಂತ ಶೋಭನೆ

---

* ಲವಲಿ ಯೆಂಬದಾಗಿಯೂ ವಲ್ಲಿ ಯೆಂಬದಾಗಿಯೂ ಉಂಟು. ಆದ್ದರಿಂದಲೆ ಸುಬ್ರಹ್ಮಣ್ಯನು ವಲ್ಲೀಸಮೇತನೆಂದು ಲೋಕದಲ್ಲಿ ಪ್ರಖ್ಯಾತಿಯಿದೆ.

ಯಾದ ಸ್ತ್ರೀಯಿಂದ ಯುಕ್ತನಾಗಿ ಶ್ರೀಪರ್ವತಕ್ಕೆ ಪೋಗಮಡುವಾಗ, ವ್ಯಾಧ ನಾಯಕನು ತನ್ನ ಪುರದಿಂ ವ್ಯಾಧಸ್ತ್ರೀಯರಂ ಕರೆಯಿಸಿಕೊಂಡು ಸ್ವಾಮಿಯೊಡನೆ ಆ ಪರ್ವತಕ್ಕೆ ಪೋಗಿ ಅಲ್ಲಿ ವಿಶ್ವಕರ್ಮ ನಿರ್ಮಿತವಾದ ನಾನಾರತ್ನಗಳಿಂ ಪೂರ್ಣ ಮಾದ, ಆ ಗಿರಿಯಮೇಲಿರ್ಪ ದಿವ್ಯ ಸಿಂಹಾಸನದಮೇಲೆ ಲವಲೀದೇವಿಯೊಡನೆ ಕುಳಿತಿರುವ ಆ ಸ್ವಾಮಿಯಂ ಕಂಡು ಪರಮ ಸಂತಸವನ್ನೈದಿದನು.

ಆ ಸಮಯದಲ್ಲಿ ಲವಲಿದೇವಿಯು ಅಸ್ಯಯನಾದ ಕುಮಾರಸ್ವಾಮಿಗೆ ಪ್ರಣಾಮವನಾಚರಿಸಿ, ಎಲೈ ಸ್ವಾಮಿಯೇ! ಈ ಪರ್ವತನಾಮವಾವುದು? ಇದರ ಮಹಿಮೆಯೆಂಥಾದ್ದು; ಎಂದು ಕೇಳಲಾಗಿ ಗುಹಸ್ವಾಮಿಯು ಆ ವಾಕ್ಯವಂ ಕೇಳಿ ಎಲೆ ವರಾಂಗಿಯೆ! ಆವುದಾನೊಂದು ಅವತಾರದಿಂ ಈ ಗಿರಿಯು ಶ್ರೀದೇವಿಯಿಂ ಪರಿಪೂರ್ಣವೋ ಅದು ಕಾರಣದಿಂ ಶ್ರೀಪರ್ವತ ವೆಂಬ ಪೆಸರುಂಟಾದುದು. ಯುದ್ಧದಲ್ಲಿ ಕೆಲಂಬರಸುರರು ನನ್ನಿಂದ ಹತವಾದ ಕಾರಣದಿಂದ ಯುದ್ಧಗಿರಿ ಯೆಂದುನ್ನು ಮತ್ತೆ ಆವುದಾನೊಂದು ಕಾರಣದಿಂ ಇದು ಕಾಂಚೀಪುರಕ್ಕೆ ಸಮಿಾಪವೋ, ಅದು ಕಾರಣದಿಂದೀ ಗಿರಿಯು ವಿಶೇಷವಾದುದು. ಕಾಂಚೀ ಸ್ಥಳದ ಪುಣ್ಯತೀರ್ಥಂಗಳು ಹೇಗೆ ಸ್ವರ್ಣನದಿಯೋ, ಸಮಸ್ತ ಪರ್ವತಂಗಳೊ ಳಗೆ ಕೈಲಾಸ ಪರ್ವತವು ಹೇಗೋ ಹಾಗೆ ಇದು ಸರ್ವೋತ್ತಮವಾದ್ದು. ನಾನು ಯಾವಾಗಲು ಇಲ್ಲಿ ವೀಣಾವೇಣು ಮೃದಂಗಾದಿಗಳಿಂ ವಿಹರಿಸುತ್ತಿಧೇನೆ. ಪೂರ್ವದಲ್ಲಿ ದೇವತೆಗಳಿಗೆ ಒಡೆಯನಾದ ಇಂದ್ರನು ಈ ಪರ್ವತದಲ್ಲಿ ನನ್ನನ್ನು ಪೂಜಿಸುವುದಕ್ಕೋಸುಗ ಕನ್ನೈದಲು ಪುಷ್ಪವನೆತ್ತಲು ಸ್ವಚ್ಛವಾದ ಉದಕಂ ಗಳಿಂ ಪೂರ್ಣವಾದ ಸರೋವರವಂ ತೆಗಿಯಿಸಿ, ಅಲ್ಲಿ ಸುಗಂಧವಾದ ಕಲ್ಹಾರ ಪುಷ್ಪಗಳನ್ನುಂಟುಮಾಡಿ ದಿನದಿನವಲ್ಲಿ ತ್ರಿಸಂಧ್ಯಾಕಾಲದಲ್ಲಿಯು ವಿಕಸಿತವಾದ ಆ ಪುಷ್ಪಂಗಳಂ ತರುತ್ತ ಅತ್ಯಂತ ಶುಭಕರವಾದ ಈ ಗಿರಿಯಲ್ಲಿ ನಿಯಮವಂತ ನಾಗಿ ನನ್ನಂ ಪೂಜಿಸಿ ತನ್ನ ಅಭೀಷ್ಟವಂ ಪಡೆವನು. ಲೋಕದಲ್ಲಿ ಆರು ಶ್ರೇಷ್ಠ ವಾದ ಈ ಗಿರಿಯಂ ನೋಡುವರೋ ಅವರ ಸಮಸ್ತ ಪಾಪಂಗಳು ನಾಶವನ್ನೈದು ವವು. ಈ ವಿಷಯದಲ್ಲಿ ಸಂಶಯವಿಲ್ಲ, ಮತ್ತೆ ಆವ ಮನುಷ್ಯನು ಈ ಪರ್ವತ ದಲ್ಲಿ ಪಂಚ ದಿನಂಗಳು ಜಿತೇಂದ್ರಿಯನಾಗಿ ನನ್ನನ್ನು ಧ್ಯಾನಿಸುತ್ತಿರುವನೋ ಆತನು ನನ್ನ ಪ್ರಸಾದದಿಂದಿಹ ಲೋಕದಲ್ಲಿ ವಾಂಛಿತಂಗಳಂ ಅಂತ್ಯದ ಮೋಕ್ಷ ವನ್ನು ಐದುವನು.

ಎಲೆ ವಲ್ಲಭೆಯೆ ! ಯಾವ ನರಾಧಮನು ಈ ಪರ್ವತವಂ ಕಂಡು ನಮ ಸ್ಕಾರವಂ ಮಾಡುವದಿಲ್ಲವೋ ಆತನು ಪೂರ್ವಜನ್ಮದಲ್ಲಿ ಆರ್ಜಿತವಾದ ಪುಣ್ಯಂ ಗಳಂ ಅದರ ಫಲಂಗಳಂ ಬಿಟ್ಟು ಅಧೋಗತಿಗೆ ಪೋಗುವನು. ಮತ್ತೆ ಆವ

ನರನು ಬ್ರಹ್ಮಹತ್ಯಾದಿ ಮಹಾಪಾತಕ ಯುಕ್ತನಾದೊಡಂ ಬ್ರಹ್ಮ ವಿಷ್ಣು ಮುಂತಾದವರಿಂ ನಮಸ್ಕರಿಸಲ್ಪಟ್ಟ ಉತ್ತಮವಾದ ಈ ಗಿರಿಯಂ ಕಂಡು ನಮಸ್ಕರಿಸುವನೋ, ಆತನು ಸಕಲ ಪಾತಕಗಳಂ ಕೊಡಹಿ ಬಿಸುಟು ನಮ್ಮ ಪದವಿಯನೈದುವನು. ಈ ವಿಷಯದಲ್ಲಿ ವಿಚಾರವಂ ಮಾಡಬೇಡ. ಎಲೈ ಪ್ರಾಣಕಾಂತೆಯೆ! ಆವ ಮನುಜನು ಇಲ್ಲಿ ಬಂದು ಪುಣ್ಯವಂ ಮಾಡುವನೋ ಆತಂಗೆ ಆ ಪುಣ್ಯವು ಅನಂತ ಫಲವನೀಯುವದು. ಇದೇ ಸತ್ಯವು, ಮತ್ತಂ ಅತ್ಯಂತ ಘೋರಂಗಳಾದ ಪಾತಕಂಗಳು ಯಾವವೋ ಅವೆಲ್ಲವು ಇಲ್ಲಿ ನಾಶವಾಗುವವು ಎಂದು ನುಡಿದನು. ಬಳಿಕ ಆ ವಲಲಿಯು ಪರಮಾತ್ಮನಾದ ಗುಹಸ್ವಾಮಿಯ ಈ ಪ್ರಕಾರವಾದ ವಚನವಂ ಕೇಳಿ ಮಂದಸ್ಮಿತಮುಖ ಕಮಲವುಳ್ಳವಳಾಗಿ ವಿಶೇಷವಾಗಿ ಸಂತೋಷವನೈದಿದಳು.

ಬಳಿಕ ಆ ಮಹೇಶ್ವರನಾದ ಗುಹನು ಆ ಪರ್ವತದ ಮೇಲೆ ಪರತತ್ವವಾದ ಶಿವಲಿಂಗ ಪ್ರತಿಷ್ಠೆಯಂ ಮಾಡಿ ಆ ಪುರಾರಾತಿಯಂ ಪರಿಪೂಜಿಸಿ, ಆತನ ಕೃಪೆಯಂ ಪಡೆದು ಪರ್ವತಂಗಳಿಗುತ್ತಮವಾದ ಆ ಪರ್ವತದ ಮೇಲೆ ಕೆಲವು ಕಾಲವಿದ್ದು ಬಳಿಕ ದಿವ್ಯವಾದ ವಿಮಾನವನೇರಿ ವಲಲಿಯೊಡನೆ ರಮ್ಯವಾದ ಸ್ಕಂದಗಿರಿಗೆ ಪೋಗಿ ವಿಮಾನದಿಂದಿಳಿದು, ಅಲ್ಲಿ ಶೋಭಿಸುತಿರುವ ತಮ್ಮ ಅಂತಃಪುರಕ್ಕೆ ಪೋಗಲಾಗಿ, ದೇವಸೇನೆಯು ಬರುತಲಿರುವ ಆ ದೇವನಂ ಕಂಡು ಶೀಘ್ರದಿಂ ನಮಸ್ಕಾರವಂ ಮಾಡೆ, ಆ ಸ್ವಾಮಿಯು ಪ್ರೀತಿಯಿಂದಾಕೆಯಂ ನೋಡಿ ಪರಮ ದಯೆಯಂ ಮಾಡಿದನು.

ದೇವಸೇನೆ ವಲಲೀದೇವಿಯರ ಸಮಾಗಮ, ಪೂರ್ವೋಪಾಖ್ಯಾನಗಳು.

ಬಳಿಕ ವಿಶೇಷ ಸೌಂದರ್ಯವತಿಯಾದ ವಲಲೀದೇವಿಯು ದೇವಸೇನೆಗೆ ನಮಸ್ಕರಿಸಲಾಗಿ, ಆಕೆಯು ಅತ್ಯಂತ ಪ್ರೀತಿಯಿಂ ಆ ವಲಲೀದೇವಿಯನ್ನಾಲಿಂಗಿಸಿ, ಎಲೆ ಬಾಲಕಿಯೆ! ನೀನಿಲ್ಲಿಗೆ ನನಗೆ ಸಹಾಯವಾಗಿ ಬಂದೆ ಎಂದು ಸ್ಮಿತಪೂರ್ವಕವಾಗಿ ವಚನವಂ ಪೇಳಿದಳು. ಆಗ ಕುಮಾರಸ್ವಾಮಿಯು ಅನ್ಯೋನ್ಯ ಪ್ರೀತಿಗಳುಳ್ಳ ಅವರೀರ್ವರೊಡನೆ ಸಿಂಹಾಸನವನಾಶ್ರಯಿಸಿರಲಾಗಿ, ದೇವಸೇನೆಯು ತಲೆವಾಗಿ ತನಗೆ ಪತಿಯಾದ ನಾಶರಹಿತನಾದ ಕುಮಾರಸ್ವಾಮಿಯಂ ನಿರೀಕ್ಷಿಸಿ, ಎಲೈ ಪ್ರಾಣನಾಥನೆ! ಆನುಪೂರ್ವವಾಗಿ ಈಕೆಯ ವೃತ್ತಾಂತವಂ ಪೇಳಬೇಕೆಂದು ಕೇಳಿದಳು. ಅನಂತರದಲ್ಲಿ ಗುಹನು ಆ ವಾಕ್ಯವಂ ಕೇಳಿ ಎಲೆ ವರಾನನೆಯೆ! ನೀವೀರ್ವರು ಪೂರ್ವದಲ್ಲಿ ಉಪೇಂದ್ರನ ನಯನಗಳಲ್ಲಿ ಉದ್ಭವಿಸಿ ನನ್ನ ಪಾಣಿಗ್ರಹಣವಂ ಮಾಡಬೇಕೆಂದು ಮಹತ್ತಾದ ತಪವನಾಚರಿಸಿದಿರಿ, ಆ

ತಪದಿಂದ ನಾನು ಸಂತುಷ್ಟನಾಗಿ ಈಕೆಯಂ ಭೂಮಿಯಲ್ಲಿ ನಿನ್ನನ್ನು ಇಂದ್ರನಲ್ಲಿಯು ಪುಟ್ಟುವಂತೆ ಅನುಗ್ರಹವಂ ಕೊಟ್ಟೆನು. ಆದುದರಿಂದ ನೀವೀರ್ವರು ಜನಿಸಿದಿರಿ. ನಾನು ಇಂದ್ರಪುತ್ರಿಯಾದ ನಿನ್ನನ್ನು ಅಂಗೀಕರಿಸಿದೆನು. ಈಕೆಯು ಕಾಂಚೀಪುರದ ಸಮೀಪಸ್ಥವಾದ ರಮ್ಯವಾದ ಲವಲಿಯೆಂಬ ಗಿರಿಯಲ್ಲಿ ಸ್ನೇಹಾತಿಶಯದಿಂದ ಆಸನದಲ್ಲಿ ಕುಳಿತು ನನ್ನಂ ಧ್ಯಾನಿಸುತ್ತ ಮಹಾತಪವನ್ನು ಮಾಡುತಿದ್ದು ಅಗ್ನಿಯಲ್ಲಿ ಶರೀರವಂ ಬಿಟ್ಟು ಶಿವಯೋಗೀಶ್ವರನ ಪುತ್ರಿಯಾಗಿ ಪುಟ್ಟಿದಳು. ಎಂತೆಂದರೆ, ವಿಷ್ಣುವು ಕಣ್ವನ ಶಾಪದಿಂ ಶಿವಯೋಗಿಯಾಗಿ ಜನಿಸಿ, ರಮ್ಯವಾದ ಈ ಪರ್ವತದಲ್ಲಿ ಉತ್ತಮವಾದ ತಪವನ್ನು ಮಾಡುತಿರಲಾಗಿ, ಆ ಸಮಯದಲ್ಲಿ ಮಹಾಲಕ್ಷ್ಮಿಯು ಹರಿಣೀರೂಪವಂ ಧರಿಸಿ ಅಲ್ಲಿಗೆ ಬಂದಳು.

ಆಗ ಋಷಿಶ್ರೇಷ್ಠನಾದ ಶಿವಯೋಗೀಶ್ವರನು ಆ ಹರಿಣಿಯಂ ಕಂಡು ಮದನಾತುರನಾಗಿ ಮೋಹಿಸಲಾಗಿ, ಆ ಸಮಯದಲ್ಲಿ ಈಕೆಯು ಹರಿಣೀ ಗರ್ಭದಲ್ಲಿ ಲವಲೀ ಕುಂಡದ ಮಧ್ಯದಲ್ಲಿ ಉತ್ತಮವಾದ ಸ್ತ್ರೀ ಶಿಶುವಾಗಿ ಜನಿಸಿದಳು. ಅದು ಕಾರಣದಿಂ ದೀಕೆಗೆ ಲವಲಿಯೆಂಬ ಪೆಸರುಂಟಾಗಿ ಜಗತ್ತಿನಲ್ಲಿ ಪ್ರಖ್ಯಾತಮಾದುದು. ಹಾಗೆ ಉಪೇಂದ್ರನು ಮೃಕಂಡುವಿನ ಶಾಪದಿಂ ವ್ಯಾಧಕುಲದಲ್ಲಿ ಪುಟ್ಟಿದನು. ಆ ವ್ಯಾಧನಾಯಕನು ಪುತ್ರರಿಲ್ಲದೆ ದುಃಖದಿಂದಿರ್ದು ಈಕೆಯು ಜನಿಸಿದ ಸಮಯದಲ್ಲಿ ಸ್ವೇಚ್ಛೆಯಿಂದಲ್ಲಿಗೆ ಪೋಗಿ ಆ ಶಿಶುವಂ ಕಂಡು ಕೊಂಡು ಪೋಗಿ ತನ್ನ ಸ್ತ್ರೀಯ ಹಸ್ತದಲ್ಲಿಟ್ಟು ಪೋಷಿಸಿದನು. ಎಲೆ, ಪ್ರಿಯೆಯೆ! ಈ ಲವಲಿದೇವಿಯಂ ವಿವಾಹಮಾಡಿ ಕೊಳ್ಳಲು ಪ್ರೀತಿಯುಕ್ತನಾಗಿ ನಾನಲ್ಲಿಗೆ ಪೋಗಿ ವಿಧಿಯಿಂ ವಿವಾಹವಂ ಮಾಡಿಕೊಂಡು ಶ್ರೀ ಪರಿಪೂರ್ಣ ಗಿರಿಯಲ್ಲಿ ಕೆಲವು ಕಾಲವಿರ್ದು ಈಕೆಯೊಡನೆ ನಿನ್ನ ಬಳಿಗೆ ಬಂದೆನೆಂದು ಪೇಳಿದನು.

ಆಗ ದೇವಸೇನೆಯು ಈ ವೃತ್ತಾಂತವಂ ಕೇಳಿ ಆಶ್ಚರ್ಯ ಯುಕ್ತಳಾಗಿ ಸಂತೋಷವನ್ನೈದಿ, ಎಲೆ ದೇವನೇ! ಅಲ್ಲಲ್ಲಿರುವ ಸಹೋದರಿಗಳಾದ ನಮ್ಮ ಅಂತಃಕರಣ ಮೂರ್ತಿಯಾದ ನೀನು ನಮ್ಮಿರ್ವರನ್ನು ಒಂದು ಬಳಿಕ ಲವಲಿಯು ದೇವಸೇನೆಯಂ ನೋಡಿ ನಾನು ನಿನಗೆ ಅನುಜೆಯು, ಈಗ ಸರ್ವ ಪ್ರಕಾರದಲ್ಲಿಯು ರಕ್ಷಿಸೆಂದು ನಮಸ್ಕರಿಸಿದಳು. ಬಳಿಕ ದೇವಸೇನೆಯು ಆಕೆಯ ನಾಲಿಂಗಿಸಿ ಎಲೆ ಸಖಿಯೆ! ನೀನು ನನಗೆ ಪರಮ ಪ್ರಿಯೆಯು, ನಿನ್ನಿಂದ ನನ್ನಮೇಲೆ ಗುಹನದಯೆಯು ಪೂರ್ಣವಾಗಿದ್ದೀತು ಎಂದು ಪೇಳಿದಳು. ಬಳಿಯಲ್ಲಿ ಸೇರಿಸಿದೆ ಯೆಂದು ಪೇಳಲಾಗಿ ಬಳಿಕ ಲವಲಿಯು ನೀನು ಅತ್ಯಂತ ಕೃತಾರ್ಥಳೆಂದು ನುಡಿಯೆ, ದೇವಸೇನೆಯು ಆಕೆಯಂ ಕುರಿತು ಹಾಗೆಯೆ ಪೇಳಿದಳು. ಅವರೀರ್ವರು ಈ ಪ್ರಕಾರದಿಂ ಪರಸ್ಪರೋಪ ಚಾರೋಕ್ತಿಗಳಂ ಪೇಳುತ್ತ, ಆ ಗುಹಸ್ವಾಮಿಯ ಉಭಯ ಪಾರ್ಶ್ವದಲ್ಲಿ ವಿಶೇಷವಾಗಿ

ವಿರಾಜಿಸುತ ಲಿರ್ದರು. ಮತ್ತೆ ಮಯೂರ ಕುಕ್ಕುಟಂಗಳು ಮನೋವೇಗ ವಾದ ರಥವು ಅಜಶಕ್ತಿ ವಿಮಾನಂಗಳು ಮನೆಯಲ್ಲಿಯೆ ಗುಹನಾಜ್ಞೆಯಿಂ ದಿರು ತಿರ್ದವು. ಗುಹಸ್ವಾಮಿಯು ಉತ್ಕೃಷ್ಟವಾದ ಸಿಂಹಾಸನದಲ್ಲಿ ಮಹಾಬಲ ರಾದ್ವೀರರಿಂ ಸೇನಾಪತಿಗಳಿಂ ಭೂತಗಣಂಗಳಿಂ ಮಾಡಲ್ಪಟ್ಟ ನಾನಾವಿಧೋಪ ಚಾರಂಗಳ ನಂಗೀಕರಿಸುತ್ತ, ದೇವಸೇನೆಯಿಂದಲು ವಲ್ಲೀದೇವಿ ಯಿಂದಲು ಯುಕ್ತನಾಗಿದ್ದನು, ಎಲೈ, ಮುನಿಗಳಿರಾ! ನಿಮ್ಮಿಂದ ಪೇಳಲ್ಪಟ್ಟಂತೆ ದೇವ ನಾಯಕನಾದ ಕುಮಾರಸ್ವಾಮಿಯ ವಲ್ಲೀ ಪರಿಣಯ ಮೊದಲಾದ ಚರಿತ್ರವು ವಿಸ್ತಾರದಿಂ ಪೇಳಲ್ಪಟ್ಟಿತು. ಅದು ಕಾರಣದಿಂ ಮರಳಿ ನಿಮಗೆ ಕೇಳುವದಕ್ಕೆ ಯಾವುದಿಷ್ಟವಾಗಿರುವುದೋ ಪೇಳಿದಿರಾದೊಡೆ ಹೇಳುವೆನೆಂದು ಸೂತಂ ಶೌನ

ಕಾದಿ ಮುನಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ದೇವಕಾಂಡದಲ್ಲಿ
ಐದನೆಯ ಅಧ್ಯಾಯವು ಸಂಪೂರ್ಣಮಾದುದು.

ಆ ರ ನೆ ಯ ಅ ಧ್ಯಾ ಯ ವು.

ಮುಚುಕುಂದೋಪಾಖ್ಯಾನ.

ಅನಂತರದಲ್ಲಿ ಋಷಿಗಳು ಈ ಪ್ರಕಾರಮಾಗಿ ಸೂತನಿಂ ಗುಹಸ್ವಾಮಿಯ ಚರಿತ್ರಮಂ ಕೇಳಿ ಮರಳಿ, ಆ ಸೂತಂಗೆ ನಮಸ್ಕಾರವಂ ಮಾಡಿ, ಎಲೈ, ಸೂತನೆ! ಪೂರ್ವದಲ್ಲಿ ಕುಮಾರಸ್ವಾಮಿಯ ಕಲ್ಯಾಣಕ್ಕೋಸುಗ ಮುಚುಕುಂದ ರಾಯನು ಬಂದನೆಂದು ಪೇಳಲ್ಪಟ್ಟದ್ದು ಸರಿಯಷ್ಟೆ, ಆತನಾರು? ಇದಂ ಪೇಳಬೇಕೆಂದು ಕೇಳಲಾಗಿ, ಸೂತಮುನಿಯು ಆ ಋಷಿಗಳಂ ಕುರಿತು, ಎಲೈ, ಋಷಿಗಳಿರಾ! ಸಾವಧಾನದಿಂ ಕೇಳುವರಾಗಿ, ಪೂರ್ವದಲ್ಲಿ ಕೈಲಾಸ ಶಿಖರದೊಳು ಪಾರ್ವತೀ ಪರಮೇಶ್ವರರು ಶೃಂಗಾರವನಮಂ ನೋಡುತ್ತ ಒಂದಾನೊಂದು ಬಿಲ್ವವೃಕ್ಷ ಮೂಲದಲ್ಲಿ ಕುಳಿತಿರುವಾಗ ಮಹಾ ಬಲನಾದ ಶ್ಯಾಮ ಮುಖನಾದ ಒಂದಾ ನೊಂದು ವಾನರನು ಆ ವೃಕ್ಷವನ್ನೇರಿ ಅತ್ಯಂತ ಮುದದಿಂ ಬಿಲ್ವಪತ್ರೆಯಂ ಕೊಯ್ದು ಭಕ್ತಿಯಿಂದಾಪಾರ್ವತೀಪರಮೇಶ್ವರರ ಮೇಲೆ ಚಲ್ಲುತ್ತ ಪೂಜಿಸಿ ದನು. ಆ ಸಮಯದಲ್ಲಿ ಪಾರ್ವತೀದೇವಿಯು ಇದೇನೆಂದು ಆ ವೃಕ್ಷವಂ ನೋಡಲಾಗಿ, ಅದರಲ್ಲಿ ವಾನರನಂ ಕಂಡು ಕೋಪಯುಕ್ತೆಯಾಗಿ ಈ ವಾನರನ ಚೇಷ್ಟೆಯಂ ನೋಡಿರೆಂದು ಮಹಾ ದೇವಂಗೆ ಬಿನ್ನಪಂಗೈದಳು. ಆಗ ಪರ ಮೇಶ್ವರನು ದೇವಿಯ ವಾಕ್ಯವಂ ಕೇಳಿ, ಎಲೆ ಪಾರ್ವತಿಯೆ! ಈ ವಾನರನು ನಮ್ಮೀರ್ವರಲ್ಲಿ ಅತ್ಯಂತ ಭಕ್ತಿಯುಳ್ಳವನೆಂದು ಪೇಳಿ, ಆ ಕಪಿಶ್ರೇಷ್ಠನನ್ನು

ತನ್ನ ಸಮೀಪಕ್ಕೆ ಕರೆಯಲಾಗಿ, ಆ ವಾನರನು ಸ್ವಾಮಿಯ ಸಮೀಪಕ್ಕೆ ಬಂದು ನಮಸ್ಕಾರವಮ್ಮಾಡಿ ಬದ್ಧಾಂಜಲಿ ಪುಟನಾಗಿ ನಿಂತುಕೊಂಡನು.

ಬಳಿಕ ಪಾರ್ವತಿಯು ಅತ್ಯಂತ ದಯೆಯಿಂದ ಆ ವಾನರನಂ ವೀಕ್ಷಿಸಿ, ಎಲೆ! ನೀನು ಬಿಲ್ವಪತ್ರೆಗಳಿಂ ನಮ್ಮನ್ನು ಅರ್ಚನೆಯಮ್ಮಾಡಿದುದರಿಂದ ಭೂಮಿಯಲ್ಲಿ ಸಮಸ್ತ ನೃಪರಿಂ ಲಾಲಿಸಲ್ಪಟ್ಟು ಸಾರ್ವಭೌಮನಾಗಿದ್ದು ತುದಿಯಲ್ಲಿ ಕೈಲಾಸಪರ್ವತಕ್ಕೆ ಬಂದು, ಆರಿಂದಲು ಪಡೆಯಲಶಕ್ಯವಾದ ಗಣಾಧೀಶ್ವರತ್ವಮಂ ಪಡೆದು ಬಹು ಪ್ರೀತಿಯಿಂ ವಾಸವಮಾಡುತ್ತಿರೆಂದು ಪೇಳಲಾಗಿ, ಮಹಾ ಬಲವಂತನಾದ ವಾನರನು ಸ್ವಾಮಿಯನ್ನೀರೀತಿ ಪ್ರಾರ್ಥಿಸಿದನು. ದೇವದೇವನಾದ ಕರುಣಾಮೃತ ಸಾಗರನಾದ ಎಲೈ ಮಹಾದೇವನೆ! ಆವಾಗಲು ನಿನಗೆ ಭಕ್ತನಾದವನಿಗೆ ಉತ್ಪತ್ತಿಯುಂಟಾಗುತಿರೆ, ಅಜ್ಞಾನವುಂಟಹುದು. ಅದುಕಾರಣದಿಂದೆನ್ನನು ಭೂಮಿಯಲ್ಲಿ ಉತ್ಪನ್ನನಾಗೆಂದಾಜ್ಞಾಪಿಸಬೇಡೆಂದು ವಿನಯದಿಂ ಶ್ರುತಿಗೊಳಿಸಲಾಗಿ, ಆಗ ಸ್ವಾಮಿಯು ಎಲೆ! ನಿನಗೆ ರಾಜಭಾವದಲ್ಲಿಯು ಜ್ಞಾನವೈರಾಗ್ಯ ಭಕ್ತಿಗಳುಂಟಾಗಲೆಂದು ಆಜ್ಞಾಪಿಸಿದನು. ಬಳಿಕ ಆ ವಾನರನು ಸ್ವಾಮಿಯ ಅನುಗ್ರಹದಿಂದ ದಿವ್ಯವಾದ ಹರಿಶ್ಚಂದ್ರನ ವಂಶದಲ್ಲಿ ಪುಟ್ಟಿ ಆವಾಗಲು ಸಮಸ್ತ ದೇಶಗಳಲ್ಲಿ ಮುಚುಕುಂದನೆಂದು ಪ್ರಖ್ಯಾತಿಯಂ ಪಡೆದು ಗುಹಸ್ವಾಮಿಯ ಕಲ್ಯಾಣಮಂ ನೋಡಿದನಲ್ಲದೆ ಪರಮ ಭಕ್ತಿಯುಕ್ತನಾದ ತಪೋವಂತರೊಳಗೆ ಶ್ರೇಷ್ಠನಾದ ವಸಿಷ್ಠನಿಂ ಆ ಗುಹಸ್ವಾಮಿಯ ದಿವ್ಯಂಗಳಾದ ವ್ರತಂಗಳಂ ಕೇಳಿ ಕ್ರಮಗಳಿಂದಾವ್ರತಗಳನ್ನಾಚರಿಸಿದನೆಂದು ನುಡಿದನು.

ನಾರದಮುನಿಯ ಉಪದೇಶದಿಂದ ಮುಚುಕುಂದನು ಸುಬ್ರಹ್ಮಣ್ಯನನ್ನು ಆರಾಧಿಸುವಿಕೆ.

ಬಳಿಕ ಮುನಿಗಳು ಈ ಪ್ರಕಾರವಾಗಿ ನಿರೂಪಿಸಲ್ಪಟ್ಟ ಸೂತವಾಕ್ಯವಂ ಕೇಳಿ, ಎಲೈ ಋಷಿಶ್ರೇಷ್ಠನಾದ ಸೂತನೆ! ರಾಜೋತ್ತಮನಾದ ಮುಚುಕುಂದನು ಋಷಿಗಳೊಳಗೆ ಶ್ರೇಷ್ಠನಾದ ವಸಿಷ್ಠಮುನಿಯಿಂದ ಯಾವಯಾವ ವ್ರತಗಳನ್ನು ಆಚರಿಸಿದನೋ ಅವುಗಳಂ ನಾವು ಕೇಳಬೇಕೆಂದು ಬಿನ್ನಪಂಗೈಯೆ, ಸೂತನದಂ ಕೇಳಿ, ಎಲೈ ಋಷಿಗಳಿರಾ! ಪೂರ್ವದಲ್ಲಿ ಭಗೀರಥನೆಂಬ ಅರಸು ಘೋರನೆಂಬ ಅಸುರನಿಂದ ರಣರಂಗದಲ್ಲಿ ಪರಾಜಿತನಾಗಿ ಕುಟುಂಬದೊಡನೆ ಕಾಡಿಗೆ ಪೋಗಿ, ಭೃಗುಋಷಿಯ ಆಶ್ರಮದಲ್ಲಿ ನಿಂತು, ಆ ಮುನಿಯಿಂದ ಪೇಳಲ್ಪಟ್ಟ ದಿವ್ಯವಾದ ಗುಹನ ವ್ರತಗಳಂ ಕೇಳಿ, ಶುಕ್ರವಾರ ವ್ರತಕ್ಕೆ ಸಂಕಲ್ಪಿಸಿ ಶತವರ್ಷವು ಮಾಡಿ ಬಳಿಕ ಆ ಗುಹಸ್ವಾಮಿಯ ಶಕ್ತಿಯಿಂದೊಡಗೂಡಿ, ಆ ಘೋರನೆಂಬ ರಾಕ್ಷಸನಂ

ಸಂಹರಿಸಿ ತಾನು ರಾಜ್ಯಕ್ಕೆ ಬಂದು ನಿಷ್ಕಂಟಕವಾಗಿ ಭೂಮಿಯನ್ನಾಳಿದನು. ಅದುಕಾರಣದಿಂ ಅನೇಕ ಫಲಗನಿಳನ್ನೀಯುವ ಶುಕ್ರವಾರವ್ರತವು ಸುಬ್ರಹ್ಮಣ್ಯ ಸ್ವಾಮಿಗೆ ಬಹು ಇಷ್ಟವು.

ನಾರದಮುನಿಯು ಕೃತ್ತಿಕಾನಕ್ಷತ್ರದಲ್ಲಿ ವ್ರತವನ್ನಾಚರಿಸಿ ಅಂತ್ಯದಲ್ಲಿ ಗುಹನ ಪ್ರಸಾದದಿಂ ಮೋಕ್ಷವನ್ನೈದಿದನು. ಈ ಪ್ರಕಾರವಾಗಿ ವಿಧಿಯಿಂ ದುತ್ತಮವಾದ ವ್ರತವನ್ನುಮಾಡಿ ಋಷಿಗಳಲ್ಲಿ ತಾನೇ ಶ್ರೇಷ್ಠನಾದನು. ಮತ್ತಂ ಒಬ್ಬಾನೊಬ್ಬ ದ್ವಿಜನು ಆ ಕೃತ್ತಿಕಾನಕ್ಷತ್ರವಮ್ಮಾಡಿ ಮಾನವನಾಗಿ ಭೂಮಿಯನ್ನಾಳುತಿರ್ದನು. ಮತ್ತೋರ್ವ ಬ್ರಾಹ್ಮಣನು ಆ ನಕ್ಷತ್ರದಲ್ಲಿ ಅದೇ ವ್ರತದ ಸಮಾಪನೆಯಮ್ಮಾಡಿ ತ್ರಿಶಂಕುವೆಂಬ ಅರಸಾಗಿ ರಾಜ್ಯವನ್ನಾಳು ತಿರ್ದನು. ಕೆಲಂಬರು ದ್ವಿಜರು ಆ ಗುಹನಲ್ಲಿ ಭಕ್ತಿಯಂ ನಿಲ್ಲಿಸಿ ಕೃತ್ತಿಕಾ ನಕ್ಷತ್ರದಲ್ಲಿ ವ್ರತವನ್ನಾಚರಿಸಿ ಸಮಸ್ತವಾದ ರಾಜ್ಯಂಗಳನ್ನನುಭವಿಸಿ ತುದಿಯಲ್ಲಿ ಗುಹನ ಪ್ರಸಾದದಿಂ ಮೋಕ್ಷವನ್ನೈದಿದರು. ಮತ್ತೆ ದೇವತೆಗಳು ಋಷಿಗಳು ಲೋಕತ್ರಯದಲ್ಲಿ ಖ್ಯಾತಿಯಂ ಪಡೆದು ಈ ಸ್ಕಂದನ ಶ್ರೇಷ್ಠವಾದ ವ್ರತ ವನ್ನಾಚರಿಸಿ, ರಾಕ್ಷಸರ ಭಯಮಂ ಬಿಟ್ಟು ತಮ್ಮ ತಮ್ಮ ಸ್ಥಾನಗಳನ್ನೈದಿದರು.

ಮುಚುಕುಂದನಿಗೆ ವರಪ್ರದಾನ.

ಎಲೈ ಮುನಿಗಳಿರಾ! ಮುಚುಕುಂದನು ಇವು ಮುಂತಾದ ಅನೇಕ ವ್ರತಂ ಗಳಂ ವಸಿಷ್ಠನ ಮುಖದಿಂ ಕೇಳಿ, ಆ ವ್ರತಗಳನ್ನಾಚರಿಸಲಾಗಿ, ಆ ಗುಹ ಸ್ವಾಮಿಯು ಆತಂಗೆ ಪ್ರಸನ್ನನಾಗಿ ನಿನಗೆ ಬೇಕಾದ ವರವಂ ಕೇಳೆಂದು ನಿರೂ ಪಿಸಿದನು. ಬಳಿಕ ಮುಚುಕುಂದ ನದಂ ಕೇಳಿ ಆ ಸ್ವಾಮಿಗೆ ನಮಸ್ಕಾರವನ್ನೆ ಸಗಿ, ಎಲೈ ಸ್ವಾಮಿಯೆ! ನನಗೆ ಲಕ್ಷವೂ ಪೊಂಭತ್ತುಸಾವಿರ ಅನುಜರು ಪುಟ್ಟ ಬೇಕು. ನಿಷ್ಕಂಟಕವಾಗಿ ರಾಜ್ಯವನ್ನಾಳಬೇಕೆಂದು ಪ್ರಾರ್ಥಿಸಲಾಗಿ, ಕುಮಾರ ಸ್ವಾಮಿಯು ಹಾಗೆ ಆಗಲೆಂದು ವೀರರಿಗಾಜ್ಞಾಪಿಸಿದನು. ಅನಂತರದಲ್ಲಿ ವೀರರದಂ ಕೇಳಿ ಭಯಕಂಪಿತರಾಗಲು ದೈತ್ಯಸಂಹಾರಕನಾದ ಕುಮಾರ ಸ್ವಾಮಿಯು ಆ ವೀರರಂ ಕುರಿತು, ಈತಗೆ ಅನುಜರಾಗಿ ತಪಸ್ಸನ್ಮಾಡಿ ಶುದ್ಧ ರಾಗಿ ನಮ್ಮ ಬಳಿಗೆ ಬನ್ನಿರೆಂದು ಆಜ್ಞಾಪಿಸೆ, ಅವರು ತತ್‌ಕ್ಷಣದಲ್ಲಿಯೆ ಮನುಜ ಸ್ವರೂಪವಂ ಧರಿಸಿ, ದಯಾನಿಧಿಯೆ! ಸ್ವಾಮಿಯೆ! ನಮ್ಮಪರಾಧವಂ ಕ್ಷಮಿ ಸೆಂದು ಪೇಳಿ ಸ್ತುತಿಸಿ ಮುಚುಕುಂದನಿಗೆ ಅನುಜರಾಗಿ ನಿಂತರು. ಈ ಪ್ರಕಾರ ವಾಗಿ ಕುಮಾರಸ್ವಾಮಿಯು ಮುಚುಕುಂದನಿಗೆ ನಿರೂಪಿಸಿ ಅಂತರ್ಧಾನನಾಗೆ, ಆ ಮುಚುಕುಂದನು ತನ್ನನುಜರಿಗೆ ಬೇರೆಬೇರೆ ಚತುರಂಗ ಬಲಗಳಂ ಕೂಡಿಸಿ ಕೊಟ್ಟು ರಾಜ್ಯವನ್ನಾಳುತ್ತಿದ್ದನು.

ಆ ಸಮಯದಲ್ಲಿ ಅನೇಕರಾದ ಅಪ್ಸರಸ್ತ್ರೀಯರು ಆ ರಾಜಕನ್ನಿಕೆಯರಾಗಿ ಪುಟ್ಟಿದರು. ಬಳಿಕ ಮುಚುಕುಂದನು ತನ್ನ ಅನುಜರಿಗೆ ಇವರಂ ಕಲ್ಯಾಣವ ಮ್ಮಾಡಿದನು. ವೀರಬಾಹುವು ಪುಷ್ಪಗಂಧಿಯೆಂಬ ಸ್ತ್ರೀಯಲ್ಲಿ ಕನಕಾಕನಕ ರಂಬೀರ್ವ ಪುತ್ರರನ್ನುಂಟುಮಾಡಿ ಚಿತ್ರಮಾಲಿಯೆಂಬ ಕುಮಾರತಿಯಂ ಪೆತ್ತು ಬಳಿಕ ಅನೇಕ ಕುಮಾರರಂ ಪೆತ್ತು ತನ್ನ ಪುತ್ರಿಯಂ ಕಲ್ಪಿತ ಜ್ಯೇಷ್ಠನಾದ ಮುಚುಕುಂದಂಗೆ ಶಾಸ್ತ್ರಪ್ರಕಾರದಿಂ ಕೊಟ್ಟನು. ಬಳಿಕ ಆಕೆಯ ಕರದಲ್ಲಿರ್ಪ ಗಿಳಿಯಂ ಯಮದೂತರು ಕಂಡು ಬಲಾತ್ಕಾರದಿಂ ತೆಗೆದುಕ್ಕೊಂಡು ಪೋಗಿ ಯಮನ ಪತ್ನಿಗೆ ಕೊಡಲಾಗಿ, ವೀರರದಂ ಕೇಳಿ ಯಮನೊಡನೆ ಯುದ್ಧವ ಮ್ಮಾಡಿ, ಮರಳಿ ಆ ಗಿಳಿಯಂ ತಂದು ಸಂತೋಷದಲ್ಲಿರ್ದರು. ಆಗ ಚಿತ್ರ ವಲ್ಲಿಯು ಗರ್ಭವತಿಯಾಗಿ ಕೇರಳದೇಶದಲ್ಲಿರುವ ಮಹಾ ಫಲವನ್ನಪೇಕ್ಷಿಸಲಾಗಿ, ವೀರರದಂ ಕೇಳಿ ದೂತರಂ ಕಳುಹಿ ಕೇರಳದೇಶಾಧಿಪನ ಹೃದಯಮಂ ತಿಳಿದು, ತಾವೆ ಪೋಗಿ ಯುದ್ಧದಲ್ಲಿ ಆತನಂ ಜಯಿಸಿ ಆ ಫಲವನ್ನು ಆಕೆಗೆ ತಂದು ಕೊಟ್ಟು, ಅಲ್ಲಲ್ಲಿರುತಿರ್ಪ ದುಷ್ಟರಂ ಸಂಹರಿಸಿ ಭೂಮಿಯಂ ತಮ್ಮ ವಶವ ಮ್ಮಾಡಿಕ್ಕೊಂಡು ಆಳುತಿರ್ದರು. ಚಿತ್ರವಲ್ಲಿಯು ಅಗ್ನಿವರ್ಣನೆಂಬ ಕುಮಾರನಂ ಪೆತ್ತಳು.

ಆ ಸಮಯದಲ್ಲಿ ಬಲಾಸುರನು ಸ್ವರ್ಗಲೋಕಕ್ಕೆ ಪೋಗಿ ಇಂದ್ರನಂ ಜಯಿಸಲಾಗಿ, ದೇವೇಂದ್ರನು ಮುಚುಕುಂದನಂ ಸಹಾಯಕ್ಕೆ ಕರೆದನು. ಬಳಿಕ ಮುಚುಕುಂದನು ಶೀಘ್ರದಿಂ ಪೋಗಿ ಆ ಬಲಾಸುರನ ಸೇನೆಯಂ ಸಂಹರಿಸಿ ಆತನನ್ನೋರ್ವನಂ ನಿಲ್ಲಿಸೆ, ಇಂದ್ರನು ವಜ್ರದಿಂದ ಆ ಅಸುರನಂ ಸಂಹರಿಸಿದನು. ಅದು ಮೊದಲ್ಗೊಂಡು ಇಂದ್ರಂಗೆ ಬಲಾರಾತಿಯೆಂಬ ಪೆಸರುಂಟಾದುದು. ಬಳಿಕ ಇಂದ್ರನು ಮುಚುಕುಂದನು ಸಹ ಸಂತೋಷದಿಂ ತಮ್ಮ ಸ್ಥಾನವನ್ನೈದಿದರೆಂದು ಶೌನಕಾದಿ ಮುನಿಗಳಿಗೆ ಸೂತಂ ಪೇಳಿದ ನೆಂಬಲ್ಲಿಗೆ, ದೇವಕಾಂಡದಲ್ಲಿ ಆರನೆಯ ಅಧ್ಯಾಯವು ಸಮಾಪ್ತಮಾದುದು.

ಏಳನೆಯ ಅಧ್ಯಾಯವು.

ಮುಚುಕುಂದನು ಇಂದ್ರಾರಾಧಿತ ಪರಶಿವಮೂರ್ತಿಯನ್ನು ಬೇಡುವಿಕೆ.

ಎಲೈ ಋಷಿಗಳಿರಾ! ಅನಂತರದಲ್ಲಿ ಇಂದ್ರನು ಮುಚುಕುಂದನು ಸ್ನಾನವ ಮ್ಮಾಡಿ ಪುರಾರಾತಿಯ ಪೂಜಾಗೃಹವನ್ನೈದಿದರು. ಆಗ ಮುಚುಕುಂದನು

ಆಸನದಲ್ಲಿ ಕುಳಿತು ಸಭಾಸೀನನಾಗಿ ಉತ್ತಮನಾದ ಉಮಾಸ್ಕಂದ ಸಹಿತನಾದ ಪ್ರಸನ್ನವದನಾಂಬುರುಹನಾದ ಪರಮಾನಂದ ವಿಗ್ರಹನಾದ ಮಹೇಶ್ವರನಂ ಕಂಡು, ಕೈಲಾಸವಾಸಿಯಾದ ಪಾರ್ವತೀನಾಥನಂ ನೆನೆದು ಭಕ್ತಿಯಿಂ ಸ್ತುತಿಸಿ ಆನಂದಾಶ್ರು ಯುಕ್ತನಾದನು. ಆ ಸಮಯದಲ್ಲಿ ಪರಮೇಶ್ವರನು ಮುಚು ಕುಂದಂಗೆ ಪ್ರಸನ್ನನಾಗಿ, ಎಲೈ ಮುಚುಕುಂದನೆ! ಪೂರ್ವದಲ್ಲಿ ನಾನು ವಿಷ್ಣುವಿಂ ಪೂಜಿಸಲ್ಪಟ್ಟು ಈ ಇಂದ್ರನ ಬಳಿಗೆ ಬಂದೆನು. ಆವುದಾನೊಂದು ಕಾರಣದಿಂ ಭಕ್ತರೊಳು ನೀನು ಶ್ರೇಷ್ಠನೋ ಅದುಕಾರಣದಿಂ ನೀನು ನನ್ನನ್ನು ಪೂಜಿಸೆಂದು ಇಂದ್ರನು ಕೇಳದ ಹಾಗೆ ಉಪಾಂಶುವಾಗಿ ನಿರೂಪಿಸಲಾಗಿ, ಆ ವಾಕ್ಯವಂ ಕೇಳಿ ಪ್ರಸನ್ನಮಾನಸನಾಗಿ ಮಹೇಶ್ವರನ ಪೂಜೆಯಮಾಡುತ ಲಿರ್ದನು. ಬಳಿಕ ಇಂದ್ರನು ಪೂಜಾಸಮಾಪನೆಯಮ್ಮಾಡಿ, ಭೋಜನಕಾಲ ದಲ್ಲಿ ಕಾಮಧೇನುವಂ ನೆನೆಯೆ, ಅದು ಬಂದು ದಿವ್ಯವಾದ ಅನ್ನಪನ್ನೀಯ ಲಾಗಿ ಆ ಇಂದ್ರನು ಪಯೋಯುಕ್ತವಾದ ದಿವ್ಯಾನ್ನವನ್ನು ಮುಚುಕುಂದಂಗೆ ಸಮರ್ಪಿಸಿ ಭೋಜನವಮ್ಮಾಡಿಸಿ, ದೇವತಾಸಂಬಂಧವಾದ ವಸ್ತ್ರಾಭರಣಂಗಳಂ ಕೊಟ್ಟು, ಎಲೆ ನೃಪನೆ! ನಿನಗಿಷ್ಟವಾದ ವಸ್ತುವಾವುದೋ ಕೇಳೆಂದು ಹೇಳಲಾಗಿ ಮುಚುಕುಂದನು ಆ ವಾಕ್ಯವಂ ಕೇಳಿ ಸಂತೋಷಯುಕ್ತನಾಗಿ ಇಂತೆಂದನು.

ಎಲೈ ಇಂದ್ರನೆ! ನೀನು ಪೂಜಿಸಿದ ಉಮಾಸ್ಕಂದ ಮಹೇಶ ವಿಗ್ರಹವಂ ನಾನು ಪೂಜಿಸುತ್ತೇನೆ ಪಾಲಿಸೆಂದು ಕೇಳಲಾಗಿ ಇಂದ್ರನದಂ ಕೇಳಿ, ಆತನಂ ನೋಡಿ ಎಲೈ ಅರಸೆ! ಈ ಮಹೇಶ ವಿಗ್ರಹವು ನನ್ನದಲ್ಲ ವಿಷ್ಣುವಿನಿಂದ ಪೂಜಿಸ ಲ್ಪಟ್ಟದ್ದು ಸತ್ಯವಾಗಿ ಹೇಳಲ್ಪಟ್ಟಿತೆಂದು ನುಡಿದನು. ಆ ವಿಷ್ಣುವು ಪೂಜಿಸು ವುದಕ್ಕೆ ಕಾರಣವೇನೆಂದರೆ, ಪೂರ್ವದಲ್ಲಿ ವಿಷ್ಣುವಿಗೆ ಪುತ್ರನಿಲ್ಲದ್ದರಿಂದ ಆತನು ಪುತ್ರಾರ್ಥಿಯಾಗಿ ಮಹಾದೇವನಂ ಹೃದಯದಲ್ಲಿ ಧ್ಯಾನಿಸುತ್ತ ಭೂತಳದಲ್ಲಿ ಮಹಾತಪವನಾಚರಿಸಿದನು. ಆಗ ಶಿವನು ಪ್ರಸನ್ನನಾಗಲಾಗಿ ವಿಷ್ಣುವು ಈಶ್ವ ರಂಗೆ ನಮಿಸಿ, ಎಲೈ ಶಿವನೆ! ನಿನ್ನಿಂದ ಕೊಡಲ್ಪಟ್ಟ ಅನಂತಾಯುಷ್ಯ ಮುಂ ತಾದ ಪದಗಳು ಕಡಮೆಯಿಲ್ಲದಿರುವವು. ಆದೊಡಂ ನಿನ್ನ ಪ್ರಸಾದದಿಂದ ಪುತ್ರನುಂಟಾಗಬೇಕು. ಮಕ್ಕಳಿಲ್ಲದ ದುಃಖವು ನನಗೆ ಬೇಡೆಂದು ಪ್ರಾರ್ಥಿಸೆ, ಪರಮೇಶ್ವರನು ಹಾಗೇ ಆಗಲೆಂದು ವರವಂ ಕೊಟ್ಟನು.

ಮಹಾವಿಷ್ಣುವಿಗೆ ಪಾರ್ವತೀದೇವಿಯ ಶಾಪ ಬರುವಿಕೆ.

ಆಗ ಪಾರ್ವತೀದೇವಿಯು ಕುಪಿತೆಯಾಗಿ ನನ್ನಂ ಬಿಟ್ಟು ನಿನ್ನನ್ನು ಪೂಜಿಸಿ ಪುತ್ರನಂ ಪಡೆದನಾದಕಾರಣ ಆ ಪುತ್ರನು ಗೃಹದಲ್ಲಿ ಅಗ್ನಿದಗ್ಧನಾಗಲಿ,

ಎಲೈ ದಯಾನಿಧಿಯೆ! ಈತನು ಮಹಾ ವಂಚಕನು. ಬಹು ಮಾಯಾವಿಯು ಬ್ರಹ್ಮ ಸ್ವರೂಪನಾದ ನೀನಿರುವಲ್ಲಿ ಈತನು ತಾನೇ ಬ್ರಹ್ಮಸ್ವರೂಪನೆಂದು ಕೆಲ ದುಷ್ಟರಂ ವಂಚಿಸಿ ದುರ್ಮಾರ್ಗದಲ್ಲಿ ಕೆಡಹಿದನು. ಅದುಕಾರಣದಿಂದೀತನ ಮುಖವಂ ನೋಡಬಾರದೆಂದು ನುಡಿದು ಸ್ವಾಮಿಯೊಡನೆ ಅಂತರ್ಧಾನವ ನೈದಿದಳು. ಆಗ ವಿಷ್ಣುವು ಅತ್ಯಂತ ದುಃಖಿತನಾಗಿ ಉಮಾಸ್ಕಂದ ಸಮೇತ ನಾದ ಮಹೇಶ್ವರನಂ ವಿಧಾನದಿಂ ಪ್ರತಿಷ್ಠೆಯಂ ಮಾಡಿ, ಬಹು ಕಾಲವು ಪೂಜಿಸುತ್ತಿರೆ, ಸಾಂಬಸದಾಶಿವನು ಉಮಾಸಹಿತನಾಗಿ ಪ್ರಸನ್ನನಾದನು. ಆ ಸಮಯದಲ್ಲಿ ವಿಷ್ಣುವು ಸ್ವಾಮಿಯಂ ಕಂಡು ಸ್ತುತಿಸಲಾಗಿ, ಪರಮೇಶ್ವರನು ಪಾರ್ವತೀ ಮುಖವಂ ನಿರೀಕ್ಷಿಸಿದನು.

ಮಹಾವಿಷ್ಣುವಿಗೆ ಶಾಪ ವಿಮೋಚನೆ.

ಅನಂತರದಲ್ಲಿ ವಿಷ್ಣುವು ಆ ಸ್ವಾಮಿಯ ಅಭಿಪ್ರಾಯವನ್ನರಿತು, ಎಲೌ ಭವಾನಿಯೆ! ನಾನು ಅಜ್ಞಾನವಶದಿಂ ನಿನ್ನನ್ನು ಬಿಟ್ಟು ಮಹೇಶ್ವರನಂ ಪೂಜಿಸಿ ದೆನು. ಪುತ್ರಾರ್ಥಿಯಾಗಿ ಬಹುಕಾಲದಿಂ ಪೂಜಿಸುತಲಿದೇನೆ, ಪುತ್ರನು ದಗ್ಧ ನಾಗಲೆಂದು ಕೊಡಲ್ಪಟ್ಟ ಶಾಪವನ್ನು ಪರಿಹರಿಸಿ ರಕ್ಷಿಸಬೇಕೆಂದು ಮಹಾ ದೇವಿಯಂ ಸ್ತೋತ್ರವಂ ಮಾಡಿ, ಪ್ರಾರ್ಥಿಸಿದ ಬಳಿಕ, ಆ ಪಾರ್ವತೀದೇವಿಯು ಪ್ರಸನ್ನೆಯಾಗಿ ವಿಷ್ಣುವಂ ಕುರಿತಿಂತೆಂದಳು. ಎಲೈ ವಿಷ್ಣುವೆ! ದಗ್ಧನಾದ ನಿನ್ನ ಪುತ್ರನಿಗೆ ಮಹೇಶ್ವರನಿಂ ಮರಳಿ ಜೀವವುಂಟಾಗಲಿ, ನನ್ನಾಜ್ಞೆಯೆಂಬದು ಮಹಾ ದೊಡ್ಡದು, ಎಂದು ಪೇಳ್ದು ಶಂಭುವಿನೊಡನೆ ಅಂತರ್ಧಾನಳಾದಳು. ಬಳಿಕ ವಿಷ್ಣುವು ಶಿವನಾಜ್ಞೆಯಿಂದ ಮನದಿಂ ಸುತನಂ ಧ್ಯಾನಿಸಿ ಆ ಮನಸ್ಸಿ ನಿಂದಲೇ ಮನ್ಮಥನಂ ಪೆತ್ತನು. ಬಳಿಕ ಮನ್ಮಥನು ವಿಷ್ಣುವಿನಿಂದ ಬಹು ಕಾಲವು ಬೆಳೆಯಿಸಲ್ಪಟ್ಟವನಾಗಿ, ದೇವತೆಗಳ ಕಾರ್ಯವಶದಿಂದ ಆ ಪುರಾರಿಯಿಂದ ದಗ್ಧನಾಗಿ ಮರಳಿ ಪ್ರಸನ್ನನಾದ ಶಿವನಿಂದಲೇ ಉತ್ಪನ್ನನಾದನು. ಈ ಪ್ರಕಾರ ವಾಗಿ ವಿಷ್ಣುವು ಮಹಾದೇವನ ವಿಗ್ರಹವಂ ಪೂಜಿಸಿ ವರವಂ ಪಡೆದು, ಬಳಿಕ ಆ ಮಹಾದೇವನ ವಿಗ್ರಹವನ್ನು ವುರದಮೇಲಿರಿಸಿಕೊಂಡು, ಕ್ಷೀರ ಸಮುದ್ರದಲ್ಲಿ ಯೋಗನಿದ್ರೆಯಂ ಮಾಡುತಿರೆ, ಆಗ ಉಮಾಸ್ಕಂದ ಸಮೇತನಾದ ಮಹೇಶ್ವರನು ವಿಷ್ಣುವಿನ ಉರದ ಮಧ್ಯದಲ್ಲಿ ಅನಂತನ ಉಶ್ವಾಸಗಳಿಂದಾಂದೋಳಿತನಾಗಿ ವಾಯುವಿನಿಂದ ಚಲಿಸಲ್ಪಟ್ಟ ವೃಕ್ಷದಂತೆ ಇರುತಿರ್ದನು.

ಇಂದ್ರನನ್ನು ಕುರಿತು ಮುಚುಕುಂದನ ಪ್ರಾರ್ಥನೆ.

ಹೀಗೆ ವಿಷ್ಣುವು ಸ್ವಾಮಿಯಂ ಉರದಮೇಲಿರಿಸಿಕೊಂಡು ಯೋಗ ನಿದ್ರೆಯಂ ಮಾಡುತಿರಲಾಗಿ, ಆ ಸಮಯದಲ್ಲಿ ವಾಕ್ಕಾಲನೆಂಬ ಅಸುರನು ಯುದ್ಧ

ಕ್ಕೋಸುಗ ನನ್ನ ಬಳಿಗೆ ಬಂದನು. ಅದುಕಾರಣದಿಂ ನಾನು ದುಃಖಿತನಾಗಿ ಕ್ಷೀರಾಬ್ಧಿಶಯನನಂ ಮಾಡುತಲಿರುವ ವಿಷ್ಣುವಿಗೆ ಪೇಳಲು ಪೋದೆನು. ಆಗ ವಿಷ್ಣುವು ನಿದ್ರೆ ತಿಳಿದೆದ್ದು ನನ್ನಂ ನೋಡಿ, ಎಲೈ ಇಂದ್ರನೆ! ನಿನ್ನಾಗಮನವಂ ತಿಳಿದೆನು, ಭೀತಿಬೇಡೆಂದು ಪೇಳಿ ಈ ಸೋಮಸ್ಕಂದ ಮಹೇಶ ವಿಗ್ರಹವಂ ನನ್ನ ವಶಕ್ಕೆ ಕೊಟ್ಟು ತಾನೆ ಪೊರಮಟ್ಟು ಭೂತಳದಲ್ಲಿರುವ ಪುಂಡರೀಕ ಪುರಕ್ಕೆ ಪೋಗಿ ಅಲ್ಲಿ ಚಿದ್ರೂಪಿಯಾದ ಮಹಾದೇವನಂ ಕಂಡು ಚಾತುರ್ಮಾಸ್ಯ ನಿದ್ರೆಯಲ್ಲಿ ಕಳದು ಪೋದುದೋ ಎಂದು ಚಿಂತಿಸಿ ಆನಂದಾಶ್ರುಪರಿಪೂರ್ಣನಾಗಿ ಗದ್ಗದ ವಾಕ್ಯದಿಂ ಸ್ತುತಿಸಿ, ಚಾತುರ್ಮಾಸ್ಯದಲ್ಲಿರ್ದ ಸ್ವಾಮಿಯಿಂದನುಜ್ಞಾತನಾಗಿ ಯುದ್ಧಕ್ಕೆ ಪೊರಮಟ್ಟು, ಘೋರನಾದ ಆ ವಾಕ್ಯಾಲನೆಂಬ ಅಸುರನಂ ಸಂಹರಿಸಿ ಕ್ಷೀರಾಂಬುಧಿಗೆ ಬಂದು ಸ್ವರ್ಗಕ್ಕೆ ನನ್ನಂ ಕಳುಹಿಸಿ ಪೂರ್ವದಂತೆ ಮಹಾರ್ಣವ ದಲ್ಲಿ ಶಯನನಂ ಮಾಡಿದನು. ಆ ಬಳಿಕ ನಾನು ಈಪರಿ ಪಟ್ಟಣಕ್ಕೆ ಬಂದು ಉಮಾಸ್ಕಂದ ಸಹಿತವಾದ ಮಹೇಶ್ವರ ವಿಗ್ರಹವನ್ನು ಪೂಜಿಸುತಲಿದೇನೆ. ಅದುಕಾರಣದಿಂ ವಿಷ್ಣುವಿನ ಅನುಜ್ಞೆಯಿಲ್ಲದೆ ಕೊಡಲಂಜುವೆನು. ನೀನು ಆ ವಿಷ್ಣುವಿನ ಆಜ್ಞೆಯಂ ಪಡೆದು ಈ ಶಿವ ವಿಗ್ರಹವನ್ನು ಕೊಂಡುಪೋಗೆಂದು ಪೇಳಿದನು.

ಮುಚುಕುಂದನ ಶಿವ ಪ್ರತಿಷ್ಠೆ.

ಬಳಿಕ ಮುಚುಕುಂದನು ಆ ವಾಕ್ಯವಂ ಕೇಳಿ ವಿಷ್ಣುವಿನ ಸಮೀಪಕ್ಕೆ ಪೋಗಿ ಆ ಹರಿಯಿಂದಾಜ್ಞೆಯಂ ಪಡೆದು ಬಂದು ಮರಳಿ ಇಂದ್ರನಂ ಕೇಳಲಾಗಿ ಆತನು ವಿಮಾನದೊಡನೆ ಆ ಸ್ವಾಮಿಯಂ ಕೊಡಲು ಚಿಂತಿಸಿದನು. ಆಗ ವಿಶ್ವಕರ್ಮನು ಷಟ್ ಸೋಮಸ್ಕಂದ ಮಹೇಶ್ವರ ವಿಗ್ರಹಗಳಂ ಮಾಡಿ ಮುಚು ಕುಂದಂ ಗಿಯ್ಯೆ, ಆತನು ಇಂದ್ರನ ಕಪಟವಂ ತಿಳಿದು ಅದೇ ವಿಗ್ರಹವಂ ತನಗೆ ಕೊಡಬೇಕೆಂದು ಪೇಳ್ದು, ಅದಂ ತೆಗದುಕ್ಕೊಂಡು ಬಂದು ಕ್ಷೇತ್ರಂಗಳೊಳಗೆ ಉತ್ತಮವಾದ ಕಮಲಾಲಯವೆಂಬ ಕ್ಷೇತ್ರದಲ್ಲಿ ಆ ವಿಗ್ರಹವನ್ನು ಪ್ರತಿಷ್ಠೆಯಂ ಮಾಡಿದ್ದಲ್ಲದೆ ವಿಶ್ವಕರ್ಮನಿರ್ಮಿತವಾದ ಆ ಆರು ಸೋಮಸ್ಕಂದ ಮಹಾದೇವ ವಿಗ್ರಹಗಳನ್ನು ಅದರ ಸಮೀಪದಲ್ಲಿ ಪ್ರತಿಷ್ಠಿಸಿ ಪೂಜಿಸುತಿರ್ದನು.

ಇಂದ್ರನು ಚಂಡಾಲನಾಗಿ ಶಿವ ಪ್ರಸಾದದಿಂದ ನಾಕವನ್ನು ಪಡೆಯುವಿಕೆ.

ಇಂದ್ರನು ಆ ಸಮಯದಲ್ಲಿ ತನ್ನ ಇಷ್ಟದೇವತೆಯಂ ಕೊಟ್ಟುದರಿಂದ, ಆ ಕಮಲಾಲಯವೆಂಬ ಕ್ಷೇತ್ರದಲ್ಲಿಯೆ ಚಂಡಾಲನಾಗಿಪುಟ್ಟಿ ಆ ಮಹಾದೇವಂಗೆ

ವಾದ್ಯಧ್ವನಿಗಳಂ ಮಾಡಿ ಆ ಸ್ವಾಮಿಯ ಪ್ರಸಾದದಿಂದ ಪುನಃ ಇಂದ್ರತ್ವವನ್ನೈದಿದನು. ಬಳಿಕ ಮುಚುಕುಂದನು ಪುರಾರಿಗೆ ಪ್ರಾಕಾರ ಮುಂತಾದ ಗೋಪುರಾಟ್ಟಾಲಕಮಂಟಪ ನಿರ್ಮಾಣವಂ ಮಾಡಿ ಮಹಾದೇವನಂ ಪೂಜಿಸುತ ನಿಷ್ಕಂಟಕಮಾಗಿರಾಜ್ಯವನಾಳುತಿದ್ದು, ಅಗ್ನಿವರ್ಣನೆಂಬ ಪುತ್ರನಿಗೆ ಪಟ್ಟವಂ ಕಟ್ಟಿ, ಅಂತ್ಯದಲ್ಲಿಕೈಲಾಸಪರ್ವತವನ್ನೈದಿದನು. ವೀರಬಾಹು ಮುಂತಾದ ವೀರರು ತಮ್ಮ ಕುಮಾರರಂ ಅಗ್ನಿವರ್ಣನ ಸಮೀಪದಲ್ಲಿರಿಸಿ ಮಾನುಷದೇಹವಂ ಬಿಟ್ಟು ದಿವ್ಯಶರೀರಂಗಳಂ ಧರಿಸಿ ಸ್ಕಂದಗಿರಿಗೆ ಪೋಗಿ, ಅನ್ವಯನಾದ ಗುಹಂಗೆ ನಮಸ್ಕಾರವಂ ಮಾಡಿ ಅವರಿಂದನುಗ್ರಹವಂ ಪಡೆದು ಸಂತೋಷದಿಂದಲ್ಲಿರ್ದರೆಂದು ಸೂತಂ ಶೌನಕಾದಿ ಮುನಿಗಳಿಗೆ ಪೇಳಿದನೆಂಬಲ್ಲಿಗೆ,

ಗದ್ಯ|| ಇಂತು ಕರ್ಣಾಟಕಭಾಷಾ ವಿರಚಿತಮಾದ, ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನ ಭೂತ ಶ್ರೀಮನ್ಮಹೀಶೂರ ಮಹಾ ಸಂಸ್ಥಾನ ಮಧ್ಯ ದೇದೀಪ್ಯಮಾನಾ ವಿಕಲ ಕಲಾನಿಧಿ ಕುಲಕ್ರಮಾಗತ ರಾಜಕ್ಷಿತಿಪಾಲ ಪ್ರಮುಖ ನಿಖಿಲ ನಿಜರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ, ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾ ಪ್ರತಿಮವೀರ ನರಪತಿ ಬಿರುದೆಂತೆಂಬರ ಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರ ಕಲಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ಶ್ರೀ ಚಾಮರಾಜ ಮಹೀಪಾಲ ಧರ್ಮಪತ್ನಿ ಕೆಂಪನಂಜಮಾಂಬಾ ಗರ್ಭಸುಧಾಂಬುಧಿ ರಾಕಾಸುಧಾಕರಾಯಮಾನ ಶ್ರೀ ಚಾಮುಂಡಿಕಾಂಬಾ ವರ ಪ್ರಸಾದೋದ್ಭವರಾದ ಆತ್ರೇಯಸಗೋತ್ರ ಆಶ್ವಲಾಯನಸೂತ್ರ ಋಕ್ಶಾಖಾನುವರ್ತಿಗಳಾದ ಶ್ರೀಮರ್ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ರಚಿಸಿದ " ಶ್ರೀ ಕೃಷ್ಣರಾಜ ವಾಣೀವಿಲಾಸ ಮೆಂಬ " ಸ್ಕಾಂದಪುರಾಣದ ಶಂಕರಸಂಹಿತೆಯಲ್ಲಿ ಶಿವರಹಸ್ಯಖಂಡದ ದೇವಕಾಂಡದೊಳು ಏಳನೆಯ ಅಧ್ಯಾಯವು ಸಮಾಪ್ತಮಾದುದು.

ದಕ್ಷಕಾಂಡ ಪ್ರಾರಂಭ.

ಮೊದಲನೆಯ ಅಧ್ಯಾಯವು.

ದಕ್ಷಾಧ್ವರೋಪಾಖ್ಯಾನ.

ಈ ಪ್ರಕಾರವಾಗಿ ಶೌನಕಾದಿ ಮುನಿಗಳು ಸಂಭವಕಾಂಡ ಮೊದಲ್ಗೊಂಡು ದೇವಕಾಂಡಾಂತವಾಗಿ "ಗಿರಿಜಾಕಲ್ಯಾಣ, ಷಣ್ಮುಖೋತ್ಪತ್ತಿ, ಶೂರಪದ್ಮಾದಿ ವಧೆ" ಮುಂತಾದ ಉಪಾಖ್ಯಾನಂಗಳಂ ಪ್ರತಿಪಾದಿಸುತಲಿರುವ ಕರ್ಣಾಮೃತಪ್ರಾಯವಾದ ಪಂಚಕಾಂಡಂಗಳಂ ಕೇಳಿ ಸಂತುಷ್ಟಸ್ವಾಂತಮುಳ್ಳವರಾಗಿ, ತಪೋಧನನಾದ ಸೂತಮುನಿಯಂ ಕುರಿತು, ಎಲೈ ಪೌರಾಣಿಕೋತ್ತಮನೆ! ಪೂರ್ವದಲ್ಲಿ ಬೃಹಸ್ಪತಿಯು ಇಂದ್ರಪುತ್ರನಾದ ಜಯಂತಂಗೆ ದಕ್ಷಾಧ್ವರಮಂ ಸಂಕೋಚದಿಂ ಪೇಳ್ದನೆಂದು ನಮಗೆ ನಿಮ್ಮಿಂದ ನಿರೂಪಿತ ಮಾದುದು ಸರಿಯಷ್ಟೆ, ಆ ಉಪಾಖ್ಯಾನವನ್ನು ಮರಳಿ ವಿಸ್ತರದಿಂ ಪೇಳಬೇಕೆಂದು ಬೆಸಗೊಂಡ ಬಳಿಕ, ಸೂತಮುನಿಯು ಆ ವಾಕ್ಯವಂ ಕೇಳಿ ಅವರನೆಲ್ಲರಂ ಅಭಿಮುಖವಾಗಿ ಮಾಡಿಕೊಂಡು ಸಾವಧಾನಮನದಿಂ ಕೇಳಿರೆಂದು ನುಡಿದು ದಕ್ಷಾಧ್ವರಮಂ ಪೇಳ್ದನದೆಂತೆನೆ,

ಎಲೈ ದ್ವಿಜರುಗಳಿರಾ ಪೂರ್ವದಲ್ಲಿ ಸತ್ಯಲೋಕದೊಳು ಚತುರಾನನನು ಸರ್ವ ದೇವತೆಗಳಿಂದಲು ತಪೋಧನರಾದ ಮುನಿಗಳಿಂದಲು ಪುತ್ರರಾದ ದಶ ಬ್ರಹ್ಮರಿಂದಲು ಒಡಗೂಡಿರುವಾಗ, ಆ ಬ್ರಹ್ಮಪುತ್ರರೊಳಗೆ ಜ್ಯೇಷ್ಠನಾದ ದಕ್ಷಬ್ರಹ್ಮನು ಜಗತ್ಪ್ರಭುವಾದ ತನ್ನ ಪಿತೃವಿಗೆ ಶಿರದಿಂ ನಮಸ್ಕಾರವಂ ಮಾಡಿಂತೆಂದನು, ಎಲೈ ಪಿತೃವೆ! ಸಮಸ್ತ ಅರ್ಥಂಗಳಂ ಬಲ್ಲವನಾದ ವೇದಾಂತಾರ್ಥ ಕೋವಿದನಾದ, ಎಲೈ ತಂದೆಯೆ! ಜಗನ್ನಾಯಕನಾಗಿ ಸರ್ವತ್ರ ಪರಿಪೂರ್ಣನಾಗಿ ಪರಂಜ್ಯೋತಿಯಾಗಿ ಸನಾತನನಾದ ಮತ್ತೆ ಸರ್ವ ಜಗತ್ತುಗಳನ್ನು ಸೃಜಿಸುತಲು ಪಾಲಿಸುತಲು ಸಂಹರಿಸುತಲು ಇರುವುದಲ್ಲದೆ ಸರ್ವ ಪ್ರಾಣಿಗಳಲ್ಲಿಯು ಸಾಕ್ಷೀಭಾವದಿಂದಿರುವ, ತ್ರಿಮೂರ್ತಿಗಳೊಳಗೆ ಶ್ರೇಷ್ಠನಾದ ಪುರುಷನಾರು? ಎಂದು ಬ್ರಹ್ಮನಂ ಕೇಳೆ, ಆತನು ಈ ವಾಕ್ಯವಂ ಕೇಳಿ ಹೃದಯದಲ್ಲಿ ಶಿವನಂ ಧ್ಯಾನಿಸಿ ಆನಂದಾಶ್ರುನಯನನಾಗಿ ಹರುಷದಿಂ ಕ್ಷಣಮಾತ್ರ ಗದ್ಗದ ಧ್ವನಿಯುಳ್ಳವನಾಗಿ, ಎಲೈ ದಕ್ಷನೆ! ಆವ ಪುರುಷನು ಮಹಾ ಮೋಹದ ದೆಸೆಯಿಂದ ಕಲಹವಂ ಮಾಡುವ ಬ್ರಹ್ಮ ವಿಷ್ಣುಗಳ ಮಧ್ಯದಲ್ಲಿ ವಹ್ನಿಜ್ವಾಲಾ ಮಾಲಾವೃತನಾಗಿ ಪ್ರಾದುರ್ಭವಿಸಿದನೋ ಆತನು ಸರ್ವೇಶ್ವರನು ಏಕನು, ಆಕಾಶವರ್ತಿಯಾಗಿದ್ದ ಶಂಭುವು ಆತನೆ ಜಗತ್ಕರ್ತನು ವಿಶೇಷವಾಗಿ ನನಗು ವಿಷ್ಣುವಿಗು ಕರ್ತನು ಎಂದು ನುಡಿದನು.

ಶಿವಾಧಿಕ್ಯತೆಯುನ್ನು ಪೇಳುವಿಕೆ.

ಬಳಿಕ ದಕ್ಷನು ಆ ವಾಕ್ಯವಂ ಕೇಳಿ, ಎಲೈ ತಾತನೆ! ಸೃಷ್ಟಿ ರಕ್ಷಣೆಗಳಂ ಮಾಡುತಲಿರುವ ಬ್ರಹ್ಮ ವಿಷ್ಣುಗಳಾದ ನಿಮಗೆ ಸಂಹಾರಕನಾದ ಈ ಹರನು ಹೇಗೆ ಕರ್ತನು? ಎಂದು ಕೇಳಲಾಗಿ ಎಲೈ ದಕ್ಷನೆ! ವಿಶ್ವಪಾಲಕನಾದ ಮಹಾದೇವನು ಬ್ರಹ್ಮನಾದ ನನ್ನನ್ನು ಪಾಲಕನಾದ ಹರಿಯುನ್ನು ಸೃಷ್ಟಿಮಾಡಿ ನಮ್ಮಿರ್ವರಿಗು ಸೃಷ್ಟಿಪಾಲನೆಗಳೆಂಬ ಕಾರ್‍ಯಂಗಳಂ ಕಲ್ಪಿಸಿ, ನಮ್ಮ ಹೃದಯದಲ್ಲಿ ನಿಂತು ಸರ್ವತ್ರ ತನ್ನ ತನ್ನ ಕೃತ್ಯದಲ್ಲಿ ನನ್ಮನ್ನು ಸರ್ವಕಾಲದಲ್ಲಿಯು ಪ್ರೇರಿಸಿ ಮರಳಿ ಮೋಹಿತರಾದ ನಮ್ಮನ್ನು ನೋಡಿ ನಿಗ್ರಹಿಸಿ ರಕ್ಷಿಸುತಲಿಥಾನೆ, ಹಾಗಾದೊಡಂ ಆ ಮಹಾದೇವನು ನಮ್ಮಗಳೋಪಾದಿಯಲ್ಲಿ ಓರ್ವನೆಂದು ತಿಳಿಯಲ್ಪಡುತಲಿರುವನು, ಆತನು ಪೂರ್ವದಲ್ಲಿ ದೇವತೆಗಳಂ ಪುರಾಣಂಗಳಂ ಉಂಟುಮಾಡಿದನು ; ಮತ್ತೆ ಆತನು ಪುಷ್ಪಗಳಲ್ಲಿ ಗಂಧದಂತೆಯು ತಿಲದಲ್ಲಿ ತೈಲದಂತೆಯು ಘಂಟೆಯಲ್ಲಿ ನಾದದಂತೆಯು ಅಗ್ನಿಯಲ್ಲಿ ಪ್ರಭೆಯಂತೆಯು ಸಮಸ್ತ ಕಡೆಯುಲ್ಲಿಯು ಸರ್ವಕಾಲದಲ್ಲಿಯು ಇರುತಲಿಥಾನೆ ಈ ಪ್ರಕಾರವಾಗಿರುವ ಆ ಪರಮೇಶ್ವರನು ಏಕನಾಗಿರುವಲ್ಲಿ ನಮ್ಮಿರ್ವರಿಗೆ ಈ ಪ್ರಭುತ್ವವೆತ್ತಣದು ? ಎಂದು ನಿರೂಪಿಸಿದನು.

ಬಳಿಕ ದಕ್ಷನು ಜಗತ್ಪ್ರಭುವಾದ ಆತನೆ ‖ ಶ್ರು ‖ ಸರ್ವಸ್ಯಬ್ರಹ್ಮತಾದಾತ್ಮ್ಯಂ । ಸರ್ವಂಕಲ್ಪಿತಂಬ್ರಹ್ಮ । ಹೀಗೆಂದು ಶ್ರುತಿಯು ಅತ್ಯಾದರದಿಂ ಪೇಳುತಲಿರುವದು ಸರಿಯಲ್ಲವೆ, ಹೀಗಿರುವಲ್ಲಿ ಎಂತು ನಿರೂಪಿಸಿದಂತಾಗುವದೆಂದಲ್ಲಿ ನುಡಿದನು, ಎಲೈ ಪುತ್ರನೆ! ಆ ಶ್ರುತಿಯು ಉಪಚಾರದಿಂ ಸಮಸ್ತಕ್ಕೆ ಬ್ರಹ್ಮಭಾವಮಂ ಪೇಳುವದು ಮತ್ತಂ ಭೂಲೋಕದಲ್ಲಿ ಬ್ರಾಹ್ಮಣರು ನನ್ನೊಡನೆ ಅಭೇದವಂ ಪೇಳುತಲಿರುವರು, ಹಾಗೆ ಸಮಸ್ತವಾದ ಜಗತ್ತಿಗು ಬ್ರಹ್ಮತ್ವವೆಂದು ನಿಶ್ಚಯವು, ಇವಲ್ಲದೆ ಈ ಶ್ರುತಿಯು ಈಶ್ವರನ ಸರ್ವವ್ಯಾಪಿತ್ವವಂ ನೋಡಿ ಸರ್ವತಾದಾತ್ಮ್ಯವನ್ನು ಪೇಳುತಲಿರುವದು. ಮತ್ತಂ ವಿಶ್ವಾತ್ಮಕನಾಗಿ ಬ್ರಹ್ಮನಾದ ಉಮಾಪತಿಯಾದ ಮೃತ್ಯುಂಜಯನಾದ ಸ್ವಭಾವವಾದ ಮಹಾದೇವನ ಭಾವವಂ ಪ್ರತಿಪಾದಿಸುತ್ತಿದ್ದೀತು, ಆತನೆ ಜೀವಂಗಳ ಅಂತರ್ಯಾಮಿಯು ಆತನೋರ್ವನೆ ಜಗತ್ಕರ್ತನು ಆ ರುದ್ರಂಗನ್ಯನು ಜಗತ್ಕರ್ತನಲ್ಲ, ಅರೂಪಿಯಾಗಿಯು ಬಹುರೂಪನಾಗಿಯು ಪರಾತ್ಪರನಾಗಿಯು ತ್ರಿಪದಾರ್ಥ ಸ್ವರೂಪಿಯಾಗಿಯು ಸರ್ವಕಲ್ಯಾಣ ಕಾರಣನಾಗಿಯು ಪರಂಜ್ಯೋತಿಯಾಗಿಯು ತತ್ವಾತೀತನಾಗಿಯು ಇರುವ ಮಹೇಶ್ವರನು ನಿರ್ಗುಣನು. ಅನೇಕ ಗುಣ ಸಂಪನ್ನನಾದ ಪರಮೇಶ್ವರನು ಮೋಹಿತರಾದ ಬ್ರಹ್ಮ ವಿಷ್ಣುಗಳಾದ ನಮ್ಮನ್ನು ಪೂರ್ವ

ದಲ್ಲಿ ರಕ್ಷಿಸಿದನು. ಆ ದೇವನು ಚರ್ಮ ಅಸ್ಥಿಗಳಂ ಜ್ಞಾಪಕಕ್ಕೋಸುಗ ಧರಿಸುತ ಲಿರ್ಧಾನೆ ಮನುಜರು ಚರ್ಮದಂತೆ ವ್ಯೋಮವಂ ಸುತ್ತು ಕಟ್ಟಿದನಾದ ಆ ಸದಾ ಶಿವನಂ ತಿಳಿದು ಮುಕ್ತಿಯಂ ಪಡೆವರೆಂಬ ವಿಷಯದಲ್ಲಿ ಸಂಶಯವಿಲ್ಲ.

ಎಲೈ ಸೂತನೆ! ಯಾವ ಪರಮಾತ್ಮನ ಮಹಿಮೆಯು ನನ್ನಿಂದ ಪೇಳಲಶಕ್ಯವೋ ವೇದವು ಯೆಲ್ಲೆಲ್ಲಿ ಉಪಚಾರದಿಂ ನನ್ನನ್ನು ವಿಷ್ಣುವಂ ಪೇಳುತಲಿರುವದೋ, ಅಲ್ಲಿಯು ಪರಮಾರ್ಥದಿಂ ಪರಮೇಶ್ವರನೆಂದು ಪೇಳುತ್ತಿದ್ದೀತು. ಇದಲ್ಲದೆ ವೇದವು ಒಂದು ಭಾಗದಿಂ ಕರ್ಮಗಳಂ ವಿಷ್ಣು ಮುಂತಾದ ದೇವತೆಗಳಂ ಋಷಿಗಳಂ ಪೇಳುವದು, ಮತ್ತೊಂದು ಭಾಗದಿಂ ಆ ದೇವೇಶನಂ ಭಯದಿಂ ಪ್ರತಿಪಾದಿಸುತ್ತಿದ್ದೀತು. ಅಲ್ಲಿಯು ನಮ್ಮಲ್ಲಿ ಶಂಭುಬುದ್ಧಿಯಂ ಪ್ರತಿಪಾದಿಸುವುದು. ಆವ ಪುರುಷನು ಅಜ್ಞಾನದಿಂ ನಮ್ಮನ್ನು ಶಿವನೊಡನೆ ಸಮಾನವಾಗಿ ಪೇಳುವನೋ ಆ ಪಾಪಿಯು ನರಕವನ್ನೈದುವನು, ಮತ್ತೆ ಯಾರು ನಮ್ಮನ್ನು ಶಿವದಾಸರೆಂದು ಪೇಳುತ್ತಿರುವರೋ ಅವರಲ್ಲಿ ನಮಗೆ ಅತ್ಯಂತ ಪ್ರೀತಿಯುಂಟಾಗುವದು. ಪಾಪಕರ್ಮ ಉಳ್ಳವರಾಗಿ ದುರ್ಬುದ್ಧಿಗಳಾದ ಹೀಗೆ ಪೇಳದಿರುವರಂ ಶತ್ರುಗಳಾಗಿ ನೋಡುತ್ತೇವೆ. ಶಂಭುವಾದ ಶಿವನೇ ಪತಿಯು ನಾವೆ ಪಶುಗಳು ವಿಷ್ಣು ಮುಂತಾದ ನಮ್ಮಿಂ ಭೂಮಿಯಲ್ಲಿ ದೇವನಾದ ಶಂಕರನಾದ ಶಿವಲಿಂಗಗಳು ವಿಧಿಯಿಂ ಪ್ರತಿಷ್ಠಿಸಲ್ಪಟ್ಟು ಪೂಜಿಸಲ್ಪಡುವವೆಂಬುದೆ ನಿದರ್ಶನವು. ಆ ಪರಮೇಶ್ವರನು ತನ್ನನಾಶ್ರಯಿಸಿದ ಭಕ್ತರಿಗೆ ಭೋಗ ಮೋಕ್ಷಂಗಳ ನೀಯುವ ನಮಸ್ಕಾರಣದಿಂ ನೀನು ದೇವದೇವೇಶನಾಗಿ ಸರ್ವ ಶರಣ್ಯನಾದ ಮಹೇಶ್ವರನಂ ಶರಣವನ್ನೈದು, ಎಲೆ ಮಗನೆ! ನನ್ನಿಂದ ಹೇಳಲ್ಪಟ್ಟಂತೆ ಅಜ್ಞಾನದಿಂದಲಾದರೂ ಈಶನಾದ ಮಹೇಶ್ವರಂಗನ್ಯನಾದವನಂ ಸ್ಮರಿಸಬೇಡೆಂದು ಆಜ್ಞಾಪಿಸಲಾಗಿ, ಆ ದಕ್ಷನು ಬ್ರಹ್ಮನಿಂ ನಿರೂಪಿಸಲ್ಪಟ್ಟ ವಾಕ್ಯವಂ ಕೇಳಿ ಮನದಿಂ ಧೈರ್ಯವಂ ನಿಶ್ಚಯಿಸಿ, ಎಲೈ ಪಿತನೆ! ತಪವನಾಚರಿಸುವದಕ್ಕೆ ಕ್ಷೇತ್ರವಾವುದು ಎಂದು ಬ್ರಹ್ಮನಂ ಕೇಳಿದನು.

ಬಳಿಕ ಬ್ರಹ್ಮನು ಅದಂ ಕೇಳಿ, ಎಲೈ ಪುತ್ರನೆ! ನನ್ನ ಮನದಿಂ ಪುಟ್ಟಿದ ಮಾನಸವೆಂಬ ಆವುದಾನೊಂದು ಸರೋವರವಿರುವದು. ಶೋಭನವಾದ ಆ ತೀರವನ್ನೈದಿ ತಪದಿಂ ಸ್ವಾಮಿಯಂ ತೃಪ್ತಿಯನ್ನೈದಿಸಿ, ಪರಮೇಶ್ವರನಿಂ ಅಭೀಷ್ಟವಂ ಪಡೆಯೆಂದು ಪೇಳ್ದು ಪುತ್ರನಂ ಕಳುಹಿದನು. ಆ ಸಮಯದಲ್ಲಿ ದಕ್ಷನು ಸಂತೋಷವಾದ ಬುದ್ಧಿಯುಳ್ಳವನಾಗಿ ಆ ಕ್ಷೇತ್ರಕ್ಕೆ ಪೋಗಿ ಅಲ್ಲಿ ನಿಂತು ಶಿವನಲ್ಲಿ ಮನವನ್ನಿಲ್ಲಿಸಿ ಘೋರವಾದ ತಪವಮ್ಮಾಡಿದನದೆಂತೆನೆ. ವರ್ಷಾಕಾಲದಲ್ಲಿ ಜಲಮಧ್ಯಲ್ಲಿಯು ಹಿಮಂತಕಾಲದಲ್ಲಿ ಹಿಮಮಧ್ಯದಲ್ಲಿಯು ಗ್ರೀಷ್ಮ

ಕಾಲದಲ್ಲಿ ಪಂಚಾಗ್ನಿಮಧ್ಯದಲ್ಲಿಯು ನಿಂತು ಮೂಲಾಗ್ನಿಯನ್ನು ಮಾಲೆಯಾಗಿ ಮಾಡಿಕೊಂಡು ಅತ್ಯಂತ ಜ್ವಾಲೆಯನ್ಮಾಡಿ ಏಕಾದಶವರ್ಷಾಯುತ ಪರ್ಯಂತರ ತಪವನ್ನಾಚರಿಸಿದನೆಂದು ಶೌನಕಾದಿ ಮುನಿಗಳಿಗೆ ಸೂತಂ ಪೇಳ್ದ ನೆಂಬಲ್ಲಿಗೆ, ದಕ್ಷಕಾಂಡದಲ್ಲಿ ಮೊದಲನೆಯ ಅಧ್ಯಾಯವು ಸಮಾಪ್ತಮಾದುದು.

ಎರಡನೆಯ ಅಧ್ಯಾಯವು.

ದಕ್ಷನ ತಪೋನಿಷ್ಠೆ-ಪರಶಿವನ ವರಪ್ರದಾನ.

ಎಲೈ ಮುನಿಗಳಿರಾ ! ಅನಂತರದಲ್ಲಿ ಶಂಭುವು ನಾನಾಲಂಕಾರಯುಕ್ತ ವಾದ ದಿವ್ಯವಾದ ವೃಷಭವನ್ನೇರಿ, ಬ್ರಹ್ಮಪುತ್ರನಾದ ದಕ್ಷಂಗೆ ಪ್ರಸನ್ನನಾಗಿ ಮುನಿಶ್ರೇಷ್ಠರಿಂ ಗಂಧರ್ವರಿಂ ಕಿನ್ನರರಿಂ ಕ್ಷೋಣಿಯಲ್ಲಿ ದಕ್ಷನ ಮುಂದೆ ನಿಲ್ಲ ಲಾಗಿ, ಆತನು ಆ ಪರಮೇಶ್ವರನಂ ಕಂಡು ಅತ್ಯಂತ ಸಂತೋಷಯುಕ್ತನಾಗಿ ದಶ ಸ್ತೋತ್ರಂಗಳಿಂ ಸ್ತುತಿಸಿ ಅಡಿಗಡಿಗೆ ನಮಸ್ಕಾರವಮ್ಮಾಡಿದನು. ಬಳಿಕ ಪರಮೇಶ್ವರನು ದಕ್ಷನನ್ನೋಡಿ ಪ್ರಸನ್ನಚಿತ್ತನಾಗಿ, ಎಲೈ ದಕ್ಷನೆ ! ನಿನಗೆ ಪ್ರಸನ್ನನಾದೆನು. ಇಷ್ಟವಾದ ವರವಂ ಬೇಡೆಂದು ನುಡಿಯೆ ದಕ್ಷನು ಸಂತೋಷ ಯುಕ್ತನಾಗಿ, ಶರಣಾಗತವತ್ಸಲನಾದ ಮಹಾದೇವನಾದ ಸರ್ವೈಶ್ವರ್ಯಸಂಪನ್ನ ನಾದ ಆಕಾಶಮಧ್ಯವರ್ತಿಯಾದ ಶಂಭುವೆ ! ವಿಶೇಷದಿಂ ಭೂಮಿ ಅಂತರಿಕ್ಷ ಸ್ವರ್ಗ ಪಾತಾಳ ಬ್ರಹ್ಮ ವಿಷ್ಣು ಮುಂತಾದ ಲೋಕಂಗಳ ಆಧಿಪತ್ಯವಂ ಕೊಡು. ಅಲ್ಲಲ್ಲಿರುವರೆಲ್ಲರು ನನ್ನಾಜ್ಞಾವಶವರ್ತಿಗಳಾಗಿರಲಿ. ನಾನು ನಿನ್ನ ಪ್ರಸಾದದಿಂದೆಲ್ಲೆಲ್ಲಿಯು ಪೂಜಿತನಾಗಿ ಭಗವಂತನಾದ ನಿನ್ನಂ ಬಿಟ್ಟು ಮತ್ತೋ ರ್ವನಂ ಭಜಿಸೆನು. ಎಲೈ ಕೃಪಾಸಿಂಧುವೆ ! ಆ ದೇವತೆಗಳು ನನ್ನಂ ಭಜಿಸಲಿ, ವೇದಪಾರಂಗತರಾದ ಅನೇಕ ಕುಮಾರರು ಅನೇಕ ಕನ್ನಿಕೆಯರು ನನಗುಂಟಾ ಗಲಿ. ಮತ್ತೆ ನನ್ನ ಗರ್ಭದಲ್ಲಿ ಪುಟ್ಟುವ ಗೌರಿದೇವಿಯನ್ನು ನಿನಗೀಯುವೆನು. ಆಕೆಯಂ ವಿವಾಹವಮ್ಮಾಡಿಕೊಂಡು ನನ್ನಂ ನನ್ನ ಪುತ್ರರಂ ಸಂರಕ್ಷಿಸೆಂದು ಪೇಳಲಾಗಿ, ಮಹೇಶ್ವರನು ಆ ದಕ್ಷನು ಕೇಳಿದ ವರಗಳನ್ನಿತ್ತು ಇಂತೆಂದನು. ಎಲೆ ದಕ್ಷನೆ ! ನೀನು ನ್ಯಾಯದಲ್ಲಿ ಇದ್ದೆಯಾದರೆ, ನಾವು ಕೊಟ್ಟ ವರಗಳು ವೃದ್ಧಿಯನೈದುವವು ಎಂದು ಪೇಳ್ದು ತ್ವರಿತದಿಂದೆದ್ದು ಅಂತರ್ಧಾನ ವಾದನು.

ಬಳಿಕ ದಕ್ಷನು ಮಹೇಶ್ವರನಿಂ ವರವಂ ಪಡೆದು ಸ್ವಾಮಿಯಂ ವಿಶೇಷ ವಾಗಿ ಸ್ತುತಿಸಿದನು. ಮತ್ತಂ ತನಗೆ ತಂದೆಯಾದ ಲೋಕನಾಯಕನಾದ

ಚತುರ್ಮುಖನಂ ಪ್ರೀತಿಯಿಂ ನೆನೆಯಲಾಗಿ, ಬ್ರಹ್ಮನು ತನ್ನ ಮನಸ್ಸಿನಲ್ಲಿ ಛೀಛೀ! ಈ ದಕ್ಷನು ಮಹಾದೇವನು ಪ್ರಸನ್ನನಾಗಿರುವಲ್ಲಿಯು ಭೋಗ ಕ್ಕೋಸುಗ ವರವಂ ಪಡೆದನು. ಅಕಟಕಟ! ನಿರುಪದ್ರವವಾದ ಮೋಕ್ಷದಲ್ಲಿ ನನ್ನ ಮಗನಿಗೆ ಬುದ್ಧಿ ಪುಟ್ಟದೆ ಪೋದುದಲ್ಲ. ಯೆಲ್ಲಿ ಪೋದರು ದಾಂಟಲಶಕ್ಯ ವಾದ ದುಃಖವುಂಟಾಗುವದು. ಶಂಭುವಿನ ಅನುಗ್ರಹವಿಲ್ಲದೆ ಮೋಕ್ಷದಲ್ಲಿ ಯಾರಿಗು ಬುದ್ಧಿ ಪುಟ್ಟದು, ಎಂದು ಚಿಂತಿಸಿ, ಶೀಘ್ರದಿಂದಾತನ ಸಮೀಪಕ್ಕೆ ಬಂದು ಆ ದಕ್ಷನಿಂ ನಮಸ್ಕರಿಸಲ್ಪಟ್ಟು ಆತಂಗೆ ಆಶೀರ್ವಚನಮನಿತ್ತನು. ಅನಂತರದಲ್ಲಿ ದಕ್ಷನು ಹೃಷ್ಟಮಾನಸನಾಗಿ ತನಗೆ ಜನಕನಾದ ಬ್ರಹ್ಮನನ್ನೋಡಿ, ಭೋಪಿತನೆ! ನನಗೆ ಸರ್ವೋತ್ತಮವಾದ ರಮ್ಯವಾದ ಪುರವಂ ನಿರ್ಮಾಣ ಮಾಡೆಂದು ಪೇಳೆ, ವಿಧಿಯು ಹಾಗೆ ಆಗಲೆಂದು ಪೇಳಿ ಅತ್ಯಾಶ್ಚರ್ಯಕರವಾದ ಮನೋಹರವಾದ ಭುವನತ್ರಯದಲ್ಲಿ ದಕ್ಷಪುರಿಯೆಂದು ಪ್ರಸಿದ್ಧವಾದ ನಗರಮಂ ನಿರ್ಮಾಣಮಾಡಿದನು. ಬಳಿಕ ವಿಧಿಯಿಂದದಂ ಕೇಳಿ ಅತ್ಯಂತ ಹೃಷ್ಟಮಾನಸ ನಾಗಿ ವೇಗದಿಂ ತನ್ನ ಪುರಕ್ಕೆ ಪ್ರವೇಶಿಸಿ ಗೃಹಮಂ ಪೊಕ್ಕು, ನಾನಾರತ್ನವಿಚಿತ್ರ ವಾದ ದಿವ್ಯಸಿಂಹಾಸನದಲ್ಲಿ ಇಂದ್ರಾದಿ ದೇವತೆಗಳಿಂ ಬೃಹಸ್ಪತಿಯಿಂ ದೈತ್ಯರಿಂ ಶುಕ್ರನಿಂ ಸೂರ್ಯಾದಿ ಗ್ರಹಂಗಳಿಂ ದಿಕ್ಪಾಲಕರಿಂ ಲೋಕಪಾಲಕರಿಂ ಮತ್ತಂ ಪ್ರಸಿದ್ಧರಾದ ಇತರರಿಂ ಸೇವಿತನಾಗಿ ಕುಳಿತು, ಕ್ರಮದಿಂ ಮನೋಹರೆಯಾದ ವೇದವಲ್ಲಿಯುಂ ವಿವಾಹವನ್ಮಾಡಿ ಮಹಾ ಪ್ರತಾಪಯುಕ್ತರಾಗಿ ಸಾತ್ವಿಕರಾದ ಸಹಸ್ರ ಪುತ್ರರಂ ಪುಟ್ಟಿಸಿ ಅವರ್ಗೆ ನಾಮಕರಣಂಗಳನ್ಮಾಡಿ, ಎಲೈ ಪುತ್ರರಿರಾ! ತಪಸ್ಸಿನಿಂ ಪರಾತ್ಪರನಾದ ಪರಮೇಶ್ವರನಂ ಸಂತೋಷವನ್ನೈದಿಸಿ ಸಮಸ್ತ ಲೋಕಸೃಷ್ಟಿಯುಂ ಸಾಮರ್ಥ್ಯವಂ ಪರಮೇಶ್ವರನಿಂ ಪಡೆದು ಶೀಘ್ರವಾಗಿ ಬನ್ನಿ ರೆಂದು ಪೇಳಿ ತಪವನ್ನಾಚರಿಸಲು ಕಳುಹಿಸಿದನು.

ನಾರದೋಪದೇಶದಿಂದ ದಕ್ಷಕುಮಾರರು ತಪೋನಿಷ್ಠರಾಗಿ ಮುಕ್ತರಾಗುವಿಕೆ.

ಬಳಿಕ ಆ ದಕ್ಷಕುಮಾರರು ಮಾನಸ ಸರೋವರಕ್ಕೆ ಪೋಗಿ ಸ್ನಾನಗಳ ನ್ಮಾಡಿ ಇತರರಿನ್ಮಾಡಲಶಕ್ಯವಾದ ತಪವನ್ಮಾಡುತ್ತಿರೆ, ಶ್ರೀಮಂತನಾದ ನಾರ ದನು ಇವರಿರುವ ನಭಸ್ಥಲಕ್ಕೆ ಬಂದನು. ಆ ಸಮಯದಲ್ಲಿ ಆ ದಕ್ಷಪುತ್ರರು ಶ್ರೇಷ್ಠನಾದ ನಾರದಮುನಿಯುಂ ಕಂಡು ನ್ಯಾಯವಂ ದಾಂಟದೆ ನಮಸ್ಕಾರವ ನ್ಮಾಡಿ ಕುಶಲ ಪ್ರಶ್ನೆಗಳಂ ಕೇಳಿ ಅತ್ಯಂತ ಸಂತೋಷಯುಕ್ತರಾಗಿರೆ, ಆ ನಾರದಮುನಿಯು ಎಲೈ ನಿಮ್ಮಿಂದ ಏನು ಕಾರಣ ತಪಸ್ಸು ಮಾಡಲ್ಪಡುತಿದ್ಧೀ ರೆಂದು ಕೇಳಿದನು. ಬಳಿಕ ಆ ದಕ್ಷಪುತ್ರರು ಆ ವಚನವಂ ಕೇಳಿ ಮಹಾದೇವನ

ಪ್ರಸಾದದಿಂ ಸೃಷ್ಟಿಸಾಮರ್ಥ್ಯವುಂಟಾಗಬೇಕೆಂದು ಪೇಳಲಾಗಿ ಆತನು, ಎಲೈ ಪುತ್ರರಿರಾ! ತಪಸ್ಸು ಮಾಡುವ ನಿಮಿಗು ಅತ್ಯಂತ ಅಜ್ಞಾನವುಂಟಾದುದು. ತಪದಿಂದ ಮಹಾದೇವಂಗೆ ಪ್ರೀತಿಯಮ್ಮಾಡಿ ದುಃಖರೂಪವಾದ ಸೃಷ್ಟಿಕರ್ತೃತ್ವವು ಪಾಪರಹಿತರಾದ ನಿಮ್ಮಿಂದ ಮಾಡಲ್ಪಡುತಿದ್ದೀತು. ಪೂರ್ವದಲ್ಲಿ ಇಸಂ ಸೃಷ್ಟಿಸಿದ ನಿಮ್ಮ ತಂದೆಯಾದ ಬ್ರಹ್ಮನ ಅಜ್ಞಾನ ಗೌರವವನ್ನೋಡಿ, ಪರಮೇಶ್ವರನ ಪುತ್ರನಾದ ಗಣೇಶನಿಂ ವಿಧಿಯ ಶಿರಚ್ಛೇದವು ಮಾಡಲ್ಪಟ್ಟುದು. ಮತ್ತೆ ಹಂಸರೂಪಿಯಾದ ಬ್ರಹ್ಮನು ಶಂಕರನಿಂ ಶಪಿಸಲ್ಪಟ್ಟು ಅತ್ಯಂತ ಗರ್ವಿತನಾಗಿ ಬಹು ದುಃಖವನ್ನೈದಿ ಅನೇಕವಾದ ದುಃಖ ಜನ್ಮಗಳನ್ನೆತ್ತಿ ದಿನದಿನದಲ್ಲಿಯು ರಾಕ್ಷಸರಿಂ ಪೀಡಿಸಲ್ಪಡುತಲಿದಾನೆ. ಹೀಗೆ ದುಃಖರೂಪವಾದ ಸುಖರಹಿತವಾದ ಸೃಷ್ಟಿಕರ್ತೃತ್ವವಂ ಬಿಟ್ಟು ತಪದಿಂ ಪರಮೇಶ್ವರನಂ ಸಂತೋಷಗೊಳಿಸಿ ನಿಮು ಪದ್ರುವವಾದ ಮುಕ್ತಿಯಂ ಪಡೆಯಿರೆಂದು ಶಿವಾಶ್ರಯವಾದ ತತ್ವಜ್ಞಾನವನ್ನುಪದೇಶಿಸಿ ತೆರಳಲಾಗಿ, ಆ ವಿಧಿಪುತ್ರರು ಏಕಾಗ್ರಮಾನಸರಾಗಿ ಮುಕ್ತಿಗೋಸುಗ ಪರಮೇಶ್ವರನಂ ಪೂಜಿಸಿ ಪುನರಾವೃತ್ತಿ ರಹಿತವಾದ ಮೋಕ್ಷವಂ ಪಡೆದರೆಂದು ಸೂತಂ ಶೌನಕಾದಿಗಳಿಗೆ ಪೇಳಿದ ನೆಂಬಲ್ಲಿಗೆ,

ದಕ್ಷಕಾಂಡದಲ್ಲಿ ಎರಡನೆಯ ಅಧ್ಯಾಯವು
ಸಮಾಪ್ತವಾದುದು.

ಮೂರನೆಯ ಅಧ್ಯಾಯವು.

ಮರಳಿ ಹುಟ್ಟಿದ ದಕ್ಷಪುತ್ರರು ನಾರದೋಪದೇಶದಿಂದ ತಪಸ್ಸುಮಾಡಿ ಮುಕ್ತರಾಗುವಿಕೆ.

ಕೇಳಿರೈ ಋಷಿಗಳಿರಾ! ಅನಂತರದಲ್ಲಿ ದಕ್ಷನು ಆ ವೃತ್ತಾಂತವಂ ಕೇಳಿ ಖಿನ್ನಮಾನಸನಾಗಿ ಪೂರ್ವದಂತೆ ಮರಳಿ ಸಹಸ್ರ ಪುತ್ರರಂ ಪುಟ್ಟಿಸಿ, ಅವರಿಗೆ ನಾಮಕರ್ಮಾದಿಗಳನ್ನೆಸಗಿ ಪ್ರೀತಿಪೂರ್ವಕವಾಗಿ ಲೋಕಸೃಷ್ಟಿಗೋಸುಗ ಅವರಂ ತಪಸ್ಸಿಗೆ ಕಳುಹಲಾಗಿ, ಅವರು ಮಹತ್ತಾದ ತಪವನ್ಮಾಡಲುದ್ಯೋಗಿಸಿದರು. ಆ ಸಮಯದಲ್ಲಿ ನಾರದನು ಬಂದು ಸೃಷ್ಟಿಕರ್ತೃತ್ವವಂ ನಿಂದಿಸಿ ಮೋಕ್ಷದಲ್ಲಿ ಮತಿಯನ್ನುಂಟುಮಾಡಿ ಗಮಿಸಿದನು. ಬಳಿಕ ಆ ಪುತ್ರರು ದೇವೇಶನಾದ ಪರಮೇಶ್ವರನ ಪ್ರಸನ್ನತೆಯಿಂ ಮೋಕ್ಷವನ್ನೈದಿದರು. ಆನಂತರದಲ್ಲಿ ದಕ್ಷನು ಆ ವೃತ್ತಾಂತವಂ ಕೇಳಿ ಕೋಪಾನ್ವಿತನಾಗಿ ಪುರುಷ ಸೃಷ್ಟಿಯಂ ಬಿಟ್ಟನು.

ದಕ್ಷನು ಪುತ್ರಿಯರನ್ನು ಸೃಷ್ಟಿಸಿ ಋಷಿಗಳಿಗೂ ಚಂದ್ರನಿಗೂ ಕೊಡುವಿಕೆ, ಚಂದ್ರನಿಗೆ ದಕ್ಷಶಾಪ.

ಸುಕುಮಾರಾಂಗಿಯರಾದ ಸರ್ವಲಕ್ಷಣ ಸಂಪನ್ನೆಯರಾದ ಮುವ್ವತ್ತೆರಡು ಕನ್ನಿಕೆಯರಂ ಪುಟ್ಟಿಸಿ, ಭೃಗು ಧರ್ಮ ಮರೀಚಿ ಪುಲಸ್ತ್ಯ ಆಂಗಿರಸ ಪುಲಹ ವಸಿಷ್ಠ ಮುಂತಾದವರಿಗೆ ಕೊಟ್ಟು ಕಲ್ಯಾಣವಂ ಮಾಡಲಾಗಿ, ಆ ಕನ್ನಿಕೆಯರು ಶೋಭನವಾದ ಪುತ್ರರಂ ಕುಮಾರ್ತಿಗಳಂ ಪೆತ್ತರು. ಬಳಿಕ ಆ ದಕ್ಷನು ಪೌತ್ರರಿಂ ಪೌತ್ರಿಯರಿಂ ಸಮನ್ವಿತನಾಗಿ, ಮಹಾ ತೇಜೋವತಿಗಳಾದ ಇಪ್ಪತ್ತೇಳುಮಂದಿ ಕುಮಾರ್ತಿಗಳಂ ಪುಟ್ಟಿಸಿ, ಅನಂತರಂ ಪ್ರೀತಿಕರನಾದ ಚಂದ್ರಂಗೆ ಕೊಟ್ಟವನಾಗಲು, ಚಂದ್ರನು ಆ ಇಪ್ಪತ್ತೇಳು ಕನ್ನಿಕೆಯರ ಮಧ್ಯದಲ್ಲಿ ಕೃತ್ತಿಕೆಯಲ್ಲಿ ಆಸಕ್ತಿಯಂ ಮಾಡಿದನು. ಬಳಿಕ ಆ ಕನ್ನಿಕೆಯರು ದುಃಖ ಪರಂಪರೆಯುಳ್ಳವರಾಗಿ ಪಿತೃವಿನ ಬಳಿಗೈದಿ, ಎಲೈ ಪಿತೃವೆ! ಚಂದಿರನು ಕೃತ್ತಿಕೆಯಲ್ಲಿಯೆ ಪ್ರೀತಿವಂತನಾಗಿ ನಮ್ಮಲ್ಲಿ ರಮಿಸಲಿಲ್ಲೆಂದು ಪೇಳಲಾಗಿ, ಆತನು ತನ್ನ ಕುಮಾರ್ತಿಯರ ವಾಕ್ಯವಂ ಕೇಳಿ ಅತ್ಯಂತ ವ್ಯಾಕುಲನಾಗಿ, ಶ್ರೇಷ್ಠನಾದ ಚಂದ್ರನಂ ನೋಡಿ ಈತನು ಕ್ಷಯಿಸಲೆಂದು ಶಾಪವಂ ಕೊಟ್ಟನಾದ ಕಾರಣ, ಆ ಚಂದ್ರನು ಪಂಚದಶ ತಿಥಿಗಳಲ್ಲಿ ಕ್ಷಯವನ್ನೈದಿ ಕಲಾಮಾತ್ರಾವಶಿಷ್ಠನಾಗಿ ದಕ್ಷಬ್ರಹ್ಮನ ಸಮೀಪಕ್ಕೆ ಪೋಗಿ ಶರಣಾಗತನಾದನು. ಆ ಸಮಯದಲ್ಲಿ ದಕ್ಷನು ಚಂದ್ರನಂ ನೋಡಿ, ಎಲೈ ಚಂದ್ರನೆ! ಪೂರ್ವದಲ್ಲಿ ನೀನು ಶಾಪದಿಂ ಮಹಾ ವಿಷ್ಣು ಮುಂತಾದ ದೇವತೆಗಳಿಂ ಆ ವಿಘ್ನರಾಜನಂ ಪ್ರಸನ್ನತೆಯಂ ಮಾಡಿಕೊಂಡು ಶಾಪರಹಿತನಾದರೆ, ಸಂವತ್ಸರದಲ್ಲಿ ಒಂದು ದಿವಸ ನಿನ್ನ ಮುಖವಂ ನೋಡಲು ಯುಕ್ತವಲ್ಲೆಂಬುವರು. ಸಮಸ್ತರು ಈಗ ನಿನ್ನ ಮುಖವಂ ನೋಡರು, ಈ ದೋಷವಿರುವದು ಅದುಕಾರಣ ನೀನು ಶೀಘ್ರದಲ್ಲಿ ಜಗತ್ಪ್ರಭುವಾದ ಬ್ರಹ್ಮಂಗೆ ಬಿನ್ನವಂಗೈದು ಆತನಿಂ ಈಶಾನನಂ ಕರಸಿಕೊಳ್ಳೆಂದು ಪೇಳಿದನು.

ಚಂದ್ರನಿಗೆ ಪರಮೇಶ್ವರ ಪ್ರಸನ್ನತೆ ಶಾಪ ವಿಮೋಚನೆ.

ಬಳಿಕ ಚಂದ್ರನು ಬ್ರಹ್ಮನ ಬಳಿಗೈದಿ ನಾನಾವಿಧ ಸ್ತೋತ್ರಂಗಳಿಂ ಸ್ತುತಿಸುತ್ತ ನಮಸ್ಕಾರವಂ ಮಾಡಿ ದಕ್ಷಶಾಪವಂ ಪರಿಹರಿಸಬೇಕೆಂದು ಪ್ರಾರ್ಥಿಸಲಾಗಿ, ಕಮಲಾಸನನಾದ ಬ್ರಹ್ಮನು ಆತನ ವಾಕ್ಯವಂ ಕೇಳಿ, ಎಲೈ ಬುದ್ಧಿಮಂತನಾದ ಚಂದ್ರನೆ! ನೀನು ಸದಾಶಿವನಾದ ಮಹೇಶ್ವರನ ಸಮೀಪಕ್ಕೆ ಪೋಗಿ ಈ ವೃತ್ತಾಂತವಂ ಬಿನ್ನಪಂ ಮಾಡು, ಆತನು ಪೂರ್ವದಲ್ಲಿ ಕಾಲಕೂಟ ವಿಷಮಂ ಹರಿಸಿ ಸಮಸ್ತ ದೇವತೆಗಳಂ ರಕ್ಷಿಸಿದನು. ಮಹಾ ಭಯಂಕರನಾದ ಯಮನಂ

ಶಿಕ್ಷಿಸಿ ಮಾರ್ಕಂಡೇಯನಂ ಪಾಲಿಸಿದನು. ಹಾಗೆ ಈಗಲೆ ನಿನ್ನ ಶಾಪವನು ವಿಮೋಚನವಂ ಮಾಡಿಸುವನೆಂದು ಪೇಳಿದನು. ಈ ವಾಕ್ಯವಂ ಕೇಳಿ ಚಂದ್ರನು ಕೈಲಾಸಗಿರಿಗೆ ಪೋಗಿ ನಂದಿಕೇಶ್ವರನ ಮುಖದಿಂ ಮಹಾದೇವನ ಸಮೀಪವ ನೈದಿ, ಅತ್ಯಂತ ಭಕ್ತಿಯಿಂ ಅಂಜಲಿಬಂಧವಂ ಮಾಡಿ ನಾನಾವಿಧ ಸ್ತೋತ್ರಂ ಗಳಿಂ ಸ್ತುತಿಸಲಾಗಿ ಆ ಮಹಾದೇವನು ಪ್ರಸನ್ನನಾದನು. ಅನಂತರದಲ್ಲಿ ಚಂದ್ರನು ತನಗೆ ಶಾಪ ಬಂದ ವೃತ್ತಾಂತವಂ ಪೇಳೆ, ಆಗ ಅಂಬಿಕಾಪತಿಯು ಕಳಾಮಾತ್ರ ಶೇಷವುಳ್ಳ ಆ ಚಂದಿರನಿಗೆ ಅಭಯವನಿತ್ತು ಕ್ಷಣಮಾತ್ರ ಶಿರಸ್ಸಿನಲ್ಲಿ ಧರಿಸಿ, ಚಂದ್ರಚೂಡನಾಗಿ ನನ್ನಾಜ್ಞೆಯಿಂ ಪೂರ್ವದಂತೆ ವೃದ್ಧಿಯನೈದೆಂದು ನಿರೂಪಿಸಿದನು. ಆ ಸಮಯದಲ್ಲಿ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಚಂದ್ರಂಗೆ ವರವನಿತ್ತ ಶಂಭುವಂ ನೋಡಿ ಚಂದ್ರಶೇಖರನಾಗಿ ದಯಾನಿಧಿ ಯಾದ ಪರಮೇಶ್ವರನೆ! ಲೋಕವು ನಿನ್ನ ಮಹಿಮೆಯಂ ತಿಳಿಯಲಾರದು. ಆದುಕಾರಣದಿಂ ನೀನು ಲೋಕ ರಕ್ಷಣಾರ್ಥವಾಗಿ ಈ ಚಂದ್ರಂಗೆ ಮಾಸಮಾಸ ದಲ್ಲಿಯು ಕ್ಷಯ ವೃದ್ಧಿಯುಂಟಾಗಲೆಂದು ಪ್ರಾರ್ಥಿಸಲಾಗಿ, ಭಕ್ತವತ್ಸಲನಾದ ಪರಮೇಶ್ವರನು ಆ ದೇವತೆಗಳ ವಾಕ್ಯವಂ ಕೇಳಿ ಹಾಗೇ ಆಗಲೆಂದು ಪೇಳಿ ಚಂದ್ರನಂ ಕಳುಹಿಸೆ, ಆ ಚಂದ್ರನು ದೇವದೇವೇಶಂಗೆ ನಮಸ್ಕಾರವಂ ಮಾಡಿ ಆ ದೇವದೇವನ ಕೃಪೆಯಂ ಪಡೆದು ಹೃಷ್ಟಮಾನಸನಾಗಿ ತನ್ನ ಸ್ಥಾನವ ನೈದಿದ

ನೆಂದು ಸೂತಂ ಶೌನಕಾದಿ ಮುನಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ದಕ್ಷ ಕಾಂಡದಲ್ಲಿ ಮೂರನೆಯ ಅಧ್ಯಾಯವು ಸಮಾಪ್ತಮಾದುದು.

ನಾಲ್ಕನೆಯ ಅಧ್ಯಾಯವು.

ದಕ್ಷನು ಶಿವದೂಷಣೆಯಂ ಮಾಡುವಿಕೆ.

ಎಲೈ ಮುನಿಗಳಿರಾ! ಅನಂತರದಲ್ಲಿ ದಕ್ಷನು ಆ ಚಂದ್ರನ ಶಾಪವಿಮೋ ಚನವಂ ಕೇಳಿ ಕೋಪಾಕುಲನಾಗಿ ನನ್ನಿಂದ ಶಾಪಗ್ರಸ್ತನಾದ ಈ ಚಂದ್ರನು ಶಂಭುವಿನಿಂ ಹೇಗೆ ಬಿಡಲ್ಪಟ್ಟನೆಂದು ಆ ಶಂಕರಂಗೆ ಅಧಿಕವಾದ ದೂಷಣವಂ ಕಲ್ಪಿಸಿದನು. ಆಗ ತಪಸ್ವಿಗಳೊಳಗುತ್ತಮನಾದ ಪುಲಹನೆಂಬ ಋಷಿಯು ಆ ಶಿವದೂಷಣವಂ ಕೇಳಿ, ಎಲೆ ದಕ್ಷನೆ! ಶಿವದೂಷಣವು ಸರ್ವೈಶ್ವರ್ಯವಿನಾಶ ಕವು. ನೀನು ಸಮಸ್ತ ಜನರಿಗು ದುರಾತ್ಮನೆಂದು ದೂಷಣಾಸ್ಪದವಾಗುವೆ. ಆ ಶಿವನಿಂದ ನಿನ್ನ ಶಾಪಕ್ಕೆ ಗತಿಯು ಪೇಳಲ್ಪಟ್ಟಿತು. ಆ ದೇವನು ನಿನ್ನ ಸುತೆಯಂ ಕಲ್ಯಾಣವಂ ಮಾಡಿಕೊಳ್ಳುವನೆಂದು ಪೇಳಲಾಗಿ ದಕ್ಷನು ಆ ಪುಲಹ ಮುನಿಯ ವಾಕ್ಯವಂ ಕೇಳಿ ಕೋಪವಂ ಬಿಟ್ಟು ಮುದದಿಂ ವಾಸವಂ ಮಾಡುತಿರ್ದನು.

ಭವಾನೀದೇವಿಯ ಗರ್ವದ ನುಡಿಯನ್ನು ಕೇಳಿದ ಶಂಕರನು ಆಕೆಯ ಗರ್ವಭಂಗವಮಾಡುವಿಕೆ.

ಎಲೈ ಮುನಿಗಳಿರಾ! ಹೀಗೆ ದಕ್ಷನಿರಲಾಗಿ, ಆ ದಕ್ಷನಲ್ಲಿ ಅನ್ಯುತೆಯಾದ ಅದ್ಭುತಳಾದ ಗೌರೀದೇವಿಯ ಉತ್ಪತ್ತಿಯಂ ಪೇಳುವೆನು ಕೇಳಿ ಏನಂದರೆ, ಪೂರ್ವದಲ್ಲಿ ಜಗತ್ಪ್ರಕಾಶಕರನಾದ ಮೂರು ದೇವತೆಗಳಿಂ ಸೇವಿಸಲ್ಪಟ್ಟ ಪಾರ್ವತೀಪರಮೇಶ್ವರರು ಕೈಲಾಸಪರ್ವತದತಲ್ಲಿರ್ದರು. ಆ ಸಮಯದಲ್ಲಿ ಈ ಭವಾನಿ ಯೆದ್ದು ಪರಮೇಶ್ವರಂಗೆ ನಮಸ್ಕಾರವಂ ಮಾಡಿ, ಭಗವಂತನಾಗಿ ದೇವ ದೇವೇಶನಾದ ಜಗತ್ಪ್ರಭುವಾಗಿ ಸರ್ವಜ್ಞನಾದ ವಿಶ್ವಾತ್ಮಕನಾಗಿ ವಿಶ್ವ ಸಂರಕ್ಷಣೋದ್ಯುಕ್ತನಾದ ಎಲೈ ಮಹಾದೇವನೆ! ಚರಾಚರವಾದ ಈ ಜಗತ್ತು ನಿಮ್ಮಿಂದ ಹೇಗೆ ಉತ್ಪನ್ನವಾದುದೋ ಪೇಳಬೇಕೆಂದು ಪ್ರಶ್ನೆಯಂಮಾಡಿ ದಳು. ಆಗ ಲೋಕಶಂಕರನಾದ ಪರಮೇಶ್ವರನು ಯಥಾರ್ಥವಾಗಿ ಆಗಮ ಮಾರ್ಗದಿಂ ಜಗತ್ಸೃಷ್ಟಿಯಂ ಸರ್ವಲೋಕ ಸಂಹಾರಮುಂ ಪೇಳಲಾಗಿ, ಮಹೇ ಶ್ವರಿಯು ಆ ವಚನವಂ ಕೇಳಿ ದೇವೇಶನಂ ನೋಡಿ, ಭಗವಂತನಾದ ಸರ್ವೇ ಶ್ವರನಾದ ಸತ್ಯಲಕ್ಷಣನಾದ ಪ್ರಭುವಾದ ಎಲೈ ಈಶನೆ! ನಿಮಗೆ ನಾನೆ ಅದ್ಭುತ ವಾದ ರೂಪವುಳ್ಳ ಶರೀರವು, ನಾನಲ್ಲದೆ ಸುರೂಪವಾಗಿರುವ ಶರೀರವಿಲ್ಲ. ನನ್ನಿಂ ದಲೆ ಈ ಸಮಸ್ತ ಜಗತ್ತು ಸ್ವಭಾವದಿಂ ಚೇಷ್ಟಿಸುತಲಿರುವದೆಂದು ನುಡಿಯೆ, ಮಹೇಶ್ವರನು ಗರ್ವಯುಕ್ತವಾದ ಆ ಪಾರ್ವತೀದೇವಿಯ ವಾಕ್ಯವಂ ಕೇಳಿ ಎಲೆ ಕಲ್ಯಾಣಿಯೆ! ನಮ್ಮ ಮಹಿಮೆಯು ನಿನ್ನಿಂದ ತಿಳಿಯಲ್ಪಡಲಿಲ್ಲ. ನೀನು ನಮ್ಮ ಸಮೀಪದಲ್ಲಿರ್ದು ಲಜ್ಜೆಯಂ ಬಿಟ್ಟು ನಾನೆ ಉತ್ತಮಳೆಂದು ಆತ್ಮ ಸ್ತುತಿಯಂ ಮಾಡಿಕೊಂಡೆ, ನಾನು ನಿನ್ನಲ್ಲಿಯು ಯೆಲ್ಲ ಕಡೆಯಲ್ಲಿಯು ಅವಾ ಗಲು ಪರಿಪೂರ್ಣನಾಗಿ ಪರಂಜ್ಯೋತಿಯಾಗಿ ಪರಮಾತ್ಮನಾಗಿರ್ದು, ಪ್ರಥಮದಿಂ ಸೂತ್ರಧಾರಕ ನಾಡಿಸುವಂತೆ ಈ ಜಗತ್ತನ್ನು ಪ್ರೇರಿಸುತಲಿದೇನೆ. ನನ್ನ ಪ್ರೇರಣೆ ಇಲ್ಲದಿರ್ದರೆ ಈ ಜಗತ್ತು ಜಡವಾಗಿ ಚೇಷ್ಟಾರಹಿತವಾಗಿರುವದು. ನಮ್ಮ ಪರತತ್ವವಂ ನೋಡೆಂದು ಪೇಳ್ದು, ಸಚ್ಚಿದಾನಂದ ವಿಗ್ರಹನಾದ ವಿಶ್ವಾ ತ್ಮಕನಾದ ಸರ್ವೇಶ್ವರನಾದ ಶಿವನು ಸರ್ವನಿಯಾಮಕವಾದ ತನ್ನ ಶಕ್ತಿಯಂ ತನ್ನಲ್ಲಿ ಉಪಸಂಹಾರವಂ ಮಾಡಿಕೊಂಡು ಪರಂಜ್ಯೋತಿಯಾಗಿ ಪಾರ್ವತೀ ದೇವಿಯು ಮುಂದೆ ನಿಲ್ಲಲಾಗಿ, ಈ ಸಮಸ್ತ ಜಗತ್ತು ವಿರೂಪವಾಗಿ ನಿಷ್ಕ್ರಿಯೆ ಯಾಗಿ ಅಹೋರಾತ್ರಿಗಳಿಲ್ಲದೆ ಭಾನುಚಂದ್ರಾಗ್ನಿ ದೀಪ್ತಿದೇವತೆಗಳಿಲ್ಲದೆ ಜಡಾಕಾರವಾಗಿ ಭೀಷಣವಾಗಿ ಕೇವಲ ತಮೋಭೂತವಾಗಿ ಅಂಧಕಾರ ವಾಗಿರ್ದುದು.

ಶ್ಲೋ|| ದೃಷ್ಟ್ವೈತದದ್ಭುತಮುಸಾಗಿರಿರಾಜಪುತ್ರೀ |
ಭೀತಾಭೃಶಂಭವಮಶೇಷಗುರುಂಪ್ರಣಮ್ಯ ||
ತುಷ್ಟಾವಗೀರ್ಭಿರತುಲಾಭಿರನನ್ಯಭಾವಾ |
ಕೃತ್ವಾಂಜಲಿಂಕರಯುಗಂಶಿರಸಿದ್ವಿಜೇಂದ್ರಾಃ ||

ತಾ|| ಎಲೈ ಬ್ರಾಹ್ಮಣ ಶ್ರೇಷ್ಠರುಗಳಿರಾ! ಈ ಪಾರ್ವತೀದೇವಿಯು ಆಶ್ಚರ್ಯಕರವಾದ ಈ ಶಂಭುವಿನ ಮಹಿಮೆಯಂ ನೋಡಿ, ಅತ್ಯಂತ ಭೀತೆಯಾಗಿ ಸರ್ವ ಗುರುವಾದ ಪರಮೇಶ್ವರನಂ ಕುರಿತು ವಂದನೆಯಂ ಗೈದು ಬೇರೊಂದನ್ನು ಮನಸ್ಸಿನಲ್ಲಿ ಯೋಚಿಸದವಳಾಗಿ ಮಸ್ತಕದಲ್ಲಿ ಹಸ್ತಯುಗ್ಮವನ್ನಿರಿಸಿ ಅಂಜಲಿಬಂಧನವಂ ಮಾಡಿ ಅಸದೃಶವಾದ ವಾಕ್ಕುಗಳಿಂದ ಸ್ತುತಿಸಿದ ಳೆಂದು ಸೂತಂ ಶೌನಕಾದಿ ಮುನಿಗಳಿಗೆ ಪೇಳಿದ ನೆಂಬಲ್ಲಿಗೆ, ದಕ್ಷಕಾಂಡದಲ್ಲಿ ನಾಲ್ಕನೆಯ ಅಧ್ಯಾಯವು ಸಮಾಪ್ತಮಾದುದು.

ಐದನೆಯ ಅಧ್ಯಾಯವು.

ಭಗವಂತನಾದ ಈಶ್ವರನನ್ನು ಭಗವತಿಯು ಸ್ತುತಿಸುವಿಕೆ.

ಎಲೈ ಮುನಿಗಳಿರಾ! ಅನಂತರದಲ್ಲಿ ಶಂಕರಿಯು ದೇವದೇವನಂ ನೋಡಿ, ಮಹಾದೇವನಾಗಿ ಭಕ್ತವತ್ಸಲನಾದ ಎಲೈ ಶಂಭುವೆ! ಜಯಜಯ, ಭೋಸ್ವಾಮಿನ್! ನಿಮ್ಮ ಮಹಿಮೆಯು ನನ್ನಿಂದ ತಿಳಿಯಲ್ಪಡಲಿಲ್ಲ. ನಾಂಮಾಡಿದಪರಾಧವಂ ಕ್ಷಮಿಸಿ ನನ್ನಂ ರಕ್ಷಿಸು. ಈ ಲೋಕಂಗಳಂ ಪೂರ್ವದಂತೆ ಮಾಡು. ನಿಮಗಶಕ್ಯವೇನಿರುವದು? ಎಂದು ಪ್ರಾರ್ಥಿಸಲಾಗಿ, ಪರಮೇಶ್ವರನು ಪ್ರಸನ್ನ ಹೃದಯನಾಗೆ, ಪ್ರಥಮದಲ್ಲಿ ಏಕಾದಶರುದ್ರರು ನಿದ್ರೆತಿಳಿವೆದ್ದವರಂತೆ ವಿಜ್ಞಾನದಿಂ ಸಂಭ್ರಮದಿಂ ತಿಳಿದೆದ್ದು ಶಿವನಂ ಹೃದಯದಲ್ಲಿ ಧ್ಯಾನಿಸಿ, ಈ ವೃತ್ತಾಂತಮಂ ತಿಳಿದು ಶಿವಲೀಲೆಯೆಂದರಿತು, ಸಮಸ್ತ ಪ್ರಾಣಿಗಳಂ ಜ್ಞಾನವಂತರಂ ಮಾಡಬೇಕೆಂದು ನಿಶ್ಚಯಿಸಿ, ಅಂಧಕಾರಮಯವಾದ ಈ ಲೋಕದಲ್ಲಿ ಮಹಾ ಕ್ಷೇತ್ರವಾದ, ಮಧ್ಯಾರ್ಜುನಕ್ಕೆ ಪೋಗಿ ಪ್ರಸನ್ನಹೃದಯರಾಗಿ ರಾತ್ರಿ ನಾಲ್ಕು ಯಾಮಗಳಲ್ಲಿಯು ಶಿವರಾತ್ರಿಯ ಭಾವದಿಂ ಶಿವಪೂಜೆಯಂ ಮಾಡಿದರು.

ಬಳಿಕ ಮಹೇಶ್ವರನು ಅವರ ಮುಂದೆ ಪ್ರಾದುರ್ಭವಿಸಲಾಗಿ ಅಂಜಲಿಬಂಧವನ್ನೆಸಗಿ ದಂಡಾಕಾರದಿಂ ನಮಸ್ಕಾರವಂ ಮಾಡಿ, ವಿಶ್ವರೂಪನಾಗಿ ವಿಶ್ವಸೃಷ್ಟಿಕರ್ತನಾದ ಸಂಹಾರಕನಾಗಿ ಸರ್ವತಂತ್ರ ಸ್ವತಂತ್ರನಾದ ಶೂಲಿಯಾಗಿ ಶೂರನಾದ, ಎಲೈ ಸ್ವಾಮಿಯೆ! ನಿನಗೆ ನಮಸ್ಕಾರವು. ಕ್ಷಯರಹಿತನಾದ

ಮೇರುವೇ ಧನುವಾಗುಳ್ಳ ಎಲೈ ಮಹಾದೇವನೆ! ಚರಾಚರಾತ್ಮಕವಾದ ಈ ಜಗತ್ತು ನಿನ್ನ ಪ್ರಸಾದದಿಂದ ಪೂರ್ವದಂತೆ ಜ್ಞಾನವುಳ್ಳದ್ದಾಗೇಳಬೇಕೆಂದು ಪ್ರಾರ್ಥಿಸಲಾಗಿ ಮಹಾದೇವನು ಹಾಗೇ ಆಗಲೆಂದು ಪ್ರಸನ್ನನಾಗಿ ಪೇಳ್ದು ಅಂತರ್ಧಾನವಾದನು. ಅನಂತರದಲ್ಲಿ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಶಿವಾಜ್ಞೆಯಿಂ ತಮ್ಮ ತಮ್ಮ ಬುದ್ಧಿಗಳಂ ಪಡೆದು ಸಮಸ್ತ ಜೀವಗಳೊಡನೆ ಶೀಘ್ರದಿಂದೆದ್ದರು. ಆದಿತ್ಯ ಚಂದ್ರ ಮುಂತಾದವರಿಂ ಗಾಢಾಂಧಕಾರವು ಪೋಗಿ ದಶದಿಕ್ಕುಗಳು ಪ್ರಕಾಶಿಸಿದವು. ಬಳಿಕ ಸಕಲ ದೇವತೆಗಳು ದೇವದೇವನಾದ ಶೂಲಿಯ ಮಹಾತ್ಮ್ಯವಂ ತಿಳಿದು ಪಾವನನಾದ ಆ ಶಿವನಂ ಪರಿಪೂಜಿಸಿದರು.

ದೇವಗಣ ಏಕಾದಶ ರುದ್ರರಿಗೆ ವರಪ್ರದಾನ.

ಬಳಿಕ ಮಹಾದೇವನು ಅಂತರ್ಧಾನವಾಗುವ ಸಮಯದಲ್ಲಿ ಆ ಏಕಾದಶ ರುದ್ರರಂ ನೋಡಿ ನಿಮಗೇನು ಹಿತವೋ ಅದಂ ಕೊಡುವೆನು ಕೇಳುವವರಾಗೆಂದು ಪೇಳಲಾಗಿ, ಆ ರುದ್ರರು ಎಲೈ ಭಗವಂತನೆ! ಆವ ನರಶ್ರೇಷ್ಠರು ನಿಮ್ಮ ಪ್ರಸಾದದಿಂದ ಆವಾಗಲು ನಿಶಿಯಲ್ಲಿ ಭಗವಂತನಾದ ಮಹೇಶ್ವರನಾದ ನಿನ್ನನ್ನು ಅರ್ಚಿಸುವರೋ, ಅವರಿಗೆ ಶಿವರಾತ್ರಿಯಲ್ಲಿ ಅರ್ಚಿಸಿದ ಫಲವುಂಟಾಗಬೇಕೆಂದು ಪ್ರಾರ್ಥಿಸಿದರು. ಬಳಿಕ ಮಹಾದೇವನು ಹಾಗೇ ಆಗಲೆಂದು ಪೇಳಿ ಅಂತರ್ಧಾನವಾದ ಬಳಿಕ ರುದ್ರರು ತಮ್ಮ ತಮ್ಮ ಸ್ಥಾನಗಳನ್ನೈದಿದರು.

ಆ ಬಳಿಕ ವಿಷ್ಣು ಮುಂತಾದ ದೇವತೆಗಳು ಕೈಲಾಸ ಪರ್ವತವನ್ನೈದಿ ಮಹಾದೇವನಂ ಕಂಡು ಪರಮಭಕ್ತಿಯಿಂ ವಂದಿಸಿ, ಭೂತಗಣಾಧೀಶ್ವರರಿಂ ಸೇವಿಸಲ್ಪಟ್ಟ ಎಲೈ ಭಗವಂತನೆ! ಇದುವರಿವಿಗು ನಾವೆಲ್ಲರು ಅಂಧಕಾರಾವೃತರಾಗಿ ಕ್ರಿಯೆಗಳಂ ಬಿಟ್ಟಿದ್ದೆವು. ಅದುಕಾರಣ ನಮಗೆ ಸರ್ವಪಾಪಪರಿಹಾರಕವಾದ ಪ್ರಾಯಶ್ಚಿತ್ತವಂ ನಿರೂಪಿಸೆಂದು ಕೇಳಲಾಗಿ, ಭಗವಂತನು ಆ ವಚನವಂ ಕೇಳ್ದು ನಗೆಯುಕ್ತವಾದ ಮುಖಾರವಿಂದವುಳ್ಳವನಾಗಿ ಎಲೈ ದೇವತೆಗಳಿರಾ! ನಮ್ಮಾಜ್ಞೆಯಿಂದ ನಿಮಗೆ ಪಾಪವಿಲ್ಲವು. ಈ ಗೌರೀಗರ್ವದಿಂದೆಲ್ಲವು ಮಾಡಲ್ಪಟ್ಟಿತು. ಇಂದು ಮೊದಲಾಗಿ, ನೀವು ನಿತ್ಯಕರ್ಮಗಳಂ ಮಾಡಿಕೊಂಡಿರ್ಪುದೆಂದು ಪೇಳ್ದು ಅವರನ್ನೆಲ್ಲರಂ ಕಳುಹಲಾಗಿ, ಆ ವಿಷ್ಣ್ವಾದಿ ದೇವತೆಗಳು ತಮ್ಮ ತಮ್ಮ ಸ್ಥಾನಗಳನ್ನೈದಿ ಶಿವಾಜ್ಞಾಪರವರ್ತಿಗಳಾಗಿ ಸಾರ್ವಕಾಲವು ಕರ್ಮಗಳನ್ನು ಮಾಡುತಿರ್ದರು.

ಗೌರೀದೇವಿಯು ತಪೋವನ ಪ್ರಯಾಣ.

ಬಳಿಕ ಗೌರೀದೇವಿಯು ಸಂಭ್ರಮದಿಂದೆದ್ದು ಅಂಜಲಿಬಂಧವಂ ಮಾಡಿ, ತಲೆವಾಗಿ, ಎಲೈ ಮಹಾದೇವನೆ! ನಾನು ಮಾಡಿದ ಅಪರಾಧಕ್ಕೆ ಪ್ರಾಯಶ್ಚಿತ್ತ

ವೇನೆಂದು ಕೇಳಲಾಗಿ, ಚಿತ್ರಚರಿತ್ರೆಯುಳ್ಳ ಮಹಾದೇವಿಯು ವಾಕ್ಯವಂ ಕೇಳಿ, ಮಂದಸ್ಮಿತ ಯುಕ್ತವಾದ ಮುಖಾರವಿಂದವುಳ್ಳವನಾಗಿ ಇಂತೆಂದನು. ಎಲೆ ದೇವಿಯೆ! ನೀನು ನನ್ನ ಸಮೀಪದಲ್ಲಿರ್ದು ಔನ್ನತ್ಯವಂ ಪೇಳಿದೆಯಲ್ಲವೆ? ಆ ದೋಷದಿಂದೀಲೋಕವು ಅಂಧಕಾರಾವೃತಮಾದುದು. ಆ ಪಾಪಪರಿಹಾರ ಕ್ಕೋಸುಗ ಪ್ರಾಯಶ್ಚಿತ್ತವಂ ಮಾಡಿತು. ನೀನು ಸಮಸ್ತ ಜಗತ್ತಿಗು ಜನ ನಿಯು ಎಂದು ನಿರೂಪಿಸಲಾಗಿ, ದೇವಿಯು ಆ ವಾಕ್ಯವಂ ಕೇಳಿ ಹಾಗೆ ಆಗ ಲೆಂದು ಶಿವಾಜ್ಞೆಯನ್ನಂಗೀಕರಿಸಿ, ಆವ ಸ್ಥಳದಲ್ಲಿ ತಪವಂ ಮಾಡಬೇಕೋ ಪೇಳೆಂದು ಪ್ರಾರ್ಥಿಸಿದ ಬಳಿಕ, ಮಹಾದೇವನು, ಎಲೆ ಶಿವೆಯೆ! ಲೋಕದಲ್ಲಿ ಪುಣ್ಯಕರವಾದ ಮಹಾ ಪ್ರಸಿದ್ಧವಾದ ಕಾಳಿಂದಿಯೆಂಬ ನದಿಯಿರುವದು. ಆ ಯಮುನಾನದಿಯ ಸಂಬಂಧವಾದ ಶುಭ್ರವಾದ ಪತ್ರಗಳುಳ್ಳ ಪದ್ಮವನದಲ್ಲಿ ಶಂಖಾಕೃತಿಯಾಗಿ ತಪವಂ ಮಾಡು. ಆಗ ದಕ್ಷಬ್ರಹ್ಮನು ನಿನ್ನ ಸಮೀಪಕ್ಕೆ ಬಂದು ಶಂಖಾಕಾರವಾದ ನಿನ್ನನ್ನು ತೆಗೆದುಕೊಂಡು ಪೋಗುವನು. ಆಗ ನೀನು ಕನ್ಯಾಕಾರವಂ ತೋರಿಸು. ಆ ದಕ್ಷನು ಸರ್ವಾವಯವ ಸೌಂದರ್ಯವುಳ್ಳ ಕನ್ನಿಕೆ ಯಾದ ನಿನ್ನನ್ನು ಪಡೆದು ಸಂತೋಷದಿಂ ಪೋಷಿಸುತ್ತಿಧಾನೆ. ನಮ್ಮಿರ್ವರಿಗು ದ್ವಾದಶಾಬ್ದಾನಂತರದಲ್ಲಿ ಕ್ರಮದಿಂ ವಿವಾಹವುಂಟಾದೀತೆಂದು ನಿರೂಪಿಸಿ ಆ ಪಾರ್ವತೀದೇವಿಯಂ ಕಳುಹಿಸಿದನು.

ಅನಂತರದಲ್ಲಿ ಪಾರ್ವತೀದೇವಿಯು ಹಾಗೆ ಆಗಲೆಂದು ಶಂಖಾಕಾರವಾದ ರೂಪವಂ ಧರಿಸಿ ಪರಮೇಶ್ವರನನ್ನು ಹೃದಯದಲ್ಲಿ ಧ್ಯಾನಿಸುತ ಏಕಾಗ್ರಮನ ಸ್ಸಿನಿಂ ತಪವಂ ಮಾಡುತಿರಲಾಗಿ, ಆ ಸಮಯದಲ್ಲಿ ದಕ್ಷನು ಸೂರ್ಯನು ಮಕರ ರಾಶಿಯಲ್ಲಿರುವಾಗ ಇಂದ್ರನು ವಿಶಾನಕ್ಷತ್ರದಲ್ಲಿರೆ, ಸಮಸ್ತರಾದ ತನ್ನ ಪುತ್ರರು ಗಳಿಂದಲು ಋಷಿಗಳಿಂದಲು ಒಡಗೂಡಿ ಯಮುನಾನದಿಯಲ್ಲಿ ಸ್ನಾನವಂ ಮಾಡಿ, ಮುಂದುಗಡೆಯಲ್ಲಿ ಪದ್ಮದ ಮೇಲೆ ಶಂಖವಂ ಕಂಡು ಆದರದಿಂ ಶೀಘ್ರವಾಗಿ ಆ ಶಂಖವಂ ತೆಗೆದುಕೊಂಡನು. ಆಗ ಅದ್ಭುತವಾದ ಆ ಶಂಖವು ಆತನ ಕರಸ್ಪರ್ಶದಿಂದ ಶಂಖಾಕಾರವಂ ಬಿಟ್ಟು ಸರ್ವಾವಯವ ಸೌಂದರ್ಯವತಿಯಾದ ವಿಶಾಲಾಕ್ಷಿಯಾದ ಕನ್ಯಕಾರೂಪವಂ ತೋರಿಸಿತು. ಬಳಿಕ ದಕ್ಷನು ಶಿಶುರೂಪ ವಾದ ಕನ್ಯಕಾರೂಪವಂ ಕಂಡು ಗೌರಿದೇವಿಯೆಂದು ತಿಳಿದು ಸ್ಮಿತವದನನಾಗಿ, ಆ ಕುಮಾರತಿಯನ್ನು ಸ್ನಾನವಂ ಮಾಡಿದ ತನ್ನ ಸ್ತ್ರೀಯ ಹಸ್ತದಲ್ಲಿಡೆ ಆ ವೇದವಲ್ಲಿಯೆಂಬ ದಕ್ಷಸ್ತ್ರೀಯು ಸಂತೋಷಯುಕ್ತೆಯಾಗಿ ಆ ಶಿಶುವನ್ನು ಗಂಡ ಸ್ಥಲದಲ್ಲಿ ಆಘ್ರಾಣಂಗೈದು, ಅಮೃತಮಯವಾದ ಸ್ತನ್ಯವಂ ಕೊಟ್ಟು ತನ್ನ ಸಖಿಯರಿಂದಲು ಕುಮಾರತಿಯರಿಂದಲು ಯುಕ್ತೆಯಾಗಿ ತನ್ನ ಗೃಹವನ್ನು

ಪ್ರವೇಶಿಸಿದಳೆಂದು ಸೂತಂ ಶೌನಕಾದಿ ಮುನಿಗಳಿಗೆ ಪೇಳಿದ ನೆಂಬಲ್ಲಿಗೆ,
ದಕ್ಷಕಾಂಡದಲ್ಲಿ ಐದನೆಯ ಅಧ್ಯಾಯವು
ಸಮಾಪ್ತಮಾದುದು.

ಆರನೆಯ ಅಧ್ಯಾಯವು.

ಗೌರಿದೇವಿಗೆ ಪರಶಿವನ ಪ್ರಸನ್ನತೆ-ವರಪ್ರದಾನ.

ಎಲೈ ಮುನಿಗಳಿರಾ! ಅನಂತರದಲ್ಲಿ ದಕ್ಷನು ನಿಯಮಂಗಳಂ ಸಮಾಪನೆಯಂ ಮಾಡಿ ದೇವತೆಗಳಿಂದಲು ಋಷಿಗಳಿಂದಲು ಆಪ್ಯತನಾಗಿ ಸಂತೋಷದಿಂ ತನ್ನ ಗೃಹಕೆ ಬಂದನು. ಆ ಗೌರೀದೇವಿಯು ಮಾತಾಪಿತೃಗಳಿಗೆ ಪ್ರೀತಿಯಂ ಮಾಡುತ್ತ ಕಾಲಾನು ಕ್ರಮದಿಂ ವೃದ್ಧಿಯನ್ನೈದಿ ಪಂಚವರ್ಷಂಗಳು ಕಳೆದ ಬಳಿಕ ಪರಮೇಶ್ವರನಾದ ಶಿವನ ಪಾಣಿಗ್ರಹಣವ ನಿಚ್ಛೈಸಿ, ತನಗೆ ಅನುಕೂಲರಾದ ಆ ಮಾತಾಪಿತೃಗಳಂ ತಪೋಗೃಹವಾಗಬೇಕೆಂದು ಕೇಳಲಾಗಿ, ಅವರು ಉತ್ತಮವಾದ ತಪೋಮಂದಿರವನ್ನು ನಿರ್ಮಾಣವಂ ಮಾಡಿ, ಅನೇಕ ಸಖಿಯರಂ ಮತ್ತೆ ರಕ್ಷಿಸುವದಕ್ಕೆ ಅರ್ಹಳಾದ ವೃದ್ಧಸ್ತ್ರೀಯಂ ಆ ತಪೋಮಂದಿರದಲ್ಲಿರಿಸಿ ಆ ಗೌರಿಯಂ ತಪೋಗೃಹಕ್ಕೆ ಕಳುಹಿದನು. ಆಗ ತಪಸ್ವಿಗಳೊಳಗೆ ಶ್ರೇಷ್ಠರಾದ ಋಷಿಗಳಿಂದನುಜ್ಞಾತೆಯಾಗಿ ಅಲ್ಲಿದ್ದು ಮಹತ್ತಾದ ತಪಸ್ಸಂ ಮಾಡಿದಳು ಆ ಸಮಯದಲ್ಲಿ ದಕ್ಷಂಗೆ ಧರ್ಮಪತ್ನಿಯಾದ ವೇದವಲ್ಲಿಯು ಈಕೆಗೆ ತಪವಂ ಮಾಡುವ ಬುದ್ಧಿಯು ಹೇಗೆ ಪುಟ್ಟಿತೆಂದು ಪತಿಯಂ ಕೇಳಲಾಗಿ, ಆ ದಕ್ಷನು ಶುಚಿಸ್ಮಿತೆಯಾದ ಗೌರಿದೇವಿಯು ಸಾಕ್ಷಾಚ್ಛಂಕರನ ವಲ್ಲಭೆಯು. ಈ ಜಗತ್ತಿಗೆ ತಾಯಿಯು. ನಮ್ಮ ತಪೋಮಹಿಮೆಯಿಂದ ನಮಗೆ ಪುತ್ರಿಯಾದಳು, ಎಲೈ ಅನಿಂದಿತೆಯೆ! ನಾನೀಗ ಪರಮ ಧನ್ಯನಾದೆನು, ನೀನು ಧನ್ಯೆಯಾದೆಯೆಂದು ಪೇಳಿದನು. ಆಕೆಯು ಆ ವಾಕ್ಯವಂ ಕೇಳಿ ಪ್ರಸನ್ನ ಚಿತ್ತವುಳ್ಳವಳಾಗಿ ಕೃತಾರ್ಥೆಯಾದೆನೆಂದು ನಿಶ್ಚಯಿಸಿ ಅಲ್ಲಿರುತಿರ್ದಳು.

ಆ ಸಮಯದಲ್ಲಿ ಶಿವನು ದ್ವಾದಶಾಬ್ದಪರ್ಯಂತರ ತನ್ನ ಐಕ್ಯವನ್ನು ಮನಸ್ಸಿನಲ್ಲಿರಿಸಿ ತಪವನ್ನು ಮಾಡುತಿರುವದನ್ನು ತಿಳಿದು ಬ್ರಾಹ್ಮಣಾಕಾರವಂ ಧರಿಸಿ ಗೌರಿದೇವಿಯ ತಪೋದ್ವಾರಕ್ಕೆ ಬಂದು, ಆಕೆಗೆ ತನ್ನ ಆಗಮನವನ್ನು ಹೇಳಿಕಳುಹಲಾಗಿ, ಆ ಗೌರಿದೇವಿಯು ಶೀಘ್ರದಿಂದೆದ್ದು ಶಿವಭಕ್ತನು ಬಂದನೆಂದರಿತು ತನ್ನ ಗೃಹದಿಂ ಪೊರಮಟ್ಟು ಆದರದಿಂದಾಬ್ರಾಹ್ಮಣನಂ ನೋಡಿ ನಮಸ್ಕರಿಸಿ ಮನೆಯೊಳಕ್ಕೆ ಕರದುಕೊಂಡು ಪೋಗಿ ಅಲ್ಲಿ ಆಸನವನಿತ್ತು ಅರ್ಘ್ಯಪಾದ್ಯ ಮುಂತಾದ ಉಪಚಾರಂಗಳಂ ಮಾಡಿ ಮಹಾಭಕ್ತಿಯಿಂ ಎಲೈ ಭಗವಂ

ತನೆ! ನಿನಗೆ ಅಪೇಕ್ಷೆಯೇನಿರುವುದೆಂದು ಪೇಳಿದಳು. ಬಳಿಕ ಆ ಬ್ರಾಹ್ಮಣನು ಹೀಗೆ ಪೇಳುತಲಿರುವ ಆ ದೇವಿಯಂ ನೋಡಿ ಎಲೆ ಕಲ್ಯಾಣಿಯೆ, ನಿನ್ನ ಪಾಣಿ ಗ್ರಹಣವಂ ಮಾಡಬೇಕೆಂದು ಆಶೆಯಿರುವದು ನೀನು ಪ್ರಸನ್ನೆಯಾದರೆ ಅದಂ ಮಾಡು, ನಾನು ಕೃತಾರ್ಥನಾದೇನೆಂದು ಪೇಳೆ, ದೇವಿಯು ಆ ವಾಕ್ಯವಂ ಕೇಳಿ, ಖಿನ್ನ ಮನಸ್ಸುಳ್ಳವಳಾಗಿ, ತನ್ನ ಶ್ರೋತ್ರಂಗಳಂ ಕರಗಳಿಂ ಮುಚ್ಚಿ ಕೋಪ ಯುಕ್ತೆಯಾಗಿ, ಎಲೆ ಮೂರ್ಖನೆ! ಪರಮಾತ್ಮನಾದ ಶಿವಂಗೆ ಧರ್ಮಪತ್ನೀತ್ವ ಮಂ ಇಚ್ಛೈಸಿದ ನನ್ನ ಮುಂದೆ ಭಯವಂ ಬಿಟ್ಟು ಈ ಮಾತನ್ಯಾಕೆ ನುಡಿಯುವೆ? ನಾನು ಪರಾತ್ಪರನಾದ ಮಹಾದೇವನಲ್ಲದೆ ಇತರರಂ ಕಾಂಕ್ಷಿಸೆನೆಂದು ಪೇಳಲಾಗಿ, ಆ ಬ್ರಾಹ್ಮಣೋತ್ತಮನು ಕೋಪಯುಕ್ತೆಯಾದ ಆಕೆಯ ವಾಕ್ಯವಂ ಕೇಳಿಂತೆಂದನು.

ಎಲೆ ಕನ್ನಿಕೆಯೆ! ಆ ದೇವನು ಸುಲಭದಿಂ ಪ್ರಸನ್ನನಾಗನೆಂದು ಪೇಳ ಲಾಗಿ, ದೇವಿಯದಂ ಕೇಳಿ ಎಲೈ, ಬ್ರಾಹ್ಮಣನೆ! ನಾನು ತೀವ್ರಮಾದ ತಪಸ್ಸನ್ನು ಮಾಡುತಿರಲಾಗಿ ಆ ದೇವನು ಪ್ರಸನ್ನನಾಗದೆ ಪೋದನಾದೊಡೆ ಪ್ರಾಣಂಗಳಂ ಬಿಡುವೆನು. ನೀನು ಬಂದ ಮಾರ್ಗವಿಡಿದು ಶೀಘ್ರದಿಂ ಪೋಗೆಂದು ಪೇಳ್ದು, ಆತನೊಡನೆ ಸಂಭಾಷಣೆಯಂ ಬಿಟ್ಟು ಮುಖವನ್ನು ಹಿಂತಿರಿಗಿಸಿದಳು. ಆ ಸಮಯ ದಲ್ಲಿ ಭಗವಂತನಾದ ಪರಮೇಶ್ವರನು ಅದ್ಭುತವಾದ ಮನೋಹರವಾದ ತನ್ನ ನಿಜರೂಪವನ್ನೀಕೆಗೆ ತೋರಿಸೆ, ಆಗ ಗೌರಿದೇವಿಯು ಆ ಪರಮೇಶ್ವರನಂ ಕಂಡು ಅತ್ಯಂತ ಭಕ್ತಿಯಿಂ ನಮಸ್ಕರಿಸಿ ಶೀಘ್ರದಿಂ ದಂಜಲಿಬಂಧವಂ ಮಾಡಿ ಭಯಯುಕ್ತೆಯಾಗಿ ಆತನಂ ಸ್ತೋತ್ರಂಗಳಿಂ ಸ್ತುತಿಸಿ, ದೇವದೇವನಾದ ಕೃಪಾನಿಧಿಯಾದ ಮಹಾ ಪ್ರಭುವಾದ ಎಲೈ ಮಹಾದೇವನೆ! ನಾನು ಮಾಡಿದ ಅಪರಾಧವಂ ಕ್ಷಮಿಸಿ ರಕ್ಷಿಸು ರಕ್ಷಿಸೆಂದು ಪ್ರಾರ್ಥಿಸಿದಳು. ಅನಂತರದಲ್ಲಿ ಮಹಾದೇವನು ಎಲೆ ದಕ್ಷಕನ್ನಿಕೆಯೆ! ನಿನಗೆ ಭಯವುಬೇಡ, ನಿನ್ನ ಸಂಬಂಧ ವಾದ ಮಹಾ ತಪಸ್ಸಿನಿಂ ಸಂತುಷ್ಟನಾದೆನೆಂದು ಪೇಳೆ, ದೇವಿಯದಂ ಕೇಳಿ ಅಡಿಗಡಿಗೆ ವಂದಿಸಿ ಆನಂದಬಾಷ್ಪ ನಯನೆಯಾಗಿ ಆ ಸ್ವಾಮಿಯ ಮುಂದೆ ನಿಂತಿರ್ದಳು. ಬಳಿಕ ಅಂಬಿಕೆಯ ಪರಿಚಾರಕ ಜನವು ಶೀಘ್ರದಿಂ ದಕ್ಷನ ಸಮೀಪಕ್ಕೆ ಬಂದು ಆ ಬ್ರಾಹ್ಮಣನ ಆಗಮನವಂ ಪೇಳಲಾಗಿ ದಕ್ಷನು ಆತನೇ ಶಂಭುವೆಂದು ತಿಳಿದು ಆ ಮಹೇಶ್ವರಂಗೆ ತನ್ನ ಕುಮಾರ್ತಿಯಂ ಕೊಟ್ಟು ಕಲ್ಯಾಣವಂ ಮಾಡಬೇಕೆಂದು ಮನದಿಂ ನಿಶ್ಚಯಿಸಿ, ಅನೇಕ ವಿಧವಾದ ಪದಾ ರ್ಥಂಗಳಂ ಸಂಪಾದಿಸಿ ದೇವತೆಗಳಂ ಋಷಿಗಳಂ ಸಿದ್ಧಸಾಧ್ಯರುಗಳಂ ಕರೆಯಿಸಿ ಕಲ್ಯಾಣಕ್ಕೋಸುಗ ಗೃಹಂಗಳಂ ರಮ್ಯಂಗಳಂ ಮಾಡಿಸಿ, ಅಲ್ಲಲ್ಲಿ ಮನೋಹರಂ

ಗಳಾದ ರಂಭಾಸ್ತಂಭಂಗಳಂ ನಾಟಿಸಿ, ಅನೇಕ ಚೂತಪತ್ರಂಗಳಂ ರಜ್ಜುಗಳಿಂ ತೋರಣಂಗಳಾಗಿ ಮಾಡಿಸಿ ತಾನು ಗೃಹದಿಂ ಪೊರಮಟ್ಟು ಆ ದೇವಿಯ ಗೃಹಕ್ಕೆ ಪೋಗಿ ಬ್ರಾಹ್ಮಣಾಕಾರನಾದ ಶಿವಂಗೆ ಪ್ರಣಾಮವಂ ಮಾಡಿ ಪ್ರಸನ್ನ ಹೃದಯ ನಾಗಿ ತನ್ನ ಕುಮಾರ್ತಿಯೊಡನೆ ಆ ವಿಪ್ರನಂ ಕಲ್ಯಾಣಕ್ಕೋಸುಗಂ ನಾನಾ ಪುಷ್ಪಗಳಿಂದಲಂಕೃತವಾದ, ಅನೇಕ ಧ್ವಜಗಳಿಂ ವಿಚಿತ್ರವಾದ ಬಹು ಮಂಟಪ ಯುಕ್ತವಾದ ನಾನಾವೇದಿಕಾ ಸಮನ್ವಿತವಾದ ತನ್ನ ಗೃಹಕ್ಕೆ ಕರದುಕೊಂಡು ಪೋಗಿ, ಸರ್ವರತ್ನ ವಿಚಿತ್ರವಾದ ರಮ್ಯವಾದ ಸ್ಥಳದಲ್ಲಿ ಕುಳ್ಳಿರಿಸಿ ತನ್ನ ಕುಮಾರ್ತಿಯನ್ನು ಅಲಂಕಾರಕ್ಕೋಸುಗ ಅಂತಃಪುರಕ್ಕೆ ಕಳುಹಿದನು. ಎಲೈ ಮುನಿಗಳಿರಾ! ಆ ಸಮಯದಲ್ಲಿ ಜಗಜ್ಜನನಿಯಾದ ಆ ದಕ್ಷಕನ್ನಿಕೆಯು ತೈಲವ ನೊತ್ತಿಕೊಂಡು ಮಂಗಳಸ್ನಾನವಂ ಮಾಡಿ ಜಡೆಗಳನ್ನು ಬಿಡಿಸಿ ದಿವ್ಯಂಗಳಾದ ವಸ್ತ್ರಗಳನ್ನು ಆಭರಣಗಳನ್ನು ಧರಿಸಿಕೊಂಡು, ಬೇಗ ಶಿವಸನ್ನಿಧಾನವನ್ನೈದಿದ ಳೆಂದು ಸೂತಂ ಪೇಳಿದನೆಂಬಲ್ಲಿಗೆ, ದಕ್ಷಕಾಂಡದಲ್ಲಿ ಆರನೆಯ ಅಧ್ಯಾಯವು ಸಂಪೂರ್ಣವಾದುದು.

ಏಳನೆಯ ಅಧ್ಯಾಯವು.

ಗೌರೀ ಕಲ್ಯಾಣ ಘಟ್ಟವು.

ಎಲೈ ಋಷಿಗಳಿರಾ! ಅನಂತರದಲ್ಲಿ ವಿಷ್ಣು ಮುಂತಾದ ದೇವತೆಗಳು ಅಂಜಲಿಹಸ್ತರಾಗಿ ನಮಸ್ಕಾರಂಗಳಂ ಮಾಡುತ ಪುಷ್ಪವೃಷ್ಟಿಗಳಂ ವರ್ಷಿಸಿ ದರು. ಲಕ್ಷ್ಮೀ ಸರಸ್ವತೀ ಮುಂತಾದ ದೇವಿಯರು ತಮ್ಮ ಆಕಾರಾಂತರ್ಯಾಮಿ ಯಾದ ದಕ್ಷಕುಮಾರ್ತಿಗೆ ನಮಸ್ಕರಿಸಿ, ಮನೋಹರಂಗಳಾದ ಕುಸುಮಂಗಳ ಅಕ್ಷೆಯಮೇಲೆ ಚಲ್ಲಿ ಸ್ತೋತ್ರಂಗಳಂ ಮಾಡುತ ನಿಂತಿರ್ದರು. ಆ ಸಮಯ ದಲ್ಲಿ ಅನೇಕವಾದ ವಾದ್ಯಧ್ವನಿಗಳು ಮೊಳಗಿದವು, ರಕ್ತಿಕಂಠರಾದ ಕಿನ್ನರರು ಗಾನವಂ ಮಾಡಿದರು. ಬ್ರಹ್ಮಾದಿ ದೇವತೆಗಳು ಪರಮೇಶ್ವರನಂ ಸ್ತುತಿಸಿ ದರು. ಅಪ್ಸರಾಂಗನೆಯರು ನರ್ತನವಂ ಮಾಡಿದರು. ಬಳಿಕ ದಕ್ಷನು ಶುಭವಾದ ಮುಹೂರ್ತದಲ್ಲಿ ದೇವದೇವನಾದ ಶೂಲಿಯ ಪಾದಾಬ್ಜಂಗಳಂ ಸ್ತ್ರೀಯಿಂದ ಎರೆಯಲ್ಪಟ್ಟ ಉದಕಂಗಳಿಂ ಪ್ರಕ್ಷಾಳನವಂ ಮಾಡಿ, ಪುಷ್ಪಂಗಳಿಂದರ್ಚಿಸಿ ಮಂಗಳಕರವಾದ ಧಾರೆಯನೆರದು, ಸ್ವಾಮಿಯ ಪಾಣಿಯಲ್ಲಿ ಸ್ವಕುಮಾರತಿಯ ಪಾಣಿಯನಿಟ್ಟನು.

ಮಹಾದೇವನು ಅಂತರ್ಧಾನವಾಗುವಿಕೆ.

ಆಗ ಸಮಸ್ತ ಜಗತ್ತಿಗು ಕರ್ತನಾದ ಬ್ರಹ್ಮನು ಅಗ್ನಿಪ್ರತಿಷ್ಠೆಯಂ

ಮಾಡಿ ಮಹಾ ವಿಭವದಿಂದ ಹವಿಸ್ಸುಗಳಿಂ ಹೋಮವಂ ಮಾಡಲಾಗಿ, ನಾರಾಯಣ ಮುಂತಾದ ದೇವತೆಗಳು ಮಂಗಳಪ್ರದವಾದ ವೇದಂಗಳಂ ಪಠಿಸಿದರು. ಬಳಿಕ ಮಹೇಶ್ವರನು ಕ್ಷಣದಿಂ ದಂತರ್ಧಾನವಾದನು. ಆ ಗೌರಿದೇವಿಯು ದುಃಖಿತೆಯಾಗಿ ಮನದಿಂ ತನ್ನಾತ್ಮನಂ ನಿಂದಿಸಿ, ಲಕ್ಷ್ಮೀದೇವಿ ಮುಂತಾದ ದೇವಸ್ತ್ರೀಯರಿಂದಾವೃತೆಯಾಗಿ ಬಾಷ್ಪನಯನ ಯುಕ್ತೆಯಾಗಿ ಮಾತೃಗೃಹಕ್ಕೆ ಪೋಗಿ ಬಹು ದುಃಖವನ್ನೈದಿ ರೋದನವಂ ಮಾಡಿದಳು. ಆ ಸಮಯದಲ್ಲಿ ವೇದವಲ್ಲಿಯು ಲಕ್ಷ್ಮಿದೇವಿಯು ಇವರೀರ್ವರು ದೇವಿಯ ಸಮೀಪಕ್ಕೆ ಬಂದು, ಎಲೆ ದಕ್ಷಸುತೆಯೆ ! ನಾವು ಮಾಡಿದ ಅಪಚಾರದಿಂ ದೇವನಂತರ್ಧಾನವಾದನು. ಆದಕಾರಣ ನೀನು ಮರಳಿ ತಪದಿಂ ಪರಮೇಶ್ವರನನ್ನು ಪ್ರಸನ್ನವಂ ಮಾಡಿಕೊಂಡು ಸುಖದಿಂದಿರು. ಈಗ ದುಃಖವಂ ಬಿಡೆಂದು ಸ್ವಾಂತ ವಚನವಂ ಪೇಳಲಾಗಿ, ಆ ಪರಮೇಶ್ವರಿಯು ಆ ವಚನವಂ ಕೇಳಿ ದುಃಖವಂ ನಿಲ್ಲಿಸಿ ಮರಳಿ ತಪೋಗೃಹವಂ ಪ್ರವೇಶಿಸಿ ಪೂರ್ವದಂತೆ ಮಹತ್ತರವಾದ ತಪವಂ ಮಾಡಿದಳು.

ಮಹರ್ಷಿಗಳು ದಕ್ಷನನ್ನು ಮತ್ತು ದಕ್ಷನು ಈಶ್ವರನನ್ನು ನಿಂದಿಸುವಿಕೆ.

ಈ ಪ್ರಕಾರವಾಗಿ ಪರಮೇಶ್ವರನು ಅಂತರ್ಧಾನವಾದ ಬಳಿಕ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ದುಃಖವನ್ನೈದಿದರು. ತಪೋಧನರಾದ ಸಮಸ್ತರಾದ ಋಷಿಗಳು ಛೀಛೀ! ಈ ದಕ್ಷನು ಪಾಪಾತ್ಮನೇ ಸರಿ, ಆವುದಾನೊಂದು ಕಾರಣದಿಂ ಮಹೇಶ್ವರನು ಪ್ರಸನ್ನನಾಗಿಯು ಅನುಗ್ರಹವಂ ಮಾಡದೆ ಬಯಲಾಗಿ ಪೋದನು, ಹಾಗಲ್ಲದಿರ್ದೊಡೆ ಈತನಲ್ಲಿ ಏನಾದರು ಒಂದು ದೋಷವಂ ಕಂಡು ಅಂತರ್ಧಾನವಾದನೋ ಏನೋ ಎಂದು ನಾನಾ ಪ್ರಕಾರದಿಂ ತಮ್ಮ ಮನದಲ್ಲಿ ಚಿಂತಿಸಿ ಮೌನವಾಗಿರ್ದರು. ಬಳಿಕ ಆದಕ್ಷನು ಸುರರು ಸಹಾ ಮಹಾ ದುಃಖಿತೆಯಾದ ಕುಮಾರ್ತಿಯಂ ಸುರಸ್ತ್ರೀಯರ ವ್ಯಥೆಯಂ ನೋಡಿ ತಾನು ವ್ಯಸನವನ್ನೈದಿ ಕಲ್ಯಾಣ ಮಂಟಪದಲ್ಲಿ ಸಮಸ್ತ ದೇವತೆಗಳಂ ನೋಡಿ ಎಲೈ ದೇವತೆಗಳಿರಾ! ಶಂಕರಂಗೆ ನಾನು ಯಾವ ದೋಷವಂ ಮಾಡಿದೆನು ಪೇಳಿ? ಆ ಶಂಕರನು ಕಲ್ಯಾಣ ಮಧ್ಯದಲ್ಲಿ ವಿಘ್ನವಂ ಮಾಡಿ ಪೋದನಲ್ಲ, ಈತನಂ ಪ್ರಾರ್ಥಿಸಿದವನಾರು? ಅಜ್ಞಾತ ಪಿತೃಕನಾಗಿ ನಿತ್ಯವು ಸ್ಮಶಾನ ನಿಲಯನಾದ ಅಶುಚಿಯಾದ ವಂಚಕನಾದ ಪಿನಾಕಧರನು ಬ್ರಾಹ್ಮಣ ರೂಪವಂ ಧರಿಸಿ ತಾನೆ ನಮ್ಮ ಪುತ್ರಿಯಂ ಕಾಂಕ್ಷಿಸಿ ನಮ್ಮ ಕುಮಾರ್ತಿಯ ಸಮೀಪಕ್ಕೆ ಬಂದು ಆಕೆಯಂ ಪ್ರಾರ್ಥಿಸಲಾಗಿ, ಆಗ ನಾನು ಪರಿಚಾರಕರಿಂದ ಈ ವೃತ್ತಾಂತವಂ ಕೇಳಿ ನಾನೇ ಪೋಗಿ ಆ ಕ್ರೂರನಂ ಕರದುಕೊಂಡು ಬಂದು ದೇವತೆಗಳಾದ ನಿಮ್ಮ ಸಮೀಪದಲ್ಲಿ ನನ್ನ ಕುಮಾರ್ತಿಗೆ ವಿಧಿಯಿಂದ ಪಾಣಿಗ್ರಹಣವಂ ಮಾಡಿಸಿದೆನು.

ಹಾಗಾದೊಡಂ ನರ್ತಕನಾದ ಧೂರ್ತನಾದ ರುದ್ರನು ಕಲ್ಯಾಣದಲ್ಲಿ ಸಭಾಮಧ್ಯ ದಲ್ಲಿ ನಿಂದಿತವಾದ ಅಪಕೀರ್ತಿಯಂ ಸಂಪಾದಿಸಿ, ದೇವತೆಗಳಾದ ನೀವು ನೋಡು ತ್ತಿರುವಾಗಲೆ ಅಂತರ್ಧಾನವಾದನು. ಈ ಲೋಕದಲ್ಲಿ ಸಹಜವಾದ ಗುಣವು ತಾನಾಶ್ರೈಸಿದ ಜನನಂ ಬಿಟ್ಟು ಪೋಗದು. ಅವುದಾನೊಂದು ಕಾರಣದಿಂ ದೀತನು ಬ್ರಾಹ್ಮಣವೇಷಮಂ ಕೈಕೊಂಡು ಈ ಪ್ರಕಾರಮಾದ ಚೇಷ್ಟೆಯಂ ಮಾಡಿದನೋ, ಅದುಕಾರಣದಿಂ ದೀತನ ದುರ್ಗುಣವು ಪ್ರಕಾಶವಾದುದೆಂದು, ವಿಧವಿಧವಾಗಿ ದೇವತೆಗಳ ಸಮಕ್ಷಮದಲ್ಲಿ ಪೇಳ್ದು ಅವರನೆಲ್ಲರಂ ತಮ್ಮ ತಮ್ಮ ಸ್ಥಾನಂಗಳಿಗೆ ಕಳುಹಿಸಿದನು. ಬಳಿಕ ಆ ದಕ್ಷನು ಅಂದು ಮೊದಲ್ಗೊಂಡು ಶಂಕರನಲ್ಲಿ ದ್ವೇಷ ಬುದ್ಧಿಯಿಂದಿರುತಿರ್ದನೆಂದು ಶೌನಕಾದಿ ಮುನಿಗಳಿಗೆ ಸೂತಂ ಪೇಳಿದನೆಂಬಲ್ಲಿಗೆ, ದಕ್ಷಕಾಂಡದಲ್ಲಿ ಏಳನೆಯ ಅಧ್ಯಾಯವು ಸಮಾಪ್ತಮಾದುದು.

ಎಂಟನೆಯ ಅಧ್ಯಾಯವು.

ದಾಕ್ಷಾಯಿಣಿಗೆ ಪರಶಿವನ ಪ್ರಸನ್ನತೆ.

ಎಲೈ ಋಷಿಗಳಿರಾ! ಹೀಗೆ ಬಹು ಕಾಲವು ಕಳೆದ ಬಳಿಕ ಆತ್ಮಾರಾಮ ನಾದ ಶಂಭುವು ಶುಭಕರಳಾದ ಮಹಾ ತಪಸ್ಸನ್ನು ಮಾಡುತ್ತ ನಿಯಮದಿಂ ಕೃಶಾಂಗಿಯಾದ ಆ ದಾಕ್ಷಾಯಿಣಿಯನ್ನು ಅನುಗ್ರಹಿಸಲು ಸಂತೋಷದಿಂ ಮುನಿ ರೂಪವಂ ಧರಿಸಿ ಜಟಾಧಾರಿಯಾಗಿ, ವಿಭೂತಿ ಭೂಷಿತನಾಗಿ ರುದ್ರಾಕ್ಷಾಲಂಕೃತ ನಾಗಿ ಕಪಾಲ ಮಾಲಾಧಾರಿಯಾಗಿ ಶೂಲ ಕಪಾಲಂಗಳಂ ಪಿಡಿದು, ನೂಪುರ ಮಂಜೀರಧ್ವನಿಗಳಿಂ ಪ್ರತಿಧ್ವನಿಗಳಂ ಮಾಡುತಲಿರುವ ದಿಙ್ಮುಖವುಳ್ಳವನಾಗಿ ಕಾಷಾಯವಸ್ತ್ರವಂ ಧರಿಸಿ ಅಲ್ಲಿಗೆ ಬರಲಾಗಿ, ಆ ದಾಕ್ಷಾಯಣಿಯು ತಾಪಸ ಶ್ರೇಷ್ಠನಾದ ಆತನಂ ಕಂಡು ಅಂಜಲಿಯಂ ಮಾಡಿ, ಅರ್ಘ್ಯಪಾದ್ಯಾದಿಗಳಿಂ ದುಪಚರಿಸಿ ಪೀಠವನ್ನಿತ್ತು ಆತನ ಮುಂದೆ ನಿಂತಿರ್ದಳು.

ಆ ಸಮಯದಲ್ಲಿ ಕಿರುಘಂಟೆಗಳ ನಾದದಿಂ ವಿರಾಜಿಸುತಲಿರ್ಪ ಬೃಹ ತ್ಕಂಠವುಳ್ಳ ಕೈಲಾಸ ಶಿಖರಕ್ಕೆ ಸಮಾನವಾದ ವೃಷಭವನ್ನೇರಿ, ಆಶ್ರಿತರಿಗೆ ಸುರ ದ್ರುಮವಾದ ಕೃಪಾಸಿಂಧುವಾದ ಮಹಾದೇವನು ಪ್ರಾದುರ್ಭವಿಸಲಾಗಿ, ಮೇಘ ಧ್ವನಿಗಳಂ ಜಯಿಸಿದ ದೇವದುಂದುಭಿಗಳು ಮೊಳಗಿದವು. ದಿವ್ಯ ಗಂಧಗಳಿಂ ಮನೋಹರವಾದ ಪುಷ್ಪವೃಷ್ಟಿಯುಂಟಾದುದು. ಸಿದ್ಧರು ಸಾಧ್ಯರು ಬ್ರಹ್ಮ ವಿಷ್ಣು ಮುಂತಾದ ದೇವತೆಗಳಿಂದಾವೃತನಾಗಿ ಈ ಪರಮಾತ್ಮನು ನಿಲ್ಲೆ, ಆ ಗೌರಿದೇವಿಯು ಆ ಮಹಾದೇವನಂ ಕಂಡು ಅತ್ಯಂತ ಸಂತೋಷದಿಂ ನಮ

ಸ್ಕರಿಸಿ ಭಕ್ತಿಯುಕ್ತೆಯಾಗಿ ಪ್ರದಕ್ಷಿಣ ಸ್ತೋತ್ರಂಗಳಂ ಮಾಡಿ, ಎಲೈ ದೇವೇಶನೆ! ನನ್ನ ಅಪರಾಧವಂ ಕ್ಷಮಿಸಬೇಕೆಂದು ಸ್ಮಿತವದನೆಯಾಗಿ ಮರಳಿ ಮರಳಿ ಪ್ರಾರ್ಥಿಸಲಾಗಿ, ಆಗ ದೇವೇಶನು ಆ ದೇವಿಯಂ ಪಾಣಿಗಳಿಂದೆತ್ತಿ ವೃಷಭೇಶ್ವರನ ಮೇಲೆ ಮನೋಹರವಾಗಿರುವ ತನ್ನ ವಾಮಪಾರ್ಶ್ವದಲ್ಲಿ ಸ್ಥಾಪಿಸಿ, ಸರ್ವದೇವಗಣಗಳಿಂದಾವೃತನಾಗಿ ಅತುಳವಾದ ಕೈಲಾಸಪರ್ವತಕ್ಕೆ ಪೋಗಿ ಸಿಂಹಾಸನದಲ್ಲಿ ಕುಳಿತನು.

ಬಳಿಕ ದೇವಿಯ ಪರಿಜನವು ದಕ್ಷನ ಸಮೀಪಕ್ಕೆ ಪೋಗಿ ಭಯಪಟ್ಟು ಕ್ರೂರಮನದಿಂದ ಆ ವೃತ್ತಾಂತವಂ ಬಿಸಗೊಳ್ಳಲಾಗಿ, ಆ ದಕ್ಷನು ಆ ವೃತ್ತಾಂತವಂ ತಿಳಿದು ತನ್ನ ಸಮೀಪದಲ್ಲಿರುವ ದೇವತೆಗಳಂ ನೋಡಿ ಎಲೈ ದೇವತೆಗಳಿರಾ! ತಸ್ಕರರಿಗೆ ಅಗ್ರೇಸರನಾದ ಈತನು ಕಲ್ಯಾಣಮಧ್ಯದಲ್ಲಿ ತಾನೆ ಬಂದು ಮಾಯವಾದನು. ಈಗಲು ತಾನೆ ಬಂದು ಶೌರ್ಯದಿಂ ನನ್ನಾಜ್ಞೆಯುಲ್ಲಂಘಿಸಿ ಕುಮಾರತಿಯಂ ಕೊಂಡುಪೋಗಿ ನನಗೆಪಕೀರ್ತಿಯನ್ನುಂಟುಮಾಡಿದನು. ಲೋಕದಲ್ಲಿ ಮಾತಾಪಿತೃಗಳ ಅನುಮತಿಯಿಲ್ಲದೆ ಈ ಪ್ರಕಾರವಾದ ಕಾರ್ಯವನ್ನು ಯಾರು ಮಾಡುವರು. ಈತನಂ ಪೂರ್ವದಲ್ಲಿಯಾದರು ಕಲ್ಯಾಣವಂ ಮಾಡುವೆನೆಂದು ಯೆಲ್ಲಿಯು ಕೇಳಲಿಲ್ಲ, ಕಾಣಲುಯಿಲ್ಲ. ಹೀಗೆ ಕಂಡವನು ಈ ರೀತಿ ಮಾಡಿದನೆಂದು ಆ ದೇವತೆಗಳ ಮುಂದೆ ಅನೇಕ ವಚನಂಗಳಂ ಪೇಳ್ದು, ಅವರಂ ತಮ್ಮ ತಮ್ಮ ಸ್ಥಾನಂಗಳಿಗೆ ಕಳುಹಿ, ಪರಮಾತ್ಮನಾದ ಶಿವನಲ್ಲಿ ದ್ವೇಷವುಳ್ಳವನಾಗಿ ಶಿವನಿಂದೆಯಂ ಮಾಡಿದನು.

ಗರ್ವಿತನಾದ ದಕ್ಷನಿಗೆ ಮಹರ್ಷಿಗಳ ಶಾಪಬರುವಿಕೆ.

ಬಳಿಕ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಈ ದಕ್ಷನು ದೇವನಾದ ಶೂಲಿಯಾದ ಮಹಾದೇವನಂ ನಿಂದಿಸುವದರಿಂ ದೇವತೆಗಳ್ಗೆಲ್ಲಿ ನಾಶವನ್ನೈದುವನು. ನಾವು ಪಾಪಿಯಾದ ಈ ದಕ್ಷನಂ ಬಿಟ್ಟು ಯೆಲ್ಲಿಗಾದರು ಪೋಗಬೇಕು. ಅಥವಾ ಈ ಪಾಪಬುದ್ಧಿಯಂ ಬಿಟ್ಟು ಈತನ ನಿಂದೆಯಂ ಬಿಡಿಸಿ ಈತಂಗೆ ಹಿತವಂ ಮಾಡುವನೆಂದು ನಿಶ್ಚಯಿಸಿ ಆತನ ಸಮೀಪಕ್ಕೆ ಪೋಗಿ, ಎಲೈ ದಕ್ಷನೆ! ಜಗತ್ಪ್ರಭುವಾದ ನೀನು ಸಮಸ್ತ ವಿದ್ಯಗಳಲ್ಲಿ ಸಮರ್ಥನು. ನಿನ್ನಿಂದ ಕುಮಾರತಿಯು ಶಿವಂಗೆ ಕೊಡಲ್ಪಟ್ಟಳು. ಆ ದೇವನು ನಿನಗಳಿಯನೆಂದು ಸಮಸ್ತ ಲೋಕದಲ್ಲಿಯು ಪ್ರಸಿದ್ಧಿಯುಂಟಾದುದು. ಆದುಕಾರಣದಿಂದಾತನು ಯೆಂಥವನಾದೊಡಂ ನೀನು ಆತನ ದೂಷಣೆಯಂಮಾಡಬೇಡ. ಸಂಬಂಧವಾದ ಬಳಿಕ ಕುಲವಿಚಾರನಂ ಮಾಡಬಾರದಲ್ಲ. ಅದುಕಾರಣದಿಂ ನೀನು ಕೈಲಾಸಪರ್ವತಕ್ಕೆ ಪೋಗಿ ನಿನ್ನ ಪುತ್ರಿಯಂ ಅಳಿಯನಂ ಕಂಡು ಆತನೊಡನೆ ಸಂಧಿಯಂ

ಮಾಡಿಕೊಂಡು ಶೀಘ್ರವಾಗಿ ಬಾರೆಂದು ಪೇಳಿದರು. ಬಳಿಕ ಆ ದಕ್ಷನು ಅವರ ವಾಕ್ಯವಂ ಕೇಳಿ ಕೋಪಶಾಂತಿಯಂ ಮಾಡಿ ಶೀಘ್ರವಾಗಿ ಕೈಲಾಸಪರ್ವತಕ್ಕೆ ಪೋಗಿ, ಪರಮಾತ್ಮನಾದ ಶಂಕರನ ಭವನದ್ವಾರವನ್ನೈದಿ ದ್ವಾರಪಾಲಕರಿಂ, ಎಲೈ ದಕ್ಷನೆ! ಆ ಸ್ವಾಮಿಯ ಆಜ್ಞೆಯಿಂ ದಂತಃಪುರಕ್ಕೆ ಪೋಗು, ಸ್ವಾಮಿಯು ಏಳುವ ಪರ್ಯಂತ ವಿಲ್ಲಿಯೇ ಇರು. ಅಥವಾ ಮತ್ತೊಂದು ಬಳಿಗಾದರುಂ ಪೋಗಿ ಬಾರೆಂದು ತಡೆಯಲ್ಪಟ್ಟವನಾಗಿ ಅವರ ವಾಕ್ಯವಂ ಕೇಳಿ, ಎಲೈ ದ್ವಾರಪಾಲಕರಿರಾ! ನನ್ನ ಕುಮಾರತಿಯಂ ಆಳಿಯನಾದ ಶಂಭುವಂ ನೋಡ ಬಂದರೆ ನನ್ನನ್ನೇನುಕಾರಣದಿಂ ತಡೆದಿರಿ? ಎನಲಾಗಿ ಗಣೇಶನು ಆತನ ವಾಕ್ಯವಂ ಕೇಳಿ, ಎಲೆ ಮೂಢನೆ! ನೀನು ಮಹೇಶ್ವರನಿಂ ಮಹದೈಶ್ವರ್ಯವಂ ಪಡೆದು ಚರಾಚರಾತ್ಮಕವಾದ ಈ ವಿಶ್ವವಂ ನಿಷ್ಕಂಟಕವಾಗಿ ಪಾಲಿಸುತ್ತಿದಿ. ಎಲೈ ಪಾಪಿಯೆ! ಐಶ್ವರ್ಯದಿಂದತ್ಯಂತ ಗರ್ವಿತನಾಗಿ ಶಿವದೂಷಣೆಯಂ ಮಾಡಿದಿ, ದೈತ್ಯರ್ಗೆ ಉಂಟಾದ ಅಲ್ಪಬುದ್ಧಿಯಾದೊಡಂ ನಿನಗಿಲ್ಲ. ಈಗ ನಿನ್ನ ಮುಖವಂ ನೋಡಬಾರದು. ಸಂಭಾಷಣೆಯನ್ನು ಮಾಡಬಾರದು. ಈಗ ಶಂಕರನ ಸೇವೆಯನ್ನು ಮಾಡಬೇಕೆಂಬ ನಿಶ್ಚಯ ಬುದ್ಧಿಯುಂಟಾದರೆ ಆ ಶಿವನ ಸಮಯವಂ ತಿಳಿದು ಸ್ವಾಮಿಯ ಆಜ್ಞೆಯಿಂದಂತಃಪುರವನ್ನೈದು, ಅಲ್ಲದಿರ್ದೊಡೆ ವ್ಯರ್ಥವಾಗಿ ಇಲ್ಲಿಯಾದರು ಇರು. ಅಥವಾ ಯೆಲ್ಲಿಗಾದರು ಹೋಗಿಬಾ, ಯೆಂದು ಪೇಳಲಾಗಿ ದಕ್ಷನು ಆತನ ವಾಕ್ಯವಂ ಕೇಳಿ ಖಿನ್ನಮಾನಸನಾಗಿ ಅಂತಃಪುರಕ್ಕೆ ಪೋಗದೆ ತಿರುಗಿ ಗಣೇಶ್ವರನ ಮುಂದೆ ಇಂತೆಂದನು. ಎಲೈ ದ್ವಾರಪಾಲಕರಿರಾ! ಸ್ವಾಮಿಯಾದ ಶಂಕರನಂ ನಾನು ಸೇವಿಸೆನು. ಬ್ರಹ್ಮ ವಿಷ್ಣು ಮುಂತಾದ ಸಕಲ ದೇವತೆಗಳು ಆವಾಗಲು ನನ್ನ ವಾಕ್ಯವಂ ಕೇಳಿ ನನ್ನ ಆಜ್ಞಾವಶವರ್ತಿಗಳಾಗಿ ನನಗೆ ಕೃಷಿಗಳನ್ನು ಮಾಡುತ್ತಿರುವರು. ಸರ್ವ ದೇವತೆಗಳಿಗು ನಾನೇ ಪ್ರವರ್ತಕನು, ನಾನೇ ಸಂಹಾರಕನು, ಧಾರಕನು ನಾನೇ ಸರಿ, ನಾನೇ ಜಗತ್ಪ್ರಭುವು. ಮತ್ತಂ ಕಾರ್ಯಗಳನ್ನರಿಯದ ನನ್ನ ಕುಮಾರತಿಯ ವಚನದಿಂ ನನ್ನನ್ನು ನೀವು ತಡೆದಿರಿ. ಅದುಕಾರಣದಿಂ ಇನ್ನು ರುದ್ರಂಗೆ ನಮಸ್ಕಾರಸ್ತುತಿಗಳಂ ಮಾಡೆನೆಂದು ಆ ಗಣಾಧೀಶ್ವರರ ಮುಂದೆ ಪೇಳ್ದು, ನಾನಾಲಂಕಾರಯುಕ್ತವಾದ ತನ್ನ ಪುರಕ್ಕೆ ಬಂದನೆಂದು ಶೌನಕಾದಿ ಮುನಿಗಳಿಗೆ ಸೂತಪೌರಾಣಿಕಂ ನಿರೂಪಿಸಿದನೆಂಬಲ್ಲಿಗೆ ದಕ್ಷಕಾಂಡದಲ್ಲಿ ಎಂಟನೆಯ ಅಧ್ಯಾಯವು

ಸಮಾಪ್ತಮಾದುದು.

ಒಂಬತ್ತನೆಯ ಅಧ್ಯಾಯವು.

ದಕ್ಷನು ತನ್ನ ಅಪಮಾನವನ್ನು ದೇವತೆಗಳ ಮುಂದೆ ಹೇಳುವಿಕೆ.

ಎಲೈ ಋಷಿಗಳಿರಾ! ಅನಂತರದಲ್ಲಿ ದಕ್ಷನು ಸಿಂಹಾಸನದಲ್ಲಿ ನಿಂತು ಬ್ರಹ್ಮ ಮುಂತಾದ ದೇವತೆಗಳಿಂ ಪೂಜಿತನಾಗಿ ದೇವತೆಗಳಿಗೆ ಈ ವೃತ್ತಾಂತವಂ ಹೇಳುವನದೆಂತೆನೆ, ಎಲೈ ದೇವತೆಗಳಿರಾ! ನಿಮ್ಮ ವಾಕ್ಯವಂ ಕೇಳಿ ರುದ್ರನಂ ಉಮಾರತಿಯಂ ನೋಡ ಪೋಗಲು ಅಲ್ಲಿ ಕ್ರೂರರಾದ ದ್ವಾರಪಾಲಕರು ನನ್ನಂ ನೋಡಿ ಶಂಕರನಾಜ್ಞೆಯಿಲ್ಲದೆ ಅಂತಃಪುರಕ್ಕೆ ಪೋಗಬೇಡ, ನಿನ್ನ ಮುಖವಂ ನೋಡಬಾರದು, ನೀನೆಲ್ಲಿಗಾದರು ಪೋಗೆಂದು ಬಹು ದೂಷಣೆಯಂ ಮಾಡಿದರು. ಅವರಿಗೆ ನಾನೇನಪರಾಧವಂ ಮಾಡಲಿಲ್ಲ, ಅಭಿಮಾನವಂ ಬಿಟ್ಟು ನಾನೇ ನೋಡಲು ಪೋದೆನು. ಬಹು ಮಾತುಗಳಿಂದೇನು ಪ್ರಯೋಜನವು? ಇಂದು ಮೊದಲಾಗಿ ನೀವು ಕ್ರೂರ ಹೃದಯನಾದ ರುದ್ರಂಗೆ ನಮಸ್ಕಾರ ಸ್ತುತಿಗಳಂ ಮಾಡಬೇಡಿ, ಮಾಡಿದರೆ ನಿಮಗೆ ಮಹತ್ತಾದ ಅಪರಾಧವುಂಟಾಗುವದು, ನಿಮ್ಮ ಸ್ಥಾನಂಗಳನ್ನು ಇತರರಿಗೆ ಕೊಡುತ್ತೇನೆಂದು ಪೇಳ್ದು ತಾನು ಅನೇಕವಾಗಿ ಶಿವದೂಷಣೆಗಳಂ ಮಾಡುತ, ಬಹುಕಾಲ ವಿರುತಿರ್ದನು.

ಬ್ರಹ್ಮದೇವನ ಯಾಗಾರಂಭವು.

ಅನಂತರದಲ್ಲಿ ವಿಶ್ವಸೃಷ್ಟಿಯಂ ಮಾಡುತಲಿರುವ ಬ್ರಹ್ಮನು ಮಹತ್ತಾದ ಕಾಲದಿಂ ತಾನು ಯಾಗವ ಮಾಡಲಿಚ್ಛೈಸಿ ಅದಕ್ಕೆ ಬೇಕಾದಷ್ಟು ದ್ರವ್ಯಗಳಂ ಸಂಪಾದಿಸಿ, ಯಾಗಕ್ಕೆ ರಾಜನಾಗಿ ತ್ರಿಯಂಬಕನಾದ ಪರಂಜ್ಯೋತಿಸ್ವರೂಪನಾದ ಕೇವಲ ಬ್ರಹ್ಮವಾದ ಮಹಾದೇವನಂ ಕರೆದುಕೊಂಡು ಬಂದು ಭಕ್ತಿಯಿಂ ಪೂಜಿಸಿ ಹವಿರ್ಭಾಗವಂ ಕೊಟ್ಟು ಸ್ವಾಮಿಗೆ ಪ್ರಿಯ ಭಕ್ತನಾದನು. ಈ ದಕ್ಷನು ಅಜ್ಞಾನದಿಂ ಸ್ವಾಮಿಯ ವಿಷಯದಲ್ಲಿ ವಿಮುಖನಾದನು. ಹಾಗಾದರು ಆ ಮಹಾದೇವನ ಪೂಜೆಯಂ ಮಾಡುವೆನು, ಸಂಶಯವಿಲ್ಲ, ದುರ್ಬುದ್ಧಿಯುಳ್ಳ ದಕ್ಷನು ನಮಗೆ ವಿರೋಧವಂ ಮಾಡುವನು, ಆಗ ತನ್ನಿಮಿತ್ತಮಾಗಿ ಪ್ರಾಣಗಳಂ ಬಿಡುವನು ಸಂಶಯವಿಲ್ಲವು. ಆರಿಗೆ ಪ್ರಾಣಾಭಿಮಾನವಿರುವದೋ ಅವರಿಗೆ ಕೆಲಕಡೆಯಲ್ಲಿ ಭೀತಿಯುಂಟು, ನನಗಾದರೆ ಆ ಭಯವಿಲ್ಲವು. ಪ್ರಾಣೇಶ್ವರನಾದ ಕೃತ್ತಿವಾಸನಾದ ಪರಮೇಶ್ವರನು ನನ್ನಂ ರಕ್ಷಿಸುವನೆಂದು ನಿಶ್ಚೈಸಿ ಅತ್ಯಂತ ಮುಖ್ಯದಿಂ ಕೈಲಾಸಗಿರಿಗೆ ಪೋಗಿ ಅಲ್ಲಿ ಮಹಾಕಾಯನಾದ ದ್ವಾರಪಾಲೇಶ್ವರನಾದ ನಂದಿಕೇಶ್ವರನಂ ಕಂಡು ನಮಸ್ಕಾರವಂ ಮಾಡಿ, ಆತನ ಮುಖವಂ ತನ್ನ ಆಗಮನವಂ ಸೂಚಿಸಿ, ಆತನಾಜ್ಞೆಯಿಂ ಮಹಾದೇವನ ರಮ್ಯವಾದ ಭವನವಂ

ಪ್ರವೇಶಿಸಿ ಅಲ್ಲಿ ಮಹೇಶ್ವರನಂ ಕಂಡು ಹೃಷ್ಟಾಂತಃಕರಣನಾಗಿ ವಿನಯದಿಂದಡಿಗಡಿಗೆ ನಮಸ್ಕರಿಸಿ ದೇವದೇವನಾದ ಶರಣಾಗತವತ್ಸಲನಾದ ಕರುಣಾಮೂರ್ತಿಯಾದ ಯಜ್ಞೇಶ್ವರನಾದ ಜಗದ್ಗುರುವಾದ, ಎಲೈ ಮಹಾದೇವನೆ! ನನ್ನಂ ರಕ್ಷಿಸು ರಕ್ಷಿಸು, ನನ್ನಿಂದ ಮಾಡಲ್ಪಡುವ ಯಾಗದಲ್ಲಿ ಪ್ರಸನ್ನನಾಗು, ಅಲ್ಲಿ ಪ್ರಥಮವಾದ ಹವಿಸ್ಸನ್ನಂಗೀಕರಿಸು, ಅದರಿಂ ನಾನು ಕೃತಾರ್ಥನಾಗುವೆನೆಂದು ಪೇಳಲಾಗಿ ಮಹಾದೇವನು ಆ ವಚನವಂ ಕೇಳಿ, ಎಲೈ ಚತುರ್ಮುಖನೆ! ನಿನ್ನ ಯಾಗವಂ ಕುರಿತು ನಮ್ಮ ನಂದಿಕೇಶ್ವರನಂ ಕಳುಹಿಸುವೆನೆಂದು ಮಂದಸ್ಮಿತಮುಖಾಂಬುಜನಾಗಿ ಆ ಬ್ರಹ್ಮನಂ ಕಳುಹೆ ಆತನು ಹಾಗೆ ಆಗಲೆಂದು ಅನುಜ್ಞಾತನಾಗಿ ಮರಳಿ ದಕ್ಷನ ಸಮೀಪಕ್ಕೆ ಪೋಗಿ, ಆತನಿಂದಲು ಅನುಜ್ಞೆಯಂ ಪಡೆದು ಮೇರುಗಿರಿಯಂ ಸಾರಿ, ಅಲ್ಲಿ ಮನೋವತಿಯೆಂಬ ಶಿಖರವನ್ನೈದಿ ಅಲ್ಲಿ ನಿಂತು ಶುಚಿಯಾಗಿ ಯಾಗವಂ ಪ್ರಾರಂಭಿಸಿದನು.

ಆಗ ವಿಷ್ಣು ಮುಂತಾದ ದೇವತೆಗಳು ಮಹಾ ಪರಾಕ್ರಮವಂತರಾದ ಸಮಸ್ತರಾದ ಬ್ರಹ್ಮ ಪುತ್ರರು ಆತನಿಂ ಕರೆಯಲ್ಪಟ್ಟವರಾಗಿ ಶೀಘ್ರದಿಂ ಆ ಮೇರುಪರ್ವತಕ್ಕೆ ಬರಲಾಗಿ ಜಗತ್ಪ್ರಭುವಾದ ಬ್ರಹ್ಮನು ಅವರಿಗಿದಿರಾಗಿ ಪೋಗಿ ಉಪಚಾರಂಗಳಂ ಮಾಡಿ ಅವರಂ ಕರೆದುಕೊಂಡು ಬಂದು ಆಸನದಲ್ಲಿ ಕುಳ್ಳಿರಿಸಿದನು. ಬಳಿಕ ದಕ್ಷನು ಬಂದವನಾಗಲು ಇದಿರಾಗಿ ಪೋಗಿ ಆತನನ್ನು ಪೂಜಿಸಿ ರಮ್ಯವಾದ ಆಸನವನಿತ್ತು ಆತನ ಆಜ್ಞೆಯಲ್ಲಿ ತಾನಿದ್ದನು. ಆ ಸಮಯದಲ್ಲಿ ಪರಮೇಶ್ವರನ ಆಜ್ಞೆಯಿಂ ನಂದೀಶ್ವರನು ಶೀಘ್ರನಾಗಿ ಬರಲು ಬ್ರಹ್ಮನೆದ್ದು ಮಹಾತ್ಮನಾದ ಆತಂಗೆ ಇದಿರಾಗಿ ಪೋಗಿ ನಾನಾವಿಧೋಪಚಾರಂಗಳಿಂ ಪೂಜಿಸಿ, ಅತ್ಯಂತ ಮುದದಿಂ ನಮಸ್ಕಾರವಂ ಮಾಡಿ ಸಭಾಮಧ್ಯದಲ್ಲಿ ಮಹತ್ತರವಾದ ಸಿಂಹಾಸನದಲ್ಲಿ ಕುಳ್ಳಿರಿಸಿ, ಆತನೊಡನೆ ಬಂದ ಶತಕೋಟಿ ಗಣಂಗಳಂ ಕರೆತಂದು ಅವರಿಗೆ ಬೇರೆಬೇರೆಯಾಗಿ ಆಸನಂಗಳನಿತ್ತು ತಾನು ಯಾಗವಂ ಮಾಡಲು ಪ್ರಾರಂಭಿಸಿದನು.

ದಕ್ಷನು ಬ್ರಹ್ಮಯಾಗದಲ್ಲಿ ಶಿವ ದೂಷಣೆಮಾಡುತ ಪರಶಿವನಿಗೆ ಹವಿರ್ಭಾಗವನ್ನು ಕೊಡಬಾರದೆನ್ನುವಿಕೆ.

ಆ ಸಮಯದಲ್ಲಿ ದಕ್ಷನು ಗಣನಾಯಕರೊಡನೆ ಬಂದಿರುವ ನಂದಿಕೇಶ್ವರನಂ ಕಂಡು ಈತನ ಬಳಸಿ ವಿಷ್ಣು ಮುಂತಾದ ದೇವತೆಗಳಿರುವರು. ಲಕ್ಷ್ಮೀ ಸರಸ್ವತಿದೇವಿಯರು ಮುಂತಾದ ದೇವ ಪತ್ನಿಗಳು ಇರುತಿರ್ದರು. ಇವರಿಗೆ ಭಿನ್ನವಾದ ಈತನು ಶ್ರೇಷ್ಠವಾದ ಆಸನದಲ್ಲಿ ಕುಳಿತನಲ್ಲ, ಮತ್ತಂ ಗರ್ವಯುಕ್ತನಾದ ಮಹಾ ಬಲನಾದೀತನು ಆರ ದ್ವಾರಪಾಲಕನೆಂದು ಕೇಳಿ ಕೈಲಾಸಪರ್ವತ

ದಲ್ಲಿ ಕ್ರೂರ ಮನಸ್ಸುಳ್ಳ ರುದ್ರನ ದ್ವಾರದಲ್ಲಿರುವಂಥ ಈತನಂ ಕಂಡಸರ್ಯಾ ರೆಂದು ಕೋಪಾತುರನಾಗಿ ಬ್ರಹ್ಮನಂ ನೋಡಿ, ಎಲೈ ಬ್ರಹ್ಮನೆ! ನೀನು ಈ ದ್ವಾರಪಾಲಕನಂ ಕರದುಕೊಂಡು ಬಂದು ಮಹತ್ತಾದ ಆಸನವನಿತ್ತೆಯಲ್ಲ? ಸತ್ಯದಿಂ ನಾನು ಪಿತನೆಂದು ಬಿಟ್ಟೆನು, ಅನ್ಯನಾದೊಡೆ ಆತನ ಶಿರಚ್ಛೇದನವಂ ಮಾಡುತಿದ್ದೆನು, ಅದುಃಕಾರಣದಿಂ ಈ ಯಜ್ಞದಲ್ಲಿ ರುದ್ರಂಗೆ ಹವಿಸ್ಸಂ ಕೊಡ ಬೇಡ. ವಿಷ್ಣು ಮುಂತಾದ ದೇವತೆಗಳಿಗೆ ಹವಿರ್ಭಾಗಗಳನಿತ್ತು ಸಂತೋಷವ ನುಂಟುಮಾಡು. ಶ್ರುತಿಯಲ್ಲಿ ರುದ್ರನ ಮಹಿಮೆಯು ಎಲ್ಲಿಯುಂ ಪೇಳಲ್ಪಡ ಲಿಲ್ಲವು, ಇದ್ದರು ಆ ಶ್ರುತಿಯು ಅಪ್ರಮಾಣವೆಂದು ನನ್ನಾಜ್ಞೆಯಿಂ ಬಿಟ್ಟುಬಿಡು, ರುದ್ರನು ಸ್ವಭಾವದಿಂ ಕ್ರೂರನು, ಅತ್ಯಂತ ತಾಮಸನು, ಬಹು ವಂಚಕನು, ಆತನ ದ್ವಾರದೇಶದಲ್ಲಿರುವ ಈತನು ಹಾಗೆ ಕ್ರೂರ ಮನಸ್ಸುಳ್ಳವನು ಎಂದು ಬಹು ಶಿವನಿಂದೆಗಳಂ ಮಾಡುತಿರಲು,

ನಂದಿಕೇಶ್ವರನ ಆಗ್ರಹವು, ಶಾಪವು.

ನಂದಿಕೇಶ್ವರನು ಅದೆಲ್ಲವುಂ ಕೇಳಿ ಕೋಪಾಕುಲಿತಮಾನಸನಾಗಿ ತನ್ನ ಶ್ರೋತ್ರಂಗಳಲ್ಲಿ ಕರದ್ವಯವನಿರಿಸಿ, ಶಿವಶಿವ!! ಎಂದು ಪೇಳ್ದು ಮಹಾದೇವನಂ ಹೃದಯದಲ್ಲಿ ಧ್ಯಾನಿಸಿ, ಆ ದಕ್ಷನಂ ನೋಡಿ, ಎಲೈ ಪಾಪಿಯೆ! ಪರಮಾತ್ಮನಾದ ಶಿವನ ದೂಷಣೆಯಿಂದ ಸಮೀಪಿಸಿದ ಮೃತ್ಯುವುಳ್ಳವನಾಗಿದ್ದಿ? ಶಿವದೂಷಣೆಯಂ ಮಾಡಿದವರ ಜಿಹ್ವೆಯಂ ಛೇದಿಸಬೇಕು, ಅವರ ಮುಖವಂ ಭೇದಿಸಬೇಕು ಎಂದು ಪೇಳುವರು, ನಾನು ಶಿವನ ಇಚ್ಛೆಯು ಹೇಗಿದ್ದೀತೋ ಎಂದು ನಿನ್ನನ್ನು ಬಿಟ್ಟೆನು, ಪಾಪಿಷ್ಠನಾದ ನೀನು ಕ್ಷಣಮಾತ್ರ ಜೀವಿಸುತ್ತಿರು, ಎಲೈ ಮೂರ್ಖನೆ! ಇನ್ನು ಮುಂದೆ ಏನಾದರು ಪೇಳಿದೆಯಾದರೆ ಈಗಲೆ ಶಿರಚ್ಛೇದನವಂ ಮಾಡು ವೆನು, ಸ್ವಾಮಿಗೆ ಯಜ್ಞಭಾಗವನ್ನು ಕೊಡಬೇಡವೆಂದು ಪೇಳಿದೆಯಲ್ಲವೆ? ಆ ಸ್ವಾಮಿಗೆ ಹವಿರ್ಭಾಗವಿಲ್ಲದಿರ್ದೊಡೆ ಯಾರು ತೆಗೆದುಕೊಳ್ಳುವರು, ಅವರ ಶಿರ ಚ್ಛೇದಂಗಳು ನನ್ನಾಜ್ಞೆಯಿಂದುಂಟಾಗಲಿ. ಎಲೊಎಲೋ ಭ್ರಾಂತನೆ! ಶಿವಾಜ್ಞೆ ಯಿಂ ನಿನ್ನ ಸಮಸ್ತವಾದ ಐಶ್ವರ್ಯಗಳು ಪೋಗಲಿ, ದುರುಳನಾದ ನಿನ್ನ ಸಮೀಪ ದಲ್ಲಿ ಯಾರಿರುವರೋ ಅವರ ಶಿರಸ್ಸುಗಳು ಛೇದಿಸಲ್ಪಡಲಿ, ಮತ್ತೆ ಅವರಿಗೆ ಶೂರಪದ್ಮನಿಂದತ್ಯಂತ ಬಾಧೆಯುಂಟಾಗಲಿ, ಎಂದು ಈ ಪ್ರಕಾರವಾಗಿ ಶಂಕರ ಪ್ರಿಯನಾದ ನಂದಿಕೇಶ್ವರನು ದಕ್ಷಂಗೆ ಶಾಪವನಿತ್ತು ಸಮಸ್ತ ಗಣಂಗಳೊಡನೆ ಕೈಲಾಸಗಿರಿಗೆ ಪೋಗಿ ಸೋಮನಾಗಿ ಸೋಮಾರ್ಧಶೇಖರನಾದ ದೇವೇಶನಂ ಕಂಡು ನಮಸ್ಕರಿಸಿ, ಆನುಪೂರ್ವ್ಯದಿಂದಾ ವೃತ್ತಾಂತವಂ ಬಿನ್ನೈಸಿ ಮರಳಿಯು ಮಹಾದೇವಂಗೆ ನಮಸ್ಕಾರವಂ ಮಾಡಿ ಶಂಕರಾಜ್ಞೆಯಿಂ ತನ್ನ ದ್ವಾರದಲ್ಲಿ ನಿಂತ

ನೆಂದು ಸೂತಂ ಶೌನಕಾದಿ ಮುನಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ದಕ್ಷ ಕಾಂಡದಲ್ಲಿ ಒಂಬತ್ತನೆಯ ಅಧ್ಯಾಯವು ಸಮಾಪ್ತಮಾದುದು.

ಹತ್ತನೆಯ ಅಧ್ಯಾಯವು.

ದಕ್ಷನು ಯಾಗಾರಂಭಮಾಡುವಿಕೆ.

ಎಲೈ ಋಷಿಗಳಿರಾ! ಅನಂತರದಲ್ಲಿ ವಿಷ್ಣು ಮುಂತಾದ ದೇವತೆಗಳು ನಂದಿಕೇಶ್ವರನು ಕೋಪದಿಂ ಪೋದನೆಂದು ತಿಳಿದು, ನಂದೀ ದಕ್ಷರಿಗೆ ವಿಶೇಷ ವಾಗಿ ಭಯಪಟ್ಟು ತಲೆವಾಗಿ ಕಾಂತಿ ಗುಂದಿರುತಿರ್ದರು. ಬಳಿಕ ಬ್ರಹ್ಮನು ಯಜ್ಞ ಮಧ್ಯದಲ್ಲಿ ದಕ್ಷಂಗೆ ಅತ್ಯಂತ ಭಯಪಟ್ಟು ಕೇವಲ ಕಲಹ ಪುಟ್ಟಿಸುವ ಯಾಗಕ್ಕಿಂತಲು ತೂಷ್ಣೀಂ ಭಾವವೇ ಲೇಸೆಂದು ಮನದಿಂ ನಿಶ್ಚಯಿಸಿರು ತಿರ್ದನು. ಅನಂತರದಲ್ಲಿ ದಕ್ಷನು ಕೋಪದಿಂದೆದ್ದು ತನ್ನ ಪುರವನ್ನೈದಿ ದಿದನು. ದೇವತೆಗಳು ನಂದಿಕೇಶ್ವರನ ಶಾಪವಂ ನೆನೆದು ಭೀತರಾಗಿ ತಮ್ಮ ತಮ್ಮ ಸ್ಥಾನವನ್ನೈದಿದರು. ಅಂದು ಮೊದಲಾಗಿ ಈ ಲೋಕಗಳಲ್ಲಿ ಅವ ರೀರ್ವರ ಭೀತಿಯಿಂದನೇಕಕಾಲ ಪರ್ಯಂತವು ಯೆಲ್ಲಿಯು ಯಾಗವಿಲ್ಲದೆ ಪೋದುದು ಆ ಸಮಯದಲ್ಲಿ ದಕ್ಷನು ಯಾಗವಂ ಮಾಡಲಿಚ್ಛೈಸಿ ಸಮಸ್ತ ದೇವತೆ ಗಳಂ ನೋಡಿಂತೆಂದನು, ಎಲೈ ದೇವತೆಗಳಿರಾ! ನಂದೀಶ್ವರನ ಶಾಪದಿಂ ಭಯ ಪಟ್ಟು ಯಾಗ ವಿಮುಖರಾದಿರಿ. ನಾನು ಯಾಗವಂ ಮಾಡುವೆನು, ಬಳಿಕ ನೀವು ನನ್ನ ಬಲವಂ ತಿಳಿದು ರುದ್ರನಂ ಬಿಟ್ಟು ಮಹಾ ಕ್ರತುವಂ ಮಾಡಿ ರೆಂದು ಪೇಳ್ದು, ವಿಶ್ವಕರ್ಮನಂ ನೋಡಿ ವಿಶಾಲವಾದ ಯಾಗಶಾಲೆಯಂ ಮಾಡೆಂದು ಪೇಳಲಾಗಿ ದೇವಶಿಲ್ಪಿಯಾದ ವಿಶ್ವಕರ್ಮನು ಆತನ ವಾಕ್ಯದಂತೆ ಗಂಗಾತೀರದಲ್ಲಿ ಪರಮ ಪಾವನವಾದ ಕನಕ ಸ್ಥಾನದಲ್ಲಿ ಸಹಸ್ರ ಯೋಜನಾ ಯತದಿಂ ಅತ್ಯಂತ ಮನೋಹರವಾದ ಗೋಪುರಾಟ್ಟಾಲವಲಭಿ ಹರ್ಮ್ಯಾದಿ ಗಳಿಂದಲಂಕೃತಮಾದ, ವಾಪೀ ಕೂಪ ತಟಾಕಾದಿಗಳಿಂ ವೃಕ್ಷಾರಾಮಂಗಳಿಂ ದಲೂಂ, ರಮ್ಯವಾದ ವಿಶಾಲಮಪ್ಪ ಅನ್ನಶಾಲೆಗಳಿಂ ವ್ಯಂಜನಶಾಲೆಗಳಿಂದ ಲೂಂ, ದಧಿಕ್ಷೀರ ಘೃತಶಾಲೆಗಳಿಂ ಬಳಿಕಿಯ ಅಮೃತವಾದ ಕಸ್ತೂರೀ ಚಂದನ ಪುಷ್ಪಮಾಲಿಕೆ ಗಳಿಂದಲಂಕೃತಮಾದ ಸರ್ವರತ್ನ ರೌಪ್ಯಗಳು ಮುಂತಾದ ಯಾಗೋಪಕರಣ ಶಾಲೆಗಳಿಂದಾ ವೃತಮಾದ ಶತಯೋಜನ ವಿಸ್ತೀರ್ಣಕುಂಡ ದಿಂದಲಂಕೃತಮಪ್ಪ ವೇದಿಕೆ ಯುಳ್ಳದ್ದಾದ ಅನೇಕ ಚಿತ್ರಶಾಲೆಗಳಿಂ ಯುಕ್ತ ಮಾದ, ದೇವತೆಗಳಿಗೆ ಅನೇಕಾಸನಗಳಿಂ ಮಂಡಿತಮಾದ, ಅತ್ಯಂತ ಸೌಂದರ್ಯ

ವುಳ್ಳ ಯಾಗಶಾಲೆಯಂ ನಿರ್ಮಾಣವಂ ಮಾಡಿ ಆ ದಕ್ಷಂಗೆ ತೋರಿಸಲಾಗಿ, ಆತನು ಆ ಯಾಗಶಾಲೆಯಂ ನೋಡಿ ಸಂತೋಷವಂ ತಾಳಿ ಸ್ರುಕ್ ಸ್ರುವ ಮುಂತಾದ ಸಮಸ್ತ ಯಾಗೋಪ ಕರಣಂಗಳಂ ವೀಕ್ಷಿಸಿ ಸಂತುಷ್ಟನಾಗಿ ಯಾಗಕ್ಕೆ ಬಂದ ದೇವತೆಗಳು ಮುಂತಾದವರಿಗೆ ವಸ್ತ್ರಾಭರಣಂಗಳಂ ಕೊಡಲು ಕಲ್ಪವೃಕ್ಷ ಕಾಮಧೇನು ಚಿಂತಾಮಣಿ ನಿಧಿಗಳಂ ಮಂಟಪಗಳಲ್ಲಿ ಸ್ಥಾಪಿಸಿ, ಅನ್ನವ ನಿಡಲು ಮುಪ್ಪತ್ತು ಸಾವಿರ ಪರಿಚಾರಕರನ್ನೂ ವ್ಯಂಜನ ಮುಂತಾ ದವನಿಡಲು ಅರವತ್ತು ಸಾವಿರ ಪರಿಚಾರಕರನ್ನು ಕಲ್ಪಿಸಿ, ಬ್ರಹ್ಮ ವಿಷ್ಣು ಮುಂತಾದ ದೇವತೆಗಳಂ ಕರೆಯಲು ದೂತರಂ ಕಳುಹಿಸಿದನು.

ದಕ್ಷಯಾಗಕ್ಕೆ ದೇವತೆಗಳ ಆಗಮನ ವೃತ್ತಾಂತ.

ಆಗ ದೂತರು ಆಯಾ ಲೋಕಂಗಳಿಗೆ ಶೀಘ್ರವಾಗಿ ಪೋಗಿ ಆದೇವತೆ ಗಳಂ ಕರೆದು ಮರಳಿ ದಕ್ಷನ ಬಳಿಗೆ ಬರಲಾಗಿ, ಬಳಿಕ ಬ್ರಹ್ಮ ವಿಷ್ಣು ಮುಂ ತಾದ ಆ ದೇವತೆಗಳು ಶ್ರೇಷ್ಠರಾದ ಋಷಿಗಳು ಸೂರ್ಯ ಚಂದ್ರರು ತಮ್ಮ ತಮ್ಮ ಪತ್ನಿಗಳ್ವೆರೆಸಿ ಬಲಂಗಳೊಡನೆ ಯಾಗವಂ ನೋಡಲು ಬಂದರು. ಆ ಸಮಯ ದಲ್ಲಿ ದಕ್ಷನು ಇದಿರಾಗಿ ಪೋಗಿ ಅವರವರಂ ಕರೆತಂದು ಯೋಗ್ಯಾನುಸಾರ ವಾಗಿ ಆಸನಂಗಳಲ್ಲಿ ಕುಳ್ಳಿರಿಸಿ, ಇತರ ದೇವತೆಗಳಿಗು ಋಷಿಗಳಿಗು ಮಹ ತ್ತಾದ ಆಸನಂಗಳಂ ಕೊಟ್ಟು, ಬಳಿಕ ಪ್ರಸಿದ್ಧರಾದ ಬ್ರಾಹ್ಮಣರು ಬರೆ, ಅವರಿಗೆ ಯೋಗ್ಯಂಗಳಾದ ಪೀಠಂಗಳಂ ಕೊಟ್ಟು ಅವರ ಮಧ್ಯದಲ್ಲಿರು ತಿರ್ದನು. ಬಳಿಕ ಲಕ್ಷ್ಮೀ ಸರಸ್ವತೀ ಇಂದ್ರಾಣೀ ಮುಂತಾದ ದೇವಪತ್ನಿ ಗಳು ಮಹಾ ಮನೋಹರೆಯರಾದ ಋಷಿಪತ್ನಿಗಳು ವೇದವಲ್ಲಿಯು ಮನೋ ಹರವಾದ ಆ ಗೃಹವಂ ಪ್ರವೇಶಿಸಿ, ಆಕೆಯಿಂ ನಾನಾಪ್ರಕಾರವಾದ ಉಪಚಾರಂ ಗಳಂ ಕೈಕೊಂಡು ಆಕೆಯ ಬಳಸಿರುತಿರ್ದರು.

ಬಳಿಕ ದಕ್ಷನು ತಾನು ಕಳುಹಿದ ದೂತರಂ ನೋಡಿ, ಎಲೈ ದೂತರು ಗಳಿರಾ! ನೀವು ನನ್ನ ಬಳಿಯಲ್ಲಿ ನಿರ್ಭಯರಾಗಿ ಈ ಯಾಗಕ್ಕೆ ದೇವದ್ವಿಜ ಋಷಿಗಳ ಮಧ್ಯದಲ್ಲಿ ಯಾರು ಬರಲಿಲ್ಲವೆಂಬುದಂ ಪೇಳಿರೆನಲಾಗಿ, ಆ ವಾಕ್ಯ ವಂ ಕೇಳಿ ಭಯಪಟ್ಟು ಆತನಂ ನೋಡಿ ತಪಸ್ವಿಗಳಿಗೆ ಶ್ರೇಷ್ಠನಾದ ಅಗಸ್ತ್ಯ, ಮಹಾತ್ಮನಾದ ನಾರದನು, ವೇದವೇದಾಂಗ ಪಾರಂಗತರಾದ ಸನಕಾದಿಗಳು, ದಧೀಚಿ ಅತ್ರಿವಸಿಷ್ಠಪರಾಶರ ಭೃಗುಗಳೆಂಬ ಋಷಿಗಳು ದೂರ್ವಾಸನು ಇವರು ಗಳು ಜಗತ್ಪ್ರಭುವಾದ ನಿನ್ನ ಯಾಗವುಂ ದೂಷಿಸಿ ಬಾರದೆ ಪೋದರೆಂದು ಪೇಳಿದರು. ಮಹಾ ಪಾಪಿಯಾದ ದಕ್ಷನವರ ವಾಕ್ಯವಂ ಕೇಳಿ ಹಾಸ್ಯವಂ ಮಾಡಿ, ಈ ಋಷಿಗಳು ರುದ್ರಭಕ್ತರಾದ ಕಾರಣ ಬಾರದೆ ಪೋದರು, ಮತ್ತಂ

ಆ ಋಷಿಗಳಿಲ್ಲಿಗೆ ಬರಲೇಬೇಹೆಂದು ಧಿಕ್ಕರಿಸಿ ದೂಷಿಸಲಾಗಿ, ಆ ಸಮಯದಲ್ಲಿ ತಪೋಧನನಾದ ಮಹಾತ್ಮನಾದ ಸರ್ವೇಶ್ವರನಾದವನಲ್ಲಿ ಅಂತಃಕರಣವುಳ್ಳ ದಧೀಚಿಮುನಿಯು ಶಿಷ್ಯಪ್ರಶಿಷ್ಯರು ಮೊದಲಾಗಿ ಯಾಗಶಾಲೆಗೆ ಬರಲಾಗಿ, ದಕ್ಷನಾತನಂ ಕಂಡು ಈತರುದ್ರ ಭಕ್ತನಲ್ಲ; ಅದು ಕಾರಣದಿಂ ಭಯದಿಂ ಬಂದನೆಂದು ನಿಶ್ಚಿತಮಾನಸನಾಗಿ ಆತಂಗೆ ಆಸನವನಿತ್ತು ಶಿಷ್ಯರಿಗು ಕೊಟ್ಟು ಪ್ರಿಯವಚನವಂ ಪೇಳೆ, ಆಗ ದಧೀಚಿಯು ಆತನಂ ನೋಡಿ ಗಂಭೀರವಾಕ್ಯವುಳ್ಳವನಾಗಿ, ಎಲೆ ದಕ್ಷನೆ! ನನ್ನ ನೇನುಕಾರಣ ಕರಸಿದೆಯೆಂದು ಕೇಳಿದನೆಂದು

ಸೂತಂ ಶೌನಕಾದಿ ಮುನಿಗಳಿಗೆ ನಿರೂಪಿಸಿದ ನೆಂಬಿಲ್ಲಿಗೆ, ದಕ್ಷ ಕಾಂಡದೊಳು ಹತ್ತನೆಯ ಅಧ್ಯಾಯವು ಸಂಪೂರ್ಣಂ

ಹನ್ನೊಂದನೆಯ ಅಧ್ಯಾಯವು.

ದಕ್ಷನ ಪರಮಾಗ್ರಹಕ್ಕೆ ದಧೀಚಿಯ ಪ್ರತ್ಯುತ್ತರ.

ಎಲೈ, ಋಷಿಗಳಿರಾ! ಆನಂತರದಲ್ಲಿ ದಕ್ಷನು ತಪಸ್ವಿಗಳಿಗೆ ಶ್ರೇಷ್ಠನಾದ ಆ ದಧೀಚಿಮುನಿಯಂ ಕುರಿತು, ತಪೋಧನನಾದ ಎಲೈ ಮುನಿಯೆ! ಕುಟಿಲ ಕ್ರಿಯನಾಗಿ ಕ್ರೂರಕರ್ಮನಾದ ಪರಮ ವಂಚಕನಾದ ತ್ರಿಲೋಚನನು ಪೂರ್ವದಲ್ಲಿ ನನ್ನ ಕುಮಾರಿತಿಯ ಪಾಣಿಗ್ರಹಣವಂ ಮಾಡಿ ಮಧ್ಯದಲ್ಲಿ ಕಲ್ಯಾಣವಂ ಕೆಡಿಸಿ ಪೋಗಿ ಮರಳಿ ಬಂದು ಕುಮಾರಿತಿಯಂ ಕೊಂಡು ಪೋದನು. ಅದು ಕಾರಣದಿಂ ನಾನು ಬ್ರಹ್ಮನ ಯಾಗದಲ್ಲಿ ಈಶ್ವರಂಗೆ ಹವಿರ್ಭಾಗವಂ ಕೊಡದ ಹಾಗೆ ಮಾಡಿದೆನು. ಆಗ ಆತನ ದ್ವಾರಪಾಲಕನಾದ ನಂದೀಶ್ವರನೆದ್ದು ಆರು ಯಾಗದಲ್ಲಿ ಪ್ರಥಮವಾದ ಹವಿಸ್ಸಂ ಶಿವಂಗೆ ಕೊಡದೆ ಇತರ ದೇವತೆಗಳಿಗೆ ಕೊಡುವರೋ ಅವರಿಗೆ ಶಿರಸ್ಸುಗಳು ಛೇದಿಸಲ್ಪಡಲೆಂದು ಕೋಪಾ ಕುಲಿತನಾಗಿ ಪೇಳ್ದು, ನನಗಂಜ ಶೀಘ್ರವಾಗಿ ಪೋದನು. ಅದು ಮೊದಲ್ಗೊಂಡು ದೇವತೆಗಳು ಭೀತರಾಗಿ ಹರನಂ ಬಿಡಲಾರದೆ ಯಾಗಗಳನ್ನೆ ಮರೆತುಬಿಟ್ಟರು. ಆ ನಂದಿಕೇಶ್ವರನ ವಾಕ್ಯನನೆಣಿಸದೆ ಆ ದೇವತೆಗಳಿಗೆ ಭಯ ಪರಿಹಾರವಾಗುವಂತೆ ರುದ್ರನಂ ಬಿಟ್ಟು ಪರಮ ಪಾವನವಾದ ಯಾಗವಂ ಮಾಡುತ್ತೇನೆ. ಅದಕ್ಕೋಸುಗ ಸಮಸ್ತ ದೇವತೆಗಳಂ ಕರೆಯಿಸಿದೆನು. ಮಹಾತ್ಮರಾದ ನೀವು ನಾನು ಮಾಡುವ ಯಾಗಕ್ಕೆ ಬಂದದ್ದು ಒಳ್ಳೇದಾಯಿತು. ಯಾಗವು ಸಮಾಪ್ತಿಯಾದುದೆಂದು ತಿಳಿಯುತ್ತೇನೆ. ಈ ಅರ್ಥದಲ್ಲಿ ಸಂಶಯವಿಲ್ಲೆಂದು ಪೇಳಿದನು. ಬಳಕ ದಧೀಚಿಮುನಿಯು ಆ ವಾಕ್ಯವಂ ಕೇಳಿ ಹಾಸ್ಯವಂಮಾಡಿ ಕೋಪದಿಂ ಕರವಂ ಬಡಿದು, ಎಲೆ ದಕ್ಷನೆ! ನೀನುಮಾಡಿದ ಸಮಸ್ತ ಪುಣ್ಯವು

ಪಾಪಕ್ಕೋಸುಗವೇಸರಿ; ಎಂದು ಪೇಳ್ದು ಮೌನವಾಗಿರ್ದನು. ಆಗ ದಕ್ಷನು ಕೋಪಾಕುಲಿತ ಲೋಚನನಾಗಿ ರುದ್ರಭಕ್ತರಿಗೆ ಶ್ರೇಷ್ಠನಾದ ಕಾರಣ ನನ್ನನ್ನು ಹಾಸ್ಯವಂ ಮಾಡಿ ನಿಂದಿಸಿ ಏನುಪೇಳುತಿದ್ಧೀ ಎನಲಾಗಿ, ಆಗ ದಧೀಚಿಯು ಎಲೆ ದಕ್ಷನೆ! ಸರ್ವಶಾಸ್ತ್ರವಂ ತಿಳಿದ ನೀನು ಅಧ್ವರೇಶ್ವರನಾದ ಮಹಾದೇವ ನಂ ಬಿಟ್ಟು ಮಹಾ ಅಜ್ಞಾನದಿಂ ಯಾಗವಂ ಮಾಡಲಿಚ್ಛೈಸುತ್ತಿ. ಆ ಮಹೇ ಶ್ವರನು ಪಶುಗಳಾದ ಬ್ರಹ್ಮ ವಿಷ್ಣು ಮುಂತಾದ ದೇವತೆಗಳಂ ಪುಟ್ಟಿಸಿ ಅವರಿಗೆ ಸ್ಥಿತಿಯಂ ಕಲ್ಪಿಸಿ ಕಾಲದಲ್ಲಿ ಸಂಹರಿಸುತ್ತಿಧಾನೆ. ಪರಮಾತ್ಮ ನಾದ ಶಂಭುವು ಸಮಸ್ತರಿಗು ಜನಕನೆಂದು ಪೇಳಲ್ಪಟ್ಟನು. ಮತ್ತಂ ಹವಿ ಸ್ಸನ್ನು ಭುಂಜಿಸುವವನು ಆ ಹವಿಸ್ಸಾಕಾರವಾದವನೆಂದು ವೇದಾಂತಂಗಳು ಪೇಳುತ್ತಿರುವವು. ಉಂಟೆಂಬುದಾದರೆ ಇಲ್ಲಿ ಯಜ್ಞೇಶ್ವರನು ನನ್ನ ಮುಂದೆ ಪ್ರಾದುರ್ಭವಿಸಲಿ, ವಿಷ್ಣು ಮುಂತಾದ ದೇವತೆಗಳಿಗೆ ಆ ಮಹೇಶ್ವರನಿಂದ ಐಶ್ವರ್ಯ ವುಂಟಾದುದು. ಈತನು ಸರ್ವರಿಗು ಕರ್ತನು, ಈತಂಗೆ ಕರ್ಮ ವುಂಟೆಂದಲ್ಲಿಯು ಪೇಳಲ್ಪಡಲಿಲ್ಲ. ಶಿವ ಮಹೇಶ್ವರ ಶಂಭು ನೀಲಗ್ರೀವ ತ್ರಿಲೋಚನ ಅಂತರ್ಯಾಮಿ-ಮಿತ್ರ ಬ್ರಹ್ಮ ಪರಾತ್ಪರನಾದ ಆ ಮಹೇಶ್ವರನು ಸಮಸ್ತ ದೇವತೆಗಳಿಗು ಶ್ರೇಷ್ಠನುಂ, ತ್ರಿಮೂರ್ತಿಗಳೊಳಗೆ ಜಗತ್ಪ್ರಭುವಾದ ಈ ಮಹೇ ಶ್ವರನು ಶ್ರೇಷ್ಠನು. ಈ ಮಹಾದೇವನಂ ಬ್ರಾಹ್ಮಣನು ವಿಷ್ಣುವಂ ಕ್ಷತ್ರಿ ಯನು ಅಭ್ಯಾಸದಿಂ ಪೇಳಲ್ಪಡುವದು. ಎಲೆ ದಕ್ಷನೆ! ನೀನು ಮಹತ್ತರ ನಾದ ಅಜ್ಞಾನದಿಂ ಪೇಳಲ್ಪಟ್ಟ ಅರ್ಥವಂ ತಿಳಿಯದೆ ಅಧ್ವರೇಶ್ವರನಾದ ಮಹೇಶ್ವರನಾದ ಅವ್ಯಯನಾದ ಮಹಾದೇವನು ಬಿಟ್ಟು ಶಾಲ್ಮಲೀ ಪುಷ್ಪ ಸಮಾನರಾದ ತುಚ್ಛ ಫಲಪ್ರದರಾದ ಅನ್ಯರಂ ಮೇಳವಿಸಿಕೊಂಡು ಯಜ್ಞ ವಂ ಮಾಡ ಬೇಕೆಂದಿಚ್ಛೈಸಿ ವ್ಯರ್ಥವಾಗಿ ಪ್ರಾರಂಭಿಸುತಿರ್ಪೆ. (ದಾಸೀ ಪುತ್ರನು ತನ್ನ ಜನಕನಂ ತಿಳಿಯದೆ ಮತ್ತೋರ್ವನಂ ತನ್ನ ಪಿತೃವೆಂದು) ತಿಳಿಯುವ ರೀತಿಗೆ ಸರಿಯಾಗಿರುತಿದ್ದಿ ಪುಣ್ಯ ಫಲಕ್ಕೋಸುಗ ಪ್ರವರ್ತಿಸಿದ ನಿನಗೆ ಪಾಪಫಲವೇ ಉಂಟಾದುದು; ಎಲೈ ದಕ್ಷನೆ! ನೀನು ಅವುದಾನೊಂದು ಕಾರಣದಿಂ ವೇದಮಾರ್ಗವಂ ಬಿಟ್ಟು ಕುಪಥದಲ್ಲಿ ನಡೆಯುತಲಿರುವದರಿಂದ ನೀನು ಮಾಡುವ ಯಾಗಕ್ಕೆ ಮಹಾ ವಿಘ್ನವುಂಟಾದೀತು; ನಿನಗೆ ಮೃತ್ಯು ಸಮೀಪವಾದುದೆಂದು ಸತ್ಯವಾಗಿ ಪೇಳುತ್ತಿಧೇನೆ, ಈ ಮಹೇಶ್ವರನ ಭಯ ದಿಂ ವಾಯು ಆವಾಗಲು ಚಲಿಸುತ್ತಿಧಾನೆ. ಈತನ ಭಯದಿಂ ಸೂರ್ಯ ನುದಯಿಸುವನು, ಮತ್ತೆ ಯಜ್ಞೇಶ್ವರನು ಉದ್ಭವಿಸಿ ಜ್ವಲಿಸುತಲಿಧಾನೆ. ಈತನ ಭಯದಿಂ ಇಂದ್ರನು ಸ್ವರ್ಗವಂ ರಕ್ಷಿಸುತಿಧಾನೆ; ಇದಲ್ಲದೆ ಈತನ

ಭಯದಿಂ ಮೃತ್ಯುವು ಶಿವಭಕ್ತರಂ ಕಂಡು ಚಂಡಾಲನಂತೆ ದೂರದಲ್ಲಿ ಪೋಗು ತಿರ್ಪನೆ. ಎಲೋ ದಕ್ಷನೇ! ಈತನ ಭಯದಿಂ ಯಾವ ದೇವತೆಗಳಂಜ ಲಿಲ್ಲವೋ ಪೇಳು? ಆದ್ದರಿಂದ ಕಾಲಕಾಲನಾದ ದೇವದೇವನಾದ ಚಿತ್ಸ್ವರೂಪ ನಾದ ಮಹಾದೇವಂಗೆ ಪ್ರಥಮ ಹವಿರ್ಭಾಗವಂ ಕೊಡೆಂದು ಪೇಳಿದನು. ಎಲೈ ಋಷಿಶ್ರೇಷ್ಠರುಗಳಿರಾ! ದುರ್ಬುದ್ಧಿ ಯುಳ್ಳವನಾದ ದಕ್ಷನು ಋಷಿಶ್ರೇಷ್ಠನಾದ ಆ ದಧೀಚಿಮುನಿಯು ಈ ಪ್ರಕಾರದಿಂ ನಿರೂಪಿಸಿದ ವಾಕ್ಯವಂ ಕೇಳಿ ಕೃದ್ಧ ನಾಗಿ, ಆ ದಧೀಚಿ ಮುನಿಯಂ ನೋಡಿ ಚಂಚಲವಾದ ನೇತ್ರಂಗಳುಳ್ಳವನಾಗಿ ಮರಳಿ ಇಂತೆಂದನೆಂದು ಸೂತಂ ಪೇಳಿದನೆಂಬಲ್ಲಿಗೆ, ದಕ್ಷಕಾಂಡದೊಳು ಹನ್ನೊಂದನೆಯ ಅಧ್ಯಾಯವು ಸಂಪೂರ್ಣವಾದುದು.

ಹನ್ನೆರಡನೆಯ ಅಧ್ಯಾಯವು.

ದಕ್ಷನು ದಧೀಚಿಮುನಿಗೆ ಪ್ರತ್ಯುತ್ತರ ಕೊಡುವಿಕೆ, ಪರಸ್ಪರ ಸಂವಾದ ಶಿವಾಧಿಕ್ಯತೆ.

ಎಲೈ, ಮುನಿಗಳಿರಾ! ಅನಂತರದಲ್ಲಿ ದಕ್ಷನು ಆ ದಧೀಚಿಮುನಿಯಂ ಕುರಿತು, ಎಲೈ ಮುನಿಯೆ! ನಾನು ರುದ್ರಂಗೆ ಹವಿರ್ಭಾಗವನ್ನು ಕೊಡುವವ ನಲ್ಲ; ಅದು ಕಾರಣದಿಂ ಪ್ರಭುವಾದ ವಿಷ್ಣುವಿಗೋಸುಗ ಹವಿರ್ಭಾಗವಿತ್ತು ಯಜ್ಞ ಪೂರ್ಣಂಗೈಯುವೆನು, ಜಗನ್ಮಯನಾದ ವಿಷ್ಣುವೆ ನನಗೆ ಪೂಜ್ಯ ನೆಂದು ಪೇಳಲಾಗಿ, ಮುನಿಯು ಆ ವಾಕ್ಯವಂ ಕೇಳಿ, ಎಲೈ ದಕ್ಷನೆ! ನೀನು ಯಜ್ಞದಲ್ಲಿ ಅಪೂಜ್ಯನಂ ಪೂಜಿಸುವದರಿಂದ ತತ್ಕ್ಷಣವೇ ಮೃತ್ಯುವುಂಟಾಗುವ ದೆಂದು ಶಾಸ್ತ್ರಜ್ಞರು ಪೇಳುವರು. ಸರ್ವ ಶ್ರೇಷ್ಠನಾದ ಮಹಾದೇವನಾದ ಚಂದ್ರಾರ್ಧ ಶೇಖರನಾದ ಮಹೇಶ್ವರನು ಅಧ್ವರೇಶನೆಂದು ದೇವತೆಗಳಲ್ಲಿ ಪ್ರಸಿ ದ್ಧವು. ಆ ಪರಮೇಶ್ವರಂಗೆ ಯಾಗದಲ್ಲಿ ಪ್ರಥಮ ಪೂಜೆಯು ಮಾಡತಕ್ಕ ದ್ದೆಂದು ನುಡಿಯಲಾಗಿ ದಕ್ಷನು ಎಲೈ ದಧೀಚಿಯೆ! ನಾನು ದಿಕ್ಪತಿಯಾದ ಈಶಾನನಂ ಏಕಾದಶರುದ್ರರಂ ಪೂಜಿಸುತ್ತೇನೆ, ಅವರೊಳಗೆ ಓರ್ವನು ಪೂಜಾ ರ್ಹನೆಂದು ಪೇಳಿದನು. ಬಳಿಕ ದಧೀಚಿಯು ಎಲೈ ದಕ್ಷನೆ! ಈ ರುದ್ರರು ಪರಮೇಶ್ವರಂಗೆ ಹೇಗೆ ಸಮಾನರಾಗುವರು? ಇವರುಗಳು ಪರಮ ಕಾರುಣೀ ಭೂತನಾದ ಶಿವನಂ ಧ್ಯಾನಿಸಿ ಸಾರೂಪ್ಯವನ್ನೈದಿದರು. ಅದರಿಂದ ಯಾಗ ದಲ್ಲಿ ಪೂಜ್ಯರಾಗರು. ಮತ್ತಂ ಇವರು ಬ್ರಹ್ಮಾದಿ ದೇವತೆಗಳಿಗೆ ಶ್ರೇಷ್ಠರು ಸಂಶಯವಿಲ್ಲವು. ಹಾಗಾದೊಡಂ ಮಹಾದೇವನ ಭಕ್ತರಲ್ಲಿ ನೀನು ಭಕ್ತಿ

ಯಂ ಮಾಡಬಹುದು. ಉತ್ತಮವಾದ ಯಜ್ಞಭಾಗಕ್ಕೆ ಇವರು ಅರ್ಹರಲ್ಲ, ನೀನು ಯಜ್ಞಭಾಗವನ್ನು ಕೊಟ್ಟರೂ ಅವರು ಸ್ವೀಕರಿಸುವದಿಲ್ಲ, ಇವರ ತಪಸ್ಸಿಗೆ ಮಹಾದೇವನು ಪ್ರಸನ್ನನಾಗಿ ಈಶಾನಂಗೆ ತನ್ನ ನಿಜರೂಪವನ್ನಿತ್ತು ಆತನಂ ದಿಕ್ಪಾಲಕನಂ ಮಾಡಿ ದೇವತೆಗಳ ಮಧ್ಯದಲ್ಲಿ ಏಕಾದಶರುದ್ರರಂತೆ ಈಶ್ವರನು ಸಾರ್ವಕಾಲವು ರಕ್ಷಿಸುತಲಿಧಾನೆ. ಈ ದೇವತೆಗಳು ಏಕಾದಶರುದ್ರರು ಸಹ ತ್ರಯಸ್ತ್ರಿಂಶತ್ಕೋಟಿ ದೇವತೆಗಳಾದರು. ಎಲೈ ಬ್ರಹ್ಮನೆ! ಬ್ರಹ್ಮ ಪರಬ್ರಹ್ಮ ಪರಂಜ್ಯೋತಿಯಾದ ದೇವನಾರೆಂದು ನಮ್ಮ ಸಂಶಯವಂ ಪರಿಹರಿಸೆಂದು ಪೇಳಿದನು. ಬಳಿಕ ಬ್ರಹ್ಮನದಂ ಕೇಳಿ ನೀಲಗ್ರೀವನಾದ ಚಂದ್ರಾರ್ಧಭೂಷಣನಾದ ಸೌಮ್ಯನಾದ ಸದಾನಂದ ವಿಗ್ರಹನಾದ ಕೃಷ್ಣಪಿಂಗಳನಾದ ಈಶಾನನಾದ ಶಿವರುದ್ರ ಪರಾತ್ಪರನಾದ ಶಿವನಂ ಕ್ಷಣಮಾತ್ರ ಧ್ಯಾನಿಸಿ, ಆನಂದಾಶ್ರು ಪರಿಪೂರ್ಣ ಲೋಚನನಾಗಿ ಗದ್ಗದವಾಕ್ಯದಿಂ ಆ ಖುಷಿಗಳಂ ನೋಡಿ, ಎಲೈ ಖುಷಿಗಳಿರಾ! ಸರ್ವವಿದ್ಯಗಳಿಗು ಈಶ್ವರನಾದ ಜಗತ್ಪ್ರಭುವಾದ ಮತ್ತೆ ಬ್ರಹ್ಮನಾದ ನನಿಗು ಪ್ರಭುವಾದ ಶಂಭುವಾದ ಬ್ರಹ್ಮಾಧಿಪತಿಯಾದ ಅವ್ಯಯನಾದ ಪರಂಜ್ಯೋತಿಯಾದ ಓಂಕಾರನಿಲಯನಾದ ಆ ಈಶಾನನೆ ಶಂಕರನೆಂದುನ್ನು ಶಂಭುವೆಂದುನ್ನು ಪರಬ್ರಹ್ಮವೆಂಬದಾಗಿಯು ತಿಳಿಯತಕ್ಕದ್ದು. ಇತರರಲ್ಲು ಹಾಗೆ ತಿಳಿಯತಕ್ಕದ್ದಲ್ಲವಿದು ಸತ್ಯವಿದು ಸತ್ಯವೆಂದು ಕರವಂ ಮೇಲಕೆತ್ತಿ ಪೇಳಲ್ಪಡುತಿದ್ದೀತೆಂದು ವೇದಂಗಳು ಸತ್ಯನಾದ ಬ್ರಾಹ್ಮಣನಾದ ಪುರುಷನಾಗಿ ಕೃಷ್ಣಪಿಂಗಳನಾದ ಊರ್ಧ್ವರೇತಸ್ಕನಾಗಿ ವಿಶ್ವಾಕಾರನಾದ ಈಶನಂ ನಮಸ್ಕರಿಸಿ ಮಹಾಭಯದಿಂ ಪೇಳುತಲಿರುವವು. ಅದು ಕಾರಣದಿಂದಾತನೇಸರ್ವೇಶ್ವರನೆಂದು ನನ್ನಿಂದ ಶತಶಃ ಪೇಳಲ್ಪಡುತ್ತೆ. ಲೋಕದಲ್ಲಿ ಆತಂಗೆ ಸಮಾನರಾರೂಯಿಲ್ಲ. ಮತ್ತೆ ಆತಂಗೆ ಪರನು ಅಪರನು ಯಾರುಯಿಲ್ಲ, ಇದಲ್ಲದೆ ಸರ್ವಜ್ಯೇಷ್ಠನಾದ ಸೂಕ್ಷ್ಮನಾದ ಅಚಲನಾದ ಸರ್ವಾತ್ಮಕನಾದ ಶಿವನು ಸ್ವರ್ಗದಲ್ಲಿಧಾನೆ. ಈ ಜಗತ್ತು ಆತನಿಂ ಪೂರ್ಣವಾದುದು. ಆವುದಾನೊಂದು ಕಾರಣದಿಂ ದೀವಾಕುಗಳು ಮನದೊಡನೆ ಐದಲಾರದೆ ತಿರುಗಿದವೂ, ಮತ್ತಂ ಆವನಾನೊಬ್ಬನು ಈತನ ಆನಂದವಂ ತಿಳಿವನೋ ಅತಂಗೆಲ್ಲಿಯು ಭಯವಿಲ್ಲವು. ಈ ಮಹೇಶ್ವರನು ಈಗಲು ಬ್ರಹ್ಮ ವಿಷ್ಣುಗಳಿಂ ಕಾಣಲ್ಪಡಲಿಲ್ಲ, ಬ್ರಹ್ಮಾದಿಗಳು ಪಶುಗಳೆಂದು ಪೇಳಲ್ಪಟ್ಟರು. ಅವರಿಗೆ ಅಧಿಪನಾದುದರಿಂದೀತನು ಪಶುಪತಿಯು, ಅತುಲನಾದ ಭಕ್ತರಿಗೆ ಭಯಂಕರನಾದ ಸರ್ವೈಶ್ವರ್ಯಪರನಾದ ಶಂಭುವು ಆಕಾಶಮಧ್ಯವನ್ನೈದಿಪನು. ಬಹುವಾಗಿ ಪೇಳಿದ್ದರಿಂದೇನು? ಅತನೆ ಪರಬ್ರಹ್ಮನೆಂದು ಪೇಳಿದನು.

ಶಿವಾಧಿಕ್ಯತೆಯನ್ನು ಕುರಿತು ಮಹರ್ಷಿಗಳ ಏಕವಾಕ್ಯತೆ.

ಬಳಿಕ ಆ ಋಷಿಗಳು ಈ ವಾಕ್ಯವಂ ಕೇಳಿ ಅಜ್ಞಾನವಂ ಬಿಟ್ಟು ಬ್ರಹ್ಮವೆಂದು ತಿಳಿದು ಆ ಬ್ರಹ್ಮಂಗೆ ನಮಸ್ಕಾರವಂ ಮಾಡಿ ಸ್ತುತಿಸಿ ತ್ರಿಪುಂಡ್ರಂಗಳಂ ಧರಿಸಿ, ರುದ್ರಾಕ್ಷಮಾಲಿಗಳೆಂಬ ಆಭರಣಗಳಿಂದ ಭೂಷಿತರಾಗಿ ಪೀರ ಪಂಚಾಕ್ಷರೀ ಜಪತತ್ಪರರಾಗಿ ಶಿವಭಕ್ತಿಯಂ ಕೈಕೊಂಡು ಕೈವಲ್ಯವನ್ನೈದಿದರು, ಎಲೈ ದಕ್ಷನೆ! ಭಗವಂತನಾದ ಈಶಾನನಾದ ಶಿವನು ತಾನೆ ಪರಮಾತ್ಮನು ಈ ಮಹಾದೇವಂಗೆ ಅನ್ಯನಾಗಿ ನೋಡುವವನು, ಕೇಳುವಂಥವನೂ ಪರಾತ್ಪರನೂ ಇಲ್ಲ, ಹೀಗೆಂದು ವೇದಾಂತ ವಾಕ್ಯಂಗಳಿಗೆ ಮಹೇಶ್ವರನಲ್ಲಿ ಅತ್ಯಂತ ನಿಷ್ಠೆಯು, ಭಗವಂತನಾದ ಆತನೇ ಪತಿಯು, ಆತಂಗೆ ಅನ್ಯರು ಪಶುಗಳೆಂದು ಪೇಳಲ್ಪಟ್ಟರು. ಪೂರ್ವದಲ್ಲಿ ಬ್ರಹ್ಮನಿಂ ವೇದಾನುಸಾರದಿಂ ಹೀಗೆ ನಿಶ್ಚಯಿಸಲ್ಪಟ್ಟಿತು. ನೀನು ಪೂರ್ವದಲ್ಲಿ ಸೃಷ್ಟಿಸುವಂಥ ಬ್ರಹ್ಮನ ವಾಕ್ಯವಂ ಕೇಳಿ ದೇವೇಶನಲ್ಲಿ ಭಕ್ತಿಯನ್ನೈದಿ ಆರಿಂದಲು ಮಾಡಲಾಗದ ತಪಮಂಮಾಡಿ ಈಶ್ವರನಿಂ ದೀಪ್ರಕಾರವಾದ ಐಶ್ವರ್ಯವಂ ಪಡೆಯುವನಾದೆ. ಬ್ರಹ್ಮಗೆ ಸೃಷ್ಟಿಕರ್ತೃತ್ವವು ವಿಷ್ಣುವಿಗೆ ದಾನವ ಮರ್ದಕತ್ವವು ಇಂದ್ರಂಗೆ ಸ್ವರ್ಗಾಧಿಪತ್ಯವು, ಶಿವಪೂಜಾಫಲದಿಂ ದುಂಟಾದುದು, ಎಲೈ, ದಕ್ಷನೆ! ನೀನು ಮಾಯೆಯಿಂ ಮೋಹಿತನಾಗಿ ಮೃತ್ಯುವಂ ಸಮೀಪಕ್ಕೆ ಕರದುಕ್ಕೊಂಡೆಯೆಂಬುದು ನಿಶ್ಚಯವು. ಆತನ ಮಾಯೆಯು ಬ್ರಹ್ಮ ವಿಷ್ಣುಗಳಿಗು ದಾಂಟಲಶಕ್ಯವು. ಆವನಾನೋರ್ವನು ಪ್ರಕೃತಿಯಂ ಮಾಯೆಯೆಂದುಂ ಮಹೇಶ್ವರನ ಮಾಯೆ ಎಂದುಂ ತಿಳಿವುತಿಪ್ಪಾನೋ, ಆತನಂ ಶಿವಪ್ರಿಯವಾದ ಮಹತ್ತಾದ ಆ ಮಾಯೆಯು ಬಾಧಿಸದು. ಅದುಕಾರಣದಿಂ ನೀನು ಈಗ ಮಹೇಶ್ವರನಂ ಲೇಶವಾದರು ಸ್ಮರಿಸಲಿಲ್ಲ. ಬ್ರಹ್ಮ ವಿಷ್ಣ್ವಾದಿ ದೇವತೆಗಳು ಮಹಾಮೋಹವಶದಿಂ ನಿನ್ನ ಸಮೀಪಕ್ಕೆ ಬಂದು ಯಜ್ಞಭಾಗಮಂ ತೆಗದುಕೊಳ್ಳಲಿಚ್ಛೆಯಿಂದಿರುವರು. ಎಲೈ ದುರಾಚಾರನಾದ ದಕ್ಷನೆ! ಬಹುಮಾತುಗಳಿಂದೇನು? ನೀನು ಹಿತವನ್ನಪೇಕ್ಷಿಸಿದವನಾದರೆ ಅಧ್ವರೇಶನಾದ ಮಹಾದೇವಂಗೆ ಹವಿರ್ಭಾಗಗಳಿಂ ಪ್ರೀತಿಯಂ ಮಾಡು, ಸರ್ವಾತ್ಮಕನಾದ ಮಹಾದೇವನು ಪರಬ್ರಹ್ಮನು, ಇತರನಲ್ಲ, ನಾನು ನಿನಗೆ ಹಿತವಂ ಬಯಸಿ ಹೀಗೆ ನಿಶ್ಚಯವಾಗಿ ಪೇಳಿದೆನೆಂದು ದಧೀಚಿಮುನಿಯು

ದಕ್ಷಂಗೆ ಪೇಳಿದನೆಂಬದಾಗಿ ಸೂತಂ ಪೇಳಿದನೆಂಬಲ್ಲಿಗೆ, ದಕ್ಷಕಾಂಡದೊಳು ಹನ್ನೆರಡನೆಯ ಅಧ್ಯಾಯವು ಸಂಪೂರ್ಣವಾದುದು.

ಹದಿಮೂರನೆಯ ಅಧ್ಯಾಯವು.

ದಕ್ಷನು ಅತ್ಯಾಗ್ರಹವಿಶಿಷ್ಟನಾಗಿ ಪರಶಿವನನ್ನು ನಿಂದಿಸುವಿಕೆ.

ಎಲೈ ಋಷಿಗಳಿರಾ! ಪಾಪಿಷ್ಠನಾದ ದಕ್ಷನು ದಧೀಚಿ ಮುನಿಯ ವಾಕ್ಯವಂ ಕೇಳಿ ಹಾಸ್ಯವಂ ಮಾಡಿ ಮರಳಿ ಆತನಂ ಕುರಿತು ಎಲೈ ದಧೀಚಿ ಮುನಿಯೆ! ಈ ರುದ್ರನೆ ಪರಬ್ರಹ್ಮನಾದೊಡೆ ಹೇಗೆ ದಿಗಂಬರನಾದನು? ಶೂಲವಂ ನಿಂದಿತಮಾದ ಕಪಾಲವಂ ಏಕೆ ಧರಿಸಿದನು? ಲಜ್ಜೆಯಂ ಬಿಟ್ಟು ನಿರ್ಭಯನಾಗಿ ವೀಧಿ ವೀಧಿಯಲ್ಲಿ ಭಿಕ್ಷವಂ ಬೇಡಲು ಹೇಗೆ ಬರುವನು? ಈ ಪಿನಾಕಿಯು ಕಠಿಣವಾದ ವ್ಯಾಘ್ರ ಚರ್ಮವನ್ನು ಎಂತು ಧರಿಸುವನು? ಮತ್ತೆ ಮೃಗವಂ ಪರಶುವಂ ಪಾಣಿಗಳಿಂ ಏಕೆ ಧರಿಸಬೇಕು? ಮಹಾ ಘೋರಂಗಳಾದ ಸರ್ಪಂಗಳಿಂದ ಸುತ್ತಲ್ಪಟ್ಟ ಶರೀರವುಳ್ಳವನಲ್ಲ, ಭಯಂಕರವಾದ ಭೂತಂಗಳಿಂದಾವೃತನಾಗಿ ಶಿರೋಮುಂಡಮಾಲೆಯನಾವಾಗಲು ಧರಿಸುತಲಿಧಾನಲ್ಲ, ಮತ್ತೆ ಭಯಂಕರವಾದ ಧ್ವನಿಯುಳ್ಳ ಡಮರವನ್ನು ಧರಿಸುವನಲ್ಲ, ಪದತಳದಲ್ಲಿ ಈಗಲು ಅಪಸ್ಮಾರವಂ ತುಳಿದುಕೊಂಡಿದ್ದಾನಲ್ಲ, ಕರತಳದಲ್ಲಿ ವಹ್ನಿಯಂ ಧರಿಸಿ ಭಯಂಕರವಾಗಿ ನರ್ತನವಂ ಮಾಡುತಿದ್ದಾನಲ್ಲ, ನಿಷ್ಠುರವಾದ ಗಜ ಚರ್ಮವನ್ನು ಧರಿಸುವನಲ್ಲ, ಇಂಥವನು ಹೇಗೆ ಪರಮಾತ್ಮನಾದನು? ವರಾಹದ ಕೊಂಬನ್ನು ಕಿತ್ತು ಧರಿಸುತಲಿರುವವನು ಎಂತು ಪರಬ್ರಹ್ಮನು? ಭಯಂಕರವಾದೀತನು ಅತ್ಯಂತ ನಿಂದಿತವಾದ ಅಸ್ಥಿಯಂ ಧರಿಸುತಲಿರುವನು, ಈತನು ಹೇಗೆ ಪರಾತ್ಪರನೊ, ಪೂರ್ವದಲ್ಲಿ ಅಪೇಕ್ಷೆಯಿಂದ ಕಾಲಕೂಟ ವಿಷವಂ ಪಾನವ ಮಾಡಿದ್ದುಂಟಲ್ಲ, ದುರಾಶೆಯಿಂದೀತನು ಸಮಸ್ತ ಲೋಕಂಗಳಲ್ಲಿಯು ತಿರುಗುತ್ತಿರುವನು, ಆವಾಗಲು ಅಶುಚಿಗಳಾದ ಅಸ್ಥಿಮಾಲೆಗಳನ್ನು ಕುಸುಮ ಮಾಲೆಗಳಂತೆ ಶರೀರದಲ್ಲಿ ಧರಿಸುತಲಿಧಾನೆ, ಈತನ ಯಜ್ಞೋಪವೀತವು ಶಿರೋರುಹಮಯವು, ಮತ್ತೆ ಶೂಲಾಗ್ರದಲ್ಲಿ ಭಯಂಕರವಾದ ಶವವಂ ಧರಿಸಿಕೊಂಡು ಸ್ಮಶಾನ ಭಸ್ಮೋದ್ಧೂಳಿತನಾಗಿ ಮನದಿಂದತ್ಯಂತವಾಗಿ ಅಟ್ಟಹಾಸವಂ ಮಾಡುತ ನರ್ತಿಸುತಲಿರುವನು, ಸರ್ವ ಭೂತ ಸಂಹಾರಕನು. ಅತಿ ನಿಷ್ಠುರನು. ಬಹು ರೂಪಂಗಳುಳ್ಳವನು, ಮತ್ತಂ ಕಾಮಾಂಧನಾಗಿ ಓರ್ವ ಸ್ತ್ರೀಯಂ ಶಿರದಲ್ಲಿಯು ಮತ್ತೋರ್ವಳಂ ಪಾರ್ಶ್ವದಲ್ಲಿಯು ವಹಿಸಿಕೊಂಡಿರುವನೆಂದು ಲೋಕದಲ್ಲಿ ಪ್ರಖ್ಯಾತಿಯಂ ಪಡೆದವನು, ಇದಲ್ಲದೆ ಆತನು ಕುಟುಂಬಿಯಾಗಿ ಮಿತ್ರವಂತನಾದೊಡಂ ಧನಹೀನನಾದ ಗೃಹಸ್ಥನೇ, ತಮೋಮಯನು ಘೋರನು ಸರ್ವರಿಗು ಅಪಕಾರಿಯು, ಎಲೈ ಮುನಿಗಳಿರಾ! ಈ ಪ್ರಕಾರವಾದ ರುದ್ರನು ಹೇಗೆ ಪರಬ್ರಹ್ಮನು ಎಂದು ನುಡಿಯಲಾಗಿ, ಆ ವಚನವಂ ಕೇಳಿ, ದಧೀಚಿಮುನಿಯು ಛೀಛೀ!! ಹೀಗೆ ಪೇಳುತಲಿರುವ ಪರನು ಪಾಪಿಯಾದ

ದಕ್ಷನೊಡನೆ ಸಂಭಾಷಣೆಯಂ ಮಾಡುವದು ಯುಕ್ತವಲ್ಲ, ಅಜ್ಞಾನವಶದಿಂ ಸಭೆಯಲ್ಲಿ ಹೀಗೆ ಪೇಳಿದನು, ಆದೊಡೆ ಉತ್ತರವಂ ಕೊಡದೆ ಪೋಗಬಾರದಲ್ಲ ಎಂದು ಮನದಿಂ ನಿಶ್ಚೈಸಿ ಒಂದು ವಾಕ್ಯವಂ ನುಡಿದನು.

ದಧೀಚಿಮುನಿಯು ಪರಶಿವನನ್ನು ಸ್ತುತಿಸುವಿಕೆ.

ಎಲೈ ದಕ್ಷನೆ! ನೀನು ಅಜ್ಞಾನವಶದಿಂ ಪರಮಾತ್ಮನಾದ ಶಿವಂಗೆ ಈ ಚರಿತ್ರೆಗಳಂ ದೂಷಣಗಳಾಗಿ ಕಲ್ಪಿಸಿದೆ, ಮಹೇಶ್ವರನ ಚರಿತ್ರಗಳಂ ನೀನರಿಯೆಯ? ಆ ಮಹೇಶ್ವರನು ಸರ್ವಾಂತರ್ಯಾಮಿಯು ಸರ್ವರಿಗು ಆತ್ಮನು ಈತನ ಅದ್ಭುತವಾದ ರೂಪವನ್ನು ನೋಡಲು ಯಾರಿಂದಲು ಶಕ್ಯವಲ್ಲ. ಹಾಗಾದೊಡಂ ಸಮಸ್ತವಾದ ಲೋಕಕ್ಕೆ ಉಪಕಾರಕ್ಕೋಸುಗ ಬಹು ಮನೋಹರವಾಗಿರುವ ಕೈಲಾಸಗಿರಿಯಲ್ಲಿ ಜ್ಞಾನಮೂರ್ತಿಯಾಗಿ ಉತ್ತಮವಾದ ರೂಪವುಳ್ಳವನಾಗಿ ವಿರಾಜಿಸುತಲಿಧಾನೆ. ಮತ್ತಂ ಕೈಲಾಸಪರ್ವತದಲ್ಲಿದ್ದು ಸರ್ವ ಲೋಕಗಳನ್ನು ದೇವತೆಗಳನ್ನು ರಕ್ಷಿಸುತಲಿರುವನು, ಎಲೆ ದುರಾಚಾರನಾದ ದಕ್ಷನೆ! ದಿಗಂಬರಾದಿ ಚರಿತ್ರವು ಆ ಶಿವಂಗೆ ಕಾಲದಿಂದುಂಟಾದುದೆ ಹೊರತು ಬೇರೊಂದಿಲ್ಲವು, ಹಾಗಾದರೆ ಜ್ಞಾನನಯನವಂ ಪಡೆದವನಾಗಿ ಕೇಳು, ಏನೆಂದರೆ, ಪೂರ್ವದಲ್ಲಿ ದಾರುಕಾವನದೊಳು ಕೆಲಂಬರು ಋಷಿಗಳು ಮಹಾದೇವ ಭಕ್ತಿ ವಿಹೀನರಾಗಿ ದುಷ್ಟಮನಸ್ಕರಾಗಿ ತಪೋವಿರಹಿತರಾಗಿ ಯಾಗವಲ್ಲದೆ ಮತ್ತೊಂದು ದೇವತೆಯಿಲ್ಲ ಫಲಪ್ರದನಾದರು ಇಲ್ಲ, ಆ ಯಾಗ ಕರ್ಮಗಳು ಸತ್ಯವಾಗಿ ಫಲವಂ ಕೊಡುತಲಿರುವವು, ಕರ್ಮವಿಲ್ಲದೆ ದೇವರಿಲ್ಲ ಆ ಕರ್ಮವಿಲ್ಲದೆ ಫಲವಂ ಕೊಡುವನಿಲ್ಲ, ಜಂತುವಿಗೆ ಕರ್ಮದಿಂ ಭೋಗವು ಮೋಕ್ಷವು ಎಲ್ಲವು ಉಂಟಾಗುವವು. ಎಂದು ಈ ರೀತಿಯಲ್ಲಿ ಕುತ್ಸಿತ ಮಾರ್ಗಂಗಳಂ ಕಲ್ಪಿಸಿಕೊಂಡು ಅನೇಕ ಕಾಲ ತಪವನಾಚರಿಸುತಿಪ್ಪರು, ಬಳಿಕ ಬ್ರಹ್ಮ ವಿಷ್ಣು ಮುಂತಾದ ದೇವೋತ್ತಮರು ಅವರಂ ನೋಡಿ ಪಾಪಿಗಳೆಂದು ತಿಳಿದು ಇವರಿಗೆ ಶಂಕರನಲ್ಲಿ ಯತ್ನವಿಲ್ಲದೆ ಭಕ್ತಿ ಪುಟ್ಟದು. ಪಾಪಿಗಳಿಗೆ ಶಿವಭಕ್ತಿಯುಂಟಾಗದು ಎಂದು ನಿಶ್ಚೈಸಿ ಶಾಪಭೀತಿಯಿಂದವರಂ ಶಿಕ್ಷಿಸಲಸಮರ್ಥರಾಗಿ ಪರಮೇಶ್ವರನ ಸಮಿಪಕ್ಕೆ ಪೋಗಿ ಬಿನ್ನಪಂಗೈದರು.

ಪರಶಿವನ ಆಜ್ಞೆಯಿಂದ ವಿಷ್ಣುವಿನ ಮೋಹಿನೀ ಅವತಾರವು.

ಬಳಿಕ ಶಂಭುವು ಈ ವೃತ್ತಾಂತವಂ ಕೇಳಿ ಅವರನ್ನೆಲ್ಲರಂ ಕಳುಹಿ, ಮರಳೆ ಮಹತ್ತಾದ ಕಾಲದಿಂ ಆ ಸಕಲ ಮುನಿಗಳಿಗೆ ವ್ಯಾಮೋಹವಂ ಪುಟ್ಟಸಲು ವಿಷ್ಣುವಂ ಸ್ಮರಿಸಲಾಗಿ ಆತನು ಶಿವಾಜ್ಞೆಯಿಂ ಶೀಘ್ರವಾಗಿ ಬಂದನು. ಆಗ ಶಿವನು ಆತನ ಹಸ್ತವಂ ಹಿಡಿದು ಪಾವನವಾದ ಕೈಲಾಸ ಪರ್ವತವಂ ಬಿಟ್ಟು,

ಎಲೈ ವಿಷ್ಣುವೆ! ನನ್ನಾಜ್ಞಾವಶವರ್ತಿಯಾದ ನೀನು ಶೀಘ್ರದಿಂದಿಲ್ಲಿ ಮೋಹಿನೀ ರೂಪವಂ ಧರಿಸಿ ವ್ಯರ್ಥವಾದ ಆಚರಣೆಗಳಂ ಮಾಡುತಲಿರುವ ಇವರಿಗೆ ಮೋಹವಂ ಪುಟ್ಟಿಸೆಂದು ಪೇಳ್ದು ತಾನು ದಿಗಂಬರನಾಗಿ, ಇಚ್ಛಾಜ್ಞಾನ ಕ್ರಿಯಾಶಕ್ತಿ ರೂಪವಾದ ಅದ್ಭುತ ಶೂಲವನ್ನು ಪರಾಶಕ್ತಿ ಸ್ವರೂಪವಾದ ಕಪಾಲವಂ ತಿರೋಧಾನ ಶಕ್ತಿರೂಪವಾದ ವಿಚಿತ್ರವಾದ ಪಾದುಕೆಗಳಂ ಕಲ್ಪಿಸಿ ವೇಗವಾಗಿ ದಾರುಕಾವನವಂ ಪ್ರವೇಶಿಸಲಾಗಿ ಮೋಹಿನಿಯು ಶಂಭುವಂ ಕಂಡು ಕಾಮಿಸಿ ಪರಮಾತ್ಮನಾದ ಶಿವನೊಡನೆ ಸಂಭೋಗವನ್ನಪೇಕ್ಷಿಸಿದಳು.

ಆಗ ಊರ್ಧ್ವರೇತಸ್ಕನಾದ ಶಂಭುವು, ಲೀಲಾಪಾಂಗವೀಕ್ಷಣೆಯಾಗಿ ಚಾರುಹಾರದಂತೆ ಮನೋಹರವಾದ ದಂತಪಙ್ಕ್ತಿಯಿಂ ವಿರಾಜಿತೆಯಾದ ಹೊಸ ಪವಳಕ್ಕೆ ಸಮಾನಮಪ್ಪ ಪ್ರಕಾಶಧರ ಪಲ್ಲವೆಯಾಗಿ ನಿರ್ಮಲ ಚಂದ್ರನಂತಿರ್ಪ ಮುಖದಲ್ಲಿ ಪುರ್ಬುಗಳ ಚಲನಕ್ರಿಯೆಗಳಿಂದೊಪ್ಪುವಳಾದ ನೀಲೋತ್ಪಲ ನೇತ್ರಿಯಾಗಿ ಅತ್ಯಂತ ಪ್ರಸನ್ನತ್ವಾಕಾರವಾದ ಸ್ತನಂಗಳಿಂ ಕಿಂಚಿದ್ಭಾಗಿದ ಕೃಶೋದರಿಯಾದ ನೀಲೋತ್ಪಲ ಸದೃಶಕಾಂತಿಯುಳ್ಳ ರೋಮರಾಜಿಯಿಂ ವಿರಾಜಿತೆಯಾಗಿ ಚಾಟುವಾಕ್ಯಗಳಂ ಪೇಳುತಿರ್ಪ ಆಕೆಯಂ ನೋಡಿ ಮುಗುಳುನಗೆಯುಕ್ತನಾಗಿ, ಎಲೆ ಸರ್ವ ಸಮ್ಮೋಹನಕಾರಿಯೆ! ನಿನಗೆನ್ನೊಡನೆ ಕಾಲಾಂತರದಲ್ಲಿ ಸಂಭೋಗವುಂಟಾಗುವದು, ಈಗ ನೀನು ದಾರುಕಾವನವಂ ಪೊಕ್ಕು ನಮ್ಮಲ್ಲಿ ವಿಮುಖರಾದ ತಾಪಸರಂ ಮೋಹಿತರಂ ಮಾಡಿ ಶೀಘ್ರವಾಗಿ ಬಾರೆಂದು ನಿರೂಪಿಸಿ ಆಕೆಯಂ ಕಳುಹಿದನು. ಅನಂತರದಲ್ಲಿ ಮೋಹಿನಿಯು ಶಿವಾಜ್ಞೆಯಿಂದ ಆ ವನವಂ ಪ್ರವೇಶಿಸಿ ಋಷಿಗಳ ಸಮೀಪಕ್ಕೆ ಪೋಗಲಾಗಿ, ಅವರುಗಳು ಲೀಲೆಯಿಂ ಮಂದಗಮನೆಯಾಗಿ ಅಲ್ಲಲ್ಲಿ ವಿಲಾಸದಿಂ ನೋಡುತ ಬರುತಿರ್ಪ ಮುಗುಳುನಗೆಯುಕ್ತಳಾಗಿ ಮೃಗನೇತ್ರಿಯಾದ ಬಾಗಲ್ಪಟ್ಟ ನಡುವುಳ್ಳ ಮನ್ಮಥಕಳಾ ರೂಪಿಣಿಯಾದ ಪೊರವಾರಗಳಿಂದೊಪ್ಪುವ ಪಾಣಿಪಲ್ಲವೆಯಾಗಿ ಪಾದಕಡಗಗಳ ಧ್ವನಿಗಳಿಂ ಮದನನನ್ನೇಳಿಸುತಲಿರುವ ಆಕೆಯಂ ಕಂಡು ಕಾಮಬಾಣ ಪೀಡಿತರಾಗಿ, ನಿಯಮಂಗಳಂ ಬಿಟ್ಟು ವಿಗಳಿತಂಗಳಾದ ಇಂದ್ರಿಯಂಗಳುಳ್ಳವರಾಗಿ ವಸ್ತ್ರಂಗಳಂ ಬಿಟ್ಟು ಆಕೆಯನ್ನು ಅಡಿಗಡಿಗೆ ನೋಡುತ ಬಹುವಾಗಿ ವರ್ಣಿಸಿ ಕಾಮ ಪರಾಧೀನರಾಗಿ ವ್ಯರ್ಥಾಲಾಪಂಗಳಂ ಮಾಡುತಲಿರ್ದರು. ಆ ಸಮಯದಲ್ಲಿ ಮಹಾದೇವನು ಕೋಟಿ ಕಂದರ್ಪಸದೃಶನಾಗಿ ಬೀದಿ ಬೀದಿಯಲ್ಲಿ ಭಿಕ್ಷಾಕೃತಿಯುಳ್ಳವನಾಗಿ ಒಂದು ಕಡೆಯಲ್ಲಿ ವೇದವಂ ಪಠಿಸುತ ಭಿಕ್ಷವಂ ಮಾಡಿದನು. ಮತ್ತೊಂದು ಕಡೆಯಲ್ಲಿ ವೀಣಾತಂತಿಗಳಂ ಮೀಂಟುತ ಗಾನವಂ ಗೈದನು. ಇನ್ನೊಂದು ಕಡೆಯಲ್ಲಿ ಶಿವಾಗಮಂಗಳಂ ಪಠಿಸುತ ಭಿಕ್ಷವಂ ತೆಗೆದುಕೊಂಡನು. ಮತ್ತೊಂದು

ಬೀದಿಯಲ್ಲಿ ಶಿವಕೀರ್ತನೆಯಂ ಮಾಡುತ ಶಿವಲೀಲೆಯಿಂ ಭಿಕ್ಷಾಟನೆಯ ಮಾಡಿದನು ಎಂದು ಸೂತಮುನಿಯು ಶೌನಕಾದಿ ಮುನಿಗಳಿಗೆ ಪೇಳಿದ ನೆಂಬಲ್ಲಿಗೆ, ದಕ್ಷಕಾಂಡದಲ್ಲಿ ಹದಿಮೂರನೆಯ ಅಧ್ಯಾಯವು ಸಮಾಪ್ತಮಾದುದು.

ಹದಿನಾಲ್ಕನೆಯ ಅಧ್ಯಾಯವು.

ಪರಶಿವನನ್ನು ಋಷಿಪತ್ನಿಯರು ಮೋಹಿಸುವಿಕೆ, ಋಷಿಗಳ ಆಭಿಚಾರ ಕರ್ಮ ವೃತ್ತಾಂತ.

ಎಲೈ ಋಷಿಗಳಿರಾ! ಭಗವಂತನಾದ ಶಂಕರನು ಹೀಗೆ ವಿಲಾಸಮಾರ್ಗದಿಂ ಕಾಲಹರಣೆಯಂ ಮಾಡುತ್ತ ಸಂಚರಿಸುತ್ತಿರಲಾಗಿ, ಆ ಸಮಯದಲ್ಲಿ ಋಷಿಪತ್ನಿಗಳು ಅನ್ನಪೂರ್ಣ ದರ್ವಿಗಳುಳ್ಳವರಾಗಿ, ಯೌವನ ಪುರುಷನಾಗಿ ಅತಿ ಸೌಂದರ್ಯವಂತನಾದ ಮಹಾದೇವನಂ ನೋಡಿ ಕಾಮಸಂಗತರಾಗಿ ಜೋಲುತಿರ್ಪ ಆಭರಣಂಗಳುಳ್ಳವರಾಗಿ ಪ್ರವಧ್ಭಗರಾಗಿ ರೋಮಾಂಚಿತ ಶರೀರವುಳ್ಳವರಾಗಿ ಚದುರಿಧ ಮುಡಿಗಳುಳ್ಳವರಾಗಿ ಚಾಟುವಾಕ್ಯಂಗಳಂ ನುಡಿಯುತ್ತ ಭಿಕ್ಷವನೀಯುವನೆವದಿಂ ಆತನ ಸಮೀಪಕ್ಕೆ ಬಂದು ಆಗಲೆ ಗರ್ಭಂಗಳಂ ಧರಿಸಿ ಪುತ್ರರಂ ಪೆತ್ತರು. ಆ ಪುತ್ರರು ಶಿವಾಜ್ಞೆಯಿಂ ಆ ಶಿವಂಗೆ ನಮಸ್ಕಾರವಂ ಮಾಡಿ ವಿನಯದಿಂ ಸ್ವಾಮಿಯ ಸಮೀಪದಲ್ಲಿ ನಿಂತಿರಲಾಗಿ, ಆ ಭಿಕ್ಷುಕನು ಮುದದಿಂ ದವರಂ ನೋಡಿ, ಎಲೈ ಪುತ್ರರಿರಾ! ನೀವು ನಮ್ಮಾಜ್ಞೆಯಿಂದಿಲ್ಲಿ ನಮ್ಮನ್ನು ಧ್ಯಾನಿಸುತ್ತ ಮಹಾ ತಪವಂ ಮಾಡಿರೆಂದು ಪೇಳಿ ಆ ಪುತ್ರರಂ ಕಳುಹಿ ಬೆಂಬಳಿವಿಡಿದು ಬಹು ಋಷಿಪತ್ನಿಗಳೊಡನೆ ಮುಂದಕ್ಕೆ ಪೋಗಲಾಗಿ, ಮೋಹಿನಿಯು ಋಷಿಗಳಿಂದಾವೃತೆಯಾಗಿ ಸರ್ವಾವಯವ ಮನೋಹರೆಯಾಗಿ ಶಿವನ ಸಮೀಪಕ್ಕೆ ಬಂದಳು.

ಆಗ ಋಷಿಗಳು ಕಾಮಸಂಗತರಾದ ತಮ್ಮ ಸ್ತ್ರೀಯರಂ ಕಂಡು ಈ ಭಿಕ್ಷುಕನು ಶಿವನೇ ಸರಿ, ತಾನೇ ಇಲ್ಲಿಗೆ ಬಂದು ಮಂತ್ರೌಷಧಗಳಿಂ ಮಾಂತ್ರಿಕನಂತೆ ನಮ್ಮ ಸ್ತ್ರೀಯರಿಗೆ ಮಾಯೆಯಿಂ ಮೋಹವಂ ಪುಟ್ಟಿಸಿದನು. ಈ ಸ್ತ್ರೀಯು ಸಾಕ್ಷಾನ್ನಾರಾಯಣನೇ ಮೋಹಿನೀ ರೂಪವಂ ಧರಿಸಿರಬಹುದು. ನಮಗೆ ಮೋಹವನ್ನುಂಟುಮಾಡಿದನು. ಹೀಗೆಂದು ಜ್ಞಾನದೃಷ್ಟಿಯಿಂ ತಿಳಿದು ಕೋಪಾನ್ವಿತರಾಗಿ ನಮಗೆ ವ್ರತಭಂಗದಿಂ ದೋಷಾದರು ಉಂಟಾದರೆ ಪ್ರಾಯಶ್ಚಿತ್ತದಿಂ ಪಾಪವು ನಾಶವಾದೀತು, ಸಂಶಯವಿಲ್ಲವು, ಈ ಸ್ತ್ರೀಯರಿಗೆ ದುರ್ಲಭವಾದ ಪಾತಿವ್ರತ್ಯವು ಭಂಗವಾದುದಲ್ಲ, ಸಮಸ್ತ ಲೋಕದಲ್ಲಿಯು ಅಪಕೀರ್ತಿಯು

ವ್ಯಾಪಿಸಿತು. ಹೀಗೆಂದು ಯೋಚಿಸಿ ತಮ್ಮ ಸ್ತ್ರೀಯರಂ ತಮ್ಮತಮ್ಮ ಗೃಹಕ್ಕೆ ಕರೆಯಲಾಗಿ, ಆ ಸ್ತ್ರೀಯರು ಅವರ ವಾಕ್ಯಂಗಳಂ ಕೇಳಿ ದಿಗಂಬರೆಯರಾಗಿ ಶಿವನ ಬಳಿವಿಡಿದು ಪೋಗುವುದಂ ಬಿಟ್ಟು ತಮ್ಮ ಗೃಹಂಗಳಂ ಪ್ರವೇಶಿಸಿ ಶಿವಾಜ್ಞೆಯಿಂ ಕ್ಷಣದಿ ಮರಳಿ ಬಂದರು.

ಆ ಸಮಯದಲ್ಲಿ ವಿಷ್ಣುವು ತನ್ನ ನಿಜರೂಪಸಂ ಧರಿಸಿ ಶಂಭುವಿಗೆ ಅಂಜಲಿ ಬಂಧವನೆಸಗಿ ಅಡಿಗಡಿಗು ಮನೋಹರಂಗಳಾದ ಸ್ತೋತ್ರಂಗಳಿಂ ಸ್ತುತಿಸಿ ಸಮೀಪದಲ್ಲಿ ನಿಂತಿರಲು ಬ್ರಹ್ಮ ಮೊದಲಾದ ದೇವತೆಗಳು ನಿಜರೂಪವಾದ ಸ್ವಾಮಿಗೆ ನಮಸ್ಕಾರವಂ ಮಾಡಿ ಭಕ್ತಿಯಿಂ ಸ್ತುತಿಸಿದರು. ಆಗ ಋಷಿಗಳು ಪರಮ ಕಲ್ಯಾಣನಾಗಿ ನೀಲಗ್ರೀವನಾದ ಪರಾತ್ಪರನಾದ ಆ ಮಹಾದೇವನಂ ಕಂಡು, ಕೋಪದಿಂ ಬಂದಾನೊಂದು ಕಾರಣದಿಂದೀತನು ನಮಗೆ ಅಪಕೀರ್ತಿ ಯನ್ನುಂಟುಮಾಡಿದನು. ಅದುಕಾರಣದಿಂದೀತನಂ ನಮ್ಮ ತಪೋಮಹಿಮೆಯಿಂ ಸಂಹರಿಸುವೆವೆಂದು ನಿಶ್ಚೈಸಿ ಅಭಿಚಾರ ಕರ್ಮವಂ ಮಾಡಿದರು.

ಶಿವತಾಂಡವ ಸಮಯಾಲಂಕಾರ ವರ್ಣನೆಯು.

ಆ ಸಮಯದಲ್ಲಿ ಮಹತ್ತಾದ ವ್ಯಾಘ್ರವು ಘೋರವಾದ ಪರಶುವು ಮೃಗವು ಸರ್ಪವು ಭಯಂಕರವಾದ ಭೂತಗಳು ಇವುಗಳು ಪುಟ್ಟಿದವು. ಆಗ ಬ್ರಹ್ಮಾದಿ ದೇವತೆಗಳು ಭೀತರಾಗಿ ಪರಮಾತ್ಮನಾದ ಶಿವನ ಬೆನ್ನಭಾಗದಲ್ಲಿ ಬರುತಿರೆ, ಶಿವನು ಭಯಂಕರವಾದ ಅವರ ಧ್ವನಿಯಂ ಕೇಳಿ ಆಗಮನವಂ ತಿಳಿದು ಅಲ್ಲಿ ನಿಂತಿದ್ದನು. ಆ ಸಮಯದೊಳು ಕುಟಿಲವದನವಾದ ವ್ಯಾಘ್ರವು ಕೋಪದಿಂ ಶಿವನಂ ಧಿಕ್ಕರಿಸಿ ಹಸ್ತಂಗಳನ್ನು ಊರ್ಧ್ವಭಾಗಕ್ಕೆತ್ತಿ ಸ್ವಾಮಿ ಯಂ ಸಂಹರಿಸಲು ವೇಗದಿಂ ಸಮೀಪಕ್ಕೆ ಬರಲಾಗಿ ಶಿವನು ಆ ವ್ಯಾಘ್ರದ ಪುಚ್ಛವಂ ಕರದಿಂ ಪಿಡಿದು ಸಂಹರಿಸಿ ಅದರ ಚರ್ಮವನ್ನು ತೆಗೆದು ವಸ್ತ್ರದಂತೆ ಧರಿಸಿದನು. ಬಳಿಕ ಪರಶುವು ಅತಿವೇಗದಿಂ ಬರುತಿರೆ, ಅದನ್ನು ಆಯುಧ ವಾಗಿ ಧರಿಸಿದನು. ಅನಂತರದಲ್ಲಿ ಮೃಗವು ಅತಿವೇಗದಿಂ ಬಂದದ್ದಾಗಲು ವಿಶ್ವಾತ್ಮಕನಾದ ಸ್ವಾಮಿಯು ಆ ಮೃಗವಂ ಕರದಿಂ ಪಿಡಿದು, ಎಲೆ, ಮೃಗವೆ! ನನ್ನ ಕರ್ಣ ಸಮೀಪದಲ್ಲಿ ಆವಾಗಲು ಸುನಾದವಂ ಮಾಡುತಿರೆಂದು ಅಜ್ಞಾ ಪಿಸಿ ಅದಂ ಸ್ಥಾಪಿಸಿದನು. ಬಳಿಕ ಸರ್ಪವು ಅತಿವೇಗದಿಂ ಬರಲಾಗಿ ಸರ್ವ ತಂತ್ರನಾದ ಸರ್ವಾಭರಣ ಭೂಷಿತನಾದ ಶಿವನು ಮಹಾ ರಭಸದಿಂ ದತಿ ಭಯಂಕರವಾಗಿ ಬರುತಿರ್ಪ ಆ ಸರ್ಪವನ್ನು ಭೂಷಣವಾಗಿ ಧರಿಸಿದನು. ಬಳಿಕ ಭೂತಂಗಳು ಬರಲಾಗಿ ಮಹಾ ಬಲನಾದ ಶಂಕರನು ಘೋರಂಗಳಾದ ಅಟ್ಟಹಾಸಂಗಳಂ ಮಾಡುತಲಿರುವ ಸಮಸ್ತ ಭೂತಂಗಳಂ ತನ್ನ ಸೇನೆಯಾಗಿ

ಕಲ್ಪಿಸಿದನು. ಬಳಿಕ ಶಿರೋಮುಂಡಂಗಳು ಬರಲ್ ಶಿವನು ಸ್ಮಿತವದನವಾದ ಆ ಶಿರೋಮುಂಡವಂ ಮಸ್ತಕದಲ್ಲಿ ಧರಿಸಿದನು. ಬಳಿಕ ಅಪಸ್ಮಾರವು ಬಂದ ದ್ದಾಗಲು ಶಿವನು ಆ ಕ್ರೂರವಾದ ಅಪಸ್ಮಾರವಂ ಪಾದದಿಂ ಮೆಟ್ಟಿದನು. ಅನಂತರದಲ್ಲಿ ಋಷಿಗಳು ವ್ಯಾಘ್ರಾದಿಗಳು ಹೀಗೆ ವ್ಯರ್ಥವಾಗಿ ಪೋದುದಂ ಕಂಡು ಆ ಪರಮೇಶ್ವರನಂ ಸಂಹರಿಸಲು ಅಗ್ನಿಯಂ ಕಳುಹಲಾಗಿ ಮಹಾ ದೇವನು ಪ್ರಳಯಕಾಲಾಗ್ನಿಗೆ ಸಮಾನವಾಗಿ ಬರುತಿರ್ಪ ಆ ಅಗ್ನಿಯಂ ಹಸ್ತ ದಲ್ಲಿ ಧರಿಸಿನು. ಮರಳಿ ಋಷಿಗಳು ಶಿವನಂ ಸಂಹರಿಸಲು ಘೋರಂಗಳಾದ ಮಹಾ ಮಂತ್ರಂಗಳಂ ಡಮರುಗವಾಗಿ ಕಲ್ಪಿಸಿ ಸ್ವಾಮಿಯಮೇಲೆ ಬಿಡೆ, ಅಸಿನಾಕಿಯು ಮಹತ್ತಾದ ನಾದವುಳ್ಳ ಭಯಂಕರವಾದ ಆ ಡಮರುಗವಂ ಹಸ್ತದಲ್ಲಿ ಧರಿಸಿದನು, ಎಲೈ, ದಕ್ಷನೆ! ಋಷಿಗಳು ಅಗ್ನಿ ಮುಂತಾದವು ವ್ಯರ್ಥಂಗಳಾಗಿ ಪೋದ ಬಳಿಕ ಆ ಸಮಸ್ತವಂ ನೋಡಿ ಅತ್ಯಂತ ಭೀತರಾಗಿ ಈ ಪುರುಷಶ್ರೇಷ್ಠನು ತಮ್ಮ ಸಮಸ್ತವಾದ ಮಂತ್ರಂಗಳಂ ವ್ಯರ್ಥಂಗಳಂ ಮಾಡಿದ ನಾದಕಾರಣ ಈ ಯೌವನ ಪುರುಷನು ಮನುಷ್ಯಾತೀತನೆಂದು ಚಿಂತೆ ಯಂ ಮಾಡಿ ಲಜ್ಜೆಯಿಂ ತಲೆವಾಗಿದ್ದರು. ಆ ಸಮಯದಲ್ಲಿ ಮಹಾದೇವನು ನಗೆಯುಕ್ತವಾದ ಮುಖಕಮಲ ವುಳ್ಳವನಾಗಿ ಈ ತಾಪಸರು ಹೇಗಾದರು ನನ್ನ ಮಹಿಮೆಯಂ ಕಾಣರೆಂದು ಪೇಳ್ದು ತಾಂಡವವೆಂಬ ನರ್ತನವಂ ಮಾಡಿ ದನು. ಆ ಸಮಯದಲ್ಲಿ ಸಮಸ್ತ ಋಷಿಗಳು ಮಹಾದೇವನ ನಟನವಂ ಕಂಡು ಭಯಕಂಪಿತರಾಗಿ ಭ್ರಮಿಸಿ ತಲೆವಾಗಿ ಭೂಮಿಯಲ್ಲಿ ಬಿದ್ದವರಾಗಲು ಕರುಣಾಕರನಾದ ಶಿವನು ಅವರೊಳು ದಯೆಯಂ ಮಾಡಲಾಗಿ, ಆ ಋಷಿಗಳೆದ್ದು ಜ್ಞಾನವಂತರಾಗಿ ಸ್ವಾಮಿಗೆ ನಮಸ್ಕಾರವಂ ಮಾಡಿ, ಎಲೈ, ದೇವದೇವನೆ! ಜಯಜಯ ಕರುಣಾಕರನಾದ ಎಲೈ ಮಹಾದೇವನೆ! ನಮ್ಮ ಅಪರಾಧವಂ ಕ್ಷಮಿಸಿ ರಕ್ಷಿಸು ರಕ್ಷಿಸು; ಹೀಗೆಂದು ಸ್ತುತಿಸಿಸ್ತುತಿಸಿ ಅಂಜಲಿ ಬಂಧನಂ ಮಾಡಿ ವಿನಯದಿಂ ತಲೆವಾಗಿನಿಂತರು. ಆಗ ಕರುಣಾಮೂರ್ತಿಯಾದ ಮಹೇ ಶ್ವರನು ಅವರಂ ನೋಡಿ, ಎಲೈ ಋಷಿಗಳಿರಾ! ನೀವು ಇದುವರಿವಿಗು ಈಶ್ವರ ನಾದ ನನ್ನರಿಯದೆ ಅಜ್ಞಾನಿಗಳಾಗಿ ದುರ್ಮಾರ್ಗವಂ ಪಿಡಿದು ಯಿರುತಿರ್ದೀ ರಲ್ಲ; ಇತಃಪರದಲ್ಲಿ ನಮ್ಮಾಜ್ಞೆಯಿಂ ದಧಿಕ ಮಾರ್ಗದಲ್ಲಿ ಭಸ್ಮ ರುದ್ರಾಕ್ಷ ಧಾರಣೆಯಂಮಾಡಿ ಅನನ್ಯಚಿತ್ತರಾಗಿ ಸಾರ್ವಕಾಲವು ನಮ್ಮನು ಪೂಜಿಸಿರೆಂದು ನಿರೂಪಿಸಿ ಅವರಂ ಕಳುಹಿ ವೇಗದಿಂ ನಾನಾಆಶ್ಚರ್ಯ ಯುಕ್ತವಾದ ಕೈಲಾಸ ಪರ್ವತಕ್ಕೆ ಬಂದು ವಿಷ್ಣು ಮುಂತಾದ ದೇವತೆಗಳಂ ತಮ್ಮ ತಮ್ಮ ಸ್ಥಾನಕ್ಕೆ ಕಳುಹಿ ಪಾರ್ವತೀ ದೇವಿಯೊಡನೆ ಕ್ರೀಡಾವಿನೋದದಿಂ ದಿರುತಿರ್ದ ನೆಂದು

ದಕ್ಷಂಗೆ ದಧೀಚಿಯು ಪೇಳಿದನೆಂಬದಾಗಿ ಶೌನಕಾದಿಮುನಿಗಳಿಗೆ ಸೂತಂ ನಿರೂಪಿಸಿದ ನೆಂಬಿಲ್ಲಿಗೆ, ದಕ್ಷಕಾಂಡದಲ್ಲಿ ಹದಿನಾಲ್ಕನೆಯ ಅಧ್ಯಾಯವು ಸಮಾಪ್ತನಾದುದು.

ಹದಿನೈದನೆಯ ಅಧ್ಯಾಯವು.

ಗಜಾಸುರನ ವೃತ್ತಾಂತವು, ಗಜಚರ್ಮಧಾರಣಲೀಲೆ.

ಎಲೈ, ಋಷಿಗಳಿರಾ! ದಧೀಚಿಯು ಆ ದಕ್ಷನಂ ಕುರಿತು, ಎಲೈ, ದಕ್ಷನೆ! ದಿಗಂಬರಾದಿ ತಾಂಡವ ಪರ್ಯಂತನಾಗಿ ಸರ್ವೋತ್ಕೃಷ್ಟವಾಗಿ ಋಷಿಗಳು ಮಾಡಲಿಚ್ಛೈಸಿದ ಸರ್ವೋತ್ತಮವಾದ ಚರಿತ್ರವು ಪೇಳಲ್ಪಟ್ಟದ್ದು ಸರಿಯಷ್ಟೆ, ಮರಳಿ ಸ್ವಾಮಿಯು ಚರಿತ್ರವಂ ನಿನ್ನ ಪಾಪ ವಿಮೋಚನವಾಗುವಂತೆ ಪೇಳುತ್ತಿರ್ಧೇನೆ, ಸಾವಧಾನ ಚಿತ್ತನಾಗಿ ಕೇಳು. ಪೂರ್ವದಲ್ಲಿ ಭಯಂಕರನಾದ ಮಹಾ ನಿಷ್ಠುರನಾದ ಗಜಾಸುರನು ತಪವನಾಚರಿಸಿ ಬ್ರಹ್ಮಂಗೆ ಪ್ರೀತಿಯಂ ಮಾಡಿ ಕ್ಷಯರಹಿತನಾದ ಶಿವನಂ ಬಿಟ್ಟು ಇತರರಾದ ಅಸುರರಿಂದ ಅವಧ್ಯತ್ವವಂ ಬಹು ಆಯುಷ್ಯಂಗಳಂ ಬಲವೀರ್ಯ ಪರಾಕ್ರಮಂಗಳಂ ಮತ್ತು ವಿಶೇಷವಾದ ವರಗಳಂ ಪಡದು ಸಕಲ ಜಗತ್ತಂ ಪಾಲಿಸಿದನು. ಇದಲ್ಲದೆ ಆ ದೈತ್ಯನು ರಣಮಧ್ಯಗತರಾದ ಬ್ರಹ್ಮಾದಿ ದೇವತೆಗಳಂ ಜಯಿಸಿ ಅನೇಕ ಋಷಿಗಳಂ ಸುರರಂ ಸಂಹರಿಸಿದನು. ಬಳಿಕ ಒಂದಾನೊಂದು ಸಮಯದಲ್ಲಿ ರಣರಂಗದಲ್ಲಿ ಅಮರನಾಯಕನಾದ ದೇವೇಂದ್ರನಂ ಜಯಿಸಿ ಪಲಾಯನವನ್ನೈದಿಸಿ ಐರಾವತದ ಪುಚ್ಛವಂ ಕರದಿಂ ಪಿಡಿದು ತಿರುಹಿ ದೂರದಲ್ಲಿಡಲಾಗಿ, ಅದು ಭೂಮಿಯಲ್ಲಿ ಬಿದ್ದು ಮೂರ್ಛೆಯನೈದಿತು. ಮತ್ತಂ ದುರುಳನಾದ ಆ ದೈತ್ಯನು ಇತರ ದಿಕ್ಪಾಲಕರಂ ಜಯಿಸಿ ಭೂಲೋಕದಲ್ಲಿ ಬಲು ಪರಾಕ್ರಮಂಗಳುಳ್ಳ ಶತ್ರುಗಳಂ ಸಂಹರಿಸಿ ಕೆಲಂಬ ಋಷಿಗಳಂ ಸಂಹರಿಸಲು ಬರಲಾಗಿ, ಆ ಋಷಿಗಳು ಭೀತರಾಗಿ ಕಾಶೀಕ್ಷೇತ್ರಕ್ಕೆ ಪೋಗಿ ಅಲ್ಲಿರುವ ಋಷಿಗಳೊಡನೆ ಮಣಿಕರ್ಣಿಕೆಯಲ್ಲಿ ಸ್ನಾನಮಂ ಮಾಡಿ ವಿಶ್ವನಾಥನ ಅದ್ಭುತವಾದ ಶಿವಾಲಯವಂ ಪ್ರೋಕ್ಷ್ಯ ಅಲ್ಲಿರ್ಪ ಪರಿಚಾರಕರ್ವೆರಸಿ ಆ ವಿಶ್ವನಾಥಂಗೆ ನಮಸ್ಕಾರವಂ ಮಾಡಿ ಭಯ ಯುಕ್ತರಾಗಲ್ಲಿರ್ದರು.

ಆ ಸಮಯದಲ್ಲಿ ಗಜಾಸುರನು ತ್ವರಿತದಿಂದ ಕಾಶಿಗೆ ಬಂದು ವಿಶ್ವನಾಥನ ಆಲಯ ದ್ವಾರದಲ್ಲಿ ನಿಂತು ಅತಿ ಭಯಂಕವಾದ ಮಹಾಧ್ವನಿಯಂ ಮಾಡೆ, ಋಷಿಗಳು ಆ ಧ್ವನಿಯಂ ಕೇಳಿ ಭೀತರಾಗಿ ಮಹೇಶ್ವರನನ್ನಾಲಿಂಗಿಸಿ ಚೈತನ್ಯರಹಿತರಾಗಿ ಮೂರ್ಛೆಯನೈದಿದರು. ಆಗ ಪಾಪಿಯಾದಾ ದೈತ್ಯನು ದ್ವಾರವಂ

ದಾಂಟಿ ಅಲ್ಲಿರುವ ಸಮಸ್ತರಂ ಸಂಹರಿಸಲು ಬರಲಾಗಿ ಯೆಲ್ಲರ ಆರ್ತಿ ಪರಿಹಾರಕನಾದ ಮಹಾದೇವನು ಕೋಟಿಸೂರ್ಯ ಪ್ರಕಾಶವಾದ ಶರೀರವಂ ಧರಿಸಿ ಭಯಂಕರನಾದ ಆ ಅಸುರನಂ ಧಿಕ್ಕರಿಸೆ, ಆಧ್ವನಿಯು ಸರ್ವರಿಗು ಕೇಳಲ್ಪಟ್ಟಿತು. ಆ ಸಮಯದಲ್ಲಿ ಗಜಾಸುರನು ಕ್ಷಯವಾದ ವೀರ್ಯವುಳ್ಳವನಾದರು ಸ್ಥಿರನಾದ ಶಿವನಂ ತಿಳಿದು ಅತ್ಯಂತ ಅಜ್ಞಾನದಿಂ ಆ ಪರಮೇಶ್ವರನೊಡನೆ ಯುದ್ಧವಂ ಮಾಡಲಾಗಿ, ಮಹಾಬಲನಾದ ಶಿವನು ದುರಾತ್ಮನಾದ ಆ ಅಸುರನಂ ಪಾದದಿಂತಾಡಿಸೆ, ಅವಂ ಭೂಮಿಯಮೇಲೆ ಬಿದ್ದು ಮಹಾ ಧ್ವನಿಯುಳ್ಳವನಾಗಿ ರಕ್ತದಿಂದಾವೃತನಾಗಿ ರೋದನವಂ ಮಾಡುವಂತೆ ಮಾಡಿ, ಆಗ ನಿಷ್ಠುರನಾದ ಅವನ ಚರ್ಮವಂ ಸುಲಿದನು. ಆ ವೇಳೆಯಲ್ಲಿ ಪಾರ್ವತೀದೇವಿಯು ಆತನ ರೋದನವಂ ಕೇಳಿ ಮಹಾ ಭಯವನೈದಿದಳು. ಸಮಸ್ತ ದೇವತೆಗಳ ನಯನಗಳು ಮಹೇಶ್ವರನ ಅದ್ಭುತವಾದ ಕೋಟಿ ಸೂರ್ಯ ಪ್ರಭೆಯುಳ್ಳ ಶರೀರವಂ ನೋಡಲು ಅಸಮರ್ಥಂಗಳಾದವು. ಮರಳಿ ಮಹೇಶ್ವರನು ಆ ಗಜಾಸುರನ ಚರ್ಮವನ್ನು ಆಚ್ಛಾದನವಂ ಮಾಡಲಾಗಿ, ಆಗ ಸಮಸ್ತ ದೇವತೆಗಳ ನಯನಂಗಳು ನೋಡಲು ಸಮರ್ಥವಾದವು. ಬಳಿಕ ದೇವತೆಗಳು ಕೃತ್ತಿವಾಸನಾದ ಮಹೇಶ್ವರನಂ ಪರಮ ಭಕ್ತಿಯಿಂ ನಮಸ್ಕರಿಸಲಾಗಿ, ಋಷಿಗಳು ಮೂರ್ಛೆಯಂ ಬಿಟ್ಟು ಮಹೇಶ್ವರನಂ ಆ ದೈತ್ಯನ ಅಸ್ಥಿಗಳಂ ಸಹ ಕಂಡು ಅಮರೇಶನಾದ ಆರ್ತಿ ಪರಿಹಾರಕನಾದ ಶಂಕರನಿಂದ ಈ ಅಸುರನು ಸಂಹೃತನಾದನೆಂದು ನಿಶ್ಚಯಿಸಿ ಬ್ರಹ್ಮಾದಿ ದೇವತೆಗಳ್ವೆರಸಿ ಭಯವಂ ಬಿಟ್ಟು ಮುದದಿಂ ಮಹಾದೇವನಂ ಸ್ತುತಿಸಿದರು.

ಅನಂತರದಲ್ಲಿ ಅವರುಗಳು ಶರಣಾಗತ ರಕ್ಷಕನಾದ ಸರ್ವಲೋಕನಾಯಕನಾದ ಚಿದಾನಂದ ವಿಗ್ರಹನಾದ ಎಲೈ ಶಂಭುವೆ! ಜಯಜಯ, ಲೋಕದಲ್ಲಿ ಆವ ಬುಧೋತ್ತಮರು ನಿನ್ನಂ ಗಜಚರ್ಮಾಂಬರನಾಗಿ ವರ್ಣಿಸುವರೋ ಅವರಿಗೆ ಆರಿಂದಲು ಭಯವಿಲ್ಲವು, ಅವರು ಸಮಸ್ತರಿಗು ವಂದ್ಯರಾಗಿ ಪೂಜ್ಯರಾಗಿರಲೆಂದು ಪರಮೇಶ್ವರನಂ ಪ್ರಾರ್ಥಿಸಿ ಸ್ತೋತ್ರವಂ ಮಾಡಲಾಗಿ ಮಹಾದೇವನು ಹಾಗೆ ಆಗಲೆಂದು ವರವನಿತ್ತು ಅಂತರ್ಧಾನವಾದನು. ಆಗ ಬ್ರಹ್ಮವಿಷ್ಣು ಮುಂತಾದ ದೇವತೆಗಳು ಅತ್ಯಂತ ಸಂತುಷ್ಟರಾದರು. ಎಲೈ ದಕ್ಷನೆ! ವಿಶ್ವಾಧಿಕನಾದ ಶಿವನು ಹೀಗೆ ಮಹಾ ಭಯಂಕರನಾದ ಮತ್ತೆ ಆವಾಗಲು ದೇವತೆಗಳಿಗು ಋಷಿಗಳಿಗು ಕಂಟಕನಾದ ಆ ಗಜಾಸುರನಂ ಸಂಹರಿಸಿ, ಸಕಲರಂ ರಕ್ಷಿಸಿ, ಈ ಕಥೆಯು ಲೋಕದಲ್ಲಿ ಪ್ರಸಿದ್ಧವಾಗಿರುವದಕ್ಕೋಸುಗ ಆತನ ಚರ್ಮವಂ ಧರಿಸಿದನು. ಅದು ಕಾರಣದಿಂದ ಈ ಶಿವಂಗೆ ಗಜಚರ್ಮ

ಧಾರಣವು ದೂಷಣವಲ್ಲ; ಮುಖ್ಯವಾಗಿ ಭೂಷಣವೆಂದು ದಧೀಚಿಯು ಪೇಳಿದ
ನೆಂದು ಸೂತಂ ನಿರೂಪಿಸಿದ ನೆಂಬಲ್ಲಿಗೆ ದಕ್ಷಕಾಂಡದೊಳು
ಹದಿನೈದನೆಯ ಅಧ್ಯಾಯವು ಸಂಪೂರ್ಣಮಾದುದು.

ಹದಿನಾರನೆಯ ಅಧ್ಯಾಯವು.

ವಿಷ್ಣುವಿನ ವರಾಹಕೂರ್ಮಾವತಾರ ದರ್ಪದಳನಲೀಲೆ.

ಎಲೈ, ಋಷಿಗಳಿರಾ! ಮರಳಿ ಆ ದಧೀಚಿಯು, ಎಲೆ, ದಕ್ಷನೆ! ಮತ್ತೊಂದು ಉಪಾಖ್ಯಾನವಂ ಪೇಳುವೆನು, ಕೇಳು; ಏನೆಂದರೆ, ಪೂರ್ವದಲ್ಲಿ ಹಿರಣ್ಯಾಕನೆಂಬ ಅಸುರನು ಈ ಭೂಮಿಯನ್ನು ಯೆತ್ತಿಕ್ಕೊಂಡು ವೇಗದಿಂ ಪಾತಾಳಲೋಕಕ್ಕೆ ಪೋಗಲಾಗಿ, ಆಗ ದಾನವಾಂತಕನಾದ ವಿಷ್ಣುವು ಬ್ರಹ್ಮನ ನಾಸಿಕೆಯಿಂ ಪೊರಮಟ್ಟು ಆ ದಾನವಾಧಮನಂ ಸಂಹರಿಸಲೋಸುಗ ವರಾಹರೂಪವಂ ಧರಿಸಿ ಪಾತಾಳಕ್ಕೆ ಪೋಗಿ ಅಲ್ಲಿರ್ದ ಹಿರಣ್ಯಾಕ್ಷನಂ ಸಂಹರಿಸಿ ಪೂರ್ವದಂತೆ ಭೂಮಿಯಂ ಸ್ಥಾಪಿಸಿ ಪಾಪಿಯಾದ ಆ ದೈತ್ಯನ ರಕ್ತಪಾನದಿಂ ಮತ್ತನಾಗಿ, ಆವನಿಗಿಂತಲು ಅಧಿಕವಾಗಿ ಸಕಲ ಲೋಕಗಳಂ ಬಾಧಿಸಿದನು. ಆಗ ದೇವತೆಗಳು ಮಹಾದೇವನಂ ಮರೆಯೊಕ್ಕು ವರಾಹರೂಪಿಯಾದ ವಿಷ್ಣುವಿನಿಂ ರಾತ್ರಿ ಹಗಲು ಬಾಧಿತರಾದ ನಮ್ಮನ್ನು ರಕ್ಷಿಸೆಂದು ಬಿನ್ನೈಸಲಾಗಿ, ಚಂದ್ರಶೇಖರನು ದೇವತೆಗಳ ವಾಕ್ಯವಂ ಕೇಳಿ ಆ ವರಾಹದ ದಂಷ್ಟ್ರವಂ ಕಿತ್ತು ಭಯಂಕರವಾದದಂ ಸಂಹರಿಸಿ ಸಮಸ್ತರಂ ರಕ್ಷಿಸಿದನು.

ಬಳಿಕ ಹರಿಯು ಅಜ್ಞಾನವಂ ಬಿಟ್ಟು ಭಕ್ತಾಭೀಷ್ಟಪ್ರದನಾದ ಮಹೇಶ್ವರನಂ ಕುರಿತು, ಎಲೈ ಪರಮೇಶ್ವರನೆ! ನಿನಗೆ ನಮಸ್ಕಾರವು; ಲೋಕೋಪದ್ರವಕಾರಿಗಳನ್ನು ಸಂಹರಿಸುತ್ತ ಕಾಲಸ್ವರೂಪನಾದ ಶಂಕರನೆ! ನಿನಗೋಸುಗ ಪ್ರಣಾಮವು; ಹೀಗೆಂದು ಮಹಾದೇವನಂ ಸ್ತುತಿಸಿ ತನ್ನ ದಂಷ್ಟ್ರೆಯಂ ತನ್ನಂ ರಕ್ಷಿಸಿದನೆಂಬ ಜ್ಞಾಪನೆಗೋಸುಗ ನೀನು ಅವುಗಳಂ ಧರಿಸಬೇಕು. ಇದನ್ನು ನೋಡುತಿದ್ದರೆ ನನ್ನ ಜ್ಞಾನವು ನಿವರ್ತಿಸಿ ಮರಳಿ ಬಾರದೆಂದು ಪ್ರಾರ್ಥಿಸಲಾಗಿ, ಸರ್ವಜ್ಞನಾದ ಕರುಣಾಕರನಾದ ಮಹೇಶ್ವರನು ಹಾಗೆ ಆಗಲೆಂದು ಅದಂ ಧರಿಸಿದನು.

ಇದಲ್ಲದೆ ಪೂರ್ವದಲ್ಲಿ ಕೂರ್ಮರೂಪಿಯಾದ ವಿಷ್ಣುವು ಮನೋಹರವಾದ ಗುಹೆಗಳುಳ್ಳ ಮಂದರಗಿರಿಯಂ ಧರಿಸಲಾಗಿ, ದೇವತೆಗಳು ಅಂದು ಅಮೃತಕ್ಕೋಸುಗ ಸಮುದ್ರವಂ ಮಥಿಸೆ ಆಗ ಸಮುದ್ರದಿಂ ಮಹತ್ತಾದ ಅಮೃತವು ಪುಟ್ಟಿದುದು. ಆ ಸಮಯದಲ್ಲಿ ದೇವಾಸುರರಿಗೆ ಅಮೃತಕ್ಕೋ

ಸುಗ ಯುದ್ಧ ಮುಂಟಾಗೆ, ಆ ಕೂರ್ಮ ರೂಪಿಯಾದ ವಿಷ್ಣುವು ತನ್ನಿಂದ ಅಮೃತವು ಪುಟ್ಟಿತೆಂದು ಗರ್ವಿಸಿ ಸಮುದ್ರವಂ ಕದಡಿತು. ಆ ವೇಳೆಯಲ್ಲಿ ಕ್ಷೀರಾಬ್ಧಿಯ ತೆರೆಗಳಿಂ ಲೋಕಂಗಳಿಗೆ ಬಾಧೆಯು ಪುಟ್ಟೆ ಅದಂ ದೇವತೆಗಳು ಸೈರಿಸಲಾರದೆ, ಬ್ರಹ್ಮನಂ ಮುಂದಿಟ್ಟುಕೊಂಡು ಕೈಲಾಸಗಿರಿಗೈದಿ ಮಹಾ ದೇವಂಗ ಬಿನ್ನಪಂಗೆಯ್ದುದು. ಆಗ ಮಹಾಬಲನಾದ ಶಿವನು ಅತಿಬಲವಾಗಿ ಪವ ಕೂರ್ಮನಂ ಸಂಹರಿಸಿ ಅದರಬೆನ್ನ ಅಸ್ಥಿಯಂ ತೆಗದು ದೇವತೆಗಳಿಂ ಪ್ರಾರ್ಥಿತನಾಗಿ ಧರಿಸಿದನು. ಮತ್ತಮಾ ಪರಮೇಶ್ವರನು ಲೋಕರಕ್ಷಣೆಗೋ ಸುಗ ಕಾಲಕೂಟ ವಿಷವನ್ನು ಪಾನಮಂ ಮಾಡಿದನು. ಅದಂ ಪೇಳುವೆನು ಕೇಳು.

ಪೂರ್ವದಲ್ಲಿ ದೇವಾಸುರರಿಗೆ ಮಹತ್ತಾದ ಯುದ್ಧ ಮುಂಟಾದುದು. ಆಗ ದೇವತೆಗಳು ಆವ ಉಪಾಯದಿಂ ತಮಗೆ ಮರಣವಿಲ್ಲೆಂದು ಚಿಂತಿಸಿ ಬ್ರಹ್ಮ ನೊಡನೆ ವಿಷ್ಣುವಿನ ಬಳಿಗೆ ಪೋಗಿ ಹೀಗೆ ಪೇಳಲಾಗಿ, ಆವಾಕ್ಯವಂ ಕೇಳಿ ವಿಷ್ಣುವು ತನ್ನ ಮನಸ್ಸಿನಲ್ಲಿ ಉಪಾಯಮಂ ತಿಳಿದು, ಅಮೃತ ಪಾನಮಂ ಮಾಡಿ ದೊಡೆ ಮರಣ ವಿಲ್ಲವೆಂದು ನುಡಿದು ಮಂದರಗಿರಿಯಂ ಮಂಥನಾಗಿ ಮಾಡಿ ಸರ್ಪರಾಜನಾದ ವಾಸುಕಿಯಂ ತೆಗೆನೇಣವಂ ಮಾಡಿ ದೇವತೆಗಳೊಡನೆ ಕ್ಷೀರ ಸಮುದ್ರವಂ ಮಥಿಸಲಾಗಿ, ಅಗಸರ್ಪದ ಉಚ್ಛ್ವಾಸ ನಿಶ್ವಾಸಗಳಿಂ ಕ್ಷೋಭಿ ಸಲ್ಪಟ್ಟ ಸಮುದ್ರದಿಂ ಭಯಂಕರವಾದ ಮಹತ್ತರವಾದ ಕಳಕಳಧ್ವನಿ ಯುಂ ಟಾದುದು. ಬಳಿಕ ಸರ್ಪಮುಖದಿಂ ಘೋರವಾದ ವಿಷವು ಆಬ್ಧಿಯಲ್ಲಿ ಪುಟ್ಟಿ ಅನೇಕ ಕೋಟಿ ಬಡಬಾಲನ ಯೋಗವೇಗಗಳುಳ್ಳದ್ದಾಗಿ ತನ್ಮಯವಾಗಿ ದಶ ದಿಕ್ಕುಗಳನ್ನು ಸಮುದ್ರವನ್ನು ಆವರಿಸಿದುದು. ಆಗ ದೇವತೆಗಳು ನೇಣುಪಗ್ಗ ವಾದ ವಾಸುಕಿಯಂ ಬಿಟ್ಟು ಶೀಘ್ರದಿಂ ಪಲಾಯನವನೈದಿದರು. ಜ್ವಾಲೆ ಯಿಂ ಮಹತ್ತರವಾದ ಭಯವುಂಟಾದುದು. ಮತ್ತಂ ಮುಕುಂದನು ಶಕ್ತಿ ಯಿಂ ಮಂದವಾದನು. ಬ್ರಹ್ಮನು ಬುದ್ಧಿಹೀನನಾದನು. ವಾಯುವು ಅಶಕ್ತ ನಾದನು. ವರುಣನು ಕಾಲುಗೆಟ್ಟನು. ಕುಬೇರನು ನಿರ್ವ್ಯಾಪಾರನಾದನು. ಹೀಗೆ ಸಕಲ ದೇವತೆಗಳು ವಿಷಾಗ್ನಿಯಿಂ ದಗ್ಧರಾಗಿ ಹಾಹಾಕಾರದಿಂ ಕೂಗುತ್ತ ಶಿವನೇ ರಕ್ಷಕನೆಂದು ತಿಳಿದು ಸರ್ವ ದುಃಖ ನಿವಾರಕವಾದ ಕೈಲಾಸಗಿರಿಗೆ ಕಳಕಳಧ್ವನಿಯಿಂ ಮಾಡುತ ಪೋದರು. ಎಲೈ, ದಕ್ಷನೆ! ಹರಿಯು ವಿಷಾಗ್ನಿ ಯಿಂ ದಹಿಸಲ್ಪಟ್ಟ ಸರ್ವಾಂಗಗಳುಳ್ಳವನಾಗಿ ಕೃಷ್ಣನಾದನು. ದೇವತೆಗಳು ಆ ಕೈಲಾಸಪರ್ವತದಲ್ಲಿ ಶಿವಾಲಯದ್ವಾರದೊಳು ಗಣನಾಯಕನಾದ ನಂದಿಕೇಶ್ವ ರನಂ ಕಂಡು ನಮಸ್ಕಾರಮಂ ಮಾಡಿ ದುಃಖಾತುರರಾಗಿ ಈ ವೃತ್ತಾಂತವಂ

ಬಿನ್ನೈಸಲಾಗಿ ನಂದಿಕೇಶ್ವರನು ದಯೆಯಿಂದವರ ವಾಕ್ಯವಂ ಕೇಳಿ ದೇವತೆಗಳನ್ನಲ್ಲಿ ನಿಲ್ಲಿಸಿ, ಮರಳಿ ಬ್ರಹ್ಮವಿಷ್ಣು ದಿಕ್ಪಾಲಕರಂ ಸಹ ಶೀಘ್ರದಿಂ ದಂತಃಪುರಕ್ಕೆ ಕರೆದುಕ್ಕೊಂಡು ಪೋಗಿ ಪಂಚಮಾವರಣದಲ್ಲಿ ನಿಲ್ಲಿಸಿ, ತಾನು ಒಳಕ್ಕೆ ಪೋಗಿ ಅವರ ಆಗುಮನವಂ ಶಿವಂಗೆ ಪೇಳಿ, ಆ ಶಿವಾಜ್ಞೆಯಿಂ ಬ್ರಹ್ಮಾದಿಗಳಂ ಸಮೀಪವ ನೈದಿಸಲಾಗಿ, ಅವರುಗಳು ಶಿವಂಗೆ ನಮಸ್ಕರಿಸಿ ಭಕ್ತಿಯಿಂ ವೇದಾಂತ ವಾಕ್ಯಂಗಳಿಂ ಸ್ತುತಿಸಿದರು. ಬಳಿಕ ಮಹೇಶ್ವರನು ಸಂತುಷ್ಟನಾಗಿ ಆ ಬ್ರಹ್ಮ ವಿಷ್ಣು ಮುಂತಾದವರಂ ನೋಡಿ ಎಲೈ ವಿಷ್ಣುವೆ! ಶುದ್ಧಸ್ಫಟಿಕ ವರ್ಣನಾದ ನೀನು ದಾವಾಗ್ನಿಯಿಂ ದಗ್ಧವಾದ ತರುವಿನಂತೆ ಅತ್ಯಂತ ಕೃಷ್ಣನಾದೆ, ನೀನು ಪುಂಡರೀಕ ನಯನನಾದರು ರಕ್ತನೇತ್ರನಾಗಿ ಮಿಂಚಿಸುತಿರ್ದ ನಿನ್ನ ಶರೀರವು ದಗ್ಧವಾದಂತೆ ಕಾಣ್ಬರುವದು. ತಪ್ತಕಾಂಚನ ವರ್ಣನಾದ ಬ್ರಹ್ಮನು ವಿವರ್ಣನಾದನು. ಇದೇನು ಕಾರಣವು, ಎಂದು ಕೇಳಲಾಗಿ, ಆ ವಾಕ್ಯವಂ ಕೇಳಿ ಹರಿಯು ಭೋ, ಮಹಾದೇವನೆ! ಈ ದೇವತೆಗಳು ಅಮೃತೇಚ್ಛೆಯಿಂದ ನಿಮಗೆ ಪೇಳದೆ ಕ್ಷೀರಸಮುದ್ರವಂ ಮಥಿಸಿದರು. ಘೋರವಾದ ಕಾಲಾಗ್ನಿ ಸದೃಶವಾದ ವಿಷವು ಪುಟ್ಟಿದುದು. ಅದರ ಜ್ವಾಲೆಯಿಂದ ವ್ಯಾಪಿಸಲ್ಪಟ್ಟ ಶರೀರವುಳ್ಳವರಾಗಿ ಸಮಸ್ತ ದೇವತೆಗಳು ರಕ್ಷಕನಿಲ್ಲದೆ ಸದಾಶಿವನಾದ ನಿನ್ನನ್ನು ಶರಣವನ್ನೈದಿದರು. ನಾನು ಪಲಾಯನವಾಗುವ ದೇವತೆಗಳ ಬಳಿವಿಡಿದು ಬರಲಾಗಿ ನನ್ನ ಶರೀರವು ವಿಶೇಷವಾಗಿ ದಗ್ಧವಾದುದು. ಎಲೈ, ಮಹೇಶನೆ! ಈ ಪ್ರಪಂಚವು ಅಘೋರವಾದ ವಿಷದಿಂ ಬಾಧಿಸಲ್ಪಟ್ಟಿತು. ಮತ್ತಂ ಕೃಷ್ಣನಾದ ಅನನ್ಯಶರಣನಾದ ನನ್ನನು, ದೇವತೆಗಳಂ ರಕ್ಷಿಸು ರಕ್ಷಿಸು. ಎಲೈ ಪ್ರಭುವೆ ವಿಶ್ವಾಧಿಕನೆ! ಕೃಪಾಂಬುಧಿಯೆ! ಸರ್ವಾತ್ಮಕನಾಗಿ ಸರ್ವವ್ಯಾಪಿಯಾದ ದೀನ ಅನಾಥಸ್ವಾಮಿಯೆ! ನೀನು ವಿಳಂಬವಂ ಮಾಡಲಾಗದು. ಎಂದು ನುಡಿಯುತ್ತ ಅಡಿಗಡಿಗೆ ನಮಸ್ಕರಿಸಿದನೆಂದು ಸೂತಂ ಶೌನಕಾದಿ ಮುನಿಗಳಿಗೆ ಪೇಳಿದನೆಂಬಿಲ್ಲಿಗೆ ದಕ್ಷಕಾಂಡದಲ್ಲಿ ಹದಿನಾರನೆಯ ಅಧ್ಯಾಯವು ಸಂಪೂರ್ಣವಾದುದು.

ಹದಿನೇಳನೆಯ ಅಧ್ಯಾಯವು.

ಪರಶಿವನ ಗರಳಪಾನ ಲೀಲೆ.

ಎಲೈ ಮುನಿಗಳಿರಾ! ಅನಂತರದಲ್ಲಿ ಶಿವನು ವಿಷ್ಣುವಿನ ವಾಕ್ಯವಂ ಕೇಳಿ, ಕಾಲಕೂಟ ವಿಷವಂ ಪಾನವಂ ಮಾಡಿದ ಸಂಗತಿಯಂ ಪೇಳುವೆನು ಕೇಳುವರಾಗಿ,

ಆ ಸಮಯದಲ್ಲಿ ಬಹಿರಾವರಣದಲ್ಲಿರ್ಪ ಸಮಸ್ತ ದೇವತೆಗಳು ಶರಣಾಗತವತ್ಸಲನಾದ ಮಹಾದೇವನಂ ಕುರಿತು, ಎಲೈ ಮಹಾದೇವನೆ! ಮಹತ್ತಾದ ವಿಷಾಗ್ನಿಯಿಂ ಬಾಧಿಸಲ್ಪಟ್ಟ ಸಕಲ ದೇವತೆಗಳನ್ನು ರಕ್ಷಿಸು. ಶರಣವನ್ನೈದಿದ ನಾವು ಅನ್ಯರನರಿಯೆವು, ನೀನೆ ರಕ್ಷಿಸೆಂದು ಒಂದೇ ವೇಳೆಯಲ್ಲಿ ಮೊರೆಯಿಡಲಾಗಿ, ಕರುಣಾಕರನಾದ ಶಂಕರನು ಆ ದೇವತೆಗಳ ನಾನಾ ವಿಧವಾದ ಧ್ವನಿಗಳಂ ಕೇಳಿ ಇದೇನೆಂದು ಬ್ರಹ್ಮನಂ ಕೇಳಿದನು. ಬಳಿಕ ಆ ಬ್ರಹ್ಮನು ವಿಶ್ವರಕ್ಷಕನಾದ ಈಶ್ವರನಂ ಕುರಿತು, ಎಲೈ ಪರಮೇಶ್ವರನೆ! ಘೋರವಿಷಾಗ್ನಿಯಿಂ ದಗ್ಧರಾಗಿ ಖಿನ್ನರಾದ ಮತ್ತೆ ನಿನ್ನನ್ನೆ ಶರಣುಹೊಕ್ಕ ಸಮಸ್ತ ದೇವಾಸುರರು ತಪೋಧನರಾದ ಋಷಿಗಳ್ವೆರಸಿ ಬಹಿರಾವರಣದಲ್ಲಿ ನಿಂತಿಹರು. ಭಯಂಕರವಾದ ಆ ವಿಷಾಗ್ನಿಯಂ ಸೈರಿಸಲಾರದೆ ಮೊರೆಯಿಡುತಲಿರ್ದಾರೆ, ಅವರಂ ರಕ್ಷಿಸಬೇಕೆಂದು ನುಡಿಯಲಾಗಿ, ದೇವೇಶ್ವರನಾದ ಶಂಕರನು ನಂದಿಕೇಶ್ವರನಂ ನೋಡಿ ದಯೆಯಿಂ ಭ್ರೂಸನ್ನೆಯಂ ಮಾಡಿದನು. ಬಳಿಕ ನಂದೀಶ್ವರನು ಸ್ವಾಮಿಯ ಇಂಗಿತವನರಿತು ಮರಳಿ ತಾನು ಬಹಿರಾವರಣಕ್ಕೆ ಪೋಗಿ ಆ ದೇವಾಸುರರಂ ಋಷಿಗಳಂ ಸ್ವಾಮಿಯ ಸಮೀಪಕ್ಕೆ ಕರತರಲಾಗಿ, ಆ ದೇವಾದಿಗಳು ಚಂದ್ರಶೇಖರನಾದ ಮಹಾದೇವನಂ ನೋಡಿ ಭೂಮಿಯಲ್ಲಿ ದಂಡವತ್ತಾಗಿ ಬಿದ್ದು ನಮಸ್ಕಾರವಂ ಮಾಡಿ ಸ್ತುತಿಸಿದರು. ಆ ಸಮಯದಲ್ಲಿ ದಯಾನಿಧಿಯಾದ ಗೌರಿದೇವಿಯು ದೇವತೆಗಳಂ ನೋಡಿ ದಯೆಯಂಗೈದು, ಎಲೈ ಈಶ್ವರನೆ! ಇವರನ್ನು ರಕ್ಷಿಸೆಂದು ಪೇಳೆ, ಆಗ ಶಿವನು ಸಮೀಪದಲ್ಲಿರ್ದ ಸುಂದರನಾದ ಗಣಾಧೀಶ್ವರನಂ ನೋಡಿ ಎಲೆ ನೀನು ಶೀಘ್ರನಾಗಿ ಆ ವಿಷವಂ ಕೊಂಡೊಯ್ಯುವನಾಗೆಂದು ನುಡಿದು ಗಣನಾಯಕನಂ ಕಳುಹಿದನು. ಬಳಿಕ ಆತನು ಪೊರಮಟ್ಟು ಕರವಂ ನೀಡಿ ಆ ವಿಷವನ್ನು ಗ್ರಹಿಸೆ, ಅದು ಆತನ ಕರ ಕಮಲದಲ್ಲಿ ಭ್ರಮರದೋಪಾದಿಯಲ್ಲಿ ಶೋಭಿಸಿತು. ಬಳಿಕ ಸುಂದರನು ಆ ಸ್ವಾಮಿಯ ಆಜ್ಞೆಯಿಂದ ವಿಷವನ್ನು ಶಂಭುವಿನ ಕೈಯಲ್ಲಿ ಕೊಡಲಾಗಿ, ಆಗ ವಿಷವು ಮಹೇಶ್ವರನ ಪಾಣಿಯಲ್ಲಿ ಕಸ್ತೂರಿಯ ಬಿಂದುವಂತೊಪ್ಪಿತು.

ಅನಂತರದಲ್ಲಿ ಸದಾಶಿವನು ಪರಮ ಭೀತರಾದ ದೇವತೆಗಳಂ ನೋಡಿ ಈ ವಿಷವನ್ನು ಸ್ವೀಕರಿಸಲೋ ದೂರದಲ್ಲಿ ವಿಸರ್ಜನೆಯಂ ಮಾಡಲೋ ಎಂದು ಪೇಳಲಾಗಿ, ಆಗ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಆ ಸ್ವಾಮಿಯ ವಾಕ್ಯವಂ ಕೇಳಿ, ಎಲೈ ಭಗವಂತನೆ! ದೂರದಲ್ಲಿ ವಿಸರ್ಜಿಸಿದೊಡೆ ಮರಳಿ ಬರುವದೋ ಏನೋ ಎಂದು ಮಹಾ ಭೀತಿಯಿರುವದು, ನಿಮ್ಮ ಕರಕಮಲದಲ್ಲಿರುವದಂ ನೋಡಿ ಭೀತಿ ಪೋದುದು. ಸರ್ವಜ್ಞನಾದ ಪರಾತ್ಪರನಾದ ಸರ್ವರಕ್ಷಾ ಪರಾಯಣನಾಗಿ

ಮೃತ್ಯುಂಜಯನಾದ ಮಹೇಶ್ವರನಾದ ನೀನು ಉಚಿತವಂ ನೋಡಿ ದೇವತೆಗಳಾದ ನಮ್ಮನ್ನು ರಕ್ಷಿಸು, ಸರ್ವ ಭೂತಾಂತರ್ಯಾಮಿಯಾದ ಸರ್ವಭಕ್ಷಕನಾದ ಶಂಭುವೆ ನಿನಗೋಸುಗ ನಮಸ್ಕಾರವೆಂದು ಸ್ತುತಿಸಿ ಪ್ರಣಾಮವಂ ಮಾಡಿದರು.

ಬಳಿಕ ಕೃಪಾಂಭೋನಿಧಿಯಾದ ಅಖಂಡನಾದ ಶಂಭುವು ಸ್ಮಿತಮುಖ ಕಮಲಕಾಂತಿಯುಳ್ಳ ಪಾರ್ವತೀದೇವಿಯಂ ನೋಡುತ್ತ ಆ ವಿಷವನ್ನು ಪಾನವಂ ಮಾಡಲಾಗಿ, ಅತ್ಯಂತ ನೀಲವರ್ಣಮಾದ ಆ ವಿಷವು ಕಂಠ ಪರ್ಯಂತವು ಯಾವಾಗ ಪೋದುದೋ ಆ ವೇಳೆಯಲ್ಲಿ ಸಮಸ್ತರಾದ ದೇವತೆಗಳು ಅಂಜಲಿಬಂಧವನೆಸಗಿ ಶೀಘ್ರವಾಗಿ ಬಂದು, ದೇವದೇವನಾದ ಭಕ್ತವತ್ಸಲನಾದ ಅನಂತ ಮಹಿಮನಾದ ಎಲೈ ಮಹಾದೇವನೆ! ಬ್ರಹ್ಮಾದಿಗಳು ಸರ್ವಭಕ್ಷಕನಾದ ಆವನಾನೊಬ್ಬ ಶೂಲಿಗೆ ಬ್ರಹ್ಮ ಕ್ಷತ್ರವೆರಡು ಓದನವೆಂದು ಮೃತ್ಯುವಾವ ಅಂಗವು ವ್ಯಜನವೆಂದುನ್ನು ಪೇಳುತಿರುವರೊ, ಅಂಥ ನಿನ್ನ ಶುದ್ಧ ಸ್ಫಟಿಕವಾದ ಕಂಠದಲ್ಲಿಯೆ ಮಹಾ ಕ್ರೂರವಾದ ವಿಷವನ್ನು ನಿಲ್ಲಿಸು. ನಿನ್ನ ಕಂಠದಲ್ಲಿರುವ ಈ ವಿಷವು ನಿನಗೆ ಅದ್ಭುತವಾದ ಅಲಂಕಾರವು, ಮತ್ತು ವಿಷದಗ್ಧರಾದ ದೇವತೆಗಳಾದ ನಮ್ಮ ಪೆಂಗಳ ಕಂಠಂಗಳಲ್ಲಿರ್ಪ ಮಂಗಳ ಸೂತ್ರಂಗಳಿಂದಿಗೆ ನಿಜವಾದವು, ಎಲೈ ದೇವನೆ! ವಿಷಪಾನವಂ ಮಾಡಿ ಸಮಸ್ತ ದೇವತೆಗಳಂ ರಕ್ಷಿಸಿದ ನಿಮ್ಮನ್ನು ಆವಾಗಲು ಮರೆಯೆವು ಎಂದು ಈ ಪ್ರಕಾರಮಾಗಿ ಅನೇಕ ಉಪಚಾರಂಗಳಂ ಮಾಡಲಾಗಿ ಮಹೇಶ್ವರನಾದ ಶಂಭುವು ಆ ವಿಷವನ್ನು ಕಂಠದಲ್ಲಿಯೆ ನಿಲ್ಲಿಸಿದನು.

ಎಲೈ ದಕ್ಷನೆ! ಸರ್ವತಂತ್ರ ಸ್ವತಂತ್ರನಾದ ಈ ಈಶ್ವರನ ಮಹಿಮೆಯಂ ಪೇಳಲು ಆರಿಂದಲು ಶಕ್ಯವಲ್ಲ, ಅನಂತರದಲ್ಲಿ ದೇವತೆಗಳು ಸಂತುಷ್ಟರಾಗಿ ದೇವೇಶನಾದ ನೀಲಕಂಠನಾದ ಶಂಭುವಿಗೋಸುಗ ನಮಸ್ಕಾರವು, ಎಲೈ ದಯಾನಿಧಿಯೆ! ಈ ಲೋಕವು ಇಂದು ಮೊದಲಾಗಿ ಮಹೇಶ್ವರನಾದ ಭಗವಂತನಾದ ನಿನ್ನನ್ನು ನೀಲಕಂಠನೆಂದು ಯಾವಾಗಲು ತಿಳಿಯಲೆಂದು ಸ್ತುತಿಸಿದರು. ಆಗ ಮಹಾದೇವನು ಅವರ ಸ್ತೋತ್ರದಿಂ ಸಂತುಷ್ಟನಾಗಿ ಅವರಂ ನೋಡಿ, ಎಲೈ ದೇವತೆಗಳಿರಾ! ನೀವು ಕ್ಷೀರಸಮುದ್ರವಂ ನಮ್ಮಾಜ್ಞೆಯಿಂ ಮಥಿಸಿ ಶಂಕೆಯಿಲ್ಲದೆ ಪುಟ್ಟಿದ ಅಮೃತವಂ ಪಾನವಂ ಮಾಡಿರಿ, ಶೀಘ್ರದಿಂದ ಅಮೃತವು ಉತ್ಪನ್ನವಾಗುವದೆಂದು ದಯದಿಂ ಪೇಳಲಾಗಿ, ಆ ದೇವತೆಗಳು ಸಂತುಷ್ಟರಾಗಿ ಗಿರಿಜಾಪತಿಗೆ ನಮಸ್ಕಾರವಂ ಮಾಡಿ ಆ ಸ್ವಾಮಿಯಿಂದನುಜ್ಞಾತರಾಗಿ ಕ್ಷೀರಾಂಬುಧಿಗೆ ಸಾರಿ ಪೂರ್ವದಂತೆ ಮಥಿಸಿ ಉತ್ತಮವಾದ ಅಮೃತವಂ ಪಡದು ಅಮೃತತ್ವಕ್ಕೋಸುಗ ಆ ಅಮೃತವನ್ನು ಪಾನವಮಾಡಿದರೆಂದು ದಧೀಚಿಯು ದಕ್ಷಂಗೆ

ಹೇಳಿದನೆಂಬದಾಗಿ ಸೂತಂ ಶೌನಕಾದಿ ಮುನಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ದಕ್ಷಕಾಂಡದಲ್ಲಿ ಹದಿನೇಳನೆಯ ಅಧ್ಯಾಯವು ಸಂಪೂರ್ಣವಾದುದು.

ಹದಿನೆಂಟನೆಯ ಅಧ್ಯಾಯವು.

ಪರಶಿವನ ಭಿಕ್ಷಾಟನಲೀಲೆ, ಬ್ರಹ್ಮ ವಿಷ್ಣುಗಳಿಬ್ಬರ ಹಮ್ಮು. ಬ್ರಹ್ಮ ಶಿರಚ್ಛೇದನ.

ಎಲೈ ಋಷಿಗಳಿರಾ! ಮತ್ತಮಾ ದಧೀಚಿ ಮುನಿಯು ಆ ದಕ್ಷನಂ ಕುರಿತು ಎಲೈ ದಕ್ಷನೆ! ಪರಮೇಶ್ವರನು ದೇವತೆಗಳನ್ನು ರಕ್ಷಿಸುವುದಕ್ಕೋಸುಗ ಘೋರವಾದ ವಿಷವಂ ಪಾನವ ಮಾಡಿ ನೀಲಕಂಠನಾದನೆಂದು ಪ್ರಸಿದ್ಧನಾದನೆಂದು ನಿರೂಪಿಸಲ್ಪಟ್ಟದ್ದು ಸರಿಯಷ್ಟೆ, ಆ ಸ್ವಾಮಿಯು ಗ್ರಾಮಗ್ರಾಮದಲ್ಲಿಯು ಭಿಕ್ಷಾಟನವಂ ಮಾಡಿದನೆಂಬ ಶಿವಚರಿತ್ರೆಯಂ ಹೇಳುತಲಿರ್ಪೆನೆ! ನೀನಜ್ಞಾನವಂ ಬಿಟ್ಟು ಸಾವಧಾನದಿಂ ಕೇಳು, ಏನೆಂದಡೆ, ಪೂರ್ವದಲ್ಲಿ ಹರಿಬ್ರಹ್ಮರು ಮೇರು ಪಾರ್ಶ್ವದಲ್ಲಿರ್ದರು. ಆಗ ಸಂದೇಹ ಮನಸ್ಸುಳ್ಳವರಾದ ದೇವತೆಗಳು ಋಷಿಗಳು ಸಹ ಆ ಹರಿಬ್ರಹ್ಮರ ಸಮೀಪವನೈದಿ ನಮಸ್ಕಾರವಂ ಮಾಡಿ, ಎಲೈ ಹರಿಯೆ! ಬ್ರಹ್ಮನೆ! ಸರ್ವದೇವತೆಗಳಿಗು ವ್ಯಾಪಕನಾದ ಪ್ರಭುವಾದ ಅಂತರ್ಯಾಮಿಯಾದ ಪರಮಾತ್ಮನಾದ ಪರಂಜ್ಯೋತಿಯಾದ ಮತ್ತೆ ಸಮಸ್ತ ಭೂತಂಗಳ ಸೃಷ್ಟಿಸ್ಥಿತಿ ಸಂಹಾರಕನಾದ ದೇವನಾರೆಂದು ಕೇಳಲಾಗಿ, ಬ್ರಹ್ಮನು ಅವರ ವಾಕ್ಯವಂ ಕೇಳಿ, ಎಲೈ ದೇವತೆಗಳಿರಾ! ನಾನೆ ಈ ಜಗತ್ತನ್ನು ಸೃಜಿಸುವವನು, ನನ್ನಿಂದಲೆ ಸಮಸ್ತವು ಚೇಷ್ಟಿಸುತಲಿರುವುದು ಇದು ನನ್ನಾಜ್ಞೆಯಿಂದ ನನ್ನಲ್ಲಿಯೆ ಲಯವನೈದುವದೆಂದು ಹೇಳಿದನು. ಬಳಿಕ ಹರಿಯು ಹಾಗೆ ಹೇಳುತಲಿರುವ ಬ್ರಹ್ಮನಂ ನೋಡಿ, ಎಲೈ ಬ್ರಹ್ಮನೆ! ನಾನು ನಿನ್ನನ್ನು ಪ್ರಥಮದಲ್ಲಿ ಸೃಷ್ಟಿಸಿ ಈ ಜಗವನ್ನು ಸೃಜಿಸುತಲು ವಿಸರ್ಜಿಸುತಲು ಇರ್ಪೆನೆ, ಜಗತ್ಕರ್ತನು ನಾನೊರ್ವನಲ್ಲದೆ ಮತ್ತೊರ್ವನಿಲ್ಲ, ನನ್ನಿಂದಲೆ ಸಮಸ್ತವು ಪುಟ್ಟುತಲಿರುವದು, ಆವುದಾನೊಂದು ಕಾರಣದಿಂ ನಾನು ಜಗನ್ಮೂಲವೋ ಅದು ಕಾರಣದಿಂದೀಜಗಕ್ಕೆ ಎಲ್ಲವು ವಿಷ್ಣುಮಯವೆಂದು ಹೇಳಿದನು. ಈ ಪ್ರಕಾರವಾಗಿ ಇವರೀರ್ವರು ಅಜ್ಞಾನವಶಂಗತರಾಗಿ ತಾನೆ ಪರಬ್ರಹ್ಮವು ನೀನಲ್ಲವೆಂದು ಪರಸ್ಪರವಾಗಿ ಉತ್ತರ ಪ್ರತ್ಯುತ್ತರಗಳನ್ನಾಡುತ ಯುದ್ಧವಂ ಮಾಡೆ, ಆಗ ಸಮಸ್ತ ದೇವತೆಗಳು ಋಷಿಗಳು ಭೀತರಾಗಿ ತಮ್ಮ ತಮ್ಮ ಗೃಹಂಗಳಿಗೆ ಪೋದರು.

ಹೀಗೆ ಬಹುಕಾಲವು ಕಳೆಯಲಾಗಿ. ಪ್ರಣವ ಪೂರ್ವಕನಾದ ಭಗವಂತ

ನಾದ ತತ್ವಾರ್ಥ ಬೋಧಕನಾದ ದೇವನು ಅಲ್ಲಿಗೆ ಬಂದು ಎಲೈ ಹರಿಯೆ! ವಿಧಿಯೆ! ನೀವೀರ್ವರು ವ್ಯರ್ಥವಾಗಿ ಕಲಹವನ್ನು ಮಾಡುತಲಿದ್ಧೀರಿ, ಶಿವನೇ ಜಗತ್ಕರ್ತನು, ಮಹೇಶ್ವರನೆ ಪರಮಾತ್ಮನು, ವಿಶ್ವಾಧಿಕನಾದ ವಿಶ್ವಮಯನಾದ ರುದ್ರನೆ ಮಹಾತ್ಮನಾದ ಋಷಿಯು. ಆಕಾಶ ಮಧ್ಯಗತನಾದ ಶಂಭುವೆ ಸರ್ವೈಶ್ವರ್ಯಸಂಪನ್ನನು, ಈಶಾನನೆ ಅಣುವಿಗಿಂತಲು ಸೂಕ್ಷ್ಮನು ಮಹತ್ತಿಗೆಲ್ಲ ಮಹಂತನು, ಮತಿಗಳಿಗೆ ಜನಕನು ಪ್ರಭುವಾದ ಶಿವನೆ ಉಮಾಸಹಿತನಾಗಿ ದಿವಕ್ಕು ಭೂಮಿಗು ಶಕ್ರಂಗು ವಿಷ್ಣುವಿಗು ತಾನೆ ಜನಕನೆಂದು ನಿರೂಪಿಸಲಾಗಿ ಅಜ್ಞಾನ ವಶಂಗತರಾದ ಇವರು ಆ ವಾಕ್ಯವಂ ಕೇಳಿ ಅದನ್ನಂಗೀಕರಿಸದೆ ಪೂರ್ವದಂತೆ ಮರಳಿಯು ಕಲಹವಂ ಮಾಡಿದರು.

ಬಳಿಕ ಪರಮಾತ್ಮನಾದ ದೇವನಾದ ಮಹೇಶ್ವರನು ಅಹಂಕಾರವಶದಿಂದಿವರು ಭಿನ್ನರಾಗಿದಾರೆ, ಇವರೀರ್ವರ ಗರ್ವವಂ ಮುರಿಯ ಬೇಕೆಂದು ನಿಶ್ಚೈಸಿ, ಶಿವನು ತಾನೆ ಕೋಟಿಸೂರ್ಯ ಪ್ರಕಾಶನಾಗಿ ಪ್ರಾದುರ್ಭವಿಸಲಾಗಿ, ಈ ಹರಿ ಬ್ರಹ್ಮರಿಗೆ ತಮ್ಮ ದೃಷ್ಟಿಯಿಂ ನೋಡಲು ಅಶಕ್ಯವಾದ ಆ ಪರಂ ಜ್ಯೋತಿಯಂ ನೋಡಿ ಇದೇನೆಂದು ಭೀತರಾಗಿ ವಿಶೇಷವಾಗಿ ವಿಚಾರವಂ ಮಾಡಿದರು. ಆ ಸಮಯದಲ್ಲಿ ಮಹೇಶ್ವರನಾದ ಶಿವನು ಅಂಬಾ ಸಮೇತನಾಗಿ ಅದ್ಭುತವಾದ ತನ್ನ ರೂಪವನ್ನು ಬ್ರಹ್ಮ ವಿಷ್ಣುಗಳಿಗೆ ತೋರಿಸಲಾಗಿ, ಹರಿಯು ಅನ್ವಯನಾಗಿ ಅಂಬಿಕಾಪತಿಯಾದ ಮಹಾದೇವನಂ ಕಂಡು ವೇಗದಿಂದೆದ್ದು ಮರಳಿ ನಮಸ್ಕಾರವಂ ಮಾಡಿ ಅನೇಕ ವಾಕ್ಯಂಗಳಿಂ ಸ್ತುತಿಸಿ ಕ್ಷೀರಾಬ್ಧಿಗೆ ಪೋದನು. ಬ್ರಹ್ಮನು ಮಹಾ ಅಜ್ಞಾನವಶನಾಗಿ ಮೂಢ ಬುದ್ಧಿಯುಳ್ಳವನಾಗಿ ಮಹೇಶ್ವರಂಗೆ ನಮಸ್ಕರಿಸವೆ ಊರ್ಧ್ವ ಮುಖದಿಂ ದೇವೇಶನಂ ನಿಂದಿಸಲಾಗಿ, ಆಗ ಉಮಾಪತಿಯು ಭೈರವನಂ ಸ್ಮರಿಸಿದನು. ಆಗ ಶಿವಾಜ್ಞೆಯಿಂ ಭಸ್ಮೋದ್ಧೂಳಿತ ಸರ್ವಾಂಗನಾಗಿ ಸರ್ಪವನ್ನೇ ಕಟಿ ಸೂತ್ರವಾಗಿ ಕಟ್ಟಿದವನಾಗಿ ಧ್ವನಿಸುತಲಿರುವ ಪಾದಕಟಕಂಗಳುಳ್ಳ ಕಪಾಲಮಾಲಾ ಭೂಷಿತನಾದ ಮತ್ತೆ ಪರಶು ಶೂಲ ಪಾಶ ಡಮರುಗಗಳಂ ಧರಿಸಿ, ವ್ಯಕ್ತಾಕಾರನಾಗಿ ಪ್ರಕಾಶಿಸುತಲಿರುವ ನೇತ್ರಂಗಳುಳ್ಳ, ಕೆಂಬಣ್ಣವಾಗಿ ವಿಕಾರವಾದ ಜಡೆಗಳಿಂದತಿ ಭಯಂಕರನಾದೊಡಂ ಮಂದಸ್ಮಿತದಿಂ ಮನೋಹರನಾದ ಸಮಸ್ತ ಬ್ರಹ್ಮಾಂಡಂಗಳಂ ಭಕ್ಷಿಸಲು ಸಮರ್ಥನಾದ ಭೈರವನು ಪ್ರಾದುರ್ಭವಿಸಿ ಆ ಮಹಾದೇವಂಗೆ ನಮಸ್ಕರಿಸಿ ವಿನಯಾನ್ವಿತನಾಗಿ, ಜಗತ್ಪ್ರಭುವಾದ ಎಲೈ ಸ್ವಾಮಿಯೆ! ನನ್ನಿಂದ ಮಾಡಲ್ಪಡತಕ್ಕದ್ದೇನು? ನಿನಗೆ ಕಿಂಕರನಾದ ನನ್ನಲ್ಲಿ ದಯಪಾಲಿಸೆಂದು ಬಿನ್ನಪಂ ಗೈದನು.

ಪರಮೇಶ್ವರಾಜ್ಞಾಬದ್ಧನಾದ ಭೈರವನಲೀಲೆ.

ಬಳಿಕ ಮಹಾದೇವನು ಆ ಭೈರವನಂ ನೋಡಿ, ಎಲೈ! ನನ್ನಾಜ್ಞೆಯಿಂದ ಅಜ್ಞಾನಿಯಾಗಿ ನಮ್ಮನ್ನು ನಿಂದಿಸುತ್ತಲಿರುವ ಬ್ರಹ್ಮನ ಶಿರಸಂ ಛೇದಿಸಿ ಗರ್ವಸಂತರಾದ ವಿಷ್ಣ್ವಾದಿ ದೇವತೆಗಳಂ ಋಷಿಗಳಂ ಭಿಕ್ಷಾವ್ಯಾಜದಿಂ ಶೀಘ್ರವಾಗಿ ಪಾನವಂ ಮಾಡಿ, ಮೃತರಾದವರ್ಗೆ ಮರಳಿ ಜೀವಂಗಳನಿತ್ತು ಬ್ರಹ್ಮಾಂಡ ಊರ್ಧ್ವ ಭಾಗಕ್ಕೆ ಗಮಿಸಿ, ದೇವತೆಗಳಿಗೂ ಋಷಿಗಳಿಗೂ ರಕ್ಷಕನಾಗಿ ಭವನದಲ್ಲಿರೆಂದು ನಿರೂಪಿಸಿ ಅಂತರ್ಧಾನವಾದನು. ಬಳಿಕ ಭೈರವನು ಅತ್ಯಂತ ಕೋಪ ಉಳ್ಳವನಾಗಿ ಪರಮ ಭಯಂಕರನಾಗಿ ಕೋಪದಿಂ ಬ್ರಹ್ಮನ ಪಂಚಮ ಶಿರವಂ ಛೇದಿಸಲಾಗಿ ಆ ಬ್ರಹ್ಮನು ರಕ್ತ ಪ್ರವಾಹದಿಂ ಮುಳುಗಿ ಭೂಮಿಯಲ್ಲಿ ಬಿದ್ದು ಮೂರ್ಛೆಯನ್ನೈದಿದನು. ಭೈರವನು ಫಾಲನಯನದಿಂದಾತನ ರಕ್ತಂಗಳಂ ಶೋಷಿಸಿ ಕೃಪೆಯಿಂ ಮರಳಿ ಪ್ರಾಣವನ್ನೀಯಲಾಗಿ, ಆತನು ಶೀಘ್ರದಿಂದೆದ್ದು ಆ ಭೈರವನ ವೈಭವಂ ತಿಳಿದು ಅಜ್ಞಾನರಹಿತನಾಗಿ ಆತಂಗೆ ನಮಸ್ಕಾರವಂ ಮಾಡಿ, ಭಯಕಂಪಿತನಾಗಿ, ಎಲೈ ! ದೇವನೆ ಮಹಾ ಮೂಢನಾದ ನನ್ನ ಅಪರಾಧವಂ ಸಹಿಸು. ಮರಳಿ ನಿನ್ನಾಜ್ಞೆಯಿಂದೆನಗೆ ಅಜ್ಞಾನ ಉಂಟಾಗಲಾರದು. ನನಗೋಸುಗ ನನ್ನ ಶಿರೋಮುಂಡವಂ ಕಂಠದಲ್ಲಿ ಧರಿಸು. ನಿನ್ನ ಕರದಲ್ಲಿರ್ಪ ಕಪಾಲವು ನಿನಗೆ ಭಿಕ್ಷಾಪಾತ್ರವಾಗಲಿ ಇದರಿಂದ ನೀನು ಭಿಕ್ಷವಂ ಗ್ರಹಿಸೆಂದು ಬಿನ್ನಪಂ ಗೈದು ಅಡಿಗಡಿಗೆ ನಮಸ್ಕಾರವಂ ಮಾಡಲಾಗಿ, ಭೈರವನು ಆ ಕಪಾಲವಂ ಕೈಕೊಂಡು ಮೇರುಗಿರಿಯಿಂ ಪೊರಮಟ್ಟು ತನ್ನಿಚ್ಛೆಯಿರ ಭೂತಂಗಳಂ ಹಾಲಾಹಲ ಅಗ್ನಿಮುಖ ಸೋಮಕ ಮುಂತಾದ ಸೇನಾಪತಿಗಳಂ ಸೃಜಿಸಿ ಆ ಭೂತಂಗಳ ಸಂಬಂಧವಾದ ಬಹುಸೇನಾಪಳಿಗಳಿಂದ ಯುಕ್ತನಾಗಿ ರಕ್ತ ಭಿಕ್ಷಾವ್ಯಾಜದಿಂ ಭೂಲೋಕದಲ್ಲಿ ಸಂಚರಿಸುತ ಸಮಸ್ತ ಕಾನನಂಗಳಲ್ಲಿ ಮಹಾ ಪರ್ವತಂಗಳಲ್ಲಿಯು ಇರುವ ಗರ್ವಿತರಾದ ದೇವತೆಗಳ ಮತ್ತೆ ಋಷಿಗಳ ರಕ್ತ ಭಿಕ್ಷೆಗಳಂ ಕೈಕೊಂಡು, ಕಪಾಲದಲ್ಲಿ ಮೃತರಾದವರಿಗೆ ಲೀಲೆಯಿಂ ಪ್ರಾಣವಂ ಕೊಟ್ಟು ಎಲ್ಲಾ ಕಡೆಯಲ್ಲಿಯೂ ಸಂಚರಿಸಿ ಬಳಿಕ ವಿಷ್ಣು ಲೋಕಕ್ಕೆ ಪೋಗಿ ನಾನಾ ಧ್ವನಿಗಳಂ ಮಾಡುತ ಭೂತಗಳೊಡನೆ ಹರಿಯ ಗೃಹ ದ್ವಾರವನ್ನೈದಿದನು.

ಆಗ ಅತಿ ನಿಷ್ಠುರನಾದ ವಿಷ್ವಕ್ಸೇನನು ಅವರಂ ತಡೆಯೆ, ಆ ಭೈರವನು ಆತನನ್ನು ಕಪಾಲದಲ್ಲಿ ಬಡಿದು ಶೂಲದಿಂ ತಿವಿದು ಪ್ರೋಣಿಸಿಕೊಂಡು ಹರಿಯ ಬಳಿಗೆ ಪೋಗಲಾಗಿ, ಆಗ ಸರ್ಪಶಯನನಾದ ಹರಿಯು ಭಯದಿಂದೆದ್ದು ಶ್ರೀದೇವಿಯೊಡನೆ ಆತಂಗೆ ನಮಸ್ಕಾರವಂ ಮಾಡಿ ಭಯಂಕರನಾದ ಆ ಭೈರವನಂ

ನೋಡಿ, ಭಕ್ತರಿಗೆ ಅಭಯಪ್ರದನಾದ ಜಗದ್ಗುರುವಾದ ಎಲೈ ಸ್ವಾಮಿಯೇ! ಏನು ಕಾರಣದಿಂ ಬಂದೆ? ನಿನ್ನ ದರ್ಶನದಿಂ ಕೃತಾರ್ಥನಾದೆನು. ನಿನ್ನನ್ನಾಶ್ರಯಿಸಿದ ನನ್ನನ್ನು ರಕ್ಷಿಸೆಂದು ಪೇಳಿದನು. ಅನಂತರದಲ್ಲಿ ಭೈರವನು ಈ ವಾಕ್ಯವಂ ಕೇಳಿ, ಎಲೈ ಹರಿಯೆ! ನನಗೆ ರಕ್ತಭಿಕ್ಷವಂ ಕೊಡೆಂದು ನಿರೂಪಿಸಲಾಗಿ ಮಾಧವನು ಆ ಭೈರವನ ವಚನವಂ ಕೇಳಿ ಖಡ್ಗದಿಂ ತನ್ನ ಹಣೆಯಂ ಶೀಳಿ ರಕ್ತಧಾರೆಯಂ ಬಿಡೆ ಮಹತ್ತರವಾದ ರಕ್ತಧಾರೆಯು ಸಾವಿರ ವರ್ಷಂಗಳು ಪ್ರವಹಿಸಿ ಅದರಿಂದ ಮಾಧವನು ಮೂರ್ಛೆಯನ್ನೈದಿದನು. ಆಗ ಕಪಾಲವು ಅರ್ಧಮಾತ್ರ ತುಂಬಿತು. ಅನಂತರದಲ್ಲಿ ಶ್ರೀದೇವಿ ಭೂದೇವಿಯರೀರ್ವರು ಮಹಾ ಅಜ್ಞಾನದಿಂ ಬಿದ್ದಿರ್ಪ ಆ ಮಾಧವನಂ ನೋಡಿ, ಮಹಾತ್ಮನಾದ ಭೈರವನ ಪಾದವಂ ಪಿಡಿದು ದಯಾನಿಧಿಯಾದ, ಎಲೈ ಭೈರವೇಶ್ವರನೆ! ಹರಿಯಂ ರಕ್ಷಿಸಿ ನಮಗೆ ಮಾಂಗಲ್ಯಭಿಕ್ಷವಂ ಕೊಡೆಂದು ಪ್ರಾರ್ಥಿಸಲಾಗಿ, ಭೈರವನು ಪ್ರಸನ್ನನಾಗಿ ಆತಂಗೆ ಪ್ರಾಣವಂ ಕೊಡೆ, ಆತನೆದ್ದು ಭೈರವನನ್ನು ಸ್ತುತಿಸಿದನು. ಬಳಿಕ ಆ ಭೈರವನು ಹರಿಯಂ ನೋಡಿ ಸಮಸ್ತ ವಾದ್ಯಘೋಷಗಳ್ವೆರಸಿ ತನ್ನ ಗೃಹವನ್ನೈದಿದನು.

ಅನಂತರದಲ್ಲಿ ವಿಷ್ಣುವು ಬಳಿವಿಡಿದು ಪೋಗಿ ಶೂಲಾಗ್ರದಲ್ಲಿರ್ಪ ಆ ವಿಷ್ವಕ್ಸೇನನಂ ಬಿಡಿಸಿಕೊಂಡು ಬಂದನು. ಭೈರವನು ಮಹಾಧ್ವನಿಯುಳ್ಳವನಾಗಿ ಗಣಂಗಳೊಡನೆ ತನ್ನ ಭವನಕ್ಕೆ ಪೋದನು. ಮತ್ತಂ ಆ ಕಾಲಭೈರವನು ಒಂದು ಕಲ್ಪಾಂತರದಲ್ಲಿ ಈ ಬ್ರಹ್ಮ ವಿಷ್ಣು ಮುಂತಾದ ಸಮಸ್ತ ದೇವತೆಗಳಂ ಸಮಸ್ತ ಜಗತ್ತಂ ಸಹ್ಮರಿಸಿ ಕೋಲಾಹಲಧ್ವನಿಯಂ ಮಾಡಿ ಸ್ವೇಚ್ಛೆಯಿಂದ ಅವರ ಶಿರೋಮುಂಡಮಾಲಾಲಂಕೃತವಿಗ್ರಹನಾಗಿ, ಲಲಾಟಾಗ್ನಿಜ್ವಾಲೆಯಿಂದವರಂ ಸಹ್ಮರಿಸಿ, ಆ ಭಸ್ಮದಿಂದ ಲೇಪಿಸಲ್ಪಟ್ಟ ಶರೀರವುಳ್ಳವನಾಗಿ ಮಹಾ ಸ್ಮಶಾನದಲ್ಲಿ ಸಮಸ್ತ ದೇವತೆಗಳಂ ಶ್ವಾನಂಗಳಂ ಮಾಡಿ, ಅವರ ಮೇಲೆ ಕುಳಿತು ಆ ಶ್ವಾನಸಮೂಹದಿಂದಾವೃತನಾಗಿ, ಪರಶಿವನಂ ಧ್ಯಾನಿಸಿ ಪರಮಾನಂದಭರಿತನಾಗಿ ಅಲ್ಲಲ್ಲಿ ಚರಿಸುತಿರ್ದನು. ಎಲೈ ದಕ್ಷನೆ! ನಿನಗೆ ಈ ರಕ್ತಭಿಕ್ಷೆಯಂ ಪೇಳಿದೆನು. ಮರಳಿ ಇನ್ನೊಂದು ಚರಿತ್ರೆಯಂ ಪೇಳುವೆನೆಂದು ದಧೀಚಿಮುನಿಯು ಪೇಳಿದನೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ,

ದಕ್ಷಕಾಂಡದಲ್ಲಿ ಹದಿನೆಂಟನೆಯ ಅಧ್ಯಾಯವು

ಸಂಪೂರ್ಣವಾದುದು.

ಹತ್ತೊಂಬತ್ತನೆಯ ಅಧ್ಯಾಯವು.

ಧರ್ಮವು ವೃಷಭರೂಪ ತಾಳುವಿಕೆ.

ಎಲೈ ದಕ್ಷನೆ! ಚತುರ್ಯುಗ ಸಹಸ್ರಗಳು ಬ್ರಹ್ಮಂಗೆ ಒಂದು ಹಗಲು, ಮರಳಿ ಯುಗ ಸಹಸ್ರಗಳಾದೊಡೆ ಆತಂಗೆ ಒಂದು ನಿಶಿಯು ಆಗುವದು. ಇವೆರಡು ಕೂಡಿದೊಡೆ ಬ್ರಹ್ಮಂಗೆ ಅಹೋರಾತ್ರಿಯೆನಿಸಿಕೊಂಬುವದು. ಇಂಥ ದಿವಸಗಳು ಮುನ್ನೂರು ಅರವತ್ತಾದರೆ ಒಂದು ವರುಷವಾಗುವದು. ಇಂಥಾ ವರ್ಷಗಳು ನೂರಾದರೆ ಬ್ರಹ್ಮಂಗೆ ಆಯುಷ್ಯವು ಸರಿ. ಅಂತ್ಯದಲ್ಲಿ ಮರಣವಾಗುವನು. ಹೀಗೆ ಅನೇಕ ಬ್ರಹ್ಮರುಗಳ ಸಂಹಾರದಲ್ಲಿ ವಿಷ್ಣುವಿಗು ಮರಣ ಉಂಟಾಗುವದು. ಈ ವಿಷ್ಣುಗಳ ಸಂಹಾರದಲ್ಲಿ ಒಂದು ಮಹಾ ಪ್ರಳಯ ಉಂಟಹುದು. ಆ ಸಮಯದಲ್ಲಿ ಧರ್ಮವು ಆ ಪರಮೇಶ್ವರನಂ ನೋಡಿ ಅತ್ಯಂತ ಭಯಯುಕ್ತವಾಗಿ ವೃಷಭಾಕಾರನಂ ಧರಿಸಿ ಸ್ವಾಮಿಯ ಸಮಿಾಪಕ್ಕೆ ಬಂದು ನಮಸ್ಕರಿಸಿ, ಎಲೈ ಶಂಭುವೆ! ಜಯಜಯ, ಎಲೆ ಮಹಾದೇವನೆ! ಶರಣಾಗತನಾದ ನನ್ನಂ ರಕ್ಷಿಸು ರಕ್ಷಿಸು. ಮಹಾ ಸಂಹಾರಕಾಲವು ಶೀಘ್ರದಿಂ ಬರುತಲಿದೆ. ಆಗ ನನ್ನೊರ್ವನಂ ಬಿಟ್ಟು ಸಮಸ್ತ ಜಗತ್ತಂ ಸಂಹರಿಸೆಂದು ಶಂಕರನಂ ಸ್ತೋತ್ರಂಗಳಿಂ ಸ್ತುತಿಸಿ ಪ್ರಾರ್ಥಿಸಲಾಗಿ, ಭಗವಂತನಾದ ಸ್ವಾಮಿಯು ಪ್ರಸನ್ನನಾಗಿ ಆ ವೃಷಭೇಶ್ವರಂಗೆ ಅನೇಕ ಬಲ ವೀರ್ಯಮಂ ಕೊಟ್ಟು ಕೃತಯುಗದಲ್ಲಿ ಚತುಷ್ಪಾದಗಳಿಂ ತ್ರೇತಾಯುಗದಲ್ಲಿ ಮೂರು ಪಾದಗಳಿಂ ದ್ವಾಪರದಲ್ಲಿ ಯೆರಡು ಪಾದಗಳಿಂ ಕಲಿಯುಗದಲ್ಲಿ ಒಂದು ಪಾದದಿಂ ಚರಿಸೆಂದು ಅಜ್ಞಾಪಿಸಿ, ತಮಗೆ ವಾಹನವಾಗಿ ಪರಿಕಲ್ಪಿಸಿ, ನಾವು ನಿನ್ನಲ್ಲಿ ಅತ್ಯಂತ ಪ್ರೀತಿಯಿಂ ವಾಸವಂ ಮಾಡುವೆವು. ನೀನು ಅವಾಗಲು ನಮ್ಮ ಸನ್ನಿಧಿಯಲ್ಲಿರು. ಯಾವ ಭಕ್ತರು ನಿನ್ನನ್ನಾರಾಧಿಸದೆ ಮಹಾ ಪುಣ್ಯಗಳನ್ನು ಮಾಡುವರೋ, ಆ ಪುಣ್ಯಗಳು ಅವರಿಗೆ ಮಹತ್ತಾದ ಪಾಪ ಫಲವನ್ನು ಕೊಡಲಿ. ನಿನ್ನ ಭಕ್ತರು ಮಾಡಿದ ಪಾಪಗಳು ಪುಣ್ಯಫಲಂಗಳಂ ಕೊಡಲಿ. ಮಹಾ ಸತ್ಯವಾದ ಎಲೈ ಧರ್ಮವೆ! ನಾನು ಸಂತುಷ್ಟಮಾನಸನಾಗಿ ಯಾವ ಕಡೆಯಲ್ಲಿ ಆವ ಭಕ್ತನಿಗೆ ಯಾವ ಅನುಗ್ರಹವನ್ನು ಮಾಡುತ್ತಲಿದೇನೋ, ಆಗ ನೀನು ನಮ್ಮಾಜ್ಞೆಯಿಂ ಶಿರಸಾವಹಿಸಿ ವೃಷಭ ರೂಪವಂ ಧರಿಸಿ ನಮ್ಮ ಸಮಿಾಪಕ್ಕೆ ಬಾರೆಂದು ನಿರೂಪಿಸಿ ಆ ಧರ್ಮವಂ ಕಳುಹಿಸಿದನು.

ಎಲೈ ದಕ್ಷಬ್ರಹ್ಮನೆ! ಅದೇ ರೀತಿಯಲ್ಲಿ ಯಾವಾಗ ಪರಮೇಶ್ವರನು ತ್ರಿಪುರರಂ ಸಂಹರಿಸಿದನೋ ಆಗ ಸರ್ವಜಗನ್ಮಯನಾದ ವಿಷ್ಣುವದಂ ಕೇಳಿ ವೃಷಭರೂಪವಾಗಿ ತ್ರಿಪುರಾಂತಕನಾದ ಮಹಾ ದೇವನಂ ವಹಿಸಿದನು. ಅದು

ಕಾರಣದಿಂ ಶಿವನು ವೃಷಭವಾಹನನೆಂದು ದಧೀಚಿಮುನಿಯು ದಕ್ಷಂಗೆ ಪೇಳಿದ ನೆಂಬದಾಗಿ ಸೂತಂ ಶೌನಕಾದಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ದಕ್ಷ ಕಾಂಡದೊಳು ಹತ್ತೊಂಬತ್ತನೆಯ ಅಧ್ಯಾಯವು ಸಮಾಪ್ತಮಾದುದು.

ಇಪ್ಪತ್ತನೆಯ ಅಧ್ಯಾಯವು.

ಹರಿಬ್ರಹ್ಮರನ್ನು ತ್ರಿಶೂಲದ ತುದಿಯಲ್ಲಿಟ್ಟ ತಾಂಡವಲೀಲೆ.

ಎಲೈ ದಕ್ಷನೆ! ಇನ್ನೊಂದು ಉತ್ತಮವಾದ ಚರಿತ್ರೆಯಂ ಪೇಳುವೆನು ಸಾವಧಾನ ಮನದಿಂ ಕೇಳುವನಾಗು, ಏನಂದರೆ! ಮಹಾ ಬಲವಂತನಾದ ಕಾಲಾಗ್ನಿರುದ್ರನಾದ ಭಗವಂತನಾದ ರುದ್ರನು ಭೈರವ ರುದ್ರನು ಅವತಾರ ಪ್ರಳಯದಲ್ಲಿ ಶಂಭುವಿನ ಆಜ್ಞೆಯಿಂ ಸಂಹಾರವಂ ಮಾಡುತ್ತಲಿದಾರೆ. ಅದು ಅವಾಂತರ ಪ್ರಳಯವೆನ್ನಿಸಿಕೊಳ್ಳುವದು. ಸರ್ವಗ್ರಾಸನಾದ ಮಹಾ ದೇವನು ನಾನಾ ರುದ್ರಗಣಯುಕ್ತನಾಗಿ ಸಮಸ್ತಾಂಡಗಳಂ ಸಮಸ್ತವಾದ ಜಗತ್ತನ್ನು ಕೋಪದಿಂ ಅಟ್ಟಹಾಸದಿಂ ನೃತ್ಯದಿಂ ನಯನಾಗ್ನಿಯಿಂ ಹೂಂಕಾರದಿಂ ಹಸ್ತ ಪಾದ ಘಾತದಿಂ ಲೀಲೆಯಿಂ ಸಂಹರಿಸಿದನು. ಅದು ಸರ್ವಸಂಹಾರಕಮಾದ ಮಹಾ ಪ್ರಳಯವೆನ್ನಿಸಿಕೊಳ್ಳುವದು. ಆ ಸಮಯದಲ್ಲಿ ಸರ್ವಸಂಹಾರಕನಾದ ಮಹಾದೇವನು ಆಯಾ ಅಂಡಂಗಳಲ್ಲಿರ್ಪ ಅನಂತ ಹರಿಗಳಂ ಅನಂತವಿಧಿಗಳಂ ಅನಂತರಾದ ಇಂದ್ರ ಮುಂತಾದ ದೇವತೆಗಳಂ ಮತ್ತೆ ಕೆಲಂಬರಂ ದಹಿಸಿ ಅವರ ಭಸ್ಮಗಳಂ ಉದ್ಧೂಳನ ವಿಧಾನದಿಂ ತನ್ನ ಶರೀರಕ್ಕೆ ಲೇಪಿಸಿ, ಕೆಲಂಬ ಮುಂಡ ಮೂಲೆಗಳಂ ಧರಿಸಿ ಅವರ ಅಸ್ಥಿಗಳಂ ಕರಭೂಷಣಗಳಾಗಿಯು ಅವರ ಕೇಶ ಗಳಂ ಯಜ್ಞೋಪವೀತವಾಗಿಯೂ ಧರಿಸಿ ಆ ಹರಿಬ್ರಹ್ಮರಂ ಶೂಲದಲ್ಲಿ ಧರಿಸಿ ಕೊಂಡು ಅಟ್ಟಹಾಸವಂ ಮಾಡುತ್ತ ಭಯಂಕರನಾಗಿ ಚಿನ್ಮೂರ್ತಿಯಾಗಿ ತಾನೇ ಆನಂದದಿಂ ನರ್ತನವಂ ಮಾಡಿದನು. ಮತ್ತು ಈಶ್ವರನು ಆ ಪ್ರಳಯದಲ್ಲಿ ಮಹಾದೇವನಲ್ಲಿ ಭಕ್ತಿಯುಕ್ತರಾದವರು ಯಾರು ಹತರಾದರೋ ಅದರಿಂ ಪುಟ್ಟಿದ ಪಿಶಾಚಂಗಳಿಂದ ಆವೃತನಾಗಿ ಗಾಢಾಂಧಕಾರ ಮಧ್ಯದಲ್ಲಿ ಮಹಾ ಸ್ಮಶಾನದಲ್ಲಿ ನಿಂತು ಓರ್ವನೆ ಸಂತುಷ್ಟಮಾನಸನಾಗಿ ಲೀಲೆಯಿಂದ ಆ ಪಿಶಾಚ ಗಳಂ ಸಂಹರಿಸಿ, ಗಣವಿಹೀನನಾಗಿ ಓರ್ವನೆ ಉಳಿದು ಮರಳಿ ಮರಳಿ ಪ್ರಳ ಯವಂ ದಾಂಟಿ ನೋಡುತಿರ್ಪ ಮಹಾದೇವಿಯು ಮುಂದೆ ಪರಮಾನಂದವಶ ದಿಂದ ನೃತ್ಯವಂ ಮಾಡಿ ಏಕನಾದನು.

ಬಳಿಕ ಸೃಷ್ಟಿಶಕ್ತಿಯುಕ್ತನಾಗಿ ಭೂತಗಳಂ ಬ್ರಹ್ಮಾಂಡಗಳಂ ಆಯಾ ಲೋಕಂಗಳಂ ಪೂರ್ವದಂತೆ ಸೃಷ್ಟಿಸಿ, ಅನೇಕ ಅಂಡಂಗಳಲ್ಲಿ ಬಹು ವಿಷ್ಣು ಬ್ರಹ್ಮರಂ ಅನೇಕ ರುದ್ರರಂ ಹಾಗೆ ಸಮಸ್ತ ದೇವಾಸುರ ರಾಕ್ಷಸರಂ ಸೃಷ್ಟಿಸಿ, ಅವರಿಗೆ ಅನುಗುಣ್ಯವಾಗಿ ಅಧಿಕಾರಂಗಳಂ ಕೊಟ್ಟು ಯೋಗ್ಯತಾನುಸಾರವಾಗಿ ವಿದ್ಯಗಳಂ ಉಪದೇಶಮಾಡಿದನು. ಅದುಕಾರಣದಿಂ ಪರಮೇಶ್ವರನು ಸಂಹಾರಕನೆಂದು ಪ್ರಸಿದ್ಧಿಯಂ ಪಡದನು.

ಅಸ್ಥಿಭೂಷಣ ಮಹಿಮಾಲೀಲೆ.

ಎಲೈ ದಕ್ಷನೆ! ಅಸ್ಥಿಭೂಷಣಮಹಾತ್ಮ್ಯವಂ ಪೇಳುವೆನು ಕೇಳು, ಪೂರ್ವದಲ್ಲಿ ವಿಷ್ಣು ಮುಂತಾದ ದೇವತೆಗಳು ಗಿರಿಜಾಪತಿಗೆ ನಮಸ್ಕಾರವಂ ಮಾಡಿ ತಪದಿಂದಾರಾಧಿಸಿ, ಭೋ! ಶಂಭುವೆ! ಮಹಾದೇವನೆ! ವಿಶ್ವೇಶ್ವರನೆ! ಮಹಾ ಪ್ರಳಯಕಾಲ ಬಂದೀತು ನಿನ್ನ ಸೃಷ್ಟಿಶಕ್ತಿಯಲ್ಲಿ ನಮಗೆ ಅನೇಕ ಜನ್ಮಂಗಳಾದವು. ಖಿನ್ನರಾದ ನಾವು ಮರಳಿ ಪುಟ್ಟಲಾರೆವು. ನಮಗೆ ನಿಮ್ಮ ಪಾದಾಂಬುಜ ಧ್ಯಾನದಿಂ ಸಂಹಾರ ಶಕ್ತಿಯಿಂ ಮೋಕ್ಷವುಂಟಾಗುತಿದ್ದೀತು, ಎಲೈ ಕರುಣಾಕರನೆ! ಈ ಮಹತ್ತರವಾದ ಸಂಹಾರದಲ್ಲಿ ನಮ್ಮನ್ನು ಸಂಹರಿಸಿ ನಮ್ಮ ಅಸ್ಥಿಗಳಂ ಭೂಷಣವಾಗಿ ಮಾಡು. ಅವರ ಭಸ್ಮಂಗಳಂ ಉದ್ಧೂಳನವಂ ಮಾಡು. ಹಾಗೆ ಮಾಡಿದೆಯಾದರೆ ನಮಗೆ ಮೋಕ್ಷವು ಸುಲಭದಿಂ ದೊರಿಯುವದು. ಲೋಕದೊಳು ಅತ್ಯಂತ ಪಾವನಿಯಾದ ಗಂಗಾದೇವಿಯು ನಿನ್ನಿಂದ ಧರಿಸಲ್ಪಟ್ಟಳು. ಆ ಗಂಗೆಯಲ್ಲಿ ಭೂಮಿಯಲ್ಲಿರುವ ಯಾವ ಜನಗಳ ಅಸ್ಥಿಗಳು ಬೀಳುವವೋ ಅವರಿಗೆ ಮೊದಲೆ ಮುಕ್ತಿಯುಂಟಾದುದು. ಅದುಕಾರಣದಿಂ ಸಂಹಾರ ಮಧ್ಯಗತರಾದ ನಮ್ಮಂ ರಕ್ಷಿಸು ಎಂದು ಪ್ರಾರ್ಥಿಸಲಾಗಿ, ವಿಭುವಾದ ಕಾಲಕಾಲನಾದ ಸ್ವಯಂ ಜ್ಯೋತಿಯಾಗಿ ಪರಮಾತ್ಮನಾದ ಮಹೇಶ್ವರನು ಅವರಲ್ಲಿ ದಯಮಾಡಿ ಸುರರ ರಕ್ಷಣೆಗೋಸುಗ ಅವರ ಭಸ್ಮಗಳಂ ಧರಿಸಿದನೆಂದು ದಧೀಚಿಯು ದಕ್ಷಂಗೆ ಪೇಳಿದನೆಂದು ಸೂತಂ ಶೌನಕಾದಿಗಳಿಗೆ ಪೇಳಿದನಂ

ಬಿಲ್ಲಿಗೆ, ದಕ್ಷಕಾಂಡದಲ್ಲಿ ಇಪ್ಪತ್ತನೆಯ ಅಧ್ಯಾಯವು
ಸಂಪೂರ್ಣವಾದುದು.

ಇಪ್ಪತ್ತೊಂದನೆಯ ಅಧ್ಯಾಯವು.

ಇಂದ್ರಗರ್ವಭಂಗಲೀಲೆ, ಜಲಂಧರವೃತ್ತಾಂತ.

ಎಲೈ ದಕ್ಷನೆ! ದೇವದೇವನಾದ ಶಿವನ ಚರಿತ್ರವು ಸಂಹಾರ ಚರಿತ್ರವು ನಿನ್ನಿಂದ ಪೇಳಲ್ಪಟ್ಟಿದ್ದು ಸರಿಯಷ್ಟೆ. ಮತ್ತೊಂದು ಪುಣ್ಯಚರಿತ್ರವಂ ಪೇಳು

ನೆನು ಕೇಳು, ಪೂರ್ವದಲ್ಲಿ ದೇವೇಂದ್ರನು ಶಿವ ಸೇವಾನಿಮಿತ್ತವಾಗಿ ಗರ್ವದಿಂ ಕೈಲಾಸಗಿರಿಗೆ ಬರೆ, ಆಗ ಶಂಭುವು ಪ್ರಮಥಗಣ ರೂಪವಂ ಧರಿಸಿ ದ್ವಾರದಲ್ಲಿ ನಿಂತಿರಲಾಗಿ, ಆತನು ದ್ವಾರದೇಶದಲ್ಲಿ ನಿಂತಿರ್ದ ಗಣರೂಪನಾದ ಶಿವನಂ ಕಂಡು ಶಿವಸಮಯವಾವಾಗೆಂದು ಕೇಳಿದನು. ಬಳಿಕ ಶಿವನು ಆತಂಗೆ ಉತ್ತರವ ನ್ನೀಯದೆ ಕೋಪದಿಂ ನೋಡುತಿರಲಾಗಿ, ಆಗ ಇಂದ್ರನು ಆ ಗಣರೂಪನಾದ ಶಿವನಂ ನೋಡಿ ಕೋಪದಿಂ ಸ್ವಾಮಿಯಮೇಲೆ ವಜ್ರವಂ ಬಿಟ್ಟನು. ಆಗ ವಜ್ರವು ಪಾಷಾಣಕ್ಕಿಂತಲು ಕಠಿಣವಾದ ಶಿವನ ಉದರದಲ್ಲಿ ಬಿದ್ದು, ಅನೇಕಾಗ್ನಿ ಕಿಡಿಗಳನ್ನು ಉದರಿಸುತ್ತ ಉದರಘಾತದಿಂ ಪುಡಿಪುಡಿಯಾದುದು. ಆಸಮಯ ದಲ್ಲಿ ಮಹೇಶ್ವರನು ತಮ್ಮ ರೌದ್ರರೂಪವಂ ಧರಿಸಲಾಗಿ ಇಂದ್ರನು ಆತನಂ ಶಿವನೆಂದರಿತು ಭಯಕಂಪಿತನಾಗಿ ನಮಸ್ಕಾರವಂ ಮಾಡಿ ಸರ್ವಭೂತ ದಯಾ ಪರನಾದ ಎಲೈ ದೇವದೇವೇಶ್ವರನೆ! ನಾನು ಮಾಡಿದ ಅಪರಾಧವಂ ಕ್ಷಮಿಸೆಂದು ಅನೇಕ ಸ್ತೋತ್ರಂಗಳಿಂ ಸ್ತುತಿಸಿದನು. ಬಳಿಕ ಶಂಕರನು ಪ್ರಸನ್ನನಾಗಿ ಎಲೈ ಇಂದ್ರನೆ! ನೀನು ಭಯಪಡಬೇಡ, ನಿನಗೆ ಪ್ರಸನ್ನನಾದೆನೆಂದು ಪೇಳಿ ಆತನಂ ತನ್ನ ಸ್ಥಾನಕ್ಕೆ ಕಳುಹಿ ಆ ಕೋಪಾಗ್ನಿಯಂ ತೆಗೆದು ಸಮುದ್ರಕ್ಕಿಟ್ಟು ಸ್ವಾಮಿಯು ಅಂತಃಪುರಕ್ಕೆ ಪ್ರವೇಶಿಸಿದನು. ಶಿವನ ಕೋಪಾಗ್ನಿಯು ಶಿಶುವಾಗಿ ಸಮುದ್ರ ತೀರದಲ್ಲಿ ಆಡುತಿರಲಾಗಿ, ಆ ರೋದನಧ್ವನಿಯು ಸಮಸ್ತ ದೇವತೆಗಳಿಂ ಋಷಿ ಗಳಿಂ ಕೇಳಲ್ಪಟ್ಟುದು. ಆಗ ವರುಣನು ಬಂದು ಆ ಶಿಶುವಂ ತೆಗೆದುಕೊಂಡು ಪೋಗಿ ಪೋಷಿಸಿದನು. ಕೆಲವು ಕಾಲದಮೇಲೆ ಬ್ರಹ್ಮದೇವನು ವರುಣನ ಗೃಹಕ್ಕೆ ಬರಲಾಗಿ, ಆಗ ವರುಣನು ಶಿಶುವಂ ಆ ಬ್ರಹ್ಮನ ಹಸ್ತದಲ್ಲಿಡಲಾಗಿ, ಆತನು ಶಿಶುವಂ ತೆಗೆದುಕೊಂಡು ನೋಡುತಿರೆ ಆ ಶಿಶುವು ಬ್ರಹ್ಮನ ಗಡ್ಡವಂ ಪಿಡಿದು ಸೆಳೆಯೆ, ಬ್ರಹ್ಮನು ಆ ಕೂಸನ್ನು ನೋಡಿ, ಇವನು ಬ್ರಹ್ಮ ವಿಷ್ಣು ಮುಂತಾದ ದೇವತೆಗಳಂ ಜಯಿಸುವನು. ಈತಂಗೆ ಮಹತ್ತಾದ ಋಷಿಗಳ ಶಾಪಭಯವಿಲ್ಲ, ಜಲಂಧರನೆಂದು ತ್ರೈಲೋಕ್ಯದಲ್ಲಿ ಪ್ರಸಿದ್ಧಿಯಂ ಪಡೆದು ಇಂದ್ರನಂ ಜಯಿಸಿ ಸ್ವರ್ಗವಂ ದೈತ್ಯರಿಗೆ ಕೊಡುವನೆಂದು ಪೇಳ್ದು ತನ್ನ ಲೋಕಕ್ಕೆ ತೆರಳಿದನು.

ಅನಂತರದಲ್ಲಿ ಜಲಂಧರನು ಕೆಲವು ಕಾಲ ವರುಣನ ಮನೆಯಲ್ಲಿರ್ದು ಆ ಬಳಿಕ ಘೋರರಾದ ಕೆಲಂಬರಸುರರಂ ಸೇರಿಸಿಕೊಂಡು ಭೂಲೋಕಕ್ಕೆ ಬಂದು ದಿಕ್ಪಾಲಕರಂ ಜಯಿಸಿ ಆ ಸ್ವರ್ಗವನ್ನು ಅಸುರರಿಗಿತ್ತು ಮಯ ನಿರ್ಮಿತವಾದ ಜಲಂಧರವೆಂಬ ನಗರಕ್ಕೆ ಬಂದು ಕೆಲವು ಕಾಲದಮೇಲೆ ಕಾಲನೇಮಿಯ ಸುತೆ ಯಾದ ಬೃಂದೆಯೆಂಬ ಪೆಸರುಳ್ಳ ಸ್ತ್ರೀಯಂ ವಿವಾಹಮಾಡಿಕೊಂಡು ಸಂತೋಷ

ದಿಂದಾಪುರದಲ್ಲಿರ್ದು ತದನಂತರದಲ್ಲಿ ದೇವತೆಗಳು ಮೇರುಪರ್ವತದಲ್ಲಿರುವುದಂ ಕೇಳಿ ವೇಗದಿಂದಲ್ಲಿಗೆ ಬಂದು ಯುದ್ಧದಿಂದವರಂ ಜಯಿಸಿ, ಅವರಿಗೆ ಸಹಾಯವಾಗಿ ಬಂದ ಹರಿಯಂ ಕಂಡು ಆತನೊಡನೆ ಯಿಪ್ಪತ್ತು ಸಂವತ್ಸರ ಯುದ್ಧವಂ ಮಾಡಿ ತನ್ನ ಕೀರ್ತನೆಯಂ ಮಾಡುತ್ತಿರುವ ಆ ಹರಿಯಂ ಬಿಟ್ಟನು. ಬಳಿಕ ದೇವತೆಗಳು ಕೈಲಾಸಪರ್ವತಕ್ಕೆ ಪೋಗಲಾಗಿ, ದೈತ್ಯನು ಅನೇಕ ಕಾಲವು ಪಟ್ಟಣದಲ್ಲಿರ್ದು ಅವರು ಕೈಲಾಸಗಿರಿಯಲ್ಲಿರುವುದಂ ಕೇಳಿ ತನ್ನ ಸೇನೆಯೊಡಗೂಡಿ ಪೊರಮಟ್ಟನು.

ಜಲಂಧರಶಕ್ತಿ ಪರೀಕ್ಷಾಲೀಲೆ.

ಆಗ ಆತನ ಸತಿಯಾದ ಬೃಂದೆಯು ಆತನಂ ಕುರಿತು, ಎಲೈ ಪ್ರಭುವೆ! ಕೈಲಾಸಕ್ಕೆ ಪೋಗುವದುಚಿತವಲ್ಲೆಂದು ಪೇಳಲಾಗಿ, ಆ ದೈತ್ಯನು ಆಕೆಯ ವಾಕ್ಯವಂ ಲಕ್ಷ್ಯ ಮಾಡದೆ ಮೀರಿ ಪೋಗಲು ದೇವತೆಗಳು ದೈತ್ಯನ ಆಗಮನವಂ ತಿಳಿದು ಭೀತಿಗೊಂಡು ನಂದಿಕೇಶ್ವರಂಗೆ ನಮಸ್ಕರಿಸಿ ಆತನ ಆಜ್ಞೆಯಿಂದ ಮಹಾದೇವನ ಮಂದಿರಕ್ಕೆ ಪೋಗಿ, ಸಂಸಾರಮೋಚಕನಾದ ಸ್ವಾಮಿಯಂ ಕಂಡು ಅನೇಕ ಸ್ತೋತ್ರಂಗಳಿಂ ಸ್ತುತಿಸುತ್ತ ಅಭಿನಂದಿಸಿ, ಈ ದೈತ್ಯನ ವೃತ್ತಾಂತವಂ ಬಿನ್ನವಿಸಿದರು. ಆಗ ದೇವೇಶನಾದ ಪರಮೇಶ್ವರನು ದೇವತೆಗಳಿಗೆ ಅಭಯವನಿತ್ತು ದಂಡ ಕಮಂಡಲ ಧರನಾದ ಬ್ರಾಹ್ಮಣನ ವೇಷವಂ ಧರಿಸಿ ಕಪಟವೇಷಧರರಾದ ದೇವತೆಗಳಿಂದಾವೃತನಾಗಿ ಆ ಜಲಂಧರನ ಸಮೀಪಕ್ಕೆ ಬಂದು ಆತನಂ ಕಂಡು, ಎಲೈ ನೀನಾರು? ಎತ್ತಣಿಂದ ಬಂದೆ? ಯಾವಕಡೆಗೆ ಗಮನವು? ಎಂದು ಕೇಳಲಾಗಿ, ಆ ಅಸುರನು ಸಮಸ್ತ ದೇವತೆಗಳಂ ಜಯಿಸಿದೆನು. ಈಗ ಶಂಕರನಂ ಜಯಿಸಲೋಸುಗ ಇಲ್ಲಿಗೆ ಬಂದೆನೆನ್ನಲಾಗಿ ಆತನು ಪಿನಾಕಿಯಾದ ಶಿವನೊಡನೆ ಯಾರು ಯುದ್ಧವಂ ಮಾಡುವನು? ಆರೂ ಮಾಡಲಾರರು. ಆದೊಡೆ ಆರು ಕಾಳಗದಲ್ಲಿ ಶಿವನಂ ಸ್ಮರಣೆಯಂ ಮಾಡುವರೋ ಅವರಿಗೆ ಪರಾಭವವೆಂದಿಗೂ ಆಗುವುದಿಲ್ಲ, ನೀನು ಶಿವನೊಡನೆ ಯುದ್ಧವಂ ಮಾಡಬಾರದು, ಶೀಘ್ರವಾಗಿ ಬಂದ ಮಾರ್ಗವಂ ಹಿಡಿದು ಪೋಗೆಂದು ನಿರೂಪಿಸೆ, ಆ ಜಲಂಧರನು ಶಂಕರನ ವಾಕ್ಯವಂ ಕೇಳಿ, ಎಲೆ ಬ್ರಾಹ್ಮಣನೆ! ನೀನು ನನ್ನ ಬಲವನರಿತವನಲ್ಲ, ಕ್ಷಣಮಾತ್ರವಿಲ್ಲಿರು, ತೋರಿಸುತ್ತಿಹೆನೆಂದು ನುಡಿಯಲಾಗಿ, ಸ್ವಾಮಿಯು ಗರ್ವಯುಕ್ತವಾದ ಆ ವಾಕ್ಯವಂ ಕೇಳಿ, ಎಲೈ ದೈತ್ಯನೆ! ನಿನ್ನ ಬಲವೆಂಥಾದ್ದು ನೋಡಬೇಕೆಂಬ ಅಭಿಲಾಷೆಯುಂಟಾಗಿಹೆಯೆಂದು ಪೇಳ್ದು ತನ್ನ ಪಾದದಿಂ ಭೂಮಿಯಲ್ಲಿ ಚಕ್ರವಂ ಬರೆದು ಈ ಚಕ್ರವನ್ನು ನೀನು ಶಿರಃಪರ್ಯಂತರ ವೆತ್ತಿದರೆ ತ್ರಾಣಯುಳ್ಳವನೆ ಸರಿ, ಎಂದು ನಿರೂಪಿಸಿದನು. ಬಳಿಕ ಜಲಂಧರನು ಪೂರ್ವದಲ್ಲಿ

ನಾನು ಬ್ರಹ್ಮ ವಿಷ್ಣು ಮುಂತಾದ ದೇವತೆಗಳಂ ಜಯಿಸಿದೆನು. ನನಿಗಿದೇನು ಭಾರವೆಂದು ಪೇಳ್ದು ಹಸ್ತಗಳಿಂ ಮಹಾ ಪ್ರಯಾಸದಿಂದೆತ್ತಿ ಶಿರಸ್ಸು ಪರ್ಯಂತರ ಕೊಂಡು ಪೋಗೆ ಆಗ ಚಕ್ರವು ಆತನ ಮೇಲೆ ಬಿದ್ದು ಆತನ ಶಿರವು ಎರಡು ಭಾಗ ವಾಗಿ ಆ ಅಸುರನು ಪ್ರಾಣವಂ ಬಿಟ್ಟನು. ಆಗ ಸ್ವಾಮಿಯು ಆತನ ಸೇನೆಯಂ ನಯನಾಗ್ನಿಯಿಂ ದಹಿಸಿದನೆಂದು ದಧೀಚಿಯು ದಕ್ಷಂಗೆ ಪೇಳಿದನೆಂಬದಾಗಿ ಸೂತಂ ಶೌನಕಾದಿ ಮುನಿಗಳಿಗೆ ಪೇಳಿದನೆಂಬಲ್ಲಿಗೆ, ದಕ್ಷಕಾಂಡದಲ್ಲಿ ಇಪ್ಪತ್ತೊಂದನೆಯ ಅಧ್ಯಾಯವು ಸಮಾಪ್ತಮಾದುದು.

ಇಪ್ಪತ್ತೆರಡನೆಯ ಅಧ್ಯಾಯವು.

ತುಲಸೀ ಉತ್ಪತ್ತಿಯ ವೃತ್ತಾಂತ.

ಎಲೈ ದಕ್ಷನೆ! ಭಗವಂತನಾದ ಪರಮೇಶ್ವರನು ಜಲಂಧರನ ಸಂಹಾರವಂ ಮಾಡಿ ತನ್ನ ನಿಜರೂಪವಂ ತೋರಿಸಲಾಗಿ, ಬ್ರಹ್ಮಾದಿ ದೇವತೆಗಳು ಸ್ವಾಮಿಯಂ ಕಂಡು ನಮಸ್ಕಾರವಂ ಮಾಡಿ ಅನೇಕ ಸ್ತೋತ್ರಂಗಳಿಂ ಸ್ತುತಿಸೆ, ಸ್ವಾಮಿಯು ಅವರಂ ನೋಡಿ ದಯೆಯಿಂದ ಅವರವರ ಸ್ಥಾನಂಗಳಿಗೆ ಕಳುಹಿಸಿ ಅಂತಃಪುರಕ್ಕೆ ಪೋದನು. ಆ ಸಮಯದಲ್ಲಿ ಮಾಧವನು ಹರಂಗೆ ವಶವರ್ತಿಯಾಗಿ ಬೃಂದೆ ಯಂ ನೆನದು ಆಕೆಯ ಉದ್ಯಾನವನಕ್ಕೆ ಬಂದು ತಪವಂ ಮಾಡುವ ವ್ಯಾಜದಿಂ ದಿರಲಾಗಿ, ಆ ಬೃಂದೆಯು ತನ್ನ ಪತಿಯ ವೃತ್ತಾಂತವಂ ತಿಳಿಯದೆ ವಿರಹದಿಂ ಕೃಶಾಂಗಿಯಾಗಿ ಕಾಲವಂ ಕಳೆಯಲು ಉದ್ಯಾನವನಕ್ಕೆ ಬಂದಳು. ಆಗ ಹರಿಯಿಂ ಪ್ರೇರಿತರಾದ ವಿಷ್ಣುಗಣಂಗಳು ಸಿಂಹರೂಪವಂ ಧರಿಸಿ ಆಕೆಯಂ ಹೆದರಿಸಲಾಗಿ, ಆ ದೈತ್ಯಸ್ತ್ರೀಯು ಸಿಂಹಗಳಂ ಕಂಡು ಭಯದಿಂದ ಋಷಿಯ ಸಮೀಪಕ್ಕೆ ಬಂದಳು. ಆ ಸಮಯದಲ್ಲಿ ಋಷಿಯು ಆಕೆಯಂ ಪ್ರಾರ್ಥಿಸಲಾಗಿ ಕರುಣಾಕರನಾದ ಶಂಭುವು ಬ್ರಹ್ಮಾದಿಗಳಿಂ ಪ್ರಾರ್ಥಿಸಲ್ಪಟ್ಟವನಾಗಿ ಪಾರ್ಶ್ವ ದಲ್ಲಿರುತಿರ್ಪ ದೇವಿಯಂ ನೋಡೆ, ಪಾರ್ವತೀದೇವಿಯು ವಾಮಹಸ್ತದ ಕನಿಷ್ಠಾಂಗುಳಿಯಲ್ಲಿ ಒಂದಾನೊಂದು ಬೀಜವನ್ನುಂಟುಮಾಡಿ ಬ್ರಹ್ಮನ ಹಸ್ತ ದಲ್ಲಿ ಕೊಟ್ಟು, ಎಲೈ ಬ್ರಹ್ಮನೆ! ನೀನು ಶೀಘ್ರದಿಂದ ಈ ಬೀಜವಂ ಬೃಂದೆಯ ಶ್ಮಶಾನದಲ್ಲಿ ಬಿತ್ತಿ ಅಮೃತಧಾರೆಯನೆರೆದು ರಕ್ಷಿಸು ಆಗಲದು ವಿಷ್ಣುವಲ್ಲಭೆ ಯಾದ ತುಳಸಿಯಾಗಿ ಪುಟ್ಟೀತು. ಆಗ ಮಾಧವನು ಆ ತುಲಸಿಯಂ ಕಂಡು ಅದರಲ್ಲಿ ಆಸಕ್ತಿಯುಳ್ಳವನಾಗುವನು, ಆ ಹರಿಗೆ ತುಳಸೀದೇವಿಯ ವಿವಾಹವಂ ಮಾಡು, ಆ ಹರಿಯು ಆಕೆಯೊಡನೆ ಕೂಡಿ ಭೋಗಿಸಿ ಬೃಂದೆಯ ಮೇಲಿರ್ದ ಮೋಹವಂ ಬಿಟ್ಟು ಆ ತುಲಸಿಯನ್ನೆ ಶಿರದಲ್ಲಿ ಮಾಲೆಯಾಗಿ ಧರಿಸಿ, ಬಳಿಕ ತನ್ನ

ಕೃತ್ಯವಂ ಮಾಡುವನೆಂದು ನುಡಿಯಲಾಗಿ, ಬ್ರಹ್ಮನು ಈ ವಾಕ್ಯವಂ ಕೇಳಿ ಪಾರ್ವತೀ ಪರಮೇಶ್ವರರಿಗೆ ನಮಸ್ಕರಿಸಿ, ದೇವತೆಗಳಂ ತಮ್ಮ ತಮ್ಮ ಸ್ಥಾನಂಗಳಿಗೆ ಕಳುಹಿ ಆ ಗೌರೀ ವಾಕ್ಯವಂ ಶಿರಸಾವಹಿಸಿ ತ್ವರಿತದಿಂ ಬೃಂದೆಯ ಉದ್ಯಾನವನಕ್ಕೆ ಬಂದು, ಆ ದೇವಿಯು ಕೊಟ್ಟ ಅದ್ಭುತ ಬೀಜವಂ ಬಿತ್ತಿ ಅಮೃತವನೆರೆದು ರಕ್ಷಿಸಲಾಗಿ ಆಗ ಅತ್ಯಂತ ಮನೋಹರವಾದ ತುಳಸಿಯು ಅಲ್ಲಿ ಪುಟ್ಟಿತು. ಬಳಿಕ ಹರಿಯುದಂ ನೋಡಿ ಆ ತುಲಸಿಯನ್ನೇ ವಿವಾಹವನೆಸಗಿ ನಿತ್ಯ ಸಂತುಷ್ಟನಾಗಿ ಆಕೆಯಲ್ಲೇ ಕ್ರೀಡಿಸುತ ಮನೋಹರವಾದ ಆ ತುಲಸಿಯ ಮಾಲೆಯನೆ ಶಿರದಲ್ಲಿ ಧರಿಸಿ ಮೋಹವಂ ಬಿಟ್ಟು ವೈಕುಂಠಕ್ಕೆ ಪೋಗಿ, ಅಲ್ಲಿರ್ದ ತನ್ನ ಕೃತ್ಯವಂ ಮಾಡುತ್ತ ಕೆಲವು ತನ್ನ ನಯನ ಕಮಲಂಗಳಿಂ ಮಹಾದೇವನಂ ಪೂಜಿಸಿ, ಪೂರ್ವದಲ್ಲಿ ಜಲಂಧರನ ವಧೆಗೋಸುಗ ಕೋಟಿಸೂರ್ಯ ಪ್ರಕಾಶವಾದ ಚಕ್ರವಂ ಸ್ವಾಮಿಯಿಂ ಪಡದು ಸಂತೋಷವನ್ನೈದಿದನು. ಎಲೈ ದಕ್ಷನೆ! ಹೀಗೆ ವಿಭುವಾದ ಶಂಭುವಿನ ನಾನಾವಿಧ ಚರಿತ್ರವು ನನ್ನಿಂದ ಪೇಳಲ್ಪಟ್ಟಿತೆಂದು

ದಧೀಚಿಯು ದಕ್ಷಂಗೆ ಪೇಳಿದನೆಂಬಲ್ಲಿಗೆ, ದಕ್ಷಕಾಂಡದಲ್ಲಿ ಇಪ್ಪತ್ತೆರಡನೆಯ ಅಧ್ಯಾಯವು ಸಮಾಪ್ತಮಾದುದು.

ಇಪ್ಪತ್ಮೂರನೆಯ ಅಧ್ಯಾಯವು.

ಗಂಗಾವತರಣ ಲೀಲೆ.

ಎಲೈ ಮುನಿಗಳಿರಾ! ಅನಂತರದಲ್ಲಿ ದಧೀಚಿ ಮುನಿಯು ದಕ್ಷನಂ ಕುರಿತು, ಎಲೆ ದಕ್ಷನೆ! ಪರಮೇಶ್ವರನು ತನ್ನ ಪಾರ್ಶ್ವದಲ್ಲಿ ಪಿರ್ವಳಂ ವಹಿಸುವನೆಂದು ನೀನು ನಿಂದೆಯಾಗಿ ಪೇಳಿದ್ದು ಸರಿಯಷ್ಟೆ, ಅದಕ್ಕೆ ಉತ್ತರವಂ ಕೊಡುವೆನು ಕೇಳು. ಪೂರ್ವದಲ್ಲಿ ಕೈಲಾಸಗಿರಿಯಲ್ಲಿ ಪಾರ್ವತೀದೇವಿಯು ವಿಲಾಸದಿಂ ತನ್ನ ಹಸ್ತಗಳಿಂ ಸ್ವಾಮಿಯ ನಯನಂಗಳಂ ಮುಚ್ಚಲಾಗಿ, ಸಮಸ್ತ ಜಗತ್ತುಗಳು ಅಂಧಕಾರಾವೃತವಾದವೆಂದು, ಪರಮೇಶ್ವರನು ತನ್ನ ಲಲಾಟ ನಯನವಂ ತೆರದು ಆ ಅಂಧಕಾರಾವೃತವಾದ ಜಗತ್ತಂ ಪ್ರಕಾಶಂಗೈಯಲಾಗಿ, ಗೌರಿದೇವಿಯು ಆ ಅದ್ಭುತವಂ ಕಂಡು ಪರಮ ಭೀತೆಯಾಗಿ ನಯನಂಗಳಂ ಮುಚ್ಚಿದ ಕರಗಳಂ ತೆಗೆಯೆ, ಆ ಕರಾಬ್ಜದಲ್ಲಿ ಮಹತ್ತರವಾದ ಬೆವರ್ವನಿಗಳು ದಶಾಂಗುಳಿಗಳಲ್ಲಿ ಪ್ರವಾಹರೂಪದಿಂದ ದಶಪಥವಾಗಿ ಪೊರಮಟ್ಟು ಕ್ಷಣಮಾತ್ರದಿಂ ಸಮಸ್ತ ಜಗತ್ತನ್ನಾವರಿಸಿತು. ಆಗ ವಿಷ್ಣು ಮುಂತಾದ ದೇವತೆಗಳು ಭಯಕಂಪಿತರಾಗಿ ಆಕಾಶದಲ್ಲಿ ಜಗತ್ಪ್ರಳಯ ವೇನುಕಾರಣ ಉಂಟಾದುದೆಂದು ಚಿಂತಾಪರರಾಗಿ ಕೈಲಾಸಪರ್ವತಕ್ಕೆ ಬಂದು ಮಹಾದೇವನ

ದರ್ಶನವಂ ಮಾಡಿ ಪರಮ ಸಂತಸದಿಂ ಪೂಜಿಸಿ, ದಯಾನಿಧಿಯಾದ, ಎಲೆ ಮಹಾದೇವನೆ! ಆ ಕಾಲದಲ್ಲಿ ಉಂಟಾದ ಜಲಪ್ರಳಯದಿಂ ನಾಶವನ್ನೈದು ತಿರ್ಪ ಚರಾಚರಾತ್ಮಕವಾದ ಈ ಜಗತ್ತಂ ರಕ್ಷಿಸು ರಕ್ಷಿಸೆಂದು ಪ್ರಾರ್ಥಿಸಲಾಗಿ, ಆಗ ಶಂಭುವು ಲೋಕರಕ್ಷಣದಲ್ಲಿ ಉದ್ಯುಕ್ತನಾಗಿ ದೇವತೆಗಳಲ್ಲಿ ದಯೆಯಂ ಗೈದು ಮಹತ್ತಾದ ಆ ಜಲವಂ ತೆಗೆದು ಜಡೆಯಲ್ಲಿ ಒಂದು ರೋಮದಲ್ಲಿ ಏಕ ಜಲಬಿಂದುವಿನೋಪಾದಿಯಲ್ಲಿ ಧರಿಸಿದನು. ಆ ಸಮಯದಲ್ಲಿ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಆ ಆಶ್ಚರ್ಯವಂ ಕಂಡು ಪರಮೇಶ್ವರಂಗೆ ದಂಡ ವತ್ತಾಗಿ ಭೂಮಿಯಲ್ಲಿ ಬಿದ್ದು ನಮಸ್ಕರಿಸಿ ನಾನಾ ವಿಧ ಸ್ತೋತ್ರಂಗಳಿಂ ಸ್ತುತಿಸಿ, ಭಗವಂತನಾದ ಎಲೈ ಪರಮೇಶ್ವರನೆ! ಆವುದಾನೊಂದು ಕಾರಣದಿಂ ನಿಮ್ಮಿಂದ ಪಾವನವಾದ ಗೌರಿದೇವಿಯ ಕರದಲ್ಲಿ ಹುಟ್ಟಿದ ಈ ನದಿಯು ಧರಿಸ ಲ್ಪಟ್ಟಿತೋ, ಅದುಕಾರಣದಿಂದಿದು ದರ್ಶನದತ್ತಣಿಂ ಸ್ಪರ್ಶನದತ್ತಣಿಂ ಸ್ನಾನದಿಂ ಪಾನದಿಂ ಸಮಸ್ತ ಜಂತುಗಳ ಪಾಪಗಳನ್ನು ಪರಿಹರಿಸುವದು. ಎಲೈ ಮಹಾದೇವನೇ! ನಮಗೆ ಪಾವನವಾದ ಈ ಕಿಂಚಿಜ್ಜಲವಂ ಕೊಡಬೇಕೆಂದು ಪ್ರಾರ್ಥಿಸಿ ಆ ಸ್ವಾಮಿಯಿಂದನುಜ್ಞಾತರಾಗಿ ಶಿವಜಟಾಜೂಟದಲ್ಲಿರ್ದ ಗಂಗೆಯಂ ಪ್ರತ್ಯೇಕ ಪ್ರತ್ಯೇಕವಾಗಿ ತೆಗೆದುಕೊಂಡು ತಮ್ಮ ತಮ್ಮ ಲೋಕಂಗಳ್ಗೆ ತೆರಳಿ ದರು. ಆಗ ಆವುದಕವು ವಿಷ್ಣುಲೋಕದಲ್ಲಿ ವೈಷ್ಣವ ನದಿ ಎಂಬದಾಗಿಯೂ ಬ್ರಹ್ಮಲೋಕದದಲ್ಲಿ ಬ್ರಹ್ಮನ ಕಮಂಡಲದಲ್ಲಿ "ಬ್ರಾಹ್ಮಿ" ಎಂಬದಾಗಿಯು ಸ್ವರ್ಗಲೋಕದಲ್ಲಿ ದೇವಗಂಗೆ ಎಂಬದಾಗಿಯು ಪ್ರಖ್ಯಾತಿಯಂ ಪಡೆದುದು. ಬಳಿಕ ಭಗೀರಥನು ಬ್ರಹ್ಮಲೋಕದಲ್ಲಿರ್ದ ನದಿಯಂ ಯತ್ನದಿಂ ಭೂಮಿಗೆ ತರಲು ಶಂಕರನಾದ ಶಿವನಂ ಪ್ರಾರ್ಥಿಸಲಾಗಿ ಆ ಶಿವನು ಮಹತ್ತಾದ ತೆರೆಗಳ ಪಂಗ್ತಿಯಿಂ ಭಯಂಕರವಾಗಿ ಗರ್ವಿಸಿದ ಆ ನದಿಯಂ ಜಡೆಯಿಂ ಧರಿಸಿ, ಶೋಷಣೆಯಂ ಮಾಡಿ ಮರಳಿ ಆ ಭಗೀರಥನಿಂ ಪ್ರಾರ್ಥಿಸಲ್ಪಟ್ಟು ಆ ನದಿಯಂ ಭೂಮಿಯಲ್ಲಿ ಬಿಟ್ಟನು. ಆಗ ಮಹಾ ವೇಗವುಳ್ಳ ಮಹಾ ತೆರೆಗಳ ಸಮೂಹದಿಂ ನಿಬಿಡವಾದ ಭಾಗೀರಥಿಯು ಪರಮೇಶ್ವರನಿಂದ ಬಿಡಲ್ಪಟ್ಟ ಮಾತ್ರದಿಂ ಪೊರ ಮಟ್ಟು ಭೂಲೋಕಕ್ಕೆ ಬಂದು ಕಪಿಲಮುನಿಯಿಂ ಹತರಾದ ಸಗರಕುಮಾರರಂ ರಕ್ಷಿಸಿತು. ಈಗಲು ಆರು ಶಂಕರಂಗೆ ಮಾಲಿಕೆಯಾದ ಆ ಗಂಗಾನದಿಯಲ್ಲಿ ಯಾರು ಸ್ನಾನವನ್ನೆಸಗುವರೋ, ಅವರು ಸ್ವರ್ಗವಂ ಪಡೆವರು.

ಹರಿಬ್ರಹ್ಮರನ್ನು ಫಾಲನೇತ್ರದಿಂದ ದಹಿಸಿ ಪುನಃ ಸೃಷ್ಟಿಮಾಡುವಿಕೆ.

ಎಲೈ ದಕ್ಷನೆ! ಹೀಗೆ ಪರಮೇಶ್ವರಂಗೆ ಪತ್ನೀಧಾರಣಮುಂಟಾಗುವದು.

ಮತ್ತೊಂದು ವೃತ್ತಾಂತವಂ ಪೇಳುವೆನು ಕೇಳು. ಪೂರ್ವದಲ್ಲಿ ಬ್ರಹ್ಮದೇವನು ಸನಕ ಮುಂತಾದ ನಾಲ್ವರ ಕುಮಾರರಂ ಸೃಷ್ಟಿಸಿದನು. ಅವರು ಜ್ಞಾನಿಗ ಳಾಗಿ ತಪೋನಿಷ್ಠರಾಗಿ ಸೃಷ್ಟಿವಿಷಯದಲ್ಲಿ ವಿಮುಖರಾದರು. ಆಗ ಬ್ರಹ್ಮ ನವರಂ ನೋಡಿ ಹರಿ ಸಮೇತನಾಗಿ ಪರಮೇಶ್ವರಂಗೆ ಪೇಳಲು, ಕೈಲಾಸ ಗಿರಿಗೆ ಬರಲಾ ಸನಕಾದಿಗಳು ಸಹ ಸಂಗಡ ಬಂದರು. ಹರಿಬ್ರಹ್ಮರು ಅವರಂ ಕಂಡು ಆ ಪರಮೇಶ್ವರಂಗೆ ಈ ವೃತ್ತಾಂತವಂ ಪೇಳದೆ, ಜಗತ್ಸೃಷ್ಟಿಯಂ ಮಾಡುವ ದಕ್ಕೆ ನಮಗೆ ಶಕ್ತಿ ಇಲ್ಲನೆಂದು ಪೇಳಲಾಗಿ ಆಗ ಶಂಕರನು ಲಲಾಟಾಗ್ನಿಯಿಂ ದವರಂ ದಹಿಸಿ, ತನ್ನ ವಾಮಭಾಗದಲ್ಲಿ ಗೌರಿದೇವಿಯಂ ಸೃಷ್ಟಿಸಿ ಮರಳಿ ಲೀಲೆಯಿಂ ಹರಿಬ್ರಹ್ಮರಂ ಸೃಜಿಸಿ, ಎಲೈ ವಿಧಿಯೆ! ಆವುದಾನೊಂದು ಕಾರ ಣದಿಂ ಈ ಶಕ್ತಿಯೊಡನೆ ಯುಕ್ತನಾಗಿ ಆವಾಗಲು ವಿಹರಿಸುತಲಿರ್ಪೆನೆಯೋ, ಅದುಕಾರಣದಿಂ ಇಲ್ಲಿಂದಿತ್ತ ನಿನಗೆ ಜಗತ್ಸೃಷ್ಟಿಯಲ್ಲಿ ಶಕ್ತಿಯುಂಟಾಗಲಿ ನೀನು ಹರಿಸಮೇತನಾಗಿ ಪೂರ್ವದಂತೆ ಜಗವಂ ಸೃಷ್ಟಿಸಲು ಪೋಗೆಂದು ಅವ ರೀರ್ವರಂ ಕಳುಹಲಾಗಿ, ಆ ಹರಿಬ್ರಹ್ಮರು ಜ್ಞಾನರೂಪಿಯಾದ ಗೌರಿದೇವಿಗೆ ನಮಸ್ಕಾರವಂ ಮಾಡಿ ಆಕೆಯ ಆಜ್ಞೆಯಿಂ ಪ್ರೇರಿತರಾಗಿ ತಮ್ಮ ಸ್ಥಾನಂಗಳ ನೈದಿದರು. ಬಳಿಕ ಬ್ರಹ್ಮನು ನಿಶ್ಚಲ ಚಿತ್ತನಾಗಿ ಸಮಸ್ತ ಜಗವಂ ಸೃಷ್ಟಿಸಿ ದನು. ಎಲೈ ದಕ್ಷನೆ! ಅದುಕಾರಣದಿಂ ಶಿವನು ಜಗತ್ಸೃಷ್ಟ್ಯರ್ಥಮಾಗಿ ಶಕ್ತಿ ಸಮೇತನಾದನು. ಆ ಶಕ್ತಿಯು ಜ್ಞಾನಾನಂದ ಸ್ವರೂಪವಾದ ಶಿವನ ಪ್ರಭೆಯು ಚಂದ್ರಂಗೆಯು ಈ ಚಂದ್ರಕಿರಣಂಗಳ್ಗೆಯು ಹ್ಯಾಗೆ ಭೇದವಿಲ್ಲವೋ ಹಾಗೆ ಗೌರೀ ದೇವಿಗು ಶಿವಂಗೆಯು ಭೇದವಿಲ್ಲ ಎಂದು ದಧೀಚಿಮುನಿಯು ದಕ್ಷಂಗೆ ಪೇಳಿದ ನೆಂಬದಾಗಿ ಸೂತಂ ಶೌನಕಾದಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ,

ದಕ್ಷಕಾಂಡದಲ್ಲಿ ಇಪ್ಪತ್ಮೂರನೆಯ ಅಧ್ಯಾಯವು
ಸಂಪೂರ್ಣಮಾದುದು.

ಇಪ್ಪತ್ನಾಲ್ಕನೆಯ ಅಧ್ಯಾಯವು.

ವಿಭೂತಿಯೆಂಬ ಅಸುರಸ್ತ್ರೀಯು ಮಾಗಧಮಹಾಮುನಿಯಿಂದ ಗಜಾಸುರನನ್ನು ಪಡೆಯುವಿಕೆ.

ಎಲೈ ದಕ್ಷನೆ! ಶಿವನು ಪುತ್ರರಂ ಪೆತ್ತನೆಂದು ಪೇಳ್ದೆನಲ್ಲ? ಆ ಕಥೆಯಂ ವರ್ಣಿಸುವೆನು ಕೇಳು? ಪೂರ್ವದಲ್ಲಿ ಅಸುರೇಂದ್ರನು ಯುದ್ಧದಲ್ಲಿಂದ್ರನಿಂದ ಪರಾಜಿತನಾಗಿ ವ್ಯಗ್ರನಾಗಿ ತಾನೋರ್ವನೆ ದುಃಖದಿಂ ತನ್ನ ಗುರುವಿನ ಸಮೀಪಕ್ಕೆ ಬರಲಾಗಿ ಆಗ ಶುಕ್ರನು ಶೀಘ್ರದಿಂದಾತನ ಆಗಮನವನ್ನು ಜ್ಞಾನ

ದೃಷ್ಟಿಯಿಂ ತಿಳಿದು, ಎಲೈ ಅಸುರೇಂದ್ರನೆ, ನಾನಿರುವಲ್ಲಿ ನಿನಗೆ ಶೋಕವೇಕೆ? ಈಗ ವಸಿಷ್ಠಕುಲದಲ್ಲಿ ಉದ್ಭವಿಸಿದ ಮಾಗಧನೆಂಬ ಮಹಾಯೋಗಿಯು ನಿಶ್ಚಲ ಮಾನಸನಾಗಿ ಘೋರಮಾದ ತಪಸಂ ಮಾಡುತಲಿಹಾನೆ. ಆತಂಗೆ ಆವಾಗ ಅಸುರ ಸ್ತ್ರೀಯ ಸಂಗಮು ಉಂಟಾಗುವದೋ ಆಗ ಆಕೆಯಲ್ಲಿ ಭಯಂಕರನಾದ ಗಜಮುಖನೆಂಬ ಅಸುರನು ಪುಟ್ಟಿ ಶಿವನಿಂ ವರನಂ ಪಡೆದು ಶತ್ರುಗಳಂ ಸಹ್ಮರಿಸಿ ರಾಜ್ಯವನ್ನು ತಾನೆ ಆಳುವನು. ಇದು ನಿಶ್ಚಯವೆಂದು ನುಡಿದು ಕಳುಹಿದನು. ಬಳಿಕ ಮತಿವಂತನಾದ ಅಸುರೇಂದ್ರನು ಶೀಘ್ರದಿಂ ತನ್ನ ಗೃಹಕ್ಕೆ ಪೋಗಿ ವಿಭೂತಿಯೆಂಬ ಪೆಸರುಳ್ಳ ಸ್ತ್ರೀಯುಂ ನೋಡಿ ಸುಕುಮಾರಾಂಗಿಯಾದ ಎಲೈ ಸ್ತ್ರೀಯೆ! ತಪಸ್ವಿಗಳಿಗೆ ಶ್ರೇಷ್ಠನಾದ ಮಾಗಧನೆಂಬ ಯೋಗಿಯು ಮೇರುವಿನ ದಕ್ಷಿಣಭಾಗದಲ್ಲಿ ಭಯಂಕರವಾದ ತಪಸಂ ಮಾಡುತಲಿದಾನೆ. ನೀನು ಆತನ ಬಳಿಗೆ ಪೋಗಿ ಸುತನಂ ಪಡಿ. ಸಮಸ್ತ ಶತ್ರುಗಳಂ ಜಯಿಸುವ ಗರ್ಭವೆಂಬ ಶುಕ್ತಿಕೆಯಲ್ಲಿ ಪುಟ್ಟಿದ ಸುತನೆಂಬ ಮುಕ್ತಾರತ್ನದಿಂ ಯುಕ್ತವಾಗಿ ಬಾರೆಂದಾಕೆಯಂ ಪ್ರೇರಿಸಲಾಗಿ, ಆಕೆಯು ಅತಿ ವೇಗದಿಂ ಮಾಗಧನು ಆತ್ಮಾಂತರ್ಗತ ಮಾನಸನಾಗಿ ಯಾವ ಸ್ಥಳದಲ್ಲಿರ್ದನೋ ಆ ಪ್ರದೇಶಕ್ಕೆ ಪೋಗಿ ಅತ್ಯಂತ ಶುದ್ಧಮಾದ ಆತನ ತಪೋನಿಷ್ಠೆಯಂ ನೋಡಿ ಆಶ್ಚರ್ಯಯುಕ್ತೆಯಾಗಿ, ತಾನು ದೃಢಚಿತ್ತನಾದಾತನ ಹೃದಯಮಂ ಭೇದಿಸಲು ಯತ್ನವಂ ಮಾಡಕೂಡದು. ಮತ್ತಂ ಆ ಕೃತ್ಯಮಂ ಮಾಡದೆ ಅಸುರೇಂದ್ರನ ಸಮೀಪಕ್ಕೆ ಪೋದೊಡೆ ಆತನು ದುಃಖಿಸುವನು, ಎಂದು ಚಿಂತಿಸಿ ಇಲ್ಲಿಯೇ ಇರ್ದು ತಪಸಂ ಮಾಡಿ ಆತನಂ ವಶವರ್ತಿಯಂ ಮಾಡಿಕೊಳ್ಳುವೆನೆಂದು ನಿಶ್ಚೈಸಿ, ಆತನ ಮುಂಗಡೆಯಲ್ಲಿ ಮಹತ್ತಾದ ತಪಸಂ ಮಾಡಿದಳು. ಬಳಿಕ ಬಹು ಕಾಲವು ಕಳೆದ ಮೇಲೆ ತಾಪಸ ಶ್ರೇಷ್ಠನಾದ ಮಾಗಧನು ಗಜಗಳ ಸಂಭೋಗಕ್ರೀಡೆಯಂ ಕಂಡೆದ್ದು ಕಾಮ ವಶವಾದ ಮೂರ್ಛೆಯನ್ನೈದಲಾಗಿ, ಆಗೆ ಅಸುರ ಸ್ತ್ರೀಯಲ್ಲಿಗೆ ಬಂದು ತಪೋವಂತನಾದ ಆ ಮಾಗಧಂಗೆ ನಮಸ್ಕರಿಸಿ, ಎಲೈ ಮುನಿಯೆ! ನಾನು ನಿನ್ನೊಡನೆ ಆವಾಗ ಸಂಭೋಗವುಂಟಾಗುವದೆಂದು ಮಹಾ ತಪಸಂಮಾಡಿದೆನು. ನೀನು ಕಾಮಾತುರೆಯಾದ ನನ್ನನಂಗೀಕರಿಸೆಂದು ನುಡಿಯಲಾಗಿ, ಆ ವಾಕ್ಯವಂ ಕೇಳಿ ಋಷಿಯು ನೀನು ಗಜವಾಗೆಂದು ಪೇಳ್ದು, ತಾನು ಮದಗಜವಾಗಿ ಆಕೆಯೊಡನೆ ರಮಿಸಿದನು. ಆಗ ಗಜಮುಖನೆಂಬ ದೈತ್ಯನು ಆಕೆಯಲ್ಲಿ ಪುಟ್ಟಿದನು. ಮಹಂತನಾದ ಆ ಗಜಮುಖನು ದಾನವರಿಂದಾವೃತನಾಗಿ ಖಡ್ಗ ಖೇಟಂಗಳಂ ಧರಿಸಿ ಕೋಲಾಹಳ ಧ್ವನಿಯಂ ಮಾಡಿ ಪರ್ವತಂಗಳಲ್ಲಿಯು ವೃಕ್ಷಂಗಳಲ್ಲಿಯು ವನಂಗಳಲ್ಲಿಯು ಸಂಚರಿಸುತಿರ್ದನು. ಆ ಸಮಯದಲ್ಲಿ ಆತನ ಮಾತಾಪಿತೃಗಳು

ಆತನಂ ತಡೆಯಲಶಕ್ಯರಾಗಿ ಭಯಕಂಪಿತರಾಗಿ ಅವನಂ ಬಿಟ್ಟು ದೂರಕ್ಕೆ ಪೋದರು. ಬಳಿಕ ಋಷಿಯು ಒಂದಾನೊಂದು ಗುಹೆಯಲ್ಲಿರ್ದು ಆ ಅಸುರ ಸ್ತ್ರೀಯಂ ನೋಡಿ, ಎಲೆ! ಇದೇನೆಂದು ವೃತ್ತಾಂತವಂ ಕೇಳಲಾಗಿ, ಆಕೆಯು ಮಹಾತ್ಮನಾದ ಋಷಿಗೋಸುಗ ತಾನು ಬಂದ ವೃತ್ತಾಂತವಂ ಪೇಳೆ, ಮಾಧವನು ಆಕೆಯ ವಾಕ್ಯವಂ ಕೇಳಿ ಲೋಕಂಗಳಿಗು ದೇವತೆಗಳಿಗು ನನ್ನಿಂದ ಮಹಾ ಬಾಧೆ ಉಂಟಾಯಿತೆಂದು ಪೇಳ್ದು ಅತಿ ದುಃಖಿತನಾಗಿ ಮರಳಿ ತಪೋವನಕ್ಕೆ ಪೋದನು. ಬಳಿಕ ಆಕೆಯು ಋಷಿಗೆ ನಮಸ್ಕಾರವಂ ಮಾಡಿ ಕಾರ್ಯಸಿದ್ಧಿಯುಳ್ಳವಳಾಗಿ ಸಂತೋಷದಿಂ ಪೊರಮಟ್ಟು ಗಜಮುಖನ ಬಳಿಗೆ ಪೋಗಿ ಆತನೊಡನೆ ಯುಕ್ತಳಾಗಿ, ಸಕಲ ಲೋಕಂಗಳಂ ಇಂದ್ರ ಮುಂತಾದ ದೇವತೆಗಳಂ ಅತ್ಯಂತ ಬಾಧಿಸಿದಳು.

ಗಜಾಸುರನು ತಪೋನಿಷ್ಠೆಯಿಂದ ಪರಶಿವನ ವರವನ್ನು ಪಡೆದುದು.

ಆ ಸಮಯದಲ್ಲಿ ದೈತ್ಯಗುರುವಾದ ಶುಕ್ರಾಚಾರ್ಯನು ಗಜಮುಖನ ಸಮೀಪವನ್ನೈದಿ, ಎಲೈ! ನೀನು ತಪದಿಂ ಪರಮೇಶ್ವರನಂ ಪ್ರಸನ್ನನಂ ಮಾಡಿಕೊಂಡು ಆ ಸ್ವಾಮಿಯಿಂ ವರವಂ ಪಡೆದು ನಿರ್ಭಯನಾಗಿ ಸ್ವೇಚ್ಛೆಯಿಂ ಸಂಚರಿಸು. ಅಲ್ಲದಿರ್ದೊಡೆ ನಿನಗೆ ಯೆಲ್ಲಿಯಾದರು ಭಯವುಂಟಾದೀತೆಂದು ಪೇಳ್ದು ತನ್ನ ಲೋಕಕ್ಕೆ ಪೋಗಲಾಗಿ, ಬಳಿಕ ಗಜಮುಖನು ಈ ರೀತಿಯಾದ ಶುಕ್ರನ ವಾಕ್ಯವಂ ಕೇಳಿ ಮನೋಹರವಾದ ಮೇರು ಪ್ರಾಂತ್ಯದಲ್ಲಿ ತೃಣಾಹಾರನುಳ್ಳವನಾಗಿ ಸಹಸ್ರವರ್ಷ ಪರ್ಯಂತರ ತಪವಂ ಮಾಡಿ, ಮರಳಿ ಸಹಸ್ರ ವರ್ಷಗಳವರಿಗು ಪರ್ಣಾಹಾರನಾಗಿ ಸಹಸ್ರಕಾಲ ವಾಯು ಭಕ್ಷಕನಾಗಿ ಮತ್ತೆ ಸಹಸ್ರಕಾಲ ನಿರಾಹಾರನಾಗಿ ಪಂಚಾಗ್ನಿ ಮಧ್ಯದಲ್ಲಿ ತಪವಂಮಾಡಿದನು. ಬಳಿಕ ಶಿವನು ಆ ದೈತ್ಯೇಂದ್ರಂಗೆ ಪ್ರಸನ್ನನಾಗಿ ನಿನಗೆ ಬೇಕಾದ ವರವಂ ಬೇಡೆಂದು ಪೇಳಲಾಗಿ, ಆಗ ಗಜಮುಖನು ಸ್ವಾಮಿಯಂ ನೋಡಿ, ಭಗವಂತನಾದ ಎಲೈ ಸ್ವಾಮಿಯೆ! ನಿನ್ನ ಪ್ರಸಾದದಿಂದೆನಗೆ ನಾನಾವಿಧವಾದ ಆಯುಧಂಗಳುಂಟಾಗಲಿ, ಶತ್ರುಗಳ ತಾಡನಾಯುದ್ಧಂಗಳಿಂ ಛೇದನಾಯುದ್ಧಂಗಳಿಂ ವಿಕ್ಷೇಪಣಾಯುದ್ಧಂಗಳಿಂ ಮತ್ತು ವಿಶೇಷವಾದ ನಾನಾ ಯುದ್ಧಂಗಳಿಂ ಮರಣವುಂಟಾಗಬೇಡ. ಇದಲ್ಲದೆ ದೇವತೆಗಳು ರಾಕ್ಷಸರು ಮೃಗಪಕ್ಷಿ ಸರ್ಪಂಗಳು ಮೊದಲಾದವರ ಯುದ್ಧದಲ್ಲಿ ಭಯವುಂಟಾಗಬೇಡ. ನಾನೆಲ್ಲಿಗೆ ಪೋದರು ಜಯವುಂಟಾಗಲಿ. ಸಮಸ್ತ ಜಗತ್ತು ನನ್ನಾಜ್ಞಾವಶವರ್ತಿಯಾಗಿರಲಿ. ಮೃತ್ಯುವು ಬರುವ

ದಾದರೆ ನನ್ನ ಮೂರ್ತಿಯಿಂದಲೆ ಉಂಟಾಗಲಿ, ಎಂದು ವರಗಳಂ ಕೇಳಿ ಪರಮೇಶ್ವರನಿಂದ ಆ ವರವಂ ಪಡೆದನು. ಬಳಿಕ ಸ್ವಾಮಿಯು ಅಂತರ್ಧಾನವಾದನು.

ಗಜಾಸುರನ ಹಿಂಸೆಯನ್ನು ತಡೆಯಲಾರದೆ ದೇವತೆಗಳು ಪರಶಿವನನ್ನು ಪ್ರಾರ್ಥಿಸುವಿಕೆ.

ಬಳಿಕ ಮಹೇಶ್ವರನ ವರವುಳ್ಳ ಪಾಪಿಯಾದ ಗಜಮುಖನು ಘೋರರಾದ ಅಸುರರಿಂದೊಡಗೂಡಿ ಹರಿಬ್ರಹ್ಮೇಂದ್ರಾದಿ ಸಮಸ್ತ ದೇವತೆಗಳಂ ಜಯಿಸಿ ಅವರ ಲೋಕಂಗಳಿಗೆ ತಾನೆ ಪೋಗಿ ಮನೋಹರವಾದ ಅವರ ಗೃಹಂಗಳನ್ನು ಪೊಕ್ಕನು. ಮತ್ತಂ ಆ ಮಹಾಸುರನು ಅತ್ಯಂತ ಸೌಂದರ್ಯವತಿಯಾದ ನಾಮಿನಿಯೆಂಬ ಹೆಸರುಳ್ಳ ಅಸುರೇಂದ್ರನ ಪುತ್ರಿಯಂ ವಿವಾಹವಂ ಮಾಡಿಕೊಂಡು ಇಂದ್ರ ಮುಂತಾದ ದೇವತೆಗಳಂ ಕಾಮಧೇನು ಕಲ್ಪವೃಕ್ಷ ಚಿಂತಾಮಣಿ ಮುಂತಾದವಂ ತನ್ನ ಕೃತ್ಯಂಗಳೊಡನೆ ಪ್ರೇರಿಸಿ, ಶುಕ್ರನಿಂದ ಅನೇಕ ಮಂತ್ರಂಗಳಂ ಪಡೆದು, ಮಹಾ ಪ್ರತಾಪದಿಂ ಸಕಲ ಜಗವನ್ನಾಳಿದನು. ಮತ್ತಂ ಇಂದ್ರಾದಿ ದೇವತೆಗಳು ಒಂದಾನೊಂದು ಕಾಲದಲ್ಲಿ ಆತನಿರುವ ಬಳಿಗೆ ಬಂದು ದಂಡವತ್ತಾಗಿ ಭೂಮಿಯಲ್ಲಿ ಬಿದ್ದು ನಮಸ್ಕರಿಸಿ ಕೈಗಳಂ ಮುಗಿದು ಆತನ ಮುಂದೆ ನಿಲ್ಲಲಾಗಿ, ಅಸುರನು ಆ ದೇವತೆಗಳಂ ನೋಡಿ, ಎಲೈ ದೇವತೆಗಳಿರಾ! ಇಂದು ಮೊದಲಾಗಿ ನೀವೆಲ್ಲರು ಭಕ್ತಿಪೂರ್ವಕವಾಗೆನಗೆ ಮೂರುಪ್ರದಕ್ಷಿಣ ನಮಸ್ಕಾರಗಳಂ ಮಾಡಿ ಕರದಿಂ ಮೂರು ಸಲ ಹಣೆಯಂ ಮುಟ್ಟಿಟ್ಟುಕೊಂಡು ವ್ಯತ್ಯಾಸ ಹಸ್ತಗಳಿಂ ಶ್ರವಣಂಗಳಂ ಪಿಡಿದು ಮರಳಿ ಮರಳಿ ಕುಳಿತು ಕುಳಿತು ಯೆದ್ದೆದ್ದು ಗುಂಜನವಂಮಾಡಿ ನನ್ನಾಜ್ಞೆಯಿಂ ಪೋಗಿರೆಂದು ಪೇಳ್ದು ಕಳುಹಿದನು. ಆಗ ಸಮಸ್ತ ದೇವತೆಗಳು ಆತನ ಆಜ್ಞೆಯಿಂ ಹಾಗೆ ಮಹತ್ತಾದ ದುಃಖದಿಂದ ಯುಕ್ತರಾಗಿ ಬಹು ಕಾಲವು ಆತಂಗೆ ಸೇವೆಯಂ ಮಾಡುತಿರ್ದರು. ಬಳಿಕ ಒಂದಾನೊಂದು ಕಾಲದಲ್ಲಿ ದೇವತೆಗಳು ಹರಿಯಂ ಪೆರಸಿ ಕೈಲಾಸಪರ್ವತಕ್ಕೆ ಪೋಗಿ ನಂದೀಶ್ವರನ ಆಜ್ಞೆಯಿಂ ಸಂಸಾರ ಭೇಷಜನಾದ ಸದಾಶಿವನಂ ಕಂಡು ನಮಸ್ಕಾರವಂ ಮಾಡಿ ನಾನಾ ಸ್ತೋತ್ರಂಗಳಿಂ ಸ್ತುತಿಸೆ, ಶರಣಾಗತವತ್ಸಲನಾದ ಪರಮೇಶ್ವರನು ಪ್ರಸನ್ನನಾಗಿ ಹರಿಯಂ ಕರೆದು ಯೇನುಕಾರಣ ಬಂದಿರೆಂದು ಕೇಳೆ, ಆಗ ಹರಿಯು ಆ ಗಜಮುಖನ ಸಕಲ ವೃತ್ತಾಂತವಂ ಶಂಭುವಾದ ಆತಂಗೆ ಪೇಳಿ, ಎಲೈ ಭಗವಂತನೆ! ಉತ್ತಮವಾದ ಕುಮಾರನಂ ಸೃಜಿಸಿ ಆ ದುರುಳನಾದ ಅಸುರನಂ ಸಂಹರಿಸಿ ನಮ್ಮನ್ನು ರಕ್ಷಿಸೆಂದು ಪ್ರಾರ್ಥಿಸಿ

ದನು. ಬಳಿಕ ಪರಮೇಶ್ವರನಾದ ಶಂಭುವು ಆ ಹರಿಯ ವಾಕ್ಯವಂ ಕೇಳಿ ಹಾಗೆಯಾಗಲೆಂದು ಅವರಂ ಕಳುಹೆ, ದೇವತೆಗಳು ಸಂತುಷ್ಟರಾಗಿ ತಮ್ಮ ತಮ್ಮ ಸ್ಥಾನಂಗಳಿಗೆ ಪೋದರು. ಎಲೆ ದಕ್ಷನೆ ! ಸಮಸ್ತರಾದ ದೇವತೆಗಳು ಈ ಪ್ರಕಾರದಿಂ ತಮ್ಮ ಸ್ಥಾನಂಗಳನ್ನೈದಿದ ಬಳಿಕ ಭಗವಂತನಾದ ಆ ಶಂಕರನು ಗೌರಿದೇವಿಯೊಡನೆ ಹರಿಚಂದನ ಪಾರಿಜಾತ ಮುಂತಾದ ಕಲ್ಪವೃಕ್ಷಂಗಳಿಂದಾಶ್ಚರ್ಯಕರವಾದ ಕೇಳೀವನನ್ನು ಪೊಂದಿದನೆಂದು ದಧೀಚಿಯು ಪೇಳಿದ ನೆಂಬದಾಗಿ ಸೂತಂ ಶೌನಕಾದಿಗಳಿಗೆ ನಿರೂಪಿಸಿದ ನೆಂಬಿಲ್ಲಿಗೆ ಇಪ್ಪತ್ನಾಲ್ಕನೆಯ ಅಧ್ಯಾಯವು ಸಂಪೂರ್ಣವಾದುದು.

ಇಪ್ಪತ್ತೈದನೆಯ ಅಧ್ಯಾಯವು.

ಗಣೇಶ್ವರನ ಜನನಾದಿ ವೃತ್ತಾಂತ.

ಎಲೆ ದಕ್ಷನೆ! ಮಹಾದೇವನು ಕ್ರೀಡಾವನದಲ್ಲಿ ವಿಚಿತ್ರವಾದ ಮಂಟಪವಂ ನೋಡಿ ಗಿರಿಜಾ ದೇವಿಯೊಡನೆ ಅಲ್ಲಿಗೆ ಪೋಗಿ ರತ್ನಸಿಂಹಾಸನದಲ್ಲಿ ಪದ್ಮಾಸನಸ್ಥಿತನಾಗಿ ವಿಚಿತ್ರಭಿತ್ತಿಗಳಲ್ಲಿರ್ಪ ಚಿತ್ರಂಗಳಂ ಕಂಡು, ಆ ಪ್ರದೇಶದಲ್ಲಿ ಕ್ರಮದಿಂ ಪ್ರಣವವಂ ನೋಡಿದನು. ಬಳಿಕ ಶಂಭುವಿನಿಂ ನೋಡಲ್ಪಟ್ಟ ಪ್ರಣವದಿಂ ಗಜದಂಪತಿಗಳು ಪುಟ್ಟಿ ಸಂತೋಷಯುಕ್ತವಾಗಿ ಅಲ್ಲಿ ಅನ್ಯೋನ್ಯದಿಂ ರಮಿಸಿದವು. ಶಾಂಕರಿಯು ಅತ್ಯಂತ ಪ್ರೀತಿಯಿಂದ ಆ ಗಜ ದಂಪತಿಗಳಂ ನೋಡಿ ಆಶ್ಚರ್ಯಯುಕ್ತೆಯಾಗಿ ಇದೇನೆಂದು ಮಹಾದೇವನಂ ಕೇಳಲಾಗಿ ಶಿವನು ದೇವಿಯ ವಾಕ್ಯವಂ ಕೇಳಿ, ಎಲೆ ಕಲ್ಯಾಣಿಯೆ ! ಲೋಕೋಪಕಾರವಾದ ದಯೆಯಂ ಇವರಲ್ಲಿ ಮಾಡೆಂದು ಪೇಳ್ದು ಸ್ನೇಹದಿಂ ತಾವೀರ್ವರು ಆ ಗಜ ದಂಪತಿಗಳಂ ನೋಡೆ ಅಲ್ಲಿ ಗಜೇಶ್ವರನಾದ ಗಜಮುಖನು ಚಂಡಾರ್ಕಕೋಟಿ ಪ್ರಕಾಶನಾಗಿ ಕ್ರೀಡಿಸುವ ಗಜದ್ವಯದಿಂ ಪ್ರಾದುರ್ಭವಿಸಿ ಪಾರ್ವತೀಪರಮೇಶ್ವರರ್ಗೆ ನಮಸ್ಕರಿಸಿದನು. ಆಗ ಪಾರ್ವತೀಪರಮೇಶ್ವರರು ಆ ವಿನಾಯಕನನ್ನಾಲಿಂಗಿಸಿ ಮಸ್ತಕವನಾಘ್ರಾಣವಂ ಮಾಡಿ ಆ ಗಣೇಶ್ವರನಂ ತಮ್ಮ ತೊಡೆಯಮೇಲೆ ಕುಳ್ಳಿರಿಸಿಕೊಂಡರು.

ಬಳಿಕ ಶಂಭುವು ಆ ಗಣಪತಿಯಂ ಕೃಪೆಯಿಂನೋಡಿ, ಎಲೆ ವಿನಾಯಕನೆ! ನನಗೆ ಕುಮಾರನಾದ ನಿನಗೆ ಆರು ನಮಸ್ಕರಿಸುವರೋ ಅವರಿಗೆ ನಿರ್ವಿಘ್ನವಾಗಿ ಅಭೀಷ್ಟಂಗಳುಂಟಾಗಲಿ. ಆದಿಯಾಗಿರ್ದ ನೀನು ನಮ್ಮಾಜ್ಞೆಯಿಂ ಸಮಸ್ತ ಗಣಂಗಳಿಗೆ ಪತಿಯು ಲೋಕದಲ್ಲಿ ಜನರು ತಮ್ಮ ಕಾರ್ಯದ ಆದಿಯಲ್ಲಿ

ನಿನ್ನಂ ಪೂಜಿಸಿ ಅಭೀಷ್ಟಂಗಳಂ ಪಡೆಯಲಿ. ಎಲೆ ಪುತ್ರನೆ! ನೀನು ಸುರ ದ್ರೋಹಿಯಾದ ದೈತ್ಯಶ್ರೇಷ್ಠನಾದ ಘೋರನಾದ ಗಜಮುಖನೆಂಬ ಅಸುರನಂ ಸಂಹರಿಸಿ ವಿಷ್ಣು ಮುಂತಾದ ದೇವತೆಗಳಂ ರಕ್ಷಿಸೆಂದು ನಿರೂಪಿಸಿದನು. ಬಳಿಕ ಆತನಂ ಕರೆದು ಕೈಲಾಸಪುರದ್ವಾರದಲ್ಲಿರಿಸಿ ಗೌರಿದೇವಿಯು ಸಂತುಷ್ಟಮಾನಸ ಳಾಗಿ ಅಂತಃಪುರವನ್ನೈದಿದಳು. ಬಳಿಕ ನಂದಿಕೇಶ್ವರ ಮುಂತಾದ ಸಕಲ ಗಣಂಗಳು ವಿಷ್ಣು ಮುಂತಾದ ಸಮಸ್ತ ದೇವತೆಗಳು ಆ ಗಣೇಶ್ವರಂಗೆ ನಮ ಸ್ಕಾರವಂ ಮಾಡಿ ನಾನಾವಿಧ ಸ್ತೋತ್ರಂಗಳಿಂ ಸ್ತುತಿಸಿ ಆತನ ಆಜ್ಞೆಯಿಂ ಪೂರ್ವದಂತೆ ತಮ್ಮ ತಮ್ಮ ಕಾರ್ಯಂಗಳಂ ಮಾಡಿದರು.

ಹರಪಾರ್ವತಿಯರ ಅಕ್ಷಕ್ರೀಡಾಲೀಲೆ.

ಶಿವನು ಪಾರ್ವತೀದೇವಿಯಂ ನೋಡಿ, ಎಲೆ ಕಲ್ಯಾಣಿಯೆ, ನೀನು ನಮ್ಮೊಡನೆ ವಿನೋದದಿಂ ಪಗಡೆಯನಾಡು. ನನಗೆ ಸೋತೆಯಾದರೆ ನಿನ್ನೊ ಡವೆ ಕೊಡು. ನಾನು ಪರಾಭವವಾದರೆ ನಮ್ಮೊಡವೆಯಂ ನಿನಗೆ ಕೊಡುವೆ ನೆಂದು ಪೇಳಲಾಗಿ, ಆ ಸಮಯದಲ್ಲಿ ಹರಿಯು ಅಲ್ಲಿಗೆ ಬಂದು ಆ ಪಾರ್ವತೀ ಪರಮೇಶ್ವರರ್ಗೆ ನಮಸ್ಕಾರವಂ ಮಾಡಿ ಭಯಾನ್ವಿತನಾಗಿ ನಿಂತನು. ಆಗ ಗೌರಿದೇವಿಯು ಆ ಹರಿಯಂ ಸಾಕ್ಷಿಯಾಗಿಮಾಡಿದಳು. ಸುಂದರರೆಂಬ ಗಣಂ ಗಳು ಪಗಡೆಯ ಉಪಕರಣಂಗಳಂ ತಂದರು. ಹರಿಯು ಹರನ ಆಜ್ಞೆಯಿಂ ಪಗಡೆಯ ಚಾರೆಯನು ಹಾಸಿ ಕಾಯಿಗಳಂ ತಮ್ಮ ತಮ್ಮ ಸ್ಥಾನಂಗಳಲ್ಲಿರಿಸಿ ಪಾರ್ವತೀಪರಮೇಶ್ವರರು ಪಗಡೆಯನ್ನಾಡುವದನ್ನು ನೋಡುತಿರಲು, ಆಗೆ ಶಂಭುವು ಪಾರ್ವತೀದೇವಿಗೆ ಸೋತು, ಎಲೆ ಮನೋರಮೆಯಾದ ಪಾರ್ವತಿಯೆ! ನಾನು ನಿನ್ನನು ಜಯಿಸಿದೆನು. ನಿನ್ನ ವೊಡವೆಯನ್ನು ಶೀಘ್ರವಾಗಿ ಕೊಡೆಂದು ಪೇಳೆ ಆ ದೇವಿಯು ಎಲೆ ದೇವೇಶನೆ! ನೀನು ಸೋತು ಲಜ್ಜೆಯಿಲ್ಲದೆ ಪುಸಿ ಮಾತಾಡುವದು ಯೋಗ್ಯವಲ್ಲ. ನಿನ್ನ ವೊಡಿವೆಯಂ ಶೀಘ್ರದಿಂ ಕೊಡೆಂದು ಕೇಳಿದಳು. ಆಗ ಶಿವನು ಆರು ಸೋತರೆಂದು ಮಾಧವನಂ ಕೇಳೆಂದು ನಿರೂಪಿಸ ಲಾಗಿ, ಪಾರ್ವತೀದೇವಿಯು ಆ ಮಾಧವನಂ ಕೇಳಿದಳು.

ಮಹಾವಿಷ್ಣುವು ಪಾರ್ವತೀದೇವಿಯ ಶಾಪದಿಂದ ಅಜಗರವಾಗುವಿಕೆ.

ಅದರೊಳಗಾಗಿ ಪರಮೇಶ್ವರನು ಭ್ರೂಸಂಜ್ಞೆಯಂ ಮಾಡೆ, ಆಗ ಕೂಟ ಸಾಕ್ಷಿಯಾಗಿ ಹರಿಯು ತಲೆವಾಗಿಸಿ, ಎಲೆ ಪಾರ್ವತಿಯೆ! ಶಿವನು ಸೋಲಲಿಲ್ಲ ವೆಂದು ಪೇಳಲಾಗಿ, ಗೌರಿದೇವಿಯು ಆ ವಿಷ್ಣುವಿನ ವಾಕ್ಯವಂ ಕೇಳಿ ಕೋಪಿಸಿ,

ಎಲೆ ಹರಿಯೆ! ನೀನು ಹುಸಿಯಾಡಿದುದರಿಂದ ಅಂದವಾದ ಅಜಗರವೆಂಬ ಸರ್ಪವಾಗಿ ಪುಟ್ಟೆಂದು ಶಾಪವಂ ಕೊಟ್ಟಳು. ಆಗ ಹರಿಯು ಪಾರ್ವತೀಶಾಪದಿಂದ ಅತ್ಯಂತ ಭಯಪಟ್ಟು ಸ್ವಾಮಿಗೆ ನಮಸ್ಕಾರವಂ ಮಾಡಿ, ಎಲೈ ಸ್ವಾಮಿಯೆ! ಶಾಪವಿಮೋಚನವಂ ಮಾಡೆಂದು ಪ್ರಾರ್ಥಿಸಲಾಗಿ ಶಿವನು ನೀನು ವಟದ್ವೀಪಕ್ಕೆ ಪೋಗಿ ಅಲ್ಲಿ ತಪವಂ ಮಾಡುತಿರು. ಅಲ್ಲಿಗೆ ಗಜಮುಖನೆಂಬ ದೈತ್ಯನಂ ಸಂಹರಿಸಲು ಗಜಾನನನು ಬರುವನು. ಆತನ ದರ್ಶನದಿಂ ನಿನಗೆ ಶಾಪವಿಮೋಚನವಾಗುವದೆಂದು ನುಡಿದು ಹರಿಯಂ ಕಳುಹಿದನು. ಬಳಿಕ ಹರಿಯು ಸರ್ಪರೂಪವಂ ಧರಿಸಿ ಶಿವಾಜ್ಞೆಯಿಂ ವಟದ್ವೀಪಕ್ಕೆ ಪೋಗಿ ಆ ವಟವೃಕ್ಷದ ಸಂಬಂಧವಾದ ಸಪ್ತಯೋಜನ ಪ್ರಮಾಣವಾದ ಬಿಲದಲ್ಲಿ ಪ್ರವೇಶಿಸಿ ಅದ್ವಿತೀಯನಾದ ಶಿವನಂ ಹೃದಯದಲ್ಲಿ ಧ್ಯಾನಿಸಿ ಹೀನಾಂಗನಾಗಿರುತಿರ್ದನೆಂದು ದಧೀಚಿಯು ದಕ್ಷಂಗೆ ಪೇಳದನೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದ ಸೆಂಬಿಲ್ಲಿಗೆ, ದಕ್ಷಕಾಂಡದಲ್ಲಿ ಇಪ್ಪತ್ತೈದನೆಯ ಅಧ್ಯಾಯವು ಸಂಪೂರ್ಣಂ.

ಇಪ್ಪತ್ತಾರನೆಯ ಅಧ್ಯಾಯವು.

ಗಣಪತಿಯು ಗಜಾಸುರನಮೇಲಿನ ಯುದ್ಧೋದ್ಯೋಗ.

ಎಲೈ ದಕ್ಷನೆ! ಅನಂತರದಲ್ಲಿ ಇಂದ್ರ ಮುಂತಾದ ದೇವತೆಗಳು ಚತುರ್ಮುಖ ಬ್ರಹ್ಮನೊಡನೆ ಕೈಲಾಸಪರ್ವತಕ್ಕೆ ಪೋಗಿ ಅಲ್ಲಿ ವಿಘ್ನೇಶ್ವರನಂ ಕಂಡು ಅರ್ಘ್ಯ ಮುಂತಾದ ಷೋಡಶೋಪಚಾರ ಪೂಜೆಗಳಿಂ ಪೂಜಿಸಿ ನಾನಾವಿಧವಾದ ಸ್ತೋತ್ರಂಗಳಿಂ ಸ್ತುತಿಸಲಾಗಿ ಬಳಿಕ ಸ್ವಾಮಿಯು ಪ್ರಸನ್ನನಾಗಿ ನಿಮ್ಮಭೀಷ್ಟವೇನೆಂದು ಕೇಳಿದನು. ಆಗ ದೇವತೆಗಳು ವಿಘ್ನೇಶ್ವರನಂ ನೋಡಿ ಮಹಾಸತ್ವನಾದ ಭಕ್ತರಿಗೆ ಇಷ್ಟಪ್ರದನಾದ ಎಲೈ, ವಿನಾಯಕನೆ! ಗಣಂಗಳಿಗೆ ಗಣಪತಿಯಾದ ನಿನ್ನನ್ನು ಶರಣು ಹೊಕ್ಕೆವು ಗಜಮುಖನೆಂಬ ದೈತ್ಯನಂ ಸಂಹರಿಸಿ ಸಮಸ್ತ ದೇವತೆಗಳಂ ರಕ್ಷಿಸು ರಕ್ಷಿಸೆಂದು ಪ್ರಾರ್ಥಿಸೆ, ಗಣಾಗ್ರಣಿಯಾದ ವಿನಾಯಕನು ಅವರ ವಾಕ್ಯವಂ ಕೇಳಿ ಶೀಘ್ರವಾಗಿ ಸಿಂಹಾಸನವನ್ನಿಳಿದು ಅಚಲನೆಂಬ ಭೂತ ಗಣಾಧೀಶ್ವರನ ಮೇಲೆ ಕುಳಿತು ಮಹಾ ಧ್ವನಿಗಳಂ ಮಾಡುತ್ತಿರುವ ಭೂತ ಸೇನೆಗಳಿಂದಾವೃತನಾಗಿ ಛತ್ರಚಾಮರ ಧ್ವಜಗಳಿಂದ ಯುಕ್ತನಾಗಿ ಸಮುದ್ರ ಘೋಷೆಯಂ ಜಯಿಸುತ್ತಲಿರುವ ವಾದ್ಯಂಗಳಂ ಘೋಷಿಸಲಾಗಿ, ದೇವತೆಗಳು ಪುಷ್ಪವೃಷ್ಟಿಯಂ ಕರೆದರು. ವೇಗದಿಂ ಮತಂಗವಕ್ತ್ರನ

ಸಮೀಪಕ್ಕೆ ಪೋದರು. ಆಗ ಗಜವಕ್ತ್ರನೆಂಬ ಮಹಾ ಅಸುರನು ಅವರ ಆಗಮ ನವಂ ಕೇಳಿ ವೇಗದಿಂ ರಥವನ್ನೇರಿ ಚತುರಂಗಬಲಯುಕ್ತನಾಗಿ ಚಾಮರ ವ್ಯಜನ ಛತ್ರ ಧ್ವಜ ವಾದ್ಯಂಗಳ್ವೆರಸಿ ಸಹಸ್ರ ವಾಹಿನೀ ಸೇನಾಸಮೇತನಾಗಿ ಸಮಸ್ತ ಸಂಭ್ರಮದಿಂ ನಗರದಿಂ ಪೊರಮಡೆ ಆಗ ಈ ಎರಡು ಬಲಂಗಳಿಗೆ ಘೋರ ಮಾದ ಯುದ್ಧಮಾದುದು. ಭೂತಸೇನೆಯಿಂ ದೈತ್ಯಸೇನೆಯು ಪರಾಭವ ವಾದುದು. ಬಳಿಕ ಆ ಗಜಮುಖನೆಂಬ ದೈತ್ಯನದಂ ನೋಡಿ ಮಹಾ ಕೋಪಾ ಕುಲನಾಗಿ ಚಾಪಮಂ ಶಳೆದು ಅಸ್ತ್ರಂಗಳಂ ಪ್ರೇರಿಸಿ, ಆ ವಿನಾಯಕನಂ ನೋಡಿ, ಎಲೈ ನೀನು ನನ್ನ ಕಾರ್ಯವನ್ನರಿಯೆ, ಪರಮೇಶ್ವರನು, ಕೊಟ್ಟ ವರವನ್ನು ತಿಳಿಯ ದಿದ್ದಿ. ಜೀವಿಸಬೇಕೆಂಬದುಂಟಾದರೆ ಬಂದ ಮಾರ್ಗವಂ ಪಿಡಿದು ಶೀಘ್ರ ವಾಗಿ ಪೋಗು. ನನ್ನೊಡನೆ ಯುದ್ಧವಂ ಮಾಡಲು ನೀನು ಶಕ್ತನಲ್ಲ ನೀನು ಬಾಲಕನು. ಪೂರ್ವದಲ್ಲಿ ಕೆಲಂಬರು ನನ್ನೊಡನೆ ಯುದ್ಧವಂ ಮಾಡಿ ಪರಾಜಿತ ರಾದರು. ಪರಮೇಶ್ವರನ ವಶದಿಂದ ನನಿಗೆ ಆವ ಆಯುಧದಿಂದಲು ಮರಣವಿಲ್ಲ. ದೇವತೆಗಳಿಗೆ ಸಹಾಯವಂ ಮಾಡೇನೆಂದು ವ್ಯರ್ಥವಾಗಿ ಆಗ್ರಹದಿಂ ಬಂದೆ. ಈಗ ಯುದ್ಧವಂ ಮಾಡಲು ಮನಸ್ಸುಂಟಾದರೆ ಯುದ್ಧವಂ ಮಾಡು. ಪ್ರಥಮ ದಲ್ಲಿ ನಿನ್ನನು ಜಯಿಸಿ ಬಳಿಕ ದೇವತೆಗಳನ್ನು ಸಂಹರಿಸುವೆನೆಂದು ಪೇಳಲಾಗಿ ವಿಘ್ನೇಶ್ವರನು ಆ ವಾಕ್ಯವಂ ಕೇಳಿ ಶಿವಾಜ್ಞೆಯಿಂ ನಿನ್ನನ್ನು ಸಂಹರಿಸಿ ದೇವತೆ ಗಳನ್ನು ರಕ್ಷಿಸಲು ಬಂದೆನು. ಅದುಕಾರಣದಿಂ ನೀನು ಇಂದ್ರಾದಿ ದೇವತೆಗಳ ಸ್ಥಾನವಂ ಅವರಿಗೆ ಕೊಡು. ಅಲ್ಲದಿದ್ದೊಡೆ ನಿನಗೆ ಆಜ್ಞೆ ಬಂದೀತು ಸಂಶಯ ವಿಲ್ಲ. ಈಗ ನೀನು ಭೂಮಿಯಂ ರಕ್ಷಿಸಿಕೊಂಡು ಮರಹು ಇಲ್ಲದಿರೆಂದು ನಿರೂ ಪಿಸಿದನು. ಬಳಿಕ ದಾನವನು ಆ ವಾಕ್ಯವಂ ಕೇಳಿ ಅಟ್ಟಹಾಸವಂ ಮಾಡಿ ಆ ಗಣೇಶ್ವರನ ಮೇಲೆ ಅನೇಕ ಬಾಣಂಗಳಂ ವರ್ಷಿಸಿದನು. ಆಗ ವಿಘ್ನೇಶ್ವರನು ಕಬ್ಬಿಣದ ಮುಸಲದಿಂ ಆ ಬಾಣಂಗಳಂ ಪುಡಿಮಾಡಿ ದುರಾತ್ಮನಾದ ಆ ದೈತ್ಯನ ಘೋರವಾದ ಧನುವಂ ಛೇದಿಸಲಾಗಿ, ಆ ದೈತ್ಯನು ಮತ್ತೊಂದು ಧನುವಂ ತೆಗದುಕೊಂಡು ಸಮೀಪಕ್ಕೆ ಬಂದನು. ಆಗ ಮಹಾಬಲನಾದ ವಿಘ್ನೇಶ್ವರನು ಮುಸಲದಿಂದಲೆ ಆ ಚಾಪವಂ ಛೇದಿಸೆ, ಮರಳಿ ಅಸುರನು ಆ ದಂಡವಂ ತೆಗದು ಕೊಂಡು ಅಟ್ಟಹಾಸವಂ ಮಾಡುತ ಸ್ವಾಮಿಯ ಸಮೀಪಕ್ಕೆ ಬರಲಾಗಿ ಗಣೇಶ್ವ ರನು ಮುಸಲದಿಂದ ದಂಡವಂ ಮುರಿದು ದುರಾತ್ಮನಾದ ಆ ದೈತ್ಯನ ಉರವಂ ಬಡಿಯೆ, ಅವನು ಮುಸಲ ಘಾತದಿಂ ಅತ್ಯಂತ ಪೀಡಿತನಾಗಿ ಮೂರ್ಛೆಯ ನೈದಿದನು. ಬಳಿಕ ವಿನಾಯಕನು ಆ ದೈತ್ಯನ ಬಲವಂ ಕ್ಷಣಮಾತ್ರದಲ್ಲಿ ಸಂಹರಿಸಿದನು.

ಗಜಾಸುರನು ಮೂಷಕನಾಗಿ ಗಣನಾಥನಿಗೆ ವಾಹನವಾಗುವಿಕೆ.

ಅನಂತರದಲ್ಲಿ ಗಜಮುಖನಾದ ಮಹಾ ಅಸುರನು ಕೋಪಾನಲನಾಗಿ ಆ ವಿನಾಯಕನ ಮೇಲೆ ಅನೇಕ ದೇವ ಶಸ್ತ್ರಂಗಳಂ ವರ್ಷಿಸಲಾಗಿ, ಅವುಗಳು ಬಂದು ವಿಧಾನದಿಂ ವಿನಾಯಕಂಗೆ ನಮಸ್ಕಾರವಂ ಮಾಡಿ ಭೀತಿಯಿಂ ಸಮೀಪದಲ್ಲಿ ನಿಂತವು. ಆಗ ಅಸುರನದಂ ಕಂಡು ಕೋಪದಿಂ ವಿನಾಯಕನ ಮೇಲೆ ಪ್ರಳಯಕಾಲದ ಮೇಘದಂತೆ ಬಹು ಬಾಣಂಗಳಂ ವರ್ಷಿಸೆ, ವಿನಾಯಕನು ಈ ದೈತ್ಯನಿಗೆ ಶಸ್ತ್ರಂಗಳಿಂ ಮರಣವಿಲ್ಲವೆಂದು ತಿಳಿದು ತಮ್ಮ ದಂತದ ಕೊನೆಯಂ ಮುರಿದು ಆ ಅಸುರನಂ ಬಡಿಯಲಾಗಿ ಅದು ಅತಿ ವೇಗದಿಂ ಪೋಗಿ ದೈತ್ಯನ ಅತಿ ನಿಷ್ಠುರವಾದ ಉರಸ್ಥಲವಂ ಭೇದಿಸಿ ಕ್ಷಣಮಾತ್ರದಲ್ಲಿ ಸ್ವಾದೂದಕ ಸಮುದ್ರದಲ್ಲಿ ಸ್ನಾನವಂ ಮಾಡಿ ವಿಘ್ನೇಶ್ವರನ ಸಮೀಪವನ್ನೈದಿತು. ಬಳಿಕ ಅಸುರನು ರಕ್ತಮಯವಾದ ಶರೀರವಂ ಬಿಟ್ಟು ವೃತ್ತಾಕಾರವಾಗಿ ರಕ್ತವರ್ಣನಾಗಿ ದೊಡ್ಡದಾದ ನಯನದ್ವಯದಿಂ ಯುಕ್ತವಾದ, ಸ್ಥೂಲವಾಗಿ ದೀರ್ಘವಾದ ಕಠಿಣವಾಗಿ ಸರ್ಪಮುಖವುಳ್ಳ ನಾಲ್ಕು ಪಾದಂಗಳಿಂ ಪರ್ವತಂಗಳಂ ವೃಕ್ಷಂಗಳಂ ಪುಡಿಪುಡಿ ಮಾಡುತ ಅಂಡಗಳಂ ಭಕ್ಷಿಸಲು ಸಮರ್ಥವಾದ ಮಹಾ ಧ್ವನಿಯುಳ್ಳ ಬಹು ಘೋರವಾದ ಜಗತ್ರಯವನ್ನು ಭಯಪಡಿಸುವ ಮಹೋನ್ನತವಾದ ಮೂಷಕರೂಪವಂ ಧರಿಸಿ ವೇಗದಿಂ ವಿನಾಯಕನ ಸಮೀಪಕ್ಕೆ ಬಂದನು. ವಿನಾಯಕನು ಆ ಮೂಷಕವಂ ವಾಹನವಾಗಿ ಮಾಡಿ ಅದರಮೇಲೆ ಕುಳ್ಳಿರೆ, ಆಗ ಮೂಷಕವು ಜ್ಞಾನವಂತನಾಗಿ ಮಹಾ ಜ್ಞಾನವಂ ಪಡೆದು ವಿಘ್ನೇಶ್ವರಸ್ವಾಮಿಯಂ ವಹಿಸಿತು. ಬಳಿಕ ಬ್ರಹ್ಮ ಮುಂತಾದ ದೇವತೆಗಳು ಅತ್ಯಂತ ಪ್ರೀತಿವಂತರಾಗಿ ಪುಷ್ಪವೃಷ್ಟಿಗಳಂ ಕರೆದು ಬಳಸಿಯು ನರ್ತನವಂ ಮಾಡಿ ಪಾಠಕರಂತೆ ಸ್ತುತಿಸಿದರು. ಆಗ ವಿಘ್ನೇಶ್ವರನು ಆ ಬ್ರಹ್ಮಾದಿ ದೇವತೆಗಳಂ ಕಂಡು ದಯೆಯಂ ಮಾಡಿ ಆ ದೈತ್ಯನಿಂ ಮೃತರಾದ ಭೂತಗಣಂಗಳಂ ನೋಡಲಾಗಿ ಅವರುಗಳು ವಿಘ್ನೇಶ್ವರನ ಕೃಪಾವಶದಿಂದೆಲ್ಲರು, ಸರ್ವರಕ್ಷಕನಾದ ವಿಘ್ನೇಶ್ವರನಿಗೆ ಅಸಾಧ್ಯವೇನಿರುವದೆಂದರು. ಬಳಿಕ ಸಮಸ್ತ ಭೂತಂಗಳು ಕೋಲಾಹಲಧ್ವನಿಯಂ ಮಾಡೆ, ಅಸುರೇಂದ್ರನು ಭೂತಂಗಳಿಂದಲು ಇಂದ್ರನಿಂದಲು ಭಯಪಟ್ಟು ಪಕ್ಷಿರೂಪವಂ ಧರಿಸಿ, ಮೇರುವಿನ ಗುಹೆಯಂ ಪೊಕ್ಕನು. ಹಾಗೆ ಶುಕ್ರನು ಭೀತಿಗೊಂಡು ತನ್ನ ಸ್ಥಾನಕ್ಕೆ ಪೋದನು.

ಮಹಾ ವಿಷ್ಣುವಿನ ಶಾಪವಿಮೋಚನೆ.

ಅನಂತರ ವಿನಾಯಕನು ಆವ ಕಡೆಯಲ್ಲಿ ಘೋರನಾದ ದುರಾತ್ಮನಾದ ಅಸುರನು ರಕ್ತವಂ ಕಾರಿ ಮೃತನಾದನೋ ಅಲ್ಲಿ ಒಂದು ಪುರವಂ ರಚಿಸಿ ಆ

ಪಟ್ಟಣಕ್ಕೆ ಮಹಾರಕ್ತವರವೆಂಬ ಪೆಸರಿಟ್ಟು ಶಿವಲಿಂಗ ಪ್ರತಿಷ್ಠೆಯಂ ಮಾಡಿ ಆ ಲಿಂಗಕ್ಕೆ ಗಣಪತೀಶ್ವರನೆಂಬ ನಾಮವನ್ನಿಟ್ಟು ಭಕ್ತಿಯಿಂ ಪೂಜಿಸಿದನು. ಬಳಿಕ ವಿನಾಯಕನು ಮೂಷಕವನೇರಿ ಭೂತಗಣಂಗಳಿಂ ಸೇವಿತನಾಗಿ ಛತ್ರ ಚಾಮರಗಳೊಡನೆ ಸಂತೋಷಯುಕ್ತನಾಗಿ ಪೊರಮಟ್ಟು ಮಾರ್ಗವಶದಿಂದ ವಟದ್ವೀಪಕ್ಕೆ ಪೋಗಲು, ಆಗ ಹರಿಯು ಆತನ ಆಗಮನವಂ ತಿಳಿದು ಆ ವಟ ವೃಕ್ಷದಿಂ ಪೊರಮಟ್ಟು, ಅಲ್ಲಿ ವಿನಾಯಕನಂ ಕಂಡು ಮುದದಿಂ ನಮಸ್ಕರಿಸಿ ವಿನಾಯಕನ ದರ್ಶನದಿಂ ಸರ್ಪರೂಪವಂ ಬಿಟ್ಟು ನಿಜರೂಪವನ್ನೈದಿ ಅನೇಕ ಸ್ತೋತ್ರಂಗಳಿಂ ಸ್ತುತಿಸಿ, ಸರ್ವಲೋಕನಾಯಕನಾದ ಎಲೈ ವಿಘ್ನೇಶ್ವರನೆ! ನಿನ್ನ ದರ್ಶನಮಾತ್ರದಿಂದ ಗೌರಿದೇವಿಯ ಶಾಪದಿಂದುಟಾದ ಸರ್ಪಜನ್ಮವು ಬಿಡುಗಡೆಯಾದುದು, ಎಂದು ಪೇಳಿ ಅನೇಕ ಭಕ್ಷ್ಯಭೋಜ್ಯಗಳಂ ಮಾಡಿಸಿ ಸ್ವಾಮಿಯಂ ಪೂಜಿಸಿ ಪ್ರಸನ್ನತೆಯ ಮಾಡಿಕೊಂಡು, ಎಲೈ ವಿನಾಯಕನೆ! ಆರು ಧನುರ್ಮಾಸದ ಷಷ್ಠೀ ದಿವಸದಲ್ಲಿ ನಿನ್ನನ್ನು ಪೂಜಿಸುವರೋ ಅವರಿಗೆ ಸರ್ವಾಭೀಷ್ಟವಂ ಕೊಟ್ಟು ನನ್ನ ರಕ್ಷಣೆಯಂ ಮಾಡಿದ ಜ್ಞಾಪನೆಯಿಂದ ಅವರಂ ರಕ್ಷಿಸಬೇಕೆಂದು ಕೇಳಲಾಗಿ, ಹಾಗೆ ಆಗಲೆಂದು ನಿರೂಪಿಸಿ ಗಣಂಗಳು ಸಹ ಕೈಲಾಸಪರ್ವತಕ್ಕೆ ಪೋಗಿ, ತನಗೆ ಮಾತಾಪಿತೃಗಳಾದ ಪಾರ್ವತೀ ಪರಮೇಶ್ವರರ್ಗೆ ನಮಸ್ಕಾರವಂ ಮಾಡಿ ಅವರ ಅನುಜ್ಞೆಯಿಂದ ಬಹಿರ್ದ್ವಾರವೇದಿಕೆಯನ್ನೈದಿದನು. ಬಳಿಕ ವಿಷ್ಣು ಮುಂತಾದ ದೇವತೆಗಳು ವಿನಾಯಕನಿಗೆ ನಮಸ್ಕಾರವಂ ಮಾಡಿ ಸ್ತುತಿಸಿ ಆ ವಿಘ್ನೇಶ್ವರನಿಂ ಅನೇಕ ವರಗಳಂ ಪಡದು, ಎಲೈ ವಿನಾಯಕನೆ! ದೈತ್ಯರಿಗೆ ಮಾಡಿದ ಕುಟ್ಟನಾದಿಗಳಿಂ ನಮ್ಮನ್ನು ರಕ್ಷಿಸಿದ ಜ್ಞಾಪಕಕ್ಕೋಸುಗ ನಿಮಗೆ ಸರ್ವರು ಮಾಡಲೆಂದು ಪ್ರಾರ್ಥಿಸಿ ಪ್ರಥಮದಲ್ಲಿ ಬ್ರಹ್ಮೇಂದ್ರಾದಿ ದೇವತೆಗಳು ಕುಟ್ಟನಾದಿಗಳಂ ಮಾಡಿ ಸ್ವಾಮಿಯಿಂ ತಮ್ಮ ಸರ್ವಾಭೀಷ್ಟಂಗಳಂ ಪಡೆದರು. ಹೀಗೆಯೆ ಸರ್ವರಿಗು ಅಭೀಷ್ಟಂಗಳಂ ಕೊಡಬೇಕೆಂದು ಪೇಳ್ದು ಸ್ವಾಮಿಯ ಆಜ್ಞೆಯಿಂ ಕುಟ್ಟನ ಪೂರ್ವಕವಾಗಿ ತಮ್ಮತಮ್ಮ ಸ್ಥಾನಂಗಳಿಗೈದಿದರು, ಎಲೈ ದಕ್ಷನೆ! ಅಪರಿಮಿತ ವೈಭವಂಗಳುಳ್ಳ ವಿನಾಯಕನ ಸಂಬಂಧಮಾದ ಈ ವೃತ್ತಾಂತವನ್ನು ನಿನಗೋಸುಗ ನನ್ನಿಂದ ವರ್ಣಿಸಲ್ಪಟ್ಟಿತು. ಅಷ್ಟುಮಾತ್ರದಿಂದ ಶಿವನಿಗೆ ದೂಷಣವೆಲ್ಲಿಯದು? ಎಂದು ದಧೀಚಿಯು ದಕ್ಷಂಗೆ

ನಿರೂಪಿಸಿದನೆಂಬಲ್ಲಿಗೆ, ದಕ್ಷಕಾಂಡದೊಳು ಇಪ್ಪತ್ತಾರನೆಯ ಅಧ್ಯಾಯವು ಸಮಾಪ್ತಮಾದುದು.

ಇಪ್ಪತ್ತೇಳನೆಯ ಅಧ್ಯಾಯವು.

ಪರಮೇಶ್ವರನ ಮಹಿಮೆಯು ವರ್ಣನೆ, ದಕ್ಷನು ಪರಶಿವನನ್ನು ತಿರಸ್ಕರಿಸುವಿಕೆ.

ಎಲೈ ದಕ್ಷನೆ! ನಿನ್ನಿಂದ ಶಿವನು ಬಹು ತಾಮಸನೆಂದು ಪೇಳಲ್ಪಟ್ಟನಲ್ಲ, ಆ ವಿಷಯವಂ ಪೇಳ್ವೆನು ಕೇಳು, ಕಲ್ಯಾಣಗುಣ ಭೂಷಣನಾದ ಅನಂತ ಮಹಿಮಾಧಾರನಾದ ಪರಂಜ್ಯೋತಿಯಾದ ಪರಾತ್ಪರನಾಗಿ ಗುಣಾತೀತನಾದ ಶಿವನು ಪೂರ್ವದಲ್ಲಿ ಸತ್ವರಜಸ್ತಮೋಗುಣಗಳಂ ಸೃಜಿಸಿ, ರಜೋಗುಣದಿಂ ಬ್ರಹ್ಮನನ್ನುಂಟುಮಾಡಿ ಲೋಕಂಗಳಂ ಸೃಷ್ಟಿಯಂ ಮಾಡಲು ಮತಿಯಂ ಮಾಡಿದನು. ಸತ್ವಗುಣದಿಂ ಹರಿಯುಂ ಸೃಷ್ಟಿಸಿ ಪಾಲನೆಯುಂ ಮಾಡಲು ಮತಿಯಂಗೈದನು. ಬಳಿಕ ಸಂಹಾರವಂ ಮಾಡಲು ಆರಿಂದಲು ಅಶಕ್ಯವಾಗಿ ಅಂತ ಸ್ವತ್ವವಾದ ಶಿವನು ತಾನೇ ತಮೋಗುಣ ನಿಷ್ಠನಾಗಿ ಕಲ್ಪಕಲ್ಪದಲ್ಲಿಯು ಸರ್ವರಂ ಸಂಹರಿಸುತಲಿರುವನು. ಹಾಗಲ್ಲದಿದ್ದೊಡೆ ಸರ್ವ ವಿದ್ಯೆಗಳಂ ಉಪದೇಶಿಸುವ ಶಿವನು ಸನಕಾದಿ ಮುನಿಗಳ್ಗೆಯು ಬ್ರಹ್ಮ ವಿಷ್ಣು ಮುಂತಾದ ದೇವತೆಗಳ್ಗೆಯು ಉಪಾಸ್ಯನಾಗುವನೋ ಹಾಗೆ ಸ್ವೇಚ್ಛಾಪರನಾಗುವನೋ ಮತ್ತಂ ಶ್ರುತಿಯು ಶಿವನೆ ಸತ್ಯಜ್ಞಾನಾನಂದ ಸ್ವರೂಪನೆಂದು ಪೇಳುತಿರುವದು. ಮಹೇಶ್ವರಂಗೆ ತಾಮಸವಾವುದೆಂದು ಸಂಹಾರ ಮುಂತಾದುದರಿಂ ಪೇಳಲ್ಪಟ್ಟುದು. ಇದಲ್ಲದೆ ಅತ್ಯಂತ ಪರಿಶುದ್ಧಭಾವದಿಂ ಶಿವನು ನಿರಂಜನನಾಗಿ ಮಹಾದೇವನಾಗಿ ನಿರ್ಗುಣನಾಗಿ ನಿರುಪಪ್ಲವನಾಗಿ ಅನಂತ ಮಹಿಮಾಧಾರನಾಗಿರುವನೆಂದು ಪೇಳುತಲಿದ್ದೀತು. ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಗುಣತ್ರಯ ಯುಕ್ತರಾಗಿ ಹಾಗೆ ಹರಿಯು ನಿದ್ರಾಲಸ್ಯ ವಶದಿಂ ತಾಮಸನಾದನು. ಅಹಂಕಾರ ಯುಕ್ತದಿಂ ರಾಜಸನಾದನು. ಶಿವಜ್ಞಾನಾರ್ಚನಾ ಧ್ಯಾನ ನಿಷ್ಠಾ ತತ್ವದಿಂ ಸಾತ್ವಿಕನಾದನು. ಹೀಗೆ ಬ್ರಹ್ಮನು ದುಃಖದಿಂ ಜ್ಞಾನಾದಿ ಯುಕ್ತದಿಂ ತಾಮಸನಾಗಿ, ಸುವರ್ಣಸದೃಶಾಕಾರದಿಂ ರಾಜಸನಾಗಿ ಶಿವಜ್ಞಾನಾದಿ ಯುಕ್ತತ್ವದಿಂ ಸಾತ್ವಿಕನಾಗಿ ಪೇಳಲ್ಪಟ್ಟನು. ಇದರಂತೆ ಸಕಲ ಜಗತ್ತು ಗುಣತ್ರಯ ಯುಕ್ತವು. ನಿರ್ಗುಣನಾದ ಚರಾಚರ ರೂಪನಾದ ಮಹೇಶ್ವರನು ಕೃತ್ಯಭೇದದಿಂ ತಾಮಸನೆಂದು ತೋರುವದಲ್ಲದೆ ಮತ್ತೊಂದರಿಂ ತಾಮಸಗುಣನಲ್ಲ. ಎಲೈ ದಕ್ಷನೆ ಶಿವನಿರ್ವಾಣ ಮುಂತಾಗಿ ತಾಮಸಪರ್ಯಂತವಾಗಿ ದಾರುಕಾವನದಲ್ಲಿರ್ಪ ನಾಲ್ವತ್ತೆಂಟು ಸಾವಿರ ಋಷಿಗಳಿಗೆ ಪೂರ್ವದಲ್ಲಿ ಶಿವಚರಿತ್ರೆಯಂ ಪೇಳ್ದೆನು. ಈಗಲು ನಿನಗು ಪೇಳಿದೆನು. ಅದುಕಾರಣದಿಂ ಈ ಯಜ್ಞದಲ್ಲಿ ಶಿವನಂ ಪೂಜಿಸು. ಆ ಶಿವನು ನಿನ್ನಂ ರಕ್ಷಿಸುವನೆಂದು ದಧೀಚಿಯು ದಕ್ಷಂಗೆ ಪೇಳಲಾಗಿ ಆತನದಂ ಕೇಳಿ, ಎಲೈ

ಋಷಿಯೆ! ಆತನಾರಾದೊಡಂ ಆತಂಗೆ ಹವಿರ್ಭಾಗವಂ ಕೊಡೆನು. ಯೇನನ್ನಾದರು ನೀನು ಪೇಳಬೇಡ. ಬಹು ಮಾತಂ ಬಿಟ್ಟು ಬಂದ ಮಾರ್ಗವಂ ಪಿಡಿದು ಪೋಗೆಂದು ನುಡಿಯೆ, ಋಷಿಯು ಆತನ ವಾಕ್ಯವಂ ಕೇಳಿ ಕೋಪಹೃದಯನಾಗಿ ಆರು ಯಾಗದಲ್ಲಿ ಮಹಾದೇವನಂ ಬಿಟ್ಟು ಇತರ ದೇವತೆಗಳಿಗೆ ಹವಿರ್ಭಾಗವನ್ನೀಯುವರೋ ಅವರಿಗೆ ವಿಪರೀತ ಫಲವುಂಟಾಗುವ ದದುಕಾರಣದಿಂ ನೀನು ಮಾಡತಕ್ಕ ಯಜ್ಞಕ್ಕೆ ವಿಘ್ನಬರುವದು. ಯದ್ಯಪಿ, ನಿನಗು ಹವಿರ್ಭಾಗವನ್ನು ಭುಜಿಸಲು ಬಂದಿರ್ಪ ದೇವತೆಗಳಿಗು ಶಿರಚ್ಛೇದವಾದೀತೆಂದು ಪೇಳ್ದು, ಅಲ್ಲಿರುತಿರ್ಪ ಬ್ರಾಹ್ಮಣರುಗಳಂ ನೋಡಿ, ಎಲೈ ದ್ವಿಜರುಗಳಿರಾ! ನೀವೆಲ್ಲರು ವಿಪ್ರಾಧಮರಾಗಿ ಕುಶಾಸ್ತ್ರಾಸಕ್ತಮಾನಸರಾಗಿ ನಿತ್ಯವು ಶಿವದ್ರೋಹ ಪರರಾಗಿ ಶಿವಾರ್ಚನಾ ಪರಾಙ್ಮುಖರಾಗಿ ಸಮಸ್ತ ನರಕಂಗಳಲ್ಲಿ ಬೀಳಿರೆಂದು ಶಾಪವಂ ಕೊಟ್ಟು ತನ್ನ ಶಿಷ್ಯರೊಡನೆ ಶಿವನಂ ಧ್ಯಾನಿಸುತ ಆಶ್ರಮಕ್ಕೆ ಪೋದನೆಂದು ಶೌನಕಾದಿಮುನಿಗಳಿಗೆ ಸೂತಂ ಪೇಳಿದ ನೆಂಬಲ್ಲಿಗೆ, ದಕ್ಷಕಾಂಡದಲ್ಲಿ ಇಪ್ಪತ್ತೇಳನೆಯ ಅಧ್ಯಾಯವು ಸಂಪೂರ್ಣಂ.

ಇಪ್ಪತ್ತೆಂಟನೆಯ ಅಧ್ಯಾಯವು.

ದಕ್ಷನು ಹತವೀರ್ಯನಾಗಿ ಅಪಶಕುನಗಳನೇಕವಾಗಿ ಕಾಣುವಿಕೆ ಮತ್ತು ಶಿವರಹಿತ ಯಾಗಾರಂಭಮಾಡುವಿಕೆ.

ಕೇಳಿರೈ ಋಷಿಗಳಿರಾ! ಅನಂತರದಲ್ಲಿ ದುರಾತ್ಮನಾದ ದಕ್ಷಬ್ರಹ್ಮನ ಬಲವೀರ್ಯಧೃತಿ ಕೀರ್ತಿ ಸಂಪತ್ತು ಮುಂತಾದವುಗಳು, ಋಷಿ ಪೋದುದಂ ನೋಡಿ ತಾವು ಆ ಮುನಿಯ ಬಳಿವಿಡಿದು ಪೋದವು. ಬಳಿಕ ದಕ್ಷಧ್ವಜ ದಂಡವು ಮುರಿದುದು. ಆತನ ಸತಿಯು ಮಂಗಳ ಸೂತ್ರವು ಕಂಠದಿಂ ಕಿತ್ತು ಕೆಳಗೆ ಬಿದ್ದುದು. ಕಾಕ ಕಂಕಾದಿಗಳು ಆತನ ಯಜ್ಞದ ಯೂಪಸ್ತಂಭದ ಮೇಲೆ ಕುಳಿತವು. ಬಳಿಕ ದಕ್ಷನು ಈ ದುರ್ನಿಮಿತ್ತಗಳಂ ಕಂಡು ಭಯವಿಲ್ಲದೆ ಹರಿಬ್ರಹ್ಮರಂ ಪೂಜಿಸಿ ದೇವತೆಗಳಿಗು ಋಷಿಗಳಿಗು ಋಷಿ ಪತ್ನಿಗಳಿಗು ಅವರ ಮಕ್ಕಳಿಗು ಸಮಸ್ತ ಬ್ರಾಹ್ಮಣರಿಗು ಕಾಮಧೇನುವಿನಿಂ ಪುಟ್ಟಿದ ಭೋಜನ ವಸ್ತುಗಳಿಂ, ಕಲ್ಪವೃಕ್ಷದಿಂದುತ್ಪನ್ನವಾದ ವಸ್ತ್ರ ಮುಂತಾದವಂ ಚಿಂತಾಮಣಿಯಿಂ ಪುಟ್ಟಿದ ಭೂಷಣಂಗಳಿಂ ಪೂಜಿಸಿ ತೃಪ್ತಿಪಡಿಸಿದನು. ಆಗ ಕೆಲಂಬ ಬ್ರಾಹ್ಮಣರು ವಸ್ತ್ರಂಗಳಂ ರಾಶಿಮಾಡಿದರು. ಕೆಲಂಬರು ಆ ವಸ್ತ್ರಾದಿಗಳಂ ಒಂದು ಬಳಿಯಲ್ಲಿರಿಸಿ ಮರಳಿ ಬಂದರು. ರಥ ಗಜ ತುರಗಂಗಳ ಧ್ವನಿಗಳು ಸಮುದ್ರ

ದಂತೆ ಮೊಳಗಿದವು. ಅನೇಕ ವಿಮಾನಂಗಳು ಆ ಯಾಗಶಾಲೆಯಲ್ಲಿ ನಿಬಿಡ ವಾಗಿರ್ದವು. ಅನೇಕರಾದ ಅಪ್ಸರ ಸ್ತ್ರೀಯರು ನರ್ತನವಂ ಮಾಡಿದರು. ವಿದ್ಯಾಧರರು ಮಧುರವಾಗಿ ಗಾನವಂ ಮಾಡಿದರು. ಕೆಲಂಬ ದೇವತೆಗಳು ಸ್ತ್ರೀ ಸಮೇತರಾಗಿ ಸಂತೋಷದಿಂದಿರ್ದರು. ಆಗ ದಕ್ಷನು ಬ್ರಾಹ್ಮಣರಿಗೋಸುಗ ಅನೇಕ ದಾನಂಗಳಂ ಮಾಡಿ ವೇಗದಿಂದಗ್ನಿಯನ್ನು ಪ್ರಜ್ವಲಿಸಿ ದೇವತೆಗಳಂ ಕುರಿತು ಮಂತ್ರಂಗಳಿಂ ದಗ್ನಿಯಲ್ಲಿ ಆಹುತಿಗಳನ್ನಿತ್ತು ಸಂತುಷ್ಟಪಡಿಸಲಾಗಿ, ನಾರದನು ಅದನರಿತು ಕೈಲಾಸಪರ್ವತಕ್ಕೆ ಪೋಗಿ ಭಕ್ತಿಯಿಂ ಸ್ವಾಮಿಗೆ ನಮಸ್ಕರಿಸಿ ಅಂಜಲಿಬದ್ಧನಾಗಿ, ಎಲೈ ಸ್ವಾಮಿಯೆ! ಯಾಗಕ್ಕೆ ಒಡೆಯನಾದ ನಿನಗೆ ಹವಿರ್ಭಾಗವಂ ಕೊಡದೆ ಅನ್ಯದೇವತೆಗಳಿಗೆ ದಕ್ಷನು ಕೊಟ್ಟನು. ಯಜ್ಞೇಶ್ವರನು ನಿಮ್ಮಲ್ಲಿ ವಿಮುಖನಾದನೆಂದು ಪೇಳೆ, ಗೌರಿದೇವಿಯು ವಿಸ್ಮಿತೆಯಾಗಿ ಪರಮೇಶ್ವರಂಗೆ ನಮಸ್ಕಾರವಂ ಮಾಡಿ ಆ ಯಾಗವಂ ನೋಡಿ ಶೀಘ್ರದಿಂ ಬಂದೇನೆಂದು ಬಿನ್ನಪಂಗೈದಳು.

ಗೌರಿದೇವಿಯು ಪರಶಿವನನ್ನು ಪ್ರಾರ್ಥಿಸುವಿಕೆ.

ಬಳಿಕ ಪರಮೇಶ್ವರನು ಪಾರ್ವತಿಯ ವಾಕ್ಯವಂ ಕೇಳಿ ಎಲೆ ಕಲ್ಯಾಣಿಯೆ! ಆ ದಕ್ಷನು ನಿನ್ನಂ ಕರೆಯದೆ ಹೇಗೆ ಪೋಗುವಿ ಎನಲು, ಮರಳಿ ದೇವಿಯು ಸ್ವಾಮಿಯ ವಾಕ್ಯವಂ ಕೇಳಿ ಪಿತೃಸ್ನೇಹದಿಂದ, ಎಲೈ ಸ್ವಾಮಿಯೆ! ಅಲ್ಪಜ್ಞಾನಿಯಾದ ಆತನ ಅಪರಾಧವಂ ಕ್ಷಮಿಸಿಕೋ, ನಾನು ಯಾಗವಂ ನೋಡಿ ಶೀಘ್ರವಾಗಿ ಬರುವೆನೆಂದು ನುಡಿದು ನಮಸ್ಕಾರವಂ ಮಾಡೆ, ಆಗ ಶಿವನು ಹಾಗೆ ಆಗಲೆಂದು ಕಳುಹಿದನು. ಆ ಸಮಯದಲ್ಲಿ ಶಿವಾಜ್ಞೆಯಿಂ ಅನೇಕ ಕೋಟಿ ಸೂರ್ಯಪ್ರಕಾಶವಾದ ಕನ್ನಿಕೆಯರು ಆಕೆಯೊಡನೆ ಪೊರಮಟ್ಟು ರಥಾರೂಢರಾಗೆ, ನಂದೀಶ್ವರನ ಸ್ತ್ರೀಯಾದ ಸುಕೇಶಿಯಾದ ಸೂಯಾಸಾ ದೇವಿಯು ನಾನಾ ಮಣಿವಿಚಿತ್ರವಾದ ಪಾರ್ವತೀದೇವಿಯ ಪಾದುಕೆಗಳಂ ಪಿಡಿದು ಪೊರಮಟ್ಟಳು. ಅನಿಂದಿತೆ ಸುಶೀಲೆಯೆಂಬೀರ್ವರು ದೇವಿಗೆ ಪುಷ್ಪಾಂಜಲಿಯಂ ಮಾಡಿದರು. ಕೆಲಂಬ ಸ್ತ್ರೀಯರುಗಳು ತಾಂಬೂಲ ಪೀಡಿಗೆಗಳಂ ಪಿಡಿದರು. ಮತ್ತೆ ಕೆಲವರು ಮಾಲ್ಯಗಂಧವಸ್ತ್ರಾಭರಣಗಳಂ ಧರಿಸಿಯು ಸುಕುಮಾರಾವಯವಂಗಳುಳ್ಳ ಕೋಟಿ ಸ್ತ್ರೀಯರು ಆ ಶುಕಪಿಕ ಹಂಸಶಾರಿಕ ಮುಂತಾದ ಪಕ್ಷಿಗಳಂ ಪಿಡಿದು ಪೊರಮಟ್ಟರು. ಬಳಿಕ ಅನೇಕ ಆಯುಧಂಗಳಂ ಧರಿಸಿ ದ್ವಾದಶಕೋಟಿ ಭೂತಗಣಾಧೀಶ್ವರರು ಪೊರಮಟ್ಟರು. ಆಗ ಸಿಂಹನೆಂಬ ಗಣಾಧೀಶ್ವರನು ಗೌರಿದೇವಿಗೆ ನಮಸ್ಕಾರವಂ ಮಾಡಿ ಮಹಾ ಸಂಭ್ರಮದಿಂ ಆ ದೇವಿಯೊಡನೆ ಯಾಗಶಾಲೆಗೆ ಬಂದನು.

ದಕ್ಷನು ಈಶಪತ್ನಿಯಾದ ತನ್ನ ದುಹಿತಾದೇವಿಯನ್ನು ತಿರಸ್ಕರಿಸುವಿಕೆ.

ಆ ಸಮಯದಲ್ಲಿ ದೇವಿಯು ವಿಮಾನದಿಂದಿಳಿದು ದಕ್ಷನ ಸಮೀಪಕ್ಕೆ ಪೋಗಲಾಗಿ, ಆತನು ತನ್ನ ಕುಮಾರಿಯಾದ ಗೌರಿದೇವಿಯಂ ನೋಡಿ ನಿನ್ನ ಪತಿಯು ಅಮಂಗಳನು. ನಿತ್ಯವು ಅನಾಚಾರ ರತನು ಅದುಕಾರಣದಿಂದಾತನನ್ನು ಆತನ ಸತಿಯೆಂದು ನಿನ್ನನ್ನು ಕರೆಯಲಿಲ್ಲ. ಹಾಗಾದೊಡಂ ನೀನು ವ್ಯರ್ಥವಾಗಿ ಬಂದಿ, ನಿನ್ನ ಪತಿ ಇರುವ ಸ್ಥಾನಕ್ಕೆ ಪೋಗೆಂದನು. ಆಗ ಪಾರ್ವತಿಯು, ಎಲೈ ತಂದೆಯೆ ! ನನ್ನ ಪೊಡಹುಟ್ಟಿದವರು ನಿನ್ನಿಂದ ಬಹುಮಾನಿತರಾದರು. ಈ ಯಾಗದಲ್ಲಿ ನನ್ನ ಪತಿಯನ್ನು ನನ್ನನ್ನು ಕರಿಸದೆ ಪೋದಿರಿ. ಹಾಗಾದರು ನಾನು ಬಂದೆನು. ಇದಲ್ಲದೆ ನಾನೆ ಬಂದಲ್ಲಿಯು ಅವಮಾನವಂ ಮಾಡಿದೆ. ನಾನು ನಿನಗೆ ಮಾಡಿದ ಅಪಕಾರವೇನು? ಇದು ನಿನಿಗೆ ಶ್ರೇಯಸ್ಸಲ್ಲವೆಂದು ಪೇಳಲಾಗಿ, ಆ ವಾಕ್ಯವಂ ಕೇಳಿ ದಕ್ಷಬ್ರಹ್ಮನು ಎಲೆ ಪುತ್ರಿಯೆ ! ನಿನ್ನ ಪತಿಯು ಸ್ಮಶಾನದಲ್ಲಿ ನರ್ತಿಸತಕ್ಕವನಾದುದರಿಂದ ನೀನು ನನ್ನ ಯಾಗವಂ ನೋಡಲು ಯೋಗ್ಯಳಲ್ಲ. ಮತ್ತಂ ನನ್ನ ಪುತ್ರಿಯರಂ ಅವರ ಪತಿಗಳಂ ಕರೆಯಿಸಿ ಬಹುಮಾನವಂ ಮಾಡುವೆನು. ನಿನ್ನ ಪತಿಯು ನನಿಗಳಿಯನಲ್ಲ, ನೀನು ನನ್ನ ಪುತ್ರಿಯು ಅಲ್ಲ. ಅದುಕಾರಣದಿಂ ನನ್ನ ಕುಮಾರತಿಯರಿಗೆ ಸಮಸ್ತವಂ ಕೊಡುತಲಿದ್ದೇನೆ. ಅವರ ಪತಿಗಳಿಗು ಬಹುಮಾನವಂ ಮಾಡುವೆನು. ಈಗ ನಿನ್ನ ಪತಿಗೆ ಹವಿರ್ಭಾಗವಿಲ್ಲ. ವೇದದಲ್ಲಿ ನಿನ್ನ ಪತಿಗೆ ಹವಿರ್ಭಾಗವಂ ಕೊಡಬೇಕೆಂದು ಹೇಳಲ್ಪಡಲಿಲ್ಲ, ನಿನ್ನ ಪತಿಯಂ ಯೆಣಿಸಲಿಲ್ಲ, ಈಗ ನಿನ್ನೊಡನೆ ಮಾತನಾಡಲು ಸಮಯವಿಲ್ಲ. ಅದುಕಾರಣದಿಂ ನೀನು ಲಜ್ಜೆಯಂ ಬಿಟ್ಟು ಹೋಗೆಂದು ಗೌರಿದೇವಿಗೆ ಪೇಳಿದನು. ಆದರು ಗೌರಿದೇವಿಯು ಕೋಪದಿಂ ಅಲ್ಲಿಯೆ ನಿಂತಿರಲಾಗಿ, ಆ ಸಮಯದಲ್ಲಿ ಆ ಗೌರಿದೇವಿಯ ಸಖಿಯಾದ ವಿಮಲೆಯೆಂಬುವಳು ದೇವಿಗೆ ನಮಸ್ಕಾರವಂ ಮಾಡಿ, ಎಲೈ ದೇವೇಶ್ವರಿಯೆ ! ನೀನು ಈ ಜಗತ್ತಿಗೆ ಮಾತೃವು, ನಿನ್ನ ಕೋಪದಿಂದ ಸಮಸ್ತ ಜಗತ್ತಿಗು ಬಾಧೆಯುಂಟಾದೀತು. ಅದುಕಾರಣದಿಂದ ಈ ಕೋಪವನ್ನು ಉಪಸಂಹರಿಸೆಂದು ಪೇಳ್ದು ಅಡಿಗಡಿಗೆ ದಂಡಪ್ರಣಾಮವಂ ಮಾಡಲಾಗಿ, ಆ ಗೌರಿದೇವಿಯು ಕೋಪವಂ ಬಿಟ್ಟು ಎಲೈ ದಕ್ಷನೆ ! ದೇವದೇವೇಶನಾದ ಶಿವನಂ ದೂಷಿಸಿದೆಯಲ್ಲ? ಅದುಕಾರಣದಿಂ ನನ್ನ ಮನಸ್ಸು ಬಹಳವಾಗಿ ನೊಂದುದು. ನನ್ನ ದೂಷಣೆಯಂ ಮಾಡಿದ್ದರಿಂದ ಆಗ್ರಹವಿಲ್ಲ. ನಿರಂಜನನಾಗಿ ತತ್ವಾತೀತನಾದ ಶಿವನಂ ಅಜ್ಞಾನದಿಂದ ತಾಮಸನೆಂದು ಪೇಳಿದೆಯಲ್ಲ? ನಿನ್ನ ಪಾಪವು ಈ ಪ್ರಕಾರವೆಂದು ತಿಳಿಯಲ್ಪಟ್ಟಿತು.

ಶಿವನಿಗೆ ಹವಿರ್ಭಾಗವಂ ಕೊಡು, ಇತರ ದೇವತೆಗಳು ಪೂಜ್ಯರಲ್ಲ. ಆರು ಪಾವನ ಮಾದ "ಶಿವ" ಎಂಬ ಅಕ್ಷರದ್ವಯವನ್ನು ಒಂದು ವೇಳೆಯಾದೊಡಂ ಜಪಿಸು ವರೋ ಅವರು ಮೋಕ್ಷವನ್ನೈದುವರು. ಮತ್ತೆ ಸರ್ವೇಶ್ವರನನ್ನು ಯಾರು ನಿಂದಿಸುವರೋ ಅವರಿಗೆ ಶಿವಭಕ್ತರು ಮಾಡಿದ ಪಾಪವುಂಟಾಗುವದು. ಹೀಗೆ ಶಿವಮಾಹಾತ್ಮ್ಯೆಯು ನಿನ್ನ ಶ್ರವಣದಲ್ಲಿ ಬೀಳಲಿಲ್ಲ. ಅದುಕಾರಣದಿಂ ಪಾಪಾತ್ಮ ನಾದ ನೀನು ಶಿವನಿಂದೆಯಂ ಮಾಡುತಿದ್ದಿ. ಶಿವಾಜ್ಞೆಯಿಂ ನಿನಗೆ ನಾಶ ವುಂಟಾದೀತೆಂದು ಪೇಳ್ದು ವಿಮಾನವನ್ನೇರಿ ವೇಗದಿಂ ಕೈಲಾಸಪರ್ವತಕ್ಕೆ ಪೋಗಿ ಮುದದಿಂ ಶಿವಂಗೆ ನಮಸ್ಕಾರವಂ ಮಾಡಿ ಆ ವೃತ್ತಾಂತವಂ ಪೇಳ್ದು, ಆ ದಕ್ಷನ ಸಂಹಾರಕ್ಕೋಸುಗ ಪ್ರಾರ್ಥನೆಯುಂ ಗೈದಳು.

ಬಳಿಕ ಶಂಭುವು ಈ ದೇವಿಯ ವಾಕ್ಯವಂ ಕೇಳಿ ಮತ್ತೆಯು ಕೇಳದಂತೆ ಸುಮ್ಮನಿರ್ದನು. ಆಗ ದೇವಿಯು ನಮಸ್ಕಾರವಂ ಮಾಡಿ, ಎಲೈ ಶಂಭುವೆ! ದುರಾಚಾರನಾದ ದಕ್ಷನು ಮಾಡುವ ಯಾಗವಂ ಕೆಡಿಸಿ ಆತನಂ ಸಂಹರಿಸಿ ಜಗತ್ತಂ ರಕ್ಷಿಸಿ ನನ್ನ ಮನೋರಥವನ್ನು ಪೂರ್ಣವಮಾಡಬೇಕೆಂದು ಬಿನ್ನೈಸಿದ ಳೆಂದು ಸೂತಂ ಶೌನಕಾದಿಮುನಿಗಳಿಗೆ ಪೇಳಿದನೆಂಬಲ್ಲಿಗೆ, ದಕ್ಷ ಕಾಂಡದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯವು ಸಂಪೂರ್ಣಮಾದುದು.

ಇಪ್ಪತ್ತೊಂಬತ್ತನೆಯ ಅಧ್ಯಾಯವು.

ಶ್ರೀ ವೀರಭದ್ರ ಕಾಳ್ಯವತಾರ ಕಥನಂ.

ಎಲೈ ಋಷಿಗಳಿರಾ! ಅನಂತರದಲ್ಲಿ ಮಹಾದೇವನು ಗೌರಿಯ ವಾಕ್ಯವಂ ಕೇಳಿ ವೀರರೊಳಗೆ ವೀರನಾದ ವೀರಭದ್ರನಂ ಸ್ಮರಿಸಲಾಗಿ, ಆ ಸಮಯದಲ್ಲಿ ಮಹೇಶ್ವರನ ಲಲಾಟಾಗ್ನಿ ಕುಂಡ ಮಧ್ಯದಿಂ ಮಹಾಗಿರಿ ಶಿಖಾ ಸಮಾನನಾಗಿ ಸಹಸ್ರ ಶಿರಗಳಿಂ ಯುಕ್ತನಾದ, ಸ್ಫುಲಿಂಗಗಳಾಗಿ ನಿಡಿದಾಗಿ ಅತಿ ಸೌಂದರ್ಯ ಗಳಾಗಿರುವ ದ್ವಿಸಹಸ್ರ ಭುಜಗಳಿಂ ಖಡ್ಗ ಖೇಟಕ ಗದಾ ಚಕ್ರ ಶೂಲ ಧನುಶ್ಶರ ಮುಸಲ ಪ್ರಾಸ ನಾರಾಚ ಮುಂತಾದ ಆಯುಧ ಸಮೂಹವಂ ವಹಿಸಿರ್ಪ ಮತ್ತೆ ವಿಷ್ಣು ಮುಂತಾದ ದೇವತೆಗಳ ರುಂಡಮಾಲೆಯಿಂದುಜ್ವಲವಾದ ಆಕಾರವುಳ್ಳವ ನಾಗಿ ಕರದಲ್ಲಿರ್ಪ ಮಹಾ ಘಂಟಾ ನಿಜರುಧ್ವನಿಯಿಂದ ಭಯಂಕರನಾದ ಪ್ರಕಾ ಶಿಸುತಿರ್ಪ ಕೆಂಜೆಡೆಗಳಿಂ ಶೋಭಿಸುವ ಮಹಾ ಮಕುಟದಿಂದ ಅಲಂಕೃತನಾಗಿ ಅತ್ಯಂತ ಕೆಂಪಾದ ಮಹತ್ತಾದ ಆಕಾರವುಳ್ಳ ಘೋರದಂಷ್ಟ್ರನಾಗಿ ಮಹಾ ಕಪಾಲವುಳ್ಳವನಾದ ನಾನಾವಿಧ ರತ್ನ ಸಮೂಹಗಳಿಂ ಕೆತ್ತಿಸಲ್ಪಟ್ಟ ಮಹಾ

ಧ್ವನಿಯುಳ್ಳ ಪಾದ ಕಡಗಳುಳ್ಳವನಾಗಿ ಅಗ್ನಿಯಿಂದುಜ್ವಲವಾದ ಅತ್ಯುಗ್ರವಾದ ತ್ರಿಸಹಸ್ರ ನಯನಂಗಳುಳ್ಳವನಾದ ನಾಸಾಪುಟದಿಂದಗ್ನಿಯ ನುಗುಳುತಿರ್ಪ ಮಹಾ ಅಟ್ಟಹಾಸಮಂ ಮಾಡುವನಾಗಿ ವರಾಹದಂತವಂ ಕಚ್ಛಪನ ಮಹತ್ತಾದ ಕರ್ಪರವಂ ಧರಿಸಿದ, ಹರಿ ಬ್ರಹ್ಮರ ಅಸ್ಥಿಮಾಲಿಗಳಿಂ ಮನೋಹರನಾಗಿ ಖಡ್ಗ ಖೇಟಂಗಳಂ ಧರಿಸಿ ಕೋಲಾಹಳ ಧ್ವನಿಯಂ ಮಾಡುತ ಶೀಘ್ರದಿಂದಿತ್ತಲತ್ತ ಸಂಚರಿಸುತಿರ್ಪ ಸರ್ಪಗಳಿಂದ ಭೂಷಿತನಾಗಿ ಭೂತಿಭೂಷಿತ ಸರ್ವಾಂಗನಾದ ಹರಿಚಂದ್ರದಿಂ ಲೇಪಿಸಲ್ಪಟ್ಟ ಲಲಾಟ ವಕ್ಷಸ್ಥಲಗಳುಳ್ಳ ಜಯೆಯಿಂದುನ್ನತವಾಗಿ ನುಡಿಯುತ ಆ ವೀರಭದ್ರನು ಪ್ರಾದುರ್ಭವಿಸಿದನು. ಹಾಗೆ ದಾಕ್ಷಾಯಣಿಯ ಕೋಪದಿಂ ಭಯಂಕರಿಯಾದ ಆ ವೀರಭದ್ರಂಗೆ ಸಮಾನವಾಗಿ ಮಹಾ ರೌದ್ರವಾದ ಭದ್ರಕಾಳಿಯು ಕೋಲಾಹಲ ಧ್ವನಿಯಂ ಮಾಡುತ ಆವಿರ್ಭವಿಸಿದಳು.

ಆಗ ಭದ್ರಕಾಳೀ ವೀರಭದ್ರರು ಆ ಪಾರ್ವತೀ ಪರಮೇಶ್ವರರ್ಗೆ ಸಾಷ್ಟಾಂಗ ಪ್ರಣಾಮವಂ ಮಾಡಿ ಅವರಮುಂದೆ ನಿಂತಿರ್ದರು. ಆ ವೇಳೆಯಲ್ಲಿ ವೀರಭದ್ರನು ಮಹಾದೇವನಂ ನೋಡಿ ಭಯಾನ್ವಿತನಾಗಿ, ಕ್ಷಯದ್ವೀರನಾದ ಎಲೈ ಶಂಭುವೇ! ಎಲ್ಲಿಗಾದರು ನನ್ನ ನಾಜ್ಞಾಪಿಸು, ಹರಿಯನು ಪಿಡಿದು ತರಬೇಕೋ, ಇಲ್ಲದಿರ್ದೊಡೆ ಬ್ರಹ್ಮನಂ ಪಿಡಿದು ತರಬೇಕೋ, ಎಲೈ ಸ್ವಾಮಿಯೆ! ನಿಮ್ಮಾಜ್ಞೆಯಿಂ ಸರ್ವಜಗತ್ತಂ ಇಂದ್ರ ಮುಂತಾದ ದೇವತೆಗಳಂ ರಾಕ್ಷಸ ಕಿನ್ನರರಂ ಮರ್ತ್ಯರಂ ಆಯಾಲೋಕಂಗಳಂ ಮತ್ತೆ ಕೆಲಂಬರಂ ಪರ್ವತಂಗಳಂ ಈಗಲೆ ದಹನವ ಮಾಡುವೆನು, ಅಲ್ಲದಿರ್ದೊಡೆ ಕರದಿಂ ಮರ್ದಿಸುವೆನು, ಎಲೈ ಈಶಾನನೆ! ನಿನ್ನ ಸ್ಮರಣೆಗೆ ವಿಷಯನಾರು? ನಾನು ಮಾಡುವ ಕೃತ್ಯವಾವುದು? ಎಂದು ಬಿನ್ನಹಂ ಮಾಡಿ ವಿನಯದಿಂ ಅಂಜಲಿಬಂಧವಂ ಗೈದು ಮುಂದೆ ನಿಂತಿರಲಾಗಿ, ಆಗ ಶಿವನು ಆ ವೀರಭದ್ರನಂ ನೋಡಿ ಮಹಾ ಸತ್ವನಾದ ವೀರಭದ್ರನೆ! ದಕ್ಷನು ನಮ್ಮಂ ಬಿಟ್ಟು ಅನ್ಯದೇವತೆಗಳಂ ಕುರಿತು ಯಾಗವಂ ಮಾಡುತಲಿಧಾನಾದ ಕಾರಣ ನೀನಲ್ಲಿಗೆ ಪೋಗಿ ನಮ್ಮ ಹವಿರ್ಭಾಗವಂ ಕೊಡೆಂದು ಕೇಳು, ಆತನು ಕೊಟ್ಟನಾದೊಡೆ ಆದಂ ತೆಗೆದುಕೊಂಡು ಶೀಘ್ರವಾಗಿ ಬಾ, ಕೊಡದಿದ್ದರೆ ದೇವತೆಗಳ್ವೆರಸಿ ಆತನ ಶಿರವಂ ಛೇದಿಸಿ ಯಾಗಮಧ್ಯದಲ್ಲಿರು. ಅಲ್ಲಿಗೆ ನಾನು ವೇಗದಿಂ ಬರುವೆನೆಂದು ಪೇಳ್ದು ಆ ವೀರಭದ್ರನಂ ಕಳುಹಿಸಿದನು.

ಅನಂತರದಲ್ಲಿ ವೀರಭದ್ರನು ಮಹಾದೇವಂಗೆ ನಮಸ್ಕರಿಸಿ ಪೊರಮಟ್ಟು ಪರಮಾನಂದ ನಿರ್ಭರನಾಗಿ ಕೋಲಾಹಳ ಧ್ವನಿಯಂ ಮಾಡುತ, ನಿಶ್ವಾಸೋಶ್ವಾಸಗಳಿಂ ಸಮಸ್ತ ರೋಮ ಕೂಪಂಗಳಿಂ ನಾಸಾಪುಟದಿಂ ಸ್ವೇದಬಿಂದುಗಳಿಂ

ನೇತ್ರಂಗಳಿಂ ಭುಜಂಗಳಿಂ ವಕ್ಷಸ್ಥಲಂಗಳಿಂ ಜಾನುಜಂಘಾಂಘ್ರಿಗಳಿಂ ನಾಭಿಕಟಿ ಮುಖಂಗಳಿಂ ಸಮಸ್ತಾವಯವಗಳಿಂ ತನಗೆ ಸಮಾನವಾದ ಅನೇಕ ಭೂತಗಳಂ ಸೃಷ್ಟಿಸಿದನು. ಆ ಸಮಯದಲ್ಲಿ ಭದ್ರಕಾಳಿಯು ಗೌರಿದೇವಿಯ ಆಜ್ಞೆಯಿಂ ಪೊರಮಟ್ಟು ನಾನಾ ವರ್ಣಯುತರಾದಂಥ ತನಗೆ ಸಮಾನರಾದ ನೀಲಕರ್ಬುರ ವರ್ಣಂಗಳುಳ್ಳ ಢಾಕಿನೀ ಗಣಂಗಳಂ ಸೃಜಿಸಿದಳು. ಆಗ ಕೆಲಂಬರು ಶಾರ್ದೂಲ ಸಿಂಹ ಶರಭ ಗಜಾಶ್ವಮುಖರು ಕೆಲಂಬರು ಭಲ್ಲೂಕ ವ್ಯಾಳಿಮುಖರು, ಕೆಲವರು ಗವಯ ವೃಗಮುಖರು, ಸಮಸ್ತರಾದ ವೀರರು ಹೀಗೆ ಭೂತಗಣಂಗಳು ವೀರ ಗಣಂಗಳು ಭಯಂಕರವಾದ ಮೋಹಿನೀ ಗಣಂಗಳು ಭೈರವೀ ಗಣಂಗಳು ಕಾಳ ರಾತ್ರಿಗಣಂಗಳು ಸಹ ಸರ್ವಾಭರಣ ಭೂಷಿತರಾಗಿ ಮಹಾ ವೇಗದಿಂ ಸಮಸ್ತ ಬ್ರಹ್ಮಾಂಡಗಳಂ ಪಿಂಡೀಕರಣವಂ ಮಾಡುವಂತೆಯು ಭಕ್ಷಿಸುವಂತೆಯು ಪೊರ ಮಟ್ಟರು. ಆಗ ಭಾನುಕಂಪ ಮುಂತಾದ ಗಣಾಧೀಶ್ವರರು ಭೇರಿ ಮೊದಲಾದ ವಾದ್ಯಂಗಳಂ ಘೋಷಿಸಿದರು. ಪಿನಾಕಿ ದಂಡಿ ಮುಂತಾದ ಕೆಲಂಬ ಗಣಾ ಧೀಶ್ವರರು ಛತ್ರಧಾರಿಗಳಾಗಿ ಪೊರಟರು. ಹೀಗೆ ಸರ್ವರು ಕ್ಷಣದಲ್ಲಿ ಪೋಗಿ ಆ ದಕ್ಷಶಾಲೆಯನಾವರಿಸಿಕೊಂಡರು. ಆಗ ಚತುರ್ದಶ ಭುವನಂಗಳು ಕಂಪಾಯ ಮಾನಂಗಳಾದವು. ಆ ಸಮಯದಲ್ಲಿ ವೀರಭದ್ರನು ವೀರಾದಿಗಳಂ ನೋಡಿ, ಎಲೈ ಗಣಂಗಳಿರಾ! ನೀವು ಮಹತ್ತಾದ ಯಾಗಶಾಲೆಯನಾವರಿಸಿಕೊಂಡು ಈ ಶಾಲೆಗೆ ಹವಿರ್ಭಾಗವಂ ಭುಂಜಿಸಲ್ಬಂದ ದೇವಾದಿಗಳನಾರನುಂ ಬಿಡದೆ ಸಾವ ಧಾನದಿಂದಿರೆಂದು ಸಮಸ್ತ ಗಣಂಗಳಿಗೆಯು ನುಡಿದನೆಂದು ಸೂತಂ ಶೌನಕಾದಿ ಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ದಕ್ಷಕಾಂಡದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯವು ಸಂಪೂರ್ಣಮಾದುದು.

ಮುವತ್ತನೆಯ ಅಧ್ಯಾಯವು.

ಶ್ರೀ ವೀರಭದ್ರ ಭದ್ರಕಾಳಿಯರು ದಕ್ಷಯಾಗಮಂಟಪವಂ ಪ್ರವೇಶಿಸುವಿಕೆ.

ಕೇಳಿರೈ ಋಷಿಗಳಿರಾ! ಅನಂತರದಲ್ಲಿ ವೀರಭದ್ರನು ಭದ್ರಕಾಳೀ ಸಹಾಯ ನಾಗಿ, ಸರ್ವ ದೇವಗಣಯುಕ್ತನಾಗಿ, ಯಾಗಶಾಲೆಯಂ ಪ್ರವೇಶಿಸುವಾಗ ಆತ ನಾಜ್ಞೆಯಿಂದ ಭಯಂಕರರಾದ ಗಣಂಗಳು ಅಲ್ಲಿ ಕಾದುಕೊಂಡಿರ್ದ ಆ ಭಟರಂ ಸಂಹರಿಸಿ ಕೋಲಾಹಲವಂ ಮಾಡುತ್ತ ಸಾವಧಾನದಿಂದಿರುತಿರ್ದರು. ಆಗ ವಿಷ್ಣು ಬ್ರಹ್ಮ ಮುಂತಾದ ದೇವತೆಗಳು ಭದ್ರಕಾಳೀಯುಕ್ತನಾಗಿ ಬರುತಿರ್ಪ ಆ ವೀರಭದ್ರನಂ ಕಂಡು ಭೀತರುಗಳಾಗಿ ಅಸದೃಶವಾದ ಆಕಾರವುಳ್ಳ ಗಂಟ

ಕ್ಕಿದ ಪುರ್ಬುಗಳಿಂ ಕುಟಿಲನೋಟವುಳ್ಳ ಇವರೀರ್ವರು ಪಾರ್ವತೀ ಪರಮೇಶ್ವರರ ಕೋಪದಿಂ ಪುಟ್ಟಿದವರು. ಅನ್ಯರಿಗೆ ಈ ಪ್ರಕಾರವಾಗಿ ಭಯಂಕರವಾದ ಕೋಪವು ಹೇಗುಂಟಾದೀತು? ಎಂದು ಪರಸ್ಪರವಾಗಿ ಮಾತಾಡಿಕೊಂಡರು. ಮತ್ತೆ ಕೆಲಂಬ ದೇವತೆಗಳು ತಲೆವಾಗಿ ಸಮಸ್ತ ದೇವತೆಗಳಿಗು ವಿನಾಶಕಾಲವು ವೊದಗಿತೆಂದರು. ಇನ್ನು ಕೆಲವರು ಶಿವಭಕ್ತರನ್ನು ನಿಂದಿಸುವರಾರೋ ಅವರಿಗೆ ಆಜ್ಞೆ ಬಂದೀತೆಂದು ಪೂರ್ವದಲ್ಲಿ ದೇವಿಯ ವಾಕ್ಯವನ್ನು ಕೇಳಿದ್ದೆವಲ್ಲವೆ? ಈಗ ದಕ್ಷನ ಯಾಗದಲ್ಲಿ ಬಂದಿತೆಂದು ವ್ಯಕ್ತವಾಗಿ ಅನ್ಯೋನ್ಯವಾಗಿ ಪೇಳುತಿಪ್ಪರು. ಮತ್ತೆ ಕೆಲ ದೇವತೆಗಳು ಶಿವನಿಂದೆಯಂ ಮಾಡುವ ಗೋಷ್ಠಿಯಲ್ಲಿ ಆರು ವಾಸವಂ ಮಾಡುವರೋ ಅವರು ನಾಶವನೈದುವರೆಂದು ಶಿವನ ವಾಕ್ಯವುಂಟು, ಅದೀಗ ನಮ್ಮಲ್ಲಿ ಕಾಣಲ್ಪಟ್ಟಿತು, ಪಾಪಿಯಾದ ದಕ್ಷಂಗೆ ಈ ಪಾಪ ಬುದ್ಧಿಯು ಏನುಕಾರಣದಿಂ ಬಂತು, ಈತನ ಬುದ್ಧಿಯಿಂದ ಸಮಸ್ತ ದೇವತೆಗಳಿಗು ಏಕ ಕಾಲದಲ್ಲಿ ಮರಣವುಂಟಾದುದು, ಈ ದಕ್ಷನು ದೇವತೆಗಳಂ ಸ್ವಪ್ರಯೋಜನಕಾರಿ ಗಳನ್ನಾಗಿ ತಿಳಿದು ಸತ್ವಹೀನರಾದ ಸ್ತ್ರೀಯರಂತೆ ನಮ್ಮನೆಣಿಸಿ ಮಹಾದೇವನಂ ಬಿಟ್ಟು ಯಾಗದಲ್ಲಿ ಯತ್ನವಂ ಮಾಡಿದನದುಕಾರಣದಿಂದೀಶ್ವರಾಜ್ಞೆಯಿಂ ಸಮಸ್ತ ದೇವತೆಗಳಿಗೆ ಏಕಕಾಲದಲ್ಲಿಯೆ ಮರಣವುಂಟಾದುದೆಂದು ಪೇಳ್ದರು. ಇನ್ನು ಕೆಲಂಬ ದೇವತೆಗಳು ಮಹಾ ಭಯಯುಕ್ತರಾಗಿ ಸರ್ವಲೋಕ ಜನನಿ ಯಾದ ದಾಕ್ಷಾಯಣಿದೇವಿಯು ಅವಮಾನದಿಂ ಪೋದಳಾದುದರಿಂ ಶೀಘ್ರ ದಲ್ಲಿಯೆ ಆ ಫಲ ಉಂಟಾದುದೆಂದು ಪೇಳ್ದರು.

ಈ ಪ್ರಕಾರವಾಗಿ ದೇವತೆಗಳು ವಿಧವಿಧವಾಗಿ ಪೇಳುತಿರಲಾಗಿ, ವೀರ ಭದ್ರನು ಭದ್ರಕಾಳಿಯು ಸಹ ದಕ್ಷನ ಸಮೀಪಕ್ಕೆ ಪೋಗಿ ಕೋಪದಿಂ ಕೋಲಾ ಹಲಧ್ವನಿಯಂ ಮಾಡಿ ಅದ್ಭುತವಾದ ಶೃಂಗವಂ ಪೂರಿಸಿ ದೇವತೆಗಳಂ ನೋಡ ಲ್ಪಟ್ಟವನಾಗಿ ಮುಂಭಾಗದಲ್ಲಿ ನಿಂತವನಾಗಲು ಕೆಲಂಬ ದೇವತೆಗಳು ಆ ಶೃಂಗ ಧ್ವನಿಯಂ ಕೇಳಿ ಓಡಿಹೋದರು. ಆಗ ಮೇರುಪರ್ವತವು ಶಿಡಿದು ಬಿದ್ದುದು, ಭೂಮಿಯು ಒಡೆದುದು, ಸಮಸ್ತ ಲೋಕಂಗಳಲ್ಲಿಯು ಪ್ರಾಣಿಗಳು ಮೂರ್ಛೆಯ ನೈದಿದರು. ಇನ್ನು ಕೆಲ ದೇವತೆಗಳು ಭೀತರಾಗಿ ಭೂಮಿಯಲ್ಲಿ ಬಿದ್ದರು. ಮತ್ತು ಕೆಲವರು ಯಾಗಶಾಲೆಯ ಪೊರವಳಯಕ್ಕೆ ಪೋಗಿ ವೀರರಿಂ ತಾಡಿತರಾಗಿ ಖಿನ್ನರಾಗಿ ಮರಳಿ ವೊಳಕ್ಕೆ ಬಂದರು. ಹೀಗೆ ಸಮಸ್ತ ದೇವತೆಗಳು ಭೀತರಾಗಿ ಭೂಮಿಯಲ್ಲಿ ಬಿದ್ದು ಮೂರ್ಛೆಯನೈದಲಾಗಿ, ದಕ್ಷನು ಮೂರ್ಛೆ ತಿಳಿದೆದ್ದು ತಿಳುವಳಿಕೆ ಪುಟ್ಟಿ ಭಯ ವ್ಯಾಕುಲಿತನಾಗಿ ಆ ವೀರಭದ್ರನಂ ನೋಡಿ, ಎಲೈ ಮಹಾಬಲನೆ! ನೀನಾರು? ಏನು ಕಾರಣದಿಂ ಬಂದೆ, ನೀನಾವ ದೇವನೆಂದು

ಕೇಳೆ, ವೀರಭದ್ರನು ಗಂಭೀರವಾದ ವಾಕ್ಯಗಳುಳ್ಳವನಾಗಿ ಆತನಂ ಕುರಿತು, ಎಲೈ ದಕ್ಷನೆ! ನನ್ನನ್ನು ದೇವದೇವನಾದ ಮಹಾದೇವನ ಪುತ್ರನೆಂದು ತಿಳಿ, ನಿನ್ನ ಯಾಗದಲ್ಲಿ ಹವಿರ್ಭಾಗವಂ ತೆಗದುಕ್ಕೊಳ್ಳಲು ಬಂದೆನದುಕಾರಣದಿಂ ಶಂಭುವಿನ ಹವಿರ್ಭಾಗವಂ ಕೊತೆಂದು ಕೇಳಿದನು.

ದಕ್ಷ ವೀರಭದ್ರರ ವಾದ ಪ್ರತಿವಾದಗಳು.

ಬಳಿಕ ದಕ್ಷನು ಆ ವಾಕ್ಯವಂ ಕೇಳಿ, ಎಲೈ! ಈ ಯಾಗದಲ್ಲಿ ಶಂಕರಂಗೆ ಹವಿರ್ಭಾಗವಂ ಕೊಡೆನು, ಮತ್ತಂ ಶಿವನು ತಾಮಸನೆಂದು ತಿಳಿದು ದೇವತೆಗಳಿಗೆ ಪ್ರೀತಿಯಂ ಮಾಡುತಲಿರ್ಧೇನೆಂದು ನುಡಿಯಲಾಗಿ, ಆಗ ವೇದದೇವನು ದಕ್ಷನ ವಾಕ್ಯವಂ ಕೇಳಿ ಪ್ರಣವದೊಡನೆದ್ದು ಅಧ್ವರೇಶನಾದ ಮಹಾದೇವನಂ ಹವಿರ್ಭಾಗಗಳಿಂ ತೃಪ್ತಿಯಂ ಮಾಡು, ಆ ಶಿವನಾಜ್ಞೆಯಿಂ ಸಮಸ್ತ ಜಗತ್ತು ಈ ಮರ್ಯಾದೆಯಿಂದಿದ್ದೀತು, ದೇವೇಶ್ವರನಾದ ಶಿವನೇ ಪ್ರಥಮ ಹವಿಸ್ಸಿಗೆ ಯೋಗ್ಯನು, ಇದೇ ಸತ್ಯವೆಂದು ನುಡಿದನು. ಆಗ ದಕ್ಷನು ವೇದಪುರುಷನ ಈ ವಾಕ್ಯವಂ ಕೇಳಿಯು ಮಹಾದೇವಂಗೆ ಪ್ರಥಮ ಹವಿಸ್ಸನ್ನು ಕೊಡಲಿಚ್ಛೈಸಲಿಲ್ಲ, ಆಗ ವೇದಪುರುಷನು ಸಾಂಬನಾದ ಮಹಾದೇವನಂ ಸ್ತುತಿಸಿ, ಭದ್ರಕಾಳಿ ಸಮೇತನಾದ ವೀರಭದ್ರಂಗೆ ಪ್ರಣವ ನಮಸ್ಕಾರವಂ ಮಾಡಿ ಆ ವೀರಭದ್ರನಾಜ್ಞೆಯಿಂ ತನ್ನ ಸ್ಥಾನಕ್ಕೆ ಪೋದುದು, ಬಳಿಕ ವೀರಭದ್ರನು ಶಿವಾಜ್ಞೆಯಂ ಮನದಲ್ಲಿ ಸ್ಮರಿಸಿ, ದುರಾಚಾರನಾದ ದಕ್ಷನಂ ಕೋಪದಿಂನೋಡಿ, ಹವಿರ್ಭಾಗವಂ ಕೊಡೆಂದು, ಕೇಳಲಾಗಿ ಮರಳಿ ದಕ್ಷನು ಕ್ರೂರನಾದ ರುದ್ರಂಗೆ ಹವಿರ್ಭಾಗವಂ ಕೊಡೆನು. ಆ ರುದ್ರನು ಭೂತಪ್ರೇತ ಪಿಶಾಚಗಳೊಡನೆ ಸಂಚರಿಸುವ ನದುಕಾರಣದಿಂದಾತನು ಈ ಯಾಗದಲ್ಲಿ ಹವಿರ್ಭಾಗವಂ ಭುಂಜಿಸಲು ಯೋಗ್ಯನಲ್ಲವೆಂದು ಆ ವೀರಭದ್ರನ ಶ್ರವಣಕ್ಕೆ ನಾರಾಚದಂತೆ ಅತಿ ಕ್ರೂರವಾದ ವಾಕ್ಯವನ್ನು ಪೇಳಲಾಗಿ, ಪ್ರತಾಪವಂತನಾದ ವೀರಭದ್ರನು, ಎಲೈ ದೇವತೆಗಳಿರಾ! ಇದು ನಿಮಗೆ ಸಮ್ಮತವೋ? ಎಂದು ಬ್ರಹ್ಮಾದಿಗಳಂ ಕೇಳೆ, ಅವರುಗಳು ತಲೆವಾಗಿ ಅಜ್ಞಾನದಿಂದಿರುತಿರ್ದರೆಂದು ಸೂತಂ ಶೌನಕಾದಿಗಳಿಗೆ ಪೇಳಿದ ನೆಂಬಿಲ್ಲಿಗೆ, ದಕ್ಷಕಾಂಡದಲ್ಲಿ ಮುವ್ವತ್ತನೆಯ ಅಧ್ಯಾಯವು ಸಂಪೂರ್ಣವಾದುದು.

ಮುವ್ವತ್ತೊಂದನೆಯ ಅಧ್ಯಾಯವು.

ಶ್ರೀ ವೀರಭದ್ರದೇವನ ಆಗ್ರಹದಿಂದ ಹರಿಬ್ರಹ್ಮೇಂದ್ರಾದಿಗಳ ದುರವಸ್ಥೆಯು-ದಕ್ಷ ವಿಧ್ವಂಸವು.

ಎಲೈ ಋಷಿಗಳಿರಾ! ಅನಂತರದಲ್ಲಿ ವೀರಭದ್ರನು ದೇವತೆಗಳ ಭಾವವಂ ಕಂಡು ಬ್ರಹ್ಮಾಂಡವಡೆಸಂತೆ ಧ್ವನಿಯಂಮಾಡಿ ಗದೆಯಿಂ ಹರಿಯ ಉರವಂ ತಾಡಿಸಲಾಗಿ, ಆತನ ಉರದಲ್ಲಿರ್ದ ಕೌಸ್ತುಭರತ್ನವು ವಡೆದು ಭೂಮಿಯಲ್ಲಿ ಬೀಳೆ, ಬಳಿಕ ವಿಷ್ಣುವು ಭೂಮಿಯಲ್ಲಿ ಬಿದ್ದು ಮೂರ್ಛೆಯನ್ನೈದಿದನು. ಬಳಿಕ ವಿಭುವಾದ ವೀರಭದ್ರನು ಬ್ರಹ್ಮನ ಶಿರವಂ ಮುಷ್ಟಿಯಿಂ ತಿವಿಯಲಾಗಿ, ಆತನು ಮೂರ್ಛೆ ಬಿದ್ದನು. ಆಗ ಬ್ರಹ್ಮನಂ ಬಿಟ್ಟು ಪೋಗುತಿರ್ಪ ಗಾಯತ್ರಿ, ಸಾವಿತ್ರಿ, ಬ್ರಹ್ಮಾಣಿ, ಎಂಬ ಮೂವರು ಸ್ತ್ರೀಯರು ವೀರಪಾಲಕವೆಂಬ ವೀರಭದ್ರನ ಕರ ವಾಳದಿಂದ ಛೇದಿಸಲ್ಪಟ್ಟ ನಾಸಿಕಾ ಕುಚಂಗಳುಳ್ಳವರಾದರು. ಬಳಿಕ ದೇವತೆ ಗಳತ್ಯಂತ ಭೀತರಾಗಿ ಸಮಸ್ತ ದಿಕ್ಕುಗಳಲ್ಲಿಯು ಪೊರಮಟ್ಟು ಯಾಗಶಾಲೆಯ ಪೊರವಳಯಕ್ಕೆ ಪೋಗೆ, ಬಹಿರಾವರಣದಲ್ಲಿರ್ಪ ಭೂತಗಣಂಗಳು ತಗುಳುತ ಬರಲು ಮರಳಿ ಯಜ್ಞಶಾಲೆಯಂ ಪೊಕ್ಕರು. ಆಗ ವೀರಭದ್ರನು ಓಡುತ ಲಿರುವ ಚಂದ್ರನಂ ಕಂಡು ವಾಮಪಾದದಿಂ ತಾಡಿಸಿ ಭೂಮಿಯಲ್ಲಿ ಕೆಡಹಿ ಆ ಚಂದ್ರನ ಕಠಿಣವಾದ ಶಿರಸ್ಸಂ ಛೇದಿಸಿದನು. ಬಳಿಕ ಅದ್ಭುತ ಪರಾಕ್ರಮಿ ಯಾದ ವೀರಭದ್ರನು ಸೂರ್ಯನ ಕಪೋಲವಂ ತಾಡಿಸಿ ದಂತಂಗಳನ್ನು ಭಗ್ನಂ ಗೈದು ದುರಾತ್ಮನಾದ ಭಾಗಾದಿತ್ಯನ ನೇತ್ರವಂ ಕಿತ್ತು, ಕೋಗಿಲೆಯ ರೂಪಿನಿಂ ಪೋಗುತಿರ್ಪ ಇಂದ್ರನಂ ಛೇದಿಸಿ, ಹವಿಸ್ಸಂ ಭುಜಿಸುತಿರ್ಪ ಅಗ್ನಿಯ ಜಿಹ್ವೆಯಂ ಖಂಡಿಸಿ, ಯಮನ ಭುಜದಂಡವಂ ನಿಋುಋುತಿಯ ಬಾಹುವಂ ಪಿಡಿದು ಸಂಹ ರಿಸಿ, ಕಬ್ಬಿಣದ ಮುಸಲದಿಂ ವರುಣನಂ ಕೊಂದು, ಓಡುತಿರ್ಪ ವಾಯುವಂ ಪರಶುವಿನಿಂ ತಾಡಿಸಿ, ಶೂಲಾಗ್ರದಿಂ ಕುಬೇರನಂ ತಿವಿದೆತ್ತಿ ನರ್ತನವಂ ಮಾಡಿದನು.

ಆಗ ಈಶಾನ ಸಹ ಏಕಾದಶ ರುದ್ರರು ಪ್ರಣತಾರ್ತಿ ಭಂಜನನಾದ ವೀರ ಭದ್ರಂಗೆ ನಮಸ್ಕರಿಸಲಾಗಿ, ಆ ವೀರಭದ್ರನು ಅವರಂ ನಿಂದಿಸಿ ಬಿಟ್ಟು ಶರದಿಂ ಅಸುರೇಂದ್ರನಂ ಖಂಡಿಸಿ ಮೃಗರೂಪದಿಂ ದೋಡುತಿರ್ಪ ವಾಯುವಂ ಯಜ್ಞ ಪುರುಷನಂ ಅಸ್ತ್ರದಿಂ ಛೇದಿಸಿದನು. ಆಗ ದಕ್ಷನು ಸಮಸ್ತವಂ ನೋಡಿ ಈ ವೀರಭದ್ರನು ನನ್ನ ಕಣ್ಣು ಮುಂದೆ ಯಜ್ಞವಂ ದೇವತೆಗಳಂ ಸಂಹರಿಸಿದನಲ್ಲ. ಎಂದು ಚಿಂತಿಸಿ ಪೂರ್ವದಲ್ಲಿ ಬ್ರಹ್ಮನಿಂದ ದೇವನಾದ ಈಶಾನನಂ ತಿಳಿದು ಕ್ರೂರವಾದ ತಪವಂ ಮಾಡಿ ಆ ಮಹೇಶ್ವರನಿಂ ವೈಶ್ವರ್ಯವಂ ಪಡೆಯದೆ, ಶಂಕ

ರನ ಮಹಿಮೆಯಂ ತಿಳಿಯದೆ ಆತನಂ ನಿಂದಿಸಿದೆನು. ಇದಲ್ಲದೆ ಪೂರ್ವದಲ್ಲಿ ನಾನು ಬ್ರಹ್ಮನ ಯಾಗದಲ್ಲಿ ಶಂಭುವಿಗೆ ಹವಿಸ್ಸಂ ಕೊಡಬೇಡವೆಂದು ವಿಘ್ನವಂ ಮಾಡಿದೆನು. ಈಗಲಾ ಮಹಾದೇವನಂ ಬಿಟ್ಟು ದೇವತೆಗಳ್ಗೆಂಸಿ ಯಾಗವ ನ್ನಾರಂಭಿಸಿ ಆ ಸಮಯದಲ್ಲಿ ಬಂದ ದಧೀಚಿ ಮುನಿಯ ವಾಕ್ಯವಂ ತಿರಸ್ಕರಿಸಿ, ಪುತ್ರಿಯಾದ ದಾಕ್ಷಾಯಣೀ ದೇವಿಯ ಮಧುರ ಯುಕ್ತವಾದ ವಚನವನ್ನೀಹಿಸದೆ, ಪ್ರಥಮ ಹವಿರ್ಭಾಗವಂ ಕೊಡೆಂದು ಪೇಳುತಿರ್ಪ ವೀರಭದ್ರನಂ ಧಿಕ್ಕರಿಸಿ, ಪ್ರಣವಪುರುಷ ಸಹ ಯೆದ್ದು ಪೇಳುತಿರ್ಪ ವೇದಪುರುಷನ ವಾಕ್ಯವನ್ನುಲ್ಲಂಘಿಸಿ, ವಿಷ್ಣ್ವಾದಿ ದೇವತೆಗಳಿಗೆ ಮಹತ್ತಾದ ಅನರ್ಥವಂ ಸಂಪಾದಿಸಿದೆನಲ್ಲ, ಎಂದು ಮನದಿಂ ವಿಚಾರಿಸಿ ಕುಪಿತನಾಗಿ ಆ ವೀರಭದ್ರನಂ ಭದ್ರಕಾಳಿಯುಂ ಭೂತ ಗಣಂಗಳಂ ನೋಡಿ, ಪೋಗಲು ಅಶಕ್ಯನೆಂದು ತಿಳಿದು ಸರ್ಪದಿಂ ಭಯಪಟ್ಟವ ನಂತೆ ಮೌನವಾಗಿರ್ದನು. ಆಗ ವೀರಭದ್ರನು ಮೇಲ್ಗಡೆಗೆ ಲಂಘಿಸಿ ದುರಾತ್ಮ ನಾದ ದಕ್ಷನ ಶಿರವಂ ಛೇದಿಸಿ, ಶಿವನಿಂದೆಗೆ ಪ್ರಾಯಶ್ಚಿತ್ತವಂ ಮಾಡಿ ಅಗ್ನಿ ಯಲ್ಲಿ ಆಹುತಿಯನ್ನು ಕೊಡಲಾಗಿ ಆ ಶಿರವು ಭಸ್ಮವಾದುದು.

ದಕ್ಷಪತ್ನೀಪುತ್ರಿಯರ ಆರ್ತನಾದವು.

ಬಳಿದ ದಕ್ಷನ ಪತ್ನಿಯಾದ ವೇದವಲ್ಲಿಯು ಆತನ ಪುತ್ರಿಯರು ಬಾಂಧ ವರು ಹತನಾದ ಆ ದಕ್ಷನನ್ನಾವರಿಸಿಕೊಂಡು ರೋದಿಸುತಿರೆ, ವೀರಭದ್ರನು ಆ ವೇದವಲ್ಲಿಯ ಕರ್ಣಗಳಂ ಛೇದಿಸಿ ಕಂದುಕ ಕ್ರೀಡೆಯನ್ನಾಡಿದನು. ಮತ್ತಂ ಭದ್ರಕಾಳೀ ವೀರಭದ್ರರೀರ್ವರು ದೇವರ್ಷಿ ಮನುಷ್ಯರಂ ಅವರ ಸ್ತ್ರೀಯರು ಗಳಂ ಸಂಹರಿಸಿ ಅದೃಶ್ಯವಾಗೆ, ಅನೇಕ ವೀರರು ಅನೇಕ ಕಾಳಿಗಳು ಅವರನು ಜ್ಞೆಯಿಂ ಯಾಗಶಾಲೆಯ ಬಹಿರ್ಭಾಗದಲ್ಲಿರ್ಪ ಮಹಾ ಸೇನೆಯಂ ಸಂಹರಿಸಿ ಪ್ರೋಳಕ್ಕೆ ಬಂದು ಕೋಲಾಹಲ ಧ್ವನಿಯಂ ಮಾಡಿ ಉಳಿದ ದೇವತೆಗಳಂ ದ್ವಿಜಾ ಧಮರಾದ ಋಷಿಗಳಂ ನಿಶಿತಂಗಳಾದ ಅಸ್ತ್ರಂಗಳಿಂ ತೋಮರಗಳಿಂ ಖಡ್ಗಗಳಿಂ ಪಾದಹಸ್ತಂಗಳಿಂ ಸಂಹರಿಸಿ ಕೆಲಂಬರ ಶಿರಂಗಳಂ ಕೆಲಂಬರ ಭುಜಂಗಳಂ ಅಸ್ಥಿಗಳಂ ಶರೀರಂಗಳಂ ಜಿಹ್ವೆಗಳಂ ನೇತ್ರಂಗಳಂ ಸಂಹರಿಸಿ ಅವರ ರಕ್ತ ಪಾನವಂ ಮಾಡಿದರು. ಇದಲ್ಲದೆ ಬಲಾತ್ಕಾರದಿಂ ಮತ್ತೆ ಕೆಲಂಬರ ಶರೀರ ಗಳಂ ಆಜ್ಯಸ್ಥಾಲಿಯಲ್ಲಿರಿಸಿ ಅಗ್ನಿಯಲ್ಲಿ ಕುದಿಯಿಸಿ ಅತ್ಯಂತ ಮನೋಹರವಾಗಿ ಭುಂಜಿಸಿದರು. ಮತ್ತಂ ಕೆಲಂಬರ ಉದರ ಕರುಳುಗಳಂ ಮಾಲೆಗಳಂತೆ ಮಾಡಿ ಕಂಠದಲ್ಲಿ ಧರಿಸಿ ಶಂಖಧ್ವನಿಯಂ ಮಾಡಿದರು. ಇದು ಮಲ್ಲದೆ ಪಲಾಯನ ಪರರಾದ ಕೆಲಂಬ ದೇವತೆಗಳಂ ಪಾದದಿಂದೊದೆದರು. ಹಾಗೆಯೆ ಮಧುಕ್ಷೀರಾ ಜ್ಯಾದಿ ಹವಿಸ್ಸುಗಳಂ ಜಿಹ್ವೆಯಿಂದಾಸ್ವಾದನೆಯಂ ಮಾಡಿ ಯಾಗಾರ್ಥವಾಗಿ

ತಂದ ಮೇಷಂಗಳಂ ಮರ್ದಿಸಿ ಭಕ್ಷಿಸಿದರು. ಬಳಿಕ ಕೋಪದಿಂ ಕುಂಡಲದ ಲ್ಲಿರ್ಪ ಅಗ್ನಿಗಳಂ ಕೆಡಿಸಿದರು. ಆಗ ಕೆಲಂಬ ದೇವತೆಗಳು ಆ ಯಾಗಶಾಲೆಯಂ ಬಿಟ್ಟು ಓಡಲುಪಕ್ರಮಿಸಲಾಗಿ, ಕೆಲಭೂತಗಳು ಆ ಶಾಲೆಯ ಯೆಲ್ಲ ಕಡೆಯ ಲ್ಲಿಯು ದಹಿಸಿದರು. ಮತ್ತೆ ಸಮಸ್ತ ಕಲಶಂಗಳಂ ಒಡೆದು ಗೋವುಗಳಂ ಗಂಗೆಯಲ್ಲಿ ಕೆಡಹಿ ಕೋಲಾಹಲಧ್ವನಿಯಂ ಮಾಡಿ, ದೇವತೆಗಳ ರಥತುರಗ ವಾಹನಾದಿಗಳಂ ಭೂಷಣಾದಿಗಳಂ ಅಗ್ನಿಯಲ್ಲಿ ಹಾಕಿದರು. ಹೀಗೆ ದಕ್ಷ ಕನ್ನಿಕೆಯರಂ ಅವರ ಬಾಂಧವರಂ ಅಳಿಯಂದಿರಂ ಮಕ್ಕಳಂ ಪಾಪಿಗಳಾದ ಬ್ರಹ್ಮರುಗಳಂ ವಾಚಾಮಗೋಚರವಾಗಿ ಬಾಧಿಸಿ ಸಮಸ್ತ ಕಡೆಯಲ್ಲಿಯು ಕಾಕ ಶ್ಯೇನ ಗೃಧ್ರುಂಗಳು ಕುಳಿತುಕೊಳ್ಳುವ ಹಾಗೆ ಮಾಡಿದರು.

ಮಹಾ ವಿಷ್ಣುವು ಮೂರ್ಛೆಯಿಂದೆದ್ದು ತನ್ನ ಅಪರಾಧಮಂ ತಾನು ನೆನೆಯುವಿಕೆ.

ಈ ಪ್ರಕಾರವಾಗಿ ದುರಾತ್ಮರಾದ ಇವರೆಲ್ಲರು ಹತರಾಗೆ, ಆಗ ವಿಷ್ಣುವು ಮೂರ್ಛೆ ತಿಳಿದೆದ್ದು ಕೋಪಯುಕ್ತನಾಗಿ ಮೃತರಾದ ತನ್ನ ಸೈನಿನಿಕರಂ ಯಾಗ ವಿಘ್ನವಂ ಮಾಡಿ ಶಿವನಿಂದೆಗೀಫಲವುಂಟಾದುದೆಂದು ತಿಳಿಯದೆ ವೀರಭದ್ರ ನೊಡನೆ ಯುದ್ಧವಂ ಮಾಡಲು ಆತ್ಮವಿನಾಶಯತ್ನವಂ ಮಾಡಿ, ಗರುಡ ಹತ ನಾದನೆಂಬುದಂ ತಿಳಿಯದೆ ಆತನಂ ನೆನದು ಆತ ಬಾರದ ಕಾರಣ ಶೋಕಯುಕ್ತ ನಾಗಿ, ಮರಳಿ ತನ್ನ ಮಾಯೆಯಿಂ ಮಹಾ ಬಲನಾದ ಗರುಡನಂ ಸೃಜಿಸಿ, ಆ ಗರುಡನ ಮೇಲೇರಿ ಪಾಂಚಜನ್ಯ ಧ್ವನಿಯಂಮಾಡಿ ಭೂತಗಳ ಮೇಲೆಯು ಕಾಳಿಯ ಮೇಲೆಯು ಅನೇಕ ಶರಗಳಂ ವರ್ಷಿಸೆ ಆಗ ಭೂತಂಗಳು ಕಾಳಿಗಳು ವಿಷ್ಣುವಿನ ಮೇಲೆ ಅನೇಕ ಶಸ್ತ್ರಂಗಳಂ ಪ್ರಯೋಗಿಸಿದರು. ಆ ಸಮಯದಲ್ಲಿ ಪ್ರತಾಪವಂತನಾದ ವೀರಭದ್ರನು ಯುದ್ಧವಂಮಾಡುತಿರ್ಪ ಹರಿಯಂ ಕೋಪದಿಂ ನಕ್ಕು ಆ ಹರಿಯೊಡನೆ ಯುದ್ಧವಂ ಮಾಡುವದಕ್ಕೆ ಉದ್ಯುಕ್ತನಾಗಲು, ಆಗ ಶಿವಾಜ್ಞೆಯಿಂದಲ್ಲಿಗೆ ಸಹಸ್ರ ತುರಗಯುಕ್ತವಾಗಿ ವಿಚಿತ್ರವಾದ ಧ್ವನಿಗಳಿಂದಾ ವೃತವಾದ ಅನೇಕಾಯುಧ ಸಂಪೂರ್ಣವಾಗಿ ದಿವ್ಯಮಾಲಾಲಂಕೃತವಾದ ಒಂದು ರಥವು ಬಂದುದು. ಆಗ ವಿಷ್ಣುವು ಅಜ್ಞಾನವಂ ಬಿಟ್ಟು ಯುದ್ಧರಂಗದ ಲ್ಲಿರ್ಪ ವೀರಭದ್ರನಿಂದ ಮಾಡಲ್ಪಟ್ಟ ಮಖಧ್ವಂಸವಂ ಸುರರ ಮರಣವಂ ನೋಡಿ ಭಯಕಂಪಿತನಾದನೆಂದ ಸೂತ ಪೌರಾಣಿಕಂ ಶೌನಕಾದಿಗಳಿಗೆ ನಿರೂಪಿಸಿದ ನೆಂಬಿಲ್ಲಿಗೆ, ದಕ್ಷಕಾಂಡದೊಳು ಮುವ್ವತ್ತೊಂದನೆಯ ಅಧ್ಯಾಯವು ಸಂಪೂರ್ಣವಾದುದು.

ಮುವ್ವತ್ತೆರಡನೆಯ ಅಧ್ಯಾಯವು.

ವೀರಭದ್ರದೇವನಿಗೆ ಬ್ರಹ್ಮನು ಸಾರಥಿಯಾಗುವಿಕೆ.

ಎಲೈ ಋಷಿಗಳಿರಾ! ಅನಂತರದಲ್ಲಿ ಸರ್ವಲೋಕ ಪಿತಾಮಹನಾದ ವಿಧಿಯು ತನ್ನ ಶರೀರವಂ ರಕ್ಷಿಸಿಕೊಳ್ಳುವದಕ್ಕಿದೇಸಮಯವೆಂದು ನಿಶ್ಚೈಸಿ ತಾನೆ ಸಾರಥಿಯಾಗಿ ರಥವನ್ನೇರಿ ವೀರಭದ್ರನ ಸಮೀಪಕ್ಕೆ ರಥವಂ ತಂದು ಅದರಿಂದಿಳಿದು ವೀರಭದ್ರಂಗೆ ನಮಸ್ಕಾರವಂ ಮಾಡಿ, ಎಲೈ ಮಹಾ ಸತ್ವನೇ! ಶಿವಾಜ್ಞೆಯಿಂ ನಿಮಗೆ ಶ್ರೇಷ್ಠವಾದ ದಿವ್ಯರಥವು ಬಂದಿತು. ನಾನು ಸಾರಥ್ಯವಂ ಮಾಡುವೆನು, ನೀನು ಭದ್ರಕಾಳಿಯುಕ್ತರಸಿ ರಥಾರೂಢರಾಗಬೇಕೆಂದು ದಂಡವತ್ತಾಗಿ ಪ್ರಣಾಮವನೆಸಗಿದನು. ಬಳಿಕ ಮಹಾಬಲನಾದ ವೀರಭದ್ರನು ಆ ಬ್ರಹ್ಮನ ಮೇಲೆ ಕೋಪವಂ ಬಿಟ್ಟು ಭದ್ರಕಾಳಿಯೊಡನೆ ಸರ್ವಾಸ್ತ್ರಯುಕ್ತಮಾದ ರಥವನ್ನೇರಿ ಬ್ರಹ್ಮನಂ ಸಾರಥಿಯಂಗೈದು ವಿಷ್ಣುವಿನ ಸಮೀಪಕ್ಕೆ ಪೋಗೆ, ಆಗ ಮಾಧವನು ವೀರಭದ್ರನಂ ನೋಡಿ, ಎಲೈ ಮಹಾಬಲನೆ! ಶಿವನಿಂದಾ ನಿರತನಾದ ದಕ್ಷಂಗೆ ನೀನು ಮಾಡಿದ ಆಜ್ಞೆಯು ಯುಕ್ತವು. ಮತ್ತಂ ನಿನ್ನ ಸಮೀಪದಲ್ಲಿರ್ಪ ದೇವತೆಗಳಂ ಸಂಹರಿಸಬೇಕೆಂದು ಪೇಳಲಾಗಿ, ಮಹಾ ಬಲವಂತನಾದ ವೀರಭದ್ರನು ಹರಿಯ ವಾಕ್ಯವಂ ಕೇಳಿ, ಮಾಧವನೆ! ಮಹಾಪಾಪಿಗಳಾದ ಯಾರು ದೇವೇಶನಾದ ಮಹೇಶ್ವರನಂ ನಿಂದಿಸುವರೋ ಅವರ ಗೋಷ್ಠಿಯಲ್ಲಿ ಆರು ಸೇವಿಸುವರೋ ಅವರು ಮಹಾಪಾಪಿಗಳು. ಅವರನೆಲ್ಲರಂ ಶಿಕ್ಷಿಸಬೇಕು, ಮತ್ತಂ ನಿನ್ನನ್ನು ಬಿಡೆನೆಂದು ನುಡಿದನು.

ವೀರಭದ್ರ, ಮಾಧವರ ಯುದ್ಧವು.

ಆಗ ಮಾಧವನು ಕೋಪದಿಂ ಭೂತಗಳ ಮೇಲೆ ಶರಗಳಂ ವರ್ಷಿಸಲಾಗಿ, ವೀರಭದ್ರನು ಮಹತ್ತಾದ ಧನುವಂ ತೆಗೆದು ನಾರಿಯಂ ಹೂಡಿ ಮಾಧವನ ಮೇಲೆ ಅನೇಕ ಬಾಣಂಗಳಂ ವರ್ಷಿಸೆ ಮಾಧವನು ಸಹಸ್ರ ಬಾಣಂಗಳಂ ಪ್ರಯೋಗಿಸಿದನು. ಆಗ ವೀರಭದ್ರನು ಆ ಬಾಣಂಗಳಂ ಛೇದಿಸಿ ಏಕಬಾಣದಿಂ ವಿಷ್ಣುವಿನ ಲಲಾಟವನೆಚ್ಚು ಹರಿಯು ರಕ್ತಧಾರೆಗಳಿಂದಾವೃತನಾಗಿ ಭೂಮಿಯಲ್ಲಿ ಬಿದ್ದು ಮೂರ್ಛೆಯನೈದಿ ಮರಳಿ ಸಂಭ್ರಮದಿಂದೆದ್ದು ಆ ವೀರಭದ್ರನ ಮೇಲೆ ಅನೇಕ ಬಾಣಂಗಳಂ ವರ್ಷಿಸಲಾಗಿ ಆತನು ಆ ಬಾಣಂಗಳಂ ಛೇದಿಸಿ, ಆಗ್ನೇಯಾಸ್ತ್ರಮಂ ಬಿಟ್ಟು ಹರಿಯಂ ಮೂರ್ಛೆಯಲ್ಲಿ ಕೆಡವಿ, ಮರಳಿ ಎದ್ದ ಹರಿಯಂ ನೋಡಿ, ಎಲೈ ಮಾಧವನೆ! ಈಗ ನನ್ನೊಡನೆ ಯುದ್ಧವಂ ಮಾಡೆಂದು ಪೇಳೆ, ಆತನು ವೀರಭದ್ರನ ವಾಕ್ಯವಂ ಕೇಳಿ ಕೋಪಯುಕ್ತನಾಗಿ ಅನೇಕ ದೇವತಾಸ್ತ್ರಂಗಳಂ ಬಿಡಲಾಗಿ ಆ ವೀರಭದ್ರನು ಅವುಗಳಂ ಖಂಡಿಸಿದನು. ಬಳಿಕ

ಹರಿಯು ಬ್ರಹ್ಮಾಸ್ತ್ರವನ್ನು ಪ್ರಯೋಗಿಸೆ, ವೀರಭದ್ರನು ಏಕ ಬಾಣದಿಂ ಛೇದಿಸಿದನು, ಮರಳಿ ಹರಿಯು ಅನೇಕ ಬಾಣಂಗಳಂ ಪ್ರಯೋಗಿಸಲಾಗಿ ವೀರಭದ್ರನು ಆ ಬಾಣಂಗಳಂ ಖಂಡಿಸಿ ಆತನ ಗರುಡನಂ ಸಂಹರಿಸಿದನು. ಆಗ ಮಾಧವನು ಅನೇಕ ರೂಪವಂ ಧರಿಸಿ, ಯುದ್ಧಕ್ಕೆ ಬರೆ ಆಗ ವೀರಭದ್ರನು ಆ ಚಕ್ರವಂ ಹಸ್ತದಿಂ ಪಿಡಿಯಲಾಗಿ, ಮರಳಿ ಹರಿಯು ಗದೆಯಂ ಪ್ರಯೋಗಿಸಿದನು. ಅದಂ ತನ್ನ ಗದೆಯಿಂದ ಪುಡಿಮಾಡೆ ಹರಿಯು ಕೋಪದಿಂ ಖಡ್ಗವಂ ಪಿಡಿದು ವೀರಭದ್ರನ ಸಮಿಾಪಕ್ಕೆ ಬರಲಾಗಿ, ಆತನು ಆ ಹರಿಯಂ ನೋಡಿ, ಹುಂಕಾರವಂ ಮಾಡಿದ ಮಾತ್ರದಿಂದಲೇ ಹರಿಯು ಸ್ತಂಭೀಭೂತನಾಗಿ ಅಚಲದಂತೆ ನಿಂತನು. ಆಗ ವೀರಭದ್ರನು ಆತನಂ ಸಂಹರಿಸಬೇಕೆಂದು ಯೋಚಿಸುತ್ತಿರೆ, ಆ ಸಮಯದಲ್ಲಿ ಕೋಪವನುಪಸಂಹಾರಮಾಡಿಕೊಳ್ಳೆಂದು ಅಶರೀರವಾಕ್ಯಮುಂಟಾಗಲು ಆ ವಾಕ್ಯವಂ ಕೇಳಿ ಶಿವಾಜ್ಞೆಯೆಂದು ತಿಳಿದು ಆ ಕೋಪವನ್ನು ಉಪಸಂಹಾರವ ಮಾಡಿದನು. ಬಳಿಕ ಬ್ರಹ್ಮನು ವೇಗದಿಂ ರಥದಿಂದಿಳಿದು ನಮಸ್ಕಾರವಂ ಮಾಡಿ, ಎಲೈ ಕರುಣಾಕರನೆ! ನಾನು ಮಾಡಿದ ಅಪರಾಧವಂ ಮನ್ನಿಸೆಂದು ಪ್ರಾರ್ಥಿಸಿ ಸ್ವಾಮಿಯಂ ಪ್ರಸನ್ನನಂ ಮಾಡಿಕೊಂಡನು.

ಮಹಾವಿಷ್ಣುವು ವೀರಭದ್ರನಿಗೆ ಶರಣಾಗತನಾಗುವಿಕೆ, ಸ್ತುತಿಸುವಿಕೆ.

ಅನಂತರದಲ್ಲಿ ಹರಿಯು ಆ ಮಹೇಶನಾದ ವೀರಭದ್ರಂಗೆ ನಮಸ್ಕಾರವಂ ಮಾಡಿ ಸ್ತೋತ್ರಂಗಳಿಂ ಸ್ತುತಿಸಿ ಭಕ್ತಿಯುಕ್ತನಾಗಿ, ಮಹಾ ಸತ್ವವಂತನಾದ ಶಿವಾಜ್ಞಾಪರಿಪಾಲಕನಾದ ಎಲೈ ವೀರಭದ್ರನೆ! ಶಿವನಿಂದೆಯಲ್ಲಿ ಆಸಕ್ತನಾದ ಪಾಪಿಯಾದ ಈ ದಕ್ಷನ ಸಂಸರ್ಗದಿಂ ಮೂಢರಾದವರಿಗೆ ಈ ಫಲವುಂಟಾದುದು. ನಿನ್ನ ದರ್ಶನದಿಂ ಸ್ಮಿತದಿಂ ಅಟ್ಟಹಾಸದಿಂ ಉಚ್ಛ್ವಾಸ ನಿಶ್ವಾಸದಿಂ ಚರಾಚರಂಗಳಾದ ಭೂತಂಗಳು ಭುವನಂಗಳು ಬ್ರಹ್ಮಾಂಡಂಗಳು ಭಸ್ಮಂಗಳಾಗುವವು. ಅದುಕಾರಣದಿಂ ತೂಲಸದೃಶರಾದ ದೇವತೆಗಳಾಗಿರ್ಪ ನಮ್ಮೊಡನೆ ಲೀಲೆಯಿಂ ವಿಹರಿಸಿದಿ, ಈ ಅರ್ಥದಲ್ಲಿ ಸಂಶಯವಿಲ್ಲ, ಎಲೈ ಸರ್ವಸಂಹಾರಕನೆ! ನೀನೆತ್ತ? ಮಶಕಂಗಳಾದ ನಾವೆಲ್ಲಿ? ಸ್ಮಿತಾಯುಧನೆ! ಸೇನೆಯಿಂದೇನು ಪ್ರಯೋಜನವು? ಆಯುಧಂಗಳಿಂದೇನು? ಬಹುಮಾತುಗಳಿಂದೇನು ಫಲವು? ನಿನಗಧೀನರಾದ ನಮ್ಮನ್ನು ರಕ್ಷಿಸು ರಕ್ಷಿಸು, ನಾನು ಜಗದ್ಗುರುವಾದ ಶಿವನ ಪ್ರಕೃತಿಯೆಂಬ ಶಕ್ತಿಯು ಅವನಿಂದೀಚಕ್ರವಂ ಪಡೆದೆನು. ನನಗೆ ಶಿವಾಜ್ಞಾಮಹಿಮೆಯಿಂ ವಿಷ್ಣುತ್ವವು ಬಂದುದು. ನಾನು ಮಾಡಿದಪರಾಧವಂ ಕ್ಷಮಿಸೆಂದು ನುಡಿಯುತ್ತ ಅಡಿಗಡಿಗೆ ನಮಸ್ಕಾರವಂ ಮಾಡಲಾಗಿ, ಮಹಾಬಲನಾದ ವೀರಭದ್ರನು ಪ್ರಸನ್ನ

ನಾಗಿ ಮಾಧವನಿಗೋಸುಗ ಕೃಪೆಯಂ ಮಾಡಿದನು. ಆ ಸಮಯದಲ್ಲಿ ಮಹಾ ದೇವನು ಕಲ್ಯಾಣಿಯಾದ ದೇವಿಯುಕ್ತನಾಗಿ ವೃಷಭವನ್ನೇರಿ ನಂದೀಶ್ವರ ಮುಂತಾದ ಗಣಂಗಳ್ವೆರಸಿ ಪ್ರಾದುರ್ಭವಿಸಿದನೆಂದು ಸೂತಂ ಶೌನಕಾದಿ ಗಳಿಗೆ ಪೇಳಿದ ನೆಂಬಲ್ಲಿಗೆ, ದಕ್ಷಕಾಂಡದಲ್ಲಿ ಮುವ್ವತ್ತೆರಡನೆಯ ಅಧ್ಯಾಯವು ಸಂಪೂರ್ಣಮಾದುದು.

ಮುವ್ವತ್ಮೂರನೆಯ ಅಧ್ಯಾಯವು.

ವೀರಭದ್ರನು ಪರಶಿವನನ್ನು ಸ್ತುತಿಸುವಿಕೆ-ಪ್ರಸನ್ನನಾಗ ದೇವತೆಗಳಿಗೆ ಜೀವದಾನಮಾಡುವಿಕೆ.

ಅನಂತರದಲ್ಲಿ ಆ ವೀರಭದ್ರನು ಜಗದ್ಗುರುವಾದ ಮಹಾದೇವನಂ ಕಂಡು ಅತ್ಯಂತ ಭಕ್ತಿಯಿಂ ನಮಸ್ಕಾರವಂ ಮಾಡಿ ಸ್ತೋತ್ರಂಗಳಿಂ ಸ್ತುತಿಸಿ ಮುಂಗಡೆ ಯಲ್ಲಿ ಅಂಜಲಿಬಂಧನಯುಕ್ತನಾಗಿ ನಿಂತಿರ್ದನು. ಆಗ ದೇವತೆಗಳು ಸಾಂಬ ನಾದ ಸುಗುಣನಾದ ಪರಮೇಶ್ವರಂಗೆ ನಮಿಸಿ ಭಯಕಂಪಿತರಾಗಿರ್ದರು. ಆ ಸಮಯದಲ್ಲಿ ದಾಕ್ಷಾಯಣಿಯಾದ ಗೌರಿದೇವಿಯು ಮೃತರಾದ ದೇವತೆಗಳಂ ದಕ್ಷನಂ ಅಂಜಲಿಬದ್ಧರಾದ ಹರಿಬ್ರಹ್ಮರಂ ಯಾಗನಾಶವಂ ನೋಡಿ ಕೃಪಾ ಯುಕ್ತೆಯಾಗಿ, ಎಲೈ ಸ್ವಾಮಿಯೆ! ಅಜ್ಞಾನವಶದಿಂ ಶಂಕರನಾದ ನಿನ್ನಂ ತಿಳಿಯದೆ ಅತ್ಯಂತ ನಿಂದಿತವಾದ ಈ ದೆಸೆಯನ್ನೈದಿದರು. ಆವುದಾನೊಂದು ಕಾರಣದಿಂ ನನ್ನ ನಿಮಿತ್ತಮಾಗಿ ಬಂದುದೊ ಅದುಕಾರಣದಿಂದಿವರಿಗೆ ಜೀವಂ ಗಳಂ ಕೊಡಬೇಕೆಂದು ಪ್ರಾರ್ಥಿಸಿ ನಮಸ್ಕರಿಸಲಾಗಿ, ಕೃಪಾಮೂರ್ತಿಯಾದ ಪರಮೇಶ್ವರನು ಆ ವಾಕ್ಯವಂ ಕೇಳಿ ಅಂಗೀಕರಿಸಿ, ಮುಂದೆ ಒಂದು ಅಂಜಲಿ ಬದ್ಧನಾಗಿರ್ಪ ವೀರಭದ್ರನಂ ನೋಡಿ, ಎಲೈ ನೀನು ಮರಳಿ ನನ್ನಾಜ್ಞೆಯಿಂ ದಿವರಿಗೆ ಜೀವಂಗಳಂ ಕೊಡೆಂದು ನುಡಿಯೆ, ಮಹಾಬಲನಾದ ವೀರಭದ್ರನು ಆ ಶಿವಾಜ್ಞೆಯಂ ಶಿರಸಾವಹಿಸಿ ಮೃತರಾದ ಅಸುರರನ್ನು ಕೃಪಾದೃಷ್ಟಿಯಿಂ ನೋಡಿ ಜೀವಂಗಳಂ ಕೊಟ್ಟನು. ಬಳಿಕ ಸಮಸ್ತ ದೇವತೆಗಳು ವಿಮಾನಂಗಳ್ವೆರಸಿ ಸ್ವಪ್ನವಂ ಕಂಡವರಂತೆ ಆಶ್ಚರ್ಯಯುಕ್ತರಾಗಿ ದೇವದೇವನಾದ ಅಂಬಿಕಾಪತಿ ಯಾದ ಪರಮೇಶ್ವರಂಗೆ ನಮಸ್ಕಾರವಂ ಮಾಡಿ ಪರಮ ಭಕ್ತಿಯಿಂದೀರೀತಿ ಸ್ತುತಿಸಿದರು. ದಯಾಸಿಂಧುವಾದ ಪರಾರ್ಥೈಕ ಪ್ರಯೋಜನನಾದ ಪರಮೇ ಶ್ವರನೆ! ಪಾಪಿಗಳಾದ ನಾವುಗಳು ಬಹು ಕಾಲವು ನರಕ ಫಲವನ್ನೀಯುವ ಶಿವ ನಿಂದನೆಯ ಸಂಸರ್ಗದಿಂದುನ್ನತವಾದ ಪಾಪವುಳ್ಳವರಾಗಿ ಅಜ್ಞಾನಿಗಳಾ

ದೊಡಂ ನಮ್ಮನು ರಕ್ಷಿಸಿದಿ. ಮೂಢಬುದ್ಧಿಗಳಾದ ನಮ್ಮಗಳಿಗೆ ನೀನಲ್ಲದೆ ರಕ್ಷಕನಿಲ್ಲ. ಶರಣಾಗತ ರಕ್ಷಕನಾದವನು ನೀನೊರ್ವನೇ ಸರಿ. ಪೂರ್ವದಲ್ಲಿ ನೀನು ಸರ್ವದೇವಸಂರಕ್ಷಣಾರ್ಥವಾಗಿ ಪುಣ್ಯವಾದ ಭಾಗೀರಥಿಯಂ ಶಿರದಲ್ಲಿಯು ಪಾಣಿಪಲ್ಲವದಲ್ಲಿ ಅಗ್ನಿಯನ್ನು ಧರಿಸಿದೆ. ಇದಲ್ಲದೆ ವಿಷಪಾನವಂ ಮಾಡಿದೆ. ಈ ಪ್ರಕಾರವಾಗಿ ಅಸಾಧ್ಯವಾದ ಭಯಗಳಿಂ ಬಿಡಿಸಿದಿಯಾದಕಾರಣ ಈಗಲು ಭೀತಿಯಂ ಪರಿಹರಿಸಿ ನಮ್ಮನ್ನು ಸಲಹು. ನಿನಗೆ ನಮಸ್ಕಾರವು. ಯೆಂದು ಈ ರೀತಿ ನಮಸ್ಕರಿಸಿ ಪ್ರಾರ್ಥಿಸಿದವರಾಗಲು ಆ ದೇವತೆಗಳಂ ನೋಡಿ ಪರಮೇಶ್ವರನು ಮಂದಸ್ಮಿತಮುಖನಾಗಿ ಅವರನ್ನು ತಮ್ಮ ತಮ್ಮ ಲೋಕಂಗಳಿಗೆ ಕಳುಹಿದನು.

ದಕ್ಷನಿಗೆ ನಿಜಶಿರವನ್ನು ಕೊಟ್ಟು ಪ್ರಾಣದಾನಮಾಡುವಿಕೆ.

ಆಗ ಬ್ರಹ್ಮನು ಆ ದೇವತೆಗಳೊಡನೆ ಮರಳಿಯು ಮಹಾದೇವಂಗೆ ನಮಸ್ಕಾರವಂಮಾಡಿ, ಎಲೈ ದೇವೇಶನೆ! ದಕ್ಷಂಗೆ ಮರಳಿ ಪ್ರಾಣಂಗಳಂ ಕೊಡಬೇಕೆಂದು ಪ್ರಾರ್ಥಿಸಲಾಗಿ, ದಯಾಸಿಂಧುವಾದ ಮಹಾದೇವನು ಆ ವಿಧಿಯ ವಾಕ್ಯವಂ ಕೇಳಿ ವೀರಭದ್ರನಂ ನೋಡೆ, ಆ ಸಮಯದಲ್ಲಿ ವೀರಭದ್ರನು ಸ್ವಾಮಿಯ ಇಂಗಿತವಂ ತಿಳಿದು ಶಿವಾಜ್ಞೆಯಿಂದಾ ದಕ್ಷನ ಶರೀರವಂ ತರಲು ಭಾನುಕೋಪನೆಂಬ ಗಣಾಧೀಶ್ವರನನ್ನು ಕಳುಹಿಸಿ ವೇಗದಿಂ ತರಿಸಿ ಆ ಮುಂಡಕ್ಕೆ ಅಜ ಶಿರವಂ ಕೂಡಿಸಿ ಪ್ರಾಣವಂ ಕೊಟ್ಟವನಾಗಲು ಆಗ ದಕ್ಷನು ಮಲಗಿದ್ದವನಂ ತೆದ್ದು ಆ ವೀರಭದ್ರಂಗೆ ನಮಸ್ಕಾರವಂ ಮಾಡಿ ತನ್ನ ಪಾಪವಂ ಸ್ಮರಿಸಿ ಭೀತಿಯಿಂ ನಿಂತು, ವೃಷಭಾರೂಢನಾಗಿ ಸಾಂಬನಾದ ಸದಾಶಿವನಂ ಕಂಡು ನಮಸ್ಕರಿಸಿ ಭಕ್ತಿಯುಕ್ತನಾಗಿ ನಿಂತಿರ್ದನು. ಆಗ ಮಹಾದೇವನು ನಡುಗುತಲಿರುವ ಶರೀರವುಳ್ಳ ಆ ದಕ್ಷನಂ ನೋಡಿ, ಎಲೈ ದಕ್ಷನೆ! ನಿನಗೆ ಭಯವು ಬೇಡ, ಪ್ರಸನ್ನನಾದೆನೆನಲು, ಆತನು ಶ್ರೋತ್ರಸುಖವಾದ ಸ್ವಾಮಿಯ ವಾಕ್ಯವಂ ಕೇಳಿ ಭಕ್ತಿಯಿಂ ಸ್ವಾಮಿಗೆ ಅಡಿಗಡಿಗೆ ನಮಸ್ಕರಿಸಿ, ಎಲೈ ಸ್ವಾಮಿಯೆ! ನಿನ್ನ ದರ್ಶನದಿಂದೀಗ ಕೃತಾರ್ಥನಾದೆನು. ನಿಮ್ಮನ್ನು ಬಿಟ್ಟು ದೇವತೆಗಳ್ಗೆರಸಿದ ಕೃತ್ಯಕ್ಕೆ ಫಲವನ್ನನುಭವಿಸಿದೆನು. ನಾನು ಮಾಡಿದ ಅಪರಾಧವಂ ಕ್ಷಮಿಸಿ ರಕ್ಷಿಸು ರಕ್ಷಿಸು, ನಿನಗೆ ನಮಸ್ಕಾರವು. ಚರಾಚರಾತ್ಮಕವಾದ ಈ ಜಗತ್ತು ನಿನ್ನ ವಶದಲ್ಲಿದೆ. ನಿನ್ನಾಜ್ಞೆಯನ್ನು ಯಾರು ಉಲ್ಲಂಘಿಸುವರು? ನಾನು ನಿನ್ನಾಜ್ಞಾಭಂಗವಂಗೈದು ಈ ಫಲವನ್ನನುಭವಿಸಿದೆನು. ಎಂದು ಪೇಳ್ದು ಸಮೀಪದಲ್ಲಿ ನಿಂತಿರಲಾಗಿ, ಗೌರಿದೇವಿಯು ವೀರಭದ್ರನಂ ನೋಡಿ ಹಸ್ತದಿಂದಾತನ ಶರೀರವಂ ತಡಹಿ ಆತಂಗೆ ಅನೇಕ ವರಗಳಂ ಕೊಟ್ಟಳು. ಆಗ ಪರಮೇಶ್ವರನು

ದೇವತೆಗಳಿಗೆ ಪ್ರಾಯಶ್ಚಿತ್ತವಂ ಮಾಡಿದೆವೆಂದು ನುಡಿಯೆ, ಆ ದೇವತೆಗಳು ಸ್ವಾಮಿಯ ವಾಕ್ಯವಂ ಕೇಳಿ ಪ್ರತಿ ಯಾಗಶಾಲೆಯುಂ ನಿರ್ಮಿಸಿ, ಆ ಸ್ವಾಮಿಯ ಸಮೀಪದಲ್ಲಿ ನಿಂತಿರ್ದರು. ಬಳಿಕ ಮಹಾದೇವನು ಗಣಂಗಳಿಂದಾವೃತನಾಗಿ ಭದ್ರಕಾಳಿಯೊಡನೆ ಕೈಲಾಸಗಿರಿಯನ್ನೈದಿ ಸಿಂಹಾಸನದಲ್ಲಿ ಕುಳಿತು ಆ ವೀರ ಭದ್ರನಂ ತನ್ನ ಲೋಕಕ್ಕೆ ಕಳುಹಲಾಗಿ, ಆತನು ಸ್ವಾಮಿಗೆ ನಮಸ್ಕಾರವಂ ಮಾಡಿ ರಥವನ್ನೇರಿ ಭಾನುಕಂಪನಂ ಸಾರಥಿಯಾಗಿ ಮಾಡಿಕ್ಕೊಂಡು ಪರಮ ಸಂತೋಷದಿಂದ ತನ್ನ ಲೋಕಕ್ಕೆ ಪೋದನೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ದಕ್ಷಕಾಂಡದಲ್ಲಿ ಮುವ್ವತ್ಮೂರನೆಯ ಅಧ್ಯಾಯವು ಸಂಪೂರ್ಣಮಾದುದು.

ಮುವ್ವತ್ನಾಲ್ಕನೆಯ ಅಧ್ಯಾಯವು.

ದಕ್ಷನಿಗೆ ಬ್ರಹ್ಮದೇವನು ಶಿವಾಧಿಕ್ಯತೆಯನ್ನುಪದೇಶಿಸುವಿಕೆ.

ಕೇಳಿರೈ ಋಷಿಗಳಿರಾ! ಅನಂತರದಲ್ಲಿ ವಿಧಿಯು ದುಃಖದಿಂ ವ್ಯಾಕುಲ ನಾದ ತನ್ನ ಪುತ್ರನಾದ ದಕ್ಷನಂ ನೋಡಿ, ಎಲೈ ದಕ್ಷನೆ! ಮಹತ್ತಾದ ಅಜ್ಞಾ ನದಿಂ ಏನು ಕಾರ್ಯವಂ ಮಾಡಿದೆ? ನಿನ್ನಿಂದ ಋಷಿಗಳಿಗು ದೇವತೆಗಳಿಗು ಬ್ರಾಹ್ಮಣರಿಗು ಮೃತ್ಯುವು ಸಂಪಾದಿಸಲ್ಪಟ್ಟಿತು. ಕೀರ್ತಿ ಐಶ್ವರ್ಯಾದಿಗಳು ನಾಶವಾದವು. ಸಾಂಬನಾದ ಸದಾಶಿವನಂ ನಿಂದಿಸಿದುದರಿಂದ ಈ ಫಲ ಮುಂಟಾ ದುದು. ಎಲೆ ಪುತ್ರನೆ! ನಿನಗೆ ಮಾತ್ರ ಶಿವದೂಷಣೆಯಲ್ಲಿ ಬುದ್ಧಿಯುಂಟಾಗ ಲಿಲ್ಲವು. ನನಗು ಶಿವಮಾಯೆಯಿಂ ದಜ್ಞಾನವುಂಟಾದ ಕಾಲದಲ್ಲಿ ಸ್ವಾಮಿಯು ತಾನೆ ಬಂದು ರಕ್ಷಿಸಿದನು. ಸರ್ವ ಶ್ರೇಯೋದಾಯಕನಾದ ಶಂಭುವಂ ಪೂಜಿ ಸೆನಲು, ದಕ್ಷನದಂ ಕೇಳಿ, ಎಲೈ ತಂದೆಯೆ! ನಿನಗೆ ಕೃಪಾನಿಧಿಯಾದ ಶಿವನಲ್ಲಿ ಆವಾಗ ಅಜ್ಞಾನಮುಂಟಾದುದು? ಭಗವಂತನಾದ ಶಿವನು ಅಜ್ಞಾನಿಯಾದ ನಿನ್ನ ಬಳಿಗೆ ಬಂದು ಆವಾಗ ರಕ್ಷಿಸಿದನು? ಈ ವೃತ್ತಾಂತವಂ ನನಗೆ ಕ್ರಮದಿಂ ಪೇಳಬೇಕೆಂದು ಪ್ರಾರ್ಥಿಸೆ, ಬ್ರಹ್ಮನು ಎಲೈ ಪುತ್ರನೆ! ಪೂರ್ವದಲ್ಲಿ ಪೇಳದ ವೃತ್ತಾಂತವನ್ನು ಮರಳಿಯು ಪೇಳುವೆನೆಂದು ನುಡಿದು, ಸಾಕ್ಷಾತ್ಸಂಸಾರ ಭೇಷಜನಾದ ಮಹಾದೇವನಂ ಹೃದಯಲ್ಲಿ ಧ್ಯಾನಿಸಿ ಬದ್ಧಾಂಜಲಿ ಪುಟನಾಗಿ ಇಂತೆಂದನು.

ಬ್ರಹ್ಮದೇವನ ಅಹಂಕಾರ ವರ್ಣನೆ.

ಎಲೈ ಪುತ್ರನೆ! ಚತುರ್ಯುಗ ಸಹಸ್ರವು ನನಗೆ ದಿವಾಕಾಲವು, ಆ ದಿವಾ ಕಾಲದಲ್ಲಿ ಸೃಷ್ಟಿಯಂ ಮಾಡುತಿಹೆನು. ಮರಳಿ ಚತುರ್ಯುಗ ಸಹಸ್ರವು ರಾತ್ರಿ

ಕಾಲವು ಆಗ ನಿದ್ರೆಯಂ ಮಾಡುತಲಿದೇನೆ. ಆ ನಿದ್ರಾಸಮಯದಲ್ಲಿ ಚಂದ್ರ ಸೂರ್ಯಾದಿ ಗ್ರಹಗಳು ನಕ್ಷತ್ರ ಮಂಡಲಂಗಳು ಇವೆಲ್ಲವೂ ಜಲಮಯವಾಗಿ ನಾಶಮನೈದಿ ಸತ್ಯಲೋಕವು ಮಾತ್ರ ಉಳಿವುದು. ಮತ್ತಂ ದ್ವಾತ್ರಿಂಶದ್ಧರ್ಮ ಕಾರಿಣಿಯಾದ ಕಾಮಾಕ್ಷಿಯೆಂದು ಲೋಕದಲ್ಲಿ ಪ್ರಸಿದ್ಧಿಯಾದ ಭವಾನಿಯು ಆವ ಪುರದಲ್ಲಿರುವಳೋ ಆ ಕಾಂಚೀಪುರವು ಜಲಮಧ್ಯದಲ್ಲಿ ಅಧೋಮುಖವಾಗಿ ಮುಳುಗಿ, ಘಟದಲ್ಲಿ ಹೇಗೆ ಜಲಪ್ರವೇಶವಿಲ್ಲವೋ ಹಾಗೆ ಅಂತರ್ಜಲ ವಿಹೀನವಾಗಿ ಬಹಿರ್ಜಲದಿಂದಾವೃತಮಾಗಿರುತಿರ್ದುದು. ಆಗ ಪರ್ವತರಾಜನಾದ ಕೈಲಾಸ ಗಿರಿಯು ವೃದ್ಧಿಯಾದುದು. ಆ ಕೈಲಾಸದಲ್ಲಿ ವಟವೃಕ್ಷದ ಒಂದು ಪರ್ಣವು ಮಹಾಜಲ ಮಧ್ಯದಲ್ಲಿ ಬೀಳೆ, ಹರಿಯು ಭಯಂಕರವಾದ ಆ ಉದಕ ಮಧ್ಯದಲ್ಲಿ ಶಿಶುರೂಪದಿಂ ಆ ಪರ್ಣದ ಮೇಲೆ ಮಲಗಿ, ಸರ್ವನಾಶಕವಾದ ರಾತ್ರಿಯು ಕಳೆಯಲಾಗಿ ತಾನು ವರಾಹರೂಪವಂ ಧರಿಸಿ ಶಿವಾಜ್ಞೆಯಿಂ ಮುಳುಗಿದ ಭೂಮಿಯನೆತ್ತಿ ಪೂರ್ವದಂತೆ ಸ್ಥಾಪಿಸಿ ಸಮಸ್ತ ಪ್ರಜೆಗಳಂ ಉಜ್ಜೀವಿಸಿದನು. ಆಗೆನಗೆ ಮಹಾ ಅಜ್ಞಾನಮುಂಟಾದುದು. ಎಂತೆಂದರೆ, ನಾನೇ ಜಗತ್ಕರ್ತನು ಮತ್ತೊರ್ವನಿಲ್ಲ. ನಾನು ನಿದ್ರಿಸಿದರೆ ಈ ಜಗತ್ತು ಸುಷುಪ್ತ್ಯವಸ್ಥೆಯ ನೈದುವದು. ನಾನೆದ್ದೊಡೆ ಈ ಜಗವುಂಟಾಗುವದು. ದೇವ ದಾನವ ಯಕ್ಷ ಗಂಧರ್ವರು ಮುಂತಾದ ಸ್ಥಾವರ ಜಂಗಮಂಗಳು ನನ್ನಿಂದ ಸೃಷ್ಟಿಸಲ್ಪಟ್ಟವು. ನನ್ನನ್ನಾರು ಸೃಷ್ಟಿಸಿದವರಿಲ್ಲವು. ನಾನೆ ಪರಬ್ರಹ್ಮನು, ಎಂದು ಮನದಿಂ ನಿಶ್ಚೈಸಿ ಗರ್ವಯುಕ್ತನಾಗಿ ಸತ್ಯಲೋಕದಿಂ ಪೊರಮಟ್ಟು ಕೈಲಾಸ ಚಕ್ರವಾಳಗಿರಿ ಮುಂತಾದ ಪರ್ವತಂಗಳಲ್ಲಿ ಆಯಾ ದ್ವೀಪಂಗಳಲ್ಲಿ ಸಮುದ್ರಂಗಳಲ್ಲಿಯು ಅಲ್ಲಲ್ಲಿ ಕ್ರಮದಿಂ ಅದ್ಭುತಂಗಳಂ ನೋಡಿ, ಹರಿಗೆ ಆಸ್ಪದವಾದ ಕ್ಷೀರಾಬ್ಧಿಗೆ ಸಾರಿ ಶೇಷಶಯನನಾಗಿರ್ಪ ಹರಿಯಂ ಕಂಡು ಆತನ ಉರವಂ ಬಡಿದು ಎಬ್ಬಿಸಲಾಗಿ, ಆತನು ಕೋಪದಿಂದೆದ್ದು ನೋಡೆ, ಆಗ ನಾನು ಆತನನ್ನು ನೀನಾರೆಂದು ಕೇಳಲಾಗಿ, ನಿನ್ನ ಜನಕನೆಂದು ಪೇಳಿದನು. ಆ ಸಮಯದಲ್ಲಿ ಸರ್ವಕರ್ತನಾದ ನನಗೆ ಜನಕನೆಂದು ನುಡಿಯಬಹುದೆ? ಎಂದು ಕೋಪಯುಕ್ತನಾಗಿ,

ಬ್ರಹ್ಮವಿಷ್ಣುಗಳಿಬ್ಬರ ಯುದ್ಧವು.

ಎಲೈ ಹರಿಯೆ; ಏನುಕಾರಣದಿಂ ನಿದ್ರಿಸುತ್ತಿದ್ದೆ? ಇನ್ನು ಮೇಲಾದರು ಅಜ್ಞಾನವಂ ಬಿಟ್ಟು ಸರ್ವಲೋಕ ಕರ್ತನಾದ ನನ್ನನ್ನು ಪರತತ್ವವೆಂದು ತಿಳಿದು ಸುಖಿಯಾಗಿರೆಂದು ಪೇಳಲಾಗಿ, ಆಗ ನನ್ನಂ ನೋಡಿ, ಎಲೈ ಪುತ್ರನೆ! ನೀನು ನನ್ನ ನಾಭೀ ಕಮಲದಿಂದುತ್ಪನ್ನನಾದವನು ಈಗ ತಿಳಿಯದೆ ವಿಪರೀತವಾಗಿ ಪೇಳುತಲಿರ್ದೆ, ಪುತ್ರನಾದ ನಿನಗೆ ನಾನಲ್ಲದೆ ಜನಕನಾರಿರುವನು? ಎಂದು ಪೇಳೆ,

ಎಲೈ ಹರಿಯೆ! ಅಗ್ನಿಯು ಹೇಗೆ ಅರಣಿಯಲ್ಲಿ ಪುಟ್ಟಿತೊ ಹಾಗೆ ನಾನು ನಿನ್ನಲ್ಲಿ ಪ್ರಾದುರ್ಭವಿಸಿದೆನು. ನಿನಗೆಯು ಸ್ತಂಭದಲ್ಲಿ ಉತ್ಪತ್ತಿಯುಂಟಾದುದು. ನಿನ್ನನ್ನು ಸ್ತಂಭಪುತ್ರನೆಂದು ಪೇಳುತ್ತೇನೆ, ಮತ್ತಂ ಭೃಗುಮುನಿಯಿಂದ ಶಾಪಗ್ರಸ್ತನಾಗಿ ದಶಾವತಾರಂಗಳಂ ತಾಳಿದೆ ಅವು ಸಂಹರಿಸಲ್ಪಟ್ಟವು. ನನಗೆ ಜನಕನಾದವನಂ ಪೇಳು. ಆತನಂ ಭಜಿಸುವೆನೆನಲಾಗಿ, ಜನಾರ್ದನನು ಆ ವಾಕ್ಯವಂ ಕೇಳಿ, ಎಲೈ ಬ್ರಹ್ಮನೆ! ನನಗು ನೀನು ಕರ್ತನಾದೊಡೆ ಶಿವನಿಂದ ಪುಟ್ಟಿದವನೋ ಮಹತ್ತಾದ ಅಜ್ಞಾನದಿಂ ಪಂಚಮ ಶಿರವಂ ಛೇದಿಸಿದವನಂ ಮರೆತೆಯೋ? ಛೀಛೀ!! ನಾನು ನಿನಗೆ ಕರ್ತನು. ಅಜ್ಞಾನದಿಂ ನುಡಿಯದಿ ರೆನಲು ನಾನು ಹಾಗೆಯೇ ನುಡಿದೆನು. ಆಗ ನಮ್ಮಿರ್ವರಿಗು ಮಹತ್ತಾದ ಕಲಹ ಮುಂಟಾದುದು. ನಾನು ಮುಂದು ಪುಟ್ಟಿದವನು ನಾನು ಮುಂದು ಪುಟ್ಟಿದವನು ಎಂದು ಈರ್ವರು ನಾನಾ ವಿಧವಾದ ಆಯುಧಗಳಿಂ ಯುದ್ಧವಂ ಮಾಡುತಿರೆ, ನಾರದನು ಬಂದು ಈರ್ವರ ಯುದ್ಧವಂ ಕಂಡು ಪೊರಮಟ್ಟನು. ಆ ಬಳಿಕ ಹರಿಯು ನಾರಾಯಣಾಸ್ತ್ರವಂ ಪ್ರಯೋಗಿಸಲಾಗಿ ನಾನದಂ ಛೇದಿಸಿ ಬ್ರಹ್ಮಾಸ್ತ್ರವಂ ಬಿಟ್ಟೆನು. ವಿಷ್ಣುವು ಆ ಅಸ್ತ್ರವಂ ಖಂಡಿಸಿ ಅನೇಕಾಸ್ತ್ರಂಗಳಂ ಬಿಟ್ಟು ನನ್ನೊಡನೆ ಯುದ್ಧವಂ ಮಾಡಿದನು. ಬಳಿಕೀರ್ವರು ಶಿವಾಸ್ತ್ರವಂ ಪ್ರಯೋಗಿಸಲಾಗಿ ಅವುಗಳ ಘೋಷದಿಂ ಸಮುದ್ರಂಗಳು ಶೋಷಿಸಿದವು. ಪರ್ವತಂಗಳು ಚೂರ್ಣಂಗಳಾದವು. ಭೂಮಿಯು ಶೇಷನ ಶಿರಸ್ಸಿನಲ್ಲಿ ನರ್ತನವಂ ಮಾಡುವದೋ ಏನೋ ಎಂಬಂತೆ ಗಡಗಡನೆ ನಡುಗಿತು. ಮತ್ತಂ ದೇವತೆಗಳು ಋಷಿಗಳು ಭೀತರಾಗಿ ಓಡಿಹೋದರು. ಆಗ ಕೆಲಂಬರು ಮೃತರಾದರು. ಕೆಲಂಬರು ಕೈಲಾಸವಂ ಸೇರಿದರು.

ಮಹಾ ಲಿಂಗೋದ್ಭವ ವರ್ಣನಂ.

ಹೀಗೆ ಸಮಸ್ತ ಲೋಕಂಗಳಿಗೂ ಕ್ಷೋಭೆಯುಂಟಾಗೆ, ಆಗ ನಾರದನು ಬಂದು ನಮ್ಮಿರ್ವರಂ ನೋಡಿ, ಎಲೈ ಹರಿಬ್ರಹ್ಮರುಗಳಿರಾ! ನಿಮಗೆ ಕರ್ತನಾದ ಶಿವನಂ ತಿಳಿಯದೆ ಮೂಢರಾಗಿ ಯುದ್ಧವಂ ಮಾಡುತಿದ್ದೀರಿ. ಈ ಯುದ್ಧವಂ ಬಿಡಿರಿ. ಜ್ಯೋತಿರ್ಲಿಂಗ ರೂಪನಾದ ಶಿವನು ಪ್ರಾದುರ್ಭವಿಸುವ ನೆಂದು ಪೇಳ್ದು ಬಂದ ಮಾರ್ಗವಿಡಿದು ಪೋದನು. ಬಳಿಕ ಮರಳಿಯು ನಮಗೀರ್ವರಿಗು ಸಹಸ್ರ ವರ್ಷ ಪರ್ಯಂತವು ಯುದ್ಧವಾಗೆ, ಆಗ ಜಗದ್ಗುರುವಾದ ಶಿವನು ಮಾಘಮಾಸದ ಕೃಷ್ಣ ಚತುರ್ದಶೀ ಮಧ್ಯರಾತ್ರಿಯಲ್ಲಿ ಜ್ಯೋತಿರ್ಲಿಂಗ ವಾಗಿ ಪ್ರಾದುರ್ಭವಿಸಿದನು. ಆ ಸಮಯದಲ್ಲಿ ಆ ದೇವತಾಸ್ತ್ರಂಗಳೆರಡು ಆ ಲಿಂಗದಲ್ಲಿ ಲೀನವಾದವು. ಎಲೈ ದಕ್ಷನೆ! ಈ ಪ್ರಕಾರವಾಗಿ ನಾವೀರ್ವರು ಆ

ಅದ್ಭುತವಂ ಕಂಡು ಮುಖವಂ ನೋಡುತ ನಿಂತಿರಲಾಗಿ, ಊರ್ಧ್ವಭಾಗದಲ್ಲಿ ಬಂದಾನೊಂದು ವಾಕ್ಯಮುಂಟಾದುದು. ಏನಂದರೆ, ಎಲೆ ಹರಿಬ್ರಹ್ಮರುಗಳಿರಾ ! ನೀವು ಬಲಹೀನರು, ಮಹಾ ಅಜ್ಞಾನಿಗಳು, ನಿಮಗೇನು ಬಲವಿದ್ದೀತು? ಮಹಾದೇವನ ಬಲವೇ ಬಲವು ಅದಕ್ಕೆ ಸಮಾನವಾದ ಬಲವಿಲ್ಲವು. ನಿಮ್ಮೀರ್ವರಲ್ಲಿ ಆವಾತನು ಜ್ಯೋತಿರ್ಲಿಂಗದ ಮೂಲವನ್ನು ಅಗ್ರವನ್ನು ಕಾಣುವನೋ ಅವನೆ ಬಲವಂತನೆನಲು, ಆಗ ನಾವೀರ್ವರು ಆ ವಾಕ್ಯವಂ ಕೇಳಿ ಕೋಪವಂ ಬಿಟ್ಟು ಮರಳಿಯು ಗರ್ವಯುಕ್ತರಾದೆವೆಂದು ಬ್ರಹ್ಮನು ದಕ್ಷಂಗೆ ಪೇಳಿದನೆಂಬದಾಗಿ ಸೂತಂ ನಿರೂಪಿಸಿದ ನೆಂಬಿಲ್ಲಿಗೆ, ದಕ್ಷಕಾಂಡದಲ್ಲಿ ಮುವ್ವತ್ನಾಲ್ಕನೆಯ ಅಧ್ಯಾಯವು ಸಂಪೂರ್ಣಂ.

ಮುವ್ವತ್ತೈದನೆಯ ಅಧ್ಯಾಯವು.

ಹರಿಬ್ರಹ್ಮರೂ ಮಹಾಲಿಂಗದ ಕೆಳಮೇಲ್ಭಾಗಗಳನ್ನು ನೋಡ ಬಯಸುವಿಕೆ.

ಎಲೈ ಋಷಿಗಳಿರಾ ! ಅನಂತರದಲ್ಲಿ ಬ್ರಹ್ಮ ವಿಷ್ಣುಗಳು ಆ ಆಕಾಶವಾಣಿಯ ವಾಕ್ಯವಂ ಕೇಳಿ, ಲವಲವಿಕೆಯುಳ್ಳವರಾಗಿ ಮುಂದುಗಡೆ ಪ್ರಕಾಶಿಸುತಿರ್ಪ ಜ್ಯೋತಿಯಂ ನೋಡಿ ಗರ್ವಿತರಾಗಿ ಅರಿಯೆವೆಂಬ ಬುದ್ಧಿಯನ್ನೆಣಿಸದೆ, ಆ ಜ್ಯೋತಿರ್ಲಿಂಗದ ಊರ್ಧ್ವಾಧೋ ಭಾಗವಂ ನೋಡಲಿಚ್ಛೈಸಿ ಅನ್ಯೋನ್ಯ ಪ್ರತಿಜ್ಞೆಯಂ ಮಾಡಿ, ಹಂಸ ವರಾಹ ರೂಪಂಗಳಂ ಧರಿಸಿ ಸಹಸ್ರ ಯೋಜನೋನ್ನತರಾಗಿ ಮಹಾ ಬಲಾನ್ವಿತರಾಗಿರುವಾಗ ಬ್ರಹ್ಮನಾದ ನಾನು ಊರ್ಧ್ವಭಾಗವನ್ನೋಡಲು ಪೋದೆನು. ಬಳಿಕ ಹರಿಯು ಅಧೋಭಾಗವಂ ನೋಡುವದಕ್ಕೆ ಗಮಿಸಿದನು. ಆಗ ಹರಿಯು ಬಹು ದೂರ ಪೋಗಿ ಭಗ್ನ ಮನೋರಥನಾಗಿ ಅತ್ಯಂತ ಅಲಸಿ ದುಃಖಿಸಿ ಪುನರಾಗಮನದಲ್ಲಿ ಅಶಕ್ತನಾಗಿ ಆ ದೇಹವಂ ಧರಿಸಲು ಬಿಡಲು ಅಸಮರ್ಥನಾಗಿ ರಕ್ಷಕನಾದ ಶಂಭುವಂ ನೆನದು, ಬಳಿಕ ಶಿವಾಜ್ಞೆಯಿಂ ಬಲವಂ ಪಡೆದು ಅತ್ತಣಿಂ ತಿರಿಗಿ ಶೀಘ್ರವಾಗಿ ಭೂಲೋಕಕ್ಕೆ ಬಂದು ಆ ಜ್ಯೋತಿರ್ಲಿಂಗದ ಅಧೋಭಾಗವಂ ಕಾಣದೆ ನಡಗುತಿರ್ಪ ಶರೀರವುಳ್ಳವನಾಗಿ ಆ ಜ್ಯೋತಿರ್ಲಿಂಗಕ್ಕೆ ನಮಸ್ಕರಿಸಿ ನಿಂತಿರ್ದನು. ನಾನು ಸಹಸ್ರ ವರ್ಷ ಪರ್ಯಂತವು ಊರ್ಧ್ವ ಭಾಗಕ್ಕೆ ಪೋಗಿ, ನೊಂದ ಪಕ್ಕಗಳುಳ್ಳವನಾಗಿ ದುಃಖವನ್ನೈದಿ ಮುಂದು ಪೋಗಲಶಕ್ತನಾಗಿ, ಆ ಜ್ಯೋತಿರ್ಲಿಂಗ ಮಸ್ತಕವಂ ಕಾಣದೆ ಇತ್ತಲತ್ತಲು ತಿರುಗುತ್ತ ಕ್ಷಣಮಾತ್ರ ಅಂತರಿಕ್ಷದಲ್ಲಿ ನಿಂತಿರಲಾಗಿ, ಆ ಸಮಯದಲ್ಲಿ ಆ ಜ್ಯೋತಿರ್ಲಿಂಗದ ವಾಮಭಾಗದಲ್ಲಿ ಕೆಲಂಬ ಸಿದ್ಧರು

ರುದ್ರಾಕ್ಷಾಭರಣ ಭೂಷಿತರಾಗಿ ವಿಭೂತಿ ಸರ್ವಾಂಗೋದ್ಧೂಳಿತರಾಗಿ ಪೊರಮಟ್ಟು, ಈ ಹಂಸವು ಅಜ್ಞಾನಾವೃತವಾಗಿ, ಜ್ಯೋತಿರ್ಲಿಂಗದ ಶಿರವಂ ಕಾಣಲು ಊರ್ಧ್ವಭಾಗಕ್ಕೆ ಪೋಗಲು ಶಕ್ತಿಹೀನವಾಗಿ ಇಲ್ಲಿಯೇ ಸುತ್ತುತಲಿರುವದು ಸಂಶಯವಿಲ್ಲ. ಹಾಗೆಯೆ ವಿಷ್ಣುವು ಆ ಜ್ಯೋತಿರ್ಲಿಂಗದ ಸ್ವರೂಪವಂ ತಿಳಿಯದೆ ಆ ಮೂಲಭಾಗವಂ ಕಾಣದೆ ಅತಿ ದುಃಖಾನ್ವಿತನಾಗಿ ಅತ್ತಣಿಂ ತಿರಿಗಿ ಆ ಲಿಂಗದ ಸಮೀಪಕ್ಕೆ ಬಂದು ನಮಸ್ಕಾರವಂ ಮಾಡಿ ಭಯಾನ್ವಿತನಾಗಿದ್ದಾನೆ. ಈ ಪಕ್ಷಿಗು ಶಿವನನುಗ್ರಹದಿಂ ಪ್ರಾಣವು ನಿಂತಿತು. ಇಲ್ಲದಿರ್ದೊಡೆ ಮರಣವೇ ಸರಿ, ಇದಕ್ಕೆ ಸಂಶಯವಿಲ್ಲವೆಂದು ಅನ್ಯೋನ್ಯವಾಗಿ ಮಾತಾಡುತ್ತ ನನ್ನ ಮುಂದೆ ಪೋದರು. ಆಗ ನಾನು ಅವರ ವಾಕ್ಯವಂ ಕೇಳಿ, ಶಿವನಿಂ ಜ್ಞಾನವಂ ಪಡೆದು ಅಜ್ಞಾನವಂ ಬಿಟ್ಟು ಶೀಘ್ರದಿಂ ದತ್ತಣಿಂ ತಿರಿಗಿ ಭೂಲೋಕಕ್ಕೆ ಬಂದು ನಮಸ್ಕಾರವಂ ಮಾಡಿ ಅನೇಕ ಸ್ತೋತ್ರಂಗಳಿಂ ಸ್ತುತಿಸಿ, ಆ ಜ್ಯೋತಿರ್ಲಿಂಗ ಸಮೀಪದಲ್ಲಿ ಬದ್ಧಾಂಜಲಿಯಾಗಿರ್ಪ ಆ ಹರಿಯಂ ಕಂಡೆನು. ಬಳಿಕ ನಾವೀರ್ವರು ವ್ಯರ್ಥವಾಗಿ ಈ ಕಾರ್ಯವಂ ಮಾಡಿದೆವೆಂದು ಚಿಂತಿಸಿ ಶಿವಾಜ್ಞೆಯಿಂ ಈ ಭ್ರಮೆಯಂ ಬಿಟ್ಟು ಸ್ವಾಮಿಯಂ ಪೂಜಿಸಲಿಚ್ಛೈಸಿ ಅದೇ ಶಿವನಂ ಅತ್ಯಂತ ಭಕ್ತಿಯಿಂ ಪರಿಪೂಜಿಸಿದೆವು.

ಹರಿ ಬ್ರಹ್ಮರಿಗೆ ಹರನ ಪ್ರಸನ್ನತೆ.

ಬಳಿಕ ಉಮಾಸಮೇತನಾದ ಶಂಭುವೇ ಆ ಜ್ಯೋತಿರ್ಲಿಂಗದ ಮಧ್ಯದಿಂದಲ್ಲಿ ಪ್ರಾಕೃತ ತನುವಾಗಿ ಶ್ರೀಮಂತನಾಗಿ ಚಂದ್ರಶೇಖರನಾಗಿ ನೀಲಕಂಠನಾಗಿ ವರಾಭಯಹಸ್ತನಾಗಿ ಪ್ರಾದುರ್ಭವಿಸೆ ಆಗ ನಾವೀರ್ವರು ಈಶಾನನಾದ ಲೋಕಶಂಕರನಾದ ಶಂಕರನಂ ಕಂಡು ಪರಮಭಕ್ತಿಯಿಂ ನಮಸ್ಕರಿಸಿ ಅನೇಕ ಸ್ತೋತ್ರಗಳಿಂ ಸ್ತುತಿಸಿ, ಎಲೈ ದೇವನೆ, ಅಜ್ಞಾನಿಗಳಾದ ನಮ್ಮ ಅಪರಾಧವಂ ಕ್ಷಮಿಸು ನೀನು ಸರ್ವ ಗುರುವು ಶಂಭುವು ಸರ್ವಲೋಕಹಿತಕರನು ಎಂದು ತ್ರಿಶೂಲಿಯಾದ ಮಹಾದೇವನಂ ಪ್ರಾರ್ಥಿಸಿದೆವು. ಆ ಸಮಯದಲ್ಲಿ ಸುಮಂಗಲನಾದ ಶಿವನು ಪ್ರಸನ್ನನಾಗಿ ನಮ್ಮೀರ್ವರಿಗೂ ಸ್ಥಾನಂಗಳಂ ಪೂರ್ವದಂತೆ ಕಲ್ಪಿಸಿ ಸ್ವೇಚ್ಛೆಯಿಂ ನಮ್ಮನ್ನು ಕಳುಹಿ, ಆ ಮಹತ್ತಾದ ಜೋತಿರ್ಲಿಂಗದಲ್ಲಿಯೇ ಅಂತರ್ಧಾನನಾದನು. ಅದುಕಾರಣದಿಂ ಈ ಪರ್ವತಕ್ಕೆ ಅನಲಗಿರಿಯೆಂದು ಪೆಸರುಂಟಾದುದು. ಆಗ ನಾವೀರ್ವರು ಜ್ಯೋತಿರ್ಲಿಂಗ ಸ್ವರೂಪವಾದ ಆ ಅನಲಗಿರಿಗೆ ನಮಸ್ಕರಿಸಿ, ಅಜ್ಞಾನದಿಂ ಬಿಡಲ್ಪಟ್ಟವರಾಗಿ ಆ ಸ್ವಾಮಿಯ ಕೃಪಾಬಲದಿಂ ನಮ್ಮ ಸ್ಥಾನಂಗಳನ್ನೈದಿ ಸುಖದಿಂದಿರ್ದೆವು. ಹಾಗೆ ಮಾಘಮಾಸದ ಕೃಷ್ಣಪಕ್ಷ ಚತುರ್ದಶಿಯಲ್ಲಿ ಜ್ಯೋತಿರ್ಲಿಂಗಾಕೃತಿಯಾದ ಅನಲಾಚಲವನ್ನೈದಿ ದಗ್ಧ

ಕಿಲ್ಬಿಷರಾಗಿ ಸ್ವಾಮಿ ಸ್ವರೂಪವಾದ ಆ ಅನಲಾಚಲವಂ ಪೂಜಿಸಿ, ಆ ಶೂಲಿಯ ಕೃಪೆಯಿಂದ ವೇದಾಗಮಗಳಿಂದುಂಟಾದ ಜ್ಞಾನವಂ ಪಡೆದು ಕೆಲಂಬರು ಮುಕ್ತರಾದರು. ಕೆಲಂಬರು ಈಗಲೂ ಆರು ಪಕ್ವಚಿತ್ತರೋ ಅವರು ಆ ಅನಲಾಚಲದಲ್ಲಿ ಮನವಂ ನಿಲ್ಲಿಸಿ ಮೋಕ್ಷವಂ ಪಡೆವುತಿರ್ಪರೆ, ಎಲೈ ದಕ್ಷನೆ! ನೀನು ಶಂಭುವಿನ ಕೃಪಾಬಲದಿಂ ದಹಿಸಲ್ಪಟ್ಟ ಸಹಸ್ರ ಪಾಪಂಗಳುಳ್ಳವನಾದೆ, ಶಿವಾಜ್ಞೆಯಿಂ ನಿನಗೆ ಜ್ಞಾನವುಂಟಾದುದದುಕಾರಣದಿಂ ದೇವೇಶಂಗೆ ಶರಣು ಹೊಕ್ಕು ನಿರಂಕುಶನಾಗಿ, ಸುಖವಾಗಿರೆಂದು ವಿಧಿಯು ದಕ್ಷಂಗೆ ಪೇಳ್ದು ಸಮಸ್ತ ದೇವತೆಗಳಿಂದಾವೃತನಾಗಿ ತನ್ನ ಪದವನ್ನೈದಿದನು.

ದಕ್ಷನಿಗೆ ಪರಶಿವನ ಪ್ರಸನ್ನತೆ.

ಎಲೈ ಮುನಿಗಳಿರಾ! ಬಳಿಕ ದಕ್ಷನು ಸರ್ವಪಾಪ ವಿನಾಶಿಯಾದ ಕಾಶೀ ಪುರಿಗೆ ಸಾರಿ ಅಲ್ಲಿ ತ್ರಿಪುರಾರಿಯಾದ ಶಿವಲಿಂಗವಂ ತನ್ನ ನಾಮದಿಂ ಆಗಮೋಕ್ತ ಪ್ರಕಾರದಿಂ ಪ್ರತಿಷ್ಠೆಯಂ ಮಾಡಿ, ಆತ್ಮನಿಷ್ಠನಾಗಿ ಭಕ್ತಿಯಿಂ ಸಹಸ್ರ ಸಂವತ್ಸರವು ಸ್ವಾಮಿಯಂ ಪೂಜಿಸಲಾಗಿ, ಮಹಾದೇವನು ಪ್ರಸನ್ನನಾದನು. ಅನಂತರದಲ್ಲಿ ದಕ್ಷನು ಆ ಸ್ವಾಮಿಗೆ ನಮಸ್ಕಾರವಂ ಮಾಡಿ ಪರಮ ಭಕ್ತಿಯಿಂ ಸ್ತುತಿಸಲಾಗಿ ಶಿವನು ಎಲೈ ದಕ್ಷನೆ! ನಿನ್ನ ಪೂಜಾಪ್ರಭಾವದಿಂ ಪ್ರಸನ್ನನಾದೆನು ನಿನಗೆ ಬೇಕಾದ ಇಷ್ಟಾರ್ಥವಂ ಬೇಡಿಕೋ ಎಂದು ನಿರೂಪಿಸೆ, ಆ ದಕ್ಷನು ಸ್ವಾಮಿಯ ವಾಕ್ಯವಂ ಕೇಳಿ, ದಯಾನಿಧಿಯಾದ ಎಲೈ ದೇವನೇ! ನನಗೆ ಕಾಲದಿಂ ವೈಷ್ಣವ ಪದದಲ್ಲಿಯು ಬ್ರಹ್ಮನ ಪದದಲ್ಲಿಯು ಅಗ್ನೀಂದ್ರಾದಿಗಳ ಸ್ಥಾನಂಗಳಲ್ಲಿಯೂ ವಾಂಛೆಯಿಲ್ಲ, ಉತ್ತಮವಾದ ಕೈಲಾಸಗಿರಿಯಲ್ಲಿ ನಿನ್ನ ಭವನದ್ವಾರದಲ್ಲಿ ಗಾಣಾಪತ್ಯ ಉಂಟಾಗಲೆಂದು ಪೇಳ್ದು, ಅಂಜಲಿ ಬಂಧನವಂ ಮಾಡಿ ಸ್ವಾಮಿಯ ಮುಂದೆ ನಿಂತಿರ್ದನು. ಆಗ ಮಹಾದೇವನು ಹಾಗೇ ಆಗಲೆಂದು ನಿರೂಪಿಸಿ, ಆ ದಕ್ಷೇಶ್ವರಲಿಂಗದಲ್ಲಿಯೇ ಅಂತರ್ಧಾನವಾದನು. ಬಳಿಕ ದಕ್ಷನು ಸ್ವಾಮಿಯಿಂ ವರವಂ ಪಡದು ಪರ್ವತೋತ್ತಮವಾದ ಕೈಲಾಸ ಪರ್ವತಕ್ಕೆ ಪೋಗಿ ಅಲ್ಲಿ ಶುದ್ಧಾತ್ಮನಾಗಿ ಗಾಣಾಪತ್ಯವಂ ಪಡದು ಪರಮ ಸಂತಸಯುಕ್ತನಾಗಿ ಆ ಭವನದ್ವಾರದಲ್ಲಿರ್ದನೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ದಕ್ಷಕಾಂಡದಲ್ಲಿ ಮುವ್ವತ್ತೈದನೆಯ ಅಧ್ಯಾಯವು ಸಂಪೂರ್ಣಮಾದುದು.

ಮುವ್ವತ್ತಾರನೆಯ ಅಧ್ಯಾಯವು.

ಅಷ್ಟೋತ್ತರ ಸಹಸ್ರಾಂಡಗಳ ವಿಮರ್ಶೆ.

ಎಲೈ ಋಷಿಗಳಿರಾ! ಆ ದಕ್ಷಯಾಗದಲ್ಲಿರ್ದ ದೇವತೆಗಳು ಅವರ ಕರ್ಮ ಶೇಷದಿಂದ ತಿರುಗುತ ಶೂರಪದ್ಮನಿಂ ಬಾಧಿಸಲ್ಪಟ್ಟರೆನಲಾಗಿ, ಆ ದ್ವಿಜರುಗಳು ದಕ್ಷಾಧ್ವರವಂ ಕೇಳಿ, ಎಲೈ ಸೂತನೆ! ಅಷ್ಟೋತ್ತರ ಸಹಸ್ರಾಂಡಗಳಿಗೆ ಅಧೀಶ ನಾದ ಶೂರಪದ್ಮನೆಂಬ ಮಹಾಸುರನು ಶುಕ್ರನಿಂ ದಂಡ ವಿಸ್ತಾರವಂ ಕೇಳ್ದ ನೆಂದು ನಿಮ್ಮಿಂದ ಪೇಳಲ್ಪಟ್ಟುದು ಸರಿಯಷ್ಟೆ, ಈಗದಂ ಮರಳಿಯು ವಿಸ್ತಾರ ದಿಂ ಪೇಳಬೇಕೆಂದು ಪ್ರಶ್ನೆಯಂ ಮಾಡುವರಾಗಲು, ತಾಪಸರಿಗಧೀಶನಾದ ಸೂತನು ಹೀಗೆ ಪೇಳುತಿರ್ಪ ಋಷಿಗಳ ವಾಕ್ಯವಂ ಕೇಳಿ, ವೇದಪಾರಂಗತರಾದ ಆ ಬ್ರಾಹ್ಮಣರಂ ನೋಡಿ, ಎಲೈ ಬ್ರಾಹ್ಮಣರುಗಳಿರಾ! ವಿಗತಕಲ್ಮಷರಾದ ನೀವೆಲ್ಲರು ಸಾವಧಾನಮನದಿಂ ಕೇಳುವರಾಗಿ, ಈ ಭೂತತ್ವದಲ್ಲಿ ಶತಕೋಟಿ ಯೋಜನೋನ್ನತ ಪ್ರಮಾಣವುಳ್ಳ ದಿವ್ಯ ಭವನದಲ್ಲಿ ಸಹಸ್ರ ಯೋಜನೋನ್ನತ ಮಾಗಿ ದ್ವಿ ಸಹಸ್ರಯೋಜನ ವಿಶಾಲವಾದ ನಾನಾರತ್ನ ಪರಿಶೋಭಿತವಾದ ದಿವ್ಯ ಸಿಂಹಾಸನದಲ್ಲಿ ದಶ ಸಹಸ್ರಯೋಜನೋನ್ನತ ಶರೀರವುಳ್ಳ ಖಡ್ಗ ಖೇಟ ಧನು ಶರಗಳಂ ಧರಿಸಿದ ಅನೇಕ ಮಹಿಮನಾದ ಸರ್ವತ್ರನಿರ್ಭರನಾದ ಕಾಲಾಗ್ನಿ ರುದ್ರನು ತನಗೆ ಸಮಾನರಾದ ಸಹಸ್ರ ರುದ್ರರಿಂ ಸಂಯುಕ್ತನಾಗಿ ದಶಕೋಟಿ ಶತ ಪರಿಜನರಿಂದಾವೃತನಗಿ ಮತ್ತೆ ಕೆಲಂಬರಿಂ ಸೇವಿತನಾಗಿ ಆದಿ ಕೂರ್ಮನಿಂ ಸ್ತುತಿಸಲ್ಪಟ್ಟವನಾಗಿ ಪರಮ ಕಾರಣನಾದ ಮಹಾದೇವನಂ ಧ್ಯಾನಿಸುತ ವಿರಾ ಜಿಸುತಿರುವನು. ಆವಾಗಲು ಭಯಂಕರಮಾದ ಆ ಕಾಲಾಗ್ನಿರುದ್ರನ ಜ್ವಾಲೆಯು ದಶಕೋಟಿ ಯೋಜನೋನ್ನತ ಪ್ರಮಾಣಮುಳ್ಳದ್ದು. ಆ ಜ್ವಾಲೆಯ ಊರ್ಧ್ವ ಭಾಗದಲ್ಲಿರ್ಪ ಧೂಮವು ಐದು ಕೋಟಿ ಯೋಜನ ಪ್ರಮಾಣಮುಳ್ಳದ್ದು. ಆ ಧೂಮದ ಉಪರಿಭಾಗದಲ್ಲಿ ಯಮಕಿಂಕರರಿಂ ಬಾಧಿಸಲ್ಪಟ್ಟ ಪಾಪಿಗಳಿಂದಾವೃತ ಮಾದ ಇಪ್ಪತ್ತೊಂಬತ್ತು ಕೋಟಿ ಯೋಜನ ಪ್ರಮಾಣಮುಳ್ಳ ದ್ವಾದಶ ಲಕ್ಷ ನರಕಂಗಳು ಶಿವನಿಂ ಕಲ್ಪಿಸಲ್ಪಟ್ಟವು. ಆ ನರಕಂಗಳ ಉಪರಿ ಭಾಗದಲ್ಲಿ ಕೂಶ್ಮಾಂಡನೆಂಬ ಗಣಾಧೀಶ್ವರನು ಅನೇಕ ಕೋಟಿ ಗಣಾಧ್ಯಕ್ಷರಿಂದಲುಂ ಅನೇಕ ಪರಿಜನರಿಂದಲುಂ ಸೇವ್ಯಮಾನನಾಗಿ, ತೊಂಬತ್ತೊಂಬತ್ತು ಲಕ್ಷ ಯೋಜನ ಪ್ರಮಾಣಮುಳ್ಳ ಭವನದಲ್ಲಿ ವಿರಾಜಿಸುತಲಿದಾನೆ. ಆ ಭವನದ ಮೇಲೆ ಲಕ್ಷಯೋಜನ ಪ್ರಮಾಣವಾದ ಅವಕಾಶ ವಿರುವದು. ಆ ಅವಕಾಶದ ಊರ್ಧ್ವಭಾಗದಲ್ಲಿ ಅತಳಾದಿ ಲೋಕಂಗಳಿರುವವು. ಅವುಗಳ ಊರ್ಧ್ವಭಾಗ ದಲ್ಲಿ ಪಾತಾಳವಿರ್ಪುದು. ಅದರ ಉಪರಿಭಾಗದಲ್ಲಿ ಲಕ್ಷಯೋಜನ ಪ್ರಮಾಣ

ವುಳ್ಳ ಭುವನವಿರುತಿರ್ಪುದು. ಆ ಭುವನದಲ್ಲಿ ಹಾಟಕೇಶ್ವರನು ನಾನಾ ರುದ್ರ ಗಣ ಯುಕ್ತನಾಗಿ ಪಾತಾಳಂಗಳಂ ರಕ್ಷಿಸುತಲಿದಾನೆ. ಆ ಭುವನದ ಮೇಲೆ ಕೋಟಿಯು ಇಪ್ಪತ್ತು ಲಕ್ಷಯೋಜನ ಪ್ರಮಾಣಮುಳ್ಳ ಆಕಾಶ ವಿರುವದು. ಅದರ ಉಪರಿಭಾಗದಲ್ಲಿ ಅಷ್ಟದಿಗ್ಗಜಂಗಳಿಂ ಮಹಾ ಸರ್ಪಂಗಳಿಂ ಯೆಂಬತ್ತು ಲಕ್ಷ ಯೋಜನ ಪ್ರಮಾಣವುಳ್ಳ ಮಹಾ ಶೇಷನಿಂ ಧರಿಸಲ್ಪಟ್ಟ ಭೂಮಿಯು ಸಮುದ್ರದ್ವೀಪ ಪರ್ವತಂಗಳಿಂ ಯುಕ್ತಮಾಗಿ ಶಂಕರಾಜ್ಞೆಯಿಂದಿರುವದು. ಬ್ರಹ್ಮಾಂಡದ ಅಧೋಭಿತ್ತಿ ಆರಭ್ಯ ಭೂಮ್ಯಂತವಾಗಿ ಐವತ್ತು ಕೋಟಿ ಯೋಜನ ಪ್ರಮಾಣವಿರುವದು. ಭೂಮಿಯ ಉಪರಿಭಾಗದಲ್ಲಿ ಕೆಲಂಬ ಗುಹ್ಯಕರು ದೇವಾಯುಗಳು ಕಿಂಪುರುಷರು ಗರುಡರು ವಿದ್ಯಾಧರರು ಯಕ್ಷರು ಆಕಾಶಗಂಗೆಯು ಕ್ರಮದಿಂದಿರುವವು. ಭೂಮಿಗೆ ಲಕ್ಷಯೋಜನ ಪ್ರಮಾಣ ದಲ್ಲಿ ತನ್ನ ತೇಜಸ್ಸಿನಿಂ ಸರ್ವ ಲೋಕಂಗಳಂ ಪ್ರಕಾಶಗೊಳಿಸುತಲಿರುವ ಸೂರ್ಯ ನಿರುವನು. ಅಲ್ಲಿ ಮುವ್ವತ್ತೆರಡು ಕೋಟಿ ದೇವತೆಗಳು ವಾಸವಂ ಮಾಡುತಲಿ ದಾರೆ. ಆ ಸೂರ್ಯಲೋಕದ ಮೇಲೆ ಲಕ್ಷ ಯೋಜನ ಪ್ರಮಾಣದಲ್ಲಿ ಚಂದ್ರನು ಪ್ರಕಾಶಿಸುವನು. ಆ ಚಂದ್ರಮಂಡಲದ ಮೇಲೆ ಲಕ್ಷಯೋಜನದಲ್ಲಿ ನಕ್ಷತ್ರಂಗ ಳಿರುವವು. ಬುಧ ಗುರು ಭೌಮ ಶನಿಗಳು ಆ ನಕ್ಷತ್ರಮಂಡಲದ ಉಪರಿಭಾಗ ದಲ್ಲಿ ಕ್ರಮದಿಂ ಪ್ರತ್ಯೇಕ ದ್ವೀಪವು ಲಕ್ಷಯೋಜನ ಪ್ರಮಾಣದಲ್ಲಿರುವರು. ಅದರ ಊರ್ಧ್ವಭಾಗದೊಳು ಲಕ್ಷ ಯೋಜನಾನಂತರದಲ್ಲಿ ಸಪ್ತರ್ಷಿಗಳು ವಾಸಿಸುತಲಿ ದಾರೆ. ಅದರ ಉಪರಿಭಾಗದಲ್ಲಿ ಧ್ರುವನಿರುವನು. ಭೂಲೋಕದ ಉಪರಿಭಾಗ ದಲ್ಲಿ ಗುಹ್ಯಲೋಕಾದಿಯಾಗಿ ಧ್ರುವಲೋಕಾಂತಮಾಗಿ ಭುವರ್ಲೋಕವೆನಿಸಿ ಕೊಳ್ಳುತ್ತದೆ. ಆ ಧ್ರುವಲೋಕದಲ್ಲಿಯೇ ಸಮಸ್ತ ದೇವತೆಗಳು ವಾಸಿಸುತಲಿ ದಾರೆ. ಅದಕ್ಕಿಂತಲು ಊರ್ಧ್ವಭಾಗದಲ್ಲಿ ಎಂಬತ್ತೈದು ಲಕ್ಷ ಯೋಜನಾ ನಂತರದಲ್ಲಿ ಸ್ವರ್ಗವಿರುವದು. ಅಲ್ಲಿ ಸುರಾಧಿಪತಿಯಾದ ದೇವೇಂದ್ರನು ಅಮರ ರೊಡನೆ ವಿರಾಜಿಸುತಲಿದಾನೆ. ಅದಕ್ಕೆ ಉಪರಿಭಾಗದಲ್ಲಿ ದ್ವಿಕೋಟಿ ಯೋಜನಾ ನಂತರದೊಳು ಮಹರ್ಲೋಕ ವಿರ್ಪುದು. ಅಲ್ಲಿ ಮಾರ್ಕಂಡೇಯ ಮುಂತಾದ ಮಹರ್ಷಿಗಳಿರುವರು. ಅದರ ಊರ್ಧ್ವಭಾಗದಲ್ಲಿ ಯೆಂಟು ಕೋಟಿ ಯೋಜನಾ ನಂತರದಲ್ಲಿ ಜನೋಲೋಕವಿರ್ಪುದು. ಅಲ್ಲಿ ಶಿವಾಜ್ಞೆಯಿಂ ಪಿತೃದೇವತೆಗಳು ವಾಸಿಸುತಲಿದಾರೆ. ಆ ಲೋಕದ ಮೇಲೆ ತಪೋಲೋಕಮಿರ್ಪುದು. ಅಲ್ಲಿ ಸನಕಾದಿ ಮಹಾ ಯೋಗಿಗಳಿರ್ಪರು. ಅದರಿಂ ಮೇಲೆ ಹದಿನಾರು ಕೋಟಿ ಯೋಜನಾನಂತರದಲ್ಲಿ ಸತ್ಯಲೋಕವಿರುವದು. ಅಲ್ಲಿ ಸೃಷ್ಟಿಕರ್ತನಾದ ಬ್ರಹ್ಮ ನಿರುವನು. ಅದರ ಉಪರಿ ಭಾಗದಲ್ಲಿ ಬ್ರಹ್ಮಲೋಕವಿದೆ. ಅಲ್ಲಿ ಚತುರ್ಮುಖ

ನಿದಾನೆ. ಅದರಿಂ ಊರ್ಧ್ವಭಾಗದಲ್ಲಿ ತ್ರಿಕೋಟಿ ಯೋಜನಾನಂತರದಲ್ಲಿ ವಿಷ್ಣು ಲೋಕವಿದೆ. ಅಲ್ಲಿ ಹರಿಯು ಶ್ರೀದೇವಿಯೊಡನೆ ಸುಖದಿಂದಿಹನು. ಅವರಿಂ ಉಪರಿಭಾಗದಲ್ಲಿ ನಾಲ್ಕು ಕೋಟಿ ಯೋಜನಾನಂತರದಲ್ಲಿ ಶಿವಲೋಕ ವಿರ್ಪುದು. ಅಲ್ಲಿ ಸರ್ವೇಶ್ವರನಾದ ಶಂಕರ ನಿರುವನು. ಅದರ ಉಪರಿ ಭಾಗದಲ್ಲಿ ಬ್ರಹ್ಮಾಂಡ ಭಿತ್ತಿಯು ಕೋಟಿ ಯೋಜನ ಪ್ರಮಾಣವು ಭೂಮ್ಯಾದಿಯಾಗಿ ಅಂಡಾಂತ ಪರ್ಯಂತವು ಪಂಚಾಶತ್ಕೋಟಿ ಪ್ರಮಾಣವೆಂದು ಸೂತಂ ಶೌನಕಾದಿಗಳಿಗೆ ಪೇಳಿದ ನೆಂಬಲ್ಲಿಗೆ, ದಕ್ಷಕಾಂಡದಲ್ಲಿ ಮುವ್ವತ್ತಾರನೆಯ ಅಧ್ಯಾಯವು ಸಂಪೂರ್ಣಮಾದುದು.

ಮುವ್ವತ್ತೇಳನೆಯ ಅಧ್ಯಾಯವು.

ಭೂಲೋಕದ ಸಾಗರದ್ವೀಪಾದಿಗಳ ವಿಮರ್ಶೆ.

ಎಲೈ ಋಷಿಗಳಿರಾ! ಭೂಲೋಕದ ದ್ವೀಪಗಳಂ ಸಾಗರಗಳಂ ಮತ್ತು ಕೆಲಂಬವಂ ಪೇಳುತಲಿದೇನೆ ಕೇಳಿರಿ. ಪೃಥಿವೀಮಧ್ಯದಲ್ಲಿ ಜಂಬೂದ್ವೀಪವು ಲಕ್ಷ ಯೋಜನಪ್ರಮಾಣವು. ಆ ಭೂಮಿಯ ಮಧ್ಯದಲ್ಲಿ ದೊಡ್ಡದಾದ ಮನೋಹರಮಾದ ಕನಕಾಚಲವಿರುವದು. ಆ ಮೇರು ಪರ್ವತವು ಹದಿನಾರು ಸಾವಿರ ಯೋಜನ ನಾಟಿಹುದು. ಅದರ ಉನ್ನತವು ನಾಲ್ಕು ಸಾವಿರ ಯೋಜನ ಪ್ರಮಾಣವು. ಆ ಮೇರುಗಿರಿಯು ಅಧೋಭಾಗದಲ್ಲಿ ಬಳಸಿಹ ವಿಶಾಲವು ಷೋಡಶ ಸಹಸ್ರ ಯೋಜನ ಪ್ರಮಾಣವು ಅದರ ಉಪರಿ ಭಾಗದಲ್ಲಿರ್ಪ ವಿಸ್ತಾರವು ಮುವ್ವತ್ತೆರಡು ಸಾವಿರ ಯೋಜನಗಳ ಅಳತೆಯುಳ್ಳದ್ದು. ಆ ಗಿರಿಗೆ ಮೂರು ಕಂಕಣಗಳಿರುವವು. ಅದರ ಮೇಲಿನ ಕಂಕಣದಲ್ಲಿ ಅನೇಕ ಶಿಖರಂಗಳಿಹವು. ಆ ಶಿಖರಂಗಳ ಮಧ್ಯದಲ್ಲಿ ಮನೋಹರಮಾದ ಒಂದು ಶಿಖರವಿದೆ. ಅಲ್ಲಿ ಗೋಪುರ ಅಟ್ಟಾಲ ವಲಭಿಗಳಿಂ ಶೋಭಿತಮಾದ ಉತ್ತಮವಾದ "ಮನೋವತಿಯೆಂದು" ಪ್ರಸಿದ್ಧಮಾದ ಕಾಂಚನ ಧ್ವಜಗಳುಳ್ಳ ಬ್ರಹ್ಮನ ಪುರವು ಪ್ರಕಾಶಿಸುತ್ತಲಿದೆ. ಹೀಗೆ ಪೂರ್ವದಿಕ್ಕಿನಲ್ಲಿರ್ಪ ಶಿಖರದಲ್ಲಿ ರಮ್ಯವಾದ ವೈಕುಂಠವೆಂದು ಪೆಸರುಳ್ಳ ವಿಚಿತ್ರವಾದ ವಿಷ್ಣುವಿನ ಪುರವು ಶೋಭಿಸುತಲಿರುವದು. ಹಾಗೆ ಉತ್ತರದಿಕ್ಕಿನ ಶಿಖರದಲ್ಲಿ ಅಜೋವತಿಯೆಂದು ಪ್ರಸಿದ್ಧವಾದ ಮತ್ತೆ ಗೋಪುರಾಟ್ಟಾಲವಲಭಿಪ್ರಾಕಾರಂಗಳಿಂದಲಂಕೃತಮಾದ ಪರಮಾತ್ಮನಾದ ಶಂಕರನ ಪುರವು ವಿರಾಜಿಸುತಲಿದೆ. ಆ ಪುರತ್ರಯಂಗಳಿಂ ಬಳಸಿ ಬಂದಿರ್ಪ ಅಷ್ಟ ಶಿಖರಂಗಳಲ್ಲಿ ವಿಚಿತ್ರಂಗಳಾದ ದಿಕ್ಪತಿಗಳ ಪುರಂಗಳಿರುವವು. ಮೆತ್ತಮಾ ಪರ್ವತದ ಪೂರ್ವದಿಗ್ಭಾಗದಲ್ಲಿ

ಮಂದರಗಿರಿಯು ಸಹಸ್ರ ಯೋಜನೋನ್ನತವಾಗಿ ಪ್ರಕಾಶಿಸುವದು. ಅದರ ಪೂರ್ವಭಾಗದಲ್ಲಿ ಮಹತ್ತಾದ ಅರುಣವೆಂಬ ಪೆಸರುಳ್ಳ ಒಂದು ಸರೋವರವಿರುವದು. ಆ ಕೊಳದ ತೀರದಲ್ಲಿ ಚೈತ್ರರಥವೆಂದು ಪೆಸರುಳ್ಳ ಅಸದೃಶವಾದ ಒಂದು ಉದ್ಯಾನವಿರುವದು. ಮತ್ತಮಾ ಮಂದರಾದ್ರಿಯ ಪೂರ್ವ ಭಾಗದಲ್ಲಿ ಮಾಲ್ಯವಂತವೆಂಬ ಪರ್ವತವು ಸಮುದ್ರೋದಕವಂ ವ್ಯಾಪಿಸಿದೆ. ಆ ಮೇರುವಿನ ದಕ್ಷಿಣ ದಿಕ್ಕಿನಲ್ಲಿ ಗಂಧಮಾದನವೆಂಬ ಪೆಸರುಳ್ಳ ಹಿರಣ್ಯವರ್ಣವಾದ ಮಹಾ ಪರ್ವತವಿರ್ಪುದು. ಅದರ ಮೇಲೆ ದ್ವಿಸಹಸ್ರ ಯೋಜನೋನ್ನತವಾದ ಜಂಬೂವೃಕ್ಷ ವಿಹುದು. ಅದುಕಾರಣದಿಂದೀಭಾಗವು ಜಂಬೂದ್ವೀಪವೆಂದು ಪೇಳಲ್ಪಟ್ಟುದು. ಮತ್ತಮಾ ಮೇರುವಿನ ದಕ್ಷಿಣ ದಿಗ್ಭಾಗದಲ್ಲಿ ರಕ್ತವರ್ಣವಾದ ನಿಷಧವೆಂಬ ಮಹಾಪರ್ವತ ವಿರುವದು. ಅದರ ದಕ್ಷಿಣಭಾಗದಲ್ಲಿ ಹೇಮಕೂಟವಿರ್ಪುದು. ಆ ಹೇಮಕೂಟದ ದಕ್ಷಿಣದ ಕಡೆಯಲ್ಲಿ ಹಿಮಾಚಲ ವಿರುವದು. ಈ ನಿಷಧ-ಹೇಮಕೂಟ-ಹಿಮಾಚಲಗಳೆಂಬ ಮೂರು ಪರ್ವತಂಗಳು ಸಮುದ್ರವಂ ವ್ಯಾಪಿಸಿರುವವು. ಮತ್ತಮಾ ಮೇರುವಿನ ಪಶ್ಚಿಮ ಭಾಗದಲ್ಲಿ ವಿಪುಲವೆಂಬ ಪರ್ವತವಿರ್ಪುದು. ಆ ಪರ್ವತದ ಮೇಲೆ ಸಹಸ್ರ ಯೋಜನೋನ್ನತವಾದ ಅಶ್ವತ್ಥವೃಕ್ಷವಿರುವದು. ಮತ್ತಮಾ ಮೇರುವಿನಲ್ಲಿ ಕೃಷ್ಣವರ್ಣವಾದ ಉದಕವುಳ್ಳ ಸರೋವರವಿರುವದು. ಅಲ್ಲಿ ಮಹಾದ್ವೀಪವೆಂಬ ಪೆಸರುಳ್ಳೊಂದುದ್ಯಾನವನ ವೊಪ್ಪುತಿದ್ದೀತು. ಆ ವಿಪುಲವೆಂಬ ಪರ್ವತಕ್ಕೆ ಪಶ್ಚಿಮ ದಿಕ್ಕಿನಲ್ಲಿ ತಪ್ತಕಾಂಚನವರ್ಣವಾದ ಗಂಧಮಾದನ ಪರ್ವತವು ದಕ್ಷಿಣ ಸಮುದ್ರವಂ ವ್ಯಾಪಿಸಿಕೊಂಡಿರುವದು. ಹಾಗೆಯೇ ಮೇರುವಿನ ಉತ್ತರ ಭಾಗದಲ್ಲಿ ವಿಕಸಿತವಾದ ದಾಳಿಂಬದ ಹುವ್ವಿನ ಕಾಂತಿಯುಳ್ಳ "ಶುಭಾಶುಭ" ವೆಂಬ ಪೆಸರುಳ್ಳ ಮಹಾಗಿರಿ ಇರುವದು. ಆ ಗಿರಿಯ ಮೇಲೆ ಸಹಸ್ರ ಯೋಜನೋನ್ನತವುಳ್ಳ ವಟವೃಕ್ಷ ವಿರುವದು. ಮತ್ತಮಾ ಮೇರುವಿನ ಉತ್ತರದಲ್ಲಿ ದಿವ್ಯವಾದ ಒಂದು ಕೊಳವಿರುವದು. ಅಲ್ಲಿ ಕೃತ್ಯವೆಂಬ ಪೆಸರುಳ್ಳ ಉದ್ಯಾನವಿರ್ಪುದು. ಆ ಶುಭಾಶುಭ ಗಿರಿಯ ಉತ್ತರ ದಿಕ್ಕಿನಲ್ಲಿ ನೀಲಪರ್ವತವಿದೆ. ಅದರ ಉತ್ತರದ ಕಡೆಯಲ್ಲಿ ಶೃಂಗವೆಂಬ ಪರ್ವತ ವಿರುವದು. ನೀಲಸಿತ ಶೃಂಗಂಗಳೆಂಬ ಮೂರು ಪರ್ವತಂಗಳು ಪಡವಲು ಸಮುದ್ರಂಗಳಿಂ ವ್ಯಾಪಿಸಿಕೊಂಡಿರ್ಪವು. ಈ ಪ್ರಕಾರವಾಗಿ ಮೇರುಗಿರಿಯು ಮಹಾ ಪರ್ವತಂಗಳಿಂದಾವೃತವಾಗಿಹುದು. ಅದರ ಮಧ್ಯದಲ್ಲಿ ಅತಿ ಸೂಕ್ಷ್ಮವಾದ ಉತ್ತರ ದಕ್ಷಿಣಾಂತವಾದ ರಂಧ್ರವಿದುತಿರ್ಪುದು. ಆ ಮೇರುವಿನ ಪೂರ್ವಭಾಗದಲ್ಲಿರ್ಪ ಮಂದರಗಿರಿಯು ಪಶ್ಚಿಮ ಭಾಗದಲ್ಲಿರುವ ವಿಪುಲ ಪರ್ವತವು ಉತ್ತರ ಭಾಗದಲ್ಲಿರ್ಪ ಶುಭಾಶುಭ ಪರ್ವತವು

ಈ ನಾಲ್ಕು ಪರ್ವತಂಗಳು ಪ್ರತ್ಯೇಕ ಪ್ರತ್ಯೇಕವಾಗಿ ಐವತ್ತು ಸಾವಿರ ಯೋಜನ ಪ್ರಮಾಣ ಉನ್ನತವುಳ್ಳವುಗಳು. ಅಮರಾದ್ರಿಯು ಪೂರ್ವಭಾಗದಲ್ಲಿರ್ಪ ಮಾಲ್ಯವಂತ ಗಿರಿಯು ದಶ ಸಹಸ್ರ ಯೋಜನ ಸ್ಥೂಲವಾಗಿರ್ಪುದು. ಆ ಗಂಧ ಮಾದನ ಪರ್ವತಕ್ಕೆ ದಕ್ಷಿಣ ಭಾಗದಲ್ಲಿರ್ಪ ನಿಷಧ ಹೇಮಕೂಟ ಹಿಮಾಚಲ ವೆಂಬ ಮೂರು ಪರ್ವತಂಗಳು ಯೆರಡು ಸಹಸ್ರ ಯೋಜನ ದೂರದಲ್ಲಿರುವವು.

ಮತ್ತಂ ಶುಭಾಶುಭ ಗಿರಿಯು ಉತ್ತರಭಾಗದಲ್ಲಿರ್ಪ ನೀಲಶ್ವೇತ ಶೃಂಗಂ ಗಳೆಂಬ ಮೂರು ಪರ್ವತಂಗಳು ಪ್ರತ್ಯೇಕ ದ್ವಿ ಸಹಸ್ರಯೋಜನ ಪ್ರಮಾಣ ದಲ್ಲಿರುವವು. ಶೃಂಗಗಿರಿ ಸಮುದ್ರಂಗಳ ಮಧ್ಯದಲ್ಲಿರ್ಪ ಭೂಮಿಯು ಕುರು ವರ್ಷವೆಂಬ ಪೆಸರುಳ್ಳದ್ದು. ಶೃಂಗಾಚಲ ಶ್ವೇತಗಿರಿ ಮಧ್ಯದಲ್ಲಿರುವ ಭೂಮಿಯು ಹೈರಣ್ಯವೆಂಬ ನಾಮಧೇಯಮುಳ್ಳದ್ದು. ಶ್ವೇತ ನೀಲಗಿರಿಗಳ ಮಧ್ಯಪ್ರದೇಶ ದಲ್ಲಿರುವ ಭೂಮಿಯು ರಮ್ಯವರ್ಷವೆಂದು ಪೆಸರುಳ್ಳದ್ದು. ಮಾಲ್ಯವಂತವೆಂದು ಪೆಸರ್ಗೊಂಡ ಗಿರಿಯು ಸಮುದ್ರಮಧ್ಯದಲ್ಲಿರುವ ಭೂಮಿಯು ಭದ್ರಾಶ್ವವರ್ಷ ವೆಂಬ ಪೆಸರುಳ್ಳದ್ದು. ಹೇಮಕೂಟ ನಿಷಧವೆಂಬ ಪರ್ವತಂಗಳ ಮಧ್ಯ ದಲ್ಲಿರುವ ಭೂಮಿಯು ಹರಿವರ್ಷವೆಂಬ ನಾಮವುಳ್ಳದ್ದು. ಆ ಮೇರುವಿನಂ ಬಳಸಿರ್ಪ ಭೂಮಿಯು ಇಳಾವೃತ ವರ್ಷವೆಂಬ ನಾಮಧೇಯವುಳ್ಳದ್ದು. ಮತ್ತವಾ ಕುರುವರ್ಷದಲ್ಲಿ ವಾಸವಾಗಿರ್ಪ ಜನರುಗಳು ನೀಲವರ್ಣವಾಗಿ ದುಃಖರಹಿತರಾಗಿ ಕಲ್ಪವೃಕ್ಷದಿಂ ಪುಟ್ಟಿದ ಫಲ ಆಹಾರವುಳ್ಳವರಾಗಿ ಸಹಜರನ್ನೆ ವಿವಾಹನಂ ಮಾಡಿಕೊಂಡು ಕುಟುಂಬಿಗಳಾಗಿ ಪದಿಮೂರು ಸಾವಿರ ವರ್ಷಂಗಳು ಆಯುಷ್ಯಮುಳ್ಳವರಾಗಿರುವರು. ಹಿರಣ್ಯವರ್ಷದಲ್ಲಿರ್ಪ ಜನರುಗಳು ಅತ್ತಿ ಹಣ್ಣುಗಳಂ ಆಹಾರಗಳಂ ಮಾಡುತ್ತ ಶೋಭನವಾದ ಕಾಂತಿಯುಳ್ಳವರಾಗಿ ಸೈದಿಲೆಯ ವರ್ಣವುಳ್ಳವರಾಗಿರುವರು. ಇದಲ್ಲದೆ ರಮ್ಯವರ್ಷದಲ್ಲಿರುವ ಜನಂ ಗಳು ಚಂದ್ರಕಾಂತ ಶಿಲೆಗಳಿಗೆ ಸಮಾನಂಗಳಾದ ವರ್ಣಂಗಳುಳ್ಳವರಾಗಿ ಏಕಾ ದಶ ಸಹಸ್ರ ವರ್ಷಂಗಳು ಆಯುಷ್ಯಮುಳ್ಳವರಾಗಿರ್ಪರು. ಮತ್ತಂ ಭದ್ರಾಶ್ವ ವರ್ಷದಲ್ಲಿರುವ ಜನರು ತ್ರಯೋದಶ ಸಹಸ್ರವರ್ಷ ಆಯುಷ್ಯಮುಳ್ಳವರಾಗಿ ರಕ್ತ ವರ್ಣರಾಗಿ ಕುಟುಂಬಂಗಳೊಡನೆ ಇರುವರು. ಈ ಭಾರತ ವರ್ಷದಲ್ಲಿರ್ಪ ಜನರು ನಾನಾವಿಧ ಕರ್ಮಂಗಳುಳ್ಳವರಾಗಿ ವಿಧವಿಧವಾದ ಆಹಾರಂಗಳಂ ಸ್ವೀಕರಿಸುತ ಕೃತ ತ್ರೇತ ದ್ವಾಪರ ಕಲಿಗಳೆಂಬ ನಾಲ್ಕು ಯುಗಂಗಳಿಗೆ ಅನುಕೂಲವಾದ ಜ್ಞಾನ ಬಲ ತೇಜಸ್ಸುಗಳುಳ್ಳವರಾಗಿ ಶತವರ್ಷ ಜೀವಿಗಳಾಗಿರುತಿಹರು. ಇದಲ್ಲದೆ ಕಿಂಪುರುಷ ವರ್ಷದಲ್ಲಿರುವ ಜನರುಗಳು ಸ್ವಾದುಫಲಾಹಾರಿಗಳಾಗಿ ಸುವರ್ಣ ಮಯ ಶರೀರಿಗಳಾಗಿ ಹತ್ತು ಸಾವಿರ ವರ್ಷಂಗಳು ಆಯುಸ್ಸುಳ್ಳವರಾಗಿರು

ತಿರ್ಪರು. ಹರಿವರ್ಷ ಜನರು ಫಲಾಹಾರಿಗಳಾಗಿ ಚಂದ್ರಕಾಂತ ಶಿಲೆಗೆ ಸಮಾನವಾದ ವರ್ಣವುಳ್ಳವರಾಗಿ ಹತ್ತುಸಾವಿರವರ್ಷ ಆಯುಷ್ಯಮುಳ್ಳವರಾಗಿಹರು. ಕೇತುಮಾಲ್ಯ ವರ್ಷದಲ್ಲಿರ್ಪ ಜನರು ನೈದಿಲೆ ಹುವ್ವಿನ ವರ್ಣವುಳ್ಳವರಾಗಿ ದಶ ಸಹಸ್ರವರ್ಷ ಆಯುಷ್ಯದಿಂ ಕೇತಕೀಫಲಾಹಾರಮಂಮಾಡುತ್ತಲಿರುವರು. ಇಲಾವೃತವರ್ಷದಲ್ಲಿರುವ ಜನರು ಶುದ್ಧಸ್ಫಟಿಕ ವರ್ಣವುಳ್ಳವರಾಗಿ ಇಕ್ಷುರಸಪಾನವಂ ಮಾಡುತ ದ್ವಾದಶ ಸಹಸ್ರವರ್ಷ ಆಯುಷ್ಯಮುಳ್ಳವರಾಗಿ, ಶೋಕಿಸದೆ ಜೀವಿಸುತಿಹರು. ಮತ್ತಂ ಹಿಮಾಚಲ ಹೇಮಕೂಟ ಗಿರಿಗಳ ಮಧ್ಯದಲ್ಲಿರುವ ಕೈಲಾಸ ಪರ್ವತವು ನಾನಾರತ್ನ ವಿಚಿತ್ರವಾದ ರಜತಮಯ ಶಿಖರಂಗಳಿಂದೊಪ್ಪುತಿಹದು. ಕುರು ಹಿರಣ್ಯ ರಮ್ಯ ಭದ್ರಾಶ್ವ ಕಿಂಪುರುಷ ಹರಿ ಕೇತುಮಾಲ ಇಲಾವೃತವೆಂಬ ಈ ಎಂಟು ವರ್ಷಂಗಳಲ್ಲಿರ್ಪ ಜನರಿಗೆ ರುಜಾರೋಗಂಗಳಿಲ್ಲವು. ಭಾರತವರ್ಷದಲ್ಲಿರುವ ಜನರು ರಾಜಯಕ್ಷ್ಮರೋಗ ಯುಕ್ತರಾಗಿ ಶುಭಾಶುಭ ಕರ್ಮಂಗಳಂ ಮಾಡುತ್ತ ಇತರ ವರ್ಷಂಗಳಿಗು ನರಕಂಗಳಿಗು ಪೋಗುವರು. ಅದುಕಾರಣದಿಂದೀ ಭರತವರ್ಷವು ಕರ್ಮಭೂಮಿಯೆನಿಸಿಕ್ಕೊಳ್ಳುವದು, ಉಳಿದ ಎಂಟು ವರ್ಷಂಗಳು ಫಲಭೂಮಿಯೆನಿಸಿಕೊಳ್ಳುವವು, ಮತ್ತಂ ಹಿಮಾಚಲ ಹೇಮಕೂಟ ಗಿರಿಗಳ ಮಧ್ಯದಲ್ಲಿರುವ ಕೈಲಾಸಪರ್ವತವು ನಾನಾರತ್ನ ವಿಚಿತ್ರವಾದ ರಜತಮಯ ಶಿಖರಂಗಳಿಂದೊಪ್ಪುತಿಹದು. ಅಲ್ಲಿ ಪರಮಾನಂದ ನಿರ್ಭರನಾದ ಋಷಿಗಳಿಂ ಸ್ತುತಿಸಲ್ಪಟ್ಟ ಮಹಾದೇವನೂ ಗೌರೀದೇವಿಯು ಸಹ ಒಪ್ಪುತಲಿರುವರು. ಮತ್ತಮಾ ಕೈಲಾಸಗಿರಿಯು ವಿಷ್ಣ್ವಾದಿ ಸಮಸ್ತ ಭೂತಂಗಳಂ ಸಂಹರಿಸುವ ಕಾಲದಲ್ಲಿ ಶಂಕರಾಜ್ಞೆಯಿಂ ಶೀಘ್ರವಾಗಿ ಬ್ರಹ್ಮಾಂಡವಂ ಭೇದಿಸಿ ಮೇಲಿರುತಿದ್ದೀತೆಂದು ಶೌನಕಾದಿಗಳಿಗೆ ಸೂತಂ ನಿರೂಪಿಸಿದನೆಂಬಲ್ಲಿಗೆ,

ದಕ್ಷಕಾಂಡದಲ್ಲಿ ಮುವ್ವತ್ತೇಳನೆಯ ಅಧ್ಯಾಯವು
ಸಂಪೂರ್ಣಮಾದುದು.

ಮುವ್ವತ್ತೆಂಟನೆಯ ಅಧ್ಯಾಯವು.

ಸ್ವಾಯಂಭುವ ಮನುವಂಶಾಭಿ ವರ್ಣನಂ.

ಎಲೈ ಋಷಿಗಳಿರಾ! ಮತ್ತಂ ಬ್ರಹ್ಮದೇವನಿಗೆ ಪೌತ್ರನಾದ ಸ್ವಾಯಂಭುವ ಮನುವು ಸರ್ವಲಕ್ಷಣ ಯುಕ್ತವಾದ ಪ್ರಿಯವ್ರತನೆಂಬ ಕುಮಾರನಂ ಪಡೆದನು. ಆ ಪ್ರಿಯವ್ರತನು ಸಪ್ತದ್ವೀಪ ಪರಿವೇಷ್ಟಿತಮಾದ ಭೂಮಿಯು ನ್ನಾಳಿದನು. ಆತಂಗೆ ಸಪ್ತಲೋಕಗಳಲ್ಲಿ ಪ್ರಸಿದ್ಧವಾದ ಏಳು ಮಂದಿ ಮಕ್ಕ

ಳುಂಟಾದರು. ಅವರ ಮಧ್ಯದಲ್ಲಿ ಆಗ್ನೀಧ್ರನೆಂಬ ಪುತ್ರಂಗೆ ಜಂಬೂದ್ವೀಪವ ನ್ನಿತ್ತನು. ಮುಂದೆ ಉಳಿದ ಆರು ದ್ವೀಪಂಗಳನ್ನು ಆರುಮಂದಿ ಕುಮಾರರಿಗೆ ಕೊಟ್ಟನು. ಆ ಆಗ್ನೀಧ್ರನೆಂಬಾತಂಗೆ ಎಲ್ಲ ಕಡೆಯಲ್ಲಿಯು ಪ್ರಸಿದ್ಧರಾದ ನವ ಪುತ್ರರುಂಟಾದರು. ಆಗಾತನು ತನ್ನ ಪುತ್ರರಿಗೆ ಈ ದ್ವೀಪವಂ ನವ ಭಾಗಂಗಳ ನೆಸಗಿ ಕೊಟ್ಟನು. ಅದುಕಾರಣದಿಂ ಆಖಂಡಂಗಳಿಗೆ ಅವರವರ ಪೆಸರಿನಿಂ ನಾಮಗಳುಂಟಾದವು. ಅದೆಂತೆಂದರೆ,— ಹಿರಣ್ಯ, ಕುರು, ರಮ್ಯ, ಭದ್ರಾಶ್ವ, ಕಿಂಪುರುಷರು, ಹರಿ, ಕೇತು, ಮಾಲ, ಇಳ ಎಂಬ ಅವರ ನಾಮಂಗಳೇ ನವ ಖಂಡಂಗಳಿಗೆ ಪೆಸರಾದವು. ಹಾಗೆ ಈ ಖಂಡವು ಭರತನಾದ ಕಾರಣದಿಂ ಭಾರತ ವೆಂದು ಪೆಸರುಳ್ಳದ್ದು. ಆ ಭರತಂಗೆ ಯೆಂಟುಮಂದಿ ಪುತ್ರರು ಓರ್ವಳಾದ ಕನ್ನಿಕೆಯು ಜನಿಸಿದರು. ಆಗ ಆ ಭರತನು ಈ ಭಾರತ ಖಂಡವಂ ನವಭಾಗ ವನ್ನೆಸಗಿ ಆ ಯೆಂಟುಮಂದಿ ಪುತ್ರರಿಗು ಕನ್ನಿಕೆಗು ಕೊಟ್ಟನು. ಆ ಅಷ್ಟ ಪುತ್ರರಿಗೆ ಕೊಟ್ಟ ಭೂಮಿಯು ಮ್ಲೇಚ್ಛದೇಶವಾಗಿ ಪೋದುದು. ಆ ಕನ್ನಿಕೆ ಗಿತ್ತ ಭೂಮಿಯು ಕುಮಾರ ಖಂಡವೆಂದು ಪೆಸರುಳ್ಳದ್ದಾಗಿ ಸಹಸ್ರ ಯೋಜನ ವಿಸ್ತಾರವುಳ್ಳದ್ದಾಗಿ, ಪುಣ್ಯಭೂಮಿಯಾಗಿರುವದು.

ಅಲ್ಲಿ ಕರ್ಮಶೀಲರು ವಾಸವಂ ಮಾಡುತಲಿದಾರೆ. ಪುಣ್ಯಕರವಾದ ಭಾಗೀ ರಥೀ ಗೌತಮಿ ಯಮುನೆ ಸರಸ್ವತಿ ಕಾಶಿ ಕಾವೇರಿ ನರ್ಮದೆ ಪಂಪೆ ತುಂಗಭದ್ರೆ ಕುಶೆ ಕ್ಷೀರನದಿ ಪಾಂಚಾಲಿ ಗೌತಮಿ ಶೂಲಸಖಿ ಪವಿನಾಶಿನಿ ಧೂತಪಾಪಶಂಖ ವಾಹಿನಿ ಭಾರದ್ವಾಜಶಿಖೆ ಶಾರ್ವರಿ ಚಂದ್ರಭಾಗೆ ಸರಯು ವೇಣಿ ಪಿಂಗಳೆ ಸುವರ್ಣ ಮುಖಿ ತಾಂಮ್ರಪರ್ಣಿ ಕುಂಡಲಪಿನಾಕಿನಿ ವೇಗವತಿ ಸ್ಕಂದವತಿ ಮುಂತಾದ ಪುಣ್ಯ ನದಿಗಳು ಪ್ರವಹಿಸುತ್ತಿರುವವು. ಅಲ್ಲಿ ಪ್ರಸಿದ್ಧಂಗಳಾದ ಮಹೇಂದ್ರ ಮಲಯ ಮಾಲ್ಯವಂತ ಪಾರಿಯಾತ್ರಕ ಶುಕಮಂತಕ ವಿಂಧ್ಯ ಸಹ್ಯಂಗಳೆಂಬ ಪೆಸರುಗಳುಳ್ಳ ಸಪ್ತ ಮಹಾ ಪರ್ವತಂಗಳಿರುತ್ತಿರುವವು. ಅಲ್ಲಿ ಕಾಂಚಿ ಮುಂತಾದ ಮಹಾ ಕ್ಷೇತ್ರಂಗಳು ಸಾವಿರದೆಂಟು ಶಿವಸ್ಥಾನಂಗಳು ವೈದಿಕ ಬ್ರಾಹ್ಮಣರುಗಳ ಅನೇಕ ಅಗ್ರಹಾರಂಗಳು ಇರುವವು. ಅಲ್ಲಿರುವ ಜನರುಗಳು ವೈದಿಕ ಮಾರ್ಗಂಗಳಿಂದಲೆ ತಮ್ಮ ಆಚಾರಂಗಳಂ ಆಚರಿಸುತಲಿರುವರು. ಮತ್ತಮಿಾ ಜಂಬೂದ್ವೀಪವು ಲಕ್ಷಯೋಜನ ಪ್ರಮಾಣಮುಳ್ಳದ್ದಾಗಿರುವದು. ಲಕ್ಷಯೋಜನ ಪ್ರಮಾಣವಾಗಿರುವ ಲವಣ ಸಮುದ್ರವು ಈ ಜಂಬೂದ್ವೀಪವಂ ಬಳಸಿಕೊಂಡಿರ್ಪುದು. ಆ ಲವಣ ಸಮುದ್ರವ ಬಳಸಿಕೊಂಡು ನಾನಾ ವಿಧ ಆಶ್ಚರ್ಯಯುಕ್ತವಾದ ಯೆರಡು ಲಕ್ಷ ಯೋಜನ ಪ್ರಮಾಣವುಳ್ಳದ್ದಾಗಿ ಶಾಕ ದ್ವೀಪವಿದೆ. ಪ್ರಿಯುತನ ಕುಮಾರನಾದ ಗೋಮೇಧಿಕನು ಆ ಶಾಕದ್ವೀಪವ

ನ್ನಾಳುತಿರ್ಪನು. ಆತಂಗೆ ಯೇಳುಮಂದಿ ಕುಮಾರರುಂಟಾಗಿರುವರು. ಆ ಗೋಮೇಧಿಕ ನ್ನವರಿಗೆ ಆ ಶಾಕದ್ವೀಪವನ್ನು ಯೇಳುಭಾಗವಂ ಮಾಡಿಕೊಟ್ಟನು. ಅಲ್ಲಿ ಸೋಮಕ ಸುಮನ ಚಂದ್ರ ದುಂದುಭಿ ದವ್ರಾಜನ ಮಾಗಧಿ ಎಂಬ ಸಪ್ತ ಮಹಾ ಪರ್ವತಂಗಳು ಶಿವೆವಿಪಾಪೆ ಅಮೃತೆ ಸುಕೃತೆ ಸುದತ್ತಕೆ ಸಿದ್ಧಕೆ ಸರ್ವ ಕಾಮಪ್ರದೆ ಎಂಬ ಸಪ್ತಮಹಾ ನದಿಗಳು ಇರುತಿರ್ಪವು. ಈ ಶಾಕದ್ವೀಪವು ಯೆರಡು ಲಕ್ಷ ಪ್ರಮಾಣವುಳ್ಳ ಇಕ್ಷುಸಮುದ್ರದಿಂ ಪರಿವೃತಮಾಗಿರುವದು. ಆ ಇಕ್ಷು ಸಮುದ್ರವಂ ಬಳಸಿ ನಾಲ್ಕು ಲಕ್ಷ ಪ್ರಮಾಣವುಳ್ಳ ಕುಶದ್ವೀಪವಿರುವದು. ಆ ದ್ವೀಪವಂ ಪ್ರಿಯವ್ರತ ಕುಮಾರನಾದ ವಪುಷ್ಮಂತ ನೆಂಬುವನು ಆಳು ತಿದಾನೆ. ಆತಂಗೆ ಸಪ್ತಕುಮಾರರು ಜನಿಸಲಾಗಿ ಆ ವಪುಷ್ಮಂತನು ಅವರಿಗೆ ಆ ಕುಶದ್ವೀಪವಂ ಯೇಳು ಭಾಗಂ ಗೈದು ಕೊಟ್ಟನು. ಅಲ್ಲಿ ಜ್ಯೋತ್ಸ್ನೆ ರೂಪ್ಯಾಮತೀ ಧೂಮ್ರಾ ನೇತ್ರಾ ಪಾಪವಿಮೋಚನಿ ವೃತ್ತಿ ಯೆಂಬ ಮಹ ತ್ತಾದ ಸಪ್ತನದಿಗಳುಂ ಉನ್ನತ ಕುಮುದ ಕುಮಾರಮೇಘ ಶಾಂತಕ ಹಿಮ ದ್ರೋಣಕ ಯೆಂಬ ಸಪ್ತಮಹಾ ಪರ್ವತಂಗಳಿರುತಿರ್ಪವು. ನಾಲ್ಕು ಲಕ್ಷ ಪ್ರಮಾಣವುಳ್ಳ ಸುರಾಬ್ಧಿಯು ಆ ಕುಶದ್ವೀಪವ ಬಳಸಿರ್ಪುದು. ಅದರ ಮೇಲೆ ಯೆಂಟು ಲಕ್ಷ ಯೋಜನ ಪ್ರಮಾಣವುಳ್ಳ ಕ್ರೌಂಚದ್ವೀಪವು ಆ ಸುರಾಸಮು ದ್ರವಂ ಬಳಸಿರುವದು. ಪ್ರಿಯವ್ರತ ಕುಮಾರನಾದ ಜ್ಯೋತಿಷ್ಮಂತ ನೆಂಬವನು ಆ ದ್ವೀಪಕ್ಕೆ ಧೊರೆಯಾಗಿದಾನೆ. ಆತಂಗೆ ಯೇಳುಮಂದಿ ಪುತ್ರರುಂಟಾಗಲಾಗಿ ಆ ಜ್ಯೋತಿಷ್ಮಂತನು ಆ ಕ್ರೌಂಚವಂ ಯೇಳು ಭಾಗಂಗಳಂ ಮಾಡಿ ತನ್ನ ಕುಮಾರರಿಗಿತ್ತನು. ಅಲ್ಲಿ ಕುಶೇಶಯ ಹರಿ ಪುಷ್ಪಾವರ್ತ ವಿದ್ರುಮ ಹಿಮಾದ್ರಿ ದ್ಯುತಿಮಂತ ಮಂದರಗಳೆಂಬ ಸಪ್ತ ಮಹಾಗಿರಿಗಳುಂ ಶಿವೆ ವಿಧೂತ ಪಾಪೆ ಹಿಮಪೂರ್ಣೆ ಪುನೀತಕೆ ಅಖಿಲಪಾಪೆ ಸಿಂಹಾನಿ ಯೆಂಬ ಸಪ್ತ ಮಹಾನದಿಗಳುಂ ಇರುತ್ತವೆ. ಅಷ್ಟಲಕ್ಷ ಪ್ರಮಾಣವುಳ್ಳ ಘೃತ ಸಮುದ್ರವು ಆ ಕ್ರೌಂಚ ದ್ವೀಪವಂ ಬಳಸಿರ್ಪುದು. ಹದಿನಾರು ಲಕ್ಷ ಯೋಜನ ಪ್ರಮಾಣವುಳ್ಳ ಶಾಲ್ಮಲಿ ದ್ವೀಪವು ಆ ಘೃತಸಮುದ್ರವನ್ನಾವರಿಸಿಕೊಂಡಿರುವದು. ಅದರೊಳು ಪ್ರಿಯ ವ್ರತ ಕುಮಾರನಾದ ದ್ಯುತಿಮಂತನು ಆ ದ್ವೀಪವನ್ನಾಳುತಿರೆ, ಆತಂಗೆ ಸಪ್ತ ಕುಮಾರರುಂಟಾದರು. ಅವರಿಗೆ ದ್ಯುತಿಮಂತನು ಆ ಶಾಲ್ಮಲೀದ್ವೀಪವನ್ನೇಳು ಭಾಗಂಗಳಂ ಮಾಡಿ ಕ್ರಮದಿಂ ಕೊಟ್ಟನು. ಅಲ್ಲಿ ತಿಮಿರ ಸುರಭಿ ಪವನ ವಿಘೂ ತಕ ಶಮ್ಮಾತಟ ದುಂದುಭಿ ಪುಂಡರೀಕಂಗಳೆಂಬ ಸಪ್ತ ಗಿರಿಗಳು ಕುಮುದೆ ಕಬರಿ ಧಾತ್ರಿ ಯಾಮೆ ಶೌಂಡೀರಕೆ ಮನೋರಮೆ ಸಂಧ್ಯೆ ಯೆಂಬ ಸಪ್ತ ಮಹಾ ನದಿಗಳುಂ ಇರುವವು. ಹದಿನಾರು ಲಕ್ಷ ಪ್ರಮಾಣವುಳ್ಳ ದಧಿಸಮುದ್ರವು ಆ

ಶಾಲ್ಮಲೀದ್ವೀಪವಂ ಬಳಸಿರುವದು. ಆ ಮೇಲೆ ಮುವ್ವತ್ತೆರಡು ಲಕ್ಷ ಯೋಜನ ಪ್ರಮಾಣವುಳ್ಳ ಗೋಮೇಧಿಕ ವೆಂಬ ದ್ವೀಪವು ಆ ದಧಿಸಮುದ್ರವಂ ಬಳಸಿರುವದು. ಅಲ್ಲಿ ಪ್ರಿಯವ್ರತ ಮಹಾರಾಯನ ಕುಮಾರನಾದ ಭವ್ಯನೆಂಬಾತನು ಮಹಾಧರ್ಮದಿಂದಾಳುತಲಿದಾನೆ. ಆತಂಗೆ ಯೇಳುಮಂದಿ ಮಕ್ಕಳು ಜನಿಸಲಾಗಿ ಅದನ್ನು ಆ ಯೇಳುಮಂದಿ ಪುತ್ರರಿಗೂ ಸಮವಾಗಿ ಭಾಗಂಗಳಂ ಮಾಡಿ ಕೊಟ್ಟನು. ಆ ದ್ವೀಪದಲ್ಲಿ ಸಿಂಹ ಕ್ರೌಂಚ ಕಚ ಚಲಕ ಅಸ್ತ ಉದಯ ಅಂಬಿಕೆ ಯೆಂಬ ಸಪ್ತ ಮಹಾಗಿರಿಗಳುಂ ಅತ್ರಿ ಧೇನು ಪುಣ್ಯ ಕಪರ್ದಿ ಸುಕುಮಾರಿಕೆ ಪ್ರಳಯೆ ಇಕ್ಷುರಸೆ ಯೆಂಬ ಸಪ್ತ ಮಹಾ ನದಿಗಳು ಇರುವವು. ಅದನ್ನು ಮುವ್ವತ್ತೆರಡು ಲಕ್ಷಯೋಜನ ಪ್ರಮಾಣವುಳ್ಳ ಮಧು ಸಮುದ್ರವು ಬಳಸಿರ್ಪದು. ಆ ಮಧು ಸಮುದ್ರವನ್ನು ಅರವತ್ತು ನಾಲ್ಕು ಲಕ್ಷ ಯೋಜನ ಪ್ರಮಾಣವುಳ್ಳ ಪುಷ್ಕರದ್ವೀಪವು ಆವರಿಸಿಕೊಂಡಿರುವದು. ಅಲ್ಲಿ ಪ್ರಿಯವ್ರತ ಪುತ್ರನಾದ ಚ್ಯವನನೆಂಬಾತನು ಪಾಲಿಸುತ್ತಿದಾನೆ. ಆತಂಗೆ ಈರ್ವರು ಕುಮಾರರು ಸಂಭವಿಸಲಾಗಿ ಆ ಪುಷ್ಕರ ದ್ವೀಪವನ್ನೆರಡು ಭಾಗವಂ ಮಾಡಿ ಆ ಪುತ್ರರಿಗೆ ಕೊಟ್ಟನು. ವೃಷಭ ಮಹೇಂದ್ರ ವರುಣ ವರಾಹ ಇಂದ್ರ ಮಹೇಂದ್ರ ನೀಲಂಗಳೆಂಬ ಸಪ್ತ ಮಹಾ ಪರ್ವತಂಗಳುಂ ಕುಟಿಲೆ ಶಿವೆ ಮೇರು ಧರಣಿ ಸುಮನಸೆ ಸಿಂಹಿಕೆ ಕುಮಾರಿ ಯೆಂಬ ಸಪ್ತ ಮಹಾನದಿಗಳುಂಟು. ಮತ್ತೆ ಐವತ್ತು ಲಕ್ಷ ಯೋಜನ ಪ್ರಮಾಣವಾದ ಒಂದು ಮಹಾ ಪರ್ವತವು ಇರುವದು. ಇಲ್ಲಿ ಇಂದ್ರಾದಿ ದಿಕ್ಪಾಲಕರು ವಾಸಂಗೈಯುತಲಿದಾರೆ. ಅರವತ್ತು ನಾಲ್ಕು ಲಕ್ಷ ಯೋಜನ ಪ್ರಮಾಣವುಳ್ಳ ಸ್ವಾದೂದಕ ಸಮುದ್ರವು ಬಂದು ಆ ಪುಷ್ಕರ ದ್ವೀಪವನ್ನು ಬಳಸಿಕೊಂಡಿರುವದು. ಆ ಸಮುದ್ರವಂ ಬಳಸಿರ್ಪ ದಶ ಕೋಟಿ ಯೋಜನ ಪ್ರಮಾಣಮುಳ್ಳ ಸ್ವರ್ಣಭೂಮಿ ಇರುವದು. ಅಲ್ಲಿ ದಶ ಸಹಸ್ರ ಕೋಟಿ ಯೋಜನ ಸ್ಥೂಲವಾದ ಚಕ್ರವಾಳ ಗಿರಿಯು ಬಳಸಿರುವದು. ಆ ಗಿರಿಯನ್ನು ಕೋಟಿಯೋಜನ ಪ್ರಮಾಣವುಳ್ಳ ಮಹಾ ಸಮುದ್ರವಿರುವದು. ಆ ಸಮುದ್ರವಂ ಬಳಸಿ ಮುವ್ವತ್ತೈದು ಕೋಟಿ ಯೋಜನ ಪ್ರಮಾಣವುಳ್ಳ ತಮೋಲೋಕವಿರ್ಪದು. ಈ ಬ್ರಹ್ಮಾಂಡದ ಹೆಂಚಿನ ದಟ್ಟವು ಕೋಟಿ ಯೋಜನ ಪ್ರಮಾಣವುಳ್ಳದ್ದು. ಮೇರುವಿಗೆ ದಕ್ಷಿಣ ಭಾಗದಲ್ಲಿರ್ಪ ಭೂಮಿಯು ಪಂಚಾಶತ್ಕೋಟಿ ಯೋಜನ ವಿಸ್ತೀರ್ಣವಾಗಿರ್ಪದು. ಉಳಿದ ಮೂರು ದಿಕ್ಕುಗಳಿಗು ಇದೇ ಪ್ರಮಾಣವು. ಮತ್ತಂ ಮೇರುಗಿರಿಗೆ ಉತ್ತರ ಭಾಗದಲ್ಲಿ ಬ್ರಹ್ಮಾಂಡದ ಹೆಂಚಿನ ಸಮೀಪದಲ್ಲಿ ಮಹತ್ತಾದ ಕೈಲಾಸ ಪರ್ವತವಿರುವದು. ಅಲ್ಲಿ ಗಣಂಗಳಿಂದಲು ಭಕ್ತರಿಂದಲು ಸ್ತುತಿಸಲ್ಪಟ್ಟ

ಪಾದಾರವಿಂದವುಳ್ಳ ಸದಾ ಸಂತೋಷಚಿತ್ತನಾದ ಶಂಭುವು ಮಹಾ ದೇವಿ ಯೊಡನೆ ವಿರಾಜಿಸುತಲಿದಾನೆ. ಈ ಬ್ರಹ್ಮಾಂಡದ ಪೊರವಳಿಯದೊಳು ಅಂಡ ಪಾಲಕರಾದ ರುದ್ರರು ವಾಸಂಗೈಯುತಲಿದಾರೆ. ಈ ಅಂಡಕ್ಕೆ ಆವ ಪ್ರಮಾಣ ವಿರುವದೋ ಅದೇರೀತಿಯಲ್ಲಿ ಪ್ರಮಾಣಂಗಳುಳ್ಳ ಅನೇಕ ಬ್ರಹ್ಮಾಂಡಗಳಿಹ ವೆಂದು ಸೂತಂ ಶೌನಕಾದಿ ಮುನಿಗಳಿಗೆ ಪೇಳಿದ ನೆಂಬಲ್ಲಿಗೆ,

ಗದ್ಯ|| ಇಂತು ಕರ್ಣಾಟಕ ಭಾಷಾವಿರಚಿತಮಾದ ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನ ಭೂತ ಶ್ರೀಮನ್ಮಹೀಶೂರ ಮಹಾ ಸಂಸ್ಥಾನಮಧ್ಯ ದೇದೀಪ್ಯ ಮಾನಾ ವಿಕಲಕಲಾನಿಧಿ ಕುಲಕ್ರಮಾಗತ ರಾಜಕ್ಷಿತಿಪಾಲ ಪ್ರಮುಖ ನಿಖಿಲ ನಿಜ ರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾ ಸನಾರೂಢ ಶ್ರೀಮದ್ರಾಜಾಧಿರಾಜ ಪರಮೇಶ್ವರ ಪ್ರೌಢಪ್ರತಾಪಾಪ್ರತಿಮ ನರ ಪತಿ ಬಿರುದೆಂತೆಂಬರ ಗಂಡ, ಲೋಕೈಕವೀರ ಯದುಕುಲಪಯಃಪಾರಾವಾರ ಕಲಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡ ಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ಶ್ರೀ ಚಾಮರಾಜ ಮಹೀಪಾಲ ಧರ್ಮಪತ್ನಿ ಕೆಂಪನಂಜಮಾಂಬಾಗರ್ಭಸುಧಾಂ ಬುಧಿ ರಾಕಾಸುಧಾಕರಾಯಮಾನ ಶ್ರೀ ಚಾಮುಂಡಿಕಾಂಬಾ ವರಪ್ರಸಾದೋ ದ್ಭವರಾದ ಆತ್ರೇಯಸಗೋತ್ರ ಆಶ್ವಲಾಯನ ಸೂತ್ರ ಋಕ್ಶಾಖಾನುವರ್ತಿಗ ಳಾದ ಶ್ರೀಮರ್ಜ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥಮಾಗಿ ರಚಿಸಿದ "ಶ್ರೀ ಕೃಷ್ಣರಾಜವಾಣೀವಿಲಾಸಮೆಂಬ" ಸ್ಕಾಂದಪುರಾಣದ ಶಂಕರ ಸಂಹಿತೆಯ ಶಿವರಹಸ್ಯ ಖಂಡದ ದಕ್ಷಕಾಂಡ ದೊಳು ಮುವ್ವತ್ತೆಂಟನೆಯ ಅಧ್ಯಾಯವು ಸಂಪೂರ್ಣಮಾದುದು.

ದಕ್ಷಕಾಂಡ ಸಮಾಪ್ತಮಾದುದು.

ಉಪದೇಶಕಾಂಡ ಪ್ರಾರಂಭ.

ಮೊದಲನೆಯ ಅಧ್ಯಾಯವು.

ಕೈಲಾಸಮಹಾಗಿರಿ ವರ್ಣನಂ.

ಅನಂತರದಲ್ಲಿ ಶೌನಕಾದಿ ಮಹಾಮುನಿಗಳು ಈರೀತಿಯಾಗಿರ್ಪ ಸೂತನ ವಾಕ್ಯಮಂ ಕೇಳಿ, ಎಲೈ ಮುನಿಯೆ! ಈ ಮಹಾಮೇರುವಿನ ಉತ್ತರಭಾಗ ದೊಳು ಅಂಡಭಿತ್ತಿಯ ಸಮೀಪದಲ್ಲಿ ಮಹಾ ಕೈಲಾಸ ವಿರುವದೆಂದು ನಿನ್ನಿಂದ ಪೇಳಲ್ಪಟ್ಟದು ಸರಿಯಷ್ಟೆ, ಈ ಕೈಲಾಸಗಿರಿಯು ಯಾವ ಪ್ರಮಾಣವುಳ್ಳದ್ದು? ಯೆಷ್ಟು ಉನ್ನತವಾಗಿದೆ? ಇದನ್ನೆಲ್ಲಮಂ ವಿಸ್ತಾರದಿಂ ಪೇಳಬೇಕೆನಲಾಗಿ, ಸೂತಪೌರಾಣಿಕ ನಿಂತೆಂದನು, ಎಲೈ ಬ್ರಾಹ್ಮಣರುಗಳಿರಾ! ನೀವೆಲ್ಲರೂ ಅತಿ ರಹಸ್ಯವಾದ ಪರಮೋತ್ತಮವಾದ ಆ ವಿಷಯಮಂ ಪೇಳುವೆನು ಕೇಳುವರಾಗಿ, ಮನಂದಸಿ, ಮೇರುವಿಗೆ, ಉತ್ತರಭಾಗದಲ್ಲಿ ಸಾಂಬನಾಗಿ ಗಣಸಮೇತನಾದ ಭಕ್ತವತ್ಸಲನಾದ ಚಂದ್ರಶೇಖರಂಗೆ ಆಲಯಮಾದ, ಇಪ್ಪತ್ತೊಂದು ಕೋಟಿ ಯೋಜನ ವಿಸ್ತೀರ್ಣವಾದ ಮಹಾಕೈಲಾಸವಿರುವದು.

ಆ ಪರ್ವತದ ಮೇಲೆ ಮಧ್ಯದಲ್ಲಿ ಉತ್ತಮವಾದ ನವರತ್ನಮಯವಾದ ಶಿಖರವಿರ್ಪುದು. ಆ ಶಿಖರದಲ್ಲಿ ಗೋಪುರಾಟ್ಟಾಲವಲಭಿಗಳಿಂ ನಾನಾರತ್ನ ವಿಚಿತ್ರ ವಾದ ಮಹೇಶ್ವರನ ಆಲಯವು ವಿರಾಜಿಸುತಿರ್ಪುದು. ಆ ಆಲಯದಲ್ಲಿ ಮಹ ತ್ತಾದ ರತ್ನಸಿಂಹಾಸನವು ವೊಪ್ಪುತಲಿರುವದು. ಅದರೊಳು ವಿಕಸಿತವಾದ ಕಮಲದೊಳಿಪಾದಿಯಲ್ಲಿ ಶೋಭಿಸುತಿರ್ಪ ಪಂಚಪಿಂಶತಿ ಮುಖಂಗಳಿಂದುಜ್ವಲ ನಾದ, ಧರಿಸಲ್ಪಟ್ಟ ನಾನಾ ವಿಧಂಗಳಾದ ಆಯುಧಂಗಳಿಂ ಪ್ರಕಾಶಿಸುವ, ಪಂಚಾ ಶತ್ಕರಗಳಿಂ ಮಂಡಿತನಾದ ಕೆಂದಾವರೆಯಂತೊಪ್ಪುವ ನಾಭಿ ಪಾದದ್ವಯಗಳಿಂ ದುಜ್ವಲನಾದ, ವಿಚಿತ್ರರತ್ನಗಳಿಂ ಕೆತ್ತಿಸಲ್ಪಟ್ಟ ಭೂಷಣಗಳಿಂ ಭೂಷಿತನಾದ ಕೋಟಿಸೂರ್ಯ ಪ್ರಕಾಶನಾದ ಪರಮಾನಂದ ವಿಗ್ರಹನಾದ ಅಪ್ರಾಕೃತ ದಿವ್ಯ ಶರೀರನಾದ ಲಕ್ಷ್ಯಲಕ್ಷಣ ವರ್ಜಿತನಾದ ಮತ್ತೆ "ಯತೊವಾಚೊನಿವರ್ತಂತೆ" ಎಂಬ ಶ್ರುತಿವಾಕ್ಯದಿಂ ಪೇಳಲ್ಪಟ್ಟ ಶಂಭುವಾದ ಸದಾಶಿವನು ಒಪ್ಪುತಲಿರು ವನು. ಆ ಪರ್ವತದಲ್ಲಿ ಪ್ರಖ್ಯಾತರಾದ ಪಂಚಶಕ್ತಿಗಳುಂ ಅನೇಕ ರುದ್ರರುಂ ಸಿದ್ಧಸಾಧ್ಯರುಂ ಸಮಸ್ತ ಋಷಿಗಳುಂ ಸದಾಶಿವನಂ ಬಳಸಿಯು ಉಪವಾಸನೆ ಯಂ ಮಾಡುತಿದಾರೆ. ಸರ್ವೈಶ್ವರ್ಯಯುಕ್ತನಾದ ಸರ್ವವ್ಯಾಪಿಯಾಗಿ ಸನಾತನ ನಾದ ಶಂಭುವು ತಮ್ಮ ತಮ್ಮ ನಿಯಮಕಾರ್ಯಂಗಳಲ್ಲಿ ಉದ್ಯುಕ್ತರಾದ ಪರಿವಾರ ಗಳಿಂ ಸೇವಿತನಾಗಿಹನು, ಎಲೈ ದ್ವಿಜರುಗಳಿರಾ! ಬೇರೆಯಾದ ಅತಿ ಮನೋಹರಂ

ಗಳಾದ ಸೂರ್ಯಕಾಂತ ಮಯವಾದ ಏಕಾದಶ ಶಿಖರಂಗಳು ಸದಾಶಿವನ ಮೂರ್ತಿ ಯಿರುವ ರತ್ನ ಶಿಖರವಂನಾವರಿಸಿ ಕೊಂಡಿರುವವು. ಆ ಹನ್ನೊಂದು ಶಿಖರಂ ಗಳಲ್ಲಿ ಕ್ರಮದಿಂ ಸದಾಶಿವನ ಪಂಚ ಮೂರ್ತಿಗಳು ಶಂಭುವಿನ ಷಣ್ಮೂರ್ತಿಗಳು ಇರುತಲಿವೆ. ಚಂದ್ರಕಾಂತಮಯವಾದ ಏಕೋತ್ತರ ಶತಶಿಖರಂಗಳು ಏಕಾದಶ ಶಿಖರಂಗಳನ್ನಾವರಿಸುವವು. ಆ ನೂರೊಂದು ಶಿಖರಂಗಳಲ್ಲಿ ಕ್ರಮದಿಂ ಶಿವನ ಅಷ್ಟವಿದ್ಯೇಶ್ವರ ಮೂರ್ತಿಗಳುಂ ಮಹೇಶ್ವರನ ಭವಾದ್ಯಷ್ಟಮೂರ್ತಿಗಳುಂ ನವ ಶಕ್ತಿಗಳೂ ಆ ಶಂಭುವಿನ ಮನೋಹರಂಗಳಾದ ಪಂಚ ವಿಂಶತಿ ತ್ರಿಮೂರ್ತಿ ಗಳುಂ ಏಕ ಪಂಚಾಶನ್ಮಾತೃಕಾಮೂರ್ತಿಗಳುಂ ಈ ನೂರೊಂದು ಮೂರ್ತಿಗಳೂ ಇರುತಿರ್ಪವು. ಅಗ್ನಿಕಾಂತಮಯವಾದ ಏಕೋತ್ತರ ಸಹಸ್ರಶಿಖರಂಗಳು ಆ ನೂರೊಂದು ಶಿಖರಂಗಳನ್ನಾವರಿಸಿರುವವು. ಆ ಶಿಖರಂಗಳಲ್ಲಿ ತಾಂಡವೇಶ್ವರನ ನೂರೆಂಟು ಮೂರ್ತಿಗಳು ಈಶ್ವರಭಾವವನ್ನೈದಿದ ಸಪ್ತಕೋಟಿ ಮಹಾಮಂತ್ರಂ ಗಳು ಹೃದಯಾಂಬುಜದಲ್ಲಿ ಮಹಾದೇವನಂ ಧ್ಯಾನಿಸುತ್ತಿವೆ, ಎಲೈ ಬ್ರಾಹ್ಮ ಣರುಗಳಿರಾ! ಸ್ಫಟಿಕಮಯಂಗಳಾದ ಏಕೋತ್ತರ ದಶಸಹಸ್ರ ಶಿಖರಂಗಳು ಶಂಕರಾಜ್ಞೆಯಿಂ ಸಾವಿರದೊಂದು ಶಿಖರಂಗಳನ್ನಾವರಿಸಿಕೊಂಡಿರುವವು. ಅವು ಗಳಲ್ಲಿ ದೇವದೇವನಾದ ಮಹೇಶ್ವರನ ಕುಮಾರನಾದ ವಿಘ್ನೇಶ್ವರ ಸ್ಕಂದಶಾಸ್ತಾ ಕುಮಾರ ಭೈರವರೆಂಬ ನಾಲ್ವರೂ ನಂದಿಕೇಶ್ವರ ಭೃಂಗೀಶ್ವರ ಮಹಾಕಾಳ ಮುಂ ತಾದ ಗಣಾಧಿಪರು ಧರ್ಮಾತ್ಮನಾದ ವೃಷಭೇಶ್ವರನು ಅಭೀಷ್ಟಪ್ರದವಾದ ಕಾಮ ಧೇನುವು ದುರ್ಗಾದಿ ಶಕ್ತಿಗಳು ಚಂಡೇಶ್ವರ ಮುಂತಾದ ಶಿವಭಕ್ತರು ಶಿವ ಪೂಜಾ ತತ್ಪರರಾದ ಪಂಚಾಸ್ತ್ರಮೂರ್ತಿಗಳು ಸಹ ಅತ್ಯಂತ ಮುದದಿಂ ವಾಸಿ ಸುತಲಿದಾರೆ.

ಎಲೈ ದ್ವಿಜರುಗಳಿರಾ! ಮನಸ್ಸನ್ನಪಹರಿಸುವ ರಕ್ತವರ್ಣವಾದ ಏಕೋ ತ್ತರ ಲಕ್ಷಶಿಖರಂಗಳು ಆ ಏಕೋತ್ತರ ದಶ ಸಹಸ್ರ ಶಿಖರಂಗಳನ್ನಾವರಿಸಿಕೊಂ ಡಿರ್ಪವು. ಆ ಶಿಖರಂಗಳೊಳು ಪಶ್ಚಿಮಭಾಗದಲ್ಲಿ ವಿಷ್ಣುವು ತಮ್ಮ ಪದವಾಂಛೆ ಯಂ ಬಿಟ್ಟು ಮೋಕ್ಷವನ್ನಿಚ್ಛೈಸಿ ಪರಮೇಶ್ವರನಾದ ಪರಾತ್ಪರನಾದ ತತ್ವಸ್ವರೂಪ ನಾಗಿ ಜ್ಯೋತಿರ್ಲಿಂಗರೂಪನಾದ ಶಿವನಂ ಉಪಾಸಿಸುತ್ತಿದಾನೆ. ಹಾಗೆ ಉತ್ತರ ಭಾಗದ ಶಿಖರಂಗಳಲ್ಲಿ ಅನೇಕ ಬ್ರಾಹ್ಮಣರು ತಮ್ಮ ಪದವಾಂಛೆಯಂ ಬಿಟ್ಟು ಮೋಕ್ಷವನಿಚ್ಛೈಸಿ ಮಹೇಶ್ವರನಂ ಭಜಿಸುತ್ತಿರುವರು. ಅದರಂತೆ ಪೂರ್ವದ ಶಿಖರಂಗಳಲ್ಲಿ ಮಹತ್ತಾದ ಇಂದ್ರಾದಿ ಲೋಕಪಾಲಕರು ವೃಷಭಾರೂಢರಾದ ಮಹಾದೇವನಂ ಧ್ಯಾನಿಸುತ್ತಿರುವರು. ಅದೇಪ್ರಕಾರದಲ್ಲಿ ದಕ್ಷಿಣ ಭಾಗದೊಳು ಮಹತ್ತರರಾದ ಮುನಿಗಳು ಏಕಾಗ್ರಮಾನಸರಾಗಿ ತತ್ವಜ್ಞಾನಾಪೇಕ್ಷರಾಗಿ ದಕ್ಷಿಣ

ಮುಖವಾಗಿ ಅನ್ಯಾಯಸಾಪ ದಕ್ಷಿಣಾಮೂರ್ತಿ ದೇವನಂ ಧ್ಯಾನಿಸುತ್ತಿರುವರು. ಸ್ವರ್ಣವರ್ಣಂಗಳಾದ ಏಕೋತ್ತರ ಶತಲಕ್ಷ ಶಿಖರಂಗಳಂ ಬಳಸಿಕೊಂಡಿರುವವು. ಅವುಗಳಲ್ಲಿ ಭೂತಾಧಿಪತಿಗಳುಂ ದಶಾಯುಧಂಗಳುಂ ಸಿದ್ಧ ವಿದ್ಯಾಧರರುಂ ಗರುಡ ಗಂಧರ್ವರುಂ ತಪಸ್ವಿಯಾದ ಸುರಭಿಯುಂ ಚಿಂತಾಮಣಿ ಕಲ್ಪವೃಕ್ಷಂಗಳುಂ ಶಂಖ ಪದ್ಮಾದಿ ನಿಧಿಗಳುಂ ರುದ್ರ ಗಣಿಕೆಯರಾದ ಸ್ತ್ರೀಯರುಂ ನಾನಾ ವಿಧಾಶ್ವರ್ಯಂಗಳುಂ ಸಾಮೀಪ್ಯರೂಪವಾದ ಮುಕ್ತಿಯಂ ಪಡೆದವರಾಗಿದಾರೆ.

ಎಲೈ ದ್ವಿಜರುಗಳಿರಾ! ರಜತ ಮಯವಾದ ಏಕೋತ್ತರಕೋಟಿ ಶಿಖರಂಗಳು ಆ ಏಕೋತ್ತರ ದಶಲಕ್ಷ ಶಿಖರಂಗಳನ್ನಾವರಿಸಿರುವವು. ಆ ಶಿಖರಂಗಳಲ್ಲಿ ಶಿವನಿಂ ಸೃಷ್ಟಿಸಲ್ಪಟ್ಟ ದ್ವಿ ಸಹಸ್ರ ದಂತಂಗಳುಳ್ಳ ಧವಳ ವರ್ಣಂಗಳಾದ ಪ್ರಣವಾತ್ಮಕ ಗಜಂಗಳುಂ ದೇವ ಮಯಂಗಳಾದ ಅಶ್ವಂಗಳುಂ ವಿಮಾನಂಗಳುಂ ರಥಂಗಳುಂ ಈಶ್ವರಾಜ್ಞೆಯಿಂದಿರುವವು. ಮತ್ತಮಾ ಶಿಖರಂಗಳಲ್ಲಿ ಶಿವನಿಂ ಸೃಷ್ಟಿಸಲ್ಪಟ್ಟ ನಾನಾರೂಪಂಗಳಾದ ಏಕಪಾದ ದ್ವಿಪಾದ ತ್ರಿಪಾದ ಬಹುಪಾದ ಅಪಾದರಾದ ಕೆಲಂಬ ಭೂತಗಣಗಳುಂ, ಏಕವದನ ದ್ವಿವದನ ತ್ರಿವನದಅವದನರಾದ ಕೆಲವು ಭೂತಗಣಗಳುಂ ಏಕಕರ ದ್ವಿಕರ ತ್ರಿಕರ ಅನೇಕಕರ ಅಕರಂಗಳಾದನೇಕ ಭೂತಂಗಳುಂ ಏಕನಯನ ದ್ವಿನಯನ ತ್ರಿನಯನ ಅನೇಕ ನಯನ ಅನಯನರಾದ ಅನೇಕ ಭೂತಗಣಂಗಳೂ ಮನುಷ್ಯನಯನರಾದ ಕೆಲಂಬರುಂ ಪಕ್ಷಿವದನರಾದ ಮತ್ತೆ ಕೆಲಂಬರುಂ ಗಜಾಶ್ವ ಸಿಂಹ ಶಾರ್ದೂಲ ಗೋಮಾಯು ವದನರಾದ ಕೆಲಂಬರುಂ ಋಕ್ಷವಾನರ ಭಲ್ಲೂಕ ತರಕ್ಷುವದನರಾದ ಕೆಲಂಬ ಗಣಾಧೀಶ್ವರರುಂ ಶಿವಾಜ್ಞೆಯಿಂದಿರುವರು. ಮತ್ತಂ ದಿವ್ಯವಾದ ಆರಾಮ ಸಹಸ್ರಂಗಳುಂ ಅನೇಕ ದಿವ್ಯ ತೀರ್ಥಂಗಳುಂ ಬಹು ಕಾನನಂಗಳುಂ ನಾನಾ ವಿಧಾಶ್ಚರ್ಯಂಗಳುಂ ಅಲ್ಲಿರುವವು. ಮತ್ತಮಲ್ಲಿ ಕೆಲಂಬ ಋಷಿಗಳಂ ಕೆಲಂಬ ದೇವತಗಳುಂ ಮಹಾ ಭೋಗಂಗಳಂ ಭುಂಜಿಸಿ ಸಾಲೋಕ್ಯಮುಕ್ತಿಯಂ ಪಡದವರಾಗಿ, ಶಂಕರಾಜ್ಞೆಯಿಂದತ್ಯಂತ ಸಂತಸದಿಂದಿರುತ್ತಿದಾರೆ. ಎಲೈ ಋಷಿಗಳಿರಾ! ಆ ಶಿಖರಂಗಳ ಲೆಕ್ಕವಾವುದೆಂದರೆ, ಒಂದು ಕೋಟಿಯು ಹನ್ನೊಂದು ಲಕ್ಷವು ಹನ್ನೊಂದು ಸಾವಿರದ ನೂರ ಹದಿನೆಂಟು ಶಿಖರಂಗಳೆಂದು ನಿಶ್ಚೈಸಲ್ಪಟ್ಟಿರುವವು. ಹೀಗೆ ಶೋಭಿಸಿಸ ಮಹಾ ಕೈಲಾಸ ಪರ್ವತವು ವಿರಾಜಿಸುತಿರುವುದೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ಉಪದೇಶ ಕಾಂಡದೊಳು ಮೊದನೆಯ ಅಧ್ಯಾಯವು ಸಮಾಪ್ತಮಾದುದು.

ಎರಡನೆಯ ಅಧ್ಯಾಯವು.

ಕೈಲಾಸಪರ್ವತದ ಅಧೋಭಾಗ ವಿಮರ್ಶೆ.

ಎಲೈ ದ್ವಿಜರುಗಳಿರಾ! ಆ ಮಹಾ ಕೈಲಾಸ ಪರ್ವತದ ಅಧೋಭಾಗದಲ್ಲಿ ಕೋಟಿಯೋಜನ ಪ್ರಮಾಣಮುಳ್ಳ ಸ್ವರ್ಣಭೂಮಿಯು ಆ ಕೈಲಾಸಗಿರಿಯ ನ್ನಾವರಿಸಿರುವದು. ಆ ಭೂಮಿಯಲ್ಲಿ ಅನೇಕ ರುದ್ರರುಂ ತಪಸ್ವಿಗಳಾದ ಋಷಿ ಗಳುಂ ಅನೇಕ ಭೂತಗಣಂಗಳುಂ ಶಿವಧ್ಯಾನವಂಶರಾದ ಶಿವಭಕ್ತರುಂ ಸ್ವೇಚ್ಛೆ ಯಿಂದ ಭೋಗಂಗಳಂ ಭುಂಜಿಸುತಿರುವರು. ಮತ್ತಮಾ ಸ್ವರ್ಣಭೂಮಿಯಂ ಬಳಸಿ ಸುವರ್ಣ ಪ್ರಾಕಾರವು ವಿರಾಜಿಸುತಿರ್ಪುದು. ಆ ಕೋಟೆಯು ವಿಶಾಲವು ಕೋಟಿಯೋಜನ ಪ್ರಮಾಣವಿರುವದು, ಅದರ ಉನ್ನತ ಎರಡು ಕೋಟಿ ಯೋ ಜನ ಪ್ರಮಾಣ ವಿರ್ಪುದು. ಮತ್ತಮಾ ಕೋಟೆಗೆ ಎಂಟು ಬಾಗಿಲುಗಳಿರುವವು. ಅವುಗಳಲ್ಲಿ ದಿವ್ಯಂಗಳಾದ ನಾನಾರತ್ನಂಗಳಿಂ ಕೆತ್ತಿಸಲ್ಪಟ್ಟ ಮೂರು ಕೋಟಿ ಯೋಜನೋನ್ನತವಾದ ಎಂಟು ಗೋಪುರಂಗಳಿರ್ಪುವು. ಅವುಗಳೊಳಗೆ ಪೂರ್ವ ಭಾಗದ ಗೋಪುರದ್ವಾರದಲ್ಲಿ ಗಣಂಗಳ್ವೆರಸಿ ವಿಘ್ನೇಶ್ವರನುಂ ಆಗ್ನೇಯ ಗೋಪುರ ದ್ವಾರದಲ್ಲಿ ಮಹಾ ಸತ್ವನಾದ ವೀರಭದ್ರನುಂ ಯಾಮ್ಯದಿಕ್ಕಿನ ಗೋಪುರದ ಬಾಗಿಲಲ್ಲಿ ಗಣ ಸಹಿತನಾದ ಗಣಾಗ್ರಣಿಯಾದ ವೇತ್ರಪಾಣಿಯಾದ ನಂದೀಶ್ವರ ನುಂ ನೈಋತ್ಯ ಗೋಪುರದ್ವಾರದಲ್ಲಿ ಮಹಾಬಲನಾದ ಶಂಕರಾಜ್ಞಾ ವಿಧಾ ಯಕನಾದ ಗಣಂಗಳಿಂವೊಡಗೂಡಿದ ಭೈರವನುಂ ಪಶ್ಚಿಮದ ಗೋಪುರದ್ವಾರ ದಲ್ಲಿ ತನ್ನ ಮಾತೆಯಾದ ಗೌರಿದೇವಿಯಂ ಹೃದಯದಲ್ಲಿ ಧ್ಯಾನಿಸುತ್ತಿರುವ ಸುಬ್ರಹ್ಮಣ್ಯನುಂ ವಾಯು ದಿಕ್ಕಿನಲ್ಲಿ ಮಹಾದೇವಿಯಂ ಧ್ಯಾನಿಸುವ ದುರ್ಗಾ ದೇವಿಯುಂ ಉತ್ತರದಿಕ್ಕಿನಲ್ಲಿ ಗೋಪುರದ್ವಾರದಲ್ಲಿ ದೇವಿ ದೇವರಂ ಧ್ಯಾನಿಸುತ್ತ ಗಣಸಮೇತನಾದ ಮಹಾತ್ಮನಾದ ಮಹಾ ಕಾಳನುಂ ಈಶಾನ್ಯಭಾಗದ ಗೋಪುರ ದಲ್ಲಿ ಹರಿ ಹರ ಕುಮಾರನಾದ ಶಾಸ್ತಾ ಕುಮಾರನುಂ ಈ ಪ್ರಕಾರದಿಂ ಶಿವಾಜ್ಞೆ ಯುಂ ಶಿರಸಾವಹಿಸಿದವರಾಗಿ ತಮ್ಮ ತಮ್ಮ ಗಣಂಗಳೊಡನೆ ಆ ಪ್ರದೇಶದಲ್ಲಿ ಇರುತಿದಾರೆ, ಹೀಗೆ ಮಹಾಭಾಗ್ಯವಂತರಾದ ಇವರು ಸಮಸ್ತ ಜಗತ್ತಂ ಪಾಲಿಸು ತಿರ್ಪರು. ಮತ್ತಮಾ ಮಹಾಕೈಲಾಸವು ನಾನಾರತ್ನಮಯಂಗಳಾದ ದಿವ್ಯಂಗ ಳಾದ ಶಿಖರಂಗಳಿಂ ಪ್ರಾಕಾರಂಗಳಿಂ ಯುಕ್ತಮಾಗಿ ಶೋಭಿಸುತಿದ್ದೀತು. ಪಾಪಿಷ್ಠರಾದವರು ಈ ಪರ್ವತಮಂ ಕಾಣುವುದಿಲ್ಲ. ಈ ಪರ್ವತವು ಅವಾಂ ತರ ಪ್ರಳಯದಲ್ಲಿ ಬ್ರಹ್ಮಾಂಡ ಉಪರಿ ಭಾಗದಲ್ಲಿರುತಿರ್ಪುದು. ಈ ಮಹಾ ಕೈಲಾಸದಲ್ಲಿ ಸರ್ವಾನುಗ್ರಹಕನಾದ ಮಹಾದೇವನು ಸಮಸ್ತಾತ್ಮರುಗ ಳಿಗೂಲಿ ನುಗ್ರಹಮಂ ಮಾಡುತಲಿರ್ಪನು. ಜಂಬೂದ್ವೀಪದಲ್ಲಿರ್ಪ ಕೈಲಾಸ

ಪರ್ವತದಲ್ಲಿ ಪರಮೇಶ್ವರನಾದ ಮಹಾ ಶಂಭುವು ನಿಗ್ರಹಾನುಗ್ರಹಗಳಂ ಮಾಡುತಿರ್ಪನು.

ಎಲೈ ದ್ವಿಜರುಗಳಿರಾ! ಜ್ಞಾನಸ್ವರೂಪಂಗಳಾದ ಈ ಎರಡು ಕೈಲಾಸಗಳನ್ನು ಸ್ಮರಿಸಿದವರಿಗೆ ಪಾಪಂಗಳು ನಾಶವಾಗುವವು. ಈ ಪರ್ವತಗಳು ಶಿವಾಜ್ಞೆಯಿಂ ಧರಿಸಲ್ಪಟ್ಟವು. ಭೂಮಿಯಲ್ಲಿಡಲ್ಪಡಲಿಲ್ಲ, ಮತ್ತಂ ಪುರಾಣಾರ್ಥವಿಶಾರದರು ಈ ಪರ್ವತಗಳಂ ಜ್ಯೋತಿರ್ಮಯಂಗಳಾಗಿ ತಿಳಿವುತಿರ್ಪರು. ಈ ಕೈಲಾಸದಲ್ಲಿ ಸದಾಶಿವನಾದ ಶಂಭುವು ಏಕಾದಶ ರುದ್ರರಿಂ ಬ್ರಹ್ಮ ವಿಷ್ಣುಗಳಿಂ ದೇವತೆಗಳಿಂ ಗಣಂಗಳಿಂ ಭಕ್ತರಿಂ ನಿತ್ಯವೂ ಪೂಜಿತನಾಗಿ, ಸರ್ವೈಶ್ವರ್ಯಸಂಪನ್ನನಾಗಿ ವಿರಾಜಿಸುತಿರುವ ಜಂಬೂದ್ವೀಪದಲ್ಲಿರ್ಪ ಈ ಮಹಾ ಕೈಲಾಸದಲ್ಲಿ ಮಹಾದೇವನು ಸಮಸ್ತ ದೇವತೆಗಳಿಂದಲೂ ಪೂಜಿತನಾಗಿ ಸ್ವೇಚ್ಛೆಯಿಂ ಸರ್ವ ಜನಂಗಳಂ ನಿಗ್ರಹಾನುಗ್ರಹವಂ ಮಾಡುತಿದಾನೆ. ವಾಙ್ಮನೋಮಾರ್ಗಗಳನ್ನತಿಕ್ರಮಿಸಿದ ಈ ಎರಡು ಮೂರ್ತಿಗಳಿಗೆ ಬೇರಾದಂತ ಮಹೇಶ್ವರನು ಲೋಕರಕ್ಷಕನಾಗಿರುತಿದಾನೆ. ಆ ಮಹೇಶ್ವರನಾಜ್ಞೆಯಿಂ ವಾಯುದೇವನು ಭಯಾನ್ವಿತನಾಗಿ ಚರಿಸುತಿರ್ಪನು. ಸೂರ್ಯನುದಯಿಸುತಿರ್ಪನು, ಅಗ್ನಿಯೂರ್ಧ್ವಮುಖನಾಗಿ ಜ್ವಲಿಸುತಿರುವನು. ಇಂದ್ರನು ಸ್ವರ್ಗವಂ ರಕ್ಷಿಸುತಿರ್ಪನು, ಪೃಥ್ವ್ಯಾದಿಭೂತಂಗಳು ಮರ್ಯಾದೆಯಲ್ಲಿರುತ್ತಿರುವವು. ಆವನೊಬ್ಬನು ಸ್ವಾಮಿಯಂ ಧ್ಯಾನಿಸುತ ಈ ಅಧ್ಯಾಯಮಂ ಪಠಿಸುತಿರ್ಪನೋ ಆವನೋರ್ವನು ಸಮಾಹಿತನಾಗಿ ಈ ಅಧ್ಯಾಯಮಂ ಕೇಳುತಿರುವನೋ ಅವರಿಗೆ ಶಿವನು ಪ್ರಸನ್ನನಹನು. ಆ ಮಾನವನು ಈ ಅಧ್ಯಾಯದ ಮಹಿಮೆಯಿಂ ಆಯುರಾರೋಗ್ಯೈಶ್ವರ್ಯಗಳಂ ಪಡೆವನು. ಈ ಅಧ್ಯಾಯಮಂ ಭಕ್ತಿಯುಕ್ತನಾದ ಕುಶಲನಾದ ಶಿಷ್ಯಂಗೋಸುಗ ತೋರಿಸಬೇಕು. ಉತ್ತಮವಾದ ಈ ಅಧ್ಯಾಯಮಂ ಆರಿಗಾದರೂ ತೋರಬಾರದು. ಈ ವಿಷಯದಲ್ಲಿ ಬಹುವಾಕ್ಯದಿಂ ಪ್ರಯೋಜನವೇನು? ಈ ಮಹಾತ್ಮ್ಯೆವು ಗೋಪ್ಯಕ್ಕಿಂತಲುಂ ಅತಿ ಗೋಪ್ಯವು ಮತ್ತಮುಪಮನ್ಯುವೆಂಬ ಮುನಿಯು ವ್ಯಾಘ್ರಪಾದನೆಂಬ ಋಷಿಯಿಂದಿದಂ ಕೇಳಿ ಅನೇಕ ಭೋಗಂಗಳಂ ಭುಂಜಿಸಿ ಸಮಾನವಿಲ್ಲದ ಕೈಲಾಸವನೈದಿದನು. ಉಪಮನ್ಯು ಋಷಿಯಿಂ ಕೃಷ್ಣನಿದಂ ಕೇಳಿ ಕೈಲಾಸವನೈದಿದನು. ಕೃಷ್ಣನಿಂದ ಪೃಥಾಸುತರಾದ ಪಾಂಡವರಿದಂ ಕೇಳಿ ಯುದ್ಧದಲ್ಲಿ ಶತ್ರುಗಳಂ ಸಂಹರಿಸಿ ಕೈಲಾಸವ ನೈದಿದರೆಂದು ಪೇಳಿ ಋಷಿಗಳಿದಂ ಕೇಳಿ ಎಲೈ ಸೂತನೆ! ಪೂರ್ವದಲ್ಲಿ ಮಹಾ ಘೋರನಾದ ಶೂರಪದ್ಮನು ಪುಟ್ಟಿದನು. ಆತನಿಗೆ ಕನಿಷ್ಠರಾದ ಸಿಂಹವಕ್ತ್ರ ತಾರಕರೆಂಬ ಅಸುರರು ಮೃತರಾಗಿ ಆವಲೋಕಕ್ಕೆ ಪೋದರೆಂಬುದನ್ನರಿಯೆವು. ಶೂರಪದ್ಮನು ಮಯೂರ

ಕುಕ್ಕುಟ ದೇಹಂಗಳಂ ಧರಿಸಿ ಪೋದನು. ಎಂದು ಆವಕಾರಣದಿಂ ನಿಮ್ಮಿಂದ ಪೇಳಲ್ಪಟ್ಟುದು? ಅದನೆಲ್ಲಮಂ ವಿಸ್ತಾರವಾಗಿ ಪೇಳಬೇಕೆನಲು ಸೂತನದಂ ಕೇಳಿ, ಎಲೈ ಋಷಿಗಳಿರಾ! ನೀವೆಲ್ಲರೂ ಸಾವಧಾನದಿಂ ಕೇಳಿರಿ.

ಭೂತಗಣಗಳಿಗೆ ಪಾಪಬರುವಿಕೆ ಶೂರಪದ್ಮಾದಿರಕ್ಕಸರ ಜನನಾದಿ ವೃತ್ತಕಥನಂ.

ಪೂರ್ವದಲ್ಲಿ ಕುಮಾರಸ್ವಾಮಿಯು ಮನೋಹರವಾದ ಭೂಷಣಗಳುಳ್ಳ ಮಯೂರವನ್ನೇರಿ ಕಲ್ಪಕಲ್ಪದಲ್ಲಿ ಪೊರಮಟ್ಟು ಲೀಲೆಯಿಂ ಜಗತ್ತಿನೊಳು ಸಂಚರಿಸಿ ಪರ್ವತಂಗಳಿಗೆ ಶ್ರೇಷ್ಠನಾದ ಕೈಲಾಸಕ್ಕೆ ಪೋಗಿ ವಾಹನಂಗಳಿಗೆ ಶ್ರೇಷ್ಠವಾದ ಮಯೂರದಿಂ ದಿಳಿದು ಗಿರಿಯ ಅಧೋಭಾಗದಲ್ಲಿ ಮಯೂರವಂ ಕೇತುರೂಪವಾದ ಕುಕ್ಕುಟಮಂ ನಿಲ್ಲಿಸಿ ತಮಗೆ ಮಾತಾಪಿತೃಗಳಾದ ಪಾರ್ವತಿ ಪರಮೇಶ್ವರರ ಸಮೀಪಕ್ಕೆ ಪೋಗಿ ನಮಸ್ಕಾರವಂ ಮಾಡಿ, ಸಮೀಪದಲ್ಲಿ ನಿಂತಿರಲು, ಆ ಸಮಯದಲ್ಲಿ ಬ್ರಹ್ಮ ವಿಷ್ಣ್ವಾದಿ ದೇವತೆಗಳು ಪರಮೇಶ್ವರನಂ ಸೇವಿಸಲು ಕೈಲಾಸಕ್ಕೆ ಬಂದು ತಮ್ಮ ವಾಹನಂಗಳಂ ಹೊರಗಿರಿಸಿ ಸರ್ವರೂ ಪರಮೇಶ್ವರನ ಸಮೀಪಕ್ಕೆ ಪೋಗಲು ಆಗ ಈ ದೇವತೆಗಳ ವಾಹನಂಗಳು ಕುಕ್ಕುಟ ಮಯೂರಂಗಳಿಗೆ ನಮಸ್ಕಾರವಂ ಮಾಡದೆ ಗರ್ವದಿಂ ನಿಂತಿರ್ದವು. ಆಗ ನಾಲ್ವರು ಭೂತಗಣಾಧೀಶ್ವರರು ಈ ವಾಹನಂಗಳ ಗರ್ವವಂ ತಿಳಿದು ಮಹಾ ಪರಾಕ್ರಮಿಗಳಾದ ಕುಕ್ಕುಟ ಮಯೂರಗಳಿಗೆ ಆ ವಾಹನಂಗಳ ಗರ್ವವಂ ಪೇಳೆ ಆ ಕುಕ್ಕುಟ ಮಯೂರಗಳು ಅತಿ ಕೋಪದೊಡನೆ ಕೂಡಿ ಅತ್ಯಂತ ವೇಗದಿಂ ಸಮಸ್ತ ಲೋಕಂಗಳಂ ನಿಲ್ಲಿಸದೆ ಕಡಿದಟ್ಟಲು ಆ ವಾಹನಂಗಳು ಬ್ರಹ್ಮ ಲೋಕ ವಿಷ್ಣು ಲೋಕ ಮುಂತಾದವುಗಳಿಗೆ ಪೋಗಿ ಶಕ್ತಿ ನಷ್ಟವಾಗಿ ಕೆಲಂಬವು ಮೃತವಾದವು ಕೆಲಂಬವು ಜೀರ್ಣವಾದವು. ಕೆಲಂಬವು ಮಾರ್ಗದಲ್ಲಿ ಅಲ್ಲಲ್ಲಿ ನಿಂತವು ಆಗ ಭಯಂಕರವಾದ ಹಾಹಾಕಾರ ಧ್ವನಿ ಪುಟ್ಟಿತು. ಮರಳಿ ಮಯೂರ ಕುಕ್ಕುಟಗಳು ಆ ವಾಹನಂಗಳಂ ಆ ಲೋಕಂಗಳಂ ಸಂಹರಿಸಿ ಶೀಘ್ರವಾಗಿ ಬಂದು ಪೂರ್ವಸ್ಥಾನದಲ್ಲಿ ನಿಂತಿರೆ, ಬಳಿಕ ಕುಮಾರಸ್ವಾಮಿಯು ಶಂಭುವಿನಿಂ ಪ್ರೇರಿತನಾಗಿ ಅನೇಕ ಕೋಟಿ ಭೂತಗಣಂಗಳಲ್ಲಿರ್ಪ ಮಯೂರ ಕುಕ್ಕುಟಗಳಂ ನೋಡಿ, ಮಯೂರವನ್ನೇರಿ ಕುಕ್ಕುಟವಂ ಧ್ವಜವಂ ಮಾಡಿ ತನ್ನ ಸ್ಥಾನಕ್ಕೆ ಪೋಗಲು ಬಳಿಕ ವಿಷ್ಣು ಮುಂತಾದ ದೇವತೆಗಳು ಪರಮೇಶ್ವರಂಗೆ ನಮಸ್ಕಾರವಂ ಮಾಡಿ ಅವರಿಂದನುಜ್ಞಾತರಾಗಿ ತಮ್ಮ ತಮ್ಮ ವಾಹನದ ಸಮೀಪಕ್ಕೆ ಬಂದು ವಾಹನಂಗಳಂ ಕಾಣದೆ ಇದೇನಲ್ಲಾ ಎಂದು ಆಶ್ಚರ್ಯಯುಕ್ತರಾಗಿ ನಿಂತಿರ್ದರು. ಆಗ ದೇವತೆಗಳ ಪರಿಜನರು ಬಂದು ವಾಹನಂಗಳ ಮರಣ

ಗಳಂ ಲೋಕಗಳ ಕೆಡಿಸಿದ್ದಂ ವಿವರವಾಗಿ ಪೇಳಲು ವಿಷ್ಣು ಮುಂತಾದ ದೇವತೆಗಳದಂ ಕೇಳಿ ದುಃಖಾನ್ವಿತರಾಗಿ ವೇಗದಿಂ ಕುಮಾರಸ್ವಾಮಿಯ ಬಳಿಗೆ ಪೋಗಿ ನಮಸ್ಕಾರವಂ ಮಾಡಿ ವಿನಯಾನ್ವಿತರಾಗಿ ಕ್ರಮದಿಂ ಈ ವೃತ್ತಾಂತಮಂ ಪೇಳೆ ಕುಮಾರಸ್ವಾಮಿಯದಂ ಕೇಳಿ ಆರಿಂದ ಇದು ಮಾಡಲ್ಪಟ್ಟಿತೆಂದು ಕೇಳೆ ಆಗ ವಿಷ್ಣು ಮುಂತಾದ ದೇವತೆಗಳು ಕುಕ್ಕುಟ ಮಯೂರಗಳಿಂ ತಮ್ಮ ವಾಹನಂಗಳು ಮೃತವಾದವೆಂದು ಪೇಳೆ ಆಗ ಕುಮಾರಸ್ವಾಮಿಯು ಜ್ಞಾನದೃಷ್ಟಿಯಿಂ ತಿಳಿದು ಶೂರಪದ್ಮ ಸಿಂಹವಕ್ತ್ರ ತಾರಕರೆಂಬ ಭೂತಗಣಗಳಂ ನೋಡಿ ಆವುದಾನೊಂದು ಕಾರಣದಿಂ ದೇವತೆಗಳಿಗೆ ಅಪರಾಧವಂ ಮಾಡಿದಿರೋ ಅದುಕಾರಣದಿಂ ನೀವು ಅಸುರ ವಂಶದಲ್ಲಿ ಪುಟ್ಟಿರೆಂದು ಈ ನಾಲ್ಕು ಭೂತಂಗಳಿಗೆ ಶಾಪವನ್ನಿತ್ತನೆಂದು

ಸೂತಪೌರಾಣಿಕನು ಶೌನಕಾದಿ ಮುನಿಗಳಿಗೆ ಪೇಳ್ದನೆಂಬಲ್ಲಿಗೆ,
ಉಪದೇಶಕಾಂಡದಲ್ಲಿ ಎರಡನೆಯ ಅಧ್ಯಾಯವು
ಸಂಪೂರ್ಣಮಾದುದು.

ಮೂರನೆಯ ಅಧ್ಯಾಯವು.

ಭೂತಗಣಗಳ ಶಾಪವಿಮೋಚನೆ-ದೇವತೆಗಳಿಗೆ ಅಭಯಪ್ರದಾನ.

ಕೇಳಿರೈ ಋಷಿಗಳಿರಾ ! ಅನಂತರದಲ್ಲಿ ಭೂತಗಣಂಗಳು ಅನ್ಯಾಯ ಭೂತನಾದ ಕುಮಾರಸ್ವಾಮಿಗೆ ನಮಸ್ಕಾರಮಾಡಿ ಎಲೆ ಸುರನಾಯಕನಾದ ಕುಮಾರಸ್ವಾಮಿಯೆ ! ನಾವು ಮಾಡಿದ ಅಪರಾಧವಂ ಪರಿಹರಿಸಲು ನಮಗೆ ಉಚಿತವಾದ ಆಜ್ಞೆಯಂ ಕೊಟ್ಟು ರಕ್ಷಿಸು. ನಮಗೆ ಅಸುರಜನ್ಮವುಂಟಾದೊಡೆ ನಮಗೆ ನಿಮ್ಮ ಸ್ಮರಣೆ ಉಂಟಾಗದೆಂದು ಕುಮಾರಸ್ವಾಮಿಗೆ ಅಡಿಗಡಿಗೆ ನಮಸ್ಕಾರವಂ ಮಾಡಿದ ಭೂತಗಳಂ ನೋಡಿ ಕುಮಾರಸ್ವಾಮಿಯು ಎಲೈ ಭೂತಗಳಿರಾ ! ನಮ್ಮಾಜ್ಞೆಯಿಂ ನಿಮಗೆ ಅಸುರಜನ್ಮ ಉಂಟಾಗಲಿ. ಆ ಜನ್ಮದಲ್ಲಿ ಕೃಪಾವಶದಿಂ ನಾನು ಬಂದು ನಿಮಗೆ ಮರಳಿ ಪೂರ್ವರೂಪವಂ ಕೊಡುತಿರ್ದೇನೆ. ಸಂಶಯವಿಲ್ಲವೆಂದು ನಿರೂಪಿಸೆ ಆಗ ಶೂರಪದ್ಮನು ಎಂಬ ಎರಡು ಭೂತಗಣಂಗಳು ಅತ್ಯಂತ ಭೀತರಾಗಿ ಕುಮಾರಸ್ವಾಮಿಗೆ ನಮಸ್ಕಾರವಂ ಮಾಡಿ ಎಲೆ ಕುಮಾರಸ್ವಾಮಿಯೆ ! ಆವಾಗ ನಾವು ಬರ್ಹಿಕುಕ್ಕುಟ ರೂಪಂ ಧರಿಸಿ ಮಹತ್ತಾದ ತಪವಂ ಮಾಡಿ ನಿಮ್ಮ ಸೇವೆಗೆ ಪಾತ್ರರಾಗುವೆವೋ ಆಗ ಅತ್ಯಂತ ಮುದದಿಂ ನಮ್ಮನ್ನು ರಕ್ಷಿಸು. ನಿನ್ನ ಪ್ರಸನ್ನತೆಯಿಂದ ಭಯಂಕರವಾದ ಅಸುರಜನ್ಮ ಉಂಟಾಗಲಿ ನಮಗೆ ಮೋಕ್ಷವಾವಾಗ ಆದೀತೆಂದು ಮರಳಿ ಪ್ರಶ್ನೆಯಂ ಮಾಡಿದರು. ಗುಹಸ್ವಾಮಿಯು ಅದಂ ಕೇಳಿ ಮಂದಸ್ಮಿತ ಮುಖನಾಗಿ ಎಲೈ ನೀವು

ಶೂರಪದ್ಮನೆಂಬ ನಾಮದಿಂ ಜಗತ್ತಿನಲ್ಲಿ ಮಹಾ ಪ್ರಸಿದ್ಧವಾದ ಮಹಾ ಘೋರ ವಾದ ದೇವಘಾತಕರಾದ ಅಸುರರಾಗಿರಿ. ಆ ದೈತ್ಯರಲ್ಲಿ ನಾವು ಪ್ರಾದುರ್ಭವಿಸಿ ಆ ದೈತ್ಯರೂಪಂ ಪರಿಹರಿಸೆ ಆಗ ನೀವು ಮಯೂರ ಕುಕ್ಕುಟ ರೂಪಂಗಳಂ ಧರಿಸಿ, ನಮಗೆ ವಾಹನವಾಗಿರೆಂದು ಆಜ್ಞಾಪಿಸಿ ಆ ಭೂತಂಗಳಂ ಕಳುಹಿ ಭಯ ಯುತರಾಗಿ ತಮ್ಮ ಪಾರ್ಶ್ವದಲ್ಲಿ ನಿಂದಿರ್ಪ ಸಕಲ ದೇವತೆಗಳಂ ನೋಡಿ ಎಲೈ ದೇವತೆಗಳಿರಾ ! ಈ ಭೂತಗಣಂಗಳಿಂ ನಿಮ್ಮ ನಿಮ್ಮ ಆವ ಸೇನೆಗಳು ಆವಾವ ವಾಹನಗಳು ಆವ ಲೋಕಂಗಳು ನಷ್ಟವಾದವೊ ಅವೆಲ್ಲವು ನಮ್ಮಾಜ್ಞೆಯಿಂ ಪೂರ್ವದಂತೆಯೇ ಆಗಲೆಂದು ಆ ದೇವತೆಗಳಲ್ಲಿ ದಯೆಮಾಡಿ ಅವರಂ ಕಳುಹಿ ನಾನಾಲಂಕಾರ ಮಂಡಿತವಾದ ಮಯೂರವನ್ನೇರಿ ತಮ್ಮ ಪುರವಂ ಪ್ರವೇಶಿಸಿ ದರು. ಬಳಿಕ ನಾಲ್ಕು ಭೂತಂಗಳು ಮಹಾತ್ಮನಾದ ಕಾಶ್ಯಪಂಗೆ ಮೂರು ಕುಮಾರರಾಗಿ ಜನಿಸಿದರು. ಆಗ ಕುಮಾರಸ್ವಾಮಿಯು ತಾರಕ ಸಿಹ್ಮವಕ್ತ್ರನಂ ಸಂಹರಿಸೆ ಅವರು ಭೂತಗಣ ಸ್ವರೂಪದಿಂ ಕೈಲಾಸವನ್ನೈದಿದರು. ಶೂರ ಪದ್ಮನು ಕುಮಾರಸ್ವಾಮಿಯಿಂ ಹತವಾದ ಮಾತ್ರದಿಂದಲೆ ಉತ್ಕೃಷ್ಟವಾದ ಮಹತ್ತಾದ ಮಯೂರ ಕುಕ್ಕುಟ ರೂಪಂಗಳಂ ಧರಿಸಿ ಕುಮಾರಸ್ವಾಮಿಗೆ ಅತ್ಯಂತ ಮುದವಂ ಮಾಡಿದನು. ಎಲೈ ದ್ವಿಜರುಗಳಿರಾ ! ಶೂರಪದ್ಮಾದಿಗಳ ಜನನವು ನಿಮಗೆ ಪೇಳಿದೆನು ಮರಳಿ ನೀವು ಏನು ಕೇಳುತ್ತೀರಿ? ಎಂದು ಸೂತ ಪೌರಾಣೀಕನು ಶೌನಕಾದಿಗಳಿಗೆ ಪೇಳ್ದನೆಂಬಲ್ಲಿಗೆ,

ಉಪದೇಶಕಾಂಡದಲ್ಲಿ ಮೂರನೆಯ ಅಧ್ಯಾಯವು
ಸಂಪೂರ್ಣಮಾದುದು.

ನಾಲ್ಕನೆಯ ಅಧ್ಯಾಯವು.

ಅಜಾಮುಖಿ ಮಾಯಾದೇವಿಯರ ವೃತ್ತಾಂತ.

ಅನಂತರದಲ್ಲಿ ಋಷಿಗಳು ಸೂತನ ವಾಕ್ಯಮಂ ಕೇಳಿ, ತಪೋಧನನಾದ ಎಲೈ ಸೂತನೆ ! ಶೂರಪದ್ಮಂಗೆ ಅನುಜೆಯಾದ ಅಜಾಮುಖಿ ಯೆಂದು ಪ್ರಸಿದ್ಧ ವಾದ ಅಸುರ ಸ್ತ್ರೀಯು ಆಕೆಗೆ ಜನನಿಯಾದ ಮಾಯಾ ದೇವಿಯು ಇವರೀರ್ವರು ಯೆಲ್ಲಿಗೆ ಪೋದರು ? ಅವರ ವೃತ್ತಾಂತವಂ ಪೇಳಬೇಕು ಯೆನಲು, ಸೂತನವರ ವಾಕ್ಯವಂ ಕೇಳಿ, ಎಲೈ ಋಷಿಗಳಿರಾ ! ಆವಾಗ ಶೂರಪದ್ಮಂಗೆ ಜನನಿಯಾದ ಮಾಯಾದೇವಿಯು ಯುದ್ಧಕಾಲದಲ್ಲಿ ಬಂದು ಮುಂದೆ ನಡೆವಂಥಾ ವೃತ್ತಾಂ ತಮಂ ಪೇಳ್ದು ತಾನು ಮಂದರಗಿರಿಗೆ ಪೋದಳೊ? ಆ ವೇಳೆಯಲ್ಲಿ ಆ ಮಾಯಾ ದೇವಿಯು ಅಜಾಮುಖಿಯಂ ನೋಡಿ, ಎಲೈ ಪುತ್ರಿಯೆ ! ಶೂರಪದ್ಮಾದಿಗಳು

ಮೃತವಾದ ಬಳಿಕ ಶ್ರೀಪರ್ವತಕ್ಕೆ ಬಾರೆಂದು ತನ್ನ ಮಗಳಾದ ಅಜಾಮುಖಿಗೆ ಪೇಳ್ದು ತಾನು ಅಂತರ್ಧಾನವಾಗೆ ಬಳಿಕ ಕಾಲವಶದಿಂದ ಶೂರಪದ್ಮಾದಿಗಳು ಹತರಾದರು. ಅಸುರೇಂದ್ರ ಹಿರಣ್ಯರೆಂಬೀರ್ವರು ಅಸುರರೂ ಪಲಾಯನವಾದರು.

ಅನಂತರದಲ್ಲಿ ಅಜಾಮುಖಿಯು ಶ್ರೀಪರ್ವತವನ್ನೈದಿ ತನಗೆ ಮಾತೃವಾದ ಮಾಯಾದೇವಿಯಂ ಕಂಡು, ಆಕೆಯನ್ನಾಲಿಂಗಿಸಿ ಆಕೆಯ ಪಾದದ ಮೇಲೆ ಬಿದ್ದು ಬಹು ಶೋಕವಂ ಮಾಡೆ ಮಾಯಾದೇವಿ ತನ್ನ ಪುತ್ರಿಯಂ ಕಂಡು ಎಲೈ ಪುತ್ರಿಯೆ? ನಿನಗೆ ದುಃಖಬೇಡ ನನಗೆ ಭ್ರಾತೃವಾದ ಶೂರ ಪದ್ಮನು ಕುಮಾರಸ್ವಾಮಿಗೆ ವಾಹನವಾಗಿಯೂ ಧ್ವಜವಾಗಿಯೂ ಇರಲೋಸುಗ ಮಯೂರ ಕುಕ್ಕುಟ ರೂಪವಂ ಧರಿಸಿ, ಬ್ರಹ್ಮ ವಿಷ್ಣುಗಳಿಂ ನಮಸ್ಕರಿಸಲ್ಪಟ್ಟು ಇತರರಿಗೆ ಸಮಾನವಿಲ್ಲದ ಪದವಂ ಪಡೆದನು. ಮತ್ತಂ ಸಿಂಹಮುಖ ತಾರಕರು ಭೂತಗಣಂಗಳಲ್ಲಿ ಕೈಲಾಸದಲ್ಲಿ ಅತ್ಯಂತ ಸಂತೋಷದಿಂದ ಮಹದೈಶ್ವರ್ಯ ಸಂಪನ್ನರಾಗಿದಾರೆಂದು ಪೇಳೆ ಅಜಾಮುಖಿಯು ತನ್ನ ಜನನಿಯ ವಾಕ್ಯವಂ ಕೇಳಿ ಎಲೈ ತಾಯೇ! ಸಹೋದರರಾದ ಶೂರಪದ್ಮಾದಿಗಳು ಮಹತ್ತಾದ ಪಾಪವಂ ಮಾಡಿದವರು. ಅವರಿಗೆ ಈ ಪದವಿಯು ಹ್ಯಾಗೆ ಉಂಟಾದುದು! ಇದಂ ಯಥಾರ್ಥವಾಗಿ ಆದರದಿಂ ನನಗೆ ಪೇಳಬೇಕೆನಲು, ಆ ಮಾಯಾದೇವಿಯು ತನ್ನ ಪುತ್ರಿಯ ವಾಕ್ಯವಂ ಕೇಳಿ.

ದುರ್ಗಾದೇವಿ ಶಾಸ್ತಾ ಕುಮಾರರ ವೃತ್ತಾಂತ.

ಎಲೈ ಪುತ್ರಿಯೆ! ಪೂರ್ವದಲ್ಲಿ ಈ ಕಲ್ಪದಲ್ಲಿ ಪ್ರಭಾಕರನೆಂಬ ನೃಪೋತ್ತಮನು ಶಾಕದ್ವೀಪದಲ್ಲಿರುತಿರ್ದನು. ಆತನಿಗೆ ಸುಕುಮಾರಿಯಾದ ಸ್ತ್ರೀಯು ಧರ್ಮಪತ್ನಿಯಾದಳು. ಬಳಿಕ ಆತನು ತನ್ನ ಸ್ತ್ರೀಯಲ್ಲಿ ಅವಳಿಯಾದ ಈರ್ವರಂ ಈರ್ವರು ಪೃಥಕ್ಕಾಗಿ ಕುಮಾರರಂ ಪಡೆದು ಆ ನಾಲ್ವರು ಸುಕುಮಾರರಿಗೂ ತನ್ನ ಮಾತಾಪಿತೃಗಳ ನಾಮಗಳನಿಡೆ ಆಗ ಈ ಭೂಮಿಯಲ್ಲಿ ಪ್ರಥಮದಲ್ಲಿ ಜನಿಸಿದ ಅವಳಿ ಮಕ್ಕಳೀರ್ವರು ಶೂರಪದ್ಮರೆಂದು ಪ್ರಸಿದ್ಧಿಪಡೆದರು. ಪೃಥಕ್ಕಾಗಿ ಜನಿಸಿದ ಈರ್ವರು ಕುಮಾರರು ವನಕ್ಕೆ ಪೋಗೆ ಶೂರಾದಿಗಳು ನ್ಯಾಯಮಾರ್ಗದಿಂ ಸಾವಧಾನ ಚಿತ್ತರಾಗಿ ರಾಜ್ಯವಂ ಆಳುತಿರೆ ಅಗಸ್ತ್ಯಮುನಿಯು ಶೂರಪದ್ಮರ ಸಮೀಪಕ್ಕೆ ಬಂದು ಸಮಸ್ತ ಪಾಪಹರನಾದ ಗುಹಸ್ವಾಮಿಯ ಮಹಾತ್ಮ್ಯೆಯಂ ಪೇಳ್ದನು. ಹಾಗೆಯೇ ತಪೋಸಿಧಿಯಾದ ತೃಣಬಿಂದು ಮಹಾಮುನಿಯು ಸಿಂಹ ತಾರಕರಿಗೂ ಕುಮಾರಸ್ವಾಮಿಯ ಮಹಾತ್ಮೆಯಂ ಪೇಳ್ದನು. ಹಾಗೆ ಯೋಗಿಶ್ರೇಷ್ಠನಾದ ಸರ್ವಲೋಕಕ್ಕುಪಕಾರಿಯಾದ ತತ್ವವೇದಿಯಾದ ವೃಷಭಯೋಗಿಯು ಅವನ ಸಮೀಪಕ್ಕೆ ಬಂದು ಪುಣ್ಯವಾದ ದುರ್ಗಾದೇವಿಯ

ಶಾಸ್ತಾಕುಮಾರನ ಮಹಿಮೆಯಂ ಪೇಳೆ ಆಗ ಕ್ಷತ್ರಿಯರು ನಾಲ್ವರು ಮಹತ್ತಾದ ಋಷಿಗಳ ವಾಕ್ಯವಂ ಕೇಳಿ, ಒಂದಾನೊಂದು ಪುಣ್ಯ ಪರಿಪಾಕದಿಂ ಭಕ್ತಿಯುಕ್ತರಾದರು. ಹಾಗೆ ಶೂರಪದ್ಮರೆಂಬ ಈರ್ವರ್ಗೆ ಷಣ್ಮುಖಸ್ವಾಮಿಯಲ್ಲಿ ಮಹತ್ತಾದ ಭಕ್ತಿಯುಂಟಾದುದು. ಶೂರ ಸಿಂಹ ತಾರಕರಿಗೆ ದುರ್ಗಾದೇವಿಯಲ್ಲಿಯುಂ ಮಹಾ ಶಾಸ್ತಾ ಕುಮಾರನಲ್ಲಿಯು ಪರಮ ಭಕ್ತಿ ಪುಟ್ಟಿದುದು. ಮತ್ತಂ ಶೂರನು ಮಯೂರ ರೂಪಂ ಧರಿಸಿ ಸ್ವಾಮಿಯಂ ವಹಿಸಲಿಚ್ಛೈಸಿದನು. ಪದ್ಮನು ಕುಕ್ಕುಟರೂಪಂ ಧರಿಸಿ ಷಣ್ಮುಖಸ್ವಾಮಿ ಧ್ವಜರೂಪಿನಿಂ ಪ್ರೀತಿಯಂ ಮಾಡಲಿಚ್ಛೈಸಿದನು. ಸಿಂಹ ತಾರಕರೀರ್ವರು ಸಿಂಹ ಗಜರೂಪಂಗಳಂ ಧರಿಸಿ ದುರ್ಗಾದೇವಿಗೂ ಮಹಾ ಶಾಸ್ತಾ ಕುಮಾರರಿಗೂ ವಾಹನತ್ವಮಂ ನಿಚ್ಛೈಸಿದರು. ಹೀಗೆ ಈ ಮಹೀಪಾಲರು ಅವರ ವಾಹನ ಭಾವವಂ ನಿಶ್ಚೈಸಿದವರಾಗಿ ಅವರ ಪದಗಳಂ ವಹಿಸಲು ಅತ್ಯಂತ ಭಕ್ತಿಯುಕ್ತರಾಗಿ ಪುತ್ರರಿಗೆ ರಾಜ್ಯವನ್ನಿತ್ತು ತಾವು ತಪಸ್ಸುಮಾಡಲು ಪೋಗಿ, ನಾಲ್ವತ್ತು ಸಾವಿರ ವರ್ಷ ತಪವನ್ನಾಚರಿಸಿದರು. ಆಗ ದೇವತೆಗಳು ಪರಮೇಶ್ವರನ ಸೇವಾನಿಮಿತ್ತವಾಗಿ ಕೈಲಾಸ ಪರ್ವತಕ್ಕೆ ಪೋಗಿ ತಮ್ಮ ವಾಹನಂಗಳಂ ಗಿರಿಯ ಅಧೋಭಾಗದಲ್ಲಿರಿಸಿ ತಾವು ಸಂತೋಷದಿಂ ಮಹೇಶ್ವರನ ಸಮಿಾಪವನ್ನೈದಿದರು. ಆ ಸಮಯದಲ್ಲಿ ಬ್ರಹ್ಮಾದಿ ದೇವತೆಗಳ ವಾಹನಗಳು ಮಹೇಶ್ವರನಾದ ಕುಮಾರಸ್ವಾಮಿಯ ಮಯೂರ ಕುಕ್ಕುಟ ರೂಪಂಗಳು ದುರ್ಗಾದೇವಿಗೆ ವಾಹನವಾದ ಸಿಂಹವು ಮಹಾ ಶಾಸ್ತಕುಮಾರನ ವಾಹನವಾದ ಗಜಸಮಿಾಪಕ್ಕೆ ಪೋಗಿ ಆ ಮಯೂರಾದಿಗಳಂ ನೋಡಿ, ಎಲೈ ಮಯೂರಾದಿಗಳಿರಾ! ಪ್ರಭಾಕರನ ನಾಲ್ವರು ಪುತ್ರರು ನಿಮ್ಮ ಪದ ಪ್ರಾಪ್ತಿಗೋಸುಗ ಅತ್ಯಂತ ವಿಶೇಷವಾದ ಪಂಚಾಗ್ನಿ ಮಧ್ಯದಲ್ಲಿ ನಿಂತು ತಪವಂ ಮಾಡುತಿದಾರೆ. ಮಯೂರಾದಿಗಳು ಬ್ರಹ್ಮ ವಿಷ್ಣ್ವಾದಿಗಳಿಗೆ ವಾಹನವಾದ ಗರುಡ ಹಂಸಾದಿ ವಾಕ್ಯವಂ ಕೇಳಿ ನಮ್ಮ ಸಂಬಂಧ ಪ್ರಾಪ್ತಿ ಅವರಿಗೆ ಹ್ಯಾಗೆ ಉಂಟಾದೀತೆಂದು ಚಿಂತಿಸಿ ಅತಿಕೋಪಯುಕ್ತರಾಗಿ ಪ್ರಭಾಕರನ ಕುಮಾರರ ಸಮಿಾಪಕ್ಕೆ ಪೋಗಿ ವಿಶೇಷವಾದ ಅಗ್ನಿಜ್ವಾಲೆಯುಂ ಕೆಡಿಸಿ ನೀವು ಯೇನುಕಾರಣ ತಪಸ್ಸುಮಾಡುತ್ತೀರೆಂದು ಕೇಳೆ ಆಗ ನಾಲ್ವರು ಮಹೀಪಾಲರು ಮಯೂರ ಮುಂತಾದವರ ವಾಕ್ಯವಂ ಕೇಳಿ ನಡುಗುತಿರ್ಪ ಶರೀರವುಳ್ಳವರಾಗಿ ತಮ್ಮ ವಾಂಛೆಯುಂ ಪೇಳೆ ಆಗ ಮಯೂರಾದಿಗಳು ತಪವಂ ಮಾಡುತಿರ್ಪ ಕ್ಷತ್ರಿಯರ ವಾಕ್ಯವುಂ ಕೇಳಿ ಅವುದಾನೊಂದು ಕಾರಣದಿಂ ನಮ್ಮ ಪದವನಿಚ್ಛೈಸಿದಿರೋ ಅದುಕಾರಣದಿಂ ನೀವು ಮಯೂರಾದಿಗಳಾಗಿ ಪೋಗಿ ಯೆನಲು ಮಯೂರಾಕಾರವಂ ಧರಿಸಿ ಮಯೂರ ಮುಂತಾ

ದಕ್ಕೆ ಮಹತ್ತಾದ ಸ್ತೋತ್ರವಂ ಮಾಡೆ ಆ ಮಯೂರಾದಿಗಳು ಭೂತಂಗಳಂ ನೋಡಿ ಪ್ರಸನ್ನರಾಗಿ ಎಲೈ ಭೂತಗಳಿರಾ! ನೀವು ಇಲ್ಲಿಯೆ ವಾಸಮಾಡಿಕೊಂಡಿರಿ ನಿಮ್ಮ ಅಭೀಷ್ಟವಾದೀತೆಂದು ಪೇಳೆ ಭೂತಗಳು ಅವರ ವಾಕ್ಯವಂ ಕೇಳಿ ಅಂಡಾಭರಣನೆಂಬ ಗಣಾಧೀಶ್ವರನ ಭೂತಗಣಂಗಳಂ ಬೆರೆಸಿ ಮುದದಿಂದಿರುತಿರ್ದವು. ಎಲೈ ಶೌನಕನೆ! ಬಳಿಕ ಬ್ರಹ್ಮಾದಿ ದೇವತೆಗಳು ಪರಮೇಶ್ವರನಾದ ಮಹಾದೇವಂಗೆ ನಮಸ್ಕರಿಸಿ ಮರಳಿ ಬಂದು ತಮ್ಮ ವಾಹನಂಗಳ ಮೇಲೆ ಕುಳಿತು ಸಂತೋಷಯುಕ್ತರಾಗಿ ತಮ್ಮ ಸ್ಥಾನಂಗಳಿಗೆ ಪೋದರೆಂದು ಮಾಯಾದೇವಿಯು ಅಜಮುಖಿಗೆ ಪೇಳ್ದುದಂ ಸೂತಂ ಶೌನಕಾದಿಗಳಿಗೆ ಪೇಳ್ದನೆಂಬಲ್ಲಿಗೆ, ಉಪದೇಶಕಾಂಡದಲ್ಲಿ ನಾಲ್ಕನೆಯ ಅಧ್ಯಾಯವು ಸಂಪೂರ್ಣಮಾದುದು.

ಐದನೆಯ ಅಧ್ಯಾಯವು.

ಗಣಾಧೀಶನಾದ ಅಂಡಾಭರಣನ ವೃತ್ತಾಂತ.

ಅನಂತರದಲ್ಲಿ ಅಂಡಾಭರಣನ ಅನಂತಕೋಟಿ ಭೂತಗಣಂಗಳೊಳು ಬಲಶಾಲಿಗಳಾದ ಈ ನಾಲ್ಕು ಭೂತಂಗಳು ಇರುತಿರ್ದರು. ಆ ಸಮಯದಲ್ಲಿ ದೇವಾಸುರರಿಗೆ ಯುದ್ಧವಾಗಿ ಅಸುರರಿಂದೇವತೆಗಳು ಪಲಾಯನವನ್ನೈದಿದರು. ಆಗ ದೇವತೆಗಳು ಸಮಸ್ತ ಭೂತಗಣಂಗಳಿಗೆ ಆಸ್ಪದವಾದ ಕೈಲಾಸಗಿರಿಗೆ ಬಂದು ಅಲ್ಲಿರ್ಪ ಸಮಸ್ತ ಭೂತಗಣಂಗಳಿಗೆ ನಮಸ್ಕಾರವಂ ಮಾಡಿ ಅತ್ಯಂತ ರೋದನವಂ ಮಾಡುತ ಆ ಭೂತಂಗಳಂ ಪ್ರಾರ್ಥಿಸೆ ಆಗ ನಾಲ್ಕು ಭೂತಗಳು ರೋದನವಂ ಮಾಡುತಿರ್ಪ ದೇವತೆಗಳ ವಾಕ್ಯವಂ ಕೇಳಿ ಭೂಲೋಕಕ್ಕೆ ಬಂದು ದಾರುಲೋಷ್ಟ ಮುಂತಾದ ಆಯುಧಗಳಿಂ ಬಹು ದೈತ್ಯರಂ ಸಂಹರಿಸಿ ದೈತ್ಯರು ಪರಾಜಿತರಾದ ಬಳಿಕ ಭೂಲೋಕದಲ್ಲಿರ್ಪ ಭೂತಂಗಳಂ ತಮ್ಮ ತಮ್ಮ ಸ್ಥಾನಂಗಳಿಗೆ ಕಳುಹಿ ತಾವು ತಾವು ಅಂಡಾಭರಣ ಭೂತಂಗಳಂ ಕೂಡಿ ಮುದದಿಂದಿರುತಿರ್ದರು. ಬಳಿಕ ದೇವತೆಗಳು ಸಂತುಷ್ಟರಾಗಿ ತಮ್ಮ ಲೋಕಂಗಳಿಗೆ ಪೋದರು. ಆ ಸಮಯದಲ್ಲಿ ದನುಜೋತ್ತಮನಾದ ಅಸುರೇಂದ್ರನು ಬಂದು ಕಡೆಯಲ್ಲಿ ಮರೆಯಾಗಿದ್ದು ಗಣಂಗಳಿಗೆ ಕರ್ತನಾದ ಅಂಡಾಭರಣನೆಂಬ ಗಣಾಧೀಶ್ವರನ ಬಳಿಗೆ ಶೀಘ್ರವಾಗಿ ಪೋಗಿ ವಿನಯದಿಂ ನಮಸ್ಕಾರವಂ ಮಾಡಿ ಭೂತಂಗಳು ಮಾಡಿದ ಕಾರ್ಯವಂ ಬಿನ್ನಪಂಗೈಯ್ಯೆ ಗಣಾಧೀಶ್ವರನಾದ ಅಂಡಾಭರಣನು ಅಸುರೇಂದ್ರನ ವಾಕ್ಯವಂ ಕೇಳಿ ಕೋಪದಿಂ ಭೂತಂಗಳನ್ನು ನೋಡಿ, ಎಲೆ ಭೂತ

ಗಳಿರಾ ! ನಮ್ಮಾಜ್ಞೆಯಿಲ್ಲದೆ ಆವುದಾನೊಂದು ಕಾರಣದಿಂ ರಣದೊಳು ಬಹು ದೈತ್ಯರಂ ಸಂಹರಿಸಿ ಶರಣಾರ್ಥಿಗಳಾದ ದೇವತೆಗಳಿಗೆ ಉಪಕಾರವನ್ನು ಮಾಡಿದಿರೋ ಅದುಕಾರಣದಿಂ ನೀವು ಅತಿ ಕ್ರೂರವಾದ ಅಸುರಭಾವವನ್ನೈದಿ ನಮ್ಮ ವಚನಬಲದಿಂದ ದೇವತೆಗಳ್ಗೆ ನಿತ್ಯವೂ ತಾಪವಂ ಮಾಡಿರೆಂದು ಕೋಪದಿಂ ಭೂತಂಗಳಿಗೆ ಶಾಪವನ್ನಿತ್ತು ಅತ್ಯಂತ ಸಂತೋಷಯುಕ್ತನಾದ ಅಸುರೇಂದ್ರನಂ ತನ್ನ ಪುರಿಗೆ ಕಳುಹಿದನು. ಅನಂತರದಲ್ಲಿ ಭೂತಂಗಳು ದೇವತೆಗಳಂ ಶತ್ರುಗಳಾಗಿ ದಯಾವಿಹೀನರಾಗಿ ಆ ದೇವತೆಗಳಿಗೆ ಘೋರವಾದ ಉಪದ್ರವವಂ ಮಾಡಿದರು. ಅನಂತರದಲ್ಲಿ ಒಂದಾನೊಂದು ಕಾಲದಲ್ಲಿ ಭೂತಂಗಳು ಪೂರ್ವವೈರವನ್ನೆನೆದು ಕೋಪದಿಂ ಕುಮಾರಸ್ವಾಮಿಗೆ ವಾಹನಗಳಾದ ಮಯೂರ ಕುಕ್ಕುಟಗಳ ಸಮೀಪಕ್ಕೆ ಪೋಗಿ ದೇವತೆಗಳ ವಾಹನಂಗಳು ಗರ್ವದಿಂ ನಿಮಗೆ ನಮಸ್ಕಾರವಂ ಮಾಡದೆ ಇರುತಿರ್ದಾರೆಂದು ಪೇಳ್ವ ಆ ಕುಕ್ಕುಟ ಮಯೂರಗಳು ದೇವತೆಗಳ ವಾಹನಂಗಳಂ ಸಂಹರಿಸಿದವು.

ಬಳಿಕ ಕುಮಾರಸ್ವಾಮಿಯು ದೇವತೆಗಳಿಗೆ ಭೂತಂಗಳಿಂದಾದ ಚೇಷ್ಟೆಯಂ ಕೇಳಿ ದೈತ್ಯಜನ್ಮದಲ್ಲಿ ಪುಟ್ಟಿರೆಂದು ಶಾಪವನ್ನಿತ್ತನು. ಬಳಿಕ ಭೂತಗಳು ನಾಲ್ಕು ದಾನವತ್ವವನ್ನೈದಿದರು. ಆ ನಾಲ್ವರೊಳು ಶೂರಪದ್ಮನೆಂದು ಪೆಸರುಳ್ಳ ಭೂತಂಗಳು ಶೂರಪದ್ಮನೆಂಬ ಅಸುರನಾಗಿ ಪುಟ್ಟಿ ನನಗೆ ಕುಮಾರನಾಗಿ ಘೋರರೂಪಿನಿಂ ದೇವತೆಗಳಂ ಬಾಧಿಸುತ್ತಿರೆ, ಆಗ ಕುಮಾರಸ್ವಾಮಿಯು ತನಗೆ ಜ್ಯೇಷ್ಠಪುತ್ರನಾದ ಶೂರಪದ್ಮನಂ ಸಂಹರಿಸಿದನು. ಬಳಿಕ ಶೂರಪದ್ಮನು ಪರಮಾತ್ಮನಾದ ಕುಮಾರಸ್ವಾಮಿಯ ವಾಹನವಾದ ಬರ್ಹಿಕುಕ್ಕುಟ ರೂಪವಂ ಧರಿಸಿ ಬ್ರಹ್ಮಾದಿಗಳಿಂ ನಮಸ್ಕಾರಕ್ಕೆ ಯೋಗ್ಯವಾಗಿರುತಿರ್ದನು. ದೇವನಾದ ಕುಮಾರಸ್ವಾಮಿಯ ಪೂರ್ವವಾಹನಂಗಳಾದ ಮಯೂರ ಕುಕ್ಕುಟಂಗಳ ಪೂರ್ವದಲ್ಲಿ ಭೂತಂಗಳಂ ಹೊಂದಿ ಘಾತವಂ ಮಾಡಿದುದರಿಂದ ಹಾಗೆ ಭೂತಂಗಳ ವಾಕ್ಯವಂ ಕೇಳಿ ದೇವತೆಗಳ ವಾಹನಂಗಳಾದ ಗರುಡಾದಿ ವಾಹನಂಗಳ ಸಂಹಾರದಿಂ ಕುಮಾರಸ್ವಾಮಿಯಂ ಧರಿಸಲು ಯೋಗ್ಯಂಗಳಲ್ಲದೆ ಕಾಂಚೀಪುರಿಗೆ ಪೋಗಿರಲು ಉತ್ಕೃಷ್ಟವಾದ ಮಯೂರವು ಶುಕಶರೀರವಂ ಧರಿಸಿ ನಂದಿ ಗುಹನಂ ಧ್ಯಾನಿಸುತ ನಿಜಕಾಲ ಪರ್ಯಂತರ ವಾಸವಂ ಮಾಡಿ ಶರೀರಾಂತ್ಯದಲ್ಲಿ ಮಹಾಜ್ಞೆಯಿಂ ಸಾಯುಜ್ಯವಂ ಪಡೆದರು. ಎಲೈ ಸುತೆಯೆ ! ನಿನಗೆ ಜ್ಯೇಷ್ಠರಾದ ಸಿಂಹತಾರಕರು ಪ್ರಸಿದ್ಧ ಪಡೆದ ನನ್ನ ಕುಮಾರರೀರ್ವರೂ ಗುಹನಿಂ ಸಂಹಾರವಾಗಿ ಭೂತಗಣಂಗಳಾಗಿ ನಂದಿಕೇಶ್ವರಂಗೆ ಅತಿ ಪ್ರೀತರಾಗಿ ಕೈಲಾಸ ಪರ್ವತದಲ್ಲಿರುತಿರ್ದಾರೆ. ಮತ್ತಮವರೀರ್ವರು ಕಲ್ಪಾಂತದಲ್ಲಿ ದುರ್ಗಾದೇವಿ

ಗೆಯೂ ಮಹಾ ಶಾಸ್ತ್ರಾಕುಮಾರಂಗೆಯೂ ಸಿಂಹಗಜ ರೂಪಗಳಂ ಧರಿಸಿ ಕ್ರಮದಿಂ ವಾಹನಂಗಳಾದರು. ಆ ಕಲ್ಪಾಂತದಲ್ಲಿಯೆ ಆ ದುರ್ಗಾದೇವಿ ಶಾಸ್ತ್ರಾಕುಮಾರರಿಗೆ ಪೂರ್ವ ವಾಹನಂಗಳಾದ ಸಿಂಹ ಗಜಂಗಳು ವೃಷಭೇಶ್ವರನ ಸಾರೂಪ್ಯವನ್ನೈದಿದರೆಂದು ಪೇಳೆ, ಅಜಮುಖಿಯು ಅದಂ ಕೇಳಿ, ಎಲೈ ಮಾತೃವೆ! ದುರ್ಗಾದೇವಿ ಮಹಾ ಶಾಸ್ತ್ರಾಕುಮಾರರಿಗೆ ವಾಹನಂಗಳಾದ ಸಿಂಹ ಗಜಂಗಳು ಹ್ಯಾಗೆ ವೃಷಭೇಶ್ವರನ ಸಾರೂಪ್ಯವನ್ನೈದಿದರೋ ಅದಂ ನನಗೆ ಪೇಳಬೇಕು ಯೆನಲು ಮಾಯಾದೇವಿಯು ಇಂತೆಂದಳು.

ಸಿಂಹ-ಗಜಗಳು-ವೃಷಭೇಶ್ವರಾವತಾರವನ್ನು ಪಡೆಯುವಿಕೆ.

ಎಲೈ ಸುತೆಯೆ! ಪೂರ್ವದಲ್ಲಿ ಮಹಾದೇವನು ಗೌರಿರೂಪವಾದ ಮಾಧವನೊಳು ದುರ್ಗಾದೇವಿಯಂ ಶಾಸ್ತ್ರಾಕುಮಾರನಂ ಸೃಷ್ಟಿಸಿ, ವಾಹನಂಗಳಿಗೆ ಒಡೆಯನಾದ ಅತಿ ಧರ್ಮಸ್ವರೂಪನಾದ ವೃಷಭೇಶ್ವರನಂ ನೋಡಿ, ಈ ದುರ್ಗಾದೇವಿಗೂ ಶಾಸ್ತ್ರಾಕುಮಾರನಿಗೂ ಶೀಘ್ರದಿಂ ವಿವಾಹವಂ ಮಾಡೆಂದು ನಿರೂಪಿಸೆ, ವೃಷಭೇಶ್ವರನು ಪರಮೇಶ್ವರನ ವಾಕ್ಯವಂ ಕೇಳಿ, ಹೃದಯದಲ್ಲಿ ಚಿಂತಿಸಿ, ಆ ಕೈಲಾಸ ಪರ್ವತಂಗಳಿರ್ಪ ಮೃಗಗಳ ಮಧ್ಯದಲ್ಲಿ ಒಂದು ಸಿಂಹವಂ ಮಹಾಸತ್ವವುಳ್ಳ ಒಂದು ಗಜವಂ ಕರೆಸಿ, ಎಲೈ ಗಜ ಸಿಂಹಗಳಿರಾ! ಈ ದುರ್ಗಾದೇವಿಗೂ ಶಾಸ್ತ್ರಾಕುಮಾರರಿಗೂ ಶ್ರೇಷ್ಠಗಳಾದ ವಾಹನಂಗಳಾಗೆಂದು ನಿರೂಪಿಸೆ, ಆ ಸಿಂಹ ಗಜಗಳು ವೃಷಭೇಶ್ವರನ ವಾಕ್ಯವಂ ಕೇಳಿ, ಎಲೈ ಸ್ವಾಮಿಯೆ! ನಿಮ್ಮ ಸಾರೂಪ್ಯವನಪೇಕ್ಷಿಸಿದ ನಮಗೆ ಏನು ಕಾರಣ ಇವರಿಗೆ ವಾಹನವಾಗಿರೆಂದು ನಿರೂಪಿಸಿದ್ದೀರಿ; ಎನಲು ವೃಷಭೇಶ್ವರನು ಎಲೆ, ಸಿಂಹ ಗಜಂಗಳಿರಾ! ಈಗ ನೀವು ನಮ್ಮಾಜ್ಞೆಯಿಂ ದುರ್ಗಾದೇವಿಗೂ ಶಾಸ್ತ್ರಾಕುಮಾರರಿಗೂ ವಾಹನವಾಗಿರ್ದು ಬಹುಕಾಲ ನಮ್ಮಂ ಧ್ಯಾನಿಸಿ ನಮ್ಮ ಸಾರೂಪ್ಯವನೈದಿ ಎಂದು ನಿರೂಪಿಸಿ ಅವರಿಗೆ ವಾಹನಭಾವವಂ ಕಲ್ಪಿಸಿದರು. ಹಾಗೆ ಆ ಸಿಂಹ ಗಜಗಳು ಅವರಿಗೆ ವಾಹನಂಗಳಾಗಿರುತಿರ್ದರು. ಮರಳಿ ಆ ಸಿಂಹ ಗಜಂಗಳು ಅಧ್ಯಯನಾದ ವೃಷಭೇಶ್ವರನಂ ಬಹುಕಾಲ ಧ್ಯಾನಿಸಿ ದುರ್ಗಾದೇವಿ ಶಾಸ್ತ್ರಾಕುಮಾರರಂ ಬಿಟ್ಟು ವೃಷಭೇಶ್ವರನ ಸಾರೂಪ್ಯವನೈದಿದರು. ಆಗ ದುರ್ಗಾ ಶಾಸ್ತ್ರಾಕುಮಾರರು ನಂದೀಶ್ವರನ ಸಾನ್ನಿಧ್ಯವನೈದಿ ವಾಹನಂಗಳಂ ತಮಗೆ ಕೊಡಬೇಕೆಂದು ಯಾಚಿಸೆ ನಂದಿಕೇಶ್ವರನಾ ವಾಕ್ಯವಂ ಕೇಳಿ, ಸಿಂಹವಕ್ತ್ರ ತಾರಕರಂ ಕರೆದು, ಎಲೈ ಸಿಂಹಮುಖ ತಾರಕರುಗಳಿರಾ! ನೀವೀರ್ವರು ಇವರ್ಗೆ ವಾಹನಂಗಳಾಗಿರೆಂದು ಪೇಳೆ ಶಿವಾಜ್ಞೆಯಿಂ ಸಿಂಹ ತಾರಕರಂ ದುರ್ಗಾ ಶಾಸ್ತ್ರಾಕುಮಾರರಿಗೆ ವಾಹನಂಗಳಾಗಿ ಇತ್ತನು. ದುರ್ಗಾ ಶಾಸ್ತ್ರಾಕುಮಾರರುಗಳಿಗೆ ವಾಹನಂಗ

ಳಾದ ಸಿಂಹ ಗಜಂಗಳಿಗೆ ವೃಷಭ ಸಾರೂಪ್ಯವಂ ನಿನಗೆ ಪೇಳ್ದೆನೆಂದು ಮಾಯಾ ದೇವಿಯು ಅಜಾಮುಖಿಗೆ ಪೇಳ್ದ ಕಥಾ ವೃತ್ತಾಂತಮಂ ಸೂತಂ ಶೌನಕಾದಿ ಗಳಿಗೆ ನಿರೂಪಿಸಿದನೆಂಬಿಲ್ಲಿಗೆ, ಉಪದೇಶಕಾಂಡದೊಳು ಐದನೆಯವು ಅಧ್ಯಾಯವು ಸಮಾಪ್ತಮಾದುದು.

ಆರನೆಯ ಅಧ್ಯಾಯವು.

ಅಜಾಮುಖಿಯ ಪೂರ್ವ ವೃತ್ತಾಂತ ಕಥನಂ.

ಎಲೈ ಋಷಿಗಳಿರಾ! ಅನಂತರದಲ್ಲಿ ಅಜಾಮುಖಿಯು ಅತ್ಯಂತ ಆಶ್ಚರ್ಯ ಯುಕ್ತೆಯಾಗಿ ತನ್ನ ತಾಯಿಯಾದ ಮಾಯಾದೇವಿಯೊಡನೆ ತನ್ನ ಪೂರ್ವ ವೃತ್ತಾಂತವಂ ಪೇಳಬೇಕೆನಲು ಮಾಯಾದೇವಿಯದಂ ಕೇಳಿ, ಎಲೈ ಸುತೆಯೆ! ಗೋಮೇಧಿಕವೆಂಬ ದ್ವೀಪದಲ್ಲಿ ವಿಶಿಷ್ಟನೆಂಬ ಬ್ರಾಹ್ಮಣೋತ್ತಮನು ಇರು ತಿರ್ಪನು. ಆತಂಗೆ ಸುಭದ್ರೆಯೆಂಬ ಧರ್ಮಪತ್ನಿಯುಂಟು. ಧರ್ಮಮತಿಯಾದ ವಿಶಿಷ್ಟಬ್ರಾಹ್ಮಣನು ಸುಭದ್ರೆಯೆಂಬ ಧರ್ಮಪತ್ನಿಯಲ್ಲಿ ನಿನ್ನಂ ಪೆತ್ತನು. ಆ ಜನ್ಮದಲ್ಲಿ ನೀನು ಚಿತ್ರಲೇಖೆ ಎಂದು ಪ್ರಸಿದ್ಧಿಪಡೆದಿರ್ದೆ. ಮತ್ತಂ ಭೂಚಕ್ರ ವೆಂಬ ಪುರದಲ್ಲಿ ಹರಿಜನ್ಮನೆಂಬ ಬ್ರಾಹ್ಮಣನು ಇರುತಿರ್ಪನು. ಆತಂಗೆ ಪುಂಡ ರೀಕನೆಂಬ ಪುತ್ರನು ಪುಟ್ಟಿ ಅತಿ ಮನೋಹರವಾದ ನಿನ್ನಂ ವಿವಾಹಮಾಡಿ ಕೊಂಡು ವಿಷ್ಣುಭಕ್ತನಾಗಿರಲು ಬಳಿಕ ಬಹು ಕಾಲದಮೇಲೆ ಹರಿಯು ಆ ವಿಪ್ರಂಗೆ ಪ್ರಸನ್ನನಾಗಿ ಉತ್ತಮವಾದ ಒಂದು ವರವನ್ನೀಯಲು ಆ ಪುಂಡರೀ ಕನು ದಿನದಿನದಲ್ಲಿ ನೂರು ವರಹ ಕೊಡುವ ಮಹಾಕಾಂತಿಯುಳ್ಳ ರತ್ನವಂ ಪಡೆದು ವೇದಶಾಸ್ತ್ರಂಗಳಂ ಬಲ್ಲ ಅನೇಕ ಶಿಷ್ಯರಿಂದಾವೃತನಾಗಿ ವೇದಪಾರಂಗತ ನಾಗಿ ನಿತ್ಯಾಧ್ಯಾಯಿಯಾಗಿ ಕ್ರೋಧವಂ ಜಯಿಸಿದವನಾಗಿ ನಿತ್ಯವೂ ಧರ್ಮಪರಾ ಯಣನಾಗಿ ಅನ್ನದಾನೈಕ ನಿರತನಾಗಿ ಅತ್ಯಂತ ಸರ್ವದಾನ ನಿರತನಾಗಿರುತಿರ್ದನು. ಆ ಪುಂಡರೀಕನೆಂಬ ವಿಪ್ರನಿಗೆ ಧರ್ಮಪತ್ನಿಯಾದ ನೀನು ರೂಪ ಯೌವ್ವನ ಸಂಪನ್ನೆಯಾಗಿ ಪಾಪವಶದಿಂ ಮನ್ಮಥ ವಶವರ್ತಿಯಾಗಿ ಅನ್ಯಪುರುಷರಲ್ಲಿ ಆಸಕ್ತೆ ಯಾಗಿ ಕೆಲವುಕಾಲ ತನ್ನ ಜಾರತನವ ಕಾಣಿಸಿಕೊಳ್ಳದಿರ್ದು ಈ ಪ್ರಕಾರದಿಂ ನಿರ್ಲಜ್ಜೆಯಾಗಿ ಆತಂಗೆ ಶಿಷ್ಯರಾದ ಬ್ರಾಹ್ಮಣೋತ್ತಮರಂ ಮರಳಿ ಮನೆಗೆ ಬಂದ ಬಂಧುಗಳಂ ಯತಿಗಳಂ ತಪಸ್ವಿಗಳಂ ದಾನಾರ್ಥವಾಗಿ ಬಂದ ಮತ್ತೆ ಕೆಲಂಬರಂ ದೈವವಶದಿಂ ಮಾರ್ಗಾಸಕ್ತರಾಗಿ ಬಂದವರಂ ಮೋಹಿಸಿ ಮೋಹಿಸಿ ತನ್ನ ವಶಮಾಡಿಕೊಂಡು ಬಲಾತ್ಕಾರದಿಂ ರಮಿಸಿ ಮಿಕ್ಕಾದ ಮನುಷ್ಯರೊಳಗಾವ

ನಾದೊಡಂ ಕಂಡು ಮೋಹಿಸುತಿರ್ದೆ. ನಿನಗೆ ವಶವಾದ ಭರ್ತೃವಾದ ಪುಂಡರೀಕ ಬ್ರಾಹ್ಮಣನು ನಿನ್ನಲ್ಲಿ ಅತ್ಯಂತ ಸ್ನೇಹದಿಂ ರೂಪಲಾವಣ್ಯನಿಧಿಯಾದ ನಿನ್ನನ್ನು ತಿಳಿಯದವನಂತೆಡೆಬಿಡದೆ ಇರುತಿರ್ದನು. ಆಗ ತಪಃಶ್ರೇಷ್ಠನಾದ ದೂರ್ವಾಸಮುನಿಯು ಅನೇಕ ಶಿಷ್ಯರೊಡನೆ ಪುಂಡರೀಕನಿದ್ದ ಊರಿಗೆ ಬರಲು ದ್ವಿಜೋತ್ತಮನಾದ ನಿನ್ನ ಭರ್ತೃವು ದೂರ್ವಾಸಮುನಿಯಂ ಕಂಡು ಎದುರಾಗಿ ಪೋಗಿ ಆತನ ಶಿಷ್ಯರೂ ಸಹ ದೂರ್ವಾಸಮುನಿಯಂ ರಮ್ಯವಾದ ತನ್ನ ಮನೆಗೆ ಬಹುಮಾನದಿಂ ಕರೆದುಕೊಂಡು ಬಂದು ತನ್ನ ಗೃಹದಲ್ಲಿ ಒಂದು ಪ್ರದೇಶದಲ್ಲಿರ್ಪ ಮಂಟಪದಲ್ಲಿ ವಾಸವಮಾಡಿಸಿ ತಾನು ಅಂತಃಪುರಕ್ಕೆ ಪೋಗಿ ನಿನ್ನನ್ನು ನೋಡಿ ಆ ಋಷಿಗಳಿಗೆ ಒಳಿತಾದ ಭಿಕ್ಷಾನ್ನವನಿತ್ತು ಶೀಘ್ರದಿಂ ಬಾರೆಂದು ಪೇಳ್ದು ನಿನ್ನನ್ನು ಕಳುಹೆ ಆಗ ನೀನು ಪತಿಯ ವಾಕ್ಯವಂ ಕೇಳಿ ಹಾಗೆಯೇ ಆಗಲೆಂದು ಅಂಗೀಕರಿಸಿ ಅತ್ಯಂತ ಮನೋಹರವಾದ ಭಿಕ್ಷಾನ್ನವ ತೆಗದುಕೊಂಡು ದೂರ್ವಾಸನ ಸಮೀಪಕ್ಕೆ ಬಂದು ಭಿಕ್ಷವಂ ತಂದೆನೆಂದು ಬಿನ್ನಪಂಗೈಯ್ಯೆ ಆ ದೂರ್ವಾಸನು ಆಕೆಯ ವಾಕ್ಯವಂ ಕೇಳಿ ತಾನು ಭಿಕ್ಷಾನ್ನವಂ ಭುಂಜಿಸಿ ತೃಪ್ತಿಯಾಗಿದ್ದಕಾರಣ ನೀನು ತಂದ ಅನ್ನವಂ ಭುಂಜಿಸದೆ ಅಂಗೀಕರಿಸದೆ ಇರುತಿರ್ದನು. ಆಗ ನೀನು ಆ ದೂರ್ವಾಸನಂ ಕಂಡು ಕಾಮಾತುರೆಯಾಗಿ ಆತನ ಮೇಲೆ ಮೋಹಿಸಿ ಮೆಲ್ಲನೆ ಹಿಂತಿರುಗಿ ಬಂದವಳಾಗಿ ಒಂದು ಮೂಲೆಯಲ್ಲಿ ಅಡಗಿದ್ದು ಋಷೀಶ್ವರನು ನಿದ್ರೆಗೈದ ಸಮಯವಂ ತಿಳಿದು ಆತನ ಸಮೀಪಕ್ಕೆ ಪೋಗಿ ಆತನನ್ನಾಲಂಗಿಸಲು, ಆತನು ಎಚ್ಚೆತ್ತವನಾದನು. ಆಗ ನೀನು ಭಯಯುಕ್ತೆಯಾಗಿ ಪಲಾಯನ ಪರೆಯಾಗಿ ಆ ಗ್ರಾಮದಲ್ಲಿ ವೀಧಿಯಲ್ಲಿರ್ಪ ಅತ್ಯುನ್ನತವಾದ ಅನೇಕ ಶಾಖೆಗಳುಳ್ಳ ವಟವೃಕ್ಷದ ಮೂಲದಲ್ಲಿ ವಾಸವಾಗಿರ್ಪ ಅಜಸಮೂಹವಂ ಪ್ರವೇಶಿಸಿ ಅಡಗಿರ್ದೆ, ಬಳಿಕ ದೂರ್ವಾಸನೆದ್ದು ಧರ್ಮಗುಪ್ತನಿಗೆ ನಡೆದ ವೃತ್ತಾಂತವಂ ಪೇಳ್ದು ಪಾಪಿನಿಯಾದ ಅವಳಂ ಕರೆದುಕೊಂಡು ಬಾರೆಂದು ಕಳುಹಿದನು. ಆಗ ಧರ್ಮಗುಪ್ತನು ಪೊರಮಟ್ಟು ಗೃಹದಲ್ಲಿ ಆಕೆಯಂ ಕಾಣದೆ ಮರಳಿ ಋಷಿಯ ಸಮೀಪಕ್ಕೆ ಬಂದು ಆಕೆಯಂ ಕಾಣೆನೆಂದು ಪೇಳೆ, ಆಗ ದೂರ್ವಾಸಮುನಿಯು ಜ್ಞಾನದೃಷ್ಟಿಯಿಂ ವಿಚಾರಿಸಿ ಪೂರ್ವದಲ್ಲಿ ಆ ವಟವೃಕ್ಷದ ಮೂಲದಲ್ಲಿ ಅಡಗಿರ್ಪ ಮೇಷ ಸಮೀಪದಲ್ಲಿರ್ಪ ಆಕೆಯಂ ತಿಳಿದು ಮರಳಿ ಧರ್ಮಗುಪ್ತನಂ ಕರೆದು, ಎಲೈ ಧರ್ಮಗುಪ್ತನೆ! ನೀನು ಆ ವಟವೃಕ್ಷದ ಮೂಲದಲ್ಲಿಹ ಅಜಸಮೂಹದಲ್ಲಿ ಅಡಗಿರ್ಪ ಆಕೆಯಂ ವಟವೃಕ್ಷದ ಅಗ್ರದಲ್ಲಿರಿಸಿ, ಎಲೈ ದುರಾಚಾರಿಣೀ! ನೀನು ಸ್ತಂಭದಂದದಿ ಅಲ್ಲಿಯೇ ಇರೆಂದು ಶಾಪವನಿತ್ತು ಶೀಘ್ರದಿಂ ಬಾರೆಂದು ಕಳುಹೆ ಆತನು ಅದೇ

ಪ್ರಕಾರವೆ ಮಾಡಿದನು. ಅನಂತರದಲ್ಲಿ ಪ್ರಾತಃಕಾಲದಲ್ಲಿ ತಪೋಧನನಾದ ಆಕೆಯ ಪತಿಯು ನದಿಗೆ ಪೋಗಿ ತನ್ನ ನಿಯಮಕಾರ್ಯಗಳ ಸಮಾಪನೆಯಂ ಮಾಡಿ ಬರುವ ಸಮಯದಲ್ಲಿ ವೃಕ್ಷಾಗ್ರದೊಳಿರ್ಪ ತನ್ನ ಸ್ತ್ರೀಯಂ ಕಂಡನು. ಹಾಗೆಯೇ ಅಲ್ಲಿರ್ಪ ಜನರು ಆಕೆಯಂ ಕಂಡು ಆಶ್ಚರ್ಯಯುಕ್ತರಾಗಿ ಪುಂಡರೀಕನ ಸ್ತ್ರೀಯು ವೃಕ್ಷಾಗ್ರದೋಳ್ ಇರುವ ಕಾರಣವೇನೆಂದು ಅನ್ಯೋನ್ಯವಾಗಿ ಪ್ರಸಂಗವಂ ಮಾಡುತಿರೆ, ಬಳಿಕ ಪುಂಡರೀಕನು ತನ್ನ ಶಿಷ್ಯರೊಡನೆ ವೆರಸಿ ದೂರ್ವಾಸರ ಸಮೀಪವನ್ನೈದಿ ನಮಸ್ಕಾರವ ಮಾಡಿ, ವಿನಯಾನ್ವಿತನಾಗಿ ಸ್ವಾಮಿ, ಋಷಿಗಳಿರಾ! ನಾನು ನನ್ನ ಸ್ತ್ರೀಯನ್ನು ನಿಮಗೆ ಭಿಕ್ಷವನಿಡಲು ಕಳುಹಿದೆನು. ಆಕೆಯು ಮರಳಿ ಬರದೆ ವೃಕ್ಷಾಗ್ರದೊಳು ಇರ್ದು ಸರ್ವರಿಗೂ ಆಶ್ಚರ್ಯವನುಂಟು ಮಾಡುತಲಿದ್ದಾಳೆ. ಅವಳು ಆವ ಪಾಪದಿಂ ಹಾಗಿರುವಳೆಂದು ಪ್ರಶ್ನೆಗೈಯ್ಯೆ ಆ ದೂರ್ವಾಸನು, ಎಲೈ ಪುಂತರೀಕನೆ! ಆ ಪಾಪಿನಿಯು ನಮ್ಮಿಂದ ಅಲ್ಲಿಡಲ್ಪಟ್ಟ ಳೆಂದು ಪೇಳೆ, ಪುಂಡರೀಕನು ಕುಪಿತನಾಗಿ ಋಷಿಯಾದ ನಿನ್ನಿಂದ ಸ್ತ್ರೀಯರು ಪಾಪವ ಮಾಡಿದರೂ ಪ್ರಕಟವ ಮಾಡಬಾರದು. ಆವನು ಪ್ರಕಟವ ಮಾಡು ತಿದಾನೋ ಆತಂಗೆ ಪಾಪ ಬಹುದೆಂದು ಪೇಳ್ದನೆಂದು ಸೂತಂ ಶೌನಕಾದಿ ಗಳಿಗೆ ಪೇಳ್ದನೆಂಬಲ್ಲಿಗೆ, ಉಪದೇಶಕಾಂಡದೊಳು ಆರನೆಯ ಅಧ್ಯಾಯವು ಸಮಾಪ್ತಮಾದುದು.

ಏಳನೆಯ ಅಧ್ಯಾಯವು.

ದೂರ್ವಾಸ ಪುಂಡರೀಕರ ಸಂಭಾಷಣೆ, ಪಾಪವೃತ್ತಾಂತ.

ಅನಂತರದಲ್ಲಿ ದೂರ್ವಾಸನು ಆ ಪುಂಡರೀಕನ ವಾಕ್ಯವಂ ಕೇಳಿ, ಕೋಪಿಸಿ, ಎಲೈ ಮೂಢನೆ! ನಿನ್ನ ಸ್ತ್ರೀಯೆಂದು ಏಕೆ ಅಭಿಮಾನಿಸುತಿದ್ದೀ? ಈ ದುಷ್ಟಳಿಂ ಅನೇಕ ಬ್ರಾಹ್ಮಣರು ಹತರಾದರು. ಈಕೆಯು ಅನೇಕ ವ್ರತವಂ ಭಂಗ ಮಾಡಿದಳು. ಈಕೆಯಿಂದ ಅನೇಕರು ಪಾಪಿಗಳಾದರು. ಆಕೆ ನಿನಗೆ ಪತ್ನಿಯಾದೊಡೆ ನೀನು ಅನೇಕ ಪಾಪಿಷ್ಠನೆಂದು ಪೇಳಲು ಪುಂಡರೀಕನದಂ ಕೇಳಿ, ಎಲೈ ಮುನಿಯೆ! ಆ ವೃಕ್ಷಾಗ್ರದಿಂ ಅವಳ ನಿಳುಹಿಸಬೇಕೆನಲು ಆ ಋಷಿಯು ನೀನು ಕರೆದರೆ ಆಗತಾನೆ ಸಂಗವ ಮಾಡಿ, ಪುರುಷರಂ ಪೇಳಿ ಶೀಘ್ರದಿಂದಿಳಿದು ನಿನ್ನ ಬಳಿಗೆ ಬರಲೆಂದು ಪೇಳಿ ಆ ಪುಂಡರೀಕನು ಮೋಹವಶದಿಂ ಆಕೆಯಲ್ಲಿ ಆಸಕ್ತನಾಗಿ ಅನೇಕ ಬ್ರಾಹ್ಮಣರು ಸಹ ಅಲ್ಲಿಗೆ ಪೋಗಿ ಆಕೆಯಂ ಕರೆಯಲು ಆಕೆಯು ಅವರು ಕರೆದ ಮಾತ್ರದಲ್ಲಿ ವೃಕ್ಷದ ಮರೆಯಾಗೆ ಆಗ ಪುಂಡರೀಕನು

ಕೋಪಯುಕ್ತನಾಗಿ ದೂರ್ವಾಸನ ಸಮಿಾಪಕ್ಕೆ ಬಂದು ಬ್ರಾಹ್ಮಣರು ಕರೆದರೂ
ಈಕೆಯು ಯಾಕೆ ಬರಲಿಲ್ಲವೆಂದು ಪೇಳೆ ಆತನದಂ ಕೇಳಿ ನಿನ್ನ ಭಾರ್ಯೆಗೆ ಪತಿಗ
ಳನೇಕರುಂಟು. ಕೆಲಂಬರು ಕೆಲಂಬರು ಬರಲಿಲ್ಲ. ಅದುಕಾರಣದಿಂ ನೀನು ಮರಳಿ
ಪೋಗಿ ಆಕೆಯುಂ ನೋಡಿ, ನೀನು ಆವಾವ ಪುರುಷರನ್ನನುಭವಿಸಿದೆಯೋ ಆ
ಪುರುಷರ ನಾಮಗಳಂ ಪೇಳು. ವೃಕ್ಷದಿಂದಿಳಿದು ಗೃಹಕ್ಕೆ ಬಾರೆಂದು ದೂರ್ವಾ
ಸನು ಪೇಳ್ದನು. ಆಗ ಆ ದ್ವಿಜರುಗಳು ಹಾಗೆಯೇ ಕರೆಯಲಾಗಿ ಅಲ್ಲಿಯು
ತಾನು ಸಂಗವಂ ಮಾಡಿದ ಕೆಲಂಬರ ನಾಮವಂ ಪೇಳ್ದು ತಾನು ಕೊಂಬೆಗೆ
ಬಂದು ನಿಂದು ತಾನು ಸಂಭೋಗವಂ ಮಾಡಿದ ಪುರುಷರನೇಕರ ನಾಮಂಗಳಂ
ಮರೆದೆನು. ಕೆಲಂಬರು ಯತಿಗಳು ಕೆಲಂಬರು ಋಷಿಗಳು ಕೆಲಂಬರು ಬ್ರಹ್ಮ
ಚಾರಿಗಳು ಕೆಲಂಬರು ತಪೋಧನರು ವ್ರತಭಂಗ ಬಂದುದಲ್ಲಾ ಯೆಂದು ಕೆಲಂ
ಬರು ಮೃತರಾದರೆಂದು ಪೇಳೆ, ಪುಂಡರೀಕನದಂ ಕೇಳಿ ಆಕೆಯು ವ್ಯಭಿಚಾರಿ
ಯಲ್ಲ! ಯೆಂದು ನಿಶ್ಚೈಸಿ ಮತ್ತೊಂದು ಸ್ತ್ರೀಯಂ ಕಲ್ಯಾಣವಂ ಮಾಡಿಕೊಳ್ಳದೆ
ಆಕೆಯಲ್ಲಿ ಪ್ರೀತಿವಂತನಾಗಿ ಋಷಿಯ ಬಳಿಗೆ ಬಂದು ಎಲೈ ಋಷಿಯೆ! ನೀನು
ಶೈವನು ನಾನು ವೈಷ್ಣವನು ದ್ವೇಷದಿಂದಾಕೆಯಲ್ಲಿ ಪಾಪವಂ ನಾರೋಪಿಸಿದೆ
ಯೆಂದು ಪೇಳೆ ಆಗ ದೂರ್ವಾಸನು ಕೇಳಿ ಎಲೈ ದ್ವಿಜನೆ! ನೀನು ಆವ ಕಾರ
ಣದಿಂದಾಕೆಯಲ್ಲಿ ಅನುರಕ್ತನಾಗಿದ್ದೆ. ಅದುಕಾರಣದಿಂ ಶಿಷ್ಯರು ಸಹ ಭಗ
ಚಿಹ್ನರಾಗಿ ಪೋಗೆಂದು ಶಾಪವನ್ನಿತ್ತು ವಟಾಗ್ರದಲ್ಲಿರ್ಪ ಆಕೆಯಂ ನೋಡಿ,
ಎಲೈ ಸ್ತ್ರೀಯೆ! ಆವ ಕಾರಣದಿಂ ನನ್ನ ರಮಿಸುವೆನೆಂಬ ಯಿಚ್ಛೆಯಿಂ ಮುಟ್ಟಿ
ದೆಯೋ ಅದುಕಾರಣದಿಂ ನೀನು ಅಸುರ ಸ್ತ್ರೀಯಾಗಿ ಪುಟ್ಟು. ಮತ್ತೆ ಆವ
ಕಾರಣದಿಂ ಅಜಗಳ ಮಧ್ಯಮಂ ಪ್ರೋಕ್ಷೆಯೋ ಅದುಕಾರಣದಿಂ ನಿನಗೆ ಅಜಾ
ಮುಖಿ ಯೆಂಬ ಪೆಸರುಂಟಾಗಲಿ ಮತ್ತಂ ವೃಕ್ಷಾಗ್ರದಿಂದಿಳಿದು ಯಥೇಚ್ಛೆ
ಯಾಗಿ ಪೋಗೆಂದು ದೂರ್ವಾಸನು ನಿರೂಪಿಸೆ ಆ ಕ್ಷಣದಲ್ಲಿಯೇ ಆಕೆಯು
ವೃಕ್ಷದಿಂದಿಳಿದು ಋಷಿಗೆ ನಮಸ್ಕಾರವಂ ಮಾಡಿ ಎಲೈ ಋಷಿಯೆ! ನನ್ನ ಪತಿಗೂ
ಆ ಶಿಷ್ಯರಿಗೂ ಮಹತ್ತಾದ ಶಾಪವನ್ನಿತ್ತೆ ಹಾಗಾದರೂ ನಿನ್ನಲ್ಲಿ ಕೋಪವಿಲ್ಲ.
ಹ್ಯಾಗಾದರೂ ನನ್ನನ್ನು ರಕ್ಷಿಸಬೇಕೆಂದು ಮರಳಿ ನಮಸ್ಕರಿಸೆ, ಬಳಿಕ ದೂರ್ವಾ
ಸನು ದಯೆಮಾಡಿ ನೀನು ಮಾಡಿದ ಪಾಪಂಗಳ ಪ್ರಕಟವಂ ಮಾಡಿದ್ದರಿಂದ
ನಿನಗೆ ಸಕಲ ಪಾಪಹರವಾಯಿತು. ಅದುಕಾರಣ ಕರ್ಮಶ್ರೇಷ್ಠದಿಂ ದೈತ್ಯ
ಯೋನಿಯಲ್ಲಿ ಪುಟ್ಟಿ ಸ್ವೇಚ್ಛಾವಿಹಾರಿಯಾಗಿ ಅನೇಕ ಪುರುಷರಂ ಸಂಭೋಗಿಸಿ
ಕಾಲದಲ್ಲಿ ನನ್ನೊಡನೆಯೂ ಕ್ರೀಡಿಸಿ ಈರ್ವರ ಕುಮಾರರಂ ಪೆತ್ತು ಮಹಾ
ಶಾಸ್ತಾಕುಮಾರನೆಂಬ ಗಣಾಧೀಶ್ವರನ ಕರಸ್ಪರ್ಶದಿಂ ಸಕಲ ಪಾಪವಂ ದಹಿಸಿ

ಶ್ರೀಪರ್ವತಕ್ಕೆ ಪೋಗಿ ಉತ್ತಮವಾದ ವೈರಾಗ್ಯವಂ ಪಡೆದು ಕೆಲವು ಕಾಲದ ಮೇಲೆ ಕೈಲಾಸಗಿರಿಗೆ ಪೋಗಿ, ಗೌರಿದೇವಿಯ ಪೂಜೆಯಂ ಮಾಡಿ ಮೋಕ್ಷವ ನ್ನೈದು ಯೆಂದನು. ಎಲೈ ಸುತೆಯೆ! ನೀನು ನನ್ನ ಕುಮಾರತೆಯಾಗಿ ಪುಟ್ಟಿ ಕಾಮುಕಿಯಾಗಿ ಅನೇಕ ಭೋಗಂಗಳಂ ಭೋಗಿಸಿ, ಈ ಮಹಾ ಶ್ರೀಪರ್ವತಕ್ಕೆ ಬಂದೆ. ನಾನು ಪೇಳಿದ್ದೇ ನಿನ್ನ ಪೂರ್ವವೃತ್ತಾಂತವು, ಹೀಗೆ ನೀನು ಕೈಲಾ ಸಕ್ಕೆ ಪೋಗಿ ಗೌರಿದೇವಿಯ ಪೂಜೆಯಿಂದ ಮೋಕ್ಷವನ್ನೈದು ಯೆಂದು ಮಾಯಾ

ದೇವಿಯು ಅಜಾಮುಖಿಗೆ ಪೇಳ್ದಳೆಂದು ಸೂತನು ಶೌನಕಾದಿಗಳ್ಗೆ ಪೇಳ್ದ
ನೆಂಬಲ್ಲಿಗೆ, ಉಪದೇಶಕಾಂಡದೊಳು ಏಳನೆಯ ಅಧ್ಯಾಯವು
ಸಂಪೂರ್ಣವಾದುದು.

ಎಂಟನೆಯ ಅಧ್ಯಾಯವು.

ಮಾಯಾದೇವಿಯ ಪೂರ್ವವೃತ್ತಾಂತ.

ಅನಂತರದಲ್ಲಿ ಅಜಾಮುಖಿಯು ಮಾಯಾದೇವಿಯ ವಾಕ್ಯವಂ ಕೇಳಿ ಎಲೆ ಮಾತೃವೆ! ನಿನ್ನ ಪೂರ್ವವೃತ್ತಾಂತವು ನೆಂತೆಂದು ಕೇಳಿದ ಸುತೆಯಂ ನೋಡಿ ಮಾಯಾದೇವಿ ಇಂತೆಂದಳು. ಎಲೆ ಅಜಾಮುಖಿಯೆ! ನನ್ನ ಪೂರ್ವ ವೃತ್ತಾಂತಮಂ ಪೇಳುತಿರ್ದೇನೆ ಕೇಳು. ಪೂರ್ವದಲ್ಲಿ ನನಗೆ ದಿತಿ ಎಂಬ ಪೆಸರು ನಾನು ಕಾಶ್ಯಪಂಗೆ ಸತಿಯಾಗಿರ್ದೆನು ಆಗ ನನಗೆ ಅನೇಕ ದಾನವರು ಪುತ್ರ ರಾಗಿ ಜನಿಸಿದರು. ಸಮಸ್ತರಾದ ದಾನವರಂ ದೇವತೆಗಳು ಸಂಹರಿಸಿದರು. ಬಳಿಕ ನಾನು ಅತ್ಯಂತ ದುಃಖಿತೆಯಾಗಿ ಪುತ್ರಶೋಕದಿಂ ಕೃಶೆಯಾಗಿ ಈ ಶ್ರೀಶೈಲವೆಂಬ ಪರ್ವತಕ್ಕೆ ಬಂದು ಸಕಲ ದೇವತೆಗಳಂ ಸಂಹರಿಸಬೇಕೆಂದು ನಿಶ್ಚೈಸಿ ಉತ್ಕೃಷ್ಟರಾದ ಪುತ್ರರಂ ಪಡೆಯಬೇಕೆಂದು ಈ ಶ್ರೀಶೈಲದ ಜರಿ ಯಲ್ಲಿ ಬಿದ್ದು ಪ್ರಾಣವಂ ಬಿಟ್ಟು ಅಸುರೇಂದ್ರನ ಗರ್ಭದಲ್ಲಿ ಪುಟ್ಟಿ ಮಾಯಾ ದೇವಿಯೆಂಬ ಪೆಸರುಳ್ಳವಳಾಗಿ ಕಾಶ್ಯಪಮುನಿಗೆ ಸತಿಯಾಗಿ ಆ ಕಾಶ್ಯಪನಿಂ ಶೂರಪದ್ಮ ಸಿಂಹವಕ್ತ್ರ ತಾರಕರೆಂಬ ಮೂರು ಪುತ್ರರನ್ನೂ ನಿನ್ನನ್ನೂ ಪೆತ್ತೆನು. ನನ್ನ ಕುಮಾರರಿಂ ಪೀಡಿತರಾದ ಸಮಸ್ತ ದೇವತೆಗಳಂ ನೋಡಿ ಸಂತುಷ್ಟೆ ಯಾಗಿ ಮರಳಿ ಪುತ್ರಾರ್ಥಿಯಾಗಿ ಕಾಶ್ಯಪನ ಸಮೀಪಕ್ಕೆ ಪೋಗವೆ ಪೂರ್ವ ಜನ್ಮದ ವೈರವಂ ಬಿಟ್ಟು ಈ ಶ್ರೀಶೈಲದಲ್ಲಿ ಶಿವಕೈಂಕರ್ಯಪರೆಯಾಗಿ ಅತ್ಯಂತ ಸಂತೋಷಯುಕ್ತೆಯಾಗಿ ಗೌರಿದೇವಿಯ ಪಾದಸೇವೆಯಂ ಮಾಡಿ ಮೋಕ್ಷವ ನ್ನೈದಿಪೆನು. ನಾನು ಆವಾಗ ಈ ಶ್ರೀಶೈಲದಿಂ ಬಿದ್ದು ಪ್ರಾಣವಂ ಬಿಟ್ಟೆನೊ.

ಆಗ ನನಗೆ ಪತಿಯಾದ ಕಾಶ್ಯಪ ಋಷಿಯು ಅತ್ಯಂತ ದುಃಖವನ್ನೈದಿ ಪುಲೋಮನ ಪುತ್ರಿಯಾದ ದಿತಿ ಎಂಬ ಮತ್ತೋರ್ವ ಸ್ತ್ರೀಯಂ ವಿವಾಹವನ್ನಾಗಿ ದುಃಖವಂ ಬಿಟ್ಟದಾನೆ. ನನಗೆ ಶುಕ್ರಾಚಾರ್ಯನ ಕೃಪೆಯಿಂ ಕಾಲತ್ರಯ ಪರಿಜ್ಞಾನ ಮುಂಟಾದುದು. ಆತನು ನನಗೆ ಪೂರ್ವ ವೃತ್ತಾಂತವಂ ಪೇಳ್ದನೆಂದು ತನ್ನ ಪುತ್ರಿಗೆ ಪೇಳೆ ಬಳಿಕ ಅಜಾಮುಖಿಯುದಂ ಕೇಳಿ ಸಂತೋಷದಿಂ ತನ್ನ ಮಾತೃವಿಗೆ ನಮಸ್ಕರಿಸಿ ತನ್ನ ಮಾತೃವಿನೊಡನೆ ಆ ಶ್ರೀಶೈಲದಲ್ಲಿ ಪರಮೇಶ್ವರನಂ ಪೂಜಿಸಿ ಅನಂತರದ ಕೈಲಾಸಪರ್ವತಕ್ಕೆ ಪೋಗಿ ಅಲ್ಲಿ ಪಾರ್ವತೀದೇವಿಯಂ ಪೂಜಿಸಿ ತನ್ನ ಮಾತೃ ಸಹಾ ಪುನರಾವೃತ್ತಿ ರಹಿತವಾದ ಮುಕ್ತಿಯನ್ನೈದಿದ ರೆಂದು ಸೂತಂ ಶೌನಕಾದಿಗಳ್ಗೆ ಪೇಳ್ದನೆಂಬಿಲ್ಲಿಗೆ, ಶ್ರೀ ಕೃಷ್ಣರಾಜ ವಾಣೀ ವಿಲಾಸಮೆಂಬ ಸ್ಕಾಂದಪುರಾಣದ ಶಂಕರಸಂಹಿತೆಯಲ್ಲಿ ಉಪದೇಶ ಕಾಂಡದೊಳು ಎಂಟನೆಯ ಅಧ್ಯಾಯವು ಸಂಪೂರ್ಣಮಾದುದು.

ಒಂಬತ್ತನೆಯ ಅಧ್ಯಾಯವು.

ಕುಮಾರಸ್ವಾಮಿಯು ಅಗಸ್ತ್ಯಮಹರ್ಷಿಗೆ ಉಪದೇಶಿಸಿದ ವಿಭೂತಿ ಮಹಿಮೆ.

ಈ ಪ್ರಕಾರಮಾಗಿ ಶೌನಕಾದಿ ಮುನಿಗಳು ಮಾಯಾದೇವಿ ಅಜಾಮುಖಿಯರ ವೃತ್ತಾಂತಮಂ ಕೇಳಿ, ಪುರಾಣಾರ್ಥವಿಶಾರದನಾದ ಸೂತನಂ ಕುರಿತು, ಎಲೈ ಮುನಿಯೆ! ಅಗ್ನಿಜನ್ಯನಾದ ಕುಮಾರಸ್ವಾಮಿಯು ಅಗಸ್ತ್ಯಂಗೆ ಯೇನುಪದೇಶವಂ ಮಾಡಿದನೋ ಅದನ್ನು ನಮಗೆ ಪೇಳಬೇಕೆನಲು, ಸೂತಪೌರಾಣಿಕನು ಆ ವಾಕ್ಯವಂ ಕೇಳಿ, ಎಲೈ ಋಷಿಗಳಿರಾ! ನೀವು ಪುಣ್ಯವಂತರೊಳಗೆ ಅತ್ಯಂತ ಶ್ರೇಷ್ಠರಾದುದರಿಂ, ಅಮಿತ ತೇಜೋವಂತನಾದ ಕುಮಾರಸ್ವಾಮಿಯಿಂದಗಸ್ತ್ಯಂಗೆ ಉಪದಿಷ್ಟಮಾದ ಪುಣ್ಯಕರಮಾದ ವಿಭೂತಿ ಮಾಹಾತ್ಮ್ಯಮಂ ಪಾಪ ವಿನಾಶನವಾದ ರುದ್ರಾಕ್ಷಿಯ ಮಹಿಮೆಯಂ ಶಿವ ನಾಮೋಚ್ಚಾರಣ ಮಾಹಾತ್ಮ್ಯಮಂ ಶಿವವ್ರತ ಮಹಿಮೆಯಂ ಮತ್ತಂ ಪ್ರಭುವಾದ ಪರಶಿವಂಗೆ ದ್ರೋಹಾದಿಗಳಂ ಮಾಡಿದ ಪಾಪಿಗಳಿಗುಂಟಾಗುವ ನರಕಾದಿಗಳಂ ಶಿವಪೂಜಾ ಪ್ರಭಾವಮಂ ಶಿವಯೋಗವೈಭವಮಂ ಶಿವಜ್ಞಾನದ ಮಹಿಮೆಯಂ ಇವೆಲ್ಲವಂ ಶಿವಕೃಪಾಬಲದಿಂ ಪೇಳುವೆನು ಕೇಳುವರಾಗಿ, ಏನೆಂದರೆ, ಕಲ್ಪ ಅನುಕಲ್ಪಂಗಳೆಂಬ ಭೇದದಿಂ ಭಸ್ಮವು ಮೂರು ವಿಧವಾಗಿರುವದು. ಸರ್ವಪಾಪ ಪರಿಹಾರಕ

ಮಾದುದರಿಂ ಶಿವಸ್ಮರಣೆಯು ದೆಸೆಯಿಂ ಭುಕ್ತಿ ಮುಕ್ತಿಪ್ರದವಾದುದು. ಭಸ್ಮವೆಂದು ಪೇಳಲ್ಪಟ್ಟುದು. ಆವ ನರನು ಮಂತ್ರಂಗಳಿಂ ಮಂತ್ರಿತವಾದ ಈ ಭಸ್ಮವಂ ಧರಿಸುವನೋ ಆತಂಗೆ ಕಾಂಕ್ಷಿತಂಗಳೆಲ್ಲವು ಸಿದ್ಧಿಸುವವು. ಆತನ ದುರಿತಂಗಳೆಲ್ಲವು ನಾಶವನ್ನೈದುವವು, ಎಲೈ ಋಷಿಗಳಿರಾ! ಪಾರ್ವತೀಪತಿಯಾದ ಪರಮೇಶ್ವರನ ಮಾಹಾತ್ಮ್ಯವು ಹೇಗೆ ತಿಳಿಯಲಶಕ್ಯವೋ ಹಾಗೆ ಭಸ್ಮದ ಮಹಿಮೆಯು ತಿಳಿಯಲಸಾಧ್ಯವೆಂದು ವೇದವೇದಾಂಗ ಪಾರಂಗತರಾದವರಿಂದ ಪೇಳಲ್ಪಟ್ಟಿರುತ್ತದೆ. ಸತ್ಯ, ಜ್ಞಾನ, ದಯೆ, ಶ್ರದ್ಧೆ, ವಹ್ನಿ,ವಾಯುವು,ಜಲ,ಸ್ಥಲ, ಆಕಾಶ ಮುಂತಾದವುಗಳೆಲ್ಲವು ಭಸ್ಮಗಳು. ಇವುಗಳು ಬ್ರಹ್ಮ ವಿಷ್ಣು ಮುಂತಾದವರಿಂ ಧರಿಸಲು ಯೋಗ್ಯವು. ಮಂತ್ರಂಗಳಿಂ ದಭಿಮಂತ್ರಿತಮಾದ ಈ ಭಸ್ಮಧಾರಣೆಯಿಂ ಅಷ್ಟೈಶ್ವರ್ಯಗಳು ಸಿದ್ಧಿಸುವವು. ಇದಲ್ಲದೆ ಅಷ್ಟಸಿದ್ಧಿಗಳುಂಟಾಗುವವು. ಶಂಭುವಿನಲ್ಲಿ ಪರಮ ಕಾರಣಮಾದ ಭಕ್ತಿಯುಂಟಹುದು. ಸರ್ವರನ್ನು ವಶವಂ ಗೈಸುವದು. ಸರ್ವ ಸೌಭಾಗ್ಯದಾಯಕವು. ಮತ್ತಂ ಭೂತ ಪ್ರೇತ ಪಿಶಾಚಂಗಳು ರಾಕ್ಷಸರು ದುರ್ಜನರು ಶತ್ರುಗಳು ಇವರೆಲ್ಲರುಂ ಭಸ್ಮದರ್ಶನ ಮಾತ್ರದಿಂದಲೇ ಅಂಜಿ ಓಡುವರು. ಇದಲ್ಲದೆ ಅಪಸ್ಮಾರ ಕುಷ್ಠ ಮುಂತಾದ ವ್ಯಾಧಿಗಳು ಕ್ಷಣದಿಂ ನಾಶವನ್ನೈದುವವು. ಸತ್ಪುರುಷರಿಂದಾವಾಗಲು ಭಸ್ಮವು ತ್ರಿಪುಂಡ್ರೋದ್ಧೂಳನಮಾಗಿ ಧರಿಸಲ್ಪಡಬೇಕು. ಆ ತ್ರಿಪುಂಡ್ರೋದ್ಧೂಳನವಂ ಮನದಿಂದಾವಾಗಲು ಉಲ್ಲಂಘಿಸಲಾಗದು, ಎಂದು ಶ್ರುತಿಯು ವಿಧಿಸುತಲಿದೆ. ಆ ಭಸ್ಮೋದ್ಧೂಳನವಂ ಪರಿತ್ಯಾಗಮಂ ಮಾಡಿದವನು ಪತಿತನಾಗುವನು. ಆ ತ್ರಿಪುಂಡ್ರೋದ್ಧೂಳನದಲ್ಲಿಯುಂ ಆ ಶಿವನ ಮಾಹಾತ್ಮ್ಯದಲ್ಲಿಯುಂ ಆರಿಗೆ ವಿಶ್ವಾಸಮುಂಟಾಗುವದಿಲ್ಲವೋ ಅವರು ಪರಮ ಪಾಪಿಗಳು. ಜಲಯುಕ್ತವಾದ ಭಸ್ಮದಿಂ ತ್ರಿಪುಂಡ್ರವಂ ಧರಿಸಬೇಕು.

ಎಲೈ ದ್ವಿಜರುಗಳಿರಾ! ಮಸ್ತಕ ಲಲಾಟ ಕಂಠ ವಕ್ಷಸ್ಥಲ ನಾಭಿ ಉಭಯ ಪಾರ್ಶ್ವ ಭುಜದ್ವಯ ಬಾಹು ಮಧ್ಯ ಕರದ್ವಯ ಬೆನ್ನು ಭಾಗ ಅಪರ ಭಾಗಂಗಳೆಂಬ ಪಂಚದಶಸ್ಥಾನಂಗಳಲ್ಲಿ ಭಸ್ಮದಿಂ ತ್ರಿಪುಂಡ್ರಗಳಂ ಆರಿಂದ ಯಾವಾಗಲು ಧರಿಸಲ್ಪಡುವವೋ ಆತನು ಮಹಾ ಪಾಪಂಗಳಂ ಮಾಡಿದವನಾದೊಡಂ ನಮ್ಮಿಂದಲು ಹರಿಬ್ರಹ್ಮರಿಂದಲು ನಮಸ್ಕರಿಸುವದಕ್ಕೆ ಯೋಗ್ಯನು. ಜಾಬಾಲೋಪನಿಷದ್ವಾಕ್ಯದಿಂ ಭಸ್ಮವು ಮಂತ್ರದಿಂ ಮಂತ್ರಿತವಾಗಿ ಬ್ರಾಹ್ಮಣಾದಿ ವರ್ಣಗಳಿಗೆಯು ಬ್ರಹ್ಮಚರ್ಯಾದ್ಯಾಶ್ರಮಂಗಳಿಗು ತ್ರಿಪುಂಡ್ರೋದ್ಧೂಳನವಂ ಮಾಡಬೇಕೆಂದು ಪೇಳಲ್ಪಟ್ಟಿದೆ. ಶ್ಲೋ॥ ಉದ್ಧೂಳನಂತ್ರಿಪುಂಡ್ರಂಚ ಜ್ಞಾನಾಂಗತ್ವೇನಸಾದರಂ। ಆಮನಂತಿಮುನಿಶ್ರೇಷ್ಠಾ ಶ್ವೇತಾಶ್ವತರಶಾಖಿನಃ॥

ತಾ|| ಶ್ವೇತಾಶ್ವತರೋಪನಿಷಚ್ಛಾಖಾಧ್ಯಾಯಿಗಳಾದ ಮುನಿಶ್ರೇಷ್ಠರು ತ್ರಿಪುಂಡ್ರೋದ್ಧೂಳನವನ್ನು ಜ್ಞಾನಾಂಗವೆಂದು ಆದರದಿಂ ಪೇಳುವರು. ಮತ್ತಂ ಅಥರ್ವಶಿರಸ್ಸೆಂಬ ಉಪನಿಷತ್ತಿನಲ್ಲಿರ್ಪ ಶ್ರುತಿವಾಕ್ಯಂಗಳಂ ಬಲ್ಲವರಾದ ಋಷಿಶ್ರೇಷ್ಠರು ಭಸ್ಮೋದ್ಧೂಳನವನ್ನು ತ್ರಿಪುಂಡ್ರವನ್ನು ವಿಶೇಷವಾಗಿ ಅಜ್ಞಾನನಾಶಕವೆಂದು ಪೇಳುತಲಿದಾರೆ ಆದರೆ ಅಜ್ಞಾನವಿಚ್ಛಿತ್ತಿಯು ಜ್ಞಾನದಿಂದುಂಟಾಗುವದೇ ಹೊರತು ಮತ್ತೊಂದರಿಂದುಂಟಾಗಲಾರದು. ಯಾಕಂದರೆ, ಅಜ್ಞಾನಕ್ಕೆ ವಿಜ್ಞಾನವೇ ಬಾಧಕವು. ಮತ್ತಾವದಲ್ಲೆಂದು ನುಡಿದಲ್ಲಿ, ಅಜ್ಞಾನನಿವರ್ತಕಮಾದ, ಪಶುಪತಿ ಸಂಬಂಧಮಾದ ವಿಜ್ಞಾನವು ಚನ್ನಾಗಿ ಈ ಭಸ್ಮ ತ್ರಿಪುಂಡ್ರದಿಂದಲೇ ಆಚರಿಸಲ್ಪಡುತ್ತದೆಯೇ ಹೊರತು ಮತ್ತೊಂದರಿಂದುಂಟಾಗುವದಿಲ್ಲ. ಅದುಕಾರಣದಿಂ ಮೋಕ್ಷಾಪೇಕ್ಷೆಯುಳ್ಳವನು ಭಸ್ಮೋದ್ಧೂಳನವನ್ನು ತ್ರಿಪುಂಡ್ರವನ್ನು ಅವಶ್ಯಕಮಾಗಿ ಆಚರಿಸಬೇಕು.

ವಿಷ್ಣುವು ಶಿವಪತ್ನಿಯಾಗಿ ಬ್ರಹ್ಮನು ಹುಟ್ಟುವಿಕೆ.

ಎಲೈ ಮುನಿಗಳಿರಾ! ಪೂರ್ವದಲ್ಲಿ ಒಂದಾನೊಂದು ಜಲಪ್ರಳಯ ಕಾಲದೊಳು ಮಾಧವನು ಮಹಾ ಸಮುದ್ರದ ಮಧ್ಯದಲ್ಲಿ ವಟಪತ್ರದೊಳು ಶಯನಮಂ ಮಾಡಿದನು. ಆ ಸಮಯದಲ್ಲಿ ಭಗವಂತನಾದ ಪರಮೇಶ್ವರನು ಆ ಮಾಧವನಿರ್ಪ ಬಳಿಗೆ ಬಂದನು. ಮಹತ್ತಾದ ಈ ಸಮುದ್ರವು ಯಾವ ಪರಮೇಶ್ವರಂಗೆ ಪಾದಾಂಗುಷ್ಠ ಪ್ರಮಾಣಮಾಗಿರುವದೋ ಅಂಥ ಪುರುಷಶ್ರೇಷ್ಠನಾದ ಮಹಾದೇವನು ಆ ಮಾಧವನಂ ಕಂಡು ನಿಂತಿರಲಾಗಿ, ಆತನು ಅಜ್ಞಾನದಿಂದಾವರಿಸಲ್ಪಟ್ಟವನಾಗಿ ನೀನಾರ್ಯೆಯೆಂದು ಕೇಳಿದನು. ಆಗ ಮಹಾತ್ಮನಾದ ಆ ಪುರುಷನು ಆ ಮಾಧವಂಗೆ ಭಸ್ಮವಂ ಕೊಡೆ, ಶಿವನು ಕೊಟ್ಟ ಆ ಭಸ್ಮಮಂ ಸ್ವೀಕರಿಸಿ ಲಲಾಟದಲ್ಲಿ ಧರಿಸಿ ಉಳಿದ ಭಸ್ಮವಂ ಭಕ್ಷಿಸಿ ಹರಿಯು ಜ್ಞಾನವಂ ಪಡೆದು ತನ್ನ ಸ್ವರೂಪವಂ ತಿಳಿದು, ಚಂದ್ರಶೇಖರನಾದ ಯೌವನವಂತನಾದ ಪುರುಷಶ್ರೇಷ್ಠನಾದ ತ್ರಿನೇತ್ರನಾದ ಮಹಾದೇವನಂ ಕಂಡು ನಮಸ್ಕಾರಮಂ ಮಾಡಿ, ಪ್ರಭುವಾದ ಆ ಸ್ವಾಮಿಯ ಆಗಮನಮಂ ಕೇಳಲಾಗಿ, ಶಿವನು ಆ ವಾಕ್ಯವಂ ಕೇಳಿ, ಎಲೈ ಜನಾರ್ದನನೆ! ಸಮಸ್ತ ಲೋಕವಂ ಸೃಷ್ಟಿಸುವಂಥವನು ಸೃಜಿಸಲು ನಾನು ಬಂದೆನು. ನನ್ನಾಜ್ಞೆಯಿಂ ನೀನು ಶಕ್ತಿಯಾದುದರಿಂ ನಿನ್ನಲ್ಲಿಯೆ ಜಗತ್ಕರ್ತನಾದ ಬ್ರಹ್ಮಂಗೆ ಜನನ ವುಂಟಾಗುವದೆಂದು ಪೇಳಿ, ಆತನಂ ಸತಿಯಾಗಿ ಮಾಡಿ, ಆಕೆಯೊಡನೆ ರಮಿಸೆ, ಆಗ ಕಾಂಚನ ವರ್ಣವಾದ ಶಿವನವೀರ್ಯವು ಬಿದ್ದುದು. ಅದುಕಾರಣದಿಂ ಆ ಹರಿಯ ನಾಭೀಕಮಲದಲ್ಲಿ ಪಂಚಮುಖನಾದ ಬ್ರಹ್ಮನು ಪುಟ್ಟಿದನು. ಆ ಬ್ರಹ್ಮನು ಪರಮೇಶ್ವರನಾಜ್ಞೆಯಿಂ ಸಕಲ ಪ್ರಜೆಗಳಂ ಸೃಜಿಸಿದನು.

ಬಳಿಕ ಒಂದಾನೊಂದು ಕಾಲದಲ್ಲಿ ಬ್ರಹ್ಮಂಗೆ ವಿಶೇಷವಾಗಿ ಅಹಂಕಾರ ಮುಂಟಾಗಿ, ಭೈರವನಿಂದೊಂದು ಶಿರಸ್ಸು ಪೋಗಿ ಗರ್ವವಂ ಬಿಟ್ಟು ಚತುರ್ಮುಖ ನೆಂಬ ಪೆಸರುಂಟಾದುದು. ಎಲೈ ದ್ವಿಜರುಗಳಿರಾ! ವಿಷ್ಣುವಿಗೆ ಈ ಭಸ್ಮಧಾರಣ ಮಾತ್ರದಿಂದಲೆ ಮಹತ್ತಾದ ಅಜ್ಞಾನವು ನಾಶವಾಗಿ ಚತುರ್ಮುಖನೆಂಬ ಪುತ್ರ ನುಂಟಾದನು. ಇದಲ್ಲದೆ ಪೂರ್ವದಲ್ಲಿ ಮಹಾಬಲನಾದ ವೀರಭದ್ರನು ಕ್ರೂರ ಕರ್ಮಿಗಳಾಗಿ ಪಾಪಿಗಳಾದ ಸರ್ಪಾಸುರ ಪಂಚಮೇಢ್ರಾಸುರ ಅಗ್ನಿಯೆಂಬ ಅಸುರರಿಂ ಮೃತರಾದ ಸಮಸ್ತ ದೇವತೆಗಳಂ ಭಸ್ಮವಂ ತಳಿದೇಳಿಸಿದನು. ಅನೇಕ ಜನ್ಮ ಸಂಸಿದ್ಧವಾದ ಮಹಾ ಪಾತಕಂಗಳೆಂಬ ಜೋಲುಗಳ ಯೌವನಾ ಧಿಪನು ಭಸ್ಮದಿಂ ಲೇಪಿತನಾದ ವಾಮದೇವನೆಂಬ ಮಹರ್ಷಿಯು ಅಂಗಸ್ಪರ್ಶ ದಿಂ ಬ್ರಹ್ಮರಕ್ಷತ್ವವಂ ಬಿಟ್ಟು ಮೋಕ್ಷವನ್ನೈದಿದನು, ದ್ರಾವಿಡ ದೇಶದಲ್ಲಿ ಪತಿತ ನಾದ ಕುತ್ಸಿತಮನಸ್ಸುಳ್ಳವನಾಗಿ ಸರ್ವ ಸ್ತ್ರೀಯರುಗಳಲ್ಲಿಯುಂ ರಮಿಸುತಿರ್ದ ಪರಮ ಪಾಪಿಯಾದ ಸರ್ವಭಕ್ಷಕನಾಗಿ ದುರಾತ್ಮನಾದ ಒಬ್ಬ ಬ್ರಾಹ್ಮಣನು, ಒಂದಾನೊಂದು ಗ್ರಾಮದಲ್ಲಿ ಮೃತನಾಗಲು, ಅಲ್ಲಿರ್ದ ಜನರುಗಳು ಆತನ ಪಾದಕ್ಕೆ ರಜ್ಜು ಬಂಧನವಂ ಮಾಡಿ ಸೆಳೆದುಕ್ಕೊಂಡು ಪೋಗಿ ಆ ಗ್ರಾಮದ ಪೊರ ವಳಯದಲ್ಲಿಟ್ಟರು. ಆಗ ಯಮದೂತರು ಬಂದು ಆತನಂ ಕೊಂಡು ಪೋದರು. ಆ ಸಮಯದಲ್ಲಿ ಒಂದು ಶ್ವಾನವು ಭಸ್ಮದಮೇಲೆ ಬಿದ್ದು ಹೊರಳಾಡಿ ಆ ಭಸ್ಮ ವಂ ಪಾದದಿಂ ತುಳಿದು ಆ ಬ್ರಾಹ್ಮಣನ ಶವವಂ ಭಕ್ಷಿಸಲು ಬಂದು, ಆ ಶವದ ಲಲಾಟ ಭುಜದ್ವಯ ವಕ್ಷಸ್ಥಲವಂ ತುಳಿಯಲಾಗಿ, ಅಷ್ಟುಮಾತ್ರದಿಂದಲೆ ನರಕ ದಲ್ಲಿರುವ ದ್ವಿಜನು ಮೋಕ್ಷವನ್ನೈದಿದನೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ಉಪದೇಶಕಾಂಡದಲ್ಲಿ ಒಂಬತ್ತನೆಯ ಅಧ್ಯಾಯವು ಸಮಾಪ್ತಮಾದುದು.

ಹತ್ತನೆಯ ಅಧ್ಯಾಯವು.

ಭಸ್ಮಮಹಿಮಾವರ್ಣನ ಕಥೋಪ ಕಥನಂ.

ಕೇಳಿರೈ ಋಷಿಗಳಿರಾ! ಮಹತ್ತಾದ ಭಸ್ಮದ ಮಹಾತ್ಮ್ಯೆಯಂ ಮರಳಿ ಪೇಳುತಿದೇನೆ. ದಾನಶೂರನಾದ ಸಜ್ಜನರಿಗೆ ಪ್ರಿಯನಾದ ಪ್ರಜಾಪಾಲಕನಾದ ಭುಜಬಲನೆಂಬ ರಾಯನು ವಂಗದೇಶದಲ್ಲಿ ಒಂದಾನೊಂದು ಕಾಲದೊಳು ಸಂಕ್ರಾಂತಿ ಬರಲಾಗಿ ಪುಣ್ಯತಿಥಿಯಲ್ಲಿ ಬ್ರಾಹ್ಮಣರಿಗೆ ದಾನವಂ ಕೊಡಬೇಕೆಂದು ಇಚ್ಛೈಸಿದನು. ಆಗ ನಾನಾದೇಶದ ದ್ವಿಜರು ಬಂದರು. ಆ ಸಮಯದಲ್ಲಿ

ವಿದರ್ಭದೇಶದ ಸುಶೀಲನೆಂಬ ದ್ವಿಜನು ಭುಜಬಲರಾಯನು ದಾನವ ಮಾಡುತ ಲಿರ್ಧಾನೆಂಬುದಂ ಕೇಳಿ ರಾಯನ ದಾನ ಮಂಟಪಕ್ಕೆ ಬರಲು ಆಗ ಸಮಸ್ತ ವಿಪ್ರರಾಸಮುದಾಯದಲ್ಲಿ ಆ ಸುಶೀಲನಂ ಕಂಡು ನಮಸ್ಕಾರವಂ ಮಾಡಿ, ಎಲೈ ರಾಯನೆ! ಈ ಸುಶೀಲನು ಬಹು ಸದಾಚಾರನು, ಸ್ವಾಧ್ಯಾಯ ನಿರತನು, ಸರ್ವ ಶಾಸ್ತ್ರಾರ್ಥವಂ ತಿಳಿದವನು. ಸರ್ವೇಶ್ವರನಲ್ಲಿ ಭಕ್ತಿಯುಳ್ಳವನು. ಈ ದ್ವಿಜೇಂದ್ರ ನಿಗೆ ದಾನವಂ ಕೊಡು. ಈತನಿಗೆ ಸ್ವಲ್ಪ ದಾನವಂ ಕೊಟ್ಟರೂ ಅದು ಅಧಿಕಫಲವ ನೀಯುವದು, ಎಂದು ರಾಯಂಗೆ ಪೇಳೆ, ರಾಯನು ದ್ವಿಜರ ವಾಕ್ಯವಂ ಕೇಳಿ ಆತನಂ ಕರಿಸಿ ದಾನವ ಕೊಡಬೇಕೆಂದು ಉದ್ಯೋಗಿಸಲು ಆ ಸುಶೀಲನು ರಾಯನ ಸಮೀಪಕ್ಕೆ ಪೋಗಿ, ಎಲೆ ರಾಯನೆ! ನೀನು ಭಸ್ಮೋದ್ಧೂಳನ ತ್ರಿಪುಂಡ್ರವ ಮಾಡಿಕೊಂಡು ದಾನವ ಕೊಡು ಅಲ್ಲದಿರ್ದೊಡೆ ನೀನು ಮಾಡುವ ಮಹತ್ತಾದ ದಾನಂಗಳು ವ್ಯರ್ಥವಾಗಿ ಪೋಗುವದು. ಭಸ್ಮಧಾರಣ ವಿಹೀನವಾಗಿ ಮಾಡಿದ ಕರ್ಮಫಲ ನಿಷ್ಫಲವಾಗಿ ಪೋಗುವದೆಂದು ಪೇಳೆ ರಾಯನು ಆತನ ವಾಕ್ಯವಂ ಕೇಳಿ ಧನಮದದಿಂ ಗರ್ವಯುಕ್ತನಾಗಿ ಒಂದು ವಾಕ್ಯವಂ ಪೇಳ್ದನದೆಂತೆನೆ, ಎಲೈ ವಿಪ್ರನೆ! ನಾನು ಏನುಕಾರಣ ಭಸ್ಮಧಾರಣವಂ ಮಾಡಬೇಕು. ಭಸ್ಮವ ಧರಿಸದೆ ದಾನವ ಮಾಡುವದರಲ್ಲಿ ನನಗೆ ಶಕ್ತಿಯಿಲ್ಲವೋ ಏನು? ಭಸ್ಮವ ಧರಿಸಿ ದಾನವ ಮಾಡಬೇಕೆಂಬ ನಿಯಮವು ಎಲ್ಲಿದ್ದೀತೆಂದು ಪೇಳಲು, ಆ ವಿಪ್ರನು ಅದಂ ಕೇಳಿ, ಎಲೆ ರಾಯನೆ ! ಆರಿಗೆ ಭಸ್ಮಧಾರಣೆಯಲ್ಲಿ ಪ್ರೀತಿ ಪುಟ್ಟಲಿಲ್ಲವೋ ಆ ಪಾಪಿಯಂ ಲಕ್ಷ್ಮಿಯು ಆ ಕ್ಷಣದಲ್ಲಿಯೆ ಅವನಂ ಬಿಟ್ಟು ಪೋಗುವದು. ದರಿದ್ರವು ಸಂಭವಿಸುವದು, ವ್ಯಾಧಿಗಳು ಪುಟ್ಟುವವು. ಆತಂಗೆ ಅಂಗಹಾನಿ ಯುಂಟಾಗುವದು, ಪುತ್ರಾದಿಗಳು ನಾಶನವಹುದು, ನರಕಪ್ರಾಪ್ತಿಯುಂಟಾಗು ವದು, ಅದುಕಾರಣದಿಂ ಕರ್ಮಾದಿಯಲ್ಲಿ ಭಸ್ಮವು ಧರಿಸತಕ್ಕದ್ದು. ಹಾಗಾದೊಡೆ ನೀಪಿತ್ತ ದ್ರವ್ಯವು ವೃದ್ಧಿಯಿಸೈದುವದು. ಅಲ್ಲದಿರ್ದೊಡೆ ಪ್ರತಿಗ್ರಹವ ಮಾಡಿ ದವನು ಮಹಾ ನರಕವನ್ನನುಭವಿಸುವನೆಂದು ಪೇಳೆ ರಾಯನದಂ ಕೇಳಿ ನಕ್ಕಂ ಥಾವನಾಗಿ ಎಲೆ ವಿಪ್ರನೆ ! ಪುಣ್ಯಾತ್ಮನಾದ ನನಗೆ ದರಿದ್ರವು ಹೇಗೆ ಸಂಭವಿ ಸೀತು? ಪುತ್ರಾದಿಗಳು ನಾಶವಾದಾರು ? ಅಂಗ ಹಾನಿಯಾದೀತು ? ವ್ಯಾಧಿಗಳು ನಮ್ಮ ಸಮೀಪಕ್ಕೆ ಹೇಗೆ ಬರುವವು ಅದು ಕಾರಣ ನೀನು ತಿಳಿಯದೆ ಏನನ್ನು ಪೇಳುತಿರುವೆ? ಈ ರೋಗಾದಿಗಳು ನನಗೆ ಸಂಭವಿಸಿದವಾದೊಡೆ ಆಗ ನಾನು ನಿನ್ನ ಸಮೀಪಕ್ಕೆ ಬಂದು ಭಸ್ಮವಂ ಧರಿಸಿ ಆ ದುರಿತಾದಿಗಳಂ ನಿವಾರಣೆ ಮಾಡುವೆನು. ನೀನು ನನ್ನ ಹಸ್ತದಿಂ ದಾನವ ತೆಗದುಕೊಂಡು ಶೀಘ್ರದಿಂ ಪೋಗೆಂದು ಪರಿ ಹಾಸ್ಯವಾಕ್ಯವಂ ನುಡಿಯೆ ಆ ವಿಪ್ರನದಂ ಕೇಳಿ ಶೀಘ್ರವಾಗಿ ಎದ್ದು ಎಲೆ,

ಭೂಪಾಲಕನೆ! ಈಗ ನಾನು ನಿನ್ನ ಹಸ್ತದಿಂ ದಾನವ ತೆಗದುಕೊಳ್ಳೆನೆಂದು ಹೇಳಿ ತನ್ನ ದೇಶಕ್ಕೆ ಪೋಗುತ್ತಿರಲು, ಆಗ ಆ ರಾಯನ ಸತಿಯು ಪರಿಹಾಸಕ ನಿಮಿತ್ತವಾಗಿ ಕಪಟದಿಂ ಶೀತಳು. ಹಾಗೆ ಕೆಲವು ಕಾಲ ಪೋಗಲು ಆ ಮಹೀ ಪತಿಯು ಮಹತ್ತಾದ ವ್ಯಾಧಿಯಿಂದಾಕ್ರಮಿಸಲ್ಪಟ್ಟು ತನ್ನ ಮನೆಯಲ್ಲಿರು ತಿರ್ದನು. ಮಹಾ ಮಾರಿಯ ಕೋಪದಿಂದಾತನ ಸೈನ್ಯವು ಮೃತವಾದುದು. ಬಳಿಕ ಆ ರಾಯನು ಶತ್ರುಗಳಿಂದಾಕ್ರಮಿಸಲ್ಪಟ್ಟು ಆ ನಗರದೊಳಿರಲು ಅಶಕ್ತ ನಾಗಿ ತನ್ನ ಸತಿಸಹ ನಗರದಿಂ ಪೊರಮಟ್ಟು ಭಯಂಕರವಾದ ಅಡವಿಗೆ ಭೀತ ನಾಗಿ ಪೋಗಲು ಅಲ್ಲಿ ಒಬ್ಬಾನೊಬ್ಬ ವ್ಯಾಧನು ಇವರೀರ್ವರಂ ಕಂಡು ವೇಗದಿಂ ಬಂದು ರಾಯನಂ ಬಡಿದು ಆತನ ಸತಿಯಂ ಪಿಡಿದುಕೊಂಡು ಪೋಗೆ ಆ ನೃಪನು ಸತಿಯಂ ಬಿಟ್ಟು ದೀನಮಾನಸನಾಗಿ ಕ್ಷುತ್ತೃಷ್ಣೆಯಿಂ ಪೀಡಿತನಾಗಿ ಭಿಕ್ಷೆಯಲ್ಲಿಯೂ ಅನ್ನವು ಪುಟ್ಟದೆ ಆಗ ಕಳವಿನಿಂದ ಉದರ ಪೂರಕನಾಗಿ ಕೆಲವು ದಿನವಿರಲು ಒಂದಾನೊಂದು ಸಮಯದಲ್ಲಿ ನಗರಪಾಲಕರು ಒಂದು ಕಡೆಯಲ್ಲಿ ಚೌರ್ಯವ ಮಾಡುತಿರ್ಪ ಈತನಂ ಕಂಡು ರಜ್ಜುವಿನಿಂದಾತನ ಕರದ್ವಯವಂ ಕಟ್ಟಿ ನಗರದ ಪೊರವಳಯಕ್ಕೆ ಕೊಂಡುಪೋಗಿ ಆತನ ಪಾಣಿ ಪಾದಂಗಳಂ ಛೇದಿಸಿದರು. ಎಲೆ ದ್ವಿಜರುಗಳಿರಾ! ಬಳಿಕ ಆ ರಾಯನು ಅತ್ಯಂತ ಹಸಿವು ತೃಷ್ಣಾಯುಕ್ತನಾಗಿ ಮರಳಿ ಕರ್ಮವಶದಿಂ ವಿದರ್ಭದೇಶದ ಕುಂಡಿನೀಪುರಕ್ಕೆ ಪೋಗಿ ಆ ಪುರದಲ್ಲಿ ಭಿಕ್ಷಾವೃತ್ತಿಯಾಗಿ ಅತ್ಯಂತ ಕೃಪಣನಾಗಿ ದೀನನಾಗಿ ಅತ್ಯಂತಾತುರನಾಗಿರುತಿರ್ದನು. ಈ ರಾಯನ ಸತಿಯಂ ವ್ಯಾಧನು ಕೊಂಡು ಪೋಗುವ ಸಮಯದಲ್ಲಿ ಮಹತ್ತಾದ ವ್ಯಾಘ್ರವು ಬಂದು ಆ ವ್ಯಾಧನಂ ಸಂಹರಿ ಸಿತು. ಬಳಿಕ ಈಕೆಯು ಭಿಕ್ಷದಿಂ ಅನ್ನವ ಪುಟ್ಟದೆ ಚೌರ್ಯವಮಾಡಿ ಆ ದೋಷ ದಿಂ ನಾಸಿಕ ಛೇದನವಾಗಿರುತಿರ್ದಳು. ಹೀಗೆ ಸತಿಪತಿಗಳೀರ್ವರು ಆದಿ ವ್ಯಾಧಿ ಗಳಿಂದಾಕ್ರಾಂತರಾಗಿ ಕ್ರಿಮಿಯುಕ್ತರಾಗಿ ವ್ರಣವುಳ್ಳವರಾಗಿ ಭಿಕ್ಷವನಿಕ್ಕೀ ಭಿಕ್ಷವನಿಕ್ಕೀ ಎಂದು ಕೂಗುವ ಸತಿಪತಿಗಳೆಂಬ ಭಾವವಂ ತಿಳಿಯದೆ ಒಬ್ಬ ರೊಬ್ಬರು ವೈರವಂ ಮಾಡುತ ಆ ಪುರದೊಳು ಅಲ್ಲಲ್ಲಿ ಸಂಚರಿಸಿ ಒಂದು ಸಮಯ ಯದಲ್ಲಿ ಅವರೀರ್ವರು ಸುಶೀಲನ ಗೃಹದ್ವಾರಕ್ಕೆ ಬರಲು ಆಗ ಸುಶೀಲನು ಮೊರೆ ಯಿಡುತಿರ್ಪ ಅವರೀರ್ವರಂ ಕಂಡು ಅತ್ಯಂತ ದಯಾಯುಕ್ತನಾಗಿ ಎಲೈ ನೀವಾರು ಆವ ಪಾಪದಫಲವನ್ನನುಭವಿಸುತಿದ್ದೀರೆನಲು ಆಗ ಭುಜಬಲರಾಯನು ಆ ದ್ವಿಜೋ ತ್ತಮನ ವಾಕ್ಯವಂ ಕೇಳಿ, ನಾನು ವಂಗದೇಶದ ರಾಯನು. ಭುಜಬಲರಾಯ ನೆಂದು ಎನ್ನ ಪೆಸರು ಘೋರವಾದ ಪಾಪದಿಂ ಈ ಅವಸ್ಥೆಯಂ ಅನುಭವಿಸು ತಿದೇನೆನಲು ಆತನದಂ ಕೇಳಿ ಆಶ್ಚರ್ಯಯುಕ್ತನಾಗಿ ಆತನಂ ಚನ್ನಾಗಿ ನೋಡಿ,

ನಾಸಿಕದಲ್ಲಿ ಬೆರಳನಿಟ್ಟು ಆಶ್ಚರ್ಯದಿಂ ತಲೆದೂಗಿ, ಎಲೈ ರಾಯನೆ! ಪೂರ್ವದಲ್ಲಿ ನನ್ನನ್ನು ಕಂಡು ಬಲ್ಲೆಯಾ? ಎನಲು ಭುಜಬಲನು ಆ ಬ್ರಾಹ್ಮಣನ ವಾಕ್ಯವಂ ಕೇಳಿ ಎಲೈ ದ್ವಿಜನೆ! ಪೂರ್ವದಲ್ಲಿ ನಿನ್ನನ್ನು ಕಂಡಿದ್ದರೂ ಈಗ ನನಗೆ ಬುದ್ಧಿ ಸ್ಫುರಿಸದು. ನನಗೆ ಬುದ್ಧಿ ಭ್ರಾಂತಿಯಾಗಿರ್ಪುದು, ಎನಲು ಆ ದ್ವಿಜನು ಆತನ ವಾಕ್ಯವಂ ಕೇಳಿ ಎಲೈ ರಾಯನೆ! ಪೂರ್ವದಲ್ಲಿ ನಾನು ನೀನು ಮಾಡುವ ದಾನವಂ ಕೇಳಿ, ನಿನ್ನ ಬಳಿಗೆ ಬಂದು ಭಸ್ಮದಿಂ ತ್ರಿಪುಂಡ್ರೋದ್ಧೂಳನವಂ ಮಾಡಿ ನನಗೆ ದಾನವಂ ಕೊಡೆಂದು ಪೇಳಲು, ಆಗ ನೀನು ಧನದಿಂ ಯೌವನದಿಂ ರಾಜ್ಯದಿಂ ಗರ್ವಿತನಾಗಿ ಪರಿಹಾಸಕ ವಾಕ್ಯದಿಂ ನುಡಿದೆ, ನಾನು ಆಗ ನೀನು ಕೊಡುವ ದಾನವಂ ಬಿಟ್ಟು ನನ್ನ ನಗರಕ್ಕೆ ಬಂದೆನು. ನಿನಗೆ ಭಸ್ಮಾವಮಾನವಂ ಮಾಡಿದ ದೆಸೆಯಿಂದ ಈ ಅವಸ್ಥೆ ಉಂಟಾದುದೆನಲು ಭುಜಬಲನದಂ ಕೇಳಿ ನಿದ್ರೆ ತಿಳಿದವನಂತೆ ಜ್ಞಾಪಕ ಎಚ್ಚರಿಕೆ ಉಂಟಾದವನಾಗಿ ಸುಶೀಲನ ವಾಕ್ಯದಿಂ ಪೂರ್ವವೃತ್ತಾಂತವಂ ಸ್ಮರಿಸಿ ಭೂತಳದಲ್ಲಿ ದಂಡದಂತೆ ಬಿದ್ದು ನಮಸ್ಕಾರವಂ ಮಾಡಿ ಅಂಜಲಿ ಬಂಧವಂ ಮಾಡಿ ಎಲೈ ದ್ವಿಜನೆ! ಪೂರ್ವದಲ್ಲಿ ನೀನು ಒಂದು ದಾನವಂ ತೆಗೆದುಕೊಂಡು ಪೋದುದಿಲ್ಲ. ನಾನು ಭಸ್ಮವ ಧರಿಸದೇ ನಿನ್ನಾಜ್ಞೆಯನ್ನುಲ್ಲಂಘಿಸಿದೆನು. ಅದುದರಿಂ ನನಗೆ ಈ ಘೋರವಾದ ಅವಸ್ಥೆ ಬಂದುದು. ಈಗಲಾದರೂ ನನಗೆ ಭಸ್ಮವನ್ನಿತ್ತು ನನ್ನಂ ರಕ್ಷಿಸಬೇಕೆಂದು ಮರಳಿ ಮರಳಿ ನಮಸ್ಕಾರವಂ ಮಾಡಿ, ಪ್ರಾರ್ಥಿಸಲು ಆ ಸುಶೀಲನು ಪಾವನಮಾದ ಭಸ್ಮವಂ ತೆಗೆದು ಆ ರಾಯನಿಗೀಯಲು ಆತನು ತನ್ನ ಶರೀರದಲ್ಲಿ ಧರಿಸೆ, ಆ ಕ್ಷಣದಲ್ಲಿಯೇ ಛೇದಿಸಲ್ಪಟ್ಟ ಪಾಣಿಪಾದಂಗಳು ಪೂರ್ವದ ಆಕಾರ ಉಂಟಾದುದು. ಬಳಿಕ ರಾಯನು ತನ್ನ ಸ್ವರೂಪವಂ ನೋಡಿ ಆಶ್ಚರ್ಯಯುಕ್ತನಾಗಿ ಆತಂಗೆ ಭಕ್ತಿಯಿಂ ನಮಸ್ಕರಿಸಿ ಆತನ ಮುಂದೆ ಅಂಜಲಿ ಬಂಧನವಂ ಮಾಡಿಕೊಂಡು ನಿಂತಿರ್ದನು. ಬಳಿಕ ರಾಯನ ಸತಿಯು ತನ್ನ ಪತಿಯಂ ನೋಡಿ, ಎಲೈ ರಾಯನೆ! ನಾನು ನಿನ್ನ ಸತಿಯು ಆದಿವ್ಯಾಧಿಗ್ರಸ್ತಶರೀರ ಉಳ್ಳವಳಾದೆನು. ಆ ಮಹಋಷಿಯು ಹಸ್ತದಿಂದ ಪಾವನಮಾದ ಭಸ್ಮವಂ ತೆಗೆದು ಇತ್ತೆಯಾದೊಡೆ ಆ ಭಸ್ಮವಂ ಧರಿಸಿ ಶೋಕರಹಿತೆಯಾದೇನೆಂದು ಪೇಳಲು, ರಾಯನಾಕೆಯ ವಾಕ್ಯವಂ ಕೇಳಿ, ಎಲೈ ಸ್ತ್ರೀಯೆ! ನಿನಗಾವ ದೋಷದಿಂದ ನಾಸಿಕ ಪೋದುದೆನಲು ಎಲೈ ರಾಯನೆ! ಈ ಬ್ರಾಹ್ಮಣನು ದಾನವನೊಲ್ಲದೆ ಪೋಗುತಿರ್ಪ ಸಮಯದಲ್ಲಿ ನಾನು ಧನುಸ್ಸಿನ ಗರ್ವಿತೆಯಾಗಿ ಕಪಟದಿಂ ಸೀತು ಎಲೈ ವಿಪ್ರನೆ! ದುರ್ನಿಮಿತ್ತವಾದೀತು. ದಾನವ ತೆಗೆದುಕೊಳ್ಳದೆ ಹೋಗಬೇಡವೆಂದು ಪರಿಹಾಸ್ಯವಂ ಮಾಡಿದೆನು. ಆ ಪಾಪದಿಂ

ನನಗೆ ನಾಸಿಕ ಪೋದುದೆನಲು ರಾಯನದಂ ಕೇಳಿ ಪೂರ್ವವೃತ್ತಾಂತವಂ ನಿಚ್ಛೈಸಿ ಮರಳಿ ಭಕ್ತಿಯಿಂ ದ್ವಿಜೋತ್ತಮನಿಗೆ ನಮಸ್ಕಾರವಂ ಮಾಡಿ, ಎಲೈ ದಯಾನಿಧಿಯಾದ ವಿಪ್ರೇಂದ್ರನೆ! ಈಕೆಯು ನನ್ನ ಸತಿಯು. ಕ್ಷತ್ತ್ರ ದೋಷ ದಿಂದೀಕೆಗೆ ನಾಸಿಕ ಪೋದುದು. ಅದುಕಾರಣದಿಂದೀಕೆಯಂ ರಕ್ಷಿಸಬೇಕೆಂದು ಪೇಳಲು, ಬಳಿಕ ವಿಪ್ರೋತ್ತಮನು, ಎಲೈ ಭೂಪಾಲನೆ ! ನಿನಗೆ ಭಯಬೇಡ. ಈ ಭಸ್ಮವಂ ತೆಗೆದು ಆಕೆಗೆ ಕೊಡೆಂದು ರಾಯಂಗೀಯಲು ಆ ರಾಯನು ಭಸ್ಮವಂ ತೆಗದು ಆಕೆಗೆ ಕೊಡಲಾಕೆಯು ಆ ಭಸ್ಮವನ್ನು ತನ್ನ ಸರ್ವಾಂಗದಲ್ಲಿ ಸೋಕಲು ಆ ಕ್ಷಣದಲ್ಲಿ ಪೂರ್ವದಂತೆ ನಾಸಿಕ ಬಂದು ವ್ಯಾಧಿಗಳು ಶಮನವಾಗಿ ಪೂರ್ವದಂತೆ ರೂಪ ಮುಂಟಾದುದು. ಬಳಿಕ ಆ ಸತಿಪತಿಗಳೀರ್ವರು ಸಂತುಷ್ಟ ಮಾನಸರಾಗಿ ಆ ದ್ವಿಜಂಗೆ ನಮಸ್ಕರಿಸಿ ಭಕ್ತಿಯಿಂ ಮುಂದೆ ನಿಂತಿರ್ದರೆಂದು ಸೂತಂ ಶೌನಕಾದಿಗಳಿಗೆ ಪೇಳ್ದನೆಂಬಲ್ಲಿಗೆ, ಉಪದೇಶಕಾಂಡದೊಳು ಹತ್ತನೆಯ ಅಧ್ಯಾಯವು ಸಂಪೂರ್ಣಮಾದುದು.

ಹನ್ನೊಂದನೆಯ ಅಧ್ಯಾಯವು.

ಭುಜಬಲರಾಯನ ವೃತ್ತಾಂತ.

ಎಲೈ ಋಷಿಗಳಿರಾ! ಅನಂತರದಲ್ಲಿ ವಿದರ್ಭದೇಶದ ಚಿತ್ರರಥನೆಂಬ ರಾಯನು ಅವರ ಈ ವೃತ್ತಾಂತವಂ ಕೇಳಿ ಅಲ್ಲಿಗೆ ಬಂದು ಆ ಭುಜಬಲ ರಾಯನಂ ಕಂಡು ಸಂತುಷ್ಟಮಾನಸನಾಗಿ ಆ ವಿಪ್ರೋತ್ತಮಂಗೆ ನಮಸ್ಕರಿಸಿ ಎಲೈ ಸ್ವಾಮಿಯೆ! ಈ ರಾಯನು ನನ್ನ ಮಾವನ ಮಗನು. ನೀನು ಆವ ಪ್ರಕಾರ ದಿಂದಲೂ ರಕ್ಷಿಸಿದೆಯಲ್ಲಾ? ಈತ ನಾವ ಕಡೆಗೆ ಪೋದನೋ ಎಂದು ವಿಚಾರ ಉಂಟಾದುದು. ನಿಮ್ಮ ಕೃಪಾಬಲದಿಂ ಈತನಂ ಕಂಡೆನೆಂದು ಪೇಳ್ದು ಅತ್ಯಂತ ಪ್ರೀತಿಯಿಂ ಭುಜಬಲರಾಯನಂ ತಕ್ಕೈಸಿ ಆತಂಗೆ ಅನೇಕ ವಸ್ತ್ರ ಭೂಷಣಂಗಳಂ ಪರಿಚಾರಕರನ್ನಿತ್ತು ಆತನ ಸತಿಗೆ ವಿಚಿತ್ರಾಂಬರಗಳಂ ವಿಚಿತ್ರ ವಾದ ಆಭರಣಂಗಳಂ ಕೊಟ್ಟು ಅನೇಕ ಉಪಚಾರೋಕ್ತಿಗಳಿಂದುಪಚರಿಸಿ ತನ್ನ ಭವನಕ್ಕೆ ಕರೆದುಕೊಂಡು ಹೋಗಿ ಅನೇಕ ಭಕ್ಷ್ಯಭೋಜ್ಯಂಗಳಿಂ ಭೋಜನವಂ ಮಾಡಿಸಿ ಅನ್ಯೋನ್ಯ ಸಂಭಾಷಣೆಗಳಂ ಮಾಡಿ ಪ್ರೀತಿಯಿಂ ರಾಯಂಗೆ ಸಹಾಯ ಮಾಗಿ ಅನೇಕ ರಥ ಗಜ ತುರಗ ಪದಾತಿಗಳನ್ನಿತ್ತು ನಿನ್ನ ಪುರಕ್ಕೆ ಪೋಗೆಂದು ಭುಜಬಲರಾಯನಂ ಕಳುಹಿದನು. ಬಳಿಕ ಆ ಭುಜಬಲರಾಯನು ಮಹತ್ತಾದ ಸೇನೆ ಸಹಿತ ಪೊರಮಟ್ಟು ಶಿವನಲ್ಲಿ ಏಕಾಗ್ರಮಾನಸನಾಗಿ ಮರಳಿ ಸುಶೀಲನ

ಗೃಹಕ್ಕೆ ಬಂದು ಭಕ್ತಿಯಿಂ ಸತಿಸಹ ನಮಸ್ಕರಿಸಿ, ಎಲೈ ಭಗವಂತನೆ! ಈಗ ನಾವು ನಿಮ್ಮಿಂದ ಚನ್ನಾಗಿ ರಕ್ಷಿಸಲ್ಪಟ್ಟೆವು ನಿಮ್ಮ ಕೃಪಾಬಲದಿಂ ನಾನು ನನ್ನ ದೇಶಕ್ಕೆ ಪೋಗುವೆನೆಂದು ಪೊರಮಟ್ಟನು. ಎಲೈ ದ್ವಿಜೋತ್ತಮನೆ! ಹ್ಯಾಗೆ ಶತ್ರುಗಳಂ ಜೈಸುವೆನೊ ಹಾಗೆ ನನಗೆ ಭಸ್ಮವನ್ನಿತ್ತು ರಕ್ಷಿಸಬೇಕೆನಲು ಆಗ ಸುಶೀಲನು ವಿನಯದಿಂ ನಿಂತಿರ್ಪ ರಾಯನ ವಾಕ್ಯವಂ ಕೇಳಿ, ಎಲೆ ರಾಯನೆ! ಈ ವಿಭೂತಿಯ ಮಹಾತ್ಮ್ಯೆಯಿಂ ನಿನಗೆ ಶತ್ರುಗಳ ಭಯ ಬೇಡವೆಂದು ಪೇಳ್ದು ಭಸ್ಮವಂ ತೆಗೆದು ಚನ್ನಾಗಿ ಅಭಿಮಂತ್ರಿಸಿ ಆ ರಾಯಂಗೆ ಕೊಡಲು ಆ ರಾಯನು ಆ ಭಸ್ಮವಂ ತೆಗೆದು ತನ್ನ ಲಲಾಟದಲ್ಲಿ ಧರಿಸಿ ಆ ಸುಶೀಲನಿಗೆ ನಮಸ್ಕರಿಸಿ ಅಂಜಲಿಬಂಧನಂ ಮಾಡಿ ಆತನಿಂದನುಜ್ಞಾತನಾಗಿ ಪ್ರೀತಿಯುಕ್ತನಾಗಿ ಸೇನಾಸಮೇತನಾಗಿ ಪೊರಮಟ್ಟನು. ಆ ಸಮಯದಲ್ಲಿ ಒಬ್ಬ ರಾಕ್ಷಸನು ಭುಜಬಲರಾಯನ ಶತ್ರುವಂ ತನ್ನ ವಶವಂ ಮಾಡಿಕೊಂಡು ಆತನ ದೇಶವಂ ಅತ್ಯಂತ ಬಾಧಿಸುತ ಇರುತಿರ್ದನು. ಆ ರಾಕ್ಷಸನು ಭುಜಬಲರಾಯನು ಬರುವದಂ ಕೇಳಿ ಆತನಂ ಸಂಹರಿಸಬೇಕೆಂದು ನಗರದಿಂ ಪೊರಮಟ್ಟು ಭುಜಬಲರಾಯನ ಸಮೀಪಕ್ಕೆ ಬಂದು ಭಸ್ಮೋದ್ಧೂಳಿತವಾದ ಆ ರಾಯನ ಮುಖವಂ ಕಂಡು ಘೋರವಾದ ರಕ್ಕಸ ರೂಪವಂ ಬಿಟ್ಟು ದಿವ್ಯ ರೂಪವಂ ಧರಿಸಿದನು. ಬಳಿಕ ಭುಜಬಲರಾಯನು ಆತನ ದಿವ್ಯರೂಪವಂ ಕಂಡು ಆಶ್ಚರ್ಯಪಟ್ಟು ನೀನಾರೆಂದು ಕೇಳಲು ಆತನು ತನ್ನ ವೃತ್ತಾಂತಮಂ ಮುಂದೆ ಪೇಳುವೆನೆಂದು ರಾಯನಂ ಪಟ್ಟಣಕ್ಕೆ ಕರೆದುಕೊಂಡು ಪೋಗಿ ಅಲ್ಲಿ ಮನೋಹರವಾದ ನಾನಾ ವಿಚಿತ್ರವಾದ ತನ್ನ ಮಂದಿರದೊಳು ಸಿಂಹಾಸನದಲ್ಲಿ ಕುಳ್ಳಿರಿಸಿ ಒಳ್ಳೇದಾದ ಮುಹೂರ್ತದಲ್ಲಿ ಭಸ್ಮದಿಂದಾತಂಗೆ ಪಟ್ಟಬಂಧನಂ ಕಟ್ಟಿ ಮಂಗಳವಾದ ವಾದ್ಯಘೋಷದಿಂ ದಶದಿಕ್ಕುಗಳಂ ಪೂರಿಸಿ ಅನೇಕ ರಾಜೋಪಚಾರವಂ ಮಾಡಿ ಪುರಜನರಿಂದಾವೃತನಾಗಿ ಅತ್ಯಂತ ಸಂತೋಷದಿಂ ದಶದಿಕ್ಕುಗಳಂ ಪೂರಿಸಿ ಅನೇಕ ರಾಜೋಪಚಾರವಂ ಮಾಡಿ ಎಲೈ, ಭೂಪಾಲಕನೆ! ನನ್ನ ಪೂರ್ವವೃತ್ತಾಂತಮಂ ಪೇಳುತಿದೇನೆ, ಸಾವಧಾನದಿಂ ಕೇಳು. ಪಶ್ಚಿಮದಿಕ್ಕಿಗೆ ಅಧಿಪತಿಯಾದ ವರುಣನೆಂಬ ಪೆಸರುಳ್ಳ ನಾನು ಸಮುದ್ರಮಧ್ಯಗತರಾದ ಪಾಪಿಗಳಾದ ರಾಕ್ಷಸರಿಂದ ಪೀಡಿತನಾಗಿ ಭಯಯುಕ್ತನಾಗಿ ಪುರಂದರನ ಸಮೀಪಕ್ಕೆ ಪೋಗಿ ಆ ಇಂದ್ರನಿಂ ಏನು ಕಾರಣದಿಂ ಬಂದೆಯೆಂದು ಕೇಳಲ್ಪಟ್ಟವನಾಗಿ, ಎಲೆ ದೇವೇಂದ್ರನೆ! ಸಮುದ್ರಮಧ್ಯಗತರಾದ ಪಾಪಿಗಳಾದ ರಾಕ್ಷಸರುಗಳು ದೈತ್ಯರುಗಳು ನಮ್ಮನ್ನು ಬಾಧಿಸುತಿರುವರು. ಅದುಕಾರಣದಿಂ ನಾನು ಅಲ್ಲಿ ವಾಸವಂ ಮಾಡಲು ಭಯಪಟ್ಟು ಇಲ್ಲಿಗೆ ಬಂದೆನೆಂದು ಪೇಳ್ದು ಆ ದೇವೇಂದ್ರನ ಸಮೀಪದಲ್ಲಿಯೆ ನಿಂತಿರ್ದನು.

ಎಲೈ ಭೂಪಾಲನೆ! ತಪೋನಿಧಿಯಾದ ಕುಂಭೋದ್ಭವನಾದ ಅಗಸ್ತ್ಯನು ಆ ಸಮಯದಲ್ಲಿ ದೇವೇಂದ್ರನ ಬಳಿಗೆ ಬರಲು ಆಗ ದೇವೇಂದ್ರನು ಅಗಸ್ತ್ಯರಂ ಕಂಡು ನಮಸ್ಕರಿಸಿ ಅರ್ಘ್ಯಪಾದ್ಯಾಚಮನಗಳಿಂ ಪೂಜಿಸಿ ಆಸನವನ್ನಿತ್ತು ಋಷಿಯ ಆಜ್ಞೆಯಿಂ ತಾನು ಕುಳಿತನು. ಆ ಸಮಯದಲ್ಲಿ ನಾರದನು ಬರಲು ಆಗ ದೇವೇಂದ್ರನು ರಮ್ಯವಾದ ಆಸನವನ್ನಿತ್ತು ನಾರದನಂ ಪೂಜಿಸಿದನು. ಬಳಿಕ ಅಗಸ್ತ್ಯ ಇಂದ್ರರಂ ಕುರಿತು ನಾರದ ನಿಂತೆಂದನು. ಎಲೈ ಅಗಸ್ತ್ಯನೆ! ಎಲೈ ಇಂದ್ರನೆ! ಭೂಲೋಕದಲ್ಲಿ ಒಂದು ಅದ್ಭುತವಂ ಕಂಡು ನಿನ್ನ ಬಳಿಗೆ ಶೀಘ್ರವಾಗಿ ಬಂದೆನು. ಅದಂ ಪೇಳುತಿರ್ದೇನೆ ಸಾವಧಾನದಿಂ ಕೇಳು ಮತ್ತಂ ಭೂಲೋಕದಲ್ಲಿ ಕಾಶ್ಮೀರದೇಶಕ್ಕಧಿಪತಿಯಾದ ಸಮಸ್ತ ಶತ್ರುಗಳಂ ಜಯಿಸಿದ ವಜ್ರದೇಹಿಯೆಂಬ ಪೆಸರಿನಿಂದ ಪ್ರಸಿದ್ಧನಾದ ರಾಯನು ವಿದ್ಯಾವಿಹೀನನಾದ ಧರ್ಮನೆಂಬ ಪೆಸರುಳ್ಳ ಪುರೋಹಿತನಂ ನೋಡಿ ಒಂದು ವಾಕ್ಯವಂ ಪೇಳ್ವನ ದೆಂತೆನೆ. ಎಲೈ ಧರ್ಮನೆ! ಬ್ರಾಹ್ಮಣನೆ ಅಲಂಕಾರ ವಿದ್ಯವಂ ಏನು ಕಾರಣ ಪಠಿಸಲಿಲ್ಲ? ಅಕ್ಷರ ಹೀನವಾದ ನಿನ್ನ ಮುಖವು ಸ್ಮಶಾನಕ್ಕೆ ಸದೃಶವಾಗಿದ್ದೀ ತೆನಲು ಧರ್ಮನೆಂಬ ಪುರೋಹಿತನು ರಾಯನ ವಾಕ್ಯವಂ ಕೇಳಿ ಒಂದು ವಾಕ್ಯವಂ ನುಡಿದನದೆಂತೆನೆ. ಎಲೆ ರಾಯನೆ! ನಾನು ವಿದ್ಯಾಭ್ಯಾಸವಂ ಮಾಡಿದೆನು. ಆವ ದೋಷದಿಂದಲೋ ನನಗೆ ವಿದ್ಯೆ ಬರಲಿಲ್ಲ. ಅದುಕಾಣರದಿಂ ಜಗತ್ಪ್ರಭು ವಾದ ಗೋವಿಂದನಂ ಪೂಜಿಸಿ ವಿದ್ಯೆಯಂ ಪಡೆಯುವೆನು. ಇದಕ್ಕೆ ಸಂಶಯ ವಿಲ್ಲವೆಂದು ಪೇಳ್ದು ಆ ಧರ್ಮನೆಂಬ ಪುರೋಹಿತನು ವೇದಮತದಿಂ ಹರಿಯ ನ್ನಾರಾಧಿಸಿದನು. ಬಳಿಕ ಹರಿಯು ತಾನೇ ಪ್ರಸನ್ನನಾಗಿ ಆ ಪುರೋಹಿತನಿಗೆ ವಿದ್ಯೆಯನ್ನಿತ್ತು ಮರಳಿ ಶೀಘ್ರವಾಗಿ ಅಂತರ್ಧಾನವಾದನು. ಬಳಿಕ ಧರ್ಮನು ಆ ಹರಿಯಿಂ ವಿದ್ಯೆಯಂ ಪಡೆದು ಅತ್ಯಂತ ಸಂತೋಷಯುಕ್ತನಾಗಿ ಸಮಸ್ತ ವಿದ್ವಜ್ಜನದಿಂ ನಿಬಿಡವಾದ ರಾಯನ ಆಸ್ಥಾನಮಂಟಪಕ್ಕೆ ಪೋಗಿ ತನಗೆ ಹರಿ ಯಿತ್ತ ವರವಂ ಆದರದಿಂ ರಾಯಂಗೆ ಪೇಳಲು ರಾಯನು ಸಂತುಷ್ಟನಾಗಿ ಬ್ರಾಹ್ಮಣರಂ ಕೂಡಿಸಿ ಅತ್ಯಂತ ಶೋಭನವಾದ ಯಾಗವಂ ಮಾಡಿ ಅತ್ಯಂತ ಸಂತೋಷದಿಂ ವಿದ್ವಾಂಸರಿಗೆ ಅನೇಕ ದಾನಂಗಳ ನಿತ್ತನು. ಆಗ ಧರ್ಮನು ಆಸ್ಥಾನಮಂಟಪದಲ್ಲಿರ್ಪ ಪಂಡಿತರ ತರ್ಕಯುಕ್ತಿಯಂ ಖಂಡಿಸಲು ಅಲ್ಲಿರ್ದ ವಿದ್ವಾಂಸರು ಪುರೋಹಿತಂಗೆ ಉತ್ತರವನೀಯಲು ಅಸಮರ್ಥರಾದರು. ಆಗ ಈ ಧರ್ಮನು ಪುರುಷ ವಚನದಿಂ ಪಂಡಿತರ್ಗೆ ಅವಮಾನವಮಾಡಲು ಆಗ ಸರ್ವಲೋಕ ಹಿತನಾದ ಚತುರ್ಮುಖನು ವೃದ್ಧ ಬ್ರಾಹ್ಮಣರೂಪದಿಂ ಆ ಸಭೆ ಯೊಳಗೆ ಎದ್ದುನಿಂತು ಒಂದು ವಾಕ್ಯವಂ ಪೇಳ್ದನು. ಎಲೆ ದ್ವಿಜನೆ! ವಿದ್ಯವು

ವಿನಯಯುಕ್ತವಾದೊಡೆ ಮೂರು ಲೋಕದಲ್ಲಿಯೂ ಪ್ರಸಿದ್ಧವಹುದು. ಆ ವಿದ್ಯವೆ ಅವಿನಯವಾದೊಡೆ ಸಕಲ ಜನರಿಂ ನಿಂದಿಸಲ್ಪಡುವದು. ಅದುಕಾರಣದಿಂ ನೀನು ಪಂಡಿತನಾದರೂ ಇಲ್ಲಿರುವ ಪಂಡಿತರಂ ಅವಮಾನಮಾಡಬೇಡ. ಈ ಭೂಮಿಯಲ್ಲಿ ಜನನಾರಭ್ಯವಿದ್ಯೆಯುಳ್ಳವನಾರಿದಾನೆ? ಎನಲು ಧರ್ಮನದಂ ಕೇಳಿ ಕೋಪದಿಂದುತ್ತರವನ್ನಿತ್ತನು. ಎಲೆ ವೃದ್ಧನೆ! ಇಲ್ಲಿ ನಿನ್ನ ಪಾಂಡಿತ್ಯವಂ ಪ್ರಕಟವಂ ಮಾಡಬೇಡ ಮೌನವಾಗಿರು. ಆರು ವಿದ್ಯಾಹೀನರೊ ಅವರು ಮೂಢಬುದ್ಧಿಯುಳ್ಳವರು ಸಂಶಯವಿಲ್ಲ. ಅದುಕಾರಣ ನೀನು ಮೂಢಮಾನಸನು ಕೇವಲ ವೃದ್ಧನು. ಅದುಕಾರಣ ಏನನ್ನೂ ಅರಿಯೆ ವೃದ್ಧಾಭಿಮಾನವಂ ಬಿಡೆನಲು ಬ್ರಾಹ್ಮಣನದಂ ಕೇಳಿ ವಿಪ್ರವೇಷವಂ ಬಿಟ್ಟು ಕ್ರೋಧಯುಕ್ತ ಚತುರ್ಮುಖದಿಂ ನಿಜರೂಪವಂ ತೋರಿ, ಎಲೆ ಭ್ರಾಂತನೆ! ಪಂಡಿತನೆನಿಸಿಕೊಂಬ ನಿನಗೆ ಬುದ್ಧಿಯಂ ಪೇಳ್ವೆನು. ನೀನು ವಿದ್ಯಾಮದದಿಂದೇನನ್ನೂ ಅರಿಯೆ, ಶಾಂತಿಯಂ ಬಿಟ್ಟು ಮೂಢ ಬುದ್ಧಿಯಿಂ ನನ್ನನ್ನು ನಿಂದಿಸಿವೆ ಅದು ಕಾರಣದಿಂ ಪಾಪಿಯಾದ ನಿನ್ನ ಜಿಹ್ವೆಯು ಚಲಿಸದೇ ಇರಲೆಂದು ಬ್ರಾಹ್ಮಣನಿಗೆ ಶಾಪವನ್ನಿತ್ತು ಬೇಗದಿಂದಲ್ಲಿಯೇ ಅಂತರ್ಧಾನವಾದನೆಂದು ಸೂತಂ ಶೌನಕಾದಿಗಳ್ಗೆ ಪೇಳ್ವನೆಂಬಲ್ಲಿಗೆ, ಉಪದೇಶಕಾಂಡದೊಳು ಹನ್ನೊಂದನೆಯ ಅಧ್ಯಾಯವು ಸಂಪೂರ್ಣಮಾದುದು.

ಹನ್ನೆರಡನೆಯ ಅಧ್ಯಾಯವು.

ವಿಶುದ್ಧನ ಚರಿತ್ರೆ.

ಎಲೈ ಋಷಿಗಳಿರಾ! ಆ ಕ್ಷಣದಲ್ಲಿ ಆ ಪಾಪಿಯ ಜಿಹ್ವೆಯು ಸ್ತಂಭನವಾಗಿ ಪೋದುದು. ಆ ಧರ್ಮನು ಆ ಆಸ್ಥಾನ ಮಂಟಪದಲ್ಲಿ ಮೂಕನಾಗಿದ್ದನು. ಎಲೈ ಇಂದ್ರನೆ! ಎಲೈ ಅಗಸ್ತ್ಯನೆ! ಆ ರಾಯನು ಆ ಅದ್ಭುತವಂ ಕಂಡು ಇದೇನೆಲಾ? ಎಂದು ಚಿಂತಿಸಿ ಅತ್ಯಂತ ವಿಚಾರವಂ ಮಾಡಿ, ಆ ಧರ್ಮಂಗೆ ಅನುಜನಾದ ವಿಶುದ್ಧನಂ ನೋಡಿ, ಪರಿಶುದ್ಧವಾದ ಮನಸ್ಸುಳ್ಳ ವಿಶುದ್ಧನೆ! ಇನ್ನುಮುಂದೆ ಮಾಡುವ ಕಾರ್ಯವೇನೆಂದು ಪ್ರಶ್ನಿಸೆ, ಆತನದಂ ಕೇಳಿ ಎಲೈ, ರಾಯನೆ! ಈಗ ಪುಂಡರೀಕಾಕ್ಷನಾದ ದೇವನಾದ ಹರಿಯನ್ನಾರಾಧಿಸಿ, ಪೂರ್ವದಂತೆ ಒಂದು ಕಡೆಯಲ್ಲಿಯೂ ಕೇಳಿಲ್ಲದ ಪದವಂ ಪಡೆವೆನೆಂದು ಪೇಳ್ದು ಮತ್ತೊಂದರಲ್ಲಿ ಮನವಿಡದೆ ಈ ಹರಿಯಂ ಪೂಜಿಸಿದನು. ಆಗ ಶ್ರೀಹರಿಯು ಸಂತೋಷದಿಂದಾತಂಗೆ ಪ್ರಸನ್ನನಾಗೆ ವಿಶುದ್ಧನು ಪ್ರಸನ್ನನಾದ ಹರಿಯಂ

ಕಂಡು ಭಗವಂತನಾದ ಭಕ್ತಗರ್ಭಸಂಪ್ರದನಾದ ಹರಿಯೆ! ಪ್ರಸನ್ನನಾಗು ನಿನಗೆ ಭಕ್ತನಾದ ಈತನಂ ಉದ್ಧರಿಸು, ಬ್ರಹ್ಮಶಾಪವಂ ಪರಿಹರಿಸೆನಲು ಹರಿಯದಂ ಕೇಳಿ, ಎಲೈ ವಿಶುದ್ಧನೆ! ಈತಂಗೆ ನಮ್ಮ ಪ್ರಸಾದದಿಂ ಪೂರ್ವದಲ್ಲಿ ವಿದ್ಯೆಯುಂಟಾದುದು. ಪರುಷೋಕ್ತಿಗಳಿಂ ವಿದ್ವಾಂಸರಂ ದೂಷಿಸಬಾರದಲ್ಲ ವಿದ್ಯೆಯು ವಿನಯಮುಳ್ಳದ್ದೆ ಆದರೆ ಆವ ಕಡೆಯಲ್ಲಿಯೂ ಪೂಜ್ಯವಹುದು. ಬ್ರಹ್ಮನು ವಿದ್ವಾಂಸರನ್ನವಮಾನವಂ ಮಾಡುವದಂ ನೋಡಿ, ಕೋಪದಿಂ ಶಾಪನಿತ್ತನು. ಅದುಕಾರಣದಿಂದೀತನ ಶಾಪವ ಬಿಡಿಸಲು ಶಕ್ಯವಲ್ಲವೆನಲು ವಿಶುದ್ಧನದಂ ಕೇಳಿ, ಎಲೈ ಸ್ವಾಮಿಯೆ! ನಾವು ಲೋಕಗುರುವಾದ ನಿನ್ನ ದಾಸರು ಅದುಕಾರಣದಿಂ ಈ ಅಪರಾಧವಂ ಕ್ಷಮಿಸಿ, ಈತನಂ ರಕ್ಷಿಸಿಕೋ ಎನಲು ಹರಿಯದಂ ಕೇಳಿ ಮರಳಿ ವಿದ್ಯೆಯ ನಿತ್ತೆನಾದೊಡೆ ಈತನು ವಿದ್ವಾಂಸರಂ ದೂಷಿಸನು ಎಂದು ಮನದಿಂದಾಲೋಚಿಸಿ, ಅಶಕ್ಯವಾದ ಕಾರ್ಯದಲ್ಲಿ ಏಸು ಯತ್ನವ ಮಾಡುತಿದ್ದಿ? ಬ್ರಹ್ಮನ ಶಾಪವ ಬಿಡಿಸಲು ನನಗೆ ಶಕ್ತಿ ಇಲ್ಲವೆಂದು ಪೇಳೆ, ವಿಶುದ್ಧನದಂ ಕೇಳಿ ಕೋಪದಿಂ ನೋಡಿ, ಎಲೈ ಪುರುಷೋತ್ತಮನೆ! ಪೂರ್ವದಲ್ಲಿ ತಾಪಸನಾದ ವಿಶ್ವಾಮಿತ್ರನು ತನ್ನನ್ನಾಶ್ರಯಿಸಿದ ತ್ರಿಶಂಕು ಮಹಾರಾಯನಂ ತನ್ನ ತಪೋಮಹಿಮೆಯಿಂ ಸ್ವರ್ಗಕ್ಕೆ ಕಳುಹಿದನು. ಹಾಗೆ ನಿನಗೂ ಆಶ್ರಿತ ಜನದಲ್ಲಿ ಅಷ್ಟು ಮಾತ್ರ ದಯೆ ಇರಬಾರದೆ? ಎನಲು ಹರಿಯದಂ ಕೇಳಿ, ಕುಪಿತನಾಗಿ, ಆವ ಕಾರಣದಿಂ ನನ್ನನ್ನೂ ಅಜ್ಞಾನದಿಂ ನಿಂದಿಸುತಿದ್ದೀ? ಅದುಕಾರಣದಿಂ ನೀನು ಬಂದು ಕ್ಷಯವ್ಯಾಧಿಗ್ರಸ್ತನಾಗಿರೆಂದು ಶಪಿಸಿ ಅಂತರ್ಧಾನವಾದನು. ಬಳಿಕ ಆ ಮಹೀಪತಿಯು ವಿಷ್ಣು ಶಾಪಗ್ರಸ್ತನಾದ ವಿಶುದ್ಧನಂ ನೋಡಿ, ಇದೇನೆಲಾ? ಎಂದು ತನ್ನ ಹೃದಯದಲ್ಲಿ ಅತ್ಯಂತ ಆಶ್ಚರ್ಯವನ್ನೈದಿದನು. ವಿಶುದ್ಧನು ಕ್ರಮದಿಂ ಪಾದಾಂಘ್ರಿಯೊಳು ಕ್ಷಯವ್ಯಾಧಿಯನ್ನೈದಿದನು.

ಬಳಿಕ ಆರಾಯನು ಕೇತಾರೇಶ್ವರನ ಮಹೋತ್ಸವಕಾಲದಲ್ಲಿ ಭಕ್ತಿಯಿಂ ಸ್ವಾಮಿಯ ಸೇವಿಸಲು ಮಹಾಸೇನಾ ಸಮೇತನಾಗಿ ಆ ಧರ್ಮನಂ ವಿಶುದ್ಧನಂ ಕರೆದುಕೊಂಡು ಕೇತಾರಕ್ಕೆ ಪೋಗಿ ಅಲ್ಲಿ ಮಹೇಶ್ವರನಾದ ಕೇತಾರೇಶ್ವರನ ದರ್ಶನವಂ ಮಾಡಿ, ಸ್ವಾಮಿಗೆ ನಮಸ್ಕರಿಸಿ ಭಕ್ತಿಯಿಂ ಸ್ತುತಿಸಿ ಆ ಬ್ರಾಹ್ಮಣರು ಸಹ ಗೋಪುರದ್ವಾರಕ್ಕೆ ಬಂದು ನಿಂತರು. ಆ ಸಮಯದಲ್ಲಿ ಕೆಲಂಬ ಋಷಿಗಳು ಪರಮೇಶ್ವರನಾದ ಕೇತಾರೇಶ್ವರಂಗೆ ನಮಸ್ಕರಿಸಿ ಸಂತೋಷದಿಂ ಮರಳಿ ಗೋಪುರದ್ವಾರಕ್ಕೆ ಬಂದು ಇವರಂ ಕಂಡು ಈ ವಿಪ್ರರು ಶಾಪಗ್ರಸ್ತರೆಂದು ತಿಳಿದು ಜ್ಞಾನದೃಷ್ಟಿಯಿಂದ ಇವರ ಶಾಪವ ಬಿಡಿಸಲಶಕ್ತರಾಗಿ ರಾಯಂಗೆ ಆಶೀರ್ವದಿಸಿ ತಮ್ಮ ತಮ್ಮ ಸ್ಥಾನಂಗಳಿಗೆ ಪೋದರು. ಬಳಿಕ ರಾಯನು ಇವರ

ಶಾಪವಿಮೋಚಕರಾರೂ ಇಲ್ಲವೆಂದು ಅತ್ಯಂತ ವ್ಯಾಕುಲನಾಗಿ ಆ ಗೋಪುರ ದ್ವಾರದಲ್ಲಿ ದಧೀಚಿಯು ಶಿಷ್ಯರು ಸಹ ಆ ಕ್ಷೇತ್ರಕ್ಕೆ ಬಂದು ದೇವೇಶ್ವರನಾದ ಕೇತಾರೇಶ್ವರಂಗೆ ಭಕ್ತಿಯಿಂ ನಮಸ್ಕರಿಸಿ ಮರಳಿ ಬರುತ್ತಿರಲು ಆ ರಾಯನು ಆ ದಧೀಚಿಯುಂ ಕಂಡು ಆತಂಗೆ ನಮಸ್ಕರಿಸಿ, ವಿನಯದಿಂ ತಲೆವಾಗಿ, ಎಲೈ ಮಹರ್ಷಿಯೆ! ಈ ವಿಪ್ರರು ನನಗೆ ಪುರೋಹಿತರು. ಇವರು ಪೂರ್ವಮಾಡಿದ ಕರ್ಮದಿಂದ ಶಾಪಗ್ರಸ್ತರಾದರು. ಇವರಂ ರಕ್ಷಿಸೆನಲು ಆ ದಧೀಚಿಯು ರಾಯನ ಮಾತಂ ಕೇಳಿ, ಸಂತೋಷದಿಂ ಪವಿತ್ರವಾದ ಭಸ್ಮವಂ ತೆಗೆದು ಆ ರಾಯನಗೀಯ್ಯೆ ರಾಯನು ಆ ಭಸ್ಮವನ್ನು ವಿಪ್ರದೇಹದಲ್ಲಿ ಲೇಪನವಂ ಮಾಡೆ, ಆ ಕ್ಷಣದಲ್ಲಿಯೆ ವಿಶುದ್ಧನ ದೇಹವು ವೃದ್ಧಿಯಾದುದು. ಧರ್ಮನ ಜಿಹ್ವೆ ಪೂರ್ವ ದಂತೆಯಾದುದು. ಆ ದ್ವಿಜರು ಭಸ್ಮಾನುಲೇಪನದಿಂ ಶಾಪವಿಮುಕ್ತರಾದರು. ಅದುಕಾರಣದಿಂ ಭಸ್ಮದ ಮಹಿಮೆಯು ಆರಿಂದಲೂ ಪೇಳಲು ಶಕ್ಯವಲ್ಲ. ಆಗ ವಜ್ರದೇಹನೆಂಬ ರಾಯನು ದಧೀಚಿಗೆ ನಮಸ್ಕರಿಸಿ, ಬಳಿಕ ಸಹೋದರರಾದ ಆ ವಿಪ್ರರು ಆತಂಗೆ ನಮಸ್ಕರಿಸಿ, ಎಲೈ ಮಹಾಮುನಿಯೆ! ಭಸ್ಮದ ಮಹಿಮೆಯಿಂ ನಮ್ಮನ್ನು ರಕ್ಷಿಸಿದೆ ನಿನ್ನಿಂದ ಶಂಕರನಿಂ ಭಸ್ಮದ ಮಾಹಾತ್ಮ್ಯೆಯು ತಿಳಿಯಲ್ಪಟ್ಟಿತು. ಮತ್ಯಾರಿಗೂ ಭಸ್ಮದ ಮಾಹಾತ್ಮೆಯು ತಿಳಿಯಲಸಾಧ್ಯವೆಂದು ಮರಳಿ ನಮಸ್ಕರಿಸೆ, ಆ ದಧೀಚಿಯು ನಮಸ್ಕಾರವಂ ಮಾಡುತಿರ್ಪ ರಾಯಂಗೆ ಅನೇಕ ಆಶೀರ್ವಾದವಂ ಮಾಡಿ ತಮ್ಮ ಆಶ್ರಮಕ್ಕೆ ಪೋದರು. ಅಂದು ಮೊದಲಾಗಿ ಅವರೀರ್ವರು ಭಸ್ಮೋದ್ಧೂಳಿತ ವಿಗ್ರಹರಾಗಿ ಮೋಕ್ಷವನ್ನೈದಿದ ರೆಂದು ನಾರದನು ಪೇಳೆ ಅಗಸ್ತ್ಯ ಇಂದ್ರರು ನಾರದನ ಮಾತಂ ಕೇಳಿ, ಆಶ್ಚರ್ಯ ಯುಕ್ತವಾದ ಮನಸ್ಸುಳ್ಳವರಾಗಿ ಅದ್ಭುತವಾದ ಭಸ್ಮದ ಮಹಾತ್ಮೆಯಂ ಕೇಳಿ ಅತ್ಯಂತ ಸಂತೋಷದಿಂದಿರುತಿರ್ದರು. ಆ ಸಮಯದಲ್ಲಿ ತಾನು ಭಸ್ಮಮಹಾ ತ್ಮೆಯಂ ಕೇಳುವಲ್ಲಿ ವಿಮುಖನಾಗಿ ಮನದಿಂ ಮತ್ತೊಂದು ಕಾರ್ಯವ ಚಿಂತಿಸಿ ಸುರರಿಗೆ ಕರ್ತೃವಾದ ಎಲೈ ಪುರಂದರನೆ! ಈ ಕಥಾಮಾರ್ಗ ಹಾಗಿರಲಿ, ಸಮು ದ್ರದ ಮಧ್ಯಗತರಾದ ರಾಕ್ಷಸರು ನನ್ನನ್ನು ಬಾಧಿಸುತಿರ್ದರು. ಆದುದರಿಂದ ನನಗೆ ಬಹು ಬಾಧೆ ಯುಂಟಾದುದು. ಅದುಕಾರಣ ಅವರ ಸಂಹಾರಕ್ಕೋ ಸುಗ ಯತ್ನವ ಮಾಡಬೇಕೆಂದು ಪೇಳಲು, ಆಗ ಅಗಸ್ತ್ಯರು ಅತ್ಯಂತ ಕೋಪ ಯುಕ್ತರಾಗಿ ಎಲೈ, ಭ್ರಾಂತನೆ! ಪಾಪಹಾರಿಯಾದ ಭಸ್ಮದ ಮಹಾತ್ಮೆಯಂ ಪೇಳುತಿರ್ಪ ನಮ್ಮ ವಚನವಂ ಧಿಕ್ಕರಿಸಿ ನೀವು ಪೇಳುವ ಕಥಾಮಾರ್ಗ ಹಾಗಿರ ಲೆಂದು ಅಶ್ಲಾಘ್ಯವ ಮಾಡಿ ನುಡಿದೆಯಲ್ಲಾ ಅದುಕಾರಣದಿಂ ನೀನು ರಾಕ್ಷಸ ನಾಗೆಂದು ನನಗೆ ಶಾಪವನಿತ್ತು ಇಂದ್ರನಂ ಕರದು ಎಲೈ ಇಂದ್ರನೆ! ಸಕಲ

ಪಾಪ ಪರಿಹಾರಕವಾದ ಭಸ್ಮ ಮಹಾತ್ಮೆಯ ಶ್ರವಣದಿಂದ ರಾಕ್ಷಸ ಸಂಹಾರವ ಮಾಡುವಲ್ಲಿ ಏನು ಪ್ರಯಾಸವಿದ್ದೀತೆಂದು ಪೇಳ್ದು ಸಮುದ್ರತೀರಕ್ಕೆ ಪೋಗಿ, ಮಂತ್ರದಿಂದಭಿಮಂತ್ರಿತವಾದ ಭಸ್ಮವಂ ತೆಗದು ಲಲಾಟದಲ್ಲಿ ಧರಿಸಿ ಮನದಲ್ಲಿ ಮಹಾದೇವನಂ ಚಿಂತಿಸಿ ಹಸ್ತವ ನೀಡಿ ಸಮುದ್ರನಂ ಕರೆಯೆ ಆಗ ಸಮುದ್ರವು ಮಂಜಿನ ಹನಿಯಂತೆ ಅಗಸ್ತ್ಯನ ಹಸ್ತದಲ್ಲಿ ನಿಲ್ಲಲು ಆಗ ಅಗಸ್ತ್ಯನು ಮಹಾ ದೇವನಂ ಧ್ಯಾನಿಸಿ ಸಮುದ್ರವಂ ಪಾನಮಾಡಿ ಎಲೈ ಇಂದ್ರನೆ ! ಈಗ ದುರ್ಜನ ರಾದ ರಾಕ್ಷಸರಂ ಸಂಹರಿಸೆಂದು ಪೇಳ್ದು ಆ ಇಂದ್ರಗೋಸುಗ ಭಸ್ಮವನೀಯೆ ಆಗ ಇಂದ್ರನು ಸರ್ವಾಂಗದಲ್ಲಿ ಲೇಪಿಸಿ ಸಮಸ್ತ ರಾಕ್ಷಸರಂ ಸಂಹರಿಸಿದನು. ಬಳಿಕ ಅಗಸ್ತ್ಯನು ಸಮುದ್ರವಂ ಮರಳಿ ಪೂರ್ವದಂತೆಯೆ ಬಿಟ್ಟು ತನ್ನಾಶ್ರಮಕ್ಕೆ ಪೋಗಲು ಆಗ ದೇವೇಂದ್ರನು ತನ್ನನ್ನು ಕರೆದುಕೊಂಡು ಆ ಮುನಿಯ ಸಮೀ ಪಕ್ಕೆ ಪೋಗಿ, ಆತಂಗೆ ಶಾಂತವಚನವಂ ಪೇಳೆ, ಎಲೈ ಅಗಸ್ತ್ಯನೆ! ಈ ವರುಣನು ಮೂಢನು ಏನನ್ನೂ ಅರಿತವನಲ್ಲ. ಕೃಪೆಯಿಂ ಈತನ ರಕ್ಷಿಸಬೇಕೆಂದು ಆತಂಗೆ ನಮಸ್ಕರಿಸೆ, ಆಗಲಗಸ್ತ್ಯನು ಪ್ರಸನ್ನನಾಗಿ ತನ್ನನ್ನು ನೋಡಿ ಒಂದು ವಾಕ್ಯವಂ ಪೇಳ್ದನು. ಎಲೈ ಇಂದ್ರನೆ ಭುಜಬಲನೆಂಬ ಒಬ್ಬಾನೊಬ್ಬ ಕ್ಷತ್ರಿಯನುಂಟು. ಈ ರಾಯನ ಲಲಾಟದಲ್ಲಿರ್ಪ ಭಸ್ಮವಂ ಕಂಡು ಅದರ ದರ್ಶನ ಮಹಿಮೆಯಿಂ ಈತಂಗೆ ರಾಕ್ಷಸ ಶರೀರವು ಪೋಗಿ ತನ್ನ ನಿಜ ಶರೀರವಂ ಧರಿಸಿ ಪೂರ್ವದಂತೆ ಪಶ್ಚಿಮ ದಿಕ್ಕಿಗೆ ಅಧಿಪತಿಯಾದನೆಂದು ಪೇಳ್ದು, ನನ್ನನ್ನು ಕಳುಹಿದನು. ನಾನು ಹಾಗೆಯೇ ನನ್ನ ಅಂತಃಪುರಕ್ಕೆ ಬರಲು, ನನಗೆ ಘೋರವಾದ ರಾಕ್ಷಸ ಶರೀರವು ಬಂದುದು. ಎಲೈ ರಾಯನೆ! ನನ್ನ ಲಲಾಟದಲ್ಲಿರ್ಪ ಭಸ್ಮವಂ ಕಂಡು ರಾಕ್ಷಸ ರೂಪಂ ಬಿಟ್ಟು ನನ್ನ ಪೂರ್ವ ಶರೀರವಂ ಧರಿಸಿದೆನೆಂದು ಭುಜಬಲರಾಯಂಗೆ ಪೇಳ್ದು ತನ್ನ ಭಟರಂ ನೆನೆಯೆ ಸಮಸ್ತರಾದ ಭಟರು ಅತಿ ಶೀಘ್ರವಾಗಿ ಬರಲು, ಬಳಿಕ ವರುಣನು ಸಂತುಷ್ಟಮಾನಸನಾಗಿ ಅವರೊಡನೆ ಕೂಡಿ ತನ್ನ ದಿಕ್ಕಿಗೆ ಪೋಗಿ ಭಸ್ಮ ದರ್ಶನದಿಂ ತನ್ನ ಸ್ಥಾನಕ್ಕೆ ಪೋದನು. ಬಳಿಕ ಭುಜಬಲನು ಭಸ್ಮ ಸಾಮರ್ಥ್ಯವಂ ಕೇಳಿ, ಅತ್ಯಂತಾಶ್ಚರ್ಯಯುಕ್ತನಾಗಿ, ಭಸ್ಮದಲ್ಲಿ ಭಕ್ತಿ ಯಂ ನಿಲ್ಲಿಸಿ, ಭಸ್ಮದಿಂ ಸರ್ವಾಂಗಲೇಪನವಂ ಮಾಡಿ ಭಸ್ಮದಿಂ ಶಯನವಂ ಮಾಡಿ, ಪುತ್ರ ಮಿತ್ರ ಕಳತ್ರರೊಡನೆ ಅನೇಕ ಭೋಗಗಳೆಲ್ಲವನನುಭವಿಸಿ, ಅಂತ್ಯದಲ್ಲಿ ಕೈಲಾಸಕ್ಕೆ ಪೋಗಿ, ಅತ್ಯಂತ ಸಂತೋಷದಿಂದಿರುತಿರ್ದನು. ಎಲೈ ದ್ವಿಜರುಗಳಿರಾ! ಆವಾತನು ಸಾವಧಾನದಿಂ ಈ ಮಹಾತ್ಮೆಯಂ ಕೇಳುತಿರ್ಪನೊ ಕೇಳಿಸುತಿದಾನೋ ಪಠಿಸುತಿದಾನೋ ಆತನು ಮೋಕ್ಷವನ್ನೈದುವನು. ಮತ್ತು ಈ ಭಸ್ಮದ ಮಹಾತ್ಮೆಯಂ ಕೇಳಿದ್ದಾದರೆ ಪುತ್ರಕಾಮಿಯಾದವರಿಗೆ ಪುತ್ರರುಂ

ಧನಕಾಮಿಗೆ ಧನವುಂ ವಿದ್ಯಾಕಾಮಿಗೆ ವಿದ್ಯೆಯುಂ ಮೋಕ್ಷಾರ್ಥಿಗಳಿಗೆ ಮೋಕ್ಷವು ಉಂಟಾಗುವದು. ಮತ್ತಮಾ ಭಸ್ಮದ ಮಹಾತ್ಮೆಯಂ ನಿಯಮಮಾಗಿ ಕೇಳಿದ್ದಾದೊಡೆ ಸುವರ್ನಸ್ತೇಯ ಗುರುತಲ್ಪಗಮನ ಮುಂತಾದ ಮಹಾ ಪಾತಕಂಗಳು ನಾಶವಾಗುವವು.

ಎಲೈ ದ್ವಿಜರುಗಳಿರಾ! ಬಹುವಾಕ್ಯದಿಂದೇನು? ನಿರ್ಣಯವನ್ನು ಪೇಳುತ್ತೇನೆ ಕೇಳಿ, ಈ ಭಸ್ಮವು ಬ್ರಹ್ಮಹತ್ಯಾದಿ ಪಾತಕಂಗಳ್ಗೆ ಪ್ರಾಯಶ್ಚಿತ್ತವು. ಈ ಭಸ್ಮದ ಮಹಾತ್ಮೆಯು ಕೇಳಿದ್ದರಿಂದ ನೀವು ಕೃತಾರ್ಥರಾದಿರೆಂದು ಸೂತಂ

ಶೌನಕಾದಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ಉಪದೇಶಕಾಂಡದೊಳು
ಹನ್ನೆರಡನೆಯ ಅಧ್ಯಾಯವು ಸಮಾಪ್ತಮಾದುದು.

ಹದಿಮೂರನೆಯ ಅಧ್ಯಾಯವು.

ರುದ್ರಾಕ್ಷಿಮಹಿಮಾ ವರ್ಣನಂ.

ಎಲೈ ದ್ವಿಜರುಗಳಿರಾ! ರುದ್ರಾಕ್ಷಿಯ ಮಹಿಮೆಯಂ ಪೇಳುತಿದೇನೆ ಕೇಳುವರಾಗಿ ಪುಣ್ಯವಾದೀ ರುದ್ರಾಕ್ಷಿಯ ಮಾಹಾತ್ಮೆಯಂ ಪಠಿಸುವರಿಗೂ ಕೇಳುವರಿಗೂ ಸಮಸ್ತವಾದ ಪಾಪಸಮೂಹವೆಲ್ಲವು ತೊಲಗಿ ಪೋಗುವವು. ಆವ ಪುರುಷನು ಭಕ್ತಿಹೀನನಾದೊಡೆಯುಂ ಹಾಗಲ್ಲದಿರ್ದೊಡೆ ಅತಿ ಭಕ್ತನಾದೊಡಂ ರುದ್ರಾಕ್ಷವಂ ಧರಿಸಿದವನಾದೊಡೆ ಆತನನ್ನು ಪಾತಕಂಗಳಿಂ ಬಿಡಲ್ಪಡುವನು. ತತ್ವ ದರ್ಶಿಗಳಾದ ಮುನಿಗಳು ಈ ರುದ್ರಾಕ್ಷ ಧಾರಣೆಯೇ ಮಹಾ ವ್ರತವೆಂದು ಪೇಳುತಿರುವರು. ರುದ್ರಾಕ್ಷಧಾರಣೆಯು ಆವದರೊಡನೆ ಸದೃಶವಾಗಿದ್ದೀತು? ಆವ ಪುರುಷನು ಪ್ರತಸ್ಥನಾಗಿ ಸಹಸ್ರ ರುದ್ರಾಕ್ಷವಂ ಧರಿಸುತಿರ್ಪನೋ ಆತಂಗೆ ದೇವತೆಗಳು ನಮಸ್ಕರಿಸುವರು. ಹ್ಯಾಗೆ ರುದ್ರನು ಸರ್ವೋತ್ಕೃಷ್ಟನೋ ಹಾಗೆ ರುದ್ರಾಕ್ಷವಂ ಧರಿಸಿದವಂ ಸರ್ವೋತ್ಕೃಷ್ಟನು. ಆವ ಪುರುಷನು ಸಹಸ್ರ ರುದ್ರಾಕ್ಷವಿಲ್ಲದಿದ್ದರೂ ಬಾಹುಗಳಲ್ಲಿ ಹದಿನಾರು ಹದಿನಾರು ಶಿಖಿಯಲ್ಲಿ ಒಂದೆರಡು ಕರಗಳಲ್ಲಿ ಹನ್ನೆರಡು ಹನ್ನೆರಡು ಕಂಠದಲ್ಲಿ ಮುವ್ವತ್ತೆರಡು ಕರ್ಣಗಳಲ್ಲಿ ಪ್ರತ್ಯೇಕ ಪ್ರತ್ಯೇಕ ಆರಾರು ಮಣಿಗಳನ್ನು ಧರಿಸಿರುವನೋ ಆತನು ರುದ್ರನೋಪಾದಿಯಲ್ಲಿ ಸಮಸ್ತರಿಂ ಪೂಜಿಸಲ್ಪಡುವನು. ಆವ ಪುರುಷನು ಮೌಕ್ತಿಕ ಪ್ರವಾಳ ಸ್ಫಟಿಕ ರಜತ ವೈಡೂರ್ಯ ಕಾಂಚನಂಗಳೊಡನೆ ರುದ್ರಾಕ್ಷ ಮಣಿಗಳಂ ಧರಿಸಿರುತಿರ್ಪನೋ ಆತನು ರುದ್ರನೆಂಬುವದರಲ್ಲಿ ಸಂಶಯವಿಲ್ಲವು. ಆವಾತನು ರುದ್ರಮುದ್ರೆಗಳಾದ ಕೇವಲ ರುದ್ರಾಕ್ಷಿಗಳನ್ನಾದರೂ ಧರಿಸಿದೊಡೆ ಅಂಧಕಾ

ರಂಗಳು ಹ್ಯಾಗೆ ಸೂರ್ಯನಂ ಮುಟ್ಟದಿರ್ಪವೊ ಹಾಗೆ ಆತನಂ ಪಾಪಂಗಳು ಮುಟ್ಟುವದಿಲ್ಲವು. ರುದ್ರಾಕ್ಷಮಾಲಿಕೆಯಿಂದ ಜಪಿಸಲ್ಪಟ್ಟ ಜಪವು ಜಪಕರ್ತೃವಿಗೆ ಅನಂತ ಫಲಂಗಳಂ ಕೊಡುವದು. ರುದ್ರಾಕ್ಷವಿಲ್ಲದ ಜಪವು ಎಷ್ಟು ಮಾಡಿದರೂ ನಿಷ್ಫಲವಾಗುವದು. ಅನೇಕ ಪುಣ್ಯವನ್ನೀಯುತಲಿರುವ ಒಂದು ರುದ್ರಾಕ್ಷಿಯ ಮಣಿಯನ್ನಾದರೂ ಆವನನ ಶರೀರದಲ್ಲಿರುವದಿಲ್ಲವೋ ಆತನ ಜನ್ಮವು ತ್ರಿಪುಂಡ್ರವಿಲ್ಲದೊಡೆ ಹ್ಯಾಗೆ ನಿರರ್ಥಕವೋ ಹಾಗೆ ವ್ಯರ್ಥವಾಗುವದು. ಮತಿವಂತನಾದ ಆವ ಮನುಷ್ಯನ ಶಿರಸ್ಸಿನಲ್ಲಿ ರುದ್ರಾಕ್ಷವನ್ನಿರಿಸಿ, ಸ್ನಾನಮಾಡುವನೋ ಆತಂಗೆ ಗಂಗಾಸ್ನಾನಫಲಮುಂಟಾಗುವದರಲ್ಲಿ ಸಂಶಯವಿಲ್ಲವು. ಆವಾತನು ರುದ್ರಾಕ್ಷವಂ ಉದಕದಿಂದಭಿಷೇಕವಂ ಮಾಡಿ, ಪೂಜಿಸುತಿರುವನೋ ಆತಂಗೆ ಲಿಂಗಪೂಜೆಯಲ್ಲಾಗುವ ಫಲವುಂಟಾಗುವದು. ಮತ್ತೆ ಕೆಲಂಬ ರುದ್ರಾಕ್ಷಿಗಳು ಏಕಮುಖಂಗಳು, ಕೆಲಂಬವು ಪಂಚ ಮುಖಂಗಳು, ಏಕಾದಶಮುಖಂಗಳು, ಕೆಲವು ಕೆಲವು ಚತುರ್ದಶ ಮುಖಂಗಳು, ಕೆಲವು ಹೀಗೆ ಲೋಕಪೂಜಿತಂಗಳಾಗಿರುವವು. ಆವ ಪುರುಷನು ಭಕ್ತಿಯಿಂ ಇವುಗಳಂ ಪೂಜಿಸುತ್ತಿರ್ಪನೊ ಆತನು ದರಿದ್ರನಾದರೂ ಅತ್ಯಂತ ಐಶ್ವರ್ಯವಂತನಹನು. ಎಲೈ ಋಷಿಗಳಿರಾ ! ಪುಣ್ಯವಾದ ಆಖ್ಯಾನಂಗಳಂ ಪೇಳುತಿರ್ದೇನೆ. ಸಾವಧಾನದಿಂ ಕೇಳಿ, ಪೂರ್ವದೋಳ್ ನಂದಿಯೆಂಬ ಗ್ರಾಮದಲ್ಲಿ ಸರ್ವಾಂಗ ಸೌಂದರ್ಯಮುಳ್ಳ ಮಹಾನದಿ ಯೆಂಬ ಒಬ್ಬ ವೇಶ್ಯಾಸ್ತ್ರೀಯುಂಟು. ಆಕೆಗೆ ಪೂರ್ಣಚಂದ್ರಂಗೆ ಸಮಾನವಾದ ಛತ್ರವು, ಸ್ವರ್ಣದಿಂ ಒಪ್ಪುತಿರ್ಪ ಪಲ್ಲಕ್ಕಿಯು, ಶೋಭನವಾದ ಕಾವುಗಳುಳ್ಳ ಚಾಮರಂಗಳು ಸುವರ್ಣಮಯವಾದ ಪಾದುಕೆಗಳು ವಿಚಿತ್ರವಾದ ವಸ್ತ್ರಂಗಳು ಚಂದ್ರಪ್ರಭೆಗೆ ಸಮಾನವಾದ ಮಂಚಂಗಳು ಅನೇಕ ಗೋವುಗಳು ಮಹಿಷಿಗಳು ಪರಿಚಾರಕರೂ ಉಂಟು. ಆಕೆಯು ಗಂಧ ಕರ್ಪೂರ ಕುಂಕುಮ ಕಸ್ತೂರಿಗಳಂ ಲೇಪನವಂ ಮಾಡಿಕೊಂಡಿರ್ಪಳು. ಆಕೆಯು ಶ್ರೇಷ್ಠಂಗಳಾದ ಭೂಷಣಂಗಳಿಂ ಕೊಟ್ಟ ಧನದಿಂದಾಢ್ಯಳಾಗಿಹಳು. ಆಕೆಯು ನಿತ್ಯದಲ್ಲೂ ಶಿವಪೂಜಾ ನಿರತೆಯು, ಆವಾಗಲೂ ಧರ್ಮಪರಾಯಣೆಯು, ಶಿವಕಥಾಯುಕ್ತೆಯು. ಶಿವನಾಮೋಚ್ಚಾರಣೆಯಲ್ಲಿ ರತಿಯುಳ್ಳವಳು. ಮತ್ತಮಾಕೆಯು ಶಿವಭಕ್ತದ್ವಿಜರ್ಗೆ ಭಕ್ತಿಯಿಂ ನಮಸ್ಕಾರವಂ ಮಾಡುವಳು. ಆ ಮಹಾನದಿಯೆಂಬ ವೇಶ್ಯೆಯು ವಿನೋದದಿಂ ನಾಟ್ಯಮಂಟಪದಲ್ಲಿರುತಿರ್ಪ ರುದ್ರಾಕ್ಷಿಗಳಿಂದಲಂಕೃತವಾದ ಒಂದು ಮರ್ಕಟವನ್ನು ಕರತಾಳಗಳಿಂದಾವಾಗಲು ನರ್ತನವಂ ಮಾಡಿಸುತ್ತಿರುವಳು. ಆಕೆಯು ಅನೇಕ ಸಖಿಗಳಿಂದಾವೃತೆಯಾಗಿ ಆವಾನರ ಕುಕ್ಕುಟಗಳಂ ನೋಡಿ ಹಾಸ್ಯವಂ ಮಾಡಿ ನಗುತಿರ್ಪಳು.

ಆ ಮರ್ಕಟವು ರುದ್ರಾಕ್ಷಿಯಿಂ ಮಾಡಲ್ಪಟ್ಟ ಕೇಯೂರ ಕರ್ಣಾಭರಣ ಕುಂಡಲಗಳುಳ್ಳದ್ದಾಗಿ ಅನೇಕ ಶಿಕ್ಷೆಯಿಂ ಬಾಲಕನಂತೆ ಅತ್ಯಂತ ನರ್ತನವಂ ಮಾಡುತಿರ್ಪುದು. ಈ ಮರ್ಕಟ ಕುಕ್ಕುಟಗಳು ಕೆಲವು ಕಾಲದ ಮೇಲೆ ಮೃತವಾದವು. ಬಳಿಕ ಆ ಮರ್ಕಟವು ಕಾಶ್ಮೀರದೇಶದ ಭದ್ರಸೇನನೆಂಬ ರಾಯನ ಕುಮಾರನಾಗಿ ಜನಿಸಿದನು. ಆ ಶಿಶುವಿಗೆ ಸುಧನ್ವನೆಂಬ ಪೆಸರುಂಟಾಯಿತು. ಆ ಕುಕ್ಕುಟವು ಮಂತ್ರಿಯ ಪುತ್ರನಾಗಿ ಪುಟ್ಟಿತು. ಅವರೀರ್ವರು ಕುಮಾರರು ಅನ್ಯೋನ್ಯ ಸ್ನೇಹಿತರಾಗಿ ವಿದ್ಯಾಭ್ಯಾಸಂಗಳಂ ಮಾಡಿ ಸ್ವರ್ಣರತ್ನಮಯಗಳಾದ ಹಾರಕೇಯೂರ ಮಕರಕುಂಡಲಂಗಳಂ ಬಿಟ್ಟು ಸರ್ವಾಂಗದಲ್ಲಿ ರುದ್ರಾಕ್ಷಿಗಳಂ ಧರಿಸಿ ನಿತ್ಯವೂ ರುದ್ರಾಕ್ಷಮಾಲಿಕೆಗಳಿಂದಲಂಕೃತರಾಗಿ ರುದ್ರಾಕ್ಷ ಕಂಕಣಂಗಳಂ ಕರದಲ್ಲಿ ಧರಿಸಿದವರಾಗಿ ರುದ್ರಾಕ್ಷ ಕಂಠಾಭರಣ ಯುಕ್ತರಾಗಿ ರುದ್ರಾಕ್ಷ ಕುಂಡಲಗಳನ್ನಿಟ್ಟು ಮಹತ್ತಾದ ಬ್ರಹ್ಮ ಕ್ಷತ್ರಿಯ ಜಾತಿಯಲ್ಲಿ ಹುಟ್ಟಿ ಅನೇಕ ಭೋಗಗಳಂ ಭುಂಜಿಸಿ ಪೂರ್ವಜನ್ಮವಾಸನೆಯಿಂ ರುದ್ರಾಕ್ಷಿಯಲ್ಲಿ ಶ್ರದ್ಧಾಭಕ್ತಿಯುಳ್ಳವರಾಗಿ ಕೆಲವು ಕಾಲದ ಮೇಲೆ ಅತ್ಯಂತ ಶೋಭನವಾದ ಸಾಂಬನ ಪದವನ್ನೈದಿದರೆಂದು ಸೂತಂ ಶೌನಕಾದಿಗಳ್ಗೆ ಪೇಳ್ದನೆಂಬಲ್ಲಿಗೆ, ಉಪದೇಶಕಾಂಡದೊಳು ಹದಿಮೂರನೆಯ ಅಧ್ಯಾಯವು ಸಂಪೂರ್ಣಮಾದುದು.

ಹದಿನಾಲ್ಕನೆಯ ಅಧ್ಯಾಯವು.

ರುದ್ರಾಕ್ಷಿಮಹಿಮೆಯ ಕಥೋಪಕಥನಂ.

ಎಲೈ ಋಷಿಗಳಿರಾ ! ಪೂರ್ವದಲ್ಲಿ ಪುಷ್ಕರದ್ವೀಪಕ್ಕಧಿಪತಿಯಾದ ಸೌಮ್ಯನೆಂಬ ರಾಯನು ಆವಾಗಲೂ ದುರ್ಮಾರ್ಗನಿರತನಾಗಿ ವೇಶ್ಯಾಸಕ್ತನಾಗಿರುತಿರ್ಪನು. ಆತನ ಪತ್ನಿಯಾದ ವಸುಮತಿ ಯೆಂಬ ಸತಿಯು ತನ್ನ ಪತಿಯಾದ ರಾಯನ ವೇಶ್ಯಾಗಮನವಂನೋಡಿ ಬಹು ವ್ಯಾಕುಲತೆಯುಳ್ಳವಳಾಗಿ ತನ್ನ ಯವ್ವನವಂ ನೋಡಿ ರಾಯಂಗೆ ತನ್ನಲ್ಲಿ ಪ್ರೀತಿಯಿಲ್ಲವಲ್ಲಾ ಎಂದು ಚಿಂತಿಸಿ ಪುರೋಹಿತನ ಸತಿಯಾದ ಸತ್ಯವ್ರತೆ ಎಂಬಾಕೆಯಂ ಕರೆಸಿ ರಾಯನ ದುರ್ಮಾರ್ಗವಂ ಪೇಳಿ ತನ್ನ ದುಃಖವಂ ಆಕೆಗೆ ತೋರಿಸಿ ರಾಯಂಗೆ ತನ್ನಲ್ಲಿ ಪ್ರೀತಿ ಹ್ಯಾಗೆ ಹುಟ್ಟುವದೊ ಹಾಗೆ ಉಪಾಯಂ ಪೇಳೆನಲು ಸತ್ಯವ್ರತೆಯೆಂಬ ಸ್ತ್ರೀಯು ರಾಯಂಗೆ ಸತಿಯಾದ ವಸುಮತಿಯ ವಾಕ್ಯವಂ ಕೇಳಿ ಎಲೆ ವಸುಮತಿಯೆ ! ರುದ್ರಾಕ್ಷಾಭರಣವು ಸರ್ವವಶ್ಯಕರವು ಸರ್ವವ್ಯಾಧಿನಾಶವು. ರುದ್ರಾಕ್ಷವಂ ಧರಿಸಿದ

ಜನರಂ ಕಂಡರೆ ಭೂತ ಪ್ರೇತ ಪಿಶಾಚ ಮುಂತಾದವು ಮುಟ್ಟುವದಿಲ್ಲವು. ಆರು ರುದ್ರಾಕ್ಷವಂ ಧರಿಸುತಿರುವರೋ ಅವರಂ ಸರ್ಪಗಳು ಕಚ್ಚವು. ಹೀಗೆಂದು ಪೇಳ್ದು ರಾಯನ ಸತಿಗೆ ಅತ್ಯಂತ ಶ್ರೇಷ್ಠವಾದ ಒಂದು ರುದ್ರಾಕ್ಷಿಯನ್ನಿತ್ತಳು. ರಾಯನ ಸತಿಯು ಅತ್ಯಂತ ಭಕ್ತಿಯಿಂದ ರುದ್ರಾಕ್ಷವಂ ತನ್ನ ಕಂಠದಲ್ಲಿ ಧರಿಸಿದಳು. ಆ ರಾಯನು ಆ ದಿವಸದಲ್ಲಿ ಆಸಕ್ತನಾಗಿ ಆ ರಾತ್ರಿಯಲ್ಲಿಯೇ ಆಕೆಯೊಡನೆ ಕ್ರೀಡಿಸಿಕೊಂಡು ಇರುತಿರ್ದನು. ಆಗ ವಿಚಾರವಿಲ್ಲದ ಕಾರಣ ಆ ರಾಯನ ಸೇನೆಯು ಮದನಾತುರನಾದ ರಾಯನಂ ಬಿಟ್ಟು ಅಲ್ಲಲ್ಲಿ ಚೆದುರಿ ಪೋದುದು. ಬಳಿಕ ಶತ್ರುಗಳು ಚತುರಂಗ ಬಲ ಸಹ ಬಂದು ಆತನ ಪುರವಂ ಮುತ್ತಿ ಕೋಲಾಹಲ ಧ್ವನಿಯಂ ಮಾಡಲು ಆಗ ಸೌಮ್ಯನು ಶತ್ರುಗಳು ಬಂದು ಪುರವಂ ಮುತ್ತಿದರೆಂಬುದಂ ಕೇಳಿ ಉಳಿದ ಸೇನಾಸಮೇತನಾಗಿ ತನ್ನ ಪುರದಿಂ ಪೊರಮಟ್ಟು ಕೋಲಾಹಲ ಧ್ವನಿಯಂ ಮಾಡಿದನು. ಆಗ ರಾಯನ ಸೇನೆಯು ಪರಬಲವಂ ಕಂಡು ಶೀಘ್ರದಲ್ಲಿ ಪಲಾಯನವಾದುದು. ಆಗ ರಾಯನು ಏಕಾಕಿಯಾಗಿ ಅತಿ ಧಾವತಿಯಿಂ ತನ್ನ ನಗರವಂ ಪೊಕ್ಕು ತನ್ನ ಭವನಕ್ಕೆ ಪೋಗಿ ತನ್ನ ಸತಿಗೋಸುಗ ಸಮಸ್ತವಂ ಪೇಳಿ ತನ್ನ ರಾಜ್ಯಾಸಕ್ತಿಯಂ ಬಿಟ್ಟು ಅತ್ಯಂತ ದುಃಖಿತನಾಗಿರುತಿರ್ದನು. ಆಗ ಆ ವಸುಮತಿಯು ದುಃಖಿತನಾದ ತನ್ನ ಪತಿಯಂ ನೋಡಿ ಒಂದು ವಾಕ್ಯವಂ ಪೇಳ್ದಳದೆಂತೆನೆ. ಎಲೆ ಪ್ರಭುವೆ! ನೀನು ರುದ್ರಾಕ್ಷಾಭರಣವನ್ನಿಟ್ಟೆಯಾದೊಡೆ ಆಗ ನಿನಿಗೆ ಜಯವುಂಟು. ಈ ಅರ್ಥದಲ್ಲಿ ಸಂಶಯವಿಲ್ಲ. ನಿನ್ನ ಪುರೋಹಿತನು ಪುರಾಣಂಗಳೊಳು ಅತಿ ಕುಶಲನು. ಆತನಂ ಕರೆಸಿ ಕೇಳಬೇಕೆನಲು ಆಗ ರಾಯನದಂ ಕೇಳಿ ಪುರೋಹಿತನಂ ಕರೆಸಿ ಸರ್ವದುಃಖ ನಿವಾರಣವಾದ ರುದ್ರಾಕ್ಷ ಮಾಹಾತ್ಮ್ಯೆಯಂ ಕೇಳಿ ಸಹಸ್ರ ರುದ್ರಾಕ್ಷ ಧಾರಣವಂ ಮಾಡಿದನು. ಆ ಪುರೋಹಿತನ ಸ್ತ್ರೀಯಾದ ಸತ್ಯವ್ರತೆಯು ಅತ್ಯಂತ ಪಾವನವಾದ ಸಹಸ್ರ ರುದ್ರಾಕ್ಷಿಯಂ ಆ ರಾಯನ ಸತಿಗಿತ್ತು ಧಾರಣೆಯಂ ಮಾಡಿಸಿದಳು. ಬಳಿಕ ಸೌಮ್ಯನು ಆವುದಾನೊಂದು ಕಾರಣದಿಂ ತನ್ನ ಸೇನೆಯು ಪಲಾಯನವಾದವೋ ಅದುಕಾರಣದಿಂ ತಾನೋರ್ವನೇ ಸಮರಸನ್ನಾಹನಾಗಿ ಯುದ್ಧಕ್ಕೆ ಪೊರಮಟ್ಟು ರಥವನ್ನೇರಿ ತನ್ನ ಸ್ತ್ರೀಯನ್ನೆ ಸಾರಥಿಯಂ ಮಾಡಿಕೊಂಡು ಪುರದಿಂ ಪೊರಮಟ್ಟು ಆ ಶತ್ರುಗಳಂ ಸಂಹರಿಸಿದನು. ಮಹತ್ತಾದ ಶಂಖಧ್ವನಿಯಂ ಮಾಡಿ ಆ ಶತ್ರುರಾಯನಂ ಬಂಧಿಸಿ ಆ ದೇಶವಂ ತನ್ನ ವಶವಂ ಮಾಡಿಕೊಂಡು ಬಳಿಕ ತನ್ನ ಪುರಕ್ಕೆ ಬಂದು ತನ್ನ ಭವನವಂ ಪ್ರವೇಶಿಸಿ ತನ್ನ ಭಾರ್ಯೆಗೆ ರುದ್ರಾಕ್ಷಮಾಹಾತ್ಮ್ಯೆಯ ಫಲ ಅತ್ಯಂತ ಮುದದಿಂ ಪೇಳಿದನು. ಬಳಿಕ ರಾಯನು ತನ್ನ ದೇಶದಲ್ಲಿರುವ

ಜನರೆಲ್ಲರಿಗೂ ರುದ್ರಾಕ್ಷಧಾರಣವಂ ಮಾಡಿಸಿದನು. ಹಾಗೆ ಆತನ ಸತಿಗೆ ಸರ್ವ ಲಕ್ಷಣ ಸಂಪನ್ನರಾದ ಮುವ್ವರು ಕುಮಾರರು ಜನಿಸಿದರು. ಅವರೊಳೋರ್ವಂಗೆ ಅತಿರಥನೆಂಬ ಪೆಸರು, ಮತ್ತೊರ್ವಂಗೆ ಅವಿರಥನೆಂಬ ಪೆಸರು, ಮತ್ತೊರ್ವಂಗೆ ಅವಿರಳನೆಂಬ ಪೆಸರು. ಬಳಿಕ ಆಕೆಗೆ ಈರ್ವರು ಕನ್ನಿಕೆಯರು ಪುಟ್ಟಿದರು. ಅವರೊಳೋರ್ವ ಕನ್ನಿಕೆಗೆ ಸರ್ವ ಕಲಾಜ್ಞೆ ಎಂದು ಪೆಸರು. ಮತ್ತೊರ್ವ ಳಿಗೆ ಚಿತ್ರಾಂಗನೆ ಎಂದು ಪೆಸರು. ಬಳಿಕ ರಾಯನು ತನ್ನ ಕುಮಾರತಿ ಯರಿಗೂ ರುದ್ರಾಕ್ಷಧಾರಣವಂ ಮಾಡಿಸಿದನು. ಹಾಗೆ ಕೆಲವು ಕಾಲವು ಪೋಗೆ ಕೇರಳ ದೇಶದಿಂ ಬ್ರಹ್ಮನಾಥನ ಕುಮಾರನಾದ ಕಮಲಾಕ್ಷನೆಂಬ ಯವ್ವನ ಪುರುಷನು ಆ ರಾಯನ ಜ್ಯೇಷ್ಠಕುಮಾರಿತಿಯಾದ ಸರ್ವಕಲಾಜ್ಞೆಯಂ ಶಾಸ್ತ್ರೋಕ್ತಮಾರ್ಗದಿಂ ವಿವಾಹಮಾಡಿಕೊಂಡನು. ಆ ರಾತ್ರಿಯಲ್ಲಿ ಸತಿ ಪತಿಗಳೀರ್ವರೂ ಶೋಭನವಾದ ಗೃಹದಲ್ಲಿ ಶಯನವಮಾಡಿದರು. ಆ ಸಮಯ ದಲ್ಲಿ ಕಮಲಾಕ್ಷನು ತನ್ನ ಭೂಷಣಗಳೆಲ್ಲವನ್ನು ತನ್ನ ಸ್ತ್ರೀಯ ಹಸ್ತದಲ್ಲಿರುವ ಆಕೆಯ ಭೂಷಣಗಳಂ ತೆಗದು ಪೆಟ್ಟಿಗೆಯಲ್ಲಿರಿಸಿ, ತನ್ನ ಸ್ತ್ರೀಯಂ ಸಂಭೋ ಗಕ್ಕೆ ಕರಿಯೆ ಆಗ ಆ ಸ್ತ್ರೀಯು ಎಲೆ ಪತಿಯೆ! ನೀನು ಉತ್ಕೃಷ್ಟವಾದ ರುದ್ರಾಕ್ಷಭೂಷಣಗಳಂ ಧರಿಸಲಿಲ್ಲ. ಆದುದರಿಂ ನನ್ನೊಡನೆ ಸಂಭೋಗಕ್ಕೆ ಯೋಗ್ಯತೆ ಇಲ್ಲವೆಂದು ಪೇಳೆ ಕಮಲಾಕ್ಷನು ತನ್ನ ಸತಿಯ ವಾಕ್ಯವಂ ಕೇಳಿ, ಎಲೈ ಸ್ತ್ರೀಯೆ! ನಾನು ದಿವ್ಯವಾದ ನಾನಾರತ್ನ ವಿಚಿತ್ರವಾದ ಭೂಷಣವಂ ಧರಿಸಿದೇನೆ. ಅಂಥಾ ಭೂಷಣಕ್ಕಿಂತಲೂ ರುದ್ರಾಕ್ಷಿ ಏನು ಅತ್ಯಧಿಕ ವಿದ್ದೀ ತೆನಲು ಆಗ ಸ್ತ್ರೀಯು ಎಲೈ ಪತಿಯೆ! ನೀನು ಅಜ್ಞಾನದಿಂ ರುದ್ರಾಕ್ಷಾ ಭರಣವಂ ಧರಿಸಲಿಲ್ಲ. ಅದುಕಾರಣದಿಂ ನೀನು ಮಹಾ ಪಾತಕವೆಂಬ ಸರ್ಪದಿಂ ಕಚ್ಚಲ್ಪಟ್ಟು ಮಹಾ ವಿಷವು ತಲೆಗೇರಿದ್ದೀತು, ಸಂಶಯವಿಲ್ಲ. ಆದುದರಿಂ ನಿನ್ನೊಡನೆ ಸಹವಾಸ ಸಂಭೋಗ ಸಂಭಾಷಣೆ ಮೊದಲಾದವಂ ಮಾಡುವದಿಲ್ಲ. ಈ ಅರ್ಥದಲ್ಲಿ ಪುರಾಣಗಳೇ ಪ್ರಮಾಣವು ಸಂಶಯವಿಲ್ಲ. ಹಾಗಲ್ಲದಿರ್ದೊಡೆ ಸರ್ವ ಶಾಸ್ತ್ರಾರ್ಥ ಕೋವಿದರಾದ ವಿದ್ವಾಂಸರಂ ಕರೆಸಿ, ನನ್ನ ಸಂಗಡ ಪ್ರಸಂ ಗವಂ ಮಾಡಿಸೆನಲು ಆತನದಂ ಕೇಳಿ, ಎಲೈ ವರಾನನೆಯೆ! ನನಗೆ ಸಮ್ಮತ ವಾದ ಪಂಡಿತನು ರುದ್ರಾಕ್ಷಾಧಿಕ್ಯವಂ ಪೇಳಿದನಾದೊಡೆ ಆಗ ತಾನು ಪುರುಷ ನಾದರೂ ನಿನಗೆ ಸ್ತ್ರೀಯಾದೇನು, ನೀನು ಸ್ತ್ರೀಯಾದರೂ ನನಗೆ ಪುರುಷ ನಾಗೆಂದು ವಿನೋದದಿಂ ತನ್ನ ಸತಿಯೊಡನೆ ಪೇಳೆ ಸರ್ವಕಲಾಜ್ಞೆಯದಂ ಕೇಳಿ ಹಾಗೆಯೇ ಆಗಲೆಂದು ಅಂಗೀಕರಿಸಿದಳು. ಆ ರಾತ್ರಿ ಪೋಗಿ ಸೂರ್ಯೋದಯ ವಾಗಲು ಬಳಿಕ ಆ ದಂಪತಿಗಳೆದ್ದು ಸರ್ವಾಭರಣಭೂಷಿತರಾಗಿ ಕಲ್ಯಾಣ

ಮಂಟಪಕ್ಕೆ ಬರಲು ಆ ಸಮಯದಲ್ಲಿ ಸರ್ವಶಾಸ್ತ್ರಾರ್ಥ ಸಂಪನ್ನರಾದ ಕೆಲಂಬ ವಿಪ್ರರು ಥೊರೆಗಳು ಕಲ್ಯಾಣವಂ ನೋಡಲು ಬಂದರು. ಶೋಭನವಾದ ಬುದ್ಧಿಯುಳ್ಳ ಈ ಸರ್ವಕಲಾಜ್ಞೆಯು ಬಂದ ದ್ವಿಜೋತ್ತಮರಂ ನೋಡಿ ಎಲೆ ರಾಯನೆ! ರುದ್ರಾಕ್ಷದ ಶ್ರೇಷ್ಠತ್ವವಂ ಕೇಳಲು, ಆ ರುದ್ರಾಕ್ಷವಂ ಧರಿಸಲು ಈ ಬ್ರಾಹ್ಮಣರಲ್ಲಿ ನಿನಗೆ ಸಮವಾದವನಾರೆಂದು ಕೇಳಲು ಆ ರಾಯನು ತನ್ನ ಸತಿಯ ವಾಕ್ಯವಂ ಕೇಳಿ ಎಲೆ ವರಾನನಯೆ! ಈ ಕಲ್ಯಾಣ ಮಂಟಪದ ಚಿತ್ರ ಭಿತ್ತಿಯಲ್ಲಿ ಚಿತ್ರರೂಪಿಯಾದ ಶೇಷಶಾಯಿಯಾದ ವಿಷ್ಣುವು ರುದ್ರಾಧಿಕ್ಯವಂ ಪೇಳಿದರಾದೊಡೆ ಆಗ ನೀನು ಪೇಳಿದ ವಾಕ್ಯವಂ ಕೇಳುವೆ ನೆನಲು, ಆಗ ಆ ಸರ್ವಕಲಾಜ್ಞೆಯು ಆ ವಾಕ್ಯವಂ ಕೇಳಿ, ಬದ್ಧಾಂಜಲಿಯಾಗಿ ಚಿತ್ರರೂಪಾದ ಹರಿಯಂ ನೋಡಿ, ಪೇಳ್ದಳದೆಂತೆನೆ. ಎಲೈ ವಿಷ್ಣುವೆ! ಪಾಪಹಾರಿಯಾದ ರುದ್ರಾಕ್ಷಿಗೆ ಮಹಿಮೆಯುಂಟಾದರೆ ರುದ್ರಾಕ್ಷಧಾರಣೆಯಿಂದ ಮಾಡಲ್ಪಟ್ಟ ಪಾಪವು ಪುಣ್ಯಫಲವಂ ಕೊಡುವದು. ರುದ್ರಾಕ್ಷವ ಧರಿಸದವನಿಂದ ಮಾಡಲ್ಪಟ್ಟ ಪುಣ್ಯವು ಪಾಪವಹುದು. ವೇದಾಂತ ಸಮ್ಮತವಾದ ಸಮಸ್ತ ಕಡೆಯಲ್ಲಿಯೂ ವಿರುದ್ಧವಲ್ಲದ ಮತ್ತು ಸಮಸ್ತ ಕಡೆಯಲ್ಲಿಯೂ ಪ್ರಸಿದ್ಧವಾದ ನಿನಗೆ ಸಮ್ಮತ ವಾದ ಈ ಅರ್ಥವು ಸತ್ಯವಾದರೆ ನೀನೀಗ ಶೀಘ್ರವಾಗಿ ಸರ್ಪಶಯನದಿಂದೆದ್ದು ಸುಖಾಸನವಾಗಿ ಕುಳಿತು ಶಿವಾಜ್ಞೆಯಿಂ ನನಗೆ ಸತ್ಯವನ್ನೇ ಪೇಳೆಂದು ಪ್ರಾರ್ಥಿಸೆ, ಆಗ ವಿಚಿತ್ರಾಂಬರಪಾದ ಹರಿಯು ಅದಂ ಕೇಳಿ ಎಲೈ ಶೋಭ ನಾಂಗಿಯೆ! ನೀನು ಪೇಳಿದ ವಾಕ್ಯವು ಸರ್ವ ವೇದಾಂತ ಸಮ್ಮತವು. ರುದ್ರಾಕ್ಷ ಮಾಹಾತ್ಮ್ಯೆಯಂ ದೇವೇಶ್ವರನಾದ ಶಂಕರ ನೋರ್ವನೆ ಬಲ್ಲನು. ಆವ ಜಾತಿ ಯಲ್ಲಿ ಪುಟ್ಟದ ಮನುಷ್ಯನಾದರೂ ಪಾವನವಾದ ರುದ್ರಾಕ್ಷಾಭರಣವಂ ತನ್ನಂಗ ದಲ್ಲಿ ಧರಿಸಿದವನಾದೊಡೆ ಆತನೇ ಧನ್ಯನು. ಆತನೆ ಪೂಜ್ಯನು ಸತ್ಯವಾಗಿ ನಾನು ನಿನಗೆ ನಾನಂಜುವೆನು. ಬಹು ವಾಕ್ಯದಿಂದೇನು? ಈ ರುದ್ರಾಕ್ಷಾಭರಣ ಸಮಸ್ತರಿಂದಲೂ ಧರಿಸಲು ಯೋಗ್ಯವು, ಇದೇ ನಿಶ್ಚಯವೆಂದು ಪೇಳ್ದು ಮರಳಿ ಸರ್ಪದ ಮೇಲೆ ಪೂರ್ವದಂತೆ ಶಯನವಂ ಮಾಡಿದನು. ಆ ಸಮಯದಲ್ಲಿ ಅಲ್ಲಿರ್ಪ ಸಮಸ್ತ ಜನರು ಈ ಅದ್ಭುತವಂ ಕಂಡು ಅತ್ಯಂತಾಶ್ಚರ್ಯವಂತರಾಗಿ ಆ ಸರ್ವಕಲಾಜ್ಞೆಯಲ್ಲಿ ವಿಶ್ವಾಸವಂ ಮಾಡಿದರು. ಆ ಕಮಲಾಕ್ಷನು ಅತ್ಯಂ ತಾಶ್ಚರ್ಯಯುಕ್ತನಾಗಿ ತಾನು ಪೇಳ್ದ ವಚನವಂ ಸ್ಮರಿಸಿ ಅತ್ಯಂತ ವಿಚಾರ ವನ್ನೈದಿದನು. ಆ ಸಮಯದಲ್ಲಿ ಸರ್ವಕಲಾಜ್ಞೆಯು ಭೃತ್ಯಜನರು ಆ ರಾಯನಂ ಪರಿವೇಷ್ಟಿಸಿಕೊಂಡು, ಎಲೆ ರಾಯನೆ! ಈಗ ನೀನು ಪೂರ್ವದಲ್ಲಿ ಪೇಳ್ದ ವಚನವಂ ಸ್ಮರಿಸಿ ಶೀಘ್ರವಾಗಿ ಪುರುಷಲಕ್ಷಣವಂ ಬಿಟ್ಟು ಸ್ತ್ರೀಯರಿಗೆ ಯೋಗ್ಯ

ವಾದ ವಸ್ತ್ರಭೂಷಣಂಗಳಂ ಧರಿಸೆನಲು ಕಮಲಾಕ್ಷನ ದಾಸಿಯರ ಮಾತಂ ಕೇಳಿ ನಿರ್ಮ್ಮೋಡತಿಯು ಪುರುಷನಾಮೊಡೆ ಆಗ ತಾನು ಸ್ತ್ರೀಯಾದೆನೆಂದು ಪರಿಜನಂಗಳಂ ಕುರಿತು ಪೇಳೆ ಆ ಕ್ಷಣದಲ್ಲಿ ಶಿವಾಜ್ಞೆಯಿಂ ಸರ್ವಕಲಾಜ್ಞೆಯು ಪುರುಷಾಕೃತಿಯಾದಳು. ಕಮಲಾಕ್ಷನು ಸ್ತ್ರೀರೂಪಂ ಧರಿಸಿದನು. ಅಂದು ಮೊದಲಾಗಿ ಕಮಲಾಕ್ಷಿ ಎಂದು ಪೆಸರುಂಟಾದುದು. ಆಕೆಗೆ ಸಕಲ ಕಲಾವಲ್ಲಭನೆಂಬ ಪೆಸರುಂಟಾದುದು. ಆಗ ಕಮಲಾಕ್ಷಿಯು ತನಗೆ ಭರ್ತೃವಾದ ಸಕಲ ಕಲಾವಲ್ಲಭನಂ ನೋಡಿ, ಎಲೆ ಭರ್ತೃವೆ! ಸರ್ವಪಾಪ ಸಮೂಹನಾಶಕವಾದ ಸರ್ವ ವೇದಾಂತ ಸಿದ್ಧವಾದ ಸಾಕ್ಷಾಚ್ಛಿವಾತ್ಮಕವಾದ ರುದ್ರಾಕ್ಷವಂ ತನಗೆ ಕೊಡು ಈ ಪಾವನವಾದ ರುದ್ರಾಕ್ಷಾಮಹಾತ್ಮೆಯಂ ಆರಿಂದಲೂ ತಾನು ಕೇಳಲ್ಲಿಲ್ಲವೆಂದು ಪೇಳ್ದು ತನ್ನ ಭರ್ತೃವಿನ ಹಸ್ತದಿಂದ ರುದ್ರಾಕ್ಷೆಯಂ ತೆಗೆದು ತನ್ನ ಶರೀರದಲ್ಲಿ ಧರಿಸಿದಳು. ಆ ಸತಿಪತಿಗಳೀರ್ವರೂ ಭೋಗಗಳನೇಕವಂ ಭುಂಜಿಸಿಕೊಂಡಿರ್ದರು.

ಬಳಿಕ ಬ್ರಹ್ಮನಾಥನೆಂಬ ಕಮಲಾಕ್ಷನ ಪಿತೃವು ತನ್ನ ಸ್ತ್ರೀ ಸಮಿಪಕ್ಕೆ ಪೋಗೆ ಆಕೆಯು ಆತನಂ ನೋಡಿ, ಎಲೆ ಮಹೀಪತಿಯೆ! ಕಮಲಾಕ್ಷನು ಸ್ತ್ರೀತ್ವವನೈದಿದನು. ಸೌಮ್ಯವಂತನಾದ ರಾಜನ ಕುಮಾರತಿಯಾದ ಸರ್ವಕಲಾಜ್ಞೆಯು ಪುರುಷತ್ವವನೈದಿದಳು. ಇವರ ಚರಿತ್ರವು ಅತ್ಯಂತಾಶ್ಚರ್ಯವೆನಲು ಬಳಿಕ ಬ್ರಹ್ಮನಾಥನು ಸೌಮ್ಯವಂತನ ಸಮಿಪಕ್ಕೆ ಪೋಗಿ ಎಲೆ ಸೌಮ್ಯವಂತನೆ! ನಿನ್ನ ಪುತ್ರಿಯು ಪುರುಷನಾದಳು. ನನ್ನ ಕುಮಾರನು ಸ್ತ್ರೀಯಾದನು. ಹಾಗಾದರೂ ವಿಬುಧನೆಂಬ ಮತ್ತೋರ್ವ ಕುಮಾರನಿರುತಿರ್ದಾನು. ಆತಂಗೆ ಸರ್ವಲಕ್ಷಣ ಸಂಪನ್ನೆಯಾದ ಚಿತ್ರಾಂಗನೆ ಎಂಬ ಕನ್ನಿಕೆಯಂ ವಿವಾಹಮಾಡಿಕೊಡೆಂದು ಪೇಳಲು ಸೌಮ್ಯನದಂ ಕೇಳಿ ತನ್ನ ಕನ್ನಿಕೆಯಂ ವಿಬುಧನೆಂಬ ಕುಮಾರಂಗೀಯೆ ಆ ವಿಬುಧನು ರುದ್ರಾಭರಣವಂ ಧರಿಸಿ, ಆಕೆಯ ವಿವಾಹವಂ ಮಾಡಿಕೊಂಡು ಪೋಗಿ ಅಲ್ಲಿ ಅನೇಕ ಭೋಗಂಗಳನನುಭವಿಸುತಿರ್ದನು ಬಳಿಕ ಸೌಮ್ಯನು ಬ್ರಹ್ಮನಾಥನು ರುದ್ರಾಕ್ಷಭೂಷಣಂಗಳಂ ಧರಿಸಿ ಅನೇಕ ಭೋಗಂಗಳನ್ನನುಭವಿಸಿ ಅಂತ್ಯದಲ್ಲಿ ಅತ್ಯಂತ ಪ್ರೀತಿಯಿಂ ಪುತ್ರ ಪೌತ್ರ ಕಳತ್ರರು ಸಹಾ ಕೈಲಾಸಪರ್ವತವನ್ನೈದಿದರೆಂದು ಸೂತಂ ಶೌನಕಾದಿಳ್ಗೆ ಪೇಳ್ದನೆಂಬಲ್ಲಿಗೆ, ಉಪದೇಶಕಾಂಡದೊಳು ಹದಿನಾಲ್ಕನೆಯ ಅಧ್ಯಾಯವು ಸಂಪೂರ್ಣಮಾದುದು.

ಹದಿನೈದನೆಯ ಅಧ್ಯಾಯವು.

ರುದ್ರಾಕ್ಷ ಮಹಿಮಾವರ್ಣನ ಕಥೋಪ ಕಥನಂ.

ಎಲೈ ಋಷಿಗಳಿರಾ! ನಾನು ಮರಳಿಯೂ ರುದ್ರಾಕ್ಷ ಮಹಾತ್ಮ್ಯೆಯಂ ಪೇಳುತಿರ್ಧೇನೆ ಕೇಳುವರಾಗಿ. ಸಮುದ್ರತೀರದಲ್ಲಿ ಅತ್ಯಂತ ಶೋಭನವಾದ ಯಾಚಕವೆಂಬ ಪುರವಿರ್ಪುದು, ಆ ಪುರದೊಳು ಮಹಂತನೆಂಬ ಸುಪ್ರತಿಷ್ಠನೆಂಬ ಪೆಸರುಳ್ಳ ಓರ್ವ ದ್ವಿಜಶ್ರೇಷ್ಠನು ರುದ್ರಾಕ್ಷಾಭರಣನಾಗಿ ರುದ್ರನಲ್ಲಿ ಇಡಲ್ಪಟ್ಟ ಮನಸ್ಸುಳ್ಳವನಾಗಿ ಪುತ್ರಪೌತ್ರ ಬಂಧುವರ್ಗ ಮುಂತಾದವರಿಗೆಲ್ಲರಿಗೂ ರುದ್ರಾಕ್ಷಧಾರಣವ ಮಾಡಿಸಿ ರುದ್ರಾಕ್ಷಧಾರಣವಾದವರಿಗೆ ಅನ್ನವನಿಡುತಿರ್ಧಾನೆ. ಮಹತ್ತಾದ ಪಾಪದಿಂ ರುದ್ರಾಕ್ಷಧಾರಣದಲ್ಲಿ ವಿಶ್ವಾಸವಿಲ್ಲದೆ ರುದ್ರಾಕ್ಷವಿಲ್ಲದಿರ್ಪ ಜನರಿಗೆ ಅನ್ನವನಿಡೆನು, ಎಂಬ ಸಂಕಲ್ಪವಮಾಡಿ ಸುಖದಿಂದಿರುತಿರ್ಪನು. ಯೋಗಾಂಗನೆಂಬ ಮತ್ತೋರ್ವ ಮುನೀಶ್ವರನು ಈತನ ನಿಯಮುವಂ ಕೇಳಿ ಸಮಸ್ತ ಜಗದಲ್ಲಿ ಪೂಜ್ಯನಾಗಿ ಸರ್ವಶಾಸ್ತ್ರಾರ್ಥ ಕೋವಿದನಾಗಿ ಯೋಗಮಾರ್ಗದಲ್ಲಿ ನಿರತನಾಗಿ ಪುಣ್ಯವಾದ ರುದ್ರಾಕ್ಷ ಭೂಷಣವಂ ಧರಿಸದೆ ಆ ಪುರಕ್ಕೆ ಶೀಘ್ರವಾಗಿ ಬಂದನು. ಮತಿವಂತನೆಂಬ ಸುಪ್ರತೀಪನೆಂಬ ವಿಪ್ರನು ಯೋಗೀಶ್ವರ ಬಂದನೆಂಬುದಂ ಕೇಳಿ ಆತಂಗೆ ರುದ್ರಾಕ್ಷಧಾರಣ ವಿಲ್ಲವಾದ ಕಾರಣ ಆತನಂ ಭಿಕ್ಷಕ್ಕೆ ಕರಿಯದೆ ಆತನೊಡನೆ ಪ್ರಸಂಗವಮಾಡದೆ ಇರುತಿರ್ದನು. ಹೀಗೆ ಅನೇಕ ದಿವಸಂಗಳು ಕಳದವು. ಬಳಿಕ ಯೋಗಾಂಗನೆಂಬ ಯೋಗೀಶ್ವರನು ಅತ್ಯಂತ ಕೋಪದಿಂ ಗೃಹಂಗಳಲ್ಲಿ ಭಿಕ್ಷವ ಬೇಡುವ ನೆವದಿಂ ಸುಪ್ರತೀಪನೆಂಬ ವಿಪ್ರನ ಗೃಹದ್ವಾರಕ್ಕೆ ಪೋಗಿ ನಿಲ್ಲಲು ಆ ಗೃಹದಲ್ಲಿ ವಾಸವ ಮಾಡುತಿರ್ಪ ಸಮಸ್ತರೂ ಗೃಹದ್ವಾರದಲ್ಲಿ ನಿಂತಿರ್ಪ ಯೋಗೀಶ್ವರನಂ ಕಂಡು ಅರಿಯದಂತೆ ಸುಮ್ಮನಿರುತಿರ್ದರು. ಸುಪ್ರತೀಕನು ತಾನೇ ಗೃಹದಿಂ ಪೊರಮಟ್ಟು ಯೋಗೀಶ್ವರನಂ ನೋಡಿ, ಎಲೆ ಯೋಗೀಶ್ವರನೆ! ಏನುಕಾರಣ ಬಂದೆ? ನನ್ನ ಗೃಹದಲ್ಲಿ ಅನ್ನವಿಲ್ಲ. ಅನ್ಯಗೃಹಕ್ಕೆ ಪೋಗಿ ಭಿಕ್ಷಾನ್ನವಂ ಬೇಡಿಕೋ ನನ್ನ ಗೃಹದಲ್ಲಿ ರುದ್ರಾಕ್ಷ ಧಾರಣದವರಿಗೆ ಅನ್ನವಿಡುವದುಂಟು. ಇತರರಿಗೆ ಅನ್ನವನಿಕ್ಕುವದಿಲ್ಲ. ಅದುಕಾರಣದಿಂ ನೀನು ಸರ್ವಪಾಪ ಹಾರಿಯಾದ ರುದ್ರಾಕ್ಷವಂ ಧರಿಸಲಿಲ್ಲ. ನಾನು ನಿನಗೆ ಅನ್ನವನಿಡೆನೆಂದು ಪೇಳಲು ಆ ಯೋಗಿಯು ಬುದ್ಧಿವಂತನಾದ ಸುಪ್ರತೀಪನ ವಾಕ್ಯವಂ ಕೇಳಿ ಕೋಪದಿಂ ಕ್ರೂರವಾಕ್ಯವಂ ಪೇಳ್ದನು. ಆಗ ಸುಪ್ರತೀಪನ ಕುಮಾರರು ಆ ಯೋಗಿಯ ನಿಷ್ಠೂರವಾಕ್ಯವಂ ಕೇಳಿ ದುಷ್ಟ ಮನಸ್ಸುಳ್ಳ ಯೋಗಿಯಂ ಮುಟ್ಟದೆ ದಂಡದಿಂದಲೇ ಆತನಂ ದೂರಕ್ಕೆ ನೂಕಲು ಬಳಿಕ ಯೋಗಿಯು ಆ ಪುರಕ್ಕಧಿಪತಿಯಾದ ಸಾಲಂಕನೆಂಬ

ರಾಯನ ಬಳಿಗೆ ಪೋಗಿ ಸಮಸ್ತವಂ ಆತಂಗೆ ಪೇಳ್ದನು. ಆ ಸಾಲಂಕನೆಂಬ ರಾಯನು ಕ್ರಮದಿಂ ಆ ಯೋಗಿಯ ವಚನವಂ ಕೇಳಿ ಅನುಜನಂ ಕಳುಹಿಸಿ ಸುಪ್ರತೀಪನಂ ಕರಿಸಿ, ಎಲೆ ಸುಪ್ರತೀಪನೆ! ಬ್ರಾಹ್ಮಣನು ಭಿಕ್ಷಾರ್ಥಿಯಾಗಿ ನಿನ್ನ ಗೃಹಕ್ಕೆ ಬಂದರೆ ಭಿಕ್ಷವನಿಡದೆ ನಿನ್ನ ಪುತ್ರರಿಂ ದಂಡದಿಂದೇನು ಕಾರಣ ನೂಕಿಸಿದೆ? ಎನಲು ಆಗ ಸುಪ್ರತೀಪನದಂ ಕೇಳಿ, ಎಲೆ ರಾಯನೆ! ರುದ್ರಾಕ್ಷ ಧಾರಣವು ಇಲ್ಲದೆ ಸನ್ಯಾಸಾಶ್ರಮವಿಲ್ಲ. ರುದ್ರಾಕ್ಷಿಧಾರಣೆಯು ಸಮಸ್ತಾಶ್ರಮಕ್ಕೂ ಮುಖ್ಯವು. ರುದ್ರಾಕ್ಷಧಾರಣೆಯಿಂದಲೆ ಮುಕ್ತಿಯು ಆ ರುದ್ರಾಕ್ಷ ಧಾರಣ ಇಲ್ಲದವರ್ಗೆ ಮುಕ್ತಿಯಿಲ್ಲವೆಂದು ನಾಲ್ಕು ವೇದಂಗಳು ಆದರದಿಂ ಪೇಳುತಿರ್ಪವು. ನನಗೆ ಒಂದು ವ್ರತವುಂಟು ಕೇಳು, ರುದ್ರಾಕ್ಷಧಾರಿಗಳಿಗೆ ಅನ್ನವ ಕೊಡುತಿರ್ಪೇನೆ. ರುದ್ರಾಕ್ಷಧಾರಣವಿಲ್ಲದವರ್ಗೆ ಅನ್ನವ ಕೊಡುವದಿಲ್ಲ. ಆವ ಮನುಷ್ಯನಾಗಲೀ ರುದ್ರಾಕ್ಷಧಾರಣವಂ ಮಾಡಿದವನೇ ಈಶ್ವರನು, ನನಗೆ ನಮಸ್ಕಾರಕ್ಕೆ ಯೋಗ್ಯನು. ಹಾಗೆಯೇ ಆ ಮನುಜನು ನನಗೆ ವಂದ್ಯನು, ಪೂಜ್ಯನು ಅನೇಕ ಧರ್ಮಾತ್ಮನು ರುದ್ರಾಕ್ಷಧಾರಣವಿಲ್ಲದ ಡಾಂಭಿಕರಿಗೆ ಅನ್ನವ ಕೊಡೆನು. ರುದ್ರಾಕ್ಷಧಾರಣವಿಲ್ಲದವನು ಆಶ್ರಮದಲ್ಲಿ ಹಿರಿಯನಾದರೂ ಮಹಾ ಪಾಪಿಯು, ನನಗೆ ಪೂಜಾರ್ಹನಲ್ಲವೆನಲು ಆ ಸನ್ಯಾಸಿಯು ರುದ್ರಾಕ್ಷಧಾರಣದಿಂದ ನಿನಗೆ ಏನು ಸಿದ್ಧಿಯುಂಟಾದುದು? ಮತ್ತಂ ನಾನು ಶೀಘ್ರವಾಗಿ ದೇವಲೋಕಕ್ಕೆ ಪೋಗಿ ಯೋಗಮಹಾತ್ಮೆಯಿಂ ಕಲ್ಪವೃಕ್ಷದ ಪುಷ್ಪವಂ ತರುತಲಿದೇನೆ. ನಿನಗೆ ರುದ್ರಾಕ್ಷಧಾರಣೆಯಿಂ ಈ ಶಕ್ತಿಯುಂಟಾದರೆ ಆಗ ನಿನ್ನಿಂದ ಪೇಳಲ್ಪಟ್ಟದ್ದೆಲ್ಲವೂ ಸತ್ಯವಾದೀತೆನಲು ಈ ಸುಪ್ರತೀಪನು ಅದಂ ಕೇಳಿ, ಎಲೆ ಯೋಗಿಯೆ! ನೀನು ಕೆಲವು ಯೋಗಾಭ್ಯಾಸದಿಂದಲೆ ದೇವಲೋಕಕ್ಕೆ ಪೋಗಿ ಕಲ್ಪವೃಕ್ಷದ ಪೂವಂ ತಂದೆಯಾದೊಡೆ ನನ್ನ ಗೃಹದಲ್ಲಿರ್ಪ ಒಂದು ಮಾರ್ಜಾಲದ ಮರಿಯು ರುದ್ರಾಕ್ಷ ಧಾರಣವ ಮಾಡಿಕೊಂಡಿರ್ಪುದು. ಆ ಮರಿಯು ರುದ್ರಾಕ್ಷಧಾರಣದಿಂದಲೇ ಶೀಘ್ರವಾಗಿ ಅತ್ಯಂತ ಶೋಭನವಾದ ದೇವಲೋಕಕ್ಕೆ ಪೋಗಿ ಸಮಸ್ತ ದೇವತೆಗಳಿಂ ಮಾಡಲ್ಪಟ್ಟ ಪೂಜೆಯಂ ಕೈಕೊಂಡು ಶೋಭನವಾದ ಕಲ್ಪವೃಕ್ಷವಂ ಕಿತ್ತು ತಂದೀತೆನಲು ಆ ಯೋಗಿಯದಂ ಕೇಳಿ ಕೋಪಾಕುಲನಾಗಿ ಎಲೆ ವಿಪ್ರನೆ! ನಿನ್ನ ವಾಕ್ಯವು ಯಥಾರ್ಥವಾದರೆ ನನಗೆ ನೀನು ನಮಸ್ಕಾರಕ್ಕೆ ಯೋಗ್ಯನು. ಸಮಸ್ತ ಕರ್ಮಗಳಲ್ಲಿಯೂ ರುದ್ರಾಕ್ಷಧಾರಣವೇ ಶ್ರೇಷ್ಠವಾದೀತೆಂದು ಪೇಳ್ದು ಸಮಸ್ತರೂ ನೋಡಿಕೊಂಡಿರುವಾಗಲೆ ಆತನು ಯೋಗಮಾರ್ಗದಲ್ಲಿ ಕುಳಿತು ವಿಧಿಯಿಂದ ಪ್ರಾಣಾಯಾಮವಂ ಮಾಡಿ ಆಕಾಶವನ್ನೈದಿ ಸ್ವರ್ಗಲೋಕಕ್ಕೆ ಪೋಗಿ ಶೀಘ್ರವಾಗಿ ಕಲ್ಪವೃಕ್ಷದ ಪುಷ್ಪವಂ ತೆಗದುಕೊಂಡು ಮರಳಿ ಸಭಾಮಧ್ಯಕ್ಕೆ

ಬಂದು ರಾಯಂಗೆ ಕಲ್ಪವೃಕ್ಷದ ಪುಷ್ಪವನ್ನಿತ್ತನು, ಆಗ ಸಭೆಯಲ್ಲಿರ್ಪ ಜನರೂ ರಾಯನೂ ಸಹಾ ಆ ಅದ್ಭುತವಂ ಕಂಡು ಆಶ್ಚರ್ಯಯುಕ್ತರಾಗಿ ಆ ಯೋಗಿಯಂ ಸ್ತೋತ್ರವಂ ಮಾಡಿದರು. ಬಳಿಕ ಸುಪ್ರತೀಪನೆಂಬ ದ್ವಿಜನು ಸ್ವರ್ಗಲೋಕದಿಂ ಕಲ್ಪವೃಕ್ಷದ ಕುಸುಮವಂ ತಂದ ಯೋಗಿಯಂ ನೋಡಿ ರುದ್ರಾಕ್ಷಧಾರಣವಂ ಮಾಡಿಕೊಂಡಿರ್ಪ ಮಾರ್ಜಾಲದ ಮರಿಯಂ ತರಲು ಗೃಹಕ್ಕೆ ತನ್ನ ಕುಮಾರನಂ ಕಳುಹಿ ಶೀಘ್ರವಾಗಿ ಆ ಮಾರ್ಜಾಲವಂ ತರಿಸಿ ತನ್ನ ಹಸ್ತದಲ್ಲಿರಿಸಿಕೊಂಡು ಎಲೈ ರಾಯನೆ! ಈ ಮಾರ್ಜಾಲವು ರುದ್ರಾಕ್ಷದ ಮಹಿಮೆಯಿಂ ಸ್ವರ್ಗಲೋಕಕ್ಕೆ ಶೀಘ್ರವಾಗಿ ಪೋಗಿ ಕಲ್ಪವೃಕ್ಷವಂ ತಂದೀತೆಂದು ಪೇಳ್ದು ತನ್ನ ಹಸ್ತದಲ್ಲಿರ್ಪ ಮಾರ್ಜಾಲವಂ ಆಕಾಶಮಾರ್ಗಕ್ಕಿಟ್ಟನು ಆಗ ಮಾರ್ಜಾಲವು ಸಮಸ್ತ ಜನರೂ ನೋಡುತ್ತಿರಲು ತನ್ನ ಸಮೀಪಕ್ಕೆ ಬಂದ ಮಹತ್ತಾದ ವಿಮಾನವನ್ನೇರಿ ಸ್ವರ್ಗಲೋಕಕ್ಕೆ ಪೋಗಲು ದೇವೇಂದ್ರನು ಮಾರ್ಜಾಲವು ಬರುವುದಂ ತಿಳಿದು ಐರಾವತವನ್ನೇರಿ ತನ್ನ ದೇವತಾ ಸಮೂಹದಿಂದೆದುರಾಗಿ ಪೋಗಿ ಮಾರ್ಜಾಲವಂ ಕಂಡು ಗಜದಿಂ ಶೀಘ್ರದಿಂದಿಳಿದು ಭಕ್ತಿಯಿಂ ತಲೆವಾಗಿ ವಿಮಾನದಲ್ಲಿರ್ಪ ಮಾರ್ಜಾಲವಂ ತೆಗದು ಐರಾವತದ ಕುಂಭಸ್ಥಳದಲ್ಲಿರಿಸಿ ಮಾರ್ಜಾಲವು ಬಂದ ಕಾರ್ಯವಂ ಜ್ಞಾನದಿಂ ತಿಳಿದು ಆ ಮಾರ್ಜಾಲದ ಮಸ್ತಕವಂ ಆಘ್ರಾಣಿಸಿ ಆ ಮಾರ್ಜಾಲವಂ ನಯನಂಗಳಲ್ಲಿ ಒತ್ತಿಕೊಂಡು ತನ್ನಾಭರಣವನಿಟ್ಟು ಅಲಂಕಾರವಂ ಮಾಡಿ ಅತ್ಯಂತಮಾಗಿ ಪೂಜಿಸಿ ಮಹಾತ್ಮನಾದ ಸುಪ್ರತೀಪನ ವಾಕ್ಯವಂ ಕೇಳಿ, ಆತನ ಸಮೀಪದಲ್ಲಿರೆಂದು ಮುಂದಿರ್ಪ ಕಲ್ಪವೃಕ್ಷಕ್ಕೆ ಪೇಳ್ದು ಆ ಕಲ್ಪವೃಕ್ಷವಂ ದೇವಸಿದ್ಧನೆಂಬ ದೇವತೆಯನ್ನೂ ಕಳುಹಿಸಿ ಪೂರ್ವದಂತೆ ಮಾರ್ಜಾಲವಂ ವಿಮಾನದಲ್ಲಿ ಕುಳ್ಳಿರಿಸಿ ಅತ್ಯಂತ ಪ್ರೀತಿಯಿಂ ನಮಸ್ಕಾರವಂ ಮಾಡಿ ಆ ಮಾರ್ಜಾಲವಂ ಭೂಲೋಕಕ್ಕೆ ಕಳುಹಿದನು. ಆಗ ಮಾರ್ಜಾಲವು ದೇವೇಂದ್ರನಿಂ ಕಳುಹಿಸಲ್ಪಟ್ಟ ಕಲ್ಪವೃಕ್ಷ ದೇವಸಿದ್ಧನೆಂಬ ದೇವತೆಯೊಡಗೂಡಿ ವಿಮಾನವನೇರಿ ಆಕಾಶಮಾರ್ಗದಲ್ಲಿ ಪೊರಮಟ್ಟು ಕ್ಷಣದಿಂ ಭೂಲೋಕಕ್ಕೆ ಬಂದು ವಿಮಾನದಿಂದಿಳಿದು ಕಲ್ಪವೃಕ್ಷ ದೇವಸಿದ್ಧನೆಂಬೀರ್ವರಿಂದಲಂಕೃತನಾಗಿ ಸಭಾಮಧ್ಯಕ್ಕೆ ಬಂದು ಸುಪ್ರತೀಪಂಗೆ ಪ್ರದಕ್ಷಿಣ ನಮಸ್ಕಾರವಂ ಮಾಡಿ ಆತನ ಮುಂದೆ ನಿಲ್ಲಲು ದೇವಸಿದ್ಧನು ಸುಪ್ರತೀಪಂಗೆ ಮೂರುವೇಳೆ ನಮಸ್ಕರಿಸಿ ಎಲೆ, ಸುಪ್ರತೀಪನೆ! ನಿನ್ನ ಕೃಪೆಯಿಂದ ಶಿವಭಕ್ತರಾದ ನಿಮ್ಮ ಸ್ಮರಣೆಯಂ ಮಾಡಿ ನಿಷ್ಕಂಟಕವಾಗಿ ಸ್ವರ್ಗವಂ ಪಾಲಿಸುತಿರ್ದೇವೆಂದು ಪೇಳ್ದ ದೇವೇಂದ್ರನ ವಚನವಂ ಸುಪ್ರತೀಪಂಗೆ ಪೇಳ್ದು, ಆತನಿಂ ಪೂಜಿತನಾಗಿ ಕಳುಹಿಸಲ್ಪಟ್ಟು ವಿಮಾನವನೇರಿ ಸ್ವರ್ಗಲೋಕಕ್ಕೆ ಪೋದನು.

ಬಳಿಕ ಆ ಕಲ್ಪವೃಕ್ಷವು ಮಹಾತ್ಮನಾದ ಸುಪ್ರತೀಪಂಗೆ ಪ್ರದಕ್ಷಿಣ ನಮಸ್ಕಾರವಂ ಮಾಡಿ ಭಕ್ತಿಯಿಂ ಆತನ ಮುಂದೆ ಇದ್ದಿತೆಂದು ಸೂತಂ ಶೌನಕಾದಿಗಳ್ಗೆ ಪೇಳ್ದನೆಂಬಲ್ಲಿಗೆ, ಉಪದೇಶಕಾಂಡದೊಳು ಹದಿನೈದನೆಯ ಅಧ್ಯಾಯವು ಸಮಾಪ್ತಮಾದುದು.

ಹದಿನಾರನೆಯ ಅಧ್ಯಾಯವು.

ಮಾರ್ಜಾಲವು ಸ್ವರ್ಗಕ್ಕೆ ಹೋದ ಕಥೆ.

ಎಲೈ ಋಷಿಗಳಿರಾ! ಅನಂತರದಲ್ಲಿ ರಾಯನು ಅವೆಲ್ಲವಂ ಕಂಡು ಆಶ್ಚರ್ಯಯುಕ್ತನಾಗಿ ಶೀಘ್ರವಾಗೆದ್ದು ವಿನಯದಿಂದ ಆ ದ್ವಿಜಂಗೆ ನಮಸ್ಕಾರವಂ ಮಾಡಿ ಭಯಯುಕ್ತನಾಗಿ ಮಾರ್ಜಾಲವಂ ನೋಡಿ, ಎಲೆ ಮಾರ್ಜಾಲವೆ! ನೀನು ಹ್ಯಾಗೆ ಸ್ವರ್ಗಲೋಕಕ್ಕೆ ಪೋದೆ? ದೇವೇಂದ್ರನು ನಿನಗೆ ಏನು ಬಹುಮಾನವಂ ಮಾಡಿದನು? ಏನು ಪೇಳಿದನು? ಎಂದು ಕೇಳಲು ಸುಪ್ರತೀಪನು ಶಿವಧ್ಯಾನವಂ ಮಾಡಿ, ಎಲೆ ಮಾರ್ಜಾಲವೆ! ನೀನು ಸ್ವರ್ಗಕ್ಕೆ ಪೋಗಿ ಬಂದುದಂ ಯಥಾರ್ಥವಾಗಿ ಪೇಳೆಂದು ನಿರೂಪಿಸಲು ಆ ಮಾರ್ಜಾಲವೆದ್ದು ಅಂಜಲಿ ಬಂಧನಂ ಮಾಡಿ, ಎಲೆ ಸ್ವಾಮಿಯೆ! ನನ್ನನ್ನು ಉಜ್ವಲವಾದ ದಿವ್ಯವಾದ ಅತ್ಯಂತ ಪೂಜೆಯಂ ಮಾಡಿ ಭಕ್ತಿಯಿಂ ನನ್ನನ್ನು ಕಳುಹಲು ಆಗ ಆತಂಗೆ ಸತಿಯಾದ ಶಚೀದೇವಿಯು, ಎಲೆ ದೇವೇಂದ್ರನೆ! ಈ ಮಾರ್ಜಾಲವು ಪೂಜೆಗೆ ಹ್ಯಾಗೆ ಯೋಗ್ಯವಾದುದು? ಆವದೇಶದಿಂ ದಾವಕಾರಣದಿಂ ಬಂದಿತೆಂದು ದೇವೇಂದ್ರನಂ ಕೇಳಲು, ಎಲೆ ಶಚೀದೇವಿಯೆ! ಈ ಮಾರ್ಜಾಲವು ಪುಣ್ಯವಾದ ರುದ್ರಾಕ್ಷವಂ ಧರಿಸಿಕೊಂಡಿರ್ಪುದು. ಅದುಕಾರಣದಿಂ ಮಾರ್ಜಾಲವು ಪೂಜಿಸಲು ಯೋಗ್ಯವಾದುದು. ಆರು ರುದ್ರಾಕ್ಷವಂ ಧರಿಸುತಿದಾರೊ ಅವರೇ ಧನ್ಯರು, ಅವರೇ ಮನುಷ್ಯರಿಗೂ ಸಮಸ್ತ ದೇವತೆಗಳಿಗೂ ಪೂಜ್ಯರು. ನೀನು ರುದ್ರಾಕ್ಷದ ಮಹಿಮೆಯಂ ಬಂದಿಸ್ಯಾದರೂ ಅರಿಯೆ. ಹಾಗಾದೊಡೆ ಪುಣ್ಯವಾದ ಒಂದು ಕಥೆಯಂ ಪೇಳುತಿದೇನೆ ಸಾವಧಾನದಿಂ ಕೇಳು. ಪೂರ್ವದಲ್ಲಿ ಯಮನು ತನ್ನ ದೂತರೊಡನೆ ಮನೋಹರವಾದ ಗುಹೆಗಳುಳ್ಳ ಮಂದರ ಪರ್ವತದ ಗುಹೆಗಳಲ್ಲಿರುತಿರ್ಪ ಶಂಕರನ ಸಮೀಪಕ್ಕೆ ಪೋಗಿ ಅತ್ಯಂತ ಭಕ್ತಿಯಿಂ ನಮಸ್ಕಾರವಂ ಮಾಡಿ, ಎಲೆ ಯಮನೆ! ನೀನು ಯೇನುಕಾರಣ ಬಂದೆ? ಎಂದು ಶಂಕರನಿಂ ಕೇಳಲ್ಪಟ್ಟವನಾಗಿ ಭಕ್ತವತ್ಸಲನಾದ ವಿಶ್ವಪಾಲಕನಾದ ಮಹಾದೇವನಂ ಕುರಿತು, ಎಲೆ ಶಂಭುವೆ! ಜಯಜಯ ಪೂರ್ವದಲ್ಲಿ ನೀವು ನನಗೆ

ಪಾಲಿಸಿದ ಅಧಿಕಾರವು ನನ್ನಿಂದ ಹೊಂದಲ್ಪಟ್ಟಿತು. ನಾನು ನಿನ್ನ ಭಕ್ತರ್ಗೆ ಪವಿತ್ರವಾದ ಪೂಜೆಯುಂ ಮಾಡುತಿರ್ದೇನೆ. ನಿಮ್ಮಲ್ಲಿ ಯಾರು ವಿಮುಖರಾಗಿ ದ್ದಾರೊ ಅವರು ನರಕದಲ್ಲಿ ಬಾಧೆ ಪಡುತಲಿರ್ಪರು. ನಿಮ್ಮಿಂದಲೇ ಸಕಲ ಮರ್ಯ್ಯಾದೆಯುಂ ಮಾಡಲ್ಪಟ್ಟಿತು. ನಿಮ್ಮಿಂದಲೆ ಧರ್ಮಾಧರ್ಮ ಮಾರ್ಗಗಳಿರ ಡುನ್ನೂ ಕಲ್ಪಿಸಲ್ಪಟ್ಟಿರುವವು. ಸುಖವೆಂಬುದು ಧರ್ಮಫಲವು, ದುಃಖ ವೆಂಬುದು ಅಧರ್ಮಫಲವು. ನಿಮ್ಮಿಂದ ಸುಖದುಃಖಂಗಳಿಗೆ ಕಾರಣವಾದ ಸ್ವರ್ಗನರಕಂಗಳು ಕಲ್ಪಿಸಲ್ಪಟ್ಟವು. ನಿಮ್ಮ ಗಣಂಗಳು ನಮ್ಮ ದೂತರಿಂ ಅತ್ಯಂತ ಬಾಧೆ ಪಡುತಿರ್ಪ ಮಹಾ ಪಾಪಿಯುಂ ನರಕದಿಂ ತೆಗೆದು ನಾನಾರತ್ನ ವಿಚಿತ್ರವಾದ ದಿವ್ಯ ವಿಮಾನದ ಮೇಲಿರಿಸಿ ನನ್ನ ದೂತರಂ ಕೊಂದು ಆತನಂ ಕೈಲಾಸಪರ್ವತಕ್ಕೆ ಕೊಂಡು ಪೋದರೆಂದು ಪೇಳೆ ಆಗ ಭೈರವನು ಸ್ವಾಮಿಯ ಮುಂದಿರ್ಪ ಯಮನಂ ನೋಡಿ, ಎಲೆ ಮತಿವಂತನಾದ ಯಮನೆ! ಈತನು ಶೋಭನವಾದ ಒಂದು ಪುಣ್ಯವನ್ನಾದರೂ ಮಾಡಲಿಲ್ಲವೆಂಬುದಂ ಶಿವನ ಸನ್ನಿಧಿ ಯಲ್ಲಿ ನೀನಾಗಿ ಪೇಳೆನಲು ಆಗ ಯಮನು ಭೈರವನ ಮಾತಂ ಕೇಳಿ ತನ್ನ ಸಮೀಪದಲ್ಲಿರ್ಪ ಚಿತ್ರಗುಪ್ತರಂ ನೋಡಿ ನಯನ ಸಂಜ್ಞೆಯುಂ ಮಾಡಲು ಬಳಿಕ ಚಿತ್ರಗುಪ್ತರು ದೇವಂಗೆ ನಮಸ್ಕಾರವಂ ಮಾಡಿ ಭೈರವನಂ ನೋಡಿ ಕರುಣಾ ಕರನಾದ, ಎಲೆ ಭೈರವನೆ! ಪ್ರಸನ್ನನಾಗು ಮತ್ತಂ ಕಳಿಂಗದೇಶದಲ್ಲಿ ವ್ಯಾಘ್ರ ಪುರಿಯೆಂಬ ಮಹಾ ಪಟ್ಟಣವಿರ್ಪುದು. ಆ ಪುರದಲ್ಲಿ ಅಜಾಮಿತ್ರನೆಂಬ ಪೆಸ ರುಳ್ಳ ಮಹಾ ಪಾಪಿಯು ಯಿರುತಿರ್ಪನು. ಈತನ ಮಾತೃವು ವ್ಯಭಿಚಾರಿಯು ಈತನು ಜಾರತನದಲ್ಲಿ ಪುಟ್ಟಿದವನು. ಈತನ ತಾಯಿಯು ಜಾರತನದ ಔಷಧ ವಶದಿಂದ ಮೃತವಾದಳು. ದುಷ್ಟಬುದ್ಧಿಯುಳ್ಳ ಈತನು ಜಾರರಾದ ಜನಕರಿಂ ರಕ್ಷಿಸಲ್ಪಟ್ಟನು. ಈತಂಗೆ ಕಾಲವಶದಿಂದ ಜ್ಞಾನಕರವಾದ ಯವ್ವನ ಬಂದು ಬಳಿಕ ಈ ಪಾಪಿಯು ಕಾಮಬಾಣದಿಂ ಪೀಡಿತನಾಗಿ ಚೌರ್ಯವಂ ಮಾಡಿ ತನಗೆ ಸಮಾನ ವಿಟರೊಡನೆ ಸಮಾನವಾಗಿ ನಿತ್ಯವೂ ದಾಸೀಸಂಗದಲ್ಲಿ ನಿರತನಾಗಿ, ಒಂದು ದಿವಸದಲ್ಲಿ ಧನವಿಲ್ಲದ ಕಾರಣ ಜಾರನಾದ ಪಿತನಂ ಕಪಟದಿಂ ಸಂಹ ರಿಸಿ ಮದ್ಯಪಾನಿಯಾಗಿ ಮಾಂಸಭೋಜಿಯಾಗಿ ಅತಿ ವಂಚಕನಾಗಿ ಒಂದು ದಿವಸದಲ್ಲಿ ಚೌರ್ಯವಂ ಮಾಡುತಿರ್ದನು. ಆಗ ಗ್ರಾಮಪಾಲಕರು ಚೌರ್ಯವಂ ಮಾಡುತಿರ್ಪೀತನಂ ಕಂಡು ತಾಡಿಸಿ ರಜ್ಜುವಿನಿಂ ಬಿಗಿದು ನಿತ್ಯವು ಪೀಡಿಸಿ ಈತನಂ ಸ್ಮಶಾನದಲ್ಲಿ ಸಂಹರಿಸಿದರು. ಈ ಪಾಪಿಗೆ ಈ ಜನ್ಮದಲ್ಲಿ ಒಂದು ಪುಣ್ಯವೂ ಇಲ್ಲವೆಂದು ಪೇಳಿ, ಎಲೆ ಜಗತ್ಪ್ರಭುವೆ! ಮೃತನಾದ ಈತಂಗೆ ನರಕ ದಲ್ಲಿ ನಾಲ್ಕು ದಿವಸ ಕಳೆದವು. ಈತನು ನಮ್ಮ ದೂತರಿಂ ಅತ್ಯಂತ ಬಾಧೆ

ಪಟ್ಟನು. ಎಲೆ ಮಹೇಶ್ವರನೆ! ನಿನ್ನ ಗಣಂಗಳು ಬಂದು ನಮ್ಮ ದೂತರಂ ಕೊಂದು ನರಕದಿಂದಾತನಂ ತೆಗದು ಕೈಲಾಸಕ್ಕೆ ಕೊಂಡುಪೋದರು. ಈ ದುರಾತ್ಮನು ಕಿಂಚಿನ್ಮಾತ್ರ ಧರ್ಮವಂ ಮಾಡಿದ್ದು ನಾವರಿಯೆವೆಂದು ಪೇಳ್ದು ಅಂಜಲಿ ಬಂಧನಂ ಮಾಡಿ ಸ್ವಾಮಿಯ ಮುಂದೆ ನಿಲ್ಲಲು ಆಗ ಭೈರವನು ಚಿತ್ರಗುಪ್ತರಂ ನೋಡಿ ನಕ್ಕು, ಎಲೆ ಚಿತ್ರಗುಪ್ತನೆ! ಚಕ್ರವಾಕನೆಂಬರಾಯನು ಕುಮಾರತಿಯಾದ ಸರ್ವಾಂಗ ಸುಂದರಿಯು ತನ್ನ ಉದ್ಯಾನವನದಲ್ಲಿರ್ಪ ಮಲ್ಲಿಗೆಯ ಬಳಿಯಲ್ಲಿ ರುದ್ರಾಕ್ಷಯುಕ್ತವಾದ ಮೌಕ್ತಿಕ ಹಾರವನ್ನಿರಿಸಿ ಸ್ನಾನವಂ ಮಾಡುತಿರ್ದಳು. ಆ ಸಮಯದಲ್ಲಿ ಒಂದು ಕಾಗೆಯು ಬಂದು ಮೌಕ್ತಿಕದ ಹಾರವನ್ನೆತ್ತಿಕೊಂಡು ಆಕಾಶಮಾರ್ಗದಲ್ಲಿ ಪೋಗುತ್ತಿರಲು ಆಗ ಮುತ್ತಿನ ಹಾರವು ಹರಿದು ಬಂದು ಪವಿತ್ರವಾದ ರುದ್ರಾಕ್ಷವು ಜನ್ಮಾಂತರದ ಪುಣ್ಯದಿಂದ ಛೇದಿಸಿದ ಮಸ್ತಕದ ಮೇಲೆ ಬಿದ್ದು ರಕ್ತದಲ್ಲಿ ಮುಳುಗಿ ಈಗಲೂ ಇರುತಿರ್ದೀತು. ಎಲೆ ಅಂತಕನೆ! ಆ ಪುಣ್ಯದಿಂದೀತನು ಕೈಲಾಸಕ್ಕೆ ಪೋದನು. ಈ ರುದ್ರಾಕ್ಷ ಮಹಿಮೆಯು ಇಂಥಾದ್ದೆಂದು ತಿಳಿಯಬಾರದೇ? ಎನಲು, ಆ ನಂದಿಕೇಶ್ವರನು ಆ ವೃತ್ತಾಂತವನ್ನೆಲ್ಲವಂ ಕೇಳಿ, ರೋಮಾಂಚ ಕಂಚುಕಿತನಾಗಿ ಆವವನ ಶರೀರದಲ್ಲಿ ಉತ್ತಮವಾದ ರುದ್ರಾಕ್ಷ ವಿರುತಿರ್ದೀತೊ ಆತನು ಕೈಲಾಸಕ್ಕೆ ಪೋದನೆಂಬುದರಲ್ಲೇನು ಆಶ್ಚರ್ಯವಿದ್ದೀತು? ಬಹು ಕಾಲದಲ್ಲಿ ಮೃತರಾದವರ ಅಸ್ಥಿಕೇಶ ಮುಂತಾದವು ಗಂಗೆಯಲ್ಲಿ ಬಿದ್ದುದಾದೊಡೆ ಶೀಘ್ರವಾಗಿ ಕೈಲಾಸವನ್ನೈದಿ ಸುಖವನ್ನನುಭವಿಸುತಿರ್ಪರು. ಅದುಕಾರಣ ಈತಂಗೆ ಕೈಲಾಸಪ್ರಾಪ್ತಿಯುಂಟಾದುದೆಂಬುದೇನಾಶ್ಚರ್ಯವಿದ್ದೀತೆನಲು ಚಿತ್ರಗುಪ್ತ ಯಮರೀರ್ವರೂ ನಂದಿಕೇಶ್ವರನ ವಾಕ್ಯವಂ ಕೇಳಿ ಭಯಕಂಪಿತರಾಗಿ ದೇವದೇವನಾದ ತ್ರಿಯಂಬಕಂಗೆ ನಮಸ್ಕಾರವಂ ಮಾಡಿ ಪಾಪಪರಿಹಾರಿಯಾದ ರುದ್ರಾಕ್ಷಿಯ ಮಹಿಮೆಯಂ ಚಿಂತಿಸುತ ಶಿವನಾಜ್ಞೆಯಿಂ ತಮ್ಮ ಸ್ಥಾನಕ್ಕೆ ಪೋಪಮಡೆ ಮರಳಿ ಶಂಕರನು ಪೋಗುತಿರ್ಪ ಯಮನಂ ಕರೆದು, ಎಲೆ ಯಮನೆ! ನೀನು ಯಿಂದು ಮೊದಲಾಗಿ ನಮಗೆ ಪ್ರಿಯವಾದ ರುದ್ರಾಕ್ಷಿ ಧಾರಿಗಳಂ ಸಮೀಪದಲ್ಲಾಗಲೀ ದೂರದಲ್ಲಾಗಲೀ ಕಂಡೆಯಾದೊಡೆ ಭಯಯುಕ್ತನಾಗಿ ಭಯದಿಂ ನಮಸ್ಕಾರವಂ ಮಾಡಿ ಪೋಗು. ನಿನ್ನ ದೂತರಿಗೆ ಈ ಪ್ರಮಾದ ಬಾರದಹಾಗೆ ನಾವು ಪೇಳಿದ ಆಜ್ಞೆಯಂ ಮಾಡು. ಭಸ್ಮರುದ್ರಾಕ್ಷ ಧಾರಿಗಳು ನಮಗೆ ನಮ್ಮ ಪ್ರಾಣಕ್ಕಿಂತಲೂ ಅಧಿಕರು. ಇವರಿಗಿಂತಲೂ ಮತ್ತಾರೂ ಅಧಿಕರಿಲ್ಲವೆನಲು ಯಮನು ಶಿವನ ವಾಕ್ಯವಂ ಕೇಳಿ ಭಕ್ತಿಯಿಂ ನಮಸ್ಕರಿಸಿ ತನ್ನ ಸ್ಥಾನಕ್ಕೆ ಪೋದನು. ಎಲೆ ಶಚೀದೇವಿಯೆ! ಆಗ ನಾನು ಶಿವಸನ್ನಿಧಿಯಲ್ಲಿ ಈಗೆ ಪೇಳ್ವ

ವೃತ್ತಾಂತವನ್ನೆಲ್ಲವಂ ಪ್ರತ್ಯಕ್ಷವಾಗಿ ಕಂಡೆನು. ರುದ್ರಾಕ್ಷಧಾರಿಗಳಂ ಕಂಡರೆ ನನಗೆ ಅತ್ಯಂತ ಭೀತಿಯುಂಟಾಗುತಿದ್ದೀತು ? ಅದುಕಾರಣದಿಂ ರುದ್ರಾಕ್ಷಧಾರಿಯಾದ ಈ ಮಾರ್ಜಾಲವಂ ಪೂಜಿಸಿದೆನೆನಲು, ಆಗ ಶಚೀದೇವಿಯದಂ ಕೇಳಿ ಅತ್ಯಂತ ಆಶ್ಚರ್ಯಯುಕ್ತಳಾದಳು, ಎಲೆ ರಾಯನೆ ! ಬಳಿಕ ಆ ಶಚೀದೇವಿಯು ನನ್ನ ಹಸ್ತವಂ ತೆಗೆದು ತನ್ನ ನಯನಂಗಳಲ್ಲಿ ಒತ್ತಿಕೊಂಡು ಶಿರವನಾಘ್ರಾಣಿಸಿ ಭಕ್ತಿಯಿಂ ನನ್ನಂ ಕಳುಹಿದಳು. ಎಲೆ ದ್ವಿಜೇಂದ್ರರುಗಳಿರಾ ! ಅನಂತರದಲ್ಲಿ ಸಾಲಂಕನೆಂಬ ರಾಜನು ಆ ಸಭೆಯಲ್ಲಿ ಮಾರ್ಜಾಲದಿಂದ ಸತ್ಯವಾದ ವೃತ್ತಾಂತವಂ ಕೇಳಿ ಆಶ್ಚರ್ಯಮಾನಸನಾಗಿ ಈ ಸುಪ್ರತೀಪನಲ್ಲಿ ಭಕ್ತಿಯಂ ಮಾಡಿ ಶ್ರೇಷ್ಠನಾದ ಈತನು ತನ್ನ ಗೃಹವನ್ನೈದಿದನೆಂದು ಸೂತಂ ಶೌನಕಾದಿಗಳ್ಗೆ ಪೇಳ್ದ ನೆಂಬಲ್ಲಿಗೆ, ಉಪದೇಶ ಕಾಂಡದೊಳು ಹದಿನಾರನೆಯ ಅಧ್ಯಾಯವು ಸಂಪೂರ್ಣಮಾದುದು.

ಹದಿನೇಳನೆಯ ಅಧ್ಯಾಯವು.

ರುದ್ರಾಕ್ಷಿಯ ಭಕ್ತಶಾಂತಿಕನ ಕಥೆ.

ಎಲೈ ಋಷಿಗಳಿರಾ ! ಅನಂತರದಲ್ಲಿ ರಾಯನು ಸುಪ್ರತೀಪಂಗೆ ನಮಸ್ಕಾರವಂ ಮಾಡಿ ತನಗೆ ರುದ್ರಾಕ್ಷಧಾರಣವಂ ಮಾಡಿಸಬೇಕೆನಲು ಆ ಸಮಯದಲ್ಲಾ ಸನ್ಯಾಸಿಯು ಶೀಘ್ರದಿಂದೆದ್ದು ಆ ಸುಪ್ರತೀಪಂಗೆ ನಮಸ್ಕಾರವಂ ಮಾಡಿ ಎಲೆ ದ್ವಿಜೋತ್ತಮನೆ ! ನೀನು ರುದ್ರಾಕ್ಷ ಧಾರಣೆಯಿಂದ ಸಾಕ್ಷಾದ್ರುದ್ರನೇ ಸರಿ. ದಯದಿಂ ಪಕ್ವಚಿತ್ತನಾದ ದ್ವಿಜನೆ! ನಾನು ಮಾಡಿದ ಅಪರಾಧವಂ ಕ್ಷಮಿಸು. ಮಹತ್ತಾದವರು ತಮಗೆ ಅಪರಾಧವಂ ಮಾಡಿದ ಪ್ರಾಣಿಗಳಲ್ಲಿ ದಯಮಾಡುವರಲ್ಲದೆ ಕೋಪವಂ ಮಾಡರೆಂದು ಸ್ತುತಿಸಿ, ಬದ್ಧಾಂಜಲಿ ಪುಟನಾಗಿ ನಿಂತಿರ್ದನು. ಬಳಿಕ ಸುಪ್ರತೀಪನು ಅವರೀರ್ವರಂ ತನ್ನ ಸಮೀಪದಲ್ಲಿ ಕುಳ್ಳಿರಿಸಿಕೊಂಡು ಒಂದು ಕಥೆಯಂ ಪೇಳ್ದನದೆಂತೆನೆ. ಎಲೆ ಸನ್ಯಾಸಿಯೆ ! ಮಕರ ದೇಶದಲ್ಲಿ ಮಕರಪುರವಿರ್ಪುದು. ಆ ಪುರದಲ್ಲಿ ಮತಿವಂತನಾದ ಸುಗುಪ್ತನೆಂಬ ಒಬ್ಬ ಬ್ರಾಹ್ಮಣ ನಿರುತಿರ್ದನು. ಆತಂಗೆ ಐದು ಮಂದಿ ಪುತ್ರರು ಜನಿಸಿದರು. ಆ ಪುತ್ರರಲ್ಲಿ ಶಾಂತಿಕನೆಂಬುವನು ಕನಿಷ್ಠ ಬಾಲಕರೊಡನೆ ಕ್ರೀಡಿಸುತಿರುವಲ್ಲಿ ಧೂಳಿನೊಳೊಂದು ರುದ್ರಾಕ್ಷಿಯಂ ಕಂಡು ಆ ರುದ್ರಾಕ್ಷಿಯನ್ನು ಯಾವಾಗಲೂ ತನ್ನ ಕಂಠದಲ್ಲಿ ಧರಿಸಿಕೊಂಡಿರ್ದನು. ಶೋಭನ ಬುದ್ಧಿಯುಳ್ಳ ಆ ಶಾಂತಿಕನು ಭ್ರಾಂತನೋಪಾದಿಯಲ್ಲಿ ಮಾತಾಪಿತೃ ಭ್ರಾತೃ

ಗಳ ವಾಕ್ಯವಂ ಕೇಳದಿರ್ಪನು. ದರಿದ್ರನಾದರೂ ಒಂದು ವಸ್ತುವನ್ನು ಯಾರನ್ನೂ ಕೇಳನು. ಆತನ ಹಿರಿಯರಾದ ನಾಲ್ಕು ಮಂದಿ ಪುತ್ರರು ತನ್ನ ಮಾತಾಪಿತೃಗಳ್ಪೆರಸಿ ಯಾಚಕಾವೃತ್ತಿಯಿಂ ತಮ್ಮ ಉದರವಂ ಪೋಷಿಸು ತಿರ್ದರು. ಈ ಬ್ರಾಹ್ಮಣನು ತನ್ನ ಗೃಹವಂ ಬಿಟ್ಟು ಮತ್ತೊಂದು ಕಡೆಗೆ ಪೋಗದೆ ಅನ್ನರಸವಂ ಮಾಡಿಕೊಂಡಿರುತಿರ್ದನು. ಆತನ ಮಾತಾಪಿತೃಗಳು ತಮ್ಮ ವಚನವಂ ಕೇಳದೆ ಭಸ್ಮೋದ್ಧೂಳವಂ ರುದ್ರಾಕ್ಷಧಾರಣವಂ ಮಾಡಿ ಕೊಂಡಿರ್ಪ ಈತನಂ ನೋಡಿ ಅತ್ಯಂತ ಕುಪಿತರಾಗಿದ್ದರು. ಆ ಸಮಯದಲ್ಲಿ ಒಬ್ಬಾನೊಬ್ಬ ಕೇರಳದೇಶದ ರಾಯನು ಪ್ರತಿ ಸಂವತ್ಸರದಲ್ಲಿಯೂ, ಭದ್ರ ಕಾಳಿಗೆ ನರಬಲಿಯು ಸಿಡುವುದರಿಂದ ಆ ಸಂವತ್ಸರದಲ್ಲಿಯೂ ಬಲಿಯಂ ಕೊಡಲು ಮನುಷ್ಯನಿಲ್ಲದೆ ತನ್ನ ಭೃತ್ಯರಂ ಕರೆದು ಅವಯವಂಗಳಲ್ಲಿ ಕೊರತೆಯಿಲ್ಲದಿರುವ ನರನಂ ಕರತರಲು ಅವರಿಗೆ ಅತ್ಯಂತ ಧನವಂ ಕೊಟ್ಟು ದೇಶಾಂತರಕ್ಕೆ ಕಳು ಹಿಸಿದನು. ಆ ಭಟರು ಅಲ್ಲಲ್ಲಿ ವಿಚಾರಿಸಿ ಕ್ರಮದಿಂದೀತನ ಗ್ರಾಮಕ್ಕೆ ಬಂದು ತಾವು ಬಂದ ಕಾರ್ಯವಂ ಪೇಳಲಾಗಿ, ಆ ಮಾತಾಪಿತೃ ಭ್ರಾತೃಗಳು ರಾಯನು ಕಳುಹಿದ ದ್ರವ್ಯವಂ ತೆಗದುಕೊಂಡು ಶಾಂತಮಾನಸನಾದ ಶಾಂತಿಕನೆಂಬ ದ್ವಿಜನಂ ಆ ಭಟರ್ಗೆ ಕ್ರಯವಾಗಿ ಕೊಟ್ಟರು. ಆ ಶಾಂತಿಕನು ಸಂತುಷ್ಟ ಮನಸ್ಸುಳ್ಳವನಾಗಿ ಆ ಮಾತಾಪಿತೃಗಳ ಅನುಮತಿಯಿಂದ ಭಟರೊಡನೆ ಕೇರಳ ರಾಯನ ನಗರಕ್ಕೆ ಬಂದು ಆ ಮಹಾರಾಯನ ಪುರೋಹಿತನ ಗೃಹದಲ್ಲಿ ನಿಂತು, ಮರಳಿ ಬಲಿಯ ದಿವಸದೊಳು ಸ್ನಾನವಂ ಮಾಡಿ ರುದ್ರಾಕ್ಷವಂ ಧರಿಸಿ ಸರ್ವಾಂಗದಲ್ಲಿ ಗಂಧಲೇಪನವಂ ಮಾಡಿ, ಆತನೊಡನೆ ಅತ್ಯಂತ ಸಂತೋಷ ದಿಂದ ರಾಜಗೃಹಕ್ಕೆ ಬಂದನು. ಬಳಿಕ ಅರಸು ಆ ಬ್ರಾಹ್ಮಣನಂ ಕಂಡು ಬಲಿಯ ನಿಮಿತ್ತಮಾಗಿ ಬಂದನೆಂಬುದನ್ನರಿತು ಆ ಪುರೋಹಿತನಿಂದೊಡಗೂಡಿ ಬ್ರಾಹ್ಮಣನೊಡನೆ ಭದ್ರಕಾಳಿಯ ಭವನವಂ ಪ್ರವೇಶಿಸಿ, ಆ ಭದ್ರಕಾಳಿಯಂ ಗಂಧಪುಷ್ಪ ಧೂಪದೀಪ ಭಕ್ಷ್ಯಭೋಜ್ಯಮಾಂಸರಕ್ತ ಮುಂತಾದ ದ್ರವ್ಯಗಳಿಂ ಪರಿಪೂಜಿಸಿ, ಆ ಶಾಂತಿಕನೆಂಬ ಬ್ರಾಹ್ಮಣನಂ ಬಲಿಯ ನಿಮಿತ್ತಮಾಗಿ ಕುಳ್ಳಿರಿಸಿ ದನು. ಆ ಸಮಯದಲ್ಲಿ ಆ ಭದ್ರಕಾಳಿಯು ರುದ್ರಾಕ್ಷಭೂಷಣದಿಂದಲಂಕೃತ ನಾದ ಈ ಶಾಂತಿಕನೆಂಬ ಬ್ರಾಹ್ಮಣನಂ ನೋಡಿ, ಶೀಘ್ರವಾಗೆದ್ದು ಮನದಿಂದಾ ದ್ವಿಜಂಗೆ ನಮಸ್ಕಾರಮಂ ಮಾಡಿ ಕೋಪದಿಂದಾ ಪುರೋಹಿತನಂ ಸಂಹರಿಸಿ, ದುರಾತ್ಮನಾದ ಆತನ ರಕ್ತಪಾನವಂ ಮಾಡಿ, ಆ ಶಾಂತಿಕನಂ ನೋಡಿ, ಎಲೈ ಬ್ರಾಹ್ಮಣಶ್ರೇಷ್ಠನೆ! ನೀವುದಾನೊಂದು ಕಾರಣದಿಂ ಕಂಠದಲ್ಲಿ ರುದ್ರಾಕ್ಷ ಧಾರಣೆಯಂ ಮಾಡಿಕೊಂಡಿದ್ದೀಯೋ ಅದುಕಾರಣದಿಂದೀಜಗತ್ತಿನಲ್ಲಿ ನಿನಗೆ

ಸಮಾನವಾರು ಇಲ್ಲ. ಮಹಾ ಸತ್ವನಾಗಿ ಸ್ಥಿರಚಿತ್ತನಾದ ದೃಢವ್ರತನಾದ ಎಲೈ ದ್ವಿಜನೆ! ನೀನು ಧನ್ಯನು. ನೀನೆ ರುದ್ರನು, ನೀನೆ ಸಮಸ್ತ ದೇವತೆಗಳಿಗು ಪೂಜ್ಯನು. ಎಲೈ ಪುಣ್ಯಾತ್ಮನೆ! ನಿನಗೆ ವರವಂ ಕೊಡುತಲಿದೇನೆ ಕೇಳಿ ಕೊಳ್ಳುವನಾಗೆನಲಾಗಿ, ಆ ಶಾಂತಿಕನು ಭದ್ರಕಾಳಿಯ ವಾಕ್ಯವಂ ಕೇಳಿ ಇಂತೆಂದನು.

ಎಲೆ ಭದ್ರಕಾಳಿಯೆ! ವರವಂ ಕೊಡುವದಾದರೆ ಪ್ರತಿ ಸಂವತ್ಸರದಲ್ಲಿಯು ನರಬಲಿಯು ಬೇಡ, ಈ ರಾಯಂಗೆ ಬೇಕಾದ ವರವಂ ಕೊಡೆನಲಾಗಿ, ಭದ್ರ ಕಾಳಿಯು ದ್ವಿಜನ ವಾಕ್ಯವಂ ಕೇಳಿ, ಹಾಗೆಯೇ ಆಗಲೆಂದಂಗೀಕರಿಸಿ ಆ ರಾಯಂಗೆ ವರವನಿತ್ತು ಮರಳಿ ಆ ರಾಜನಂ ನೋಡಿ, ಎಲೆ ರಾಯನೆ! ಆವಾಗಲು ರುದ್ರಾಕ್ಷಭೂಷಣನಾದ ಈ ಬ್ರಾಹ್ಮಣನಂ ಪೂಜಿಸು, ಈತನ ವಾಕ್ಯವಂ ರುದ್ರ ವಾಕ್ಯವನ್ನಾಗಿ ಭಾವಿಸಿ ಈತಂಗೆ ನಿನ್ನ ಕನ್ನಿಕೆಯಂ ಕೊಟ್ಟು ವಿವಾಹಮಾಡು, ಹೀಗೆ ನೀನಿದ್ದೆಯಾದೊಡೆ ನಿನಗೆ ಸಮಸ್ತಂಗಳಾದ ಇಷ್ಟಾರ್ಥಂಗಳುಂಟಾಗು ವವು. ಆವುದಾನೊಂದು ಕಾರಣದಿಂ ಈತನಂ ಬಲಿಯ ನಿಮಿತ್ತವಾಗಿ ಪುರೋ ಹಿತನು ಕರತಂದನೋ ಆದುಕಾರಣದಿಂ ನಿನ್ನ ಮುಂದೆಯೇ ಆತನಂ ಸಂಹರಿಸಿ ದೆನು. ಹಾಗೆ ಪುರೋಹಿತನ ಸತಿಯು ಆತನ ಪುತ್ರರು ಮೃತರಾದರು. ಆತನ ದೇಹವು ದಗ್ಧವಾದುದು. ಈತಂಗೆ ದ್ವೇಷಿಗಳಾದ ಮಾತಾಪಿತೃಗಳು ಚೋರರಿಂ ಅಪಹರಿಸಲ್ಪಟ್ಟ ದ್ರವ್ಯಂಗಳುಳ್ಳವರಾಗಿ, ಕುಷ್ಠಾದಿ ರೋಗಂಗಳಿಂ ಗ್ರಸ್ತರಾಗಿ ಕ್ಷುತ್ಪಿಪಾಸೆಗಳಿಂ ಪರಿಪೀಡಿತರಾಗಿ, ನಿತ್ಯವು ನಿರಾಹಾರಿಗಳಾಗಿ ಆಲಯ ವಿಹೀನ ರಾಗಿ ದೇಶದಿಂ ದೇಶಕ್ಕೆ ತಿರುಗುತ ದುಃಖಸಾಗರದಲ್ಲಿ ಮಗ್ನರಾಗಿದ್ದಾರೆ. ಆರು ಕೆಲಂಬರು ರುದ್ರಾಕ್ಷಧಾರಿಗಳಾದ ಈತನಂ ಮಹೇಶ್ವರನಂ ಪೂಜಿಸುನಂತೆ ಪೂಜಿಸುತಲಿರುವರೋ ಅವರು ಸಮಸ್ತ ಪಾಪಂಗಳಂ ದಹಿಸಿ ಭೂಲೋಕದಲ್ಲಿ ದೇವತೆಗಳಂತಿರುವರೆನಲು, ರಾಯನು ಆ ಭದ್ರಕಾಳಿಯ ವಾಕ್ಯವಂ ಕೇಳಿ ಅತ್ಯಂತ ಪ್ರೀತಿಯಿಂದ ಯುಕ್ತನಾಗಿ ತನ್ನ ಪುತ್ರಿಯಂ ಆ ಬ್ರಾಹ್ಮಣಂಗೆ ಕೊಟ್ಟು ವಿವಾಹವಂ ಮಾಡಿ, ನಾನಾರತ್ನಮಯವಾದ ಗೃಹವಂ ನಿರ್ಮಾಣವಂ ಮಾಡಿಸಿ ಆತಂಗೆ ಕೆಲವು ರಾಜ್ಯವಂ ಕೊಟ್ಟು ಮಹೇಶ್ವರನನ್ನಾರಾಧಿಸುವಂತೆ ಪೂಜಿಸುತಿರ್ದನು.

ಎಲೆ ಋಷಿಗಳಿರಾ! ಶಾಂತಿಕನು ಬಂದು ರುದ್ರಾಕ್ಷಧಾರಣದಿಂದಲೇ ಈ ಫಲವುಂಟಾದುದೆಂದು ಮನದಲ್ಲಿ ಆಲೋಚಿಸಿ ಕರ್ಣದ್ವಯ ಬಾಹುದ್ವಯ ಮಣಿಬಂಧದ್ವಯ ಶಿರಸ್ಸು ಮುಂತಾದ ಸ್ಥಾನಂಗಳಲ್ಲಿ ಸಹಸ್ರಾಧಿಕ ರುದ್ರಾಕ್ಷವಂ ಧರಿಸಿ ತನ್ನ ಸ್ತ್ರೀಯೊಡನೆ ಗೃಹದಲ್ಲಿರ್ದನು. ಈ ಬ್ರಾಹ್ಮಣನ ಮಾತಾಪಿತೃಗಳು

ಈತನ ವೃತ್ತಾಂತಂಗಳಂ ತಿಳಿದು ತಮ್ಮವನೆಂದು ನಿಶ್ಚೈಸಿ ಆ ದೇಶಕ್ಕೆ ಬಂದು ಬ್ರಾಹ್ಮಣಾಚಾರವಂ ಬಿಟ್ಟು ವ್ರಣದಿಂದಾಕ್ರಮಿಸಲ್ಪಟ್ಟ ಶರೀರವುಳ್ಳವರಾಗಿ, ಆತನಿರುವ ನಗರಕ್ಕೆ ಬರಲಾಗಿ, ಆಗ ಶಾಂತಿಕನವರಂ ಕಂಡು ಸಂತೋಷದಿಂ ತನ್ನ ಗೃಹಕ್ಕೆ ಕರೆದುಕೊಂಡು ಬಂದು ಅಭ್ಯಂಜನವಂ ಮಾಡಿಸಿ ದಿವ್ಯ ವಸ್ತ್ರಂಗಳಂ ಕೊಟ್ಟು, ರುದ್ರಾಕ್ಷಮಾಲಿಗೆಳಿಂ ಸಮಸ್ತರಿಗು ಅಲಂಕಾರವಂ ಮಾಡಿಸಿದನು. ಅವರು ಆ ರುದ್ರಾಕ್ಷಧಾರಣ ಮಹಿಮೆಯಿಂದ ಕುಷ್ಠರೋಗದಿಂ ಬಿಡಲ್ಪಟ್ಟವರಾಗಿ ನಿತ್ಯವು ದಿವ್ಯಾಂಬರಾಭರಣ ಭೂಷಿತರಾಗಿ, ಅತ್ಯಂತ ಭೋಗಂಗಳಂ ಭುಜಿಸಿ ಪರಮ ಸಂತಸವನ್ನೈದಿ. ಆ ಶಾಂತಿಕನೊಡನೆ ಕೈಲಾಸಕ್ಕೆ ಪೋದರು. ಎಲೆ ಸನ್ಯಾಸಿಯೆ! ಮೂಗಿಭ್ರಾಂತಿಯಿಂ ಧರಿಸಿದ ಏಕ ರುದ್ರಾಕ್ಷಿಯಿಂದೀಫಲ ಮುಂಟಾದುದು. ಬುದ್ಧಿಪೂರ್ವಕಮಾಗಿ ಧರಿಸಿದ ರುದ್ರಾಕ್ಷದ ಮಹಿಮೆಯಂ ಪೇಳಲಶಕ್ಯವು ಆದೊಡಂ ಪೇಳ್ವೆನು ಕೇಳು ಏನಂದರೆ, ಯಾವ ಮನುಜರು ಶಿವಂಗೆ ಭೂಷಣಪ್ರಾಯಮಾದ ರುದ್ರಾಕ್ಷವನ್ನು ಸ್ವರ್ಗ ಮೋಕ್ಷಂಗಳನ್ನೀಯುವದೆಂದು ತಿಳಿದು ಈ ವಿಧಿಯಿಂದ ಸ್ವಕೀಯವಾದ ಶರೀರದಲ್ಲಿ ಚನ್ನಾಗಿ ಯಾವಾಗಲು ಧಾರಣೆಯಂ ಮಾಡುತಲಿರುವರೋ, ಅವರುಗಳು ದಹಿಸಲ್ಪಟ್ಟ ನಿಜಪಾತಕಂಗಳುಳ್ಳವರಾಗಿ ಈ ಲೋಕದಲ್ಲಿ ಶುಭಫಲಂಗಳನ್ನೈದಿ ಶಿವನನ್ನು ಪಾರ್ವತೀದೇವಿಯನ್ನು ಗಣಾಧೀಶ್ವರನನ್ನು ಬಿಟ್ಟು ಮತ್ತಾರನ್ನು ಪೂಜಿಸದಿರುವರೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ಉಪದೇಶಕಾಂಡದಲ್ಲಿ ಹದಿನೇಳನೆಯ ಅಧ್ಯಾಯವು ಸಮಾಪ್ತಮಾದುದು.

ಹದಿನೆಂಟನೆಯ ಅಧ್ಯಾಯವು.

ಭಸ್ಮ ರುದ್ರಾಕ್ಷಗಳ ವರ್ಣನೆ.

ಎಲೈ ಋಷಿಗಳಿರಾ! ಅನಂತರದಲ್ಲಿ ಯೋಗೀಶ್ವರನು ಸುಪ್ರತೀಪನ ವಚನವಂ ಕೇಳಿ, ಪರಮ ಸಂತೋಷವನ್ನೈದಿ, ನಿಜಕರ್ಮವಾದ ಯೋಗವಂ ಬಿಟ್ಟು ರುದ್ರಾಕ್ಷಿಯಂ ಧರಿಸಿ ಸರ್ವಪಾಪವಂ ಪರಿಹಾರವಂ ಮಾಡಿಕೊಂಡು ಶಿವಪ್ರಸಾದದಿಂ ಶಿವಯೋಗಿಯೆಂಬ ನಾಮವಂ ಧರಿಸಿ, ಶಿವಜ್ಞಾನದಿಂ ಪುನರಾವೃತ್ತಿ ರಹಿತಮಾದ ಮುಕ್ತಿಯಂ ಪಡೆದನು.

ಬಳಿಕ ಆ ರಾಯನು ಅಂದು ಮೊದಲಾಗಿ ರುದ್ರಾಕ್ಷಾಭರಣದಿಂದುಜ್ವಲನಾಗಿ, ಶತ್ರುರಹಿತನಾಗಿ ಅನೇಕ ಕಾಲ ರಾಜ್ಯವನಾಳಿ ಮಾನುಷಾನಂದಯುಕ್ತನಾಗಿ ಅನೇಕ ಭೋಗಂಗಳನನುಭವಿಸಿ ಪುತ್ರರ್ಗೆ ರಾಜ್ಯವನಿತ್ತು ಶಿವಲೋಕವ

ನೈದಿದನು. ಬಳಿಕ ಸುಪ್ರತೀಪನು ರುದ್ರಾಕ್ಷಮಹಿಮೆಯಂ ವರ್ಣಿಸಿ ತನ್ನ ಗೃಹಕ್ಕೆ ಪೋಗಿ ಅನೇಕಕಾಲ ಬಹುಭೋಗಂಗಳನನುಭವಿಸಿ ಪುತ್ರ ಪೌತ್ರರೊಡನೆ ಶಿಷ್ಯ ಪ್ರಶಿಷ್ಯ ಬಾಂಧವರ್ವೆರಸಿ ಸತಿಯಿಂದೊಡಗೂಡಿದ ದೇವತಾಸ್ತ್ರೀಯರಿಂದ ಯುಕ್ತವಾದ ದಿವ್ಯ ವಿಮಾನವನೇರಿ ದೇವದುಂಭಿಗಳ್ವೆರಸಿ ಪುಷ್ಪವೃಷ್ಟಿಗಳಿಂದ ಯುಕ್ತನಾಗಿ ದೇವರ್ಷಿಗಳಿಂದ ಸ್ತುತಿಸಲ್ಪಡುತ್ತ, ಇಂದ್ರಪ್ರೇರಿತವಾದ ಕಲ್ಪವೃಕ್ಷವನ್ನು ಉಜ್ಜನೀ ಪುರದಲ್ಲಿರುವ ಮಹಾ ಕಾಳೇಶ್ವರನೆಂಬ ಮಹೇಶ್ವರಂಗೆ ಸಮರ್ಪಿಸಿ, ಆ ಮಾರ್ಜಾಲದೊಡನೆ ಮುದದಿಂ ಶಿವಲೋಕಕ್ಕೆ ಪೋಗಿ ಕೆಲವು ಕಾಲದಮೇಲೆ ಮಹೇಶ್ವರನ ಸಾಯುಜ್ಯವ ನೈದಿದನೆಂದು ಸೂತಂ ಪೇಳ್ದನು.

ಬಳಿಕ ಋಷಿಗಳು ಆವಾಕ್ಯವಂ ಕೇಳಿ, ಪುರಾಣಾರ್ಥವಂ ಬಲ್ಲವರೊಳಗೆ ಸಮರ್ಥನಾದ ಎಲೈ ಸೂತನೆ! ನೀನು ಪ್ರಥಮದಲ್ಲಿ ಸರ್ವಸಮ್ಮತವಾದ ಭಸ್ಮದ ಮಹಿಮೆಯಂ ಪೇಳಿದೆ, ಹಾಗೆಯೇ ಸರ್ವರು ಪೊಪ್ಪತಕ್ಕ ರುದ್ರಾಕ್ಷದ ಮಹಾತ್ಮ್ಯವನು ನಿರೂಪಿಸಿದೆ, ಭಸ್ಮದಿಂದಲೆ ಸರ್ವಾಭೀಷ್ಟಂಗಳುಂಟಾಗುವವು. ರುದ್ರಾಕ್ಷಧಾರಣೆಯ ವಿಷಯದಲ್ಲಿರುವ ನಮ್ಮ ಸಂದೇಹವನ್ನು ಛೇದಿಸು, ಈ ಸಂದೇಹವನ್ನು ಪರಿಹರಿಸುವ ವಿಷಯದಲ್ಲಿ ನೀನಲ್ಲದೆ ಮತ್ತಾರ್ಯರು ಪಂಡಿತರಿಲ್ಲ, ನಿಮ್ಮಂಥ ಮಹಾತ್ಮರಿಗೆ ಕೇಳುವರುಂಟಾದ ಬಳಿಕ ಎಷ್ಟು ರಹಸ್ಯವಾದೊಡಂ ಪಾವನಮಾದೊಡಂ ಪೇಳಬೇಕೆಂದರು.

ಅನಂತರದಲ್ಲಿ ಸೂತನು ಈ ವಾಕ್ಯವಂ ಕೇಳಿ ಪುಸಿನಗೆಯುಕ್ತನಾಗಿ, ಎಲೈ ಪಾಪರಹಿತರಾದ ಋಷಿಗಳಿರಾ! ರುದ್ರಾಕ್ಷರಹಿತವಾಗಿ ಧರಿಸಲ್ಪಟ್ಟ ಭಸ್ಮವು ಜಲಬಿಂದು ಮಳೆಸ್ನಾನ ಜಲಸಮ್ಮರ್ದ ಮುಂತಾದವುಗಳಿಂ ಅಳಿದೊಡೆ ಪ್ರಾಣಿಗಳಿಗಂಟಾಗುವದು. ಆವುದಾನೊಂದು ಕಾರಣದಿಂ ಯಾವಾಗಲು ಮರ್ಮವನ್ನು ಭೇದಿಸುವಂಥ ಭೂತ ಪ್ರೇತ ಪಿಶಾಚ ರಾಕ್ಷಸ ಸರ್ಪ ಚೋರ ವ್ಯಾಘ್ರ ಸಿಂಹ ಮುಂತಾದವುಗಳು ಭಸ್ಮ ರುದ್ರಾಕ್ಷ ವಿಹೀನರಂ ಕೊಲ್ಲುವವೋ ಅದುಕಾರಣದಿಂ ತಮಗೆ ಹಿತವಂ ಬಯಸುವವರು ಈ ಭಸ್ಮ ರುದ್ರಾಕ್ಷ ಧಾರಣವಂ ಕಂಠ ಕರ್ಣ ಕರ ಮುಂತಾದ ಸ್ಥಾನಂಗಳಲ್ಲಿ ಆವಾಗಲು ಧರಿಸುವರು. ಈ ರುದ್ರಾಕ್ಷ ಧಾರಣಕ್ಕೆ ವಿಭೂತಿಯೋಪಾದಿಯಲ್ಲಿ ಜಲಾದಿಗಳಿಂ ಕೆಡಕಿಲ್ಲ, ಭೂತ ಪ್ರೇತ ಪಿಶಾಚ ರಾಕ್ಷಸರು ಭಸ್ಮ ರುದ್ರಾಕ್ಷಧಾರಿಗಳಂ ಸಂಹರಿಸರು. ಸರ್ಪಂಗಳು ಕಚ್ಚುವುದಿಲ್ಲವು, ಸ್ವರ್ಣರಜತ ತಾಮ್ರ ಸೂತ್ರದಿಂ ಕಂಠಾದಿ ಸ್ಥಾನಂಗಳಲ್ಲಿ ಧರಿಸಬೇಕು. ಮತ್ತಂ ಯಜ್ಞೋಪವೀತದಲ್ಲಿ ಒಂದು ರುದ್ರಾಕ್ಷವನಾದರು ಧರಿಸಬೇಕು. ರುದ್ರಾಕ್ಷಧಾರಿಗಳು ಶತ್ರುಗಳಿಗಂಜವೆ ನಿರ್ಭಯರಾಗಿರುವರು. ಈ ಅರ್ಥದಲ್ಲಿ

ಒಂದು ಇತಿಹಾಸವುಂಟು ಏನೆಂದರೆ, ಸೌವೀರದೇಶದಲ್ಲಿ ಮಹದೈಶ್ವರ್ಯವುಳ್ಳ ಸೂರ್ಯಪುರದಲ್ಲಿ ಮಹಾತ್ಮನಾದ ಸಿಂಧುಸೇನನೆಂಬ ಓರ್ವ ರಾಜನಿರ್ದನು. ಆ ಧೊರೆಯು ವಿಂಧ್ಯದೇಶಾಧೀಶ್ವರನಾಗಿ ಕಾಕಳಿಯೆಂಬ ಪುರಕ್ಕೆ ಒಡೆಯನಾದ ಸಿಂಹವೆಂಬ ನಾಮವುಳ್ಳ ಶತ್ರುರಾಯನಮೇಲೆ ದಂಡೆತ್ತಿ ಪೋಗಿ, ಮಹಾ ಬಲ ವಂತನಾದ ಆ ರಾಯನಂ ಯುದ್ಧದಲ್ಲಿ ಜಯಿಸಿ, ತನ್ನ ಸೇನೆಯುಂ ಕಳುಹಿಸಿ ಆರಣ್ಯಕ್ಕೆ ಓಡಿಸಿದನು. ಸಿಂಹನೆಂಬ ರಾಯನು ಆ ವನದಲ್ಲಿ ಅನೇಕ ದಿವಸ ವಾಸವಂ ಮಾಡಿ ತಪದಿಂ ಹರಿಯನಾರಾಧಿಸಿ ಸರ್ವ ಶತ್ರು ಸಂಹಾರಕವಾದ ಚಕ್ರವಂ ಬೇಕೆಂದು ಪ್ರಾರ್ಥಿಸಲಾಗಿ, ಆಗ ಹರಿಯು ಪ್ರಸನ್ನನಾಗಿ ಚಕ್ರವಂ ಕೊಡುವ ಸಮಯದಲ್ಲಿ ಈ ಚಕ್ರವು ಐದುವೇಳೆ ಪ್ರಯೋಗಿಸುವ ಪರ್ಯಂತವು ನಿನ್ನ ಸಮೀಪದಲ್ಲಿರಲಿ, ಬಳಿಕ ನನ್ನ ಬಳಿಗೆ ಬರಲೆಂದು ಪೇಳ್ದು ಆ ಚಕ್ರವನ್ನು ಆತಂಗೆ ಕೊಟ್ಟು ಅಂತರ್ಧಾನವಾದನು, ಬಳಿಕ ಆ ರಾಯನು ಅದನ್ನು ಹಸ್ತದಲ್ಲಿ ಧರಿಸಿಕೊಂಡು ಶೀಘ್ರದಿಂ ಅರಣ್ಯದಿಂ ಪೊರಮಟ್ಟು ಸೇನಾಸಮೇತನಾದ ಸಿಂಧು ದೇಶಾಧೀಶ್ವರನ ಸಮೀಪಕ್ಕೆ ಅತಿ ಭಯಂಕರವಾದ ಆ ಚಕ್ರವಂ ಪ್ರಯೋಗಿಸ ಲಾಗಿ ಅದು ರಾಯನೋರ್ವನಂ ಬಿಟ್ಟು ಸಮಸ್ತವಾದ ಬಲವಂ ಸಂಹರಿಸಿ ಮರಳಿ ಆತನ ಹಸ್ತಕ್ಕೆ ಬಂದುದು. ಆ ಸಿಂಧುಸೇನನೆಂಬ ರಾಯನು ಏಕಾಕಿ ಯಾಗಿ ಅತಿ ಭಯಂಕರವಾದ ಅರಣ್ಯಕ್ಕೆ ಪೋಗಿ, ಅಲ್ಲಿ ವಸಿಷ್ಠರ ಆಶ್ರಮವನ್ನೈದಿ, ಅಲ್ಲಿ ಮಹಾನುಭಾವನಾದ ಆ ವಸಿಷ್ಠಮುನಿಯುಂ ಗೌತಮನಂ ವಿಶ್ವಾಮಿತ್ರ ನಾರದ ಮುಂತಾದ ಋಷಿಗಳಂ ಕಂಡು ನಮಸ್ಕಾರಮುಂ ಮಾಡಿ, ಎಲೈ ಋಷಿ ಗಳಿರಾ! ನಾನು ಸಮಸ್ತ ದೇಶಕ್ಕೂ ಧೊರೆಯಾಗಿರ್ದೆನು. ಈಗ ಶತ್ರುವಿನಿಂ ರಣದಲ್ಲಿ ಪರಾಜಿತನಾದೆನು. ಪೂರ್ವ ಜನ್ಮದಲ್ಲಿ ಮಾಡಿದ ಪುಣ್ಯಫಲದಿಂದ ನಿಮ್ಮ ಆಶ್ರಮಕ್ಕೆ ಬಂದೆನು. ನಾನು ಆವ ಉಪಾಯದಿಂದಲಾದರೂ ಶತ್ರುವಂ ಜಯಿಸಬೇಕೆನಲಾಗಿ, ಋಷಿಗಳು ಆತನ ವಾಕ್ಯವಂ ಕೇಳಿ ಜಯೋಪಾಯವಂ ಪೇಳ್ದರು.

ಎಲೈ ರಾಯನೆ! ಜಯಪ್ರದವಾದ ಭಸ್ಮ ರುದ್ರಾಕ್ಷವಂ ಸೇನೆಯೊಡನೆ ನೀನು ಧರಿಸಿಕೊಂಡು ನಿನ್ನ ಶತ್ರುವಿನೊಡನೆ ಯುದ್ಧವಂ ಮಾಡಿದೆಯಾದೊಡೆ ನಿನಗೆ ಜಯವುಂಟಾಗುವದು ಸಂದೇಹಿಸಬೇಡ, ನಿನ್ನ ಸೇನೆಯು ಭಸ್ಮ ರುದ್ರಾಕ್ಷ ಧಾರಣ ರಹಿತವಾದುದರಿಂದ ಶತ್ರುವಿನಿಂ ಹತವಾದುದು. ನೀನೋರ್ವನೆ ಉಳಿದೆ, ಎನಲಾಗಿ ಆ ರಾಯನು ಸಂದೇಹಿಸದೆ ವಿನಯದಿಂ ತಲೆವಾಗಿ, ಎಲೈ ಋಷಿಗಳಿರಾ! ಶತ್ರು ಪ್ರೇರಿತವಾದ ಚಕ್ರವು ನನ್ನ ಸರ್ವ ಸೇನೆಗಳಂ ಸಂಹರಿಸಿ ಭಸ್ಮ ರುದ್ರಾಕ್ಷ ವರ್ಜಿತನಾದ ನನ್ನ ಬಿಟ್ಟ ಕಾರಣವೇನು? ಸೇನೆಯು ಮಾತ್ರ

ಹತವಾಗುವದಕ್ಕೆ ಹೇತುವೇನು? ನನಿಗು ಭಸ್ಮ ರುದ್ರಾಕ್ಷಧಾರಣವು ಇಲ್ಲವಲ್ಲ ಎಂದು ಕೇಳಲಾಗಿ, ಆ ಋಷಿಗಳು ಆ ಸಿಂಧು ಸೇನನೆಂಬ ರಾಯನಂ ನೋಡಿ ಜಯಪ್ರದವಾದ ಭಸ್ಮ ರುದ್ರಾಕ್ಷಗಳಂ ಆವ ಪ್ರಕಾರದಿಂದಲಾದರು ಧರಿಸಿರ್ದೆ, ಇಲ್ಲದಿರ್ದೊಡೆ ನಿನ್ನಂ ಬಿಡದು ಇದೇ ನಿಶ್ಚಯವೆಂದರು.

ಬಳಿಕ ರಾಯನು ಆ ವಾಕ್ಯವಂ ಕೇಳಿ, ಎಲೈ ಋಷಿಗಳಿರಾ! ಕಸ್ತೂರಿ ಚಂದನಾನುಲಿಪ್ತನಾಗಿ ಮೌಕ್ತಿಕ ಸರಗಳಂ ಧರಿಸಿಕೊಂಡು ನೀಲರತ್ನ ಮುಂತಾದವುಗಳಿಂದಲಂಕೃತನಾಗಿ ಭಸ್ಮ ರುದ್ರಾಕ್ಷಗಳಂ ಧರಿಸದೆ ಯುದ್ಧಕ್ಕೆ ಪೋದೆನು. ಹಾಗಾದೊಡೆಯು ಚಕ್ರವು ನನ್ನ ನೋರ್ವನಂಬಿಟ್ಟು ಸಮಸ್ತ ಸೇನೆಗಳಂ ಸಂಹಾರಮಂ ಮಾಡಿದುದು. ನನಗಿಷ್ಟುಮಾತ್ರ ತಿಳಿವುದು ಮತ್ತೇ ನನ್ನು ಅರಿಯೆನೆನಲಾಗಿ, ಋಷಿಗಳು ಸಂದೇಹಮನಸ್ಕರಾಗಿ, ಎಲೆ ರಾಯನೆ! ನೀನು ಮೌಕ್ತಿಕ ಸರಮಂ ಆ ರತ್ನಮಾಲಿಕೆಯಂ ಶೋಧಿಸಿ ನೋಡೆಂದು ಪೇಳಿ ಅವುಗಳಂ ತೆಗಿಸಿ ನೋಡುವಲ್ಲಿ ಅಲ್ಲಿ ಒಂದು ರುದ್ರಾಕ್ಷಿಯಂ ಕಂಡು ತೋರಿಸಿದರು.

ಬಳಿಕ ರಾಯನದಂ ಕಂಡು ಭಯಕಂಪಿತನಾಗಿ ನಿಲ್ಲಲು ಋಷಿಗಳು ಎಲೈ ರಾಯನೆ! ಈ ಮೌಕ್ತಿಕಸರವು ಯಾರಿಂದ ಕೊಡಲ್ಪಟ್ಟದ್ದು, ಇದನ್ನು ನೀನು ಎಷ್ಟುದಿನಗಳಿಂ ಧರಿಸುತಿದ್ದಿ ಚನ್ನಾಗಿ ಯೋಚಿಸಿ ಪೇಳಬೇಕೆನಲಾಗಿ, ರಾಯನು ಎಲೈ ಋಷಿಗಳಿರಾ! ಆವಾಗ ಯುದ್ಧಸನ್ನದ್ಧನಾಗಿ ಗೃಹದಿಂ ಪೊರಮಟ್ಟೆನೋ ಆಗ ಓರ್ವ ವರ್ತಕನು ಈ ಸರವನ್ನು ಕಾಣಿಕೆಯಾಗಿ ಕೊಟ್ಟನು. ನಾನು ರಣ ಸಂಭ್ರಮದಿಂದಿದನ್ನು ಶೋಧಿಸದೆ ಕಂಠದಲ್ಲಿ ಧರಿಸಿ ವೇಗದಿಂ ಯುದ್ಧರಂಗಕ್ಕೆ ಬಂದೆನೆಂದನು.

ಅನಂತರದಲ್ಲಿ ಋಷಿಗಳು ಆ ವಾಕ್ಯವಂ ಕೇಳಿ ಆಶ್ಚರ್ಯಯುಕ್ತರಾಗಿ ಎಲೈ ರಾಯನೆ! ನೀನು ಈ ರುದ್ರಾಕ್ಷದ ಮಹಿಮೆಯಿಂ ಜಯಿಸಿದೆ ಮೃತಬಲ ನಾಗಿ ಪರಾಜಿತನಾದರು ಚಕ್ರವು ನಿನ್ನನ್ನು ಸಂಹರಿಸದೆ ಪೋದುದು. ಇತಃಪರ ದಲ್ಲಿ ಭಸ್ಮ ರುದ್ರಾಕ್ಷಧಾರಿಯಾದ ಬಲದಿಂ ಪರಿವೃತನಾಗಿ ಯುದ್ಧಕ್ಕೆ ಪೊರಮಡ ಲಾಗಿ ಜಯವುಂಟಾಗುವದು. ಮತ್ತೊಂದರಿಂದಾಗದೆಂದರು. ಬಳಿಕ ರಾಯನು ಹಾಗೆಯೆ ನಿಶ್ಚಯಿಸಿ ಯುದ್ಧಮಂ ಮಾಡಬೇಕೆಂದು ಯೋಚಿಸಿ ಅವುಗಳಂ ತಾನು ಧರಿಸಿ ಏಕಾಕಿಯಾಗಿ ವನದಿಂ ಪೊರಮಡಲು ಆ ಸಮಯದಲ್ಲಿ ಆತನ ಕೆಲಂಬ ಸೇನಾಭಟರು ಆಯುಧಪಾಣಿಗಳಾಗಿ ಬಂದು ರಾಯನಂ ಕಂಡರು.

ಬಳಿಕ ರಾಯನು ತನ್ನ ಭಟರಿಗೆ ಭಸ್ಮ ರುದ್ರಾಕ್ಷಧಾರಣೆಯಂ ಮಾಡಿಸಿ, ಸಿಂಹನೆಂಬ ನರನಾಥನ ನಗರವಂ ಅವರೊಡನೆ ಮುತ್ತಿದನು. ಬಳಿಕ ಆ ದೇಶಾ

ಧೀಶ್ವರನು ತನ್ನ ಬಲವೊಡನೆ ಪುರದಿಂ ಪೊರಮಟ್ಟು ಕೋಲಾಹಲ ಧ್ವನಿಯಂ ಮಾಡಿ, ಸರ್ವ ಶತ್ರು ಸಂಹಾರಕಮಾದ ಚಕ್ರವಂ ಪ್ರಯೋಗಿಸಲಾಗಿ, ಅದು ಅತಿವೇಗದಿಂ ಶತ್ರು ಸೇನಾ ಸಮೀಪಕ್ಕೆ ಪೋಗಿ, ಭಸ್ಮ ರುದ್ರಾಕ್ಷಧಾರಿಗಳಾದ ರುದ್ರನಂತೆ ಜ್ವಲಿಸುತ್ತಿರುವ ಭಟರಂ ಕಂಡು, ಅತಿ ಭಕ್ತಿಯಿಂ ನಮಸ್ಕಾರವಂ ಮಾಡಿ, ಪ್ರಯೋಗಿಸಿದವನ ಹಸ್ತವನ್ನೈದಿತು. ಸಿಂಹನು ಪರಬಲವನ್ನು ಸಂಹರಿಸವೆ ತನ್ನ ಹಸ್ತಗತಮಾದ ಆ ಚಕ್ರವಂ ನೋಡಿ ಪರಮ ಭೀತನಾಗಿ, ಪರಾಜಯವನ್ನೈದಿ, ವನಕ್ಕೆ ಪೋಗಿ, ಭಸ್ಮ ರುದ್ರಾಕ್ಷಧಾರಿಗಳಾದ ಭಟರಂ ಸಂಹರಿಸಲಶಕ್ಯವೆಂದು ತಿಳಿದು, ವರುಣನಂ ಕುರಿತು ಮಹತ್ತಾದ ತಪವಂ ಮಾಡಿ, ಆತನ ಪ್ರಸಾದವನ್ನೈದಿ, ಯಾವಾಗ ವೃಷ್ಟಿಯನಪೇಕ್ಷಿಸಿದರೂ ವರ್ಷಿಸಬೇಕೆಂದು ವರವಂ ಪಡೆದು, ಬಳಿಕ ಮರಳಿ ಯುದ್ಧಕ್ಕೆ ಬಂದು ಕೋಲಾಹಲ ಧ್ವನಿಯಂ ಮಾಡಿ, ಸಿಂಧುಸೇನನಂ ಯುದ್ಧಕ್ಕೆ ಕರೆದನು.

ಆಗ ಸಿಂಧುಸೇನನು ಯುದ್ಧದಲ್ಲಿ ಅತಿ ಗರ್ವಿತನಾದ ಸಿಂಹನ ಪರಾಭವವಂ ಮಾಡುವ ನಿಮಿತ್ತಮಾಗಿ ವೇಗದಿಂ ಬಂದನು. ಆಗ ಸಿಂಹನು ಮಧ್ಯಾಹ್ನ ಕಾಲದಲ್ಲಿ ವರುಣನಂ ಸ್ಮರಿಸಲಾಗಿ, ಮಹಾ ಮೇಘಂಗಳು ವರ್ಷಿಸಿದವು. ಆಗ ಉಭಯ ಬಲಂಗಳು ನೆನೆದವು. ರುದ್ರಾಕ್ಷಧಾರಣವಿಲ್ಲದೆ ಭಸ್ಮಧಾರಿಗಳಾದ ಸಿಂಧುಸೇನನ ಭಟರುಗಳ ಲಲಾಟಸ್ಥಾನದಲ್ಲಿರುವ ಭಸ್ಮವು ವೃಷ್ಟಿಯಿಂದಳಿದು ಪೋಗಲಾಗಿ, ಆ ಸಮಯದಲ್ಲಿ ಸಿಂಹನು ಚಕ್ರವಂ ಪ್ರಯೋಗಿಸೆ, ಅದು ಶೀಘ್ರವಾಗಿ ಆ ಬಲವನ್ನು ಆಕ್ರಮಿಸಿ ಭಸ್ಮ ರುದ್ರಾಕ್ಷಧಾರಿಗಳಾದ ಕೆಲ ಭಟರಂ ಆ ರಾಯನಂ ಬಿಟ್ಟು ಮಹಾ ಪರಾಕ್ರಮಿಯಾದ ಆ ಸಿಂಹನ ಹಸ್ತವನ್ನೈದಿತು.

ಬಳಿಕ ಸಿಂಧುಸೇನನು ರುದ್ರಾಕ್ಷಧಾರಿಗಳಾದ ಕೆಲಂಬ ಭಟರೊಡನೆ ಅಲ್ಪ ಬಲನಾದಕಾರಣ ಪೂರ್ವದಂತೆ ಅತಿ ದುಃಖವನ್ನೈದಿ, ವನಕ್ಕೆ ಪೋಗಿ, ಆ ವಸಿಷ್ಠಾದಿಗಳಂ ಕಂಡು ನಮಸ್ಕರಿಸಿ, ಎಲೈ ಋಷಿಗಳಿರಾ! ಭಸ್ಮ ರುದ್ರಾಕ್ಷಗಳಂ ಧರಿಸಿ, ಭಟರಿಗು ಧಾರಣೆಯಂ ಮಾಡಿಸಿ, ಯುದ್ಧಕ್ಕೆ ತೆರಳೆಂದು ನೀವು ಪೇಳಲಾಗಿ, ಅದರಂತೆ ರಣಮಂಡಲಕ್ಕೆ ಪೋದೆನು. ಆಗ ಸಿಂಹನು ಚಕ್ರವಂ ಪ್ರಯೋಗಿಸಲಾಗಿ, ಅದು ವೇಗದಿಂ ಬಂದು ನನ್ನ ಬಲದಲ್ಲಿರುವ ಶೂರರಂ ಸಂಹರಿಸಿ ನನ್ನೊಡನೆ ಮುನ್ನರು ನಾಲ್ವರಂ ಬಿಟ್ಟು ಆತನ ಹಸ್ತಕ್ಕೆ ಮರಳಿ ಪೋದುದೆಂದು ಪೇಳಿ ಭಯಕಂಪಿತನಾಗಿ ಆ ಪರಿಯಾಯವಂ ಪೇಳಿದನು.

ಬಳಿಕ ಈ ವಸಿಷ್ಠಾದಿಗಳು ಆ ಸಿಂಧುಸೇನನೆಂಬ ರಾಯನಿಂದ ಪೇಳಲ್ಪಟ್ಟ ವಾಕ್ಯವಂ ಕೇಳಿ, ತಮ್ಮ ಹೃದಯದಲ್ಲಿ ಯೋಚಿಸಿ, ಎಲೈ ಅರಸೆ! ಯಾವಾತನು ತನ್ನ ಶರೀರದಲ್ಲಿ ಈ ರುದ್ರಾಕ್ಷವನ್ನು ಯಾವಾಗಲು ಧರಿಸುವನೋ ಆತನು

ಶತ್ರುಗಳ ಆಯುಧಂಗಳಿಂ ಮರಣವನ್ನೈದುವನೆಂದು ಋಷಿಗಳು ಪೇಳಿದರೆಂಬ ದಾಗಿ ಸೂತಂ ಪೇಳ್ದನೆಂಬಲ್ಲಿಗೆ, ಉಪದೇಶಕಾಂಡದೊಳು ಹದಿನೆಂಟನೆಯ ಅಧ್ಯಾಯವು ಸಂಪೂರ್ಣವಾದುದು.

ಹತ್ತೊಂಬತ್ತನೆಯ ಅಧ್ಯಾಯವು.

ಭಸ್ಮರುದ್ರಾಕ್ಷಧಾರಣಾವರ್ಣನ ಕಥೋಪಕಥನಂ.

ಎಲೈ ಋಷಿಗಳಿರಾ! ಬಳಿಕ ಸಿಂಧುಸೇನನೆಂಬ ರಾಯನು ಆ ವಸಿಷ್ಠಾದಿಗಳ ವಾಕ್ಯವಂ ಕೇಳಿ, ಕೆಲಂಬರು ಭಸ್ಮರುದ್ರಾಕ್ಷಧಾರಣವಂ ಮಾಡಿ ಯುದ್ಧವಂ ಮಾಡಿದರು. ಆ ಸಮಯದಲ್ಲಿ ಮಹಾವೃಷ್ಟಿಯು ಬಂದು ಉಭಯ ಸೇನೆಗಳು ನೆನೆದವು. ಆಗೆ ಸಿಂಹನು ಚಕ್ರವಂ ಪ್ರಯೋಗಿಸಿ, ಪರಸೈನ್ಯವಂ ಸಂಹರಿಸಿದ ನೆಂಬುದಂ ರಾಯನಿಂದ ಋಷಿಗಳು ಮರಳಿ ಕೇಳಿ, ಮನದಿಂದಾಲೋಚಿಸಿ ರುದ್ರಾಕ್ಷಧಾರಣವಿಲ್ಲದೆ ಕೇವಲ ಭಸ್ಮಧಾರಿಗಳಾದ ಭಟರು ವೃಷ್ಟಿಯಿಂ ನೆನದು ಭಸ್ಮಂಗಳಿಲ್ಲದವರಾದಕಾರಣ ಚಕ್ರದಿಂ ಹತರಾದರು. ಮತ್ತಂ ಭಸ್ಮ ರುದ್ರಾಕ್ಷ ಧಾರಿಗಳಾದ ಭಟರು ನೀನು ಜೀವಿಸಿದ್ದೀರಿ, ಎಲೈ ಭೂಪಾಲನೆ! ಪೂರ್ವದಲ್ಲಿ ಭಸ್ಮ ರುದ್ರಾಕ್ಷಂಗಳಂ ಧರಿಸಿದೆ ತ್ರಿಪುರದಲ್ಲಿರ್ದ ದೈತ್ಯರಿಗೆ ಯಾವ ದೇವತೆಯಿಂದಲು ಭೀತಿಯು ಪುಟ್ಟಲಿಲ್ಲ. ಆಗ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಅಭಿಚಾರ ಕರ್ಮಗಳಿಂ ಭಯಂಕರವಾದ ಭೂತಂಗಳಂ ಪ್ರೇರಿಸಿ, ಆ ದೈತ್ಯರಂ ಸಂಹರಿಸಲು ಭೂತಂಗಳಂ ಕಳುಹೆ, ಆಗ ಭೂತಂಗಳು ಭಸ್ಮ ರುದ್ರಾಕ್ಷಧಾರಿಗಳಾದ ದೈತ್ಯರಂ ಕಂಡು ಅತ್ಯಂತ ಭಯಪಟ್ಟು ತಿರಿಗಿ ಬಂದವು. ಮರಳಿ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಉಪಾಯದಿಂ ದೈತ್ಯರಿಗೆ ಆ ಭಸ್ಮ ರುದ್ರಾಕ್ಷಧಾರಣವಂ ಮಾಡಿಸಿ ಶಿವನಿಂ ಆ ದೈತ್ಯರಂ ಸಂಹರಿಸಿದರು.

ಎಲೈ ರಾಯನೆ! ನೀನು ಶಿವನಿಂ ರುದ್ರಾಕ್ಷವಂ ಧರಿಸಿ ನಿನ್ನ ಭಟರಿಗೆ ಭಸ್ಮ ರುದ್ರಾಕ್ಷಧಾರಣವಂ ಮಾಡಿಸಿಕೊಂಡು ಯುದ್ಧವಂ ಮಾಡಿದರೆ, ಶತ್ರುವು ಪಲಾಯನವಾಗುವನು, ಕೇವಲ ಭಸ್ಮಧಾರಿಗಳಾದರೆ ವೃಷ್ಟಿಗಳಿಂದಳಿದು ಪೋಗುವದು. ರುದ್ರಾಕ್ಷಧಾರಣಕ್ಕೆ ಯಾವ ಪ್ರಕಾರದಿಂದಲಾದರೂ ಕೇಡಿಲ್ಲವೆಂದು ನುಡಿದರು. ಬಳಿಕ ರಾಯನದಂ ಕೇಳಿ ಹಾಗೆ ಆಗಲೆಂದು ಪೇಳಿ ನಮಸ್ಕರಿಸಿ ತಾನು ಭಸ್ಮ ರುದ್ರಾಕ್ಷೆಯಂ ಧರಿಸಿ ಭಟರಿಗೂ ವಿಭೂತಿ ರುದ್ರಾಕ್ಷಿ ಮಾಲೆಗಳಿಂದಲಂಕರಿಸಿ ಅವರೊಡನೆ ಬಂದು ಆ ಸಿಂಹನಂ ಯುದ್ಧಕ್ಕೆ ಕರೆಯೆ, ಆ ಸಿಂಹನು ವೇಗದಿಂ ಯುದ್ಧಕ್ಕೆ ಪೋಗಿ ಅನೇಕ ಯುದ್ಧವಂ ಮಾಡಿ ಬಳಿಕ ಚಕ್ರವಂ ಪ್ರಯೋಗಿಸಲಾಗಿ, ಅದು ಭಸ್ಮ ರುದ್ರಾಕ್ಷಧಾರಿಗಳಾದ ಆ ಭಟರಂ ನೋಡಿ

ಅತ್ಯಂತ ಭಯಪಟ್ಟು, ಆತನ ಬಲಕ್ಕೆ ಪ್ರದಕ್ಷಿಣ ನಮಸ್ಕಾರವಂ ಮಾಡಿ ಮರಳಿ ಪೋದುದು.

ಆಗ ಸಿಂಹನು ವರುಣನಂ ಸ್ಮರಿಸಿ ವೃಷ್ಟಿಯಂ ಪಡೆದು ಆ ವೃಷ್ಟಿಯಿಂ ಭಸ್ಮಂಗಳಳಿಯೆ ಚಕ್ರವಂ ಪ್ರಯೋಗಿಸಿದನು. ಅದು ಭಸ್ಮವಿಲ್ಲದೆ ಕೇವಲ ರುದ್ರಾಕ್ಷಧಾರಿಗಳಾದ ಭಟರಂ ನೋಡಿ ಭೀತಿಯಿಂ ನಮಸ್ಕಾರವಂ ಮಾಡಿ ಆಗ ತನ್ನ ಸ್ಥಾನಕ್ಕೆ ಪೋದುದು. ಬಳಿಕ ಸಿಂಹನು ತನ್ನ ಬಲದೊಡನೆ ವನಕ್ಕೆ ಪೋಗಲು, ಸಿಂಧುಸೇನನೆಂಬ ರಾಯನು ಅತಿ ಕೋಲಾಹಲ ಧ್ವನಿಯಂ ಮಾಡಿ ತನ್ನ ಪುರಕ್ಕೆ ಬಂದು ಅಲ್ಲಿರ್ಪ ಸರ್ವರಿಗು ಭಸ್ಮರುದ್ರಾಕ್ಷ ಧಾರಣೆಗಳಂ ಮಾಡಿಸಿ, ಈ ಮಹಿಮೆಯನ್ನೇ ಪೇಳುತ ಅನೇಕ ಕಾಲವಿರ್ದು ಬಹು ಭೋಗಂಗಳನ್ನನುಭವಿಸಿ ಅಂತ್ಯದಲ್ಲಿ ತನ್ನ ದೇಶದಲ್ಲಿರುವ ಜನರೊಡನೆ ವಿಮಾನವನ್ನೇರಿ, ಕೈಲಾಸ ಪರ್ವತಕ್ಕೆ ಪೋಗಿ ಕ್ರಮದಿಂ ಸಾಯುಜ್ಯವನ್ನೈದಿದನು. ಹಾಗೆ ಸಿಂಹನು ರಾಗದ್ವೇಷಗಳಂ ಬಿಟ್ಟು ವೈರಾಗ್ಯಸಂಪನ್ನನಾಗಿ ಭಸ್ಮರುದ್ರಾಕ್ಷವಂ ಧರಿಸಿ ಜೀವನ್ಮುಕ್ತನಾಗಿ ಅನೇಕ ಕಾಲವಿರ್ದು ಮೋಕ್ಷವನ್ನೈದಿದನು. ಅದುಕಾರಣದಿಂ ಭಸ್ಮಸಹಿತವಾಗಿ ರುದ್ರಾಕ್ಷಧಾರಣವಂ ಮಾಡಬೇಕು. ರುದ್ರನಯನವಾದಕಾರಣ ರುದ್ರಾಕ್ಷವೆಂಬ ಪೆಸರಾದುದು. ಶಂಭುವು ರುದ್ರಾಕ್ಷಧಾರಣವಂ ಮಾಡಿದ ಜನರಂ ಸಂಪೂರ್ಣಕಟಾಕ್ಷದಿಂ ನೋಡುವನು. ಮತ್ತಂ ಅವರನ್ನು ರುದ್ರನಂತೆಯೇ ನೋಡತಕ್ಕದ್ದು. ಈ ರುದ್ರಾಕ್ಷದ ಮಹಿಮೆಯಂ ಯಾರು ಕೇಳುವರೋ ಅವರು ಸಾಕ್ಷಾದ್ರುದ್ರಸ್ವರೂಪಿಗಳು ಅವರು ಆಯುರಾರೋಗ್ಯ ಪುತ್ರಪೌತ್ರಾದಿಗಳಂ ಪಡೆದು ಅಂತ್ಯದಲ್ಲಿ ಶಿವಸಾಯುಜ್ಯವನ್ನೈದುವರೆಂದು ಸೂತಂ ಶೌನಕಾದಿ ಮುನಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ,

ಗದ್ಯ॥ ಇಂತು ಕರ್ಣಾಟಕ ಭಾಷಾವಿರಚಿತಮಾದ ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನಭೂತ ಶ್ರೀಮನ್ಮಹೀಶೂರ ಮಹಾ ಸಂಸ್ಥಾನಮಧ್ಯ ದೇದೀಪ್ಯಮಾನಾ ವಿಕಲಕಲಾನಿಧಿ ಕುಲಕ್ರಮಾಗತರಾಜಕ್ಷಿತಿಪಾಲ ಪ್ರಮುಖ ನಿಖಿಲ ನಿಜ ರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾ ಪ್ರತಿಮ ನರಪತಿ ಬಿರುದೆಂತೆಂಬರ ಗಂಡ, ಲೋಕೈಕವೀರ ಯದುಕುಲಪಯಃಪಾರಾವಾರ ಕಲಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ಶ್ರೀಚಾಮರಾಜ ಮಹೀಪಾಲ ಧರ್ಮಪತ್ನಿ ಕೆಂಪನಂಜಮಾಂಬಾಗರ್ಭಸುಧಾಂ

ಬುಧಿ ರಾಕಾಸುಧಾಕರಾಯಮಾನ ಶ್ರೀಚಾಮುಂಡಿಕಾಂಬಾ ವರಪ್ರಸಾದೋದ್ಭವರಾದ ಆತ್ರೇಯಸಗೋತ್ರ ಆಶ್ವಲಾಯನ ಸೂತ್ರ ಋಕ್ಶಾಖಾನುವರ್ತಿಗಳಾದ ಶ್ರೀಮನ್ ಮಹೀಶೂರ ಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ರಚಿಸಿದ “ಶ್ರೀ ಕೃಷ್ಣರಾಜವಾಣೀವಿಲಾಸವೆಂಬ” ಸ್ಕಾಂದ ಪುರಾಣದ ಶಂಕರಸಂಹಿತೆಯ ಶಿವರಹಸ್ಯಖಂಡದೊಳು, ಉಪದೇಶ ಕಾಂಡದಲ್ಲಿ ಹತ್ತೊಂಬತ್ತನೆಯ ಅಧ್ಯಾಯವು ಸಂಪೂರ್ಣವಾದುದು.

ಇಪ್ಪತ್ತನೆಯ ಅಧ್ಯಾಯವು.

ಪರಶಿವನಾಮಸ್ಮರಣ ಮಹಿಮಾವರ್ಣನಂ.

ಎಲೈ ಋಷಿಗಳಿರಾ! ಭಸ್ಮರುದ್ರಾಕ್ಷದ ಮಹಿಮೆಯಂ ಪೇಳಿದೆನು. ಹಾಗೆಯೆ ಶಿವನಾಮದ ಮಹಿಮೆಯಂ ಪೇಳುತಿದೇನೆ ಸಾವಧಾನದಿಂ ಕೇಳುವವರಾಗಿ. ಉಮಾಪತಿಯಾದ ಸದಾಶಿವಂಗೆ ಶಿವ, ಶಂಭು, ಶಂಕರ, ಚಂದ್ರಶೇಖರ, ಮೃತ್ಯುಂಜಯ, ವಿರೂಪಾಕ್ಷ, ನೀಲಕಂಠ, ಮಹೇಶ್ವರ, ಭವ, ಭರ್ಗ, ಮಹಾದೇವ, ರುದ್ರ, ಹರ, ಉಮಾಪತಿ ಮುಂತಾದ ದಿವ್ಯ ನಾಮಂಗಳುಂಟು. ಅವುಗಳೊಳು ಆವ ಪುರುಷನು ಒಂದು ನಾಮವನ್ನಾಗಲಿ ಅನೇಕ ನಾಮಗಳನ್ನಾಗಲೀ ಜಪಿಸುತಿರ್ದಾನೊ ಆತನೇ ಧನ್ಯನು, ಆತನೇ ಪುಣ್ಯಾತ್ಮನು, ಆತನೆ ಶಿವನು ಆತನೇ ಸಮಸ್ತ ದೇವತೆಗಳಿಂ ನಮಸ್ಕಾರಕ್ಕೆ ಯೋಗ್ಯನು. ಆತನು ಸಕಲ ಭೋಗಂಗಳಂ ಭುಂಜಿಸೆ ಕೈಲಾಸಪರ್ವತಕ್ಕೆ ಪೋಗಿ ಅಲ್ಲಿ ಅನೇಕ ಕಾಲವಿರ್ದು ಪರವಾಗಿರ್ದ ಬ್ರಹ್ಮಸಾಯುಜ್ಯವನ್ನೈದುವನು. ಆವ ಮನುಜನು ಪಂಚಮಹಾಪಾತಕನಾಶಕವಾದ ಪರಕ್ಕೆ ವಾಚಕವಾದ ಪಂಚಾಕ್ಷರ ಮಹಾ ಮಂತ್ರವು ಗುರುವಿನಿಂದುಪದೇಶಿಸಿಕೊಂಡು ಪ್ರತಿ ದಿನದಲ್ಲಿಯೂ ಜಪಿಸುತಿರ್ದಾನೋ ಆತನು ಧನ್ಯನು. ಲೋಕಪಾವನನು, ಆತಂಗೆ ಲೇಶಮಾತ್ರವೂ ಪಾಪಂಗಳಿಲ್ಲ. ಆತಂಗೆ ಪರಬ್ರಹ್ಮನೊಡನೆ ಭೇದವಿಲ್ಲ. ಈ ವಿಷಯದಲ್ಲಿ ಒಂದು ಇತಿಹಾಸ ಉಂಟು. ಅದಂ ಪೇಳುತಿದೇನೆ ಕೇಳಿ. ಎಂದರೆ, ಕಾಶೀಪಟ್ಟಣಕ್ಕಧಿಪತಿಯಾದ ವಜ್ರಬಾಹುವೆಂಬ ರಾಯನಿದ್ದನು. ಆತಂಗೆ ಒಬ್ಬ ಕನ್ನಿಕೆಯುಂಟು. ಆಕೆಯು ಕಲೆಗಳಲ್ಲಿ ಪ್ರೌಢೆಯಾದಕಾರಣ ಆಕೆಗೆ ಕಲಾವತಿಯೆಂಬ ಪೆಸರುಂಟಾಯಿತು. ಆಕೆಯು ಯಾವಾಗಲೂ ಪಂಚಾಕ್ಷರೀ ಜಪಪರೆಯಾಗಿರ್ಪಳು. ವಜ್ರಬಾಹುವೆಂಬ ರಾಯನು ಪುಣ್ಯವತಿಯಾದ ತನ್ನ ಕನ್ನಿಕೆಯಂ ಪಾಂಡ್ಯದೇಶದ ದಾಶರಥರಾಯಂಗಿತ್ತನು. ಆ ದಾಶರಥನು ಆಕೆಯಂ ವಿವಾಹವಂ ಮಾಡಿಕೊಂಡು

ತನ್ನ ದೇಶಕ್ಕೆ ಕರೆದುಕೊಂಡು ಪೋಗಿ ರಾತ್ರಿಯಲ್ಲಿ ತನ್ನ ಗೃಹದಲ್ಲಿ ಪಂಚಾಕ್ಷರಿ ಪರಿಯಾದ ಪರಮತತ್ವಸ್ವರೂಪವಂ ತಿಳಿದ ತನ್ನ ಸ್ತ್ರೀಯಂ ನೋಡಿ ಕಾಮ ಬಾಣದಿಂ ಪೀಡಿತನಾಗಿ ಆಲಿಂಗನವಂ ಮಾಡಬೇಕೆಂಬ ಲವಲವಿಕೆಯಿಂದಾ ಕೆಯಂ ನೋಡುತ ವಿನೋದ ವಾಕ್ಯಂಗಳನ್ನಾಡೆ ಕಲಾವತಿಯು ಆತನ ಇಂಗಿ ತವಂ ತಿಳಿದು ಎಲೆ ರಾಯನೆ! ಸಮಸ್ತ ಪಾಪವಂ ಕೆಡಿಸುವ ಪಂಚಾಕ್ಷರೀ ನಾಮವುಂಟು. ಆ ಮಂತ್ರದ ರಹಸ್ಯವು ನಿನಗೆ ಉಪದೇಶವಿಲ್ಲ. ಕೇವಲ ವಿಷಯಾಸಕ್ತನಾಗಿ ಮಧುಮಾಂಸಾದಿಗಳಂ ಭುಂಜಿಸುತ ನಿಷಿದ್ಧಕರ್ಮಗಳಂ ಬಿಡದೆ ಪರಸ್ತ್ರೀ ಸಂಭೋಗವಂ ಮಾಡುತ ಕೇವಲ ಭೋಗಿಯಾಗಿದ್ದೀ, ಅದು ಕಾರಣದಿಂ ನೀನು ನಿಸ್ಪೃಹೆಯಾದ ನನ್ನಂ ಮುಟ್ಟದಿರೆನಲು ರಾಯನಾಕೆಯ ವಾಕ್ಯವಂ ಕೇಳಿ ಮದನಪೀಡಿತನಾಗಿ ಎಲೈ ಪ್ರಿಯೆ! ನಿನ್ನಂ ಆಲಿಂಗನವಂ ಮಾಡದೆ ಹೋದರೆ ನನ್ನ ಪ್ರಾಣನಿಲ್ಲಲಾರದು. ಅದುಕಾರಣದಿಂ ಆಲಿಂಗನವ ನ್ನಿತ್ತು ಪ್ರಾಣಧಾರಣವಂ ಮಾಡಬೇಕೆಂದು ಪೇಳ್ದು ವಿಮುಖಿಯಾದ ಆಕೆಯಂ ಪಿಡಿದು ಬಲಾತ್ಕಾರದಿಂದಾಲಂಗಿಸಲು ಆಕೆಯ ಅಂಗಸ್ಪರ್ಶದಿಂದಗ್ನಿಯಂ ಮುಟ್ಟಿದಂತೆ ದಗ್ಧವಾಗಿ ಆಕೆಯಂ ಬಿಟ್ಟು ದೂರದಲ್ಲಿ ಹಾಹಾಕಾರದಿಂ ಪ್ರಲಾ ಪವಂ ಮಾಡಿ ದುಃಖಿತನಾಗಿ ತನ್ನ ಸ್ತ್ರೀಯನ್ನು ನೋಡಿ ಇದೇನೆಂದು ಕೇಳಲು ಆ ಕಲಾವತಿಯು ಆತನಂ ನೋಡಿ ಪಾಪನಾಶಕವಾದ ಪಂಚಾಕ್ಷರೀ ಜಪವು ನಿನ ಗಿಲ್ಲವು. ಸದ್ಗುರುವಿನಿಂ ಪಂಚಾಕ್ಷರೀಮಂತ್ರೋಪದೇಶವಂ ಪಡೆದು ನನ್ನ ಸಂಭೋಗವಂ ಮಾಡು. ಹಾಗಿಲ್ಲದಿರ್ದೊಡೆ ಪಂಚಾಕ್ಷರೀಪರಿಯಾದ ನನ್ನ ಅಂಗವಂ ಮುಟ್ಟಿದರೆ ನೀನು ದಹಿಸಿ ಪೋಗುವದರಲ್ಲಿ ಸಂಶಯವಿಲ್ಲವೆನಲು ರಾಯನದಂ ಕೇಳಿ ಮನದಿಂ ನಿಶ್ಚೈಸಿ ಪ್ರತಿ ದಿನದಲ್ಲಿಯೂ ಗಗನನೆಂಬ ಋಷಿಯ ಬಳಿಗೆ ಪೋಗಿ ಪಂಚಾಕ್ಷರೀ ಮಂತ್ರೋಪದೇಶವಂ ಪಡೆದನು. ಬಳಿಕ ದೀಪದಿಂ ದೀಪದಂತೆ ಪಂಚಾಕ್ಷರೀ ವಿದ್ಯೆಯು ಈತಂಗೆ ಉಪದೇಶವಾಗಲು ಆಗ ಮಹಾ ಪಾತಕ ಕೋಟಿಗಳು ಕಾಕರೂಪಿನಿಂ ಆ ರಾಯನಿಂ ಪೊರಮಟ್ಟು ಪೋದವು. ಶುದ್ಧದೇಹಿಯಾದ ಆ ದಾಶರಥಿಯು ಚಿತ್ತಶುದ್ಧಿಯನ್ನೈದಿ ಗುರು ವಿನ ಅನುಗ್ರಹದಿಂ ತನ್ನ ಗೃಹಕ್ಕೆ ಬಂದು ತನ್ನ ಸತಿಯೊಡನೆ ಕ್ರೀಡಿಸಿ ಅನೇಕ ಪುತ್ರರಂ ಪಡೆದು ಅಂತ್ಯದಲ್ಲಿ ತನ್ನ ಸತಿಯೊಡನೆ ಕೈಲಾಸಕ್ಕೆ ಪೋಗಿ ಅಲ್ಲಿ ಅನೇಕಕಾಲ ವಿದ್ದು ಬಳಿಕ ಮೋಕ್ಷವನ್ನೈದಿದನೆಂದು ಸೂತಂ ಶೌನಕಾದಿಗಳ್ಗೆ ಪೇಳಿದನೆಂಬಲ್ಲಿಗೆ, ಉಪದೇಕಾಂಡದೊಳು ಇಪ್ಪತ್ತನೆಯ ಅಧ್ಯಾಯವು ಸಂಪೂರ್ಣಮಾದುದು.

ಇಪ್ಪತ್ತೊಂದನೆಯ ಅಧ್ಯಾಯವು.

ಸುಬುದ್ಧ ಬ್ರಾಹ್ಮಣಕುಮಾರರ ಕಥೆ.

ಎಲೈ ಋಷಿಗಳಿರಾ! ಬಾಡಬದೇಶದಲ್ಲಿ ಮಾಲ್ಯವೆಂಬ ಪಟ್ಟಣವಿರುವುದು. ಆ ಪಟ್ಟಣದಲ್ಲಿ ಸುಬುದ್ಧನೆಂಬ ಬ್ರಾಹ್ಮಣನಿದ್ದನು. ಆತಂಗೆ ಧರ್ಮನೆಂಬ ಕುಮಾರನು ಪುಟ್ಟದನು. ಅದೇ ಪುರದಲ್ಲಿ ವಿಪುಲನೆಂಬ ಮತ್ತೊರ್ವ ವಿಪ್ರನಿದ್ದನು. ಆತಂಗೆ ಚಂದ್ರಸೇನ, ಮೃದುಚಂದ್ರರೆಂಬೀರ್ವರು ಕುಮಾರರು ಜನಿಸಿದರು. ಧರ್ಮನೂ ಚಂದ್ರಸೇನನೂ ಉಪನಯನಾನಂತರದಲ್ಲಿ ಬ್ರಹ್ಮಚರ್ಯವಂ ನಡಿಸುತ ವಿದ್ಯಾನಂದನನೆಂಬ ಯತೀಶ್ವರನ ಬಳಿಗೆ ಪೋಗಿ ಆತನ ವಾಕ್ಯಾನುಮತದಿಂ ಗುರುಶಿಶ್ರೂಷೆಯಂ ಮಾಡುತಿರ್ದರು. ಆ ಯತೀಶ್ವರನು ಅವರೀರ್ವರಂ ನೋಡಿ ಬ್ರಹ್ಮಚಾರಿಗಳಾದ ನೀವೀರ್ವರೂ ಯತ್ಯಾಶ್ರಮವಂ ಮಾಡಿಕ್ಕೊಳ್ಳಿರೆಂದು ಪೇಳಿದನು. ಅದಕ್ಕೆ ಅವರು ಆತನ ವಾಕ್ಯವಂ ಕೇಳಿ ತಮ್ಮ ಮಾತಾಪಿತೃಗಳ ಸಮೀಪಕ್ಕೆ ಪೋಗಿ ಈ ವೃತ್ತಾಂತವಂ ಪೇಳ್ದರು. ವಿಪುಲನು ತನ್ನ ಕುಮಾರನ ವಾಕ್ಯವಂ ಕೇಳಿ ಹಾಗೆಯೆ ಆಗಲೆಂದು ಅನುಮತಿಯಂ ಗೈಯ್ಯಲು ಚಂದ್ರಸೇನನು ಪಿತೃವಿನ ಆಜ್ಞೆಯಿಂ ಆ ಯತೀಶ್ವರನ ಬಳಿಗೆ ಪೋಗಿ ಆತಂಗೆ ನಮುಸ್ಕರಿಸಿ ಆ ಯತೀಶ್ವರನಿಂ ಯತ್ಯಾಶ್ರಮಕ್ಕೆ ತಕ್ಕಾಚಾರವಂ ಕೈಕೊಂಡು ಕಾಮಕ್ರೋಧಾದಿಗಳಂ ಬಿಟ್ಟು ಇಂದ್ರಿಯಂಗಳೆಂಬ ಅಶ್ವಂಗಳಂ ಸ್ವವಶಮಾಡಿಕ್ಕೊಂಡು ಕಂದಮೂಲ ಫಲಾಹಾರಿಯಾಗಿ ಮಹತ್ತಾದ ಅರಣ್ಯಕ್ಕೆ ಪೋಗಿ ಓರ್ವನಾಗಿರುತಿರ್ದನು. ಧರ್ಮನು ತನ್ನ ಪಿತೃಸಮೀಪವನ್ನೈದಿ ನಿಮ್ಮ ಅಪ್ಪಣೆಯಿಂ ವಿದ್ಯಾನಂದನನೆಂಬ ಯತೀಶ್ವರನಿಂ ಸನ್ಯಾಸಾಶ್ರಮವಂ ಪಡೆಯುವೆನೆನಲು ಸುಬುದ್ಧನದಂ ಕೇಳಿ ಎಲೈ ಪುತ್ರನೆ! ನನ್ನ ವಂಶಕ್ಕೆ ನೀನೋರ್ವನೆ ಪುತ್ರನು. ನಿನಗೆ ಸನ್ಯಾಸಾಶ್ರಮವು ಬೇಡವೆನಲು ಧರ್ಮನದಂ ಕೇಳಿ ಅತಿ ದುಃಖಿತನಾಗಿ ಚಿಂತಿಸುತ್ತಿರಲು ಆಗ ಭೃಗುಮುನೀಶ್ವರನು ಬಂದನು. ಸುಬುದ್ಧನು ಆತನಂ ಕಂಡು ನಮುಸ್ಕಾರವಂ ಮಾಡಿ, ಎಲೆ ಸ್ವಾಮಿಯೆ! ನನ್ನ ಕುಮಾರನು ಬ್ರಹ್ಮಚರ್ಯಾಶ್ರಮವಂ ಬಿಟ್ಟು ಗೃಹಸ್ಥಾಶ್ರಮವಂ ಕೈಕೊಳ್ಳದೆ ಸನ್ಯಾಸಿಯಾಗಿ ಪೋಗಬೇಕೆಂದು ಯತ್ನಿಸುತಿದಾನೆ. ನನ್ನ ವಂಶಕ್ಕೆ ಇವನೋರ್ವನೆ ಪುತ್ರನು ಮತ್ತಮಾವನೂ ಇಲ್ಲ. ಇವನಿಗೆ ತಕ್ಕ ಬುದ್ಧಿಯಂ ಪೇಳಿ ಗೃಹಸ್ಥಾಶ್ರಮದಲ್ಲಿಯೆ ನಿಲ್ಲಿಸಬೇಕೆನಲು ಭೃಗುವದಂ ಕೇಳಿ ಸಮೀಪದಲ್ಲಿರ್ಪ ಧರ್ಮನಂ ನೋಡಿ, ಎಲೈ ಧರ್ಮನೆ! ಗೃಹಸ್ಥಾಶ್ರಮವನ್ನೆ ಸ್ವೀಕರಿಸು. ಸಮಸ್ತ ಯತಿಗಳು ಆ ಗೃಹಸ್ಥನಿಂದಲೇ ಜೀವಿಸುವರು. ಕನಕಸಂಪನ್ನೆಯಾದ ಕನ್ನಿಕೆಯಂ ವಿವಾಹಮಾಡಿಕ್ಕೊಂಡಿರು. ಸಮಸ್ತ ಶ್ರೇಯಸ್ಸುಗಳನ್ನುಂಟು

ಮಾಡುವ ಪಿತೃವಿನ ವಾಕ್ಯವಂ ಮೀರಬಾರದೆನಲು ಆ ಧರ್ಮನದಂ ಕೇಳಿ, ಎಲೆ ಸ್ವಾಮಿಯೆ! ನನಿಗೆ ಸ್ನೇಹಿತನಾದ ಚಂದ್ರಸೇನನು ಸನ್ಯಾಸಾಶ್ರಮವನ್ನೈದಿ ಮಹಾ ಫಲವಂ ಪಡೆದನು.

ಆದುದರಿಂ ನನಿಗೂ ಸನ್ಯಾಸಾಶ್ರಮದಲ್ಲಿಯೇ ಪ್ರೀತಿಯಾಗಿದ್ದೀತೆನಲು ಭೃಗುವದಂ ಕೇಳಿ ಎಲೈ ಧರ್ಮನೆ! ಉತ್ತಮವಾದ ಗೃಹಸ್ಥಾಶ್ರಮದಲ್ಲಿಯೇ ಇರು. ಮತ್ತಂ ನೀನು ಪರವಾದ ಪಂಚಾಕ್ಷರಿಯಂ ಗುರುವಿನಿಂ ಪಡೆದು ನಿಯಮ ಯುಕ್ತನಾಗಿ ಪ್ರತಿ ದಿನದಲ್ಲಿಯೂ ಜಪಿಸು. ಸ್ವಧರ್ಮಪಾಲನೆಯಂ ಮಾಡಿದರೆ ಚಂದ್ರಸೇನನಿಗಿಂತಲೂ ಅಧಿಕ ಫಲ ಮಪ್ಪುದೆಂದು ಆತಂಗೆ ಶಿವ ಪಂಚಾಕ್ಷರಿಯಂ ಉಪದೇಶಿಸಿ ವರಕನ್ನಿಕೆಯಂ ವಿವಾಹವಂ ಮಾಡಿ ತನ್ನಾಶ್ರಮಕ್ಕೆ ಪೋದನು. ಆ ಧರ್ಮನು ಪಂಚಾಕ್ಷರೀ ಪರಾಯಣನಾಗಿ ಅನೇಕ ಪುತ್ರರಂ ಪಡೆದು ತನ್ನ ಗೃಹವನ್ನೈದಿ ಸುಖದಿಂದಿರುತಿರ್ದನು. ಬಳಿಕ ಚಂದ್ರಸೇನನು ಕೆಲವು ಕಾಲದ ಮೇಲೆ ಆ ಗ್ರಾಮಕ್ಕೆ ಬಂದು ಸ್ನೇಹಿತನಾದ ಧರ್ಮನಂ ಕಂಡು, ಎಲೆ ಧರ್ಮನೆ! ಸನ್ಯಾಸಾಶ್ರಮವು ಅತ್ಯಂತ ದುಃಖವಿರಹಿತವಾದದ್ದು. ಈ ಗೃಹಸ್ಥಾಶ್ರಮದಲ್ಲಿ ನೀನು ಯೇನು ಫಲವಂ ಸಂಪಾದಿಸಿದೆ? ಗೃಹಸ್ಥನಾದ ನಿನ್ನ ಜನ್ಮವು ನಷ್ಟವಾದುದು. ಸಮಸ್ತ ಬಂಧಕವಂ ಕೆಡಿಸುವ ಸನ್ಯಾಸಾಶ್ರಮಕ್ಕೆ ಸಮಾನ ಒಂದೂ ಇಲ್ಲ. ನಾನು ಸನ್ಯಾಸಾಶ್ರಮವಂ ಪಡೆದು ಶೋಕ ಸಮುದ್ರವಂ ದಾಂಟಿ, ಕೃತಕೃತ್ಯನಾದೆನು. ಅದುಕಾರಣದಿಂ ಈ ಆಶ್ರಮವು ಸರ್ವೋತ್ತಮವು, ನನ್ನ ತಪಸ್ಸಿಗೆ ಸಮಸ್ತ ದೇವತೆಗಳೂ ವಶ್ಯರು. ಇಂದ್ರಾದಿಗಳಂ ನಾನು ತಪೋಬಲದಿಂದ ಆಕರ್ಷಣವಂ ಮಾಡುತಿದೇನೆನಲು ಧರ್ಮನು ಆ ಯತೀಶ್ವರನ ವಾಕ್ಯವಂ ಕೇಳ್ದು, ಎಲೈ ಯತೀಶ್ವರನೆ, ಸತ್ಯವಾಗಿ ಪೇಳುತಿದೇನೆ ಕೇಳು. ಗೃಹಸ್ಥನಾದರೂ ನನಗೆ ಲೇಶಮಾತ್ರವೂ ದುಃಖವಿಲ್ಲ. ಇಂದ್ರಾದಿ ದೇವತೆಗಳು ನನಗೆ ವಶ್ಯರೆನಲು, ಆ ಯತೀಶ್ವರನದಂ ಕೇಳಿ, ಸ್ವರ್ಗಲೋಕವಾಸಿಯಾದ ಇಂದ್ರನಂ ಸ್ಮರಿಸಲು ಆಗ ಇಂದ್ರನು ಸಮಸ್ತ ದೇವತೆಗಳೊಡನೆ ಆ ಯತಿಯ ಬಳಿಗೆ ಬರಲು, ಚಂದ್ರಸೇನನು ಇಂದ್ರನಂ ಕಂಡು ಯೆದ್ದು ಶೀಘ್ರವಾಗಿ ನಮಸ್ಕಾರಮಂ ಮಾಡಿ ಆತನಂ ಪೂಜಿಸಿ, ಮರಳಿ ಸ್ವರ್ಗಲೋಕಕ್ಕೆ ಕಳುಹಲು, ಬಳಿಕ ಧರ್ಮನು ಪಂಚಾಕ್ಷರಿಯಂ ಜಪಿಸಿ ಇಂದ್ರನಂ ಸ್ಮರಿಸೆ, ಮೊದಲಿನ ಹಾಗೆ ಇಂದ್ರನು ಬಂದು ಧರ್ಮಂಗೆ ಪ್ರದಕ್ಷಿಣ ನಮಸ್ಕಾರವಂ ಮಾಡಿ, ಕುಶಲ ಪ್ರಶ್ನೆಯಂ ಕೇಳಿ ತನ್ನ ಸ್ಥಾನಕ್ಕೆ ಪೋದನು. ಆ ಯತಿಯದಂ ಕಂಡು ಆಶ್ಚರ್ಯಯುಕ್ತನಾಗಿ, ಎಲೈ ಧರ್ಮನೆ! ಸರ್ವಲೋಕ ಪಿತಾಮಹನಾದ ಚತುರ್ಮುಖನಂ ಕರಿಯೆನಲು, ಧರ್ಮನು ಹಾಗೆಯೇ ಆಗಲೆಂದು ಬ್ರಹ್ಮನಂ

ಸ್ಮರಿಸಲಾಗಿ ಆತನ ಸ್ಮರಣೆಯ ಮಾತ್ರದಿಂದಲೆ, ಬ್ರಹ್ಮನು ದ್ವಿಜೋತ್ತಮನಾದ ಧರ್ಮಂಗೆ ಪ್ರದಕ್ಷಿಣ ನಮಸ್ಕಾರವಂ ಮಾಡಿ ಶುಭವಚನವಂ ಪೇಳ್ದು ತನ್ನ ಸ್ಥಾನಕ್ಕೆ ಪೋದನು.

ಬಳಿಕ ಧರ್ಮನು ಯತೀಶ್ವರನಂ ನೋಡಿ ನೀನು ಬ್ರಹ್ಮನಂ ಕರೆಯೆನಲು, ಆಗ ಯತಿಯು ಹಾಗೆಯೆ ಆಗಲೆಂದು ಬ್ರಹ್ಮನಂ ಸ್ಮರಿಸಲಾಗಿ ಆತನು ಬಾರದೆ ಹೋದನು. ಆಗ ಸಮಸ್ತರು ಈತನನ್ನೇ ಶಿವನೆಂದು ಪೂಜಿಸಿದರು. ಬಳಿಕ ಯತೀಶ್ವರನು ಅತ್ಯಂತ ಭಯಯುಕ್ತನಾಗಿ ಆ ಧರ್ಮಂಗೆ ನಮಸ್ಕಾರವಂ ಮಾಡಿ ನಿನಗೀವಿದ್ಯೆಯು ಹೇಗೆ ಬಂದುದೆಂದು ಪ್ರಶ್ನೆಯಂ ಮಾಡಲಾಗಿ, ಆ ಧರ್ಮನಾ ವಾಕ್ಯಮಂ ಕೇಳಿ ಪಂಚಾಕ್ಷರೀ ಮಹಾಮಹಿಮೆಯಿಂದೀ ಶಕ್ತಿಯುಂಟಾದುದು. ಈ ಮಂತ್ರಕ್ಕೆ ಸಮಾನವಾದ ಮಂತ್ರವಿಲ್ಲ. ಈ ಪಂಚಾಕ್ಷರೀ ಮಂತ್ರದ ಮಹಿಮೆಯಂ ತ್ರಿಯಂಬಕನಿಂದಲ್ಲದೆ ಮತ್ತೋರ್ವನಿಂದ ತಿಳಿಯಲಶಕ್ಯಮೆಂದು ಪೇಳ್ದನು. ಬಳಿಕ ಚಂದ್ರಸೇನನೆಂಬ ಯತೀಶ್ವರನು ಆ ವಾಕ್ಯವಂ ಕೇಳಿ ಧರ್ಮನಿಂ ಪಂಚಾರೀಮಂತ್ರಮಂ ಉಪದೇಶವಂ ಮಾಡಿಕೊಂಡು ಅಹೋರಾತ್ರಿಯಲ್ಲಿಯು ಆ ಮಹಾಮಂತ್ರವಂ ಜಪಿಸಿ, ಧರ್ಮನೊಡನೆ ಭೂಮಿಯಲ್ಲಿ ಅನೇಕಕಾಲ ಜೀವನ್ಮುಕ್ತನಾಗಿರ್ದು, ಶಿವಲೋಕಕ್ಕೆ ಪೋಗಿ ಅಲ್ಲಿ ಅನೇಕ ಭೋಗಂಗಳಂ ಭುಂಜಿಸಿ, ಕೆಲವು ಕಾಲದ ಮೇಲೆ ಧರ್ಮನೊಡನೆ ಶಿವಸಾಯುಜ್ಯವನ್ನೈದಿದನೆಂದು ಸೂತಪೌರಾಣಿಕಂ ಶೌನಕಾದಿ ಮಹಾಮುನಿಗಳಿಗೆ ಪೇಳಿದ ನೆಂಬಿಲ್ಲಿಗೆ, ಉಪದೇಶಕಾಂಡದೊಳು ಇಪ್ಪತ್ತೊಂದನೆಯ ಅಧ್ಯಾಯವು ಸಂಪೂರ್ಣಂ.

ಇಪ್ಪತ್ತೆರಡನೆಯ ಅಧ್ಯಾಯವು.

ಪಂಚಾಕ್ಷರಿಯ ಮಂತ್ರಮಹಿಮೆಯಲ್ಲಿ ಮಾನದ ಸೂರ್ಯಶರ್ಮರ ವೃತ್ತಾಂತ.

ಎಲೈ ಋಷಿಗಳಿರಾ! ಮಂತ್ರರಾಜವಾದ ಶ್ರೀಮತ್ಪಂಚಾಕ್ಷರೀ ಮಂತ್ರದ ಮಹಿಮೆಯಲ್ಲಿ ಮತ್ತೊಂದು ಇತಿಹಾಸವಂ ಪೇಳುತಿದೇನೆ, ಸಾವಧಾನ ಮನದಿಂ ಕೇಳುವರಾಗಿ ಏನೆಂದರೆ, ಕೌಶಿಕವೆಂಬ ಮಹಾ ದೇಶದಲ್ಲಿ ಏಕವೆಂಬ ಪುರವಿರುವುದು. ಅಲ್ಲಿ ಸರ್ವ ವಂಚಕನಾದ ಮಾನದನೆಂಬ ದ್ವಿಜನಿರುತಿರ್ದನು. ಆ ವಿಪ್ರನು ಸೂರ್ಯಶರ್ಮನೆಂಬ ಬ್ರಾಹ್ಮಣನಂ ಕುರಿತು ದ್ವೇಷವಂ ಮಾಡಿ ಆತನಂ ಜಯಿಸಲಾಗದೆ ಬಹಿರ್ವಂಚನಾಮಾರ್ಗವಂ ಬಿಟ್ಟು ಆತಂಗೆ ನಮಸ್ಕಾರವಂ

ಮಾಡಿ ಮನದಲ್ಲಿ ಕಪಟಯುಕ್ತನಾಗಿ ಇಂದು ಮೊದಲ್ಗೊಂಡು ನಾನು ನಿನಗೆ ಶಿಷ್ಯನಾಗಿ ಶುಶ್ರೂಷೆಯಂ ಮಾಡಿಕೊಂಡಿರುತ್ತೇನೆ; ನೀನಂಗೀಕರಿಸೆನಲು, ಸೂರ್ಯ ಶರ್ಮನು ಆ ವಾಕ್ಯವಂ ಕೇಳಿ ಹಾಗೆ ಆಗಲೆಂದು ಪೇಳಿ ಆತನಲ್ಲಿ ವಿಶ್ವಾಸನಂ ಮಾಡಿದನು. ಬಳಿಕ ಪರಮ ವಂಚಕನಾದ ಮಾನದನೆಂಬ ಬ್ರಾಹ್ಮಣನು ರಂಧ್ರಾನ್ವೇಷಣವಂ ಮಾಡಿಕೊಂಡಿರ್ದು ಒಂದಾನೊಂದು ದಿವಸದಲ್ಲಿ ಆ ಸೂರ್ಯ ಶರ್ಮನೆಂಬ ದ್ವಿಜನಂ ಕರೆದು ರಾತ್ರಿಕಾಲದಲ್ಲಿ ನಾನು ಗೃಹದ ಪೊರವಳಯದಲ್ಲಿ ಸಾವಧಾನದಿಂದಿರುತಿರ್ಥೇನೆ. ನೀನು ಒಳಗಡೆಯಲ್ಲಿ ನಿದ್ರೆಯಂ ಬಿಟ್ಟು ಜಾಗರೂಕನಾಗಿರೆಂದು ಪೇಳಿ, ದೃಢವಾದ ಧನುವಂ ಆತಂಗೆ ಕೊಟ್ಟು, ಗೃಹದ ಪೊರವಳಯಕ್ಕೆ ಕರದುಕೊಂಡು ಪೋಗಿ ಹಾಹಾ!! ವ್ಯಾಘ್ರವು ಬಂದುದೆಂದು ಕಪಟದಿಂ ಗೋವಂ ತೋರಿಸಲಾಗಿ, ಸೂರ್ಯಶರ್ಮನದಂ ನೋಡಿ ಆತನ ವಾಕ್ಯದಿಂ ವ್ಯಾಘ್ರವೆಂದು ನಿಶ್ಚೈಸಿ, ನಿಶಿತವಾದ ಬಾಣವಂ ಪ್ರಯೋಗಿಸಿ ಆ ಗೋವಂ ಸಂಹರಿಸಿ ಅಲ್ಲಿರ್ದನು.

ಬಳಿಕಾ ಕಪಟಿಯು ಒಂದಾನೊಂದು ವ್ಯಾಜದಿಂ ಮನೆಯೊಳಕ್ಕೆ ಗಮಿಸಿ ಏಕಾಂತವಾಗಿ ಆ ಸೂರ್ಯಶರ್ಮನ ಸತಿಯಂ ನೋಡಿ, ಎಲೌ ದೇವಿಯೆ! ಮಹಾ ಚೋರನು ಬಂದಿರುವನು, ನೀನಿಲ್ಲಿರಬೇಡ, ನಿನ್ನ ಪುತ್ರನ ಮಂದಿರಕ್ಕೆ ತೆರಳಿ ಸುಖವಾಗಿರು. ಈಗ ನಿನ್ನ ಪುತ್ರನು ನಿನ್ನ ಶಯನಾಗಾರದಲ್ಲಿ ತನ್ನ ಸತಿಯೊಡನೆ ಸಾವಧಾನನಾಗಿರಲೆಂದು ಪೇಳ್ದು ಆಕೆಯನ್ನು ಅಲ್ಲಿಗೆ ಕಳುಹಿ, ಆತನ ಪುತ್ರನಂ ಕರೆದು ಎಲೈ ಬಾಲಕನೆ! ಆರು ಕರೆದರೂ ಮಾತನಾಡದೆ ಸತಿ ಸಮೇತನಾಗಿರೆಂದು ಪೇಳಿ ಮಾತೃವಿನ ಶಯನಗೃಹಕ್ಕೆ ಕಳುಹಿ, ಮರಳಿ ತಾನು ಸೂರ್ಯಶರ್ಮನ ಸಮೀಪಕ್ಕೆ ಬಂದು, ಎಲೈ ಗುರುವೆ! ನಿನ್ನ ಸ್ತ್ರೀಯೊಡನೆ ಒಬ್ಬಾನೊಬ್ಬ ಜಾರ ಪುರುಷನು ಬಂದು ಗೃಹದಲ್ಲಿ ಕ್ರೀಡಿಸುತಲಿರ್ಥಾನೆ, ನಾನು ಕಂಡು ಬಂದೆನು, ಆತಂಗೆ ತಕ್ಕ ಶಿಕ್ಷೆಯಂ ಮಾಡಿಸಬೇಕೆಂದು ನುಡಿದು ತಾನು ದೃಢವಾದ ಖಡ್ಗ ವಂ ತೆಗದುಕೊಂಡು ಆತನಂ ಕರದುಕೊಂಡು ಪೋದನು. ಆಗ ಸೂರ್ಯಶರ್ಮನು ಅತ್ಯಂತ ಕೋಪದಿಂದಾತನ ಖಡ್ಗವಂ ಹಸ್ತದಿಂ ಪಿಡಿದು ಗೃಹದ್ವಾರಕ್ಕೆ ಪೋಗಿ ತನ್ನ ಸ್ತ್ರೀಯಂ ಕರೆಯೆ, ಆತನ ಪುತ್ರನು ಸತಿಸಹ ಮೌನವಾಗಿರಲು, ಆ ಸೂರ್ಯ ಶರ್ಮನು ಗೃಹದ ಮೇಲ್ಗಡೆಯಲ್ಲಿ ಹೊದಿಕೆಯಂ ತೆಗದು ಗೃಹದೊಳಕ್ಕಿಳಿದು ಮೌನವಾಗಿರುವ ತನ್ನ ಪುತ್ರನಂ ಸೊಸೆಯುಂ ಜಾರರೆಂದು ಸಂಹಾರನಂ ಮಾಡಿ ಕಡು ಕೋಪದಿಂದಾ ಗೃಹದಿಂ ಪೊರಮಟ್ಟು, ಒಂದು ಬಳಿಯಲ್ಲಿರ್ದು, ಸೂರ್ಯೋದಯವಾದ ಬಳಿಕ ತನ್ನ ಮಂದಿರಕ್ಕೆ ಬಂದನು.

ಆಗ ಪುತ್ರನ ಗೃಹದಿಂ ಪೊರಮಟ್ಟು ಮನೆಗೆ ಬರುತಿರುವ ತನ್ನ ಸ್ತ್ರೀಯಂ

ಕಂಡು ವಿಚಾರಯುಕ್ತನಾಗಿ ತ್ವರಿತದಿಂ ತನ್ನ ಶಯನಾಗಾರಕ್ಕೆ ಪೋಗಿ ಖಡ್ಗದಿಂ ಮೃತರಾದ ಪುತ್ರನಂ ಸೊಸೆಯುಂ ಕಂಡು ಹಾಹಾ!! ಎಂದು ಕೂಗುತ್ತ ಭೂಮಿಯಲ್ಲಿ ಬಿದ್ದು ಹೊರಳಾಡಿ, ಅತ್ಯಂತ ರೋದನವಂ ಗೈದು ಮೆಲ್ಲನೆ ಧೈರ್ಯವಂ ತಂದುಕೊಂಡು ಗೃಹದಿಂ ಪೂರವಳಯಕ್ಕೆ ಬಂದು ಅಂಗಳದಲ್ಲಿ ಹತವಾದ ಗೋವಂ ನೋಡಿ ಬಹು ದುಃಖವಂ ಮಾಡಿ "ಓಂ ನಮಶ್ಶಿವಾಯ" ಎಂಬ ಪಂಚಾಕ್ಷರೀ ಜಪವಂ ಮಾಡುತಿದ್ದನು.

ಬಳಿಕ ಪರಮ ವಂಚಕನಾದ ಮಾನದನು ವೇಗದಿಂ ಬ್ರಾಹ್ಮಣರ ಸಮೀಪಕ್ಕೆ ಪೋಗಿ, ಎಲೈ ದ್ವಿಜರುಗಳಿರಾ! ಸೂರ್ಯಶರ್ಮನು ಪೂರ್ವ ದಿವಸದ ರಾತ್ರಿಯಲ್ಲಿ ಕೋಪದಿಂ ತನ್ನ ಪುತ್ರನಂ ಸೊಸೆಯುಂ ಒಂದು ಗೋವಂ ಸಂಹರಿಸಿದನದು ಕಾರಣದಿಂದಾತಂಗೆ ಬಹಿಷ್ಕಾರವನೆಸಗಿ ಆತನಂ ಗ್ರಾಮದಿಂ ಪೊರಮಡಿಸಬೇಕೆನಲು, ಆಗ ಗ್ರಾಮವಾಸಿಗಳಾದ ಬ್ರಾಹ್ಮಣರುಗಳು ಆ ಮಾನದನ ವಾಕ್ಯವಂ ಕೇಳಿ, ವೇಗದಿಂದಾತನ ಗೃಹಕ್ಕೆ ಬಂದು ಅವೆಲ್ಲವಂ ನೋಡಿ ಕೋಪಯುಕ್ತರಾಗಿ, ಎಲೈ ಸೂರ್ಯಶರ್ಮನೆ! ಏನು ಪಾಪವಮಾಡಿದೆ? ನೀನು ನಮ್ಮ ಗ್ರಾಮದಲ್ಲಿರಬೇಡ; ವನಕ್ಕೆ ಪೋಗು, ಅಲ್ಲದಿರ್ದೊಡೆ ಆಜ್ಞೆಯಂ ಮಾಡುತಿರ್ದ್ದೇವೆಂದು ನುಡಿದರು. ಅನಂತರದಲ್ಲಿ ಸೂರ್ಯಶರ್ಮನು ಆ ವಾಕ್ಯವಂ ಕೇಳಿ, ಎಲೈ ಬ್ರಾಹ್ಮಣರುಗಳಿರಾ! ಜ್ಞಾನದಿಂದೀ ಪಾಪ ಮಾಡಿದವನಲ್ಲ, ಅಜ್ಞಾನದಿಂದಲೇ ಮಾಡಿದೆನೆಂಬುದು ಸತ್ಯವು, ನಾನು ಪ್ರಾತಃಕಾಲದಲ್ಲೆದ್ದು ಮೃತರಾದವರಂ ನೋಡಿ ಪಂಚಾಕ್ಷರೀ ಮಂತ್ರವಂ ಜಪಿಸಿದೆನದುಕಾರಣ ನನಗೆ ಪಾಪವು ಲೇಶವಾದರೂ ಇಲ್ಲವೆನಲು, ಬ್ರಾಹ್ಮಣರು ಆ ವಾಕ್ಯವಂ ಕೇಳಿ, ಎಲೈ ಸೂರ್ಯಶರ್ಮನೆ! ನಿನಗೆ ಪಾಪವಿಲ್ಲದಿರ್ದೊಡೆ ನಿನ್ನಿಂದ ಕೊಡಲ್ಪಟ್ಟ ತೃಣವಂ ಧರ್ಮರೂಪವಾದ ಈ ಕಲ್ಲ ವೃಷಭೇಶ್ವರನು ಭಕ್ಷಿಸಲಿ, ಎಂದು ನಿರೂಪಿಸಿದರು. ಬಳಿಕ ಸೂರ್ಯಶರ್ಮನು ಆ ವಾಕ್ಯವಂ ಕೇಳಿ, ಎಲೈ ದ್ವಿಜರುಗಳಿರಾ! ಈ ವೃಷಭೇಶ್ವರನು ನಾನಿತ್ತ ತೃಣವಂ ಭಕ್ಷಿಸಿದೊಡೆನ್ನ ಪಾಪವೆಂದಿಗು ಶೋಷಣವಾಗದು, ತಾರಕೇಶ್ವರನ ಆಲಯದಲ್ಲಿರ್ಪ ಶಿಲಾರೂಪಂಗಳಾದ ವೃಷಭಂಗಳು ನಾನಿತ್ತ ತೃಣವಂ ಭಕ್ಷಿಸಿದೊಡೆ ಪಾಪ ಪರಿಹಾರವಾಗುವದೆಂದು ನುಡಿಯೆ, ಬ್ರಾಹ್ಮಣರು ಆ ವಾಕ್ಯವನಂಗೀಕರಿಸಿದರು.

ಅನಂತರದಲ್ಲಿ ಸೂರ್ಯಶರ್ಮನು ತನ್ನ ಪುತ್ರರಂ ಕಳುಹಿ ಅನೇಕ ತೃಣವಂ ತರಿಸಿ ತಾರಕೇಶ್ವರನ ಸನ್ನಿಧಿಯಲ್ಲಿರಿಸಿ ಶಿವಧ್ಯಾನ ಪರಾಯಣರಾಗಿ ಪಂಚಾಕ್ಷರೀಪರರಾದ, ನಿತ್ಯದಲ್ಲಿಯು ಪರತತ್ವದಲ್ಲಿ ಆಸಕ್ತಚಿತ್ತರಾಗಿ ಶಿಲಾರೂಪಂಗಳಾದ ಗೋಪುರಪ್ರಾಕಾರ ಚಿತ್ರಂಗಳಲ್ಲಿರ್ಪ ವೃಷಭಂಗಳೆಲ್ಲವು ಬಂದು ಅಜ್ಞಾನದಿಂ

ನಾನು ಮಾಡಿದ "ಬ್ರಹ್ಮಹತ್ಯಾ, ಸ್ತ್ರೀಹತ್ಯಾ, ಗೋಹತ್ಯಾ" ಎಂಬೀ ಮೂರು ಕರ್ಮಗಳಿಂ ಪುಟ್ಟಿದ ಪಾಪವು ಪಂಚಾಕ್ಷರೀ ಮಹಾ ಮಂತ್ರ ಜಪದಿಂ ನನಗಿಲ್ಲದಿರ್ದೊಡೆ ನಾನಿತ್ತ ತೃಣವಂ ಭಕ್ಷಿಸಲೆಂದು ಪೇಳ್ದು ಶಿವಪಂಚಾಕ್ಷರೀ ಮಂತ್ರವಂ ಜಪಿಸುತ್ತಿರೆ, ಆಗ ಅಲ್ಲಲ್ಲಿರ್ಪ ಕೃತ್ರಿಮ ವೃಷಭಂಗಳೆಲ್ಲವು ಆ ಬ್ರಾಹ್ಮಣನಿಂದ ಕೊಡಲ್ಪಟ್ಟ ತೃಣಂಗಳಂ ಭಕ್ಷಿಸಿ ಗೋಮಯವನ್ನಿಟ್ಟು, ಘರ್ಜಿಸಿ, ಆತಂಗೆ ಪ್ರದಕ್ಷಿಣವಂ ಮಾಡಿ ತಮ್ಮ ತಮ್ಮ ಸ್ಥಾನಂಗಳಿಗೆ ಪೋದವು. ಬಳಿಕ ಸರ್ವ ಬ್ರಾಹ್ಮಣರು ಅವೆಲ್ಲವಂ ನೋಡಿ ಭಯಪಟ್ಟು, ಮಹಾತ್ಮನಾದ ಬ್ರಾಹ್ಮಣೋತ್ತಮನಾದ ಎಲೈ ಸೂರ್ಯಶರ್ಮನೆ! ನಿನ್ನ ಮಹಿಮೆಯನಾರು ತಿಳಿಯಲು ಸಮರ್ಥರು? ನಮ್ಮಲ್ಲಿ ಕೋಪವಂಗೈಯ್ಯದೆ ಕ್ಷಮಿಸೆಂದು ಯೆಲ್ಲರು ಅಂಜಲಿ ಬದ್ಧರಾಗಿ ನಿಂತಿರ್ದರು.

ಆ ಸಮಯದಲ್ಲಿ ಆತನ ಸತಿಯು ತನ್ನ ಪತಿಯಾದ ಸೂರ್ಯಶರ್ಮನಂ ನೋಡಿ, ಎಲೈ ಸ್ವಾಮಿಯೆ! ಪಂಚಾಕ್ಷರೀ ಜಪದಿಂ ಶಿಲಾರೂಪಂಗಳಾದ ವೃಷಭಂಗಳು ನೀನಿತ್ತ ತೃಣವಂ ಹೇಗೆ ಭಕ್ಷಿಸಿದವೋ ಹಾಗೆಯೆ ಅಜ್ಞಾನದಿಂ ಹತರಾದ ಪುತ್ರನು ಸೊಸೆಯು ಗೋವು ಸಹಾ ಸಪ್ರಾಣಂಗಳಾಗೇಳಬೇಕೆನಲು, ಆ ಬ್ರಾಹ್ಮಣರುಗಳು ಹಾಹಾ! ಇದು ಸರಿ. ಈಕೆಯ ಬಯಕೆಯು ಸರ್ವೋತ್ತಮವಾದದ್ದೆಂದು ಭಾವಿಸಿ, ಎಲೈ ಬ್ರಾಹ್ಮಣೋತ್ತಮನೆ! ಇವರಿಗೆ ಪ್ರಾಣವನ್ನಿತ್ತು ಯೆಬ್ಬಿಸಬೇಕು. ನಿನಗೆಷ್ಟುಮಾತ್ರವು ಅತಿಶಯವಲ್ಲ. ಶೀಘ್ರವಾಗಿ ಯೇಳಿಸಬೇಕೆಂದು ನಿರೂಪಿಸಿದರು. ಆಗ ಸೂರ್ಯಶರ್ಮನು ಪಂಚಾಕ್ಷರೀ ಮಂತ್ರವು ಪಂಚಮಹಾ ಪಾತಕನಾಶಕವು. ಆ ಮಂತ್ರವಂ ಜಪಿಸುವರ್ಗೆ ಪುನರ್ಜನ್ಮವಿಲ್ಲವು. ಯೆಂಬದು ನಿಶ್ಚಯಮಾದೊಡೆ ಮೃತರಾದ ಈ ಮುವ್ವರು ಶೀಘ್ರವಾಗೇಳಲೆಂದು ಪೇಳ್ದು ಅಂಜಲಿ ಬಂಧವಂ ಮಾಡಿ ಶ್ರೀಮತ್ಪಂಚಾಕ್ಷರೀ ಮಂತ್ರವಂ ಜಪಿಸಿದನು ಸೊಸೆಯು ಗೋವು ಸಹ ಯೇಳಲು ಬ್ರಾಹ್ಮಣರು ಆ ಅದ್ಭುತವಂ ನೋಡಿ ಆ ಸೂರ್ಯಶರ್ಮನಂ ಸಾಕ್ಷಾಚ್ಛಿವನೆಂದು ತಿಳಿದು ಆತನ ಅಪ್ಪಣೆಯಂ ಕೈಕೊಂಡು ತಮ್ಮ ತಮ್ಮ ಗೃಹಂಗಳಿಗೆ ಪೋದರು.

ಅನಂತರದಲ್ಲಿ ಸೂರ್ಯಶರ್ಮನು ಮರಳಿಯು ಪಂಚಾಕ್ಷರೀಮಂತ್ರವಂ ಜಪಿಸಿ ಅನೇಕ ಭೋಗಂಗಳಂ ಭುಂಜಿಸಿ ಅಂತ್ಯದಲ್ಲಿ ಪುತ್ರಮಿತ್ರ ಬಾಂಧವರೊಡನೆ ದೇವರ್ಷಿಗಳ ಸಮೂಹಂಗಳ್ವೆರಸಿ ಮಹಾ ವಿಮಾನವನ್ನೇರಿ ದೇವದುಂದುಭಿಗಳಿಂದಲುಂ ಪುಷ್ಪವೃಷ್ಟಿಗಳಿಂದಲುಂ ಯುಕ್ತನಾಗಿ ಶಿವಲೋಕಕ್ಕೆ ಪೋಗಿ, ಅಲ್ಲಿ ರುದ್ರಗಣಂಗಳೊಡನೆ ಚಿರಕಾಲವಿರ್ದು, ಬ್ರಹ್ಮಸ್ವರೂಪನಾದ ಶಿವಸಾಯುಜ್ಯವಂ ಪಡೆದನು. ಈತಂಗೆ ವಿರೋಧಿಯಾದ ಮಾನದನೆಂಬ ವಂಚ

ಕನು ಭೀತಿಯಿಂದಾದೇಶವಂ ಬಿಟ್ಟು ದೇಶಾಂತರವನ್ನೈದಿ ಅಂತಸ್ತಾಪಯುಕ್ತ ನಾಗಿ ಅನ್ನವಿಲ್ಲದೆ ಶಕ್ತಿರಹಿತನಾಗಿ ಶರೀರದಲ್ಲಿ ಕ್ರಿಮಿಗಳುಳ್ಳವನಾಗಿ ವ್ಯಾಧಿಯಿಂ ಹತನಾಗಿ ನರಕದಲ್ಲಿ ಬಿದ್ದು ಈಗಲು ಬಾಧೆ ಪಡುತಲಿದಾನೆ. ಅದುಕಾರಣದಿಂ ಪಂಚಾಕ್ಷರೀ ಮಂತ್ರ ಜಪ ಪರಾಯಣರಂ ಕುರಿತು ಆರು ದ್ವೇಷವಂ ಮಾಡುತ ಲಿರುವರೋ ಅವರುಗಳು ಮಹಾ ಪಾತಕಯುಕ್ತರಾಗಿ ನರಕವನ್ನೈದುವರು. ಮತ್ತಂ ಪಂಚಾಕ್ಷರೀ ಮಂತ್ರಪರಾಯಣರ್ಗೆ ಆರು ಹಿತವಂ ಮಾಡುವರೋ ಅವರು ಪುಣ್ಯವಂತರಾಗಿ ಅತ್ಯಂತ ಪ್ರೀತಿಯಿಂ ಶಿವಲೋಕವನ್ನೈದುವರು. ಇದು ಸತ್ಯವು ಈ ವಿಷಯದಲ್ಲಿ ಎಷ್ಟುದಾತ್ರವು ಸಂಶಯವಿಲ್ಲವು. ಅದುಕಾರ ಣದಿಂ ಪಂಚಮಹಾಪಾತಕನಾಶಕವಾದ ಪಂಚಾಕ್ಷರೀ ಜಪವು ನಿತ್ಯದಲ್ಲಿಯು ಸರ್ವಥಾ ಸರ್ವಥಾ ಸರ್ವರಿಂದಲು ಜಪಿಸತಕ್ಕದೆಂದು ಸೂತಂ ಶೌನಕಾದಿ ಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ಉಪದೇಶಕಾಂಡದೊಳು ಇಪ್ಪ ತ್ತೆರಡನೆಯ ಅಧ್ಯಾಯವು ಸಂಪೂರ್ಣಮಾದುದು.

ಇಪ್ಪತ್ಮೂರನೆಯ ಅಧ್ಯಾಯವು.

ಪರಶಿವನಾಮಕೀರ್ತನ ಮಹಿಮೆಯ ಕಥೋಪಕಥನಂ.

ಎಲೈ ಮುನಿಗಳಿರಾ! ಆರು ಕೆಲಂಬರು ಶಿವನಾಮಂಗಳಂ ಪವಿತ್ರಂಗ ಳೆಂದು ತಿಳಿದು ಕೀರ್ತನವಂ ಮಾಡುತ್ತಿರುವರೋ, ಅವರುಗಳು ಉತ್ತಮವಾದ ಶಿವಸಾಯುಜ್ಯವನ್ನೈದುವರೆಂಬದೇನಾಶ್ಚರ್ಯವು? ಬಹುಜನರು ಶಿವನಾಮೋ ಚ್ಚಾರಣೆಯಂ ಮಾಡಿ ಶಿವಲೋಕವನ್ನೈದಿದರು. ಅವರೊಳಗೆ ಕೆಲಂಬರಂ ಪೇಳುತ್ತಿದೇನೆ ಕೇಳಿ. ಗೌತಮವೆಂಬ ದೇಶದಲ್ಲಿ ಕಂತುಕವೆಂಬ ಪುರವಿರ್ಪುದು. ಅಲ್ಲಿ ಪಾಪವರ್ಜಿತನಾದ ವ್ಯಾಳನೆಂಬ ಬ್ರಾಹ್ಮಣನಿರ್ಪನು. ಆತಂಗೆ ವೀರ್ಯ ವಂತನೆಂಬ ಕುಮಾರನುಂಟಾದನು. ಅವನು ಪಾಪಕರ್ಮತತ್ಪರನಾಗಿ ಮದ್ಯ ಪಾಯಿಯಾಗಿ ಮಹಾ ಪಾಪಿಯಾಗಿ ಮಾಂಸಭಕ್ಷಕನಾಗಿ ದ್ರವ್ಯಲೋಭದಿಂ ಮದ್ಯಮಾಂಸವಿಕ್ರಯವಂ ಮಾಡಿಕೊಂಡು ಬ್ರಾಹ್ಮಣಾಚಾರವಂ ಬಿಟ್ಟು ನಿಷಿದ್ಧಾಚಾರವಂ ಕೈಕೊಂಡು ದುರಾತ್ಮನಾಗಿ ಅನೇಕಕಾಲ ವಿರ್ದನು. ಆ ವೀರ್ಯ ವಂತನೆಂಬವನಿಗೆ ಅಂತ್ಯಕಾಲವು ಪೊದಗಿದಾಗ ಆತನ ಪುತ್ರರು ಬಂದು, ಎಲೈ ತಂದೆಯೆ! ತಮಗೆ ಸಾಲವ ಕೊಡುವಂಥಾವರಾರು? ಎಂದು ಕೇಳಲಾಗಿ, ಆ ದುರಾತ್ಮನು ಪುತ್ರರ ವಾಕ್ಯವಂ ಕೇಳಿ ತಾನು ಸಂಪಾದಿಸಿದ ದ್ರವ್ಯ ಋಣ ಮುಂತಾದವಂ ಪೇಳ್ದು, ಬಳಿಕ ಓರ್ವ ಚಂಡಾಲಂಗೆ ಬಂದು ಶಿವಮದ್ಯಮಂ

ಕೊಟ್ಟಿದ್ದೇನೆಂದು ಪೇಳುತ್ತ ಪ್ರಾಣವಂ ಬಿಟ್ಟನು. (ಒಂದು ಶಿವನುದ್ಯವೆಂದೊಡೆ ಒಂದು ಕೊಳಗ ಮದ್ಯವೆಂದರ್ಥವು) ಆ ಸಮಯದಲ್ಲಿ ಯಮದೂತರು ಆತನಂ ಕೊಂಡುಪೋಗಲು ಬರೆ, ತತ್ಕ್ಷಣದಲ್ಲಿಯೆ ಶಿವಗಣಂಗಳು ಬಂದು ತಮ್ಮ ಆಯುಧಂಗಳಿಂದ ಆ ಯಮದೂತರಂ ಕೊಂದೋಡಿಸಲಾಗಿ ಅವರುಗಳು ಕಾಲನ ಸಮೀಪಕ್ಕೆ ಪೋಗಿ ಮೊರೆಯಿಟ್ಟರು. ಆಗ ಕಾಲನು ಮಹಾ ಕೋಪದಿಂ ಶಿವಗಣಂಗಳ ಸಮೀಪಕ್ಕೆ ಬರೆ, ಆ ಶಿವಕಿಂಕರರಾದ ಗಣಂಗಳು ಭಯಂಕರವಾದ ಆ ಕಾಲನಂ ಕಂಡು ತಮ್ಮ ಆಯುಧಂಗಳಿಂದಾತನ ಸೇನೆಯಂ ಕಡಿದೋಡಿಸಿ, ಯಮನ ಪ್ರಧಾನಪುರುಷನೆಂಬ ಕಾಲನೆಂದು ತಿಳಿದು ಆತನಂ ಪಾಶದಿಂ ಕಟ್ಟಿ ಕೈಲಾಸದ ಒಂದು ಗುಹೆಯೊಳಕ್ಕೆ ಕೊಂಡುಪೋಗಲ್ಲಿರಿಸಿ ಆತನ ಬಳಿಯಲ್ಲಿ ಓರ್ವಗಣಾಧೀಶ್ವರನಂ ಕಾವಲಿರಿಸಿ, ವೀರ್ಯವಂತನಂ ದೇವದೇವನಾದ ಶಂಭುವಿನ ಮುಂದೆ ನಿಲ್ಲಿಸಿ ತಮ್ಮ ಸ್ಥಾನಂಗಳಿಗೆ ಪೋದರು. ಆ ವೀರ್ಯವಂತನು ಮಹಾ ದೇವನ ಸೇವೆಯಂ ಮಾಡಿ ಪಾರ್ಶ್ವಪದವಂ ಪಡೆದನು.

ಬಳಿಕ ಯಮನು ದೂತಮುಖದಿಂ ಕಾಲನ ವೃತ್ತಾಂತವಂ ಕೇಳಿ ಮೇರು ಶಿಖರದಲ್ಲಿರ್ಪ ಅಚೋವತಿಯೆಂಬ ಪುರದಲ್ಲಿರುವ ಮಹಾ ದೇವನ ಸೇವೆಯಂ ಮಾಡಿ ತನ್ನ ಪುರಕ್ಕೆ ಬಂದು ಅತ್ಯಂತ ದುಃಖಿತನಾಗಿ, ವೇಗದಿಂ ಕೈಲಾಸಪರ್ವತಕ್ಕೆ ಬಂದು ನಂದಿಕೇಶ್ವರಂಗೆ ಬಿನ್ನಪಂಗೈಯ್ಯೆ ಆ ನಂದೀಶ್ವರನು ಎಲೆ ಯಮನೆ! ವೀರ್ಯವಂತನೆಂಬ ಬ್ರಾಹ್ಮಣನು ಅಂತ್ಯಕಾಲದಲ್ಲಿ ಶಿವನಾಮೋಚ್ಚಾರಣೆಯಂ ಮಾಡಿ ಶಿವಸಾಯುಜ್ಯವನ್ನೈದಿದನು. ಆರು ಜ್ಞಾನದಿಂದಲಾಗಲಿ ಅಜ್ಞಾನದಿಂದಲಾಗಲಿ ಪಾಪಹರವಾದ ಶಿವನಾಮವನ್ನು ಉಚ್ಚರಿಸುವರೋ ಅವರುಗಳಿಗೆ ನೀನು ಅಧಿಕಾರಿಯಲ್ಲವೆಂದು ಪರಮೇಶ್ವರಾಜ್ಞೆಯಿರುವದು. ಶಿವನಾಮದ ಮಹಿಮೆಯಂ ನೀನು ಅನುಭವಿಸಿಯೆ ಇದ್ದೀ ನೋಡಿಕೋ ಯೆನಲು ಯಮನು ಆ ವಾಕ್ಯವಂ ಕೇಳಿ ಎಲೈ ಸ್ವಾಮಿಯೆ! ನಾನಿರಲಿಲ್ಲ. ಸ್ವಾಮಿಯ ದರ್ಶನಕ್ಕೆ ಪೋಗಿರ್ದೆನು. ಕಾಲನು ನೂತನಾಧಿಕಾರಿಯಾದ ಕಾರಣ ಶಿವನಾಮೋಚ್ಚಾರಣೆಯ ಮಹಿಮೆಯಂ ತಿಳಿಯದೆ ಈ ರೀತಿ ಮಾಡಿದನು. ಆತನಂ ರಕ್ಷಿಸಬೇಕೆಂದು ಪರಿಪರಿ ಪ್ರಾರ್ಥಿಸಲಾಗಿ, ನಂದಿಕೇಶ್ವರನಾವಾಕ್ಯವಂ ಕೇಳಿ, ಎಲೆ ಯಮನೆ! ಮಹಾ ಕಾಳನ ಸಮೀಪಕ್ಕೆ ಪೋಗಿ ನಮಸ್ಕಾರವಂ ಮಾಡಿ ನಾನು ಪೇಳಿದ ವಾಕ್ಯವಂ ಪೇಳ್ದು ಕಾಲನಂ ಬಿಡಿಸಿಕೊಂಡು ಪೋಗೆಂದನು. ಬಳಿಕ ಯಮನು ವೇಗದಿಂದೆದ್ದು ಗಣಾಧಿಪತಿಯಾದ ಮಹಾ ಕಾಲನ ಸಮೀಪಕ್ಕೆ ಪೋಗಿ ಸಾಷ್ಟಾಂಗಪ್ರಣಾಮವನ್ನೆಸಗಿ, ಕಾಲನಂ ಬಿಡಿಸಲು ನಂದಿಕೇಶ್ವರನ ವಾಕ್ಯವಂ ಬಿನ್ನಪಂಗೈದನು. ಆಗ ಕಾಳನು ಮಹಾ ಕೋಪವುಳ್ಳವ

ನಾಗಿ, ಎಲೋ ಯಮನೆ! ಪೂರ್ವವೃತ್ತಾಂತವಂ ಮರೆತೆಯೊ? ಎನಲು ಯಮನು ಆ ವಾಕ್ಯವಂ ಕೇಳಿ ಸ್ವಾಮಿನ್! ನಾನು ಪೂರ್ವವೃತ್ತಾಂತವನ್ನು ಮರೆಯಲಿಲ್ಲ. ಈಗಲು ಅದನ್ನು ಸ್ಮರಿಸುತ್ತಲೆ ಇದೇನೆಂದು ಪೇಳಿದ ನೆಂಬ

ದಾಗಿ ಸೂತ ಪೌರಾಣಿಕಂ ಶೌನಕಾದಿ ಮಹಾ ಮುನಿಗಳಿಗೆ ನಿರೂಪಿಸಿದ
ನೆಂಬಲ್ಲಿಗೆ ಉಪದೇಶಕಾಂಡದೊಳು ಇಪ್ಪತ್ತೊಮ್ಮರನೆಯ
ಅಧ್ಯಾಯವು ಸಂಪೂರ್ಣಮಾದುದು.

ಇಪ್ಪತ್ನಾಲ್ಕನೆಯ ಅಧ್ಯಾಯವು.

ಶಿವನಾಮಸ್ಮರಣ ಮಹಿಮಾಪರಂಪರೆಯಲ್ಲಿ ಕೌಶಿಕನ ಕಥೆ.

ಈ ಪ್ರಕಾರವಾಗಿ ಸೂತನಿಂ ನಿರೂಪಿಸಲ್ಪಟ್ಟ ವಾಕ್ಯವಂ ಕೇಳಿ ಶೌನಕಾದಿ ಮುನಿಗಳು ಸೂತನಂ ಕುರಿತು, ಎಲೈ ಸೂತನೆ! ಯಮನು ಮಹಾಕಾಳನಿಂ ಕೇಳಲ್ಪಟ್ಟವನಾಗಿ ಪೂರ್ವವೃತ್ತಾಂತವಂ ಮರೆಯಲಿಲ್ಲವೆಂದು ಪೇಳ್ದ ಮಾತೇ ನೆನಲು ಸೂತನಿಂತೆಂದನು. ಎಲೈ ಋಷಿಗಳಿರಾ! ಸೌರಾಷ್ಟ್ರದೇಶದಲ್ಲಿ ಅತ್ಯಂತ ಧನಿಕನಾದ ಶ್ರೀಪ್ರದನೆಂಬ ದ್ವಿಜನಿಹನು. ಆತಂಗೆ ಕೌಶಿಕನೆಂಬ ಓರ್ವ ಕುಮಾರನುಂಟಾದನು. ಅತನು ಚೋರನು ದುಷ್ಟಮನಸ್ಕನಾಗಿ ನಿತ್ಯವು ಮಧುಮಾಂಸ ಭಕ್ಷಕನಾಗಿ ತನಗೆ ಸಮಾನರಾದ ಶೂದ್ರರೊಡನೆ ಸ್ನಾನವಂ ಮಾಡಿ, ಮತ್ತೊರ್ವ ಪಾಪಿಯಿಂದ ಚಂಡಾಲೋಚಿತವಾದ ಮಾಂಸವಂ ಭಕ್ಷಿಸಿ, ಒಂದಾನೊಂದು ಸಮಯದಲ್ಲಿ ಚಂಡಾಲ ಸ್ತ್ರೀಯೊಡನೆ ಸಂಗವನೆಸಗಿ, ಆಕೆಯೊಡನೆ ಪೋಗಬೇಕೆಂದು ಯತ್ನಿಸಲಾಗಿ, ಆಕೆಯ ಪುರುಷನಾದ ಚಂಡಾಲನು ಅವರೀರ್ವರಂ ಕಂಡು ಪಾಶದಿಂ ಬಿಗಿದು ಕಟ್ಟಿ ತಾಡನವಂ ಮಾಡಿ ಖಡ್ಗದಿಂ ಆತನ ಮೇಢ್ರವಂ ಛೇದಿಸಿದನು. ಆಗ ಆ ದ್ವಿಜನು ಅನೇಕಕಾಲ ದುಃಖಿಸಿ ಮೃತನಾದನು. ಆ ಸಮಯದಲ್ಲಿ ಯಮದೂತರು ಬಂದು ಪಾಶದಿಂ ಆತನಂ ಬಿಗಿದುಕೊಂಡು ಪೋಗಲು ಯತ್ನಿಸಲಾಗಿ, ಶಿವಗಣಂಗಳು ಬಂದು ಆ ಯಮದೂತರಂ ಕೊಂದೋಡಿಸಿ ಕೌಶಿಕನೆಂಬ ಬ್ರಾಹ್ಮಣನಂ ವಿಮಾನದಮೇಲೆ ಕುಳ್ಳಿರಿಸಿಕ್ಕೊಂಡು ಶಿವಲೋಕವನ್ನೈದಿದರು. ಯಮದೂತರಾದೊಡೆ ರಕ್ತಮಯವಾದ ಶರೀರವುಳ್ಳವರಾಗಿ ಯಮನ ಬಳಿಗೈದಿ ಆ ಕೌಶಿಕನ ವೃತ್ತಾಂತವಂ ಪೇಳ್ವು ರೋದನವಂ ಮಾಡಿದರು. ಬಳಿಕ ಯಮನು ದೂತರ ವಾಕ್ಯವಂ ಕೇಳಿ ಶಿವನ ಸಮೀಪಕ್ಕೆ ಪೋಗಬೇಕೆಂದು ಪೊರಮಟ್ಟು ಕೈಲಾಸಗಿರಿಗೆ ಬಂದು ಆ ಪರ್ವತದ ಅಧೋಭಾಗದಲ್ಲಿ ಮನೋಹರವಾದ ಸಿಂಹಾಸನದಲ್ಲಿ ಕುಳಿತಿರ್ಪ

ಗಣಾಗ್ರಣಿಯಾದ ಮಹಾಕಾಳನಂ ಕಂಡು ಕೌಶಿಕನ ವೃತ್ತಾಂತವಂ ತನ್ನ ದೂತರ ಪಿಡಿಯಂ ಪೇಳೆ, ಮಹಾಕಾಳನಾವಾಕ್ಯವಂ ಕೇಳಿ ಪರಮ ಕೋಪಿಷ್ಠನಾಗಿ, ಮಹಾತ್ಮನಾದ ಕೌಶಿಕಂಗೆ ಲೇಶಮಾತ್ರವು ಪಾಪವಿಲ್ಲವು, ಏಕೆಂದರೆ, ಈ ಕೌಶಿಕನು ಬಾಲ್ಯದಲ್ಲಿ ಶಂಭುವೆಂಬ ಬಾಲಕನಾದ ದ್ವಿಜನೊಡನೆ ಆಡುತಿರ್ದನು. ಆ ಶಂಭುವೆಂಬ ದ್ವಿಜನು ಈ ಕೌಶಿಕಂಗೆ ತ್ರಿಯಂಬಕನೆಂಬ ಪೆಸರಿಟ್ಟನು. ಅದುಕಾರಣದಿಂ ಕೈಲಾಸಪರ್ವತಕ್ಕೆ ಪೋದನೆನಲು, ಯಮನು ಆ ವಾಕ್ಯವಂ ಕೇಳಿ ಇಷ್ಟುಮಾತ್ರದಿಂದೀತಂಗೆ ಕೈಲಾಸಪ್ರಾಪ್ತಿಯು ಮಹಾದೇವನ ಸನ್ನಿಧಾನವು ಹೇಗುಂಟಾದೀತೆಂದು ಪೇಳಿ, ಆತನ ವಚನವನುಲ್ಲಂಘಿಸಿ ಮಹಾದೇವನ ಸನ್ನಿಧಿಗೆ ಪೋಗಲು, ಮಹಾಕಾಲನು ಕೋಪದಿಂ ಯಮನಂ ಕರೆದು, ದುರಾತ್ಮನಾದ ಯಮನೆ! ನನ್ನ ವಾಕ್ಯವನ್ನು ನೀನೆ ಉಲ್ಲಂಘಿಸತಕ್ಕವನೆಂದು ಪೇಳ್ದು ದಂಡದಿಂದಾಯಮನ ಉರವಂ ಬಡಿಯೆ, ಯಮನು ದಂಡಘಾತದಿಂ ಪರ್ವತದಂತೆ ಬಿದ್ದು ರುಧಿರವಂ ಕಾರಿ ಮೂರ್ಛೆಯನ್ನೈದಿ ಕ್ಷಣದಲ್ಲಿದ್ದನು. ಆ ಸಮಯದಲ್ಲಿ ಬ್ರಹ್ಮನು ಮಹಾದೇವನ ಸೇವಾರ್ಥವಾಗಿ ಬಂದು ಈ ವೃತ್ತಾಂತವಂ ಕೇಳಿ ಮಹಾಕಾಳಂಗೆ ನಮಸ್ಕಾರವಂ ಮಾಡಿ, ಎಲೈ ಗಣನಾಯಕನೆ! ಯಮನು ಮಾಡಿದ ಅಪರಾಧವಂ ಮನ್ನಿಸು, ಎಲೈ ಅಂತಕನೆ! ಈ ಕೌಶಿಕನು ಶಿವನಾಮಾಂಕಿತದಿಂ ಶಿವನಾಮೋಚ್ಚಾರಣೆಯಿಂ ಶಿವಸನ್ನಿಧಿಯಲ್ಲಿರುತಿಧಾನೆ. ಶಿವನಾಮದ ಮಹಾತ್ಮ್ಯವಂ ಉಮಾಪತಿಯಾದ ನೀಲಕಂಠನಲ್ಲದೆ ಮತ್ತೋರ್ವನರಿಯನು. ಅದುಕಾರಣದಿಂ ನೀನು ಸಾವಧಾನದಿಂದಿರೆಂದು ಪೇಳ್ದು ಆ ಯಮನಂ ಬಿಡಿಸಿ ಕೈಲಾಸಪರ್ವತಕ್ಕೆ ಪೋದನು. ಬಳಿಕ ಯಮನು ಮಹಾಕಾಳಂಗೆ ನಮಸ್ಕಾರವಂ ಮಾಡಿ ತನ್ನ ಸ್ಥಾನವನ್ನೈದಿದನು. ಎಲೈ ದ್ವಿಜರುಗಳಿರಾ! ಇದು ಮಹಾಕಾಳನು ಮರತೆಯೋ? ಎಂದು ಯಮನಂ ಕೇಳ್ದದಕ್ಕೆ ಉತ್ತರವಂ ಪೇಳಿದೆನು. ಬಳಿಕ ಯಮನು ಮಹಾಕಾಳಂಗೆ ನಮಸ್ಕಾರವಂ ಮಾಡಿ, ಎಲೈ ಸ್ವಾಮಿಯೆ! ಈ ಕಾಲನು ನೂತನವಾಗಿ ಅಧಿಕಾರಿಯಾದಕಾರಣ ಏನನ್ನು ಅರಿತವನಲ್ಲ, ನಿಮ್ಮ ಗಣಂಗಳಿಂದ ಬಹುಬಾಧೆಯಂ ಪಡುತಲಿಧಾನೆ. ಪೂರ್ವದಲ್ಲಿ ನನ್ನನ್ನು ಹೇಗೆ ರಕ್ಷಿಸಿದಿರೋ ಹಾಗೆ ಈತನಂ ರಕ್ಷಿಸಬೇಕೆನಲು, ಮಹಾಕಾಳನು ಆ ವಚನವಂ ಕೇಳಿ ಸರ್ವ ಗಣಾಧೀಶ್ವರನಂ ಕಳುಹಿ ಕಾಲನ ಸೆರೆಯಂ ಬಿಡಿಸಿದನು. ಅನಂತರದಲ್ಲಿ ಕಾಲನು ಯಮನ ಸಮೀಪಕ್ಕೆ ಬರಲಾಗಿ, ಯಮನು ಮಹಾಕಾಲಂಗೆ ನಮಸ್ಕಾರವಂ ಮಾಡಿ ಆತನ ಅನುಮತಿಯಿಂ ಈರ್ವರು ತಮ್ಮ ಸ್ಥಾನಕ್ಕೆ ಪೋಗುತ್ತಿರಲು, ಆಗ ಕಾಲನು ಮಧ್ಯಮಾರ್ಗದಲ್ಲಿ ಯಮನಂ ನೋಡಿ ಎಲೈ ಅಂತಕನೆ! ಈಗ ನಿನ್ನ ಬಳಿಯಲ್ಲಿ ನನಗಧಿಕಾರವು ಬೇಡ, ರಕ್ತಮಯವಾದ

ಎಲ್ಲಕಡೆಯಲ್ಲಿಯು ವ್ರಣಂಗಳಿಂದಂಕಿತವಾದ ನನ್ನ ಶರೀರವಂ ನೋಡು, ಈ ಕ್ಷಣದಲ್ಲಿ ನನ್ನ ಪ್ರಾಣವು ಪೋಗುತ್ತಿದ್ದೀತು. ನನಗೆ ಮರಣವು ಬೇಡೆಂದನು.

ನಂದಕಕ್ಷತ್ರಿಯನ ಕಥೆ.

ಅನಂತರದಲ್ಲಿ ಯಮನು ಎಲೈ ಕಾಲನೆ! ಶಂಕರಗಣಂಗಳಂ ಕಂಡು ಪಾಪಿಷ್ಠನಾದರು ಧಾರ್ಮಿಕನಾದರು ಕಾಶಿಕನಂ ಏನುಕಾರಣ ಬಿಡದೆಪೋದೆ? ಅದು ಕಾರಣದಿಂ ನಿನಗೀಫಲ ಮುಂಟಾದುದು. ಹೀಗೆ ಪೂರ್ವದಲ್ಲಿ ಕಂತುಕವೆಂಬ ದೇಶದಲ್ಲಿ ಕದಳಿಯೆಂಬ ಪುರವಿಥೆ. ಅಲ್ಲಿ ನಂದಕನೆಂಬ ಕ್ಷತ್ರಿಯನಿದ್ದನು. ಆತನ ಸತಿಯು ಕಾಮದಾಯಿನಿ ಎಂಬ ಪೆಸರುಳ್ಳವಳಾಗಿ ದುಶ್ಶೀಲೆಯಾಗಿ ರೂಪು ಲಾವಣ್ಯ ಸಂಪನ್ನೆಯಾಗಿ ಅತ್ಯಂತ ಮದಾನ್ವಿತೆಯಾಗಿ ದುರಾಚಾರಳಾಗಿ ವ್ಯಭಿಚಾರದಲ್ಲಿಯೆ ಪರಮ ಪ್ರೀತಿಯುಳ್ಳವಳಾಗಿ ತನ್ನ ಪತಿಯಂ ಬಿಟ್ಟು ಅನ್ಯಪುರುಷರಲ್ಲಿ ಆಸಕ್ತಿಯನ್ನೈದಿ, ರೂಪವಂತನಾದೊಡೆ ಚಂಡಾಲನನ್ನಾದರೂ ರಮಿಸುತಿರ್ದಳು. ಆಕೆಯು ಅಭಿಮಾನಸಂ ಬಿಟ್ಟು ದುರ್ಬುದ್ಧಿಯೆಂಬ ಶೂದ್ರನೊಡನೆ ಕ್ರೀಡಿಸಿ, ಗರ್ಭವಂ ಧರಿಸಿ ಬಳಿಕಾ ಶೂದ್ರನಂ ಬಿಟ್ಟು, ವಸುವೇದಿಯೆಂಬ ದ್ವಿಜನೊಡನೆ ವಿಹರಿಸಿ ದಶಮ ಮಾಸದಲ್ಲಿ ಪುತ್ರನಂ ಪೆತ್ತು ಆತನ ಬಳಿಯಲ್ಲಿರ್ದಳು. ಆ ಬ್ರಾಹ್ಮಣನು ಕೆಲವು ಕಾಲದಮೇಲೆ ಮೃತನಾದನು. ಬಳಿಕ ಈ ವ್ಯಭಿಚಾರಿಯು ತನ್ನ ಶಿಶುವಂ ತೊರೆದು ಮರಳಿ ಆ ದುರ್ಬುದ್ಧಿಯೆಂಬ ಶೂದ್ರನಂ ಸೇರಿ ಚಿರಕಾಲವು ಕ್ರೀಡಿಸುತ್ತಾ ಪಾಪವಂ ಮಾಡಿ, ಬಳಿಕ ದ್ವೀಪಾಂತರಕ್ಕೆ ಪೋಗಬೇಕೆಂದು ಆ ಶೂದ್ರನೊಡನೆ ಓಡೆಯನ್ನೇರಿ ಸಮುದ್ರದಲ್ಲಿ ಪೋಗುತ್ತಿದ್ದಳು. ಆ ಸಮಯದಲ್ಲಿ ಮಹತ್ತರವಾದ ಸುಳಿಗಾಳಿಯು ಬಂದು ಹಡಗನ್ನು ಕಡಲಿನಲ್ಲಿ ಮುಣಿಗಿಸಲಾಗಿ ಅವರೀರ್ವರು ಮೃತರಾದರು. ಆಗೆ ಯಮದೂತರು ಬಂದು ಅವರೀರ್ವರಂ ಪಾಶದಿಂ ಕಟ್ಟಿ ನರಕಾರ್ಣವದಲ್ಲಿ ಕೆಡಹಿ ಘೋರವಾದ ಗರಗಸದಿಂ ಅವರ ಶರೀರಂಗಳಂ ಛೇದಿಸುತ್ತಿರಲು, ಶಿವಗಣಂಗಳು ಬಂದು ತಮ್ಮ ಆಯುಧಂಗಳಿಂ ಯಮದೂತರಂ ಹೊಡೆದು ದಿವ್ಯವಾದ ವಿಮಾನದ ಮೇಲೆ ಕುಳ್ಳಿರಿಸಿ ಶಿವಲೋಕಕ್ಕೆ ಕೊಂಡು ಪೋದರು. ಆಗ ನಾನು ಅತ್ಯಂತ ಕೋಪಯುಕ್ತನಾಗಿ, ಎಲೆ ಗಣಂಗಳಿರಾ! ಪಾಪಿಗಳಾದ ಇವರೀರ್ವರಂ ವಿಮಾನದಮೇಲೆ ಕುಳ್ಳಿರಿಸಿ ಎಲ್ಲಿಗೆ ಕೊಂಡೊಯ್ಯುವಿರೆಂದು ಕೇಳಲಾಗಿ, ಶಿವಗಣಂಗಳು ನೂತನಾಧಿಕಾರಿಯಾದ ನನ್ನಂ ಕಡುಕೋಪ ವಚನದಿಂ ಪೇಳಿ ಪಾಶದಿಂ ನನ್ನನ್ನು ಕಟ್ಟಿ ದಂಡದಿಂ ಬಡಿದು ಚಕ್ರವಾಳಗಿರಿಯಲ್ಲಿ ಗುಹೆಯಲ್ಲಿ ಅಧೋಮುಖವಂ ಮಾಡಿ ಕೆಡಹಿ, ಯಮಲೋಕಾಧಿಕಾರವಂ ಓರ್ವ ಗಣಾಧೀಶ್ವರಂಗಿತ್ತು, ಪಾಪಿಷ್ಠರಾದ ಅವರೀರ್ವರಂ ಶಿವಸನ್ನಿಧಿಗೆ ಕೊಂಡು ಪೋದರು. ಆಗ

ಹರಿ ಬ್ರಹ್ಮರು ಚಂದ್ರ ಚೂಡನ ಸೇವೆಗೋಸುಗ ಪೋಪಮಡೆ, ಚಿತ್ರಗುಪ್ತನು ಬಂದು ನನ್ನ ವೃತ್ತಾಂತವಂ ಹರಿಗೆ ಪೇಳ್ದನು. ಬಳಿಕ ಹರಿಯು ಆ ವಾಕ್ಯವಂ ಕೇಳಿ ಪರಮ ದುಃಖವನ್ನೈದಿ ಬ್ರಹ್ಮನೊಡನೆ ಶಿವಲೋಕಕ್ಕೆ ಬಂದು ವಿಘ್ನೇಶ್ವರನಂ ಕಂಡು ನಮಸ್ಕಾರವಂ ಮಾಡಿ ಈ ವೃತ್ತಾಂತವಂ ಪೇಳ್ದನು. ಅನಂತರದಲ್ಲಿ ವಿನಾಯಕನು ನನ್ನ ವೃತ್ತಾಂತವಂ ಕೇಳಿ ಅತ್ಯಂತ ಕುಪಿತನಾಗಿ, ಎಲೈ ಹರಿಯೆ! ಯಮನು ಶಿವಗಣಂಗಳೊಡನೆ ಕಲಹವಂ ಮಾಡಿದನು. ಆ ಶಿವಗಣಂಗಳು ದುರ್ಬುದ್ಧಿಯುಳ್ಳವನಾದ ಯಮಂಗೆ ತಕ್ಕ ಶಿಕ್ಷೆಯಂ ಮಾಡಿದರೆನಲು, ಹರಿ ಬ್ರಹ್ಮರು ಈ ವಾಕ್ಯವಂ ಕೇಳಿ ಭಯಯುಕ್ತರಾಗಿ, ಎಲೈ ವಿನಾಯಕನೆ! ಯಮನು ಮೂಢನು ಇದಲ್ಲದೆ ನೂತನಾಧಿಕಾರಿಯು, ಆದಕಾರಣ ನಿನ್ನನ್ನು ಅರಿಯದವನು, ಈತನ ಅಪರಾಧವಂ ಕ್ಷಮಿಸಿ ರಕ್ಷಿಸಬೇಕೆಂದು ಪ್ರಾರ್ಥಿಸಿ, ನಮಸ್ಕಾರವಂ ಮಾಡಿ ನಿಂತರು. ಬಳಿಕ ಭಗವಂತನಾದ ವಿನಾಯಕನು ಈ ಯಮನು ಮಹಾ ಬಲನಾದ ವೀರಭದ್ರನಹೋಬಳಿಯ ಗಣಂಗಳಿಂ ಪಾಶದಿಂ ಕಟ್ಟಲ್ಪಟ್ಟವನಾಗಿ ಚಕ್ರವಾಳಗಿರಿಯಲ್ಲಿರುತಿರ್ದಾನೆ. ಆತನಂ ಕರದು ಕೊಡುವದೆಂದು ಅಚಲನೆಂಬ ಗಣಾಧೀಶ್ವರಂಗೆ ಪೇಳ್ದು ಕಳುಹಲು, ಆ ಗಣಾಧೀಶ್ವರನದಂ ಕೇಳಿ ವೇಗದಿಂದಲ್ಲಿಗೆ ಪೋಗಿ ಪಾಶವಂ ಬಿಡಿಸಿ ಆತನಂ ವಿಘ್ನೇಶ್ವರನ ಬಳಿಗೆ ಕರತಂದನು. ಆಗ ನಾನು ವಿಘ್ನೇಶ್ವರಂಗೆ ನಮಸ್ಕಾರವಂ ಮಾಡಿ ಆತನ ಸಮೀಪದಲ್ಲಿ ನಿಂತಿರ್ದೆನು. ಆ ಸಮಯದಲ್ಲಿ ವಿನಾಯಕನು ನನ್ನನ್ನು ನೋಡಿ ಎಲೈ ಯಮನೆ! ದುರ್ಬುದ್ಧಿಯೆಂಬ ಶೂದ್ರನು ಕಾಮದೆಯೆಂಬ ವ್ಯಭಿಚಾರಿಯು ಇವರೀರ್ವರಂ ಪಾಪಿಗಳೆಂದು ಬಾಧಿಸಿದೆ, ಇವರು ಮಾಡಿದ ಸುಕೃತವಂ ನೀನರಿಯೆ, ಈಕೆಯುಂ ದುರ್ಬುದ್ಧಿಯೆಂಬುವನ ಬೀಜದಿಂ ಗರ್ಭವಂ ಧರಿಸಿ, ಮಹಾ ವಿಟನಾದ ಸುವೇದಿಯೆಂಬ ದ್ವಿಜನಂ ಕೂಡಿ ಆತನ ಗೃಹದಲ್ಲಿ ಪುತ್ರನಂ ಪೆತ್ತಳು. ಆ ದ್ವಿಜನು ಕೆಲಕಾಲಾನಂತರ ಮೃತನಾದನು. ಈ ವ್ಯಭಿಚಾರಿಣಿಯು ತನ್ನ ಶಿಶುವಂ ವಸುವೇದಿಯ ಮನೆಯಲ್ಲಿಯೆ ಬಿಟ್ಟು ಮರಳಿ ದುರ್ಬುದ್ಧಿಯೆಂಬ ಶೂದ್ರನಂ ಕೂಡಿಕೊಂಡಿದ್ದಳು. ಆ ಶಿಶುವು ಆ ಗೃಹದಲ್ಲಿಯೆ ಬೆಳದು ಶೂದ್ರನೊಡನೆ ಕೃಷಿಯಂ ಮಾಡುತಿತ್ತು. ಆ ವಸುವೇದಿಯ ಸತಿಯು ಆ ಕಾಮದೆಯ ಶಿಶುವಿಗೆ ಸಂಕರವಾಗಿ ಪುಟ್ಟಿದ ಕಾರಣ ಶಂಕರನೆಂಬ ನಾಮವಿಟ್ಟನು. ಈತಂಗೆ ಶಂಕರನೆಂಬ ನಾಮ ಉಂಟಾದಕಾರಣದಿಂ ಇವನ ಮಾತಾಪಿತೃಗಳಿಗೆ ಕೈಲಾಸ ಪ್ರಾಪ್ತಿಯುಂಟಾದುದು. ಎಲೈ ಯಮನೆ! ದೇವ ದೇವನಾದ ಶಿವನ ನಾಮ ಮಹಿಮೆಯಂ ಯಥಾರ್ಥವಾಗಿ ಯಾರೂ ತಿಳಿಯಲರಿಯರು. ಆವ ಪುರುಷನು ಮಹಾದೇವನ ನಾಮದ ಮಹಿಮೆಯಂ ತಿಳಿದು ತಮ್ಮ ಪುತ್ರರಿಗೆ ಆ ನಾಮವ

ನಿಡುವನೋ ಅವನ ಫಲವು ಕಾಲಕೋಟಿಗಳಿಂದಲು ನನ್ನಿಂದ ಪೇಳಲಶಕ್ಯವೆನಲು, ನಾನು ವಿಘ್ನೇಶ್ವರನ ವಾಕ್ಯವಂ ಕೇಳಿ, ಭಯ ಕಂಪಿತನಾಗಿ ಆತಂಗೆ ನಮುಸ್ಕರಿಸಿ, ನಾನು ಮಾಡಿದ ಅಪರಾಧವಂ ಕ್ಷಮಿಸೆಂದು ಪ್ರಾರ್ಥಿಸಿದೆನು. ಹಾಗೆ ಹರಿಬ್ರಹ್ಮರು ನಮಸ್ಕಾರವಂ ಮಾಡಿ ಬೇಡಿದರು. ಆಗ ವಿನಾಯಕನು ಖಿನ್ನನಾಗಿ ಅನಾಥನಂತೆ ಭೀತನಾಗಿ ತನ್ನನೆ ನೋಡುತಿರುವ ನನ್ನನ್ನು, ಎಲೆ ಯಮುನೆ! ಇನ್ನು ಮೇಲೆ ನೀನು ಜಗತ್ಪತಿಯಾದ ಶಿವನಾಮ ವೈಭವವಂ ನೋಡಿ ನಾನು ಪೇಳಿದ ವಾಕ್ಯಕ್ಕನುಸಾರಿಯಾಗಿ ಸತ್ಯವಾಗಿರೆಂದು ಯಮುಂಗೆ ಪೇಳಿದನೆಂಬದಾಗಿ ಸೂತಂ ಶೌನಕಾದಿಗಳಿಗೆ ನಿರೂಪಿಸಿದನೆಂಬಲ್ಲಿಗೆ ಉಪಕೇಶ ಕಾಂಡದೊಳು ಇಪ್ಪತ್ನಾಲ್ಕನೆಯ ಅಧ್ಯಾಯವು ಸಮಾಪ್ತಮಾದುದು.

ಇಪ್ಪತ್ತೈದನೆಯ ಅಧ್ಯಾಯವು.

ಶಿವನಾಮಸ್ಮರಣ ಮಹಿಮೆಯಲ್ಲಿ ಯಮಾಧಿಕಾರ ಪ್ರಾಪ್ತಿ.

ಎಲೆ ಕಾಲನೆ! ಅನಂತರದಲ್ಲಿ ವಿಘ್ನೇಶನು ಈ ಪ್ರಕಾರವಾಗಿ ನಿರೂಪಿಸಿ ನನ್ನ ಯಮಲೋಕದಲ್ಲಿ ಅಧಿಕಾರವಂ ಮಾಡುತಿರ್ಪ ಗಣಾಧೀಶ್ವರನಂ ಕರಿಸಿ ಪೂರ್ವದಂತೆ ಅಧಿಕಾರವನ್ನು ನನಗಿತ್ತನು. ಬಳಿಕ ನಾನು ಹರಿ ಬ್ರಹ್ಮರು ಸಹಾ ಆ ವಿನಾಯಕಂಗೆ ನಮುಸ್ಕರಿಸಿ ನನ್ನ ಸ್ಥಾನಕ್ಕೆ ಬಂದು ಸಾವಧಾನದಿಂದಿರುತಿದೇನೆ. ಆವ ಮನುಜರು ಪಾವನವಾದ ಶಿವನಾಮವಂ ಉಚ್ಚರಿಸುತಿರ್ದಾರೊ ಅವರಿಗೆ ಜ್ಞಾನದಿಂದಾದರೂ ಪಾಪವಿಲ್ಲ. ನಾನು ಪೇಳಿದ ವಚನವು ಸತ್ಯವು. ಹೀಗಲ್ಲದಿರ್ದೊಡೆ ನನಗೂ ನಿನಗೂ ಮತ್ತೆ ಕೆಲಂಬರಿಗೂ ಶಂಕರನ ಆಜ್ಞೆ ಬರುತಿದ್ದೀತು. ನಾನು ಮಹೇಶ್ವರನಂ ಪ್ರತಿ ದಿವಸದಲ್ಲೂ ಸೇವಿಸಲು ಬರುವೆನು ಹಾಗೆ ಹರಿಬ್ರಹ್ಮರು ಬರುವರು. ಅದುಕಾರಣ ನನಗೆ ಅಧಿಕಾರವಂ ಮಾಡಲು ಸಮಯವಿಲ್ಲ ನೀನು ಆವಾಗಲೂ ಅಧಿಕಾರವಂ ಮಾಡುತ್ತಿರು. ಒಂದು ವೇಳೆಯಲ್ಲಿಯೂ ನನ್ನ ವಾಕ್ಯವನ್ನತಿಕ್ರಮಿಸಬೇಡ. ಆವಾತನು ಮಹಾದೇವನ ನಾಮವಂ ಧರಿಸುತಿರ್ದಾನೊ ಆತನ ಮಾತಾಪಿತೃಗಳನ್ನು ಕಂಡು ದೂರದಲ್ಲಿಯೆ ಪೋಗು. ಅದುಕಾರಣದಿಂ ಸರ್ವ ಪ್ರಯತ್ನದಿಂದಲೂ ಮರವಿಲ್ಲದವನಾಗಿಯೇ ಇರೆನಲು, ಕಾಲನದಂ ಕೇಳಿ ಭಯಯುಕ್ತನಾಗಿ, ಎಲೆ ಯಮುನೆ! ಮಹತ್ತಾದ ನಿನ್ನಧಿಕಾರವು ನನ್ನಿಂದ ಮಾಡಲು ಕೂಡದು. ನನಗೆ ಅತ್ಯಂತ ಭೀತಿಯುಂಟಾಗುತಿದ್ದೀತು ಎನಲು ಯಮನದಂ ಕೇಳಿ ಎಲೆ ಕಾಲನೆ!

ಸಮಸ್ತರೂ ನನ್ನ ವಶವರ್ತಿಗಳು. ಪ್ರಾಣಿಗಳು ನನ್ನನ್ನು ಕಂಡ ಮಾತ್ರ ದಿಂದಲೆ ಭಯಪಡುತಿರ್ದಾರು ಇದು ನಿಶ್ಚಯವು. ಪೂರ್ವದಲ್ಲಿ ಸಾಂದೀಪನೆಂಬ ಮುನಿಪುತ್ರನಾದ ಮಹಾಬಲನಾದ ಮಹಾ ಮತಿವಂತನಾದ ಋಷಿಯ ಕುಮಾರನು ಪಾಪಹಾರಿಯಾದ ಶುದ್ಧವಾದ ಉದಕದಲ್ಲಿ ಅಚ್ಯುತ ಗೋವಿಂದ ಮುಕುಂದನೆಂಬ ನಾಮಂಗಳು ಮೊದಲಾದ ವಿಷ್ಣುನಾಮಂಗಳ ಕೀರ್ತನೆಯಂ ಮಾಡುತ್ತ ಸ್ನಾನವಂ ಮಾಡಿದನು. ಆಗ ಅತ್ಯಂತ ಬಲವುಳ್ಳ ಪೊಂದು ಮೊಸಳೆಯು ಬಂದು ಆತನಂ ಪಿಡಿದುಕೊಂಡು ಪೋಗಿ ಭಕ್ಷಿಸಿತು. ಆಗ ಮಹಾ ಬಲವಂತರಾದ ನನ್ನ ದೂತರು ಮೃತನಾದ ಬಾಲಕನಂ ನನ್ನ ಲೋಕಕ್ಕೆ ತರಲು ಆಗ ಸಾಂದೀಪನ ಮುನಿಯು ಮಹತ್ತಾದ ಮಡುವಿನಲ್ಲಿ ಪುತ್ರನು ಮೃತನಾದ ನೆಂಬುದಂ ಕೇಳಿ, ಶೋಕಮೋಹಯುಕ್ತನಾಗಿ ಮೂಢನಂತೆ ಪ್ರಲಾಪಿಸಿ ತನ್ನ ಶಿಷ್ಯರಾದ ಮಹಾ ಬಲವಂತರಾದ ಕೃಷ್ಣಬಲಭದ್ರರಂ ನೋಡಿ ಆಚಾರ್ಯದಕ್ಷಿಣೆಯಂ ಕೇಳ್ದನದೆಂತೆನೆ, ಮೊಸಳೆಯಿಂದ ಗ್ರಹಿಸಲ್ಪಟ್ಟ ನನ್ನ ಪುತ್ರನಂ ತಂದರೆ ಅದೇ ನನಗೆ ಉತ್ಕೃಷ್ಟವಾದ ಆಚಾರ್ಯ ದಕ್ಷಿಣೆ ಯೆನಲು, ಬಲಶಾಲಿಗಳಾದ ಬಲಭದ್ರಕೃಷ್ಣದೇವರು ಸಹ ಆತನ ವಾಕ್ಯವಂ ಕೇಳಿ ಶೀಘ್ರವಾಗಿ ಮಹತ್ತಾದ ಮಡುವಿನಲ್ಲಿ ಬಿದ್ದು ಆ ಮೊಸಳೆಯಂ ಸಂಹರಿಸಿ ಗುರುಪುತ್ರನಂ ಕಾಣದೆ ದುಃಖದಿಂ ವ್ಯಾಕುಲಿತಮಾನಸರಾಗಿ ಯಮಲೋಕದಲ್ಲಿದ್ದಾನೆಂದು ನಿಶ್ಚೈಸಿ ಯಮಲೋಕಕ್ಕೆ ಪೋಗಿ ವಿನಯಾನ್ವಿತರಾಗಿ ನನ್ನನ್ನು ಸ್ತುತಿಸಿ ಗುರುಪುತ್ರನಂ ಬಿಡಿಸಿಕೊಂಡು ಆತನಂ ಗುರುವಿಗೆ ಒಪ್ಪಿಸಿದರು. ಬಳಿಕ ಮತಿವಂತನಾದ ಸಾಂದೀಪನ ಪುತ್ರನು ಭಯಯುಕ್ತನಾಗಿ ನಾನು ಯಾವಾಗಲೂ ಮುಕುಂದ ನಾಮಕೀರ್ತನೆಯಂ ಮಾಡುತಿರ್ಪೆನು. ಆದರೂ ಯಮದೂತರು ನನ್ನನ್ನು ಯಮಲೋಕಕ್ಕೆ ಕೊಂಡುಪೋದರು ಯೆಂದು ಮನದಲ್ಲಿ ಆಲೋಚಿಸಿ ಕಾಲಕಾಲನಾದ ಶೂಲಿಯಾದ ಮಹಾದೇವನಾದ ಭೀಮನಾದ ಪರಮಾತ್ಮನಾದ ಜಗತ್ರಯ್ಯಗಳಲ್ಲಿಯೂ ಪ್ರಸಿದ್ಧನಾದ ಶಿವನಾಮಂಗಳ ಕೀರ್ತನೆಯಂ ಮಾಡಿ ಮೃತ್ಯುಭಯವಂ ದಾಂಟಿ ಅನೇಕ ಭೋಗಂಗಳಂ ಭೋಗಿಸಿ ಬಳಿಕ ಕೈಲಾಸ ಪರ್ವತಕ್ಕೆ ಪೋಗಿ ಶಿವಗಣಂಗಳಿಂದಾವೃತನಾಗಿ ಅನೇಕ ಕಾಲವಿದ್ದು ಅಲ್ಲಿಯೆ ದುರ್ಲಭವಾದ

ಮೋಕ್ಷವನ್ನೈದಿದನೆಂದು ಸೂತನು ಶೌನಕಾದಿಗಳ್ಗೆ ಪೇಳ್ದನೆಂಬಲ್ಲಿಗೆ
ಉಪದೇಶಕಾಂಡದೊಳು ಇಪ್ಪತ್ತೈದನೆಯ ಅಧ್ಯಾ
ಯವು ಸಂಪೂರ್ಣಮಾದುದು.

ಇಪ್ಪತ್ತಾರನೆಯ ಅಧ್ಯಾಯವು.

ಶಿವನಾಮಃಸ್ಮರಣ ಮಹಿಮೆಯಲ್ಲಿ ಪುಷ್ಕರದ್ವಿಜನ ಕಥೆ.

ಎಲೈ ಋಷಿಗಳಿರಾ! ಅನಂತರದಲ್ಲಿ ಯಮನು ಕಾಲನಂ ನೋಡಿ, ಎಲೆ ಕಾಲನೆ! ಪೂರ್ವದಲ್ಲಿ ವಿಷ್ಣುಭಕ್ತನಾದ ಮಹಾ ಮತಿವಂತನಾದ ಪುಷ್ಕರನೆಂಬ ದ್ವಿಜನಂ ನನ್ನ ದೂತರು ಪೋಗಿ ನನ್ನ ಲೋಕಕ್ಕೆ ಕರೆತಂದರು. ಆಗ ನಾನು ವಿದ್ವಾಂಸನಾದ ಆತನಂ ನೋಡಿ ದೂತರಂ ಕುರಿತು ಒಂದು ವಾಕ್ಯವಂ ನುಡಿದೆನು. ಎಲೆ ದೂತರೆ! ಆ ಗ್ರಾಮದಲ್ಲಿ ದುರಾಶಯನಾದ ಪಾಪಿಯಾದ ಮತ್ತೊರ್ವ ಪುಷ್ಕರನಿರುತಿರುವನು ಆತನಂ ಕರೆತಂದು ಈತನಂ ಅಲ್ಲಿಯೆ ಬಿಟ್ಟು ಬನ್ನಿರೆನಲು ಅವರದಂ ಕೇಳಿ ಬ್ರಾಹ್ಮಣೋತ್ತಮನಾದ ಆ ಪುರುಷನಂ ಬಿಟ್ಟು ಪಾಪಿಯಾದ ಮತ್ತೊರ್ವ ಪುಷ್ಕರನಂ ಕರೆತಂದರು. ಬಳಿಕ ಉತ್ತಮನಾದ ಬುದ್ಧಿವಂತನಾದ ಆ ಪುಷ್ಕರನು ನಾನು ಸಾರ್ವಕಾಲವೂ ಹರಿನಾಮಸ್ಮರಣೆಯಂ ಮಾಡಿದೆನು. ಹಾಗಾದರೂ ಯಮದೂತರು ಬಂದು ನನ್ನನ್ನು ಕರೆದುಕೊಂಡು ಪೋದರು ಯೆಂದು ಮನದಲ್ಲಿ ಚಿಂತಿಸಿ, ಸಮಸ್ತಪಾಪಹರವಾದ ಪರಮಾತ್ಮನಾದ ಶಿವನಾಮಂಗಳಂ ಜಪಿಸಿ ಶಂಕರ ಹರ ಭವ ಯೆಂದು ಮಹತ್ತಾದ ಸ್ವರದಿಂ ಉಚ್ಚರಿಸಿ ಶಿವನಾಮಪ್ರಭಾವದಿಂ ಜೀವನ್ಮುಕ್ತನಾಗಿ ಭೂಮಿಯಲ್ಲಿ ಸ್ವೇಚ್ಛೆಯಿಂ ಸಂಚರಿಸಿ, ಯಾರಿಂದಲೂ ಕೆಡಿಸಲಶಕ್ಯವಾದ ಮನೋರಥ ಮುಳ್ಳವನಾಗಿ ಸರ್ವೈಶ್ವರ್ಯ ಯುಕ್ತವಾದ ಶಿವಲೋಕಕ್ಕೆ ಪೋಗಿ, ಅನೇಕ ಭೋಗಂಗಳನನ್ನುಭವಿಸಿ ಮೋಕ್ಷವನ್ನೈದಿದನು. ಎಲೆ ಕಾಲನೆ! ಪೂರ್ವದಲ್ಲಿ ದಶರಥಕುಮಾರನಾದ ದುಷ್ಟನಿಗ್ರಹ ಶಿಷ್ಟಪರಿಪಾಲಕನಾದ ರಾಮನಂ ನಾನೆ ಕರೆದುಕೊಂಡು ಬಂದೆನಲ್ಲಾ ಅದುಕಾರಣದಿಂ ನೀನು ಯಾಕೆ ಭಯಪಡುತಿದ್ದೀ? ತ್ರಿಯಂಬಕನಾದ ಮಹಾ ದೇವನಂ ಸಮಸ್ತ ಶಾಸ್ತ್ರವಂ ತಿಳಿದ ಶಿವಭಕ್ತರಂ ಬಿಟ್ಟರೆ ಇತರ ದೇವತೆಗಳಿಂದ ನಮಗೆ ಹ್ಯಾಗೆ ಭಯವುಂಟಾದೀತು? ನಮ್ಮಾಜ್ಞೆಗೆ ಒಳಗಾಗಿರುವ ನೀವೆಲ್ಲರೂ ಪರಮೇಶ್ವರನಂ ಅವರ ಭಕ್ತರಂ ಬಿಟ್ಟು ಸುಖದಿಂ ಸಂಚರಿಸುತ್ತಿರಿ. ಈಗೆ ಪೇಳ್ದ ವಾಕ್ಯವು ಸತ್ಯವು. ಅದುಕಾರಣದಿಂ ಈ ವಿಷಯದಲ್ಲಿ ಭಯವಂ ಬಿಟ್ಟು ನೀನು ಯಾವಾಗಲೂ ಪೂರ್ವದಂತೆ ನನ್ನಧಿಕಾರವಂ ಮಾಡುತ್ತಿರು. ನೀನು ಏಕಾಗ್ರ ಮಾನಸನಾಗಿ ಈಗೆ ನನ್ನ ವಾಕ್ಯವಂ ಕೇಳು. ಆರು ಕೆಲಂಬರು ಮಹಾ ದೇವಿಯ ನಾಮಂಗಳಂ ವಿನಾಯಕ ನಾಮಂಗಳಂ ಕುಮಾರಸ್ವಾಮಿಯ ನಾಮಂಗಳಂ ಭೈರವನ ನಾಮಂಗಳಂ ವೀರಭದ್ರನ ನಾಮಂಗಳಂ ಮಹಾ ಶಾಸ್ತಾಕುಮಾರನ ನಾಮಂಗಳಂ ಶಿವನಾಮಂಗಳಂ ಜಪಿಸುತಿರ್ದಾರೋ ಅಂಥ ಪಾಪವರ್ಜಿತರಾದ

ಶಿವಭಕ್ತರಂ ಕಂಡಮಾತ್ರದಿಂದಲೆ ಶೀಘ್ರವಾಗಿ ಭಕ್ತಿಯಿಂ ನಮಸ್ಕಾರವಂ ಮಾಡಿ ಅವರ ಮುಂದಕ್ಕೆ ಪೋಗದೆ ಆವಾಗಲು ಪ್ರಮಾದವಿಲ್ಲದವನಾಗಿಯೇ ಇರು. ಈ ವಿಷಯದಲ್ಲಿ ಒಂದು ಇತಿಹಾಸವಂ ಪೇಳುವೆನು. ಪೂರ್ವದಲ್ಲಿ ಮಗಧದೇಶದಲ್ಲಿ ಸೂರ್ಯಂಗೆ ಸಮಾನವಾದ ಕಾಂತಿಯುಳ್ಳ ವಿದ್ವಾಂಸನಾದ ಭಾರವಿ ಎಂಬ ಒಬ್ಬಾನೊಬ್ಬ ಪೆಸರುಳ್ಳ ಬ್ರಾಹ್ಮಣನು ಪಾಪವಶದಿಂ ವೇಶ್ಯಾಸಂಗದಲ್ಲಿ ಆಸಕ್ತಿಯುಳ್ಳವನಾಗಿ ಚೋರನಾಗಿ ಮಹತ್ತಾದ ಅರಣ್ಯದಲ್ಲಿದ್ದು, ದಿವಾರಾತ್ರಿಯಲ್ಲಿಯೂ ಪಟ್ಟಣಕ್ಕೆ ಬಂದು ಗ್ರಾಮಪಾಲರಿಗೆ ಕಾಣಿಸಿಕೊಳ್ಳದೆ ಚೋರತನವಂ ಮಾಡುತಿರ್ದನು. ಒಂದು ಸಮಯದಲ್ಲಿ ಗ್ರಾಮಪಾಲರು ಒಂದು ಬಳಿಯಲ್ಲಿ ಕುಳಿತಿರ್ದ ಆತನಂ ಕಂಡು ಸಂಹರಿಸಲು ಶೀಘ್ರವಾಗಿ ಬಂದರು. ಆಗ ಚೋರನು ತಳವಾರನಂ ಕಂಡು ಭಯಯುಕ್ತನಾಗಿ ಆವ ಪ್ರಕಾರದಿಂದಲೂ ತನ್ನ ಪ್ರಾಣವಂ ರಕ್ಷಿಸಿಕೊಳ್ಳಬೇಕೆಂದು ದೂರದಿಂದಲೇ ಧ್ವನಿಯಂ ಮಾಡಿ ವೇಗದಿಂದೋಡಿದನು. ಆಗ ತಳವಾರರಲ್ಲಿ ಮಹಾ ಬಲನಾದ ಓರ್ವ ಪುರುಷನು ವೇಗದಿಂ ಆತನ ಬಳಿವಿಡಿದು ಓಡುತ ಮಹಾ ಚೋರನಂ ಹಿಡಿ ಹಿಡಿ ಬಡಿ ಬಡಿ ಎಂದು ನುಡಿಯುತ ಆತನ ತನುಗುತಿರೆ, ಆಗ ಮಹಾ ಬಲವುಳ್ಳ ಮಹಾಕಾಯವುಳ್ಳ ಒಂದು ವ್ಯಾಘ್ರವು ಅತಿ ರಭಸದಿಂ ಓಡುತಿರ್ದ ಗ್ರಾಮಪಾಲಕನಂ ಕಂಡು ಗುಹೆಯಿಂ ಪೊರಮಟ್ಟು ಮಹಾ ಕೋಪದಿಂದ ಆ ಗ್ರಾಮಪಾಲಕನಂ ಸಂಹರಿಸಿತು. ಬಳಿಕ ಆ ದ್ವಿಜನು ಭಯಮಂ ಬಿಟ್ಟು ಕೇರಳದೇಶಕ್ಕೆ ಪೋಗಿ ವ್ಯಾಘ್ರಪಾದದಿಂದ ಗ್ರಾಮಪಾಲಕ ಮೃತನಾದಕಾರಣ ತನಗೂ ವ್ಯಾಘ್ರಪಾದನೆಂಬ ಪೆಸರನ್ನಿಟ್ಟು ದೇಶಾಂತರವಂ ಮಾಡುತಿರ್ದನು. ಆ ದೇಶದಲ್ಲಿರ್ದ ಜನರು ಆತನಂ ವ್ಯಾಘ್ರಪಾದನೆಂದೇ ಕರೆವರು. ಮರಳಿ ಆ ದ್ವಿಜನು ಕಾಲವಶದಿಂದ ಮೃತಪಟ್ಟನು. ಆಗ ನನ್ನ ದೂತರು ಪೋಗಿ ಆತನಂ ಬಂಧಿಸಿ ನನ್ನ ಸಮೀಪಕ್ಕೆ ಕರತರುತಿರೆ, ಮಹಾ ಬಲರಾದ ಶಿವದೂತರು ಬಂದು ನನ್ನ ದೂತರಂ ಕೊಂಡು ಓಡಿಸಿ ಆತನಂ ದಿವ್ಯ ವಿಮಾನದಲ್ಲಿ ಕುಳ್ಳಿರಿಸಿ, ದೇವರ್ಷಿಗಳು ಸ್ತುತಿಸೆ, ದೇವ ದುಂದುಭಿಗಳು ಮೊಳಗೆ ಪುಷ್ಪವೃಷ್ಟಿ ಕರೆಯೆ, ಶಂಭುವಿನ ಸಮೀಪಕ್ಕೆ ಕರೆದುಕೊಂಡು ಪೋದರು. ಭಕ್ತವತ್ಸಲನಾದ ಶಂಭುವು ದಯದಿಂದ ಒಂದು ವಾಕ್ಯವಂ ನಿರೂಪಿಸಿದನು. ಎಲೆ ಶೋಭನನಾದ ಬ್ರಾಹ್ಮಣನೆ! ಅವುದಾನೊಂದು ಕಾರಣದಿಂ ನೀನು ನಮ್ಮ ಭಕ್ತನಾದ ವ್ಯಾಘ್ರಪಾದನ ನಾಮಮಂ ಅಜ್ಞಾನದಿಂದಲಾದರೂ ಧರಿಸಿದೆಯಲ್ಲ? ಆ ಪುಣ್ಯದಿಂ ಪರ್ವತೋತ್ತಮವಾದ ಈ ಕೈಲಾಸಗಿರಿಯಲ್ಲಿ ಅನೇಕಕಾಲವಿರ್ದು, ಅನಂತರದಲ್ಲಿ ನಮ್ಮ ಸಾಯುಜ್ಯವನ್ನೈದೀಯೆ ಎಂದು ಆತನಂ ತಮ್ಮ ಸಮೀಪದಲ್ಲಿರಿಸಿಕೊಂಡಿರುತಿರ್ದರು. ಆ ಸಮಯದಲ್ಲಿ ನಾನು ಕೈಲಾಸ ಪರ್ವತಕ್ಕೆ

ಪೋಗಿ ನಂದಿಕೇಶ್ವರಂಗೆ ನಮಸ್ಕಾರವಂ ಮಾಡಿ ಆತನ ಮುಖದಿಂ ಸ್ವಾಮಿಯ ಸಮೀಪಕ್ಕೆ ಪೋಗಿ ಈ ವೃತ್ತಾಂತವಂ ಪೇಳ್ದೆನು. ಬಳಿಕ ಶಂಭುವು ನನ್ನಂ ನೋಡಿ ಒಂದು ವಾಕ್ಯವಂ ಪೇಳ್ದನದೆಂತೆನೆ, ಎಲೆ ಯಮನೆ! ಆವ ಮನುಜನು ತನ್ನ ನಾಮಂಗಳಂ ಧರಿಸುವನೋ ಜಪಿಸುವನೋ ಆವ ಮನುಜರು ನಮ್ಮ ಭಕ್ತರ ನಾಮುಗಳಂ ಧರಿಸುವರೋ ಜಪಿಸುವರೋ ಅವರಿಗೆ ನೀನು ಅಧಿಕಾರಿ ಯಲ್ಲವೆಂದು ಪೂರ್ವದಲ್ಲಿಯೆ ನಿನಗೆ ನಾವು ಕಟ್ಟುಮಾಡಿದ್ದೆವು. ಆದರೂ ನಿನ್ನ ದೂತರು ಈತನಂ ಕೊಂಡು ಪೋದರು. ಇದು ಸರಿಯೋ? ಜ್ಞಾನದಿಂ ಮಾಡಿ ದುದರಿಂದ ಆಜ್ಞೆ ಬಂದೀತು ಸಂಶಯವಿಲ್ಲವೆನಲು ಆಗ ನಾನು ಶಿವನ ವಾಕ್ಯವ ಕೇಳಿ, ಎಲೆ ಸ್ವಾಮಿಯೆ! ನನ್ನ ದೂತರು ಅಜ್ಞಾನದಿಂ ಮಾಡಿದರೆಂದು ಪೇಳ್ದು ದಂಡದಂತೆ ಬಿದ್ದು ನಮಸ್ಕಾರವಂ ಮಾಡಿ, ಈ ಅಪರಾಧವಂ ಕ್ಷಮಿಸಬೇಕೆಂದು ಪ್ರಾರ್ಥಿಸಲು, ಆ ಸಮಯದಲ್ಲಿ ಕುಮಾರಸ್ವಾಮಿಯು ನನ್ನಂ ನೋಡಿ ಒಂದು ವಾಕ್ಯವಂ ಪೇಳ್ದನು. ಎಲೆ ಯಮನೆ! ಶಿವಪ್ರಿಯನಾದ ಸದಾನಂದನೆಂಬ ಯೋಗೀಶ್ವರನು ಸ್ವೇಚ್ಛೆಯಿಂದ ಯಮಲೋಕಕ್ಕೆ ಪೋಗಿ ದೂತರಿಂ ಬಾಧೆ ಪಡುತಿರ್ಪ ನರಕಂಗಳಂ ನೋಡಿ ಉನ್ನತವಾಕ್ಯದಿಂ ಹರಹರ ಎಂದು ಪೇಳೆ, ನರಕದಲ್ಲಿರ್ಪ ಪ್ರಾಣಿಗಳು ಆ ಹರ ಶಬ್ದವಂ ಕೇಳಿ ನರಕದಿಂದೇಳುವ ಸಮಯ ದಲ್ಲಿ ನಾನಾರತ್ನ ವಿಚಿತ್ರವಾದ ವಿಮಾನಂಗಳಂ ಕಂಡು ಶೀಘ್ರದಿಂದಾ ವಿಮಾನ ಗಳನೇಲಿ ಕುಳಿತು ಕೈಲಾಸಕ್ಕೆ ಪೋಗಿ ಸಕಲ ದುಃಖಗಳಂ ಬಿಟ್ಟು ಸುಖದಿಂ ಇರುತಿರ್ದರು.

ಪರಶಿವಪರಿವಾರ ನಾಮಸ್ಮರಣಾಮಹಿಮೆಯನ್ನು ತಿಳಿಸುವಿಕೆ.

ನರಕಗಳು ಶೂನ್ಯವಾದ ಬಳಿಕ ನಾನು ಕೈಲಾಸಪರ್ವತಕ್ಕೆ ಬಂದು ಈ ವೃತ್ತಾಂತವಂ ಪೇಳಿದೆನು. ಆಗ ಶಿವನು ಜ್ಞಾನದಿಂದಾಗಲೀ ಪ್ರಸಂಗದಿಂ ದಾಗಲೀ ಲೋಭದಿಂದಾಗಲೀ ದೇವಿಯ ನಾಮಂಗಳಂ ವಿಘ್ನೇಶ್ವರನ ನಾಮಂ ಗಳಂ ಸುಬ್ರಹ್ಮಣ್ಯನ ನಾಮಂಗಳಂ ಗಣಾಧೀಶ್ವರರ ನಾಮುಗಳಂ ಭಕ್ತರ ನಾಮು ಗಳಂ ಆರು ಪೇಳುವರೋ ಆರು ಕೇಳುವರೋ ಅವರಿಗೆ ಪಾಪವೂ ನರಕಭಯವೂ ಇಲ್ಲವು. ಅವರ ಪಿತೃಗಳಿಗೆ ಬಾಂಧವರಿಗೆ ನರಕ ಭಯವಿಲ್ಲವೆಂದು ಶಿವನು ನಿನಗೆ ಪೇಳ್ದನಲ್ಲ. ಆದೊಡಂ ಈಗ ಮೂಢನೋಪಾದಿಯಲ್ಲಿ ಶಿವಸನ್ನಿಧಿಗೆ ಏನೆಂದು ಬಂದೆ? ನೀನಿಲ್ಲಿರದಿರು ಪೋಗು ಪೋಗು ಎನಲು, ಆಗ ನಾನು ಕುಮಾರ ಸ್ವಾಮಿಯ ವಾಕ್ಯವಂ ಕೇಳಿ ಭಯ ಯುಕ್ತನಾಗಿ ಅವರಿಗೆ ನಮಸ್ಕರಿಸಿ ಅವರ ಆಜ್ಞೆಯಿಂ ನನ್ನ ಲೋಕಕ್ಕೆ ಬಂದೆನು, ಎಲೆ ಕಾಲನೆ! ನೀನು ನನ್ನಿಂದ ಅನೇಕ ಪುಣ್ಯ ಕಥೆಗಳಂ ಕೇಳಿವೆ. ನೀನು ಶಿವನಾಮದ ಮಹಿಮೆಯಂ ಶಿವ ಭಕ್ತರ

ನಾಮದ ಮಹಿಮೆಯಂ ಮನದಲ್ಲಿ ಸ್ಮರಿಸಿ ಪ್ರಮಾದವಿಲ್ಲದೆ ನನ್ನ ಲೋಕದಲ್ಲಿರು. ಆರು ಶಿವಭಕ್ತರನಾಮಂಗಳಂ ಕೇಳುವರೋ ಸ್ಮರಿಸುವರೋ ಪೇಳುವರೋ ಅವರಂ ನೀನು ದೂರದಲ್ಲಿಯೆ ನೋಡಿ ನಮ್ಮಾಜ್ಞೆಯಿಂ ತಲೆವಾಗಿ ಪೋಗು ಎನಲು, ಕಾಲನದಂ ಕೇಳಿ ಶಿವನಾಮದ ಮಹಿಮೆಯಂ ತಿಳಿದು ಪ್ರಮಾದವಿಲ್ಲದೆ ಇರುತಿರ್ದನು. ಎಲೆ ದ್ವಿಜರುಗಳಿರಾ! ಶಿವನಾಮದ ಮಹಿಮೆಯು ಆರಿಂದಲೂ ತಿಳಿಯಲಶಕ್ಯವು ನಾನು ತಿಳಿದಮಾತ್ರವಂ ನಿಮಗೆ ಪೇಳಿದೆನು.

ಎಲೈ ಋಷಿಗಳಿರಾ! ಕೆಲಂಬರು ಶಿವನಾಮಂಗಳಂ ಜಪಿಸಿ ಐಶ್ವರ್ಯಂಗಳಂ ಪಡೆದರು, ಮತ್ತೆ ಕೆಲಂಬರು ಪುಣ್ಯಾಯುಷ್ಯವಂ ಪಡೆದರು, ಕೆಲಂಬರು ಪುತ್ರಾದಿಗಳಂ ಪಡೆದರು, ಇನ್ನು ಕೆಲಂಬರು ಬಹುಕಾಲ ರೋಗಿಗಳಾಗಿರ್ದು ಬಳಿಕ ಶಿವನಾಮಂಗಳಂ ಜಪಿಸಿ ಯನ್ಮನಸ್ಕರಾದರು. ಕೆಲವರು ಭೂತಪ್ರೇತ ಪಿಶಾಚ ವಿಷ ದುಷ್ಟಮೃಗಂಗಳಿಗಂಜರು. ಕೆಲವರು ಯುದ್ಧದಲ್ಲಿ ಶತ್ರುಗಳಂ ಜಯಿಸಿದರು. ಕೆಲಂಬರು ವಾಕ್ಸಿದ್ಧಿಯಂ ಪಡೆದರು. ಕೆಲವರು ಸಮಸ್ತ ಕಾಂಕ್ಷೆಗಳಂ ಪಡೆದರು. ಆರು ಭಸ್ಮ ರುದ್ರಾಕ್ಷಗಳಂ ಧರಿಸಿ ಶಿವನಾಮಗಳಂ ಜಪಿಸುತಿರ್ದಾರೋ ಪ್ರತ್ಯಕ್ಷವಾದ ಈಶ್ವರ ರೂಪವಾದ ಅವರ ಮಹಿಮೆಯಂ ನಾನು ಪೇಳಲರಿಯೆನು. ಆವ ಮಹಾತ್ಮರು ಶಿವನಾಮ ಮಹಿಮೆಯಂ ಪಠಿಸುತಿರ್ದಾರೋ ಕೇಳಿಸುತಿರ್ದಾರೋ ಅವರು ಇಹಲೋಕದಲ್ಲಿ ಅನೇಕ ಭೋಗಗಳನನುಭವಿಸುತಿರ್ದಾರು, ಆಯುಷ್ಯ ಆರೋಗ್ಯ ಐಶ್ವರ್ಯ ಪುತ್ರರಂ ಪಡೆದು ಅಂತ್ಯದಲ್ಲಿ ಶಿವಸಾಯುಜ್ಯವನೈದುತಿರ್ದಾರೆಂದು ಸೂತಂ ಶೌನಕಾದಿಗಳಿಗೆ ಪೇಳ್ದನೆಂಬಲ್ಲಿಗೆ, ಉಪದೇಶ ಕಾಂಡದೊಳು ಇಪ್ಪತ್ತಾರನೆಯ ಅಧ್ಯಾಯವು ಸಮಾಪ್ತವಾದುದು.

ಇಪ್ಪತ್ತೇಳನೆಯ ಅಧ್ಯಾಯವು.

ಶೈವವ್ರತ ಮಹಿಮಾನು ವರ್ಣನಂ.

ಎಲೈ ಋಷಿಗಳಿರಾ! ಅಷ್ಟ ಮಹಾಸಿದ್ಧಿಗಳಂ ಕೊಡುವ ಶೈವ ವ್ರತಗಳಂ ಪೇಳುತಿರ್ದೇನೆ ಸಾವಧಾನ ಮನದಿಂ ಕೇಳುವರಾಗಿ, ಏನೆಂದರೆ, "ಸೋಮವಾರ ವ್ರತ, ಆದ್ರಾರ್ನಕ್ಷತ್ರವ್ರ, ಉಮಾಮಹೇಶ್ವರವ್ರತ, ಶಿವರಾತ್ರೀವ್ರತ, ಕಲ್ಯಾಣ ವ್ರತ, ಶೂಲವ್ರತ, ವೃಷಭವ್ರತ" ವೆಂಬ ಈ ಎಂಟು ಮಹಾ ವ್ರತಂಗಳು ಶಿವಂಗೆ ಅತಿ ಪ್ರಿಯಂಗಳು. ಶುಕ್ರವಾರವ್ರತ, ಫಾಲ್ಗುಣಮಾಸದ ಅಶ್ವಿನೀ ನಕ್ಷತ್ರವ್ರತ, ಆಶ್ವೀಜಮಾಸದ ನವಮೀವ್ರತ, ಈ ಮೂರು ವ್ರತಂಗಳು

ಪಾರ್ವತೀದೇವಿಗೆ ಅತಿ ಪ್ರಿಯಂಗಳು. ಶುಕ್ರವಾರವ್ರತ, ಭಾದ್ರಪದ ಶುದ್ಧ ಚತುರ್ಥೀವ್ರತ, ಮಾರ್ಗಶೀರ್ಷ ಷಷ್ಠೀವ್ರತ ಈ ಮೂರು ವ್ರತಂಗಳು ವಿನಾಯಕಂಗೆ ಪ್ರಿಯಕರಂಗಳು. ಶುಕ್ರವಾರವ್ರತ, ಕೃತ್ತಿಕಾನಕ್ಷತ್ರವ್ರತ, ಸ್ಕಂದ ಷಷ್ಠೀವ್ರತ ಈ ವ್ರತಂಗಳು ಕುಮಾರಸ್ವಾಮಿಗೆ ಪ್ರಿಯಂಗಳು. ಭಾನುವಾರ ವ್ರತ, ತುಲಾರಾಶಿಯಲ್ಲಿ ಸೂರ್ಯನಿರುವಲ್ಲಿ ಭರಣೀನಕ್ಷತ್ರವ್ರತ ಈ ವ್ರತಂಗಳು ಭೈರವಂಗೆ ಅತಿ ಪ್ರಿಯಂಗಳು. ಮಂಗಳವಾರವ್ರತವು ವೀರಭದ್ರಂಗೆ ಪ್ರಿಯಕರವು. ಈ ವ್ರತಂಗಳಂ ಯಾರು ಮಾಡುವರೋ ಅವರು ಇಹದಲ್ಲಿ ಅನೇಕ ಭೋಗಂಗಳಂ ಭುಂಜಿಸಿ ಬಳಿಕ ಶಿವಲೋಕಕ್ಕೆ ಪೋಗಿ, ಅಲ್ಲಿ ಅನೇಕ ಕಾಲವಿರ್ದು ಅಂತ್ಯದಲ್ಲಿ ಶಿವಸಾಯುಜ್ಯವನೈದುವರು. ಮತ್ತ ಮೀವ್ರತಂಗಳ ಅನುಷ್ಠಾನವಂ ಪೇಳುವೆನು. ಕಾರ್ತಿಕಮಾಸದ ಸೋಮವಾರದೊಳು ಉಷಃಕಾಲದಲ್ಲೆದ್ದು ಶಿವಧ್ಯಾನವಂ ಮಾಡಿ ಸ್ನಾನವಂ ಮಾಡಿ ಸಂಧ್ಯಾವಂದನೆಯಂ ತೀರಿಸಿ ಕಲ್ಯಾಣ ಗುಣಯುಕ್ತನಾದ ಮಹಾದೇವನಂ ಪೂಜಿಸಿ, ಶಿವಭಕ್ತರಂ ಪತಿವ್ರತೆಯರಾದ ಸ್ತ್ರೀಯರಂ ಗಂಧ ಪುಷ್ಪಾದಿಗಳಿಂದರ್ಚಿಸಿ, ಶಿವನೆಂದು ಶಿವೆ ಎಂದು ಭಾವಿಸಿ, ಅವರಿಗೆ ಭೋಜನಂಗಳಿಂ ತೃಪ್ತಿಯಮಾಡಿಸಿ ರಾತ್ರಿಯಲ್ಲಿ ಭೋಜನಂ ಗೈದು ಶಿವಧ್ಯಾನಪರನಾಗಿರಬೇಕು. ಶಿವಾರ್ಚನಾ ಹೀನನಾದವನು ಸ್ನಾನವ ಮಾಡಿ ನಿತ್ಯಕರ್ಮಂಗಳಂ ಮಾಡಿ, ಶಿವಸನ್ನಿಧಿಗೆ ಪೋಗಿ ಬಿಲ್ವಪತ್ರೆಯಿಂ ಶಿವಾರ್ಚನೆಯಂ ಮಾಡಿಸಿ, ದ್ರವ್ಯ ವಂಚನೆಯಂ ಮಾಡದೆ ಸ್ವಾಮಿಗೆ ಅರ್ಘವಂ ಅರ್ಪಿಸಿ, ಶಿವಭಕ್ತರಾದ ಜಿತೇಂದ್ರಿಯರಾದ ದ್ವಿಜರಿಗೆ ಅನ್ನವನಿಟ್ಟು ತೃಪ್ತಿಯಂ ಮಾಡಿಸಿ, ತಾನು ರಾತ್ರಿಯಲ್ಲಿ ಉಪವಾಸವಿರಬೇಕು, ಅಲ್ಲದಿರ್ದೊಡೆ ಕ್ಷೀರವನ್ನಾದರೂ ಪಾನವ ಮಾಡಲಿ ಅಶಕ್ತನಾದೊಡೆ ಭುಂಜಿಸಲಿ. ಆರು ಕೆಲಂಬರು ಆಗಮೋಕ್ತ ಪ್ರಕಾರದಿಂ ಹೀಗೆ ಸೋಮವಾರ ವ್ರತವಂ ಮಾಡುತಿರ್ದಾರೊ ಅವರು ಸಮಸ್ತ ಪಾಪಂಗಳಿಂ ಬಿಡಲ್ಪಟ್ಟವರಾಗಿ, ಇಹದಲ್ಲಿ ಅನೇಕ ಭೋಗಂಗಳಂ ಭುಂಜಿಸಿ ಅಂತ್ಯದಲ್ಲಿ ಕೈಲಾಸವನೈದುವರು. ಪೂರ್ವದಲ್ಲಿ ಪತಿವ್ರತೆಯಾದ ಸೀಮಂತಿನಿಯು ಸೋಮವಾರವ್ರತವಂ ಮಾಡಿ ದಂಪತೀರೂಪವಾಗಿ ಬಂದ ಬ್ರಹ್ಮಚಾರಿಗಳಂ ನೋಡಿ, ಉಮಾಮಹೇಶ್ವರರೆಂದು ಧ್ಯಾನಿಸಿ ಅವರಂ ಸತಿಪತಿಗಳೆಂದು ತಿಳಿದು ಪರಮ ಭಕ್ತಿಯಿಂ ಪೂಜಿಸಿದಳು. ಬಳಿಕ ಆ ಸೀಮಂತಿನಿಯ ಭಾವದಿಂದೀರ್ವರು ದಂಪತಿಗಳೇ ಆದರು. ಅದುಕಾರಣದಿಂ ಸೋಮವಾರವ್ರತದ ಮಹಿಮೆಯು ಹೀಗೆ ಆಶ್ಚರ್ಯಕರವಾದದ್ದು. ಋಷಿಗಳೊಳಗೆ ಶ್ರೇಷ್ಠನಾದ ವಸಿಷ್ಠಮುನಿಯು ಈ ಸೋಮವಾರವ್ರತವಂ ಮಾಡಿ ಅರುಂಧತಿಯೆಂಬ ಸ್ತ್ರೀಯಂ ಪಡದನು. ಮತ್ತಂ ವಿಭುವೆಂಬರಾಯನು ಪುತ್ರಹೀನನಾಗಿ ಈ ವ್ರತವ

ನಾಚರಿಸಿ ಸುತೋತ್ತಮನಂ ಪಡದನು. ಇದಲ್ಲದೆ ಸೋಮಶರ್ಮನೆಂಬ ಘೋರಿಯು ಈ ಸೋಮವಾರವ್ರತವಂ ಗೈದು ಈಶ್ವರಪ್ರಸಾದದಿಂ ಮಹದೈಶ್ವರ್ಯ ವಂ ಪಡದನು. ವಜ್ರಬಾಹುವೆಂಬ ಮಹಾರಾಯನು ಶತ್ರುಗಳಿಂ ಪೀಡಿತನಾಗಿ ಈ ವ್ರತವನಾಚರಿಸಿ ಸಮಸ್ತ ಶತ್ರುಗಳಂ ಜಯಿಸಿದನು. ಸಿಂಹನೆಂಬ ರಾಜನು ಈ ವ್ರತವಂ ಮಾಡಿ ಮೃತ್ಯುವಿನಿಂದ ಬಿಡಲ್ಪಟ್ಟವನಾಗಿ ಅಷ್ಟೈಶ್ವರ್ಯವಂ ಪಡ ದನು. ಕೀಚಕನೆಂಬ ಬ್ರಾಹ್ಮಣನು ಈ ವ್ರತವನಾಚರಿಸಿ ಮೃತ್ಯುವಂ ಜಯಿಸಿ ದನು. ವೇದಾಂಗನೆಂಬ ದ್ವಿಜನು ಧರ್ಮವೀರ್ಯನೆಂಬವಂ ಸಹ ಈ ಸೋಮವಾರ ವ್ರತವಂ ಮಾಡಿ ಸ್ತ್ರೀ ಸಮೇತರಾಗಿ ಶರೀರ ಸಹ ಕೈಲಾಸವನೈದಿದರು.

ವೇಶ್ಯಾಂಗನಾಸಕ್ತನಾದ ವಿರಾಟರಾಯನ ಕಥೆ.

ಭಕ್ತಿಶೀಲನೆಂಬಾತನು ಈ ವ್ರತವಂ ಮಾಡಿ ಪುತ್ರ, ಮಿತ್ರ, ಕಳತ್ರಾದಿ ಗಳ್ವೆರಸಿ ಇಹಲೋಕದಲ್ಲಿ ಅನೇಕ ಭೋಗಂಗಳಂ ಭುಂಜಿಸಿ ಕೈಲಾಸಪರ್ವತಕ್ಕೆ ಪೋಗಿ ಚಿರಕಾಲವಿರ್ದು ಅಂತ್ಯದಲ್ಲಿ ಮೋಕ್ಷವಂ ಪಡೆದನು. ಸತ್ಯಸಂಧ ಕುಮಾರನಾದ ವಿರಾಟನೆಂಬ ಮಹಾರಾಯನು ವೇಶ್ಯಾಲಂಪಟನಾಗಿ ಒಂದಾ ನೊಂದು ಕಡೆಯಲ್ಲಿ ಚೌರ್ಯವಂ ಮಾಡಿ ವೇಶ್ಯಾಗೃಹಕ್ಕೆ ಪೋಗುತಿರಲು, ಗ್ರಾಮ ಪಾಲಕರು ಜಾಗರೂಕರಾಗಿ ಆತನಂ ಹಿಡಿಯಲ್ಬರಲಾಗಿ, ವಿರಾಟನವರಂ ಕಂಡು ಭೀತನಾಗಿ ವನಕ್ಕೆ ಪೋಗಿ ಮಳೆಯಿಂ ನೆನೆದು ಭಕ್ಷಣಕ್ಕೆ ಯೇನೂ ದೊರೆಯದೆ ಆ ದಿವಸ ಸೋಮವಾರವೆಂದು ತಿಳಿಯದೆ, ಕಂದಮೂಲ ಫಲಾಹಾರವಂ ಮಾಡಿ ವನದಲ್ಲಿ ಸಂಚರಿಸುತ್ತಿರುವಾಗ, ಒಂದಾನೊಂದು ಸರ್ಪನಿಂ ಕಚ್ಚಲ್ಪಟ್ಟವನಾಗಿ ಮೃತಪಟ್ಟನು. ಬಳಿಕ ಯಮದೂತರು ಆತನಂ ಕೊಂಡುಪೋಗಲು ಬರೆ, ಆಗ ಶಿವದೂತರು ಬಂದು ಆ ಯಮದೂತರಂ ಕೊಂದೋಡಿಸಿ ಆತನಂ ವಿಮಾ ನದ ಮೇಲೆ ಕುಳ್ಳಿರಿಸಿಕೊಂಡು ಶಿವಲೋಕಕ್ಕೆ ಕೊಂಡುಪೋಗುತಿದ್ದರು. ಆ ಸಮಯದಲ್ಲಿ ಯಮದೂತರು ಶಿವಗಣಂಗಳಿಂದ ಬಾಧಿಸಲ್ಪಟ್ಟವರಾಗಿ ಯಮನ ಬಳಿಗೆ ಪೋಗಿ ಈ ವೃತ್ತಾಂತವಂ ಪೇಳೆ, ಯಮನಾವಾಕ್ಯವಂ ಕೇಳಿ ಶೀಘ್ರದಿಂ ಪೊರಮಟ್ಟು ಶಿವಗಣಂಗಳ ಬಳಿಗೈದಿ ನಮಸ್ಕಾರವಂ ಮಾಡಿ, ಎಲೆ ಗಣಂಗ ಳಿರಾ! ಈತನು ಒಂದು ಪುಣ್ಯವನ್ನಾದರು ಮಾಡಿದವನಲ್ಲ, ಈತನಂ ದಿವ್ಯ ವಿಮಾನದ ಮೇಲೇರಿಸಿಕೊಂಡು ಪೋಗುವದುಚಿತವಲ್ಲ. ವಿಚಾರಿಸಿ ನೋಡಿದರೆ ಪುಣ್ಯ ಲೇಶವಾದೊಡಂ ಈತನಿಗಿಲ್ಲವು. ಬಹು ಪುಣ್ಯಮಾಡಿದವರ್ಗೆಯೇ ಶಿವ ಲೋಕ ಪ್ರಾಪ್ತಿಯುಂಟಾಗುವದಲ್ಲವೆ? ಎಂದು ನುಡಿದ ಯಮನ ವಾಕ್ಯವಂ ಕೇಳಿ, ಎಲೆ ಯಮನೆ! ಈತನು ಸೋಮವಾರದ ದಿವಸದಲ್ಲಿ ಮಳೆಯಿಂ ನೆನದು ಸ್ನಾನವಂ ಮಾಡಿ ಆ ಹಾರಾಭಾವದಿಂದ ಕಂದಮೂಲವಂ ಭಕ್ಷಿಸಿ, ಅರಣ್ಯದಲ್ಲಿ

ಸಂಚರಿಸುತ್ತಿರ್ದು, ಮರುದಿವಸದೊಳು ಸರ್ಪದಷ್ಟನಾಗಿ ಮೃತನಾದನು. ಆ ಫಲದಿಂ ಶಿವಲೋಕಪ್ರಾಪ್ತಿಯಿಂ ದಂತ್ಯದಲ್ಲಿ ಮೋಕ್ಷವುಂಟಾದೀತು. ಈಗ ನಾವುಗಳು ಶಿವಾಜ್ಞೆಯಿಂದಲೆ ಈತನಂ ಕೊಂಡುಪೋಗಲು ಬಂದೆವು ಅದುಕಾರಣದಿಂ ನೀನು ಈತನಂ ಬಿಟ್ಟು ನಿನ್ನ ಲೋಕಕ್ಕೆ ಪೋಗೆನಲು, ಆ ಯಮನು ಭಯಕಂಪಿತನಾಗಿ ಅವರಿಗೆ ನಮಸ್ಕಾರವಂ ಮಾಡಿ ತನ್ನ ಲೋಕಕ್ಕೆ ಪೋಗಿ ಅನೇಕ ಕಾಲ ಶಿವಸನ್ನಿಧಿಯಲ್ಲಿರ್ದು ಅಂತ್ಯದಲ್ಲಿ ಮೋಕ್ಷವನ್ನೈದಿದನು.

ಸೋಮವಾರ ಶಿವಪೂಜಾ ವ್ರತಮಹಿಮೆ.

ಚಂದ್ರನು ಈ ಸೋಮವಾರ ವ್ರತವಂ ಮಾಡಿ ಶಿವನಂ ಪ್ರಸನ್ನನಂ ಮಾಡಿಕೊಂಡು ತಾನು ಸೋಮನೆಂಬ ಪೆಸರಂ ಪಡೆದು ಶಿವನಂ ಕುರಿತು, ಎಲೈ ಪ್ರಭುವೆ! ಈ ಸೋಮವಾರ ವ್ರತವಂ ಆರು ಮಾಡುತಲಿರುವರೋ ಅವರಿಗೆಲ್ಲರ್ಗೆಯುಂ ನಿಮ್ಮ ಪ್ರಸಾದದಿಂದನೇಕ ಭೋಗಂಗಳುಂಟಾಗಿ ಅಂತ್ಯದಲ್ಲಿ ಮೋಕ್ಷವುಂಟಾಗಲೆಂದು ಪ್ರಾರ್ಥಿಸಲಾಗಿ, ಶಿವನು ಹಾಗೆಯೇ ಆಗಲೆಂದು ಚಂದ್ರಂಗೆ ವರವನ್ನಿತ್ತು ಅಂತರ್ಧಾನವನ್ನೈದಿದನು. ಎಲೈ ಋಷಿಗಳಿರಾ! ಆರು ಈ ಸೋಮವಾರವ್ರತವಂ ಮಾಡುತಿರುವರೋ ಅವರಿಗೆ ಪರಮೇಶ್ವರನು ಪ್ರಸನ್ನನಾಗಿ ಮೋಕ್ಷವನ್ನೀಯುವನೆಂಬ ವಿಷಯದಲ್ಲಿ ಸಂಶಯವಿಲ್ಲವು. ಆರು ಕೆಲಂಬರು ಶಿವಪ್ರಿಯವಾದ ಈ ಸೋಮವಾರ ವ್ರತದ ಮಾಹಾತ್ಮ್ಯೆಯಂ ಪಠಿಸುತ್ತಿರುವರೋ ಆರು ಕೆಲಂಬರು ಕೇಳುತ್ತಿರುವರೋ, ಮತ್ತಂ ಆರು ಕೆಲಂಬರು ಕೇಳಿಸುತ್ತಿರುವರೋ, ಅವರೆಲ್ಲರುಂ ಇಹಲೋಕದಲ್ಲಿ ಅನೇಕ ಭೋಗಂಗಳಂ ಭುಂಜಿಸಿ ಅಂತ್ಯದಲ್ಲಿ ಮೋಕ್ಷವನ್ನೈದುವರೆಂದು ಸೂತಂ ಶೌನಕಾದಿಗಳ್ಗೆ ನಿರೂಪಿಸಿದ ನೆಂಬಿಲ್ಲಿಗೆ, ಉಪದೇಶಕಾಂಡದೊಳು ಇಪ್ಪತ್ತೇಳನೆಯ ಅಧ್ಯಾಯವು ಸಂಪೂರ್ಣಮಾದುದು.

ಇಪ್ಪತ್ತೆಂಟನೆಯ ಅಧ್ಯಾಯವು.

ಆರ್ದ್ರಾಶಿವಯೋಗವ್ರತಮಹಿಮೆ-ಮಂಜುಕೇಶ ಕಥೆ.

ಎಲೈ ಋಷಿಗಳಿರಾ! ಆನಂತರದಲ್ಲಿ ಕಲ್ಯಾಣಕರವಾದ ಆರ್ದ್ರಾವ್ರತವಂ ಪೇಳುವೆನು ಕೇಳಿರೈ ಸೂರ್ಯನು ಆರ್ದ್ರಾನಕ್ಷತ್ರವಂ ಪೊಕ್ಕರೆ ಆ ದಿನದೊಳು ಧರ್ಮಾತ್ಮನಾದ ಮಹಾ ಪುರುಷನು ಪ್ರಾತಃಕಾಲದಲೆದ್ದು ಶುಚಿಭೂತನಾಗಿ ಶಿವಧ್ಯಾನವಂ ಮಾಡಿ, ಪುಣ್ಯತೀರ್ಥದಲ್ಲಿ ಸ್ನಾನಾದಿ ನಿತ್ಯಕರ್ಮಂಗನ್ನೆಸಗಿ, ಮುದದಿಂ ದೇವದೇವನಾದ ಶಂಕರಂಗೆ ನಮಸ್ಕಾರವಂ ಮಾಡಿ, ಗೃಹಕ್ಕೆ ಬಂದು

ಆ ದಿವಸ ಉಪವಾಸವಂ ಗೈದು, ಮರುದಿನ ಅರುಣೋದಯದಲ್ಲೆದ್ದು ಶುಚಿರ್ಭೂತನಾಗಿ ತ್ರಿಯಂಬಕನಂ ಧ್ಯಾನಿಸಿ, ಸ್ನಾನಾದಿ ನಿತ್ಯಕರ್ಮಾನಂತರದಲ್ಲಿ ಶಿವದರ್ಶನವಂ ಮಾಡಿ ಜಿತೇಂದ್ರಿಯನಾಗಿ ಶಿವಭಕ್ತರ್ಗೆ ಅನ್ನಾದಿಗಳಂ ಕೊಟ್ಟು ತೃಪ್ತಿಪಡಿಸಿ, ಅವರನುಜ್ಞೆಯಿಂ ತಾನು ಭೋಜನವಂ ಮಾಡಿ ಶಿವಧ್ಯಾನ ತತ್ಪರನಾಗಿರಬೇಕು. ಹೀಗೆ ಆರು ಕೆಲಂಬರು ಪರಮೇಶ್ವರನ ಸ್ವರೂಪವಾದ ಆರ್ದ್ರಾವ್ರತವನ್ನಾಚರಿಸುವರೋ ಅವರಿಗೆ ಭುಕ್ತಿಮುಕ್ತಿಗಳು ಕರಸ್ಥವಾಗಿರುವವು. ಆ ರೀತಿಯಲ್ಲಿ ಮಂಜುಕೇಶನೆಂಬ ಮಹಾಮುನಿಯು ಆರ್ದ್ರಾವ್ರತವಂ ಮಾಡಿ ದೇವದೇವನಾದ ಶಂಕರನ ತಾಂಡವವಂ ನೋಡಿ ಸಮಸ್ತ ಪಾಪಂಗಳಿಂ ಬಿಡಲ್ಪಟ್ಟವನಾಗಿ ಜೀವನ್ಮುಕ್ತನಾದನು. ಮತ್ತಂ ಪತಂಜಲಿಯೆಂಬ ಯೋಗಿಯು ಕರ್ಕೋಟಕನೆಂಬ ಮಹಾ ಸರ್ಪವು ಇವರೀರ್ವರು ವಿಧಾನದಿಂ ಆರ್ದ್ರಾವ್ರತವಂ ಮಾಡಿ ಮುದದಿಂ ದೇವದೇವನ ತಾಂಡವವಂ ನೋಡಿ ಜನ್ಮಮೃತ್ಯುಜರಾರಹಿತವಾದ ನಿತ್ಯತ್ವವಂ ಪಡೆದರು. ವ್ಯಾಘ್ರಪಾದನೆಂಬ ಯೋಗಿಯು ಈ ಆರ್ದ್ರಾವ್ರತವಂ ಮಾಡಿ ಶಿವನ ನೃತ್ಯವಂ ನೋಡಿ, ಅದರ ಪ್ರಭಾವದಿಂ ಉಪಮನ್ಯುವೆಂಬ ಪುತ್ರನಂ ಪಡೆದು ಜೀವನ್ಮುಕ್ತನಾದನು. ವಿಪುಲನೆಂಬ ದ್ವಿಜೋತ್ತಮನು ಈ ವ್ರತವಂ ಮಾಡಿ ಶರೀರದೊಡನೆ ದಿವ್ಯ ವಿಮಾನವನ್ನೇರಿ ಶ್ರೀ ಕೈಲಾಸಪರ್ವತಕ್ಕೆ ಪೋಗಿ ಶಿವನ ಸಮೀಪವನ್ನೈದಿ ಭಕ್ತಿಯಿಂ ನಮಸ್ಕರಿಸಿ, ಮರಳಿ ಭೂಲೋಕದಲ್ಲಿ ಮಹಂತನ ಗೃಹಕ್ಕೆ ಬಂದು ಅನೇಕ ಭೋಗಂಗಳಂ ಭುಜಿಸಿ, ಅಂತ್ಯದಲ್ಲಿ ಸಾಯುಜ್ಯವಂ ಪಡೆದನು. ಹೀಗೆ ಅನೇಕ ಶಿವಭಕ್ತರು ಈ ಆರ್ದ್ರಾವ್ರತವಂ ಮಾಡಿ ಅನೇಕ ಕಾಲ ಭೋಗಂಗಳಂ ಭುಂಜಿಸಿ ಮೋಕ್ಷವನ್ನೈದಿದರು. ಈ ತಿಥಿಯಲ್ಲಿ ಪರಮೇಶ್ವರನು ಪರಮಾನಂದ ನಿರ್ಭರನಾಗಿ ಸಮಸ್ತ ಪ್ರಾಣಂಗಳಂ ರಕ್ಷಿಸಲೋಸುಗ ಆನಂದ ತಾಂಡವವಂ ಮಾಡುತಲಿಹಾನೆ. ಅದುಕಾರಣದಿಂದೀ ನಕ್ಷತ್ರವ್ರತವು ಸರ್ವವ್ರತಂಗಳಿಗಿಂತಲು ಉತ್ತಮೋತ್ತಮವೆಂದು ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ,

ಉಪದೇಶಕಾಂಡದೊಳು ಇಪ್ಪತ್ತೆಂಟನೆಯ ಅಧ್ಯಾಯವು
ಸಂಪೂರ್ಣಮಾದುದು.

ಇಪ್ಪತ್ತೊಂಬತ್ತನೆಯ ಅಧ್ಯಾಯವು.

ಉಮಾಮಹೇಶ್ವರ ವ್ರತಮಹಿಮೆ.

ಎಲೈ ಋಷಿಗಳಿರಾ! ಉಮಾಮಹೇಶ್ವರ ವ್ರತವಂ ಪೇಳ್ವೆನು ಕೇಳಿರಿ, ಈ ಉಮಾಮಹೇಶ್ವರ ವ್ರತವು ಸೂರ್ಯನು ವೃಶ್ಚಿಕರಾಶಿಗೆ ಬಂದಲ್ಲಿ ಪೂರ್ಣಿಮಾ

ತಿಥಿಯಲ್ಲಿ ಮಾಡತಕ್ಕದ್ದು. ಎಂತೆಂದರೆ, ಉತ್ತಮನಾದ ಶಿವಭಕ್ತನು ಆ ತಿಥಿಯಲ್ಲಿ ಪ್ರಾತಃಕಾಲದಲ್ಲೆದ್ದು ಶುಚಿರ್ಭೂತನಾಗಿ ಯೇಕಾಗ್ರಮನದಿಂ ಶಿವನಂ ಧ್ಯಾನಿಸುತ, ಶುದ್ಧೋದಕದಲ್ಲಿ ಸ್ನಾನವಂ ಮಾಡಿ ನಿತ್ಯಕರ್ಮವಂ ತೀರಿಸಿ ದ್ರವ್ಯಲೋಭವಂ ಬಿಟ್ಟು, ಸುವರ್ಣದಿಂದಾಗಲಿ ರಜತದಿಂದಾಗಲಿ ಉಮಾಮಹೇಶ್ವರ ಪ್ರತಿಮೆಯಂ ಮಾಡಿಸಿ ತನ್ನ ವಿತ್ತಾನುಸಾರದಿಂ ಷೋಡಶೋಪಚಾರ ಪೂಜೆಗಳಿಂ ಸ್ವಾಮಿಯಂ ಪೂಜಿಸಿ ನಮಸ್ಕಾರವಂ ಮಾಡಿ ಪ್ರಾರ್ಥಿಸಿ, ಮರಳಿ ತನ್ನ ಗೃಹಕ್ಕೆ ಬಂದು ಶಿವಭಕ್ತರಾದ ಬ್ರಾಹ್ಮಣರಿಗೆ ಯಥಾಶಕ್ತಿ ದಾನವಂ ಮಾಡಿ, ಅವರಿಗೆ ಅನ್ನವನ್ನಿಟ್ಟು ತೃಪ್ತಿಪಡಿಸಿ, ತಾನು ಸಾಧುವಾದ ತಂಡುಲ ಪಿಷ್ಟವನ್ನಾಗಲಿ ಯೆರೆಯಪ್ಪವನ್ನಾಗಲೀ ಫಲವನ್ನಾಗಲಿ ಭುಜಿಸಬೇಕು. ಅಶಕ್ತನಾದೊಡೆ ಯೇಕವಾರ ಭುಂಜಿಸಿ ಉಮಾಮಹೇಶ್ವರ ವ್ರತಮಾಹಾತ್ಮ್ಯೆಯಂ ಕೇಳಿದ ಬಳಿಕ, ಶಿವಯೋಗಿಗೋಸುಗ ಆ ಪ್ರತಿಮೆಯಂ ಕೊಡಬೇಕು. ಆರು ಕೆಲಂಬರು ಆಗಮೋಕ್ತಮಾರ್ಗದಿಂ ಈ ಉಮಾಮಹೇಶ್ವರ ವ್ರತವಂ ಮಾಡುತಲಿರುವರೋ, ಅವರಿಗೆ ಇಹದಲ್ಲಿ ಭೋಗವು ಪರದಲ್ಲಿ ಮೋಕ್ಷವು ಸಹ ಉಂಟಾಗುವ ವಿಷಯದಲ್ಲಿ ಸಂಶಯವಿಲ್ಲವು.

ತೃಣಬಿಂದು ಮಹಾಮುನಿಯ ಕಥೆ.

ಪೂರ್ವದಲ್ಲಿ ತೃಣಬಿಂದುವೆಂಬ ಮಹಾಮುನಿಯು ಈ ವ್ರತವಂ ಮಾಡಿ ತಾನು ಜಾತ್ಯಂಧನಾದೊಡಂ, ಶಿವಪ್ರಸಾದದಿಂ ತಾವರೆ ದಳಕ್ಕೆ ಸಮಾನವಾದ ನಯನಂಗಳಂ ಪಡೆದನು. ವೊಬ್ಬಾಳೊಬ್ಬ ವಿಧವೆಯು ಈ ಉಮಾಮಹೇಶ್ವರ ವ್ರತವಂ ಮಾಡಿ ಮೃತನಾದ ಪತಿಯಂ ಪಡೆದು, ಇಹದಲ್ಲಿ ಅನೇಕ ಭೋಗಂಗಳಂ ಭುಂಜಿಸಿ ತುದಿಯಲ್ಲಿ ಶಿವಲೋಕವನ್ನೈದಿದಳು. ಮತ್ತೊಂರ್ವ ಸ್ತ್ರೀಯಳು ಪುತ್ರವಿಹೀನೆಯಾಗಿ ಈ ವ್ರತವಂ ಮಾಡಿ ಸತ್ಪುತ್ರನಂ ಪಡೆದು ಸುಖದಲ್ಲಿರ್ದು ಶಿವಲೋಕವನ್ನೈದಿದಳು. ವಿಷ್ಣುವು ಕೃಷ್ಣಾವತಾರದಲ್ಲಿ ಉಮಾಮಹೇಶ್ವರ ವ್ರತವಂ ಮಾಡಿ ಅನೇಕ ಸ್ತ್ರೀಯರಲ್ಲಿ ಅನೇಕ ಪುತ್ರರಂ ಪಡೆದನು. ಚತುರ್ಮುಖ ಬ್ರಹ್ಮನು ಅತ್ಯಂತ ಪ್ರೀತಿಯಿಂದ ಈ ವ್ರತವಂ ಮಾಡಿ ಗಾಯತ್ರಿ ಸಾವಿತ್ರಿಯೆಂಬ ಸ್ತ್ರೀಯರಂ ಪಡೆದನು. ಮತ್ತ ಮಿಂದ್ರನು ಈ ವ್ರತವಂ ಮಾಡಿ ಜಯಂತನೆಂಬ ಕುಮಾರನಂ ಪೊಂದಿದನು. ವಸಿಷ್ಠ ಮಹಾಮುನಿಯು ಇದನ್ನಾಚರಿಸಿ ಅಗ್ನಿಹೋತ್ರಾರ್ಥವಾಗಿ ಕಾಮಧೇನುವಂ ಪಡೆದನು. ಇದಲ್ಲದೆ ಗೌತಮ ಮಹಾಮುನಿಯು ಈ ವ್ರತವಂ ಮಾಡಿ ಶತಾನಂದನೆಂಬ ಪುತ್ರನಂ ಪಡೆದನು. ಜನಕಮಹಾರಾಯನು ಇದನ್ನಾಚರಿಸಿ ಸ್ವರ್ಗವನ್ನೈದಿ ದೇವೇಂದ್ರನಿಂ ಮಾಡಲ್ಪಟ್ಟ ಪೂಜೆಯಂ ಕೈಕೊಂಡು, ಅತಿ ಸೌಂದರ್ಯವತಿಯಾದ

ಊರ್ವಶಿಯೊಡನೆ ಕ್ರೀಡಿಸಿ ಕಲ್ಪವೃಕ್ಷವಂ ತೆಗದುಕೊಂಡು ಮರಳಿ ಭೂಲೋಕಕ್ಕೆ ಬಂದು ಅನೇಕಕಾಲವಿರ್ದು ಬಹುಕುಮಾರರಂ ಪಡದು ಅವರೊಳು ಜ್ಯೇಷ್ಠಪುತ್ರಂಗೆ ಪಟ್ಟವಂ ಕಟ್ಟಿ, ನವರತ್ನಖಚಿತಮಾದ ಕಾಂಚನ ವಿಮಾನವನೇರಿ ಕೈಲಾಸಗಿರಿಗೆ ಸಾರಿ ಚಿರಕಾಲವಿರ್ದು ಪರಶಿವನಲ್ಲಿ ಸಾಯುಜ್ಯವನೈದಿದನು. ಸುಧರ್ಮನೆಂಬ ಬ್ರಾಹ್ಮಣನು ಶಾಸ್ತ್ರಾರ್ಥವಿಹೀನನಾಗಿ ಮೂಢಬುದ್ಧಿಯಿಂ ಶಾಸ್ತ್ರವಂ ಪಠಿಸಿದರೂ ಬಾರದಕಾರಣ ಸರ್ವರಿಂದಲು ಹಾಸ್ಯವಂ ಮಾಡಲ್ಪಟ್ಟವನಾಗಿ, ಬಳಿಕ ದಿವ್ಯವಾದ ಉಮಾಮಹೇಶ್ವರವ್ರತವಂ ಮಾಡಲಾಗಿ, ಸರ್ವವಿದ್ಯಾರೂಪಿಣಿಯಾದ ಸರಸ್ವತಿಯು ಉಮಾದೇವಿಯ ಕೃಪೆಯಿಂದ ಆತನ ಮುಖದಲ್ಲಿ ಬಂದು ನಿಂತಳು. ಆಗ ಆತಂಗೆ ಸಕಲ ಶಾಸ್ತ್ರಾರ್ಥಜ್ಞಾನವು ತಿಳಿದಹಾಗೆ ಮತ್ತೊರ್ವನಿಗು ತಿಳಿಯಲಿಲ್ಲ. ಅನಂತರದಲ್ಲಿ ಆ ದೇಶದರಾಯನು ಆತನಂ ಕರೆಯಿಸಿ ಬಹು ಧನವನಿತ್ತನು. ಆಗ ಎಲ್ಲರು ಆತನ ದಿವ್ಯ ವಿದ್ಯಾ ಪ್ರಭಾವವಂ ನೋಡಿ ತಲೆವಾಗಿದರು.

ಸಿಂಧುಸೇನರಾಯನ ಕಥೆ.

ಬಳಿಕ ಆ ಸುಧರ್ಮನೆಂಬ ಬ್ರಾಹ್ಮಣನು ಅನೇಕ ದ್ವಿಜರಿಗೆ ವಿದ್ಯಾದಾನವಂ ಮಾಡಿ, ಸಕಲ ಶಾಸ್ತ್ರಾರ್ಥ ಕೋವಿದರಾದ ಪುತ್ರರಂ ಪಡದು, ಅನೇಕಕಾಲ ಬಹು ಭೋಗಂಗಳಂ ಭುಂಜಿಸಿ ಅಂತ್ಯದಲ್ಲಿ ವಿಮಾನವನೇರಿ ಶರೀರಸಹ ಕೈಲಾಸಕ್ಕೆ ಪೋಗಿ, ಶಿವಾಜ್ಞೆಯಿಂ ಗಾಣಾಪತ್ಯವಂ ಪಡದನು. ಸಿಂಧುಸೇನನೆಂಬ ರಾಯನು ಯುದ್ಧದಲ್ಲಿ ಪರಾಜಿತನಾಗಿ ಶತ್ರುಗಳಿಗೆ ಭಯಪಟ್ಟು, ಸತಿಯೊಡನೆ ತನ್ನ ನಗರವಂ ಬಿಟ್ಟು ಮಹಾವನವನೈದಿ, ಅಲ್ಲಿ ಕಂದಮೂಲಾಹಾರವಂ ಮಾಡಿಕೊಂಡು ಚಿರಕಾಲವಿರ್ದು, ಒಂದು ಸಮಯದಲ್ಲಿ ಅಗಸ್ತ್ಯಮಹಾಮುನಿಯಂ ಕಂಡು ತನ್ನ ವೃತ್ತಾಂತವಂ ಪೇಳಲಾಗಿ, ಆ ಮಹಾಮುನಿಯು ಎಲೈ ಮಹಾರಾಜನೆ! ನೀನು ಉಮಾಮಹೇಶ್ವರ ವ್ರತವಂ ಮಾಡಿದೆಯಾದರೆ ಸರ್ವಶತ್ರುಗಳಂ ನಿಗ್ರಹಿಸಿ ಪೂರ್ವದಂತೆ ನಿನ್ನ ಪುರದಲ್ಲಿ ವಾಸವಂ ಮಾಡುವಿಯೆಂದು ನುಡಿದನು. ಅನಂತರದಲ್ಲಿ ರಾಯನು ಆ ಮಾತಿಗೆ ಒಳಪಟ್ಟು ಈ ವ್ರತವಂ ಮಾಡಲಾಗಿ, ಬಳಿಕ ಕುಬೇರನು ಶಿವಾಜ್ಞೆಯಿಂದಾತನ ಬಳಿಗೆ ಬಂದು ಆತನ ರಾಜಧಾನಿಯಲ್ಲಿ ಆತನಂ ಸ್ಥಾಪಿಸಿ, ಶತ್ರುಗಳಂ ಸಂಹರಿಸಿ, ಸತಿಯೊಡನೆ ಗಜದ ಮೇಲೆ ಕುಳ್ಳಿರಿಸಿ ಪಟ್ಟವಂ ಕಟ್ಟಿ ಬಹು ದ್ರವ್ಯವಂ ಕೊಟ್ಟು, ಬಳಿಕಾತನ ಅನುಜ್ಞೆಯಿಂ ತನ್ನ ಸ್ಥಾನಕ್ಕೆ ಪೋದನು. ಎಲೈ ಋಷಿಗಳಿರಾ! ಈ ಪ್ರಕಾರವಾಗಿ ಸಿಂಧುಸೇನ ಮಹಾರಾಯನು ಬಹು ಭೋಗಂಗಳನನುಭವಿಸಿ ಅಂತ್ಯದಲ್ಲಿ ಕೈಲಾಸಕ್ಕೆ ಪೋದನು. ಮತ್ತಂ ಅನೇಕ ಜನರು ಈ ವ್ರತವಂ ಮಾಡಿ ಅನೇಕ

ಭೋಗಂಗಳನನುಭವಿಸಿ ತುದಿಯಲ್ಲಿ ಮೋಕ್ಷಮಂ ಪಡದರು. ಆರು ಕೆಲಂಬರು ಈ ಉಮಾಮಹೇಶ್ವರ ವ್ರತಮಂ ಮಾಡಿ ಈ ಕಥೆಯಂ ಕೇಳುವರೋ ಯಾರು ಪಠಿಸುವರೋ ಅವರು ಇಹದಲ್ಲಿ ಬಹು ಭೋಗಂಗಳನನುಭವಿಸಿ ಪರದಲ್ಲಿ ಸದ್ಗತಿಯಂ ಪಡೆಯುವರೆಂದು ಸೂತಂ ನಿರೂಪಿಸಿದನೆಂಬಲ್ಲಿಗೆ, ಶಿವರಹಸ್ಯೋಪದೇಶಕಾಂಡದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯವು ಸಮಾಪ್ತಮಾದುದು.

ಮುವ್ವತ್ತನೆಯ ಅಧ್ಯಾಯವು.

ಶಿವರಾತ್ರೀವ್ರತ - ಪೂಜಾ ಮಹಿಮೆ.

ಎಲೈ ಮುನಿಗಳಿರಾ! ಕಲ್ಯಾಣಕರವಾದ ಶಿವರಾತ್ರಿಯ ಮಹಾತ್ಮ್ಯವಂ ಪೇಳುತಿರ್ಧೇನೆ ಸಾವಧಾನದಿಂ ಕೇಳಿರಿ, ಈ ಶಿವರಾತ್ರೀವ್ರತವು ನಿತ್ಯಮಾಸಾದಿ ಭೇದದಿಂ ನಾಲ್ಕು ವಿಧವಾಗಿಹುದು. ಪ್ರತಿ ದಿವಸದಲ್ಲಿಯು ರಾತ್ರಿಕಾಲದಲ್ಲಿ ನಾಲ್ಕು ಝಾಮಂಗಳಲ್ಲಿಯು ಶಿವಾರ್ಚನೆಯಂ ಮಾಡಬೇಕು. ಇದು ನಿತ್ಯ ಶಿವಾರ್ಚನೆಯೆಂಬದು. ಆವ ಮಾಸದಲ್ಲಿಯಾದರು ಸೋಮವಾರಯುಕ್ತವಾದ ಅಮಾವಾಸ್ಯೆಯ ದಿವಸದಲ್ಲಿ ನಾಲ್ಕು ಯಾಮಂಗಳಲ್ಲಿಯು ಶಿವಪೂಜೆಯಂ ಮಾಡತಕ್ಕದ್ದು ಯಾವುದೋ ಅದು ಯೋಗವೆಂಬ ಶಿವರಾತ್ರೀವ್ರತವು. ಮತ್ತಂ ಮಾಘಮಾಸದ ಕೃಷ್ಣಪಕ್ಷದ ಚತುರ್ದಶೀ ದಿವಸದಲ್ಲಿ ಚತುರ್ಯಾಮದಲ್ಲಿಯು ಶಿವಾರ್ಚನೆಯಂ ಮಾಡುವದ್ಯಾವುದೋ ಅದು ಮೋಕ್ಷಪ್ರದವಾದ ಶಿವರಾತ್ರಿಯೆನ್ನಿಸಿಕೊಂಬುವದು. ಇದು ಎರಡನೆಯ ವಿಧವಾದ ವ್ರತವು. ಇದಲ್ಲದೆ ಮಾಘಮಾಸದ ಶುಕ್ಲಪಕ್ಷ ಪಾಡ್ಯಮಿ ಆರಭ್ಯ ಕೃಷ್ಣಪಕ್ಷ ತ್ರಯೋದಶೀ ಪರ್ಯಂತರ ಏಕವಾರ ಭುಂಜಿಸಿ ನಿಯಮವಾಗಿರ್ದು, ಆ ಬಳಿಕ ಚತುರ್ದಶಿಯ ಪ್ರಾತಃಕಾಲದಲ್ಲೆದ್ದು ಶುಚಿರ್ಭೂತನಾಗಿ, ಅನಂತ ಕಲ್ಯಾಣಗುಣನಾದ ಮಹೇಶ್ವರನಾದ, ಪರಿಪೂರ್ಣ ವೈಭವಶಾಲಿಯಾಗಿ ಜ್ವಾಲಾಮಾಲಾ ಸಹಸ್ರಗಳಿಂ ಬೆಳಗುವನಾದ ಮಹಾ ಲಿಂಗಾಕೃತಿಯಾದ ಶಿವನಂ ಹೃದಯ ಕಮಲದಲ್ಲಿ ಧ್ಯಾನಿಸಿ, ನಿರ್ಮಲೋದಕದಲ್ಲಿ ಸ್ನಾನಮಂ ಮಾಡಿ ನಿತ್ಯ ಕರ್ಮಂಗಳಂ ತೀರಿಸಿಕೊಂಡು, ರಾತ್ರಿಯಲ್ಲಿ ಚತುರ್ಯಾಮಂಗಳಲ್ಲಿ ಲಿಂಗಾರ್ಚನೆಯಂ ಮಾಡುವದ್ಯಾವುದೊ ಅದು ಮಾಘಮಾಸ ಶಿವರಾತ್ರೀವ್ರತವೆಂದೆನ್ನಲ್ಪಡುವದು. ಇದು ಮೂರನೆಯ ವಿಧವಾದ ಶಿವರಾತ್ರೀವ್ರತವು. ಮತ್ತಂ ಮಾಘ ಬಹುಳ ಚತುರ್ದಶೀ ಪ್ರಾತಃಕಾಲದಲ್ಲೆದ್ದು ಹೃದಯದಲ್ಲಿ ಶಂಕರನಂ ಧ್ಯಾನಿಸಿ, ಬಳಿಕ ಸ್ನಾನ ಮುಂತಾದ ನಿತ್ಯಕರ್ಮಗಳಂ ಮಾಡಿ

ರಾತ್ರಿಯೊಳು ನಾಲ್ಕು ಝಾವಂಗಳಲ್ಲಿಯು ನಿದ್ರೆಯಂ ಬಿಟ್ಟು ಶಿವನಂ ಪೂಜಿಸುವ ದ್ಯಾವದೋ ಅದು ನಾಲ್ಕನೆಯ ವ್ರತವು. ಸೋಮವಾರ ಯುಕ್ತವಾದ ಅಮಾವಾಸ್ಯೆಯಲ್ಲಿ ಮಾಡುವ ಶಿವರಾತ್ರೀವ್ರತವು ಯೋಗವೆಂಬದು ನೈಮಿತ್ತಿಕವಾದ ಐದನೆಯ ವ್ರತವು. ಈ ರಾತ್ರಿಗಳಲ್ಲಿ ಶುದ್ಧಾತ್ಮನಾಗಿ ನಿದ್ರೆಯಂ ಬಿಟ್ಟು ಶಿವಾರ್ಚನೆಯಂ ಮಾಡಿ, ಮರಳಿ ಪ್ರಾತಃಕಾಲದಲ್ಲೆದ್ದು ಸ್ನಾನಾದಿ ನಿತ್ಯಕರ್ಮಗಳಂ ಮಾಡಿ ಶಿವಾರ್ಚನೆಯಂ ಗೈದು ಭಕ್ತಿಯಿಂ ಶುಚಿಯಾದನ್ನವಂ ಶಿವಭಕ್ತರ್ಗೆ ನೀಡಿ, ತೃಪ್ತಿಪಡಿಸಿ ಬಳಿಕ ತಾನು ಭೋಜನವಂ ಮಾಡಬೇಕು. ನಾಲ್ಕು ಶಿವರಾತ್ರಿಗಳಲ್ಲಿಯು ಶಿವಲಿಂಗಾರ್ಚನೆಯಂ ಆರು ಮಾಡುತ್ತಿರುವರೋ ಅಥವಾ ಒಂದನ್ನಾದರು ಎರಡನ್ನಾದರು ಮೂರನ್ನಾದರು ಆರು ಮಾಡುತಿದ್ದಾರೋ ಅವರ ಪುಣ್ಯವನ್ನು ಕಲ್ಪಕೋಟಿ ವರ್ಷಂಗಳಿಂದಲಾದರು ಪೇಳಲಾಗದು. ಮತ್ತಂ ಆ ಶಿವಭಕ್ತರು ಇಹದಲ್ಲಿ ಅನೇಕ ಭೋಗಂಗಳನನುಭವಿಸಿ ಪರದಲ್ಲಿ ಮೋಕ್ಷವನ್ನೈದುವರೆಂಬದು ಆಶ್ಚರ್ಯವಲ್ಲವು. ಹೀಗೆ ಶಿವರಾತ್ರೀವ್ರತವಂ ಮಾಡಿ ಮಹಾತ್ಮನಾದ ಹರಿಯು ಶಿವನ ಪ್ರಸಾದದಿಂ ವಿಷ್ಣುತ್ವವಂ ಪಡೆದನು. ಚತುರ್ಮುಖ ಬ್ರಹ್ಮನು ಈ ವ್ರತವನಾಚರಿಸಿ ಸರ್ವಸೃಷ್ಟಿ ಕರ್ತೃತ್ವವನ್ನೂ ಇಂದ್ರನು ಮಹೇಂದ್ರತ್ವವನ್ನೂ ಮತ್ತಂ ಕೆಲಂಬ ದೇವತೆಗಳು ಗಣತ್ವವನ್ನೂ ಅನೇಕ ಋಷಿಗಳು ಪುನರಾವೃತ್ತಿರಹಿತವಾದ ಮೋಕ್ಷವನ್ನೂ ಪಡೆದರು. ಇದಲ್ಲದೆ ಕುಬೇರಂಗೆ ಧನಾಧಿಪತ್ಯವು ವಾಯು ವರುಣರಿಗೆ ಮಹಾಶಕ್ತಿ ಧಾರಣತ್ವವು ಉಂಟಾದುದು. ಕಲ್ಮಾಷಪಾದನೆಂಬ ರಾಜನು ಗೌತಮಮುನೀಂದ್ರನಿಂದೀ ವ್ರತವಂ ಕೇಳಿ ಚನ್ನಾಗಿ ಆಚರಿಸಿ, ಬ್ರಹ್ಮಹತ್ಯೆಯಿಂ ಬಿಡಲ್ಪಟ್ಟವನಾಗಿ ಶಾಪವಿಮುಕ್ತನೂ ಆಗಿ ತನ್ನ ದೇಶಕ್ಕೆ ಬಂದು ಪಟ್ಟಾಭಿಷಿಕ್ತನಾಗಿ ಬಹು ಭೋಗಂಗಳಂ ಭುಂಜಿಸಿ ಅಂತ್ಯದಲ್ಲಿ ಮೋಕ್ಷವನ್ನೈದಿದನು.

ವ್ಯಾಧವೃದ್ಧೆಯರು ಅವ್ಯಾಜದಿಂದ ಶಿವ ಕರುಣೆಯಂ ಪಡೆಯುವಿಕೆ.

ಪೂರ್ವದಲ್ಲಿ ಒಬ್ಬಾನೊಬ್ಬ ವ್ಯಾಧನು ಮಹಾವನದಲ್ಲಿ ವ್ಯಾಘ್ರ ಭಯದಿಂ ಬಿಲ್ವವೃಕ್ಷವನೇರಿ, ಶಿವರಾತ್ರಿಯೆಂಬ ಜ್ಞಾನವಿಲ್ಲದೆ ಬಿಲ್ವಪತ್ರೆಗಳಂ ಕೊಯ್ದು ಕೊಯ್ದು ಕೆಳಗಿಡುತ, ನಾಲ್ಕು ಯಾಮಂಗಳಲ್ಲಿಯು ಜಾಗರವಾಗಿರ್ದು, ಮರು ದಿವಸದಲ್ಲಿ ವಿಧಿಬಲದಿಂ ಪ್ರಾಣವಂ ಬಿಟ್ಟು, ಈ ಶಿವರಾತ್ರಿಯ ಪ್ರಭಾವದಿಂ ಶಿವಲೋಕವನ್ನೈದಿದನು. ನೀಚೆಯಾದ ವ್ಯಾಧಿಗ್ರಸ್ತಳಾದ ಒಬ್ಬಾಕೆಯೊಬ್ಬ ವೃದ್ಧಸ್ತ್ರೀಯು ಶಿವರಾತ್ರಿಯ ದಿವಸದಲ್ಲಿ ಅನ್ನವಿಲ್ಲದೆ ರಾತ್ರಿಯಲ್ಲಿ ನಿದ್ರೆಯಿಲ್ಲದೆ

ಜಾಗರವಾಗಿರ್ದು, ಉದಯಕಾಲದಲ್ಲಿ ಪ್ರಾಣವಂ ಬಿಟ್ಟು ದಿವ್ಯರೂಪವಂ ಧರಿಸಿ ದಿವ್ಯ ವಿಮಾನವನೇರಿ ಶಿವ ಪ್ರಸಾದದಿಂ ಶಿವಲೋಕವನೈದಿದಳು. ಪೂರ್ವದಲ್ಲಿ ಮಹಾ ಸಂಹಾರಕಾಲದೊಳು ಅಹಸ್ಸೆಂಬದೂ ರಾತ್ರಿಯೆಂಬದೂ ಮತ್ತಂ ಸದ ಸತ್ತುಗಳುಂ ಯಾವದೂ ಇಲ್ಲವು. ಕೇವಲ ಶಿವನೊಬ್ಬನೆ ವಾಸವಾಗಿರ್ದನು. ಆಗ ಆತಂಗೆ ಅರವತ್ತುನಾಲ್ಕು ತಲೆಗಳು ಕೂಡಿದವು. ಉಮಾದೇವಿಯೊ ರ್ವಳೆ ಸಾಕ್ಷಿಯಾಗಿ ಹೃದಯದಲ್ಲಿ ಶಿವನಂ ಪೂಜಿಸಿ, ಎಲೈ ಪರಮೇಶ್ವರನೆ! ಈ ನಾಲ್ಕು ರಾತ್ರಿಗಳಲ್ಲಿ ಯಾರು ಕೆಲಂಬರು ಜಗದ್ಗುರುವಾದ ನಿನ್ನನ್ನು ಪೂಜಿಸು ವರೋ ಅವರಿಗೆ ನಿನ್ನ ಕೃಪೆಯಿಂ ಇಹದಲ್ಲಿ ಸಮಸ್ತ ಭೋಗಂಗಳುಂಟಾಗಿ ಅಂತ್ಯದಲ್ಲಿ ಮೋಕ್ಷವುಂಟಾಗಲಿ, ಈ ನಾಲ್ಕು ರಾತ್ರಿಗಳಲ್ಲಿಯೂ ಮಾಡಿದ ವ್ರತವು ಶಿವರಾತ್ರಿಯೆಂದು ಲೋಕದೊಳು ಪ್ರಸಿದ್ಧವಾಗಲಿ. ಆವಾತನು ಈ ರಾತ್ರಿಯಲ್ಲಿ ವ್ರತವಂ ಮಾಡುವನೋ ಆತಂಗೆ ಅಕ್ಷಯವಾದ ಫಲವು ಇಷ್ಟ ಸಿದ್ಧಿಯು ಉಂಟಾಗಲೆಂದು ವರವಂ ಕೇಳಿ, ಸ್ವಾಮಿಯ ದೆಸೆಯಿಂದ ಆ ವರವಂ ಪಡದು, ಪ್ರಥಮದಲ್ಲಿ ದೇವಿಯು ತಾನೇ ಈ ವ್ರತವನಾಚರಿಸಿ ಪರಮಾನಂದ ಭರಿತೆಯಾಗಿ ಶಿವಸನ್ನಿಧಿಯಲ್ಲಿರುತಿದಾಳೆ.

ಶಿವಪರಿವಾರವು ಶಿವನನ್ನು ಆರಾಧಿಸುವಿಕೆ.

ಬಳಿಕ ವಿಘ್ನೇಶ್ವರ ಷಣ್ಮುಖ ಮುಂತಾದ ಶಿವಕುಮಾರರು ನಂದಿ ಭೃಂಗಿ ಮೊದಲಾದ ಮಹಾ ಕಾಳ ಗಣಾಧೀಶ್ವರರುಂ ಈ ಮಹಾ ವ್ರತವಂ ಮಾಡಿದರು. ಪೂರ್ವದಲ್ಲಿ ಬ್ರಹ್ಮ ವಿಷ್ಣುಗಳೀರ್ವರು ಅನ್ಯೋನ್ಯವಾಗಿ ಗರ್ವದಿಂ ಯುಕ್ತರಾಗಿ ಜ್ಯೋತಿರ್ಲಿಂಗಾಕೃತಿಯ ಆದ್ಯಂತವಂ ಕಾಣದೆ ಶಿವರಾತ್ರಿಯಲ್ಲಿ ಶಿವಪೂಜೆಯಂ ಮಾಡಿ ಸ್ವಾಮಿಯಂ ಪ್ರಸನ್ನನಂ ಮಾಡಿಕೊಂಡು ನಮಸ್ಕಾರವಂ ಮಾಡಿ, ಅನೇಕ ಸ್ತೋತ್ರಂಗಳಿಂ ಸ್ತುತಿಸಿ ಅಪರಾಧ ಕ್ಷಮಾಪಣಂಗೈದು, ಪುರಾಣ ವಿಗ್ರಹನಾದ ಪರಮೇಶ್ವರನಿಂದ ಅನೇಕ ವರಗಳಂ ಪಡದ ಬಳಿಕ ಸ್ವಾಮಿಯು ಅಂತರ್ಧಾನವಾದನು, ಎಲೈ ಋಷಿಗಳಿರಾ! ಶಿವರಾತ್ರಿಯ ಮಾಹಾತ್ಮ್ಯವು ನನ್ನಿಂದ ಪೇಳಲಶಕ್ಯವು, ನನಗೆ ಗುರುವಾದ ವ್ಯಾಸಮುನಿಯಿಂದಲು ಪೇಳಲಸಾ ಧ್ಯವು. ಮತ್ತಮಾತಂಗೆ ಗುರುವಾದ ಪರಮೇಶ್ವರನಿಂ ವೀಕ್ಷಿತನಾದ ಸನತ್ಕು ಮಾರ ಯೋಗಿಯಿಂದಲು ಪೇಳಲಾಗುವದೋ ಇಲ್ಲವೋ ನಾನರಿಯೆನು. ನಂದಿ ಕೇಶ್ವರನು ಪರಮೇಶ್ವರನಿಂದೀ ಶಿವರಾತ್ರೀ ವ್ರತವಂ ಕೇಳಿ ಪರಮಾನಂದವೆಂಬ ಮಹಾಸಾಗರದಲ್ಲಿ ಮುಳುಗಿದನು. ಹೇಗೆ ಶಿವಮಹಿಮೆಯು ಮನೋವಾಚಾಮ ಗೋಚರವೋ ಹಾಗೆ ಈ ಶಿವರಾತ್ರೀವ್ರತವು ಮನಸ್ಸಿಗೂ ವಾಕ್ಕುಗಳಿಗೂ ಅಗೋ ಚರವು. ಆವಾತನು ಶಿವಸಮ್ಮತವಾದ ಈ ಅಧ್ಯಾಯವಂ ಪಠಿಸುವನೋ, ಆರು

ಕೇಳುವರೋ ಅವರುಗಳು ಇಹದಲ್ಲಿ ಅನೇಕ ಭೋಗಂಗಳನನುಭವಿಸಿ, ಜ್ಞಾನಿಗಳಾದ ಪುತ್ರರಂ ಪಡದು ಅಂತ್ಯದಲ್ಲಿ ಕೈಲಾಸಕ್ಕೆ ಪೋಗಿ ಮುಕ್ತಿಯನ್ನೈದುವರೆಂದು ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ, ಉಪದೇಶ ಕಾಂಡದೊಳು ಮುವ್ವತ್ತನೆಯ ಅಧ್ಯಾಯವು ಸಂಪೂರ್ಣಮಾದುದು.

ಮುವ್ವತ್ತೊಂದನೆಯ ಅಧ್ಯಾಯವು.

ಶ್ರೀಮತ್ಕೇದಾರವ್ರತಮಾಹಾತ್ಮ್ಯಂ.

ಎಲೈ ಋಷಿಗಳಿರಾ! ಶಿವರಾತ್ರಿವ್ರತವು ನಿರೂಪಿಸಲ್ಪಟ್ಟದ್ದು ಸರಿಯಷ್ಟೆ. ಕೇತಾರವ್ರತದ ಮಹಿಮೆಯಂ ಪೇಳುತಿಪೇನೆ ಸಾವಧಾನದಿಂ ಕೇಳುವರಾಗಿ, ಈ ಕೇತಾರವ್ರತವು ಭಾದ್ರಪದ ಶುದ್ಧ ಅಷ್ಟಮೀ ಆರಭ್ಯ ಇಪ್ಪತ್ತೊಂದು ದಿವಸಗಳ ಪರ್ಯಂತರ, ವಿಧಿಗೂಡಿ ನಿರಾಹಾರ ಫಲಾಹಾರ ಏಕವಾರವಾದರು ಇದ್ದು, ವ್ರತಸಮಾಪ್ತಿಯಂ ಮಾಡುವ ದಿವಸದಲ್ಲಿ ಶಿವಭಕ್ತರಾದ ಬ್ರಾಹ್ಮಣರೊಡನೆ ಭುಂಜಿಸಬೇಕು. ಆರು ಕೆಲಂಬರು ಈ ವ್ರತವನ್ನಾಚರಿಸುವರೋ ಅವರು ಇಹದಲ್ಲಿ ಅನೇಕ ಭೋಗಂಗಳನ್ನನುಭವಿಸಿ ಅಂತ್ಯದಲ್ಲಿ ಮೋಕ್ಷವನ್ನೈದುವರು. ಪೂರ್ವದಲ್ಲಿ ಗೌರೀದೇವಿಯು ಈ ವ್ರತವಂ ಮಾಡಿ ಶಿವನೊಳು ಅರ್ಧ ಶರೀರವನ್ನೈದಿದಳು. ಈ ವ್ರತವನ್ನಾಚರಿಸಿ ವಿಷ್ಣುವು ಶಿವನ ಅರ್ಧ ಶರೀರವಂ ಪಡೆದನಲ್ಲದೆ ವೈಕುಂಠಾಧಿಪತಿಯಾದನು. ಬ್ರಹ್ಮನು ಈ ವ್ರತವಂ ಮಾಡಿ ಹಂಸವಾಹನವಂ ಪಡೆದು ಸೃಷ್ಟಿಕರ್ತನಾದನು. ಅಷ್ಟದಿಕ್ಪಾಲಕರು ಅನೇಕ ದೈತ್ಯರಂ ಸಂಹರಿಸಿದರು. ಸಪ್ತರ್ಷಿಗಳು ಬ್ರಹ್ಮಶಾಪವಂ ಪರಿಹರಿಸಿಕೊಂಡರು. ಪೂರ್ವದಲ್ಲಿ ಒಬ್ಬಾನೊಬ್ಬ ಬ್ರಾಹ್ಮಣನು ಈ ಕೇತಾರ ವ್ರತವಂ ಮಾಡಿ ಅನೇಕ ಭೋಗಂಗಳಂ ಭುಜಿಸಿ, ಮಹಾತ್ಮರಾದ ಶತಪುತ್ರರಂ ಪಡೆದು ಮೋಕ್ಷವನ್ನೈದಿದನು. ಹೀಗೆ ಅನೇಕ ಜನರು ಈ ವ್ರತವಂ ಮಾಡಿ ಬಹು ಭೋಗಂಗಳಂ ಭುಂಜಿಸಿ ಅಂತ್ಯದಲ್ಲಿ ಕೈವಲ್ಯವಂ ಪಡೆದರು. ಅದುಕಾರಣದಿಂ ಈ ಕೇತಾರ ವ್ರತದ ಮಹಿಮೆಯಂ ಆರು ಪಠಿಸುವರೋ ಅವರು ಅಸದೃಶಂಗಳಾದ ಭೋಗಂಗಳನ್ನನುಭವಿಸಿ ತುದಿಯಲ್ಲಿ ಮೋಕ್ಷವಂ ಪೊಂದುವರೆಂದು ಸೂತಂ ಶೌನಕಾದಿ ಮಹಾ ಮುನಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ಶಿವರಹಸ್ಯೋಪದೇಶಕಾಂಡದೊಳು ಮುವ್ವತ್ತೊಂದನೆಯ ಅಧ್ಯಾಯವು ಸಂಪೂರ್ಣಮಾದುದು.

ಮುವ್ವತ್ತೆರಡನೆಯ ಅಧ್ಯಾಯವು.

ಕಲ್ಯಾಣವ್ರತಮಾಹಾತ್ಮ್ಯಂ.

ಎಲೈ ಋಷಿಗಳಿರಾ! ಕಲ್ಯಾಣವ್ರತವಂ ಪೇಳುವೆನು ಕೇಳಿರಿ, ಸೂರ್ಯನು ಮೀನರಾಶಿಯಲ್ಲಿರುವಾಗ ಶುಕ್ಲಪಕ್ಷದಲ್ಲಿ ಉತ್ತರಾ ನಕ್ಷತ್ರ ಸೇರಿದ ದಿವಸದಲ್ಲಿ ಸ್ನಾನವಂ ಮಾಡಿ ನಿತ್ಯಕರ್ಮವಂ ತೀರಿಸಿಕೊಂಡು, ಪಾರ್ವತೀ ಪರಮೇಶ್ವರರಂ ಸುವರ್ಣದಿಂ ಮಾಡಿಸಿ ವಿಧಾನದಿಂ ಕುಂಭಸ್ಥಾಪನೆಯನ್ನೆಸಗಿ ಆ ಕುಂಭವಂ ಉದಕದಿಂ ತುಂಬಿ, ಆ ಶುದ್ಧೋದಕದಿಂ ವಿಧಿಯಿಂ ಸ್ವಾಮಿಗೆ ಅಭಿಷೇಕವಂ ಮಾಡಿ, ಕಲ್ಯಾಣವಿಧಿಯಿಂದ ಪಾರ್ವತೀಪರಮೇಶ್ವರರ್ಗೆ ವಿವಾಹವಂ ಮಾಡಿಸಿ, ನಾನಾಭಕ್ಷ್ಯ ಯುಕ್ತವಾದ ನೈವೇದ್ಯವಂ ಸಮರ್ಪಿಸಿ ಜಿತೇಂದ್ರಿಯರಾದ ಶಿವಭಕ್ತರಾದ ಬ್ರಾಹ್ಮಣರಂ ದಾನಂಗಳಿಂ ಸಂತೋಷಗೊಳಿಸಿ, ಭಕ್ಷ್ಯ ಭೋಜ್ಯಾದಿಗಳಿಂ ತೃಪ್ತಿಪಡಿಸಿ, ಬಳಿಕ ಶಿವಾಲಯಕ್ಕೆ ತೆರಳಿ ಪ್ರದಕ್ಷಿಣ ನಮಸ್ಕಾರಂಗಳಂ ಮಾಡಿ ಸ್ವಾಮಿಯಂ ಸ್ತುತಿಸಿ ಯಥಾಶಕ್ತಿಯಿಂ ಶಿವಲಿಂಗಕ್ಕೆ ಪೂಜೆಯಂ ಮಾಡಿಸಿ, ಮರಳಿ ಮರಳಿಯು ಪ್ರದಕ್ಷಿಣ ನಮಸ್ಕಾರಂಗಳಂ ಗೈದು ಸ್ವಾಮಿಯ ಪ್ರಸಾದವಂ ಸ್ವೀಕರಿಸಿ, ಮರಳಿ ತನ್ನ ಗೃಹಕ್ಕೆ ಬಂದು ಬ್ರಾಹ್ಮಣರೊಡನೆ ಆ ರಾತ್ರಿಯಲ್ಲಿ ಪಾಯಸವಂ ಭುಂಜಿಸಿ, ದರ್ಭಾಸ್ತರಣದಲ್ಲಿ ಶಯನವಂ ಮಾಡಿ, ಮರುದಿವಸ ಪ್ರಾತಃಕಾಲದಲ್ಲೆದ್ದು ಸ್ನಾನಾದಿಗಳಂ ಮಾಡಿ ಶಿವಲಿಂಗವಂ ಪೂಜಿಸಿ, ಬಳಿಕ ಪಾರ್ವತೀ ಪರಮೇಶ್ವರರ ವಿಗ್ರಹವಂ ಪರಿಪೂಜಿಸಿ, ಆಚಾರವಂತರಾದ ಶಿವಭಕ್ತರೀರ್ವರ್ಗೆ ಆ ಪ್ರತಿಮೆಗಳನ್ನಿತ್ತು ಬಂಧುಗಳ್ವೆರಸಿ ಭೋಜನವಂ ಮಾಡಬೇಕು. ಆರು ಈ ವ್ರತವಂ ಮಾಡುವರೋ ಅವರು ಅನೇಕ ಭೋಗಂಗಳನ್ನನುಭವಿಸಿ ತುದಿಯಲ್ಲಿ ಮೋಕ್ಷವನ್ನೈದುವರು. ಪೂರ್ವದಲ್ಲಿ ಜಗನ್ಮಯನಾದ ವಿಷ್ಣುವು ಈ ಕಲ್ಯಾಣವ್ರತವಂ ಮಾಡಿ ಲಕ್ಷ್ಮಿಯಂ ಪಡೆದನು. ಬ್ರಹ್ಮನು ಸರಸ್ವತಿಯಂ ಪಡೆದನು. ಇಂದ್ರನು ಶಚೀದೇವಿಯಂ ಚಂದ್ರನು ಅಶ್ವಿನೀ ನಕ್ಷತ್ರವಂ ಮತ್ತಂ ಇಪ್ಪತ್ತೇಳು ನಕ್ಷತ್ರಂಗಳಂ, ಸೂರ್ಯನು ಉಷೆಯಂ ಅಗಸ್ತ್ಯಮುನಿಯು ಲೋಪಾಮುದ್ರೆಯಂ ಪಡೆದರು. ಮತ್ತಂ ವಿಷ್ಣುವಿನ ಕುಮಾರಿತಿಯರಾದ ಅಮೃತವಲ್ಲಿ ಆನಂದವಲ್ಲಿಯೆಂಬ ಸ್ತ್ರೀಯರೀರ್ವರು ಈ ವ್ರತವಂ ಮಾಡಿ ಕುಮಾರಸ್ವಾಮಿಯಂ ಪತಿಯಾಗಿ ಪಡೆದರು. ಅದು ಹೇಗೆಂದರೆ, ಕುಮಾರಸ್ವಾಮಿಯ ಪ್ರಸಾದದಿಂದ ಸ್ವೇಚ್ಛೆಯಿಂ ಮರಳಿ ಭೂಲೋಕದಲ್ಲಿ ಪುಟ್ಟಿ, ದೇವಸೇನೆ ಲವಲಿಯೆಂಬ ಪೆಸರಂ ಪಡೆದು ಆ ಕುಮಾರಸ್ವಾಮಿಯನ್ನ ಪತಿಯಾಗಿ ಪೊಂದಿ ಸುಖವಾಗಿರ್ದರು. ವೇದಾಂಗನೆಂಬ ಮುನಿಯ ಕನ್ನಿಕೆಯಾದ ಸುಕೇಶಿಯು ಸಮಸ್ತ ಗಣಂಗಳಿಗಧಿಪತಿಯಾದ ನಂದಿಕೇಶ್ವರನಂ

ಪತಿಯಾಗಿ ಪಡೆದಳು. ಸತ್ಯನೆಂಬ ಮುನಿಯು ನಯನೋದ್ಭವೆಯಾದ ಪೂರ್ಣಾ ಪುಷ್ಕಳೆಯೆಂಬ ಕನ್ನಿಕೆಯರು ಮಹಾ ಶಾಸ್ತಾಕುಮಾರಂಗೆ ಸತಿಯರಾದರು. ಮತ್ತಂ ಮನ್ಮಥನು ರತಿದೇವಿಯು ರಾಮಚಂದ್ರನಂ ಸೌಭರಿಯೆಂಬ ಮುನಿಯು ಅನೇಕ ಸ್ತ್ರೀಯರುಂ ಬಹು ಸಂತಾನಂಗಳಂ ಪಡೆದರು. ಈ ಪ್ರಕಾರವಾಗಿ ಅನೇಕಜನರು ತಮ್ಮ ತಮ್ಮ ಸತಿಗಳ್ವೆರಸಿ ಅನೇಕ ಭೋಗಂಗಳಂ ಭುಂಜಿಸಿ ಅಂತ್ಯದಲ್ಲಿ ಮೋಕ್ಷವನ್ನೈದಿದರು. ಸ್ತ್ರೀಕಾಮುಕನಾಗಿ ಈ ವ್ರತವಂ ಮಾಡಿದೊಡೆ ಸರ್ವಲಕ್ಷಣಯುಕ್ತೆಯಾದ ಸತಿಯುಂಟಾಗುವಳು. ಕನ್ನಿಕೆಯರು ಈ ವ್ರತವನ್ನಾಚರಿಸಿದರೆ ಮನ್ಮಥಂಗೆ ಸದೃಶನಾದ ಪತಿಯಂ ಪಡೆವರು. ಅದುಕಾರಣದಿಂ ಈ ವ್ರತವನ್ನಾಚರಿಸಿದವರ್ಗೆ ಇಹದಲ್ಲಿ ಭೋಗವು ಅಂತ್ಯದಲ್ಲಿ ಮೋಕ್ಷವು ಉಂಟೆಂಬುದರಲ್ಲಿ ಸಂಶಯವಿಲ್ಲವು. ಈ ವ್ರತದ ಮಹಿಮೆಯು ವಿಸ್ತಾರದಿಂ ನನ್ನಿಂದ ಪೇಳಲಾಗದು. ಆರು ಕೆಲಂಬರು ಈ ಅಧ್ಯಾಯವಂ ಪಠಿಸುವರೋ ಯಾರು ಕೇಳುವರೋ ಆ ಮಹಾತ್ಮರಿಗೆ ಇಹದಲ್ಲಿ ಸರ್ವವಾಂಛೆಗಳುಂಟಾಗಿ ಪರದಲ್ಲಿ ಶಿವಸಾಯುಜ್ಯವುಂಟಹುದೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ಮುವ್ವತ್ತೆರಡನೆಯ ಅಧ್ಯಾಯವು ಸಂಪೂರ್ಣವಾದುದು.

ಮುವ್ವತ್ತೊಮ್ಮರನೆಯ ಅಧ್ಯಾಯವು.
ಶೂಲವ್ರತ ಮಾಹಾತ್ಮ್ಯಂ.

ಎಲೈ ಋಷಿಗಳಿರಾ! ಸರ್ವಾಭೀಷ್ಟವಂ ಕೊಡುವಂಥ ಶೂಲವ್ರತವಂ ಪೇಳುವೆನು ಸಾವಧಾನದಿಂ ಕೇಳಿರಿ. ಸೂರ್ಯನು ಮಕರರಾಶಿಯಲ್ಲಿರುವಾಗ ಅಮಾವಾಸ್ಯೆಯ ದಿವಸದಲ್ಲಿ ಪ್ರಾತಃಕಾಲದಲ್ಲೆದ್ದು ಶುಚಿರ್ಭೂತನಾಗಿ ಹೃದಯದಲ್ಲಿ ಉಮಾಸಹಾಯನಾದ ಶಿವನಂ ಧ್ಯಾನಿಸಿ, ಶುದ್ಧೋದಕ ಸ್ನಾನವಂಮಾಡಿ ನಿತ್ಯಕರ್ಮವಂ ತೀರಿಸಿ, ರಜತದಿಂದಲಾಗಲಿ ಸ್ವರ್ಣದಿಂದಾಗಲಿ ಸರ್ವಾಂಗದಲ್ಲಿಯು ಅತ್ಯಂತ ಸೌಂದರ್ಯವುಳ್ಳ ಶೂಲಧಾರಿಯಾದ ಶಿವ ಪ್ರತಿಮೆಯಂ ಮಾಡಿಸಿ, ಪಂಚಾಮೃತ ದ್ರವ್ಯಂಗಳಿಂ ವಿಧಾನದಿಂ ಶಿವಮೂರ್ತಿಗೆ ಅಭಿಷೇಕವಂ ಮಾಡಿ, ಷೋಡಶೋಪಚಾರಗಳಿಂದುಪಚರಿಸಿ ಪರಮಾನ್ನಯುಕ್ತವಾದ ಅನೇಕ ಚಿತ್ರಾನ್ನಂಗಳಂ ಮಾಡಿಸಿ ನಿವೇದನಂಗೈದು, ಮಧ್ಯಾಹ್ನಕಾಲದಲ್ಲಿ ಶಿವಭಕ್ತನಾದ ರುದ್ರಾಕ್ಷಧಾರಿಯಾದ ಬ್ರಾಹ್ಮಣನಿಗೆ ಯಥಾಶಕ್ತಿ ದಾನವಂ ಮಾಡಿ, ಬಳಿಕ ಶಿವಾಲಯಕ್ಕೆ ಪೋಗಿ ಪ್ರದಕ್ಷಿಣ ನಮಸ್ಕಾರವನ್ನೆಸಗಿ, ಶಿವಭಕ್ತರ್ವೆರಸಿ ಭೋಜನವಂ ಮಾಡಿ, ಮಾರನೆಯ ದಿವಸ ಪ್ರಾತಃಕಾಲದಲ್ಲೆದ್ದು ಸ್ನಾನಾದಿ

ನಿತ್ಯಕರ್ಮಗಳಂ ತೀರಿಸಿಕೊಂಡು, ಆ ಶಿವಮೂರ್ತಿಯಂ ತನ್ನ ಗುರುವಿಗಿತ್ತು, ನಿಯಮ ಯುಕ್ತನಾಗಿ ಬಂಧುಗಳೊಡನೆ ಸೇರಿ ಭೋಜನವಂ ಮಾಡಬೇಕು. ಆರು ಕೆಲಂಬರು ಉತ್ತಮವಾದ ಈ ವ್ರತವಂ ಮಾಡುವರೋ, ಅವರು ಶತ್ರುಗಳಂ ವ್ಯಾಧಿಗಳಂ ಜಯಿಸಿ ಪೂರ್ಣಾಯುಷ್ಯವಂ ವಂಶಾಭಿವೃದ್ಧಿಕರರಾದ ಪುತ್ರರಂ ಸಹ ಪಡೆದು ಅಂತ್ಯದಲ್ಲಿ ಶಿವಸಾಯುಜ್ಯವನ್ನೈದುವರು.

ಪೂರ್ವದಲ್ಲಿ ವಿಷ್ಣುವು ಈ ವ್ರತವಂ ಮಾಡಿ ದೈತ್ಯಾಧಮನಾದ ಕಾಲನೇಮಿಯಂ ಸಂಹರಿಸಿದನು. ಮತ್ತಂ ಪರಶುರಾಮನು ಕಾರ್ತವೀರ್ಯಾರ್ಜುನನಂ ಸುಧರ್ಮನು ಮೃತ್ಯುವನ್ನೂ, ಸಂಹಂಸಿದರು. ಮೇಘಾಂಗನೆಂಬ ಬ್ರಾಹ್ಮಣನು ಸಹಸ್ರ ಪುತ್ರರಂ ಪೌತ್ರರಂ ಪಡೆದು ಕೈಲಾಸವನ್ನೈದಿದನು. ಹೀಗೆ ಅನೇಕರು ಈ ವ್ರತವಂ ಮಾಡಿ ಸಮಸ್ತ ಭೋಗಂಗಳನ್ನನುಭವಿಸಿ ಕೈಲಾಸಗಿರಿಗೈದಿ ಅಂತ್ಯದಲ್ಲಿ ಶಿವಸಾಯುಜ್ಯವನ್ನೈದಿದರು. ಈ ವ್ರತಕಾರಿಗಳಂ ಕಂಡು ದುರಿತಂಗಳು ದೂರಂಗತಂಗಳಾಗುವವು. ಶಿವ ಪ್ರಸಾದವುಳ್ಳವರ್ಗೆಯೇ ಮಹದೈಶ್ವರ್ಯಂಗಳುಂಟಹುದು. ಎಲೆ ಋಷಿಗಳಿರಾ ! ಪೂರ್ವದಲ್ಲಿ ವೀರಭದ್ರನು ಈ ವ್ರತದ ಮಹಿಮೆಯಂ ಭಾನುಕಂಪನೆಂಬ ಗಣಾಧೀಶ್ವರನಿಗೆ ಪೇಳ್ದನು. ಆತನು ಪೇಳಿದನೆಂದು ವ್ಯಾಸಮುನಿಯು ನನಗೆ ನಿರೂಪಿಸಿದನು. ಈ ಅಧ್ಯಾಯವಂ ಆರು ಪಠಿಸುತಿರ್ದಾರೋ ಆರು ಕೇಳುವರೋ ಅವರಿಗೆ ಮೃತ್ಯುಭಯವಿಲ್ಲವೆಂದು ಸೂತಂ ಶೌನಕಾದಿಗಳಿಗೆ ಪೇಳ್ದನೆಂಬಲ್ಲಿಗೆ, ಉಪದೇಶಕಾಂಡದೊಳು ಮುವ್ವತ್ಮೂರನೆಯ ಅಧ್ಯಾಯವು ಸಂಪೂರ್ಣಂ.

ಮುವ್ವತ್ನಾಲ್ಕನೆಯ ಅಧ್ಯಾಯವು.

ವೃಷಭವ್ರತಮಾಹಾತ್ಮ್ಯಂ.

ಎಲೈ ಋಷಿಗಳಿರಾ ! ಉತ್ತಮವಾದ ವೃಷಭವ್ರತವಂ ಪೇಳುವೆನು ಸಾವಧಾನದಿಂ ಕೇಳಿರಿ. ಸೂರ್ಯನು ವೃಷಭರಾಶಿಯಲ್ಲಿರುವಲ್ಲಿ ಶುಕ್ಲಪಕ್ಷದ ಅಷ್ಟಮೀ ದಿವಸ ಪ್ರಾತಃಕಾಲದಲ್ಲೆದ್ದು ಶುಚಿರ್ಭೂತನಾಗಿ, ವೃಷಭಾರೂಢನಾದ ಶಿವನಂ ಧ್ಯಾನಿಸಿ ಶುದ್ಧೋದಕದಲ್ಲಿ ಸ್ನಾನವಂಮಾಡಿ ನಿತ್ಯಕರ್ಮವಂ ತೀರಿಸಿ, ಸುವರ್ಣದಿಂದಾಗಲೀ ರಜತದಿಂದಾಗಲೀ ವೃಷಭಾರೂಢನಾದ ಉಮಾಮಹೇಶ್ವರನ ವಿಗ್ರಹವಂ ಮಾಡಿಸಿ, ಪಂಚಾಮೃತಾಭಿಷೇಕವಂ ಮಾಡಿ ಪಾಯಸಸಮೇತವಾದ ಶುದ್ಧಾನ್ನವಂ ಸ್ವಾಮಿಗೆ ನೈವೇದ್ಯವಂ ಮಾಡಿ, ಶಿವಭಕ್ತರಾದ ಬ್ರಾಹ್ಮಣರಿಗೆ ಆ ಶಿವಮೂರ್ತಿಯಂ ದಾನವಂ ಮಾಡಿ, ಬಳಿಕ ಶಿವಾಲಯಕ್ಕೆ ಪೋಗಿ ಪ್ರದಕ್ಷಿಣ ನಮಸ್ಕಾರವಂ ಮಾಡಿ ತನ್ನ ಗೃಹಕ್ಕೆ ಬಂದು, ಶಿವಭಕ್ತರಾದ

ಬ್ರಾಹ್ಮಣರೊಡನೆ ವೊಪ್ಪತ್ತು ಭೋಜನವಂ ಮಾಡಿ, ಸಾಯಂತರ ಸಂಧ್ಯಾವಂದನೆಯಂ ಗೈದು ರಾತ್ರಿಯಲ್ಲಿ ಒಂದು ಯಾಮ ಪುರಾಣಶ್ರವಣವಂ ಮಾಡಿ, ಶುಚಿಯಾದ ಹಾಸಿಗೆಯ ಮೇಲೆ ಶಯನಿಸಿ ಮರುದಿವಸ ಪ್ರಾತಃಕಾಲದಲ್ಲೆದ್ದು ಶಿವಧ್ಯಾನವಂ ಮಾಡಿಕೊಂಡಿರಬೇಕು. ಪೂರ್ವದಲ್ಲಿ ವಿಷ್ಣುವು ಈ ವ್ರತವಂ ಮಾಡಿ ಮಹದೈಶ್ವರ್ಯವಂ ಪಡೆದು ಗರುಡನಂ ವಾಹನವಾಗಿ ಮಾಡಿಕೊಂಡನು. ಇಂದ್ರನು ಈ ವ್ರತವನ್ನಾಚರಿಸಿ ಐರಾವತವಂ ಪಡೆದನು. ಮತ್ತಂ ಅಗ್ನಿಯು ಮಹಾ ಬಲವುಳ್ಳ ಅಜವೆಂಬ ವಾಹನವನ್ನು ಯಮನು ಮಹಾ ಶರೀರಿಯಾದ ಕೋಣನಂ, ನಿಋಋತಿಯು ನರವಾಹನವನ್ನೂ ವರುಣನು ಮಕರವಾಹನವನ್ನೂ ವಾಯುವು ಕೃಷ್ಣಸಾರಂಗವನ್ನೂ ಕುಬೇರನು ಪುಷ್ಪಕವನ್ನೂ ಈ ರೀತಿ ಪಡೆದರು. ಇದಲ್ಲದೆ ವಿಶ್ವಸೇನನೆಂಬ ರಾಯನು ವಸಿಷ್ಠರ ಸಮೀಪಕ್ಕೆ ಬಂದು ನಮಸ್ಕರಿಸಿ, ಭೂತಭವಿಷ್ಯದ್ವರ್ತಮಾನಜ್ಞಾನವು ತನಗುಂಟಾಗಲು ಪ್ರಾರ್ಥಿಸಿ, ಆ ಮಹಾ ಮುನಿಯಿಂದ ಈ ವ್ರತವಂ ತಿಳಿದು ತ್ರಿಕಾಲಜ್ಞಾನವಂ ಪಡೆದು, ಅನೇಕ ಭೋಗಂಗಳನ್ನನುಭವಿಸಿ ಅಂತ್ಯದಲ್ಲಿ ಶಿವಸಾಯುಜ್ಯವನ್ನೈದಿದನು. ಎಲೈ ಋಷಿಗಳಿರಾ! ಆರು ಕೇಳ್ವರು ಈ ಅಧ್ಯಾಯವಂ ಪಠಿಸುವರೋ ಅವರು ಕೈಲಾಸವನ್ನೈದುವರು. ಈ ವಿಷಯದಲ್ಲಿ ಸಂಶಯವಿಲ್ಲವು. ಈ ಎಂಟು ವ್ರತಂಗಳು ಶಿವಂಗೆ ಅತಿ ಪ್ರಿಯಂಗಳು, ಉಳಿದ ವ್ರತಂಗಳಂ ಪೇಳುತ್ತಿದೇನೆ ಸಾವಧಾನ ಚಿತ್ತರಾಗಿ ಕೇಳಿರೆಂದು ಸೂತಂ ಶೌನಕಾದಿ ಮುನಿಗಳಿಗೆ ಪೇಳಿದನೆಂಬಲ್ಲಿಗೆ, ಉಪದೇಶಕಾಂಡದೊಳು ಮುವ್ವತ್ನಾಲ್ಕನೆಯ ಅಧ್ಯಾಯವು ಸಂಪೂರ್ಣಂ.

ಮುವ್ವತ್ತೈದನೆಯ ಅಧ್ಯಾಯವು.

ಶುಕ್ರವಾರವ್ರತ ಮಾಹಾತ್ಮ್ಯಂ.

ಎಲೈ ಋಷಿಗಳಿರಾ! ಗೌರಿದೇವಿಗೆ ಅತಿ ಪ್ರಿಯವಾದ ಶುಕ್ರವಾರ ವ್ರತವಂ ಪೇಳುವೆನು ಕೇಳಿರಿ. ಸೂರ್ಯನು ಮೇಷರಾಶಿಯಲ್ಲಿರುವಾಗ ಶುಕ್ಲಪಕ್ಷದ ಶುಕ್ರವಾರಗಳ ದಿವಸ ಪ್ರಾತಃಕಾಲದಲ್ಲೆದ್ದು. ಮನೋಹರೆಯಾದ ಗೌರಿದೇವಿಯಂ ಹೃದಯಕಮಲದಲ್ಲಿ ಧ್ಯಾನವಂ ಮಾಡುತ್ತ ಶುದ್ಧೋದಕದಲ್ಲಿ ಸ್ನಾನವಂ ಮಾಡಿ, ನಿತ್ಯಕರ್ಮವಂ ತೀರಿಸಿ ತನ್ನ ಆತ್ಮನಂ ಸ್ತ್ರೀರೂಪಕವಾಗಿ ಧ್ಯಾನಿಸಿ, ಶುದ್ಧೋದಕದಿಂ ಕುಂಭವಂ ತುಂಬಿ ಅದರಲ್ಲಿ ಮಹಾ ದೇವಿಯನ್ನಾವಾಹಿಸಿ, ಗಂಧಪುಷ್ಪಾದಿಗಳಿಂ ದರ್ಚಿಸಿ, ಪಾಯಸದಿಂದ ನಿವೇದನವಂ ಗೈದು, ಅಷ್ಟಸುಮಂ

ಗಲೀ ಕನ್ನಿಕೆಯರಂ ಭಸ್ಮರುದ್ರಾಕ್ಷಿಗಳಿಂದಲುಂ ಗಂಧಪುಷ್ಪಾದಿಗಳಿಂದಲುಂ ಪರಿಪೂಜಿಸಿ, ಶಿವಾಲಯಕ್ಕೆ ಪೋಗಿ ಯಥಾಶಕ್ತಿ ಪ್ರದಕ್ಷಿಣ ನಮಸ್ಕಾರವಂ ಮಾಡಿ, ಶಿವದರ್ಶನವನ್ನೂ ದೇವಿದರ್ಶನವನ್ನೂ ಗೈದು, ಆ ದೇವಿಗೆ ಯಥಾಶಕ್ತಿ ಕಾಣಿಕೆಯನ್ನಿತ್ತು, ಮಧ್ಯಾಹ್ನದಲ್ಲಿ ಪ್ರಾರಂಭಿಸಿ ಅರ್ಧರಾತ್ರಿ ಯೊಳಗಾಗಿ ದೇವೀವ್ರತದ ಸಮಾಪನೆಯಂ ಮಾಡಿ, ಫಲಾಹಾರದಿಂದಿದ್ದು ಮರುದಿವಸ ನಿತ್ಯಕರ್ಮವಂ ತೀರಿಸಿ ಶಿವಭಕ್ತರಾದ ಬ್ರಾಹ್ಮಣರೊಡನೆ ಭುಂಜಿಸಬೇಕು. ಆವಾತನು ಈ ಶುಕ್ರವಾರ ವ್ರತವಂ ಮಾಡುವನೋ ಆತಂಗೆ ಗೌರಿದೇವಿಯು ಪ್ರಸನ್ನೆಯಾಗುವಳು. ಪೂರ್ವದಲ್ಲಿ ಶುಕ್ರನು ಈ ವ್ರತವಂ ಮಾಡಿ ಇದಕ್ಕೆ ತನ್ನ ನಾಮಾಂಕಿತವಾಗಬೇಕೆಂದು ಪ್ರಾರ್ಥಿಸೆ, ಆಗ ದೇವಿಯು ಪ್ರಸನ್ನೆಯಾಗಿ ಹಾಗೆಯೆ ಆಗಲೆಂದು ಶುಕ್ರಂಗೆ ವರವನ್ನಿತ್ತಳಾದಕಾರಣ ಈ ವ್ರತಕ್ಕೆ ಶುಕ್ರವಾರ ವ್ರತವೆಂದು ಪೆಸರುಂಟಾದುದು. ಮಹಾ ಲಕ್ಷ್ಮಿಯು ಈ ವ್ರತವಂ ಮಾಡಿ ಮಹದೈಶ್ವರ್ಯಕ್ಕೆ ಕರ್ತೆಯಾದಳು. ಸರಸ್ವತಿಯು ಈ ವ್ರತವನ್ನಾಚರಿಸಿ ಸರ್ವ ವಿದ್ಯೆಗಳಿಗು ಆಧಿಪತ್ಯವಂ ಪಡೆದಳು. ಕೆಲಂಬ ರಾಯರು ಈ ವ್ರತವಂ ಮಾಡಿ ಚಕ್ರವರ್ತಿಗಳಾದರು, ಬ್ರಾಹ್ಮಣರು ವಿದ್ಯಾಲಕ್ಷ್ಮಿಯಂ ಪಡೆದು ಜೀವನ್ಮುಕ್ತರಾದರು. ವೈಶ್ಯರು ಧನಾಧಿಪತಿಗಳಾದರು, ಶೂದ್ರರು ಸಂತುಷ್ಟರಾದರು. ಕೆಲಂಬರು ಈ ವ್ರತವಂ ಮಾಡಿ ಇಹದಲ್ಲಿ ಅನೇಕ ಭೋಗಂಗಳಂ ಭುಂಜಿಸಿ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯಂಗಳೆಂದು ನಾಲ್ಕು ಬಗೆಗಳಾಗಿರ್ಪ ಮುಕ್ತಿಗಳಂ ಪಡೆದರು.

ಎಲ್ಲೈ ಋಷಿಗಳಿರಾ! ಮತ್ತಂ ಗೌರಿದೇವಿಗೆ ಪರಮ ಪ್ರೀತಿಯಾಗಿರ್ಪ ಎರಡನೆ ವ್ರತವಂ ಪೇಳುತ್ತೇನೆ ಕೇಳಿರಿ. ಆಶ್ವಯುಜಮಾಸದ ಶುಕ್ಲಪಕ್ಷದ ಶುಕ್ರವಾರದ ದಿವಸ ಪ್ರಾತಃಕಾಲದಲ್ಲೆದ್ದು ಪೂರ್ವದಂತೆ ಅನುಷ್ಠಾನವಂಗೈದು, ಯಥಾಶಕ್ತಿ ದಾನವಂ ಮಾಡಿ ಪ್ರತಿ ದಿವಸದಲ್ಲಿ ಶಿವಭಕ್ತರಾದ ದ್ವಿಜರೊಡನೆ ಭೋಜನವಂ ಮಾಡಬೇಕು. ಪೂರ್ವದಲ್ಲಿ ಇಂದ್ರಾಣಿಯು ಈ ವ್ರತವಂಮಾಡಿ ದೇವೇಂದ್ರಂಗೆ ಪ್ರಾಣಕಾಂತೆಯಾದಳು. ಉಷಾದೇವಿಯು ಗೌರಿದೇವಿಗೆ ಅತಿ ಪ್ರೀತಿಪಾತ್ರಳಾಗಿ ಸೂರ್ಯಕಾಂತೆಯಾದಳು. ಹೀಗೆ ಅನೇಕರು ಈ ವ್ರತವಂ ಮಾಡಿ ಸದ್ಗತಿಯನ್ನೈದಿದರು.

ಮಹಾನವಮೀವ್ರತ ಮಾಹಾತ್ಮ್ಯಂ.

ಎಲ್ಲೈ ಋಷಿಗಳಿರಾ! ಸರ್ವಾಭೀಷ್ಟಪ್ರದಮಾದ ಮಹಾನವಮೀವ್ರತವಂ ಪೇಳುವೆನು ಕೇಳಿರಿ. ಆಶ್ವೀಜಮಾಸದ ಶುಕ್ಲಪಕ್ಷದ ಪಾಡ್ಯದ ಆರಭ್ಯ ನವಮೀ ಪರ್ಯಂತವು ಕುಂಭದೊಳು ದೇವಿಯನ್ನಾವಾಹಿಸಿ ಶುಕ್ರವಾರದ ವ್ರತದಂತೆ ಈ

ವ್ರತವನ್ನಾಚರಿಸಿ, ಆ ನವಮಿದಿವಸ ಪ್ರಾತಃಕಾಲದಲ್ಲೆದ್ದು ಗೌರಿದೇವಿಯಂ ಧ್ಯಾನವಂಮಾಡುತ್ತ ಶುದ್ಧೋದಕದಲ್ಲಿ ಸ್ನಾನಾದಿ ನಿತ್ಯಕರ್ಮವಂ ಮಾಡಿ, ಭಕ್ತಾಭೀಷ್ಟ ಪ್ರದಾಯಿನಿಯಾದ ಮಹಾ ದೇವಿಯನ್ನರ್ಚಿಸಿ, ಶುದ್ಧೆಯರಾಗಿ ಪತಿವ್ರತೆಯರಾದ ಸುಮಂಗಲಿಯರಿಗೆ ವಸ್ತ್ರಾದಿಗಳಂ ಕೊಟ್ಟು, ಪಾಯಸಾದಿ ಅನ್ನಂಗಳನ್ನಿಡಿ ತೃಪ್ತಿಗೊಳಿಸಿ, ಶಿವಭಕ್ತರಾದ ಬ್ರಾಹ್ಮಣರಂ ಕೂಡಿಕೊಂಡು ತಾನು ಭೋಜನವಂ ಮಾಡಿ, ದಶಮಿದಿವಸದಲ್ಲಿ ಪ್ರಾತಃಕಾಲದಲ್ಲೆದ್ದು ನಿತ್ಯ ಕರ್ಮವಂ ತೀರಿಸಿಕೊಂಡು, ಉತ್ಸವವಂ ನಡೆಯಿಸಿ ಶಿವಭಕ್ತರಾದ ಬ್ರಾಹ್ಮಣ ರೊಡನೆ ಭುಂಜಿಸಬೇಕು. ಪೂರ್ವದಲ್ಲಿ ವಿಷ್ಣುವು ಈ ವ್ರತವಂ ಮಾಡಿ ಸಮಸ್ತ ರಾದ ಶತ್ರುಗಳಂ ಜಯಿಸಿದನು. ಮತ್ತೆ ಕೆಲಂಬರು ಇದನ್ನಾಚರಿಸಿ ಜಯ ಶಕ್ತಿ ವಿದ್ಯಾಶಕ್ತಿ ಭಾಗ್ಯಶಕ್ತಿಗಳೆಂಬ ನಾಲ್ಕು ಶಕ್ತಿಗಳಂ ಪಡೆದು. ಇಹದಲ್ಲಿ ಅನೇಕ ಭೋಗಂಗಳಂ ಭುಂಜಿಸಿ ಅಂತ್ಯದಲ್ಲಿ ಶಿವಲೋಕವನೈದುವರು. ಆರು ಈ ಅಧ್ಯಾಯವಂ ಪಠಿಸುವರೋ ಆರು ಕೇಳುವರೋ ಅವರಿಗೆ ಇಷ್ಟಾರ್ಥವು ಕೈಗೂಡುವವೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದನೆಂಬಲ್ಲಿಗೆ ಶಿವ ರಹಸ್ಯೋಪದೇಶಕಾಂಡದೊಳು ಮುಪ್ಪತ್ತೈದನೆಯ ಅಧ್ಯಾಯವು ಸಂಪೂರ್ಣಮಾದುದು.

ಮುಪ್ಪತ್ತಾರನೆಯ ಅಧ್ಯಾಯವು.

ವಿನಾಯಕವ್ರತ ಮಾಹಾತ್ಮ್ಯಂ.

ಎಲೈ ಋಷಿಗಳಿರಾ! ವಿನಾಯಕ ವ್ರತವಂ ಪೇಳುತಿದೇನೆ, ಕೇಳುವ ರಾಗಿ, ಸೂರ್ಯನು ವೃಷಭಂಗತನಾಗಿರುವಲ್ಲಿ ಶುಕ್ಲಪಕ್ಷದ ಶುಕ್ರವಾರದ ದಿವಸ ಪ್ರಾತಃಕಾಲದಲ್ಲೆದ್ದು ಶುಚಿರ್ಭೂತನಾಗಿ, ನಿತ್ಯನೈಮಿತ್ತಿಕ ಕರ್ಮವಂ ತೀರಿಸಿ ನಾನಾ ವಿಧಂಗಳಾದ ಪರಿಮಳ ಪುಷ್ಪಂಗಳಿಂ ಮನೋಹರಂಗಳಾದ ಬಿಲ್ವ ಮುಂತಾದ ಪತ್ರಿಗಳಿಂ ಸ್ವಾಮಿಯನರ್ಚಿಸಿ, ಮೋದಕಂಗಳಿಂ ನಿವೇದನಂಗೈದು ಶಿವಾಲಯಕ್ಕೆ ಪೋಗಿ ಶಿವದರ್ಶನವನ್ನೂ ದೇವಿಯ ದರ್ಶನವನ್ನೂ ಮಾಡಿದ ಬಳಿಕ ವಿಘ್ನೇಶ್ವರನ ದರ್ಶನವನ್ನೂ ಮಾಡಿ, ಆ ವಿಘ್ನೇಶ್ವರಂಗೆ ಕಾಣಿಕೆಯಂ ಸಮರ್ಪಿಸಿ, ಯಥಾಶಕ್ತಿ ದಾನವಂ ಮಾಡಿ ಭಕ್ತಿಯಿಂ ನಮಸ್ಕರಿಸಿ ಮಂದಿರಕ್ಕೆ ಬಂದು, ಫಲವನ್ನಾಗಲಿ ಶುದ್ಧಾನ್ನವನ್ನಾಗಲಿ ಭುಂಜಿಸುತ್ತ ಪ್ರತಿ ದಿವಸ ದಲ್ಲಿಯು ಶಿವಭಕ್ತರಾದ ಬ್ರಾಹ್ಮಣರಿಗೆ ಆಯಾ ವಿಘ್ನೇಶ್ವರನ ಪ್ರತಿಮೆಯಂ ಭಕ್ತಿಯಿಂ ಕೊಟ್ಟು ಪರಿಶುದ್ಧನಾಗಿರಬೇಕು.

ಪೂರ್ವದಲ್ಲಿ ಅತ್ರಿಮಹಾಮುನಿಯು ಹೀಗೆ ಈ ವ್ರತವನ್ನಾಚರಿಸಿ ಚಂದ್ರನಂ ಪುತ್ರನನ್ನಾಗಿ ಪಡೆದನು. ಬ್ರಹ್ಮನು ಸೃಷ್ಟಿಕರ್ತೃತ್ವವನ್ನೈದಿದನು. ಕುಬೇರನು ಶಂಖ ಪದ್ಮಾದಿ ನಿಧಿಗಳಂ ಪೊಂದಿದನು. ಹೀಗೆ ಅನೇಕರು ಈ ವ್ರತವಂ ಮಾಡಿ ಇಹದಲ್ಲಿ ಅನೇಕ ಭೋಗಂಗಳನ್ನನುಭವಿಸಿ ಅಂತ್ಯದಲ್ಲಿ ಮೋಕ್ಷವನ್ನೈದಿದರು. ಮತ್ತಂ ಆವಾತನು ವಿನಾಯಕ ಚತುರ್ಥಿಯ ದಿವಸದಲ್ಲಿ ವಿಧಿಯಿಂ ಸರ್ವಪಾಪಪರಿಹಾರಕವಾದ ವಿನಾಯಕವ್ರತವಂ ಮಾಡುವನೋ ಆತನು ವಿಘ್ನೇಶ್ವರ ಪ್ರಸಾದದಿಂದ ಅನೇಕ ಭೋಗಂಗಳಂ ಭುಂಜಿಸಿ ವಿಘ್ನೇಶ್ವರನ ಲೋಕವನ್ನೈದುವನು. ಈ ವಿಷಯದಲ್ಲಿ ಸಂಶಯವಿಲ್ಲ, ಪೂರ್ವದಲ್ಲಿ ವಿಷ್ಣುವು ಉತ್ತಮವಾದ ಈ ವ್ರತವಂ ಮಾಡಿ ವಿನಾಯಕಂಗೆ ಪ್ರೀತಿಪಾತ್ರನಾಗಿ, ಪಾರ್ವತಿಯ ಶಾಪದಿಂ ತನಗೆ ಬಂದ ಸರ್ಪಶರೀರವಂ ಬಿಟ್ಟು ಪುಂಡರೀಕಾಕ್ಷನಾಗಿ ಜಗತ್ಪರಿಪಾಲಕತ್ವವನ್ನೈದಿದನು. ಇದಲ್ಲದೆ ಬ್ರಹ್ಮಾದಿ ದೇವತೆಗಳು ಚತುರ್ಥೀವ್ರತ ಪ್ರಭಾವದಿಂದ ವಿಘ್ನೇಶ್ವರನಂ ಕಂಡು ಭಕ್ತಿಯುಕ್ತರಾಗಿ ನಮಸ್ಕರಿಸೆ, ಆಗ ವಿನಾಯಕನು ಲಸಲವಿತವಾದ ನೃತ್ಯವಂ ಮಾಡಿದನು. ಆ ಸಮಯದಲ್ಲಿ ಚಂದ್ರನು ಆ ನೃತ್ಯವಂ ಮಾಡಲಾಗಿ, ಆಗ ವಿಘ್ನೇಶ್ವರನು ಅಪಹಾಸ್ಯವಂ ಮಾಡುತಲಿರುವ ಆ ಚಂದ್ರಂಗೆ ಶಾಪವಂ ಕೊಟ್ಟನು. ಅದುಕಾರಣದಿಂ ಚತುರ್ಥೀದಿನದಲ್ಲಿ ಚಂದ್ರನಂ ನೋಡಲಾಗದು. ಆದೊಡೆ ಆವಾತನು ಜ್ಞಾನಾಜ್ಞಾನಗಳಿಂ ನೋಡುವನೋ ಅವನು ಪಾಪಿಯಾಗಿ ಪೋಗುವನು. ಪೂರ್ವದಲ್ಲಿ ಕೃಷ್ಣನು ಚಂದ್ರನಂ ನೋಡಿ ಮಹಾ ದೋಷವನ್ನೈದಿದನು. ಅದುಕಾರಣದಿಂದ ಈ ವ್ರತವನ್ನು ಮಾಡಿದೊಡೆ ವಿಘ್ನೇಶ್ವರನು ಪ್ರಸನ್ನನಾಗಿ ಅನೇಕ ಭೋಗಂಗಳನ್ನಿತ್ತು ಅಂತ್ಯದಲ್ಲಿ ಮೋಕ್ಷವನ್ನೀಯುವನೆಂಬ ವಿಷಯದಿ ಎಷ್ಟು ಮಾತ್ರವು ಸಂಶಯವಿಲ್ಲವು.

ಅನೇಕ ಜನರು ಷಷ್ಠಿಯ ದಿವಸದಲ್ಲಿ ವಿಘ್ನೇಶ್ವರ ವ್ರತವಂ ಮಾಡಿ ಸದ್ಗತಿಯನ್ನೈದಿದರು. ಪೂರ್ವದಲ್ಲಿ ವಿದ್ಯುನ್ಮಾಲಿಯೆಂಬ ರಾಯನು ಷಷ್ಠಿಯಲ್ಲಿ ವಿನಾಯಕ ವ್ರತವಂ ಮಾಡಿ ಮಹಾ ರೋಗದಿಂ ಬಿಡಲ್ಪಟ್ಟು ವಜ್ರಾಂಗಿಯಾಗಿ ತಿಲೋತ್ತಮೆಯೆಂಬ ಸ್ತ್ರೀಯೊಡನೆ ಕ್ರೀಡಿಸಿ ಅನೇಕ ಪುತ್ರರಂ ಪಡೆದು, ಬಹು ಭೋಗಂಗಳನ್ನನುಭವಿಸಿ ಸಶರೀರವಾಗಿ ಕೈಲಾಸವನ್ನೈದಿ, ವಿಘ್ನೇಶ್ವರಂಗೆ ಪ್ರೀತಿಪಾತ್ರನಾಗಿ ಅಲ್ಲಿಯೇ ಅನೇಕ ಕಾಲವಿದ್ದು ಬಳಿಕ ಮೋಕ್ಷವನ್ನೈದಿದನು. ಇದಲ್ಲದೆ ಅನೇಕರು ಈ ವ್ರತವಂ ಮಾಡಿ ಮೋಕ್ಷವಂ ಪಡೆದರು. ಎಲೈ ಋಷಿಗಳಿರಾ! ಆರು ಈ ಅಧ್ಯಾಯವಂ ಪಠಿಸುವರೋ ಆರು ಕೇಳುವರೋ ಅವರು ಇಹದಲ್ಲಿ ಅನೇಕ ಭೋಗಂಗಳಂ ಭುಂಜಿಸಿ ಮೋಕ್ಷವನ್ನೈದುವರೆಂದು

ಸೂತಂ ಶೌನಕಾದಿಗಳಿಗೆ ಪೇಳ್ದನೆಂಬಲ್ಲಿಗೆ, ಮುವ್ವತ್ತಾರನೆಯ ಅಧ್ಯಾಯವು ಸಂಪೂರ್ಣವಾದುದು.

ಮುವ್ವತ್ತೇಳನೆಯ ಅಧ್ಯಾಯವು.

ಷಣ್ಮುಖವ್ರತ ಮಹಾತ್ಮ್ಯಂ.

ಎಲೈ ಋಷಿಗಳಿರಾ! ಕುಮಾರಸ್ವಾಮಿಯ ವ್ರತವಂ ಪೇಳುತಿರ್ಪೆನೆ, ಕೇಳುವರಾಗಿ, ತುಲಾರಾಶಿಯಲ್ಲಿ ಸೂರ್ಯನಿರುವಲ್ಲಿ ಶುಕ್ಲಪಕ್ಷದ ಶುಕ್ರವಾರ ದಿವಸ ಪ್ರಾತಃಕಾಲದಲ್ಲೆದ್ದು ಶುಚಿರ್ಭೂತನಾಗಿ, ಕುಮಾರಸ್ವಾಮಿಯಂ ಹೃದಯ ಕಮಲದಲ್ಲಿ ಧ್ಯಾನಿಸುತ್ತ ವಿಧಿಯಿಂದ ವ್ರತವಂ ಮಾಡಬೇಕು. ಹೀಗೆಯೆ ಕೃತ್ತಿಕಾ ನಕ್ಷತ್ರದಲ್ಲಿಯು ಸ್ಕಂದಷಷ್ಠಿಯಲ್ಲಿಯು ವ್ರತವನ್ನಾಚರಿಸಬೇಕು. ಆರು ಕೆಲಂಬರು ಕುಮಾರ ಪ್ರೀತಿಕರವಾದ ಈ ಮೂರು ವ್ರತಗಳನ್ನು ಆಗಮೋಕ್ತಪ್ರಕಾರದಿಂ ಮಾಡುವರೋ, ಅವರು ಅನೇಕ ಭೋಗಂಗಳಂ ಭುಂಜಿಸಿ ಅಂತ್ಯದಲ್ಲಿ ಕುಮಾರಾಜ್ಞೆಯಿಂ ಮೋಕ್ಷವನ್ನೈದುವರು. ಹರಿ ಬ್ರಹ್ಮ ಮುಂತಾದ ದೇವತೆಗಳು ಈ ವ್ರತವಂ ಮಾಡಿ ರಣಕ್ಕೆ ಬಂದ ಘೋರರಾದ ಅಸುರರಂ ಕೊಂದು ಜಯವಂ ಪಡೆದರು. ಪೂರ್ವದಲ್ಲಿ ಮುಚುಕುಂದರಾಯನು ಈ ವ್ರತವಂ ಮಾಡಿ ಕಾಳಗದಲ್ಲಿ ವೈರಿಗಳಂ ಜಯಿಸಿ ಗಣಾಧ್ಯಕ್ಷತ್ವವಂ ಪಡೆದನು. ನಾರದಾದಿಗಳು ನಿತ್ಯತ್ವವನ್ನೈದಿದರು. ಮತ್ತೆ ಕೆಲಂಬರು ಈ ವ್ರತಗಳಂ ಮಾಡಿ ಪುತ್ರರಂ ಪಡೆದು ಐಶ್ವರ್ಯ ಜ್ಞಾನ ಮೋಕ್ಷಗಳಂ ಪೊಂದಿದರು. ಆವಾತನು ಇವರೊಳಗೆ ಗುಹಂಗೆ ಸಮ್ಮತವಾದ ಒಂದು ವ್ರತವನಾದರೂ ಆಚರಿಸುವನೋ ಆತನು ಕುಮಾರಸ್ವಾಮಿಯ ಪ್ರಸಾದದಿಂದ ಇಹದಲ್ಲಿ ಸಮಸ್ತವಾದ ಅಭಿಲಾಷೆಗಳಂ ಪಡೆದು, ಬಳಿಕ ಶಿವಲೋಕಕ್ಕೆ ಪೋಗಿ ಕೆಲವು ಕಾಲವಿದ್ದು ಅಂತ್ಯದಲ್ಲಿ ಮೋಕ್ಷವನ್ನೈದುವನು. ಆವಾತನು ಈ ಮೂರು ವ್ರತಗಳಂ ಮಾಡುತಿರ್ಧಾನೆಯೋ ಆತನ ಮಹಿಮೆಯಂ ಪೇಳಲಸಾಧ್ಯವು. ಎಲೈ ಋಷಿಗಳಿರಾ! ಗುಹಪ್ರಿಯವಾದ ಈ ಅಧ್ಯಾಯವನ್ನು ಯಾರು ಪಠಿಸುವರೋ ಯಾರು ಕೇಳುವರೋ ಅವರು ಐಹಿಕ ಸುಖಂಗಳನನುಭವಿಸಿ ಅಂತ್ಯದಲ್ಲಿ ಮೋಕ್ಷವನ್ನೈದುವರು. ಈ ವಿಷಯದಲ್ಲಿ ಸಂಶಯವಿಲ್ಲವು, ಎಂದು ಸೂತಂ ಶೌನಕಾದಿಮುನಿಗಳಿಗೆ ಪೇಳಿದನೆಂಬಲ್ಲಿಗೆ ಉಪದೇಶಕಾಂಡದಲ್ಲಿ ಮುವ್ವತ್ತೇಳನೆಯ ಅಧ್ಯಾಯವು ಸಮಾಪ್ತವಾದುದು.

ಮುವ್ವತ್ತೆಂಟನೆಯ ಅಧ್ಯಾಯವು.

ಭೈರವಗಣವ್ರತ ಮಹಾತ್ಮ್ಯಂ.

ಎಲೈ ಋಷಿಗಳಿರಾ! ಭೈರವ ವ್ರತಂಗಳಂ ಪೇಳುತಿರ್ಧೇನೆ ಸಾವಧಾನದಿಂ ಕೇಳಿರಿ, ಸೂರ್ಯನು ಮಕರರಾಶಿಗೆ ಬಂದಲ್ಲಿ ಶುಕ್ಲಪಕ್ಷದ ಭಾನುವಾರದ ದಿವಸ ಭೈರವ ವ್ರತವಂ ಮಾಡಬೇಕು. ಚೈತ್ರಮಾಸದ ಭರಣೀ ನಕ್ಷತ್ರದಲ್ಲಿ ಭೈರವನ ಎರಡನೆಯ ವ್ರತವು ಮತ್ತಂ ಆಶ್ವೀಜಮಾಸದ ಭರಣೀ ನಕ್ಷತ್ರದಲ್ಲಿ ಮೂರನೆಯ ವ್ರತವು, ಈ ಮೂರು ವ್ರತಗಳ ದಿವಸಗಳಲ್ಲಿಯು ಬ್ರಾಹ್ಮೀ ಮುಹೂರ್ತದಲ್ಲಿ ಭೈರವ ಸ್ಮರಣೆಯ ಪೂರ್ವಕವಾಗಿ ನಿತ್ಯ ಕರ್ಮವಂ ಮಾಡಿ, ಸುವರ್ಣದಿಂ ದಾಗಲಿ ರಜತದಿಂದಾಗಲಿ ತಾಮ್ರದಿಂದಾಗಲಿ ಭೈರವ ಮೂರ್ತಿಯಂ ಮಾಡಿಸಿ, ನಾನಾ ವಿಧಂಗಳಾದ ಪುಷ್ಪಂಗಳಿಂದ ಪರಿಪೂಜಿಸಿ, ಪಾಯಸ ಮುಂತಾದ ಪದಾರ್ಥಂಗಳಂ ನಿವೇದಿಸಿ, ಸ್ತೋತ್ರಪೂರ್ವಕವಾಗಿ ಪ್ರದಕ್ಷಿಣ ನಮಸ್ಕಾರಂ ಗಳಂ ಗೈದು, ಶಿವಭಕ್ತರಾದ ಬ್ರಾಹ್ಮಣರಿಗೆ ಯಥಾಶಕ್ತಿ ದಾನವಂ ಕೊಟ್ಟು, ಶಿವಾಲಯಕ್ಕೆ ತೆರಳಿ ದೇವದೇವನಾದ ತ್ರಿಯಂಬಕಂಗೆ ನಮಸ್ಕಾರವಂ ಮಾಡಿ ಯಥಾಶಕ್ತಿ ಕಾಣಿಕೆಯನಿತ್ತು, ಮರಳಿ ತನ್ನ ಗೃಹಕ್ಕೆ ಬಂದು ಮಧ್ಯಾಹ್ನಕಾಲ ದಲ್ಲಿ ಶಿವಭಕ್ತರಾದ ದ್ವಿಜರೊಡನೆ ಫಲವನ್ನಾಗಲಿ ಅನ್ನಾಹಾರಂಗಳನ್ನಾಗಲಿ ಏಕವಾರ ಭುಂಜಿಸಿ, ಮಾರನೆಯ ದಿವಸ ಭೈರವ ಮೂರ್ತಿಯನ್ನು ಶಿವಭಕ್ತ ನಾದ ಬ್ರಾಹ್ಮಣನಿಗೆ ಕೊಡಬೇಕು. ಆವಾತನು ಹೀಗೆ ಭೈರವ ವ್ರತವನ್ನು ಮಾಡುವನೋ ಆತನು ಸಕಲ ಭೋಗಂಗಳನನುಭವಿಸಿ, ಬಳಿಕ ಶಿವಲೋಕಕ್ಕೆ ಪೋಗಿ ಭೈರವಾನುಗ್ರಹದಿಂ ತುದಿಯಲ್ಲಿ ಮೋಕ್ಷವನ್ನೈದುವನು. ಪೂರ್ವದಲ್ಲಿ ಮಹಾ ಕಾಂತಿಯುಳ್ಳ ಸೂರ್ಯನು ಈ ವ್ರತವಂ ಮಾಡಿ ಸೂರ್ಯಕೋಟಿ ಪ್ರಕಾಶ ಮಾನಮಾದ ಭೈರವನ ಕವಚವನ್ನೈದಿದನು.

ಭೈರವವ್ರತ ಫಲಸ್ತುತಿಯು.

ಎಲೈ ಋಷಿಗಳಿರಾ! ಭಾನುವಾರದೊಳು ಪ್ರಾತಃಕಾಲದಲ್ಲೆದ್ದು ನಿತ್ಯ ಕರ್ಮವಂ ತೀರಿಸಿ, ಸ್ವರ್ಣರಜತ ತಾಮ್ರಗಳಿಂ ವಿತ್ತಾನುಸಾರವಾಗಿ ಭೈರವ ಮೂರ್ತಿಯಂ ಮಾಡಿಸಿ, ವಿಧಿಯಿಂದ ಪರಿಪೂಜಿಸಿ ನೈವೇದ್ಯವಂ ಗೈದು ಯಥಾ ಶಕ್ತಿ ದಾನವನಿತ್ತು, ಶಿವಾಲಯಕ್ಕೆ ಸಾರಿ ಶಿವದರ್ಶನವನ್ನು ಭೈರವನ ಸಂದರ್ಶನ ವನ್ನೂ ಮಾಡಿ, ಯಥಾಶಕ್ತಿ ದಾನವನಿತ್ತು ಭೈರವನಾಜ್ಞೆಯಿಂ ತನ್ನ ಗೃಹಕ್ಕೆ ಬಂದು, ಮೌನವಾಗಿ ಶಿವಭಕ್ತರಾದ ಬ್ರಾಹ್ಮಣರೊಡನೆ ಭುಂಜಿಸಿ, ಮಾರನೆಯ ದಿವಸ ಆ ಪ್ರತಿಮೆಯಂ ಬ್ರಾಹ್ಮಣರಿಗೆ ಕೊಡಬೇಕು. ಆವಾತನು ಹೀಗೆ ಈ ವ್ರತವಂ ಮಾಡುತ್ತಿದ್ದಾನೋ ಆತನು ದೀರ್ಘಾಯುಷ್ಯವನ್ನು ಸಂಪತ್ತನ್ನು

ಪೊಂದುವನು. ಬ್ರಹ್ಮನು ಈ ವ್ರತವಂ ಮಾಡಿ ಶಿವಂಗೆ ಸಾರಥಿಯಾದನು. ದೇವೇಂದ್ರನು ಕಲ್ಪವೃಕ್ಷ,ಕಾಮಧೇನುಗಳಂ ಶಚೀದೇವಿಯುಂ ಸಹ ಪಡದನು. ಕೆಲಂಬ ಬ್ರಾಹ್ಮಣರು ಈ ವ್ರತವಂ ಮಾಡಿ ಶಿವಯೋಗಿಗಳಾದರು. ಕೆಲಂಬ ರಾಯರು ಐಶ್ವರ್ಯವಂ, ವಿಜಯಂಗಳಂ ಪಡದರು. ಕೆಲಂಬ ವೈಶ್ಯರು ಅನೇಕ ಭೋಗಂಗಳನನುಭವಿಸಿ ಶಿವಪದಂಗಳಂ ಪಡದರು. ಕೆಲಂಬ ಶೂದ್ರರು ಅನೇಕ ಪುತ್ರರಂ ಪಡದು ಬಹು ಭೋಗಂಗಳನನುಭವಿಸಿ ಮೋಕ್ಷವಂ ಪಡದರು. ಅದು ಕಾರಣದಿಂ ಯಾರು ಕೆಲಂಬರು ಈ ವ್ರತವನಾಚರಿಸುತ್ತಿದ್ದಾರೋ ಅವರು ಶಿವನ ಪ್ರಸಾದದಿಂ ವಿಜಯವಂ ಪರಾಕ್ರಮವಂ ಪಡದು ಅಂತ್ಯದಲ್ಲಿ ಮೋಕ್ಷವನೈದುವರು. ಎಲೈ ಋಷಿಗಳಿರಾ! ಆರು ಈ ಅಧ್ಯಾಯವಂ ಪಠಿಸುವರೋ ಯಾರು ಪಠನೆಯಂ ಮಾಡಿಸುವರೋ ಅವರು ಎಣೆಯಿಲ್ಲದ ಭೋಗಂಗಳನನುಭವಿಸಿ ಅಂತ್ಯದಲ್ಲಿ ಶಿವಸಾಯುಜ್ಯವನೈದುವರೆಂದು ಸೂತಂ ಶೌನಕಾದಿಗಳಿ ನಿರೂಪಿಸಿದ

ನೆಂಬಲ್ಲಿಗೆ, ಶಿವರಹಸ್ಯೋಪದೇಶಕಾಂಡದೊಳು ಮುವ್ವತ್ತೆಂಟನೆಯ
ಅಧ್ಯಾಯವು ಸಮಾಪ್ತಮಾದುದು.

ಮುವ್ವತ್ತೊಂಬತ್ತನೆಯ ಅಧ್ಯಾಯವು.

ಶಿವಪ್ರತಿಷ್ಠಾಪನಾ ಮಹಿಮಾನುವರ್ಣನಂ.

ಎಲೈ ಋಷಿಗಳಿರಾ! ಈ ರೀತಿಯಲ್ಲಿ ಶಿವವ್ರತಂಗಳಂ ಪೇಳಿದ್ದು ಸರಿಯಷ್ಟೆ ಶಿವಪುಣ್ಯಗಳಂ ಪೇಳುತ್ತಿಧೇನೆ, ಸಾವಧಾನದಿಂ ಕೇಳುವರಾಗಿ, ಶಿವಭಕ್ತರಿಗೆ ಶಿವಾಜ್ಞೆಯಿಂದ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯಂಗಳೆಂಬ ಚತುರ್ವಿಧ ಮುಕ್ತಿಗಳುಂಟಾಗುವದಕ್ಕೋಸುಗ, ದೇವದೇವನಾದ ಮಹೇಶ್ವರನಾದ ಲಿಂಗರೂಪಿಯಾದ ಶಿವಂಗೆಯು ಶಿವಮೂರ್ತಿಗಳ್ಗೆಯು ಉಮಾದೇವಿಗು ಕುಮಾರಸ್ವಾಮಿಗು ವಿನಾಯಕನಿಗು ಗುಹಂಗು ಪ್ರಾಕಾರಾಟ್ಟಾಲ ವಲಭಿಗಳಂ ಮನೋಹರಂಗಳಾದ ಆಲಯಂಗಳಂ ತಾಮ್ರ ಸ್ವರ್ಣ ಶಿಲಾದಿಗಳಿಂ ನಿರ್ಮಾಣವಂ ಮಾಡಿ ಆ ಆಲಯಂಗಳಲ್ಲಿ ಆಯಾಯ ಮೂರ್ತಿಗಳಂ ವಿಧಾನದಿಂದ ಅಭಿಷೇಕವಂಮಾಡಿ ಪೂವಂಡೆಗಳಿಂದಲಂಕರಿಸಿ, ಅಗರು ಮುಂತಾದ ಧೂಪಂಗಳಿಂ ಸ್ಥೂಲಂಗಳಾದ ದೀಪಜ್ವಾಲೆಗಳಿಂದಾರಾಧಿಸಿ, ಶಿವಾಲಯ ಮುಂತಾದ ಆಲಯಂಗಳಿಗೆ ವಿಶೇಷವಾಗಿ ಕ್ಷೀರವಂ ಕರೆಯುವ ಕಪಿಲಾಗೋವ್ರಗಳಂ ಕನ್ನಿಕೆಯರಂ ಕ್ಷೇತ್ರಂಗಳಂ ವಿತ್ತಾನುಸಾರದಿಂ ಆರಾಮ ವಾಪೀ ಕೂಪ ತಟಾಕಾದಿ ಮಹಾವೃಕ್ಷಂಗಳಂ ಶಿವಪ್ರೀತಿಯಾಗಿ ಕೊಟ್ಟು, ರಥ ಮುಂತಾದ ವಾಹನಂಗಳಂ ನಿರ್ಮಾಣವಂಗೈದು ಮಹಾ ವಿಭವ ವಿಸ್ತಾರದಿಂ ಉತ್ಸವವಂ ಮಾಡಬೇಕು. ಜೀರ್ಣವಾದ ಶಿವಾ

ಲಯಂಗಳಂ ಉದ್ಧರಿಸಬೇಕು. ನಿತ್ಯದಲ್ಲಿಯು ಶಿವಾಲಯಂಗಳಿಗೆ ಪೋಗಿ ಪ್ರದಕ್ಷಿಣ ನಮಸ್ಕಾರಂಗಳಂ ಭಕ್ತಿಯಿಂ ಮಾಡಬೇಕು. ಪರಮಾತ್ಮನಾದ ಶಿವಂಗೆ ಪ್ರೀತಿಯಾದ ಈ ಮೊದಲಾದ ಪುಣ್ಯಂಗಳಂ ನಿತ್ಯದಲ್ಲಿಯು ತನ್ನ ಶ್ರೇಯೋಭಿವೃದ್ಧಿಗಾಗಿ ಪ್ರಯತ್ನದಿಂ ಮಾಡತಕ್ಕದ್ದು. ಮತ್ತಂ ಶಿವಾರ್ಚಕನಾದ ಗುರುವಿಗೋಸುಗ ಗೃಹವಂ ನಿರ್ಮಾಣವಂ ಮಾಡಿಸಿ, ಆ ಗೃಹವನ್ನು ಉಪಕರಣಂಗಳ್ವೆರಸಿ ಧಾನ್ಯಾದಿಗಳಿಂ ವರ್ಷಾಶಕ್ಕಾಗಿ ತುಂಬಿ ನಮಸ್ಕಾರ ಪೂರ್ವಕಮಾಗಿ ಭಕ್ತಿಯಿಂ ಗುರುವಿಗೆ ಕೊಟ್ಟು, ನಿತ್ಯದಲ್ಲಿಯು ಆ ಗುರುವಿನ ಕಾರ್ಯಂಗಳಂ ಚಂಚಲಚಿತ್ತನಲ್ಲದೆ ಮಾಡುತ್ತಿರಬೇಕು. ಇದಲ್ಲದೆ ಶಿವಭಕ್ತರಿಗೋಸುಗ ಗೃಹಂಗಳಂ ನಿರ್ಮಾಣವಂ ಮಾಡಿಸಿ ಸಾಮಗ್ರಿಗಳೊಡನೆ ಅವುಗಳಂ ಕೊಡಬೇಕು. ಇದಲ್ಲದೆ ಶಿವಪುರಾಣಂಗಳಂ ವಿಭೂತಿ ರುದ್ರಾಕ್ಷಿಗಳಂ ಶಿವಲಿಂಗಂಗಳಂ ಶುದ್ಧವಾದ ಅನ್ನಂಗಳಂ ಭಕ್ತರ್ಗೆ ಕೊಡುತಲಿರಬೇಕು. ಶಿವಭಕ್ತರಂ ಕಂಡರೆ ಶೀಘ್ರದಿಂದೆದ್ದು ಭಕ್ತಿಯಿಂ ನಮಸ್ಕರಿಸಿ, ಅವರೊಡನೆ ಬಹುಮಾನದಿಂ ಸಂಭಾಷಣೆಗಳಂ ಮಾಡುತ ಭಕ್ತಿಯಿಂದಿರಬೇಕು. ಈ ಕಾರ್ಯಂಗಳಲ್ಲಿ ಮನದಿಂದಲಾದರು ವಿಘ್ನವನಾಚರಿಸದೆ ಸಹಾಯುವನ್ನೇ ಮಾಡುತಲಿರಬೇಕು. ಆರು ಕೆಲಂಬರು ವಾಕ್ಕುಗಳಿಂದಲು ಮಾನಸಂಗಳಿಂದಲು ಶರೀರದಿಂದಲು ಅತ್ಯಂತ ಮುದದಿಂ ಈ ಪ್ರಕಾರವಾದ ಶಿವ ಪುಣ್ಯಂಗಳಂ ಮಾಡುತಲಿರ್ಧಾರಿಯೋ, ಅವರು ಭೂತಂಗಳಲ್ಲಿ ಪುಣ್ಯಾತ್ಮರಾಗಿ ಪುತ್ರ ಪೌತ್ರಾದ್ಯಭಿವೃದ್ಧಿಗಳಂ ಪಡದು, ಅಖಂಡ ಭೋಗಂಗಳನನುಭವಿಸಿ, ಕಾಂಚನ ವಿಮಾನಂಗಳನೇರಿ ಶಿವಲೋಕವನ್ನೈದಿ, ಶಿವ ಸಂಮಾನಿತರಾಗಿ ಆನಂದದಿಂ ಕಲ್ಪಕೋಟಿ ಸಹಸ್ರವರ್ಷಂಗಳಿರ್ದು, ಅಂತ್ಯದಲ್ಲಿ ಶಿವಸಾಯುಜ್ಯವನ್ನೈದುತಿರ್ಪರು ಸಂಶಯವಿಲ್ಲವು, ಎಂದು ಸೂತಪೌರಾಣಿಕಂ ನಿರೂಪಿಸಲಾಗಿ, ಶೌನಕಾದಿ ಋಷಿಗಳಾವಾಕ್ಯವಂ ಕೇಳಿ ಸಂಶಯಗ್ರಸ್ತರಾಗಿ, ಎಲೈ ಸೂತನೆ! ಶಿವಭಕ್ತರ ಲಕ್ಷಣಂಗಳು ಹೇಗಿರುವವು? ಎಂದು ಪ್ರಚ್ಛಿಸೆ, ಸೂತನಿಂತೆಂದನು.

ಎಲೈ ಋಷಿಗಳಿರಾ! ದೇವತೆಗಳಲ್ಲಿ ಕೆಲಂಬ ಮಹಾತ್ಮರು ಶಿವಭಕ್ತರಾಗಿರುವರು. ಹಾಗೆಯೆ "ದೈತ್ಯ, ದಾನವ, ಯಕ್ಷ, ಕಿನ್ನರ, ಗಂಧರ್ವ, ಸರ್ಪ, ಮುನೀಶ್ವರ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ" ಎಂಬಿವರುಗಳಲ್ಲಿಯು ಮತ್ತಂ ಸಂಕರ ಜಾತಿಗಳಲ್ಲಿಯು ಕೆಲಂಬರಾದ ಮಹಾತ್ಮರು ಶಿವಭಕ್ತರಾಗಿರುವರು. ಇವರಿಗೆ ವರ್ಣಾಶ್ರಮ ವ್ಯವಸ್ಥೆಗಳಿಲ್ಲವು. ಸಮಸ್ತರಾದ ಶಿವಭಕ್ತರೆಲ್ಲರು ಕೇವಲ ಶಿವಸ್ವರೂಪಿಗಳಾಗಿ ಮಹೇಶ್ವರರೆಂದೇ ಪೇಳಲ್ಪಟ್ಟಿರುವರು. ಆದುದರಿಂದವರೆಲ್ಲರು ವೇದಂಗಳಲ್ಲಿ ವರ್ಣಾಶ್ರಮ ಧರ್ಮಂಗಳಂ ದಾಂಟದವರೆಂದು ಪೇಳಲ್ಪಟ್ಟುದು.

ಶ್ಲೋ॥ ತೆಷಾಂಬಾಹ್ಯಾನಿಚಿಹ್ನಾನಿ ದಶಸಂತಿವ.ುನೀಶ್ವರಾಃ ।
ತ್ರೀಣ್ಯಂತರಾಣಿಭಕ್ತಾನಾಂ ದುರ್ಲಭಾನಿಸ್ಥಿರಾತ್ಮನಾಂ ॥
ಪ್ರಥಮಂಭಸ್ಮರುದ್ರಾಕ್ಷಧಾರಣಂ ಸಮುದೀರಿತಂ ।
ದ್ವಿತೀಯುಂಗುರುಸೇವಾಚ ಶಿವಸ್ತೋತ್ರಂತೃತೀಯುಕಂ ॥
ನಾಮೋಚ್ಚಾರಣಮಿಾಶಸ್ಯ ಚತುರ್ಥಂಪರಿಪಠ್ಯತೆ ।
ಪಂಚಮಂದೇವದೇವಸ್ಯ ಪೂಜನಂಬ್ರಾಹ್ಮಣೊತ್ತಮಾಃ ॥
ಶಿವಾಲಯುಸ್ಯಪುಣ್ಯಸ್ಯ ದರ್ಶನಂಷಷ್ಠಮಿಾರಿತಂ ।
ತಥಾಶಿವಪುರಾಣಾನಾಂ ಶ್ರವಣಂಸಪ್ತಮಂಪರಂ ॥
ನಮಸ್ಕಾರಸ್ತುಭಕ್ತಾನಾ ಮಷ್ಟಮಂಕಥಿತಂಖಲು ।
ನವಮಂಶಿವಭಕ್ತಾನಾಂ ಗೃಹೆಭೋಜನಮಿಾರಿತಂ ॥
ದಾನಂಚದಶಮಂಜ್ಞೆಯುಂ ಶಿವಭಕ್ತೆಗುರೊರಪಿ ।
ಏನಂಬಾಹ್ಯಾನಿಚಿಹ್ನಾನಿ ಕಥಿತಾನಿದಶದ್ವಿಜಾಃ ॥
ಅಂತರಾಣ್ಯಪಿಚಿಹ್ನಾನಿ ಮಾನಸಃಪ್ರಥಮೊಮನುಃ ।
ಪೂಜಾಚಮಾನಸೀಜ್ಞೆಯಾ ದ್ವಿತೀಯಾಪರಮೇಶಿತುಃ ॥
ಸಾಕ್ಷಾತ್ಕಾರಸ್ತೃತೀಯುಸ್ತು ಬ್ರಹ್ಮಣೊಬ್ರಾಹ್ಮಣೋತ್ತಮಾಃ ।
ಇಮಾನಿತ್ರೀಣಿಚೊಕ್ತಾನಿ ಪುರಾವಿದ್ಭಿರ್ಮುನೀಶ್ವರೈಃ ॥
ಅಂತರಾಣ್ಯಪಿಬಾಹ್ಯಾನಿ ಯೆಷಾಂಸತಿಯಥಾದ್ವಿಜಾಃ ।
ತಥಾಭಕ್ತಾನಿಚಿಹ್ನಾನಿ ಸಂಭವಂತಿಮಹಾತ್ಮನಾಂ ॥
ಕಂಪಿಕಾರಃಪ್ರಥಮೊ ಗದ್ಗದಾಖ್ಯಶ್ಚರೀಯಜಃ ।
ಜಿಹ್ವಾಸ್ಪಂದೊದ್ವಿತೀಯುಸ್ತು ಸ್ಫುರಣಂಚೊಷ್ಠಯೊರಪಿ ॥
ಕಂಪನಂಚಶರೀರಸ್ಯ ಚತುರ್ಥಂಭಕ್ತಲಕ್ಷಣಂ ।
ರೊಮಾಂಚಃಪಂಚಮೊಜ್ಞೆ ಯುಷ್ಷಷ್ಠಸ್ಸ್ವೆದೊಪಿಕೀರ್ತಿತಃ ॥
ಸ್ಖಲನಂಸಪ್ತಮಂಜ್ಞೆಯ ಮಷ್ಟಮಂಬಾಷ್ಪನಿರ್ಗಮಃ ।
ರೋದನಂನವಮಂಚಿಹ್ನಂ ದಶಮಂಪಾರವಶ್ಯಕಂ ॥
ಏತಾನಿದಶಚಿಹ್ನಾನಿ ಭಕ್ತ್ಯುಸ್ಯುಕ್ತಾನಿಶೂಲಿನಾ ।
ತ್ರಿವಿಧಾನ್ಯಪಿಚಿಹ್ನಾನಿ ಯೆಷಾಂಸಂತಿಮಹಾತ್ಮನಾಂ ॥
ತೆಭಕ್ತಾಶ್ಶಂಕರಾಜ್ಞೆಯಾ ಸ್ಸರ್ವಲೋಕೈಕಪಾವನಾಃ ।
ಅಥವಾಶಿವಭಕ್ತಾಯೆ ಭಸ್ಮರುದ್ರಾಕ್ಷಧಾರಿಣಃ ॥
ತೆಷುಪೂರ್ವೊಕ್ತಚಿಹ್ನಾನಿ ನಜ್ಞಾಯಂತೆಚಯದಾತದಾ ।
ತಾನ್ದೃಷ್ಟ್ವಾಪ್ರಣಮೆದ್ಭಕ್ತ್ಯಾ ಶಿವಭಕ್ತಾನ್ನಿವಪ್ರಿಯಃ ॥

ಮಹೇಶ್ವರ ಚಿಹ್ನಾ ವಿವರಣಂ.

ಎಲೈ ಮುನೀಶ್ವರರುಗಳಿರಾ! ಆ ಮಹೇಶ್ವರಂಗೆ ಚಿಹ್ನೆಗಳು ಹತ್ತು, ಮತ್ತಂ ದುರ್ಲಭಂಗಳಾದನಂತರ ಚಿಹ್ನಂಗಳು ಮೂರಿರುವವು. ಅವು ಯಾವ ವೆಂದೊಡೆ, ಭಸ್ಮ ರುದ್ರಾಕ್ಷಧಾರಣವೇ ಪ್ರಥಮ ಚಿಹ್ನವು, ಗುರುಸೇವೆಯಂ ಮಾಡುವದೆರಡನೆಯದು, ಶಿವಸ್ತೋತ್ರವಂ ಮಾಡುವುದು ತೃತೀಯವು, ಶಿವ ನಾಮೋಚ್ಚಾರಣೆಯು ಚತುರ್ಥವು, ದೇವದೇವನಾದ ಶಿವನಂ ಪೂಜಿಸುವುದು ಐದನೆಯದು, ಪುಣ್ಯವಾದ ಶಿವಾಲಯ ದರ್ಶನವು ಷಷ್ಠಮವು, ಶಿವಭಕ್ತರಿಗೆ ನಮಸ್ಕರಿಸುವಣವು, ಸಪ್ತಮವು, ಶಿವಪುರಾಣಶ್ರವಣವು, ಅಷ್ಟಮವು, ಶಿವ ಭಕ್ತರ ಮನೆಯಲ್ಲಿ ಭೋಜನಮಾಡುವದು ಒಂಭತ್ತನೆಯದು, ಶಿವಭಕ್ತರಿಗು ಗುರುವಿಗು ದಾನವಂ ಕೊಡುವದು ದಶಮವು, ಈ ಹತ್ತು ಬಾಹ್ಯ ಚಿಹ್ನಂಗಳೆನ್ನ ಲ್ಪಡುವವು. ಮತ್ತಂ ಮಾನಸ ಜಪವು ಪ್ರಥಮವು, ಮಾನಸಪೂಜೆಯು ಎರಡನೆಯದು, ಪರಬ್ರಹ್ಮ ರೂಪನಾದ ಶಿವನ ಸಾಕ್ಷಾತ್ಕಾರವು ತೃತೀಯವು, ಈ ಮೂರು ಅಂತರ ಚಿಹ್ನಂಗಳು, ಇವುಗಳು ಯಾವಾಗ ಯಾವ ಮಹಾತ್ಮರಿಗೆ ಇರುತಿರುವವೋ ಆಗ ಆ ಮಹಾತ್ಮರಿಗೆ ಭಕ್ತಿಸಂಬಂಧವಾದ ದಶ ಚಿಹ್ನಂಗಳು ಸಂಭವಿಸುವವು. ಶರೀರ ಜನ್ಯವಾದ ಕಂಠದಲ್ಲಿ ಪುಟ್ಟುವ ಗದ್ಗದ ಸ್ವರವು ಪ್ರಥಮವು, ಜಿಹ್ವಾಸ್ಪಂದವು ಎರಡನೆಯದು, ತುಟಿಗಳ ಚಲನವು ತೃತೀಯವು, ಶರೀರ ಕಂಪನವು ಚತುರ್ಥವು, ರೋಮಾಂಚವು ಐದನೆಯದು, ಸ್ವೇದೋದ್ಭವವು ಆರನೇದು, ಪರವಶದಿಂದೆಡಹುವದು ಸಪ್ತಮವು, ಆನಂದಬಾಷ್ಪ ಬೀಳುವ ದಷ್ಟಮವು, ರೋದನವು ನವಮವು, ಪರವಶವಾಗಿರುವದು ದಶಮವು, ಈ ಹತ್ತು ಭಕ್ತಿ ಸಂಬಂಧಂಗಳಾದ ಚಿಹ್ನಂಗಳು, ಮಹಾತ್ಮರಾದ ಆರು ಕೆಲಂಬರಿಗೆ ಈ ಮೂರು ಚಿಹ್ನಂಗಳಿರುವವೋ ಅಂಥ ಶಿವಭಕ್ತರಂ ಸಮಸ್ತ ಲೋಕಂಗಳಂ ಪಾವನಂ ಗೈಯುವ ಶಿವಸ್ವರೂಪಿಗಳಂತೆ ತಿಳಿಯಬೇಕು. ಅಥವಾ ಆರು ಕೆಲಂ ಬರು ಶಿವಭಕ್ತರು ಭಸ್ಮ ರುದ್ರಾಕ್ಷಧಾರಿಗಳಾಗಿರುವರೋ, ಅಂಥ ಶಿವಭಕ್ತರೊಳು ಪೂರ್ವದಲ್ಲಿ ಹೇಳಿದ ಚಿಹ್ನಂಗಳು ತಿಳಿಯಲ್ಪಡದಿರ್ದೊಡೆ, ಈ ಶಿವಪ್ರಿಯ ನಾದವನು ಭಸ್ಮ ರುದ್ರಾಕ್ಷಧಾರಣಾಮಾತ್ರವುಳ್ಳ ಶಿವಭಕ್ತರಂ ಕಂಡು ನಮ ಸ್ಕರಿಸಬೇಕು.

ಶಿವಭಕ್ತರಿಗೆ ನಮಸ್ಕರಿಸುವಿಕೆಯ ಫಲಸ್ತುತಿ.

ಆರು ಕೆಲಂಬರುಗಳುಂ ಶಿವಭಕ್ತರಂಕಂಡು ನಮಸ್ಕರಿಸಿ ಸ್ತೋತ್ರಂ ಗಳಂ ಮಾಡುತಲಿರುವರೋ, ಅವರುಗಳು ಸಮಸ್ತ ವಾಂಛೆಗಳಂ ಪಡೆದು, ಅತ್ಯಂತ ಮುದದಿಂದನೇಕ ಭೋಗಂಗಳಂ ಭುಂಜಿಸಿ, ಪುತ್ರ ಪೌತ್ರಾದಿ ಸಮಸ್ತ

ಇಷ್ಟಾರ್ಥಂಗಳಂ ಪಡೆದು, ಆರೋಗ್ಯದೃಢಗಾತ್ರರಾಗಿ ಇಹದಲ್ಲಿ ಬಹು ಕಾಲ ವಿರ್ದು, ಅಂತ್ಯದಲ್ಲಿ ನಾನಾವರ್ಣ ವಿಚಿತ್ರವಾದ ವಿಮಾನವನ್ನೇರಿ, ಸೂರ್ಯ ಲೋಕದಲ್ಲಿಯುಂ ಚಂದ್ರಲೋಕದಲ್ಲಿಯು ಇರುವ ದೇವತೆಗಳಿಂ, ಜಗದೀಶ್ವರ ರಾದ ಅಷ್ಟದಿಕ್ಪಾಲಕರಿಂದಲುಂ ಹರಿಬ್ರಹ್ಮರಿಂದಲು, ಉತ್ತಮರಾದ ಋಷಿಗ ಳಿಂದಲು, ಕಿನ್ನರ ಕಿಂಪುರುಷಾದಿಗಳಿಂದಲು ಸ್ತುತಿಸಲ್ಪಡುತ್ತ, ನರ್ತನವಂ ಮಾಡುತ್ತಿರುವ ಅಪ್ಸರ ಸ್ತ್ರೀಯರಿಂದಲು ಗಾನವಂ ಮಾಡುತಲಿರುವ ಕಿನ್ನರ ರಿಂದಲು ವ್ಯಾಪ್ತರಾಗಿ, ಪುಷ್ಪವೃಷ್ಟಿಯಿಂ ಕರೆಯಲ್ಪಟ್ಟವರಾಗಿ, ದಿವ್ಯ ಶರೀ ರವಂ ಪಡೆದು ಶಿವಪ್ರಿಯವಾದ ಶಿವಲೋಕವನ್ನೈದಿ, ಶಿವಸನ್ನಿಧಿಯಲ್ಲಿ ಸಾರೂ ಪ್ಯವಂ ಪಡೆದು, ಅಲ್ಲಿ ಅನೇಕಕಾಲ ಭೋಗಂಗಳನ್ನನುಭವಿಸಿಕೊಂಡಿರ್ದು, ಅಂತ್ಯದಲ್ಲಿ ಶಿವಸಾಯುಜ್ಯವನ್ನೈದುತಿರುವರು. ಎಲೈ ಋಷಿಗಳಿರಾ! ನನ್ನಿಂದ ಮಹಾತ್ಮನಾದ ಶಿವನ ಮಹಿಮೆಯು ಪೇಳಲ್ಪಡುವದು. ಆದೊಡಂ ಶಿವಪುಣ್ಯಂ ಗಳ ಮಹಿಮೆಯು ವರ್ಣಿಸಲಶಕ್ಯವು. ಪೂರ್ವದಲ್ಲಿ ಪಾರ್ವತೀದೇವಿಯು ಉತ್ತಮವಾದ ಶಿವಪುಣ್ಯಂಗಳ ಮಹಿಮೆಯಂ ಮಹೇಶ್ವರನಿಂ ಕೇಳಿ, ಭಕ್ತಿ ಪ್ರೀತಿಯಿಂದತ್ಯಂತ ಸಂತುಷ್ಟೆಯಾಗಿ, ಅತ್ಯಾಶ್ಚರ್ಯದಿಂ ಆಸನದಿಂದೆದ್ದು ಶಿವಂಗೆ ಪ್ರದಕ್ಷಿಣ ತ್ರಯವಂ ಮಾಡಿ ನಮುಸ್ಕಾರವಂ ಮಾಡಿ, ಸುಪ್ರೀತನಾದ ಆ ಶಂಕರನಂ ನೋಡಿ, ಮುಗುಳುನಗೆಯಿಂದ ಯುಕ್ತಳಾಗಿ, ಎಲೈ ಮಹೇಶ್ವ ರನೆ! ಪ್ರಾಣಿಗಳು ಶಿವಪುಣ್ಯಂಗಳಂ ತಿಳಿದು ಅವರಿಂ ನಿನ್ನ ಸಾಯುಜ್ಯಗತಿಯ ನ್ನೈದಬೇಕೆಂದು ಶಿವಂಗೆ ಬಿನ್ನಹಂ ಗೈಯ್ಯಲಾಗಿ, ದೇವದೇವನು ಉತ್ತಮ ವಾದ ಶಿವಪುಣ್ಯವು ಜನರಿಂದ ತಿಳಿಯಕೂಡದು. ಮತ್ತಂ ಸಮಸ್ತವಾದ ಪಶುಗಳು ಪುಣ್ಯಂಗಳಂ ಮಾಡಿ ಶುದ್ಧಾತ್ಮರಾಗಿ ಪರಿಪಕ್ವವಾದವರು ಶಿವಪುಣ್ಯಂ ಗಳಂ ತಿಳಿವರು. ಹಾಗಲ್ಲದಂಥವರಿಗೆ ಹೇಗೆ ಲಬ್ಧವಾಗುವದು. ಆದುಕಾರ ಣದಿಂದನೇಕ ಪುಣ್ಯಂಗಳಂ ಮಾಡಿದ ಬಳಿಕ ಶಿವಪುಣ್ಯಂಗಳಲ್ಲಿ ಮನಸ್ಸೆರಗುವ ದೆಂದು ಪೇಳ್ದರು. ಎಲೈ ಋಷಿಗಳಿರಾ! ಈ ವಿಷಯದಲ್ಲಿ ನಿಮಗೆ ಮಹಾ ಮನೋಹರವಾದ ಒಂದು ಕಥೆಯಂ ಪೇಳುವೆನೆಂದು ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ, ಉಪದೇಶಕಾಂಡದೊಳು ಮುವ್ವತ್ತೊಂಬತ್ತನೆಯ ಅಧ್ಯಾಯವು ಸಂಪೂರ್ಣಮಾದುದು.

ನಲವತ್ತನೆಯ ಅಧ್ಯಾಯವು.

ಶಿವಭಕ್ತನಾದ ಅಜಮಹಾರಾಯನ ಕಥೆ.

ಪೂರ್ವದಲ್ಲಿ ಕೋಸಲ ದೇಶಕ್ಕಧಿಪತಿಯಾದ ಅಜನೆಂಬ ಮಹಾರಾಯ ನಿರ್ದನು. ಆತಂಗೆ ರೂಪಲಾವಣ್ಯಸಂಪನ್ನೆಯರಾದ ಸುಕುಮಾರಾಂಗಿಯರಾದ

ನಾಲ್ವರು ಕುಮಾರತಿಯರು ಪುಟ್ಟಿದರು. ಆ ರಾಯನು ಅವರಿಗೆ ಸಂತೋಷ ವಾಗುವಂತೆ ಕಲ್ಯಾಣಮಂಟಪವಂ ಕಟ್ಟಿಸಿ, ಮನೋಹರರಾದ ರಾಜಕುಮಾರರಂ ಕರೆಯಿಸಿದನು. ಆಗ ಆ ರಾಜಕುಮಾರರು ಬಂದು ಆ ಮಂಟಪದಲ್ಲಿ ನಿಲ್ಲೆ, ಬಳಿಕ ಕನ್ನಿಕೆಯರು ಪೊರಮಟ್ಟು ರಾಜಪುತ್ರರಂ ನೋಡಿ, ಅವರೊಳಗೆ ತಮಗೆ ಪ್ರಿಯರಾದ ಪುರುಷರ ಕರಂಗಳಂ ಪಿಡಿದರು. ಮೊದಲಾಕೆಯು ನಿಷಧ ದೇಶಕ್ಕಧಿಪತಿಯಾದ ಮಹೇಂದ್ರನೆಂಬ ರಾಯನಂ ಪತಿಯಾಗಿ ಪಡೆದಳು. ಎರಡನೆಯಾಕೆಯು ಕಂಬುದೇಶಾಧೀಶ್ವರನಾದ ಸಾನಂದನೆಂಬ ರಾಯನಂ ಪತಿಯಾಗಿ ಪಡೆದಳು. ಮೂರನೆಯಾಕೆಯು ಭೋಜದೇಶಕ್ಕೆ ಒಡೆಯನಾದ ಮಾಲಿಯೆಂಬ ರಾಯನಂ ಪೊಂದಿದಳು. ನಾಲ್ಕನೆಯಾಕೆಯು ಕೊಂಕಣದೇಶಕ್ಕೆ ಧೊರೆಯಾದ ವಿಶಾಲಾಕ್ಷನೆಂಬ ರಾಯನಂ ಪತಿಯಾಗಿ ಪಡೆದಳು. ಹೀಗೆ ಈ ಕನ್ನಿಕೆಯರು ತಮತಮಗೆ ಪ್ರೀತರಾದ ಪತಿಗಳಂ ಪಡೆದು ಅವರ ಕಂಠಂಗಳಲ್ಲಿ ಪುಷ್ಪಮಾಲಿಕೆಗಳಂ ಹಾಕಿದರು. ಬಳಿಕ ಆ ರಾಯನು ನಾನಾ ವಿಭವವಿಸ್ತರದಿಂದವರಿಗೆ ಕಲ್ಯಾಣವಂ ಮಾಡಿ, ಅತ್ಯಂತ ಪ್ರೀತಿಯಿಂ ಬಂಧುಗಳಂ ಸನ್ಮಾನಿಸಿ, ಅನೇಕ ದ್ರವ್ಯಂಗಳಂ ಭೂಷಣಂಗಳಂ ವಸ್ತ್ರಂಗಳಂ ಕೊಟ್ಟು, ಪುತ್ರಿಕೆಗಳಿಗು ಬಹುಮಾನಂಗಳಂ ಮಾಡಿ ಪ್ರತ್ಯೇಕ ಪ್ರತ್ಯೇಕ ಚತುರಂಗ ಬಲಂಗಳುಂ ಕಲ್ಪಿಸಿ ಆ ರಾಜಕುಮಾರರಂ ತನ್ನ ಕುಮಾರತಿಯರಂ ಸಹ ಅವರವರ ದೇಶಕ್ಕೆ ಕಳುಹಿದನು. ಬಳಿಕಾರಾಜಕುಮಾರರು ಪುರದಿಂ ಪೊರಮಟ್ಟು ಅನ್ಯೋನ್ಯದಿಂ ಪ್ರಸಂಗಗಳಂ ಮಾಡುತ್ತ ತಮ್ಮ ತಮ್ಮ ದೇಶಂಗಳಿಗೆ ಪೊರಮಡೆ, ಆ ಸಮಯದಲ್ಲಿ ವಿಶ್ವಾಮಿತ್ರಮುನಿಯು ಬಂದು ಆ ರಾಜಕುಮಾರರಂ ಅವರವರ ಪೆಸರನ್ನಿಟ್ಟು ಕರೆದನು. ಆ ರಾಜಕುಮಾರರು ಸೇನಾರಭಸದಿಂ ಪೊರಮಡುವ ಸಂಭ್ರಮದಿಂದವ್ಯಗ್ರರಾಗಿ ಆ ಋಷಿಯ ವಾಕ್ಯವಂ ಕೇಳದೆ ಪ್ರಯಾಣಾತುರರಾಗಿರ್ದರು. ಬಳಿಕ ವಿಶ್ವಾಮಿತ್ರ ಮಹಾಮುನಿಯು ಆ ನಾಲ್ವರಾದ ಕನ್ನಿಕೆಯರಂ ಬಿಟ್ಟು ಸಮಸ್ತ ಸೇನೆಯುಂ ದ್ರವ್ಯಾದಿಗಳಂ ಭಸ್ಮೀಭೂತಂಗೈದು, ಎಲೈ ರಾಜಪುತ್ರರಿರಾ! ನೀವು ನನ್ನಂ ನೋಡದೆ ನನ್ನ ವಾಕ್ಯವಂ ಕೇಳದೆ ಇದ್ದಕಾರಣ ಅಂಧರಾಗಿಯು ಬಧಿರರಾಗಿಯು ನಿಮ್ಮ ನಿಮ್ಮ ಗ್ರಾಮಂಗಳಿಗೆ ಪೋಗದೆ, ಸ್ತ್ರೀಸಂಭೋಗಂಗಳಂ ಮಾಡದೆ ಈ ವನದಲ್ಲಿ ಸಂಚರಿಸಿಕೊಂಡಿರಿ. ಅಜ್ಞಾನದಿಂ ಸ್ತ್ರೀಸಂಗವಂ ಮಾಡಿದೊಡೆ, ನಿಮ್ಮ ಶಿರಸ್ಸುಗಳು ಬಿದ್ದುಪೋಗಲಿ, ಎಂದು ಶಾಪವಂ ಕೊಟ್ಟು ತನ್ನಾಶ್ರಮಕ್ಕೆ ಪೋದನು. ಆ ರಾಜಪುತ್ರರಾಮೊಡೆ ಆ ವನದಲ್ಲಿ ಸ್ತ್ರೀಯರು ತೋರಿಸಿದ ಮಾರ್ಗದಲ್ಲಿ ಸಂಚರಿಸುತ, ಕಂದಮೂಲ ಫಲಾದಿಗಳಂ ಭಕ್ಷಿಸಿಕೊಂಡಿರುತಿರ್ದರು. ಆ ಸಮಯದಲ್ಲಿ ತಪಸ್ವಿ

ಗಳಿಗೆ ಶ್ರೇಷ್ಠನಾದ ಅಗಸ್ತ್ಯಮಹಾಮುನಿಯು ಅಲ್ಲಿಗೆ ಬರಲಾಗಿ, ಆ ಕನ್ನಿಕೆಯರು ಆ ಮಹಾಮುನಿಯಂ ಕಂಡು ತಮ್ಮ ಪತಿಗಳೊಡನೆ ನಮಸ್ಕಾರವಂ ಮಾಡಿ, ಪರಮ ದುಃಖಾರ್ತೆಯರಾಗಿ, ತಮ್ಮ ವಿಪತ್ತುಗಳಂ ಪೇಳಿ, ಎಲೈ ಮಹಾಮುನಿಯೆ! ಮುಂದೆ ನಮಗೆ ಆವಾಗ ಶಾಪವಿಮೋಚನೆಯಾಗುವದು? ಈ ಶಾಪವಿಮೋಚನಕ್ಕೆ ತಕ್ಕ ಉಪಾಯವೇನು? ಪೇಳಬೇಕು. ನಿಮ್ಮನ್ನು ಶರಣು ಪೊಕ್ಕೆವು, ನಮ್ಮನ್ನು ರಕ್ಷಿಸಬೇಕೆಂದು ನುಡಿದರು. ಬಳಿಕ ಆ ಅಗಸ್ತ್ಯರು ಅವರ ವಾಕ್ಯವಂ ಕೇಳಿ, ಎಲೈ ಪುತ್ರಿಗಳಿರಾ! ಶಿವಪುಣ್ಯವಂ ಮಾಡಿದಲ್ಲದೆ ಶಾಪಮೋಕ್ಷವಾಗದು. ಅದರಿಂ ಐಶ್ವರ್ಯಾದಿಗಳು ಸಂಭವಿಸುವವು. ಈ ವಿಷಯದಲ್ಲಿ ಒಂದು ಇತಿಹಾಸವಂ ಪೇಳುತಿರ್ದೇನೆ ಕೇಳಿರಿ.

ಸಾಧಾರಣ ಮಹಾರಾಯನ ಕಥೆ.

ಪೂರ್ವದಲ್ಲಿ ಕೀಚಕವೆಂಬ ಪುರದಲ್ಲಿ ಸಾಧಾರಣನೆಂಬ ಮಹಾರಾಯನು ಅಂತಃಪುರದಲ್ಲಿ ತನ್ನ ಸತಿಯೊಡನೆ ಕ್ರೀಡಿಸಿಕೊಂಡಿರೆ, ಆ ಸಮಯದಲ್ಲಿ ವಸಿಷ್ಠ ಮಹಾಮುನಿಯು ಅಲ್ಲಿಗೆ ಬಂದು ಕೆಲಕಾಲ ನಿಂತಿರಲಾಗಿ, ಆ ರಾಯನು ಸತಿಯೊಡನೆ ಪೋಂಮಟ್ಟು ಅವರಿಗೆ ನಮಸ್ಕಾರವಂ ಮಾಡಿ ಬದ್ಧಾಂಜಲಿ ಪುಟನಾಗಿ ನಿಂತಿರಲು, ಆ ಮಹಾಮುನಿಯು ರಾಯನಂ ನೋಡಿ, ಎಲೈ ರಾಯನೆ! ಎರಡು ಮೂರುಗಳಿಗೆ ನಿನ್ನ ಗೃಹದ್ವಾರದಲ್ಲಿ ನಿಂತಿರುವ ನನ್ನನ್ನು ನೀನು ವಿಚಾರಿಸದಿರ್ದೆಯಲ್ಲಾ, ಅದುಕಾರಣದಿಂ ಈ ಪಟ್ಟಣವು ವನವಾಗಲಿ, ಇಲ್ಲಿರುವ ಜನರೆಲ್ಲರು ಮೃಗಂಗಳಾಗಲಿ, ನೀನು ನಿನ್ನ ಸ್ತ್ರೀ ಸಹ ವ್ಯಾಧನಾಗಿ ಈ ವನದಲ್ಲಿ ಸಂಚರಿಸಿಕೊಂಡಿರೆಂದು ಶಾಪವಂ ಕೊಟ್ಟು ತನ್ನಾಶ್ರಮಕ್ಕೆ ಪೋಗೆ, ಆತನ ಶಾಪದಿಂದ ಪಟ್ಟಣವು ವನವಾದುದು. ಅಲ್ಲಿರ್ಪ ಜನರು ಮೃಗಂಗಳಾದರು. ಆ ರಾಯನು ವ್ಯಾಧನಾಗಿ ಆ ವನದಲ್ಲಿಯೆ ಸಂಚರಿಸಿಕೊಂಡಿರುತಿರ್ದನು.

ಆ ಸಮಯದಲ್ಲಿ ತೃಣಬಿಂದುವೆಂಬ ಮಹಾಮುನಿಯು ಬಂದವನಾಗಲು, ಈ ವ್ಯಾಧನು ಆತನಂ ಕಂಡು ನಮಸ್ಕಾರವಂ ಮಾಡಿ ತನ್ನ ವೃತ್ತಾಂತವಂ ಪೇಳ್ದನು. ಬಳಿಕ ಆ ಮಹಾಮುನಿಯು ಈ ವಾಕ್ಯವಂ ಕೇಳಿ ಸರ್ವದುಃಖನಿವಾರಕಮಾದ ಶಿವಪುಣ್ಯವಂ ನೆನೆದು, ಈ ವನದಲ್ಲಿ ಶಿವಸ್ಥಾನವಿರುವದೋ? ಎಂದು ಕೇಳಲಾಗಿ, ಆ ವ್ಯಾಧನು, ಎಲೈ ಸ್ವಾಮಿಯೆ! ಸಮೀಪದಲ್ಲಿ ಬ್ರಹ್ಮೇಶ್ವರ ನಿರುವನೆಂದು ನಿರೂಪಿಸಿದನು. ಆ ಮುನಿಯದಂ ಕೇಳಿ, ಎಲೆ ವ್ಯಾಧನೆ! ನೀನು ಸತಿಯೊಡನೆ ಆ ಬ್ರಹ್ಮೇಶ್ವರಕ್ಕೆ ಪೋಗಿ, ಆ ಆಲಯದಲ್ಲಿರ್ಪ ತೃಣಪರ್ಣಂಗಳಂ ತೆಗದು, ಆ ಆಲಯದಲ್ಲಿರುವ ಶಿವಂಗೆ ಪ್ರದಕ್ಷಿಣ ನಮಸ್ಕಾರಂಗಳಂ ಮಾಡಿಕೊಂಡಿದ್ದರೆ, ಈಶ್ವರನು ರಕ್ಷಿಸುವನೆಂದು ಪೇಳಿ ತನ್ನಾಶ್ರಮಕ್ಕೆ

ಪೋದನು. ಬಳಿಕ ಆ ವ್ಯಾಧನು ಸತಿಯೊಡನೆ ಈಶ್ವರಾಲಯಕ್ಕೆ ಪೋಗಿ ಅಲ್ಲಿರ್ದ ತೃಣಪರ್ಣಾದಿಗಳಂ ತೆಗೆದು, ಏಕಾದಶ ದಿನ ಪರ್ಯಂತರ ಪ್ರದಕ್ಷಿಣ ನಮಸ್ಕಾರಂಗಳಂ ಮಾಡಿಕೊಂಡು ಶಿವಧ್ಯಾನ ತತ್ಪರನಾಗಿರೆ, ಆಗ ಆ ವನವು ಪಟ್ಟಣವಾದುದು. ಆ ಮೃಗಂಗಳೆಲ್ಲವು ಜನಂಗಳಾದವು. ಶಿವಸೇವಾ ಪುಣ್ಯ ಮಹಿಮೆಯಿಂದ ಆತನ ವ್ಯಾಧಭಾವವು ಪೋಗಿ ಪೂರ್ವದಂತೆ ರಾಜಭಾವವಂ ತಾಳಿ ರಾಜ್ಯವನ್ನಾಳಿ ಅಂತ್ಯದಲ್ಲಿ ಮೋಕ್ಷವನ್ನೈದಿದನು. ಅದು ಕಾರಣ ನೀವು ಶಿವಪುಣ್ಯವಂ ಮಾಡಿ ಕೃತಕೃತ್ಯರಾಗಿರೆಂದು ಪೇಳಲಾಗಿ, ಆ ವಾಕ್ಯವಂ ಕೇಳಿ, ಎಲೈ ಸ್ವಾಮಿಯೆ ! ಶಿವಪುಣ್ಯವಂ ಮಾಡುವ ಪ್ರಕಾರವು ಹೇಗೆಂದು ಪ್ರಶ್ನೆಯಂ ಮಾಡಿದರು. ಆ ಸಮಯದಲ್ಲಿ ಶಿವಪ್ರಿಯನಾದ ಒಬ್ಬ ಶಿವಬ್ರಾಹ್ಮಣನು ಅಲ್ಲಿರ್ಪ ಅಮೃತೇಶಾನನೆಂಬ ಶಂಭುವಂ ಪೂಜಿಸಲಲ್ಲಿಗೆ ಬರಲಾಗಿ, ಅಗಸ್ತ್ಯ ಮುನಿಯು ಆತನಂ ಕಂಡು, ಲೋಕಗುರುವಾದ ಶಿವಬ್ರಾಹ್ಮಣನೆ ! ಇವರಂ ಶಿಷ್ಯರಂ ಮಾಡಿಕೊಂಡು ಸರ್ವಪಾಪ ಪರಿಹಾರಕನಾದ ಅಮೃತೇಶಾನನೆಂಬ ಶಿವನ ದರ್ಶನವನ್ನಿವರಿಗೆ ಮಾಡಿಸಿ, ಸುಖಿಗಳಾಗುವ ಹಾಗೆ ಒಂದು ಪರಿಚಾರ ಕತ್ವವಂ ಕಲ್ಪಿಸಿ, ಇವರಂ ರಕ್ಷಿಸೆಂದು ಪೇಳಿ ತಾನು ಕೈಲಾಸಕ್ಕೆ ಪೋದನು. ಆ ಬಳಿಕ ಶಿವಬ್ರಾಹ್ಮಣನು ಅವರಂ ನೋಡಿ ದುಃಖಿಸಬೇಡಿರೆಂದು ಬಹು ಪ್ರಕಾರವಾಗಿ ಶಾಂತವಚನವಂ ಪೇಳಿ, ಭಕ್ತರಕ್ಷಾಪರನಾದ ಶಿವನಲ್ಲಿ ಭಕ್ತಿಯ ನ್ನಿರಿಸಿರೆಂದು ಪೇಳ್ದು, ಅವರಿಗೆ ಒಂದು ಇತಿ ಹಾಸವಂ ಪೇಳ್ದನು ಏನಂದರೆ

ಮುದ್ಗಲದ್ವಿಜನ ಕಥೆ.

ಪೂರ್ವದಲ್ಲಿ ಮುದ್ಗಲನೆಂಬ ದ್ವಿಜನು ಮಹಾತ್ಮನಾದ ಕಾಶ್ಯಪನಿಗೆ ಶಿಷ್ಯ ನಾಗಿ ಶಾಸ್ತ್ರವಂ ಪಠಿಸುತಿರೆ, ಒಂದಾನೊಂದು ದಿವಸದಲ್ಲಿ ಉಗುಳುನೀರು ಬಿದ್ದುದು. ಆಗ ಆ ಮುನಿಯು ಕೋಪಿಸಿ, ಎಲ ಈ ಅಪಚಾರದಿಂ ನಿನಗೆ ಮಹಿಷ ಭಾವವುಂಟಾಗಿ ವನಗಳಲ್ಲಿ ತೃಣಗಳಂ ಭಕ್ಷಿಸಿಕೊಂಡಿರೆಂದು ಶಾಪವನಿಟ್ಟನು. ಬಳಿಕ ಆ ಬ್ರಾಹ್ಮಣನು ವನದಲ್ಲಿ ಮಹಿಷವಾಗಿ ಅಲ್ಲಲ್ಲಿ ತೃಣಂಗಳಂ ಭಕ್ಷಿಸಿಕೊಂ ಡಿರ್ದು ಒಂದು ದಿವಸದಲ್ಲಿ ಅಲ್ಲಿರ್ದ ಶಕ್ತೀಶ್ವರನ ಪ್ರಾಕಾರಕ್ಕೆ ಪೋಗಿ, ಆ ಆಲಯದೊಳು ಬೆಳದಿರ್ಪ ತೃಣಂಗಳಂ ಮೂರು ಪ್ರದಕ್ಷಿಣವಾಗಿ ಬಳಸಿ ಮೆದ್ದು ಧ್ವಜದಂಡವಂ ಮುಟ್ಟಿಕೊಂಡು ದರ್ಶನವಂ ಮಾಡಿದ ಮಾತ್ರದಿಂದ ಮಹಿಷ ಭಾವವು ಪೋಗಿ ಪೂರ್ವದಂತೆ ಬ್ರಾಹ್ಮಣತ್ವವು ಬಂದು ಅನೇಕವಾಗಿ ಸ್ತುತಿಸಿ ದನು. ಅಲ್ಲಿರ್ಪ ಜನರು ಅವಂ ಕಂಡು ಪರಮಾನಂದಭರಿತರಾಗಿ ಮಹಿಷವು ಅಜ್ಞಾನದಿಂ ತೃಣವಂ ಭಕ್ಷಿಸುತ ಮೂರುಸಲ ಪ್ರದಕ್ಷಿಣವಾಗಿ ಬಂದಮಾತ್ರ ದಿಂದ ಬ್ರಾಹ್ಮಣ ಸ್ವರೂಪ ವುಂಟಾದುದು. ಅದುಕಾರಣದಿಂ ಶಿವಪುಣ್ಯದ

ಮಹಿಮೆಯಂ ತಿಳಿಯಲಸಾಧ್ಯವೆಂದು ಪರಸ್ಪರವಾಗಿ ಪೇಳುತ್ತಿರ್ದರು. ಎಲೈ ಕುಮಾರರುಗಳಿರಾ! ನೀವು ಮಹೇಶ್ವರಂಗೆ ಪ್ರಿಯವಾದ ಶಿವಪುಣ್ಯವಂ ಮಾಡಿ ರೆಂದು ಪೇಳಲಾಗಿ, ಈ ಅಂಧಕರು ಆತನ ವಾಕ್ಯವಂ ಕೇಳಿ, ಎಲೈ ದಯಾ ಸಿಂಧುವೆ! ಪಾಪಿಗಳಾದ ನಮಗೆ ಶಿವಪುಣ್ಯವಂ ಮಾಡಬೇಕೆಂದು ನುಡಿದದ್ದು ಸರಿಯಲ್ಲವೆ? ನಾವು ಅಶಕ್ತರಾಗಿರ್ಧೇವೆ, ಅದರ ವಿಧಾನವು ಹೇಗೆ? ಹೇಳಿರೆಂದು ನುಡಿಯೆ, ಆತನು ಈ ವಾಕ್ಯವಂ ಕೇಳಿ ಎಲೈ ಪುರುಷರುಗಳಿರಾ! ನೀವು ನಾಲ್ವರು ಅಮೃತೇಶ್ವರಂಗೆ ಅವಾಗಲು ಪ್ರದಕ್ಷಿಣವಂ ಮಾಡುತ್ತಿರಿ. ನಿಮ್ಮ ಸ್ತ್ರೀಯ ರೊಳಗೊರ್ವಳು ಶಂಭು ಸನ್ನಿಧಿಯಲ್ಲಿ ಸಮ್ಮಾರ್ಜನೆ ಅನುಲೇಪನಂಗಳಂ ಮಾಡಿಕೊಂಡಿರಲಿ, ಮತ್ತೊರ್ವಳು ಶಂಭುವಿಗೆ ಅಭಿಷೇಕಜಲವಂ ತರಲಿ, ಮೂರನೆಯವಳು ಶಿವಪೂಜೆಗೆ ಪುಷ್ಪಂಗಳಂ ತರಲಿ, ನಾಲ್ಕನೆಯಾಕೆಯು ನೈವೇದ್ಯ ಕ್ಕೋಸುಗ ಕಂದಮೂಲಾದಿಗಳಂ ತರಲಿ, ಹೀಗೆಂದು ನುಡಿದು ಅನರಂ ಕಳುಹಿ, ಅವರು ತಂದ ಪದಾರ್ಥಗಳಿಂ ಇಪ್ಪತ್ತೊಂದು ದಿವಸಗಳ ಪರ್ಯಂತ ಆರಾಧ ನೆಯಂ ಮಾಡೆ, ಇಪ್ಪತ್ತೆರಡನೆಯ ದಿವಸದಲ್ಲಿ ಅವರಿಗೆ ಅಂಧತ್ವವು ಬಧಿರತ್ವವು ಪೋದವು. ಮರಳಿ ರಾಜಕುಮಾರರು ಐಶ್ವರ್ಯಯುಕ್ತರಾಗಿ ಮತ್ತು ಎಂಟು ದಿವಸ ಸ್ವಾಮಿಗೆ ಪ್ರದಕ್ಷಿಣಾದಿಗಳಂ ಮಾಡುತ್ತಿರೆ, ಆಗ ಅವರ ಸಕಲ ಧನಂ ಗಳು ಚತುರಂಗ ಬಲಂಗಳೆಲ್ಲವು ಉಂಟಾದವು. ಬಳಿಕ ಆ ರಾಜಕುಮಾರರು ಸುಕುಮಾರಾಂಗಿಯರಾದ ತಮ್ಮ ಸ್ತ್ರೀಯರಂ ನೋಡಿ, ಅತ್ಯಂತ ಆಶ್ಚರ್ಯಯುಕ್ತ ರಾಗಿ ಆ ಶಿವ ಬ್ರಾಹ್ಮಣನ ಸಮೀಪಕ್ಕೆ ಬಂದು ನಮಸ್ಕಾರವಂ ಮಾಡಿ, ಎಲೈ ವಿಪ್ರೇಂದ್ರನೆ! ನಿನ್ನ ಕೃಪೆಯಿಂದ ನಮಗೆ ಶಾಪ ವಿಮೋಚನವಾಯಿತೆಂದು ಪೇಳಿದರು. ಬಳಿಕ ಆ ಶಿವಬ್ರಾಹ್ಮಣನು ಅವರು ಪೇಳಿದ ಉಪಚಾರವಾಕ್ಯವಂ ಕೇಳಿ, ಎಲೈ ನೀವು ಶಿವಪುಣ್ಯವಂ ಮಾಡಿ ಪಾಪರಹಿತರಾದಿರಿ, ಅದರ ಪ್ರಭಾವದಿಂ ನಿಮಗೆ ನಯನಂಗಳು ಶ್ರೋತ್ರಂಗಳು ಧನಂಗಳು ಚತುರಂಗ ಬಲಂಗಳು ಉಂಟಾದವು. ಮಹಾ ಋಷಿಯ ಶಾಪದಿಂದ ಬಿಡಲ್ಪಟ್ಟಿರಿ, ಇತಃಪರದಲ್ಲಿ ನೀವು ಶಂಕೆಯಂ ಬಿಟ್ಟು ರಾಜ್ಯ ಪರಿಪಾಲನೆಯಂ ಮಾಡುತ ಅವಾಗಲು ಶಿವ ಪುಣ್ಯಂಗಳನ್ನು ಅನುಷ್ಠಾನವಂ ಮಾಡಿಕೊಂಡಿರೆಂದು ಪೇಳ್ದನು. ಬಳಿಕ ಆ ರಾಜಕುಮಾರರು ತಮಗೆ ಗುರುವಾದ ಶಿವಬ್ರಾಹ್ಮಣನ ವಾಕ್ಯವಂ ಕೇಳಿ ನಮ ಸ್ಕಾರವಂ ಮಾಡಿ, ಅಮೃತೇಶ್ವರಂಗೆ ವಿಧಿಯಿಂದ ಅಭಿಷೇಕ ನಿವೇದನಗಳಂ ಮಾಡಿಸಿ ನಮಸ್ಕಾರಾದಿಗಳಂ ಗೈದು, ಮಹಾ ದೇವಾಲಯವಂ ಬಳಸಿರ್ಪ ಅರಣ್ಯಗಳಂ ಛೇದಿಸಿ, ಗುರುನಾಮಾಂಕಿತವಾಗಿ ಲೋಕಧರ್ಮವೆಂಬ ಪಟ್ಟಣವಂ ನಿರ್ಮಿಸಿ, ಅಲ್ಲಿ ದೇವಾಲಯವಂ ಅತಿ ವಿಭವದಿಂ ನಿರ್ಮಾಣವಂ ಮಾಡಿಸಿ,

ಸ್ವಾಮಿಗೆ ಗೋಪುರಾದಿಗಳಂ ಕಟ್ಟಿಸಿ, ರಥೋತ್ಸವ ಮುಂತಾದ ಉತ್ಸವಗಳಂ ಮಾಡಿಸಿ, ಆ ಸ್ವಾಮಿಗೂ ಗುರುವಿಗೂ ಬಹು ದ್ರವ್ಯವನಿತ್ತು, ಆತನಾಜ್ಞೆಯಿಂ ಪರಮಾನಂದ ಭರಿತರಾಗಿ, ತಮ್ಮ ರಾಜ್ಯಂಗಳಂ ಪೊಕ್ಕು ಆ ಶಂಭುವಿನ ಬಲದಿಂ ನಿಷ್ಕಂಟಕವಾಗಿ ರಾಜ್ಯವನಾಳಿ, ತಮ್ಮ ರಾಜ್ಯದಲ್ಲಿ ಅನೇಕ ಶಿವ ಪುಣ್ಯಂಗಳಂ ನಿರ್ಮಾಣವಂ ಮಾಡಿಸಿ ವಿನಯವಂತರಾದ ಶಾಸ್ತ್ರಕೋವಿದರಾದ ಪುತ್ರರಂ ಶಿವ ಕರುಣದಿಂ ಪಡದು, ಮಹಾ ಪ್ರತಾಪದಿಂ ಸ್ತ್ರೀಸಮ್ಮತರಾಗಿ ಏಕಾಂತರಾಗಿರ್ದರು. ಒಂದಾನೊಂದು ಸಮಯದಲ್ಲಿ ಆ ನಾಲ್ವರು ಕುಮಾರರು ಒಂದು ಪ್ರದೇಶದಲ್ಲಿ ಸ್ತ್ರೀ ಸಮೇತರಾಗಿ ವಿಹರಿಸುತ್ತಿರಲು, ಆ ಸಮಯದಲ್ಲಿ ದೂರ್ವಾಸಮುನಿಯು ಬಂದನು. ಆಗ ಆ ಋಷಿಯಂ ಕಂಡು ಶೀಘ್ರವಾಗೆದ್ದು ಅತ್ಯಂತ ಸಂತೋಷ ಯುಕ್ತರಾಗಿ ಬಾರಿ ಬಾರಿಗೂ ನಮಸ್ಕರಿಸಿ, ಎಲೈ ಭಗವಂತನಾದ ದೂರ್ವಾಸ ಮುನಿಯೆ! ಆವ ಪಾಪದಿಂದ ನಮಗೆ ಅಂಧತ್ವ ಬಧಿರತ್ವವು ಬಂತು? ನೀನು ಸರ್ವಜ್ಞನಾದುದರಿಂ ನಮಗೆ ನಿರೂಪಿಸಬೇಕೆಂದು ಪ್ರಾರ್ಥಿಸಲಾಗಿ, ಆ ವಾಕ್ಯ ವಂ ಕೇಳಿ, ಎಲೈ ರಾಜಕುಮಾರರಿರಾ! ಯೌವನದೇಶದಲ್ಲಿ ಆದಿತ್ಯವೆಂಬ ಪುರ ವಿರ್ಪುದು. ಅಲ್ಲಿ ಶಿವಾಲಯ ನಿರ್ಮಾಣವಂ ಮಾಡುವ ಒಬ್ಬಾನೊಬ್ಬ ಬ್ರಾಹ್ಮಣ ನಿರ್ದನು. ಆತನು ನಿಮ್ಮ ಸಮೀಪಕ್ಕೆ ಬಂದು ದೇವಾಲಯ ನಿರ್ಮಾಣವಂ ಮಾಡಲು ಕೆಲವು ಧನವಂ ಕೇಳಿದನು. ಬಳಿಕ ನೀವು ಧನವಂ ಕೊಡುತ್ತೇ ವೆಂದು ಪೇಳಿ ಆಶೆಯಂ ಪುಟ್ಟಿಸಿ, ಇಂದು ನಾಳೆಯೆಂದು ಕಾಲಕ್ಷೇಪವಂ ಮಾಡುತ್ತ, ಆತನು ಬಂದರೆ ನೋಡದೆಯು ಆತನ ಮಾತಂ ಕೇಳದೆಯು ಇದ್ದದ್ದರಿಂದ ಅಂಧತ್ವ ಬಧಿರತ್ವವು ಪ್ರಾಪ್ತಮಾದುದು. ಈಗ ಈ ಪುಣ್ಯಂಗಳಂ ಮಾಡಲಾಗಿ ನಯನಾದಿಗಳುಂಟಾದವು. ಎನಲಾಗಿ ಆ ರಾಜ ಕುಮಾರರು ಈ ವಾಕ್ಯವಂ ಕೇಳಿ ಅನೇಕ ಶಿವ ಪುಣ್ಯಂಗಳಂ ಮಾಡಿ ಬಹು ಭೋಗಂಗಳನನು ಭವಿಸಿ ಅಂತ್ಯದಲ್ಲಿ ವಿಮಾನವನೇರಿ ಕೈಲಾಸಕ್ಕೆ ಪೋದರೆಂದು ಸೂತಂ ಶೌನ ಕಾದಿಗಳಿಗೆ ಪೇಳ್ದನೆಂಬಲ್ಲಿಗೆ, ಶಿವರಹಸ್ಯೋಪದೇಶ ಕಾಂಡದೊಳು ನಲವತ್ತನೆಯ ಅಧ್ಯಾಯವು ಸಮಾಪ್ತಮಾದುದು.

ನಲವತ್ತೊಂದನೆಯ ಅಧ್ಯಾಯವು.

ಸದ್ಬುದ್ಧಿರಾಯನ ಕಥೆ.

ಎಲೈ ಋಷಿಗಳಿರಾ! ಶಂಭುದೇಶದಲ್ಲಿ ಅತಿ ಸೌಂದರ್ಯವಾದ ಮಾಯಾಪುರ ವಿರುತಿರ್ಪುದು. ಆ ಪಟ್ಟಣದಲ್ಲಿ ಸದ್ಬುದ್ಧಿಯೆಂಬ ರಾಯನಿರ್ದನು. ಆತಂಗೆ ಮಹಾಬಲ ಪರಾಕ್ರಮಶಾಲಿಗಳಾದ ಭೀಮ ಮುಂತಾದ ಎಂಟುಮಂದಿ ಪುತ್ರರು

ಸರ್ವಲಕ್ಷಣ ಸಂಪನ್ನೆಯಾದ ಓರ್ವ ಕನ್ನಿಕೆಯು ಸಹ ಜನಿಸಿದರು. ಬಳಿಕ ಆ ರಾಯನು ತನ್ನ ದೇಶವನ್ನು ಒಂಭತ್ತು ಭಾಗವಂ ಮಾಡಿ ಕುಮಾರರಿಗು ಕುಮಾರಿಗು ಕೊಟ್ಟು, ವನಕ್ಕೆ ಪೋಗಿ ಮಹತ್ತಾದ ತಪವನಾಚರಿಸಿ, ಮಹಾದೇವನ ಪ್ರಸಾದದಿಂ ಮೋಕ್ಷವನ್ನೈದಿದನು. ಆ ಕುಮಾರರು ಕನ್ನಿಕೆಯು ಧರ್ಮದಿಂ ರಾಜ್ಯಪರಿಪಾಲನೆಯಂ ಮಾಡುತಿರ್ದರು. ಅವರೊಳಗೆ ಆ ಕನ್ನಿಕೆಯು ವಿಶೇಷವಾಗಿ ಧರ್ಮದಲ್ಲಿ ಬುದ್ಧಿಯನಿಟ್ಟು ಜಗತ್ತಿನಲ್ಲಿ ಅತಿ ಖ್ಯಾತಿಯಂ ಪಡೆದಳು. ಮತ್ತಂ ಧರ್ಮನಿರತರಾದ ಸಪ್ತಋುಷಿಗಳು ಆಕೆಯಂ ನೋಡಲು ಆಕೆಯ ಗೃಹಕ್ಕೆ ಬಂದು, ಆವಾಗಲು ಧರ್ಮದಲ್ಲಿ ಪ್ರೀತಿಯುಳ್ಳ ಆ ಕುಮಾರಿತಿಯಂ ಕಂಡು, ಅರ್ಥ ಗಂಭೀರವಾದ ವಾಕ್ಯಗಳಿಂ ಸ್ತುತಿಸಿ, ಎಲೆ ಸುವ್ರತೆಯೆ! ಶಿವಭಕ್ತೆಯಾದ ನಿನಗೆ ಕುಶಲವುಂಟಾಗಲಿ, ಶಿವಪುಣ್ಯದಲ್ಲಿ ನಿನಗೆ ಅಚಂಚಲವಾದ ಭಕ್ತಿಯುಂಟಾಗಲಿ, ನೀನು ಸಕಲ ಧರ್ಮಂಗಳಂ ಮಾಡುತಲಿದ್ದೀ ಆದಕಾರಣ ಲೋಕದೊಳು ನಿನಗೆ ಸಮಾನಳಾದ ಸ್ತ್ರೀಯು ಇಲ್ಲವೇ ಇಲ್ಲ ಎಂದು ನುಡಿದರು. ಅನಂತರದಲ್ಲಿ ಆ ಕನ್ನಿಕೆಯು ಈ ಸಪ್ತರ್ಷಿಗಳ ವಾಕ್ಯವಂ ಕೇಳಿ, ಎಲೈ ಮುನೀಶ್ವರರುಗಳಿರಾ! ನೀವುಗಳು ಶಿವಪುಣ್ಯವಂ ಮಾಡೆಂದು ನಿರೂಪಿಸಿದಿರಲ್ಲವೆ? ಆ ಪುಣ್ಯವಂ ಮಾಡಿ ಮೋಕ್ಷವನ್ನೈದಿದವರಾರು? ಕೇಳಲಿಚ್ಛೈಸುತ್ತೇನೆನಲು, ಆ ಋುಷಿಗಳೊಳಗೆ ಮಹಾ ತಪಸ್ವಿಯಾದ ಗೌತಮಮುನಿಯು ಒಂದಾನೊಂದು ಕಥೆಯಂ ಪೇಳ್ದನು. ಎಂತೆಂದರೆ, ಪಾಂಚಾಲದೇಶದಲ್ಲಿ ಮನೋಹರವಾದ ಶೋಭನವೆಂಬ ಪುರವಿರ್ಪುದು, ಆ ಪಟ್ಟಣದಲ್ಲಿ ಮಾಧವನೆಂಬ ಬ್ರಾಹ್ಮಣನಿದ್ದನು. ಆತಂಗೆ ಸೌಂದರ್ಯವತಿಯೆಂಬ ಓರ್ವಳು ಕುಮಾರ್ತಿಯುಂಟಾದಳು. ಆ ಕುಮಾರ್ತಿಯು ಅದೇ ಪುರದಲ್ಲಿರ್ಪ ಪುಷ್ಕರನೆಂಬ ದ್ವಿಜಂಗೆ ಕೊಡಲ್ಪಟ್ಟವಳಾಗಿ, ಸಂತೋಷದಿಂ ಆತನೊಡನೆ ಕ್ರೀಡಿಸಿಕೊಂಡಿರ್ದು, ಯೌವನ ಮದದಿಂ ತನ್ನ ಗೃಹಕ್ಕೆ ಎದುರಾಗಿರುವ ಮಂದಿರದಲ್ಲಿರ್ಪ ಕಾಂಚನಾಭನೆಂಬ ಬ್ರಾಹ್ಮಣನೊಡನೆ ವ್ಯಭಿಚಾರಳಾಗಿ ವಿಹರಿಸಿದಳು. ಆಕೆಯ ಪತಿಯು ಬಹು ದಿವಸಗಳು ಕಳೆದ ಮೇಲೆ ಇದಂ ತಿಳಿದು ಆಕೆಯಂ ಬಂಧಿಸಿ, ತಾಡನೆಯಂ ಮಾಡಿ ಗರಗಸದಿಂ ಕೊಯಿದು ಬಹು ಆಯಾಸಪಡಿಸೆ, ಆಕೆಯು ಆ ಘಾಯಗಳಂ ತಾಳಿ ಕೆಲ ದಿವಸಾನಂತರದಲ್ಲಿ ಅನ್ನದಲ್ಲಿ ವಿಷವನಿಟ್ಟು ತನ್ನ ಪತಿಯಂ ಕೊಂದು ವಿಧವೆಯಾಗಿ, ಅತಿ ಕಾಮುಕೆಯಾಗಿ ಜಾರತ್ವದಿಂ ಪುಟ್ಟಿದ ಪುತ್ರನಂ ಕೊಂದು, ಮರಳಿ ಗರ್ಭವತಿಯಾಗಿ ಆ ಗರ್ಭಪಾತಕ್ಕೆ ಔಷಧವಂ ತೆಗೆದುಕೊಂಡರೂ ಆ ಗರ್ಭವು ಬೀಳದೆ ಪೋಗೆ, ಅತಿ ದುಃಖಿತಳಾಗಿರ್ದಳು. ಆಗ ಬಂಧುಗಳೆಲ್ಲರು ಆ ದುಷ್ಟ ವ್ಯಭಿಚಾರಳಂ ತ್ಯಜಿಸಲಾಗಿ, ಆಕೆಯು ಭೀತಿಯಿಂದ ಆ ದೇಶವಂ ಬಿಟ್ಟು ದೇಶಾಂ

ತರಕ್ಕೆ ಪೋಗಿ ಅಲ್ಲಿ ದಶಮಾಸದೊಳು ಪುತ್ರನಂ ಪೆತ್ತು, ಆ ಶಿಶುವಂ ನಿರ್ದಯದಿಂ ಕೊಂದು ಮರಳಿಯು ಜಾರಿಣಿಯಾಗಿ ಧನಿಕನಾದ ಬ್ರಾಹ್ಮಣನಂ ಸೇರಿ, ಕೆಲವು ಕಾಲವಮೇಲೆ ಆ ಬ್ರಾಹ್ಮಣನಿಗು ವಿಷವನಿಟ್ಟು ಸಂಹಾರವಂ ಮಾಡಿ, ಮರಳಿ ಓರ್ವ ದ್ರವ್ಯವಂತನಾದ ವಿಪ್ರನಂ ಸೇರಿ ವಂಚನಾಬುದ್ಧಿಯಿಂದಾತನೊಡನೆ ಕ್ರೀಡಿಸಿಕೊಂಡಿರ್ದು, ಕೆಲವು ಕಾಲದಮೇಲೆ ಆತಂಗೂ ವಿಷವೀಯೆ, ಆ ವಿಷವು ಜೀರ್ಣಮಾದುದು. ಬಳಿಕಾಕೆಯು ಆತನಂ ವನಕ್ಕೆ ಕರದುಕೊಂಡು ಪೋಗಿ ಆತನೊಡನೆ ಕ್ರೀಡಿಸಿ, ನಿದ್ರಾಸಮಯದಲ್ಲಿ ಆತನ ತಲೆಯಂ ಪಾಷಾಣದಿಂ ಪೊಡೆದು ಸಂಹಾರವಂ ಮಾಡಿ, ಸ್ವೇಚ್ಛೆಯಿಂದಾತನ ಧನವಂ ತೆಗೆದುಕೊಂಡು ಅಮಾರ್ಗಗತೆಯಾಗಿರ್ದಳು. ಆಗ ಆ ದೇಶದ ರಾಯನು ಈಕೆಯ ದುರ್ಮಾರ್ಗವಂ ಚಾರರಿಂ ಕೇಳಿ, ಆಕೆಯ ಸ್ತನಂಗಳಂ ನಾಸಿಕೆಯಂ ಛೇದಿಸಿ ತನ್ನ ಪಟ್ಟಣದಿಂ ಪೊರಮಡಿಸಿದನು. ಆದರೂ ಆಕೆಯು ಜಾರತ್ವಮಂ ಬಿಡದೆ ಛಿನ್ನನಾಸಾಪುಟಂಗಳುಳ್ಳವಳಾಗಿ ಓರ್ವ ಪುರುಷನಂ ಸೇರಿ, ಶತನಿಷಿದ್ಧ ಕರ್ಮಂಗಳಂ ಮಾಡುತಲಿರಲಾಗಿ ಮರಳಿ ರಾಯನು ಆಕೆಯಂ ಕಂಡು ಅತಿ ಕುಪಿತನಾಗಿ ಹಸ್ತದಿಂ ತಾಡಿಸಲು ತತ್ಕ್ಷಣದಲ್ಲಿಯೆ ಪ್ರಾಣವಂ ಬಿಟ್ಟಳು. ಆಗ ಯಮದೂತರು ಯಮಾಜ್ಞೆಯಿಂ ಬಂದು ಪಾಶದಿಂದಾಕೆಯಂ ಕಟ್ಟಿ ಘೋರವಾದ ನರಕದಲ್ಲಿ ಕೆಡಹುವ ಸಮಯದಲ್ಲಿ, ಶಿವಾಜ್ಞೆಯಿಂ ಮಹಾ ಸತ್ವವುಳ್ಳ ಶಿವದೂತರು ಬಂದು ನರಕದೊಳು ಬೀಳುತಲಿರುವ ಆಕೆಯಂ ದಿವ್ಯ ವಿಮಾನವನೇರಿಸಿ, ಸಮಸ್ತರಾದ ಯಮದೂತರಂ ಬಡಿದೋಡಿಸಿ, ಕೈಲಾಸಗಿರಿಗೆ ಕರತಂದು ಶಿವಸನ್ನಿಧಿಯಲ್ಲಿ ನಿಲ್ಲಿಸೆ, ಶಿವನು ಕರುಣಾಕಟಾಕ್ಷದಿಂ ಆಕೆಯಂ ನೋಡಿದನು. ಆಗ ಪಾರ್ವತೀದೇವಿಯ ಸಖಿಯರು ಬಂದು ಬಹುಮಾನನಂ ಮಾಡುತಿರೆ, ಆಕೆಯು ಅವರೊಡನೆ ಸಂತೋಷದಿಂದಿರ್ದಳು.

ಬಳಿಕ ಯಮದೂತರು ಯಮನ ಸಮೀಪಕ್ಕೆ ಪೋಗಿ ಈ ವೃತ್ತಾಂತವಂ ಬಿನ್ನಪಂಗೈಯ್ಯೆ, ಯಮನದಂ ಕೇಳಿ ಚಿತ್ರಗುಪ್ತನಂ ನೋಡಿ, ಎಲೈ ಚಿತ್ರಗುಪ್ತನೆ! ಈಕೆಯು ಯಾವ ಪುಣ್ಯವಂ ಮಾಡಿದಳೆಂದು ಕೇಳಿದನು. ಬಳಿಕ ಆ ಚಿತ್ರಗುಪ್ತನು ಎಲೈ ಯಮನೆ! ಈಕೆಯು ಒಂದು ಪುಣ್ಯವನಾದರೂ ಮಾಡಲಿಲ್ಲೆಂದು ನುಡಿಯುತ್ತಿರಲು, ಆ ಸಮಯದಲ್ಲಿ ನಾರದಮುನಿಯು ಬಂದನು. ಆಗ ಯಮನು ಆ ಮುನಿಯಂ ಕಂಡು ವೇಗದಿಂದೆದ್ದು ನಮಸ್ಕಾರವಂ ಮಾಡಿ, ಎಲೈ ಸ್ವಾಮಿಯೆ! ಯಾವದೇಶದಿಂ ಬಂದಿರಿ, ಎಂದು ಕೇಳೆ, ನಾರದಮುನಿಯು ನಾನು ಕೈಲಾಸದಿಂ ಬಂದೆನು, ಅಲ್ಲಿ ಒಂದಾಶ್ಚರ್ಯವಂ ಕಂಡೆನು. ಏನೆಂದರೆ, ಶಿವದೂತರು ಯಮದೂತರಿಂ ಬಹು ಬಾಧಿಸಲ್ಪಡುತಲಿರುವ ಸ್ತ್ರೀಯಂ ಬಿಡಿಸಿ

ಯಮದೂತರಿಗೆ ತಕ್ಕ ಶಿಕ್ಷೆಯಂ ಮಾಡಿಸಿ ಆಕೆಯಂ ಕೈಲಾಸಪರ್ವತಕ್ಕೆ ಕರ ತಂದು ಶಿವಸನ್ನಿಧಿಯಲ್ಲಿರಿಸಿ, ಪರಸ್ಪರವಾಗಿ ಹಾಹಾ! ಈಕೆಯು ಈ ಜನ್ಮದಲ್ಲಿ ಪರಮಪಾಪಿಯಾದರೂ ಅಜ್ಞಾನದಿಂ ಮಾಡಿದ ಪುಣ್ಯಲೇಶದಿಂದ ಪಾಷಾಣದಿಂ ಬ್ರಾಹ್ಮಣನಂ ಕೊಂದಳು, ಅಲ್ಲಿರ್ಪ ಜನರು ಆ ಪಾಷಾಣವಂ ತೆಗದು ಶಿವಾಲಯ ನಿರ್ಮಾಣವಂ ಮಾಡಿದರು, ಆ ಪುಣ್ಯದಿಂದೀಕೆಯು ಸರ್ವ ಪಾಪಂಗಳಂ ತೊರೆದು ಪರಮ ಸಂತಸದಿಂ ಶಿವ ಸನ್ನಿಧಿಯನ್ನೈದಿದಳೆಂದು ಮಾತಾಡಿಕೊಳ್ಳುತಲಿರಲು, ನಾನು ಆ ವಾಕ್ಯವಂ ಕೇಳಿ ಅತ್ಯಂತ ಆಶ್ಚರ್ಯಯುಕ್ತನಾಗಿ ನಿನ್ನ ಬಳಿಗೆ ಬಂದೆ ನೆಂದು ಪೇಳ್ದು ಮತ್ತಿಂತೆಂದನು. ಎಲೈ ಯಮನೆ! ಆ ಸ್ತ್ರೀಯು ಎಷ್ಟು ದುರಾಚಾರಳಾದೊಡಂ ತಿಳಿಯದೆ ಮಾಡಿದ ಶಿವಪುಣ್ಯದ ಮಹಿಮೆಯಿಂ ಮೋಕ್ಷವ ನ್ನೈದಿದಳು. ಎಲೈ ಮುನಿಗಳಿರಾ! ಅರು ಕೇಲಂಬರು ಶಿವಪುಣ್ಯದ ಮಹಿಮೆಯಂ ತಿಳಿದು ಮಾಡುವರೋ ಅವರ ಪುಣ್ಯಪ್ರಭಾವವಂ ಶಿವನೋರ್ವನೆ ಬಲ್ಲನಲ್ಲದೆ ಮತ್ತೋರ್ವನು ತಿಳಿಯನೆಂದು ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ,

ಉಪದೇಶಕಾಂಡದೊಳು ನಲವತ್ತೊಂದನೆಯ ಅಧ್ಯಾಯವು

ಸಂಪೂರ್ಣವಾದುದು.

ನಲವತ್ತೆರಡನೆಯ ಅಧ್ಯಾಯವು.

ಮಹಾ ಶುದ್ಧರಾಯನ ಕಥೆ.

ಎಲೈ ಋಷಿಗಳಿರಾ! ಮತ್ತೊಂದು ಶಿವಪುಣ್ಯದ ಮಹಿಮೆಯಂ ಪೇಳು ವೆನು ಕೇಳಿರಿ. ಪೂರ್ವದಲ್ಲಿ ಅಂಗೀರಸ ಮುನಿಯು ತನ್ನ ಕುಮಾರತಿಯಂ ನೋಡಿ ಒಂದು ಕಥೆಯಂ ಪೇಳ್ವನದೆಂತೆನೆ. ವಂಗದೇಶದಲ್ಲಿರುವ ಮಹಾ ಶುದ್ಧನೆಂಬ ರಾಜನು ಬೇಟೆಯಾಡುವ ನಿಮಿತ್ತವಾಗಿ ವನಕ್ಕೆ ಪೋಗೆ, ಘೋರ ರೆಂಬ ಚೋರರು ಬಂದು ಆ ವನವನ್ನಾವರಿಸಿ ಆ ಮಂತ್ರಿಯಂ ಸಂಹಾರವಂ ಮಾಡಿದರು. ಬಳಿಕ ಪೂರ್ಣಗರ್ಭಿಯಾದ ಆ ರಾಯನ ಸ್ತ್ರೀಯು ತನ್ನ ಪಿತೃ ವಿನ ಗೃಹಕ್ಕೆ ಪೋಗಿ, ಪುತ್ರನಂ ಪೆತ್ತು ಕೆಲವು ಕಾಲದ ಮೇಲೆ ಆ ಪುತ್ರನೊಡನೆ ಋಷಿಕ್ಷೇತ್ರದಲ್ಲಿ ಶಿವಾಲಯ ನಿರ್ಮಾಣವಂ ಮಾಡಿಸಿ, ಅಲ್ಲಿ ಶಿವಲಿಂಗ ಪ್ರತಿ ಷ್ಠೆಯಂ ಮಾಡಿಸಿ ಮಹಾ ಪೂಜೆಗಳಂ ಮಾಡಿ ಅತ್ಯಂತ ಭಕ್ತಿಯಿಂ ನಿತ್ಯವು ಶಿವದರ್ಶನಕ್ಕೆ ಪೋಗಿ ಬರುತ್ತಿಹಳು. ಒಂದಾನೊಂದು ದಿವಸದಲ್ಲಿ ಆಕೆಯ ಪುತ್ರನಂ ಶಿವಲಿಂಗಕ್ಕೆ ನಮಸ್ಕಾರವಂ ಮಾಡಿ ಬರುವ ಸಮಯದಲ್ಲಿ, ಎಲೈ ಮಾತೃವೆ! ನನ್ನ ಪಿತೃ ಯೆಲ್ಲಿಹಾನೆಂದು ಕೇಳುತ್ತಿರಲಾಗಿ, ಆ ಸಮಯದಲ್ಲಿ

ಇಂದ್ರನು ಚತುರಂಗ ಬಲ ಸಹಿತನಾಗಿ ಮೃತನಾದ ಆ ಮಹಾ ಶುದ್ಧನೆಂಬ ರಾಯನಂ ಕೂಡಿಕ್ಕೊಂಡು ಬಂದು, ಆತನಂ ಸ್ತ್ರೀಪುತ್ರರೊಡನೆ ಕೂಡಿಸಿ, ಆತನ ದೇಶಮಂ ಆತಂಗೆ ಕೊಟ್ಟು ಶಿವಾಜ್ಞೆಯಿಂ ತನ್ನ ಲೋಕಕ್ಕೆ ಪೋದನು. ಬಳಿಕ ಆ ರಾಯನು ತನ್ನ ಸ್ತ್ರೀಪುತ್ರರ್ ವೆರಸಿ ತನ್ನ ದೇಶದಲ್ಲಿರುವ ಅನೇಕ ಚೋರರಂ ಸಂಹರಿಸಿ, ಅವರೊಳಗೆ ಶ್ರೇಷ್ಠನಾದ ನೊಬ್ಬ ಚೋರನಂ ಹಿಡಿದು ಬಂಧಿಸಿ ಕಾರಾಗೃಹದಲ್ಲಿರಿಸಿ, ತನ್ನ ಭಟರಿಂದ ಆತಂಗೆ ಶಿಕ್ಷೆಯಂ ಮಾಡಿಸಿ ಶಿರಚ್ಛೇದನಕ್ಕೆ ಅಪ್ಪಣೆಯಂ ಕೊಟ್ಟು ಕೊಲ್ಲಿಸಿದನು. ಆ ಸಮಯದಲ್ಲಿ ಶಿವ ದೂತರು ಬಂದು ಆ ಚೋರನ ಮುಂಡವಂ ಹಿಡಿದೆತ್ತಿ ದಿವ್ಯ ವಿಮಾನದ ಮೇಲೆ ಕುಳ್ಳಿರಿಸಿ ಕೈಲಾಸಪರ್ವತಕ್ಕೆ ಕೊಂಡುಪೋದರು. ಆ ರಾಯನದಂ ಕಂಡು ಅತ್ಯಂತಾಶ್ಚರ್ಯಯುಕ್ತನಾಗಿ, ಊರ್ಧ್ವಮುಖನಾಗಿ ನೋಡುತ ನಿಂತಿರೆ, ಆ ಸಮಯದಲ್ಲಿ ಪುಣ್ಯಶ್ರೇಷ್ಠನಾದ ಗಾರ್ಗ್ಯಮಹಾಮುನಿಯು ಅಲ್ಲಿಗೆ ಬಂದನು. ಆಗಾ ಆ ರಾಯನು ಆ ಮುನಿಗೆ ನಮಸ್ಕರಿಸಿ, ಈ ವೃತ್ತಾಂತವಂ ಪೇಳೆ, ಆ ಮುನಿಯು ಕ್ಷಣಮಾತ್ರ ಧ್ಯಾನವಂ ಮಾಡಿ ಭೂತಭವಿಷ್ಯದ್ವರ್ತಮಾನದಲ್ಲಿ ದೃಷ್ಟಿಯುಳ್ಳವನಾಗಿ, ಆ ಚೋರನು ಮಾಡಿದ ಪುಣ್ಯವಂ ತಿಳಿದು, ಎಲೈ ರಾಯನೆ! ನೀನು ಈತನ ಕಂಠದಲ್ಲಿರ್ಪ ದಂಡಮಂ ತೆಗದು ಶಿವಾಲಯ ನಿರ್ಮಾಣಮಂ ಮಾಡಿಸಿದೆ, ಆ ಪುಣ್ಯದಿಂದೀತನು ಸಮಸ್ತ ಪಾಪವಂ ಕೊಡಹಿ ದಿವ್ಯ ವಿಮಾನವನ್ನೇರಿ, ಕೈಲಾಸಗಿರಿಗೈದಿ ಅಂತ್ಯದಲ್ಲಿ ಶಿವಸಾಯುಜ್ಯವಂ ಪಡೆದ ನೆಂದು ನುಡಿಯೆ, ರಾಯನದಂ ಕೇಳಿ ಅಂದು ಮೊದಲ್ಗೊಂಡು ಶಿವಪುಣ್ಯವಂ ಮಾಡುತಲಿರಲಾಗಿ, ಶಿವಪ್ರಸಾದದಿಂ ದೇವೇಂದ್ರನು ಬಂದು ಅರಿಮರ್ದಕವಾದ ಖಡ್ಗವಂ ಕೊಟ್ಟು ತಾನು ಸ್ವರ್ಗಕ್ಕೆ ಪೋದನು. ಬಳಿಕ ಆ ರಾಯನು ಮಹಾ ಪ್ರತಾಪಶಾಲಿಯಾಗಿ ರಾಜ್ಯವನ್ನಾಳಿ ಸಮಸ್ತ ಶಿವಪುಣ್ಯಗಳಂ ಮಾಡಿ, ಅಂತ್ಯ ದಲ್ಲಿ ಮೋಕ್ಷವನ್ನೈದಿದನು. ಎಲೈ ಮುನಿಗಳಿರಾ! ಆವುದಾನೊಂದು ಕಾರ ಣದಿಂ ಪಾಪಿಯಾದ ಚೋರನ ದಂಡವು ಶಿವಾಲಯಕ್ಕೋಸುಗವಾದುದೊ, ಅದು ಕಾರಣದಿಂದಾತನು ಶಿವಪುಣ್ಯಪ್ರಭಾವದಿಂ ಮೋಕ್ಷವನ್ನೈದಿದನು. ಹೀಗೆ ಆಂಗೀರಸ ಮುನಿಯು ತನ್ನ ಕುಮಾರತಿಗೆ ಈ ಪುಣ್ಯವಾದ ಕಥೆಯಂ ಪೇಳಿ ಮತ್ತಿಂತೆಂದನು.

ಚಂದ್ರರಥದ್ವಿಜನ ಕಥೆ.

ಎಲೈ ಕನ್ಯೆಯೆ ಗುಂಜಾಪುರದಲ್ಲಿ ಚಂದ್ರರಥನೆಂಬ ದ್ವಿಜನಿದ್ದನು. ಆತಂಗೆ ವಿಬುಧನೆಂಬ ಮಹಾ ಪಾಪಿಯಾದ ಪುತ್ರನು ಪುಟ್ಟಿ, ಆ ದೇಶದ ರಾಯನು ಕೋಪದಿಂದಾಪಾಪಿಯಂ ತನ್ನ ದೇಶದಿಂ ಪೊರಮಡಿಸಿದನು. ಬಳಿಕ ಆ

ಪಾಪಿಯು ಮಹಾರಣ್ಯದಲ್ಲಿ ಮಾರ್ಗದೊಳು ಸಂಚರಿಸುವವರಂ ಕಂಡು ಅವರ ದ್ರವ್ಯಾದಿಗಳಂ ತೆಗೆದುಕೊಳುತ್ತ ಕೆಲಕಾಲವಿರ್ದನು. ಬಳಿಕ ರಾಯನಿದಂ ಕೇಳಿ ತನ್ನ ಭಟರಂ ಕಳುಹಿ ಆತನಂ ಹಿಡಿತರಿಸಿ ಗಜದ ಮುಂದೆ ಹಾಕಿ ಆತನ ಶಿರವಂ ತುಳಿಯಲು ಗಜವಂ ಪ್ರೇರಿಸಲಾಗಿ, ಅದು ಅತಿ ಶೀಘ್ರದಿಂ ಬಂದು ಆತನ ಶಿರವಂ ತುಳಿಯದೆ ಪ್ರದಕ್ಷಿಣತ್ರಯವಂ ಮಾಡಿ ತನ್ನ ಸುಂಡಿಲಿಂದ ಆತನಂ ಹಿಡಿದೆತ್ತಿ ಕುಂಭಸ್ಥಳದ ಮೇಲೆ ಕುಳ್ಳಿರಿಸಿಕೊಂಡಿತು. ಆಗ ರಾಯನದಂ ಕಂಡು ಹಾಹಾ! ಇದೇನು? ಮದಗಜವು ಈ ರೀತಿ ಮಾಡುವದಕ್ಕೆ ಕಾರಣವೇನು? ಎಂದು ಆಶ್ಚರ್ಯವಂ ಮಾಡುತಿರೆ, ಆಗ ಗಜವು ಆ ರಾಯನಂ ನೋಡಿ, ಎಲೈ ರಾಯನೆ! ಈತನು ಬಾಲ್ಯದಲ್ಲಿ ತನ್ನ ಸ್ನೇಹಿತರೊಡನೆ ಬಾಲ ಕ್ರೀಡೆಗಳನ್ನಾಡುತ್ತ ಇಟಿಕೆಗಳಂ ತಂದು ಶಿವಾಲಯವಂ ಮಾಡಿದನು. ಆದರಿಂ ದೀತನಂ ಸಂಹರಿಸಲು ನಿನ್ನಿಂದಾಗಲೀ ಬ್ರಹ್ಮನಿಂದಾಗಲಿ ಆಗದು, ಈತನು ಪರಮ ಪೂಜ್ಯನು? ಎಂದು ನುಡಿಯೆ, ಆ ರಾಯನು ಈ ವಾಕ್ಯವಂ ಕೇಳಿ ಪರಮ ಭಕ್ತಿಯಿಂದಾತನಂ ಕಳುಹಿದನು. ಬಳಿಕ ಆ ವಿಬುಧನೆಂಬ ಬ್ರಾಹ್ಮಣನು ದೇಶಾಂತರಕ್ಕೆ ಪೋಗಿ ಬಹು ಕಾಲ ಸಂಚಾರವಂ ಮಾಡಿ, ಪೂರ್ವವಶದಿಂ ಮರಳಿಯು ಆ ದೇಶಕ್ಕೆ ಬರೆ, ರಾಯನು ಆತನಂ ಕಂಡು ಅತ್ಯಂತ ಸಂತೋಷದಿಂ ಬಹು ದ್ರವ್ಯ ಪೂರ್ವಕವಾಗಿ ತನ್ನ ಔರ್ಸರಾದ ಕನ್ನಿಕೆಯನಿತ್ತನು. ಅನಂತರದಲ್ಲಿ ಆ ದ್ವಿಜನು ಚೌರ್ಯಕರ್ಮವಂ ಬಿಟ್ಟು ಯಥೇಚ್ಛವಾಗಿ ಅನೇಕ ಭೋಗಂಗಳನ್ನನುಭವಿಸಿ ಅಂತ್ಯದಲ್ಲಿ ವಿಮಾನವನ್ನೇರಿ ಶಿವಲೋಕವನ್ನೈದಿದ ನೆಂದು ಆಂಗೀರಸ ಮುನಿಯು ತನ್ನ ಪುತ್ರಿಗೆ ಪೇಳಿದನೆಂದು ಶೌನಕಾದಿ ಗಳಿಗೆ ಸೂತಂ ಪೇಳಿದನೆಂಬಲ್ಲಿಗೆ, ಉಪದೇಶಕಾಂಡದೊಳು ನಲವತ್ತೆರಡನೆಯ ಅಧ್ಯಾಯವು ಸಂಪೂರ್ಣಂ.

ನಲವತ್ಮೂರನೆಯ ಅಧ್ಯಾಯವು.

ಭೋಗಾಂಗರಾಯನ ಕಥೆ.

ಎಲೈ ಋಷಿಗಳಿರಾ! ಕಶ್ಯಪನು ಆ ಆಂಗೀರಸ ಪುತ್ರಿಯಂ ನೋಡಿ ಪಾಪಹರವಾದ ಮತ್ತೊಂದು ಶಿವಪುಣ್ಯದ ಕಥೆಯಂ ಪೇಳಿದನು. ಯೇನೆಂದರೆ, ವೇದಾರಣ್ಯವೆಂಬ ನಗರದಲ್ಲಿ ಪರಹಿಂಸಕನಾದ ಭೋಗಾಂಗನೆಂಬ ರಾಯನು ಮಹಾ ಪಾಪಿಯಾಗಿರ್ದು, ಕೆಲವು ಕಾಲದ ಮೇಲೆ ಮೃತನಾದನು. ಬಳಿಕ ಯಮದೂತರು ಬಂದು ಪಾಶದಿಂದಾತನಂ ಕಟ್ಟಿ ನರಕದಲ್ಲಿ ಹಾಕಿ ಕೋಪದಿಂ

ಬಾಧಿಸುತ್ತಿರೆ, ಶಿವದೂತರು ಶಿವಾಜ್ಞೆಯಿಂದಲ್ಲಿಗೆ ಬಂದು ಘೋರವಾದ ನರಕದಲ್ಲಿ ಬಾಧೆಪಡುತಲಿರುವ ಆತನಂ ಪಿಡಿದೆತ್ತಿ, ದಿವ್ಯ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಶಿವಲೋಕಕ್ಕೆ ಪೋಗುತ್ತಿದ್ದರು. ಯಮದೂತರದಂ ನೋಡಿ ಅತ್ಯಂತ ತ್ವರಿತದಿಂ ಸಮೀಪಕ್ಕೆ ಬಂದು ಭಯಕಂಪಿತರಾಗಿ, ಈತನಿಂದ ಮಾಡಲ್ಪಟ್ಟ ಪುಣ್ಯವಾವುದೆಂದು ಕೇಳಲಾಗಿ, ಶಿವಗಣಗಳು ಅತಿ ಪ್ರೀತಿಯಿಂದವರಂ ನೋಡಿ, ಎಲೈ ಯಮದೂತರಿರಾ! ಕನಕನೆಂಬೀತನ ಪುತ್ರನು ಬಾಲ್ಯದಲ್ಲಿ ಮರಳಿನ ಲಿಂಗವಂ ಮಾಡಿ ಕ್ರೀಡಿಸುತಿರ್ದನು. ಆ ಪುಣ್ಯಪ್ರಭಾವದಿಂದೀತನು ಮಹಾ ಪಾಪಿಯಾದೊಡಂ ಘೋರಮಾದ ನರಕವಂ ಬಿಟ್ಟು ಶಿವಲೋಕವನ್ನೈದಿದನೆಂದು ನುಡಿದರು. ಬಳಿಕ ಯಮದೂತರು ಈ ವಾಕ್ಯವಂ ಕೇಳಿ ಬಹು ಭೀತಿಯುಳ್ಳವರಾಗಿ ತಮ್ಮ ಸ್ಥಾನಕ್ಕೆ ಪೋದರು. ಅಜ್ಞಾನದಿಂ ಪುತ್ರಾದಿಗಳು ಶಿವಪುಣ್ಯವಂ ಮಾಡಿದರೂ ಅವರ ಪಿತ್ರಾದಿಗಳಿಗೆ ಶಿವಲೋಕವುಂಟಾಗುವದು. ಹೀಗಿರುವಲ್ಲಿ ತಿಳಿದು ಭಕ್ತಿಶ್ರದ್ಧೆಯಿಂ ಮಾಡಿದೊಡೆ ಅವರ ವಿಷಯದಲ್ಲಿ ಯೇನು ಹೇಳಬೇಕಾಗಿರುವದು, ಎಂದು ಕಾಶ್ಯಪಮುನಿಯು ಆಂಗೀರಸನ ಪುತ್ರಿಗೆ ಪೇಳ್ದು ತೂಷ್ಣೀಂಭಾವದಿಂದಿರ್ದನು. ಬಳಿಕ ಜಮದಗ್ನಿಯು ಸರ್ವಪಾಪ ಪರಿಹಾರಕಮಾದ ಮತ್ತೊಂದು ಶಿವಪುಣ್ಯದ ಕಥೆಯಂ ಪೇಳ್ದನು ಎಂತೆಂದರೆ. ಚಂದ್ರಪುರಿಯೆಂಬ ಪಟ್ಟಣದಲ್ಲಿ ವಿಶುದ್ಧನೆಂಬ ಮಹಾರಾಯನು ನಿರುತಿರ್ದನು. ಆತನ ಬಳಿಯಲ್ಲಿರುವ ಓರ್ವ ಮಂತ್ರಿಗೆ ಅತಿ ಬಲಶಾಲಿಗಳಾದ ಮುವ್ವರು ಪುತ್ರರುಂಟಾದರು. ಅವರಲ್ಲಿ ಈರ್ವರು ಪುತ್ರರು ಮಹಾ ದುರಾಚಾರಿಗಳು, ಓರ್ವಂಗೆ ದುರಾಚಾರನೆಂದು ಮತ್ತೋರ್ವಂಗೆ ದುರ್ಗುಣನೆಂದು ಪೆಸರುಗಳು. ಅವರೀರ್ವರು ದುರಾಚಾರದಲ್ಲಿಯು ದುರ್ಮಾರ್ಗದಲ್ಲಿಯು ನಡೆಯುತ್ತಿರೆ, ಆ ಮಂತ್ರಿಯು ಬೇರೊಂದು ಗೃಹವಂ ನಿರ್ಮಾಣವಂ ಮಾಡಿಸಿ, ಈ ಈರ್ವರನ್ನು ಬೇರೆಯಾಗಿರಿಸಿದನು. ಬಳಿಕ ಅವರೀರ್ವರು ಅತ್ಯಂತಖಿನ್ನಮಾನಸರಾಗಿ ಆ ಪುರವಂ ಬಿಟ್ಟು, ಚೌರ್ಯಕ್ಕೋಸುಗ ಪೊರಮಟ್ಟು, ಸ್ವೇಚ್ಛೆಯಿಂ ಸಂಚರಿಸಿ ಮಧ್ಯಾಹ್ನದ ಸಮಯದಲ್ಲಿ ಸೂರ್ಯರಶ್ಮಿಯಿಂ ಪರಿತಪ್ತರಾಗಿ, ಅನ್ನವಂ ಕಟ್ಟಿಕೊಂಡು ಬರುತಲಿರುವ ಓರ್ವ ದ್ವಿಜನಂ ಕಂಡು ಶೀಘ್ರವಾಗಿ ಪೋಗಿ, ಆ ವಿಪ್ರನಂ ಬಡಿದು ಆತನಲ್ಲಿರುವ ವಸ್ತುಗಳಂ ಶೋಧಿಸಿ ಅಪೂಪಾದಿಗಳಂ ಭಕ್ಷಿಸಿ, ಒಂದು ವೃಕ್ಷದಲ್ಲಿ ಆ ಬ್ರಾಹ್ಮಣನಂ ಕಟ್ಟಿ ಆತನ ಕೈಯಲ್ಲಿರ್ಪ ಸಣ್ಣದ ಹರಳಂ ಚಲ್ಲಿ ಸ್ವೇಚ್ಛೆಯಿಂ ಪೋದರು. ಬಳಿಕ ಚೋರರು ಮಾರ್ಗದಲ್ಲಿ ಅವರೀರ್ವರಂ ಕಂಡು ಪಿಡಿತಂದು ಶಿರಚ್ಛೇದನವಂ ಮಾಡೆ, ಯಮದೂತರು ಬಂದು ಪಾಶದಿಂ ಕಟ್ಟಿ ಯಮನ ಸಮೀಪಕ್ಕೆ ಕೊಂಡು ಪೋದರು. ಆಗ ಯಮನವರಂ ನೋಡಿ ಚಿತ್ರ

ಗುಪ್ತನಂ ಕರೆಯಿಸಿ ಇವರೇನು ಪುಣ್ಯವನ್ನು ಮಾಡಿದಾರೆ? ಎಂದು ಕೇಳಲಾಗಿ, ಆ ಚಿತ್ರಗುಪ್ತನು ಇವರೇನು ಪುಣ್ಯವಂ ಮಾಡಲಿಲ್ಲ. ಓರ್ವ ಬ್ರಾಹ್ಮಣನ ಕೈಯಲ್ಲಿರ್ದ ಸುಣ್ಣದ ಹರಳಂ ತೆಗದುಕೊಂಡು ಚೆಲ್ಲಿಬಿಡೆ, ಆ ಸುಣ್ಣದ ಹರಳು ವಿಶ್ವನಾಥನ ಗುಡಿಗೆ ಪ್ರಯೋಜನವಾದುದು. ಆ ಪುಣ್ಯದಿಂದಿವರು ಸಮಸ್ತ ಪಾಪಂಗಳಿಂ ಬಿಡಲ್ಪಟ್ಟವರಾಗಿ ಅತಿ ಪುಣ್ಯಶಾಲಿಗಳಾದರೆಂದು ಪೇಳುತಿರಲು, ಶಿವಾಜ್ಞೆಯಿಂ ಶಿವಗಣಂಗಳು ಬಂದು ಕಾಂಚನ ವಿಮಾನದಲ್ಲಿ ಅವರೀರ್ವರಂ ಕುಳ್ಳಿರಿಸಿ ಕೈಲಾಸಕ್ಕೆ ಹೋದರು. ಆಗ ಯಮನು ಎಲೈ ಶಿವಗಣಂಗಳಿರಾ! ಇವರೀರ್ವರು ಮಾಡಿದ ಪುಣ್ಯ ಲೇಶಮಂ ತಿಳಿಯದೆ ನನ್ನ ದೂತರು ಅಜ್ಞಾನದಿಂ ಕರಕೊಂಡು ಬಂದರು. ಈ ಅಪರಾಧಮಂ ಕ್ಷಮಿಸಿಕೊಳ್ಳಿರೆಂದು ಅಡಿಗಡಿಗೆ ನಮಸ್ಕಾರಮಂ ಮಾಡೆ, ಶಿವಗಣಂಗಳು ಆ ವಾಕ್ಯಮಂ ಕೇಳಿ ಅಪರಾಧಮಂ ಕ್ಷಮಿಸಿ ಅವರೀರ್ವರಂ ಕರೆದುಕೊಂಡು ಪೋಗಿ ಶಿವಸನ್ನಿಧಿಯಲ್ಲಿ ನಿಲ್ಲಿಸಿದರು. ಅದುಕಾರಣದಿಂ ಶಿವಪುಣ್ಯದ ಮಹಿಮೆಯು ಶಿವನಿಂದಲ್ಲದೆ ಮತ್ತಾರಿಂದಲು ತಿಳಿಯಲಸಾಧ್ಯವೆಂದು ಜಮದಗ್ನಿಯು ಪೇಳ್ದನು.

ಬಳಿಕ ವಿಶ್ವಾಮಿತ್ರನು ಆ ಆಂಗೀರಸ ಪುತ್ರಿಯಂ ಕುರಿತು, ಎಲೆ ಪುತ್ರಿಯೆ ನಾನು ಪೂರ್ವದಲ್ಲಿ ಹೇಮಾದ್ರಿಯ ಶಿಖರದಲ್ಲಿರುವ ಜಗದ್ಗುರುವಾದ ಬ್ರಹ್ಮಂಗೆ ನಮಸ್ಕರಿಸಿ ಋಷಿಗಳ್ವೆರಸಿರ್ದೆನು. ಆಗ ಸದಾ ಬಿಂದುವೆಂಬ ಗಣಾಧೀಶ್ವರನು ಕೆಲವು ಗಣಂಗಳೊಡನೆ ಅಲ್ಲಿಗೆ ಬರಲು, ಬ್ರಹ್ಮನಾತನಂ ಕಂಡು ನಮಸ್ಕಾರಮಂ ಮಾಡಿ ವಿನಯದಿಂದಿದ್ದನು. ಆ ಗಣಾಧೀಶ್ವರನು ಬ್ರಹ್ಮನಂ ಯೋಚಿಸದೆ ಮೇರು ಪರ್ವತಕ್ಕೆ ಪೋಗಿ ಆಸನದಲ್ಲಿ ಕುಳಿತಿರೆ, ನಾನು ಬ್ರಹ್ಮನಂ ನೋಡಿ, ಎಲೈ ಚತುರ್ಮುಖನೆ! ನಿನ್ನನ್ನು ಲಕ್ಷ್ಯಂಗೆಯ್ಯದೆ ಪೋದವನಾರು? ಎಂದು ಕೇಳಿದೆನು. ಬಳಿಕ ಬ್ರಹ್ಮನು ಕೇಳೆಲೈ ಋಷಿಯೆ! ಈತನು ಸಾಮಂತನಗರದಲ್ಲಿ ಸದಾ ಬಿಂದುವೆಂಬ ಪೆಸರುಳ್ಳವನಾಗಿ, ಕೃಷಿಯಂ ಮಾಡುತ್ತ ಅತ್ಯಂತ ದರಿದ್ರನಾಗಿ, ತನ್ನ ಬಳಿ ಇರುವ ಒಂದು ಕೋಣನಂ ಮಾರುವದಕ್ಕೆ ಪೋಗಲು, ಅದನ್ನು ಯಾರೂ ಕ್ರಯಕ್ಕೆ ಕೊಳ್ಳದಿದ್ದರು. ಆಗ ಈತನು ಆ ಮಹಿಷವನೊಂದು ಕಡೆಯಲ್ಲಿ ಕಟ್ಟಿ ಅತಿ ದುಃಖಿತನಾಗಿ ತನ್ನ ಗೃಹಕ್ಕೆ ಪೋಗೆ, ಈ ಮಹಿಷವು ಶಿವಾಲಯಕ್ಕೆ ಪಾಷಾಣಂಗಳನ್ನೆಳೆವ ಮಹಿಷಂಗಳೊಡನೆ ಸೇರಿದುದು. ಬಳಿಕ ಅಪರರಾತ್ರಿಯಲ್ಲಿ ಶಿವಾಲಯ ನಿರ್ಮಾಣವಂ ಮಾಡುವ ಪುರುಷರು ಬಂದು ಮಹಿಷಗಳನ್ನೆಲ್ಲವಂ ಬಂಡಿಗಳ್ಗೆ ಕಟ್ಟಿ ದೂರಕ್ಕೆ ಕೊಂಡು ಪೋಗಿ, ಮಹಾಪಾಷಾಣಂಗಳಂ ಆ ಬಂಡಿಗಳ ಮೇಲೇರಿಸಿ ಶಿವಾಲಯದ ಬಳಿಯಲ್ಲಿ ತಂದು ಬಿಟ್ಟು, ಈ ಮಹಿಷವಂ ನೋಡಿ ತಮ್ಮದಲ್ಲವೆಂದು ತಿಳಿದು, ಅದನ್ನು ಪೊರಮಡಿಸಿದರು.

ಆ ಪುಣ್ಯದಿಂದೀತನಂ ಪಾಪದಿಂ ಬಿಡಲ್ಪಟ್ಟು ಗಣಾಧೀಶ್ವರನಾಗಿ ನನಗು ವಿಷ್ಣು ಮುಂತಾದ ದೇವತೆಗಳಿಗೂ ಪೂಜ್ಯನಾದನೆಂದು ಬ್ರಹ್ಮನೆನಗೆ ಪೇಳಿದನು.

ಗೋಪಾಲಬಾಲಕನಿಗೆ ಪರಶಿವನ ಪ್ರಸನ್ನತೆ.

ಎಲೈ ಕನ್ನಿಕೆಯೆ! ಇದಲ್ಲದೆ ಪೂರ್ವದಲ್ಲಿ ಓರ್ವ ಗೋಪಾಲಕನು ಪಾಷಾಣವನ್ನು ಲಿಂಗವಾಗಿ ಭಾವಿಸಿ, ಬಾಲ್ಯದಲ್ಲಿ ಪುಷ್ಪಗಳಂ ತಂದು ಆ ಶಿವ ಲಿಂಗಕ್ಕೆ ಸಮರ್ಪಿಸಿ, ಮನೋಹರವಾದ ಕೆಸರನ್ನೆ ಚಂದನವಾಗಿ ಭಾವಿಸಿ, ಮಣ್ಣು ಉಂಡೆಗಳನ್ನೆ ಕಾಣಿಕೆಯಾಗಿರಿಸುತ್ತ ನಿತ್ಯದಲ್ಲಿಯು ಈ ಪ್ರಕಾರವಾಗಿ, ಕ್ರೀಡಿಸುತ್ತಿರೆ, ಪರಮೇಶ್ವರನು ಆತನ ಭಕ್ತಿಶ್ರದ್ಧೆಗಳ್ಗೆ ಮೆಚ್ಚಿ, ಆ ಪಾಷಾಣ ಲಿಂಗವನ್ನೆ ರತ್ನಲಿಂಗವನ್ನಾಗಿಯು ಆತನ ಮನೆಯನ್ನು ರತ್ನಮಯವನ್ನಾಗಿಯು ಮಾಡಿ, ಆ ಮಂದಿರದಲ್ಲಿ ಕುಬೇರನ ನವನಿಧಿಗಳಂ ತುಂಬಿ ಈ ರೀತಿ ಆತಂಗೆ ಪ್ರಸನ್ನನಾಗೆ, ಆ ಗೋಪಾಲಕನು ಸಾಂಬಶಿವನಂ ನೋಡಿ ಅಡಿಗಡಿಗೆ ನಮ ಸ್ಕಾರವಂ ಮಾಡಿದನು. ಆಗ ಸಮಸ್ತರಾದ ದೇವತೆಗಳು ರಾಯರುಗಳು ಋಷಿ ಗಳು ಇದೆಲ್ಲವಂ ಕೇಳಿ ಅತ್ಯಂತ ಆಶ್ಚರ್ಯಯುಕ್ತರಾಗಿ, ಅಲ್ಲಿಗೆ ಬಂದು ಆ ಮಹಾ ದೇವಂಗೆ ನಮಸ್ಕಾರವಂ ಮಾಡಿ, ಅಂಜಲಿಬದ್ಧರಾಗಿ, ಆ ಗೋಪಾಲ ಬಾಲಕನಂ ತಕ್ಕೈಸಿ ಸಂತುಷ್ಟರಾಗಿ ನಿಂತಿರೆ, ಬಳಿಕ ಮಹೇಶ್ವರನು, ಎಲೈ ಬಾಲಕನೆ! ಇಂದು ಮೊದಲಾಗಿ ನಿನಗೆ ಶ್ರೀಹರನೆಂಬ ನಾಮವುಂಟಾಗಲಿ, ನೀನು ಮುಂದಣ ಜನ್ಮದಲ್ಲಿ ನಂದಗೋಪನಾಗಿ ಪುಟ್ಟಿ, ನಿನಗೆ ಹರಿಯು ಪುತ್ರನಾಗುವ ನೆಂದು ಪೇಳ್ದು ಅಂತರ್ಧಾನವನ್ನೈದಿದನು. ಬಳಿಕ ಈ ಶ್ರೀಹರನು ಮಹ ದೈಶ್ವರ್ಯವಂತನಾಗಿ ಅನೇಕ ಭೋಗಂಗಳನ್ನನುಭವಿಸಿ ಅಂತ್ಯದಲ್ಲಿ ಕೈಲಾಸಗಿರಿ ಗೈದಿದನು. ಅದುಕಾರಣದಿಂ ಆರು ಕೆಲಂಬರು ಶಿವಪುಣ್ಯವಂ ತಿಳಿದು ಮಾಡುತ ಲಿರುವರೋ ಅವರ ಪುಣ್ಯವನ್ನು ಶಿವನೇ ಬಲ್ಲನು. ಎಂದು ವಿಶ್ವಾಮಿತ್ರನು ನುಡಿಯೆ, ಆ ಕನ್ನಿಕೆಯು ಈ ಪ್ರಕಾರದಿಂ ಸಪ್ತರ್ಷಿಗಳಿಂದ ನಿರೂಪಿಸಲ್ಪಟ್ಟ ವಾಕ್ಯವಂ ಕೇಳಿ ಬದ್ಧಾಂಜಲಿ ಪುಟೆಯಾಗಿ ನಿಂತಳು. ಆಗ ಋಷಿಗಳು ಆಕೆಗೆ ಅನೇಕವಾದ ಆಶೀರ್ವಾದಗಳಂ ಮಾಡಿ, ಎಲೆ ಕುಮಾರತಿಯೆ! ನಿರ್ದೋಷೆ ಯಾದ ನೀನು ಸಮಸ್ತವಾದ ಶಿವಪುಣ್ಯವಂ ಮಾಡು, ಮಹಾನುಭಾವನಾದ ಪರಮೇಶ್ವರನ ಕೃಪೆಯು ನಿನಗುಂಟಾಗುವದು. ಎಂದು ಪೇಳ್ದು ಶೀಘ್ರದಿಂ ತಮ್ಮಾಶ್ರಮಕ್ಕೆ ಪೋದರು. ಬಳಿಕ ಆ ಕನ್ನಿಕೆಯು ತನ್ನ ದೇಶವನ್ನೆ ಶಿವ ಪೂಜಾರ್ಥವಾಗಿ ಕಲ್ಪಿಸಿ, ಮಂಟಪ ಉಪ್ಪರಿಗೆ ವಾಪೀಕೂಪ ತಟಾಕಾದಿಗಳಂ ನಿರ್ಮಾಣವಂ ಮಾಡಿ, ಶಿವಂಗೆ ಅನೇಕೋತ್ಸವಗಳಂ ಮಾಡಿಸಿ, ಸಂಸಾರ ಮೂಲಚ್ಛೇದಕವಾದ ಶಿವಜ್ಞಾನವಂ ಪಡೆದು ಅನೇಕ ಭೋಗಂಗಳನ್ನನುಭವಿಸಿ

ಅಂತ್ಯದಲ್ಲಿ ದೇವತೆಗಳಿಂದ ಸ್ತುತಿಸಲ್ಪಡುತ್ತ ದೇವದುಂದುಭಿಗಳ್ಮೊಳಗಿ ಪುಷ್ಪ ವೃಷ್ಟಿಯಿಂ ಕರೆಯಲ್ಪಟ್ಟವಳಾಗಿ ಕೈಲಾಸಪರ್ವತಕ್ಕೆ ಪೋಗಿ, ಶಿವಸನ್ನಿಧಿಯಲ್ಲಿ ಅನೇಕ ಕಾಲವಿರ್ದು ಮೋಕ್ಷಮಂ ಪೊಂದಿದಳೆಂದು ಸೂತಂ ಶೌನಕಾದಿ ಮುನಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ಉಪದೇಶಕಾಂಡದೊಳು ನಲವತ್ಮೂರನೆಯ ಅಧ್ಯಾಯವು ಸಂಪೂರ್ಣಮಾದುದು.

ನಲವತ್ನಾಲ್ಕನೆಯ ಅಧ್ಯಾಯವು.

ಸರ್ವ ಗುರುದ್ವಿಜನ ವೃತ್ತಾಂತ.

ಎಲೈ ಋಷಿಗಳಿರಾ! ಮರಳಿಯು ಶಿವಕಥೆಯಂ ಪೇಳುತ್ತ ಇದೇನೆ. ಸಾವಧಾನದಿಂ ಕೇಳಿರಿ, ವಿರಾಟದೇಶದಲ್ಲಿ ಶ್ರೀಮಂತವೆಂಬ ಪುರವಿರುವದು, ಅಲ್ಲಿ ಸರ್ವಶಾಸ್ತ್ರ ಪ್ರವೀಣನಾದ ಸರ್ವಗುರುವೆಂಬ ಬ್ರಾಹ್ಮಣನಿರುತಿರುವನು. ಆತಂಗೆ ಸೋಮಕನೆಂಬ ಕುಮಾರನು ಪುಟ್ಟಿ ಅತಿ ಕ್ರೂರನಾಗಿ ವೇಶ್ಯಾಗಮನ ತತ್ಪರ ನಾಗಿ, ಚೌರ್ಯವಂ ಮಾಡುತ್ತ ಸಂಚರಿಸುತ್ತಿರಲು, ಒಂದಾನೊಂದು ದಿವಸದಲ್ಲಿ ಕದಳೀವನಕ್ಕೆ ಪೋಗಿ ಕದಳೀ ಫಲಂಗಳನಪಹರಿಸಿ, ಅವುಗಳನ್ನು ತಲೆಯ ಮೇಲಿಟ್ಟುಕೊಂಡು ಚೋರರ ಮಾರ್ಗದಿಂ ಬರುತಿರ್ದನು. ಆಗ ವನಪಾಲಕರು ಈತನಂ ಕಂಡು ರಜ್ಜುವಿನಿಂ ಬಿಗಿದು ಅನೇಕ ಜನಗಳಿಂ ನಿಬಿಡಮಾದ ರಾಜ ಸನ್ನಿಧಿಗೆ ಕರತಂದು ನಿಲ್ಲಿಸೆ, ಆ ರಾಯನು ಚನ್ನಾಗಿ ತಾಡನವಂ ಮಾಡಿಸಿ ಆತನ ಕರಗಳಂ ಛೇದಿಸಿ, ತನ್ನ ಗ್ರಾಮದಿಂ ಪಾಪಿಯಂ ಪೊರಮಡಿಸಿದನು. ಬಳಿಕ ಆತನೆ ಮರಳಿಯು ರಾಯನ ಶೃಂಗಾರದ ತೋಟವಂ ಪ್ರವೇಶಿಸಿ ನಿತ್ಯದಲ್ಲಿಯು ಕದಳೀ ಫಲಗಳನ್ನು ಅಪಹರಿಸುತ್ತಿರೆ, ಒಂದು ದಿವಸದಲ್ಲಿ ರಾಜದೂತರು ಆತನಂ ಕಂಡು ರಜ್ಜುವಿನಿಂ ಬಿಗಿದು, ಮರಳಿಯು ರಾಜಸನ್ನಿಧಿಗೆ ಕರತಂದರು. ಆ ಸಮಯದಲ್ಲಿ ರಾಯನು ಚೋರರೊಳಗೆ ಅತಿ ಚೋರನಾದ ಆತನಂ ಮಹಾ ಕೋಪದಿಂ ಬಡಿಸಿ, ಜಾನುಪರ್ಯಂತರ ಪಾದವಂ ಛೇದಿಸಲಾಗಿ ಅವನು ಮೃತ ನಾದನು. ಬಳಿಕ ಯಮದೂತರು ಬಂದು ಆತನಂ ಪಿಡಿದುಕೊಂಡು ಪೋಗಿ ಯಮನ ಸಮೀಪದಲ್ಲಿ ನಿಲ್ಲಿಸೆ, ಯಮನವರಂ ನೋಡಿ, ಎಲೈ ದೂತರಿರಾ ! ಈತನು ಲೋಕದಲ್ಲಿ ಅತಿ ಚೋರನಾಗಿ ಕದಳೀ ಫಲಂಗಳಂ ಕದಿಯುತಲಿರೆ, ಒಂದು ದಿವಸದಲ್ಲಿ ಗ್ರಾಮಪಾಲಕನು ಈತನನ್ನಟ್ಟಿಕೊಂಡು ಬಂದವನಾಗಲು ಇವನು ಭೀತಿಗೊಂಡು ಹಾಟಕೇಶ್ವರನ ಪ್ರಾಕಾರವಂ ದಾಟಿ ಓಡಿದನು. ಬಳಿಕ ಸೂರ್ಯೋದಯಮಾಗಲು ಆ ದೇವಾಲಯದ ಜನರು ಕದಳೀ ಫಲಂಗಳಂ ತಂದು

ರಾಯಂಗೆ ಬಿನ್ನಪಂಗೆಯ್ಯೆ, ಆ ರಾಯನು ಆ ಫಲಂಗಳಂ ಸ್ವಾಮಿಗೆ ನಿವೇದನವಂ ಮಾಡಿಸಿರೆಂದು ಪೇಳ್ದುದರಿಂದ, ಅವರು ಸ್ವಾಮಿಗೆ ಅಭಿಷೇಕವಂ ಮಾಡಿ ನಿವೇದನವಂ ಮಾಡಿದರು. ಆ ಫಲದಿಂದೀತನು ಸುಕೃತಶಾಲಿಯು, ಈತನಂ ಕಳುಹಿರೆಂದು ಪೇಳೆ, ಯಮದೂತರು ಆತನಂ ಯಥಾಪ್ರಕಾರ ಸ್ಥಾನವಂ ಸೇರಿದರು. ಬಳಿಕ ಈತನು ನಿದ್ರೆಗೈದೆದ್ದವನಂತೆದ್ದು ರಾಯ ಮುಂತಾದ ಸಕಲ ಜನರಿಗು ಈ ವೃತ್ತಾಂತವಂ ಪೇಳುತಿರಲು, ಆ ಸಮಯದಲ್ಲಿ ಶಿವಗಣಂಗಳು ಬಂದು ದಿವ್ಯವಿಮಾನದಲ್ಲಿ ಆತನಂ ಕುಳ್ಳಿರಿಸಿಕೊಂಡು ಕೈಲಾಸಕ್ಕೆ ಪೋಗೆ, ಆತನು ಶಿವಸನ್ನಿಧಿಯುಲ್ಲಿ ಅನೇಕ ಕಾಲವಿರ್ದು ಶಿವಸಾಯುಜ್ಯವನೈದಿದನೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ನಲವತ್ನಾಲ್ಕನೆಯ ಅಧ್ಯಾಯವು ಸಂಪೂರ್ಣವಾದುದು.

ನಲವತ್ತೈದನೆಯ ಅಧ್ಯಾಯವು.

ಭಾರ್ಗವ ವೈಣವರೆಂಬ ವೈಶ್ಯರಕಥೆ.

ಎಲೈ ಋಷಿಗಳಿರಾ! ಮತ್ತೊಂದು ಶಿವಪುಣ್ಯದ ಕಥೆಯಂ ಪೇಳುವೆನು ಕೇಳಿರಿ, ಪೂರ್ವದಲ್ಲಿ ಗಂಧಮಾದನವೆಂಬ ಪರ್ವತದೊಳು ಕೆಲಂಬರಾದ ಮಹಾಮುನಿಗಳು ತೀವ್ರವಾದ ತಪವಂ ಮಾಡುತಿರ್ದರು. ಆ ಸಮಯದಲ್ಲಿ ಕಣ್ವಮಹರ್ಷಿ ಅಲ್ಲಿಗೆ ಬರೆ, ಆತನಂ ಕಂಡು ಅತ್ಯಂತ ಮುದದಿಂದ ನಮಸ್ಕಾರವಂ ಮಾಡಿ ಆಸನದಲ್ಲಿ ಕುಳ್ಳಿರಿಸಿ, ಎಲೈ ಮಹಾಮುನಿಯೆ! ನೀವು ಎಲ್ಲಿಂದ ಬಂದಿರಿ? ಏನಾಶ್ಚರ್ಯವಂ ಕಂಡಿರಿ? ನಮಗೆ ಪೇಳಬೇಕೆಂದು ನಿರೂಪಿಸಲಾಗಿ ಆತನಿಂತೆಂದನು. ಎಲೈ ಋಷಿಗಳಿರಾ! ನಾನು ಬ್ರಹ್ಮಲೋಕದಿಂದಿಲ್ಲಿಗೆ ಬಂದೆನು, ಅಲ್ಲಿ ಒಂದು ಆಶ್ಚರ್ಯವಂ ಕಂಡೆನು ಏನೆಂದರೆ, ಮಾಳವದೇಶದಲ್ಲಿ ಕಲ್ಯಾಣವೆಂಬ ಪುರವಿರ್ಪುದು. ಆ ಪಟ್ಟಣದಲ್ಲಿ ಭಾರ್ಗವನೆಂಬನು ವೈಣವನೆಂಬನು ಈರ್ವರು ವೈಶ್ಯರು ಮಹಾಬಲವಂತರಾಗಿ ಪರಮ ಪಾಪಿಗಳಾಗಿ, ಆವಾಗಲು ವಂಚನೋದ್ಯುಕ್ತರಾಗಿ ಹಗಲಿನಲ್ಲಿ ವರ್ತಕರೊಡನೆ ವ್ಯಾಪಾರವಂ ಮಾಡುತ, ರಾತ್ರಿಯುಲ್ಲಿ ಧನಿಕರಾದ ವರ್ತಕರು ಬಂದರೆ, ತಮ್ಮ ಮನೆಗೆ ಕರದುಕ್ಕೊಂಡು ಬಂದು ಸ್ಥಳವಂ ಕೊಟ್ಟು ವಂಚನೆಯಿಂದವರಂ ಸಂಹರಿಸಿ ಅವರ ದ್ರವ್ಯವನ್ನು ಅಪಹರಿಸಿಕೊಳ್ಳುವದಲ್ಲದೆ, ರಾತ್ರಿಯಲ್ಲಿ ವನಪ್ರದೇಶಕ್ಕೆ ಪೋಗಿ ಧನಿಕರಾದ ಮಾರ್ಗಸ್ಥರಂ ಕೊಂದು ಅವರ ದ್ರವ್ಯಂಗಳ ತೆಗದುಕೊಂಡು ಪ್ರಾತಃಕಾಲದಲ್ಲಿ ಮರಳಿ ಯಥಾಪ್ರಕಾರಕ್ಕೆ ವರ್ತಕರೊಡನೆ ವ್ಯಾಪಾರಂಗಳಂ ಮಾಡಿ ಕೊಳ್ಳುತ್ತಿದ್ದರು.

ಅವರು ಮಾಡಿದ ಪಾಪಂಗಳನೆಣಿಸಲು ಯಾರಿಂದಲು ಆಗದು. ಹೀಗಿರಲೊಂದಾ
ನೊಂದುದಿನ ಅವರೀರ್ವರು ರಾತ್ರಿಯಕಾಲದಲ್ಲಿ ಗೊಲ್ಲತಿಯ ಗೃಹಕ್ಕೆ ಬಂದಿರುವ
ವರ್ತಕರಂ ಕಂಡು, ಅವರು ನಿದ್ರಿಸುವ ಸಮಯದಲ್ಲಿ ಆ ಗೃಹವಂ ಪೊಕ್ಕು,
ಅವರ ಮೇಲೆ ಮೋಹನೌಷಧವಂ ತಳಿದು ಆ ದ್ರವ್ಯಂಗಳನಪಹರಿಸಿಕೊಂಡು,
ಮಹತ್ತಾದ ಅರಣ್ಯಕ್ಕೆ ಪೋಗಿ ಅಲ್ಲಿ ನಿರ್ಜನವಾದ ಶಿವಾಲಯವಂ ಕಂಡು,
ಅದರೊಳಕ್ಕೆ ಪ್ರವೇಶಿಸಿ ಆ ಗೊಲ್ಲರ ಗೃಹದಿಂ ತಂದ ಆಜ್ಯದಿಂದ ಕಾಡುಗಿಚ್ಚಿನಿಂ
ಒಂದು ದೀಪವಂ ಹತ್ತಿಸಿ ಬೆಳಕು ಮಾಡಿಕೊಂಡು, ತಾವು ತಂದ ಧನವಂ
ಸಮಾಂಶವಾಗೀರ್ವರು ಹಂಚಿಕೊಂಡು ಮರಳಿ ನಗರಕ್ಕೆ ಬರಬೇಕೆಂದಿರ್ದರು.
ಇಷ್ಟರೊಳಗಾಗಿ ಪ್ರಾತಃಕಾಲದಲ್ಲಿ ಆ ಗೋಪ ಗೃಹದಲ್ಲಿರ್ದ ಜನರಿಂದಂ ಕಂಡು
ಪೊರಮಡೆ, ಗ್ರಾಮಪಾಲಕರದಂ ಕೇಳಿ ದಟ್ಟಿಗಳಂ ಕಟ್ಟಿ ನಾನಾವಿಧ ಆಯು
ಧಂಗಳುಳ್ಳವರಾಗಿ ಅಲ್ಲಿಗೆ ಬಂದು ನಡೆದ ವೃತ್ತಾಂತವಂ ತಿಳಿದು, ಆ ಚೋರರು
ಪೋದ ಮಾರ್ಗದಲ್ಲಿಯೇ ನಡೆದು ಅವರಂ ಕಂಡು ಹಗ್ಗದಿಂ ಬಿಗಿದುಕಟ್ಟಿ, ರಾಜ
ಸನ್ನಿಧಿಗೆ ಕರತಂದು ಈ ವೃತ್ತಾಂತವಂ ಪೇಳಲಾಗಿ, ರಾಜನದಂ ಕೇಳಿ ಆ
ಚೋರರಾದ ವರ್ತಕರ ಶಿರಚ್ಛೇದನವಂ ಮಾಡಿಸಿದನು. ಬಳಿಕ ಶಿವದೂತರು
ಬಂದು ಅವರೀರ್ವರಂ ದಿವ್ಯ ವಿಮಾನದ ಮೇಲೆ ಕುಳ್ಳಿರಿಸಿಕೊಂಡು ಕೈಲಾಸ
ಪರ್ವತವನ್ನೈದಿಸಿ, ಶಿವಸನ್ನಿಧಿಯಲ್ಲಿ ಬಿಟ್ಟರು. ಎಲೈ ಋಷಿಗಳಿರಾ! ಚೌರ್ಯದಿಂ
ತಂದ ಆಜ್ಯದಿಂದ ಶಿವಂಗೆ ದೀಪಜ್ವಾಲೆಯಂ ಗೈದುದರಿಂದುಂಟಾದ ಪುಣ್ಯಲೇಶ
ದಿಂದ ಸಮಸ್ತ ಪಾಪಂಗಳಿಂದಲು ಬಿಡಲ್ಪಟ್ಟವರಾಗಿ, ಶಿವಸಾಯುಜ್ಯವನೈದಿ
ದರು. ಎಂದು ಕಣ್ವಮುನಿಯಿಂದ ನಿರೂಪಿಸಲ್ಪಟ್ಟ ವಾಕ್ಯವಂ ಕೇಳಿ ಎಲ್ಲರೂ
ಆಶ್ಚರ್ಯಯುಕ್ತರಾದರು.

ಚೋರನಿಗೆ ಶಿವಲೋಕಪ್ರಾಪ್ತಿಯ ಕಥೆ.

ಬಳಿಕ ವಾಮದೇವನೆಂಬ ಋಷಿಯು ಆ ಋಷಿಗಳಿಗೆ ಮತ್ತೊಂದು ಶಿವ
ಪುಣ್ಯದ ಕಥೆಯಂ ಪೇಳ್ದನು. ಅದೆಂತೆಂದರೆ, ಎಲೈ ಋಷಿಗಳಿರಾ! ಕುಂಡಲ
ವೆಂಬ ದೇಶದಲ್ಲಿ ಕಪಿತ್ಥವೆಂಬ ಮಹಾಪುರವಿರ್ಪುದು. ಅಲ್ಲಿ ಮಹಾಬಲನಾದ
ಓರ್ವ ಶೂದ್ರನಿದ್ದನು. ಆತನು ನಿತ್ಯವು ಗ್ರಾಮನಗರಂಗಳಲ್ಲಿ ಚೌರ್ಯವಂ
ಮಾಡುತ್ತ ಬರಲಾನೊಂದು ವೇಳೆಯಲ್ಲಿ ಚೋರಭಾವದಿಂ ಪ್ರಾಪ್ತಮಾದ ಮಹಾ
ಧನವಂ ಮಲ್ಲೇಶ್ವರನ ಮುಂದಿರ್ಪ ತಟಾಕದ ಕೆಸರಿನಲ್ಲಿ ನಿಕ್ಷೇಪವಂ ಮಾಡಿ,
ಮತ್ತೆ ಕೆಲವು ದಿವಸಗಳ ಮೇಲೆ ಪ್ರತಿದಿನವು ಬಂದು ತಾವಿರಿಸಿದ್ದ ಸ್ಥಳವ
ನರಿಯದೆ, ನಾನಾ ಪ್ರಕಾರದಿಂದಾಕೆಸರಂ ಶೋಧಿಸಿ ಧನವಂ ತೆಗದುಕೊಂಡು,
ಪರಮ ಶ್ರೇಷ್ಠನಾಗಿ ಅನೇಕ ಭೋಗಂಗಳನನುಭವಿಸಿ ಮೃತನಾಗೆ, ಶಿವಗಣಗಳು

ಬಂದು ಆತನಂ ದಿವ್ಯ ವಿಮಾನದಮೇಲೆ ಕುಳ್ಳಿರಿಸಿಕೊಂಡು ಶಿವಲೋಕಕ್ಕೆ ಪೋಗುತ್ತಿರ್ದರು. ಆ ಸಮಯದಲ್ಲಿ ನಾನವರಂ ಕಂಡು, ಎಲೈ ಶಿವಗಣಂಗಳಿರಾ! ಈತನಾವ ಪುಣ್ಯಮಂ ಮಾಡಿದಾನೆ? ಎಂದು ಕೇಳಲಾಗಿ, ಅವರುಗಳು ಎಲೈ ವಾಮದೇವನೆ! ಈತನು ಚೌರ್ಯದಿಂ ಮಹಾಧನವಂ ತಂದು ಮತ್ಸ್ಯೇಶ್ವರನ ದೇವಾಲಯದ ಮುಂದಿರ್ಪ ತಟಾಕದಲ್ಲಿ ನಿಕ್ಷೇಪಮಂ ಮಾಡಿ, ಆ ಸ್ಥಳವಂ ಕಾಣದೆ ಅದನ್ನು ಪಡೆಯಲೋಸುಗ ಆ ತಟಾಕವನ್ನು ಪರಿಶೋಧಿಸಿದನು. ಆ ಪುಣ್ಯದಿಂದೀತಂಗೆ ಶಿವಲೋಕಪ್ರಾಪ್ತಿ ಯುಂಟಾಯಿತೆಂದು ಪೇಳ್ದರು. ಅದಂ ಕೇಳಿ ಆಶ್ಚರ್ಯಪಡುತ್ತ ಇಲ್ಲಿಗೆ ಬಂದೆನೆಂದು ವಾಮದೇವನು ನುಡಿದನು.

ಹೂದೋಟದಿಂದಾದ ಶಿವಪ್ರಸಾದ ಕಥನ.

ಬಳಿಕ ಸದಾನಂದನೆಂಬ ಮುನಿಯು ಈ ಕಥೆಯಂ ಕೇಳಿ ತಾನೊಂದು ಕಥೆಯಂ ಪೇಳ್ದನದೆಂತೆನೆ, ಕಾಂಪಿಲ್ಯದೇಶದಲ್ಲಿ ಮುಕುಂದವೆಂಬ ಪುರವಿರ್ಪುದು. ಆ ಪಟ್ಟಣದಲ್ಲಿ ಮಹಾದರಿದ್ರನಾದ ಶೋಭನನೆಂಬ ಬ್ರಾಹ್ಮಣನು ದ್ವಿಜರಂ ಕಂಡು, ಎಲೈ ಬ್ರಾಹ್ಮಣೋತ್ತಮರಿರಾ! ನನಗೆ ಯಾವಾಗ ದಾರಿದ್ರ ವಿಮೋಚನವಾದೀತು? ಎಂದು ಪೃಚ್ಛಿಸಲಾಗಿ, ಆ ದ್ವಿಜರೀವಾಕ್ಯವಂ ಕೇಳಿ, ಎಲೈ ದ್ವಿಜನೆ! ಶಿವಪೂಜಾ ನಿಮಿತ್ತವಾಗಿ ಒಂದು ಪುಷ್ಪಾರಾಮವಂ ಮಾಡಿಸಿದೆಯಾದರೆ ನಿನಗೆ ಮಹದೈಶ್ವರ್ಯ ಉಂಟಾಗುವದೆಂದು ನುಡಿದರು. ಬಳಿಕ ಆ ವಿಪ್ರನು ಅತ್ಯಂತ ಸಂತೋಷಯುಕ್ತನಾಗಿ ಒಂದು ಹುವ್ವಿನತೋಟವಂ ಮಾಡಿಸಿ ಅಲ್ಲಿ ಅನೇಕ ಪುಷ್ಪವೃಕ್ಷಂಗಳಣಿಯಮಾಡಿ, ಆ ಪುಷ್ಪಂಗಳಿಂದ ಏಕಾಗ್ರಚಿತ್ತನಾಗಿ ಶಿವಪೂಜೆಯಂ ಮಾಡುತಿರೆ, ಆ ವೇಳೆಯಲ್ಲಿ ಸುರಾಧಿಪನಾದ ದೇವೇಂದ್ರನಲ್ಲಿಗೆ ಬಂದು ಆ ಬ್ರಾಹ್ಮಣಂಗೆ ದಿವ್ಯವಾದ ಅಮೃತವನ್ನಿತ್ತು, ಎಲೈ ಬ್ರಾಹ್ಮಣನೆ! ನೀನು ಇಹಲೋಕದಲ್ಲಿ ಅನೇಕ ಭೋಗಂಗಳನ್ನನುಭವಿಸಿ ಅಂತ್ಯದಲ್ಲಿ ನನ್ನ ಲೋಕಕ್ಕೆ ಬರುವನಾಗೆಂದು ಪೇಳ್ದು ತನ್ನ ಲೋಕಕ್ಕೆ ಪೋದನು. ಎಲೈ ದ್ವಿಜರುಗಳಿರಾ! ಬಳಿಕ ಆ ದ್ವಿಜನು ಈ ಪ್ರಕಾರವಾಗಿ ಪುಷ್ಪಂಗಳನ್ನೆತ್ತಿ ಗುರುಹಸ್ತದಲ್ಲಿ ಸಮರ್ಪಿಸಿ, ಮರಳಿ ಯವುಗಳಂ ತೆಗದುಕೊಂಡು ಶಿವನಂ ಪೂಜಿಸುತಿದ್ದನು ಆವಾಗ ಆ ಪುಷ್ಪಂಗಳು ಶಿವನ ಮಸ್ತಕದ ಮೇಲೆ ಬಿದ್ದವೋ, ಆಗಲೆ ಪರಮೇಶ್ವರನು ಪ್ರಸನ್ನನಾಗಿ, ಆತನಂ ಕುರಿತು, ಎಲೈ ದ್ವಿಜನೆ! ಅವುದಾನೊಂದು ಕಾರಣದಿಂ ನೀನೆ ಪುಷ್ಪಂಗಳಂ ನೀಟುಮಾಡಿ ಅವುಗಳಿಂದ ನನ್ನನ್ನು ಪೂಜಿಸಿದೆಯೋ, ಅದುಕಾರಣದಿಂ ನಾನವುಗಳಂ ವಿಶ್ವಾಸದಿಂ ಶಿರಸ್ಸಿನಲ್ಲಿಯೇ ಧರಿಸುತಲಿದ್ದೇನೆ. ಆ ಪುಣ್ಯ ಪ್ರಭಾವದಿಂ ನೀನು ಇಹಲೋಕದಲ್ಲಿ ಅನೇಕ ಭೋಗಂಗಳನ್ನನುಭವಿಸಿ, ಅಂತ್ಯದಲ್ಲಿ ಇಂದ್ರತ್ವಮಂ ಪಡೆದು, ಸಕಲ ದೇವತೆಗ

ಳಿಂದ ಮಾಡಲ್ಪಡುವ ಪೂಜೆಗಳಂ ಕೈಕೊಂಡು ಅಂತ್ಯದಲ್ಲಿ ನನ್ನ ಲೋಕಕ್ಕೆ ಬಂದು ಮುಕ್ತನಾಗೆಂದು ನಿರೂಪಿಸಿ, ತನ್ನ ಸಮೀಪದಲ್ಲಿರುವ ಕುಬೇರನಂ ನೋಡಿ, ಎಲೈ ಕುಬೇರನೆ! ನೀನೀ ಬ್ರಾಹ್ಮಣನ ಸಮೀಪದಲ್ಲಿಯೆ ಇದ್ದು ಕೊಂಡು ಈತಂಗೆ ಬೇಕಾದ ಧನವಂ ಕೊಡುತಲಿರೆಂದಾಜ್ಞಾಪಿಸಿ, ತಾನು ಅಂತ ರ್ಧಾನವನ್ನೈದಿದನು. ಬಳಿಕ ಶೋಭನನೆಂಬೀ ಬ್ರಾಹ್ಮಣನು ತನ್ನ ಗುರು ವಾದ ಶಿವಧರ್ಮಿಯೆಂಬ ದ್ವಿಜನಂ ಕುರಿತು, ನಮಸ್ಕಾರವಂ ಮಾಡಿ, ಎಲೈ ಗುರುವೆ! ನಿನ್ನ ದರ್ಶನದಿಂದೆನಗೆ ಸಮಸ್ತಫಲಂ ಉಂಟಾದುದು. ಕೃತಾರ್ಥ ನಾದೆನು. ಪುಷ್ಪಾರಾಮ ಪ್ರಭಾವದಿಂ ಪರಮೇಶ್ವರನು ಪ್ರಸನ್ನನಾದನು. ನಿಮ್ಮನುಗ್ರಹದಿಂದ ನಾನು ಖಂಡಿತವಾಗಿ ಅನೇಕ ಭೋಗಂಗಳಂ ಪಡವೆನೆಂದು ಹೇಳ್ದು, ಬಹು ಭೋಗಂಗಳನ್ನನುಭವಿಸಿ ಬಳಿಕ ಇಂದ್ರತ್ವಮಂ ಪಡೆದು ಸಕಲ ದೇವತೆಗಳಿಂದಲು ಪೂಜಿಸಲ್ಪಡುತ ಕೆಲಕಾಲವಿರ್ದು, ಶಿವಲೋಕವನ್ನೈದಿ ಅಂತ್ಯ ದಲ್ಲಿ ಸಾಯುಜ್ಯಮುಂ ಪಡೆದನೆಂದು ಸೂತಂ ಶೌನಕಾದಿಗಳಿಗೆ ಹೇಳಿದ ನೆಂಬಲ್ಲಿಗೆ ಉಪದೇಶಕಾಂಡದೊಳು ನಲವತ್ತೈದನೆಯ ಅಧ್ಯಾಯವು ಸಂಪೂರ್ಣಮಾದುದು.

ನಲವತ್ತಾರನೆಯ ಅಧ್ಯಾಯವು.

ಸರ್ವಜಿದ್ರಾಯನ ಕಥೆ.

ಎಲೈ ಋಷಿಗಳಿರಾ! ಈ ಪ್ರಕಾರದಿಂ ಸದಾನಂದನೆಂಬ ಋಷಿಯು ಪಾಪಪರಿಹಾರಕವಾದ ಪುಣ್ಯ ಕಥೆಯಂ ಹೇಳಿ ತೂಷ್ಣೀಂಭಾವದಿಂದಿರೆ, ಬಳಿಕ ತಾಪಸನಾದ ಅತ್ರಿಮಹಾಮುನಿಯು ಮರಳಿ ಒಂದು ಶಿವಕಥೆಯಂ ಹೇಳ್ದನ ದೆಂತೆನೆ. ಪೂರ್ವಕಾಲದಲ್ಲಿ ಜ್ಯೋತಿಷ್ಮತೀಪುರವೆಂಬ ಪಟ್ಟಣದಲ್ಲಿ ಸರ್ವ ಚಿತ್ತನೆಂಬ ರಾಯನಿರ್ದನು. ಆತಂಗೆ ನೂರೊಂದು ಕುಮಾರರು ಜನಿಸಿದರು. ಅವರೊಳಗೆ ನೂರು ಮಂದಿ ಕುಮಾರರು ಪಾಪಕರ್ಮವನ್ನೇ ಮಾಡುತಿರ್ದರು. ಓರ್ವ ಕುಮಾರನು ಸರ್ವಧರ್ಮ ಪರಾಯಣನಾಗಿರುರ್ದನು. ಆ ನೂರು ಮಂದಿ ಕುಮಾರರು ಚೌರ್ಯವಂ ಮಾಡಿ ಅನೇಕರಂ ಸಂಹರಿಸುತ ಕ್ರೂರಕರ್ಮಿಗಳಾಗಿ ಪರಹಿಂಸಕರಾಗಿ, ನಿತ್ಯದಲ್ಲಿಯು ಮದ್ಯಪಾನ ನಿರತರಾಗಿ ಪರಸ್ತ್ರೀಸಂಗಂಗಳಂ ಪರ ವಂಚನೆಗಳಂ ಮಾಡುತಿರ್ದರು. ಬಳಿಕ ಇಂದ್ರಾದಿದೇವತೆಗಳು ಈ ರಾಜ ಕುಮಾರರಂ ನೋಡಿ ಮಹಾ ಕೋಪವುಳ್ಳವರಾಗಿ? ಇವರಂ ಭಕ್ಷಿಸಲು ಒಬ್ಬ ಮಹಾ ರಾಕ್ಷಸನಂ ಸೃಜಿಸಿ ಕಳುಹಿಸೆ ಆ ರಾಕ್ಷಸನು ಬಂದು ಅವರಂ ನೋಡಿ

ಬಹು ಜುಗುಪ್ಸೆಯುಳ್ಳವನಾಗಿ ವೇಗದಿಂ ಪೋಗಿ ಆವರ ಪಾದಂಗಳಂ ಪಿಡಿದೆತ್ತಿ ಚಕ್ರಾಕಾರವಾಗಿ ಗರ್ರನೆ ಸುತ್ತಿಸಿ, ದಕ್ಷಿಣ ಸಮುದ್ರದೊಳು ಕೊಂಡೊಯ್ದನು. ಬಳಿಕ ಆ ರಾಜಕುಮಾರರು ಕಾಶೀಕ್ಷೇತ್ರ ಸದೃಶಮಾದ ಕೇತಾರದಲ್ಲಿಯುಂ, ದರ್ಶನಮಾತ್ರದಿಂ ಮುಕ್ತಿಯನ್ನೀಯುವ ಶ್ರೀಪರ್ವತದಲ್ಲಿಯು, ಶಿವಲೋಕವ ನ್ನುಂಟುಮಾಡುವ ದಕ್ಷಿಣ ಕೈಲಾಸದಲ್ಲಿಯುಂ, ಸುಕರಮಾದ ವೃದ್ಧಾಚಲ ದಲ್ಲಿಯುಂ, ಪರಮಾನಂದ ನಿರ್ಭರನಾದ ಶಂಭುವಿನಿಂ ಸದಾವಾಸ ಮಾಡಲ್ಪಟ್ಟ ಚಿದಂಬರವೆಂಬ ಮಹಾ ಕ್ಷೇತ್ರದಲ್ಲಿಯುಂ, ಮಹಾ ಪುಣ್ಯಪ್ರದಮಾದ ಮಧ್ಯಾ ರ್ಜುನದಲ್ಲಿಯುಂ, ಶಿವಪ್ರಿಯವಾದ ಕುಂಭಕೋಣದಲ್ಲಿಯುಂ, ಹೀಗೆ ಅನೇಕ ಪುಣ್ಯಕ್ಷೇತ್ರಂಗಳಲ್ಲಿ ಬಿದ್ದು ಅಲ್ಲಲ್ಲಿ ಮೃತರಾದರು. ಎಲೈ ಮುನಿಯೆ ! ಈ ರಾಜಕುಮಾರರು ಬೇರೆ ಬೇರೆ ಪುಣ್ಯಕ್ಷೇತ್ರದಲ್ಲಿ ಯಾವ ಕಾರಣದಿಂ ಬಿದ್ದು ಮೃತರಾದರೋ, ಆ ಪುಣ್ಯಪ್ರಭಾವದಿಂದವರು ಶಿವಾಜ್ಞೆಯಿಂ ದಿವ್ಯ ವಿಮಾನವ ನ್ನೇರಿ, ಅತ್ಯಂತ ಪ್ರೀತಿಯಿಂ ಕೈಲಾಸವನ್ನೈದಿದರೆಂದು. ಸತ್ಯಲೋಕದಲ್ಲಿ ರುವ ಋಷಿಗಳು ನನಗೆ ಪೇಳ್ದರೆಂದು ಅತ್ರಿಮಹಾಮುನಿಯು ನುಡಿದನು. ಎಲೈ ಋಷಿಗಳಿರಾ! ಶಂಭು ಸಂಬಂಧಿಗಳಾದ ಮಹಾತ್ಮರು ಬಹು ಪರಾಕ್ರಮಶಾಲಿ ಗಳು ಅಲ್ಲಿರ್ದರು. ಅವರುಗಳು ಅನೇಕ ಪುಣ್ಯಕಥೆಗಳಂ ಪೇಳಿದರು. ಎಂದು ಈ ವೃತ್ತಾಂತಮಂ ಸೂತ ಪೌರಾಣಿಕನು ಶೌನಕಾದಿ ಮುನಿಗಳಿಗೆ ಪೇಳಿ ಮುತ್ತಿಂತೆಂದನು.

ಚೋರನಿಗೆ ಪ್ರಾಣದಾನ ಮಾಡಿದ ಕಥೆ.

ಸೌರಾಷ್ಟ್ರದೇಶದಲ್ಲಿ ಮನೋಹರವಾದ ಕನಕವೆಂಬ ಪುರವಿರ್ಪುದು, ಅಲ್ಲಿ ಮಹಾ ದುಷ್ಟನಾದ ಓರ್ವ ಚೋರನಿದ್ದನು. ಆ ಚೋರನು ಒಂದಾ ನೊಂದು ವೇಳೆಯಲ್ಲಿ ರಾಯನ ಪುರೋಹಿತನ ಮನೆಯಲ್ಲಿ ಬಹು ದ್ರವ್ಯವಂ ಚೌರ್ಯದಿಂ ತೆಗೆದುಕೊಂಡು ಪೊರಮಡೆ, ಆಗ ಓರ್ವ ಬ್ರಾಹ್ಮಣನಾತನಂ ಕಂಡೋಡಿ ಬಂದನು. ಆ ಸಮಯದಲ್ಲಿ ಗ್ರಾಮಪಾಲಕರು ವೇಗದಿಂ ಬಂದು ಆತನಂ ರಜ್ಜುವಿನಿಂ ಕಟ್ಟಿ ರಾಯನ ಸಮೀಪವನ್ನೈದಿಸೆ, ಮತಿಮಂತನಾದ ಆ ಧೊರೆಯು ಅತಿ ವಂಚಕನಾದ ಆ ಚೋರನಂ ನೋಡಿ, ಎಲೈ ಗ್ರಾಮಪಾಲಕ ರಿರಾ! ನಗರದ ಪೊರವಳಯದಲ್ಲಿರ್ಪ ಸರೋವರದಲ್ಲಿ ಆಶ್ರಯವಂ ಮಾಡಿ ಕೊಂಡಿರುವ ಮೊಸಳೆಗೀತನಂ ಕೊಡಿರೆಂದಾಜ್ಞಾಪಿಸಿದನು. ಬಳಿಕ ಆ ಗ್ರಾಮ ಪಾಲಕರು ರಾಜಾಜ್ಞೆಯಂತೆ ಮಾಡಲಾಗಿ, ಮಸಳೆಯು ಆತನಂ ಪಿಡಿದು ತಿನ್ನದೆ ತೀರವಂ ಸೇರಿಸಿತು. ಅಲ್ಲಿರ್ಪ ಜನರು ದಂ ಕಂಡು ಪರಮಾಶ್ಚರ್ಯಯುಕ್ತರಾಗಿ ರಾಯಂಗೆ ಬಿನ್ನಪಂಗೈದರು. ಅನಂತರದಲ್ಲಿ ರಾಯನು ಬಹು ಕೋಪವುಳ್ಳವ

ನಾಗಿ ಆಯುಧಂಗಳಿಂದ ಸಂಹರಿಸೆಂದು ಪೇಳ್ದು ಭಟರಂ ಕಳುಹೆ, ಅವರುಗಳು ಹಾಗೆಯೇ ಮಾಡುವದಕ್ಕೆ ಆಯುಧಪಾಣಿಗಳಾಗಿ ಬಂದು ತಾವು ಶ್ರಮವನ್ನೈದಲು, ರಾಜನು ಆಶ್ಚರ್ಯಯುಕ್ತನಾಗಿ ತಾನೆ ಬಂದು ಅವನ ಕೈಯಲ್ಲಿ ಔಷಧವಿರುವದೆಂದು ಯೋಚಿಸಿ, ಆ ಚೋರನ ಪಾದಾದಿ ಮಸ್ತಕಾಂತವನ್ನೆಲ್ಲ ಪರಿಶೋಧಿಸಿ, ಏನನ್ನೂ ಕಾಣದೆ ಮನದಿಂ ವಿಚಾರಿಸಿ ಆಶ್ಚರ್ಯಯುಕ್ತನಾಗಿ, ಆತನೊಡನೆ ತನ್ನ ಮಂದಿರವಂ ಪ್ರವೇಶಿಸಿ, ಸುಂದರವತಿಯೆಂಬ ತನ್ನ ಪತ್ನಿಯ ಹಸ್ತದ ಮೇಲೆ ಕುಳಿತಿರುವ ಶುಕದ ಮುಂದೆ ಕುಳ್ಳಿರಿಸಿ ತ್ರಿಕಾಲಜ್ಞಾನಿಯಾದ ಆ ಶುಕವಂ ಕುರಿತು ಇಂತೆಂದನು. ಎಲೈ ಶುಕವೆ! ನನ್ನ ಸ್ತ್ರೀಯು ಶೀಲವಂ ನೋಡಿ, ಶಚೀದೇವಿಯು ಸಂತುಷ್ಟೆಯಾಗಿ ನಿನ್ನನ್ನು ಕೊಟ್ಟಳು. ನೀನು ಭೂತಭವಿಷ್ಯದ್ವರ್ತಮಾನ ಕಾಲಂಗಳನ್ನು ತಿಳಿದಿರುವಿ, ಆದಕಾರಣದಿಂ ನಾನೊಂದು ಪ್ರಶ್ನೆಯಂ ಮಾಡುತ್ತೇನೆ. ಈ ಚೋರನು ಅನೇಕ ಪಾಪಕರ್ಮಗಳನ್ನು ಮಾಡಿದುದರಿಂದ ಬಹುವಾಗಿ ನನ್ನಿಂದ ಶಿಕ್ಷಿಸಲ್ಪಟ್ಟನು. ಆದರೂ ನನ್ನ ದಂಡನೆಯು ಈತನಲ್ಲಿ ವ್ಯರ್ಥವಾದುದು, ಎಂತೆಂದರೆ, ಪ್ರಥಮತಃ ಮೊಸಳೆಯ ಬಾಯಿಗೆ ಕೊಡಲ್ಪಟ್ಟನು. ಆದೊಡಂ ಅದು ಈತನಂ ಮುಟ್ಟದೆ ಕಡೆಗೆ ಸೇರಿಸಿತು. ಬಳಿಕ ಶಸ್ತ್ರಾಸ್ತ್ರಧಾರಿಗಳಾದ ಭಟರಿಂದ ಶಿಕ್ಷಿಸಲ್ವಿಧಿಸೆ ಅವರುಗಳೇ ಬಳಲಿ ಬಿದ್ದರು. ಅವರ ಅಸ್ತ್ರಂಗಳೆಲ್ಲವು ಪುಡಿಪುಡಿಯಾದವು. ಇದೇನು ಕಾರಣವೆಂದು ಆಶ್ಚರ್ಯಪಡುತಲಿದೇನೆ. ಇದಂ ನೀನು ಪೇಳಬೇಕೆಂದು ನುಡಿಯೆ, ಶುಕ ವಿವರಿ ಪೇಳ್ದುದು.

ಚೋರನ ಪೂರ್ವ ವೃತ್ತಾಂತವು.

ಎಲೈ ಮಹಾರಾಜನೆ! ನೀ ಕೇಳಿದ ವೃತ್ತಾಂತವಂ ಪೇಳ್ವೆನು ಸಾವಧಾನದಿಂ ಕೇಳುವನಾಗು, ಈ ಚೋರನು ರಮ್ಯವಾದ ಕುಶಪುರದಲ್ಲಿ ವಿಷ್ಕಂಭನೆಂಬ ವರ್ತಕನ ಪುತ್ರನಾಗಿ ಚಿತ್ರಭಾನುವೆಂಬ ಪೆಸರುಳ್ಳವನಾಗಿಧಾನೆ. ಈತನು ವೇಶ್ಯಾಸ್ತ್ರೀಲಂಪಟನಾಗಿ ಸಮಸ್ತ ದ್ರವ್ಯವಂ ಆಕೆಗೆ ಕೊಟ್ಟು ನಿರ್ಧನನಾಗಿ, ಚೌರ್ಯದಲ್ಲಿ ಮನಮನಿಟ್ಟು ಆ ಅಗ್ರಹಾರದಲ್ಲಿ ಬಹು ಗೃಹಂಗಳಂ ಸುಟ್ಟು ಅನೇಕ ದ್ರವ್ಯಂಗಳಂ ಕದ್ದುಕೊಂಡು ನಗರದಲ್ಲಿ ವಿಷಯವಂ ಮಾಡಿ, ಆವಾಗಲು ಮನ್ಮಥ ಪರಿಪೀಡಿತನಾಗಿ ಆ ವೇಶ್ಯೆಗೆ ಧನವಂ ಕೊಡುತ್ತಾ ಕ್ರೀಡಿಸಿಕೊಂಡಿರುವನು. ಆಗ ಅನೇಕ ಬ್ರಾಹ್ಮಣರು ಸ್ತ್ರೀಯರು ಮೃತರಾದರು, ಮತ್ತಮೀ ಪಾಪಿಯು ಒಂದು ದಿವಸ ಭುಜಂಗೆ ಪುರವಂ ಸುಟ್ಟು ಅನೇಕ ಗೋವುಗಳಂ ಚೌರ್ಯದಿಂ ಸಂಪಾದಿಸಿ ಅಟ್ಟಿಕೊಂಡು ಬರುತಿರಲು, ಅವುಗಳೊಳಗೊಂದು ಗೋವಿಗೆ ಕಾಲೊಳು ದಶಿ ನೆಟ್ಟಿಕ್ಕೊಂಡು ಅಚಲೇಶ್ವರನ ಆಲಯದ ಸಮೀಪದಲ್ಲಿ

ಬಿದ್ದುದು. ಬಳಿಕೀ ಚೋರನು ಆ ಗೋವಂ ಕಂಡು ಶಿವಾರ್ಪಣವಾಗಲೆಂದು ಪೇಳ್ದು ಅದನಲ್ಲಿಯೇ ಬಿಟ್ಟು, ಉಳಿದ ಗೋವುಗಳಂ ತಂದು ವಿಕ್ರಯವಂ ಮಾಡಿ ಆ ಧನವಂ ವೇಶ್ಯಾಸ್ತ್ರೀಗಿತ್ತು ಆಕೆಯೊಡನೆ ರಮಿಸಿಕೊಂಡಿರ್ದು, ಮತ್ತೊಂದು ದಿವಸದಲ್ಲಿ ನಿನ್ನ ಪುರೋಹಿತನ ಗೃಹದಲ್ಲಿ ಚೌರ್ಯವಂ ಮಾಡಿ ಧನವನೆತ್ತಿಕೊಂಡು ಪೋಗುತ್ತಿರಲು ಗ್ರಾಮಪಾಲಕರು ಹಿಡಿತಂದರು. ಎಲೈ ರಾಯನೆ! ಈ ರೀತಿಯಾಗಿ ಗೋವಂ ಶಿವಾರ್ಪಣವಾಗಿ ಕೊಟ್ಟು ಪುಣ್ಯಪುರುಷನಾದನು. ಮತ್ತಾಪುಲ್ಲಿರ್ದ ಜನರು ಈತನಿಂದ ಕೊಡಲ್ಪಟ್ಟ ಗೋವಿನ ಪಾದದಲ್ಲಿರ್ಪ ದಶಿಯಂ ತೆಗದು ಚನ್ನಾಗಿ ಪೋಷಿಸಿದ ಬಳಿಕ ಆ ಗೋವಿಗೆ ತ್ರಿಶೂಲಾಂಕವಂ ಮಾಡಿ ಬಿಟ್ಟರು. ಈಗಲು ಆ ಗೋವಿನ ಕ್ಷೀರವು ಶಿವಂಗೆ ಅಭಿಷೇಕವಾಗುತಲಿರುವದು. ಆ ಪುಣ್ಯಪ್ರಭಾವದಿಂ ಈತನಲ್ಲಿ ನೀನು ಮಾಡಿದ ದಂಡನೆಯು ವ್ಯರ್ಥವಾಗಿ ಪೋದುದು. ಎಲೆ ಮಹಾರಾಯನೆ! ಪುಣ್ಯವೆಂಬದು ದೊಡ್ಡದು. ಅದುಕಾರಣದಿಂ ನೀನು ಈ ಮಹಾಪುರುಷನಂ ಪರಿಪೂಜಿಸು, ಶಿವಪುಣ್ಯಮಾಡಿದವರ್ಗೆ ಸರ್ವ ರಾಕ್ಷಸ ಪಿಶಾಚಾದಿಗಳ ಬಾಧೆಯಿಲ್ಲವು, ಮತ್ತಂ ಈತನು ಇಹದಲ್ಲಿ ಅನೇಕ ಭೋಗಂಗಳನನುಭವಿಸಿ, ಅಂತ್ಯದಲ್ಲಿ ನಿರಾಮಯವಾದ ಶಿವಲೋಕಕ್ಕೆ ಪೋಗಿ, ಅಲ್ಲಿ ಈ ಗೋವಿನ ರೋಮಂಗಳೊಂದೊಂದಕ್ಕೆ ಬ್ರಹ್ಮನ ಸಹಸ್ರ ಕಲ್ಪಂಗಳಿದ್ದು ತುದಿಯಲ್ಲಿ ಶಿವಸಾಯುಜ್ಯವ ನೈದುವನೆಂದು ಶುಕಂ ಪೇಳ್ದುದು. ಬಳಿಕ ಆ ರಾಯನು ಈ ವಾಕ್ಯವಂ ಕೇಳಿ ಆಶ್ಚರ್ಯಯುಕ್ತನಾಗಿ, ಆ ಚೋರನಂ ತನ್ನ ಸಿಂಹಾಸನದಮೇಲೆ ಕುಳ್ಳಿರಿಸಿ ಬಹು ದ್ರವ್ಯವನಿತ್ತು ವಿವಾಹವಂ ಮಾಡಿಸಿ ಗೃಹಾರಾಮ ಕ್ಷೇತ್ರಾದಿಗಳಂ ಕೊಟ್ಟು ಮರಳಿ ಬಂದು ಶುಕವಂ ನೋಡುತಿರಲು ಮತ್ತೊಂದು ಪುಣ್ಯಕಥೆಯಂ ಪೇಳ್ದುದು.

ಚೌರ್ಯಜೀವಿಯಾದ ಕಪಿಲದ್ವಿಜನ ಕಥೆ.

ಎಲೈ ನೃಪನೆ! ಪೂರ್ವಕಾಲದಲ್ಲಿ ಆವಾಗಲು ರಮ್ಯವಾದ ವಿಷ್ಣು ಲೋಕದಲ್ಲಿ ಲಕ್ಷ್ಮೀದೇವಿಯು ಕರವನಾಶ್ರೈಯಿಸಿಕೊಂಡಿದ್ದೆನು. ಆಗ ಇಂದ್ರಾಣಿಯು ಮಹಾಲಕ್ಷ್ಮಿಯಂ ಪೂಜಿಸಿ ನನ್ನಂ ತೆಗದುಕೊಂಡಳು. ಆ ಸಮಯದಲ್ಲಿ ವಿಷ್ಣುವು ತನ್ನ ಲೋಕವನ್ನು ಅಲಂಕಾರವಂ ಮಾಡಲು ಭಟರಿಗಾಜ್ಞಾಪಿಸೆ, ಮಹಾಲಕ್ಷ್ಮಿಯು ಈ ವಾಕ್ಯವಂ ಕೇಳಿ, ಎಲೈ ವಿಷ್ಣುವೆ! ಏನುಕಾರಣ ಈ ಲೋಕವಲಂಕರಿಸಲ್ಪಡುವದು? ಎಂದು ಕೇಳಲಾಗಿ ನಾರಾಯಣನಿಂತೆಂದನು. ಎಲೆ ಮಹಾಲಕ್ಷ್ಮಿಯೆ! ಸುಪಾರ್ಶ್ವದೇಶದಲ್ಲಿ ಶಾರ್ವರಿಯೆಂಬ ಪುರವಿರ್ಪುದು. ಆ ಪಟ್ಟಣದಲ್ಲಿ ಕಪಿಲನೆಂಬ ದ್ವಿಜಾಧಮನು ಯಾವಾಗಲು ಚೋರಭಾವದಿಂ ಜೀವಿಸಿಕೊಂಡಿರ್ಪನು. ಆತನು ಒಂದಾನೊಂದು ಸಮಯದಲ್ಲಿ ಮತ್ತೋರ್ವನ

ಗೋವಂ ಕದ್ದು ತನ್ನ ಗೃಹದಲ್ಲಿ ಕಟ್ಟಿಕೊಂಡು ಆ ಕ್ಷೀರವಂ ಪಾನಮಾಡುತ ಲಿದ್ದನು. ಆ ಗೋವಿನ ಯಜಮಾನನದಂ ಕೇಳಿ ಈತನ ಬಳಿಗೆ ಬರುತಿರಲು, ಆ ಬರವಂ ಕೇಳಿ ಚೋರನು ಆ ಗೋವಂ ಪರಗ್ರಾಮಕ್ಕೆ ಸಾಗಿಸಿ, ಒಂದು ದಿವಸ ಅಲ್ಲಿರ್ದು ಮರುದಿವಸ ಬರುತಿರೆ, ಆತನು ಮಾರ್ಗದಲ್ಲಿಯೆ ಗೋವಂ ಕಂಡು ಪಿಡಿದುಕೊಂಡು ರಾಯನ ಸಮೀಪವನ್ನೈದಿಸಿದನು. ಆಗ ರಾಯನು ಬ್ರಾಹ್ಮಣನ ಕಣ್ಣುಗಳಂ ಕೀಳಿಸೆ, ಆ ವೇದನೆಯಿಂದಾತನು ಮೃತನಾದನು. ತತ್ಕ್ಷಣದಲ್ಲಿಯೆ ಶಿವಗಣಂಗಳು ಬಂದು ದಿವ್ಯ ವಿಮಾನವನೇರಿಸಿಕೊಂಡು ಈ ಲೋಕದ ಮೇಲೆ ಬರುತಲಿಹಾರೆ, ಅದುಕಾರಣದಿಂ ಈ ಲೋಕವನು ಅಲಂಕಾರವಂ ಮಾಡ ಹೇಳಿದೆನು. ಅವಾಗಲು ಪಾಪತತ್ಪರನಾದ ಆತನ ಪುಣ್ಯವಾವುದೆಂದರೆ, ಈ ಚೋರನು ಆ ಯಜಮಾನನ ಭೀತಿಯಿಂದ ಈ ಗೋವಂ ಪರಗ್ರಾಮಕ್ಕೆ ಕೊಂಡು ಪೋಗಿ, ಶುದ್ಧಾತ್ಮನಾಗಿ ಶಿವಭಕ್ತನಾದ ಓರ್ವ ಗೃಹಸ್ತನ ಮಂದಿರದಲ್ಲಿ ಬಿಡೆ, ಆ ಶಿವಭಕ್ತನು ಈತನಾಜ್ಞೆಯಿಂ ಗೋಕ್ಷೀರವಂ ಪಾನಮಾಡಿದನು. ಈ ಪುಣ್ಯದಿಂದ ಪಾಪವಿಮುಕ್ತನಾಗಿ ಶಿವಲೋಕವನ್ನೈದುತ್ತಿರುವನು, ಎಂದು ವಿಷ್ಣುವು ನಿರೂಪಿಸೆ, ಮಹಾಲಕ್ಷ್ಮಿಯು ಅತಿ ಸಂತುಷ್ಟೆಯಾದಳೆಂದು ಗಿಣಿ ನುಡಿದುದು. ಬಳಿಕ ಆ ರಾಯನು ಅತ್ಯಂತ ಪ್ರೀತಿಯಿಂದ ಅನೇಕ ಶಿವಧರ್ಮಂಗಳಂ ಮಾಡಿ ಶಿವಲೋಕವನ್ನೈದಿದನೆಂದು ಸೂತಂ ಪೇಳ್ದು ಮತ್ತಿಂತೆಂದನು.

ಅತಿರಥನ ಕಥೆ.

ಎಲೈ ಮುನಿಗಳಿರಾ! ಮತ್ಸ್ಯದೇಶದಲ್ಲಿ ಸುಮತಿಯೆಂಬೋರ್ವ ರಾಯನಿರ್ದನು. ಆತಂಗೆ ಅತಿರಥನೆಂಬ ಕುಮಾರನು ಜನಿಸಿ, ಪಂಚಮ ವರ್ಷದಲ್ಲಿಯೇ ಕೇಕಯದೇಶದ ರಾಯನ ಪುತ್ರಿಯಂ ಪಾಣಿಗ್ರಹಣಮಂ ಮಾಡಿಕೊಂಡು, ತನಗೆ ಸಮಾನರಾದ ಬಾಲಕರೊಡನೆ ಧೂಳುಗಳಲ್ಲಿ ಆಡುತಿರೆ, ಆತಂಗೆ ಜಾತಿಸ್ಮರಣೆಯುಂಟಾದುದು. ಬಳಿಕ ಆ ರಾಜಪುತ್ರನು ತನ್ನ ಪಿತೃವಿನ ಸಮೀಪಕ್ಕೆ ಬಂದು ನಮಸ್ಕಾರವಂ ಮಾಡಿ, ಶಿವದರ್ಶನಕ್ಕಾತನಿಂ ಅಪ್ಪಣೆಯಂ ಪಡದು ಹರೇಶ್ವರನೆಂಬ ಶಿವನ ದೇವಾಲಯಕ್ಕೆ ಗಮಿಸಿ, ವಿಧಿಯಿಂದಾಸ್ವಾಮಿಗೆ ನಮಸ್ಕಾರವಂ ಗೈದು, ಆ ದೇವಾಲಯಾಧಿಪತಿಯಾದ ಧರ್ಮಿಯೆಂಬ ದ್ವಿಜನಂ ಕಂಡು ಪ್ರಣಾಮವನಾಚರಿಸಿ, ಎಲೈ ದ್ವಿಜನೆ! ನನ್ನಂ ಬಲ್ಲೆಯಾ? ಎನಲಾಗಿ, ಆ ಬ್ರಾಹ್ಮಣನು ನೀನು ರಾಜಪುತ್ರನೆಂಬುದಂ ಬಲ್ಲೆನೆಂದನು. ಬಳಿಕ ರಾಜಕುಮಾರನದಂ ಕೇಳಿ, ಎಲೈ ಈ ಜನ್ಮದಲ್ಲಿ ನನ್ನನ್ನು ಎಲ್ಲರು ರಾಜಪುತ್ರನೆಂಬುದಂ ಬಲ್ಲರು, ಪೂರ್ವಜನ್ಮದಲ್ಲಿ ನಾನ್ಯಾರು? ಎಂಬುದನ್ನು ಅರಿಯೆಯ ಎನಲಾಗಿ, ದ್ವಿಜನು ಆತನ ವಾಕ್ಯವಂ ಕೇಳಿ ಈಶ್ವರ ನೋರ್ವನಿಂದಲ್ಲದೆ ಮತ್ತಾರಿಂದಲು

ಪೂರ್ವಜನ್ಮದ ವೃತ್ತಾಂತವು ತಿಳಿಯಲೆಂಗಡೆಂದು ನುಡಿದನು. ಆಗ ರಾಜ ಕುಮಾರನು ನಕ್ಕಂಥವನಾಗಿ, ಎಲೈ ದ್ವಿಜನೆ! ನನ್ನ ಪೂರ್ವಜನ್ಮದ ವೃತ್ತಾಂತ ವಂ ಪೇಳುತಲಿದೇನೆ ಕೇಳು,

ವಿಕ್ರಮ ಬ್ರಾಹ್ಮಣನ ಕಥೆ.

ನಾನು ಗೌಡದೇಶದಲ್ಲಿ ವಿಕ್ರಮನೆಂಬ ಬ್ರಾಹ್ಮಣನು, ನನಗೆ ಬಾಲ್ಯ ದಲ್ಲಿಯೆ ಮಾತಾಪಿತೃಗಳು ಮೃತರಾದರು. ಬಳಿಕ ಓರ್ವಳಾದ ಶೂದ್ರ ಸ್ತ್ರೀಯು ಸಂರಕ್ಷಿಸಿದಳು. ಕೆಲವು ಕಾಲದ ಮೇಲೆ ಆಕೆಯು ಮೃತಪಟ್ಟಳು. ತದನಂತರ ದಲ್ಲಿ ಆ ಪುರದಲ್ಲಿಯೆ ಚಂಡಾಲರೊಡನೆ ಕೂಡಿಕೊಂಡು ಮದ್ಯಮಾಂಸ ವಿಕ್ರಯ ವಂ ಮಾಡಿಕೊಂಡಿದ್ದೆನು. ಆ ಸಮಯದಲ್ಲಿ ನೀನು ದೇವದೇವನಾದ ಶಂಕರಂಗೆ ತಾಂಬೂಲವಂ ಕೊಡಲು ಬರೆ, ಒಂದಾನೊಂದು ಮದಗಜವು ಬಂದುದು. ಅಲ್ಲಿರ್ಪ ಜನರೆಲ್ಲರು ಆ ಮದಗಜವಂ ಕಂಡು ಓಡಿದರು. ಆ ಸಂದಣಿಯಲ್ಲಿ ನಿನ್ನ ಕೈಯಲ್ಲಿದ್ದ ಕಾಸು ಬಿದ್ದುಪೋಗಲು ಅದಂ ಕಾಣದೆ ಅತಿವ್ಯಾಕುಲನಾಗಿರೆ, ಆ ಸಮಯದಲ್ಲಿ ನಾನು ಮದ್ಯಮಾಂಸಂಗಳಂ ಮಾರಿ ಅನೇಕ ರೊಕ್ಕಗಳಂ ಕೊಂಡು ಬರುತಿರ್ದೆನು. ಆಗ ನೀನು ನನ್ನದೊಂದು ಕಾಸಂ ಕೇಳಿದೆ, ನನಗೆ ಮುಂದಣ ಜನ್ಮದಲ್ಲಿ ರಾಜತ್ವವುಂಟಾದರೆ ನಿನಗೊಂದು ಕಾಸಂ ಕೊಟ್ಟೇನೆಂದು ಪೇಳು ತ್ತಿರಲು, ನನ್ನ ಸ್ತ್ರೀಯು ಎಲೆ ಬ್ರಾಹ್ಮಣನೆ! ನನ್ನ ಪತಿಯು ರಾಯನಾದೊಡೆ ನಾನು ರಾಜಪತ್ನಿಯಾಪೇನೆಂದಳು. ಆಗ ನೀನು ಈ ವಾಕ್ಯವಂ ಕೇಳಿ ಹಾಗೆಯೇ ಆಗಲೆಂದಂಗೀಕರಿಸಿದ ಬಳಿಕ, ನಾನೊಂದು ಕಾಸಂ ಕೊಟ್ಟು ಚಂಡಾಲಬೀದಿಗೆ ಪೋದೆನು. ಆ ಸಮಯದಲ್ಲಿ ಒಂದು ಪಿಶಾಚಿಯು ಬಂದಾ ವರಿಸಿ ನಮ್ಮಿರ್ವರಂ ಸಂಹರಿಸಿತು. ಒಂದು ಕಾಸಿನಿಂದ ನೀನು ಸಂತುಷ್ಟ ನಾದಕಾರಣ ಮತ್ಸ್ಯದೇಶಕ್ಕೆ ರಾಯನಾದೆನು. ನನ್ನ ಸತಿಯು ಕೇಕಯರಾಯಂಗೆ ಪುತ್ರಿಯಾಗಿ ನನ್ನನ್ನೆ ಪತಿಯಾಗ್ಯೈದಿದಳು, ಎಲೈ ಯೋಗೀಂದ್ರನೆ, ನನ್ನ ಪೂರ್ವ ಜನ್ಮದ ವೃತ್ತಾಂತವು ಪೇಳಲ್ಪಟ್ಟಿತು. ಈಗಲು ಶಿವಪೂಜೆಗೆ ಏನೇನು ದ್ರವ್ಯವು ಬೇಕಾಗಿರುವದೋ, ಆ ದ್ರವ್ಯಂಗಳಂ ತೆಗದುಕ್ಕೊಂಡು ನನ್ನಂ ಕೃತಾರ್ಥನಂ ಮಾಡಬೇಕೆಂದು ಕೇಳಿ ಸ್ತ್ರೀಸಮೇತನಾಗಿ ಆ ದ್ವಿಜಂಗೆ ನಮಸ್ಕಾರವಂ ಮಾಡಿ, ಬಹು ದ್ರವ್ಯವನಿತ್ತು ಆತನ ಅನುಮತದಿಂದ ಗೃಹಕ್ಕೆ ಪೋಗಿ ಮಾತಾಪಿತೃಗಳಿಗೀ ವೃತ್ತಾಂತವಂ ಪೇಳಲಾಗಿ, ಅವರುಗಳಿದಂ ಕೇಳಿ ಪುತ್ರನ ಮುಖವಂ ನೋಡುತ್ತ ಆಶ್ಚರ್ಯಪಟ್ಟರು. ಎಲೈ ಋಷಿಗಳಿರಾ! ಬಳಿಕ ಮಹಾ ಕೀರ್ತಿಶಾಲಿಯಾದ ಆ ರಾಜಪುತ್ರನು ಕಾಲದಲ್ಲಿ ಅನೇಕ ಪುತ್ರರಂ ಪಡದು, ಸಾವಧಾನದಿಂ ಬಹು ಶಿವ ಪುಣ್ಯಗಳಂ ಮಾಡಿ ನಿಷ್ಕಂಟಕವಾಗಿ ದೇಶವನಾಳಿ, ಸ್ವರ್ಣಮಾಲಿಕೆಯೊಡನೆ

ಚಿಂತಾಮಣಿಯೆಂಬ ರತ್ನವಂ ಸಹ ಆ ಬ್ರಾಹ್ಮಣಂಗಿತ್ತು, ಆತನನುಜ್ಞೆಯಿಂದ ಇಹಲೋಕದಲ್ಲಿ ಅನೇಕ ಭೋಗಂಗಳನನುಭವಿಸಿ, ಪಂಡಿತರಾದ ತನ್ನ ಪುತ್ರರಿಗೆ ರಾಜ್ಯವಂ ಕೊಟ್ಟು, ಸ್ತ್ರೀಸಮೇತನಾಗಿ ದಿವ್ಯವಿಮಾನವನೇರಿ ಶಿವಲೋಕಕ್ಕೆ ಪೋಗಿ ಕೆಲಕಾಲ ಭೋಗಂಗಳನನುಭವಿಸುತಿರ್ದು ಬಳಿಕ ಶಿವಸಾಯುಜ್ಯವ ನೈದಿದನೆಂದು ಸೂತಂ ಶೌನಕಾದಿ ಮುನಿಗಳಿಗೆ ನಿರೂಪಿಸಿದನೆಂಬಲ್ಲಿಗೆ,
ಶಿವರಹಸ್ಯೋಪದೇಶಕಾಂಡದೋಳ್ ನಲವತ್ತಾರನೆಯ ಅಧ್ಯಾಯವು ಸಂಪೂರ್ಣಮಾದುದು.

ನಲವತ್ತೇಳನೆಯ ಅಧ್ಯಾಯವು.

ವಿಕರ್ತರಾಯನಿಗೆ ಶಿವಲೋಕಪ್ರಾಪ್ತಿಯ ಕಥೆ.

ಎಲೈ ಋಷಿಗಳಿರಾ! ಶ್ರವಣಮಾತ್ರದಿಂದಲೆ ಸರ್ವಾಭೀಷ್ಟವಂ ಕೊಡುವಂಥ ಮೋಕ್ಷಪ್ರದವಾದ ಮತ್ತೊಂದು ಕಥೆಯಂ ಪೇಳುವೆನು, ಸಾವಧಾನದಿಂ ಕೇಳಿರಿ, ಪೂರ್ವದಲ್ಲಿ ವೃಷಭನೆಂಬ ಮಹಾಮುನಿಯು ಸ್ವರ್ಗಲೋಕಕ್ಕೆ ಗಮಿಸೆ, ಇಂದ್ರಕುಮಾರನಾದ ಜಯಂತನು ಆ ಮಹರ್ಷಿಯಂ ಕಂಡು ಅರ್ಘ್ಯಾದಿಗಳಿಂದುಪಚರಿಸಿ ತಾನು ಬದ್ಧಾಂಜಲಿ ಪುಟನಾಗಿ ಪೀಠದಲ್ಲಿ ಕುಳ್ಳಿರಿಸೆ, ಆತನು ಎಲೈ ನಿನ್ನ ತಂದೆ ಎತ್ತ ಪೋದನೆಂದು ಕೇಳಿದನು. ಬಳಿಕ ಜಯಂತನು ಆ ವಾಕ್ಯವಂ ಕೇಳಿ, ಎಲೈ ಮಹಾಮುನಿಯೆ! ಶಿವಗಣಂಗಳು ವಿಕರ್ತನೆಂಬ ರಾಯನಂ ವಿಮಾನದಮೇಲೆ ಕುಳ್ಳಿರಿಸಿಕೊಂಡು ಶಿವಲೋಕಕ್ಕೆ ಪೋಗುತ್ತಿರುವರು, ಅವರ ದರ್ಶನವಂ ಮಾಡಲು ಪೋದನೆಂದು ಪೇಳುತ್ತಿರುವಾಗಲೆ ಇಂದ್ರನು ಬಂದು ಆ ಯೋಗೀಶ್ವರನಂ ನೋಡಿ ಎಲೈ ಋಷಿಯೆ! ನಾನು ವಿಕರ್ತನೆಂಬ ರಾಯನಂ ಶಿವಗಣಂಗಳು ಕೈಲಾಸಕ್ಕೆ ಕರದುಕೊಂಡು ಪೋಗುತ್ತಿರಲಾಗಿ ಅವರ ದರ್ಶನಾರ್ಥಮಾಗಿ ಪೋಗಿದ್ದೆನು, ಸಾಕ್ಷಾದೀಶ್ವರ ರೂಪರಾದ ನೀವು ಬಂದುದಂ ಕೇಳಿ ದರ್ಶನವಂ ಮಾಡಲು ಬಂದೆನೆಂದನು. ಅದಕ್ಕಾ ಮಹರ್ಷಿಯು ಎಲೈ ಇಂದ್ರನೇ ಆತನು ಏನು ಪುಣ್ಯವಂ ಮಾಡಿದನೆಂದು ಕೇಳಿದನು. ಬಳಿಕ ಇಂದ್ರನು ಎಲೈ ವೃಷಭಮುನಿಯೆ! ಕನಕುಬ್ಜರವೆಂಬ ದೇಶದೋಳ್ ವಿರಾಟಪುರದಲ್ಲಿ ಓರ್ವ ರಾಯನಿರ್ದನು. ಆತಂಗೆ ವಿಕರ್ತನೆಂಬ ರಾಯನು ಪುಟ್ಟಿದನು, ಆ ರಾಜಪುತ್ರನಿಗೆ ಮಂತ್ರಿಕುಮಾರನೊಂದಿಗೆ ಸ್ನೇಹಮುಂಟಾದುದು. ಅವರೀರ್ವರು ಪಿತೃವಾಕ್ಯವನುಲ್ಲಂಘಿಸಿ ಪಗಡೆಯನಾಡುತ ಅತಿ ಮತ್ತರಾಗಿ ಆ ನಗರವಂ ಬಿಟ್ಟು ಮತ್ತೊಂದು ಕಡೆಗೆ ಪೋಗಿ ಮಹಾ ದುರಾಚಾರಿಗಳಾದ ಚೋರರೊಡನೆ ಬೆರದು

ಚೌರ್ಯವಂ ಮಾಡಿ ಬಳಿಕ ಕಾಮಪುರಿಗೆ ಪೋಗಿ ಅನೇಕ ಪದಾರ್ಥಂಗಳಂ ತಂದು ಬಹುದೂರವನ್ನೈದಿ ನಿರ್ಜಲಸ್ಥಾನದಲ್ಲಿ ಹೊರೆಗಳನಿರಿಸಿ ಆ ಪೆಟ್ಟಿಗೆಯಂ ಶೋಧಿಸಲಾಗಿ, ಅದರಲ್ಲಿ ಬರೆಯದ ಒಂದು ಪುಸ್ತಕವಿತ್ತು ಅದನ್ನು ಎಂದಿನಂತೆ ಹೊರೆಯಂ ಕಟ್ಟಿ ಎತ್ತಿಕೊಳ್ಳೆ ಅತಿಭಾರವಾಗಿ ಎತ್ತಕೂಡದೆ ಪೋದುದು. ಆ ಸಮಯದಲ್ಲಿ ಮಾರ್ಗಸ್ಥನಾದೋರ್ವ ಬ್ರಾಹ್ಮಣನು ಬರಲಾಗಿ ಆತನಂ ನೋಡಿ, ಎಲೈ ದ್ವಿಜನೆ! ಹೊರೆಗಳನೆತ್ತುವನಾಗೆಂದು ನುಡಿಯೆ, ಆ ಬ್ರಾಹ್ಮಣನು ಹಾಗೆ ಆಗಲೆಂದು ಅವುಗಳನ್ನು ಎತ್ತುವ ಸಮಯದಲ್ಲಿ, ಎಲೈ ಪುರುಷರಿರಾ! ನಾನು ಅನ್ನವಿಲ್ಲದೆ ಬಹು ಕೃಶನಾಗಿಧೇನೆ, ಕ್ಷುದ್ಬಾಧಾ ಪರಿಹಾರವಾಗುವಂತೆ ತಂಡುಲವಂ ಕೊಡಬೇಕೆಂದನು. ಆಗ ಆ ರಾಜಕುಮಾರನು ಎಲೈ ದ್ವಿಜನೆ! ಈ ಭೂಮಿಯಲ್ಲಿರುವ ತಂಡುಲವಂ ಈ ಪುಸ್ತಕವಂ ತೆಗೆದುಕೊಂಡುಪೋಗೆಂದು ಪೇಳ್ದು, ತಾವು ಒಂದು ಪ್ರದೇಶಕ್ಕೆ ಪೋಗಿ ಒಬ್ಬ ಸ್ತ್ರೀಯೊಡನೆ ಇಬ್ಬರು ಕೆಲವು ದಿವಸಗಳು ಭೋಗಿಸಿಕೊಂಡಿರ್ದು ಆ ವೈಷಮ್ಯದಿಂದ ಅನ್ಯೋನ್ಯ ಶಸ್ತ್ರಘಾತದಿಂ ಈರ್ವರು ಮೃತರಾದರು. ಬಳಿಕ ಶಿವಭಕ್ತನಾದ ಈ ದ್ವಿಜನು ಆ ಅಕ್ಕಿಯನ್ನೆತ್ತಿ ಪುಸ್ತಕವನ್ನು ತೆಗೆದುಕೊಂಡು ಗೃಹಕ್ಕೆ ಪೋಗಿ ತಂಡುಲವನಡಿಗೆಯಂ ಮಾಡಿಸಿ ಚನ್ನಾಗಿ ಭುಂಜಿಸಿ ಆ ಪುಸ್ತಕದಲ್ಲಿ ಮಹತ್ತರವಾದ ಶಿವಪುರಾಣವಂ ಬರೆಯಿಸಿ ನಿತ್ಯದಲ್ಲಿಯು ಮಹಾತ್ಮರೊಡನೆ ಪಾರಾಯಣವಂ ಮಾಡುತಿರ್ದಾನೆ ಆ ಪುಣ್ಯದಿಂದ ಶಿವಗಣಂಗಳು ಬಂದು ದಿವ್ಯ ವಿಮಾನದಮೇಲೆ ಅವರೀರ್ವರಂ ಕುಳ್ಳಿರಿಸಿಕೊಂಡು ನಾಟ್ಯವಂ ಮಾಡುತಲಿರುವ ಅಪ್ಸರಾಂಗನೆಯರಿಂದಲು ಗಾನವಂ ಗೈಯುತಲಿರುವ ಕಿನ್ನರರಿಂದಲು ಸಮಸ್ತರಾದ ದೇವತೆಗಳಿಂದಲು ಒಡಗೂಡಿ ದೇವದುಂದುಭಿಗಳ್ಮೊರಸಿಕೊಳ್ಳುವಾಗ, ಸಮಸ್ತ ಋಷಿಗಳು ಕೈಯಂ ಮುಗಿದುಕೊಂಡು ಸ್ತುತಿಸುತ್ತಿರಲಾಗಿ ಶಿವಸನ್ನಿಧಿಗೆ ಕರದುಕೊಂಡು ಹೋದರು. ಆಗ ಶಿವಾಜ್ಞೆಯಿಂ ಅವರೀರ್ವರು ಶಿವ ಸನ್ನಿಧಿಯಲ್ಲಿರುತಿರ್ದರು. ಎಲೈ ಋಷಿಗಳಿರಾ! ಮತ್ತೊಂದು ಶಿವ ಪುಣ್ಯಕಥೆಯಂ ಪೇಳುತಿವೇನೆ ಸಾವಧಾನದಿಂ ಕೇಳುವರಾಗಿ.

ಅತಿಕಂಠರಾಯನ ಕಥೆ.

ಪೂರ್ವದಲ್ಲಿ ವಾಮದೇವಋಷಿಯು ಪರಮಾಕಾಶಮಧ್ಯದಲ್ಲಿರುವ ಶಿವಲೋಕಕ್ಕೆ ಪೋಗಿ ಸಾಂಬನಾಗಿ ಸಗಣನಾದ ಅವ್ಯಯನಾಗಿ ಮಹಾದೇವನಾದ ಪರಮೇಶ್ವರನಂ ಕಂಡು ನಮಸ್ಕಾರವಂ ಮಾಡಿ ಚನ್ನಾಗಿ ಪೂಜಿಸಿ, ಅಲ್ಲಿ ಅನೇಕ ಕಾಲವು ಪರಮಾನಂದಭರಿತನಾಗಿರ್ದು ಶಿವನಿಂದನುಜ್ಞೆಯಂ ತೆಗೆದುಕೊಂಡು "ಅಹಮನ್ನ ಮಹಮನ್ನಾ ಮಹಮಹಮನ್ನಾದೊಹಮನ್ನ" ಮಿತ್ಯಾದಿ ಉಪನಿಷದ್ವಾಕ್ಯಮಂ ಕೇಳುತ ಪೊರಮಟ್ಟು ಆ ಶಿವಲೋಕದಿಂದಿಳಿದು ಕ್ರಮವಾಗಿ

ಭೂಲೋಕಕ್ಕೆ ಬಂದು ಕುಟೀಜದೇಶದಲ್ಲಿರ್ಪ ಸೌಭಾಗ್ಯವೆಂಬ ಪುರಿಗೆ ಬಂದನು. ಆ ಪಟ್ಟಣದಲ್ಲಿ ಅತಿಕಂಠನೆಂಬ ದ್ವಿಜಬಾಲಕನು ರಾಜವೀಥಿಯಲ್ಲಿ ಆಡುತ್ತಿರುವಾಗ ಬಂದು ರುದ್ರಾಕ್ಷಿಯಂ ಕಂಡು ಶಿವಭಕ್ತನಾದ ಓರ್ವಂಗಿತ್ತನು. ಬಹು ಭೋಗಂಗಳನನುಭವಿಸಿದ ಬಳಿಕ ಅಂತ್ಯಕಾಲದಲ್ಲಿ ಶಿವಗಣಂಗಳು ಬಂದು ಆತನಂ ದಿವ್ಯವಿಮಾನದಲ್ಲಿ ಕುಳ್ಳಿರಿಸಿಕೊಂಡು ಶಿವಲೋಕಕ್ಕೆ ಪೋಗುತಿದ್ದಾಗಂದು ಬ್ರಹ್ಮಾದಿ ದೇವತೆಗಳು ಪೋಗಿ ಬಹುಮಾನವಂ ಮಾಡಿ ಕಳುಹಲಾಗಿ ಆತನಂ ಶಿವಲೋಕಕ್ಕೆ ಕೊಂಡೊಯ್ದು ಶಿವಸನ್ನಿಧಿಯಲ್ಲಿರಿಸಿದರೆಂದು ವಾಮದೇವ ಮುನಿಯು ಈ ವೃತ್ತಾಂತವಂ ಪೇಳಿದ್ದರಿಂದ ನಾನದನ್ನು ಪೇಳಿದೆನೆಂದು ವೃಷಭಯೋಗೀಂದ್ರನು ಇಂದ್ರಂಗೆ ಪೇಳಿದನೆಂದು ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ, ಉಪದೇಶಕಾಂಡದೊಳು ನಲವತ್ತೇಳನೆಯ ಅಧ್ಯಾಯವು ಸಮಾಪ್ತಮಾದುದು.

ನಲವತ್ತೆಂಟನೆಯ ಅಧ್ಯಾಯವು.

ಶಿವಪುರಾಣಶ್ರವಣಪಠನಾದಿಗಳ ಫಲಸ್ತುತಿವರ್ಣನೆ.

ಈ ರೀತಿಯಾಗಿ ಸೂತಮುನಿಯಿಂ ನಿರೂಪಿಸಲ್ಪಟ್ಟ ಶಿವಪುಣ್ಯಗಳಂ ಕೇಳಿ ಆ ಸೂತನಂ ಕುರಿತು, ಎಲೈ ಬುದ್ಧಿಶಾಲಿಯಾದ ಸೂತಮುನಿಯೆ! ನಿನ್ನಿಂದ ಶಿವಪುಣ್ಯಂಗಳಂ ಕೇಳಿ ಕೃತಾರ್ಥರಾದೆವು. ಈ ಕಥೆಗಳೊಡನೆ ಸೇರಿರುವ ಆಶ್ಚರ್ಯಂಗಳಂ ಪೇಳುತಲಿರುವ ಪುರಾಣಂಗಳಂ ಶ್ರದ್ಧೆಯಿಂದ ಆರು ಪಠಿಸುತಲಿರುವರೋ ಅವರಿಗೆ ಏನು ಫಲವುಂಟಾಗುವದೋ, ಅದಂ ನಮಗೆ ಪೇಳಬೇಕೆಂದು ಪ್ರಾರ್ಥಿಸಲಾಗಿ ಸೂತನಿಂತೆಂದನು. ಎಲೈ ಋಷಿಗಳಿರಾ! ಸಾಧು ಸಾಧು!! ನೀವು ಕೇಳಿದ ಪ್ರಶ್ನೆಯು ಪರಮೋತ್ತಮವಾದದ್ದು. ಶಿವಪುರಾಣಂಗಳಂ ಕೇಳುವವರ ಪಠಿಸುವವರ ಮತ್ತೆ ಬರೆಯಿಸುವಂಥಾವರ ಪುಣ್ಯವನ್ನು, ಸಾಕ್ಷಾಚ್ಛಿವನಾದರು ಇಷ್ಟೆಂದು ಪೇಳಲಾರನು.

ಶ್ಲೋ|| ಮತ್ಕಥಾಶ್ರವಣೇಭಕ್ತಿಸ್ವರನೇತ್ರಾಂಗವಿಕ್ರಿಯಾ |
ಇತಿದೇವೇನಕಥಿತಂದೇವ್ಯೈಪೂರ್ವಂಮುನೀಶ್ವರಾಃ ||

ತಾ|| ಎಲೈ ಋಷಿಗಳಿರಾ! ಪೂರ್ವಕಾಲದಲ್ಲಿ ಪರಮೇಶ್ವರನು ಪಾರ್ವತೀ ದೇವಿಯಂ ಕುರಿತು, ಎಲೈ ಪ್ರಿಯೆಯೆ! ನನ್ನಲ್ಲಿ ಭಕ್ತಿಯುಳ್ಳವರಾದವರಿಗೆನ್ನ ಕಥೆಯಂ ಕೇಳುವುದರಲ್ಲಿ ಕಂಠದೊಳು ಗದ್ಗದ ಸ್ವರವೂ ನೇತ್ರಂಗಳಲ್ಲಿ ಆನಂದ ಬಾಷ್ಪವೂ ಶರೀರದಲ್ಲಿ ರೋಮಾಂಚವೂ ಉಂಟಾಗುವವೆಂದು ನುಡಿದಿರುವನು. ಎಲೈ ಮುನಿಗಳಿರಾ! ಶಿವಪುರಾಣಕ್ಕಿಂತಲು ಅಧಿಕವಾದುದು ಮತ್ತಾವದೂ

ಇಲ್ಲ. ಅದುಕಾರಣದಿಂ ಶಿವಪುರಾಣಶ್ರವಣಕ್ಕೆ ಸಮಾನದ ಪುಣ್ಯವು ಶ್ರುತಿಯಲ್ಲಿಯು ಇಲ್ಲ. ಆರು ಕೆಲಂಬರು ಪರಮ ಸಂತೋಷಯುಕ್ತರಾಗಿ ಶಿವಪುರಾಣವಂ ಪಠಿಸುತಲಿರುವರೋ ಅವರುಗಳು ಮಲತ್ರಯದಿಂ ಬಿಡಲ್ಪಟ್ಟು ಶಂಕರ ಪದವಂ ಪಡೆವರು. ಭಕ್ತಿಯಿಂದ ಕೇಳುವವರಿಗೆ ಶಿವಪದ ಪ್ರಾಪ್ತಿಯುಂಟಾಗುವದು. ಈ ವಿಷಯದಿಂ ಸಂಶಯವಿಲ್ಲವು. ಅದುಕಾರಣದಿಂ ಶಿವಪುರಾಣಂಗಳಂ ನಿತ್ಯದಲ್ಲಿಯು ಕೇಳಬೇಕು. ವಿಚಕ್ಷಣರಾದಂಥಾವರು ಸಕಲ ಕೃತ್ಯಂಗಳಂ ಬಿಟ್ಟು ಶಂಭು ಸಂಬಂಧವಾದ ಪುರಾಣವಂ ಕೇಳಬೇಕು? ಪಠಿಸಬೇಕು? ಈ ವಿಷಯಗಳಲ್ಲಿ ಬ್ರಹ್ಮಾದಿಗಳಾದ ಮುನಿಗಳಿಂದ ಪೇಳಲ್ಪಟ್ಟ ಒಂದು ಇತಿ ಹಾಸವಂ ನಾನು ವ್ಯಾಸಮುನಿಯಿಂ ಕೇಳಿದೆನು. ಅದಂ ನಿಮಗೆ ಪೇಳುತ್ತೇನೆ ಸಾವಧಾನದಿಂ ಕೇಳಿರಿ.

ಜಿತೇಂದ್ರಿಯ ಸನ್ಯಾಸಿಯ ಕಥೆ.

ಎಲೈ ಋಷಿಗಳಿರಾ! ಸಾಲ್ವದೇಶದಲ್ಲಿ ಕಾಮ್ಯಖಂಡವೆಂದು ಸ್ವರ್ಗಖಂಡದೋಪಾದಿಯಲ್ಲಿರುವ ಮಹಾ ಪಟ್ಟಣವಿರುವದು. ಆ ಪುರದಲ್ಲಿ ವೇದಜ್ಞರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು, ವರ್ಣಾಶ್ರಮತತ್ಪರರಾದ ಶೂದ್ರರುಂ ಉಳಿದ ಸಂಕರ ಜಾತಿಗಳುಂ ವಾಸವಂಮಾಡುತ್ತಿಹರು. ಮತ್ತಮಲ್ಲಿ ಮಹಾವ್ರತ ಪರಾಯಣರಾದ ಯತಿಗಳು ವಿದ್ಯಾಧಿಕರಾದ ಬ್ರಹ್ಮಚಾರಿಗಳು ವಾಸಿಸುತ್ತಿದ್ದಾರೆ. ಓರ್ವಳಾದ ಮಾತೃವಿನನ್ನಾಶ್ರಯಿಸಿ ಅನೇಕ ಪ್ರಾಣಿಗಳು ಎಂತು ಜೀವಿಸುತ್ತಿರುವರೋ, ಹಾಗೆ ಒಬ್ಬ ಗೃಹಸ್ಥನನ್ನಾಶ್ರಯಿಸಿ ಅನೇಕ ಭಿಕ್ಷುಗಳು ಜೀವಿಸುತ್ತಿದಾರೆ. ಅವರ ಮಧ್ಯದಲ್ಲಿ ಮಹಾತ್ಮನಾಗಿ ಜಿತೇಂದ್ರಿಯನಾದ ಒಬ್ಬ ಸನ್ಯಾಸಿ ಇರುತಿರ್ಪನು. ಸರ್ವೇಂದ್ರಿಯಂಗಳು ಜಯಿಸಲ್ಪಟ್ಟಿರುವುದರಿಂದ ಯತೀಶ್ವರನಾದ ಆ ಸನ್ಯಾಸಿಯು ಜಿತೇಂದ್ರಿಯನೆಂಬ ನಾಮದಿಂದಲಿ ಪ್ರಸಿದ್ಧನಾಗಿದಾನೆ. ಮತ್ತಮಾ ಪಟ್ಟಣದಲ್ಲಿರುವ ಜನರೆಲ್ಲರು ಬ್ರಹ್ಮವೇತ್ತನಾಗಿ ಶಿವಭಕ್ತನಾಗಿ ಸಮಸ್ತ ಶಾಸ್ತ್ರವಂಬಲ್ಲವನಾದ ಸರ್ವಪ್ರಾಣಿಗಳಲ್ಲಿಯು ಸಮದೃಷ್ಟಿಯುಳ್ಳ ಜಿತೇಂದ್ರಿಯನಾದ ಆ ಸನ್ಯಾಸಿಯ ಸಮೀಪಕ್ಕೆ ಬಂದು ಹಿತಾಹಿತಂಗಳಂ ಕೇಳಿ ಆತನಿಂದ ಪೇಳಲ್ಪಟ್ಟ ಬುದ್ಧಿಯಿಂ ಶ್ರೇಯಸ್ಸುಗಳನ್ನೈದುತಿರ್ಪರು. ಬ್ರಾಹ್ಮಣ ಮುಂತಾದವರು ಆ ಜಿತೇಂದ್ರಿಯನೆಂಬ ಯತಿಯನ್ನು ಬಹುವಾಗಿ ಪ್ರೋಷಿಸುತ್ತಿದ್ದರು. ಮತ್ತಮಲ್ಲಿ ಶ್ರೀಮುಖನೆಂಬ ಪೆಸರುಳ್ಳ ಓರ್ವ ಬ್ರಾಹ್ಮಣ ಶ್ರೇಷ್ಠನು ಶ್ರುತಿ ಸ್ಮೃತಿ ಪುರಾಣಾರ್ಥಂಗಳಂ ತಿಳಿದು, ಸದಾಚಾರನಿರತನಾಗಿ ಯಾವಾಗಲು ಶುಚಿಯಾಗಿರ್ದನು. ಮಹಾತ್ಮನಾದ ಆ ಬ್ರಾಹ್ಮಣನಿಗೆ ಪುಣ್ಯದಿಂದ ಎಂಟು ಮಂದಿ ಕುಮಾರರು ಜನಿಸಿದರು. ಅವ

ರೊಳಗೆ ಜ್ಯೇಷ್ಠಪುತ್ರಂಗೆ ಶಾಂತನೆಂಬ ನಾಮವು. ಆತನ ಅನುಜಂಗೆ ಅನುಶಾಂತನೆಂಬ ನಾಮವು, ಉಳಿದವರಿಗೆ ಜ್ಞಾನ, ವಿಜ್ಞಾನ, ಸಿದ್ಧಾರ್ಥ, ಪ್ರಸಿದ್ಧಾರ್ಥ, ಕಾರಣ, ಅಕಾರಣ, ರೆಂಬ ನಾಮಂಗಳಿಹವು. ಅವರೆಲ್ಲರು ವೇದಶಾಸ್ತ್ರಪಾರಂಗತರು, ಉಪಾದಾನ ಜೀವಿಗಳಾದವರೆಲ್ಲರು ಪಿತೃವು ಸಹ ಬ್ರಾಹ್ಮಣರು ಮಾಡತಕ್ಕಂಥ ಕಾರ್ಯವಾವುದು? ಮಾಡಬಾರದ ಕಾರ್ಯವೇನು? ಎಂದು ಈ ಪ್ರಕಾರವಾಗಿ ಹಿತಾಹಿತ ಕೃತ್ಯವಂ ಕೇಳಲು ಜಿತೇಂದ್ರಿಯನಾಗಿ ಮಹಾತ್ಮನಾದ ಆ ಯತೀಶ್ವರನ ಬಳಿಗೈದಿ ನಮಸ್ಕಾರವಂ ಮಾಡಿ, ಏಕಾಂತದೊಳು ಕೈಗಳಂ ಕಟ್ಟಿಕೊಂಡು ನಿಂತಿದ್ದರು. ಬಳಿಕ ಆ ಯತಿಯು ಅವರಂ ನೋಡಿ ಬ್ರಹ್ಮಚರ್ಯ ವ್ರತಂಗಳಲ್ಲಿರುವ ಯತಿಪುತ್ರರಿರಾ! ನೀವು ಸುಖದಲ್ಲಿರುವಿರೋ? ಇಲ್ಲಿಗೇನು ಕಾರಣ ಬಂದಿರಿ? ಎಂದು ಕೇಳಲಾಗಿ, ಆ ಎಂಟು ಮಂದಿ ಬ್ರಹ್ಮಚಾರಿಗಳು ಅಂಜಲಿಬದ್ಧರಾಗಿ, ಎಲೈ ಮುನಿಯೆ! ನಾವು ದಯಾಶಾಲಿಯಾದ ನಿನ್ನಿಂದ ನೋಡಲ್ಪಟ್ಟಕಾರಣ ಕೃತಾರ್ಥರಾದೆವು. ಈಗ ನಮ್ಮ ಜನ್ಮವು ಸಾಫಲ್ಯವನೈದಿತು. ದಾರಿದ್ರ್ಯದಿಂದತಿಕೃಶರಾಗಿದೇವೆ. ನಮ್ಮ ವಾಂಛೆಗಳಾವ ಕರ್ಮದಿಂದುಂಟಾಗುವದು? ಏನನಾದೊಡಂ ಒಂದುಪಾಯವಂ ಹೇಳಬೇಕೆಂದು ಬಿನ್ನೈಸೆ, ಆ ಯತೀಶ್ವರನು ಎಲೈ ಬ್ರಹ್ಮಚಾರಿಗಳಿರಾ! ನಿಮ್ಮಗಳ ಮನೋರಥಂಗಳಂ ಬೇರೆ ಬೇರೆ ಯಾಗಿ ಹೇಳಿರೆಂದು ನುಡಿದನು. ಬಳಿಕ ಒಬ್ಬನೊಬ್ಬ ವಿವಾಹವಂ ಮಾಡಿಕೊಂಡು ಸುಖವಾಗಿರಬೇಕೆಂತಲು, ಮತ್ತೊಬ್ಬನು ಬಹು ಪುತ್ರರುಂಟಾಗಬೇಕೆಂತಲು, ಇನ್ನೊಬ್ಬನು ವ್ಯಾಧಿಯಿಂದ ಬಿಡಲ್ಪಡಬೇಕೆಂತಲು, ಬೇರೊಬ್ಬನು ವಿದ್ಯೆಯನ್ನೂ, ಮತ್ತೊಬ್ಬನು ಐಶ್ವರ್ಯವನ್ನೂ, ಇನ್ನೊಬ್ಬನು ನಿತ್ಯತ್ವವನ್ನೂ, ಮತ್ತೊಬ್ಬನು ಶಿವಲೋಕಕ್ಕೆ ಶರೀರ ಸಮೇತ ಪೋಗಬೇಕೆಂತಲು, ಈ ಪ್ರಕಾರವಾಗಿ ಎಂಟು ಮಂದಿಯು ತಮ್ಮ ತಮ್ಮ ಅಭೀಷ್ಟಂಗಳಂ ಹೇಳಲಾಗಿ, ಯತೀಶ್ವರನು ಆ ವಾಕ್ಯವಂ ಕೇಳಿ, ಎಲೈ ಪುತ್ರರಿರಾ! ನೀವು ಶಿವಪುಣ್ಯಗಳಂ ಮಾಡಿದೊಡೆ ನಿಮ್ಮ ಇಷ್ಟಾಪೂರ್ತಿಯಾಗುವದೆಂದು ನುಡಿದನು. ಬಳಿಕಾ ಕುಮಾರರು ಯತಿಯ ವಾಕ್ಯವಂ ಕೇಳಿ, ಎಲೈ ಸನ್ಯಾಸಿಯೆ! ನಾವುಗಳು ಭಿಕ್ಷಾಟನವಂ ಗೈದು ಜೀವಿಸುತಲಿದೇವೆ. ಹೇಗೆ ಶಿವಪುಣ್ಯಂಗಳಂ ಮಾಡೇವು ಅಶಕ್ತರಲ್ಲವೆ? ಎಂದು ಹೇಳಲಾಗಿ ಯತಿಯು, ಎಲೈ ದ್ವಿಜಕುಮಾರರಿರಾ! ನಿಮ್ಮ ಮನೋಭೀಷ್ಟಂಗಳಂ ಕೊಡುವಂಥ ಶಿವಪುರಾಣಂಗಳನ್ನು ಕೇಳಿರಿ. ಹಾಗೆಯೆ ಕೇಳುವೆವು ಆದೊಡೆ ಪುರಾಣವಂ ಹೇಳುವಾತಂಗೆ ಕೊಡಲು ಏನೂ ಇಲ್ಲವಲ್ಲ ಏನು ಮಾಡುವಣ? ಎಂದು ನುಡಿಯುತ್ತಿರೆ, ಯತಿ ಇಂತೆಂದನು. ಎಲೈ ಕುಮಾರರಿರಾ! ಇಲ್ಲಿಗೆ ಸಮೀಪವಾಗಿಯೆ

ಒಂದು ಪಟ್ಟಣ ವಿರುವದು. ಆದರ ಸಮೀಪದಲ್ಲಿ ಋಷಿಪುರವೆಂಬ ಅಗ್ರಹಾರ ವಿದೆ. ಅಲ್ಲಿ ಸರ್ವಶ್ರುತಿ ಪಾರಂಗತನಾದ ಶಿವಭಕ್ತನಾದ ಕಲಿಜಿತ್ತೆಂಬ ಬ್ರಾಹ್ಮಣನಿರುವನು. ಆತನು ಶ್ರೋತ್ರಿಯರಾದ ಬ್ರಾಹ್ಮಣರಂ ಕರೆಯಿಸಿ ಕೊಂಡು ಶಿವಪುರಾಣಂಗಳಂ ಪೇಳುತಲಿದಾನೆ. ಆತ ಆರಿಂದಲು ಒಂದು ಕಾಸನಾದೊಡಂ ಪ್ರತಿಗ್ರಹವಂ ಮಾಡನು. ವಿಶೇಷವಾಗಿ ಅನ್ನದಾನವಂ ಗೈಯುತ್ತಾನೆ. ನೀವು ಆತನ ಬಳಿಗೆ ಸಾರಿ ಶಿವಪುರಾಣಂಗಳಂ ಕೇಳಿರೆನಲಾಗಿ, ಅವರು ಆ ಯತೀಶ್ವರಂಗೆ ನಮಸ್ಕಾರವಂ ಮಾಡಿ ಆತನನುಜ್ಞೆಯಿಂದ ಋಷಿ ಪುರಕ್ಕೆ ಪೋಗಿ, ಆ ಕಲಿಜಿತ್ತೆಂಬ ಬ್ರಾಹ್ಮಣನಂ ಕಂಡು ಅಂಜಲಿಬಂಧವಂಗೈದು, ಆತನಿಂದ ಶಿವಪುರಾಣಂಗಳಂ ಕೇಳಿ, ಗದ್ಗದ ಸ್ವರವುಳ್ಳವರಾಗಿ ಏಕಾಗ್ರಮನದಿಂ ಶಿವನಂ ಧ್ಯಾನಿಸಿ, ಸಮುಸ್ತ ಪಾಪಂಗಳಿಂ ಬಿಡಲ್ಪಟ್ಟವರಾಗಿ, ತಮ್ಮ ತಮ್ಮ ಅಭೀಷ್ಟಂಗಳಂ ಪಡೆದರು. ಮತ್ತಂ ಪಶುಪಕ್ಷಿ ಮೃಗಾದಿಗಳು ಶಿವಪುರಾ ಣವಂ ಕೇಳಿದರೆ ಮೋಕ್ಷವನ್ನೈದುವವೆಂದು ಅಧರ್ವಣ ಶ್ರುತಿಯು ಪೇಳುತ ಲಿರ್ಪುದು. ಎಲೈ ಋಷಿಗಳಿರಾ ! ಶಿವಪುರಾಣವಂ ಕೇಳುವದಕ್ಕಿಂತಲು ಅಧಿಕ ವಾದ ಪುಣ್ಯವು ಯಾವದೂ ಇಲ್ಲವೆಂದು ಸೂತಂ ಶೌನಕಾದಿಮುನಿಳಿಗೆ ಪೇಳಿದ ನೆಂಬಲ್ಲಿಗೆ, ಉಪದೇಶಕಾಂಡದೊಳು ನಲವತ್ತೆಂಟನೆಯ ಅಧ್ಯಾ ಯವು ಸಂಪೂರ್ಣಮಾದುದು.

ನಲವತ್ತೊಂಬತ್ತನೆಯ ಅಧ್ಯಾಯವು.

ಶಿವದ್ರೋಹವಿವರಣ-ಪ್ರಾಯಶ್ಚಿತ್ತ ವಿಧಾನಂ.

ಅನಂತರದಲ್ಲಿ ಋಷಿಗಳು ಸೂತನಂ ನೋಡಿ, ಎಲೈ ಸೂತನೆ ! ನಿನ್ನಿಂದ ನಿರೂಪಿತವಾದ ಶಿವಪುರಾಣದ ಕಥೆಗಳಂ ಕೇಳಿ ಕೃತಾರ್ಥ ರಾದೆವು. ಮತ್ತಂ ಶಿವದ್ರೋಹವಂ ಮಾಡಿದವರಿಗೆ ಪ್ರಾಯಶ್ಚಿತ್ತ ವಿರಹಿತವಾದ ವಿಧಾನವು ಯಾವದು ಎಂದು ಪೃಚ್ಛಿಸಲಾಗಿ, ಸೂತನು ಇಂತೆಂದನು. ಎಲೈ ಮುನಿಗಳಿರಾ ! ಶಿವನು, ಪಾರ್ವತೀದೇವಿಯು, ಸುಬ್ರಹ್ಮಣ್ಯನು, ಗಣೇಶ್ವರನು, ಗುರುವು, ಶಿವ ಭಕ್ತನು ಈ ಆರು ಮಂದಿಗು ಆರು ದ್ರೋಹವಂ ಮಾಡುವರೋ ಇವರ ದ್ರವ್ಯ ಗಳಂ ಯಾರು ಅಪಹಾರಂಗೈಯ್ಯುವರೋ, ಮತ್ತಂ ಯಾರು ಉಪೇಕ್ಷಿಶುವರೋ ಅವರು ಶಿವದ್ರೋಹಿಗಳೆಂದು ಪೇಳಲ್ಪಡುವರು. (ಉಪೇಕ್ಷೆಯೆಂದರೆ ಇವರ ದ್ರವ್ಯಾಪಹಾರವಂ ಮಾಡುವವನಂ ನೋಡಿ ಸುಮ್ಮನೆ ಇರುವಿಕೆ. ಇಂಥಾ ಉಪೇಕ್ಷ ಕನು) ಹೀಗೆ “ ಧನ, ಧಾನ್ಯ, ವಸ್ತ್ರ, ಆಭರಣ, ಗೃಹ, ಆರಾಮು, ಕ್ಷೇತ್ರ, ವಾಪೀ, ಕೂಪ, ತಟಾಕ ” ಮುಂತಾದ ಪದಾರ್ಥಗಳಂ ಆವಾತನು ನಾಶಮಾಡುವನೋ,

ಆವಾತನು ನೋಡಿಕೊಂಡಿರುವನೋ, ಯಾರು ಅವರ ಬಳಿಯಲ್ಲಿ ಸಹಾಯಕ ರಾಗಿ ನಿಂತಿರುವರೋ, ಅಂಥವರ ಪೆಸರಂ ಯಾರು ಉಚ್ಚರಿಸುವರೋ, ದ್ರೋಹಿ ಗಳಾದ ಅವರ ಸ್ಪರ್ಶನವನ್ನು ಯಾರು ಮಾಡುವರೋ, ಅವರ ಮಾತುಗಳಂತೆ ಯಾರು ನಡೆಯುತ್ತಿರುವರೋ, ಇವರೆಲ್ಲರು ಶಿವದ್ರೋಹಿಗಳೆಂದು ಪೇಳಲ್ಪಡು ತ್ತಾರೆ. ಇದಲ್ಲದೆ ಹಿಂದೆ ಹೇಳಿದ ಶಿವ ಮೊದಲಾದ ಷಡ್ದೇವತೆಗಳನ್ನು "ಶಿವ ಸ್ನಾನ, ವೇದ, ವಿಭೂತಿ, ರುದ್ರಾಕ್ಷಿ, ಶೈವಾಗಮ, ಶಿವಪುರಾಣ" ಎಂಬಿವು ಮೊದಲಾದ ಶಿವಸಂಬಂಧಂಗಳನ್ನು ಯಾರು ಮೂಢಾತ್ಮರಾಗಿ ನಿಂದಿಸುವರೋ ಯಾರು ಆತನ ವಾಕ್ಯಕ್ಕೆ ಅನುಸಾರಿಗಳಾಗದಿರುವರೋ, ಅವರು ಶಿವದ್ರೋಹಿ ಗಳು. ಮತ್ತಂ ಈ ಶಿವಾದಿ ಷಡ್ದೇವತೆಗಳ ಭವನಂಗಳಲ್ಲಿಯುಂ ಪುಷ್ಪಾರಾಮಂಗ ಳಲ್ಲಿಯು, ಆ ಶಿವಸಂಬಂಧವಾದ ಪ್ರದೇಶಂಗಳಲ್ಲಿಯುಂ ಆವಾತನು ಉಚ್ಚಿ ಷ್ಟವಂ ಮಾಡುವನೋ, ಅವನೊಡನೆ ವೀಕ್ಷಣ ಸ್ಪರ್ಶನ ಸಂಭಾಷಣಾದಿಗಳನ್ನು ಯಾರು ಮಾಡುವರೋ, ಇವರೆಲ್ಲರು ಶಿವದ್ರೋಹಿಗಳು ಈ ವಿಷಯದಲ್ಲಿ ಸಂಶಯವಿಲ್ಲವು

ಶ್ಲೋ|| ಏವಮಾದಿಭವದ್ರೋಹಂಕೃತ್ವಾಕೇಚನಪಾಪಿನಃ |
ಪ್ರಾಪ್ಯೇಹಭವದುಃಖಾನಿಬಾಧ್ಯಂತೇಯಮಕಿಂಕರೈಃ ||

ಎಲೈ ಋಷಿಗಳಿರಾ! ಇವು ಮೊದಲಾದ ಶಿವದ್ರೋಹಂಗಳಂ ಮಾಡಿ ಪರಮ ಪಾಪಿಗಳಾದ ಕೆಲಂಬರು, ಈ ಲೋಕದಲ್ಲಿ ಅನೇಕ ದುಃಖಗಳನ್ನನುಭವಿಸಿ ಪರದಲ್ಲಿ ಯಮಕಿಂಕರರಿಂದ ಬಾಧಿಸಲ್ಪಡುತ್ತಾರೆ. ಈಗಲು ಕೆಲಂಬರಾದ ಶಿವ ದ್ರೋಹಿಗಳು ನರಕದಲ್ಲಿ ಬಾಧೆಪಡುತಲೇ ಇದಾರೆ. ಅವರಲ್ಲಿ ಕೆಲಂಬರಂ ಪೇಳುವೆನು ಕೇಳಿರಿ.

ಕೀಲಕರಾಯನ ಕಥೆ.

ವಂಗದೇಶಾಧಿಪತಿಯಾದ ಕೀಲಕನೆಂಬೋರ್ವ ರಾಯನು ರಾಜಗಿರಿ ಯೆಂಬ ನಗರವನ್ನಾಳುತ್ತಿದ್ದನು. ಆತಂಗೆ ಪಾಪಜಿತು ವೆಂಬವನು ಮೊದಲಾದ ನಾಲ್ವರು ಕುಮಾರರು ಪುಟ್ಟಿ ಸರ್ವಾಯುಧ ವಿಶಾರದರಾಗಿ, ತಪದಿಂ ಸರ್ವಾರಿ ಮರ್ದಕನಾದ ಶಿವನಂ ಸಂತೋಷಗೊಳಿಸಿ, ಆಸ್ವಾಮಿಯಬಲದಿಂ ಸರ್ವ ವೈರಿ ಗಳಂ ಸಂಹರಿಸಿ ದಶದಿಕ್ಕುಗಳಂ ಜಯಿಸಿ, ನಾನಾವಿಧವಾದ ಸಂಭಾರಂಗಳಿಂ ರಾಜ ಸೂಯವೆಂಬ ಕ್ರತುವಂ ಮಾಡಿ, ಪಿತೃವಾಕ್ಯವನ್ನುಲ್ಲಂಘಿಸದೆ ಇರುತಿರ್ದರು. ಅವರಿಗೆ ತಂದೆಯಾದ ಆ ಕೀಲಕನೆಂಬ ರಾಯನು ಶಿವರಾತ್ರಿಯಲ್ಲಿ ಪರಮೇ ಶ್ವರನಂ ಸೇವಿಸಲು ಗೋಕರ್ಣಕ್ಕೆ ಪೋಗಿ ಶಿವರಾತ್ರೀವ್ರತವಂ ಮಾಡಿ, ಅಲ್ಲಿ ಸಾಂಬನಾದ ಸದಾಶಿವನಂ ಧ್ಯಾನಿಸುತ ಷಣ್ಮಾಸಂಗಳು ನಿಯಮದಿಂದಿರ್ದು,

ಸುಹಾ ಬಲವಂತರಾದ ಭಟರೊಡನೆ ತನ್ನ ದೇಶಕ್ಕೆ ಬಂದನು. ಬಳಿಕ ನಾಲ್ವರು ಕುಮಾರರು ಯೆದುರಾಗಿ ಪೋಗೆ, ರಾಯನು ಆ ಪುತ್ರರೊಡನೆ ಸಮಸ್ತ ವಾದ್ಯಂಗ ಳಿಂದ ಯುಕ್ತನಾಗಿ ತನ್ನ ಗೃಹಕ್ಕೆ ಬಂದು, ಸಿಂಹಾಸನದಲ್ಲಿ ಕುಳಿತು ಆ ಪುತ್ರರಂ ತಮ್ಮ ತಮ್ಮ ಗೃಹಕ್ಕೆ ಕಳುಹಿ ತಾನು ಅಂತಃಪುರಕ್ಕೆ ಪೋಗಲಿಚ್ಛೈಸಿದನು. ಆ ಸಮಯದಲ್ಲಿ ಪುರಮಧ್ಯದಲ್ಲಿರ್ಪ ರಾಜಗಿರೀಶ್ವರನಂ ಪೂಜಿಸುವ ಬ್ರಾಹ್ಮಣರು ರಾಯನ ಸಮೀಪಕ್ಕೆ ಬರೆ, ಆ ರಾಯನು ಬ್ರಾಹ್ಮಣರಂ ಕಂಡು ಮಹಾದೇವ ಪೂಜಾಸಕ್ತರಾದ ಎಲೈ ಬ್ರಾಹ್ಮಣರಿರಾ! ಕ್ಷೇಮವೆ? ಸುಖದಲ್ಲಿ ಬಂದಿರೆ? ಮಹಾದೇವನ ಪೂಜೆಯು ಪೂರ್ವದೋಪಾದಿಯಲ್ಲಿ ನ್ಯೂನವಿಲ್ಲದೆ ಚನ್ನಾಗಿ ನಡೆಯುತ್ತಿದೆಯೆ? ಎಂದು ಕೇಳಿದನು. ಬಳಿಕ ಆ ಬ್ರಾಹ್ಮಣರು ರಾಯನ ವಾಕ್ಯವಂ ಕೇಳಿ, ಎಲೈ ಅರಸೆ! ನಿನ್ನ ಪ್ರಭಾವದಿಂದ ಶಿವಪೂಜೆಯು ನ್ಯೂನ ವಿಲ್ಲದೆ ನಡೆಯುತಲಿದೆ. ಈಗ ವಿಭುವಾದ ಶಂಭುವು ಅತ್ಯಂತ ಪ್ರಸನ್ನನಾಗಿ ಪೂರ್ವದಂತೆ ಪ್ರಕಾಶಿಸುತಿದಾನೆ. ಆದರೆ ನಿನ್ನ ಪುತ್ರರಿಂದ ಶಿವದ್ರೋಹವು ಮಾಡಲ್ಪಟ್ಟಿತೆಂದರು. ಅನಂತರದಲ್ಲಿ ರಾಯನು ಆ ವಾಕ್ಯವಂ ಕೇಳಿ ಎಲೈ, ಶಿವಪೂಜಾಸಕ್ತರೆ! ಈ ನಾಲ್ವರೊಳಗೆ ಯಾರು ಪರಮಾತ್ಮನಾದ ಶಿವಂಗೆ ದ್ರೋಹವಂ ಮಾಡಿದರು? ಭಯಪಡದೆ ಪೇಳಿರೆನಲು, ಅವರು ವೀರಜಿತ್ತೆಂಬ ನಿನ್ನ ಪುತ್ರನು ಸ್ವಾಮಿಯ ಆಲಯದಿಂ ಇನ್ನೂರು ಯಿಟ್ಟಿಕೆಗಳಂ ತೆಗದು ಅವುಗ ಳಿಂದ ತನ್ನ ಗೃಹವಂ ಕಟ್ಟಿಸಿದನು. ನಾವು ಶಿವದ್ರೋಹವು ಬಂದೀತೆಂದು ತಡೆದರೂ ನಮ್ಮ ವಾಕ್ಯವನ್ನುಲ್ಲಂಘಿಸಿ, ಸಮಸ್ತವು ದೊರೆಗಳದಾದ ಮೇಲಿ ದೋಷವೆಲ್ಲಿಯದೆಂದು ನುಡಿಯುತ್ತ ರಾಜಭಟರು ತೆಗದುಕ್ಕೊಂಡು ಪೋದರು. ಮತ್ತಂ ಘೋರಜಿತ್ತೆಂಬ ನಿನ್ನ ಮಗನು ಮಹಾ ಉನ್ನತವಾದ ಶಿವಸಂಬಂಧ ಮಾಗಿರ್ಪ ಚೂತವೃಕ್ಷವನ್ನು ಛೇದಿಸಿ ಯಾಗಶಾಲೆಯಂ ಕಟ್ಟಿಸಿದನು. ಆಗ ಶಿವಾಲಯದ ಮಧ್ಯದಲ್ಲಿರುವ ಫಲವೃಕ್ಷವಂ ಛೇದಿಸಬೇಡ, ಮಹಾ ದೋಷ ಉಂಟಾಗುವದೆಂದು ಪೇಳಲಾಗಿ ಆ ಘೋರಜಿತುವು ನಮ್ಮ ವಾಕ್ಯವನ್ನು ಲಕ್ಷ್ಯಂಗೆಯ್ಯದೆ ಯಾಗಶಾಲೆಯನ್ನೇ ಕಟ್ಟಿಸಿದನು. ಇದಲ್ಲದೆ ಆ ಶೂರಜಿತು ವೆಂಬವನು ಶಿವಾರಾಮಪುಷ್ಪಂಗಳಂ ತರಿಸಿ ತನ್ನ ಸತಿಗೆ ಸಹ ಮುಡಿವರು. ನಾವು ನಿಷೇಧಿಸಿದರೂ ಕೇಳಲಿಲ್ಲ. ಇವರು ಮಾಡಿದ ಶಿವದ್ರೋಹಗಳಂ ನೋಡಿ, ವಿರಕ್ತ ನಾದ ವೀರವ್ರತನುಂ ಶಿವಾರಾಮ ಪೋಷಕನಾದ ಮಾರ್ತಾಂಡನುಂ ಶಿವಪೂಜಾ ಪರಾಯಣನಾದ ವಿಕ್ರಮನುಂ ಈ ಮೂರುಮಂದಿಯೂ ಮೃತರಾದರು. ನಾನು ಪ್ರಾಣಂಗಳಂ ಬಿಡಲಶಕ್ತನಾಗಿ ನಿನ್ನ ಸಮೀಪಕ್ಕೆ ಬಂದೆನೆಂದನು. ಬಳಿಕ ರಾಯನದಂ ಕೇಳಿ ಹಸ್ತದಿಂ ಶ್ರೋತ್ರಂಗಳಂ ಮುಚ್ಚಿ ಪಾಪಜಿತ್ತೆಂಬ ಕುಮಾ

ರನಂ ಕರೆಯಿಸಿ, ಆತನ ಮುಖದಿಂದಲೆ ವೀರಭಟರಂ ಕರೆಯಿಸಿ, ಆ ಘೋರ ಜಿತ್ತು ವೀರಜಿತ್ತು ಶೂರಜಿತ್ತು ಎಂಬ ಪುತ್ರರಂ ಅವರ ಪರಿಚಾರಕರೊಡನೆ ಶಿಕ್ಷಿಸಿ, ಶಿವಾಲಯಕ್ಕೆ ಪೋಗಿ ಆ ಯಾಗಶಾಲೆಯಂ ಕಿತ್ತು ಆ ಮರಗಳಂ ತೆಗದು ಇಟ್ಟಿಗೆಗಳಂ ತೆಗಿಸಿ ಶಿವಂಗೆ ನೂತನವಾದ ಆಲಯವಂ ಕಟ್ಟಿಸಿ, ತನ್ನ ಭಂಡಾರದ ಬಾಗಿಲಂ ತೆಗಿಸಿ, ಧನವಂ ತೆಗೆದು, ರುಂಡಮಾಲೆ ಮುಂತಾದ ಭೂಷಣಾದಿಗಳಂ ಮಾಡಿಸಿ, ಮಹಾಭಿಷೇಕ ನೈವೇದ್ಯ ಮೊದಲಾದವಂ ಗೈದು, ಆ ದಿವ್ಯಭೂಷಣಂಗಳಿಂದ ಅಲಂಕಾರವಂ ಮಾಡಿಸಿ, ಶಿವದ್ರೋಹಕ್ಕೆ ನಿಷ್ಕೃತಿ ಯೇನೆಂದು ಚಿಂತಿಸಿ ತುದಿಯಲ್ಲಿ ಪ್ರಾಣಪರಿತ್ಯಾಗವೇ ನಿಷ್ಕೃತಿಯೆಂದು ನಿಶ್ಚೈಸಿ ಮಹತ್ತಾದ ಅಗ್ನಿಕುಂಡವಂ ಮಾಡಿಸಿ ಪಾಪಜಿತ್ತೆಂಬ ಕುಮಾರನ ಹಸ್ತಮಂ ಪಿಡಿದು ರಕ್ತವಲ್ಲಿಯೊಡನೆ ಅಗ್ನಿಪ್ರವೇಶವಂ ಮಾಡಲಗ್ನಿಯು ಶೀತಳಮಾದುದು. ಆಗ ವೀರವ್ರತ ಮಾರ್ತಾಂಡವಿಕ್ರಮಕೇಸರಿಗಳೆಂಬ ಮೂರು ಮಂದಿ ಶಿವಭಕ್ತರು ರಾಯನ ಮುಂದೆ ನಿಲ್ಲಲು? ಪುಷ್ಪವೃಷ್ಟಿಗಳು ಕರೆದವು. ದೇವದುಂದುಭಿಗಳು ಮೊಳಗಿದವು. ಮತ್ತಂ ಪರಮೇಶ್ವರನು ವೃಷಭಾ ರೂಢನಾಗಿ ಪಾರ್ವತೀ ಸಮೇತನಾಗಿ ನಾನಾವಿಧ ಗಣಂಗಳಿಂದಾವೃತನಾಗಿ ರಾಯನ ಸಮೀಪಕ್ಕೆಬಂದು ಕರುಣಾರಸ ಪರಿಪೂರ್ಣವಾದ ಕಟಾಕ್ಷವೀಕ್ಷಣದಿಂದಾ ರಾಯನಂ ನೋಡಿ, ಎಲೈ ರಾಜನೆ, ನಿನ್ನ ಬುದ್ಧಿಯು ಸರ್ವೋತ್ತಮವಾದದ್ದು? ಲೋಕದಲ್ಲಿ ನಿನಗೆ ಸದೃಶವಾದ ಭಕ್ತನಿಲ್ಲ. ಅದುಕಾರಣದಿಂ ನೀನು ಚಿರ ಕಾಲವು ನಿಷ್ಕಂಟಕಮಾಗಿ ರಾಜ್ಯವನ್ನಾಳಿ ವಿನಯವಂತರಾದ ಪುತ್ರರಂ ಪಡೆದು ಅನೇಕ ಶಿವಪುಣ್ಯಂಗಳಂ ಮಾಡಿ ಬಹು ಭೋಗಂಗಳನ್ನನುಭವಿಸಿ, ಅಂತ್ಯದಲ್ಲಿ ನನ್ನ ಸ್ಥಾನಕ್ಕೆ ಬರುವನಾಗೆಂದು ನಿರೂಪಿಸಿ ಅಂತರ್ಧಾನವಾದನು. ಬಳಿಕ ವಿಷ್ಣುವು ಪ್ರಸನ್ನನಾಗಿ ದಿವ್ಯ ವಿಮಾನವನ್ನಿತ್ತನು. ಇಂದ್ರನು ಆ ಪಾಪ ಜಿತ್ತೆಂಬ ಕುಮಾರಂಗೆ ಪ್ರಸನ್ನನಾಗಿ ಮಹಾ ಜಗವನ್ನಿತ್ತನು. ಎಲೈ ಋಷಿ ಗಳಿರಾ! ಈ ಪ್ರಕಾರಮಾಗಿ ಆ ರಾಯನು ದೇವತೆಗಳಂ ಬಹುಮಾನನಮಂ ಪಡೆದು, ಸಂತೋಷದಿಂ ಪಾಪಜಿತ್ತೆಂಬ ತನ್ನ ಕುಮಾರನೊಡನೆ ಸತಿ ಸಹ ಅರಮನೆಗೆ ಬಂದು, ವಿನಯವಂತರಾದ ಪುತ್ರರಂ ಪಡೆದು, ಅಂತ್ಯದಲ್ಲಿ

ಮೋಕ್ಷವನ್ನೈದಿದನೆಂದು ಸೂತಂ ಶೌನಕಾದಿಗಳಿಗೆ ಪೇಳಿದ ನೆಂಬಲ್ಲಿಗೆ,
ಉಪದೇಶಕಾಂಡದೊಳು ನಲವತ್ತೊಂಬತ್ತನೆಯ ಅಧ್ಯಾಯವು
ಸಂಪೂರ್ಣವಾದುದು.

ಐವತ್ತನೆಯ ಅಧ್ಯಾಯವು.

ವಿಧಾತೃರಾಯನ ಕಥೆ.

ಎಲೈ ಮುನಿಗಳಿರಾ! ಆ ವೀರಜಿತ್ತು ಘೋರಜಿತ್ತು ಶೂರಜಿತ್ತು ಎಂಬ ಮೂವರು ತಮ್ಮ ಭಟರುಗಳೊಡನೆ ಇಹಲೋಕದಲ್ಲಿ ಅನೇಕ ದುಃಖಂಗಳನನು ಭವಿಸಿ, ಬಳಿಕ ಯಮಲೋಕಕ್ಕೆ ಪೋಗಿ ನರಕದಲ್ಲಿ ಬಿದ್ದು ಅನೇಕ ಯಾತನೆ ಗಳನ್ನು ಪಡುತಲಿದಾರೆ, ಈ ದುರಾತ್ಮರಾದಿವರು ಕಲ್ಪಕೋಟಿ ಶತಗಳಾದರೂ ನರಕವೆಂಬ ಸಮುದ್ರದ ಕಡೆಯಂ ಕಾಣದೆ ಹೊರಳಾಡುತಲಿದಾರೆ. ಸಮಸ್ತ ವಾದ ಪಾಪಗಳಿಗು ಶ್ರುತ್ಯುಕ್ತವಾದ ಪ್ರಾಯಶ್ಚಿತ್ತವುಂಟು, ಶಿವದ್ರೋಹಕ್ಕಾ ದರೆ ಶ್ರುತಿಸಮ್ಮತವಾಗಿ ಯಾವ ಋಷಿಯಿಂದಲು ಪ್ರಾಯಶ್ಚಿತ್ತವು ವಿಧಿಸಲ್ಪಡ ಲಿಲ್ಲವು. ಎಲೈ ಋಷಿಗಳಿರಾ! ದೇವದೇವನಾದ ಪರಮೇಶ್ವರನ ಕದಳೀ ಫಲಗಳನ್ನು ಯಾರು ಅಪಹರಿಸುವರೋ ಅವರ ಕಥೆಯುಂ ಪೇಳುತ್ತಿದೇನೆ, ಸಾವಧಾನದಿಂ ಕೇಳುವರಾಗಿ ಏನಂದರೆ, ಅಂಗದೇಶದಲ್ಲಿ ಸತ್ಯಸಂಧನಾದ ವಿಧಾತೃವೆಂಬ ರಾಯನ ಬಳಗೆ ನಾರದಮುನಿಯು ಬರಲು, ಆ ರಾಯನು ದೇವರ್ಷಿಯಾದ ಆತನಂ ಕಂಡು ನಮಸ್ಕಾರವಂ ಮಾಡಿ ಉತ್ತಮಾಸನವನಿತ್ತು ಅಂಜಲಿಬದ್ಧನಾಗಿ ಬ್ರಹ್ಮ ಪುತ್ರನಾದ ನಾರದಮುನಿಯೆ! ನಿನ್ನ ದರ್ಶನದಿಂ ನಾನು ಕೃತಾರ್ಥನಾದೆನು, ನನ್ನಿಂದಾಗತಕ್ಕ ಕಾರ್ಯವೇನು? ಯಾವಕಾರಣದಿಂದಿಲ್ಲಿಗೆ ಬಂದಿರಿ? ಎಂದು ಪ್ರಶ್ನೆಯಂ ಮಾಡಿದ ಬಳಿಕ ನಾರದಮುನಿಯು ಆ ರಾಯನಂ ಕುರಿತು, ಎಲೈ ಪ್ರಭುವೆ! ನಿನ್ನೊಡನೆ ಸಂಭಾಷಣವಂ ಮಾಡುವದಕ್ಕಿಂತಲು ಮತ್ತೊಂದು ಕಾರ್ಯವಿಲ್ಲ, ನಿನ್ನ ಪಿತೃವಿನ ವಾಕ್ಯವಂ ಪೇಳಲು ಬಂದೆನು, ನಿನ್ನ ಜನಕನು ಇಂದ್ರ ಸಭೆಯಲ್ಲಿ ನನ್ನಂ ಕುರಿತು, ಎಲೈ ಋಷಿಯೆ! ನನ್ನ ಮಗನು ಅಹೋ ರಾತ್ರಿಗಳಲ್ಲಿಯು ಎಡಬಿಡದೆ ಪುಣ್ಯವಂ ಮಾಡುವಂತೆ ಪೇಳಿ ಬರಬೇಕೆಂದು ನಿರೂಪಿಸಿದ್ದರಿಂದ ನಾನು ಬಂದೆನು, ನೀನು ಯಾವಾಗಲು ಪುಣ್ಯವಂ ಮಾಡುತ ಲಿರೆಂದು ರಾಯಂಗೆ ಪೇಳ್ದನು. ಬಳಿಕ ಆತನ ಪುರೋಹಿತನಂ ಕುರಿತು, ಎಲೈ ಪುರೋಹಿತನೆ! ನಿನ್ನ ತಂದೆಯು ನರಕದಲ್ಲಿ ಬಿದ್ದು ಬಹುಬಾಧೆ ಪಡುತಿದ್ದನು. ಭೂಲೋಕಕ್ಕೆ ಬರುತಲಿರುವ ನನ್ನಂ ಕಂಡು ಕೃತಾಂಜಲಿ ಪುಟನಾಗಿ ಇಂತೆಂ ದನು. ಎಲೈ ಮುನಿಯೆ! ನಾನು ಅನೇಕ ದಾನಂಗಳಂ ಹಿಡಿದು ಬಹು ದ್ರವ್ಯ ವಂ ಸಂಪಾದಿಸಿ, ಆ ದ್ರವ್ಯವನ್ನು ಗೃಹಮಧ್ಯದಲ್ಲಿ ನಿಕ್ಷೇಪವಂ ಮಾಡಿ, ಇನ್ನೂ ಸಂಪಾದಿಸಬೇಕೆಂದು ಯೋಚಿಸುತ್ತಿರುವಾಗಲೆ ಯಮದೂತರು ಬಂದು ಶೀಘ್ರ ದಿಂ ಯಮನ ಸಮೀಪಕ್ಕೆ ಕೊಂಡುಪೋಗಿ, ಆ ಯಮನ ಆಜ್ಞೆಯಿಂದ ದಿವಾ ರಾತ್ರಿಯು ಬಹು ಬಾಧಿಸುತಿದಾರೆ, ಅದುಕಾರಣ ವಿಧಾತೃರಾಯನ ಪುರೋಹಿತ

ನಾದ ಅಜಿತನೆಂಬ ನನ್ನ ಕುಮಾರಂಗೆ ಆ ದ್ರವ್ಯಮಂ ತೆಗೆದುಕೊಂಡು ಅನೇಕ ದಾನಂಗಳಂ ಮಾಡೆಂದು ಪೇಳಬೇಕು. ಅವುಗಳು ಯಾವವೆಂದರೆ, ಭೂದಾನ ಗೋದಾನ ಕನ್ಯಾದಾನಗಳನ್ನೂ, ಗಂಗಾತೀರದಲ್ಲಿ ಘೃತಪಾಯಸ ಅಪೂಪವ್ಯಂಜನ ಸಹಿತವಾದ ಅನ್ನದಿಂದ ಸಹಸ್ರ ಬ್ರಾಹ್ಮಣ ಭೋಜನವನ್ನೂ ಮಾಡಿಸಲಿ, ಆ ಪುಣ್ಯದಿಂದಾದರೂ ನಾನು ಸ್ವರ್ಗವನ್ನೈದುವೆನು, ಎಂಬದಾಗಿ ನನ್ನ ಕುಮಾರನಿಗೆ ಪೇಳಬೇಕೆಂದು ದೈನ್ಯದಿಂ ನುಡಿದನು. ಅದುಕಾರಣದಿಂ ನೀನು ಸಕಲ ಪುಣ್ಯಂಗಳಂ ಮಾಡೆಂದು ಪುರೋಹಿತಂಗೆ ಪೇಳ್ದು, ಆ ರಾಯನಿಂದನುಜ್ಞಾತನಾಗಿ ಸ್ವರ್ಗಕ್ಕೆ ಪೋದನು.

ಬಳಿಕ ರಾಜಶ್ರೇಷ್ಠನಾದ ವಿಧಾತೃವೆಂಬ ರಾಯನು ಆತನ ಪುರೋಹಿತನು ಸಹ ಆ ನಾರದವಾಕ್ಯಮಂ ಅಡಿಗಡಿಗೆ ನೆನೆದು ಅತ್ಯಂತ ಪುಣ್ಯಂಗಳಂ ಮಾಡಿದರು. ಆ ರಾಯನ ಪುರೋಹಿತನಾದ ಅಜಿತನೆಂಬ ಬ್ರಾಹ್ಮಣನು ತನ್ನ ಗೃಹಮಧ್ಯದಲ್ಲಿ ಕುಂಭದಲ್ಲಿ ನಿಕ್ಷೇಪಮಾಡಿದ್ದ ಧನಮಂ ತೆಗೆದುಕೊಂಡು, ಅತಿ ತ್ವರಿತದಿಂ ಗಂಗಾತೀರಕ್ಕೆ ಪೋಗಿ ಕಾಶೀ ಕಾಂಚೀ ಮುಂತಾದ ಪುರಗಳಲ್ಲಿಯು ಇತರವಾದ ಪುಣ್ಯಕ್ಷೇತ್ರಂಗಳಲ್ಲಿಯು ನಿತ್ಯದಲ್ಲಿಯು ಸಹಸ್ರ ಬ್ರಾಹ್ಮಣ ಸಂತರ್ಪಣಗಳಂ ಮಾಡಿಸುತ ದೀನರಿಗು ಅಂಧರಿಗು ಕೃಪಣರಿಗು ದರಿದ್ರರಿಗು ಸಹಸ್ರಾಯುತ ಕೋಟಿಗಳಾದ ಕನ್ಯಾದಾನ ಗೋದಾನ ಭೂದಾನಂಗಳಂ ಮಾಡಿ, ಮಾರ್ಗಂಗಳಲ್ಲಿ ಅರವಟ್ಟಿಗೆಗಳಂ ಕಟ್ಟಿಸಿ ಜಲದಾನಮಂ ಮಾಡಿಸಿ, ಅನೇಕ ಪುಷ್ಪಾರಾಮಗಳಂ ಸಮುದ್ರ ಸದೃಶಂಗಳಾದ ತಟಾಕಂಗಳಂ ಅವುಗಳ ತೀರಂಗಳಲ್ಲಿ ಅನೇಕ ಉದ್ಯಾನವನಂಗಳಂ ಸಹಾ ಉಂಟುಮಾಡಿದನು. ಮತ್ತಮಾ ದ್ವಿಜನು ಒಂದಾನೊಂದು ದಿವಸದಲ್ಲಿ ಒಂದು ತೀರ್ಥದಲ್ಲಿ ಉತ್ತಮವಾದೊಂದು ಪುಣ್ಯಮಂ ಮಾಡಿದನು, ಆ ಪುಣ್ಯದಿಂದಾತನ ತಂದೆಯು ನರಕದಿಂದೆದ್ದು ದಿವ್ಯ ವಿಮಾನವ ನೇರಿ ಸ್ವರ್ಗಕ್ಕೆ ಪೋಗಿ, ಅಲ್ಲಿ ಚಿರಕಾಲವು ದಿವ್ಯಭೋಗಂಗಳಂ ಅನುಭವಿಸಿ, ಇತರ ದಿವಸಗಳಲ್ಲಿ ಮಾಡಿದ ಪುಣ್ಯರಾಜಿಗಳಿಂದ ಉತ್ತರೋತ್ತರ ಸುಖಂಗಳನ್ನನುಭವಿಸಿಕೊಂಡಿದ್ದನು. ಇದಲ್ಲದೆ ಈ ಅಜಿತನೆಂಬ ಬ್ರಾಹ್ಮಣನು ಒಂದು ದಿವಸ ವಿಂಧ್ಯ ಪರ್ವತದ ಪಾದದಲ್ಲಿ ಹರಿಯುತಲಿರುವ ನರ್ಮದಾನದಿಗೆ ಬಂದು ಸ್ನಾನಮಂ ಗೈದು, ದೇವರ್ಷಿ ಪಿತೃತರ್ಪಣಂಗಳಂ ಮಾಡಿ ಸಂಧ್ಯೆಯಂ ತೀರಿಸಿಕೊಂಡು, ಬಹು ಬ್ರಾಹ್ಮಣರಿಗೆ ವಿಶೇಷವಾಗಿ ಅನ್ನವನಿಟ್ಟು ಕೆಲವುಕಾಲದಲ್ಲಿಯೇ ಇದ್ದನು. ಆಗೆ ಒಂದಾನೊಂದು ದಿವಸದಲ್ಲಿ ಘೃತ ಸೂಪಫಲ ಸಮೇತವಾದ ಅನ್ನಂಗಳಿಂ ಸಹಸ್ರ ಬ್ರಾಹ್ಮಣ ಭೋಜನಮಂ ಮಾಡಿಸುತ್ತಿರಲು, ಕೆಲಂಬರಿಗೆ ಕದಳೀ ಫಲಂಗಳಿಲ್ಲದೆ ಪೋದವು, ಆಗ ಈ ದ್ವಿಜನು ಅತ್ಯಂತ ದುಃಖಿತನಾಗಿ ತನ್ನ

ಪುರೋಹಿತನಂ ಕರದು, ಎಲೈ ದ್ವಿಜವರನೆ! ಬ್ರಾಹ್ಮಣರಿಗೆ ನೂರು ಕದಳೀ ಫಲಂಗಳಿಲ್ಲದೆ ಪೋದವು, ಆವ ಬಳಿ ಎಲ್ಲಾದರೂ ಕೊಂಡು ಬಾ ಎಂದು ಪೇಳೆ, ಆ ಪುರೋಹಿತನು ಇಲ್ಲಿ ಕದಳೀ ಫಲಂಗಳು ದೊರಿಯವು, ಅನ್ಯಗ್ರಾಮದಿಂದ ನಾಳೆ ನಾಳಿದ್ದು ತರಿಸೇನು, ಇದ್ದ ಹಾಗೆ ಬ್ರಾಹ್ಮಣರು ಭುಂಜಿಸಲಿ, ಅದರಿಂ ನಿಯಮಭಂಗ ವಾಗಲಿಲ್ಲ, ಈ ವಿಂಧ್ಯಾಟವಿಯಲ್ಲಿ ವಿಶೇಷವಾಗಿ ಆವ ಬ್ರಾಹ್ಮಣ ರಿಗೆ ಕದಳೀ ಫಲಂಗಳು ಸಾಲದೇ ಪೋಗುವವೋ, ಅವರಿಗೆ ನಾಳೆ ನಾಳಿದ್ದು ದ್ವಿಗುಣ ಫಲಂಗಳನ್ನಿಡಬಹುದೆಂದನು. ಬಳಿಕ ಆ ಅಜಿತನು ತನ್ನ ಕರ್ಣಗಳಲ್ಲಿ ಕರಗಳನಿರಿಸಿ ಹೇಗೆ ವ್ರತಭಂಗವಾಗದಿರುವದೋ ಹಾಗೆ ಮಾಡುವನಾಗು, ನಿನಗೆ ನಮಸ್ಕರಿಸೆ, ಆ ಪುರೋಹಿತನು ಚಿಂತಾವ್ಯಾಕುಲನಾಗಿರ್ದನು.

ಕದಳೀಫಲ ರಹಿತ ಭೋಜನ ನಿಕೃಷ್ಟತೆ.

ಆ ಸಮಯದಲ್ಲಿ ಆತನ ಸಮೀಪದಲ್ಲಿರ್ದ ಸುತೀರ್ಥನೆಂಬ ಓರ್ವ ಬ್ರಾಹ್ಮ ಣನು ಚಿಂತಾತುರನಾದ ಆತನಂ ಕುರಿತು, ಎಲೈ ಪುರೋಹಿತನೆ! ಈ ಸಮೀಪದಲ್ಲಿ ಪಶ್ಚಿಮಭಾಗದೊಳು ಭೀಮೇಶ್ವರಂಗಾಶ್ರಯವಾದ ಕ್ಷೇತ್ರದಲ್ಲಿ ಅನೇಕ ಕದಳೀ ತೋಟಗಳಿರುವವು. ಅಲ್ಲಿ ನೂರು ವರಹಗಳಿಗಾದೊಡಂ ಕದಳೀ ಫಲಂಗಳು ದೊರೆಯುವವು. ಎಂದು ನುಡಿಯಲಾಗಿ, ಪುರೋಹಿತನಾತನ ವಾಕ್ಯವಂ ಕೇಳಿ ಮುದದಿಂ ತನ್ನ ಭೃತ್ಯರಂ ಕರೆದು ಬಹು ದ್ರವ್ಯವಂ ಕೊಟ್ಟು ಕಳುಹಿದನು. ಆಗ ಆತನ ಭೃತ್ಯರು ತ್ವರಿತವಾಗಿ ಶಿವಾಲಯಕ್ಕೆ ಪೋಗಿ ಅರ್ಚಕರಂ ಕಂಡು ಕ್ರಯಕ್ಕೆ ಕದಳೀ ಫಲಗಳನ್ನು ಕೇಳಲಾಗಿ, ಆ ಪೂಜಕರು ಭೀಮೇಶ್ವರನ ಅಭಿ ಷೇಕಕ್ಕೆ ಬೇಕಾದ್ದನ್ನು ನಾವು ಕ್ರಯಕ್ಕೆ ಕೊಡುವುದಿಲ್ಲವೆಂದರು. ಬಳಿಕ ಆತನ ಭೃತ್ಯರು ಆ ಪುರದ ರಾಜಾಧಿಕಾರಿಯ ಸಮೀಪಕ್ಕೆ ಪೋಗಿ ಆತನೊಡನೆ ಈ ವೃತ್ತಾಂತವಂ ಪೇಳ್ದು, ರಾಜಪುರುಷರಂ ಕರದುಕೊಂಡು ಬಂದು ಆ ಪೂಜಕ ರಿಗೆ ಬಲವಂತದಿಂ ದ್ರವ್ಯವಕೊಟ್ಟು, ಆ ಕದಳೀ ಫಲಗಳನ್ನೆಲ್ಲವಂ ಕೊಂಡು ಪೋಗಿ, ಕದಳೀಫಲ ರಹಿತವಾಗಿ ಭುಜಿಸುವ ಬ್ರಾಹ್ಮಣರಿಗೆ ಯಥೇಷ್ಟವಾಗಿ ತ್ತರು. ಆಗ ಭೀಮೇಶ್ವರನ ಅರ್ಚಕರು ರಾಯನ ಸಮೀಪಕ್ಕೆ ಪೋಗಿ ಪೇಳೆ, ಆ ರಾಯನು ಅಜಿತನು ಮಾಡಿದ ಅನ್ನದಾನದ ವೈಭವವಂ ಕೇಳಿ, ಇವರ ವಾಕ್ಯ ವಂ ಕೇಳದೆ ಪರಾಙ್ಮುಖನಾಗಿದ್ದನು. ಏಕೆಂದರೆ ಆ ರಾಜನ ಅಧಿಕಾರಿಯು ರಾಜನ ಸಮೀಪಕ್ಕೆ ಬಂದು ಅಜಿತನು ಮಾಡುವ ತೀರ್ಥಯಾತ್ರೆಯಂ ಅನ್ನದಾನ ಗೋದಾನ ಭೂದಾನಾದಿ ಸತ್ಕರ್ಮಗಳಂ ತಿಳುಹಿ, ಎಲೈ ರಾಯನೆ! ಈ ದಿವಸ ನರ್ಮದಾತೀರದಲ್ಲಿ ಬ್ರಾಹ್ಮಣ ಭೋಜನವಂ ಮಾಡಿಸುತಿರಲು, ಕದಳೀ ಫಲಂಗ ಳಿಲ್ಲದೆ ಹತ್ತು ಹಣವಂ ಕೊಟ್ಟು ಭೀಮೇಶ್ವರಾಲಯದಲ್ಲಿರುವ ಫಲಂಗಳಂ

ತೆಗದುಕೊಂಡು ಬಂದು ಬ್ರಾಹ್ಮಣ ಸಂತರ್ಪಣೆಯಂ ಮಾಡಿದನೆಂದನು. ಬಳಿಕ ಆ ರಾಯನು ಈ ವೃತ್ತಾಂತವಂ ಕೇಳಿ ಅತ್ಯಂತ ಪ್ರೀತನಾಗಿ ಆ ಅಜಿತಂಗೆ ಕಾಣಿಕೆಯನಿತ್ತು ಕಳುಹಿಸಿದನು. ಬಳಿಕ ಭೀಮೇಶ್ವರನ ಅರ್ಚಕರು ರಾಯನ ಸಮೀಪಕ್ಕೆ ಬಂದು, ಎಲೈ ರಾಯನೆ! ಶಿವನ ಅಭಿಷೇಕಕ್ಕು ನೈವೇದ್ಯಕ್ಕು ಬೇಕಾದ ಕದಳೀ ಫಲಗಳನ್ನು ನಾವು ಒಂದುಬಾರಿಯಾದೊಡಂ ಕ್ರಯಕ್ಕೆ ಕೊಡಲಿಲ್ಲ, ಈಗನಿನ್ನಿಂದ ಸ್ವಾಮಿಯ ಅಭಿಷೇಕ ನೈವೇದ್ಯಂಗಳಿಗೆ ವಿಘ್ನ ಬಂದುದು. ಆ ಅಜಿತನ ಪುರೋಹಿತನು ರಾಜಾಧಿಕಾರಿಯಂ ಕರದುಕೊಂಡು ಬಂದು ಬಲಾತ್ಕಾರದಿಂ ಹತ್ತು ಹಣಗಳಂ ಕೊಟ್ಟು ಆ ವೃಕ್ಷಗಳಂ ಛೇದಿಸಿ ಫಲಂಗಳಂ ತೆಗದುಕೊಂಡು ಪೋದನು. ಇದುವರಿವಿಗು ಶಿವದ್ರೋಹವುಂಟಾಗಲಿಲ್ಲವೆನಲು, ರಾಯನು ಎಲೈ ಪೂಜಕರಿರಾ! ನಿಮಗೆ ಹತ್ತು ಹಣವಂ ಕೊಟ್ಟು ತೆಗೆದುಕೊಂಡು ಪೋದರಷ್ಟೆ, ಮುಂದು ವಿಕ್ರಯಿಸಬೇಡಿರೆಂದು ಪೇಳಿ ಸುಮ್ಮನಿದ್ದನು. ಬಳಿಕ ಆ ಅರ್ಚಕರು ಹಾಹಾ! ಈತನೆ ಶಿವದ್ರೋಹಿಯು, ಅವರಲ್ಲವೆಂದು ಪೇಳ್ದು ದೇವಾಲಯಕ್ಕೆ ಪೋಗಲು, ರಾಯನು ತನ್ನ ಅಂತಃಪುರಕ್ಕೆ ಪೋದನು.

ಕದಳೀಫಲಚೌರ್ಯ ಫಲಾನುಭವ ವರ್ಣನಂ.

ಎಲೈ ಮುನಿಗಳಿರಾ! ಆ ರಾಯನು ಶಿವಾರ್ಪಿತವಾಗುವ ಕದಳೀ ಫಲವನವನ್ನು ಅಪಹಾರಂ ಗೈದವರಿಗೆ ಶಿಕ್ಷೆಯಂ ಮಾಡಿಸದೆ ಉಪೇಕ್ಷೆಯಂ ಮಾಡಿದ ಪಾಪದಿಂದ ಆತನ ಪಿತೃಗಳಂ ಯಮದೂತರು ಸ್ವರ್ಗದಿಂದೆಳತಂದು ನರಕದಲ್ಲಿ ಕೆಡಹಿದರು. ಅಂದು ಮೊದಲಾಗಿ ಆ ರಾಯನು ಕ್ಷಯರೋಗ ಪೀಡಿತನಾಗಿ ಎಂಟು ದಿವಸಗಳೊಳಗಾಗಿ ಮೃತನಾದನು. ಯಮದೂತರು ಆತನಂ ನರಕಕ್ಕೆ ಕೊಂಡೊಯ್ದರು. ಆತನ ರಾಜ್ಯವನ್ನು ವೈರಿಗಳಪಹರಿಸಿದರು. ಪುರೋಹಿತನಿಗೆ ನೇತ್ರೋತ್ಪಾಟನವಾಗಿ ಆ ವ್ರಣದಿಂದಾತನು ಮರಣವನ್ನೈದಿದನು. ಆಗ ಯಮದೂತರು ಸ್ವರ್ಗದಲ್ಲಿರ್ಪ ಆತನ ಪಿತೃಗಳನ್ನು ಎಳತಂದು ಆತನೊಡನೆ ನರಕದಲ್ಲಿ ಕೆಡಹಿದರು. ಇದಲ್ಲದೆ ಭೀಮೇಶ್ವರನ ಆಲಯದಲ್ಲಿ ಫಲಂಗಳಿರುವವೆಂದು ಪೇಳಿದ ಬ್ರಾಹ್ಮಣನು ವ್ಯಾಧಿಯಿಂ ಪೀಡಿತನಾಗಿ ಪ್ರಾಣವಂ ಬಿಟ್ಟು ಪಿತ್ರಾದಿಗಳೊಡನೆ ನರಕದಲ್ಲಿ ಬಿದ್ದನು. ಆ ರಾಜಾಧಿಕಾರಿಯು ಸರ್ಪದಷ್ಟನಾಗಿ ಪ್ರಾಣವಂ ಬಿಟ್ಟನು. ಮತ್ತಂ ಆರು ಈ ಕದಳೀ ಫಲಂಗಳಂ ಭುಂಜಿಸಿದರೋ ಅವರುಗಳು ಮಹೋದರ ವ್ಯಾಧಿಯಿಂ ಪೀಡಿತರಾಗಿ ಪ್ರಾಣಂಗಳಂ ಬಿಟ್ಟು ತಮ್ಮ ತಮ್ಮ ವಂಶಗಳ್ವೆರಸಿ ನರಕದಲ್ಲಿ ಬಿದ್ದರು. ಇದಲ್ಲದೆ ಬಾಳೆಗೊನೆಗಳನ್ನು ತರಿಸಿದಂಥ ಆ ಕೇಸರಿಯೆಂಬ ಬ್ರಾಹ್ಮಣನು ಕರದಲ್ಲಿ ಮಹಾ ವ್ರಣವುಂಟಾಗಿ ಆ ವ್ರಣದಲ್ಲಿ ಕ್ರಿಮಿಗಳು ಪುಟ್ಟಿ, ಆ ವೇದನೆಯಿಂದ ಮೃತನಾಗಿ ತನ್ನ

ವಂಶಸಹ ನರಕದಲ್ಲಿ ಬಿದ್ದಿದಾನೆ, ಎಲೈ ಋಷಿಗಳಿರಾ! ಹೀಗೆ ಶಿವದ್ರೋಹವಂ ಮಾಡಿದ ರಾಯನು ಪುರೋಹಿತನು ಪುರೋಹಿತನ ಪುರೋಹಿತನು ರಾಜಾಧಿಕಾರಿಯು ಭೃತ್ಯರುಂ ಪೇಳಿದಂಥವರುಂ ಭುಂಜಿಸಿದವರುಂ ವೃಕ್ಷಚ್ಛೇದಕರುಂ ಇವರೆಲ್ಲರು ತಮ್ಮ ತಮ್ಮ ವಂಶ ಸಮೇತರಾಗಿ ನರಕದಲ್ಲಿ ಬಿದ್ದು ಈಗಲೂ ಯಾತನೆಗಳನ್ನು ಅನುಭವಿಸುತ್ತಿದಾರೆ, ಇದಕ್ಕೆ ಪ್ರಾಯಶ್ಚಿತ್ತವೇ ಇಲ್ಲವೆಂದು ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ, ಉಪದೇಶಕಾಂಡದೊಳು ಐವತ್ತೊಂದನೆಯ ಅಧ್ಯಾಯವು ಸಂಪೂರ್ಣಮಾದುದು.

ಐವತ್ತೆರಡನೆಯ ಅಧ್ಯಾಯವು.

ಸವಿತ್ರು, ಬ್ರಾಹ್ಮಣಕುಮಾರರ ಕಥೆ.

ಕೇಳಿರೈ ಋಷಿಗಳಿರಾ! ಶಿವಕ್ಷೇತ್ರವ ಅಪಹರಿಸಿದವರ ದುರ್ಗತಿಯಂ ಪೇಳುವೆನು ಏನೆಂದರೆ, ಶೃಂಖಲವೆಂಬ ದೇಶದೋಳ್ ಭೂಕ್ರವೆಂಬ ಪುರದಲ್ಲಿ ವೇದಶಾಸ್ತ್ರ ಸಂಪನ್ನನಾದ ಧನಿಕನಾದೊಡಂ ಶಾಂತನಾದ ಸವಿತ್ರುವೆಂಬ ಬ್ರಾಹ್ಮಣನಿದ್ದನು. ಆತಂಗೆ ಮೂರು ಮಂದಿ ಕುಮಾರರು ಪುಟ್ಟಿದರು. ಅವರೊಳಗೆ ಧಾರ್ಮಿಕನಾದ ಜ್ಯೇಷ್ಠಪುತ್ರನು ಹರೀಶ್ವರವೆಂಬ ಶಿವಕ್ಷೇತ್ರದಲ್ಲಿರ್ಪ ಪರಮೇಶ್ವರಂಗೆ ನೈವೇದ್ಯಾರ್ಥವಾಗಿ ತನ್ನ ಭಾಗಕ್ಕೆ ಬಂದ ಕ್ಷೇತ್ರವನಿತ್ತು, ಎಂಟು ದಿವಸಗಳೊಳಗೆ ವಿರಕ್ತನಾಗಿ ಅನೇಕ ಧನವಂ ಬಿಟ್ಟು ಬದರಿಕಾಶ್ರಮಕ್ಕೆ ಪೋಗಿ, ಶಿವಪಾದಾರವಿಂದ ಧ್ಯಾನವಂ ಮಾಡುತ ತಪವಂ ಮಾಡುತಿರ್ದನು. ಬಳಿಕ ಶಿವಭಕ್ತರು ಆ ಶಿವಕ್ಷೇತ್ರವಂ ನೋಡಲು ಪೋಗೆ, ಆತನ ಪಿತೃವು ಬಹು ರೋದನವಂ ಮಾಡಿ, ಎಲೈ ಶಿವಭಕ್ತರಿರಾ! ನನ್ನ ಕುಮಾರನು ಪಿತ್ತಭ್ರಮೆಯಿಂದ ಹೀಗೆಮಾಡಿ ಗೃಹವಂ ಬಿಟ್ಟು ವನಾಂತರಕ್ಕೆ ಪೋದನು. ನನ್ನ ಸುಜ್ಞೆಯಿಲ್ಲದೆ ಕ್ಷೇತ್ರಂಗಳಂ ಕೊಟ್ಟನು, ಧರ್ಮಸಾಧನ ಪತ್ರವಿಲ್ಲದಿದ್ದಮೇಲೆ ಭ್ರಾಂತನು ಕೊಟ್ಟ ಕ್ಷೇತ್ರವು ಹೇಗೆ ಬಂದೀತೆಂದು ಹಾಸ್ಯವಂ ಮಾಡಿ, ಪುತ್ರನಿಂದ ಕೊಡಲ್ಪಟ್ಟ ಕ್ಷೇತ್ರವಂ ತೆಗೆದುಕೊಂಡನು. ಆಗ ಶಿವಭಕ್ತರು ಆ ಸವಿತ್ರುವೆಂಬ ಬ್ರಾಹ್ಮಣನಮೇಲೆ ಕೋಪವಂ ಮಾಡಿ, ಆ ದೇಶದ ರಾಯನ ಸಮೀಪಕ್ಕೆ ಪೋಗಿ ಈ ವೃತ್ತಾಂತವಂ ಪೇಳಲಾಗಿ, ರಾಯನದಂ ಕೇಳಿ ಆ ಬ್ರಾಹ್ಮಣನಂ ಕರೆಯಿಸಿ, ಎಲೈ ಬ್ರಾಹ್ಮಣನೆ! ಕನ್ಯಾ ಭೂದಾನಂಗಳಂ ಮಾಡಿದ ಮೇಲೆ ತಿರುಗುವದಿಲ್ಲ. ನಿನ್ನ ಭಾಗಕ್ಕೆ ಬಂದ ದ್ರವ್ಯವಂ ತೆಗೆದುಕೊಂಡು ಸುಖದಿಂದಿರೆಂದು ನಿರೂಪಿಸೆ, ಅಂದುಮೊದಲಾಗಿ ಅದು ಶಿವಕ್ಷೇತ್ರವಾದುದು.

ಬಳಿಕ ಆ ರಾಯನು ಸ್ವರ್ಗಸ್ಥನಾಗಲು, ಮರಳಿ ಆ ಬ್ರಾಹ್ಮಣನು ಆ ಶಿವಭಕ್ತರೊಡನೆ ಕಲಹಮಂ ಮಾಡಿ ಆ ಕ್ಷೇತ್ರವನ್ನಪಹರಿಸಿದನು. ಅನಂತರದಲ್ಲಿ ಆ ದೇಶದಲ್ಲಿ ಮತ್ತೋರ್ವರಾಯನು ಆಳುತ್ತಿರೆ ಮರಳಿ ಶಿವಭಕ್ತರು ಆ ರಾಯನ ಸಮೀಪಕ್ಕೆ ಪೋಗಿ ಈ ವೃತ್ತಾಂತವಂ ಪೇಳಲಾಗಿ, ರಾಯನದಂ ಕೇಳಿ ಆ ಬ್ರಾಹ್ಮಣನಂ ಕರೆಯಿಸಿ ಆ ಕ್ಷೇತ್ರವಂ ಬಿಡಿಸಿ ಆತನು ಮಾಡಿದ ಅಪರಾಧಕ್ಕೆ ಆತನ ಸರ್ವಸ್ವವಂ ತೆಗದುಕೊಂಡು ದೇಶವಂ ಬಿಟ್ಟು ದಾಟಿಸಿದನು. ಬಳಿಕ ಆ ದ್ವಿಜನು ಅತ್ಯಂತ ದುಃಖಿತನಾಗಿ ಬಹು ದೇಶಂಗಳಂ ತಿರುಗಿ ಮಗಧ ದೇಶದ ರಾಯನ ಸಮೀಪಕ್ಕೆ ಪೋಗಿ ಈ ವೃತ್ತಾಂತವಂ ಪೇಳಲಾಗಿ ಆ ರಾಯನು, ಎಲೈ ಬ್ರಾಹ್ಮಣನೆ ಭಯಪಡದಿರು ಇಂದು ಮೊದಲಾಗಿ ನೀನು ನನ್ನ ಬಳಿಗೆ ಬಂದು ಆಶೀರ್ವಾದಂಗಳಂ ಮಾಡುತ್ತ ಸುಖವಾಗಿರೆಂದು ಪೇಳ್ದು ಸಮೀಪದಲ್ಲಿರಿಸಿಕೊಂಡಿದ್ದನು. ಬಳಿಕ ವಿಶಾಂತನೆಂಬ ಆ ರಾಯನ ಪುರೋಹಿತನು, ಎಲೈ ದ್ವಿಜನೆ ನೀನು ಶಿವದ್ರೋಹಿಯು, ಶಿವದ್ರೋಹಮಂ ಮಾಡಿದವರನ್ನು ವಿಚಾರಿಸದೆ ಸದ್ಯೋವಧೆಯಂ ಮಾಡಬೇಕು, ಹಾಗೆ ಮಾಡದೆ ಆ ರಾಯನು ತನ್ನ ದೇಶದಿಂ ಪೊರಮಡಿಸಿದನು, ನೀನು ಮಾಡಿದ ಶಿವದ್ರೋಹಕ್ಕೆ ನಾನು ಪ್ರಾಯಶ್ಚಿತ್ತವಂ ಮಾಡುತ್ತಿದೇನೆಂದು ನುಡಿದು, ಬಂದು ಖಡ್ಗವಂ ತೆಗೆದುಕೊಂಡು ಆತನ ಕರವಂ ಕತ್ತರಿಸಿದನು. ರಾಯನದಂ ಕಂಡು ಮೂರ್ಖತನದಿಂ ಪುರೋಹಿತನ ಮೇಲೆ ಕೋಪಿಸಲಾಗಿ ಆ ಪುರೋಹಿತನು ಬಹು ರೋಷದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ ಆ ರಾಯನ ಶಿರಚ್ಛೇದನವಂ ಮಾಡಿದನು. ಶಿವದ್ರೋಹಿಯಾದ ಬ್ರಾಹ್ಮಣನೂ ಆತಂಗೆ ಅಭಯವನ್ನಿತ್ತ ರಾಯನು ಸಹ ಆ ಕ್ಷಣದಲ್ಲಿಯೇ ಪ್ರಾಣಂಗಳಂ ಬಿಟ್ಟರು. ಬಳಿಕ ಆ ರಾಯನ ಸೇನೆಗಳಿದಂ ಕಂಡು ಅತ್ಯಂತ ಕೋಪಿಗಳಾಗಿ ಕೊಲ್ಲಿರಿ ಕೊಲ್ಲಿರಿ, ಬಡಿಯಿರಿ ಬಡಿಯಿರಿ, ಎಂದು ರಭಸದಿಂ ಕೂಗುತ್ತ ಆ ಪುರೋಹಿತನ ಸಮೀಪಕ್ಕೆ ಬಂದು ಭ್ರಾಂತರಾಗಿ ಅನ್ಯೋನ್ಯ ಕಲಹಮಂ ಮಾಡಿದರು. ಆ ಬಳಿಕ ರಾಯನ ಕುಮಾರನು ಇದೆಲ್ಲವಂ ನೋಡಿ, ಪುರೋಹಿತನ ಸಮೀಪಕ್ಕೆ ಬಂದು ನಮಸ್ಕಾರಮಂ ಮಾಡಿ ಕೈಮುಗಿದು, ಎಲೈ ವಿಶಾಂತನೆ ದೇಶಾಂತರದಿಂದ ಬಂದ ಬ್ರಾಹ್ಮಣನನ್ನು ನನ್ನ ತಂದೆಯನ್ನು ಏನು ಕಾರಣ ಕೊಂದೆ? ಈ ಭಟರು ಅನ್ಯೋನ್ಯದಿಂ ಜಗಳವಾಡುವದಕ್ಕೆ ನಿಮಿತ್ತವೇನು, ಇವೆಲ್ಲವಂ ಪೇಳಬೇಕು. ಸಾಧುಗಳು ಭಕ್ತಪ್ರಿಯರಾಗಿರುವರು, ಅದು ಕಾರಣದಿಂ ನನ್ನ ಮೇಲೆ ದಯವಿಡಬೇಕೆನಲು, ಆ ಪುರೋಹಿತನು ಎಲೈ ರಾಜಕುಮಾರನೆ ದೇಶಾಂತರದ ಬ್ರಾಹ್ಮಣನು ಶಿವಕ್ಷೇತ್ರಾಪಹಾರಿಯು, ಈತನು ಅಸಂಭಾಷ್ಯನು ಅದು ಕಾರಣ ಈತಂಗೆ ವಧೆಯುಂಟಾದುದು. ಆತಂಗೆ ಸಹಾಯ

ವಾದುದರಿಂದ ನಿನ್ನ ತಂದೆಗು ವಧೆಯುಂಟಾಯಿತು. ಆ ನಿನ್ನ ತಂದೆಗೆ ಸಹಾಯವಾಗಿ ಬಂದ ಸೇನಾಸಮೂಹವು ಈಶ್ವರನ ಮಾಯೆಯಿಂದೇ ಕಡಿದಾಡಿ ಮಡಿದರೆಂದು ನಿರೂಪಿಸಿದನು. ಬಳಿಕ ರಾಜಪುತ್ರನದಂ ಕೇಳಿ ಭೀತನಾಗಿ, ಎಲೈ ವಿಶಾಂತನೆ! ಶಿವದ್ರೋಹವಂ ಮಾಡಿದವರಿಗೆ ಶಿಕ್ಷೆಯಂ ಮಾಡಿದುದು ಉಚಿತವೇ ಸರಿ, ಮತ್ತಂ ನನಗೊಂದು ಬುದ್ಧಿಯಂ ಪೇಳಿ ಕೃತಾರ್ಥನಂ ಮಾಡಬೇಕು, ಶಿವದ್ರೋಹಿಯಾದ ಬ್ರಾಹ್ಮಣ ವಧೆಯು ಆತಂಗೆ ಸಹಾಯಭೂತನಾದ ರಾಯನ ವಧೆಯು ಹಾಗಿರಲಿ, ಈಗ ನನ್ನ ಶಿರವನ್ನಾದರೂ ಛೇದಿಸಿ ಈ ಸೇನೆಗೆ ಪ್ರಾಣವಂ ಕೊಡಬೇಕೆನಲು, ಪುರೋಹಿತನಾವಾಕ್ಯವಂ ಕೇಳಿ ಎಲೈ ಸುಮಿತ್ರನೆ! ನೀನು ಬುದ್ಧಿಶಾಲಿಯು, ಶಿವದ್ರೋಹಿಗೆ ಸಹಾಯವಾಗಿ ಬಂದ ಪಿತೃಪಿನ ಪ್ರಾಣಂಗಳನಪೇಕ್ಷಿಸದೆ ಜನರ ಪ್ರಾಣಂಗಳಂ ಕೇಳಿದ್ದು ಚನ್ನಾಯಿತೆಂದು ಪೇಳ್ದು ಶಿವಮಹಿಮೆಯಿಂದವರಿಗೆ ಪ್ರಾಣಂಗಳಂ ಕೊಟ್ಟು ಆ ಕಲಹವಂ ನಿಲ್ಲಿಸಿದನು. ಬಳಿಕ ಆ ರಾಜಕುಮಾರನು ಆಶ್ಚರ್ಯಪಟ್ಟು ಮರಳಿ ಮರಳಿ ಪುರೋಹಿತಂಗೆ ನಮಸ್ಕರಿಸುತಿರೆ, ದೇವತೆಗಳು ಪುಷ್ಪವೃಷ್ಟಿಗಳಂ ಕರೆದರು. ದೇವದುಂದುಭಿಗಳು ಮೊಳಗಿದವು, ಮತ್ತಂ ನಂದಿಕೇಶ್ವರನನುಜ್ಞೆಯಿಂದ ವಿಮಾನಾರೂಢರಾಗಿ ಶಿವಗಣಂಗಳು ಬಂದು ಆಕಾಶದಲ್ಲಿ ನಿಂತು, ಎಲೈ ಬ್ರಾಹ್ಮಣನೆ! ನೀನು ದೃಢವ್ರತನು, ಕೃತಕೃತ್ಯನು, ಅದುಕಾರಣದಿಂ ವಿಮಾನವನ್ನೇರಿ ಶೀಘ್ರವಾಗಿ ಬಾರೆಂದು ಪೇಳೆ, ಆ ವಿಶಾಂತನೆಂಬ ಬ್ರಾಹ್ಮಣನು ಪುತ್ರ ಮಿತ್ರ ಕಳತ್ರ ಬಂಧುಗಳ್ವೆರೆಸಿ ವಿಮಾನವನೇರಿ ಕೈಲಾಸಕ್ಕೆ ಪೋದನು. ಈ ಶಿವಕ್ಷೇತ್ರಾಪಹಾರಿಯಾದ ಬ್ರಾಹ್ಮಣನು ಆತಂಗೆ ಸಹಾಯಕನಾದ ರಾಯನು ಇವರೀರ್ವರು ನರಕದಲ್ಲಿ ಬಿದ್ದು ಈಗಲು ಯಾತನೆಗಳನನುಭವಿಸುತ್ತಿದಾರೆಂದು ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ, ಉಪದೇಶಕಾಂಡದೊಳು ಐವತ್ತೆರಡನೆಯ ಅಧ್ಯಾಯವು ಸಂಪೂರ್ಣಮಾದುದು.

ಐವತ್ಮೂರನೆಯ ಅಧ್ಯಾಯವು.

ಧರ್ಮನಂದನನು ಯಮನ ಮೂಲಕ ನರಕಗಳ ವಿವರವನ್ನು ತಿಳಿಯುವಿಕೆ.

ಎಲೈ ಋಷಿಗಳಿರಾ! ಶಿವಪಶುಗಳ ನವಹಾರಂಗೈದವರ ದುರ್ಗತಿಯಂ ಪೇಳುತ್ತೇನೆ! ಸಾವಧಾನದಿಂ ಕೇಳಿರಿ. ಸತ್ಯಸಂಧನಾದ ಮಹಾ ಪರಾಕ್ರಮಿಯಾದ ಪಾಂಡುಪುತ್ರನಾದ ಧರ್ಮರಾಯನು ಸಹೋದರರಿಂ ದುರ್ಯೋಧನಾದಿ ಶತ್ರುಗಳಂ ಜಯಿಸಿ, ಭೂಭಾರವನ್ನಿಳುಹಿ ಸಶರೀರನಾಗಿ ಸ್ವರ್ಗಲೋಕಕ್ಕೆ

ಪೋಗುತ್ತಿರೆ, ಮಧ್ಯಮಾರ್ಗದಲ್ಲಿ ತನಗೆ ಪಿತೃವಾದ ಯಮನಂ ಕಂಡು ನಮಸ್ಕಾರವಂ ಮಾಡಿ, ಆ ಯಮನಿಂ ಬಹುಮಾನವಂ ಪಡೆದು ಹೋಗುವ ಸಮಯದಲ್ಲಿ, ಧರ್ಮಾಧರ್ಮ ವಿಚಾರಕನಾದ ಚಿತ್ರಗುಪ್ತನು ಯಮಂಗೆ ನಮಸ್ಕರಿಸಿ, ಎಲೈ ಯಮನೆ! ಪೂರ್ವದಲ್ಲಿ ಶತ್ರುಸಂಹಾರಾರ್ಥವಾಗಿ ನಿರ್ಬಂಧದಿಂದೀ ಧರ್ಮಪುತ್ರನು ಅಸತ್ಯವನ್ನಾಡಿದನು. ಅದುಕಾರಣದಿಂ ನರಕವಂ ನೋಡಿ ಬಳಿಕ ಸ್ವರ್ಗಕ್ಕೆ ಪೋಗಲೆಂದು ನುಡಿಯೆ, ಯಮನು ಹಾಗೇ ಆಗಲೆಂದು ಧರ್ಮರಾಯನೊಡನೆ ಪಾತಾಳಕ್ಕೆ ಪೋಗಿ ನರಕಗಳನ್ನು ದುರಾತ್ಮರ ಯಾತನೆಗಳಂ ಕ್ರಮದಿಂ ತೋರಿಸೆ, ಆ ಧರ್ಮರಾಯನು ಅನಲವೆಂಬ ನರಕದಲ್ಲಿ ಯಾತನೆಗಳನ್ನನುಭವಿಸುತಿರ್ಪವರಂ ನೋಡಿ ಭೀತನಾಗಿ, ಎಲೈ ಯಮನೆ! ಆವ ಪಾಪವಂ ಮಾಡಿದುದರಿಂದ ಇವರಿಗೆ ಈ ಬಾಧೆ ಯುಂಟಾದುದೆಂದು ಕೇಳಿದನು. ಬಳಿಕ ಯಮನು ಪುತ್ರನಂ ನೋಡಿ, ಎಲೈ ಪುತ್ರನೆ! ಶಿವದ್ರೋಹಿಗಳ ಕಥೆಯಂ ಪೇಳುತ್ತಿದೇನೆ ಸಾವಧಾನದಿಂ ಕೇಳು. ಕುಂಜರವೆಂಬ ದೇಶದಲ್ಲಿ ವಸುಧನೆಂಬ ಬ್ರಾಹ್ಮಣನಿರಲು, ದೇವೇಂದ್ರನು ಆತನಂ ಸ್ವರ್ಗಕ್ಕೆ ಕರೆಯಿಸಿ ಪ್ರತಿದಿನಸದಲ್ಲಿಯು ಸಹಸ್ರ ಹೊನ್ನಂ ಕೊಡುವ ಒಂದು ರತ್ನವನ್ನಿತ್ತು ಭೂಲೋಕದಲ್ಲಿ ಧರ್ಮವಂಮಾಡಿಕೊಂಡಿರೆಂದು ಪೇಳಿ ಪೇಳಿ ಕಳುಹಿಸಲಾಗಿ, ಆ ದ್ವಿಜನು ಭೂಲೋಕದಲ್ಲಿ ಬಹು ಧರ್ಮ ಮಾಡಿ, ಒಂದು ವೇಳೆಯಲ್ಲಿ ಸಹಸ್ರ ಗೋದಾನವಂ ಮಾಡಲಾಗಿ, ವಸಂತೇಶ್ವರಸ್ವಾಮಿಯ ಒಂದು ಗೋವು ಆ ಸಹಸ್ರ ಗೋವುಗಳಲ್ಲಿ ಬೆರೆತು ಬಂದುದು. ಬಳಿಕ ಆ ಶಿವಾಲಯದ ಅರ್ಚಕರು ಬಂದು ಎಲ ವಿದ್ವನ್ಮಣಿಯೆ! ದೇವದೇವನಾದ ವಸಂತೇಶ್ವರನ ಗೋವಂ ಬಿಡೆಂದು ನಿಷ್ಠುರ ವಾಕ್ಯವನ್ನಾಡೆ, ಎಲೈ ಶಿವಾರ್ಚಕರಿರಾ! ದೇವೇಂದ್ರನು ದಾನಮಾಡಲೋಸುಗ ಬಹು ದ್ರವ್ಯವಂ ಕೊಡುವಂಥ ರತ್ನವನ್ನಿತ್ತನು. ಹಾಗೆ ವಸಂತೇಶ್ವರನು ದಾನವಂಮಾಡಲೋಸುಗ ನನಗೆ ಒಂದು ಗೋವನ್ನಿತ್ತನು. ನೀವು ಪೋಗಿರೆಂದು ಪೇಳಲಾಗಿ, ಶಿವಾರ್ಚಕರು ಖಿನ್ನರಾಗಿ ಆ ದೇಶದ ರಾಯಂಗೆ ಪೇಳ್ದರು. ಬಳಿಕ ಆ ರಾಯನು ವಿಚಾರಿಸದೆ ಉಪೇಕ್ಷೆಯಂ ಮಾಡಲು, ಮಂತ್ರಿಯದಂ ಕಂಡು ಎಲೈ ರಾಯನೆ! ಇದನ್ನು ಉಪೇಕ್ಷಿಸಲಾಗದು, ಶಿವದ್ರೋಹಿಯಾದ ಆತನಂ ದಂಡಿಸಬೇಕೆಂದನು. ಅನಂತರದಲ್ಲಿ ರಾಯನು ಎಲೈ ಮಂತ್ರಿಯೆ! ಇಂದ್ರಾದಿಗಳಿಂ ಬಹುಮಾನವಂ ಪಡೆದಿರುವ ಆ ಬ್ರಾಹ್ಮಣನಂ ನಾನು ದಂಡಿಸಕೂಡದು. ಅದು ನನಗೆ ಪೊಳಪಟ್ಟದ್ದಲ್ಲೆಂದು ನುಡಿಯೆ, ಸುವೀರನೆಂಬ ಆ ಮಂತ್ರಿಯು ಈ ಶಿವದ್ರೋಹಿಗೆ ಸಹಾಯಕವಾದ ನಿನ್ನ ಬಳಿಯಲ್ಲಿರಬಾರದೆಂದು ಪೇಳ್ದು ವನಕ್ಕೆ ಪೋದನು. ಆಗ ಶಿವಾರ್ಚಕರು ಈ

ರಾಯನೆ ಶಿವದ್ರೋಹಿಯೆಂದು ಪೇಳ್ದು ಆ ಶಿವಾಲಯಕ್ಕೆ ಪೋದರು. ಮತ್ತಂ ಕೆಲವು ದಿವಸಗಳ ಮೇಲೆ ವಿಶಾಲನೆಂಬ ಆ ರಾಯನು ಕೋಪದಿಂ ಸುವೀರನೆಂಬ ಆ ಮಂತ್ರಿಯಂ ಕರೆಯಿಸೆ, ಆತನು ರಾಯನ ಸಮೀಪಕ್ಕೆ ಬಾರದೆ ಆ ವನದಲ್ಲಿಯೇ ಇದ್ದು, ಕುಟುಂಬ ಸಂರಕ್ಷಣವಂ ಮಾಡಿಕೊಳ್ಳಲಾರದೆ ಚಿಂತಾಕುಲನಾದನು. ಆಗ ದೇವೇಂದ್ರನು ಆತನ ರಕ್ಷಣಾರ್ಥವಾಗಿ ಕಾಮಧೇನುವಂ ಕಳುಹೆ ಮಂತ್ರಿಯು ಆ ಕಾಮಧೇನುವಿನಿಂ ಸುಖವಾಗಿರ್ದನು. ಮರಳಿ ವಿಶಾಲನೆಂಬ ರಾಯನು ಕೋಪದಿಂ ಸೇನಾಸಮೇತನಾಗಿ ವನಕ್ಕೆ ಬಂದು, ಬಲಾತ್ಕಾರದಿಂದೀತನಂ ಪಿಡಿಯಲ್ಬರುವ ಸಮಯದಲ್ಲಿ, ಒಂದಾನೊಂದು ಮದಗಜವು ನಿಗಳವಂ ಮುರಿದು ಆ ರಾಯನಂ ಸಂಹಾರವಂ ಮಾಡೆ, ಆತನ ಸೇನಾನಾಯಕ ಮುಂತಾದವರು ಶೋಕವಂ ಮಾಡುತ ಮರಳಿ ಪಟ್ಟಣಕ್ಕೆ ಪೋದರು.

ಬಳಿಕ ಚಿತ್ರಸೇನನೆಂಬ ಆತನ ಕುಮಾರನು ಪಟ್ಟಾಭಿಷಿಕ್ತನಾಗಿ, ವಿನಯದಿಂದಾಮಂತ್ರಿಯಂ ಕರೆಯಿಸೆ, ಆ ಮಂತ್ರಿಯು ಶಿವದ್ರೋಹಿಯಾದ ವಿದ್ವನ್ಮಣಿಯಂ ದಂಡನೆಯಂ ಮಾಡಿದಲ್ಲದೆ ಪುರವಂ ಪ್ರವೇಶಿಸುವದಿಲ್ಲೆಂದು ನುಡಿಯಲಾಗಿ, ಆ ರಾಜಕುಮಾರನು ಶಿವದ್ರೋಹಿಯಂ ಕರೆಯಿಸಿ ನೀನು ಚೋರನೆಂದು ಬಹು ನಿಷ್ಠೂರ ವಾಕ್ಯಗಳಂ ನುಡಿದು, ವಿಶೇಷವಾಗಿ ದಂಡಿಸಿದನು. ಆ ಸಮಯದಲ್ಲಿ ದೇವೇಂದ್ರನು ಭೂಲೋಕಕ್ಕೆ ಬಂದು ಆ ರತ್ನವಂ ತೆಗದು ಸುವೀರಂಗಿತ್ತು, ಪುಷ್ಪವೃಷ್ಟಿಗಳಂ ಕರೆದು ಸ್ವರ್ಗಕ್ಕೆ ಪೋದನು. ಮತ್ತಂ ಕಚ್ಛದೇಶಾಧಿಪತಿಯು ಶಿವಾಲಯದ ಗೋವಂ ಪ್ರತಿಗ್ರಹವಂ ಮಾಡಿದ ಅಸುವೆಂಬ ಬ್ರಾಹ್ಮಣನಂ ಗೋವು ಸಹ ಪಾಶದಿಂ ಕಟ್ಟಿ, ಚಿತ್ರಸೇನನೆಂಬ ರಾಯನ ಸಮೀಪಕ್ಕೆ ಕಳುಹೆ, ಆ ರಾಯನು ಗೋವಂ ಶಿವಾಲಯಕ್ಕೆ ಕಳುಹಿ ಆ ದ್ವಿಜಂಗೆ ನೇತ್ರೋತ್ಪಾಟನವಂ ಮಾಡಿಸಿ, ಕಚ್ಛದೇಶದ ನಿಯೋಗಿಗಳಂ ಕಳುಹಿದನು. ಆ ಅಸುವೆಂಬ ಬ್ರಾಹ್ಮಣನು ನೇತ್ರವಿಹೀನನಾಗಿ ಮೃತನಾದನು. ಗೋದಾನವಂ ಗೈದ ವಿದ್ವನ್ಮಣಿಯು ತೆಗದುಕೊಂಡ ಆ ಅಸುವೆಂಬ ಬ್ರಾಹ್ಮಣನು ಉಪೇಕ್ಷೆಮಾಡಿದ ವಿಶಾಲನೆಂಬ ರಾಯನು ಈ ಮೂರು ಮಂದಿಯು ತಮ್ಮ ತಮ್ಮ ವಂಶದವರು ಸಹಾ ಅನಲವೆಂಬ ಈ ಘೋರವಾದ ನರಕದಲ್ಲಿ ಬಿದ್ದು ಬಾಧೆ ಪಡುತ್ತಿದ್ದಾರೆಂದು ಯಮನು ಧರ್ಮರಾಯಂಗೆ ಪೇಳೆ, ಧರ್ಮರಾಯನದಂ ಕೇಳಿ ಶಿವದ್ರೋಹವಂ ಮಾಡಬಾರದಲ್ಲ, ಎಂದು ಪೇಳ್ದು ಆ ಯಮನಿಂ ದಪ್ಪಣೆಯಂ ತೆಗೆದುಕೊಂಡು ಯಮಲೋಕಕ್ಕೆ ಪೋದನೆಂದು

ಸೂತಂ ಶೌನಕಾದಿ ಮುನಿಗಳಿಗೆ ಪೇಳಿದ ನೆಂಬಲ್ಲಿಗೆ ಐವತ್ತೊಂದನೆಯ

ಅಧ್ಯಾಯವು ಅಧ್ಯಾಯವು ಸಂಪೂರ್ಣಮಾದುದು.

ಐವತ್ನಾಲ್ಕನೆಯ ಅಧ್ಯಾಯವು.

ಬ್ರಹ್ಮದೇವನು ಹಂಸವಾಹನಕ್ಕೆ ಶಿವರಹಸ್ಯವಂ ತಿಳಿಸುವಿಕೆ.

ಎಲೈ ಋಷಿಗಳಿರಾ! ವೃಷಭಮುದ್ರೆಯನುಳ್ಳ ಶಿವಾಲಯದ ಸ್ತ್ರೀಯರಂ ಅಪಹಾರಂಗೈದ ಶಿವದ್ರೋಹಿಗಳ ಕಥೆಯಂ ಪೇಳುತಿಪೇನೆ ಕೇಳಿರೈ, ಪೂರ್ವದಲ್ಲಿ ಬ್ರಹ್ಮದೇವನು ಸಕಲ ಜಗತ್ತಂ ನೋಡಬೇಕಾಗಿ ಹಂಸಾರೂಢನಾಗಿ ಸಂಚರಿಸುವಾಗ, ಯಮಲೋಕಕ್ಕೆ ಬಂದು ಕೆಲವು ನರಕಂಗಳಂ ನೋಡಿ, ಮುಂದಕ್ಕೆ ಪೋಗಬಾರದೆಂದು ಆ ಹಂಸಪಕ್ಷಿಯಂ ನಿಲ್ಲಿಸೆ, ಆ ಹಂಸವು ಎಲೈ ಚತುರ್ಮುಖನೆ! ಏನು ಕಾರಣ ಮುಂದಕ್ಕೆ ಪೋಗಬಾರದೆಂದು ಪೇಳ್ದಿಯೆಂದುದು. ಬಳಿಕ ಬ್ರಹ್ಮನು ಎಲೈ ಹಂಸವೆ! ಮುಂದೆ ಶಿವದ್ರೋಹಿಗಳ ಯಾತನಾಭೂಮಿಗಳು ಅದು ಕಾರಣ ನಿಂತೆನು. ಮತ್ತು ಆ ನರಕಂಗಳ ಮಧ್ಯದಲ್ಲಿ ಅಗ್ನಿಯಂತೆ ಜ್ವಲಿಸುತಿರುವ ಸ್ತಂಭದಲ್ಲಿ ಕಟ್ಟಿರುವ ಪುರುಷರ ರೋದನವಂ ಕೇಳೆಂದನು. ಮರಳಿ ಹಂಸವು ಈತ ನ್ಯಾವ ಶಿವದ್ರೋಹವಂ ಮಾಡಿದನೆಂದು ಕೇಳೆ ಆಗ ಬ್ರಹ್ಮನು ಎಲೈ ಹಂಸವೆ! ಕೇಳು, ಪೂರ್ವಕಾಲದಲ್ಲಿ ಸೌರಾಷ್ಟ್ರವೆಂಬ ದೇಶದಲ್ಲಿ ಸೌಸುತನೆಂಬ ವೈಶ್ಯನು ಸತ್ಯವಾಗಿ ವ್ಯಾಪಾರವಂ ಮಾಡುತ್ತ ಪ್ರತಿ ದಿವಸದಲ್ಲಿಯು ಭದ್ರಕಾಳಿಯ ಪೂಜೆಯಂ ಮಾಡುತ್ತಿದ್ದನು. ಒಂದು ಕಾಲದಲ್ಲಿ ಆ ವೈಶ್ಯನು ಹಡಗಿನ ಮೇಲೆ ಬಹು ದೂರ ಪೋಗಿ, ದ್ವೀಪಾಂತರದಿಂ ಬಹು ದ್ರವ್ಯವಂ ಸಂಪಾದಿಸಿಕ್ಕೊಂಡು ಬರುವ ಮಾರ್ಗದಲ್ಲಿ, ಆ ಹಡಗು ಚಂಡಮಾರುತದಿಂ ಬಡಿಯಲ್ಪಟ್ಟು ಮುಣುಗುತ್ತಿರೆ, ಭದ್ರಕಾಳಿಯಂ ಧ್ಯಾನಿಸಿ ಆಕೆಯ ಅನುಗ್ರಹದಿಂದ ಸಮಸ್ತ ವಸ್ತುಗಳ ಸಹಿತ ತನ್ನ ಮನೆಯಂ ಸೇರಿಸಿದನು. ಮತ್ತೊಂದು ಸಮಯದಲ್ಲಿ ಆ ವೈಶ್ಯನ ಕಲ್ಯಾಣವಂ ನೋಡಲು ಆ ಪಟ್ಟಣದಲ್ಲಿರುವ ಸಮಸ್ತ ಜನರುಂ ಸೌರೇಶ್ವರನ ಆಲಯದಲ್ಲಿರುವ ಸಮಸ್ತ ನರನಾರಿಯರು ಬಂದು ಸಂತೋಷದಿಂ ಭೋಜನವಂ ಮಾಡುತಿರೆ, ಆ ವೈಶ್ಯನು ಅವರಿಗೆ ಬಹುಮಾನಂಗಳಂ ಮಾಡಿ ಸರ್ವರಂ ಕಳುಹಿಸಿ, ಆ ಸೌರೇಶ್ವರನ ಆಲಯದ ವೃಷಭಮುದ್ರೆಯಾದ ಓರ್ವ ಸ್ತ್ರೀಯಂ ಕಂಡು ಕಾಮುಕನಾಗಿ, ಆಕೆಯಂ ಕಳುಹದೆ ರಾತ್ರಿಯೊಳು ಕ್ರೀಡಿಸಿ ಪ್ರಾತಃಕಾಲದಲ್ಲಿ ದೇವಾಲಯ ಸಂಮಾರ್ಜನೆಯಂ ಮಾಡುವದಕ್ಕೆ ಕಳುಹಿಸದೆ, ತನ್ನ ಮನೆಯ ದಾಸಿಯಂ ಕಳುಹಿದನು. ಆಗ ಆ ಆಲಯದ ಅಧಿಕಾರಿಗಳು ಧಿಕ್ಕರಿಸಿ ವೈಶ್ಯನ ಸಮೀಪಕ್ಕೆ ಬಂದು ವೃಷಭಮುದ್ರೆಯಾದ ಸ್ತ್ರೀಯಂ ಬಿಡು. ನಿನ್ನ ಸ್ತ್ರೀಯು ಅನ್ಯಪುರುಷನೊಡನೆ ರಮಿಸಿದರೆ ಹೇಗೋ ಹಾಗೆಂದು ಬಿಡೆಂದರು. ಬಳಿಕ ಆ ವೈಶ್ಯನು ಧನಗರ್ವದಿಂದ ಆಕೆಯಂ ಬಿಡದಿರಲು, ಶಿವಾಲಯಾಧಿಕಾರಿಗಳು

ಆ ದೇಶದ ರಾಯನ ಸಮೀಪಕ್ಕೆ ಪೋಗಿ ಈ ವೃತ್ತಾಂತವಂ ಪೇಳಲಾಗಿ, ರಾಯನದಂ ಕೇಳಿ ಮಂತ್ರಿಯಂ ಕರೆಯಿಸಿ ಆ ಸ್ತ್ರೀಯಂ ಬಿಡಿಸಿ ಬಾರೆಂದು ಪೇಳಿದನು. ಅನಂತರದಲ್ಲಿ ಆ ಮಂತ್ರಿಯು ಎಲೈ ರಾಯನೆ! ಆ ವೈಶ್ಯನು ಬಹು ಧನಿಕನು ಭದ್ರಕಾಳೀ ಉಪಾಸಕನು, ಆತನ ನಿಗ್ರಹವಂ ಮಾಡಬೇಡೆನಲಾಗಿ, ರಾಯನು ಕೋಪದಿಂ ಶಿವದ್ರೋಹಿಗೆ ಹೇಗೆ ಭದ್ರಕಾಳಿಯು ಸಹಾಯವಾಗುವಳು? ನೀನು ಮರಳಿ ಪೋಗಿ ಆ ಸ್ತ್ರೀಯಂ ಬಿಡಿಸೆಂದು ಪೇಳ್ವೊಡಂ, ಆ ಮಂತ್ರಿಯು ಪೋಗದೆ ನಿಂತಿರಲು, ರಾಯನು ಸೇನೆಯೊಡನೆ ತಾನೇ ಆತನ ಗೃಹಕ್ಕೆ ಪೋಗಿ, ಆ ಸ್ತ್ರೀಯಂ ಬಿಡೆಂದು ಕೋಪದಿಂ ನಿಗ್ರಹಿಸಲು ಯತ್ನವಂ ಮಾಡಿದನು. ಆಗ ಆ ವೈಶ್ಯನು ತನಗೆ ಇಷ್ಟದೇವತೆಯಾದ ಕಾಳಿಯಂ ನೆನೆಯೆ, ಆ ಭದ್ರಕಾಳಿಯು ಬಂದು ಎಲೈ ವೈಶ್ಯನೆ! ನೀನು ಶಿವದ್ರೋಹಿಯು, ನಿನಗೆ ದಂಡನೆಯಂ ಮಾಡಬೇಕೆಂದು ನುಡಿದು, ಎಲೈ ರಾಯನೆ! ಇವನು ಶಿವದ್ರೋಹಿಯಾದುದರಿಂದ ದಂಡಿಸೆಂದು ಪೇಳ್ದು ಅಂತರ್ಧಾನವಾದಳು.

ಶಿವರಹಸ್ಯ ವಿವೇಚನವು.

ಬಳಿಕ ಆ ರಾಯನು ವೈಶ್ಯನ ಸರ್ವಸ್ವವಂ ತೆಗೆದುಕೊಂಡು ಅವನಂ ಸಂಹರಿಸಿ, ಆತನ ಸ್ತ್ರೀಯರಂ ವೃಷಭ ಮುದ್ರಾಂಕಿತರಂ ಮಾಡಿ, ಸೌರೇಶ್ವರನ ಆಲಯಕ್ಕೆ ಪೋಗಿಸಿ, ಆ ವೈಶ್ಯ ನಿರಿಸಿಕೊಂಡಿದ್ದ ಸ್ತ್ರೀಯಂ ಸ್ನಾನವಂ ಮಾಡಿಸಿ, ಆ ದೇವಾಲಯಕ್ಕೆ ಪೋಗಿ ಸಮ್ಮಾರ್ಜನೆಯಂ ಮಾಡಿಕೊಂಡಿರೆಂದು ಪೇಳಿ ಕಳುಹಿಸಿದನು. ಬಳಿಕ ಆ ರಾಯನು ಶಿವದ್ರೋಹಿಗೆ ಸಹಾಯಕನಾದ ಮಂತ್ರಿಯಂ ಸಂಹರಿಸಿದನು. ಎಲೆ ಹಂಸವೆ! ಶಿವದ್ರೋಹಿಗಳಾದ ಆ ಅನಲವೆಂಬ ನರಕದ ಮಧ್ಯದಲ್ಲಿ ಜ್ವಲಿಸುತಿರ್ಪ ವಜ್ರಸ್ತಂಭದಲ್ಲಿ ಕಟ್ಟಲ್ಪಟ್ಟು ಘೋರವಾಗಿ ಧ್ವನಿಯಿಂ ಮೊರೆಯಿಡುತ್ತಿದ್ದಾರೆ. ಹೀಗೆ ಶಿವದ್ರೋಹಿಗಳ ಯಾತನಾ ಭೂಮಿಗಳು ಬಹಳವಾಗಿವೆ. ನಾವು ನೋಡಬಾರದೆಂದು ಹಂಸಂಗೆ ಪೇಳುತ ಸತ್ಯಲೋಕಕ್ಕೆ ಪೋದನೆಂದು ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ, ಉಪದೇಶಕಾಂಡದಲ್ಲಿ ಐವತ್ತಾಲ್ಕನೆಯ ಅಧ್ಯಾಯವು ಸಂಪೂರ್ಣಮಾದುದು.

ಐವತ್ತೈದನೆಯ ಅಧ್ಯಾಯವು.

ಶಿವದ್ರೋಹವಿವೇಚನಾಪ್ರಕರಣವು.

ಎಲೈ ಋಷಿಗಳಿರಾ! ಶಿವಾಲಯದ ತೈಲವನ್ನಪಹರಿಸಿದ ದ್ರೋಹಿಗಳ ಕಥೆಯಂ ಪೇಳುತ್ತಿದೇನೆ ಕೇಳಿರಿ. ಶಿವಭಕ್ತನಾದ ಶತಾನಂದನೆಂಬ ಮುನೀ

ಶ್ವರನು ಪ್ರತಿ ದಿವಸದಲ್ಲಿಯು ಕೈಲಾಸಕ್ಕೆ ಪೋಗಿ, ಮೂರು ಲೋಕದಲ್ಲಿಯು ನಡೆದ ವೃತ್ತಾಂತವಂ ಪೇಳುತ್ತಿದ್ದನು. ಆತನು ಒಂದು ವೇಳೆಯಲ್ಲಿ ಯಮ ಲೋಕಕ್ಕೆ ಪೋಗಿ ಯಮನು ಮಾಡಿದ ಪೂಜೆಯಂ ಕೈಕೊಂಡು, ಆತನೊಡನೆ ಬಹು ನರಕಂಗಳಂ ನೋಡಿ, ಅಲ್ಲಿ ಕೆಲವು ನರಕಿಗಳಂ ಕಂಡು, ಎಲೈ ಯಮನೆ! ಇವರೇನು ಪಾಪಮಾಡಿದರೆಂದು ಕೇಳಲಾಗಿ, ಆ ಯಮನು ಎಲೈ ಶಿವಯೋಗಿಯೆ! ನಾನರಿಯೆನು. ಇವರು ಪೂರ್ವದಲ್ಲಿ ಘೋರಿಗಳು ಶಿವದ್ರೋಹಿಗಳೆಂಬುವದಂ ಕೇಳಿಬಲ್ಲೆನೆನಲು, ಆ ಶಿವಯೋಗಿಯು ಬ್ರಹ್ಮಲೋಕಕ್ಕೆ ಪೋಗಿ ಬ್ರಹ್ಮಂಗೆ ನಮಸ್ಕಾರವಂ ಮಾಡಿ, ಎಲೈ ಬ್ರಹ್ಮನೆ! ನಾನು ಕೇಳುವ ವೃತ್ತಾಂತವಂ ಪೇಳಬೇಕೆಂದನು. ಬಳಿಕ ಬ್ರಹ್ಮನು ಕೆಲವು ಮಂದಿ ನರಕಿಗಳ ವೃತ್ತಾಂತಮಂ ಪೇಳ್ದು, ಎಲೈ ದ್ವಿಜನೆ! ನನ್ನಿಂದ ಸೃಷ್ಟಿಸಲ್ಪಟ್ಟ ಪ್ರಾಣಿಗಳಂ ರಕ್ಷಿಸುವ ವಿಷ್ಣುವು ನನ್ನಂತೆ ಪೂರ್ವದ ವೃತ್ತಾಂತವನ್ನರಿಯನು. ಆದರಿಂದ ನಮ್ಮಿರ್ವರಿಗು ಜನಕನಾದ ಶಿವನು ಬಲ್ಲನು. ಆತನಂ ಕೇಳೆಂದು ಪೇಳೆ, ಆ ಶತಾನಂದನು ಕೈಲಾಸಕ್ಕೆ ಸಾರಿ ಸ್ವಾಮಿಗೆ ನಮಸ್ಕಾರವಂ ಮಾಡಿ, ಎಲೈ ಶಿವನೆ! ನಾನು ಬ್ರಹ್ಮಾದಿಗಳ ಸಮೀಪಕ್ಕೆ ಪೋಗಿ ನರಕಿಗಳ ವೃತ್ತಾಂತವಂ ಕೇಳಿದೆನು. ಅವರು ಕೆಲವರ ವೃತ್ತಾಂತವು ತಿಳಿಯದು. ಶಿವನೋರ್ವನೆ ಬಲ್ಲನೆಂದು ಪೇಳ್ದರು. ಆ ನರಕಿಗಳು ಮಾಡಿದ ಪಾಪಂಗಳಂ ನನಗೆ ಪೇಳಬೇಕೆನಲು, ಪರಮೇಶ್ವರನು ನಂದೀಶ್ವರನಂ ಕರೆದು ಶತಾನಂದನ ಮನೋಭೀಷ್ಟವಂ ಪೇಳೆಂದನು. ಆಗ ನಂದೀಶ್ವರನು ಶತಾನಂದನಂ ತನ್ನ ಭವನಕ್ಕೆ ಕರೆದುಕೊಂಡು ಪೋಗಿ, ಎಲೈ ಮುನೀಶ್ವರನೆ! ನಿನ್ನ ಅಭೀಷ್ಟವಂ ಪೇಳೆನಲಾಗಿ, ಆ ಶತಾನಂದನು ಎಲೈ ನಂದೀಶ್ವರನೆ! ನಾನು ಒಂದು ವೇಳೆ ನರಕಂಗಳಂ ನೋಡಲ್ಪೋಗೆ, ಅಲ್ಲಿ ಕೆಲವು ನರಕಿಗಳು ಅಗ್ನಿಯಿಂದ ಕಾಸಲ್ಪಟ್ಟ ತೈಲಕಟಾಹಗಳಲ್ಲಿ ಪಾಶದಿಂ ಬಿಗಿಯಿಸಲ್ಪಟ್ಟು ಅಧೋಮುಖವಾಗಿ ಬಿದ್ದು ಪಚನವಾಗುತ್ತಿದ್ದರು. ಮತ್ತೆ ಕೆಲಂಬರು ಕಾಯಲ್ಪಟ್ಟ ತಾಮ್ರಶಲಾಕಿಗಳಿಂದ ಕಣ್ಣು ಮೂಗು ಕಿವಿಗಳಲ್ಲಿಯುಂ ರೋಮಕೂಪಗಳಲ್ಲಿಯುಂ ಪೋಣಿಸಲ್ಪಟ್ಟವರಾಗಿ ಬಾಧೆಪಡುತ್ತಿದ್ದಾರೆ. ನಾನವರಂ ಕಂಡು ಬ್ರಹ್ಮ ಮುಂತಾದವರಂ ಕೇಳಿದೆನು. ಅವರು ನಾವರಿಯೆವೆಂದು ಪೇಳಿದರು. ಎಲೈ ನಂದಿಕೇಶ್ವರನೆ! ಅವರೊಳಗೆ ಓರ್ವನ ಕಥೆಯಂ ನನಗೆ ಪೇಳಬೇಕೆನಲು, ಆ ಸಮಯದಲ್ಲಿ ಬ್ರಹ್ಮ ವಿಷ್ಣುಗಳು ಶಿವ ಸೇವಾರ್ಥವಾಗಿ ಬಂದಿದ್ದಲ್ಲಿಗೆ ಬಂದರು. ಆಗ ನಂದೀಶ್ವರನು ಎಲೈ ಶಿವಯೋಗಿಯೆ! ವಿದರ್ಭದೇಶದಲ್ಲಿ ನೀತಿವಂತನಾದ ಸರ್ವಶಾಸ್ತ್ರಜ್ಞನಾದ ವಿಶ್ವಸೇನನೆಂಬ ರಾಯನು ಬೇಟೆಗೆ ಪೋಗಿ, ಬಳಿಕ ವಿಶ್ವೇಶ್ವರನ ಆಸ್ಥಾನ ಮಂಟಪಕ್ಕೆ

ಬಂದು ಶಿವಸನ್ನಿಧಿಯಲ್ಲಿ ಮಂಚದ ಮೇಲೆ ಮಲಗಿದನು. ದಕ್ಷಿಣನೆಂಬ ಆತನ ಪರಿಚಾರಕನು ಆತನ ಅಂಗಮರ್ದನಕ್ಕೋಸುಗ ತೈಲ ನಿಂಬೇಹಣ್ಣುಗಳನ್ನು ಆ ಪಟ್ಟಣದಲ್ಲಿ ತಿರಿಗಿ ಕಾಣದೆ, ಶಿವಾಲಯದಲ್ಲಿ ದೀಪಕ್ಕೆ ತಂದ ತೈಲವನ್ನು ಅಭಿಷೇಕಕ್ಕೆ ತಂದ ನಾಲ್ಕು ನಿಂಬೇ ಹಣ್ಣುಗಳನ್ನು ಬಲಾತ್ಕಾರದಿಂ ತೆಗದುಕೊಂಡು ಬಂದು, ಅಂಗಮರ್ದನವಂ ಮಾಡಿ ಸ್ನಾನವಂ ಗೈಯಿಸಿದನು. ಆ ಶಿವಾಲಯದ ಅಧಿಕಾರಿಗಳು ನಡುಗುತ ಆ ರಾಯನ ಸಮೀಪಕ್ಕೆ ಬಂದು ಈ ವೃತ್ತಾಂತವಂ ಸೂಚಿಸೆ, ರಾಯನದಂ ಕೇಳಿಯು ಕೇಳದ ಹಾಗೆ ತನ್ನ ನಗರಕ್ಕೆ ಪೋದನು. ಬಳಿಕ ಆ ಶಿವಾಲಯದ ಅಧಿಕಾರಿಗಳು ನಿಂದಿಸುತ್ತಾ ಬರೆ, ಆತನು ತನ್ನ ಪುರಕ್ಕೆ ಪೋಗಿ ನಿಷ್ಕಾರಣವಾಗಿ ಮೃತನಾದನು. ಆ ಬಳಿಕ ಆ ಕಲ್ಪದ ಯಮನು ಆತನಂ ಪಾಶದಿಂ ಕಟ್ಟಿ ತೈಲಕಟಾಹದಲ್ಲಿ ಪಚನವಂ ಮಾಡಿಸುತ್ತಿದ್ದನು. ಹಾಗೆಯೆ ಈ ಕಾಲದ ಯಮನು ಪಚನವಂ ಮಾಡಿಸುತ್ತಿದಾನೆ. ಊಳಿಗದವನು ಅದೇ ರೀತಿಯಲ್ಲಿ ಯಾತನೆಗಳನ್ನನುಭವಿಸುತ್ತಿದ್ದಾನೆ. ಅದು ಮೊದಲು ಇದುವರಿವಿಗೆ ಅನೇಕ ಬ್ರಹ್ಮ ವಿಷ್ಣುಗಳು ಹತರಾದರು. ಹೀಗಿರುವಲ್ಲಿ ಇಂದ್ರಾದಿಗಳ ಲೆಕ್ಕವೇ ನಿದ್ದೀತು? ಆ ರಾಯನ ವಂಶಸ್ಥರು ಊಳಿಗೆದವನ ವಂಶಸ್ಥರು ನರಕದಲ್ಲಿ ಬಿದ್ದು ಈಗಲು ಯಾತನೆ ಪಡುತ್ತಿದ್ದಾರೆಂದು ಪೇಳೆ, ಆ ಬ್ರಾಹ್ಮಣನು ಎಲೈ ನಂದೀಶ್ವರನೆ! ಸ್ವರ್ಣಸ್ತೇಯವಂ ಮಾಡಿದವರು ಯಾವ ನರಕಗಳಿಗೆ ಪೋಗುವರೋ ಅದಂ ಪೇಳಬೇಕೆಂದು ಕೇಳಿದ ನೆಂಬದಾಗಿ ಸೂತಂ ಶೌನಕಾದಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ಉಪದೇಶಕಾಂಡದಲ್ಲಿ ಐವತ್ತೈದನೆಯ ಅಧ್ಯಾಯವು ಸಂಪೂರ್ಣಮಾದುದು.

ಐವತ್ತಾರನೆಯ ಅಧ್ಯಾಯವು.

ವಜ್ರಪಾಲನ ಕಥೆ. ಶಿವದ್ರೋಹ ವಿವರಣ.

ಎಲೈ ಶತಾನಂದನೆ! ಗುರುದ್ರವ್ಯಾಪಹಾರಿಯ ಕಥೆಯಂ ಪೇಳುವೆನು ಕೇಳು, ಪೂರ್ವದಲ್ಲಿ ನೀಡವೆಂಬ ದೇಶದೊಳು ವಜ್ರಪಾಲನೆಂಬುವನು ಪುಣ್ಯವಂತನಾಗಿ ಗುಣಸಂಪನ್ನನಾಗಿ, ವೃತ್ತಿಯಿಂ ವೇದಿಕೆಯಂ ಗೈದು ಸೂರ್ಯನಮಸ್ಕಾರವಂ ಮಾಡುತಿರ್ದನು. ಆತನು ಒಂದು ವೇಳೆಯಲ್ಲಿ ಇಟ್ಟಿಕೆಯಿಂ ಜಗತಿಯಂ ಮಾಡಲ್ಬಯಸಿ ಎಲ್ಲಿಯು ದೊರಿಯದೆ, ಗೌಡೇಶ್ವರನ ಪೂಜಕನಾದ ತತ್ಪುರುಷನೆಂಬ ಬ್ರಾಹ್ಮಣನು ಶಿವಾಲಯವಂ ಕಟ್ಟಸಲೋಸುಗ ಮಾಡಿಸಿದ್ದ ಇಟ್ಟಕೆಗಳಂ ಕ್ರಯಕ್ಕೆ ಕೇಳೆ ಆತನು ಕೊಡುವುದಿಲ್ಲೆಂದು ನುಡಿಯಲಾಗಿ, ಬಹು ವ್ಯಾಕುಲನಾಗಿ

ತನ್ನ ಗೃಹಕ್ಕೆ ಬಂದನು. ಆ ಸಮಯದಲ್ಲಿ ಆ ದೇಶದ ರಾಯನ ವೈದ್ಯನು ದ್ರವ್ಯಾರ್ಥವಾಗಿ ಆ ವೈಶ್ಯನ ಗೃಹಕ್ಕೆ ಬಂದು ಈ ವೃತ್ತಾಂತವಂ ಕೇಳಿ, ಇಟ್ಟಿಗೆಗಳಂ ನಾನು ತರಿಸಿಕೊಟ್ಟೇನೆಂದು ಪೇಳಿ, ಆ ಶೈವ ಗುರುವಿನ ಬಳಿಗೆ ಪೋಗಿ ಅವುಗಳಂ ಕೇಳಿ ಕೊಡದಿರಲು ಬಹು ದುಃಖಿತನಾಗಿ, ಮರಳಿ ವೈಶ್ಯನ ಬಳಿಗೈದಿ, ಎಲೈ ವೈಶ್ಯನೆ! ನನ್ನ ಸಾಮರ್ಥ್ಯವಂ ನೋಡು, ಇಟ್ಟಿಗೆಗಳಂ ತರಿಸುತ್ತಿದೇನೆಂದು ಪೇಳ್ದು, ರಾಜಭವನಕ್ಕೆ ಪೋಗಿ ಗಜಪಾಲಕನಂ ಕರೆದು, ಎಲೈ ಹಸ್ತಿಪಾಲಕನೆ! ರಾಯನ ಆನೆಗೆ ರೋಗ ಬಂದಿದೆ, ಈ ರಾತ್ರಿಯೆ ಚಿಕಿತ್ಸೆಯಂ ಮಾಡಬೇಕು. ತತ್ಪುರುಷನ ಮಂದಿರದಲ್ಲಿ ಇಟ್ಟಿಗೆಗಳಿರುವವು ಅವುಗಳಂ ತರಿಸಿದರೆ ಗುಣವಾಗುವದೆಂದು ಪೇಳಿ ಬರುವಂತೆ ನಿರೂಪಿಸಿ, ಆತನ ಮುಖದಿಂದವುಗಳಂ ತರಿಸಿ, ಔಷಧಂಗಳಂ ಕೊಡಿಸಿ ಗಜಕ್ಕೆ ಶಾಖವಂ ಕೊಡೆ ಆ ಗಜವು ರಾತ್ರಿಯೆ ಮೃತವಾದುದು. ಪ್ರಾತಃಕಾಲದಲ್ಲಿ ರಾಯನು ರೋಗವಿಲ್ಲದೆ ಚಿಕಿತ್ಸೆಯಿಂದಲೆ ಮೃತವಾದುದೆಂದು ಕೇಳಿ ವ್ಯಾಕುಲದಿಂದಿರಲು, ಆ ಸಮಯದಲ್ಲಿ ಆ ಅರ್ಚಕನು ರಾಜನ ಸಮೀಪಕ್ಕೆ ಬಂದು ಈ ವೃತ್ತಾಂತವಂ ಪೇಳಿದನು. ಬಳಿಕ ರಾಯನದಂ ಕೇಳಿ ಶಿವದ್ರೋಹದಿಂದ ಗಜವು ಮೃತವಾದುದೆಂದರಿತು, ಆ ಹಸ್ತಿಪಾಲಕನಂ ಅವನ ಬಂಧುಗಳಂ ವೈಶ್ಯನಂ ಆತನ ನೆಂಟರಂ ಶಿರಚ್ಛೇದನವಂ ಮಾಡಿಸಿ, ಅವರ ದ್ರವ್ಯಂಗಳ ಅರಮನೆಗೆ ತರಿಸಿದ್ದಲ್ಲದೆ, ಆ ಸೌಭರಿಯೆಂಬ ವೈದ್ಯನಂ ಕರಿಸಿ ನಿನ್ನಿಂದೆ ಬಹು ಶಿವದ್ರೋಹವುಂಟಾದುದು. ನಿನಗೆ ಶಿಕ್ಷೆಯಂ ವಿಧಿಸಬೇಕೆಂದು ಪೇಳಿದನು. ಆ ಸಮಯದಲ್ಲಿ ಮಂತ್ರಿಯು ಬಗೆಬಗೆಯಾಗಿ ಪೇಳಲಾಗಿ, ಎಲೈ ಮಂತ್ರಿಯೆ! ಈ ವೈದ್ಯನು ಪೋದರೆ ಜಗದ್ವೈದ್ಯನಾದ ಈಶ್ವರನಿಲ್ಲವೆ? ಆತನೆ ಚಿಕಿತ್ಸೆಯಂ ಮಾಡುವನೆಂದು ಪೇಳ್ದು, ಆ ಮಂತ್ರಿಯಿಂದಲೆ ಆ ವೈದ್ಯನ ಶಿರಚ್ಛೇದನವಂ ಮಾಡಿಸಿ, ಶೈವ ಗುರುವಿಗೆ ನಮಸ್ಕಾರವಂ ಮಾಡಿ ಸಮಾಧಾನ ಮಾಡಲಾಗಿ, ಆ ಗುರುವು ನೀನು ದೃಢವ್ರತನೆಂದು ಶ್ಲಾಘಿಸುತ್ತಿದ್ದನು. ಆಗ ದೇವತೆಗಳು ಪುಷ್ಪವೃಷ್ಟಿಯಂ ಕರೆದರು, ದೇವದುಂದುಭಿಗಳು ಮೊಳಗಿದವು. ಮತ್ತಂ ಬ್ರಹ್ಮ ವಿಷ್ಣುಗಳು ಆ ರಾಯಂಗೆ ಪ್ರಸನ್ನರಾಗಿ ನಿನಗೆ ಬೇಕಾದ ವರವಂ ಬೇಡೆಂದು ನುಡಿಯೆ, ಆ ರಾಯನು ತನ್ನ ದೇಶಕ್ಕೆ ರೋಗವಿಲ್ಲದಂತೆ ವರವಂ ಪಡದು, ಆ ಶೈವ ಗುರುವಂ ಪೂಜಿಸಿ, ಮಂದಿರಕೆ ಕಳುಹಿ ಧರ್ಮದಿಂ ಬಹುಕಾಲವು ರಾಜ್ಯವನಾಳಿ, ಕಡೆಯಲ್ಲಿ ಶಿವಸಾಯುಜ್ಯವನೈದಿದನು. ಆ ಶಿವದ್ರೋಹಿಗಳಾದ ವೈಶ್ಯಾದಿಗಳು ಘೋರವಾದ ನರಕದಲ್ಲಿ ಬಿದ್ದು ಈಗಲು ಮೊರೆಯಿಡುತ್ತಿದಾರೆಂದು ಶತಾನಂದಮುನಿಗೆ ನಂದೀಶ್ವರನು

ನಿರೂಪಿಸಿದನೆಂಬದಾಗಿ ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ, ಶಿವರಹಸ್ಯೋಪದೇಶಕಾಂಡದೊಳು ಐವತ್ತಾರನೆಯ ಅಧ್ಯಾಯವು ಸಂಪೂರ್ಣವಾದುದು.

ಐವತ್ತೇಳನೆಯ ಅಧ್ಯಾಯವು.

ಶಿವಭಕ್ತರ ದ್ರವ್ಯಾಪಹರಣಮಾಡಿದವರ ಪಾತಕ.

ಎಲೈ ಶತಾನಂದನೆ! ಶಿವಭಕ್ತರ ದ್ರವ್ಯವ ನಪಹರಿಸಿದಂಥವರ ಕಥೆಯಂ ಪೇಳುವೆನು ಕೇಳು, ಸಿಂಧು ದೇಶಾಧಿಪತಿಯಾದ ಕರನೆಂಬ ರಾಯನು ಇಂದ್ರೋಪಾಸನೆಯಂ ಮಾಡಿ, ವಜ್ರಾಯುಧವಂ ಪಡದು ಸಕಲ ಶತ್ರುಗಳಂ ಜಯಿಸಿ, ಭಯವಿರಹಿತನಾಗಿ ರಾಜ್ಯವನಾಳುತಿದ್ದನು. ಆ ಸಮಯದಲ್ಲಿ ಮಧುವೆಂಬ ಓರ್ವ ರಾಯನು ಅಸುರೇಂದ್ರನ ಉಪಾಸನೆಯಂ ಮಾಡಿ ಅನೇಕ ರಾಕ್ಷಸರ್ವೆರಸಿ, ಆ ಕರನೆಂಬ ರಾಯನ ಪಟ್ಟಣವಂ ಮುತ್ತಿದನು. ಆಗ ಆ ರಾಯನು ಬಹು ಚಿಂತೆಯಿಂ ವ್ಯಾಕುಲನಾಗಿರೆ, ಒಬ್ಬಾನೊಬ್ಬ ಭಟನು ರಾಯನ ಸಮೀಪಕ್ಕೆ ಬಂದು ಎಲೈ ರಾಯನೆ! ನಾನು ನರಸಿಂಹೋಪಾಸಕನು, ಈ ಶತ್ರುಬಲವಂ ಕ್ಷಣಮಾತ್ರದಲ್ಲಿ ಜಯಿಸುತಲಿದೇನೆಂದು ಪೇಳ್ದು ರಾಜಾಜ್ಞೆಯಿಂ ತಾನೋರ್ವನೆ ತೆರಳಿ, ಸೈನ್ಯದ ಮಧ್ಯದಲ್ಲಿ ನಿಂತು ನರಸಿಂಹನಂ ಧ್ಯಾನಿಸಲಾಗಿ, ಆ ನರಸಿಂಹನು ಪ್ರಸನ್ನನಾಗಿ ಶತೃಬಲವಂ ಸಂಹರಿಸಿ, ಮಧುವೆಂಬ ರಾಯನಂ ಭಕ್ಷಿಸಿ ಅಂತರ್ಧಾನವಾದನು. ಬಳಿಕ ಈ ಭಟನು ಅತಿ ಸಂತೋಷದಿಂ ರಾಯನ ಸಮೀಪಕ್ಕೆ ಬರೆ, ಆ ರಾಜನು ಈತನೆ ದೇವರೆಂದು ಭಾವಿಸಿ ಬಹುವಾಗಿ ಪೂಜೆಯಂ ಮಾಡಿದನು. ಬಳಿಕ ಆ ನೃಸಿಂಹೋಪಾಸಕನ ಕುಮಾರನಾದ ಶೂರನು ಒಂದು ದಿವಸದಲ್ಲಿ ಭಸ್ಮರುದ್ರಾಕ್ಷಧಾರಿಯಾದ ಧರ್ಮನೆಂಬ ಶಿವಭಕ್ತನ ವೇಶ್ಯಾಗೃಹಕ್ಕೆ ಪೋಗಿ ಆತನ ವಸ್ತ್ರವಂ ತೆಗದುಕೊಂಡು ಪೋಗೆ, ಆತನು ವೇಶ್ಯಾಗೃಹದಲ್ಲಿ ವಸ್ತ್ರವಂ ಕಾಣದೆ ಶೂರನು ತೆಗದುಕೊಂಡನೆಂದು ತಿಳಿದು, ಆತನ ಬಳಿಗೈದಿ ವಸ್ತ್ರವಂ ಕೊಡೆಂದು ಕೇಳ್ದನು. ಬಳಿಕ ಆತನು ಉಪೇಕ್ಷಿಸಲಾಗಿ, ಈ ವೃತ್ತಾಂತವಂ ಆತನ ತಂದೆಗೆ ಪೇಳಿದನು. ಆಗ ಆತನೂ ಉಪೇಕ್ಷೆಯಂಗೈಯ್ಯೆ, ಆ ಶಿವಭಕ್ತನು ರಾಯನ ಬಳಿಗೆ ಪೋಗಿ ಪೇಳಿದನು. ಬಳಿಕ ಆ ರಾಯನು ನರಸಿಂಹೋಪಾಸಕನಂ ಕರೆಯಿಸಿ, ಎಲೈ ಮೂಢನೆ! ಆವಾಗಲು ಭಸ್ಮ ರುದ್ರಾಕ್ಷಧಾರಿಯಾದ ಧರ್ಮನ ವಸ್ತ್ರವನ್ನು ನಿನ್ನ ಕುಮಾರ ಅಪಹರಿಸಿದಾನೆ, ಅದಂ ತರಿಸಿಕೊಡೆಂದು ಕೇಳಲಾಗಿ, ಆ ವಿಜಯನು, ಎಲೈ ರಾಯನೆ! ವೇಶ್ಯಾಸಕ್ತನಾದ ಈತಂಗೆ ಹೇಗೆ ಶಿವಭಕ್ತಿಯುಂಟಾದೀತು? ಈ ಭಸ್ಮ ರುದ್ರಾಕ್ಷಧಾರಿಗಳಿಂದೇನು ಪ್ರಯೋಜನವು

ಎಂದನು. ಆಗೆ ರಾಯನು ಈ ವಾಕ್ಯವಂ ಕೇಳಿ ಎಲ ಎಲ ಮೂಢನೆ! ಶಿಲೆಯಿಂದ ನಿರ್ಮಿಸಲ್ಪಟ್ಟ ಶಿವಲಿಂಗವು ದೇವತೆಗಳಿಂದಲುಂ ಮನುಜರಿಂದಲುಂ ಹೇಗೆ ಪೂಜಿಸಲ್ಪಡುವುದೋ, ಹಾಗೆ ಭಸ್ಮ ರುದ್ರಾಕ್ಷಧಾರಿಯಾದ ಮನುಷ್ಯನು ಸರ್ವರಿಂದಲು ಮನೋವಾಕ್ಕಾಯ ಕರ್ಮಂಗಳಿಂ ಪೂಜಿಸಲ್ಪಡುವನು. ಅದು ಕಾರಣದಿಂದೀಗೆ ನಿನ್ನ ಪುತ್ರನ ಹಸ್ತದಲ್ಲಿರುವ ವಸ್ತ್ರವಂ ತೆಗೆದುಕೊಡೆಂದು ನಿಷ್ಠುರ ವಚನವಂ ಪೇಳ್ದು ಮತ್ತಿಂತೆಂದನು.

ಎಲೈ ಮೂಢನೆ! ನೀನೀಗ ದುರುಳನಾದ ಕುಮಾರನಂ ಬಯಿದು ಆ ವಸ್ತ್ರವಂ ತೆಗೆದು ಕೊಡದೆ ಪೋದೊಡೆ, ನನ್ನ ಸಮೀಪದಲ್ಲಿರಬೇಡ, ವೇಗದಿಂ ಪೋಗೆಂದು ನುಡಿದು ಆತನಂ ಕಳುಹಿ, ಆತನ ಕುಮಾರನಾದ ಶೂರನಂ ಕರೆಯಿಸಿ, ಎಲ ದುರಾತ್ಮನೆ! ನಿನ್ನಿಂದ ಶಿವಭಕ್ತನ ವಸ್ತ್ರವು ಅಪಹರಿಸಲ್ಪಟ್ಟಿತು, ನೀನು ಶಿವದ್ರೋಹಿಯು ಆದ್ದರಿಂದ ನಿನ್ನಂ ವಧಿಸಬೇಕು ಏಕೆಂದರೆ,—

ಶ್ಲೋ॥ ಅವಿಚಾರ್ಯಶಿವದ್ರೋಹೀ । ವಧ್ಯಇತ್ಯುಚ್ಯತೆಬುಧೈಃ ॥

ತಾ॥ ವಿಚಾರಿಸದೆ ಶಿವದ್ರೋಹಿಯು ವಧೆಗೆ ಯೋಗ್ಯನು (ಅಂದರೆ ಶಿವದ್ರೋಹವಂ ಮಾಡಿದವನನ್ನು ವಿಚಾರಿಸದೆ ವಧಿಸಬೇಕು.) ಈ ಆಗಮ ವಚನಕ್ಕೆ ವಿರೋಧವಾಗಿ ನಾನು ಮಾಡಿದರೆ ನನಗೆ ಶಿವದ್ರೋಹಮುಂಟಾಗುವುದೆಂದು ವಿಚಾರಿಸಿ ಆತಂಗೆ ತಕ್ಕ ಶಿಕ್ಷೆಯಂ ಮಾಡಿಸಿದನು. ಆಗ ಆತನ ತಂದೆಯು ಪುತ್ರನಿಗೆ ಆಜ್ಞೆಯಾದುದಂ ಕಂಡು ಆ ಶಿವಭಕ್ತನಂ ಅನೇಕವಾಗಿ ದೂಷಿಸೆ, ರಾಯನದಂ ಕೇಳಿ ಬಹು ಕೋಪವುಳ್ಳವನಾಗಿ, ಎಲೈ ವಿಜಯನೆ! ನಿನ್ನ ಮಗನು ಶಿವದ್ರೋಹಿಯೆಂದು ತಿಳಿದಿದ್ದರೂ ನೀನಾತಂಗೆ ಶಿಕ್ಷೆಯಂ ಮಾಡದೆ ನನ್ನ ಮುಂದೆ ಭೀತಿಯಿಲ್ಲದೆ ಶಿವಭಕ್ತನಂ ದೂಷಿಸಿದರಿಂದ್ದ ಮಹಾಪಾಪಿಯು ವಿಚಾರವಿಲ್ಲದೆ ವಧಿಸಬೇಕೆಂದು ನುಡಿದು, ಆತನ ಗೃಹದಲ್ಲಿದ್ದ ಸಮಸ್ತವಾದ ದ್ರವ್ಯವಂ ತೆಗೆದುಕೊಳ್ಳಲಾಜ್ಞಾಪಿಸೆ, ಆ ವಿಜಯನು ಅತಿ ಕುಪಿತನಾಗಿ ನರಸಿಂಹನಂ ಸ್ಮರಿಸಿದನು. ಆಗ ನರಸಿಂಹನು ಅತ್ಯುಗ್ರದಿಂದ ಮುಂದುಗಡೆಯಲ್ಲಿ ಪ್ರಾದುರ್ಭವಿಸಿ, ದುಷ್ಟಮಾನಸನಾಗಿ ಪರಮಪಾಪಿಯಾದ ಆ ವಿಜಯನಂ ನೋಡಿ, ವಿಶೇಷವಾಗಿ ನಿಂದಿಸಿ, ನೀನು ಶಿವಭಕ್ತನಂ ದೂಷಿಸಿದ್ದರಿಂದ ನಿನ್ನಂ ಸಂಹರಿಸುತ್ತಿದೇನೆಂದು ನುಡಿಯುತ್ತ, ಹಸ್ತಗಳಿಂದಾತನಂ ಬಡಿದು ರಾಯನ ಮುಂದೆ ಆತನ ಉದರವಂ ಸೀಳಿ ಸಂಹರಿಸಿ, ಎಲೈ ಅರಿಮರ್ದಕನಾದ ಅರಸೆ! ಶಿವದ್ರೋಹವಿಲ್ಲದೆ ನಿಷ್ಕಂಟಕವಾಗಿ ರಾಜ್ಯವನಾಳುತ, ಅವರಿಗೆ ತಕ್ಕ ಶಿಕ್ಷೆಯಂ ಮಾಡುತ್ತ ಶಿವಭಕ್ತರಂ ಪರಿಪಾಲಿಸುತ್ತಿರು, ಆವಾಗ ನನ್ನಂ ಸ್ಮರಿಸುವಿಯೋ ಆಗ ಬಂದು ನಾನೇ ನಿನ್ನ ಶತ್ರುವಂ ಸಂಹರಿಸಿ ಬೇಡಿದ ವರವಂ ಕೊಡುತ್ತಿದೇನೆ. ಇವನು

ನನ್ನ ಭಕ್ತನಾದೊಡಂ ಶಿವದ್ರೋಹಿಯಾದ ಕಾರಣ ನನ್ನಿಂದಲಿ ಸೃತನಾದ ನೆಂದು ಪೇಳ್ವ ಅಂತರ್ಧಾನವಾದನು. ಬಳಿಕ ರಾಯನು ಅನೇಕ ವಸ್ತ್ರಂಗಳಿಂ ಬಹು ದ್ರವ್ಯಂಗಳಿಂ ಶಿವಭಕ್ತನಾದ ಧರ್ಮಂಗೆ ಬಹುಮಾನವಂ ಮಾಡಿ, ಆತನ ವಸ್ತ್ರವಂ ಕೊಟ್ಟು ಕಳುಹಿ ತಾನು ಸುಖದಿಂದಿರ್ದನು. ಯಮಭಟರು ಶಿವ ಭಕ್ತದೂಷಣೆಯಂ ಮಾಡಿದ ವಿಜಯನಂ ಆತನ ಪುತ್ರನಂ ಘೋರವಾದ ನರಕ ದಲ್ಲಿ ಕೆಡಹಿ ಈಗಲು ಬಾಧಿಸುತಿರ್ಪರೆಂದು ಶತಾನಂದನಂ ಕುರಿತು ನಂದಿಕೇ ಶ್ವರನು ಪೇಳಿದನೆಂಬದಾಗಿ ಸೂತಪೌರಾಣಿಕಂ ಶೌನಕಾದಿಗಳಿಗೆ ನಿರೂಪಿಸಿದ

ನೆಂಬಲ್ಲಿಗೆ, ಉಪದೇಶಕಾಂಡದಲ್ಲಿ ಐವತ್ತೇಳನೆಯ ಅಧ್ಯಾಯವು ಸಂಪೂರ್ಣವಾದುದು.

ಐವತ್ತೆಂಟನೆಯ ಅಧ್ಯಾಯವು.

ಶಿವನಿಂದಾ ಗೋಪ್ಯವಿವರಣೆ. ಶಿವಾಧಿಕ್ಯತೆ.

ಎಲೈ ಋಷಿಗಳಿರಾ! ಶಿವನಿಂದನೆಯನ್ನೂ ವಿಭೂತಿ ರುದ್ರಾಕ್ಷ ನಿಂದನೆ ಯನ್ನೂ ಗುರುನಿಂದನೆಯನ್ನೂ ಶಿವಭಕ್ತರಿಗೆ ಅಪಕಾರವನ್ನೂ ಯಾರು ಮಾಡು ವರೋ ಆ ನರಕಿಗಳ ಯಾತನೆಗಳಂ ಪೇಳುತ್ತಿದೇನೆ ಕೇಳಿರಿ, ಬಕದೇಶದಲ್ಲಿ ಜನಕವೆಂಬ ಪುರವಿರ್ಪುದು. ಅಲ್ಲಿ ಪರಮ ಧಾರ್ಮಿಕನಾದ ಕಲಾಧರನೆಂಬ ರಾಯನು, ಕಲಾಧರನೋಪಾದಿಯಲ್ಲಿ ಕಲಾಧರರಾದ ಬ್ರಾಹ್ಮಣಶ್ರೇಷ್ಠರೊಡನೆ ಕೂಡಿಕೊಂಡು ಧರ್ಮದಿಂ ರಾಜ್ಯವನಾಳುತಿರ್ದನು. ಆ ರಾಯನು ಒಂದಾ ನೊಂದು ಕಾಲದಲ್ಲಿ ಆಸ್ಥಾನ ಮಂಟಪದೊಳು ಕುಳಿತಿರೆ, ಮಹಾತ್ಮರಾದ ಕವಿ ಗಳುಂ ವೈದ್ಯರುಂ ಸಿದ್ಧರುಂ ಯೋಗಿಗಳುಂ ಸೇರಿ ಅನ್ಯೋನ್ಯ ಪ್ರಸಂಗವಂ ಮಾಡುತಿದ್ದರು. ಆ ಸಮಯದಲ್ಲಿ "ಪಶುಪತಿ ಭಾರತಿ" ಎಂಬ ಯತೀಶ್ವರನು ಆ ರಾಯನಂ ನೋಡಿ,

ಶ್ಲೋ॥ ಶಿವಏವಸದೋಪಾಸ್ಯಃ ಜ್ಞೇಯೋಧ್ಯೇಯಶ್ಚ ಮುಕ್ತಯೆ ।
ಸಏವಹಿಪರಬ್ರಹ್ಮ ತತ್ವಂಸತ್ಯಂಪರಾತ್ಪರಂ ॥
ಪರಂಜ್ಯೋತಿಃಪರಂಧಾಮ ಶಿವಏವಪರಾಯಣಂ ।
ಕಾರಣಂಕಾರಣಾನಾಂಚ ದೇವಾನಾಂಚಾಧಿದೈವತಂ ॥
ಪ್ರಣಮಂತೀಹಯೇದೇವಂತೆ ಕೃತಾರ್ಥಾನಚೇತರೆ ।
ತೇಷಾಮೇವಪರಾಮುಕ್ತಿ ರ್ಭೋಗಸ್ತೇಷಾಂಮಹಾತ್ಮನಾಂ ॥
ಅಷ್ಟೈಶ್ವರ್ಯಂಪ್ರಸಿದ್ಧಿಶ್ಚ ಸಾರ್ವಭೌಮತ್ವಮದ್ಭುತಂ ।
ಸ್ವರ್ಗಾಧಿಪತ್ಯಂಬ್ರಹ್ಮತ್ವಂ ವಿಷ್ಣುತ್ವಂಚಾಪಿಭೂಪತೆ ॥

ತಾ|| ಎಲೈ ಮಹೀಪಾಲನಾದ ಕಲಾಧರನೆ! ಯಾವಾಗಲುಂ ಉಪಾಸನಾ ಯೋಗ್ಯನಾಗಿಯುಂ ತಿಳಿಯಲು ಅರ್ಹನಾಗಿಯುಂ ಮುಕ್ತಿಯಂ ಪೊಂದುವ ಕ್ಕೋಸುಗ ಧ್ಯಾನಂಗೈಯ್ಯುವದಕ್ಕೆ ಯೋಗ್ಯನಾಗಿಯುಂ ಇಂತಕ್ಕವನು ಶಿವನೆ ಸರಿ, ಆತನೆ ಪರಬ್ರಹ್ಮನು ಪರತತ್ವಸ್ವರೂಪನು. ಕಾಲತ್ರಯದಲ್ಲಿಯು ಅಬಾಧಿತ ನಾಗಿ ಸತ್ಯನಾಗಿರುವನು. ಪರಾತ್ಪರನು ಪರಂಜ್ಯೋತಿಸ್ವರೂಪನು. ಪರಂಧಾಮನು ಭಕ್ತಪ್ರಿಯನು ಕಾರಣಂಗಳಿಗೆ ಕಾರಣನು, ದೇವತೆಗಳಿಗೆ ಅಧಿದೇವತಾಸ್ವರೂಪನು ಅಂಥ ಪರಮೇಶ್ವರನಿಗೆ ಈ ಲೋಕದಲ್ಲಿ ಯಾರು ನಮಸ್ಕಾರವಂ ಮಾಡುವರೋ ಅವರೇ ಕೃತಾರ್ಥರು. ಇದಲ್ಲದೆ ಶಿವಂಗೆ ನಮಸ್ಕಾರವಂ ಗೈದ ಮಹಾತ್ಮರ್ಗೆಯೆ ಅಷ್ಟೈಶ್ವರ್ಯಂಗಳುಂ ಪ್ರಸಿದ್ಧಿಯುಂ ಅದ್ಭುತವಾದ ಸಾರ್ವಭೌಮತ್ವ ಇಂದ್ರತ್ವ ಬ್ರಹ್ಮತ್ವ ವಿಷ್ಣುತ್ವ ಮುಂತಾದ ಆಧಿಪತ್ಯಂಗಳೂ ಇವೆಲ್ಲವು ಉಂಟಾಗುವ ವೆಂದು ನುಡಿಯೆ, ವಾಸುದೇವ ಭಾರತಿ ಎಂಬ ಮತ್ತೊರ್ವನು ಈ ಶಿವಾಧಿಕ್ಯ ವಾಕ್ಯಗಳಂ ಸೈರಿಸಲಾರದೆ ಆ ರಾಯನಂ ನೋಡುತ ಇಂತೆಂದನು.

ಶ್ಲೋ|| ಶಿವೋಸೌತಾಮಸೋರುದ್ರಶ್ಚರ್ಮಾಸ್ಥಿಶವಭಸ್ಮಧೃತ್ |
ಸ್ಮಶಾನನಿಲಯೋತ್ಯರ್ಥಂ ಭೂತಪ್ರಮಥಸಂವೃತಃ ||
ಸದಾಭೋಗರತೋಲೋಕೇ ಸತುಕಿಂಬ್ರಹ್ಮಭೂಪತೇ |
ಭುಜಂಗಧಾರೀಸೊತ್ಯರ್ಥಂ ಭೋಗಮೋಕ್ಷಪ್ರದಸ್ಸಕಿಂ ||

ತಾಮಸನಾದ ರುದ್ರನಾದ ಈ ಶಿವನು ಚರ್ಮ ಅಸ್ಥಿ ಶವಭಸ್ಮಂಗಳಂ ಧರಿಸಿ, ಸ್ಮಶಾನವಾಸಿಯಾಗಿ ಭೂತಪ್ರಮಥರಿಂದಾವೃತನಾಗಿ ಆವಾಗಲು ಭೋಗ ಪರನಾಗಿ ಸರ್ಪಭೂಷಣನಾಗಿರುವನು. ಅಂಥವನು ಹೇಗೆ ಪರಬ್ರಹ್ಮನಾದಾನು? ವಿಶೇಷವಾಗಿ ಹೇಗೆ ಭೋಗಮೋಕ್ಷಂಗಳಂ ಕೊಡುವನು? ಎನಲಾಗಿ ಪಶುಪತಿ ಭಾರತಿಯು ಆ ವಾಸುದೇವ ಭಾರತಿಯು ನುಡಿದ ಶಿವನಿಂದನೆಯಂ ಕೇಳಿ ಹರ ಹರ! ಎಂದು ಕಿವಿಗಳಂ ಮುಚ್ಚಿ ಶಿವಧ್ಯಾನವಂ ಮಾಡಿ ಛೀಛೀ! ಶಿವಮಾಹಾ ತ್ಮ್ಯವ ನರಿಯದೆ ಹೀಗೆ ಈತನಿಂ ಹೇಳಲ್ಪಟ್ಟಿತೆಂದು ನುಡಿದು, ಎಲೈ ಜನಗಳಿರಾ! ಚಂದ್ರಶೇಖರನಾದ ಮಹೇಶ್ವರನು ಮುಂದೆ ಹುಟ್ಟತಕ್ಕವರಿಗು ಈಗಿರುವಂಥವ ರಿಗು ಸಹ ತನ್ನ ನಿತ್ಯತ್ವವನ್ನೂ ಉಳಿದವರ ಅನಿತ್ಯತ್ವವನ್ನೂ ತೋರಿಸುವುದ ಕ್ಕೋಸ್ಕರ ಆಯಾಕಾಲಂಗಳಲ್ಲಿ ಸಂಹೃತರಾದ ಬಹ್ಮ ವಿಷ್ಣುಗಳ ಅಸ್ಥಿಗಳನ್ನು ಶವ ಭಸ್ಮವನ್ನು ಧರಿಸಿಕೊಂಡಿಧಾನೆ, ಮತ್ತಂ ಚರಾಚರಾತ್ಮಕಮಾದ ಈ ಸಮ ಸ್ತವು ಸಂಹೃತವಾಗುವದರಿಂದ ಸರ್ವವು ಸ್ಮಶಾನವೆಂದು ಪೇಳಲ್ಪಡುವದು, ಅಗ ರುದ್ರನೊರ್ವನೆ ಅಂಬಿಕಾಸಮೇತನಾಗಿ ನರ್ತನವಂ ಮಾಡುತ್ತಿರುವುದ ರಿಂದ ಸ್ಮಶಾನವಾಸಿಯೆಂದನ್ನಲ್ಪಟ್ಟನು. ಜನರು ಶಿವ ಮಹಿಮೆಯಂ ಅರಿಯದೆ

ಪರಾಭವವ ನೈದುವರೆಂದು ಪೇಳ್ದು, ಆ ವಾಸುದೇವ ಭಾರತಿಯಂ ಕುರಿತು, ಎಲ ಎಲ! ನೀನು ಬ್ರಹ್ಮಶಾಪಗ್ರಸ್ತನು, ಹೇಗೆಂದರೆ, ಪೂರ್ವದಲ್ಲಿ ಬ್ರಹ್ಮನು ವಿಷ್ಣುವಂ ಕುರಿತು, ಎಲೈ ಹರಿಯೆ! ನಿನ್ನ ಭಕ್ತರಾದವರು ಏಕದಂಡಿ ತ್ರಿದಂಡಿ ಸನ್ಯಾಸಿಗಳಾದರೂ ಪಾಷಂಡಿಗಳಾಗಿ ಶಿವದೂಷಣೆಯಿಂದ ನರಕವ ನೈದುವರೆಂದು ನಿರೂಪಿಸಿದ್ದರಿಂದ ಅಜ್ಞಾನಿಯಾದ ನೀನು ಬ್ರಹ್ಮನ ಶಾಪಕ್ಕೆ ಪಾತ್ರನು, ಮತ್ತಂ ಭಸ್ಮರುದ್ರಾಕ್ಷ ವಿರಹಿತನಾಗಿ ಶಿವನಿಂದನೆಯಂ ಮಾಡುತಿರ್ದಿ ಆದಕಾರಣ ನಿನ್ನೊಡನೆ ಸಂಭಾಷಣೆಯಂ ಮಾಡಬಾರದು, ಮಾತಾಡಿದೆವಾದೊಡೆ ದಂಡನೆಗೆ ಯೋಗ್ಯರಾಗುವೆವು.

ಶ್ಲೋ॥ ಯಸ್ಯಫಾಲೇನಭಸ್ಮಾಂಗೆ ನಾಸ್ತಿರುದ್ರಾಕ್ಷಮಾಲಿಕಾ ।
ತಂಬ್ರಾಹ್ಮಣಮಪಿಪ್ರಾಜ್ಞಂ ವರ್ಜಯೇಚ್ಛ್ವಪಚಂಯಥಾ ॥

ಯಾವಾತನ ಫಾಲಪ್ರದೇಶದಲ್ಲಿ ಭಸ್ಮವೂ ಅಂಗಭೂತವಾದ ಕಂಠಾದಿಗಳಲ್ಲಿ ರುದ್ರಾಕ್ಷಮಾಲಿಕೆಯೂ ಇಲ್ಲವೋ ಅಂಥವನು ಬ್ರಾಹ್ಮಣನಾದರೂ ಅವನಂ ಶ್ವಪಚನಂ ಬಿಡುವಂತೆ ದೂರದಲ್ಲಿಯೆ ಬಿಡಬೇಕು. ಅದುಕಾರಣದಿಂ ನಿನ್ನ ದರ್ಶನದಿಂದಲು ಸಂಭಾಷಣೆಯಿಂದಲು ನನಗೆ ಮಹಾದೋಷವು ಪ್ರಾಪ್ತವಾದುದೆಂದು ನುಡಿಯೆ, ಆಗ ಸಭೆಯಲ್ಲಿರುತಿರ್ದ ಬ್ರಹ್ಮಕೇಸರಿಯೆಂಬ ಬ್ರಾಹ್ಮಣನು ಆ ಪಶುಭಾರತಿಯಂ ನೋಡಿ, ಜ್ಞಾನಯುಕ್ತವಾದ ಭಕ್ತಿಯಿಲ್ಲದವರಿಗೆ ಭಸ್ಮಧಾರಣೆಯಿಂದಲು ವೃಕ್ಷದಿಂ ಪುಟ್ಟಿದ ಬೀಜಧಾರಣದಿಂದಲು ಮುಕ್ತಿಯು ಹೇಗುಂಟಾದೀತು, ಈ ರಾಜಾಸ್ಥಾನದಲ್ಲಿ ಇಂಥಾ ವಾಕ್ಯಂಗಳಂ ಪೇಳಬೇಡೆಂದನು. ಬಳಿಕ ಪಶುಪತಿ ಭಾರತಿಯು ಆತನಂ ಕುರಿತು ಎಲೈ ದ್ವಿಜಾಧಮನೆ ನೀನು ವೇದಾಗಮ ಪುರಾಣಂಗಳಂ ನೋಡದ ಕಾರಣ ಹೀಗೆ ಪೇಳಿದೆ, ಪಾಪಿಗು ಭಸ್ಮ ರುದ್ರಾಕ್ಷಧಾರಣದಿಂ ಮುಕ್ತಿಯುಂಟೆಂದು ವೇದಾದಿಗಳ ಮರ್ಮಜ್ಞರಾದ ಮಹಾತ್ಮರು ಪೇಳುತ್ತಿರುವರು.

ಭಸ್ಮರುದ್ರಾಕ್ಷಧಾರಣಾ ಮಹಿಮೆ.

ಶ್ಲೋ॥ ಶಿವೇನಸದೃಶಾಲೋಕೇ ಭಸ್ಮರುದ್ರಾಕ್ಷಧಾರಿಣಃ ।
ಪಾಪಿಷ್ಠಾಅಪಿತೇಪೂತಾ ಸ್ತದನ್ಯೇಪಾಪಿನಸ್ಸ್ಮೃತಾಃ ॥

ತಾ॥ ಈ ಲೋಕದಲ್ಲಿ ಭಸ್ಮರುದ್ರಾಕ್ಷಧಾರಿಗಳು ಪಾಪಿಷ್ಠರಾದವರೂ ಶಿವಸದೃಶರು, ಭಸ್ಮರುದ್ರಾಕ್ಷ ವಿರಹಿತರೆ ಪಾಪಿಗಳೆಂದು ನಿಶ್ಚಯಿಸಲ್ಪಟ್ಟದೆ. ಎನಲು, ಆ ಬ್ರಾಹ್ಮಣನು ಈ ವಾಕ್ಯವಂ ಕೇಳಿ ಮರಳಿ ಕುತರ್ಕ ಉಕ್ತಿಯನ್ನೇ ಪೇಳಿದೆನು. ಬಳಿಕ ಆ ಯತಿಯು ರಾಯನಂ ಕುರಿತು, ಎಲೈ ಅರಸೆ! ನಾನು ಶಾಸ್ತ್ರಪ್ರಸಂಗವಂ ಮಾಡಿದರೆ ಇವರೀರ್ವರು ಕುತರ್ಕವಂ ಪೇಳುತಿದಾರೆನಲು

ಆ ಸಮಯದಲ್ಲಿ ಆ ಯತಿಯ ಶಿಷ್ಯನು ಗುರುವಂ ಕುರಿತು, ಎಲೈ ಸ್ವಾಮಿಯೆ! ನೀನು ಸನ್ಯಾಸಿಯು, ಈ ಕಲಹದಿಂದೇನು ಪ್ರಯೋಜನವು. ನಾವು ಹೋಗುವ ಣೆಂದು ನುಡಿಯೆ, ಆ ಯತಿಯು ಎಲೈ ಶಿಷ್ಯನೆ ಇವರೀರ್ವರು ಶಿವದ್ರೋಹಿಗಳಲ್ಲಿ ಶ್ರೇಷ್ಠರು. ಇವರಿಂ ನಮಗೇನು ಹಾನಿ ಯುಂಟಾದೀತೆಂದು ಪೇಳ್ದನು. ಬಳಿಕ ಶಿಷ್ಯನು ಇವರು ನರಕಕ್ಕಾದರೂ ಪೋಗಲಿ ಆ ಸ್ವರ್ಗಕ್ಕಾದರೂ ಪೋಗಲಿ ನಾವು ತೆರಳುವಣೆಂದನು. ಗುರುವು ಎಲೈ ಶಿಷ್ಯನೆ! ಹೀಗೆ ಶಿವದ್ರೋಹಿಗಳು ರಾಯನ ಬಳಿಯಲ್ಲಿ ಹೇಳುತ್ತಿರುವಾಗ ನಾವು ಪೋಗುವದುಚಿತವಲ್ಲೆಂದು ಪೇಳೆ, ಶಿಷ್ಯ ನದಂ ಕೇಳಿ ಕುಪಿತನಾಗಿ ನೀವಿಲ್ಲಿಯೆ ಇರಿ. ನಾನು ಪೋಗುತ್ತಿದೇನೆಂದು ಪೇಳಿ, ಅಂಧಕನಾದ ಆ ಗುರುವಂ ಬಿಟ್ಟು ಪೋದನು. ಬಳಿಕ ಬ್ರಹ್ಮಕೇಸರಿಯು ಆ ಶಿಷ್ಯನ ನಿರ್ಗಮನವಂ ನೋಡಿ, ಎಲೈ ಯತಿಯೆ, ನಿನ್ನ ಶಿಷ್ಯನೆ ನಿನಗುತ್ತರವ ನ್ನಿತ್ತು ಪೋದನಲ್ಲ? ಮಾರ್ಗವಂ ನಿನಗೆ ತೋರುವನಾರು? ನಿನ್ನ ಕಣ್ಣು ಪೋದಂತೆ ಮತಿಯು ಪೋದುದಲ್ಲ, ಎನಲಾಗಿ, ಆ ಸಮಯದಲ್ಲಿ ವಿಶಾಂತನೆಂಬ ಬ್ರಾಹ್ಮಣೋತ್ತಮನು ಆ ಸನ್ಯಾಸಿಯ ಬಳಿಗೈದಿ ಸಮೀಪದಲ್ಲಿ ಕುಳಿತು, ಈತಂಗೆ ನಾನು ಶಿಷ್ಯನಾಗಿ ಮಾರ್ಗವಂ ತೋರಿಸುವೆನು. ಶಿವದ್ರೋಹಿಯಾಗಿ ದುರಾತ್ಮನಾದ ಶಿಷ್ಯನು ಪೋದರೆ ಪೋಗಲೆಂದು ನುಡಿದು, ಎಲೈ ಯತೀಶ್ವರನೆ! ನಿನಗೆ ನಾನು ಶಿಷ್ಯನು. ನೀನು ಸಾಕ್ಷಾತ್ತಾದ ಶಿವನು, ನಿನಗೆ ಪ್ರತಿ ದಿವಸ ದಲ್ಲಿಯು ಶುಶ್ರೂಷೆಯಂ ಮಾಡುತ್ತಿರುವೆನು, ಸಕಲ ಶಾಸ್ತ್ರವಂ ಬಲ್ಲೆನು. ಭಸ್ಮ ರುದ್ರಾಕ್ಷವಂ ಧರಿಸಿದೇನೆ, ನಿನಗೆ ಶಿಷ್ಯನಾಗುವದಕ್ಕೆ ಯೋಗ್ಯನು ನನ್ನಂ ಪರಿ ಗ್ರಹಿಸೆಂದು ಪೇಳ್ದನು.

ಬಳಿಕ ಭದ್ರನೆಂಬಾತನು ಎಲೈ ಯತೀಶ್ವರನೆ! ಈ ಬ್ರಾಹ್ಮಣನು ವೇಶ್ಯಾ ಪತಿಯು ನೀನು ಬಾಲಕನು ಎನಲಾಗಿ, ಆ ಪಶುಪತಿ ಭಾರತಿಯದಂ ಕೇಳಿ ಎಲ ದ್ವಿಜಾಧಮನೆ! ಶಿವಭಕ್ತನಿಂದೆಯಂ ಮಾಡಬಾರದೆಂದು ಪೇಳಿ, ರಾಯನಂ ಕುರಿತು ಶಿವನಿಂದಾ ಪರನಾದ ವಾಸುದೇವ ಭಾರತಿಯನ್ನೂ, ಭಸ್ಮರುದ್ರಾಕ್ಷ ದೂಷಕನಾದ ಬ್ರಹ್ಮಕೇಸರಿಯೆಂಬ ದ್ವಿಜನನ್ನೂ, ಗುರುವಾದ ತನಗೆ ದ್ರೋಹವಂ ಮಾಡಿದ ವಸುವೆಂಬ ಶಿಷ್ಯನನ್ನೂ, ಶಿವಭಕ್ತನಿಂದೆಯಂ ಗೈದ ಭದ್ರನೆಂಬಾತನನ್ನೂ ಶಿಕ್ಷಿಸೆನಲಾಗಿ, ರಾಯನದಂ ಕೇಳಿ, ಎಲೈ ಸ್ವಾಮಿಯೆ! ನಿಮ್ಮ ಮಹಿಮೆಯಿಂದಲೆ ನಯನಂಗಳಂ ಪಡೆದು ಇವರನ್ನು ನೀವೆ ಶಿಕ್ಷಿಸಿರಿ. ನಾವೆಲ್ಲರು ನೋಡುತ್ತಿದೇವೆನಲು, ಪಶುಪತಿ ಭಾರತಿಯು ತನ್ನ ಮಹಿಮೆ ಯಿಂದಲೆ ಕಣ್ಣುಗಳಂ ಪಡೆದು, ಅವರ ಶಿರಸ್ಸುಗಳ ಮೇಲೆ ಸಿಡಿಲು ಬೀಳಲೆಂದು ಶಪಿಸಿ, ಆ ಶಿವದ್ರೋಹಿಗಳಂ ಸಂಹರಿಸಿದ ಬಳಿಕ, ಎಲೈ ಭೂಪಾಲಕನೆ! ಆವುದಾ

ನೊಂದು ಕಾರಣದಿಂ ನೀನು ಶಿವದ್ರೋಹಿಗಳಿಗೆ ಸಹಾಯಕನಾದೆಯೋ, ಅದು ಕಾರಣದಿಂ ಗಾರ್ದಭನಾಗೆಂದು ಶಾಪವನ್ನಿತ್ತನು. ಬಳಿಕ ರಾಯನು ಹಾಹಾ! ನಾನೇನು ಮಾಡಿದವನಲ್ಲವೆ, ಆದರೆ ನಾನು ತಮ್ಮ ಆಜ್ಞೆಯಂ ಮೀರಿದ ಅಪರಾಧಮಂ ಕ್ಷಮಿಸಿರಿ, ಮಹಾತ್ಮರಾದವರು ತಮ್ಮ ಭಕ್ತರ ಮೇಲೆ ಕೋಪವಂ ಮಾಡರೆನೆ, ಯತೀಶ್ವರನು ಕೋಪಾಕುಲಿತನಾಗಿ ಶ್ರುತಿಸ್ಮೃತಿ ಪುರಾಣಂಗಳಲ್ಲಿ ಶಿವನಿಂದಕರಿಗೆ ಪ್ರಾಯಶ್ಚಿತ್ತವಿಲ್ಲ. ನಾನೇನುಮಾಡಲಿ, ನಿನಗೆ ಜನ್ಮಜನ್ಮದಲ್ಲಿ ವಿಮೋಚನವಿಲ್ಲೆಂದು ನುಡಿದು ಶೀಘ್ರದಿಂ ಪೊರಮಡಲು, ತತ್ ಕ್ಷಣದಲ್ಲಿಯೆ ಆ ಪಶುಪತಿ ಭಾರತಿಯ ಶಾಪದಿಂ ರಾಯನು ಗಾರ್ದಭಯೋನಿಯಲ್ಲಿ ಪುಟ್ಟಿದನು. ಈ ನಾಲ್ವರು ಸಿಡಿಲು ಬಿದ್ದು ಹತವಾದರು. ಎಲೈ ಋಷಿಗಳಿರಾ! ಮಹಾತ್ಮರಲ್ಲಿ ಮಾಡಿದ ಅಪರಾಧವು ಜೀರ್ಣಿಸಲಾರದು, ಮತ್ತಂ ಯಮದೂತರು ಆ ನಾಲ್ವರಂ ಪಾಶದಿಂ ಬಿಗಿದು ಕಟ್ಟಿ ಯಮಲೋಕಕ್ಕೆ ಕೊಂಡು ಪೋಗಿ, ಅಧೋಮುಖವಾಗಿಯು ಊರ್ಧ್ವಪಾದವಾಗಿಯು ಕಟ್ಟಿ ದಂಡದಿಂ ಬಡಿದು ಬಾಧಿಸಿದರು. ಅವರ ಶ್ರೋತ್ರ ನಯನ ನಾಸಿಕ ಮುಖಂಗಳಲ್ಲಿ ಕ್ರಿಮಿಗಳು ಪೊರಮಡುತ್ತಿವೆ. ಇದಲ್ಲದೆ ಅವರು ಉಶ್ವಾಸ ನಿಶ್ವಾಸ ರಹಿತರಾಗಿ ಯಾವಾಗಲು ಬಾಧೆ ಪಡುತ್ತಿದಾರೆ. ಅವರಿಗೆ ನೂರು ಕಲ್ಪವಾದರೂ ನರಕದಿಂ ಬಿಡುಗಡೆಯಿಲ್ಲವೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ಶಿವರಹಸ್ಯೋಪದೇಶಕಾಂಡದಲ್ಲಿ ಐವತ್ತೆಂಟನೆಯ ಅಧ್ಯಾಯವು ಸಂಪೂರ್ಣವಾದುದು.

ಐವತ್ತೊಂಬತ್ತನೆಯ ಅಧ್ಯಾಯವು.

ವಿರಾಗ ಸುತಂತ್ರರ ಕಥೆ.

ಎಲೈ ಋಷಿಗಳಿರಾ! ಶುಭಕರವಾದ ಮತ್ತೊಂದು ಕಥೆಯಂ ಪೇಳುತ್ತಿದೇನೆ, ಕೇಳಿರಿ. ಕಳಿಂಗದೇಶದಲ್ಲಿ ಕಟಕವೆಂಬ ಪುರವಿರ್ಪುದು. ಆ ರಾಯನ ಪೆಸರು ವಿರಾಗನೆಂಬದಾಗಿಯು ಮಂತ್ರಿ ಪುತ್ರನ ನಾಮಧೇಯವು ಸುತಂತ್ರನೆಂಬದಾಗಿಯು ಪುರೋಹಿತ ಪುತ್ರನು ಸುನಂದನನೆಂಬದಾಗಿಯು ದ್ವಾರಪಾಲಕನ ಕುಮಾರನು ಸುಕುಂದನೆಂಬದಾಗಿಯು ಇದ್ದರು. ಈ ನಾಲ್ವರು ಸಮಸ್ತ ಶಾಸ್ತ್ರಾಭ್ಯಾಸವಂ ಮಾಡಿ ಸ್ವಕರ್ಮನಿರತರಾಗಿ ನಿತ್ಯದಲ್ಲಿಯು ದಾನಧರ್ಮ ಪರರಾಗಿರ್ದು, ಒಂದು ದಿವಸದಲ್ಲಿ ತೀರ್ಥಯಾತ್ರೆಗೆ ಪೋಗಬೇಕೆಂದು ಮಾತಾಪಿತೃಗಳಿಂದನುಜ್ಞಾತರಾಗಿ ಧನವಂ ತೆಗದುಕೊಂಡು ಪೊರಮಟ್ಟರು. ಆಗ ರಾಜಪುತ್ರನು ಆ ಕಟಕವೆಂಬ ಪುರಿಗೆ ಸಮೀಪವಾಗಿರ್ಪ ವಸುಪುರವೆಂಬ ಗ್ರಾಮದಲ್ಲಿ

ಸುರೇಶ್ವರವೆಂಬ ಶಿವನ ಆಲಯದಲ್ಲಿ ಶಯನವಂ ಮಾಡಿದನು, ಮಂತ್ರಿಪುತ್ರನು ಭಿಕ್ಷಾಗಿರಿಯೆಂಬ ಯೋಗಿಯ ಮಠದಲ್ಲಿ ಶಯನಿಸಿದನು. ದ್ವಾರಪಾಲಕನ ಕುಮಾರನು ಆತನ ಶೃಂಗಾರದ ತೋಟದಲ್ಲಿದ್ದನು. ಪುರೋಹಿತ ಪುತ್ರನು ಆ ಗ್ರಾಮದ ಮಧ್ಯದಲ್ಲಿರುವ ಶಿವಭಕ್ತನ ಆಲಯದಲ್ಲಿದ್ದನು. ಬಳಿಕ ಆ ನಾಲ್ವರು ಬ್ರಾಹ್ಮಣನ ಗೃಹದಲ್ಲಿ ಭೋಜನವಂ ಮಾಡಿ ಆ ರಾತ್ರಿ ಅಲ್ಲಿದ್ದು ಉದಯ ಕಾಲದಲ್ಲೆದ್ದು ಗ್ರಾಮಾಂತರಕ್ಕೆ ಪೋಗುತ್ತಿರಲು, ಆ ವೇಳೆಯಲ್ಲಿ ಮಾರ್ಗ ವಶಾತ್ ಗೌತಮ ಮುನಿಯು ಬಂದನು. ಆಗ ಈ ನಾಲ್ವರು ಆತನಂ ಕಂಡು ನಮಸ್ಕಾರವಂ ಮಾಡಿ, ತಮ್ಮ ತಮ್ಮ ವೃತ್ತಾಂತವಂ ಪೇಳಲಾಗಿ ಆ ಮಹಾ ಮುನಿಯು ಈ ವಾಕ್ಯವಂ ಕೇಳಿ, ಎಲೈ, ಕುಮಾರರಿರಾ ನಿಮ್ಮ ಆಯುಸ್ಸು ಕ್ಷೀಣ ವಾಗಿರುವವು. ನೀವೆಂತು ತೀರ್ಥಯಾತ್ರೆಗೆ ಪೋಗುವಿರಿ? ಅತಿ ಗರ್ವದಿಂ ಶಿವದ್ರೋಹವಂ ಮಾಡಿದುದರಿಂದ ಇಂದಿನ ಸಾಯಂಕಾಲದಲ್ಲಿ ನಿಮಗೆ ಮರಣ ಉಂಟಾಗುವದೆಂದನು. ಬಳಿಕ ಈ ವಾಕ್ಯವಂ ಕೇಳಿ ಆ ನಾಲ್ವರು ಪರಮ ದುಃಖಿತರಾಗಿ, ಎಲೈ ಮುನಿಯೆ! ಆವ ಶಿವದ್ರೋಹದಿಂ ನಮಗೆ ಆಯುಸ್ಸು ಕ್ಷೀಣವಾದುದೋ ಪೇಳಬೇಕೆಂದು ನುಡಿಯೆ, ಗೌತಮಮುನಿಯು ಈ ವಾಕ್ಯವಂ ಕೇಳಿ, ಎಲೈ ರಾಜಕುಮಾರನೆ! ಪೂರ್ವ ದಿವಸದಲ್ಲಿ ರಾತ್ರಿಯೊಳು ನೀನು ಶಯನವಂ ಮಾಡಿದ ಶಿವಾಲಯದಲ್ಲಿ ನಿನ್ನ ಕೇಶಗಳುದುರಿದವು. ಆ ಕೇಶಂಗಳಿಂದ ಶಿವಾಲಯವು ಕೆಟ್ಟಿತು. ಅದುಕಾರಣದಿಂ ನೀನು ಶಿವದ್ರೋಹಿಯಾದೆ, ನಿನ್ನ ಮಂತ್ರಿ ಪುತ್ರನು ಶಿವಯೋಗಿಯ ಮಠದಲ್ಲಿದ್ದು ಅಲ್ಲಿ ತಾಂಬೂಲ ರಸವನ್ನುಗಿದು ಆ ಮಠವಂ ಕೆಡಿಸಿದನು. ಪುರೋಹಿತನ ಪುತ್ರನು ಶಿವಭಕ್ತನ ಗೃಹದಲ್ಲಿ ವಾಸವಂ ಮಾಡಿ ನೀರಂ ಮುಕ್ಕಳಿಸಿ ಉಗಿಯಲು, ಆ ಶಿವಭಕ್ತನು ಅದಂ ತುಳಿದನು ಆ ದೋಷಗಳಿಂದವರೀರ್ವರು ಶಿವದ್ರೋಹಿಗಳಾದರು. ನಿನ್ನ ದ್ವಾರ ಪಾಲಕನ ಪುತ್ರನು ಶಿವಾರಾಮದಲ್ಲಿಳಿದು ಶ್ಲೇಷ್ಮಂಗಳಂ ಕಾರಿಸಿದನು. ಆ ದೋಷದಿಂದಾತನು ಶಿವದ್ರೋಹಿಯಾದನೆಂದನು. ಬಳಿಕ ಈ ನಾಲ್ವರು ಆ ಮುನಿಯ ವಾಕ್ಯವಂ ಕೇಳಿ ನಮಸ್ಕಾರವಂ ಮಾಡಿ ಪೋಗುತ್ತಿರುವಾಗ ರಾಜ ಪುತ್ರಂಗೆ ಶಿರೋರೋಗವು ಮಂತ್ರಿಕುಮಾರಂಗೆ ಕಂಠರೋಗವೂ, ಪುರೋಹಿತ ಪುತ್ರಂಗೆ ರಕ್ತವು ಸ್ರವಿಸುವಂಗೆ ಜಿಹ್ವಾರೋಗವೂ, ದ್ವಾರಪಾಲಕ ಕುಮಾರಂಗೆ ನಾಸಿಕಾರೋಗವೂ ಉಂಟಾದವು. ಹೀಗೆ ಈ ನಾಲ್ಕು ಮಂದಿಯು ಮಹಾ ರೋಗಗ್ರಸ್ತರಾಗಿ ಕ್ಷಣದಲ್ಲಿಯೆ ಪ್ರಾಣವಂ ಬಿಟ್ಟು ನರಕದಲ್ಲಿ ಬಿದ್ದರು. ಅನಂ ತರದಲ್ಲಿ ಆ ರಾಜಪುತ್ರನ ಶಿರವನ್ನು ಯಮಭಟರು ಖಂಡಖಂಡವಾಗಿ ಸೀಳಿ, ಸೀಸಗಳನ್ನು ಕಾಸಿ ಹೊಯ್ಯುತ್ತಲು, ಶ್ಲೇಷ್ಮವನ್ನುಗಿದಂಥವನ ನಾಲಿಗೆಯಲ್ಲಿ

ತಾಮ್ರವನ್ನು ಕಾಸಿ ಹೊಯುತ್ತಲು ನೀರು ಮುಕ್ಕಳಿಸಿ ಉಗಿದಂಥ ಮಂತ್ರಿ ಪುತ್ರನ ದಂತಂಗಳಂ ಕಿತ್ತು ಅನೇಕವಾಗಿ ಪೀಡಿಸುತ್ತಲು ಪುಷ್ಪಾರಾಮದಲ್ಲಿದ್ದ ವನ ನಾಸಿಕಗಳಲ್ಲಿ ನಾರಾಚಗಳನ್ನೇರಿಸುತ್ತಲು, ಈ ರೀತಿ ಬಾಧೆಪಡಿಸಿದರು. ಅವರ ಪೂರ್ವಿಕರೆಲ್ಲರು ನರಕದಲ್ಲಿ ಬಿದ್ದರು. ಶಿವದ್ರೋಹವಂ ಮಾಡಿದವರಿಗೆ ಇಂಥಾ ಬಾಧೆಯುಂಟಾಗುವದೆಂದು ನಂದೀಶ್ವರನು ಶತಾನಂದಂಗೆ ಪೇಳಲಾಗಿ, ಹಾಹಾ! ಎಲೈ ನಂದಿಕೇಶ್ವರನೆ! ಈ ಶಿವದ್ರೋಹಿಗಳ ವೃತ್ತಾಂತವಂ ಕೇಳಿ ನನ್ನ ಶರೀರವು ಗಡಗಡನೆ ನಡುಗುತ್ತಿದೆ. ಈ ಪಾಪಗಳಂ ಮಾಡಿದವರಿಗೆ ಶಿವದ ರ್ಶನವೆ ಪ್ರಾಯಶ್ಚಿತ್ತವೆಂದು ಪೇಳ್ದು ಆ ನಂದೀಶ್ವರನೊಡನೆ ಶಿವನ ಸಮೀಪಕ್ಕೆ ಪೋಗಿ ಅಲ್ಲಿ ದೇವದೇವನಾದ ಶಂಕರಂಗೆಯು ಮಹಾ ದೇವಿಗೂ ನಮಸ್ಕಾರವಂ ಮಾಡಿ ಮುಂದು ನಿಲ್ಲೆ, ದೇವತೆಗಳು ಶಿವನಂ ಸ್ತೋತ್ರಂಗಳಂ ಮಾಡುತ್ತಿದ್ದರು. ಆಗ ಪರಮೇಶ್ವರನು ಎಲೈ ಶತಾನಂದನೆ! ಕೇಳಬೇಕಾದುದಂ ನನ್ನ ರೂಪಿಯಾದ ನಂದೀಶ್ವರನಿಂದ ಕೇಳಿದೆಯೋ? ಎನಲಾಗಿ, ಆತನು ಎಲೈ ಸ್ವಾಮಿಯೆ! ನಿಮ್ಮಾಜ್ಞೆಯಿಂದ ಸಕಲವನ್ನು ನಂದೀಶ್ವರನ ಮುಖದಿಂ ಕೇಳಿದೆನು. ಸಂದೇಹಂಗಳೆಲ್ಲವು ನಿವೃತ್ತಂಗಳಾದವೆಂದು ಪೇಳ್ದು ಆ ಸ್ವಾಮಿಯಿಂದನುಜ್ಞಾತನಾಗಿ ಶಿವಲೋಕದಿಂ ಪೊರಮಟ್ಟನು. ಬಳಿಕ ದೇವತೆಗಳು ನಂದೀಶ್ವರನು ಸಹಾ ಸ್ವಾಮಿಗೆ ನಮಸ್ಕಾರವಂ ಮಾಡಿ ಅಪ್ಪಣೆಯಂ ತೆಗದುಕೊಂಡು ತಮ್ಮ ತಮ್ಮ ಸ್ಥಾನಂಗಳಿಗೆ ತೆರಳಿದರೆಂದು ಸೂತಂ ಶೌನಕಾದಿಗಳಿಗೆ ಪೇಳಿದ ನೆಂಬಲ್ಲಿಗೆ, ಐವತ್ತೊಂಬತ್ತನೆಯ ಅಧ್ಯಾಯವು ಸಂಪೂರ್ಣಮಾದುದು.

ಅರವತ್ತನೆಯ ಅಧ್ಯಾಯವು.

ಸೋಮಶರ್ಮ ಶಿವಧರ್ಮರ ಕಥೆ.

ಅನಂತರದಲ್ಲಿ ಋಷಿಗಳು ಸೂತಪೌರಾಣಿಕನಂ ಕುರಿತು, ಎಲೈ ಪೌರಾಣಿಕೋತ್ತಮನೆ! ಮದಾಂಧರಾದ ಈ ರಾಜಪುತ್ರಾದಿ ನಾಲ್ವರು ಪುರುಷರು ಅಜ್ಞಾನದಿಂ ಶಿವದ್ರೋಹವಂ ಮಾಡಿ ನರಕಂಗಳಲ್ಲಿ ಯಾತನೆಗಳನ್ನನುಭವಿಸಿದರಲ್ಲವೆ. ಮಹಾತ್ಮರಾದ ಶಿವಭಕ್ತರು ಒಂದು ವೇಳೆ ಅಜ್ಞಾನದಿಂ ಶಿವದ್ರೋಹವಂ ಮಾಡಿದೊಡೆ ಅವರಿಗೂ ನರಕಾನುಭವವುಂಟೋ, ನಿರೂಪಿಸೆನಲು ಸೂತನಿಂತೆಂದನು. ಎಲೈ ಋಷಿಗಳಿರಾ! ಮಹಾತ್ಮರಾದ ಶಿವಭಕ್ತರಿಂದ ಶಿವಾಪಕಾರವು ಜ್ಞಾನದಿಂದಾಗಲಿ ಅಜ್ಞಾನದಿಂದಾಗಲಿ ಮಾಡಿದರೆ ಅವರಿಗೂ ನರಕಾನುಭವವುಂಟು. ಹೀಗಿರುವಲ್ಲಿ ಉಳಿದಂಥ ಪಶುಕರ್ಮವಂ ಮಾಡಿದವರಿಗೆ

ನರಕಾನುಭವವು ಉಂಟೆಂಬಲ್ಲಿ ಏನು ಹೇಳಬೇಕಾಗಿರುವದು? ಪೂರ್ವದಲ್ಲಿ "ಸೋಮಶರ್ಮ, ಶಿವಧರ್ಮ" ರೆಂಬೀರ್ವರು ಬ್ರಾಹ್ಮಣರು ಮಹಾತ್ಮರಾಗಿ ಸರ್ವಜ್ಞರಾಗಿ ದೃಢವ್ರತರಾಗಿ ಇದ್ದರು. ಅವರು ಒಂದಾನೊಂದು ವೇಳೆಯಲ್ಲಿ ದೇವದೇವನಾದ ಶಂಕರನ ಸೇವಾರ್ಥವಾಗಿ ದೇವಾಲಯಕ್ಕೆ ಪೋಗಿ ಅಲ್ಲಿ ಲಿಂಗ ಮೂರ್ತಿಯಾದ ಶಿವನಂ ಕಂಡು ಪ್ರದಕ್ಷಿಣ ನಮಸ್ಕಾರವಂ ಮಾಡಿದರು. ಆ ಸಮಯದಲ್ಲಿ ಓರ್ವನ ಶರೀರಘಾತಿಯಿಂದ ದೀಪವು ಶಾಂತವಾದುದು. ಆತನದನ್ನು ನೋಡಲಿಲ್ಲವು. ಮತ್ತೋರ್ವನದಂ ಕಂಡು ಆ ದೀಪವನ್ನು ಪ್ರಕಾಶವಂ ಮಾಡದೆ ಸುಮ್ಮನೆ ಇದ್ದನು. ಬಳಿಕ ಅವರೀರ್ವರು ಕೆಲವು ಕಾಲದ ಮೇಲೆ ಮೃತರಾಗಿ ನರಕಂಗಳಲ್ಲಿ ಬಹು ಯಾತನೆಗಳನ್ನನುಭವಿಸಿದರು. ಅದನ್ನು ನಾನು ಪೇಳಲಾರೆನು. ಮತ್ತಂ ಶಿವಭಕ್ತನಾದ ಪುಣ್ಯವರ್ಮನೆಂಬ ಬ್ರಾಹ್ಮಣನು ದೇವಸೇವಾರ್ಥವಾಗಿ ಶಿವಾಲಯಕ್ಕೆ ಪೋಗಿ ನಾಶವಾಗುತಿರ್ಪ ದೀಪವಂ ಕಂಡು, ಪ್ರಕಾಶವಂ ಮಾಡುವ ನಿಮಿತ್ತವಾಗಿ ಅಂಗುಳಿಯಿಂದ ಆ ಬತ್ತಿಯನ್ನೆತ್ತೆ, ಆ ಬೆರಳ ತುದಿಯು ತೈಲದಲ್ಲಿ ಬಿದ್ದು ನೆನೆದ ಪಾಪದಿಂದ ಆತನು ನರಕದಲ್ಲಿ ಬಿದ್ದು ಯಾತನೆಗಳ ನನುಭವಿಸಿ ಬಳಿಕ ಅನೇಕ ಜನ್ಮಂಗಳಲ್ಲಿ ಶ್ವಾನವಾಗಿರ್ದನು. ಹಾಗೆಯೆ ಸುಮತಿಯೆಂಬ ಶಿವಯೋಗಿಯು ಶಿವಪೂಜಾರ್ಥವಾಗಿ ಅನೇಕ ಧಾನ್ಯಗಳನ್ನು ಯಾಚನೆಯಂ ಮಾಡಿಕೊಂಡು ಬಂದು, ಸ್ವಾಮಿಗೆ ಅಭಿಷೇಕವಂ ಮಾಡಿಸಿ ಅಲ್ಲಿಯೆ ಆ ನಾರಿಕೇಳಂಗಳ ವೊಳಗಿರ್ಪ ಸಾರವಂ ಭಕ್ಷಿಸಿದನು. ಆ ಪಾಪದಿಂದಾತನು ಘೋರವಾದ ನರಕದಲ್ಲಿ ಬಿದ್ದು ಬಹು ಯಾತನೆಗಳನ್ನನುಭವಿಸಿದನು. ಹಾಗೆಯೆ ಮತ್ತೋರ್ವ ಶಿವಭಕ್ತನಾದ ವೈಶ್ಯನು ಪ್ರತಿ ದಿವಸದಲ್ಲಿಯು ಸ್ಕಂದಾಲಯಕ್ಕೆ ಪೋಗಿ, ಆಜ್ಯದಿಂದೀಪಗಳನ್ನೆತ್ತಿ ಪ್ರದಕ್ಷಿಣ ನಮಸ್ಕಾರಂಗಳಂ ಮಾಡಿ ಬರುವ ವೇಳೆಯಲ್ಲಿ, ಆ ಗುಡಿಯಲ್ಲಿರುವ ಹುಣಸೆ ಚಿಗರನ್ನು ಕೊಯ್ದು ತಂದು ಭಕ್ಷಿಸಿದನು. ಆ ಪಾಪದಿಂದಾತನು ನರಕವನ್ನನುಭವಿಸಿದನು. ಅದುಕಾರಣದಿಂ ಶಿವದ್ರೋಹವಂ ಮಾಡಬಾರದು. ಆ ಶಿವದ್ರೋಹಿಗಳ ಸಮೀಪದಲ್ಲಿಯು ಇರಬಾರದು, ಎಂದು ನುಡಿಯೆ, ಮುನಿಗಳೆಲ್ಲರು ಆಶ್ಚರ್ಯಪಟ್ಟು ಭಯದಿಂ ನಡುಗುತ್ತ, ನಮ್ಮಿಂದ ಮಾಡಲ್ಪಟ್ಟ ತಪಸ್ಸುಗಳು ಸಫಲವಾಗುವದಕ್ಕೋಸ್ಕರ, ಶಿವಪಂಚಾಕ್ಷರೀ ಜಪವೇ ಪ್ರಾಯಶ್ಚಿತ್ತವೆಂಬ ಶ್ರುತಿವಾಕ್ಯವಂ ಸ್ಮರಿಸಿ, ತಮ್ಮ ಹೃದಯದಲ್ಲಿ ಪಾರ್ವತೀಸಮೇತನಾದ ಪರಮೇಶ್ವರನಂ ಧ್ಯಾನಿಸಿ ಪಂಚಾಕ್ಷರೀಜಪವಂ ಮಾಡಿ ಬಳಿಕ ಶಿವಪೂಜಾಮಾಹಾತ್ಮ್ಯವಂ

ಕೇಳಬೇಕೆಂದು ಪ್ರಶ್ನೆಯಂ ಮಾಡಿದರೆಂಬಲ್ಲಿಗೆ, ಉಪದೇಶಕಾಂಡದೊಳು

ಅರವತ್ತನೆಯ ಅಧ್ಯಾಯವು ಸಂಪೂರ್ಣವಾದುದು.

ಅರವತ್ತೊಂದನೆಯ ಅಧ್ಯಾಯವು.

ಶಿವಪೂಜಾಮಹಿಮೆ.

ಎಲೈ ಮುನಿಗಳಿರಾ! ಶ್ರವಣಮಾತ್ರದಿಂದಲೆ ಮುಕ್ತಿಯಂ ಕೊಡುವಂಥ ಶಿವಪೂಜಾಮಹಿಮೆಯಂ ಪೇಳುವೆನು ಕೇಳಿರೈ, ಪರಮೇಶ್ವರನು ಜಗತ್ಸಂಹಾರವಂ ಮಾಡಿ ಆ ಮಹಾನಿಶಿಯ ಕಡೆಯಲ್ಲಿ ಶಕ್ತಿಸಮೇತನಾಗಿ ನರ್ತನವಂಗೈದು, ಪೂರ್ವದಂತೆ ಜಗತ್ತಂ ಸೃಷ್ಟಿಸಲಿಚ್ಛೈಸಿ, ಸಂಕಲ್ಪಮಾತ್ರದಿಂದಲೆ ಅಂಡಂಗಳಂ ರುದ್ರರಂ ಮಾತೃಕಾಗಣಂಗಳಂ ಪ್ರಮಥಗಣಂಗಳಂ ಗಣಾಧ್ಯಕ್ಷರಂ ದೇವಾಸುರೋರಗ ಪಿತೃಗಣಂಗಳಂ ಸೃಷ್ಟಿಸಿ, ವಿಷ್ಣುಮುಂತಾದ ಕೆಲವಧಿಕಾರಿಗಳಿಗೆ, ವೇದಾಗಮ ಪುರಾಣ ಶಾಸ್ತ್ರಂಗಳ ಉಪದೇಶವಂ ಮಾಡಿ ಎಲೈ ವಿಷ್ಣ್ವಾದಿ ದೇವತೆಗಳಿರಾ! ಭಾವಪುರಸ್ಸರವಾಗಿ ಭಕ್ತಿಯಿಂದ ನನ್ನಂ ಪರಿಪೂಜಿಸಿದರೆ ಭಾವಾನುರೂಪವಾದ ಫಲವುಂಟಾದೀತು, ನಿಮಗೆ ಅಧಿಕಾರಂಗಳನೀಯುವೆನೆಂದು ಪೇಳಿದನು. ಬಳಿಕ ಆ ವಿಷ್ಣ್ವಾದಿ ದೇವತೆಗಳು ಮಹಾದೇವಂಗೆ ನಮಸ್ಕಾರವಂ ಮಾಡಿ ಅಂಜಲಿಬಂಧವಂಗೈದು, ಎಲೈ ಮಹಾದೇವನೆ! ನೀನು ಪರಿಪೂರ್ಣನಾಗಿ ವಿಶ್ವರೂಪನಾಗಿದ್ದೀಯೆಂದು ಶ್ರುತಿಯು ಪೇಳುತ್ತಿರುವುದರಿಂದ ನಿನ್ನ ನಾಮರೂಪದಲ್ಲಿ ಪೂಜಿಸಿ ಪ್ರಸಾದಕ್ಕೆ ಯೋಗ್ಯರಾಗುವೆವು ಎನಲಾಗಿ, ಪರಮೇಶ್ವರನು ಎಲೈ ದೇವತೆಗಳಿರಾ! ಆವವನಾಗಲಿ ಆವ ಮೂರ್ತಿಯಲ್ಲಿಯಾದರು ಸರಿಯೆ ನನ್ನನ್ನು ಪೂಜಿಸಿದರೆ ನಾನು ಪ್ರಸನ್ನನಾಗಿ ವಾಂಛಿತಾರ್ಥಂಗಳಂ ಕೊಡುತಲಿದೇನೆ, ಮತ್ತಂ ಲಿಂಗಾರ್ಚನೆಯಂ ಮಾಡುವವರಿಗೆ ಶೀಘ್ರದಿಂ ಪ್ರಸನ್ನನಾಗಿ ಅಭೀಷ್ಟವಂ ಕೊಡುವೆನು, ನಾನು ಆವಾಗಲು ಲಿಂಗಮೂರ್ತಿಯಲ್ಲಿ ವಾಸವಂ ಮಾಡುತಿರ್ಪೆನೆಂದು ನಿರೂಪಿಸಿದನು. ಅನಂತರವಲ್ಲಿ ಆ ದೇವತೆಗಳು ಈ ವಾಕ್ಯವಂ ಕೇಳಿ, ಎಲೈ ಅವ್ಯಯನಾದ ಶಿವನೆ! ಲಿಂಗವೆಂಬುವದಾವುದು? ಈ ಲಿಂಗವೆಂಬ ಪೆಸರು ಆವಕಾರಣದಿಂ ಬಂದುದು? ಎಂದು ನುಡಿಯೆ, ಪರಮೇಶ್ವರನು ಈ ವಾಕ್ಯವಂ ಕೇಳಿ,

ಶ್ಲೋ॥ ಅವ್ಯಕ್ತಂ ಲಿಂಗಮಾಖ್ಯಾತ ಮನಂತಮಜರಂಧ್ರುವಂ ।
ಗುಣತ್ರಯಂತದೇವಾಹಂ ಸೃಜತ್ಯವತಿಹಂತಿಚ ॥

ತಾ॥ ಎಲೈ ದೇವತೆಗಳಿರಾ! ಅವ್ಯಕ್ತವೆಂಬುದು ಲಿಂಗವೆಂದು ಹೇಳಲ್ಪಟ್ಟಿತು, ಆ ಲಿಂಗವು ಅಂತವಿಲ್ಲದ್ದಾಗಿಯು ತ್ರಿಕಾಲದಲ್ಲಿಯೂ ಏಕರೀತಿಯಾಗಿರುವುದರಿಂದ ಜರಾವಸ್ಥೆಯಿಲ್ಲದ್ದಾಗಿಯು, ಚಲನೆಯಿಂದ ರಹಿತವಾದದ್ದಾಗಿಯು ಇರುವದು, ಅಂಥ ಲಿಂಗರೂಪಿಯಾದ ನಾನೆ ಗುಣತ್ರಯಯುಕ್ತನಾಗಿ ಜಗತ್ತಿನ ಸೃಷ್ಟಿಸ್ಥಿತಿ ಸಂಹಾರಂಗಳಂ ಮಾಡುತ್ತಿದೇನೆ ಇದೇ ನನ್ನ ಲಿಂಗಸ್ವರೂಪವು, ಆ ಲಿಂಗಕ್ಕೆ ನಾಲ್ಕು ರೂಪಂಗಳಿರುವವು ಯಾವುವೆಂದರೆ,

ಶ್ಲೋ॥ ಪರೋಬಿಂದುಃಪರೋನಾದ ಸ್ತ್ವಪರೌಬಿಂದುನಾದಕೌ ।
ಉಪರ್ಯ್ಯಧೋಭಾಗನಿಷ್ಠಾಶ್ಚ ತ್ವಾರೋಪಿಮುನೀಶ್ವರಾಃ ।
ಬಿಂದುನಾದಮಯೇತಸ್ಮಿನ್ಲಿಂಗೆಸನ್ನಿಹಿತಸ್ಸದಾ ॥

ತಾ॥ ಪರಬಿಂದು, ಪರನಾದ, ಅಪರಬಿಂದು, ಅಪರನಾದ, ಎಂಬೀ ನಾಲ್ಕು ರೂಪಂಗಳಲ್ಲಿ ಲಿಂಗದ ಅಧೋಭಾಗದೊಳು ಅಪರಬಿಂದುವೆಂಬ ರೂಪವೂ ಅದರ ಮೇಲೆ ಅಪರನಾದವೆಂಬ ರೂಪವೂ ಅದರ ಮೇಲ್ಭಾಗದಲ್ಲಿ ಪರಬಿಂದುವೆಂಬ ರೂಪವೂ ಇರುವವು. ಇವಕ್ಕೆ ಬಿಂದುನಾದ ಲಿಂಗಾಕೃತಿಯಾದ ಪ್ರಣವವೆ ಪೀಠವು, ಬಿಂದುನಾದ ಮಯವಾದ ಲಿಂಗದಲ್ಲಿ ಆವಾಗಲು ನಾನು ಸನ್ನಿಹಿತನಾಗಿ ಈ ಲಿಂಗಾರ್ಚಕರಿಗೆ ಸದ್ಯಃ ಪ್ರೀತನಾಗಿ ಸಮಸ್ತವಾದ ಇಷ್ಟಾರ್ಥಂಗಳಂ ಕೊಡುತಲಿದೇನೆ. ಎಲೈ ದೇವತೆಗಳಿರಾ! ಹಿಂದೆ ಹೇಳಿದ ನಾಲ್ಕು ರೂಪಂಗಳುಳ್ಳ ಆ ಲಿಂಗದಲ್ಲಿ ನಾನು ಪೂರ್ಣ ಕಲೆಯಿಂದ ವಾಸವಂ ಮಾಡುತ್ತಿದೇನೆ ಮತ್ತಂ ಸಕಲ ಜಗತ್ತು ತಿಲದಲ್ಲಿ ತೈಲವಿರುವಂತೆ ಆ ಲಿಂಗದಲ್ಲಿದ್ದು ಪ್ರಳಯ ಕಾಲದಲ್ಲಿ ಅದರಲ್ಲಿಯೆ ಲೀನವಾಗುವದು, ಆದುದರಿಂದ ಈ ಜಗತ್ತಿನ ಸೃಷ್ಟಿ ಸ್ಥಿತಿಲಯಂಗಳೆಂಬ ಮೂರು ಆ ಲಿಂಗದಲ್ಲಿಯೆ ಉಂಟಾಗುವವು. ಮತ್ತಂ ಆ ಲಿಂಗವು ಪೀಠಾತ್ಮಕವಾಗಿರುವದೆಂದು ಪೇಳಲ್ಪಟ್ಟಿದೆ, ಅದುಕಾರಣದಿಂ ಪೀಠಯುಕ್ತವಾದ ಲಿಂಗವನ್ನು ರತ್ನ, ಕಾಂಚನ, ರಜತ, ಶಿಲೆದಾರು, ಮೃತ್ತಿಕೆ, ಪಾದರಸ, ಮುಂತಾದವುಗಳಿಂದ ನಿರ್ಮಾಣವಂ ಗೈದು, ಸಾರ್ವಕಾಲದಲ್ಲಿಯು ಆರು ಪರಿಪೂಜಿಸುವರೋ ಅವರು ಮುಕ್ತಿಯಂ ಪಡೆವರು, ಈ ಲಿಂಗಾರ್ಚನೆಯು ಫಲವನೀಯುವಂತೆ ವೇದಯಜ್ಞದಾನ ತಪಸ್ಸುಗಳ್ಯಾವವು ಕೊಡಲಾರವು. ಅದು ಕಾರಣದಿಂ ಲಿಂಗಾರ್ಚಕರಿಗೆ ಜನ್ಮ ಸಂಸಾರಂಗಳಿಲ್ಲವು, ಜಗತ್ರಯದಲ್ಲಿಯು ಲಿಂಗಧಾರಿಯಾದ ನನ್ನನ್ನು ಪೂಜಿಸಲಿ, ಆ ಪೂಜೆಯಂ ತೆಗದುಕೊಳ್ಳುತಲಿದೇನೆ, ಮತ್ತಂ ಕೇದಾರ, ಕಾಶಿ, ಶ್ರೀಶೈಲ, ದಕ್ಷಿಣಕೈಲಾಸ, ವಟಾರಣ್ಯ, ಕಾಂಚೀಪುರ, ಅರುಣಾದ್ರಿ, ವೃದ್ಧಾಚಲ, ಚಿದಂಬರ, ಕುಂಭಕೋಣ, ಮಧ್ಯಾರ್ಜುನ, ಕಮಲಾಲಯ, ಹಾಲಾಸ್ಯನಗರಿ, ರಾಮೇಶ್ವರ ಎಂಬಿವುಗಳು ಮೊದಲಾದ ಕ್ಷೇತ್ರಂಗಳಲ್ಲಿ ಉಮಾಸಹಿತನಾಗಿ ವಾಸವಂ ಮಾಡುತಲಿದೇನೆ, ಸರ್ವರು ನನ್ನಂ ಪೂಜಿಸಲೆಂದು ಪೇಳ್ದು ಅಂತರ್ಧಾನವಾದನು. ಬಳಿಕ ವಿಷ್ಣು ಮುಂತಾದ ದೇವತೆಗಳು ಋಷಿಗಳು ತಮ್ಮ ತಮ್ಮ ಅಭೀಷ್ಟಂಗಳಂ ಪಡೆಯುವುದಕ್ಕೋಸುಗ ಪೀಠಯುಕ್ತವಾದ ಲಿಂಗವಂ ನಿರ್ಮಿಸಿ, ನದೀತೀರ ಪರ್ವತಾಗ್ರ ಮುಂತಾದ ಪ್ರದೇಶಗಳಲ್ಲಿ ಸ್ಥಾಪನೆಯಂ ಮಾಡಿ, ಷೋಡಶೋಪಚಾರ ಪೂಜೆಗಳಂ ಗೈದು ಶಿವಪ್ರಸಾದದಿಂ ಮೋಕ್ಷವನ್ನೈದಿದರೆಂದು ಸೂತಂ ಶೌನಕಾದಿಮುನಿಳಿಗೆ

ಪೇಳಿದ ನೆಂಬಲ್ಲಿಗೆ, ಉಪದೇಶಕಾಂಡದೊಳು ಅರವತ್ತೊಂದನೆಯ ಅಧ್ಯಾಯವು ಸಂಪೂರ್ಣವಾದುದು.

ಅರವತ್ತೆರಡನೆಯ ಅಧ್ಯಾಯವು.

ಶಿವಪೂಜಾಬಲದಿಂದ ಬ್ರಹ್ಮ ವಿಷ್ಣುಗಳಿಗೆ ಸತ್ಯ ವೈಕುಂಠ ಲೋಕ ಪ್ರಾಪ್ತಿ.

ಈ ಪ್ರಕಾರವಾಗಿ ಸೂತಮುನಿಯಿಂದ ನಿರೂಪಿಸಲ್ಪಟ್ಟ ಶಿವಪೂಜಾ ಮಹಿಮೆಯಂ ಕೇಳಿ, ಪರಮಾನಂದ ಭರಿತರಾಗಿ ಎಲೈ ಸೂತಪೌರಾಣಿಕನೆ! ಯಾವ ಯಾವ ಸ್ಥಳದಲ್ಲಿ ಆರಾರು ಲಿಂಗಪೂಜೆಯಂ ಮಾಡಿದರೋ ಕೇಳಲಿಚ್ಛೈಸುತ್ತೇವೆನಲು, ಸೂತನಿಂತೆಂದನು, ಎಲೈ ಋಷಿಗಳಿರಾ! ಶಂಕರಪ್ರಿಯನಾದ ಮಹಾನುಹಿಮಾಶಾಲಿಯಾದ ವಿಷ್ಣುವು, ಅವಿಮುಕ್ತವೆಂಬ ಕಾಶೀಕ್ಷೇತ್ರಕ್ಕೆ ಪೋಗಿ, ಬಹು ವರ್ಷಂಗಳು ಘೋರವಾದ ತಪವಂ ಮಾಡಿ, ಲಿಂಗಮೂರ್ತಿಯಾದ ಸದಾಶಿವನಂ ಪರಿಪೂಜಿಸಿ, ಪ್ರಸನ್ನನಂ ಮಾಡಿಕೊಂಡು, ಆ ಪರಮೇಶ್ವರನಿಂ ಸರ್ವಾಧಿಕಾರದಲ್ಲಿ ಯಥಾಶಾಸ್ತ್ರದಿಂದಭಿಷಿಕ್ತನಾಗಿ, ವೈಕುಂಠವೆಂಬ ಸ್ಥಾನವನ್ನೂ ಶಂಖ ಚಕ್ರ ಗದೆ ಶಾರ್ಜ ಮುಂತಾದ ಆಯುಧಂಗಳನ್ನೂ ಪಡದು, ಶ್ವೇತಚ್ಛತ್ರ ಚಾಮರಾದಿಗಳಿಂದ ಯುಕ್ತನಾಗಿ, ಲಕ್ಷ್ಮಿಯೊಡನೆ ಗರುಡಾರೂಢನಾಗಿ, ಶಿವಲೋಕಕ್ಕಿಂತಲು ಅಧೋಭಾಗದಲ್ಲಿರ್ಪ ವಿಷ್ಣುಲೋಕದಲ್ಲಿ ಬ್ರಹ್ಮಾದಿಗಳಿಂ ಸೇವ್ಯಮಾನನಾಗಿ ದುಷ್ಟನಿಗ್ರಹ ಶಿಷ್ಟಪರಿಪಾಲನೆಯಂ ಮಾಡುತ್ತ ಮಹದೈಶ್ವರ್ಯವಂ ಪಡದನು. ಹಾಗೆ ಕಾಂಚೀಪುರದಲ್ಲಿ ಬ್ರಹ್ಮನು ಶಿಲಾಮಯವಾದ ಈಶ್ವರಂಗೆ ಅಭಿಷೇಕವಂ ಮಾಡಿ, ಆ ಪರಮೇಶ್ವರನಿಂದ ಸಕಲ ಜಗತ್ತಂ ಸೃಷ್ಟಿಸುವ ಅಧಿಕಾರವಂ ಸರಸ್ವತಿಯಂ ಹಂಸವಾಹನವಂ ಪಡದು ಛತ್ರಚಾಮರಾದಿಗಳ್ವೆರಸಿ, ದೇವತೆಗಳಿಂದಲು ಋಷಿಗಳಿಂದಲು ಪೂಜಿಸಲ್ಪಟ್ಟವನಾಗಿ ವಿಷ್ಣುಲೋಕಕ್ಕೆ ಅಧೋಭಾಗದಲ್ಲಿರುವ ಸತ್ಯಲೋಕದಲ್ಲಿರುವನು, ಇಂದ್ರನು ಶ್ರೀಶೈಲದಲ್ಲಿ ಈಶ್ವರನಂ ಪೂಜಿಸಿ ದೇವಾಧಿಪತ್ಯವಂ ಪಡದು, ಶಚೀದೇವಿಯೊಡನೆ ಕಾಮಧೇನು ಕಲ್ಪವೃಕ್ಷ ಮುಂತಾದವುಗಳಿಂದ ಯುಕ್ತನಾಗಿ, ಮಹದೈಶ್ವರ್ಯವಂತನಾಗಿ ಪೂರ್ವದಿಕ್ಕಿನಲ್ಲಿ ಆಧಿಪತ್ಯವಂ ಮಾಡುತ್ತ ದಿವ್ಯಭೋಗಂಗಳ ಅನುಭವಿಸಿಕೊಂಡಿರುವನು. ಅಗ್ನಿಯು ಅರುಣಾಚಲದಲ್ಲಿ ಸದಾ ಶಿವಲಿಂಗಾಭಿಷೇಕವಂ ಗೈದು ಅಗ್ನಿಗಳಿಗೆ ಅಧಿಪತಿಯಾಗಿ ಪ್ರಾಚೀ ದಕ್ಷಿಣದಿಕ್ಕುಗಳಿಗೆ ಮಧ್ಯಗತವಾದ ವಿದಿಕ್ಕಿನ ಆಧಿಪತ್ಯವನ್ನೈದಿ, ಪತ್ನಿ ಮುಂತಾದ ಅನೇಕ ವೈಭವಂಗಳಂ

ಪೊಂದಿರುತಿರ್ಧಾನೆ, ಹಾಗೆಯೆ ಯಮನು ಕೇದಾರ ಕ್ಷೇತ್ರದಲ್ಲಿ ದೇವದೇವನಾದ ಸದಾಶಿವನಂ ಪೂಜಿಸಿ ದಕ್ಷಿಣ ದಿಕ್ಪಾಲಕತ್ವನನ್ನೂ ಮಹಿಷವಾಹನವನ್ನೂ ಕಾಲ ದಂಡ ಮುಂತಾದ ಆಯುಧಂಗಳನ್ನೂ ಪಡದು, ಪ್ರಾಣಿಗಳ ಪುಣ್ಯಪಾಪಾನು ಸಾರವಾಗಿ ತತ್ತಲ್ಲೋಕ ಪ್ರಾಪ್ತಿಯನೀಯುತ್ತ, ಧರ್ಮಾಧರ್ಮಂಗಳಂ ವಿಚಾ ರಿಸಿಕೊಂಡು ಸಂಯಮನೀಪುರದಲ್ಲಿದಾನೆ, ನಿಋುತಿಯು ಗೋಕರ್ಣದಲ್ಲಿ ಶಿವನಂ ಪೂಜಿಸಿ, ದಕ್ಷಿಣ ಪಶ್ಚಿಮದಿಕ್ಕುಗಳ ಮಧ್ಯದಲ್ಲಿರುವ ವಿದಿಕ್ಕಿನಲ್ಲಿ ಅಧಿ ಪತ್ಯವಂ ಪೊಂದಿ, ರಾಕ್ಷಸಾಧಿಪತ್ಯವನ್ನೈದಿ ಯಜ್ಞಗಳಂ ಮಾಡುವವರಿಗೆ ಫಲವಂ ಕೊಡುತ್ತ ಅನೇಕ ಸಂಪತ್ತುಗಳಂ ಪಡದಿರುವನು, ವರುಣನು ಜಂಬುವೆಂಬ ಅರಣ್ಯದಲ್ಲಿ ಪರಮೇಶ್ವರನಂ ಪೂಜಿಸಿ, ಸಮುದ್ರಾಧಿಪತ್ಯವಂ ಮಕರವಾಹನವಂ ಪಾಶಾದ್ಯಾಯುಧಂಗಳಂ ಪಡದು ಪಶ್ಚಿಮದಿಕ್ಕಿನಲ್ಲಿ ಸುಖದಿಂದಿರುವನು. ವಾಯುವು ಭೂ ಕೈಲಾಸವಾದ ಕಾಳಹಸ್ತಿಯಲ್ಲಿ ಅನೇಕೋಪಚಾರಂಗಳಿಂ ಮಹಾದೇವನಂ ಪೂಜಿಸಿ, ಪಶ್ಚಿಮೋತ್ತರ ಮಧ್ಯದಲ್ಲಿರುವ ವಿದಿಕ್ಕಿನಲ್ಲಿ ಅಭಿಷಿಕ್ತ ನಾಗಿ ವಾಯುಗಳಿಗಧಿಪತಿಯಾಗಿ, ಹರಿಣ ವಾಹನವಂ ಧ್ವಜ ಛತ್ರ ಆಯುಧಾದಿ ಗಳಂ ಪಡದು ಸಂತುಷ್ಟನಾಗಿದಾನೆ, ಕುಬೇರನು ಸಿದ್ಧವಟದಲ್ಲಿ ಪರಮ ವಿಶ್ವಾಸ ದಿಂ ಶಂಕರನಂ ಪೂಜಿಸಿ, ಉತ್ತರದಿಗಾಧಿಪತ್ಯವನ್ನು ನವನಿಧಿಗಳ ಪ್ರಭುತ್ವ ವನ್ನೂ ಪುಷ್ಪಕವೆಂಬ ವಿಮಾನವಂ ಪಡದು ಸುಖದಿಂದಿದಾನೆ. ಈಶಾನನು ಕಮಲಾಲಯದಲ್ಲಿ ಮಹಾದೇವನಂ ಪೂಜಿಸಿ, ಶಿವಸದೃಶವಾದ ರೂಪವಂ ಶಿವ ಚಿಹ್ನಂಗಳಂ ವೃಷಭ ವಾಹನವಂ ಪಡದು, ಪೂರ್ವೋತ್ತರ ದಿಙ್ಮಧ್ಯಗತವಾದ ವಿದಿಕ್ಕಿಗೆ ಅಧಿಪತಿಯಾಗಿರುತಿದಾನೆ. ಹಾಗೆ ಸೂರ್ಯನು ಕಾಂಚೀಪುರದಲ್ಲಿ ಈಶ್ವರಾ ರಾಧನೆಯಂ ಮಾಡಿ, ಋಗ್ಯಜುಸ್ಸಾಮವೇದಂಗಳು ತನ್ನ ಮಂಡಲದಲ್ಲಿರುವ ಹಾಗೆಯೇ ವೇದಮಯವಾದ ರಥವನ್ನೂ ನವಗ್ರಹಾಧಿ ಪತ್ಯವನ್ನೂ ದಿನಾಧಿ ಪತ್ಯವನ್ನೂ ಜ್ಯೋತಿಶ್ಚಕ್ರಾಧಿಪತ್ಯವನ್ನೂ ಪಡದು ಸುಖವಾಗಿರುವನು. ಚಂದ್ರನು ಕುಂಭಕೋಣದಲ್ಲಿ ಶಿವನಂ ಮುಕ್ತಾಫಲಂಗಳಿಂ ಪೂಜೆಯಂ ಮಾಡಿ ನಕ್ಷತ್ರಾಧಿಪತ್ಯವಂ ಪಡದು, ಈಶ್ವರನ ಶಿರೋಭೂಷಣವಾಗಿರುತಿದಾನೆ. ಈ ಸೂರ್ಯಚಂದ್ರರೀರ್ವರು ಮೇರುವಂ ಪ್ರದಕ್ಷಿಣವಂ ಮಾಡುತ್ತ ಜಗತ್ತಂ ರಕ್ಷಿಸು ತಿರುವರು. ಇದಲ್ಲದೆ ಅಂಗಾರಕ ಬುಧ ಶುಕ್ರ ಶನೈಶ್ಚರರು ಮಧ್ಯಾರ್ಜುನ ಹಾಲಾಸ್ಯ ಸೇತು ವಟವನ ವೇದಾರಣ್ಯಗಳೆಂಬ ಪಂಚ ಕ್ಷೇತ್ರಂಗಳಲ್ಲಿ ಮಹಾ ದೇವನಂ ಪೂಜಿಸಿ, ಸೂರ್ಯಚಂದ್ರರ ಉಪರಿಭಾಗದಲ್ಲಿ ಸ್ಥಾನವಂ ಪಡದು ಪ್ರಾಣಿ ಗಳಿಗೆ ಸುಖದುಃಖಂಗಳ ನೀಯುವ ಅಧಿಕಾರವಂ ಅವರಿಂದ ಪೂಜಾಯೋಗ್ಯತ್ವ ವಂ ಪಡದು ಸುಖವಾಗಿರುವರು. ಹಾಗೆ ಸಪ್ತರ್ಷಿಗಳು ಚಿದಂಬರದಲ್ಲಿ ಸದಾ

ಶಿವನಂ ಪೂಜಿಸಿ, ಈಶ್ವರಾನುಗ್ರಹದಿಂ ಸರ್ವ ಶಾಸ್ತ್ರಾರ್ಥ ಪರಿಜ್ಞಾನವಂ, ನವ ಗ್ರಹೋಪರಿಭಾಗಸ್ಥಿತಿಯುಂ ದೇಹಾಂತರದಲ್ಲಿ ಮುಕ್ತಿಯುಂ ಸಹಾ ಪಡದರೆಂದು ಸೂತಂ ಶೌನಕಾದಿಗಳಿಗೆ ಪೇಳಿದ ನೆಂಬಲ್ಲಿಗೆ, ಉಪದೇಶಕಾಂಡದೊಳು ಅರವತ್ತೆರಡನೆಯ ಅಧ್ಯಾಯವು ಸಂಪೂರ್ಣವಾದುದು.

ಅರವತ್ಮೂರನೆಯ ಅಧ್ಯಾಯವು.

ಧ್ರುವ ಮಹಾರಾಯನ ಕಥೆ.

ಎಲೈ ಋಷಿಗಳಿರಾ! ಉತ್ತಾನಪಾದರಾಯನ ಕುಮಾರನಾದ ಧ್ರುವಮಹಾ ರಾಯನು ಕಾಶೀಕ್ಷೇತ್ರಕ್ಕೆ ಪೋಗಿ ವಿಶ್ವೇಶ್ವರನಂ ಪೂಜಿಸಿ ಗ್ರಹ ನಕ್ಷತ್ರ ಸಪ್ತ ಋಷಿಗಳ ಮಂಡಲಂಗಳಂ ಕಾಲಸೂತ್ರದಿಂ ತಿರುಗಿಸುವಂತೆ ವರವಂ ಪಡದು ಉಪರಿಭಾಗದಲ್ಲಿದಾನೆ. ಆದಿಶೇಷನು ಕುಂಭಕೋಣದಲ್ಲಿ ಮಹೇಶ್ವರನ ಪೂಜಿಸಿ, ಸರ್ವಸರ್ಪಾಧಿಪತ್ಯವಂ ಭೂಮಿಯುಂ ಪಡದು ಪ್ರತಾಪಿಯಾಗಿದಾನೆ. ಇದಲ್ಲದೆ ದೇವ ಮುನಿಸಿದ್ಧ ಯಕ್ಷ ಗರುಡ ವಿದ್ಯಾಧರ ಮಹೋರಗ ಕಿನ್ನರ ಕಿಂಪುರುಷ ದಿಗ್ಗಜ ಕುಲಪರ್ವತ ಮನುಷ್ಯ ಎಂಬಿವರು ಮುಂತಾದ ಸಕಲ ಪ್ರಾಣಿಗಳು ಈಗ ಹೇಳಿದ ಸ್ಥಾನಂಗಳಲ್ಲಿಯು ಇತರವಾದ ಪರ್ವತ ಶಿಖರಂಗಳಲ್ಲಿ ನದೀತೀರಂ ಗಳಲ್ಲಿಯು ಮಹಾದೇವನಂ ಪೂಜಿಸಿ ತಮಗೆ ಬೇಕಾದ ಆಧಿಪತ್ಯಂಗಳಂ ಪಡ ದರು. ಮತ್ತಂ ಶಿವಪೂಜಾ ಪ್ರಭಾವದಿಂ ಕಪಿಲಾದಿ ಮುನಿಗಳುಂ ಇತರರಾದ ಕೆಲಂಬರುಂ ಲೋಕ ಕರ್ತೃಗಳಾಗಿ ನಿತ್ಯರಾಗಿರುವರು. ಇನ್ನು ಕೆಲವರು ಶಿವ ಪೂಜಾಮಹಿಮೆಯಿಂ ಶಿವಲೋಕವನೈದಿ ಸಾಯುಜ್ಯ ಸಾರೂಪ್ಯಾದಿ ಮುಕ್ತಿಗಳಂ ಪಡದರು. ಇದಲ್ಲದೆ ದೇವಾಸುರ ಮನುಷ್ಯಾದಿಗಳಲ್ಲಿ ಕೆಲಂಬರು ಶಿವಪೂಜಾ ಪ್ರಭಾವದಿಂ ಮಹದೈಶ್ವರ್ಯವಂತರಾಗಿ, ಭುವನತ್ರಯದಲ್ಲಿಯು ವಿಖ್ಯಾತರಾಗಿ ದಾರೆ. ಜಯಾರ್ಥಿಗಳಾದ ಕೆಲಂಬರು ಶಿವಪೂಜೆಯಂ ಮಾಡಿ ಶತ್ರುಗಳಂ ಜಯಿಸಿದರು. ಮತ್ತಂ ಬಲಾರ್ಥಿಯು ಬಲವಂ ಪುತ್ರಾರ್ಥಿಗಳು ಪುತ್ರರಂ ಪಶುಕಾಮಿಗಳು ಪಶುಗಳಂ ಐಶ್ವರ್ಯಕಾಮಿಗಳು ಮಹದೈಶ್ವರ್ಯವಂ ಪಡದಿರುವರು. ಅದುಕಾರಣದಿಂ ಶಿವಪೂಜೆಯೆ ಭುಕ್ತಿ ಮುಕ್ತಿಗಳನ್ನೀಯುವುದಕ್ಕೆ ಸಮರ್ಥವೆ ಹೊರತು ಮತ್ಯಾವುದೂ ಇಲ್ಲವು. ಶಿವಪೂಜಾಪ್ರಭಾವದಿಂದನೇಕರು ಸೌಭಾಗ್ಯ ಕಾಂತಿತ್ಯಾಗ ಸತ್ಯಪರಾಕ್ರಮಂಗಳಂ ಪಡದು ಸರ್ವೋತ್ಕೃಷ್ಟರಾಗಿರುತಿದಾ ರೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ಅರವತ್ಮೂರನೆಯ ಅಧ್ಯಾಯವು ಸಮಾಪ್ತವಾದುದು.

ಅರವತ್ನಾಲ್ಕನೆಯ ಅಧ್ಯಾಯವು.

ಬ್ರಹ್ಮವಿಷ್ಣುಗಳಿಬ್ಬರ ಅಹಂಕಾರಖಂಡನೆ.

ಎಲೈ ಋಷಿಗಳಿರಾ! ಪರಮಪುರುಷನಾದ ವಿಷ್ಣುವು ಪುರಾರಿಯನ್ನಾರಾಧಿಸಿ, ಋಷಿ ಶಾಪವಂ ಪರಿಹರಿಸಿಕೊಂಡು ಪುತ್ರ ಮಿತ್ರ ಕಳತ್ರಂ ರಾಜ್ಯಲಾಭವಂ ಸಹಾ ಪಡೆದನು. ಈ ವಿಷಯದಲ್ಲಿ ಕೆಲವು ಪುಣ್ಯಂಗಳಾದ ಇತಿಹಾಸಂಗಳಂ ಪೇಳುವೆನು ಕೇಳಿರಿ. ಒಂದಾನೊಂದು ವೇಳೆಯಲ್ಲಿ ಬ್ರಹ್ಮಾವಿಷ್ಣುಗಳೀರ್ವರಿಗೆ ಪರಸ್ಪರಮಾಗಿ, ಜಗತ್ತುಗಳಿಗೆ ನಾನು ಕರ್ತನು ತಾನು ಕರ್ತನು ಎಂಬದಾಗಿ ಕಲಹವು ಪ್ರವರ್ತಿಸಲಾಗಿ, ಆಗ ಸರ್ವೇಶ್ವರೇಶ್ವರನಾದ ಶಿವನು ಅವರ ಅಹಂಕಾರವಂ ಪರಿಹರಿಸಲೋಸುಗ, ಸೂರ್ಯಮಂಡಲಾಂತರ್ವರ್ತಿಯಾದ ಭೈರವನಂ ಸೃಜಿಸಿ, ಆ ಬ್ರಹ್ಮನ ಪಂಚ ಶಿರಸ್ಸುಗಳಲ್ಲೊಂದು ಶಿರಸ್ಸನ್ನು ಮಿಣಿಕೇಕಾಯನೋಪಾದಿಯಲ್ಲಿ ನಖಾಗ್ರದಿಂ ಛೇದಿಸಿ, ವಿಷ್ಣುವಿನ ಅಹಂಕಾರವಂ ಪರಿಹರಿಸಲೋಸುಗ ಕಪಾಲಧರನಾದ ಆ ಭೈರವನಂ ಆ ವಿಷ್ಣುವಿನ ಸಮೀಪಕ್ಕೆ ರಕ್ತಭಿಕ್ಷೆಯಂ ಕೇಳ್ಕೊಳುವಲು, ಆತನು ಹರಿಯಂ ನೋಡಿ ರಕ್ತಭಿಕ್ಷೆಯಂ ಕೊಡೆಂದು ಕೇಳಿದನು. ಆಗ ಹರಿಯು ಲಲಾಟಾಗ್ರದಲ್ಲಿರ್ಪ ನರವಂ ಶೀಳಿ ಶರೀರದಲ್ಲಿರುವ ರಕ್ತವನ್ನೆತ್ತಿ ಮೂರ್ಛೆಯನ್ನೈದಿದನು. ಬಳಿಕ ಭೈರವನು ತನ್ನ ಕರಸ್ಪರ್ಶದಿಂದಾತನಂ ಯೆಬ್ಬಿಸಲಾಗಿ, ವಿಷ್ಣುವು ಶೀಘ್ರದಿಂ ಜ್ಞಾನವಂ ಪಡೆದು, ನಾವು ಅಹಂಕಾರಂ ಗೈದದ್ದರಿಂದ ಶಿವನಿಂದ ಹೀಗೆ ಮಾಡಲ್ಪಟ್ಟಿತೆಂದು ತಿಳಿದು, ಈ ಪಾಪಶಾಂತಿಗೆ ಶಿವಪೂಜೆಯಂ ಮಾಡಬೇಕೆಂದು ನಿಶ್ಚಯಿಸಿ, ಮಧ್ಯಾರ್ಜುನಕ್ಕೆ ಪೋಗಿ ಜಗದ್ಗುರುವಾದ ಶಿವನಂ ಪೂಜಿಸಿ, ಆ ಅರ್ಚನೆಯಿಂದ ತಾನು ಕೃತಾರ್ಥನಾದೆನೆಂದರಿತು ಪ್ರಸನ್ನನಾದ ದೇವದೇವನ ಕೃಪೆಯಿಂದ ಪೂರ್ವದಂತೆ ತನ್ನ ಲೋಕಕ್ಕೆ ಪೋದನು. ಮರಳಿ ಒಂದಾನೊಂದು ವೇಳೆಯಲ್ಲಿ ವಿಷ್ಣುವು ಅಹಂಕಾರದಿಂದ ಪರಮಾರ್ಥವನ್ನು ತಿಳಿಯದೆ, ತಾನೆ ಈಶ್ವರನೆಂದು ಬ್ರಹ್ಮನೊಡನೆ ಸ್ಪರ್ಧೆಯಂ ಮಾಡಿ, ಮಹಾಲಿಂಗಾಕೃತಿಯ ಮೂಲವಂ ಕಾಣದೆ ಮರಳಿ ಬಂದು, ಆ ಪಾಪಶಾಂತಿಗೋಸುಗ ಅರುಣಾಚಲೇಶ್ವರನಂ ಪೂಜಿಸಿ ನಿರ್ದೋಷಿಯಾಗಿ ತನ್ನ ಲೋಕಕ್ಕೆ ಪೋದನು. ಮತ್ತಂ ಒಂದು ವೇಳೆಯಲ್ಲಿ ದೇವಾಸುರರ್ಗೆ ಕಲಹವುಂಟಾಗಲು, ದೇವತೆಗಳು ಪರಾಭವವನ್ನೈದಿದ ಸಮಯದಲ್ಲಿ ವಿಷ್ಣುವು ಚಕ್ರಧರನಾಗಿ ರಾಕ್ಷಸರಂ ಸಂಹರಿಸುತ್ತಿದ್ದನು. ಆಗ ಅಸುರರು ಅತಿ ಶೀಘ್ರವಾಗಿ ಭೃಗ್ವಾಶ್ರಮಕ್ಕೆ ಪೋಗಿ ಅಲ್ಲಿ ತಪಸ್ಸುಮಾಡುವಂಥ ಮಹಾ ಪ್ರಸಿದ್ಧಳಾದ ಭೃಗುಪತ್ನಿಯಂ ಕಂಡು ಶರಣವನ್ನೈದೆ, ಆಗ ಚಕ್ರಧರನಾಗಿ ಅಲ್ಲಿಗೂ ಬಂದನು. ಆಗ ಆಕೆಯು ವಿಷ್ಣುವಂ ನೋಡಿ.

ಮಹಾವಿಷ್ಣುವಿಗೆ ಭೃಗುಮುನಿಯು ಶಾಪ ಬರುವಿಕೆ.

ಎಲೈ ಜನಾರ್ದನನೆ! ಈ ಆಶ್ರಮದಲ್ಲಿ ಭೃಗುಮುನೀಶ್ವರನಿಲ್ಲದ್ದರಿಂದ ನೀನು ಬರಲಾಗದು. ಮತ್ತಂ ನನ್ನನ್ನು ಮರೆಹೊಕ್ಕ ದೈತ್ಯರಿಗೆ ಅಭಯವಂ ಕೊಟ್ಟಿರುವದ್ದರಿಂದ ನೀನು ಸಂಹರಿಸಬೇಡೆನಲು, ವಿಷ್ಣುವು ಆಕೆಯ ವಾಕ್ಯವಂ ಕೇಳಿ ಅತ್ಯಂತ ಕೋಪದಿಂದ ಆ ರಾಕ್ಷಸರುಗಳನ್ನು, ಅವರಿಗಭಯವನ್ನಿತ್ತ ಭೃಗುಪತ್ನಿಯ ಶಿರಸ್ಸನ್ನು ಸಹ ಚಕ್ರದಿಂ ಛೇದಿಸಿ ಹೊರಟುಹೋದನು. ಬಳಿಕ ಆ ಭೃಗುಮಹಾಮುನಿಯು ತನ್ನಾಶ್ರಮಕ್ಕೆ ಬಂದು ರಾಕ್ಷಸರೊಡನೆ ಶಿರಚ್ಛೇದನವಾಗಿ ಬಿದ್ದಿರುವ ತನ್ನ ಪತ್ನಿಯಂ ನೋಡಿ, ಜ್ಞಾನದೃಷ್ಟಿಯಿಂದ ವಿಷ್ಣುವಿಂ ಮಾಡಲ್ಪಟ್ಟಿತೆಂದು ತಿಳಿದು ಭೂಮಿಯಲ್ಲಿ ಕೋಟಿಜನಸ್ತ್ರೀ ವಿರಹಿತನಾಗಿ ಜನಿಸಲೆಂದು ವಿಷ್ಣುವಿಗೆ ಶಾಪವನಿತ್ತು, ಆತನ ಭಕ್ತರೆಲ್ಲರು ಪಾಷಂಡಿಗಳಾಗಲೆಂದು ಶಪಿಸಿ, ಈಶ್ವರನಿಂದ ಪಡೆಯಲ್ಪಟ್ಟ ಮೃತಸಂಜೀವಿನಿಯೆಂಬ ವಿದ್ಯೆಯಿಂದ ತನ್ನ ಸತಿಯನೆಬ್ಬಿಸಿದನು. ವಿಷ್ಣುವು ಈ ಶಾಪವಾರ್ತೆಯಂ ಕೇಳಿ ಅತ್ಯಂತ ಭೀತನಾಗಿ ಆ ಶಾಪ ಪರಿಹಾರಾರ್ಥವಾಗಿ, ಕಾಂಚೀಪುರದಲ್ಲಿ ದೇವದೇವನಾದ ಶಿವನಂ ಪೂಜಿಸಿ ಬಹು ಪ್ರಾರ್ಥಿಸೆ, ಶಿವನು ಪ್ರಸನ್ನನಾಗಿ, ಎಲೈ ವಿಷ್ಣುವೆ! ನನ್ನ ಭಕ್ತರಿಂದ ಮಾಡಲ್ಪಟ್ಟ ಶಾಪಕ್ಕೆ ಪರಿಹಾರವು ಅವರಿಂದಲೇ ಮಾಡಲ್ಪಡಬೇಕೆಂದು ಮುಗುಳುನಗೆಯಿಂದ ಪೇಳ್ದು, ಸ್ಮರಣೆಮಾತ್ರದಿಂದ ಆ ಭೃಗುವಂ ಕರೆಯಿಸಿ, ನನಗೆ ಭಕ್ತನಾದೀ ವಿಷ್ಣುವಿಗೆ ಬಹು ಜನ್ಮಂಗಳಲ್ಲಿ ಹುಟ್ಟುವ ಶಾಪವಂ ಬಿಡಿಸಿ ದಶಜನ್ಮವನಿತ್ತು, ಅದರೊಳು ಒಂದು ಜನ್ಮದಲ್ಲಿ ಬಹುಕಾಲ ಸ್ತ್ರೀಯಿಂದ ರಹಿತನಾಗಿರುವಂತೆ ಅನುಗ್ರಹಿಸೆಂದನು. ಬಳಿಕ ಭೃಗುವು ಶಿವಾಜ್ಞೆಯಿಂದ ಹಾಗೆ ಆಗಲೆಂದು ಸಮ್ಮತಿಸಿ, ಆ ಶಿವಂಗೆ ನಮಸ್ಕಾರವಂ ಮಾಡಿ ತನ್ನಾಶ್ರಮಕ್ಕೆ ಪೋದನು. ಅನಂತರದಲ್ಲಿ ರಮಾಕಾಂತನಾದ ವಿಷ್ಣುವು ಉಮಾಕಾಂತನಾದ ಶಿವಂಗೆ ನಮಸ್ಕಾರವಂ ಮಾಡಿ, ಎಲೈ ಪರಮೇಶ್ವರನೆ! ಆ ದಶಜನ್ಮಗಳಲ್ಲಿ ನನಗೆ ಅಜ್ಞಾನವುಂಟಾದೀತು. ಆ ಅಜ್ಞಾನವಂ ತಿಳಿಯಲೋಸುಗ ನಿಗ್ರಹಾನುಗ್ರಹಗಳಂ ಮಾಡಿ ನನ್ನನ್ನು ರಕ್ಷಿಸೆಂದು ಪ್ರಾರ್ಥಿಸಲಾಗಿ, ಭಗವಂತನಾದ ಶಿವನು ಹಾಗೆ ಆಗಲೆಂದು ಪೇಳಿ ಅಂತರ್ಧಾನವಾದನು.

ಮತ್ಸ್ಯಾವತಾರಿಯಾದ ವಿಷ್ಣುವಿನ ಕಣ್ಗಳನ್ನು ಕೀಳಿಸುವಿಕೆ.

ಮತ್ತೊಂದು ಸಮಯದಲ್ಲಿ ವೇದೋದ್ಧಾರಕ್ಕೋಸುಗ ಮತ್ಸ್ಯದಲ್ಲಿ ಪುಟ್ಟಿ ವೇದತಸ್ಕರನಾದ ಸೋಮಕಾಸುರನಂ ಸಂಹರಿಸಿ, ಆ ವೇದಂಗಳಂ ಬ್ರಹ್ಮಂಗಿತ್ತು ಸಮುದ್ರಗಳಂ ಕಲಕಿ ಸರ್ವ ಪ್ರಾಣಿಗಳಂ ಭಕ್ಷಿಸುತಿರೆ, ಬ್ರಹ್ಮಾದಿ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟವನಾಗಿ ಪರಮೇಶ್ವರನು ಶಾಸ್ತಾಕುಮಾರನಂ

ಕಳುಹಿಸಿದನು. ಬಳಿಕ ಮತ್ಸ್ಯಬೇಟೆಗಾರನಾದ ಆತನು ಮಾನವನಂ ನಿಗ್ರಹಿಸಿ ನಖಾಗ್ರದಿಂ ಆತನ ಸಂಬಂಧವಾದ ಗುಲಗಂಜಿಗೆ ಸಮಾನವಾದ ನೇತ್ರವಂ ಕಿತ್ತು ಶಿವನ ಮುಂದೆ ತಂದಿರಿಸಿ ಅಂಜಲಿಬದ್ಧನಾಗಿ ನಿಂತಿರಲಾಗಿ, ಬ್ರಹ್ಮಾದಿ ದೇವತೆಗಳು, ಎಲೈ ಸ್ವಾಮಿಯೆ! ಈ ಮತ್ಸ್ಯದಿಂ ಬಹುಬಾಧಿತರಾದೆವು, ಅಂಥ ಮತ್ಸ್ಯವು ನಿನ್ನಿಂದ ನಿಗ್ರಹಿಸಲ್ಪಟ್ಟದ್ದರಿಂದ ಇದನ್ನು ರುಂಡಮಾಲಿಕೆಯಲ್ಲಿ ಧರಿಸಬೇಕೆಂದು ಪ್ರಾರ್ಥಿಸಿದರು. ಶಿವನು ಹಾಗೆಯೇ ಧರಿಸಿದನು. ಬಳಿಕ ವಿಷ್ಣುವು ಜ್ಞಾನವಂತನಾಗಿ ತನಗೆ ಅಜ್ಞಾನ ಬಂದ ಮಾರ್ಗವಂ ತಿಳಿದು, ಆ ಅಪರಾಧಕ್ಷಮಾಪಣಾರ್ಥವಾಗಿ ಕಾಂಚೀಪುರದಲ್ಲಿ ಶಿವಪೂಜೆಯಂ ಮಾಡಿದ್ದರಿಂದ, ಶಿವನು ಪ್ರಸನ್ನನಾಗಿ ನಿಗ್ರಹಾನುಗ್ರಹಶಕ್ತಿಯಂ ಕೊಟ್ಟು ಅಂತರ್ಧಾನವಾದನು.

ಕೂರ್ಮ ವಿಷ್ಣುವನ್ನು ಗಣಾಧೀಶನು ನಿಗ್ರಹಿಸುವಿಕೆ.

ಮರಳಿ ವಿಷ್ಣುವು ಸಮುದ್ರಮಥನ ಕಾಲದಲ್ಲಿ ಕೂರ್ಮರೂಪವಂ ಧರಿಸಿ, ಮಂದರಪರ್ವತಕ್ಕೆ ಆಧಾರವಾಗಿ ನಿಂತು ಅಲ್ಲಿ ಉತ್ಪನ್ನವಾದ ಅಮೃತದ ಪಾನದಿಂ ಗರ್ವಿತನಾಗಿ, ಸಕಲಪ್ರಾಣಿಗಳಂ ಬಾಧಿಸುತ್ತಿರೆ, ದೇವಾಸುರರು ಈ ವೃತ್ತಾಂತವಂ ಪರಮೇಶ್ವರಂಗೆ ಬಿನ್ನೈಸಿದರು. ಬಳಿಕ ಪರಮೇಶ್ವರನು ಈ ಕೂರ್ಮವಂ ನಿಗ್ರಹಿಸುವದಕ್ಕೋಸುಗ ವಿಘ್ನೇಶ್ವರನಂ ಕಳುಹೆ, ಆತನು ತನ್ನ ಸೊಂಡಿಲದಿಂ ಕೂರ್ಮವಂ ಮರ್ದಿಸಿ ಬೆನ್ನಸ್ಥಿಯಂ ತೆಗದು ಸ್ವಾಮಿಯ ಸಮೀಪದಲ್ಲಿರಿಸಿದನು. ಆಗ ದೇವತೆಗಳು ಎಲೈ ಪರಮೇಶ್ವರನೆ ಈ ಕೂರ್ಮದ ಅಸ್ಥಿಯನ್ನು ರುಂಡಮಾಲಿಯಲ್ಲಿ ಧರಿಸಬೇಕೆಂದು ಪ್ರಾರ್ಥಿಸಲಾಗಿ ಅದನ್ನು ಹಾಗೆ ಧರಿಸಿದನು. ಮರಳಿ ವಿಷ್ಣುವು ಶಿವಾರ್ಚನೆಯಂ ಮಾಡಿ ವಿಷ್ಣುಲೋಕವನ್ನೈದಿದನು, ಮತ್ತೊಂದು ವೇಳೆಯಲ್ಲಿ ಹಿರಣ್ಯಾಕ್ಷನಿಂ ಪೀಡಿತರಾದ ದೇವತೆಗಳು ವಿಷ್ಣುವಿಗೆ ತಮ್ಮ ಬಾಧೆಯಂ ಪೇಳಲಾಗಿ ಆತನು ಬ್ರಹ್ಮನ ನಾಸಾಪುಟದಿಂ ವರಾಹರೂಪವನೆತ್ತಿ ಹಿರಣ್ಯಾಕ್ಷನಂ ಸಂಹರಿಸಿ ಸಮುದ್ರದಲ್ಲಿ ಮುಳುಗಿದ್ದ ಭೂಮಿಯನುದ್ಧರಿಸಿ, ಆ ಗರ್ವದಿಂ ಸಮಸ್ತ ಲೋಕಂಗಳು ನಡುಗುವಂತೆ ಸಂಚರಿಸುತ್ತಿದ್ದನು. ಮರಳಿ ಆ ದೇವತೆಗಳು ಅತ್ಯಂತ ಭೀತರಾಗಿ ಶಿವಂಗೆ ಪೇಳೆ, ಆತನು ತನ್ನ ಕುಮಾರನಾದ ಸುಬ್ರಹ್ಮಣ್ಯನಂ ಕಳುಹಿಸಿ ಆತನಿಂದ ವರಾಹವಂ ಸಂಹಾರವಂ ಗೈಯಿಸಿ ದೇವತೆಗಳ ಪ್ರೀತ್ಯರ್ಥವಾಗಿ ಅದರ ಕೋರದಾಡೆಯಂ ಶಿರದಲ್ಲಿ ಧರಿಸಿದನು. ಬಳಿಕ ವಿಷ್ಣುವು ಅಜ್ಞಾನವಂ ಬಿಟ್ಟು ಪೂರ್ವದಂತೆ ಮಹಾದೇವನಂ ಪೂಜಿಸಿ ಅಪರಾಧವಂ ಪರಿಹರಿಕೊಂಡನು.

ವೀರಭದ್ರನು ನೃಸಿಂಹನನ್ನು ಪರಿಭವಿಸುವಿಕೆ.

ಹಾಗೆಯೆ ವಿಷ್ಣುವು ಸಮಸ್ತದೇವತೆಗಳಂ ಪೀಡಿಸುತಿರ್ಪ ಹಿರಣ್ಯಕಶಿ

ಪ್ರವಂ ಸಂಹರಿಸಲೋಸುಗ ನರಸಿಂಹ ರೂಪವಂ ತಾಳಿ ಆತನ ಉರವಂ ನಖದಿಂ ಶೀಳಿ, ರಕ್ತಪಾನವಂ ಮಾಡಿ ಮತ್ತನಾಗಿ ಸಕಲ ಲೋಕಂಗಳಂ ಸಂಹರಿಸಬೇಕೆಂದು ಪ್ರವರ್ತಿಸೆ, ಆಗ ದೇವತೆಗಳಿಂದ ಪ್ರಾರ್ಥಿತನಾಗಿ ಪರಮೇಶ್ವರನು ವೀರಭದ್ರನಂ ಕಳುಹಿಸಲಾಗಿ, ಆತನು ಆ ನಾರಸಿಂಹರೂಪವಂ ಸಂಹರಿಸಿ ಅದರ ಚರ್ಮವನ್ನು ಶಿವನ ಸಮೀಪಕ್ಕೆ ಕೊಂಡೊಯ್ದನು. ಆಗ ಶಿವನು ಆ ಚರ್ಮವಂ ಧರಿಸಿದನು. ಬಳಿಕ ವಿಷ್ಣುವು ಶಿವಪೂಜೆಯಂ ಮಾಡಿ ಈಶ್ವರಕೃಪೆಯಂ ಪಡದನು. ಮತ್ತೊಂದು ವೇಳೆಯಲ್ಲಿ ವಿಷ್ಣುವು ವಾಮನ ರೂಪವಂ ಧರಿಸಿ ಬಲಿಚಕ್ರವರ್ತಿಯ ಯಾಗಶಾಲೆಯನ್ನೈದಿ, ಪದತ್ರಯ ಪ್ರಮಾಣವ್ಯಾಜದಿಂ ಭೂಮಿಯನಪೇಕ್ಷಿಸಿ, ಒಂದು ಪಾದದಿಂ ಭೂಮಿಯನ್ನು ಮತ್ತೊಂದು ಪಾದದಿಂ ಆಕಾಶವನ್ನು ಅಳೆದು, ಮತ್ತೊಂದು ಹೆಜ್ಜೆಗೆ ಸ್ಥಳವಿಲ್ಲದಿರಲು ಬಲಿಯಂ ಪಾತಾಳಕ್ಕೆ ತುಳಿದು, ಆ ರಾಜ್ಯವಂ ದೇವೇಂದ್ರಂಗಿತ್ತು, ಆ ಮದದಿಂ ಬ್ರಹ್ಮಾಂಡವೊಡೆಯುವಂತೆ ವೃದ್ಧಿಯನ್ನೈದಿದನು. ಬಳಿಕ ಮಹಾದೇವನು ದೇವತೆಗಳಿಂದೀ ವೃತ್ತಾಂತವಂ ಕೇಳಿ ಆತನಂ ನಿಗ್ರಹಿಸಲು ಭೈರವನಂ ಕಳುಹಿದನು. ಆತನು ಅತಿ ಶೀಘ್ರದಿಂ ಪೋಗಿ ಹಸ್ತದಿಂ ಉರವಂ ಬಡಿದು ಸಂಹರಿಸಿ, ಆತನ ಚರ್ಮವಂ ಮತ್ತಂ ಕಂಕಾಳವೆಂಬ ಬೆನ್ನಸ್ಥಿಯಂ ತೆಗದು ಕರದಲ್ಲಿ ಧರಿಸಿದನು. ಬಳಿಕ ದೇವತೆಗಳು ನಿರಾತಂಕರಾಗಿ ತಮ್ಮ ತಮ್ಮ ಸ್ಥಾನಂಗಳಿಗೆ ಪೋದರೆಂದು ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ, ಉಪದೇಶಕಾಂಡದೊಳು ಅರವತ್ನಾಲ್ಕನೆಯ ಅಧ್ಯಾಯವು ಸಂಪೂರ್ಣಮಾದುದು.

ಅರವತ್ತೈದನೆಯ ಅಧ್ಯಾಯವು.

ಪರಶುರಾಮನ ಚರಿತ್ರೆ.

ಎಲೈ ಮುನಿಗಳಿರಾ ! ಮಹಾನುಭಾವನಾದ ಭೃಗುಮಹಾಮುನಿಯ ಶಾಪನಿಮಿತ್ತದಿಂ ವಿಷ್ಣುವು ರೇಣುಕಾಗರ್ಭದಲ್ಲಿ ಜಮದಗ್ನಿಯಿಂ ಪುಟ್ಟಿ, ಆ ಋಷಿಯು ಆತಂಗೆ ರಾಮನೆಂದು ಪೆಸರನ್ನಿಟ್ಟು ಕಾಲದಲ್ಲಿ ಉಪನಯನವಂ ಮಾಡಿದನು. ಬಳಿಕ ಆ ರಾಮನು ಮಾತಾಪಿತೃಗಳಿಗೆ ಶುಶ್ರೂಷಾಪರನಾಗಿರಲು, ಒಂದು ದಿವಸ ಕಾರಣಾಂತರದಿಂ ನಿನ್ನ ತಾಯಿಯ ಶಿರಚ್ಛೇದನವಂ ಮಾಡೆಂದನು. ಬಳಿಕ ಆ ರಾಮನು ಪಿತೃವಾಕ್ಯದಿಂ ತಾಯಾದ ರೇಣುಕಾದೇವಿಯ ಶಿರಚ್ಛೇದನವಂ ಮಾಡಿದನು. ಆಗ ಜಮದಗ್ನಿಯು ಪುತ್ರನ ಮೇಲೆ ಅತ್ಯಂತ ಪ್ರೀತನಾಗಿ ಬೇಕಾದ ವರವಂ ಬೇಡೆಂದು ಪೇಳಲಾಗಿ, ರಾಮನು ಶಿರಚ್ಛೇದನವಾದ ತಾಯಿಗೆ ಮರಳಿ

ಪ್ರಾಣಗಳುಂಟಾಗಬೇಕು, ಕೋಪವು ಶಾಂತವಾಗಬೇಕು, ನನಗೆ ಶಿವಪೂಜೆಯಲ್ಲಿ ಭಕ್ತಿಯುಂಟಾಗಬೇಕೆಂದು ಪ್ರಾರ್ಥಿಸಿ ಪಿತೃವಿನಿಂ ಆ ಮೂರು ವರಗಳಂ ಪಡೆದು, ವನಕ್ಕೆ ಪೋಗಿ ಶಿವಪೂಜಾ ಪರಾಯಣನಾಗಿ ತಪವಂ ಮಾಡುತ್ತಿದ್ದನು. ಬಳಿಕ ಕೃತವೀರ್‍ಯನ ಕುಮಾರನಾದ ಕಾರ್ತವೀರ್‍ಯಾರ್ಜುನನು ಜಮದಗ್ನಿಯ ಆಶ್ರಮಕ್ಕೆ ಬಂದು, ಶಾಂತನಾದ ಆ ಮುನೀಶ್ವರನಂ ಕಂಡು ಆತನ ಬಳಿಯ ಕ್ಷೀರದ ಕಾಮಧೇನುವಂ ಕೊಡೆಂದು ಯಾಚಿಸಿದೊಡಂ ಆತನು ಮುಖವಂ ನೋಡದೆ ಕೊಡದಿದ್ದನು. ಆಗ ರಾಜನು ಕೋಪದಿಂದಾಯಮುನಿಯ ಶಿರಚ್ಛೇದನವಂ ಮಾಡಿ ಮಾಹಿಷ್ಮತೀಪುರಕ್ಕೆ ಪೋದನು. ಅನಂತರದಲ್ಲಿ ರೇಣುಕಾದೇವಿಯು ಮಹಾ ದುಃಖಿತಳಾಗಿ ಆ ಪತಿಯೊಡನೆ ಸಹಗಮನವಂ ಮಾಡಿದಳು. ಆ ಸಮಯದಲ್ಲಿ ಮಹಾ ವೃಷ್ಟಿ ಬಂದು ಆ ಚಿತ್ಯಗ್ನಿಯು ಶಾಂತವಾದುದು. ಬಳಿಕ ಆ ದೇವಿಯು ಅಗ್ನಿದಗ್ಧೆಯಾಗಿ ಅತಿ ದುಃಖದಿಂ ನಿಂಬಪರ್ಣಂಗಳಿಂ ತನ್ನ ಶರೀರವಂ ಮರೆಮಾಡಿಕೊಂಡು ಚಂಡಾಲ ಶ್ರೇಣಿಯಲ್ಲಿ ಕೆಲವು ದಿನವಿರ್ದಳು. ಅಲ್ಲಿ ಪಿತ್ತನೆಂಬ ಓರ್ವ ಮಾತಂಗನು ಸ್ತ್ರೀಯು ಸಹಾ, ಅಗ್ನಿದಗ್ಧೆಯಾಗಿ ವ್ಯಾಕುಲೆಯಾಗಿರ್ಪ ಈಕೆಯಂ ಕಂಡು ದಯೆಯಂ ಗೈದು ಪಿಷ್ಟಾದಿಗಳಿಂ ರಕ್ಷಿಸಿದನು. ಬಳಿಕ ರಾಮನು ಇವೆಲ್ಲವಂ ಕೇಳಿ ಪೂಜಾಸಂತುಷ್ಟನಾದ ಈಶ್ವರನಿಂ ಮಹಾ ಪರಶುವಂ ಪಡೆದು, ಕ್ಷತ್ರಿಯಾಂಭೋಧಿಗೆ ಬಡಬಾನಲನಾಗಿ ಮಾಹಿಷ್ಮತೀ ಪುರಕ್ಕೆ ಬಂದು ಆ ಕಾರ್ತವೀರ್‍ಯಾರ್ಜುನನಂ ಸಂಹರಿಸಿ ರಕ್ತದಿಂ ಪಿತೃತರ್ಪಣವಂ ಮಾಡಿ ಸರಸ್ಸಿನಲ್ಲಿ ಪಿತೃಕರ್ಮವಂ ತೀರಿಸಿ, ಚಂಡಾಲ ಶ್ರೇಣಿಯೊಳಿರುತಿರ್ಪ ಮಾತೃವಂ ಕಂಡು ಅಲ್ಲಿ ಕೆಲವು ಕಾಲ ಶುಶ್ರೂಷೆಯಂ ಮಾಡಿಕೊಂಡಿರ್ದು, ವೀರಹತ್ಯಾದಿ ನಿವೃತ್ತಿಗೋಸುಗ ಸದಾ ಮಹೇಶ್ವರನಂ ಪೂಜಿಸಿ, ಸಮಸ್ತವಾದ ಭೂಮಿಯಂ ಕಶ್ಯಪಂಗಿತ್ತು ಕೇರಳದೇಶಕ್ಕೆ ಪೋಗಿ ತಪವನ್ನಾಚರಿಸುತ್ತ ವೈಕುಂಠಾದಿ ಲೋಕಂಗಳಲ್ಲಿ ಸಂಚಾರವಂ ಮಾಡುತ್ತಿದ್ದನು.

ಶ್ರೀರಾಮಚರಿತ್ರೆ.

ಪೂರ್ವಕಾಲದಲ್ಲಿ ದಶರಥರಾಯನು ಪುತ್ರಕಾಮನಾಗಿ ವಸಿಷ್ಠಾದಿಗಳ್ವೆರಸಿ ಪುತ್ರಕಾಮೇಷ್ಟಿಯಂ ಮಾಡಿ ಪರಮೇಶ್ವರನಂ ಪೂಜಿಸಿದನು. ಬಳಿಕ ನಾರಾಯಣನು ಪರಮೇಶ್ವರಾಜ್ಞಾವಶದಿಂ ಕೌಸಲ್ಯೆಯೆಂಬ ರಾಜಮಹಿಷಿಯ ಗರ್ಭದಲ್ಲಿ ರಾಮನೆಂಬ ಪೆಸರುಳ್ಳವನಾಗಿ ಪುಟ್ಟಿ, ಪಿತೃವಾಕ್ಯದಿಂ ಸೀತಾಸಮೇತನಾಗಿ ತನ್ನನುಜನಾದ ಲಕ್ಷ್ಮಣನೊಡನೆ ಅರಣ್ಯಕ್ಕೆ ಪೋದನು. ಅಲ್ಲಿ ರಾಕ್ಷಸೇಶ್ವರನಾದ ರಾವಣನು ಆ ರಾಮಲಕ್ಷ್ಮಣರಂ ವಂಚಿಸಿ ಜನಕರಾಜನಂದಿನಿಯನ್ನು ಅಪಹರಿಸಿದನು. ಬಳಿಕ ರಾಮನು ಸೀತಾವಿಯೋಗ ಸಂತಪ್ತನಾಗಿ ಲಕ್ಷ್ಮಣ

ನೊಡನೆ ಅಗಸ್ತ್ಯ ಸಂದರ್ಶನವಂ ಮಾಡಿ, ರಾಕ್ಷಸ ಸಂಹಾರಕ್ಕೋಸುಗ ಆತ ನಿಂದ ಉಪದೇಶವಂ ಕೈಕೊಂಡು ಶಿವನಂ ಪೂಜಿಸಿ ಅಸ್ತ್ರಗಳಂ ಪಡೆದು, ಕಪಿ ಗಳಿಂ ಸೇತುವಂ ಕಟ್ಟಿಸಿ ರಾವಣನೊಡನೆ ಯುದ್ಧವಂ ಮಾಡಿ ಸಂಹರಿಸಿ, ಅಗ್ನಿ ಪ್ರವೇಶದಿಂ ಶುದ್ಧೆಯಾದ ಸೀತೆಯಿಂ ಕೂಡಿಕೊಂಡು, ತನ್ನ ಪುರಿಗೆ ಬಂದು ಪಟ್ಟಾಭಿಷಿಕ್ತನಾಗಿ ನಿಷ್ಕಂಟಕವಾಗಿ ರಾಜ್ಯವನ್ನಾಳಿ, ಲೋಕಾಪವಾದ ಭೀತಿ ಯಿಂದ ಮರಳಿ ಸೀತೆಯಂ ವನಕ್ಕೆ ಕಳುಹಿ, ಭೂಮಿಯೊಳಗೆ ಪೋದ ವೃತ್ತಾಂ ತವಂ ಕೇಳಿ ಪರಮ ದುಃಖಿತನಾಗಿ, ಅಶ್ವಮೇಧಯಾಗದಿಂ ಮಹೇಶ್ವರನಂ ಪೂಜಿಸಿ, ತನ್ನ ಅನುಜರೊಡನೆ ಸರಯೂನದಿಯಲ್ಲಿ ತನುವಂ ಬಿಟ್ಟು ಕ್ಷೀರಾಬ್ಧಿ ಯಲ್ಲಿ ತನ್ನ ಸ್ಥಾನವನ್ನೈದಿದನು. ಈ ರಾಮಾವತಾರದಲ್ಲಿ ಸ್ತ್ರೀವಿಯೋಗದಿಂ ತನ್ನಾತ್ಮವನ್ನು ತಾನರಿಯದೆ ಕೇವಲ ಮಾಯೆಯಿಂದ ಆವರಿಸಲ್ಪಟ್ಟಿತೆಂದು ಋಷಿಗಳು ಹೇಳುವರು.

ಬಲರಾಮಕೃಷ್ಣರ ಚರಿತ್ರೆ.

ಹಾಗೆಯೆ ಮತ್ತೊಂದಾದ ದ್ವಾಪರಯುಗದಲ್ಲಿ ಆ ಪುರುಷೋತ್ತಮನೆ ರೋಹಿಣೀ ಗರ್ಭದಲ್ಲಿ ಬಲರಾಮನೆಂಬ ಪೆಸರುಳ್ಳವನಾಗಿ ವಸುದೇವನಿಂ ಪುಟ್ಟಿ, ರಾಕ್ಷಸ ಸಂಹಾರಮಂ ಮಾಡಿ ಅಂಬಿಕಾಸಮೇತನಾದ ಮಹಾ ದೇವನಂ ಪೂಜಿಸಿ, ಯೋಗಮಾರ್ಗ ನಿರತನಾಗಿ ವೈಕುಂಠಕ್ಕೆ ಪೋದನು. ಮರಳಿ ಕೃಷ್ಣನು ದೇವಕೀಗರ್ಭದಲ್ಲಿ ವಸುದೇವನಿಂ ಪುಟ್ಟಿ, ಮಹಾ ದೇವನಂ ಪೂಜಿಸಿ ಅತಿ ವಂಚನೆಯಿಂ ಶತ್ರುಗಳಂ ಸಂಹರಿಸಿ, ಉಪಮನ್ಯು ಋಷಿಯ ಸಮೀಪಕ್ಕೆ ಪೋಗಿ ವಿಧಿಯಿಂದ ಶೈವದೀಕ್ಷೆಯಂ ಕೈಕೊಂಡು, ಶೈವರಲ್ಲಿ ಪರಮಮುಖ್ಯನಾಗಿ ಶಿವನಂ ಪೂಜಿಸಿ ಭೂಭಾರವನ್ನಿಳುಹಿ ವಿಷ್ಣು ಲೋಕಕ್ಕೆ ಪೋದನು. ಮರಳಿ ಕಲಿಯುಗಾಂತ್ಯದಲ್ಲಿ ವಿಷ್ಣುವು ದುಷ್ಟರಂ ಸಂಹರಿಸಲು ಹಯಗ್ರೀವನಾಗಿ ಪುಟ್ಟಿ, ಲಿಂಗಮೂರ್ತಿಯಾದ ಸದಾಶಿವನಂ ಪೂಜಿಸಿ, ಆ ದೇವನ ಪ್ರಸಾದದಿಂ ಮ್ಲೇಚ್ಛರಂ ಸಂಹರಿಸಿ ಪೂರ್ವದಂತೆ ತನ್ನ ರೂಪವಂ ಧರಿಸಿಕೊಂಡು ತನ್ನ ಸ್ಥಾನಕ್ಕೆ ಪೋದನು.

ಹೀಗೆ ನಾರಾಯಣನು ಪಂಚಾವತಾರಂಗಳಲ್ಲಿ ನಿಗ್ರಹಿಸಲ್ಪಟವನಾಗಿ, ಮರಳಿ ಪಂಚಾವತಾರಂಗಳಲ್ಲಿ ಅನುಗೃಹೀತನಾಗಿ, ಭೃಗುಶಾಪದಿಂ ಬಿಡಲ್ಪಟ್ಟೆ ನೆಂದು ತಿಳಿದುಕೊಂಡನು. ವೈಷ್ಣವ ಪುರಾಣಂಗಳಲ್ಲಿ ನಿಗ್ರಹಂಗಳು ಪೇಳ ಲ್ಪಟ್ಟಿರುವದು. ಮತ್ತಂ ಕುಮಾರ ವೀರಭದ್ರ ಗಣಾಧೀಶ್ವರರಿಂ ನಿಗ್ರಹಿಸಲ್ಪ ಟ್ಟನು. ಮಹೇಶ್ವರನು ಮತ್ಸ್ಯಾಕ್ಷಿ, ಕೂರ್ಮಾಸ್ಥಿ, ಕ್ರೋಡಶೃಂಗ, ಸಿಂಹ ಚರ್ಮ, ಶಿರೋಮುಂಡ, ತ್ರಿವಿಕ್ರಮ ಮಹಾಸ್ಥಿಗಳಿಂ ಭೂಷಿತನಾಗಿದ್ದಾನೆಂದು

ಪುರಾಣ ಸ್ಮೃತಿಗಳು ಪೇಳುತ್ತಿರುವವು. ಇದಲ್ಲದೆ ಹರಿ ಬ್ರಹ್ಮ ಮುಂತಾದ ದೇವತೆಗಳು ಅಂಥಾ ಮಹೇಶ್ವರನಂ ಕಂಡು ಭೀತರಾಗಿ, ತಮ್ಮ ಅಹಂ ಕಾರಂಗಳಂ ಬಿಟ್ಟು ಸ್ವಸ್ವಕರ್ಮಂಗಳಲ್ಲಿರುತಿದ್ದಾರೆಂದು ವೇದಾರ್ಥಜ್ಞರು ಪೇಳುತ್ತಿರುವರು.

ವಿಷ್ಣುವಿಗೆ ಕಣ್ವಮುನಿಯ ಶಾಪ ವೃತ್ತಾಂತ.

ಎಲೈ ಋಷಿಗಳಿರಾ! ಪೂರ್ವದಲ್ಲಿ ಒಂದಾನೊಂದು ವೇಳೆಯಲ್ಲಿ ಉಪೇಂದ್ರನು ವಿಷ್ಣುವಿನ ಸಮೀಪಕ್ಕೆ ಪೋಗಿ, ಪ್ರದ್ಯುಮ್ನಾದಿ ಮೂರ್ತಿಗಳಲ್ಲಿ ನಾನೊಂದು ಮೂರ್ತಿಯು, ಎಂದು ಮಾತಾಡುತ್ತಿರಲು, ಕಾಶ್ಯಪನ ಕುಮಾರನಾದ ಕಣ್ವಮಹಾಮುನಿಯು ವಿಷ್ಣುವಿನ ಸಂಗಡ ಮಾತಾಡಬೇಕೆಂದು ಬಂದನು. ಆಗ ಅವರೀರ್ವರು ದೃಢವ್ರತನಾದ ಶಿವಭಕ್ತನಾದ ಆ ಮುನಿಯಂ ಕಂಡು ಮೌನವಾಗಿರೆ, ಆ ಕಣ್ವಮಹಾಮುನಿಯು, ಎಲೈ ವಿಷ್ಣುವೆ! ನಮ್ಮನ್ನು ಶಿವ ಪ್ರಿಯರೆಂದು ತಿಳಿದು ಮೌನವಾಗಿರುವದ್ದರಿಂದ ನಿನಗೆ ಅನೇಕ ಜನ್ಮಂಗಳುಂಟಾಗಲಿ, ಆಗ ನೀನು ಮೂಕನಾಗಿರು. ನಿನ್ನ ಸಮೀಪದಲ್ಲಿರ್ಪ ಲಕ್ಷ್ಮಿಯು ಹೆಣ್ಣು ಹುಲ್ಲೆಯಾಗಿ ಪುಟ್ಟಲಿ. ಉಪೇಂದ್ರನು ಅನೇಕ ಸಲ ಕಿರಾತಕ ಯೋನಿಯಲ್ಲಿ ಪುಟ್ಟಿ ವನದಲ್ಲಿ ವಾಸಿಸುತ್ತಿರಲಿ. ನಿನ್ನ ಭಕ್ತರು ಈ ಲೋಕದಲ್ಲಿ ಶಿವನಿಂದಕರಾಗಿ ಭಸ್ಮರುದ್ರಾಕ್ಷನಿಂದೆಯಂ ಮಾಡಲೆಂದು ಶಾಪವನ್ನಿತ್ತು ತನ್ನಾಶ್ರಮಕ್ಕೆ ಪೋದನು. ವಿಷ್ಣುವು ಆ ಋಷಿಯ ಶಾಪಭಯದಿಂ ಕಮಲಾಲಯಕ್ಕೆ ಪೋಗಿ, ಪರಮ ಭಕ್ತಿಯಿಂ ಮಹಾ ದೇವನಂ ಪೂಜಿಸಿದನು. ಮತ್ತಂ ಶಿವನು ಪ್ರಸನ್ನನಾಗಿ ಕಣ್ವಮುನಿಯಂ ಕರೆಯಿಸಿ ಮಾಧವಂಗೆ ಒಂದು ಜನ್ಮದಲ್ಲಿ ಮೂಕತ್ವವಂ ಲಕ್ಷ್ಮಿಗೆ ಒಂದು ಜನ್ಮದೊಳು ಮೃಗಭಾವವಂ, ಉಪೇಂದ್ರಂಗೆ ಒಂದು ಸಲ ಕಿರಾತಕತ್ವವಂ ಮಾಡಿಸಲಾಗಿ, ವಿಷ್ಣುವು ಶಿವಯೋಗಿಯಾಗಿ ಪುಟ್ಟಿದನು. ಲಕ್ಷ್ಮಿಯು ಮೃಗವಾಗಿ ಪುಟ್ಟಿದಳು. ಉಪೇಂದ್ರನು ಕಿರಾತಕನಾಗಿ ಪುಟ್ಟಿದನು. ಹಾಗೆ ಆ ಹೆಣ್ಣು ಸಾರಂಗವು ಮೂಕನಾದ ಮುನಿಯಂ ಕಂಡು ಗರ್ಭವಾಗೊಂದು ಕನ್ನಿಕೆಯಂ ಪೆತ್ತು ಪಲಾಯನವಾದುದು. ಆ ಕಿರಾತನು ಆ ಕನ್ನಿಕೆಯಂ ತನ್ನ ಗೃಹಕ್ಕೆ ಕೊಂಡುಪೋಗಿ ಪರಿಪೋಷಿಸಿ ಲವಲಿಯೆಂಬ ನಾಮವನ್ನಿಟ್ಟು ಕುಮಾರಸ್ವಾಮಿಗೆ ಕೊಟ್ಟನು. ಮತ್ತಂ ಅವರು ಶಾಪದಿಂ ಮುಕ್ತರಾಗಿ ತಮ್ಮಾಶ್ರಮಗಳಿಗೆ ಪೋದರು.

ಕ್ಷುವದಧೀಚಿಗಳ ವೃತ್ತಾಂತ.

ಎಲೈ ಋಷಿಗಳಿರಾ! ಒಂದು ಸಮಯದಲ್ಲಿ ಕ್ಷುವದಧೀಚಿಗಳಿಗೆ ಪ್ರಸಂಗದಿಂ ಮಹತ್ತಾದ ಕಲಹ ಉಂಟಾಗಲು ವಿಷ್ಣುವು ಕ್ಷುವದನೆಂಬ ರಾಯಂಗೆ

ಸಹಾಯವಂ ಮಾಡಲಿಚ್ಛೈಸಿ ಕಪಟದಿಂ ಬ್ರಾಹ್ಮಣ ವೇಷವಂ ಧರಿಸಿಕೊಂಡು ದಧೀಚಿಯ ಆಶ್ರಮಕ್ಕೆ ಬಂದು, ಎಲೈ ಮುನಿಶ್ರೇಷ್ಠನೆ! ಬ್ರಾಹ್ಮಣನಿಗು ಕ್ಷತ್ರಿಯ ಶ್ರೇಷ್ಠನೆಂದು ನನಗೋಸ್ಕರ ಪೇಳಬೇಕೆಂದು ಯಾಚಿಸಿದನು. ದಧೀಚಿ ಮುನಿಯು ಆ ವಾಕ್ಯವಂ ಕೇಳಿ, ಎಲೈ ಹರಿಯೆ! ನಾನಸತ್ಯವಂ ಪೇಳೆನು. ನಿನ್ನನ್ನು ನಾರಾಯಣನೆಂದು ಬಲ್ಲೆನು. ಕ್ಷತ್ರಿಯನಿಗೆ ನಾನಂಜುವನಲ್ಲೆಂದನು ಬಳಿಕ ಹರಿಯು ಕುಪಿತನಾಗಿ ದಧೀಚಿಯ ಮೇಲೆ ಅಸ್ತ್ರಪ್ರಯೋಗವಂ ಮಾಡೆ, ಮುನಿಯು ದರ್ಭೆಯಂ ತ್ರಿಶೂಲವಂ ಮಾಡಿ ಪ್ರೇರಿಸಿದನು. ಆಗ ತ್ರಿಶೂಲವು ಅಸ್ತ್ರಗಳನ್ನೆಲ್ಲವಂ ಭಕ್ಷಿಸಿತು. ಅನಂತರದಲ್ಲಿ ಮಹಾ ವಿಷ್ಣುವು ಕೋಪವುಳ್ಳವ ನಾಗಿ ವಿಶ್ವರೂಪವಂ ತೋರಿಸಲಾಗಿ, ಮುನಿಯು ಆ ವಿಶ್ವರೂಪವಂ ಸಂಹರಿಸಿ ತನ್ನಲ್ಲಿ ವಿಶ್ವರೂಪವಂ ತೋರಿಸಿದನು. ಮರಳಿ ನಾರಾಯಣನು ಚಕ್ರವಂ ಪ್ರಯೋಗಿಸೆ ದಧೀಚಿಮುನಿಯ ಅಸ್ಥಿಯಸ್ಪರ್ಶೆಯಿಂದ ಅದರ ಧಾರೆಗಳು ಮುರಿದು ಬಿದ್ದವು. ಇದಲ್ಲದೆ ಬಹು ವೇಗವಾಗಿ ಬಂದ ದೇವತೆಗಳ ಆಯುಧಂ ಗಳು ಆ ದಧೀಚಿಯ ಶರೀರವು ತಾಕಿ ಮುರಿದು ಬಿದ್ದವು. ಆ ಸಮಯದಲ್ಲಿ ಬ್ರಹ್ಮನು ಬಂದು ಆಯುಧಪಾಣಿಗಳಾದ ವಿಷ್ಣು ಮುಂತಾದ ದೇವತೆಗಳಂ, ಎಲೈ ದೇವತೆಗಳಿರಾ! ನಿಮಗಿದು ಯೋಗ್ಯವಲ್ಲೆಂದು ನುಡಿದು ಯುದ್ಧವಂ ನಿಲ್ಲಿಸಿದನು. ಬಳಿಕ ಮುನಿಯು ರುದ್ರನ ಕೋಪದಿಂ ಪುಟ್ಟಿದ ವೀರಭದ್ರನಿಂ ನೀವೆಲ್ಲರು ಬಾಧೆ ಪಟ್ಟೀರಿ. ವಿಷ್ಣುಭಕ್ತರು ಪಾಷಂಡಿಗಳಾಗಿ ಶಿವನಿಂದಾಪರ ರಾಗಲೆಂದು ಶಾಪವಂ ಕೊಟ್ಟನೆಂದು ಶೌನಕಾದಿ ಮುನಿಗಳಿಗೆ ಸೂತಂ ಪೇಳಿದ ನೆಂಬಲ್ಲಿಗೆ, ಉಪದೇಶಕಾಂಡದೊಳು ಅರವತ್ತೈದನೆಯ ಅಧ್ಯಾಯವು ಸಂಪೂರ್ಣಮಾದುದು.

ಅರವತ್ತಾರನೆಯ ಅಧ್ಯಾಯವು.

ವಿಷ್ಣುವಿನ ತಪಸ್ಸು-ಶಿವನ ವರಪ್ರದಾನ.

ಅನಂತರದಲ್ಲಿ ವಿಷ್ಣುವು ಭಯಯುಕ್ತನಾಗಿ ತನ್ನನು ತಾನೆ ನಿಂದಿಸಿ ಕೊಂಡು ಈತನೊಡನೆ ಏನುಕಾರಣ ಕಲಹವಂ ಮಾಡಿದೆನು? ಇದರಿಂದ ನನ ಗೇನು ಫಲ ಉಂಟಾದುದು. ಎಂದು ಚಿಂತಿಸಿ ಆ ದೋಷ ಪರಿಹಾರಕ್ಕೋಸುಗ ಶಿವನಂ ಮರೆಹೊಕ್ಕೇನೆಂದು ನಿಶ್ಚೈಸಿ, ಚಿದಂಬರಕ್ಕೆ ಪೋಗಿ, ಅಲ್ಲಿ ಮಹಾ ದೇವನಂ ಪೂಜಿಸಿ ಆ ಶಿವಪ್ರಸಾದದಿಂ ತತ್‌ಕ್ಷಣವೆ ದೋಷದಿಂ ಬಿಡಲ್ಪಟ್ಟವ ನಾಗಿ, ಮರಳಿಯು ಗಂಧಮಾದನ ಪರ್ವತಕ್ಕೆ ಸಾರಿ ಮಹಾದೇವನನ್ನರ್ಚಿಸಿ,

ಎಲೈ ಮಹಾದೇವನೆ! ನನ್ನನ್ನು ವಾಹನವಾಗಿಯುಂ ಶರವಾಗಿಯು ಮಾಡಿಕೊಳ್ಳುವಂಥವರ ದ್ವಯವಂ ಬೇಡಿಕೊಳ್ಳಲು, ಪರಮೇಶ್ವರನು ಹಾಗೆ ಆಗಲೆಂದಂಗೀಕರಿಸಿ, ತ್ರಿಪುರದಲ್ಲಿ ಆ ಹರಿಯನ್ನು ವಾಹನವಾಗಿಯು ಶರವಾಗಿಯು ಮಾಡಿಕೊಂಡನು. ಮತ್ತಂ ಪೂರ್ವದಲ್ಲಿ ವಿಷ್ಣುವು ಮೈನಾಕ ಪರ್ವತದಲ್ಲಿ ಶಂಕರನಂ ಪೂಜಿಸಿ ಪ್ರಸನ್ನನಂ ಮಾಡಿಕೊಂಡು, ಅಂಜಲಿಬದ್ಧನಾಗಿ ಉತ್ತಮವಾದ ಸಹಸ್ರ ವರಗಳಂ ಪಡದು ಒಂದು ವಾಕ್ಯವಂ ನುಡಿದನದೆಂತೆನೆ,

ನರಕಾಸುರನನ್ನು ವಧಿಸುವಂತೆ ಶ್ರೀಕೃಷ್ಣನಿಗೆ ಶಿವಪ್ರಸಾದ.

ಎಲೈ ಮಹಾದೇವನೆ! ಭೂದೇವಿಗೆ ಪುಟ್ಟಿದ ನರಕಾಸುರನು ತಪಸ್ಸಿನಿಂದ ದೇವೇಶನಾದ ಶಂಕರನಾದ ನಿನ್ನಂ ಪೂಜಿಸಿ, ವಾಙ್ಮನಸ್ಸುಗಳಿಗೆ ಗೋಚರನಾಗದ ಪರವಾದ ಶಿವನೆಂಬ ವಸ್ತುವು, ಮಾಯಾಮಯನಾದ ದೇವನೊಡನೆ ಏಕೀಭವಿಸಿ ತನ್ನೊಡನೆ ಯುದ್ಧವಂ ಮಾಡಿದೊಡೆ, ನನಗೆ ಮರಣವುಂಟಾಗಲಿ, ನಾನು ಸಕಲ ದೇವತೆಗಳಂ ಜಯಿಸಿ ತ್ರೈಲೋಕ್ಯವನನುಭವಿಸುವಂತೆ ವರವಂ ಪಡದು ಭೂಲೋಕದಲ್ಲಿದ್ದಾನೆ ಆತನಿಂದ ನಾನು ಇಪ್ಪತ್ತೊಂದುಸಲ ಯುದ್ಧವಂ ಮಾಡಿ, ಭೀತನಾಗಿ ಪುತ್ರ ಮಿತ್ರ ಕಳತ್ರಾದಿಗಳೊಡನೆ ಮಧುರಾಪುರಿಯಂ ಬಿಟ್ಟು ಸಮುದ್ರ ಮಧ್ಯದಲ್ಲಿರುವ ದ್ವಾರಕಾಪುರಿಯಲ್ಲಿ ವಾಸಿಸುತ್ತಿದ್ದೇನೆ. ಹಾಗಾದರೂ ಆ ನರಕಾಸುರನು ಪರ್ವತಗುಹೆ ಮುಂತಾದ ಸ್ಥಳಗಳಲ್ಲಿ ನನ್ನನ್ನು ಹುಡುಕುತ್ತಿದ್ದಾನೆ ಅದುಕಾರಣದಿಂ ವಾಚಾಮಗೋಚರನಾದ ನೀನು ನನ್ನಲ್ಲಿ ಏಕೀಭಾವವಾಗಿದ್ದು ಆ ಅಸುರನಂ ಸಂಹರಿಸಬೇಕೆಂದು ಪೇಳ್ದು, ನಮಸ್ಕಾರವಂ ಮಾಡಿ ವಿನಯದಿಂ ಮುಂದೆ ನಿಂತಿದ್ದನು. ಹೀಗೆ ಪರಮೇಶ್ವರನು ಕೃಷ್ಣನಿಂದ ಪ್ರಾರ್ಥಿಸಲ್ಪಟ್ಟವನಾಗಿ, ಎಲೈ ಮಧುಸೂದನನೆ! ನಾನು ನಿನ್ನ ದಕ್ಷಿಣ ಪಾರ್ಶ್ವದಲ್ಲಿರುತ್ತಿದ್ದೇನೆ. ದೇವತೆಗಳಿಗೆ ಉಪಕಾರವಂ ಮಾಡುವದಕ್ಕೋಸುಗ ನಿನಗೆ ಅತ್ಯಂತ ಶಕ್ತಿಯಂ ಕೊಡುತಿದ್ದೇನೆ, ಕೃಷ್ಣನು ಮಹಾಬಲಯುಕ್ತನಾಗಿ ನರಕಾಸುರನಂ ಕಾಳಕ್ಕೆ ಕರೆದನು. ಆಗ ಉಭಯ ಬಲಂಗಳಿಗೆ ಬಹು ಯುದ್ಧವಾದುದು. ಅಲ್ಲಿ ಸರ್ವೇಶ್ವರನಾದ ಅಸುರಾಂತಕನಾದ ಪರಮೇಶ್ವರನು ಕೃಷ್ಣನಲ್ಲಿ ಆವೇಶಿಸಿ, ಆತನ ದಕ್ಷಿಣ ಪಾರ್ಶ್ವದಲ್ಲಿ ನಿಂತನು. ಆಗ ವಿಷ್ಣುವು ಚಕ್ರದಿಂದಾ ನರಕಾಸುರನ ಶಿರಶ್ಛೇದನವಂ ಮಾಡಿದನು. ಮತ್ತಂ ಕೃಷ್ಣನಲ್ಲಿದ್ದ ಪರಮೇಶ್ವರನು ಆ ನರಕಾಸುರಂಗೆ ಮುಕ್ತಿಯನಿತ್ತು ಆ ವಿಷ್ಣುವಿನಲ್ಲಿಯೆ ಅಂತರ್ಧಾನನಾದನು. ಮೃತನಾದ ನರಕಾಸುರನು ಕೈಲಾಸಗಿರಿಗೈದಿ ಗಾಣಪತ್ಯವಂ ಪಡದು ಶಿವಸಮೀಪದಲ್ಲಿದ್ದಾನೆ. ಸರ್ವರೂ ಆ ಯುದ್ಧವಂ ನೋಡಿ ಆಶ್ಚರ್ಯಯುಕ್ತರಾದರು. ಮರಳಿ ಈಶ್ವರನು ಆ ವಿಷ್ಣುವಂ ಬಿಟ್ಟು ಕೈಲಾಸಪರ್ವತವ

ನೈದಿದನು. ಬಳಿಕ ಕೃಷ್ಣನು ಪರಮೇಶ್ವರಂಗೆ ನಮಸ್ಕಾರವಂ ಮಾಡಿ ಅತ್ಯಂತ ಸಂತೋಷದಿಂದ ದ್ವಾರಕಾಪುರಿಗೆ ಪೋದನು. ದೇವತೆಗಳು ನಿರ್ಭಯರಾಗಿ ದೇವಲೋಕಕ್ಕೆ ಸಾರಿದರು.

ವಿಷ್ಣುವು ಈಶ್ವರನಂ ಮೆಚ್ಚಿಸಿ ಮೋಹಿನಿಯಾಗಿ ಶಾಸ್ತಾ ಕುಮಾರನಂ ಪಡೆಯುವಿಕೆ.

ಮರಳಿ ಒಂದಾನೊಂದು ವೇಳೆಯಲ್ಲಿ ಹರಿಯು ನ್ಯಗ್ರೋಧವನದಲ್ಲಿ ಈಶ್ವರನ ಆರಾಧಿಸಿ, ಎಲೈ ಶಂಕರನೆ! ನೀನೆನಗೆ ಪ್ರಸನ್ನನಾದೊಡೆ ನಾನು ಸ್ತ್ರೀಯಾಗಿ ನಿನ್ನೊಡನೆ ರಮಿಸಬೇಕೆಂದು ಇಚ್ಛೈಸುತಿದೇನೆಂದು ಪ್ರಾರ್ಥಿಸಲಾಗಿ ಪರಮೇಶ್ವರನು ಹಾಗೆ ವರವಂ ಕೊಟ್ಟು ಅಂತರ್ಧಾನವಾದನು. ಮತ್ತೊಂದು ಸಮಯದಲ್ಲಿ ದೇವಾಸುರರು ಕ್ಷೀರಸಮುದ್ರವಂ ಮಥಿಸಿ ಅಮೃತವಂ ಪಡೆಯೆ, ಅವರೀರ್ವರಿಗು ಮಹಾಕಲಹಮುಂಟಾದುದು. ಆಗ ಹರಿಯು ಮೋಹಿನೀ ವೇಷವಂ ಧರಿಸಿ ಆ ಅಸುರರಂ ವಂಚಿಸಿ ದೇವತೆಗಳಿಗೆ ಅಮೃತವನಿತ್ತು, ಊರ್ಧ್ವರೇತಸ್ಕನಾದ ಈಶ್ವರನಂ ಮೋಹಪಡಿಸಿ, ಆ ಮಹೇಶ್ವರನೊಡನೆ ಕ್ರೀಡೆಯಂ ಮಾಡಿ ಶಾಸ್ತಾಕುಮಾರನಂ ಪೆತ್ತನು, ಮರಳಿ ಒಂದು ಕಲ್ಪದಲ್ಲಿ ಬ್ರಹ್ಮನು ಮೃತನಾಗಲು, ಆ ಪ್ರಳಯಕಾಲದಲ್ಲಿ ವಿಷ್ಣುವು ಸ್ತ್ರೀಯಾಗಿ ಶಂಕರನಂ ತನ್ನ ವಶಮಾಡಿಕೊಂಡು ಆತನೊಡನೆ ಕ್ರೀಡಿಸೆ, ಆಗ ಬ್ರಹ್ಮನು ವಿಷ್ಣುವಿನಲ್ಲಿ ಪುಟ್ಟಿದನು. ಈ ವಿಷ್ಣುವು ಶಿವಪೂಜಾಮಹಿಮೆಯಿಂದಲೆ ಶಿವಂಗೆ ಸ್ತ್ರೀಯಾದನೆಂದು ಲೋಕದಲ್ಲಿ ಪ್ರಸಿದ್ಧಿಯಂ ಪಡದನು. ಈ ಶಿವಪೂಜೆಯು ಸರ್ವ ಅಭಿಲಾಷೆಯನೀಯುವುದು. ಒಂದು ವೇಳೆಯಲ್ಲಿ ದೂರ್ವಾಸಮುನಿಯು ಕೇದಾರಕ್ಷೇತ್ರಕ್ಕೆ ಪೋಗಿ, ಶಿವವ್ರತನಾಗಿ ಅಲ್ಲಿಯೆ ವಾಸಿಸುತ್ತಿದ್ದನು. ಆ ಸಮಯದಲ್ಲಿ ವಿಷ್ಣುವು ಗರುಡಾರೂಢನಾಗಿ ವೈಕುಂಠಕ್ಕೆ ಪೋಗಲು ಪೊರಮಟ್ಟು, ದೂರದಲ್ಲಿ ಶಿವಪೂಜೆಯಂ ಮಾಡುತ್ತಿರುವ ದೂರ್ವಾಸನಂ ಕಂಡು ಸಮೀಪಕ್ಕೆ ಪೋಗಿ, ಆ ಶಿವಪೂಜೆಯಂ ನೋಡಿ, ಶಿವನಿಗೂ ಮುನಿಗೂ ನಮಸ್ಕರಿಸದೆ ತನ್ನ ಲೋಕಕ್ಕೆ ಪೋದನು. ಬಳಿಕ ದೂರ್ವಾಸಮುನಿಯು ಆ ಶಿವಪೂಜೆಯಂ ಸಮಾಪನಂಗೈದು ವಿಷ್ಣು ಬಳಿಗೈದಿ, ಎಲೈ ವಿಷ್ಣುವೆ ನೀನು ಆವುದಾನೊಂದು ಕಾರಣದಿಂ ನನ್ನಿಂದ ಪೂಜಿಸಲ್ಪಡುವ ಶಿವಲಿಂಗಕ್ಕೆ ನಮಸ್ಕಾರವಂ ಮಾಡದೆ ಗರ್ವದಿಂ ಪೋದೆಯೋ, ಅದುಕಾರಣದಿಂ ನಿನ್ನ ವಾಹನವಾದ ಗರುಡನು ಮೃತನಾಗಲಿ, ನಿನ್ನ ಲಕ್ಷ್ಮಿಯು ಸಮುದ್ರವನ್ನೈದಲಿ, ಭೈರವನು ತ್ರಿಶೂಲಾಗ್ರದಿಂ ನಿನ್ನ ಹಣೆಯಂ ತಿವಿದು ಶರೀರದಲ್ಲಿರ್ಪ ರಕ್ತವಂ ಪಾನವಂ ಮಾಡಲಿ, ಮತ್ತಂ ನಿನ್ನ ಭಕ್ತರು ಶಿವದ್ರೋಹಪರರಾಗಲೆಂದು ಶಾಪವಂ ಕೊಟ್ಟು, ಅತಿ ಶೀಘ್ರದಿಂ ಪೋದನು. ಆಗ ಕೇಶ

ವನು ಶ್ರೀಕಾಳಹಸ್ತಿಗೆ ಪೋಗಿ ಶಿವನಂ ಪೂಜಿಸೆ, ಭಗವಂತನಾದ ಶಂಕರನು ಅಂಬಾಸಮೇತನಾಗಿ, ಎಲೈ ಹರಿಯೆ! ಭೈರವನಿಂದ ನಿನ್ನ ರಕ್ತವು ಪಾನಮಾಡಲ್ಪಟ್ಟು ನೀನು ಮೃತನಾದೊಡಂ ಆತನ ಹಸ್ತಸ್ಪರ್ಶೆಯಿಂದ ಮರಳಿ ಏಳುವನಾಗು, ಲಕ್ಷ್ಮಿಯು ಸಮುದ್ರಮಥನ ಕಾಲದಲ್ಲಿ ಪುಟ್ಟಲಿ, ಗರುಡನು ಮರಳಿ ಪುಟ್ಟಿ ಅಮೃತವಂ ತಂದು ವಾಹನವಾಗಿರಲಿ, ಎಂದು ದೂರ್ವಾಸ ಶಾಪಕ್ಕೆ ಪ್ರತೀಕಾರವಂ ಪೇಳಿದನು. ಬಳಿಕ ಭಕ್ತಾರ್ತಿ ಭಂಜಕನಾದ ಭೈರವನು ಶೂಲದಿಂ ವಿಷ್ಣುವಿನ ರಕ್ತವಂ ತೆಗೆದು ಪಾನವಂ ಮಾಡಿ ಮರಳಿ ಆತಂಗೆ ಜೀವವನಿತ್ತು ಪೊರಮಟ್ಟನು. ಮಹಾಲಕ್ಷ್ಮಿಯು ಸಮುದ್ರದಲ್ಲಿ ಪುಟ್ಟಿದಳು. ಗರುಡನು ಕಾಶ್ಯಪನಿಂ ಪುಟ್ಟಿದನು. ಭೋಗ ಮೋಕ್ಷಪ್ರದಮಾದ ಶಿವಪೂಜೆಯಿಂದ ಈ ರೀತಿಯಾದುದರಿಂದ ಈ ಶಿವಪೂಜೆಗೆ ಸಮಾನವಾದುದು ಯಾವುದೂ ಇಲ್ಲವು. ಮತ್ತೊಂದುವೇಳೆಯಲ್ಲಿ ದೇವತೆಗಳು ದೈತ್ಯರಿಂ ಪರಿಪೀಡಿತರಾಗಿ ವಿಷ್ಣುವಂ ಮೊರೆಹೊಕ್ಕು ಇಂತೆಂದು ಬಿನ್ನಪಂಗೈದರು. ಭಗವಂತನಾದ ಎಲೈ ಹರಿಯೆ! ವಿರುದ್ಧವಾದ ಆಧಿಪತ್ಯವು ಅಸುರರಿಂದ ಮಾಡಲ್ಪಡುತ್ತಿದೆ.

ಶಿವಪೂಜೆಯಿಂದ ವಿಷ್ಣುವು ಚಕ್ರವನ್ನು ಪಡೆಯುಪಿಕೆ.

ನೀನು ಈಶ್ವರನಿಂದ ನಮಗೆ ರಕ್ಷಕನಾಗಿ ಆಜ್ಞಾಪಿಸಲ್ಪಟ್ಟಿದ್ದೀ ಆದ ಕಾರಣ ಅಸುರರಂ ಸಂಹರಿಸೆಂದು ಪೇಳಲಾಗಿ ಹರಿಯು, ಎಲೈ ದೇವತೆಗಳಿರಾ! ನನ್ನ ಚಕ್ರವು ದಧೀಚಿಮುನಿಯ ಶರೀರಘಟ್ಟನೆಯಿಂದ ಮುರಿದು ಪೋದುದು. ನಿರಾಯುಧನಾಗೆಂತು ಸಂಹರಿಸಲೆಂದನು. ಬಳಿಕ ದೇವತೆಗಳು ಜಲಂಧರ ಸಂಹಾರಾರ್ಥವಾಗಿ ಶಿವನಿಂ ನಿರ್ಮಿತಮಾದ ಚಕ್ರವನ್ನು ನೀನು ಪಡದುಕೋ ಎಂದು ಪೇಳೆ, ವಿಷ್ಣುವು ಕಾಂಚೀಪುರಕ್ಕೆ ಪೋಗಿ ತೊಂಭತ್ತೊಂಭತ್ತು ವರುಷಗಳು ಪ್ರತಿ ದಿವಸದಲ್ಲಿಯು ಕಮಲಂಗಳಿಂದ ಶಿವನಂ ಪೂಜಿಸಿ ಬಂದಾನೊಂದು ದಿವಸದಲ್ಲಿ ಕಡಮೆಯಾದ ಒಂದು ಕಮಲಕ್ಕೆ ಬದಲಾಗಿ ತನ್ನ ನೇತ್ರವನೆ ಪದ್ಮವಾಗಿ ಮಾಡಿ ಸ್ವಾಮಿಗರ್ಪಿಸಿ, ಶಿವಾನುಗ್ರಹದಿಂದ ಸಹಸ್ರಾದಿತ್ಯ ಸಂಕಾಶವಾದ ಸುದರ್ಶನವೆಂಬ ಚಕ್ರವಂ ಅನೇಕ ವರಗಳಂ ಪಡದು, ಅಂದು ಮೊದಲಾಗಿ ಪದ್ಮಾಕ್ಷನೆಂದು ಪ್ರಸಿದ್ಧನಾಗಿ ಅಸುರರಂ ಸಂಹರಿಸಿದನು. ಮತ್ತೊಂದು ವೇಳೆಯಲ್ಲಿ ವಿಷ್ಣುವು ಪುತ್ರಕಾಮನಾಗಿ ಪರಮೇಶ್ವರನಂ ಪರಿಪೂಜಿಸಿ ಪುತ್ರವರವಂ ಪಡದುಕೊಳ್ಳೆ, ಶಿವೆಯು ಕುಪಿತೆಯಾಗಿ ಆ ಪುತ್ರನು ಶಿವನಿಂದ ದಗ್ಧನಾಗಲೆಂದು ಶಾಪವಂ ಕೊಟ್ಟಳು. ಬಳಿಕ ಆ ವಿಷ್ಣುವು ಅಂಬಾಸಮೇತನಾದ ಸದಾಶಿವನಂ ಪೂಜಿಸಿ ಆ ಪಾರ್ವತೀ ಪರಮೇಶ್ವರರಿಗೆ ಸಂತೋಷವಂ ಮಾಡೆ, ದೇವಿಯು ಈಶ್ವರನ ದಯದಿಂ ಪ್ರೇರಿತೆಯಾಗಿ ಪ್ರಸನ್ನತೆಯನ್ನೈದಿ ಎಲೆ ಹರಿಯೆ! ನನ್ನ

ಶಾಪದಿಂ ಪುತ್ರನು ಶಿವನಯನದಿಂ ನಷ್ಟನಾದೊಡಂ ಮರಳಿ ದೇಹಾಂತರವಂ ಧರಿಸಿರಲೆಂದು ವರವಂ ಕೊಟ್ಟಳು. ಅದುಕಾರಣದಿಂ ರತಿಪ್ರಿಯನಾದ ಕಾಮನೆಂಬ ಪುತ್ರನಂ ಪಡೆದನು. ಆತನು ಶಿವಫಾಲ ನಯನಾಗ್ನಿಯಿಂದ ದಗ್ಧನಾಗಿ ಮರಳಿ ಪುಟ್ಟಿದನು ಹಾಹಾ! ಶಿವಪೂಜೆಯು ಸಕಲಾಭೀಷ್ಟಂಗಳಂ ಕೊಡುವಂತೆ ಮತ್ತಾವುದೂ ಸತ್ಯವಾಗಿ ಕೊಡಲಾರದು. ಈ ವಿಷಯದಲ್ಲಿ ಸಂದೇಹ ವಿಲ್ಲೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ಉಪದೇಶ ಕಾಂಡದೊಳು ಅರವತ್ತಾರನೆಯ ಅಧ್ಯಾಯವು
ಸಮಾಪ್ತಮಾದುದು.

ಅರವತ್ತೇಳನೆಯ ಅಧ್ಯಾಯವು.

ಪದ್ಮಾಕ್ಷನು ಪರಶಿವನನ್ನು ಪ್ರಾರ್ಥಿಸುವಿಕೆ.

ಎಲೈ ಋಷಿಗಳಿರಾ! ಮತ್ತಂ ಒಂದಾನೊಂದು ವೇಳೆಯಲ್ಲಿ ಪದ್ಮಾಕ್ಷನು ಅತ್ಯಂತ ಮಾಯಾವಿಶಾರದರಾದ ದೈತ್ಯರಿಂ ಪರಾಜಿತನಾಗಿ ಮಾಯಾಪುರಿಗೆ ಪೋಗಿ ಮಹೇಶ್ವರನಂ ಪರಿಪೂಜಿಸಿ ಪ್ರಸನ್ನನಂ ಮಾಡಿಕೊಂಡು ಎಲೈ ದೇವ ದೇವನೆ! ಕಾಲನೇಮಿ ಮುಂತಾದ ಅಸುರರು ಮಹಾ ಮಾಯಾವಿಗಳು ನಾನವರಂ ಜಯಿಸಲಾರೆನು ಆದಕಾರಣ ಅಂಥ ಶಕ್ತಿಯಂ ಕೊಡಬೇಕೆಂದು ಪ್ರಾರ್ಥಿಸಿ, ಆ ಸ್ವಾಮಿಯಿಂ ಬಲವಂ ಪಡೆದು ಮಹತ್ತರವಾದ ಯುದ್ಧವಂ ಮಾಡಿ ದೈತ್ಯರ ನೆಲ್ಲರಂ ಸಂಹರಿಸಿದನು. ಇನ್ನೊಂದು ವೇಳೆಯಲ್ಲಿ ಕಾಶಿಗೆ ಪೋಗಿ ಮಹಾ ದೇವನಂ ಪ್ರಸನ್ನನಂ ಮಾಡಿಕೊಂಡು, ಎಲೈ ಸ್ವಾಮಿಯೆ! ನೀನು ಬ್ರಹ್ಮಾದಿಗಳ ಮತ್ತಂ ನನ್ನ ಅಹಂಕಾರಶಾಂತಿಗೋಸುಗ ನಮ್ಮಗಳ ಶರೀರಸ್ಥಂಗಳಾದ ಅಸ್ಥಿ ಗಳಂ ಧರಿಸುತಲಿದ್ದರೂ, ಆಧಿಪತ್ಯಜನ್ಯವಾದ ಅಹಂಕಾರವು ಪೋಗಲಿಲ್ಲ. ಆದುಕಾರಣದಿಂ ಇನ್ನು ಮೇಲೆ ಯಾವ ಭಕ್ತನಿಗೆ ಪ್ರಸನ್ನನಾದರೂ ನನ್ನ ಶರೀರ ದಲ್ಲಿ ಪುಟ್ಟಿದ ಅಸ್ಥಿಯಿಂದ ಭೂಷಿತನಾಗಿ ಅವರಿಗೆ ಪ್ರಸನ್ನನಾಗು. ಮತ್ತಂ "ಮತ್ಸ್ಯಾಕ್ಷಿಧೃತ್, ಕೂರ್ಮಾಸ್ಥಿಧರನು, ಕ್ರೋಡ ಶೃಂಗಧಾರಿಯು, ನಾರಸಿಂಹ ಚರ್ಮಾಂಬರಧರನು, ತ್ರಿವಿಕ್ರಮಾಸ್ಥಿದಂಡಿಯು" ಎಂಬ ಈ ನಾಮಂಗಳು ಲೋಕಂಗಳಲ್ಲಿ ಪ್ರಸಿದ್ಧಂಗಳಾಗಿರಲಿ, ಈ ನಾಮಂಗಳಿಂದ ನಿನ್ನನ್ನು ಯಾರು ಸ್ತುತಿಸುವರೋ ಅವರಿಗೆ ಸರ್ವಾಭೀಷ್ಟಂಗಳಂ ಕೊಡುವನಾಗೆಂದು ಪ್ರಾರ್ಥಿಸಿ, ವರವಂ ಪಡೆದು ನಮಸ್ಕಾರವಂ ಮಾಡಿ ತನ್ನ ಲೋಕಕ್ಕೆ ಪೋಗಿ ಪರಮಾನಂದ ನಿರ್ಭರನಾಗಿರ್ದನು. ಮತ್ತೊಂದು ವೇಳೆಯಲ್ಲಿ ಹರಿಯು ಹರೀಶ್ವರನಾದ

ವರನಂ ಪರಿಪೂಜಿಸಿ ವರಗಳಂ ಪಡದು, ಆ ಸ್ವಾಮಿಯು ನರ್ತನ ಕಾಲದಲ್ಲಿ ಭೇರೀ ಮರ್ದಳೆಗಳಂ ಬಾರಿಸಿ ಸುಖವಂ ಪೊಂದಿದನು.

ವಿಷ್ಣುವಿಗೆ ಪರಶಿವನ ವರಪ್ರಸಾದಗಳ ವಿವರಣೆ.

ಇನ್ನೊಂದು ವೇಳೆಯಲ್ಲಿ ಶ್ವೇತಾರಣ್ಯಕ್ಕೆ ಸಾರಿ ಸಾಂಬನಾದ ಶಿವಂಗೆ ನಮಸ್ಕಾರವಂ ಮಾಡಿ, ಎಲೈ ದೇವನೆ! ನನಗೆ ಜನ್ಮಂಗಳುಂಟಾದವು. ಇತಃಪರದಲ್ಲಾದರೂ ನನಗೆ ಮುಕ್ತಿಯಂ ಕೊಟ್ಟು ರಕ್ಷಿಸಬೇಕೆಂದು ಪ್ರಾರ್ಥಿಸೆ, ಪರಮೇಶ್ವರನು, ಎಲೈ ವಿಷ್ಣುವೆ! ಸರ್ವಸಂಹಾರ ಕಾಲದಲ್ಲಿ ನಿನ್ನಂ ಸಂಹರಿಸಿ ನಿನ್ನ ಶರೀರದಲ್ಲಿ ಪುಟ್ಟಿರುವ ಅಸ್ಥಿ ಚರ್ಮಾದಿಗಳಿಂ ಭೂಷಿತನಾಗಿ ನರ್ತನವಂ ಗೈದು ಸಾರೂಪ್ಯದ ಪದವಿಯನ್ನಿತ್ತು, ಬಳಿಕ ಸಾಯುಜ್ಯಮುಕ್ತಿಯನ್ನೀಯುವೆನೆಂದು ವರವಂ ಕೊಟ್ಟು ಅಂತರ್ಧಾನವನ್ನೈದಿದನು. ಅನಂತರದಲ್ಲಿ ವಿಷ್ಣುವು ಮಹಾ ಸಂತೋಷದಿಂದ ತನ್ನ ಲೋಕಕ್ಕೆ ಪೋದನು. ಹೀಗೆ ಪರಮೇಶ್ವರನು ಭಸ್ಮರುದ್ರಾಕ್ಷಧಾರಿಯಾದ ಸರ್ವರನ್ನು ಅನುಗ್ರಹಿಸುತ್ತಿರುವನು. ಅದುಕಾರಣದಿಂ ಪುರುಷೋತ್ತಮನು ಶಿವಪೂಜಾ ಮಹಿಮೆಯಿಂ ಸರ್ವಜಗತ್ಪಾಲಕನಾಗಿ, ಸಂಪೂರ್ಣಕಾಮನಾಗಿ ಪುತ್ರವಂತನಾಗಿ ಪ್ರಸಿದ್ಧನಾಗಿ, ಸರ್ವಪಾಪಂಗಳಂ ಬಿಡಲ್ಪಟ್ಟವನಾಗಿ, ಸಮಸ್ತರಾದ ದೈತ್ಯರಂ ಸಂಹರಿಸಿ ಸರ್ವರಿಗೂ ಅಧಿಕನಾಗಿರುತಿದಾನೆ. ಎಲೈ ಋಷಿಗಳಿರಾ! ವಿಷ್ಣುವಿನಿಂದ ಮಾಡಲ್ಪಟ್ಟ ಶಿವಪೂಜೆಗಳಲ್ಲಿ ಕೆಲವಂ ನಿಮಗೆ ಪೇಳಿದೆನು. ಉಳಿದವು ಪೇಳಲಶಕ್ಯವು. ಲೋಕದಲ್ಲಿ ಈ ಮಹಿಮೆಗಳನ್ನು ಯಾರು ಕೇಳುವರೋ, ಅವರಿಗೆ ಇಹದಲ್ಲಿ, ಅನೇಕ ಸೌಖ್ಯಂಗಳುಂಟಾಗಿ ಪರದಲ್ಲಿ ಸಾಕ್ಷಾತ್ಕೈಲಾಸವನ್ನೈದುವರೆಂದು ಸೂತಂ ಶೌನಕಾದಿ ಮುನಿಗಳಿಗೆ ಪೇಳಿದನೆಂಬಲ್ಲಿಗೆ, ಉಪದೇಶಕಾಂಡದಲ್ಲಿ ಅರವತ್ತೇಳನೆಯ ಅಧ್ಯಾಯವು ಸಂಪೂರ್ಣಮಾದುದು.

ಅರವತ್ತೆಂಟನೆಯ ಅಧ್ಯಾಯವು.

ಬ್ರಹ್ಮದೇವನು ಪರಶಿವನನ್ನು ಪೂಜಿಸುವಿಕೆ.

ಎಲೈ ಋಷಿಗಳಿರಾ! ಬ್ರಹ್ಮನಿಂದ ಮಾಡಲ್ಪಟ್ಟ ಶಿವಪೂಜಾ ಮಹಿಮೆಗಳಂ ಪೇಳುವೆನು, ಕೇಳುವರಾಗಿ. ಪೂರ್ವದಲ್ಲಿ ಬ್ರಹ್ಮದೇವನು ಕಾಶೀನಗರಕ್ಕೆ ಸಾರಿ ಉಗ್ರವಾದ ತಪದಿಂದ ಪರಮೇಶ್ವರನನ್ನು ಪ್ರಸನ್ನನಂ ಮಾಡಿಕೊಂಡು, ಅಹಂಕಾರದಿಂ ಮತ್ತನಾದ ತನ್ನ ಶಿರವಂ ಭೈರವನು ಛೇದಿಸಿದರಿಂದ ಮತಿಚಂಚಲನಾಗಿ ಸೃಷ್ಟಿಯಂ ಮಾಡಲಾರದೆ, ಸೃಷ್ಟಿಗನುಕೂಲವಾದ

ಶಕ್ತಿಯಂ ಕೊಡುವನಾಗೆಂದು ಪ್ರಾರ್ಥಿಸಿ, ಪರಶಿವನಿಂದ ವರವಂ ಪಡೆದು ಸಕಲ ಜಗವಂ ಸೃಜಿಸಿ ಸೃಷ್ಟಿಕರ್ತನೆಂಬ ಪೆಸರುಳ್ಳವನಾಗಿ, ಅಪ್ಸರೋಗಣಂಗಳಂ ಸೃಷ್ಟಿಸುವಲ್ಲಿ ತಿಲೋತ್ತಮೆಯೆಂಬ ಸ್ತ್ರೀಯಂ ಪುಟ್ಟಿಸಿ, ಆಕೆಯ ಸೌಂದರ್ಯವಂ ಕಂಡು ಮೋಹಿಸಿ ಸಂಭೋಗಕ್ಕೆ ಕರೆದನು. ಆಗ ತಿಲೋತ್ತಮೆಯು ಈ ವಾಕ್ಯವಂ ಕೇಳಿ, ಎಲೈ ಬ್ರಹ್ಮನೆ! ಸಕಲ ಜಗತ್ತಿಗು ನನಗು ನೀನೇ ಪಿತನಲ್ಲದೆ ಮತ್ತೋರ್ವನಿಲ್ಲ. ಅದುಕಾರಣದಿಂ ನೀನೆನ್ನೊಡನೆ ರಮಿಸುವ ದುಚಿತವಲ್ಲೆಂದು ನುಡಿದು, ಭಯದಿಂದೋಡಿ ಪೋಗುತ್ತಿರಲು, ಬ್ರಹ್ಮನು ಆಕೆಯ ಬಳಿವಿಡಿದು ಪೋಗುತ್ತಿರ್ದನು. ಆ ಸಮಯದಲ್ಲಿ ಶಿವಗಣಂಗಳು ತಿಲೋತ್ತಮೆಯನ್ನಟ್ಟಕೊಂಡು ಪೋಗುತ್ತಿರುವ ಆ ಬ್ರಹ್ಮನಂ ನೋಡಿ ಬೆನ್ನಟ್ಟಿ ಬರೆ, ಬ್ರಹ್ಮನು ಮೂರು ಲೋಕವಂ ಸುತ್ತಿ ಯೆಲ್ಲಿಯು ನಿಲ್ಲಲವಕಾಶವಿಲ್ಲದೆ, ಸುಪಾರ್ಶ್ವವೆಂಬ ಮಹಾ ಗಿರಿಯ ಗುಹೆಯಂ ಪೊಕ್ಕು, ಅಲ್ಲಿ ಶಿವಪೂಜೆಯಂ ಮಾಡಿ ಪ್ರಸನ್ನನಂ ಮಾಡಿಕೊಂಡಿಂತೆಂದನು. ಎಲೈ ಸ್ವಾಮಿಯೆ! ನಿನ್ನ ಮಾಯೆಯಿಂದ ಮೋಹಿಸಲ್ಪಟ್ಟವನಾಗಿ ಮದನ ಬಾಧೆಯಿಂ ನೊಂದು ತಿಲೋತ್ತಮೆಯೊಡನೆ ಪೋಗುತ್ತಿರಲು, ನಿನ್ನ ಗಣಗಳತಿ ವೇಗದಿಂ ಪ್ರಹರಿಸಲ್ಬರೆ, ನಾನೀ ಗುಹೆಯಂ ಪೊಕ್ಕೆನು. ಸಾವಿತ್ರಿ, ಗಾಯತ್ರಿ, ಸರಸ್ವತಿ ಎಂಬ ಮೂರು ಸ್ತ್ರೀಯರಲ್ಲದೆ ಇತರ ಸ್ತ್ರೀಯರಲ್ಲಿ ಮೋಹವು ಪುಟ್ಟದಂತೆ ವರವಂ ಕೊಡಬೇಕೆಂದು ಪ್ರಾರ್ಥಿಸಿ ಆ ವರವಂ ಪಡೆದು ತನ್ನ ಸ್ಥಾನಕ್ಕೆ ಪೋಗಿ ತನ್ನ ಸ್ತ್ರೀಯರೊಡನೆ ಕ್ರೀಡಿಸಿಕೊಂಡು ಸುಖನಾಗಿರ್ದನು. ಮತ್ತೊಂದು ವೇಳೆಯಲ್ಲಿ ಜಗದ್ರೋಹಿಗಳಾದ ದೈತ್ಯರಂ ಸೃಜಿಸಿ ಕೋಪದಿಂದವರನ್ನೆಲ್ಲರಂ ಸಂಹಾರವಂ ಗೈದು, ಆ ದೋಷ ಪರಿಹಾರಕ್ಕೋಸುಗ ಸರ್ವಪಾಪ ವಿಚ್ಛೇದಕವಾದ ಶ್ರೀ ಕಾಳಹಸ್ತಿನಗರಕ್ಕೆ ಪೋಗಿ, ಸ್ವಾಮಿಗೆ ನಮಸ್ಕಾರವಂ ಮಾಡಿ ದೋಷದಿಂ ಬಿಡಲ್ಪಟ್ಟು, ಶುದ್ಧಾತ್ಮನಾಗಿ ಸತ್ಯಲೋಕಕ್ಕೆ ಪೋದನು. ಇನ್ನೊಂದು ವೇಳೆಯಲ್ಲಿ ಕೈಲಾಸಕ್ಕೆ ಸಾರಿ ಶಿವಂಗೆ ನಮಸ್ಕರಿಸಿ ತನ್ನ ಲೋಕಕ್ಕೆ ಪೋಗುವ ಸಮಯದೊಳು, ಮಾರ್ಗದಲ್ಲಿ ಆಡುತಿರ್ಪ ಕುಮಾರಸ್ವಾಮಿಯಂ ಕಂಡು ಮಾತಾಡಿಸದೆ ತೆರಳುತ್ತಿರಲು, ಕುಮಾರಸ್ವಾಮಿಯು ತಾನೆ ಆತನಂ ಕರಿಸಿ ಪ್ರಣವಾರ್ಥವಂ ಕೇಳಿ, ಅನ್ಯಥಾ ಪೇಳಿದ್ದರಿಂದ ಮುಷ್ಟಿಯಿಂ ತಾಡಿಸಿ, ಕಾರಾಗೃಹದಲ್ಲಿಟ್ಟು ತಾನೇ ಜಗವಂ ಸೃಜಿಸುತ್ತಿದ್ದನು. ಆಗ ಶಿವನದಂ ಕೇಳಿ ಕುಮಾರನಿಂ ಬಿಡಿಸೆ ಬ್ರಹ್ಮನು ಆ ಕುಮಾರಂಗೆ ನಮಸ್ಕರಿಸಿ ಅನುಜ್ಞಾತನಾಗಿ ಕಾಂಚೀಪುರಿಗೆ ಸಾರಿ ಏಕಾಂಮ್ರನಾಥನಂ ಪರಿಪೂಜಿಸಿ ತನ್ನ ನಾಮದಿಂದೊಂದು ಶಿವಲಿಂಗ ಪ್ರತಿಷ್ಠೆಯಂ ಮಾಡಿ ಮರಳಿ ಸ್ವಕೀಯಮಾದ ಲೋಕಕ್ಕೆ ಪೋಗಿ ಸುಖದಿಂದಿದ್ದನು. ಮತ್ತಂ

ಬಂದಾನೊಂದು ಸಮಯದಲ್ಲಿ ಸೀಲಾದ್ರಿಗೆ ಪೋಗಿ ಶಿವಪೂಜೆಯಂ ಮಾಡಿ ಸ್ವಾಮಿಯಂ ಪ್ರಸನ್ನನಂ ಮಾಡಿಕೊಂಡು ಎಲೈ ಭಗವಂತನೆ! ಪೂರ್ವದಲ್ಲಿ ನೀನು ವಿಷ್ಣುವಿನಿಂ ದಾರಾಧಿತನಾಗಿ ನರ್ತನವಂ ಮಾಡುವ ಸಮಯದಲ್ಲಿ ಮರ್ದಳೆಯಂ ಬಾರಿಸುವಂತೆ ವರವಂ ಕೊಟ್ಟೆ. ನಾನು ಆ ನರ್ತನವಂ ನೋಡ ಬಯಸುತ್ತಿದೇನೆನಲಾಗಿ, ಶಿವನು ಬ್ರಹ್ಮಂಗೆ ತಾಳವನ್ನಿತ್ತು ಅಂತರ್ಧಾನ ವಾದನು. ಬಳಿಕ ಬ್ರಹ್ಮನು ಸ್ವಾಮಿಯ ತಾಳವಂ ಪಿಡಿದು ನಟೇಶ್ವರನ ನೃತ್ಯವಂ ನೋಡಿ ನೋಡಿ ಪ್ರೀತಿಯುಕ್ತನಾಗಿದ್ದನು. ಇನ್ನೊಂದು ವೇಳೆ ಸತ್ಯಲೋಕ ದಲ್ಲಿ ಶಿವನಂ ಪರಿಪೂಜಿಸಿ, ಎಲೈ ಶಂಕರನೆ! ಉಮಾಸಮೇತನಾಗಿ ರಥದಲ್ಲಿರ್ಪ ನಿನ್ನಂ ಸೇವಿಸ ಲಿಚ್ಛೈಸಿ ಬಂದೆನು. ಆದೊಡೆ ಅತಿ ಸಂದಣಿಯಾಗಿಹುದು, ನಂದೀಶ್ವರ ಮುಂತಾದ ವೇತ್ರಪಾಣಿಗಳು ಪ್ರಹರಿಸುತ್ತಿದಾರೆ ಬರಲಾಗದು. ಆದುಕಾರಣದಿಂ ಯಾವಾಗಲು ಸೇವಿಸುವಂತೆ ಸಾರಥ್ಯವಂ ಕೊಡೆಂದು ಪ್ರಾರ್ಥಿಸಿ, ವರವಂ ತೆಗದುಕೊಂಡು ರಥಕ್ಕೆ ವೇದಾಶ್ವಂಗಳಂ ಕಟ್ಟಿ ಸಾರ ಥ್ಯವಂ ಮಾಡಿದನು. ಮತ್ತೊಂದು ಕಾಲದಲ್ಲಿ ಕೈಲಾಸಕ್ಕೆ ಪೋಗಿ ಮಹೇಶ್ವ ರನಂ ಪೂಜಿಸಿ, ಎಲೈ ಶಂಕರನೆ! ನಿನ್ನ ಪ್ರಸಾದದಿಂ ವಿಷ್ಣುವಂ ಸರ್ವ ಲೋಕಂಗಳಂ ಸಹ ನುಂಗುವ ಶಕ್ತಿಯಂ ಮರಳಿ ಆ ವಿಷ್ಣುವಂ ಜಗವಂ ಅಪಾನಮಾರ್ಗದಲ್ಲಿ ಬಿಡುವ ಸಾಮರ್ಥ್ಯವಂ ಕೊಡಬೇಕೆಂದು ಪ್ರಾರ್ಥಿಸಿ ವರವಂ ಪಡೆದು ಹಾಗೆಯೇ ಮಾಡಿದನು. ಇನ್ನೊಂದು ವೇಳೆಯಲ್ಲಿ ಮಹಾ ಲಿಂಗಸ್ವರೂಪನಾದ ಪರಶಿವನ ಊರ್ಧ್ವ ಭಾಗವಂ ಕಂಡೆನೆಂದು ವಿಷ್ಣುವಿ ನೊಡನೆ ಸುಳ್ಳಂ ಪೇಳಿದ ದೋಷಪರಿಹಾರಕ್ಕೋಸುಗ, ಪುಣ್ಯಕರವಾದ ಅರುಣಾ ಚಲಕ್ಕೆ ಪೋಗಿ ಆ ಅರುಣಾಚಲೇಶ್ವರನಂ ಆರಾಧಿಸಿ ಶಿವಪೂಜಾಮಹಿಮೆಯಿಂ ಪಾಪದಿಂ ಬಿಡಲ್ಪಟ್ಟವನಾಗಿ ಮರಳಿ ಸಕಲ ಜಗತ್ತಂ ಸೃಷ್ಟಿಸಿದನು. ಇದಲ್ಲದೆ ಬ್ರಹ್ಮನು ಶ್ರೀಪರ್ವತಕ್ಕೆ ಪೋಗಿ ಶಿವಪೂಜೆಯಂ ಮಾಡಿ ದಂಡವತ್ತಾಗಿ ಪ್ರಣಾ ಮವಂ ಗೈದು, ಎಲೈ ಸ್ವಾಮಿಯೆ! ನಿನ್ನ ಗಣಾಧೀಶ್ವರರು ಮಹತ್ತರವಾದೆನ್ನ ಪದ್ಮಾಸನವನ್ನು ಹಂಸವನು ದಕ್ಷಬ್ರಹ್ಮನ ಯಾಗಾಗ್ನಿಯಲಿ ಗರುಡನೊಡನೆ ದಹನವಂ ಮಾಡಿ ಭಕ್ಷಿಸಿದರು. ಅವುಗಳನ್ನು ಕೊಡಿಸಬೇಕೆಂದು ಬೇಡಿ ಮರಳಿ ಅವುಗಳಂ ಪಡೆದನು. ಇನ್ನೊಂದು ವೇಳೆಯಲ್ಲಿ ಹೇಮಕೂಟ ಪರ್ವತಕ್ಕೆ ಪೋಗಿ ಅಂಬಿಕಾನಾಥನಂ ಆರಾಧಿಸಿ, ಎಲೈ ಈಶ್ವರನೆ! ಪ್ರಳಯಕಾಲದಲ್ಲಿ ವಿಷ್ಣು ಸಹ ಸಮಸ್ತ ಜಗತ್ತಂ ಸಹಾ ಸಂಹರಿಸಿ, ಶರೀರಂಗಳಂ ದಹಿಸಿ ಆ ಭಸ್ಮವಂ ಭೂಷಣವಾಗಿ ಮಾಡಿಕೊಂಡು ಹೇಗೆ ತಾಂಡವವಂ ಮಾಡುತ್ತಿರುವಿಯೋ ಹಾಗೆ ನನ್ನ ಅಸ್ಥಿಗಳಂ ಧರಿಸಿ ನರ್ತನವಂ ಮಾಡೆಂದು ಪ್ರಾರ್ಥಿಸಿ ವರವಂ

ಪಡೆದನೆಂದು ಸೂತಪೌರಾಣಿಕಂ ಶೌನಕಾದಿ ಋಷಿಗಳಿಗೆ ಪೇಳಿದ ನೆಂಬಲ್ಲಿಗೆ ಶಿವರಹಸ್ಯೋಪದೇಶಕಾಂಡದಲ್ಲಿ ಅರವತ್ತೆಂಟನೆಯ ಅಧ್ಯಾಯವು ಸಂಪೂರ್ಣಮಾದುದು.

ಅರವತ್ತೊಂಬತ್ತನೆಯ ಅಧ್ಯಾಯವು.

ಇಂದ್ರಾದಿದೇವತೆಗಳು ಶಿವಪೂಜೆಯನ್ನು ಮಾಡುವಿಕೆ.

ಎಲೈ ಋಷಿಗಳಿರಾ! ಇಂದ್ರಾದಿಗಳು ಮಾಡಿದ ಶಿವಪೂಜಾ ವಿಶೇಷಂಗಳಂ ಪೇಳುತಿರ್ದೇನೆ, ಕೇಳುವರಾಗಿ, ಪೂರ್ವದಲ್ಲಿ ಇಂದ್ರನು ಕಾಳಹಸ್ತಿಗೆ ಪೋಗಿ ಶಿವನಂ ಪೂಜಿಸಿ ಬಲಾಸುರನಂ ಸಂಹರಿಸುವಂಥ ಶಕ್ತಿಯಂ ಪಡೆದು ಬಹು ದೈತ್ಯರಂ ಸಂಹರಿಸಿದನು. ಇದಲ್ಲದೆ ದೂರ್ವಾಸಮುನಿಯ ಶಾಪದಿಂದ ಐರಾವತವೆಂಬ ಮಹಾಗಜವು ಉಚ್ಚೈಃಶ್ರವಸ್ಸೆಂಬ ಕುದುರೆಯು, ಚಿಂತಿತಾರ್ಥ ಪ್ರದಾಯಕವಾದ ಚಿಂತಾಮಣಿಯು ಕಲ್ಪವೃಕ್ಷಂಗಳು ಇವೆಲ್ಲವು ಪೋದ ಬಳಿಕ, ಸ್ವರ್ಗದಿಂ ಸಮುದ್ರಕ್ಕೆ ಬಂದು ದಾರಿದ್ರ್ಯದುಃಖದಿಂ ಪರಿತಪ್ತನಾಗಿ ವೃದ್ಧಾಚಲವನ್ನೈದಿ, ಶಿವಪೂಜೆಯಂ ಮಾಡಿ ಆ ಪೂಜಾಪ್ರಭಾವದಿಂದವುಗಳಂ ಪಡೆದು ಸಂತೋಷಚಿತ್ತನಾದನು. ಮತ್ತೊಂದು ವೇಳೆಯಲ್ಲಿ ಗೌತಮಶಾಪದಿಂ ಯೋನ್ಯಾಕಾರವಾದ ಶರೀರವುಳ್ಳವನಾಗಿ ಕಾಶೀವಿಶ್ವೇಶ್ವರನಂ ಪೂಜಿಸಿ ಸಹಸ್ರಾಕ್ಷನಾದನು. ಇನ್ನೊಂದು ಸಮಯದಲ್ಲಿ ಮುನೀಶ್ವರರಂ ಸೋಂಕಿಸಿ ಅವರ ಶಾಪದಿಂ ರೂಪಾಂತರವನ್ನೈದಿ ಕೆಲ ದಿನಂಗಳ ಬಳಿಕ ಕೇತಾರೇಶ್ವರನಂ ಪೂಜಿಸಿ ತನ್ನ ಪೂರ್ವದೇಹವಂ ಪಡೆದು ಸ್ವರ್ಗವನ್ನಾಳುತಿರ್ದನು. ಮತ್ತಂ ಅರುಣಾಚಲಕ್ಕೆ ಪೋಗಿ ಶಿವಪೂಜೆಯಂ ಮಾಡಿ ಶಚಿಯೆಂಬ ಸತಿಯಂ ಪಡೆದು ರಂಭಾದಿ ಗಣಿಕೆಯರೊಡನೆ ಕ್ರೀಡಿಸಿಕೊಂಡಿದ್ದನು.

ಸೂರ್ಯನು ಶಿವಪೂಜೆಯಿಂದ ಪಡೆದ ಫಲ.

ಸೂರ್ಯನು ಶಿವಕ್ಷೇತ್ರಂಗಳಲ್ಲಿ ಶಿವಪೂಜೆಯಂ ಮಾಡಿ, ದಕ್ಷಾಧ್ವರದಲ್ಲಿ ಪೋದ ದಂತಂಗಳಂ ಪಡೆದು ಮಹಾ ಮಹಿಮವಂತನಾದನು. ಹಾಗೆಯೆ ಚಂದ್ರನು ಶಿವಪೂಜೆಯಂ ಗೈದು ದಕ್ಷಶಾಪದಿಂ ಬಿಡಲ್ಪಟ್ಟು, ವೀರಭದ್ರನ ಪಾದ ಘಾತದಿಂ ಪುಟ್ಟಿದ ರುಜೆಯಂ ಮತ್ತಂ ಅನೇಕ ದುರಿತಂಗಳಂ ಪರಿಹರಿಸಿಕೊಂಡನು. ಹೀಗೆಯೆ ಅಷ್ಟದಿಕ್ಪಾಲರು ಶಿವಪೂಜಾ ಮಹಿಮೆಯಿಂದ ಪುತ್ರಾದಿ ಸಕಲೈಶ್ವರ್ಯಂಗಳಂ ಪಡೆದು ಪರಮೇಶ್ವರನ ಕೃಪಾಬಲದಿಂ ಸಮಸ್ತ ದುರಿತಂಗಳಂ ಬಿಡಲ್ಪಟ್ಟರು. ಇದಲ್ಲದೆ ಅಷ್ಟವಸುಗಳು ದೇವದೇವನಾದ ಶೂಲಿಯಂ

ಪೂಜೆಯಂ ಮಾಡಿ ಪಾಪವಿಮುಕ್ತರಾಗಿ ತಮ್ಮ ತಮ್ಮ ವಾಂಛಿತಾರ್ಥಂಗಳಂ ಪಡೆದರು. ಹಾಗೆಯೆ ಅಶ್ವಿನೀದೇವತೆಗಳುಂ ಮಹಾತ್ಮರಾದ ಏಕಾದಶ ರುದ್ರರುಂ ಪ್ರಸಿದ್ಧರಾದ ಸಪ್ತರ್ಷಿಗಳುಂ ಪರಮೇಶ್ವರನನ್ನಾರಾಧಿಸಿ ಪಾಪವಿರತರಾಗಿ ಸರ್ವಾಭೀಷ್ಟಂಗಳಂ ಪಡೆದು ಶುದ್ಧಾತ್ಮರಾಗಿರುವರೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದ ನಂಬೆಲ್ಲಿಗೆ ಉಪದೇಶಕಾಂಡದಲ್ಲಿ ಅರವತ್ತೊಂಬತ್ತನೆಯ ಅಧ್ಯಾಯವು ಸಂಪೂರ್ಣಮಾದುದು.

ಎಪ್ಪತ್ತನೆಯ ಅಧ್ಯಾಯವು.

ಧ್ರುವಭಕ್ತನೆಯೆ ಮುಂತಾದವರು ಶಿವಪೂಜೆಯಿಂದ ಪಡೆದ ಫಲ.

ಎಲೈ ಋಷಿಗಳಿರಾ! ಉತ್ತಾನಪಾದರಾಯನ ಕುಮಾರನಾದ ಧ್ರುವನೆಂಬ ರಾಜಕುಮಾರನುಂ, ಸೂರ್ಯಾದಿ ನವಗ್ರಹಂಗಳುಂ ಅಶ್ವಿನ್ಯಾದಿ ಸಪ್ತವಿಂಶತಿ ತಾರೆಗಳುಂ, ಮೇಷಾದಿ ದ್ವಾದಶರಾಶಿಗಳುಂ ವಿಷ್ಕಂಭಾದಿ ಯೋಗಂಗಳುಂ ಕರಣಂಗಳುಂ ಮತ್ತಂ "ವಿದ್ಯಾಧರ, ಗಂಧರ್ವ, ಗರುಡ, ಉರಗ, ರಾಕ್ಷಸ, ಯಕ್ಷ, ಸಿದ್ಧ, ಗುಹ್ಯಕ, ಕಿನ್ನರ, ಕಿಂಪುರುಷ, ಪಿಶಾಚ, ಪಶು, ಪಕ್ಷಿ, ಮೃಗಾದಿ ಸ್ಥಾವರ ಜಂಗಮಂಗಳುಂ" ಸಪ್ತ ಸಮುದ್ರಂಗಳುಂ ಪರ್ವತಂಗಳುಂ ಗಂಗಾದಿ ನದಿಗಳುಂ ವಸಿಷ್ಠಾದಿ ಬ್ರಹ್ಮರ್ಷಿಗಳುಂ ನಾರದಾದಿ ದೇವರ್ಷಿಗಳುಂ ಈ ಸಮಸ್ತರು, ದೇವದೇವನಾದ ಲಿಂಗಮೂರ್ತಿಯಾದ ಸದಾಶಿವನಂ ಪರಿಪೂಜಿಸಿ, ತಮ್ಮ ತಮ್ಮ ಸ್ಥಾನಂಗಳನ್ನೈದಿ ಅಲ್ಲಿ ಅಭೀಷ್ಟಂಗಳಂ ಪಡೆದು, ಪಾಪವಿಮುಕ್ತರಾಗಿ ಅತ್ಯಂತ ಸುಖವನ್ನೈದಿದರು. ಇದಲ್ಲದೆ ಬೇರೆ ಬೇರೆಯಾಗಿ ಸದಾಶಿವನಂ ಪೂಜಿಸಿ ತಮ್ಮ ವಾಂಛಿತಂಗಳಂ ಪಡೆದವರ ಕಥೆಗಳಂ ಪೇಳುತ್ತಿದೇನೆ ಸಾವಧಾನದಿಂ ಕೇಳುವರಾಗಿ.

ತ್ರಿಪುರಾಸುರರ ವೃತ್ತಾಂತ.

ಪೂರ್ವದಲ್ಲಿ ರಜತದಿಂದಲು ಕಾಂಚನದಿಂದಲು ಕಬ್ಬಿಣದಿಂದಲು ನಿರ್ಮಿಸಲ್ಪಟ್ಟ ಮೂರು ಪಟ್ಟಣಂಗಳಿದ್ದವು. ಆ ತ್ರಿಪುರಂಗಳು ಭೂಮ್ಯಾಕಾಶ ಮಾರ್ಗಂಗಳಲ್ಲಿ, ಸಂಚರಿಸುತ್ತಿದ್ದವು. ಅವುಗಳಲ್ಲಿ ತಾರಕನಿಂ ಸಂಜನಿಸಿದ ಮಹಾ ಪರಾಕ್ರಮಿಗಳಾದ, ವಿದ್ಯುನ್ಮಾಲಿ ತಾರಕಾಕ್ಷ ಕಮಲಾಕ್ಷರೆಂಬ ಮೂರು ಮಂದಿ ಮಹಾಸುರರು ಪ್ರತ್ಯೇಕ ಪ್ರತ್ಯೇಕಮಾಗಿ ಅರವತ್ತಾರು ಕೋಟಿ ಅಸುರರಂ ಕೂಡಿಕೊಂಡು ಲೀಲೆಯಿಂದಮರರಂ ಜಯಿಸಿ, ಮೂರು ಲೋಕಂಗಳಂ ಬಾಧಿಸುತ್ತಿದ್ದರು. ಅವರುಗಳು ಮಹಾ ನಿಯಮದಿಂ ಚತುರ್ಮುಖನಂ ಕುರಿತು

ತಪವಂ ಗೈಯ್ಯೆ, ಬ್ರಹ್ಮನು ಇಂದ್ರಾದಿದೇವತೆಗಳ್ವೆರಸಿ ಪ್ರತ್ಯಕ್ಷನಾಗಿ ಎಲೈ ಅಸುರರಿರಾ! ನಿಮ್ಮ ತಪಸ್ಸಿಗೆ ಮೆಚ್ಚಿದೇನೆ. ವರವಂ ಕೇಳಿಕ್ಕೊಳ್ಳಿರೆಂದು ನುಡಿಯಲಾಗಿ, ಅವರು ನಿತ್ಯತ್ವವಂ ಕೇಳಿದರು. ಬಳಿಕ ಬ್ರಹ್ಮನು ನಾನು ನಿತ್ಯ ನಾದೊಡೆ ನಿತ್ಯತ್ವವಂ ಕೊಡಲು ಶಕ್ತನು, ಲೋಕದಲ್ಲಿ ದಾನಶೀಲನಾದ ಪುರುಷನು ಇಲ್ಲದಿರುವ ವಸ್ತುವಂ ಕೊಡಲಾರನಲ್ಲವೆ? ಇದಲ್ಲದೆ ವಿಷ್ಣುವು ನಿತ್ಯನಲ್ಲ. ಶಿವನ ಹೊರತಾಗಿ ಮತ್ತಾವ ದೇವತೆಗಳು ನಿತ್ಯರಲ್ಲ. ಅದುಕಾರಣದಿಂ ಮತ್ತೊಂದು ವರವಂ ಕೇಳಿರೆಂದು ಪೇಳಿದನು. ಬಳಿಕ ಅಸುರುಗಳು ಎಲೈ ದೇವೇಶನೆ! ಭೂವ್ಯಂತರಿಕ್ಷಂಗಳಲ್ಲಿ ಸಂಚರಿಸುವಂಥ "ಸ್ವರ್ಣ, ರೌಪ್ಯ" ಕಬ್ಬಿಣಗಳ ಮಯವಾದ ನಮ್ಮ ಮೂರು ಸ್ಥಾನಂಗಳು, ಸಾವಿರ ವರ್ಷಂಗಳ ಅಂತ್ಯದಲ್ಲಿ ಕ್ಷಣಮಾತ್ರ ಕೂಡಲಿ. ಆ ಸಮಯದಲ್ಲಿ ಆವಾತನು ಅದ್ವಿತೀಯನೆಂದು ಪೇಳಲ್ಪಡುವನೋ, ಅಂಥವನು ಒಂದು ಬಾಣದಿಂದ ತ್ರಿಪುರವಂ ಸಂಹರಿಸಬೇಕು. ಆಗ ನಮಗೆ ಮೃತ್ಯುವುಂಟಾಗಲಿ, ಲೋಕಾತಿಶಯವಾದ ಮಹದೈಶ್ವರ್ಯವುಂಟಾಗಲಿ. ಸರ್ವರಾಕ್ಷಸರಿಗೆ ಆಸ್ಪದವಾದ ಈ ಪುರಂಗಳಿಗೆ ಸ್ವೇಚ್ಛೆಯಾಗಿ ಸಂಚಾರವುಂಟಾಗಲಿ, ಎಂದು ಮೂರು ವರಗಳಂ ಕೇಳಲಾಗಿ ಬ್ರಹ್ಮನು ಹಾಗೆ ಆಗಲೆಂದು ವರತ್ರಯವಂ ಕೊಟ್ಟು ಸತ್ಯಲೋಕಕ್ಕೆ ಪೋದನು. ಆಗ ದೇವತೆಗಳ ಭೀತಿಯಿಂದ ಅಲ್ಲಲ್ಲಿ ಅಡಗಿರ್ದ ತಾರಕನ ಸಂಬಂಧಿಗಳಾದ ಸಮಸ್ತ ಅಸುರರು ಈ ವೃತ್ತಾಂತವಂ ಕೇಳಿ ವೇಗದಿಂ ಬಂದು, ಅವರಿಗೆ ತಮ್ಮ ಕನ್ನಿಕೆಯರಂ ಕೊಟ್ಟು ದುಃಖಂಗಳಂ ಪೇಳಿ ಸುಖವನ್ನೈದಿದರು. ಬಳಿಕ ಮಾಯಾ ನಿಪುಣನಾದ ಮಯನೆಂಬ ದೈತ್ಯನು ಅವರೊಡನೆ ಯೋಚಿಸಿ, ಮಹಾ ಸಂತೋಷದಿಂದ ಅಯೋರಜತ ಕಾಂಚನಂಗಳಿಂ ಮೂರು ಪುರಂಗಳಂ, ನವ ರತ್ನಮಯಂಗಳಾದ ಗೃಹಂಗಳಂ ಮಹತ್ತಾದ ಗೋಪುರಂಗಳಿಂ ನವರತ್ನಗಳಿಂ ಅಲಂಕೃತಂಗಳಾದ ಪ್ರಾಕಾರವೀಥಿಗಳಿಂ ಯುಕ್ತವಾಗಿರುವಂತೆ, ನಿರ್ಮಾಣವಂ ಮಾಡಿದನು. ಬಳಿಕ ಆ ದೈತ್ಯರು ಸರ್ವದೈತ್ಯರಿಂ ನಿಬಿಡವಾದ ತ್ರಿಪುರಂಗಳಂ ನೋಡಿ ಪರಮ ಸಂತೋಷವನ್ನೈದಿ, ಆ ಮಯನಂ ಕುರಿತು ಹಿತಾಹಿತ ಕಾರ್ಯಂಗಳಂ ಕೇಳೆ, ಆತನು ವಿದ್ಯುನ್ಮಾಲಿ ಮುಂತಾದ ಅಸುರರಂ ವೀಕ್ಷಿಸಿ, ಎಲೈ ರಾಕ್ಷಸೋತ್ತಮರುಗಳಿರಾ! ಈ ತ್ರಿಪುರಂಗಳು ಸಹಸ್ರ ವರ್ಷಾಂತ್ಯದಲ್ಲಿ ಕ್ಷಣ ಮಾತ್ರ ಸೇರುವಂತೆಯು ಆ ಸಮಯದಲ್ಲಿ ಅತ್ಯುಕ್ತನಾದ ಅದ್ವಿತೀಯನಿಂದ ಮರಣವುಂಟಾಗುವಂತೆಯು ಮಹದೈಶ್ವರ್ಯವುಂಟಾಗುವಂತೆಯು ನಿತ್ಯತ್ವಕ್ಕೆ ಸಮಾನಂಗಳಾದ ಮೂರು ವರಗಳನ್ನು ಪಡೆದಿರಿ. ಆದರೆ ನಾನೊಂದು ವಾಕ್ಯವಂ ಪೇಳುವೆನು ಅದನ್ನು ಮಾತ್ರ ಕೇಳಿರಿ. ಏನೆಂದರೆ, ವೇಗವಾದ ಬಾಣವು ಸ್ಥಿರ

ವಾದ ಧನುಸ್ಸನ್ನುಳ್ಳವನಾಗಿ, ಸ್ವಧಾಮನಾಗಿ ಜಗತ್ಪತಿಯಾಗಿ ಅಷಾಢನಾಗಿ ಸಹಮಾನನಾಗಿ ಸರ್ವರಿಗು ಭರ್ತೃವಾಗಿ ತಿಗ್ಮಾಯುಧನಾಗಿ ವೇದಪ್ರತಿಪಾದ್ಯನಾಗಿರುವ ಮಹೇಶ್ವರನಂ ನಿಯಮದಿಂ ಪೂಜಿಸಿದೊಡೆ, ಸರ್ವ ವಿಘ್ನಂಗಳು ಕ್ರೂರಗ್ರಹಂಗಳು ನಾಶವನ್ನೈದುವವು. ಮನಸ್ಸು ನಿರ್ಮಲವಾಗಿರುವದು. ಅದುಕಾರಣದಿಂ ಬಂಧುಗಳ್ವೆರಸಿ ಲಿಂಗಮೂರ್ತಿಯಲ್ಲಿ ತ್ರಿಯಂಬಕನಾದ ಪುಷ್ಟಿವರ್ಧನನಾದ ಶಿವನಂ ಪೂಜಿಸಿದರೆ, ನಿಮ್ಮನು ಸಂಹರಿಸುವದಕ್ಕೆ ಬಂದವರನ್ನು ತಾನೆ ಸಂಹರಿಸುವನು. ಜಯವೆಂಬುದು ಯಾವಾಗಲು ನಿಮ್ಮ ಹಸ್ತದಲ್ಲಿಯೆ ಇರುವದೆಂದು ಪೇಳಲಾಗಿ, ವಿದ್ಯುನ್ಮಾಲಿಯು ಹಾಗೆ ಆಗಲೆಂದೊಪ್ಪಿಕೊಂಡು ಶಿವಲಿಂಗವಂ ನಿರ್ಮಿಸಿ ಕೊಡಬೇಕೆಂದು ಪ್ರಾರ್ಥಿಸೆ, ಮಯನು ತತ್‌ಕ್ಷಣದಲ್ಲಿಯೆ ಶಿವಲಿಂಗಂಗಳಂ ನಿರ್ಮಾಣವಂ ಮಾಡಿ, ಎಲೈ ಅಸುರರಿರಾ ! ನೀವು ಭಸ್ಮಭೂಷಿತರಾಗಿ ರುದ್ರಾಕ್ಷಾಭರಣಯುಕ್ತರಾಗಿ ಮನೆ ಮನೆಯಲ್ಲಿಯು ಶಿವಲಿಂಗಂಗಳಂ ಪೂಜಿಸುತ್ತಿರೆಂದು ನುಡಿದು ಕೊಟ್ಟನು. ಬಳಿಕ ವಿದ್ಯುನ್ಮಾಲಿ, ತಾರಕಾಕ್ಷ ಪದ್ಮಾಕ್ಷರೆಂಬ ಆ ದೈತ್ಯರು ಅದೇ ಪ್ರಕಾರವಾಗಿ ತಮತಮಗೆ ಬೇಕಾದ ಶಿವಲಿಂಗಂಗಳಂ ಸ್ವೀಕರಿಸಿ, ಭಸ್ಮ ರುದ್ರಾಕ್ಷಧಾರಿಗಳಾಗಿ ಜಿತೇಂದ್ರಿಯರಾಗಿ ಗೃಹಗೃಹದಲ್ಲಿಯು ನಿಯಮದಿಂ ಬೇರೆ ಬೇರೆ ಶಿವಾರ್ಚನೆಯಂ ಮಾಡುತ್ತಿದ್ದರು. ಹೀಗೆ ಮಾಡುತ್ತಿರಲು ಅವರಿಗೆ ಲೋಕಂಗಳಲ್ಲಿ ಪ್ರಸಿದ್ಧಂಗಳಾದ ಐಶ್ವರ್ಯಂಗಳುಂಟಾದವು. ಆಗ ಗೃಹಾರಾಮಂಗಳಲ್ಲಿರ್ದ ವೃಕ್ಷಂಗಳೆಲ್ಲವು ಕಲ್ಪತರುಗಳಾದವು. ಅವರ ದೊಡ್ಡಿಗಳಲ್ಲಿರ್ದ ಗೋವುಗಳೆಲ್ಲವು ಕಾಮಧೇನುಗಳಾದವು. ಅವರ ಅಂಗಳಗಳಲ್ಲಿರುವ ಪಾಷಾಣಗಳೆಲ್ಲ ಚಿಂತಾಮಣಿಗಳಾದವು. ಮತ್ತಂ ಶಂಖಮುಂತಾದ ನವನಿಧಿಗಳು ಪ್ರಸನ್ನವಾಗಿ ಅವರ ಕೈಸೇರಿದವು. ಮತ್ತಂ ಅಸುರೋತ್ತಮರು ಗಾನವಂ ಹಾಸ್ಯವಂ ನೃತ್ಯವಂ ಸಹಾ ಮಾಡುತ್ತಿದ್ದರು. ಅವರು ನಿತ್ಯೋತ್ಸವವೂ ನಿತ್ಯವಾದ ಐಶ್ವರ್ಯವೂ ನಿತ್ಯಮಂಗಳವೂ ಉಂಟಾಗಿ ರಥ ಗಜ ಪದಾತಿಗಳೊಡನೆ ವಿಚಿತ್ರಂಗಳಾದ ಆರಾಮಂಗಳಲ್ಲಿಯು ವಾಪೀಕೂಪ ತಟಾಕಂಗಳಲ್ಲಿಯೂ ಸರಸ್ಸುಗಳಲ್ಲಿಯು ವನಂಗಳಲ್ಲಿಯು ಕ್ರೀಡಿಸಿಕೊಂಡಿದ್ದರು. ಆ ಅಸುರರು ಆ ಪುರದೊಡನೆ ಯೆಲ್ಲಿಗೆ ಪೋಗಬೇಕೆಂದಿಚ್ಛೈಸಿದರೂ, ಅಲ್ಲಲ್ಲಿಗೆ ಪೋಗಿ ಕ್ರೀಡಿಸುತ್ತಿದ್ದರು. ಮತ್ತಂ ಅವರು ಸೂರ್ಯಮಂಡಲದಲ್ಲಿಯು ಚಂದ್ರಮಂಡಲದಲ್ಲಿಯು ಬ್ರಹ್ಮಲೋಕದಲ್ಲಿಯು ವಿಷ್ಣುಲೋಕದಲ್ಲಿಯು ಅಂತರಿಕ್ಷದಲ್ಲಿಯು ಇಂದ್ರ ಲೋಕದಲ್ಲಿಯು, ಸರ್ವ ದಿಕ್ಪಾಲಕರ ಲೋಕಂಗಳಲ್ಲಿಯು ಕ್ರೀಡಿಸುತ್ತ, ಜಯದಿಂ ಸರ್ವರಂ ಜಯಿಸಿ ಬಾಧಿಸುತ್ತಿದ್ದರು.

ವರಪ್ರಸಾದ ಗರ್ವಿತರಾದ ರಕ್ಕಸರ ಹಾವಳಿಯನ್ನು ಅಡಗಿಸಲು ಬ್ರಹ್ಮಾದಿಗಳು ಯೋಚಿಸುವಿಕೆ.

ಬಳಿಕ ಬ್ರಹ್ಮ ವಿಷ್ಣು ಮುಂತಾದ ಸಮಸ್ತ ದೇವತೆಗಳು ತಮ್ಮ ತಮ್ಮ ಲೋಕಂಗಳಂ ಬಿಟ್ಟು ಮಹಾ ಮೇರುವಿಗೆ ಪೋಗಿ, ವರಗರ್ವಿತರಾದ ಈ ಅಸುರರಂ ಎಂತು ಸಂಹರಿಸಬೇಕೆಂದು ಯೋಚಿಸಲಾಗಿ, ವಿಷ್ಣುವು, ಎಲೈ ದೇವತೆಗಳಿರಾ! ಆ ಅಸುರರು ಶಿವನಂ ಪೂಜಿಸುತ್ತಿರುವದರಿಂದ ಅವರ ಸ್ತ್ರೀಯರುಗಳು ಪತಿಯನ್ನೇ ದೇವತೆಯಾಗಿಕಂಡು ಪರಿಶುದ್ಧೆಯರಾಗಿರುವುದರಿಂದಲು ಆಅಸುರರಂ ಜಯಿಸಲು ಅಶಕ್ಯವೆನಲು, ದೇವತೆಗಳು ಎಲೈ ನಾರಾಯಣನೆ! ಅಸುರರು ಭಕ್ತಿಹೀನರು, ಮತ್ತಂ ಆವರ ಶಿಲ್ಪಿಯಾದ ಮಯನ ವಾಕ್ಯವಂ ಕೇಳಿ ಶಿವಾರ್ಚನೆಯಂ ಮಾಡುವರೇ ಹೊರತು ಭಕ್ತಿಯಿಂದ ಮಾಡುವದಿಲ್ಲವು, ಅದುಕಾರಣದಿಂ ನಾವೆಲ್ಲರು ಶಿವಾರ್ಚನೆಯಂ ಮಾಡಿ, ಆ ಈಶ್ವರಾಜ್ಞೆಯಿಂ ಪುಟ್ಟಿದ ಭೂತಂಗಳಿಂ ಜಯಿಸುವನೆಂದರು. ಬಳಿಕ ಹರಿಯು ಅವರವರ ವರಗಳನ್ನು ನೀವರಿಯಿರಿ, ಆ ಅಸುರರಿಗೆ ಒಂದು ಬಾಣದಿಂದ ನಾಶವಲ್ಲದೆ ಯಾಗಂಗಳಿಂ ಪುಟ್ಟಿದ ಭೂತಂಗಳಿಂದ ನಾಶವಾಗಲಾರದು. ವ್ಯರ್ಥವಾಕ್ಯಗಳನ್ನು ಏಕೆ ಪೇಳುತಿದ್ದೀರೆನೆ, ಯಾಗಂಗಳಿಂ ಪುಟ್ಟಿದ ಭೂತಂಗಳಿಂದಲಿ ಆ ಪುರಂಗಳಂ ಮುತ್ತಿ ನಾವು ಶತ್ರುಗಳಂ ಜಯಿಸಿ ನಮ್ಮ ಲೋಕಂಗಳಲ್ಲಿ ಸುಖವಾಗಿರುತಿರ್ಪೆವೆಂದು ಮರಳಿ ವಿಷ್ಣುವಿನೊಡನೆ ಯೋಚಿಸಲು ಹರಿಯು ಆ ದೇವತೆಗಳ್ವೆರಸಿ ಶಿವನಂ ಧ್ಯಾನಿಸುತ್ತ ಅನೇಕ ಪ್ರಾರ್ಥನೆಯಂ ಮಾಡಿದನು. ಆಗ ಬಲವಂತರಾದ ಭೂತಂಗಳು ಪುಟ್ಟಿ ದೇವತೆಗಳು ಆ ಅಸುರರಂ ಅವರ ಪುರಂಗಳಂ ಭಕ್ಷಿಸಿರೆಂದು ಪೇಳಲಾಗಿ ಅವುಗಳು ಭಸ್ಮ ರುದ್ರಾಕ್ಷ ಧಾರಿಗಳಾಗಿ ಶಿವಪೂಜಾ ಪರಾಯಣರಾದ ಸಮಸ್ತ ಅಸುರರಂ ನೋಡಿ ಜಯಿಸಲಾರದೆ ಅವರ ಉದ್ಯಾನವನಕ್ಕೆ ಪೋಗಿ ಅಲ್ಲಿರ್ದ ಪನಸ ಆಮ್ರ ಮುಂತಾದ ಫಲಂಗಳಂ ಭಕ್ಷಿಸಿದರು. ಆಗ ಅಸುರರು ಆ ಭೂತಂಗಳಂ ವೀಕ್ಷಿಸಿ ಮಣ್ಣು ಹೆಂಟೆಗಳಿಂದಲು, ದಂಡಂಗಳಿಂದಲು ಬಡಿಯೆ, ಆ ಭೂತಂಗಳಿಗೂ ಅಸುರರಿಗು ಮಹತ್ತಾದ ಯುದ್ಧಮುಂಟಾದುದು. ಆ ಸಮಯದಲ್ಲಿ ಮಹಾ ಭೂತಂಗಳೆಲ್ಲವು ಶಿವಾಜ್ಞೆಯಿಂ ನಾಶವಾದವು, ಅಸುರರು ದೇವತೆಗಳಿಂದೀ ಕಾರ್ಯವು ಮಾಡಲ್ಪಟ್ಟಿತೆಂದರಿತು ಅಮರಾ ಲೋಕಕ್ಕೆ ಪೋಗಿ ಪಟ್ಟಣಂಗಳನ್ನಿಡಿದು ಅಲ್ಲಿಯೇ ಸಂಹರಿಸಿದರು. ಬಳಿಕ ಉಳಿದವರು ಶೀಘ್ರವಾಗಿ ಮೇರುಗಿರಿಗೆ ಸಾರಿ ಒಂದಾನೊಂದು ಗುಹೆಯಂ ಪೊಕ್ಕು ಅಲ್ಲಿಯೆ ಇದ್ದರು. ಆ ಅಸುರರಾದೊಡೆ ದೇವತೆಗಳ ಲೋಕಂಗಳನ್ನಾಕ್ರಮಿಸಿದರು. ಅನಂತರದಲ್ಲಿ ವಿಷ್ಣು ಮುಂತಾದ ಈ ದೇವತೆಗಳು ಈಶ್ವರಂಗೆ ಈ ವೃತ್ತಾಂತವಂ ಪೇಳಲು,

ಕೈಲಾಸಕ್ಕೆ ಪೋಗಿ ಅಲ್ಲಿ ದ್ವಾರಪಾಲಕರಿಗೆ ನಮಸ್ಕಾರಮಂ ಮಾಡಿ ಸಮಯವೆಂತಿರುವದೆಂದಲ್ಲಿ, ಅವರುಗಳು ಈಗ ನಿಮಗೆ ಸಮಯವಲ್ಲ ಬಂದ ಮಾರ್ಗವಿಡಿದು ಪೋಗಿರೆಂದು ನುಡಿಯೆ, ಹಾಹಾ! ಶಿವನಲ್ಲದೆ ಮತ್ತಾರು ನಮಗೆ ಗತಿಯಿಲ್ಲವಲ್ಲ ಸಮಯವಾಗುವವರಿಗು ಇಲ್ಲಿಯೇ ಇರುವೆನೆಂದು ಯೋಚಿಸಿ ಬಾಹುಗಳಂ ಊರ್ಧ್ವ ಮುಖವಾಗೆತ್ತಿ ಹರ ಹರ! ಮಹಾದೇವ! ಪ್ರಭೋ! ಪರಮೇಶ್ವರ! ಎಂದು ದೀನಾಕ್ಷರದಿಂ ಮೊರೆಯಿಡುತ್ತಿದ್ದರು. ಆಗ ಗಣಾಧ್ಯಕ್ಷರು ವಿಶೇಷವಾಗಿ ಕೂಗುತ್ತಿರುವ ಹರಿ ಬ್ರಹ್ಮಾದಿ ದೇವತೆಗಳಂ ದಂಡಂಗಳಿಂ ಬಡಿದಟ್ಟೆ, ದೇವತೆಗಳು ಬಲವಂತರಾದ ಭೂತಗಣಗಳಿಂ ತಾಡಿತರಾಗಿ ಮೆಲ್ಲಮೆಲ್ಲನೆ ಮಾನಸ ಸರೋವರವನ್ನೈದಿ ತಮ್ಮ ಕಾರ್ಯವು ಹೇಗೆ ಈಡೇರಿತು? ನಮ್ಮ ದುಃಖಂಗಳನೆಂತು ಪೇಳುವಣ. ಪರಾಕ್ರಮಿಗಳಾದ ದ್ವಾರಪಾಲಕರು ಸೈರಿಸಲಾರರಲ್ಲ, ಏನು ಮಾಡುವಣ? ಎಂದು ಹರಿಯೊಡನೆ ಪೇಳೆ, ವಿಷ್ಣುವು ಎಲೈ ದೇವತೆಗಳಿರಾ! ಆ ಭೂತಗಣಂಗಳು ಕೂಗಾಡಿದುದರಿಂದ ನಮ್ಮನ್ನು ಪ್ರಹರಿಸಿದರೆ ಹೊರತು ಸುಮ್ಮನಿರುವ ನಮ್ಮಗಳನ್ನು ಪ್ರಹರಿಸಲಿಲ್ಲ, ಪ್ರಭುಸ್ಥಾನಂಗಳಲ್ಲಿ ಹೀಗೆಯೆ ಸರಿಯೆಂದು ನುಡಿಯೆ ಈ ವಿಷ್ಣುವಿನವಾಕ್ಯವು ಸತ್ಯವೆಂದು ನಿಶ್ಚಯಿಸಿ ತಮ್ಮಗಳನ್ನು ತಾವೆ ನಿಂದಿಸಿಕೊಂಡು ಏನೂ ತೋರದೆ ಎಲ್ಲರೂ ಸೇರಿ ಯೋಚಿಸಿ, ಸಮಸ್ತರಾದ ಅಸುರರು ಶಿವಪೂಜಾ ನಿರತರಾಗಿ ಭಸ್ಮ ರುದ್ರಾಕ್ಷಾಲಂಕೃತರಾಗಿ ಲಿಂಗಾರ್ಚನೆಯಂ ಗೈಯುತ್ತ ಸ್ವಾಧ್ಯಾಯಿಗಳಾಗಿ ಅಗ್ನಿಹೋತ್ರ ಪರಾಯಣರಾಗಿಹರೆ, ಅವರ ಸ್ತ್ರೀಯರು ಮಹಾ ಪತಿವ್ರತೆಗಳು, ಅದುಕಾರಣದಿಂ ಅವರಂ ಸಂಹರಿಸಲಾಗದು, ಎಲೈ ಹರಿಯೆ! ಆ ದಾನವರು ನಿನ್ನ ಮಾಯೆಗೆ ಯಾವಾಗ ಮಗ್ನರಾಗುವರೋ ಆಗ ಶಿವಪೂಜಾ ರಹಿತರಾದ ಅವರಂ ಆ ಪರಶಿವನೇ ಸಂಹರಿಸುವನು? ಹೀಗೆ ಮಾಡಿದೆಯಾದೊಡೆ ನಮಗೆ ಮಹಾಮೋಹವಿನ ಗುಹೆಯೋ ನಾಶವಾಗಿರುವದೆಂದೆನೆ, ಹರಿಯು ಇದು ನಿಶ್ಚಯವೇ ಸರಿ ನಾನು ಹಾಗೆ ಮಾಡುತ್ತೇನೆ. ನೀವು ಮಹಾತಪವಂ ಮಾಡುತ್ತಾ ಮಹೇಶ್ವರನಂ ಪೂಜಿಸುತ್ತಿದ್ದರೆ ಮಹೇಶ್ವರನು ಸರ್ವಪ್ರಯತ್ನದಿಂ ಅವರಂ ಸಂಹರಿಸುವೆನೆಂದು ಪೇಳ್ದು, ನಾರದ ಮುನಿಯಂ ಕರೆದುಕೊಂಡು ತ್ರಿಪುರಕ್ಕೆ ಪೋದನು. ನಾರದನು ಆತಂಗೆ ಶಿಷ್ಯನಾದನು. ಆಗ ಅವರೀರ್ವರು ಕ್ಷಣಮಾತ್ರದಲ್ಲಿ ಅಸುರರ್ಗೆ ಮೋಹವಂ ಪುಟ್ಟಿಸಿ ಪರದೆಂತೆನೆ, ನಾನಾಮಾಯಾ ವಿಚಕ್ಷಣರಾದ ಅವರೀರ್ವರು ಮಾಯಾಮಯವಾದ ಶಾಸ್ತ್ರದಿಂದ ಮಧುರಾಲಾಪಂಗಳಿಂದಲು ವಿಚಿತ್ರಭೋಜನಾದಿಗಳಿಂದಲು ನವರತ್ನಮಯಂಗಳಾದ ಆಭರಣಾದಿಗಳಿಂದಲು ಆ ಪತಿವ್ರತಾ ಸ್ತ್ರೀಯರಿಗೆ ಮೋಹವಂ ಪುಟ್ಟಿಸಿ ಪಾತಿವ್ರತ್ಯಭಂಗವಂ ಗೈದರೆಂದು ಸೂತಂ ಶೌನಕಾದಿ

ಗಳಿಗೆ ನಿರೂಪಿಸಿದನೆಂಬಲ್ಲಿಗೆ, ಉಪದೇಶಕಾಂಡದಲ್ಲಿ ಎಪ್ಪತ್ತನೆಯ ಅಧ್ಯಾಯವು ಸಮಾಪ್ತಮಾದುದು.

ಎಪ್ಪತ್ತೊಂದನೆಯ ಅಧ್ಯಾಯವು.

ಬುದ್ಧದೇವನ ಅವತಾರ ವೃತ್ತಾಂತವು.

ಎಲೈ ಋಷಿಗಳಿರಾ ! ಅನಂತರದಲ್ಲಿ ದೈತ್ಯರುಗಳು ಗುರು ಶಿಷ್ಯ ರೂಪ ರಾದವರಂ ಕಂಡು, ಮಾಯಾಮೋಹಿತರಾಗಿ ಆ ಮಾಯಾವಿಗಳಲ್ಲಿ ಬಹು ಪ್ರೀತಿಯನ್ನೈದಿ, ಆತಂಗೆ ಶಿಷ್ಯನಾದ ನಾರದ ಮುನಿಯಂ ಕಂಡು, ಎಲೈ ಉತ್ತಮನಾದ ಶಿಷ್ಯನೆ! ಈತನಾರು? ಯಾವಕಾರಣದಿಂ ಬಂದಿರುವನು? ಈತನ ಆಗಮನವು ನಮ್ಮ ಭಾಗ್ಯವಶದಿಂ ಉಂಟಾದುದು, ಈತ ಬಂದಕಾರ್ಯವೇನೆಂದು ರಹಸ್ಯದಲ್ಲಿ ಕೇಳೆ, ನಾರದಮುನಿಯು ಎಲೈ ಅಸುರರಿರಾ! ಈತನು ಸಮಸ್ತ ಲೋಕವಂ ಸೃಜಿಸುವನು. ಸರ್ವಲೋಕಕ್ಕೂ ಈತನೇ ಆವಾಸಭೂತನು, ಆವಾಸ ಭೂಮಿಯು, ಲೋಕಂಗಳಂ ನೋಡಲ್ಬಯಸಿ ಜಗತ್ತಿನಲ್ಲಿ ಸಂಚಾರವಂ ಮಾಡುತ್ತ, ಯಾವ ಕಡೆಯಲ್ಲಿ ತನ್ನ ಮನಸ್ಸಿಗೆ ಪ್ರಿಯವಹುದೋ ಅಲ್ಲಿದ್ದು ಕೊಂಡು ವಿದ್ಯಾಮಹಿಮೆಯಂ ತೋರಿಸುತ್ತಿರುವನು. ಈತನಿಂದುಪದಿಷ್ಟ ರಾದವರು ಸರ್ವಾಭೀಷ್ಟವನ್ನೈದುವರೆಂದು ನುಡಿದನು. ಬಳಿಕ ಕೆಲಂಬ ಅಸು ರರು ಆ ನಾರದನ ವಾಕ್ಯವಂ ಕೇಳಿ ಆತನ ಪಾರ್ಶ್ವದಲ್ಲಿ ಕುಳಿತರು. ಆಗ ಮಹಾ ಮಾಯಾವಿಯಾದ ಆ ಬೌದ್ಧನು ವಿಚಿತ್ರವಾದ ವಸ್ತ್ರಾಭರಣ ಧನಧಾನ್ಯ ವಾರಾಂಗನಾದಿಗಳಂ ಕೊಟ್ಟು ಮಾಯೆಯಂ ಮಾಡೆ ಅವರುಗಳು ಆತನ ಮಾಯೆಯಿಂ ಪುಟ್ಟಿದ ವಸ್ತುಗಳಂ ತೆಗೆದುಕೊಂಡು ಪೋದರು, ಮತ್ತಂ ಕೆಲಂಬ ರದಂ ಕಂಡು ಸಮೀಪಕ್ಕೆ ಬಂದು ನಿಲ್ಲಲಾಗಿ, ಈತನು ಸರ್ವಾಭೀಷ್ಟಂ ಗಳಂ ಕೊಟ್ಟನು. ಆ ಸಮಯದಲ್ಲಿ ಕೆಲಂಬ ದೈತ್ಯರು ಮರಳಿಯು ನಾರದನಂ ರಹಸ್ಯಸ್ಥಾನಕ್ಕೆ ಕರದುಕೊಂಡು ಪೋಗಿ, ಈತಂಗೆ ಆವಾವ ಸಿದ್ಧಿಗಳುಂಟೋ ನಮಗೆ ತೋರಿಸಬೇಕೆನಲು, ನಾರದನು ಬುದ್ಧಾಚಾರ್ಯರ ಶಿಷ್ಯರೊಳಗೆ ನಾನು ಪರಮ ಮೂಢನು, ಹಾಗಾದೊಡಂ ಕೆಲವು ಸಿದ್ಧಿಗಳುಂಟು, ನೋಡಿರೆಂದು ಪೇಳಿ ತತ್ ಕ್ಷಣದಲ್ಲಿಯೇ ಕಮಂಡಲೋದಕವಂ ತೆಗದು ಅಭಿಮಂತ್ರಿಸಿ ಸಮಸ್ತ ದೇವತೆಗಳಂ ನೆನೆಯೆ, ಹರಿ ಬ್ರಹ್ಮ ಮೊದಲಾದ ಸಮಸ್ತ ದೇವತೆಗಳು ಬಂದು ನಿಂತರು. ಬಳಿಕ ಕ್ಷಣಮಾತ್ರದಲ್ಲಿಯೇ ಅವರನೆಲ್ಲರಂ ಅಂತರ್ಧಾನಂಗೈದು, ತನ್ನ ಮಾಯೆಯಿಂದ ಅಮೃತವಂ ತರಿಸಿ ಅವರಿಗೆ ಕೊಡಲು, ಅದು ಸರ್ವಾ ಭೀಷ್ಟಮನಿತ್ತು ಮೋಹವಂ ಪುಟ್ಟಿಸಿತು. ಅನಂತರದಲ್ಲಿ ದೈತ್ಯರುಗಳು ಈತಂಗೆ

ನಾವೂ ಶಿಷ್ಯರಾಗಬೇಕೆಂದು ನಾರದ ಮುನಿಯಂ ಬೇಡಿಕೊಳ್ಳಲು, ಅದಕ್ಕಂಗೀಕಾರವಂ ಗೈದು ಗುರುಸಮೀಪಕ್ಕೆ ಪೋಗಿ ಸಮಸ್ತವಂ ಪೇಳ್ದು, ಆ ದೈತ್ಯರಂ ಶಿಷ್ಯರಂ ಮಾಡಿಸಿದನು.

ರಕ್ಕಸರಿಗೆ ಬುದ್ಧದೇವನು ತತ್ತ್ವೋಪದೇಶ ಮಾಡುವಿಕೆ.

ಆಗ ಗುರುವು ಅಸುರರಂ ಕರೆದು ಎಲೈ ಅಸುರರಿರಾ! ನೀವು ನನ್ನನ್ನೆ ಭಜಿಸಿರಿ, ನಾನು ಬುದ್ಧನೆಂಬ ನಾಮವುಳ್ಳವನು, ನನ್ನ ನಾಮದಿಂದಲೆ ಜಪಸ್ತುತಿಗಳಂ ಮಾಡಿ ಅರ್ಚನೆಯಂ ಮಾಡಿದರೆ ನಿಮಗೆ ಸರ್ವಾಭೀಷ್ಟಂಗಳುಂಟಾಗುವವು. ಈ ಲೋಕದಲ್ಲಿ ನೀವು ಆವಾವುದಂ ಕಾಣುತಲಿರ್ಧೀರೋ, ಅವು ಮತ್ತೊಂದು ಕಡೆಯುಳ್ಳಿಲ್ಲವು. ಶಿವಪೂಜೆಯಂ ಭಸ್ಮ ರುದ್ರಾಕ್ಷಧಾರಣೆಯಂ ಮಾಡಬೇಡಿ, ವೇದವಾಕ್ಯಂಗಳೆಲ್ಲವು ಮಿಥ್ಯಾ ಭೂತಂಗಳು, ನಾನು ಬೇಡೆಂದು ಹೇಳಿದುದಂ ಯಾರು ಬಿಡುವರೋ ಅವರಿಗೆ ಸರ್ವಸಿದ್ಧಿಗಳು ಉಂಟಾಗುವವು, ಯಾರು ಬಿಡದಿರುವರೋ ಅವರಿಗೆ ಒಂದು ಸಿದ್ಧಿಯು ಉಂಟಾಗುವದಿಲ್ಲ ಎಂದು ನುಡಿದನು. ಬಳಿಕ ಆ ದೈತ್ಯರು ಆತನ ವಾಕ್ಯದಿಂ ಶಿವಾರ್ಚನೆಯಂ ಭಸ್ಮ ರುದ್ರಾಕ್ಷ ಧಾರಣೆಯಂ ಬಿಟ್ಟು, ಆತನುಪದೇಶಿಸಿದ ಮಾರ್ಗದಲ್ಲಿ ನಡೆಯುತ್ತಿದ್ದರು. ಅವರ ಸ್ತ್ರೀಯರು ಪಾತಿವ್ರತ್ಯ ಧರ್ಮವಂ ಬಿಟ್ಟು ಆತನ ಮಾಯೆಯಿಂ ಪುಟ್ಟಿದ ವಸ್ತ್ರಾಭರಣಾದಿಗಳಿಂ ಭೂಷಿತೆಯರಾಗಿ, ಗೃಹದ ಗೋಡೆ ಮೊದಲಾದವಂ ಪೂಜಿಸಿಕೊಂಡಿರ್ದರು.

ವಿಷ್ಣು ನಾರದ ಸಮಾಗಮ ವೃತ್ತಾಂತವು.

ಬಳಿಕ ವಿಷ್ಣುವು ನಾರದನಂ ಕುರಿತು, ಎಲೈ ಸಮಸ್ತ ದೈತ್ಯರು ನಮ್ಮ ಮಾಯೆಯಿಂದ ಮೋಹಿತರಾದರೋ ಏನು? ಸ್ತ್ರೀಯರೆಲ್ಲರು ಕಾಮಚಾರಿಗಳಾಗಿರುವರೋ? ಎನಲು, ಎಲೈ ಸ್ವಾಮಿಯೆ! ಈ ಪುರತ್ರಯದಲ್ಲಿ ಒಂದೊಂದು ಪುರದೊಳು ಒಬ್ಬೊಬ್ಬನಾಗಿರುವ ಶಿವಯೋಗಿ, ಸುಶೀಲನು, ವಿರಕ್ತನು, ಎಂಬೀ ಮೂರುಮಂದಿ ಪೊರತಾಗಿ ಸಮಸ್ತರೂ ನಿನ್ನ ಮಾಯೆಯಿಂದ ಮೋಹಿಸಲ್ಪಟ್ಟರು. ಇವರು ಪಾಶುಪತೋತ್ತಮರು, ಶಿವಪೂಜಾ ಪರಾಯಣರಾಗಿರುವರು. ಉಪಮನ್ಯು ದಧೀಚಿ ಭೃಗು ಅಗಸ್ತ್ಯ ವಸಿಷ್ಠರಿಗಿಂತಲು ಅತ್ಯಂತ ಶ್ರೇಷ್ಠರು. ತಮ್ಮ ಮಾಯೆಯು ಇವರಂ ಕಟ್ಟಲಾರದೆನೆ, ಬುದ್ಧರೂಪಿಯಾದ ಹರಿಯು ಸರ್ವ ದೈತ್ಯರಂ ಕರೆಯಿಸಿ, ಆ ಶಿವಭಕ್ತರಾದ ಮೂವರೊಡನೆ ಮಾತಾಡಬೇಡಿರೆಂದಾಜ್ಞಾಪಿಸಿ, ಆ ಪುರತ್ರಯದಲ್ಲಿ ತನ್ನ ಅಂಶಭೂತವಾದ ಬುದ್ಧದೇವರಂ ಪ್ರತಿಷ್ಠೆಯಂ ಮಾಡಿ ನಾರದನೊಡನೆ ಕೈಲಾಸ ಪರ್ವತಕ್ಕೆ ಪೋಗಿ, ಆ ಪರ್ವತವನ್ನೇರ

ಲಾರದೆ ಶಿವಪೂಜೆ ಭಸ್ಮರುದ್ರಾಕ್ಷಧಾರಣವಂ ಬಿಡಿಸಿದ ದೋಷದಿಂಡ ಪರಮ ಪಾಪಿಗಳಾದೆವೆಂದು ತಿಳಿದನು.

ತಪಸ್ಸಿನಿಂದ ವಿಷ್ಣುವು ಶಿವನನ್ನು ಮೆಚ್ಚಿಸಿ ವರವಂ ಪಡೆಯುವಿಕೆ.

ಆ ದೋಷಪರಿಹಾರಕ್ಕೋಸುಗ ಪರಮೇಶ್ವರನಂ ಕುರಿತು ಮಹತ್ತಾದ ತಪವಂ ಮಾಡಿದನು. ಆಗ ಶಂಕರನು ಪ್ರಸನ್ನನಾಗಿ ಎಲೈ ವಿಷ್ಣುವೆ! ನೀನು ನಾರದನೊಡನೆ ದೇವತೆಗಳ ಕಾರ್‍ಯಾರ್ಥವಾಗಿ ಶಂಕೆಯಿಲ್ಲದೆ, ನಮ್ಮ ಭಕ್ತರಿಗೆ ಅಜ್ಞಾನವಂ ಪುಟ್ಟಿಸಿ ಶಿವಪೂಜಾದಿಗಳಂ ನಿಲ್ಲಿಸಿದ ಪಾಪದಿಂದೀಪರ್ವತವನ್ನೇರ ಲಾರದೆ ಪೋದೆ. ಅದುಃಕಾಣದಿಂದೀಗ ಮಾನಸ ಸರೋವರಕ್ಕೆ ಸಾರಿ ಸುರ ಕಾರ್‍ಯವಂ ಸಾಧಿಸೆಂದು ನೇಮಿಸಿ ಅಂತರ್ಧಾನನಾದನು. ಬಳಿಕ ವಿಷ್ಣುವು ನಾರದನೊಡನೆ ದೇವತೆಗಳ ಸಮೀಪಕ್ಕೆ ಪೋಗಿ ಈ ವೃತ್ತಾಂತವಂ ಪೇಳಿ ಅವರ ಸಂಗಡ ಮಾನಸ ಸರೋವರಕ್ಕೆ ಬಂದು ತಪವಂ ಮಾಡಿದನು. ಆಗ ಚಂದ್ರ ಖಂಡ ಮೌಳಿಯಾದೀಶ್ವರನು ಅವರ ತಪಸ್ಸಿನಿಂ ಸಂತುಷ್ಟಮಾನಸನಾಗಿ, ಎಲೇ ದೇವತೆಗಳಿರಾ! ನಿಮ್ಮ ತಪಸ್ಸಿನಿಂ ದತ್ಯಂತ ಪ್ರೀತನಾದೆನು. ಇತಃಪರದಲ್ಲಿ ಪಾಶುಪತ ವ್ರತವನ್ನಾಚರಿಸಿ ಮನೋಭೀಷ್ಟಂಗಳಂ ಪಡೆದುಕೊಳ್ಳಿರೆಂದು ನಿರೂಪಿಸಿದನು.

ಷಣ್ಮುಖಸ್ವಾಮಿಯ ನರ್ತನ–ಹರಪಾರ್ವತಿಯರ ಸಂತಸವು.

ಆ ಸಮಯದಲ್ಲಿ ಕುಮಾರಸ್ವಾಮಿಯು ನರ್ತನವಂ ಮಾಡಲು ಜಗ ನ್ಮಾತೃವಾದ ಪಾರ್ವತೀದೇವಿಯು ತನ್ನ ಕರದಲ್ಲಿರ್ಪ ಕಮಲದಿಂ ಸ್ವಾಮಿಯಂ ಬಡಿದು, ಪುತ್ರವಂತರೊಳಗೆ ಶ್ರೇಷ್ಠನಾದ ಶಿವನೆ! ನಿಮ್ಮ ಕುಮಾರನು ನರ್ತ ನವಂ ಮಾಡುತ್ತಿರುವನು ನೋಡಿರೆಂದು ನೇಮಿಸಲಾಗಿ, ನರ್ತನವಂ ಮಾಡು ತ್ತಿರುವ ಆ ಕುಮಾರನಂ ನೋಡಿ ತನ್ನ ವಕ್ಷಸ್ಥಳದಲ್ಲಿ ಕೂಡಿಸಿಕೊಂಡು, ಕೈಚಪ್ಪಾಳೆಯನ್ನಿಕ್ಕಿ ಮರಳಿ ನರ್ತಿಸೆಂದು ನಿರೂಪಿಸಿದನು. ಆಗ ಕುಮಾರನು ನರ್ತನವಂ ಮಾಡಲಾಗಿ ದೇವತೆಗಳು ಪರವಶದಿಂ ನರ್ತನವಂ ಮಾಡಿದರು. ಆಗ ಮಾತಾಪಿತೃಗಳಾದ ಪಾರ್ವತೀಪರಮೇಶ್ವರರು ಅತ್ಯಂತ ಸಂತುಷ್ಟರಾಗಿ ಆ ಪುತ್ರನನ್ನಾಲಿಂಗಿಸಿ ಆತನ ಶಿರವನ್ನು ಆಘ್ರಾಣಂಗೈದು ಬಾಹುಗಳಿಂದೆತ್ತಿ ಕೊಂಡು ಅಂತಃಪುರಕ್ಕೆ ಪೋದರು. ಬಳಿಕ ಹರಿ ಬ್ರಹ್ಮ ಮುಂತಾದ ದೇವತೆ ಗಳು ಖಿನ್ನರಾಗಿ ಅಸುರರೇ ಧನ್ಯರು? ನಮಗೆ ಸ್ವಾಮಿಯು ಪ್ರಸನ್ನನಾಗಿಯು ಕಾರ್‍ಯವಾದುದಿಲ್ಲೆಂದು ಅನ್ಯೋನ್ಯವಾಗಿ ಪ್ರಸಂಗವಂ ಮಾಡಿ, ಮೊದಲು

ಸ್ವಾಮಿಯು ನಿರೂಪಿಸಿದಂತೆ ಪಾಶುಪತ ವ್ರತವಂ ಕೈಕೊಂಡು, ಭಸ್ಮ ರುದ್ರಾಕ್ಷ ಭೂಷಿತರಾಗಿ ಪರಮ ಭಕ್ತಿಯಿಂ ಶಿವಾರಾಧನಂ ಗೈಯುತಿರೆ,

ತ್ರಿಪುರಧ್ವಂಸ ಸಿದ್ಧತೆ.

ಪರಮೇಶ್ವರನು ಅವರ ಪೂಜೆಗಳಿಂದ ಸಂತುಷ್ಟನಾಗಿ ತ್ರಿಪುರಂಗಳ ಸಂಹಾರವಂ ಮಾಡಲು ಶೀಘ್ರವಾಗಿ ರಥ ಧನುರ್ಬಾಣಂಗಳಂ ಯುದ್ಧಸಾಮಗ್ರಿಗಳಂ ಸಂಪಾದಿಸಿರೆಂದು ದೇವತೆಗಳಿಗೆ ಪೇಳಿ ಬರುವಂತೆ ನಂದಿಕೇಶ್ವರನಂ ಕಳುಹಿದನು. ಬಳಿಕ ನಂದಿಕೇಶ್ವರನು ಪರಮೇಶ್ವರನಿಂ ನಿರೂಪಿತವಾದ ವಾಕ್ಯವಂ ದೇವತೆಗಳಿಗೆ ಪೇಳಿ, ತಾನು ಮರಳಿ ಸ್ವಾಮಿಯ ಬಳಿಗೈದಿದನು. ಆ ದೇವತೆಗಳು ಅತ್ಯಂತ ಸಂತೋಷಚಿತ್ತರಾಗಿ ಶಿವಂಗೆ ಯೋಗ್ಯವಾದ ರಥ ಸಾರಥಿ ಅಶ್ವ ಧನುರ್ಬಾಣಂಗಳ್ಯಾವವೆಂದು ಚಿಂತಿಸಿ ಅನ್ಯೋನ್ಯದಿಂ ಯೋಚನೆಯಂಗೈದು, ಕಾಂಚನಮಯವಾದ ಮಹಾ ಮೇರುಪರ್ವತವೆ ಧನುಸ್ಸು, ಸರ್ಪರಾಜನೆ ನಾರಿಯು, ವಾಯ್ವಗ್ನಿ ವಿಷ್ಣುಗಳೆ ಬಾಣಂಗಳು, ವಿಂಧ್ಯಾದ್ರಿಯು ಕೇಸರಾಚಲವು ನಿವಾಸಸ್ಥಾನವು, ಭೂಮಿಯೆ ರಥವು, ಆ ರಥಕ್ಕೆ ಆಕಾಶವೆ ಮಾರ್ಗವು, ಚಂದ್ರ ಸೂರ್ಯರೆ ಗಾಲಿಗಳು, ಋಗ್ಯಜುಸ್ಸಾಮಾಥರ್ವಣಂಗಳೆಂಬ ವೇದಂಗಳೆ ಅಶ್ವಂಗಳು, ಸಪ್ತ ಕುಲಪರ್ವತಂಗಳುಂ ಮಹಾ ದಿಗ್ಗಜಂಗಳೂ ಸಮುದ್ರಂಗಳುಂ ಮೇಘಪಙ್ತಿಗಳುಂ ಇವೇ ಆ ರಥಕ್ಕೆ ಕೀಲ್ಕಟ್ಟುಗಳು ನವರತ್ನಂಗಳೆ ಭೂಷಣಂಗಳು, ಮಂತ್ರಕಲಿಸಿಧಿ ಸಂಪತ್ತು ಯಜ್ಞಕರ್ಮ ಧರ್ಮ ಕಾಲ ಕಲ್ಪ ದಿವಸ ಮಾಸ ಋತು ಅಯನ ಯೋಗ ಕರಣ ಕ್ಷಣ ಮುಹೂರ್ತ ಕಾಷ್ಠ ಮುಂತಾದವುಗಳು ರಥಕ್ಕೆ ಕೀಲುಗಳು, ಎಂದು ಯುದ್ಧಸಾಧನಗಳಂ ನಿರ್ಮಿಸಿ ಬ್ರಹ್ಮನು ಸಾರಥಿಯಾದನು. ಪ್ರಣವವೆ ವೇದಾಶ್ವಂಗಳ ತಾಡನಕ್ಕೆ ಕಶೆಯಾದುದು. ಆಗ ಕ್ಷೀರಾಬ್ಧಿನಾಯಕನಾದ ವಿಷ್ಣುವೆ ಸ್ವಾಮಿಗೆ ಅನುಚರನಾಗಿಯು ಸಮಸ್ತದೇವತೆಗಳು ಸೈನಿಕರಾಗಿಯು ವಸಿಷ್ಠಾದಿ ಮುನಿಗಳೆ ಸ್ವಸ್ತಿವಾಚಕರಾಗಿಯು ಕಿನ್ನರ ಯಕ್ಷ ಸಿದ್ಧ ಕಿಂಪುರುಷ ಗರುಡ ಗಂಧರ್ವರೆ ಸ್ತುತಿಪಾಠಕರಾಗಿಯು ಚಾರಣ ವಿಧ್ಯಾಧರರೆ ಕವೀಶ್ವರರಾಗಿಯು ಆದರು. ಬಳಿಕ ವಿಷ್ಣುವು ಸರ್ವ ದೇವತೆಗಳಿಂ ಒಡಗೂಡಿ ಕೈಲಾಸಗಿರಿಗೈದಿ ನಂದಿಕೇಶ್ವರಂಗೆ ನಮಸ್ಕರಿಸಿ ಈ ವೃತ್ತಾಂತವಂ ಪೇಳೆ, ನಂದೀಶ್ವರನು ಸ್ವಾಮಿಯ ಸಮೀಪಕ್ಕೆ ಪೋಗಿ, ದೇವತೆಗಳ ವಾಕ್ಯವಂ ಶ್ರವಣಂಗೈಯ್ಯಿಸಿದನು. ಅನಂತರದಲ್ಲಿ ದಯಾನಿಧಿಯಾದ ಶಂಕರನು ಈ ವಾಕ್ಯವಂ ಕೇಳಿ ಪರಮ ಸಂತೋಷದಿಂ ದೇವಿಯೊಡನೆ ಶ್ವೇತವೃಷಭವನೇರಿ ಆ ರಥದ ಸಮೀಪಕ್ಕೆ ಬರಲು, ವಿಷ್ಣು ಮುಂತಾದ ದೇವತೆಗಳು ಸಾಂಬನಾದ ಸದಾಶಿವನಂ ಕಂಡು, ಜಯ ಶಂಭೋ! ಮಹಾದೇವ!

ಶರಣಾಗತವತ್ಸಲ ರಕ್ಷಿಸು ರಕ್ಷಿಸು, ಎಂದು ಪ್ರಾರ್ಥಿಸಿದರು. ಆಗ ದೇವ ದೇವೇಶನಾದ ಶಂಕರಂ ಅತ್ಯಂತ ಸಂತೋಷದಿಂ ಮಹಾ ವೃಷಭದಿಂ ಇಳಿದು ಧನುರ್ಬಾಣಂಗಳಂ ತೆಗೆದು ರಥದಲ್ಲಿರಿಸಿ ತಾನು ಪಾದವನಿಡಲು, ಆ ರಥವು ಸ್ವಾಮಿಯ ಭಾರವಂ ಸೈರಿಸಲಾರದೆ ಘಟಘಟವೆಂಬ ಧ್ವನಿಯುಳ್ಳದ್ದಾಗಿ ಪಾತಾ ಳಕ್ಕೆ ಬೀಳೆ, ಬ್ರಹ್ಮಾದಿ ದೇವತೆಗಳು ಭೀತಿಗೊಂಡರು. ಬಳಿಕ ಮಹಾ ಯೋಗಿ ಯಾದ ನಾರಾಯಣನು ತಾನೆ ವೃಷಭರೂಪವಂ ಧರಿಸಿ ಆ ರಥವನೆತ್ತಲು ಭಾರವಂ ಸಹಿಸಲಾರದೆ, ಅರಳಿದ ಕಣ್ಣುಗಳುಳ್ಳವನಾಗಿ ಮುಖದಿಂ ರಕ್ತವಂ ಸ್ರವಿಸುತ್ತ ಭೀತನಾಗಿ ಸ್ವಾಮಿಯಂ ಸ್ತುತಿಸೆ,

ವಿಷ್ಣುವು ವೃಷಭರೂಪಾಗಿ ಶಿವಸನ್ನಿಧಿಯಲ್ಲಿರುವಂತೆ ವರವನ್ನು ಬೇಡುವಿಕೆ.

ದೇವತೆಗಳು ಭಯಪಟ್ಟು ಊರ್ಧ್ವ ಬಾಹುಗಳುಳ್ಳವರಾಗಿ ಮಹಾದೇವ ನಂ ಸ್ತುತಿಸಿದರು. ಆಗ ಶಿವನು ವಿಷ್ಣುವಿಗೆ ಮಹಾಬಲವನ್ನು ಕೊಡಲಾಗಿ ಆ ಹರಿಯು ತನ್ನ ಹಿರಿಳಿನಿಂ ರಥವಂ ಮೇಲಕ್ಕೆತ್ತೆ ಅದು ಶಿವಾಜ್ಞೆಯಿಂ ಪೂರ್ವ ದಂತಾದುದು. ಬಳಿಕ ಶಂಕರನು ದೇವಿಯೊಡನೆ ರಥವನೇರೆ ವಿಷ್ಣುವು ದೇವತೆ ಗಳ್ವೆರಸಿ ಮುಂದುನಿಂತು ಸ್ವಾಮಿಯಂ ಸ್ತುತಿಸಲಾಗಿ, ಶಂಭುವು ಪ್ರಸನ್ನನಾಗಿ ಎಲೈ ಹರಿಯೆ! ನೀನು ನನ್ನನ್ನುದ್ದೇಶಿಸಿ ಮಹಾ ಯಾಗವಂ ಗೈದುದರಿಂದ ದೇವತೆಗಳಿಗೆ ಮಹದುತ್ಸವಕಾಲ ವೊದಗಿದುದು. ನನ್ನಾಜ್ಞೆಯಿಂ ಭೀತಿಯಂ ತೊರದು ವರವಂ ಬೇಡೆಂದನು. ಆಗ ಹರಿಯು ಎಲೈ ಜಗತ್ಪತಿಯೆ! ನಿನಗೆ ಮಹತ್ತಾದ ಶಿವಶಕ್ತಿಯಿದ್ದರೂ ನಾನೆಂತು ಮೂಲಶಕ್ತಿಯಾದೆನೋ ಅಂತು ಮಹಾ ವೃಷಭವಿದ್ದಲ್ಲಿಯು ವೃಷಭರೂಪವಾಗಿ ನಿನ್ನ ಬಳಿಯಲ್ಲಿರುವೆನು. ಆವಾ ಗಲು ನಿನ್ನಲ್ಲಿಯೆ ಭಕ್ತಿಯುಂಟಾಗಲಿ, ಇದೆ ಉತ್ತಮವಾದ ವರವು. ಮತ್ತೊಂದು ವರವವಶ್ಯಕವಿಲ್ಲೆಂದೂ ಪ್ರಾರ್ಥಿಸುತಿರೆ ದೇವತೆಗಳು ಪರಮ ಸಂತೋಷವನ್ನೈದಿದರು. ಬಳಿಕ ಶಿವನು ಬ್ರಹ್ಮನಂ ಕುರಿತು, ಎಲೈ ವೇದ ಮಯವಾದ ಅಶ್ವಂಗಳಂ ಮುಂದಕ್ಕೆ ನಡೆಯಿಸೆಂದು ಪೇಳೆ ಬ್ರಹ್ಮನು ಸ್ವಾಮಿ ಯಾಜ್ಞೆಯಿಂ ಅಶ್ವಂಗಳಂ ಪ್ರೇರಿಸಿದನು. ಆಗ ದೇವತೆಗಳು ವಿಘ್ನ ನಿವಾರಣ ಕ್ಕೋಸುಗ ಭಕ್ಷ್ಯ ಭೋಜ್ಯ ಫಲಾದಿಗಳಿಂ ವಿನಾಯಕನ ಪೂಜೆಯಂಗೈದರು. ಪರಮೇಶ್ವರನು ತನ್ನ ಕುಮಾರನಾದ ವಿಘ್ನೇಶ್ವರನಂ ಪರಿಪೂಜಿಸಿದನು. ಗಣಾ ಧ್ಯಕ್ಷರು ಭೇರಿ ಪಟಹ ಡಿಂಡಿಮ ಕಹಳೆ ಗೋಮುಖ ಕೊಂಬು ಮುಂತಾದ ಸಮಸ್ತ ವಾದ್ಯಂಗಳಂ ಬಡಿಯೆ, ಆ ಧ್ವನಿಯು ದಶ ದಿಕ್ಕುಗಳಲ್ಲಿಯು ವ್ಯಾಪಿ

ಸಿತು. ಬಳಿಕ ದೇವದೇವನಾದ ಶಂಕರನು ಪಾದಚಾರಿಗಳಾಗಿ ಬರುತಿರುವ ದೇವತೆಗಳಂ ಗಣಾಧ್ಯಕ್ಷರಂ ನೋಡಿ ತಮ್ಮ ತಮ್ಮ ವಾಹನಂಗಳನೇರಲು ಅಪ್ಪಣೆಯಂ ಕೊಟ್ಟನು. ಆಗ ನಾರಾಯಣನು ಗರುಡವಾಹನವನ್ನೂ ಬ್ರಹ್ಮನು ಹಂಸವಾಹನವನ್ನೂ ಹೀಗೆ ಸಮಸ್ತ ದೇವತೆಗಳು ತಮ್ಮ ತಮ್ಮ ವಾಹನಂಗಳ ನೇರಿದರು. ವಿನಾಯಕ ಕುಮಾರಸ್ವಾಮಿಯರೀರ್ವರು ಮೂಷಕ ಮಯೂರ ವಾಹನಗಳನೇರಿ ನಾನಾ ಗಣಂಗಳೊಡನೆ ಸ್ವಾಮಿಯ ದಕ್ಷಿಣ ಭಾಗದಲ್ಲಿಯು ವಾಮಭಾಗದಲ್ಲಿಯು ನಡೆದರು. ಮುಂದುಗಡೆಯಲ್ಲಿ ನಂದಿಕೇಶ್ವರನು ಕಾಂಚನ ಮಯವಾದ ವೇತ್ರವಂ ಪಿಡಿದು ಸ್ವಾಮಿಯ ಸಮ್ಮುಖದಲ್ಲಿ ಮಾರ್ಗವಂ ಬಿಡಿ ಸುತ್ತ ನಡೆವುತ್ತಿದ್ದನು. ಈ ಪ್ರಕಾರವಾಗಿ ದೇವದೇವನಾದ ಪರಮೇಶ್ವರನು ಪಾರ್ವತೀದೇವಿಯೊಡನೆ ರಥಾರೂಢನಾಗಿ ತ್ರಿಪುರಂಗಳಂ ಸಂಹರಿಸಲ್ಪೊರಮಡೆ, ಸಿದ್ಧ ವಿದ್ಯಾಧರ ಮುಂತಾದ ದೇವತೆಗಳಂ ನಾರದಾದಿ ದೇವರ್ಷಿಗಳುಂ ವಸಿಷ್ಠಾದಿ ಮಹಾ ಮುನಿಗಳುಂ, ಸರ್ವಭೂಷಣಗಳಿಂ ಭೂಷಿತನಾಗಿ ರಥಾರೂಢನಾದ ಸಾಂಬಶಿವನಂ ನೋಡಿ, ಹಾಹಾ! ನಾವು ಪೂರ್ವದಲ್ಲಿ ಏನು ಪುಣ್ಯವಂ ಮಾಡಿ ದೆವೊ ಎಂದು ಪೇಳುತ್ತಿದ್ದರು. ಬಳಿಕ ಮಹೇಶ್ವರನು ಕರ್ಣಶ್ರಾವ್ಯವಾದ ಈ ವಾಕ್ಯಗಳಂ ಕೇಳುತ್ತ ತ್ರಿಪುರ ಸಂಹಾರಾರ್ಥವಾಗಿ ಮುಂದಕ್ಕೆ ನಡೆದನು. ಆಗ ದೇವತೆಗಳು ಮುನೀಂದ್ರರು ಯೋಗಿಗಳು ಗಣೇಶ್ವರರು ತುಂಬುರ ನಾರ ದಾದಿಗಳು ಅವರ ಪತ್ನಿಗಳು ಸಹ ಮಹಾದೇವನಂ ನೋಡಿ, ಪ್ರೀತಿಯುಕ್ತರಾಗಿ ಸ್ವಸ್ತಿವಚನಗಳಂ ಪೇಳುತ್ತ ಮಂಗಳಗಳಂ ಪಾಡಿದರೆಂದು ಸೂತಂ ಶೌನಕಾದಿ ಮುನಿಗಳಿಗೆಪೇಳಿದ ನೆಂಬಲ್ಲಿಗೆ, ಉಪದೇಶಕಾಂಡದೊಳು ಎಪ್ಪತ್ತೊಂದ ನೆಯ ಅಧ್ಯಾಯವು ಸಂಪೂರ್ಣವಾದುದು.

ಎಪ್ಪತ್ತೆರಡನೆಯ ಅಧ್ಯಾಯವು.

ತ್ರಿಪುರಧ್ವಂಸ ವರ್ಣನೆ.

ಎಲೈ ಋಷಿಗಳಿರಾ! ಇತ್ತ ಕಡೆಯಲ್ಲಿ ವಿಷ್ಣುವಿನ ಮಾಯೆಯಿಂ ಮೋಹಿತ ರಾದ ಆ ದೈತ್ಯರು, ವಿಭೂತಿ ರುದ್ರಾಕ್ಷಿ ಶ್ರುತಿ ಸ್ಮೃತಿಗಳಂ ಬಿಟ್ಟು ಬೌದ್ಧಾ ಚಾರ ನಿರತರಾಗಿ ದೃಷ್ಟ ಫಲಂಗಳನ್ನೆ ಅಪೇಕ್ಷಿಸುತ ವ್ಯಭಿಚಾರವಂ ಗೈಯು ತ್ತಿದ್ದರು. ಹೀಗೆ ಅಸುರುಗಳು ತಮ್ಮ ತಮ್ಮ ಸ್ತ್ರೀಯರೊಡನೆ ವೇದಬಾಹ್ಯರಾಗೆ ಆಗ ಆ ತ್ರಿಪುರಂಗಳಲ್ಲಿ ಅನೇಕ ದುರ್ನಿಮಿತ್ತಂಗಳಾದವು, ಮತ್ತಂ ಅವರ ಗೃಹಂಗಳಲ್ಲಿರ್ಪ ಕಲ್ಪವೃಕ್ಷ ಕಾಮಧೇನು ಚಿಂತಾಮಣಿಗಳು ನಾಶಂಗಳಾದವು,

ಇದಲ್ಲದೆ ಸಹಸ್ರ ಸಂವತ್ಸರಾಂತ್ಯದಲ್ಲಿ ಭೂಮ್ಯಂತರಿಕ್ಷ ಪಾತಾಳಂಗಳಲ್ಲಿ ಸಂಚಾರಶೀಲಂಗಳಾದ ಮೂರು ಪುರಂಗಳೊಂದು ಸ್ಥಳದಲ್ಲಿ ಕೂಡಿದವು, ಆಗ ವಿಷ್ಣು ಮುಂತಾದ ಸಕಲ ದೇವತೆಗಳು ಆ ತ್ರಿಪುರಂಗಳು ಕೂಡಿದ ಸಮಯವ ನರಿತು ಸಂತುಷ್ಟಮಾನಸರಾಗಿ, ಬಾಣಪ್ರಯೋಗವಂ ಮಾಡಬೇಕೆಂದು ಸ್ವಾಮಿ ಯಂ ಪ್ರಾರ್ಥಿಸೆ, ಪರಮೇಶ್ವರನು ದೇವತೆಗಳ ಸಂತೋಷವಂ ತಿಳಿದು ಮುಗು ಳ್ನಗೆವೆರಸಿ ಗೌರಿದೇವಿಯಂ ನೋಡುತ್ತ, ವಿಷ್ಣು ಮುಂತಾದ ದೇವಮಯ ವಾಗಿರ್ಪ ಬಾಣ ಮುಂತಾದವಂ ಮೇರು ಕೋದಂಡವಂ ದಕ್ಷಿಣ ಪಾಣಿಗಳಿಂ ಲೀಲೆಯಿಂ ಪಿಡಿದು, ತ್ರಿಣೇತ್ರಂಗಳ ಕಡೆಗಣ್ಣ ನೋಟಂಗಳಿಂ ಆ ಪುರತ್ರಯ ವಂ ನೋಡೆ, ಆ ಪಟ್ಟಣಗಳು ಮನ್ಮಥನು ಭಸ್ಮವಾದಂತೆ, ಸ್ವಾಮಿಯ ಕಡೆಗಣ್ಣಿ ನಿಂ ಪುಟ್ಟಿದ ಅಗ್ನಿಜ್ವಾಲೆಯಲ್ಲಿ ಪತಂಗದ ಪುಳುಗಳೋಪಾದಿಯಲ್ಲಿ ಭಸ್ಮವಾದವು. ಆಗ ಬಾಣಂಗಳಾದ ವಾಯ್ವಗ್ನಿ ಶಶಿ ಗೋವಿಂದರು ಸ್ವಾಮಿಯ ನಯನಾಗ್ನಿಯಿಂ ದಗ್ಧವಾದ ಆ ಪುರವಂ ನೋಡಿ, ತಮ್ಮ ತಮ್ಮ ರೂಪವಂ ಧರಿಸಿಕೊಳ್ಳಲೋಸುಗ ಮಹಾದೇವನಂ ಪ್ರಾರ್ಥಿಸೆ, ಆತನು ಮೇರುವೆಂಬ ಕೋದಂಡದಲ್ಲಿ ವಾಸುಕಿ ಯೆಂಬ ನಾರಿಯಂ ಹೂಡಿ, ಹಸ್ತದಿಂ ತೀವಿ ನಖದಿಂ ಮಿಡಿದು ಬಾಣ ಸಂಧಾನ ವಂ ಮಾಡಿ ಪ್ರಯೋಗಿಸಲಾಗಿ, ಆ ತ್ರಿಪುರಂಗಳು ಬಾಣಾಗ್ನಿಯಿಂದಲು ಸ್ಮಿತಾಗ್ನಿ ಯಿಂದಲು ಕ್ಷಣಮಾತ್ರದಲ್ಲಿ ದಗ್ಧವಾದವು.

ಅಸುರರಿಗೆ ಗಾಣಾಪತ್ಯಪ್ರಾಪ್ತಿ.

ಆಗ ಆ ತ್ರಿಪುರದಲ್ಲಿರುವ ದೈತ್ಯರುಗಳು ಆ ಅಗ್ನಿಯಿಂದ ದಗ್ಧರಾಗಿ, ಬುದ್ಧದೇವನ ವಾಕ್ಯಕ್ಕಿಂತಲು ಪೂರ್ವದಲ್ಲಿ ಮಾಡಿದ ಶಿವಪೂಜಾಮಹಿಮೆಯಿಂ ಗಾಣಾಪತ್ಯವನ್ನೈದಿದರು. ಬಳಿಕ ಸಮಸ್ತ ಪ್ರಮಥ ಗಣಂಗಳು ಸ್ತೋತ್ರಂ ಗಳಂ ಮಾಡುತ್ತ ಶಿವನ ಎಡಬಲದಲ್ಲಿ ನಿಂತರು. ಮತ್ತಂ ತ್ರಿಪುರದಲ್ಲಿರ್ಪ ಭಸ್ಮ ರುದ್ರಾಕ್ಷಧಾರಿಗಳಾದ ಶಿವಯೋಗಿ ಮುಂತಾದ ಶಿವ ಭಕ್ತರಾದ ಮೂರು ಮಂದಿ ದೈತ್ಯರು ದಗ್ಧರಾದ ಆ ದೈತ್ಯರಂ ನೋಡಿ, ಹಾಹಾ! ನಾವುಗಳು ಮೂವರು ಭಾಗ್ಯವಶದಿಂ ಬುದ್ಧದೇವನ ಮಾಯೆಗೆ ವಶವಾಗದಿದ್ದೆವು, ವಶರಾಗಿರ್ದೊಡೆ ಇವರಂತೆ ನಾಶವನ್ನೈದುತ್ತಿದ್ದೆವೆಂದು ಪೇಳ್ದು, ಶಿವಕೀರ್ತನೆಗಳಿಂ ಕಾಲವಂ ಕಳೆದು ಶಿವಸಾನ್ನಿಧ್ಯವನ್ನೈದಿ, ರೋಮಾಂಚ ಕಂಚುಕಿತರಾಗಿ ಅನೇಕ ನಮಸ್ಕಾರ ವಂಗೈದು ಬಹುವಾಗಿ ಸ್ತುತಿಸಿದರು. ಬಳಿಕ ರಥಾರೂಢನಾದ ಶಿವನು ಆ ಭಕ್ತ ರಂ ನೋಡಿ ಮಂದಸ್ಮಿತಯುಕ್ತನಾಗಿ ಎಲೈ ಅಸುರರಿರಾ! ನೀವು ನನಗತ್ಯಂತ ಭಕ್ತರಾದಕಾರಣದಿಂ ಬೇಕಾದ ವರವಂ ಬೇಡಿಕೊಳ್ಳಿರೆಂದು ಪೇಳೆ, ಅವರುಗಳು ಅತ್ಯಂತ ಸಂತುಷ್ಟರಾಗಿ, ಎಲೈ ಸ್ವಾಮಿಯೆ! ನಿನ್ನ ದ್ವಾರಪಾಲಕರಾಗಿರುತ್ತೇವೆ

ಈ ವರವನಿತ್ತು ಪಾಲಿಸಬೇಕೆಂದು ಪ್ರಾರ್ಥಿಸಲಾಗಿ, ಸ್ವಾಮಿಯು ಹಾಗೆ ದ್ವಾರಪಾಲಕತ್ವವನಿತ್ತು ರಕ್ಷಿಸಿದನು.

ಎಲೈ ಋಷಿಗಳಿರಾ! ಇಂಥ ವರವನ್ನು ಯಾರು ಪಡೆಯಲಾರರು. ಬಳಿಕ ಪರಮೇಶ್ವರನು ಹಾಗೆಯೇ ದೇವತೆಗಳಿಗೆ ಕೆಲಂಬ ವರಗಳನ್ನಿತ್ತು ಅಂತರ್ಧಾನವಾಗೆ, ವಿಷ್ಣು ಮುಂತಾದ ದೇವತೆಗಳು ಇಂದು ಮೊದಲಾಗಿ ಈ ಲೋಕಂಗಳಲ್ಲಿ ನಮ್ಮಗಳೊಳಗೆ, ದೇವಾಸುರ ಕಿನ್ನರ ಗರುಡ ಗಂಧರ್ವ ಮುಂತಾದ ಪ್ರಾಣಿಗಳಾರಾದರೂ, ಶಿವಪೂಜೆಯಂ ಬಿಟ್ಟು ಭಸ್ಮ ರುದ್ರಾಕ್ಷಧಾರಣವಿಲ್ಲದೆ ಇರುವರೋ, ಅವರು ಪಾಷಂಡಮಾರ್ಗವನ್ನೈದುವರು, ಅವರೊಡನೆ ಸಂಭಾಷಣೆ ಸಹವಾಸ ಮೊದಲಾದವಂ ಮಾಡೆವು, ಮಾಡಿದೆವಾದೊಡೆ ಪ್ರಾಯಶ್ಚಿತ್ತವಿಲ್ಲೆಂದು ಸಂಕೇತವಂ ಮಾಡಿ, ಶಿವಪೂಜಾ ಹೀನರಾಗಿದ್ದವರಿಗೆ ಅನೇಕ ಶಾಪವಂ ಕೊಟ್ಟು, ಅಲ್ಲಿಯೆ ಚಿರಕಾಲವಿದ್ದು ಶಿವಪೂಜೆಯಂ ಮಾಡಿ, ಮರಳಿ ಮರಳಿ ಆ ಪಾಷಂಡಿಗಳಿಗೆ ಶಾಪವನ್ನೀಯುತ್ತ ತಮ್ಮ ತಮ್ಮ ಲೋಕಂಗಳಿಗೆ ಪೋಗಿ, ಶಿವಾರಾಧನಂ ಗೈಯುತಲಿರುತಿರ್ದರು. ಮತ್ತಂ ಆ ದೈತ್ಯರು ಬುದ್ಧಿಪೂರ್ವಕದಿಂ ಶಿವಪೂಜೆಯಂ ಮಾಡಿದ್ದರಿಂದ ದೇವತೆಗಳಿಗೆ ಅವಧ್ಯರಾಗಿ, ಶಿವನಿಂ ನೃತರಾಗಿ ಅಂತ್ಯದಲ್ಲಿ ಗಣಾಧೀಶ್ವರತ್ವಮಂ ಪಡೆದರು. ಅತ್ಯಂತ ಶಿವಭಕ್ತರಾದ ಆ ಮುನೀಶ್ವರರು ಶಂಕರನ ಆಲಯದಲ್ಲಿ ದ್ವಾರಪಾಲಕರಾದರು. ಅದು ಕಾರಣದಿಂ ಸರ್ವಪ್ರಯತ್ನದಿಂದಲು ಶಿವಪೂಜೆಯಂ ಮಾಡಬೇಕು. ಎಲೈ ಮುನಿಗಳಿರಾ! ಈ ಪುರವಿಜಯದ ವಿಷಯದಲ್ಲಿ ಶಿವಾರ್ಚನೆಯಿಂ ಪಡೆಯಲ್ಪಟ್ಟ ಸೌಖ್ಯವುಳ್ಳ ಸಮಸ್ತ ದೇವತೆಗಳು ಏಕವಾಗಿ ಹೀಗೆ ಪಾಶುಪತಾದಿ ವ್ರತಗಳಂ ಮಾಡಿ ಮಹತ್ತರವಾದ ಸೌಖ್ಯ ಶೌರ್ಯ ಜಯಶ್ರೀ ನಾನಾ ವಿಧ ಶ್ರೇಷ್ಠತ್ವ ಭೋಗಮೋಕ್ಷಂಗಳಂ ಪಡೆದರದುಕಾರಣದಿಂ, ಮರ್ತ್ಯರು ದೇವತೆಗಳು ಸಿದ್ಧರು ಸಾಧ್ಯರು ಗಂಧರ್ವರು ಮುಂತಾದ ಸರ್ವರು, ಭಕ್ತಿಯಿಂ ಲಿಂಗದಲ್ಲಿ ನಾನಾ ವಿಧವಾದ ಶಿವಪೂಜೆಯಂ ಪ್ರತಿ ದಿವಸದಲ್ಲಿಯು ಮಾಡುತ್ತಿರಬೇಕೆಂದು ಸೂತಂ ನಿರೂಪಿಸಿದ ನೆಂಬಲ್ಲಿಗೆ, ಉಪದೇಶಕಾಂಡದೊಳು ಎಪ್ಪತ್ತೆರಡನೆಯ ಅಧ್ಯಾಯವು ಸಂಪೂರ್ಣವಾದುದು.

ಎಪ್ಪತ್ಮೂರನೆಯ ಅಧ್ಯಾಯವು.

ಅಂಧಕಾಸುರನ ವೃತ್ತಾಂತವು.

ಎಲೈ ಋಷಿಗಳಿರಾ! ಮರಳಿಯು ದೇವತೆಗಳು ಶಿವಾರ್ಚನೆಯಂಗೈದು

ತಮ್ಮ ತಮ್ಮ ಅಭೀಷ್ಟಂಗಳಂ ಪಡೆದ ವೃತ್ತಾಂತಂಗಳಂ ಪೇಳುತಿದೇನೆ, ಸಾವಧಾನದಿಂ ಕೇಳಿರಿ, ಪೂರ್ವದಲ್ಲಿ ಮೂರ್ಲೋಕಕಂಟಕನಾದ ಅಂಧಕನೆಂಬ ದೈತ್ಯನು ತಪದಿಂ ಬಲವೀರ್ಯ ಪರಾಕ್ರಮಂಗಳಂ ಪಡೆದು, ಯುದ್ಧದಲ್ಲಿ ದೇವತೆಗಳಂ ಜಯಿಸಿ ಮೂರು ಲೋಕಂಗಳಂ ಬಾಧಿಸುತಿರ್ದನು. ಆಗ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಸ್ತ್ರೀವೇಷವಂ ಧರಿಸಿ ದಶದಿಕ್ಕುಗಳಂ ತಿರುಗುತ್ತಿರಲು ಆ ಅಂಧಕಾಸುರನು ಪುರುಷರೂಪವಾದವರಂ ಸಂಹರಿಸುವಂತೆ ಪೇಳಿ, ಚಾರರ ಮುಖದಿಂ ಪುರುಷರಾರು ಇಲ್ಲವೆಂಬುವದಂ ಕೇಳಿ ಮಂದರಾದ್ರಿಗೆ ಸಾರಿ ಮಹಾದೇವಂಗೆ ನಮಸ್ಕಾರವಂ ಗೈದನು.

ಮೃತ್ಯುಂಜಯ ಮಹಾಮಂತ್ರ ಮಹಿಮೆ.

ಆಗ ಸ್ವಾಮಿಯ ಆಜ್ಞೆಯಿಂ ದೇವಿಯ ಸಖಿಯರು ದೇವಿಗೆ ಪರಿಚಾರಕವಂ ಮಾಡುತ್ತಿರೆ, ಆ ಅಂಧಕನು ದೇವತೆಗಳು ಸ್ತ್ರೀವೇಷವಂ ಧರಿಸಿ ಪಾರ್ವತೀದೇವಿಗೆ ಪರಿಚಾರಕ ವೃತ್ತಿಯಂ ಮಾಡುತ್ತಿದಾರೆಂಬುದಂ ಕೇಳಿ ಆ ಗಿರಿಗೂ ಬರೆ, ಸ್ತ್ರೀವೇಷಧಾರಿಗಳಾದ ವಿಷ್ಣು ಮುಂತಾದ ದೇವತೆಗಳು ಸ್ವಾಮಿಯ ಸಮಿಪಕ್ಕೆ ಪೋಗಿ ಇವನ ಚರಿತ್ರೆಯಂ ಪೇಳಿದರು. ಬಳಿಕ ಮಹಾದೇವನು ದೇವತೆಗಳಿಗೆ ಅನುಕೂಲವಾಗಿ ಈ ಅಂಧಕಾಸುರನಂ ಸಂಹರಿಸಲೋಸುಗ ಭೈರವನಂ ಕಳುಹೆ, ಆ ಭೈರವನು ಶಿವಂಗೆ ನಮಸ್ಕರಿಸಿ ಅತಿ ಶೀಘ್ರದಿಂ ಪೊರಮಟ್ಟು ಸರ್ವಗಣಂಗಳ್ವೆರಸಿ, ಆ ಅಂಧಕನ ಸಮಿಪಕ್ಕೆ ಬಂದನು. ಆಗ ಗಣಂಗಳಿಗು ದೈತ್ಯಸೇನೆಗು ಮಹಾ ಯುದ್ಧಮುಂಟಾಗೆ, ಭೈರವನಿಗೂ ಅಂಧಕಾಸುರನಿಗು ಅನ್ಯೋನ್ಯ ಯುದ್ಧಮಾದುದು. ಆ ಸಮಯದಲ್ಲಿ ಭೈರವಸೇನೆಯಿಂದ ದೈತ್ಯಸೇನೆಯು ವಿನಾಶವಾಗಲು, ಶುಕ್ರಾಚಾರ್ಯನು ಮೃತರಾದ ದೈತ್ಯರನ್ನೆಲ್ಲರಂ ಮೃತ್ಯುಂಜಯ ಮಹಾಮಂತ್ರಜಪದಿಂ ಮರಳಿ ಜೀವಂತರಂ ಮಾಡಿದನು. ಮರಳಿ ಭೈರವಸೇನೆಯಿಂದ ಸಂಹೃತಮಾಗೆ ಮರಳಿ ಜೀವಂತರಂ ಗೈದನು. ಹೀಗೆ ಅನೇಕ ವೇಳೆಗಳಲ್ಲಿ ಸಂಹಾರ ಸೃಷ್ಟಿಗಳೆರಡು ಉಂಟಾಗಲು, ಶಿವನದಂ ತಿಳಿದು ಶುಕ್ರಾಚಾರ್ಯನನ್ನಾಕರ್ಷಿಸಿ ಭಕ್ಷಿಸೆ, ಆಗ ಗಣಾಧ್ಯಕ್ಷರಿಂದ ಅಸುರ ಸೇನೆಯು ಮೃತವಾದುದು. ಬಳಿಕ ಭೈರವನತ್ಯಂತ ಕುಪಿತನಾಗಿ ಆ ಮಹಾಸುರನಾದ ಅಂಧಕನಂ ಶೂಲದಲ್ಲಿ ಪೋಣಿಸಿಕೊಂಡು ಶಿವಸನ್ನಿಧಿಯನ್ನೈದಿಸೆ, ಅವನು ಮಹಾಸ್ವಾಮಿಯ ದರ್ಶನಮಾತ್ರದಿಂದ ಸಕಲ ಪಾಪಂಗಳಿಂ ವಿನಿರ್ಮುಕ್ತನಾಗಿ ಜ್ಞಾನಿಯಾಗಿ ಆ ಶೂಲಾಗ್ರದಲ್ಲಿಯೆ ಜೋಲುತ ಪರಮ ಸಂತುಷ್ಟನಾಗಿ ಸ್ತುತಿಸಿದನು ಅನಂತರದಲ್ಲಿ ಸ್ವಾಮಿಯು ಆತನಲ್ಲಿ ಪರಮ ಪ್ರೀತಿಯುಳ್ಳವನಾಗಿ, ಎಲೈ ದೈತ್ಯನೆ ! ನಿನ್ನ ಸ್ತೋತ್ರದಿಂ ದತ್ಯಂತ ಪ್ರೀತನಾದೆನದುಕಾರ

ಣದಿಂ, ಬೇಕಾದ ವರವಂ ಕೇಳಿಕೊಳ್ಳೆಂದು ನಿರೂಪಿಸೆ, ದೈತ್ಯನು ಆ ವಾಕ್ಯವಂ ಕೇಳಿ, ಎಲೈ ಜಗನ್ನಾಯಕನೆ! ಕರುಣಾಕರನೆ! ನನಗೆ ನಿನ್ನ ಸಮೀಪದಲ್ಲಿರುವಂಥ ಗಾಣಾಪತ್ಯದ ಹೊರತಾಗಿ ಇತರ ವರಂಗಳೆಲ್ಲವು ತೃಣಪ್ರಾಯಂಗಳಾದ ಕಾರಣದಿಂ "ಗಾಣಾಪತ್ಯವನೆ" ಕೊಡಬೇಕೆಂದು ಪ್ರಾರ್ಥಿಸಲಾಗಿ, ಪರಮೇಶ್ವರನು ಹಾಗೆಯೆ ದೈತ್ಯಂಗೆ ವರವನ್ನಿತ್ತು, ಉದರದಿಂ ಆ ಶುಕ್ರಾಚಾರ್ಯನಂ ಬಿಟ್ಟನು. ಬಳಿಕ ಶುಕ್ರನು ಪರಮಭಕ್ತಿಯಿಂದ ಶಿವಪೂಜೆಯಂ ಮಾಡಿ ತನ್ನ ಮಂಡಲಕ್ಕೆ ಪೋಗಲು, ವಿಷ್ಣು ಮುಂತಾದ ದೇವತೆಗಳು ಅತ್ಯಂತ ಸಂತುಷ್ಟರಾಗಿ, ಅಂಬಾಸಮೇತನಾದ ಶಿವನಂ ಪೂಜಿಸಿ ಸ್ತ್ರೀರೂಪವಂ ಬಿಟ್ಟು ನಿಜರೂಪವಂ ಧರಿಸಿ ತಮ್ಮ ತಮ್ಮ ಲೋಕಂಗಳಿಗೆ ಪೋದರು. ಆ ದೈತ್ಯನು ತ್ರಿಶೂಲಾಗ್ರದಿಂ ಸ್ವಾಮಿಯಂ ಕಂಡು ದೇವತೆಗಳಿಗು ದುರ್ಲಭವಾದ ಗಾಣಾಪತ್ಯವನ್ನೈದಿದನೆಂದು ಸೂತಂ ಶೌನಕಾದಿಗಳಿಗೆ ಪೇಳಿದನೆಂಬಲ್ಲಿಗೆ,

ಉಪದೇಶಕಾಂಡದೊಳು ಎಪ್ಪತ್ಮೂರನೆಯ ಅಧ್ಯಾಯವು
ಸಂಪೂರ್ಣಮಾದುದು.

ಎಪ್ಪತ್ನಾಲ್ಕನೆಯ ಅಧ್ಯಾಯವು.

ವಟವೃಕ್ಷವನ್ನು ಕುರಿತು ಶಿವಶಿವೆಯರ ಸಂವಾದ.

ಎಲೈ ಋಷಿಗಳಿರಾ! ಒಂದು ವೇಳೆಯಲ್ಲಿ ಪರಮೇಶ್ವರನು ಗಿರಿರಾಜಪುತ್ರಿಯಾದ ಪಾರ್ವತೀದೇವಿಯೊಡನೆ ಅಂತರಂಗ ಗಣಾಧೀಶ್ವರರ್ವೆರಸಿ ಶೃಂಗಾರವನಕ್ಕೆ ಪೋಗಿ ಗುಲ್ಮಗಳಂ ಲತೆಗಳಂ ಮನೋಹರವಾದ ಪಲ್ಲವಂಗಳುಳ್ಳ ವೃಕ್ಷಂಗಳಂ ನೋಡುತ್ತ, ಉಪವನ ರಕ್ಷಕರಿಂ ಪೇಳಲ್ಪಟ್ಟ ಮಾರ್ಗದೊಳಲ್ಲಲ್ಲಿ ಸಂಚರಿಸಿ, ಆ ಶೃಂಗಾರ ಕೋಟದ ಮಧ್ಯದಲ್ಲಿರ್ಪ ಮಹತ್ತಾದ ವೇದಿಕೆಯ ಸಮೀಪಕ್ಕೆ ಪೋಗಿ ಸಿಂಹಾಸನದಲ್ಲಿ ದೇವೀಸಮೇತನಾಗಿ ಕುಳಿತಿರ್ದನು. ಆಗ ದೇವಿಯು ಆ ವೃಕ್ಷವಂ ನೋಡಿ ಸ್ವಾಮಿಯ ಮುಖವಂ ನೋಡುತ್ತ ಮಂದಸ್ಮಿತಯುಕ್ತೆಯಾಗಿ, ಎಲೈ ಮಹಾದೇವನೆ! ಇಂಥ ಮಹಾವೃಕ್ಷವನ್ನು ನಾನೆಲ್ಲಿಯು ಕಾಣೆನು, ಇದಾವದೆಂದು ಕೇಳೆ, ಪರಮೇಶ್ವರನು ಆ ವಾಕ್ಯವಂ ಕೇಳಿ ಇಂತೆಂದನು. ಎಲೆ ಸತಿಯೆ! ಈ ವೃಕ್ಷವು ಬ್ರಹ್ಮಪ್ರಳಯಕಾಲದಲ್ಲಿ ಇದಕ್ಕಿಂತಲು ನೂರುಮಡಿ ಹೆಚ್ಚೀತು. ಆಗ ಈ ಮರದ ಒಂದು ಪರ್ಣವು ಸಮುದ್ರದಲ್ಲಿ ಬೀಳುವದು. ಆ ಸಮಯದಲ್ಲಿ ವಿಷ್ಣುವು ಸಮುದ್ರದೊಳು ತೇಲುವ ಈ ವಟಪತ್ರದ ಮೇಲೆ ಶಯನವಂ ಮಾಡಿ ಶಿವನೆ ಪರಬ್ರಹ್ಮನೆಂದು ತಿಳಿವನು, ಆ

ವಿಷ್ಣುವಿನ ನಾಭೀಕಮಲದೊಳು ನಾನು ಹಿರಣ್ಯಗರ್ಭನಂ ಪುಟ್ಟಿಸೆ, ಆ ಬ್ರಹ್ಮನು ಪೂರ್ವದಂತೆ ಜಗತ್ಸೃಷ್ಟಿಯಂ ಮಾಡುತ್ತಿರುವನೆಂದು ದೇವಿಗೆ ಪೇಳಿ, ಉದ್ಯಾನವನಪಾಲಕರಾದ ಮೂವ್ವರು ಪುರುಷರಂ ಕರೆಯಿಸಿ, ಕೊಳದಲ್ಲಿ ವಿಹರಿಸಿಕೊಂಡಿರುವ ಎರಡು ಪಕ್ಷಿಗಳಂ ಕೊಂಡುಬನ್ನಿರೆಂದಾಜ್ಞಾಪಿಸಲಾಗಿ, ಅವರುಗಳು ಒಂದು ಹಂಸವನ್ನು ಮತ್ತೊಂದು ಶುಕವನ್ನು ಸ್ವಾಮಿಯ ಬಳಿಗೆ ತಂದು ಬಿಟ್ಟರು. ಬಳಿಕ ಆ ಪಕ್ಷಿಗಳು ನಮಸ್ಕಾರವಂ ಮಾಡಿ ಮುಂದು ನಿಲ್ಲೆ, ಮಹೇಶ್ವರನು ದೇವಿಯೊಡನೆ ಆ ಪಕ್ಷಿಗಳಂ ನೋಡಿ, ಎಲೈ ಪಕ್ಷಿಗಳಿರಾ! ನೀವೆಲ್ಲಿದ್ದೀರಿ? ಯಾವ ಕಾರ್ಯವಂ ಗೈದು ಕಾಲವಂ ಕಳೆಯುತ್ತಿದ್ದೀರಿ? ಎಂದು ಪ್ರಶ್ನೆಯಂ ಮಾಡಿದನು. ಬಳಿಕ ಭಾಗ್ಯವತ್ತಾದ ಆ ಶುಕವು ಪರಮ ಸಂತೋಷದಿಂ, ಎಲೈ ಮಹೇಶ್ವರನೆ! ನಾನು ತಮ್ಮ ಉದ್ಯಾನವನದಲ್ಲಿರುವ ತಮಾಲವೃಕ್ಷದ ಸೇವೆಯಂ ಮಾಡಿಕೊಂಡಿದೇನೆಂತಲು, ಹಂಸವು ಬ್ರಹ್ಮ ವಿಷ್ಣು ಮುಂತಾದ ದೇವತೆಗಳ ಲೋಕಂಗಳಲ್ಲಿ ಸಂಚರಿಸುತಿದ್ದು, ಪುಣ್ಯವಶದಿಂದೀ ಉದ್ಯಾನವನಕ್ಕೆ ಬಂದು, ಜಟಾಜೂಟದಲ್ಲಿಹ ಸ್ತ್ರೀಯಾದ ಗಂಗಾದೇವಿಯ ಸಂಬಂಧವಾಗಿರುವ ಅಮೃತೋಪಮವಾದ ಉದಕವಂ ಪಾನಂಗೆಯ್ಯುತ್ತ, ಈ ತೀರ್ಥದ ಮಹಿಮೆಯಂ ಕೊಂಡಾಡುತಲಿದೇನೆಂತಲು ನುಡಿಯೆ, ಮಹೇಶ್ವರನು ಆ ವಾಕ್ಯವಂ ಕೇಳಿ ಸಂತೋಷಚಿತ್ತನಾಗಿ ಅವುಗಳಂ ಕಳುಹಿದನು. ಆಗ ಪಾರ್ವತೀದೇವಿಯು ಮಹಾಕೋಪವುಳ್ಳವಳಾಗಿ ಆಸನದಿಂದೆದ್ದು, ನಿನ್ನ ಸ್ತ್ರೀಯಾದ ಗಂಗೆಯ ಉದಕ ಪಾನವಂ ಮಾಡಿಕೊಂಡಿದೇನೆಂದು ಪೇಳ್ದ ಹಂಸವಚನವಂ ಕೇಳಿ ಸಂತೋಷವಾದುದೊ? ಪೊಳ್ಳೇದಾದುದು, ಎಂದು ನಿಷ್ಠುರ ವಚನವಂ ಪೇಳುತ್ತ ಸ್ವಾಮಿಯಂ ಬಿಟ್ಟು ದೂರಕ್ಕೆ ಪೋಗಿ ಒಂದು ಕಡೆಯಲ್ಲಿ ಮರೆಯಾಗಿರ್ದು, ಭೂಮಿಯಲ್ಲಿರ್ಪ ಧೂಳುಗಳಂ ರಾಶಿಯಂ ಮಾಡಿ ಒಂದು ಬೊಂಬೆಯಂ ಗೈಯೆ, ಅದು ಜೀವವುಳ್ಳದ್ದಾಗೆದ್ದು ನಿಂತುದು. ಆ ಸಮಯದಲ್ಲಿ ಮಹಾದೇವನು ದೇವಿಯ ಸಮೀಪಕ್ಕೆ ಸಾರಿ ಕುಪಿತೆಯಾದಾಕೆಯಂ ಪ್ರೀತಿವಾಕ್ಯಂಗಳಂ ನುಡಿದು ಅಂತಃಪುರಕ್ಕೆ ಕರೆದುಕ್ಕೊಂಡು ಪೋದನು.

ಷಂಡಾಸುರನ ಉತ್ಪತ್ತಿಯ ಕಥೆ.

ಆದೊಡೆ ಆ ದೇವಿಯು ಯಾವ ಧೂಳಿಯಿಂದ ಪುತ್ಥಳಿಯಂ ಮಾಡಿದಳೋ, ಅದು ದಗ್ಧವಾದ ಮನ್ಮಥನ ದೇಹದ ಭಸ್ಮಸಮೂಹವು, ಅದುಕಾರಣದಿಂದಾಪುತ್ಥಳಿಯು ಪುರುಷಾಕಾರವಾಗೆದ್ದು ದುರ್ಗುಣ ಉಳ್ಳದ್ದಾಗಿ ಕೈಲಾಸಗಿರಿಯ ಸಮೀಪದಲ್ಲಿರುತಿರೆ, ಶಿವಗಣಂಗಳಾತನಂ ಕಂಡು, ಎಲೆ ದುಷ್ಟನೆ! ಸುರವೈರಿಯಾದ ನೀನಿಲ್ಲಿರಕೂಡದು ಪೋಗು, ಇದ್ದೆಯಾದೊಡೆ ನಿನ್ನ ಪ್ರಾಣವು

ಉಳಿಯದೆಂದರು. ಬಳಿಕ ಷಂಡನು ಈ ವಾಕ್ಯವಂ ಕೇಳಿ ಅತಿ ಕೋಪದಿಂ ಪೊರಮಟ್ಟು ಮತ್ತೊಂದು ಸ್ಥಳಕ್ಕೆ ಪೋಗಿ, ಬಹು ಘೋರವಾದ ಪಾಶುಪತ ವ್ರತವಂ ಹತ್ತು ಸಾವಿರ ವರ್ಷಂಗಳು ಮಾಡಿ, ತನಗೆ ಶತ್ರುಗಳಾದ ಹರಿ ಬ್ರಹ್ಮರಂ ಸಂಹರಿಸುವೆನು. ಅವರ ವೀರ್ಯಂಗಳಂ ಅವರ ಹೃದಯದಲ್ಲಿರ್ದು ಕೊಂಡು ಭಕ್ಷಿಸುವೆನು. ಸಮಸ್ತರ ಪ್ರಾಣಂಗಳಂ ಹೀರುವೆನು, ಎಂದು ಈ ಪ್ರಕಾರವಾದ ವರವಂ ತ್ರಿಯಂಬಕನಾದ ಈಶ್ವರನಿಂ ಪಡೆಯಲು ಅತಿ ವೈರಾಗ್ಯ ದಿಂದಿರೆ, ಶಿವನು ಪ್ರಸನ್ನನಾಗಿ ಹಾಗೇ ವರವನ್ನಿತ್ತು ಅಂತರ್ಧಾನನಾದನು. ಷಂಡನು ಸ್ವಾಮಿಯಿಂ ವರವಂ ಪಡೆದು ಬ್ರಹ್ಮ ವಿಷ್ಣು ಮುಂತಾದ ಸರ್ವರ ದೇಹಂಗಳಂ ಪ್ರವೇಶಿಸಿ, ಅವರ ವೀರ್ಯಂಗಳಂ ಭಕ್ಷಿಸಿದನು. ಬಳಿಕ ಇಂದ್ರಾದಿ ದೇವತೆಗಳು ಆ ಅಸುರನ ಕರ್ಮವೆಂದು ತಿಳಿಯಲಾರದೆ ತಮ್ಮ ತಮ್ಮ ಸ್ತ್ರೀಯ ರಲ್ಲಿ ವಿರಳವಾಗಿದೇವೆಂದು ದುಃಖಿಸುತ, ಶಿವಪೂಜೆಯಂಗೈದು ಅದಕ್ಕೆ ಪ್ರತೀಕಾ ರವಂ ಮಾಡಬೇಕೆಂದು ನಿಶ್ಚಯಿಸಿ, ಷೋಡಶೋಪಚಾರಗಳಿಂ ಲಿಂಗಾರ್ಚನೆಯಂ ಮಾಡಿ ಪ್ರಾರ್ಥಿಸುವದಕ್ಕಾಗಿ ಕೈಲಾಸಗಿರಿಗೈದಿ, ಎಲೈ ಸ್ವಾಮಿಯೆ! ನಾವು ನಿರ್ವೀ ರ್ಯರಾದೆವು. ಇದಕ್ಕೇನು ಕಾರಣವೋ ತೋರಲಿಲ್ಲೆಂದು ಮೊರೆಯಿಟ್ಟರು.

ಪರಮೇಶ್ವರನ ಸರ್ವ ಸಂಹಾರ ಯಾಗವೃತ್ತಂ.

ಬಳಿಕ ಸ್ವಾಮಿಯು ಈ ರೋದನ ವಾಕ್ಯವಂ ಕೇಳಿ, ಎಲೈ ದೇವತೆಗಳಿರಾ! ಷಂಡಾಸುರನೆಂಬೋರ್ವ ದೈತ್ಯನು ನಿಮ್ಮ ಶರೀರದಲ್ಲಿ ವ್ಯಾಪಿಸಿಕೊಂಡು ವೀರ್ಯಂ ಗಳಂ ಭಕ್ಷಿಸುತಲಿಹಾನೆ, ಆತನಂ ಸಂಹರಿಸಲೋಸುಗ ನಾನು ಸರ್ವಸಂಹಾರ ಯಾಗವಂ ಮಾಡುತಿಹೇನೆ, ಹಾಗಲ್ಲದಿರ್ದೊಡೆ ಆ ದುರುಳನು ಸಂಹಾರವಾಗನು, ನಿಮಗೀಕಾರ್ಯ ಸಮ್ಮತವೋ? ಆ ಯಾಗಾಗ್ನಿಯಲ್ಲಿ ನಮ್ಮಾಜ್ಞೆಯಿಂದ ಒಂದು ಶಕ್ತಿಯು ಪುಟ್ಟುವದು. ಆ ಶಕ್ತಿಯು ಈ ಷಂಡಾಸುರನಂ ಸಂಹರಿಸಿ ಪೂರ್ವ ದಂತೆ ನಿಮ್ಮಗಳಂ ಸೃಷ್ಟಿಸಿ ನಿರ್ವಾಹವಂ ಮಾಡೀತು. ಇದು ಸತ್ಯವೆನಲು, ಆ ದೇವತೆಗಳು ಹಾಗೇ ಆಗಲೆಂದಂಗೀಕರಿಸಿದರು. ಬಳಿಕ ಪರಮೇಶ್ವರನು ತಾನೆ ಅಂಬಾಸಮೇತನಾಗಿ ದೀಕ್ಷೆಯಂ ಕೈಕೊಂಡು, ತಾನೆಂಬ ಮಹಾಗ್ನಿಯಲ್ಲಿ ಸಮಸ್ತ ಮುನಿಗಳಂ ಪಿತೃಗಳಂ ಮತ್ತಂ ಗಂಧರ್ವ, ಉರಗ, ರಾಕ್ಷಸ, ಮನುಷ್ಯ, ಪಕ್ಷಿ, ಗೋ, ಹರಿ, ಬ್ರಹ್ಮಾದಿ ಸಕಲ ದೇವತೆಗಳಂ ಸ್ಥಾವರ ಜಂಗಮಾತ್ಮಕವಾದ ಜಗತ್ತಂ ಸಮಿತ್ತುಗಳಾಗಿ ಕಲ್ಪಿಸಿ ಹೋಮವಂ ಮಾಡೆ, ಆ ಅಗ್ನಿಯಲ್ಲಿ ಮೂರು ಅಂಡ ಸಮೇತವಾಗಿ ಪುಷ್ಪಬಾಣ ಇಕ್ಷುಚಾಪ ಅಂಕುಶ ಪಾಶಂಗಳಂ ಹಸ್ತದಲ್ಲಿ ಪಿಡಿದುಕೊಂಡು, ಓರ್ವ ಶಕ್ತಿಯು ಪುಟ್ಟಿ ಸ್ವಾಮಿಗೆ ನಮಸ್ಕಾರವಂ ಮಾಡಿ, ಎಲೈ ಸರ್ವಭೂತರಕ್ಷಕನೆ! ನಾನು ಮಾಡಬೇಕಾದ

ಕಾರ್ಯವಾವುದು? ಎಂದು ಬಿನ್ನೈಸಲಾಗಿ ಶಿವನು, ಭಯಂಕರವಾಗಿ ಸಕಲರ ಶುಕ್ಲವಂ ಭಕ್ಷಿಸಿಕೊಂಡಿರ್ಪ ಷಂಡಾಸುರನಂ ಸಂಹರಿಸೆಂದು ಪೇಳ್ದು ಆಕೆಯಂ ಕಳುಹಿಸಿದನು. ಬಳಿಕ ಆ ಶಕ್ತಿಯು ಒಂದೇಬಾಣದಿಂದಾದೈತ್ಯನ ಪ್ರಾಣವಂ ತೆಗೆದಳು.

ಯಾಗೋತ್ಪನ್ನ ಶಕ್ತಿಯ ವೃತ್ತ.

ಅನಂತರದಲ್ಲಿ ದಯಾಸಮುದ್ರನಾದ ಶಿವನು ಆ ಶಕ್ತಿಯಂ ನೋಡಿ, ಎಲೆ ಮಹೇಶ್ವರಿಯೆ! ನೀನು ಮೂರು ಅಂಡಗಳಲ್ಲಿಯು ಜಗತ್ತಿನ ಸೃಷ್ಟಿಸ್ಥಿತಿ ಲಯಂಗಳಂ ಮಾಡಲೋಸುಗ, ಬ್ರಹ್ಮ ವಿಷ್ಣು ಮಹೇಶ್ವರರಂ ಅವರ ಶಕ್ತಿಗಳಾದ ಲಕ್ಷ್ಮೀ ಅಂಬಿಕೆ ಸರಸ್ವತೀದೇವಿಯರಂ ಸೃಷ್ಟಿಸಿ, ಅವರವರ ಶಕ್ತಿಯನ್ನವರಿಗೆ ಕೊಡಿಸೆಂದು ನಿರೂಪಿಸೆ, ಆ ಶಕ್ತಿಯು ಹಾಗೆ ಅಂಡಗಳಲ್ಲಿ ಅವರಂ ಸೃಜಿಸಿ, ಆಯಾಶಕ್ತಿಗಳಲ್ಲಿ ಅವರಂ ಕೂಡಿಸಿ ಆ ಮೂವ್ವರಿಂದ ಸೃಷ್ಟಿಸ್ಥಿತಿ ಸಂಹಾರಂಗಳಂ ಮಾಡಿಸಿದಳು. ಆ ತ್ರಿಮೂರ್ತಿಗಳು ದೇವದೇವನಾದ ಪರಶಿವನಾದ ಶಂಕರನಂ ಪೂಜಿಸಿ, ತಮ್ಮ ತಮ್ಮ ಅಹಂಕಾರ ಗುಣಪ್ರೇರಿತರಾಗಿ ಸೃಷ್ಟ್ಯಾದಿಕರ್ಮಗಳಂ ಮಾಡುತ್ತಿದಾರೆ. ಆ ರುದ್ರಮೂರ್ತಿಗು ಸದಾಶಿವ ಮೂರ್ತಿಗು ನಾಮಚಿಹ್ನಂಗಳಂ ಭೇದವಿಲ್ಲವು. ಆತನು ಅವರನ್ನೆಲ್ಲರಂ ಸ್ವಸ್ಥಾನಾಧಿಕಾರಂಗಳಲ್ಲಿ ನಿಲ್ಲಿಸಿ ಇಷ್ಟಾರ್ಥಂಗಳಂ ಕೊಡುತಲಿದಾನೆ. ಹೀಗೆಂದು ಹರನು ತಾನೆ ನಿರೂಪಿಸಿ ಅಂತರ್ಧಾನವನ್ನೈದಿದನು. ಬಳಿಕ ತ್ರಿಮೂರ್ತಿಗಳು ಶಿವಪೂಜೆಯಿಂದ ಸಕಲ ಗುಣಂಗಳಂ ಪಡೆದು, ಆನಂದಯುಕ್ತರಾಗಿ ಶೈವಾನಂದವನ್ನನುಭವಿಸಿಕೊಂಡಿರುತಿರ್ದರು.

ಷಂಡಾಸುರನು ಗಣಾಧೀಶನಾಗುವಿಕೆ-ತ್ರಿಪುರ ಸುಂದರಿಯ ವೃತ್ತ.

ಆ ಷಂಡಾಸುರನು ಸ್ವಾಮಿಯ ಮುಂಪೆ ದೇವಿಯಿಂದ ಹತವಾದ ಕಾರಣ ಗಣಾಧೀಶ್ವರನಾಗಿ ಗಣಂಗಳೊಡನೆ ಪಾರ್ವತೀ ಪರಮೇಶ್ವರರ ಸನ್ನಿಧಿಯಲ್ಲಿ ಈಶ್ವರನಂ ಸೇವಿಸುತ ಈಗಲು ಇರುತಿದಾನೆ. ಅಗ್ನಿಗುಂಡದಲ್ಲಿ ಅಂಬಾಂಶೆಯಿಂದ ಆವ ಶಕ್ತಿಯು ಪುಟ್ಟಿದಳೋ ಆಕೆಗೆ ತ್ರಿಪುರಸುಂದರಿಯೆಂಬ ನಾಮವು. ಪುಷ್ಪಬಾಣ ಹಸ್ತೆಯಾದ ಆ ತ್ರಿಪುರಸುಂದರಿಯು ಆ ಮಹೇಶ್ವರನಂ ಪೂಜಿಸುತ್ತ ದೇವಿಯೊಡನೆ ಇರುತಿರ್ದಳು. ಎಲೈ ಋಷಿಗಳಿರಾ! ಶಿವನು ಷಂಡಾಸುರನ ನಿಮಿತ್ತವಾಗಿ ಈ ಪ್ರಕಾರದಲ್ಲಿ ತನ್ನ ಅಂಶಾಗ್ನಿಯಲ್ಲಿ ಬ್ರಹ್ಮ ವಿಷ್ಣು ಇಂದ್ರಾದಿ ದೇವತೆಗಳಂ ಸಮಸ್ತ ಜಗವಂ, ಸಮಿತ್ತುಗಳೋ ಪಾದಿಯಲ್ಲಿ

ಹೋಮವಂ ಮಾಡಿ, ತ್ರಿಪುರಸುಂದರಿಯಾದ ಆ ಮಹಾಶಕ್ತಿಯಿಂ ಷಂಡಾಸುರನಂ ಸಂಹಾರವಂ ಮಾಡಿಸಿ, ಆ ದೇವಿಯಿಂ ಮರಳಿಯು ಸಮಸ್ತ ಜಗತ್ತಂ ತ್ರಿಮೂರ್ತಿಗಳನ್ನೂ ಉಳಿದ ದೇವತೆಗಳನ್ನು ಕಲ್ಪಿಸಿದನೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದನೆಂಬಲ್ಲಿಗೆ, ಉಪದೇಶಕಾಂಡದೊಳು ಎಪ್ಪತ್ನಾಲ್ಕನೆಯ ಅಧ್ಯಾಯವು ಸಂಪೂರ್ಣಂ.

ಎಪ್ಪತ್ತೈದನೆಯ ಅಧ್ಯಾಯವು.

ಮಹಿಷಾಸುರ-ವ್ಯಾಘ್ರಾಸುರರ ವೃತ್ತಾಂತ.

ಎಲೈ ಋಷಿಗಳಿರಾ! ಪೂರ್ವದಲ್ಲಿ ಹರಿ ಬ್ರಹ್ಮ ಮುಂತಾದ ದೇವತೆಗಳು ಮಹಿಷಾಸುರನಿಂದಲು ವ್ಯಾಘ್ರಾಸುರನಿಂದಲು ಬಹು ಬಾಧೆಯನ್ನೈದಿದವರಾಗಿ ತಮ್ಮ ತಮ್ಮ ಲೋಕಂಗಳಂ ಬಿಟ್ಟು ಕೇತಾರಕ್ಷೇತ್ರಕ್ಕೆ ಬಂದು ಶಿವಪೂಜೆಯಂ ಮಾಡೆ, ಆಗ ಶಿವನು ಪ್ರಸನ್ನನಾದನು. ಬಳಿಕ ಮಹಾ ವಿಷ್ಣುವು ಶಿವಂಗೆ ನಮಸ್ಕಾರವಂಮಾಡಿ ವಿನಯಾನ್ವಿತನಾಗಿ, ಎಲೈ ಶಿವನೆ! ನನಿಗೂ ಬ್ರಹ್ಮನಿಗೂ ಮಹಾ ಯುದ್ಧವುಂಟಾಗೆ, ಬ್ರಹ್ಮ ನತ್ಯಂತ ಕೋಪದಿಂ ನನ್ನ ಮೇಲೆ ಮಹಿಷಾಸುರನಂ ಬಿಟ್ಟನು. ನಾನು ಆತನ ಮೇಲೆ ವ್ಯಾಘ್ರಾಸುರನಂ ಬಿಟ್ಟೆನು. ಆಗ ಇವರೀರ್ವರ್ಗೆಯು ಅನೇಕ ಕಾಲವು ಯುದ್ಧವಾಗಿ ಅನ್ಯೋನ್ಯವಾಗಿ ಸಂಹರಿಸಲು ಸಾಮರ್ಥ್ಯವಿಲ್ಲದೆ, ವ್ಯಾಘ್ರಾಸುರನು ಬ್ರಹ್ಮನನ್ನಟ್ಟಿದನು. ನನ್ನನ್ನು ಮಹಿಷಾಸುರ ನಟ್ಟಿದನು. ಹಾಗೆಯೆ ಇವರೀರ್ವರು ಸಕಲ ದೇವತೆಗಳನ್ನು ಪರಾಭವವನ್ನೈದಿಸಿದರು. ನಾವು ಅವರ ಮುಂದೆ ನಿಲ್ಲಲಾರೆವು, ಎಲೈ ದಯಾನಿಧಿಯೆ! ದುಷ್ಟರಾದ ಆ ಅಸುರರಂ ಸಂಹರಿಸಿ ನಮ್ಮನ್ನು ರಕ್ಷಿಸೆಂದು ಪ್ರಾರ್ಥಿಸಲಾಗಿ, ಶಿವನು ಆ ವಾಕ್ಯವಂ ಕೇಳಿ ಗಿರಿಜೆಯ ಮುಖವಂ ನೋಡಿ ನಕ್ಕು ಶೀಘ್ರವಾಗಿ ತಾನೆ ದುರ್ಗಾದೇವಿಯಂ ನಿರ್ಮಿಸಿ, ಅತ್ಯಂತ ಭಯಂಕರವಾದ ಪರಾಕ್ರಮವುಳ್ಳ ಸಿಂಹವನ್ನಾಕೆಗೆ ವಾಹನವಾಗಿತ್ತು, ಬಹು ತೀಕ್ಷ್ಣವಾದ ಅಷ್ಟಾದಶಾಯುಧಗಳನ್ನಿತ್ತು, ಆಸುರರ ಸಂಹಾರವಂ ಮಾಡಲು ಕಳುಹಿದನು. ಬಳಿಕ ಸರ್ವಾಯುಧ ಸಮರ್ಥಳಾದ ಆ ದುರ್ಗಾದೇವಿಯು ಮಹತ್ತರವಾದ ಆ ಸಿಂಹವಾಹನವನ್ನೇರಿ, ಆ ವ್ಯಾಘ್ರಾಸುರನ ಸಂಹಾರವಂ ಮಹಿಷಾಸುರನ ಶಿರಚ್ಛೇದನವಂ ಮಾಡೆ, ಆತನ ಶಿರವು ದೇವಿಯ ಮುಂದೆ ಮರಳಿ ಯುದ್ಧವಂ ಮಾಡಿತು. ಆಗ ದೇವಿಯು ಪಾದದಿಂದಾತನ ಶಿರವಂ ಮೆಟ್ಟಿ ತ್ರಿಶೂಲದಿಂ ತಿವಿಯೆ, ಆ ಅಸುರನು ದೇವಿಯ ಪಾದಸ್ಪರ್ಶಮಾತ್ರದಿಂದಲೆ

ಜ್ಞಾನಿಯಾಗಿ ಸ್ತೋತ್ರಂಗಳಂ ಮಾಡಲಾಗಿ, ದೇವಿಯು ಗಣತ್ವವಂ ಕೊಟ್ಟ ಮರಳಿ ಪಾರ್ವತೀ ಪರಮೇಶ್ವರರ ಸಮೀಪಕ್ಕೆ ಪೋಗಿ, ಶಿವಲಿಂಗದಲ್ಲಿ ಅರ್ಚನೆಯಂ ಮಾಡುತಿರ್ದಳು. ಆಗ ದೇವತೆಗಳು ಭಯವಿರಹಿತರಾಗಿ ದೇವಂಗೂ ದೇವಿಯರಿಗೂ ದುರ್ಗಾದೇವಿಗೂ ನಮಸ್ಕಾರವಂ ಮಾಡಿ, ಅವರನುಮತಿಯಿಂದ ತಮ್ಮ ತಮ್ಮ ಸ್ಥಾನಂಗಳಿಗೆ ಪೋದರೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದ

ನೆಂಬಲ್ಲಿಗೆ, ಉಪದೇಶಕಾಂಡದೊಳು ಎಪ್ಪತ್ತೈದನೆಯ ಅಧ್ಯಾಯವು ಸಂಪೂರ್ಣವಾದುದು.

ಎಪ್ಪತ್ತಾರನೆಯ ಅಧ್ಯಾಯವು.

ರಕ್ಷೋಘ್ನಯಾಗ ವೃತ್ತಾಂತವು

ಎಲೈ ಋಷಿಗಳಿರಾ! ಒಂದಾನೊಂದು ವೇಳೆಯಲ್ಲಿ ಸ್ವರ್ಗದೊಳು ಇಂದ್ರನು ಅನೇಕ ಭೋಗಂಗಳನ್ನನುಭವಿಸುತ್ತಿರ್ದನು. ಆಗ ಸಪ್ತರ್ಷಿಗಳು ಆತನಂ ನೋಡಲು ಬರೆ, ಇಂದ್ರನವರಿಗೆ ನಮಸ್ಕಾರವಂ ಗೈದು ಅನೇಕ ಉಪಚಾರಂಗಳಂ ಮಾಡಿ, ಎಲೈ ಋಷಿಗಳಿರಾ! ನಿಮ್ಮ ಆಗಮನದಿಂ ನಾನು ಧನ್ಯನಾದೆನು. ವಿಶೇಷವಾದ ವರವಂ ಪಡೆಯಲ್ಪ್ರಾರ್ಥಿಸುತಲಿದೇನೆ, ದೇವತೆಗಳು ಮನುಷ್ಯರು ಪಿತೃಗಳು ಈ ನಾವೆಲ್ಲರು ಸುಖವಾಗಿರುತಿದೇವೆ. ಅಸುರರು ಪಿಶಾಚರು ಸಖರಾಗಿ, ನಮಗೆ ರಿಪುಗಳಾಗಿದಾರೆ. ಅವರ ಉಪದ್ರವವಂ ಪರಿಹರಿಸುವ ನಿಮಿತ್ತವಾಗಿಯು ನಮ್ಮ ಶ್ರೇಯಸ್ಸಿಗೋಸುಗವೂ ನೀವು ಈ ಅಮರಾವತೀ ಪುರದಲ್ಲಿ ಬೇರೆ ಬೇರೆ ಕುಂಡದಲ್ಲಿ ಅಗ್ನಿಪ್ರತಿಷ್ಠೆಯಂ ಮಾಡಿ, ರಕ್ಷೋಘ್ನ ಮಂತ್ರದಿಂದ ಪ್ರತಿ ದಿವಸದಲ್ಲಿಯೂ ಮಹಾದೇವನಂ ಪೂಜಿಸುತ್ತಿರೆಂದು ಪ್ರಾರ್ಥಿಸಿದನು. ಬಳಿಕ ಆ ಸಪ್ತರ್ಷಿಗಳು ಈ ವಾಕ್ಯವಂ ಕೇಳಿ, ಎಲೈ ಮೋಹಿಯಾದ ಇಂದ್ರನೆ! ನಾವು ಸ್ವಕರ್ಮವಂ ಬಿಟ್ಟು ನಿರಂತರವು ಇಲ್ಲಿ ಹ್ಯಾಗಿದ್ದೇವು? ಎನಲು, ಈ ವಾಕ್ಯವಂ ಕೇಳಿ ಇಂದ್ರನು ಎಲೈ ಋಷಿಗಳಿರಾ! ನೀವು ನಮ್ಮ ನಿಮಿತ್ತವಾಗಿ ಇಲ್ಲಿಯೆ ವಾಸವಂ ಮಾಡಿಕೊಂಡಿರಬೇಕು. ಜ್ಞಾನಿಗಳಾಗಿರ್ದವರಿಗೆ ಕರ್ಮಗಳಿಂದೇನು ಪ್ರಯೋಜನವೆನೆ, ಋಷಿಗಳದಂ ಕೇಳಿ ಆ ಇಂದ್ರನ ವಾಕ್ಯವಂ ಮೀರಲಾರದೆ ಅಂತರಂಗದಲ್ಲಿ ಸಂತೋಷವಿರಹಿತರಾಗಿ, ಬಾಹ್ಯದಲ್ಲಿ ಸಂತೋಷಗೊಂಡು ಸಪ್ತಕುಂಡಂಗಳಲ್ಲಿ ಅಗ್ನಿಪ್ರತಿಷ್ಠೆಯಂ ಮಾಡಿ, ರಕ್ಷೋಘ್ನವೆಂಬ ಯಾಗವಂ ನಡೆಯಿಸಿದರು. ಆ ಕುಂಡಗಳಲ್ಲಿ ರಕ್ತಾಸುರ ರಕ್ತಬೀಜ ಷಂಡಾಸುರ ರಾವಣಾಸುರರು ಪುಟ್ಟಿ ಯಾಗವಂ ಮಾಡುವ

ಸಪ್ತರ್ಷಿಗಳ ನಟ್ಟಿಕೊಂಡು ಬರೆ, ಆ ಋಷಿಗಳು ಆ ಅಸುರರಂ ಕಂಡು ಪಲಾಯನವಾದರು. ಬಳಿಕ ಆ ಅಸುರರು ಇಂದ್ರಲೋಕಕ್ಕೆ ಪೋಗಿ ಸಮಸ್ತ ದೇವತೆಗಳಂ ಬಾಧಿಸಿ, ಅಮರಾವತಿಯಂ ಪಿಡಿದು ಹರಿ ಬ್ರಹ್ಮ ಮುಂತಾದ ದೇವತೆಗಳ ಲೋಕಕ್ಕೆ ಸಾರಿ ಅವರವರ ಪುರಗಳನ್ನಿಡಿದು, ಸರ್ವ ಪ್ರಾಣಿಗಳಂ ಹಿಂಸಿಸುತ್ತಿರೆ, ಆ ಸಪ್ತರ್ಷಿಗಳು ಇಂದ್ರ ಹರಿ ಬ್ರಹ್ಮ ಮುಂತಾದ ದೇವತೆಗಳು ಶಿವಪೂಜೆಯಂ ಮಾಡಲೋಸುಗ ಕೈಲಾಸಕ್ಕೆ ಪೋಗಿ, ಶಿವಂಗೆ ನಮಸ್ಕಾರವಂ ಮಾಡಿ ಈ ಅಸುರರ ವೃತ್ತಾಂತವಂ ಪೇಳ್ದರು. ಬಳಿಕ ದೇವದೇವನಾದ ಶಂಕರನು ಅವರ ವಾಕ್ಯವಂ ಕೇಳಿ, ಎಲೈ ಇಂದ್ರನೆ! ನೀನು ಭೋಗಾರ್ಥವಾಗಿ ನನ್ನ ಉಪಾಸಕರಾದ ಸಪ್ತರ್ಷಿಗಳಿಂದ ರಕ್ಷೋಘ್ನವೆಂಬ ಯಾಗವಂ ಮಾಡಿಸಿದರಿಂದ ಆ ಯಜ್ಞವೆ ನಿನಗೆ ವಿಪರೀತ ಫಲವನ್ನಿತ್ತುದು, ಎಂದು ಪೇಳುತ್ತಿರುವಾಗ, ದುರ್ಗಾದೇವಿಯು ಮಹಿಷಾಸುರನಂ ಮರ್ದಿಸಿ ವ್ಯಾಘ್ರಾಸುರನಂ ಸಂಪರಿಸಿ ಅತಿ ಸಂತೋಷದಿಂ ಸ್ವಾಮಿಯ ಸಮೀಪಕ್ಕೆ ಬಂದಳು. ಆಗ ಸ್ವಾಮಿಯು ಆ ದುರ್ಗಾದೇವಿಗೆ ಏಳು ಮಂದಿ ಅಸುರರಂ ಸಂಹರಿಸುವಂತೆ ಆಜ್ಞಾಪಿಸಿ, ಆಕೆಗೆ ಸಹಾಯವಾಗಿ ಕುಂಡೋದರನಂ ಕಳುಹೆ, ಆ ದೇವಿಯು ಕುಂಡೋದರನಂ ಸೇರಿ ಪೊರಮಟ್ಟು ಯುದ್ಧರಂಗದಲ್ಲಿ, ರಕ್ತಾಸುರ, ರಕ್ತಬೀಜರೆಂಬ ಅಸುರರೊಡನೆ ಯುದ್ಧವಂ ಮಾಡಿ ಅವರಂ ಛೇದಿಸಿದಳು. ಆ ಸಮಯದಲ್ಲಿ ಅವರ ರಕ್ತವು ಭೂಮಿಯಲ್ಲಿ ಬಿದ್ದು ಅನೇಕ ಅಸುರರು ಪುಟ್ಟಿದರು. ಬಳಿಕ ದುರ್ಗಾದೇವಿಯು ಕಾಳಿಯಂ ಸೃಷ್ಟಿಸೆ, ಸಮರ ಭೂಮಿಯಲ್ಲಿ ಆ ಕಾಳಿಯು ನಾಲಿಗೆಯಂ ಹಾಸಿ ಅಸುರರಂ ಸಂಹರಿಸಲಾಗಿ ಅವರು ಮೃತರಾದರು. ಆ ಕಾಳಿಯು ಅಸುರರ ರಕ್ತಪಾನದಿಂ ಮತ್ತೆಯಾಗಿ ಸಮಸ್ತ ಪ್ರಾಣಿಗಳಲ್ಲಿಯು ದ್ವೇಷಬುದ್ಧಿಯುಳ್ಳವಳಾಗಿ, ಸರ್ವ ಸಂಹಾರದಲ್ಲಿ ಉದ್ಯುಕ್ತೆಯಾಗೆ, ಶಿವನು ಸಮಸ್ತ ಪ್ರಾಣಿಗಳಿಗೆ ಹಿತವಂ ಮಾಡಲೋಸುಗವು ಕಾಳಿಯಗರ್ವಭಂಜನಕ್ಕೋಸುಗವೂ ಆಕೆಯೊಡನೆ ನರ್ತನವಂ ಮಾಡಲಾಗಿ, ಆ ಕಾಳಿಯು ಬಹು ನರ್ತನವಂ ಗೈದಲಸಿ ಗರ್ವವಂ ಬಿಟ್ಟು ದುರ್ಗಾದೇವಿಯೊಡನೆ ಪಾರ್ವತೀದೇವಿಯ ಸಮೀಪಕ್ಕೆ ಬಂದಳು. ಬಳಿಕ ಕುಂಡೋದರನು ಪಂಚರಾವಣರಂ ಸಂಹರಿಸಿ ಅವರನ್ನೆಲ್ಲರಂ ಭಕ್ಷಿಸಿ, ಸಾಂಬನಾದ ಶಿವನ ಸಮೀಪಕ್ಕೆ ಪೋಗಿ ನಿಜಾನಂದದಿಂದಿರುತಿರ್ದನು. ಆಗ ಹರಿಬ್ರಹ್ಮ ಮುಂತಾದ ದೇವತೆಗಳು ದೇವದೇವನಾದ ಪರಮೇಶ್ವರನಾಜ್ಞೆಯಿಂ ತಮ್ಮ ತಮ್ಮ ಲೋಕಂಗಳಿಗೆ ಪೋಗಿ ನಿಜಾನಂದದಿಂದಿರುತಿಪ್ಪರು. ಹೀಗೆ ದೇವತೆಗಳಿಗೆ ಅಸುರರಿಂ ಯಾವಾಗ ಬಾಧೆಯುಂಟಾಗುವದೋ, ಆವಾಗ ದೇವತೆಗಳೊಂದಾಗಿ ಸೇರಿ ಶಿವಾರಾಧನಂಗೈದು

ಸುಖದಿಂದಿರುತಿದ್ದರು. ಎಲೈ ಋಷಿಗಳಿರಾ! ಬೇರೆ ಬೇರೆ ಶಿವಾರ್ಚನೆಯಂ ಮಾಡಿ ಸಿದ್ಧಿಯಂ ಪಡೆದವರ ಕಥೆಗಳು ಇಂದ್ರಾದಿದೇವತೆಗಳ್ವೆರಸಿ ಮಾಡಿದ ಶಿವಾರಾಧನದ ಕಥೆಯು ಈ ಉಭಯಾತ್ಮಕವಾದ ಕಥೆಗಳು ನನ್ನಿಂದ ಪೇಳಲ್ಪಟ್ಟವು. ಆವಾತನು ಈ ಶಿವಾರ್ಚನಾಮಹಿಮೆಯಂ ನಿತ್ಯದಲ್ಲಿಯು ಪಠಿಸುವನೋ, ಆವಾತನು ಪುಸ್ತಕದಲ್ಲಿ ಬರೆದು ಪ್ರತಿ ದಿವಸದಲ್ಲಿಯು ಅರ್ಚಿಸುತಿದಾನೋ, ಮತ್ತಂ ಈ ಉಪಾಖ್ಯಾನವಂ ಯಾವಾತನು ಕೇಳುವನೋ ಆವಾತನು ಶ್ರವಣಂ ಗೈಯ್ಯಿಸುವನೋ, ಅವರೆಲ್ಲರು ಆಧಿವ್ಯಾಧಿಗಳಿಂ ಬಿಡಲ್ಪಟ್ಟವರಾಗಿ, ಪುತ್ರ ಪೌತ್ರ ಕಳತ್ರಾದಿಗಳ್ವೆರಸಿ ಸಮಸ್ತ ವಸ್ತುಗಳಿಂದೊಡಗೂಡಿ, ಮುದದಿಂ ಸಮಸ್ತ ಕರ್ಮಗಳಂ ಮಾಡಿ ಅಂತ್ಯದಲ್ಲಿ ಮೋಕ್ಷವನ್ನೈದುವರು. ಮತ್ತಂ, ಪರಮೇಶ್ವರನ ಪಾದಪೂಜೆಯಿಂದ ಸಮಸ್ತ ಸಿದ್ಧಿಗಳು ಉಂಟಾಗುವವು. ಆ ಶಿವಾರ್ಚನೆಯೆ ಹರಿಬ್ರಹ್ಮೇಂದ್ರ ಪದಪ್ರಾಪ್ತಿಗೆ ಕಾರಣವಾಗುವದು ಎಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ಉಪದೇಶ ಕಾಂಡದೊಳು ಎಪ್ಪತ್ತಾರನೆಯ ಅಧ್ಯಾಯವು ಸಂಪೂರ್ಣಂ.

ಎಪ್ಪತ್ತೇಳನೆಯ ಅಧ್ಯಾಯವು.

ವ್ಯಾಸಮಹರ್ಷಿಗೆ ಶಿವಭಕ್ತಿ ತಪ್ಪಿ ವಿಷ್ಣುಭಕ್ತಿ ಯುಂಟಾದ ಫಲಿತವು.

ಎಲೈ ಋಷಿಗಳಿರಾ! ಪೂರ್ವದಲ್ಲಿ ಬ್ರಹ್ಮಮಾನಸ ಪುತ್ರರಾದ ಸನಕ ಸನಂದನ ಸನತ್ಕುಮಾರ ಸನತ್ಸುಜಾತರೆಂಬ ನಾಲ್ವರು ಋಷಿಗಳು, ಪುಣ್ಯವಾದ ಶಂಭುವಿನ ಪೂಜೆಯಂ ಮಾಡಿ ಪ್ರಸನ್ನನಾದ ಶಿವನಿಂದ ವೇದಾಗಮೇತಿಹಾಸ ಪುರಾಣಂಗಳನೋದಿ, ಅದರ ಅರ್ಥಂಗಳಂ ತಿಳಿದು ಶಿವಾರ್ಚನಾಪರರಾಗಿ, ನಿತ್ಯದಲ್ಲಿಯು ಶಿವಯೋಗದಿಂ ಪಾವನರಾಗಿ ಮಹಾ ಪಾತಕ ಸಮೂಹವಂ ಶಿವಜ್ಞಾನಾಗ್ನಿಯಿಂ ದಹಿಸಿ, ಜೀವನ್ಮುಕ್ತರಾಗಿ ಪರಮಾನಂದ ನಿರ್ಭರರಾದರು. ಇದಲ್ಲದೆ ವ್ಯಾಸಮಹಾಮುನಿಯು ವಿಶ್ವರಕ್ಷಾಕಾರನಾದ ಮಹಾದೇವನಂ ಪೂಜಿಸಿ, ದೇವತೆಗಳನ್ನು ಚತುರ್ದಶ ಪುರಾಣ ವಿದ್ಯೆಗಳನ್ನು ಚನ್ನಾಗಿ ತಿಳಿದು, ತಪಸ್ವಿಗಳಾದ ಶಿಷ್ಯರಿಗೆ ಪೇಳ್ದು ಮಹಾದೇವನಂ ಪರತತ್ವವಾಗಿ ತಿಳಿದನು. ತದನಂತರದಲ್ಲಿ ಐಶ್ವರ್ಯ ಮದ ಮೋಹದಿಂದಲು ವಿದ್ಯಾಗರ್ವದಿಂದಲು ಪರಮೇಶ್ವರನ ಮಾಯೆಯಿಂದಲು ಮೋಹಿತನಾಗಿ, ಈಶ್ವರನ ಭಕ್ತರಾದ ಮತ್ತಂ ತನಗೆ ಶಿಷ್ಯರಾದ ಋಷಿಗಳಂ ನೋಡಿ, ನಾರಾಯಣನೆ ಪರಬ್ರಹ್ಮನು ಪರತತ್ವವು ಎಂದು ಪೇಳೆ,

ಶಿಷ್ಯರಾದ ಋಷಿಗಳು ಆ ವಾಕ್ಯವಂ ಕೇಳಿ, ಎಲೈ ಮುನಿಪ! ನೀನಿಷ್ಟುಕಾಲ ಪರ್ಯಂತರವು ಶಿವನೆ ಪರತತ್ವವು, ಪರಬ್ರಹ್ಮನು, ಎಂದು ಪೇಳಿ ಈಗ ಅದಕ್ಕೆ ವಿರುದ್ಧವಾಗಿ ಪೇಳಿದೆಯಲ್ಲವೆ, ಹೀಗೆ ಪೇಳಲ್ಕಾರಣವೇನು, ಎಂದು ಕೇಳಲಾಗಿ ಆ ವ್ಯಾಸಮುನಿಯು ಮರಳಿ ವಿಷ್ಣುವೆ ಪರಬ್ರಹ್ಮನು, ಮತ್ತೊರ್ವನಲ್ಲ, ಸುಮ್ಮನೆ ಪೂರ್ವದಲ್ಲಿ ಪೇಳಿದೆನು, ಈಗ ನೀವು ಹರಿಯನ್ನೆ ಪರಬ್ರಹ್ಮವೆಂದು ತಿಳಿಯಿರೆಂದನು, ಬಳಿಕ ಋಷಿಗಳು ಮಹಾ ಸಂದೇಹಯುಕ್ತರಾಗಿ, ಎಲೈ ಮುನಿಯೆ! ಪೂರ್ವದಲ್ಲಿ ವೇದಪುರಾಣ ಇತಿಹಾಸಂಗಳಿಗೆ ವಿರುದ್ಧವಲ್ಲದ ಅರ್ಥವಂ ಪೇಳಿದೆ, ಈಗ ಅದಕ್ಕೆ ವಿರುದ್ಧವಾದ ಅರ್ಥವನೆ ಪೇಳುತಿದ್ಧಿಯೆನಲು, ಆತನು ಅಸತ್ಯವಂ ಪೇಳಲಿಲ್ಲೆಂದನು. ಅನಂತರದಲ್ಲಿ ಋಷಿಗಳು, ಎಲೈ ವ್ಯಾಸ ಮುನಿಯೆ! ನೀನು ನಿರೂಪಿಸಿದ ವಾಕ್ಯವು ಸತ್ಯವಾಗಿರ್ದೊಡೆ, ಕಾಶೀಪಟ್ಟಣಕ್ಕೆ ಪೋಗಿ ಭುಜಂಗಳಂ ಮೇಲಕ್ಕೆತ್ತಿ ಹಾಗೆ ಪೇಳಿದೆಯಾದೊಡೆ, ನಿನ್ನ ವಚನವು ಪ್ರಮಾಣವಾದೀತೆನಲು, ಆವ್ಯಾಸಮುನಿಯು ಹಾಗೆ ಆಗಲೆಂದಂಗೀಕರಿಸಿ, ಮಹಾ ಪಾಪಂಗಳಂ ಪರಿಹರಿಸುವುದರಲ್ಲಿ ಸಮರ್ಥವಾದ ಕಾಶೀಪುರಿಗೆ ಪೋಗಿ, ವಿಶ್ವೇಶ್ವರನ ಸನ್ನಿಧಿಯಲ್ಲಿ ಭುಜಗಳಂ ಮೇಲಕ್ಕೆತ್ತಿ ನಾರಾಯಣನೆ ಪರಬ್ರಹ್ಮವು ಪರಾತ್ಪರನು, ಪರಂಜ್ಯೋತಿಯು, ಪರಮಾತ್ಮನು ಎನಲು, ಆತನ ಭುಜಗಳು ಸ್ತಂಭಿಸಿ ಪೋದವು. ಜಿಹ್ವೆಯು ಚಲಿಸದೆ ಪೋದುದು.

ಶಿವ ಸರ್ವಾಧಿಕ್ಯತೆಯನ್ನು ವಿಷ್ಣುವೆಯೆ ಕೈಯೆತ್ತಿ ಸಾರುವಿಕೆ.

ಆಗ ಆತನು ಸ್ತಂಭದಂತೆ ನಿಷ್ಕ್ರಿಯನಾಗಿರ್ದನು. ಬಳಿಕ ಆತನ ಶಿಷ್ಯರು ಆತನಂ ನೋಡಿ ಬಹು ದುಃಖಾಕುಲರಾಗಿ ಅಜ್ಞಾನದ ಮಹಿಮೆಯು ಆಶ್ಚರ್ಯಕರವಾದದ್ದು, ಸಕಲ ವೇದಾಗಮ ಪುರಾಣ ಇತಿಹಾಸಂಗಳಂ ತಾನೆ ಪೇಳಿ ಈಗ ಅದಕ್ಕೆ ವಿಪರೀತಾರ್ಥವಂ ಪೇಳಿದ್ದರಿಂದ ಈತನ ಬಾಹುಗಳು ಜಿಹ್ವೆಯು ಸ್ತಂಭೀಭೂತವಾದವೆಂದು ಯೋಚಿಸುತ್ತಿರೆ, ವಿಷ್ಣುವು ಪ್ರಸನ್ನನಾಗಿ ಭುಜ ಸ್ತಂಭಭೂತನಾದ ವ್ಯಾಸನಂ ನೋಡಿ ಆಶ್ಚರ್ಯಯುಕ್ತನಾಗಿ, ಎಲೈ ವ್ಯಾಸನೆ! ನಿನ್ನ ನಿಯತವೆಂತು ಪೋದುದು, ಮತ್ತಂ ಶಿವನು ವಿಶ್ವಾಧಿಕನು ಶಾಂತನು ಸಚ್ಚಿದಾನಂದಸ್ವರೂಪನು? ಯೋಗಿಧ್ಯೇಯನು ಏಕಾಂತನು ನನಗು ಧ್ಯೇಯನು ಅವ್ಯಯನು ಸರ್ವ ವೇದಾಂತ ಸಾರಜ್ಞನು, ಸರ್ವಾಧಿಕನು, ಇಂಥ ಸ್ವಾಮಿಯಂ ಬಿಟ್ಟು ನನ್ನನ್ನು ಅಧಿಕನೆಂದೇನುಕಾರಣ ಪೇಳಿದಿ, ಈಗ ನಾನು ಭುಜಂಗಳಂ ಮೇಲಕ್ಕೆತ್ತಿ ಸತ್ಯವಾಗಿ ಪೇಳುತ್ತಿದೇನೆ, ಶಿವನೆ ಪರತತ್ವವು ಪರಬ್ರಹ್ಮವು ವಿಶ್ವಾಧಿಕವು, ನಾನು ಸಕಲಕ್ಕೆ ಕರ್ತನು, ನನಗೆ ಕರ್ತನು ಮಹೇಶ್ವರನು ದೇವದೇವನಾದ ಶಂಕರಂಗೆ ಕರ್ತನಾರು ಇಲ್ಲ, ಆ ಶಿವನೆ ಸಮಸ್ತರಿಗು ಈಶ್ವರನು, ಆತನ

ಪ್ರಸಾದದಿಂದಲೆ ಸರ್ವರಿಗು ಮೋಕ್ಷವುಂಟಾಗುವುದೆಂದು ವಿಷ್ಣುವು ವ್ಯಾಸಂಗೆ
ಪೇಳಿದನೆಂಬದಾಗಿ ಸೂತಂ ಶೌನಕಾದಿಗಳಿಗೆ ನಿರೂಪಿಸಿದನೆಂಬಲ್ಲಿಗೆ,
ಉಪದೇಶ ಕಾಂಡದೊಳು ಎಪ್ಪತ್ತೇಳನೆಯ ಅಧ್ಯಾ
ಯವು ಸಮಾಪ್ತವಾದುದು.

ಎಪ್ಪತ್ತೆಂಟನೆಯ ಅಧ್ಯಾಯವು.

ವ್ಯಾಸಮಹರ್ಷಿಗೆ ಪರಶಿವನ ಪ್ರಸನ್ನತೆ.

ಎಲೈ ಋಷಿಗಳಿರಾ ! ಅನಂತರದಲ್ಲಿ ವಿಷ್ಣುವು ||ಶ್ಲೋ|| ಜಯಶಂಭೋ ಮಹಾದೇವ ಸಚ್ಚಿದಾನಂದವಿಗ್ರಹ | ನಮಸ್ತೆಸ್ತುಮಹಾದೇವ ಪರಾತ್ಪರತರಾಯಚ || ವಿಶ್ವಾಧಿಕಾಯಭವತೆ ನಮೊಯಜ್ಞೇಶ್ವರಾಯತೆ | ನಮಸ್ತೆ ಸರ್ವಕರ್ತೃಷು ಪುನರ್ಭೂಯೊನಮೋನಮಃ || ಹೀಗೆಂದು ಋಷಿಗಳೊಡನೆ ಶಿವಸ್ತೋತ್ರವಂ ಮಾಡೆ, ವ್ಯಾಸನು ವಿಷ್ಣುವಿನ ವಾಕ್ಯವಂ ಕೇಳಿ ಅಜ್ಞಾನದಿಂ ಬಿಡಲ್ಪಟ್ಟು ಭಯಾಕುಲಿತಮಾನಸನಾಗಿ, ಎಲೈ ಋಷಿಗಳಿರಾ! ಮಹಾದೇವನು ವಿಶ್ವಾಧಿಕನು, ಆ ಸ್ವಾಮಿಯಾಜ್ಞೆಯಿಂದ ನಾರಾಯಣನು ಜಗತ್ತಂ ಪಾಲಿಸುತಿದಾನೆ, ಶಿವಪೂಜಾಪ್ರಭಾವದಿಂದ ಬ್ರಹ್ಮಂಗೆ ಬ್ರಹ್ಮತ್ವವು ವಿಷ್ಣುವಿಗೆ ವಿಷ್ಣುತ್ವವು ಉಂಟಾದವು. ಮಹೇಶ್ವರನಾಗಿ ಮಾಯಾತೀತನಾದ ಶಂಭುವಿಗೆ ನಮಸ್ಕಾರವು ನಮಸ್ಕಾರವೆಂದು ಸ್ತುತಿಸಲು, ಶಿವನು ಸಾಂಬನಾಗಿ ಸಗುಣನಾಗಿ ವ್ಯಾಸಂಗೆ ಪ್ರಸನ್ನನಾದನು. ಆಗ ಶಂಕರಪ್ರಿಯನಾದ ನಂದಿಕೇಶ್ವರನು ವ್ಯಾಸಮುನಿಯಂ ನೋಡಿ, ಎಲೈ ದುರ್ಬುದ್ಧಿಯುಳ್ಳವನಾದ ವ್ಯಾಸನೆ! ಪರಬ್ರಹ್ಮನಾಗಿ ಶಂಕರನಾದ ನೀಲಗ್ರೀವನಾಗಿ ವಿರೂಪಾಕ್ಷನಾದ ಸಚ್ಚಿದಾನಂದ ವಿಗ್ರಹನಾಗಿ ವಿಶ್ವಾಧಿಕನಾದ, ವಿಶ್ವರೂಪನಾದ ಮಹೇಶ್ವರನಿರುವಲ್ಲಿ ವ್ಯರ್ಥವಾಗಿ ಹರಿಬ್ರಹ್ಮರನ್ನು ಸ್ತುತಿಸುತಿದ್ದಿಯೆ? ಆವುದಾನೊಂದು ಕಾರಣದಿಂ ಹರಿಯನ್ನೆ ಸತ್ಯನೆಂದು ಭುಜವನ್ನೆತ್ತಿದೆಯೋ ಆದುಕಾರಣದಿಂ ನಿನ್ನ ಭುಜಂಗಳಂ ಕತ್ತರಿಸಬೇಕೆಂದನು. ಬಳಿಕ ವ್ಯಾಸಮುನಿಯು ತನ್ನ ಮುಂದೆ ಪ್ರಸನ್ನನಾದ, ಬ್ರಹ್ಮಾದಿಗಳ ಕಪಾಲ ಮಾಲಾಲಂಕೃತನಾದ ಅನಿರ್ದೇಶ್ಯನಾದ ಅನಂತ ಮಹಿಮಾಸ್ಪದನಾದ ಶಂಭುವಂ ನೋಡಿ, ತನ್ನ ನಯನಂಗಳಿಗೆ ಸಾಫಲ್ಯವಾದುದೆಂದು ನಿಶ್ಚಯಿಸಿ ದಂಡವತ್ಪ್ರಣಾಮಂ ಗೈದು || ಶ್ಲೋ|| ಮಹಾದೇವಮಹಾದೇವಮಹಾದೇವದಯಾನಿಧೆ | ಭವಾನೇವಭವಾನೇವಭವಾನೇವಗತಿರ್ಮಮ || ಹೀಗೆಂದು ಸ್ತುತಿಸಿ, ಎಲೈ ಶಿವನೆ! ಅಜ್ಞಾನದಿಂದುಂಟಾದ ಅಪರಾಧವಂ

ಕ್ಷಮಿಸೆಂದು ಮರಳಿ ಮರಳಿ ಅನೇಕವಾಗಿ ಸ್ತುತಿಸೆ, ಶಿವನು ಗಣಂಗಳೊಡನೆ ಅಂತರ್ಧಾನವಾದನು. ಬಳಿಕ ವಿಷ್ಣುವು ಸಕಲ ಋಷಿಗಳು ಮಹಾದೇವನ ದರ್ಶನದಿಂ ಸಂತುಷ್ಟರಾಗಿ ವ್ಯಾಸನಂ ನೋಡಿ, ಎಲೈ ವ್ಯಾಸನೆ! ಇತಃಪರದಲ್ಲಿ ಈ ಮೇರಿಗೆ ನುಡಿಯಬೇಡ, ಮದವಂ ಬಿಟ್ಟು ಶಿವನೇ ಪರಬ್ರಹ್ಮವೆಂದು ಹೇಳೆಂಬದಾಗಿ ಆಜ್ಞಾಪಿಸಿ ಅಂತರ್ಧಾನವಾದನು. ಅನಂತರದಲ್ಲಿ ಋಷಿಗಳು ತಮ್ಮ ತಮ್ಮ ಆಶ್ರಮಕ್ಕೆ ಪೋದರು. ಆಗ ವ್ಯಾಸಮುನಿಯು ತನ್ನ ಮನದಿಂ ಸಮಸ್ತವಂ ಯೋಚಿಸಿ ತನ್ನ ಶಿಷ್ಯರೊಡನೆ ಕಲಿದೋಷವಿರಹಿತವಾದ ಕಾಂಚೀಪುರಕ್ಕೆ ಪೋಗಿ, ಅಲ್ಲಿ ಶಿವಲಿಂಗಪ್ರತಿಷ್ಠೆಯಂ ಮಾಡಿ ವಿಧಿಯಿಂ ಶಿವನಂ ಪೂಜಿಸಿ, ಶಂಭುವಿನ ಕೃಪಾಬಲದಿಂ ದುಳಿದ ದುರಿತಂಗಳಂ ಪರಿಹರಿಸಿಕೊಂಡು ಶಿವಜ್ಞಾನ ಪ್ರಭಾವದಿಂ ನಿರ್ಮಲವಾದ ಸಂತೋಷವಂ ಪಡೆದ ನೆಂಬಿಲ್ಲಿಗೆ,

ಎಪ್ಪತ್ತೆಂಟನೆಯ ಅಧ್ಯಾಯವು ಸಂಪೂರ್ಣಂ.

ಎಪ್ಪತ್ತೊಂಬತ್ತನೆಯ ಅಧ್ಯಾಯವು.

ಶಿವಾಧಿಕ್ಯತಾಕಥೋಪಕಥನದಲ್ಲಿ ಮಹರ್ಷಿಗಳ ವೃತ್ತಾಂತವು.

ಎಲೈ ಋಷಿಗಳಿರಾ! ಪೂರ್ವದಲ್ಲಿ ಪುಣ್ಯಾತ್ಮನಾದ ವಸಿಷ್ಠಮುನಿಯು ಶಿವನಂ ಪೂಜಿಸಿ, ಅರುಂಧತಿಯನ್ನು ಕಾಮಧೇನುವನ್ನು ಸರ್ವವಿದ್ಯಾಪರಿಜ್ಞಾನವನ್ನು ಸಪ್ತರ್ಷಿತ್ವವನ್ನು ಪಡೆದನು. ಮತ್ತಂ ವಸಿಷ್ಠಮುನಿಗೆ ಪೌತ್ರನಾದ, ಶಕ್ತಿಯೆಂಬ ಋಷಿಗೆ ಪುತ್ರನಾದ ನಿತ್ಯದಲ್ಲಿಯು ಶಿವಪೂಜಾನಿರತನಾದ ಪರಾಶರಮುನಿಯು, ಒಂದು ದಿನಸದಲ್ಲಿ ವಿಧವೆಯಾದ ತನ್ನ ಮಾತೃವಂ ನೋಡಿ, ಎಲೆ ತಾಯೆ! ನನ್ನ ತಂದೆ ಯೆತ್ತ ಪೋದನೆಂದು ದುಃಖದಿಂ ರಹಸ್ಯದಲ್ಲಿ ಕೇಳಲಾಗಿ, ಆಕೆಯು ಮಹಾ ದುಃಖಾಕುಲಿತೆಯಾಗಿ ಎಲ ಮಗನೆ! ನಿನ್ನ ತಂದೆಯು ದುಷ್ಟನಾದ ರಾಕ್ಷಸನಿಂ ಹತನಾದನು, ಅದುಕಾರಣದಿಂದೆನಗೆ ವೈಧವ್ಯವು ಪ್ರಾಪ್ತಮಾದುದು. ನೀನು ಯತ್ನದಿಂದ ಅದಕ್ಕೊಂದು ಪ್ರಯತ್ನವನ್ನು ಮಾಡೆಂದಳು. ಬಳಿಕ ಆ ಪರಾಶರನು ತನ್ನ ಮಾತೃವಾಕ್ಯವಂ ಕೇಳಿ ಮಹಾ ದುಃಖವನ್ನೈದಿ, ರಾಕ್ಷಸ ಸಂಹಾರಕ್ಕೋಸುಗ ಶಿವಪೂಜೆಯಂ ಮಾಡೆ, ಭಗವಂತನಾದ ಶಿವನು ಆ ಪೂಜೆಯಿಂದ ಪ್ರಸನ್ನನಾಗಿ, ಮಹತ್ತಾದ ವರವನ್ನಿತ್ತು ಅಂತರ್ಧಾನವಾದನು. ಬಳಿಕ ಪರಾಶರಮುನಿಯು ಶಿವಾಜ್ಞೆಯಿಂದ ಅಸುರರಂ ನೋಡಲು, ಅವರುಗಳು ಅಗ್ನಿಕುಂಡದಲ್ಲಿ ಬಿದ್ದು ಶಿವಮಂತ್ರ ಪ್ರಭಾವದಿಂ ದಗ್ಧರಾದರು. ಆಗ ಸಕಲ ಋಷಿಗಳು ವಸಿಷ್ಠಮುನಿಯು ಆತನ ಕೋಪಶಾಂತಿಗೋಸುಗ ಶಕ್ತಿಗೆ ಸಂತೋ

ಷವಂ ಮಾಡೆ, ಆಗ ಪರಾಶರನು ಆ ಕೋಪವಂ ಬಿಟ್ಟು, ವೇದಂಗಳಂ ಆಗಮಂಗಳಂ ಸಮಸ್ತ ಪುರಾಣಂಗಳಂ ಯಥಾರ್ಥವಾಗಿ ಒಂದು ಶಾಸ್ತ್ರವಂ ಮಾಡಿ ಶಂಭುವಿನ ಕೃಪೆಯಿಂ ನಿತ್ಯತ್ವಮಂ ಪಡೆದನು.

ವಿಶ್ವಾಮಿತ್ರನು ಪೂರ್ವದಲ್ಲಿ ಶಿವಪೂಜೆಯಂ ಮಾಡಿ ಶಿವಪ್ರಸಾದದಿಂ ವರಗಳಂ ಪಡೆದು ಬ್ರಹ್ಮಸೃಷ್ಟಿಗೆ ಪ್ರತಿಸೃಷ್ಟಿಯಂ ಮಾಡಿ, ತ್ರಿಶಂಕುಮಹಾರಾಯನಂ ನಿರೀಕ್ಷಿಸಿ ಸಪ್ತರ್ಷಿಗಳಲ್ಲಿ ತಾನೋರ್ವ ಋಷಿಯಾದನು. ವ್ಯಾಘ್ರಪಾದನೆಂಬ ಮುನಿಯು ಪರಮೇಶ್ವರನ ಕೃಪೆಯಿಂದ ಉತ್ತಮನಾದ ಪುತ್ರನಂ ಪಡೆದು, ದೇವದೇವನಾದ ಶಂಕರನ ನಾಟ್ಯವಂ ನೋಡಿ ನಿತ್ಯತ್ವವಂ ಪಡೆದನು. ಆತನ ಕುಮಾರನಾದ ಉಪಮನ್ಯು ಋಷಿಯು ಬಾಲ್ಯದಲ್ಲಿ ತನ್ನ ತಾಯಂ ನೋಡಿ ಕ್ಷೀರವಂ ಬೇಡೆ, ಆಕೆಯು ಉದಕದಲ್ಲಿ ಪಿಷ್ಟವಂ ಕದಡಿ ಕ್ಷೀರವೆಂದು ಪೇಳಿ ಪುತ್ರಂಗೆ ಕೊಡಲು, ಆ ಉಪಮನ್ಯುಋಷಿಯು ಅದಂ ಪಾನವಂಮಾಡಿ ರುಚಿಯಿಲ್ಲದೆ ಇದ್ದಕಾರಣ ರೋದನವಂ ಮಾಡಿ, ಎಲೆ ತಾಯಿಯೆ! ಇದು ಕ್ಷೀರವಲ್ಲವು. ಜಲವೆಂದು ಅಡಿಗಡಿಗೆ ಬಾಧಿಸಿದನು. ಬಳಿಕ ಆಕೆಯು ರೋದನವಂ ಮಾಡುತಿರ್ಪ ಪುತ್ರನಂ ನೋಡಿ, ಎಲೈ ಪುತ್ರನೆ! ನಮ್ಮ ಗೃಹದಲ್ಲಿ ಸ್ವಾದುವಾದಕ್ಷೀರವಿಲ್ಲ. ಪುಣ್ಯಾತ್ಮನಾದ ನಿನಗೆ ಸೋದರಮಾವನಾದ, ಶಂಕರಪ್ರಿಯನಾದ ಶಿವಪೂಜಾಪರನಾದ ವಸಿಷ್ಠಮುನಿಯು ಶಿವಪೂಜೆಗೆ ಪಾಲುಕ್ಕ ಕಾಮಧೇನುವಿನಿಂ ಪುಟ್ಟಿದ ಕ್ಷೀರವಂ ಪಾನವಂ ಮಾಡಿ ಇಲ್ಲಿಯು ಬಾಲತ್ವದಿಂ ಕ್ಷೀರವನಿಚ್ಛೈಸುತಿದ್ದೀ ಎಲೈ ಪುತ್ರನೆ! ವಿರೂಪಾಕ್ಷನು ಪ್ರಸನ್ನನಾಗದ ಬಳಿಕ ಕ್ಷೀರಭೋಜನವೆಲ್ಲಿಯದು? ವಿಶೇಷ ದರಿದ್ರನಾದ ನಿನಗೆ ಕ್ಷೀರಭೋಜನವು ಹೇಗುಂಟಾದೀತು? ಅದುಕಾರಣದಿಂ ನೀನು ವಿಶ್ವಾಧಿಕನಾದ ಯೋಗಿಧ್ಯೇಯನಾದ ಪರಮೇಶ್ವರನ ಪೂಜೆಯಿಂದ ಸಮಸ್ತವನ್ನು ಪಡೆಯುವಿ ಎಂದಳು. ಬಳಿಕ ಉಪಮನ್ಯುವು ಮಾತೃವಿನ ವಾಕ್ಯವಂ ಕೇಳಿ ಸ್ವಲ್ಪ ದೂರ ಪೋಗಿ, ಒಂದಾನೊಂದು ರಹಸ್ಯ ಸ್ಥಳದಲ್ಲಿ ಭೂತಿಭೂಷಿತ ಸರ್ವಾಂಗನಾಗಿ, ರುದ್ರಾಕ್ಷಾಲಂಕೃತನಾಗಿ ಏಕಾಗ್ರಮನದಿಂ ಶಿವನಂ ಧ್ಯಾನಿಸಿ, ಪುರಾಣ ಪುರುಷನಾದ ಆ ಶಿವನಂ ಪೂಜಿಸೆ, ಮಹೇಶ್ವರನಾದ ಭಗವಂತನು ಇಂದ್ರರೂಪವಂ ಧರಿಸಿಕೊಂಡು ಆತಂಗೆ ಪ್ರಸನ್ನನಾದನು. ಆಗ ಉಪಮನ್ಯು ಮಹರ್ಷಿಯು ಆ ಇಂದ್ರನಂ ಕಂಡು ಕೋಪಾಕುಲಿತಮಾನಸನಾಗಿ, ಎಲೈ ಇಂದ್ರನೆ! ನೀನು ನನ್ನ ಮುಂದೆ ನಿಲ್ಲಬೇಡ ಮತ್ತೆಲ್ಲಾದರು ಪೋಗು, ನಾನು ಶಿವಪೂಜಾನಿರತನು, ನಿನ್ನನ್ನು ಸ್ಮರಿಸಲಿಲ್ಲ ನೀನು ಶೂಲಿಯಾದ ಮಹಾದೇವನ ಪೂಜೆಗೆ ವಿಘ್ನವಾದೊಡೆಯಾದರೆ ಶಾಪವಂ ಕೊಡುತ್ತಿದೇನೆಂದು ಕೋಪಿಸಲಾಗಿ, ಈಶ್ವರನು ಆತನ ಚಿತ್ತಧೈರ್ಯ

ವನ್ನು ಶಕ್ತಿಯನ್ನು ನೋಡಿ ವೃಷಭಾರೂಢನಾಗಿ ಅಂಬಾಸಮೇತನಾಗಿ ಕ್ಷಣ
ಮಾತ್ರದಲ್ಲಿ ಮುಂಗಡೆಯಲ್ಲಿಯೆ ಪ್ರಾದುರ್ಭವಿಸಿದನು. ಬಳಿಕ ಆ ಋಷಿಯು
ಸಾಂಬನಾದ ಶಿವನಂ ಕಂಡು ದಂಡವತ್ತಾಗಿ ಪ್ರಣಾಮಮಂಗೈದು, ಎಲೈ ದೇವೇ
ಶನೆ! ನಿನ್ನ ದರ್ಶನದಿಂದೆನ್ನ ವಾಂಛೆಯು ಸಫಲಮಾದುದೆನೆ, ತಾಪಸಪ್ರಿಯನಾದ
ಮಹೇಶ್ವರನು ಕ್ಷೀರಾರ್ಥಿಯಾದ ಆ ಶಿಶುವಿಗೆ ಕ್ಷೀರಸಾಗರವನ್ನು ವೇದಾಗಮ
ಪುರಾಣ ಶಾಸ್ತ್ರಂಗಳ ತತ್ವಜ್ಞಾನವನ್ನು ನಿತ್ಯತ್ವವನ್ನು ಇತ್ತು ಅಂತರ್ಧಾನ
ವಾದನು. ಮತ್ತಂ ಗೌತಮ ಮುನಿಯು ಮಹಾದೇವನಂ ಪೂಜಿಸಿ ಸಮಸ್ತ
ವಿದ್ಯಾಪರಿಜ್ಞಾನವಂ ನಿತ್ಯತ್ವವಂ ಪಡೆದು ಶಿವಪ್ರಿಯನಾಗಿರುತಿರ್ದನು. ಇದಲ್ಲದೆ
ಯೋಗೀಂದ್ರನಾದ ಸದಾನಂದನೆಂಬ ಮುನೀಶ್ವರನು ಸಚ್ಚಿದಾನಂದ ವಿಗ್ರಹ
ನಾದ ಮಹೇಶ್ವರನಂ ಹೃದಯದಲ್ಲಿ ಧ್ಯಾನಿಸಿ, ಸರ್ವಲೋಕಂಗಳಲ್ಲಿಯು ಸಂಚ
ರಿಸಿ, ಅಲ್ಲಲ್ಲಿನ ವೃತ್ತಾಂತವಂ ತಿಳಿದು ಪರಮಾನಂದ ನಿರ್ಭರನಾಗಿರುತಿರ್ದನು.
ಮತ್ತಂ ಮೃಕಂಡು ಮಹಾಮುನಿಯು ಸರ್ವವಿದ್ಯಾ ನಿಪುಣನಾದ ಮಾರ್ಕಂ
ಡೇಯನೆಂಬ ಪುತ್ರನಂ ಪಡೆದು ಆತನಿಂ ಸಮಸ್ತ ಲೋಕಂಗಳಲ್ಲಿಯು ಕೀರ್ತಿ
ಯನ್ನುಂಟುಮಾಡಿ ಅತ್ಯಂತ ಸಂತೋಷದಿಂ ಸತ್ಯಲೋಕದಲ್ಲಿ ವಾಸವಂ
ಮಾಡುತಿರ್ದನು. ಆ ಮಾರ್ಕಂಡೇಯ ಮುನಿಯು ಷೋಡಶವರ್ಷಂಗಳ ಸಂಖ್ಯಾತ
ವಾದ ಆಯುಷ್ಯದ ಪರಿಮಿತನಾಗಿ, ಸಕಲಾಯುಷ್ಯವು ತೀರಿ ಎರಡು ದಿವಸಗ
ಳುಳಿದಿರುವಾಗ ಪಿತೃಮಾತೃಗಳು ತಮ್ಮ ಕುಮಾರನಂ ನೋಡಿ ಇವಂಗೆ ಮೃತ್ಯು
ಕಾಲವು ಪೊದಗಿತೆಂದು ಬಹು ರೋದನವಂ ಮಾಡೆ, ಆಗ ಮಾರ್ಕಂಡೇಯನು
ಆ ತಾಯಿತಂದೆಗಳ ದುಃಖವಂ ನೋಡಿ ತನ್ನ ನಿಮಿತ್ತವೆಂದು ತಿಳಿದು, ಮೃತ್ಯುಂ
ಜಯನಾದ ಶಿವನಂ ಏಕಾಗ್ರಮನದಿಂ ಪೂಜಿಸುತಿರ್ದನು. ಆ ಸಮಯದಲ್ಲಿ
ಯಮನು ಶೀಘ್ರವಾಗಿ ಪ್ರಿಯವಚನಂಗಳಿಂ ಕರೆಯೆ, ಆ ಮೃಕಂಡು ಪುತ್ರನು
ಶಿವಪೂಜಾರತನಾಗಿ ಯಮನಂ ಯೋಚಿಸದಿರ್ದನು. ಆಗ ಅತಿ ಭಯಂಕರನಾದ
ಯಮನು ಮಹಾ ಕೋಪದಿಂದಾತಂಗೆ ಭಯವಂ ಪುಟ್ಟಿಸಿದ್ದರಿಂದ ಆ ಮೃಕಂಡು
ಪುತ್ರನು ಭೀತಿಗೊಂಡು ಶಿವನಂ ಆಲಿಂಗಿಸಲಾಗಿ, ಆ ಯಮನು ಕೋಪದಿಂ
ಲಿಂಗ ಸಹ ಆತನಂ ಪಾಶದಿಂ ಕಟ್ಟಿ ಸೆಳೆದನು. ಬಳಿಕ ಭಗವಂತನಾದ ಮಹೇ
ಶ್ವರನು ಲಿಂಗದಿಂ ಪ್ರಾದುರ್ಭವಿಸಿ ಭಯಂಕರನಾದ ಯಮನಂ ಪಾದದಿಂ
ಪೊಡೆಯೆ, ಪರ್ವತೋಪಮನಾದ ಆ ಯಮನು ಆ ಪಾದಘಾತದಿಂ ದೂರದಲ್ಲಿ
ಬಿದ್ದು ಪ್ರಾಣವಂ ಬಿಟ್ಟನು. ಅನಂತರದಲ್ಲಿ ಮೃಕಂಡುಪುತ್ರನು ಮೆಲ್ಲಮೆಲ್ಲನೆ
ನಯನಂಗಳಂ ಬಿಟ್ಟು, ನೀಲಪರ್ವತಕ್ಕೆ ಸದೃಶನಾದ ಯಮನು ಮೃತನಾದುದಂ

ಕಂಡು, ಮುಂದು ಗಡೆಯಲ್ಲಿ ಕಾಲಕಾಲನಾದ ಪಿನಾಕಿಯಾದ ನೀಲಕಂಠನಾದ ಮಹಾದೇವನಂ ಕಂಡು.

ಶ್ಲೋ॥ ನಮಸ್ತೇಕಾಲಕಾಲಾಯ ವಿರೂಪಾಕ್ಷಾಯಶೂಲಿನೇ।
ಉಗ್ರಾಯಸರ್ವಭಕ್ಷಾಯ ಭೀಮಾಯಮಹತೇನಮಃ ॥

ಎಂದು ಅತ್ಯಂತ ಪ್ರೀತಿಯಿಂ ಸ್ವಾಮಿಯಂ ಸ್ತುತಿಸಿ ಪ್ರಸನ್ನನಂ ಮಾಡಿಕ್ಕೊಂಡು, ಆವಾಗಲು ಷೋಡಶ ವರ್ಷಪ್ರಾಯವಾಗಿರುವಂತೆ ನಿತ್ಯತ್ವರೂಪವಾದ ವರವಂ ಪಡೆದು, ಅಸದೃಶನಾಗಿ ಶೈವಶಾಸ್ತ್ರವಿಶಾರದನಾಗಿ, ಅತ್ಯಂತ ಪ್ರೀತಿಯಿಂ ತನ್ನ ಗೃಹಕ್ಕೆ ಪೋಗಿ ಈಗಲು ಮಾತಾಪಿತೃಗಳ ಸೇವೆಯಂ ಮಾಡಿಕೊಂಡು ಇರುತ್ತಿದಾನೆಂದು ಸೂತಂ ಶೌನಕಾದಿಗಳಿಗೆ ಪೇಳಿದ ಸೆಂಬಿಲ್ಲಿಗೆ,
ಉಪದೇಶಕಾಂಡದೊಳು ಎಪ್ಪತ್ತೊಂಬತ್ತನೆಯ ಅಧ್ಯಾಯವು
ಸಂಪೂರ್ಣಮಾದುದು.

ಎಂಬತ್ತನೆಯ ಅಧ್ಯಾಯವು.

ಅಗಸ್ತ್ಯಮಹರ್ಷಿಗೆ ಪರಶಿವನ ಪ್ರಸನ್ನತೆ.

ಎಲೈ ಋಷಿಗಳಿರಾ! ತಪಸ್ವಿಗಳಿಗೆ ಶ್ರೇಷ್ಠನಾದ ಅಗಸ್ತ್ಯಮಹಾಮುನಿಯು ಶಿವಪೂಜೆಯಿಂದ ವಿಂಧ್ಯಾದ್ರಿಯ ಗರ್ವವ ಅಪಹರಿಸಿ, ಮಹತ್ತಾದ ತೆರೆಗಳುಳ್ಳ ಸಮುದ್ರವಂ ಪಾನವಂ ಮಾಡಿ, ದುರಾತ್ಮರಾದ ಇಲ್ವಲ ವಾತಾಪಿಗಳಂ ಸಂಹರಿಸಿ, ದ್ರಾವಿಡಭಾಷೆಯಂ ಕಲ್ಪಿಸಿ ಸರ್ವಶಾಸ್ತ್ರ ಪರಿಜ್ಞಾನವನ್ನೈದಿ ಶಂಕರನ ತಾಂಡವವಂ ಪಾರ್ವತೀ ಪರಮೇಶ್ವರರ ಕಲ್ಯಾಣವಂ ನೋಡಿ, ಸರ್ವಲೋಕ ಸಂಚಾರವಂ ಸ್ವೇಚ್ಛೆಯಿಂ ಪಡದು, ಶಿವಯೋಗವಂ ಕುಮಾರಸ್ವಾಮಿಯಿಂ ತಿಳಿದು ಸಮಸ್ತ ಲೋಕಂಗಳಲ್ಲಿಯು ಪೂಜ್ಯತ್ವವಂ ಖ್ಯಾತಿಯಂ ಪಡೆದನು. ಮತ್ತಂ ದಧೀಚಿಮಹಾಮುನಿಯು ಬಾಲ್ಯದಲ್ಲಿ ಕ್ಷುಪನೆಂಬ ರಾಯನೊಡನೆ ಸ್ನೇಹವಂ ಮಾಡಿಕೊಂಡಿದ್ದನು. ಒಂದು ವೇಳೆಯಲ್ಲಿ ಅವರೀರ್ವರಿಗು ಮಹತ್ತಾದ ಕಲಹಮುಂಟಾಗೆ, ಆಗ ದ್ವಿಜನು ಎಲೈ ರಾಯನೆ! ನಾನೆ ಶ್ರೇಷ್ಠನೆಂದನು. ಆಗ ರಾಯನದಂ ಕೇಳಿ ನಾನೆ ಶ್ರೇಷ್ಠನೆಂದು ನುಡಿಯೆ, ಅವರೀರ್ವರ್ಗಯು ಬಹು ಪ್ರಕಾರದಿಂ ಕಲಹಮುಂಟಾಗಿ, ಕೋಪದಿಂ ದಧೀಚಿಮಹಾಮುನಿಯು ತಾನೆ ಶ್ರೇಷ್ಠನೆಂದು ಪೇಳುತಿರ್ಪ ರಾಯನಂ ಬಡಿದನು. ಆ ಸಮಯದಲ್ಲಿ ದುರಾತ್ಮನಾದ ರಾಯನು ವಜ್ರಾಯುಧವಂ ತೆಗದು ಕೋಪದಿಂದ ಆ ದಧೀಚಿ ಮುನಿಯಂ ಬಡಿಯೆ! ಆ ತಾಪಸನು ವಜ್ರಘಾತದಿಂ ಪ್ರಾಣಂಗಳಂ

ಬಿಟ್ಟನು. ಆ ರಾಜಸಭೆಯಲ್ಲಿ ಸಮಸ್ತರು ಭಯಪಡುವಂಥ ಹಾಹಾಕಾರವು ಪುಟ್ಟಿತು. ಮೃತನಾದ ದಧೀಚಿ ಮಹಾಮುನಿಗೆ ಪಿತಾಮಹನಾದ ಶುಕ್ರನು ಬಂದು ಎರಡು ತುಂಡಾಗಿರ್ದ ಆ ಶರೀರವಂ ಕೂಡಿಸಿ, ಮೃತಸಂಜೀವಿನೀ ಮಂತ್ರದಿಂದೆಬ್ಬಿಸಿ, ಎಲೈ ಪೌತ್ರನೆ! ಇಂದು ಮೊದಲಾಗಿ ದೇವದೇವನಾದ ಮಹಾದೇವನಂ ಪೂಜಿಸುತ್ತಿರು. ಅದರಿಂ ನಿನಗೆ ಸಮಸ್ತವು ಉಂಟಾದೀತು, ಶಿವಪೂಜೆಯು ಪುರುಷರ್ಗೆ ಭೋಗಮೋಕ್ಷವಂ ಕೊಡುವಂಥಾದ್ದು ಅದರಿಂದ ಹರಿ ಬ್ರಹ್ಮ ಮುಂತಾದ ದೇವತೆಗಳು ತಮ್ಮ ತಮ್ಮ ಸ್ಥಾನಂಗಳಂ ಪಡೆದರು. ಅದುಕಾರಣದಿಂ ಮಹೇಶ್ವರನಂ ಪರಿಪೂಜಿಸು, ನಿನ್ನ ವೈರಿಗಳು ವ್ಯಾಧಿಗಳು ನಾಶಂಗಳಾಗುವವು. ಎಂದು ಪೇಳ್ದು ಬಹು ಮಂತ್ರಂಗಳನ್ನು ಉಪದೇಶವಂ ಮಾಡಿ ಸ್ವೇಚ್ಛೆಯಾಗಿ ಪೋದನು.

ಕ್ಷುಪರಾಯ ದಧೀಚಿಮಹಾಮುನಿಯ ವೃತ್ತಾಂತ.

ಬಳಿಕ ಪುಣ್ಯಾತ್ಮನಾದ ದಧೀಚಿಮುನಿಯು ಶಂಕರನಂ ಪೂಜಿಸಿ ವಜ್ರ ದೇಹವನ್ನು ಅವಧ್ಯತ್ವವನ್ನು ಔದಾರ್ಯವನ್ನು ಅಭಯವನ್ನು ಮತ್ತು ಇತರವಾದ ಅನೇಕ ವರಗಳನ್ನು ಪಡೆದು, ಮರಳಿ ಆ ರಾಯನ ಸಮೀಪಕ್ಕೆ ಬಂದು ಪಾದದಿಂ ಕ್ಷುಪನಂ ಒದೆಯೆ, ಆ ರಾಯನು ಅತಿ ಕೋಪದಿಂ ಆತನ ಉರವಂ ವಜ್ರದಿಂ ಬಡಿದನು. ಆಗ ವಜ್ರಾಯುಧವು ಪುಡಿಪುಡಿಯಾದುದು. ಬಳಿಕ ದಧೀಚಿಯು ಆ ರಾಯನಂ ನೋಡಿ, ಎಲೈ ಭೂಪಾಲನೆ ! ನಿನ್ನ ವಜ್ರಾಯುಧದಿಂ ನಾನಂಜೆನೆನಲು, ಕ್ಷುಪನು ಆ ವಾಕ್ಯವಂ ಕೇಳಿ ವಿಷ್ಣುವಂ ಕುರಿತು ತಪವಂ ಮಾಡಿದನು. ಆಗ ವಿಷ್ಣುವು ಪ್ರಸನ್ನನಾಗಲು ಕ್ಷುಪನು ನಮಸ್ಕಾರವಂ ಮಾಡಿ ತನ್ನ ವೃತ್ತಾಂತವಂ ಪೇಳಲಾಗಿ, ನಾರಾಯಣನು ಆ ದಧೀಚಿಯ ಆಶ್ರಮಕ್ಕೆ ಪೋಗಿ ಆತನೊಡನೆ ಮುದದಿಂ ಮಾತನಾಡಿ, ಎಲೈ ಋಷಿಯೆ! ನನಗಾಗಿ ಕ್ಷುಪನೊಡನೆ ಕ್ಷತ್ರಿಯ ಬಲವೆ ಉತ್ತಮವೆಂದು ಪೇಳಿದೆಯಾದೊಡೆ, ನಿನಗೆ ಅಪಮೋಕ್ಷ ಉಂಟಾಗುವದೊ ಅದು ನನ್ನದಾಗಿರಲೆಂದು ನುಡಿದನು. ಬಳಿಕ ದಧೀಚಿಯು ಅದನ್ನಂಗೀಕರಿಸದಿರೆ, ಹರಿಯು ಕೋಪಾಕುಲಿತನಾಗಿ ಆ ದಧೀಚಿಯಮೇಲೆ ಚಕ್ರವಂ ಪ್ರಯೋಗಿಸಲಾಗಿ, ಅದು ಆತನಮೇಲೆ ಬಿದ್ದು ಮೊನೆ ಮುರಿದುದು. ಆಗ ಹರಿಯು ಆತನಮೇಲೆ ಬಹು ಮಾಯೆಗಳಂ ಪ್ರಯೋಗಿಸೆ, ದಧೀಚಿಯು ಅದಕ್ಕೆ ಪ್ರತಿಯಾಗಿ ಬಂದು ದರ್ಭೆಯಂತೆಗದು ಅಭಿಮಂತ್ರಿಸಿ ಪ್ರಯೋಗಿಸಿದನು. ಬಳಿಕ ಆ ದರ್ಭೆಯು ಕ್ಷಣಮಾತ್ರದಲ್ಲಿ ವಿಷ್ಣುವಿನ ಮಾಯೆಯುಂ ಸೈನ್ಯವಂ ಹತವಂ ಮಾಡಿತು. ಆಗ ಹರಿಯು ಶೀರ್ಣನಾಗಿ ನಿಲ್ಲಲು ಬ್ರಹ್ಮನು ದಧೀಚಿಯ ಸಮೀಪಕ್ಕೆ ಬಂದು ವಿಶೇಷವಾಗಿ

ಸ್ತುತಿಸೆ; ಆ ದಧೀಚಿಯು ಕೋಪದಿಂ ವಿಷ್ಣುವಂ ನೋಡಿ, ಎಲೈ ವಿಷ್ಣುವೆ! ನಿನ್ನ ಶರೀರವಂ ವೀರಭದ್ರನು ಛೇದಿಸಲಿ, ಮೂರ್ಖತನದಿಂ ಪರಮೇಶ್ವರ ದೂಷಕರಾದ ಪಾಂಚರಾತ್ರಾವಲಂಬಿಗಳಾಗಿರ್ಪ ನಿನ್ನ ಭಕ್ತರು ನರಕಂಗಳಲ್ಲಿ ಬೀಳಲಿಯೆಂದು ಶಾಪವನೀಯೆ, ಬ್ರಹ್ಮನು ವಿಷ್ಣುವಿನಮೇಲೆ ಅತ್ಯಂತ ಕೋಪವಂ ಮಾಡಿ, ಆ ದಧೀಚಿ ಮುನಿಗೆ ನಮಸ್ಕಾರವಂ ಗೈದು ವಿಷ್ಣುವಂ ಕರದುಕೊಂಡು ಪೋದನು. ಬಳಿಕ ಕ್ಷುಪನೆಂಬ ರಾಯನು ಅವೆಲ್ಲವಂ ನೋಡಿ ದಧೀಚಿಮುನಿಯ ಪಾದಂಗಳಲ್ಲಿ ಬಿದ್ದು, ಎಲೈ ಬ್ರಾಹ್ಮಣ ಶ್ರೇಷ್ಠನೆ ನೀನು ಪೂರ್ವದಲ್ಲೆನಗೆ ಮಿತ್ರನು ಯೋಗ್ಯನು; ಮಾತಾಪಿತೃ ಮುಂತಾದ ಬಳಗವೆಲ್ಲವು ನೀನೆ, ಅದುಕಾರಣದಿಂ ನಾನು ಮಾಡಿದ ಅಪರಾಧವಂ ಕ್ಷಮಿಸೆಂದು ನುಡಿಯೆ, ದಧೀಚಿಮುನಿಯು, ಆರಾಯನಂ ನೋಡಿ, ಎಲೈ ರಾಯನೆ! ನಾನು ಶಾಂತನಾದೆನೆಂದು ತಿಳಿದುಕೋ, ಯಾಕಂದರೆ, ಸಾಧುಗಳು ಕ್ಷಮೆಯೆ ಬಲವಾಗಿ ಉಳ್ಳವರು,ನನ್ನ ಕೋಪಕ್ಕೆ ಪ್ರತೀಕಾರವು ನಮಸ್ಕಾರವೆಸರಿ, ಬ್ರಾಹ್ಮಣ ಬಲವೆ ಉತ್ತಮವು, ಮತ್ತಂ ಪರಮೇಶ್ವರನು ಬ್ರಾಹ್ಮಣಾಧೀನ ದೇವತೆಯು ವಿಷ್ಣುವು ಕ್ಷತ್ರಿಯಾಧೀನ ದೇವತೆಯು, ಬ್ರಹ್ಮನು ವೈಶ್ಯಾಧೀನ ದೇವತೆಯು, ಅದುಕಾರಣದಿಂ ಬ್ರಾಹ್ಮಣಾದಿಗಳು ಆನೂಪವಂ ಪೂಜಿಸುತ್ತಿದಾರೆ ಕ್ಷತ್ರಿಯ ತೇಜಸ್ಸು ವೈಶ್ಯತೇಜಸ್ಸು ಬ್ರಾಹ್ಮಣತೇಜಸ್ಸಿಗೆ ಸಮಾನವಲ್ಲ, ಆವುದಾನೊಂದು ಕಾರಣದಿಂ ಬ್ರಾಹ್ಮಣಾಧಿಪನಾದ ಭಗವಂತನಾದ ಶಿವನು ಆವಾತಂಗೆ ಅಧಿದೇವತೆ ಯಾಗಿರುವನೋ, ಆತನೆ ಮಹಾ ಬ್ರಾಹ್ಮಣನು, ದಿನದಿನದಲ್ಲಿಯು ಅಂಥ ಬ್ರಾಹ್ಮಣನಿಗೆ ನಮಸ್ಕಾರವಂ ಮಾಡಬೇಕು, ಅವರಿಗೆ ಹಾನಿಯ ನೆಣಿಸಬಾರದು, ನೀನು ಧರ್ಮದಿಂ ರಾಜ್ಯಪರಿಪಾಲನೆಯಂ ಮಾಡುತ್ತಿರೆಂದು ದಧೀಚಿ ಮುನಿಯು ಕ್ಷುಪನೆಂಬ ರಾಯಂಗೆ ಪೇಳಿದ ವೃತ್ತಾಂತವಂ, ಸೂತಪೌರಾಣಿಕನು ಶೌನಕಾದಿಮಹಾ ಮುನಿಗಳಿಗೆ ಪೇಳಿದನೆಂಬಲ್ಲಿಗೆ, ಶಿವರಹಸ್ಯೋಪದೇಶಕಾಂಡದಲ್ಲಿ ಎಂಬತ್ತನೆಯ ಅಧ್ಯಾಯವು ಸಂಪೂರ್ಣಮಾದುದು.

ಎಂಬತ್ತೊಂದನೆಯ ಅಧ್ಯಾಯವು.

ಸುದರ್ಶನ-ಚಕ್ರಾಂಗದ ವಿಪ್ರರ ಕಥೆ.

ಎಲೈ, ಋಷಿಗಳಿರಾ! ಸುದರ್ಶನನೆಂಬ ಬ್ರಾಹ್ಮಣನು ಶಿವಪೂಜಾ ಫಲದಿಂದ ಅಥಿತಿ ಪೂಜೆಯಂ ಮಾಡಿ ಮೃತ್ಯುವಂ ಜಯಿಸಿ ನಿತ್ಯತ್ವವಂ ಪಡೆದು,

ಕೈಲಾಸದಲ್ಲಿಯೂ ಇತರ ಲೋಕಗಳಲ್ಲಿಯೂ ಸಂಚರಿಸುತಿರುವನು. ಮತ್ತು ಪೂರ್ವದಲ್ಲಿ "ಭೃಗು' ದೂರ್ವಾಸ, ಕಣ್ವ, ಆಪಸ್ತಂಬ, ಜೈಮಿನಿ, ಸೌಭರಿ, ತೃಣಬಿಂದು ವಾಮದೇವ. ವೃಷಭ, ಶುಕ, ಅತ್ರಿ, ಪುಲಸ್ತ್ಯ" ಮುಂತಾದ ಅನೇಕ ತಾಪಸರು ಭಕ್ತಿಯಿಂ ಲಿಂಗಮೂರ್ತಿಯಾದ ಮಹಾದೇವನಂ ಪೂಜಿಸಿ, ಕಾಲಮೃತ್ಯುವಂ ಜಯಿಸಿ ನಿತ್ಯತ್ವವಂ ಪಡೆದು, ಕಾಮಚಾರಿಗಳಾಗಿ ಅಯಾ ಲೋಕಂಗಳಲ್ಲಿ ಸಂಚರಿಸಿ, ದಿಕ್ಪಾಲಕರಿಂ ಮಾಡಲ್ಪಟ್ಟ ಪೂಜೆಯಂ ಕೈಕೊಂಡು, ಮಹಾ ಭೋಗಂಗಳಂ ಭುಂಜಿಸುತ ಅಮೃತಪಾನವಂ ಮಾಡಿ, ಸುರಾಸುರರಿಂ ಮಾಡಲ್ಪಟ್ಟ ನಮಸ್ಕಾರವಂ ಕೈಕೊಂಡು. ಬ್ರಹ್ಮಾದಿ ಲೋಕಂಗಳಲ್ಲಿ ಸಂಚರಿಸುತಿರುವರು. ಹಾಗೆ ಅನೇಕರು ಶಿವಪೂಜೆಯಂ ಮಾಡಿ ಮಹದೈಶ್ವರ್ಯವಂ ಪಡೆದು ಜಗತ್ರಯಂಗಳಲ್ಲಿ ಸಂಚರಿಸಿ ಅಂತ್ಯದಲ್ಲಿ ಮುಕ್ತಿಯಂ ಪಡೆದರು. ಇರುವು ಮುಂತಾದ ಗಜಾಂತಜೀವಿಗಳು ಅನೇಕರು ಶಿವನಂ ಆರಾಧಿಸಿ ಮುಕ್ತಿಯಂ ಪಡೆದವು. ಅದುಕಾರಣದಿಂ ಪುರಾಣವನು ಬ್ರಹ್ಮ ಕ್ಷತ್ರಿಯ ವೈಶ್ಯಾದಿಗಳಿಗೆ ಹೇಳಬೇಕು. ಎಲೈ, ಋಷಿಗಳಿರಾ! ಬುದ್ಧಿ ಪೂರ್ವಕವಾಗಿ ಶಿವನಂ ಪೂಜಿಸಿ ಮುಕ್ತಿಯಂ ಪಡೆದವರ ವೃತ್ತಾಂತವಂ ಹೇಳಿದೆನು. ಮುಂದೆ ಬುದ್ಧಿಪೂರ್ವಕವಲ್ಲದೆ ಶಿವಪೂಜೆಯಂ ಮಾಡಿ ಮುಕ್ತಿಯಂ ಪಡೆದವರ ವೃತ್ತಾಂತವಂ ಹೇಳುವೆನು. ಕೇಳುವವರಾಗಿ! ಮಗಧದೇಶದಲ್ಲಿ ಮಾಗಧವೆಂಬ ಮಹಾ ಪರ್ವತವಿರುವದು ಅಲ್ಲಿ ಚಕ್ರಾಂಗದನೆಂಬ ಓರ್ವ ವಿಪ್ರನು ವಿಷಯಪರನಾಗಿ ಹನು. ಆತಂಗೆ ಧೂರ್ತನಾದ ಧೃತರಾಷ್ಟ್ರನೆಂಬ ಮಗನು ಪುಟ್ಟಿ, ನಿತ್ಯದಲ್ಲಿಯೂ ವಿವಿಧ ವೇಶ್ಯಾಪರನಾಗಿ, ಮದ್ಯವಿಕ್ರಯವಂ ಮಾಡುತ್ತ ದಿವಾರಾತ್ರಿಯಲ್ಲಿಯೂ ಆಕೆವೊಡನೆ ಕ್ರೀಡಿಸುತ್ತ, ಒಂದು ದಿನದಲ್ಲಿ ರಾಯನ ಶೃಂಗಾರವನಕ್ಕೆ ಕರದುಕೊಂಡುಹೋಗಿ ಪುಷ್ಪವನೆತ್ತಿ ಮುಡಿದು ಹೀಗೆ ಸಂಚರಿಸುತ್ತಿರೆ; ಒಂದು ದಿವಸದಲ್ಲಿ ಉದ್ಯಾನಪಾಲಕರು ಆತನಂ ಕಂಡು ಶಿಕ್ಷಿಸಿ ಮುಂದು ಹೀಗೆ ಮಾಡಬೇಡವೆಂದು ಆತನಂ ಕಳುಹಿಸಿದರು. ಆ ಧೂರ್ತನು ಆಗ ಮರಳಿ ಬಂದು ರಾತ್ರಿಯಲ್ಲಿ ಆಕೆಯಂ ಕೂಡಿಕೊಂಡು ಆ ವನಕ್ಕೆ ಬಂದು, ಅನೇಕ ಪುಷ್ಪಗಳಂ ಕೊಯ್ದುಕೊಂಡು ಈರ್ವರು ಮುಡಿದು ಕೆಲವುಗಳಂ ಮದ್ಯಭಾಂಡದಲ್ಲಿರಿಸಿ, ಆಕೆವೊಡನೆ ಕ್ರೀಡಿಸಿ ನಿದ್ರಾಸಕ್ತನಾಗಿ ಸೂರ್ಯೋದಯವನರಿಯದೆ ಆಕೆಯ ನಾಲಿಂಗಿಸಿಕೊಂಡು ನಿದ್ರೆಮಾಡುತ್ತಿರೆ, ಆ ದೇಶದ ರಾಯನು ಆ ಶೃಂಗಾರದ ತೋಟವಂ ಮಹಾ ಪ್ರೀತಿಯಿಂ ನೋಡಲು ಬಂದನು. ಆಗ ಉದ್ಯಾನ ಪಾಲಕರು ಆ ರಾಯಂಗೆ ಮುಂಚಿತವಾಗಿ ಬಂದು ಆ ವೇಶ್ಯೆಕೂಡೆ ನಿದ್ರೆಯಂ ಮಾಡುತಿರ್ಪ ಆ ದ್ವಿಜನಂ ನೋಡಿ ಮದ್ಯಭಾಂಡದಲ್ಲಿರ್ಪ ಸುಗಂಧಿ

ಗಳಾದ ಪುಷ್ಪಗಳನ್ನು ನೋಡಿ ರಾಯ ಬಂದಾನೆಂದು ಅತಿ ಭೀತಿಯಿಂದ ನಿದ್ರಾಪರವಶರಾದ ಆ ಈರ್ವರ ಹಸ್ತಪಾದನಂ ಕಟ್ಟಿ ಉದ್ಯಾನವನ ಪೊರವಳಯಕ್ಕೆ ರಾಯನ ಸಮೀಪಕ್ಕೆ ಪೋಗಲು, ಆ ರಾಯನು ಸಮಸ್ತವಂ ನೋಡಿ ಒಂದು ಕಡೆಯಲ್ಲಿ ಪುಷ್ಪಂಗಳಿಂ ಮುಚ್ಚಲ್ಪಟ್ಟ ಮೃಣ್ಮಯಲಿಂಗವಂ ಕಂಡು, ಇದೇನು ಈ ಪುಷ್ಪಗಳನೆತ್ತಿದವರು ಯಾರು; ಎಂದು ಕೋಪದಿಂ ಕೇಳಲು ಆ ವನಪಾಲಕರು ತಾವಲ್ಲದೆ ಇಲ್ಲಿಗೆ ಮತ್ಯಾರೂ ಬಂಕೂಡದು, ಆವ ದಿವ್ಯ ಪುರುಷನು ಸುಗಂಧಗಳಾದ ಪುಷ್ಪಂಗಳನೆತ್ತಿ ಲಿಂಗ ಪೂಜೆಯಂ ಮಾಡಿ ಪೋದನೋ ನಾವರಿಯೆನಲು, ರಾಯನದಂ ಕೇಳಿ ಎಲೇ ! ವನಪಾಲಕರುಗಳಿರಾ! ನಿತ್ಯದಲ್ಲಿಯೂ ಹೀಗೆಯೊ? ಒಂದು ದಿವಸ ಮಾತ್ರವೊ? ಸತ್ಯವಾಗಿ ಪೇಳಿ ಇಲ್ಲದಿದ್ದರೆ ನಿಮ್ಮ ಹಸ್ತಪಾದಂಗಳಂ ಕತ್ತರಿಸುತ್ತೇನೆನಲು, ಅವರದಂ ಕೇಳಿ ಎಲೆ, ಸ್ವಾಮಿಯೆ! ನಿಮ್ಮ ಪಾದಂಗಳಾಣೆ ಮತ್ತೊಂದು ದಿವಸದಲ್ಲಿ ಹೀಗೆ ಕಂಡವರಲ್ಲವೆನಲು, ರಾಯನ ಸಮೀಪದಲ್ಲಿರ್ಪ ಪುರುಷರು ಉದ್ಯಾನ ವನಪಾಲಕರ ವಾಕ್ಯವಂ ಕೇಳಿ ಎಲೆ, ರಾಯನೆ! ಯೋಗಿಗಳು ಎಲ್ಲೆಲ್ಲಿ ದಿವ್ಯ ಕ್ಷೇತ್ರಗಳುಂಟೊ ಅಲ್ಲಿಗಲ್ಲಿಗೆ ಪೋಗುವರು, ಆವ ಸಮಯದಲ್ಲಿ ದಿವ್ಯ ತೀರ್ಥಗಳನ್ನೂ ದಿವ್ಯ ಪುಷ್ಪಗಳನ್ನೊ ನೋಡಿದರೆ, ಅಲ್ಲಿಯೆ ಇಳಿದು ಸ್ನಾನಾದಿಗಳಂ ಮಾಡಿ ಪುಷ್ಪಂಗಳನೆತ್ತಿ, ಲಿಂಗಾರ್ಚನೆಯಂ ಮಾಡುವರು. ಅದುಕಾರಣದಿಂ ನಮಗೆಯೂ ಮಹತ್ತಾದ ಲಿಂಗಾರ್ಚನೆಯೆ ಶ್ರೇಯಸ್ಕರವೆಂದು ಪೇಳ್ದರು. ಆರಾಯನದಂ ಕೇಳಿ ಅಂತಃಪುರಕ್ಕೆ ಪೋದನು. ಆ ವನಪಾಲಕರು ಈದಿವಸ ನಾವು ಪುಟ್ಟಿದೆವೆಂದು ತಿಳಿದು ಶೃಂಗಾರವನಕ್ಕೆ ಪೋದರು. ಬಳಿಕ ಆ ಜಾರ ಚೋರರೀರ್ವರು ಸಮಸ್ತ ಪಾದಂಗಳಂ ಬಿಡಿಸಿಕೊಂಡು ಗೃಹಕ್ಕೆ ಪೋಗಿ ಕಂಠಸ್ಥಾನಪರ್ಯಂತರ ಮದ್ಯಪಾನವಂ ಮಾಡಿ ಮದದಿಂದ ಮರಳಿ ಆ ವನಕ್ಕೆ ಬಂದು ಪುಷ್ಪಗಳನೆತ್ತುತ್ತಿರೆ, ಆ ವನಪಾಲಕರು ಅವರಂ ಕಂಡು ಅತಿ ಶೀಘ್ರವಾಗಿ ಪಾಶದಿಂದವರಂ ಕಟ್ಟಿ ರಾಜಸನ್ನಿಧಿಗೆ ಕೊಂಡು ಪೋಗೆ, ಆ ರಾಯನವರಂ ನೋಡಿ ಅತ್ಯಂತ ಕ್ರೋಧದಿಂ ಆ ವನಪಾಲಕರಂ ಕರೆದು ಈ ಚೋರನ ಹಸ್ತಪಾದಂಗಳಂ ವೇಶ್ಯೆಯ ಸ್ತನ ನಾಸಿಕಂಗಳಂ ಛೇದನವಂ ಮಾಡಿರೆಂದು ಪೇಳಲು ಆ ವನಪಾಲಕರು ಅವರಂ ದೂರಕ್ಕೆ ಕೊಂಡುಪೋಗಿ ಆತನ ಹಸ್ತಪಾದಂಗಳಂ ಆಕೆಯ ಸ್ತನ ನಾಸಿಕಂಗಳಂ ಕತ್ತರಿಸಿ ಪೋದರು.

ಬಾಣಾಸುರನ ಕಥೆ.

ಬಳಿಕ ಅವರೀರ್ವರು ಅಲ್ಲಲ್ಲಿ ಸಂಚರಿಸಿ ಮೃತರಾದರು. ಮೃಣ್ಮಯವಾದ ಲಿಂಗವನ್ನು ಮದ್ಯಭಾಂಡದಲ್ಲಿ ಪುಷ್ಪಗಳಿಂದ ಕ್ರೀಡೆಯಿಂದ ಅರ್ಚಿಸಿದಕಾರಣ

ಮರಳಿ ಅವರೀರ್ವರು ಸತಿಪತಿಗಳಾಗಿ ಪುಟ್ಟಿದರು. ಆತಂಗೆ ಬಾಣಾಸುರನೆಂಬ ನಾಮವು ಆಕೆಗೆ ಸುಪ್ರತೀ ಎಂಬ ನಾಮವು ಉಂಟಾದುದು. ಆ ಬಾಣಾಸುರನು ಪೂರ್ವ ವಾಸನೆಯಿಂದ ನರ್ಮದಾತೀರದಲ್ಲಿ ಪ್ರತಿ ದಿವಸದಲ್ಲಿಯೂ ಕೈಲಾಸ ಪರ್ವತಕ್ಕೆ ಪೋಗಿ ಶಿವನಂ ಪೂಜಿಸಿ ತನ್ನ ಗೃಹಕ್ಕೆ ಬರುತಿರುವನು ಹಾಗೆ ಆತನು ಒಂದು ದಿವಸದಲ್ಲಿ ಸಮಯವನರಿಯದೆ ಸ್ವಾಮಿಯ ಸನ್ನಿಧಿಗೆ ಪೋಗುತ್ತಿರಲು, ದ್ವಾರದಲ್ಲಿ ಓರ್ವ ಗಣಾಧೀಶ್ವರನು ಕೋಪದಿಂದೆದ್ದು ಆತನಂ ಪಿಡಿದು ಲೀಲೆಯಿಂ ಸೆಳೆದು ಇಡೆ, ಆತನು ಚಕ್ರವಾಳಪರ್ವತದ ಸಮೀಪದಲ್ಲಿ ಬಿದ್ದು ಮೂರ್ಛೆ ತಿಳಿದಮೇಲೆದ್ದು ತನ್ನ ಪುರಕ್ಕೆ ಬಂದು ಮರಳಿ ವಿಧಿಯಿಂದ ಶಿವಾರ್ಚನೆಯಂ ಮಾಡಿದನು. ಆಗ ಶಿವನು ಪ್ರಸನ್ನನಾಗಿ ಎಲೆ ಬಾಣನೆ! ನಿನಗೆ ಬೇಕಾದ ವರವಂ ಕೇಳಿಕೊ ಎನಲು, ಬಾಣಾಸುರನು ಎಲೆ ಸ್ವಾಮಿಯೆ! ಅಂಬಾಸಮೇತನಾದ ನಿಮ್ಮ ಸೇವೆಯು ಯಾವಾಗಲೂ ಉಂಟಾಗಬೇಕು ಕೈಲಾಸಕ್ಕೆ ಬಂದೆನಾದರೆ ಅಲ್ಲಿರ್ಪ ಗಣಂಗಳು ಮಹಾ ಬಲರು ನಾನು ಬರುವದಕ್ಕೆ ಸಹಿಸಲಾರರು ಆದ ಕಾರಣದಿಂದ ನನ್ನ ಗೃಹದ್ವಾರದಲ್ಲಿ ನೀನು ಸಾಂಬನಾಗಿ ಸಪುತ್ರನಾಗಿ ಸಗಣನಾಗಿ ವಾಸವಂ ಮಾಡಿದ್ದಾದರೆ ಆಗ ನನಗೆ ನಿತ್ಯಸೇವೆಯುಂಟಾಗುವದು. ಈ ವರವಂ ನನಗೆ ಕೊಡಬೇಕೆನಲು ಶಿವನು ಮುಗುಳುನಗೆ ಯುಕ್ತನಾಗಿ ಆತಂಗೆ ಆ ವರವಂ ಕೊಡಲು ಈತನು ಸ್ವಾಮಿಯಿಂದದಂ ಪಡದು ತನ್ನ ಗೃಹದ್ವಾರದಲ್ಲಿ ಒಂದು ಶಿವಾಲಯವಂ ನಿರ್ಮಿಸಲಾಗಿ ದೇವದೇವಂಗೆಯೂ ದೇವಿಯರಿಗೂ ವಿಘ್ನೇಶ್ವರನಿಗೂ ಕುಮಾರಸ್ವಾಮಿಗೂ ಪ್ರತ್ಯೇಕ ಪ್ರತ್ಯೇಕ ಸ್ಥಾನವಂ ಕಲ್ಪಿಸಿ, ಆಯಾ ಸ್ಥಾನಂಗಳಲ್ಲಿ ಅವರವರಂ ಪ್ರತಿಷ್ಠೆಯುಂ ಮಾಡಿ ಪ್ರತಿದಿನದಲ್ಲಿಯೂ ಪರಿಚಾರಕವಂ ಮಾಡಿ ಕೊಂಡಿರುತಿರ್ದನು, ಮತ್ತು ಆ ಬಾಣಾಸುರನು ಸ್ವಾಮಿಯಿಂದ ಹರಿ ಬ್ರಹ್ಮ ಮುಂತಾದ ದೇವತೆಗಳಂ ಜೈಸಿ ತ್ರೈಲೋಕ್ಯವೀರನಾಗಿ ಒಂದು ದಿನದಲ್ಲಿ ಸ್ವಾಮಿಯ ಸಮೀಪಕ್ಕೆ ಪೋಗಿ ಶಿವಂಗೆ ನಮಸ್ಕರಿಸಿ ಎಲೆ ಮಹೇಶ್ವರನೆ! ವಿಷ್ಣುವು ನನ್ನೊಡನೆ ಯುದ್ಧವಂ ಮಾಡಿ ಮುಪ್ಪತ್ತು ಸಾರಿ ಓಡಿದನು ಇಂದ್ರನು ಅರವತ್ತು ಸಾರಿ ಓಡಿದನು ಮತ್ತು ನನ್ನ ಬಾಹುಗಳ ತಿಮಿರವು ನಿಮ್ಮೊಡನೆ ಯುದ್ಧವಂ ಮಾಡಿದಲ್ಲದೆ ಅಡಗದು ಆದಕಾರಣದಿಂದ ನೀವು ನನ್ನೊಡನೆ ಯುದ್ಧವಂ ಮಾಡಬೇಕೆನಲು ಸ್ವಾಮಿಯು ಆತನ ವಾಕ್ಯವಂ ಕೇಳಿ ಪ್ರಹಸನಗೆಯಂ ನಕ್ಕು ಎಲೆ ಬಾಣನೆ! ವಿಷ್ಣುವು ಅತ್ಯಂತ ಭಕ್ತಿಯಂಮಾಡಿ ಯದುವಂಶದಲ್ಲಿ ಪುಟ್ಟಿರ್ದಾನೆ. ಆತನು ನಿನ್ನ ಗರ್ವವಂ ಅಡಗಿಸುವನೆನಲು ಬಾಣನದಂ ಕೇಳಿ, ಎಲೆ ಸ್ವಾಮಿಯೆ! ಹರಿಯು ನನ್ನೊಡನೆ ಯುದ್ಧವಂ ಮಾಡಿ ಅನೇಕವೇಳೆ ಪರಾಭವವನೈದಿದನು. ಆತನು ನನ್ನೊಡನೆ ಯುದ್ಧವಂ ಮಾಡಿ

ನನ್ನ ಭುಜದ ತಿಮಿರವನಡಿಗಿಸುವನೆ, ಎಂದು ಕೇಳಲು ಶಿವನು ಎಲೆ ಬಾಣನೆ! ಈಗ ನೀನು ಹರಿಯಂ ಪೂರ್ವದಂತೆ ಎಣಿಸಬೇಡ ಮತ್ತು ಹರಿಯು ಉಪಮನ್ಯು ಮುನಿಯ ಉಪದೇಶದಿಂದ ಶಿವದೀಕ್ಷೆಯಂ ಕೈಕೊಂಡು ಭಸ್ಮ ರುದ್ರಾಕ್ಷಧಾರಿ ಯಾಗಿ ಮಹಾ ವೀರ್ಯವಂತನಾಗಿ ತಾನೆ ನಿನ್ನ ಸಮಿಾಪಕ್ಕೆ ಬಂದು ಸ್ವಲ್ಪಕಾಲ ದಲ್ಲಿಯೆ ನಿನ್ನ ಮದವನಡಿಗಿಸುವನು. ಸಂಶಯಬೇಡವೆನಲು ಆತನದಂ ಕೇಳಿ ಸುಮ್ಮನಿರುತಿರ್ದನು. ಬಾಣಾಸುರನ ಪುತ್ರಿಯಾದ ಉಷಾದೇವಿಯು ಒಂದು ದಿವಸದಲ್ಲಿ ಕೃಷ್ಣಪೌತ್ರನಾದ ಅನಿರುದ್ಧನಂ ಸ್ವಪ್ನದಲ್ಲಿ ಕಂಡು ಅತ್ಯಂತ ವಿರಹದಲ್ಲಿರೆ ಆಕೆಗೆ ಸತಿಯಾದ ಚಿತ್ರಲೇಖೆಯು ಆಕೆಯ ಬಳಿಗೆ ಬಂದು ಮುಖವ ನ್ನೋಡಿ ಈಕೆ ವಿರಹದಿಂದಿದಾಳೆಂದು ತಿಳಿದು ಆಕೆಯ ವಾಕ್ಯದಿಂದಲೆ ಇಂಥ ಪುರುಷನೆಂಬುದಂ ಅನಿರುದ್ಧನೆಂದುಂ ತಿಳಿದು ಅವನಂ ಕರತಂದು ಬಿಡಲು ಉಷಾದೇವಿಯು ಕೃಷ್ಣಪೌತ್ರನೊಡನೆ ಕ್ರೀಡಿಸಿಕೊಂಡಿರ್ದಳು. ಕೃಷ್ಣನು ತನ್ನ ಪೌತ್ರನಂ ಯಾರು ಕೊಂಡುಪೋದರೆಂದು ಅಲ್ಲಲ್ಲಿ ವಿಚಾರಿಸಿ ಬಹುವಾಗಿ ಸಂಚರಿಸಿ ಮೆಲ್ಲನೆ ಅಗ್ನಿಯಿಂದ ಬಳಸಲ್ಪಟ್ಟ ಬಾಣಾಸುರನ ಪುರಿಗೆ ಬಂದು ಬಾಣವಂ ಬಿಟ್ಟನು. ಬಳಿಕ ವಿಘ್ನೇಶ್ವರನು ಯುದ್ಧಸನ್ನದ್ಧನಾಗಿ ಬಂದು ಕೃಷ್ಣನು ಪೂಜಿಸಿದ ಭಕ್ಷ್ಯ ಭೋಜ್ಯಗಳಿಂದ ತೃಪ್ತನಾಗಲು ಕುಮಾರ ಸ್ವಾಮಿಯು ದೇವಿಯರು ಕೃಷ್ಣನೊಡನೆ ಯುದ್ಧವಂ ಮಾಡದೆ ವಿಘ್ನೇಶ್ವರನ ಸಮಿಾಪದಲ್ಲಿಯೆ ಸಂತೋಷದಿಂ ಆತನಂ ನೋಡುತ್ತಿರಲು, ಶಿವನು ಯುದ್ಧ ಸನ್ನದ್ಧನಾಗಿ ಕೃಷ್ಣನಮೇಲೆ ಬಂದನು.

ಕೃಷ್ಣಪರಮೇಶ್ವರರ ಯುದ್ಧವು.

ಆಗ ಕೃಷ್ಣನು ಸ್ವಾಮಿಯಂ ಕಂಡು ಪುಷ್ಪಾದಿಗಳಿಂ ಪೂಜಿಸಲಾಗಿ, ಬಾಣದ್ವಾರಪಾಲಕನಾದ ಶಿವನು ಅರ್ಚನಾಸಕ್ತನಾದ ಶ್ರೀಕೃಷ್ಣನಂ ನೋಡಿ, ಎಲೈ ವಾಸುದೇವನೆ! ಬಾಣಾಸುರನ ದ್ವಾರದಲ್ಲಿರುವ ನನ್ನೊಡನೆ ಯುದ್ಧವಂ ಮಾಡೆಂದು ನಿರೂಪಿಸಿದ ಬಳಿಕ ಕೃಷ್ಣನಿಂತೆಂದನು. ಎಲೈ ಮಹೇಶ್ವರನೆ! ನೀನು ಜಗತ್ಪತಿಯು ನಾನು ಜಗತ್ತು, ನೀನು ವಿಶ್ವೇಶನು ನಾನು ವಿಶ್ವವು, ನೀನು ಯಜ್ಞೇಶ್ವರನು ನಾನು ಯಜ್ಞವು, ನೀನು ಮಾಯಿ ನಾನು ಮಾಯೆ, ನೀನು ಪುರುಷನು ನಾನು ಶಕ್ತಿಯು, ನೀನು ಧನ್ವಿಯು, ನಾನು ಧನುಸ್ಸು, ಮತ್ತಂ ನೀನು ಶರವಂತನು ನಾನು ಶರವು, ಅದುಕಾರಣದಿಂ ನಾನು ನಿನ್ನೊಡನೆ ಯುದ್ಧವಂ ಮಾಡಿದೊಡೆ, ಮನ್ಮಥನೋಪಾದಿಯಲ್ಲಿ ಭಸ್ಮವಾಗಿ ಪೋಗುವೆನು, ನನ್ನ ಮೇಲೆ ಕರುಣೆಯಿಲ್ಲವೇ ಏನು? ಎನಲಾಗಿ, ಮಹಾದೇವನು ಆ ವಾಕ್ಯವಂ ಕೇಳಿ, ಎಲೈ ನಾರಾಯಣನೆ! ನರನು ನನ್ನೊಡನೆ ಯುದ್ಧವಂ ಮಾಡಿ ಹೇಗೆ

ಪಾಶುಪತಾಸ್ತ್ರವಂ ಪಡೆದನೋ, ಹಾಗೆ ನೀನೆನಗೆ ಪ್ರೀತಿಯನ್ನುಂಟುಮಾಡುವದಕ್ಕಾಗಿ ಯುದ್ಧದಲ್ಲಿ ಕ್ರೀಡಿಸೆಂದು ನುಡಿದು, ಪಿನಾಕವೆಂಬ ಧನುವಿನಲ್ಲಿ ನಾರಿಯುಂ ಹೂಡಿ ಶರಸಂಧಾನಂಗೈದು ಕೃಷ್ಣನ ಮೇಲೆ ಬಿಟ್ಟನು, ಆಗ ವಾಸುದೇವನು ಶಿವಾಜ್ಞೆಯಿಂದ ಶಾರ್ಜವೆಂಬ ಧನುವಂ ಸಜ್ಜುಂಗೈದು ಸ್ವಾಮಿಯ ಮೇಲೆ ಬಾಣಗಳಂ ವರ್ಷಿಸೆ, ಆ ಬಾಣಂಗಳು ಪರಮೇಶ್ವರನ ಪಾದಕಮಲಂಗಳಲ್ಲಿ ಪುಷ್ಪಂಗಳೋಪಾದಿಯಲ್ಲಿ ಬಿದ್ದವು. ಹೀಗೆ ಹರಿಹರರೀರ್ವರು ಸಂಗರವಂ ಮಾಡುತ್ತಿರೆ, ಆ ಸಮಯದಲ್ಲಿ ಬಾಣಾಸುರನು ಚತುರಂಗ ಸೇನಾಪರಿವೃತನಾಗಿ ಶೀಘ್ರದಿಂ ರಣಭೂಮಿಗೆ ಬಂದು ಯಾದವಸೇನೆಯಂ ಸಂಹರಿಸಿದನು.

ಅನಿರುದ್ಧ ವುಷಾಕನ್ಯಾ ವಿವಾಹವು.

ಬಳಿಕ ಕೃಷ್ಣನದಂ ಕಂಡು ಪರಮೇಶ್ವರಂಗೆ ನಮಸ್ಕಾರವಂ ಮಾಡಿ, ಬಾಣನೊಡನೆ ಯುದ್ಧವಂ ಮಾಡೆ, ಆಗ ಅವರೀರ್ವರಿಗು ರೋಮಹರ್ಷಣವಾದ ಯುದ್ಧವು ನಡೆದುದು. ಅನಂತರದಲ್ಲಿ ಕೃಷ್ಣದೇವನು ಬಾಣಾಸುರನಂ ಜಯಿಸಿ ಚಕ್ರಪ್ರಯೋಗವಂ ಮಾಡಿ ಆ ಬಾಣಾಸುರನ ಬಾಹುಗಳಂ ಕದಳೀವನವಂ ಖಂಡಿಸುವಂತೆ ಖಂಡಿಸಿದನು. ಆ ಸಮಯದಲ್ಲಿ ಮಹಾದೇವನು ಪಾರ್ವತೀ ದೇವಿಯೊಡನೆ ವೃಷಭವನ್ನೇರಿ, ಕಲಹ ಶಾಂತಿಗೋಸುಗ ನಭೋಮಧ್ಯದಲ್ಲಿ ನಿಂತು ಕೃಷ್ಣನಂ ನೋಡಿ, ಎಲೈ ಕೃಷ್ಣನೆ! ನಿನ್ನಂತೆಯೇ ಈ ಬಾಣಾಸುರನು ಪ್ರತಿ ದಿವಸದಲ್ಲಿಯು ನನ್ನ ಪೂಜೆಯಲ್ಲಿ ಆಸಕ್ತನಾದ ಕಾರಣ, ಇವನ ನಾಲ್ಕು ಬಾಹುಗಳಂ ನಿಲ್ಲಿಸಿ ಈತನೊಡನೆ ಸ್ನೇಹವಂ ಮಾಡೆಂದು ಪೇಳ್ದು, ಆ ಬಾಣಾಸುರನಂ ನೋಡಿ ನಕ್ಕು, ಎಲ ಅಸುರನೆ! ಈಗ ನಿನ್ನ ಭುಜ ತಿಮಿರ ವಡಗಿತೋ? ಕೃಷ್ಣನು ನನ್ನಾಜ್ಞೆಯಿಂದ ನಾಲ್ಕು ಬಾಹುಗಳನ್ನುಳುಹಿ ಮಿಕ್ಕ ಬಾಹುಗಳಂ ಛೇದಿಸಿದವನು, ಆದುಕಾರಣದಿಂದೀಕೃಷ್ಣನ ಪೌತ್ರಂಗೆ ನಿನ್ನ ಪುತ್ರಿಯಂ ಕೊಡೆಂದು ಪೇಳ್ದು ಅಂತರ್ಧಾನವಾದನು. ಬಳಿಕ ಬಾಣಾಸುರನು ಸ್ವಾಮಿಯ ವಾಕ್ಯದಿಂದ ಶ್ರೀ ಕೃಷ್ಣನ ಪೌತ್ರಂಗೆ ತನ್ನ ಪುತ್ರಿಯಂ ಕೊಟ್ಟು ಅತಿ ಸಂಭ್ರಮದಿಂ ಕಲ್ಯಾಣಮಂ ಮಾಡಿದನು. ಅನಂತರದಲ್ಲಿ ಕೃಷ್ಣನು ಆ ಬಾಣಾಸುರನ ಪುತ್ರಿಯಾದ ಉಷಾದೇವಿಯೊಡನೆ ಅನಿರುದ್ಧನಂ ಕರೆದುಕೊಂಡು ಸೇನಾಸಮೇತನಾಗಿ ದ್ವಾರಕಾಪುರವಂ ಪ್ರವೇಶಿಸಿದನು. ಆ ಬಾಣಾಸುರನು ಪರಮೇಶ್ವರಂಗೆ ತಾನು ಮಾಡಿದ ಅಪರಾಧದಿಂದಿಂತು ಪರಾಭವವು ಬಂದುದೆಂದು ತಿಳಿದು, ಲಜ್ಜೆಯಿಂ ತಲೆವಾಗಿ ಮರಳಿ ನರ್ಮದಾತೀರಕ್ಕೆ ಪೋಗಿ ಪರಮೇಶ್ವರನಂ ಪೂಜಿಸೆ, ಚಂದ್ರಶೇಖರನು ಆ ಪೂಜೆಯಿಂದ ಸಂತುಷ್ಟನಾಗಿ, ಎಲೆ ಬಾಣನೆ! ಬೇಕಾದವರವಂ ಬೇಡೆನಲು, ಆ ಬಾಣಾಸುರನು ಅತ್ಯಂತ

ಸಂತೋಷವುಳ್ಳವನಾಗಿ, ಎಲೈ ಜಗನ್ನಾಥನೆ! ನೀನು ನೃತ್ಯವಂ ಮಾಡುವ ಕಾಲದಲ್ಲಿ ಗಣಂಗಳಿಗೆ ಅಧಿಪತಿಯಾಗಿ ವಾದ್ಯವಂ ಬಾರಿಸುವದೊಂದು ವರವು. ಮತ್ತಂ ನರ್ಮದಾತೀರದಲ್ಲಿ ನಾನು ಪೂಜಿಸಿದ ಲಿಂಗಗಳಿಗೆ ಬಾಣಲಿಂಗವೆಂದು ಪೆಸರುಂಟಾಗುವದೊಂದು ವರವು. ಆ ಬಾಣಲಿಂಗ ಪೂಜೆಯುಂಗೈದ ಭಕ್ತರಿಗೆ ಇಹದಲ್ಲಿ ಸರ್ವಾಭೀಷ್ಟವು ಪರದಲ್ಲಿ ಮೋಕ್ಷವು ಉಂಟಾಗುವದೊಂದು ವರವು. ಈ ಮೂರು ವರಗಳುಂಟಾಗಬೇಕೆನಲು, ಪರಮೇಶ್ವರನು ಹಾಗೆಯೆ ವರಗಳನ್ನಿತ್ತು ಅಂತರ್ಧಾನವಾದನು. ಅನಂತರದಲ್ಲಿ ಬಾಣಾಸುರನು ಸಶರೀರನಾಗಿ ಗಾಣಾಪತ್ಯವಂ ಪಡೆದು ಪರಮೇಶ್ವರನ ನರ್ತನಕ್ಕೆ ಮರ್ದಳೆಯಂ ಬಾರಿಸುತ ಸಂತೋಷದಿಂದೀಗಲು ಇರುತಿರ್ಧಾನೆಂದು ಸೂತಂ ಪೇಳಿದ ನೆಂಬಿಲ್ಲಿಗೆ, ಉಪದೇಶಕಾಂಡದಲ್ಲಿ ಎಂಬತ್ತೊಂದನೆಯ ಅಧ್ಯಾಯವು ಸಂಪೂರ್ಣವಾದುದು.

ಎಂಬತ್ತೆರಡನೆಯ ಅಧ್ಯಾಯವು.

ಚಿತ್ರನೆಂಬ ಬ್ರಾಹ್ಮಣನ ಕಥೆ-ಸ್ತನಲಿಂಗಾರ್ಚನೆಯ ಕಥೆ.

ಎಲೈ ಋಷಿಗಳಿರಾ! ಪರ್ವತವೆಂಬ ದೇಶದಲ್ಲಿ ಭಗವತಿ ಎಂಬ ಪೆಸರುಳ್ಳ ಪುರದೊಳು, ಪೂರ್ವದಲ್ಲಿ ಸುವರ್ಣನೆಂಬ ಓರ್ವ ಬ್ರಾಹ್ಮಣನಿರುತಿರ್ದನು. ಆತಂಗೆ ಅಚಿತ್ತನೆಂಬ ಕುಮಾರನು ಪುಟ್ಟಿ, ದುರ್ಮಾರ್ಗ ನಿರತನಾಗಿ ಸರ್ವದಾ ಸ್ತ್ರೀ ಸಂಭೋಗದಲ್ಲಿ ನಿರತನಾಗಿ, ಆವಾವಜಾತಿಯಲ್ಲಾದರೂ ರೂಪವತಿಯಾದ ಸ್ತ್ರೀಯಂ ಕಂಡೊಡೆ, ಆಕೆಗೆ ಧನವನಿತ್ತು ಕ್ರೀಡಿಸುತ ಚೌರ್ಯದಿಂದ ಧನವಂ ಸಂಪಾದಿಸಿ ಅಸದ್ವ್ಯಯವಂ ಮಾಡುತ್ತಿದ್ದನು. ಒಂದಾನೊಂದು ದಿವಸದಲ್ಲಿ ಕಾರ್ಕೀಪುರಕ್ಕೆ ಸಾರಿ ರಾತ್ರಿಯೊಳು ಸಂಕರ್ಷಣನೆಂಬ ಬ್ರಾಹ್ಮಣನ ಗೃಹವಂ ಪ್ರವೇಶಿಸಿ ಮಹಾಧನವನ್ನಪಹರಿಸೆ, ಆ ದ್ವಿಜನು ಆ ಅಜಿತನೆಂಬ ದ್ವಿಜನಂ ಪಿಡಿದು, ಈ ಚೌರ್ಯವನು ಏನು ಕಾರಣ ಮಾಡುತಿದ್ದೀಯೆನಲು ಆ ಅಜಿತ್ತನು ಆತನ ವಾಕ್ಯವಂ ಕೇಳಿ, ಈ ಲೋಕದಲ್ಲಿ ರೂಪವತಿಯಾದ ಸ್ತ್ರೀಯು ಯೆಲ್ಲೆಲ್ಲಿರುತಿರ್ದಾಳೊ, ಆಕೆಯ ಸಮೀಪಕ್ಕೆ ಪೋಗಿ ಬೇಕಾದ ಧನವಿತ್ತು ಆವಾಗಲು ಕ್ರೀಡಿಸಿಕೊಂಡಿರ್ದೇನೆಂದು ಪೇಳಿದನು. ಬಳಿಕ ಸಂಕರ್ಷಣನೆಂಬ ಬ್ರಾಹ್ಮಣನು ಆ ವಾಕ್ಯವಂ ಕೇಳಿ, ಎಲೈ ದುಷ್ಟನಾದ ಚೋರನೆ! ಏನು ವಾಕ್ಯವಂ ಪೇಳುತಿದ್ಧಿ? ಬ್ರಾಹ್ಮಣ ಜಾತಿಯಲ್ಲಿ ಪುಟ್ಟಿ ವ್ಯರ್ಥವಾಗಿ ಕೆಟ್ಟು ಪೋದೆಯಲ್ಲ. ಪಾಪಿಯಾದ ನಿನ್ನಲ್ಲಿ ಬ್ರಹ್ಮತೇಜಸ್ಸು

ಹೇಗಿದ್ದೀತು? ಆದು ಕಾರಣದಿಂ ಸರ್ವಪಾಪ ಪ್ರಾಯಶ್ಚಿತ್ತಕ್ಕೋಸುಗ ಮಹಾದೇವನಂ ಪೂಜಿಸೆ, ಕಾಮಕ್ರೋಧ ಮೋಹ ಪರಸ್ತ್ರೀ ಸಂಗ ಮುಂತಾದ ಪಾಪಗಳೆಲ್ಲವು ನಾಶವಾಗಿ ಪೋಗುವವೆಂದು ನುಡಿಯೆ, ಆ ಬ್ರಾಹ್ಮಣನು ಎಲೈ ದ್ವಿಜನೆ! ಪರಮೇಶ್ವರನೆಲ್ಲಿ? ಪಾಪಿಯಾದ ನಾನೆಲ್ಲಿ? ಇದಲ್ಲದೆ ನಾನು ಪರಸ್ತ್ರೀಗಮನವಂ ಬಿಟ್ಟಿರಲಾರೆನು, ಆಶಕ್ತನಿಗನುಗುಣವಾದ ಶಿವಪೂಜೆಯಂ ಪೇಳಿದೆಯಾದೊಡೆ ನಾನು ಕೇಳುವೆನೆಂದನು. ಬಳಿಕ ಆ ಸಂಕರ್ಷಣನೆಂಬ ಬ್ರಾಹ್ಮಣನು ಆ ವಾಕ್ಯವಂ ಕೇಳಿ, ಎಲ ಚೋರನೆ! ನೀನು ಭೋಗಿಸುವಂಥ ಸ್ತ್ರೀಯ ಕುಚಂಗಳನ್ನು ಹೃದಯದಲ್ಲಿ ಶಿವಲಿಂಗಗಳಾಗಿ ಭಾವಿಸಿ ಧ್ಯಾನಿಸೆ, ಸಮಸ್ತ ಪಾಪಂಗಳಿಂ ಬಿಡಲ್ಪಟ್ಟವನಾಗಿ ಶಿವಲೋಕವನ್ನೈದುವಿಯೆಂದು ಪೇಳ್ದು, ಆ ಅಜಿತ್ರನೆಂಬ ಚೋರನಂ ಬಿಟ್ಟನು. ಬಳಿಕ ಆ ಚೋರಬ್ರಾಹ್ಮಣನು ಆ ರಾತ್ರಿಯ ಜಾರಿಣಿಯಾದ ಬ್ರಾಹ್ಮಣಸ್ತ್ರೀ ಗೃಹಕ್ಕೆ ಪೋಗಿ ಆಕೆಯೊಡನೆ ಕ್ರೀಡಿಸುವ ಸಮಯದಲ್ಲಿ, ಸ್ತನಗಳಂ ಕಂಡು ಆ ಸಂಕರ್ಷಣನೆಂಬ ಬ್ರಾಹ್ಮಣನಂ ಸ್ಮರಿಸಿ, ಆ ಸ್ತನಗಳನೆ ಶಿವಲಿಂಗಗಳೆಂದು ಭಾವಿಸಿ ಕ್ರೀಡಾರ್ಥವಾಗಿ ತಂದ ಚಂದನದಿಂ ಲೇಪನಂ ಗೈದು ಆಕೆಗೆ ವಿಲಾಸವಾಗಿರುವಂತೆ ಸಮಸ್ತ ಪುಷ್ಪಗಳನ್ನು ಆಸ್ತನಲಿಂಗಗಳಿಗೆ ಸಮರ್ಪಿಸಿ, ಪಕ್ವವಾದ ಭಕ್ಷ್ಯಂಗಳಂ ನಾನಾವಿಧ ಫಲಂಗಳಂ ನಿವೇದನಂಗೈದು, ಸಂಭೋಗಕಾಲದಲ್ಲಿ ವಿನೋದದಿಂ ಯೆರಡು ಕರಗಳಂ ಶಿರಸ್ಸಿನಲ್ಲಿರಿಸಿ ಅಂಜಲಿಬಂಧವಂ ಮಾಡಿ ನಮಸ್ಕರಿಸುವಲ್ಲಿ, ಎಲೈ ಸ್ತನಲಿಂಗೇಶ್ವರನೇ! ಪ್ರತಿ ದಿವಸದಲ್ಲಿಯು ನನಗೆ ರೂಪಲಾವಣ್ಯವತಿಯರಾದ ಸ್ತ್ರೀಯರು ಲಭಿಸಲಿ; ಅವರಸ್ತನಂಗಳಲ್ಲಿ ದಿನೇದಿನೇ ಪೂಜಿಸುತ್ತಿರುವೆನೆಂದು ಪ್ರಾರ್ಥಿಸಿ, ತಾನು ಆಕೆಯೊಡನೆ ಆಫಲಾದಿಗಳಂ ಭಕ್ಷಿಸಿ, ತಾಂಬೂಲವಂ ಸ್ವೀಕರಿಸುತಿದ್ದನು. ಮತ್ತಂ ಆ ವ್ಯಭಿಚಾರಿಣಿಯಾದ ಸ್ತ್ರೀಯು ಪುಸಿನಗೆಯಂ ನಕ್ಕು, ಎಲೈ ಧೂರ್ತನೆ! ದುರಾಚಾರಿಯೆ! ಇದೇನು ಚೇಷ್ಟೆಯಂ ಮಾಡುತಿರ್ಪೆ? ಅದರಿಂ ನನ್ನ ಸ್ತನಂಗಳನ್ನೆ ಪೂಜಿಸಿ ಪ್ರಾರ್ಥಿಸುತಿಪ್ಪೆ? ಯೆನಲು ಆ ಅಜಿತ್ರನೆಂಬ ಬ್ರಾಹ್ಮಣನು ಆಕೆಯ ವಾಕ್ಯವಂ ಕೇಳಿ, ಎಲೆ ಸುಂದರಿಯೆ! ನಿನ್ನ ಸ್ತನಂಗಳು ಸ್ಥೂಲಂಗಳಾಗಿಯು ವರ್ತುಲಂಗಳಾಗಿಯು ಉನ್ನತ್ತಂಗಳಾಗಿ ಇರುವವು. ಇಂಥ ಸ್ತನಂಗಳು ಪ್ರತಿ ದಿವಸದಲ್ಲಿ ಲಭಿಸಲೆಂಬ ವಾಂಛೆಯಿಂದ ನಿನ್ನ ಸ್ತನಂಗಳನ್ನೆ, ಭುಕ್ತಿಮುಕ್ತಿಪ್ರದವಾದ ಶಿವಲಿಂಗವೆಂದು ಪೂಜಿಸಿದೆನೆಂದು ನುಡಿಯುತ್ತಿರೆ ಸೂರ್ಯೋದಯಮಾದುದು. ಬಳಿಕ ಅಜಿತ್ರನು ಆಕೆಯಂ ಕಳುಹಿ ಮಹಾರಣ್ಯಕ್ಕೆ ಪೋಗಿ ಮಾರ್ಗಸ್ಥರ ದ್ರವ್ಯಂಗಳನ್ನಪಹರಿಸಿಕೊಂಡು ಬರುತ್ತಿರೆ, ಆ ಸಮಯದಲ್ಲಿ ದಾವಾಗ್ನಿಯಿಂದಾವರಿಸ

ಲ್ಪಟ್ಟು ಮೃತನಾದನು ಆತನ ಸಮಸ್ತ ಪಾಪಂಗಳು ಸ್ತನಲಿಂಗಾರ್ಚನೆಯಿಂದ ನಾಶವನ್ನೈದಿದ ಕಾರಣ ಶುದ್ಧಾತ್ಮನಾಗಿ ವಿಷ್ಣುವಿನ ಚಿತ್ತದಲ್ಲಿ ಉದ್ಭವಿಸಿ, ಸಚಿತ್ತನೆಂಬ ನಾಮವಂ ಪ್ರಸಿದ್ಧವಾಗಿ ಪಡೆದನು.

ಪೂರ್ವದಲ್ಲಿ ಸ್ತನಲಿಂಗಾರ್ಚನೆಯ ವಾಸನೆಯಿಂ ವಿಷ್ಣುವಿನಿಂದನುಜ್ಞಾತನಾಗಿ ಕಾಶೀಪಟ್ಟಣಕ್ಕೆ ಪೋಗಿ ತನ್ನ ನಾಮದಿಂದಲೆ ಶಿವಲಿಂಗ ಪ್ರತಿಷ್ಠೆಯಂ ಮಾಡಿ ಶ್ರದ್ಧೆಯಿಂ ಶಿವನಂ ಪೂಜಿಸಿ ಪ್ರಾರ್ಥಿಸೆ, ದಯಾನಿಧಿಯಾದ ಪರಮೇಶ್ವರನು ಸಂತುಷ್ಟನಾಗಿ ಆತಂಗೆ ಮದನರಾಜನೆಂಬ ಪೆಸರನ್ನಿಟ್ಟು ಮನ್ಮಥ ರಾಜ್ಯದಲ್ಲಿ ಅಭಿಷೇಕವಂ ಮಾಡಿ ಗಿಳಿಗಳೆ ಅಶ್ವಂಗಳಾಗಿಯು ಮಾರುತನೆ ರಥವಾಗಿಯು ಚಂದ್ರನೆ ಛತ್ರವಾಗಿಯು, ಕಾಂತಿಮತ್ತಾದ ಅಸದೃಶ ರೂಪವನ್ನು ರತಿಯೆಂಬ ಸ್ತ್ರೀಯನ್ನು ಅನೇಕ ಸೌಂದರ್ಯವತಿಯರಾದ ಸ್ತ್ರೀಯರನ್ನು ಇಕ್ಷುಚಾಪವಂ ಪುಷ್ಪಬಾಣಂಗಳಂ ಕೊಟ್ಟು ಅಂತರ್ಧಾನವಾದನು. ಬಳಿಕ ಆ ಕಾಮರಾಜನು ರತೀ ಸಮೇತನಾಗಿ ಭೂಮ್ಯಂತರಿಕ್ಷ ಸ್ವರ್ಗಂಗಳಲ್ಲಿ ವಿಲಾಸದಿಂ ಸರ್ವ ಪ್ರಾಣಿಗಳಿಗು ಮೋಹವಂ ಪುಟ್ಟಿಸುತ ಪಂಚ ಪುಷ್ಪಬಾಣಂಗಳಿಂ ತ್ರೈಲೋಕ್ಯವಂ ಜಯಿಸಿದನು. ಎಲೈ ದ್ವಿಜರುಗಳಿರಾ! ಆ ಅಜಿತ್ತನೆಂಬ ಬ್ರಾಹ್ಮಣನು ಈ ರೀತಿ ಭಕ್ತಿಹೀನನಾಗಿ ಶೈವಾಗಮೋಕ್ತಾಚಾರ ವಿರಹಿತನಾಗಿ ಶಿವನಂ ಪೂಜಿಸಿ ಲೋಕದಲ್ಲಿ ಕಾಮರಾಜನ ಪದವಿಯಂ ಪಡೆದನು. ಹೀಗಿರುವಲ್ಲಿ ಶೈವಾಗಮೋಕ್ತ ವಿಧಿಯಿಂದ ಮಹಾದೇವನಂ ಪೂಜಿಸಿದವರ ಫಲಗಳನ್ನೆಂತು ಪೇಳಲಿ, ನನಗಶಕ್ಯವು.

ಈ ಕಾಮರಾಜನು ದೇವತೆಗಳಿಂ ಪ್ರೇರಿತನಾಗಿ ಪರಮೇಶ್ವರನು ಸಮಸ್ತ ದೇವತೆಗಳ ಸಮಾನನೆಂದರಿತು, ರಥವೇರಿ ಆ ಮಹಾದೇವನ ಸಮೀಪಕ್ಕೆ ಬಂದು ಪಂಚಬಾಣಗಳನ್ನು ಪ್ರಯೋಗಿಸಿ, ಆತನ ನಯನಾಗ್ನಿಯಿಂದ ದಹಿಸಲ್ಪಟ್ಟವನಾಗಿ ಭಸ್ಮವಾಗಿ ಪೋದನು. ಬಳಿಕ ರತಿದೇವಿಯು ಬಹು ಪ್ರಲಾಪವಂ ಮಾಡಿ ಸ್ವಾಮಿಯಂ ಪೂಜಿಸಿ ಮರಳಿ ಪತಿಯಂ ಪಡೆದಳು. ಈಗಲು ಈ ಲೋಕದಲ್ಲಿ ಯಾರು ಕೆಲಂಬರು ದೇವದೇವನಾದ ತ್ರಿಯಂಬಕನಂ ಮನಸ್ಸಿನಿಂ ದೊರಗಿರ್ಪ ಭಕ್ತಿಯಿಂದ ಹೀನರಾಗಿ, ದೇವತೆಗಳಿಗೆ ಸಮಾನನೆಂದು ತಿಳಿಯುತಿದ್ದಾರೆಯೋ, ಅವರುಗಳು ರತಿಪತಿಯು ಹೇಗೆ ನಾಶವನ್ನೈದಿದನೋ ಹಾಗೆ ನಾಶವಾಗುವರೆಂದು

ಸೂತಂ ಪೇಳಿದ ನೆಂಬಲ್ಲಿಗೆ, ಉಪದೇಶಕಾಂಡದೊಳು ಎಂಬತ್ತೆರಡನೆಯ ಅಧ್ಯಾಯವು ಸಂಪೂರ್ಣಮಾದುದು.

ಎಂಬತ್ತೊಮ್ಮರನೆಯ ಅಧ್ಯಾಯವು.

ಶಿವಪೂಜಾವಿಧಿ ವಿಧಾನ ವರ್ಣನಂ.

ಎಲೈ ಋಷಿಗಳಿರಾ! ಶಿವಯೋಗವಂ ಪೇಳ್ವೆನು ಕೇಳಿರಿ, ವಿಧಿಯಿಂದ ಶಿವಾರ್ಚನೆಯಂ ಮಾಡಿದೊಡೆ ಶಿವಸಾಯುಜ್ಯ ಉಂಟೆಂಬುವದರಲ್ಲಿ ಸಂಶಯವಿಲ್ಲ, ಬ್ರಾಹ್ಮಣನು ಪ್ರಾತಃಕಾಲದಲ್ಲೆದ್ದು ಶೌಚಾಚಮನಂಗಳಂ ಮಾಡಿ ಸ್ನಾನಂಗೈದು ವಿಭೂತಿ ರುದ್ರಾಕ್ಷಿಗಳಂ ಧರಿಸಿ ದೇವರ್ಷಿ ಪಿತೃತರ್ಪಣವನೆಸಗಿ, ಉದ್ಯಾನವನಕ್ಕೆ ಪೋಗಿ ನಿರ್ಮಲವಾದ ಪುಷ್ಪಂಗಳಂ ತಂದು ಸಕಲ ಪೂಜಾ ದ್ರವ್ಯಂಗಳಂ ಸಂಪಾದಿಸಿ ದೀಪಂಗಳಿಂ ಶಿವಾಲಯವ ಅಲಂಕರಿಸಿ ಶಿವಭಕ್ತರ ವಚನವಂ ಕೇಳುತ ಶಿವಸೇವಾಪರಾಯಣನಾಗಿರಬೇಕು. ಈ ಶಿವಚರ್ಯವು ಸರ್ವ ಪಾಪಪರಿಹಾರಕವಾಗಿಯು ಪ್ರಸಿದ್ಧವಾಗಿಯು ಇರುವದು. ಇದಲ್ಲದೆ ಶಿವಕ್ರಿಯೆಯಂ ಪೇಳುವೆನು ಕೇಳಿರಿ, ವಿಚಕ್ಷಣನಾದವನು ಪ್ರಥಮದಲ್ಲಿ ಅಂತ್ರಪೂಜಾಪೂರ್ವಕವಾಗಿ ಪಂಚಭೂತ ಶುದ್ಧಿಯಂ ಮಾಡಿ ಶಿವಪೂಜಾನಂತರದಲ್ಲಿ ಅಗ್ನಿಕಾರ್ಯವಂ ಮಾಡುವದೆ ಶಿವಕ್ರಿಯೆಯೆಂದು ಪೇಳಲ್ಪಟ್ಟದು. ಮತ್ತಂ ಶಿವಚರ್ಯಾಕ್ರಿಯೆಗಳಂ ಮಾಡಿದವನು ಸಕಲ ಪಾಪ ಪರಿಹಾರಕವಾದ ಶಿವಯೋಗದಲ್ಲಿ ಮನಸ್ಸಂ ಕೂಡಿಸಬೇಕು. ಶಿವಯೋಗಕ್ಕೆ ಎಂಟು ಅಂಗಗಳಿರುವವು ಅವುಗಳಾವವೆಂದರೆ, ಯಮ ನಿಯಮ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿಗಳೆಂಬಿವುಗಳು, ಇವುಗಳಲ್ಲಿ ಅಹಿಂಸೆ ಸತ್ಯ ಆಸ್ತೇಯ ಪರದ್ರವ್ಯಾನಪೇಕ್ಷತೆ ಬ್ರಹ್ಮಚರ್ಯ, ದಯೆ, ಆರ್ಜವ ಇವಾರು ಯಮಾಂಗಗಳೆಂತಲು, ಕ್ರೋಧದಾಹವಿಚ್ಛಿತ್ತಿಯು ತನಗೆ ಬಂದುದರಲ್ಲಿ ಸಂತುಷ್ಟಿಯು, ಸ್ನಾನ ತರ್ಪಣ ಆಚಾರ ಮುಂತಾದ ಶಿವಭಕ್ತರ ವಾಕ್ಯವಂ ಆದರದಿಂ ಕೇಳುವದು, ಶಿವಪೂಜೆಯಲ್ಲಿ ಪರಮ ಪ್ರೀತಿಯು ದಯೆ ಇವೇಳು ನಿಯಮವೆಂತಲು, ಕೃಷ್ಣಾಜಿನವನಾಗಲಿ ವ್ಯಾಘ್ರಾಜಿನವಾಗಲಿ ಸಮಭೂಮಿಯಲ್ಲಿ ಹಾಸಿ ಪದ್ಮಾಸನ ಮುಂತಾದವುಗಳಲ್ಲಿ ಕುಳ್ಳಿರುವದು ಆಸನವೆಂತಲು ಪೇಳಲ್ಪಡುವವು. ಮತ್ತಂ ಶಿವಯೋಗವಂ ಮಾಡುವವನು ಮೊದಲು ನಿಯಮವುಳ್ಳವನಾಗಿ ಪೂರ್ವ ಮುಖವಾಗಲಿ ಉತ್ತರಮುಖವಾಗಾಗಲಿ ಪೂರ್ವದಲ್ಲಿ ಪೇಳಿದ ಆಸನದಲ್ಲಿ ಕುಳಿತು, ಯೋಗಸಿದ್ಧಿಗೋಸುಗ ಷೋಡಶ ಮಾತ್ರೆಗಳಿಂ ವಾಮನಾಡಿಯಿಂ ವಾಯುವಂ ಪೂರಿಸಿ, ಅರವತ್ತುನಾಲ್ಕು ಮಾತ್ರೆಗಳಿಂ ಕುಂಭಕವಂ ಮಾಡಿ, ಮುವ್ವತ್ತೆರಡು ಮಾತ್ರೆಗಳಿಂ ವಾಯುವಂ ದಕ್ಷಿಣನಾಡಿಯಿಂದ ಬಿಟ್ಟು, ಮರಳಿ ದಕ್ಷಿಣನಾಡಿಯಿಂ ಷೋಡಶ ಮಾತ್ರೆಯಂ ಪೂರಿಸಿ, ಪೂರ್ವದಂತೆ ಕುಂಭಕವಂ ಮಾಡಿ, ವಾಮನಾಡಿಯಿಂ ಮುವ್ವತ್ತೆರಡು ಮಾತ್ರೆಗಳಿಂ ವಾಯುವಂ ಬಿಡುವನು. (ಇದು ಪ್ರಾಣಾಯಾಮ

ವೆಂದು ಪೇಳಲ್ಪಡುವದು.) ಈ ಪ್ರಾಣಾಯಾಮವು ಸಗರ್ಭವೆಂತಲು ಅಗರ್ಭವೆಂತಲು ಎರಡು ಪ್ರಕಾರವಾಗಿರುವದು. ಜಪಧ್ಯಾನಯುಕ್ತವಾದ ಪ್ರಾಣಾಯಮವೇ ಸಗರ್ಭವು, ಈ ಜಪಧ್ಯಾನ ವಿರಹಿತವಾದ ಪ್ರಾಣಾಯಾಮವು ಅಗರ್ಭವು, ಆ ಸಗರ್ಭ ಪ್ರಾಣಾಯಮವಂ ಮಾಡುವಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯರುಗಳಿಂದ ಪ್ರಣವಯುಕ್ತವಾದ ಪಂಚಾಕ್ಷರೀಜಪವು ಮಾಡಲ್ಪಡಬೇಕು. ಶೂದ್ರರಿಂದ ಪ್ರಣವ ವಿರಹಿತವಾದ ಪಂಚಾಕ್ಷರೀ ಜಪವು ಮಾಡಲ್ಯೋಗ್ಯವು, ಇದೇ ಪ್ರಾಣಾಯಾಮವಿಧಿಯು. ತಿಕ್ತ ಅಮ್ಲ ಮಧುರ ಇವುಗಳಂ ಬಿಟ್ಟು ಸೋರೇಕಾಯಿ ಮುಂತಾದ ನಿಷಿದ್ಧಪದಾರ್ಥಂಗಳಂ ವರ್ಜಿಸಿ, ಕ್ಷೀರ ದಧಿ ವಿರಹಿತವಾದ ಮಿತಾನ್ನವಂ ಸ್ವೀಕರಿಸಿ ಸುಖೋಷ್ಣವಾದ ಉದಕಪಾನವಂ ಮಾಡುತ ಇಂದ್ರಿಯಂಗಳಂ ಜಯಿಸುವದು ಪ್ರತ್ಯಾಹಾರವೆಂತಲು, ಶಿವಪಾದಾರವಿಂದ ಯುಗ್ಮದಲ್ಲಿ ಚಿತ್ತವಂ ನಿಲ್ಲಿಸುವದು ಧಾರಣೆಯೆಂತಲು, ಹೃದಯ ಕಮಲದಲ್ಲಿ ಶಿವಧ್ಯಾನ ವಂದನಾದಿಗಳಂ ಮಾಡುವದು ಧ್ಯಾನವೆಂತಲು, ಸಮಸ್ತ ವಿಷಯಂಗಳಂ ಬಿಟ್ಟು ತನಗೆ ಸತ್ಯನಾದ ಶಿವನಲ್ಲಿ ತಾದಾತ್ಮ್ಯಭಾವವನ್ನು ಮಾಡುವದು ಸಮಾಧಿಯೆಂತಲು, ಪೇಳಲ್ಪಡುವವು. ಈ ಅಷ್ಟಾಂಗಗಳೊಡನೆ ಕೂಡಿದ ಯೋಗವನ್ನು ಆವನಾದೋರ್ವನು ಅಭ್ಯಾಸವಂ ಮಾಡುತಿರುವನೋ, ಅಂಥ ಮಹಾತ್ಮನಿಗೆ ಅಣಿಮಾದ್ಯಷ್ಟಸಿದ್ಧಿಗಳು ಉಂಟಾಗುವವು. ಆ ಶಿವಯೋಗಿಯು ಶುಭಕರವಾದ ರೂಪವುಳ್ಳ ಕೋಟಿಸೂರ್ಯ ಪ್ರಕಾಶಮಾನನಾದ ಶಿವನಂ ಹೃದಯದಲ್ಲಿ ನೋಡುತಿರ್ಪನು. ಮತ್ತಂ ಆತನು ಮಹೇಶ್ವರನ ಪಂಚವಿಂಶತಿ ಲೀಲಾಮೂರ್ತಿಗಳಂ ನೋಡುತ್ತಿರುವನು. ಆತನು ನಿಲ್ಲುವಲ್ಲಿಯು ಶಯನಮಾಡುವಾಗಲು ಸಂಚರಿಸುವಾಗಲು ಸರ್ವಕಾಲಂಗಳಲ್ಲಿಯು ಶಿವನನ್ನೆ ಧ್ಯಾನವಂ ಮಾಡಿ ಶಿವಾಗಮ ಸ್ವರೂಪವನ್ನೇ ನೋಡುತ್ತಿರುವನು. ಹೀಗೆ ಆರು ಕೆಲಂಬರು ಶಿವಯೋಗವಂ ಮಾಡುತ್ತಿರುವರೋ ಅವರುಗಳು ಸರ್ವಪಾಪಂಗಳಂ ದಹಿಸಿ ಶಿವಂಗೆ ಅತಿ ಪ್ರಿಯರಾಗಿ ಇಹದಲ್ಲಿ ತಮಗೆ ಬೇಕಾದ ಫಲಗಳನನುಭವಿಸಿ, ದೇಹಾಂತ್ಯದಲ್ಲಿ ಶಿವಾಜ್ಞೆಯಿಂದ ಪರಮಾನಂದ ಶಿವನ ಸಾರೂಪ್ಯವನ್ನೈದುವರು. ಎಲೈ ಮುನಿಗಳಿರಾ! ಶಿವಯೋಗಮಾರ್ಗವು ನಿಮಗೆ ಚನ್ನಾಗಿ ಪೇಳಲ್ಪಟ್ಟಿತು. ಈ ಮಹಿಮೆಯಂ ಕೇಳಿದವರಿಗು ಹೇಳಿದವರಿಗು ಶಿವಸಾರೂಪ್ಯ ಉಂಟಾಗುವದೆಂದು ಸೂತಂ ಶೌನಕಾದಿಗಳಿಗೆ ನಿರೂಪಿಸಿದ ನೆಂಬಲ್ಲಿಗೆ, ಉಪದೇಶ ಕಾಂಡದಲ್ಲಿ ಎಂಬತ್ತೊಂದನೆಯ ಅಧ್ಯಾಯವು ಸಂಪೂರ್ಣವಾದುದು.

ಎಂಬತ್ನಾಲ್ಕನೆಯ ಅಧ್ಯಾಯವು.

ಪಶು-ಪಾಶು-ಪತಿ-ಯೆಂಬ ಶಿವಜ್ಞಾನ ವಿಮರ್ಶನವು.

ಎಲ್ಲೈ ಋಷಿಗಳಿರಾ! ಸಂಸಾರಮೋಚಕವಾದ ಶಿವಜ್ಞಾನಮಂ ಪೇಳುತ್ತಿರ್ದೇನೆ, ಕೇಳಿರೆನಲಾಗಿ, ಅವರುಗಳು ಅದೆಂತಿರುವದು. ಆ ಶಿವಜ್ಞಾನದಿಂ ತಿಳಿಯತಕ್ಕವಸ್ತುವಾವದು? ಅದು ತಿಳಿದದ್ದರಿಂದ ಏನು ಫಲವುಂಟಾಗುತ್ತದೆಂದ, ಪ್ರಶ್ನೆಯಂ ಮಾಡಲಾಗಿ ಸೂತನಿಂತೆಂದನು, ಎಲ್ಲೈ ಋಷಿಗಳಿರಾ! ಶಿವಜ್ಞಾನವು ಪಶುವು ಪಾಶವು ಪತಿಯು ಎಂದು ಮೂರು ಪ್ರಕಾರವಾಗಿರುವುದು, ಈ ಮೂರು ಪ್ರಕಾರವೆ ಋಷಿಗಳಿಂದ ನಾಮಭೇದವಾಗಿ ವರ್ಣಿಸಲ್ಪಡುತಿದ್ದೀತು, ಅಜ್ಞಾನದಿಂ ಪುಟ್ಟಿದ ದುಃಖವು ಜ್ಞಾನದಿಂ ಕೆಡಲ್ಪಡುವದು, ಅಜ್ಞಾನಿಗಳು ತಿಳಿಯತಕ್ಕ ವಸ್ತುವಿನೊಡನೆ ಕೂಡಿಹುದು, ಅವರು ತಿಳಿಯತಕ್ಕ ವಸ್ತುವು ಅಜಡವೆಂಬದಾಗಿಯು ಜಡವೆಂಬದಾಗಿಯು ಇವೆರಡಕ್ಕೆ ಬೇರೆಯಾಗಿರುವನು ನಿಯಾಮಕನೆಂಬದಾಗಿಯು ಮೂರು ವಿಧವು, ಈ ಮೂರು ಬಗೆಯೊಳು ಪಶುವೆಂದು ಪಾಶವೆಂದು ಪತಿಯೆಂದುನ್ನು ವರ್ಣಿಸಲ್ಪಡುತ್ತದೆ, ಅಜಡವೆಂಬ ಪಶುವಿಗೆ ಅಕ್ಷರವೆಂದುನ್ನು ಜಡವೆಂಬ ಪಾಶಕ್ಕೆ ಕ್ಷರವೆಂದುನ್ನು, ಅಕ್ಷರಾಕ್ಷರಂಗಳಿಗೆ ಪರವಾದ ಪತಿಗೆ ಶಂಭುವೆಂಬ ನಾಮಧೇಯವನ್ನು ಪ್ರಾಜ್ಞರು ಪೇಳುವರು. ಈ ಮೂರು ಆದಿಯು ಅಕ್ಷರವೆಂಬ ಪಶುವಿಗೆ ಪುರುಷನೆಂಬ ನಾಮವು, ಕ್ಷರವೆಂಬ ಪಾಶಕ್ಕೆ ಪ್ರಕೃತಿಯೆಂಬ ಪೆಸರು, ಅಕ್ಷರಾಕ್ಷರಂಗಳಿಗೆ ನಿಯಾಮಕನಾದ ಪತಿಯೆಂಬ ಶಂಭುವಿಗೆ ಈಶ್ವರನೆಂಬ ಪೆಸರು ಎಂಬದಾಗಿ ಪೇಳೆ, ಋಷಿಗಳು ಆ ವಾಕ್ಯಮಂ ಕೇಳಿ ಎಲ್ಲೈ ಸೂತಪೌರಾಣಿಕನೆ, ನಿನ್ನಿಂದ ನಿರೂಪಿತವಾದ ಮೂರು ಪ್ರಕಾರವು ನಿಮ್ಮಿಂದ ತಿಳಿಯಲ್ಪಟ್ಟಿದೆ, ಈ ಮೂರು ಪದಾರ್ಥಂಗಳ ಸ್ವರೂಪವನ್ನು ಕ್ರಿಯೆಯನ್ನು ತಡವಿಲ್ಲದೆ ಪೇಳೆಂದರು. ಬಳಿಕ ಸೂತ ಪೌರಾಣಿಕನು, ಎಲ್ಲೈ ಋಷಿಗಳಿರಾ! ಹಿಂದೆ ಹೇಳಿದ ಪ್ರಕೃತಿಗೆ ಜಡವಾದ ಮಹೇಶ್ವರನ ಶಕ್ತಿಯಾದ ಮಾಯೆಯೆಂಬ ಪೆಸರು, ಸತ್ಯಚಿತ್ಸ್ವರೂಪವಾದ ಆ ಮಾಯಾಶಕ್ತಿಯು ಪರಮಾಕಾಶದಲ್ಲಿ ಶಿವನನ್ನಾಶ್ರಯಿಸಿಕೊಂಡಿಹಳು. ಜಡರೂಪವಾದ ಮಾಯೆಯಿಂದಾವೃತನಾದ ಪುರುಷನಿಗೆ ಜೀವನೆಂಬ ನಾಮಧೇಯವು. ಆ ಪುರುಷನ ಸ್ವರೂಪವನ್ನು ಆಚ್ಛಾದಿಸಿಕೊಂಡು ಜೀವಭಾವನ ನಿಮಿತ್ತಕಾರಣ ಮಾಯಾಶಕ್ತಿಗೆ ಮಲವೆಂಬ ನಾಮ ಉಂಟಾಗುವದೆಂದು ಜ್ಞಾನಿಗಳು ಪೇಳುವರು. ಮತ್ತಂ ಮಲದಿಂದಾವರಿಸಲ್ಪಟ್ಟ ಜೀವನು ತಾನು ಮಾಡಿದ ಕರ್ಮವಂ ಭುಂಜಿಸುತಲಿಹಾನೆ. ಆ ಮಲನಾಶವಾದೊಡೆ ಕರ್ಮವೆ ಕಾರಣವಾಗುಳ್ಳ ಭೋಗವು ನಾಶವಾಗುವದು. ಭೋಗವೆಂದೊಡೆ ಕರ್ಮದಿಂ ಪುಟ್ಟಿದ ಅನುಭವವು. ಅದು

ಕಾರಣದಿಂದೀ ಶರೀರವು ಭೋಗಸಾಧನವು. ಆ ಪಶುವು ಶರೀರದಲ್ಲಿರ್ದು ಬಾಹ್ಯಾಂತಃಕರಣ ದ್ವಾರಂಗಳಿಂದ ಭೋಗವನನುಭವಿಸುತ್ತಿಹನೆಂದು ಪೇಳಲ್ಪಡುತಿದಾನೆ. ಈ ಪಶುವಿಗೆ ಸಹಾಯವಾಗುವಂತಹರು ಯಾರು ಇಲ್ಲ, ಈ ಪಶುವು ಆರಿಗು ಸಹಾಯವಾಗುವನಲ್ಲ, ಈ ಪಶುವಿಗೆ ಮಾರ್ಗದಲ್ಲಿ ಜನಸಂಬಂಧವಾಗುವಂತೆ ದಾರಾಪುತ್ರಾದಿ ಸಂಬಂಧವೆಂದು ತಿಳಿಯತಕ್ಕದ್ದು, ಈ ಪಶುಗಳು ಶರೀರಗಳಂ ಧರಿಸುವದು ಬಿಡುವದು ಸಹ ಆಕಾಶದಲ್ಲಿ ಪೋಗುವ ಮತ್ತಂ ಬರುತ್ತಿರುವ ಮೇಘಂಗಳೊಳಗೆ, ಕೂಡಿವ ಚಂದ್ರ ಬಿಂಬದಂತೆ ಕಾಣಲ್ಪಡುತ್ತಿರುವನು. ಈ ಪಶುವಿಗೆ ಹೋಗಿ ಬರುವಂಥ ಶರೀರಂಗಳು ಅನೇಕಂಗಳಾಗಿರುವವು, ಲೋಕದಲ್ಲಿ ಜನಗಳು ಜೀರ್ಣವಸ್ತ್ರವಂ ಪರಿಹರಿಸಿ ನೂತನ ವಸ್ತ್ರವಂ ಧರಿಸುವಂತೆ ಈ ಪಶುವು ಜೀರ್ಣ ಶರೀರಂಗಳಂ ಬಿಟ್ಟು ಹೊಸದಾದ ಶರೀರಂಗಳಂ ಧರಿಸಿ, ಎರಡು ಪಡುವುಗಳಲ್ಲಿ ಸಂಚರಿಸುವ ಮತ್ಸ್ಯದೋಪಾದಿಯಲ್ಲಿ ಆ ಮೋಕ್ಷಪರ್ಯಂತರ ಸ್ವರ್ಗ ಭೂಲೋಕ ಪಾತಾಳಂಗಳಲ್ಲಿ ಪಾಶಬದ್ಧನಾಗಿ, ಕರ್ಮವಶದಿಂ ಸುಖದುಃಖಂಗಳ ಅನುಭವಿಸುತ್ತ ಪರಮೇಶ್ವರನ ಲೀಲಾವಿನೋದಾರ್ಥವಾಗಿ ಸಂಚರಿಸುತ್ತಿರುವನೆಂದು ಶಾಸ್ತ್ರನಿಶ್ಚಯವು. ಎಲೈ ಋಷಿಗಳಿರಾ! ಬ್ರಹ್ಮಾದಿ ಪಿಪೀಲಿಕಾಂತ ಜೀವರುಗಳೆಲ್ಲರುಂ ಪಶುಗಳೆಂದೇ ಪೇಳಲ್ಪಟ್ಟರು. ಈ ಸಮಸ್ತ ಪಶುಗಳಿಗು ಪೂರ್ವದಲ್ಲಿ ಪೇಳಿದಂಥಾದ್ದು ಸಮಾನವೆಂದು ತಿಳಿಯಬೇಕೆಂಬದಾಗಿ ಸೂತಮುನಿಯು ಪೇಳಿದನು.

ಮಾಯಾಸ್ವರೂಪ ವರ್ಣನೆ.

ಬಳಿಕ ಋಷಿಗಳು ಆ ವಾಕ್ಯವಂ ಕೇಳಿ ಎಲೆ ಮತಿವಂತನಾದ ಸೂತಮುನಿಯೆ! ನೀನೀಗ ಮಾಯೆಯನ್ನೇ ಪ್ರಕೃತಿಯೆಂದು ಪೇಳಿದೆಯಲ್ಲವೆ, ಆ ಮಾಯಾ ಸ್ವರೂಪವನ್ನು ಅದರ ಕಾರ್ಯವನ್ನು ನಮಗೆ ಪೇಳಬೇಕೆಂದು ಪ್ರಶ್ನೆಯಂ ಮಾಡೆ ಸೂತನಿಂತೆಂದನು, ಎಲೈ ಋಷಿಗಳಿರಾ! ಮಹೇಶ್ವರನನ್ನು ಆಶ್ರಯಿಸಿಕೊಂಡಿರುವ ಪ್ರಕೃತಿಯು ಸಮಸ್ತ ಪಶುಗಳಿಗೂ ಮಾಯೆಯೆಂದು ಪೇಳಲ್ಪಡುವದು, ಆ ಮಾಯೆಗೆ ಪ್ರಕೃತಿಯೆಂಬದಾಗಿಯು ಅವ್ಯಕ್ತವೆಂಬದಾಗಿಯು, ಪ್ರಧಾನವೆಂಬದಾಗಿಯೂ ಮೂರು ನಾಮಂಗಳು, ಆ ಮಾಯೆಯು ಸಮಸ್ತ ಪಶುಗಳಿಗು ಉಪಾದಾನಕಾರಣವಾಗಿರುವದು. ಮತ್ತಂ ಆ ಮಾಯೆಯು ಅವ್ಯಕ್ತರೂಪವಾಗಿ ಸುಖದುಃಖ ಮೋಹಂಗಳಂ ಪುಟ್ಟಿಸಲೋಸುಗ ಸತ್ವವು ರಜಸ್ಸು ತಮಸ್ಸು ಎಂಬ ಗುಣತ್ರಯವಂ ಪುಟ್ಟಿಸುವದು. ಇದಲ್ಲದೆ ಗುಣತ್ರಯಂಗಳು, ತನ್ಮಾತ್ರಗಳೈದು, ಮತ್ತಂ ಭೂತಪಂಚಕ, ಜ್ಞಾನೇಂದ್ರಿಯಪಂಚಕ, ಕರ್ಮೇಂದ್ರಿಯಪಂಚಕ, ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳು, ನಾಲ್ಕು ಈ ಇಪ್ಪತ್ತೇಳು

ಸವಿಕಾರಿಗಳಾದ ಅವ್ಯಕ್ತಂಗಳೆಂದು ಪೇಳಲ್ಪಡುತ್ತವೆ, ಇವುಗಳಿಗೆ ಕಾರಣವಾದ ಮಾಯೆಯು ಅವಿಕಾರಿಯಾದ ಅವ್ಯಕ್ತವೆಂದೆನ್ನಲ್ಪಡುವದು. ಕಾರ್ಯವಶದಿಂ ಪುಟ್ಟಿದ ಶರೀರಾದಿಗಳು ಘಂಟಾದಿಗಳೋಪಾದಿಯಲ್ಲಿ ವ್ಯಕ್ತವೆಂದು ಪೇಳಲ್ಪಡುತ್ತವೆ, ಅವ್ಯಕ್ತವಾದ ಶರೀರಾದಿಗಳು ಅವ್ಯಕ್ತದ ದೆಸೆಯಿಂದ ಪುಟ್ಟಿದವು, ಅದು ಕಾರಣದಿಂದವ್ಯಕ್ತವು ಒಂದು ಕಾರಣವು, ಆ ಕಾರಣದಿಂ ವ್ಯಕ್ತಕಾರಣಂಗಳು ಅವ್ಯಕ್ತಕಾರಣದಿಂ ವ್ಯಕ್ತವಾದ ಶರೀರಗಳು ಪುಟ್ಟಿದವು. ಈ ಶರೀರವು ಅವ್ಯಕ್ತವಾದ ಆ ಕಾರಣಗಳನ್ನೇ ಆಧಾರವಾಗಿ ಮಾಡಿಕೊಂಡು ಆ ಕಾರಣಂಗಳಿಗೆ ಭೋಕ್ತವಾಗಿ ಮತ್ತೊಂದಕ್ಕೆ ಕಾರಣವಲ್ಲದೆ ಇಹುದು, ಇವರುಗಳಿಂ ಆವರಿಸಲ್ಪಟ್ಟವನೇ ಪಶುವು. ಮತ್ತಂ ಜನಗಳು ಮಾಯೆಯಿಂ ಮೋಹಿತರಾಗಿ ಈ ಕಾರ್ಯಕಾರಣ ಭಾವವನರಿಯರು. ಅದುಕಾರಣದಿಂ ಬ್ರಹ್ಮಾದಿಗಳಂ ಪಶುಗಳೆಂದು ತಿಳಿಯಬೇಕು. ಹೀಗಿರುವಲ್ಲಿ ಇವುಗಳು ಪಶುಗಳು ನಾನು ಬ್ರಹ್ಮನು, ಈತ ಕುರುಡನು, ಆತ ಬಧಿರನು, ನಾನು ಕಪ್ಪಾದವನು, ಇವನು ಕೆಂಚನು, ಆತ ಮೂಕನು ಎಂದೆ ಪ್ರತ್ಯೇಕ ಪ್ರತ್ಯೇಕ ತಿಳಿವರು. ಆತ್ಮನು ಇವುಗಳಿಗೆ ಬೇರೆಯಾಗಿ ತನ್ನ ಲೀಲೆಯಿಂದ ಇವರುಗಳನ್ನು ನೋಡುತ್ತಿಹನು, ಹಾಗೆ ಪಶುಗಳು ಈ ಶರೀರವು ನನ್ನದು, ಶರೀರವು ಜಡವು, ತಾನು ಶರೀರಿಯು, ಎಂಬುದನ್ನು ತಿಳಿಯಲರಿಯರು. ದೇವದೇವನಾದಂಥ ಪತಿಯು ಆ ಶರೀರಿಯನ್ನು, ಶರೀರಗಳನ್ನು ನೋಡುತ್ತಿದಾನೆ. ಈ ಶರೀರಂಗಳು ಆ ಪತಿಯಂ ನೋಡಲಾರವು. ಆವನಾನೋರ್ವ ಜೀವನು ಶರೀರಾದಿಗಳಂ ಜಡವೆಂದು ತಿಳಿದು ಪಶುಗಳಿಗೆ ನಿಯಂತನಾದ ಸರ್ವತ್ರಪರಿಪೂರ್ಣನಾದ ಹಿರಣ್ಮಯನಾದಂಥ ಪರಮೇಶ್ವರನಂ ಆವಾಗಲು ನೋಡುತ್ತಿರುವನೋ, ಆ ಜೀವನು ಸಕಲ ಪಾಪಂಗಳಂ ಕೊಡಹಿ ಆ

ಪರಮೇಶ್ವರನಲ್ಲಿ ಐಕ್ಯವಾಗುವನೆಂದು ಸೂತಂ ಶೌನಕಾದಿಗಳಿಗೆ ಪೇಳಿದ
ನೆಂಬಲ್ಲಿಗೆ, ಉಪದೇಶಕಾಂಡದೊಳು ಎಂಬತ್ನಾಲ್ಕನೆಯ
ಅಧ್ಯಾಯವು ಸಮಾಪ್ತವಾದುದು.

ಎಂಬತ್ತೈದನೆಯ ಅಧ್ಯಾಯವು.

ಪಶು-ಪಾಶವಿಮರ್ಶೆ.

ಎಲೈ ಋಷಿಗಳಿರಾ! ಆವನಾನೋರ್ವನು ಜೀವನೆಂದು ಪೇಳಲ್ಪಡುವನೋ ಆತನು ಪರತಂತ್ರನೆಂಬುದಾಗಿಯು ಪಶುವೆಂಬುದಾಗಿ ನಿಶ್ಚಯಿಸಲ್ಪಟ್ಟಿರುವನು, ಆ ಪಶುವು ಶರೀರದಲ್ಲಿದ್ದಂಥವನಾಗಿ ಪರಮೇಶ್ವರನಿಂ ಶರೀರಿಯೆಂಬ ನಾಮವಂ

ಪಡದು ಪಂಚಾವಸ್ಥೆಗಳಿಂದ ಯುಕ್ತನಾಗಿರುವನೆಂದು ವೇದಾಂತಜ್ಞಾನಿಗಳಿಂದ ಪೇಳಲ್ಪಡುವದು. ಆ ಪಶುಗಳಲ್ಲಿ ಅನೇಕರು ಸಂಸಾರ ವಶವರ್ತಿಗಳಾಗಿಯು ಕೆಲಂಬರು ವಿಶೇಷ ಜ್ಞಾನವುಳ್ಳವರಾಗಿಯು ಇರುವರು. ಪ್ರಳಯವೆಂದು ಪಾತ್ರವಾದ ಆ ಪಶುವಿನಲ್ಲಿ ಶಕ್ತಿಪಾತ ಉಂಟಾಗುವದು. ಅನಂತರದಲ್ಲಿ ಆ ಪಶುವು ಶರೀರದಲ್ಲಿರುವವನಾಗಿ, ಪರಮೇಶ್ವರನಿಂ ಆ ಸತ್ಕರ್ಮದ ಶಿವಶಾಸ್ತ್ರದಲ್ಲಿ ಪೇಳಿದ ಮಾರ್ಗದೊಳು ನಿಷ್ಠಾವಂತನಾಗಿ, ಆವಾಗಲು ಶಿವನಲ್ಲಿ ಲೀನವಾದ ಮನಸ್ಸುಳ್ಳವನಾಗಿ ಮಧ್ಯೆ ಮಧ್ಯೆ ಶಿವನ ಕೃಪೆಯಂ ಪಡೆದು ಶಿವಾಲಯ ನಿರ್ಮಾಣವಂ ಮಾಡುತ್ತಲು, ಶಿವಾರಾಮಂಗಳಂ ಮಾಡಿಸುತ್ತಲು ಶಿವಸೇವಾಪರನಾಗಿ ಅನೇಕ ಶಿವಪ್ರತಿಷ್ಠೆಗಳಂ ಮಾಡಿ ಶಿವಭಕ್ತರಿಗೆ ಸಂತರ್ಪಣೆಗಳಂ ಗೈಯುತ್ತಿರುವನು. ಮತ್ತಂ ಆ ಪಶುವು ಆವಾಗಲು ಭಸ್ಮ ರುದ್ರಾಕ್ಷಾಲಂಕೃತನಾಗಿ ಪಂಚಾಕ್ಷರೀ ಜಪ ಪರಾಯಣನಾಗಿ, ಸರ್ವ ಪ್ರಾಣಿಗಳಲ್ಲಿಯು ದಯಾಯುಕ್ತನಾಗಿ ಜೀವನ್ಮುಕ್ತನಾಗಿ ವಿಹರಿಸುತ್ತಿರುವನು. ಈತನೇ ಜ್ಞಾನಿಯು, ಮತಿವಂತನು, ಲೋಕ ಪೂಜಿತನು. ಈತಂಗೆ ಮೂರು ಲೋಕದಲ್ಲಿಯು ಸಮಾನವಿಲ್ಲ. ಈತನ ಪೂಜೆಯೇ ಪರಮೇಶ್ವರನ ಪೂಜೆಯು, ಈತನ ಅವಮಾನದಿಂದ ಪರಮೇಶ್ವರನು ಅವಮಾನ್ಯನಾ ಪಟ್ಟವನಹನದ ಇದು ಸತ್ಯವೆಂದು ತಿಳಿಯಿರಿ, ಸಂಶಯವಿಲ್ಲ, ಪರಮೇಶ್ವರನು ಈತನ ಜಿಹ್ವೆಯನ್ನಾಶ್ರಯಿಸಿ ಸ್ವಾದುಗಳಂ ಸ್ವೀಕರಿಸುತ್ತಿರುವನು. ಈತನು ದೃಷ್ಟಿಪಥವ ನೈದಿದಂಥ ಜನರುಗಳೆಲ್ಲರು ಪಾಪದಿಂ ವಿಮುಕ್ತರಹರೆಂದು ಸೂತನು ಋಷಿಗಳಿಗೆ ಪೇಳದನು.

ಪತಿವಿಮರ್ಶೆಯು.

ಬಳಿಕ ಋಷಿಗಳೆಲ್ಲರು ಆ ವಾಕ್ಯವಂ ಕೇಳಿ, ಎಲೈ ಸೂತಮುನಿಯೆ ! ನಾವು ನಿನ್ನಿಂದ ಪಶುಪಾಶುಗಳ ಸ್ವರೂಪಗಳಂ ಕೇಳಿದೆವು. ಈಗ ಪತಿಸ್ವರೂಪವಂ ಪೇಳಿದೊಡೆ ಕೃತಾರ್ಥರಾಗುವೆವು. ಈ ಭೂಲೋಕದಲ್ಲಿ ಆರು ಕೆಲಂಬರು ಕೇಳುತ್ತಿರುವರೋ ಅವರಿಗೆ ಮರಳಿ ಜನ್ಮವಿಲ್ಲದ ಹಾಗೆ ವಿಸ್ತಾರದಿಂ ಪೇಳಬೇಕೆನೆ, ಸೂತನು ಎಲೈ ಋಷಿಗಳಿರಾ ! ದೇವದೇವನಾದ ಮಹೇಶ್ವರನ ವೈಭವವಂ ಪೇಳುತ್ತಿರ್ದೇನೆ, ಕೇಳಿರಿ. ಆ ಪರಮೇಶ್ವರನ ವೈಭವದ ಶ್ರವಣಮಾತ್ರದಿಂದಲೆ ಪುರುಷನು ಕೃತಾರ್ಥನಾಗುವನು. ಈ ಲೋಕದಲ್ಲಿ ವಿಶ್ವಾಧಿಕನಾದ ಶಿವನಿರುತಿಹಾನೆ. ಅನಂತ ಮಹಿಮಾಸ್ಪದನಾದ ಕಲ್ಯಾಣಗುಣ ಸಾಗರನಾದ ಶಿವನು ಜಗವಂ ಸೃಷ್ಟಿಸಿ ಪಾಲನೆಯಂ ಮಾಡಿ ಅಂತ್ಯದಲ್ಲಿ ಸಂಹಾರವಂ ಮಾಡುತ್ತಿರುವನು. ವಿಶ್ವತಶ್ಚಕ್ಷುನಾಗಿ ವಿಶ್ವತೋಮುಖನಾದ, ವಿಶ್ವತೋಹಸ್ತನಾಗಿ ವಿಶ್ವತಃಪಾದನಾದ, ಸರ್ವಜ್ಞನಾಗಿ ಸರ್ವಕರ್ತೃವಾದ ಸಚ್ಚಿದಾನಂದ ಪರಿ

ಪೂರ್ಣನಾಗಿ ಪರಂಜ್ಯೋತಿಯಾದ ಪಾಶುಪಾಶ ವಿಮೋಚಕನಾದ ಅನಾದಿಮಲ
ನಿರ್ಮುಕ್ತನಾದ ವಿಭುವಾದನಿಷ್ಕಳಂಕನಾಗಿ ಸಕಳನಾದ ಶಿವನೋರ್ವನೆ ಕ್ರಿಯೋ
ಪಾಧಿಭೇದದಿಂ ಬಹುವಿಧವಾಗಿರ್ಪನು. ಮತ್ತಂ ಶಿವಸಾದಾಖ್ಯ ಅಮೂರ್ತ
ಸಾದಾಖ್ಯ ಮೂರ್ತಸಾದಾಖ್ಯ ಕರ್ತೃಸಾದಾಖ್ಯ ಕರ್ಮಸಾದಾಖ್ಯಗಳೆಂಬ ಪಂಚ
ಸಾದಾಖ್ಯಂಗಳು ಪರಮೇಶ್ವರನಿಂ ಪುಟ್ಟಿದುವು. ಇದಲ್ಲದೆ ಶಿವನು ಷಡಂಗ
ಯುಕ್ತನಾಗಿ ಪಂಚಬ್ರಹ್ಮಸ್ವರೂಪವಾಗಿದಾನೆ. ಆ ಸದಾಶಿವನು ಪರವಾದಂಥ
ವನು. ಅಪರವಾದವನೆ ಮಹಾಶಿವನು, ಆ ಮಹಾಶಿವನಾದಂಥ ಶಿವಂಗೆ ಪಂಚ
ವಿಂಶತಿ ಮೂರ್ತಿಗಳಿರುವವು. ಪ್ರಥಮದಲ್ಲಿ ಸೃಷ್ಟಿಕೃತ್ಯವು ದ್ವಿತೀಯದಲ್ಲಿ
ಪಾಲನ ಕರ್ಮವು ತೃತೀಯದಲ್ಲಿ ಸಂಹಾರಕೃತ್ಯವು ಚತುರ್ಥದಲ್ಲಿ ತಿರೋಭಾವ
ಕೃತ್ಯವು ಪಂಚಮದಲ್ಲಿ ಅನುಗ್ರಹ ಕೃತ್ಯವು ಎಂದು ಧೂರ್ಜಟಿಯಾದ ಪರಮೇ
ಶ್ವರಗೆ ಪಂಚಕೃತ್ಯಂಗಳುಂಟು. ಆ ಪರಮೇಶ್ವರನೆ ಪರಬ್ರಹ್ಮನು, ಇತರ
ರಾದ ದೇವತೆಗಳೆಲ್ಲರು ಪಶುಗಳೆಂದು ಪೇಳಲ್ಪಟ್ಟರು. ಮತ್ತಂ ಸರ್ವಜ್ಞತ್ವಾದಿ
ಶಕ್ತಿವಂತನಾದ ಆ ಪರಶಂಭುವು ಶರೀರೇಂದ್ರಿಯ ಮುಂತಾದ ಪಾಶಗಳಿಂದ
ಈ ಪಶುಗಳಂ ಕಟ್ಟಿ, ಆವಾಗಲು ವಿಹರಿಸುತ್ತಿದಾನೆ. ಬ್ರಹ್ಮ ಮುಂತಾದ
ಪಶುಗಳು ಆ ಪರಶಿವನ ವಿಲಾಸಕ್ಕೆ ಆಸ್ಪದರಾದಂತವರು. ಆತನು ಈ ಜಗ
ತ್ತಿನ ಸೃಷ್ಟಿಸ್ಥಿತಿಲಯಂಗಳಂ ಮಾಡುತ್ತ ಆಕಾಶದಲ್ಲಿ ಸಮಸ್ತ ಪಶುಗಳಿಗು
ಅನುಗ್ರಹವಂ ಮಾಡುತ್ತಿರುವನು. ಮತ್ತಂ ಪರಶಂಬೋಧನೆಂಬದಾಗಿಯು
ಅನಾದಿಯೆಂಬದಾಗಿಯು ಪರನೆಂಬದಾಗಿಯು ನಿರೂಪಿಸಲ್ಪಡುತ್ತಿದಾನೆ. ಸ್ವತಂತ್ರ
ವುಳ್ಳ ಶಕ್ತಿಯುಳ್ಳಂಥ ಪರಮೇಶ್ವರನು ಪಶುಗಳ ಪಾಶಂಗಳಂ ಸಾರ್ವಕಾಲ
ದಲ್ಲಿಯೂ ಶಕ್ತಿವಂತನಾಗಿ ಪಂಚಕೃತ್ಯಂಗಳಂ ಮಾಡುತಿಹನು. ಈ ಶಂಭು
ವಾದ ಶಂಕರನಾದ ಪರಮೇಶ್ವರನಾದ ಶಿವಂಗೆ ಶಕ್ತಿಗಳುಂಟಾಗಿಹವು. ಮತ್ತಂ
ಪಂಚಬ್ರಹ್ಮಸ್ವರೂಪಾದಸದಾಶಿವನು ಆರಂಗಗಳೊಡನೆಕೂಡಿಕೊಂಡಿಹನು. ಪಶು
ಪಾಶ ವಿಮೋಚನನಾದ ಪಶುಪತಿಯು ಸಮಸ್ತರಿಂ ತಿಳಿಯತಕ್ಕವನು. ಈ ಸದಾ
ಶಿವನಾದ ಪರಮಾತ್ಮನಾದ ಶಂಕರನಾದ ತ್ರಿಯಂಬಕನಾದ ಈಶ್ವರನಾದ ಪಶು
ಪತಿಯ ಜ್ಞಾನದಿಂದ ಬಂಧಮೋಚನವಹುದು. ಆ ಪತಿಜ್ಞಾನ ವಿಲ್ಲದಿದ್ದರೆ
ಪಶುಗಳಾಗಿಯೆ ಇಹರು. ಈ ಪಶುಪತಿಯಂ ತಿಳಿಯದಿದ್ದರೆ ಮಾಂಗಲ್ಯವಿಲ್ಲವು.
ತಿಳಿದರೆ ಆತನಿಗೆ ಮಂಗಳಪ್ರದವಾಗುವದು, ಆತನು ಶಾಂತನಾಗುವನು, ಆತ
ನಿಗೆ ಸಂಸಾರಶೋಕ ಬಿಡುಗಡೆ ಯಾಗುವದು. ಶಿವನಿಂದ ಪಶುಗಳ ಬಂಧ
ಮೋಚನಾರ್ಥವಾಗಿ ಚರ್ಯಾಪಾದವೆಂದುನ್ನೂ, ಕ್ರಿಯಾಪಾದವೆಂದುನ್ನೂ,
ಯೋಗಪಾದವೆಂದುನ್ನೂ, ಜ್ಞಾನಪಾದವೆಂದುನ್ನೂ ಚತುರ್ವಿಧ ಪಾದಂಗಳು

ಕಲಿಸಲ್ಪಟ್ಟವು. ಯಾವ ನೊಬ್ಬನು ಚರ್ಯಾಪಾದೋಕ್ತ ಪ್ರಕಾರದಿಂದಲೂ ಕ್ರಿಯಾಪಾದೋಕ್ತ ಪ್ರಕಾರದಿಂದಲೂ, ಯೋಗಪಾದೋಕ್ತ ಪ್ರಕಾರದಿಂದಲೂ ಶಿವಯೋಗವಂ ಮಾಡುವನೋ ಆತನು ಶಿವಸಾರೂಪ್ಯವನ್ನೈದಿ ಅಂತ್ಯದಲ್ಲಿ ಶಿವಸಾಯುಜ್ಯವನ್ನೈದುವನು. ಅದುಕಾರಣದಿಂ ಶಿವಜ್ಞಾನದಿಂದಲೆ ಮುಕ್ತಿಯುಂಟು. ಆ ಶಿವಜ್ಞಾನವು ಮೂರು ಲೋಕಂಗಳಲ್ಲಿಯೂ ದುರ್ಲಭವಾಗಿರುವದು. ಆ ಶಿವಜ್ಞಾನವಿಲ್ಲದಿದ್ದರೆ ಪಶುಗಳಿಗೆ ಸಂಸಾರ ಬಿಡುಗಡೆಯಾಗದು. ಆ ಶಿವಜ್ಞಾನವಂ ತಿಳಿದರೆ ಇಹದಲ್ಲಿಯೆ ಜೀವನ್ಮುಕ್ತನಾಗುವನು. ಆ ಶಿವಜ್ಞಾನಿಯು ಯಾವ ವಸ್ತುಗಳಂ ಕಾಮಿಸುವನೊ ಆ ವಸ್ತುಗಳಂ ಭೋಗಿಸುವನು. ಆದುಕಾರಣದಿಂ ಶಿವಜ್ಞಾನಿಗಳಿಗೆ ಸರ್ವಕಾಲದಲ್ಲಿಯೂ ಯಾವ ವಸ್ತುವು ದುರ್ಲಭವಾಗುವದಿಲ್ಲವು. ಯಾವನು ಷಡಂಗಯುಕ್ತವಾದ ಚತುರ್ವೇದಂಗಳಂ ಪುರಾಣ ತರ್ಕ ಮೀಮಾಂಸ ಧರ್ಮಶಾಸ್ತ್ರಂಗಳಂ ಸರ್ವಾಗಮಾರ್ಥ ಸಮಸ್ತ ಮಂತ್ರಂಗಳಂ ಪಶುಪಾಶಪತಿಗಳಂ ಅವ ವಿಷಯಗಳಂ ತಿಳಿದವನೋ ತಿಳಿದವನಿಂ ತಾನು ತಿಳಿಯತಕ್ಕದ್ದು. ಈಶ್ವರ ಸ್ವರೂಪವಾದ ಶಿವನೋರ್ವನೇ ವಿಷಯಜ್ಞಾನದಿಂದ ತಾನೇತಾನಾದ ಶಿವನೆಂದು ತಿಳಿಯುವನು. ಈ ಮೂರನ್ನು ತಿಳಿದವನು ಜಿತೇಂದ್ರಿಯನಾಗಿರುವನು. ಆತನೇ ಜೀವನ್ಮುಕ್ತನು. ಶಿವಸಮ್ಮತನು. ಪರಿಪೂರ್ಣನಾದುದರಿಂದ ಪರಶಿವನೆಂದು ಪೇಳಲ್ಪಡುವನು. ಮತ್ತಂ ಶಿವನು ಪಂಚಸಾದಾಖ್ಯ ನಿರೂಪದಿಂ ಪಂಚಬ್ರಹ್ಮರೂಪಿಯಾದ, ಷಡಂಗಯುಕ್ತನಿಂದ ಪಂಚವಿಂಶತಿ (ಅಂದರೆ ೨೫) ಮೂರ್ತ್ಯಾತ್ಮಕವಾದ, ಪರಾಪರವಿಭಾಗದಿಂ ಅನಾದಿಯಾದ ದೇವದೇವೇಶ್ವರನಾದ ಸರ್ವಾನುಗ್ರಹ ಕರ್ತೃವಾದ ಪಂಚಕೃತ್ಯ ಪರನಾದ ಮಹೇಶ್ವರ ಮೂರ್ತಿಯೆಂದು ಪೇಳಲ್ಪಟ್ಟನು. ಹೀಗೆ ಪರಶಿವನು ಸಕಲಾತ್ಮರ ಸಿದ್ಧಿಗೋಸ್ಕರ ಸರ್ವವನ್ನು ಮಾಡುತ್ತಿರುವನು. ಯಾವನೊಬ್ಬನ ಈ ಶಿವತತ್ವವಂ ಯಥಾರ್ಥವಾಗಿ ತಿಳಿಯುವನೊ ಆತನೆ ಜ್ಞಾನಿಯೆಂದು ಸೂತಂ ಶೌನಕಾದಿಗಳ್ಗೆ ಪೇಳ್ದನೆಂಬಲ್ಲಿಗೆ,

ಉಪದೇಶಕಾಂಡದೊಳು ಎಂಬತ್ತೈದನೆಯ ಅಧ್ಯಾಯವು
ಸಂಪೂರ್ಣವಾದುದು.

ಎಂಬತ್ತಾರನೆಯ ಅಧ್ಯಾಯವು.

ಪಂಚವಿಂಶತಿ ಮೂರ್ತಿವಿವರಣಂ.

ಎಲೆ ಸೂತನೆ! ಆ ಸ್ವರೂಪ ಬ್ರಹ್ಮನಾದ ಪರಶಿವನಿಗೆ ಕೈಲಾಸ, ಶಿವಲೋಕ ಮುಂತಾದವುಗಳಲ್ಲಿ, ಕಾರ್ಯಾರ್ಥವಾಗಿ ಅನಾದಿಗಳಾದ ಪಂಚವಿಂಶತಿ

ಮೂರ್ತಿಗಳುಂಟೆಂದು ನಿಮ್ಮಿಂದ ಕೇಳಿದೆವು. ಆ ಮೂರ್ತಿಗಳ ರಹಸ್ಯವಂ ನಮಗೆ ಪೇಳಿ ನಮ್ಮ ಸಂಕಲ್ಪನಂ ಬಿಡಿಸಿರೆಂದು ಶೌನಕಾದಿಗಳು ಕೇಳಲು ಸೂತ ನಿಂತೆಂದನು. ಎಲೈ ಋಷಿಗಳಿರಾ! ಆ ಮಹೇಶ್ವರನ ಪಂಚವಿಂಶತಿ ಮೂರ್ತಿಗಳಿಗೆ ಅನಾದಿತ್ವನಂ ಹ್ಯಾಗೆ ತಿಳಿಯುವಿರೊ ಹಾಗೆ ಪೇಳುವೆನು. ನಿತ್ಯ ತೃಪ್ತನಾದ ಶಿವಂಗೆ ಪಂಚವಿಂಶತಿ ಮೂರ್ತಿಗಳು ಅನಾದಿಗಳಾಗಿ ನಿತ್ಯವಾಗಿರು ವವು. ಶುದ್ಧನಾದ ಮಹೇಶ್ವರತತ್ವದಲ್ಲಿ ಸದಾಶಿವನು ಏನುಕಾರ್ಯ ನಿಮಿತ್ತ ವಾಗಿ ಪಂಚವಿಂಶತಿ ಮೂರ್ತಿಗಳಂ ಧರಿಸಿದನೋ ಅದನ್ನು ನಿಮಿಗೆ ಪೇಳುವೆನು. ಆದಿಯಲ್ಲಿ ಲಿಂಗೋದ್ಭವವು, ಆತ್ಮರ ಉತ್ಪತ್ತಿ ನಿಮಿತ್ತವಾಗಿ ಸರ್ವಾತ್ಮತ್ವವು, ಮಹೇಶ್ವರನಿಂ ಧರಿಸಲ್ಪಟ್ಟಿತು. ಅದುಕಾರಣದಿಂ ಸಮಸ್ತವಾಗಿದ್ದ ಆತ್ಮಗಳು ಲಿಂಗಸ್ವರೂಪಿಗಳೇ ಆಗುತ್ತಿರುವರು ಮತ್ತಂ ನಿರ್ವಿಕಾರವಾದ ಸುಖಾಸನಾತ್ಮಕ ವಾದ ಯೆರಡನೆಯ ಮೂರ್ತಿಯು ಪರಮೇಶ್ವರನಿಂ ಧರಿಸಲ್ಪಟ್ಟಿತಾದಕಾರಣದಿಂ ಸಮಸ್ತ ಆತ್ಮರು ಬಾಲ್ಯದಲ್ಲಿ ನಿರ್ವಿಕಾರಿಗಳಾಗುತ್ತಿರುವರು. ಆವುದಾನೊಂದು ಕಾರಣದಿಂ ಪ್ರಭುವಾದ ಮಹೇಶ್ವರನು ಉಮಾರೂಪವಾದ ತನ್ನ ಶಕ್ತಿಯಂ ಧರಿಸಿದನೋ ಅದುಕಾರಣದಿಂ ಸರ್ವಾತ್ಮರು ಪಾಣಿಗ್ರಹಣಾಕಾಂಕ್ಷಿಗಳಾದರು. ಉಮಾಕಲ್ಯಾಣ ಮೂರ್ತಿಯೆ ಮೂರನೆಯದು. ಕಲ್ಯಾಣಾಲಂಕೃತವಾದ ಅರ್ಧನಾರೀಶ್ವರ ಮೂರ್ತಿಯು ಸಕಲರಿಗು ಮೋಹಕಾರಣಮಾಗಿರುವದು ಅದು ಕಾರಣದಿಂ ಸರ್ವರು ಸಕಲ ಶಾಸ್ತ್ರಾಭ್ಯಾಸವಂ ಮಾಡಿ ಮತ್ತಂ ಮೋಹಯುಕ್ತ ವಾಗಿ ಅನುದಿನವು ತಮ್ಮ ಸ್ತ್ರೀಯರಿಂ ಕೂಡಿರುತಿರುವರು. ಇದಲ್ಲದೆ ಆ ಮಹೇ ಶ್ವರನು ಆವುದಾನೊಂದು ಕಾರಣದಿಂ ಸೋಮಸ್ಕಂದ ಮೂರ್ತಿಯಾದನೋ ಅದುಕಾರಣದಿಂ ದಾತ್ಮರುಗಳು ತ್ಯಾಗಿಗಳಾಗಿ ಪುತ್ರ ಕಳತ್ರ ಯುಕ್ತರಾಗಿರು ವರು. ಮತ್ತಂ ಆ ಮಹೇಶ್ವರನು ವಿಶ್ವಯೋಗಿಯಾದ ವಿಷ್ಣುವಿಗೆ ಚಕ್ರವ ನ್ನಿತ್ತ ಕಾರಣದಿಂ ತ್ಯಾಗಿಗಳಾಗಿರ್ಪರು. ಇದಲ್ಲದೆ ಪರಮೇಶ್ವರನು ತ್ರಿಮೂರ್ತಿ ಸ್ವರೂಪವಂಧರಿಸಿದ ಕಾರಣದಿಂ ದಾತ್ಮರುಗಳು ಯತ್ನವಿಲ್ಲದೆ ಮೂರ್ತಿತ್ರಯುವ ನ್ನೈದುವರು. ಮತ್ತಂ ಆ ಪರಮೇಶ್ವರನು ಅನ್ವಯನಾದ ಹರಿಹರಾತ್ಮಕತ್ವದಿಂ ಆತ್ಮರುಗಳ ಪುಣ್ಯಪಾಪಂಗಳಂ ಸಮಾನವಂ ಮಾಡಿ, ಶಕ್ತಿಪಾತಂ ಮಾಡಿದನು. ಶಕ್ತಿಪಾತವಾದ ಆತ್ಮರುಗಳಿಗೆ ಉಪದೇಶವಂ ಮಾಡಲೋಸುಗ ದಕ್ಷಿಣಾ ಮೂರ್ತಿ ಸ್ವರೂಪವಂ ಧರಿಸಿದ ನದುಕಾರಣದಿಂ, ಆತ್ಮರುಗಳು ಜರಾಮರಣಕ್ಕೆ ಭೀತರಾಗಿ ಆ ದಕ್ಷಿಣಾಮೂರ್ತಿಯ ಸೇವೆಯಿಂದ ಮುಕ್ತಿಯಂ ಪಡೆವರು. ಮತ್ತಂ ಆ ಮಹೇಶ್ವರನು ಅತ್ಯಂತ ಶೋಭನವಾದ ಭಿಕ್ಷಾಟನ ಮೂರ್ತಿಯಂ ಧರಿಸಿದನು. ಆ ಮೂರ್ತಿಯು ಪಕ್ವಚಿತ್ತರಾದ ಆತ್ಮರಿಗೋಸುಗ ಸಂಗ್ರ

ಹವಂ ಮಾಡುತ್ತಿರುವದು. ಅದುಕಾರಣದಿಂ ದಾವನಾನೋರ್ವ ಪುರುಷನು ತನ್ನ ದಹರಾಕಾಶ ಮಧ್ಯದಲ್ಲಿ ಸತ್ಯಜ್ಞಾನಾನಂದಾದ್ಯರುನಾದ ಶಿವನ ಸ್ವರೂಪವಂ ತಿಳಿವನೋ, ಆತನು ಸರ್ವಾತ್ಮಸ್ವರೂಪವಾದ ಪರಶಿವನೊಡನೆ ಐಕ್ಯವಾಗಿಹನು. ಮತ್ತಂ ಮಹೇಶ್ವರನು ಕಂಕಾಳ ಮೂರ್ತಿಯಂ ಧರಿಸಿ ಪಕ್ವಚಿತ್ತರಾದ ಆತ್ಮರಿಗೆ ವೈರಾಗ್ಯೋಪದೇಶವಂ ಮಾಡುತ್ತಿರುವುದರಿಂದ ಆತ್ಮರುಗಳು ವಿಕಾರಿಗಳಾಗಿರುವರು. ಇದಲ್ಲದೆ ಪರಮೇಶ್ವರನು ಲಲಾಟಾಗ್ನಿಯಿಂ ಕಾಮನಂ ಭಸ್ಮೀಭೂತಂ ಗೈದು ಆತ್ಮರುಗಳಿಗೆ ಕಾಮಬಾಧೆಯಂ ಪರಿಹರಿಸಿದ್ದಲ್ಲದೆ ಕಾಲನಂ ಸಂಹಾರವಂ ಮಾಡಿ ಕಾಲಭಯವಂ ಬಿಡಿಸುತ್ತ ಮೋಕ್ಷಸುಖವಂ ಕೊಡುತ್ತಿರುವನು. ಅದುಕಾರಣದಿಂ ಕಾಮಾಂತಕನು, ಕಾಲಸಂಹಾರ ಮೂರ್ತಿಯು ಎಂದು ಮುನೀಶ್ವರರಿಂ ಪೇಳಲ್ಪಟ್ಟನು. ಮತ್ತಂ ಜಗದ್ಗುರುವಾದ ಪರಮೇಶ್ವರನು ಜಲಂಧರಮೂರ್ತಿಯಂ ಧರಿಸಿ ನಿರ್ಮಲಚಿತ್ತರಾದ ಮುನಿಗಳ ಕೋಪವಂ ಸಂಹರಿಸಿದನು. ಇದಲ್ಲದೆ ತ್ರಿಪುರಸಂಹಾರವಂ ಮಾಡಿದ ಮೂರ್ತಿಯು ಪಕ್ವರಾದ ಪ್ರಾಣಿಗಳ ಗುಣತ್ರಯವಂ ಸಂಹರಿಸುವನು. ಮತ್ತಂ ನೀಲಕಂಠನೆಂದು ಪೆಸರ್ಗೊಂಡ ಕಾಲಕೂಟ ಹರನಾದ ಮೂರ್ತಿಯು ಆತ್ಮರುಗಳಿಗೆ ಸಂಸಾರಸಾಗರದಿಂ ಪುಟ್ಟಿದ ವಿಷವಂ ಪರಿಹರಿಸುತ್ತಿದಾನೆ. ಇದಲ್ಲದೆ ಮಹೇಶ್ವರಂಗೆ ಮೂರು ಪಾದಂಗಳು, ನಾಲ್ಕು ಶೃಂಗಂಗಳು, ಯೆರಡು ಶಿರಸ್ಸುಗಳು, ಸಪ್ತ ಬಾಹುಗಳು ಉಳ್ಳ ಆವುದಾನೊಂದು ಮೂರ್ತಿಯುಂಟೋ ಆ ತ್ರಿಪಾದಮೂರ್ತಿಯು ಪಕ್ವಪಾಶರಾದ ಆತ್ಮರಿಗೆ ಶಿವಚರ್ಯಾಕ್ರಿಯಾ ಯೋಗಂಗಳಂ ಉಪದೇಶವಂ ಮಾಡುತ್ತಿರುವನು. ಮತ್ತಂ ಅಜನಾಗಿ ಏಕಪಾದನಾದ ಅನಂತ ಮಹಿಮಾಸ್ಪದನಾದ ಮೂರ್ತಿಯು ಪಕ್ವಪಾಶರಾದ ಆತ್ಮರಿಗೆ ಪ್ರಸಾದವಂ ಕೊಡುತಿರುವನು. ಇದಲ್ಲದೆ ಚಂದ್ರಶೇಖರ ಮೂರ್ತಿಯಿಂ ಪಕ್ವಪಾಶರಾದ ಆತ್ಮರುಗಳು ಮಹಾ ಸತ್ವವಾದ ಜನನ ಮರಣಂಗಳಂ ದಾಂಟುತ್ತಿರುವರು. ಆ ಮಹಾದೇವನ ಸಂಬಂಧವಾದ ಏಕಸಾಕ್ಷಿಯುಳ್ಳ ಒಂದು ಪಾದದಿಂ ಜ್ಞಾನವಂ ತಿಳಿದು ಲೀಲೆಯಿಂ ಮತ್ತೊಂದು ಪಾದವಂ ಊರ್ಧ್ವಕ್ಕೆತ್ತಿ ಪರಮಾನಂದದಿಂ ನರ್ತನವಂ ಮಾಡುವ ತಾಂಡವ ಮೂರ್ತಿಯಿಂ ಸರ್ವಪಕ್ವಾತ್ಮರುಗಳು ಆನಂದವನ್ನೈದುವರೆಂದು ಶ್ರುತಿಯು ಪೇಳುತ್ತಿರುವದು. ಮತ್ತಂ ಕೃಪಾಸಿಂಧುವಾದ ಉಮಾಪತಿಯಾದ ಮಹೇಶ್ವರಂಗೆ ಗಂಗಾಧರನೆಂಬ ಪೆಸರಾದ ಮೂರ್ತಿಯು ಪಕ್ವಾತ್ಮರುಗಳಂ ಆನಂದ ಸಾಗರದಲ್ಲಿ ಮುಳುಗಿಸುತ್ತಿರುವನು. ಎಲೈ ಋಷಿಗಳಿರಾ! ಈ ಪಂಚವಿಂಶತಿ ಮೂರ್ತಿಗಳು ಪಕ್ವಾತ್ಮರಂ ರಕ್ಷಿಸಲೋಸುಗ ಆಯಾ ಕಾಲದಲ್ಲಿ ಆತ್ಮರುಗಳ

ಮೇಲೆ ದಯೆಯಿಂ ಲೀಲೆಯಿಂದುಂಟಾದವು. ನಿತ್ಯನಾದ ಆ ಮಹೇಶ್ವರನು ಈ ಪಂಚವಿಂಶತಿ ಮೂರ್ತಿಗಳು ನಿತ್ಯಂಗಳೆಂಬದಾಗಿ ಶ್ರುತಿಯಿಂ ಪೇಳಲ್ಪಟ್ಟವು. ಸ್ವತಂತ್ರ ಶಕ್ತಿಯುಕ್ತನಾದ ಮಹೇಶ್ವರನಲ್ಲಿ ವಿಧಿವಾದವೆ ಕಾರಣವೋ, ತರ್ಕ ವಾಕ್ಯಂಗಳಿಗೆ ವಿಶೇಷದಿಂದೊಂದು ಕಡೆಯಲ್ಲಿಯು ನಿಶ್ಚಯವಿಲ್ಲದ ಕಾರಣದಿಂ ಆ ತರ್ಕೋಕ್ತಿಗಳಿಗೆ ಅವಕಾಶವಿಲ್ಲವೋ, ಹಾಗೆ ನಡಿಸಿದೊಡೆ ವೇದಾಂತ ವಾಕ್ಯಂಗಳಿಂ ವೈರಾಗ್ಯವು ಹೇಗುಂಟಾಗುವದು? ನಿರಾಕಾರನಾದ ಆ ಪರಮೇಶ್ವರನಲ್ಲಿ ದೋಷವಿಲ್ಲದ ಕಾರಣದಿಂ ಅಣಿಮಾದ್ಯಷ್ಟಗುಣಂಗಳು ಹೇಗುಂಟಾದೀತು. ಸಾಕಾರವಾದ ಮೂರ್ತಿಯಿಂದ ಸಮಸ್ತ ಜಗತ್ತು ಉಂಟಾಯಿತೆಂದು ತಿಳಿಯಬೇಕಾದುದರಿಂ ಸ್ವಲೀಲೆಯಿಂದ ಮೂರ್ತಿಗಳಂ ಧರಿಸಿದನು. ತರ್ಕ ವಾಕ್ಯಗಳಿಂ ಮಾಡಲಾಗದು, ಒಂದು ವೇಳೆ ಅಜ್ಞಾನದಿಂ ಮಾಡಿದನಾದೊಡೆ ನಾಶವನೈದುವನು. ಅದುಕಾರಣದಿಂ ಈ ಮಹೇಶ್ವರನ ಪಂಚವಿಂಶತಿ ಮೂರ್ತಿಗಳಲ್ಲಿ ವಿಶ್ವಾಸವುಳ್ಳ ಪುರುಷರಿಗೆ ಕಲ್ಯಾಣಂಗಳು ಶ್ರೇಯಸ್ಸುಗಳು ಅಮಿತವಾದ ಸಂಪತ್ತುಗಳು ಉಂಟಾಗುವವೆಂದು ನುಡಿಯೆ ಋಷಿಗಳಿಂತೆಂದರು.

ಮಹರ್ಷಿಗಳು ಸೂತರನ್ನು ಸ್ತುತಿಸುವಿಕೆ.

ಎಲೈ ಸೂತಪೌರಾಣಿಕನೇ! ನೀನು ನಮಗಾಚಾರ್ಯನು ಪಿತೃವು ಸಹಾ ಆಗಿರುವೆ ಲೋಕದೊಳು ಮಾತಾಪಿತೃಗಳು ದೇಹಮಾತ್ರಕ್ಕೆ ಜನಕರು, ನೀನು ಬ್ರಹ್ಮಸ್ವರೂಪವಂ ಪೇಳಿ ಜ್ಞಾನೋಪದೇಶವಂ ಮಾಡಿದುದರಿಂದ ನಾವುಗಳು ಸಂಸಾರ ಸಾಗರವಂ ದಾಂಟಿದೆವು, ಆವ ಬ್ರಹ್ಮೋಪದೇಶದಿಂ ಸಂಸಾರ ಸಮುದ್ರವು ಗೋವಿನ ಹೆಜ್ಜೆಯೋಪಾದಿಯಲ್ಲಿ ದಾಂಟಲ್ಪಡುವದೋ, ಅಂಥ ಜ್ಞಾನೋಪದೇಶವಂ ಗೈದವನೆ ಆರು ಮಂದಿ ಪಿತೃಗಳ ಮಧ್ಯದಲ್ಲಿ ಉತ್ತಮನು. ಅದುಕಾರಣದಿಂ ಶರೀರವಂ ದ್ರವ್ಯಂಗಳಂ ಸದ್ಗುರುವಿಗೆ ಸಮರ್ಪಿಸಬೇಕೆಂದು ಜ್ಞಾನಿಗಳು ಪೇಳುತ್ತಿರುವರು, ಎಲೈ ಮುನಿಯೇ! ನಮ್ಮ ಧನಂಗಳಂ ಶರೀರಂಗಳಂ ಪ್ರಾಣಂಗಳಂ ನಿಮಗೆ ಸಮರ್ಪಿಸಿದೇವೆ: ನಮಗೆ ನೀನೆ ಈಶ್ವರನೆಂದು ಜ್ಞಾನದಿಂ ತಿಳಿದವರಾದೆವು ಎಂದು ಪೇಳ್ದು ನಮಸ್ಕರಿಸಲಾಗಿ, ಸೂತನು ಮರಳಿಯು ಅವರಿಗೆ ನಮಸ್ಕಾರವಂ ಮಾಡಿ ಎಲೈ ಋಷಿಗಳಿರಾ! ನೀವು ಹೀಗೆ ಪೇಳಬೇಡಿರಿ. ಸ್ತೋತ್ರಾರ್ಹನಾದ ಮಹೇಶ್ವರಂ ನಾವೆಲ್ಲರು ಸ್ತುತಿಸುವಣೆಂದು ನುಡಿದನು.

ಪರಮೇಶ್ವರನು ಪ್ರಸನ್ನನಾಗುವಿಕೆ.

ಬಳಿಕ ಅವರುಗಳು ಅತ್ಯಂತ ಸಂತೋಷಯುಕ್ತರಾಗಿ ದೇವದೇವನಾದ

ಮಹೇಶ್ವರನಂ ಧ್ಯಾನಿಸಿ, ಶ್ರುತಿವಾಕ್ಯಂಗಳಿಂ ಸ್ತುತಿಯಂ ಗೈಯುತಿರೆ, ಮಹೇಶ್ವರನು ಪಾರ್ವತೀಸಮೇತನಾಗಿ ಕೈಲಾಸೋಪಮವಾದ ವೃಷಭವನ್ನೇರಿ, ವಿಘ್ನೇಶ, ಸ್ಕಂದ, ನಂದಿ, ಭೃಂಗಿ, ಮಹಾಕಾಳ, ಕುಂಭೋದರ ಮುಂತಾದ ಸಮಸ್ತ ಗಣಂಗಳೊಡನೆ, ಇಂದ್ರಾದಿ ದೇವತೆಗಳ್ವೆರಸಿ ಆ ಋಷಿಗಳಿಗೆ ಪ್ರಸನ್ನನಾದನು. ಆ ಸಮಯದಲ್ಲಿ ಗಂಧರ್ವರು ಯಕ್ಷರು ರಾಕ್ಷಸರು ಸಕಲ ದೇವತೆಗಳು ಪುಷ್ಪವರ್ಷವಂ ಕರೆದರು. ಗಗನದಲ್ಲಿ ಸಮುದ್ರ ಘೋಷಕ್ಕೆ ಸಮಾನವಾಗಿ ದೇವದುಂದುಭಿಗಳು ಮೊಳಗಿದವು. ತಿಮಿಲ ಗೋಮುಖ ಮುಂತಾದ ವಾದ್ಯ ವಿಶೇಷಂಗಳು ಬಾರಿಸಲ್ಪಟ್ಟವು. ಅರ್ಬುದ ಶಂಖಂಗಳಂ ಘೋಷಿತಂಗಳಾದವು. ಮತ್ತಂ ಕೋಟಿ ಸಂಖ್ಯಾಕವಾದ ಕಹಳೆ ಮೃದಂಗ ತಾಳಂಗಳು ಧ್ವನಿಗೈದವು. ಈ ಘೋಷವು ಸಮುದ್ರಘೋಷೆಯಂ ತಿರಸ್ಕಾರವಂ ಮಾಡಿತು. ಸಮಸ್ತರಾದ ಋಷಿಗಳು ತಮ್ಮ ತಮ್ಮ ದಂಡಂಗಳಂ ಬಿಟ್ಟು ನರ್ತನವಂ ಮಾಡಿದರು. ಸಾಮಕರಾದ ಕೆಲವು ಋಷಿಗಳು ಸಾಮವೇದದಿಂ ಗಾನಂಗೈದರು. ಹಾಹಾ ಹೂಹೂ ಚಿತ್ರಸೇನ ಚಿತ್ರರಥ ತುಂಬುರ ನಾರದರೆಂಬ ಗಾಯಕರು, ಗಾಂಧರ್ವವೇದದಿಂ ಪರಮೇಶ್ವರನ ಚರಿತ್ರೆಗಳಂ ಪಾಡಿದರು. ಕಿನ್ನರ ಕಿಂಪುರುಷರು ಸ್ತ್ರೀಸಮೇತರಾಗಿ ಗಾನವಂ ಮಾಡಿದರು. ವಿಷ್ಣುವು ಗರುಡಾರೂಢನಾಗಿ ತನ್ನ ಮೂರ್ತಿಗಳಿಂದಾವೃತನಾಗಿ ಪರಮೇಶ್ವರಂಗೆ ನಮಸ್ಕಾರವಂ ಮಾಡಿ, ಶತರುದ್ರಜಪವಂ ಮಾಡುತ್ತ ವಾಮಭಾಗದಲ್ಲಿ ನಿಂತಿರ್ದನು. ಲಕ್ಷ್ಮೀದೇವಿಯು ತನ್ನ ಮೂರ್ತಿಗಳಿಂದಾವೃತೆಯಾಗಿ ಪಶುಪತಿಯಾದ ಈಶಾನಂಗು ವಾಮಭಾಗದಲ್ಲಿರ್ಪ ಪಾರ್ವತೀದೇವಿಗು ನಮಿಸಿ, ತನಗೆ ಅಸದೃಶವಾದ ರೂಪವು ಶಾಶ್ವತವಾದ ಸೌಮಂಗಲ್ಯವು ಉಂಟಾಗಲೆಂದು ಪ್ರಾರ್ಥಿಸಿದಳು. ವಿಷ್ಣು ಚಿಹ್ನಂಗಳಿಂದೊಪ್ಪುತಿರ್ಪ ವಿಷ್ಣುಗಣಂಗಳು ಆತನ ಸಮೀಪದಲ್ಲಿರ್ದರು. ಬ್ರಹ್ಮನು ಸರಸ್ವತಿಯೊಡನೆ ಹಂಸವನ್ನೇರಿ ಬಂದು ನಮಸ್ಕರಿಸಿ ರುದ್ರಪಾರಾಯಣವಂ ಮಾಡುತಿರ್ದನು. ಅದಲ್ಲದೆ ನವಬ್ರಹ್ಮರು ಸನಕಾದಿ ಬ್ರಹ್ಮರ್ಷಿಗಳು ದೇವರ್ಷಿಗಳು ಕಪಿಲಾದಿ ಮುನಿಗಳು ದೇವದೇವನಂ ಸ್ತುತಿಸಿದರು, ಬಳಿಕ ಆ ಸಭಾಮಧ್ಯದಲ್ಲಿ ರತ್ನನಿರ್ಮಿತವಾಗಿ ಮೇರು ಸದೃಶವಾದ ಕಾಂಚನ ಮಯವಾಗಿ ಅದ್ಭುತವಾದ ಒಂದು ಸಿಹ್ಮಾಸನವು ಪ್ರಾದುರ್ಭವಿಸಲಾಗಿ, ಪಾರ್ವತೀದೇವಿಯು ಸ್ವಾಮಿಯು ಕುಮಾರಸ್ವಾಮಿಯು ವಿಘ್ನೇಶ್ವರನು ಸಹಾ ಆ ಸಿಹ್ಮಾಸನದಲ್ಲಿ ಕುಳಿತುಕೊಂಡರು ಆಗ ಕೋಟಿರುದ್ರಕನ್ನಿಕೆಯರು ಚಾಮರಗಳಿಂ ಆಲವಟ್ಟಗೆಗಳಿಂ ಬೀಸುತ್ತಿರಲು, ಗಣಾಧ್ಯಕ್ಷರು ಅಗಲು ಧೂಪಂಗಳಿಂ ಪುಷ್ಪಂಗಳಿಂ ಆ ಆಸ್ಥಾನಮಂಟಪವಂ ಪರಿಮಳಯುಕ್ತಂ

ಗೈದರು. ಆ ಸಮಯದಲ್ಲಿ ಶೌನಕಾದಿಗಳು ಶಿವನಂ ಕಂಡು ಆನಂದ ಪರರಾಗಿ ತಾವಿರುವ ಲೋಕವಂ ಮರೆತು ಕಣ್ಣಳಂ ಮುಚ್ಚಿ ಧ್ಯಾನವಂ ಮಾಡಿದರು. ಮತ್ತೆ ಕೆಲಬರು ಆನಂದಾತಿಶಯದಿಂ ರೋದನವಂ ಮಾಡಿದರು. ಇನ್ನು ಕೆಲಂಬರು ಜಯಜಯವೆಂದು ಸ್ತುತಿಸಿದರು. ಮತ್ತು ಕೆಲವರು ಪರವಶರಾಗಿ ಭೂಮಿಯಲ್ಲಿ ಹೊರಳಾಡಿದರು ಕೆಲಬರು ನಕ್ಕರು ಕೆಲಂಬರು ಗಾನವಂ ಮತ್ತು ಕೆಲಂಬರು ಘರ್ಜನೆಯಂ ಕೆಲವರು ಆನಂದ ಬಾಷ್ಪಂಗಳಂ ಕೆಲಂಬರು ಉಶ್ವಾಸ ನಿಶ್ವಾಸಗಳಂ ಬಿಡುತಿರ್ದರು. ಬಳಿಕ ಆ ಸಭಾಮಧ್ಯದಲ್ಲಿ "ವಸಿಷ್ಠ, ಕಾಶ್ಯಪ, ವಿಶ್ವಾಮಿತ್ರ, ಪರಾಶರ, ಹಾರೀತ, ಅತ್ರಿ, ಭೃಗು, ಕುತ್ಸ, ವಿರೂಪಾಕ್ಷ, ಪೌರ, ನಾಗ, ಮುದ್ಗಲ, ವಾಜಸ್ರವ, ಉಶನ, ನಾಚಿಕೇತು, ಆರ್ಶ, ನಾರತ, ಶಕ್ತಿವಂತ, ಐಸ್ಯೆರಿಕ, ವೀತಿಹೋತ್ರಾಯಸ, ಆಂಗೀರಸ, ಶಂಖಲಿಖಿತ, ದಕ್ಷ, ಕ್ರತು, ದೇವಲ, ಶುಕ, ಮರೀಚಿ, ರೋಮಶ, ದಾಲ್ಭ್ಯ" ಎಂಬಿವರು ಮೊದಲಾದ ಜನೋಲೋಕ ವಾಸಿಗಳಾದ ಋಷಿಗಳು ನೈಮಿಶಾರಣ್ಯ ವಾಸಿಗಳಾದ ಶೌನಕಾದಿಗಳು ಸಹ ಅನ್ಯೋನ್ಯದಿಂದಾಲಿಂಗನಂ ಗೈದು ಕುಶಲ ಪ್ರಶ್ನೆಯಂ ಮಾಡಿದರು. ಬಳಿಕ ವಸಿಷ್ಠಾದಿಗಳು, ಎಲೈ ಶೌನಕಾದಿಗಳಿರಾ! ನೀವತ್ಯಂತ ಶ್ರೇಷ್ಠರು. ಸೂತಪೌರಾಣಿಕನಿಂ ಕುಮಾರಸ್ವಾಮಿಯ ಚರಿತ್ರವಂ ಕೇಳಿದ್ದರಿಂದ ಸ್ವಾಮಿಯು ವಿಘ್ನೇಶ್ವರ ಕುಮಾರ ಪಾರ್ವತೀ ಸಮೇತನಾಗಿ ಪ್ರಸನ್ನನಾದನು. ನಿಮ್ಮಿಂದ ನಾವು ದರ್ಶನವಂ ಮಾಡಿದೆವೆಂದು ಪೇಳ್ದು ಬಳಿಕ ಸಿಂಹಾಸನಾರೂಢನಾದ ಸ್ವಾಮಿಯಂ ಈ ರೀತಿ ಸ್ತುತಿಸಿದರು.

ಶ್ಲೋ॥ ಜಯದೇವಮಹಾನಂದ ಜಯಸರ್ವಜಗನ್ಮಯ ।
ಜಯಕಲ್ಯಾಣನಿಲಯ ಜಯಪ್ರಕೃತಿಸುಂದರ ॥
ಸತ್ಯಚಿದ್ಘನಸರ್ವಜ್ಞ ಜಯವಾಚಾಮಗೋಚರ ।
ಜಯಶಂಭೋಜಯಾಧೀಶ ಜಯಕಾಂತಾರ್ಧವಿಗ್ರಹಃ ॥

ಎಂದು ಹೀಗೆ ಸ್ವಾಮಿಯಂ ಸ್ತುತಿಸಿ ಸಂಸಾರತಾರಕನಾದ ಪರಮೇಶ್ವರಂಗೆ ಅಡಿಗಡಿಗೆ ನಮಸ್ಕಾರವಂ ಮಾಡೆ, ಸ್ವಾಮಿಯು ಆ ಸ್ತೋತ್ರಕ್ಕೆ ಮೆಚ್ಚಿ ಋಷಿಗಳಂ ಕುರಿತು ! ಎಲೈ, ನೀವು ಮಾಡಿದ ತಪದಿಂದಲು ದಾನದಿಂದಲು ಸಂತೋಷಿಸಿದ ಆನಂದವನ್ನು ಸ್ತೋತ್ರದಿಂದ ಪಡೆದೆನು. ಬೇಕಾದ ವರವಂ ಕೇಳಿಕೊಳ್ಳಿರೆಂದೆನು. ಬಳಿಕ ಋಷಿಗಳು ಎಲೈ ಮಹಾದೇವನೇ ! ಯಾರು ಈ ಶಿವರಹಸ್ಯ ಖಂಡವಂ ಕೇಳುತ್ತಿರುವರೋ ಅವರಿಗೆ ನೀನು ಪ್ರಸನ್ನನಾಗಿ ಜಯಾರ್ಥಿಗೆ ಜಯವಂ ಪುತ್ರಾರ್ಥಿಗೆ ಪುತ್ರರಂ ಧನಾರ್ಥಿಗೆ ಧನವಂ ವಿದ್ಯಾರ್ಥಿಗಳಿಗೆ ವಿದ್ಯೆಗಳಂ ಹೀಗೆ ಆ ಯಾವ ವರಗಳಂ ಕೊಟ್ಟು ರಕ್ಷಿಸಬೇಕು. ನಮಗೆ

ನಿಮ್ಮ ಪಾದಾರವಿಂದದಲ್ಲಿ ಭಕ್ತಿಯುಂಟಾಗುವಂತೆ ಮಾಡಬೇಕೆಂದು ಪ್ರಾರ್ಥಿಸಲಾಗಿ ಸ್ವಾಮಿಯು ಹಾಗೆ ಆಗಲೆಂದು ವರವನ್ನಿತ್ತು ಅಂತರ್ಧಾನವಾದನು.

ಪುರಾಣಪಠನಶ್ರವಣ ಫಲಸ್ತುತಿಯು.

ಬಳಿಕ ಋಷಿಗಳು ದೇವದೇವಂಗು ಕೈಲಾಸಪರ್ವತಕ್ಕೂ ನಮಸ್ಕರಿಸಿ ಸೂತಪೌರಾಣಿಕನಂ ಪೂಜಿಸೆ, ಆ ಸೂತನು ಎಲೈ ಋಷಿಗಳಿರಾ! ಸತ್ಪುರುಷರಾದ ನಿಮ್ಮ ಸಂಪರ್ಕದಿಂ ನಾನು ಕೃತಾರ್ಥನಾದೆನು. ಈ ಕುಮಾರಸ್ವಾಮಿಯ ಚರಿತ್ರವು ಕೇಳುವಂಥವರಿಗೆ ಮಂಗಳವನೀಯುವದು. ಎಲ್ಲಿ ಈ ಕುಮಾರಸ್ವಾಮಿಯ ಆಖ್ಯಾನವು ಪಠಿಸಲ್ಪಡುವದೋ ಅಲ್ಲಿ ಮಹಾದೇವನು ಉಮಾದೇವಿಯೊಡನೆ ಗಣಂಗಳ ಸಹಿತನಾಗಿ ಪ್ರಸನ್ನನಾಗುವನು. ಮತ್ತಮೀ ಶಿವರಹಸ್ಯ ಖಂಡವಂ ಕೇಳುವಂಥ ಪ್ರಭುವು ನಿಯಮದಿಂದ ಬ್ರಾಹ್ಮಣರು ಮಂತ್ರಿಗಳು ಬಂಧುಗಳು ಇವರುಗಳಿಂದೊಡಗೂಡಿ ವ್ಯಾಖ್ಯಾನ ಮಂಟಪವಂ ಗೋಮಯದಿಂ ಪರಿಶುದ್ಧವಂ ಮಾಡಿಸಿ ವಿತಾನಾದಿಗಳಿಂದಲಂಕರಿಸಿ, ಅಮಿತ ತೇಜೋವಂತನಾದ ಕುಮಾರಸ್ವಾಮಿಯಂ ಪೂಜಿಸಿ ಭೋಜನಾತ್ಪೂರ್ವದಲ್ಲಿ ಆಗಲಿ ಭೋಜನಾತ್ಪರದಲ್ಲಿ ಆಗಲಿ, ಪುರಾಣಜ್ಞನಾಗಿ ಜಿತೇಂದ್ರಿಯನಾದ ವೇದಾಂತ ನಿಷ್ಠನಾಗಿ ಸ್ಕಂದೋಪಾಸಕನಾದ ಬ್ರಾಹ್ಮಣನಂ ಗಂಧಪುಷ್ಪ ತಾಂಬೂಲಗಳಿಂ ಪೂಜಿಸಿ ಅನುಜ್ಞೆಯಂ ಪಡದು, ಪುಣ್ಯದಿವಸದಲ್ಲಿ ಬ್ರಹ್ಮವಿದ್ಯವಾದ ಈ ಶಿವರಹಸ್ಯ ಖಂಡವಂ ಪ್ರಾರಂಭಿಸಿ ಪ್ರತಿದಿವಸದಲ್ಲಿಯು ಹತ್ತು ಅಧ್ಯಾಯಗಳನ್ನಾಗಲಿ ಒಂದು ಅಧ್ಯಾಯವನ್ನಾಗಲಿ ಒಂದು ಶ್ಲೋಕವನ್ನಾಗಲಿ ಭಕ್ತಿಯಿಂ ಹೇಳಬೇಕು. ಮತ್ತಂ ಭಕ್ತನಾಗಿ ಕೇಳುವ ಪ್ರಭುವು ಅಭೀಷ್ಟದಾಯಕನಾದ ಕುಮಾರಸ್ವಾಮಿಯ ಪ್ರಸಾದವನ್ನಿಚ್ಛಿಸಿ ಕಾಂಡ ಕಾಂಡ ಸಮಾಪ್ತಿಯಲ್ಲಿಯು ಗಿರಿಜಾಕಲ್ಯಾಣದಲ್ಲಿಯು ಕುಮಾರಸ್ವಾಮಿಯ ಪಟ್ಟಾಭಿಷೇಕದಲ್ಲಿಯು ಕುಮಾರಸ್ವಾಮಿಯ ಕಲ್ಯಾಣದಲ್ಲಿಯು ಸಹ, ಸಾವಿರದೆಂಟಾಗಲಿ, ನೂರೆಂಟಾಗಲಿ, ಐವತ್ತಾಗಲಿ, ಇಪ್ಪತ್ನಾಲ್ಕಾಗಲಿ, ಹನ್ನೆರಡಾಗಲಿ ಸಂಖ್ಯೆಯುಳ್ಳ ಬ್ರಾಹ್ಮಣರಿಗೆ ಭೋಜನವಂ ಮಾಡಿಸಿ ಪುರಾಣಿಕನಿಗೆ ವಸ್ತ್ರ ಭೂಷಣ ಧನ ಗೋವು ಗಜ ವಾಜಿ ರಥ ಗ್ರಾಮ ಕ್ಷೇತ್ರ ಗೃಹಂಗಳಂ ಕೊಟ್ಟು ತೃಪ್ತಿಯಂ ಮಾಡಬೇಕು. ಪುರಾಣ ಸಮಾಪ್ತಿಯಲ್ಲಿ ಮಹಾ ವಿಭವ ವಿಸ್ತಾರದಿಂ ಬ್ರಾಹ್ಮಣ ಭೋಜನವಂ ಮಾಡಿಸಿ ಆ ಪುರಾಣಿಕನಂ ಪೂಜಿಸಬೇಕು, ಹೀಗೆ ಈ ಪುರಾಣದಲ್ಲಿ ಒಂದು ಶ್ಲೋಕಾರ್ಥವಂ ಕೇಳಿದೊಡೆ ಷಡಂಗಯುಕ್ತವಾದ ವೇದವನ್ನು ಕೋಟಿವೇಳೆ ಪಾರಾಯಣವಂ ಮಾಡಿದರೆ ಯಾವ ಫಲವುಂಟೋ ಆ ಫಲವುಂಟಾಗುವದು. ಮತ್ತಂ ಅಶ್ವಮೇಧ ಶತವನ್ನು ಕೋಟಿಷೋಡಶ ಮಹಾ ದಾನಂಗಳನ್ನು ಮಾಡಿದ

ಫಲವು ಈ ಪುರಾಣಶ್ರವಣದಿಂ ಬರುವದು. ಇದಲ್ಲದೆ ಈ ಶಿವರಹಸ್ಯ ಖಂಡ ವನ್ನು ಓದಿದಂಥವರು ಕೇಳಿದವರು ಸಹ ಪುತ್ರ ಮಿತ್ರ ಕಳತ್ರಾದಿಗಳ್ವೆರಸಿ ಇಹದಲ್ಲಿ ಬಹು ಭೋಗಂಗಳ ಭುಂಜಿಸಿ ಪರದಲ್ಲಿ ಸ್ಕಂದಸಾಯುಜ್ಯವನ್ನೈದುವರು. ಅದು ಕಾರಣದಿಂ ಪ್ರತಿದಿವಸದಲ್ಲಿಯು ತನ್ನ ಅಭೀಷ್ಟವೃದ್ಧಿಗೋಸುಗ ಈ ಶಿವರಹಸ್ಯಖಂಡವಂ ಕೇಳಬೇಕೆಂದು ಸೂತಂ ಪೇಳಲಾಗಿ, ಋಷಿಗಳು ಆ ವಾಕ್ಯವಂ ಕೇಳಿ ಸಂತೋಷಚಿತ್ತರಾಗಿ ಆತನಂ ಪರಿಪೂಜಿಸಿ ಕಳುಹಿಸಿದ ಬಳಿಕ ತಮ್ಮ ತಮ್ಮ ಆಶ್ರಮಂಗಳಿಗೆ ಪೋದರು. ಅದುಕಾರಣದಿಂ ಅವರು ಅನೇಕ ಐಶ್ವರ್ಯ ಸಮೃದ್ಧರಾಗಿ ಶಿವಧ್ಯಾನ ಪರಾಯಣರಾಗಿ ಒಬ್ಬರಿಗೊಬ್ಬರು ಶಿವಮಹಾತ್ಮ್ಯವಂ ಪೇಳಿಕೊಳ್ಳುತ್ತ ಸಂತೋಷಚಿತ್ತರಾಗಿ ಸುಖದಿಂದ ಇರುತಿರ್ದರು.

ಗದ್ಯ॥ ಇಂತು ಕರ್ಣಾಟಕ ಭಾಷಾವಿರಚಿತಮಾದ ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನ ಭೂತ ಶ್ರೀಮನ್ಮಹೀಶೂರ ಮಹಾ ಸಂಸ್ಥಾನಮಧ್ಯ ದೇದೀಪ್ಯ ಮಾನಾ ವಿಕಲಕಳಾನಿಧಿ ಕುಲಕ್ರಮಾಗತ ರಾಜಕ್ಷಿತಿಪಾಲ ಪ್ರಮುಖ ನಿಖಿಲ ನಿಜರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯ ರತ್ನ ಸಿಂಹಾಸನಾರೂಢ, ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢ ಪ್ರತಾಪ ಅಪ್ರತಿಮವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರರಾವಿಕಲಕಳಾನಿಧಿ ಶಂಖಚಂಕ್ರಾಂಕುಶಕುಠಾರ ಮಕರಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾ ದ್ಯನೇಕ ಬಿರುದಾಂಕಿತ ಶ್ರೀ ಚಾಮರಾಜ ಮಹೀಪಾಲ ಧರ್ಮಪತ್ನಿ ಕೆಂಪನಂಜ ಮಾಂಬಾ ಗರ್ಭ ಸುಧಾಂಬುಧಿ ರಾಕಾಸುಧಾಕರಾಯಮಾನ ಚಾಮುಂಡಿಕಾಂಬಾ ವರಪ್ರಸಾದೋದ್ಭವರಾದ ಆತ್ರೇಯಸಗೋತ್ರ ಅಶ್ವಲಾಯನಸೂತ್ರ ಋಕ್ಶಾ ಖಾನುವರ್ತಿಗಳಾದ ಶ್ರೀಮನ್ಮಹಿಶೂರು ಪುರವರಾಧೀಶರಾದ ಶ್ರೀಕೃಷ್ಣ ರಾಜ ಒಡೆಯರವರು ಲೋಕೋಪಕಾರಾರ್ಥವಾಗಿ ವಿರಚಿಸಿದ ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಸ್ಕಾಂದಪುರಾಣದ ಶಂಕರಸಂಹಿತೆಯೊಳು ಶಿವರಹಸ್ಯಖಂಡದೊಳು ಉಪದೇಶಕಾಂಡದಲ್ಲಿ, ಎಂಬತ್ತಾರನೆಯ ಅಧ್ಯಾಯವು ಸಮಾಪ್ತಮಾದುದು.

ಶಂಕರಸಂಹಿತೆಯು ಸಂಪೂರ್ಣಮಾದುದು.

107

14